ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ

ಆದಿಕಾಲದಿಂದ ಕ್ರಿ.ಶ.೧೯೪೭ ರವರೆಗೆ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕರು

ಹೆಚ್.ಎನ್.ವೆಂಕಟೇಶ ಪ್ರಸನ್ನ

ಮಾರ್ಗದರ್ಶಕರು

ಡಾ। ಕೆ. ಜಿ. ವಸಂತ ಮಾಧವ
ನಿವೃತ್ತ ಪ್ರಾಧ್ಯಾಪಕರು ಮತ್ತು ಹಿರಿಯ ಸಂಶೋಧಕರು
ಭಾರತೀಯ ಇತಿಹಾಸ ಆನುಷಂಗಿಕ ಸಂಶೋಧನೆ

ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೧೧

ಣಿ ಸಂಖ್ಯೆ- ಕೆ.ಟಿ.ಎಸ್.ಎಂ-೦೦೦೮೧, ದಿನಾಂಕ : ೨೯-೧೨-೨೦೦೭

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು- ೫೭೫೦೦೧

"ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ"

ಆದಿಕಾಲದಿಂದ ಕ್ರಿ.ಶ.೧೯೪೭ ರವರೆಗೆ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕರು
ಹೆಚ್.ಎನ್.ವೆಂಕಟೇಶ ಪ್ರಸನ್ನ

ಮಾರ್ಗದರ್ಶಕರು

ಡಾ: ಕೆ. ಜಿ. ವಸಂತ ಮಾಧವ
ನಿವೃತ್ತ ಪ್ರಾಧ್ಯಾಪಕರು ಮತ್ತು ಹಿರಿಯ ಸಂಶೋಧಕರು
ಭಾರತೀಯ ಇತಿಹಾಸ ಅನುಷಂಗಿಕ ಸಂಶೋಧನೆ

ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೧೧

ನೊಂದಣಿ ಸಂಖ್ಯೆ- ಕೆ.ಟಿ.ಎಸ್.ಎಂ-೦೦೦೮೧, ದಿನಾಂಕ : ೨೯-೧೨-೨೦೦೭

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು- ೫೭೫೦೦೧

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಸ್ವಾತಂತ್ರ್ಯ ಪೂರ್ವ ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ: ಕೆ.ಜಿ.ವಸಂತ ಮಾಧವರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲಮೊ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ, ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೧೪-೧೧--೨೦೧೧
ಸ್ಥಳ : ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ,
ಬಲ್ಮಠ, ಮಂಗಳೂರು- ೫೭೫೦೦೧

ಹೆಚ್.ಎನ್.ವೆಂಕಟೇಶ ಪ್ರಸನ್ನ,
ಸಂಶೋಧಕರು,

ಯೋಗ್ಯತಾ ಪತ್ರ

ಹೆಚ್.ಎನ್.ವೆಂಕಟೇಶ ಪ್ರಸನ್ನರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ 'ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಪಿಹೆಚ್.ಡಿ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವತಂತ್ರ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು, ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ದಿನಾಂಕ: ೧೪-೧೧-೨೦೧೧
ಸ್ಥಳ : ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಬಲ್ಮಠ, ಮಂಗಳೂರು- ೫೭೫೦೦೧

ಡಾ: ಕೆ.ಜಿ. ವಸಂತ ಮಾಧವ,
ಸಂಶೋಧನಾ ಮಾರ್ಗದರ್ಶಕರು,

ಪುಟ ತೆರೆದಾಗ

ಸಂಕ್ಷೇಪ ರೂಪಗಳು

ಅ.ಭಾ.ಇ	–	ಆಧುನಿಕ ಭಾರತದ ಇತಿಹಾಸ.
ಕ. ಇ	–	ಕರ್ನಾಟಕದ ಇತಿಹಾಸ.
ಕ. ಇ. ದ	–	ಕರ್ನಾಟಕ ಇತಿಹಾಸ ದರ್ಶನ.
ಕ. ಚ	–	ಕರ್ನಾಟಕ ಚರಿತ್ರೆ.
ಕ. ಪ	–	ಕರ್ನಾಟಕದ ಪರಂಪರೆ.
ಕ.ಶಾ.ಸಾಂ.ಅ	–	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
ಕ. ಸಂ. ಇ	–	ಕರ್ನಾಟಕ ಸಂಕ್ಷಿಪ್ತ ಇತಿಹಾಸ.
ಕೌ.ಅ	–	ಕೌಟಿಲೀಯ ಅರ್ಥಶಾಸ್ತ್ರ.
ನ್ಯಾ.. ದಿ. ಪೂ	–	ನ್ಯಾಯಾಡಳಿತಗಾರನಾಗಿ ದಿವಾನ್ ಪೂರ್ಣಯ್ಯ.
ನಿ. ಅ	–	ನಿಕೋಲ್ ದೆ ಕೊಂತಿ ಮತ್ತು ಅಬ್ದುಲ್ ರಜಾಕ್.
ಪೂ.ದಿ.ಹ.ಪ	–	ಪೂರ್ಣಯ್ಯನವರ ದಿವಾನಗಿರಿ ಕಾಲದ ಹಣಕಾಸಿನ ಪಕ್ಷಿನೋಟ.
ಬ.ಸಾಂ.ಇ	–	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ,
ಭಾ.ಗೆ.ಕ.ಕೊ	–	ಭಾರತದ ಗೆಜಿಟಿಯರ್. ಕರ್ನಾಟಕ, ಕೊಡಗು ಜಿಲ್ಲೆ.
ಭಾ.ಗೆ.ಕ.ಗು	–	ಭಾರತದ ಗೆಜಿಟಿಯರ್ ಕರ್ನಾಟಕ ಗುಲ್ಬರ್ಗ ಜಿಲ್ಲೆ.
ಭಾ.ಗೆ.ಕ.ದ	–	ಭಾರತದ ಗೆಜಿಟಿಯರ್ ಕರ್ನಾಟಕ ರಾಜ್ಯ . ದ.ಕ ಜಿಲ್ಲೆ
ಭಾ.ಗೆ.ಕ.ಧಾ	–	ಭಾರತದ ಗೆಜಿಟಿಯರ್ ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ.
ಮನು	–	ಮನುಸ್ಮೃತಿ.
ಮು.ಕೃ.ಮ.ವಂ	–	ಮುಮ್ಮಡಿ ಶ್ರೀ.ಕೃಷ್ಣರಾಜ ಮಹಿಪಾಲ ವಂಶರತ್ನಾಕರ.
ಮೈ.ಇ.ಹ.ಪು	–	ಮೈಸೂರು ಇತಿಹಾಸದ ಹಳೇಯ ಪುಟಗಳು.
ಮೈ.ಕ.ಆ	–	ಮೈಸೂರಿನಲ್ಲಿ ಕಮಿಷನರುಗಳ ಆಡಳಿತ.
ರಾ. ಆ	–	ರಾಜಕೀಯ ಇತಿಹಾಸ ಆಧುನಿಕ ಕಾಲ.
ವಿ.ಕೃ.ಕಾ	–	ವಿಜಯನಗರದ ಕೃಷ್ಣದೇವರಾಯನ ಕಾಲ.
ಶ್ರೀ.ಜೀ.ಸಾ	–	ಶ್ರೀಕೃಷ್ಣದೇವರಾಯನ ಜೀವನ ಸಾಧನೆ.
ಸ.ಭಾ.ಇ	–	ಸಮಗ್ರ ಭಾರತದ ಇತಿಹಾಸ.
A.A.R	-	Annual administration report.
A.I.R	-	All India Revue manual.
A.M.U.M	-	Administration of Mysore under Sir Mark Cubbon
A.R.S.E	-	Annual report of south Indian Ephigraphy
A.S.I.K	-	Administration and society in the Carnatic
A.S.K.U.V	-	Administration and social life under Vijayanagara

B. C. I	-	Bombay Carnatica Inscriptions.
C.C.B.P	-	The criminal clases in Bombay Presidency
C.C.O.C	-	Collections of circular orders of criminal court
C. I	-	Carnatika Inscriptions
C.R.PC	-	Criminal Procedure Code
E. B	-	Encyclopedia of Britanica.
E. C	-	Ephigraphia Carnatica
E.I	-	Ephigraphya Indica
F. P B	-	Finger print beaure.
F.P.S	-	Finger print slip
G.I.K.K.	-	Gazetteer of India, Karnataka State, Kolara District,
G.I. K.M	-	Gazetteer of India – Karnataka State, Mysore District,
G.I. K.Mn	-	Gazetteer of India – Karnataka State, Mandya District,
G. R.G.M.M	-	General and revenue secretariat of the government of His Highness the Maharaja of Mysore
H. M	-	History of Mysore
H.O.I	-	History of India
I. A	-	Indian Antiquary
I. P	-	Indain Police.
I.P.C	-	Indian Penal Code
J.P.E.S	-	Judiciary and Police in early colonial south canara
M.A.M.P	-	Manual of the administration on the Madras presidency
M.M	-	Modern Mysore
P.G.M	-	Proceedings of the Government of His Highness the Maharaja of Mysore
P.K.G.C	-	Policing in Karnataka Growth in a century
P.M.J.D	-	Proceedings of the Madras Judicial department and Judicial Consultations
P.M.R.A	-	Proceedings of the Mysore representative assembly.
R.A.C	-	Report on the Administration of Coorg.
R.A.C.M.S	-	Report on the administration of the civil and military station of Bangalore
R.A.M	-	Report on the Administration of Mysore
R.I.E. M	-	Report on the intierriar administration resources and expanditure of the Government of Mysore,

R.I.T.M	-	Report of the commissioners for the investigation of alleged cases of torture in the Madras presidency
R.P.B.I	-	Report of the public service commission on British attitude towards the employment of Indians in civil service
S.I.I	-	South India Inscriptions
S Y.I.P	-	Scottland yard and Indian Police
T.A.I	-	The administrative History of India,
T.I.P	-	The Indain Police
T.M.A.E.S	-	Tippu Sulthans Mysore, An Economic study,

ಪಾರಿಭಾಷಿಕ ಶಬ್ದಗಳು

ಅಂಕಮಾಲ	–	ಬೇಡರ ಜಾತಿಯ ಕಾವಲುಗಾರ.
ಅಮರ್‌ಗಾರ್	–	ಅಮರ್' ಎಂಬ ಇನಾಮ್ ಭೂಮಿ ಹೊಂದಿದ್ದು, ಪೊಲೀಸ್ ಕರ್ತವ್ಯ ಮಾಡುತ್ತಿದ್ದವನು.
ಅಮಿಲ್	–	ಕಂದಾಯ ಇಲಾಖೆಯ ಕಛೇರಿ.
ಅಮಿಲ್‌ದಾರ	–	ತಾಲೂಕು ಪೊಲೀಸ್ ಮತ್ತು ಕಂದಾಯ ಸಂಗ್ರಹಣ ಅಧಿಕಾರಿ.
ಆಯಗಾರ್	–	ಇನಾಮ್ ಭೂಮಿಗೆ ಬದಲಾಗಿ ಒಂದು ಶುಲ್ಕ ಅಥವಾ ಆಯವನ್ನು ಪಡೆಯುತ್ತಿದ್ದ ಕಾವಲುಗಾರ.
ಅಸೋಫ	–	ಟಿಪ್ಪು ಸುಲ್ತಾನನ ಕಾಲದ ಪೊಲೀಸ್ ಅಧಿಕಾರಿ.
ಇನಾಮ್	–	ಕಾವಲುಗಾರರಿಗೆ ನೀಡುತ್ತಿದ್ದ ತೆರಿಗೆ ರಹಿತ ಭೂಮಿ.
ಉಕ್ಕಡ	–	ಘಾಟಿ ಪ್ರದೇಶಗಳಲ್ಲಿ ಇದ್ದ ಪೊಲೀಸ್ ಉಪ-ಠಾಣೆಗಳು.
ಉತ್ತಮಸಾಸಹ ದಂಡ	–	೫೦೦ ರಿಂದ ೧೦೦೦ ಪಣ
ಉಪ ಅಮಿಲ್‌ದಾರ್	–	ಉಪತಾಲೂಕು ಪೊಲೀಸ್ ಅಧಿಕಾರಿ.
ಉಂಬಳಿದಾರ	–	ಉಂಬಳಿ ಎಂಬ ಇನಾಮ್ ಭೂಮಿ ಹೊಂದಿದ್ದವನಾಗಿದ್ದು, ಆಸ್ತಿಪಾಸ್ತಿಗಳ ರಕ್ಷಣೆಯ ಜವಾಬ್ದಾರಿ ಹೊಂದಿದವ ಮತ್ತು ಕಾವಲುಗಾರರನ್ನು ನೇವಿಸುವ ಅಧಿಕಾರ ಹೊಂದಿದವನು.
ಊರ್‌ಕಾವಲ್/ ಪಾಡಿಕಾವಲ್	–	ಗ್ರಾಮಸ್ಥರು ಗ್ರಾಮರಕ್ಷಕನಿಗೆ ನೀಡುತ್ತಿದ್ದ ಸಂಭಾವನೆ.
ಓಲೆಕಾರರು	–	ಕಂದಾಚಾರ ಪಡೆಯ ಸಿಬ್ಬಂದಿಯವರಾಗಿದ್ದು, ಅಂಚೆ ಕೆಲಸದೊಂದಿಗೆ ಗ್ರಾಮದಲ್ಲಿ ನಡೆಯುವ ಘಟನೆಗಳ ರಹಸ್ಯವರದಿ ನೀಡುತ್ತಿದ್ದ ಗೂಢ ಚಾರರು.
ಕಂದಾಚಾರ	–	ಪ್ರಾಚೀನ ಕಾಲದ ಪೊಲೀಸ್ ಪಡೆ.
ಕಂದಾಚಾರ ಭಕ್ಷಿ	–	ಪೊಲೀಸ್ ಇಲಾಖೆಯ ಮುಖ್ಯಸ್ಥ.
ಕಟ್ಟಬಿಡಿ	–	ಸಾರ್ವಜನಿಕರಿಂದ ಸಂಬಳ ಪಡೆಯುತ್ತಿದ್ದ ಕಾವಲುಗಾರ.
ಕಳ್ಳ ಕೊರಮರು	–	ಕಳ್ಳತನ ಮಾಡುತ್ತಿದ್ದ ಅಲೆಮಾರಿ ಜನಾಂಗ.
ಕಳ್ಳ ಭಂಟರು	–	ಪತ್ತೇದಾರಿಯವರು.
ಕಳ್ಳರ್	–	ಕಳ್ಳತನ ಮಾಡುತ್ತಿದ್ದ ಅಲೆಮಾರಿ ಜನಾಂಗ.

ಕಳ್ಳವೇಲೈಕಾರರು	–	ಗ್ರಾಮದ ಅಧಿಕಾರಿಗಳಲ್ಲಿ ಆಶ್ರಯ ಪಡೆದ ಗ್ರಾಮರಕ್ಷಕ.
ಕಾಪು/ಬಾರಿಕಾಪು	–	ಪೊಲೀಸ್ ಕೆಲಸ ಮಾಡುತ್ತಿದ್ದ ಗ್ರಾಮಸೇವಕ.
ಕಾವಲ್	–	ತಮಿಳುನಾಡಿನಲ್ಲಿದ್ದ ಪೊಲೀಸ್ ವ್ಯವಸ್ಥೆ.
ಕಾವಲ್‌ಗಾರ	–	ಗ್ರಾಮವನ್ನು ಕಾಯುವುದರೊಂದಿಗೆ ವ್ಯವಸ್ಥಿತ ಪೊಲೀಸ್ ಪಡೆಗೆ ನೆರವು ನೀಡುತ್ತಿದ್ದವನು.
ಕಾಹಿನವರ	–	ಕೃಷ್ಣದೇವರಾಯನ ಕಾಲದ ಒಂದು ವರ್ಗದ ಗೂಢಚಾರ ಪಡೆ.
ಕಿಲ್ಲೇದಾರ	–	ಅಮಲ್‌ದಾರನ ಕೈಕೆಳಗಿನ ಪೊಲೀಸ್ ಅಧಿಕಾರಿ.
ಕೊತ್ವಾಲ	–	ಮೊಗಲರ ಕಾಲದ ನಗರದ ಮುಖ್ಯ ಪೊಲೀಸ್ ಅಧಿಕಾರಿ.
ಕೊತ್ವಾಲಿ	–	ಕೊತ್ವಾಲನ ಕಛೇರಿ.
ಕೊರಚರು	–	ಕಳ್ಳತನ ಮಾಡುತ್ತಿದ್ದ ಅಲೆಮಾರಿ ಜನಾಂಗ.
ಕೋಲಕರ	–	ಸಂದೇಶವಾಹಕ.
ಗಸ್ತಿ	–	ಗಸ್ತು ತಿರುಗುವ ಕಾವಲುಗಾರ.
ಗ್ರಾಮಕೂಟ	–	ಮೊಗಲರ ಕಾಲದಲ್ಲಿ ಕಳ್ಳತನವನ್ನು ಪತ್ತೆಹಚ್ಚುವ ಹಳ್ಳಿಯ ಜನರ ಗುಂಪು.
ಗಿರಾಯತಿ	–	ಸಿಳ್ಳೇದಾರ ಪಡೆಯವರು ನಡೆಸುತ್ತಿದ್ದ ವ್ಯವಸಾಯ.
ಗುರಿಕಾರ	–	ಥಾನಾದಾರನ ಕೈಕೆಳಗಿನ ಪೊಲೀಸ್ ಅಧಿಕಾರಿ.
ಗೊಲ್ಲ	–	ಟ್ರಜರಿ ಅಟೆಂಡರ್.
ಗೋಪ/ಅಧಿಪತಿ	–	ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ ಪೊಲೀಸ್ ಅಧಿಕಾರಿಗಳು.
ಗೌಡ	–	ಗ್ರಾಮದ ಮುಖ್ಯಸ್ಥ .
ಘಡ್ಕರಿ	–	ಖಾನಾಪುರ ಸಂಸ್ಥಾನದ ಪೊಲೀಸ್ ಅಧಿಕಾರಿ.
ಚೌಕೀದಾರ	–	ಹಳ್ಳಿಯ ಒಬ್ಬ ಕಾವಲುಗಾರ.
ಜಮಾದಾರ್	–	ಪೊಲೀಸ್ ಪಡೆಯ ಒಂದು ಘಟಕದ ಮುಖ್ಯಸ್ಥ.
ಜಮೇದಾರ	–	ದಫೇದಾರನಿಗಿಂತ ಮೇಲಿನ ಪೊಲೀಸ್ ಅಧಿಕಾರಿ.
ಡಕಾಯಿತಿ	–	೫ ಜನರಿಗಿಂತ ಹೆಚ್ಚು ಜನರ ಗುಂಪು ನಡೆಸುವ ರಾಬರಿ.
ತಹಸಿಲ್	–	ಜಿಲ್ಲೆಯ ಒಂದು ಉಪ ಘಟಕ. (ತಾಲೂಕು).
ತಹಶೀಲ್ದಾರ್	–	ತಾಲೂಕಿನ ಮುಖ್ಯ ಅಧಿಕಾರಿ.
ತರಲ್/ಮಹರ್	–	ಬೆಳಗಾಂ ಜಿಲ್ಲೆಯಲ್ಲಿದ್ದ ಕಾವಲುಗಾರರು.
ತರಫ್	–	ಬಹಮನಿ ಅರಸರ ರಾಜ್ಯದ ವಿಭಾಗಗಳು.
ತರೀರ್	–	ಪ್ರತೀಯೊಬ್ಬ ಶಿಲ್ಲೇದಾರರ ವಾರ್ಷಿಕ ವೇತನದಿಂದ ಪಡೆಯುತ್ತಿದ್ದ ೨ ಚಿನ್ನದ ನಾಣ್ಯಗಳು.

ತಳವಾರ	–	ಗ್ರಾಮದ ಪೊಲೀಸ್ ಅಧಿಕಾರಿ.
ತಳಾರಿ/ತೋಟಿ	–	ರಸ್ತೆಗಳು ಮತ್ತು ಘಾಟಿ ಪ್ರದೇಶಗಳನ್ನು ಕಾವಲು ಕಾಯುತ್ತಾ ಸ್ಥಳೀಯ ಪೊಲೀಸರಿಗೆ ನೆರವು ನೀಡುತ್ತಿದ್ದ ಅಧಿಕಾರಿಗಳು.
ಥಾಣಾ	–	ಪೊಲೀಸ್ ಠಾಣೆ.
ಥಾನಾದಾರ	–	ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ.
ದಫೇದಾರ	–	ಆರು ಜನ ಓಲೇಕಾರರ ಮೇಲಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಒಬ್ಬ ಪೊಲೀಸ್ ಅಧಿಕಾರಿ.
ದಫ್ತರ	–	ಕಛೇರಿಯ ಕಾಗದಗಳ ಕಟ್ಟು .
ದಫ್ತರದವರು	–	ದಾಖಲಾತಿಗಳನ್ನು ಇಡುವವರು.
ದರೋಗ	–	ಪೊಲೀಸ್ ಕೆಲಸ ಮಾಡುತ್ತಿದ್ದ ಪ್ರಾಚೀನ ಕಾಲದ ಆಡಳಿತಾಂಗ/ಅಧಿಕಾರಿ.
ದಿವ್ಯಗಳು	–	ನ್ಯಾಯತೀರ್ಮಾನ ಮಾಡಲು ಬಳಕೆಯಲ್ಲಿದ್ದ ಅಮಾನುಷ ಪದ್ಧತಿ.
ದೇಶಕಾವಲ್	–	ಕಾವಲುಗಾರರಿಗೆ ಸ್ಥಳೀಯ ಜನರು ಸ್ವ-ಇಚ್ಛೆಯಿಂದ ನೀಡುತ್ತಿದ್ದ ಹಣ.
ನಾಯಕ	–	ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಅಧಿಕಾರಿ, ಆದರೆ ನೇರವಾಗಿ ಈತನು ಪೊಲೀಸ್ ಕೆಲಸದಲ್ಲಿ ಭಾಗಿಯಾಗದೇ ಕೈಕೆಳಗಿನ ಅಧಿಕಾರಿಯವರಲ್ಲಿ ಈ ಕೆಲಸ ಮಾಡುತ್ತಿದ್ದ.
ನಾಯನಕಾರ ಪದ್ಧತಿ	–	ಕಳ್ಳರ ಸಹಾಯದಿಂದ ಕಳ್ಳರನ್ನು ಹಿಡಿಯುವ ಪದ್ಧತಿ.
ನಾಯಿಬ್ ಕಿಲ್ಲೇದಾರ್	–	ಕಿಲ್ಲೇದಾರನ ಕೈಕೆಳಗೆ ಕೋಟೆಗಳನ್ನು ಕಾಯುತ್ತಿದ್ದ ಕಾವಲುಗಾರ.
ನೀರ್ಗಂಟಿ	–	ಗ್ರಾಮದ ಜನರಿಗೆ ಕುಡಿಯಲು ಮತ್ತು ವ್ಯವಸಾಯಕ್ಕೆ ನೀರನ್ನು ಬಿಡುವುದರೊಂದಿಗೆ ಕೆರೆಗಳನ್ನು ಕಾಯುತ್ತಿದ್ದ ಕಾವಲುಗಾರ.
ಪಟೇಲ	–	ಗ್ರಾಮದ ಮುಖ್ಯಸ್ಥ.
ಪ್ರಭುಗಾವುಂಡ	–	ಊರ ಗೌಡ.
ಪ್ರಥಮ ಸಾಹಸದಂಡ	–	೨೪ ರಿಂದ ೯೧ ಪಣ
ಪೋಲಿಗಾರ್	–	ರಾಜನ ಸೈನಿಕ ಸೇವೆ ಮಾಡುವ ಮತ್ತು ಪರಕೀಯ ದಾಳಿಯಿಂದ ರಾಜ್ಯವನ್ನು ರಕ್ಷಿಸುವ ಅಧಿಕಾರಿ.
ಫೌಜುದಾರ	–	ಮೊಗಲರ ಕಾಲದ ಸೇನೆಯ ಅಧಿಕಾರಿ.
ಬಾರ್‌ಗೀರ್ ವ್ಯವಸ್ಥೆ	–	ಮರಣ ಹೊಂದಿದ ಸಿಳ್ಳೇದಾರನ ಕುದುರೆಯನ್ನು ಆತನ ಮಕ್ಕಳು ದೊಡ್ಡವರಾಗುವ ವರೆಗೆ ಸರಕಾರವೇ ಸಾಕುವ ಪದ್ಧತಿ.
ಬಾರಾಬಲೂತಿ	–	ಹಳ್ಳಿಯಲ್ಲಿದ್ದ ೧೨ ಆಡಳಿತಾಂಗಗಳು.
ಬೇಹಿನವರು	–	ಕೃಷ್ಣದೇವರಾಯನ ಕಾಲದ ಒಂದು ವರ್ಗದ ಗೂಢಚಾರ ಪದ್ಧತಿ.
ಭಂಡಾರಿ	–	ಮಹಾರಾಷ್ಟ್ರದಲ್ಲಿ ಬಳಕೆಯಲ್ಲಿದ್ದ ಒಂದು ಪ್ರಜಾಸೈನ್ಯ.
ಮಹರ್	–	ಬಿಜಾಪುರ ಸುಲ್ತಾನರ ಕಾಲದ ಹಳ್ಳಿಯ ಕಾವಲುಗಾರ.

ಮಧ್ಯಮಸಾಹಸ ದಂಡ	–	೨೦೦ ರಿಂದ ೫೦೦ ಪಣ
ಮಿರ	–	ತೋಟಿಗಳಿಗೆ ರೈತರು ಧಾನ್ಯ ರೂಪದಲ್ಲಿ ನೀಡುತ್ತಿದ್ದ ತೆರಿಗೆ.
ಮುಕುದ್ದಮ್/ಮುಖಿಯಾ	–	ಷೇರ್‌ಷಹಾನ ಕಾಲದಲ್ಲಿ ಗ್ರಾಮಗಳಲ್ಲಿ ಅಪರಾಧಿಗಳನ್ನು ಹಿಡಿಯುವ ಮುಖ್ಯಸ್ಥ.
ಮುತ್ಸಿಬ್	–	ಮೊಗಲರ ಕಾಲದ ನಗರ ಪೊಲೀಸ್ ಅಧಿಕಾರಿ.
ಮುದ್ರಾಧ್ಯಕ್ಷ	–	ಕೌಟಿಲ್ಯನ ಕಾಲದ ವಿದೇಶಿ ರಹದಾರಿ ಅಧಿಕಾರಿ.
ಮೂಢದಾತಾರ	–	ಗಂಗರ ಕಾಲದ ಪೂರ್ವದ ಗಡಿಯ ಕಾವಲುಗಾರ.
ಮೈಗಾವಲರು	–	ಅಂಗರಕ್ಷಕರು.
ಮೌಪಕ	–	ಕೌಟಿಲ್ಯನ ಕಾಲದಲ್ಲಿ ರಹದಾರಿ ಪತ್ರಕ್ಕೆ ಪಡೆಯುವ ಸುಂಕದ ನಾಣ್ಯ.
ರಹದಾರಿ	–	ಪರವಾನಗಿ.
ರಕ್ಷಪಾಲ	–	ಸೇವುಣರ ಕಾಲದ ರಕ್ಷಣಾಧಿಕಾರಿ.
ರಾಜಾಸೇವಕಾನಂ ವಸಂತಿದಂಡ ಹಾಗೂ ಪ್ರಯಾಣ ದಂಡ	–	ಶಾತವಾಹನರ ಕಾಲದಲ್ಲಿ ಸೈನಿಕ ಹಾಗೂ ಕಾವಲು ದಳಗಳು ಹಳ್ಳಿಗಳಿಗೆ ಆಗಮಿಸುವಾಗ ಅವುಗಳ ನಿರ್ವಹಣೆಗೆ ಹಾಕುತ್ತಿದ್ದ ತೆರಿಗೆ.
ರೋಸ್‌ನಮಾಜ್	–	ಪಟೇಲನು ಪೊಲೀಸ್ ಕೆಲಸಕ್ಕೆ ಸಂಬಂಧಿಸಿದಂತೆ ಬರೆಯುತ್ತಿದ್ದ ದಿನಚರಿ.
ಹಕೀಮ	–	ಕ್ರಿಮಿನಲ್ ನ್ಯಾಯ ವಿಚಾರಣೆ ಮಾಡುತ್ತಿದ್ದ ನ್ಯಾಯಾಧೀಶ.
ಹಡದೆ	–	ತೋಟಿಮತ್ತು ತಳವಾರರಿಗೆ ನಿರ್ಧಿಷ್ಟ ಪ್ರಮಾಣದ ದಾನ್ಯ ನೀಡುತ್ತಿದ್ದ ಪದ್ಧತಿ.
ಹಾಜಿ–ಉಲ್–ಕಾಸ್‌ಹಾಬ್	–	ಬಹಮನಿ ಕಾಲದ ನಗರ ಪೊಲೀಸ್ ಅಧಿಕಾರಿ.
ಹಿತ್ತು–ಬಿತ್ತು	–	ಕಂದಾಚಾರ ಪಡೆಯವರಿಗೆ ನೀಡುತ್ತಿದ್ದ ಕಠಿಣ ಕೆಲಸ.
ಹುಜೂರು ಕಛೇರಿ	–	ಕಲೆಕ್ಟರ್ ಅಥವಾ ಜಡ್ಜ್‌ರವರ ಕಛೇರಿ.
ಹೋಬಳಿ	–	ತಾಲೂಕಿನ ಒಂದು ವಿಭಾಗ.
ಹೋಬಳಿದಾರ	–	೫೦ ಜನ ದಫೇದಾರರುಗಳ ಮೇಲಿನ ಪೊಲೀಸ್ ಅಧಿಕಾರಿ.
ಶಿಕ್ದಾರ	–	ಷೇರ್‌ಷಹಾನ ಕಾಲದಲ್ಲಿ ಸೈನ್ಯಾಧಿಕಾರಿಯಾಗಿ ಕಾನೂನು ಸುವ್ಯವಸ್ಥೆ ಕಾಪಾಡುತ್ತಿದ್ದವನು.
ಶಿರಸ್ತೇದಾರರು	–	ಠಾಣಾ ಬರಹಗಾರನಾಗಿದ್ದು, ಒಬ್ಬ ಠಾಣಾಧಿಕಾರಿಯ ಕೈಕೆಳಗೆ ಮೂರು ಜನ ಶಿರಸ್ತೇದಾರರು ಇದ್ದರು.
ಶೇಖ್‌ದಾರ	–	ಅಮಿಲ್‌ದಾರನ ಕೈಕೆಳಗೆ ಇದ್ದ ಒಬ್ಬ ಕಂದಾಯ ಅಧಿಕಾರಿ.
ಶೇತ್‌ಸನದಿ	–	ಧಾರವಾಡ ಜಿಲ್ಲೆಯಲ್ಲಿದ್ದ ಮರಾಠರ ಕಾಲದ ಗ್ರಾಮೀಣ ಪೊಲೀಸ್ ಪೇದೆ.
ಸದರ್ ಉಲ್ ಮೊಹಂ	–	ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಪೊಲೀಸ್ ಮಂತ್ರಿ.

ಸ್ಟಾರ್ ಪಗೋಡ	–	ಮೂರುವರೆ ರೂಗಳಿಗೆ ಸಮಾನಾದ ಬೆಲೆಯುಳ್ಳ ಒಂದು ನಾಣ್ಯ. ಫನಂ ಮತ್ತು ಪನಂ = ೮೦ ನಾಣ್ಯ. ೪೨ ಫನಂ = ಒಂದು ಸ್ಟಾರ್ ಪಗೋಡ.
ಸಿಡಿತಲೆ	–	ಹೊಯ್ಸಳರ ಕಾಲದ ಗರುಡ ಎಂಬ ಅಂಗರಕ್ಷಕರು ರಾಜನು ಸತ್ತಾಗ ಪ್ರಾಣಾರ್ಪಣೆ ಮಾಡುತ್ತಿದ್ದ ಪದ್ಧತಿ.
ಸಿಳ್ಳೇದಾರ್	–	ಹಂಗಾಮಿ ಅಶ್ವದಳ.
ಸಿಳ್ಳೇದಾರ	–	ಅಶ್ವದಳದ ಅಧಿಕಾರಿ.
ಸುಬೇದಾರ್	–	ಸೇನೆಯ ಸುಭಾ (ಪ್ರಾಂತ್ಯ) ದ ಮುಖ್ಯ ಅಧಿಕಾರಿ.
ಸೇನಾಬೋವ	–	ಶಾನುಭೋಗ (ಗ್ರಾಮದ ಲೆಕ್ಕಪತ್ರ ಬರೆಯುತ್ತಿದ್ದ ಕರಣಿಕ)
ಹಳೇಪೈಕಿಯವರು	–	ಪ್ರಾಚೀನ ಕಾಲದಲ್ಲಿ ಸರ್ವೇ ಸಾಮಾನ್ಯವಾದ ಸೇವಕ (ಪೀವನ್)
ಹುಲ್‌ಗಾವಲ್	–	೧೩ ಜಾತಿಗಳಿಂದ ಆಯ್ಕೆಯಾಗಿ ಸಾರ್ವಜನಿಕ ಖಜಾನೆ ನೋಡಿಕೊಳ್ಳುತ್ತಿದ್ದವರು.

ಚಿತ್ರಗಳು

ಅನುಬಂಧಗಳ ಪಟ್ಟಿ

ಅಧ್ಯಾಯ – ೧

೧.೧ ಅಧ್ಯಯನದ ವಿಷಯ

ರಕ್ಷಣೆ ಎನ್ನುವುದು ಮಾನವನ ಅನ್ನ, ಅರಿವೆ, ನೀರು, ಆಶ್ರಯಗಳಂತೆ ಜನರ ಅತ್ಯಂತ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ತನ್ನನ್ನು ತಾನು ರಕ್ಷಿಸಿಕೊಳ್ಳಬೇಕೆಂಬ ಅಥವಾ ತನ್ನವರನ್ನು ರಕ್ಷಿಸಿಕೊಳ್ಳಬೇಕೆಂಬ ಉದ್ದೇಶ ಅತ್ಯಂತ ಪ್ರಾಚೀನ ಕಾಲದಿಂದಲೂ ಮಾನವನಿಗೆ ಇತ್ತು. ಒಂದು ಪ್ರದೇಶದ ವ್ಯಕ್ತಿಗಳು ಇನ್ನೊಂದು ಪ್ರದೇಶದ ವ್ಯಕ್ತಿಗಳ ಮೇಲೆ ಭಿನ್ನ ಭಿನ್ನ ಕಾರಣಗಳಿಗಾಗಿ ದಾಳಿ ಮಾಡಿದಾಗ, ತನ್ನ ಹಾಗೂ ತನ್ನವರ ರಕ್ಷಣೆ ತನ್ನೊಬ್ಬನಿಂದಲೇ ಸಾಧ್ಯವಿಲ್ಲವೆಂದು ಮಾನವನು ಅರಿತಾಗ, ತಮ್ಮೆಲ್ಲರ ರಕ್ಷಣೆಗಾಗಿ ಒಂದು ಪಡೆಯನ್ನು ರಚಿಸಿಕೊಂಡು ಅದಕೊಬ್ಬ ಮುಖ್ಯಸ್ಥನನ್ನು ನೇಮಿಸಿದ. ದೇಶದ ರಕ್ಷಣೆಗಾಗಿ ಸೈನಿಕರಿದ್ದರೆ ಸಮಾಜ ರಕ್ಷಣೆಗಾಗಿ ಪೊಲೀಸರಿದ್ದರು.

ಮಾನವ ಈ ನೆಲದ ಮೇಲೆ ಎಂದಿನಿಂದ ಸಂಘಜೀವಿಯಾಗಿ ವಾಸಿಸಲು ಆರಂಭಿಸಿದನೋ ಅಂದಿನಿಂದ ಅಪರಾಧಗಳು ನಡೆದುಕೊಂಡು ಬಂದಿವೆ. ಎಲ್ಲಿ ಅಪರಾಧಗಳು ನಡೆದವೋ ಅಲ್ಲಿ ಅದನ್ನು ಪತ್ತೆ ಮಾಡುವ ಒಂದು ಪಡೆ ಅಥವಾ ದಳ ಹಾಗೂ ಆ ಅಪರಾಧಕ್ಕೆ ತಕ್ಕ ಶಿಕ್ಷೆ ನೀಡುವ ಪರಿಪಾಠ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಬಗ್ಗೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಅಪರಾಧ ನಿಯಮಗಳಿಗೆ ಸಂಬಂಧಿಸಿದ ಸ್ವರೂಪಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಬೇರೆ ಬೇರೆ ಅರಸರ ಕಾಲದಲ್ಲಿ ಇಂತಹ ಅಪರಾಧಗಳನ್ನು ಪತ್ತೆಹಚ್ಚುವ ಮತ್ತು ಶಾಂತಿ ಕಾಪಾಡುವ ಕಾಯಕವನ್ನು ಬೇರೆ ಬೇರೆ ಹೆಸರಿನಿಂದ ಕರೆಯುವ ಅಧಿಕಾರಿಗಳು ಮಾಡುತ್ತಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದ ಭೂಪ್ರದೇಶವನ್ನು ಆಳಿದ ಅರಸು ಮನೆತನಗಳಲ್ಲಿ ಸೈನ್ಯದಿಂದ ಪ್ರತ್ಯೇಕಗೊಂಡ ಒಂದು ಪೊಲೀಸ್ ವ್ಯವಸ್ಥೆ ಇತ್ತೇ? ಇದ್ದರೆ ಯಾವ ಯಾವ ರಾಜರುಗಳು ಆಂತರಿಕ ಭದ್ರತೆಗಾಗಿ ಯಾವ ಯಾವ ಹೆಸರಿನ ಅಧಿಕಾರಿಗಳನ್ನು ಇಟ್ಟಕೊಂಡು ಆಡಳಿತವನ್ನು ನಡೆಸುತ್ತಿದ್ದರು ಆ ಇಲಾಖೆಯ ರಚನೆ, ಸ್ವರೂಪ, ಬೆಳವಣಿಗೆ, ಉದ್ದೇಶಗಳ ಬಗ್ಗೆ "ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ" ಎಂಬ ಶೀರ್ಷಿಕೆಯಲ್ಲಿ ವಿಷಯದ ಅಧ್ಯಯನ ನಡೆಸಲು ನಿರ್ಧರಿಸಿರುತ್ತೇನೆ.

ಈ ಶೀರ್ಷಿಕೆಯಲ್ಲಿ ಬಂದಿರುವ 'ಕರ್ನಾಟಕ' ಎಂಬ ಶಬ್ದವನ್ನು ಬಳಸಿಕೊಳ್ಳಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕ ಎಂಬ ಭೂಪ್ರದೇಶ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಸಹ ಈಗಿನ ಕರ್ನಾಟಕದ ಹಲವು ಭೂಭಾಗಗಳು ವಿವಿಧ ಅರಸರ ಮತ್ತು ಬ್ರಿಟಿಷರ ಆಡಳಿತದಲ್ಲಿ ಇತ್ತು. 'ಕರ್ಣಾಟ' ಎಂಬ ಶಬ್ದವು ಅನೇಕ ಪ್ರಾಚೀನ ಶಾಸನ ಹಾಗೂ ಗ್ರಂಥಗಳಲ್ಲಿ ಉಲ್ಲೇಖವಿದೆ. ಕನ್ನಡ ಭಾಷೆಯನ್ನಾಡುವ ಇಂದಿನ ಕರ್ನಾಟಕದ ಭೂಪ್ರದೇಶವನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕ ಎಂಬ ಶಬ್ದ ಬಳಸಿಕೊಳ್ಳಲಾಗಿದೆ. ಇನ್ನೊಂದು 'ಪೊಲೀಸ್' ಎಂಬ ಶಬ್ದ, ಇದು ಆಂಗ್ಲಭಾಷೆಯ ಶಬ್ದವಾಗಿದ್ದು ಒಂದು ನಾಡಿನ ಆಂತರಿಕ ಭದ್ರತೆ, ಕಾನೂನು ಸುವ್ಯವಸ್ಥೆ ಹಾಗೂ ಅಪರಾಧಗಳ ತಡೆ ಮತ್ತು ಪತ್ತೆಕಾರ್ಯವನ್ನು ಮಾಡುವ ಕಾರ್ಯಾಂಗದ ಒಂದು ಪ್ರಮುಖ ಆಡಳಿತಾಂಗವಾಗಿದೆ. ಇಂತಹ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಇಂತಹ ವ್ಯವಸ್ಥೆಯು ನಡೆದು ಬಂದ ದಾರಿಯನ್ನು ತಿಳಿಯುವುದು- ಈ ಅಧ್ಯಯನದ ವಿಷಯವಾಗಿರುತ್ತದೆ.

೧.೨ ವಿಷಯದ ವ್ಯಾಪ್ತಿ

ಈ ಅಧ್ಯಯನದ ವ್ಯಾಪ್ತಿಯು ವೇದಗಳ ಕಾಲದಿಂದ ಪ್ರಾರಂಭವಾದರೂ, ವೇದಗಳಲ್ಲಿ ಬರುವ ಕೆಲವು ರಕ್ಷಣೆಯ ವಿಚಾರಗಳನ್ನು ಮಾತ್ರ ಬಳಸಿಕೊಂಡಿದೆ. ನಿಜವಾದ ಅಧ್ಯಯನವು ಮೌರ್ಯರ ಕಾಲದಿಂದ ಕ್ರಿಪೂ ೩೦೦ ರಿಂದ ಪ್ರಾರಂಭವಾಗಿ, ೧೯೪೭ ರಲ್ಲಿ ನಮ್ಮ ನಾಡು ದಾಸ್ಯಮುಕ್ತಗೊಳ್ಳುವವರೆಗೆ ಸೀಮಿತಗೊಳಿಸಲಾಗಿದೆ.

'ಪೊಲೀಸ್' ಎಂಬ ಶಬ್ದದ ವ್ಯುತ್ಪತ್ತಿ ಹೇಗೆ ಆಯಿತು ಎಂಬುದನ್ನು ಮೊದಲು ಚರ್ಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ

ನಡೆಯುತ್ತಿದ್ದ ಅಪರಾಧಗಳು ಮತ್ತು ಅವುಗಳನ್ನು ಪತ್ತೆಮಾಡುವ ಸಲುವಾಗಿ ಇದ್ದ ಅಧಿಕಾರಿ ವರ್ಗಗಳನ್ನು ಗುರುತಿಸಲಾಗಿದೆ. ರಾಜನ ಪ್ರಮುಖ ಕರ್ತವ್ಯಗಳಲ್ಲಿ ದುಷ್ಟ ಶಿಕ್ಷೆ, ಶಿಷ್ಟ ರಕ್ಷೆಯು ಒಂದಾಗಿತ್ತು. ಪೊಲೀಸ್ ವ್ಯವಸ್ಥೆಯ ಮೂಲವನ್ನು ಹುಡುಕುತ್ತಾ ಹೋದಂತೆ ನಮಗೆ ಸಿಗುವ ಅತ್ಯಂತ ಪ್ರಾಚೀನ ಗ್ರಂಥಗಳೆಂದರೆ, ಮನುಸ್ಮೃತಿ ಮತ್ತು ಕೌಟಿಲ್ಯನ ಅರ್ಥಶಾಸ್ತ್ರಗಳು. ಇವರ ಕಾಲದಲ್ಲಿ ಆಂತರಿಕ ರಕ್ಷಣೆಗಾಗಿ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆ ಇದ್ದುದು ಸುಸ್ಪಷ್ಟವಾಗಿದೆ. ಈ ವ್ಯವಸ್ಥೆಯು ಅತ್ಯಂತ ಸಂಘಟಿತವಾಗಿತ್ತು. ಇವರಿಬ್ಬರ ಸಿದ್ಧಾಂತಗಳು ಸರಿಯೇ ಅಥವಾ ತಪ್ಪೇ ಎಂಬುದನ್ನು ಚರ್ಚಿಸುವುದು ನನ್ನ ಉದ್ದೇಶವಲ್ಲ. ಆದರೆ ಆ ಕಾಲದಲ್ಲಿ ಪೊಲೀಸ್ ವ್ಯವಸ್ಥೆ ಹೇಗಿತ್ತು ಎಂಬುದನ್ನು ಸೂಕ್ಷ್ಮವಾಗಿ ವಿವರಿಸಿದೆ.

ಶಾತವಾಹನರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸ್ಪಷ್ಟವಾಗಿ ಗುರುತಿಸಲಾಗದಿದ್ದರೂ ಸಹ ಆ ಕಾಲದಲ್ಲಿದ್ದ ಕೆಲವು ಅಧಿಕಾರಿಗಳ ಕರ್ತವ್ಯಗಳ ಸ್ವರೂಪಗಳ ಆಧಾರದ ಮೇರೆಗೆ ಅವರನ್ನು ಪೊಲೀಸರೆಂದು ಭಾವಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಬಹುತೇಕ ರಾಜ ಮಹಾರಾಜರುಗಳ ಕಾಲದಲ್ಲಿ ಆಯಾ ರಾಜ್ಯದ ಸೇನೆಯೇ ರಾಜ್ಯದ ಆಂತರಿಕ ಭದ್ರತೆಗಳ ವಿಷಯವನ್ನೂ ಸಹ ನೋಡಿಕೊಂಡು ಬರುತ್ತಿತ್ತು. ಪ್ರಾಚೀನ ಕಾಲದಲ್ಲಿ ಗ್ರಾಮಗಳ ರಕ್ಷಣಾ ವ್ಯವಸ್ಥೆಯನ್ನು ಗ್ರಾಮದ 'ಗಾವುಂಡರು'ಗಳು (ಗೌಡ) ನೋಡಿಕೊಳ್ಳುತ್ತಿದ್ದರು. ಇವರುಗಳ ಸಾಹಸ ಕಥೆಗಳು, ಸಾಧನೆಗಳ ಬಗ್ಗೆ ಅನೇಕ ಕನ್ನಡ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಇಲ್ಲಿ ಚರ್ಚಿಸಲಾಗಿದೆ. ಶಾಸನಗಳಲ್ಲಿ ಅಂಗರಕ್ಷಕರ ಬಗ್ಗೆಯೂ ವಿವರಗಳಿವೆ. ಮಧ್ಯಯುಗದ ವೇಳೆಗೆ ರಾಜ್ಯದ ಆಂತರಿಕ ಭದ್ರತೆಯ ವಿಷಯವನ್ನು ಸೇನೆಯಿಂದ ಪ್ರತ್ಯೇಕಿಸಿ ವಿಭಿನ್ನವಾದ ಒಂದು ಆಡಳಿತಾಂಗವನ್ನು ಪ್ರಾರಂಭಿಸಿದ ಲಕ್ಷಣಗಳು ಕಂಡು ಬಂದಿದ್ದನ್ನು ಗುರುತಿಸಲಾಗಿದೆ.

ವಿಜಯನಗರ ಕಾಲದ ಪೊಲೀಸ್ ವ್ಯವಸ್ಥೆಯ ಬಗ್ಗೆ ಆ ಕಾಲದ ವಿದೇಶಿ ಯಾತ್ರಿಕರ ಪ್ರವಾಸ ಕಥನದಲ್ಲಿ ಬಂದ ವಿವರಗಳನ್ನು ಗಮನಿಸಲಾಗಿದೆ. ಈ ಕಾಲದಲ್ಲಿ ಸೇನೆಗಿಂತ ಭಿನ್ನವಾದ ಅಂಗರಕ್ಷಕ ಪಡೆ ಹಾಗೂ ಮಹಿಳಾ ರಕ್ಷಕರು (ಪೇದೆಗಳು) ಇದ್ದ ಬಗ್ಗೆ ಗುರುತಿಸಲಾಗಿದೆ. ಆ ಕಾಲದಲ್ಲಿ ಪೊಲೀಸ್ ಕೆಲಸ ಮಾಡುತ್ತಿದ್ದ 'ತಳಾರಿ', 'ಕಾವಲುಗಾರ', 'ದೇಶಕಾವಲಿಗಾರ' ರವರುಗಳ ಕರ್ತವ್ಯಗಳ ಸ್ವರೂಪವೇನು?, ಜವಾಬ್ದಾರಿಗಳೇನು?, 'ನಾಯಕ'ನ ಜವಾಬ್ದಾರಿಗಳೇನು? 'ಕಾವಲ್' ಪದ್ಧತಿ ಹಾಗೂ 'ಪೋಲಿಗಾರ್' ಪದ್ಧತಿಗಳೆಂದರೇನು? ಎಂಬುದರ ಬಗ್ಗೆ ವಿಷಯ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಈ ಕಾಲದಲ್ಲಿ ಒಂದು ಪ್ರತ್ಯೇಕ ಆಂತರಿಕ ಭದ್ರತೆಯ ಘಟಕ ಸ್ಥಾಪನೆಯಾದ ಬಗ್ಗೆ ಕುರುಹುಗಳು ಸಿಗುತ್ತವೆ. ಪ್ರಾಚೀನ ಕಾಲಧಲ್ಲಿ ನಡೆಯುತ್ತಿದ್ದ ನ್ಯಾಯಪದ್ಧತಿಯಾದ 'ದಿವ್ಯ'ಗಳ ಬಗ್ಗೆ ಸೂಕ್ಷ್ಮವಾಗಿ ಚರ್ಚಿಸಲಾಗಿದೆ. (ಗೂಢಚಾರ ವ್ಯವಸ್ಥೆಯು ಪೊಲೀಸ್ ವ್ಯವಸ್ಥೆಯ ಒಂದು ಭಾಗವಾಗಿದ್ದು, ಹಲವು ಅರಸರ ಗೂಢಚಾರಿ ಪದ್ಧತಿಗಳ ಬಗ್ಗೆ ವಿವರಿಸಲಾಗಿದೆ.) ವಿಜಯನಗರದ ಅರಸರ ಕಾಲದಿಂದ ಈಚೆಗೆ ಆಂತರಿಕ ಭದ್ರತೆಯ ಸಲುವಾಗಿ ಪ್ರತ್ಯೇಕವಾದ ಆಡಳಿತಾಂಗಗಳನ್ನು ರಚಿಸಿರುವುದಾಗಿ ಕಂಡಬರುತ್ತದೆ. ಬಿಜಾಪುರದ ಸುಲ್ತಾನರು ಬಹಮನಿ ಸುಲ್ತಾನರ ಆಡಳಿತ ಪದ್ಧತಿಯನ್ನೇ ಅನುಸರಿಸಿದರು. ಇವರ ಕಾಲದಲ್ಲಿ ಪ್ರತ್ಯೇಕ ಪೊಲೀಸ್ ವ್ಯವಸ್ಥೆಯನ್ನು ಗುರುತಿಸಲಾಗಿದೆ.

ಮೊಗಲರ ಕಾಲದ ಪೊಲೀಸ್ ಆಡಳಿತ ವ್ಯವಸ್ಥೆಯು ಹೇಗಿತ್ತು? ಮತ್ತು ಮೊಗಲರಿಗಿಂತ ಹಿಂದೆ ಭಾರತದಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆ ಇತ್ತೇ? ಎಂಬ ಬಗ್ಗೆ ಇಲ್ಲಿ ವಿಶಾಲವಾದ ಚರ್ಚೆಗೆ ಅವಕಾಶ ಇದ್ದರೂ ಸಹ ನನ್ನ ಅಧ್ಯಯನದ ವಿಷಯ, ವ್ಯಾಪ್ತಿಯನ್ನು ಮೀರುವ ಅಪಾಯವಿದೆ. ಹಾಗಾಗಿ ಸೂಕ್ಷ್ಮವಾಗಿ ಚರ್ಚಿಸಲಾಗಿದೆ. ಚಿಕ್ಕದೇವರಾಜ ಒಡೆಯರ ಕಾಲದ ಅಠಾರ ಕಛೇರಿಗಳಲ್ಲಿ ಪೊಲೀಸ್ ಪಡೆಗೆ ಸಂಬಂಧಿಸಿದ 'ಪಟ್ಟಣದಭಾವಡಿ' ಇತ್ತು. ಹಾಗೆಯೇ ಇವರ 'ಬಾರಾಬಲೂತಿ' ವ್ಯವಸ್ಥೆಯಲ್ಲಿ ಗ್ರಾಮೀಣ ಪೊಲೀಸರಿದ್ದರು. ಇವರ ಕಾಲದಿಂದಲೂ ಆಂತರಿಕ ಭದ್ರತೆಗಾಗಿ ಒಂದು ವಿಭಿನ್ನವಾದ ಆಡಳಿತಾಂಗವನ್ನು ಅವರು ಕಂಡು ಕೊಂಡಿದ್ದು, ಅಲ್ಲಿಂದ ಮೈಸೂರು ಅರಸರ ಕಾಲದಲ್ಲಿ ನಡೆದು ಬಂದ

'ದರೋಗ', 'ಕಂದಾಚಾರ', 'ತೋಟಿ', 'ತಳವಾರಿ', 'ಪಟೇಲ' ಮುಂತಾದ ವ್ಯವಸ್ಥೆಗಳ ಬಗ್ಗೆ ಹಾಗೂ ಅವರುಗಳ ಸಂಬಳ, ಭತ್ಯೆ, ಕರ್ತವ್ಯದ ಸ್ವರೂಪಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಪೊಲೀಸ್ ಪಡೆಯಲ್ಲಿ ಇಂದಿಗೂ ಬಳಕೆಯಲ್ಲಿರುವ 'ಪಂಚಾಯತಿ' ಎಂಬ ಶಬ್ದವು ಇವರ ಕಾಲದಲ್ಲಿಯೇ ಬಳಕೆಯಲ್ಲಿದ್ದುದನ್ನು ಗುರುತಿಸಲಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೆಳೆದು ಬಂದ ಅಶ್ವದಳ ಮತ್ತು ಮಹಾರಾಜರ ಅಂಗರಕ್ಷಕ ಪಡೆ ಬಗ್ಗೆ ಚರ್ಚಿಸಿದೆ.

ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ 'ಕಂದಾಚಾರ' ಎಂಬ ಹೆಸರಿನ ಪೊಲೀಸ್ ವ್ಯವಸ್ಥೆಯೊಂದು ಕಂಡು ಬಂದಿದ್ದು, ಇದರ ಅಧಿಕಾರಿಗಳನ್ನು 'ದರೋಗ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಹೈದರ್ ಮತ್ತು ಟಿಪ್ಪು ಕಾಲದಲ್ಲಿದ್ದ 'ಕಂದಾಚಾರ' ಪಡೆ ಇತ್ತು, 'ಫೌಜುದಾರ', 'ಅಸೋಫ' 'ಕೊತ್ವಾಲ' ಎಂಬ ಅಧಿಕಾರಿಗಳು ಪೊಲೀಸ್ ಕೆಲಸ ಮಾಡುತ್ತಿದ್ದ ಬಗ್ಗೆ ವಿವರಗಳನ್ನು ಸಂಗ್ರಹಿಸಲಾಗಿದೆ. ಇದು ಒಂದು ಸ್ಪಷ್ಟವಾದ ಪೊಲೀಸ್ ವ್ಯವಸ್ಥೆಯಾಗಿತ್ತು. ಇದೇ ಕಂದಾಚಾರ ಶಬ್ದದ ಬಳಕೆಯು ವಿಜಯನಗರದ ಕಾಲದಲ್ಲಿಯೂ ಸಹ ಕಂಡುಬರುತ್ತದೆ. ಈ ಕಂದಾಚಾರ ವ್ಯವಸ್ಥೆಯ ಬಗ್ಗೆ ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. 'ಕಂದಾಚಾರಿ'ಗಳ ನೇಮಕಾತಿ, ಕರ್ತವ್ಯಗಳ ಸ್ವರೂಪ, ಅವರುಗಳ ಸಂಬಳ, ಕಂದಾಚಾರಿಗಳ ದಂಗೆ ಕಂದಾಚಾರಿ ಪಡೆಯ ರದ್ಧತಿ ವಿಚಾರ, ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. ಟಿಪ್ಪು ಸುಲ್ತಾನನು ಪೊಲೀಸ್ ಅಧಿಕಾರಿಗಳಿಗೆ ಪತ್ರಗಳನ್ನು ಬರೆದು ಅವರನ್ನು ನಿಯಂತ್ರಿಸುತ್ತಿದ್ದ ಬಗ್ಗೆ ವಿಷಯ ಸಂಗ್ರಹಿಸಲಾಗಿದೆ.

ದಿವಾನ್ ಪೂರ್ಣಯ್ಯನವರು ಟಿಪ್ಪುವಿನ ಮರಣಾನಂತರ ಆತನ ಹರಿದು ಹಂಚಿ ಹೋಗಿದ್ದ ಸೇನೆಯಲ್ಲಿ ಅಳಿದುಳಿದ ಸೈನಿಕರನ್ನು ಕಂದಾಚಾರ ಪಡೆಗೆ ಸೇರಿಸಿಕೊಂಡು ಈ 'ಕಂದಾಚಾರ' ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ತಂದರು. ಮೈಸೂರು ಅರಸರ ಕಾಲದಲ್ಲಿ ನಾಡಿನ ಆಂತರಿಕ ಭದ್ರತೆಯ ಹಾಗೂ ರಕ್ಷಣೆಯ ಸಲುವಾಗಿ ಹಲವು ಕ್ರಮಗಳನ್ನು ಕೈಗೊಂಡಿದ್ದು, ಅವುಗಳನ್ನು ಮತ್ತು ಇವರು ಕಂದಾಚಾರ ಪಡೆಯನ್ನು ರಚಿಸಿದ್ದು ನಿಜವೇ? ಅಥವಾ ಅಲ್ಲವೇ? ಎಂಬ ಬಗ್ಗೆ ಚರ್ಚಿಸಲಾಗಿದೆ.

ಪ್ರಾಚೀನ ಕಾಲದಲ್ಲಿ ಪೊಲೀಸ್ ಕೆಲಸಗಳು ಮತ್ತು ನ್ಯಾಯಾಂಗದ ಕೆಲಸಗಳು ಒಟ್ಟಿಗೆ ಒಬ್ಬ ಅಧಿಕಾರಿಯಲ್ಲೇ ಸಮ್ಮಿಳಿತವಾಗಿದ್ದವು. ಬಹುಶ: ಲಾರ್ಡ್ ಕಾರ್ನ್‌ವಾಲೀಸನು ಈ ಎರಡು ಇಲಾಖೆಗಳನ್ನು ಪ್ರತ್ಯೇಕಗೊಳಿಸುವವರೆಗೆ ಈ ವ್ಯವಸ್ಥೆ ನಡೆದು ಬಂತು.

ಬ್ರಿಟೀಷ್ ಆಡಳಿತ ಕಾಲದಲ್ಲಿ ಅಂದರೆ ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟ ಮಂಗಳೂರು, ಬಳ್ಳಾರಿ, ಮಲಬಾರ್ ಜಿಲ್ಲೆಗಳನ್ನೊಳಗೊಂಡ ಭೂಪ್ರದೇಶಗಳಲ್ಲಿ ಮತ್ತು ಮೈಸೂರನ್ನಾಳಿದ ಬ್ರಿಟೀಷ್ ಕಮಿಷನರುಗಳ ಕಾಲದಲ್ಲಿದ್ದ ಪೊಲೀಸ್ ಇಲಾಖೆಯ ರಚನೆ, ಸ್ವರೂಪ, ಬದಲಾವಣೆ, ಪುನರ್‌ಸಂಘಟನೆಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಬ್ರಿಟೀಷರ ಆಡಳಿತದ ಆರಂಭದಲ್ಲಿದ್ದ ಮತ್ತು ಬಂಗಾಳದ ಪೊಲೀಸ್ ವ್ಯವಸ್ಥೆ ನಮ್ಮ ಪೊಲೀಸ್ ವ್ಯವಸ್ಥೆಯ ಮೇಲೆ ಬೀರಿದ ಪ್ರಭಾವ, ಲಾರ್ಡ್ ಕಾರ್ನ್‌ವಾಲೀಸ್ ಹಾಗೂ ಇತರರು ಪೊಲೀಸ್ ಇಲಾಖೆಯಲ್ಲಿ ತಂದ ಬದಲಾವಣೆಗಳ ಬಗ್ಗೆ ಚರ್ಚಿಸಿದೆ. ಪೊಲೀಸ್ ಕೆಲಸಕ್ಕೆ ಭಾರತೀಯರನ್ನು ಸೇರಿಸಿಕೊಳ್ಳುವ ಮತ್ತು ಬ್ರಿಟೀಷರಿಗಿದ್ದ ಮನೋಭಾವಗಳ ಬಗ್ಗೆ ಚರ್ಚಿಸಲಾಗಿದೆ. ಬ್ರಿಟೀಷರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸುವ ಸಲುವಾಗಿ ೧೮೬೦ ರಲ್ಲಿ ರಚಿಸಲಾದ ಪೊಲೀಸ್ ಆಯೋಗ, ಐಸ್‌ಲಿಂಗ್‌ಟನ್ ವರದಿ, ನಂತರ ೧೮೬೧ರ ಭಾರತೀಯ ಪೊಲೀಸ್ ಕಾಯ್ದೆ, ಮೈಸೂರು ಪೊಲೀಸ್ ಕಾಯ್ದೆ, ಬ್ರಿಟನ್ ಮತ್ತು ಮೈಸೂರಿನ ಪೊಲೀಸ್ ಪಡೆಯ ವ್ಯತ್ಯಾಸಗಳು, ಮೈಸೂರಿನಲ್ಲಿ ಆಗಿಹೋದ ಐ.ಜಿ.ಪಿರವರುಗಳು ಪೊಲೀಸ್ ಇಲಾಖೆಗೆ ನೀಡಿದ ಕೊಡುಗೆಗಳು, ಆಧುನಿಕ ಕಾನೂನಿನ ಬೆಳವಣಿಗೆಗಳು ಮೊದಲಾದ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ಬ್ರಿಟೀಷರ ಕಾಲದ ಪೊಲೀಸ್ ನೇಮಕಾತಿ, ಅವರ ಪದೋನ್ನತಿ, ಶಿಕ್ಷೆ, ದಂಡ, ಬಹುಮಾನ, ಅಪರಾಧದ ತಡೆ, ಅಪರಾಧದ ಪತ್ತೆ, ಘೋರ ಅಪರಾಧಗಳು, ಸಂಜ್ಞೆಯ ಅಪರಾಧಗಳು, ಅಸಂಜ್ಞೆಯ ಅಪರಾಧಗಳು, ಕೆ.ಡಿ.ಗಳು, ಪ್ರೋಸೆಸ್‌ಗಳು, ಗಡಿಪಾರು, ಬೆರಳಚ್ಚು, ಗ್ರಾಮ ಪೊಲೀಸ್, ಮೋಟಾರು ವಾಹನ ಅಪರಾಧಗಳು, ಕೆಟ್ಟ ನಡತೆಯವರ ಮೇಲೆ ಕೈಗೊಂಡ ಕ್ರಮಗಳು, ಬ್ರಿಟನ್‌ನಲ್ಲಿದ್ದ ಪೊಲೀಸ್ ವ್ಯವಸ್ಥೆಗೂ ಭಾರತದಲ್ಲಿದ್ದ ಪೊಲೀಸ್ ವ್ಯವಸ್ಥೆಯ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದಲ್ಲಿದ್ದ ಪ್ರಮುಖ ಜಿಲ್ಲೆಗಳಲ್ಲಿದ್ದ ಪೊಲೀಸ್ ಪಡೆಯ ಸ್ವರೂಪ, ಅಲ್ಲಿ ನಡೆದ ಪೊಲೀಸ್ ದೌರ್ಜನ್ಯಗಳು, ಪತ್ತೆದಾರಿ ದಳಗಳು, ದರೋಗನ ಕರ್ತವ್ಯಗಳ ಬಗ್ಗೆ ಚರ್ಚಿಸಿದೆ.

ಪೊಲೀಸ್ ತರಬೇತಿ ಶಾಲೆಗಳು, ಪೊಲೀಸರಿಗೆ ವಸತಿ, ಸಮವಸ್ತ್ರ ಮತ್ತು ಇತರ ಸೌಲಭ್ಯಗಳು, ಪೊಲೀಸರ ಮೇಲೆ ಅಧಿಕಾರಿಗಳ ದೌರ್ಜನ್ಯ, ಪೊಲೀಸ್ ಅಶ್ವದಳ, ಮೈಸೂರು ಪೊಲೀಸ್ ಬ್ಯಾಂಡ್, ವಿಶೇಷ ಮೀಸಲು ಪೊಲೀಸ್ ಪಡೆ, ಪ್ರಹಾರ ದಳ, ಸಿ.ಐ.ಡಿ, ರೈಲ್ವೆ ಪೊಲೀಸ್, ವಿಶೇಷ ಘಟಕ, ಪೊಲೀಸ್ ಸಾರಿಗೆ, ಕಛೇರಿ ಸಿಬ್ಬಂದಿಗಳು, ಕಾರಾಗೃಹಗಳು, ಪೊಲೀಸ್ ಸಮವಸ್ತ್ರ, ವಸತಿ, ಪೊಲೀಸ್ ತರಬೇತಿ, ಅಪರಾಧ ವಿಭಾಗಗಳು, ಪೊಲೀಸ್ ಕ್ರೀಡಾಕೂಟ ಮತ್ತು ಗ್ರಾಮೀಣ ಪೊಲೀಸ್ ಮುಂತಾದ ವಿಷಯಗಳ ಬಗ್ಗೆ ಅಂಕಿಅಂಶಗಳ ಸಹಿತ ಇಲ್ಲಿ ಚರ್ಚಿಸಲಾಗಿದೆ. ಈ ಅಂಕಿಅಂಶಗಳನ್ನು ಅನುಬಂಧದ ರೂಪದಲ್ಲಿ ನೀಡಲಾಗಿದೆ.

ಪೊಲೀಸ್ ವರಿಷ್ಠಾಧಿಕಾರಿಗಳ ಹಾಗೂ ರಾಜ್ಯ ಪೊಲೀಸ್ ಮುಖ್ಯಸ್ಥರುಗಳ ಪಟ್ಟಿಯನ್ನು ಸಂಗ್ರಹಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದಲ್ಲಿದ್ದ ಪೊಲೀಸ್ ಐ.ಜಿ.ಪಿಗಳ ಚಿತ್ರಗಳು ಹಾಗೂ ಪ್ರಾಚೀನ ಕಾಲದ ಪೊಲೀಸ್ ಪಡೆಗಳಿಗೆ ಸಂಬಂಧಿಸಿದ ಹಾಗೂ ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯ, ರಕ್ಷಣೆಯ ಕಾರ್ಯ ಮಾಡುತ್ತಿದ್ದ ಹಳೇಪೈಕಿಯವರ ಮತ್ತು ಅಶ್ವದಳಗಳಿಗೆ ಸಂಬಂಧಿಸಿದ ಪ್ರಾಚೀನ ಚಿತ್ರಗಳನ್ನು ಸಂಗ್ರಹಿಸಲಾಗಿದೆ. ದಿವಾನ್ ಪೂರ್ಣಯ್ಯನವರು ರಕ್ಷಣೆ ಬಗ್ಗೆ ಬರೆದ ಪತ್ರಗಳು, ಮೈಸೂರು ಪೊಲೀಸ್, ಮೈಸೂರಿನ ಪೊಲೀಸ್ ಬ್ಯಾಂಡ್, ಮೈಸೂರು ದಸರಾ ಉತ್ಸವದ ಸಂದರ್ಭದಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳ ಚಿತ್ರಗಳು, ಕೇಂದ್ರ ಕಾರಾಗೃಹ, ನೇಣುಗಂಬದ ಶಿಕ್ಷೆ ನೀಡುವ ಸೆಟ್ ಹಾಗೂ ಪೊಲೀಸರ ಸಮವಸ್ತ್ರಗಳ ಬಗ್ಗೆ ೮೦ ಕ್ಕೂ ಹೆಚ್ಚು ಅಪರೂಪದ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

೧.೩: ಅಧ್ಯಯನದ ಉದ್ದೇಶ

ಬ್ರಿಟೀಷರು ಭಾರತಕ್ಕೆ ಬರುವುದಕ್ಕಿಂತ ಮುಂಚೆ ಪೊಲೀಸ್ ವ್ಯವಸ್ಥೆಯ ಸ್ವರೂಪಗಳು ಪ್ರತೀ ರಾಜ್ಯದಲ್ಲಿ ಭಿನ್ನವಾಗಿದ್ದವು. ಅಲ್ಲಿನ ಕಾನೂನುಗಳು ಭಿನ್ನವಾಗಿದ್ದು, ಅಪರಾಧಗಳ ತಡೆ, ಅಪರಾಧಗಳ ಪತ್ತೆ ಮತ್ತು ಕಾನೂನು ಸುವ್ಯವಸ್ಥೆಯ ಪರಿಪಾಲನೆಗಾಗಿ ವಿವಿಧ ಹೆಸರಿನಿಂದ ಕರೆಯುತ್ತಿದ್ದ ಘಟಕಗಳಿದ್ದವು. ಕಾನೂನು ಜಾತಿ ಆಧಾರಿತ ಹಾಗೂ ಧರ್ಮಾಧರಿತವಾಗಿತ್ತು. ಬ್ರಿಟೀಷರು ಭಾರತಕ್ಕೆ ಬಂದು ಆಡಳಿತ ನಡೆಸಲು ಆರಂಭಿಸಿದಾಗ ಕಾನೂನಿನಡಿಯಲ್ಲಿ ಎಲ್ಲರೂ ಸಮಾನರಾದರು. ಆದರೆ ಬ್ರಿಟೀಷರು ಕಾನೂನು ಸುವ್ಯವಸ್ಥೆ ಪಾಲನೆಯ ಹೆಸರಿನಲ್ಲಿ ತಮ್ಮ ವಿರುದ್ಧ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವ ಸಲುವಾಗಿ ಪೊಲೀಸ್ ಪಡೆಯನ್ನು ಬಳಸಿಕೊಂಡರು. ಹೋರಾಟಗಾರರ ಮೇಲೆ ಇನ್ನಿಲ್ಲದ ದೌರ್ಜನ್ಯವನ್ನು ನಡೆಸಲಾಯಿತು. ಪೊಲೀಸ್ ಪಡೆಯನ್ನು ಹೆಚ್ಚಾಗಿ ಯುರೋಪಿಯನ್ನರ ರಕ್ಷಣೆಗಾಗಿ ಬಳಸಿಕೊಂಡರು. ತಮ್ಮ ಸ್ಥಾಪಿತ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವ ಸಲುವಾಗಿ ಪೊಲೀಸ್ ಇಲಾಖೆಗೆ ಇದ್ದ ಕಂದಾಯ ವಸೂಲಿಯ ಜವಾಬ್ದಾರಿ ಮತ್ತು ನ್ಯಾಯಾಂಗ ಜವಾಬ್ದಾರಿಗಳನ್ನು ಕಿತ್ತಕೊಂಡು, ಹಿರಿಯ ಪೊಲೀಸ್ ಅಧಿಕಾರಿಗಳೆಲ್ಲರೂ ಯುರೋಪಿಯನ್ನರಾಗಿರಬೇಕೆಂದು ನಿಯಮವನ್ನು ಜಾರಿಗೆ ತಂದರು. ಪೊಲೀಸ್ ಪಡೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ

ಉದ್ದೇಶದಿಂದ ಹಿಂದೆ ಇದ್ದ ಪೊಲೀಸ್ ವ್ಯವಸ್ಥೆಯು, ಕಾನೂನು ಸುವ್ಯವಸ್ಥೆ ಪಾಲನೆ ಮಾಡಲು ಅಸಮರ್ಥವಾಗಿದೆ ಮತ್ತು ಭ್ರಷ್ಟಾಚಾರದಿಂದ ಕೂಡಿದೆ ಎಂಬ ಆರೋಪಗಳನ್ನು ಅವರ ಮೇಲೆ ಹೊರಿಸಿ, ಇದರ ಸುಧಾರಣೆಗಾಗಿ ಯುರೋಪಿಯನ್ನರಿಂದಲೇ ಕೂಡಿದ ವಿವಿಧ ಆಯೋಗಗಳನ್ನು ರಚಿಸಿ, ಆ ಆಯೋಗಗಳಿಂದ ಈ ಆರೋಪವನ್ನು ಎತ್ತಿಹಿಡಿದು ಪೊಲೀಸ್ ಇಲಾಖೆಯ ಪುನರ್ ಸಂಘಟನೆಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳೆಲ್ಲರೂ ಯುರೋಪಿಯನ್ನರಾಗಿರಬೇಕೆಂದು ಸಲಹೆಗಳನ್ನು ನೀಡಿಸಲಾಯಿತು. ಮತ್ತು ಅದನ್ನು ಸರಕಾರವು ಒಪ್ಪಿಕೊಂಡಿತು. ಕೆಳದರ್ಜೆಯ ಅಧಿಕಾರಿಗಳು ಮಾತ್ರ ಭಾರತೀಯರಾಗಿದ್ದರು. ಸ್ವಾತಂತ್ರ್ಯ ಹೋರಾಟವನ್ನು ಈ ಕೆಳದರ್ಜೆಯ ಪೊಲೀಸರ ಸಹಾಯದಿಂದಲೇ ಹತ್ತಿಕ್ಕಲಾಯಿತು. ಇವರನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಸಲುವಾಗಿ ಕೆಳಹಂತದ ಪೊಲೀಸರಿಗೆ ದೈಹಿಕ ಶ್ರಮವನ್ನು ಒಳಗೊಂಡ ಉಗ್ರವಾದ ಶಿಕ್ಷೆಗಳನ್ನು ನೀಡಲಾಗುತ್ತಿತ್ತು. ಪೊಲೀಸರು ಸ್ವಾತಂತ್ರ್ಯ ಹೋರಾಟಗಾರರ ಮೇಲೆ ನಡೆಸಿದ ದೌರ್ಜನ್ಯದ ಕಥೆಗಳು ಅತ್ಯಂತ ಕರುಣಾಜನಕವಾಗಿದೆ. ಈ ದೌರ್ಜನ್ಯದಿಂದಲೇ ಪೊಲೀಸರೆಂದರೆ ದುಷ್ಟರೆಂಬ ಭಾವನೆ ಇಂದಿಗೂ ಬೆಳೆದುಕೊಂಡು ಬಂದಿದೆ.

ಕರ್ನಾಟಕದಲ್ಲಿ ಬ್ರಿಟೀಷರ ಪೊಲೀಸ್ ವ್ಯವಸ್ಥೆ ಮೊದಲಿಗೆ ಕಾಣಿಸಿಕೊಂಡಿದ್ದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ. ಭಾರತೀಯರನ್ನು ಪೊಲೀಸ್ ಇಲಾಖೆಗೆ ಸೇರಿಸಿಕೊಳ್ಳುವ ಬಗ್ಗೆ ಬ್ರಿಟೀಷರು ವಿಭಿನ್ನ ನಿಲುವು ತಳೆದಿದ್ದರು. ಪೊಲೀಸ್ ಇಲಾಖೆಯ ಸಾಂಸ್ಥಿಕ ಗುಣಲಕ್ಷಣಗಳನ್ನು ವಸಾಹತುಶಾಹಿ ವ್ಯವಸ್ಥೆಯ ಇತರ ಘಟಕಗಳೊಂದಿಗೆ ಹೋಲಿಸಿ ನೋಡಿದಾಗ ಅದು ಬ್ರಿಟೀಷರ ಅಗತ್ಯಕ್ಕೆ ತಕ್ಕಂತೆ ಯುರೋಪಿನಲ್ಲಿ ಬೆಳವಣಿಗೆಗೆಬಂತು.[೧] ಯುರೋಪಿಯನ್ನರು ಪೊಲೀಸ್ ಇಲಾಖೆಯಲ್ಲಿ ಮೇಲ್ವಿಚಾರಕ ಹುದ್ದೆಯನ್ನು ವಶಪಡಿಸಿಕೊಳ್ಳಲೇಬೇಕೆಂದು ನಿರ್ಧರಿಸಿದ್ದರು. ಅವರು ಭಾರತೀಯರ ಬಗ್ಗೆ ಅಪನಂಬಿಕೆ ಹೊಂದಿದ್ದರು. ಅದಕ್ಕಾಗಿ ಅಧೀನ ಅಧಿಕಾರಿಗಳ ನೇಮಕಾತಿಗೆ ಇದ್ದ ಮಧ್ಯಸ್ಥಿಕೆದಾರರನ್ನು ತೆಗೆದು ಹಾಕಿದರು.[೨]

ಯುರೋಪಿಯನ್ನರ ಮೇಲ್ವಿಚಾರಣೆ ಇಲ್ಲದೇ ಸ್ಥಳೀಯ ಪೊಲೀಸ್‌ನಲ್ಲಿ ಕಾನ್‌ಸ್ಟೇಬಲ್ ಅಥವಾ ಹೆಡ್‌ಕಾನ್‌ಸ್ಟೇಬಲ್‌ಗಳು ನಿರೀಕ್ಷಿತ ಮಟ್ಟಕ್ಕೆ ಕೆಲಸ ಮಾಡುವುದಿಲ್ಲ, ಅಷ್ಟೇ ಅಲ್ಲದೇ ಪೊಲೀಸ್ ಇಲಾಖೆಯು ಪರಿಪೂರ್ಣವಾಗಿ ಕೆಲಸ ಮಾಡಬೇಕಾದರೆ, ಯುರೋಪಿಯನ್ನರ ಬುದ್ಧಿಶಕ್ತಿ ಅಗತ್ಯವಿದೆಯೆಂದು ವಾದಿಸಲಾಯಿತು.[೩] ೧೮೫೦ರ ವೇಳೆಗೆ ಮೇಲ್ವಿಚಾರಣಾ ಸಿದ್ಧಾಂತವನ್ನು ಸ್ಥಾಪಿಸಲಾಯಿತು. ಹೀಗಾಗಿ ಎಸ್.ಪಿ ದರ್ಜೆಯ ಅಧಿಕಾರಿಗಳನ್ನಾಗಿ ಯುರೋಪಿಯನ್ನರನ್ನು ನೇಮಿಸಲಾಯಿತು.[೪]

ಪೊಲೀಸ್ ಇಲಾಖೆಯ ಅಧಿಕಾರಿಗಳ ಅದರಲ್ಲೂ ಅಧೀನ ಅಧಿಕಾರಿಗಳ ನೇಮಕಾತಿಯು ಸಂಪೂರ್ಣವಾಗಿ ಪ್ರಾಚೀನ ವರ್ಗ ವ್ಯವಸ್ಥೆಯನ್ನೇ ಅವಲಂಬಿಸಿತ್ತು. ಇದನ್ನು ಪ್ರೋತ್ಸಾಹಿಸುವುದರಿಂದ ಸಮಾಜದಲ್ಲಿ ಇರುವ ಸ್ಥರೀಕರಣ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವುದು ಬ್ರಿಟೀಷರ ಉದ್ದೇಶವಾಗಿತ್ತು. ವಸಾಹತುಶಾಹಿ ಅಧಿಕಾರಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರನ್ನು ಪೊಲೀಸ್ ಕೆಲಸಕ್ಕೆ ನೇಮಿಸುತ್ತಿರಲಿಲ್ಲ. ಈಗಾಗಲೇ ಉದ್ಯೋಗದಲ್ಲಿದ್ದ 'ಪರಿಹಾತ್' ಮೊದಲಾದ ಅಸ್ಪೃಶ್ಯರನ್ನು ಉದ್ಯೋದದಿಂದ ತೆಗೆದು ಹಾಕಲಾಯಿತು. ಇವರುಗಳು ಪೊಲೀಸ್ ಕೆಲಸ ಮಾಡಲು ಉನ್ನತ ಜಾತಿಯವರ ಮನೆಗೆ ಹೋಗಲು ಸಾಧ್ಯವಿಲ್ಲ. ಮತ್ತು ಅವರ ಮನೆಗಳನ್ನು ಶೋಧಿಸುವಂತಹ ಪೊಲೀಸ್‌ನ ಮೂಲಭೂತ ಕರ್ತವ್ಯಗಳನ್ನು ಮಾಡಲು ಸಾಧ್ಯವಿಲ್ಲವೆಂದು ಮತ್ತು ಇವರುಗಳು ರೂಢಿಗತ ಅಪರಾಧಿಗಳಾಗವುದರಿಂದ ನೇಮಕಾತಿಗೆ ಅನರ್ಹರೆಂದು ಭಾವಿಸಲಾಗಿತ್ತು.[೫] ಪೊಲೀಸ್ ಇಲಾಖೆಗೆ ನೇಮಕಗೊಳ್ಳಲು ಅಭ್ಯರ್ಥಿಗಳೇ ಇಲ್ಲದ ಸಮಯದಲ್ಲಿ ಮಾತ್ರ ಇವರುಗಳನ್ನು ಆಯ್ಕೆ ಮಾಡಲಾಗುತ್ತಿತ್ತು.[೬] ಮಲಬಾರಿನ ಮಾಪಿಲ ಮುಸ್ಲೀಮರು ದಕ್ಷಿಣ ತಮಿಳುನಾಡಿನ 'ಮರವರ್' ಮತ್ತು 'ಕಳ್ಳರ್' ಮತ್ತು ಇತರ ಜನಾಂಗದವರನ್ನು ಕಾನೂನು ಭಂಗಮಾಡುವರೆಂದು ಪಟ್ಟಿ ಮಾಡಲಾಯಿತು. ೧೮೬೦

ರಿಂದ ೧೯೦೫ ರವರೆಗೆ ಪ್ರತೀ ವರ್ಷ ಇವರು ಅಪರಾಧಗಳಲ್ಲಿ ಭಾಗಿಯಾದ ಬಗ್ಗೆ ಶೇಕಡಾವಾರು ಅಂಕಿಅಂಶಗಳನ್ನು ಪ್ರಕಟಿಸಲಾಯಿತು.[೭] ಈ ಬಗ್ಗೆ ಹಲವು ಬ್ರಿಟೀಷ್ ಸಾಹಿತ್ಯಗಳು ಪ್ರಕಟವಾದವು. ಗೆಜೆಟಿಯರ್, ಜಿಲ್ಲಾ ಕೈಪಿಡಿಗಳಲ್ಲಿ ಈ ಮಿತ್ಯವನ್ನು ಸತ್ಯವೆಂದು ಪ್ರಚಾರ ಮಾಡಲಾಯಿತು. ಇಡೀ ಜನಾಂಗವನ್ನು ಏಕದೃಷ್ಟಿಕೋನದಿಂದ ನೋಡಲಾಯಿತು. ಭಾರತೀಯರು ವಸಾಹತುಶಾಹಿಯ ಜ್ಞಾನದ ಪರಿಮಿತಿಯೊಳಗೆ ಸಸ್ಯ ವಿಜ್ಞಾನ ಮತ್ತು ಪ್ರಾಣಿವಿಜ್ಞಾನದ ಪ್ರಯೋಗಾಲಯಗಳ ಮಾದರಿ ವಸ್ತುಗಳಂತೆ ಆಗಿದ್ದರು.[೮]

ಮುಸ್ಲೀಮರು ದನವನ್ನು ತಿನ್ನುವವರಾದುದರಿಂದ ಅವರು ಶೌರ್ಯವಂತರೆಂದೂ ಭಾವಿಸಲಾಗಿತ್ತು.[೯] ಮತ್ತು ನಾಯರ್‌ಗಳನ್ನೂ ಸಹ ಮಾರ್ಷಲ್ ರೇಸ್ ಹೊಂದಿದ ಅಂದರೆ ಶೌರ್ಯವಂತರೆಂದೂ, ಉಳಿದ ಹಿಂದುಗಳು ಹೇಡಿಗಳೆಂದು ಬ್ರಿಟೀಷರು ನಂಬಿದ್ದರು.[೧೦] ಈ ಮಾರ್ಷಲ್‌ರೇಸ್ ಸಿದ್ಧಾಂತದ ಪರಿಣಾಮದಿಂದಾಗಿ ೧೯ನೇ ಶತಮಾನದಲ್ಲಿ ನೇಮಕಾತಿಯಲ್ಲಿ ನಾಟಕೀಯ ಕುಸಿತ ಕಂಡಿತು.[೧೧] ಹೀಗಾಗಿ ಮುಸ್ಲಿಮರು ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಸಹ ಪೊಲೀಸ್ ಉದ್ಯೋಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರು. ಹಿಂದೂ ಸಂಸ್ಥಾನಗಳಲ್ಲಿ ಮುಸ್ಲೀಮ್ ಕಾನ್ಸ್ಟೇಬಲರಿ ಇರುವುದು ಬ್ರಿಟೀಷರಿಗೆ ಪ್ರಧಾನ ಆಕರ್ಷಣೆಯ ವಿಷಯವಾಗಿತ್ತು. ಏಕೆಂದರೆ, ಹಿಂದುಗಳಿಗಿಂತಲೂ ಮುಸ್ಲೀಮರು ವಸಾಹತುಶಾಹಿಗೆ ಹೆಚ್ಚು ವಿದೇಯರಾಗಿದ್ದರು.[೧೨]

ಅಂತೆಯೇ ಮಲಿಯಾಳಿ ಜನಾಂಗದೊಳಗೆ ನಾಯರ್‌ಗಳು ಪ್ರಥಮ ಸ್ಥಾನದಲ್ಲಿದ್ದರು. ಅವರುಗಳನ್ನು ಮಿಲಿಟರಿ ಕುಲೀನರೆಂದು, ಆರ್ಮಿ ಮಾನ್ಯುವೆಲ್‌ನಲ್ಲಿ ಕರೆಯಲಾಗಿದೆ.[೧೩] ನಾಯರ್‌ಗಳು ಮಿಲಿಟರಿ ಮತ್ತು ಪೊಲೀಸ್ ಇಲಾಖೆಯ ಹುದ್ದೆಗಳನ್ನು ಉದ್ಯೋಗಕ್ಕಾಗಿ ಪಡೆಯುವುದಕ್ಕಿಂತಲೂ ಹೆಚ್ಚಾಗಿ ಅದೊಂದು ಶೌರ್ಯ ಮತ್ತು ಗೌರವದ ಸಂಕೇತವೆಂದು ಭಾವಿಸಿದ್ದರು. ಭಾರತೀಯ ಕ್ರಿಶ್ಚಿಯನ್ನರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರು. ಆದರೆ ಮಿಷನರಿಗಳ ಮೂಲಕ ಅಕ್ಷರಸ್ಥರಾಗುವ ಮತ್ತು ಇಂಗ್ಲೀಷ್ ಜ್ಞಾನ ಪಡೆಯುವ ಅವಕಾಶ ಸಿಕ್ಕಿತು. ಇವರು ಭಾರತೀಯರೆಂಬ ಅನುಮಾನ ಬ್ರಿಟೀಷರಿಗೆ ಇದ್ದರೂ ಸಹ, ನೇಮಕಾತಿಯಲ್ಲಿ ಇವರು ಹೆಚ್ಚಿನ ಲಾಭ ಪಡೆದರು.[೧೪] ಇವರು ಸ್ವದೇಶಿಯರಾಗಿ, ಸ್ಥಳೀಯ ಸಮಾಜದ ಪರಿಚಿತರಾಗಿ, ಮಾತೃಭಾಷೆಯನ್ನು ಬಲ್ಲವರಾಗಿ ಮತ್ತು ಬ್ರಿಟೀಷರಿಗೆ ಅವರ ಧರ್ಮರವರೆಂಬ ಕಾರಣಕ್ಕೆ ಬಾಂದವ್ಯ ಬೆಳೆಯಿತು.[೧೫] ಉಳಿದ ಜನಾಂಗಗಳಿಗೆ ಸಂಬಂಧಿಸಿದಂತೆ ನಿಷ್ಠೆಯ ಪ್ರಶ್ನೆ ಅಸ್ಪಷ್ಟವಾಗಿತ್ತು. ಬ್ರಾಹ್ಮಣರನ್ನು ಇನ್ನಿಲ್ಲದ ಅನುಮಾನದ ದೃಷ್ಟಿಯಿಂದ ನೋಡಿಕೊಳ್ಳಲಾಯಿತು. ಏಕೆಂದರೆ, ಮದ್ರಾಸ್ ಕಾಂಗ್ರೇಸ್‌ನ ಪ್ರಭಲ ನಾಯಕತ್ವವನ್ನು ಬ್ರಾಹ್ಮಣರು ಹೊಂದಿದ್ದರು. ಒಂದೇ ಜಾತಿಯವರ ಏಕಸೌಮ್ಯತೆಯಿಂದ ಅಪಾಯವಾಗಬಹುದೆಂದು ಗ್ರಹಿಸಿದ ಬ್ರಿಟೀಷರು ಮುಸ್ಲೀಮರ ಸಂಖ್ಯೆಯನ್ನು ಕಡಿತಗೊಳಿಸುತ್ತಾ ಬಂದರು. ಮದ್ರಾಸ್ ಪ್ರಾಂತ್ಯದ ಈ ನೇಮಕಾತಿ ಸಿದ್ಧಾಂತ ಶಿಕ್ಷಣದಲ್ಲಿ ಹಿಂದೆ ಉಳಿದಿದ್ದ ಕೆಳಜಾತಿಯ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೂ ಹಾಗೂ ಮೇಲ್ಜಾತಿಯ ಹೆಚ್ಚಿನ ವಿದ್ಯಾಬ್ಯಾಸ ಮಾಡಿದ ಬ್ರಾಹ್ಮಣರು, ತಮಿಳುನಾಡಿನ ಮುದಲಿಯಾರಗಳ ನಡುವೆ ಇನ್ನಷ್ಟು ಭೇದವನ್ನು ಸೃಷ್ಟಿಸಿತು.

ಪ್ರಾಚೀನ ಭಾರತದ ಇತಿಹಾಸವನ್ನು ಅಧ್ಯಯನ ಮಾಡಿದಾಗ, ಪೊಲೀಸ್ ಇಲಾಖೆಯು ಪ್ರಾಚೀನ ಕಾಲ ದಿಂದಲೂ ಬೆಳೆದು ಬಂದ ಆಡಳಿತಾಂಗದ ಒಂದು ಪ್ರಭಲ ಇಲಾಖೆಯಾಗಿದೆ. ಪೊಲೀಸ್ ವ್ಯವಸ್ಥೆಯು, ನಾಡನ್ನು ಆಳಿದ ಪ್ರತಿಯೊಂದು ರಾಜವಂಶಗಳ ಆಡಳಿತಾಂಗದ ಪ್ರಮುಖ ಭಾಗವಾಗಿತ್ತು. ಕಂದಾಯ ಇಲಾಖೆಯ ನಂತರದ ಸ್ಥಾನವೇ ಪೊಲೀಸ್ ಇಲಾಖೆಗಿತ್ತು. ಯಾವ ರಾಜ್ಯದಲ್ಲಿ ಉತ್ತಮ ಸುರಕ್ಷೆ ಇತ್ತೋ, ಅಲ್ಲಿ ಶಾಂತಿ ನೆಲೆಸಿ ಜನರು ನೆಮ್ಮದಿ ಯಿಂದಿದ್ದರು. ಇದು ಇಂದಿಗೂ ಅನ್ವಯಿಸುವ ಮಾತಾಗಿದೆ. ಯಾವ ನಾಡಿನಲ್ಲಿ ಆಂತರಿಕ ರಕ್ಷಣೆಯು ಸಮರ್ಪಕ ವಾಗಿಲ್ಲವೋ, ಆ ನಾಡಿನಲ್ಲಿ ಕೊಲೆ, ಸುಲಿಗೆಯಂತಹ ಅಪರಾಧಗಳು ಹೆಚ್ಚಾಗಿ ಜನರು ಅಭದ್ರತೆ ಯಿಂದಿರುತ್ತಾರೆ.

ಕಾರ್ಯಾಂಗದ ಇಂತಹ ಪ್ರಮುಖ ಇಲಾಖೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಅದು ಬೆಳೆದು ಬಂದ ಬಗ್ಗೆ, ಅದರ ಇತಿಹಾಸವನ್ನು ಚಿತ್ರಿಸುವ ಪ್ರಯತ್ನ ಇನ್ನೂ ಸಮರ್ಪಕವಾಗಿ ನಡೆದಿಲ್ಲವೆಂದೇ ಹೇಳಬಹುದು. ಪೊಲೀಸ್ ಇಲಾಖೆಯ ಮೇಲೆ ಕೆಲವು ಇತಿಹಾಸಕಾರರು ಸಂಶೋಧನೆ ನಡೆಸಿದ್ದರೂ ಸಹ ಅದು ಇಡೀ ಭಾರತ ದೇಶವನ್ನು ಕುರಿತು ಅಧ್ಯಯನ ನಡೆಸಲಾಗಿದೆ. ಇನ್ನು ಕೆಲವು ಸಂಶೋಧಕರು ಪ್ರತ್ಯೇಕವಾಗಿ ಕೆಲವು ರಾಜಮನೆತನಗಳ ಆಡಳಿತ ಪದ್ಧತಿಯ ಮೇಲೆ ಸಂಶೋಧನೆ ನಡೆಸಿದ್ದಾರೆ. ಕರ್ನಾಟಕದಲ್ಲಿ ವಸಹಾತುಶಾಹಿ ಕಾಲದ ಪೊಲೀಸ್ ವ್ಯವಸ್ಥೆಯ ಬಗ್ಗೆ ಕೆಲವು ಸಂಶೋಧಕರು ಅಭ್ಯಸಿಸಿದ್ದಾರೆ. ವಸಹಾತುಶಾಹಿಗಿಂತ ಮೊದಲು ಕನ್ನಡ ಭಾಷೆಯನ್ನಾಡುವ ಈ ಪ್ರದೇಶಗಳಲ್ಲಿದ್ದ ಪೊಲೀಸ್ ವ್ಯವಸ್ಥೆ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಕರ್ನಾಟಕ ರಾಜ್ಯದ ಪೊಲೀಸ್ ವ್ಯವಸ್ಥೆಯ ಸಮಗ್ರ, ವೈಜ್ಞಾನಿಕ ಸಂಶೋಧನೆ ಇದುವರೆಗೆ ನಡೆದಂತೆ ಕಂಡುಬರುವುದಿಲ್ಲ. ಇದಲ್ಲದೇ ಪೊಲೀಸ್ ಇಲಾಖೆಯ ಬಗ್ಗೆ ಕೆಲವು ತಪ್ಪು ಅಭಿಪ್ರಾಯಗಳಿವೆ. ಇವೆರಡೂ ಕುಂದು ಕೊರತೆಗಳನ್ನು ಹೋಗಲಾಡಿಸುವ ದೃಷ್ಟಿಯಿಂದ ಕರ್ನಾಟಕದ ಪೊಲೀಸ್ ಇತಿಹಾಸದ ಅಧ್ಯಯನದ ಅವಶ್ಯಕತೆ ಇದೆ. ಈ ಹಿನ್ನಲೆಯಲ್ಲಿ ಸಮಗ್ರ ಕರ್ನಾಟಕದ ಪೊಲೀಸ್ ವ್ಯವಸ್ಥೆಯ ಇತಿಹಾಸವನ್ನು ಪುನರ್‌ರಚಿಸುವ ಒಂದು ವಿನಮ್ರ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಇನ್ನು ಪೊಲೀಸ್ ಇಲಾಖೆಯ ಬಗ್ಗೆ ಹಲವಾರು ತಪ್ಪು ಕಲ್ಪನೆಗಳು ಜನಮಾನಸದಲ್ಲಿವೆ. ಅವುಗಳೆಂದರೆ, ನಮ್ಮ ಪೊಲೀಸ್ ವ್ಯವಸ್ಥೆಯನ್ನು ಬ್ರಿಟೀಷರು ಸ್ಥಾಪಿಸಿದ್ದರೆಂತಲೂ, ಕಾರ್ನ್‌ವಾಲೀಸನು ಈ ಪಡೆಯನ್ನು ಸ್ಥಾಪಿಸಿದನೆಂತಲೂ, ಆತನು ೧೮೪೩ ರಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಒಂದು ಪೊಲೀಸ್ ಪಡೆಯನ್ನು ಸ್ಥಾಪಿಸಿದನೆಂತಲೂ, ಕಂದಾಚಾರ ಪಡೆಯನ್ನು ದಿವಾನ್‌ಪೂರ್ಣಯ್ಯನವರು ಸ್ಥಾಪಿಸಿದರೆಂಬ ಪರಿಕಲ್ಪನೆಗಳಿವೆ. ಆದರೆ ಈ ಅಭಿಪ್ರಾಯಗಳು ಸರಿಯಾದುದಲ್ಲ. ಅಷ್ಟೇ ಅಲ್ಲದೇ ಬ್ರಿಟೀಷರು ಭಾರತವನ್ನು ಆಳಿದರೂ ಸಹ ಭಾರತದಲ್ಲಿ ಅವರು ಸ್ಥಾಪಿಸಿದ ಪೊಲೀಸ್ ವ್ಯವಸ್ಥೆಯು ಲಂಡನ್‌ನ ಪೊಲೀಸ್ ಮಾಧರಿಯಲ್ಲಿಲ್ಲದೇ ಅದು ಐರಿಷ್ ಮಾಧರಿಯಲ್ಲಿತ್ತು. ಬ್ರಿಟೀಷರು ಪೊಲೀಸ್ ಇಲಾಖೆಯನ್ನು ಪುನರ್‌ಸಂಘಟಿಸಿದರು. ಆದರೆ ಅದು ನಗರ ಪ್ರದೇಶಗಳಿಗೆ ಮಾತ್ರ ಅನ್ವಯವಾಗುತ್ತಿತ್ತು. ಗ್ರಾಮೀಣ ಪ್ರದೇಶದಲ್ಲಿದ್ದ ಸಾಂಪ್ರಾದಾಯಿಕ ಪೊಲೀಸ್ ವ್ಯವಸ್ಥೆಯನ್ನು ಅವರು ಬಹುತೇಕ ಹಾಗೆಯೇ ಉಳಿಸಿಕೊಂಡು ಬಂದರು. ಇದು ಏಕೆ? ಎಂದು ಉತ್ತರವನ್ನು ಈ ಅಧ್ಯಯನದಲ್ಲಿ ಹುಡುಕಲಾಗಿದೆ.

ಬ್ರಿಟೀಷ್ ವಸಹಾತುಶಾಹಿ ಕಾಲದ ಪೊಲೀಸ್ ವ್ಯವಸ್ಥೆಯ ಬಗ್ಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಇದಕ್ಕಿಂತಲೂ ಹಿಂದೆ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಆದರೆ ವಸಹಾತುಗಿಂತಲೂ ಮೊದಲು ನಮ್ಮಲ್ಲಿ ಒಂದು ಮಾದರಿಯಾದ ಪೊಲೀಸ್ ವ್ಯವಸ್ಥೆಯಿತ್ತು. ವಸಹಾತುಶಾಹಿ ಆಡಳಿತದ ಕಾಲದಲ್ಲಿ ನಾಡಿಗೆ ಬೇಕಾದ ಕಾನೂನು, ನೀತಿ ನಿಯಮಗಳನ್ನು ರಚಿಸಲಾಯಿತು. ಅದರಲ್ಲೂ ಮೈಸೂರು ಸಂಸ್ಥಾನವು ೧೮೩೧ ರಿಂದ ೧೮೮೧ ರವರೆಗೆ ನೇರವಾಗಿ ಬ್ರಿಟೀಷ್ ಕಮಿಷನರ್‌ರವರ ಆಡಳಿತಕ್ಕೆ ಒಳಪಟ್ಟಿದ್ದು ಈ ಸಂದರ್ಭದಲ್ಲಿ ಸಂಸ್ಥಾನವು ವಸಹಾತುಶಾಹಿಗಳ ಕಾನೂನು, ನೀತಿ ನಿಯಮಗಳನ್ನು ಒಪ್ಪಿಕೊಂಡು ನಡೆಯಿತು. ಆದಾಗ್ಯೂ ಮುಂದೆ ಅಗತ್ಯಗಳಿಗೆ ತಕ್ಕಂತೆ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಲಾಯಿತು.

ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದ ಪೊಲೀಸ್ ವ್ಯವಸ್ಥೆಯ ಬಗ್ಗೆ ಒಂದು ಸಮಗ್ರ ಅಧ್ಯಯನ ಮಾಡುವುದು ಅಗತ್ಯವೆಂದು ನನಗೆ ಅನ್ನಿಸಿತು.

೧ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಿದ್ದು ಬ್ರಿಟೀಷರೇ ? ಬ್ರಿಟೀಷರು ಭಾರತಕ್ಕೆ ಬರುವ ಮುನ್ನ ಇಂತಹದೊಂದು ಪೊಲೀಸ್ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇತ್ತೇ?

೨ ಆಂತರಿಕ ಭದ್ರತೆಯ ವ್ಯವಸ್ಥೆಯನ್ನು ಸೈನ್ಯದಿಂದ ಬೇರ್ಪಡಿಸಿ ಅದಕ್ಕಾಗಿ ವಿಶೇಷ ದಳವನ್ನು ನೇಮಿಸಿದ್ದು, ಬ್ರಿಟೀಷರೇ ? ಅಥವಾ ಅಂತಹ ವ್ಯವಸ್ಥೆ ಕರ್ನಾಟಕದಲ್ಲಿ ಮೊದಲೇ ಇತ್ತೇ? ಇದ್ದರೆ ಅವು ಯಾವುವು?

೩ ಕರ್ನಾಟಕದಲ್ಲಿರುವ ಪೊಲೀಸ್ ವ್ಯವಸ್ಥೆಯು ಬ್ರಿಟೀಷ್ ಪೊಲೀಸ್ ಮಾಧರಿಯನ್ನು ಹೊಂದಿದೆಯೇ? ಇದ್ದಲ್ಲಿ ಅದಕ್ಕೂ ಮತ್ತು ಬ್ರಿಟೀಷ್ ಪೊಲೀಸ್ ವ್ಯವಸ್ಥೆಗೂ ಇರುವ ವೈದೃಶ್ಯಗಳು ಮತ್ತು ಸಾದೃಶ್ಯಗಳು ಏನು ?

೪ ಮೈಸೂರಿನಲ್ಲಿ 'ಕಂದಾಚಾರ' ಪದ್ಧತಿಯನ್ನು ದಿವಾನ್ ಪೂರ್ಣಯ್ಯನವರು ಸ್ಥಾಪಿಸಿದರೆಂಬ ವಾದವು ನಿಜವೇ? ಅಥವಾ ಅವರಿಗಿಂತ ಮೊದಲು ಇಂತಹ ಒಂದು ವ್ಯವಸ್ಥೆ ನಮ್ಮ ನಾಡಿನಲ್ಲಿ ಇತ್ತೇ? ಪೂರ್ಣಯ್ಯ ನವರು ಪೊಲೀಸ್ ಇಲಾಖೆಗೆ ನೀಡಿದ ಕೊಡುಗೆ ಏನು ?

೫ ಬ್ರಿಟೀಷ್ ಪೊಲೀಸ್ ವ್ಯವಸ್ಥೆ ಏಕೆ ಜನರಿಂದ ದೂರ ಉಳಿಯಿತು ?

೬ ಭಾರತದಲ್ಲಿ ಪೊಲೀಸ್ ಪಡೆಯನ್ನು ಮೊದಲ ಭಾರಿಗೆ ಸಿಂಧ್ ಪ್ರಾಂತ್ಯದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ನು ಸ್ಥಾಪಿಸಿದನು ಎಂಬ ವಾದವು ಸರಿಯೇ? ಸರಿಯಲ್ಲವೆಂದಾದರೆ ಅದನ್ನು ಸ್ಥಾಪಿಸಿದವರು ಯಾರು?

೭ ಈ ಅಧ್ಯಯನದಿಂದ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಹೊಸ ವಿಷಯಗಳನ್ನು ಸಂಶೋಧಿಸ ಲಾಗಿದೆಯೇ ?

೮ ನಗರ ಪ್ರದೇಶಗಳಲ್ಲಿ ಪೊಲೀಸ್ ವ್ಯವಸ್ಥೆಯ ಪುನರ್‌ಸಂಘಟನೆಯನ್ನು ಮಾಡಿದ ಬ್ರಿಟೀಷರು ಮತ್ತು ಮೈಸೂರು ಅರಸರು ಗ್ರಾಮೀಣ ಪ್ರದೇಶಗಳ ಸಾಂಪ್ರಾದಾಯಿಕ ಪೊಲೀಸ್ ಪದ್ಧತಿಯನ್ನು ಪುನರ್‌ಸಂಘಟನೆ ಮಾಡದೇ ಹಾಗೆಯೇ ಉಳಿಸಿಕೊಂಡು ಬರಲು ಕಾರಣಗಳು ಏನು ?

೯ ಪೊಲೀಸ್ ಪಡೆಯ ಘಟಕಗಳಾದ ಅಶ್ವದಳ, ಪೊಲೀಸ್‌ಬ್ಯಾಂಡ್, ಮಿಸಲು ಪೊಲೀಸ್‌ಪಡೆ, ಸಿ.ಐ.ಡಿ, ರೈಲ್ವೆ ಪೊಲೀಸ್, ವಿಶೇಷ ಘಟಕ, ಕಾರಾಗೃಹಗಳು, ಸಾರಿಗೆ ವ್ಯವಸ್ಥೆ, ಅಧಿಕಾರಿ ಸಿಬ್ಬಂದಿಗಳ ಬಲ, ಅಪರಾಧ ತನಿಖಾ ವಿಭಾಗ, ವಿವಿಧ ರೀತಿಯ ಅಪರಾಧಗಳು, ಬೆರಳುಮುದ್ರೆ, ಪೊಲೀಸ್ ಪಡೆಯ ಬಲ ಹಾಗೂ ಗ್ರಾಮೀಣ ಪೊಲೀಸ್ ವ್ಯವಸ್ಥೆ ಹೇಗೆ ಬೆಳೆದು ಬಂದಿತು?

ಅಷ್ಟೇ ಅಲ್ಲದೇ ಮೈಸೂರು ಅರಸರ ಕಾಲದಲ್ಲಿದ್ದ ಕಂದಾಚಾರ ಪೊಲೀಸ್ ಪಡೆಯ ಸ್ವರೂಪ ಏನು? ಅದರ ನೇಮಕಾತಿ, ಅವರ ಕರ್ತವ್ಯ, ಸಂಬಳ, ಅವರಿಗಿದ್ದ ಸೌಕರ್ಯಗಳ ಬಗ್ಗೆ ತಳಾರಿ, ನೀರ್ಗಂಟಿ, ಕಂದಾಚಾರಿ, ಅಮಿಲ್‌ದಾರನ ಪೊಲೀಸ್ ಕರ್ತವ್ಯಗಳೇನು? ಪ್ರಾಚೀನ ಕಾಲದಿಂದಲೂ ೧೯೪೭ರಲ್ಲಿ ಭಾರತ ಸ್ವತಂತ್ರಗೊಳ್ಳುವವರೆಗೂ ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯು ಹೇಗೆ ಬೆಳೆದುಬಂತು ? ಭಾರತದ ಸ್ವಾತಂತ್ರ್ಯಕ್ಕೆ ಮೊದಲು ರಚನೆಯಾದ ಪೊಲೀಸ್ ಆಯೋಗಗಳ ವರದಿಗಳು ಪೊಲೀಸ್ ಆಡಳಿತ ಸುಧಾರಣೆಗೆ ಹೇಗೆ ಸಹಾಯಕವಾದವು? ಸ್ವಾತಂತ್ರ್ಯ ಪೂರ್ವದಲ್ಲಿ ಆಗಿಹೋದ ಪೊಲೀಸ್ ಐ.ಜಿ.ಪಿರವರುಗಳು ಪೊಲೀಸ್ ಇಲಾಖೆಗೆ ನೀಡಿದ ಕೊಡುಗೆಗಳು ಏನು ? ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಪೊಲೀಸ್ ವ್ಯವಸ್ಥೆ ಹೇಗೆ ಇತ್ತು ಎಂಬ ಬಗ್ಗೆ ಈ ಸಂಶೋಧನೆಯಲ್ಲಿ ಉತ್ತರಗಳನ್ನು ಕಂಡುಕೊಳ್ಳುವ ವಿನಮ್ರ ಪ್ರಯತ್ನ ಮಾಡಿದ್ದೇನೆ.

೧.೪ –ಚಾರಿತ್ರಿಕ ಲೇಖನಗಳು

ಪೊಲೀಸ್ ಇಲಾಖೆಯ ಬಗೆಗಿನ ಸಂಶೋಧನೆಗೆ ಸಾಕಷ್ಟು ಅವಕಾಶಗಳಿದ್ದರೂ, ಈ ಬಗ್ಗೆ ಹೆಚ್ಚಿನ ಪ್ರಯತ್ನ ನಡೆದಿಲ್ಲವೆಂದೇ ಹೇಳಬೇಕು. ಕೆಲವು ಇತಿಹಾಸಕಾರರು ಇಡೀ ಭಾರತ ದೇಶದ ಪೊಲೀಸ್ ವ್ಯವಸ್ಥೆಯ ಬಗ್ಗೆ ಅತ್ಯಂತ ವಿಶಾಲ ವ್ಯಾಪ್ತಿಯಲ್ಲಿ ಅಭ್ಯಸಿಸಿದ್ದಾರೆ. ಆದರೆ ಕರ್ನಾಟಕದ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಅಧ್ಯಯನದಲ್ಲಿ ಕೊರತೆ

ಕಾಣುತ್ತದೆ.

ಡಾ.ದೊರೆಸ್ವಾಮಿಯವರು ಹಿಸ್ಟ್ರಿ ಆಫ್ ಪೋಲೀಸ್ ಫೋರ್ಸ್ ಇನ್ ಮೈಸೂರು – ೧೮೬೬– ೧೯೪೭ ಎಂಬ ಶೀರ್ಷಿಕೆಯಲ್ಲಿ ಅಧ್ಯಯನ ನಡೆಸಿದ್ದಾರೆ. ಅವರು ಆಯ್ಕೆ ಮಾಡಿಕೊಂಡ ಕಾಲಘಟ್ಟ ೧೮೬೬ ರಿಂದ ೧೯೪೭. ಆದರೆ ೧೮೬೬ ಕ್ಕಿಂತ ಮೊದಲು ನಮ್ಮ ನಾಡಿನಲ್ಲಿ ಒಂದು ವ್ಯವಸ್ಥಿತವಾದ ಪೊಲೀಸ್ ಪಡೆ ರಚನೆಯಾಗಿತ್ತು. ಅದಕ್ಕೊಂದು ಇತಿಹಾಸವಿತ್ತು. ಆದರೆ ಆ ಇತಿಹಾಸದ ಬಗ್ಗೆ ಅಧ್ಯಯನ ನಡೆದಿಲ್ಲ. ಅಷ್ಟೇ ಏಕೆ ೧೮೩೪ ರಲ್ಲಿ ಮೈಸೂರಿನಲ್ಲಿ 'ಪೊಲೀಸ್ ಹುಕುಂನಾಮೆ' ಯನ್ನು ರಚಿಸಲಾಗಿತ್ತು. 'ಕಂದಾಚಾರ' ಎಂಬ ಹೆಸರಿನ ಪೊಲೀಸ್ ಪಡೆ ಇತ್ತು. ಅದಕ್ಕಾಗಿ ಒಬ್ಬ ಭಕ್ಷಿಯು ಇದ್ದನು. ಇದಕ್ಕಿಂತ ಹೆಚ್ಚಾಗಿ ಬ್ರಿಟೀಷರ ಆಡಳಿತವಿರುವ ಭಾರತದ ಎಲ್ಲಾ ಭಾಗಗಳಿಗೂ ಅನ್ವಯವಾಗುವಂತೆ ೧೮೬೧ ರಲ್ಲಿ ಭಾರತೀಯ ಪೊಲೀಸ್ ಕಾಯ್ದೆಯು ರಚನೆಯಾಗಿತ್ತು. ಇದಕ್ಕಿಂತ ಮೊದಲು ಪೊಲೀಸ್ ವ್ಯವಸ್ಥೆಯನ್ನು ಸಮಗ್ರವಾಗಿ ಪುನರ್‌ಸಂಘಟಿಸುವ ಹಿನ್ನಲೆಯಲ್ಲಿ ೧೮೬೦ ರಲ್ಲಿ ಭಾರತೀಯ ಪೊಲೀಸ್ ಕಾಯ್ದೆಯು ರಚನೆಯಾಗಿ, ಅದು ತನ್ನ ವರದಿಯನ್ನು ನೀಡಿತ್ತು. ದಿವಾನರಿಗೆ ಪೊಲೀಸ್ ಆಡಳಿತದ ವಿಷಯದಲ್ಲಿ ನೆರವಾಗಲು ಒಬ್ಬ ಕಾರ್ಯದರ್ಶಿಯೂ ಸಹ ಇದ್ದ. ಮೈಸೂರು ಅರಸರಿಗಿಂತಲೂ ಹಿಂದೆ ಕನ್ನಡ ನಾಡನ್ನು ಆಳಿದ ಅನೇಕ ರಾಜ ಮನೆತನಗಳಲ್ಲಿ ಆಂತರಿಕ ಭದ್ರತೆಯ ಸಲುವಾಗಿ ಪ್ರತ್ಯೇಕವಾದ ವ್ಯವಸ್ಥೆಗಳಿದ್ದವು.

ಡಾ.ಕೆ.ದೊರೆಸ್ವಾಮಿಯವರು ತಮ್ಮ ಸಂಶೋಧನೆಯಲ್ಲಿ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳು ಮತ್ತು ೧೯೩೯ ರಲ್ಲಿ ರಚನೆಯಾದ ಮಂಡ್ಯ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಪೊಲೀಸ್ ಪಡೆಯ ಬಲ, ಖರ್ಚುವೆಚ್ಚ ಮೊದಲಾದ ವಿಷಯಗಳ ಬಗ್ಗೆ ಅಂಕಿ ಅಂಶಗಳ ಮಹಾಪೂರವನ್ನೇ ಹರಸಿದ್ದಾರೆ. ಆದರೆ ಅದರ ಬಗ್ಗೆ ಏಕೆ, ಹೇಗೆ ಎಂಬ ಬಗ್ಗೆ ಚರ್ಚೆ ಆಗಿಲ್ಲ. ಅಲ್ಲದೇ ಆ ಅಧ್ಯಯನದಲ್ಲಿ ಸಮಸ್ಯೀಕರಣವಿದ್ದಂತೆ ಕಂಡುಬರುವುದಿಲ್ಲ. ಮತ್ತು ಅದಕ್ಕೆ ಪರಿಹಾರ ಹುಡುಕ್ಕಿದ್ದಾಗಲೀ, ಹೊಸ ವಿಷಯಗಳನ್ನು ಹುಡುಕಿದ್ದಾಗಲೀ ಕಂಡುಬರುವುದಿಲ್ಲ. ಕಾಲಘಟ್ಟಗಳಿಗೆ ಅನುಗುಣವಾಗಿ ಇಲಾಖೆಯಲ್ಲಿ ಆದ ಬದಲಾವಣೆಗಳನ್ನು ಗುರುತಿಸಿದ್ದಾರೆ. ಏಕೆ ಆ ರೀತಿಯ ಬದಲಾವಣೆಗಳು ಆದವು ಎಂಬ ಬಗ್ಗೆ ಬೆಳಕು ಚೆಲ್ಲಿದಂತೆ ಕಂಡು ಬರುವುದಿಲ್ಲ. ಇಲ್ಲಿ ಕೇವಲ ಪೊಲೀಸ್ ಇಲಾಖೆಯು ಬೆಳೆದು ಬಂದ ಬಗೆಯನ್ನು ತಿಳಿಸಲಾಗಿದೆ.

ಕೆ.ಕೆ.ಮಿಶ್ರ ರವರ ಪೊಲೀಸ್ ಅಡ್‌ಮಿನಿಸ್ಟ್ರೇಷನ್ ಇನ್ ಏನ್ಸಿಯಂಟ್ ಇಂಡಿಯಾ (೧೯೮೭) ಎಂಬ ಪುಸ್ತಕದಲ್ಲಿ ಪೊಲೀಸ್ ಪಡೆಯ ಉಗಮದ ಬಗ್ಗೆ ತಿಳಿಸಿ ಪ್ರಾರಂಭದಲ್ಲಿ ಶಾಂತಿ ಕಾಪಾಡುವುದು ಇದರ ಜವಾಬ್ದಾರಿಯಾಗಿದ್ದರೂ ಬರಬರುತ್ತ ಕರ್ತವ್ಯಗಳು ಸಂಕೀರ್ಣವಾಗುತ್ತಾ ಬಂತು. ಹಲವು ಸಮಸ್ಯೆಗಳನ್ನು ಎದುರಿಸುವಂತಾಯಿತು. ಇದನ್ನು ಎದುರಿಸುವಂತಹ ಪಡೆಯ ರಚನೆಯ ಅಗತ್ಯತೆ ಉಂಟಾಯಿತು ಎಂದಿದ್ದಾರೆ. ಮನು, ಕೌಟಿಲ್ಯ, ಮೌರ್ಯ, ಗುಪ್ತರ ಕಾಲದ ಪೊಲೀಸ್ ಆಡಳಿತದ ಬಗ್ಗೆ ಹೇಳಿದ್ದಾರೆ. ಪೊಲೀಸರು ಮತ್ತು ಸಾರ್ವಜನಿಕರು, ಪೊಲೀಸರು ಮತ್ತು ಆರ್ಥಿಕ ಜೀವನ, ಪೊಲೀಸರು ಮತ್ತು ನ್ಯಾಯಾಂಗ, ಕಾನೂನು ಸುವ್ಯವಸ್ಥೆ ಅಪರಾಧಗಳ ಪತ್ತೆ, ಭ್ರಷ್ಟಾಚಾರ, ಅಪರಾಧ ಮತ್ತು ಶಿಕ್ಷೆಗಳ ಬಗ್ಗೆ ಅಭ್ಯಸಿಸಿದ್ದಾರೆ. ಆದರೆ ಇದು ಇಡೀ ಭಾರತ ದೇಶದ ವ್ಯಾಪ್ತಿಯನ್ನು ಹೊಂದಿದೆ.

ಮದನ್ ಜೆ.ಸಿ. ರವರ ದ ಇಂಡಿಯನ್ ಪೊಲೀಸ್ ಎಂಬ ಪುಸ್ತಕದಲ್ಲಿ, ಪ್ರಾಚೀನ, ಮಧ್ಯಕಾಲೀನ ಹಾಗೂ ಬ್ರಿಟೀಷ್ ಭಾರತದ (೧೮೬೦ ರ ವರೆಗೆ) ಪೊಲೀಸ್ ಆಡಳಿತದ ಬಗ್ಗೆ ಅಭ್ಯಸಿಸಿದ್ದಾರೆ. ಕಾರ್ನ್‌ವಾಲೀಸನು ಜಮೀನುದಾರರುಗಳಿಗೆ ನೀಡಿದ್ದ ಪೊಲೀಸ್ ಅಧಿಕಾರವನ್ನು ಕಿತ್ತುಕೊಂಡನು. ಅವರು ಅಸಮರ್ಥರಾಗಿದ್ದರೆಂದು, ರಾಬರಿ ಮೊದಲಾದ ಅಪರಾಧಗಳು ಹೆಚ್ಚಿದ್ದರಿಂದ ಪೊಲೀಸ್ ಅಧಿಕಾರ ಹಿಂಪಡೆಯಲಾಯಿತೆಂದು, ಇದೇ ದೇಶದಲ್ಲಿ ಕಾನೂನು ಸುವ್ಯವಸ್ಥೆಯ ಪರಿಪಾಲನೆಗೆ ಏಕರೀತಿಯ ಪೊಲೀಸ್ ವ್ಯವಸ್ಥೆ ಜಾರಿಗೆ ತರುವ ಉದ್ದೇಶದಿಂದ ಈಸ್ಟ್ ಇಂಡಿಯಾ

ಕಂಪೆನಿಯ ನೇರ ನಿರ್ದೇಶನದಲ್ಲಿ 'ದರೋಗ' ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದರೆಂದು ತಿಳಿಸಿದ್ದಾರೆ. ನಂತರ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಐ.ಜಿ.ಪಿಯನ್ನು ಇಡೀ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥನನ್ನಾಗಿ ಮಾಡಲಾಯಿತು. ನ್ಯಾಯಾಂಗ ಹಾಗೂ ಪೊಲೀಸ್ ಇಲಾಖೆಗಳನ್ನು ಪ್ರತ್ಯೇಕಿಸಲಾಯಿತು. ಪ್ರತೀ ಜಿಲ್ಲೆಗಳಲ್ಲಿ ಯುರೋಪಿಯನ್ ಡಿಸಿಪಿಗಳನ್ನು ನೇಮಿಸಲಾಯಿತು. ಗ್ರಾಮದ ಮುನ್ಸಿಫ್ ಅಥವಾ ಪಟೇಲ್ ಬದಲಿಗೆ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲಾಯಿತು. ಕಾರ್ನ್‌ವಾಲೀಸ್‌ನ ದರೋಗ ವ್ಯವಸ್ಥೆ ವಿಫಲವಾಯಿತು ಎಂದಿದ್ದಾರೆ. ಸರ್‌ಥಾಮಸ್ ಮನ್ರೋನು ದೇಶೀಯ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದ. ಆದರೆ ಇವರ ಅಧ್ಯಯನ ೧೭೫೭ ರಿಂದ ೧೮೬೦ ರ ವರೆಗಿನ ಭಾರತದ ಪೊಲೀಸ್ ವ್ಯವಸ್ಥೆ ಬಗ್ಗೆ ವ್ಯಾಪಿಸಿದೆ. ಕರ್ನಾಟಕದ ಪೊಲೀಸ್ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಮಾಹಿತಿಗಳು ಇರುವುದಿಲ್ಲ.

ಕೆ.ಎನ್. ವೆಂಕಟಸುಬ್ಬಶಾಸ್ತ್ರಿಯವರು ಅಡ್‌ಮಿನಿಸ್ಟ್ರೇಷನ್ ಆಫ್ ಮೈಸೂರು ಅಂಡರ್ ಸರ್ ಮಾರ್ಕ್ ಕಬ್ಬನ್ ಎಂಬ ಪುಸ್ತಕದಲ್ಲಿ ಬ್ರಿಟೀಷರು ಮೈಸೂರು ಅರಸರಿಂದ ಆಡಳಿತವನ್ನು ಕಿತ್ತುಕೊಂಡ ನಂತರ ೧೮೩೧ ರಿಂದ ೧೮೬೧ ರ ವರೆಗೆ ವಸಹಾತುಶಾಹಿ ಆಡಳಿತದಲ್ಲಿ ಆದ ವಿವಿಧ ಇಲಾಖೆಗಳ ಬದಲಾವಣೆಗಳನ್ನು ಗುರುತಿಸಿದ್ದಾರೆ. ಈ ಬದಲಾವಣೆಗಳು ಸ್ಥಳೀಯರ ಪ್ರಶಂಸೆಗೆ ಒಳಗಾದರೂ ಸಹ ಪ್ರಮುಖ ಹುದ್ದೆಗಳನ್ನು ಯುರೋಪಿಯನ್ನರಿಗೆ ನೀಡಿದ್ದನ್ನು ಇದರ ಮೂಲಕ ಅವರ ರಹಸ್ಯ ಉದ್ದೇಶಗಳನ್ನು ಸಾಧಿಸಿದ್ದನ್ನು ಗುರುತಿಸಿದ್ದಾರೆ. ಮಾರ್ಕ್ ಕಬ್ಬನನು ಪೊಲೀಸ್ ಹುಕುಂನಾಮೆ ಜಾರಿಗೆ ತಂದ ಬಗ್ಗೆ ವಿವರಿಸಿದ್ದಾರೆ. ಇದರಲ್ಲಿ ಪೊಲೀಸ್ ಇಲಾಖೆಯನ್ನು ಕುರಿತಾಗಿರದೇ ಎಲ್ಲಾ ಇಲಾಖೆಗಳ ಬಗ್ಗೆ ಚರ್ಚಿಸಲಾಗಿದೆ.

ಆರ್ನಾಲ್ಡ್ ಡೇವಿಡ್ ರವರು ತಮ್ಮ ಪೊಲೀಸ್ ಪವರ್ ಎಂಡ್ ಕಲೋನಿಯಲ್ ರೂಲ್– ೧೮೫೯–೧೯೪೭ ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪೊಲೀಸ್ ಪಡೆಯ ಬೆಳವಣಿಗೆ ಬಗ್ಗೆ ಸಮಗ್ರವಾಗಿ ಚರ್ಚಿಸಿದ್ದಾರೆ. ಅಸಂಘಟಿತವಾದ ಪೊಲೀಸ್ ಪಡೆಯು ಸಂಘಟಿತವಾದ ಬಗ್ಗೆ ಪ್ರಾಚೀನ ಕಾಲದಲ್ಲಿದ್ದ ತಳಾರಿ, ಕಾವಲುಕಾರರು ಇಲ್ಲಿ ಪೊಲೀಸರಾಗಿದ್ದರೆಂದು, ಇದರಿಂದ ಸಮಸ್ಯೆಗಳ ನಿರ್ವಹಣೆ ಸಾಧ್ಯವಾಗದಿದ್ದಾಗ ಪಡೆಯನ್ನು ಸಂಘಟಿಸಲಾಯಿತು. ಬ್ರಿಟೀಷರ ಪೊಲೀಸ್ ಪಡೆ ಕೇವಲ ನಾಗರೀಕರ ರಕ್ಷಣೆಗಾಗಿರಲಿಲ್ಲ. ಅದು ಯುರೋಪಿಯನ್ನರ ಹಾಗೂ ಅವರ ಆಸ್ತಿಪಾಸ್ತಿ ರಕ್ಷಣೆಗಾಗಿ ಹಾಗೂ ಹೆಚ್ಚು ಕಂದಾಯ ನೀಡುವ ಪ್ರದೇಶಗಳ ರಕ್ಷಣೆಗಾಗಿತ್ತು. ಮದ್ರಾಸ್ ಪೊಲೀಸ್ ವ್ಯವಸ್ಥೆಯನ್ನು (ಐರಿಷ್ ಮಾದರಿಯಲ್ಲಿ ರಚಿಸಲಾಯಿತು) ೧೮೫೯ ರಲ್ಲಿ ಗವರ್ನರ್ ಜನರಲ್‌ನಿಂದ ಸಂಸ್ಥಾನೀಯ ಪೊಲೀಸ್ ಪಡೆ(provincial consteblary) ಯ ರಚನೆಗೆ ಅನುಮತಿ ಪಡೆಯಲಾಯಿತು. ಒಟ್ಟಿನಲ್ಲಿ ಯುರೋಪಿಯನ್ನರ ಅಧಿಕಾರಿಶಾಹಿ ಪೊಲೀಸ್ ಆಡಳಿತದಲ್ಲಿತ್ತೆಂದು ತಿಳಿಸಿದ್ದಾರೆ. ಈ ಪೊಲೀಸ್ ವ್ಯವಸ್ಥೆ ಭಾರತದಲ್ಲಿ ಇತರೆಡೆ ಬ್ರಿಟೀಷ್ ವಸಹಾತುಗಳಲ್ಲಿನ ಪೊಲೀಸ್ ವ್ಯವಸ್ಥೆಗೆ ಪ್ರೇರಣೆ ಯಾಯಿತು ಎಂದಿದ್ದಾರೆ. ಈ ಅಧ್ಯಯನವು ಕೇವಲ ವಸಾಯತುಶಾಹಿಯಲ್ಲಿನ ಪೊಲೀಸ್ ಪಡೆಯ ಬಗ್ಗೆ ಮಾತ್ರ ವಿವರಿಸಲಾಗಿದೆ.

ವೆಂಕರಾಮಯ್ಯ.ಪಿ.ಎಸ್ ರವರು ಸಂಪಾದಿಸಿದ 'ಪೊಲೀಸಿಂಗ್ ಇನ್ ಕರ್ನಾಟಕ ಗ್ರೋತ್ ಇನ್ ಎ ಸೆಂಚುರಿ' ಎಂಬ ಪುಸ್ತಕದಲ್ಲಿ ಪೊಲೀಸ್ ವ್ಯವಸ್ಥೆಯ ಬಗ್ಗೆ ಹೆಚ್ಚು ಗಮನಹರಿಸಿದರೂ ಸಹ ಅದು ಸ್ವಾತಂತ್ರ್ಯ ನಂತರದ ಬೆಳವಣಿಗೆಗೆ ಹಾಗೂ ಕೇವಲ ಅಂಕಿಅಂಶಗಳ ಸಂಗ್ರಹಕ್ಕೆ ಸೀಮಿತವಾಗಿದೆ. ನಿಜವಾಗಿಯೂ ಮೈಸೂರಿನಲ್ಲಿ ಪೊಲೀಸ್ ವ್ಯವಸ್ಥೆಯು ಜಾರಿಗೆ ಬಂದಿದ್ದು ಟಿಪ್ಪು ಸುಲ್ತಾನನ ಮರಣದ ದಿನದಿಂದ[೧೬] ಎಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಈ ವಾದವನ್ನೂ ಸಹ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಮತ್ತು ಅದಕ್ಕಿಂತ ಪೂರ್ವದಲ್ಲೂ ಕರ್ನಾಟಕವನ್ನು ಆಳಿದ ಅನೇಕ ರಾಜಮನೆತನಗಳಲ್ಲಿ 'ಪೊಲೀಸ್' ಎಂಬ ಶಬ್ದದ ಬಳಕೆ ಇಲ್ಲದಿದ್ದರೂ ಸಹ ಪೊಲೀಸರು

ನಿರ್ವಹಿಸುವ ಕೆಲಸ ಕಾರ್ಯಗಳನ್ನು ಮಾಡಲು ಒಂದು ಪ್ರತ್ಯೇಕವಾದ ವ್ಯವಸ್ಥೆ ಇದ್ದು, ಅದಕ್ಕೆ ಸ್ಥಳೀಯ ಭಾಷೆಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದುದನ್ನು ನಾವು ಇತಿಹಾಸದಲ್ಲಿ ಕಾಣಬಹುದಾಗಿದೆ. 'ಪೊಲೀಸ್' ಎಂಬ ಶಬ್ದ ಮಾತ್ರ ಬ್ರಿಟೀಷರ ಕೊಡುಗೆಯಾಗಿರುವುದೇ ವಿನಾ, ಪೊಲೀಸ್ ಆಡಳಿತ ವ್ಯವಸ್ಥೆಯು ಭಾರತಕ್ಕೆ ಬ್ರಿಟೀಷರು ನೀಡಿದ ಕೊಡುಗೆ ಅಲ್ಲ.

ನಿಗಮ್.ಎಸ್.ಆರ್ ರವರ ಸ್ಕಾಟ್‌ಲ್ಯಾಂಡ್ ಯಾರ್ಡ್ ಮತ್ತು ಇಂಡಿಯನ್ ಪೊಲೀಸ್ ಎಂಬ ಪುಸ್ತಕದಲ್ಲಿ ಇಂಗ್ಲೆಂಡ್ ಮತ್ತು ಭಾರತೀಯ ಪೊಲೀಸ್‌ನ ವೈರುಧ್ಯಗಳು ಮತ್ತು ಸಾದೃಶ್ಯಗಳನ್ನು ತಿಳಿಯಲು ನೆರವಾಗಿದೆ. ಮತ್ತು ಸ್ವಾತಂತ್ರ್ಯ ನಂತರದ ಪೊಲೀಸ್ ಬೆಳವಣಿಗೆ ಬಗ್ಗೆ ಒತ್ತು ನೀಡಲಾಗಿದೆ. ಆದರೆ ಕರ್ನಾಟಕದ ಪೊಲೀಸ್ ಬಗೆಗಿನ ವಿಚಾರಗಳಿಗೆ ಒತ್ತು ನೀಡಿಲ್ಲ. ಎನ್.ಶ್ಯಾಮ್‌ಭಟ್‌ರವರ ಜ್ಯುಡಿಷಿಯರಿ ಆಂಡ್ ಪೊಲೀಸ್ ಇನ್ ಅರ್ಲಿ ಕಲೋನಿಯಲ್ ಸೌತ್ ಕೆನರ ಎಂಬ ಪುಸ್ತಕದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟಿದ್ದ ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಇಲ್ಲಿಯೂ ಸಹ ಕರ್ನಾಟಕದ ಉಳಿದ ಪ್ರದೇಶಗಳ ಬಗ್ಗೆ ಮಾಹಿತಿಗಳು ಇರುವುದಿಲ್ಲ. ಬ್ರಿಟೀಷರ ಪೊಲೀಸ್ ವ್ಯವಸ್ಥೆಯನ್ನು ಬೇರೆ ದೃಷ್ಟಿಕೋನದಿಂದ ನೋಡಲಾಗಿದೆ.

ಎಂ.ಬಿ ಚಾಂಡೇರವರ ಪೊಲೀಸ್ ಇನ್ ಇಂಡಿಯಾ ಜೆ.ಸಿ ಕ್ಯಾರಿಯವರ ದ ಇಂಡಿಯನ್ ಪೊಲೀಸ್‌ಗಳಲ್ಲಿಯೂ ಕರ್ನಾಟಕದ ಪೊಲೀಸ್ ವ್ಯವಸ್ಥೆ ಬಗ್ಗೆ ಹೆಚ್ಚು ಒತ್ತು ನೀಡಿಲ್ಲ. ಬಸವರಾಜ್.ಆರ್ ರವರ ಅಡ್‌ಮಿನಿಸ್ಟ್ರೇಷನ್ ಅಂಡರ್ ಚಾಲುಕ್ಯಾಸ್ ಆಫ್ ಕಲ್ಯಾಣ, ಚಾರ್ಲ್ ಪಿಲಿಪ್ ಬ್ರೌನ್‌ರವರ ಮೆಮೊರೀಸ್ ಆಫ್ ಹೈದರ್ ಆಂಡ್ ಟಿಪ್ಪು, ಖಾನ್.ಎಂ.ಹೆಚ್ ರವರ ಹಿಸ್ಟ್ರಿ ಆಫ್ ಟಿಪ್ಪು ಸುಲ್ತಾನ್, ಗೋಪಾಲ್.ಎಂ.ಹೆಚ್ ರವರ ಟಿಪ್ಪುಸುಲ್ತಾನ್ಸ್ ಮೈಸೂರು. ಸರ್ಕಾರ್.ಜೆ ರವರ ಮೊಗಲ್ ಅಡ್‌ಮಿನಿಸ್ಟ್ರೇಷನ್, ಮಹಾಲಿಂಗಂ.ಟಿ.ವಿ ರವರ ಅಡ್‌ಮಿನಿಸ್ಟ್ರೇಷನ್ ಆಂಡ್ ಸೋಸಿಯಲ್ ಲೈಫ್ ಅಂಡರ್ ವಿಜಯನಗರ, ಡಿ.ಸಿ.ವರ್ಮರವರ ಹಿಸ್ಟ್ರಿ ಆಫ್ ಬಿಜಾಪುರ್ ದೀಕ್ಷಿತ್ ಜಿ.ಎಸ್‌ರವರ ಸಂಗಮಕಾಲದ ವಿಜಯನಗರ, ಡಿ.ಎಲ್ ನರಸಿಂಹಾಚಾರ್ ರವರ ಶಾತವಾಹನರ ಕಾಲದ ಧರ್ಮ ಮತ್ತು ಸಮಾಜ, ನಾರಾಯಣ ಸಂಗಮರವರ ವಿಜಯನಗರದ ಕೃಷ್ಣಾದೇವರಾಯನ ಕಾಲ, ಬಸವರಾಜ್‌ರವರ ಬಾದಾಮಿ ಚಾಲುಕ್ಯರ ಆಡಳಿತ ಎಂಬ ಪುಸ್ತಕಗಳು ಆಯಾ ಕಾಲದ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿಸುತ್ತವೆ. ಶರಣ ಎಸ್.ಡಿ ರವರ ಅಡ್‌ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಇನ್ ಏನ್ಸಿಯಂಟ್ ಇಂಡಿಯದಲ್ಲಿ ಭಾರತದ ಪ್ರಾಚೀನ ನ್ಯಾಯಾಂಗದ ವ್ಯವಸ್ಥೆ ಬಗ್ಗೆ ತಿಳಿಸುತ್ತಾ ಪೊಲೀಸ್ ಹಾಗೂ ನ್ಯಾಯಾಂಗ ಒಂದೇ ಅಧಿಕಾರಿಯಲ್ಲಿರುವುದನ್ನು ಗುರುತಿಸಿದ್ದಾರೆ.

ಮುಲ್ಲಿಕ್ ಬಿ.ಎನ್‌ರವರ ಎ ಪಿಲಾಸಫಿ ಫಾರ್ ದ ಪೊಲೀಸ್, ರೀತ್ ಸಿ ರವರ ದ ಬ್ಲೈಂಡ್ ಐ ಆಫ್ ಹಿಸ್ಟ್ರಿ, ಮೊರ್ರೈರಿಟಿರವರ ಪೊಲೀಸ್ ಪ್ರೊಸಿಡಿಂಗ್ಸ್ ಆಂಡ್ ಅಡ್‌ಮಿನಿಸ್ಟ್ರೇಷನ್. ಕ್ಯಾರಿ ರವರ ಇಂಡಿಯನ್ ಪೊಲೀಸ್, ದೀಕ್ಷಿತರ್ ವಿ.ಆರ್‌ರವರ ಹಿಂದು ಅಡ್‌ಮಿನಿಸ್ಟ್ರೇಟ್ ಇನ್ಸಿಟ್ಯೂಟ್, ಕಾಣೆ ಪಿ.ವಿ ರವರ ಹಿಸ್ಟ್ರಿ ಆಫ್ ಧರ್ಮಶಾಸ್ತ್ರ, ಪ್ರಮಥನಾಥ ಬ್ಯಾನರ್ಜಿಯವರ ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್ ಇನ್ ಎನ್ಸಿಯಂಟ್ ಇಂಡಿಯ, ರಾಜಯ್ಯನ್.ಕೆ ರವರ ಅಡ್‌ಮಿನಿಸ್ಟ್ರೇಷನ್ ಆಂಡ್ ಸೊಸೈಟಿ ಇನ್ ದ ಕರ್ನಾಟಿಕ್, ಸ್ಮಿತ್.ವಿ.ಡಬ್ಲು ರವರ ಅರ್ಲಿ ಹಿಸ್ಟ್ರಿ ಆಫ್ ಇಂಡಿಯಾ, ಹಯವದನರಾವ್, ರಮೇಶ್‌ದತ್, ಶಾಲಿನಿದೇವಿ, ಸ್ಮಿತ್.ವಿ.ಡಬ್ಲು, ಗೋಪಾಲ.ಬಾ.ರಾ, ಗೋಪಾಲ ಎಂ.ಹೆಚ್, ರವರ ಇತಿಹಾಸದ ಪುಸ್ತಕಗಳನ್ನು ಅಭ್ಯಸಿಸಲಾಗಿದೆ. ಇವು ನಿರ್ಧಿಷ್ಟವಾಗಿ ಪೊಲೀಸ್ ಆಡಳಿತಕ್ಕೆ ಸಂಬಂಧಪಡದಿದ್ದರೂ ಕೆಲವು ಉಪಯುಕ್ತ ಮಾಹಿತಿಗಳನ್ನು ಇವುಗಳಿಂದ ಸಂಗ್ರಹಿಸಲಾಗಿದೆ. ಇವು ಪ್ರಾಚೀನ ಭಾರತದಲ್ಲಿದ್ದ ಪೊಲೀಸ್ ಆಡಳಿತ ವ್ಯವಸ್ಥೆಯನ್ನು ತಿಳಿಯಲು ಸಹಾಯವಾಗುತ್ತದೆ.

ತಿರುಮಲೆ ತಾತಾಶರ್ಮರ ಮೈಸೂರು ಇತಿಹಾಸದ ಹಳೆಯ ಪುಟಗಳು, ಚಾರಿತ್ರಿಕ ದಾಖಲೆಗಳು, ವಿಚಾರ ಕರ್ನಾಟಕ, ಗೋಪಾಲ್.ಆರ್‌ರವರು ಸಂಪಾಧಿಸಿದ ದಿವಾನ್‌ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಹಲವು ಸಂಶೋಧಕರ ಲೇಖನಗಳು ಮೂರ್ತಿ ಎನ್.ಕೆ.ಎನ್‌ರವರ ಪೂರ್ಣಯ್ಯ ಎಂಬ ಪುಸ್ತಕದಲ್ಲಿ ದಿವಾನ್‌ಪೂರ್ಣಯ್ಯನವರ ಬಗ್ಗೆ ಮಾಹಿತಿ ಗಳನ್ನು ಸಂಗ್ರಹಿಸಲಾಗಿದೆ.

ಶೇಷನವರತ್ನ ನವರು ಭಾಷಾಂತರಿಸಿದ 'ಮನುಸ್ಮೃತಿ' ಬಹುಷ: ಭಾರತೀಯ ಪೊಲೀಸ್ ವ್ಯವಸ್ಥೆಯ ಬಗ್ಗೆ ತಿಳಿಸುವ ಅತ್ಯಂತ ಪ್ರಾಚೀನ ಕೃತಿ. ಇದರಲ್ಲಿ ಆ ಕಾಲದ ಪೊಲೀಸ್ ವ್ಯವಸ್ಥೆ ಬಗ್ಗೆ ತಿಳಿಸಿದ್ದಾರೆ. ಕೂಡಲಿ ಶೃಂಗೇರಿಯ ಜಗದ್ಗುರು ಶ್ರೀ.ಸಚ್ಚಿದಾನಂದ ಶಂಕರಭಾರತಿ ಸ್ವಾಮಿಗಳು ಅನುವಾದಿಸಿದ ಕೌಟಿಲೀಯ ಅರ್ಥಶಾಸ್ತ್ರದಲ್ಲಿ ಅಪರಾಧಗಳು, ಅದಕ್ಕೆ ಶಿಕ್ಷೆ, ಅದನ್ನು ತಡೆಯುವ ಅಧಿಕಾರಿಗಳ ಹೆಸರು ಮತ್ತು ಅವರ ಕರ್ತವ್ಯಗಳ ಸ್ವರೂಪಗಳನ್ನು ವಿವರಿಸಿದ್ದಾರೆ.

ಸರಸ್ವತಿ ಎನ್.ರವರ ವಿಜಯನಗರ ಕಾಲದ ಉದ್ಯೋಗಸ್ಥ ಮಹಿಳೆಯರು ಎಂಬ ಲೇಖನ, ಅಲ್ಲಿನ ಮಹಿಳಾ ಅಂಗರಕ್ಷಕರ ಬಗ್ಗೆ ತಿಳಿಸುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ ಕರ್ನಾಟಕದ ಪರಂಪರೆ, ಶಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ಹೊಯ್ಸಳರ ಆಡಳಿತ ಪದ್ಧತಿ ಬಗ್ಗೆ ತಿಳಿಯಲು ನೆರವು ನೀಡಿದೆ. ಮಿತ್ರ ಆ.ರಾ ರವರ ಶಾತವಾಹನ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ ಎಂಬ ಪುಸ್ತಕದಲ್ಲಿ ಶಾತವಾಹನ ಕಾಲದಲ್ಲಿ ಕಾವಲುದಳಗಳಿಗೆ ಪಡೆಯುತ್ತಿದ್ದ ತೆರಿಗೆಗಳ ಬಗ್ಗೆ ತಿಳಿಸುತ್ತದೆ. ಕೃಷ್ಣರಾವ್ ಎಂ.ವಿ ರವರ ಆಡಳಿತ ಸಂಸ್ಥೆಗಳು ಆದಿಕಾಲ ಎಂಬ ಲೇಖನ, ಪ್ರಾಚೀನ ಪೊಲೀಸ್ ಆಡಳಿತದ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ನೀಡುತ್ತದೆ. ಮುರಿಗಪ್ಪನವರು ಸಂಪಾಧಿಸಿದ ಬಾದಾಮಿ ಚಾಲುಕ್ಯರು ಎಂಬ ಪುಸ್ತಕ ಇವರ ಆಡಳಿತ ಪದ್ಧತಿಯೊಂದಿಗೆ ಅಂದಿನ ಕಾನೂನು ಸುವ್ಯವಸ್ಥೆ ಪಾಲಕರ ಬಗ್ಗೆ ತಿಳಿಸುತ್ತದೆ. ಗೌರ್ಲೆರವರ ಎ ಕಾಂಟ್ರಿಬ್ಯೂಷನ್ ಟುವರ್ಡ್ಸ್ ಹಿಸ್ಟ್ರಿ ಆಫ್ ಬೆಂಗಾಳ್ ಎಂಬ ಪುಸ್ತಕದಲ್ಲಿ ಮೌರ್ಯರ ಗೂಢಚಾರ ಪದ್ಧತಿ ಹಾಗೂ ಬಂಗಾಳದಲ್ಲಿ ಪೊಲೀಸ್ ಪಡೆ ಬೆಳೆದ ಬಗ್ಗೆ ವಿವರಿಸಲಾಗಿದೆ. ಡಾ.ಎಂ.ಚಿದಾನಂದ ಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಶಾಸನಗಳಲ್ಲಿ ಗಾವುಂಡರ ಬಗೆಗಿನ ಮಾಹಿತಿಗಳಿವೆ.

ನಿರಂಜನರಾಜ ಅರಸುರವರ ಮುಮ್ಮಡಿ ಶ್ರೀಕೃಷ್ಣರಾಜ ಮಹಿಪಾಲ ವಂಶರತ್ನಾಕರ, ಶ್ಯಾಮರಾವ್.ಎಂ ರವರ ಮಾಡ್ರನ್ ಮೈಸೂರು, ಮಂಜಪ್ಪಶೆಟ್ಟಿ ಮಸಗಲಿರವರ ಮೈಸೂರು ಅರಮನೆ, ಪುಸ್ತಕಗಳಲ್ಲಿನ ಮೈಸೂರಿನಲ್ಲಿದ್ದ ಪೊಲೀಸ್ ವ್ಯವಸ್ಥೆ ಮತ್ತು ದಿವಾನ್ ಪೂರ್ಣಯ್ಯನವರು ಪೊಲೀಸ್ ಇಲಾಖೆಗೆ ನೀಡಿದ ಕೊಡುಗೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲಾಗಿದೆ.

ಚಾರ್ಲ್ಸ್.ಯು ಐಟಿಕ್ಸನ್‌ರವರ ರಿಪೋರ್ಟ್ ಆನ್ ದ ಪಬ್ಲಿಕ್ ಸರ್ವಿಸ್ ಕಮಿಷನ್ ಆನ್ ಬ್ರಿಟೀಷ್ ಆಟಿಟ್ಯೂಡ್ ಟುವರ್ಡ್ಸ್ ದ ಎಂಪ್ಲಾಯ್‌ಮೆಂಟ್ ಆಫ್ ಇಂಡಿಯನ್ಸ್ ಇನ್ ಸಿವಿಲ್ ಸರ್ವಿಸ್ ಎಂಬ ವರದಿಯಲ್ಲಿ ಭಾರತೀಯರನ್ನು ನಾಗರೀಕ ಸೇವೆಗಳಲ್ಲಿ ಸೇರಿಸಿಕೊಳ್ಳಲು ಬ್ರಿಟೀಷರಿಗಿದ್ದ ಮನೋಭಾವವನ್ನು ತಿಳಿಸಿದೆ.

ಮುಖ್ಯವಾಗಿ ಪೊಲೀಸ್ ವ್ಯವಸ್ಥೆಯ ಬಗ್ಗೆ ನಿಖರ ವಿಷಯಗಳನ್ನು ಸಂಗ್ರಹಿಸಲು ಪ್ರಾಥಮಿಕ ಆಕರಗಳಿಂದ ಮಾಹಿತಿ ಪಡೆಯಲಾಗಿದೆ. ಅವುಗಳೆಂದರೆ, ಶಾಸನಗಳಿಂದ ಪ್ರಾಚೀನ ಕಾಲದ ರಕ್ಷಣಾ ವ್ಯವಸ್ಥೆಯ ಜವಾಬ್ದಾರಿ ಹೊತ್ತಿದ್ದ ಗಾವುಂಡರ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಮೈಸೂರು ರಾಜ್ಯದ ಪೊಲೀಸ್ ವಾರ್ಷಿಕ ವರದಿಗಳಲ್ಲಿ ಆಯಾವರ್ಷದಲ್ಲಿ ಇಲಾಖೆಯ ವಿವಿಧ ಘಟಕಗಳಲ್ಲಿ ಆದ ಬದಲಾವಣೆಗಳು, ಘಟಿಸಿದ ವಿವಿಧ ರೀತಿಯ ಅಪರಾಧಗಳು, ಅವುಗಳ ಪತ್ತೆ, ವಿಲೇವಾರಿ, ಶಿಕ್ಷೆ, ಬಹುಮಾನಗಳು, ಅಪರಾಧ ತಡೆಕಾಯ್ದೆಗಳು, ಗಡಿಪಾರು, ಬೆರಳು ಮುದ್ರೆ, ನೇಮಕಾತಿ, ಭಡ್ತಿಗಳು,

ಮೊದಲಾದ ವಿಷಯಗಳ ಬಗ್ಗೆ ಅಂಕಿಸಂಖ್ಯೆಗಳೊಂದಿಗೆ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಮೈಸೂರು ಮಹಾರಾಜರ ಸರಕಾರದ ನಡಾವಳಿಗಳು, ಮೈಸೂರು ಸರಕಾರದ ಆಡಳಿತ ವರದಿಗಳಿಂದ ಪೊಲೀಸ್ ಇಲಾಖೆಯ ಆಧುನಿಕರಣ ಹಾಗೂ ಬದಲಾವಣೆಗೆ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ೧೯೦೨-೦೩ ರ ಇಂಡಿಯನ್ ಪೊಲೀಸ್ ಕಮಿಷನ್ ರಿಪೋರ್ಟ್, ೧೯೧೬ರ ಐಸ್‌ಲಿಂಗ್‌ಟನ್ ವರದಿ, ೧೯೨೪ರ ಲೀ ಕಮಿಷನ್ ವರದಿ ಮೊದಲಾದ ಆಯೋಗಗಳ ವರದಿಗಳಿಂದ ಪೊಲೀಸ್ ಇಲಾಖೆಯಲ್ಲಿ ಆದ ಬದಲಾವಣೆಗಳು ಹಾಗೂ ಸುಧಾರಣೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಪುರಾತತ್ವ ಇಲಾಖೆಯಲ್ಲಿರುವ, ಮೈಸೂರು ಸರಕಾರ ಹಾಗೂ ಪೊಲೀಸ್ ಅಧಿಕಾರಿಗಳ ನಡುವಿನ ಪತ್ರ ವ್ಯವಹಾರಗಳಿಂದ ಇಲಾಖೆಯ ಬದಲಾವಣೆಯ ಬಗ್ಗೆ ಅವರು ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿ ಸಂಗ್ರಹಿಸಿದ್ದರೆ, ಟಿಪ್ಪುಸುಲ್ತಾನನು ಪೊಲೀಸ್ ಅಧಿಕಾರಿಗಳಿಗೆ ಬರೆದ ಪತ್ರಗಳು, ಸರಕಾರಿ ಆದೇಶಗಳು ಮತ್ತು ಸುತ್ತೋಲೆಗಳು, ಮೈಸೂರಿನ ಜ್ಯುಡಿಷಿಯಲ್ ಕಮಿಷನರ್‌ರವರ ಆದೇಶಗಳಿಂದಲೂ ಸಹ ಉಪಯುಕ್ತ ಮಾಹಿತಿಗಳನ್ನು ಪಡೆಯಲಾಗಿದೆ. ಐ.ಜಿ.ಪಿರವರುಗಳು, ಸರಕಾರದ ಕಾರ್ಯದರ್ಶಿಗಳು, ಕಲೆಕ್ಟರ್‌ಗಳು, ಮ್ಯಾಜಿಸ್ಟ್ರೇಟರುಗಳು ಬರೆದ ಪತ್ರಗಳಿಂದ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿದೆ. ಪೊಲೀಸ್ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆಸಿ ಅಲ್ಲಿ ಆಗಿಹೋದ ಪೊಲೀಸ್ ಅಧಿಕಾರಿಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ.

ಮೈಸೂರು ರಾಜ್ಯದ ಕ್ರಿಮಿನಲ್ ನ್ಯಾಯಾಲಯಗಳ ಸರ್ಕ್ಯುಲರ್‌ಗಳು, ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗೆ ಸಂಬಂಧಿಸಿದ ಮೂಲ ದಾಖಲೆಗಳು, ಮದ್ರಾಸ್ ಪೊಲೀಸ್‌ಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಪರಿಶೀಲಿಸಲಾಗಿದೆ. General and revenue secretariat of the government of His Highness the maharaja of Mysore, police (Home) branch collections, General and revenue secretariat of the government of His Highness the maharaja of Mysore confidential branch collection, General and revenue secretariat of the government of His Highness the maharaja of Mysore general miscellaneous collections, General and revenue secretariat of the government of His Highness the maharaja legislation branch collection, Proceedings of Indian Legislative council. Proceedings of the Mysore representative assembly, Report on Administration of the civil and military administration of Bangalore, Report on Administration of criminal justice, Report on the Madras record, selection from the records of Fort Saint George, Selection from the records of Government of India Home department, Selection of papers from the records at the East India company relating to the revenue, Police and civil and criminal justice under the company Government in India, volume 1 and 2 Annual Administration report of Mysore, Madras Police administration Report ಮೊದಲಾದ ಪ್ರಾಥಮಿಕ ಆಕರಗಳನ್ನು ಅಧ್ಯಯನ ನಡೆಸಲಾಯಿತು. ಆನುಷಂಗಿಕ ಆಕರಗಳಾಗಿ, ಹಲವಾರು ವಿದ್ವಾಂಸರು ಹಾಗೂ ಸಂಶೋಧಕರು ಬರೆದ ಪುಸ್ತಕಗಳು, ಸಾಹಿತ್ಯ ಕೃತಿಗಳು, ನಿಯತಕಾಲಿಕಗಳು, ಹಾಗೂ ವಿವಿಧ ಜಿಲ್ಲೆಗಳ ಗೆಜೆಟಿಯರ್‌ಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ನಾನು ಈ ಸಂಶೋಧನೆ ನಡೆಸಲು ನನಗೆ ಮಾರ್ಗದರ್ಶನ ನೀಡಿ, ನನ್ನ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರ ನೀಡಿ, ಸಂಶೋಧನೆಯ ಶಿಸ್ತಿಗೆ ಮಹತ್ವವನ್ನು ಕೊಟ್ಟು ಪ್ರೋತ್ಸಾಹಿಸಿದ ನನ್ನ ಮಾರ್ಗದರ್ಶಕರೂ, ಹಿರಿಯ ಸಂಶೋಧಕರು ಆದ ಡಾ.ಕೆ.ಜಿ.ವಸಂತ ಮಾಧವರವರಿಗೂ ಹಾಗೂ ನನಗೆ ಪ್ರೇರಣೆ ನೀಡಿ, ಪ್ರತೀ ಹಂತದಲ್ಲೂ ನನ್ನ ಬರವಣಿಗೆಯನ್ನು ತಿದ್ದಿ,

ಆಕರಗಳನ್ನು ಪಡೆಯಲು ನೆರವು ನೀಡಿ, ಪ್ರೋತ್ಸಾಹಿಸಿದ ಪ್ರೊ.ಎ.ವಿ.ನಾವುಡರವರಿಗೂ ಹಾಗೂ ನನಗೆ ಗ್ರಂಥಾಲಯವನ್ನು ಉಪಯೋಗಿಸುವುದರೊಂದಿಗೆ ಸಕಲ ರೀತಿಯಲ್ಲಿ ಪ್ರೋತ್ಸಾಹಿಸಿದ ಕರ್ನಾಟಕ ತಿಯೋಲಾಜಿಕಲ್ ಸಂಶೋದನಾ ಕೇಂದ್ರ ಬಲ್ಮಠ ಮಂಗಳೂರು ಇಲ್ಲಿನ ನಿರ್ದೇಶಕರಾದ ಡಾ.ರತ್ನಾಕರ ಸದಾನಂದರವರಿಗೂ, ಕರ್ನಾಟಕ ಪೊಲೀಸ್ ಅಶ್ವದಳದ ಕಮಾಡೆಂಟ್ ಮರಿಬಾಶೆಟ್ಟಿರವರಿಗೂ, ಬೆಂಗಳೂರಿನ ಕರ್ನಾಟಕ ರಾಜ್ಯ ಪತ್ರಾಗಾರಾ ಇಲಾಖೆಯ ಮೋಹನ್ ರವರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಡಿಟಿಪ್ಪಣಿ

೧) **David Arnold, Bureaueratic Recruitment and subordination in colonial India, the Medrass constabulary 1859-1947 - p- 4**

೨) **Ibid – p- 5**

೩) **Statement of the Police committee on the administration of Madrass city Police (Madras – 1902) p- 44**

೪) **David Arnold, B.R.S. M.S – p – 6**

೫) **S.P.A.M - (Madras – 1902) p-37 (M.P.A.R - p- 29)**

೬) **Macleane . C.D Manual of the administration of the Madras presidency (Madras 1885) p- 190**

೭) **Devid Arnold- B.R.S.M.S - by p- 13, orginal – Mouat – Handbooks for the Indian Army Madrass class- p- 68**

೮) **Nelson .J.H.- The Madras country manual part II (Madras) p- 8**

೯) **G.O 2395 Home (judicial) 7th Oct 1916 TNA**

೧೦) **Ibid**

೧೧) **Nelson . J.H - M.C.M - (Madras) p- 16**

೧೨) **Ibid**

೧೩) **Lt. Col. Ged Mount Hand book for the Indian Army : Madras class revised Edition New Delhi, 1938- p- 63 (Do- p- 12)**

೧೪) **Devid Arnold, B.R.S.M.S, p- 15**

೧೫) **Ibid – p- 15**

೧೬) **Venkataramaiah. P.S (E) Policing in Karnataka growth in a century, Karanataka State government Bangalore- 1985- p- 2**

ಅಧ್ಯಾಯ– ೨

ಪ್ರಾಚೀನ ಕರ್ನಾಟಕದಲ್ಲಿ ಆಂತರಿಕ ರಕ್ಷಣಾ ವ್ಯವಸ್ಥೆ

೨.೧ – ಪೊಲೀಸರ ಉಗಮ

ಆಹಾರನಿದ್ರಾ – – ಎಂದು ಶ್ರೀ. ಸೀತಾರಾಮದಾಸ ಓಂಕಾರನಾಥರು 'ಶ್ರೀ.ಶ್ರೀ.ಪುರುಷೋತ್ತಮ ಲೀಲಾ'ದಲ್ಲಿ ತಿಳಿಸಿದ್ದಾರೆ. ಆಹಾರ, ನಿದ್ರೆ, ಭಯ ಮತ್ತು ಮೈಥುನಗಳು ಮನುಷ್ಯ ಮತ್ತು ಪ್ರಾಣಿಗಳಿಗೆ ಸಮಾನವಾಗಿದೆ. ಪ್ರಾಣಿಗಳಿಗಿಂತ ಮನುಷ್ಯನನ್ನು ಭಿನ್ನವಾಗಿ ನಾವು ಕಾಣುವುದು ಆತನು ಆಚರಿಸುವ ಧರ್ಮದಿಂದಾಗಿ. ಮನುಷ್ಯ ಧರ್ಮವನ್ನು ಪಾಲಿಸುತ್ತಾನೆ. ಆದರೆ ಪ್ರಾಣಿಗಳು ಧರ್ಮವನ್ನು ಆಚರಿಸುವುದಿಲ್ಲ. ಧರ್ಮವಿಲ್ಲದ ಮನುಷ್ಯನು, ಪ್ರಾಣಿಗಳಿಗೆ ಸಮಾನವೆನ್ನುತ್ತಾರೆ.

ಪ್ರಾಣಿಗಳು ತಮ್ಮ ಹಸಿವಿಗಾಗಿ ಆಹಾರ ಸೇವಿಸಿದ ನಂತರ ತೃಪ್ತವಾಗುತ್ತವೆ. ನಾಳೆಗಾಗಿ ಆಹಾರ ಸಂಗ್ರಹಿಸುವುದಿಲ್ಲ. ಅವು ಆಹಾರ ತಿಂದೊಡನೆ ನಿದ್ರಿಸಿ ಹಸಿವಾದಾಗ ಏಳುತ್ತವೆ. ಭಯವಾದಾಗ ಅವಿತುಕೊಳ್ಳುತ್ತವೆ. ಅಥವಾ ಓಡುತ್ತವೆ, ಅಥವಾ ಆತ್ಮರಕ್ಷಣೆಗಾಗಿ ಕಾದಾಡುತ್ತವೆ. ಅದೂ ಸಹ ಆ ಕಾಲಕ್ಕೆ ತಮ್ಮನ್ನು ರಕ್ಷಿಸಿಕೊಳ್ಳಲು ಮಾತ್ರ. ಮೈಥುನವೂ ಸಹ ಪ್ರಾಣಿಗಳಲ್ಲಿ ನಿಗದಿತ ಕಾಲಮಾನದಲ್ಲಿ ಮಾತ್ರ ಇದ್ದು ಆ ಬಯಕೆ ಈಡೇರಿದೊಡನೆ ಅಲ್ಲಿಗೆ ಮುಗಿಯಿತು. ಹೆಚ್ಚು ಕಾಲ ಆ ಬಗ್ಗೆ ಚಿಂತಿಸುವುದಿಲ್ಲ. ಇದು ಕೇವಲ ವಂಶಾಭಿವೃದ್ಧಿಗಾಗಿ ನಡೆಯುವ ಕ್ರಿಯೆ ಅಷ್ಟೇ. ಇವುಗಳಿಗೆ ಮುಂದಾಲೋಚಿಸುವ ಶಕ್ತಿಯಿಲ್ಲ, ಎಲ್ಲವೂ ಪ್ರವೃತ್ತಿಗಳಾಗಿರುತ್ತವೆ.

ಆದರೆ ಮನುಷ್ಯ ಈ ಎಲ್ಲಾ ಪ್ರವೃತ್ತಿಗಳ ನಡುವೆ ಮುಂದಾಲೋಚಿಸುತ್ತಾನೆ. ಪ್ರತಿಯೊಂದು ಕ್ರಿಯೆಯ ಕಾರ್ಯ ಕಾರಣಗಳನ್ನು ತಿಳಿಯುತ್ತಾನೆ. ಈ ಯೋಚನಾಶಕ್ತಿಯಿಂದಾಗಿಯೇ ಕಾಲಕ್ರಮೇಣ ಈತನ ಪ್ರವೃತ್ತಿಗಳಲ್ಲಿ ಬದಲಾಯಿತು. ಹಸಿವಿನ ಸಮಸ್ಯೆ ಊಟಮಾಡಿದೊಡನೆ ಉಪಶಮನವಾದರೂ ಸಹ, ಮಾನವ ತನ್ನ ಆಲೋಚನಾ ಶಕ್ತಿಯಿಂದಾಗಿ ನಾಳಿನ ಬದುಕಿಗಾಗಿ ಆಹಾರ ಸಂಗ್ರಹಿಸಿದ, ತನ್ನ ಆರೋಗ್ಯಕ್ಕೆ ಅಗತ್ಯವಾದ ನಿದ್ರೆಗೆ ಒಂದು ಸಮಯವನ್ನು ನಿಗಧಿಪಡಿಸಿದ. ಕೆಲಸಕ್ಕೆ ಪ್ರತ್ಯೇಕ ಸಮಯವನ್ನು ನಿಗಧಿಪಡಿಸಿದ. ಮೈಥುನಕ್ಕಾಗಿ ಆತನಿಗೆ ನಿಗಧಿತ ಸಮಯವಿಲ್ಲ. ತನ್ನ ಯೋಚನಾ ಶಕ್ತಿಯಿಂದಾಗಿ ಈ ಪ್ರವೃತ್ತಿಗಳನ್ನು ಕಾಲಕಾಲಕ್ಕೆ ಅಭಿವೃದ್ಧಿಪಡಿಸಿಕೊಳ್ಳಲು ಹಲವು ಪ್ರಯೋಗಗಳನ್ನು ಮಾಡಿದ. ಮಾನವನು ಮೂಲತ: ಹಲವು ಪ್ರಾಣಿಗಳಿಗಿಂತಲೂ ದೈಹಿಕವಾಗಿ ಕಡಿಮೆ ಶಕ್ತಿಯುಳ್ಳವನು. ಹಾಗಾಗಿ ಈ ಪ್ರಾಣಿಗಳನ್ನು ಎದುರಿಸುವ ಸಲುವಾಗಿ ತಾನು ಒಟ್ಟಾಗಿ ಗುಂಪಾಗಿ ಬದುಕಬೇಕೆಂಬುದನ್ನು ಕಂಡುಕೊಂಡನು. ತಾನು ತನ್ನ ಹೆಂಡತಿ ಮಕ್ಕಳು ಸಂಸಾರಗಳನ್ನು ರಕ್ಷಿಸುತ್ತಾ ಬಂದ ಹೀಗೆ ತನ್ನ ಹಾಗೂ ತನ್ನ ಸಂಸಾರದ ರಕ್ಷಣೆಗೆ ಕುಟುಂಬವೊಂದೇ ಸಾಲದು, ಅದಕ್ಕಿಂತ ದೊಡ್ಡದಾದ ಗುಂಪು ಅಗತ್ಯವಿದೆ ಎಂದು ಅನ್ನಿಸಿತು. ಹೀಗಾಗಿ ಒಂದು ಸಾಮಾಜಿಕ ಗುಂಪನ್ನು ಕಟ್ಟಿಕೊಂಡನು. ಇಲ್ಲಿ ವಾಸಿಸುವ ಜನರು ಕೆಲವು ಉತ್ತಮ ಗುಣಗಳನ್ನು ಹೊಂದಿರಬೇಕಿತ್ತು. ಇವುಗಳಿಗೆ ವಿರುದ್ಧವಾಗಿ ನಡೆದುಕೊಂಡವರನ್ನು ತಮ್ಮ ಗುಂಪಿನಿಂದ ಹೊರಗಿಟ್ಟರು. ಈ ಒಳ್ಳೆಯ ಗುಣ ನಡತೆಗಳ ಸಂಹಿತೆಯೇ ಕಾಲಕ್ರಮೇಣ ಆಯಾ ಕಾಲದ ಕಾನೂನು, ಧರ್ಮಶಾಸ್ತ್ರ ಸಂಹಿತೆಗಳಾದವು.

ಈ ನೀತಿನಿಯಮಗಳನ್ನು ಜನರು ಪಾಲಿಸಬೇಕಿತ್ತು. ಹೀಗೆ ಜನರು ಈ ನೀತಿ ನಿಯಮಗಳನ್ನು ಪಾಲಿಸುತ್ತಿದ್ದಾರೋ? ಇಲ್ಲವೋ? ಎಂಬುದನ್ನು ಗಮನಿಸಲು ಕಾವಲುಗಾರನೊಬ್ಬನ ಅಗತ್ಯತೆ ಇತ್ತು. ಆತನೇ ಪೊಲೀಸ್ ಆಗಿ ಬೆಳೆದುಬಂದ. ಯಾವಾಗಿನಿಂದ ಸಮಾಜದಲ್ಲಿ ಸರಿತಪ್ಪುಗಳ ಪರಿಕಲ್ಪನೆ ಬೆಳೆದು ಬಂತೋ, ಅಂದಿನಿಂದಲೂ ಪೊಲೀಸ್ ಕೆಲಸಗಳನ್ನು ಮಾಡುವ ಮಾರ್ಗವೂ ಬೆಳೆದು ಬಂದಿರಬೇಕು. ತಪ್ಪು ಮಾಡಿದವರನ್ನು ಪ್ರಶ್ನಿಸುವ, ತಿದ್ದುವ ಕೆಲಸವನ್ನು ಮಾಡುತ್ತಾ ಬಂತು. ಸಮಾಜಕ್ಕೆ ಯಾವುದು ಸರಿಯಾದ ಮತ್ತು ಯಾವುದು ತಪ್ಪಾದ ದಾರಿ ಎಂದು ಈ ವರ್ಗ

[illegible]

ತೋರಿಸುತ್ತಿತ್ತು.[೧]

ಭೂಮಿಯ ಮೇಲೆ ಭಗವಂತನ ಅವತಾರವಾಗಿದ್ದೇ ದುಷ್ಟಶಿಕ್ಷಣೆ ಹಾಗೂ ಶಿಷ್ಟರಕ್ಷಣೆಗಾಗಿ (ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ) ಕ್ರಿಶ್ಚಿಯನ್ ಧರ್ಮದ ಪ್ರಕಾರವೂ ಏಸುಕ್ರಿಸ್ತನನ್ನು ಭಗವಂತನು ಭೂಮಿಗೆ ಕಳುಹಿಸಿದ್ದೆ ಇಲ್ಲಿನ ಜನರ ರಕ್ಷಣೆಗಾಗಿ.[೨]

೨.೨– ಪೊಲೀಸ್ ಪದದ ವ್ಯುತ್ಪತ್ತಿ

ಪೊಲೀಸ್ ಎಂಬ ಶಬ್ದದ ವ್ಯುತ್ಪತ್ತಿ ಬಗ್ಗೆ ಕತೂಹಲವಿದೆ. ಗ್ರೀಕ್ ಭಾಷೆಯ POLIS ಎಂಬ ಶಬ್ದದಿಂದ Police ಎಂಬ ಶಬ್ದವು ವ್ಯುತ್ಪತ್ತಿ ಆಗಿದೆ[೩] ಎಂದು ಸಿ.ರೀತ್ ಅಭಿಪ್ರಾಯಪಡುತ್ತಾರೆ. ಅಂದರೆ ಅದರ ಅರ್ಥ 'ನಗರ'(a City) ಎಂದಾಗುತ್ತದೆ. ಆದರೆ ಮೊರ್ರೈರ್‌ಟಿಯವರ ಅಭಿಪ್ರಾಯದಂತೆ, ಲ್ಯಾಟಿನ್ ಭಾಷೆಯ POLITIA ಎಂಬ ಶಬ್ದದಿಂದ ಇದು ವ್ಯುತ್ಪತ್ತಿ ಆಗಿದೆ. ಇದರ ಅರ್ಥ, ಒಂದು ರಾಜ್ಯದ ಅಥವಾ ಸರಕಾರದ ಸ್ಥಿತಿ.[೪] ಇದು ಪೊಲೀಸ್ ಶಬ್ದದ ಅರ್ಥಕ್ಕೆ ತುಲನಾತ್ಮಕವಾಗಿ ಸಮೀಪವಾಗಿದೆ. ಇದಕ್ಕಿಂತ ಪೂರ್ವದಲ್ಲಿ ಈ ಶಬ್ದಕ್ಕೆ 'ಆಡಳಿತದ ರೀತಿ' ಅಥವಾ 'ನಿಯಂತ್ರಣ' ಎಂಬ ಅರ್ಥವಿತ್ತು. ಆದರೆ ಈಗ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ, ಅಪರಾಧಗಳ ತಡೆ ಮತ್ತು ಪತ್ತೆ, ಮತ್ತು ಕಾನೂನು ಜಾರಿ ಮಾಡುವ ನಾಗರಿಕ ಅಧಿಕಾರಿಗಳ ಸಂಘಟಿತ ಸಮೂಹವನ್ನು ಪ್ರತಿನಿಧಿಸುತ್ತದೆ.

ಎನ್‌ಸೈಕ್ಲೋಪಿಡಿಯ ಆಫ್ ಬ್ರಿಟಾನಿಕದಲ್ಲಿ POLICE – ಎಂದರೆ ೧)ಸಿವಿಲ್ ಆಡಳಿತ, ಪ್ರಜೆಗಳ ನೆಮ್ಮದಿ ರಕ್ಷಣೆ, ಸಾರ್ವಜನಿಕ ಶಾಂತಿಪಾಲನೆ, ೨) ಸಿವಿಲ್ ಆಡಳಿತ ಇಲಾಖೆ, ಸಾರ್ವಜನಿಕ ನೆಮ್ಮದಿ, ಶಾಂತಿ ರಕ್ಷಣೆಯ ವಿಭಾಗ, ೩) ಪೊಲೀಸು ದಳ, ಕಾವಲು ದಳ, ತಳವಾರಿಕೆ ಎಂದಾಗುತ್ತದೆ. ಮೈಸೂರು ವಿ.ವಿಯ ಇಂಗ್ಲೀಷ್ ಕನ್ನಡ ನಿಘಂಟು, ಏಕೀಕೃತ ಸಂಪುಟ, ಪ್ರಸಾರಂಗ, ಮೈಸೂರು ೨೦೦೭ ರಲ್ಲಿ ಪೊಲೀಸ್ ಎಂದರೆ ಕಾನೂನು ಕಟ್ಟಳೆಗಳನ್ನು ಜಾರಿಗೆ ತರುವ ಅದೇ ರೀತಿಯ ಕರ್ತವ್ಯಗಳನ್ನುಳ್ಳ ದಳ.

ಶಬ್ದಕೋಶಗಳಲ್ಲಿ ವಿವರಿಸಿದಂತೆ POLICE - ಎಂಬ ಶಬ್ದವು ಕ್ರಿಯಾ ಪದವಾಗಿದೆ. ಪೊಲೀಸ್ ದಳದ ಮೂಲಕ ಆಳು, ಅಧೀನದಲ್ಲಿ ಇಟ್ಟುಕೋ, ಪೊಲೀಸ್ ಬಂದೋಬಸ್ತ್‌ನ್ನು ಇಡು, ತಳವಾರಿಕೆ ನಡೆಸು, ಏರ್ಪಡಿಸು, ಪೊಲೀಸ್ ಸಿಬ್ಬಂದಿ ಒದಗಿಸು, ನಿಯಂತ್ರಿಸು, ವ್ಯವಸ್ಥೆ ಸ್ಥಾಪಿಸು ಎಂದು ಅರ್ಥವಾಗುತ್ತದೆ. Concise oxford English dictionary – edited by catherinesoanes angns Stevenson – oxford university press, 11th edition – ೨೦೦೪ ರಲ್ಲಿ POLICE - ಎಂದರೆ A civil force responsible for the prevention and detection of crime and maintenance of public order- members of such force control and maintain law and order in an area. ಎಂದು ವಿವರಿಸಿದೆ.

ಪೊಲೀಸ್ ಎಂಬ ಶಬ್ದವನ್ನು ವಿವರಣಾತ್ಮಕವಾಗಿ ಹೇಳುವುದಾದರೆ ಸಾರ್ವಜನಿಕ ಆಸ್ತಿಪಾಸ್ತಿಗಳ ರಕ್ಷಣೆಗಾಗಿ, ಅಪರಾಧಿಗಳ ಪತ್ತೆ ಮತ್ತು ತಡೆಗಾಗಿ ಹಾಗೂ ಯಾವುದೇ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವ ಸಲುವಾಗಿ ಇರುವ ಒಂದು ಸರಕಾರಿ ಅಂಗ ಎಂದು ತಿಳಿದು ಬರುತ್ತದೆ. ದೇಶದಲ್ಲಿ ಆಂತರಿಕ ಶಾಂತಿಯ ಪರಿಪಾಲನೆ, ಅಪರಾಧಗಳ ನಿವಾರಣೆ ಮತ್ತು ಕಾನೂನು ಚೌಕಟ್ಟಿನಲ್ಲಿ ಸರ್ಕಾರದ ನಿಯಮಗಳನ್ನು ಜಾರಿಗೆ ತರುವ ಮೂಲಕ, ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಕಾಪಾಡಿ ಅವರಿಗೆ ಹಾಗೂ ಅವರ ಆಸ್ತಿಪಾಸ್ತಿಗಳಿಗೆ ರಕ್ಷಣೆ ಒದಗಿಸುವ ಶಾಸನಬದ್ಧ ವ್ಯವಸ್ಥೆ ಪೊಲೀಸ್ (polis). ಅಂದರೆ ಗ್ರೀಕ್ ಭಾಷೆಯಲ್ಲಿ ಗ್ರಾಮರಾಜ್ಯದ ಅಧಿಕಾರ ಕೇಂದ್ರ ಎಂದರ್ಥ. ಇದೇ ಇಂದಿನ ಪೊಲೀಸು ಪದದ ವ್ಯುತ್ಪನ್ನ. ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ ಪೊಲೀಸು ವ್ಯವಸ್ಥೆಯ ಉದ್ದೇಶ. ಶಿಕ್ಷೆಯ ವಿಧಾನಗಳು ಮಾತ್ರ ಕಾಲದಿಂದ ಕಾಲಕ್ಕೆ

ಬದಲಾಗುತ್ತ ಬಂದಿದೆ.[೫]

ಅನಾದಿ ಕಾಲದಿಂದಲೂ ಪೊಲೀಸರ ಕರ್ತವ್ಯಗಳನ್ನು ಮಾಡುತ್ತಿದ್ದ ವ್ಯವಸ್ಥೆ ಅಥವಾ ಸಂಸ್ಥೆಗಳು ಇದ್ದವು. ಈಜಿಪ್ಟ್, ಗ್ರೀಕ್ ಮತ್ತು ರೋಂ ಕಾನೂನುಗಳಲ್ಲಿ ನಾಗರಿಕರಿಗೆ ತಮ್ಮ ಕಾನೂನುಬದ್ಧವಾದ ಉದ್ಯೋಗಗಳಿಂದ ರಕ್ಷಣೆಯನ್ನು ಒದಗಿಸುತ್ತಿದ್ದ ಮತ್ತು ಶಾಂತಿ ಕಾಪಾಡುತ್ತಿದ್ದ ನಾಗರಿಕ ಸಂಘಟನೆಗಳಿದ್ದವು. ಇವು ಬಹಳ ಪ್ರಾಚೀನವಾಗಿದ್ದು, ಬಹುತೇಕ ಸಾಮ್ಯತೆಯಿಂದ ಕೂಡಿದ್ದವು.[೬]

ರೋಮ್‌ನಲ್ಲಿ ಅಗಸ್ಟಸ್‌ನ ಕಾಲದವರೆಗೆ 'ಪೊಲೀಸ್' ವ್ಯವಸ್ಥೆ ಪ್ರತ್ಯೇಕವಾದ ವ್ಯವಸ್ಥೆಯಾಗಿ ಬೆಳೆದಿರಲಿಲ್ಲ. ರೋಮ್ ಚಕ್ರಾಧಿಪತ್ಯದ ಪತನದೊಂದಿಗೆ 'ಬಾರ್‌ಬರಿಯನ್' ಆಡಳಿತದ ಪರಿಣಾಮದಿಂದಾಗಿ ಪೊಲೀಸ್ ಆಡಳಿತದ ಕುರುಹುಗಳು ಮರೆಯಾದವು. ಯಾವಾಗ ಚಾರ್ಲ್‌ಮ್ಯಾಗ್ನೆ ರೋಮ್‌ನ ಆಡಳಿತಗಾರನಾದನೋ, ಆತ ಪೊಲೀಸ್ ಆಡಳಿತವನ್ನು ಪುನರುಜ್ಜೀವನಗೊಳಿಸಿದ. ಹಲವಾರು ಪೊಲೀಸ್ ನಿಯಮಗಳನ್ನು ಅದರಲ್ಲಿ ತೂಕ, ಅಳತೆ, ಗಡಿಸುಂಕ, ಮಾರುಕಟ್ಟೆ, ಆಹಾರ ಧಾನ್ಯಗಳು, ಧಾನ್ಯಗಳ ಮತ್ತು ಜಾನುವಾರುಗಳ ಮಾರಾಟಗಳಲ್ಲಿ ನಿಯಮಗಳನ್ನು ಜಾರಿಗೆ ತಂದನು. ಚಕ್ರವರ್ತಿಯ ಮರಣದಿಂದ ಪುನ: ಅರಾಜಕತೆ ಉಂಟಾಯಿತು. ಆದರೆ ಪ್ರಾನ್ಸ್‌ನಲ್ಲಿ ಸಹಜ ಸ್ಥಿತಿ ಬರುತ್ತಿದ್ದಂತೆ ಅತ್ಯಂತ ಗೌರವಯುತವಾದ ಪೊಲೀಸ್ ಕಾಯ್ದೆ (ನಿಯಮ) ಗಳನ್ನು ಜಾರಿಗೆ ತರಲಾಯಿತು. ಈ ವ್ಯವಸ್ಥೆಯನ್ನು ಇಂಗ್ಲೆಂಡ್‌ನಲ್ಲಿ 'ವಿಲಿಯಂ ದಿ ಕಾಂಕರರ್' ಪರಿಚಯಿಸಿದ.[೭] ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಪ್ರಾರಂಭಿಕ ದಿನಗಳಲ್ಲಿ ಪೊಲೀಸ್ ಕರ್ತವ್ಯಗಳು ಮತ್ತು ಕೆಲಸ ಕಾರ್ಯಗಳು ವಿಶಾಲವಾದ ಗುರಿಗಳನ್ನು ಹೊಂದಿತ್ತು. ಆದ್ದರಿಂದ ಇದು ಸಹಜ ವಾಗಿ ಪೊಲೀಸ್ ಶಬ್ದವು ನಿಧಾನವಾಗಿ ಮತ್ತು ಅಸ್ಪಷ್ಟವಾಗಿ ರೂಪತಾಳಿತು. ಭಾರತದಲ್ಲಿನ ಪೊಲೀಸ್ ವ್ಯವಸ್ಥೆಯ ಕೆಲವು ಮಾಹಿತಿಗಳು ಮನುವಿನ ಕಾಲದಲ್ಲಿ (ಕ್ರಿಸ್ತ ಪೂರ್ವ ೨೦೦೦) ಕಾಣಿಸುತ್ತವೆ. ನಂತರ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ (ಕ್ರಿಸ್ತ ಪೂರ್ವ ೩೦೦) ಅಪರಾಧ ಮತ್ತು ಆಡಳಿತಕ್ಕೆ ಸಂಬಂಧಿಸಿದ ಅತ್ಯಂತ ವಿವರವಾದ ವಿವರಣೆಗಳು ಸಿಗುತ್ತದೆ.

೨.೩ ವೇದಗಳ ಕಾಲದ ರಕ್ಷಣೆಯ ವಿಚಾರಗಳು

ಒಂದು ಜನಸಮುದಾಯವು ಒಬ್ಬ ರಾಜನ ಅಡಿಯಲ್ಲಿ ಸಂಘಟಿತವಾಗಿರಬೇಕಾದರೆ ಅವರೆಲ್ಲರನ್ನೂ ನಿಯಂತ್ರಿಸುವ, ಹಿಡಿತದಲ್ಲಿ ಇಟ್ಟುಕೊಳ್ಳುವ ಒಂದು ನೀತಿ ಸಂಹಿತೆಯ ಕಾನೂನಿನ ಅಗತ್ಯವಿತ್ತು. ಈ ಕಾನೂನುಗಳನ್ನು ಅನುಷ್ಠಾನಕ್ಕೆ ತರಲು ಹಾಗೂ ಈ ಕಾನೂನನ್ನು ಮೀರಿ ನಡೆದವರ ವಿರುದ್ಧ ಆಯಾ ಕಾಲದ ದಂಡಸಂಹಿತೆಯಂತೆ ಶಿಕ್ಷಿಸುವ ಪಡೆಯೊಂದು ಎಲ್ಲ ಕಾಲದಲ್ಲಿಯೂ ಅಗತ್ಯವಾಗಿ ಬೇಕಿತ್ತು. ಹಾಗೆ ನೋಡಿದಲ್ಲಿ ಮಾನವನು ಎಂದಿನಿಂದ ಗುಂಪಾಗಿ ಬದುಕಲು ಪ್ರಾರಂಭಿಸಿದನೋ ಅಂದಿನಿಂದಲೇ ಕಳ್ಳತನಗಳು ಮೊದಲಾದ ಅಪರಾಧಗಳು ನಡೆಯುತ್ತಾ ಬಂದಿದೆ. ಇಂತಹ ಅಪರಾಧಗಳನ್ನು ತಡೆಯುವ ಮತ್ತು ನಡೆದ ಅಪರಾಧಗಳನ್ನು ಪತ್ತೆಹಚ್ಚುವ ಘಟಕವೊಂದನ್ನು ಎಲ್ಲಾ ರಾಜ ಮಹಾರಾಜರುಗಳು ಹೊಂದಿದ್ದರು. ಇದನ್ನೇ ಆಧುನಿಕ ಭಾಷೆಯಲ್ಲಿ 'ಪೊಲೀಸ್' ಎನ್ನಬಹುದು.

ಉಪಲಬ್ಧವಿರುವ ನ್ಯಾಯಶಾಸ್ತ್ರಗಳಲ್ಲಿ ಹಿಂದೂ ನ್ಯಾಯಶಾಸ್ತ್ರವು ಅತ್ಯಂತ ಪ್ರಾಚೀನವಾದುದು. ಇಸ್ಲಾಮಿ ನ್ಯಾಯಶಾಸ್ತ್ರದಂತೆ ಹಿಂದೂ ನ್ಯಾಯವು ಧಾರ್ಮಿಕ ಸಾಹಿತ್ಯದೊಡನೆ ಮಿಶ್ರವಾಗಿಯೇ ಬೆಳೆದುಬಂದಿದೆ. ಸಹಸ್ರಾರು ವರ್ಷಗಳ ಹಿಂದಿನ ವೇದವಾಙ್ಮಯಗಳಲ್ಲಿಯೇ ನ್ಯಾಯಿಕ ತತ್ವಗಳು ರೂಪಗೊಂಡಿವೆ. ವೃತ್ತಿ, ವರ್ಗ, ಜೀವನಗಳಿಗೆ ಸಂಬಂಧಿಸಿದ ನಿಯಮಗಳ ಜೊತೆಗೆ ಸ್ತೇಯ, ಜಾರತನ, ಜೂಜು, ಮೊದಲಾದ ಅಪರಾಧಗಳ ವಿವರಗಳಿವೆ. ಭಾರತದ ಪ್ರಾಚೀನ ಮಹಾಭಾಷ್ಯಕಾರರು, ಯೋಗಸೂತ್ರಕಾರರು ಆದ ಪತಂಜಲಿ ಮಹರ್ಷಿಗಳ ಕಾಲದಲ್ಲಿಯೇ ವೇದಾಧ್ಯಯನ ಪಾಠಶಾಲೆಗಳ ಜೊತೆಜೊತೆಗೆ ಧರ್ಮಾಧ್ಯಯನ (law study) ವಿಶೇಷ ಪಾಠಗಳಿದ್ದವೆಂದು ತಿಳಿದುಬರುತ್ತದೆ.[೮] ಧರ್ಮ

ಸೂತ್ರ, ಸ್ಮೃತಿಗಳು, ಸಮಾಜದ ಸ್ವಾಸ್ಥ್ಯ ಕಾಪಾಡಲು ರಚನೆಯಾಗಿ ಯಾವ ಕೃತ್ಯಗಳು ಅಪರಾಧಗಳಾಗುತ್ತವೆ, ಅವುಗಳಿಗೆ ಏನು ಶಿಕ್ಷೆ ಎಂಬುದನ್ನು ನಿಗದಿಪಡಿಸಿದವು. ಈ ಅಪರಾಧಗಳನ್ನು ಪತ್ತೆಹಚ್ಚುವ ಅಂಗವು ಸಮಕಾಲಿನವಾಗಿ ಬೆಳೆದುಬಂದಿದೆ. ಧರ್ಮಶಾಸ್ತ್ರಕಾರರಲ್ಲಿ ಆಪಸ್ತಂಬ, ಗೌತಮ, ಬೋಧಾಯನ, ಹಾರೀತ, ವಶಿಷ್ಟ, ವಿಷ್ಣು ಮೊದಲಾದ ಸೂತ್ರಕಾರರು ಹಾಗೂ ಮನು, ಯಜ್ಞವಲ್ಕ್ಯ, ನಾರದ, ಬೃಹಸ್ಪತಿ, ಕಾತ್ಯಾಯನ, ಪರಾಶರ ಮೊದಲಾದ ಸ್ಮೃತಿಕಾರರು ನೀತಿ ಸಂಹಿತೆಗಳನ್ನು ರಚಿಸಿದರು. ಅಪರಾಧದ ಸ್ವರೂಪ, ಪತ್ತೆಹಚ್ಚುವ ವಿಧಾನ, ಪತ್ತೆಮಾಡುವ ಅಧಿಕಾರಿಗಳ ವಿವರಗಳ ಬಗ್ಗೆ ಕೆಲವು ನೀತಿ ಸಂಹಿತೆಗಳಲ್ಲಿ ಮಾಹಿತಿಗಳಿವೆ. ಇವರ ಸೂತ್ರಗಳು ಇಂದಿನ ಸಮಾಜಕ್ಕೆ ಅನ್ವಯಿಸುವುದಿಲ್ಲವಾದರೂ ಅಂದಿನ ಸಮಾಜ ಅದನ್ನು ಒಪ್ಪಿಕೊಂಡಿತ್ತು.

ವೇದಗಳಲ್ಲಿ ಬರುವ ಗ್ರಾಮಿಣಿ, ಗ್ರಾಮಕೂಟ, ಗ್ರಾಮನೇತೃ, ಗ್ರಾಮಪತಿ, ಗ್ರಾಮಭತ್ರು, ಗ್ರಾಮಾಧಿಪತಿ, ಗ್ರಾಮಿಕ ಈ ಎಲ್ಲಾ ಶಬ್ದಗಳು ಆ ಕಾಲದಲ್ಲಿ ಗ್ರಾಮದ ರಕ್ಷಣೆಯ ಜವಾಬ್ದಾರಿಯೊಂದಿಗೆ ಇತರ ಕೆಲಸಗಳನ್ನು ಮಾಡುತ್ತಿದ್ದ ಗ್ರಾಮದ ಮುಖ್ಯಸ್ಥನನ್ನು ಸೂಚಿಸುತ್ತವೆ. ಅನೇಕ ಗ್ರಾಮಗಳ ಗುಂಪಾದ 'ವಿಸ್‌ಗೆ' ವಿಶ್ಪತಿಯು ಅನೇಕ ವಿಸ್‌ಗಳು ಸೇರಿದ ಪ್ರಾಂತ್ಯಕ್ಕೆ ಗೋಪ ಎಂಬುವವನು ಮುಖ್ಯಾಧಿಕಾರಿಯಾಗಿ ಜನರ ರಕ್ಷಣೆಯನ್ನು ನಡೆಸುತ್ತಿದ್ದ. ವೇದಗಳಲ್ಲಿ ಬಳಕೆಯಾದ 'ಚೋರಗ್ರಾಹ' ಮತ್ತು 'ಚೋರೋದ್ಧರಣಿಕ' ಎಂಬ ಪದಗಳು ಅನುಕ್ರಮವಾಗಿ ಕಳ್ಳರನ್ನು ಹಿಡಿಯುವ ಮತ್ತು ಕಳ್ಳಮಾಲಿನ ವ್ಯಾಪಾರಿಗಳನ್ನು ಪತ್ತೆಮಾಡುವ ಅಧಿಕಾರಿ ಎಂಬ ಅರ್ಥವನ್ನು ನೀಡುತ್ತವೆ.[೯] ಅಂದರೆ ಈ ಕೆಲಸಗಳು ಸೈನಿಕ ಕರ್ತವ್ಯಗಳಿಗಿಂತ ಬಿನ್ನವಾಗಿವೆ. ದೌ:ಸಾಧಸಾಧನಿಕ ಎಂಬ ಶಬ್ದವು ಭಾರಿಕಳ್ಳರು, ದರೋಡೆಕೋರರು ಇವರನ್ನು ಪತ್ತೆಮಾಡಿ ಹಿಡಿಯುವ ದುಸ್ಸಾಧ್ಯವಾದ ಕೆಲಸವನ್ನು ಸಾಧಿಸುವ ಅಧಿಕಾರಿ ಎಂದು ಸೂಚಿಸುತ್ತದೆ.[೧೦] 'ಪಿಶುನವೇತ್ರಕ' ಎಂಬ ಶಬ್ದವು ದುಷ್ಟರನ್ನು ಬೆತ್ತದಿಂದ ಹೊಡೆದೋಡಿಸುವ (ಲಾಠಿಚಾರ್ಜ್) ಅಧಿಕಾರಿ ಎಂಬ ಅರ್ಥ ಬರುತ್ತದೆ. ಈ ಎಲ್ಲಾ ಹೆಸರುಗಳು ನಿರ್ಧಿಷ್ಟವಾಗಿ ಪೊಲೀಸ್ ಕೆಲಸ ಮಾಡುವ ಅಧಿಕಾರಿಯನ್ನೇ ಸೂಚಿಸುತ್ತಿದ್ದವು.

ಹತ್ತುಬಗೆಯ ಅಪರಾಧಗಳನ್ನು ಗುರುತಿಸಿದ್ದು, ಅದರ ಮೇಲೆ ಕಣ್ಣಿಡುವ ಅಧಿಕಾರಿಗೆ 'ದಶಪರಾಧಿಕ' ಎಂದು ಕರೆಯಲಾಗಿದೆ. ಈ ಅಪರಾಧಗಳು ಬಹುತೇಕ ಇಂದಿನ ಭಾರತೀಯ ದಂಡ ಸಂಹಿತೆಯನ್ನು ಹೋಲುತ್ತವೆ. ಅವುಗಳೆಂದರೆ, ರಾಜಾಜ್ಞೆಯ ಉಲ್ಲಂಘನೆ, ಸ್ತ್ರೀಹತ್ಯೆ, ವರ್ಣಸಂಕರ, ಜಾರತನ, ಕಳ್ಳತನ, ಪರಪುರುಷನಿಂದ ಗರ್ಭಧಾರಣೆ, ನಿಂದೆ, ಅಪಚಾರ, ಅಶ್ಲೀಲತೆ, ಜಲಪ್ರಯೋಗ, ಗರ್ಭಪಾತಗಳಾಗಿದ್ದವು.

ಸಭಾ ಮತ್ತು ಸಮಿತಿಗಳಿಗಿಂತ ಪ್ರಾಚೀನವಾದ ಹಾಗೂ ಪ್ರಬಲವಾದ ರಾಜಕೀಯ ಸಂಸ್ಥೆ ಎಂದರೆ, ವಿದಾತ. ಇದೊಂದು ಬುಡಕಟ್ಟು ಸಭೆಯಾಗಿದ್ದು, ಧಾರ್ಮಿಕ, ಸೈನಿಕ ಹಾಗೂ ನಾಗರಿಕ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸಲು ಸ್ಥಾಪನೆಗೊಂಡಿತ್ತು. ಬುಡಕಟ್ಟು ಸಮಾಜವು ವ್ಯವಸ್ಥಿತವಾಗಿ ನಡೆದುಕೊಂಡು ಹೋಗಲು ಅವಶ್ಯವಾದ ಕಾನೂನು ಮತ್ತು ರೀತಿ ನೀತಿಗಳನ್ನು ಈ ಸಭೆಯು ರಚಿಸುತ್ತಿತ್ತು. ವಿಧಾತ ಸಭೆಯು ಸೈನಿಕ ರಕ್ಷಣೆ ನೀಡಲು ಬುಡಕಟ್ಟು ಸೈನ್ಯವನ್ನು ವ್ಯವಸ್ಥೆಗೊಳಿಸುತ್ತಿತ್ತು. ಋಗ್ವೇದದಲ್ಲಿ ವಿಧಾತ ಸಭೆಯು ಬುಡಕಟ್ಟುಗಳನ್ನು ರಕ್ಷಿಸುವುದನ್ನು ಉಲ್ಲೇಖಿಸುತ್ತದೆ

ಕಳ್ಳತನವು (ಸ್ತೇಯವು) ಮಾನವ ಪ್ರಪಂಚವನ್ನು ಮೊದಲಿನಿಂದಲೂ ಕಾಡಿದ ಪ್ರಶ್ನೆ. ಸಮಾಜವನ್ನು ಸದಾ ಬೆದರಿಸುವ ಒಂದು ಪೆಡಂಭೂತ. ಇದು ಬಹಿರಂಗವಾಗಿಯೂ ನಡೆಯಬಹುದು ಅಥವಾ ರಹಸ್ಯವಾಗಿಯೂ ನಡೆಯಬಹುದು. ಕೆಲವು ಸಲ ಸಾಮಾಜಿಕ ಆರ್ಥಿಕ ಅಪರಾಧಗಳ ರೂಪವನ್ನೂ ತಾಳುವುದು. ಕಳ್ಳತನ, ಕುಡಿತ, ಜಾರತನ, ಕಲಬೆರಕೆ, ಕಳ್ಳಸಾಗಾಣಿಕೆ ಇವು ಸದಾ ಸಮಾಜವನ್ನು ಕಾಡಿವೆ, ಕೆಡಿಸಿವೆ. ಋಷಿಮುನಿಗಳನೇಕರು ವೇದಕಾಲದಿಂದಲೂ ಈ ಬಗ್ಗೆ ಎಚ್ಚರಿಸಿದ್ದಾರೆ. ಸರಕಾರದವರು ಸಮಾಜಕಂಟರ (ರೌಡಿಗಳ) ಪಟ್ಟಿಯನ್ನು ತಯಾರಿಸಿ ಅವರನ್ನು ಬೇತಾಳದಂತೆ ಬೆನ್ನುಹತ್ತಿ ಪತ್ತೆಮಾಡಿ,

ರಕ್ಷಣಾಧಿಕಾರಿಗಳು (ಪೊಲೀಸ್) ಕೈಕೊಂಡ ಕ್ರಮವು ಮೌರ್ಯ ಸಾಮ್ರಾಜ್ಯದ ಮಹಾ ಮಂತ್ರಾಲೋಚಕ ನಾಗಿದ್ದ ಕೌಟಿಲ್ಯ ಮಹಾಶಯನು ನಿರೂಪಿಸಿದ 'ಕಂಟಕ ಶೋಧನ' ದ ಪ್ರತ್ಯಕ್ಷ ಆಧುನಿಕ ನಿದರ್ಶನವೆಂದು ಹೇಳಬಹುದು.

'ತಸ್ಕರ' , 'ಸ್ತೇನ' ಮತ್ತು 'ತಾಯು' ಎಂಬ ಶಬ್ದಗಳಿಂದ ಋಗ್ವೇದವು ಕಳ್ಳರನ್ನು ಸೂಚಿಸಿದೆ. " ನ ತಾ, ನ ಶಂತಿ ನ ದಭಾದಿ ತಸ್ಕರೋ ನಾಸಾಮಾಮಿತ್ರೋ ವ್ಯಥಿರಾಧಘರ್ಷತಿ" 'ನಮ್ಮ ಹಸುಗಳು ಕಣ್ಮರೆಯಾಗದಿರಲಿ, ಕಳ್ಳರು ಅವುಗಳನ್ನು ಹಿಂಸಿಸದಿರಲಿ' ಎಂದು ಋಗ್ವೇದ ಮಂತ್ರವೊಂದು ಸಾರುತ್ತದೆ.[೧] ಇರುಳ ಕಳ್ಳರನ್ನು 'ತಸ್ಕರ'ರೆಂದು ಕರೆಯುತ್ತಿದ್ದರು. 'ತಾಯು' ಎಂಬುದು ಇಂಡೋ ಇರಾನ್ ಮೂಲದ ಪದ ಎಂದು ಶ್ರೀ.ಕಾಣೆ ಹೇಳುತ್ತಾರೆ. 'ಸ್ತೇನ' ಎಂಬುದು ಋಗ್ವೇದದಲ್ಲಿ ಅನೇಕ ಸಲ ಬಂದಿದೆ. ದನಗಳ್ಳರನ್ನು 'ಸ್ತೇನ'ರೆಂದು ಕರೆಯುತ್ತಿದ್ದರು. ಇಂಥ 'ಸ್ತೇನ'ರನ್ನು ಮತ್ತು 'ತಸ್ಕರ'ರನ್ನು ನಾಯಿಗಳು ಅಟ್ಟಿಕೊಂಡು ಹೋಗುತ್ತಿದ್ದುವಂತೆ. (ಟಿಪ್ಪಣಿ ನೋಡಿ) ರಹಸ್ಯವಾಗಿ ಕಳ್ಳತನ ಮಾಡುವವರು 'ಸ್ತೇನ'ರು, ಬಹಿರಂಗವಾಗಿ ಮಾಡುವವರು 'ತಸ್ಕರ'ರು. 'ಮಲಿಮ್ಲು'ರೆಂಬ ಮತ್ತೊಂದು ಕಳ್ಳವರ್ಗವಿತ್ತೆಂದು 'ವಾಜಸನೇಯ ಸಂಹಿತೆ'ಯಲ್ಲಿ ಮತ್ತು 'ತೈತ್ತಿರೀಯ ಸಂಹಿತೆ'ಯಲ್ಲಿ ಹೇಳಲಾಗಿದೆ.

ರಾತ್ರಿ ಅಥವಾ ಹಗಲು, ತಿಳಿಯದ ಹಾಗೆ ಅಥವಾ ಬಹಿರಂಗವಾಗಿ ಮನುಷ್ಯನ ದ್ರವ್ಯಹರಣ ಮಾಡುವುದು ಕಳ್ಳತನ; ನಿದ್ದೆಯಲ್ಲಿರುವಾಗ, ನಿರ್ಲಕ್ಷ್ಯದಿಂದಿರುವಾಗ ಅಥವಾ ಅಮಲಿನಲ್ಲಿರುವಾಗ ಜನರ ದ್ರವ್ಯ ಇತ್ಯಾದಿಗಳನ್ನು ನಾನಾ ರೀತಿಯಲ್ಲಿ ಹರಣ ಮಾಡುವುದು ಕಳ್ಳತನ ಎಂದು ಕಾತ್ಯಾಯನ, ನಾರದರು ಹೇಳಿದ್ದಾರೆ.

ಕಳ್ಳತನವನ್ನು ಮೂರು ಭಾಗಗಳನ್ನಾಗಿಸಲಾಗಿತ್ತು. ೧) ಮಣ್ಣಿನ ಪಾತ್ರೆ, ಪೀಠೋಪಕರಣ, ಮಂಚ, ಮರಮಟ್ಟು, ಚರ್ಮದ ಹೊದಿಕೆ, ಹುಲ್ಲು ಮತ್ತು ಬೇಯಿಸದ ಆಹಾರ ಇವುಗಳ ಕಳ್ಳತನ– ಇದು ಅಲ್ಪ ಸ್ವರೂಪದ್ದು ; ೨) ರೇಷ್ಮೆಯನ್ನು ಳಿದು ಇತರ ಬಟ್ಟೆಬರೆಗಳು, ಹಸು ಮತ್ತು ಎತ್ತುಗಳನ್ನುಳಿದು ಇತರ ಸಾಕುಪ್ರಾಣಿಗಳು, ಚಿನ್ನವನ್ನುಳಿದು ಇತರ ಧಾತುಗಳು, ಬತ್ತ ಮತ್ತು ಬಾರ್ಲಿ ಇವುಗಳ ಕಳ್ಳತನ– ಇದು ಮಧ್ಯಮ ಸ್ವರೂಪದ್ದು; ೩) ಚಿನ್ನ, ರತ್ನಾಭರಣಗಳು, ರೇಷ್ಮೆ ವಸ್ತುಗಳು ಹೆಣ್ಣು, ಗಂಡು, ದನಕರು, ಆನೆ ಕುದುರೆಗಳು ಮತ್ತು ಮಂದಿರ ದೇವಾಲಯಗಳ ದ್ರವ್ಯಸಂಪತ್ತು ಇವುಗಳ ಕಳ್ಳತನ – ಇದು ಘೋರ ಸ್ವರೂಪದ್ದು ಎಂದು ನಾರದ ಮತ್ತು ಯಾಜ್ಞವಲ್ಕ್ಯರು ಹೇಳುತ್ತಾರೆ. ಹಾಡುಹಗಲೇ ಕಳ್ಳತನ ಮಾಡುವವರನ್ನು 'ಪ್ರಕಾಶ'ರೆಂದೂ, ಮುಚ್ಚುಮರೆಯಿಂದ ಮಾಡುವವರನ್ನು 'ಪ್ರಚ್ಛನ್ನ'ರೆಂದೂ ಸ್ಮೃತಿಕಾರರು ಕರೆದಿದ್ದಾರೆ.

ಸುಳ್ಳು ಅಳತೆ ತೂಕಗಳನ್ನು ಉಪಯೋಗಿಸುವವರು, ಜೂಜಾಟಗಾರರು, ಮಂತ್ರಮಾಟಗಾರರು, ಸಭ್ಯರಿಗೆ (Puisne Judges) ಲಂಚ ಕೊಡುವವರು, ವೇಶ್ಯೆಯರು, ಮಧ್ಯಸ್ಥಿಕೆ ಮಾಡುವುದಾಗಿ ಬರುವವರು, ನಕಲೀ ವಸ್ತುಗಳನ್ನು ತಯಾರಿಸುವವರು, ಐಂದ್ರಜಾಲಿಕರು ಮತ್ತು ಹಸ್ತ ಸಾಮುದ್ರಿಕರು, ಸುಳ್ಳು ಸಾಕ್ಷಿಗಳು ಇವರೆಲ್ಲರೂ ಕಳ್ಳತನದಲ್ಲಿ ಸಿದ್ಧಹಸ್ತರೆಂದು ಬೃಹಸ್ಪತಿ ಹೇಳುತ್ತಾನೆ. ಸಭಾಗೃಹಗಳಲ್ಲಿ, ಉಪಾಹಾರ ಗೃಹಗಳಲ್ಲಿ, ವೇಶ್ಯಾವಾಟಿಕೆಗಳಲ್ಲಿ, ಮದ್ಯದಂಗಡಿಗಳಲ್ಲಿ ಮತ್ತು ನಾಟಕಮಂದಿರಗಳಲ್ಲಿ ಇಂಥವರನ್ನು ಪತ್ತೆಹಚ್ಚಲು ರಾಜನು ಅಧಿಕಾರಿಗಳನ್ನು ನೇಮಿಸಬೇಕು ಎಂದು ಮನು ಹೇಳಿದ್ದಾನೆ.

ರಹಸ್ಯಗಳ್ಳರು ಮನೆಯ ಬಾಗಿಲು ತಾಲಗಳನ್ನು ಮುರಿಯುವ ಉಪಕರಣಗಳನ್ನು ಹೊಂದಿರುತ್ತಾರೆ ಮತ್ತು ಅವರ ಹೆಸರು ದೆಶೆ ಒಂದೂ ತಿಳಿಯುವುದಿಲ್ಲ. ರಹಸ್ಯಗಳ್ಳರು ಒಂಬತ್ತು ವಿಧ ಎಂದು ಸ್ಮೃತಿಕಾರರು ಹೇಳುತ್ತಾರೆ: ೧) ಯಾವುದೋ ಬೇರೆ ಕೆಲಸದಲ್ಲಿರುವಾಗ ತಿಳಿಯದ ಹಾಗೆ ಕದಿಯುವುದು, ೨) ಬಾಗಿಲು– ಕೀಲಿ ಮುರಿಯುವವರು, ೩) ಹೆದ್ದಾರಿ

ಟಿಪ್ಪಣಿ

೧) ಈಗಲೂ ಅಪರಾಧಿಗಳ್ನು ಪತ್ತೆಹಚ್ಚಲು ಪೊಲೀಸರು ವಿಶೇಷ ತರಬೇತಿ ಹೊಂದಿದ ನಾಯಿಗಳನ್ನು ಉಪಯೋಗಿಸುತ್ತಾರೆ. ಅಂತೂ ಕಂಟಕರನ್ನು ಬೆದರಿಸಿ ಓಡಿಸುವಲ್ಲಿ ಅಥವಾ ಕಂಟಕಶೋಧನ ಕಾರ್ಯದಲ್ಲಿ ನಾಯಿಗಳು ವೇದಕಾಲದಿಂದಲೂ ತಮ್ಮ ಸೇವೆಯನ್ನು ಸಲ್ಲಿಸುತ್ತಬಂದಿವೆಯೆಂದು ಹೇಳಬಹುದು

ದರೋಡೆಕಾರರು, ೪) ಜೇಬುಗಳ್ಳರು, ೫) ಸ್ತ್ರೀಯರನ್ನು, ೬) ಪುರುಷರನ್ನು, ೭) ಹಸು ಮತ್ತು ೮) ಕುದುರೆ ಹಾಗೂ ಪ್ರಾಣಿಗಳನ್ನು ಕದಿಯುವವರು. (ಟಿಪ್ಪಣಿ ನೋಡಿ)

ಕಳ್ಳರನ್ನು ಪತ್ತೆಮಾಡುವ ನಾನಾ ವಿಧಾನಗಳನ್ನು ಯಾಜ್ಞವಲ್ಕ್ಯರು ಸೂಚಿಸಿದ್ದಾರೆ. ಕಳ್ಳನ ಬಳಿಯಿಂದ ಕಳ್ಳವಸ್ತುವನ್ನು ಪತ್ತೆಮಾಡುವುದು, ಹೆಜ್ಜೆಗಳಿಂದ ಗುರುತಿಸುವುದು, ಹಿಂದೆ ಅನೇಕ ಸಲ ಕಳ್ಳತನ ಮಾಡಿದವನನ್ನು ಹಿಡಿಯುವುದು, ಶಂಕಿತನಾದವನ ಹೆಸರು ದೇಶಗಳನ್ನು ಮುಚ್ಚಿಡಲು ಪ್ರಯತ್ನ ಮಾಡುವವರನ್ನು ಪತ್ತೆಹಚ್ಚುವುದು ಇತ್ಯಾದಿ. ಕೆಲವು ಕಳ್ಳರು ಜೂಜಾಟ ಆಸಕ್ತರೂ, ಮದ್ಯಲೋಲುಪರೂ ಆಗಿರುತ್ತಾರೆ. ಪ್ರಶ್ನೆ ಕೇಳಿದೊಡನೆಯೇ ಕೆಲವರ ಬಾಯಿ ಒಣಗುತ್ತದೆ, ಕೆಲವರ ಧ್ವನಿಯೇ ಬದಲಾಗುತ್ತದೆ, ಕೆಲವರ ಉಪಜೀವನ ಮಾರ್ಗವೇ ತಿಳಿಯುವುದಿಲ್ಲ. ಆದರೂ ದುಂದುಗಾರರಾಗಿರುತ್ತಾರೆ. ಕೆಲವರು ಕಳ್ಳಮಾಲನ್ನು ಮಾರುವವರಾಗಿರುತ್ತಾರೆ, ಕೆಲವರು ವೇಷಮರೆಸಿ ಸಭ್ಯರಂತೆ ತಿರುಗುತ್ತಾರೆ, ಮತ್ತೆ ಕೆಲವರು ಇತರರ ಮನೆ ಮಠಗಳನ್ನು ಕುರಿತು ರಹಸ್ಯವಾಗಿ ವಿಚಾರಿಸುತ್ತಿರುತ್ತಾರೆ. ಇವರೆಲ್ಲರ ಬಗ್ಗೆ ನಗರ ರಕ್ಷಕರು (ಪೊಲೀಸರು) ಎಚ್ಚರಿಕೆ ವಹಿಸಬೇಕೆಂದು ಸ್ಮೃತಿಕಾರರು ಹೇಳಿದ್ದಾರೆ.

"ನ ಸಂದೇಹೇ ದಂಡಂ ಕುರ್ಯಾತ್" ಎಂಬಂತೆ ಕೇವಲ ಸಂದೇಹದ ಮೇಲೆ ಆಪಾಧಿತನನ್ನು ಶಿಕ್ಷೆಗೆ ಗುರಿಪಡಿಸ ಕೂಡದು (ಯಾಜ್ಞವಲ್ಕ್ಯ) ಕಳ್ಳನು ಕಳ್ಳತನ ಮಾಡಿಲ್ಲವೆಂದು ಹೇಳಿದರೆ ಸಾಲದು. ಕಳ್ಳತನ ನಡೆದಾಗ ತಾನು ಅಲ್ಲಿರಲಿಲ್ಲವೆಂದೂ ಸಿದ್ಧಮಾಡಬೇಕು ಅಥವಾ 'ದಿವ್ಯ' ಪರೀಕ್ಷೆಗೆ ಒಳಗಾಗಬೇಕು ಎಂದು ಮನು ಹೇಳಿದ್ದಾನೆ. ದುಷ್ಪ್ರೇರಕರಿಗೆ ದಂಡನೆ: ಅಲ್ಪಬೆಲೆಯ ವಸ್ತುಗಳ ಕಳ್ಳರಿಗೆ ಬೆಲೆಯ ೫ ಅಥವಾ ೨ ಪಟ್ಟು ದಂಡ ; ಕಳ್ಳರು ಉಚ್ಚವರ್ಣದವರಾದಂತೆ ದಂಡವೂ ಹೆಚ್ಚುತ್ತಾ ಹೋಗಬೇಕು; ಅವರು ತಮ್ಮ ಜವಾಬ್ದಾರಿಯನ್ನರಿತವರಾಗಿರುವುದೇ ಇದಕ್ಕೆ ಕಾರಣ. ಕಳ್ಳರಿಗೆ ಸಾಂಕೇತಿಕ ಬರೆ ಹಾಕಿ ಅಥವಾ ಸಂಕೋಲೆಗಳನ್ನು ತೊಡಿಸಿ ದಂಡಿಸಬೇಕು ಎಂದು ಸ್ಮೃತಿಕಾರರು ಹೇಳುತ್ತಾರೆ. ಕಳ್ಳರಿಗೆ ಅನ್ನ ನೀರು ವಸತಿಯನ್ನೊದಗಿಸಿ ಸಹಾಯ ಮಾಡುವವರಿಗೆ ಅಥವಾ ಅವರನ್ನು ಕಳ್ಳತನಕ್ಕೆ ಪ್ರೇರೇಪಿಸುವವರಿಗೆ ಅಥವಾ ಅವರಿಗೆ ಕಳ್ಳತನಕ್ಕೆ ಬೇಕಾದ ಉಪಕರಣಗಳನ್ನೂ, ದ್ರವ್ಯ ಸಹಾಯವನ್ನೂ ನೀಡುವವರಿಗೆ ಉಗ್ರದಂಡನೆಗಳನ್ನು ವಿಧಿಸಬೇಕು ಮತ್ತು ಕಳ್ಳಮಾಲನ್ನು ಸ್ವೀಕರಿಸುವವರನ್ನು ದೇಶ ಬಿಟ್ಟೋಡಿಸಬೇಕು ಎಂದಿದ್ದಾರೆ ಯಾಜ್ಞವಲ್ಕ್ಯರು. ತನ್ನ ದನಕರುಗಳಿಗಾಗಿ ಮತ್ತೊಬ್ಬರ ಹುಲ್ಲು, ಮೇವುಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಕೇಳದೇ ತರುವವನು ಕಳ್ಳನಲ್ಲ, ನಿರಂತರ ಮೂರು ದಿನದಿಂದ ಉಪವಾಸವಿರುವವನು ನಾಲ್ಕನೇ ದಿನ ಇತರರ ಧಾನ್ಯಕಣದಿಂದ ಹೊಲಗದ್ದೆಗಳಿಂದ ಮನೆಗಳಿಂದ ಒಂದು ದಿನದ ಆಹಾರಕ್ಕಾಗುವಷ್ಟು ಧಾನ್ಯವನ್ನು ಕೇಳದೆ ತಂದರೆ ಅವನು ಕಳ್ಳನಲ್ಲ. ಆದರೆ ಯಜಮಾನನು ಪ್ರಶ್ನಿಸಿದಾಗ ನಿಜಾಂಶವನ್ನು ತಿಳಿಸಬೇಕು , ಹಸಿವೆ, ತೃಷೆಯಿಂದ ಬಾಯಾರಿದ ದಾರಿಹೋಕನು ದಾರಿಯಲ್ಲಿ ಎರಡು ಕಬ್ಬಿನಗಳನ್ನೋ, ಎರಡು ಮೂಲಿಕಾಬೇರುಗಳನ್ನೋ(ಮೂಲಂಗಿ),ಎರಡು ಸೌತೆಕಾಯಿಗಳನ್ನೋ, ಐದು ಮಾವುಗಳನ್ನೋ ಅಥವಾ ಹಿಡಿ ಖರ್ಜೂರ, ಅಕ್ಕಿ, ಗೋಧಿ ಅಥವಾ ಕಡಲೆಯನ್ನೋ ಹೊಲಗದ್ದೆ ಗಳಿಂದ ಕೇಳದೇ ಕೊಂಡರೂ ಅವನು ಕಳ್ಳನಲ್ಲ ಎನ್ನುತ್ತಾರೆ ಮನು, ನಾರದ, ಶಂಖ ಮತ್ತು ಕಾತ್ಯಾಯನರು. ಪ್ರಾಣರಕ್ಷಣೆಗೆ ಇದು ಅಗತ್ಯ ಎಂದು ಸ್ಮೃತಿಕಾರರು ಭಾವಿಸಿದಂತಿದೆ. ಇದರಿಂದ ಹಸಿವೆ ನೀರಡಿಕೆಗಳಿಂದ ಬಳಲಿ ಬೆಂಡಾದ ದನಕರು ಮತ್ತು ಮನುಷ್ಯರ ಬಗ್ಗೆ ಸ್ಮೃತಿಕಾರರು ತೋರಿದ ಅನುಕಂಪವನ್ನು ಅರಿತುಕೊಳ್ಳಬಹುದಾಗಿದೆ.

ಸಭಾ ಮತ್ತು ಸಮಿತಿಗಳ ಅಧ್ಯಕ್ಷತೆಯನ್ನು 'ಸಭಾಪತಿ' ವಹಿಸುತ್ತಿದ್ದನು. ಸಭಾವು ನಾಗರಿಕ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸಿ ನ್ಯಾಯತೀರ್ಪು ನೀಡುತ್ತಿತ್ತು. ಅಥರ್ವವೇದ ಋಗ್ವೇದ ಮತ್ತು ಜಾತಕಗಳು ಸಭಾವು

ಟಿಪ್ಪಣಿ

ಉತ್ಕ್ಷೇಪಕಃ ಸಂಧಿಭೇತ್ತಾ ಪಾಂಥಮುದ್‌ಗ್ರಂಥಿಭೇದಕಃ ಸ್ತ್ರೀಪುಂಗೋಶ್ವ ಪಶುಸ್ತೇಯೀ ಚೋರೋ ನವವಿಧಃ ಸ್ಮೃತಃ - ವ್ಯಾಸ

ಉತ್ತಮವೆಂದು ಕರೆಯಲ್ಪಡಬೇಕಾದರೆ, ಅದರ ಸದಸ್ಯರು ಧರ್ಮವನ್ನು ಎತ್ತಿ ಹಿಡಿಯುವಷ್ಟು ಧೈರ್ಯವಂತರಾಗಿರಬೇಕು. ಸದಸ್ಯರು ತಮ್ಮ ಸ್ವಹಿತಾಸಕ್ತಿಗಾಗಿ ಧರ್ಮ ಅಥವಾ ನ್ಯಾಯವನ್ನು ಬಲಿಕೊಡದೇ ಸತ್ಯವನ್ನು ನುಡಿಯಲು ಧೈರ್ಯ ಹೊಂದಿರ ಬೇಕೆಂದು ತಿಳಿಸುತ್ತವೆ.

ವೈದಿಕ ಯುಗದಲ್ಲಿ ವಿಧಾತ, ಸಭಾ ಮತ್ತು ಸಮಿತಿಗಳು ನಾಡಿನ ಜನರನ್ನು ರಕ್ಷಿಸುವ ಕೆಲಸಗಳನ್ನು ಅಂದರೆ, ಪೊಲೀಸ್ ಕೆಲಸವನ್ನು ಮಾಡುತ್ತಿದ್ದವು. ಜೊತೆಗೆ ಕ್ರಿಮಿನಲ್ ಮೊಕದ್ದಮೆಗಳೂ ಸಹ ಸಭಾಪತಿಯ ಮುಂದೆ ಅಂದರೆ, ಸಭಾ ಮತ್ತು ಸಮಿತಿಗಳಲ್ಲಿ ತೀರ್ಮಾನವಾಗುತ್ತಿದ್ದವು ಎಂದು ಸ್ಪಷ್ಟವಾಗುತ್ತದೆ.

'ಕುಲಪರು' ಎಂದರೆ ಕುಟುಂಬಗಳ ಯಜಮಾನರು. 'ವ್ರಾಜಪತಿ'ಯ ನಾಯಕತ್ವದಲ್ಲಿ ಯುದ್ಧ ಮಾಡುತ್ತಿದ್ದರು. 'ವ್ರಾಜಪತಿ'ಯನ್ನು ಗ್ರಾಮಿಣಿ ಎಂದು ಗುರುತಿಸಲಾಗಿದೆ. ಕೋಟೆಗಳು ಅಥವಾ ಕಿಲ್ಲೆಗಳು ಪುರಪತಿಯ ಆಡಳಿತದಲ್ಲಿತ್ತು. ಯುದ್ಧದಲ್ಲಿ ದೂತರು ಅಥವಾ ಬೇಹುಗಾರರು ಗೂಢಚರ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು"

೨.೪– ವೈದಿಕ ಯುಗದಲ್ಲಿ ನ್ಯಾಯ ಮತ್ತು ಕಾನೂನು.

ರಾಜನು ಧರ್ಮದ ಆದಾರದ ಮೇಲೆ ನ್ಯಾಯಾಧೀಶರ, ಪುರೋಹಿತರ ಸಲಹೆಯ ಮೇಲೆ ನ್ಯಾಯ ತೀರ್ಮಾನ ನೀಡುತ್ತಿದ್ದನು. ಕಾನೂನುಗಳು ಸಂಪ್ರದಾಯದ ಆಧಾರದ ಮೇಲೆ ರೂಪಿತವಾಗಿದ್ದವು. ಅವುಗಳ ಅಂತಿಮ ಅರ್ಥ ವಿವರಣೆ ನೀಡುವ ಅಧಿಕಾರ ರಾಜನದ್ದಾಗಿತ್ತು. ಗೋವನ್ನು ಅಪಹರಿಸುವುದೇ ಪ್ರಮುಖ ಅಪರಾಧವಾಗಿತ್ತು. ಕೊಲೆ ಮಾಡಿದ ಅಪರಾಧಿಗೆ ಒಂದು ನೂರು ನಾಣ್ಯದ 'ಶತಾದಾಯ' ಶಿಕ್ಷೆ ವಿಧಿಸುತ್ತಿದ್ದರು,. ಇನ್ನು ಕೆಲವು ವೇಳೆ ಕೊಲೆಗಾರನು ನೂರು ಗೋವುಗಳನ್ನು ಕೊಲೆಯಾದವನ ಕುಟುಂಬಕ್ಕೆ ಪರಿಹಾರವಾಗಿ ನೀಡಬೇಕಾಗಿತ್ತು. ಅಪರಾಧಿಯನ್ನು ಶಿಕ್ಷೆ ವಿಧಿಸಿದ ನಂತರ ಬಂಧಿಸದೇ ಸ್ವತಂತ್ರವಾಗಿ ಬಿಟ್ಟುಬಿಡುತ್ತಿದ್ದರು. ತಪ್ಪಿತಸ್ಥನೆಂದು ಸಂಶಯಕ್ಕೆ ಒಳಗಾದವನು ನಿಜವಾಗಿ ಅಪರಾಧಿಯೇ ಅಥವಾ ನಿರಪರಾಧಿಯೇ ಎಂದು ತೀರ್ಮಾನಿಸಲು ಕುದಿಯುವ ನೀರಿನಲ್ಲಿ ಅಥವಾ ಬೆಂಕಿಯಲ್ಲಿ ಕೈಯಿಟ್ಟು ಪರೀಕ್ಷಿಸುವ ಉಗ್ರ ನ್ಯಾಯ ವಿಧಾನವು ರೂಢಿಯಲ್ಲಿತ್ತು. ಹಣವನ್ನು ಸಾಲವಾಗಿ ಪಡೆಯುವುದಕ್ಕೆ 'ರಿನಾ'ಎಂದು ಕರೆಯುತ್ತಿದ್ದರು. ಪಡೆದ ಸಾಲವನ್ನು ಹಿಂದಿರುಗಿಸುವಲ್ಲಿ ವಿಫಲನಾದ ಸಾಲಗಾರನು ಸಾಲ ಕೊಟ್ಟವನ ಬಳಿ ಅವನ ಸೇವಕನಾಗಿ ಕೆಲಸ ಮಾಡ ಬೇಕಿತ್ತು. ಅಪರಾಧಿಯನ್ನು ಕಟ್ಟಿ ಚಾವಟಿಯಿಂದ ಹೊಡೆಯುವುದು ಮಾಮೂಲು ಶಿಕ್ಷೆಯಾಗಿತ್ತು.

ರಾಷ್ಟ್ರದ ಜನರಿಗೆ ರಕ್ಷಣೆ ಕೊಡುವುದು ರಾಜನ ಕರ್ತವ್ಯವಾಗಿದ್ದು, ಅದಕ್ಕೆ ಪ್ರತಿಫಲವಾಗಿ ಜನರು 'ಬಲಿ' ಎನ್ನುವ ಕೊಡುಗೆ ಅಥವಾ ತೆರಿಗೆಯನ್ನು ಕೊಡುತ್ತಿದ್ದರು. ಮೊದಲು ಆತ್ಮ ಸಂತೋಷದಿಂದ ನೀಡುತ್ತಿದ್ದ ಬಲಿ ನಂತರ ಕಡ್ಡಾಯ ವಾಯಿತು. ಕಳ್ಳರನ್ನು ಕೊಲೆಗಾರರನ್ನು ಕೊಡಲಿಯಿಂದ ಸತ್ವಪರೀಕ್ಷೆ ಮಾಡಲಾಗಿತ್ತೆಂದು ಉಪನಿಷತ್ತುಗಳು ತಿಳಿಸುತ್ತವೆ.

ಉತ್ತರ ವೈದಿಕ ಕಾಲದಲ್ಲಿ ನ್ಯಾಯ ನೀಡುವಿಕೆಯಲ್ಲಿ ರಾಜನ ಪಾತ್ರ ಪ್ರಮುಖವಾದುದಾಗಿತ್ತು. ಕೆಲವು ವೇಳೆ ಈ ಅಧಿಕಾರವನ್ನು ಕೆಲವು ಮೇಲ್ವಿಚಾರಕರಿಗೆ ವಹಿಸಿಕೊಡುತ್ತಿದ್ದನು. ಹಲವು ಮೊಕದ್ದಮೆಗಳನ್ನು ಜನರ ತೀರ್ಮಾನಕ್ಕೆ ಬಿಡಲಾಗುತ್ತಿತ್ತು. 'ನ್ಯಾಯದರ್ಶಿ'ಗಳು (ನ್ಯಾಯತೀರ್ಮಾನ ಮಾಡುವವರು) ಜನಾಂಗ ಸಭೆಯ ನ್ಯಾಯಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಗ್ರಾಮ ಗಳಲ್ಲಿನ ಸಣ್ಣಪುಟ್ಟ ಅಪರಾಧಗಳನ್ನು ' ಗ್ರಾಮ್ಯವಾದಿ' ಅಥವಾ ಗ್ರಾಮ್ಯ ನ್ಯಾಯಾಧೀಶನು ತನ್ನ ಸಭೆಯವರೊಂದಿಗೆ ಕೂಡಿ ತೀರ್ಮಾನಿಸುತ್ತಿದ್ದನು.

೨. ೫– ಅಥರ್ವ ವೇದದಲ್ಲಿ ರಕ್ಷಣೆಯ ವಿಚಾರಗಳು

ಅಥರ್ವವೇದವು "ರಾಜನನ್ನು ಈ ಪ್ರಪಂಚದ ಅಧಿಪತಿಯಾದ ಭಗವಂತನ ಪ್ರತಿನಿಧಿ" ಯೆಂದು ಬಗೆಯುತ್ತದೆ. ಅಂತೆಯೇ ಭಗವಂತನ ದಿವ್ಯತೆಯ ಕಿಂಚಿದಂಶವನ್ನು ಹೊಂದಿರಬೇಕು ಎಂಬುದು ಅಥರ್ವವೇದದ ಆಶಯ. ಅಥರ್ವ

ವೇದದ ಅನುಸಾರ ನೈಜವಾದ ಪ್ರಭುತ್ವವು ಆ ಭಗವಂತನದೇ ಆಗಿದೆ. ರಾಜನು ಕೇವಲ ಅವನ ಅಪರೋಕ್ಷ ಪ್ರತಿನಿಧಿಯಾಗಿ ಸಾಮಾಜಿಕ ಶಾಂತಿಯ ಸಂಸ್ಥಾಪನೆಗಾಗಿ ಕಟಿಬದ್ಧನಾಗಬೇಕು.

ಸಶಾಸನ ಸಾಮ್ರಾಜ್ಯವೊಂದರಲ್ಲಿ ಪ್ರಜೆಗಳ ಹಿತಕ್ಕಾಗಿ ಸ್ಥಾಪಿತನಾದ ರಾಜನು ದುಷ್ಟರ ದಮನಕ್ಕಾಗಿ ಸೂಕ್ತವಾದ ದಂಡ–ವಿದಾನಗಳನ್ನು ಅನುಸರಿಸಬೇಕು ಎಂದು ಅಥರ್ವವೇದದಲ್ಲಿ ಹೇಳಲಾಗಿದೆ. ಪ್ರಜೆಗಳು ಸರ್ವಾನುಮತದಿಂದ ರಾಜನನ್ನು ನಿರ್ಧರಿಸುವ ವಿಧಾನವು ಪ್ರಚಲಿತದಲ್ಲಿತ್ತು ಎಂದು ತಿಳಿದು ಬರುತ್ತದೆ. ಬಲಶಾಲಿಯಾದ, ನೀತಿವಂತನಾದ ಅಧಿಪತಿಯೊಬ್ಬನ ಸಮರ್ಥ ಆಡಳಿತದ ಅಡಿಯಲ್ಲಿ ಸಾಮಾಜಿಕ ಶಾಂತಿಯನ್ನು ಹಾಗೂ ವ್ಯಕ್ತಿಗತ ವಿಕಾಸವನ್ನು ಸಾಧಿಸಬೇಕೆಂಬ ಅಭಿಲಾಶೆಯು ಪುನ: ಪುನ: ಪ್ರಕಟಗೊಂಡಿದೆ. ನಾಲ್ಕನೇಯ ಕಾಂಡದ ೧೬ ನೇ ಸೂಕ್ತದಲ್ಲಿ ರಾಜ್ಯ ವ್ಯವಸ್ಥೆಗಾಗಿ ದುಷ್ಟರನ್ನು ಹುಡುಕುವುದಕ್ಕಾಗಿ ರಾಜನು 'ಗುಪ್ತಚಾರರ' ಪಡೆಗಳನ್ನು ಇಡಬೇಕೆಂಬ ನಿರ್ದೇಶನವಿದೆ. ಆದರೆ ಅವನ ಅಜಾಗರೂಕತೆಯಿಂದ ಸತ್ಯವಾದಿಗಳಿಗೆ ಹಿಂಸೆಯಾಗದಿರಲಿ, ನಿಜವಾದ ಅನೃತವಾದಿಗಳು ಮಾತ್ರ ದಂಡಿಸಲ್ಪಡಲಿ ಎಂಬ ಆಶಯ ಪ್ರಕಟವಾಗಿದೆ. ರಕ್ಷಣಾ ಪಡೆ (ಪೊಲೀಸ್ ಪಡೆ) ಹುಟ್ಟಬೇಕಾದರೆ ಜನರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತ ರಾಜನ ಉಗಮ ಮುಖ್ಯವಾದುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅಪರಾಧಿಗಳಿಗೆ ಶಿಕ್ಷೆಯಾಗಬೇಕೇ ವಿನ: ನಿರಪರಾಧಿಗಲ್ಲ. ಇಂದಿಗೂ ಸಹ ನ್ಯಾಯಾಂಗದ ಪ್ರಮುಖ ಆಶಯ ಇದೇ ಆಗಿದೆ. ಅಪರಾಧಿಗೆ ದಂಡ ನೀಡುವಾಗ ನಿಯಮಪೂರ್ವಕವಾಗಿ ಅಪರಾಧಿಯ ವಂಶ, ಕುಲ ಹಾಗೂ ತಂದೆ ತಾಯಿಗಳ ಹೆಸರು ಮತ್ತು ಪ್ರಸಕ್ತ ಅಪರಾಧ ಮತ್ತು ದಂಡ ವಿಧಾನವನ್ನು ಬರೆದು ದಂಡಾಧಿಕಾರಿಯ ಕಡೆಗೆ ಕಳುಹಿಸಲಿ [೧೨] ಎಂಬ ಆದೇಶವು ಅಥರ್ವವೇದಿಯ ರಾಜನೈತಿಕ ಪ್ರಜ್ಞೆಯ ಪಕ್ವತೆಗೆ ಸಾಕ್ಷಿಯಾಗಿದೆ.[೧೩] ಪ್ರಜಾಪೀಡಕರನ್ನು ದಂಡಿಸಲು ಇಂದ್ರನನ್ನು ಜನರು ಪ್ರಾರ್ಥಿಸುತ್ತಾರೆ. ಹಾಗೂ ರಾಜನ ಮೂಲಕ ಪ್ರಜಾಪೀಡಕರನ್ನು ದಂಡಿಸುವಂತೆ ಅಥರ್ವಣವೇದದಲ್ಲಿ ಪ್ರಾರ್ಥಿಸಲಾಗಿದೆ. " ಎಲೈ ಅಗ್ನಿಯೇ ರಾಷ್ಟ್ರಹಿತಕ್ಕಾಗಿ ಅನುಗ್ರಹಿಸು. ನಮ್ಮ ಹಿತರಕ್ಷಕನಾಗಿ (ರಾಜನ ಮೂಲಕ) ಪ್ರಜಾಪೀಡಿತರನ್ನು ದಂಡಿಸು" [೧೪] ಎಂದು ಪ್ರಾರ್ಥಿಸಲಾಗಿದೆ.

"ಸೋಮಪ್ರಿಯನೇ (ಇಂದ್ರನೇ) ಪ್ರಜಾಪೀಡಕರನ್ನು ಶಿಕ್ಷಿಸು. ನೀನೂ ಅವರಿಗೊಲಿದು ಅವರನ್ನು ಸನ್ಮಾರ್ಗಕ್ಕೆಳೆ. ಮತ್ತು ಅವರ ಅಕ್ಷಿಗಳನ್ನು ಕೆಳಗಿಳಿಸು. (ಅವರನ್ನು ವಿನಮ್ರೀಕರಿಸು)"ಹೀಗೆ ದೇವತೆಗಳನ್ನು ಪ್ರಾರ್ಥಿಸಿ, ರಾಜನು ಈ ದೇವತೆಗಳ ಪ್ರತಿನಿಧಿಯಾಗಿರುವುದರಿಂದ ಅವನ ಮೂಲಕ ಜಗತ್ತಿನ ಪಾಪಿಗಳಿಗೆ ಯೋಗ್ಯ ಶಿಕ್ಷೆಯಾಗಲಿ ಎಂದು ಹಾರೈಸಿದ್ದಾರೆ.

ಅಥರ್ವವೇದದಲ್ಲಿ ಹಲವು ರೀತಿಯ ಅಪರಾಧಗಳ ವಿವರಗಳು ಸಿಗುತ್ತವೆ. ಅಂತವರಿಗೆ ಶಿಕ್ಷೆಗಳನ್ನು ವಿಧಿಸಬೇಕೆಂದು ಸಹ ಜನರ ಪ್ರಾರ್ಥನೆಯಾಗಿದೆ. ಹಿಂಸಾಚಾರಿಗಳು, ಕಳ್ಳರು, ಅಪಹರಣಕಾರರು, ವಂಚಕರು, ದುರಾಚಾರಿಗಳು, ಇವರೆಲ್ಲರೂ ಸಮಾಜ ವೈರಿಗಳಾಗಿದ್ದು, ಇವರಿಗೆ ಕಠಿಣವಾದ ಶಿಕ್ಷೆಗಳನ್ನು ನೀಡಲು ರಾಜನಿಗೆ ಆದೇಶ ನೀಡಲಾಗಿದೆ. ಹಿಂಸೆ, ಲೋಭ, ಕಾಮ, ವಂಚನೆ, ಚಿಂತಾ, ನಿಂದಾ, ಪ್ರತಿಹಿಂಸಾ ಹಾಗೂ ಪಿಶುನತಾ ಈ ಎಂಟು ದುಷ್ಟ ಗುಣಗಳುಳ್ಳವರಿಗೆ ಭಯಾನಕ ದಂಡ ವಿಧಾನವನ್ನನುಸರಿಸಬೇಕೆದು ಹೇಳಿದೆ. ಪುನ: ಪುನ: ಈ ಶಕ್ತಿಗಳು ತಮ್ಮ ಹೀನಕೃತಿಗಳಿಂದ ಸಾಮಾಜಿಕ ಸ್ವಾಸ್ಥ್ಯವನ್ನು ಕದಡುತ್ತವೆ ಎಂದು ಎಚ್ಚರಿಸಲಾಗಿದೆ.[೧೫] ಇದರಿಂದ ಅಥರ್ವವೇದ ಕಾಲದಲ್ಲಿ ನಡೆಯುತ್ತಿದ್ದ ಅಪರಾಧಗಳ ಸ್ವರೂಪವೂ ನಮಗೆ ತಿಳಿಯುತ್ತದೆ. ಅಥರ್ವವೇದದ ಇನ್ನೊಂದು ಶ್ಲೋಕದಲ್ಲಿ "ನಮ್ಮ ಹವನಕ್ಕಾಗಿ ಸೇನೆಯು ಶಸ್ತ್ರಗಳನ್ನೆತ್ತಿದರೆ ರಾಜನು ತಕ್ಷಣ ನಮ್ಮ ರಕ್ಷಣಾರ್ಥವಾಗಿ ತನ್ನ ಬಾಹುಗಳನ್ನು ಎಲ್ಲ ಕಡೆಗೆ ಪಸರಿಸಿ ಅಭಯದಾನ ಮಾಡಲಿ" [೧೬] ಎನ್ನಲಾಗಿದೆ. ಇಲ್ಲಿ ಪರೋಕ್ಷವಾಗಿ ಸೈನ್ಯದ ಆಡಳಿತವನ್ನು ಅಲ್ಲಗಳೆದು ನಾಗರಿಕ ಆಡಳಿತವನ್ನು ಸ್ವೀಕರಿಸಲಾಗಿದೆ. ಹತ್ತನೆಯ ಕಾಂಡದ ೫ ನೇಯ ಸೂಕ್ತವು ಅತ್ಯಂತ ಶ್ರೇಷ್ಠ ರಾಜನೈತಿಕ ಸೂಕ್ತ ವಾಗಿದೆ. ಇದರಲ್ಲಿ ಪ್ರಜೆಗಳ

[illegible]

ಕರ್ತವ್ಯ, ರಾಜನ ಕರ್ತವ್ಯ, ಖೈದಿಗಳ ಜೊತೆಗೆ ಅನುಸರಿಸಬಹುದಾದ ವಿಧಾನ ಹಾಗೂ ಪ್ರಜಾ ಪೀಡಕರ ದಂಡನೆಯ ಕ್ರಮಗಳನ್ನು ಕುರಿತು ಹೇಳಲಾಗಿದೆ. ಪ್ರಜೆಗಳೇ ರಾಜನ ಶಕ್ತಿಯ ಕೇಂದ್ರ ಬಿಂದು ಎಂದು ಅಭಿಪ್ರಾಯ ಪಟ್ಟ ಈ ಸೂಕ್ತವು ಪ್ರಜೆಗಳನ್ನು ರಾಜನ ಓಜ, ಶಕ್ತಿ, ಬಲ, ವೀರ್ಯ, ಧನ ಎಂದು ವರ್ಣಿಸಿದೆ. ಒಟ್ಟಿನಲ್ಲಿ ರಾಜನು ಪ್ರಜಾ ರಕ್ಷಕನಾಗಿರಬೇಕೆಂದು ಅಥರ್ವವೇದದ ಆಶಯವಾಗಿದೆ.

೨.೬ – ಮನುಸ್ಮೃತಿಯಲ್ಲಿ ಅಪರಾಧ ಮತ್ತು ಪೊಲೀಸ್

ಮನುಸ್ಮೃತಿಯು ಸುಮಾರು ೫,೦೦೦ ವರ್ಷಗಳ ಹಿಂದಿನ ಸಮಾಜಕ್ಕೆ ಆಗಿನ ಕಾಲ, ಪರಿಸರಗಳಿಗೆ ತಕ್ಕಂತೆ ರಚಿಸಿದ ಒಂದು ನೀತಿಸಂಹಿತೆಯಾಗಿದೆ. ಇದನ್ನು ಧರ್ಮಶಾಸ್ತ್ರ, ಸ್ಮೃತಿ ಮೊದಲಾದ ಹೆಸರಿನಿಂದ ಕರೆಯಲಾಗಿದೆ. ಸ್ಮೃತಿ ಎಂಬ ಶಬ್ಧಕ್ಕೆ ಸಂವಿಧಾನ ಎಂಬ ಅರ್ಥವೂ ಇರುವುದರಿಂದ, ಇದು ಆಗಿನ ಕಾಲದ ಒಂದು ಕಾನೂನು ಸಂಹಿತೆ ಯಾಗಿದೆ ಎನ್ನಬಹುದು. ಮನು ತನ್ನ ಸ್ಮೃತಿಯಲ್ಲಿ ರಾಜನ ಪ್ರಾಥಮಿಕ ಕರ್ತವ್ಯವೆಂದರೆ ಕಳ್ಳತನವನ್ನು ತಡೆಯುವುದು, ಹಿಂಸೆ ಗಳನ್ನು ತಡೆಯುವುದು, ಅಪರಾಧಿಗಳನ್ನು ಶಿಕ್ಷಿಸುವುದು (ದುಷ್ಟ ನಿಗ್ರಹ, ಶಿಷ್ಟ ಪರಿಪಾಲನ)ಎಂದು ಹೇಳಿದ್ದಾನೆ.[೧೭] ರಾಜನು ಈ ಕೆಲಸಕ್ಕಾಗಿ ಹಲವಾರು 'ಸಿಪಾಯಿ'ಗಳನ್ನು ನೇಮಿಸಿದನು. ಇವರು ಗಸ್ತು ತಿರುಗಬೇಕಿತ್ತು ಮತ್ತು ಪೊಲೀಸ್ ಚೌಕಿಗಳನ್ನು ಸ್ಥಾಪಿಸಲಾಗಿತ್ತು. ಅಪರಾಧಕ್ಕೆ ಸಂಬಂಧಿಸಿದ ಆಡಳಿತಾಂಗಕ್ಕೆ ಇವರು ಸಹಕರಿಸುತ್ತಿದ್ದರು. ಮನುವು ತಿಳಿಸುವಂತೆ ರಾಜನು ಕಳವಾದ ವಸ್ತುಗಳನ್ನು ಕಳ್ಳರಿಂದ ವಶಪಡಿಸಿಕೊಂಡು ಅವರ ಯಜಮಾನನಿಗೆ ತಲುಪಿಸಬೇಕು. ಒಂದು ವೇಳೆ ಹಾಗೆ ಮಾಡಲು ವಿಫಲವಾದಲ್ಲಿ ರಾಜನೇ ತನ್ನ ಖಜಾನೆಯಿಂದ ಪರಿಹಾರ ಕೊಡಬೇಕು ಎಂದಿದ್ದಾನೆ. "ರಾಜನಾದವನು ದೇಶಕಾಲಗಳನ್ನರಿತು, ತನ್ನ ಶಕ್ತಿ ಮತ್ತು ನ್ಯಾಯನಿರ್ಣಯದ ವಿದ್ಯೆಯನ್ನರಿತು, ಅಪರಾಧಿಗೆ ಅವನ ಅಪರಾಧಕ್ಕೆ ಅನುಗುಣ ವಾದ ಶಿಕ್ಷೆಯನ್ನು, ಕೂಲಂಕುಷವಾಗಿ ಪರಿಶೀಲಿಸಿ ನೀಡಬೇಕು" (ಮನುಸ್ಮೃತಿ ೭-೧೬) ಎಂದಿದ್ದಾನೆ.[೧೮] ಮನುಸ್ಮೃತಿಯಲ್ಲಿ ರಾಜನ ವಿವಿಧ ಕರ್ತವ್ಯಗಳನ್ನು ತಿಳಿಸುವುದರ ಜೊತೆಗೆ ಆತನು ನ್ಯಾಯಾಧಿಕಾರಿಯಾಗಿ ತಪ್ಪು ಎಸಗಿದವರಿಗೆ ಶಿಕ್ಷಿಸುವ ಮತ್ತು ಪ್ರಜೆಗಳನ್ನು ರಕ್ಷಿಸುವ ಕರ್ತವ್ಯಗಳ ಬಗ್ಗೆ ವಿಷದವಾಗಿ ತಿಳಿಸಲಾಗಿದೆ. ಅಪರಾಧಿಗಳ ವಿಚಾರಣೆ ಮತ್ತು ಶಿಕ್ಷೆಯು ಶೀಘ್ರವಾಗಿ ಆಗಬೇಕೆಂಬುದನ್ನು ಮನುವು ಅಂದೇ ತಿಳಿಸಿದ್ದಾನೆ. "ಅಪರಾಧಿಗಳಿಗೆ ರಾಜನು ಸರಿಯಾದ ದಂಡನೆಯನ್ನು ಶೀಘ್ರದಲ್ಲಿ ನೀಡದಿದ್ದರೆ, ಬಲಿಷ್ಠರು ಅಸಹಾಯಕರನ್ನು, ಗಾಳದಲ್ಲಿ ಸಿಲುಕಿದ ಮೀನುಗಳಂತೆ ಕೊಲ್ಲುತ್ತಾರೆ". (ಮನುಸ್ಮೃತಿ ೭-೨೦) ಎಂದಿದ್ದಾನೆ.[೧೯] "ರಾಜನು ತನ್ನ ರಾಷ್ಟ್ರದಲ್ಲಿ ನ್ಯಾಯ-ನೀತಿಯಿಂದ ವ್ಯವಹರಿಸಬೇಕು. ಶತ್ರುಗಳಿಗೆ ಕಠೋರವಾದ ಶಿಕ್ಷೆ ನೀಡಬೇಕು. ಸನ್ಮಿತ್ರರಲ್ಲಿ ಕುಟಿಲತನ ತೋರಬಾರದು." (ಮನುಸ್ಮೃತಿ ೭-೩೨) ಎಂದಿದ್ದಾನೆ.[೨೦] ಮನುವಿನ ಕಾನೂನು ಜಾತಿ, ವರ್ಗ ಆಧಾರಿತವಾಗಿತ್ತು. ಕಾನೂನು ಎಲ್ಲರಿಗೂ ಸರಿಸಮಾನವಾಗಿರಲಿಲ್ಲ. ಉನ್ನತ ಕುಲದಲ್ಲಿ ಜನಿಸಿದವರು ತಪ್ಪು ಮಾಡಿದರೆ ಅವರನ್ನು ಕ್ಷಮಿಸಲಾಗುತ್ತಿತ್ತು. ರಾಜನಾದವನು ಬೇರೆ ಬೇರೆ ವಿದ್ಯೆಗಳಲ್ಲಿ ಪರಿಣಿತನಾಗಿರುವಂತೆ ದಂಡನೀತಿಯನ್ನು ಅಂದರೆ ಶಾಸನ ಧರ್ಮವನ್ನು ಅರಿತವನಾಗಿರಬೇಕೆಂದು ಮನುವು ತಿಳಿಸುತ್ತಾನೆ. ರಾಜನ ಮಂತ್ರಾ ಲೋಚನೆಯಲ್ಲಿ ರಾಜ್ಯದ ಮತ್ತು ಜನರ ರಕ್ಷಣೆಯ ವಿಷಯವು ಸಹ ಅತ್ಯಂತ ಮುಖ್ಯವಾಗಿತ್ತು. "ಆ ಮಂತ್ರಿಗಳ ಜತೆಗೆ ರಾಜನಾದವನು ಸಾಮಾನ್ಯವಾದ ದಿನನಿತ್ಯದ ಆಡಳಿತವನ್ನು ಸಂಧಿ-ಯುದ್ಧಗಳ ವಿಷಯವನ್ನು, ನೆಲ-ಜಲ ವಿಶೇಷವುಳ್ಳ ಸ್ಥಾನದ ಬಗ್ಗೆ ವಿಷಯವನ್ನು ರಾಜ್ಯಕೋಶದ ಬಗೆಗಿನ ಆಲೋಚನೆಯನ್ನು, ರಾಜ್ಯ ರಕ್ಷಣೆಯ ವಿಷಯವನ್ನು, ರಾಜದ್ರವ್ಯದ ಸದುಪಯೋಗವನ್ನು ಕುರಿತು ಚರ್ಚಿಸಬೇಕಿತ್ತು."[೨೧] "ಪ್ರಜಾಪಾಲನೆಯೇ ಕ್ಷತ್ರಿಯನಿಗೆ (ರಾಜನಿಗೆ) ಶ್ರೇಷ್ಠವಾದ ಧರ್ಮವು. ಪ್ರಜೆಗಳ ತೆರಿಗೆಯಿಂದ ರಾಜ್ಯಫಲವನ್ನನುಭವಿಸುವ ರಾಜನು ಧರ್ಮದಿಂದ ನಿಯಮಿಸಲ್ಪಟ್ಟಿರುತ್ತಾನೆ". ಎಂದಿದ್ದಾನೆ.[೨೨]

ರಾಜನು ತನ್ನ ರಕ್ಷಣೆಗಾಗಿ ಹಾಗೂ ರಾಜ್ಯದ ಕೋಶ ರಕ್ಷಣೆಗಾಗಿ ಆಯ್ಕೆ ಮಾಡುವಂತಹ ಸಿಪಾಯಿಗಳು ಹೇಗಿರ

ಬೇಕೆಂದು ಮನುಸ್ಮೃತಿಯಲ್ಲಿ ತಿಳಿಸಲಾಗಿದೆ. "ಶೂರರಾದವರನ್ನು, ದಕ್ಷರನ್ನು, ಶುದ್ಧರಾದವರನ್ನು ಹಾಗೂ ಉತ್ತಮ ಕುಲದಲ್ಲಿ ಜನಿಸಿದವರನ್ನು ರಾಜನು ತನ್ನ ಕೋಶದ ರಕ್ಷಣೆಗಾಗಿ ಮತ್ತು ಧಾನ್ಯಾಗಾರಗಳ, ಖನಿಗಳ ಮೇಲ್ವಿಚಾರಣೆಗಾಗಿ ನೇಮಿಸಿಕೊಳ್ಳಲಾಗುತ್ತಿತ್ತು. ಕೆಳಜಾತಿಯಲ್ಲಿ ಜನಿಸಿದವರನ್ನು ಈ ಕೆಲಸಗಳಿಗೆ ನೇಮಿಸಿಕೊಂಡಿರಲಿಲ್ಲ. ಅಂತ:ಪುರದಲ್ಲಿ ಹಾಗೂ ಅರಮನೆಯಲ್ಲಿ ಕೆಲಸ ಮಾಡಲು ಬಿರುಸ್ವಭಾವದವರನ್ನು ನೇಮಿಸಿಕೊಳ್ಳಬೇಕು" ಎಂದಿದ್ದಾನೆ.[೨೩] "ಒಕ್ಕಲಿಗನು ಹೊಲದಲ್ಲಿಯ ಕಳೆಯನ್ನು ಕಿತ್ತು ಬೆಳೆಯನ್ನು ರಕ್ಷಿಸುವಂತೆ ರಾಜನು ತನ್ನ ರಾಷ್ಟ್ರದಲ್ಲಿ ದುಷ್ಟರನ್ನು, ವೈರಿಗಳನ್ನು ನಾಶಮಾಡಿ, ಶಿಷ್ಟರನ್ನು ಸಜ್ಜನರನ್ನು ರಕ್ಷಿಸಬೇಕು" ಎಂದಿದ್ದಾನೆ.[೨೪] "ದುಷ್ಟರಿಂದ ಪೀಡಿತರಾಗಿ ಯಾವ ರಾಜನ ರಾಜ್ಯದಲ್ಲಿ ಪ್ರಜೆಗಳು ಗೋಳಿಡುತ್ತಾರೋ ಅಂಥ ರಾಜ್ಯದ ಮಂತ್ರಿ, ಅಧಿಕಾರಿಗಣ ಸಹಿತವಾಗಿ ಆಳುವ ಅರಸನು ಇದ್ದರೂ ಸತ್ತಂತೆಯೇ ಸರಿ" ಎನ್ನುತ್ತಾನೆ.[೨೫] ಪ್ರತಿಯೊಂದು ಆಡಳಿತದ ವಿಭಾಗಕ್ಕೆ ಪರಿಣತರಾದ ಅಧ್ಯಕ್ಷರನ್ನು ನಿಯಮಿಸಬೇಕು. ಈ ಇಲಾಖಾ ಮುಖ್ಯಸ್ಥರು ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವವರ ಮೇಲ್ವಿಚಾರಣೆಯನ್ನು ಮಾಡಬೇಕು ಎಂದಿದ್ದಾನೆ.[೨೬] ರಾಷ್ಟ್ರ ರಕ್ಷಣೆಗಾಗಿ ರಾಜನು ಏನೇನು ಕೆಲಸಗಳನ್ನು ಮಾಡಬೇಕೆಂದು ಇಲ್ಲಿ ವಿವರಿಸಲಾಗಿದೆ. ಅದರಲ್ಲಿಯೂ ಗ್ರಾಮದ ರಕ್ಷಕರಾದ ಅಧಿಪತಿಗಳು ಏನು ಕೆಲಸಗಳನ್ನು ಮಾಡಬೇಕೆಂದು, ಗುಢಚಾರರನ್ನು ಹೇಗೆ ನೇಮಿಸಬೇಕು, ಅವರ ಕೆಲಸಗಳೇನು ಎಂಬುದನ್ನು ವಿವರಿಸಲಾಗಿದೆ. ಗ್ರಾಮರಕ್ಷಣೆಯ ಜವಾಬ್ದಾರಿಯನ್ನು 'ಅಧಿಪತಿ'ಯು ಹೊಂದಿದ್ದನೆಂದು, ಹಾಗೂ ಆತನೇ 'ಗೂಢಚಾರ'ರನ್ನು ನೇಮಿಸುತ್ತಿದ್ದನೆಂದು ಅಥರ್ವಣವೇದದಲ್ಲಿ ತಿಳಿಸಿದೆ. ಅಂದರೆ ಗ್ರಾಮದಲ್ಲಿ 'ಅಧಿಪತಿ'ಯೇ ಪೊಲೀಸ್ ಅಧಿಕಾರಿಯಾಗಿದ್ದಿರಬಹುದು. ನಗರಗಳಲ್ಲಿ 'ನಗರಾಧಿಪತಿ'ಯು ಪೊಲೀಸ್ ಕಾರ್ಯವನ್ನು ನಿರ್ವಹಿಸುತ್ತಿದ್ದನೆಂದು ತಿಳಿದು ಬರುತ್ತದೆ. 'ಅಧಿಪತಿ'ಯೆಂಬ ಪೊಲೀಸ್ ಅಧಿಕಾರಿಗಳಲ್ಲಿ ಹಲವು ವಿಧಗಳಿದ್ದವು. ಅವು ಆತನ ಕೈಕೆಳಗೆ ಬರುವ ಗ್ರಾಮಗಳ ಸಂಖ್ಯೆಗೆ ಅನುಗುಣವಾದ ಹೆಸರನ್ನು ಹೊಂದಿದ್ದವು.

"ಗ್ರಾಮಸ್ಯಾಧಿಪತಿಂ ಕುರ್ಯಾದ್ದಶಗ್ರಾಮಪತಿಂ ತಥಾ
ವಿಂಶತೀಶಂ ಶತೇಶಂ ಚ ಸಹಸ್ರಪತಿಮೇವ ಚ" : (ಮನುಸ್ಮೃತಿ ೭- ೧೧೫)

ಒಂದು ಗ್ರಾಮಕ್ಕೆ ಒಬ್ಬ 'ಅಧಿಪತಿ'ಯನ್ನು , ಹತ್ತು ಗ್ರಾಮಗಳಿಗೆ ಒಬ್ಬ ಅಧಿಪತಿಯನ್ನು, ಇಪ್ಪತ್ತು ಗ್ರಾಮಗಳಿಗೆ ಒಬ್ಬ ಅಧಿಪತಿಯನ್ನು, ನೂರು ಗ್ರಾಮಗಳಿಗೆ ಒಬ್ಬ ಅಧಿಪತಿಯನ್ನು ಹಾಗೂ ಸಹಸ್ರ ಗ್ರಾಮಗಳಿಗೆ ಒಬ್ಬ 'ಅಧಿಪತಿ'ಯನ್ನು ನಿಯಮಿಸಬೇಕು ಎಂದಿದ್ದಾನೆ.[೨೭] "ಏಕಗ್ರಾಮಾಧಿಪತಿಯು ತನ್ನ ಗ್ರಾಮದಲ್ಲಿ ಉಂಟಾದ ಸಮಸ್ಯೆಯನ್ನು ಪರಿಹರಿಸಲಾಗದಿದ್ದರೆ ದಶಗ್ರಾಮಾಧಿಪತಿಗೆ, ದಶಗ್ರಾಮಾಧಿಪತಿಯು ಇಪ್ಪತ್ತು ಗ್ರಾಮಗಳ ಅಧಿಪತಿಗೆ ಹೋಗಿ ನೆರವನ್ನು ಕೇಳಬೇಕು" ಎಂದಿದ್ದಾನೆ.[೨೮] "ವಿಂಶತಿ (ಇಪ್ಪತ್ತು) ಗ್ರಾಮಾಧಿಪತಿಯು ತನ್ನ ತೊಂದರೆಯನ್ನು ಶತಗ್ರಾಮಾಧಿಪತಿಗೆ; ಶತಗ್ರಾಮಾಧಿಪತಿಯು ಸಹಸ್ರಗ್ರಾಮಾಧಿಪತಿಗೆ ನಿವೇದಿಸಿಕೊಂಡು ಅವರ ನೆರವು ಪಡೆಯಬೇಕು" ಎಂದಿದ್ದಾನೆ.[೨೯] ನಗರಗಳನ್ನು ನಗರಾಧಿಪತಿಯು ರಕ್ಷಿಸುತ್ತಿದ್ದನೆಂದು ಮತ್ತು ಆತನು ಗೂಢಚರ ವ್ಯವಸ್ಥೆಯನ್ನು ಹೊಂದಿದ್ದನೆಂದು ತಿಳಿದುಬರುತ್ತದೆ. ನಗರ ಪ್ರದೇಶಕ್ಕೆ ಪೊಲೀಸ್ ಅಧಿಕಾರಿಯಾಗಿ 'ನಗರಾಧಿಪತಿ' ಇದ್ದನು. "ನಕ್ಷತ್ರಗಳ ನಡುವೆ ಹೊಳೆವ ಗ್ರಹವು ಇರುವಂತೆ ಪ್ರತಿಯೊಂದು ನಗರಕ್ಕೆ ಉಚ್ಚ ಸಾಮರ್ಥ್ಯವನ್ನು ಹಾಗೂ ಸ್ಥಾನಮಾನವನ್ನು ಹೊಂದಿದಂಥ, ಸೇನಾಬಲವುಳ್ಳವಂಥ 'ನಗರಾಧಿಪತಿ'ಯನ್ನು ನಿಯಮಿಸಬೇಕು. ಅವನು ಸರ್ವಕಾರ್ಯಗಳನ್ನು ವಿಚಾರಿಸಿಕೊಳ್ಳಬೇಕು" ಎಂದು ಮನು ಹೇಳಿದ್ದಾನೆ.[೩೦]

ಸ ತಾನನುಪರಿಕ್ರಾಮೇತ್ ಸರ್ವಾನೇವ ಸದಾ ಸ್ವಯಂ
ತೇಷಾಂ ವೃತ್ತಂ ಪರಿಣಯೇತ್ಸಮ್ಯ ಗ್ರಾಷ್ಟ್ರೇಷು ತಚ್ಚರೈ: : ೧೨೨ :

ಆ 'ನಗರಾಧಿಪತಿ'ಯು ತನ್ನೆಲ್ಲ ಅಧಿಕಾರಿಗಳೊಡನೆ ಸದಾ ಸಂಚರಿಸುತ್ತಲಿರಬೇಕು. ಗ್ರಾಮಪತಿಗಳ ಕಾರ್ಯವನ್ನು, ಸಾಧನೆ

ಯನ್ನು ಪರೀಕ್ಷಿಸಲು ಗೂಢಚಾರರನ್ನು ನಿಯಮಿಸಬೇಕು ಎಂದು ತಿಳಿಸಿದ್ದಾನೆ.[೩೧] ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ವೆಂದರೆ, ಗ್ರಾಮದ ಅಧಿಪತಿಯ ಮೇಲ್ವಿಚಾರಕನಾಗಿ ನಗರಾಧಿಪತಿಯು ಇದ್ದನು. ಈತನು ಕೆಳಗಿನ ದರ್ಜೆಯ ಪೊಲೀಸ್ ಅಧಿಕಾರಿಗಳನ್ನು (ಅಧಿಪತಿ) ಪರೀಕ್ಷಿಸಲು ಗೂಢಚಾರರನ್ನು ನೇಮಿಸುತ್ತಿದ್ದನೆಂಬುದು ಗಮನಾರ್ಹವಾಗಿದೆ. ಕೆಳಗಿನ ದರ್ಜೆಯ ಅಧಿಕಾರಿಗಳ ಬಗ್ಗೆ ಈ ರೀತಿ ರಹಸ್ಯವಾಗಿ ಮಾಹಿತಿ ಸಂಗ್ರಹಿಸುವುದರಿಂದ ಮಾತ್ರ ಅವರ ನಿಯಂತ್ರಣ ಸಾಧ್ಯ ವಾಗಿತ್ತು. ಅದು ಈ ಕಾಲಕ್ಕೂ ಸತ್ಯವಾಗಿದೆ. ರಾಜನ ಗೂಢಚಾರ ವ್ಯವಸ್ಥೆಯ ಬಗ್ಗೆ ಮತ್ತು ಆ ವಿಚಾರಗಳನ್ನು ರಾಜನು ಹೇಗೆ ಸಮಾಲೋಚಿಸಬೇಕೆಂಬ ಬಗ್ಗೆಯೂ ಸಹ ಇಲ್ಲಿ ವಿವರಿಸಲಾಗಿದೆ.

"ರಾಜದೂತರ ನಿಯುಕ್ತಿಯ ಬಗ್ಗೆ, ಕಾರ್ಯವನ್ನು ಸಾಧಿಸುವುದರ ಬಗ್ಗೆ ಅಂತ:ಪುರದಲ್ಲಿ ನಡೆದ ವ್ಯವಹಾರಗಳ ಬಗ್ಗೆ, ಗುಪ್ತಚಾರರು ತಂದ ವರ್ತಮಾನದ ಬಗ್ಗೆ ಸಮಾಲೋಚಿಸಬೇಕು" ಎಂದಿದ್ದಾನೆ.[೩೨] ಅಂದರೆ ಇಲ್ಲಿ ಗೂಢಚಾರರು ತಂದ ಮಾಹಿತಿಗಳನ್ನು ರಾಜನು ನಂಬದೇ ಅದನ್ನು ವಿಶ್ಲೇಷಿಸುತ್ತಿದ್ದನೆಂಬುದು ಅತ್ಯಂತ ಗಮನಾರ್ಹವಾಗಿದೆ. ಅಷ್ಟೇ ಅಲ್ಲದೇ ಆತನು ಗೂಢಚಾರರ ಕಾರ್ಯವೈಖರಿಯ ಬಗ್ಗೆಯೂ ಸಮಾಲೋಚಿಸುತ್ತಿದ್ದ. ಕರವಸೂಲಾತಿ, ವೇತನ ಪಾವತಿ, ರಾಜಾಜ್ಞೆಯ ಅನುಷ್ಠಾನ, ಅಪರಾಧನಿಷೇಧ, ಧನಾರ್ಜನೆಯ ಆದೇಶ, ಪ್ರಜೆಗಳ ವಾದ- ವಿವಾದ ಪರೀಕ್ಷೆ, ದಂಡವನ್ನು ವಿಧಿಸುವ ವಿಧಾನ, ಪ್ರಾಯಶ್ಚಿತ ವಿಧಾನ ಈ ಎಂಟು ರಾಜಕಾರಣಗಳನ್ನು ಐದು ವಿಧದ ಗುಪ್ತಚಾರರ ಕಾರ್ಯಗಳನ್ನು ಜನತೆಯ ಪ್ರೀತಿ ಮತ್ತು ದ್ವೇಷದ ಕಾರಣಗಳನ್ನು, ರಾಜ-ಮಂಡಲದ ವಿಚಾರವನ್ನು ಕುರಿತು ಆಲೋಚಿಸಬೇಕು" ಎಂದಿದ್ದಾನೆ.[೩೩] ಸಂಜೆಗೆ ಸಂಧ್ಯೋಪಾಸನೆ ಮಾಡಿ ತನ್ನ ಖಾಸಾ-ಕೊಠಡಿಯಲ್ಲಿ ಗುಪ್ತಚಾರರನ್ನು ಕರೆದು ಅವರಿಂದ ತನ್ನ ರಾಜ್ಯದ ವಾರ್ತೆಯನ್ನು ಕೇಳಬೇಕು. ರಾಜ್ಯದ ರಹಸ್ಯಗಳನ್ನು, ಪ್ರಜೆಗಳ ವ್ಯವಹಾರಗಳನ್ನು ತಿಳಿದುಕೊಳ್ಳಬೇಕು" ಎಂದಿದ್ದಾನೆ.[೩೪]

ಮನುವು ಅಪರಾಧ ಶಾಸ್ತ್ರಜ್ಞನಂತೆ ಕಂಡುಬರುತ್ತಾನೆ. ಏಕೆಂದರೆ, ಅಂದಿನ ಕಾಲದಲ್ಲಿ ನಡೆಯುತ್ತಿದ್ದ ಅಪರಾಧಗಳ ವಿಧಗಳು ಮತ್ತು ಅವುಗಳ ಕಾರಣಗಳನ್ನು ಆತನು ವಿವರಿಸುತ್ತಾನೆ. ಸಮಾಜದಲ್ಲಿ ಜಗಳಗಳು ಏಕೆ ಹುಟ್ಟುತ್ತವೆ ಎಂಬುದಕ್ಕೆ ೧೮ ಕಾರಣಗಳನ್ನು ಮನುಸ್ಮೃತಿಯ ೮ ನೇ ಅಧ್ಯಾಯದಲ್ಲಿ ತಿಳಿಸುತ್ತಾನೆ. ಸಮಾಜದಲ್ಲಿ ಜಗಳಕ್ಕೆ ಕಾರಣವಾಗುವ ವಿಷಯ ಗಳಲ್ಲಿ ಮೊಟ್ಟ ಮೊದಲನೆಯದು ಸಾಲ ತೆಗೆದುಕೊಳ್ಳುವುದು, ಇನ್ನೊಬ್ಬರಲ್ಲಿ ದುಡ್ಡನ್ನು ಇರಿಸುವುದು, ತನ್ನದಲ್ಲದ್ದನ್ನು ಮಾರುವ ಅಸ್ವಾಮಿ ವಿಕ್ರಯ, ಪಾಲುಗಾರಿಕೆಯಿಂದ ಮಾಡುವ ವ್ಯಾಪಾರ (ಸಂಭೂಯ ಸಮುತ್ಥಾನ) ಹಾಗೂ ಕೊಟ್ಟದ್ದನ್ನು ಪುನ: ಕಸಿದುಕೊಳ್ಳುವುದು (ದತ್ತ ಸ್ಯಾನಪಕರ್ಮ)[೩೫] ಮಾಡಿಸಿಕೊಂಡ ಕೆಲಸಕ್ಕೆ ಸಂಬಳ ಕೊಡದಿರುವುದು, ನಿಯಮವನ್ನುಂ ಲ್ಲಂಘಿಸಿ ಮಾಡುವ ವ್ಯಾಪಾರ (ಸಂವಿದೋವ್ಯತಿಕ್ರಮ) ಕ್ರಯ-ವಿಕ್ರಯದ ನಂತರದ ಜಗಳ, ಯಜಮಾನನಿಗೂ ದುಡಿಯು ವವನಿಗೂ ಬರುವ ಜಗಳ (ಸ್ವಾಮಿ-ಪಾಲ- ವಿವಾದ)[೩೬] ಗಡಿಗಳ ಹಾಗೂ ಹೊಲದ ಜಗಳ (ಸೀಮಾವಿವಾದ) ವಾಕ್ ಪಾರುಷ್ಯ (ಬೈಯುವುದು) ಹೊಡೆಯುವುದು (ದಂಡಪಾರುಷ್ಯ) ಕಳ್ಳತನ (ಸ್ತೇಯ) ಮೋಸ ಹಾಗೂ ಬಲತ್ಕಾರ (ಸಾಹಸ) ಸ್ತ್ರೀ ಸಂಗ್ರಹಣ (ಹೆಣ್ಣಿನ ವಿಷಯದ ಜಗಳ)[೩೭] ಹೆಣ್ಣು-ಗಂಡಿನ ವ್ಯವಹಾರ (ಸ್ತ್ರೀ-ಪುರುಷಧರ್ಮ) ವಿಭಾಗ (ಆಸ್ತಿಯ ಪಾಲು ಮಾಡುವಿಕೆ) ದ್ಯೂತ (ಜೂಜಾಟ) ಆಹ್ವಯ (ಪಂದ್ಯ ಕಟ್ಟುವುದು) ಈ ಮೇಲೆ ಹೇಳಿದ ಹದಿನೆಂಟು ಕಾರಣ ಗಳಿಂದಾಗಿ ಜಗಳಗಳು ಉದ್ಭವಿಸುತ್ತದೆ.[೩೮] ಈ ಹದಿನೆಂಟು ಕಾರಣಗಳಿಂದ ದೊಡ್ಡ ಜಗಳವೆಬ್ಬಿಸಿಕೊಂಡು ರಂಪ ಮಾಡುವ ಜನರ ಸಮಸ್ಯೆಗಳನ್ನು ಶಾಶ್ವತವಾದ ಧರ್ಮಪಥವನ್ನನುರಿಸಿ ರಾಜನು ನ್ಯಾಯ ನಿರ್ಣಯ ಮಾಡಿ ಪರಿಹರಿಸಬೇಕು ಎನ್ನುತ್ತಾನೆ.[೩೯]

ಕಳ್ಳತನದ ವಸ್ತುಗಳನ್ನು ವಶಪಡಿಸಿಕೊಂಡಾಗ ಅವುಗಳನ್ನು ಏನು ಮಾಡಬೇಕೆಂಬ ಬಗ್ಗೆ ಮನುವು ತಿಳಿಸುತ್ತಾನೆ. ವೇದಗಳ ಕಾಲದಲ್ಲಿ ಕಳ್ಳತನದಂತಹ ಅಪರಾಧಿಗಳಿಗೂ ಸಹ ಅತ್ಯಂತ ಘೋರ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಕಳೆದು

ಹೋದ ವಸ್ತುವು ಸಿಕ್ಕಾಗ ಅದನ್ನು ಯೋಗ್ಯರಾದವರ ಬಳಿ ಇಟ್ಟು ರಕ್ಷಿಸಬೇಕು. ಕಳ್ಳರು ಸಿಕ್ಕರೆ ಅವರನ್ನು ಆನೆಯ ಕಾಲಲ್ಲಿ ತುಳಿಸಿ ಕೊಲ್ಲಿಸಬೇಕು.[೪೦] ಕಳ್ಳರಿಂದ ವಶಪಡಿಸಿಕೊಂಡ ಹಣವನ್ನು (ಸೊತ್ತನ್ನು) ಎಲ್ಲ ವರ್ಣದವರಿಗೂ ಹಂಚಿಕೊಡಬೇಕು. ಆ ಕಳ್ಳತನ ಮಾಡಿದ ಧನವನ್ನು ತಾನೇ ಇಟ್ಟುಕೊಂಡರೆ ಆ ಕಳ್ಳನ ಪಾಪವನ್ನು ತಾನೇ ಹೊಂದುತ್ತಾನೆ ಎಂದು ಮನು ಹೇಳಿದ್ದಾನೆ.[೪೧] ಗೊಡ್ಡು ಬೆದರಿಕೆಯಿಂದ ಹಾಗೂ ಬಲವಂತದಿಂದ ಪರರ ಹಣವನ್ನಪಹರಿಸುವ ನೀಚರನ್ನು ಹಿಡಿದು ತರಿಸಿ ರಾಜನು, ಜನರ ಸಮಕ್ಷಮದಲ್ಲಿ ಅವನನ್ನು ಚಿತ್ರಹಿಂಸೆಗೆ ಗುರಿಪಡಿಸಿ ವಧಿಸಬೇಕು.[೪೨] ಒಬ್ಬನ ಸ್ವತ್ತನ್ನು ಅದರ ಒಡೆಯನ ಸಮ್ಮತಿಯಿಲ್ಲದೇ ಯಾವನು ಮಾರುತ್ತಾನೋ ಅವನು ಕಳ್ಳನೇ ಸರಿ. ಅಂಥವನನ್ನು ಯಾವ ವಿವಾದದಲ್ಲೂ ಸಾಕ್ಷಿಯನ್ನಾಗಿ ಮಾಡಬಾರದು.[೪೩] ಹೀಗೆ ಮಾರಿದವನು ಆ ವಸ್ತುವಿನ ಒಡೆಯನ ಸಂಬಂಧಿಯಾಗಿದ್ದರೆ ಅವನಿಗೆ ಆರು ನೂರು ಪಣಗಳ ದಂಡವನ್ನು ವಿಧಿಸಬೇಕು. ಏನೇನೂ ಸಂಬಂಧವೇ ಇಲ್ಲದವನಾಗಿದ್ದರೆ ಅವನು ಕಳ್ಳತನದ ಅಪರಾಧಕ್ಕೆ ಗುರಿಯಾಗುವನು.[೪೪] ಹೀಗೆ ಕಳ್ಳತನದಿಂದ ಮಾರಾಟ ಮಾಡಿದವನು ಕಾಣೆಯಾಗಿದ್ದರೆ ಅಥವಾ ಮರಣಿಸಿದ್ದರೆ ಬಹಿರಂಗವಾಗಿ ಆ ವಸ್ತುವನ್ನು ಕೊಂಡಂಥವನು ಶಿಕ್ಷಾರ್ಹನಲ್ಲ. ಆದರೆ ಆ ವಸ್ತುವಿನ ನಿಜವಾದ ಒಡೆಯನು ಅದನ್ನು ಮರಳಿ ಪಡೆದುಕೊಳ್ಳಲು ಅರ್ಹನಾಗುತ್ತಾನೆ.[೪೫] ವಸ್ತುಗಳನ್ನು ಒಂದನ್ನೊಂದು ಕಲಬೆರಕೆ ಮಾಡಿ ಮಾರಬಾರದು. ಕಟ್ಟಿದ್ದನ್ನು ಒಳ್ಳೆಯದೆಂದು ಹೇಳಿ, ತೂಕದಲ್ಲಿ ಮೋಸಮಾಡಿ,ಕಣ್ಣಿಗೆ ಕಣದಂತೆ ದೂರದಿಂದ ವ್ಯತ್ಯಾಸ ಮಾಡಿ ಮಾರಬಾರದು. (ಅಥವಾ ದೂರದಿಂದ ತಂದದ್ದೆಂದು ಹೇಳಿ ಮೋಸಮಾಡಿ ಕಟ್ಟಿದ್ದನ್ನು ಮಾರಬಾರದು) ಎಂದು ಮನು ತಿಳಿಸಿದ್ದಾನೆ. [೪೬]

ಒಟ್ಟಿನಲ್ಲಿ ಮನುವಿನ ಮನುಸ್ಮೃತಿಯಲ್ಲಿ ಆತನು ಅಪರಾಧಗಳು ಏಕೆ ಸಂಭವಿಸುತ್ತವೆ, ಯಾವ ಯಾವ ರೀತಿಯ ಅಪರಾಧಗಳಿವೆ, ಇಂತಹ ಅಪರಾಧಿಗಳನ್ನು ಹಿಡಿಯುವ ಬಗ್ಗೆ ರಾಜನ ಕರ್ತವ್ಯಗಳೇನು, ಗೂಢಚರರಿಂದ ಯಾವ ರೀತಿ ಅಪರಾಧಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಬೇಕು, ಕಳ್ಳರನ್ನು ಹಿಡಿದ ನಂತರ ಅವರಿಂದ ವಸ್ತುಗಳನ್ನು ವಶಪಡಿಸಿಕೊಂಡ ನಂತರ ಅದನ್ನು ಹೇಗೆ ವಿಲೇವಾರಿ ಮಾಡಬೇಕು, ಮತ್ತು ಯಾವ ಯಾವ ಅಪರಾಧಿಗಳಿಗೆ ಯಾವ ಯಾವ ರೀತಿಯ ಶಿಕ್ಷೆಗಳನ್ನು ನೀಡಬೇಕು ಎಂಬ ಬಗ್ಗೆ ಅತ್ಯಂತ ವಿವರವಾಗಿ ವಿವರಿಸಿದ್ದಾನೆ. ಅಷ್ಟೇ ಅಲ್ಲದೇ ಪ್ರಜಾರಕ್ಷಣೆಯು ರಾಜನ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದ್ದು, ಅದಕ್ಕಾಗಿ ಆತನು ಏನೇನು ಮಾಡಬೇಕೆಂಬ ಬಗ್ಗೆ ವಿವರಿಸಿದ್ದಾನೆ. ಇಂದಿನ ಪೊಲೀಸ್ ಇಲಾಖೆಯ ಕೆಲಸಗಳನ್ನು, ಅಂದಿನ 'ಅಧಿಪತಿ' ಮೊದಲಾದ ಅಧಿಕಾರಿಗಳು ಹೇಗೆ ನಿರ್ವಹಿಸುತ್ತಿದ್ದರೆಂಬ ಬಗ್ಗೆಯೂ ಸಹ ವಿವರಗಳು ಸಿಗುತ್ತವೆ. ರಾಜನು ತನ್ನ ಅಂಗರಕ್ಷಕರನ್ನೂ ಸಹ ಗುಪ್ತಚರರ ಮೂಲಕ ಪರೀಕ್ಷಿಸಿ ನಂತರ ತನ್ನ ಬಳಿಗೆ ಬಿಟ್ಟುಕೊಳ್ಳುತ್ತಿದ್ದನೆಂಬ ವಿವರವು ಅತ್ಯಂತ ಮಹತ್ವದ್ದಾಗಿದೆ. ಆಂತರಿಕ ರಕ್ಷಣೆಗಾಗಿ ಸೇನೆಯಿಂದ ಸಂಪೂರ್ಣವಾಗಿ ಪ್ರತ್ಯೇಕವಾದ ಒಂದು ರಕ್ಷಣಾ ವ್ಯವಸ್ಥೆ ಇಲ್ಲದಿದ್ದರೂ ಸಹ, ಅಪರಾಧ ತಡೆ ಮತ್ತು ಪತ್ತೆಕಾರ್ಯಕ್ಕಾಗಿ ವಿಶೇಷ ಪಡೆಯನ್ನು ಮನುವಿನ ಮನುಸ್ಮೃತಿಯಲ್ಲಿ ಗುರುತಿಸಬಹುದಾಗಿದೆ. ಇದನ್ನು ನಾವು ಆಧುನಿಕ ಪೊಲೀಸ್ ಪಡೆಗೆ ಹೋಲಿಸಬಹುದಾಗಿದೆ. ಇವರುಗಳು ತಾವು ಹಿಡಿದ ಕಳ್ಳರನ್ನು ಮತ್ತು ಕಳ್ಳತನವಾದ ಮಾಲುಗಳನ್ನು ನ್ಯಾಯಾಧಿಕಾರಿಯ ಮುಂದೆ ಹಾಜರು ಪಡಿಸಬೇಕಿತ್ತು. ಅದನ್ನು ಹೇಗೆ ಮತ್ತು ಯಾರಿಗೆ ನೀಡಬೇಕೆಂಬ ಬಗ್ಗೆ ಈ ಸಂಹಿತೆಯಲ್ಲಿ ತಿಳಿಸಲಾಗಿದೆ. ಅಂತಿಮ ನ್ಯಾಯ ತೀರ್ಮಾನಾಧಿಕಾರಿ ರಾಜನಾಗಿದ್ದು, ಆತನು ನ್ಯಾಯಶಾಸ್ತ್ರ ತಿಳಿದವನಾಗಿರಬೇಕೆಂಬುದು ಅಂದಿನ ನಿಯಮವಾಗಿತ್ತು. ಇದು ಅತ್ಯಂತ ಮುಖ್ಯವಾದ ವಿಷಯವಾಗಿದೆ. ಇಂದು ನಮ್ಮನ್ನಾಳುವ ಹಲವಾರು ಜನರಿಗೆ ನ್ಯಾಯಶಾಸ್ತ್ರದ ಪರಿಜ್ಞಾನವೇ ಇರುವುದಿಲ್ಲ. ಹಾಗಿರುವಾಗ ಮನುಧರ್ಮಶಾಸ್ತ್ರವು ಅಪರಾಧ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ದೊರೆಯುವ ಅತ್ಯಂತ ಪ್ರಾಚೀನ ಗ್ರಂಥವೆಂದೇ ಹೇಳಬೇಕು. ಈ ಗ್ರಂಥದಲ್ಲಿ ಪೊಲೀಸ್ ವ್ಯವಸ್ಥೆಯ ಬಗ್ಗೆ ಮಾಹಿತಿಗಳು ಲಭ್ಯವಾಗಿದೆ. ಇದೇ ಬಹುಶಹ ಪೊಲೀಸ್ ವ್ಯವಸ್ಥೆಯ ಬಗ್ಗೆ ಸಿಗುವ ಅತ್ಯಂತ ಪ್ರಾಚೀನ ಉಲ್ಲೇಖವೆನ್ನಬಹುದು.

೨. ೭- ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ನಾಗರಿಕ ಎಂಬ ಪೊಲೀಸ್.

ಭಾರತದಲ್ಲಿ ಪೊಲೀಸ್ ಬಗೆಗಿನ ವಿವರಗಳು ಸುಮಾರು ಕ್ರಿಪೂ ೨೦೦೦ ವರ್ಷಗಳಷ್ಟು ಹಿಂದೆ ರಚಿತವಾದ ಮನುವಿನ ಕಾನೂನು (The law's of Manu) ಗಳಲ್ಲಿ ಕಾಣಬಹುದಾಗಿದೆ.[೪೭] ನಂತರ ಕ್ರಿಪೂ ೩೦೦ ರಲ್ಲಿ ರಚಿತವಾದು ದೆಂದು ನಂಬಲಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗೂಢಚರ (Spies) ಮತ್ತು ಅಪರಾಧಿಕ ಆಡಳಿತ ವ್ಯವಸ್ಥೆಯ ಬಗ್ಗೆ ವಿಷದವಾದ ವಿವರಗಳು ಸಿಗುತ್ತವೆ.[೪೮]

'ಕೌಟಿಲ್ಯ'ನು ಪೊಲೀಸ್ ವ್ಯವಸ್ಥೆಯನ್ನು ಮುಖ್ಯವಾಗಿ ಎರಡು ಭಾಗ ಮಾಡಿದನು. ಒಂದು ವ್ಯವಸ್ಥಿತ (ರೆಗ್ಯುಲರ್) ಪೊಲೀಸ್ ಮತ್ತೊಂದು ರಹಸ್ಯ ಪೊಲೀಸ್ ಎಂದು. ಕೌಟಿಲ್ಯನು ಈ ವ್ಯವಸ್ಥಿತ ಪೊಲೀಸ್ ಕರ್ತವ್ಯಗಳನ್ನು ಮೂರು ವಿಭಾಗ ಮಾಡಿದ್ದನು. ಅವುಗಳೆಂದರೆ, ೧)ಪೊಲೀಸ್ ಸೇವೆಯ ಸಂವಿಧಾನ ೨) ಪೊಲೀಸ್ ಆಡಳಿತ ೩)ಕಾವಲು ಕಾಯಲು ಸಾರ್ವಜನಿಕರ ಜವಾಬ್ದಾರಿ.

೧) ಪೊಲೀಸ್ ಸಂವಿಧಾನ:- ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಪೊಲೀಸ್ ಪಡೆಯ ರಚನೆ ನಗರ ಹಾಗೂ ಗ್ರಾಮಗಳಲ್ಲಿ ಇತ್ತು. ಇವೆರಡೂ ಬಹುತೇಕ ಒಂದೇ ತರವಾಗಿದ್ದವು. ಈ ಪೊಲೀಸ್ ಪಡೆಯು ಪ್ರಧಾನವಾಗಿ ಮೂರು ದರ್ಜೆಯ ಅಧಿಕಾರಿಗಳನ್ನು ಒಳಗೊಂಡಿತ್ತು. ಪೊಲೀಸ್ ಕೆಲಸ ಮಾಡುತ್ತಿದ್ದ ಮೂರು ಜನ ಅಧಿಕಾರಿಗಳನ್ನು ಆತನು ಹೆಸರಿಸುತ್ತಾನೆ. ಮತ್ತು ಅವರ ಕರ್ತವ್ಯಗಳ ಬಗ್ಗೆ ವಿವರಿಸುತ್ತಾನೆ. 'ನಾಗರಿಕ', 'ಗೋಪ' ಮತ್ತು 'ಸ್ಥಾನಿಕ' ಎಂಬ ಮೂರು ಜನ ನಗರವನ್ನು ರಕ್ಷಿಸುವ ಅಧಿಕಾರಿಗಳ ವಿವರಣೆಯನ್ನು ನೀಡುತ್ತಾನೆ. ೫೬ ನೇ ಪ್ರಕರಣದ ೫೭ ನೇ ಅಧ್ಯಾಯದಲ್ಲಿ 'ನಾಗರಿಕ', 'ಗೋಪ', 'ಸ್ಥಾನಿಕ'ರ ಮೇಲ್ವಿಚಾರಣೆ ಬಗ್ಗೆ ತಿಳಿಸುತ್ತಾನೆ. "ಸಮಾಹರ್ತನು ಜನಪದವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಂಡು, ಗೋಪ ಸ್ಥಾನಿಕರ ನೆರವಿನಿಂದ ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವಂತೆ, ನಗರದ ಮುಖ್ಯಾಧಿಕಾರಿಯಾದ ನಾಗರಿಕ ನಗರ ವನ್ನು ನಾಲ್ಕು ವಿಭಾಗ ಮಾಡಿಕೊಂಡು 'ಗೋಪ' 'ಸ್ಥಾನಿಕ'ರ ಸಹಾಯದಿಂದ ಅದರ ರಕ್ಷಣೆಯಲ್ಲಿ ತೊಡಗಬೇಕು."[೪೯] ನಾಗರಿಕನು ನಗರದ ಮುಖ್ಯಾಧಿಕಾರಿಯಾಗಿ ಅದರ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿದ್ದನು. ಈತನ ಕೈಕೆಗಳಗೆ 'ಗೋಪ' ನೆಂಬ ಅಧಿಕಾರಿಯು ಇದ್ದು ಆತನು "ಉತ್ತಮ ದರ್ಜೆಯ ಹತ್ತು ಕುಲಗಳನ್ನಾಗಲೀ, ಮಧ್ಯಮ ದರ್ಜೆಯ ಇಪ್ಪತ್ತು ಕುಲಗಳನ್ನಾಗಲೀ, ಅಧಮ ದರ್ಜೆಯ ನಲವತ್ತು ಕುಲಗಳನ್ನಾಗಲೀ ರಕ್ಷಿಸಬೇಕು. ಅವನು ಅವುಗಳಲ್ಲಿ ಎಷ್ಟು ಜನ ಸ್ತ್ರೀ-ಪುರುಷರಿರುವರು? ಅವರ ಜಾತಿ, ಗೋತ್ರ, ಹೆಸರು ಮತ್ತು ಕಾರ್ಯಗಳೇನು? ಅವರ ಆದಾಯ ಖರ್ಚುಗಳೇನು ಮುಂತಾದುವನ್ನು ತಿಳಿದಿರಬೇಕು"[೫೦] ಎನ್ನುತ್ತಾನೆ. ಇಲ್ಲಿ ಸ್ಥಳೀಯ ನಿವಾಸಿಗಳ ರಕ್ಷಣೆಯ ಜೊತೆಗೆ ಅವರ ಆಧಾಯ, ಖರ್ಚುಗಳು ಏನೆಂಬುದನ್ನು ತಿಳಿಯಬೇಕೆಂದು ಕೌಟಿಲ್ಯನು ಸೂಚಿಸಿರುವುದು ಅತ್ಯಂತ ಗಮನಾರ್ಹವಾದ ವಿಷಯವಾಗಿದೆ. ಏಕೆಂದರೆ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವ ವ್ಯಕ್ತಿಗಳು ಯಾರಾದರೂ ಇದ್ದಲ್ಲಿ ಅಂತವನ ಬಗ್ಗೆ ವಿಚಾರಣೆ ನಡೆಸುವ ಅವಶ್ಯಕತೆ ಇತ್ತು. ಏಕೆಂದರೆ ಆತನು ಅಪರಾಧಗಳನ್ನು ಮಾಡಿ ಹೆಚ್ಚಿನ ಹಣ ಸಂಪಾದಿಸುವ ಸಾಧ್ಯತೆಯನ್ನು ಅಲ್ಲಗಳೆಯುವಂತೆ ಇರಲಿಲ್ಲ. ಅಷ್ಟೇ ಅಲ್ಲದೇ ಸ್ಥಳೀಯ ನಿವಾಸಿಗಳ ಪರಿಚಯವೂ ಆತನಿಗೆ ಇರಬೇಕಿತ್ತು. ಇದರಿಂದಾಗಿ ಪರ ಊರುಗಳಿಂದ ಯಾರಾದರೂ ಅಪರಿಚಿತ ವ್ಯಕ್ತಿ ಬಂದಲ್ಲಿ ತಕ್ಷಣವೇ ಆತನನ್ನು ಗುರುತಿಸಿ ಯಾವ ಕಾರಣಕ್ಕಾಗಿ ಆತನು ಅಲ್ಲಿಗೆ ಬಂದಿದ್ದಾನೆ ಎಂಬುದನ್ನು ವಿಚಾರಿಸುವ ಸಲುವಾಗಿ 'ಗೋಪ'ನಿಗೆ ಸ್ಥಳೀಯರ ಪರಿಚಯ ಇರಬೇಕಾಗಿತ್ತು. 'ಗೋಪ'ನ ಕೈಕೆಳಗೆ 'ಸ್ಥಾನಿಕ' ಎಂಬ ಅಧಿಕಾರಿ ಇದ್ದ. "ಸ್ಥಾನಿಕನು ದುರ್ಗವನ್ನು ನಾಲ್ಕು ಭಾಗವನ್ನಾಗಿ ವಿಂಗಡಿಸಿಕೊಂಡು ಅಲ್ಲಿ ಎಷ್ಟು ಜನ ಗಂಡಸು ಹೆಂಗಸರಿರುವರು? ಅವರ ಜಾತಿ, ಗೋತ್ರ, ಹೆಸರು ಮತ್ತು ಕಾರ್ಯಗಳೇನು? ಅವರ ಆಯ ವ್ಯಯಗಳೇನು? ಎಂಬುದನ್ನು ಅರಿತಿರಬೇಕು.[೫೧] ಎನ್ನುತ್ತಾನೆ. ಸ್ಥಾನಿಕನ ಕರ್ತವ್ಯಗಳೂ ಸಹ

ಗೋಪನ ಕರ್ತವ್ಯಗಳನ್ನೇ ಹೋಲುತ್ತಿದ್ದು, ಆದರೆ ಆತನ ವ್ಯಾಪ್ತಿಯು ದುರ್ಗಕ್ಕೆ ಸೀಮಿತವಾಗಿತ್ತು.

ಕೌಟಿಲ್ಯನು ಪೊಲೀಸ್ ವ್ಯವಸ್ಥೆಯನ್ನು ಹಳ್ಳಿ ಮತ್ತು ಪಟ್ಟಣಗಳಿಗೆ ಸಂಬಂಧಿಸಿದಂತೆ ಸಜ್ಜುಗೊಳಿಸಿದ. ಹಳ್ಳಿಗಳಲ್ಲಿ ನಗರಗಳಲ್ಲಿ ನಾಗರೀಕ ಹಳ್ಳಿ ಮತ್ತು ಪಟ್ಟಣಗಳಿಗಿಂತ ಮಿಗಿಲಾಗಿ ಇರುತ್ತಿದ್ದರು. ಕೆಳದರ್ಜೆಯ ಪೊಲೀಸ್ ಅಧಿಕಾರಿ ಎಂದರೆ ಗೋಪ. ಪೊಲೀಸ್ ಕೇಂದ್ರ ಸ್ಥಾನವು ರಾಜಧಾನಿಯಲ್ಲಿದ್ದು ಪ್ರಮುಖ ಹಳ್ಳಿಗಳಲ್ಲಿ ಪ್ರಾತಿನಿಧಿಕ ಪೊಲೀಸ್ ಅಧಿಕಾರಿಗಳಿದ್ದರು.[೫೨] ೧)ಪ್ರದೇಷ್ಟ ಎಂಬು ವವನು ಕಂದಾಯ ವಸೂಲಿ ಜೊತೆಗೆ ಪೊಲೀಸ್ ಪ್ರಧಾನ ಕೆಲಸ ಮಾಡುತ್ತಿದ್ದನು. ಈತ ಕೇಂದ್ರ ಸರಕಾರ ಗ್ರಾಮಗಳ ನಡುವೆ ಕೊಂಡಿಯಾಗಿದ್ದ. ಈತ ೫ ರಿಂದ ೧೦ ಹಳ್ಳಿಗೆ ಒಬ್ಬನಿದ್ದು, ಪ್ರಕರಣಗಳ ತನಿಖೆ ಮತ್ತು ಶಿಕ್ಷೆ ನೀಡುತ್ತಿದ್ದ. ೨) ಗ್ರಾಮಭರ್ತಕ, ಗ್ರಾಮಿಕ, ಗ್ರಾಮಕೂಟ – ಇವರು ಗ್ರಾಮದ ಪೊಲೀಸ್ ಮುಖ್ಯಸ್ಥರಾಗಿದ್ದು, ಇವರಿಗೆ ಇತರ ಕೆಲವು ಅಧಿಕಾರಗಳಿದ್ದವು. ಕಳ್ಳರನ್ನು ಕಲಬೆರಕೆ ಮಾಡುವವರನ್ನು ಗಡಿಪಾರು ಮಾಡುವ ಅಧಿಕಾರ ಹೊಂದಿದ್ದ. ಕಳ್ಳತನದ ಮಾಲುಗಳನ್ನು ತುಂಬಿಸಿಕೊಡುತ್ತಿದ್ದ. ೩) ನಾಗರಿಕ (ನಗರಕ) ನಗರ ಪೊಲೀಸ್ ಮುಖ್ಯಸ್ಥನಾಗಿದ್ದ. ಭೂಮಿಯನ್ನು ಅಳೆಯುವುದು, ಜನಗಣತಿಯನ್ನು ಮಾಡುತ್ತಿದ್ದ. ೪) ಅಂತಪಾಲ– ಈತನು ಗಡಿ ಚೆಕ್‌ಪೋಸ್ಟ್‌ಗಳ ಅಧಿಕಾರಿಯಾಗಿದ್ದ. ಗಡಿಯ ಬಳಿಗೆ ಬರುವ ಮತ್ತು ಹೋಗುವ ಜನರು ಹಾಗೂ ಸಾಮಾನು ಸರಂಜಾಮುಗಳನ್ನು ನಿಯಂತ್ರಿಸುತ್ತಿದ್ದ. ದೇಶದೊಳಗೆ ಬರುವ ವರ್ತಕರಿಗೆ ಪಾಸ್‌ಪೋರ್ಟ್‌ನ್ನು ನೀಡುತ್ತಿದ್ದ. ಈತನ ಮುದ್ರೆ ಇಲ್ಲದೇ ಯಾರೂ ಒಳಗೆ ಬರು ವಂತಿರಲಿಲ್ಲ. ಮತ್ತು ಈತನ ಬಳಿ ಶುಲ್ಕವನ್ನು ಕಟ್ಟಬೇಕಿತ್ತು. ೫)ಸಂಸ್ಥಾಧ್ಯಕ್ಷ ಮತ್ತು ಪನ್ಯಾಧ್ಯಕ್ಷ ವರ್ತಕರಿಂದ ಗ್ರಾಹಕರಿಗೆ ಅನ್ಯಾಯವಾಗದಂತೆ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿದ್ದರು. ತೂಕ, ಅಳತೆ, ಕಲಬೆರಕೆ, ಬೆಲೆ ಎಲ್ಲವನ್ನೂ ಇವರು ನಿಯಂತ್ರಿಸುತ್ತಿದ್ದರು. ೬)ಗಣಿಕಾಧ್ಯಕ್ಷ– ಈತ ವೇಶ್ಯಾಗ್ರಹಗಳು ಹಾಗೂ ಜೂಜಾಟಗಳನ್ನು ನಿಯಂತ್ರಿಸುವ ಅಧಿಕಾರಿಯಾಗಿದ್ದ.[೫೩] ಕೌಟಿಲ್ಯನು ಇವರ ಕೆಲಸಗಳನ್ನು 'ಚೋರ ರಜ್ಜುಕ' ಎಂದು ಹೇಳಿದ್ದಾನೆ. ಅಂದರೆ ಕಳ್ಳರನ್ನು ಹಿಡಿಯಲು ಅಧಿಕಾರಿಗಳು ಶಸ್ತ್ರಧಾರಿಗಳಾಗಿದ್ದರು.

೨)ಪೊಲೀಸ್ ಆಡಳಿತ: ಇಂದಿನ ಕಾಲದಲ್ಲಿ ದೇಶದಿಂದ ದೇಶಕ್ಕೆ ಹೋಗುವವರಿಗೆ ವಿದೇಶಿ ರಹದಾರಿ ಪತ್ರದ ಅಗತ್ಯವಿರುತ್ತದೆ. ವಿದೇಶಕ್ಕೆ ಹೋಗಬೇಕಾದ ಸಂದರ್ಭದಲ್ಲಿ ವಲಸೆ (ಇಮಿಗ್ರೇಷನ್) ಪೊಲೀಸ್ ಅಧಿಕಾರಿಗಳು ರಹದಾರಿ ಪತ್ರಕ್ಕೆ ಮುದ್ರೆಯನ್ನು ಒತ್ತಿ ಕಳುಹಿಸುತ್ತಾರೆ. ಈ ಪದ್ಧತಿಯು ಕೌಟಿಲ್ಯನ ಕಾಲದಲ್ಲಿಯೇ ಇತ್ತು. ರಾಜ್ಯದ ಗಡಿಯೊಳಗೆ ಪ್ರವೇಶಿಸುವ ಮತ್ತು ರಾಜ್ಯದಿಂದ ಹೊರಹೋಗುವ ಮಾರ್ಗಗಳಲ್ಲಿ ಅತ್ಯಂತ ಕಟ್ಟುನಿಟ್ಟಿನ ನಿಯಂತ್ರಣ ಹೇರಲಾಗಿತ್ತು. ಇದಕ್ಕಾಗಿ 'ಮುದ್ರಾಧ್ಯಕ್ಷ' ಎಂಬ ಅಧಿಕಾರಿಯು ಇದ್ದು ರಹದಾರಿ ಪತ್ರಕ್ಕೆ 'ಮೌಷಕ' ಎಂಬ ನಾಣ್ಯವನ್ನು ಸುಂಕವಾಗಿ ಪಡೆದು ಮುದ್ರೆಯನ್ನು ಹಾಕುತ್ತಿದ್ದ. ಮುದ್ರೆಯನ್ನು ಹೊಂದದೇ ಪುರಪ್ರವೇಶ ಮಾಡಿದರೆ ಸ್ವದೇಶದವನು ೧೨ ಪಣಗಳನ್ನು, ಪರದೇಶದವನು ೨೪ ಪಣಗಳನ್ನು ದಂಡವಾಗಿ ನೀಡಬೇಕು. ಕೃತ್ರಿಮವಾದ ಮುದ್ರೆ ಯಿಂದ ಪ್ರವೇಶಿಸಿದರೆ 'ಸ್ವದೇಶ'ದವನು ಪೂರ್ವಸಾಹಸ ದಂಡವನ್ನು ಪರದೇಶದವನು ಉತ್ತಮಸಾಹಸ ದಂಡವನ್ನೂ ನೀಡಬೇಕು.[೫೪] ಹುಲ್ಲುಗಾವಲನ್ನು ಕಾಯುವ ಮೇಲಾಧಿಕಾರಿಯು ಪ್ರತೀಯೊಬ್ಬ ದಾರಿಗನ ಮುದ್ರೆಯನ್ನು ಪರೀಕ್ಷಿಸಬೇಕಿತ್ತು. ಭಯಂಕರವಾದ ಆಯಕಟ್ಟು ಪ್ರದೇಶಗಳಲ್ಲಿ ಆತನು ಹುಲ್ಲುಗಾವಲನ್ನು ಸ್ಥಾಪಿಸಬೇಕಿತ್ತು. ಕಳ್ಳಕಾಕರು, ಕೆಟ್ಟಮೃಗಗಳು ಅರಣ್ಯ ದಲ್ಲಿ ಸೇರಿಕೊಂಡಿರಬಹುದೇ ಎಂಬುದನ್ನು ಆಗಾಗ್ಗೆ ಪರೀಕ್ಷಿಸಬೇಕಾಗಿತ್ತು. ನಾಯಿಯ ಬೆಂಬಲದಿಂದ ಬೇಟೆಯಾಡು ವವರು ಕಳ್ಳಕಾಕರ ಮತ್ತು ಶತ್ರುಜನರ ಸುಳಿವನ್ನು ಅರಿಯಲಿಕ್ಕಾಗಿಯೂ, ಅವರ ಪ್ರವೇಶವನ್ನು ತಡೆಗಟ್ಟಲಿಕ್ಕಾಗಿಯೂ ಕಾಡನ್ನು ಸುತ್ತುತ್ತಿರಬೇಕು. ಒಂದು ವೇಳೆ ಅವರ ಅಸ್ತಿತ್ವವು ಪತ್ತೆಹಚ್ಚಿದರೆ, ಅವರ ಕಣ್ಣಿಗೆ ಬೀಳದಂತೆ ಗಿಡಗಳನ್ನಾಗಲೀ, ಗುಡ್ಡಗಳನ್ನಾಗಲೀ ಹತ್ತಿ ಶಂಖಧ್ವನಿಯನ್ನಾಗಲೀ, ನಗಾರಿಯ ಧ್ವನಿಯನ್ನಾಗಲೀ ಮಾಡಬೇಕು. ವೇಗಶಾಲಿಯಾದ ಕುದುರೆಯನ್ನಾಗಲೀ ಹತ್ತಿಕೊಂಡು ಹೋಗಿ ತಿಳಿಸಬೇಕು.[೫೫]

ಅಥವಾ ಪಾರಿವಾಳದ ಕಾಲಿಗೆ ಪತ್ರಕಟ್ಟಿ ಕಳುಹಿಸುತ್ತಿದ್ದರು. ಅಥವಾ ಬೆಂಕಿ ಮತ್ತು ಹೊಗೆಯನ್ನು ಹಾಕಿ ಅಪಾಯದ ಸೂಚನೆ ನೀಡುತ್ತಿದ್ದರು.

ಜನರ ಜೀವ ಹಾಗೂ ಆಸ್ಥಿಪಾಸ್ಥಿ ರಕ್ಷಣೆಗೆ ವಿಶೇಷವಾದ ಗಮನಹರಿಸಲಾಗಿತ್ತು. ಪ್ರದೇಶ್ಥ ಸ್ಥಾನಿಕ ಮತ್ತು ಗೋಪರವರುಗಳು ಅವರವರ ಕೇಂದ್ರಸ್ಥಾನದಲ್ಲಿ ಕೆಲಸ ಮಾಡಬೇಕಿತ್ತು. ಮತ್ತು ಸಾರ್ವಜನಿಕರ ಶತ್ರುಗಳು, ಕಳ್ಳರು ಸಾರ್ವಜನಿಕರಿಗೆ ತೊಂದರೆ ಕೊಡುವವರನ್ನು ಹತ್ತಕ್ಕಬೇಕಿತ್ತು.

ಯಾವುದೇ ಅಸಹಜ ಸಾವುಗಳಾದಾಗ ಎರಡು ಬಗೆಯಲ್ಲಿ ಶವದ ಮರಣೋತ್ತರ ಪರೀಕ್ಷೆಯನ್ನು ನಡೆಸಲಾಗುತ್ತಿತ್ತು. ಒಂದು ವೈದ್ಯಕೀಯ ಪರೀಕ್ಷೆಯಾದರೆ ಮತ್ತೊಂದು ಪೊಲೀಸರ ತನಿಖೆ. ಮೊದಲನೆಯದು ಶವದ ಮರಣೋತ್ತರ ಪರೀಕ್ಷೆಯನ್ನು ಅತ್ಯಂತ ತಜ್ಞರು ಮಾಡುತ್ತಿದ್ದರು. ಶವಕ್ಕೆ ಎಣ್ಣೆಯನ್ನು ಹಚ್ಚಿ ವರ್ಗೀಕೃತವಾಗಿ ವಿವರವಾಗಿ ದೇಹದ ಮೇಲಿನ ಸುಳಿವುಗಳನ್ನು ಗಮನಿಸಲಾಗುತ್ತಿತ್ತು. ಮತ್ತೊಂದು ವಿಧ ಸತ್ತ ಪ್ರದೇಶದ ಸುತ್ತಮುತ್ತಲ ಜನ, ಸಂಬಂಧಿಕರು, ಸ್ನೇಹಿತರು ಸೇವಕರುಗಳನ್ನು ವಿಚಾರಣೆ ಒಳಪಡಿಸಲಾಗುತ್ತಿತ್ತು. ಸತ್ತ ವೇಳೆ ಇದ್ದ ಜನರನ್ನು ಪ್ರಶ್ನಿಸಲಾಗುತ್ತಿತ್ತು. ಸತ್ತ ವ್ಯಕ್ತಿ ಹಾಕಿಕೊಂಡ ಬಟ್ಟೆ ಒಡವೆಗಳ ಬಗ್ಗೆ ಪ್ರಶ್ನಿಸಲಾಗುತ್ತಿತ್ತು. ನಂತರ ಪ್ರಕರಣದ ಹಿಂದಿನ ಉದ್ದೇಶದ ಬಗ್ಗೆ ತಿಳಿಯಬೇಕಿತ್ತು.

ಅರ್ಥಶಾಸ್ತ್ರದ ಆರನೇ ಅಧ್ಯಾಯದಲ್ಲಿ ಕೌಟಿಲ್ಯನು ಪ್ರದೇಷ್ಟ ನಾಗರೀಕ, ಗೋಪ, ಸ್ಥಾನಿಕರವರುಗಳಿಗೆ ಅವರವರ ಪ್ರದೇಶಗಳಲ್ಲಿ ಮಾಡಬೇಕಾದ ಕೆಲಸ, ಕಳ್ಳರನ್ನು ಹಿಡಿಯುವ ವಿಧಾನದ ಬಗ್ಗೆ ತಿಳಿಸಿದ್ದಾನೆ. ಶಂಕಿತ ವ್ಯಕ್ತಿಗಳನ್ನು ಪರೀಕ್ಷಿಸುವ ಬಗ್ಗೆ ಮೂರು ವಿಧಗಳನ್ನು ತಿಳಿಸಿದ್ದಾನೆ. ಅವುಳೆಂದರೆ ಶಂಕ, ರೂಪ ಮತ್ತು ಕರ್ಮ ಎಂದು ಕರೆದಿದ್ದಾನೆ. ಇದರಿಂದ ಕಳವು ಮಾಲು ಪತ್ತೆಹಚ್ಚಬಹುದೆಂದು ತಿಳಿಸಿದ್ದಾನೆ. ಕಳ್ಳತನ ಮಾಡಿದ್ದಾರೆಂದು ಸುಳ್ಳು ಆರೋಪ ಹೊರಿಸಿ ತಪ್ಪುಶಿಕ್ಷೆ ನೀಡಿದರೆ ದಂಡಿಸಲಾಗುತ್ತಿತ್ತು. ಆಮದು ರಫ್ತು ಮಾಡುವ ವರ್ತಕರ ಮೇಲೆ ನಿಯಂತ್ರಣವನ್ನು ಇಡಬೇಕಿತ್ತು. ಇನ್ನು ಗ್ರಾಮಗಳಲ್ಲಿ ಹೊರಭಾಗದಿಂದ ಬರುವ ವ್ಯಾಪಾರಿಗಳು ಗ್ರಾಮದ ಮುಖ್ಯಸ್ಥನ ಬೆಳೆ ತನ್ನ ಬಳಿ ಇರುವ ಹಣ ಹಾಗೂ ವಸ್ತುಗಳ ಬಗ್ಗೆ ತಿಳಿಸಬೇಕಿತ್ತು. ಒಂದು ವೇಳೆ ಈತನು ಹಣ ಅಥವಾ ವಸ್ತುಗಳು ಕಳ್ಳತನವಾದರೆ ಹಳ್ಳಿಯ ಮುಖ್ಯಸ್ಥನಾದ ಗ್ರಾಮಸ್ಥರಲ್ಲಿಯೂ ಅದನ್ನು ವಸೂಲಿ ಮಾಡಿಕೊಡಬೇಕಿತ್ತು. ಗ್ರಾಮದಿಂದ ಹೊರಭಾಗದಲ್ಲಿ ಆತನ ಕಳ್ಳತನಕ್ಕೆ ಬೇಕಾದರೆ ಅಧ್ಯಕ್ಷ ಮತ್ತು ವಿವಿದಾಧ್ಯಕ್ಷರು ವಸೂಲಿ ಮಾಡಿಕೊಡಬೇಕಿತ್ತು. ಚೂರಾಧ್ಯಕ್ಷ ಕಳ್ಳರನ್ನು ಹಿಡಿಯಬೇಕಿತ್ತು. ಆರೋಪಿ ಗಳಿಂದ ತಪ್ಪೊಪ್ಪಿಗೆ ಪಡೆಯಲು ಕೌಟಿಲ್ಯನು ೧೮ ವಿದದ ಹಿಂಸೆ ನೀಡುತ್ತಿದ್ದ ಬಗ್ಗೆ ತಿಳಿಸುತ್ತಾನೆ.

೩) ಸಾರ್ವಜನಿಕರ ಕಾವಲು ಕಾಯುವಿಕೆ

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಹಳ್ಳಿ ಮತ್ತು ನಗರಗಳಲ್ಲಿ ಸಾರ್ವಜನಿಕರು ಕಾವಲು ಕಾಯುವ ಜವಾಬ್ದಾರಿಗಳ ಬಗ್ಗೆ ತಿಳಿಸಿದ್ದಾನೆ. ಪೊಲೀಸ್ ಕರ್ತವ್ಯಗಳು ಕೇವಲ ಪೊಲೀಸ್ ಅಧಿಕಾರಿಗಳಿಗೆ ಮಾತ್ರ ಸಂಬಂಧಿಸಿರದೆ ಇತರ ಇಲಾಖೆಗಳ ಅಧಿಕಾರಿಗಳಿಗೂ, ವರ್ತಕರಿಗೂ ಮತ್ತು ಸಾಮಾನ್ಯ ಜನರಿಗೂ ಸಂಬಂಧಿಸಿದ್ದಾಗಿತ್ತು. ಇದೇ ಬೆಳವಣಿಗೆಯನ್ನು ನಾವು ಮುಂದೆ ಬ್ರಿಟೀಷರ ಆಡಳಿತ ಕಾಲದವರೆಗೂ ಗಮನಿಸಬಹುದಾಗಿದೆ. ಈ ಕಾಲದಲ್ಲಿ ಯಾತ್ರಾರ್ಥಿಗಳು ಬಂದು ಛತ್ರಗಳಲ್ಲಿ ತಂಗುತ್ತಿದ್ದ ಪದ್ಧತಿ ಇತ್ತು. ಇಂತಹ ಯಾತ್ರಿಗಳ ಬಗ್ಗೆ "ಛತ್ರದ ಅಧಿಕಾರಿಗಳು ನಾಗರಿಕನಿಗೆ ತಿಳಿಸಬೇಕಿತ್ತು. ಮತ್ತು ತಿಳಿಸು ವುದಕ್ಕೆ ಮುಂಚೆ, ಸ್ವಂತವಾಗಿ ಮಾಡಬೇಕಾದ ಕರ್ತವ್ಯಗಳು ಛತ್ರ (ಧರ್ಮಶಾಲೆಯ) ಅಧಿಕಾರಿಗಳು ಗೋಪನಿಗೆ ತಿಳಿಸಿ ಪಾಷಂಡಿ, ಬೌದ್ಧ ಭಿಕ್ಷುಗಳೇ ಮುಂತಾದವರನ್ನು ಧರ್ಮಶಾಲೆಯಲ್ಲಿ ಇಟ್ಟುಕೊಳ್ಳಬೇಕು. ತನ್ನ ವಿಚಾರ ವಿಮರ್ಶೆ ಗಳಿಂದ ನಿಶ್ಚಿತರಾದ ತಪಸ್ವಿ ಜನರಿಗೂ ಶೋತ್ರಿಯರಿಗೂ ಆಶ್ರಯ ಕೊಡಬೇಕು".[೫೬] ಎನ್ನುತ್ತಾನೆ. ಕಳವು ಮಾಲುಗಳನ್ನು ಮಾರಲು

ಬಂದ ವ್ಯಕ್ತಿಯ ಬಗ್ಗೆ ವರ್ತಕರುಗಳು ನಾಗರಿಕನಿಗೆ ಮಾಹಿತಿಯನ್ನು ನೀಡಬೇಕಾಗಿತ್ತು. ಈ ರೀತಿ ಮಾಡುವುದರಿಂದ ಕಳವು ಪ್ರಕರಣಗಳನ್ನು ಸುಲಭವಾಗಿ ಪತ್ತೆ ಹಚ್ಚಬಹುದಾಗಿತ್ತು. "ವರ್ತಕರು ಪರಸ್ಪರವಾಗಿ ಅಂದರೆ ಮಾರುವವನು ಮಾರುವವನಿಗೂ, ಕೊಳ್ಳುವವನು ಕೊಳ್ಳುವವನಿಗೂ, ತಮ್ಮ ಮೇಲಿನ ಜವಾಬ್ದಾರಿಯಿಂದ ಸ್ವಕಾರ್ಯ ಸ್ಥಾನಗಳಲ್ಲಿ ಮಾರುತ್ತಿರುವ ಆಗಂತುಕನನ್ನೂ, ತನ್ನದಲ್ಲದುದನ್ನು ಮಾರುತ್ತಿರುವವನನ್ನೂ, ನಗರದ ಅಧಿಕಾರಿಗಳಿಗೆ ತಿಳಿಸಬೇಕು".[೫೭] ಇದು ಕೇವಲ ವರ್ತಕರ ಕರ್ತವ್ಯ ಮಾತ್ರ ಆಗಿರದೇ, ಬೇರೆ ಉದ್ಯೋಗದಲ್ಲಿ ತೊಡಗಿರುವವರ ಕರ್ತವ್ಯವೂ ಆಗಿತ್ತು. "ಹೆಂಡ ಮಾರು ವವನು, ಪಕ್ವಮಾಂಸವನ್ನು ವಿಕ್ರಯಿಸುವವನು, ಅನ್ನ ಮಾರುವವನು, ಗಣಿಕೆಯರು, ಸ್ವವೃತ್ತಿ ಯಲ್ಲಿರುವ ಜನರಿಗೆ ವಾಸಿಸಲು ಅವಕಾಶ ಗೊಡಬಹುದು. ಅತಿ ಖರ್ಚುಮಾಡುವ ಜನರನ್ನೂ, ಅತಿಯಾಗಿ ಮದ್ಯಪಾನ ಮಾಡುವವರನ್ನೂ ನಗರಾಧ್ಯಕ್ಷನ ಗಮನಕ್ಕೆ ತರಬೇಕು".[೫೮] ನಿಜವಾಗಿ ಕಷ್ಟಪಟ್ಟು ಹಣ ಸಂಪಾದಿಸುವವನು ಹಣವನ್ನು ಖರ್ಚು ಮಾಡಬೇಕಾದರೆ ಯೋಚಿಸಿ ನಿಯಮಿತವಾಗಿ ಹಣ ಖರ್ಚು ಮಾಡುತ್ತಾನೆ. ಕಳ್ಳತನ, ಮೋಸ, ವಂಚನೆಗಳಿಂದ ಹಣ ಸಂಪಾದಿಸಿದವನು ಅತಿಯಾಗಿ ಹಣ ವ್ಯಯಮಾಡುತ್ತಾನೆ. ಇಂತವನ ಬಗ್ಗೆ ನಾಗರಿಕನಿಗೆ ಮಾಹಿತಿ ನೀಡುವುದು ಜನರ ಕರ್ತವ್ಯವಾಗಿತ್ತು. ಇಂತಹ ಮಾಹಿತಿಯ ಆಧಾರದ ಮೇರೆಗೆ 'ನಾಗರಿಕ'ನು ಇವರನ್ನು ಹಿಡಿದು ಹಣದ ಮೂಲದ ಬಗ್ಗೆ ಪ್ರಶ್ನಿಸಬೇಕಾಗಿತ್ತು. ಅಪರಾಧಗಳ ಬಗ್ಗೆ ಆ ಕಾಲದಲ್ಲಿಯೇ ಅತ್ಯಂತ ಸೂಕ್ಷ್ಮವಾಗಿ ಮಾಹಿತಿಯನ್ನು ಸಂಗ್ರಹಿಸುತ್ತಿದ್ದರು. "ವೈದ್ಯನೂ ಸಹ ಗೋಪ ಸ್ಥಾನಿಕರಿಗೆ ನೆರವು ನೀಡಬೇಕಿತ್ತು. ಸ್ವಾಪರಾಧವು ಹೊರಬೀಳುವುದೆಂಬ ಭಯದಿಂದ, ಶಸ್ತ್ರಾದಿಗಳ ಮೂಲಕ ಒದಗಿದ ವ್ರಣಗಳಿಗೆ ಚಿಕಿತ್ಸೆ ಮಾಡಿಸುತ್ತಿರುವವನನ್ನೂ, ರೋಗ, ಮರಣಗಳನ್ನುಂಟುಮಾಡುವ ದ್ರವ್ಯಗಳನ್ನೆ ಸಗುತ್ತಿರುವವನನ್ನೂ, ಸಂಗ್ರ ಹಿಸುತ್ತಿರುವವನನ್ನೂ ಇಲ್ಲವೇ ಹುಡುಕುತ್ತಿರುವವನನ್ನೂ, ಗೋಪ, ಸ್ಥಾನಿಕರಿಗೆ ತಿಳಿಸಬೇಕು. ಹಾಗಿಲ್ಲದಿದ್ದರೆ ಅಪರಾಧಿಯಂತೆ ಅವನು ಪರಿಗಣಿಸಲ್ಪಡುವನು. ಯಾರ ಮನೆಯಲ್ಲಿ ವ್ರಣಚಿಕಿತ್ಸೆಯೂ, ರೋಗ ಮರಣೋತ್ಪಾಕದವಾದ ದ್ರವ್ಯಸಂಗ್ರಹವೂ ಜರುಗುತ್ತಿದೆಯೋ ಅವನು 'ಗೋಪ' 'ಸ್ಥಾನಿಕ'ರಿಗೆ ವಿಷಯವನ್ನು ತಿಳಿಸಬೇಕು. ಇಲ್ಲದಿದ್ದರೆ ಅವನು ಅಪರಾಧಿಯಾಗುವನು.[೫೯] ಯಾವುದಾದರೊಂದು ಶಸ್ತ್ರಗಳಿಂದ ಗಾಯವಾಗಿ ಚಿಕಿತ್ಸೆ ಪಡೆಯುತ್ತಿ ದ್ದಾನೆಂದರೆ ಆತ ಯುದ್ಧ ಮಾಡಿದ ಸೈನಿಕ ನಾಗಿರಬೇಕು, ಅಥವಾ ಯಾವುದಾದರೂ ಅಪರಾಧವೆಸಗುವ ವೇಳೆ ಉಂಟಾದ ಸಂಘರ್ಷದಿಂದಾಗಿ ಗಾಯ ಹೊಂದಿದ ವನಾಗಿರಬೇಕು. ಅಂತವನ ಬಗ್ಗೆ ವೈದ್ಯರು ನಾಗರಿಕನಿಗೆ ಮಾಹಿತಿ ನೀಡಬೇಕಿತ್ತು. ಒಂದು ವೇಳೆ ಮಾಹಿತಿ ನೀಡದಿದ್ದಲ್ಲಿ ವೈದ್ಯನು ಅಪರಾಧಿಯಾಗುತ್ತಿದ್ದನು. ಇಂದಿನ ಭಾರತ ದಂಡ ಸಂಹಿತೆಯಲ್ಲಿಯೂ ಸಹ ಇಂತಹ ಒಂದು ನಿಯಮವನ್ನು ನಾವು ಕಾಣಬಹುದಾಗಿದೆ. ಯಾವನೇ ವ್ಯಕ್ತಿ ಮರಣವುಂಟುಮಾಡುವ ದ್ರವ್ಯಗಳನ್ನು ಹುಡುಕುತ್ತಿದ್ದಾನೆ ಎಂದರೆ, ಆತನು ಶತ್ರು ದೇಶದವನಾಗಿರಬೇಕು ಅಥವಾ ಅಪರಾಧವನ್ನು ಮಾಡಲು ಹೊರಟ ವನಾಗಿರಬೇಕು. ಇಂತವರ ಬಗ್ಗೆ ಮಾಹಿತಿಯನ್ನು ಪಡೆದ ನಾಗರಿಕ, ಗೋಪ ಮತ್ತು ಸ್ಥಾನಿಕರು ಅವರನ್ನು ವಿಚಾರಣೆ ಮಾಡಬೇಕಿತ್ತು. ಊರಿನಿಂದ ಹೊರಹೋದ ಮತ್ತು ಒಳಬಂದ ಜನರ ಬಗ್ಗೆ ಸಂಬಂಧಪಟ್ಟ ಮನೆಯವರು ನಾಗರಿಕನಿಗೆ ವಿಷಯ ತಿಳಿಸಬೇಕಾಗಿತ್ತು. ಇದು ಪ್ರತಿಯೊಬ್ಬ ಜನರ ಕರ್ತವ್ಯವಾಗಿತ್ತು. "ಕಾರ್ಯಾಂತರದ ಮೇಲೆ ಯಾರು ಮನೆಯಿಂದ ದೇಶಾಂತರಕ್ಕೆ ತೆರಳಿದರು? ಯಾರು ದೇಶಾಂತರದಿಂದ ಮನೆಗೆ ಬಂದರು? ಎಂಬುದನ್ನೂ ತಿಳಿಸಬೇಕಿತ್ತು. ಹಾಗಿಲ್ಲದಿದ್ದರೆ ಕಳ್ಳತನದ ಆರೋಪಣೆಗೆ ಅವರು ಪಾತ್ರರಾಗಬೇಕಾಗಿತ್ತು. ಅಂದಿನ ರಾತ್ರಿಯಲ್ಲಿ ಕಳ್ಳತನವಾಗದಿದ್ದರೂ, ತಿಳಿಸದ ತಪ್ಪಿಗಾಗಿ ಮೂರು ಪಣ ದಂಡವನ್ನು ಕೊಡಬೇಕಿತ್ತು"[೬೦] ಇದರಿಂದಾಗಿ ಯಾರೇ ಆಗಂತುಕರು ಊರಿಗೆ ಬಂದರೆ ಅವರ ಉದ್ದೇಶವನ್ನು ತಿಳಿಯಲು ನಾಗರಿಕನಿಗೆ ನೆರವಾಗುತ್ತಿತ್ತು. ಇಲ್ಲಿ ಗಮನಿಸ ಬೇಕಾದ ಮುಖ್ಯ ಅಂಶವೆಂದರೆ, ಜನರು ಅಪರಾಧ ಮಾಡಿದ ತಪ್ಪಿಗಾಗಿ ದಂಡವನ್ನು ನೀಡುವುದರ ಜೊತೆಗೆ ತಾನು ಮಾಡ ಬೇಕಾದ ಕರ್ತವ್ಯಗಳನ್ನು ಮಾಡದಿ

ದ್ದರೂ ಸಹ ದಂಡ ನೀಡಬೇಕಾಗಿತ್ತು.

ರಹಸ್ಯ ಪೊಲೀಸ್:

ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಗೂಢಚರ ವ್ಯವಸ್ಥೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾನೆ. ಮತ್ತು ಈ ವ್ಯವಸ್ಥೆಯು ಮೌರ್ಯರ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆಂತರಿಕ ಮತ್ತು ಬಾಹ್ಯವಾದ ಅಪಾಯಗಳನ್ನು ಗುರುತಿಸಲು ಹೆಚ್ಚು ಒತ್ತು ನೀಡಲಾಗಿತ್ತು. ಕಾನೂನು ಜಾರಿಗೊಳಿಸುವ ಈ ರೀತಿಯ ಜವಾಬ್ದಾರಿಗಳು ಪ್ರಾಚೀನ ಕಾಲದಿಂದ ತುರ್ಕ–ಅಫ್ಘಾನ್ ಕಾಲದವರೆಗೆ ಬದಲಾವಣೆಗಳು ಇಲ್ಲದೇ ಉಳಿದುಕೊಂಡು ಬಂತು..[೬೧] ಈ ವ್ಯವಸ್ಥೆಯಲ್ಲಿದ್ದ ಸಣ್ಣಪುಟ್ಟ ಲೋಪ ದೋಷಗಳನ್ನು ತಿದ್ದುವ ಸಲುವಾಗಿ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಲಾಯಿತು. ಪೊಲೀಸ್ ವ್ಯವಸ್ಥೆಯು ವಾಸ್ತವ ವಾಗಿ ಸೇನೆಯ ರೂಪವಾಗಿದ್ದು, ಆಧುನಿಕ ಸ್ವರೂಪವನ್ನು ಹೊಂದಿರಲಿಲ್ಲ.[೬೨]

ಯಾವ ರಾಜನು ಅತ್ಯಂತ ಪ್ರಬಲವಾದ ಗೂಢಚರ ವ್ಯವಸ್ಥೆಯನ್ನು ಹೊಂದಿದ್ದನ್ನೋ ಅಲ್ಲಿ ಶಾಂತಿ, ಸುವ್ಯವಸ್ಥೆ ಇದ್ದು, ಪ್ರಬಲ ರಾಜ್ಯಾಡಳಿತ ವ್ಯವಸ್ಥೆ ಇರುತ್ತದೆ ಎನ್ನುವಷ್ಟರ ಮಟ್ಟಿಗೆ, ಗೂಢಚರ ವ್ಯವಸ್ಥೆಯ ಬಗ್ಗೆ ವ್ಯಾಪಕವಾದ ವಿವರಣೆಯನ್ನು ನೀಡಿದ್ದಾನೆ. ಕೌಟಿಲ್ಯನು ಅಪರಾಧ ಎಸಗುವವರ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದನು. 'ನಾಗರಿಕ' ಎಂಬ ಪೊಲೀಸ್ ಅಧಿಕಾರಿಯು ನಗರಗಳಲ್ಲಿ ಗೂಢಚರ ವ್ಯವಸ್ಥೆಗಳನ್ನು ಏರ್ಪಡಿಸಿದ್ದನು. "ಪಥಿಕೋತ್ಪಥಿಕರೆಂಬ ಅಧಿಕಾರಿಗಳು ನಗರದ ಹೊರಗಿನ ಮತ್ತು ಒಳಗಿನ ದೇವಾಲಯ, ಪುಣ್ಯಸ್ಥಾನ, ಕಾಡು ಮತ್ತು ಸ್ಮಶಾನಗಳಲ್ಲಿ ನೆಲೆಸಿರುವ ಶಸ್ತ್ರಾದಿಗಳಿಂದ ಗಾಯಗೊಂಡವರನ್ನೂ, ಕಳ್ಳತನಕ್ಕೆ ಸಾಧಕವಾದ ಉಪಕರಣಗಳನ್ನು ಪಡೆ ದವರನ್ನೂ, ಹೇರಳವಾಗಿ ಹಣ ತಂದಿರುವವ ರನ್ನೂ, ಅತಿಯಾಗಿ ನಿದ್ರಿಸುತ್ತಿರುವವರನ್ನೂ, ಮಾರ್ಗಸಂಚಾರದಿಂದ ಬಳಲಿದವರನ್ನೂ, ಅಪರಿಚಿತನನ್ನೂ, ಭೀತಿಗೊಂಡ ವನನ್ನೂ ಹಿಡಿದು ನಾಗರಿಕನಿಗೆ ಒಪ್ಪಿಸಬೇಕು" ಎಂದಿದ್ದಾನೆ. [೬೩]

ಸಾಧಾರಣವಾಗಿ ಕಳ್ಳತನ ಮಾಡಿದ ವ್ಯಕ್ತಿಗಳು ನಗರದ ಹೊರಗಿನ ಮತ್ತು ಒಳಗಿನ ದೇವಾಲಯಗಳಲ್ಲಿ, ಸ್ಮಶಾನ ಗಳಲ್ಲಿ ಮಲಗಿರುತ್ತಾರೆ. ರಾತ್ರಿ ವೇಳೆ ಕಳ್ಳತನದಲ್ಲಿ ತೊಡಗಿದ್ದವನು ಹಗಲು ಹೊತ್ತು ನಿದ್ರಿಸುತ್ತಾನೆ. ಇಂತಹ ಸೂಕ್ಷ್ಮತೆಗಳನ್ನು ಅರಿತು 'ನಾಗರಿಕ'ನು ಅಪರಾಧವೆಸಗಿದವರ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ, ಅವರನ್ನು ವಿಚಾರಣೆಗೊಳ ಪಡಿಸುತ್ತಿದ್ದನು. ಸಾಧಾರಣವಾಗಿ ಅಪರಾಧ ಎಸಗುವವರು ಸೇರುವಂತಹ ಸ್ಥಳಗಳನ್ನು ಗುರುತಿಸಿ ಅಲ್ಲಿ 'ನಾಗರಿಕ'ನು ಗೂಢಚಾರರನ್ನು ಕಳುಹಿಸಿ ಮಾಹಿತಿ ಸಂಗ್ರಹಿಸುತ್ತಿದ್ದನು."ಸ್ಥಾನೀಯದೊಳಗಿನ ಪಾಳುಮನೆಗಳಲ್ಲಿಯೂ, ಶಿಲ್ಪಶಾಲೆ ಗಳಲ್ಲಿಯೂ, ಹೆಂಡದಂಗಡಿಗಳಲ್ಲಿಯೂ, ಅನ್ನವನ್ನೂ, ಪಕ್ವಮಾಂಸವನ್ನೂ, ಮಾರುತ್ತಿರುವೆಡೆಗಳಲ್ಲಿಯೂ, ಜೂಜುಕಟ್ಟೆ ಗಳಲ್ಲಿಯೂ, ಪಾಷಂಡಿಗಳ ಮನೆಗಳಲ್ಲಿಯೂ, ಶಸ್ತ್ರಾದಿಗಳಿಂದ ಗಾಯಗೊಂಡವರೇ ಮುಂತಾದವರನ್ನು ಗೂಢಪುರುಷರು ಶೋಧಿಸಬೇಕು." [೬೪] ಎನ್ನುತ್ತಾನೆ. ಕೌಟಿಲ್ಯನು ರಾಜನಿಗೆ ತನ್ನ ಗೂಢಚಾರರನ್ನು ನಂಬಿಕಸ್ಥ ಮತ್ತು ಪ್ರಾಮಾಣಿಕ ಮಂತ್ರಿಗಳ ಕೈಕೆಳಗೆ ಇಡುವಂತೆ ಬೋಧಿಸಿದ್ದಾನೆ. ಕೌಟಿಲ್ಯನು ವಿವಿಧ ರೀತಿಯ ಜನರುಗಳಿಗೆ ಸಂಬಂಧಿಸಿದಂತೆ ಗುಪ್ತಮಾಹಿತಿಗಳನ್ನು ಸಂಗ್ರಹಿಸುವುದಕ್ಕಾಗಿ ಒಂಬತ್ತು ವಿಧದ ಗೂಢಚಾರರ ಬಗ್ಗೆ ತಿಳಿಸಿದ್ದನು. ಕೌಟಿಲ್ಯನು ನೀಡಿದ ಗುಪ್ತಚರ ವ್ಯವಸ್ಥೆಯ ವಿವರಗಳು ಅತ್ಯಂತ ಪರಿಪೂರ್ಣವಾಗಿದ್ದು, ಅವು ಇಂದಿಗೂ ಅನ್ವಯವಾಗುವಂತಿದೆ. [೬೫]

ಕೌಟಿಲ್ಯನು ಅಪರಾಧಗಳ ಪತ್ತೆಗೆ "ಕಂಟಶೋಧನ" ಎಂದು ಕರೆದನು. ಈತನ ಪ್ರಕಾರ ಕಂಠಕಗಳು ಪ್ರಧಾನವಾಗಿ ಎರಡು ವಿಧ. ಮೊದಲನೆಯದು ದೈವನಿರ್ಮಿತವಾದ ಪ್ರಕೃತಿ ವಿಕೋಪ, ಪಿಡುಗುಗಳು, ಪ್ರಾಣಿಗಳ ದಾಳಿಗಳು ಇತ್ಯಾದಿ, ಎರಡನೇಯದು ಮಾನವ ನಿರ್ಮಿತವಾದ ಕಳ್ಳತನ, ಅನೀತಿ, ದುರಾಚಾರ, ವ್ಯಬಿಚಾರ ಇತ್ಯಾದಿಗಳು. ಜೂಜುಕಟ್ಟೆಯಲ್ಲಿನಡೆಯುವ ದುರಾಚಾರಗಳ ಬಗ್ಗೆ 'ಸಭಿಕ'ನೆಂಬ ಅಧಿಕಾರಿಯು ಸಮಾಚಾರ ಒದಗಿಸುತ್ತಿದ್ದನು. ಸಂಬಳ

ಪಡೆದು ಸಮಾಚಾರ ಒದಗಿಸುವ 'ಸೂಚಕ'ನೂ (Paid informant) ತಾನಾಗಿಯೇ ರಹಸ್ಯವಾಗಿ ಬಂದು ಸಮಾಚಾರ ಒದಗಿಸುವ 'ಸ್ತೋಭಕ'ನೂ (Private informant) ಕೇಡಿಗಳ ಕುಹಕ ತಂತ್ರಗಳನ್ನು ಪತ್ತೆಹಚ್ಚುವಲ್ಲಿ ಸಹಾಯಕರಾಗಿದ್ದರು. ಸ್ತೋಭಕನಿಗೂ ಆಮೇಲೆ ನಿರ್ದಿಷ್ಟ ಪರಿಹಾರ ಕೊಡಲಾಗುತ್ತಿತ್ತು. ಚೋರೋದ್ಧರ್ತಾ, ಚೋರ್ತೋದ್ಧಕರಣಿಕ, ಚೋರರಜ್ಜುಕ, ಚೋರಗ್ರಾಹ, ದುಸ್ಸಾಧ್ಯವಾದ ಭಾರೀ ಕೇಡಿಗಳನ್ನು ಪತ್ತೆಮಾಡಿ ಹಿಡಿಯುವ ದೌ:ಸಾಧಸಾಧನಿಕ, ನಗರ ಪೊಲೀಸ್ ಮುಖ್ಯಾಧಿಕಾರಿಯಾದ ನಾಗರಿಕ, ಉಪವಾಸ ಮುಷ್ಕರ ಹೂಡುವವರ ಮೇಲೆ ಕಣ್ಣಿಡುವ ಪ್ರಾಯೋಪವೇಶಾಧಿಕೃತ, ಪೊಲೀಸ್ ಠಾಣೆ ಅಧಿಕಾರಿಯಾಗಿದ್ದ ಸ್ಥಾನಪಾಲ ಇವರೆಲ್ಲರೂ ಕಂಟಕಶೋಧನ ಇಲಾಖೆಯ ಅದಿಕಾರಿಗಳಾಗಿದ್ದರು. ಪ್ರಾದೇಷ್ಟ ಗೃಹಸಚಿವನ ಅಧಿಕಾರಿಗಳನ್ನೂ ಸಮಾಹರ್ತನು ಪೊಲೀಸ್ ಕಮಿಷನರ್ ಅಥವಾ ಹೋಮ್ ಕಮಿಷನರ್ ಅಧಿಕಾರಿಗಳನ್ನೂ ಅಂದು ಚಲಾಯಿಸುತ್ತಿದ್ದಂತೆ ಗ್ರಹಿಸಬಹುದಾಗಿದೆ. [೬೬]

ದಂಡ ದಂಡನೆಗಳ ಜೊತೆಗೆ, ನಷ್ಟಭರ್ತಿ ಮತ್ತು ಪರಿಹಾರ ವಿಧಿಸುತ್ತಿದ್ದ ಅಪರಾಧಗಳು 'ಅಪಚಾರ' ವರ್ಗಕ್ಕೆ ಸೇರಿದುದಾಗಿದ್ದು, ಕೌಟಿಲ್ಯನು ಅವುಗಳನ್ನು 'ಪ್ರಕೀರ್ಣ' (Miscellaneous or civil wrong) ವರ್ಗಕ್ಕೆ ಸೇರಿಸಿದ್ದಾನೆ. ಈ ಎಲ್ಲ ಅಪರಾಧಗಳ ಬಗ್ಗೆ ಸಮಾಜಸ್ವಾಸ್ಥ್ಯ, ಶಾಂತಿ ಸುವ್ಯವಸ್ಥೆಯ ದೃಷ್ಟಿಯಿಂದ ರಾಜನೇ (ಸರಕಾರವೇ) ಸ್ವತ: (Suo moto) ಕ್ರಮ ಕೈಗೊಳ್ಳಬೇಕಾಗಿತ್ತು.

ರಾಜನ ಕರ್ತವ್ಯಗಳನ್ನು ವಿವರಿಸುತ್ತಾ ಆತನ ಪ್ರಾಥಮಿಕ ಕರ್ತವ್ಯಗಳು 'ದುಷ್ಟ ಶಿಕ್ಷೆ ಮತ್ತು ಶಿಷ್ಟ ರಕ್ಷೆ' ಆಗಿದೆ ಎನ್ನುತ್ತಾನೆ. "ರಾಜನು ಪ್ರಜೆಗಳಿಗೆ ಶಿಕ್ಷೆ ವಿಧಿಸುವುದರಿಂದಲೂ, ಅವರಿಂದ ಸುಂಕ ಸಾರಿಗೆಗಳ ರೂಪದಲ್ಲಿ ಹಣವನ್ನು ತೆಗೆದುಕೊಳ್ಳುವುದರಿಂದಲೂ ಉಂಟಾದ ಪಾಪವು, ಪ್ರಜೆಗಳಿಗೆ ಕಳ್ಳಕಾಕರಿಂದ ಒದಗಲಿರುವ ಉಪದ್ರವಗಳನ್ನು ಪರಿಹರಿಸು ವುದರಿಂದ ನಿವಾರಿತವಾಗುವುದು. ರಾಜರು ಜನರ ಯೋಗಕ್ಷೇಮ ಸಾಧಕರು. ಆದ್ದರಿಂದಲೇ ಅರಣ್ಯವಾಸಿಗಳು ಕಾಳು ಕಾಳಾಗಿ ಆರಿಸಿ ತಂದ ಧಾನ್ಯಾದಿಗಳಿಂದಲೂ ಆರನೆಯ ಒಂದು ಭಾಗವನ್ನು ಸಹ "ಯಾವನು ನಮ್ಮನ್ನು ಕಾಪಾಡುತ್ತಿ ರುವನೋ ಅವನ ಭಾಗವಿದು" ಎಂದು ಕೊಡುವರು. ರಾಜರು ಪ್ರತ್ಯಕ್ಷವಾಗಿ ನಿಗ್ರಹಿಸಲಿಕ್ಕೂ, ಅನುಗ್ರಹಿಸಲಿಕ್ಕೂ ಸಮರ್ಥರು. ಆದ್ದರಿಂದಲೇ ಅವರನ್ನು ಇಂದ್ರ, ಯಮರಿಗೆ ಸಮಾನರೆನ್ನುವುದು. ಅವರನ್ನು ಅಪಮಾನಗೊಳಿಸುವವನ ಮೇಲೆ ದೇವರೂ
ದಂಡಎತ್ತುವನು. ಆದ ಕಾರಣ ಎಂದಿಗೂ ರಾಜನನ್ನು ಅಲ್ಲಗಳೆಯಬಾರದು ಅದನ್ನು ತಡೆಗಟ್ಟಬೇಕು".[೬೭] ಎಂದುಹೇಳಿದ್ದಾನೆ.

ಕರ್ನಾಟಕ ಪೊಲೀಸ್ ಕಾಯ್ದೆ ಕಲಂ: ೯೨ ರಲ್ಲಿ ಸಾರ್ವಜನಿಕ ಉಪದ್ರವಗಳು ಎಂಬ ಹಲವಾರು ಅಪರಾಧಗಳ ಬಗ್ಗೆ ವಿವರಿಸಲಾಗಿದೆ. ಇಂತಹದೇ ಸಾರ್ವಜನಿಕ ಉಪದ್ರವಗಳನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾಣಬಹುದಾಗಿತ್ತು. ಈ ಉಪದ್ರವಗಳಿಗೆ ಏನು ಶಿಕ್ಷೆ ? ಎಷ್ಟು ದಂಡ? ಎಂಬುದನ್ನು ವಿವರಿಸಲಾಗಿದೆ. ಪೊಲೀಸ್ ಕಾಯ್ದೆಯ ಈ ಕಲಂನಲ್ಲಿರುವ ಬಹುತೇಕ ಸಾರ್ವಜನಿಕ ಉಪದ್ರವದ ಅಪರಾಧಗಳನ್ನು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ವಿವರಿಸಿದ್ದಾನೆ. ರಸ್ತೆಗಳನ್ನು ಕೆಡಿಸುವವರಿಗೆ ದಂಡ, ರಸ್ತೆಗಳಲ್ಲಿ ಕಸ ಹಾಕುವವರಿಗೆ ಎಂಟನೆಯ ಒಂದು ಭಾಗ ಪಣವನ್ನು ದಂಡ ಹಾಕಬೇಕು. ಅಲ್ಲಿ ಕೆಸರನ್ನುಂಟುಮಾಡಿದವನಿಗೆ ನಾಲ್ಕನೆಯ ಒಂದು ಭಾಗ ಪಣವನ್ನು ದಂಡವೆಳೆಯಬೇಕು. ರಾಜಬೀದಿಯಲ್ಲಿ ಕೆಸರ ನ್ನುಂಟುಮಾಡಿದವರಿಗೂ, ಕಸ ಹಾಕಿದವರಿಗೂ ದ್ವಿಗುಣ ದಂಡವನ್ನು ವಿಧಿಸಬೇಕು. ರಾಜಮಾರ್ಗ, ಪುಣ್ಯಸ್ಥಳ, ಕೆರೆ, ದೇವಾಲಯ, ಅರಮನೆ, ಭಾಂಡಾಗಾರ ಮುಂತಾದೆಡೆಗಳಲ್ಲಿ, ಮಲವಿಸರ್ಜನೆ ಮಾಡಿದರೆ ಅವುಗಳಲ್ಲಿ ಒಂದಕ್ಕಿಂತ ಮತ್ತೊಂದಕ್ಕೆ ಕ್ರಮವಾಗಿ ಒಂದೊಂದು ಪಣ ಹೆಚ್ಚಿನ ದಂಡವನ್ನು ಹಾಕಬೇಕು, ರಸ್ತೆಯಲ್ಲಿ ಮೂತ್ರಗೈದರೆ ಅರ್ಧಪಣವನ್ನು

ಉತ್ತರೋತ್ತರ ಹೆಚ್ಚಿಸಿ ದಂಡ ವಿಧಿಸಬೇಕು ಎಂದಿದ್ದಾನೆ. [೧೮]

ಸತ್ತಬೆಕ್ಕು, ನಾಯಿ, ಮುಂಗುಸಿ, ಹಾವು ಮುಂತಾದವನ್ನು ಪಟ್ಟಣದೊಳಗಡೆ ಎಸೆದರೆ ಮೂರು ಪಣ ದಂಡವನ್ನೆಳೆಯಬೇಕು. ಕತ್ತೆ, ಒಂಟೆ, ಹೇಸರುಗತ್ತೆ, ಕುದುರೆ ಮತ್ತು ಇತರ ಪ್ರಾಣಿಗಳ ದೇಹವನ್ನು ಹಾಕಿದರೆ ಆರು ಪಣ ದಂಡವನ್ನು ವಿಧಿಸಬೇಕು. ಮನುಷ್ಯನ ದೇಹವನ್ನೆಸೆದರೆ ಐವತ್ತು ಪಣ ದಂಡವನ್ನೆಳೆಯಬೇಕು. ಪ್ರಸಿದ್ಧವಾದ ಮಾರ್ಗವನ್ನುಳಿದು ಬೇರೆಯ ಮಾರ್ಗಗಳಲ್ಲಿ ಹೆಣವನ್ನೊಯ್ದರೆ ಪೂರ್ವಸಾಹಸ ದಂಡವನ್ನು ಹಾಕಬೇಕು. ಅದನ್ನು ನಿವಾರಿಸದ ದ್ವಾರಪಾಲಕರಿಗೆ ಇನ್ನೂರು ಪಣ ದಂಡವನ್ನಿಕ್ಕಬೇಕು. ಸ್ಮಶಾನವನ್ನುಳಿದು ಇತರೆಡೆಗಳಲ್ಲಿ ಹೆಣಗಳನ್ನು ಹೂಳಿದರೆ ಅಥವಾ ಸುಟ್ಟರೆ ಹನ್ನೆರಡು ಪಣ ದಂಡವನ್ನು ವಿಧಿಸಬೇಕು.[೧೯] ಎಂದಿದ್ದಾನೆ. ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೧೦೯ ರಲ್ಲಿ ರಾತ್ರಿ ವೇಳೆ ಕಾರಣವಿಲ್ಲದೇ ಅನುಮಾನಾಸ್ಪದವಾಗಿ ತಿರುಗುವ ವ್ಯಕ್ತಿಗಳನ್ನು ಹಿಡಿದು, ಅವರನ್ನು ವಿಚಾರಿಸಿ ಅವರಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಳ್ಳಬೇಕೆಂದು ತಿಳಿಸುತ್ತದೆ. ಈ ಬಗ್ಗೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಅಂದೇ ವಿವರಿಸಿದ್ದಾನೆ.

ಸಂಚಾರವನ್ನು ತಡೆಗಟ್ಟಲಿಕ್ಕಾಗಿ ವಾದ್ಯಗಳನ್ನು ಮೊದಲನೆಯ ಮತ್ತು ಕೊನೆಯ ಯಾಮಗಳಲ್ಲಿ ಭಾರಿಸಬೇಕು. ಅಂದರೆ ಮೊದಲನೆಯ ಯಾಮದಲ್ಲಿ ಆರು ಘಳಿಗೆಗಳು ಕಳೆದ ನಂತರವೂ, ಕಡೆಯ ಯಾಮದಲ್ಲಿ ಆರು ಘಳಿಗೆಗಳಿರುವಾಗಲೂ ವಾದ್ಯವನ್ನು ಭಾರಿಸಬೇಕು. ಮೊದಲನೆಯ ಮತ್ತು ಕೊನೆಯ ಯಾಮಗಳ ಅಂತ್ಯದಲ್ಲಿ ರಾಜಗೃಹದ ಸಮೀಪದಲ್ಲಿ ಸಂಚರಿಸುತ್ತಿರುವವರಿಗೆ ಒಂದೂ ಕಾಲು ಪಣವನ್ನು, ಅಕಾಲ ಸಂಚಾರಕ್ಕಾಗಿ ದಂಡ ಹಾಕಬೇಕು. ಎರಡು ಮೂರನೆಯ ಯಾಮಗಳಲ್ಲಿ ಸಂಚರಿಸಿದವರಿಗೆ ದ್ವಿಗುಣವಾಗಿ ದಂಡ ಹಾಕಬೇಕು. ನಗರದ ಬಹಿರ್ಭಾಗದಲ್ಲಿ ಸಂಚರಿಸುವವರಿಗೆ ನಾಲ್ಕರಷ್ಟು ದಂಡವನ್ನು ವಿಧಿಸಬೇಕು. ಸಂಶಯಿತನನ್ನು, ಸಂದೇಹಕ್ಕೆಡೆಗೊಡುವ ಜಾಗಗಳಲ್ಲಿ ಅಡಗಿರುವವನನ್ನು, ಹಿಂದೊಮ್ಮೆ ಕಳ್ಳತನ ಮಾಡಿ ಪ್ರಸಿದ್ಧಿಗೊಂಡವನನ್ನು ಸೆರೆಹಿಡಿದು ನೀನು ಯಾರು? ಎಲ್ಲಿಂದ ಬಂದೆ? ಏತಕ್ಕಾಗಿ ಬಂದೆ? ಯಾರಿಗೆ ಸಂಬಂಧಿ? ಎಂದು ಪ್ರಶ್ನಿಸಬೇಕು. ರಾಜನ ಉದ್ಯಾನವನ್ನು ಪ್ರವೇಶಿದವನಿಗೂ, ರಕ್ಷಣೀಯವಾದ ಕೋಟೆ ಕೊತ್ತಲುಗಳನ್ನು ಹತ್ತಿದವನಿಗೂ, ಮಧ್ಯಮಸಾಹಸ ದಂಡವನ್ನು ವಿಧಿಸಬೇಕು. ಪ್ರಸವ ಕಾಲದಲ್ಲೇ ನೆರವು ಕೊಡಲಿಕ್ಕಾಗಿಯೂ, ರೋಗಿಗಳಿಗೆ ಚಿಕಿತ್ಸೆ ನಡೆಸಲಿಕ್ಕಾಗಿಯೂ, ಹೆಣಗಳನ್ನು ಹೊರಲಿಕ್ಕಾಗಿಯೂ, ತೂರ್ಯಧ್ವನಿಯ ಕಾರಣಗಳನ್ನರಿಯಲಿಕ್ಕಾಗಿಯೂ, ರಾಜಾನುಜ್ಞಾತವಾದ ನಾಟಕಾದಿಗಳನ್ನು ನೋಡಲಿಕ್ಕಾಗಿಯೂ, ನಗರಾಧಿಕಾರಿಯನ್ನು ಕಾಣಲಿಕ್ಕಾಗಿಯೂ, ಅಗ್ನಿ ಭಯವನ್ನು ತಪ್ಪಿಸಲಿಕ್ಕಾಗಿಯೂ, ರಾತ್ರಿಯಲ್ಲಿ ಸಂಚರಿಸಿದವರಿಗೆ ಅಕಾಲ ಪ್ರಯುಕ್ತವಾದ ದಂಡವನ್ನೆಳೆಯಕೂಡದು. ದೀಪದೊಡನೆ ಸಂಚರಿಸುತ್ತಿರುವವರಿಗೂ, ಮಂತ್ರಿ ನಗರಾಧ್ಯಕ್ಷರೇ ಮುಂತಾದವರ ಮುದ್ರೆಗಳನ್ನು ಪಡೆದವರಿಗೂ ದಂಡ ವಿಧಿಸಕೂಡದು. ಎಲ್ಲರ ಸಂಚಾರಕ್ಕೆ ಅನುಮತಿಯಿರುವ ರಾತ್ರಿಗಳಲ್ಲಿ (ಚಾರರಾತ್ರಿಷು) ಗುರುತುಪತ್ತೆ ಹತ್ತದಿರುವುದಕ್ಕೋಸ್ಕರ ವಿಪರೀತ ವೇಷಗಳನ್ನು ಧರಿಸಿಕೊಂಡು ಸಂಚರಿಸುತ್ತಿರುವ ಜನರಿಗೂ, ಸನ್ಯಾಸಿಗಳಿಗೂ, ಶಸ್ತ್ರಧಾರಿಗಳಾದ ಜನರಿಗೂ ದೋಷಾನುಸಾರ ದಂಡ ವಿಧಿಸಬೇಕು.[೨೦] ಎನ್ನುತ್ತಾನೆ.

ಪ್ರಾಚೀನ ಗ್ರಂಥಗಳಲ್ಲಿ ಕಾರಾಗೃಹಗಳಿಗೆ 'ಬಂಧನಾಗಾರಂ' ಎಂಬ ಪ್ರಯೋಗ ರೂಢಿಯಲ್ಲಿರುವುದು ಕಂಡುಬರುತ್ತದೆ. ಕೌಟಿಲ್ಯನು (ವಿಭಕ್ತ ಸ್ತ್ರೀಪುರುಷಸ್ಥಾನಮುಪಸಾರತ: ಸುಗುಪ್ತ ಕಕ್ಷ್ಯಂ ಬಂಧನಾಗಾರಂ ಕಾರಯೇತ್') ಸ್ತ್ರೀ ಹಾಗೂ ಪುರುಷರಿಗೆ ಪ್ರತ್ಯೇಕವಾಗಿರುವ ಮತ್ತು ಬಲವಾದ ಕಾವಲಿರುವ ಬಂದೀಖಾನೆಗಳು ರಾಜಧಾನಿಯಲ್ಲಿರಬೇಕು ಎಂದು ಹೇಳುತ್ತಾನೆ.[೨೧] 'ಬಂಧನಾಗಾರವು ರಾಜಬೀದಿಯಲ್ಲಿರಬೇಕು. ಏಕೆಂದರೆ ಅಪರಾಧಿಗಳು ಇಲ್ಲಿ ಪಡುವ ಯಾತನೆ ಮತ್ತು ಅವರ ದು:ಸ್ಥಿತಿಗಳನ್ನು ಕಂಡು ಇತರರು ಪಾಠ ಕಲಿಯಲಿ' ಎಂದು ಮನು ಹೇಳುತ್ತಾನೆ. ಮೌರ್ಯ ಚಕ್ರವರ್ತಿ ಅಶೋಕನು ಕಳಿಂಗ ಯುದ್ಧಕ್ಕಿಂತ ಮುಂಚೆ ಅತಿಕ್ರೂರ ಪ್ರವೃತ್ತಿಯವನಾಗಿದ್ದನು. ಅಶೋಕನು ನರಕಸದೃಶವಾದ ಬಂಧನಾ

ಗಾರಗಳನ್ನು ಕಟ್ಟಿಸಿದ್ದನೆಂದು ಬೌದ್ಧ ಯಾತ್ರಿಕ ಹುಯೆನ್‌ತ್ಸಾಂಗ್ ತಿಳಿಸುತ್ತಾನೆ. ಇಂದಿಗೂ ಸಹ ಸ್ವಾತಂತ್ರ್ಯ ದಿನಾಚರಣೆ ಅಥವಾ ಗಣರಾಜ್ಯೋತ್ಸವದಂದು ಸೆರೆಮನೆಯಲ್ಲಿ ಶಿಕ್ಷೆ ಅನುಭವಿ ಸುತ್ತಿರುವ ಸನ್ನಡತೆಯಲ್ಲಿರುವ ಖೈದಿಗಳನ್ನು ಸರಕಾರವು ಮಾನವೀಯ ನೆಲೆಯಲ್ಲಿ ಬಿಡುಗಡೆ ಮಾಡುವ ಪದ್ಧತಿ ಇದೆ. ಆದರೆ ಇದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೇ ಕಂಡುಬರುತ್ತದೆ. ಬಂಧನಾಗಾರದಲ್ಲಿರುವ ಹುಡುಗರನ್ನೂ, ಮುದುಕರನ್ನೂ, ರೋಗಿಗಳನ್ನೂ, ಅನಾಥರನ್ನೂ ರಾಜನ ಜನ್ಮ ನಕ್ಷತ್ರದ ದಿನಗಳಲ್ಲಿಯೂ, ಹುಣ್ಣಿಮೆಗಳಲ್ಲಿಯೂ ಬಿಡಬೇಕು. ತಮ್ಮ ದುರಾದೃಷ್ಟದ ಪರಿಣಾಮವಾಗಿ ನಡತೆ ತಪ್ಪಿ ಸೆರೆಮನೆ ಸೇರಿದ ಧಾರ್ಮಿಕರು ಮುಂದೆ ಇಂಥ ಕಾರ್ಯಗಳನ್ನು ಕೈಕೊಳ್ಳುವು ದಿಲ್ಲವೆಂದು ಪ್ರತಿಜ್ಞೆ ಮಾಡಿ ಹೊಣೆಗಾರನನ್ನಿತ್ತು ದೋಷಾನುರೂಪವಾಗಿ ದಂಡವನ್ನು ಕೊಟ್ಟು ಮುಕ್ತರಾಗಬಹುದು ಎನ್ನುತ್ತಾನೆ. "ಖೈದಿಗಳು ಮಾಡಿದ ಕಾರ್ಯಗಳ ಮಟ್ಟವನ್ನಾಗಲೀ, ನಡೆದ ಕಾಯಿಕ ಶಿಕ್ಷೆಯ ಫಲವಾಗಿ ಅವರಲ್ಲುಂಟಾದ ಕಾರ್ಯಕಾರಣ ಸಾಮರ್ಥ್ಯವನ್ನಾಗಲೀ ಅಪರಾಧಕ್ಕೆ ಅನುಗುಣವಾಗಿ ಚಿನ್ನದ ರೂಪದಲ್ಲಿ ಪಡೆದ ದಂಡವನ್ನಾಗಲೀ ಗಮನಕ್ಕೆ ತಂದುಕೊಂಡು ದಿನಕ್ಕೊಮ್ಮೆಯೋ, ಐದು ದಿನಕ್ಕೊಮ್ಮೆಯೋ ಬಂಧನಾಗಾರದಿಂದ ಅವರನ್ನು ಬಿಟ್ಟುಬಿಡಬೇಕು"[೨೨] ಎಂದಿದ್ದಾನೆ. ಹೊಸ ದೇಶವೊಂದನ್ನು ಗೆದ್ದಾಗಲೂ, ರಾಜ ಪುತ್ರನಿಗೆ ಯುವರಾಜ ಪಟ್ಟವನ್ನು ಕಟ್ಟಿದಾಗಲೂ, ರಾಜನಿಗೆ ಗಂಡು ಮಕ್ಕಳು ಹುಟ್ಟಿದಾಗಲೂ ಸೆರೆಮನೆಯಿಂದ ಖೈದಿಗಳನ್ನು ಬಿಡಬೇಕು.[೨೩] ಅಶೋಕನ ಅನೇಕ ಶಿಲಾಶಾಸನಗಳಲ್ಲಿ ಈ ರೀತಿ ಬಂದಿಗಳನ್ನು ಬಿಡುಗಡೆ ಮಾಡಿದ ಉಲ್ಲೇಖಗಳಿವೆ. ದೆಹಲಿ ತೋಪ್ರದ ೫ ನೇ ಸ್ತಂಭ ಶಾಸನದಲ್ಲಿ ತಾನು ೨೬ ವರ್ಷಗಳಲ್ಲಿ ೨೫ ಸಲ ಬಂದಿಗಳಿಗೆ ಈ ವಿಶೇಷ ಅವಕಾಶ ನೀಡಿರುವುದಾಗಿ ಅಶೋಕನು ತಿಳಿಸುತ್ತಾನೆ.[೨೪]

ಕೌಟಿಲ್ಯನು 'ನಾಗರಿಕ'ನ ಕರ್ತವ್ಯಗಳನ್ನು ವಿವರಿಸಿದ್ದಾನೆ. ಕರ್ನಾಟಕ ಪೊಲೀಸ್ ಕಲಂ ೨೩, ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವ ಬಗ್ಗೆ ವಿವರಿಸುತ್ತದೆ. ಆದರೆ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಇದರ ಬಗ್ಗೆ ಅಂದೇ ವಿವರಿಸಿದ್ದಾನೆ. ಆಡಳಿತ ನಡೆಸುವ ಅಧಿಕಾರಿಗಳು ತಪ್ಪಿ ನಡೆದರೆ ಅವರನ್ನು ಶಿಕ್ಷಿಸಿ ತಿದ್ದುವ ಕೆಲಸವನ್ನು ಇಲ್ಲಿ ಕಾಣ ಬಹುದಾಗಿದೆ. ತಡೆಯಬಾರದವನನ್ನು ತಡೆಯುವುದು, ತಡೆಯಲು ಯೋಗ್ಯನಾದವನನ್ನು ತಡೆಯದಿರುವುದು, ಇವನ್ನು ನಡೆಸುವ ರಕ್ಷಜನರಿಗೆ ಅಕಾಲ ಸಂಚಾರಕ್ಕೆ ವಿಧಿಸುವ ದಂಡದೆರಡರಷ್ಟನ್ನು ದಂಡ ವಿಧಿಸಬೇಕು. ಬಲೋದ್ಧಂದಿಯಿಂದ ದಾಸಿಯನ್ನು ಪ್ರವೇಶಿಸಿದವನಿಗೆ ಪೂರ್ವಸಾಹಸ ದಂಡವನ್ನೂ, ಗಣಿಕೆಯನ್ನು ಪ್ರವೇಶಿಸಿದವನಿಗೆ ಮಧ್ಯಮಸಾಹಸ ದಂಡವನ್ನು ವಿಧಿಸಬೇಕು. ಸೆರೆಸಿಕ್ಕಿದ ದಾಸಿಯನ್ನಾಗಲೀ, ಆ ದಾಸಿಯನ್ನಾಗಲೀ ಬಲತ್ಕರಿಸಿ ಪ್ರವೇಶಿಸಿದವನಿಗೆ ಉತ್ತಮ ಸಾಹಸದಂಡವನ್ನು, ಕುಲಸ್ತ್ರೀಯನ್ನು ಪ್ರವೇಶಿಸಿದವನಿಗೆ ವಧೆಯನ್ನು ವಿಧಿಸಬೇಕು ಎನ್ನುತ್ತಾನೆ.[೨೫]

ಅಂದಿನ ಪೊಲೀಸ್ ಅಧಿಕಾರಿಯಾಗಿದ್ದ ನಾಗರಿಕನ ಕರ್ತವ್ಯಗಳನ್ನು ಕೌಟಿಲ್ಯನು ವಿವರಿಸಿದ್ದಾನೆ. ಪ್ರಾಮಾಣಿಕೃತವೂ, ಅಪ್ರಾಣಿಕೃತವೂ ಎನಿಸಿದ ರಾತ್ರಿದೋಷಗಳನ್ನು ನಿವೇದಿಸದ 'ನಾಗರಿಕ'ನಿಗೆ ದೋಷಾನುಸಾರ ದಂಡವೆಳೆಯಬೇಕು. ಮದ್ಯ ಪಾನದ ಫಲವಾಗಿ ರಕ್ಷಕ ಪುರುಷರು ರಕ್ಷಾವ್ಯಾಪಾರವನ್ನು ಸಡಿಲಗೊಳಿಸಿದ್ದರೆ ದೋಷಾನುಸಾರವಾಗಿ ದಂಡ ಹಾಕಬೇಕು. ನಗರದ ಮುಖ್ಯಾಧಿಕಾರಿಯು ಜಲಾಶಯ (ಉದಕಸ್ಥಾನ) ಕ್ಕೆ ಹೋಗಿಬರುವ ಹಾದಿ, ಸುರಂಗಮಾರ್ಗ, ಕೋಟೆಯ ಬಳಿ ಯಿರುವ ಮಣ್ಣಿನ ದಿಣ್ಣೆ, ಕೋಟೆಕೊತ್ತಲು, ಮತ್ತು ಅಗಳ್ತೆಗಳನ್ನು ಪ್ರತಿದಿನವೂ ಪರೀಕ್ಷಿಸುತ್ತಿರಬೇಕು. ಅಜಾಗರೂಕತೆ ವಿಸ್ಮೃತಿಗಳ ಪರಿಣಾಮವಾಗಿ ಕೈತಪ್ಪಿದ ಪದಾರ್ಥಗಳನ್ನೂ, ತಾವಾಗಿಯೇ ತಪ್ಪಿಸಿಕೊಂಡು ಹೋದ ಪಶುಪ್ರಾಣಿಗಳನ್ನೂ ಮಾಲಿಕನಿಂಥವನೆಂದು ಪತ್ತೆಯಾಗುವವರೆಗೂ ರಕ್ಷಿಸಬೇಕು[೨೬] ಎಂದಿದ್ದಾನೆ.

ಮೌರ್ಯರ ಕಾಲದ ಸಂಪೂರ್ಣ ರಾಜ್ಯದ ಆಡಳಿತ ವ್ಯವಸ್ಥೆಯು 'ಕೌಟಿಲ್ಯನ ಅರ್ಥಶಾಸ್ತ್ರ'ದ ಆಧಾರದ ಮೇಲೆಯೇ ನಡೆಯುತ್ತಿತ್ತು. ಕೌಟಿಲ್ಯನ ಅರ್ಥಶಾಸ್ತ್ರವು ನಿಜವಾಗಿಯೂ ಅದೊಂದು ರಾಜ್ಯಶಾಸ್ತ್ರವಾಗಿದೆ. ರಾಜನಾದವ

ನೊಬ್ಬನು ಹೇಗೆ ಆಡಳಿತ ನಡೆಸಬೇಕೆಂದು ಸಂಪೂರ್ಣ ವಿವರಗಳನ್ನು ಆತನು ನೀಡಿದ್ದಾನೆ. ರಾಜನು ಪಾಲಿಸ ಬೇಕಾದ ರಾಜನೀತಿ ಮತ್ತು ಆಡಳಿತ ಕ್ರಮಗಳ ಬಗ್ಗೆ ನಮಗೆ ಸಿಗುವ ಅತ್ಯಂತ ಪ್ರಾಚೀನಗ್ರಂಥಗಳೆಂದರೆ, 'ಮನುಸ್ಮೃತಿ' ಮತ್ತು 'ಕೌಟಿಲ್ಯನ ಅರ್ಥಶಾಸ್ತ್ರ'ಗಳು ಇದರಲ್ಲಿರುವ ಪೊಲೀಸ್ ವ್ಯವಸ್ಥೆ ಮತ್ತು ಆಂತರಿಕ ರಕ್ಷಣೆಯ ವಿಚಾರಗಳೇ ಒಂದೊಂದು ಅಧ್ಯಯನದ ವಸ್ತುವಾಗಬಲ್ಲವು. ಆದರೆ ಈ ಇಬ್ಬರೂ ವ್ಯಕ್ತಿಗಳು ಕರ್ನಾಟಕದವರಲ್ಲ. ಆದರೆ ಭಾರತವನ್ನಾಳಿದ ಬಹುತೇಕ ಹಿಂದೂ ಅರಸರುಗಳು ಈ ಎರಡೂ ಕೃತಿಗಳಲ್ಲಿನ ರಾಜನೀತಿಗಳನ್ನೇ ಪಾಲಿಸಿಕೊಂಡು ಬಂದರು. ಅಷ್ಟೇ ಏಕೆ ಈಗಾಗಲೇ ಚರ್ಚಿಸಿರುವಂತೆ ನಮ್ಮ ಆಧುನಿಕ ಕಾಲದ ಕಾನೂನುಗಳಲ್ಲಿಯ ಅನೇಕ ಅಂಶಗಳನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾಣಬಹುದು. ಹಾಗಾಗಿ ಈ ಎರಡೂ ಗ್ರಂಥಗಳಲ್ಲಿರುವ ಪೊಲೀಸ್ ವ್ಯವಸ್ಥೆಯ ಬಗ್ಗೆ ಸೂಕ್ಷ್ಮವಾಗಿಯಾದರೂ ತಿಳಿಯುವುದು ಈ ಅಧ್ಯಯನಕ್ಕೆ ಪೂರಕವೆಂದು ಭಾವಿಸಿ ಈ ವಿಷಯಗಳ ಸಂಗ್ರಹ ಮಾಡಿದ್ದೇನೆ.

೨.೮– ಮೌರ್ಯರ ಕಾಲದಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆ

ಮೌರ್ಯರಿಗಿಂತ ಪೂರ್ವ ಕಾಲದಲ್ಲಿ ಭಾರತ ದೇಶದಲ್ಲಿ ರಾಜ್ಯಾಡಳಿತದ ಪ್ರಮುಖ ಲಕ್ಷಣವೇನೆಂದರೆ, ರಾಜ್ಯದ ಸರಹದ್ದಿನೊಳಗೆ ಶಾಂತಿ ಕಾಪಾಡುವ ಪೂರ್ಣ ಜವಾಬ್ದಾರಿಯು ರಾಜನ ಪ್ರಭುತ್ವಕ್ಕೆ ಸೇರಿತ್ತು. ರಾಜನ ಶ್ರೇಷ್ಠ ನ್ಯಾಯತೀರ್ಮಾನ ಈ ಶಾಂತಿಯನ್ನು ಕಾಪಾಡುತ್ತಿತ್ತು. ಧರ್ಮಸೂತ್ರ ಮತ್ತು ಅರ್ಥಶಾಸ್ತ್ರ ಗಳೆರಡೂ ರಾಜ ಹಾಗೂ ಆತನ ಅಧಿಕಾರಿಗಳಿಗೆ ಗ್ರಾಮೀಣ ಹಾಗೂ ಪಟ್ಟಣಗಳೆರಡರಲ್ಲೂ ಆಡಳಿತ ನಡೆಸಲು ಮಾರ್ಗದರ್ಶನ ನೀಡಿದ್ದವು. ಇದು ಕೌಟಿಲ್ಯನ ಕಲ್ಪನೆಗಳಿಗೆ ಅನುಗುಣವಾಗಿತ್ತು. ರಾಜನ ಪ್ರಮುಖ ಅಧಿಕಾರಿಗಳು ಆತನ ಅಧೀನ ಅಧಿಕಾರಿಗಳು ರಾಜ್ಯದ ಒಳಗೆ ಮತ್ತು ಗಡಿ ಪ್ರದೇಶಗಳಲ್ಲಿ ಪ್ರಯಾಣಿಕರಿಗೆ ರಕ್ಷಣೆ ನೀಡುತ್ತಿದ್ದರು. 'ಜಾತಕ' ಕಥೆಗಳಲ್ಲಿ ಕೆಲವು ದರೋಡೆಕೋರರು ಕಳ್ಳತನ ಮಾಡಿ, ಪದೇ ಪದೇ ದಸ್ತಗಿರಿಯಾದ ಬಗ್ಗೆ ವಿವರಗಳಿವೆ. ಆದರೆ ಪೊಲೀಸ್ ವ್ಯವಸ್ಥೆ ಪೂರ್ಣವಾಗಿ ಬೆಳೆದಿದ್ದು 'ಕೌಟಿಲ್ಯ'ನ ಅರ್ಥಶಾಸ್ತ್ರದಲ್ಲಿ.

ಮೌರ್ಯರ ಕಾಲದ ಆಡಳಿತ ವ್ಯವಸ್ಥೆಯು ಬಹುತೇಕ ಕೌಟಿಲ್ಯನ ಅರ್ಥಶಾಸ್ತ್ರವನ್ನು ಅವಲಂಬಿಸಿತು. ಅಶೋಕನ ಶಾಸನಗಳು ಕರ್ನಾಟಕದಲ್ಲಿ ಕಂಡು ಬಂದಿವೆ. ಮೌರ್ಯರ ಆಡಳಿತವನ್ನು ಈ ಪ್ರದೇಶದಲ್ಲಿಯೂ ರೂಢಿಸಲಾಯಿತೆಂದು ಭಾವಿಸಬಹುದು. ಸಿದ್ದಾಪುರದ ಬಳಿಯ 'ಇಸಿಲ'ವು ಮೌರ್ಯ ಚಕ್ರಾಧಿಪತ್ಯದ 'ಉಕ್ಕಡ' (Out post) ವಾಗಿತ್ತೆಂದು ಇಲ್ಲಿ ತಿಳಿಸಬೇಕಾಗಿದೆ. 'ಉಕ್ಕಡ' ಎಂಬ ಶಬ್ದವು ಇಂದಿಗೂ ಸಹ ಚಾಲ್ತಿಯಲ್ಲಿದ್ದು, ಪೊಲೀಸ್ ಉಪಠಾಣೆಗಳಿಗೆ ಈ ಶಬ್ದವನ್ನು ಬಳಸಲಾಗುತ್ತದೆ. ಪೊಲೀಸ್ ಠಾಣೆಗಳನ್ನು ನಿರ್ಮಿಸಲು ಅವಶ್ಯಕತೆಗಳು ಇಲ್ಲದ ಸ್ಥಳದಲ್ಲಿ ಈ ಉಕ್ಕಡಗಳನ್ನು ನಿರ್ಮಿಸಲಾಗುತ್ತಿದೆ. ಮೌರ್ಯ ಚಕ್ರಾಧಿಪತ್ಯದ ನೇರ ಅಧೀನಕ್ಕೆ ಕರ್ನಾಟಕವು ಒಳಪಡದಿದ್ದರೂ ಸಹ ಚಂದ್ರಗುಪ್ತನ ಮೌರ್ಯನ ಕೊನೆಯ ಕಾಲವು ಶ್ರವಣಬೆಳಗೊಳದಲ್ಲಿ ನಡೆದಿತ್ತು. ಕರ್ನಾಟಕದ ಇಸಿಲವು ಅವರ ಒಂದು ಉಕ್ಕಡವಾಗಿತ್ತು ಎಂದರೆ ಬಹುಶ: ಇದೊಂದು ಸೇನೆಯ ಅಥವಾ ಪೊಲೀಸ್ ವ್ಯವಸ್ಥೆಯ ಔಟ್‌ಪೋಸ್ಟ್ ಆಗಿದ್ದಿರಬೇಕು ಎಂದೆನಿಸುತ್ತದೆ.

ಮೌರ್ಯರ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಸುವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಕಾಲಾನಂತರದಲ್ಲಿ ಪೊಲೀಸರ ಜವಾಬ್ದಾರಿಗಳು ಬೇರೆ ಬೇರೆ ಸರಕಾರಿ ಅಂಗಗಳೊಂದಿಗೆ ಹಂಚಿಹೋದವು. ಕಾನೂನನ್ನು ಜಾರಿಗೊಳಿಸುವ ಅತ್ಯಂತ ಸಮರ್ಥವಾದ ಅಂಗವೊಂದರ ಅಗತ್ಯತೆಗಳು ಕಂಡು ಬಂದವು. ತಪ್ಪಿತಸ್ಥ ಆರೋಪಿ ಗಳನ್ನು ನ್ಯಾಯದೇವತೆಯ ಮುಂದೆ ಹಾಜರುಪಡಿಸುವ ಅನಿವಾರ್ಯತೆ ಕಂಡುಬಂತು. ದೇಶದ ಆಂತರಿಕ ಭದ್ರತೆಯ ಮುಖಾಂತರ ನೈತಿಕತೆ ಮತ್ತು ತಾತ್ವಿಕತೆಗಳು ಇರುವಂತಹ ಜನಾಂಗವನ್ನು ಕಾಪಾಡಿಕೊಳ್ಳುವುದು ರಾಜನ ಅಗತ್ಯತೆಗಳಲ್ಲಿ ಒಂದಾಗಿತ್ತು. ಈ ಕಾರಣಗಳಿಗಾಗಿ ಪ್ರಾಚೀನ ಕಾಲದ ಹಳ್ಳಿ ಮತ್ತು ನಗರಗಳಲ್ಲಿ ಪೊಲೀಸ್ ವ್ಯವಸ್ಥೆ ಹಂತ

ಹಂತವಾಗಿ ಬೆಳೆಯುತ್ತಾ ಬಂದು ಮುಂದೆ ಆಳಿದ ಹಿಂದೂ ಅರಸರ ಕಾಲದಲ್ಲಿ ಈ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲಾಯಿತು.

ಸ್ತ್ರೀಯರು ಚಕ್ರವರ್ತಿಯ ಅಂಗರಕ್ಷಕರಾಗಿ ಅರಮನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂಬುದನ್ನು ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಗ್ರೀಕ್ ರಾಯಭಾರಿ ಮೆಗಸ್ಥನೀಸ್ ಹೇಳುತ್ತಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಸ್ತ್ರೀಯರ ಬಗ್ಗೆ ಹೇಳುತ್ತಾನೆ. ಬಿಲ್ಲು ಬಾಣಗಳನ್ನು ಹಿಡಿದ ಮಹಿಳಾ ಯೋಧರು ಇದ್ದ ಬಗ್ಗೆ ಉಲ್ಲೇಖಗಳಿವೆ.[೭೭] ಇದೊಂದು ಅತ್ಯಂತ ಮುಖ್ಯ ವಿಷಯವಾಗಿದ್ದು, ಕರ್ನಾಟಕದಲ್ಲಿ ಆಳಿದ ಅರಸರುಗಳ ಆಡಳಿತದಲ್ಲಿ ಮಹಿಳಾ ಅಂಗರಕ್ಷಕರು ಇರುವುದನ್ನು ಪ್ರಪ್ರಥಮವಾಗಿ ವಿಜಯನಗರ ಕಾಲದಲ್ಲಿ ಗುರುತಿಸಲಾಗಿದೆ. ಆದರೆ ಕರ್ನಾಟಕದಲ್ಲಿ ನೇರ ಆಡಳಿತವಿಲ್ಲದಿದ್ದರೂ ಕೆಲವು ಪ್ರಭಾವ ಹೊಂದಿದ್ದ ಮೌರ್ಯರ ಕಾಲದಲ್ಲಿ ಮಹಿಳಾ ಅಂಗರಕ್ಷಕರು ಇದ್ದರು ಎಂಬುದು ಭಾರತದ ಪೊಲೀಸ್ ಪಡೆಯ ಪ್ರಾಚೀನತೆಯನ್ನು ಎತ್ತಿ ತೋರಿಸುತ್ತದೆ.

ಗೂಢಚಾರ ವ್ಯವಸ್ಥೆ : ಮೌರ್ಯರ ಆಡಳಿತದ ವ್ಯವಸ್ಥೆಯಲ್ಲಿ ಗೂಢಚಾರ ವ್ಯವಸ್ಥೆಗೆ ಸೈನ್ಯದ ನಂತರದ ಸ್ಥಾನ ನೀಡಲಾಗಿತ್ತು. ಗೂಢಚಾರ ಇಲಾಖೆ ಎಂಬ ಪ್ರತ್ಯೇಕ ಇಲಾಖೆಯೇ ಇದ್ದಿತು. ಗ್ರೀಕ್ ಬರಹಗಾರರ ಪ್ರಕಾರ ಗೂಢಚಾರರು ಸಾಮ್ರಾಜ್ಯದ ಎಲ್ಲ ಕಡೆಯಲ್ಲೂ ವ್ಯಾಪಿಸಿದ್ದು ಜನ ಸಾಮಾನ್ಯರಿಂದ ಹಿಡಿದು ಸರ್ಕಾರಿ ಅಧಿಕಾರಿಗಳವರೆಗಿನ ದಿನನಿತ್ಯದ ಘಟನೆಗಳನ್ನು ರಾಜನಿಗೆ ವರದಿ ಒಪ್ಪಿಸುತ್ತಿದ್ದರು. ಸ್ತ್ರೀ ಗೂಢಚಾರರನ್ನು ನೇಮಿಸಲಾಗುತ್ತಿತ್ತು. ಗೂಢಚಾರರನ್ನು ವಿದೇಶಗಳಿಗೂ ಕಳುಹಿಸಿ ಅಲ್ಲಿನ ವಿದ್ಯಮಾನಗಳನ್ನು ತಿಳಿಯಲಾಗುತ್ತಿತ್ತು. ಕೌಟಿಲ್ಯನು ಗೂಢಚಾರರನ್ನು 'ಗುದಪುರಷ' ರೆಂದು ಕರೆದು ಈ ಕೆಲಸಕ್ಕೆ ವಾರಾಂಗನೆಯರನ್ನು, ತಲೆಹಿಡುಕರನ್ನು ಸನ್ಯಾಸಿಗಳನ್ನು, ವಿಷಕನ್ಯೆಯರನ್ನು ಹಾವಾಡಿಗರನ್ನು ನೇಮಿಸಲಾಗುತ್ತಿತ್ತೆಂದು ತಿಳಿಸಿದ್ದಾನೆ. ಈ ಗೂಢಚಾರರರು ಮಂತ್ರಿಗಳ ಕರ್ತವ್ಯನಿಷ್ಠೆ, ಆಸ್ಥಾನದ ಒಳಸಂಚು, ಪ್ರಜೆಗಳ ಕುಂದು ಕೊರತೆಗಳನ್ನು ಪತ್ತೆ ಮಾಡಿ ರಾಜನಿಗೆ ವರದಿ ಸಲ್ಲಿಸುತ್ತಿದ್ದರು.

ಕದಂಬರ ಕಾಲದಲ್ಲಿ ಪೊಲೀಸ್ ವ್ಯವಸ್ಥೆ ಇದ್ದ ಬಗ್ಗೆ ವಿವರಗಳು ಲಭ್ಯವಾಗಿಲ್ಲ. ಬಹುಶ: ಕದಂಬರ ರಾಜ್ಯವು ಚಿಕ್ಕದಾಗಿದ್ದುದರಿಂದ ಅವರ ಕಾಲದ ಸೈನಿಕರೇ ಆಂತರಿಕ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರಬಹುದೆಂದು ಅನಿಸುತ್ತದೆ. ಅಲ್ಲದೇ ಕದಂಬರ ಆಳ್ವಿಕೆಯ ಕಾಲವೂ ಸಹ ಅಲ್ಪಾವಧಿಯದಾಗಿದ್ದು (ಕ್ರಿಶ ೪೫೦ ರಿಂದ ೫೪೦) ಅವರುಗಳು ಕೇವಲ ಯುದ್ಧ ಮತ್ತು ರಾಜ್ಯ ವಿಸ್ತರಣೆ ಮತ್ತು ರಾಜ್ಯ ರಕ್ಷಣೆಯಲ್ಲಿ ತೊಡಗಿದ್ದರೇ ವಿನಹ ರಾಜ್ಯಾಡಳಿತವನ್ನು, ರಾಜ್ಯಾಂಗವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೆಚ್ಚಿನ ಗಮನಹರಿಸಲಾಗಲಿಲ್ಲವೆಂದು ಅನಿಸುತ್ತದೆ.

೨.೯: ಶಾತವಾಹನರ ಆಳ್ವಿಕೆಯಲ್ಲಿ ಪೊಲೀಸ್ ವ್ಯವಸ್ಥೆ

ಶಾತವಾಹನರ ಕಾಲದ ಆಡಳಿತ ವ್ಯವಸ್ಥೆಯು ಕೌಟಿಲ್ಯನಅರ್ಥಶಾಸ್ತ್ರದ ಆಧಾರದಲ್ಲಿಯೇ ನಡೆಯುತ್ತಿತ್ತು.[೭೮] ಪ್ರಾಚೀನ ಕಾಲದಲ್ಲಿ 'ಬಾಳ್ಗಲ್ಚು' ಮತ್ತು 'ಕಲ್ನಾಡು' ಎಂಬವು ಆ ಕಾಲದ ವಿಶೇಷ ಪ್ರಕಾರದ ದತ್ತಿಗಳು. ಯುದ್ಧಭೂಮಿಯಲ್ಲಿ ತೋರಿದ ಶೌರ್ಯ, ಸಾಹಸಾದಿಗಳಿಗಾಗಿ ಯೋಧರಿಗೆ ಖಡ್ಗಗಳನ್ನು ತೊಳೆಯುವ ಸಮಾರಂಭ ಸಂದರ್ಭಗಳಲ್ಲಿ ನೀಡುತ್ತಿದ್ದ ದತ್ತಿಯೇ 'ಬಾಳ್ಗಲ್ಚು.' ಕುದಿವೂರಿನ ಕದನದಲ್ಲಿ ಸತ್ಯವಾಕ್ಯ ಪೆರ್ಮಾನಡಿಯ ತಮ್ಮ ಭೂತರಸನು ಮರಣವನ್ನೈದಿರುದನ್ನು ಅವನ ಮಾವ ತಿಂಪ ಮೆದೆಯನು ಮಾದವಾಡಿ ಗ್ರಾಮವನ್ನು ಬಾಲ್ಗಚ್ಚು ಬಿಟ್ಟುದನ್ನು ನಿರೂಪಿಸುತ್ತದೆ. (ಚಾ.ನ ೨೩.೭) [೭೯]

'ಭೂತೋಪಟ್ಟ ಪ್ರತ್ಯಯ', 'ಚಾಟಭಟ ಪ್ರವೇಶದಂಡ', 'ರಾಜಸೇವಕಾನಾಂ ವಸಂತಿದಂಡ' ಅಥವಾ 'ಪ್ರಯಾಣದಂಡ' ಮತ್ತು 'ಉತ್ಸಂಗ'– ಇವು ಕ್ರಮವಾಗಿ ಒಳಸುಂಕ ಮತ್ತು ಹೊರಸುಂಕ, ನಿಯತ ಹಾಗೂ ಅನಿಯತ ಸೈನಿಕ

ಹಾಗೂ ಕಾವಲುಗಳ (ಪೊಲೀಸ್) ಗಳ ಆಗಮನ ಕಾಲಕ್ಕೆ ಎತ್ತುವ ತೆರಿಗೆ [೮೦] ಇಲ್ಲಿ ನಾವು ಗಮನಿಸಬೇಕಾದ ಅಂಶ ವೆಂದರೆ ಕಾವಲು ದಳ ಎಂಬುದು ಆಗಿನ ಕಾಲದ ಒಂದು ಪೊಲೀಸ್ ವ್ಯವಸ್ಥೆಯಾಗಿತ್ತು. ಈ ವ್ಯವಸ್ಥೆಯ ನಿರ್ವಹಣೆಗಾಗಿ ಜನರಿಂದ ಸುಂಕವನ್ನು ವಸೂಲಿ ಮಾಡಲಾಗುತ್ತಿತ್ತು. ಅದಕ್ಕೆ 'ರಾಜಸೇವಕಾನಾಂ ವಸಂತಿದಂಡ' ಅಥವಾ 'ಪ್ರಯಾಣದಂಡ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಏಕೆಂದರೆ ರಾಜ್ಯದ ಒಳಭಾಗದಲ್ಲಿ ನಡೆಯುವ ಗಲಭೆ, ದೊಂಬಿ ಮೊದಲಾದವುಗಳ ನಿಯಂತ್ರಣಕ್ಕಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಈ ಕಾವಲುದಳವನ್ನು ಕರೆಸಬೇಕಾಗುತ್ತಿತ್ತು. ಅದಕ್ಕಾಗಿ ಜನರ ಮೇಲೆ ತೆರಿಗೆಯನ್ನು ಹಾಕುತ್ತಿದ್ದರೆಂದು ತಿಳಿದು ಬರುತ್ತದೆ. ಇಲ್ಲಿ ಸೈನಿಕ ದಳ ಬೇರೆ ಮತ್ತು ಕಾವಲು ದಳ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಸೈನಿಕರು ಅಥವಾ ಕಾವಲುದಳದವರು ಒಂದು ಊರಿಗೆ ಬಂದು ನೆಲೆಸಿದಾಗ ಅವರ ಖರ್ಚು ವೆಚ್ಚಗಳಿಗಾಗಿ ಮತ್ತು ಅವರ ಆತಿಥ್ಯಕ್ಕಾಗಿ ಈ ತೆರಿಗೆ ವಿದಿಸಲಾಗುತ್ತಿತ್ತು. ಇದರಿಂದ ನಮಗೆ ತಿಳಿದು ಬರುವ ಅಂಶ ವೇನೆಂದರೆ, ಶಾತವಾಹನರೂ ಮತ್ತು ರಾಷ್ಟ್ರಕೂಟರ ಕಾಲದಲ್ಲಿ 'ಕಾವಲುದಳ' ಎಂಬುದೇ ನಾಡಿನ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಪೊಲೀಸ್ ವ್ಯವಸ್ಥೆಯಾಗಿತ್ತು. ಇದರ ನಿರ್ವಹಣೆಗಾಗಿ ಜನರಿಂದಲೇ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿತ್ತು. 'ಕಾವಲುದಳ'ವು ಸೈನಿಕ ಸೇವೆಗಳಿಗಿಂತ ಹೊರತಾದ ನಾಡಿನ ರಕ್ಷಣೆಯ ಕೆಲಸವನ್ನು ಮಾಡುತ್ತಿತ್ತು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

೨.೧೦–: ಗಂಗರ ಕಾಲದ ಹದಿಹಾರ ಮತ್ತು 'ಗರುಡ' ಎಂಬ ಅಂಗರಕ್ಷಕರು

ಕದಂಬರ ಮತ್ತು ಗಂಗರ ಆಳ್ವಿಕೆಯಲ್ಲಿ ದೇಶವನ್ನು ನಾಡುಗಳನ್ನಾಗಿ ವಿಂಗಡಿಸಲಾಗಿತ್ತು. ನಾಡನ್ನು ವಿಷಯ, ವೆಂತ್ಯ, ಕಂಪಣ ಹೀಗೆ ಗ್ರಾಮಗಳ, ಪಟ್ಟಣಗಳ ತಂಡಗಳೊಡನೆ ಮರು ವಿಂಗಡಿಸುವ ವ್ಯವಸ್ಥೆಯಿತ್ತು. ಗ್ರಾಮಗಳು ಆಡಳಿತ ವ್ಯವಸ್ಥೆಯ ಕೊನೆಯ ತುಕಡಿಗಳಾಗಿದ್ದವು. [೮೧]

ಪ್ರತಿಯೊಂದು ನಾಡಿನಲ್ಲಿಯೂ ಅನೇಕ ಹಳ್ಳಿಗಳು ಇರುತ್ತಿದ್ದವು. ಗಂಗವಾಡಿ, ನೊಳಂಬವಾಡಿ ಮತ್ತು ಇತರ ದೇಶಗಳು ಕೂಡ, ಬೇರೆ ಬೇರೆ ನಾಡುಗಳಾಗಿ, ತರುವಾಯ ಆ ನಾಡುಗಳು ಕೆಲವು ಹಳ್ಳಿಗಳ ಗುಂಪುಗಳಾಗಿ, ಬಹುಶ: ಕಂದಾಯ ನಿರ್ಧಾರ ಮತ್ತು ವಸೂಲಿಯ ಸಲುವಾಗಿ ವಿಂಗಡಣೆ, ಮರುವಿಂಗಡಣೆಗೊಂಡಿದ್ದವು. ಹಳ್ಳಿಗಳ ಮಹಾಜನರು ಸ್ಥಳೀಯ ಆಡಳಿತದಲ್ಲಿ ಕೇಂದ್ರದ ಕೈವಾಡವಿಲ್ಲದೇ ಹೆಚ್ಚಿನ ಅಧಿಕಾರವನ್ನು ಅನುಭವಿಸುತ್ತಿದ್ದರು.[೮೨]

ಗಂಗರು 'ಮನುಧರ್ಮಶಾಸ್ತ್ರ' ಹಾಗೂ ಅನ್ಯ ಗ್ರಂಥಗಳಿಗನುಗುಣವಾಗಿ ಆಳುತ್ತಿದ್ದಾರೆಂದು ಶಾಸನಗಳು ತಿಳಿಸುತ್ತವೆ. ದುರ್ವಿನೀತನು ಮನುವೇ ಎಂದು ನೀತಿಮಾರ್ಗನು 'ನೀತಿಸಾರ' ದಂತೆ ಆಳುತ್ತಿದ್ದರೆಂದೂ ಹೇಳಲಾಗಿದೆ. [೮೩] ಸಾಮಾನ್ಯ ಕಾನೂನನ್ನು ಪೋಷಿಸುವುದರಿಂದ ಹಾಗೂ ಜಾರಿಗೆ ತರುವುದರಿಂದ ಮಾತ್ರವಲ್ಲ ಬಲಶಾಲಿಗಳು ದುರ್ಬಲರನ್ನು ಶೋಷಿಸುವುದನ್ನು ತಡೆಗಟ್ಟಿ ಅಂತಹವರಿಂದ ರಾಜ್ಯವನ್ನು ರಕ್ಷಿಸುವುದರ ಮೂಲಕವೂ ಪ್ರಜೆಗಳ ಹಿತವನ್ನು ಕಾಪಾಡುವುದು ಕರ್ತವ್ಯವಾಗಿತ್ತು. ಹೀಗೆ ತನ್ನ ಪ್ರಜೆಗಳಿಗೆ ರಕ್ಷಣೆ ನೀಡಿದ್ದರಿಂದ ರಾಜ್ಯದ ಆದಾಯದಲ್ಲಿ ರಾಜ ತನ್ನ ಪಾಲು ಪಡೆಯುತ್ತಿದ್ದ. ಹೀಗೆ ರಕ್ಷಣೆ ನೀಡುವುದು ಪ್ರಜೆಗಳ ಖಾಸಗಿ ಹಾಗೂ ಸಾರ್ವಜನಿಕ ಜೀವನಕ್ಕೆಲ್ಲಾ ವ್ಯಾಪಿಸುತ್ತಿತ್ತಾದರೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಎಂದೂ ನಿರ್ಬಂಧವಿರಲಿಲ್ಲ. ರಾಜ್ಯವು ಖಾಸಗಿ ಆಸ್ತಿಪಾಸ್ತಿಗಳ ವ್ಯವಸ್ಥೆಯನ್ನು ಭೂಮಿಯ ಒಡೆತನ ಸಹಿತ ಎಲ್ಲಾ ಸಂಪತ್ತಿನ ಮೇಲೆ ಎಲ್ಲಾ ಬಗೆಯ ವ್ಯಕ್ತಿಗತವಾದ ಹಕ್ಕುಭಾದ್ಯತೆಗಳನ್ನು ಖಚಿತವಾಗಿಯೇ ಮನ್ನಿಸಿತ್ತು.[೮೪] ರಾಜನ ಪ್ರಧಾನ ಕರ್ತವ್ಯ ನ್ಯಾಯಪ್ರದಾನ ಮತ್ತು ದುಷ್ಟರನ್ನು ನಿಗ್ರಹಿಸಿ ನ್ಯಾಯ ಮತ್ತು ಶಾಂತಿಯನ್ನು ಕಾಪಾಡುವುದಾಗಿತ್ತು

ಗಂಗರ ಕಾಲದಲ್ಲಿ ಅರಮನೆಯ ಕಾವಲುಗಾರರ ಮೇಲ್ವಿಚಾರಕ ಅಧಿಕಾರಿಯನ್ನು 'ಪಡಿಯಾರ' ಅಥವಾ 'ಹದಿಯಾರ' ಅಥವಾ 'ಹದಿಹಾರ' ಎಂದು ಕರೆಯಲಾಗುತ್ತಿತ್ತು. ಅಂದರೆ ಕಾವಲುಗಾರರೋ, ಸೈನಿಕರೋ ಅಥವಾ

ಪೊಲೀಸ್ ಕಾರ್ಯ ಮಾಡುತ್ತಿದ್ದವರೋ ಎಂಬ ಬಗ್ಗೆ ಮಾಹಿತಿಗಳಿಲ್ಲ. ರಾಜ್ಯದ ಕೆಳಹಂತಗಳಲ್ಲಿ ಪರಂಪರಾಗತ ಮಾಂಡಲಿಕರಿದ್ದರು. ಪ್ರತೀ ಗ್ರಾಮದಲ್ಲಿ 'ಗಾವುಂಡ' (ಗೌಡ) 'ಕರ್ಣಂ' (ಶಾನುಭೋಗ) ತಳಾರ (ಕಾವಲಿನವನು) ಮುಂತಾದ ಅಧಿಕಾರಿಗಳಿಲ್ಲದೇ 'ಪ್ರಜೆಗಾಮುಂಡ'ರೆಂಬ ಹಿರಿಯ ರೈತರ ಸಮಿತಿ ಇತ್ತು.

<u>ಗಂಗರ ಕಾಲದ ಪ್ರಾಂತೀಯ ಆಡಳಿತ</u>

ರಾಜಕೀಯ ವ್ಯವಸ್ಥೆಯಲ್ಲಿ ವಿವಿಧ ಮಟ್ಟದ ನೌಕರ ವರ್ಗ, ಅವರ ಕೆಲಸಗಳು ಮೌರ್ಯ ಮತ್ತು ಗುಪ್ತ ಆಡಳಿತವನ್ನು ಹೋಲುವಂತಿದ್ದವು. [೮೫]

" ಗ್ರಾಮ ಮುಖಂಡ (ಗೌಡ) ಸೇನಭೋವ – ನ್ಯಾಯತೀರ್ಮಾನ ಬರೆಯುವವ, ಮಾದಿಹಾರ್ ಗ್ರಾಮಲೇಖಕ ಇವರು ಗ್ರಾಮದ ಅಧಿಕಾರಿಗಳಾಗಿದ್ದರೆ ಕಂದಾಯವನ್ನು ವಸೂಲು ಮಾಡುವುದು, ಸ್ಥಳೀಯ ಜನರ ಸಹಾಯದಿಂದ ಹಳ್ಳಿಗಳನ್ನು ದರೋಡೆಕೋರರಿಂದ ರಕ್ಷಿಸುವುದು– ಇವು ಗೌಡನ ಕೆಲಸ. ರೆವೆನ್ಯೂ ಮುಖ್ಯ ಅಧಿಕಾರಿಯಾಗಿದ್ದ ಮಟ್ಟಿಗೆ ಅವನು ನ್ಯಾಯಾಂಗ ಹಾಗೂ ಪೊಲೀಸ್ ನ್ಯಾಯಮೂರ್ತಿಯ ಅಧಿಕಾರವನ್ನು ಚಲಾಯಿಸುತ್ತಿದ್ದ. ಅವನು ಗ್ರಾಮ ನಿವಾಸಿಗಳಿಂದ ಚುನಾಯಿತವಾಗುತ್ತಿರಲಿಲ್ಲ. ಅಥವಾ ರಾಜನಿಂದಲೂ ನೇಮಕವಾಗುತ್ತಿರಲಿಲ್ಲ. ಅವನು ಅನುವಂಶಿಕ ಅಧಿಕಾರಿ. ಅವನಿಗೆ ಅನುವಂಶಿಕ ಹಕ್ಕುಬಾಧ್ಯತೆಗಳಿದ್ದವು. ತನ್ನ ಹಕ್ಕುಬಾಧ್ಯತೆಗಳನ್ನು ಅನುವಂಶಿಕವಾಗಿ ವರ್ಗಾಯಿಸುವ ಹಕ್ಕನ್ನು ಹೊಂದಿದ್ದ. ಕೆಲವು ವೇಳೆ ಗೌಡನ ಹೆಂಡತಿ, ಗೌಡ ತೀರಿಕೊಂಡಾಗ ಆ ಹಕ್ಕುಬಾಧ್ಯತೆಗಳನ್ನು ಅವಳು ಅನುಭವಿಸುವ ಏರ್ಪಾಟು ಇತ್ತು. ಗ್ರಾಮಾಧಿಕಾರಿಗಳನ್ನು ಜಾಣತನದಿಂದಲೂ, ದಕ್ಷತೆಯಿಂದಲೂ ಗೌಡನ ವಿಧವೆ ನಿಭಾಯಿಸಿದ ಪ್ರಸಂಗಗಳು ಕೆಲವು ಶಾಸನಗಳಿಂದ ತಿಳಿದು ಬರುತ್ತದೆ. [೮೬]

ಪಟ್ಟಣದ ಕಾನೂನು ಮತ್ತು ಶಿಸ್ತುಪಾಲನೆಯ ಕೆಲಸವನ್ನು 'ನಾಗರಿಕ' ಅಥವಾ 'ತೋಟಿಗಾರ' ನ್ಯಾಯಾಧೀಶ ಮತ್ತು ಪೊಲೀಸ್ ಮುಖ್ಯಸ್ಥನ ಮೂಲಕ ಈ ಸಭೆಯು (ಪಟ್ಟಣಸಭೆ) ನಡೆದುಕೊಳ್ಳುತ್ತಿದ್ದಿತು.[೮೭] ಇವರು ಪಟ್ಟಣಕ್ಕೆ ಬಂದು ಹೋಗುವ ಜನರ ದಾಖಲೆಯನ್ನು ಇಡಬೇಕಾಗಿತ್ತು. "ರಾಜ್ಯದ ಗಡಿಯಗಳಲ್ಲೆಲ್ಲಾ ಸೇನೆಯ ಚಲನದ ರಕ್ಷಣೆಯನ್ನು ನೋಡಿಕೊಳ್ಳಲು ರಕ್ಷಕರಿರುತ್ತಿದ್ದರು. ಪೂರ್ವದ ಗಡಿಯಲ್ಲಿದ್ದ ಇಂಥ ರಕ್ಷಕರನ್ನು 'ಮೂಡದಾತಾರ' ಎಂದು ಕರೆಯಲಾಗುತ್ತಿತ್ತು."

ಸಾಮ್ರಾಜ್ಯದ ಅಭಿಮಾನ ಗೌರವ, ರಕ್ಷಣೆಯ ಹೊಣೆ ಹೊತ್ತವರು ಕ್ಷತ್ರಿಯರು, ಪ್ರತ್ಯೇಕ ಪೊಲೀಸ್ ಪಡೆಯ ರಚನೆಯಾಗುವರೆವಿಗೂ ಕ್ಷತ್ರಿಯರೇ ಜನರ ಪ್ರಾಣ, ಮಾನ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದರು. ಯುದ್ಧವೇ ಇವರ ಉದ್ಯೋಗ ಮತ್ತು ಕರ್ತವ್ಯವಾಗಿತ್ತು.

ಗಂಗರ ಸೈನ್ಯದ ಬಹುದೊಡ್ಡ ಭಾಗ ಸಾಮಂತ ಅರಸರಿಂದ ಸಂಗ್ರಹಿಸಿ ರಚನೆಗೊಂಡಿದ್ದಾಗಿತ್ತು. ಆದರೆ ಸೈನ್ಯದ ನೇಮಕಾತಿ ಒಂದು ವರ್ಗಕ್ಕೆ ಸೀಮಿತವಾಗಿರಲಿಲ್ಲ. ಇಲ್ಲಿ ಎಲ್ಲ ವರ್ಗದವರಿಗೂ ಮುಕ್ತ ಅವಕಾಶವಾಗಿತ್ತು. [೮೮] ಸೈನಿಕ ವೃತ್ತಿ ಇಲ್ಲಿ ಕ್ಷತ್ರಿಯರಿಗೆ ಮಾತ್ರ ಸೀಮಿತವಾಗಿರಲಿಲ್ಲ ಎಂಬುದು ಗಮನಾರ್ಹವಾದ ವಿಷಯವಾಗಿದೆ. ಸೈನಿಕ ವೃತ್ತಿ ಕ್ಷತ್ರಿಯರ ಹಕ್ಕು ಎಂಬ ಪ್ರಾಚೀನ ರಾಜನೀತಿಜ್ಞರ ತಾತ್ವಿಕ ಅಂಶಗಳು ಇಲ್ಲಿ ಸಡಿಲಗೊಂಡಿದೆ. ಈ ವ್ಯವಸ್ಥೆ ರಾಷ್ಟ್ರಕೂಟರು ಹಾಗೂ ಕಲ್ಯಾಣದ ಚಾಲುಕ್ಯರ ಕಾಲದಲ್ಲೂ ಮುಂದುವರಿದಿತ್ತು. ಈ ಕಾಲದಲ್ಲಿ ಸೈನಿಕ ವ್ಯವಸ್ಥೆಗೆ ಸೇರುವ ಅವಕಾಶ ಎಲ್ಲ ವರ್ಗದ ಜನರಿಗಿತ್ತು. ಬ್ರಾಹ್ಮಣ ವರ್ಗದದವರೂ ಸೇನೆಯಲ್ಲಿದ್ದುದು ಗಮನಾರ್ಹ, ಮೂರನೇ ಕೃಷ್ಣನ ಬೆಟೆಗೇರಿ ಶಾಸನವೊಂದರಲ್ಲಿ, ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ ಗಣರಮಣನೆಂಬ ಬ್ರಾಹ್ಮಣನಿಗೆ ದಾನ ನೀಡಿದ ಉಲ್ಲೇಖವಿದೆ. [೮೯]

ಕಲ್ಯಾಣದ ಚಾಲುಕ್ಯರ ಅವಧಿಯಲ್ಲಿ ಅನೇಕ ಮಂದಿ ಬ್ರಾಹ್ಮಣ ಸೇನಾಪತಿಗಳು ಸೇನೆಯಲ್ಲಿದ್ದರು. ವ್ಯಾಪಾರಸ್ಥರು,

ಕುಶಲಕರ್ಮಿಗಳು ಸಂದರ್ಭಕ್ಕೆ ಅನುಗುಣವಾಗಿ ಯುದ್ಧದಲ್ಲಿ ಭಾಗವಹಿಸುತ್ತಿದ್ದರು.[೬೦] ಕ್ಷತ್ರಿಯರು ಇರುವ ಸೈನ್ಯವು ಪ್ರಭಲವಾದುದೆಂಬ ನಂಬಿಕೆ ಇದ್ದರೂ ಎಲ್ಲಾ ವರ್ಗದವರು ಇದರಲ್ಲಿ ಇರಲು ಕಾರಣ, ಸೈನಿಕರ ಅಗತ್ಯತೆ ಹೆಚ್ಚಾಗಿರಬೇಕು. ಹೀಗಾಗಿ ಸೈನ್ಯಕ್ಕೆ ಸೇರಲು ಜಾತಿ ವರ್ಗಕ್ಕಿಂತಲೂ ಶಕ್ತಿ ಸಾಮರ್ಥ್ಯ, ಯುದ್ಧ ಕೌಶಲವೇ ಮುಖ್ಯವಾಗಿತ್ತು.

ಗಜಸಾಹನಿ, ತುರಗಸಾಹನಿ ಅಥವಾ ಅಶ್ವಾಧ್ಯಕ್ಷ ಮುಂತಾದ ಸೇನಾಧಿಕಾರಿಗಳ ಉಲ್ಲೇಖವೂ ಶಾಸನಗಳಲ್ಲಿದೆ. ಯುದ್ದದಲ್ಲಿ ಸತ್ತವರ ಕುಟುಂಬಗಳಿಗೆ 'ನೆತ್ತರು ಕೊಡುಗ' ಎಂಬ ಭೂದಾನ ನೀಡುತ್ತಿದ್ದರು. ನೀತಿಮಾರ್ಗನು ಸತ್ತಾಗ (ಬಹುಶ: ಅವನ ಅಂಗರಕ್ಷಕ) 'ಅಗರಯ್ಯನೆಂಬಾತ ಕಿಳೂಂಟಿಯಾದ (ಎಂದರೆ ರಾಜನ ಜೊತೆಯೇ ಅದೇ ಚಿತೆಯಲ್ಲಿ ಅಸುನೀಗಿದ) ದೇಹದ ಕೆಳಗೆ ಕಿಳೂಂಟೆಯ ದೇಹವಿಟ್ಟು ಸುಡುತ್ತಿದ್ದರು.[೬೧]

ಗಂಡನು ಸತ್ತಾಗ ಹೆಂಡತಿಯು ಗಂಡನ ಚಿತೆಗೆ ಹಾರಿ ಸಾಯುವಂತೆ, ರಾಜನು ಸತ್ತಾಗ ಆತನ ಅಂಗರಕ್ಷಕರು ಆತನ ಚಿತೆಯಲ್ಲಿ ಹಾರಿ ಪ್ರಾಣ ಬಿಡುವ ಪದ್ಧತಿ ಕರ್ನಾಟಕವನ್ನಾಳಿದ ಕೆಲವು ರಾಜವಂಶಗಳಲ್ಲಿ ಕಾಣಬಹುದು. ಅಂಗರಕ್ಷಕ ಪಡೆ ಎಂದರೆ ಆಧುನಿಕ ಪರಿಕಲ್ಪನೆಯಲ್ಲಿ ಬಾಡಿಗಾರ್ಡ್‌ಗಳು. ಇವರು ಪೊಲೀಸರೇ ಆಗಿದ್ದಾರೆ. ರಾಜನಿಗಾಗಿ ಇಂತಹ ಅಂಗರಕ್ಷಕರು ಆತನು ಸತ್ತಾಗ ಚಿತೆಗೆ ಹಾರಿ ಪ್ರಾಣ ತ್ಯಾಗ ಮಾಡುವುದಾಗಿ ಶಪಥ ಮಾಡುತ್ತಿದ್ದರು. ಹೊಯ್ಸಳರ ಕಾಲದಲ್ಲಿಯೂ 'ಗರುಡ' ಎಂಬ ಅಂಗರಕ್ಷಕರು ಈ ರೀತಿ ಪ್ರಾಣತ್ಯಾಗ ಮಾಡಿದ ಉದಾಹರಣೆಗಳಿದ್ದು ಮುಂದೆ ಚರ್ಚಿಸಿದೆ. ಗಂಗರ ಕಾಲದ 'ಗರುಡ' ದಳದವರು ರಾಜನ ಬೆಂಗಾವಲು ಕಾವಲುಗಾರರಾಗಿದ್ದು, ಅವರು ನೂರರಿಂದ ಸಾವಿರ ಸಂಖ್ಯೆಯವರೆಗೆ ಇದ್ದರು. ಇದೊಂದು ಪ್ರಸಿದ್ಧ ದಳವಾಗಿತ್ತು. ತಮ್ಮ ರಾಜ ಸತ್ತಾಗ ತಾವು, ತಮ್ಮ ಸತಿಯರು ಮತ್ತು ಸೇವಕ ವರ್ಗದವರೊಡನೆ ದೃಢ ಸಂಕಲ್ಪದಿಂದ ಆತ್ಮತ್ಯಾಗ ಮಾಡಿಕೊಂಡ ಪ್ರಕರಣಗಳು ಅನೇಕ ಶಾಸನಗಳಲ್ಲಿ ಕಂಡುಬರುವುವು.[೬೨] ಇಲ್ಲಿ ಪ್ರಮುಖ ವಿಷಯವೆಂದರೆ, ರಾಜನ ಬಗ್ಗೆ ಅಂಗರಕ್ಷಕರಿಗೆ (ಪೊಲೀಸರಿಗೆ) ಇದ್ದ ಭಕ್ತಿ, ಗೌರವ, ನಂಬಿಕೆಯನ್ನು ಗಮನಿಸಬೇಕಾಗಿದೆ. ರಾಜನಿಗಾಗಿ ಇವರು ಪ್ರಾಣತ್ಯಾಗಕ್ಕೂ ಸಿದ್ಧರಾಗಿದ್ದರು. ಇಡೀ ಇತಿಹಾಸದಲ್ಲಿ ರಾಜನೊಂದಿಗೆ ಅಂಗರಕ್ಷಕ ಪಡೆಯ ಯೋಧರು ಆತ್ಮಾಹುತಿ ಮಾಡಿಕೊಂಡ ವಿವರಗಳು ಇವೆಯೇ ವಿನಹ ಬೇರೆ ಇಲಾಖೆಗಳ ಅಧಿಕಾರಿಗಳು ಆತ್ಮಾಹುತಿ ಮಾಡಿಕೊಂಡ ವಿವರಗಳಿಲ್ಲ. ಹೀಗಾಗಿ ಈ ಇಲಾಖೆಯ ಶ್ರೇಷ್ಠತ್ವವನ್ನು ತಿಳಿಯಬಹುದು. ಈ ರೀತಿಯ ಆತ್ಮಾಹುತಿ ಎಷ್ಟು ಸರಿ? ತಪ್ಪು? ಎಂಬ ತಾರ್ಕಿಕ ಚಿಂತನೆಯನ್ನು ಇಂದಿನ ಸಾಮಾಜಿಕ ನೆಲೆಗಟ್ಟಿನಲ್ಲಿ ನಿಂತು ಅದೊಂದು ಶೋಷಣೆ ಎಂದು ಹೇಳುವ ಬದಲು ಅಂದಿನ ಸಾಮಾಜಿಕ ನೆಲೆಗಟ್ಟಿನಲ್ಲಿ ನಿಂತು ಯೋಚಿಸಿದರೆ ಅದೊಂದು ನಂಬಿಕೆ, ವಿಶ್ವಾಸಗಳಂತಹ ಮೌಲ್ಯಗಳಿಗಾಗಿ ತಮ್ಮ ಜೀವವನ್ನೇ ಬಲಿದಾನ ಮಾಡುತ್ತಿದ್ದುದು ಅತ್ಯಂತ ಶ್ರೇಷ್ಠವೆಂದೆನಿಸುತ್ತದೆ. ಇಂದಿನ ಕಾಲದಲ್ಲಿ ಅಂಗರಕ್ಷಕರಿಂದಲೇ ನಾಯಕರುಗಳು ಹತರಾದ ಉದಾಹರಣೆಗಳು ಇವೆ. ಹೀಗಿರುವಾಗ ನಂಬಿಕೆ, ವಿಶ್ವಾಸಗಳಂತಹ ಮೌಲ್ಯಗಳು ಇಂದು ಅಪಮೌಲ್ಯಗೊಂಡಿರುವುದನ್ನು ನಾವಿಲ್ಲಿ ಗಮನಿಸಬೇಕಾಗಿದೆ.

೨.೧೧– ಬಾದಾಮಿ ಚಾಲುಕ್ಯರ ಕಾಲದ ದಂಡಪಾಸಿಕರ, ಚೌರಾಧಿಕರಣರು ಮತ್ತು ಚೌಟರು ಎಂಬ ಪೊಲೀಸ್ ಅಧಿಕಾರಿ.

ಕರ್ನಾಟಕದ ಪರಮಾಧಿಕಾರಿಗಳಾಗಿ ಆಳಿ, ಕರ್ನಾಟಕವನ್ನು ಮೊದಲ ಬಾರಿಗೆ ಏಕಾಡಳಿತಕ್ಕೆ ಒಳಪಡಿಸಿದವರು ಬಾದಾಮಿ ಚಾಲುಕ್ಯರು. (ಕ್ರಿ.ಶ ೫೪೦ ರಿಂದ ೭೫೩) ಇಂದಿನ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರ, ಒರಿಸ್ಸಾ, ತಮಿಳುನಾಡಿನ ಮೇಲೂ ಅಧಿಕಾರ ಹೊಂದಿದ್ದರು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಡಳಿತ ವ್ಯವಸ್ಥೆ ರಾಜನ ಸುತ್ತ ತಿರುಗುತ್ತಿತ್ತು ಯಶಸ್ವಿ ರಾಜ್ಯಕ್ಕೆ ಆತ ಹೊಣೆಗಾರನಾಗಿದ್ದ, ರಾಜ್ಯದ ಒಳಿತಿಗಾಗಲೀ ಕೆಡುಕಿಗಾಗಲಿ ಆತನೇ ಜವಾಬ್ದಾರನಾಗಿದ್ದ. ತಮ್ಮ ಪ್ರಜೆಗಳನ್ನು ಅನ್ಯರ ಆಕ್ರಮಣಗಳಿಂದ ರಕ್ಷಿಸುವುದು ಅವರ ಕಲ್ಯಾಣವನ್ನೇ ಸದಾ ಗಮನಿಸು

ತ್ತಿರುವುದು ತಮ್ಮ ಕರ್ತವ್ಯವೆಂದು ಚಾಲುಕ್ಯ ಅರಸರು ಭಾವಿಸಿದ್ದರು. ಇವರು ರಾಜನ ಕೆಲವು ಮೂಲಭೂತ ಕರ್ತವ್ಯಗಳಾದ ಪ್ರಜಾರಕ್ಷಣ, ಪ್ರಜಾಪಾಲನ, ಪ್ರಜಾರಂಜನಗಳನ್ನು ನೆರವೇರಿಸುತ್ತಿದ್ದರು. "ಪ್ರಜೆಗಳನ್ನು ಆಂತರಿಕ ಅವ್ಯವಸ್ಥೆಯಿಂದಲೂ, ಬಾಹ್ಯ ವೈರಿಗಳ ಆಕ್ರಮಣದಿಂದಲೂ ರಕ್ಷಿಸುವುದು ರಾಜನ ಮೂಲಭೂತ ಕರ್ತವ್ಯವಾಗಿತ್ತು. ಆದ್ದರಿಂದ ಅವರು ಪ್ರಬಲವಾದ ಪೊಲೀಸ್‌ದಳವನ್ನು ಅಗಾಧವಾದ ಸೈನ್ಯಬಲವನ್ನೂ ಕಾಪಾಡುತ್ತಿದ್ದರು. 'ದಂಡಪಾಶಿಕರ' ಚೌರಾಧಿಕರಣರು' ಮೊದಲಾದ ಪೊಲೀಸ್ ಅಧಿಕಾರಿಗಳ ಹಾಗೂ ಚೌಟರು ಮತ್ತು ಭಟರು ಮೊದಲಾದ ಪೊಲೀಸ್ ಪಡೆಗಳ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತದೆ. ಇವರು ರಾಜ್ಯಾದ್ಯಾಂತ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು.[೯೩] ಚಿಪ್ಲಂ ಫಲಕಗಳಲ್ಲಿ ಇಮ್ಮಡಿ ಪುಲಕೇಶಿಯನ್ನು ಸಜ್ಜನ ರಕ್ಷಕ, ದುರ್ಜನ ಶಿಕ್ಷಕ ಎಂದು ವರ್ಣಿಸಿದೆ.

ಚಾಲುಕ್ಯರ ಕಾಲದಲ್ಲಿ ಆಡಳಿತಾಂಗದಲ್ಲಿ ೭೨ ಇಲಾಖೆಗಳು ಇದ್ದವೆಂದು ಬಾಹತ್ತರಣೀಯ ಯೋಗಾಧಿಪತಿ ಎಂಬ ಗ್ರಂಥದಲ್ಲಿ ತಿಳಿಸಿದೆ. ಕ್ರಿಶ. ೧೦೫೮ ರಲ್ಲಿ ದಂಡನಾಯಕ ಮದುಸೂಧನನು ಈ ಇಲಾಖೆಗಳನ್ನು ಹೊಂದಿದ್ದ. ಮನುವಿನ ಕಾಲದಿಂದಲೂ ಒಂದು ಸರ್ಕಾರದಲ್ಲಿ ೭೨ ಇಲಾಖೆಗಳಿದ್ದವು. ಮಾನಸೋಲ್ಲಾಸ ಎಂಬ ಗ್ರಂಥದಲ್ಲಿ ೬೬ ಇಲಾಖೆಗಳನ್ನು ಗುರುತಿಸಲಾಗಿದೆ.[೯೪]

ಚಾಲುಕ್ಯರ ಆಡಳಿತೀಯ ಘಟಕಗಳೆಂದರೆ, ದೇಶ, ನಾಡು, ಮಂಡಲ, ವಿಷಯ, ಭೋಗೆ, ಆಹರ, ಗ್ರಾಮ. ಇಮ್ಮಡಿ ವಿಕ್ರಮಾದಿತ್ಯನ ಲಕ್ಷ್ಮೇಶ್ವರ ಶಾಸನದಲ್ಲಿ 'ದೇಶಾಧಿಪತಿ' ಎಂಬ ಅಧಿಕಾರಿಯ ಉಲ್ಲೇಖವಿದೆ. ಹೆಸರೇ ಸೂಚಿಸುವಂತೆ ಇವನು ರಾಜ್ಯದ ಘಟಕವಾದ ದೇಶದ ಮುಖ್ಯಸ್ಥನಾಗಿದ್ದನು. ಕಾಲಕಾಲಕ್ಕೆ ತೆರಿಗೆಯನ್ನು ದೇಶಾಧಿಪತಿಗೆ ಸಲ್ಲಿಸತಕ್ಕದ್ದು ಎಂದು ಶಾಸನವು ಹೇಳುತ್ತದೆ. ಇನ್ನೊಂದು ಶಾಸನದಲ್ಲಿ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನು ನಾಲ್ಕು ವಿಷಯ ಮಂಡಲಗಳ ಅಧಿಪತಿಯಾಗಿದ್ದನೆಂದು ಹೇಳಿದೆ. ಅವನು ತನಗೆ ಸೇರಿದ ಪ್ರದೇಶದ ಕಾನೂನು – ಸುವ್ಯವಸ್ಥೆಯ ಹೊಣೆಗಾರಿಕೆ ಹೊತ್ತಿದ್ದುದಲ್ಲದೆ ಅಲ್ಲಿ ತೆರಿಗೆ ಸಂಗ್ರಹಿಸುವ ಜವಾಬ್ದಾರಿಯೂ ಅವನಿಗಿತ್ತು.[೯೫] ಇಲ್ಲಿ ದೇಶಾಧಿಪತಿ ಮತ್ತು 'ಮಂಡಳಾಧಿಪತಿ'ಗಳು ತಮ್ಮ ತಮ್ಮ ಪ್ರದೇಶಗಳ ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳುವ ಪೊಲೀಸ್ ಅಧಿಕಾರಿಗಳಾಗಿದ್ದರಂದೇ ಹೇಳಬೇಕು.

ರಾಜನ ದಾನಗಳನ್ನು ತಿಳಿಸಬೇಕಾದವರ ಪಟ್ಟಿಯಲ್ಲಿ 'ಗ್ರಾಮಕೂಟ' ಎಂಬ ಅಧಿಕಾರಿಯ ಹೆಸರು ಇದೆ. ಪದವೇ ಸೂಚಿಸುವಂತೆ, ಅವನು ಗ್ರಾಮದ ಆಡಳಿತದ ಹೊಣೆಯನ್ನು ಹೊತ್ತಿದ್ದವನು. 'ಗ್ರಾಮಕೂಟ'ನು ಹಳ್ಳಿಯ ಮುಖ್ಯಸ್ಥನಾಗಿದ್ದನೆಂದು ಘೋಪಾಲ್ ಅಭಿಪ್ರಾಯಪಡುತ್ತಾರೆ. ಬಹುಶಃ ದೊಡ್ಡ ಹಳ್ಳಿಗಳಿಗೆ ಇವನು ಮುಖ್ಯಸ್ಥನಾಗಿರಬಹುದು. ಇವನು ಅತ್ಯಂತ ಕೆಳಗಿನ ಆಡಳಿತೀಯ ಘಟಕದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಇವನು ಹಳ್ಳಿಯ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗೆ ಹೊಣೆಗಾರನಾಗಿದ್ದನು. ಇವನು ಗ್ರಾಮಸಭೆಗೂ, ರಾಜನ ಕಡೆಯ ಅಧಿಕಾರಿಗಳಿಗೂ ನಡುವೆ ಕೊಂಡಿಯಾಗಿದ್ದನು. ರಾಜನ ಅಧಿಕಾರಿಯು ಗಾವುಂಡನನ್ನು ನೇಮಿಸುತ್ತಿದ್ದನು[೯೬] ದಾನ ಮಾಡಿರುವ ಭೂಮಿಗೆ 'ಚಟರು' ಮತ್ತು 'ಭಟರು' ಭೇಟಿ ನೀಡಬಾರದು ಎಂದು ಶಾಸನಗಳು ಹೇಳುತ್ತವೆ. 'ಭಟ' ಒಬ್ಬ 'ಯೋಧ', 'ಚಟ' ಬಹುಶಃ 'ಪೊಲೀಸ್' ಅಧಿಕಾರಿಯಿರಬಹುದು. ಈ ಪದಗಳು ಸೈನ್ಯಗಳನ್ನು ಸೂಚಿಸುತ್ತವೆ ಎಂದು ಕೆಲವು ವಿದ್ವಾಂಸರೂ ಕ್ರಮವಾಗಿ ದಾಖಲಾದ ಮತ್ತು ಕ್ರಮವಿಲ್ಲದ ಯೋಧರು ಎಂದು ಇತರ ಕೆಲವರೂ ಅಭಿಪ್ರಾಯ ಪಡುತ್ತಾರೆ. ಅವರು ಪೊಲೀಸ್‌ದಳದ ಸಾಮಾನ್ಯ ಸದಸ್ಯರು. ಸಮಾಜದಲ್ಲಿರುವ ರೂಢಿಯ ಅಪರಾಧಿಗಳ ಮೇಲೆ ಕಣ್ಣಿಟ್ಟು ಕಾಯುವುದು ಅವರ ಕರ್ತವ್ಯಗಳಲ್ಲಿ ಸೇರಿತ್ತು.[೯೭]

ದೇಶದ ಬೇರೆ ಕಡೆಗಳಲ್ಲಿನಂತೆಯೇ ಚಾಲುಕ್ಯ ಚಕ್ರವರ್ತಿಯು ಸರ್ವೋನ್ನತ ನ್ಯಾಯಪೀಠವಾಗಿದ್ದನು. ಅವನು

ಸ್ಮೃತಿಗಳಲ್ಲೂ ಧರ್ಮಶಾಸ್ತ್ರದಲ್ಲೂ ಪರಿಣತನಾಗಿದ್ದನು. ನ್ಯಾಯವನ್ನು ವಿತರಿಸುವುದರಲ್ಲಿ ಅವನಿಗೆ ಆಡಳಿತೀಯ ಅಧಿಕಾರಿಗಳು ಸಹಾಯ ಮಾಡುತ್ತಿದ್ದರು. ಸಿವಿಲ್ ವಿಚಾರಗಳಲ್ಲಿ ಸರ್ವೋನ್ನತ ಮೇಲ್ಮನವಿಯನ್ನು ಅವನು ತೀರ್ಮಾನಿಸುತ್ತಿದ್ದನು. ಕೇಂದ್ರದಲ್ಲಿ ನ್ಯಾಯಾಲಯವಿದ್ದುದರ ಜೊತೆಗೆ ಭೋಗ, ವಿಷಯ, ದೇಶ ಮೊದಲಾದ ಹಲವು ಆಡಳಿತೀಯ ಘಟಕಗಳಲ್ಲಿ ನ್ಯಾಯಾಲಯಗಳಿದ್ದವು. ಈ ವಿಭಾಗಗಳ ಆಡಳಿತ ಮುಖ್ಯಸ್ಥರೇ ಅಲ್ಲಲ್ಲಿನ ನ್ಯಾಯಾಧಿಕಾರಿಗಳೂ ಆಗಿರುತ್ತಿದ್ದರು.[೯೮] ಚಾಲುಕ್ಯರ ಸಾಮಂತನೊಬ್ಬನ ಒಂದು ಶಾಸನವು ಕೆಲವು ಅಪರಾಧಗಳನ್ನು ಉಲ್ಲೇಖಿಸಿ ಅವುಗಳಿಗೆ ಶಿಕ್ಷೆಯನ್ನು ವಿಧಿಸುತ್ತದೆ. ವ್ಯಾಜ್ಯಗಳನ್ನು ಪರಿಹರಿಸುವಲ್ಲಿ ಹಳ್ಳಿಯ ಮತ್ತು ನಗರಗಳ ಹಿರಿಯರ ಸಹಾಯವನ್ನು ನ್ಯಾಯಾಧಿಕಾರಿಗಳು ಪಡೆಯುತ್ತಿದ್ದರು. ಚಾಲುಕ್ಯ ಶಾಸನಗಳು ಪೊಲೀಸ್ ಅಧಿಕಾರಿಗಳನ್ನು ಉಲ್ಲೇಖಿಸಿ ಕೆಲವು ಅಪರಾಧಿಗಳಿಗೆ ಜುಲ್ಮಾನೆಯನ್ನು ವಿಧಿಸುತ್ತದೆ. [೯೯] ಈ ವಿಚಾರಣೆಗಳು ಮತ್ತು ದಂಡನೆಗಳ ಉದ್ದೇಶ, ಅವು ಮರುಕಳಿಸದಂತೆ ತಡೆಯುವುದು ಮತ್ತು ಮುಯ್ಯಿಗೆ ಮುಯ್ಯಿ ರೂಪದ ಶಿಕ್ಷೆ ವಿಧಿಸಿ, ಇತರರಲ್ಲಿ ಅಪರಾಧ ಪ್ರವೃತ್ತಿ ಬೆಳೆಯದಂತೆ ಮಾಡುವುದು. ಇಮ್ಮಡಿ ವಿಕ್ರಮಾದಿತ್ಯನ ಲಕ್ಷ್ಮೇಶ್ವರ ಶಾಸನದಲ್ಲಿ ಕಳವು ಮತ್ತು ಇತರ ಹತ್ತು ಅಪರಾಧಗಳಿಗೆ ದಂಡನೆ ವಿಧಿಸುವುದನ್ನು ಉಲ್ಲೇಖಿಸಲಾಗಿದೆ. ಸಾಮಂತ ಭೋಗಶಕ್ತಿಯ ಅಂಜನೇರಿ ಫಲಕಗಳು, ಅವಿವಾಹಿತೆಯಾದ ಹೆಂಗಸಿನ ಮೇಲೆ ಹಲ್ಲೆ ಮಾಡಿದ ಅಪರಾಧಕ್ಕಾಗಿ ೧೦೮ ರೂಪಕಗಳನ್ನು, ವ್ಯಭಿಚಾರಕ್ಕೆ ೮೦ ರೂಪಕಗಳು, ತೀವ್ರವಾಗಿ ಗಾಯಗೊಳಿಸಿದ್ದಕ್ಕೆ ೧೬ ರೂಪಕಗಳು, ತಲೆಗೆ ಸಣ್ಣಗಾಯ ಮಾಡಿದ್ದಕ್ಕೆ ೪ ರೂಪಕಗಳನ್ನು ಜುಲ್ಮಾನೆಯನ್ನು ವಿಧಿಸಿದೆ. ನ್ಯಾಯವಿತರಣೆಯಲ್ಲಿ ಮೇಲಿನವನು– ಕೆಳಗಿನವನು ಎಂಬ ಬೇಧವಿರಲಿಲ್ಲವೆನ್ನುವುದು ಗಮನಾರ್ಹ ವಿಷಯ. ಒಬ್ಬ ಕೂಲಿಕಾರ ಹೆಂಗಸಿನೊಂದಿಗೆ ಅಕ್ರಮ ಸಂಬಂಧ ನಡೆಸಿದ ಒಬ್ಬ ಶ್ರೀಮಂತ ವರ್ತಕನಿಗೆ ೧೦೮ ರೂಪಕಗಳ ಜುಲ್ಮಾನೆ ವಿಧಿಸಲಾಯಿತು.[೧೦೦] ಅಲ್ಲದೇ ಅಪರಾಧಿಗಳನ್ನು ಬಹಿಷ್ಕರಿಸಿ ದೇಶ ದಿಂದ ಹೊರಗಟ್ಟುವುದು ಮತ್ತು ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಈ ಶಿಕ್ಷೆಗಳನ್ನೂ ವಿಧಿಸ ಲಾಗುತ್ತಿತ್ತೆಂದು ಶಾಸನಗಳು ಸೂಚಿಸುತ್ತವೆ. ಬಾದಾಮಿಯ ಒಂದು ಶಾಸನವು ಒಪ್ಪಂದದ ಉಲ್ಲಂಘನೆಗೆ ದಂಡವನ್ನು ಹೇಳುತ್ತದೆ. ವಾತಾಪಿಯ ಮಹಾಚತುರ್ವಿದ್ಯಾ ಸಮುದಾಯವು ಆ ಸ್ಥಳದ ಚರ್ಮಗಾರರ ಗಳಿಕೆಯನ್ನು ನಿಡಿಯಮಾರನೆಂಬ ಒಬ್ಬನಿಗೆ ಸಲ್ಲಬೇಕೆಂದು ನಿಗದಿಪಡಿಸಿತು. ಆ ಆದೇಶವನ್ನು ಉಲ್ಲಂಘಿಸಿದರೆ ದಂಡ ವಿಧಿಸುವುದಾಗಿ ಬೆದರಿಕೆ ಹಾಕ ಲಾಯಿತು. ಹೀಗೆ ಚಾಲುಕ್ಯರ ಕಾಲದಲ್ಲಿ ರಾಜನೂ, ಅವನ ಅಧಿಕಾರಿಗಳಿಗೂ, ಇತರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ರಾಜ್ಯಾದ್ಯಂತ ನ್ಯಾಯವಿತರಣೆ ಮಾಡುತ್ತಿದ್ದರು.[೧೦೧]

೨.೧೨ – ರಾಷ್ಟ್ರಕೂಟರ ಕಾಲದ ಪ್ರಭುಗಾವುಂಡ ಮತ್ತು ನಾಡಗಾವುಂಡರು.

ರಾಷ್ಟ್ರಕೂಟರ ಕಾಲದಲ್ಲಿ (ಕ್ರಿ.ಶ ೭೭೪) ರಾಜ್ಯವು ಮಂಡಲಗಳಾಗಿ ವಿಂಗಡಿಸಿದ್ದು, ಅಮೋಘವರ್ಷನ ಕಾಲದಲ್ಲಿ ೧೬ ಮಂಡಲಗಳಿದ್ದವು. ಮಂಡಲವನ್ನು ರಾಷ್ಟ್ರವೆಂದು ಕರೆಯಲಾಗುತ್ತಿತ್ತು. ರಾಷ್ಟ್ರವನ್ನು ವಿಷಯ ಎಂಬ ಜಿಲ್ಲೆಗಳಾಗಿ ವಿಭಜಿಸಿತ್ತು. ವಿಷಯದ ನಂತರ ನಾಡು ಎಂಬ ಭಾಗವಿದ್ದು, ಆಡಳಿತದ ಕೊನೆಯ ಘಟಕವಾಗಿತ್ತು. ಪ್ರಾಂತ್ಯಗಳನ್ನು ಗ್ರಾಮಗಳ ಸಂಖ್ಯೆ ಆಧಾರದಲ್ಲಿ ಗುರುತಿಸುತ್ತಿದ್ದರು. <u>ಉದಾ:</u> ಬನವಾಸಿ ೧೨೦೦. ಗ್ರಾಮಗಳಲ್ಲಿ ಗ್ರಾಮದ ಮುಖ್ಯಸ್ಥನಾಗಿ ಗಾವುಂಡನು, ಊರರಕ್ಷರಾಗಿ ಪ್ರಭುಗಾವುಂಡರು, ತಳವಾರ ನಾಯಕರು, ನಾಡಿನ ರಕ್ಷಕರಾಗಿ ನಾಳಾವುಂಡ ಅಥವಾ ನಾಡಗಾವುಂಡ ರಕ್ಷಿಸುತ್ತಿದ್ದರೆಂದು ತಿಳಿದುಬರುತ್ತದೆ. ಇವರೇ ಅಲ್ಲಿನ ಕಾನೂನು ಸುವ್ಯವಸ್ಥೆಗಳ ಪಾಲಕರಾಗಿ ಅಪರಾಧಗಳನ್ನು ಪತ್ತೆಹಚ್ಚುವ ಕಾರ್ಯಗಳನ್ನು ಮಾಡುತ್ತಿದ್ದರು. ಈ ನಾಡಗಾವುಂಡರ ಪದವಿ ಪರಂಪರಾಗತವಾದುದು. ಉದಾ: ನಾಗರಬಂಡೆಯ ನಾಡಗಾವುಂಡ ಕಲಿವಿಚ್ಚರಸನು ಸಾಯಲು ಅವನ ಸತಿಯನ್ನೂ, ಮುಂದೆ ಅವಳೂ ಸಾಯಲು ಅವಳ ಮಗಳನ್ನೂ, ಆ ಸ್ಥಾನಕ್ಕೆ ಏರಿಸಲಾಯಿತು.[೧೦೨] ಇಂತಹ ಗಾವುಂಡರುಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದ್ದು,

ಅದನ್ನು ಮುಂದೆ ವಿವರಿಸಲಾಗಿದೆ.

ಕಲ್ಯಾಣದ ಚಾಲುಕ್ಯರು ಮತ್ತು ಕಲಚೂರಿಗಳ ಕಾಲದಲ್ಲಿಯೂ ಸಹ ಗಾವುಂಡರು, ನಾಡಗಾವುಂಡರುಗಳೇ ಹಳ್ಳಿಯ ಮತ್ತು ನಗರಗಳ ರಕ್ಷಕರಾಗಿದ್ದರೆಂದು ತಿಳಿದುಬರುತ್ತದೆ.

೨.೧೩ – ಹೊಯ್ಸಳರ ಆಂತರಿಕ ರಕ್ಷಣೆ ಮತ್ತು ಅಂಗರಕ್ಷಕರು ೧೧೧೭–೧೩೪೬

ಇವರ ಕಾಲದಲ್ಲಿ ಗ್ರಾಮಗಳಲ್ಲಿ 'ಗಾವುಂಡ'ರು, ನಾಡಿನಲ್ಲಿ 'ನಾಳ್‌ಗಾವುಂಡ'ರು, ಅಧಿಕಾರಿಗಳಾಗಿ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿದ್ದರೆ, ನಾಳ್‌ಗಾವುಂಡನ ಕೈಕೆಳಗೆ ಒಬ್ಬ ಮಹಾಪ್ರಧಾನ, ಒಬ್ಬ ಭಂಡಾರಿ, ಒಬ್ಬ 'ಸೇನಾಭೋವ' ಎಂಬ ಅಧಿಕಾರಿಗಳು ಇದ್ದರೆಂದು ತಿಳಿದುಬರುತ್ತದೆ. ಹಳ್ಳಿಗಳಲ್ಲಿ 'ತಳಾರ' ಅಥವಾ 'ತಳವಾರ'ನು ಗ್ರಾಮಗಳನ್ನು ಕಾಯುವ ಕೆಲಸಗಳನ್ನು ಮಾಡುತ್ತಿದ್ದನು.

ಕರ್ನಾಟಕದ ಸೈನ್ಯವನ್ನು ಪ್ರಾಚೀನ ತಳಹದಿಗಿಂತ ಭಿನ್ನವಾಗಿ ಪುನ: ರಚಿಸಿದರೆ 'ರಾಜನ ಸೈನ್ಯ' ಗ್ರಾಮದ ಕಾಯ್ದಿಟ್ಟ ಸೈನ್ಯ, ಗ್ರಾಮದ ಪ್ರಜಾ ಸಮೂಹ ಎಂದು ಮೂರು ಹಂತದಲ್ಲಿ ಗುರುತಿಸಬಹುದು.[೧೦೩] ರಾಜನ ಸೈನ್ಯ ನೇರವಾಗಿ ಯುದ್ಧದಲ್ಲಿ ತೊಡಗಿದ್ದರೆ, ಗ್ರಾಮದ ಕಾಯ್ದಿಟ್ಟ ಪಡೆಯು, ಅರಸನಿಂದ ಅನುಜೀವಿತವನ್ನು ಭೋಗಿಸುತ್ತಾ, ಸ್ವಗ್ರಾಮದಲ್ಲಿದ್ದು ಯುದ್ಧ ಪ್ರಸಂಗದಲ್ಲಿ ಮಾತ್ರ ರಾಜನ ನೆರವಿಗೆ ಹೋಗುವ ಸೈನ್ಯವಾಗಿತ್ತು. ಇವರನ್ನು ಶಾಸನಗಳಲ್ಲಿ 'ಲೆಂಕಸಾಸಿರ್ವರ್' ಎಂದು ಹೇಳಲಾಗಿದೆ. [೧೦೪] ಇಂತಹ ಸಾವಿರ 'ಲೆಂಕರ' ಸಂಘವೊಂದರ ಹೆಸರು ಕ್ರಿಶ ೧೦೪೫ ರ ಶಾಸನದಲ್ಲಿದೆ. [೧೦೫] ಲೆಂಕನೆಂದರೆ ಯೋಧನೊಬ್ಬ ಅಂಗರಕ್ಷಕನಾಗಿ ಪ್ರತಿಜ್ಞಾ ಬದ್ಧನಾಗುವುದು, ಒಡೆಯನು ಸತ್ತಾಗ ಆತನೊಂದಿಗೆ ತಾನೂ ಪ್ರಾಣಾರ್ಪಣೆ ಮಾಡುವವನು. ಇಂತಹ ಹಲವು ಲೆಂಕಾವಳಿಗಳು ಶಾಸನಗಳಲ್ಲಿ ಸಿಗುತ್ತವೆ.[೧೦೬] ಸೇವಕರು (ಲೆಂಕ) ತನ್ನ ಒಡೆಯನು ಸತ್ತಾಗ ತಲೆಹಾರಿಸಿಕೊಂಡು (ಸಿಡಿತಲೆ) ಪ್ರಾಣ ನೀಡಿದ ಉಲ್ಲೇಖಗಳೂ ಉಂಟು".[೧೦೭] ಎಂದು ಡಾ: ಸೂರ್ಯನಾಥ ಕಾಮತ್‌ರವರು ತಿಳಿಸುತ್ತಾರೆ ಇವರು ಯುದ್ಧ ಶಿಕ್ಷಣವನ್ನು ಪಡೆದ ಆನಂತರ ಆಡಳಿತದ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳಾಗಿದ್ದರು. ಬೇಣಯ್ಯನೆಂಬ ಲೆಂಕನೊಬ್ಬ ಬೇರೆ ಬೇರೆ ಭಾಗಗಳ ಸುಂಕದ ಮೇಲ್ವಿಚಾರಕನಾಗಿದ್ದನು.[೧೦೮] ಮತ್ತೊಬ್ಬ ಲೆಂಕನು ಗಡಿಗಳ ರಕ್ಷಣೆಯ ಜವಾಬ್ದಾರಿ ಹೊಂದಿದ್ದನು.[೧೦೯] ಆದರೆ ಯುದ್ಧ ಮಾಡುವುದು ಇವರ ಮುಖ್ಯ ಜವಾಬ್ದಾರಿಯಾಗಿತ್ತು. ತಮ್ಮ ಒಡೆಯನ ಮಡಿದಾಗ, ಲೆಂಕರು ತಮ್ಮ ತಲೆಗಳನ್ನು 'ತಲೆಗೆ ಮುಂದಲೆಯಾಗಿ' ನೀಡುತ್ತಿದ್ದ ವಿವರವನ್ನು ಕವಿ ಜನ್ನ ನೀಡಿದ್ದಾನೆ.[೧೧೦] ಲೆಂಕರೊಡನೆ ಸಹಗಮನ ಮಾಡಲು ಲೆಂಕತಿಯರು ಸಿದ್ಧರಾಗುತ್ತಿದ್ದರು. ಈ ಲೆಂಕರಂತೆ ಇನ್ನೊಂದು ವರ್ಗವಿದೆ ಅವರೇ "ಗರುಡ"ರು.

ಪ್ರಭುವಿನ ಅಂಗರಕ್ಷಕನಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿದವನಿಗೆ ಗರುಡನೆಂದು ಹೆಸರು. ಇವರು ಎಡಕಾಲಿಗೆ ತೊಡರು ಅಥವಾ ಗಂಡ ಪಂಡೇರವನ್ನು ಧರಿಸುತ್ತಿದ್ದರು.[೧೧೧] ಚಿನ್ನದ ಎಳೆಯೊಂದಕ್ಕೆ ಮುತ್ತುಗಳನ್ನು ಜೋಡಿಸಿ ಮದ್ಯೆ ಗೊಂಬೆಗಳನ್ನು ಗಂಡ ಪಂಡೇರದಲ್ಲಿ ಅಳವಡಿಸಿದ್ದರು. ಇದನ್ನು ಧರಿಸಿ ನಡೆಯುವಾಗ ಝಣ ಝಣ ಶಬ್ಧ ಬರುತ್ತಿತ್ತು. "ಸರಸ್ವತಿ ಕರ್ಣ ಕುಂಡಲಮ್, ಕರ್ಪೂರ ವರ್ಷಂ ಸಿಜನ ಗರುಡನಾಮದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಸಾಮಂತ ನೆರೆಯಮ್ಮರಸನಿರಲ್" ಎಂದು ಮಹಾಸಾಮಂತ ಎರೆಯಮ್ಮರಸನು ಗರುಡನಾಗಿದ್ದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. [೧೧೨] ಪುರುಷರಂತೆ ಸ್ತ್ರೀಯರೂ ಗರುಡರಾಗಿ ಎಡಗಾಲಿಗೆ ತೊಡರನ್ನು ಧರಿಸುತ್ತಿದ್ದರು. "ಬಲ್ಲಾಳ ಭೂಪೊತ್ತಮ ಪ್ರಿಯ ಸುತಂಗೆ ಕುಮಾರ ಲಕ್ಷ್ಮ ರಥೀನೀನಾಥಂಗೆ ಕೊಟ್ಟಳ್ ಮನ: ಪ್ರಿಯೆಯೀ ಸುಗ್ಗಲದೇವಿ ಭಾಷೆಯ ನಿಳಾಚಕ್ರಂ ಪೊಗಳ್ವನ್ನೆಗೆಂ"[೧೧೩] ಎಂಬಲ್ಲಿ ವೀರಬಲ್ಲಾಳನಿಗೆ ಗರುಡನಾದ ಕುಮಾರ ಲಕ್ಷ್ಮನ ಹೆಂಡತಿ ಸುಗ್ಗಲೆಯೂ ಗರುಡನಾಗುವ ಭಾಷೆ ನೀಡಿದ್ದು ಸ್ಪಷ್ಟವಾಗಿದೆ. ವೀರ ಬಲ್ಲಾಳನ ಸಾವಿನೊಂದಿಗೆ ಕುವರಲಕ್ಷ್ಮ ಹಾಗೂ ಸುಗ್ಗಲೆಯ ಬದುಕು ಅಂತ್ಯವಾಗುತ್ತದೆ. ಈ

ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡಿದ ಒಂದು ಸಾವಿರ ಗರುಡರನ್ನು ಲೆಂಕರೆಂದು ಶಾಸನದಲ್ಲಿ ಗುರುತಿಸಿದೆ. ಲೆಂಕ ಮತ್ತು ಗರುಡರ ನಡುವಿನ ವ್ಯತ್ಯಾಸ ಸ್ಪಷ್ಟವಾಗಿಲ್ಲ. ಕುವರ ಲಕ್ಷ್ಮ ಹಾಗೂ ಆತನ ಅನುಯಾಯಿಗಳನ್ನು ಗರುಡ ಮತ್ತು ಲೆಂಕ ಎಂದು ಕರೆದಿರುವುದರಿಂದ ಇವರ ನಡುವೆ ಹೆಚ್ಚಿನ ವ್ಯತ್ಯಾಸವಿಲ್ಲ [೧೧೪] ಎನ್ನಬಹುದು. ವಿಷ್ಣುವರ್ಧನನಿಗೆ 'ಚೋಕಿಮಯ್ಯ' ಎಂಬ ಗರುಡನಿದ್ದನು. [೧೧೫] ಎಂದು ಡಾ: ಸೂರ್ಯನಾಥ ಕಾಮತ್‌ರು ತಿಳಿಸುತ್ತಾರೆ.

ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ದೇವಾಲಯದಲ್ಲಿರುವ ಎಂಟು ಶಾಸನಗಳಲ್ಲಿ (ಕೃಷ್ಣರಾಜಪೇಟೆ ೭೭–೮೪) ಐದು ವೀರಗಲ್ಲುಗಳ ಮೇಲೂ (ಕೃ.ಪೇ ೭೭–೮೧) ಮೂರು, (ಕೃ.ಪೇ ೮೨–೮೪) ಕಂಬಗಳ ಮೇಲೂ ಕೆತ್ತಲ್ಪಟ್ಟ ಶಾಸನಗಳು. ಕೊನೆಯ ಮೂರು ಶಾಸನಗಳು ಸಹ ವಾಸ್ತವವಾಗಿ ವೀರರ ಸ್ಮಾರಕವಾದ ಶಾಸನಗಳೇ. ಕೃಷ್ಣರಾಜಪೇಟೆ ೮೩ ನೇಯ ಶಾಸನದಲ್ಲಿ ವೀರನೊಬ್ಬ ಲೆಂಕನಾಡಿ ಗರುಡನ್ನಪ್ಪಿದ ಬಾಷೆಗೆ ಸಂದನೆಂದಿದ್ದರೂ, ಶಾಸನ ಅಸಂಪೂರ್ಣವಾಗಿದೆ. ಅಂತೆಯೇ ೮೦ ನೇ ಶಾಸನ ಒಡೆದಿದ್ದು ಕೆಲವು ಹೆಸರುಗಳು ಮಾತ್ರ ಉಳಿದಿವೆ.

ಈ ಶಾಸನಗಳಲ್ಲಿ ಕಂಡುಬರುವ ವೀರರೆಲ್ಲಾ ಮುಗಿಲಕುಲಕ್ಕೆ ಸೇರಿದವರು. ಈ ಮನೆತನದಲ್ಲಿ ಲಭ್ಯವಿರುವ ಮೊದಲ ಹೆಸರು ಗಂಡನಾರಾಯಣ ಸೆಟ್ಟಿಯದು. ಈತ ಕಬ್ಬಾಹು ನಾಡಿನ ಮಹಾಪ್ರಭುವಾಗಿದ್ದ. ಈತನ ವಂಶಜರೆಲ್ಲ ಹೊಯ್ಸಳರ ಮಹಾ ಸಾಮಂತರಾಗಿದ್ದರು. ಗಂಗನಾರಾಣ ಸೆಟ್ಟಿಯ ಪತ್ನಿ ಮಾರವ್ವೆನಾಯಕತಿ ಇವರೀರ್ವರು ಐವರು ಲೆಂಕಗೊಡಗೂಡಿ ಹೊಯ್ಸಳ ಎರೆಯಂಗನಿಗಾಗಿ ಗರುಡನನ್ನಪ್ಪಿ ಅವನೊಡನೆ ಸಂದರು. ಇವರೀರ್ವರ ಮಗ ಹೊಯ್ಸಳಸೆಟ್ಟಿ ಸೊಸೆ ಮಾಚವ್ವೆ ಅವರು ಬಿಟ್ಟಿದೇವನೊಡನೆ ಲೆಂಕರಾಗಿ ಸಂದರು. [೧೧೬]

೮೨–೮೪ ನೇಯ ಶಾಸನಗಳಲ್ಲಿ ಹೊಯ್ಸಳಸೆಟ್ಟಿಗೂ ಮಾಚವ್ವೆ ನಾಯಕಿತಿಗೂ ಜನಿಸಿದ ಕೊರೆಯ ನಾಯಕನ ಪ್ರಸ್ತಾಪವಿದೆ. ಈತನೂ ಈತನ ಇಬ್ಬರು ಪತ್ನಿಯರಾದ ಮಾರವ್ವೆ ಮತ್ತು ಚಿಕ್ಕಮಾದವ್ವೆಯರೂ ಏಳು ಲೆಂಕರೊಡನೆ ನರಸಿಂಹ (I) ನಿಗೆ ಗರುಡರಾದರು. [೧೧೭]

ಕ್ರಿಶ ೧೨೫೬ ರ ಅಗ್ರಹಾರ ಬಾಚಹಳ್ಳಿಯ ೮೨ (೪ ಕೃಷ್ಣರಾಜಪೇಟೆ ೯) ರ ಶಾಸನದಲ್ಲಿ ಮುಗಿಲಕುಲದ ಗರುಡರ ವಂಶಾವಳಿಯನ್ನೇ ನೀಡಿದೆ. ಗಂಡನಾರಾಯಣಸೆಟ್ಟಿ ಆತನ ಪತ್ನಿ ಮೂರವ್ವೆ (ಬೀಚವ್ವೆ ?) ಈತನ ಮಕ್ಕಳಾದ ಹೊಯ್ಸಳಸೆಟ್ಟಿ (ಪತ್ನಿ ಮಾಚವ್ವೆ) ಬೋಕಣ, – ಬಿಮ್ಮಚ ಹೊಯ್ಸಳಸೆಟ್ಟಿಯ ಮಕ್ಕಳಾದ ಬಿಬ್ಬೆಯ ನಾಯಕ (ಆತನ ಮಗ ಮಹದೇವ ನಾಯಕ) ಹಾಗೂ ಕೊರೆಯನಾಯಕ (ಈತನ ಪತ್ನಿಯರು ಮಾರವ್ವೆ – ಚಿಕ್ಕಮಾದವ್ವೆ) ಈತನ ಮಕ್ಕಳಾದ ಬಲ್ಲೆಯ ಸಿವನೆನಾಯಕ, ಈತನ ಮಗ ಬಲನಾಯಕ (ಪತ್ನಿ ಗಂಗಾದೇವಿ) ಈತನ ಮಗ ಕನ್ನೆಯ ನಾಯಕ, (ಪತ್ನಿಯರು ವುಮ್ಮವ್ವೆ , ಜವನವ್ವೆ, ಕಲ್ಲವ್ವೆ) ಈತನ ಮಗ ರಂಗೆನಾಯಕ (ಪತ್ನಿಯರು ಕೇತವ್ವೆ, ಹೊನ್ನವ್ವೆ, ಮಂಚವ್ವೆ) [೧೧೮]

ಶಾಸನಗಳಲ್ಲಿ ಇವರನ್ನು "ನಾನಾದೇಶಿಯಂ ಸೆಟ್ಟಿವಟ್ಟಮಂ ತಳೆದ ಗಂಡನಾರಾಯಣರು ಕಂನಡಿಗಮೊನೆಯಾಳ್ತಿ ನೆಂಗೆಯ್ವೆ ಸೇನಾನಾಯಕರು, ಹೊಯ್ಸಳ ಲೆಂಕ ನಿಸ್ಸಂಕರು, ಕಬ್ಬಾಹುನಾಡಾಳ್ವರು, ಸೇವುಣ ಸೈನ್ಯ ವಿಭಾಡರು ಎಂದೆಲ್ಲ ವರ್ಣಿಸಿದೆ. ಈ ಸಮಯದಲ್ಲಿ ಹೊಯ್ಸಳ ಹಾಗೂ ಸೇವುಣರ ನಡುವೆ ನಡೆದ ಕಾಳಗದಲ್ಲಿ ಇವರು ವಿಶಿಷ್ಟ ಪಾತ್ರ ವಹಿಸಿರಬಹುದು ಎನಿಸುತ್ತದೆ.

ಚಾಮರಾಜನಗರ ತಾಲೂಕಿನ (೧೩೨) ಮಂಗಳದಲ್ಲಿ ದೊರೆತ ಶಾಸನವು ೧೦೪೯–೧೦೫೦ ರ ವೇಳೆಯದ್ದಾಗಿದ್ದು ಇದರಲ್ಲಿ ವಣಿಶೈ ಮಕ್ಕಳಿಗೆ ಎಂದರೆ ವ್ಯಾಪಾರಿಗಳ ಅಂಗರಕ್ಷಕರಿಗೆ ಇಲ್ಲಿ ತಂಗಿದ್ದಾಗ ಊಟ ಹಾಕಿದ ಬಗ್ಗೆ ವಿವರಗಳಿವೆ.[೧೧೯] ಕೊಲ್ಲೆಗಾಳ ತಾಲೂಕಿನ (೧೧೩) ಮುಡಿಗೊಂಡದಲ್ಲಿ ಸಿಕ್ಕಿರುವ ತಮಿಳು ಶಾಸನವೊಂದು ಅಂಗರಕ್ಷಕರ ಬಗ್ಗೆ ತಿಳಿಸಿದೆ. ಇದರ ಕಾಲವನ್ನು ೧೧೯೦–೯೧ ಎಂದು ಗುರುತಿಸಲಾಗಿದೆ. ಈ ಶಾಸನದಲ್ಲಿ ಸೇನಾಪತಿಯ ಮಗನೂ ಮತ್ತು

ಮುಡಿಗೊಂಡ ಶೋರಿಪುರದ ' ಅಡೈಪ್ಪು ಮುದಲಿ' ಯು ಆದ ದಾಸನಾಯಕನು ವಲಂಗೈ ಸೇನೆಯವರಿಗೆ ಬಿಟ್ಟ ದತ್ತಿಯ ವಿವರವನ್ನು ಕೊಟ್ಟಿದೆ. ಈ ಕೊಡಿಗೆ ಭೂಮಿಯನ್ನು ಮೊದಲು ವೀರಶೋರಿ ಅನುಕ್ಕುರ್' ಎಂಬ ಸಂಘದ ಸದಸ್ಯನೊಬ್ಬನಿಗೆ ಭೋಗ್ಯಕ್ಕೆ ಕೊಟ್ಟಿದ್ದಂತೆ ತಿಳಿದುಬರುತ್ತದೆ. ಈ ವೀರಶೋರಿ ಅನುಕ್ಕುರ್ ವೀರಶೋರಿನ ಅಂಗರಕ್ಷಕನಾಗಿದ್ದು, ರಾಜನ ಸಮೀಪದಲ್ಲಿಯೇ ಇರಬೇಕಾಗಿತ್ತೆಂದು ಸೂಚಿಸಲಾಗಿದೆ. [೧೨೦] ಈ ಅಂಗರಕ್ಷಕ ಪಡೆಯು ವೀರಶೋರಿ ಎಂಬ ಬಿರುದನ್ನು ಹೊಂದಿದ್ದ ಚೋಳ ಒಂದನೇ ಪರಾಂತಕನ ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿರಬೇಕು ಎಂದು ಊಹಿಸಲಾಗಿದೆ.

ಸುಮಾರು ೧೨-೧೩ ನೇ ಶತಮಾನದ ಶಾಸನವೊಂದು (ಚಾಮರಾಜನಗರ ೧೪೨) ನಂಬಿಯರನ್ನು (ಅರ್ಚಕ) ಒಬ್ಬ ಸೇವಕನನ್ನು, ಒಬ್ಬ ಕರಣಿಕನನ್ನು, ಇಬ್ಬರು ವಾದ್ಯಗಾರರನ್ನು, ಒಬ್ಬ ಧ್ವಜಹೋರುವವನನ್ನು, ವಾದ್ಯ ವಿಶೇಷವನ್ನು ನುಡಿಸುವವನನ್ನು, ಒಬ್ಬ ಹಾಡುಗಾರನನ್ನು, ನಾಲ್ವರು ಪಾತ್ರದವರನ್ನು, ದವನಿಗ ಮತ್ತು ಅಂಘರಿಕರನ್ನು ಪೋಷಿಸಲು ಭೂಮಿಯನ್ನು ದತ್ತಿ ಬಿಟ್ಟದನ್ನು ತಿಳಿಸುತ್ತದೆ. ದವನಿಗನೆಂದರೆ ಹೂವಾಡಿಗನು, ಅಂಘರಿಕನೆಂದರೆ ಅಂಗರಕ್ಷಕನೆಂದು ಅರ್ಥವಾಗುತ್ತದೆ.

ಬೇಲೂರು ೪೫೮ ಕ್ರಿಶ ೧೧೪೫-೪೬ ರಲ್ಲಿ ಒಡೆಯಲಾದ ಪಂಡಿತನ ಹಳ್ಳಿಯ ಶಾಸನ " ವಿಷ್ಣುವರ್ಧನನ ಕಟ್ಟದಲಗು"ಎಂದು ಪ್ರಸಿದ್ದಿಯನ್ನು ಹಾಗೂ ಅವನ 'ಗರುಡ' ಎಂದು ಪ್ರಸಿದ್ಧವಾದ ಹಡವಳ ಬೋರೆ ಮತ್ತು ಬಲ್ಲ ಎಂಬವೀರ ಚಂಗಾಳ್ವನ ಕುದುರೆಗಳ ಹಾಗೂ ಚಂಗಾಳ್ವನ ಆನೆಯೊಂದಿಗೆ ಹೋರಾಡಿದ ಸಂಗತಿಯನ್ನುವಿವರಿಸಿದೆ. [೧೨೧]

ಸ್ವಾಮಿನಿಷ್ಠೆ ಮತ್ತು ಪ್ರಾಮಾಣಿಕತೆಯ ಭಾಷೆ ನೀಡುವ ಪದ್ಧತಿಯಾಗಿ ಲೆಂಕ, ಗರುಡ ಪದ್ಧತಿ ಬೆಳೆದಂತೆ ಕಾಣುತ್ತದೆ. ದೇಶದ್ರೋಹಿಗಳ ಸಂಖ್ಯೆಯನ್ನು ಕಡಿಮೆ ಮಾಡುವ, ಅರಸೊತ್ತಿಗೆಯನ್ನು ರಕ್ಷಣೆ ಮಾಡುವ ದಳವೊಂದರ ನಿರ್ಮಾಣದ ಉದ್ದೇಶ ಇದರ ಹಿಂದಿರುತ್ತದೆ. ಮಾಂಡಲಿಕರು, ಸಾಮಂತರು, ಅರಸೊತ್ತಿಗೆಯ ನಡುವೆ ಬಂಡಾಯ, ಅಸಹಕಾರ, ಅಂತಕಲಹ ನಡೆಯುತ್ತಿದ್ದ ಈ ಕಾಲದಲ್ಲಿ ಇಂತಹ ದಳದ ಅವಶ್ಯಕತೆಯಿತ್ತು. ಲೆಂಕರು, ಗರುಡರು, ರಾಜ್ಯದ ತುಂಬ ಹರಡಿಕೊಂಡು, ವಿವಿಧ ಇಲಾಖೆಯ ಅಧಿಕಾರಿಗಳು ಅಥವಾ ಬೇರೆ ಬೇರೆ ಭಾಗಗಳ ಅಧಿಕಾರಿಗಳಾಗಿದ್ದರೆ, ಆಂತರಿಕ ಕಲಹ ಅಥವಾ ವಂಚನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ ಈ ದೇಶಪ್ರೇಮಿ ಯುವಕರ ಸೈನ್ಯದ ನಿರ್ಮಾಣ ಈ ಪದ್ಧತಿಯ ಘೋಷಣೆಗೆ ಕಾರಣವೆನ್ನಬಹುದು.[೧೨೨] ಇವೆಲ್ಲವೂ ಆತ್ಮಾಹುತಿಗಳೇ ಆಗಿವೆ. ಪ್ರಾಮಾಣಿಕತೆ, ಸ್ವಾಮಿನಿಷ್ಠೆಯ ಹೆಸರಿನಲ್ಲಿ ಅರಸೊತ್ತಿಗೆ ಉಳಿವಿಗಾಗಿ ಪ್ರಭುವರ್ಗ ರೂಪಿಸಿದ ಶೋಷಣೆಯಾಗಿ ಕಾಣುತ್ತದೆ. ವ್ಯಕ್ತಿಯ ಬದುಕು ಹಾಗೂ ಪ್ರಾಣವನ್ನು ಪಣಕ್ಕಿಟ್ಟ ಈ ಪದ್ಧತಿ ಸೈನಿಕರ ಶೋಷಣೆಯ ಇನ್ನೊಂದು ಮುಖದಂತೆ ಕಾಣುತ್ತದೆ. ಆದರೆ ನಾಡಿನ ಒಳಿತಿಗಾಗಿ ಆತ್ಮಾಹುತಿ ಮಾಡಿಕೊಂಡ ಈ ಯೋಧರ ಬಗ್ಗೆ ಅಂದಿನ ಸಮಾಜದಲ್ಲಿ ಅಪಾರವಾದ ಗೌರವ ಅಭಿಮಾನಗಳಿದ್ದವು.

೨.೧೪: ಸೇಉಣರ (ಯಾದವರು) ಪೊಲೀಸ್ ಅಧಿಕಾರಿ ರಕ್ಷಪಾಲ.

ದೇವಗಿರಿಯ ಯಾದವರು ರಾಷ್ಟ್ರಕೂಟರ, ಚಾಲುಕ್ಯರ ಆಡಳಿತ ವ್ಯವಸ್ಥೆಯನ್ನೇ ಮುಂದುವರಿಸಿದರು. ಇವರ ಕಾಲ ದಲ್ಲಿ ಗ್ರಾಮಗಳಲ್ಲಿ 'ಗಾವುಂಡ', ನಾಡಿನಲ್ಲಿ 'ನಾಳ್‌ಗಾವುಂಡ' ರವರುಗಳು ರಕ್ಷಣಾ ಕಾರ್ಯವನ್ನು ಮಾಡುವುದರ ಜೊತೆಗೆ ತಳಾರನು ಸಹ ಇದ್ದ ಬಗ್ಗೆ ಉಲ್ಲೇಖವಿದೆ. ಆದರೆ ಇಲ್ಲಿ ಗ್ರಾಮಗಳ ರಕ್ಷಣೆಗೆ 'ರಕ್ಷಪಾಲ' ಎಂಬ ಅಧಿಕಾರಿಯೊಬ್ಬ ನಿದ್ದನೆಂದು ತಿಳಿದುಬರುತ್ತದೆ. ಈ ಹೆಸರಿನ ಅಧಿಕಾರಿಗಳು ಈ ಹಿಂದೆ ಆಳಿದ ಯಾವುದೇ ಅರಸರ ಆಡಳಿತದಲ್ಲಿ ಕಂಡು ಬರುವುದಿಲ್ಲ. ಸರಕಾರಿ ಅಧಿಕಾರಿಗಳು ಊರ ಸಭೆಗಳಲ್ಲಿ (ಮಹಾಜನರ ಸಭೆ ಅಗ್ರಹಾರಗಳಲ್ಲಿ ನಖರ, ಮಹಾನಾಡು ಎಂಬ ವ್ಯಾಪಾರಿಗಳ ಸಭೆ) ನ್ಯಾಯ ತೀರ್ಮಾನ ಮಾಡುತ್ತಿದ್ದರು. 'ದಿವ್ಯ' ರೂಢಿಯಲ್ಲಿತ್ತು. ಜುಲ್ಮಾನೆ ಶಿಕ್ಷೆಯ ಒಂದು

ವಿಧಾನ, ಒಂದು ತಪ್ಪಿಗೆ ನೀಡುವ ಜುಲ್ಮಾನೆ ವ್ಯಕ್ತಿಯ ಸ್ಥಾನಮಾನಕ್ಕನುಗುಣವಾಗಿ ಹೆಚ್ಚುತ್ತಿತ್ತು. ಸಾರ್ವಜನಿಕ ಬಹಿಷ್ಕಾರವು ಶಿಕ್ಷೆಯ ಒಂದು ರೀತಿಯಾಗಿತ್ತು.

<u>ಅಡಿಟಿಪ್ಪಣಿ:</u>

೧) **Mullik.B.N – A philosophy for the Police, Aliyad - Bombay – 1969, P – 6**

೨) **Ibid - p- 3**

೩) **Reeth.C – The Blind Eye of History- Febar and Febar London – 1952, p- 9**

೪) **Mority- Police procedure and administration , p – 9**

೫) ಜಿಲಾನಿ,ಎಸ್.ಎ– (ಸಂ) ಕರ್ನಾಟಕ ಗಜೇಟಿಯರ್, ದಕ ಜಿಲ್ಲೆ. ಪು– ೪೭೫–೭೬

೬) **Encyclopedia of Britanica – Volume- 18 p-158**

೭) **E. B - p- 158**

೮) ಕಂಠೀರಾವ್ – ಭಾರತೀಯ ನ್ಯಾಯಪದ್ಧತಿ, ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ – ೧೯೭೮ ಪು– ೨

೯) ಅದೇ – ಪು– ೩೨೪

೧೦) ಅದೇ– ಪು– ೩೨೫

೧೧) ಋಗ್ವೇದ ೨೮.೩

೧೨) ಅಥರ್ವವೇದ ೪–೧೬–೯

೧೩) ಶೇಷನವರತ್ನ (ಅನು), ಮನುಸ್ಮೃತಿ, ಪ್ರ. ಸಮಾಜ ಪುಸ್ತಕಾಲಯ ಧಾರವಾಡ – ೨೦೦೩, ಪು– ೧೮

೧೪) ಅಥರ್ವವೇದ ೧–೭–೬

೧೫) ಅಥರ್ವವೇದ ೨–೨೪–೨

೧೬) ಅಥರ್ವವೇದ ೬–೯೯–೨

೧೭) **Madan.J.C- Indian Police,- Uppal publication New Delhi- 1980 – p- 5**

೧೮ ಶೇಷನವರತ್ನ, ಮನು– ಪು– ೨೫೩

೧೯) ಅದೇ – ಪು– ೨೫೪

೨೦) ಅದೇ – ಪು– ೨೫೭

೨೧) ಅದೇ – ಪು – ೨೬೧

೨೨) ಅದೇ – ಪು – ೨೭೯

೨೩) ಅದೇ– ಪು– ೨೬೨

೨೪) ಅದೇ– ಪು– ೨೭೨

೨೫) ಅದೇ– ಪು– ೨೭೯

೨೬) ಅದೇ – ಪು– ೨೬೬

೨೭) ೨೮) ೨೯) ಅದೇ– ಪು– ೨೭೩

೩೦) ೩೧) ಅದೇ– ಪು – ೨೭೪

೩೨) ಮತ್ತು ೩೩) ಅದೇ – ಪು– ೧೮೧

೩೪) ಅದೇ– ಪು– ೨೯೪

೩೫) ಅದೇ– ಪು– ೨೯೬

೩೬) ೩೭), ೩೮), ಮತ್ತು ೩೯) ಅದೇ– ಪು– ೨೯೭

೪೦) ಅದೇ – ಪು– ೩೦೨

೪೧) ಅದೇ – ಪು– ೩೦೩

೪೨) ಮತ್ತು ೪೩) ಅದೇ– ಪು– ೩೩೫

೪೪) ಮತ್ತು ೪೫) ಅದೇ – ಪು– ೩೩೬

೪೬) ಅದೇ – ಪು– ೩೩೭

೪೭) and ೪೮) Nigam .S.R – Scottland yard and Indian Police – Kithab mahal Alahabadh- 1963- p- 30

೪೯) ೫೦) ಮತ್ತು ೫೧) ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು – ಶ್ರೀ.ಕೂಡಲಿ ಶೃಂಗೇರಿ, ಕೌಟಲೀಯ ಅರ್ಥಶಾಸ್ತ್ರ, ಪ್ರ. ಅಂಕಿತ ಪ್ರಕಾಶನ ಬೆಂಗಳೂರು– ೧೯೬೩ – ಪು– ೨೨೩

೫೨) Chande.M.B- The Police in India- Lontic publishers and distributers – New Delhi- 1997, p- 57

೫೩) Ibid- p- 58, 59

೫೪) ಮತ್ತು ೫೫) ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು –ಕೌ.ಅ – ಪು– ೨೧೯

೫೬) ೫೭), ೫೮), ೫೯), ಮತ್ತು ೬೦) ಅದೇ – ಪು– ೨೨೪

೬೧) Madan.J.C- I. P – p- 7-8

೬೨) Doreswamy. K – History of Police force in Mysore, 1866-1947, unpublished ph.d thesis, p- 7

೬೩) ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು –ಕೌ.ಅ – ಪು– ೨೨೪

೬೪) ಅದೇ– ಪು – ೨೨೫

೬೫) Kyari. J.C – The Indian Police, - Febar and Febar, London- 1932 , p- 19-20

೬೬) ಕಂಠೀರಾವ್– ಭಾ.ನ್ಯಾ.ಪ – ಪು– ೨೦೬

೬೭) ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು –ಕೌ.ಅ – ಪು– ೫೫

೬೮) ಅದೇ– ಪು – ೨೨೫

೬೯) ಅದೇ– ಪು– ೨೨೬

೭೦) ಅದೇ – ಪು– ೨೨೬–೨೨೭

೭೧) ಕೌಟಲ್ಯ, 'ಅರ್ಥಶಾಸ್ತ್ರ', – II- ೫

೭೨) ಮತ್ತು ೭೩) ಅದೇ – ಪು– ೨೨೪

೭೪) ಕಂಠೀರಾವ್, ಭಾ. ನ್ಯಾ.ಪ – ಪುಟ– ೨೪೯

೭೫) ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು –ಕೌ.ಅ – ಪು– ೨೨೭

೭೬) ಅದೇ– ಪು– ೨೨೮

೭೭) ಸರಸ್ವತಿ .ಎನ್– 'ವಿಜಯನಗರ ಕಾಲದಲ್ಲಿ ಉದ್ಯೋಗಸ್ಥ ಮಹಿಳೆಯರು' – ವಿಜಯನಗರ ಒಂದು ಅಧ್ಯಯನ– ಸಂಪುಟ ೩ ರಲ್ಲಿ ಎಂಬ ಲೇಖನ ಪ್ರಕಟಿತ ಲೇಖನ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭ (ಮೂಲ ತಾರಾ ಅಲಿಬೇಗ್‌ರ ವುಮನ್ ಇನ್ ಎನ್ಸಿಯಂಟ್ ಇಂಡಿಯಾ ಎಂಬ ಕೃತಿ) ಪು– ೮೨

೭೮) ಮಿತ್ರ.ಆ.ರಾ– ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ, (ಕರ್ನಾಟಕದ ಪರಂಪರೆ ಭಾಗ ೧ ರಲ್ಲಿ ಪ್ರಕಟಿತ ಲೇಖನ) ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳ್ರರು – ೨೦೦೬ (ಅದೇ– ಮೂಲ– ನರಸಿಂಹ ಆಚಾರ್. ಡಿ.ಎಲ್) ಪು– ೧೨೫

೭೯) ಇ.ಸಿ ಸಂಪುಟ ೪ – ಪು ೭೨

೮೦) ಮಳಗಿ.ಎಸ್.ಆರ್. (ಅನು) ಪ್ರಾಚೀನ ಕಾಲದ ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿ, ಕರ್ನಾಟಕದ ಪರಂಪರೆ ಭಾಗ– ೧ ರಲ್ಲಿನ ಲೇಖನ ಮೂಲ ಲೇಖಕರು ಗೋಪಾಲ.ಬಿ.ಆರ್, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬, ಪು– ೨೧೬

೮೧) ಕೃಷ್ಣರಾವ್. ಎಂ.ವಿ –ಕರ್ನಾಟಕದ ಪರಂಪರೆ ಭಾಗ ೧ ರಲ್ಲಿ, ಆಡಳಿತ ಸಂಸ್ಥೆಗಳು –ಆದಿಕಾಲ ಎಂಬ ಲೇಖನ, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು –೨೦೦೬, ಪುಟ – ೫೯೧,

೮೨) ಅದೇ– ಪು– ೫೮೫

೮೩) ಸೂರ್ಯನಾಥ್ ಕಾಮತ್ –(ಸಂ) ಭಾರತದ ಗಜೆಟಿಯರ್ ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ– ಪ್ರ– ಕರ್ನಾಟಕ ರಾಜ್ಯ ಸರಕಾರ– ೧೯೯೫, ಕರ್ನಾಟಕದ ಸಂಕ್ಷಿಪ್ತ ಇತಿಹಾಸ ೧೯೮೫, ಪು– ೪೦

೮೪) ಕೃಷ್ಣರಾವ್.ಎಂ.ವಿ – ಕ.ಪ – ಪು – ೫೮೬

೮೫) ಅದೇ– ಪುಟ – ೫೯೧

೮೬) ಅದೇ- ಪುಟ – ೫೯೮- ೫೯೯

೮೭) ಅದೇ- ಪುಟ – ೬೦೦

೮೮) ಶ್ರೀಧರ ಹೆಚ್.ಜಿ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆ ಕ್ರಿಶ ೪೫೦ ರಿಂದ ೧೩೫೦, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು – ೨೦೦೨)

೮೯) EI XIII p- 189

೯೦) Krishnamurthy – the Chalukyas of Kalyani – consept publishing company- Delhi – 1977

೯೧) ಸೂರ್ಯನಾಥ ಕಾಮತ್ – ಭಾ.ಗೆ.ಕ.ಧಾ- ಪು- ೪೨

೯೨) ಕೃಷ್ಣರಾವ್. ಎಂ.ವಿ – ಕರ್ನಾಟಕದ ಪರಂಪರೆ ಭಾಗ ೧, ಪುಟ – ೬೦೩,

೯೩) ಬಸವರಾಜು.ಕೆ.ಆರ್.– ಬಾದಾಮಿ ಚಾಲುಕ್ಯರ ಆಡಳಿತ, (ಮುರಿಗೆಪ್ಪ.ಎ. (ಸಂ) ಬಾದಾಮಿ ಚಾಲುಕ್ಯರು, ಲೇಖನ ಸಂಪುಟದಲ್ಲಿನ ಲೇಖನ) ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ –೨೦೦೯ ಪು- ೧೧೯

೯೪) Basavaraj. R- Administration under the Chalukyas of Kalyana, publishers New Era publications Madras – 1983,

೯೫) ಮುರಿಗೆಪ್ಪ.ಎ.–(ಸಂ) ಬಾದಾಮಿ ಚಾಲುಕ್ಯರು, ಲೇಖನ ಸಂಪುಟ, ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೯ ಪು- ೧೩೨

೯೬) ಅದೇ- ಪು- ೧೩೩

೯೭) ಅದೇ - ಪು- ೧೩೪

೯೮) ಅದೇ- ಪು- ೧೩೫

೯೯) ೧೦೦) ಮತ್ತು ೧೦೧) ಅದೇ- ಪು- ೧೩೫–೧೩೬

೧೦೨) ಸೂರ್ಯನಾಥ ಕಾಮತ್ – ಭಾ.ಗೆ.ಕ.ಧಾ- ಪು- ೭೫

೧೦೩) ಶ್ರೀಧರ ಹೆಚ್.ಜಿ, ಪ್ರಾ. ಕ. ಯು – ಪುಟ- ೧೭೭

೧೦೪) ಅದೇ- ಪುಟ- ೨೮೦

೧೦೫) S.I.I. IX. i, 101- 1045 AD

೧೦೬) B.K.I, I- i- 50 – 1006 AD

೧೦೭) ಸೂರ್ಯನಾಥ ಕಾಮತ್ – ಭಾ.ಗೆ.ಕ.ಧಾ- ಪು- ೧೦೧

೧೦೮) B.K.I I-o. 50- 1005 AD

೧೦೯) S.I.I IX – I 130, 1066 AD

೧೧೦) ಜನ್ನ- ಅನಂತನಾಥ ಪುರಾಣ- ಹೆಚ್, ದೇವೀರಪ್ಪ .ಎಂ.ಸಿ, ಪದ್ಮನಾಭ ಶರ್ಮ, ಕನ್ನಡ ಅಧ್ಯಯನ ಸಂಸ್ಥೆ – ಮೈಸೂರು , ೧೯೭೨, ಲೆಂಕರೊಡನೆ ಸಹಗಮನ ಮಾಡಲು ಲೆಂಕತಿಯರೂ ಸಿದ್ಧರಾಗುತ್ತಿದ್ದರು.

೧೧೧) EC V B 1 , 112 – 1120 AD

೧೧೨) I.A XIX 164 1040 AD

೧೧೩) EC VBI 112, 1220 AD

೧೧೪) ಶ್ರೀಧರ ಹೆಚ್.ಜಿ, (ಪ್ರಾ. ಕ. ಯು) ಪುಟ- 281

೧೧೫) ಸೂರ್ಯನಾಥ ಕಾಮತ್ – ಭಾ.ಗೆ.ಕ.ಧಾ- ಪು- ೧೧೮

೧೧೬) E.C Vol 6 , p- 48

೧೧೭) E C Vol 6- p- 67-68

೧೧೮) E.C Vol- 6 – p- 68

೧೧೯) E.C Vol- 4 – p- 75

೧೨೦) S.I.I Vol – 18, (E) p- 5

೧೨೧) EC Vol VI P- 279

೧೨೨) ಶ್ರೀಧರ ಹೆಚ್.ಜಿ, (ಪ್ರಾ. ಕ. ಯು) ಪುಟ- ೨೮೧

ಅಧ್ಯಾಯ – ೩
ಮಧ್ಯಯುಗೀನ ಕಾಲದ ಪೊಲೀಸ್ ವ್ಯವಸ್ಥೆ

೩.೧ : ವಿಜಯನಗರ ಅರಸರ ಕಾಲದ ಪೊಲೀಸ್ ವ್ಯವಸ್ಥೆ

ವಿಜಯನಗರದ ಅರಸರ ಕಾಲದಲ್ಲಿ ಆಂತರಿಕ ಭದ್ರತೆಗಾಗಿ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆ ಇರುವುದು ಕಂಡು ಬರುತ್ತದೆ. ಹಿಂದೆ ಆಳಿದ ರಾಜಮನೆತನಗಳಿಗಿಂತ ವ್ಯವಸ್ಥಿತವಾದ ಮತ್ತು ವಿಶಿಷ್ಟವಾದ ಸ್ಥಳೀಯ ಸರಕಾರಗಳ ವ್ಯವಸ್ಥೆ ಈ ಕಾಲದಲ್ಲಿ ಕಂಡುಬರುತ್ತದೆ. ಆಂತರಿಕ ರಕ್ಷಣೆಯ ವಿಷಯಕ್ಕೆ ಬಾಹ್ಯ ರಕ್ಷಣೆಯಷ್ಟೆಯೇ ಪ್ರಾಮುಖ್ಯತೆಯನ್ನು ಇವರು ನೀಡಿದರು. ಸಾಮ್ರಾಜ್ಯವನ್ನು ೨೪ ರಾಜ್ಯಗಳಾಗಿ ವಿಂಗಡಿಸಲಾಗಿತ್ತು. ರಾಜ್ಯ, ಮಂಡಲ, ಸೀಮಾ, ಸ್ಥಳ ಎಂದು ವಿಭಜಿಸ ಲಾಗಿತ್ತು. ಇವುಗಳನ್ನು ಮತ್ತೆ ಉಪ ವಿಭಾಗಳಾಗಿ ವಿಂಗಡಿಸಲಾಗಿತ್ತು. ರಾಜನ ಕೆಳಗೆ ಸುಮಾರು ಎರಡು ನೂರು ಸಾಮಂತ ರಿದ್ದರು ಎಂದು ಪಾಯಾಸ್ ಹೇಳುತ್ತಾನೆ. ಒಟ್ಟು ಆರು ಪ್ರಾಂತ್ಯಗಳಿದ್ದು, ಒಂದೊಂದಕ್ಕೂ ಒಬ್ಬೊಬ್ಬ ದಂಡನಾಯಕನನ್ನು ನೇಮಿಸಲಾಗಿತ್ತು. ಸಮಸ್ತ ರಾಜ್ಯದ ಮೇಲ್ವಿಚಾರಣೆಯನ್ನು 'ಮಹಾನಾಯಕಾಚಾರ್ಯ'ನ ಮೂಲಕ ಮಾಡುತ್ತಿದ್ದ. ಈ ಪ್ರಾಂತ್ಯ ಗಳಲ್ಲಿ ಸುಂಕಾಧಿಕಾರಿ, ಸೈನ್ಯಾಧಿಕಾರಿ ಎಂದು ಬೇರೆ ಬೇರೆ ಅಧಿಕಾರಿಗಳೂ ಇರುತ್ತಿದ್ದರು. ಹಳ್ಳಿಯೇ ಸ್ಥಾನಿಕ ಆಡಳಿತದ ಕೊನೆಯ ಘಟಕ ಆಗಿತ್ತು. ಗ್ರಾಮ ಸಂಬಂಧೀಯ ವ್ಯವಹಾರಗಳನ್ನೆಲ್ಲ ಗ್ರಾಮಕೂಟವೇ ನಿರ್ವಹಿಸುತ್ತಿತ್ತು. ಹಳ್ಳಿಗಳಲ್ಲಿ 'ಶಾನಭೋಗ' (ಕುಲಕರಣಿ) ಮತ್ತು 'ತಳವಾರ' (ಕಾವಲುಗಾರ) ಮೊದಲಾದ ಅಧಿಕಾರಿಗಳು ಇರುತ್ತಿದ್ದರು. ಹಳ್ಳಿಗಳು ಸ್ವಯಂ ಆಡಳಿತದ ಘಟಕಗಳಾಗಿದ್ದವು ಮತ್ತು ಅವು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದವು.[೧] ಸಾಮ್ರಾಜ್ಯವನ್ನು 'ರಾಜ್ಯ'ಗಳಾಗಿ (ಉದಾ: ಮುಳುವಾಯಿ ರಾಜ್ಯ,ಮಂಗಳೂರು ರಾಜ್ಯ) ರಾಜ್ಯಗಳನ್ನು 'ವಿಷಯ' ಅಥವಾ 'ವೇಂಟೆ' ಎಂದು ವಿಭಜಿಸಲಾಗಿತ್ತು. ಈ ಭಾಗಕ್ಕೆ 'ಸೀಮೆ' ಅಥವಾ 'ನಾಡು' ಎಂಬ ಉಪ ವಿಭಾಗವಿತ್ತು. 'ಸ್ಥಳ' ಅಥವಾ 'ಕಂಪಣ' ಕೆಲವೇ ಗ್ರಾಮಗಳುಳ್ಳ ಕಡೆಯ ವಿಭಾಗವಾಗಿದ್ದು, ಅದರ ಕೆಳಗೆ ಗ್ರಾಮವಿತ್ತು ಎಂದು ಡಾ:ಸೂರ್ಯನಾಥ ಕಾಮತ್‌ರವರು ಅಭಿಪ್ರಾಯಪಡುತ್ತಾರೆ.[೨]

ಪಟ್ಟಣವನ್ನು ವಿವಿಧ ಪಾಳೆಯಗಳಾಗಿ, ಪ್ರತಿ ಪಾಳೆಯವನ್ನು ವಿವಿಧ ಕೇರಿಗಳಾಗಿ ವಿಭಜಿಸಲಾಗಿತ್ತು. ಪ್ರತಿ ಪಾಳೆಯಕ್ಕೆ ಒಬ್ಬ ಪ್ರಮುಖ ರಕ್ಷಣಾಧಿಕಾರಿ ಇರುತ್ತಿದ್ದ. ಆತ ತನ್ನ ಸಹಾಯಕರೊಂದಿಗೆ ಬೀದಿಗಳನ್ನು ಗಸ್ತು ತಿರುಗುತ್ತಿದ್ದ. ಪಟ್ಟಣಕ್ಕೆ ಬಂದು ಹೋಗುವ ಪ್ರತಿಯೊಬ್ಬರನ್ನೂ ಗಮನಿಸುತ್ತಿದ್ದನು. ಯಾವುದೇ ಗ್ರಾಮದಲ್ಲಿ ಭೂಮಿ ದಾನ ಮಾಡಿದಾಗ, ಕಾಣಿಕೆ ನೀಡಿದಾಗ ಇವರಿಗೂ ಒಂದು ಭಾಗ ಹೋಗುವ ವ್ಯವಸ್ಥೆ ಮಾಡಲಾಗಿತ್ತು. ಗುಪ್ತಚರರು ತಂದ ಸುದ್ದಿಯನ್ನು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿ, ಮಂತ್ರಿಗಳನ್ನು ಕರೆದು ಮಾತನಾಡುತ್ತಿದ್ದ. ಈ ವ್ಯವಸ್ಥೆ ಆಂತರಿಕ ಕಲಹ ನಿವಾರಿಸುವಲ್ಲಿ, ಬಂಡುಕೋರರನ್ನು ಬಗ್ಗು ಬಡಿಯುವಲ್ಲಿ ಇದು ಮಹತ್ತರ ಪಾತ್ರವಹಿಸಿತ್ತು.

೩.೧ ೧ : ತಳಾರಿ, ಕಾಪು

ಪೊಲೀಸ್ ಕೆಲಸಗಳಿಗೆ 'ತಳಾರಿ' ಎಂಬ ಅಧಿಕಾರಿಯಿದ್ದನು. ಅವನ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಗ್ರಾಮ ಮುಖ್ಯಸ್ಥನು ನೋಡಿಕೊಳ್ಳುತ್ತಿದ್ದನು. 'ತಳಾರಿ'ಯು 'ಗೌಡ'ನ ಅಧೀನದಲ್ಲಿ ಕೆಲಸ ಮಾಡಬೇಕಿತ್ತು. ಅವನನ್ನು 'ತಳವಾರ' ಅಥವಾ 'ಕಾಪು' ಅಥವಾ 'ಕಾವಲ್' ಎಂದು ಕರೆಯಲಾಗುತ್ತಿತ್ತು. ಇತರ ಗ್ರಾಮ ಹುದ್ದೆಗಳ ಹಾಗೆ ಅವನ ಹುದ್ದೆಯೂ ವಂಶ ಪಾರಂಪರ್ಯವಾಗಿತ್ತು. ಅವನು ಶಾಂತಿ ಕಾಪಾಡಲು ಅಹೋರಾತ್ರಿ ಗಸ್ತು ತಿರುಗುತ್ತಾ ಅಪರಾಧಿಗಳನ್ನು ಹಿಡಿಯಬೇಕಿತ್ತು .ಗ್ರಾಮ ವನ್ನು ಕ್ರೂರ ಮೃಗಗಳ ಹಾಗೂ ಹೊರಗಿನ ಶತ್ರುಗಳಿಂದ ರಕ್ಷಿಸುವುದು 'ಬಾರಿ– ಕಾಪು' ಎಂಬ ಗ್ರಾಮ ಸೇವಕನ ಕರ್ತವ್ಯ ವಾಗಿತ್ತು. ಅನೇಕ ವೇಳೆ 'ಕಾಪು'ಗಳ ಸಂಭಾವನೆಯನ್ನು ಗ್ರಾಮದಿಂದ ಕೊಡಲಾಗುತ್ತಿತ್ತು. ಕ್ರಿಶ ೧೩೨೪–೨೬ ರಲ್ಲಿ "ಚನ್ನಮನಾಯನಿಂಗರು ಕಂಡ್ಯಕುಂಟದ ಕೆರೆಯ ಕೆಳಗಿನ ಭೂಮಿಯಲ್ಲಿ ಮೂರು ಭಾಗಗಳನ್ನಾಗಿ ಮಾಡಿ ದೇವರು,

ಬ್ರಾಹ್ಮಣರು, ಮುಂತಾದವರಿಗೂ ಮತ್ತು ಗ್ರಾಮವನ್ನು ಕಾಯುತ್ತಿದ್ದ 'ಕಾಪು'ಗಳಿಗೆ ಎರಡು ಭಾಗಗಳು ಸೇರಬೇಕೆಂದು" ತೀರ್ಮಾನಿಸಿದರೆಂದು ಶಾಸನವು ತಿಳಿಸುತ್ತದೆ.[೩] ಅಂದರೆ ಗ್ರಾಮರಕ್ಷಣೆಯನ್ನು ಮಾಡುತ್ತಿದ್ದ 'ಬಾರಿ-ಕಾಪು'ಗಳಿಗೂ ಸಹ ಭೂಮಿಯಲ್ಲಿ ಭಾಗವನ್ನು ಹಂಚಿಕೊಡುತ್ತಿದ್ದರು ಎಂಬುದಕ್ಕೆ ಇದೊಂದು ಉದಾಹರಣೆ. ನಗರಗಳಲ್ಲಿ ಮತ್ತು ಉಪ-ನಗರ ಗಳಲ್ಲಿ ಆಡಳಿತವು ಪಟ್ಟಣಶೆಟ್ಟಿಯ ಕೈಯಲ್ಲಿದ್ದು, ಅಲ್ಲಿ 'ತಳವಾರ' ಎಂಬವನು ರಕ್ಷಣಾಧಿಕಾರಿಯಾಗಿದ್ದನು. ವಿಜಯನಗರದ ಕಾಲದಲ್ಲಿ ಕಾವಲುಗಾರರು ತಳಾರಿಗಿಂತಲೂ ಮೇಲಿನ ಸ್ಥಾನವನ್ನು ಹೊಂದಿದ್ದರು. ಪೊಲೀಸ್ ಸಂಘಟನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಜನರು ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು.

ವಿಜಯನಗರಕ್ಕೆಲ್ಲ ಒಬ್ಬ ಮಂತ್ರಿಯು ಆಡಳಿತಗಾರನಾಗಿದ್ದ. ಸಾಲುವ ತಿಮ್ಮನ ತಮ್ಮ ಗೋವಿಂದರಾಜನು ಈ ಮಂತ್ರಿ ಯಾಗಿದ್ದನು.(೧೫೨೦-೨೨) ಇವನಿಗೆ 'ತಳವಾರ' ನೆಂಬ ರಕ್ಷಣಾಧಿಕಾರಿಯ ನೆರವಿತ್ತು ಎಂದು ಪಾಯೇಸ್‌ನು ತಿಳಿಸುತ್ತಾನೆ.[೪] ವಿಜಯನಗರ ಕಾಲದಲ್ಲಿ ಪ್ರಾಂತ್ಯಾಧಿಕಾರಿಯ ಮುಖ್ಯ ಕರ್ತವ್ಯ ತನ್ನ ಪ್ರಾಂತ್ಯವನ್ನು ಶತ್ರುಗಳ ಆಕ್ರಮಣದಿಂದ ರಕ್ಷಿಸುವುದು ಮತ್ತು ಪ್ರಾಂತ್ಯದಲ್ಲಿ ಶಾಂತಿಪಾಲನೆಯ ಜವಾಬ್ದಾರಿಯನ್ನು ಹೊಂದಿದ್ದನು.[೫]

'ಕಾವಲುಗಾರರು' ಅಥವಾ 'ತಲಯಾರಿಗಳು' ಪೊಲೀಸ್ ಕರ್ತವ್ಯವನ್ನು ಮಾಡುತ್ತಿದ್ದರು. ಇವರುಗಳು ರಾತ್ರಿ ವೇಳೆ ಕಾವಲು ಕಾಯುವುದು. ಊರಿಗೆ ಹಳ್ಳಿಗೆ ಬರುವವರ ಮತ್ತು ಹೋಗುವವರ ಮೇಲೆ ಗಮನಹರಿಸಿ ನಿಗಾ ಇಡುವುದು, ಅಲೆ ಮಾರಿಗಳ ಚಲನವಲನಗಳನ್ನು ಗಮನಿಸಿ ಅವರುಗಳ ಬಗ್ಗೆ 'ಪಟೇಲ'ನಿಗೆ ವರದಿ ಮಾಡುವುದು ಇವರ ಕರ್ತವ್ಯವಾಗಿತ್ತು. ದರೋಡೆ ಸುಲಿಗೆ, ಕೊಲೆಯಂತಹ ಪ್ರಕರಣಗಳ ಆರೋಪಿಗಳನ್ನು ಬಂಧಿಸಿ, ಅವರು ತಪ್ಪಿತಸ್ಥರೆಂದು ಕಂಡುಬಂದರೆ ಅವರನ್ನು ಶಿಕ್ಷೆಗೊಳಪಡಿಸುವ ಉದ್ದೇಶದಿಂದ ಸ್ಥಳೀಯ ಪ್ರಾಧಿಕಾರದ ಮುಂದೆ ಹಾಜರುಪಡಿಸುತ್ತಿದರು. ಒಂದು ವೇಳೆ ಕಳ್ಳತನಗಳು ಸಂಭವಿಸಿದರೆ, ಕಾವಲುಗಾರರು ಹೆಜ್ಜೆ ಗುರುತು (foot-print) ಮೂಲಕ ಕಳ್ಳರನ್ನು ಪತ್ತೆಹಚ್ಚುತ್ತಿದ್ದರು. ಒಂದು ವೇಳೆ ಕಳ್ಳನು ತನ್ನ ಹಳ್ಳಿಯಿಂದ ಹೊರಗೆ ಹೋಗಿದ್ದಾನೆಂದು ಸಾಬೀತು ಆದರೆ, ಪಕ್ಕದ ಹಳ್ಳಿಯ ಕಾವಲುಗಾರನು ಈ ಕಳ್ಳನನ್ನು ಪತ್ತೆಮಾಡುವ ಕಾರ್ಯವನ್ನು ಮುಂದುವರೆಸಬೇಕಾಗಿತ್ತು. ಇದು ಆತನ ಜವಾಬ್ದಾರಿಯಾಗಿತ್ತು. ಕೊನೆಯದಾಗಿ ಯಾವ ಹಳ್ಳಿಯಲ್ಲಿ ಕಳ್ಳನು ಪತ್ತೆಯಾಗುತ್ತಾನೋ ಆ ಹಳ್ಳಿಯ ಕಾವಲುಗಾರನು ಕಳವು ಮಾಲುಗಳು ಎಲ್ಲಿವೆ ಎಂಬ ಬಗ್ಗೆ ಆತ ನನ್ನು ಪ್ರಶ್ನೆ ಮಾಡಬೇಕಿತ್ತು. ಇಲ್ಲವಾದಲ್ಲಿ ಆ ಹಳ್ಳಿಯವರು ಜವಾಬ್ದಾರರಾಗುತ್ತಿದ್ದರು. ಕಳ್ಳತನ ದರೋಡೆಗಳು ನಡೆದರೆ ಅದನ್ನು ಪತ್ತೆಮಾಡಿ ಸಂಬಂಧಪಟ್ಟ ಮಾಲಕರಿಗೆ ಹಿಂದಿರುಗಿಸುವುದು ಕಾವಲುಗಾರನ ಜವಾಬ್ದಾರಿಯಾಗಿತ್ತು. ಒಂದು ವೇಳೆ ಈ ಕೆಲಸದಲ್ಲಿ ಆತನು ವಿಫಲವಾದರೆ, ವಸ್ತುವನ್ನು ಕಳೆದುಕೊಂಡವರಿಗೆ ಆ ವಸ್ತುವಿನ ಮೌಲ್ಯವನ್ನು ತನ್ನ ಕೈಲಾದಷ್ಟು ತುಂಬಿ ಕೊಡಬೇಕಿತ್ತು. ಉಳಿದ ಭಾಗವನ್ನು ಇಡೀ ಹಳ್ಳಿಯ ಜನರು ತುಂಬಿಕೊಡಬೇಕಿತ್ತು.[೬] ಇದರಿಂದ ತಿಳಿದು ಬರುವುದೇನೆಂದರೆ ಖಾಸಗಿ ವ್ಯಕ್ತಿಯೊಬ್ಬನು ಕಳ್ಳತನಕ್ಕೆ ಒಳಗಾದರೆ, ಅದನ್ನು ರಕ್ಷಿಸುವುದು 'ಕಾವಲುಗಾರ'ನ ವೈಯಕ್ತಿಕ ಜವಾಬ್ದಾರಿಯಲ್ಲದೇ ಅದು ಸಮುದಾಯದ ಒಟ್ಟು ಜವಾಬ್ದಾರಿಯಾಗಿತ್ತು. ಹಳ್ಳಿಗಳ ನಡುವೆ ಕಳ್ಳರನ್ನು ಹಿಡಿಯುವ ಸಲುವಾಗಿ ಇಂತಹ ಒಂದು ಪರಸ್ಪರ ಸಹಕಾರ ಇತ್ತು. ಏಕೆಂದರೆ ಇಂತಹ ಹಲವು ಹಳ್ಳಿಗಳ ಗುಂಪಿಗೆ ಒಬ್ಬ ಪಾಳೆಗಾರ ನಾಯಕನಾಗಿದ್ದು, ಸರಕಾರದ ವತಿ ಯಿಂದ 'ದರೋಗ' ಎಂಬ ಹೆಸರಿನ ಪೊಲೀಸ್ ಅಧಿಕಾರಿ ಇದ್ದು, ಅನೇಕ ಹಳ್ಳಿಗಳನ್ನೊಳಗೊಂಡ ಭೂ ಪ್ರದೇಶಗಳು ಈತನ ವ್ಯಾಪ್ತಿಯೊಳಗೆ ಬರುತ್ತಿತ್ತು.[೭] ಸೈನಿಕ ವ್ಯವಸ್ಥೆಯ ಹೊರತಾಗಿ ಪಾಳೇಗಾರರು 'ಕಾವಲ್' ಎಂಬ ಹೆಸರಿನ ಪೊಲೀಸ್ ವ್ಯವಸ್ಥೆ ಯನ್ನು ಹೊಂದಿದ್ದರು. 'ಕಾವಲ್' ಎಂಬ ಶಬ್ಧದ ಅರ್ಥ 'ಕಾಯುವುದು' ಎಂದಾಗುತ್ತದೆ. ಈ ಕೆಲಸವನ್ನು ಮಾಡು ತ್ತಿದ್ದವನಿಗೆ 'ಕಾವಲುಗಾರ' ಅಥವಾ 'ತಳಾರಿ' ಎಂದು ಕರೆಯಲಾಗುತ್ತಿತ್ತು. ದಕ್ಷಿಣ ಭಾರತದಲ್ಲಿ ಈ ಪದ್ಧತಿಯನ್ನು ಕಾಣಬಹುದು.[೮] ಮೊಗಲರ ಕಾಲದಲ್ಲಿ ಪಾಳೇಗಾರರ ಮತ್ತು 'ಕಾವಲ್' ವ್ಯವಸ್ಥೆಯನ್ನು ಎರಡು ಪ್ರತ್ಯೇಕವಾದ ವ್ಯವಸ್ಥೆಗಳಾಗಿ ಪರಿಗಣಿಸಿದ್ದು,

ಪಾಳೆಗಾರರಿಗೆ ಸರಕಾರದ ಭೂಪ್ರದೇಶದಲ್ಲಿ 'ಕಾವಲ್' ವ್ಯವಸ್ಥೆಯ ಮೇಲೆ ಯಾವುದೇ ಅಧಿಕಾರವಿರಲಿಲ್ಲ. ಕಾಲಕ್ರಮೇಣ ಅವರಿಗೆ 'ಕಾವಲ್' ವ್ಯವಸ್ಥೆಯ ನಿಯಂತ್ರಣ ಸಿಕ್ಕಿತು.[೯] ಅತ್ಯಂತ ಪ್ರಾಚೀನ ಕಾಲದಲ್ಲಿ ಪ್ರತೀ ಹಳ್ಳಿಯೂ ತನ್ನದೇ ಆದ 'ಕಾವಲುಗಾರ'ರನ್ನು ಹೊಂದಿದ್ದವು. ಅವರನ್ನು ಸ್ಥಳೀಯ ಸರಕಾರಗಳು ಅಥವಾ ಆ ಹಳ್ಳಿಯ ಪ್ರಮುಖ ಆಡಳಿತ ಗಾರನು ನೇಮಿಸುತ್ತಿದ್ದನು. ಈ ಕಾವಲುಗಾರರಲ್ಲಿ ನಾಲ್ಕು ವಿಧಗಳಿದ್ದವು– ೧) ಅರಸು ಕಾವಲುಗಾರ, ೨) ನಾಡು ಕಾವಲು ಗಾರ ೩)ದೇಶ ಕಾವಲುಗಾರ ೪) ಸ್ಥಳಂ ಕಾವಲುಗಾರ. ಅರಸು ಎಂದರೆ ಸರ್ಕಾರವೆಂದು, ನಾಡು ಎಂದರೆ ಜಿಲ್ಲೆ, ದೇಶ ಎಂದರೆ ದೇಶಂ ಅಥವಾ ಪ್ರಾಂತ್ಯ. ಸ್ಥಳಂ ಎಂದರೆ ಒಂದು ಸ್ಥಳ ಅಥವಾ ಪ್ರದೇಶ ಅಥವಾ ಗ್ರಾಮ ಎಂದು ಅರ್ಥ.[೧೦] ಕಾವಲುಗಾರನು ಬೆಳೆ, ಜಾನುವಾರು ಮತ್ತು ಸ್ಥಳೀಯ ಜನರ ಗೃಹ ಉಪಯೋಗಿ ವಸ್ತುಗಳನ್ನು ಮತ್ತು ಸಾರ್ವಜನಿಕ ಸ್ಥಳಗಳಾದ ರಸ್ತೆ ಮತ್ತು ಮಾರುಕಟ್ಟೆಗಳನ್ನು ರಕ್ಷಿಸುವುದು ಇವರ ಕೆಲಸವಾಗಿತ್ತು. ಕಳ್ಳತನಗಳು ನಡೆದರೆ ಸಂಬಂಧಪಟ್ಟ ಕಾವಲುಗಾರನು ಅದನ್ನು ಪತ್ತೆಮಾಡುವ ಜವಾಬ್ದಾರಿ ಹೊಂದಿದ್ದನು. ಒಂದು ವೇಳೆ ಅದನ್ನು ಪತ್ತೆ ಮಾಡಲು ವಿಫಲವಾದಲ್ಲಿ ವಸ್ತುವನ್ನು ಕಳೆದು ಕೊಂಡವರಿಗೆ ಈತ ಪರಿಹಾರ ನೀಡಬೇಕಿತ್ತು.[೧೧] ಈ ಕಾವಲುಗಾರ ಸೇವೆಗೆ ಅವರಿಗೆ 'ಸ್ಥಳಂಕಾವಲ್' ಎಂದು ಕರೆಯುತ್ತಿದ್ದ ಸಂಬಳ ನೀಡುತ್ತಿದ್ದರು. ಇದರಲ್ಲಿ ಅರ್ಧಭಾಗ ಧಾನ್ಯದ ರೂಪದಲ್ಲಿ ಇರುತ್ತಿತ್ತು. ನಂತರದ ದಿನಗಳಲ್ಲಿ ನಗದು ರೂಪದಲ್ಲಿ ನೀಡುತ್ತಿದ್ದರು.[೧೨] ಈ 'ಕಾವಲ್' ವ್ಯವಸ್ಥೆಯ ಸಾರಾಂಶ, ತಿರುಳು ಎಂದರೆ 'Set a thief to catch a thief' ಎಂಬ ತತ್ವದ ಆಧಾರದಲ್ಲಿ ರಚಿತವಾಗಿದೆ.[೧೩] ಸಾಧಾರಣವಾಗಿ ದರೋಡೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡ 'ಕಲ್ಲನ್' ಮತ್ತು 'ಮರವ' ಜನಾಂಗದವರೇ ಹೆಚ್ಚಾಗಿ ಕಳ್ಳತನಗಳನ್ನು ಮಾಡುತ್ತಿದ್ದರು.[೧೪]

ಕಾವಲುಕಾರರಿಗೆ 'ದೇಶಕಾವಲ್' ಎಂದು ಕರೆಯುತ್ತಿದ್ದ ಸ್ಥಳೀಯ ಜನರು ಸ್ವ–ಇಚ್ಛೆಯಿಂದ ನೀಡಿದ ಹಣವನ್ನು ಅವರ ಸೇವೆಗಾಗಿ ನೀಡಲಾಗುತ್ತಿತ್ತು.[೧೫] ಇವರು ಹೆಚ್ಚಿನ ಅಧಿಕಾರಗಳನ್ನು ಪಡೆದರು. ಇದರಿಂದ ಇವರ ಸೈನಿಕ ಕೆಲಸಗಳನ್ನು ವಿಸ್ತರಿಸಲು ನೆರವಾಯಿತು. ಪಾಳೇಗಾರರು ಇದರಿಂದ ಶಕ್ತಿಶಾಲಿಗಳಾದರು. ವಿಜಯನಗರ ಕಾಲದಲ್ಲಿ ಸಾಮಾನ್ಯವಾಗಿ 'ಕಾವಲುಗಾರರು', 'ತಳಾರಿ'ಗಿಂತಲೂ ಮೇಲಿನ ಸ್ಥಾನವನ್ನು ಹೊಂದಿದ್ದರು. ಪೊಲೀಸ್ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ದಂತೆ ಜನರೇ ಸ್ವತಃ ತಾವೇ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಸರಕಾರವು ಪೊಲೀಸ್ ವ್ಯವಸ್ಥೆಯ ಒಂದು ಭಾಗವನ್ನು ಮಾತ್ರ ನೋಡಿಕೊಳ್ಳುತ್ತಿತ್ತು. ಅದನ್ನು ಬಹುತೇಕ ನಗರ ಮತ್ತು ಜಿಲ್ಲೆಗಳಲ್ಲಿನ ಪೊಲೀಸ್ ಎಂದು ವಿಭಜಿಸಲಾಗಿತ್ತು.[೧೬] ವಿಜಯನಗರ ಸಾಮ್ರಾಜ್ಯದಲ್ಲಿ ಪೊಲೀಸ್ ಸಂಘಟನೆಯ ಬಗ್ಗೆ ವಿಶೇಷ ಗಮನನೀಡಲಾಗಿತ್ತು. ಪೊಲೀಸ್ ಪಡೆಯನ್ನು ಎರಡು ವಿಭಾಗ ಮಾಡಲಾಗಿತ್ತು. ಒಂದು ವಿಭಾಗವನ್ನು ರಾಜ್ಯವು (ರಾಜನ ಸರಕಾರ) ನಿರ್ವಹಿಸುತ್ತಿದ್ದರೆ, ಮತ್ತೊಂದನ್ನು ಸ್ಥಳೀಯ ಜನರೇ ನಿರ್ವಹಿಸುತ್ತಿದ್ದರು. ಅದರಲ್ಲಿ ಮೊದಲನೇ ವಿಭಾಗವು ನೇರವಾಗಿ ಸರಕಾರಕ್ಕೆ ಜವಬ್ದಾರಿಯಾಗಿದ್ದರೆ, ಎರಡನೇಯದು ಸ್ಥಳೀಯ ಜನರಿಗೆ ಜವಾಬ್ದಾರಿಯುತವಾಗಿತ್ತು. ರಾಜಧಾನಿಯಲ್ಲಿ ಇನ್ನೊಂದು ಪೊಲೀಸ್ ಪಡೆ ಇದ್ದು, ಇದು ಬಹುತೇಕ ಸರಕಾರದಿಂದ ನಿರ್ವಹಿಸಲ್ಪಡುತ್ತಿದ್ದ ಪೊಲೀಸ್ ವ್ಯವಸ್ಥೆಯಂತೆಯೇ ಇದ್ದು, ಅವರ ಕರ್ತವ್ಯವೆಂದರೆ, ಅವರ ಸರಹದ್ದುಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ಅಪರಾಧಗಳನ್ನು ಪತ್ತೆ ಹಚ್ಚುವುದಾಗಿತ್ತು [೧೭] ಈ ಪೊಲೀಸರ ಕರ್ತವ್ಯದ ಬಗ್ಗೆ ಅಬ್ದುಲ್ ರಜಾಕ್‌ನು, 'The business of these men was to acquaint themselves with all the event and accidents that happen within the seven walls and to recover everything that is lost, or that may be abstracted by theft otherwise they are fined.' (ಇವರುಗಳ ಕರ್ತವ್ಯಗಳೆಂದರೆ, ಏಳು ಗೋಡೆಗಳ ಮಧ್ಯದಲ್ಲಿ ನಡೆಯುವ ಎಲ್ಲಾ ಘಟನೆಗಳು ಮತ್ತು ಅವಘಡಗಳ ಬಗ್ಗೆ ಮಾಹಿತಿಯನ್ನು ಹೊಂದಿದವರಾಗಿದ್ದು, ಅಲ್ಲಿ ನಡೆದ ಕಳವು ಮಾಲುಗಳೆಲ್ಲವನ್ನೂ ಪತ್ತೆಹಚ್ಚಬೇಕು. ಅವರು ವಿಫಲರಾದಲ್ಲಿ ಅವರಿಗೆ ದಂಡ ವಿಧಿಸಲಾಗುತ್ತಿತ್ತು.) ಎಂದಿದ್ದಾನೆ.[೧೮] ಪೊಲೀಸ್ ಪದ್ಧತಿ ಪ್ರಶಂಸಾರ್ಹ

ವಾಗಿತ್ತು. ಪೊಲೀಸ್ ಅಧಿಕಾರಿಗಳಾದ ತಳಾರಿ, ಕಾವಲಿಗಾರ, ದೇಶಕಾವಲಿಗಾರ ಇವರು ಜಿಲ್ಲೆಗಳಲ್ಲಿ ಮತ್ತು ಹಳ್ಳಿಗಳಲ್ಲಿ ಹಾಗೂ ಪಾಳೇಯಗಾರರು ಹೊರವಲಯದ ಗಡಿ ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ರಾಜ್ಯಪಾಲರಿಗೆ ಸಹಾಯ ಮಾಡುತ್ತಿದ್ದರು.[೧೯]

ರಾಜಧಾನಿಯಲ್ಲಿ ನಡೆದ ಕಳ್ಳತನಗಳ ವರದಿಯನ್ನು ಅಲ್ಲಿಯ 'ತಳವಾರ'ನಿಗೆ ಒಪ್ಪಿಸತಕ್ಕದ್ದು. ಮಾಲನ್ನು ಕಳೆದು ಕೊಂಡವರು ಕಳ್ಳನನ್ನು ವರ್ಣಿಸಿ ಅಧಿಕಾರಿಗಳಿಗೆ ಸ್ವಲ್ಪ ಹಣ ಕೊಟ್ಟರೆ ಕಳ್ಳ ಎಲ್ಲಿದ್ದರೂ ತಕ್ಷಣ ಹುಡುಕುತ್ತಿದ್ದರು. ಯಾಕೆಂದರೆ ಪೊಲೀಸ್ ಅಧಿಕಾರಿಗಳು ಬಹಳ ಸಮರ್ಥರಾಗಿದ್ದರು. ನ್ಯೂನಿಜನು ಅವರನ್ನು ಮಾಟಗಾರನೆಂದು ಕರೆಯುತ್ತಾನೆ. ಅಷ್ಟು ಬೇಗನೆ ಅಷ್ಟು ತಪ್ಪಿಲ್ಲದೇ ಕೆಲಸ ಮಾಡುತ್ತಿದ್ದರು. ಕಳ್ಳತನ ಕಡಿಮೆಯಾಗುವುದಕ್ಕೆ ಪೊಲೀಸರ ಸಾಮರ್ಥ್ಯವಲ್ಲದೇ ಉಗ್ರವಾದ ಶಿಕ್ಷೆಯೂ ಕಾರಣವಾಗಿತ್ತು. ಭಾರೀ ಕಳ್ಳತನ ಮಾಡಿದರೆ ಅವರನ್ನು ಗಲ್ಲಿಗೇರಿಸುತ್ತಿದ್ದರು. ಸ್ತ್ರೀಯರ ಮಾನಭಂಗ ಮಾಡಿದ ವರಿಗೂ, ದೇಶದ್ರೋಹಿಗಳಿಗೂ ಇಂತದೇ ಶಿಕ್ಷೆ ಸಿಗುತ್ತಿತ್ತು.[೨೦]

ಸಂಸ್ಥಾನದಲ್ಲಿ ಎಲ್ಲಿ 'ನಾಯಕರ' ವ್ಯವಸ್ಥೆಯು ರೂಢಿಯಲ್ಲಿತ್ತೋ ಅಲ್ಲಿ 'ನಾಯಕ' ರವರುಗಳು ಅವರವರಿಗೆ ಸೇರಿದ ಸರಹದ್ದಿನಲ್ಲಿ ಶಾಂತಿ ಕಾಪಾಡುವ ಜವಾಬ್ದಾರಿ ಹೊಂದಿದ್ದರು. ಅವರೇ ಸ್ವತಃ ಪೊಲೀಸ್ ಕೆಲಸಗಳಲ್ಲಿ ಭಾಗಿಯಾಗುತ್ತಿರಲಿಲ್ಲ. ಆದರೆ ಆ ಕೆಲಸ ಮಾಡಲು ತಮ್ಮ ಕೈಕೆಳಗೆ ಅಧಿಕಾರಿಗಳನ್ನು ನೇಮಿಸುತ್ತಿದ್ದರು.[೨೧]

'ಪೊಲಿಗಾರ್' ಮತ್ತು 'ಕಾವಲ್' ವ್ಯವಸ್ಥೆಯಲ್ಲಿ ಒಬ್ಬರಿಗೊಬ್ಬರು ಸಹಕರಿಸುತ್ತಿದ್ದರು. ಪೊಲೀಗಾರ್‌ರು ರಾಜನ ಸೈನಿಕ ಸೇವೆಗಳನ್ನು ಮಾಡುತ್ತಿದ್ದರು. ಮತ್ತು ಪರಕೀಯ ದಾಳಿಗಳಿಂದ ರಾಜ್ಯವನ್ನು ರಕ್ಷಿಸುವ ಜವಾಬ್ದಾರಿ ಹೊಂದಿದ್ದರು. ಇನ್ನೊಂದೆಡೆ 'ಕಾವಲುಕಾರ'ರು ಪೊಲೀಸ್ ಕರ್ತವ್ಯಗಳನ್ನು ಮಾಡುತ್ತಾ ಆಂತರಿಕ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಹೊಂದಿದ್ದನು. 'ಪಾಳೆಗಾರ'ರು ಅವರ ಪಾಳೆಯ (ಪ್ರಾಂತ್ಯ)ದಲ್ಲಿ ಕೆಲಸ ಮಾಡುತ್ತಿದ್ದರೆ, 'ಕಾವಲುಗಾರ'ರು ಸರಕಾರದ ಪ್ರದೇಶ ಗಳಲ್ಲಿ ಕೆಲಸ ಮಾಡುತ್ತಿದ್ದರು.[೨೨] ಸ್ಥಳೀಯ ವಾಸಿಗಳು ಈ ಎರಡೂ ವ್ಯವಸ್ಥೆಗಳಿಗೂ ಹಣಕಾಸು ನೆರವು ನೀಡುತ್ತಿದ್ದರು. ಸಾರ್ವ ಭೌಮನಿಗೆ ಎರಡೂ ವ್ಯವಸ್ಥೆಗಳು ಸರಿಯಾಗಿ ಮತ್ತು ಪರಸ್ಪರ ನೆರವಿನಿಂದ ಕೆಲಸ ಮಾಡುತ್ತವೆಯೋ? ಎಂದು ನೋಡುವ ಅಧಿಕಾರವಿತ್ತು. ಮತ್ತು ಈ ಎರಡೂ ವ್ಯವಸ್ಥೆಗಳು ಬೇರೆ ಬೇರೆಯಾಗಿದ್ದರೂ ಸಾರ್ವಭೌಮನ ಹಿತಾಸಕ್ತಿಗಳನ್ನು ಕಾಪಾಡಿ ಕೊಂಡು ರಾಜ್ಯವನ್ನು ರಕ್ಷಿಸುವ, ಶಾಂತಿ ಕಾಪಾಡುವ ಜವಾಬ್ದಾರಿ ಹೊಂದಿದ್ದವು. ಇಂತಹ ವ್ಯವಸ್ಥೆಗಳು ಹೆಚ್ಚಾಗಿ ತಮಿಳು ನಾಡಿನಲ್ಲಿ ಕಂಡುಬಂದವು.

ಪರ್ಶಿಯಾದ ರಾಯಭಾರಿಯಾದ ಅಬ್ದುಲ್ ರಜಾಕ್‌ನು ಒಂದು ಸಂದರ್ಭದಲ್ಲಿ ಇವರು (ಪೊಲೀಸರು) ಕಳ್ಳತನ ಗಳಿಗೆ ಶಿಕ್ಷಿಸುತ್ತಿದ್ದರು ಎಂಬ ಬಗ್ಗೆ ವಿವರಣೆ ನೀಡಿದ್ದಾನೆ. 'Certain slaves which my companion had brought took to fight, and when the circumstances were brought to the prefect, he ordered the watch the men of that quarter, where the forest people dwelt, to produce them are pay the penalty, which last they did on ascertaining the amount.' ಇದರಿಂದ ತಿಳಿದು ಬರುವುದೇನೆಂದರೆ, ಕಳ್ಳತನಗಳಂತಹ ಅಪರಾಧಗಳು ನಡೆದಾಗ ಅಪರಾಧವೆಸಗಿದವರನ್ನು ಸೆರೆಹಿಡಿಯಬೇಕು ಅಥವಾ ಜನರು ಕಳೆದುಕೊಂಡ ಹಣದ ಮೌಲ್ಯವನ್ನು ಖಚಿತಪಡಿಸಿ ಕೊಂಡ ನಂತರ ಅದನ್ನು ನೀಡಬೇಕಾಗಿತ್ತು, ಅಥವಾ ದಂಡ ಕಟ್ಟಬೇಕೆಂದು ಆಡಳಿತಾಧಿಕಾರಿಯು ಪ್ರಾಂತದ ಕಾವಲುಗಾರರಿಗೆ ಆಜ್ಞೆ ಮಾಡುತ್ತಿದ್ದ ವ್ಯವಸ್ಥೆ ಇತ್ತು. ಇದೇ ರೀತಿ ವ್ಯವಸ್ಥೆ ಇತ್ತೆಂದು 'ನ್ಯೂನಿಜ್' ಸಹ ಹೇಳಿದ್ದಾನೆ. ಯಾರಾದರೂ ರಾಜನಿಗೆ ಯಾವುದೇ ಪ್ರಾಂತದಲ್ಲಿ, ಯಾವುದೇ ರಸ್ತೆಯಲ್ಲಿ ತನ್ನನ್ನು ಯಾರಾದರೂ ಲೂಟಿ ಅಥವಾ ರಾಬರಿ ಮಾಡಿದ್ದಾರೆ ಎಂದು ದೂರಿದರೆ ಕೂಡಲೇ ರಾಜನು ಆಯಾ ಪ್ರಾಂತಾಧಿಕಾರಿಯನ್ನು ಅಲ್ಲಿಗೆ ಕಳುಹಿಸುತ್ತಿದ್ದ. ರಾಜನು ನ್ಯಾಯ ಪೀಠದಲ್ಲಿ ಇದ್ದರೂ

ಸಹ ತಕ್ಷಣ ಇಂತಹ ವಿಷಯಗಳಿಗೆ ಗಮನ ಕೊಡುತ್ತಿದ್ದ. ಒಂದು ವೇಳೆ ಕಳವಾದ ವಸ್ತುವನ್ನು ಪತ್ತೆ ಮಾಡದಿದ್ದಲ್ಲಿ, ಪ್ರಾಂತ್ಯಾಧಿಕಾರಿಯಿಂದ ಕಳವಾದ ವಸ್ತುವಿನ ಮೌಲ್ಯದ ಹಣವನ್ನು ವಸೂಲಿ ಮಾಡಲಾಗುತ್ತಿತ್ತು. ಮುಖ್ಯ ಅಮೀನನು ರಾಜಧಾನಿಯಲ್ಲಿ ನಡೆಯುವ ಸುಲಿಗೆಗಳ ಲೆಕ್ಕವನ್ನು ಮತ್ತು ಕಳ್ಳತನದ ಲೆಕ್ಕಗಳನ್ನು ಕೊಡಲು ಬದ್ಧನಾಗಿದ್ದನು. ಅಮೀನ (Bailiff) ಮತ್ತು ಆಡಳಿತಾಧಿಕಾರಿ ಪ್ರಾಂತಾಧಿಕಾರಿ (prefect) ಗಳು ಒಂದೇ ಕಾರ್ಯವನ್ನು ಮಾಡುವ ಅಧಿಕಾರಿಯ ಬೇರೆ ಬೇರೆ ಹೆಸರುಗಳು. ಇದು ಆಧುನಿಕ ಯುಗದ ಪೊಲೀಸ್ ಕಮಿಷನರ್‌ಗೆ ಸಮಾನಾಂತರ ಹುದ್ದೆಯಾಗಿತ್ತು. ಅಥವಾ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ 'ನಾಗರಿಕ'ನ ಹುದ್ದೆಗೆ ಸಮಾನಾಂತರವಾದ ಹುದ್ದೆಯಾಗಿತ್ತು.[೨೩]

ಎರಡನೇ ದೇವರಾಯನ ಕಾಲದಲ್ಲಿ ರಾಜಧಾನಿಯಲ್ಲಿದ್ದ ಟಂಕಸಾಲೆಯ ಎದುರು ರಾಜನು ತನ್ನ ಕಛೇರಿಯನ್ನು ಹೊಂದಿದ್ದ. ಈತನ ಕೆಳಗೆ ೧೨,೦೦೦ ಪೊಲೀಸರು ಕೆಲಸ ಮಾಡುತ್ತಿದ್ದು, ಪ್ರತಿಯೊಬ್ಬರಿಗೂ ತಿಂಗಳಿಗೆ ಮೂವತ್ತು ಪನಾಮಗಳನ್ನು ಸಂಬಳವಾಗಿ ನೀಡಲಾಗುತ್ತಿತ್ತು.[೨೪]

ರಕ್ಷಣಾ ಶಾಖೆಯು 'ಕಂದಾಚಾರ' ಎಂಬ ಶಾಖೆಯ ಮೇಲ್ವಿಚಾರಣೆಯಲ್ಲಿತ್ತು ಮತ್ತು ದಂಡನಾಯಕ ಅಥವಾ ದಣ್ಣಾಯಕನು ಅದನ್ನು ನಿಯಂತ್ರಿಸುತ್ತಿದ್ದನು. ನ್ಯೂನಿಜ್ ರಕ್ಷಣಾ ವ್ಯವಸ್ಥೆಯನ್ನು ಬಣ್ಣಿಸುತ್ತ ಪದಾತಿಗಳಿಂದ ಕುದುರೆದಂಡಿ, ಕುದುರೆದಂಡಿನಿಂದ, ಆನೆಗಳಿಂದ ಮತ್ತು ಮದ್ದುಗುಂಡಿನ ಪಡೆಯಿಂದ ಕೂಡಿತ್ತು ಎಂದಿದ್ದಾನೆ. ಮೊದಲನೆಯ ವಿರೂಪಾಕ್ಷನ ಒಂದು ಶಾಸನವು ಗ್ರಾಮದ ಅಧಿಕಾರಿಗಳಲ್ಲಿ ಆಶ್ರಯ ಪಡೆದ 'ಕಳ್ಳವೇಲೈಕ್ಕಾರರು' ಎಂಬುವವರ ವಿವರವನ್ನು ನೀಡಿದ್ದು, ಗ್ರಾಮದ ಭೂಮಿ ಮತ್ತು ಜನರ ರಕ್ಷಣೆಗೆ ಪ್ರತೀ ವರ್ಷವೂ ಅವರು ೧೮ ಜಾತಿ ಸಂಸಾರದಿಂದ, ಮದುವೆ ಸಮಾರಂಭಗಳಲ್ಲಿ ಒಂದು ಉಂಗುರವನ್ನು ಪಡೆಯಬಹುದೆಂಬ ವಿಷಯವನ್ನು ತಿಳಿಸುತ್ತದೆ. ಮಂಗಳಕರ ಮತ್ತು ಉತ್ಸವ ಕಾಲದಲ್ಲಿ ರಕ್ಷಣೆ ನೀಡಲು ಗ್ರಾಮಸ್ಥರು ಈತನಿಗೆ ಸಂಭಾವನೆ ನೀಡಬೇಕಿತ್ತು. ತಮಿಳುನಾಡಿನಲ್ಲಿ ಎರಡು ರೀತಿಯ ಗ್ರಾಮ ಪೊಲೀಸರು ಇದ್ದರೆಂದು ಕಾಣುತ್ತದೆ. ಅವರು 'ಊರ್‌ಕಾವಲ್' 'ಪಾಡಿಕಾವಲ್' ಎಂಬ ಎರಡು ವಿಧವಾದ ಶುಲ್ಕವನ್ನು ಪಡೆಯುತ್ತಿದ್ದರು.[೨೫] ಇನಾಮ್ ಭೂಮಿಗೆ ಬದಲಾಗಿ ಇವರು ಒಂದು ಶುಲ್ಕ ಅಥವಾ ಆಯವನ್ನು ಪಡೆಯುತ್ತಿದ್ದುದರಿಂದ ಇವರಿಗೆ 'ಆಯಗಾರ್' ಎಂಬ ಹೆಸರು ಬಂದಿದೆ. ಆಯಗಾರ್‌ರು ಗ್ರಾಮಸ್ಥರು ಮತ್ತು ಸರಕಾರದ ಮತ್ತು ಸರಕಾರದ ಅಧಿಕಾರಿಗಳ ನಡುವೆ ಸಂಪರ್ಕ ಹೊಂದಿದ್ದರು. ಆಯಗಾರರು ಸರಕಾರದ ಸೇವಕರಿಗಿಂತ ಹೆಚ್ಚಾಗಿ ಗ್ರಾಮಸೇವಕರಾಗಿದ್ದರು.[೨೬]

೩.೨ ನ್ಯಾಯ ತೀರ್ಮಾನ ಮತ್ತು ದಿವ್ಯಗಳು.

ರಾಜನೇ ಸರ್ವೋಚ್ಚ ನ್ಯಾಯದಾತನಾಗಿದ್ದರೂ ನ್ಯಾಯದಾನಕ್ಕಾಗಿ ನ್ಯಾಯಸ್ಥಾನಗಳು ಮತ್ತು ನ್ಯಾಯಾಧಿಕಾರಿಗಳು ಇದ್ದರು. ರಾಜಾಸ್ಥಾನಕ್ಕೆ "ಪ್ರಾಡ್ವಿವೇಕ" ಮತ್ತು ಇಬ್ಬರು 'ಸಭ್ಯರು' ಸಹಾಯ ಸಲ್ಲಿಸುತ್ತಿದ್ದರು. ರಾಜ್ಯಪಾಲರು ಮತ್ತು ಅಮಾತ್ಯರು ಕೂಡ ನ್ಯಾಯವಿಚಾರಣೆ ನಡೆಸುತ್ತಿದ್ದರು. ಅಪರಾಧ ಸಂಬಂಧೀಯ ತೀರ್ಪುಗಳನ್ನು ಒಡನೆಯೇ ಕೊಟ್ಟುಬಿಡಲಾಗುತ್ತಿತ್ತು ಮತ್ತು ಅವು ಉಗ್ರವಾಗಿರುತ್ತಿದ್ದವು. ನ್ಯಾಯದಾನವು, ಪ್ರಾಚೀನರು ಹಾಕಿ ಕೊಟ್ಟ ಪರಂಪರಾಗತ ಶಾಸನ ನಿಯಮಗಳನ್ನು ಆಧರಿಸುತ್ತಿದ್ದಿತು. ವಿಚಾರಣೆಯಲ್ಲಿ ಕಠಿಣ ಪರೀಕ್ಷಾ ಪದ್ಧತಿಯನ್ನೇ ವಾಡಿಕೆಯಾಗಿ ಅನುಸರಿಸಲಾಗುತ್ತಿತ್ತು. ಅಪರಾಧಿಗಳಿಗೆ ದಂಡನೆಗಳು ಉಗ್ರವಾಗಿರುತ್ತಿದ್ದವು. ಗಂಭೀರ ಸ್ವರೂಪದ ಅಪರಾಧಗಳಿಗೆ ಮರಣದಂಡನೆ ಅಥವಾ ಅವಯವ ಖಂಡನೆಯನ್ನೇ ವಿಧಿಸಲಾಗುತ್ತಿತ್ತು. ಎಷ್ಟೋ ಸಲ ರಾಜನೇ ದೂರುಗಳಿಗೆ ನಿರ್ಣಯ ಕೊಟ್ಟು ಬಿಡುತ್ತಿದ್ದನು. ಹಾಗೂ ದು:ಖದ ಕಾರಣಗಳನ್ನು ನಿಶ್ಚಯಾತ್ಮಕ ರೀತಿಯಿಂದ ನಿವಾರಿಸುತ್ತಿದ್ದನು. ನಾಡಿನಲ್ಲಿ ಕಳ್ಳರು ಏಳಿಗೆ ಹೊಂದಲು ಸಾಧ್ಯವೇ ಇರಲಿಲ್ಲ.[೨೭]

ವಿಜಯನಗರದ ಸಾಮ್ರಾಜ್ಯದಲ್ಲಿ ಸಂಘಟಿತವಾದ ನ್ಯಾಯಾಲಯದ ವ್ಯವಸ್ಥೆ ಇರಲಿಲ್ಲ. ದೊರೆಯು ವರಿಷ್ಠ ನ್ಯಾಯಾಧೀಶನಾಗಿದ್ದನು. ಪ್ರಾಂತ ಮಟ್ಟದಲ್ಲಿ ಪ್ರಾಂತಾಧಿಪತಿಯು ನ್ಯಾಯನಿರ್ವಹಣೆಯ ಹೊಣೆಯನ್ನು ಹೊತ್ತಿದ್ದನು. ಗ್ರಾಮ

ಮಟ್ಟದಲ್ಲಿ ಗ್ರಾಮಸಭೆಯು (ಪಂಚಾಯತಿಯು) ವ್ಯಾಜ್ಯಗಳನ್ನು ತೀರ್ಮಾನ ಮಾಡುತ್ತಿತ್ತು. ಶಿಕ್ಷೆಗಳು ಕಠೋರವಾಗಿದ್ದವು. ಕಳ್ಳತನಕ್ಕಾಗಿ ಅಂಗಛೇದನ, ದರೋಡೆ, ಕೊಲೆ ಮತ್ತು ವ್ಯಭಿಚಾರ ಕೃತ್ಯಗಳಿಗೆ ಮರಣದಂಡನೆ, ರಾಜಾದ್ರೋಹದ ಚಟುವಟಿಕೆಗಳಿಗೆ ಕಾರಾಗೃಹದ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಕೆಲವು ಬಾರಿ ರಾಜದ್ರೋಹಿಗಳನ್ನು ಆನೆ ಕಾಲುಗಳಿಂದ ತುಳಿಸಲಾಗುತ್ತಿತ್ತು. ದಂಡ ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವುದು ಇತರ ಶಿಕ್ಷೆಯ ಪ್ರಕಾರಗಳಾಗಿದ್ದವು. ಅಪರಾಧಗಳನ್ನು ರುಜುವಾತು ಪಡಿಸಲು ದಿವ್ಯ ಪರೀಕ್ಷೆ (Ordeals) ಗಳನ್ನು ನಡೆಸುವ ಪದ್ಧತಿಯಿತ್ತು. ವರಿಷ್ಠ ನ್ಯಾಯಾಧೀಶನಾಗಿದ್ದ ದೊರೆಯು ನೀಡುವ ತೀರ್ಪು ಅಂತಿಮವಾಗಿತ್ತು. ದ್ರೋಹ, ಆಕ್ರಮಣ, ಅಪವಾಧ, ಹಿಂಸಾ ಕೃತ್ಯಾದಿ ಅಪರಾಧಗಳಲ್ಲಿ ದಿವ್ಯಗಳೇ ಸಾಕ್ಷಿಗಳಾಗಿದ್ದವು. ಗುರುತರವಾದ ಆಪಾಧನೆಗಳಿಂದ ವಿಮೋಚನೆ ಪಡೆಯಲು ದಿವ್ಯಗಳೇ ಸಾಕ್ಷಿಗಳಾಗಿದ್ದವು. ಈ ಗುರುತರ ಆಪಾಧನೆಗಳಿಂದ ವಿಮುಕ್ತಿ ಪಡೆಯಲು 'ಸಮತೋಲನ ದಿವ್ಯ' 'ಅಗ್ನಿದಿವ್ಯ', 'ಜಲದಿವ್ಯ', 'ವಿಷದಿವ್ಯ' ಮತ್ತು 'ತುಂಡಲ ದಿವ್ಯ'ಗಳು ಪ್ರಚಾರದಲ್ಲಿದ್ದವು.[೨೮] ಬ್ರಾಹ್ಮಣರಿಗೆ, ಸ್ತ್ರೀಯರಿಗೆ, ಮಕ್ಕಳಿಗೆ, ವೃದ್ಧರಿಗೆ ಮತ್ತು ಅಂಗಹೀನರಿಗೆ ಸಮತೋಲನ ದಿವ್ಯವು, ಅಗ್ನಿದಿವ್ಯ, ಜಲದಿವ್ಯ, ವಿಷದಿವ್ಯಗಳು ಕ್ರಮವಾಗಿ ಕ್ಷತ್ರೀಯ, ವೈಶ್ಯ, ಶೂದ್ರರಿಗೆ ವಿಧಿತವಾಗುತ್ತಿತ್ತು. ಚೌರ್ಯಕ್ಕೆ ತುಂಡಲದಿವ್ಯ ಪ್ರಮಾಣವಾಗಿತ್ತು. ಪ್ರಕರಣಗಳ ಇತ್ಯರ್ಥಕ್ಕಾಗಿ ಗ್ರಾಮಪಟೇಲನು 'ಪಂಚಾಯಂ' ಅಥವಾ 'ಪಂಚಾಯ್ತಿ' ಎಂದು ಕರೆಯಲ್ಪಡುತ್ತಿದ್ದ ಸಭೆಯನ್ನು ಸೇರಿಸುತ್ತಿದ್ದನು. ನ್ಯಾಯ ತೀರ್ಮಾನ ಮಾಡುವವರನ್ನು ಆಯ್ಕೆಮಾಡಲು ಅನೇಕ ವಿಧಗಳಿದ್ದವು. ಅದರಲ್ಲಿ ಮೊದಲನೆಯದು ನೇಮಕಮಾಡುವುದು. ಒಬ್ಬನು ನ್ಯಾಯ ತೀರ್ಮಾನಗಾರನಾಗಿ 'ಪಟೇಲ'ನಿದ್ದರೆ, ಎರಡೂ ಗುಂಪುಗಳ ಕಡೆಯಿಂದ (ದೂರುದಾರ ಮತ್ತು ಆತನ ಎದುರುದಾರ) ತಲಾ ಇಬ್ಬರನ್ನು ನೇಮಕ ಮಾಡಲಾಗುತ್ತಿತ್ತು. (ಅಂದರೆ ಐದು ಜನ ಪಂಚಾಯ್ತಿಯಲ್ಲಿ ಇರುತ್ತಿದ್ದರು) ಈ ನೇಮಕಗೊಂಡ ಸದಸ್ಯರು ತಮ್ಮ ತಮ್ಮ ಗುಂಪಿನ ವ್ಯಕ್ತಿಯ ಪರವಾಗಿ ಪಕ್ಷಪಾತ ವಹಿಸುತ್ತಿರುವ ಬಗ್ಗೆ ಆಗಾಗ ಸಂಸ್ಥಾನಗಳಿಗೆ ದೂರುಗಳು ಬರುತ್ತಿದ್ದವು. ಆದ್ದರಿಂದ ಬೇರೊಂದು ವಿಧಾನ ಬಳಕೆಗೆ ಬಂತು. ಪಟೇಲನು ಪಂಚಾಯ್ತಿಗೆ ಸೇರಲು ಐದರಿಂದ ಹತ್ತು ಜನ ಸದಸ್ಯರನ್ನು ನೇಮಕಮಾಡುತ್ತಿದ್ದ. ಆದರೆ ಉಭಯ ಗುಂಪುಗಳವರಿಗೆ ಈ ತಂಡದ ಯಾವುದೇ ಸದಸ್ಯನ ನೇಮಕಾತಿ ಸರಿಯಿಲ್ಲವೆಂದು ಅನ್ನಿಸಿದರೆ, ಅವರು ಅದನ್ನು ಆಕ್ಷೇಪಿಸಬಹುದಿತ್ತು. ಆ ಆಕ್ಷೇಪಣೆಯ ಕಾರಣಗಳು ನ್ಯಾಯ ಸಮ್ಮತವಾದುದೆಂದು ಸಾಬೀತಾದರೆ, ಪಂಚಾಯ್ತಿಗಾಗಿ ನೇಮಕಗೊಂಡ ಆ ಸದಸ್ಯನನ್ನು ಬದಲಾಯಿಸಲಾಗುತ್ತಿತ್ತು.[೨೯] ಕೆಲವೊಂದು ಸಂದರ್ಭದಲ್ಲಿ ಗ್ರಾಮಗಳಲ್ಲಿನ ಬೇರೆ ಬೇರೆ ಜನಾಂಗಗಳ ಮುಖ್ಯಸ್ಥರು ನ್ಯಾಯ ತೀರ್ಮಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಒಂದು ವೇಳೆ ಸಾಮಾನ್ಯ ಒಡೆತನಕ್ಕೆ ಸೇರಿದ ಗ್ರಾಮದ ಜಮೀನು ಹಂಚಿಕೆಯ ವಿಷಯಕ್ಕೆ ಸಂಬಂಧಿಸಿದ ವಿವಾದವಾಗಿದ್ದಲ್ಲಿ ಪ್ರತಿಯೊಬ್ಬ ಜಮೀನಿನ ಮಾಲಿಕನಿಗೂ ನ್ಯಾಯತೀರ್ಮಾನ ಸಭೆಯಲ್ಲಿ ಭಾಗವಹಿಸುವ ಹಕ್ಕು ಇತ್ತು.[೩೦] ಸಾಧಾರಣವಾಗಿ ಈ ಸಭೆಗಳು ಊರಿನ ದೊಡ್ಡ ಮರದ ಅಡಿಯಲ್ಲಿ ಸೇರುತ್ತಿತ್ತು. ದೂರು ಪ್ರತಿವಾದಗಳನ್ನು ಆಲಿಸಿ, ವಿವರವಾಗಿ ಚರ್ಚಿಸಿ ನ್ಯಾಯ ತೀರ್ಮಾನ ನೀಡಲಾಗುತ್ತಿತ್ತು. ಇಂತಹ ನ್ಯಾಯ ತೀರ್ಮಾನಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿದ್ದವು[೩೧] ಒಂದು ವೇಳೆ ಇವುಗಳಿಂದ ಪ್ರಕರಣವೊಂದರ ಅಂತಿಮ ತೀರ್ಪು ನೀಡಲು ಭಂಗ ಉಂಟಾದರೆ 'ಬಿಸಿ ತುಪ್ಪದ ಪರೀಕ್ಷೆ' ನಡೆಸಲಾಗುತ್ತಿತ್ತು. ಪಂಚಾಯ್ತಿಯು ಅತ್ಯಂತ ಭಕ್ತಿ ಶ್ರದ್ಧೆಯಿಂದ ಇಂತಹ ಪರೀಕ್ಷೆಗಳನ್ನು ನಡೆಸುತ್ತಿತ್ತು. ಜನರೂ ಸಹ ಆ ಕಾಲದಲ್ಲಿ ಇಂತಹ ಮೂಢನಂಬಿಕೆಗಳಲ್ಲಿ ಖಚಿತವಾದ ವಿಶ್ವಾಸ ಹೊಂದಿದ್ದರು. ಬ್ರಿಟೀಷರ ಆಡಳಿತ ಪ್ರಾರಂಭವಾದ ಮೇಲೆ ಇಂತಹ ಕ್ರೂರ ಪದ್ಧತಿಗಳನ್ನು ರದ್ದುಮಾಡಲಾಯಿತು.[೩೨] ಸಣ್ಣ ಪುಟ್ಟ ಪ್ರಕರಣಗಳನ್ನು ಇತ್ಯರ್ಥ ಪಡಿಸುವುದರಲ್ಲಿ ಪಂಚಾಯ್ತಿಯು ನಿಷ್ಣಾತವಾಗಿತ್ತು. 'ಪಟೇಲ'ನು ಪಂಚಾಯ್ತಿದಾರರಾಗಬಲ್ಲ ಕೆಲವು ವ್ಯಕ್ತಿಗಳ ಹೆಸರಿನ ಪಟ್ಟಿಯನ್ನು ಇಟ್ಟುಕೊಂಡಿರುತ್ತಿದ್ದನು. ಅವರನ್ನು ಅಗತ್ಯ ಬಂದಾಗ ನೇಮಿಸುತ್ತಿದ್ದನು. ನ್ಯಾಯ ತೀರ್ಮಾನಗಳು ಪಕ್ಷಪಾತಗಳಿಂದ ಹೊರತಾಗೇನು ಇರಲಿಲ್ಲ. ತೀರ್ಪನ್ನು ನೀಡಿದ ನಂತರ ಅದನ್ನು ಜಾರಿಗೊಳಿಸುವಾಗ ಕಷ್ಟಗಳು ಎದುರಾಗುತ್ತಿತ್ತು. ವಿವಾದ

[illegible]

ವೊಂದನ್ನು ನಿರ್ಣಯಿಸಲು ಮಾನುಷ ಪ್ರಮಾಣಗಳ ಅಭಾವ ವಿರುವಾಗ ಅನುಸರಿಸುವ ವಿಧಾನವೇ ದಿವ್ಯ.[೩೩] ಕರ್ನಾಟಕದಲ್ಲಿ ಸಪ್ತ ದಿವ್ಯಗಳ ಆಚರಣೆಯು ಇದ್ದಿತ್ತೆಂದು ಒಂದೆರಡು ಶಾಸನಗಳಿಂದ ತಿಳಿದುಬರುತ್ತದೆ.[೩೪] 'ಕೋಪ' (ಬಹುಶ: 'ಕೋಶ' ವಿರಬೇಕು), ರವಿ, ತಂಡುಲ, ಅಗ್ನಿ ತಪ್ತಮಾಷ, ಜಲ, ವಿಷ ಇವೇ ಆ ಸಪ್ತ ದಿವ್ಯಗಳು. ದಿವ್ಯವನ್ನು ಹಿಡಿಯುವ ವ್ಯಕ್ತಿಯೇ ಶೋಧ್ಯ. ಆ ಶೋಧ್ಯನು ದಿವ್ಯವನ್ನು ಹಿಡಿಯುವ ಮುನ್ನ ಆ ವಿವಾದದ ವಿಷಯವನ್ನು ಪತ್ರವೊಂದರಲ್ಲಿ ಬರೆದು ಅದನ್ನು ಅವನ ತಲೆಯ ಮೇಲೆ ಇಡುತ್ತಿದ್ದರು.[೩೫] (ಈ ನಿಯಮವನ್ನು ಸ್ಮೃತಿಗಳೇ ಹಾಕಿಕೊಟ್ಟಿವೆ) ಕ್ರಿಶ ೧೧೫೦ ಕ್ಕಿಂತ ಈಚಿನ ಹಲವು ಶಾಸನಗಳಲ್ಲಿ ಕಾಸಿದ ಕಬ್ಬಿಣದ ತುಂಡನ್ನು ಕೈಯಲ್ಲಿ ಹಿಡಿದೋ,-*(ಟಿಪ್ಪಣಿ ನೋಡಿ)* ಕಾಸಿದ ತುಪ್ಪದಲ್ಲಿ ಕೈಯದ್ದಿಯೋ, ಅಂತೂ ದಿವ್ಯದ ಪರೀಕ್ಷೆಗಳಿಗೆ ಒಳಗಾಗಿ ಗೆದ್ದು ಬಂದ ವಿಷಯವು ಹಲವು ಶಾಸನಗಳಲ್ಲಿದೆ.[೩೬] ದಿವ್ಯದ ವಿಷಯವು ಅನೇಕ ಕನ್ನಡ ಕಾವ್ಯಗಳಲ್ಲಿಯೂ ಉಕ್ತವಾಗಿದೆ.[೩೭] ಇದೆಲ್ಲವನ್ನೂ ನೋಡಿದರೆ ಪ್ರಾಚೀನ ಕರ್ನಾಟಕದಲ್ಲಿ ದಿವ್ಯದ ಪದ್ಧತಿಯು ತಕ್ಕಮಟ್ಟಿಗೆ ಪ್ರಬಲವಾಗಿಯೇ ಇದ್ದಿತೆಂದು ಊಹಿಸಬಹುದು. ಶಾಸನಗಳ ಮತ್ತು ಕಾವ್ಯಗಳ ಸಹಾಯದಿಂದ ನಾವು ಕೆಳಗಿನ ಕೆಲವು ತೀರ್ಮಾನಗಳಿಗೆ ಬರಬಹುದು. ಇಬ್ಬರಿಗೆ ಜಗಳವಾಗುತ್ತದೆಯೆಂದು ಭಾವಿಸೋಣ. ಆಗ ಒಬ್ಬನು ತನ್ನ ತಲೆಯ ಮೇಲಿನ ಟೊಪ್ಪಿಗೆಯನ್ನು ಅಥವಾ ತಾನು ತಲೆಗೆ ಧರಿಸಿದ್ದ ವಸ್ತ್ರವನ್ನೇ ಕಿತ್ತು ಎಸೆದರೆ ಅದು ಪ್ರತಿಪಕ್ಷದವನಿಗೆ ಸವಾಲು ಹಾಕಿದಂತಾಗುತ್ತಿದ್ದಿತು. ಇದನ್ನೇ 'ಮುಡಿಗೆಯಿಕ್ಕು' ಅಥವಾ 'ಮುಂಡಿಗೆ ಇಕ್ಕು' ಎಂದು ಕಾವ್ಯಗಳಲ್ಲಿ ಕರೆದಿರುವುದು.[೩೮] ಇನ್ನೊಬ್ಬನು ಆ ವಸ್ತ್ರವನ್ನು ಮೇಲೆತ್ತಿದರೆ ಸವಾಲನ್ನು ಅಂಗೀಕರಿಸಿದಂತಾಗುತ್ತಿದ್ದಿತು.

ಎಷ್ಟೋ ಸಾರಿ ತಾನು ದಿವ್ಯವನ್ನು ಹಿಡಿದು ತನ್ನ ವಾದವೇ ಸರಿಯೆಂದು ತೋರಿಸಬಲ್ಲೆ ಎಂಬ ಸವಾಲನ್ನು 'ಮುಂಡಿಗೆಯಿಕ್ಕು'ವ ರೂಪದಲ್ಲಿ ಹಾಕುತ್ತಿದ್ದುದೂ ಉಂಟು.[೩೯] ದಿವ್ಯಗಳನ್ನು ಸಾಮಾನ್ಯವಾಗಿ ಯಾವುದೋ ಪ್ರಸಿದ್ಧ ದೇವಸ್ಥಾನದಲ್ಲಿ ಬ್ರಾಹ್ಮಣರ ಮುಂದೆ ನಡೆಯಿಸುತ್ತಿದ್ದರು. ದಿವ್ಯಗಳಲ್ಲಿ ಬಹು ಪ್ರಚಲಿತವಿದ್ದುದೆಂದರೆ 'ಪಾಳದಿವ್ಯ' [೪೦] ಅಥವಾ ಪಾಲದಿವ್ಯ. ಕಾಸಿದ ಲೋಹವನ್ನು ಕೈಯಲ್ಲಿ ಹಿಡಿಯುವುದನ್ನೇ ಪಾಳದಿವ್ಯವೆಂದು ಕರೆದಿರುವುದು. ದಿವ್ಯಗಳಲ್ಲಿ ಗೆದ್ದವರಿಗೆ ಜಯಪತ್ರಗಳನ್ನು ಕೊಡುತ್ತಿದ್ದರು. ದಿವ್ಯಗಳು ನಡೆಯುತ್ತಿದ್ದ ದೇವಸ್ಥಾನಗಳಿಗೆ ದಿವ್ಯಗಳಿಂದ ತಕ್ಕ ಮಟ್ಟಿಗೆ ಆದಾಯವು ಬರುತ್ತಿದ್ದಿತು.[೪೧] ದಿವ್ಯಗಳನ್ನು ಸಣ್ಣಪುಟ್ಟ ಜಗಳಗಳ ನಿರ್ಣಯಕ್ಕಾಗಿ ಬಳಸಬಾರದೆಂದು ಸ್ಮೃತಿಗಳು ಹೇಳುತ್ತವೆ. ಅದರಂತೆ ಪ್ರಾಚೀನ ಕರ್ನಾಟಕದಲ್ಲಿಯೂ ಕೂಡ ಭೂಮಿಗೆ ಸಂಬಂಧಿಸಿದ ವಿವಾದಗಳಲ್ಲಿ, ಅಥವಾ ಒಂದು ಜಾತಿಯ ಪ್ರತಿಷ್ಠೆಗೆ ಭಂಗವನ್ನು ತರಬಹುದಾದ ವಿವಾದಗಳಲ್ಲಿ ಮಾತ್ರ ದಿವ್ಯಗಳನ್ನು ಬಳಸುತ್ತಿದ್ದರೆಂದು ಶಾಸನಗಳಿಂದ ಊಹಿಸಬಹುದು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಹಲವರು ದಿವ್ಯಗಳನ್ನು ಹಿಡಿದು, ಅಗ್ನಿಯಿಂದ ಯಾವ ಗಾಯಕ್ಕೂ ಒಳಗಾಗದೆ ಗೆದ್ದಿರುವುದು. ಈಗ ನಮ್ಮ ದೃಷ್ಟಿಗೆ ದಿವ್ಯವು ಒಂದು ಅನಾಗರಿಕವಾದ ಪದ್ಧತಿಯಂತೆ ಕಂಡುಬಂದರೂ, ಪ್ರಾಚೀನ ಕರ್ನಾಟಕದಲ್ಲಿ ಮಾತ್ರ ಅದೊಂದು ಸಹಜವೂ ಶಾಸ್ತ್ರೋಕ್ತವೂ ಆದ ಪದ್ಧತಿಯಾಗಿದ್ದಿತು. ದಂಡ ಬಹಿಷ್ಕಾರಗಳ ಶಿಕ್ಷೆ ಇತ್ತು. ಕದ್ದವರಿಗೆ ಅಂಗಛೇದ(ಕೈ,ಕಾಲು) ಶಿಕ್ಷೆ ವಿಧಿಸುತ್ತಿದ್ದರು. ಕಳವನ್ನು ಪತ್ತೆಹಚ್ಚಲು ಮಂತ್ರ, ತಂತ್ರಗಳ ಬಳಕೆಯೂ ಇತ್ತು. ರಾಜದ್ರೋಹಕ್ಕೆ ಮಾತ್ರ ಮರಣದಂಡನೆ ನೀಡಲಾಗುತ್ತಿತ್ತು.[೪೨]

ಸಿರಿಯಾ ದೇಶದ ಡಮಾಸ್ಕಸ್ ನಗರದ ಯಾತ್ರಿಕನಾಗಿದ್ದ ನಿಕೊಲೋ-ದೆ-ಕೊಂತಿಯು ವಿಜಯನಗರದ ಅರಸರ ಕಾಲದಲ್ಲಿ ಯಾತ್ರಿಕನಾಗಿ ಈತನು ತನ್ನ ಪ್ರವಾಸಿಕಥನದಲ್ಲಿ ಅಪರಾಧ ಎಸಗಿದ ಆರೋಪಿಗಳನ್ನು ಅತ್ಯಂತ ಉಗ್ರವಾದ ರೀತಿಯಲ್ಲಿ ಶಿಕ್ಷಿಸಲಾಗುತ್ತಿತ್ತು ಎಂಬ ಬಗ್ಗೆ ಸಾಕಷ್ಟು ವಿವರಣೆಗಳನ್ನು ನೀಡಿದ್ದಾನೆ. "ಒಬ್ಬನ ಮೇಲೆ ದುಷ್ಕೃತ್ಯದ ಆರೋಪಣೆ

ಟಿಪ್ಪಣಿ- ನಯಸೇನನ ಧರ್ಮಾಮೃತದ ಒಂದು ಕಥೆಯಲ್ಲಿ ನಿಷ್ಕಾರಣವಾಗಿ ವೃಷಭದ ಮೇಲೆ ಕೊಲೆಯ ಆರೋಪ ಬಂದಾಗ ಜನರು ಅದನ್ನು ಹೊಡೆದರೆಂದೂ, ಆಗ ಆ ಬಸವನು ವೇದನೆಯನ್ನು ತಡೆಯಲಾರದೆ, 'ತನ್ನ ಮನದ ನಿರ್ಮಲತೆಯನೆಲ್ಲರ್ಗೆ ತೋರುವಂತೆ' ಒಬ್ಬ ಕಮ್ಮಾರ ಕಾಯಿಸುತ್ತಿದ್ದ ಕಬ್ಬಿಣವನ್ನು ಕಚ್ಚಿಹಿಡಿಯಿತೆಂದೂ, ಆಗ ಜನರು ಅದು ನಿರಪರಾಧಿಯೆಂದು ತೀರ್ಮಾನಿಸಿದರೆಂದೂ ಹೇಳಿದೆ.

ಬಂದರೆ ಸಾಕ್ಷಿಗಳು ಇಲ್ಲದಿದ್ದಲ್ಲಿ ಅವರು ಪ್ರಾಮಾಣ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ. ಮೂರು ತರಹದ ಪ್ರಮಾಣಗಳಿವೆ. ಒಂದರಲ್ಲಿ ಅಪರಾಧಿ ದೇವರ ಮುಂದೆ ತಾನು ನಿರಪರಾಧಿ ಎಂದು ಹೇಳಿ ಕೆಂಪಗೆ ಕಾದ ಕಬ್ಬಿಣವನ್ನು ನಾಲಗೆಯಿಂದ ನೆಕ್ಕಬೇಕು. ಅವನಿಗೆ ಏನೂ ಅಪಾಯ ವಾಗದಿದ್ದರೆ ನಿರಪರಾಧಿ ಎಂದು ತೀರ್ಮಾನಿಸುತ್ತಾರೆ. ಮತ್ತೊಂದು ವಿಧಾನದಲ್ಲಿ ದೇವರ ಮುಂದೆ ಕಾದ ಕಬ್ಬಿಣದ ತುಂಡನ್ನು ಅಥವಾ ಕಾದ ತಗಡನ್ನು ಕೈಯಲ್ಲಿ ಹಿಡಿದು ನಾಲ್ಕಾರು ಹೆಜ್ಜೆ ನಡೆದುಕೊಂಡು ಹೋಗಬೇಕು. ಅವನಿಗೆ ಏನೂ ಅಪಾಯ ವಾಗದಿದ್ದರೆ ಅವನು ನಿರಪರಾಧಿ ಎಂದು ತೀರ್ಮಾನಿಸುತ್ತಾರೆ. ಮೂರನೇಯದು ಸರ್ವೇ ಸಾಮಾನ್ಯವಾದ ವಿಧಾನ, ದೇವರ ಮುಂದೆ ಕುದಿಯುವ ತುಪ್ಪವನ್ನು ಇಟ್ಟು ಅದರೊಳಗೆ ಅಪರಾಧಿಯ ೨ ಬೆರಳುಗಳನ್ನು ಅದ್ದಿಸುತ್ತಾರೆ. ಹಾಗೆ ಮಾಡಿದ ತಕ್ಷಣವೇ ಬೆರಳುಗಳಿಗೆ ಬಟ್ಟೆ ಸುತ್ತಿ ಮುದ್ರೆ ಒತ್ತುತ್ತಾರೆ. ಮೂರನೇ ದಿವಸ ಬಟ್ಟೆ ಬಿಚ್ಚಿ ನೋಡುತ್ತಾರೆ. ಬೆರಳುಗಳು ಸುಟ್ಟಿದ್ದರೆ ಅಪರಾಧಿ ಎಂತಲೂ, ಸುಡದಿದ್ದರೆ ನಿರಪರಾಧಿ ಎಂತಲೂ ತೀರ್ಮಾನಿಸುತ್ತಾರೆ." [೪೩]

೧೪೧೩ ರಿಂದ ೧೪೮೨ ರವರೆಗೆ ಇದ್ದ ಪರ್ಶಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್‌ನು, ವಿಜಯನಗರದ ಅರಸರ ಕಾಲದಲ್ಲಿ ಅಲ್ಲಿಗೆ ಬಂದು ತನ್ನ ಯಾತ್ರಾ ಕಥನದಲ್ಲಿ, ಅಲ್ಲಿನ ಅಪರಾಧಿಗಳನ್ನು ಶಿಕ್ಷಿಸುವ ಬಗೆಯನ್ನು ಈ ರೀತಿ ವಿವರಿಸಿದ್ದಾನೆ. "ಅಪರಾಧಿಗಳನ್ನು ಶಿಕ್ಷಿಸಲು ಒಮ್ಮೊಮ್ಮೆ ಅವರನ್ನು ಆನೆಯ ಕಾಲಕೆಳಕ್ಕೆ ಎಸೆಯುತ್ತಾರೆ, ಆನೆ ಅವರನ್ನು ಕಾಲಿನಿಂದ ಹೊಸಕಿ ಸೊಂಡಿಲಿನಿಂದ ಹರಿದು ಚಿಂದಿ ಚಿಂದಿ ಮಾಡುತ್ತದೆ' ಎಂದಿದ್ದಾನೆ. [೪೪]

ದಿವ್ಯಗಳು ಒಂದು ಅನಾಗರಿಕ ಪದ್ಧತಿಯಾಗಿತ್ತು. ವೇದಗಳ ಕಾಲದಿಂದ ಈ ನ್ಯಾಯಪದ್ಧತಿಯು ನಡೆದುಕೊಂಡು ಬಂದಿದೆ. ಪೊಲೀಸರು ನ್ಯಾಯಾಂಗ ವಿಭಾಗದ ಒಂದು ಭಾಗವಾಗಿದ್ದರು. ಕಳ್ಳರು ಆರೋಪಿಗಳನ್ನು ಹಿಡಿದು ನ್ಯಾಯಸ್ಥಾನದ ಮುಂದೆ ಹಾಜರುಪಡಿಸುತ್ತಿದ್ದರು. ಕೆಲವೊಮ್ಮೆ 'ಗೌಡ' ಅಥವಾ 'ಗಾವುಂಡ'ನೇ ಶಿಕ್ಷೆಯನ್ನು ನೀಡುತ್ತಿದ್ದ. ಉಗ್ರವಾದ ಶಿಕ್ಷೆ ಗಳಿಂದ ಅಪರಾಧ ಎಸಗುವಂತವರಲ್ಲಿ ಭಯದ ವಾತಾವರಣ ಉಂಟಾಗುತ್ತಿತ್ತು. ಈ ಭಯದ ಕಾರಣ ಅಪರಾಧಗಳ ಸಂಖ್ಯೆ ಕಡಿಮೆಯಾಗಿ ಸಮಾಜದಲ್ಲಿ ಶಾಂತಿ ನೆಲೆಸುತ್ತಿತ್ತು. ಆದರೆ ಆರೋಪವನ್ನು ಒಬ್ಬ ವ್ಯಕ್ತಿಯು ಎದುರಿಸಿದರೆ ಆತನ ಆರೋಪ ವನ್ನು ಸಾಬೀತುಪಡಿಸಲು ಸಾಕ್ಷಿ ಆಧಾರಗಳು ಸಾಲಾದಾದಾಗ ಮಾತ್ರ ದಿವ್ಯಗಳನ್ನು ಬಳಸುತ್ತಿದ್ದರು. ಇದರಿಂದ ನಿರಪರಾಧಿ ಗಳಿಗೂ ಶಿಕ್ಷೆಯಾಗುವ ಸಾಧ್ಯತೆಗಳು ಹೆಚ್ಚಾಗಿದ್ದವು.

೩:೩ ಗೂಢಚಾರಿ ಶ್ರೀಕೃಷ್ಣದೇವರಾಯ

ಆಡಳಿತದಲ್ಲಿ ಬಿಗಿ ತರಲು ಹಾಗೂ ಎಲ್ಲರನ್ನೂ ಹದ್ದುಬಸ್ತಿನಲ್ಲಿಟ್ಟಿರಲು ಶ್ರೀ.ಕೃಷ್ಣದೇವರಾಯ ಗುಪ್ತಚಾರ ವಿಭಾಗದಲ್ಲಿ 'ಬೇಹಿನವರ' ಮತ್ತು 'ಕಾಹಿನವರ' ಎಂಬ ಎರಡು ವಿಭಾಗಗಳನ್ನು ಆರಂಭಿಸಿದ್ದ. 'ಬೇಹಿನ'ವರ ಎಂದರೆ ಬೇಹುಗಾರಿಕೆ ಅಥವಾ ಗುಪ್ತಚರ್ಯೆ. 'ಕಾಹಿನ' ಎಂದರೆ ಕಾವಲು. ಈ ಎರಡು ವಿಭಾಗಗಳು ನೀಡಿದ ಮಾಹಿತಿ ಆಧರಿಸಿ ಶ್ರೀ.ಕೃಷ್ಣದೇವರಾಯ ಹಲವು ನಿರ್ಣಯ ತೆಗೆದುಕೊಳ್ಳುತ್ತಿದ್ದ.

ಈ ಗೂಢಚಾರರು ಆಚಾರ್ಯ, ಸನ್ಯಾಸಿ, ಜ್ಯೋತಿಷಿ, ಕಲಾವಿದರು, ಕೆಳವರ್ಗದ ಕೆಲಸಗಾರರು, ಭಿಕ್ಷುಕರು, ಶ್ರೀಮಂತರು, ಹುಚ್ಚರು, ವರ್ತಕರು, ಕೃಷಿಕ, ಪ್ರವಾಸಿಯಂತೆ, ಪಶುಪಾಲಕರಂತೆ ವೇಷಧರಿಸಿ ಯಾರಿಗೂ ಅನುಮಾನ ಬಾರ ದಂತೆ ಮಾಹಿತಿ ಸಂಗ್ರಹಿಸಿ, ಶ್ರೀಕೃಷ್ಣದೇವರಾಯನಿಗೆ ರವಾನಿಸುತ್ತಿದ್ದರು. ಇವರು ಬಹುಭಾಷಾಂತರಿಗಳು, ವಿವಿಧ ವಿಷಯಗಳ ಬಗ್ಗೆ ತಿಳುವಳಿಕೆ ಹೊಂದಿದವರು. ಸೂಕ್ಷ್ಮವಾಗಿ ಗಮನಿಸುವ ಗುಣದ ಜೊತೆಗೆ ಮಾತುಗಾರಾಗಿದ್ದರು. ಶತ್ರುಗಳ ನಡುವೆ ಕೆಲಸ ಮಾಡುವುದು ಎಂದರೆ ಪ್ರಾಣ ಪಣಕ್ಕಿಟ್ಟಂತೆ ಎಂದರ್ಥ. ಇದಕ್ಕಾಗಿ ರಾಜನೂ ಅವರ ಕೆಲಸಕ್ಕೆ ತಕ್ಕಂತೆ ಅವರಿಗೆ ಬಹುಮಾನ, ಕಾಣಿಕೆ ಹಾಗೂ ಅಪಾರ ಸಂಬಳ ನೀಡುತ್ತಿದ್ದ. ಅಷ್ಟೇ ಅಲ್ಲ, ಸ್ವತ: ಶ್ರೀಕೃಷ್ಣದೇವರಾಯನೇ ಗೂಢಚರ್ಯೆ ನಡೆಸುತ್ತಿದ್ದನಂತೆ.

ಶ್ರೀಕೃಷ್ಣದೇವರಾಯನ ದಿನಚರಿ ಪುಸ್ತಕದಲ್ಲಿ ' ಸ್ವತ: ಶ್ರೀಕೃಷ್ಣದೇವರಾಯ ರಾತ್ರಿ ವೇಷ ಮರೆಸಿಕೊಂಡು ನಗರ ಸಂಚಾರ ಹೋಗುತ್ತಿದ್ದ. ತನ್ನ ಗುಪ್ತಚರರು ತಂದ ಸುದ್ದಿ ಒರೆಗೆ ಹಚ್ಚುತ್ತಿದ್ದ' ಎಂದು ಉಲ್ಲೇಖಿಸಲಾಗಿದೆ. ಒಮ್ಮೆ 'ತಳವಾರ' ಜಂಗಮಯ್ಯ ಎಂಬಾತ ನೀಡಿದ ಮಾಹಿತಿಯಲ್ಲಿ ತಪ್ಪಿತ್ತು. ಆಗ ಶ್ರೀಕೃಷ್ಣದೇವರಾಯ "ನಿನ್ನೆ ರಾತ್ರಿ, ಇಂಥಹ ಸ್ಥಳದಲ್ಲಿ ಇಂಥಹ ಮನೆಯಲ್ಲಿ, ಇಂಥಹ ಬೀದಿಯಲ್ಲಿ ಈ ರೀತಿಯ ಘಟನೆಯಾಗಿದೆ. ನಿನಗೆ ತಿಳಿಯದಿದ್ದರೆ "ನೀನು ತಳವಾರಿಕೆ ಮಾಡುವುದಕ್ಕೂ ನಾವು ರಾಜ್ಯವಾಳುವುದಕ್ಕೂ ಚೆನ್ನಾಗಿದೆ" ಎಂದು ತರಾಟೆಗೆ ತೆಗೆದುಕೊಂಡ. ಆಗ 'ತಳವಾರ' ಜಂಗಮಯ್ಯ, ಈ ವಿಷಯವನ್ನು ರಾಜರಿಗೆ ತಿಳಿಸಿದವರು ಯಾರು ಎಂದು ಗಲಿಬಿಲಿಗೊಂಡನಂತೆ. ಕೊನೆಗೆ ಸ್ವತ: ರಾಜರೇ ಗಸ್ತು ತಿರುಗಿ ತಿಳಿದುಕೊಂಡಿದ್ದಾರೆ ಎಂದು ಗೊತ್ತಾದಾಗ ಆತ ಮತ್ತಷ್ಟು ಭಯಪಟ್ಟ. ಮರುದಿನವೇ ಕಾವಲನ್ನು ಮತ್ತಷ್ಟು ಬಿಗಿಗೊಳಿಸಿದ. ಇದರಿಂದ ಕಾವಲಿನವರು ಯಾವಾಗ ಶ್ರೀಕೃಷ್ಣದೇವರಾಯ ಮಹಾರಾಜರು ಗಸ್ತು ತಿರುಗುತ್ತಾರೋ? ಯಾವ ಮಾರುವೇಷದಲ್ಲಿ ಬರುತ್ತಾರೋ ಎಂದು ತಿಳಿಯದೇ ಸದಾ ಎಚ್ಚರಿಕೆಯಿಂದ ಕೆಲಸ ನಿರ್ವಹಿಸುತ್ತಿದ್ದರು. ಇದರ ಭಯ ಕೇವಲ ಕಳ್ಳಕಾಕರಿಗೆ ಮಾತ್ರವಲ್ಲ, ಅಧಿಕಾರಿಗಳು, ಮಂತ್ರಿಗಳಿಗೂ ತಟ್ಟಿತ್ತು. ಅಬ್ದುಲ್ ರಜಾಕ್‌ನ ವಿವರಣೆಯಲ್ಲಿ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಕಾವಲು ಹೇಗಿತ್ತು ಎಂಬ ಉಲ್ಲೇಖವಿದೆ, ' ರಾಜನನ್ನು ಭೇಟಿ ಮಾಡಲು ೭ ಬಾಗಿಲುಗಳನ್ನು ಹಾಗೂ ಅಲ್ಲಿದ್ದ ಕಾವಲುಗಾರರನ್ನು ದಾಟಿ ಹೋಗ ಬೇಕಿತ್ತು. ಅರಮನೆ ಎದುರಿಗಿದ್ದ ಟಂಕಸಾಲೆ, ಅರಮನೆ ಹಾಗೂ ಮಂತ್ರಿಗಳ ವಸತಿಯ ಸುತ್ತುಮುತ್ತ ಏನಿಲ್ಲವೆಂದರೂ ೧೨,೦೦೦ ಸೈನಿಕರು ಕಾವಲಿರುತ್ತಿದ್ದರು.'[೪೫]

ಕೃಷ್ಣದೇವರಾಯ ತನ್ನ ರಾಜ್ಯದಲ್ಲಿ ನಡೆಯುವ ವಿಷಯಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲು ಮಾತ್ರ ಗೂಢಚಾರರನ್ನು ನೇಮಿಸುತ್ತಿರಲಿಲ್ಲ. ತನ್ನ ಗೂಢಚಾರರನ್ನು ಹೊರರಾಜ್ಯಗಳಿಗೂ ಸಹ ಕಳುಹಿಸಿ ಅಲ್ಲಿನ ವಿದ್ಯಮಾನಗಳ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅದರ ಬಗ್ಗೆ ತಾನು ತೆಗೆದುಕೊಳ್ಳಬೇಕಾದ ನಿಲುವಿನ ಬಗ್ಗೆ ಮಂತ್ರಿಗಳನ್ನು ಸಮಾಲೋಚಿಸುತ್ತಿದ್ದ. ಶ್ರೀಕೃಷ್ಣದೇವರಾಯ ಬಿಜಾಪುರಕ್ಕೆ ಕೆಲವು ಗೂಢಚಾರರನ್ನು ಕಳುಹಿಸಿದ್ದ. ಅವರಲ್ಲಿ ಬೇಹಿನ 'ಮಾರೀಚರಾಮಯ್ಯ'ನೂ ಒಬ್ಬ. ಸಾಕಷ್ಟು ಕಾಲ ಅಲ್ಲಿದ್ದ ಆತ ಒಂದು ದಿನ ದಿಢೀರನೇ ವಿಜಯನಗರಕ್ಕೆ ಬಂದು ಮಹಾರಾಜರನ್ನು ನೋಡಬೇಕು ಎಂದು ಹೇಳಿ ಕಳುಹಿಸಿದ. ತಕ್ಷಣ ಮಹಾರಾಜರು ಏಕಾಂತದಲ್ಲಿ ಆತನನ್ನು ಕರೆಸಿಕೊಂಡರು. ಆಗ ಮಾರೀಚರಾಮಯ್ಯ ಮಹತ್ವದ ವಿಷಯ ತಿಳಿಸಿದ. 'ಗೋಲ್ಕೊಂಡಾದ ವಜೀರರು, ಕುತುಬ್ ಮುಲ್ಕ್, ನಿಜಾಮ್ ಸಾಹೇಬರು, ವಜೀರರು, ಮುದ್ದಾ ಪಂಡಿತ, ದತ್ತೋಪಂಡಿತ ಎಲ್ಲರೂ ಕುಳಿತು ಸಮಾಲೋಚನೆ ಮಾಡುತ್ತಿದ್ದಾರೆ. ತಾವು ಪಟ್ಟಕ್ಕೆ ಬಂದ ನಂತರ ಮುಸ್ಲಿಂ ರಾಜರ ಮೇಲೆ ದಂಡೆತ್ತಿ ಹೋಗುತ್ತೀರಿ ಎಂಬ ಸುದ್ದಿ ಹರಡಿದೆ. ಅವರೆಲ್ಲ ತಮ್ಮ ಗಡಿಗಳನ್ನು ಭದ್ರಪಡಿಸುತ್ತಿದ್ದಾರೆ. ಮೇಲಾಗಿ ವಿಜಯನಗರದಲ್ಲಿ ಏನಾಗುತ್ತಿದೆ ಎಂದು ತಿಳಿಯಲು ೬೦ ಗೂಢಚಾರಿಗಳನ್ನು ಇಲ್ಲಿಗೆ ಕಳುಹಿಸಲಿದ್ದಾರೆ. ವಿಜಯನಗರದವರು ಯಾವಾಗ ಧಾಳಿ ಮಾಡುತ್ತಾರೋ ಎಂದು ಆತಂಕದಲ್ಲಿದ್ದಾರೆ ' ಎಂದು ತಿಳಿಸಿದ. ವಿಷಯ ತಿಳಿದ ಶ್ರೀಕೃಷ್ಣದೇವರಾಯ ಆತನಿಗೆ ಉಡುಗೊರೆಯಾಗಿ ಅಪಾರ ಹಣ ನೀಡಿದ. ಕೆಲ ದಿನಗಳ ನಂತರ ಬೇಹಿನ ರಾಮಯ್ಯ ಹಾಗೂ ಗೋಪಾಜಿ ಎಂಬ ಗುಪ್ತಚಾರರು ಬಿಜಾಪುರದಲ್ಲಿರುವ ರಕ್ಷಣಾ ವ್ಯವಸ್ಥೆ, ಅವರು ದಾರಿಹೋಕರನ್ನು ತನಿಖೆ ಮಾಡುವ ರೀತಿ ಎಲ್ಲವನ್ನೂ ಸಂಗ್ರಹಿಸಿದ್ದರು. ಬೇಹಿನ 'ಗೋಪಾಜಿ' ಅವರು ಈಗ ತಮ್ಮ ಗಡಿ ಭದ್ರಪಡಿಸಿಕೊಂಡು ವಿಜಯನಗರದ ಮೇಲೆ ಯುದ್ಧ ಸಾರಲು ಸಿದ್ಧತೆ ನಡೆಸಿದ್ದಾರೆ. ಈಗಾಗಲೇ ಅವರ ಅಧೀನ ರಾಜರಿಗೆ, ಸಾಮಂತರಿಗೆ ಅವರವರ ಬಳಿ ಇರುವ ಸೈನಿಕರು, ಆನೆ, ಕುದುರೆಗಳ ಮಾಹಿತಿ ಕಳುಹಿಸುವಂತೆ ಕೇಳಿ ಪತ್ರ ಬರೆದಿದ್ದಾರೆ. ಅವರು ವಿಜಯನಗರಕ್ಕೆ ೧೭೦ ಜನರನ್ನು ಬೇಹುಗಾರಿಕೆ ಮಾಡಲು ಕಳುಹಿಸಿದ್ದಾರೆ. ಅವರೆಲ್ಲ ವಿಜಯನಗರದ ಮಾಹಿತಿಯನ್ನು ಅಲ್ಲಿಗೆ ಕಳುಹಿಸುತ್ತಿದ್ದಾರೆ" ಎಂದು ತಿಳಿಸಿದ. ರಾಯ ಅವರಿಗೂ ಬಹುಮಾನ ಕೊಟ್ಟು ಕಳುಹಿಸಿದ.

ಗೂಢಚಾರಿ ಪದ್ಧತಿ ಒಬ್ಬ ಅರಸನ ಆಡಳಿತದ ಆತ್ಮವಿದ್ದಂತೆ. ಯಾವ ದೊರೆಯು ಸಮರ್ಥವಾದ ಗೂಢಚಾರಿ ಪದ್ಧತಿ ಹೊಂದಿದ್ದಾನೋ, ಅವನು ಯಶಸ್ವಿ ರಾಜನಾಗುತ್ತಾನೆ. ಎಲ್ಲಿ ಗೂಢಚಾರಿಕೆ ವಿಫಲವಾಗುತ್ತದೋ ಅಲ್ಲಿ ರಾಜನು ವಿಫಲ ನಾಗುತ್ತಾನೆ. ಗೂಢಚಾರಿಯ ವ್ಯವಸ್ಥೆಯು ಪೊಲೀಸ್ ಪಡೆಯ ಒಂದು ಅಂಗವಾಗಿದೆ. ಗೂಢಚಾರರು ತಂದ ಎಲ್ಲಾ ಮಾಹಿತಿ ಗಳನ್ನು ರಾಜನು ಒಪ್ಪುತ್ತಿರಲಿಲ್ಲ. ಇದನ್ನು ಇನ್ನೊಬ್ಬನ ಮೂಲಕ ಪರೀಕ್ಷಿಸಿ ಇಬ್ಬರೂ ಹೇಳುವ ವಿಷಯ ಒಂದೇ ಆಗಿದ್ದಲ್ಲಿ ಅದನ್ನು ನಂಬುತ್ತಿದ್ದನು. ಗೂಢಚಾರರು ಹಲವು ವೇಷಭೂಷಣಗಳೊಂದಿಗೆ ಸಂಚರಿಸುತ್ತಾ ಅಪರಾಧಿಗಳ ಬಗ್ಗೆ, ಹಾಗೂ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದರು. ವೇಶ್ಯಾಗೃಹಗಳು, ಮದ್ಯದಂಗಡಿಗಳು, ಅಕ್ಕಸಾಲಿಗರ ಅಂಗಡಿಗಳ ಮೇಲೆ ಗಮನವಿಟ್ಟು, ದುಂದುವೆಚ್ಚ ಮಾಡುವವರ ಬಗ್ಗೆ ಗೂಢಚಾರರು ಪೊಲೀಸ್ ಅಧಿಕಾರಿಗಳಿಗೆ ತಿಳಿಸುತ್ತಿದ್ದರು. ಗೂಢಚಾರರಾಗಿ ಸ್ತ್ರೀಯರು, ವೇಶ್ಯೆಯರು ಇದ್ದ ಬಗ್ಗೆ ಉಲ್ಲೇಖಗಳು ಸಿಗುತ್ತವೆ.

೩.೪: ವಿಜಯನಗರ ಕಾಲದ ಅಂಗರಕ್ಷಕರು

ಅಂಗರಕ್ಷಕ ಪಡೆಯಲ್ಲಿ ರಾಜನ ಅತ್ಯಂತ ನಂಬಿಕಸ್ಥರು ಇರುತ್ತಿದ್ದರು. ಇವರು ರಾಜನ ಮೇಲೆ ದಾಳಿಗಳಾಗದಂತೆ ಆತನ ಜೀವವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿದ್ದರು. ಇದರಲ್ಲಿ ಪೊಲೀಸ್ ಹಾಗೂ ಸೇನಾಪಡೆಯ ಯೋಧರು ಇರುತ್ತಿದ್ದರು. ರಾಜನು ಅಂಗರಕ್ಷಕರ ಚಲನವಲನಗಳ ಮೇಲೂ ಸಹ ಗೂಢಚಾರರನ್ನು ಬಿಟ್ಟು ಮಾಹಿತಿ ಸಂಗ್ರಹಿಸುತ್ತಿದ್ದನು. ವಿದೇಶಿ ಯಾತ್ರಿಕನಾದ ಪಾಯಸ್ ಅರಮನೆಯನ್ನು ವಿವರ ವಿವರವಾಗಿ ಚಿತ್ರಿಸಿ ಬಾಯ್ತುಂಬ ಹೊಗಳುತ್ತಾನೆ. ಅದರ ಸಂರಕ್ಷಕ ಭಿತ್ತಿಗಳು, ಕಾವಲುಗಾರರು, ದ್ವಾರಪಾಲಕರು, ವಿಜಯಗೃಹ ಹಾಗೂ ಅದರ ಅಲಂಕರಣ, ರಾಜಾಮಾನ್ಯ ಅತಿಥಿಗಳ ಸಲುವಾಗಿ ಇಷ್ಟ. ಪಿಠೋಪಕರಣ ಮತ್ತು ಅವಕ್ಕೆ ಹೊದ್ದಿಸಿದ ರತ್ನಖಚಿತ ಅಮೂಲ್ಯ ವಸ್ತ್ರಾಭರಣ, ಬಿತ್ತಿಗಳನ್ನು ಅಲಂಕರಿಸಿದ ವರ್ಣರಂಜಿತ ಚಿತ್ರಗಳ ವಿಷಯಗಳನ್ನು ಇವೆಲ್ಲವನ್ನು ಅವನು ಉಲ್ಲೇಖಿಸಿದ್ದಾನೆ.[೪೬] ವಿಜಯನಗರ ಕಾಲದಲ್ಲಿ ಸಾಮಾನ್ಯವಾಗಿ ಎಲ್ಲ ಸ್ತ್ರೀಯರು ಬೆಲೆಬಾಳುವ ಬಂಗಾರದ ಆಭರಣ ಧರಿಸುತ್ತಿದ್ದರು ಎಂದು ಪಾಯಸ್ ಹೇಳುವನು. ತೆಲುಗು ಕವಿ ಪೆದ್ದನನ ಪ್ರಕಾರ ಅನೇಕ ಮಹಿಳೆಯರು ವಿದ್ಯೆಯಲ್ಲಿ, ನೃತ್ಯದಲ್ಲಿ ಅಪ್ರತಿಮರೆನಿಸಿದ್ದರು. ಇಷ್ಟೇ ಅಲ್ಲ ಸ್ತ್ರೀಯರು ಶಸ್ತ್ರವಿದ್ಯೆ, ಕುಸ್ತಿ, ಜೋತಿಷ್ಯ, ಸಂಗೀತ ಇವುಗಳಲ್ಲಿ ನಿಷ್ಣಾತರಾಗಿದ್ದರು ಮತ್ತು ಅಂಗರಕ್ಷಕರಾಗಿಯೂ, ಅಡುಗೆಯವರಾಗಿಯೂ ಕೆಲಸ ಮಾಡು ತ್ತಿದ್ದರು. ಇವರು ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿ ನ್ಯಾಯಾಧೀಶರ ಸ್ಥಾನ ಅಲಂಕರಿಸಿದ್ದೂ ಉಂಟು. ಇದೇ ಬಗೆಯಾಗಿ ಮಹಿಳೆಯರು ಪೇದೆಗಳಾಗಿಯೂ, ಕಾವಲುಗಾರರಾಗಿಯೂ ಕೆಲಸ ಮಾಡುತ್ತಿದ್ದರು.[೪೭]

ವಿಜಯನಗರ ಅರಸರ ಕಾಲದಲ್ಲಿದ್ದ ರಾಜನ ಅಂಗರಕ್ಷಕ ವ್ಯವಸ್ಥೆಯ ಬಗ್ಗೆ ಅದರಲ್ಲೂ ಮಹಿಳಾ ಅಂಗರಕ್ಷಕರ ಬಗ್ಗೆ ಆಗಿನ ಕಾಲದ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸ ಕಥನದಲ್ಲಿ ವಿವರಿಸಿದ್ದಾರೆ. ಡಾಮಿಂಗೋ ಪಾಯಸ್‌ನು ಮಹಿಳಾ ಅಂಗ ರಕ್ಷಕರ, ರಾಣಿಯರ, ಸೇವಕಿಯರ ಮತ್ತು ಆಸ್ಥಾನ ಸ್ತ್ರೀಯರ ಬಗ್ಗೆ ವಿವರಿಸಿದ್ದಾನೆ. ಇವನ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ರಾಜಸ್ತ್ರೀಯು ಒಂದೊಂದು ಮನೆಯನ್ನು ಹೊಂದಿದ್ದು, ಜೊತೆಗೆ ಅವಶ್ಯಕವಿದ್ದ ಇತರ ಎಲ್ಲಾ ಸೇವಕಿಯರನ್ನು ಮತ್ತು ಮಹಿಳಾ ಅಂಗರಕ್ಷಕರನ್ನು ಹೊಂದಿದ್ದಳು. ಇಲ್ಲಿಗೆ ಯಾವೊಬ್ಬ ಪುರುಷನೂ ಬರುತ್ತಿರಲಿಲ್ಲ.[೪೮] ಈ ಕಾಲದಲ್ಲಿ ಮಹಿಳಾ ಅಂಗರಕ್ಷರು ಇರುವುದು ಅತ್ಯಂತ ಮಹತ್ವದ ವಿಷಯವಾಗಿರುತ್ತದೆ. ಇವರನ್ನೇ ಮಹಿಳಾ ಪೊಲೀಸ್ ಪೇದೆಗಳೆಂದು ಕೆಲವರು ಕರೆದಿದ್ದಾರೆ. ಆಧುನಿಕ ಪೊಲೀಸ್ ವ್ಯವಸ್ಥೆಯಲ್ಲಿ ಮಹಿಳಾ ಪೇದೆಗಳ ಕೆಲಸ, ಮಹಿಳಾ ಆರೋಪಿಗಳನ್ನು ವಿಚಾರಣೆ ನಡೆಸಲು ಹಾಗೂ ಅವರನ್ನು ಬೆಂಗಾವಲು ಮಾಡುವುದಾಗಿದೆ. ಆದರೆ ವಿಜಯನಗರ ಕಾಲದ ಮಹಿಳಾ ಅಂಗರಕ್ಷಕರು ಮಹಾರಾಜನ ಅಂಗರಕ್ಷಕನಾಗಿರುವುದು ಅತ್ಯಂತ ಗಮನಾರ್ಹವಾದ ವಿಷಯವಾಗಿದೆ. ಅಂಗರಕ್ಷಕರು ಯಾವುದೇ ಘಟನೆ ನಡೆದರೂ ಅದಕ್ಕೆ ತಾವೇ ಹೊಣೆಯಾಗುವ ಕರ್ತವ್ಯ ಹೊಂದಿದ್ದರು. ಇವರು ಮುಖ್ಯದ್ವಾರದಲ್ಲಿ ಪ್ರವೇಶಿಸುವ ಜನರ ಚಲನವಲನಗಳ ಬಗ್ಗೆ

ಗಮನಹರಿಸಬೇಕಿತ್ತು. ಅಲ್ಲದೇ ಇವರು ಕಳ್ಳರಿಂದ ಕಳವಾದ ವಸ್ತುಗಳ ಬಗ್ಗೆ ವರದಿ ನೀಡಬೇಕಿತ್ತು. ಈ ರಾಜ್ಯದಲ್ಲಿ ಮಹಿಳಾ ಅಂಗರಕ್ಷಕರಿಗೆ ಪ್ರತ್ಯೇಕವಾದ ಮನೆಗಳಿದ್ದವು. ಹಂಪಿಯ ಮಹಾನವಮಿಯ ದಿಬ್ಬದಲ್ಲಿರುವ ಶಿಲ್ಪವೊಂದು ಮಹಿಳಾ ಅಂಗರಕ್ಷಕರ ಬಗ್ಗೆ ವಿವರವನ್ನು ನೀಡುತ್ತದೆ.–*(ಚಿತ್ರ ಸಂಖ್ಯೆ ೧ ನೋಡಿ).* ಈ ಶಿಲ್ಪವು ಕುಳಿತಿರುವ ರಾಜನನ್ನೂ ಮತ್ತು ಅವನ ಹಿಂಭಾಗದಲ್ಲಿ ಎಡಕೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿರುವ ಮಹಿಳಾ ಅಂಗರಕ್ಷಕರನ್ನು ತೋರಿಸುತ್ತದೆ. ಈ ಮಹಿಳಾ ಅಂಗರಕ್ಷಕರು ರಾಜ ಎಲ್ಲಿಗೆ ಹೋದರೂ ಅವನ ಜೊತೆ ಇರುತ್ತಿದ್ದರು. ಇವರು ಉತ್ತಮವಾದ ವೇತನ ಪಡೆಯುತ್ತಿದ್ದರು. ಈ ಮಹಿಳೆಯರು ಅಂದವಾದ ಉಡುಪು ಧರಿಸುತ್ತಿದ್ದರು. ಇವರು ಶಿರಾಭರಣ, ಬಳೆ, ಸೊಂಟಾಭರಣ, ಉಂಗುರ, ತೋಳು ಬಂಧಿ, ಕಂಠೀಹಾರ ಮುಂತಾದವುಗಳನ್ನು ಧರಿಸುತ್ತಿದ್ದರು.[೪೯] ಇದೊಂದು ಅತ್ಯಂತ ಮಹತ್ವದ ವಿಷಯವಾಗಿದೆ. ಏಕೆಂದರೆ, ಆಧುನಿಕ ಕಾಲದಲ್ಲಿ ಅಂದರೆ ಸ್ವಾತಂತ್ರ್ಯೋತ್ತರದಲ್ಲಿ ಅದರಲ್ಲಿಯೂ ಸುಮಾರು ಕ್ರಿಶ ೧೯೮೦ ರ ನಂತರ ರಾಜ್ಯದಲ್ಲಿ ಮಹಿಳಾ ಪೇದೆಗಳನ್ನು ನೇಮಿಸಿದ್ದನ್ನು ನಾವು ಕಾಣಬಹುದಾಗಿದೆ. ಆದರೆ ವಿಜಯನಗರ ಕಾಲದಲ್ಲಿಯೇ ಮಹಿಳಾ ಪೇದೆಗಳಿದ್ದರು ಎಂಬುದು ಅತ್ಯಂತ ಗಮನಾರ್ಹವಾದ ವಿಷಯವಾಗಿದೆ. ಇದರಿಂದ ತಿಳಿದುಬರುವ ವಿಷಯವೇನೆಂದರೆ, ಬ್ರಿಟೀಷರು ಭಾರತಕ್ಕೆ ಬರುವ ಮುಂಚೆಯೇ ಕರ್ನಾಟಕದಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆ ಇತ್ತೆಂಬುದು ಸ್ಪಷ್ಟವಾಗುತ್ತದೆ. ಮೌರ್ಯರ ಕಾಲದಲ್ಲೂ ಮಹಿಳಾ ಅಂಗರಕ್ಷಕರಿದ್ದರೆಂದು ಮಹಾಲಿಂಗಂ ಅಭಿಪ್ರಾಯ ಪಡುತ್ತಾರೆ. [೫೦]

ವಿಜಯನಗರ ಕಾಲದಲ್ಲಿ ಕೋಟೆಗಳನ್ನು ಮತ್ತು ನಗರಗಳನ್ನು ಕಾಯಲು ಒಂದು ವಿಶೇಷ ಪಡೆಯಿತ್ತು. ಅವು ಯುದ್ಧದಿಂದ ಹೊರತಾದ ಕೇವಲ ನಗರ ಕಾಯುವ ಪಡೆಗಳಾಗಿದ್ದವು. "ವಿಜಯನಗರದ ಮುಖ್ಯ ಪ್ರವೇಶದ್ವಾರವಿದ್ದುದು ದಕ್ಷಿಣ ದಿಕ್ಕಿನಲ್ಲಿ," ರಾಯನಕೆರೆಯ ಕಡೆಗೆ. ಈ ಕೆರೆಗೆ ಕೃಷ್ಣರಾಯ ತಟಾಕ ಎಂದೂ ಹೆಸರು ಪೂರ್ವದ ಕಡೆಯ ಪ್ರವೇಶದ್ವಾರ ವಿದ್ದುದು ಕಂಪಿಲಿಯ ಕಡೆಯಿಂದ. ಕಂಪಿಲಿಯು ರಾಜಧಾನಿಯ ಗಡಿಕಾವಲು ದಳದ ಠಾಣೆಯಂತಿದ್ದು, ವಿಜಯವಿರೂಪ ಪುರವೆಂಬ ಹೆಸರಿನ ನಗರೋಪಭಾಗವಾಗಿತ್ತು.[೫೧] ನಗರದ ಬೇರೆ ಬೇರೆ ಬಡಾವಣೆಗಳ ಆಡಳಿತವು ಸೆಟ್ಟಿ, ಪಟ್ಟಣಸ್ವಾಮಿಗಳೆಂಬ ನಗರಾಧ್ಯಕ್ಷರುಗಳ ಅಧೀನದಲ್ಲಿತ್ತು.[೫೨] ಇವರಿಗೆ ತಳವಾರರೆಂಬ ರಕ್ಷಣಾದಳದ ನೆರವಿತ್ತು.[೫೩] ವಿಜಯನಗರ ಸಾಮ್ರಾಜ್ಯವು ಒಟ್ಟಿನಲ್ಲಿ ದಕ್ಷಿಣದ ಪ್ರಭಾವಶಾಲಿಯಾದ ರಾಜಕೀಯ ಶಕ್ತಿಯಾಗಿದ್ದುಕೊಂಡು ಜನರಿಗೆ ಶಾಂತಿ ಮತ್ತು ಸಂರಕ್ಷಣೆಯ ಭರವಸೆ ಯನ್ನು ನೀಡಿತು.

ಅಬ್ದುಲ್ ರಜಾಕ್‌ನು ತನ್ನ ಪ್ರವಾಸ ಕಥನದಲ್ಲಿ ವಿಜಯನಗರ ಕಾಲದಲ್ಲಿ ಇದ್ದ ರಕ್ಷಣಾ ವ್ಯವಸ್ಥೆಗಳ ಬಗ್ಗೆ ರಾಜನ ಅಂಗರಕ್ಷಕರ ಬಗ್ಗೆ ಮತ್ತು ಅಲ್ಲಿನ ಪೊಲೀಸ್ ವ್ಯವಸ್ಥೆಯ ಬಗ್ಗೆ ವಿವರಗಳನ್ನು ನೀಡಿದ್ದಾನೆ. 'ದರಬ್‌ಖಾನೆ' ಎದುರಾಗಿ ರಾಜ್ಯಪಾಲನ ಮನೆಯಿದೆ. ಇಲ್ಲಿ ೧೨,೦೦೦ ಸೈನಿಕರು ಕಾವಲು ಕಾಯುತ್ತಾರೆ. ಪ್ರತಿಯೊಬ್ಬರಿಗೂ ದಿನಕ್ಕೆ ಒಂದು ಫನಂ ಸಂಬಳ ಕೊಡುತ್ತಾರೆ. ಈ ಸಂಬಳಕ್ಕೆ ಬೇಕಾದ ಹಣ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬರುತ್ತದೆ ಎಂದಿದ್ದಾನೆ.[೫೪] ಈ ನಗರದ ೭ ಕೋಟೆಗಳಲ್ಲಿಯೂ ಈ ತರಹ ಅನೇಕ ವೇಶ್ಯಾಗೃಹಗಳಿವೆ. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ೧೨,೦೦೦ ಫನಂ ಆಧಾಯ ಬರುತ್ತದೆ. ಈ ಹಣವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಾರೆ. ಈ ಪಹರೆಯವರು ಕೋಟೆಯೊಳಗೆ ನಡೆಯುವ ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳಬೇಕು. ಕಳವುಗಳನ್ನು ಪತ್ತೆಹಚ್ಚಿ ವರದಿ ಮಾಡಬೇಕು. ಹಾಗೆ ಮಾಡದೇ ಹೋದರೆ, ಆ ಮಾಲಿನ ಬೆಲೆಯನ್ನು ಮಾಲಿಕರಿಗೆ ಕೊಡಬೇಕು.[೫೫] ಎಂದು ವಿವರಿಸಿದ್ದಾನೆ. ಇದಕ್ಕಾಗಿ ಅಬ್ದುಲ್ ರಜಾಕ್‌ನು ತನ್ನದೇ ಒಂದು ಸ್ವಂತ ಉದಾಹರಣೆಯನ್ನೂ ಸಹ ವಿವರಿಸಿದ್ದಾನೆ. "ನನ್ನ ಸಹಪಾಟಿಗಳು ಕೊಂಡುಕೊಂಡಿದ್ದ ಕೆಲವು ಗುಲಾಮರು ಓಡಿಹೋಗಿ ಬಿಟ್ಟರು. ಈ ವಿಚಾರವನ್ನು 'ಕೊತ್ವಾಲ'ನಿಗೆ ತಿಳಿಸಿದೆವು. ನಮ್ಮ ಬಿಡಾರಗಳನ್ನು ನೋಡಿ

ಕೊಳ್ಳುತ್ತಿದ್ದ ಪಹರೆ ನಾಯಕನಿಗೆ ತಪ್ಪಿಸಿಕೊಂಡು ಹೋಗಿದ್ದ ಗುಲಾಮರನ್ನು ಹಿಡಿದು ತರಬೇಕು, ಇಲ್ಲವೇ ಅವರ ಬೆಲೆಯನ್ನು ಕಟ್ಟಿಕೊಡಬೇಕು ಎಂದು ಆತ ಆಜ್ಞೆ ಮಾಡಿದ. ಗುಲಾಮರ ಬೆಲೆ ಎಷ್ಟು ಎಂದು ಪಹರೆಯವರು ತಿಳಿದುಕೊಂಡು ಆ ಬೆಲೆಯನ್ನು ಕೊಟ್ಟುಬಿಟ್ಟರು."[೫೬] ಇದರಿಂದ ನಮಗೆ ಸ್ಪಷ್ಟವಾಗಿ ತಿಳಿದು ಬರುವ ವಿಷಯವೇನೆಂದರೆ, 'ಕೊತ್ವಾಲ'ನು ವಿಜಯ ನಗರ ಕಾಲದಲ್ಲಿ ಅಪರಾಧಗಳಿಗೆ ಸಂಬಂಧಿಸಿದ ಮತ್ತು ಕಾನೂನು ಸುವ್ಯವಸ್ಥೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿ ಕೊಳ್ಳುವ ಅಧಿಕಾರಿಯಾಗಿದ್ದನು. ಆತನ ಕೈಕೆಳಗೆ ಪಹರೆಯವರು ಇದ್ದು ಅದರಲ್ಲಿ ಕೆಲವು ನಾಯಕರನ್ನೂ ಸಹ ನೇಮಿಸ ಲಾಗಿತ್ತು. ಈ ಕೊತ್ವಾಲರು ನಗರಗಳನ್ನು ಕಾಯುವ ಕೆಲಸಗಳನ್ನು ಮಾಡುತ್ತಿದ್ದರು. ಕೊತ್ವಾಲನು ಮೊಗಲರ ಕಾಲದ ನಗರ ಪೊಲೀಸ್ ಅಧಿಕಾರಿಯಾಗಿದ್ದನೆಂದು ಈ ಹಿಂದೆ ವಿವರಿಸಿದೆ. ಎರಡನೇ ಕೃಷ್ಣದೇವರಾಯನ ಕಾಲದಲ್ಲಿ ಅಂದರೆ ಕ್ರಿ.ಶ. ೧೫೨೦ರಲ್ಲಿ ವಿಜಯನಗರಕ್ಕೆ ಬಂದ ಪೋರ್ಚ್‌ಗೀಸ್ ದೇಶದ ಯಾತ್ರಿಕನಾದ ಡೊಮಿಂಗೋ ಪಾಯಸ್‌ನು ಅಲ್ಲಿನ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಈ ರೀತಿ ಹೇಳಿದ್ದಾನೆ. ವರ್ಷಕ್ಕೊಮ್ಮೆ ಸಂಬಳ ಕೊಡುವುದು ವಿಜಯನಗರ ಅರಸರ ಕಾಲದ ರೂಢಿ. ಈ ವೇಳೆಯಲ್ಲಿ ರಾಜನ ಮನೆಯ ಅಧಿಕಾರಿಗಳಿಂದ ವೀಕ್ಷಣೆ ನಡೆದು ಅವರು ಪ್ರತೀಯೊಬ್ಬನ ಹೆಸರು ಮತ್ತು ಅವನ ಮುಖ ಇಲ್ಲವೇ ದೇಹದ ಮೇಲೆ ಇರುವ ಕಲೆಗಳನ್ನು ಬರೆದುಕೊಳ್ಳುತ್ತಿದ್ದರು. ೧,೦೦೦ 'ಪರ್ದಬ' ಸಂಬಳವಿರುವ ರಕ್ಷಕ ಪಡೆಯವರಿದ್ದರು. ಕೆಲವರಿಗೆ ೮೦೦, ೬೦೦ ಸ್ವಲ್ಪ ಹೆಚ್ಚು ಕಮ್ಮಿ ವ್ಯತ್ಯಾಸವಿತ್ತು. ಅವರಲ್ಲಿ ಉನ್ನತ ದರ್ಜೆಯ ಕೆಲವರಿಗೆ ೨-೩ ಕುದುರೆಗಳಿವೆ. ಮಿಕ್ಕವರಿಗೆ ಒಂದಕ್ಕಿಂತ ಹೆಚ್ಚಿಲ್ಲ. ಈ ಸೈನಿಕರಿಗೆ ತಮ್ಮ ದಳಪತಿ ಇದ್ದು, ಪ್ರತೀಯೊಬ್ಬ ದಳಪತಿ ಕ್ರಮ ಹಾಗೂ ಪದ್ಧತಿಯಂತೆ ತನ್ನ ರಕ್ಷಕ ದಳದೊಂದಿಗೆ ಅರಮನೆಗೆ ಕಾವಲಾಗಿ ನಿಲ್ಲಲು ಹೋಗುವನು. ರಾಜ ತನ್ನ ಕಾವಲು ಪಡೆಯಲ್ಲಿ ೫೦೦ ಅಶ್ವಗಳನ್ನು ಹೊಂದಿದ್ದಾನೆ. ಮತ್ತು ಇವರು ತಮ್ಮ ಆಯುಧಗಳಿಂದ ಅರಮನೆಯ ಹೊರಗೆ ಪಹರೆ ಮಾಡುತ್ತಾರೆ. ಒಳಗಡೆ ೨ ಪಹರೆಗಳು ಇರುತ್ತವೆ ಮತ್ತು ಖಡ್ಗ ಮತ್ತು ಗುರಾಣಿ ಹಿಡಿದ ಜನರು ಇರುತ್ತಾರೆ ' ಎಂದು ಹೇಳಿದ್ದಾನೆ.[೫೭]

೩.೫ : ಬಹಮನಿ ಸುಲ್ತಾನರ ಕಾಲದ ಪೊಲೀಸ್ ವ್ಯವಸ್ಥೆ

ಕರ್ನಾಟಕದಲ್ಲಿ ಮೂರು ಶತಮಾನಗಳಿಗೂ ಹೆಚ್ಚಿನ ಕಾಲ ಬಹಮನಿ ಸುಲ್ತಾನರು ಮತ್ತು ಇತರ ಮಹಮ್ಮದೀಯ ರಾಜರು ಆಳಿ ಹೋದರು. ಇವರು ವಿಜಯನಗರದ ಸಮಕಾಲೀನರು. ಸುಮಾರು ಒಂದು ದಶಕದ ಕಾಲ (೧೩೪೭-೫೮) ಬಹಮನಿ ರಾಜ್ಯವಾಳಿ ಬಹುಮನ್‌ಷಾನು ತನ್ನ ಅಧಿಕಾರವಧಿಯಲ್ಲಿ ಆಡಳಿತದ ಸೌಕರ್ಯಕ್ಕಾಗಿ ಮಹಮ್ಮದ್ ಬಿನ್ ತೊಘಲಕ್‌ನ ಆಸ್ಥಾನದಲ್ಲಿ ಪ್ರಚಲಿತವಾಗಿದ್ದ ಆಡಳಿತ ಪದ್ಧತಿಗಳನ್ನು ಅನುಸರಿಸಿದನು. ರಾಜ್ಯವನ್ನು ನಾಲ್ಕು 'ತರಫ್' ಅಥವಾ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ, ೧) ದಾಬೋಲ್‌ವರೆಗಿನ ಮತ್ತು ಕೃಷ್ಣಾ-ತುಂಗಭದ್ರಾ ಪ್ರದೇಶಗಳನ್ನು ಒಳ ಗೊಂಡ ಅಹಸನಾಬಾದ್ (ಗುಲ್ಬರ್ಗ). ೨) ದೌಲತಾಬಾದ್, ೩)ಬೀದರ್, ೪)ಕಾಂದಹಾರ್, ಇಂದೂರಾ ಮತ್ತು ತೆಲಂಗಾಣದ ಕೆಲವು ಪ್ರದೇಶಗಳನ್ನೊಳಗೊಂಡ ಬೀರಾರ್, ಪ್ರತಿಯೊಂದು ತರಫ್‌ಗೂ ಒಬ್ಬೊಬ್ಬ ರಾಜ್ಯಪಾಲರನ್ನು ನೇಮಿಸ ಲಾಗಿತ್ತು. ಈ ರಾಜ್ಯಪಾಲರುಗಳು ಆ ಪ್ರಾಂತ್ಯದ ಆಡಳಿತದ ಹೊಣೆಗಾರಿಕೆಯನ್ನಷ್ಟೇ ಅಲ್ಲದೇ ಯುದ್ಧ ಸಮಯದಲ್ಲಿ ಸುಲ್ತಾನ ನಿಗೆ ಸೈನ್ಯದ ಸಹಾಯವನ್ನು ಸಹ ಮಾಡಬೇಕಿತ್ತು. ಇದಕ್ಕಾಗಿ ಅವರುಗಳು ಸುಲ್ತಾನನಿಂದ ಜಹಗೀರುಗಳನ್ನು ಪಡೆದಿದ್ದರು. ಈತನ ಕಾಲದಲ್ಲಿದ್ದ ಅಧಿಕಾರಿ ವರ್ಗಗಳೆಂದರೆ, ೧) ಸಾಹಿಬ್-ಇ-ಆರ್ಜ್-ಸೈನ್ಯವನ್ನು ಪರಿಶೀಲಿಸುವವನು. ೨) ನಾಯಿಬ್ ಒರ್ಬಕ್- ಸಹಾಯಕ ದ್ವಾರಪಾಲಕ, ೩) ದಬೀರ್- ಕಾರ್ಯದರ್ಶಿ, ೪) ದೀವಾನ್- ಮಂತ್ರಿ, ೫) ದವತ್‌ದಾರ್ - ಮುದ್ರಾಧಿಕಾರಿ, ೬) ಸೈಯದ್-ಉಲ್-ಹುಜ್ಜಬ್-ದ್ವಾರಪಾಲಕ, ೭) ಹಾಜಿಬ್-ಉಲ್-ಕಾಸ್‌ಹಾಬ್ - ನಗರದ ಪೊಲೀಸ್ ಅಧಿಕಾರಿ,೮)ಶಹ್ನಾ-ಇ-ಬರ್ಗ್-ದರ್ಬಾರಿನ ಅಧಿಕಾರಿ, ೯)ಸಲಾರ್ ಅಥವಾ ಚಸ್ನಿಗಿರ್‌ಖ್ವಾನ್-ಪಾಕ ಶಾಲಾಧಿಕಾರಿ.

೩.೬ : ಬಿಜಾಪುರದ ಸುಲ್ತಾನರ ಕಾಲದಲ್ಲಿ ಪೊಲೀಸ್ ಅಧಿಕಾರಿಯಾಗಿ ಕೊತ್ವಾಲ.

ಬಿಜಾಪುರದ ಆಡಳಿತದಲ್ಲಿ ಕಾನೂನು ಇಲಾಖೆಯು ಬಹುತೇಕ ಅತ್ಯಂತ ದುರ್ಬಲವಾಗಿದ್ದು, ಅದರ ಸಂಘಟನೆಯು ದೋಷಯುಕ್ತವಾಗಿತ್ತು.[೫೮] ಸುಲ್ತಾನ ನ್ಯಾಯಾಂಗದ ಪರಮೋಚ್ಛ ಅಧಿಕಾರಿಯಾಗಿದ್ದ ಬಿಜಾಪುರ ಸರಕಾರ ಅಂಗೀಕರಿಸಿದ ಕಾನೂನೆಂದರೆ ಕುರಾನ್ ಶಾಸನ ಒಂದೇ ಆಗಿತ್ತು, ಇದನ್ನು ಎತ್ತಿ ಹಿಡಿಯುವುದು ಮತ್ತು ಜಾರಿಗೆ ತರುವುದು ಸುಲ್ತಾನನ ಜವಾಬ್ದಾರಿಯಾಗಿತ್ತು. [೫೯] ಮತ್ತು ಪ್ರಚಲಿತದಲ್ಲಿದ್ದ ಧಾರ್ಮಿಕ ಅಡಚಣೆಗಳ ಆಧಾರದ ಮೇರೆಗೆ ನ್ಯಾಯದಾನ ನೀಡಲಾಗುತ್ತಿತ್ತು. ಸಾಮಾನ್ಯವಾಗಿ ಪ್ರಕರಣಗಳನ್ನು ಕುರಾನ್‌ಗೆ ಅನುಗುಣವಾಗಿ ನಿರ್ಣಯಿಸಲಾಗುತ್ತಿತ್ತು. ಸಿವಿಲ್ ಪ್ರಕರಣಗಳು ಹಿಂದುಗಳಿಗೆ ಸಂಬಂಧಿಸಿದ್ದರೆ ಅದನ್ನು ಹಿಂದುಗಳ ಸಂಪ್ರದಾಯ ಹಾಗೂ ಬಳಕೆಯಲ್ಲಿರುವ ಕಾನೂನಿಗೆ ಅನುಗುಣವಾಗಿ ತೀರ್ಮಾನಿಸಲಾಗುತ್ತಿತ್ತು. ಆದರೆ ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನು ಎಲ್ಲರಿಗೂ ಸಮಾನವಾಗಿತ್ತು. [೬೦]

ಬಿಜಾಪುರ ಸುಲ್ತಾನರ ಕಾಲದಲ್ಲಿ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆ ಕಂಡುಬರುವುದಿಲ್ಲ. ಆದರೆ ಪ್ರಾಂತೀಯ ಆಡಳಿತದ ಸ್ವರೂಪ ಬಹಮನಿ ಸುಲ್ತಾನರ ಆಡಳಿತದಂತೆಯೇ ಮುಂದುವರೆಯಿತು. (ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ) ತರಫ್ ಮತ್ತು ತರಫ್‌ದಾರನ ಬದಲಾಗಿ ಜಾಗಿರ್ ಮತ್ತು ಜಾಗಿರ್‌ದಾರರು ಬಂದರು. ಜಾಗಿರ್‌ದಾರನಿಗೆ ಪ್ರಮುಖವಾಗಿ ಮೂರು ಕರ್ತವ್ಯಗಳಿದ್ದವು. ಮೊದಲನೆಯದು ಈತ ರಾಜನ ಸೇವೆಗೆ ನಿರ್ಧಿಷ್ಟ ಕಾಲ್ದಳ ಮತ್ತು ಸೇನೆಯನ್ನು ಇಟ್ಟುಕೊಳ್ಳಬೇಕಿತ್ತು. ಎರಡನೆಯದು, ತನ್ನ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು. ಮೂರನೆಯದು, ಸುಲ್ತಾನನಿಗೆ ವಾರ್ಷಿಕ ಪೊಗದಿಯನ್ನು ಅರ್ಪಿಸಬೇಕಿತ್ತು. [೬೧] ಈ ಜಾಗಿರ್‌ದಾರರು ಸಾಧಾರಣವಾಗಿ ತಮ್ಮ ಜಹಗೀರ್‌ಗಳಲ್ಲಿ ವಾಸಿಸುತ್ತಿರಲಿಲ್ಲ. ಇವರ ಈ ಗೈರುಹಾಜರಿಯಲ್ಲಿ ಉಪಜಾಗಿರ್‌ದಾರರು ಈತನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು. ಉಪಜಾಗಿರ್‌ದಾರರನ್ನು ಜಾಗಿರ್‌ದಾರರು ನೇಮಿಸುತ್ತಿದ್ದರು. ಈ ಜಾಗಿರ್‌ದಾರರನ್ನು ಸುಲ್ತಾನನು ವರ್ಗಾವಣೆ ಅಥವಾ ವಜಾ ಮಾಡಬಹುದಿತ್ತು. ಆದರೆ ೧೭ ನೇ ಶತಮಾನದಲ್ಲಿ ವರ್ಗಾವಣೆ ಅಥವಾ ವಜಾ ಬಹಳ ಕಡಿಮೆಯಾಗಿದ್ದವು. ಆದ್ದರಿಂದ ಇವರ ಹುದ್ದೆಯು ವಂಶ ಪಾರಂಪರ್ಯವಾಗಿರಲಿಲ್ಲ. ಈತ ತನ್ನ ಸರಹದ್ದಿನ ನ್ಯಾಯಾಂಗದ ಮುಖ್ಯಸ್ಥನೂ ಆಗಿದ್ದ. [೬೨]

ಸರಕಾರಿಗಳನ್ನು ಪರಗಣ (ಜಿಲ್ಲೆ) ಗಳೆಂದು ವಿಭಾಗಿಸಲಾಗಿತ್ತು. ಇದರಲ್ಲಿ ಮೂರು ಜನ ಅಧಿಕಾರಿಗಳಿದ್ದರು. ಕೊತ್ವಾಲ, ದೇಶಮುಖ್ ಮತ್ತು ದೇಸಾಯಿ.[೬೩] ಇದರಲ್ಲಿ ಕೊತ್ವಾಲನ ಪೊಲೀಸ್ ವ್ಯವಸ್ಥೆಯನ್ನು ನೋಡಿಕೊಳ್ಳುವವ ನಾಗಿದ್ದನು. ಈತ ನಾಗರಿಕರ ಸುರಕ್ಷತೆ, ಅವರ ಆಸ್ತಿಪಾಸ್ತಿಗಳ ರಕ್ಷಣೆಯ ಜೊತೆಗೆ ಕಾನೂನು ಸುವ್ಯವಸ್ಥೆ ನೋಡಿ ಕೊಳ್ಳುವ ಜವಾಬ್ದಾರಿ ಹೊಂದಿದ್ದನು.[೬೪] ಡಕಾಯಿತರನ್ನು ಹಿಡಿದು ತಪ್ಪಿತಸ್ಥರನ್ನು ಶಿಕ್ಷಿಸುವುದು ಈತನ ಕರ್ತವ್ಯ ವಾಗಿತ್ತು. ದೇಶಮುಖ್ ಕಂದಾಯ ವಸೂಲಿ ಮಾಡುತ್ತಿದ್ದರೆ ದೇಸಾಯಿ ಲೆಕ್ಕಪತ್ರಗಳನ್ನಿಡುವವನಾಗಿದ್ದ.

ಗ್ರಾಮಾಡಳಿತದಲ್ಲಿ ಮೂರು ಜನ ಅಧಿಕಾರಿಗಳಿದ್ದು, ಪಟೇಲನು ಗ್ರಾಮದ ಮುಖ್ಯಸ್ಥನಾಗಿ ಕಂದಾಯ ವಸೂಲಿ ಮಾಡುವವನಾಗಿದ್ದರೆ, ಕುಲಕರ್ಣಿ ಲೆಕ್ಕಪತ್ರಗಳನ್ನು ಬರೆಯುವವನಾಗಿದ್ದ. ಚೌಕಿದಾರ ಅಥವಾ ಗ್ರಾಮದ ಕಾವಲುಗಾರ ಪೊಲೀಸ್ ಕೆಲಸ ಮಾಡುವವನಾಗಿದ್ದ. ಈತನ ಹುದ್ದೆಯು ವಂಶಪಾರಂಪರ್ಯವಾಗಿತ್ತು. ಪಾಟೀಲನು ಕಂದಾಯ ವಸೂಲಿಯ ಜವಾಬ್ದಾರಿಯೊಂದಿಗೆ ಈತ ಗ್ರಾಮದ ಮುಖ್ಯ ಪೊಲೀಸ್ ಮ್ಯಾಜಿಸ್ಟ್ರೇಟ್ (chief Police Megistrate) ಹಾಗೂ ಮುಖ್ಯನ್ಯಾಯಿಕ ಅಧಿಕಾರಿಯಾಗಿದ್ದ.[೬೫] ಈತಗ್ರಾಮದ ಮತ್ತುಸುಲ್ತಾನನ ಅಧಿಕಾರಿಗಳ ನಡುವಿನ ಸೇತುವೆಯಾಗಿದ್ದ. ಪೊಲೀಸ್ ಅಧಿಕಾರಿಯಾಗಿ ಈತ ಗ್ರಾಮದ ಕಾವಲುಗಾರನ ಸಹಕಾರದೊಂದಿಗೆ ಕಳ್ಳತನ, ರಾಬರಿ, ಪ್ರಕರಣಗಳ ವಿಚಾರಣೆ ನಡೆಸುತ್ತಿದ್ದ. ಈ ಪಾಟೀಲನ ಹುದ್ದೆಯಲ್ಲಿ ಅಪರೂಪವಾಗಿ ಬ್ರಾಹ್ಮಣರಿದ್ದರು. ಮುಸ್ಲಿಂ ಪಾಟೀಲರ ಸಂಖ್ಯೆಗೆ ಕೊರತೆ ಇರಲಿಲ್ಲ.[೬೬]

ಗ್ರಾಮವು ೧೨ ಜನ ಅಧಿಕಾರಿಗಳನ್ನು ಹೊಂದಿದ್ದು ಅದನ್ನು ಬಾರಾಬಲೂತಿ ಎನ್ನಲಾಗುತ್ತಿದ್ದು ಮರಾಠಿಯಲ್ಲಿ ಅವರನ್ನು ಬಲೂತೇದಾರ್ ಎನ್ನುತ್ತಿದ್ದರು. [೬೭] ಮಹರ್ – ಹಳ್ಳಿಯ ಕಾವಲುಗಾರ.

ಹಳ್ಳಿಗಳಲ್ಲಿ ಸಣ್ಣಪುಟ್ಟ ವ್ಯಾಜ್ಯಗಳನ್ನು ಪಂಚಾಯತಿಗಳು ತೀರ್ಮಾನಿಸುತ್ತಿದ್ದವು. ಹಳ್ಳಿಗಳ ಮುಖ್ಯ ಅಧಿಕಾರಿ ಪಟೇಲ. ಅವನ ಮೊದಲನೆಯ ಕರ್ತವ್ಯ ಎರಡು ಪಕ್ಷಗಳ ನಡುವಿನ ವ್ಯಾಜ್ಯವನ್ನು ಪರಿಹರಿಸುವುದು. ತನಗೆ ಅದು ಸಾಧ್ಯವಾಗದೇ ಹೋದರೆ ಆಗ ವಿಚಾರಣೆ ಹಾಗೂ ತೀರ್ಪಿಗಾಗಿ ಅದನ್ನು ಪಂಚಾಯತಿಗೆ ಕಳುಹಿಸುತ್ತಿದ್ದನು. ಗ್ರಾಮದ ಮಂಡಳಿಗಳಲ್ಲಿ ಪಟೇಲ, ಶಾನುಭೋಗ ಅಥವಾ ಕುಲಕರ್ಣಿ, ಬಲುತೇದಾರರೆಂಬ ಸಿಬ್ಬಂದಿ ಇರುತ್ತಿದ್ದರು. ಪಂಚಾಯತಿ ಕೊಡುವ ತೀರ್ಮಾನಕ್ಕೆ ಎರಡೂ ಪಕ್ಷಗಳೂ ಬದ್ಧರಾಗಿರಬೇಕಿತ್ತು. ಅವರು ಮೌಖಿಕ ಮತ್ತು ಚಾಕ್ಷುಷ ಸಾಕ್ಷ್ಯಾಧಾರಗಳಿಂದ ವ್ಯಾಜ್ಯಗಳನ್ನು ತೀರ್ಮಾನ ಮಾಡುತ್ತಿದ್ದರು. ಸಾಕ್ಷಿಯು ದೊರಕದ ಸಂದರ್ಭಗಳಲ್ಲಿ ಸನ್ನಿವೇಶದ ಆಧಾರ (Circumstantial evidence) ಅಥವಾ ದಿವ್ಯದ ಮೂಲಕ ಪರೀಕ್ಷೆ ನಡೆಯುತ್ತಿತ್ತು. ಇದು ಹಿಂದುಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಎರಡು ಸಣ್ಣ ಚೀಟಿಗಳನ್ನು ಬರೆದು ಸ್ಥಳದ ದೇವತೆಯ ವಿಗ್ರಹದ ಎದುರಿಗೆ ಇಡಲಾಗುತ್ತಿತ್ತು. ಒಂದು ಮಗುವನ್ನು ಕರೆದು ಅವುಗಳಲ್ಲಿ ಒಂದು ಚೀಟಿಯನ್ನು ಎತ್ತಿ ಕೊಡುವಂತೆ ಹೇಳಲಾಗುತ್ತಿತ್ತು. ವ್ಯಕ್ತಿಯು ಅಪರಾಧಿಯೇ? ಅಲ್ಲವೇ? ಎಂಬುದನ್ನು ಅದು ತೀರ್ಮಾನಿಸುತ್ತಿತ್ತು. ಪಂಚಾಯತಿಯ ತೀರ್ಪಿಗೆ ಎದುರಾಗಿ ಮೇಲ್ಮನವಿಯನ್ನು ಪರಗಣ ಅಥವಾ ಸರಕಾರದ ಖಾಜಿಗೆ ಸಲ್ಲಿಸಲಾಗುತ್ತಿತ್ತು. ಅಲ್ಲಿಂದ ಮುಂದಕ್ಕೆ ಕೊನೆಯ ಹಂತ ಸುಲ್ತಾನ. ಕೊತ್ವಾಲನು ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿ ಹೊತ್ತ ಪೊಲೀಸ್ ಅಧಿಕಾರಿಯಾಗಿದ್ದನು. ಅವನ ಕೈಕೆಳಗೆ ಒಂದು ಸಣ್ಣ ತುಕಡಿ ಇತ್ತು. ಹಳೇಯ ಕೋಟೆಗಳು ಮತ್ತು ದುರ್ಗಗಳನ್ನು ಸೆರೆಮನೆಗಳನ್ನಾಗಿ ಉಪಯೋಗಿಸುತ್ತಿದ್ದರು.[೬೮] ಆಡಳಿತದ ಉದ್ದೇಶಗಳಿಗಾಗಿ ಜಿಲ್ಲೆಗಳನ್ನು ಮತ್ತು ಪರಗಣಗಳನ್ನಾಗಿ ಒಡೆಯಲಾಗಿತ್ತು. ಇಂದಿನ ತಹಶೀಲುಗಳಿಗೆ ಅವು ಸಮಾನಾಗಿದ್ದವು. ಪ್ರತಿಯೊಂದು ಪರಗಣದಲ್ಲೂ ಮೂವರು ಮುಖ್ಯರಾದ ಅಧಿಕಾರಿಗಳಿದ್ದರು. ಅವರು ಕೊತ್ವಾಲ, ದೇಶಮುಖ ಮತ್ತು ದೇಸಾಯಿ. ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತ ಪೊಲೀಸ್ ಅಧಿಕಾರಿ ಕೊತ್ವಾಲ, ಪ್ರಜೆಗಳ ಪ್ರಾಣ ಮತ್ತು ಆಸ್ತಿಪಾಸ್ತಿಯ ರಕ್ಷಣೆ, ಶಾಂತಿ ಪಾಲನೆಗಳು ಇವನ ಕೆಲಸ. ದರೋಡೆಗಳ ಬೆನ್ನುಹತ್ತಿ ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸುವುದು ಇವನ ಕೆಲಸವಾಗಿತ್ತು.[೬೯]

ಗ್ರಾಮವು ಆಡಳಿತದ ಅತ್ಯಂತ ಚಿಕ್ಕ ಘಟಕ. ಕಠಿಣ ಪರಿಶ್ರಮ, ಸರಳ ಜೀವನ, ಸಾಮಾಜಿಕ ಒಗ್ಗಟ್ಟು ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಗೆ ಅವು ಪ್ರಸಿದ್ಧವಾಗಿದ್ದವು. ಭೂಮಿಯೇ ಮುಖ್ಯವಾದ ವರಮಾನ ಮೂಲವಾಗಿತ್ತು. ಅರಸನು ಯಾರೇ ಆಗಿರಲಿ ಅದರ ಪರಿಯೇ ಇಲ್ಲದೇ ಗ್ರಾಮದ ಜೀವನವು ಶಾಂತವಾಗಿ ನಡೆದುಕೊಂಡು ಹೋಗುತ್ತಿತ್ತು. ಹಳ್ಳಿಯಲ್ಲಿ ಅವರದೇ ಆಡಳಿತ ಇತ್ತು. ಪ್ರತಿಯೊಂದು ಹಳ್ಳಿಯೂ ಒಂದು ಪುಟ್ಟ ಕಾಮನ್‌ವೆಲ್ತ್ ಆಗಿತ್ತು. ಪಂಚಾಯತಿ ಎಂಬ ಒಂದು ಮಂಡಳಿಯು ಅಲ್ಲಿಯ ಜನರ ವ್ಯವಹಾರಗಳನ್ನು ಗಮನಿಸುತ್ತಿದ್ದಿತು. ಗ್ರಾಮದ ರಕ್ಷಣೆ, ಕಾವಲುಕೆಲಸ, ಪ್ರಾಥಮಿಕ ವಿದ್ಯಾಭ್ಯಾಸ ಹಾಗೂ ಹಳ್ಳಿಯ ನೈರ್ಮಲ್ಯ ಪಾಲನೆಗಳ ವ್ಯವಸ್ಥೆಯನ್ನು ಮಾಡುತ್ತಿದ್ದಿತು. ಸಾಮಾನ್ಯವಾಗಿ ಕೇಂದ್ರ, ಪ್ರಾಂತ ಅಥವಾ ಜಿಲ್ಲಾಡಳಿತವು ಪಂಚಾಯತಿ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುತ್ತಿರಲಿಲ್ಲ. ಹಳ್ಳಿಯಲ್ಲಿಯೂ ಮೂವರು ಅಧಿಕಾರಿಗಳಿದ್ದರು. ಪಟೇಲ ಅಥವಾ ಹಳ್ಳಿಯ ಮುಖ್ಯಸ್ಥ, ಕುಲಕರ್ಣಿ ಅಥವಾ ಲೆಕ್ಕಗಳನ್ನು ಬರೆಯುವವನು, ಚೌಕಿದಾರ ಅಥವಾ ಹಳ್ಳಿಯ ಕಾವಲುಗಾರ, ಪಟೇಲ ಅಥವಾ ಪಾಟೀಲನು ಕಂದಾಯವನ್ನು ಸಂಗ್ರಹಿಸಿ ಅದನ್ನು ಜಿಲ್ಲಾ ಖಜಾನೆಗೆ ತುಂಬುವ ಹೊಣೆಯನ್ನು ಹೊತ್ತಿದ್ದನು. ಅವನೇ ಮುಖ್ಯ ತೆರಿಗೆ ಅಧಿಕಾರಿ, ಮುಖ್ಯ ನ್ಯಾಯಾಧೀಶ. ಪಂಚಾಯತಿಗಳಲ್ಲಿ ಅಧ್ಯಕ್ಷತೆ ವಹಿಸುತ್ತಿದ್ದುದಲ್ಲದೇ ಗ್ರಾಮದ, ರಾಜ್ಯದ ಅಧಿಕಾರಿಗಳು ಹಾಗೂ ಸುಲ್ತಾನ ಇವರ ನಡುವೆ ಮಧ್ಯವರ್ತಿಯಾಗಿ ನಡೆದುಕೊಳ್ಳುತ್ತಿದ್ದನು. ಅವನು ಗ್ರಾಮದ ಹಂತದಲ್ಲಿ ಸರಕಾರದ ಅಧಿಕೃತ ಪ್ರತಿನಿಧಿ. ನ್ಯಾಯಾಧಿಕಾರಿಯಾಗಿ ಹಳ್ಳಿಯಲ್ಲಿ ನಡೆಯುವ ವ್ಯಾಜ್ಯಗಳನ್ನು ತೀರ್ಮಾನಿಸುತ್ತಿದ್ದನು.

ಒಂದು ವೇಳೆ ಅದು ತಮ್ಮಿಂದ ಆಗದೇ ಹೋದರೆ ವ್ಯಾಜ್ಯವನ್ನು ಪಂಚಾಯತಿಗೆ ಹಾಕುತ್ತಿದ್ದನು. ಪೊಲೀಸ್ ಅಧಿಕಾರಿಯಾಗಿ ಕಳ್ಳತನ, ದರೋಡೆಗಳ ವಿಚಾರ ನಡೆಸುತ್ತಿದ್ದನು. ಇದರಲ್ಲಿ ಹಳ್ಳಿಯ 'ಚೌಕಿದಾರ'ನು ಅವನಿಗೆ ಸಹಾಯ ಮಾಡುತ್ತಿದ್ದನು.[೬೦] ಬಿಜಾಪುರದ ಆದಿಲ್‌ಷಾಹಿಗಳ ಪಥನದೊಂದಿಗೆ ವಿಜಾಪುರ ಸಾಮ್ರಾಜ್ಯವು ಮೊಗಲ್ ಸಾಮ್ರಾಜ್ಯಕ್ಕೆ ಪ್ರಾಂತ್ಯವಾಗಿ ಸೇರಿತು. ವಿಜಾಪುರದ ಆಸ್ಥಾನಿಕರನ್ನು ದೆಹಲಿ ಸೇವೆಗೆ ಸೇರಿಸಿಕೊಂಡ ಔರಂಗಜೇಬನು ವಿಜಾಪುರದ ಅಧಿಕಾರಿಯೊಬ್ಬನನ್ನು ವಿಜಾಪುರದ ಫೌಜುದಾರನನ್ನಾಗಿ ನೇಮಿಸಿದ ಔರಂಗಜೇಬನ ಆಳ್ವಿಕೆಯಲ್ಲಿ ವಿಜಾಪುರ 'ಸುಭಾ' ಆಗಿತ್ತು. ವಿಜಾಪುರ ಪ್ರಾಂತ್ಯಕ್ಕೆ ಆಡಳಿತ ನಿರ್ವಹಣೆಗಾಗಿ ಫೌಜುದಾರ ಮತ್ತು ಶಾಲ್ದಿವಾನರೆಂಬ ಇಬ್ಬರು ಅಧಿಕಾರಿಗಳನ್ನು ನೇಮಿಸಿದ್ದನು..[೬೧]

ಗುಪ್ತಚರ ವ್ಯವಸ್ಥೆ

ಪ್ರತಿಯೊಂದು ರಾಜ್ಯವು ಒಂದು ಗುಪ್ತಚರ ವಿಭಾಗವನ್ನು ಹೊಂದಿತ್ತು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಅದರ ಪ್ರಾಮುಖ್ಯವನ್ನು ಒತ್ತಿ ಹೇಳಿದನು. ಆಗಿನಿಂದಲೂ ಬೇಹುಗಾರಿಕೆಯು ಮುಖ್ಯವಾದುದೊಂದು ಅಂಗವಾಗಿತ್ತು. ಮುಸ್ಲಿಂ ರಾಜ್ಯಗಳು ಈ ಪರಂಪರೆಯನ್ನು ಮುಂದುವರಿಸಿ ರಹಸ್ಯ ವರದಿಗಾರರ ಭಾರಿ ದಂಡನ್ನೇ ರಚಿಸಿಕೊಂಡಿದ್ದರು. ಅದರಲ್ಲೂ ಹೆಚ್ಚಿನವರು ಬ್ರಾಹ್ಮಣರಾಗಿದ್ದರು ಎಂದು ಜುಬೈರಿ ಹೇಳುತ್ತಾನೆ. ಅವರು ಪ್ರಧಾನಮಂತ್ರಿಯ ಕೈಕೆಳಗೆ ಇದ್ದರು. ಆದರೆ ಅವರಿಗೆ ನೇರವಾಗಿ ಸುಲ್ತಾನನ ಬಳಿಗೆ ಹೋಗಲು ಅವಕಾಶ ಇತ್ತು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಏನು ನಡೆಯುತ್ತದೆ, ಎಂಬುದರ ವರದಿಯನ್ನು ಪ್ರತೀ ದಿನವೂ ಅವರ ಗಮನಕ್ಕೆ ತರಲಾಗುತ್ತಿತ್ತು. ಅವರು ಅಂಚೆ ಸೇವೆಯನ್ನು ಮಾಡುತ್ತಿದ್ದರು, ವಿವಿಧ ಅಧಿಕಾರಿಗಳಿಂದ ಪತ್ರಗಳನ್ನು ಒಯ್ಯುತ್ತಿದ್ದರು ಹಾಗೂ ಅವರಿಗೆ ತಲುಪಿಸುತ್ತಿದ್ದರು, ಯುದ್ಧ ಸಮಯಗಳಲ್ಲಂತೂ ಅವರ ಸೇವೆ ಬಹು ಅಮೂಲ್ಯವಾಗುತ್ತಿತ್ತು. ಶತ್ರುವಿನ ಹಂಚಿಕೆಗಳು, ಉದ್ದೇಶಗಳು ಮತ್ತು ಚಲನವಲನಗಳನ್ನು ತಿಳಿದುಕೊಂಡು ಬಂದು ವರದಿ ಮಾಡುತ್ತಿದ್ದರು. ಸುಲ್ತಾನನ ಖಾಸಗಿ ಅಗತ್ಯಗಳಿಗೆ ಗಮನಕೊಡುತ್ತಿದ್ದ, ಅರಮನೆಯ ಉಸ್ತುವಾರಿ ಹೊತ್ತಿದ್ದ ಅಧಿಕಾರಿಯು ಬಹು ಪ್ರಭಾವಶಾಲಿಯಾಗಿದ್ದನು. ಸುಲ್ತಾನನ ವೈಭವೋಪೇತವಾದ ಜೀವನವನ್ನು ನಡೆಸುತ್ತಿದ್ದು, ಅಗತ್ಯಗಳನ್ನು ಪೂರೈಸಲು ಒಂದು ವಿಭಾಗವೇ ಅಗತ್ಯವಾಗಿತ್ತು. ರಾಜನ ಅಂಗರಕ್ಷಕರು ಅವನ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಹಾಗೆಯೇ ಅರಮನೆಯ ಆನೆ, ಕುದುರೆ, ಒಂಟೆಗಳು ಮತ್ತು ಸರಕು ಸಾಗಣೆಗಳನ್ನು ಇರಿಸಿದ್ದ ಲಾಯಗಳು ಕೂಡ ಅವನ ಉಸ್ತುವಾರಿಯಲ್ಲಿದ್ದವು. [೬೨]

ನ್ಯಾಯಾಂಗ ವಿಭಾಗವು ಆಡಳಿತದ ಒಂದು ಮುಖ್ಯ ಅಂಗವಾಗಿತ್ತು. ಸುಲ್ತಾನರು ಈ ವಿಭಾಗದ ಕಡೆಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಏಕೆಂದರೆ ಇತಿಹಾಸದಲ್ಲಿ ತಾನೊಬ್ಬ ನ್ಯಾಯಪರನೂ, ಪ್ರಜೆಗಳನ್ನು ನ್ಯಾಯ, ಧರ್ಮಗಳಿಂದ ರಕ್ಷಿಸಿದವನು ಎಂದು ಹೆಸರಾಗಬೇಕೆಂದು ಪ್ರತಿಯೊಬ್ಬ ಸುಲ್ತಾನನು ಬಯಸುತ್ತಿದ್ದನು. ಸುಲ್ತಾನನೇ ಅತ್ಯುನ್ನತ ಮೇಲ್ಮನವಿಯ ನ್ಯಾಯಾಲಯವಾಗಿದ್ದನು. ಸ್ಥಾಪಿತ ರೂಢಿಗಳ ಪ್ರಕಾರ ನ್ಯಾಯ ತೀರ್ಮಾನವನ್ನು ಕೊಡಲಾಗುತ್ತಿತ್ತು. ಈ ಕೆಲಸದಲ್ಲಿ ಅನೇಕ ಖಾಜಿಗಳು ಸುಲ್ತಾನನಿಗೆ ನೆರವು ನೀಡುತ್ತಿದ್ದರು. ಅಲ್ಲದೇ ಧಾರ್ಮಿಕ ಸಂಸ್ಥೆಗಳಿಗೆ ರಾಜನು ಕೊಡುವ ದತ್ತಿಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ಸುಲ್ತಾನರ ಪರವಾಗಿ ದಾನ, ಧರ್ಮ ಮಾಡುತ್ತಿದ್ದರು. ಅಪರಾಧ ಶಾಸನವು ಉಗ್ರವಾಗಿತ್ತು. ವ್ಯಾಜ್ಯದ ಪಕ್ಷಗಳು ಹಿಂದುಗಳದ್ದಾಗಿದ್ದರೆ, ಸಿವಿಲ್ ಮೊಕದ್ದಮೆಗಳಲ್ಲಿ ಹಿಂದುಗಳಲ್ಲಿ ಪ್ರಚಲಿತವಾದ ಸಂಪ್ರದಾಯ, ರೂಢಿ ಮತ್ತು ಕಾನೂನುಗಳ ಪ್ರಕಾರವೇ ತೀರ್ಪು ಕೊಡಲಾಗುತ್ತಿತ್ತು. ಆದರೆ ಕ್ರಿಮಿನಲ್ ಮೊಕದ್ದಮೆಗಳನ್ನು ಮಾತ್ರ ಕುರಾನ್ ಶಾಸನಗಳ ಅನ್ವಯ ತೀರ್ಮಾನಿಸಲಾಗುತ್ತಿತ್ತು. ೨ನೇ ಇಬ್ರಾಹಿಂ ಆದಿಲ್‌ಷಾಹನ ಕಾಲದಲ್ಲಿ ಎರಡು ಮೊಕದ್ದಮೆಗಳನ್ನು ಪಂಡಿತರ ತೀರ್ಪಿಗಾಗಿ ಕೋರಿ ವಾರಣಾಸಿಗೆ ಕಳುಹಿಸಲಾಯಿತು. ಅಂತಿಮವಾದ ಮೇಲ್ಮನವಿ ಸುಲ್ತಾನನಿಗೆ ಬರುತ್ತಿತ್ತು. ರಾಜನ ಆಸ್ಥಾನದಲ್ಲಿ ಇಂತಹ ಮೊಕದ್ದಮೆಗಳನ್ನು ವಿಚಾರಣೆ ಮಾಡಲೆಂದು ಒಂದು ವ್ಯವಸ್ಥೆ ಇತ್ತು. ಸ್ಥಳೀಯ ಅಧಿಕಾರಿಗಳು ಅದನ್ನು ಆಸ್ಥಾನಕ್ಕೆ ರವಾನಿಸುತ್ತಿದ್ದರು. ಯುರೋಪಿಯನ್ನರ ವಿಷಯದಲ್ಲಿ ಸುಲ್ತಾನನೊಬ್ಬನೇ ನ್ಯಾಯಾಧಿಕಾರಿಯಾಗಿದ್ದನು.[೬೩]

ಬಿಜಾಪುರ ಸುಲ್ತಾನರು ಕನ್ನಡ ನಾಡನ್ನು ಆಳಲು ಪ್ರಾರಂಭಿಸುತ್ತಿದ್ದಂತೆಯೇ ಕಾನೂನುಗಳ ಸ್ವರೂಪಗಳು ಬದಲಾದವು. ದಿವಾಣಿ (ಸಿವಿಲ್) ವ್ಯವಹಾರಗಳಿಗೆ ಹಿಂದೂ ಸಂಪ್ರದಾಯ ಮತ್ತು ರೂಢಿಗಳ ಆಧಾರಗಳ ಮೇಲೆ ತೀರ್ಪನ್ನು ನೀಡುತ್ತಿದ್ದರೆ ಕ್ರಿಮಿನಲ್ ಅಪರಾಧಗಳಿಗೆ ಕುರಾನ್ ಶಾಸನಗಳ ಅನ್ವಯ ತೀರ್ಪು ನೀಡಲು ಪ್ರಾರಂಭವಾಯಿತು. ಕುರಾನ್‌ನನ್ನು ಪಾಲಿಸದ ಹಿಂದು ಮತ್ತು ಇತರ ಜನಾಂಗದವರೂ ಸಹ ಇದರ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬರುವಂತಾಯಿತು. ಪರೋಕ್ಷವಾಗಿ ನಾಡಿನ ಜನರ ಮೇಲೆ ಇದು ಧರ್ಮದ ಪ್ರಭಾವವನ್ನೂ ಸಹ ಬೀರಿತು. ಹಿಂದುಗಳೂ ಸಹ ಅನಿವಾರ್ಯವಾಗಿ ಕುರಾನ್‌ನ ನೀತಿ ತತ್ವಗಳನ್ನು ಪಾಲಿಸಿಕೊಂಡು ಬರುವಂತಾಯಿತು. ತಲಾಂತರಗಳಿಂದಲೂ ಹಿಂದೂ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬಂದಿದ್ದ ಜನಗಳಿಗೆ ಇದೊಂದು ನುಂಗಲಾರದ ತುತ್ತಾಯಿತು. ಕಾನೂನಿನ ಮೂಲಕ ಜನಗಳ ಮೇಲೆ ಧರ್ಮವನ್ನು ಹೇರುವ ಪ್ರಯತ್ನವು ನಡೆಯಿತು. ಇಲ್ಲಿನ ಪೊಲೀಸರೂ ಸಹ ಕುರಾನ್‌ನ ಶಾಸನಗಳನ್ನು ಪಾಲಿಸದವರ ಮೇಲೆ ಕ್ರಮ ಜರುಗಿಸುತ್ತಿದ್ದರು. ಆದ್ದರಿಂದ ಬಿಜಾಪುರದ ಸುಲ್ತಾನರ ಕಾಲದ ಪೊಲೀಸರು ಧರ್ಮಪ್ರಭಾವಿತರಾಗಿದ್ದರು ಎಂದು ಹೇಳಬಹುದು.

೩.೭: ಮೊಗಲರಿಗಿಂತಲೂ ಹಿಂದಿನ ಭಾರತದಲ್ಲಿ ಪೊಲೀಸ್ ವ್ಯವಸ್ಥೆ.

ಭಾರತದ ಸ್ವದೇಶಿ ಪೊಲೀಸ್ ವ್ಯವಸ್ಥೆಯು ಅತ್ಯಂತ ಗಮನಾರ್ಹವಾದ ವಿಷಯವಾಗಿದ್ದು, ಇದು ಇಂಗ್ಲೆಂಡಿನ ಸ್ಯಾಕ್ಸನ್ ವ್ಯವಸ್ಥೆಯನ್ನು ಬಹುತೇಕ ಹೋಲುತ್ತದೆ. ಆಶ್ಚರ್ಯವೆಂದರೆ ಎರಡೂ ಪೊಲೀಸ್ ವ್ಯವಸ್ಥೆಗಳು ಭೂಮಿಯ ಗೇಣಿ ಗಾರಿಕಾ (land tanure) ಪದ್ಧತಿಯಿಂದ ಬೆಳೆದುಬಂದಿದೆ. ಪ್ರಾಚೀನ ಕಾಲದಲ್ಲಿ ಪೊಲೀಸರ ಕರ್ತವ್ಯವೆಂದರೆ ಕಾನೂನು ಸುವ್ಯವಸ್ಥೆ ಕಾಪಾಡುವುದು, ಅಪರಾಧಗಳ ತಡೆ ಮತ್ತು ಪತ್ತೆಕಾರ್ಯದ ಜೊತೆಗೆ ಗೇಣಿ ವಸೂಲಿಯೂ ಇತ್ತು. ಬಂಗಾಳದಲ್ಲಿ ಜಮೀನುದಾರರುಗಳಿಗೆ ಗ್ರಾಮಗಳ ಪೊಲೀಸ್ ಜವಾಬ್ದಾರಿಯನ್ನು ನೀಡಲಾಗಿತ್ತು. ಇವರು ತಮ್ಮ ಭೂಮಿಯನ್ನು ಗೇಣಿಗೆ ನೀಡಿ ಆ ಗೇಣಿದಾರರಿಂದ ಗೇಣಿ ವಸೂಲು ಮಾಡುವ ಸಲುವಾಗಿ ತಮ್ಮ ಅಧಿಕಾರ ಮತ್ತು ದರ್ಪಗಳನ್ನು ಬಳಸುತ್ತಿದ್ದರು. ರಾಜ ಆಲ್‌ಫ್ರೆಡ್‌ನ ಕಾಲದಲ್ಲಿ ಆರೋಪಿಗಳನ್ನು ಅಥವಾ ತಪ್ಪಿತಸ್ಥರು ದಂಡಕಟ್ಟಲು ಥಾಣೆಯಂತಹ ಪ್ರದೇಶಗಳಿದ್ದವು. ಭಾರತದಲ್ಲಿಯೂ ಸಹ ಶಾಂತಿಭಂಗ ಮಾಡುವವರನ್ನು ಹಿಡಿಯುವ ಮತ್ತು ಕಳ್ಳತನವಾದ ವಸ್ತುಗಳನ್ನು ಪತ್ತೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಈ ಜಮೀನುದಾರರ ಕೈಕೆಳಗೆ ಅನೇಕ ಹಳ್ಳಿಗಳು ಬರುತ್ತಿದ್ದು, ಪ್ರತೀ ಹಳ್ಳಿಗೂ ಒಬ್ಬೊಬ್ಬ ಮುಖ್ಯಸ್ಥನಿದ್ದು, ಆತನಿಗೆ ಒಂದು ಅಥವಾ ಎರಡು ಜನ ಕಾವಲುಗಾರರು ಸಹಾಯಕರಾಗಿದ್ದರು.[೭೪] ಸಾಮಾನ್ಯ ಜನರಿಗೂ ಸಹ ಅಪರಾಧಗಳನ್ನು ಪತ್ತೆಹಚ್ಚುವ ಮತ್ತು ತಡೆಯುವ ಜವಾಬ್ದಾರಿಯಿತ್ತು. ಈ ಕಾವಲುಗಾರರು ರಾತ್ರಿಯ ವೇಳೆ ಕಾವಲು ಕಾಯಬೇಕಿತ್ತು. ಹಳ್ಳಿಗೆ ಬಂದು ಹೋಗುವ ಪ್ರತಿಯೊಬ್ಬರ ಬಗ್ಗೆಯೂ ಗಮನಹರಿಸಬೇಕಿತ್ತು. ಅಪರಿಚಿತ ವ್ಯಕ್ತಿಗಳ ಬಗ್ಗೆ ಗ್ರಾಮದ ಮುಖ್ಯಸ್ಥನಿಗೆ ವರದಿ ಮಾಡಬೇಕಿತ್ತು. ಗ್ರಾಮದ ಮುಖ್ಯಸ್ಥನೂ ಸಹ ಗ್ರಾಮದ ಬಗ್ಗೆ ತಿಳಿದುಕೊಂಡಿರಬೇಕಿತ್ತು. ಗ್ರಾಮದಲ್ಲಿ ಒಂದು ವೇಳೆ ಕಳ್ಳತನ ನಡೆದರೆ ಕಳ್ಳನನ್ನು ಪತ್ತೆ ಮಾಡುವುದು ಈತನ ಜವಾಬ್ದಾರಿಯಾಗಿತ್ತು. ಒಂದು ವೇಳೆ ಕಳ್ಳನನ್ನು ಪತ್ತೆಮಾಡಲು ವಿಫಲನಾದರೆ, ವಸ್ತುವನ್ನು ಕಳೆದುಕೊಂಡವರಿಗೆ ಈತನು ಪರಿಹಾರ ನೀಡಬೇಕಿತ್ತು. ಇದು ವಿಜಯನಗರ ಕಾಲದವರೆಗೂ ಮುಂದುವರೆದುಕೊಂಡು ಬಂತು. ಅಪರಾಧಿಗಳನ್ನು ದಸ್ತಗಿರಿ ಮಾಡಲು ಕಾವಲುಗಾರನಿಗೆ ಸಹಕರಿಸುವುದು ಇಡೀ ಹಳ್ಳಿಯ ಜನರ ಕರ್ತವ್ಯವಾಗಿತ್ತು.[೭೫] ಹಾಗೂ ಆತನ ಇತರ ಕರ್ತವ್ಯಗಳಲ್ಲೂ ಹಳ್ಳಿಗರು ಸಹಕರಿಸಬೇಕಿತ್ತು. ಕೆಲವು ವೇಳೆ ಬುಡಕಟ್ಟು ಜನಾಂಗಗಳಿಂದ ನಡೆಯುತ್ತಿದ್ದ ದರೋಡೆಗಳನ್ನು ತಡೆಯಲು ಕೆಲವು ಸ್ಥಳಗಳಲ್ಲಿ ಜನರಿಗೆ ರಕ್ಷಣೆ ಇದೆಯೇ? ಎಂಬ ಬಗ್ಗೆ ಈತನು ಖಾತರಿಪಡಿಸಿಕೊಳ್ಳಬೇಕಿತ್ತು. "ಬುಡಕಟ್ಟು ಜನಾಂಗದವರು ಅಪರಾಧ ಮಾಡುವ ಉದ್ದೇಶದಿಂದ ಹಳ್ಳಿಗಳಿಗೆ ಭೇಟಿ ನೀಡುವುದನ್ನು ತಡೆಯಲು ಬುಡಕಟ್ಟು ಜನಾಂಗದ ನಾಯಕನಿಗೆ ಹಣವನ್ನು ನೀಡಲಾಗುತ್ತಿತ್ತು."[೭೬] ನಗರ

ಗಳಲ್ಲಿ ಪೊಲೀಸ್ ವ್ಯವಸ್ಥೆಯು 'ಕೊತ್ವಾಲ' ಎಂಬ ಹೆಸರಿನಿಂದ ಕರೆಯುತ್ತಿದ್ದ ಅಧಿಕಾರಿಯ ಅಧೀನದಲ್ಲಿತ್ತು. ಇದು ಇತ್ತೀಚಿನ ಕಾಲದವರೆಗೂ ಮುಂದುವರೆದುಕೊಂಡು ಬಂತು.[೭೭] ಇವರಿಗೆ ಉತ್ತಮ ಸಂಬಳ ನೀಡಲಾಗುತ್ತಿತ್ತು. ಆದರೆ ಇದರ ಹೊರತಾಗಿ ಆತನ ಕೈಕೆಳಗೆ ಕೆಲಸ ಮಾಡುವ ಸಿಬ್ಬಂದಿಗಳಿಗೆ ಆತನು ಸಂಬಳ ನೀಡುವ ಅವಶ್ಯಕತೆ ಇತ್ತು.[೭೮] ರಾಜರುಗಳು ತಮ್ಮ ರಾಜ್ಯದಲ್ಲಿ ನಡೆಯುವ ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಲು ಗೂಢಚಾರರನ್ನು ನೇಮಿಸಿದ್ದರು. ಈ ಗೂಢಚಾರರು ಅಪರಾಧ ಗಳ ಮತ್ತು ಅಪರಾಧಿಗಳ ಪತ್ತೆ ಕಾರ್ಯದಲ್ಲಿ ನೆರವು ನೀಡುತ್ತಿದ್ದರು.

"ಈ ಗೂಢಚಾರ ಪದ್ಧತಿಯು ಮೌರ್ಯರ ಕಾಲದಲ್ಲಿ ಅತ್ಯಂತ ಶ್ರೇಷ್ಠವಾದ ಸಾಮರ್ಥ್ಯವನ್ನು ಸಾಧಿಸಿತು."[೭೯] ಹರ್ಷವರ್ಧನನ ಕಾಲದಲ್ಲಿ ಹಿಂಸೆಯಿಂದ ಕೂಡಿದ ಅಪರಾಧಗಳು ಕಡಿಮೆಯಿದ್ದರೂ ಸಹ 'ಹೆದ್ದಾರಿ ಡಕಾಯಿತಿ'ಗಳು ಆಗಾಗ ನಡೆಯುತ್ತಿದ್ದವು. ಜೈಲು ಶಿಕ್ಷೆಯು ಸಾಮಾನ್ಯವಾಗಿತ್ತು. ಆದರೆ ಇದು ಟಿಬೇಟಿಯನ್ ಮಾದರಿಯಲ್ಲಿದ್ದು ಜೈಲು ಅಧಿಕಾರಿಗಳು ಖೈದಿಗಳಿಗೆ ಊಟ ಒದಗಿಸುತ್ತಿರಲಿಲ್ಲ. ಖೈದಿಗಳಿಂದ ತಪ್ಪೊಪ್ಪಿಗೆ ಪಡೆಯಲು ಮೂರನೇ ದರ್ಜೆಯ (third degree) ವಿಧಾನವನ್ನು ಬಳಸುತ್ತಿದ್ದರು.[೮೦]

೩.೮ : ಮೊಗಲರ ಕಾಲದ ಪೊಲೀಸ್ ವ್ಯವಸ್ಥೆಯಲ್ಲಿ ಮುತ್ಸಿಬ್, ಕೊತ್ವಾಲ ಮತ್ತು ಥಾಣಾದಾರರು

ಮೊಗಲರ ಕಾಲದಲ್ಲಿ ಪೊಲೀಸ್ ಇಲಾಖೆಯ ಸೇನೆಯಿಂದ ಹೊರತಾದ ಮತ್ತು ಪ್ರತ್ಯೇಕವಾದ ಆಡಳಿತ ವ್ಯವಸ್ಥೆಯನ್ನು ಪಡೆಯಿತು. ಮತ್ತು ಇಲಾಖೆಯಲ್ಲಿ ಗಮನಾರ್ಹವಾದ ಬದಲಾವಣೆಗಳಾದವು. ಪೊಲೀಸ್ ಇಲಾಖೆಗೆ ಒಂದು ಕೇಂದ್ರೀಕೃತ ವ್ಯವಸ್ಥೆ ಎಂಬುದು ಇರಲಿಲ್ಲ. ಆದಾಗ್ಯೂ ಅವರು ಇಲಾಖೆಯ ಜವಾಬ್ದಾರಿಯ 'ಸುಭೇದಾರ' ಎಂಬ ಅಧಿಕಾರಿಗೆ ಸೇರಿತ್ತು. ಜಿಲ್ಲಾ ಮಟ್ಟದಲ್ಲಿ 'ಫೌಜುದಾರ'ನನ್ನು ರಾಜನು ನೇಮಿಸಿದ್ದು ಈತನು ನಗರ ಪೊಲೀಸ್ ವ್ಯವಸ್ಥೆಗೆ 'ಕೊತ್ವಾಲ' ಎಂಬ ಅಧಿಕಾರಿಯನ್ನು ನೇಮಿಸುವುದಕ್ಕಿಂತ ಮುಂಚೆ 'ಮುತ್ಸಿಬ್' (Muthasib) ಎಂಬ ಹೆಸರಿನ ಅಧಿಕಾರಿ ನಗರ ಪೊಲೀಸ್‌ನ ಮುಖ್ಯಸ್ಥನಾಗಿದ್ದ. ಹಳ್ಳಿಗಳಲ್ಲಿ ಹಿಂದೆ ಇದ್ದ ವ್ಯವಸ್ಥೆಯೆ ಮುಂದುವರೆದುಕೊಂಡು ಬಂದಿತು. ಪೊಲೀಸ್ ವ್ಯವಸ್ಥೆಯನ್ನು ಎರಡು ಭಾಗಗಳನ್ನಾಗಿ ಮಾಡಲಾಯಿತು. ಒಂದು ದಿವಾಣಿ (ಸಿವಿಲ್) ಮತ್ತೊಂದು 'ಮಿಲಿಟರಿ'. 'ಸಿವಿಲ್ ಪೊಲೀಸ್', ಕಂದಾಯ ಮತ್ತು ಪೊಲೀಸ್ ಇಲಾಖೆಗಳ ಕರ್ತವ್ಯವನ್ನು ನಿರ್ವಹಿಸುತ್ತಿದ್ದರೆ, ಮಿಲಿಟರಿ ಪೊಲೀಸ್ 'ಪಾಲಕ' ಮತ್ತು 'ಚೌಕಿದಾರ' ಎಂಬ ಅಧಿಕಾರಿಗಳನ್ನು ಹೊಂದಿದ್ದು, ಅಪರಾಧಿಗಳನ್ನು ಹಿಡಿಯುವ ಮತ್ತು ಶಾಂತಿ ಕಾಪಾಡುವ ಜವಾಬ್ದಾರಿ ಹೊಂದಿದ್ದರು. ಚೌಕಿದಾರನು ಹಳ್ಳಿಯ ಜನರ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರಬೇಕಿತ್ತು.[೮೧] ಮೊಗಲರ ಕಾಲದಲ್ಲಿ ಗ್ರಾಮಗಳಲ್ಲಿ ಅಪರಾಧಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ಮೊಗಲರು ಯಾವ ವ್ಯವಸ್ಥೆಯನ್ನೂ ಜಾರಿಗೆ ತರಲಿಲ್ಲ. ಅನೂಚಾನವಾಗಿ ಬಂದ ಪದ್ಧತಿಯಂತೆ ಪೊಲೀಸ್ ವ್ಯವಸ್ಥೆಯು ಗ್ರಾಮದ ಮುಖ್ಯಸ್ಥ ಮತ್ತು ಅವನ ಅಧೀನ ಕಾವಲುಗಾರರ ಕೈಯಲ್ಲಿಯೇ ಇದ್ದಿತು.

ಸ್ವದೇಶಿಯ ಪೊಲೀಸ್ ವ್ಯವಸ್ಥೆಯ ರೂಪರೇಷೆಗಳು ಮೊಗಲರ ಕಾಲದಲ್ಲಿ ಬದಲಾಗಲಿಲ್ಲ. ಹಳ್ಳಿಗಳ ಜನರು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಮತ್ತು ತಮ್ಮ ವ್ಯಾಪ್ತಿಯೊಳಗೆ ಹಾದು ಹೋಗುವ ಪ್ರಯಾಣಿಕರ ರಕ್ಷಣೆಯ ಸಲುವಾಗಿ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಂಡು ಬರುವ ಪದ್ಧತಿ ಮೊಗಲರ ಕಾಲದಲ್ಲಿ ಇತ್ತು. ಮೊಗಲರ ರಾಜ್ಯದಲ್ಲಿದ್ದ ಪ್ರಾಂತ್ಯಗಳು ಅರೆ-ಸ್ವಾಯತ್ತತೆಯನ್ನು ಪಡೆದ ಘಟಕಗಳಾಗಿದ್ದವು.[೮೨] ಈ ಪ್ರಾಂತ್ಯಗಳ ಗವರ್ನರ್‌ನನ್ನು 'ಸುಬೇದಾರ್' ಅಥವಾ 'ನಿಜಾಮ್' ಎಂದು ಕರೆಯುತ್ತಿದ್ದರು. "ಒಂದು ಸುಭಾ (ಪ್ರಾಂತ್ಯ)ವು ಹಲವಾರು ಉಪ-ವಿಭಾಗಗಳನ್ನು ಹೊಂದಿದ್ದು, ಪ್ರತಿಯೊಂದು ಉಪ-ವಿಭಾಗವು 'ಫೌಜುದಾರ' ಎಂಬ ಅಧಿಕಾರಿಯ ಹಿಡಿತದಲ್ಲಿತ್ತು. ಈತನು ಮೂಲತ: ಕಂದಾಯ ಅಧಿಕಾರಿಯಾಗಿದ್ದರೂ ಸಹ, ಕಾನೂನು ಮತ್ತು ಸುವ್ಯವಸ್ಥೆಯನ್ನು ನೋಡಿಕೊಳ್ಳುವ ಜವಬ್ದಾರಿಯೂ ಈತನದಾಗಿತ್ತು. ಈತನು ಪೊಲೀಸ್ ಕರ್ತವ್ಯ

ಗಳನ್ನು ಮಾಡುವಾಗ, ಈತನ ಕೈಕೆಳಗೆ ಇರುವ ಪೊಲೀಸ್ ಠಾಣೆಗಳ ಜವಾಬ್ದಾರಿ ಹೊಂದಿದ 'ಥಾನಾದಾರ' ಎಂಬ ಹೆಸರಿನ ಅಧಿಕಾರಿಯು ಈತನಿಗೆ ನೆರವು ನೀಡುತ್ತಿದ್ದನು.[೮೩] ಈ 'ಥಾನಾದಾರ' ಎಂಬ ಶಬ್ದವು ಭಾರತೀಯ ಪೊಲೀಸ್ ವ್ಯವಸ್ಥೆಯಲ್ಲಿ ಇಂದಿಗೂ ಬಳಕೆಯಲ್ಲಿದೆ. ಮೊಗಲರ ಕಾಲದಲ್ಲಿ 'ಫೌಜುದಾರ'ನಿಗೆ ಸಮಾನಾಂತರವಾದ ಈ ಕಾಲದ ಅಧಿಕಾರಿ ಎಂದರೆ, ಜಿಲ್ಲೆಯ ಮ್ಯಾಜಿಸ್ಟ್ರೇಟರ್ ಮತ್ತು ಕಲೆಕ್ಟರ್. ಭಾರತದಲ್ಲಿ ಜಿಲ್ಲೆಯೆಂಬುದು, ರಾಜ್ಯದ (ಪ್ರಾಂತ್ಯದ) ಉಪ-ವಿಭಾಗಗಳಿಗೆ ಸಮನಾಗಿತ್ತು. ಈತನು ತನ್ನ ಇಡೀ ಪ್ರಾಂತ್ಯದ ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದನು. ಅಕ್ಬರನ ಕಾಲದಲ್ಲಿ 'ಅಬ್ದುಲ್ ಫಜಲ್' ಎಂಬ ಯಾತ್ರಿಕ ತನ್ನ ಪ್ರವಾಸ ಕಥನದಲ್ಲಿ ಸ್ವದೇಶಿ ಪೊಲೀಸ್ ವ್ಯವಸ್ಥೆಯ ಪೂರ್ಣ ವಿವರ ನೀಡುತ್ತಾನೆ.

'ಸುಬೇದಾರರು'ಗಳು ಫೌಜುದಾರರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ನಡೆಸುತ್ತಿದ್ದರು. ಬಹಳ ದೊಡ್ಡ ಪ್ರಮಾಣದ ಹಿಂಸಾಚಾರ ಅಥವಾ ದಂಗೆ ನಡೆದರೆ ಮಾತ್ರ ಸೇನೆಯನ್ನು ನಿಯಂತ್ರಣಕ್ಕೆ ಬಳಸಲಾಗುತ್ತಿತ್ತು.[೮೪] ಸಣ್ಣ ವ್ಯಾಜ್ಯಗಳನ್ನು ಥಾನಾದಾರನು ನೋಡಿಕೊಳ್ಳುತ್ತಿದ್ದನು. ಆದರೆ ಆ ಕಾಲದಲ್ಲಿ ಥಾನಾದಾರರಿಗೆ ಹೆಚ್ಚಿನ ಕೆಲಸ ಕಾರ್ಯಗಳು ಇರಲಿಲ್ಲ. ಏಕೆಂದರೆ ಹಳ್ಳಿಗಳಲ್ಲಿ ನಡೆಯುವ ಕಳ್ಳತನಗಳನ್ನು ಪತ್ತೆ ಹಚ್ಚುವ ಕೆಲಸವು 'ಗ್ರಾಮಕೂಟ' (village communities) ಗೆ ಇತ್ತು. "ಥಾನಾದಾರನು ಫೌಜುದಾರನ ಸಹಾಯಕನಾಗಿದ್ದನು" [೮೫] ದೊಡ್ಡ ನಗರಗಳಲ್ಲಿ ಕೊತ್ವಾಲನು ಕಾನೂನು ಮತ್ತು ಶಾಂತಿ ಪಾಲನೆಯ ಜವಾಬ್ದಾರಿ ಹೊಂದಿದ್ದರೆ, ಆತನ ಕಛೇರಿಯನ್ನು 'ಕೊತ್ವಾಲಿ' ಎಂದು ಕರೆಯಲಾಗುತ್ತಿತ್ತು. ಭಾರತದಲ್ಲಿ ಇತ್ತೀಚಿನ ಕಾಲದವರೆಗೂ ಪೊಲೀಸ್ ಇಲಾಖೆಯಲ್ಲಿ ಕೊತ್ವಾಲ ಎಂಬ ಹೆಸರಿನ ಅಧಿಕಾರಿಯನ್ನು ನಗರ ಪೊಲೀಸ್ ಠಾಣೆಗೆ ನೇಮಕ ವಾಗುತ್ತಿದ್ದುದನ್ನು ನೋಡಬಹುದು. ಈತನ ಕರ್ತವ್ಯಗಳ ಸ್ವರೂಪವನ್ನು ಐನ್-ಇ.-ಅಕ್ಬರಿ ಗ್ರಂಥದಲ್ಲಿ ವಿಷದವಾಗಿ ವಿವರಿಸ ಲಾಗಿದೆ. ಇದು ರಾಜ ಅಕ್ಬರನ ದಿನಚರಿಯಾಗಿದೆ. ಇದರ ಪ್ರಕಾರ ಕೊತ್ವಾಲನು ಪ್ರತಿಯೊಂದು ರಾಜನ ಹಾಗೂ ರಾಜ ಪ್ರತಿನಿಧಿಯ ದರ್ಬಾರ್‌ಗಳಲ್ಲಿ ಭಾಗವಹಿಸಬೇಕಿತ್ತು. ಈತನು ಪ್ರತಿಯೊಂದು ಸಾರ್ವಜನಿಕರ ಸಭೆ-ಸಮಾರಂಭಗಳಿಗೆ ಪೊಲೀಸ್ ರಕ್ಷಣೆ ಒದಗಿಸುವ ಜವಾಬ್ದಾರಿ ಹೊಂದಿದ್ದನು. ಈತನು ವೇಶ್ಯಾವಾಟಿಕೆಯನ್ನು ನಿಯಂತ್ರಿಸುವ, ಮದ್ಯ ತಯಾರಿಕೆ ಹಾಗೂ ಮಾದಕ ದ್ರವ್ಯಗಳ ಮಾರಾಟದ ಮೇಲೆ ನಿಯಂತ್ರಣ ಹೇರುವ ಅಧಿಕಾರ ಪಡೆದಿದ್ದನು. ಈತನು ಪ್ರತೀ ದಿನ ನಗರದಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಕಾವಲುಗಾರರಿಂದ ವರದಿ ತರಿಸಿಕೊಳ್ಳುತ್ತಿದ್ದನು. ಈತನು (ಕೊತ್ವಾಲನು) ಹಲವಾರು ಜನ ಮಾಹಿತಿದಾರರನ್ನು ಹಣಕೊಟ್ಟು ಇಟ್ಟುಕೊಂಡಿದ್ದನು.[೮೬] ಈ ರೀತಿ ಹಣ ನೀಡಿ ಖಾಸಾಗಿ ಮಾಹಿತಿ ದಾರರನ್ನು ನೇಮಿಸಿಕೊಳ್ಳುವುದು ಒಂದು ಉತ್ತಮ ಗೂಢಚಾರಿಕೆ ಪದ್ಧತಿಯಾಗಿದೆ. ಏಕೆಂದರೆ ತನ್ನ ಕೈಕೆಳಗೆ ಕೆಲಸ ಮಾಡುವ ಗೂಢಚಾರರು ಎಲ್ಲಾ ಮಾಹಿತಿಗಳನ್ನು ಸರಿಯಾಗಿಯೇ ಹೇಳುತ್ತಾರೆಂದು ನಂಬಲು ಸಾಧ್ಯವಿಲ್ಲ. ಅವರು ಮಾಹಿತಿಯನ್ನು ಯಾವುದಾದರೂ ಒಂದು ವರ್ಗದ ಪರವಾಗಿ ಅಥವಾ ವಿರುದ್ಧವಾಗಿ ನೀಡಿರುವ ಸಾಧ್ಯತೆಗಳು ಇರುತ್ತದೆ. ಆ ಕಾರಣಕ್ಕಾಗಿ ಆತನು ನೀಡಿದ ಮಾಹಿತಿಯು ಸರಿಯೇ? ಅಥವಾ ತಪ್ಪೇ? ಎಂದು ತೀರ್ಮಾನಿಸಲು ಇಂತಹ ಖಾಸಗಿ ಗೂಢಚಾರರನ್ನು ಹಣಕೊಟ್ಟು ನೇಮಿಸಲಾಗುತ್ತಿತ್ತು. ಪೊಲೀಸ್ ಕೆಲಸಗಳು ಅದರಲ್ಲೂ ರಕ್ಷಣೆಯ ಕೆಲಸವಂತೂ ಸಮರ್ಪಕ ಗೂಢಚಾರಿಕೆ ಯನ್ನು ಅವಲಂಬಿಸಿದೆ. ಯಾವ ರಾಜ್ಯದಲ್ಲಿ ಗೂಢಚಾರಿಕೆ ಸಮರ್ಪಕವಾಗಿತ್ತೋ ಅಂತಹ ರಾಜರುಗಳು ಯಶಸ್ವಿ ಯಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಈತನ ಕೆಲಸವು ಇಂದಿನ ಪೊಲೀಸ್ ಅಧಿಕಾರಿಗಳ ಕೆಲಸವನ್ನು ಸಾಕಷ್ಟು ಹೋಲುತ್ತವೆ.

ನಗರ ಹಾಗೂ ಪಟ್ಟಣಗಳಲ್ಲಿ ಸಾರ್ವಜನಿಕ ಶಿಸ್ತು ಮತ್ತು ಶಾಂತಿಯನ್ನು ನೋಡಿಕೊಳ್ಳುವ ಸೇವೆಯೂ ಸೇರಿದಂತೆ ಪೊಲೀಸ್ ಕೆಲಸಗಳೆಲ್ಲವನ್ನೂ ಕೊತ್ವಾಲರಿಗೆ ವಹಿಸಲಾಗಿತ್ತು. ಐನ್-ಇ-ಅಕ್ಬರಿಯಲ್ಲಿ ವಿವರಿಸಿರುವಂತೆ ಅವನ ಕಾರ್ಯ

ಬಹುಮುಖವಾಗಿತ್ತು. ೧) ಕಳ್ಳರನ್ನು ಪತ್ತೆ ಹಚ್ಚುವುದು, ೨) ಬೆಲೆ ನಿಯಂತ್ರಣ ಮತ್ತು ಅಳತೆಗಳ ಪರಿಶೀಲನೆ, ೩)ರಾತ್ರಿಯ ವೇಳೆಯಲ್ಲಿ ಪಹರೆ ಹಾಗೂ ಗಸ್ತು ತಿರುಗುವುದು. ೪) ಮನೆಗಳ, ವಾಡಿಕೆಯ ರಸ್ತೆಗಳ ಹಾಗೂ ನಗರದ ಜನಗಳ ಬಗ್ಗೆ ದಾಖಲೆ ಇಡುವುದು ಹಾಗೂ ಅಪರಿಚಿತರ ಬಗ್ಗೆ ಗಮನವಿಡುವುದು, ೫) ಗೂಢಚಾರರನ್ನು ನೇಮಿಸಿಕೊಂಡು ನೆರೆಹೊರೆಯ ಗ್ರಾಮದ ವ್ಯವಹಾರಗಳ ಮಾಹಿತಿ ಸಂಗ್ರಹಿಸುವುದು, ೬) ಹಕ್ಕುದಾರರಿಲ್ಲದ ಸತ್ತ ಅಥವಾ ತಪ್ಪಿಸಿಕೊಂಡವರ ಆಸ್ತಿ ಬಗ್ಗೆ ವಿವರವಾಗಿ ಪಟ್ಟಿ ತಯಾರಿಸಿ ಅವುಗಳನ್ನು ವಶಪಡಿಸಿಕೊಳ್ಳುವುದು. "ಐನ್-ಇ-ಅಕ್ಬರಿಯಲ್ಲಿ ಸೂಚಿಸಿರುವ ಈ ದೀರ್ಘಪಟ್ಟಿ ಕೊತ್ವಾಲನಿಗೆ ಇರಬೇಕಾದ ಆದರ್ಶವನ್ನು ಸೂಚಿಸುವುದೇ ವಿನಃ ವಾಸ್ತವವಾಗಿ ಇದು ಇದ್ದ ಸ್ಥಿತಿಯಲ್ಲ" ಎಂಬುದು ಸರ್.ಜೆ.ಎನ್. ಸರ್ಕಾರ್‌ರವರ ಅಭಿಪ್ರಾಯವಾಗಿದೆ. ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸುಭದ್ರತೆ ಮತ್ತು ಶಾಂತಿ ರಕ್ಷಣೆಯೇ ಕೊತ್ವಾಲನ ಮುಖ್ಯ ಕರ್ತವ್ಯವಾಗಿದ್ದಿತೆಂಬುದು ಖಂಡಿತವಾಗಿದೆ.[೮೭]

ಜಿಲ್ಲೆಗಳಲ್ಲಿ ಅಥವಾ ಸರ್ಕಾರ್‌ಗಳಲ್ಲಿ ಸಾಮಾನ್ಯವಾಗಿ ಶಿಸ್ತು ಮತ್ತು ಶಾಂತಿಪರಿಪಾಲನೆಯ ಕರ್ತವ್ಯವನ್ನು ಫೌಜುದಾರರಂತಹ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಈತನು ಸೇನಾ ಪಡೆಯ ನಾಯಕನಾಗಿದ್ದು, ಸಣ್ಣಪುಟ್ಟ ಬಂಡಾಯಗಳನ್ನೆದುರಿಸುವುದು, ದರೋಡೆಕೋರರ ಗುಂಪನ್ನು ಚದುರಿಸುವುದು ಅಥವಾ ಬಂಧಿಸುವುದು, ಘೋರಾಪರಾಧಗಳೆಲ್ಲದರ ಬಗ್ಗೆ ಗಮನಹರಿಸುವುದು ಮತ್ತು ತೆರಿಗೆ ಅಧಿಕಾರಿಗಳಿಗೆ ಅಥವಾ ನ್ಯಾಯಾಧೀಶರಿಗೆ ಅಥವಾ ಮೇಲ್ವಿಚಾರಕರಿಗೆ, ವಿರೋಧ ವ್ಯಕ್ತಪಡಿಸುವಂತವರಿಗೆ ಭೀತಿಯನ್ನುಂಟುಮಾಡುವುದು, ಮತ್ತು ಬಲಪ್ರದರ್ಶನ ಮಾಡುವುದು ಅವರ ಕರ್ತವ್ಯವಾಗಿತ್ತು. "ಸಾರ್ವಜನಿಕ ಸುಭದ್ರತೆಯ ಸ್ಥಿತಿ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ, ತೀವ್ರವಾಗಿ ವೆತ್ಯಾಸಗೊಂಡರೂ" ಕೆಲವು ವಿಷಯಗಳಲ್ಲಿ ಪೊಲೀಸ್ ವ್ಯವಸ್ಥೆ ಪರಿಣಾಮಕಾರಿಯಾದುದಾಗಿತ್ತು.[೮೮]

ಅಬ್ದುಲ್ ರಜಾಕ್ ಹಾಗೂ ನ್ಯೂನಿಜ್ ಒಂದು ರೀತಿಯ ಸಚಿವಾಲಯದ ಬಗ್ಗೆ ಉಲ್ಲೇಖಿಸಿದ್ದಾರೆ. ಮುಖ್ಯ ಕೋಶಾಧಿಕಾರಿ, ರತ್ನಾಭರಣಗಳ ರಕ್ಷಕ, ರಾಜ್ಯ ವಾಣಿಜ್ಯ ಆಸಕ್ತಿಯ ಮೇಲ್ವಿಚಾರಣೆಗಾಗಿ ಒಬ್ಬ ಅಧಿಕಾರಿ, ಅಪರಾಧವನ್ನು ತಡೆಗಟ್ಟಲು, ಶಾಂತಿ ಕಾಪಾಡಲು ಪೊಲೀಸ್ ಮುಖ್ಯಾಧಿಕಾರಿ, ಅಶ್ವಗಳ ಮೇಲ್ವಿಚಾರಕ, ರಾಜನ ಖಾಸಗಿ ಸೇವಕರು, ಲೆಕ್ಕಪತ್ರಗಳ ಮೇಲ್ವಿಚಾರಣೆಗಾಗಿ ಕರಣಿಕ ಎಂಬ ಅಧಿಕಾರಿ, ಸರ್ವನಾಯಕ, ಮುದ್ರಕರ್ತ, ಪಂಚಾಂಗ ಕರ್ತ, ಕೆತ್ತನೆ ಕೆಲಸಗಾರರು ಹೀಗೆ ವಿಂಗಡಿಸಿದ ಅಧಿಕಾರಿ ವರ್ಗವು ಪ್ರಧಾನಿಯ ಅಧೀನಕ್ಕೊಳಪಟ್ಟಿರುತ್ತಿತ್ತು. ಈತನು ರಾಜನ ಆಡಳಿತದ ಮುಖ್ಯಸ್ಥನಾಗಿ ಆತನಿಂದಲೇ ನೇಮಕಗೊಂಡು ಆಡಳಿತದ ಸಂಪೂರ್ಣ ವ್ಯವಸ್ಥೆಯ ಬಗ್ಗೆ ರಾಜನಿಗೆ ವರದಿ ನೀಡಬೇಕಿತ್ತು.[೮೯]

ಭಾರತವನ್ನು ಆಳಿದ ಹಿಂದು ಮತ್ತು ಮುಸ್ಲಿಂ ಅರಸರ ಕಾಲದಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆಯ ಸಾದಾರಣ ಲಕ್ಷಣಗಳು ಒಂದೇ ತರವಾಗಿದ್ದವು. ಆದಾಗ್ಯೂ ಮುಸ್ಲಿಂ ಆಡಳಿತದಲ್ಲಿ ಸ್ಥಳೀಯ ಸಂದರ್ಭಕ್ಕೆ ಅನುಗುಣವಾಗಿ ಕೆಲವು ವ್ಯತ್ಯಾಸಗಳಿದ್ದವು. ಅರಸನ ಕೈಕೆಳಗೆ 'ಸುಬೇದಾರ'ರು ಪ್ರಾಂತ್ಯಗಳಲ್ಲಿ (ಸುಭಾಗಳಲ್ಲಿ) ಮತ್ತು ಉಪ-ವಿಭಾಗಳಲ್ಲಿ 'ಫೌಜುದಾರ'ರು ಇದ್ದರು. ಇವರುಗಳ ಕರ್ತವ್ಯದ ಸ್ವರೂಪಗಳೆಂದರೆ, ಮಿಲಿಟರಿ ಕಮಾಂಡರ್‌ನಾಗಿ, ಕಂದಾಯ ವಸೂಲಿ ಮಾಡುವವನಾಗಿ, ಮ್ಯಾಜಿಸ್ಟ್ರೇಟನಾಗಿ, ಪೊಲೀಸ್ ಇಲಾಖೆಯ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದ.[೯೦] ಜಮೀನುದಾರರು ಅಪರಾಧಗಳ ತಡೆ ಮತ್ತು ಪತ್ತೆಕಾರ್ಯದ ಜವಾಬ್ದಾರಿಯನ್ನು ಹೊಂದಿದ್ದರು. ಗ್ರಾಮದ ಮುಖ್ಯಸ್ಥನು ಕಂದಾಯ ಸಂಗ್ರಹಣೆಯ ಜೊತೆಗೆ ಪೊಲೀಸ್ ಅಧಿಕಾರಿಯ ಕೆಲಸವನ್ನು ಸಹ ಮಾಡುತ್ತಿದ್ದನು. ಈತನ ಅಧಿಕಾರಿಗಳು ಸರ್ವಾಧಿಕಾರತ್ವದಿಂದ ಕೂಡಿತ್ತು. ಇಂದಿನ ಆದುನಿಕ ಕಾಲದ ಪೊಲೀಸ್ ಪಡೆಯ ವ್ಯಾಪ್ತಿ, ವ್ಯಾಖ್ಯೆಗಳು ಅಂದಿನ ಕಾಲದಲ್ಲಿ ಇಲ್ಲದಿದ್ದರೂ ಸಹ, ಇಂದಿನಂತೆ ಅಂದು ಸಹ ಪೊಲೀಸ್ ಕೆಲಸಕಾರ್ಯಗಳು ಇದ್ದವು.[೯೧] ಪೊಲೀಸ್ ವ್ಯವಸ್ಥೆಯು ಭಾರತದಲ್ಲಿ ಮೊಗಲರ ಕಾಲದಲ್ಲೂ ಇದ್ದ ಬಗ್ಗೆ ವಿವರಗಳು ಸಿಗುತ್ತವೆ. 'ಸೂರ್' ಸಾಮ್ರಾಜ್ಯದ ದೊರೆ 'ಶೇರ್‌ಷಹಾ'

(೧೫೪೦–೧೫೪೫) ನು ತನ್ನ ಆಡಳಿತದ ವ್ಯವಸ್ಥೆಯಲ್ಲಿ ಸಾಮ್ರಾಜ್ಯವನ್ನು ೪೭ ಸರ್ಕಾರ (ಆಡಳಿತ ಘಟಕ)ಗಳಾಗಿ ವಿಭಾಗಿಸಿದ್ದು, ಪ್ರತೀ ಸರ್ಕಾರದಲ್ಲಿ ಒಬ್ಬ ಮುಖ್ಯ 'ಶಿಕ್ದಾರ' ಮತ್ತು ಮುಖ್ಯ 'ಮುನ್ಸಿಫ್' ಎಂಬ ಇಬ್ಬರು ಪ್ರಮುಖ ಅಧಿಕಾರಿಗಳನ್ನು ನೇಮಿಸಿದ್ದರು. ಮುಖ್ಯ 'ಶಿಕ್ದಾರ'ನ ಕೈಕೆಳಗೆ ಸೈನ್ಯವಿರುತ್ತಿತ್ತು. ಕಾನೂನು ಪರಿಪಾಲನೆ ಮತ್ತು ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳುವುದು ಈ ಅಧಿಕಾರಿಯ ಮುಖ್ಯ ಕರ್ತವ್ಯ ವಾಗಿತ್ತು. ಇದಲ್ಲದೇ ಇವನು ತನ್ನ ಸರಕಾರದಲ್ಲಿನ ಪರಗಣಗಳ ಶಿಕ್ದಾರರ ಕಾರ್ಯವನ್ನು ಪರಿಶೀಲಿಸುತ್ತಿದ್ದನು. ಮುಖ್ಯ ಮುನ್ಸೀಫ್‌ನು ನ್ಯಾಯಾಧೀಶನಾಗಿದ್ದನು. ಈ ಅಧಿಕಾರಿಯು ದಿವಾನಿ (ಸಿವಿಲ್) ಪ್ರಕರಣಗಳನ್ನು ತೀರ್ಮಾನಿಸುತ್ತಿದ್ದನು. ಶೇರ್‌ಷಹಾನ ಕಾಲದಲ್ಲಿ ಪ್ರತ್ಯೇಕವಾದ ಪೋಲೀಸ್ ಇಲಾಖೆ ಇರಲಿಲ್ಲ. ಸರ್ಕಾರದಲ್ಲಿ (ಜಿಲ್ಲೆಯಲ್ಲಿ) ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು ಮುಖ್ಯ ಶಿಕ್ದಾರನ ಕರ್ತವ್ಯವಾಗಿತ್ತು. ಪರಗಣೆಯಲ್ಲಿ ಅಂದರೆ ಸರ್ಕಾರಕ್ಕಿಂತ ಕೆಳಗಿನ ಆಡಳಿತ ವಿಭಾಗದಲ್ಲಿ, ಇದೇ ಕಾರ್ಯವನ್ನು ಶಿಕ್ದಾರನು ನಿರ್ವಹಿಸುತ್ತಿದ್ದನು. ಈ ಅಧಿಕಾರಿಗಳು ತಮ್ಮ ಭಾಗಗಳಲ್ಲಿಯ ಕಳ್ಳರು, ದರೋಡೆಕೋರರು ಮತ್ತು ಇತರ ಸಮಾಜ ವಿರೋಧಿ ಶಕ್ತಿಗಳ ಮೇಲೆ ನಿಗಾ ಇಡುತ್ತಿದ್ದರು. ಮತ್ತು ಅಪರಾಧಿಗಳನ್ನು ಶಿಕ್ಷಿಸುತ್ತಿದ್ದರು. ದೊಡ್ಡ ನಗರಗಳಲ್ಲಿ 'ಕೊತ್ವಾಲ'ರು ಪೋಲೀಸ್ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಶೇರ್‌ಷಹಾನು ಹಳ್ಳಿಗಳಲ್ಲಿ ಸ್ಥಾನಿಕ ಹೊಣೆ ಗಾರಿಕೆಯ ತತ್ವಗಳನ್ನು ಜಾರಿಗೆ ತಂದಿದ್ದನು. ಹಳ್ಳಿಯಲ್ಲಿ ಜರುಗಿದ ಎಲ್ಲಾ ಅಪರಾಧಿಗಳಿಗೆ ಹಳ್ಳಿಯ ಮುಖ್ಯಸ್ಥನೇ ಹೊಣೆ ಗಾರನಾಗಿದ್ದನು. ಅಪರಾಧಿಯನ್ನು ಹಿಡಿಯುವುದಕ್ಕೆ 'ಮುಕದ್ದಮ'ನಿಗೆ (ಮುಕದಮ್ ಅಥವಾ ಮುಖಿಯಾ ಎಂಬುವವನು ಗ್ರಾಮದ ಮುಖ್ಯಸ್ಥನಾಗಿದ್ದನು) ಕಾಲಾವಕಾಶ ಕೊಡಲಾಗುತ್ತಿತ್ತು. ಅಪರಾಧಿಯನ್ನು ಕಂಡುಹಿಡಿಯುವುದು ಆಗದಿದ್ದಲ್ಲಿ, ಗ್ರಾಮಾಧಿಕಾರಿಯು ದರೋಡೆ ಅಥವಾ ಕಳ್ಳತನದಿಂದ ಉಂಟಾದ ನಷ್ಟವನ್ನು ಸ್ವತಃ ಭರ್ತಿಮಾಡಿಕೊಡಬೇಕಾಗುತ್ತಿತ್ತು. ಇದನ್ನು ಮಾಡದಿದ್ದರೆ ಆತನನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಇದೇ ವ್ಯವಸ್ಥೆಯನ್ನು ನಾವು ವಿಜಯನಗರ ಹಾಗೂ ಮಧ್ಯಯುಗೀನ ಕಾಲದಲ್ಲಿಯೂ ಸಹ ಕಾಣಬಹುದಾಗಿದೆ. ಮಧ್ಯಯುಗೀನ ಚರಿತ್ರಾಕಾರರೆಲ್ಲರೂ ಶೇರ್‌ಷಹಾನ ಪೊಲೀಸ್ ಆಡಳಿತವನ್ನು ಹೊಗಳಿದ್ದಾರೆ. ಪ್ರವಾಸಿಗರು ಹಾಗೂ ವರ್ತಕರು ನಿರ್ಭೀತಿಯಿಂದ ಪ್ರಯಾಣ ಮಾಡುತ್ತಿದ್ದರು. "ಶೇರ್‌ಷಹಾನ ಆಳ್ವಿಕೆಯ ಕಾಲದಲ್ಲಿ ಮುದುಕಿಯೂ ಕೂಡ ಚಿನ್ನದ ಒಡವೆಗಳಿಂದ ತುಂಬಿದ ಬುಟ್ಟಿಯನ್ನು ಹೊತ್ತುಕೊಂಡು ಪ್ರಯಾಣ ಮಾಡಬಹು ದಾಗಿತ್ತು. ಶೇರ್‌ಷಹಾನು ವಿಧಿಸುತ್ತಿದ್ದ ಉಗ್ರ ಶಿಕ್ಷೆಗೆ ಹೆದರಿಕೊಂಡು ಯಾವನೊಬ್ಬ ಕಳ್ಳನಾಗಲೀ, ದರೋಡೆಕೋರನಾಗಲೀ ಆಕೆಯ ಬಳಿ ಸುಳಿಯುತ್ತಿರಲಿಲ್ಲ." ಎಂದು ಅಬ್ಬಾಸ್ ಸರ್ವಾಣಿ ಹೇಳುತ್ತಾನೆ.

ಅಕ್ಬರನ ಕಾಲದಲ್ಲಿ ಪ್ರತೀಯೊಂದು ಪ್ರಾಂತವನ್ನು ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು. ಜಿಲ್ಲೆಯನ್ನು 'ಸರಕಾರ' ಎಂದು ಕರೆಯುತ್ತಿದ್ದರು. ಪ್ರತೀ ಜಿಲ್ಲೆಯಲ್ಲಿಯೂ ಒಬ್ಬ 'ಫೌಜುದಾರ', 'ಅಮಲ್‌ಗುಜಾರ್', 'ಖಾಜಿ', 'ಕೊತ್ವಾಲ್', 'ಬಿತಿಕ್ಚಿ' ಮತ್ತು 'ಖಜಾನಾದಾರ' ಇರುತ್ತಿದ್ದರು. ಜಿಲ್ಲಾಧಿಕಾರಿಯಾಗಿದ್ದ 'ಫೌಜುದಾರ'ನು ಒಬ್ಬ ಸೇನಾಧಿಕಾರಿಯಾಗಿದ್ದನು. ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ಮಾರ್ಗಗಳು ಕಳ್ಳಕಾಕರಿಂದ ಮುಕ್ತರಾಗಿರುವಂತೆ ನೋಡಿಕೊಳ್ಳುವುದು ಮತ್ತು ಸಾಮ್ರಾಜ್ಯದ ಸರ್ಕಾರದ ಕಟ್ಟಳೆಗಳನ್ನು ಜಾರಿಗೊಳಿಸುವುದು ಇವನ ಕರ್ತವ್ಯವಾಗಿರುತ್ತದೆ. ಜಿಲ್ಲೆಯ ಅಂದರೆ ಸರ್ಕಾರಕ್ಕಿಂತ ಮೇಲಿನ ರಾಜ್ಯದ ವಿಭಾಗವಾದ ಪ್ರಾಂತದಲ್ಲಿ ರಾಜಧಾನಿಯ ಮತ್ತು ನಗರದ ರಕ್ಷಣೆ ಕಾರ್ಯವನ್ನು 'ಕೊತ್ವಾಲ್' ಎಂಬ ಅಧಿಕಾರಿಯು ಮಾಡುತ್ತಿದ್ದನು ಎಂಬುದಾಗಿ "ಐನ್–ಇ–ಅಕ್ಬರೀ" ಎಂಬ ಗ್ರಂಥದಲ್ಲಿ ತಿಳಿಸಲಾಗಿದೆ. ಈತನು ನಗರದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕೆಲಸದೊಂದಿಗೆ ನಗರಾಡಳಿತವನ್ನು ಸಹ ನೋಡಿಕೊಳ್ಳುತ್ತಿದ್ದು, ಈತನು ಪ್ರಾಂತ್ಯದ ಎಲ್ಲಾ ಠಾಣೆಗಳ ವರಿಷ್ಠ ಆಡಳಿತಗಾರನಾಗಿದ್ದನು.[೯೨]

ಅಕ್ಬರನ ಕಾಲದಲ್ಲಿ (೧೫೫೬–೧೬೦೫) ಪೊಲೀಸ್ ವ್ಯವಸ್ಥೆಯು ಸುಸಂಘಟಿತವಾಗಿದ್ದು ಮತ್ತು ಸಮರ್ಥವೂ

ಆಗಿತ್ತು. ಮೊಗಲ್ ಸಾಮ್ರಾಜ್ಯದ ಎಲ್ಲಾ ನಗರದ ಮತ್ತು ಪಟ್ಟಣಗಳಲ್ಲಿ ಕೊತ್ವಾಲರು ಇದ್ದರು. ಇವರು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಜಿಲ್ಲೆಯಲ್ಲಿ ಫೌಜುದಾರನು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದನು. ಈತನಿಗೆ 'ಅಮಿಲ್'ರು ಮತ್ತು ಪರಗಣಗಳ ಕಂದಾಯ ಅಧಿಕಾರಿಗಳು ಸಹಾಯಕರಾಗಿರುತ್ತಿದ್ದರು. ಜಿಲ್ಲೆಯ ರಾಜಮಾರ್ಗಗಳನ್ನೆಲ್ಲಾ ಕಳ್ಳರು ಮತ್ತು ದರೋಡೆಕೋರರಿಂದ ಮುಕ್ತರಾಗಿಡುವುದು ಮತ್ತು ಜಿಲ್ಲೆಯಲ್ಲಿನ ಸಮಾಜಘಾತುಕ ಶಕ್ತಿಗಳನ್ನು ಅಡಗಿಸುವುದು ಫೌಜುದಾರನ ಕರ್ತವ್ಯವಾಗಿತ್ತು. ಪ್ರತಿಯೊಂದು ಪರಗಣೆಯಲ್ಲಿ ಅನೇಕ ಠಾಣೆಗಳು (ಪೊಲೀಸ್ ಸ್ಟೇಷನ್) ಇದ್ದವು. ಹಳ್ಳಿಗಳ ಪೊಲೀಸ್ ಆಡಳಿತದ ವಿಷಯದಲ್ಲಿ ಅಕ್ಬರನು ಹಿಂದಿನಿಂದ ಜಾರಿಯಲ್ಲಿದ್ದ ಸ್ಥಾನಿಕ ಹೊಣೆಗಾರಿಕ ಪದ್ಧತಿಯನ್ನೇ ಮುಂದುವರಿಸಿದನು. ಗ್ರಾಮದ ಮುಖ್ಯಸ್ಥನು ಕಳ್ಳರನ್ನು, ದರೋಡೆಕೋರರನ್ನು ಪತ್ತೆಹಚ್ಚಬೇಕಾಗುತ್ತಿತ್ತು. ಈ ಕರ್ತವ್ಯದಲ್ಲಿ ವಿಫಲನಾದರೆ ಕಳ್ಳತನ ದಿಂದುಂಟಾದ ಹಾನಿಯನ್ನು ಆತನೇ ತುಂಬಿ ಕೊಡಬೇಕಾಗುತ್ತಿತ್ತು. ಗ್ರಾಮ ರಕ್ಷಣೆಗಾಗಿ ಪ್ರತಿಯೊಂದು ಗ್ರಾಮದಲ್ಲಿ ಒಬ್ಬೊಬ್ಬ ಚೌಕಿದಾರರನ್ನು ನೇಮಿಸಲಾಗಿತ್ತು.[೯]

ಮೊಗಲರ ಕಾಲದಲ್ಲಿದ್ದ ಆಡಳಿತದ ಅಧಿಕಾರಿಗಳನ್ನು ಸೂಚಿಸುವ ಅನೇಕ ಪಾರಿಭಾಷಿಕ ಶಬ್ದಗಳು ಇಂದಿಗೂ ಸಹ ಪೊಲೀಸ್ ಇಲಾಖೆಯಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಿದರೆ, ಭಾರತ ದೇಶದಲ್ಲಿನ ಪೊಲೀಸ್ ವ್ಯವಸ್ಥೆಯ ಮೇಲೆ ಮೊಗಲರ ಆಡಳಿತ ಪ್ರಭಾವ ಬೀರಿದೆ ಎಂಬ ಅಭಿಪ್ರಾಯಕ್ಕೆ ಬರಬಹುದು. ಏಕೆಂದರೆ, 'ಅಮಲ್‌ದಾರ', 'ಶೇಖ್‌ದಾರ', 'ಠಾಣೆ', 'ಠಾಣಾದಾರ', 'ಫೌಜುದಾರ', 'ಕೊತ್ವಾಲ' ಮೊದಲಾದ ಶಬ್ಧಗಳನ್ನು ಪೊಲೀಸ್ ಇಲಾಖೆಯಲ್ಲಿ ಬಳಕೆಯಲ್ಲಿರು ವುದನ್ನು ನಾವು ಗಮನಿಸಬಹುದು. ಮೊಗಲರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯು ಸೈನಿಕ ವ್ಯವಸ್ಥೆಯಿಂದ ಸಂಪೂರ್ಣವಾಗಿ ಬೇರ್ಪಟ್ಟು ಆಂತರಿಕ ಭದ್ರತೆಗಾಗಿಯೇ ಇರುವ ಒಂದು ಪ್ರತ್ಯೇಕ ವ್ಯವಸ್ಥೆ ಆಗಿದ್ದುದನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಭಾರತಕ್ಕೆ ಮೊಗಲರ ಆಗಮನವಾದ ನಂತರ ಮೊಗಲರ ಅಕ್ರಮಣಕಾರಿ ನೀತಿಗೆ ಪೊಲೀಸ್ ವ್ಯವಸ್ಥೆಯು ಒಂದು ಕಾರಣವಾಗಿತ್ತು. ಮೊಗಲರು ಸೈನಿಕ ಕಾರ್ಯಾಚರಣೆಗಳು ಮತ್ತು ಕಂದಾಯ ವಸೂಲಿಗಾಗಿಯೂ ಸಹ ಈ ಪಡೆಯನ್ನು ಬಳಸಿಕೊಳ್ಳುತ್ತಿದ್ದರು. ಬಹಳ ಹಳೇಯ ಕಾಲದಿಂದ ಬೆಳೆದುಬಂದಿದ್ದ, ಸ್ವಾರ್ಥಿಗಳಾಗಿದ್ದ ಮತ್ತು ಪರಕೀಯ ಅಧಿಕಾರಿಗಳ ಆಶ್ರಯದಲ್ಲಿದ್ದ ಈ ಸಾಂಪ್ರದಾಯಿಕ ಪೊಲೀಸ್ ವ್ಯವಸ್ಥೆಯನ್ನು (Community Police) ಹಂತ ಹಂತವಾಗಿ ಬದಲಾಯಿಸುತ್ತಾ ಬರಲಾಯಿತು. ಇದು ಜಮೀನುದಾರರಲ್ಲಿಯೂ ಮತ್ತು ಗ್ರಾಮ ಪಂಚಾಯತಿಗಳಲ್ಲಿಯೂ ಇದ್ದ ಪೊಲೀಸ್ ಜವಾಬ್ದಾರಿಗಳನ್ನು ಮೊಟಕು ಗೊಳಿಸಿತು.

೩: ೯ : ವಿಜಯನಗರೋತ್ತರ ಕಾಲದ ಪೊಲೀಸ್ ವ್ಯವಸ್ಥೆ (ಕ್ರಿ.ಶ. ೧೬೦೦– ೧೭೬೧)

ರಾಜನು ಬೇರೆ ಬೇರೆ ಬಗೆಯ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದ್ದಿತು. ಅವುಗಳಲ್ಲಿ ಅತ್ಯಂತ ಮುಖ್ಯವಾದವು ಧರ್ಮಾನುಸರಣೆ, ಪ್ರಜೆಗಳನ್ನೂ ಅವರ ಧರ್ಮಗಳನ್ನೂ ರಕ್ಷಿಸುವುದು, ಸಮಾಜ ವ್ಯವಸ್ಥೆಯನ್ನು ಜತನವಾಗಿ ಕಾಪಾಡುವುದು ನ್ಯಾಯದ ಆಡಳಿತ, ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ದಂಡಿಸುವುದು, ಜನರ ಆರ್ಥಿಕ ಯೋಗಕ್ಷೇಮವನ್ನು ನೋಡಿಕೊಳ್ಳುವುದು. ಧರ್ಮಶಾಸ್ತ್ರಗಳು ಹೇಳುವಂತೆ ಸಾರ್ವಜನಿಕ ಉಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಇತ್ಯಾದಿ. ಹದಿನೇಳನೆಯ ಶತಮಾನದ ಕರ್ನಾಟಕವನ್ನು ಅಲಂಕರಿಸಿದ್ದ ಚಕ್ರವರ್ತಿಗಳು ಈ ಕರ್ತವ್ಯಗಳನ್ನು ಕರಾರುವಕ್ಕಾಗಿ ಪರಿಪಾಲಿಸಲು ಪ್ರಾಮಾಣಿಕ ವಾಗಿ ಪ್ರಯತ್ನಿಸಿದರು. ದಾಖಲೆಗಳೆನೋ ಆ ರಾಜರು ಧರ್ಮಿಷ್ಠರಾಗಿದ್ದರು ಎಂದು ಹೇಳುತ್ತದೆ. ರಾಜ ಒಡೆಯರ ಆಳ್ವಿಕೆಯು ಧರ್ಮ ತತ್ವಗಳ ಮೇಲೆ ಆಧಾರಗೊಂಡಿದ್ದಿತು. ಕಂಠೀರವ ನರಸರಾಜರ ಆಳ್ವಿಕೆಯು ಧರ್ಮದಲ್ಲಿ ಆಳವಾಗಿ ಬೇರು ಬಿಟ್ಟಿತ್ತು. ಧರ್ಮಾಚರಣೆಯಿಂದಾಗಿ ದೇವರಾಜ ಪಡೆಯರ ಮುಖವು ಆಧ್ಯಾತ್ಮಿಕ ಕಾಂತಿಯಿಂದ ಶೋಭಿಸುತ್ತಿತ್ತು.[೧೦] ಅರಸು ತಮ್ಮ ಪ್ರಜೆ ಗಳನ್ನೂ ಸಮಾಜ ವ್ಯವಸ್ಥೆಯನ್ನೂ ನೆರೆಯ ರಾಜ್ಯಗಳ ಧಾಳಿಗಳಿಂದ ರಕ್ಷಿಸಲು ಸೂಕ್ತವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿ

ದ್ದರು, ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು, ಪ್ರಜೆಗಳಿಗಾದ ಅನ್ಯಾಯವನ್ನು ಪರಿಹರಿಸುತ್ತಿದ್ದರು ಮತ್ತು ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಲು ಪ್ರಯತ್ನ ನಡೆಸುತ್ತಿದ್ದರು.[೯೫] ಕರ್ನಾಟಕದ ಹೊರಗಿನ ರಾಜ್ಯಗಳೊಂದಿಗೆ ಹಾಗೂ ವಿದೇಶಗಳೊಂದಿಗೆ ವ್ಯಾಪಾರವನ್ನು ಪ್ರೋತ್ಸಾಹಿಸುತ್ತಿದ್ದರು. ವಿದೇಶಿ ವರ್ತಕರಿಗೆ ರಕ್ಷಣೆಯನ್ನು ಒದಗಿಸುತ್ತಿದ್ದರು.[೯೬]

'ಕಂದಾಚಾರ' ಸೇವೆಯಿಂದ ಪಡೆದ 'ಕಿಲ್ಲೇದಾರ', 'ಠಾಣಾದಾರ' ಮೊದಲಾದ ಅಧಿಕಾರಿಗಳ ಕಾವಲು ಕೆಲಸದ ಸೇವಾ ವಿಭಾಗವೂ ಇತ್ತು. ಈ ನೇಮಕಾತಿಗಳನ್ನು ಮಾಡಲು ಸಂಬಂಧಿತ ವ್ಯಕ್ತಿಗಳ ಬುದ್ಧಿಶಕ್ತಿ, ಪ್ರಾಮಾಣಿಕತೆ ಮತ್ತು ದಕ್ಷತೆಗಳನ್ನು ಆಧಾರವಾಗಿ ಇಟ್ಟುಕೊಳ್ಳುತ್ತಿದ್ದರು. ಈ ನೌಕರರು ಮತ್ತು ಅಧಿಕಾರಿಗಳು ಹೊಂದಿದ್ದ ಜವಾಬ್ದಾರಿಗಳ ಆಧಾರದ ಮೇಲೆ ಅವರ ವೇತನವನ್ನು ನಿಗದಿಪಡಿಸುತ್ತಿದ್ದರು. ಅದರಲ್ಲಿ ಅರ್ಧವನ್ನು ನಗದಾಗಿಯೂ ಇನ್ನರ್ಧವನ್ನು ವಸ್ತು ರೂಪದಲ್ಲೂ ಕೊಡುತ್ತಿದ್ದರು. ಕಂದಾಚಾರದ ಓಲೇಕಾರರಿಗೆ ವೇತನವನ್ನು ಅರ್ಧವರಹದಿಂದ ಒಂದು ವರಹದವರೆಗೆ ನಗದು ಮತ್ತು ವಸ್ತು ಸಮಪ್ರಮಾಣದಲ್ಲಿ ನೀಡಲಾಗುತ್ತಿತ್ತು. ಈ ವೆಚ್ಚವನ್ನು ಅವರಿಗೆ ಕೊಟ್ಟು ಜಮೀನಿನ ಉತ್ಪನ್ನದಿಂದ ನಿರ್ವಹಿಸಲಾಗುತ್ತಿತ್ತು. ಕಾಣಿಕೆ, ಕಡ್ಡಾಯ (ಕಡ್ಡಾಯವಾಗಿ ಕೊಡಲೇಬೇಕಾದ ತೆರಿಗೆ) ಮನೆತೆರಿಗೆ (ಮನೆಗಂದಾಯ) ಮೊದಲಾದ ತೆರಿಗೆಗಳ ವಿನಾಯಿತಿ ತೋರಿಸಿ ಅಧಿಕಾರಿಗಳಿಗೆ ಅವರ ಕೆಲಸವು ಆಕರ್ಷಕವಾಗುವಂತೆ ಮಾಡಲಾಗುತ್ತಿದ್ದಿತು.[೯೭]

ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗೆ ಅತಿ ಹೆಚ್ಚಿನ ಗಮನಕೊಡಲಾಗಿತ್ತು. ಠಾಣಾದಾರ, ಗುರಿಕಾರ, ಶಿರಸ್ತೆದಾರ (ವಿಭಾಗ ಕಛೇರಿಯ ಮುಖ್ಯಸ್ಥ) ಗುಮಾಸ್ತ, ಹೋಬಳಿದಾರ, ಓಲೇಕಾರ, ಕೊಂಬಿನವ, ತಮ್ಮಟೆಯವ, ಇತರ ಕಂದಾಚಾರದ ಅಧಿಕಾರಿಗಳು ಜನವಸತಿಗಳಲ್ಲಿ ಗಸ್ತು ತಿರುಗುತ್ತಿದ್ದರು. ಸಾರ್ವಜನಿಕ ಸೇವೆಗೆ ಒದಗಲು ಓಲೇಕಾರರು, ದಫೇದಾರರು ಮತ್ತು ಹೋಬಳಿದಾರರು ಸದಾ ಮದ್ದುಗುಂಡುಗಳೊಂದಿಗೆ ಸಿದ್ಧವಾಗಿರುತ್ತಿದ್ದರು. ಹೀಗೆ ಸ್ಥಳೀಯ ಅಧಿಕಾರಿಗಳು ಯುದ್ಧ ಕಾಲದಲ್ಲೂ ಶಾಂತಿಕಾಲದಲ್ಲೂ ಒಂದೇ ಸಮನಾಗಿ ಉಪಯೋಗಕ್ಕೆ ಬರುತ್ತಿದ್ದರು. ಇವರೊಂದಿಗೆ ಕಂದಾಚಾರಿಗಳೂ ನೆರವು ನೀಡುತ್ತಿದ್ದರು. ಇವರುಗಳು ಆಯಾ ಘಟಕದಲ್ಲಿ ಗಸ್ತು ತಿರುಗುವುದು, ಸ್ಥಳೀಯ ಖಜಾನೆಯನ್ನು ರಕ್ಷಿಸುವುದು, ಯುದ್ಧಕಾಲದಲ್ಲಿ ಮದ್ದುಗುಂಡುಗಳನ್ನು ಪೂರೈಸುವ ಕೆಲಸವನ್ನೂ ಮಾಡುತ್ತಿದ್ದರು. ಹೀಗೆ ರಾಜ್ಯದ ನಾಗರಿಕ ಹಾಗೂ ಸೈನಿಕ ಆಡಳಿತಗಳಲ್ಲಿ ಘಟಕವು ಬಹು ಪ್ರಯೋಜನಕಾರಿಯಾಗಿತ್ತು. ಅಪರಾಧಗಳಿಗೆ ಸಂಬಂಧಿಸಿದ ಬೇಹುಗಳನ್ನು ಸಂಗ್ರಹಿಸಿ ಅತಿ ಶೀಘ್ರವಾಗಿ ರವಾನಿಸುವ ವ್ಯವಸ್ಥೆಯಿತ್ತು. ಪ್ರಜೆಗಳ ನಡವಳಿಕೆಯನ್ನು ಕುರಿತು ಓಲೇಕಾರರು ವರದಿ ಮಾಡಬೇಕಾಗಿತ್ತು. ಒಳನಾಡು ಪ್ರದೇಶದಲ್ಲಿ, ಹೆದ್ದಾರಿ ಪಕ್ಕಗಳಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಅವರು ಕೇಂದ್ರ ಸರಕಾರಕ್ಕೆ ವರದಿ ಮಾಡಬೇಕಾಗಿತ್ತು. ಮುಖ್ಯ ಪ್ರದೇಶಗಳಲ್ಲಿ ಮತ್ತು ಘಟಕ ಕೇಂದ್ರಗಳಲ್ಲಿ ಕೊತ್ವಾಲ, ಶಾನಭೋಗ, ಪೇಟೆಸೆಟ್ಟಿ, ಯಜಮಾನ, ದೇಶದ ಶಾನುಭೋಗ, ಕೊಂಬಿನವನು, ತಮಟೆಯವನು, ಕಳ್ಳಭಂಟರು (ಪತ್ತೆದಾರರು) ಮತ್ತು ಊಳಿಗದವರನ್ನೊಳಗೊಂಡ ವಿಶೇಷ ಸಿಬ್ಬಂದಿ ವರ್ಗವಿರುತ್ತಿತ್ತು. ಸ್ಥಳೀಯ ಜನರು ತಮ್ಮ ತಮ್ಮ ಜಾತಿ ಕಟ್ಟುಪಾಡುಗಳನ್ನು ನಿಯಮ ನಿಬಂಧನೆಗಳನ್ನು ಉಲ್ಲಂಘಿಸದಂತೆ, ವರ್ತಕರು ನಿಯಮಗಳಿಗನುಗುಣವಾಗಿ ತಮ್ಮ ವ್ಯವಹಾರ ಮಾಡುವಂತೆ ನೋಡಿಕೊಳ್ಳುವುದು ಅವರ ಹೊಣೆಗಾರಿಕೆಯಾಗಿತ್ತು. ರಾತ್ರಿವೇಳೆ ಕಾವಲು ಗಸ್ತುತಿರುಗುವುದು, ಕಳ್ಳತನ ಮತ್ತಿತರ ಅಪರಾಧಗಳು ನಡೆಯದಂತೆ ಜಾಗರೂಕರಾಗಿರುವುದು ಕೂಡ ಅವರ ಕರ್ತವ್ಯ. ಸಣ್ಣಪುಟ್ಟ ಸ್ಥಳೀಯ ವ್ಯಾಜ್ಯಗಳನ್ನು ವಿಚಾರಣೆ ಮಾಡಿ ದಂಡ ವಿಧಿಸಲು ಕೊತ್ವಾಲ, ಪೇಟೆಸೆಟ್ಟಿ ಮತ್ತು ಯಜಮಾನರಿಗೆ ಅಧಿಕಾರವಿದ್ದಿತು. ಆದರೆ ಗುರುತರವಾದ ಶಿಕ್ಷೆಯಾಗಬೇಕಾದ ಗಂಭೀರ ಅಪರಾಧಗಳನ್ನು ಒಡನೆಯೇ ಅವರು ರಾಜನಿಗೆ ವರದಿ ಮಾಡಬೇಕಾಗಿತ್ತು.

ಕರ್ನಾಟಕದ ಕೆಳದಿ ಮತ್ತಿತರ ರಾಜ್ಯಗಳಲ್ಲಿ ನ್ಯಾಯವಿತರಣೆ ಮಾಡುವಲ್ಲಿ ರಾಜನ ಕರ್ತವ್ಯಕ್ಕೆ ವಿಶೇಷ ಮಹತ್ವವಿದ್ದಿತು. ಕೆಳದಿಯಲ್ಲಿ ಪಾರಂಪರಿಕವಾದ ಕಾನೂನನ್ನು ಪಾಲಿಸಲಾಗುತ್ತಿತ್ತು. ರಾಜನು ತಜ್ಞರೊಂದಿಗೆ ವಿಚಾರಮಾಡಿ

ನಿಯಮಾವಳಿಗಳನ್ನು ರೂಪಿಸುತ್ತಿದ್ದನು. ರಾಜದ್ರೋಹ, ವಿಶ್ವಾಸಘಾತಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಸರಕಾರವು ವಿಧಿಸುತ್ತಿದ್ದಿತು. ಅರಸನು ಧರ್ಮದ ಮೂಲಸೆಲೆ. ಪ್ರಾಂತೀಯ ಅರಸರು ತಮ್ಮವೇ ನ್ಯಾಯಾಲಯಗಳನ್ನು ನಡೆಸುತ್ತಿದ್ದರು. ಪಂಚಾಯಿತಿಗಳು, ಜಾತಿಯ ಹಿರಿಯರು, ಮಠದಗುರುಗಳು, ಸಂಘಗಳ ಮಹಾಜನರು, ದೇವಾಲಯ ಅಧಿಕಾರಿಗಳು ಇವರಿಗೆ ಅವರವರ ಕ್ಷೇತ್ರಗಳಲ್ಲಿ ನ್ಯಾಯ ವಿತರಣೆ ಮಾಡಲು ಸಾಕಷ್ಟು ಅಧಿಕಾರವಿರುತ್ತಿದ್ದಿತು. ಕೆಲವೊಮ್ಮೆ ರಾಜ್ಯದ ಹಿರಿಯ ಮಂತ್ರಿಯೊಬ್ಬನು ನ್ಯಾಯ ವಿಚಾರಣೆಗೆ ಅಧ್ಯಕ್ಷನಾಗಿ ಕುಳಿತು ಆಲಿಸುತ್ತಿದ್ದನು. ಅವನು ಕೆಲವು ಸದಸ್ಯರೊಂದಿಗೆ ಒಂದು ವಿಶೇಷ ನ್ಯಾಯಾಲಯ ವಾಗಿ, ವಿಶೇಷ ಸಂದರ್ಭಗಳಲ್ಲಿ ಹಳ್ಳಿಗಳಿಗೆ ಭೇಟಿಕೊಟ್ಟು ನ್ಯಾಯತೀರ್ಮಾನ ಮಾಡುತ್ತಿದ್ದನು. ಅದು ಒಂದು ಬಗೆಯಲ್ಲಿ ಸಂಚಾರಿ ನ್ಯಾಯಾಲಯವಾಗಿರುತ್ತಿತ್ತು. ಸಾಕ್ಷಿಗಳನ್ನು ವಿಚಾರಣೆ ಮಾಡಿ, ತೀರ್ಪು ನೀಡಿ, ಬಹುತೇಕ ಅವರ ಸಮ್ಮುಖದಲ್ಲೇ ಅದನ್ನು ಜಾರಿಗೊಳಿಸಲಾಗುತ್ತಿತ್ತು. ಈ ಸಂಬಂಧವಾಗಿ ಸರಕಾರಕ್ಕೆ ಕೋರ್ಟು ಶುಲ್ಕವೆಂಬ ಹೆಸರಿನಲ್ಲಿ ಒಂದಿಷ್ಟು ಹಣ ಸಲ್ಲುತ್ತಿತ್ತು. ಕೆಲವು ವೇಳೆ ದುರುಪಯೋಗದ ನಿರ್ದಿಷ್ಟ ಸಂದರ್ಭಗಳಲ್ಲಿ, ರಾಜರು ತಾವೇ ಖುದ್ದಾಗಿ ವಿಚಾರಣೆ ನಡೆಸುತ್ತಿದ್ದರು. ಶೃಂಗೇರಿ ಮಠ, ಅಗ್ರಹಾರ ಮತ್ತು ದೇವಾಲಯಗಳಿಗೆ ನೀಡಿದ್ದ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದನ್ನು ಶಿವಪ್ಪ ನಾಯಕನು ತಾನೇ ಖುದ್ದಾಗಿ ಕುಳಿತು ನ್ಯಾಯ ವಿಚಾರಣೆ ಮಾಡಿದನು. ಅಪರಾಧಿಗಳಿಗೆ ಉಗ್ರವಾದ ದಂಡನೆವಿಧಿಸಿ, ಆ ಭೂಮಿಯೆಲ್ಲವನ್ನೂ ಮಠಕ್ಕೆ ಮರಳಿ ವಹಿಸಿಕೊಟ್ಟನು. ಈ ಮಠದ ವ್ಯವಹಾರಗಳನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತಿದ್ದ ತನ್ನ ಪ್ರತಿನಿಧಿ ತಿರುಮಲಭಟ್ಟನು ಕರ್ತವ್ಯ ಪಾಲನೆಯಲ್ಲಿ ವಿಫಲನಾದಾಗ ಶಿವಪ್ಪನಾಯಕನು ಅವನಿಗೂ ಸೇನ ಬೋವರಿಗೂ ಒಂದು ನಿರೂಪ ಕಳಿಸಿ, ತಕ್ಷಣವೇ ಆ ನಷ್ಟವನ್ನು ಭರ್ತಿಮಾಡಬೇಕೆಂದೂ, ಇದೇ ಬಗೆಯ 'ದುಷ್ಟ ನಡವಳಿಕೆ ಯಲ್ಲೇ' ಮುಂದುವರಿದರೆ ಉಗ್ರವಾಗಿ ಶಿಕ್ಷಿಸಲಾಗುವುದೆಂದೂ ತಿಳಿಸಿದನು. ಸಾಲಗಳು, ವಂಚನೆ, ಲಂಚ, ಸುಳ್ಳು, ಕಳವು, ಮೋಸ, ರಾಜ್ಯಕ್ಕೆ ವಿರುದ್ಧವಾಗಿರುವುದು, ಭ್ರಷ್ಟಾಚಾರ, ವ್ಯಭಿಚಾರ, ಸಾಹುಕಾರರು ಅನ್ಯಾಯವಾದ ದರದಲ್ಲಿ ಬಡ್ಡಿ ಕೇಳು ವುದು, ಇಂತಹ ಮೊಕದ್ದಮೆಗಳನ್ನು ತಾವೇ ವಿಚಾರಣೆ ನಡೆಸುತ್ತಿದ್ದರು. ಸಾಮಾನ್ಯವಾಗಿ ಅಪರಾಧಿಗಳಿಗೆ ಅಂಗಚ್ಛೇದ, ಕಾರಾಗೃಹವಾಸ, ಗಡೀಪಾರು, ದಂಡಗಳು ಮತ್ತು ಬಹುಶ: ಮರಣದಂಡನೆ ಇವು ವಿಧಿಸುತ್ತಿದ್ದ ಶಿಕ್ಷೆಗಳು. ಕೆಳದಿ ರಾಜರ ನ್ಯಾಯದೃಷ್ಟಿ, ಶಾಂತಿ, ಕಾನೂನು ಸುವ್ಯವಸ್ಥೆಗಳ ಪಾಲನೆಯಲ್ಲಿ ಕಾಳಜಿ ಎಷ್ಟು ಉತ್ಕಟವಾಗಿತ್ತೆಂದರೆ ಅವರು ದುಷ್ಟ ಜನರನ್ನು ಮಾತ್ರವಲ್ಲದೇ ದುಷ್ಟಪ್ರಾಣಿ, ಪಕ್ಷಿಗಳನ್ನೂ ಶಿಕ್ಷಿಸುತ್ತಿದ್ದರು. ಜನರಿಗೆ ಸೇರಿದ ವಸ್ತುಗಳನ್ನು ಕದಿಯುತ್ತಿದ್ದ ಒಂದು ದುಷ್ಟ ನರಿ ಯನ್ನು ಹಿಡಿಸಿ ಶಿವಪ್ಪ ನಾಯಕನು ಶಿಕ್ಷಿಸಿದನು. ತಾನೇ ಅಹವಾಲುಗಳನ್ನು ಆಲಿಸಿ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಅಸಹಾಯಕ ರನ್ನು ರಕ್ಷಿಸುತ್ತಿದ್ದನು (ದುಷ್ಟ ನಿಗ್ರಹ, ಶಿಷ್ಟ ಪರಿಪಾಲನ) ಅಲ್ಲದೇ ರಾಜ್ಯದಲ್ಲಿ ಶಾಂತಿ ಕಲಕುವ ದುಷ್ಟರನ್ನು ನಿವಾರಿಸಲು, ಸಹಾಯ ಮಾಡಿದ ವ್ಯಕ್ತಿಗಳಿಗೆ ಅರಸರು ಪುರಸ್ಕಾರ ನೀಡುತ್ತಿದ್ದರು. ಸೋಮಶೇಖರ ನಾಯಕನು ಕೋಡಿಹಳ್ಳಿ ಬಸವ ಎನ್ನುವವನಿಗೆ ಮಂದೆಬರಮ ಎಂಬ ದುಷ್ಟನನ್ನು ಕೊಂದು ಸತ್ಕಾರ್ಯ ಮಾಡಿದುದಕ್ಕಾಗಿ ಉತ್ತರ–ಉಂಬಳಿ ಭೂಮಿಯನ್ನು ಕೊಡುಗೆಯಾಗಿ ನೀಡಿದನು. ದಕ್ಷ ನ್ಯಾಯ ವಿತರಣೆಯಿಂದಾಗಿ ಜನರು ಕಾನೂನಿಗೆ ಬದ್ಧರಾಗಿರುತ್ತಿದ್ದರು. ಹಾಗಾಗಿ ಅಪರಾಧಗಳ ಸಂಖ್ಯೆ ಕಡಿಮೆಯಾಗಿತ್ತು. ಕೆಳದಿ ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಯರು ಈ ಪರಿಸ್ಥಿತಿಯನ್ನು ಪ್ರಶಂಸಿಸಿದ್ದಾರೆ. ಅಲೆಗ್ಸಾಂಡರ್ ಹ್ಯಾಮಿಲ್ಟನ್ " ಈ ಪ್ರಜೆಗಳು ಎಷ್ಟು ಚೆನ್ನಾಗಿ ಕಾನೂನಿಗೆ ಬದ್ಧ ರಾಗಿರುತ್ತಾರೆಂದರೆ, ಇವರಲ್ಲಿ ದರೋಡೆ, ಕೊಲೆ ಎನ್ನುವುದು ಕೇಳಿ ಬರುವುದೂ ಇಲ್ಲ. ಅಪರಿಚಿತನೊಬ್ಬನು ಎಲ್ಲಿಗೆ ಹೋಗು ತಿದ್ದಾನೆ, ಅವನಿಗೇನು ಕೆಲಸ ಎಂದು ಯಾರೂ ಕೇಳದೆಯೇ ನಿರಾಳವಾಗಿ ಹೋಗಬಹುದು" ಎಂದಿದ್ದಾನೆ.[೮]

ವಿಜಯನಗರ ಮತ್ತು ಕೆಳದಿ ಅರಸರ ನ್ಯಾಯನಿಷ್ಠೂರತೆಯಿಂದಾಗಿ ಅಲ್ಲಿ ಅಪರಾಧಗಳ ಸಂಖ್ಯೆಗಳು ಕಡಿಮೆಯಾದ ವೆಂದು ಇದರಿಂದ ತಿಳಿದುಬರುತ್ತದೆ. ಯಾವ ನಾಡಿನಲ್ಲಿ ಕಾನೂನು ಕಠಿಣವಾಗುತ್ತದೋ ಅಲ್ಲಿ ಅಪರಾಧಗಳು ಕಡಿಮೆಯಾಗು

ತ್ತದೆ. ಎಲ್ಲಿ ಕಾನೂನು ಸಡಿಲವಾಗುತ್ತದೋ ಅಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತದೆ. ಕಾನೂನಿನ ಕಠಿಣತೆಯಿಂದಾಗಿ ವಿಜಯನಗರ ಹಾಗೂ ಕೆಳದಿ ಸಂಸ್ಥಾನಗಳು ಉಚ್ರಾಯ ಸ್ಥಿತಿಗೆ ಹೋಗಿದ್ದವು.

೩.೧೦ : ಶಾಸನಗಳಲ್ಲಿ ಗಾವುಂಡರು

ಪ್ರಾಚೀನ ಕಾಲದಲ್ಲಿ ಹಳ್ಳಿಗಳಲ್ಲಿನ ಕಾನೂನು ಸುವ್ಯವಸ್ಥೆಗಳನ್ನು ಪಾಲನೆ ಮಾಡುವ ಮತ್ತು ಕಳ್ಳತನ, ಅಪರಾಧಗಳನ್ನು ಪತ್ತೆಹಚ್ಚುವಂತಹ ಕಾರ್ಯಗಳನ್ನು ಊರಿನ ಗಾವುಂಡರು (ಗೌಡ) ಮಾಡುತ್ತಿದ್ದರು. ಇಂತಹ ಗಾವುಂಡರ ಸಾಧನೆಗಳ ಬಗ್ಗೆ ಮತ್ತು ಕೆಲವೊಮ್ಮೆ ಈ ಗಾವುಂಡರ ಮರಣದ ನಂತರ, ಅವರ ಪತ್ನಿಯರು ಹಳ್ಳಿಯ ಆಡಳಿತವನ್ನು ನೋಡಿಕೊಂಡ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಇದನ್ನು ಪ್ರಾಚೀನ ಪೊಲೀಸರಿಗೆ ಸಂಬಂಧಿಸಿದ ಶಾಸನಗಳೆಂದೇ ಹೇಳಬಹುದು.

ಗ್ರಾಮದ ಪ್ರಭುಗಳು ಗಾವುಂಡರು. ಇಂದು ಹೆಸರಿನೊಂದಿಗೆ ಗೌಡರೆಂದು ಕರೆಸಿಕೊಳ್ಳುವವರ ಪೂರ್ವಜರು ಗಾವುಂಡರಾಗಿದ್ದಾರೆ. ಆದುದರಿಂದ ಅವರಿಗೆ ಗೌಡ ಎಂಬ ಹೆಸರು ಪ್ರಾಪ್ತವಾಗಿರುವುದು. ಗ್ರಾಮದ ಆಡಳಿತ, ಅಭಿವೃದ್ಧಿ ಜನರ ಯೋಗಕ್ಷೇಮ ನೋಡಿಕೊಳ್ಳುವುದು ಈತನ ಕರ್ತವ್ಯವಾಗಿತ್ತು. ಗ್ರಾಮರಕ್ಷಣೆ, ಸುಂಕ ಸಂಗ್ರಹ, ಧಾರ್ಮಿಕ ಕಾರ್ಯ, ದಾನ ದತ್ತಿಗಳ ಸಂರಕ್ಷಣೆ ಈತನ ಕರ್ತವ್ಯವಾಗಿತ್ತು. ಪ್ರಭು ಗಾವುಂಡರು ತಮ್ಮ ಮಹಾ ಸಾಮಂತರ, ಮಹಾಮಂಡಲೇಶ್ವರ ಚಕ್ರವರ್ತಿಯ ಪರವಾಗಿ ಯುದ್ಧಾದಿ ಕಾರ್ಯಗಳಲ್ಲಿ ಭಾಗವಹಿಸಿ ಯಶಸ್ಸು ಪಡೆಯುವಲ್ಲಿ ನೆರವಾಗುತ್ತಿದ್ದರು. ಒಳ್ಳೆಯ ಭಟರಾಗಿದ್ದ ಗಾವುಂಡರು ಗ್ರಾಮಕ್ಕೆ ಒದಗುವ ಕಳ್ಳ, ಕೊಳ್ಳೆಯ ಬಾದೆ, ಗೋಗ್ರಹಣದಂತಹ ಪ್ರಸಂಗಗಳು ಬಂದಾಗ ತಮ್ಮ ಪ್ರಾಣದ ಹಂಗು ತೊರೆದು ಹೋರಾಡುತ್ತಿದ್ದರು. ಇಂತಹ ಕೆಲವು ಗಾವುಂಡರ ವಿವರಗಳು ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಲಭ್ಯವಾಗುತ್ತದೆ.[೯೮] ಗಾವುಂಡ ಅಥವಾ ಗೌಡ ಗ್ರಾಮಸಭೆಯ ಮುಖಂಡನಾಗಿದ್ದ.[೯೯]

ಪ್ರಾಚೀನ ಭಾರತದಲ್ಲಿ ಕೆಲವು ಸ್ಥಳೀಯ ಸಂಸ್ಥೆಗಳು ಕೇಂದ್ರಾಡಳಿತದ ಅಂಗಗಳಾಗಿದ್ದುವು. ಆದರೂ ಅವು ಅನ್ಯ ನಿಯಂತ್ರಣಗಳಿಗೆ ಒಳಗಾಗದೇ ತಮ್ಮನ್ನು ತಾವು ಆಳಿಕೊಳ್ಳುತ್ತಿದ್ದವು. ಈ ಸ್ಥಳೀಯ ಸಂಸ್ಥೆಗಳ ಭದ್ರ ಬುನಾದಿಯ ಮೇಲೆ ಕೇಂದ್ರಾಡಳಿತವು ರೂಪಿತವಾಗಿರುತ್ತಿದ್ದಿತು.[೧೦೦] ಇಂತಹ ಸ್ಥಳೀಯ ಸಂಸ್ಥೆಗಳಲ್ಲಿ ಹಳ್ಳಿಗಳ ಗಾವುಂಡುಗಳ ಸಮೂಹವು ಒಂದು. ಈ ಸಮೂಹವನ್ನು ಬಹು ಸ್ಥೂಲಾರ್ಥದಲ್ಲಿ ಕೇವಲ ಸೌಕರ್ಯಕ್ಕಾಗಿ 'ಗ್ರಾಮಸಭೆ' ಎಂದು ಕರೆಯಬಹುದು. ಹಾಗೆ ನೋಡಿದರೆ, ಇದನ್ನು ಸಭೆ ಅಥವಾ ಸಂಸ್ಥೆ ಎಂದು ಕರೆಯುವುದು ಅಷ್ಟು ಉಚಿತವೇನೂ ಅಲ್ಲ. ಏಕೆಂದರೆ ಆ ಗ್ರಾಮ ಸಭೆಗಳಲ್ಲಿರುತ್ತಿದ್ದವರು ರಾಜನಿಂದ ನೇಮಿಸಲ್ಪಟ್ಟವರು ಅಲ್ಲ, ಊರಿನವರು ಚುನಾಯಿಸಿದವರೂ ಅಲ್ಲ. ಅವರು ವಯಸ್ಸಿನ ಕಾರಣದಿಂದಲೋ, ಅನುವಂಶಿಕ ಕಾರಣಗಳಿಂದಲೋ ಊರಿನ ಸಹಜ ನಾಯಕರು, ಆ ಊರಿನ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತಿದ್ದವರು. ಊರಿನ ಜನತೆ ಅವರಲ್ಲಿ ನಂಬಿಕೆಯಿಟ್ಟು ಊರಿನ ಆಡಳಿತವನ್ನು ಅವರಿಗೆ ಒಪ್ಪಿಸಿದ್ದುದರಿಂದ ಅಧುನಿಕ ಯುಗದ ಪ್ರಜಾ ಪ್ರಭುತ್ವದ ಮೂಲಬೀಜಗಳನ್ನು ಆ ಗ್ರಾಮಸಭೆಗಳಲ್ಲಿ ಕಾಣಬಹುದು. ಕೇಂದ್ರಾಡಳಿತಕ್ಕೂ ಆ ಊರಿನ ಜನರಿಗೂ ಮಧ್ಯವರ್ತಿಯಾಗಿದ್ದ 'ಗಾವುಂಡ'ರನ್ನು ಅಥವಾ 'ಪ್ರಭುಗಾವುಂಡ'ರನ್ನು ರಾಜ್ಯದ ಅಧಿಕಾರಿಗಳೆಂದು ಭಾವಿಸುವುದಕ್ಕಿಂತ ಜನರ ಪ್ರತಿನಿಧಿಗಳೆಂದು ಭಾವಿಸುವುದೇ ಹೆಚ್ಚು ಉಚಿತವಾದುದು.[೧೦೧] ಪ್ರಾಚೀನ ಕರ್ನಾಟಕದ ಶಾಸನಗಳಲ್ಲಿ ಕಂಡು ಬರುವ 'ಗಾವುಂಡು'[೧೦೨] ರ ಮತ್ತು 'ಪ್ರಭುಗಾವುಂಡು'ರ ಸಂಖ್ಯೆಯನ್ನು ಕೆಲವು ಶಾಸನಗಳು ಕೊಡುತ್ತವೆ. ಸಿರಿವುರದಲ್ಲಿ ಎಂಟು ಜನ ಗಾವುಂಡುಗಳಿದ್ದಂತೆ ಶಾಸನವೊಂದು ಹೇಳುತ್ತದೆ[೧೦೩] ಬೆಳ್ಳಿಟ್ಟಗೆಯಲ್ಲಿ ಹನ್ನೆರಡು 'ಗೌಡ'ರಿದ್ದರು.[೧೦೪] ನೆರೆಯಂಗಲಿನಲ್ಲಿ 'ಧರ್ಮಪ್ರತಿಪಾಳ ನಾಪರರಪ್ಪ' 'ಪ್ರಭುಗಾವುಂಡು'ಗಳಿದ್ದರು. [೧೦೫] (ಸಂಖ್ಯೆಯನ್ನು ಕೊಟ್ಟಿಲ್ಲ) ಬೆಳ್ತುರು ಎಂಬ ಗ್ರಾಮದಲ್ಲಿ ಮೂವರು 'ಗ್ರಾಮಾಧಿಪ'ರಿದ್ದರೆಂದು ಹೇಳಿದ್ದು, ಅವರ ಹೆಸರುಗಳನ್ನು ಒಂದು ಶಾಸನವು ಕೊಟ್ಟಿದೆ. [೧೦೬] 'ಊರೊಡೆಯ ಗೌಂಡು'ರ ಉಲ್ಲೇಖ ಶಾಸನವೊಂದರಲ್ಲಿದೆ [೧೦೭] ಇನ್ನು ಕೆಲವು ಶಾಸನಗಳಲ್ಲಿ ಒಬ್ಬನೇ ಒಬ್ಬ ಗಾವುಂಡನ ಹೆಸರಿರುವುದಲ್ಲದೇ,

ಕೆಲವು ಕಡೆ ಅವನೊಬ್ಬನೇ ಆ ಊರಿನ ಗಾವುಂಡ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಪಸುಂಡಿ ಎಂಬ ಗ್ರಾಮದಲ್ಲಿ ನಾಗ ಪುಲಿಗಾವುಂಡ ಎನ್ನುವವನು, 'ಗಾವುಂಡುಗೆಯ್ಯು'ತ್ತಿದ್ದಂತೆ ಶಾಸನವೊಂದು ಹೇಳುತ್ತದೆ.[೧೦೭] ಕಲ್ಲಮ ಎನ್ನುವವನು 'ಊರ್ಗಾವುಂಡುಗೆಯ್ಯು'ತ್ತಿದ್ದ ವಿಷಯವು ಶಾಸನವೊಂದರಲ್ಲಿದೆ.[೧೦೮] ಸಿಗುನೂರಿನಲ್ಲಿ ಕಲ್ಲಯ್ಯ ಎನ್ನುವವನು 'ಏಕಭಾಗದ ಗಾವುಂಡುಗೆಯ್ಯು'ತ್ತಿದ್ದನು [೧೦೯] 'ಏಕಭೋಗಂ ಗಾವುಂಡಿಕೆ'ಯ ವಿಷಯ ಇನ್ನೊಂದು ಶಾಸನದಲ್ಲಿದೆ.[೧೧೦] ಗಾವುಂಡರ ಬಗ್ಗೆ *ಟಿಪ್ಪಣಿ ನೋಡಿ* ಗ್ರಾಮಸಭೆಯ ಅತ್ಯಂತ ಪ್ರಮುಖ ಕರ್ತವ್ಯ ನ್ಯಾಯಪರಿಪಾಲನೆ. ಪೊಸವೂರನ್ನು "ಏಕಭೋಗ'ದಿಂದ ಆಳುತ್ತಿದ್ದ ನಾಕಿಗವುಂಡನನ್ನು ಒಂದು ಶಾಸನವು [೧೧೧] ಹೊಗಳುತ್ತ ಅವನಿಂದ ದುಷ್ಟರ ಧ್ವನಿಯು ಅಡಗಿತೆಂದೂ, ಕಳ್ಳರ ಕೊಳ್ಳಿಯ ಬಾದೆಯು ಕೊಚ್ಚಿಕೊಂಡು ಹೋಯಿತೆಂದೂ, ಮನ್ನೆಯರ ಅನ್ಯಾಯವು ಅಡಗಿತೆಂದೂ ಹೇಳುತ್ತದೆ. ಇದರಿಂದ ಗಾವುಂಡರು ಪೊಲೀಸ್ ಕೆಲಸ ಮಾಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಶಾಸನವೊಂದರಲ್ಲಿ 'ಸಭೆ'ಯ ಉಲ್ಲೇಖವಿದೆ. [೧೧೨] ಈ ಉಲ್ಲೇಖವು ಬಂದಿರುವ ರೀತಿಯನ್ನು ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷೆಗಳನ್ನು ವಿಧಿಸುತ್ತಿದ್ದಿರಬಹುದು. ಆದರೆ ಈ ನಿಯಮಗಳನ್ನೆಲ್ಲ ನೋಡಿದರೆ, ಅದು ಗ್ರಾಮಸ್ಥರ ಕುಂದುಕೊರತೆಗಳನ್ನು ನಿವಾರಿಸಲೋ, ಅವರ ವಿವಾದಗಳನ್ನು ಪರಿಹರಿಸಲೋ ಸೇರುತ್ತಿದ್ದ ಆ ಗ್ರಾಮದ ಹಿರಿಯರ ಸಭೆ ಎಂಬ ಭಾವನೆ ಬರುತ್ತದೆ. ಅಂತಹ ಸಭೆಗಳಲ್ಲಿ ಆಯ್ಚಗಾವುಂಡ ನೆಂಬಾತನು ಕ್ರಮವನ್ನೂ, ಧರ್ಮವಿಚಾರವನ್ನೂ ವಿಚಾರಮಾಡಿ ಮಾತನಾಡುತ್ತಿದ್ದನೆಂದು ಶಾಸನವು ಹೇಳುತ್ತದೆ. 'ಸತ್ಯ ಕಾನೀನ', ವಿವೇಕ ಬೃಹಸ್ಪತಿ' ಮುಂತಾದ ವಿಶೇಷಣಗಳನ್ನು ನೋಡಿದರೆ ವಿವಾದ ನಿರ್ಣಯಗಳ ಸಭೆಗಳಲ್ಲಿ ಅವನ ಮಾತಿಗೆ ಬಹು ಬೆಲೆಯಿದ್ದಿತೆಂದು ಕಾಣುತ್ತದೆ. ಅನೇಕ ಶಾಸನಗಳಲ್ಲಿ, ಇಂತಿಂತಹ ಅಪರಾಧಕ್ಕೆ ಇಷ್ಟಿಷ್ಟು ದಂಡವೆಂದು ರಾಜನೋ ಇತರ ಹಿರಿಯ ಅಧಿಕಾರಿಯೋ ನಿಯಮಿಸುತ್ತಿದ್ದಂತೆ ಉಲ್ಲೇಖಗಳಿವೆ.[೧೧೩] ಗ್ರಾಮಸಭೆಗಳು ಬಹುಶ: ಆ ಊರುಗಳಿಗೂ ಅನ್ವಯಿಸುತ್ತಿದ್ದುವೆಂದಾಗಲಿ, ಎಲ್ಲ ಗ್ರಾಮಸಭೆಗಳೂ ಚಾಚೂತಪ್ಪದಂತೆ ಅನುಸರಿಸುತ್ತಿದ್ದವೆಂದಾಗಲಿ ಭಾವಿಸುವುದು ತಪ್ಪಾಗುತ್ತದೆ. ಅಪರಾಧದ ಸ್ವರೂಪ ಮತ್ತು ಪ್ರಮಾಣ, ಅಪರಾಧಿ, ಅಪರಾಧವನ್ನು ಮಾಡಲು ಒದಗಿದ ಸನ್ನಿವೇಶ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮಸಭೆಯು ಬಹುಮಟ್ಟಿಗೆ ಲೌಕಿಕ ಪ್ರಜ್ಞೆಯನ್ನಾಶ್ರಯಿಸಿ ತೀರ್ಪನ್ನು ಕೊಡುತ್ತಿದ್ದಿರಬೇಕು. ಗ್ರಾಮ ಸಭೆಯ ತೀರ್ಪು ಬಹುಶ: ಅನುಲ್ಲಂಘನೀಯವಾಗಿದ್ದಿರಬೇಕು. ಅದನ್ನು ಉಲ್ಲಂಘಿಸಿದವನನ್ನು ಊರಿನಿಂದ ಹೊರಗೆ ಹಾಕುತ್ತಿದ್ದರು, ಊರಿನಲ್ಲಿ ಅವನಿಗೆ ಅನ್ನ ನೀರು ಸಿಗದಂತೆ ಕಟ್ಟು ಮಾಡುತ್ತಿದ್ದರು. ಇದರ ಸೂಚನೆ ಶಾಸನವೊಂದರಲ್ಲಿದೆ.[೧೧೪] ಶಾಸನವು ಅಸ್ಪಷ್ಟವಾಗಿದ್ದರೂ ಇಷ್ಟು ಅಂಶವನ್ನು ಗ್ರಹಿಸಬಹುದು. ಯಾವನೋ ಒಬ್ಬನು ಊರಿನವರ ಇಚ್ಚೆಗೆ ವಿರೋಧವಾಗಿ ನಡೆದುಕೊಂಡದ್ದರಿಂದ, ಊರಿನವರ ಅಪ್ಪಣೆಯಿಲ್ಲದೆ ಊರನ್ನು ಹೊಕ್ಕು ಉಣಲಾಗದೆಂದೂ ("ಊರೊಳ್ ಬೆಸನಿಲ್ಲದೆ ಪೊಕ್ಕುಣಲಾಗದು") ಹಾಗೆ ಉಂಡರೆ ಶಿಕ್ಷೆಯನ್ನನ್ನುಭವಿಸಬೇಕಾಗು ವುದೆಂದೂ ಆ ಶಾಸನವು ತಿಳಿಸುತ್ತದೆ. ಅಪರಾಧವು ಕೊಲೆಯಂತಹ ದೊಡ್ಡ ಕೃತ್ಯಗಳಿಗೆ ಸಂಬಂಧಿಸಿದ್ದರೆ ಅಲ್ಲಿಯೂ ಗ್ರಾಮ ಸಭೆಗಳೇ ತೀರ್ಪುಕೊಡುತ್ತಿದ್ದುವೇ ? ಇಲ್ಲವೇ ? ಹಿರಿಯ ಅಧಿಕಾರಿಗಳು ತೀರ್ಪುಕೊಡುತ್ತಿದ್ದರೇ ? ಎಂಬ ವಿಷಯದಲ್ಲಿ ಶಾಸನಗಳಿಂದ ಹೆಚ್ಚು ಬೆಳಕು ಬರುವುದಿಲ್ಲ. ಅಶೋಕನ ನಾಲ್ಕನೆಯ ಸ್ತಂಭಶಾಸನದಿಂದ ದೊಡ್ಡ ವ್ಯಾಜ್ಯಗಳನ್ನು ಹಿರಿಯ ನ್ಯಾಯಾಲಯಗಳು ಪರಿಹರಿಸುತ್ತಿದ್ದುವೆಂದೂ ಆ ನ್ಯಾಯಾಲಯಗಳ ತೀರ್ಪುಗಳು ವಿಶೇಷ ಅಧಿಕಾರಿಗಳ ಅಂಗೀಕಾರ ಮುದ್ರೆ

ಟಿಪ್ಪಣಿ 'ಗಾವುಂಡ' ಎನ್ನುವ ಪದವು 'ಗ್ರಾಮವೃದ್ಧ'ದಿಂದ ಬಂದಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. (**A.N. Narashimhaiah: 'Gowda in Kannada'' (Indian Linguistics xxii.** ೧೯೬೧. **pp-** ೧೧೦-೫) ರಾಜ್ಯದ ಅಧಿಕಾರಿಗಳನ್ನು ಹೆಸರಿಸುವಾಗ ಗ್ರಾಮವೃದ್ಧ ಎಂಬ ಅಧಿಕಾರಿಯ ಹೆಸರು ಎಲ್ಲಿಯೂ ಉಕ್ತವಾಗಿಲ್ಲ. 'ಗ್ರಾಮಕೂಟ' ಎಂಬ ಅಧಿಕಾರಿಯ ಹೆಸರಿದೆ. (**BKI- I-ii.**೧೩೬.೧೯೯೧. **A.D**) ಈ 'ಗ್ರಾಮಕೂಟ' ಎಂಬುದೇ 'ಗಾವುಂಡ'(=ಗೌಡ) ಆಗಿರಬಹುದೇ ಎಂಬುದು ವಿಚಾರಯೋಗ್ಯವಾದುದು. ಗಾಮಉಡ, ಗಾಮಊಡ ಎಂಬ ರೂಪಗಳು ಪ್ರಾಕೃತದಲ್ಲಿ ದೊರೆಯುತ್ತವೆ. (ಇದು ದೇಶ್ಯ ಶಬ್ದವೆಂದು ಹೇಮಚಂದ್ರನ ಅಭಿಮತ) 'ಗ್ರಾಮಕೂಟ' ಎಂದರೆ ಸಂಸ್ಕೃತದಲ್ಲಿ ಗ್ರಾಮದ ಮುಖ್ಯಸ್ಥ ಎಂದರ್ಥ. ಗೌಡ ಶಬ್ದದ ವ್ಯುತ್ಪತ್ತಿ ಬಹುಶ: ಹೀಗೆ: ಸಂ.ಗ್ರಾಮಕೂಟ >ಪ್ರಾ.ಗಾಮಊಡ, ಗಾಮಉಡ > ಕನ್ನಡ. ಗಾಮುಂಡ. ಇದೇ ಕ್ರಮೇಣ ಗಾವುಂಡ, ಗೌಂಡ, ಗೌಡ ಎಂದಾಗಿದೆ. ಈ ವ್ಯುತ್ಪತ್ತಿಯು ಅನೇಕ ವಿದ್ವಾಂಸರಿಗೆ ಒಪ್ಪಿಗೆಯಾಗಿದೆ.

ಯನ್ನು ಪಡೆಯಬೇಕಾಗಿದ್ದಿತೆಂದೂ ತಿಳಿದುಬರುತ್ತದೆ[೧೧೫] ಪ್ರಾಚೀನ ಕರ್ನಾಟಕದಲ್ಲೂ ಇಂತಹ ವ್ಯವಸ್ಥೆಯೊಂದು ಇದ್ದಿರಬಹುದೋ? ಏನೋ, ರಾಜರಿಗೆ ಮತ್ತು ಇತರ ಮಂತ್ರಿಗಳಿಗೆ ಇದ್ದ 'ದುಷ್ಟಶಿಕ್ಷಕ' ಮುಂತಾದ ವಿಶೇಷಣಗಳನ್ನು ನೋಡಿದರೆ ಮೇಲಿನ ಊಹೆಯು ಸಾಧಾರವಾದುದೆಂದು ಕಾಣುತ್ತದೆ. ಒಂದೇ ಒಂದು ಶಾಸನದಲ್ಲಿ ತಂದೆಯೊಬ್ಬನು ತನ್ನ ಮಗನನ್ನು ಕೊಲ್ಲಿಸಿ ದಂಡ ತೆತ್ತ ವಿಷಯವೂ, ಮತ್ತೆ 'ತಂದೆಯ ಹೆಗಲಮೆಟ್ಟಿ' ಮಗನು ಸ್ವರ್ಗಕ್ಕೆ ಸಂದ ವಿಷಯವೂ ಇದೆ.[೧೧೬] ಮಗನ ಕೊಲೆ ಮಾಡಲು ನೂರು ಗದ್ಯಾಣಗಳನ್ನು ಕೊಟ್ಟನೆಂದೂ, ಬಳಿಕ ಐವತ್ತು ಗದ್ಯಾಣಗಳ ದಂಡವನ್ನು ತೆತ್ತನೆಂದೂ ಶಾಸನವು ಹೇಳುತ್ತದೆ. ಈ ದಂಡವನ್ನು ನಿರ್ಧರಿಸಿದವರು ಯಾರು ಎಂಬುದು ಸಂದೇಹಾಸ್ಪದವಾಗಿ ಉಳಿಯುತ್ತದೆ. ಕೊಲೆಯ ಮತ್ತು ದಂಡದ ವಿಚಾರಗಳು ಶಾಸನೋಕ್ತವಾಗಿರುವುದರಿಂದ, ರಾಜ್ಯದ ಹಿರಿಯ ಅಧಿಕಾರಿಗಳಿಂದ ಬಹಿರಂಗ ವಿಚಾರಣೆ ನಡೆಯಿತೆಂದು ಊಹಿಸಬಹುದೇ? ಊರಿನವರೇ ಸೇರಿ ನ್ಯಾಯ ನಿರ್ಣಯವನ್ನು ಮಾಡಿದ್ದರೆ ಬಹುಶ: ಶಾಸನವನ್ನು ಹಾಕಿಸುತ್ತಿರಲಿಲ್ಲ. ಗ್ರಾಮಾಡಳಿತಕ್ಕೆ ಸಂಬಂಧಿಸಿದ ಇಬ್ಬರ ಹೆಸರುಗಳನ್ನು ಇಲ್ಲಿ ಸೂಚಿಸಬಹುದು. ಒಬ್ಬ– ಸೇನಬೋವ (ಈಗಿನ ಶಾನುಭೋಗ) ಮತ್ತೊಬ್ಬ– ತಳವಾರ, ಸೇನಬೋವನು ವಿದ್ಯಾವಂತನಾಗಿದ್ದು, ಗ್ರಾಮ ಸಭೆಯ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದನು. ವಾಸ್ತವವಾಗಿ, ಇವನ ಸ್ಥಾನ ಗ್ರಾಮದ ಗೌಡನಿಗಿಂತ ಕೆಳಗಿನದಾದರೂ ಅಕ್ಷರಸ್ಥನಾಗಿದ್ದ ಇವನು ಬಹು ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದಿರಬೇಕು. ಗುಡಿಗೆರೆ ಎಂಬ ಗ್ರಾಮವನ್ನು 'ಪನ್ನೆರಡುಂಗವುಂಡುಗಳ್' ರಕ್ಷಿಸುತ್ತಿರುವಾಗ ಆ ಊರಿನಲ್ಲಿ ಸೇನಬೋವನಾಗಿದ್ದ ಸಿಂಗಣ್ಣನನ್ನು ಶಾಸನವೊಂದು ಬಹುವಾಗಿ ಹೊಗಳಿದೆ.[೧೧೭] ಅವನು ಅಕ್ಷರ ಪಕ್ಷಪಾತಿಯಾಗಿದ್ದನೆಂದು ಆ ಶಾಸನವು ಹೇಳುತ್ತದೆ. (ಕುಳಕರಣಿ'; ಎಂಬುದು ಸೇನಬೋವನಿಗಿದ್ದ ಮತ್ತೊಂದು ಹೆಸರು) ಊರಿನ ರಕ್ಷಣೆಯ ಹೊಣೆ ತಳವಾರನದು. ತಳವಾರನ ಹೆಸರು ಅನೇಕ ಶಾಸನಗಳಲ್ಲಿ ಬಂದಿದೆ.[೧೧೮]

ರಾಜಧಾನಿಯಲ್ಲಿ ದೊರೆಯ ಜೊತೆ ಪಿರಿಯರಸಿ ಪಟ್ಟಮಹಾದೇವಿ 'ಸುಖ ಸಂಕಥಾ ವಿನೋದದಿಂ' ಬಾಳುತಲಿದ್ದರೆ ಇನ್ನುಳಿದ ರಾಣಿಯರು, ರಾಜಪುತ್ರಿಯರು ಕೆಲವು ವೇಳೆ ಆಡಳಿತಕ್ಕೆ ಸಂಬಂಧಿಸಿದ ಯಾವುದೋ ಒಂದು ಭಾಗದಲ್ಲಿ ಸ್ವತಂತ್ರ ಅಧಿಕಾರಿಗಳಾಗುತ್ತಿದ್ದರು. ಇವರನ್ನು ಬಿಟ್ಟರೆ ಪುತ್ರವಿಹೀನರಾದ ಅಥವಾ ಅಪ್ರೌಢದೆಸೆಯ ಮಕ್ಕಳನ್ನು ಮುಂದಿಟ್ಟುಕೊಂಡು ವಿಧವೆಯರು ನೇರವಾಗಿ ಆಡಳಿತವನ್ನು ಕೈಗೊಳ್ಳುತ್ತಿದ್ದರು. ಇವರು ಮಂಡಲೇಶ್ವರ, ಸಾಮಂತ, ನಾಳ್ಗಾವುಂಡ, ಗಾವುಂಡ, ಅಧಿಕಾರ ಶ್ರೇಣಿಗಳಲ್ಲದೇ ಸ್ವತಂತ್ರವಾಗಿ ಆಳಿರುವರು.[೧೧೯]

ನಾಳ್ಗಾವುಂಡಿ ಮತ್ತು ಗಾವುಂಡಿಯರ ಆಡಳಿತದಬಗೆಗೂ ಕೆಲವು ಸಂಗತಿಗಳು ಕಂಡುಬರುತ್ತವೆ. ಪತಿ ನಾಗಾರ್ಜುನನ ಮರಣಾನಂತರ ನಾಗರಖಂಡ ೭೦ ರ ನಾಳ್ಗಾವುಂಡಿಯಾಗಿ ಅಧಿಕಾರ ನಿರ್ವಹಿಸಿದ 'ಜಕ್ಕಿಯಬ್ಬೆಯ' ಕೈಕೆಳಗಿನ ನಣ್ಣುವರ ಕಲಿಗ ಮತ್ತು ಸನ್ನಿಗರ ಕುಡಿವುಳ್ದ ಎಂಬುವವರು ಪೆರ್ಗಡೆಯಾಗಿದ್ದರು. 'ಉತ್ತಮ ಪ್ರಭಾಶಕ್ತಿ ಯುಕ್ತೆ ಎನಿಸಿದ ಜಕ್ಕಿಯಬ್ಬೆ ವಧುವಾಗಿಯಂ ನಿಜವೀರ ಕ್ರಮ ಗರ್ಭದಿಂ' ನಾಳ್ಗಾವುಂಡಿತನ ಗೈದಿಳೆಂದು ಶಾಸನವೊಂದು ಹೇಳುತ್ತದೆ.[೧೧೩] ಪಂಚಪಟ್ಟನ ಕುಲವದು ನಾಗಿಯಕ್ಕ 'ಪೆಣ್ಡತಿಗುಂಟು ದುಷ್ಟರಂ ಕಿಡಿಸುವ ಶಿಷ್ಟರಂ ಪೊರೆವ ಅನುಗ್ರಹ' ಎಂಬುದನ್ನು ಲೋಕಕ್ಕೆ ಸಾರಿ ನಾಡಪೆರ್ಗಡೆತನ ನಿರ್ವಹಿಸಿದ ಅದ್ವಿತೀಯ ಮಹಿಳೆ.[೧೨೦] ಇವರ ನಾಳ್ಗಾವುಂಡಿ ಅಧಿಕಾರದ ಬಗೆಗೆ ವಿಷಯ ಸ್ಪಷ್ಟವಾಗಿ ದೊರಕದೇ ಹೋದರೂ ಇಲ್ಲಿಯ ಆಡಳಿತ ನಿರ್ವಹಣೆಯ ಜವಾಬ್ದಾರಿ ಅರಿಯಬಹುದು. ಸ್ಥಳೀಯರ ಜವಾಬ್ದಾರಿಯೊಂದಿಗೆ 'ಗೌಡ' ಎಂದು ಕರೆಯಲ್ಪಡುತ್ತಿದ್ದ ಹಳ್ಳಿಯ ಮುಖಂಡನು ಮುಖ್ಯಸ್ಥನಾದ. ನಗರಗಳಿಗೆ ಪ್ರತ್ಯೇಕ ವ್ಯವಸ್ಥೆ ಇತ್ತು. ಸಂಬಳ ಪಡೆಯುತ್ತಿದ್ದ ಖಾಯಂ ಆದ ಸಿಬ್ಬಂದಿಯನ್ನು ಪೊಲೀಸ್ ಕರ್ತವ್ಯ ಮಾಡಲು ನೇಮಿಸಲಾಯಿತು. ಇವರ ಪ್ರಮುಖ ಕರ್ತವ್ಯವೆಂದರೆ, ಕ್ರಮಬದ್ಧವಾಗಿ ಗಸ್ತು ತಿರುಗುವುದು, ಅಪರಾಧಗಳ ತನಿಖೆ ಮಾಡುವುದು, ಅಪರಾಧಗಳ ತಡೆ ಮತ್ತು ಪತ್ತೆ ಮಾಡುವುದಾಗಿತ್ತು.[೧೨೧]

೩. ೧೦.೧ ಚಂಗಗಾವುಂಡ

ಕೊಳಗಲ್ಲು [೧೨] ಶಾಸನದಲ್ಲಿ ಈತನ ಉಲ್ಲೇಖವಿದೆ. ರಾಷ್ಟ್ರಕೂಟರ ದೊರೆ ಛಲಕೆನಲ್ಲಾತನು ಆಳುತ್ತಿರುವಾಗ ಅಯ್ಯಪ ಗಾವುಂಡನ ತಮ್ಮನಾದ ಈ ಚಂಗಗಾವುಂಡ ಸೂಜಿಗಲ್ಲಿನ ಪಶ್ಚಿಮಕ್ಕೆ ಮೂವತ್ತು ಮತ್ತಾರು ಹೊಲವನ್ನು ಉತ್ತರ ದಿಕ್ಕಿಗೆ ಒಂದು ತೋಟವನ್ನು, ಮಠದ ಮುಂದಿರುವ ಒಂದು ಗಾಣವನ್ನು, ನಲ್ವತ್ತೆರಡು ಮಹಾಜನರ ನಾಲ್ಕು ಜನ ಗಾವುಂಡರ ಸಮ್ಮುಖದಲ್ಲಿ ವಿದ್ಯಾದಾನ, ಸತ್ರ, ಮಠಕ್ಕೆಂದು ಸತ್ಯರಾಶಿ ಭಟ್ಟಾರರ ಕಾಲು ತೊಳೆದು ದಾನಬಿಡುತ್ತಾನೆ ಎಂದು ಹೇಳಿದೆ.

೩.೧೦.೨: ಸೇನಗೌಡ, ಚಿಕ್ಕಗೌಡ, ನೇಮಗೌಡ

ಸೇನಗೌಡನ ಪುತ್ರ ಚಿಕ್ಕಗೌಡ, ಚಿಕ್ಕಗೌಡನ ಮಾವ ನೇಮಗೌಡ ಇವರ ಉಲ್ಲೇಖ ತಲವಾಗಲು ಶಾಸನದಲ್ಲಿ ಬರುತ್ತದೆ. ತಲವಾಗಲು ಶ್ರೀ.ಭೋಶ್ವರ ದೇವರ ಸ್ಥಾನಿಕರು ಪರಲೋಕ ಪ್ರಾಪ್ತರಾದ ಬಳಿಕ ಈ ಮೂವರು ಗೌಡರು ಅರವ ತ್ತೊಕ್ಕಲು ಹನ್ನೆರಡು ಇಟ್ಟು ಸಹಿತವಾಗಿ ಪೂಜಾರಿ ನಾಗಯ್ಯನ ಕರೆದು ಕಾಲು ತೊಳೆದು ಧಾರಪೂರಕವಾಗಿ ದಾನ ಬಿಡು ತ್ತಾರೆ. ದಾನ ಬಿಟ್ಟ ವಿವರಗಳು ತಿಳಿದುಬಂದಿಲ್ಲ.[೧೩]

೩.೧೦.೩: ಮಾರಗಾವುಂಡ, ಮೂಕಗಾವುಂಡ, ರಾಚಮ್ಮಗಾವುಂಡ

ಇವರ ಉಲ್ಲೇಖ ಮನ್ನೇರ ಮಸಲವಾಡ [೧೪] ಶಾಸನದಲ್ಲಿದೆ. ಸೋಮಗ್ರಹಣದಂದು ಈ ಮೂವರು ಗಾವುಂಡರು ಹಾಗೂ ಭೋಗಾಯಯ್ಯ ಸಹದೇವಯ್ಯ ಇವರ ಸನ್ನಿದಾನದಲ್ಲಿ ಎರೆಮತ್ತರು ೧೨ ನ್ನು ಕಿಸಮತ್ತರು ೪ನ್ನು ಮಹಾದೇವರ ಮುಂದಿನ ಕೆರೆಯನ್ನು ದೇವರಿಗೆ ದತ್ತಿ ಬಿಟ್ಟಿದ್ದು ತಿಳಿದು ಬರುತ್ತದೆ.

೩.೧೦.೪: ಎಂಕಗಾವುಂಡ

ಈತನ ಉಲ್ಲೇಖ ಹೊಳಗುಂದಿ[೧೫] ಶಾಸನದಲ್ಲಿ ಬರುತ್ತದೆ. ಮಹಾಮಂಡಳೇಶ್ವರ ಗಂಗರಸನು ತನ್ನ ತಂದೆ ಚಾಮುಂಡರಸನು ಹೊಳಗುಂದಿಯಲ್ಲಿ ಮಾಡಿಸಿದ ಬಾಳೇಶ್ವರ ದೇವರಿಗಾಗಿ ಚಕ್ರವರ್ತಿಯ ಕೈಯಿಂದ ಕರಿಯ ಭೂಮಿಯನ್ನು, ಗದ್ದೆಯನ್ನು ಪಡೆದು ಪೊಳಲ್ಗುಂದೆಯ ಎಂಕಗಾವುಂಡನ ಕೈಯಲ್ಲಿ ದಾರಾಪೂರ್ವಕವಾಗಿ ಬಿಡುತ್ತಾನೆ. ಎಂಕಗಾವುಂಡನ ಪ್ರಶಸ್ತಿ ಯನ್ನು ಶಾಸನದಲ್ಲಿ 'ಸಮಸ್ತ ಗುಣಸಂಪನ್ನಂ ನುಡಿದು ಮತ್ತೆನ್ನಂ ಗೋತ್ರ ಪವಿತ್ರ ಪರಾಂಗನ ಪುತ್ರಂ ನೀತಿ ಚಾಣಕ್ಯಂ ಸುಜನ ಮಾಣಿಕ್ಯಂ ಚಲದಂಕರಾಮಂ ಸಂಗ್ರಾಮ ಭೀಮಂ ಸಾಹಸೋತ್ತುಂಗ ನಯ್ಯನಸಿಂಗಂ' ಎಂದು ಬರುತ್ತದೆ.

೩.೧೦.೫: ಬಮ್ಮಗಾವುಂಡ

ಇವನು ಶ್ರೀನಿವಾಸಪುರಂ ಶಾಸನೋಕ್ತನಾಗಿದ್ದಾನೆ.[೧೬] ಪಲ್ಲವ ವಂಶದವನಾದ ಇವನ ಸಾಮಾಂಥ ಮುಸವರಾಧಿತ್ಯನ ಸಹೋದರನಾಗಿದ್ದಾನೆ. ಶಾಸನದಲ್ಲಿ ಇವನನ್ನು 'ತ್ರಿಭುವನ ಸ್ತುತನಣ್ಣನ ಗಂಧವಾರಣಂ ಶಿವಸಮಯ ಮುಸವ ವಂಶ ಶಿಕಾ ಮಣಿ ಎಂದು ಲೋಕಮುತ್ಸವದೊಳು ಬಣ್ಣಿಕು ನೆಗಲ್ದ ಬಮ್ಮಗೌವುಂಡನ ನಾಜಿಗೌಂಡನ' ಎಂದು ವರ್ಣಿಸಿದೆ. ಇವನು ಆಯ್ತೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಡುತ್ತಾನೆ.

೩.೧೦.೬: ರೇವುಗಾವುಂಡ

ಕೋಲೂರಿನ [೧೭] ಶಾಸನವು ಇವನ ವ್ಯಕ್ತಿತ್ವವನ್ನು ರಂಜನೀಯವಾಗಿ ವರ್ಣಿಸಿದೆ. ಶಾಸನದಲ್ಲಿ ಇವನ ವಂಶಾವಳಿ ಬರುತ್ತಿದ್ದು, ಅದು ಹೀಗಿದೆ. ಕಾಳೇಯಗಾವುಂಡ + ಮಲ್ಲಿಯಕ್ಕ –೧)ರೇವುಗವುಂಡ, ೨)ಹರಿಯಮ್ಮ ಗವುಂಡ, ೩) ಸುಖ ಗವುಂಡ ೪)ಮೈಲಮ್ಮ ೫) ಹಾಲಮ್ಮ, ೬)ಹಿರಿಯವನಾದ ರೇವು ಗವುಂಡನ ಹೆಂಡತಿ ಚಾಕಬೇಗೌರಿ. ಇವರಿಗೆ ೧)ಹರಿಯಮ್ಮ ಗವುಂಡ, ೨)ಕಾಳೇಯ ಗವುಂಡ, ೩)ಮಾಧವಸಾ (ಸೌ) ಸೌಧರೆ, ೪) ಮಹದೇವ ಎಂಬ ನಾಲ್ವರು ಪುತ್ರರು. ಇದರಲ್ಲಿ ಮಾಧವ ಸೌಧರೆಯ ಹೆಂಡತಿ ಮಾರಮ್ಮ, ಇವರೀರ್ವರಿಗೆ ರೇವು ಗವುಂಡನೆಂಬ ಪುತ್ರ ಜನಿಸುತ್ತಾನೆ. ಮಾಧವ ಸೌದರೆಯ ಪುತ್ರ ರೇವುಗವುಂಡ ಅತ್ಯಂತ ಉಧಾರಿಯಾಗಿದ್ದ ವೀರನು, ಧಾರ್ಮಿಕ ಮನೋಭಾವದವನು ಆಗಿದ್ದನು. ದಾನ

ಧರ್ಮದ ಕಾರ್ಯಗಳಿಗೆ ಹೆಸರಾದ ಈತನನ್ನು ಶಾಸನವು

‘ ಒಲಪಿನೊಲಂ ತೇಜದೊಲಂ
ಚಲದೊಳಮೌದಾರ್ಯ ಗುಣದೊಳಂ ರೂಪಿನೊಳಂ
ಸಲ್ಲಲಿ ತವಪ್ಪ ರೆತದೊಳಂ
ಗೆಲುವ ವನ್ನರ್ಗಾಣೆ ರೇವಗೌಂಡಂಗೆಳೆಯೊಲ್’

ಎಂದು ವರ್ಣಿಸಿದೆ. ಇವನು ವಿವಿಧ ದೇವಾಲಯಗಳನ್ನು ನಿರ್ಮಿಸಿದ್ದನು. ಸೋಮೇಶ್ವರ, ಕಾಳೇಶ್ವರ, ಮಲ್ಲಿಕಾರ್ಜುನ, ಆಧಿತ್ಯ ಗೃಹ, ವಿಘ್ನೇಶ್ವರ, ಬೈರವ ದೇವಾಲಯ, ಮೋಳೇಶ್ವರ ದೇವಾಲಯಗಳನ್ನು ನಿರ್ಮಿಸಿದ. ಅಲ್ಲದೇ ಊರ ಹೊರಗೆ ಬಾವಿಯನ್ನು ಅಗೆಸಿ ಅದರಲ್ಲಿ ಶಿವಾಲಯವನ್ನು ಮಾಡಿಸುತ್ತಾನೆ. ಇದರ ಸಮೀಪಕ್ಕೆ ಕೆರೆಯನ್ನು ಕಟ್ಟಿಸುತ್ತಾನೆ. ತನ್ನ ಬಾವ ಮತ್ತು ಈತನು ಸೇರಿ ವಿಷ್ಣು ದೇವಾಲಯವನ್ನು ನಿರ್ಮಿಸುತ್ತಾರೆ. ಹೀಗೆ ರೇವುಗಾವುಂಡ ತನ್ನ ಧರ್ಮ ಕಾರ್ಯಗಳಿಂದ ಖ್ಯಾತನಾಗಿದ್ದನು. ಇವನು ಮಾಡಿಸಿದ ದೇವಾಲಯಗಳಿಗೆ ಹಿಮ್ಮಡಿ ದೇವರ ಭೂಮಿ ಧಾನಬಿಡುತ್ತಾನೆ.

೩.೧೦.೭: ಹಂಪ ಗೌಡ

ಒರುವಾಯಿ[೧೨೮] ಶಾಸನದಲ್ಲಿ ಈತನ ಉಲ್ಲೇಖವಿದೆ. ‘ಒಲವಾಯಿ ಕುಲದೇವರ ಸ್ಥಾನಪತಿ ಭೀಮರಾಶಿ ಸಂತಿತರು ಪೂಸಕುತ್ತುಕನೂರಲು ಬ್ರಹ್ಮೇಶ್ವರ ನೀಲಕಂಠ ದೇವರನ್ನು ಪ್ರತಿಷ್ಠೆ ಮಾಡಿ ಎಂಟು ಹಿಟ್ಟುಗಳ ಸಮ್ಮುಖದಲ್ಲಿ ದಾನಬಿಡುತ್ತಾನೆ’

೩.೧೦.೮: ಬೀರಗಾವುಂಡ

ಇವನ ಉಲ್ಲೇಖ ಉತ್ತಂಗಿ ಶಾಸನದಲ್ಲಿದೆ. ಉತ್ತಂಗಿಯ ಗಾವುಂಡರ ವರ್ಣನೆಯ ಜೊತೆಗೆ ಬೀರಗಾವುಂಡನನ್ನು ವರ್ಣಿಸಲಾಗಿದೆ. ಈತನ ಕುರಿತು

‘ ತೊಂಡರ ಗಂಡ ನದ್ಧತರ ಗಂಡನೋ ಉಂಟರಗಂಡನುಕ್ಕಿದು
ದ್ದಂಟರ ಗಂಡನೀ ಬೇಡರಗಣ್ಡನೆಡೆ ಪಡೇ ಮಾತೋ ಮೀಉೆಮಾ
ರ್ಕ್ಕೊಂಡರ ಗಂಡಂನೇಳಿಸುವವಂ ವೀರಗಣ್ಡನೇನುತ್ತ ಬೀರಗಾ
ವುಂಡನನಕ್ಕಳೆರಿ ಪೊಗಳುವುದೀ ಭುವನಂ ಪ್ರಜೆ ಮೆಚ್ಚಗಂಡನಂಮೆ’

ಪ್ರಜೆ ಮೆಚ್ಚಿದ ಗಂಡನಾದ ಇವನು ಬೇಡರ ಗಂಡನಾಗಿದ್ದನೆಂದು ಶಾಸನ ಕರೆದಿದೆ. ಬೇಡರು ಈ ಕಾಲಕ್ಕಾಗಲೇ ಈ ಜಿಲ್ಲೆಯಲ್ಲಿ ಒಗ್ಗಟ್ಟಾಗಿ ತಮ್ಮ ಪ್ರಭುತ್ವ ಸಾಧಿಸಲು ಪ್ರಯತ್ನಿಸುತ್ತಿದ್ದ ಇವರನ್ನು ವೀರಗಾವುಂಡ ಎದುರಿಸುತ್ತಿದ್ದುದು ಸ್ಪಷ್ಟ..[೧೨೯]

೩.೧೦.೯: ಪೊನ್ನೆಯಗವುಂಡ, ಬೀರಯ್ಯ ಗವುಂಡ, ಮಣಿಯಮ ಗವುಂಡ

ಇವನ ಉಲ್ಲೇಖ ಕಲ್ಲುಕುಟಿಗನ ಹಾಳು [೧೩೦] ಶಾಸನದಲ್ಲಿದೆ. ಪೊನ್ನೆಯ ಗವುಂಡನು ಬಾವಿಯನ್ನು ನಿರ್ಮಿಸುತ್ತಾನೆ. ಮಹಾಮಂಡಳೇಶ್ವರ ದೇವಪರಸ ಆಳುತ್ತಿರುವಾಗ ಈ ಬಾವಿಗೆ ಬೀರಯ್ಯ ಗವುಂಡನು ಮಣಿಯಮ ಗವುಂಡನು ಇಬ್ಬರೂ ಸೇರಿ ೫ ಮತ್ತರ ಕರಿಯ ಭೂಮಿಯನ್ನು ಬಿಡುತ್ತಾರೆ.

೩.೧೦.೧೦: ಮಲ್ಲಿಕ ಗವುಂಡ

ಕುರುವಳ್ಳಿ[೧೩೧] ಶಾಸನದಲ್ಲಿ ಈತನ ಉಲ್ಲೇಖವಿದೆ. ಈತನು ‘ವರಿಸ ವರಿಸಕ್ಕೆರಡು ವಟ್ಟದ ಜವಳಿ’ ನಡೆಸುತ್ತಿದ್ದುದನ್ನು ಶಾಸನ ತಿಳಿಸುತ್ತದೆ. ಇದನ್ನು ಆಳೆದವನಿಗೆ ಪಾಪ ಬಿಡುತ್ತದೆ ಎಂದು ಶಾಸನ ವಿವರಿಸುತ್ತದೆ.

೩.೧೦.೧೧: ಕನ್ನಗೌಡ

ವಿಜಯಪಾಂಡ್ಯನ ಪಾದಪದ್ಮೋಪ ಜೀವಿಯಾಗಿ ವಿಜಯ ಹೆಂಮಾಡಿ ದಣ್ನಾಯಕ ನೊಳಂಬವಾಡಿ ೩೨೦೦೦ ಸರ್ವಾಧಿಕಾರ ಗೆಯ್ಯುತ್ತಿರುವಾಗ ಮಂಡೇಯನ ಹಳ್ಳಿಯ ಮಂಡೇಶ್ವರ ದೇವರಿಗೆ ಕೊತ್ತಗೌಡನ ಮಗ ಕಂನ್ನಗೌಡನು ತನ್ನ ಬಂಧುವರ್ಗ ಸಹಿತ ಬಾಗಳಿಯ ಆಯ್ವದಿಂಬರ ಕೈಯಲ್ಲಿ ಮಿಂಡಹಳ್ಳಿಯ ಕ್ರಯವಾಗಿ ಧಾರೆಯಂಕೊಂಡು ಮಿಂಡೇಶ್ವರ ದೇವರಿಗೆ ಸರ್ವಬಾಧಾ ಪರಿಹಾರವಾಗಿ ಭೂಮಿ ಬಿಡುತ್ತಾನೆ’ [೧೩೨]

ಗೌಂಡ ಅಥವಾ ಗೌಡ ಗ್ರಾಮ ಸಭೆಯ ಮುಖಂಡನಾಗಿದ್ದನು. ಮೊದಲನೇಯ ವಿರೂಪಾಕ್ಷನ ಒಂದು ಶಾಸನವು ಗ್ರಾಮದ ಅಧಿಕಾರಿಗಳಲ್ಲಿ ಆಶ್ರಯ ಪಡೆದ 'ಕಳ್ಳವೇಲೈಕ್ಕಾರರು' ಎಂಬ ಅಧಿಕಾರಿ ಇದ್ದ ಬಗ್ಗೆ ತಿಳಿಸುತ್ತದೆ. ಗ್ರಾಮದ ಭೂಮಿ ಮತ್ತು ಜನರ ರಕ್ಷಣೆಗೆ ಅವರು ಪ್ರತೀ ವರ್ಷವೂ ಹದಿನೆಂಟು ಜಾತಿ ಸಂಸಾರದಿಂದ, ಮದುವೆ ಸಮಾರಂಭದಲ್ಲಿ ಒಂದು ಉಂಗುರವನ್ನು ಪಡೆಯಬಹುದು ಎಂಬ ವಿಷಯವನ್ನು ತಿಳಿಸುತ್ತದೆ.[೧೩೩] ಕಳ್ಳವೆಲೈಕಾರರು ಸಮಾರಂಭಗಳಲ್ಲಿ ಜನರಿಗೆ ರಕ್ಷಣೆ ನೀಡುತ್ತಿದ್ದರೆಂದು ಈ ಹಿಂದೆ ವಿವರಿಸಿದೆ.

ಒಂದು ರಾಜ್ಯದ ಮೇಲೆ ಆಗಾಗ ಬೇರೆ ರಾಜರು ಬಂದು ದಾಳಿ ಮಾಡಿದಾಗ ಆ ರಾಜ್ಯದ ಅನೇಕ ಗ್ರಾಮ, ನಗರಗಳು ಬಹುವಾಗಿ ನಷ್ಟವನ್ನನ್ನುಭವಿಸುತ್ತಿದ್ದವು. ಆ ಗ್ರಾಮ ಅಧಿಕಾರಿಗಳು ಬಂದು, ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಈ ಕೆಲಸವನ್ನು ಅನೇಕ ನಾಡುಗಳನ್ನಾಳುತ್ತಿದ್ದ ಅಕ್ಕಾದೇವಿ ಎನ್ನುವವಳು ಕೈಗೊಂಡಳೆಂದು ಒಂದು ಶಾಸನವು ನಿರೂಪಿಸುತ್ತದೆ.[೧೩೪] ಸೂಂಡಿಯ ಎಂಟು ಜನ ವರ್ತಕರಿಗೂ, ಎಂಬತ್ತು ಒಕ್ಕಲಿಗೂ ಅವರವರಿಗೆ ನ್ಯಾಯವಾಗಿ ಸಲ್ಲಬೇಕಾದ ಅಂಗಡಿ, ಹೊಲ, ಮನೆಗಳನ್ನು ತನ್ನ ಸಮಸ್ತ ಪ್ರಧಾನರ ಮುಂದೆ ಬಿಟ್ಟು ಕೊಡುತ್ತಾಳೆ. ಅದಕ್ಕೆ ಕಾರಣ "ಚೋಳಕರ ಪ್ರಘಟ್ಟದಿಂ ಕೆಟ್ಟ ಸಮ್ಮಂದಿ (ಸಂಬಂಧಿ)"ಯಿಂದ ಎಂದು ಶಾಸನವು ಹೇಳುತ್ತದೆ. ಚೋಳರ ದಾಳಿಯಿಂದ ಮೇಲೆ ಹೇಳಿದ ಜನರು ಬಹುನಷ್ಟಕ್ಕೆ ಒಳಗಾಗಿದ್ದರೆಂದು ಕಾಣುತ್ತದೆ. ಹೀಗೆ ಅವರ ಆಸ್ತಿಯನ್ನು ಅವರಿಗೆ ಹಿಂದಕ್ಕೆಕೊಡಿಸಿಕೊಟ್ಟು ಅಕ್ಕಾದೇವಿಯು ಒಂದು ಆಜ್ಞೆಯನ್ನು ಹೊರಡಿಸುತ್ತಾಳೆ. "ಇಡೀ ಕಿಸುಕಾಡು ಎಪ್ಪತ್ತಕ್ಕೆ ಅನೇಕ ಸುಂಕಗಳನ್ನು ಬಿಟ್ಟುಕೊಡಬೇಕು. ಪಟ್ಟಣದಲ್ಲಿ ಏನಾದರೂ ಅನ್ಯಾಯ ನಡೆದರೆ ಅದಕ್ಕೆ ತಳವಾರನು ಹೊಣೆ, ಮತ್ತು ಅವನು ಆ ನಷ್ಟವನ್ನು ತುಂಬಿಕೊಡಬೇಕು. ತಂದೆಯ ದೋಷ ಮಗನನ್ನೂ, ಮಗನ ದೋಷ ತಂದೆಯನ್ನೂ ಹೊಂದುವುದಿಲ್ಲ. ಕಳ್ಳ, ಬಂಧಿಕಾರಂ,'ಅಂಚಲ್‌ವಿಡಿವಂ *(ಟಿಪ್ಪಣಿನೋಡಿ)* ಹಗೆ, ಕೆಟ್ಟಮನುಷ್ಯ– ಇವರನ್ನು ಅಂಗಡಿಯ ತಡಿಕೆಯ ಕೆಳಗೆ, ಎಂದರೆ ಅವರ ಅಪರಾಧದ ಸ್ಥಳದಲ್ಲಿಯೇ ಇರಿದರೆ ದಂಡವಾಗಲಿ, ದೋಷವಾಗಲಿ ಇಲ್ಲ. ಇವರನ್ನು ಬಿಟ್ಟು ಬೇರೆಯವರನ್ನು ಇರಿದರೆ ಅದಕ್ಕೆ ತಕ್ಕ ದಂಡವನ್ನು ತರಬೇಕು.[೧೩೫] ರಾಜಧಾನಿಗಳಾಗಿದ್ದ ಕೆಲವು ಪಟ್ಟಣಗಳನ್ನು 'ಗಾವುಂಡು'ಗಳು ರಕ್ಷಿಸುತ್ತಿದ್ದರೆಂದು ಒಂದೆರಡು ಶಾಸನಗಳು ತಿಳಿಸುತ್ತವೆ. ಉದಾಹರಣೆಗೆ ಗೋಂಕದೇವನ ರಾಜಧಾನಿಯಾಗಿದ್ದ ತೇರದಾಳನ್ನೂ ಅಲ್ಲಿಯ ಧರ್ಮಗಳನ್ನು, ಅಲ್ಲಿಯ ಹನ್ನೆರಡು ಗಾವುಂಡುಗಳು ರಕ್ಷಿಸುತ್ತಿದ್ದರು.[೧೩೬] ಗೋಂಕದೇವನು ಗೊಂಕಜಿನಾಲಯವನ್ನು ಕಟ್ಟಿಸಿ ಅದಕ್ಕೆ ದತ್ತಿಗಳನ್ನು ಬಿಡುವಾಗ ಆ ಹನ್ನೆರಡು ಗಾವುಂಡುಗಳನ್ನೂ, ಆ ಊರಿನ 'ನಗರ'ಗಳನ್ನೂ ಬರಮಾಡಿಕೊಂಡನೆಂದು ಆ ಶಾಸನವು ಹೇಳುತ್ತದೆ. ಹಬ್ಬೆಯ ನಾಯಕ ಎನ್ನುವವನು ಶಿರಸಂಗಿಯಲ್ಲಿ ಕಟ್ಟಿಸಿದ ದೇವಾಲಯಕ್ಕೆ ದತ್ತಿಯನ್ನು ಬಿಡುವಾಗ 'ಮೂಲಿಗ ಮುಖ್ಯರರುವರ್ ಗಾವುಂಡುಗಳ ಪಾದಪೂಜೆ ಕೊಟ್ಟು' ಅವರಿಂದ ಕೊಂಡುಕೊಂಡ ಭೂಮಿಯನ್ನು ದಾನವಾಗಿ ಕೊಡುತ್ತಾನೆ.[೧೩೭] ಬಹುಶ: ತೇರದಾಳ್ ಮತ್ತು ಶಿರಸಂಗಿಗಳು ಹಿಂದೊಮ್ಮೆ ಹಳ್ಳಿಗಳಾಗಿದ್ದಾಗ ಅಲ್ಲಿಯ ಗಾವುಂಡಗಳಿಗೆ ಸಲ್ಲುತ್ತಿದ್ದ ಗೌರವವು ಅವು ಪಟ್ಟಣಗಳಾಗಿ ವರ್ಧಿಸಿದ ಮೇಲೆಯೂ ಸಲ್ಲುತ್ತಿದ್ದಿರಬಹುದು.

ಕೆಲವು ಶಾಸನಗಳು ಗಾವುಂಡರು ಜನರ ರಕ್ಷಣೆಯ ಮಾಡುವುದರ ಜೊತೆಗೆ ಊರಿನ ದೇವಾಲಯಗಳಿಗೆ ದಾನದತ್ತಿ ಬಿಟ್ಟ ಬಗ್ಗೆ, ದೇವಾಲಯ ಕೆರೆಕಟ್ಟೆಗಳನ್ನು ಕಟ್ಟಿಸಿದ ಬಗ್ಗೆ ವಿವರಿಸುತ್ತವೆ.

---

೧) ಟಿಪ್ಪಣಿ : ಬಂದಿಕಾರಂ ಮಂಚಲ್ವಿಡಿವಂ' ಎಂದಿದೆ. 'ಬಂದಿಕಾರಂಮ್ = ಅಂಚಲ್ವಿಡಿವಂ' ಎಂದು ಬಿಡಿಕೊಳ್ಳಬೇಕೆಂದು ತೋರುತ್ತದೆ. 'ಅಂಚಲ್' ಎಂದರೆ ತಮಿಳು ಮತ್ತು ಮಲೆಯಾಳಗಳಲ್ಲಿ, 'ಪ್ರಯಾಣದ ಸಮಯದಲ್ಲಿ ತಂಗುವ ನಿಲ್ದಾಣ' 'relay 'ಎಂದು ಅರ್ಥ. ಕನ್ನಡದ 'ಅಂಚೆ' (= Post) ಇದರ ಜ್ಞಾತಿಪದ. ತುಳುವಿನಲ್ಲಿ 'ಅಂಚಲ್' ಎಂದರೆ 'the post' ಎಂದರ್ಥ. 'ಅಂಚಲ್‌ವಿಡಿವವನು' ಎಂದರೆ ರಾಜಾಜ್ಞೆಗಳನ್ನು ಹೊತ್ತ ಟಪ್ಪಾಲುಗಳನ್ನು ಅಪಹರಿಸುವವನು ಎಂದು ಅರ್ಥ ಮಾಡಬಹುದೆ? ರಾಜನ ಆಜ್ಞೆಗಳನ್ನು ಹೊತ್ತು ಒಯ್ಯುತ್ತಿದ್ದವರನ್ನು ಕಾಳಿದಾಸನು 'ಶಾಸನಹಾರಿ'ಗಳೆಂದು ("ಶಾಸನಹಾರಿಣ:) ಕರೆಯುತ್ತಾನೆ. (**Inda in Kalidasa, p-** ೧೩೫)

ಕನ್ನಂಬಾಡಿಯಲ್ಲಿ (ಪಾಂಡವಪುರ ೪೪) ಕನ್ನಡ ಶಾಸನವೊಂದರಲ್ಲಿ ಮಾದಿಯಣ್ಣ ಮತ್ತು ಲಕ್ಕಣರು ಕಟ್ಟಿಸಿದ ಎರಡು ದೇಗುಲಗಳಿಗೆ ಗಾವುಂಡಗಳಿಬ್ಬರು ನೀಡಿದ ಭೂಮಿದಾನದ ಬಗ್ಗೆ ಇದೆ. ದೇವಾಲಯ ಕಟ್ಟಿಸಿದ "ಈರ್ವರು ವಡುಗ ವೇಳೆಕಾರಿನಾದ ಮುತಹೆಜೆಯರಾಯನ ಮಕ್ಕಳು " ವೇಳೇಕಾರಿ ಎಂಬುದು ವೇಳೆವಾಳಿಗೆ ಸಮಾನವಾದ ಪದ. ಸ್ವಾಮಿಗಾಗಿ ತಮ್ಮ ಜೀವವನ್ನೇ ಮುಡಿಪಾಗಿಡುವ ಯೋಧರು ಇವರು. ವಡುಗವೇಳೆಕಾರಿ ಎಂದರೆ ರಾಜ್ಯದ ಉತ್ತರ ಭಾಗದಲ್ಲಿದ್ದ ವೇಳೆಕಾರಿ ಎಂದು ಅರ್ಥೈಸಬಹುದು. [೧೩೮] ಇದೇ ರೀತಿ ಕ್ರಿಶ ೧೧೩೮ ರ ಹೊನ್ನಾವರದ ಶಾಸನ, ಬಮ್ಮಗಾವುಂಡನು ದೇವಾಲಯ ಕಟ್ಟಿಸಿದ ಬಗ್ಗೆ ವಿವರಗಳಿವೆ.

೧೧೬೭- ಕ್ರಿಶ ಮಾರ್ಚ್ ೨೭ ಕ್ಕೆ ಸರಿಹೊಂದುವ ಹುಣಸೂರು ತಾಲೂಕಿನ ತೊಂಡಾಳು ಗ್ರಾಮದ ಶಾಸನದಲ್ಲಿ " ತೊಂಡೆಯ ಹಾಳಿ ತೆನೆದಂಕರ ಬೋಗೆಯ ಸಾವಂತನ ಮಗ ಹರಿದ ಗಾವುಂಡನು ಕಾಳೆಯ ಸಾವಂತ ಗವುಂಡ ನೋಡವುಟ್ಟಿದ ತಮುತ್ತಯ್ವರ ಮಕ್ಕಳು ಕಟ್ಟಿಸಿದ ಕೆರೆ" [೧೩೯] ಬಗ್ಗೆ ವಿವರಿಸುತ್ತದೆ.

ಯಳಂದೂರು (೪- ೨೯) ತಾಲೂಕಿನ ಗಣಿಗನೂರು ಶಾಸನ (೧೫೬೪ ಎ.ಡಿ ಅಕ್ಟೋಬರ್ ೧೫) ಬಹಳ ಕುತೂಹಲಕಾಲಿಯಾಗಿದೆ. ಇದು ವಿಜಯನಗರದ ಸದಾಶಿವರಾಯನ ಕಾಲದ ಶಾಸನವಾಗಿದ್ದು " ಸೀಮೆಯ ದೀವಾಣದೊಂಡೆಯರು ಚಾಮರಸ ಹೊಡೆಯಂಗೆ ಕೊಟ್ಟ ಶಿಲಾಶಾಸನದ ವಿವರ ಸಂಜರ ಕಾನನವರು ನಿಂದು ತಂದೆ ದೇವಪ್ಪ ಗೌಡರನು ಅನ್ಯಾಯದಲ್ಲಿ ಕೊಂದದಕ್ಕೆ ಸಲವಾಗಿ ನಾಉ ನಂಮ ರಾಯ ಪೊಡೇರಿಗೆ ಬಂನಹಮಾಡಿ ಕಳುಹಿ ನಂಮ ಜಗದೇಕರಾಯ ವೊಡೇರ ನಾಯಕತನಕೆ ಸಲ್ಲುವ ಹದಿನಾಡ ಸೀಮೆವೊ ---- ಗಣೆಗನೂರು ಸ್ಥಳವನ್ನು ನಿಮಗೆ ರಕ್ತಕೊಡುಗೆಯಾಗಿ ಕೊಟ್ಟೆವಾಗಿ. [೧೪೦]

ಇನ್ನು ಕೆಲವು ಶಾಸನಗಳಂತು ಊರ ಗಾವುಂಡನ ಕರ್ತವ್ಯಗಳನ್ನು ವಿವರಿಸುತ್ತದೆ.

ಸಿಂಗನಲ್ಲೂರು (೫೬) ನಿಯಮಗಳನ್ನು ಸಾರಿದ ಹದಿನೆಂಟು ಜಾತಿಗೂ ಒಕ್ಕಲು ಹೋಣೆಯಲ್ಲಿ ಗುರುತುಗಳನೀ ಊರಲು ಒಕ್ಕಲು ಓಡಿಹೋದಡೆ ಆ ಊರು ಆಗಬಡನೂ ಆ ಒಕ್ಕಲನಾಳ್ವನೂ ತೆರುವರು ಒಕ್ಕಲೂ ಊರುಗಳೂ ಓಡಿದೊಡೆ ಗಲುಡಗಳೂ ಯಿದಿರು ಹೊಣೆಯ ಕೊಡಸಲ್ಲ --- - - -- ಊರುಗಳ ಓಡಿಹೋದಡೆ ಆ ನಷ್ಟವನ್ನು ಆ ಸ್ಥಳದ ಗಲುಡಗಳೂ ಕಟ್ಟಿಕೊಂಡು ತೆರುವರು. [೧೪೧]

೨೦೮ (೪ ಚಾ.ನ ೬೦) ಚನ್ನಿಗರಾಯ ದೇವಾಲಯಕ್ಕೆ ಪೂರ್ವ ಕಡೆನೆಟ್ಟಕಲ್ಲವೂ ವೈದಗಿರಿಯ ಕೋಣಪ್ಪನಾಯಕ ಕೇಲವ ದೇವರಿಗೆ ಭೂಮಿ ದತ್ತಿ ಕೊಟ್ಟಿದ್ದು ದೇವರ ಪೂಜೆಯೂರು ಮಾಡಬೇಕೆಂದಿದೆ. ಅದಕ್ಕಿಂತ ಮುಖ್ಯವಾಗಿ " ಯೀಭವ್ಮಣ್ಣವನು ಮುಂದೆ ಬಂದ ಪಾರುಪತ್ಯಗಾರರು ಗಲುಚ ಸೇನಭೋವರೂ ನಡೆಸಿದರೆ ಅವರಿಗೆ ಅರ್ಥ ----- ಉಂಟು ----- ಅಂದರೆ ಗೌಡಸೇನಾ ಭೋವರು ಇದನ್ನು ರಕ್ಷಿಸಬೇಕೆಂದು ತಿಳಿಸಿದೆ. [೧೪೨]

ಕ್ರಿಶ ೧೪೦೮ ಕ್ಕೆ ಸೇರುವ ಒಂದನೇ ದೇವರಾಯನ ಸಿಂಗನಲ್ಲೂರು ಶಾಸನವು (ಕೊಳ್ಳೆಗಾಲ ೫೬) ಹಳಿಹಿರಿಯೂರು ಗ್ರಾಮದಲ್ಲಿ ನೆಲೆಸಬೇಕಾಗಿದ್ದ ಒಕ್ಕಲುಗಳಿಗೆ ವಿದಿಸಲಾದ ಕಟ್ಟುಕಟ್ಟಲೆಗಳನ್ನು ತಿಳಿಸಿರುವುದು ಕುತೂಹಲಕರವಾಗಿದೆ. ಒಕ್ಕಲುಗಳು ತಾವು ಕೊಡಬೇಕಾದ ತೆರಿಗೆ, ಸುಂಕ ಇತ್ಯಾದಿಗಳನ್ನು ತಪ್ಪದೇ ಕೊಡಲು ಒಪ್ಪಿದರೆನ್ನಲಾಗಿದೆ. ನೆಡೆವಳಿಕಾರಿ ಪ್ರಭುಗಳು, ದಂಡ, ತಪ್ಪು, ತಬುದಿ, ಮುಂತಾದವುಗಳನ್ನು ಸಂಗ್ರಹಿಸುವಂತಿಲ್ಲವೆಂದು ಶಾಸನಗಳಲ್ಲಿ ತಿಳಿಸಿದೆ. ಒಂದು ವೇಳೆ ಒಕ್ಕಲು ಓಡಿಹೋದಲ್ಲಿ, ಊರು, ಗೌಡ ಹಾಗೂ ಒಕ್ಕಲನಾಳ್ವ ವ್ಯಕ್ತಿ ದಂಡ ಇತ್ಯಾದಿಗಳನ್ನು ತೆರಬೇಕೆಂದು ಹೇಳಿದೆ. ಒಂದು ವೇಳೆ ಒಕ್ಕಲುಗಳೊಂದಿಗೆ ಊರು ಸಹ ತಪ್ಪಿಸಿಕೊಂಡಲ್ಲಿ ಗೌಡುಗಳನ್ನು ಹೊಣೆಗಾರರೆಂದು ಭಾವಿಸುವಂತಿಲ್ಲ ಎಂದುಹೇಳಿದೆ. [೧೪೩]

೧೬೧ (iv ಚಾ.ನ ೩೮) ಹೊಂಗನೂರು (೧೫೪೪ ನವೆಂಬರ್೨೯.ವಿಜಯನಗರದ ರಾಮರಾಜ ವಿಠಲರಾಜಯ್ಯನ ಕಾಲ) ಮಾರೀಚಾವಡಿಗೆ ಪೂರ್ವ ಕಡೆ ನಿಂತಿರುವ ಕಲ್ಲಿನಲ್ಲಿ ಹೊಂಗನೂರು ಗ್ರಾಮದ ಭೂಮಿಯನ್ನು ವ್ಯವಸಾಯ ಮಾಡಿಸಲು ನಿಯಮಗಳನ್ನೊಳಗೊಂಡ ಶಾಸನವಾಗಿದೆ. ಚಾಮರಸಗೌಡನೆಂಬುವವನು ಶಾಸನ ಇದಾಗಿದ್ದು, ಗ್ರಾಮದ ಗದ್ದೆಯನ್ನು ನಿಗಧಿಪಡಿಸಿದ ಪ್ರಜೆಗಳ ಹೊರತಾಗಿ ಬೇರೆ ಯಾರೂ ಸಾಗುವಳಿ ಮಾಡಬಾರದು ಹಾಗೆ ಮಾಡಿದರೆ ಅದನ್ನು ಚಾವಡಿಯ ಕರಣಿಕರು, ಗ್ರಾಮದ ಗೌಡ, ಸೇನಾಭೋವ ಬರಿಸಬೇಕು. ಇಲ್ಲವಾದರೆ " ವಾರಣಾಸಿಯಲ್ಲಿ ಕಪಿಲ್ ಕೊಂದ ಪಾಪಕ್ಕೆ ------ " ಎಂದು ತಿಳಿಸಿದೆ. [೧೪] ಕ್ರಿಶ ೧೨೧೩-೧೪ ರ ಕುದುರೆಗುಂಡಿ ಶಾಸನದಲ್ಲಿ (ಹಾ ೮೧) ಭಂಡಿ ಮಿಟ್ಟೆಯ ಘಟ್ಟದ ಕಣಿವೆಯಲ್ಲಿ ಮಸಣೋಜನೆಂಬಾತನು ಕಳ್ಳರ ವಿರುದ್ಧ ಹೋರಾಡಿ ಮರಣಹೊಂದಿದ ವಿಷಯವನ್ನು ತಿಳಿಸುತ್ತದೆ. ಶಾಸನ ಸವೆದುದರಿಂದ ವಿವರಗಳು ಸ್ಪಷ್ಟವಾಗಿಲ್ಲ. ಆದರೂ ಕೆಲವಾರು ಬ್ರಾಹ್ಮಣರು ಸ್ಥಳದ ಗೌಡನನ್ನು ಭೇಟಿ ಮಾಡಿ ಕಳ್ಳರ ಹಾವಳಿಯಿಂದ ತಮ್ಮನ್ನು ಪಾರು ಮಾಡಬೇಕೆಂದು ಪ್ರಾಯಶ: ಕೋರಿದರೆಂದು, ಆಗ ಗೌಡರು ಮಸಣನಿಗೆ ಹಾಗೆ ಮಾಡಲು ಅಪ್ಪಣೆ ಮಾಡಿದ್ದಿರಬೇಕೆಂದು ತೋರುತ್ತದೆ. " ಕುದುರೆಗುಂಡಿಯಲೂ ವಿಪ್ರರು ಪೋಗಿ ನಿರತ- - -- - ಗಲಿಗೌಡುಗಳಂ ರೋಸದಿ ಮಷಣಂಗೆ ಬೆಸನ ಪೇಳಿ ಕಯಿಕೊಂಡಾಗಳ್ ಕೊಂಡಾಳ್ದರ ಬೆಸದಿಂ ಪೋಗಿ ಭಂಡಿಮಿಟ್ಟೆಯ ಘಟ್ಟದಲಿ ಕಳ್ಳ - - -- ಅರೆಯಟ್ಟಿಬಪ್ಪ ಕಳ್ಳರ ಬರಸಿಡಿಲೆರಿ ಪಂತಿರೆರಿಗಿ ಕುರೆದರಿ ದರಿದಂ ನೆರೆಗಂಡ ಮೆರೆದ ಮಸಣ- -- - ತು ಕದನದೊಳ್ ಕಾಯ್ದು ರಾಶಿವೆಗ್ಗಳಿಸಿ ಅರವರಿಸದಾಳುತನದೊಳ್ ಪರಕಲಿಸಿದ ನೊಂದಿಯೆಟ್ಟಣಂಗಳೊಳ್"[೧೫] ಎಂದು ಹೇಳಿದೆ. ಇದರಿಂದ ಗೌಡನು ಕಳ್ಳರಿಂದ ಗ್ರಾಮವನ್ನು ರಕ್ಷಣೆ ಮಾಡುವ ಕೆಲಸವನ್ನು ಮಾಡುತ್ತಿದ್ದನೆಂದು ಸ್ಪಷ್ಟವಾಗುತ್ತದೆ. ಕೆಲವು ಗಾವುಂಡಗಳು ಊರನ್ನು ರಕ್ಷಿಸುವುದು ಮಾತ್ರವಲ್ಲ, ಯುದ್ಧದಲ್ಲೂ ಭಾಗವಹಿಸಿದ ಬಗ್ಗೆ ಬೇಲೂರಿನ ೫೨೩ ನೇ ಶಾಸನವು ತಿಳಿಸುತ್ತದೆ.[೧೬]

ಹೀಗೆ ಗಾವುಂಡರು ಗ್ರಾಮಗಳ ಪ್ರಭುಗಳಾಗಿ ಕಾರ್ಯನಿರ್ವಹಿಸುತ್ತಾ ಅದರ ಸರ್ವಾಂಗೀಣ ಅಭಿವೃದ್ಧಿಗೆ ಕಾರಣ ರಾಗಿದ್ದಾರೆ. ತನ್ನ ಅರಸರ ಆಜ್ಞೆಗಳನ್ನು ಚಾಚು ತಪ್ಪದೇ ಪರಿಪಾಲಿಸುತ್ತಾ ತಮ್ಮ ಗ್ರಾಮದ ಅಭಿವೃದ್ಧಿಗೆ, ಪ್ರತಿಷ್ಠೆಗೆ ಹೋರಾಡಿ ದವರಾಗಿರುತ್ತಾರೆ.

ಅಡಿಟಿಪ್ಪಣಿ

೧) ನಾರಾಯಣ ಸಂಗಮ - ವಿಜಯನಗರದ ಕೃಷ್ಣದೇವರಾಯನ ಕಾಲ (ಅನು) (ಕರ್ನಾಟಕ ಪರಂಪರೆ ಸಂಪುಟ -೨ ರಲ್ಲಿನ ಲೇಖನ, ಮೂಲ ರಂಗಸ್ವಾಮಿ. ಸಿ.ವಿ) ಪು- ೩೯

೨) ಸೂರ್ಯನಾಥ . ಯು. ಕಾಮತ್ - ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು- ೧೬೮

೩) A.R.S.E - 1916, p- 143

೪) ದೀಕ್ಷಿತ್ ಜಿ.ಎಸ್- ಶ್ರೀಕೃಷ್ಣದೇವರಾಯನ ಜೀವನ ಸಾಧನೆಗಳು. ಮೈಸೂರು- ೧೯೯೭, ಪು -೮೮ (orginal- South India inscription volume 9, pt II No 573)

೫) ವೆಂಕಟರತ್ನಂ ಎ.ವಿ - ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ, ಪ್ರ. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ- ೧೯೭೪, ಪು-೧೩

೬) Rajayyan. K. – Administration and society in the Carnatic , Venkateshwara university, Thirupathi- 1966,. P – 93, (Orginal- correspondence relating to the rivision of village revenue establishments of Madras presidency, 14 december 1866, part 1, p- 6-8

೭) Ibid - p- 94 (orginal - selection from the record of fort St George, 13 May 1815, p- 18

೮) ೯), ೧೦), and ೧೧) idid- p- 66

೧೨) Ibid - p- 64

೧೩) Ibid - p- 66

೧೪) Ibid - p- 37

೧೫) Madras council 28 November 1800, revenue consultation volume 16, p-3198-3201

೧೬) Mahalingam T.V- Administration and social life under Vijayanagara, publishers Madras University,1940, p-133

೧೭) Ibid- p- 137

೧೮) Eliyat – History of India, Volume -4, publishers Kithab Mahal , p- 112

೧೯) ನಾರಾಯಣ ಸಂಗಮ –ವಿ.ಕೃ.ಕಾ, ಪು– ೪೦

೨೦) ದೀಕ್ಷೀತ್ ಜಿ.ಎಸ್– ಶ್ರೀ.ಜೀ.ಸಾ, ಪು– ೧೧೫.

೨೧) Mahalingam .T.V- A.S.I.U.V, p- 130-131

೨೨) Rajayyan.K- A.S.I.K, p- 67

೨೩) Mahalingam .T.V- A.S.I.U.V, p- 137

೨೪) Eliyat –H.O.I, - p- 111

೨೫) A. R.S.E - 1916- III- M.I- 67, 388-1915

೨೬) ದೀಕ್ಷಿತ್.ಜಿ.ಎಸ್– ಸಂಗಮ ಕಾಲದ ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಪು– ೧೨೦

೨೭) ನಾರಾಯಣ ಸಂಗಮ– ವಿ.ಕೃ.ಕಾ, ಪು– ೪೦

೨೮) ಕೃಷ್ಣರಾವ್ ಎಂ.ವಿ ಮತ್ತು ಕೇಶವಭಟ್.ಎಂ – ಕರ್ನಾಟಕ ಇತಿಹಾಸ ದರ್ಶನ, ಪ್ರ. ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು– ೧೯೭೦ ಪು– ೮೯೫

೨೯) Rajayyan.K- A.S.I.K, p- 94

೩೦) Ibid- p- 94 (Orginal- Selection from the record of Fort St.George, 19 August 1815, No-9)

೩೧) Ibid- p- 94 (Orginal- Selection from the record of Fort St.George, 29, April 1815, No- 2)

೩೨) Ibid- p- 94

೩೩) ಚಿದಾನಂದ ಮೂರ್ತಿ ಎಂ– ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ. ೪೫೦–೧೧೫೦, ಪ್ರ. ಸಪ್ನ ಬುಕ್ ಹೌಸ್, ಬೆಂಗಳೂರು ೧೯೯೬. (Orginal-Kane.P.V –History of Dharmas -3, p-363) ಪು– ೩೮೫

೩೪) ಅದೇ–ಪು– ೩೮೫ (ಮೂಲ–S. I. I – IX 1, 143, A.D- 1079, E.C VII S.K 185, A.D- 1158)

೩೫) ಅದೇ– ಪು– ೩೮೫, (ಮೂಲ– E. C, III, Mandya, 79 C, A.D- 1275)

೩೬) ಅದೇ– ಪು– ೩೮೫ (ಮೂಲ– Journal of the Bombay branch of the royal ashiyatic society X, p-260, E.C III, Mandya 79, E.C.IV, Yalandhoor- 2)

೩೭) ಅದೇ– ಪೂರ್ವೋಕ್ತ, ಪು– ೩೮೫ (ಮೂಲ– ಪಂಪಭಾರತ, ೧–೭೦; ಶಾಂತಿಪುರಾಣ, ೪.೩೦,ವ. ಧರ್ಮಾಮೃತ, ೧ ಪು– ೪೨೯; ಪಂಪರಾಮಾಯಣ, ೯.೧೧೧; ಬಸವಣ್ಣನವರ ವಚನಗಳು (೧೯೫೪ ಪು–.೬೦, ೮೪,೧೬೯; ಸಿದ್ಧರಾಮಚರಿತ, ೭.೨೦)

೩೮) ಅದೇ– ಪು– ೩೮೬ (ಮೂಲ– ಪಂಪಭಾರತ, ೮.೨೨; ಬಸವಣ್ಣನವರ ಷಟ್ಸ್ಥಲದ ವಚನಗಳು (೧೯೫೪), ಪುಟ.೧೯೫. ವಿವರಗಳಿಗೆ ನೋಡಿ.

೩೯) ಅದೇ– ಪು– ೩೮೬ (ಮೂಲ– E. K- 3, Mandya 39, C- A.D 1275)

೪೦) ಅದೇ– ಪು– ೩೮೬ (ಮೂಲ– Journal of the Bombay branch of the royal Ashyatic society IX, p- 304) .

೪೧) ಅದೇ– ಪು– ೩೮೬, (ಮೂಲ– S. I. I – IX- I, 143 A.D 1079)

೪೨) ಸೂರ್ಯನಾಥ ಕಾಮತ್, ಕ.ಸಂ.ಇ, ಪು– ೧೬೮

೪೩) ನಾಗೇಗೌಡ ಹೆಚ್.ಎಲ್– (ಅನು) ನಿಕೋಲ್ ದೆ ಕೊಂತಿ ಮತ್ತು ಅಬ್ದುಲ್ ರಜಾಕ್, ಡಾ.ಬಿ.ಎ.ವಿವೇಕ ರೈ. (ಸಂ) ಪ್ರವಾಸಿ ಕಂಡ ವಿಜಯನಗರ ಪುಸ್ತಕದಲ್ಲಿ ಪ್ರಕಟಿತ ಲೇಖನ, ಕನ್ನಡ ವಿಶ್ವವಿದ್ಯಾಲಯ ಹಂಪಿ– ೨೦೦೫, ಪು– ೭

೪೪) ಅದೇ– ಪು– ೧೭

೪೫) ಶಿವಪ್ರಸಾದ್ ಟಿ.ಆರ್.– ಶ್ರೀಕೃಷ್ಣದೇವರಾಯ, ಚಿಂತನಗಂಗಾ ಪ್ರಕಾಶನ ದಾವಣಗೆರೆ – ೨೦೦೯, ಪು– ೯೬–೯೭

೪೬) ನಾರಾಯಣ ಸಂಗಮ, ವಿ.ಕೃ.ಕಾ, ಪು– ೪೨

೪೭) ಅದೇ – ಪು– ೪೩

೪೮) ಸರಸ್ವತಿ.ಎನ್.– ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು– ವಿಜಯನಗರ ಒಂದು ಅಧ್ಯಯನ, ಸಂಪುಟ ೨ ರಲ್ಲಿ, ಪ್ರಕಟಿತ ಲೇಖನ, ಸಂ. ಶಿವಶಂಕರ್.ಎಂ.ಎಲ್, ಚೆನ್ನಬಸಪ್ಪ ಪಾಟೀಲ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭ ಪು–೧

೪೯) ಅದೇ– ಪು– ೬

೫೦) ಅದೇ– ಪು – ೮೨

೫೧) ಶಿವರುದ್ರಪ್ಪ.ಜಿ.ಎಸ್–ವಿಜಯನಗರ ಕಾಲದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜೀವನ, ಕರ್ನಾಟಕದ ಪರಂಪರೆ ಸಂಪುಟ೨ ರಲ್ಲಿ ಪ್ರಕಟಿತ) ಪು– ೧೦೪

೫೨) ಮತ್ತು ೫೩) ಅದೇ– ಪು– ೧೦೪ (S. I. I – XI (II) No p- 573)

೫೪) ನಾಗೇಗೌಡ, ಹೆಚ್.ಎಲ್- ನಿ.ಅ. ಪು-೧೭

೫೫) ಮತ್ತು ೫೬) ಅದೇ- ಪು- ೧೮

೫೭) ಅದೇ- ಪು- ೯೦-೯೧

೫೮) ವರ್ಮ, ಡಿ.ಜಿ - ಹಿಸ್ಟ್ರಿ ಆಫ್ ಬಿಜಾಪುರ್, ಕುಮಾರ್ ಬ್ರದರ್ಸ್, ನ್ಯೂಡೆಲ್ಲಿ ೧೯೭೪- ಪು- ೨೨೪

೫೯) ಮತ್ತು ೬೦) ಅದೇ - ಪುಟ- ೨೨೪

೬೧) ಮತ್ತು ೬೨) ಅದೇ- ಪುಟ- ೨೨೮

೬೩) ಅದೇ- ಪುಟ-೨೩೦ (ಮೂಲ - ಪಾರಾಮಿನ್ ಎಟ್ ಸುಲ್ತಿನ್- ಪುಟ- ೨೧೨, ೨೧೩

೬೪) ಅದೇ - ಪುಟ- ೨೩೦.

೬೫) ಮತ್ತು ೬೬) ಅದೇ- ಪುಟ- ೨೩೧

೬೭) ಅದೇ- ಪುಟ- ೨೩೨

೬೮) ಷೇಕ್ ಆಲಿ.ಬಿ -(ಸಂ)ಕರ್ನಾಟಕ ಚರಿತ್ರೆ, ಸಂಪುಟ ೧ ರಿಂದ ೪, ಪ್ರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, - ೧೯೯೭, ಪು-೧೯೫

೬೯) ಅದೇ - ಪು- ೧೯೬

೭೦) ಅದೇ- ಪು- ೧೯೯

೭೧) ಮುನಿಸ್ವಾಮಿ.ಆರ್. (ಸಂ) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಬಿಜಾಪುರ ಜಿಲ್ಲೆ, ಪು- ೧೬೦

೭೨) ಮತ್ತು ೭೩) ಷೇಕ್ ಆಲಿ ಬಿ- ಕ.ಚ- ಪು - ೧೯೪

೭೪) ೭೫), ೭೬) and ೭೭) Nigam.S.R- S.Y.I.P - p- 30

೭೮) The Indian Police commission report 1902-03, p- 4

೭೯) Gourlay.W.R.- A contribution towards a History of Bengal Police- p- 10

೮೦) Nigam .S.R – S.Y.I.P - p- 31

೮೧) Madan. J.C- I.P- p- 8

೮೨) Nigam .S.R – S.Y.I.P - p- 31

೮೩) Smith.V.W- Early History of India, - Oxford the claradon press London- 1914 , p – 287

೮೪) Nigam .S.R – S.Y.I.P - p- 32

೮೫) and ೮೬) Kyari. J.C – T.I.P - p- 21-22

೮೭) ೮೮), ೮೯) and ೯೦) Nigam .S.R – S.Y.I.P - p- 32

೯೧) ಮತ್ತು ೯೨) ಷೇಕ್ಅಲಿ, ಬಿ- ಕ.ಚ, ಸಂಪುಟ-೧, ಪು - ೨೫೪

೯೩) ಅದೇ- ಪು -೨೫೬

೯೪) ಅದೇ- ಪು- ೩೦೨

೯೫) ಅದೇ- ಪು- ೩೦೬-೩೦೭

೯೬) ನಾಗಯ್ಯ. ಜಿ.ಎಂ- ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯ ಪ್ರಕಾಶನ ಬಳ್ಳಾರಿ, ೨೦೦೨, ಪು- ೧೧

೯೭) A.R S. E - 1916, p- 143, 388 of 1915

೯೮) Dheekshithar.V.R.R – Hindu administration institution – p- 328

೯೯) ಚಿದಾನಂದ ಮೂರ್ತಿ.ಎಂ - ಪು- ೩೯೬ (ಮೂಲ Althekar- the Rastrakootas and their times , p- 189)

೧೦೦) ಅದೇ- ಪು- ೩೯೬

೧೦೧) ಅದೇ- ಪು- ೩೯೬ (ಮೂಲ - B. C. I- I, i 50 A.D 1005)

೧೦೨) ಅದೇ- ಪು- ೩೯೬ (ಮೂಲ - B. C. I - I, ii 138 A.D 1093)

೧೦೩) ಅದೇ- ಪು- ೩೯೬ (ಮೂಲ - B. C.I - I, ii 155 A.D 1004-05)

೧೦೪) ಅದೇ- ಪು- ೩೯೬ (ಮೂಲ - E . C - XI. Dg. 3 A.D 1121)

೧೦೫) ಅದೇ- ಪು- ೩೯೬ (ಮೂಲ - E C - XI. Dg. 155 A.D 1124)

೧೦೬) ಅದೇ- ಪು- ೩೯೬ (ಮೂಲ - B. C.I - I, i 34 A.D 925)

೧೦೭) ಅದೇ- ಪು- ೩೯೬ (ಮೂಲ - C . I - I.KI.I 14 A.D 866)

೧೦೮) ಅದೇ- ಪು- ೩೯೬ (ಮೂಲ - E.I - XV p- 331 A.D 1028

೧೦೯) ಅದೇ- ಪು- ೩೯೬ (ಮೂಲ - E. C- VII HI 14- A.D 1076)

೧೧೦) ಅದೇ- ಪು- ೩೯೮ (ಮೂಲ - B. C. I- I, ii 152 A.D 1103)

೧೧೧) ಅದೇ- ಪು- ೩೯೯ (ಮೂಲ - B. C.I - I.ii 65 A.D 1029)

೧೧೨) ಅದೇ- ಪು- ೩೯೯ (ಮೂಲ - S. I.I – IX.i 102 A.D 1046)

೧೧೩) ಅದೇ- ಪು- ೩೯೯ (ಮೂಲ - E. C - VI K.D 144 C 760)

೧೧೪) ಅದೇ- ಪು- ೩೯೯ (ಮೂಲ -Althekar – History of village communities in western India p- 34)

೧೧೫) ಅದೇ- ಪು- ೩೯೯ (ಮೂಲ - E. C - VIII S.B 80 C A.D 1131)

೧೧೬) ಅದೇ- ಪು- ೪೦೦ (ಮೂಲ -Indian Antiquary XVIII, p- A.D 1036)

೧೧೭) ಅದೇ- ಪು- ೪೦೦ (ಮೂಲ -E.C - XI C.D 75 A.D 941)

೧೧೮) ಎಲಿಗಾರ ಚೆನ್ನಕ್ಕ- ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, - ಪು- ೧೮೫

೧೧೯) ಅದೇ- ಪು- ೧೦೪

೧೨೦) E. C- VII, Shikaripura 169, Belligave A.D 1067 .

೧೨೧) Madan. J.C- I. P - p- 3

೧೨೨) S. I.I - IX (1) 67984 June 16, Kolagallu, Bellary Taluk.

೧೨೩) ನಾಗಯ್ಯ.ಜಿ.ಎಂ-ಬ.ಸಾಂ.ಇ - ಲೋಹಿಯ ಪ್ರಕಾಶನ ಬಳ್ಳಾರಿ, ೨೦೦೨, ಪುಟ- ೧೬೨ (ಮೂಲ -S.I.I – ೧೬೩-೧೦೯೩, ಸೆಪ್ಟೆಂಬರ್ ೨೩, ಹೊಲಗುಂಡಿ, - ಹಡಗಲಿ ತಾಲೂಕು)

೧೨೪) S. I.I - IX (1) 90 1036 Manneramasalavada, Harapanahalli Taluk.

೧೨೫) S. I.I - 163 – 1093, September 23, Holagundhi Taluk .

೧೨೬) S. I.I - IX (1) 247 Srinivasapuram, Harappana halli Taluk

೧೨೭) S. I.I - 249 -1147, December 25, Koloor, Bellary Taluk

೧೨೮) S. I.I - IX (1) 253 – 1149 December 22, Oruvai, Bellary Taluk.

೧೨೯) ನಾಗಯ್ಯ, ಜಿ.ಎಂ- ಬ.ಸಾಂ.ಇ, ಪು- ೧೬೩

೧೩೦) A.R.S.E - 102/78-79 A.D, 1067, Kallukutaganahalu, Shiraguppa Taluk,

೧೩೧) A.R.S.E - 109/78-79, A.D, 10th century, Kuruvally, Shiraguppa Taluk

೧೩೨) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಹರಪ್ಪನಹಳ್ಳಿ ೯೨, ೧೧೭೧ ಎಪ್ರಿಲ್ ೨೧ ಮೂಡಲಗೇರಿ ಹರಪ್ಪನಹಳ್ಳಿ ತಾಲೂಕು.

೧೩೩) A.R.S.E - III M.I p- 67

೧೩೪) And ೧೩೫) – E. I - XV p-78 A.D 1050

೧೩೬) ಮತ್ತು ೧೩೭)– ಚಿದಾನಂದ ಮೂರ್ತಿ.ಎಂ.- ಕ.ಶಾ.ಸಾಂ.ಅ, ಪು- ೩೯೦

೧೩೮) E.C Vol- 6, p- 11

೧೩೯) E.C Vol- 4, p- 487

೧೪೦) E.C Vol- 4, p- 378

೧೪೧) E.C Vol- 4, p- 435

೧೪೨) E.C Vol- 4, p- 727

೧೪೩) E.C Vol- 4, p- 84

೧೪೪) E.C Vol- 4, p- 99

೧೪೫) E C Vol- 8, p- 290-91

೧೪೬) E C Vol – 9 p- 53

ಅಧ್ಯಾಯ – ೪

ಹೈದರ್, ಟಿಪ್ಪು ಮತ್ತು ಮೈಸೂರು ಅರಸರ ಕಾಲದ ಪೊಲೀಸ್ ವ್ಯವಸ್ಥೆ

೪.೧ : ಮೈಸೂರು ಅರಸರ ಕಾಲದ ಆಡಳಿತದಲ್ಲಿ ಪೊಲೀಸ್ ವ್ಯವಸ್ಥೆ

ಮೈಸೂರು ರಾಜ್ಯದ ಲಕ್ಷಣಗಳನ್ನು ಗಮನಿಸಿದರೆ ಇದೊಂದು ಭೌಗೋಳಿಕವಾಗಿ ಒಂದು ಸಣ್ಣ ರಾಜ್ಯ. ಶಾಂತ ಸ್ವಭಾವದ ಮತ್ತು ಆತ್ಮಗೌರವ ಹೊಂದಿದ ಜನರಿಂದ ತುಂಬಿತ್ತು. ಇಲ್ಲಿ ಆಡಳಿತಾತ್ಮಕವಾದ ಪ್ರಯೋಗಗಳಿಗೆ ಸಾಧ್ಯತೆಗಳಿದ್ದವು. ಇದರಿಂದಾಗಿ ಶಾಂತಿ ಮತ್ತು ಪ್ರಸಿದ್ಧಿ ಎರಡೂ ಮೈಸೂರು ಸಂಸ್ಥಾನಕ್ಕೆ ಬಂದಿತು. ಯಾವಾಗಲೂ ಮೈಸೂರು ಮುಂಚೂಣಿಯಲ್ಲಿರುವ ರಾಜ್ಯವೆಂದು ಹೆಸರು ಪಡೆದಿತ್ತು.[೧] ಮೈಸೂರನ್ನು ಆಳಿದ ಅರಸರೆಲ್ಲರೂ ಸಹ ಪುರಾತನವಾದ ನಾಡಿನ ಸಂಸ್ಕೃತಿಯನ್ನು ಉಳಿಸಲು ಶ್ರಮವಹಿಸಿದ್ದರು. ಸುಮಾರು ೧೭೦೦ ರ ಹೊತ್ತಿಗೆ ವಿಜಯನಗರ ಸಾಮ್ರಾಜ್ಯವೂ ಸಹ ಅವನತಿ ಹೊಂದಿತ್ತು. ಮರಾಠರೂ ಸಹ ಅವನತಿ ಹೊಂದಿದ್ದರು. ಈ ಎರಡೂ ರಾಜವಂಶಗಳಿಂದ ಖಾಲಿಯಾದ ಶ್ರೇಷ್ಠ ಸ್ಥಾನವನ್ನು ಮೈಸೂರು ತುಂಬಿತು. ಈ ಸಾಮ್ರಾಜ್ಯದಲ್ಲಿ ಸಾರ್ವಜನಿಕ ಜೀವನ ಮತ್ತು ಕಾರ್ಯಗಳಲ್ಲಿ ಮನುಷ್ಯ ಮನುಷ್ಯರೊಡನೆ ಯಜಮಾನ ಮತ್ತು ಸೇವಕ ಹಾಗೂ ರಾಜ ಮತ್ತು ಪ್ರಜೆಗಳ ನಡುವೆ ಇದ್ದ ಸ್ವಾಮಿನಿಷ್ಠೆ (ರಾಜಭಕ್ತಿ,) ಯಾವಾಗಲೂ ಮಾದರಿಯಾಗಿತ್ತು. ಇವರ ನಡೆ ನುಡಿಗಳು ಸಾರ್ವಜನಿಕ ಜೀವನ ಮತ್ತು ಕಾರ್ಯಗಳಲ್ಲಿ ಒಂದು ಮಾದರಿ ವಾತಾವರಣವನ್ನು ನಿರ್ಮಿಸಿದ್ದವು.

ಪ್ರಭುತ್ವದ ಬೆಳವಣಿಗೆ ಅಥವಾ ಅಧಿಕಾರದ ಬೆಳವಣಿಗೆ

೧೮ ನೇ ಶತಮಾನದಲ್ಲಿ ಭಾರತ ದೇಶದ್ಯಾಂತ ರಾಜರುಗಳ ಆಡಳಿತದಿಂದಾಗಿ ಅರಾಜಕತೆ ತುಂಬಿದ್ದರಿಂದ ಇಡೀ ದೇಶಕ್ಕೆ ಅನ್ವಯವಾಗುವ ಪ್ರಭುತ್ವವನ್ನು ಸಂರಕ್ಷಿಸುವುದು ಕಷ್ಟಕರವಾಗಿತ್ತು. ಈ ದೃಷ್ಠಿಕೋನದಿಂದ ದಕ್ಷಿಣ ಭಾರತವಂತೂ ಅತ್ಯಂತ ದಯನೀಯ ಸ್ಥಿತಿಯಲ್ಲಿತ್ತು. ಮೈಸೂರಿಗೆ ಸಂಬಂಧಿಸಿದಂತೆ ರಾಜ್ಯದ ಉತ್ತರದ ಗಡಿ ಪ್ರದೇಶಗಳಲ್ಲಿ ಪ್ರಭುತ್ವ ಸ್ಥಾಪನೆಗಾಗಿ ಮೂರು ಶಕ್ತಿಗಳು ಶ್ರಮಿಸುತ್ತಿದ್ದವು. ಅವುಗಳೆಂದರೆ ಮೊಗಲರು, ಮರಾಠರು ಮತ್ತು ಬ್ರಿಟೀಷರು. ವಾಸ್ತವವಾಗಿ ಉತ್ತರ ಭಾಗದಲ್ಲಿ ವಿಸ್ತರಣೆಯು ಮುಚ್ಚಿಕೊಂಡಿತು. ಏಕೆಂದರೆ ದಕ್ಷಿಣದ ಘಟ್ಟ ಪ್ರದೇಶದ ಕೆಳಭಾಗದಲ್ಲಿ ವಿಸ್ತರಣೆಗೆ ಸುಲಭದ ದಾರಿಯಿತ್ತು.[೨] ರಾಜರುಗಳು ವಶಪಡಿಸಿಕೊಂಡ ಪ್ರದೇಶಗಳಲ್ಲಿ ತಮ್ಮ ಪ್ರಭುತ್ವವನ್ನು ಸರ್ಕಾರವನ್ನು ಸ್ಥಾಪಿಸುವ ವಿಚಾರವಂತೂ ತುಂಬ ಅನಿಶ್ಚಿತವಾಗಿತ್ತು. ಮಿಲಿಟರಿ ಅಥವಾ ನಾಗರೀಕ ಅಥವಾ ಎರಡೂ ವಿಚಾರಗಳಿಗೆ ಸಂಬಂಧಿಸಿದಂತೆ ಖಂಡಿತವಾಗಿಯೂ ಇದು ರಕ್ಷಣಾತ್ಮಕವಾದುದಾಗಿರಲಿಲ್ಲ. ಆದರೆ ಈ ಹಿಂದೆ ಇದ್ದ ರಾಜರು ನಡೆಸಿಕೊಂಡು ಬರುತ್ತಿದ್ದ ಸರಕಾರದ ವಿಧಿ ವಿಧಾನಗಳು ಬಹುತೇಕ ಜಾರಿಯಲ್ಲಿದ್ದವು.

ಸಣ್ಣಪುಟ್ಟ ರಾಜರುಗಳು, ಪಾಳೇಗಾರರು, ಸಣ್ಣಸಣ್ಣ ಪ್ರಾಂತಗಳಲ್ಲಿ ಅಧಿಕಾರದಲ್ಲಿದ್ದರು. ಆಯಾ ಪ್ರದೇಶಗಳಲ್ಲಿ ಕಾನೂನುಕಟ್ಟಳೆ, ಆಡಳಿತಪದ್ಧತಿ, ನ್ಯಾಯದಾನ ಪದ್ಧತಿಗಳು ಸ್ವಂತಿಕೆಯಿಂದ ಕೂಡಿದ್ದು ಏಕರೂಪವಾಗಿರಲಿಲ್ಲ. ಇಡೀ ದೇಶದ್ಯಾಂತ ಏಕರೂಪವಾದ ಕಾನೂನು, ಆಡಳಿತ ವ್ಯವಸ್ಥೆಯಿರಲಿಲ್ಲ. ಭಾರತ ದೇಶವನ್ನು ಸಂಪೂರ್ಣವಾಗಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳುವುದು ಬ್ರಿಟೀಷರ ಪ್ರಧಾನ ಗುರಿಯಲ್ಲಿ ಒಂದಾಗಿತ್ತು. ಹಾಗಾಗಿ ತಾವು ವಶಪಡಿಸಿಕೊಂಡ ಸ್ಥಳಗಳಲ್ಲಿ ಬಹುತೇಕ ಏಕರೂಪವಾದ ಕಾನೂನು, ಆಡಳಿತ ವ್ಯವಸ್ಥೆಯನ್ನು ಅವರು ಜಾರಿಗೆ ತಂದರು. ಇದರಿಂದಾಗಿ ಪ್ರಭುತ್ವದ ನಿಯಂತ್ರಣ ಸುಲಭ ಸಾಧ್ಯವಾಗಿತ್ತು.

ವಿಜಯನಗರ ಮತ್ತು ಮರಾಠರ ಕಾಲದ ಸಂಪ್ರದಾಯವು ಸ್ವಲ್ಪ ಅಕ್ರಮಣಶೀಲವಾಗಿತ್ತು. ಆಡಳಿತದ ಹೊರ

ನೋಟವು ಆಗಿನ ಕಾಲದ ಮುಸಲ್ಮಾನರ ಪ್ರೇರಣೆಯಿಂದ ಆದಂತೆ ಕಂಡು ಬರುತ್ತಿತ್ತು. ಹಿಂದು ಸಂಸ್ಕೃತಿಯನ್ನು ಹಾಳು ಮಾಡುವ ಶತ್ರುಗಳಿಂದ ಸಂಸ್ಕೃತಿಯನ್ನು ರಕ್ಷಿಸುವ ಹಾಗೂ ದೇಶಭಕ್ತರಾಜನ ನೇತೃತ್ವದಲ್ಲಿ ದೇಶದಲ್ಲಿ ರಾಷ್ಟ್ರೀಯ ಐಕ್ಯಮತ್ಯ ಬೆಳೆಸುವುದು ಇವರ ಪ್ರಮುಖ ಗುರಿಯಾಗಿತ್ತು. ವಿಜಯನಗರದ ಅರಸರು ತಮ್ಮ ಹಿಂದುತ್ವದ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಹೊಸದಾದ ಆಡಳಿತ ಯಂತ್ರವನ್ನು ರೂಪಿಸಿದರು. ಆಡಳಿತದಲ್ಲಿ ಸೇನೆಯನ್ನು ಮೊದಲ ಸ್ಥಾನದಲ್ಲಿ ಇರಿಸ ಲಾಯಿತು. ಇದು ರಾಜ್ಯದಲ್ಲಿ ರಕ್ಷಣೆಗೆ ಹಾಗೂ ದಾಳಿ ಮಾಡುವ ಉದ್ದೇಶಕ್ಕಾಗಿ ಬಳಸಲಾಯಿತು. ನಿರ್ಧಿಷ್ಟವಾಗಿ ಉತ್ತರದ ಶತ್ರುಗಳ ದಮನಕ್ಕೆ ಬಳಸಲಾಯಿತು.

ಪ್ರತಿಯೊಬ್ಬ ರಾಜನೂ ರಕ್ಷಣೆಗೆ ಮೊದಲು ಆದ್ಯತೆ ಕೊಟ್ಟಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಸೇನೆ ದೇಶದ ಗಡಿಯನ್ನು ಕಾಯುವುದು ಪ್ರಮುಖ ಕರ್ತವ್ಯವಾಗಿತ್ತು. ನಂತರ ದೇಶದ ಆಂತರಿಕ ಭದ್ರತೆಯನ್ನು ಕಾಪಾಡುವುದೂ ಅವರ ಕೆಲಸಗಳಲ್ಲಿ ಒಂದಾಗಿತ್ತು. ಕಾಲಕ್ರಮೇಣ ರಾಜ್ಯದ/ದೇಶದ ಆಂತರಿಕ ಭದ್ರತೆ, ರಕ್ಷಣೆಗೆ, ಕಾವಲಿಗೆ ಒಂದು ಪ್ರತ್ಯೇಕ ಅಂಗ ಗಳ ರಚನೆಯಾದುದನ್ನು ಇತಿಹಾಸದಲ್ಲಿ ಗುರುತಿಸಬಹುದಾಗಿದೆ. ಇಂತಹ ಪ್ರತ್ಯೇಕ ರಚನೆಯೇ ಪೊಲೀಸ್ ವ್ಯವಸ್ಥೆಯ ಹುಟ್ಟಿಗೆ ನಾಂದಿಯಾಯಿತು. ಈ ಸೇನೆಯ ಹೆಚ್ಚಿನ ಖರ್ಚು ವೆಚ್ಚಗಳನ್ನು ನಿಭಾಯಿಸಲು ಹೆಚ್ಚಿನ ತೆರಿಗೆಗಳನ್ನು ವಿಧಿಸ ಲಾಯಿತು ಮತ್ತು ಇದಕ್ಕಾಗಿ ಇದ್ದ ನಿಯಮಗಳನ್ನು ಪರಾಮರ್ಶಿಸಲಾಯಿತು. ಗುಡ್ಡ ಪ್ರದೇಶಗಳಲ್ಲಿ ರಕ್ಷಣಾ ಸೈನ್ಯವನ್ನು ಬಲಪಡಿಸಲಾಯಿತು. ಪ್ರಾಂತ್ಯಗಳಲ್ಲಿ 'ಗವರ್ನರ್'ಗಳನ್ನು ನೇಮಿಸಲಾಯಿತು. (ಪ್ರಾಂತ್ಯಾಧಿಕಾರಿ) ಇವರು ಎಲ್ಲಾ ರೀತಿಯ ನಾಗರಿಕ ಮತ್ತು ಮಿಲಿಟರಿ ವ್ಯವಹಾರಗಳನ್ನು ಪೂರ್ಣವಾಗಿ ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದು, ಅವರಿಗೆ ಕರ್ತವ್ಯಗಳನ್ನು ನಿರ್ವಹಿಸುವ ಸಲುವಾಗಿ ಅವರ ಕೈಕೆಳಗೆ ಕೆಲವು ಅಧಿಕಾರಿಗಳನ್ನು ನೇಮಿಸಲಾಗಿತ್ತು. ಇಂತಹ ರಾಜಕೀಯ ಪರಂಪರೆ ಮತ್ತು ಆಧ್ಯಾತ್ಮಿಕತೆಯ ಎರಡು ಹಿಂದೂ ರಾಜ ಮನೆತನಗಳನ್ನು ಮೈಸೂರು ರಾಜರು ನಿದಾನವಾಗಿ ಅನು ಸರಿಸುತ್ತಾ ಬಂದರು.ಎಂದು ಕಂಡು ಕೇಳರಿಯದ ರೀತಿಯಲ್ಲಿ ಇದು ಪ್ರಖ್ಯಾತವಾಯಿತು. ಯುರೋಪಿಯನ್ನರ ಚಿಂತನೆಗಳು, ಒಡೆಯರ್‌ರವರುಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಲಿಲ್ಲ. ಆದರೆ ಭಾರತದಲ್ಲಿ ಯುರೋಪಿಯನ್ನರ ಆಡಳಿತವಿರುವ ಪ್ರದೇಶಗಳಲ್ಲಿ ಅವರ ಯಶಸ್ಸಿನ ಕಾರಣಗಳನ್ನು ತುಲನಾತ್ಮಕವಾಗಿ ಒಡೆಯರು ಪರೀಕ್ಷಿಸುತ್ತಿದ್ದರು. ಈ ಎಲ್ಲದರ ಪ್ರಭಾವದ ಪರಿಣಾಮವಾಗಿ ಮತ್ತು ದಾಖಲೆಗಳ ಆಧಾರದ ಮೇರೆಗೆ ೧೭೦೦ರ ಸುಮಾರಿಗೆ ಮೈಸೂರು ಬಹುತೇಕ ಈ ಕೆಳಗಿನಂತೆ ಇತ್ತು.

೧)ರಾಜನು ರಾಜ್ಯದ ಪ್ರಮುಖನಾಗಿದ್ದ. ಈತನ ಅಧಿಕಾರವು ವಂಶಪಾರಂಪರ್ಯವಾಗಿದ್ದು, ಶಾಸ್ತ್ರಗಳ ನೈತಿಕ ಚೌಕಟ್ಟಿನ ಒಳಗೆ ಕೇಂದ್ರೀಕೃತವಾದ ಅಧಿಕಾರ ಹೊಂದಿದ್ದನು. ೨) ರಾಜನ ಆಸ್ಥಾನದಲ್ಲಿ ಬೇರೆ ಬೇರೆ ಇಲಾಖೆಗಳಿಗೆ ಮಂತ್ರಿಗಳು ಇರುತ್ತಿದ್ದರು. ಆದರೆ ಇವರು ಮಂತ್ರಾಲೋಚನ ಸಭೆಯಿಂದ ನೇಮಕವಾಗುತ್ತಿದ್ದರೆ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವುದು ಸ್ವಲ್ಪ ಕಠಿಣ. ಆದರೆ ಅವರು ರಾಜ್ಯದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಾಗಿದ್ದರು ಎಂಬುದು ನಿಶ್ಚಯ. ೩) ಪ್ರಾಂತೀಯ (ಗವರ್ನರ್‌ಗಳು) ಪ್ರಾಂತ್ಯಾಧಿಕಾರಿಗಳು ಅವರ ಪ್ರದೇಶಗಳ ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಿಸುವ ಅಧಿಕಾರಿ ಯಾಗಿದ್ದನು. ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇತ್ತು. ೪) ಪ್ರಾಂತ್ಯಾಧಿಕಾರಿಗಳ ಕೈಕೆಳಗೆ ಕೆಲಸ ಮಾಡಲು ಅಧಿಕಾರಿ ಗಳನ್ನು ಕೇಂದ್ರ ಸರ್ಕಾರವೇ (ರಾಜನೆ) ನೇಮಿಸುತ್ತಿತ್ತು. ೫) ಹಳ್ಳಿ ಮತ್ತು ನಗರಗಳಲ್ಲಿ ಕಾರ್ಯತ: ಪ್ರಜಾಪ್ರಭುತ್ವ ಮಾಧರಿ ಯ ಸರಕಾರ ಇತ್ತು. ಆದರೆ ಹಳ್ಳಿಗಳಿಗೆ (ಗ್ರಾಮ) ಸಿಕ್ಕಿದಷ್ಟು ಸ್ವಾತಂತ್ರವು ನಗರ ಸರಕಾರಗಳಿಗೆ ಸಿಗದೇ ಸೊರಗಿದ್ದವು. ೬) ಸೇನೆಯು ರಾಜ್ಯದ ಅತ್ಯಂತ ಪ್ರಮುಖ ಅಂಗವಾಗಿತ್ತು. ಇದಕ್ಕಾಗಿ ಹೆಚ್ಚಿನ ತೆರಿಗೆ ವಿಧಿಸುವಂತಾಯಿತು. ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ ಕೋಟೆಗಳನ್ನು ಬಲಪಡಿಸಲಾಯಿತು. ಸೇನೆಯು ನೇರವಾಗಿ ರಾಜನ ನಿಯಂತ್ರಣದಲ್ಲಿದ್ದು ಅದರ ಶಿಸ್ತುಗಳ

ಬಗ್ಗೆ ರಾಜನೇ ಗಮನ ಹರಿಸುತ್ತಿದ್ದನು ಮತ್ತು ಆತನೇ ನಿರ್ದೇಶನಗಳನ್ನು ನೀಡುತ್ತಿದ್ದನು. ಒಬ್ಬರನೊಬ್ಬರನ್ನು ಬಂಧಿಸುತ್ತಿದ್ದ ವಿಷಯವೆಂದರೆ ರಾಷ್ಟ್ರಭಕ್ತಿಯಾಗಿತ್ತು.[೩]

ವಾಸ್ತವವಾಗಿ ಎಲ್ಲವೂ ಸಮರ್ಪಕವಾಗಿರುವ ರಾಜ್ಯ ಇದಾಗಿರಲಿಲ್ಲ. ಆದರೆ ಪ್ರಭುತ್ವಕ್ಕೆ ಉತ್ತಮ ತಳಹದಿ ಮತ್ತು ಮಾದರಿ ರಾಜ್ಯ ಮಾಡುವ ಎಲ್ಲಾ ಉತ್ತಮ ನಿರ್ದೇಶನಗಳು ಸಿಕ್ಕಿದ್ದವು. ೧೭೫೦ ರ ನಂತರ ನೈತಿಕತೆಯ ಕುಸಿತ ಪ್ರಾರಂಭ ವಾಯಿತು. ಪ್ರಭುತ್ವವನ್ನು ನಿರ್ವಹಿಸಿಕೊಂಡು ಹೋಗುವುದು ಕಷ್ಟಕರವಾಯಿತು. ಹೈದರಾಲಿಯ ಅಧಿಕಾರದಾಹದಿಂದ ಅಧಿಕಾರವನ್ನು ಕಿತ್ತುಕೊಳ್ಳುವಿಕೆ ಹಾಗೂ ಟಿಪ್ಪುಸುಲ್ತಾನನ ಸರ್ವಾಧಿಕಾರಿ ಮನೋಭಾವ ಮತ್ತು ಪರಮಾಧಿಕಾರದ ಭ್ರಮೆ ಯಿಂದ ಪೂರ್ಣವಾಗಿ ಹೊಸ ವಾತಾವರಣ ಸೃಷ್ಟಿಯಾಯಿತು. ಇದು ಹೊಸ ಮಾಧರಿಯ ಸರ್ಕಾರ ರಚನೆಗೆ ಕಾರಣ ವಾಯಿತು. ಈ ಕೆಳಗಿನ ಕಾರಣಗಳಿಗಾಗಿ ಹೊಸ ವಾತಾವರಣ ಸೃಷ್ಟಿಯಾಯಿತು.

೧) ರಾಜನು ಮತ್ತು ಆತನ ಪ್ರಜೆಗಳು ಹಲವು ವಿಚಾರಣೆಗಳಿಗೆ ಬದ್ಧರಾಗಿದ್ದರು. ವಾಸ್ತವವಾಗಿ ಇವರ ನಡುವೆ ವಿರೋಧ ಪ್ರಾರಂಭವಾಯಿತು. ೨) ಹೊಸ ಭೂ ಪ್ರದೇಶಗಳನ್ನು ಹಳೇಯ ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು. ಈ ಹೊಸ ಪ್ರಾಂತ್ಯಗಳಲ್ಲಿ ಇದ್ದ ನಿವಾಸಿಗಳು ಹೊಸ ರಾಜನಿಗೆ ವಿದೇಯರಾಗಿರುವಂತೆ ಮಾಡಲಾಯಿತು. ೩) ಧರ್ಮವು ರಾಜ್ಯಾಡಳಿತದಲ್ಲಿ ಸೇರಿ ಕೊಂಡಿತು. ೪) ರಾಜನೊಬ್ಬ ವ್ಯಾಪಾರಿ, ಲೇವಾದೇವಿಗಾರ, ಹಣ ವಿನಿಮಯಗಾರನಾದ. ೫) ಸಹಜವಾಗಿ ಪ್ರಭುತ್ವವು ಶಕ್ತಿಯುತವಾಗಿದ್ದು, ರಾಜನ ವೈಯಕ್ತಿಕ ಬಯಕೆಗಳ ಈಡೇರಿಕೆಗೆ ಶಕ್ತಿಯನ್ನು ಬಳಸುವಂತಾಯಿತು.[೪]

ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಭಾರತದಲ್ಲಿ ಇದ್ದ ಯುರೋಪಿಯನ್ನರಿಂದ ಪ್ರಮುಖ ಆಡಳಿತದ ವಿಚಾರಗಳ ಬಗ್ಗೆ ಬಹಳಷ್ಟು ಪಾಠ ಕಲಿತರು.

೧) ರಾಜ್ಯವೊಂದರಲ್ಲಿ ಪ್ರಭುತ್ವಕ್ಕೆ ಅಡಿಪಾಯವೆಂಗರೆ ಪ್ರಬಲವಾದ ಶಕ್ತಿ (ಸೇನೆ) ೨) ರಾಜ್ಯವು ಜನರ ಬದುಕಿನ ಆರ್ಥಿಕ ವಿಚಾರಗಳ ಮೇಲೆ ನಿಯಂತ್ರಣವನ್ನು ಹೊಂದಿರಬೇಕು, ಅವರ ಆರ್ಥಿಕ ವಿಚಾರಗಳಲ್ಲಿ ಸ್ವತಂತ್ರತೆಯನ್ನು ನೀಡಬಾರದು. ೩) ವಿದೇಶಾಂಗ ನೀತಿಗಳು, ದೇಶೀಯ ನೀತಿಗಳನ್ನು ಬಲಪಡಿಸುವಂತಹ ಆಕರಗಳಾಗಬೇಕು.

೧೭೯೯ ರಲ್ಲಿ ಮೈಸೂರನ್ನು ಪುನರ್‌ಸಂಘಟಿಸುವ ಸಂದರ್ಭಗಳಲ್ಲಿ ಈ ಮೂರು ತತ್ವಗಳನ್ನು ಗಮನದಲ್ಲಿ ಇಟ್ಟು ಕೊಳ್ಳಲಾಯಿತು. ರಾಜ್ಯಕ್ಕೆ ವಿಧಿಬದ್ಧವಾದ ವ್ಯವಸ್ಥಿತವಾದ ಸಂವಿಧಾನವನ್ನು ನೀಡಲಾಯಿತು. ಇದರಲ್ಲಿ ಅರ್ಧ ಲಿಖಿತ ಸಂವಿಧಾನವಾದರೆ ಇನ್ನರ್ಧ ಅಲಿಖಿತವಾದ ಸಂಪ್ರದಾಯ ಮತ್ತು ಪದ್ಧತಿ ರೂಪದಲ್ಲಿತ್ತು. ಈ ಹೊಸ, ವ್ಯವಸ್ಥೆಯ ಸಾಮಾನ್ಯ ಲಕ್ಷಣಗಳೆಂದರೆ ೧) ರಾಜ್ಯಕ್ಕೆ ಮುಖ್ಯಸ್ಥನಾಗಿ ಮಹಾರಾಜರು ಇದ್ದು ಅವರು ಕೇಂದ್ರೀಕೃತವಾದ ಅಧಿಕಾರವನ್ನು ಚಲಾಯಿಸುತ್ತಿದ್ದರು. ೨) ಈತನಿಗೆ ಒಬ್ಬರು ಮಂತ್ರಿಯಿದ್ದು, ಆತನನ್ನು ದಿವಾನನೆಂದು ಕರೆಯಲಾಯಿತು. ಈತನು ಆಡಳಿತದ ವಿಚಾರಗಳ್ನು ನೋಡಿಕೊಳ್ಳುತ್ತಿದ್ದನು. ೩) ಸರಕಾರದಲ್ಲಿ ಹಲವು ಇಲಾಖೆಗಳಿದ್ದವು. ೪) ರಾಜ್ಯವನ್ನು ವಿಭಾಗಗಳನ್ನಾಗಿ ವಿಂಗಡಿಸಿ ಅದಕ್ಕೆ 'ಫೌಜುದಾರ' ಎಂಬ ಹೆಸರಿನ ಅಧಿಕಾರಿಯನ್ನು ನೇಮಿಸಲಾಯಿತು. ಈತನು ಅಲ್ಲಿನ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಯಾಗಿದ್ದನು. ೫) ಈ ವಿಭಾಗಗಳ ಸಣ್ಣ ಘಟಕಗಳಿಗೆ 'ತಾಲೂಕು' ಎಂದು ಕರೆದು ಅದಕ್ಕೆ 'ಅಮಿಲ್‌ದಾರ್' ಎಂಬ ಹೆಸರಿನ ಅಧಿಕಾರಿಯನ್ನು ನೇಮಿಸಲಾಯಿತು. ಅವರು ಕೇವಲ ಕಂದಾಯ ಇಲಾಖೆಯ ಅಧಿಕಾರಿಯಾಗಿರದೇ ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದನು.[೫] (ಈಗಿನ ತಹಶಿಲ್ದಾರರೇ ಅಂದಿನ ಅಮಲ್ದಾರರು. ಈಗ ತಹಶಿಲ್ದಾರರು ತಾಲೂಕಿನ ಆಡಳಿತದ ಮುಖ್ಯಾಧಿಕಾರಿಯಾಗಿದ್ದರೆ ಅಂದು ಅಮಲ್ದಾರರು ತಾಲೂಕಿನ ಮುಖ್ಯಾಧಿಕಾರಿಯಾಗಿದ್ದ) ೬)ಹಳ್ಳಿಗಳ ಆಡಳಿತ ಮಾತ್ರ ಆಯಾ ಹಳ್ಳಿಯ 'ಪಂಚಾಯ್ತಿ'ಯ ಅಡಿಯಲ್ಲಿಯೇ ಮುಂದುವರಿಯಿತು. ಆದರೆ 'ಪಟೇಲ' ಎಂಬ ಹೆಸರಿನ ಆಡಳಿತಗಾರನು ಪಂಚಾಯ್ತಿಯ ಬಹುತೇಕ ಅಧಿಕಾರ ಮತ್ತು

ಕರ್ತವ್ಯಗಳನ್ನು ಕಿತ್ತುಕೊಂಡಿದ್ದನು. ೭)ಮಹಾರಾಜನು ತನ್ನ ರಾಜಧಾನಿಯಲ್ಲಿ ಒಂದು 'ಅದಾಲತ್'ನ್ನು ವ್ಯವಸ್ಥೆಗೊಳಿಸಿದ್ದನು. (ಅದಾಲತ್–ನ್ಯಾಯತೀರ್ಪು ನೀಡುವ ವ್ಯವಸ್ಥೆ) ರಾಜ್ಯದಲ್ಲಿ ಹಳ್ಳಿಗಳಲ್ಲಿ ಇರುವ ಪಂಚಾಯ್ತಿ ವ್ಯವಸ್ಥೆ ಬಿಟ್ಟರೆ ಇದೊಂದೇ ನ್ಯಾಯ ತೀರ್ಪು ಮಾಡುವ ನ್ಯಾಯಾಲಯವಾಗಿತ್ತು. ೮) ಮುಸಲ್ಮಾನ ಆಡಳಿತಗಾರರು (ರಾಜರು) ಸೇನೆ ಮತ್ತು ವಿದೇಶಾಂಗ ನೀತಿಗಳ ನಿಯಂತ್ರಣಕ್ಕೆ ಹೆಚ್ಚು ಒತ್ತನ್ನು ನೀಡಿದ್ದರು. ಅದನ್ನೇ ಬ್ರಿಟೀಷರು ಮುಂದುವರಿಸಿಕೊಂಡು ಬಂದರು. ಮೈಸೂರು ಅರಸರು ಈ ಎರಡು ಅಂಗಗಳ ಅಡಿ ಬರುವ (ಸೇನೆ ಮತ್ತು ವಿದೇಶಾಂಗ ನೀತಿ) ಎಲ್ಲಾ ವಿಷಯಗಳು ತಮ್ಮ ಬಳಿಗೆ ಬರಬೇಕೆಂದು ಸೂಚಿಸಿದ್ದರು. ಇದಕ್ಕೆ ಪೂರಕವಾಗಿ ಎರಡು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಅವುಗಳೆಂದರೆ, Subsidiary Army(ಸಹಕಾರಿ ಸೇನೆ) ಮತ್ತು Resident (ಬ್ರಿಟೀಷ್ ರಾಜ ಪ್ರತಿನಿಧಿ)

೧) ಅಧಿಕಾರವು ಎರಡು ಭಾಗವಾಗಿತ್ತು. ಮೈಸೂರು ಅರಸರು ಮತ್ತು ಪರಮಾಧಿಕಾರ (ಬ್ರಿಟೀಷರು) ನಡುವೆ ಅಧಿಕಾರ ಹಂಚಿತ್ತು. ಹಾಗಾಗಿ ಸಂವಿಧಾನವು ಸಂಪೂರ್ಣವಾಗಿ ಖಚಿತತೆಯಿಂದ ಕೂಡಿರಲಿಲ್ಲ. ೨) ಅಧಿಕಾರವನ್ನು ಸ್ಥಳೀಯ ಅಧಿಕಾರಿಗಳಿಗೆ ಅವರ ಕರ್ತವ್ಯದೊಂದಿಗೆ ಹಂಚಲಾಗಿತ್ತು. 'ದಿವಾನ' ಹುದ್ದೆಯು ಅತ್ಯಂತ ಗೌರವಯುತವಾದ ಹುದ್ದೆ ಯಾಗಿದ್ದು, ಮಹಾರಾಜನ ಪದವಿಯಷ್ಟೇ ಗೌರವಯುತವಾಗಿತ್ತು. ಅಮಿಲ್‌ದಾರನ ಹುದ್ದೆಯು ಫೌಜುದಾರನಷ್ಟೇ ಗೌರವ ಯುತವಾಗಿದ್ದರೆ, ದಿವಾನ ಮತ್ತು ಪಟೇಲರ ಹುದ್ದೆ ಅಮೀಲ್‌ದಾರನಷ್ಟೇ ಗೌರವಯುತವಾಗಿತ್ತು. ಒಂದು ತಿಂಗಳ ಅಮಿಲ್‌ದಾರಿಕೆಯು ಹಲವಾರು ಸಾವಿರ ರೂಪಾಯಿಗಳು ಬೆಲೆಬಾಳುವಷ್ಟು ಮೌಲ್ಯಯುತವಾಗಿತ್ತು. ೩) ನ್ಯಾಯದಾನ ವ್ಯವಸ್ಥೆ ಸರಿಯಾಗಿ ಒದಗಿಸಿರಲಿಲ್ಲ. ಗ್ರಾಮದ ಪಂಚಾಯ್ತಿಗಳು ಮತ್ತು ಅದಾಲತ್‌ಗಳು ಮಾತ್ರ ನ್ಯಾಯದಾನ ವ್ಯವಸ್ಥೆಯ ನ್ಯಾಯಾಲಯಗಳಾಗಿದ್ದವು. ರಾಜದ್ರೋಹ ಮತ್ತು ವೈಯಕ್ತಿಕ ದ್ವೇಷ ಪ್ರಕರಣಗಳು ಮಾತ್ರ ನ್ಯಾಯತೀರ್ಮಾನಕ್ಕೆ ಬರುತ್ತಿದ್ದವು. ೪) ವ್ಯಕ್ತಿಯ ಖಾಸಗಿ ಹಕ್ಕುಗಳನ್ನು ತಿರಸ್ಕರಿಸಲಾಗಿತ್ತು. ೫) ಆಗಾಗ ಕೆಲವೊಮ್ಮೆ ಹಕ್ಕುಗಳನ್ನು ನೀಡ ಲಾಗುತ್ತಿತ್ತು. ೬) ಪರಮಾಧಿಕಾರವನ್ನು ತೆಗೆಯಲಾಯಿತು. ಆದರೆ ಇದು ಅಸ್ಪಷ್ಟವಾಗಿತ್ತು. ಒಪ್ಪಂದಗಳ ಅರ್ಥವಿವರಣೆ ಮಾಡುವ ಅದರಲ್ಲಿರುವ ಸಂಶಯಗಳಿಗೆ ವಿವರಣೆ ನೀಡುವ ಅಧಿಕಾರವನ್ನು ಪರಮಾಧಿಕಾರಕ್ಕೆ (ಬ್ರಿಟೀಷರಿಗೆ) ನೀಡಲಾಯಿತು. ಇದು ರಾಜ್ಯಕ್ಕೆ ದೊಡ್ಡ ನಷ್ಟವಾಯಿತು. ೭) ಸಂವಿಧಾನವನ್ನಂತೂ ಜೀರ್ಣಿಸಿಕೊಳ್ಳಲಾಗುತ್ತಿರಲಿಲ್ಲ. ಇದು ಪಾಶ್ಚಿಮಾತ್ಯ ನಿಯಮಗಳು ಮತ್ತು ಪೌರಾತ್ಯ ಪದ್ಧತಿಗಳನ್ನು ಒಳಗೊಂಡಿತ್ತು.

ಮೈಸೂರಿನಲ್ಲಿ ಬ್ರಿಟೀಷ್ ಕಮಿಷನರ್‌ರವರ ಆಡಳಿತದಲ್ಲಿ (೧೮೩೪–೧೮೮೧) ಸಮಯದಲ್ಲಿ ಈ ತೊಂದರೆ ಗಳನ್ನು (ಸಮಸ್ಯೆ) ನಿವಾರಿಸಲಾಯಿತು. ಅದರ ಫಲಶೃತಿ ಈ ಕೆಳಗಿನಂತೆ ಇತ್ತು.

೧) ಅಧಿಕಾರವು ಒಬ್ಬನೇ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿ ಅವಿಭಾಜ್ಯವಾಗಿತ್ತು. ಕಮಿಷನರು ಆಡಳಿತದ ವಿಚಾರಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿಯುತನಾಗಿದ್ದನು. ಈತನು ಪರಮಾಧಿಕಾರದ ಫಲಶೃತಿಗಳಿಗೆ ಜವಾಬ್ದಾರಿಯುತನಾಗಿದ್ದ. ೨) ಆಡಳಿತ ಶ್ರೇಣೀಕೃತ ವ್ಯವಸ್ಥೆಯಿಂದ ಕೂಡಿತ್ತು. ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯಗಳು ಏನು ಎಂಬುದನ್ನು ಲಿಖಿತವಾಗಿ ವಿವರಿಸಲಾಗಿತ್ತು. ಸ್ವಲ್ಪ ಸಮಯದ ನಂತರ ಇಲಾಖಾ ಕೈಪಿಡಿಗಳನ್ನು ಮುದ್ರಿಸಿ ಎಲ್ಲಾ ಅಧಿಕಾರಿಗಳಿಗೆ ವಿತರಿಸ ಲಾಯಿತು. ೩) ಅಧೀನ ನ್ಯಾಯಾಲಯಗಳ ಸರಣಿಯೇ ಅಸ್ತಿತ್ವಕ್ಕೆ ಬಂದವು. ಭಾರತೀಯರನ್ನು ಆಡಳಿತಾತ್ಮಕ ಸಿವಿಲ್ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು. ಆದರೆ ಇವರು ಪರಮಾಧಿಕಾರ ಹೊಂದಿದ ಕಮಿಷನರ್‌ನ ಮೇಲ್ವಿಚಾರಣೆಗೆ ಒಳಪಟ್ಟಿದ್ದರು. ೪) ಖಾಸಗಿ ಹಕ್ಕುಗಳಿಗೆ ಹೆಚ್ಚಿನ ಗೌರವ ನೀಡಲಾಯಿತು. ಕೆಲವು ಹಕ್ಕುಗಳ ಬಗ್ಗೆ ವಾಸ್ತವವಾಗಿ ಬರವಣಿಗೆ ಯಲ್ಲಿ ಇಲ್ಲದಿದ್ದರೂ ಅವನ್ನು ಗೌರವಿಸಲಾಗುತ್ತಿತ್ತು. ಉದಾಹರಣೆಗೆ: ಯಾವನಾದರೂ ವ್ಯಕ್ತಿಯೊಬ್ಬನಿಗೆ ಬಂದು ಗುಂಪು ಆಕ್ರಮಣ ಮಾಡಿದರೆ ಅಥವಾ ದರೋಡೆಕೋರರು ದಾಳಿ ಮಾಡಿದರೆ ಆತ ತನ್ನ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಬಳಸ

ಬಹುದಿತ್ತು. ಕಂದಾಯ ಅಧಿಕಾರಿಗಳನ್ನು ಅತ್ಯಂತ ಅವಿವಾರ್ಯ ಪ್ರಸಂಗಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಜನರ ಮನೆಗಳಿಗೆ ಪ್ರವೇಶಿಸುವುದನ್ನು ತಡೆಹಿಡಿಯಲಾಯಿತು. ರೈತರ ಜಮೀನುಗಳನ್ನು ನ್ಯಾಯತೀರ್ಪನ್ನು ಜಾರಿಗೊಳಿಸಲು ತೆರವುಗೊಳಿಸುವುದನ್ನು ತಡೆಹಿಡಿಯಲಾಯಿತು. ಕೈಗಾರಿಕೆಗಳ ಮಾಲಿಕರಿಗೆ ಲಾಭಾಂಶವನ್ನು ಉಳಿಸುವ ರೀತಿಯಲ್ಲಿ ತೆರಿಗೆ ಪದ್ಧತಿಯನ್ನು ಪರಿಶೋಧಿಸಲಾಯಿತು. ೫) ರೆಸಿಡೆನ್ಸಿಯನ್ನು ರದ್ದುಗೊಳಿಸಲಾಯಿತು. ರೆಸಿಡೆಂಟರ ಕಛೇರಿಯನ್ನು ಕಮಿಷನರ್‌ರವರ ಕಛೇರಿಯೊಂದಿಗೆ ಸಮ್ಮಿಳಿತಗೊಳಿಸಲಾಯಿತು. (ವಿಲೀನ) ೬) ಲಿಖಿತವಾಗಿ ಉಳಿದ ಸಂವಿಧಾನದ ಭಾಗಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಯಿತು.

ಇದರ ಪರಿಣಾಮವಾಗಿ ೧೮೮೧ ರಲ್ಲಿ ಒಂದು ಪ್ರಖ್ಯಾತವಾದ ಸಂವಿಧಾನವನ್ನು ರಾಜ್ಯಕ್ಕೆ ನೀಡಲಾಯಿತು. ಇದರಲ್ಲಿ ಪರಮಾಧಿಕಾರವು ಒಪ್ಪಿತವಾದ ತತ್ವಗಳ ತಳಹದಿಯ ಮೇಲಿತ್ತು. ಈ ವ್ಯವಸ್ಥೆಯನ್ನು ನಂತರ ಅಭಿವೃದ್ಧಿಗೊಳಿಸಲಾಯಿತು. ಮೊದಲನೇಯದಾಗಿ ಕಾರ್ಯಕಾರಿ, ಮಂತ್ರಾಲೋಚನೆ ಸಭೆ (Executive council) ಗೆ 'ದಿವಾನ' ಎಂದೇ ಕರೆಯಲಾಗುತ್ತಿದ್ದ ಪ್ರಧಾನಮಂತ್ರಿಯೇ ಅಧ್ಯಕ್ಷನಾಗಿರುತ್ತಿದ್ದ. ಎರಡನೇಯದಾಗಿ, ಪ್ರಜಾಪ್ರತಿನಿಧಿಕ ಸಭೆಯಲ್ಲಿ ಜನರಿಗೆ ತಮ್ಮ ಸಮಸ್ಯೆಗಳ ಬಗ್ಗೆ ಅಗತ್ಯತೆಗಳ ಬಗ್ಗೆ ಧ್ವನಿ ಎತ್ತುವ ಮತ್ತು ಆಡಳಿತದ ಲೋಪದೋಷಗಳ ಬಗ್ಗೆ ಟೀಕಿಸುವ ಮತ್ತು ಅದನ್ನು ಸರಿಪಡಿಸುವ ಸಲಹೆ ನೀಡುವ ಹಕ್ಕು ದೊರೆಯಿತು. ೧೮೮೧ ರಲ್ಲಿ ಮೈಸೂರಿನಲ್ಲಿ ಚೀಫ್ ಕೋರ್ಟ್ ಪ್ರಾರಂಭವಾಯಿತು. ಮೈಸೂರು ಆಡಳಿತ ಇತಿಹಾಸದ ಸಂಕ್ಷಿಪ್ತ ಸಾರಾಂಶವೇನೆಂದರೆ, ೧೭೦೦ ರಲ್ಲಿ ಪ್ರಭುತ್ವವು ಔದಾರ್ಯದಿಂದ ಕೂಡಿದ್ದು, ಧರ್ಮಾದರಿತವಾಗಿತ್ತು. ರಾಜ-ಮಂತ್ರಿಗಳು-ಇಲಾಖೆಗಳು- ಒಬ್ಬರು ಅಥವಾ ಇಬ್ಬರು ಗವರ್ನರ್‌ಗಳು-ಪಟೇಲ-ಪಂಚಾಯತ್ ಈ ರೀತಿ ಆಡಳಿತಾಂಗವನ್ನು ಹೊಂದಿತ್ತು.

೧೮೦೦ ರಲ್ಲಿ ರಾಜ್ಯದ ಶಕ್ತಿಯ ಮೂಲದ ಬಹುತೇಕ ಅರ್ಧ ಭಾಗವು ಪ್ರಭಲ ಸೇನೆಯಾಗಿದ್ದರೆ, ಮತ್ತರ್ಧ ಔದಾರ್ಯದಿಂದ ಕೂಡಿತ್ತು. ಮತ್ತು ಮಹಾರಾಜ ಮತ್ತು ಬ್ರಿಟೀಷ್ ಪರಮಾಧಿಕಾರದ ಎರಡರ ಹಿತಾಸಕ್ತಿ ಕಾಪಾಡುವುದು ಅದರ ಉದ್ದೇಶವಾಗಿತ್ತು. ಆಡಳಿತದ ಪ್ರಮುಖ ಅಂಗಗಳಾಗಿ ಮಹಾರಾಜ-ದಿವಾನ- ಇಲಾಖೆಗಳು- ಫೌಜುದಾರರು-ಅಮಿಲ್ದಾರರು-ಪಟೇಲ-ಪಂಚಾಯತು-ಅದಾಲತ್ (ರಾಜಧಾನಿಯಲ್ಲಿ) -ಪಂಚಾಯತಿ ನ್ಯಾಯಾಲಯಗಳು (ಗ್ರಾಮಗಳಲ್ಲಿ) ಇದ್ದವು. ಮತ್ತು ೨ ಸ್ಥಳೀಯ ಸರಹದ್ದನ್ನು ಹೊಂದಿರುವ ವಿದೇಶಿ ಸಂಸ್ಥೆಗಳು ಇದ್ದವು. ಅವುಗಳೆಂದರೆ, ಸಹಕಾರಿ ಸೇನೆ (Subsidary Army) ಮತ್ತು ರೆಸಿಡೆಂಟ್.

೧೯೦೦ ರಲ್ಲಿ ರಾಜ್ಯಕ್ಕೆ ಪೂರ್ಣ ಪ್ರಮಾಣದ ಲಿಖಿತ ಸಂವಿಧಾನ ಇತ್ತು. ರಾಜನಾದವನು 'ಧರ್ಮ' ದಿಂದ ಉತ್ತಮ ಮೌಲ್ಯಗಳನ್ನು ಪಡೆಯುತ್ತಿದ್ದ. ಮಹಾರಾಜನಿಗೆ ಒಂದು ಮಂತ್ರಿ ಪರಿಷತ್ (**Council**) ಇತ್ತು. ಅದರ ಕೆಳಗೆ ಇಲಾಖೆಗಳು-ಡೆಪಿಟ್ಯೂ ಕಮಿಷನರ್- ಅವಿಲ್ದಾರ್ -ಪಟೇಲ-ಪ್ರಜಾಪ್ರಾತಿನಿಧಿಕ ಸಭೆ ಮತ್ತು ವಿವಿಧ ಸ್ತರದ ಹಲವು ನ್ಯಾಯಾಲಯಗಳು ಇದ್ದವು. ೧೯೩೭ ರಲ್ಲಿ ರಾಜ್ಯವು ಸಂವಿಧಾನವನ್ನು ಹೊಂದಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳನ್ನು ಪ್ರತ್ಯೇಕಿಸಿತು. ಹಳ್ಳಿಗಳು ತಾವು ಇಚ್ಛಿಸಿದ ಗಣತಂತ್ರಗಳಾದವು. ಧರ್ಮವು ರಾಜನಿಗೆ ಮೌಲ್ಯಯುತ ಆಳ್ವಿಕೆಗೆ ಮಾರ್ಗದರ್ಶಕವಾಗಿ ಉಳಿಯಿತು[೬]

ಮೈಸೂರು ರಾಜ್ಯದಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆಯು ಬಹಳ ಪೂರ್ವದಿಂದಲೇ ಇತ್ತು. ಇದಕ್ಕೆ ತನ್ನದೇ ಆದ ಬಹಳ ದೊಡ್ಡ ಮಹತ್ವದ ಇತಿಹಾಸವಿದೆ. ಐತಿಹಾಸಿಕ ಕಾಲದ ಆಡಳಿತ ವ್ಯವಸ್ಥೆಯನ್ನು ಅರಿಯುವುದರಿಂದ ಪೊಲೀಸ್ ವ್ಯವಸ್ಥೆಯ ಬಗ್ಗೆ ತಿಳಿಯಲು ಸಾಧ್ಯವಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಅರಸರ ಮತ್ತು ಬ್ರಿಟೀಷ್ ಆಡಳಿತ ವ್ಯವಸ್ಥೆಯು ಇಂದಿನ ಕರ್ನಾಟಕ ಪೊಲೀಸ್ ಆಡಳಿತದ ಮೇಲೆ ಪರಿಣಾಮ ಬೀರಿದೆ. ವಾಸ್ತವವಾಗಿ ಟಿಪ್ಪುವಿನ ಮರಣದ ದಿನದಿಂದ

ಮೈಸೂರಿನಲ್ಲಿ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದಿತು.[೬]

೪.೨ : ಚಿಕ್ಕದೇವರಾಜ ಒಡೆಯರ ಕಾಲದ ಅಠಾರ ಕಛೇರಿ

ದೇಶದ ಆಂತರಿಕ ರಕ್ಷಣೆಗಾಗಿ ಪ್ರತ್ಯೇಕ ಅಧಿಕಾರಿ ವ್ಯವಸ್ಥೆಯನ್ನು ಹೊಂದಿದ್ದನ್ನು ರಾಜಒಡೆಯರ ಕಾಲದಲ್ಲಿಯೇ ಗುರುತಿಸಬಹುದು. "ಶ್ರೀರಂಗಪಟ್ಟಣವನ್ನು ೧೬೧೦ ರಲ್ಲಿ ರಾಜಧಾನಿಯನ್ನಾಗಿ ಮಾಡಿಕೊಂಡ ರಾಜ ಒಡೆಯರ್ ರತ್ನ ಖಚಿತವಾದ ರಾಜಪ್ರತಿನಿಧಿಯ ಸಿಂಹಾಸನವನ್ನೇರಿದರು. ಸೈನಿಕ ಮತ್ತು ಪ್ರಜಾಸಂಬಂಧವಾದ ಹೊಣೆಗಳನ್ನು ನಿರ್ವಹಿಸುವುದಕ್ಕಾಗಿ 'ದಳವಾಯಿ' ಮತ್ತು 'ಸರ್ವಾಧಿಕಾರಿ' ಎಂಬ ಆಡಳಿತ ಮುಖ್ಯಾಧಿಕಾರಿಯೊಬ್ಬನನ್ನು ನೇಮಕ ಮಾಡುವುದು ಅಗತ್ಯವೆಂದು ಭಾವಿಸಿದರು. ಈ ಸಂಯುಕ್ತ ಪದಾಧಿಕಾರಕ್ಕೆ ಅವರ ಸೋದರ ಪುತ್ರ ಬೆಟ್ಟದ ಅರಸು ಎಂಬವರನ್ನು ನೇಮಕ ಮಾಡಲಾಯಿತು. ಪ್ರತೀ ಗ್ರಾಮದಲ್ಲಿಯೂ ಮೇಲ್ವಿಚಾರಣೆ, ರಕ್ಷಣೆ ಮತ್ತು ಕಂದಾಯ ವಸೂಲಿಗಾಗಿ ಅಧಿಕಾರಿಗಳನ್ನು ನೇಮಿಸಲಾಯಿತು"[೮]

ಚಿಕ್ಕದೇವರಾಜ ಒಡೆಯರ್‌ರವರ ಕಾಲದಲ್ಲಿ (೧೬೪೫ ಜನನ–೧೬೭೩ ಪಟ್ಟಾಭಿಷೇಕ) ಅವರ ಪ್ರಧಾನ ಮಂತ್ರಿಯಾಗಿದ್ದ ತಿರುಮಳ ಅಯ್ಯಂಗಾರ್ (೧೯೮೬ರಿಂದ೧೭೦೪) ರವರು ರಾಜ್ಯಕ್ಕೆಲ್ಲಾ ಅನ್ವಯವಾಗುವ ಅಂಚೆ ವ್ಯವಸ್ಥೆಯನ್ನು ಸ್ಥಾಪಿಸಿದರು[೯] (ಪೊಲೀಸ್ ಪೇದೆಯವರೇ ಅಂಚೆಯವನ ಕೆಲಸವನ್ನು ಮಾಡಿದ ವಿವರಗಳು ಮುಂದೆ ಇದೆ) ವಿಜಯನಗರ ಕಾಲದ ಆಡಳಿತ ವ್ಯವಸ್ಥೆಯನ್ನು ಇವರು ಹೆಚ್ಚುಕಡಿಮೆ ಹಾಗೆಯೇ ಮುಂದುವರಿಸಿಕೊಂಡು ಬಂದರು.

ಮೊಗಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನಕ್ಕೆ ರಾಯಭಾರಿಗಳನ್ನು ಕಳುಹಿಸಿದರು. ತಮ್ಮ ಸುಪ್ರಸಿದ್ಧ ರಾಯಭಾರ ನಿಯೋಗವು ಹಿಂದಿರುಗಿದ ಸ್ವಲ್ಪದರಲ್ಲೇ ಚಿಕ್ಕದೇವರಾಜ ಒಡೆಯರು ಇನ್ನಷ್ಟು ಆಡಳಿತೀಯ ಸುಧಾರಣೆಗಳನ್ನು ಮಾಡಿದರು. ಆಡಳಿತವು ಆಧುನಿಕವೂ, ಪರಿಣಾಮಕಾರಿಯೂ, ಶಾಶ್ವತವೂ ಆಗಿರುವಂತೆ ಮೊಗಲ್ ಮಾದರಿಯಲ್ಲಿ ಪರಿಷ್ಕರಿಸಲು ಪ್ರಯತ್ನಿಸಿದರು. ಅದರ ಫಲವೇ ಈ ಕೆಳಕಂಡ ಸುಪ್ರಸಿದ್ಧ ಹದಿನೆಂಟು ವಿಭಾಗಗಳ, ಚಾವಡಿಗಳ ಸ್ಥಾಪನೆ ಮಾಡಿದರು. ಇದನ್ನೇ ಅಠಾರ ಕಛೇರಿಗಳೆಂದು ಕರೆಯಲಾಗುತ್ತಿತ್ತು.

೧ ನಿರೂಪದ ಚಾವಡಿ : ಸಾರ್ವಜನಿಕರಿಂದ ಮನವಿಗಳನ್ನೂ ಅಹವಾಲುಗಳನ್ನೂ ಸ್ವೀಕರಿಸುವ ದಾಖಲು ಪಡಿಸುವ, ಅಧಿಕೃತ ವರದಿಗಳನ್ನು ತಯಾರಿಸುವ, ಖಚಿತ ಆದೇಶಗಳ ರೂಪದಲ್ಲಿ ಅವುಗಳ ವಿಲೇವಾರಿ ಮಾಡುವ ಇಲಾಖೆ (ನಿರೂಪ)

೨ ಆಯಕಟ್ಟಿನ ಚಾವಡಿ : ಸಿವಿಲ್ ಮತ್ತು ಮಿಲಿಟರಿ ಲೆಕ್ಕಪತ್ರ ಇಲಾಖೆ, ೮೪ ಆಡಳಿತೀಯ ಘಟಕಗಳಿಗೆ, ಕೇಂದ್ರ ಬೊಕ್ಕಸಕ್ಕೆ ಹಾಗೂ ಅರಮನೆಯ ಆಯವ್ಯಯಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನಿಡುವ ವಿಭಾಗ.

೩ ಮೈಸೂರು ಹೋಬಳಿ ವಿಚಾರದ ಚಾವಡಿ: ಕಾವೇರಿ ನದಿಯ ದಕ್ಷಿಣದ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ವ್ಯಾಪ್ತಿಯುಳ್ಳ ವಿಚಾರಣಾ ಇಲಾಖೆ.

೪ ಪಟ್ಟಣದ ಹೋಬಳಿ ವಿಚಾರದ ಚಾವಡಿ : ಕಾವೇರಿ ನದಿಯ ಉತ್ತರದ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ವ್ಯಾಪ್ತಿಯುಳ್ಳ ವಿಚಾರಣಾ ಇಲಾಖೆ.

೫ ಸೀಮೆಯ ಕಂದಾಚಾರದ ಚಾವಡಿ : ಆಡಳಿತ ಘಟಕಗಳಲ್ಲಿ ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕಪತ್ರಗಳನ್ನಿಡುವುದು, ಆಯಾ ಘಟಕಗಳನ್ನು ಸಜ್ಜುಗೊಳಿಸಲು ಅಗತ್ಯವಾದ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳ ವ್ಯವಹಾರ.

೬ ಬಾಗಿಲ ಕಂದಾಚಾರ ಚಾವಡಿ : ಮಿಲಿಟರಿ ಮತ್ತು ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೆಯಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನಿಡುವ ಇಲಾಖೆ.

೭ ಸುಂಕದ ಚಾವಡಿ: ಸರಕು ಸಾಗಾಣಿಕೆಯ ದಾರಿಸುಂಕದ ಒಟ್ಟು ಲೆಕ್ಕ, ಆಮದು ಮತ್ತು ರಫ್ತು ತೆರಿಗೆಗಳು.

೮ ಪೊಮ್ಮಿನ ಚಾವಡಿ: ವಿಶೇಷವಾದೊಂದು ತೆರಿಗೆ ಇಲಾಖೆ. ಬ್ರಾಹ್ಮಣರು ಮತ್ತು ಅಧಿಕಾರಿಗಳೇ ಮೊದಲಾದ ವಿಶೇಷ ವರ್ಗದ ಜನರು ಕೊಳ್ಳುವ ಮತ್ತು ಮಾರುವ ಸರಕುಗಳ ಮೇಲೆ ನಿರ್ಧಿಷ್ಟ ಮೊತ್ತದ ತೆರಿಗೆ ಸಂಗ್ರಹಿಸುವ ಇಲಾಖೆ.

೯ ತೋಡಾಯದ ಚಾವಡಿ : ಶ್ರೀರಂಗಪಟ್ಟಣದ ಕೆಲವು ನಿರ್ಧಿಷ್ಟ ವರ್ಗಗಳಿಂದ ಮಾತ್ರ ಸುಂಕಗಳನ್ನಾಗಿ ಪ್ರವೇಶ ತೆರಿಗೆಯನ್ನು ವಸೂಲು ಮಾಡವುದಕ್ಕೆ ಸಂಬಂಧಿಸಿದ ಇಲಾಖೆ.

೧೦ ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ: ಚಿಕ್ಕದೇವರಾಜಸಾಗರ ನಾಲೆಯ ಕೆಳಗೆ ಹೊಸದಾಗಿ ರೂಪಿಸಿದ ಎಂಟು ಹೋಬಳಿಗಳ (ಗಡಿಯ ಉಪವಿಭಾಗಗಳು) ಅಧಿಕಾರ ವ್ಯಾಪ್ತಿಯುಳ್ಳ ಇಲಾಖೆ.

೧೧ ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ : ದೇವರಾಜನಾಲಾ ಕೆಳಗೆ ಹೊಸದಾಗಿ ರೂಪಿಸಿದ ಎಂಟು ಹೋಬಳಿಗಳ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಇಲಾಖೆ. ಈ ಎರಡೂ ಇಲಾಖೆಗಳಿಗೆ ಕಾವೇರಿ ಮತ್ತು ಹೇಮಾವತಿ ನದಿಗಳ ಅಣೆಕಟ್ಟುಗಳನ್ನೂ ನಾಲೆಗಳನ್ನೂ ನೋಡಿಕೊಳ್ಳುವುದು, ದುರಸ್ತಿಪಡಿಸುವುದು, ಅಲ್ಲಿ ಬೆಳೆದ ಬೆಳೆಯ ಅರ್ಧಪಾಲು ಸರಕಾರಕ್ಕೆ ಬರುವಂತೆ ನೋಡಿಕೊಳ್ಳುವುದು, ಅದರ ಲೆಕ್ಕಪತ್ರ ವಿವರ ಇತ್ಯಾದಿ ಹೊಣೆಗಾರಿಕೆಗಳು ಸೇರಿದ್ದುವು.

೧೨ ಬೆಣ್ಣೆಯ ಚಾವಡಿ : ಅರಮನೆಗೆ ಸಂಬಂಧಿಸಿದ ದನಕರುಗಳ ಸಾಕಾಣಿಕೆ, ಪ್ರತಿದಿನವೂ ಡೈರಿ ಉತ್ಪನ್ನಗಳ ಸಂಗ್ರಹಣೆ ಮತ್ತು ವಿನಿಯೋಗ, ಅವಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳು.

೧೩ ಪಟ್ಟಣದ ಚಾವಡಿ: ಅರಮನೆ, ಕೋಟೆ ಕೊತ್ತಲಗಳು, ಬತ್ತೇರಿಗಳು, ಉಗ್ರಾಣಗಳು, ಆಯುಧಾಗಾರ ಇತ್ಯಾದಿ ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಇಲಾಖೆ. ಶ್ರೀರಂಗಪಟ್ಟಣ ರಾಜಧಾನಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದೂ ಈ ಇಲಾಖೆಯ ಹೊಣೆಯಾಗಿದೆ.

೧೪ ಬೇಹಿನ ಚಾವಡಿ: ಇದು ಗುಪ್ತಚಾರ ಇಲಾಖೆ, ಬೇರೆ ಬೇರೆ ಆಡಳಿತ ಘಟಕಗಳಿಂದ ಘಟನೆಗಳನ್ನು ಕುರಿತು ಮಾಹಿತಿಯನ್ನು, ವರದಿಯನ್ನು ಅತ್ಯಂತ ತುರ್ತಾಗಿ ಅಂಚೆ ಹರಿಕಾರರ ಮೂಲಕ ರಾಜಧಾನಿಗೆ ಕಳುಹಿಸುವುದು. ರಾಜಾಜ್ಞೆಗಳನ್ನು (ನಿರೂಪ)ಸ್ಥಳೀಯ ಆಡಳಿತ ಘಟಕಗಳಿಗೆ ತಲುಪಿಸುವುದು ಈ ಇಲಾಖೆಯ ಕರ್ತವ್ಯ.

೧೫ ಸಮ್ಮುಖದ ಚಾವಡಿ: ರಾಜಮನೆತನದ ಸಟಸ್ಯರು, ಅರಮನೆಯ ವಿವಿಧ ವಿಭಾಗಗಳ ಅಧೀನ ಸಿಬ್ಬಂದಿ ಇವರು ಗಳನ್ನು ಕುರಿತಾದ ಲೆಕ್ಕಪತ್ರಗಳನ್ನಿಡುವುದು, ನೇರವಾಗಿ ರಾಜನ ಗಮನಕ್ಕೆ ತರಬೇಕಾದ ವಿಷಯಗಳು ಈ ಇಲಾಖೆಯ ಹೊಣೆ.

೧೬ ದೇವಸ್ಥಾನದ ಚಾವಡಿ: ಎಲ್ಲಾ ದೇವಾಲಯಗಳ ನಿರ್ವಹಣೆ, ಅವುಗಳ ಆದಾಯ ಮತ್ತು ವೆಚ್ಚದ ಉಸ್ತುವಾರಿಗೆ ಸಂಬಂಧಿಸಿದ ಇಲಾಖೆ.

೧೭ ಕಬ್ಬಿಣದ ಚಾವಡಿ: ಕಬ್ಬಿಣದ ಗಣಿಗಳು, ಕಚ್ಚಾ ಕಬ್ಬಿಣವನ್ನು ಕೊಳ್ಳುವಿಕೆ, ಕಬ್ಬಿಣದ ಉಪಕರಣಗಳ ತಯಾರಿಕೆ ಮತ್ತು ಮಾರಾಟ ಇವುಗಳಿಗೆ ಸಂಬಂಧಿಸಿದ ವ್ಯವಹಾರಗಳ ಇಲಾಖೆ.

೧೮ ಹೊಗೆಸೊಪ್ಪಿನ ಚಾವಡಿ: ಶ್ರೀರಂಗಪಟ್ಟಣದಲ್ಲಿ ಹೊಗೆಸೊಪ್ಪು ಕೊಳ್ಳುವುದು ಮತ್ತು ಮಾರುವುದನ್ನು ಕುರಿತ ಇಲಾಖೆ.[೧೦]

ಈ ಒಂದೊಂದು ವಿಭಾಗದಲ್ಲೂ ಒಬ್ಬ ಮೇಲ್ವಿಚಾರಕನಾದ ಗೊತ್ತುದಾರ, ಮೂವರು ದಫ್ತರದವರು (ದಾಖಲೆಗಳನ್ನಿಡುವವರು) ಗುಮಾಸ್ತೆಯರು, ರಾಯಸದವರು (ಬರೆಯುವವರು) ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವನು ಇರುತ್ತಿದ್ದರು. ಇವರುಗಳ ವೇತನವನ್ನು ಅವರ ಕರ್ತವ್ಯ ಮತ್ತು ಹೊಣೆ ಗಾರಿಕೆಗಳನ್ನವಲಂಬಿಸಿ ನಿಗಧಿಮಾಡಲಾಗುತ್ತಿತ್ತು. ಅರ್ಧ ನಗದಾಗಿ ಮತ್ತು ಅರ್ಧ ವಸ್ತುರೂಪದಲ್ಲಿ ಪಾವತಿಯಾಗುತ್ತಿತ್ತು. ಅವರು ತಮ್ಮ ಹೊಣೆಗಾರಿಕೆಗಳನ್ನು ಚಾಚು ತಪ್ಪದೇ ನಿರ್ವಹಿಸಬೇಕಾಗಿತ್ತು. ಪ್ರತೀ ದಿನ ಬೆಳಿಗ್ಗೆ ರಾಜನಿಗೆ ಹಿಂದಿನ ದಿನ ತಮ್ಮ ಚಾವಡಿಯಲ್ಲಿ ಏನಾಯಿತು ಎಂಬುದರ ವರದಿ ಒಪ್ಪಿಸಿ ಆಜ್ಞೆಯನ್ನು ಪಡೆದುಕೊಳ್ಳಬೇಕಾಗಿತ್ತು. ಈ ಚಾವಡಿಗಳ ಕಾರ್ಯವಿಧಾನ, ಅಲ್ಲಿಗೆ ಸಂಬಂಧಿಸಿದ ಗೌಪ್ಯ ವಿವರಗಳನ್ನು ರಾಜನಿಗೆ ವರದಿ ಮಾಡಲು ಬೇಹುದಳವೊಂದಿರುತ್ತಿತ್ತು. ಅದರಿಂದಾಗಿ ಈ ಇಲಾಖೆಗಳ ಕಾರ್ಯವಿಧಾನದಲ್ಲಿ ಏನಾದರೂ ಕೊರತೆ ಕಂಡುಬಂದರೆ ಒಡನೆಯೇ ಸರಿಪಡಿಸಲು ಸಾಧ್ಯವಾಗುತ್ತಿತ್ತು.[೧೧] ಮೈಸೂರು ಸಂಸ್ಥಾನದಲ್ಲಿ ೧೬೭೯–೧೬೮೧ ರಲ್ಲಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಆಡಳಿತಾಂಗದ ಪ್ರತಿಯೊಂದು ವಿಭಾಗಗಳಿಗೆ ಸುಭೇದಾರರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು. ಈತನ ಕೈಕೆಳಗೆ ಸಹಾಯಕನಾಗಿ ಚಿಕ್ಕಪಾರು ಪತ್ತೆಗಾರನನ್ನು ನೇಮಿಸಲಾಗಿತ್ತು. ಅತವಾನಗೆಪ್ರತಿ (Athavanage prati) ಎಂಬ ಮೂರು ಜನ ಬರಹಗಾರರು, ಆರು ಜನ ಗುಮಾಸ್ತರು, ಒಬ್ಬರು ರಾಯಸದವರು. ಇದ್ದ ಅಂಚೆ ವ್ಯವಸ್ಥೆ ಜಾರಿಯಲ್ಲಿತ್ತು. ಪ್ರತೀ ವಿಭಾಗದಲ್ಲಿ ಒಬ್ಬೊಬ್ಬರು ಅಂಚೆ–ಹರಿಕಾರರಿದ್ದರು. ಪತ್ರಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು ಮತ್ತು ತನ್ನ ಪರಿದಿಯೊಳಗೆ ಬರುವ ಪ್ರದೇಶಗಳಲ್ಲಿ ನಡೆದ, ತನ್ನ ಗಮನಕ್ಕೆ ನೇರವಾಗಿ ಬಂದ ಘಟನೆಗಳ ಬಗ್ಗೆ ವರದಿ ಮಾಡುವುದು ಈತನ ಕರ್ತವ್ಯವಾಗಿತ್ತು.[೧೨] ಪ್ರತೀ ಇಲಾಖೆಯಲ್ಲೂ ಕೆಳ ದರ್ಜೆಯ ಅಧಿಕಾರಿಗಳನ್ನು ಅಗತ್ಯತೆಗಳಿಗೆ ತಕ್ಕಂತೆ ನೇಮಿಸಲಾಗುತ್ತಿತ್ತು. ದಫೇದಾರರು (Head Peon) ಕಾಳೂಳಗದವರು ಹಸ್ತಾಂತರಿ, ಗೊಲ್ಲ (ಟ್ರಜರಿ ಅಡೆಂಟರ್‌ಗಳು) ಇಬ್ಬರು ಕಾವಲುಗಾರರು, ಒಬ್ಬ ಚಾವಡಿ ಕಾವಲುಗಾರ ಮತ್ತು ದೀವಟಿಗೆಯ ಜನ ಇದ್ದರು, ಜೊತೆಗೆ ಸ್ಥಳೀಯ ಪ್ರಜಾಸೈನ್ಯ (ಮಿಲಿಟರಿ) ಗೆ 'ಕಂದಾಚಾರ' ಎಂದು ಕರೆಯಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ನಗರಗಳಲ್ಲಿಯೂ ಸಹ ಪೊಲೀಸ್ ಕರ್ತವ್ಯಗಳನ್ನು ಮಾಡುವ ವ್ಯವಸ್ಥೆಗಳು ಇದ್ದವು. ಮೈಸೂರಿನಲ್ಲಿ 'ಕಂದಾಚಾರ' ಎಂಬುವುದು ಆಡಳಿತಾಂಗದ ಒಂದು ಭಾಗವಾಗಿತ್ತು. 'ಒಡೆಯರ್' ರವರುಗಳ ಕಾಲದಲ್ಲಿ ಈ ಕಂದಾಚಾರಕ್ಕೆ ದಳವಾಯಿಗಳು ಮುಖ್ಯಸ್ಥರಾಗಿದ್ದರು. ಪೊಲೀಸ್ ವ್ಯವಸ್ಥೆಯನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲಾಯಿತು. ಠಾಣೆಗಳ ಪ್ರಭಾರದಲ್ಲಿ 'ಠಾಣೇದಾರರು' ಇರುತ್ತಿದ್ದರು. ಹೋಬಳಿಗಳ ಮಟ್ಟದಲ್ಲಿ ಪೊಲೀಸ್ ಕರ್ತವ್ಯಗಳನ್ನು ನಡೆಸಲು 'ಹೋಬಳಿದಾರ'ರು ಇರುತ್ತಿದ್ದರು. ಈ ಇಲಾಖೆಗೆ ಸಂಬಂಧಿಸಿದ ರಾಜ್ಯಾ ದೇಶಗಳನ್ನು 'ಓಲೇಕಾರ'ರು, 'ದೂತ', 'ವಾರ್ತಾವಾಹಕ' (Messengers), 'ಹರೀಕಾರ ' 'ಡಂಗುರದವರು ' 'ತಮಟೆಯವರು' (Drummers) ಸಾರುತ್ತಿದ್ದರು. ಬೇರೆ ಬೇರೆ ಜಾತಿಗೆ ಸೇರಿದವರು ಆಯಾ ಜಾತಿಗೆ ಸಂಬಂಧಿಸಿದ ಕಟ್ಟಲೆಗಳನ್ನು ಉಲ್ಲಂಘಿಸದಂತೆ ನೋಡಿಕೊಳ್ಳುವ ಸಲುವಾಗಿ ಈ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು ಎಂದೂ ಹೇಳಲಾಗುತ್ತಿದೆ. ಮತ್ತು ಕಳ್ಳತನವನ್ನು ತಡೆಯುವುದು, ವ್ಯಾಪಾರಸ್ಥರು ತಮ್ಮ ವ್ಯಾಪಾರ ವಹಿವಾಟುಗಳನ್ನು ನಿರ್ಧಿಷ್ಟಪಡಿಸಿದ ನೀತಿ ನಿಯಮಗಳಿಗೆ ಅನುಗುಣವಾಗಿ ಮಾಡುವಂತೆ ನೋಡಿಕೊಳ್ಳಲು ವಿವಿಧ ವರ್ಗದ ಆರೋಪಿಗಳ ಮೇಲೆ ಪ್ರಕರಣ ದಾಖಲಿಸಲು ಈ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. [೧೩] ಇವರುಗಳಿಗೆ ಅಂದರೆ ಈ ಸೇವಕರುಗಳಿಗೆ ಇನಾಮ್ ಜಮೀನನ್ನು ಅಥವಾ ಕಂದಾಯರೂಪದಲ್ಲಿ ಸಂಗ್ರಹಿಸಿದ ಧಾನ್ಯಗಳಲ್ಲಿ ಪಾಲನ್ನು ಸಂಬಳ ವಾಗಿ ನೀಡಲಾಗುತ್ತಿತ್ತು. ದಿವಾನ್ ಪೂರ್ಣಯ್ಯನವರು ಮುಂದೆ ಪುನ: ಪಟೇಲರುಗಳ ಸಂಖ್ಯೆ ಕಡಿತಗೊಳಿಸಿ ಕಂದಾಚಾರ ಪೇದೆ (ಪೀವನ್) ಗಳನ್ನು ಹೊಸದಾಗಿ ಪರಿಚಯಿಸಿದರು. ಅವರುಗಳ ಮುಖ್ಯ ಕರ್ತವ್ಯವೆಂದರೆ ಆರೋಪಿಗಳನ್ನು ದಸ್ತಗಿರಿ ಮಾಡುವುದು, ಅವರುಗಳನ್ನು ಬಂಧದಲ್ಲಿಡುವುದು, ಜೈಲುಗಳಲ್ಲಿ ಈ

ಆರೋಪಿಗಳನ್ನು ರಕ್ಷಿಸುವುದು, ಕೋಟೆಗಳ ಪಹರೆ ಕಾಯುವುದು, ಪಲ್ಲಕ್ಕಿ (Palanquins) ಗಳನ್ನು ಸಾಗಿಸುವುದು ಮತ್ತು ಓಲೆಗಳನ್ನು ಸಾಗಿಸುವುದು ಆಗಿತ್ತು [೧೪] ಪ್ರತೀ ವಿಭಾಗಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ 'ಕಂದಾಚಾರ' ಪಡೆಯವರು ಇದ್ದರು. ಒಬ್ಬರು ಥಾಣಾದಾರರು ಮತ್ತು ಒಬ್ಬರು ಗುರಿಕಾರರು, ಮೂರು ಜನ ಶಿರಸ್ತೇದಾರರು, ಒಬ್ಬರು ಓಲಗ ಊದು ವವರು, ಡ್ರಂ ಬಡಿಯುವವರನ್ನು (ಕೊಂಬಿನವನು, ತಮಟೆಯವನು) ಸೂಕ್ತವಾಗಿ ನೇಮಿಸಲಾಗಿತ್ತು. ರಾಜ್ಯದ ಘಟಕಗಳ ಗಾತ್ರಗಳಿಗೆ ಅನುಗುಣವಾಗಿ ೧೦೦ ರಿಂದ ೪೦೦ ರ ವರೆಗೆ ಓಲೇಕಾರರು ಇದ್ದರು. ಆರು ಜನ ಓಲೆಕಾರರಿಗೆ ಮೇಲೆ ಒಬ್ಬ ದಫೇದಾರ ಹಾಗೂ ೫೦ ಜನ ದಫೇದಾರರುಗಳಿಗೆ ಒಬ್ಬರು ಹೋಬಳಿದಾರರು ಇದ್ದರು. ಸಾದಾರಣವಾಗಿ ಈ 'ಕಂದಾಚಾರ' ಪ್ರಜಾಸೈನ್ಯದ ಕರ್ತವ್ಯವೆಂದರೆ, ಆಯಾ ಘಟಕಗಳಲ್ಲಿ (ಯುನಿಟ್) ಗಸ್ತು ತಿರುಗುವುದು, ಸ್ಥಳೀಯ ಖಜಾನೆಯನ್ನು ಕಾಯುವುದಾಗಿತ್ತು. ಇದನ್ನು 'ಹಸ್ತಾಂತರದ ಕಾವಲುಕಟ್ಟೆ' ಎನ್ನುತ್ತಿದ್ದರು.[೧೫]

ಯುದ್ಧ ನಡೆಯುವ ಸಂದರ್ಭಗಳಲ್ಲಿ ಇವರು ಶಸ್ತ್ರಾಸ್ತ್ರಗಳೊಂದಿಗೆ ಸಿದ್ದರಿರಬೇಕಿತ್ತು [೧೬] ಇವರು ಅಂಚೆ ಕಾರ್ಯ ದೊಂದಿಗೆ ಅತ್ಯಂತ ಗುಪ್ತ ಮಾಹಿತಿ ರವಾನೆ ಮಾಡುವ ಗುಪ್ತಚರರಾಗಿ ಕೆಲಸ ಮಾಡುತ್ತಿದ್ದರು. ಆದರೆ "ಇದೊಂದು ಭಯಂಕರವಾದ ಪ್ರಜಾಪೀಡಕ ಸಾಧನವಾಗಿತ್ತು" ಎಂದು ವಿಲ್ಕ್ಸ್ ಅಭಿಪ್ರಾಯಪಡುತ್ತಾರೆ.[೧೭] ಸಮಕಾಲೀನ ಮೊಗಲ್ ಸಾಮ್ರಾಜ್ಯದಲ್ಲೂ ಇದೇ ರೀತಿ ವ್ಯವಸ್ಥೆ ಇತ್ತೆಂದು ಜ.ಸರ್‌ಕಾರ್ ಅಭಿಪ್ರಾಯಪಡುತ್ತಾರೆ.

ಈ ಪ್ರಜಾಸೈನ್ಯವು ರಾಜ್ಯದ ಸಿವಿಲ್ ಮತ್ತು ಮಿಲಿಟರಿ ಆಡಳಿತ ವಿಭಾಗದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿ ದಂತೆ ಕಂಡುಬರುತ್ತದೆ. ಯುದ್ಧ ಮತ್ತು ಶಾಂತಿ ಸಂದರ್ಭಗಳಲ್ಲಿ ಈ ಪಡೆಯು ಅತ್ಯಂತ ಉಪಯುಕ್ತವಾಗಿತ್ತು. ಇಂತಹ ವ್ಯವಸ್ಥೆಯು ಸಮಕಾಲೀನ ಮರಾಠ ಮತ್ತು ಮೊಗಲರ ಆಡಳಿತ ಪದ್ಧತಿಯಲ್ಲಿ ಇತ್ತು.[೧೮] ಸ್ಥಿರಾಸ್ಥಿ ಭೂಮಿಗೆ ಸಂಬಂಧಿಸಿದಂತೆ ವಿಶೇಷ ಸುಭೇದಾರರನ್ನು ನೇಮಿಸಲಾಗಿತ್ತು. ಆ ಭೂಮಿಗಳಲ್ಲಿ ಹೆಚ್ಚಿನ ಬೆಳೆ ಬೆಳೆಯುವಂತೆ ನೋಡಿಕೊಳ್ಳುವ ಮತ್ತು ಆ ಭೂಮಿಯಲ್ಲಿ ಹೆಚ್ಚಾದ ಬೆಳೆಯ ಬಗ್ಗೆ ಮೇಲ್ವಿಚಾರಣೆ ಮಾಡುವುದು ಈತನ ಕರ್ತವ್ಯವಾಗಿತ್ತು. ಈತನ ಕೈಕೆಳಗೆ ನಿಗದಿತ ಲೆಕ್ಕಪತ್ರಗಳನ್ನು ಇಡಲು ಮತ್ತು ಹಣ ಹಾಗೂ ವಸ್ತುಗಳ ಬಗ್ಗೆ ರಶೀದಿಯನ್ನು ನೀಡಲು ಒಂದು ದಿವಾಣ (ಸಿವಿಲ್) ಸಿಬ್ಬಂದಿ ವ್ಯವಸ್ಥೆ ಇದ್ದು, ಇದಕ್ಕೆ ಶಿರಸ್ತೇದಾರರನ್ನು ನೇಮಿಸಲಾಗಿತ್ತು. ಮಿಲಿಟರಿ ಸಿಬ್ಬಂದಿ ವ್ಯವಸ್ಥೆಯು ಅಂದರೆ 'ಕಂದಾಚಾರ' ಪಡೆಯು 'ಕಿಲ್ಲೇದಾರ' ರ ಮತ್ತು 'ಥಾಣಾದಾರ'ರ ನೇತ್ರತ್ವದಲ್ಲಿ ಈ ಭೂಮಿಗಳನ್ನು ಮತ್ತು ಬೆಳೆಗಳನ್ನು ಕಾಯುವ ಕೆಲಸ ಮಾಡುತ್ತಿತ್ತು.[೧೯]

ಬುದ್ಧಿವಂತಿಕೆ, ಪ್ರಾಮಾಣಿಕತೆ, ಕಾರ್ಯಕ್ಷಮತೆಯು ಎಲ್ಲಾ ಉದ್ಯೋಗ ನೇಮಕಾತಿಗಳಿಗೆ ಮಾನದಂಡವಾಗಿತ್ತು. ಭ್ರಷ್ಟಾಚಾರ, ಲಂಚಗುಳಿತನಕ್ಕೆ ಪ್ರೋತ್ಸಾಹವಿರಲಿಲ್ಲ. ಉದ್ಯೋಗಿಗಳ ಆರ್ಥಿಕ ಸ್ಥಿತಿ ಉತ್ತಮವಾಗಿತ್ತು. ಉನ್ನತ ಸ್ಥಾನದ ಉದ್ಯೋಗಿಗಳಾದ ಸುಭೇದಾರರು, ಶಿರಸ್ತೇದಾರರು ಮೊದಲಾದವರಿಗೆ ಅವರ ಉದ್ಯೋಗದ ಜವಾಬ್ದಾರಿಗಳಿಗೆ ಅನುಗುಣ ವಾಗಿ ಸಂಬಳ ನೀಡಲಾಗುತ್ತಿತ್ತು. ಸಂಬಳದ ಅರ್ಧಭಾಗವನ್ನು ಹಣದ ರೂಪದಲ್ಲೂ ಇನ್ನರ್ಧವನ್ನು ವಸ್ತುಗಳ ರೂಪದಲ್ಲೂ ನೀಡಲಾಗುತ್ತಿತ್ತು.[೨೦] ಕಂದಾಚಾರ ಸೇವೆಯಲ್ಲಿ ಓಲೇಕಾರರಿಗೆ ಸಂಬಳವು ನಿಗಧಿಯಾಗಿದ್ದು ಆಗಾಗ ಅರ್ಧ ವರಾಹದಿಂದ ಒಂದು ವರಾಹಕ್ಕೆ ಬದಲಾಗುತ್ತಿತ್ತು. ಇವರಿಗೆ ಅರ್ಧ ಸಂಬಳವನ್ನು ಹಣದ ರೂಪ ದಲ್ಲೂ ಅರ್ಧ ಸಂಬಳವನ್ನು ವಸ್ತು ರೂಪದಲ್ಲೂ ನೀಡಲಾಗುತ್ತಿತ್ತು. ಇದು ಅವರಿಗೆ ಮಂಜೂರಾದ ಜಮೀನಿನಲ್ಲಿ ಬೆಳೆದ ಬೆಳೆಯ ಸ್ವರೂಪದಲ್ಲಿ ನೀಡ ಲಾಗುತ್ತಿತ್ತು. 'ಕಂದಾಚಾರ' ಸೇವೆಯನ್ನು ಆಕರ್ಷಣೀಯವನ್ನಾಗಿ ಮಾಡಲು ಎಲ್ಲಾ ಓಲೇಕಾರರಿಗೆ ಬಲತ್ಕಾರದ ಕಠಿಣ ಕೆಲಸ (ಹಿತ್ತು- ಬಿತ್ತು) ದಿಂದ ವಿಮುಕ್ತಿ ನೀಡಲಾಗಿತ್ತು. ಅವರಿಂದ ಸರಕಾರಕ್ಕೆ ಕಟ್ಟಲು ಬಾಕಿ ಇರುವುದಕ್ಕೂ ವಿನಾಯ್ತಿ ನೀಡ ಲಾಗಿತ್ತು. ಮತ್ತು ಅವರಿಗೆ ಕಾಣಿಕೆ (Benevolences) ಮತ್ತು ಕಡ್ಡಾಯ ಮನೆ ತೆರಿಗೆಳಿಂದ ವಿನಾಯಿತಿ ನೀಡಲಾಯಿತು.[೨೧]

ಸೈನಿಕ ಸಮೂಹಕ್ಕೆ ತೆರಿಗೆ ವಿನಾಯಿತಿ ನೀಡುವುದಕ್ಕೆ ಕಾರಣವೇನೆಂದರೆ, ಚಿಕ್ಕದೇವರಾಜ ಒಡೆಯರ್‌ರವರ ಕಾರ್ಯಕ್ರಮ (ಕಾನೂನು) ಗಳಿಗೆ ಇವರ ವಿರೋದವಿದ್ದು ಅದನ್ನು ಸರಿದೂಗಿಸಲು, ಸಮಾದಾನಗೊಳಿಸಲು ವಿನಾಯಿತಿ ನೀಡಲಾಯಿತು.[೨೨] ಇಂತಹ ವಿನಾಯಿತಿಯನ್ನು ತೆರಿಗೆ ಕಾನೂನಿನನ್ವಯ ನ್ಯಾಯಸಮ್ಮತಗೊಳಿಸಲಾಗಿತ್ತೆಂದು ಕಂಡು ಬರುತ್ತದೆ. ಪೊಲೀಸ್ ವ್ಯವಸ್ಥೆ ಅಪರಾಧ ಗುಪ್ತವಾರ್ತೆ ಮತ್ತು ಗೂಢಚಾರ ಸೇನೆಗಳಲ್ಲಿ ಮೊಗಲ ಮತ್ತು ಮರಾಠರ ಪ್ರಭಾವ ಕಂಡುಬರುತ್ತದೆಂದು ಹಳೆಯ ಬರಹಗಾರರ ಅಭಿಪ್ರಾಯ.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ವಿಶೇಷ ಗಮನಹರಿಸಲಾಗಿತ್ತು. ಅಪರಾಧಗಳಿಗೆ ಸಂಬಂಧಿಸಿದಂತೆ ಒಂದು ಖಾಯಂ ಗುಪ್ತವಾರ್ತೆ ವ್ಯವಸ್ಥೇ ಮಾಡಲಾಯಿತು. 'ಒಲೆಕಾರರು' ರಾಜ್ಯದ ವಿವಿಧ ಭಾಗಗಳ ಜನರ ನಡತೆ, ವರ್ತನೆ, ಗುಣಗಳ ಬಗ್ಗೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ರಾಜ್ಯದ ಮೂಲೆ ಮೂಲೆಗಳಲ್ಲಿ ಹಾಗೂ ರಸ್ತೆಬದಿಗಳಲ್ಲಿ ನಡೆಯುವ ಘಟನೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಬೇಕಾಗಿತ್ತು. ಇದು ಪ್ರಾಮಾಣಿಕ ವಾಗಿರಬೇಕಿತ್ತು. ರಾಜ್ಯದ ಘಟಕ ಕೇಂದ್ರಸ್ಥಾನಗಳಲ್ಲಿ, ಮುಖ್ಯವಾದವುಗಳಲ್ಲಿ ವಿಶೇಷ ಸಿಬ್ಬಂದಿಗಳನ್ನು ನೇಮಿಸಲಾಗಿತ್ತು. ಅವರೆಂದರೆ, ಕೊತ್ವಾಲ, ಶಾನುಭೋಗ, (ಇವರ ಸಂಖ್ಯೆಯು ಆಯಾ ಪ್ರದೇಶಗಳ ಗಾತ್ರಕ್ಕೆ ಅನುಗುಣವಾಗಿ ಒಂದರಿಂದ ಮೂರರವರೆಗೆ ಇರುತ್ತಿತ್ತು) ಪೇಟೆಸೆಟ್ಟಿ, ಯಜಮಾನ, ಸ್ಥಳೀಯ ಲೆಕ್ಕಪತ್ರ ಬರೆಯುವ ದೇಶದ ಶಾನುಭೋಗ, ಡಂಗುರ ದವನು (ಚಲವಾದಿ, ದಂಡಿಯವನು) ಕಹಳೆ ಊದುವವ, ನಗಾರಿ ಬಡಿಯುವವ, ಪತ್ತೆದಾರಿಯವರು (ಕಳ್ಳ ಭಂಟರು) ಮನೆಗೆಲಸದವರು (ಊಳಿಗದವರು) ರವರುಗಳು ಮುಖ್ಯ ಕರ್ತವ್ಯಗಳಲ್ಲಿದ್ದರು.[೨೩] ಸಾದಾರಣವಾಗಿ ಈ ಅಧಿಕಾರಿಗಳು ಸ್ಥಳೀಯ ಸಮಾಜದ ವಿವಿಧ ಜಾತಿ ಮತ್ತು ವರ್ಗಕ್ಕೆ ಸೇರಿದವರಾಗಿದ್ದು, ಅದರಲ್ಲೂ ಬಣಜಿಗ, ವೈಶ್ಯ, ಪಾಂಚಾಲರಾಗಿದ್ದರು ತಮ್ಮ ಜಾತಿ ಕಟ್ಟಳೆಗಳನ್ನು ಮೀರುತ್ತಿರಲಿಲ್ಲ. ಕಳ್ಳತನವನ್ನು ತಡೆಯಲು ವ್ಯಾಪಾರಸ್ಥರು ತಮ್ಮ ವ್ಯಾಪಾರವನ್ನು ನೀತಿ ನಿಯಮ ಗಳಿಗನುಗುಣವಾಗಿ ನಡೆಸಿಕೊಂಡು ಬರುತ್ತಿದ್ದರು. ಬೇರೆ ಬೇರೆ ವರ್ಗದ ಅಪರಾಧಗಳನ್ನು ಮಾಡಿದವರ ವಿರುದ್ಧ ಪ್ರಕರಣ ಗಳನ್ನು ಹಾಕುತ್ತಿದ್ದರು. ಅಪರಾಧಗಳನ್ನು ತಡೆಯಲು ತಮ್ಮ ಪ್ರದೇಶಗಳಲ್ಲಿ ರಾತ್ರಿ ಗಸ್ತು ತಿರುಗುತ್ತಿದ್ದರು. ನಂತರ ಕೊತ್ವಾಲ ಪೇಟೆಸೆಟ್ಟಿ ಮತ್ತು ಯಜಮಾನ ರವರುಗಳು ಸ್ಥಳೀಯ ಪ್ರಕರಣಗಳನ್ನು ವಿಚಾರಣೆ ಮಾಡುವ ಅಧಿಕಾರ ಹೊಂದಿದ್ದರು. ಸಣ್ಣ ತಪ್ಪುಗಳಿಗೆ ತಾವೇ ದಂಡವಿಧಿಸಿ ದೊಡ್ಡ ತಪ್ಪುಗಳ ತೀರ್ಮಾನಕ್ಕೆ ರಾಜನಿಗೆ ವರದಿ ಮಾಡುತ್ತಿದ್ದರು.[೨೪]

ಚಿಕ್ಕದೇವರಾಜ ಒಡೆಯರ್‌ರವರು ರಾಜ್ಯಾದಾಯವನ್ನು ಪುನರ್‌ಸಂಘಟಿಸಿದರು. ಹಳ್ಳಿಯು ರಾಜ್ಯಾದಾಯದ ಚಿಕ್ಕ ಘಟಕವಾಗಿತ್ತು. ಇದಕ್ಕೆ (ಹಳ್ಳಿಗೆ) ಹೆಚ್ಚಿನ ಗಮನಹರಿಸಲಾಯಿತು. ಹಳ್ಳಿಯಲ್ಲಿ ೧೨ ರೀತಿಯ ಆಡಳಿತಾಂಗವಿದ್ದು ಇದಕ್ಕೆ ಬಾರಾಬಲೂತಿ ಎಂದು ಕರೆಯುತ್ತಿದ್ದರು.[೨೫] ಅವರೆಂದರೆ ೧)ಹಳ್ಳಿಯ ಮುಖ್ಯಸ್ಥ ಗೌಡ ೨) ಲೆಕ್ಕಪತ್ರ ಬರೆಯುವವ- ಶಾನು ಭೋಗ, ೩) ಬ್ರಾಹ್ಮಣ ಜ್ಯೋತಿಷ್ಯಕಾರ- ಪಂಚಾಂಗದ ಬ್ರಾಹ್ಮಣ, ೪) ಕಮ್ಮಾರ- ಕಬ್ಬಿಣದ ಕೆಲಸದವನು, ೫) ಅಕ್ಕಸಾಲಿ ೬) ಕುಂಬಾರ ೭)ಅಗಸ, ೮)ಬಂಡಾರಿ-ಕೆಲಸಿ (ಬಾರ್ಬರ್) ೯) ತೋಟಿ, (ಬೀದಿ ಗುಡಿಸುವವ), ೧೦) ಕಾವಲುಗಾರ - ತಳವಾರ, ೧೧) ನೀರು ಬಿಡುವವ - ಕೆರೆ - ನೀರ್ಗಂಟಿ ಮತ್ತು ೧೨) ಮರಗೆಲಸದವ ಓಜರವನು ಇಲ್ಲಿಯೂ ಸಹ ಗಮನಿಸಬೇಕಾದ ಅಂಶವೆಂದರೆ, ಪ್ರತೀ ಹಳ್ಳಿಯಲ್ಲಿ ಅತ್ಯಂತ ಅಗತ್ಯ ಸೇವೆ ಮಾಡುತ್ತಿದ್ದ ೧೨ ಆಡಳಿತಾಂಗವಿದ್ದು, ಅದರಲ್ಲಿ ರಕ್ಷಣೆಯ ಸಲುವಾಗಿ ಕಾವಲುಗಾರ ಮತ್ತು ತಲವಾರ ಸಹ ಇದ್ದುದನ್ನು ಗಮನಿಸಬಹುದು. ಇವರು ಗ್ರಾಮ ರಕ್ಷಣೆಯ ಕೆಲಸವನ್ನು ಮಾಡುತ್ತಿದ್ದರು. ಈ ಹಳ್ಳಿಯ ಮುಖ್ಯಸ್ಥನಿಗೆ ಮನೆ ತೆರಿಗೆ, ಕಡ್ಡಾಯದ ಶ್ರಮ (ಹಿತ್ತು- ಬಿತ್ತು) ಕಡ್ಡಾಯ ಕಾಣಿಕೆಗಳಿಂದ ವಿನಾಯಿತಿ ನೀಡಲಾಗಿತ್ತು. ಇದರ ಜೊತೆಗೆ ಹಳ್ಳಿಯನ್ನು ಕಾವಲು ಕಾಯುತ್ತಿದ್ದ ಕಾವಲುಗಾರನಿಗೆ ಹಳ್ಳಿಯಲ್ಲಿ ರೈತರಿಂದ ಒಂದು ಹೊರೆ ಹುಲ್ಲು ಮತ್ತು ಒಂದು ಕೊಳಗ ಧಾನ್ಯವನ್ನು ಪ್ರತೀ ರೈತರಿಂದ ಪಡೆಯಲು ಅನುಮತಿ

ನೀಡಲಾಗಿತ್ತು. ಇದರಿಂದ ಅವನ ಹಾಗೂ ಆತನು ಸಾಕಿದ ಜಾನುವಾರುಗಳ ಹೊಟ್ಟೆಪಾಡಿಗೆ ಸಾಕಾಗಿತ್ತು. ಸರಕಾರ ಇವನಿಗೆ ಸಂಬಳ ನೀಡುತ್ತಿರಲಿಲ್ಲ. ಒಂದರಿಂದ ಆರು ವರಹದವರೆಗೆ ಕಂದಾಯ ಮೌಲ್ಯ ಹೊಂದಿರುವ ಭೂಮಿಯನ್ನು ಅವರ ಯೋಗ್ಯತೆಗೆ ಅನುಸಾರವಾಗಿ ಕಂದಾಯರಹಿತವಾಗಿ ನೀಡಲಾಗುತ್ತಿತ್ತು. ತೋಟಿ ಮತ್ತು ತಳವಾರರನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳಿಗೆ ಪ್ರತೀ ರೈತರಿಂದ ವಾರ್ಷಿಕ ಭತ್ಯೆಯಾಗಿ (ಹಡದೆ) ನಿರ್ಧಿಷ್ಟ ಪ್ರಮಾಣದ ಧಾನ್ಯವನ್ನು ಪಡೆಯಲು ಅನುಮತಿ ನೀಡಲಾಗಿತ್ತು. ಆದರೆ ಇದನ್ನು ರೈತರ ಮನೆಯ ಜನಸಂಖ್ಯೆಯ ಆಧಾರದ ಮೇರೆಗೆ ಲೆಕ್ಕ ಮಾಡಿ ನಿಗಧಿ ಗೊಳಿಸಲಾಗುತ್ತಿತ್ತು. ಆದರೆ ಬ್ರಾಹ್ಮಣ ಜ್ಯೋತಿಷ್ಯಕಾರ, ಶಾನುಭೋಗ, ತೋಟಿ ಮತ್ತು ಕಾವಲುಗಾರರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಒಂದು ವರಹದಿಂದ ಆರು ವರಹದವರೆಗೆ ಕಂದಾಯ ಮೌಲ್ಯ ಹೊಂದಿರುವ ಭೂಮಿಯನ್ನು ಕಂದಾಯ ರಹಿತವಾಗಿ ನೀಡಲಾಗಿತ್ತು. ರಾಜ್ಯದಲ್ಲಿ ಸೇನೆಯು ರಾಜ್ಯದ ಗಡಿಯನ್ನು ಕಾಯುವುದರ ಜೊತೆಗೆ ಗಡಿಯ ಒಳಗೆ ಅಕ್ರಮವಾಗಿ ನುಗ್ಗುವವರನ್ನು ಕಾವಲು ಕಾಯುವ ಕೆಲಸವನ್ನು ಮಾಡುತ್ತಿದ್ದರು. ಈ ಸೇನೆಯನ್ನು ಅಪರಾಧ ತಡೆಯುವುದಕ್ಕಾಗಿ ಮಾತ್ರವಲ್ಲ ರಕ್ಷಣೆಗಾಗಿಯೂ ಬಳಸುತ್ತಿದ್ದರು. ಪಟ್ಟಣ ಮತ್ತು ಹಳ್ಳಿ ಗಳಲ್ಲಿ ಕಾನೂನು ಸುವ್ಯವಸ್ಥೆಯ ಬಗ್ಗೆ ನೋಡಿಕೊಳ್ಳಲು ಅಪರಿಚಿತರು ಮತ್ತು ಹೊಸ ವ್ಯಕ್ತಿಗಳು ಬಂದರೆ ಅವರನ್ನು ಗಮನಿಸಲು ಮತ್ತು ಕಳ್ಳತನ ಮೊದಲಾದ ಅಪರಾಧಗಳನ್ನು ತನಿಖೆ ಮಾಡಲು ಸ್ಥಳೀಯವಾದ ಪ್ರಜಾಸೈನ್ಯ (MILITIA) ವ್ಯವಸ್ಥೆ ಇತ್ತು.[೨೬] ಪ್ರಾಚೀನ ಕಾಲದಲ್ಲಿ ಗ್ರಾಮಕೂಟ ಅಥವಾ ಗೌಂಡ (ಗೌಡ) ರವರುಗಳು ಹಳ್ಳಿಗಳ ಮುಖ್ಯಸ್ಥರಾಗಿದ್ದರು. ಅವರುಗಳು ಗ್ರಾಮಗಳಲ್ಲಿ ಕಾನೂನು ಸುವ್ಯವಸ್ಥೆಯ ಪರಿಪಾಲನೆ, ಕಳ್ಳತನ, ರಾಬರಿಯಂತಹ ಅಪರಾಧಗಳನ್ನು ತಡೆಯುವ ಕೆಲಸಗಳನ್ನು ಮಾಡುತ್ತಿದ್ದರು. ನಂತರ ಈತನನ್ನು ಪಟೇಲ ಎಂದು ಕರೆಯುತ್ತಿದ್ದರು. ಈತನ ಕರ್ತವ್ಯಗಳು ಈತನಿಗೆ ವಂಶಪಾರಂಪರ್ಯವಾಗಿ ಬರುತ್ತಿತ್ತು. ಈತನ ಕೆಲಸಗಳಿಗೆ ಗ್ರಾಮಗಳಲ್ಲಿರುವ ಗ್ರಾಮಕೂಟ (MILITIA) ಅಥವಾ ತಳಾರರು ಸಹಾಯ ಮಾಡುತ್ತಿದ್ದರು. ಇಂತಹ 'ಗೌಂಡರ್' ಮೃತಪಟ್ಟಾಗ ಅವರ ವಿಧವಾ ಪತ್ನಿಯರು ಗೌಂಡರ್‌ರವರ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸಿದ ಮತ್ತು ಕಛೇರಿ ಕೆಲಸ ನಿರ್ವಹಿಸಿದ ಉದಾಹರಣೆಗಳು ಇವೆ [೨೭] ಇದನ್ನು ಈ ಹಿಂದೆಯೇ ವಿವರಿಸಲಾಗಿದೆ.

೪:೩ ಹೈದರ್ ಮತ್ತು ಟಿಪ್ಪು ಕಾಲದ ಪೊಲೀಸ್ ವ್ಯವಸ್ಥೆ

ಹೈದರ್, ಟಿಪ್ಪು, ಮುಮ್ಮಡಿ ಕೃಷ್ಣರಾಜ ಒಡೆಯರ್ ಈ ಮೂವರ ವಿಷಯದಲ್ಲಿ ಬ್ರಿಟೀಷ್ ಇತಿಹಾಸಕಾರರು ಸತ್ಯ ವನ್ನು ಹೇಳಿರಲಿಲ್ಲ. ಹೇಳಿದ್ದರೂ ತಪ್ಪು ಅಭಿಪ್ರಾಯ ಮೂಡುವ ಹಾಗೆ ಹೇಳಿದ್ದರು. [೨೮] ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆ ಬೆಳೆದು ಬಂದದ್ದೇ ಈ ಮೂವರ ಕಾಲದಲ್ಲಿ. ಹೀಗಿರುವಾಗ ಸತ್ಯವಾದುದನ್ನು ಹುಡುಕುವುದು ಸ್ವಲ್ಪ ತ್ರಾಸದ ಕೆಲಸವೇ ಸರಿ. ಹೈದರಾಲಿಯ ದಿನಚರಿ ಸೂರ್ಯೋದಯದಿಂದ ಆರಂಭವಾಗುತ್ತದೆ. ಮೈಗಾವಲರದು ಮೊದಲನೇ ದರ್ಶನ. ಅವರು ಪ್ರಭುಗಳಿಗೆ ತಂದ ಸುದ್ದಿ ತಿಳಿಸಿ, ಪ್ರಭುಗಳಿತ್ತ ಸುದ್ದಿಗಳನ್ನು ಮಂತ್ರಿ ಸೇನಾಪತಿಗಳಿಗೆ ಒಯ್ಯುವರು[೨೯] ಇಲ್ಲಿ ಮೈಗಾವಲರು ಎಂದರೆ ಮೈಯನ್ನು ಕಾವಲು ಕಾಯುವವರು ಎಂದರ್ಥ. ಅಂದರೆ ಆಧುನಿಕ ಭಾಷೆಯಲ್ಲಿ ಅಂಗರಕ್ಷಕರು (ಬಾಡಿಗಾರ್ಡ್) ಎಂದು ಅರ್ಥವಾಗುತ್ತದೆ. ಅಂದರೆ ರಾಜನಿಗೆ ದೇಶದಲ್ಲಿ ನಡೆಯುವ ಘಟನೆಗಳ ಗುಪ್ತ ಮಾಹಿತಿಗಳನ್ನು ಈ ಅಂಗರಕ್ಷಕರು ತಲುಪಿಸುತ್ತಿದ್ದರು.

ಹೈದರನು ಗುಪ್ತಚರರಿಗೂ ಹೆಚ್ಚು ಮಹತ್ವ ನೀಡಿದ್ದನು. ಆತನ ದರ್ಬಾರ್ ನಡೆಯುವ ವೇಳೆ ಆತನ ಎಡಬಲಗಳಲ್ಲಿ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ತುಂಬಿದ ಚೀಲಗಳನ್ನಿಡಲಾಗುತ್ತಿತ್ತು. ಉತ್ತಮ ಗುಪ್ತವಾರ್ತೆಗಳನ್ನು ತಂದವರಿಗೆ ಒಂದು ಅಥವಾ ಎರಡು ಕೈತುಂಬ ನಾಣ್ಯಗಳನ್ನು ನೀಡಲಾಗುತ್ತಿತ್ತು. [೩೦]

ಹೈದರ್‌ನ ಕಾಲದ ಪೇಶಾ (ಅಧಿಕಾರಿ ವರ್ಗ) ದಲ್ಲಿ ಪೊಲೀಸ್ ಕೆಲಸಗಳಿಗೆ ಸಂಬಂಧಿಸಿದಂತೆ ಕಳಭಂಟರು, ಚೋಪುದಾರ, *ಹಳೇಪೈಕಿಯವರ ಬಗ್ಗೆ ಚಿತ್ರ ೨ ನೋಡಿ)* ಇತ್ಯಾದಿಗಳಿದ್ದು, ಒಟ್ಟು ೧೩೧ ಅಧಿಕಾರಿ ಘಟಕಗಳಿದ್ದವು.[೩೧]

ಹೈದರಾಲಿಯ ಕಾಲದಲ್ಲಿದ್ದ ಪೇಶಾ (ಅಧಿಕಾರಿ ವರ್ಗ) ದಲ್ಲಿ ಬಾರ್ ಕಛೇರಿ, ಕಂದಾಚಾರ್ ಕಛೇರಿ, ಕಳಭಂಟ, ಚೂಪುದಾರರ ಕಛೇರಿ ಇತ್ತೆಂದು ತಿ.ತಾ ಶರ್ಮ ತಿಳಿಸುತ್ತಾರೆ. ಕಳಭಂಟರು, ಚೂಪುದಾರರೆಂದರೆ ಗುಪ್ತಚಾರರು ಎಂದರ್ಥ. ಇವರು ಪೊಲೀಸ್ ಪಡೆಯ ಒಂದು ಅಂಗವಾಗಿದ್ದರು. ಚಿಕ್ಕದೇವರಾಜ ಒಡೆಯರ ಕಾಲದಿಂದಲೂ ಇದ್ದ ಕಂದಾಚಾರ ಪದ್ಧತಿಯನ್ನು ಹೈದರನ ಕಾಲದಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಮುಂದುವರಿಸಿಕೊಂಡು ಬರಲಾಯಿತು.[೩೨]

ಹೈದರಾಲಿಯ ಕಾಲದಲ್ಲಿ (ಕ್ರಿ.ಶ ೧೭೬೧-೧೭೮೨) ಪೊಲೀಸ್ ಕೆಲಸಗಳನ್ನು ಮಾಡಲು 'ಕಂದಾಚಾರ' ಎಂಬ ಪಡೆ ಇತ್ತು. ಪ್ರತಿಯೊಂದು ತಾಲೂಕಿನ ವ್ಯವಹಾರಗಳನ್ನು 'ಅಮಿಲ್ದಾರ' ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದನು. ಜನಪ್ರಿಯವಾದ ತಂತ್ರಗಾರಿಕೆ ಇರುವವರನ್ನು 'ಅಮಿಲ್'ಗಳಾಗಿ ಹೊಂದಿದ್ದನು. ೧೭೭೨ ರಲ್ಲಿ ಕೃಷ್ಣ ಅರಸರವರ ಮಗನಾದ ಲಕ್ಷ್ಮಿಕಾಂತಯ್ಯರವರನ್ನು ಹೈದರಾಲಿಯು ಪ್ರಜಾಸೈನ್ಯ ಅಥವಾ ಪೊಲೀಸ್ ಇಲಾಖೆ (ಸೀಮೆ ಕಂದಾಚಾರ ಕಛೇರಿ) ಯ ಭಕ್ಷಿಯನ್ನಾಗಿ ನೇಮಿಸಿದನು.[೩೩] ನಂತರ ಲಕ್ಷ್ಮಿಕಾಂತಯ್ಯರವರನ್ನು ಕಂದಾಯ ಇಲಾಖೆಯ ಜವಾಬ್ದಾರಿ ನೋಡಿಕೊಳ್ಳಲು ನೇಮಿಸಲಾಯಿತು. ಪೊಲೀಸ್ ಇಲಾಖೆಯ ಮುಖ್ಯಸ್ಥನ ಜವಾಬ್ದಾರಿಯನ್ನು ಜೈನುಲ್ಲಾಬಿದಿನ್‌ಗೆ ವಹಿಸಲಾಯಿತು. ಹೈದರನು ತನ್ನ ರಾಜ್ಯವನ್ನು ಹಲವು ಸುಭಾಗಳಾಗಿ ವಿಂಗಡಿಸಿ ಅದಕ್ಕೆ ಸುಬೇದಾರರನ್ನು ನೇಮಿಸಿದ. ಈ ಹೆಸರನ್ನು ಆತನು ಅಕ್ಬರನ ಆಡಳಿತವನ್ನು ನೋಡಿ ಪಡೆದಿದ್ದ. ಅದಕ್ಕೆ ಮೊದಲು ಸ್ಥಳೀಯವಾಗಿ ಆತನಗೆ ಅಮಿಲ ಅಥವಾ ಅಮಿಲ್‌ದಾರ ಎಂದು ಕರೆಯಲಾಗುತ್ತಿತ್ತು.

ಹೈದರಾಲಿ ಯು ೭ ಅಥವಾ ೮ ತಾಲೂಕುಗಳನ್ನು ಒಟ್ಟಿಗೆ ಸೇರಿಸಿ ವಿಭಾಗಗಳನ್ನಾಗಿ ಮಾಡಿ ಅದಕ್ಕೆ ಹಿರಿಯ ಅಧಿಕಾರಿಗಳನ್ನು ನೇಮಿಸಿದ. ಈತನ ಮಗನಾದ ಟಿಪ್ಪು ಸುಲ್ತಾನನು ಮುಂದೆ, ಈ ವಿಭಾಗಗಳ ಅಧಿಕಾರಿಗಳನ್ನು ನಿಯಂತ್ರಿಸಲು ಎರಡು ಬಗೆಯ ಅಧಿಕಾರಿಗಳನ್ನು ನೇಮಿಸಿದನು. ಅವರೆಂದರೆ 'ಅಸೋಫ' ಮತ್ತು 'ಫೌಜುದಾರ' [೩೪] 'ಅಸೋಫ' ಕಂದಾಯ ಇಲಾಖೆಯ ಮುಖ್ಯಸ್ಥನಾದರೆ 'ಫೌಜುದಾರ' ನು ಮಿಲಿಟರಿ ಕಮಾಡೆಂಟ್ ಆಗಿದ್ದನು. ಈತನು ಆಗಾಗ ಸ್ಥಳೀಯ ಪೊಲೀಸರ ಕರ್ತವ್ಯಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದ. ಶ್ರೀರಂಗಪಟ್ಟಣದ ಪಥನಾ ನಂತರ 'ಅಸೋಫ' ಹುದ್ದೆಯನ್ನು ರದ್ದುಗೊಳಿಸಲಾಯಿತು. ಆದರೆ ಫೌಜುದಾರ ಹುದ್ದೆ ಮುಂದುವರೆಯಿತು. ಫೌಜುದಾರನು ಪೊಲೀಸ್ ಇಲಾಖೆಯ ನಿಯಂ ತ್ರಣಾಧಿಕಾರದೊಂದಿಗೆ ಕಂದಾಯ ಇಲಾಖೆಯ ನಿಯಂತ್ರಣಾಧಿ ಕಾರವನ್ನೂ ಸಹ ಹೊಂದಿದ್ದನು. ಟಿಪ್ಪುವು ಆಡಳಿತವನ್ನು ವಹಿಸಿಕೊಂಡಾಗ ತನ್ನ ತಂದೆಯಿಂದ ಅವನು ಪಡೆದ ಐದು ಅಸೋಫಿ (ಪ್ರಾಂತ) ಗಳು ಸಮಾನ ಗಾತ್ರವಾಗಿರಲಿಲ್ಲ. ಡಾ: ಎಂ.ಎಚ್.ಗೋಪಾಲರು ಹೇಳುವಂತೆ ಈ ಐದು ಅಸೋಫಿಗಳಲ್ಲಿನ ೧೭೧ ಪರಗಣ (ತಾಲೂಕು)ಗಳಲ್ಲಿ ಸಿರಾ ಪ್ರಾಂತದಲ್ಲಿ ಕೇವಲ ಐದು ಪರಗಣಗಳಿದ್ದು, ಶ್ರೀರಂಗಪಟ್ಟಣ ಪ್ರಾಂತದಲ್ಲಿ ೧೦೨ ಪರಗಣಗಳಿದ್ದವು. ೧೭೯೬ ರಲ್ಲಿ ಅವನು ೬೨,೦೦೦ ಚದರ ಮೈಲಿಗೂ ಸ್ವಲ್ಪ ವಿಸ್ತಾರವುಳ್ಳ ರಾಜ್ಯವನ್ನು ೩೭ ಅಸೋಫಿ (ಪ್ರಾಂತ) ಗಳಾಗಿ ವಿಭಜಿಸಿದರು. ಒಟ್ಟು ತಾಲೂಕುಗಳ ಸಂಖ್ಯೆ ೧೨೪ ಆಯಿತು. ಪ್ರತೀ ಅಸೋಫಿಗೆ ಒಬ್ಬ ಅಸೋಫ್ ಮತ್ತು ಒಬ್ಬ ಉಪ ಅಸೋಫನಿದ್ದನು. ಈ ಪ್ರಾಂತವನ್ನು ಅಮಿಲ್ ಎಂಬ ಹೆಸರಿನ ತಾಲೂಕುಗಳಾಗಿ ವಿಭಜಿಸಿ ತಾಲೂಕಿಗೆ ಒಬ್ಬ ಅಮಿಲ್ದಾರನನ್ನು ನೇಮಿಸಿದ್ದನು. ಸಿಂಪ್ತ್ ಎಂಬುದು ಈಗಿನ ಹೋಬಳಿಗೆ ಸಮನಾದ ವಿಭಾಗ. ಇದರ ಕೆಳಗಿನ ಘಟಕ ಗ್ರಾಮ. ಪಟೇಲನೇ ಗ್ರಾಮಾಧಿಕಾರಿಯಾಗಿದ್ದನು.[೩೫]

ಸುಗಮ ಆಡಳಿತಕ್ಕಾಗಿ ಟಿಪ್ಪುವಿನ ರಾಜ್ಯದ ಹಳ್ಳಿ ಪ್ರದೇಶಗಳನ್ನು ಮೂರು ಭಾಗ ಮಾಡಲಾಗಿತ್ತು. ಅವುಗಳೆಂದರೆ ಮೌಜಿ (ಹಳ್ಳಿ) ಸಿಂಪತ್ (ಹೋಬಳಿ) ಅಮಿಲ್ (ತಾಲೂಕು). ಹಳ್ಳಿಯು ಪಟೇಲನ ಅಧೀನದಲ್ಲಿತ್ತು ತಾಲೂಕಿನಲ್ಲಿ ಮುಖ್ಯಸ್ಥನಾಗಿ ಅಮಿಲ್‌ದಾರನಿದ್ದ. ಪಟೇಲರನ್ನು ಅಮಿಲ್‌ದಾರನು ನೇಮಿಸುತ್ತಿದ್ದ. ಟಿಪ್ಪು ಕಾಲದಲ್ಲಿ ಅಮಿಲ್‌ದಾರರಿಗೆ ಅವರು ಕಂದಾಯ ರೂಪದಲ್ಲಿ ಸಂಗ್ರಹಿಸಿದ ಪ್ರತಿಯೊಂದು ಪಗೋಡದ ೨.೫% ಫನಮ್‌ನ ೧/೪ ಭಾಗ ನೀಡಲಾಗುತ್ತಿತ್ತು. ಪೀವನ್ ಎಂದು ಕರೆಯುತ್ತಿದ್ದ ಕಂದಾಯ ಸಂಗ್ರಹಿಸುವ ಪೊಲೀಸರಿದ್ದು ಅವರಿಗೆ ಸಂಬಳದ ಬದಲಾಗಿ ವ್ಯವಸಾಯ ಮಾಡದ ಭೂಮಿಯನ್ನು ನೀಡಲಾಗುತ್ತಿತ್ತು. ಮತ್ತು ಆ ಭೂಮಿಯನ್ನು ವ್ಯವಸಾಯ ಮಾಡಲು ವಾರಕ್ಕೆ ಒಮ್ಮೆ ರಜೆ ನೀಡ ಲಾಗುತ್ತಿತ್ತು.[೩೬]

ಟಿಪ್ಪುವಿನ ಕಾಲದಲ್ಲಿ ಮೊದಲು ೧೮ ಇಲಾಖೆಗಳು ಇದ್ದವು. ಅದನ್ನು ಟಿಪ್ಪು ೭ ಕ್ಕೆ ಇಳಿಸಿದ. ಹಣಕಾಸು ಮತ್ತು ಪೊಲೀಸ್ ಇಲಾಖೆಗಳು ಮುಖ್ಯವಾಗಿದ್ದವು. ಪೊಲೀಸ್ ಇಲಾಖೆಗೆ ಅಂಚೆ ಮತ್ತು ಗುಪ್ತಚರ ಇಲಾಖೆ ಸೇರಿಕೊಂಡಿತ್ತು ಎಂದು ಮೊಯಿಬುಲ್ಲಾ ಹಸನ್ ಅಭಿಪ್ರಾಯ ಪಡುತ್ತಾರೆ[೩೭] ಈ ಅಂಚೆ ಮತ್ತು ಪೊಲೀಸ್ ಇಲಾಖೆಗೆ ಟಿಪ್ಪುವಿನ ಕಾಲದಲ್ಲಿ ಶಾಮಯ್ಯ ಅಯ್ಯಂಗಾರ್ ಎಂಬವರು ಮಂತ್ರಿಯಾಗಿದ್ದನೆಂದು ಡಬ್ಲು ಕಿರ್ಕ್ ಪ್ಯಾಟ್ರಿಕ್ ತಿಳಿಸುತ್ತಾನೆ.[೩೮]

ಪೊಲೀಸ್ ಆಡಳಿತದಲ್ಲಿ ಎರಡು ವಿಧಗಳಿದ್ದು, ಪ್ರಾಂತ್ಯದ ಕೇಂದ್ರ ಸ್ಥಾನದಲ್ಲಿ ನಜೀಮ್ ಅಥವಾ ಗವರ್ನರ್ ಮುಖ್ಯಸ್ಥನಾದರೆ, ಜಿಲ್ಲೆಗಳಲ್ಲಿ ಫೌಜುದಾರ ಮುಖ್ಯಸ್ಥನಾಗಿದ್ದ. ಇವರಿಗೆ ಸ್ಥಳೀಯವಾಗಿ ಸಹಕರಿಸುತ್ತಿದ್ದ ಅಧಿಕಾರಿಗಳಿಗೆ ಸಿಕ್‌ದಾರ ಎಂದು ಕರೆಯಲಾಗುತ್ತಿತ್ತು. ಅಂದರೆ ಈತ ಪೊಲೀಸ್ ಇಲಾಖೆಯ ಶ್ರೇಣೀಕೃತ ಅಧಿಕಾರಿಗಳ ಸಾಲಿನಲ್ಲಿ ಒಬ್ಬನಾಗಿರಲಿಲ್ಲ. ಫೌಜುದಾರನು ಅಪರಾಧಿಗಳನ್ನು ಹಿಡಿಯುವ ಮತ್ತು ಶಾಂತಿ ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದ. ಆದರೆ ಈತನ ಕಾರ್ಯ ಕಂದಾಯ ವಸೂಲಿ ಆಗಿತ್ತು. ಗ್ರಾಮದ ಕಾವಲುಗಾರರು ಇವರ ನಿಯಂತ್ರಣದಲ್ಲಿದ್ದರು. ಕಳ್ಳರನ್ನು ಹಿಡಿಯಲು ವಿಫಲನಾದರೆ ಕೆಲವು ಪ್ರಕರಣಗಳಲ್ಲಿ ಕಳವಾದ ವಸ್ತುಗಳ ಪೂರ್ಣ ಮೌಲ್ಯಗಳನ್ನು ಈತನು ಕಟ್ಟಿಕೊಡಬೇಕಿತ್ತು. ಫೌಜುದಾರರುಗಳು ಠಾಣಾದಾರರುಗಳನ್ನು ನೇಮಿಸುತ್ತಿದ್ದರು.[೩೯]

ಟಿಪ್ಪುವಿನ ಆಡಳಿತದ ಮೊದಲ ಅರ್ಧಭಾಗ ಕೇವಲ ರಾಜ್ಯದಲ್ಲಿ ಕಂದಾಯವನ್ನು ಹೆಚ್ಚಿಸುವುದು ಮಾತ್ರವಲ್ಲ ರಾಜ್ಯವನ್ನು ಉಚ್ಛ್ರಾಯ ಸ್ಥಿತಿಗೆ ತೆಗೆದುಕೊಂಡು ಹೋಗುವುದೂ ಆಗಿತ್ತು. ಈತ ತನ್ನ ಕಠಿಣ ಆಡಳಿತ ಪದ್ಧತಿಯಿಂದ ಇದನ್ನು ಸಾಧಿಸಲು ಪ್ರಯತ್ನಿಸಿದ. ಈತ ಸಿವಿಲ್ ಮತ್ತು ಮಿಲಿಟರಿ ಎರಡೂ ಆಡಳಿತಳಿಗೆ ಪ್ರಾಧಾನ್ಯತೆ ನೀಡಿದ ಈತನು ಸಿಂಸಾಸನಾರೂಢನಾದ ಮೇಲೆ ಎಲ್ಲಾ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳ ನೇಮಕಾತಿ ಅಥವಾ ತೆಗೆದು ಹಾಕುವ ಅಧಿಕಾರ ತನ್ನ ಬಳಿ ಇಟ್ಟುಕೊಂಡನು. ಆಡಳಿತವು ಹಿಂದಿನಂತೆ ನಡೆಯುತ್ತಿತ್ತು. ಅಂದರೆ ಅಮಿಲ್‌ದಾರನು 'ಅಮಿಲ್' ಅಥವಾ ತಾಲೂಕಿನ ಮುಖ್ಯಸ್ಥನಾಗಿದ್ದನು.[೪೦] ನಗರ ಮತ್ತು ಪಟ್ಟಣಗಳಲ್ಲಿ ಪ್ರತ್ಯೇಕವಾದ ಆಡಳಿತ ವ್ಯವಸ್ಥೆ ಇತ್ತು. ವಾರ್ಷಿಕ ೫೦೦೦ ಅಥವಾ ಅದಕ್ಕಿಂತ ಹೆಚ್ಚು ಪಗೋಡಗಳ ಕಂದಾಯ ಹೊಂದಿದ ಊರುಗಳು ಪಟ್ಟಣಗಳಾಗಿದ್ದು, ಅದಕ್ಕೆ ಅಮಿಲ್‌ದಾರ ಮುಖ್ಯಾಧಿಕಾರಿಯಾಗಿದ್ದು ಆತನಿಗ ಸಹಾಯಕರಾಗಿ ಒಬ್ಬ 'ಶಿರಸ್ತೇದಾರ', ಒಬ್ಬ 'ಅಮೀನ್' ಮತ್ತು ಒಬ್ಬ 'ಮುಜುಂದಾರ'ರಿದ್ದರು. ನಗರ ಮತ್ತು ಶ್ರೀರಂಗಪಟ್ಟಣದಂತವು ನಗರಗಳಾಗಿದ್ದು, ಪ್ರತ್ಯೆಕ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದು, ಪ್ರತೀ ನಗರಕ್ಕೂ ಕನಿಷ್ಟ ಮೂರು ಜನ ದಿವಾನರಿದ್ದರು.[೪೧]

ಪೊಲೀಸ್ ಅಧಿಕಾರಿಯಾಗಿದ್ದ ' ಮೀರ್‌ಸಾಧಿಕ್'

ಟಿಪ್ಪುವಿನ ಆಡಳಿತದ ಮೊದಲ ಭಾಗದಲ್ಲಿ ಅತ್ಯಂತ ಪ್ರಮುಖವಾದ ಹಣಕಾಸು ಇಲಾಖೆಯ ಮಂತ್ರಿಯಾಗಿದ್ದವನು 'ಮೀರ್‌ಸಾಧಿಕ್'[೪೨] ನಂತರದ ದಿನಗಳಲ್ಲಿ ಪೂರ್ಣಯ್ಯನವರು ಹಣಕಾಸು ಮಂತ್ರಿ ಇವರು ಮೊದಲು ಕಂದಾಯ

ಹಾಗೂ ಸೇನಾ ವ್ಯವಹಾರ ಮಂತ್ರಿಯಾಗಿದ್ದರು.[೪೩] ಮೀರ್‌ಸಾಧಿಕ್‌ನು ೧೭೯೦ ರಲ್ಲಿ ಮೈಸೂರು ಅಶ್ವದಳವನ್ನು ಮುನ್ನಡೆಸುತ್ತಿದ್ದನು. ಈತನು ಮೊದಲು ದೊಡ್ಡಬಳ್ಳಾಪುರಗ ಕೊತ್ವಾಲ (ಪೊಲೀಸ್ ಅಧಿಕಾರಿ)ನಾಗಿದ್ದು ಕಾಲಕ್ರಮೇಣ ಸುಲ್ತಾನನ ವಿಶ್ವಾಸಗಳಿಸಿದನು. ಈತ ಬಹಳ ಸಮರ್ಥನಾಗಿದ್ದನು.[೪೪] ಮತ್ತು ಸುಲ್ತಾನನ ಬಳಿ ಅತ್ಯಂತ ಪ್ರಭಾವವುಳ್ಳ ವ್ಯಕ್ತಿಯಾಗಿದ್ದನು. ಆದರೆ ಈತ ಅಪ್ರಾಮಾಣಿಕನಾಗಿದ್ದನು. ೧೭೯೦-೯೨ ರಲ್ಲಿ ಈತನು ಸಿದ್ದರಾಜು ಎಂಬ ವ್ಯಕ್ತಿಗೆ ಹೋಗಲು ನೆರವಾದನೆಂದು ಅಧಿಕಾರವನ್ನು ಕಳೆದುಕೊಂಡಿದ್ದ ಮೈಸೂರಿನ ಅರಸರನ್ನು ಪುನ: ಅಧಿಕಾರಕ್ಕೆ ತರಲು ಮೈಸೂರಿನ ಹಿಂದೂ ರಾಣಿಯೊಂದಿಗೆ ಸೇರಿ ಅಪಾರ ಪ್ರಮಾಣದ ಹಣ ಪಡೆದು ಸಂಚು ರೂಪಿಸಿದ [೪೫] ೧೭೯೯ ರಲ್ಲಿ ಶ್ರೀರಂಗಪಟ್ಟಣದ ಮೇಲೆ ಬ್ರಿಟೀಷರು ಮುತ್ತಿಗೆ ಹಾಕಿದಾಗ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಆದರೆ ಟಿಪ್ಪುವಿನ ನಿಷ್ಠಾವಂತ ಸೈನಿಕರು ಆತನನ್ನು ಕೊಂದು ಹಾಕಿದರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಟಿಪ್ಪುವಿಗೆ ನಂಬಿಕೆದ್ರೋಹ ಮಾಡಿದಂತಹ ಹಾಗೂ ಇಂದಿಗೂ ಸಹ ಅನ್ಯಾಯ, ಮೋಸ, ವಂಚನೆ ಎಂಬ ಶಬ್ದಗಳಿಗೆ ಅನ್ವರ್ಥವಾಗಿ ಬಳಸುವ ಹೆಸರುಗಳಲ್ಲಿ ಒಂದಾದ 'ಮೀರ್‌ಸಾಧಿಕ್'ನು ದೊಡ್ಡಬಳ್ಳಾಪುರದಲ್ಲಿ ಪೊಲೀಸ್ ಅಧಿಕಾರಿ (ಕೊತ್ವಾಲ) ಆಗಿದ್ದ ಎಂಬುದು.

ಹೈದರಾಲಿಯ ಕಾಲದಿಂದ ಕಂದಾಚಾರ ಸಿಬ್ಬಂದಿಯು ಮುಖ್ಯವಾಗಿ ಕೃಷಿಯಲ್ಲಿ ತೊಡಗಿರುತ್ತಿದ್ದು ಒಂದು ಸಂಘಟಿತ ತಂಡವಾಗಿತ್ತು. ಅಗತ್ಯಬಿದ್ದಾಗ ಆರಕ್ಷಕ ಅಥವಾ ಸೈನಿಕ ಸೇವೆಗೆ ತಾತ್ಕಲಿಕವಾಗಿ ಒದಗಿಸಬೇಕಾಗಿತ್ತು. ಕೆಲವು ವೇಳೆ ಇವಾವುದನ್ನು ಮಾಡದೇ ಗ್ರಾಮೀಣರಿಗೆ ಉಪಟಳ ಕೊಟ್ಟು ಆಹಾರ ದಾನ್ಯ ಅಥವಾ ಹಣವನ್ನು ವಸೂಲು ಮಾಡುತ್ತಿದ್ದರು. "ಹೈದರಾಲಿಯ ಕಾಲದಿಂದಲೂ ಫೌಜುದಾರರು ಡಿವಿಜನ್ ಮಟ್ಟದಿಂದಲೂ, ಹಾಗೂ ಅಮಲ್‌ದಾರರು ತಾಲೂಕು ಮಟ್ಟದಲ್ಲಿ ಸಣ್ಣಪುಟ್ಟ ಹಾಗೂ ಮದ್ಯಮ ಗಾತ್ರದ ವ್ಯಾಜ್ಯಗಳನ್ನು, ದಿವಾನಿ ಮೊಕದ್ದಮೆಗಳನ್ನು ಬಗೆಹರಿಸುತ್ತಿದ್ದರು. ಇದರ ಜೊತೆಗೆ ಸೇನಾಡಳಿತದ ಹೊಣೆಯನ್ನು ಹಾಗೂ ಕಂದಾಯ ವಸೂಲಿ ಕೆಲಸವನ್ನು ನಿರ್ವಹಿಸುತ್ತಿದ್ದರು." [೪೬] ಆಗಾಗ್ಗೆ ಸ್ಥಳೀಯ ಪೊಲೀಸರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಿದ್ದನು. ಆದರೆ ಫೌಜುದಾರ ಹುದ್ದೆಯು ಮುಂದುವರೆಯಿತು. ಈಗಾಗಲೇ ಈತನಿಗೆ ಪೊಲೀಸ್ ಇಲಾಖೆಯ ಮೇಲೆ ನಿಯಂತ್ರಣವಿದ್ದು ಈಗ ಕಂದಾಯ ಇಲಾಖೆಯ ನಿಯಂತ್ರಣದ ಜವಾಬ್ದಾರಿಯನ್ನು ನೀಡಲಾಯಿತು.[೪೭] ಹೈದರಾಲಿಯ ಆಳ್ವಿಕೆಯ ಕಾಲ (೧೭೬೧-೧೭೮೨)ದಲ್ಲಿ ಪ್ರತ್ಯೇಕ ಪೊಲೀಸ್ ದಳಗಳ ನಿರ್ಮಾಣ ಮಾಡಿ ಗುಪ್ತಚರ ದಳವನ್ನು ರಚಿಸಲಾಯಿತು. ಪೊಲೀಸ್ ಆಡಳಿತದ ದೃಷ್ಟಿಯಿಂದ ಹಳ್ಳಿ, ನಗರ ಮತ್ತು ಜಿಲ್ಲೆಗಳೆಂದು ವಿಭಾಗಿಸಲಾಯಿತು. ಟಿಪ್ಪುವಿನ ಆಳ್ವಿಕೆಯ ಸಮಯದಲ್ಲಿ (೧೭೮೨-೧೭೯೯) 'ಕಂದಾಚಾರ' ಪದ್ದತಿಯಲ್ಲಿ 'ಅಶಮ್‌ಕಛೇರಿ' ಸ್ಥಾಪನೆ ಮಾಡಿ ಅದರ ಮುಖ್ಯಸ್ಥರನ್ನಾಗಿ ಭಕ್ಷಿಯನ್ನು ನೇಮಿಸಲಾಯಿತು. ಪೊಲೀಸ್ ವ್ಯವಸ್ಥೆಗೆ ಪ್ರತ್ಯೇಕ ಅಸ್ತಿತ್ವವನ್ನು ನೀಡಲಾಯಿತು.

ಪರಂಪರಾಗತ ಭೂಕಂದಾಯ ಪದ್ಧತಿ ಮತ್ತು ತೆರಿಗೆಗಳನ್ನು ಅವನು ಮುಂದುವರಿಸಿದ. ವ್ಯವಸ್ಥಿತವಾದ ಜನಗಣತಿಯೊಂದನ್ನು ಆತನು ನಡೆಸಿದ್ದನಲ್ಲದೆ ಜನನ, ಮರಣಗಳ ವ್ಯವಸ್ಥಿತ ದಾಖಲೆ ಇಡುವ ಪದ್ಧತಿ ಆರಂಭಿಸಿದ್ದ. ಯಾವುದೇ ಗ್ರಾಮದಿಂದ ಸಂಗ್ರಹಿಸಿದ ಕಂದಾಯ ಅತಿಯಾಗಿ ಆ ಗ್ರಾಮಸ್ಥರು ಊರು ಬಿಟ್ಟರೆ ಕಂದಾಯ ಸಂಗ್ರಹಿಸುತ್ತಿದ್ದ ಅಧಿಕಾರಿಗಳಿಗೆ ಶಿಕ್ಷೆಯಾಗುತ್ತಿತ್ತು. ಕಂದಾಯ ಸಂಗ್ರಹಿಸುತ್ತಿದ್ದ ಅಮಿಲ್ದಾರನಿಗೆ ಶೇಕಡ ಎರಡೂವರೆ ಯಷ್ಟು ರುಸುಮು ನೀಡಲಾಗುತ್ತಿತ್ತು. "ಟಿಪ್ಪುವಿನ ಆಡಳಿತ ನೆರೆಯ ರಾಜ್ಯಗಳಿಗಿಂತ ಒಳಿತಾದುದು: ಅವನ ಪ್ರಜೆಗಳು ಇತರರ ಪ್ರಜೆಗಳಿಗಿಂತ ಸಂತುಷ್ಟರಾದವರು" ಎಂದು ಡಾ.ಎಂ.ಎಚ್.ಗೋಪಾಲ್ ಹೇಳಿದ್ದಾರೆ.[೪೮] ಒಬ್ಬ ಬ್ರಿಟೀಷ್ ಅಧಿಕಾರಿ ಅವನನ್ನು "ಪ್ರಜೆಗಳ ರಕ್ಷಕ" ಎಂದಿದ್ದಾನೆ. ಮೂರ್ ಎಂಬ ಸಮಕಾಲೀನ ಬ್ರಿಟೀಷ್ ಅಧಿಕಾರಿ ಅವನ ರಾಜ್ಯದ ಸಮೃದ್ದ ಕೃಷಿಯನ್ನೂ, ಪೇಟೆ ಪಟ್ಟಣಗಳ ಸಮೃದ್ಧ ವಾಣಿಜ್ಯ ಚಟುವಟಿಕೆಯನ್ನೂ ಗಮನಿಸಿ ಟಿಪ್ಪುವಿನ ಆಡಳಿತ ಸಾಮರ್ಥ್ಯವನ್ನು ಕೊಂಡಾಡಿದ್ದಾನೆ.[೪೯]

ಟಿಪ್ಪು ಸುಲ್ತಾನನ ಕಾಲದಲ್ಲಿ ಕಂದಾಚಾರ ಪಡೆ ಎಷ್ಟೊಂದು ಸಮರ್ಥವಾಗಿತ್ತೆಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ.

ಪಶ್ಚಿಮ ಕರಾವಳಿಯಲ್ಲಿ ಟಿಪ್ಪುವು ಆಂಗ್ಲರೊಂದಿಗೆ ಹೊಡೆದಾಡುತ್ತಿದ್ದ ಕಾಲದಲ್ಲಿ, ಶ್ರೀರಂಗಪಟ್ಟಣದಲ್ಲಿ ಒಡೆಯರ್ ಮನೆತನದ ಪಕ್ಷದವರು ಒಂದು ಪಿತೂರಿ ನಡೆಸಿದರು. ಅಂಚೆ ಮತ್ತು ಕಂದಾಚಾರ ಚಾವಡಿಯ 'ಸಿಂಗಯ್ಯ' (ಕೊಯಮುತ್ತೂರಿನಲ್ಲಿ ಇದ್ದ) ಅದೇ ಚಾವಡಿಯ 'ರಂಗಯ್ಯ', ಬಟವಾಡೆ ಚಾವಡಿ ನರಸಿಂಗರಾಯರು, ದೇವರಾಜಯ್ಯನ ವಂಶದ ಸುಬ್ಬರಾಜೇ ಅರಸು ಮೊದಲಾದವರೇ ಪಿತೂರಿಗಾರರು. ಇವರೆಲ್ಲಾ ಶಾಮಯ್ಯನೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಅವನಿಗೂ ತಿರುಮಲರಾವ್, ಮರಾಠರು, ಆಂಗ್ಲರು ಮೊದಲಾದವರೊಂದಿಗೆ ಪರಸ್ಪರ ಸಂಪರ್ಕವಿತ್ತು. ದಿನಾಂಕ ೨೪-೦೭-೧೭೮೩ ನೇ ದಿನ ಸಂಬಳ ಬಟವಾಡೆಯ ದಿನ. ತಮ್ಮ ಉದ್ದೇಶ ಸಾಧಿಸಿಕೊಳ್ಳಬೇಕೆಂದು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಪಿತೂರಿಕೋರರು ಶ್ರೀರಂಗಪಟ್ಟಣದ ಫೌಜುದಾರ ಸೈಯದ್ ಮೊಹಮ್ಮದ್‌ನನ್ನು, ದಂಡನಾಯಕ ಅಸದ್‌ಖಾನ್‌ನನ್ನು ಕತ್ತರಿಸಿ ಹಾಕಬೇಕೆಂದು ಕೋಟೆಯನ್ನೂ, ಭಂಡಾರವನ್ನೂ ವಶಪಡಿಸಿಕೊಳ್ಳಬೇಕೆಂದು ಏರ್ಪಾಟು ಆಗಿತ್ತು. ಶ್ರೀರಂಗಪಟ್ಟಣದಲ್ಲಿ ಬಂಧಿಗಳಾಗಿದ್ದ ಆಂಗ್ಲರು ಈ ಪಿತೂರಿಯಲ್ಲಿ ಭಾಗಿಗಳಾಗಿದ್ದರು. ಆಂಗ್ಲ ಬಂಧಿಗಳ ಬಿಡುಗಡೆಯಾದ ಕೂಡಲೇ ಜನರಲ್ ಮ್ಯೂಥ್ಯೂಸನ್ ನಾಯಕತ್ವದಲ್ಲಿ ಫುಲ್‌ರಟನ್‌ನ ಸಹಾಯದಿಂದ ಒಡೆಯರ ಮನೆತನದ ಉದ್ಧಾರ ಮಾಡಬೇಕೆಂದು ನಿಶ್ಚಯವಾಗಿತ್ತು. ಇಷ್ಟೆಲ್ಲಾ ಆಗಬೇಕಾಗಿದ್ದ ದಿನದ ಹಿಂದಿನ ರಾತ್ರಿ 'ಸುಬೇದಾರ'ನೊಬ್ಬ ಪಿತೂರಿಯ ಸುದ್ದಿಯನ್ನು 'ಫೌಜುದಾರ' ಸೈಯದ್ ಮೊಹಮ್ಮದ್‌ನ ಕಿವಿಗೆ ಹಾಕಿದ. ಸೈಯದ್ ಮೊಹಮ್ಮದ್‌ನಾದರೂ ಸದ್ದಿಲ್ಲದೇ ವಿದ್ಯುತ್ ವೇಗದಿಂದ ಕಾರ್‌ಬಾರ್ ನಡೆಸಿದ. ಈ ಮಹತ್ಕಾರ್ಯ ಸಾಧನೆಗಾಗಿಯೇ ಕೊಯಮುತ್ತೂರಿನಿಂದ ಆಗಮಿಸಿದ ಸಿಂಗಯ್ಯನನ್ನು ಹಿಡಿದು ಮೊದಲು ಗಲ್ಲಿಗೇರಿಸಿದ. ಟಿಪ್ಪುವಿನಿಂದ ಆಜ್ಞೆ ಪಡೆದು ನರಸಿಂಗರಾಯನನ್ನು ಗಲ್ಲಿಗೆ ಹಾಕಿದ. ಶಾಮಯ್ಯ, ರಂಗಯ್ಯ ಇವರುಗಳನ್ನು ಪಂಜರಗಳಲ್ಲಿ ಇಟ್ಟ. ಶ್ರೀರಂಗಪಟ್ಟಣದ ಪಿತೂರಿ ನಾಯಕ ಸುಬ್ಬರಾಜ ಅರಸು ಎಂದು ನಿಶ್ಚಯಮಾಡಿ ಅವನನ್ನು ಗಲ್ಲಿಗೇರಿಸಿದ. ಈ ಪಿತೂರಿಗೆ ೩,೦೦೦ ಜಟ್ಟಿಗಳು, ಮರಾಠರು ಸೇರಿದ್ದರು. ಕೋಟೆಯೊಳಗಿನ ಮುಸಲ್ಮಾನರನ್ನೆಲ್ಲಾ ಬಂಧಿಸಬೇಕೆಂದು ಒಡೆಯರ್ ಪಕ್ಷದವರ ನಿಶ್ಚಯವಾಗಿತ್ತು.[೫೦]

ಕಿಲ್ಲೇದಾರ ಸೈಯದ್ ಮೊಹಮ್ಮದ್‌ಖಾನ್ ಎಲ್ಲವನ್ನೂ ಟಿಪ್ಪುವಿಗೆ ತಿಳಿಸಿದ. ಟಿಪ್ಪುವಿನ ಅಪ್ಪಣೆ ಪಡೆದು ತಿರುಮಲರಾವ್, ಸುಬ್ಬರಾಜ ಅರಸು ಇಬ್ಬರ ಮನೆಯವರನ್ನೆಲ್ಲಾ ಹೆಂಗಸರು, ಮಕ್ಕಳನ್ನು ಬಿಡದೇ ಸುಮಾರು ೭೦೦ ಸಂಸಾರಗಳನ್ನು ಬಂಧಿಸಿದ. ಅವರನ್ನೆಲ್ಲಾ ಸರಪಳಿಗಳಿಂದ ಬಿಗಿದು ಸೆರೆಮನೆಗೆ ದೂಡಿದ. ಪ್ರಧಾನ ನಾರಾಯಣ ರಾಯನನ್ನು ಬಂಧಿಸಿದ. ಸಕಾಲದಲ್ಲಿ ಸೈಯದ್ ಮೊಹಮ್ಮದ್‌ನು ಉಗ್ರ ಕಾರ್ಯಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಒಡೆಯರ ಪಕ್ಷದವರು, ಆಂಗ್ಲರು ನಡೆಸಿದ ಒಳಸಂಚು ಯಶಸ್ವಿಯಾಗಿ ಚರಿತ್ರೆಯ ರೂಪ ರಚನೆಗಳೇ ಬೇರೆಯಾಗಿತ್ತು.[೫೧] ಇಲ್ಲಿ ಕಿಲ್ಲೇದಾರನೆಂದರೆ, 'ಕಂದಾಚಾರ' ಪಡೆಯ ಒಬ್ಬ ಅಧಿಕಾರಿ, 'ಸೈಯದ್ ಮೊಹಮ್ಮದ್ ಖಾನ್' ಕಿಲ್ಲೇದಾರನಾಗಿ ಸಾಕಷ್ಟು ಗುಪ್ತ ಮಾಹಿತಿಗಳನ್ನು ಒಬ್ಬ ಸುಬೇದಾರನಿಂದ ಪಡೆದು ತಕ್ಷಣ ಕಾರ್ಯಪ್ರವೃತ್ತರಾಗಿ ಇಡೀ ಪಿತೂರಿಯನ್ನು ವಿಫಲಗೊಳಿಸಿ ಶ್ರೀರಂಗಪಟ್ಟಣವನ್ನು ರಕ್ಷಿಸಿದ ಎಂದು ತಿಳಿದು ಬರುತ್ತದೆ. ಟಿಪ್ಪುವಿನ ಗುಪ್ತಚರ ಪಡೆ ಮತ್ತು 'ಕಂದಾಚಾರ' ಪಡೆ ಹೇಗೆ ಇತ್ತು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಇದರಿಂದ ತಿಳಿದು ಬರುವ ವಿಷಯಗಳೆಂದರೆ, ಮೈಸೂರಿನ 'ಮಹಾರಾಣಿ ಲಕ್ಷ್ಮಮ್ಮಣ್ಣಿ'ಯವರು 'ಹೈದರ'ನ ಮರಣಾನಂತರ ತಮ್ಮ ಕೈಯಿಂದ ಈ ಹಿಂದೆ ಹೈದರ್‌ನು ಕಿತ್ತುಕೊಂಡಿದ್ದ ಅಧಿಕಾರವನ್ನು ಪುನಃ ಹಿಂದಿರುಗಿ ಪಡೆಯುವ ಸಲುವಾಗಿ ಸುಬ್ಬರಾಜ ಅರಸುವಿನ ನೇತೃತ್ವದಲ್ಲಿ 'ಕಂದಾಚಾರ' ಪಡೆಯ ಅಧಿಕಾರಿಗಳನ್ನು ಬಳಸಿಕೊಂಡರು. ಅಂದರೆ, 'ಕಂದಾಚಾರ' ಪಡೆ ಎಷ್ಟು ಪ್ರಬಲವಾಗಿತ್ತು ಎಂಬುದು ಇದರಿಂದ ಅರ್ಥವಾಗುತ್ತದೆ. 'ಕಂದಾಚಾರ' ಚಾವಡಿಯ ಸಿಂಗಯ್ಯ ಮತ್ತು ರಂಗಯ್ಯ ಈ ಪಿತೂರಿಗಾಗಿ ಗಲ್ಲು ಶಿಕ್ಷೆಗೆ ಗುರಿಯಾದರೆಂಬ

ಅಂಶವು ಇದರಿಂದ ಬೆಳಕಿಗೆ ಬರುತ್ತದೆ. ಮೈಸೂರು ಅರಸರ ದೃಷ್ಟಿಯಿಂದ ನೋಡಿದರೆ 'ಕಂದಾಚಾರ' ಚಾವಡಿಯ ಈ ಅಧಿಕಾರಿಗಳು ಮೈಸೂರು ಒಡೆಯರ ಸಂಸ್ಥಾನದಿಂದ ಹೈದರ್‌ನು ಕಿತ್ತುಕೊಂಡಿದ್ದ ಅಧಿಕಾರವನ್ನು ಹೈದರ್‌ನ ಮಗ ಟಿಪ್ಪುವಿನಿಂದ ವಾಪಾಸು ಪಡೆದು ಒಡೆಯರ ಆಳ್ವಿಕೆಯನ್ನು ಮುಂದುವರಿಸುವ ದೇಶಪ್ರೇಮದ ಕೆಲಸವಾಗಿತ್ತು. ಆದರೆ ಟಿಪ್ಪುವಿನ ದೃಷ್ಟಿಯಿಂದ ನೋಡಿದರೆ ತನ್ನ ಕೈಕೆಳಗಿನ ಕಂದಾಚಾರ ಪಡೆಯ ಅಧಿಕಾರಿಗಳು ತನ್ನ ಅರಸೊತ್ತಿಗೆಯನ್ನು ನಾಶ ಮಾಡಿ ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಳ್ಳುವ ಸಂಚು ದೇಶದ್ರೋಹದ ಕೆಲಸವಾಗಿತ್ತು. ಈ ವಾದ ಏನೇ ಇರಲಿ, ಒಂದು ರಾಜ್ಯವನ್ನು ಕಟ್ಟುವ ಅಥವಾ ನಾಶಪಡಿಸುವಷ್ಟು ಶಕ್ತಿಶಾಲಿಯಾಗಿ 'ಕಂದಾಚಾರ' ಪಡೆ ಇತ್ತು ಎಂಬುದು ಇಲ್ಲಿ ಅತ್ಯಂತ ಮುಖ್ಯ ವಿಷಯವಾಗಿದೆ. ಇದರಿಂದ ತಿಳಿದುಬರುವುದೇನೆಂದರೆ, ಟಿಪ್ಪುವಿನ ಕಾಲದಲ್ಲಿಯೇ ಮೈಸೂರಿನಲ್ಲಿ ಒಂದು 'ಕಂದಾಚಾರ' ಎಂಬ ಹೆಸರಿನ ಪಡೆಯೊಂದು ಇತ್ತು. ಇದು ಅಂದಿನ ಪೊಲೀಸ್ ವ್ಯವಸ್ಥೆ ಆಗಿತ್ತು. ಮೈಸೂರು ಸಂಸ್ಥಾನವನ್ನು ಮರಳಿ ಹಿಂದೆ ಪಡೆಯುವ ಉದ್ದೇಶದಿಂದ ಸಿಂಗಯ್ಯ, ಶಾಮಯ್ಯ ಮತ್ತು ರಂಗಯ್ಯರವರುಗಳು ಮೈಸೂರು ಅರಸರ ಪರವಾಗಿ ಕಂದಾಚಾರ ಪಡೆಯ ಯೋಧರನ್ನು ಪಿತೂರಿಗೆ ಬಳಸಿಕೊಳ್ಳಲು ಪ್ರಯತ್ನಿಸಿದ್ದರೆಂಬುದು ಸ್ಪಷ್ಟವಾಗುತ್ತದೆ. ಬ್ರಿಟೀಷರು ಮೈಸೂರಿನ ಮೇಲೆ ಹಿಡಿತ ಸಾಧಿಸುವುದಕ್ಕಿಂತ ಮೊದಲೇ ಅಂದರೆ, ಮೈಸೂರಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಕ್ಕಿಂತ ಮೊದಲೇ ಟುಪ್ಪುವಿನ ಕಾಲದಲ್ಲಿ 'ಕಂದಾಚಾರ' ಎಂಬ ಹೆಸರಿನ ಪೊಲೀಸ್ ಪಡೆಯಿತ್ತು ಎಂಬುದು ಸ್ಪಷ್ಟವಾಗುತ್ತದೆ.

'ಕಂದಾಚಾರ' ಪಡೆಯ ಸಿಬ್ಬಂದಿಯವರು ಟಿಪ್ಪುವಿನ ಕಾಲದಲ್ಲಿ ಕೆಲವು ಉದ್ಯೋಗವಿಲ್ಲದ ಜನರೊಂದಿಗೆ ಸೇರಿಕೊಂಡು ಸುಲಿಗೆ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಇವರು ಆಗಾಗ ರೈತರನ್ನು ಸುಲಿಗೆ ಮಾಡುತ್ತಿದ್ದರು. ರೈತರು ತಾವು ಬೆಳೆದ ಕೆಲವು ಭಾಗಗಳನ್ನು 'ಕಂದಾಚಾರ' ಪಡೆಯವರಿಗೆ ನೀಡಬೇಕಿತ್ತು ಇದರಿಂದಾಗಿ ರೈತರು ದಾಳಿಕೋರರಿಂದ ತಪ್ಪಿಸಿಕೊಳ್ಳುತ್ತಿದ್ದರು. ಟಿಪ್ಪು ಸುಲ್ತಾನನು 'ಕಂದಾಚಾರ' ಪಡೆಯ ಸಿಬ್ಬಂದಿಯನ್ನು ಕಡಿತಗೊಳಿಸಿ ತನ್ನ ಸೇನೆಗೆ ಸೇರಿಸಿಕೊಂಡಿದ್ದರ ಪರವಾಗಿ ಇಂತಹ ದರೋಡೆಗಳು ಕಡಿಮೆಯಾದವು.[೩೨] ೧೭೯೦ ರ ಯುದ್ಧದ ಆರಂಭದಲ್ಲಿ ಟಿಪ್ಪುವಿನ ಸೇನೆಯಲ್ಲಿ ೪೫,೦೦೦ ರೆಗ್ಯುಲರ್ ಇನ್‌ಫೆಂಟ್ರ ಮತ್ತು ೫೨೦೦ ಕುದುರೆಗಳಿದ್ದವು. ಇದರಲ್ಲಿ ಕಂದಾಚಾರ ಎಂದು ಕರೆಯುತ್ತಿದ್ದ ಇರ್ರೆಗ್ಯುಲರ್ ಪೀವನ್‌ಗಳು ಸೇರಿರಲಿಲ್ಲ ಎಂದು ಎಂ.ಹೆಚ್.ಗೋಪಾಲ್ ತಿಳಿಸಿದ್ದಾರೆ.[೩೩]

ಪೂರ್ಣಯ್ಯನವರು ಹೈದರ್‌ನ ಬಳಿ ಕೆಲಸಕ್ಕೆ ಬರುವ ಮೊದಲೆಯೇ ಇಂತಹ ಒಂದು ಕಂದಾಚಾರ ಪಡೆಯು ಹೈದರನ ಆಡಳಿತ ಕಾಲದಲ್ಲಿತ್ತೆಂದು ಅಭಿಪ್ರಾಯಕ್ಕೆ ಬರಬಹುದಾಗಿದೆ. ಹೈದರ್ ಮತ್ತು ಟಿಪ್ಪು ಸುಲ್ತಾನರು ನ್ಯಾಯಾಂಗದಲ್ಲಿ ಹೆಚ್ಚಿನ ಬದಲಾವಣೆಗಳನ್ನು ತರಲಿಲ್ಲ. ಮೈಸೂರು ಅರಸರು ಪುರಾತನ ಕಾಲದಿಂದ ನಡೆಸಿಕೊಂಡು ಬಂದ ನ್ಯಾಯ ಪದ್ಧತಿಗಳನ್ನೇ ಮುಂದುವರಿಸಿಕೊಂಡು ಹೋದರು. ಕಂದಾಯ ಇಲಾಖೆಯ ಅಧಿಕಾರಿಗಳನ್ನು ನ್ಯಾಯಾಂಗದ ಕಾರ್ಯಗಳನ್ನೂ ಸಹ ನೋಡಿಕೊಳ್ಳಲು ನೇಮಿಸಲಾಗಿತ್ತು. 'ತಹಶೀಲ್'ಗಳಲ್ಲಿ ಇದ್ದ 'ಅಮೀಲ್' ರವರುಗಳು ಕ್ರಿಮಿನಲ್ ಅಪರಾಧಗಳ ತನಿಖೆಯನ್ನು ಮಾಡುತ್ತಿದ್ದರು. ಮುಸ್ಲಿಂ ಕಾನೂನಿನ ಪ್ರಕಾರ ನ್ಯಾಯಾಂಗದ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ ರಾಜದಾನಿಯಲ್ಲಿ ಒಂದು 'ಸಾದರ್' (ಮುಖ್ಯ) ನ್ಯಾಯಾಲಯವನ್ನು ತೆರೆಯಲಾಯಿತು.[೩೪] ಟಿಪ್ಪುವು ಪಟೇಲರುಗಳ, ಉಂಬಳಿದಾರರು ಮತ್ತು ಅಮಾರ್‌ಗರ್ಸ್‌ರ ಸಂಖ್ಯೆಯನ್ನು ಇಳಿಸಿದ.[೩೫]

೪.೩.೧ – ಪೊಲೀಸ್ ಅಧಿಕಾರಿಗಳಿಗೆ (ದರೋಗ / ಕಿಲ್ಲೇದಾರ) ಟಿಪ್ಪು ಸುಲ್ತಾನ್ ಬರೆದ ಪತ್ರಗಳು

ಟಿಪ್ಪು ಬರೆದ ಪತ್ರಗಳಲ್ಲಿ ಕೆಲವು ಆಗಿನ ಕಾಲದ ಪೊಲೀಸ್ ವ್ಯವಸ್ಥೆಯ ಬಗ್ಗೆ ತಿಳಿಯಲು ನಮಗೆ ನೆರವಾಗುತ್ತದೆ. ೧೭೮೬ ರ ಮೇ ೫ ರಿಂದ ಸಿಲ್‌ಕೋತ್ (silcotah) ದ ಅಮಿಲ್‌ನಾಗಿದ್ದ ಗುಲಾಮ್ ಮನ್ಸೂರನಿಗೆ ಟಿಪ್ಪು ಬರೆದ ಪತ್ರ

"ಜಮೇದಾರ ಸೈಯ್ಯದ್ ಅಮೀನನು ಭಕ್ಷಿ ನವಾಜ್ ಬೇಗನಿಗೆ ಸಾಯುವ ರೀತಿಯಲ್ಲಿ ಹೊಡೆದಿದ್ದಾನೆಂದು ನಿನ್ನ ಪತ್ರದಲ್ಲಿ ವರದಿ ಮಾಡಿದ್ದಿ. ಈ ಕಾರಣಕ್ಕಾಗಿ ನೀನು ಮೇಲೆ ಹೇಳಿದ ಜಮೇದಾರನನ್ನು ಬಂಧಿಸಿ ಆತನ ಕೈ ಮತ್ತು ಕಾಲುಗಳಿಗೆ ಕಬ್ಬಿಣದ ಕೊಳತೊಡಿಸು, ನಾಡಿದ್ದು ಸನ್ನಿದಾನವು ಗ್ರೇಟ್ ಬಾಲಾಪುರಕ್ಕೆ ವಿಶೇಷವಾಗಿ ಆಗಮಿಸುತ್ತೇವೆ. ಕೊಲೆಗಾರನ ಕೈಕಾಲುಗಳನ್ನು ಬೇಡಿಯಿಂದ ಬಂಧಿಸಿ, ಬಲವಾಽ ಪಹರೆಯೊಂದಿಗೆ ನನ್ನ ಮುಂದೆ ಹಾಜರುಪಡಿಸುವುದು, ಜೊತೆಯಲ್ಲಿ ನೀನೂ ಹಾಜರಿರುವುದು" ಎಂದು ಪತ್ರ ಬರೆದಿದ್ದಾನೆ.[೫೬]

ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ಸೈಯದ್ ಅಮೀದ್ ಒಬ್ಬ ಜಮೇದಾರನಾಗಿದ್ದನು. ಅಂದರೆ ಒಬ್ಬ ಪೊಲೀಸ್ ಅಧಿಕಾರಿಯಾಗಿದ್ದನು. ಆತನಿಗೆ ಯಾರನ್ನೂ ಸಾಯಿಸುವ ಅಧಿಕಾರವಿರಲಿಲ್ಲ. ಆದ್ದರಿಂದಲೇ ಟಿಪ್ಪು ಇಲ್ಲಿ ಆತನನ್ನು ಕೊಲೆಗಾರ ಎಂದು ಕರೆದಿದ್ದಾನೆ. ಮತ್ತು ಈತನನ್ನು ಬಂಧಿಸಲು ಈತನ ಹಿರಿಯ ಪೊಲೀಸ್ ಅಧಿಕಾರಿ ಅಮಿಲ್ದಾರನಿಗೆ ಸೂಚಿಸಿದ್ದಾನೆ. ಅಷ್ಟೇ ಅಲ್ಲದೇ ವಿಶೇಷವಾದ ಘಟನೆಗಳು ನಡೆದಾಗ ರಾಜನೇ ನ್ಯಾಯ ತೀರ್ಮಾನಗಾರನಾಗಿ ಹೋಗುತ್ತಿದ್ದ ಎಂಬುದಕ್ಕೆ ಭಕ್ಷಿ ನವಾಜ್ ಬೇಗ್‌ನ ಕೊಲೆ ಪ್ರಕರಣ ನಮಗೆ ಸಾಕ್ಷಿಯಾಗಿದೆ.

ಟಿಪ್ಪುವಿನ ಗುಪ್ತಚಾರರಾಗಿದ್ದ ಹರಿಕಾರ್ (Harkars) ರ ದರೋಗನಾಗಿದ್ದ ಗುಲಾಂ ಅಹಮ್ಮದ್, ಓಲೆಕಾರರ (couriers) ದರೋಗನಾಗಿದ್ದ ಸೈಯದ್ ಆಲಿ ಮತ್ತು ಸಾಯಿಷ್‌ಕೀಮ್ (paishkhaeema) ದ ದರೋಗನಾದ ಮೀರ್ ಬಶೀರ್, ಶಾಮನಾಯಕ, ಶೈಸನಾಯ್ಕ ಮತ್ತು ಸದಾಶಿವ ನಾಯ್ಕರಿಗೆ ಟಿಪ್ಪುವು ಪತ್ರ ಬರೆದು ಸೂಚಿಸಿದ್ದೇನೆಂದರೆ, " ಮೇಲೆ ಹೇಳಿದ ಹರಿಕಾರ ನಾಯಕರಿಂದ ನೀವುಗಳು ಒಂದು ತಿಂಗಳು ಕಡ್ಡಾಯವಾಗಿ ಗಾಂಜಾನಗರ ಮತ್ತು ಎರಡು ಹುಜೂರು ಕ್ಯಾಂಪ್‌ಗಳಲ್ಲಿ ಹಾಗೂ ಗ್ರೇಟ್‌ಮೀರ್‌ನ ಗೇಟುಗಳು ಒಳ, ಹೊರಗೆ, ಮತ್ತು ಪೂರ್ತಿ ಪಟ್ಟಣಗಳಲ್ಲಿ ಇರುವ ಮನೆಗಳಲ್ಲಿ ಗುಪ್ತ ಮಾಹಿತಿಗಳನ್ನು ಸಂಗ್ರಹಿಸಬೇಕು. ಬೇರೆ ವಾಸಸ್ಥಳಗಳಿಗೆ ಹೋಗುವ ಪ್ರತಿಯೊಬ್ಬ ವ್ಯಕ್ತಿಯಿಂದಲೂ ರಾಜ್ಯದ ಸ್ಥಿತಿಗತಿ ಬಗ್ಗೆ ಏನು ಹೇಳುತ್ತಾರೆಂಬ ಬಗ್ಗೆ ಮಾಹಿತಿ (ಜ್ಞಾನ)ಪಡೆಯಬೇಕು. ನೀವು ಮೂರು ಜನ ದರೋಗಗಳು ಪ್ರತಿನಿತ್ಯ ನಡೆಯುವ ಘಟನೆಗಳ ಬಗ್ಗೆ ನಿಮ್ಮ ಸ್ವಂತ ಹಸ್ತಾಕ್ಷರದಲ್ಲಿ ಪರ್ಶಿಯನ್ ಭಾಷೆಯಲ್ಲಿ ಪ್ರತ್ಯೇಕವಾದ ವರದಿಗಳನ್ನೂ, ನೀವು ಮೂರು ಜನ ನಾಯಕರುಗಳು, ನಿಮ್ಮ ಸ್ವಂತ ಹಸ್ತಾಕ್ಷರದಲ್ಲಿ ಕನ್ನಡ ಭಾಷೆಯಲ್ಲಿ ಪ್ರತ್ಯೇಕವಾದ ವರದಿಯನ್ನು ಬರೆದು ಸನ್ನಿದಾನಕ್ಕೆ ಪರಾಂಬರಿಕೆಗೆ ಕಳುಹಿಸತಕ್ಕದ್ದು. ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆಯೂ ಗುಪ್ತಮಾಹಿತಿ ಸಂಗ್ರಹಿಸಬೇಕು. ಆದರೆ ಒಬ್ಬರು ಇನ್ನೊಬ್ಬರ ಮನೆಗಾಗಲಿ, ಇನ್ನೊಬ್ಬ ಮತ್ತೊಬ್ಬನ ಮನೆಗಾಗಲಿ ಹೋಗಬಾರದೆಂಬುದು ಸನ್ನಿದಾನದ ಆದೇಶ. ನೀವುಗಳು ಏನನ್ನು ತಿಳಿಸಬೇಕೋ ಅದನ್ನು ಸಂಬಂಧಪಟ್ಟ ಕಛೇರಿಯ ಮೂಲಕ ಕಳುಹಿಸಿಕೊಡಬೇಕು. ಈ ಆದೇಶಕ್ಕೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡು ಯಾರಾದರೂ ಇನ್ನೊಬ್ಬನ ಮನೆಗೆ ಹೋದರೆ ನೀವು ಆ ಮನೆಯಿಂದ ಹೊರಗೆ ಬರುವಾಗ ಅದೇ ವೇಳೆ ನಿಮ್ಮನ್ನು ಹಿಡಿದು ಅರಮನೆಯ ದ್ವಾರಕ್ಕೆ ತಂದು ಸನ್ನಿದಾನಕ್ಕೆ ವಿಷಯವನ್ನು ವರದಿ ಮಾಡಲಾಗುವುದು".[೫೭] ಇದರಿಂದ ತಿಳಿದುಬರುವುದೇನೆಂದರೆ, ಟಿಪ್ಪು ಕಾಲದಲ್ಲಿ 'ದರೋಗ' ಎಂಬ ಅಧಿಕಾರಿಗಳು ಪೊಲೀಸ್ ಕರ್ತವ್ಯದ ಜೊತೆಗೆ ಗುಪ್ತಚಾರರ ಕೆಲಸವನ್ನು ಮಾಡುತ್ತಿದ್ದರು. ಆತನ ಆಡಳಿತದ ವ್ಯವಹಾರ ಪರ್ಶಿಯನ್ ಹಾಗೂ ಕನ್ನಡ ಭಾಷೆಗಳಲ್ಲಿ ನಡೆಯುತ್ತಿತ್ತು. ಮತ್ತು ಗುಪ್ತಚಾರರು ಸರಿಯಾಗಿ ಕೆಲಸ ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಅವರ ಬಗ್ಗೆಯೇ ಮಾಹಿತಿ ತಿಳಿಯಲು ಬೇರೆಯವರನ್ನು ನೇಮಿಸುತ್ತಿದ್ದನೆಂದು ತಿಳಿಯುತ್ತದೆ. ಮತ್ತು ಅಗತ್ಯವಿರುವ ಸ್ಥಳದ ಪ್ರತಿಯೊಬ್ಬರ ಬಗ್ಗೆಯೂ ಟಿಪ್ಪು ಗುಪ್ತಚಾರರಿಂದ ಮಾಹಿತಿ ತರಿಸಿಕೊಳ್ಳುತ್ತಿದ್ದನೆಂದು ತಿಳಿದುಬರುತ್ತದೆ. ದಿನಾಂಕ: ೨೬ ರ ನವೆಂಬರ್ ೧೭೮೫ ರಂದು ಅರ್‌ಮೇನಿಯಾದ ವ್ಯಾಪಾರಿಗೆ ಟಿಪ್ಪು ಸುಲ್ತಾನ್ ಬರೆದ ಪತ್ರದಲ್ಲಿ, "ನೀವು ಸರಕು ತುಂಬಿದ ಹಡಗಿನೊಂದಿಗೆ ಬಂದು ಅವುಗಳನ್ನು ಇಂಗ್ಲೀಷರು, ಅಥವಾ ಪೋರ್ಚ್‌ಗೀಸರಂತೆ ಮಾರಾಟ ಮಾಡಲು ಉದ್ದೇಶವಿರಿಸಿಕೊಂಡು,

ನಮ್ಮ ಬಂದರಿಗೆ ಪ್ರವೇಶಿಸಲು ವಿಶೇಷ ಪರವಾನಿಗೆ ಪಡೆಯಲು ಬಯಸ್ಸಿ ದ್ದೀರೆಂದು, ನಮಗೆ ವಿಳಂಬವಾಗಿ ತಿಳಿಯಿತು. ನಾವು ಈ ಬಗ್ಗೆ ಅನುಮತಿ ನೀಡಿದ್ದೇವೆ. ನೀವು ಮಂಗಳೂರು ಅಥವಾ ಕ್ಯಾಲಿಕಟ್‌ನಲ್ಲಿ ನಿಮ್ಮ ಹಡಗನ್ನು ನಿಲ್ಲಿಸಿ ಅತ್ಯಂತ ಭರವಸೆಯಿಂದ ದುರಸ್ಥಿ ಮಾಡಿಸಿಕೊಳ್ಳಬಹುದು. ಮತ್ತು ನಿಮ್ಮ ಸರಕನ್ನು ಇಳಿಸಬಹುದು. ನೀವು ಮೊದಲ ಬಾರಿಗೆ ಸರಕುಗಳ ಪಟ್ಟಿಯನ್ನು ನಮಗೆ ಕಳುಹಿಸಿಕೊಟ್ಟು ಅದರಲ್ಲಿ ನಾವು ಬಯಸಿದ್ದನ್ನು ನ್ಯಾಯಯುತವಾದ ಬೆಲೆಗೆ ನೀಡಬೇಕು. ನಂತರ ಉಳಿದ ಸರಕುಗಳನ್ನು ನಿಮ್ಮ ಇಚ್ಚೆಯಂತೆ ಮಾರಾಟ ಮಾಡಿ ಕೊಳ್ಳಬಹುದು. ಮತ್ತು ನೀವು ಬಯಸಿದಾಗ ಇಲ್ಲಿಂದ ಹಿಂದಿರುಗಬಹುದು. ಈ ವಿಷಯವಾಗಿ ನಾವು ಮೇಲಿನ ಆದೇಶದ ಜಾರಿಗಾಗಿ ಕ್ಯಾಲಿಕಟ್‌ನ ಫೌಜುದಾರನಾದ ಉರ್‌ಷದ್ ಬೇಗ್‌ಖಾನ್‌ಗೆ ಒಂದು ಮತ್ತು ಮಂಗಳೂರಿನ ಅಮಿಲ್ ಆದ ಗುಲಾಂ ಹೈದರ್‌ನಿಗೆ ಒಂದು ಆದೇಶ ಕಳಿಸುತ್ತೇವೆ. ಎರಡು ಬಂದರುಗಳಲ್ಲಿ ಯಾವುದು ಸೂಕ್ತವೆಂಗು ನಿಮಗೆ ಅನ್ನಿ ಸುತ್ತದೋ ಅಲ್ಲಿಗೆ ಹೋಗಬಹುದು" ಎಂದು ತಿಳಿಸಿದ್ದಾನೆ.[೫೮] ಇಲ್ಲಿ ಗಮನಿಸ ಬೇಕಾದ ಎರಡು ಮುಖ್ಯ ಅಂಶಗಳೆಂದರೆ, ಒಂದು ಯಾವುದೇ ವಿದೇಶಿ ಹಡಗು ರಾಜ್ಯಕ್ಕೆ ಬರಬೇಕಿದ್ದರೆ ನೇರವಾಗಿ ರಾಜನ ಅನುಮತಿಬೇಕಿತ್ತು. ಮತ್ತು ಸ್ಥಳೀಯ ಪೊಲೀಸ್ ಅಧಿಕಾರಿಗಳಾಗಿದ್ದ ಫೌಜುದಾರರ ಅಥವಾ ಅಮಿಲ್‌ಗೆ ವಿಷಯ ತಿಳಿದು ಆತನ ಅನುಮತಿ ನಂತರವೇ ಆ ಹಡಗು ಬಂದರಿನೊಳಗೆ ಬರಬೇಕಿತ್ತು. ಎರಡನೇಯದಾಗಿ ೧೭೮೫ ರಲ್ಲಿ ಮಂಗಳೂರಿನ (ಪೊಲೀಸ್ ಅಧಿಕಾರಿ) ಅಮಿಲ್‌ದಾರ 'ಗುಲಾಂ ಹೈದರ್' ಎಂಬವನಾಗಿದ್ದನೆಂದು ತಿಳಿಯುತ್ತದೆ.

ನಗರದ ಖಾಜಿರವರಿಗೆ ದಿನಾಂಕ ೦೯-೦೫-೧೭೮೫ ರಂದು ಬರೆದ ಪತ್ರ

"ನಿಮ್ಮ ಪತ್ರ ತಲುಪಿತು. ಒಂಬತ್ತು ಜನ ಪ್ರೆಂಚರು ತಮ್ಮ ಕ್ಯಾಪ್ಟನ್‌ನೊಂದಿಗೆ ನಮ್ಮ ನಂಬಿಕೆಗಳನ್ನು ಒಪ್ಪಿಕೊಂಡಿದ್ದಾರೆಂದೂ, ಆ ಕ್ಯಾಪ್ಟನನು ವಿನೀತನಾಗಿ 'ಅಹಮದೀಯ ರಿಸಾಲ್'ಗಳ ಆದೇಶಗಳನ್ನು ಗೌರವಿಸಿ ದ್ದಾನೆಂದು ನೀವು ಬರೆದಿದ್ದೀರಿ. ಇದು ತಿಳಿಯಿತು. ಪ್ರತಿಯೊಬ್ಬರಿಗೂ ಹತ್ತು ರೂಪಾಯಿಗಳನ್ನು ನೀಡಲು ಸಂತೋಷ ಪಡುತ್ತೇನೆ. ಮತ್ತು ಅವರೆಲ್ಲರನ್ನು ಬೆಂಗಾವಲಿನೊಂದಿಗೆ ಸನ್ನಿದಾನಕ್ಕೆ ಕಳಿಸಿಕೊಡುವುದು. ಕ್ಯಾಪ್ಟನ್ ತಲುಪುವ ವೇಳೆಗೆ ಆತನನ್ನು ಗೌರವದಿಂದ ಬರಮಾಡಿಕೊಳ್ಳಬೇಕು. ಅವರಿಗೆ ನಿರ್ಧಿಷ್ಟವಾಗಿ ನೀಡಬೇಕಾದ ವೇತನ ಮತ್ತು ಅಗತ್ಯ ಬೆಂಗಾವಲು ಒದಗಿಸಲು ನಗರದ ಕಿಲ್ಲೇದಾರರಿಗೆ ಆದೇಶ ಕಳಿಸಲಾಗಿದೆ."[೫೯] ಇಲ್ಲಿ ಗಮನಿಸಬೇಕಾದ ಎರಡು ಅಂಶಗಳೆಂದರೆ, ಮಹಮ್ಮದೀಯ ನಂಬಿಕೆಗಳನ್ನು ಒಪ್ಪಿ ಬಂದವರಿಗೆ ವೇತನ ನೀಡುವುದರ ಜೊತೆಗೆ ಕಿಲ್ಲೇದಾರನ ಮೂಲಕ ಸೂಕ್ತ ಬೆಂಗಾವಲು ನೀಡಲಾಗುತ್ತಿತ್ತು. ಇವರಿಗೂ ಸಹ ಪೊಲೀಸರು ಬೆಂಗಾವಲು ನೀಡುತ್ತಿದ್ದರೆಂಬುದು ಇಲ್ಲಿ ಮುಖ್ಯ. ೧೭೯೯ ರ ಜನವರಿ ೨ ರಂದು ಹೈದರಾಬಾದ್ ರೆಸಿಡೆಂಟರು ಲಾರ್ಡ್ ಮಾರ್ನಿಂಗ್‌ಟನ್‌ಗೆ ಬರೆದ ಪತ್ರದಲ್ಲಿ ಟಿಪ್ಪುವಿನ ಕಾಲದಲ್ಲಿದ್ದ ಕೆಲವು ಪೊಲೀಸ್ ಅಧಿಕಾರಿಗಳ ಹೆಸರುಗಳು ತಿಳಿದುಬರುತ್ತದೆ. ಇದರ ಪ್ರಕಾರ ಬಳ್ಳಾರಿಯ ಮೊದಲ ಕಿಲ್ಲೇದಾರ ಮತ್ತು ಸುಲ್ತಾನ್‌ಷ್ಲೀಟ್‌ನ ದರೋಗನಾಗಿದ್ದ ಜಾಫಿರ್‌ಖಾನ್ ಎಂಬವನು ಕಾನ್‌ಸ್ಟಾಂಟಿನೋಪಲ್‌ಗೆ ಹೋಗಿದ್ದ ಗುಲಾಮ್ ಅಲಿಖಾನ್‌ನ ನಿಯೋಗದಲ್ಲಿದ್ದನೆಂದು ತಿಳಿಯುತ್ತದೆ. ಅದೇ ರೀತಿ ಸಯ್ಯದ್ ಯಾಕೂಬ್ ಪೀಯದಾಹ (Syed yacoob peeyadah) ನು ಕರೂವ್ (karoov) ನ ಮೊದಲ ಕಿಲ್ಲೇದಾರನಾಗಿದ್ದನೆಂತಲೂ ಮತ್ತು ಪೀಲ್‌ಖಾನ್ ಎಂಬವನು ಬಾನಾವೂರಿನ ದರೋಗನಾಗಿ ಕಂದಾಯವನ್ನು ವಸೂಲಿಯ ಮೇಲ್ವಿಚಾರಣೆ ನೋಡುತ್ತಿದ್ದನೆಂತಲೂ ತಿಳಿದುಬರುತ್ತದೆ. ಸೆಯ್ಯದ್ ಉಮ್ಮರ್‌ನು ತಕರಿ (takaree) ಯ ಮೊದಲ ಕಿಲ್ಲೇದಾರನಾಗಿದ್ದು, ೩೦೦ ಜನ ಚೇಲಾಗಳಿಗೆ ಕಮಾಂಡರ್ ಆಗಿದ್ದನೆಂತಲೂ, ಸೈಯದ್ ಆದಬ್ ರಹೀಂ ದೇರಿಯ ಬಹದ್ದೂರ್‌ಗೀರ್ (Deria bahadur geer) ನ ಮೊದಲ ಕಿಲ್ಲೇದಾರನಾಗಿದ್ದನೆಂತಲೂ, ಮೊಹಮ್ಮದ್ ಮೇದಿನನು ಶಾಕುರ್‌ಪೂರ್ (shakurpoor) ನ ಮೊದಲ ಕಿಲ್ಲೇದಾರನಾಗಿದ್ದನೆಂತಲೂ, ಮೊಹಮ್ಮದ್

ಇಸ್ಮಾಯಿಲ್‌ನು ಲಕ್ಕವಳ್ಳಿಯ ಕಿಲ್ಲೇದಾರನಾಗಿದ್ದನೆಂತಲೂ, ಸೈಯದ್ ಮೋರ್ಬಿಯಾಹನು ಕುಂದಾಪುರದ ಕಿಲ್ಲೇದಾರನಾಗಿದ್ದನೆಂತಲೂ, ಸೈಯದ್ ಇಬ್ರಾಹಿಂನು ಗೌಮನಿ (Govmany) ಯ ಕಿಲ್ಲೇದಾರನಾಗಿದ್ದನೆಂತಲೂ ತಿಳಿದು ಬರುತ್ತದೆ.[೬೦]

೪.೪ ಪೊಲೀಸ್ ವ್ಯವಸ್ಥೆಗೆ ದಿವಾನ್ ಪೂರ್ಣಯ್ಯನವರ ಕೊಡುಗೆಗಳು

ಪೂರ್ಣಯ್ಯನವರು ಜನಿಸಿದ್ದು ಅಕ್ಷಯ ನಾಮ ಸಂವತ್ಸರದ ಪಾಲ್ಗುಣ ಮಾಸದ ಏಕಾದಶಿ ೧೭೪೬ ರಂದು. ತಮಿಳುನಾಡಿನ ಕೊಯಮುತ್ತೂರು ಜಿಲ್ಲೆಯ ಕುಳಿತಲೈ ತಾಲೂಕಿನ ತಿರುಕಂಬೂರು ಗ್ರಾಮದಲ್ಲಿ. ಇವರ ತಂದೆ ಕೃಷ್ಣಾಚಾರ್ಯ ಅರವೇಲು. ದೇಶಸ್ಥ ಮಾದ್ವ ಕುಟುಂಬಕ್ಕೆ ಸೇರಿದ್ದು, ಇವರ ಪತ್ನಿ ಲಕ್ಷ್ಮೀಬಾಯಿ, ಮರಾಠಿ ದೇಶಸ್ಥ ಕುಟುಂಬಕ್ಕೆ ಸೇರಿದ್ದರೆಂದು ತಿಳಿದುಬರುತ್ತದೆ. ಇವರು ಮೊದಲು ಅನ್ನದಾನ ಶೆಟ್ಟಿ ಎಂಬವನ ಬಳಿ ಕೆಲಸದಲ್ಲಿದ್ದು, ನಂತರ ಶ್ರೀರಂಗಪಟ್ಟಣಕ್ಕೆ ವಲಸೆ ಬಂದರು. ಅನ್ನದಾನ ಶೆಟ್ಟಿಯ ಮುಖಾಂತರ ಹೈದರಾಲಿಯ ಪರಿಚಯವಾಗಿ ಹೈದರಾಲಿ ಇವರನ್ನು ತೋಶಿಖಾನೆ (ಖಜಾನೆ) ಯಲ್ಲಿ ಗುಮಾಸ್ತನನ್ನಾಗಿ ಸೇರಿಸಿಕೊಂಡನು.[೬೧] *(ದಿವಾನ್ ಪೂರ್ಣಯ್ಯ ನವರ ಚಿತ್ರ ೩ ನೋಡಿ.)*

ಸ್ವಲ್ಪ ಸಮಯದ ನಂತರ ಪೂರ್ಣಯ್ಯನವರ ಬುದ್ದಿವಂತಿಕೆಯನ್ನು ಗಮನಿಸಿದ ಹೈದರಾಲಿಯು ತೋಶಿಖಾನೆಯ ಮುಖ್ಯಸ್ಥನಾಗಿ ನೇಮಿಸಲಾಯಿತು. ಕಾಲಕ್ರಮೇಣ ಗೈದರಾಲಿಗೆ ಪೂರ್ಣಯ್ಯನವರ ಮೇಲೆ ವಿಶ್ವಾಸ ಹೆಚ್ಚಿದ್ದರಿಂದ ತನ್ನ ಆಪ್ತ ಸಲಹೆಗಾರರನ್ನಾಗಿ ನೇಮಿಸಿದರು. ನಂತರ ಪೂರ್ಣಯ್ಯನವರನ್ನು ತನ್ನ ಸೇನೆಯ ಸರಬರಾಜು ಮಂತ್ರಿಯನ್ನಾಗಿ ನೇಮಿಸಿ ಕೊಂಡರು. ಹೈದರಾಲಿಯ ಅತ್ಯಂತ ಆಪ್ತ ನಂಬಿಕಸ್ಥ ಮಂತ್ರಿ ವರ್ಗದಲ್ಲಿ ಪೂರ್ಣಯ್ಯನವರು ಒಬ್ಬರಾಗಿದ್ದರು. ೧೭೮೨ ರ ಡಿಸೆಂಬರ್ ೭ ರಂದು ಹೈದರಾಲಿಯು ಅಕಾಲಿಕ ಮರಣಕ್ಕೆ ತುತ್ತಾದ ಸಂದರ್ಭದಲ್ಲಿ ಸರಬರಾಜುಮಂತ್ರಿಯಾಗಿದ್ದ ಪೂರ್ಣಯ್ಯನವರ ಸಲಹೆಯ ಮೇರೆಗೆ ಈ ವಿಷಯವನ್ನು ಗೌಪ್ಯವಾಗಿಟ್ಟು ಆ ಸಮಯದಲ್ಲಿ ಮಲಬಾರಿನಲ್ಲಿದ್ದ ಟಿಪ್ಪು ಸುಲ್ತಾನನು ರಾಜಧಾನಿ ಶ್ರೀರಂಗಪಟ್ಟಣಕ್ಕೆ ಬರುವವರೆಗೆ ಗೌಪ್ಯತೆಯನ್ನು ಕಾಪಾಡಲಾಯಿತು. ಈ ರಾಜಕೀಯ ತಂತ್ರ ದಿಂದಾಗಿ ಹೈದರಾಲಿಯ ಆಸೆಯಂತೆ ಟಿಪ್ಪುವನ್ನು ಮೈಸೂರಿನ ನವಾಬನನ್ನಾಗಿ ನೇಮಿಸುವ ಪ್ರಕ್ರಿಯೆಯು ಸುಗಮವಾಯಿತು.

ಟಿಪ್ಪು ಸುಲ್ತಾನನು ನವಾಬನಾದ ತಕ್ಷಣ ಪೂರ್ಣಯ್ಯನವರನ್ನು ಹಣಕಾಸು ಮಂತ್ರಿಯನ್ನಾಗಿ ನೇಮಿಸಿದ. ಹೈದರಾಲಿ (೧೭೬೧ –೧೭೮೨) ಮತ್ತು ಟಿಪ್ಪು ಸುಲ್ತಾನ್ (೧೭೮೨–೧೭೯೯) ಹೈದರ್ ಮತ್ತು ಟಿಪ್ಪುರವರ ಕೈಕೆಳಗೆ ಸೇವೆ ಮಾಡುತ್ತಿದ್ದ ಇವರು ಅಂದರೆ, ಮುಸ್ಲಿಂ ದೊರೆಗಳ ಆಡಳಿತ ಅವಧಿಯಲ್ಲಿಯೂ ತನ್ನ ಕೆಲಸ ಕಾರ್ಯಗಳಿಂದ ರಾಜರ ಮತ್ತು ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇಷ್ಟೇ ಅಲ್ಲದೇ ಟಿಪ್ಪುವಿನ ಮರಣಾನಂತರ (೧೭೯೯ ಮೇ ೪) ಅಂದರೆ ಶ್ರೀರಂಗಪಟ್ಟಣದ ಪಥನಾನಂತರ ಬ್ರಿಟೀಷರು ಪೂರ್ಣಯ್ಯನವರನ್ನು ಕೇವಲ ೬ ವರ್ಷದ ಮೈಸೂರಿನ ಬಾಲ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತವನ್ನು ನೋಡಿಕೊಳ್ಳುವ ದಿವಾನರನ್ನಾಗಿ ನೇಮಿಸಿದರು. ಇದೊಂದು ಅತ್ಯಂತ ಕ್ಲಿಷ್ಟಕರವಾದ ಮತ್ತು ಅಗ್ನಿಪರೀಕ್ಷೆಯ ಕಾಲವಾಗಿತ್ತು.

ವಿಧವೆಯಾಗಿದ್ದ ಮಹಾರಾಣಿ ಲಕ್ಷ್ಮಮ್ಮಣ್ಣಿ ಆಡಳಿತದ ಯಂತ್ರವನ್ನು ಹಿಡಿದರು. ಆಗ ಅವರಿಗೆ ಅತ್ಯಪೂರ್ವವಾದ ಸಲಹೆಯನ್ನು ಇತ್ತವರು ದಿವಾನ್ ಪೂರ್ಣಯ್ಯನವರು ಇವರು ಈ ಕೆಲಸವನ್ನು ಬಯಸಿ ಬಂದವರಲ್ಲ. ಏಕೆಂದರೆ ಟಿಪ್ಪುವಿನ ಮರಣಾನಂತರ ೧೭೯೯ ರ ಮೇ ೧೨ ನೇ ತಾರೀಕಿನವರೆಗೂ ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಕರಿಗಟ್ಟದಲ್ಲಿ ಟಿಪ್ಪುವಿನ ಮಗನಾದ ಫತೇಹೈದರ್‌ನೊಂದಿಗೆ ಇದ್ದು, ಆತನಿಗೆ ರಕ್ಷಣೆಯನ್ನು ಕೊಟ್ಟು ಕೊಂಡಿದ್ದರು. ನಂತರ ಇಬ್ಬರೂ ಬ್ರಿಟೀಷರಿಗೆ ಶರಣಾದಾಗ ಪೂರ್ಣಯ್ಯನವರು ಬ್ರಿಟೀಷರ ಮುಂದೆ ಇಟ್ಟ ಬೇಡಿಕೆ ಏನೆಂದರೆ, ಫತೇ ಹೈದರ್‌ಗೆ ಮೈಸೂರಿನ ಪಟ್ಟ ಕಟ್ಟಬೇಕೆಂದು ಪ್ರಾರ್ಥಿಸಿದರು. ಆದರೆ ವೆಲ್ಲೆಸ್ಲಿಯು ಅದಕ್ಕೆ ಒಪ್ಪಿರಲಿಲ್ಲ. ಹೀಗೆ ತಾನು ಹೈದರ್ ಮತ್ತು

ಟಿಪ್ಪುರವರಿಗೆ ವಿಧೇಯರಾಗಿದ್ದು ಕೊಂಡು ಕೆಲಸ ಮಾಡಿಕೊಂಡು ಬಂದಿದ್ದ ಪೂರ್ಣಯ್ಯ ರವರಿಗೆ ಮೈಸೂರು ಸಂಸ್ಥಾನದಲ್ಲಿ ಕೆಲಸ ಮಾಡುವುದು ಅತ್ಯಂತ ಕ್ಲಿಷ್ಟಕರವಾಗಿತ್ತು. ಈ ಹಿಂದೆ ಆಳುತ್ತಿದ್ದ ದೊರೆಗಳ ಸಹಾನುಭೂತಿಯಿಂದ ಕೆಲಸ ಮಾಡುತ್ತಿದ್ದುದರಿಂದ ಇವರ ಬಗ್ಗೆ ಹಾಗೂ ಇವರ ಚಟುವಟಿಕೆಗಳು, ನಿರ್ಣಯಗಳ ಬಗ್ಗೆ ಬಹಳ ಎಚ್ಚರದಿಂದ ಗಮನಿಸಬೇಕಿತ್ತು. ಅಸಮಧಾನ ಮತ್ತು ಕೋಪದಿಂದ ಕುದಿಯುತ್ತಿದ್ದ ಮುಸಲ್ಮಾನರನ್ನು ಸಮಾದಾನಪಡಿಸಬೇಕಿತ್ತು. ಸಮರಾಂಗಣದಲ್ಲಿ ಇನ್ನೂ ಪೂರ್ಣವಾಗಿ ಪರಾಜಿತ ವಾಗದಿದ್ದ ದೊಡ್ಡ ಸೈನ್ಯವನ್ನು ಶಾಂತ ರೀತಿಯಿಂದ ಸೂಕ್ತ ಪರಿಹಾರ ನೀಡಿ ಎದುರಿಸಬೇಕಿತ್ತು. ಸಂಪೂರ್ಣವಾಗಿ ಬರಿದಾಗಿದ್ದ ಖಜಾನೆಯನ್ನು ತುಂಬಿಸಬೇಕಿತ್ತು. ತನ್ನ ತಲೆಯ ಮೇಲೆ ಸೂರಿಲ್ಲದ ಅಪ್ರಾಪ್ತ ವಯಸ್ಸಿನ ಮಹಾರಾಜ ಕೃಷ್ಣರಾಜ ಒಡೆಯರ್‌ರವರ ಯೋಗಕ್ಷೇಮ ನೋಡಿಕೊಳ್ಳಬೇಕಿತ್ತು. ಮೈಸೂರು ಸಂಸ್ಥಾನದ ಅನೇಕಾನೇಕ ಭದ್ರತಾ ನೆಲೆಗಳು ಮತ್ತು ಕೋಟೆಗಳಲ್ಲಿ ದಿಕ್ಕು ಕಾಣದೇ ತೊಳಲಾಡುತ್ತಿದ್ದ ಕಾವಲು ದಂಡುಗಳು ಇನ್ನು ಶರಣಾಗಬೇಕಿತ್ತು. ಇಷ್ಟೇ ಸಾಲದೆಂಬಂತೆ ಇವರನ್ನು ದಿವಾನರ ಹುದ್ದೆಗೆ ನೇಮಿಸಿದ್ದ ಬ್ರಿಟೀಷರು ಇವರ ಮೇಲೆ ಇರಿಸಿಕೊಂಡಿದ್ದ ಹೆಚ್ಚಿನ ನಿರೀಕ್ಷಣೆಗಳನ್ನು ಈಡೇರಿಸಬೇಕಾದ ಒತ್ತಡವು ಅವರ ಮೇಲಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ರಾಜಪರಿವಾರವು ಟಿಪ್ಪುವಿನೊಡನೆ ಪೂರ್ಣಯ್ಯನವರು ಇರಿಸಿದ್ದ ಹಿಂದಿನ ಗಾಢ ಸಂಬಂಧದಿಂದಾಗಿ ಅನುಮಾನಗಳು ಮತ್ತು ಭಯದಿಂದ ಪರಿತಪಿಸುತ್ತಿತ್ತು.[೭೨] ಏಕೆಂದರೆ ಟಿಪ್ಪುವಿನ ಮರಣಾನಂತರವೂ ಸಹ ಆತನ ಮಗನನ್ನು ಮೈಸೂರು ರಾಜನನ್ನಾಗಿ ಮುಂದುವರಿಸಲು ಪೂರ್ಣಯ್ಯನವರು ಪ್ರಯತ್ನಿಸಿದ್ದರು.

ಪೂರ್ಣಯ್ಯನವರು ಟಿಪ್ಪುವಿನ ಪಥನಾನಂತರ ರಾಜ್ಯವನ್ನು ಅಷ್ಟಗ್ರಾಮ, ನಗರ, ದುರ್ಗವೆಂದು ಮೂರು ಭಾಗಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬ ಸುಬೇದಾರರನ್ನಾಗಿ ನೇಮಿಸಿದರು. ನಂತರ ಭಾಗಗಳನ್ನು ಜಿಲ್ಲೆಗಳನ್ನಾಗಿಯೂ, ಅವನ್ನು ತಾಲೂಕುಗಳನ್ನಾಗಿಯೂ ಮತ್ತು ಹೋಬಳಿ ಮತ್ತು ಹಳ್ಳಿಗಳನ್ನಾಗಿ ವಿಂಗಡಿಸಿ ಹೋಬಳಿಗೆ ಪಾರುಪತ್ತೆದಾರ, ಹಳ್ಳಿಗೆ ಪಟೇಲರು, ಶಾನುಭೋಗರು, ತೋಟಿ, ತಳವಾರರನ್ನು ನೇಮಿಸಿದರು. ಸುಬೇದಾರರ ಕೈಕೆಳಗೆ ತಾಲೂಕಿಗೆ ಅಮಲ್‌ದಾರ, ಶಿರಸ್ತೇದಾರ, ಕೋಶಾಧಿಕಾರಿಗಳಿದ್ದರು [೭೩] ಈ ಮೂರು ವಿಭಾಗಗಳಲ್ಲಿ ಒಟ್ಟಾಗಿ ೧೧೫ ರಿಂದ ೧೨೦ ತಾಲೂಕುಗಳ ಅಥವಾ ಉಪ-ವಿಭಾಗಗಳು ಇದ್ದವು. ಪ್ರತೀ ಉಪ-ವಿಭಾಗದಲ್ಲಿ 'ಅಮಿಲ್'ಅಥವಾ ಅಮಿಲ್‌ದಾರ್ ಎಂದು ಕರೆಯಲ್ಪಡುವ ಅಧಿಕಾರಿಯು ಇದ್ದನು. ಒಟ್ಟು ರಾಜ್ಯದ ವಿಸ್ತೀರ್ಣವು ೨೯,೦೦೦ ಚ.ಮೈ ಹಾಗೂ ಜನಸಂಖ್ಯೆ ೨೨ ಲಕ್ಷಕ್ಕೂ ಸ್ವಲ್ಪ ಕಡಿಮೆ ಇತ್ತು.[೭೪]

ಟಿಪ್ಪು ಕಾಲದ ಸೈನ್ಯದ ಪುನರ್‌ವ್ಯವಸ್ಥೆ ಮಾಡುವಂತೆ ಪೂರ್ಣಯ್ಯನವರಿಗೆ ಜನರಲ್ ಹ್ಯಾರೀಸ್‌ನು ಆದೇಶಿಸಿದ ಕಾರಣ ಆ ಸೈನ್ಯದಲ್ಲಿದ್ದ ಸೈನಿಕರು ರಾಜ್ಯದಲ್ಲಿ ಹರಡಿ ಕಾನೂನು ಮತ್ತು ಶಿಸ್ತಿನ ವ್ಯವಸ್ಥೆಗೆ ಸಮಸ್ಯೆಗಳನ್ನು ಉಂಟು ಮಾಡುವ ಸಂಭವವಿತ್ತು. ಹೀಗಾಗಿ ದಿವಾನ್ ಪದವಿ ವಹಿಸಿಕೊಂಡ ಕೂಡಲೇ ಪೂರ್ಣಯ್ಯನವರು ಹಿಂದು ಪದ್ಧತಿ ಅನುಸಾರ ಕಂದಾಯ ದರವನ್ನು ನಿಗದಿಪಡಿಸಿ ಹಿಂದೆ ಮೀರ್‌ಸಾದಿಕ್ ಕಂದಾಯ ವಸೂಲಿ ಅನುಸರಿಸುತ್ತಿದ್ದ ದಬ್ಬಾಳಿಕೆ ನೀತಿಯನ್ನು ರದ್ದು ಮಾಡಿದರು. ಅದು ಭೂಹಿಡುವಳಿಯದಾರರ ಮೇಲೆ ಪರಿಣಾಮ ಬೀರಿ ತಮ್ಮ ಜಮೀನುಗಳನ್ನು ಬಿಟ್ಟು ಹೋಗಿದ್ದವರೆಲ್ಲಾ ಹಿಂದಿರುಗಿ ಬಂದರು. ನೆಮ್ಮದಿ ಶಾಂತಿಯು ನೆಲೆಸಿತು.[೭೫] ರಾಜ್ಯದ ಶಾಂತಿಗೆ ಭಂಗವೆನಿಸಿದ್ದ ಪಾಳೇಗಾರರು, ತುಂಡುನಾಯಕರು ಇದ್ದರು. ಅವರುಗಳು ಕೂಟ ಯುದ್ಧದಲ್ಲಿ (ಗೆರಿಲ್ಲಾ ವಾರ್) ನಿಷ್ಣಾತರಾಗಿದ್ದರು. ಬೆಟ್ಟಗುಡ್ಡಗಳಲ್ಲಿ ಸೇರಿಕೊಂಡು ಉಪಟಳಗಳನ್ನು ನೀಡುತ್ತಿದ್ದರು. ಬಯಲು ಕಾಳಗಕ್ಕೆ ಅವರು ಎಂದೂ ಬಂದವರಲ್ಲ. ಪ್ರಬಲವಾದ ಸೈನ್ಯ ಬಂತೆಂದರೆ ಅರಣ್ಯದಲ್ಲಿ, ಗುಡ್ಡಗಳ ಮೇಲ್‌ತುದಿಯಲ್ಲಿ ಅವಿತುಕೊಂಡು ಬಂದ ಸೈನ್ಯ ಹಾನಿಗೊಂಡು ಹಿಂತಿರುಗುವಂತೆ ಮಾಡುತ್ತಿದ್ದರು. ವಿಜಯನಗರ ಕಾಲದ ಪಾಳೇಯಪಟ್ಟಿನ ಬಿಗಿ ವ್ಯವಸ್ಥೆ, ಅಚ್ಚುಕಟ್ಟು, ಸಾಮ್ರಾಜ್ಯಕ್ಕೆ ಆಧಾರ

ಸ್ತಂಬವಾಗುವ ತ್ಯಾಗ, ನಿಷ್ಠೆಗಳು ಶಿಥಿಲಗೊಂಡು ಅನ್ಯರೂಪ ಪಡೆದುಕೊಂಡ ವ್ಯವಸ್ಥೆಯಾಗಿ ಬಿಟ್ಟಿತು. ಇದಕ್ಕೆ ಈ ಪೂರ್ವದ ದಬ್ಬಾಳಿಕೆ, ಆಕ್ರಮಣ ಸೈನಿಕ ನೀತಿಯು ಕಾರಣವಾಗಿತ್ತು. ಇದಲ್ಲದೇ ಟಿಪ್ಪುವಿನ ತರುವಾಯ ಕೆಲವು ಪ್ರದೇಶ ಗಳಲ್ಲಿ ಪಟೇಲರು, ಪೊಲೀಸ್ ಅಧಿಕಾರಿಗಳು, ಪಾಳೇಗಾರರ ವೇಷ ಹಾಕಿಕೊಂಡು ಶ್ಯಾನುಭೋಗನಿಗೆ ಲಂಚ ನೀಡಿ ಆ ಪ್ರದೇಶದ ಭೂಮಿಗಳನ್ನೆಲ್ಲ ಅನಾಧಿಯಿಂದ ತಮ್ಮ ಅನುಭವ ದಲ್ಲಿದ್ದಂತೆ ಲೆಕ್ಕಗಳನ್ನು ಹುಟ್ಟಿಸಲಾರಂಭಿಸಿದರು. ಅಂಥ ಅಕ್ರಮಗಳನ್ನು ನಿಲ್ಲಿಸುವಂತಹ ಅಮಿಲ್ದಾರರ ಪ್ರಯತ್ನಗಳಿಗೆ ಅಡ್ಡಿ ಮಾಡಿ ಯಾರಿಗೂ ತಿಳಿಯದಂತೆ ಅವರನ್ನು ಕೊಲ್ಲಿಸು ತ್ತಿದ್ದರು. ಪೂರ್ಣಯ್ಯನವರು ಇದನ್ನು ತಿಳಿದು ಸರಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮುಂತಾದ ಮೊಬಲಗನ್ನು ಸೋಡಿ ಮಾಡಿರುವುದಾಗಿಯೂ ಅಲ್ಲಿಂದ ಮುಂದಕ್ಕೆ ಹಿಂದೂ ಧರ್ಮಶಾಸ್ತ್ರ ಪ್ರಕಾರ ಕಂದಾಯ, ಸಾಯರು, ಸುಂಕ ಮುಂತಾದವುಗಳನ್ನು ತೆಗೆದುಕೊಳ್ಳುವ ಬಗ್ಗೆ ಒಂದು ಪತ್ರಿಕೆ ಹೊರಡಿಸಿದರು. ಅದರ ರೀತ್ಯಾ ಖುಷ್ಕಿ ಜಮೀನಿಗೆ ಅದರಲ್ಲಿ ಆಗುವ ಉತ್ಪತ್ತಿಯಲ್ಲಿ ಅರ್ಧವನ್ನು ದವಸವಾಗಿಯೇ ಕೊಡಬೇಕೆಂದು ನಿಷ್ಕರ್ಷೆಯಾಯಿತು. ಆದರೆ ತರೀ ಜಮೀನಿನಲ್ಲಿ ಸುಗ್ಗಿಧಾರಣೆಯ ಪ್ರಕಾರ ಆದ ಉತ್ಪತ್ತಿಯಲ್ಲಿ ಅರ್ಧ ಉತ್ಪತ್ತಿಯ ಕ್ರಯವನ್ನು ವಾಡಿಕೆಯಾಗಿ ತೆಗೆದುಕೊಳ್ಳಲಾಗುತ್ತಿತ್ತು. ಧಾರಣೆ ವಿಷಯದಲ್ಲಿ ಚರ್ಚೆ ಬಿದ್ದರೆ ಆಗ ಹಣಕ್ಕೆ ಬದಲಾಗಿ ದವಸವನ್ನೇ ತೆಗೆದುಕೊಳ್ಳುತ್ತಿದ್ದರು. ಜಮೀನುದಾರರೂ ಅರ್ಧ ಕಂದಾಯವನ್ನು ಹಣದ ರೂಪದಲ್ಲಿ ಉಳಿದ ಅರ್ಧ ಕಂದಾಯವನ್ನು ದಂಡಿಗೆ ಜನರನ್ನು ಒದಗಿಸುವುದರ ಮೂಲಕ ತುಂಬಿ ಕೊಡಬೇಕೆಂಬ ನಿಬಂಧನೆ ಇತ್ತು. ಹೈದರ್ ಕಾಲದಲ್ಲಿ ಕಂದಾಯವನ್ನು ಪೂರ್ಣವಾಗಿ ನಗದು ರೂಪದಲ್ಲಿ ಕೊಡ ಬೇಕೆಂದಾಯಿತು. ಟಿಪ್ಪು ಬಂದ ಮೇಲೆ ಸೀಮೆಯಲ್ಲೆಲ್ಲಾ ಕಂದಾಯವನ್ನು ಹೆಚ್ಚಿಸಿದ. ಇವರೀರ್ವರ ಕಾಲದಲ್ಲಿ ಸೈನ್ಯವನ್ನು ತೆಗೆದುಕೊಂಡು ಹೋದಹೊರತು ಕಂದಾಯ ವಸೂಲಾಗುತ್ತಿರಲಿಲ್ಲ. ಕೃಷ್ಣರಾಜ ಒಡೆಯರ ಕಾಲದಲ್ಲಿ ಪೂರ್ಣಯ್ಯನವರು ರೈತರಿಗೆ ಒಪ್ಪಿಗೆ ಆಗುವಂತೆ ಕಂದಾಯ ನಿಷ್ಕರ್ಷೆ ಮಾಡಿ, ಜಮೀನುಗಳ ಬಾಧ್ಯತೆಯನ್ನು ವಂಶಪಾರಂಪರ್ಯವಾಗಿ ಕಂದಾಯ ತಪ್ಪದೇ ಕೊಡುತ್ತ ಬರುವವರಿಗೆ ರೈತರಿಗೆ ಸೇರಿದ್ದೆಂದು ಗೊತ್ತು ಮಾಡಿದರು[೬೬] ಪಟೇಲರು ಮತ್ತು ಪೊಲೀಸ್ ಅಧಿಕಾರಿ ಗಳ ಉಪಟಳ ತಡೆಯಲು ಪೂರ್ಣಯ್ಯನವರ ಈ ಕೆಲಸ ಯಶಸ್ವಿಯಾಯಿತು. ಸಿವಿಲ್ ಸರ್ಕಾರವನ್ನು ಮೂರು ಇಲಾಖೆ ಗಳನ್ನಾಗಿ ವಿಂಗಡಿಸಿದರು. ೧)ಹಣಕಾಸು ೨)ಕಂಗಾಯ, ಮತ್ತು ೩)ಇತರೆ, ಸೈನ್ಯಕ್ಕೆ ಸಂಬಂಧಿಸಿದ ಆಡಳಿತ ವ್ಯವಸ್ಥೆಯನ್ನು ಕ್ಯಾವಲರಿ ಮತ್ತು ಇನ್‌ಫೆಂಟ್ರಿ ಎಂಬ ಪ್ರತ್ಯೇಕ ಇಲಾಖೆಗಳು ನಿರ್ವಹಿಸುತ್ತಿದ್ದವು. ಆಂತರಿಕ ರಕ್ಷಣೆಗೆ ಇಲಾಖೆಯೊಂದಿದ್ದು ಅದು 'ಕಂದಾಚಾರ ಪಿವನ್'ಗಳದ್ದಾಗಿದ್ದು ಇವರ ಕೆಲಸ ಆಂಶಿಕವಾಗಿ ಮಿಲಿಟರಿ ಮತ್ತು ಆಂಶಿಕವಾಗಿ ಸಿವಿಲ್ ಸೇವೆಗಳಾಗಿತ್ತು. 'ಕಂದಾಚಾರ' ಪಿವನ್‌ಗಳು ಸ್ಥಳೀಯ ಗ್ರಾಮವಾಸಿಗಳ ಸಹಕಾರದೊಂದಿಗೆ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಇವರ ಸೇವೆಯು ಅಗತ್ಯ ವಿಲ್ಲದಾಗ ಕಂದಾಚಾರಿಗಳು ವ್ಯವಸಾಯದಲ್ಲಿ ತೊಡಗುತ್ತಿದ್ದರು. ಇದೊಂದು ಪೂರ್ಣಾವದಿಯ ಪೊಲೀಸ್ ಕೆಲಸವಾಗಿರಲಿಲ್ಲ. ಆದರೆ ಅತ್ಯಂತ ತುರ್ತು ಕೆಲಸಗಳಿದ್ದಾಗ ಸೇನೆಯೊಂದಿಗೆ ಸೇರಿಕೊಳ್ಳುತ್ತಿದ್ದರು. ಇವರ ಸೈನಿಕ ಸ್ವಭಾವಗಳು ಹಳ್ಳಿಗರಲ್ಲಿ ಭಯವನ್ನು ಮೂಡಿಸಿತ್ತು.

ಪೂರ್ಣಯ್ಯನವರ ಕಾಲದಲ್ಲಿ ಪ್ರತೀ ಕಂದಾಚಾರಿಗಳ ಕುಟುಂಬದಿಂದ ಒಬ್ಬರನ್ನು ಯಾವುದಾದರೊಂದು ಬಗೆಯ ಸರ್ಕಾರಿ ಕೆಲಸದಲ್ಲಿ ಸೇರಿಸಿಕೊಳ್ಳಲಾಯಿತು. ಆದರೆ ಕುಟುಂಬದ ಸದೃಢ ವ್ಯಕ್ತಿಯು ಅವಶ್ಯಕತೆ ಇದ್ದಾಗ ಸೇನೆ ಯಲ್ಲಿ ಕೆಲಸ ಮಾಡಲು ಸಿದ್ಧರಿರಬೇಕೆಂಬ ಒಪ್ಪಂದದೊಂದಿಗೆ ಸರ್ಕಾರಿ ಉದ್ಯೋಗ ನೀಡಲಾಯಿತು. ಇವರಿಗೆ ಅರ್ಧ ಸಂಬಳವನ್ನು ಹಣದ ರೂಪದಲ್ಲಿ ಇನ್ನರ್ಧವನ್ನು ಬೇಸಾಯ ಮಾಡದ ಭೂಮಿಯ ರೂಪದಲ್ಲಿ ನೀಡಲಾಗುತ್ತಿತ್ತು. ಇದರಿಂದಾಗಿ ಬೇಸಾಯ ಮಾಡದೇ ಉಳಿದ ಭೂಮಿಯಲ್ಲಿಯೂ ವ್ಯವಸಾಯ ಮಾಡುವಂತಾಯಿತು. ಪೂರ್ಣಯ್ಯ ನವರ ಆಡಳಿತದ ಆರಂಭದಲ್ಲಿ ೨,೦೦೦ಕ್ಕಿಂತಲೂ ಹೆಚ್ಚು ಕಂದಾಚಾರಿಗಳನ್ನು ನೇಮಿಸಲಾಗಿತ್ತು. ಕಾಲಾನಂತರದಲ್ಲಿ ಈ ಸಂಖ್ಯೆಯಲ್ಲಿ

ಕಾಲುಭಾಗ ಕಡಿತಗೊಳಿಸಲಾಯಿತು.[೬೭]

ದಿವಾನರಾಗಿ ಪದನಾಮ ಹೊಂದಿ ಕೆಲಸದಲ್ಲಿ ನಿರತರಾದ ಪೂರ್ಣಯ್ಯನವರು ರಾಜ್ಯದಲ್ಲಿ ಸಂಚಾರವನ್ನು ರೆಸಿಡೆಂಟ್ ಕ್ಲೋಸ್‌ನ ಜೊತೆ, ಸಣ್ಣ ಸೈನ್ಯದೊಂದಿಗೆ ಕೈಗೊಂಡರು. ಹಾದಿಯ ಗ್ರಾಮಗಳ, ಊರುಗಳ ಜನರ ಕಷ್ಟನಷ್ಟ ಗಳನ್ನು ಆಲಿಸಿ ಸ್ಥಳದಲ್ಲಿಯೇ ಪರಿಹಾರ ಕಾರ್ಯೋನ್ಮುಖರಾಗಿ ಜನರ ನೆಮ್ಮದಿ, ಶಾಂತಿಗೆ ಕಾರಣರಾದರು. ಇಂತಹ ಆಗಾಗಿನ ಜನಸಂಪರ್ಕದಿಂದಾಗಿ ತುಂಡುನಾಯಕರ ಉಪಟಳ ಕಡಿಮೆಯಾಯಿತು.

ಹೈದರಾಲಿಯ ಕಾಲದಿಂದ 'ಕಂದಾಚಾರ' ಸಿಬ್ಬಂದಿ ಪದ್ಧತಿ ಇತ್ತು. ಈ ಸಿಬ್ಬಂದಿಯು ಮುಖ್ಯವಾಗಿ ಕೃಷಿಯಲ್ಲಿ ತೊಡಗಿರುತ್ತಿದ್ದು ಒಂದು ಸಂಘಟಿತ ತಂಡವಾಗಿತ್ತು. ಅಗತ್ಯ ಬಿದ್ದಾಗ ಆರಕ್ಷಕ ಅಥವಾ ಸೈನಿಕ ಸೇವೆಗೆ ತಾತ್ಕಲಿಕವಾಗಿ ಒದಗಿಸಬೇಕಾಗಿತ್ತು. ಕೆಲವು ವೇಳೆ ಇವಾವುದನ್ನು ಮಾಡದೇ ಗ್ರಾಮೀಣರಿಗೆ ಉಪಟಳ ಕೊಟ್ಟು ಆಹಾರ ಧಾನ್ಯ ಅಥವಾ ಹಣವನ್ನು ವಸೂಲು ಮಾಡುತ್ತಿದ್ದರು. ಆದರೆ ಲೂಟಿಗೆಳೆಸುವುದಿಲ್ಲ ಎಂದು ಆಶ್ವಾಸನೆ ನೀಡುತ್ತಿದ್ದರು. ಪೂರ್ಣಯ್ಯನವರು ಅಂತಹ ಪ್ರತಿಯೊಂದು 'ಕಂದಾಚಾರ' ಕುಟುಂಬದಿಂದ ಒಬ್ಬೊಬ್ಬರನ್ನು ಸರಕಾರಿ ಸೇವೆಗೆ ಸೇರಿಸಿಕೊಂಡರು. ಆ ಕುಟುಂಬ ದಲ್ಲಿ ಒಬ್ಬ ಶಕ್ತಿವಂತ ತರುಣನು ಅಗತ್ಯ ಬಿದ್ದಾಗ ಸೈನಿಕ ಸೇವೆ ಸಲ್ಲಿಸಬೇಕೆಂಬ ಷರತ್ತು ಇರುವ ಒಂದು ಯೋಜನೆಯನ್ನು ರೂಪಿಸಿದರು. ಅವರಿಗೆ ಕೊಡಬೇಕಾದ (ಸಂಬಳ) ಪ್ರತಿಫಲವನ್ನು ಅರ್ಧ ಭಾಗ ನಗದುರೂಪದಲ್ಲಿ, ಉಳಿದರ್ಧವನ್ನು ಸಾಗುವಳಿಯಾಗದ ಭೂಮಿಕೊಟ್ಟು ಬೇಸಾಯ ಮಾಡಲು ಉತ್ತೇಜಿಸಿ ದರು. ಹೀಗೆ ಸಾಮಾನ್ಯವಾಗಿ ಉದ್ಯೋಗ ಸ್ಥರಾದವರಿಗೆ ಕೋಟೆಕಾವಲು, ಗ್ರಾಮರಕ್ಷಣೆ ಅಥವಾ ಬೇರೆಡೆ ಪೊಲೀಸ್ ಕೆಲಸಕ್ಕೆ ನೇಮಿಸಲಾಗುತ್ತಿತ್ತು. ಹೀಗೆ ೨೦ ಸಾವಿರ ಸಂಖ್ಯೆಯಲ್ಲಿ ಆರಂಭದಲ್ಲಿ ನೇಮಿಸಿಕೊಂಡರು. ಕಾಲಾಂತರದಲ್ಲಿ ಆ ಸಂಖ್ಯೆಯ ಕಾಲುಭಾಗದಷ್ಟಕ್ಕೆ ಸೀಮಿತ ಗೊಳಿಸಿದರು.[೬೮] ಅಮಿಲ್‌ದಾರನು ಕಂದಾಯ ಇಲಾಖೆಯ ಅಧಿಕಾರಿಯಾಗಿ ಭೂಕಂದಾಯ ವಸೂಲಿ ಜೊತೆಗೆ ರೈತರು ಹೊಲ ವನ್ನು ಬೇಸಾಯ ಮಾಡಿದ್ದಾರೋ ಇಲ್ಲವೇ ಎಂಬ ಬಗ್ಗೆ ವರದಿ ನೀಡಬೇಕಿತ್ತು. ಮತ್ತು ತಾಲೂಕಿನ ಪೊಲೀಸ್ ಇಲಾಖೆಯ ಮುಖ್ಯಸ್ಥನೂ ಆಗಿದ್ದನು.

ನ್ಯಾಯದಾನ ಪದ್ಧತಿ

ಪೂರ್ಣಯ್ಯನವರು ನ್ಯಾಯಾಂಗ ವಿಭಾಗವನ್ನು ಪುನರ್‌ರಚಿಸಿದರು. ಹಿಂದು ಪದ್ಧತಿಯ ತೆರಿಗೆ ಗಳನ್ನು ಜ್ಯಾರಿಗೆ ತಂದರು. ನ್ಯಾಯಾದಾನ ಪದ್ಧತಿಯು ಒಂದು ಪ್ರಮುಖ ಅಂಗವಾಗಿದ್ದು, ಇದು ಪ್ರಾಚೀನ ಕಾಲದಿಂದ ದೇಶದಲ್ಲಿ ಅನುಚಾನವಾಗಿ ನಡೆದು ಬಂದ ನ್ಯಾಯಪದ್ಧತಿ ಮತ್ತು ಹಿಂದು ಕಾನೂನಿನ ಉಪದೇಶಗಳನ್ನು ಆಧರಿಸಿತ್ತು. ನ್ಯಾಯಾಂಗಕ್ಕೆ ಪ್ರತ್ಯೇಕವಾದ ಇಲಾಖೆ ಇರಲಿಲ್ಲ. ಸರ್ಕಾರದ ಉದ್ಯೋಗದಲ್ಲಿರುವ ಕೆಲವು ನೌಕರರೇ ಈ ಇಲಾಖೆಯ ಜವಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಅಧಿಕಾರದಲ್ಲಿದ್ದ ಖಾಜಿಗಳು ಕ್ರೈಸ್ತ ಪಾದ್ರಿಗಳು, ಧರ್ಮ ಬೀರುಗಳ ಸಲಹೆಯನ್ನು ನ್ಯಾಯದಾನಕ್ಕೆ ಪಡೆಯಲಾಗುತ್ತಿತ್ತು. ಹಿಂದುಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಕಾಲದಿಂದ ಅಸ್ಥಿತ್ವದಲ್ಲಿರುವ ನ್ಯಾಯದಾನದ ದೃಷ್ಟಾಂತ, ನಿದರ್ಶನಗಳನ್ನು ಅನುಸರಿಸಿ ನ್ಯಾಯದಾನ ಮಾಡಲಾಗುತ್ತಿತ್ತು. ಒಂದು ವೇಳೆ ಅಂತಹ ದೃಷ್ಟಾಂತಗಳು ಸಿಗದಿದ್ದಲ್ಲಿ, ಧರ್ಮಶಾಸ್ತ್ರದಲ್ಲಿ ತಿಳಿಸಿರುವ ಆಜ್ಞೆಗಳಿಗೆ ಅನುಗುಣವಾಗಿ ನ್ಯಾಯದಾನ ಮಾಡಲಾಗುತ್ತಿತ್ತು.[೬೯] ತಾಲೂಕುಗಳಲ್ಲಿ ಅಮಿಲ್ ದಾರನು ಸಣ್ಣಪುಟ್ಟ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಹಾಗೂ ಸುಬೇದಾರರು ಪ್ರಮುಖ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣ ಗಳನ್ನು ತೀರ್ಮಾನಿಸಲು ನಿರ್ದೇಶಿತರಾಗಿದ್ದರು.

ಪಂಚಾಯತು

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ಒಬ್ಬ ವ್ಯಕ್ತಿಯನ್ನು ಬಂಧಿಸಿದಾಗ ಅಮಿಲ್ ಅಥವಾ

ಸುಬೇದಾರರಿಗೆ ಈ ಪ್ರಕರಣವು ಸಾರ್ವಜನಿಕ ವಿಚಾರಣೆಗೆ ಯೋಗ್ಯವಾಗಿದೆ ಎಂದು ಅನ್ನಿಸಿದಲ್ಲಿ, ಅವರು ಪಂಚಾಯತಿಗೆ ಅಥವಾ ೫ ಜನರ ನಿಯೋಗ (commission) ವನ್ನು, ತೆರೆದ ಕಛೇರಿಯಲ್ಲಿ ಸೇರಿಸಿ ನ್ಯಾಯ ತೀರ್ಮಾನ ಮಾಡುತ್ತಿದ್ದರು. (ಪಂಚಾಯ್ತಿ ಎಂಬ ಶಬ್ದವು ಐದು ಜನರ ನ್ಯಾಯತೀರ್ಮಾನ ಮಾಡುವವರ ಗುಂಪಿಗೆ ಸಂಬಂಧಿಸಿದ್ದಾಗಿದೆ. ಇಂದಿಗೂ ಸಹ ಪೊಲೀಸ್ ಇಲಾಖೆಯಲ್ಲಿ ಅಪರಾಧ ನಡೆದ ಸ್ಥಳದ ವಿವರಗಳನ್ನು ಪಂಚಾಯತಿ ದಾರರ ಸಮಕ್ಷಮದಲ್ಲಿ ಬರೆಯುವ ಕ್ರಮವಿದ್ದು, ಅದನ್ನು ಪಂಚನಾಮೆ ಎಂದು ಕರೆಯಲಾಗುತ್ತದೆ)

ಈ ಪಂಚಾಯತ್ ತಂಡದಲ್ಲಿ ಸಾಮಾನ್ಯವಾಗಿ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ಉತ್ತಮ ಸ್ಥಾನ ಮಾನವುಳ್ಳ ಪ್ರಭಾವಶಾಲಿ ಕುಟುಂಬದ ಸದಸ್ಯರು ಮತ್ತು ಒಬ್ಬ ಮುಸ್ಲಿಂ ಖಾಜಿ ಮತ್ತು ಒಬ್ಬ ಪಂಡಿತ ಇರುತ್ತಿದ್ದರು. ೧೮೦೫ ರಲ್ಲಿ ಪ್ರತ್ಯೇಕವಾಗಿ ಸ್ಥಾಪನೆಗೊಂಡ ಈ ಅದಾಲತ್ ನ್ಯಾಯಾಲಯದಲ್ಲಿ ವ್ಯಾಸರಾವ್ ಮತ್ತು ಅಹಮ್ಮದ್‌ಖಾನ್ ಎಂಬ ಇಬ್ಬರು ನ್ಯಾಯಾಧೀಶರನ್ನಾಗಿ ಮೈಸೂರಿನ ಅದಾಲತ್ ನ್ಯಾಯಾಲಯಕ್ಕೆ ನೇಮಕ ಮಾಡಿದರು. ಈ ನ್ಯಾಯಾಲ ಯದ ನ್ಯಾಯಾಧೀಶರ ಅಧೀನದಲ್ಲಿದ್ದ ಸಹಾಯಕರಾಗಿ ಇಬ್ಬರು ಶಿರಸ್ತೇದಾರರನ್ನು ನೇಮಕ ಮಾಡಲಾಗಿತ್ತು. ಈ ನ್ಯಾಯಾ ಲಯದ ವಿಚಾರಣೆ, ತನಿಖೆ ಹಾಗೂ ನ್ಯಾಯ ವಿತರಣೆಯಲ್ಲಿ ನೆರವಾಗಲು ಒಂದು ಪಂಚಾಯತ್ ಎಂಬ ೬ ಜನರು ಸಾಮಾನ್ಯವಾಗಿ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ಉನ್ನತ ಸ್ಥಾನಮಾನ ಹೊಂದಿದವರಾಗಿದ್ದು, ಅದರಲ್ಲಿ ಒಬ್ಬ ಮುಸ್ಲಿಂ ಖಾಜಿ ಹಾಗೂ ಒಬ್ಬ ಹಿಂದೂ ಪಂಡಿತರನ್ನೊಳಗೊಂಡ ಸಂಘಟನೆ ಆಗಿದ್ದಿತು. ಇಂತಹ ನ್ಯಾಯಾಲಯ ವ್ಯವಸ್ಥೆ ಯಲ್ಲಿ ಯಾವುದೇ ಬಗೆಯ ಪ್ರಕರಣಗಳು ವಿಚಾರಣೆ ಹಾಗೂ ತನಿಖೆಗಾಗಿ ಬಂದರೆ ಮೊಕದ್ದಮೆಗಳ ತೀವ್ರತೆ ಹಾಗೂ ಪ್ರಮಾಣವನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುತ್ತಿತ್ತು. ಸೂಕ್ತ ನಿರ್ಣಯ ತೆಗೆದುಕೊಳ್ಳಲು ಆಗದಿದ್ದಾಗ ಮತ್ತು ಮರಣ ದಂಡನೆ ವಿಧಿಸಬಹುದಾಗಿದ್ದ ಗಂಭೀರ ಅಪರಾಧಗಳ ಪ್ರಕರಣಗಳು ದಿವಾನರ ಮುಂದೆ ಬರುತ್ತಿದ್ದವು. ದಿವಾನರು ಪರಿಶೀಲಿಸಿ ರೆಸಿಡೆಂಟರ ಸಲಹೆ ಪಡೆದು ನಂತರ ತೀರ್ಪು ಪ್ರಕಟಿಸುತ್ತಿದ್ದರು. ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣವು ಅಪರಾಧ ಪ್ರಕರಣದ ಸ್ವರೂಪ ಹಾಗೂ ತೀವ್ರತೆಯನ್ನು ಅವಲಂಭಿಸಿದ್ದಿತು.

ಈ ಪಂಚಾಯತಿಯಲ್ಲಿ ನ್ಯಾಯ ತೀರ್ಮಾನ ಮಾಡಲು ಕುಳಿತುಕೊಳ್ಳುವ ಪ್ರತಿಯೊಬ್ಬ ಸದಸ್ಯರೂ ಯಾವುದೇ ಗುಂಪಿಗೆ (ಪಿರ್ಯಾದಿ ಯಾ ಆರೋಪಿ) ಸೇರದೆ ಗೌರವಾನ್ವಿತ ವ್ಯಕ್ತಿಗಳಾಗಿರಬೇಕಿತ್ತು. ಅಮಿಲ್‌ದಾರರು ಅಥವಾ ಸುಬೇದಾರರು ಪಂಚಾಯ್ತಿಯ ನಡಾವಳಿ ವಿಚಾರಗಳನ್ನು ಬರವಣಿಗೆಯಲ್ಲಿಡಬೇಕಿತ್ತು. ಆರೋಪಿಯ ಪರವಾದ ಮತ್ತು ಆರೋಪಿಯ ವಿರುದ್ಧವಾದ ಸಾಕ್ಷಿಗಳನ್ನು ದಾಖಲಿಸಿ, ಆರೋಪಿತನು ತನ್ನ ಪರವಾಗಿ ಮಾತನಾಡುವ ಸಾಕ್ಷಿದಾರರುಗಳನ್ನು ಹಾಜರು ಪಡಿಸಬೇಕೆಂದು ಬಯಸಿದಲ್ಲಿ, ಅದನ್ನು ಒಂದು ವಿಶೇಷ ವರದಿಯ ಮುಖಾಂತರ ಅಮಿಲ್ದಾರರು ಮತ್ತು ಸುಬೇದಾರರು, ದಿವಾನರಿಗೆ ತಿಳಿಸಿಕೊಡಬೇಕಾಗಿತ್ತು. ಯಾವುದೇ ಕ್ಲಿಷ್ಟಕರವಾದ ಪ್ರಕರಣದಲ್ಲಿ ಅಥವಾ ಬಂಧಿತನೊಬ್ಬನ ಜೀವ ಹಾಗೂ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ನ್ಯಾಯತೀರ್ಮಾನ ಮಾಡುವ ಸಲುವಾಗಿ ದಿವಾನರ ಮುಂದೆ ಅಂತಿಮ ವಿಚಾರಣೆ ನಡೆಸಲಾಗುತ್ತಿತ್ತು. ದಿವಾನರು ಮತ್ತು ರೆಸಿಡೆಂಟರು ಸೇರಿ ಇಂತಹ ಪ್ರಕರಣಗಳಿಗೆ ಅಂತಿಮ ತೀರ್ಪನ್ನು ನೀಡು ತ್ತಿದ್ದರು. ಕೊಲೆ ಮತ್ತು ಗಡಿಭಾಗದ ಅಪಹರಣ ಪ್ರಕರಣಗಳಿಗೆ ಮಾತ್ರ ಮರಣದಂಡನೆ ಶಿಕ್ಷೆ ವಿಧಿಸಲಾಗುತ್ತಿತ್ತು. ಕಳ್ಳತನ ಮತ್ತು ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗುತ್ತಿತ್ತು. ಆದರೆ ಈ ಶಿಕ್ಷೆಯು ಆಯಾ ಅವಧಿಯು ಆಯಾಘಟನೆಗಳ ಲಕ್ಷಣಗಳಿಗೆ ಸಂಬಂಧಿಸಿದಂತೆ ಇರುತ್ತಿತ್ತು. ಇದು ಕಠಿಣ ದೈಹಿಕ ಶ್ರಮದ ಶಿಕ್ಷೆಯಾಗಿರುತ್ತಿತ್ತು. ದೈಹಿಕ ಶಿಕ್ಷಣಗಳನ್ನು ನಿಷೇಧಿಸಲಾಗಿತ್ತು. ದಂಡ ವಿಧಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು ಇದು ಕೆಳದರ್ಜೆಯ ಅಧಿಕಾರಿ ಗಳಲ್ಲಿ ಭಯವನ್ನು ಹುಟ್ಟಿಸುವಂತಹ ಸಾಧನವಾಗಿತ್ತು.[೨೦]

ದಿವಾಣಿ (Civil) ಪ್ರಕರಣಗಳಿಗೆ ಸಂಬಂಧಿಸಿದಂತಹ ನ್ಯಾಯದಾನ ಪದ್ಧತಿಯು ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದ ನ್ಯಾಯದಾನ ಪದ್ಧತಿಯಂತೇ ನಡೆಯುತ್ತಿತ್ತು. ಅಮೀಲ್ದಾರನಿಗೆ ಆಸ್ತಿಪಾಸ್ತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ವಿಚಾರಣೆ ನಡೆಸುವ ಅಧಿಕಾರವಿದ್ದು ಆತನು ಅದನ್ನು ತೆರೆದ ಕಛೇರಿಯಲ್ಲಿ ನಡೆಸಬೇಕಿತ್ತು. ಆದರೆ ೫ ಪಗೋಡಗಳಿಗಿಂತ ಹೆಚ್ಚಿನ ಮೌಲ್ಯದ ಪ್ರಕರಣಗಳನ್ನು ಪಂಚಾಯ್ತಿಯವರು ವಿಚಾರಣೆ ನಡೆಸಬೇಕಿತ್ತು. ಇದರಿಂದ ನ್ಯಾಯದಾನದಲ್ಲಿ ಆಗುವ ಲೋಪದೋಷಗಳನ್ನು ತಡೆಯಲು ಸಾಧ್ಯವಾಗುತ್ತಿತ್ತು. ಗೌರವಾನ್ವಿತ ಸ್ಥಳೀಯ ನಿವಾಸಿಗಳನ್ನು ಇಂತಹ ಪಂಚಾಯ್ತಿಗಳಿಗೆ ಅವರಿಗೆ ಅನುಕೂಲವಾಗುವ ಮತ್ತು ಅವರ ವಿರಾಮದ ವೇಳೆಯಲ್ಲಿ ಹಾಜರಾಗಿ ನ್ಯಾಯ ತೀರ್ಮಾನಿಸಲು ಪ್ರೋತ್ಸಾಹಿಸ ಲಾಗುತ್ತಿತ್ತು. ಒಂದು ವೇಳೆ ಎರಡು ಗುಂಪಿನ ವ್ಯಕ್ತಿಗಳು ಹಿಂದೂ ಜನಾಂಗಕ್ಕೆ ಸೇರಿದ ವರಾಗಿದ್ದರೆ ಪಂಚಾಯ್ತಿದಾರರು ಪೂರ್ಣ ಹಿಂದೂಗಳಾಗಿರುತ್ತಿದ್ದರು. ಆದರೆ ೨ ಗುಂಪಿನ ಅಂದರೆ ಎದುರು ಬದುರು ಗುಂಪಿನವರು ಬೇರೆ ಬೇರೆ ಜನಾಂಗಕ್ಕೆ ಸೇರಿದವನಾಗಿದ್ದರೆ ಪಂಚಾಯ್ತಿದಾರರೂ ಸಹ ತಲಾ ಇಬ್ಬಿಬ್ಬರು ಪ್ರತಿ ಗುಂಪಿಗೆ ಸೇರದ ಜನಾಂಗಕ್ಕೆ ಸೇರಿದವರಾಗಿರುತ್ತಿದ್ದರು. ೫ ನೇ ವ್ಯಕ್ತಿಯು ನಿರ್ಧಿಷ್ಟ ಗುಂಪಿಗೆ ಸೇರಿದವನಾಗಿರುತ್ತಿದ್ದನು. ಸಾಧಾರಣ ಪ್ರಕರಣಗಳಲ್ಲಿ ಪಂಚಾಯ್ತಿಗೆ ಸೇರಿದವರ ಅಭಿಪ್ರಾಯಗಳಲ್ಲಿ, ಭಿನ್ನಾಭಿಪ್ರಾಯಗಳು ಇಲ್ಲದಿದ್ದಲ್ಲಿ ಅಮೀಲ್ದಾರನು ಪಂಚಾಯ್ತಿಗೆ ಸೇರಿದವರ ತೀರ್ಪನ್ನು ಬರೆದು ದಿವಾನರಿಗೆ ಕಳುಹಿಸಿಕೊಡುತ್ತಿದ್ದನು. ಒಂದು ವೇಳೆ ಪಂಚಾಯ್ತಿ ಸೇರಿದವರಲ್ಲಿ ನ್ಯಾಯ ತೀರ್ಮಾನಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳು ಇದ್ದಲ್ಲಿ, ಸಂಬಂಧಿಸಿದ ಅಮೀಲ್ದಾರರು ಅಥವಾ ಸುಬೇದಾರರು ಪಂಚಾಯ್ತಿಯ ನಡಾವಳಿಗಳನ್ನು ಬರೆದು ಅದನ್ನು ದಿವಾನರಿಗೆ ಕಳುಹಿಸಿಕೊಡುತ್ತಿದ್ದರು. ದಿವಾನರು ಅಗತ್ಯ ಕಂಡುಬಂದಲ್ಲಿ ಅದನ್ನು ಪುನ: ವಿಚಾರಣೆಗೆ ಒಳಪಡಿಸುತ್ತಿದ್ದರು ಅಥವಾ ರೆಸಿಡೆಂಟ್‌ನ್ನು ಸಂಪರ್ಕಿಸಿ ಅಂತಿಮ ತೀರ್ಪನ್ನು ಪ್ರಕಟಿಸುತ್ತಿದ್ದರು. ಪ್ರತಿಯೊಂದು ಪ್ರಕರಣದಲ್ಲಿಯೂ ೨ ಗುಂಪಿನವರಿಗೆ ಪ್ರಕರಣದ ತೀರ್ಪಿನ ವಿರುದ್ಧ ದಿವಾನರಿಗೆ ಮೇಲ್ಮನವಿಯನ್ನು ಸಲ್ಲಿಸುವ ಹಕ್ಕುಗಳು ಇದ್ದವು. ಇದಕ್ಕಾಗಿ ದಿವಾನರು ರಾಜ್ಯದಲ್ಲಿ ಆಗಾಗ ಈ ಪ್ರವಾಸವನ್ನು ಕೈಗೊಳ್ಳುತ್ತಿದ್ದರು.[೬೧] ವಿಚಾರಣೆ ಪ್ರಾರಂಭವಾಗುವುದಕ್ಕೆ ಮೊದಲು ಅರ್ಜಿದಾರರು (plaintiff) ನಂತರ ಎದುರುದಾರ (defendent) ವ್ಯವಹಾರಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಬೇಕಿತ್ತು. ಇದನ್ನು ಬರೆದು ಎರಡೂ ಕಡೆಯವರ ಮುಂದೆ ಓದಲಾಗುತ್ತಿತ್ತು. ಆಗ ಯಾವುದಾದದರೂ ವಿಷಯಗಳು ಬಿಟ್ಟು ಹೋಗಿದೆಯೇ ಎಂಬುದನ್ನು ಗಮನಿಸಲಾಗುತ್ತಿತ್ತು. ಒಂದು ವೇಳೆ ತಪ್ಪುಗಳಿದ್ದರೆ ತಿದ್ದಿ ಸರಿಯಾದ ದಾಖಲೆ ತಯಾರಿಸಿ ಎರಡೂ ತಂಡಗಳ ಸಹಿ ಪಡೆದು ನಂತರ ಇಬ್ಬರು ಪಂಚಾಯ್ತಿದಾರರ ಸಹಿ ಪಡೆಯಲಾಗುತ್ತಿತ್ತು ಮತ್ತು ಒಬ್ಬ ಸಾರ್ವಜನಿಕ ಅಧಿಕಾರಿಯ ಸಹಿಯನ್ನು ಪಡೆಯಲಾಗುತ್ತಿತ್ತು. ಈ ರೀತಿ ಬರೆದ ವಿಷಯಗಳ ಮೇಲೆ ಅವರುಗಳು ಸಾಂದರ್ಭಿಕ ಸಾಕ್ಷಿಗಳನ್ನು ಒದಗಿಸಬೇಕಿತ್ತು ಮತ್ತು ಅದರಲ್ಲಿ ಒಪ್ಪದೇ ಇರುವಂತಹ ವಿಷಯಗಳಿದ್ದಲ್ಲಿ ಪೂರ್ವಭಾವನೆಗಳಿಗೆ ಸಂಬಂಧಪಟ್ಟ ವಿಷಯಗಳಿದ್ದಲ್ಲಿ ಅಥವಾ ಸುಳ್ಳು ಅಥವಾ ಕೃತ್ರಿಮವಾದಂತಹ ಬೇಡಿಕೆಗಳಿದ್ದಲ್ಲಿ ಸಾಕ್ಷಿಗಳನ್ನು ದಾಖಲಿಸಿಕೊಳ್ಳಲಾಗುತ್ತಿತ್ತು. ಪಂಚಾಯತಿದಾರರು ಈ ಸಾಕ್ಷ್ಯಾಧಾರಗಳ ಜೊತೆಗೆ ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ತೀರ್ಮಾನಿಸುತ್ತಿದ್ದರು. ಪಂಚಾಯತಿಯವರಿಗೆ ಒಂದು ವೇಳೆ ತೀರ್ಪು ನೀಡಲು ಕಷ್ಟವಾದಲ್ಲಿ ಅದರ ಕಾರಣಗಳನ್ನು ವಿವರಿಸಬೇಕಿತ್ತು. ಸಾಕ್ಷಿಗಳು ಸರಿ ಎಂದು ಕಂಡು ಬರುವ ಪೂರಕ ಸಾಕ್ಷಿಗಳು ಸಿಗುವವರೆಗೂ ಈ ಸಾಕ್ಷಿಗಳನ್ನು ಸುಳ್ಳು ಸಾಕ್ಷಿಗಳೇಂದೇ ಪರಿಗಣಿಸುತ್ತಿದ್ದರು.

ಇಂತಹ ನ್ಯಾಯತೀರ್ಮಾನ ಮಾಡುವಲ್ಲಿ ಅಮಿಲ್ದಾರರು ಅಥವಾ ಇತರ ಅಧಿಕಾರಿಗಳು ತಪ್ಪು ಮಾಡಿದ್ದರೆ, ಕರ್ತವ್ಯದಲ್ಲಿ ಲೋಪಮಾಡಿದ್ದರೆ, ಅಧಿಕಾರ ದುರುಪಯೋಗ ಮಾಡಿದ್ದರೆ ಅಥವಾ ದ್ರವ್ಯಾಪಹಾರ ಮಾಡಿದ್ದರೆ, ಅಂತಹ ವರನ್ನು ಪೂರ್ಣಯ್ಯನವರ ಸ್ಥಿರವಾದ ನಿಯಮಗಳ ಮೂಲಕ ಕೆಲಸದಿಂದ ವಜಾಗೊಳಿಸಲಾಗುತ್ತಿತ್ತು. ಆತನನ್ನು ಮುಂದೆ

ಎಂದೂ ಸಹ ಸರಕಾರಿ ಕೆಲಸಕ್ಕೆ ಸೇರದಂತೆ ಅನರ್ಹಗೊಳಿಸಲಾಗುತ್ತಿತ್ತು. ಪ್ರಾರಂಭದ ವರ್ಷಗಳಲ್ಲಿ ಇಂತಹ ಕಠಿಣವಾದ ನಿಯಮ ಪಾಲನೆಯಿಂದಾಗಿ ಪೂರ್ಣಯ್ಯನವರಿಗೆ ಮಹತ್ವದ ಅಡಚಣೆಗಳು ಉಂಟಾದವು. ಆದರೆ ನಂತರದ ದಿನಗಳಲ್ಲಿ ಮಂತ್ರಿಗಳು ಈ ವಿಷಯದಲ್ಲಿ ಯಾವುದೇ ಮುಲಾಜಿಗೆ ಬಗ್ಗುವುದಿಲ್ಲವೆಂದು ತಿಳಿದುಬಂತು. ಇದರಿಂದಾಗಿ ಸಾರ್ವಜನಿಕ ಸೇವೆಗಳಲ್ಲಿ ಕಾಲಕ್ರಮೇಣ ಪ್ರಾಮಾಣಿಕತೆಯು ಬೆಳೆದು ಸಾಮಾನ್ಯ ಜನರ ಯೋಗಕ್ಷೇಮದ ವಿಚಾರಣೆಯು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿತ್ತು.[೨]

೧೮೦೫ ರಲ್ಲಿ ನ್ಯಾಯದಾನದ ಉದ್ದೇಶಕ್ಕಾಗಿ ಒಂದು ಪ್ರತ್ಯೇಕವಾದ ಇಲಾಖೆಯ ಅವಶ್ಯಕತೆ ಇದೆಯೆಂದು ಪೂರ್ಣಯ್ಯನವರಿಗೆ ಅನ್ನಿಸಿತು. ಪೂರ್ಣಯ್ಯನವರು 'ಅದಾಲತ್' ಎಂಬ ಹೆಸರಿನ ನ್ಯಾಯಾಲಯವೊಂದನ್ನು ತೆರೆದರು. ಇದರಲ್ಲಿ ಇಬ್ಬರು ನ್ಯಾಯಾಧೀಶರು, ಇಬ್ಬರು ಶಿರಸ್ತೇದಾರರು, ೬ ಜನ ಗೌರವಾನ್ವಿತ ಪಂಚಾಯ್ತಿದಾರರನ್ನು ಅದರಲ್ಲಿ ಒಬ್ಬರು ಖಾಜಿ ಮತ್ತು ಒಬ್ಬರು ಪಂಡಿತರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಇವರುಗಳು ನ್ಯಾಯಾಧೀಶರಿಗೆ ತೀರ್ಪು ನೀಡಲು ಸಹಕರಿಸುತ್ತಿದ್ದರು.[೩]

ನ್ಯಾಯಾಡಳಿತದಲ್ಲಿ ಆ ಸಂದರ್ಭದಲ್ಲಿದ್ದ ದೇಶದ ಪ್ರಾಚೀನ ನ್ಯಾಯಪದ್ಧತಿ, ನಿಯಮ, ಆಚಾರ ಮತ್ತು ಹಿಂದು ಧರ್ಮಶಾಸ್ತ್ರ ಹಾಗೂ ಇಸ್ಲಾಮಿಕ್ ತತ್ವಗಳ ಅಡಿಯಲ್ಲಿ ನ್ಯಾಯ ವಿಚಾರಣೆ ನಡೆಯುತ್ತಿತ್ತು. ನ್ಯಾಯ ವಿಚಾರಣೆಗೆಂದೇ ಪ್ರತ್ಯೇಕ ಇಲಾಖೆ ಇರಲಿಲ್ಲ. ನ್ಯಾಯಾಡಳಿತ ವಿತರಣೆಗಾಗಿ ಕಂದಾಯ ಅಧಿಕಾರಿಗಳೇ ಹೆಚ್ಚುವರಿ ಕರ್ತವ್ಯಗಳೆಂದು ಪರಿಗಣಿಸಿದ್ದರು. ಆಯಾ ತಾಲೂಕು ಮತ್ತು ಹೋಬಳಿಗಳಲ್ಲಿ ಅಮಲ್‌ದಾರ, ಶಿರಸ್ತೇದಾರರುಗಳೇ ಚಿಕ್ಕಪುಟ್ಟ ದೂರುಗಳ ವಿಚಾರಣೆ ನಡೆಸಿ ಬಗೆಹರಿಸುತ್ತಿದ್ದರು. ದಿವಾನಿ (ಸಿವಿಲ್) ಮತ್ತು ಕ್ರಿಮಿನಲ್ ವಿಚಾರಣೆಗಳನ್ನು ಸುಬೇದಾರ್‌ರು ನಡೆಸುತ್ತಿದ್ದರು. ವ್ಯಕ್ತಿಯ ಜೀವ, ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ದಿವಾನರೆ ವಿಚಾರಣೆ ನಡೆಸುತ್ತಿದ್ದರು. ಹಾಗೂ ಆಡಳಿತದ ಉನ್ನತ ಸ್ಥಾನದಲ್ಲಿರುವ ರಾಜರ ಒಪ್ಪಿಗೆ ಪಡೆದು ತೀರ್ಪು ನೀಡುತ್ತಿದ್ದರು. ಕೊಲೆ ಮತ್ತು ಲೂಟಿ ಮಾಡಿದವರಿಗೆ ಮಾತ್ರ ಮರಣ ದಂಡನೆ ನೀಡಲಾಗುತ್ತಿತ್ತು. ಕಳ್ಳತನ, ದರೋಡೆ, ಸೊತ್ತು ಹಾಗೂ ಆಸ್ತಿಗೆ ವಿರುದ್ಧವಾದ ಅಪರಾಧಗಳಿಗೆ ಕಾರಾಗೃಹವಾಸ ಮತ್ತು ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು.[೪]

ಅಪರಾಧ (ಕ್ರಿಮಿನಲ್) ಪ್ರಕರಣಗಳಂತೆ ದಿವಾನಿ (ಸಿವಿಲ್) ಪ್ರಕರಣಗಳನ್ನು ಗಂಭೀರವಾದವುಗಳೆಂದೇ ಪರಿಗಣಿಸಿ ನ್ಯಾಯವಿತರಣೆ ಮಾಡುತ್ತಿದ್ದರು. ಲಂಚಗುಳಿತನ, ಭ್ರಷ್ಟಾಚಾರ, ಹಣದುರುಪಯೋಗ ಅಥವಾ ಧುರ್ವಿನಿಯೋಗದಂತಹ ಪ್ರಕರಣಗಳಲ್ಲಿ ಉಗ್ರ ಶಿಕ್ಷೆಯಾಗುತ್ತಿತ್ತು. ಸಾರ್ವಜನಿಕ ವ್ಯವಹಾರಗಳಲ್ಲಿ ಆಸ್ಥಿ ಅಥವಾ ಸೊತ್ತಿಗೆ ಸಂಬಂಧಿಸಿದ ಅಪರಾಧಿಗಳಿಗೆ ನೌಕರಿಯಿಂದ ತೆಗೆದು ಹಾಕುತ್ತಿದ್ದರು. ಉಗ್ರಶಿಕ್ಷೆ ಮತ್ತು ಜೊತೆಗೆ ಅಂತಹ ಅಪರಾಧಿಗಳಿಗೆ ಎಂದೆಂದಿಗೂ ಸರಕಾರಿ ನೌಕರಿ ದೊರೆಯದಂತೆ ಅನರ್ಹಗೊಳಿಸುತ್ತಿದ್ದರು. ಈ ನೀತಿಯಿಂದಾಗಿ ಹಾಗೂ ಶಿಕ್ಷೆಯಲ್ಲಿನ ಪ್ರಮಾಣ ಹಾಗೂ ತೀವ್ರತೆಯಿಂದಾಗಿ ಆಡಳಿತದಲ್ಲಿ ದಕ್ಷತೆ ಇತ್ತು. ಮತ್ತು ಸಾರ್ವಜನಿಕರಲ್ಲಿ ನ್ಯಾಯಾಡಳಿತದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇತ್ತು.

ದಿವಾನ್ ಪೂರ್ಣಯ್ಯನವರ ನ್ಯಾಯಾಡಳಿತ ವ್ಯವಸ್ಥೆಯಲ್ಲಿ ಎಲ್ಲಾ ರೀತಿಯ ಹಕ್ಕುಗಳಲ್ಲಿ ಆಸ್ತಿಯ ಅಥವಾ ಸ್ವತ್ತಿಗೆ ಸಂಬಂಧಿಸಿದ ಹಕ್ಕುಗಳನ್ನು ವಿಶೇಷವಾಗಿ ಪರಿಗಣಿಸುತ್ತಿದ್ದರು. ಬ್ರಿಟೀಷರ ಪ್ರಭಾವ ಹೆಚ್ಚಾಗುತ್ತಿದ್ದ ಆ ಸಂದರ್ಭದಲ್ಲಿ ವ್ಯಾಪಾರಿ ಕಂಪೆನಿಯಾದ ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಆಸ್ತಿ, ಸ್ವತ್ತಿನ ರಕ್ಷಣೆ ಕಂದಾಯ/ಸುಂಕ ವಸೂಲಾತಿ ಇತ್ಯಾದಿ ದ್ರವ್ಯ ಸಂಗ್ರಹಣೆಯ ವಿರುದ್ಧ ಎಸಗಿದ ಅಪರಾಧಗಳಿಗೆ ಉಗ್ರ ಶಿಕ್ಷೆ ಪ್ರತಿಪಾದಿಸತೊಡಗಿತ್ತು. ಇಲ್ಲದೇ ಹೋದರೆ ಲೂಟಿಯಂತಹ ಅಪರಾಧಗಳು ವ್ಯಕ್ತಿಯ ಪ್ರಾಣಹತ್ಯೆ ಎಸಗುವಂತಹ ಹೀನಾಯ ಅಪರಾಧಗಳಲ್ಲ. ಆದರೆ ಕೊಲೆಯಂತಹ ಅಪರಾಧಗಳ ಜೊತೆಗೆ ಲೂಟಿ ಮಾಡಿದವರಿಗೂ ಮರಣದಂಡನೆಯಂತಹ ಉಗ್ರ ಶಿಕ್ಷೆ ನೀಡುವಂತಹ ನ್ಯಾಯಾಡಳಿತ

ವ್ಯವಸ್ಥೆ ಹಿಂದೆ ಇರಲಿಲ್ಲ. ಆದರೆ ೧೭೯೯ರ ನಂತರ ಪ್ರಾರಂಭವಾಯಿತು. ಹಾಗೆ ವಿಮರ್ಶಾತ್ಮಕವಾಗಿ ಪ್ರಾಚೀನ ಕಾಲ ದಿಂದಲೂ ರಾಜಮಹಾರಾಜರ ಆಡಳಿತ ವ್ಯವಸ್ಥೆಯಿಂದಲೂ ಅಪರಾಧಿಗಳಿಗೆ ಶಿಕ್ಷೆ ವಿಧಿಸುವಾಗ ಯಾವಾಗಲೂ ಗಾತ್ರ, ಪ್ರಮಾಣದಲ್ಲಿ ಹೆಚ್ಚಳ ಮತ್ತು ಶಿಕ್ಷೆಯನ್ನು ಜಾರಿಮಾಡುವಾಗ ಹಿಂಸೆ, ರಕ್ತಪಾತ, ಅಂಗಚ್ಛೇದನ ಹಾಗೂ ಮರಣದಂಡನೆ ಸರ್ವೇಸಾಮಾನ್ಯವಾಗಿತ್ತು. ಈ ರೀತಿಯ ಕ್ರೂರ ಹಾಗೂ ಅಮಾನುಷ ಶಿಕ್ಷೆ ಪದ್ಧತಿ ದಿವಾನ್ ಪೂರ್ಣಯ್ಯನವರ ಕಾಲದಲ್ಲೂ ಮುಂದುವರೆದಿದ್ದು ಬಹುಶ: ವಸಹಾತುಶಾಹಿಯ ಪ್ರಭಾವವೇ ಸರಿ.

ನ್ಯಾಯಾಡಳಿತದಲ್ಲಿನ ಇನ್ನೊಂದು ಮಹತ್ವದ ಹೆಜ್ಜೆ ಎಂದರೆ ಸಾರ್ವಜನಿಕ ಅದರಲ್ಲೂ ಗ್ರಾಮೀಣ ಪ್ರದೇಶದ ಅಮಾಯಕ ರೈತರು, ಕೃಷಿ ಕಾರ್ಮಿಕರ ಆಸ್ತಿ-ಪಾಸ್ತಿ, ಹೊಲ ಕೃಷಿ ಉತ್ಪನ್ನಗಳನ್ನು ಕಳ್ಳಕಾಕರು, ದರೋಡೆಕೋರರಿಂದ ರಕ್ಷಿಸುವುದು. ಇದಕ್ಕಾಗಿ ದಿವಾನ್ ಪೂರ್ಣಯ್ಯನವರು ಒಂದು ಚಿಕ್ಕದಾದ ಸೇನಾ ಪಡೆಯನ್ನು ರಚನೆ ಮಾಡಿದರು ಹಾಗೂ ಇದರಿಂದಾಗಿ ಆಂತರಿಕ ಭದ್ರತೆ ಸುಗಮವಾಗಿ ಜನರು ನೆಮ್ಮದಿಯಿಂದ ಇರುವಂತಾಯಿತು. ಈ ನಿಟ್ಟಿನಲ್ಲಿ ದಿವಾನ್ ಪೂರ್ಣಯ್ಯನವರು ಮೈಸೂರು ರಾಜ್ಯದ ರೆಸಿಡೆಂಟ್‌ರವರ ಜೊತೆಯಲ್ಲಿ ಸಾರ್ವಜನಿಕರ ಬಳಿ ನೇರವಾಗಿ ಸಂದರ್ಶಿಸಿ ವೈಯಕ್ತಿಕ ಹಾಗೂ ಸಾಮುದಾಯಿಕ ಕುಂದು ಕೊರತೆ ನಿವಾರಿಸತೊಡಗಿದರು. ಇದರಿಂದಾಗಿ ನ್ಯಾಯಾಡಳಿತ ನೀಡುವಲ್ಲಿ ಮಧ್ಯವರ್ತಿಗಳ ಹಾಗೂ ಅಧಿಕಾರಸ್ಥರ ಕಿರುಕುಳ ಹಾಗೂ ಅನಗತ್ಯ ಹಸ್ತಕ್ಷೇಪ ನಿವಾರಿಸಿದಂತಾಯಿತು.[೭೫] ದಿವಾನ್ ಪೂರ್ಣಯ್ಯನವರ ಈ ಎಲ್ಲಾ ಕ್ರಮಗಳು ಆಡಳಿತಾತ್ಮಕ ನಿಲುವುಗಳನ್ನು ರೆಸಿಡೆಂಟ್ ಕ್ಲೋಸ್ ಮತ್ತು ಜನರಲ್ ವೆಲ್ಲೆಸ್ಲಿ ಯವರು ಮುಕ್ತಕಂಠದಿಂದ ಶ್ಲಾಘಿಸಿದರು.[೭೬]

ಕೃಷ್ಣರಾಜ ಒಡೆಯರ್ ಸ್ವತ: ಆಡಳಿತ ಆರಂಭಿಸಿದ ಬಳಿಕ ೧೮೦೩ ರಲ್ಲಿ ಕೆಳದಿಯ ನಾಯಕರ ಅಧೀನ ದಲ್ಲಿದ್ದ ನಗರ ಪ್ರಾಂತ್ಯದಲ್ಲಿ ದಂಗೆ ಉಂಟಾಯಿತು. ಇದರ ನೇತೃತ್ವ ವಹಿಸಿದ್ದ ಬೂದಿ ಬಸಪ್ಪ (ಸದರ್‌ಮಲ್ಲ) ನಿಗೆ ಸಹಾಯವಾಗಿ ತರಿಕೆರೆಯ ಪಾಳೇದಾರನಾದ ಸರ್ಜಾ ಹನುಮಪ್ಪ ನಾಯಕನು ಬೇಡರ ಗುಂಪಿಗೆ ಸೇರಿದ ಸುಮಾರು ೧೫೦೦ ಜನ 'ಕಂದಾಚಾರದ' ನೌಕರರು ದಂಗೆ ಏಳುವಂತೆ ಮಾಡಿದನು.[೭೭] ಇದನ್ನು ಕಂದಾಚಾರಿಗಳ ದಂಗೆ ಎಂದು ಕರೆಯುತ್ತಾರೆ. ಆದರೆ ಬ್ರಿಟಿಷ್‌ರ ಸೈನ್ಯದ ನೆರವಿನಿಂದ ಅದನ್ನು ಅಡಗಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ (ಮೈಸೂರು ಸಂಸ್ಥಾನದಲ್ಲಿ) ಮೊಟ್ಟ ಮೊದಲ ಪೊಲೀಸ್ ದಂಗೆ ಈ ಕಂದಾಚಾರಿಗಳ ದಂಗೆ ಆಗಿತ್ತೆಂದು ಹೇಳಬಹುದಾಗಿದೆ.

ಪೂರ್ಣಯ್ಯನವರ ದಿವಾನಗಿರಿಯ ಕಾಲದಲ್ಲಿ ' ಸರ್ ಬ್ಯಾರಿ ಕ್ಲೋಸ್ ' ಎಂಬಾತನು ಬ್ರಿಟೀಷ್ ರೆಸಿಡೆಂಟ್ ಆಗಿದ್ದನು. ಶ್ರೀರಂಗಪಟ್ಟಣದ ಕೋಟೆಯಲ್ಲಿ ಬೀಡುಬಿಟ್ಟ ಬ್ರಿಟೀಷ್ ಸೈನ್ಯಕ್ಕೆ ' ಅರ್ಥರ್ ವೆಲ್ಲೆಸ್ಲಿ' ನಾಯಕನಾಗಿದ್ದನು. ಈತನೇ ಮುಂದೆ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಎಂಬ ಪ್ರಸಿದ್ಧಿಗೆ ಏರಿದವನು. ಸ್ವತ: ಮೇಧಾವಿಗಳಾಗಿದ್ದ ಪೂರ್ಣಯ್ಯನವರು ಈ ಇಬ್ಬರು ಅಧಿಕಾರಿಗಳು ಕೊಟ್ಟ ಪರಾಮರ್ಶೆಯಿಂದ ಪ್ರಯೋಜನ ಪಡೆದು ಮೈಸೂರಿನಲ್ಲಿ ಶಾಂತಿ ಸುವ್ಯವಸ್ಥೆಯನ್ನು ನೆಲೆ ಗೊಳಿಸಿದರು. ಆಡಳಿತದಲ್ಲಿ ಪ್ರಗತಿಪರವಾದ ಪರಿಷ್ಕಾರಗಳನ್ನು ತಂದರು. ಪೂರ್ಣಯ್ಯನವರು ಬ್ರಿಟೀಷ್ ಸೇನೆಯ ನೆರವು ಪಡೆದು, ರಾಜ್ಯ ಸೈನ್ಯಗಳನ್ನು ಮೈಸೂರಿನ ಗಡಿಗಳಿಗೆ ಕಳಿಸಿ ಅಲ್ಲಲ್ಲಿ ಎದ್ದ ಬಿಡಿ ದಂಗೆಗಳನ್ನು ಅಡಗಿಸಿದರು. ರಾಜ್ಯದ ಗಡಿ ಯಾಚೆ ನಡೆದ ಕೆಲವು ಪುಂಡಾಟಿಕೆಗಳನ್ನು ಬ್ರಿಟೀಷರು ಮೈಸೂರು ಸೇನೆಯ ನೆರವಿನಿಂದ ಅಡಗಿಸಿದರು. ೧೭೯೯-೧೮೦೦ ರಲ್ಲಿ ದೊಂಡಿಯಾವಾಘನೆಂಬುವವನು ನಡೆಸಿದ ಪುಂಡಾಟ, ಮಂಜರಾಬಾದ್‌ನ ಬಲ್ಲಂ ಸೀಮೆಯ ಪಾಳೇಗಾರ ಕೃಷ್ಣ ನಾಯಕ್‌ನ ೧೮೦೦ ರ ಪುಂಡಾಟ, ೧೮೦೩ ೬ ಮರಾಠಿ ಯುದ್ಧ, ೧೮೦೪-೦೫ರ ಚಿತ್ತೂರು ಗಲಭೆ ಮತ್ತು ೧೮೦೬ರ ವೆಲ್ಲೂರು ದಂಗೆ [೭೮] ಗಳನ್ನು ಪೂರ್ಣಯ್ಯ ಕಂದಾಚಾರಿಗಳ ಸಹಾಯದಿಂದ ಅಡಗಿಸಿದರು. ಶ್ರೀರಂಗಪಟ್ಟದ ಪಥನಾನಂತರ ಮೈಸೂರು ಸಂಸ್ಥಾನದಲ್ಲಿ ಉಂಟಾಗಿದ್ದ ಪಾಳೇಗಾರರ ದಂಗೆ ಮತ್ತು ದೊಂಬಿಗಳನ್ನು ಕರ್ನಲ್ ಅರ್ಥರ್ ಮೆಲ್ಲೆಸ್ಲಿಯು ತನ್ನ

ಅತ್ಯಂತ ಕಠಿಣ ಕ್ರಮಗಳಿಂದ ಅತ್ಯಂತ ಯಶಸ್ವಿಯಾಗಿ ಹದ್ದುಬಸ್ತಿಗೆ ತಂದನು. ಈ ದೊಂಬಿಗಳು ಯಾವುದೇ ನಿರ್ಧಿಷ್ಟ ಪ್ರದೇಶಕ್ಕೂ ಸೀಮಿತವಾಗಿರಲಿಲ್ಲ. ಇಡೀ ರಾಜ್ಯಾದ್ಯಂತ ಪಾಳೇಗಾರರು ಮತ್ತು ಪಾಳೇಗಾರರೆಂದು ತಮ್ಮನ್ನೇ ತಾವು ಕರೆದುಕೊಂಡ ಕೆಲವರು ಸ್ವತಂತ್ರ ಆಡಳಿತ ನಡೆಸಲೂ ಬೇಡಿಕೆಯನ್ನಿಟ್ಟರು. ಪಟೇಲರು, ಪೊಲೀಸ್ ಅಧಿಕಾರಿಗಳು ಮತ್ತು ರೈತರು ಅಧಿಕಾರಿಗಳಿಗೆ ಲಂಚ ನೀಡಿ ಗ್ರಾಮ.ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತಿದ್ದುಪಡಿ ಮಾಡಿ ತಮ್ಮದಲ್ಲದ ಭೂಮಿಗಳನ್ನು ತಮ್ಮ ಹೆಸರಿನಲ್ಲಿ ಬರೆಸಿಕೊಳ್ಳಲು ಪ್ರಾರಂಭಿಸಿದರು. ಎಲ್ಲೆಲ್ಲಿ ಅಮಲ್ದಾರರು ಅಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿದ್ದಾರೋ ಅಲ್ಲಿ ಇಂತಹ ಘಟನೆಗಳು ನಡೆಯಲು ಪ್ರಾರಂಭಿಸಿದವು. ಇದರಿಂದಾಗಿ ಸರ್ಕಾರಕ್ಕೆ ಮುಜುಗರದ ಪರಿಸ್ಥಿತಿ ಉಂಟಾಯಿತು. ಸಮಾಜದ ಕೆಳಸ್ಥರದ ವ್ಯಕ್ತಿಗಳಿಗೆ ತೊಂದರೆಗಳಾದವು. ಇಂತಹ ಅನ್ಯಾಯ, ಅಕ್ರಮ ಚಟುವಟಿಕೆಗಳನ್ನು ನಿಗ್ರಹಿಸಲು ಹೋದ ಸ್ಥಳೀಯ ಅಮಲ್ದಾರರ ಕೊಲೆಗಳು ಜರುಗಿದವು.[೭೯] ಇಂತಹ ಅನ್ಯಾಯ ಹಾಗೂ ದೌರ್ಜನ್ಯ ಮತ್ತು ಅರಾಜಕತೆ ಮುಂದುವರೆಯಲು ಬಿಡದಂತೆ ದಿವಾನ್ ಪೂರ್ಣಯ್ಯ ನವರು ದಿಟ್ಟ ಹೆಜ್ಜೆ ಇಟ್ಟರು. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಅತ್ಯಂತ ಅಗತ್ಯವಾಗಿತ್ತು. ದಿವಾನ್ ಪೂರ್ಣಯ್ಯನವರು ಈ ಪರಿಸ್ಥಿತಿಯನ್ನು ನಿಭಾಯಿಸಲು ಅತ್ಯಂತ ಕಠಿಣ ಕ್ರಮ ಕೈಗೊಂಡರು.

ಪೂರ್ಣಯ್ಯನವರು ರಾಜ್ಯಕ್ಕೆ ವಿಧೇಯರಾಗಿದ್ದ ಒಳ್ಳೆಯ ಪಾಳೇಗಾರರಿಗೆ ನಿವೃತ್ತಿ ವೇತನವನ್ನು ನೀಡಿ ಅವರನ್ನು ಸಮಾಧಾನಪಡಿಸಿದರು. ಆದರೆ ಈ ರೀತಿ ವೇತನ ಪಡೆದವರು ಮೈಸೂರಿನಲ್ಲಿ ವಾಸಿಸಬೇಕೆಂದು, ತಾನು ರಾಜ್ಯದಲ್ಲಿ ಪ್ರವಾಸಕ್ಕೆ ಹೋದಾಗ ತನ್ನ ಜೊತೆ ಈ ಪಾಳೇಗಾರರು ಬರಬೇಕೆಂದು ನಿರ್ಬಂದಹಾಕಿದರು. ಇದಲ್ಲದೇ ರಾಜ್ಯದಲ್ಲಿ ಪದೇ ಪದೇ ಸಂಚರಿಸಿ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಿದರು. ಪ್ರಜೆಗಳನ್ನು ಸಂದಿಸಿ ಅವರ ಕುಂದುಕೊರತೆಗಳನ್ನು ಆಲಿಸಿ ಪರಿಹಾರ ನೀಡಲು ಸೂಕ್ತ ಕ್ರಮಕೈಗೊಂಡರು. ಇದರಿಂದ ರಾಜ್ಯದಲ್ಲಿ ಗಲಭೆ, ಲೂಟಿ, ಹಿಂಸಾಚಾರಗಳು ನಡೆಯಲು ಆಸ್ಪದ ಇಲ್ಲದಂತೆ ಅಯಿತು.[೮೦]

ಮೈಸೂರು ಬಳಿಯ ಸುಣ್ಣಕಲ್ಲಿನ ಪಾಳೇಗಾರ, ಕುಡುಪಟ್ಟಿ ನಾಯಕ ಮೈಸೂರು ರಾಜ್ಯದ ಮೇಲೆ ಧಾಳಿ ನಡೆಸಿ ಅಪಾರ ಹಾನಿಯನ್ನು ಉಂಟುಮಾಡಿದ್ದರು. ಇಂತಹ ಪಾಳೇಗಾರರ ಉಪಟಳವನ್ನು ತಪ್ಪಿಸಲು ಸೈನ್ಯವನ್ನು ಆಯಾಕಟ್ಟಿನ ಸ್ಥಳದಲ್ಲಿ ಇಡಲಾಯಿತು. ಮಂಜರಾಬಾದ್ (ಸಕಲೇಶಪುರ) ನಲ್ಲಿ ೧೫೦೦ ಅಶ್ವದಳ, ೩,೦೦೦ ಕಾಲ್ದಳ ಮತ್ತು ೫೦೦೦ ಕಂದಾಚಾರ ಸೈನಿಕರುಳ್ಳು ಸೈನಿಕರನ್ನು ಇರಿಸಲಾಯಿತು.[೮೧]

ಅರಮನೆಯ ಎರಡೂ ಪಕ್ಕಗಳಲ್ಲಿ ೧೮ ಕಛೇರಿ (ಅಠಾರ ಕಛೇರಿ) ಗಳನ್ನು ಕಟ್ಟಿಸಿದರು. ಮುಂಭಾಗದಲ್ಲಿ ನೌಬತ್ತು ಖಾನೆಯನ್ನು ನಿರ್ಮಿಸಿ ಆ ಸ್ಥಳದಲ್ಲಿ ಜಾ.ಗರೂಕರಾದ ಪಹರೆ ಸಿಬ್ಬಂದಿಯವರನ್ನು ನೇಮಿಸಲಾಯಿತು. ಈ ಕಛೇರಿಗಳಿಂದಲೇ ನಿರೂಪದ ಚಾವಡಿ, ಆಯಕಟ್ಟಿನ ಚಾವಡಿ, ಕಾವೇರಿಗೆ ದಕ್ಷಿಣ ಮತ್ತು ಉತ್ತರ ಪಾರ್ಶ್ವಗಳಲ್ಲಿರುವ ಗಡಿಗಳಿಗೆ ದಕ್ಷಿಣ ವಿಚಾರದ ಚಾವಡಿ, ಮತ್ತು ಉತ್ತರ ವಿಚಾರದ ಚಾವಡಿ, ಶಿಮೇ ಕಂದಾಚಾರದ ಚಾವಡಿ, ಬಾಗಿಲ ಕಂದಾಚಾರದ ಚಾವಡಿ ಮೊದಲಾದವುಗಳನ್ನು ನಿರ್ಮಿಸಿದರು. ಕಂದಾಚಾರ ವ್ಯವಸ್ಥೆಯ ಮೂಲಕ ಪೊಲೀಸ್ ವ್ಯವಸ್ಥೆಯನ್ನು ಬಲ ಪಡಿಸಿದರು. ಈ ಕಂದಾಚಾರ ಪೊಲೀಸರು ಬೇಡ ಜನಾಂಗದವರಾಗಿದ್ದು, ತಲೆಮಾರುಗಳಿಂದ ಯುದ್ಧಕಾರ್ಯಗಳಲ್ಲಿ ತೊಡಗಿಸಿಕೊಂಡ ಬುಡಕಟ್ಟು ಜನರಾಗಿದ್ದರು.[೮೨]

ಪೂರ್ಣಯ್ಯನವರು ಆಡಳಿತದ ಮೊದಲ ವರ್ಷದಲ್ಲಿ ೨೦,೦೦೦ ಇಂತಹ ಸೈನಿಕರನ್ನು ನೇಮಿಸಿ ಅವರಿಗೆ ಅರ್ಧ ಸಂಬಳವನ್ನು ನಗದಾಗಿ ಮತ್ತು ಉಳಿದದ್ದನ್ನು ಉಂಬಳಿ ಜಮೀನು ನೀಡುವುದರ ಮೂಲಕ ಅವರ ಸೇವೆಯನ್ನು ಪಡೆದುಕೊಂಡರು. ಅವರ ಸಂಬಳ ತಿಂಗಳಿಗೆ ೨-೩ ರೂಪಾಯಿಗಳೆಂದು ನಿಗದಿಪಡಿಸಿದರು. ಈ ರೀತಿ ಮಾಡಿದುದರಿಂದ

ಅವರನ್ನು ಪಾಳೇಗಾರರ ಜೊತೆ ಸೇರುವುದನ್ನು ತಪ್ಪಿಸಿ ಸರಕಾರಕ್ಕೆ ವಿಧೇಯರನ್ನಾಗಿ ಮಾಡಲು ಸಾಧ್ಯವಾಯಿತು.

ಹೈದರಾಲಿಗೂ ಪೂರ್ಣಯ್ಯನವರಿಗೆ ಜಹಗೀರಾಗಿ ಕೊಟ್ಟದ್ದ ಮರವಳ್ಳಿ ಎಂಬ ಊರಿನ ಪ್ರಸ್ತಾಪವನ್ನು ಪ್ರವಾಸಿಗನಾದ ಬುಕನನ್ ಮಾಡುತ್ತಾನೆ. ಪೂರ್ಣಯ್ಯನವರು ಈ ಪ್ರದೇಶವನ್ನು ಪಾರುಪತ್ಯಗಾರನೊಬ್ಬನ ಉಸ್ತುವಾರಿಗೆ ಕೊಟ್ಟಿದ್ದು, ಅದು ಅಮಲ್ದಾರನ ಕಂದಾಯ ಇಲಾಖೆಯ ವ್ಯಾಪ್ತಿಯಿಂದ ಹೊರಗಿತ್ತು. ಮತ್ತು ಅದರ ನಿರ್ವಹಣೆ ಸರಿಯಾಗಿಲ್ಲ ಎಂದು ಹೇಳುತ್ತಾನೆ. ಅದೊಂದು ಬಯಲು ಊರಾಗಿದ್ದು, ಸುಮಾರು ೩೦-೪೦ ಮನೆಗಳ ರೈತರ ಕುಟುಂಬಗಳಿವೆ, ಒಂದೆರಡು ಅಂಗಡಿಗಳಿವೆ, ಕೆಲಸಗಾರರ ೮-೧೦ ಮನೆಗಳಿವೆ. ಲಂಬಾಣಿಗಳೆಂಬ ಅಲೆಮಾರಿ ಜನಾಂಗ ಆಗಾಗ್ಗೆ ದಿನಸಿ ವಸ್ತುಗಳ ಮಾರಾಟಕ್ಕೆ ಬರುತ್ತಿದ್ದು, ಜನರನ್ನು ಬಹಳವಾಗಿ ದೋಚಿ ಇದೀಗ ಅವರ ಸ್ಥಿತಿ ಬಹಳಷ್ಟು ಹೀನಸ್ಥಿತಿಯಲ್ಲಿದೆ. ಮಂತ್ರಿಯಾಗಿದ್ದರೂ ಪೂರ್ಣಯ್ಯನವರು ತಮಗೆ ಕೊಟ್ಟ ಗ್ರಾಮವನ್ನು ಸರಿಯಾಗಿ ಇಟ್ಟಿಲ್ಲ ಎನ್ನುತ್ತಾನೆ ಬುಕನನ್.[೮೬] ಇಂತಹ ಜಹಗೀರ್ ಗ್ರಾಮಗಳು ಒಂದೊಂದು ಬಾರಿ ಹೇಗೆ ರಕ್ಷಣೆ ಇಲ್ಲದೇ ದೌರ್ಜನ್ಯಕ್ಕೆ ಒಳಗಾಗುತ್ತದೆ ಎಂಬುದನ್ನು ಇದರ ಮೂಲಕ ತಿಳಿಯಬಹುದು. ಇದರಿಂದ ತಿಳಿದುಬರುವುದೇನೆಂದರೆ, ಇಡೀ ರಾಜ್ಯದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿದ್ದ ದಿವಾನ್ ಪೂರ್ಣಯ್ಯನವರು ತಮಗೆ ಜಹಗೀರಾಗಿ ಬಂದಿದ್ದ ಗ್ರಾಮಕ್ಕೆ ಸರಿಯಾಗಿ ರಕ್ಷಣೆ ಒದಗಿಸಿಲ್ಲ ಎಂಬುದಾಗಿ ತಿಳಿದುಬರುತ್ತದೆ. ಇದು ಅವರ ನಿರ್ಲಕ್ಷವೋ ಅಥವಾ ಕೆಲಸದ ಒತ್ತಡವೋ ಎಂದು ತಿಳಿದು ಬರುವುದಿಲ್ಲ.

ದಿವಾನ್ ಪೂರ್ಣಯ್ಯರವರು ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಬಹಳಷ್ಟು ಶ್ರಮಿಸಿದ್ದಾರೆ. ಅಷ್ಟೇ ಅಲ್ಲದೇ ಕಾಲಕಾಲಕ್ಕೆ ರಾಜ್ಯಕ್ಕೆ ಬಂದು ಹೋಗುವ ಮತ್ತು ರಾಜ್ಯದಲ್ಲೇ ಇರುವ ಕೆಲವು ಪ್ರಮುಖ ವ್ಯಕ್ತಿಗಳ ರಕ್ಷಣೆಯ ಬಗ್ಗೆಯೂ ಸಹ ಗಮನಹರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಪತ್ರ ನಿರೂಪಗಳನ್ನು ಹೊರಡಿಸುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ.

ಶೃಂಗೇರಿ ಸ್ವಾಮಿಗಳು ಪ್ರಯಾಣಿಸುವ ಕಾಲದಲ್ಲಿ ಸರಕಾರ ಅವರಿಗೆ ಮತ್ತು ಅವರ ಪರಿವಾರಕ್ಕೆ ಕೊಡಬೇಕಾಗುವ ಸಕಲ ವ್ಯವಸ್ಥೆ ಮಾಡಿಕೊಡುತ್ತಿತ್ತೆಂದು ಪೂರ್ಣಯ್ಯರವರು ಅರಮನೆ ಸೀಮೆಯ ಗಡಿಗಳ ಕಿಲ್ಲೇದಾರರ ಮತ್ತು ಅಮಲ್ದಾರರಿಗೆ ಕ್ರೊದನ ಸಂವತ್ಸರ (ಕ್ರಿಶ ೧೮೦೬) ದ ಫಾಲ್ಗುಣ ಶು ೨ ರಂದು ಬರೆಸಿದ ನಿರೂಪವು ಖಚಿತಪಡಿಸುತ್ತದೆ.[೮೭]

ಅನುಬಂಧ ೧ ನೋಡಿ

ಇದರಿಂದ ರಾಜ್ಯದಲ್ಲಿ ಕಳ್ಳಕಾಕರ ಭಯ ಇತ್ತೆಂದು ಅವರುಗಳು ಸನ್ಯಾಸಿಗಳನ್ನೂ ಬಿಡದೇ ಗುರುಮಠಗಳನ್ನು ದೋಚುತ್ತಿದ್ದರೆಂದು ತಿಳಿದುಬರುತ್ತದೆ. ಶೃಂಗೇರಿ ಸ್ವಾಮಿಜಿಯವರು ಮೈಸೂರಿಗೆ ದಯಮಾಡಿಸುವ ಸಂದರ್ಭದಲ್ಲಿ ಕಳ್ಳಕಾಕರ ಉಪದ್ರವಿಲ್ಲದಂತೆ ಆಳುಗಳನ್ನು ಬಿಟ್ಟು ರಕ್ಷಣೆ ಕೊಡುವಂತೆ ಅರಮನೆ ಸೀಮೆಯ ಗಡಿಗಳ ಕಿಲ್ಲೇದಾರ ಮತ್ತು ಅಮಲದಾರರಿಗೆ ಪೂರ್ಣಯ್ಯ ನಿರೂಪ ಹೊರಡಿಸಿರುವುದು ಅತ್ಯಂತ ಗಮನಾರ್ಹವಾದದ್ದಾಗಿದೆ.

ಇದೇ ರೀತಿ ಪ್ರಮೋದೂತ ಸಂವತ್ಸರದ ಚೈತ್ರ ಬ ೧೩ ಮಂಗಳವಾರದಂದು (ಮೇ ೦೧ ೧೮೧೦) ಹೊರಡಿಸಿದ ನಿರೂಪದ ಬಗ್ಗೆ *ಅನುಬಂಧ ೨ ನೋಡಿ*

ತಿ.ತಾ ಶರ್ಮರವರು ತಮ್ಮ ವಿಚಾರ ಕರ್ನಾಟಕದಲ್ಲಿ (ಪು.೨೬೪-೨೬೮) ದಿವಾನ್ ಪೂರ್ಣಯ್ಯನವರು ನಾಯಕ ರಾಮಯ್ಯನಿಗೆ ಬರೆದಿದ್ದ ನಾಲ್ಕು ಪತ್ರಗಳನ್ನು ಪ್ರಕಟಿಸಿದ್ದಾರೆ. [೮೮] ಈ ನಾಲ್ಕು ಪತ್ರಗಳ ಬಗ್ಗೆ *ಅನುಬಂಧ ೩ ನೋಡಿ* ಪ್ರಸ್ತಾವನೆಯಾಗಿ ಅವರು ಪೂರ್ಣಯ್ಯನವರು ಸರ್ ಜಾನ್ ಮಾಲ್ಕಂ ಬಳಿ ಚಾಕರಿಗಾಗಿ ನೇಮಿಸಿದ್ದ ನಾಯಕ ರಾಮಯ್ಯ ಪ್ರತಿ ದಿನವೂ ತನ್ನ ಯಜಮಾನರಿಗೆ ಪತ್ರ ಬರೆಯು ತ್ತಿದ್ದ. ಪ್ರತಿಯೊಂದು ಪತ್ರಕ್ಕೂ ಪೂರ್ಣಯ್ಯನವರು ಉತ್ತರ ಕೊಡುತ್ತಿದ್ದರು. ಆ ಕಾಲದ ಪತ್ರ ಲೇಖನ, ಅದರ ಮರ್ಯಾದೆ, ಆ ಶಬ್ದಸಂಪತ್ತು, ವಾಕ್ಯರಚನೆ, ಇವೇ ಮೊದಲಾದವುಗಳ

ಪರಿಚಯವಾಗಲೆಂದು ಪೂರ್ಣಯ್ಯನವರ ಪತ್ರಗಳ ನಾಲ್ಕನ್ನು ಮಾದರಿಗಾಗಿ ಕೊಡಲಾಗಿದೆ ಎಂಬುದಾಗಿ ತಿಳಿಸುತ್ತಾರೆ. ಪ್ರತಿಯೊಂದು ಪತ್ರದ ಮೇಲೂ ನಿಜ ಪೂರ್ಣ ಸುಖ ಶ್ರೀ ಲಕ್ಷ್ಮಿನೃಸಿಂಹ ಎಂದು ಮುದ್ರೆ ಇದೆ ಎಂಬುದಾಗಿ ಬರೆಯುತ್ತಾರೆ. *ಚಿತ್ರ ೪ ರಿಂದ ೬ ನೋಡಿ ದಿವಾನ್ ಕಛೇರಿಯ ಸೀಲಿನ ಬಗ್ಗೆ ಚಿತ್ರ ೭ ನ್ನು ನೋಡಿರಿ.*

ವಕೀಲ ರಾಮಪ್ಪನು ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ರಾಜರ ಬಳಿ ಸವಾಲ್ ಜವಾಬ್ ಮಾಡಿ ತರಬೇತು ಪಡೆದಿದ್ದ. ಈತನು ಕ್ರಿಶ ೧೮೦೪ ರಲ್ಲಿ ಜನರಲ್ ಜಾನ್ ಮಾಲ್ಕಂ ಜೊತೆಗೆ ಪೂಣೆಯಲ್ಲಿ ಮೊಕ್ಕಾಂ ಮಾಡಿದ್ದ. ಜಾನ್ ಮಾಲ್ಕಂಗೆ ಪ್ರೀತಿ, ವಿಶ್ವಾಸದ ನಂಬುಗೆಯ ವ್ಯಕ್ತಿಯಾಗಿದ್ದ. ಆ ಕಾರಣದಿಂದಲೇ ಮಾಲ್ಕಂ ತನ್ನ ಸ್ವಂತ ವಸ್ತುಗಳ ಜವಾಬ್ದಾರಿಯನ್ನು ರಾಮಪ್ಪನಿಗೆ ನೀಡಿ ಅವುಗಳನ್ನು ಮೈಸೂರಿಗೆ ತಲುಪಿಸುವಂತೆ ತಿಳಿಸಿದ್ದ. ಅಲ್ಲದೇ ರಾಮಪ್ಪನ ಬಗ್ಗೆ ಒಳ್ಳೆಯ ಮಾತುಗಳನ್ನು ಬರೆದು ದಿವಾನ್ ಪೂರ್ಣಯ್ಯನವರಿಗೆ ಶಿಫಾರಸ್ಸು ಪತ್ರ ನೀಡಿದ್ದ. ಬಹುಶ: ಇದೇ ಪತ್ರದ ಕಾರಣ ನಾಯಕ ರಾಮಯ್ಯನು ಮೈಸೂರಿನ ಒಡೆಯರು ಮತ್ತು ಬ್ರಿಟೀಷ್ ರೆಸಿಡೆಂಟ್ ಅಧಿಕಾರಿಗಳ ಜೊತೆಗೆ ಜವಾಬು ಸವಾಲ್ ಮಾಡುವ ಕೆಲಸಕ್ಕೆ ನೇಮಕಗೊಂಡ ವಕೀಲ ರಾಮಪ್ಪನಾಗಿರಬಹುದೆಂಬ ಚರ್ಚೆಯೂ ನಡೆದಿದೆ.[೬]

ಅನಂತರ ಸರ್ ಜಾನ್ ಮಾಲ್ಕಂ ಕೇವಲ ಹದಿಮೂರನೇಯ ವಯಸ್ಸಿನ ಹುಡುಗನಾಗಿದ್ದಾಗ ಈಸ್ಟ್ ಇಂಡಿಯ ಕಂಪೆನಿ ಸೈನ್ಯದ ಕೆಡೆಟಾಗಿ ಸೇರಿ (೧೭೮೧) ದೊಡ್ಡ ದೊಡ್ಡ ಪದವಿಗಳಿಗೇರಿದ, ನಾನಾ ದೇಶಗಳ ರಾಯಭಾರಿ ಯಾದ. ಶ್ರೀರಂಗಪಟ್ಟಣದ ಪಥನಾನಂತರ ರಾಜ್ಯದ ಹಂಚಿಕೆ, ಮೈಸೂರು ಸಂಸ್ಥಾನ ನಿರ್ಮಾಣ, ಇವೆಲ್ಲ ಆಗಬೇಕಾದ ಸಂದರ್ಭದ ವ್ಯವಸ್ಥೆಗೆ ಮಾಲ್ಕಂ ಕಾರ್ಯದರ್ಶಿಯಾಗಿದ್ದ. ೧೮೦೩ ರಲ್ಲಿ ದಂಡನಾಯಕ ವೆಲ್ಲೆಸ್ಲಿಯೊಂದಿಗೆ ಸೇರಿ ಹರಿಹರದ ಬಳಿ, ಮರಾಠರೊಂದಿಗೆ ಯುದ್ಧ ಮಾಡಲು ಹೊರಟ. ಸರ್ ಜಾನ್ ಮಾಲ್ಕಂಗೂ, ದಿವಾನ್ ಪೂರ್ಣಯ್ಯನವರಿಗೂ ಇದ್ದ ಬಾಂಧವ್ಯಕ್ಕಿದು ಕಾರಣ. ಸೈನ್ಯದೊಂದಿಗೆ ಮಾಲ್ಕಂ ಹೊರಟಾಗ ಪೂರ್ಣಯ್ಯನವರು ನಾಯಕ ರಾಮಯ್ಯನನ್ನು ಆತನ ಬಳಿ ಇದ್ದು, ಬೇಕಾದ ಸಹಾಯ ನೀಡುವಂತೆ ವ್ಯವಸ್ಥೆ ಮಾಡಿದ್ದರು. ಬ್ರಿಟೀಷ್ ಅಧಿಕಾರಿಗಳೂ, ಭಾರತೀಯರೂ, ಇಬ್ಬರ ಮಧ್ಯೆ ಇದ್ದ "ಆಳು-ಅರಸ" ಚರ್ಯೆಯ ಚಿತ್ರವನ್ನು ಈ ಪತ್ರಗಳು ಅರ್ಥೈಸುತ್ತವೆ ಮತ್ತು ಬ್ರಿಟೀಷ್ ಅಧಿಕಾರಿಗೆ ರಕ್ಷಣೆ ನೀಡುವಲ್ಲಿ ಪೂರ್ಣಯ್ಯನ ಕಳಕಳಿ ವ್ಯಕ್ತವಾಗುತ್ತದೆ.

ದಿವಾನ್ ಪೂರ್ಣಯ್ಯನವರು ಮೂರು ಅರಸರ ಹಾಗೂ ಬ್ರಿಟೀಷ್ ಅಧಿಕಾರಿಗಳ ಕೈಕೆಳಗೆ ಸೇವೆ ಸಲ್ಲಿಸುವಂತಹ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ದೂರದೃಷ್ಟಿ, ಸಮಷ್ಟಿಪ್ರಜ್ಞೆ ಹಾಗೂ ಉತ್ತಮ ನ್ಯಾಯಾಡಳಿತಗಾರರಾಗಿ ಎಲ್ಲರೂ ಮೆಚ್ಚುವಂಥ ಸಮನ್ವಯಕಾರರಾದರು. ಕಂದಾಚಾರ ಪಡೆಯಲ್ಲಿ ಅನೇಕ ಬದಲಾವಣೆಗಳನ್ನು ಪೂರ್ಣಯ್ಯನವರು ತಂದರೇ ವಿನಹ ಕಂದಾಚಾರ ಪಡೆಯನ್ನು ಸ್ಥಾಪಿಸಿದವರು ಪೂರ್ಣಯ್ಯನವರು ಅಲ್ಲ ಎಂಬುದನ್ನು ಈ ಮೇಲಿನ ಅಂಶಗಳಿಂದ ನಾವು ತಿಳಿಯಬಹುದಾಗಿದೆ. ಇವರು ೧೮೧೧ ರವರೆಗೆ ರಾಜ ಪ್ರತಿನಿಧಿಯಾಗಿ ಹಾಗೂ ದಿವಾನರಾಗಿ ಕಾರ್ಯ ನಿರ್ವಹಿಸಿ ಆ ವರ್ಷ ರಾಜ್ಯಾಡಳಿತವನ್ನು ಕೃಷ್ಣರಾಜ ಒಡೆಯರ್‌ರವರಿಗೆ ಒಪ್ಪಿಸಿ ನಿವೃತ್ತರಾದರು.

೪.೩ : ಕಂದಾಚಾರ ಪೊಲೀಸ್ ಪದ್ಧತಿ

ನಮ್ಮ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬ್ರಿಟೀಷರು ಸ್ಥಾಪಿಸಿರೆಂಬ ಅಭಿಪ್ರಾಯವು ಸರಿಯಾದುದಲ್ಲ. ಬ್ರಿಟೀಷರು ನಮ್ಮ ರಾಜ್ಯಕ್ಕೆ ಬರುವ ಮೊದಲೇ ನಮ್ಮ ನಾಡಿನಲ್ಲಿ ಪ್ರತ್ಯೇಕವಾದ ಒಂದು ಪೊಲೀಸ್ ವ್ಯವಸ್ಥೆ ಇತ್ತು. ಆದರೆ ಆಧುನಿಕ ಪೊಲೀಸ್ ವ್ಯವಸ್ಥೆಯಂತೆ ಅದು ಪೂರ್ಣ ಸಂಘಟಿತವಾಗಿರಲಿಲ್ಲ. ಜೊತೆಗೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದ ಜವಾಬ್ದಾರಿಗಳನ್ನೂ ಸಹ ಈ ಇಲಾಖೆಯು ಹೊಂದಿತ್ತು. ನಾವು ಈಗಾಗಲೇ ವಿಜಯನಗರ ಕಾಲ ಮತ್ತು ಚಿಕ್ಕದೇವರಾಜ ಒಡೆಯರ ಕಾಲ ಮತ್ತು ಹೈದರ್, ಟಿಪ್ಪು ಕಾಲದಲಿ ಕಂದಾಚಾರ ಎಂಬ ಪೊಲೀಸ್ ಪಡೆ ಇದ್ದ ಬಗ್ಗೆ ಚರ್ಚಿಸಿದ್ದೇವೆ.

ದಿವಾನ್ ಪೂರ್ಣಯ್ಯನವರು ಮೈಸೂರಿನಲ್ಲಿ 'ಕಂದಾಚಾರ' ಪಡೆಯನ್ನು ಪ್ರಾರಂಭಿಸಿದರೆಂದು ಹಲವರ ಅಭಿಪ್ರಾಯವಾಗಿದೆ. ಅದರೆ ಈ ಅಭಿಪ್ರಾಯವು ಸರಿಯಾದುದಲ್ಲ. ದಿವಾನ್ ಪೂರ್ಣಯ್ಯನವರಿಗಿಂತ ಮೊದಲೇ ನಮ್ಮ ನಾಡಿನಲ್ಲಿ ಒಂದು ಕಂದಾಚಾರ ಎಂಬ ಹೆಸರಿನ ಪೊಲೀಸ್ ಪಡೆಯೊಂದು ಅಸ್ತಿತ್ವದಲ್ಲಿತ್ತು. ಅದು ಬೆಳೆದು ಬಂದ ಬಗೆಯನ್ನು ನಾವು ಗಮನಿಸ ಬೇಕಾಗಿದೆ.

೧೮೬೮ ರಲ್ಲಿ ಸರ್ ಮಾರ್ಕ್ ಕಬ್ಬನ್ ನೀಡಿದ ವರದಿಯಂತೆ ಮೈಸೂರಿನ ಹಿಂದು ಅರಸರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯ ಕೆಲಸ ಕಾರ್ಯಗಳನ್ನು ಹಳ್ಳಿಗಳ ಸೇವಕರಾದ ' ತಳವಾರ ', 'ತೋಟಿ', 'ನೀರ್ಗಂಟಿ', 'ಕಾವಲುಗಾರ', 'ಕಟ್ಟಬಡಾಡಿ ಜವಾನರು', ' ಹಳೇಯ ಪೈಕಿಯವರು ', 'ಉಂಬಳಿದಾರ ', 'ಅಮರ್‌ಗಾರ ', 'ಹುಲುಗಾವಲಿ ', 'ಅಂಕಮಾಲ ', 'ಕಳ್ಳಕೊರಮರು', 'ಪಟೇಲ', 'ಶಾನುಭೋಗರು' ಮಾಡುತ್ತಿದ್ದರು. ಇದೇ ಹುದ್ದೆಗಳನ್ನು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಹೈದರಾಲಿ, ಟಿಪ್ಪುಸುಲ್ತಾನ್ ಮತ್ತು ಪೂರ್ಣಯ್ಯನವರ ಕಾಲದಲ್ಲಿಯೂ ಮುಂದುವರಿಸಲಾಯಿತು. ಈ ಸೇವಕರುಗಳಿಗೆ ಸಂಬಳವನ್ನು ಭೂಮಿಯನ್ನು ಇನಾಮ್ ಆಗಿ ಕೊಡುವ ಮೂಲಕ ಅಥವಾ ರೈತರಿಂದ ಸಂಗ್ರಹಿಸಿದ ಧಾನ್ಯದಲ್ಲಿ ಪಾಲನ್ನು ನೀಡುವ ಮೂಲಕ ಅಥವಾ ನೇರವಾಗಿ ರಾಜ್ಯದಿಂದ ಪಡೆಯುತ್ತಿದ್ದರು.[೮೭]

೧೬ ಮತ್ತು ೧೭ ನೇ ಶತಮಾನದಲ್ಲಿ ಮೈಸೂರಿನ ಆಡಳಿತ ವ್ಯವಸ್ಥೆಯಲ್ಲಿ ೪ ಮುಖ್ಯ ವಿಭಾಗಗಳು ಇದ್ದವೆಂದು ಶ್ರೀ.ಶಾಮರಾವ್ ತಿಳಿಸುತ್ತಾರೆ.[೮೮] ೧)'ಅಠವಣ' ಎಂದರೆ ಕಂದಾಯ ವಿಭಾಗ ೨) 'ಕಂದಾಚಾರ' ಇಲ್ಲವೇ ಸೇನಾ ವಿಭಾಗ' ೩) ಬೊಕ್ಕಸ ೪)ಅರಮನೆಯ ವಿಭಾಗ. ಇವುಗಳಲ್ಲಿ ಒಂದೊಂದು ವಿಭಾಗವು ಒಬ್ಬೊಬ್ಬ ಮಂತ್ರಿಯ ಅಧೀನವಾಗಿದ್ದಿತ್ತು. ಕಂದಾಯ ವಿಭಾಗವು ಪ್ರಧಾನನ ಇಲ್ಲವೇ ಸರ್ವಾಧಿಕಾರಿಯ ವಶದಲ್ಲಿ ಇತ್ತು. 'ಕಂದಾಚಾರ' ವಿಭಾಗವು ದಳವಾಯಿಯ ನೇತೃತ್ವದಲ್ಲಿತ್ತು ಎಂದಿದ್ದಾರೆ.ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ೧೭೯೯-೧೮೩೧ ಟಿಪ್ಪು ಕಾಲದ ವ್ಯವಸ್ಥೆಯನ್ನು ಮುಂದುವರಿಸಿಕೊಂಡು 'ಕಂದಾಚಾರ' ದಳಕ್ಕೆ ಟಿಪ್ಪುವಿನ ಸೈನ್ಯದಲ್ಲಿದ್ದ ಪದಾಧಿಕಾರಿಗಳ ಸೇರ್ಪಡೆ ಮಾಡಿದರು. ರಾಜಧಾನಿಯಲ್ಲಿ ಮಾತ್ರ ಪೊಲೀಸ್ ದಳಕ್ಕೆ 'ಬಾರ್ ಆಫ್ ಇನ್‌ಫೆಂಟ್ರಿಯು' ನೆರವು ನೀಡುತ್ತಿತ್ತು.

ಹೈದರಾಲಿಯು ತನ್ನ ಸೇನೆ ಹಾಗೂ ಕಾವಲುದಂಡುಗಳಿಗೆ ಹೆಚ್ಚಿನ ಸಂಖ್ಯೆಯ 'ಕಂದಾಚಾರ' ಸಿಬ್ಬಂದಿ ಪಡೆಯನ್ನು ನೇಮಿಸಿದನಾದರೆ ಟಿಪ್ಪು ಸುಲ್ತಾನನು 'ಕಂದಾಚಾರ' ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಿ ತನ್ನ ಸೇನೆಯ ಸಂಖ್ಯೆಯನ್ನು ಹೆಚ್ಚು ಮಾಡಿದನು.[೮೯]

೧೭೯೯ ರ ಶ್ರೀರಂಗಪಟ್ಟಣ ಪಥನಾನಂತರ ಮೈಸೂರು ರಾಜ್ಯದ ಗಡಿಗಳನ್ನು ನಿರ್ಧಿಷ್ಟಗೊಳಿಸಲಾಯಿತು. ಎಲ್ಲೆಗಳನ್ನು ಗುರುತಿಸಿದ ನಂತರ ರಾಜ್ಯವನ್ನು ಈ ಹಿಂದೆ ತಿಳಿಸಿದಂತೆ ಮೂರು ವಿಭಾಗಗಳನ್ನಾಗಿ ಮಾಡಲಾಯಿತು. ಇವು ದಿವಾನರ ನಿಯಂತ್ರಣದಲ್ಲಿ ಇದ್ದು ಅವುಗಳಿಗೆ 'ಸುಬೇದಾರ' ಎಂಬ ಹೆಸರಿನ ಅಧಿಕಾರಿಯನ್ನು ನೇಮಿಸ ಲಾಯಿತು. ಪ್ರತೀ ಉಪ-ವಿಭಾಗದಲ್ಲಿ 'ಅಮಿಲ್'ಅಥವಾ ಅಮಿಲ್‌ದಾರ್ ಎಂದು ಕರೆಯಲ್ಪಡುವ ಅಧಿಕಾರಿಯು ಇದ್ದನು. ಒಟ್ಟು ರಾಜ್ಯದ ವಿಸ್ತೀರ್ಣವು ೨೯,೦೦೦ ಚ.ಮೈ ಹಾಗೂ ಜನಸಂಖ್ಯೆ ೨೨ ಲಕ್ಷಕ್ಕೂ ಸ್ವಲ್ಪ ಕಡಿಮೆ ಇತ್ತು.[೯೦] ಕಾನೂನು ಮತ್ತು ಸುವ್ಯವಸ್ಥೆ ಪರಿಪಾಲನೆಗಾಗಿ ಒಂದು ಸಣ್ಣದಾದ ಆದರೆ ಆಯ್ದ ಜನರ ಕಾಲ್ದಳ (ಇನ್‌ಫೆಂಟ್ರಿ) ಮತ್ತು ಅಶ್ವದಳವನ್ನು ಸ್ಥಾಪಿಸಿದರು. ಈ ದಳಗಳನ್ನು 'ಕಂದಾಚಾರ' ಪೀವನ್ (ಪೊಲೀಸ್)ಗೆ ಹೆಚ್ಚುವರಿಯಾಗಿ ಸೇರಿಸಲಾಯಿತು. ಯುರೋಪಿಯನ್ ಸೈನಿಕರ ನಂತರ ಅತ್ಯಂತ ಶಿಸ್ತುಬದ್ಧವಾಗಿದ್ದವರೆಂದರೆ ಈ ಇನ್‌ಫೆಂಟ್ರಿ ಅಥವಾ ಬಾರ್ ಸಿಪಾಯಿಗಳು.[೯೧]

'ಕಂದಾಚಾರ ಪೀವನ್'ಗಳನ್ನು ದೇಶದ ಹಳೇಯ ಸೇನೆಯಿಂದ ರಚಿಸಲಾಯಿತು. ಅವರ ಗಲಭೆ, ಗದ್ದಲಗಳನ್ನು ನಿರ್ಬಂಧಿಸುವುದಕ್ಕಾಗಿ ದಿವಾನರು ಅವರನ್ನು ಪಡೆಗೆ ಸೇರಿಸಿಕೊಂಡರು. ಮೊದಲ ವರ್ಷದಲ್ಲಿ (೧೭೯೯-೧೮೦೦) ಇವರ

ಸಂಖ್ಯೆ ಹೆಚ್ಚಾಗಿತ್ತು. ಅಂದರೆ ಇವರು ೨೦,೦೦೦ ದಷ್ಟು ಇದ್ದರು. ಕ್ರಮೇಣ ಇವರ ಸಂಖ್ಯೆಯನ್ನು ಕಡಿಮೆಗೊಳಿಸಲಾಯಿತು. ಮತ್ತು ಉತ್ತಮವಾಗಿ ಇವರಿಗೆ ವ್ಯವಸ್ಥೆಗಳನ್ನು ಮಾಡಲಾಗಿತ್ತೆಂದು ಮೇಜರ್ ಎಂ.ಮಿಲ್ಕ್ ತಿಳಿಸಿದ್ದಾನೆ.[೯೨] ನಂತರ ಈ ಸಂಖ್ಯೆಯನ್ನು ೧೫,೦೦೦ ಕ್ಕೆ ಇಳಿಸಲಾಯಿತೆಂದು ಶ್ಯಾಮರಾವ್‌ರವರು ಅಭಿಪ್ರಾಯಪಡುತ್ತಾರೆ.[೯೩] ೧೮೩೪ ಕ್ಕಿಂತ ಮೊದಲು ಮೈಸೂರಿನಲ್ಲಿ 'ಕಾನ್ಸ್‌ಟೇಬಲರಿ' ಇರಲಿಲ್ಲ. ಪೊಲೀಸ್ ಕರ್ತವ್ಯಗಳನ್ನು 'ಕಂದಾಚಾರ ಪೀವನ್' ಎಂದು ಕರೆಯುತ್ತಿದ್ದ ಶಸ್ತ್ರಧಾರಿಗಳು ಮಾಡುತ್ತಿದ್ದರು. ಇವರುಗಳು ತಮ್ಮ ಕೆಲಸವನ್ನು ಗ್ರಾಮಗಳಲ್ಲಿ ವಾಸವಿರುವ ಸೇವಕರ ಸಹಾಯದಿಂದ ಮಾಡುತ್ತಿದ್ದರು. ಇವರನ್ನು ಆಗಾಗ ಅಂದರೆ ಪ್ರಮುಖ ಸಂದರ್ಭಗಳಲ್ಲಿ ಸೈನಿಕ ಕಾರ್ಯಗಳಿಗಾಗಿ ಕಾಲ್ದಳ (ಇನ್‌ಫೆಂಟ್ರ) ಕ್ಕೆ ಸೇರಿಸಲಾಗುತ್ತಿತ್ತು. ಕಾಲ್ದಳವೂ ಸಹ 'ಕಂದಾಚಾರ' ಪಡೆಗೆ ಪೊಲೀಸ್ ಕೆಲಸಗಳಲ್ಲಿ ನೆರವಾಗುತ್ತಿತ್ತು ಎಂದು ವೆಂಕಟ ಸುಬ್ಬಶಾಸ್ತ್ರಿ ತಿಳಿಸುತ್ತಾರೆ. [೯೪]

ಸೈನಿಕ ವರ್ಗದವರ ಕುಟುಂಬದಿಂದ ಕನಿಷ್ಟ ಒಬ್ಬರಾದರೂ ಸಹ ಕಂದಾಚಾರ ಪಡೆಯ ಸದಸ್ಯರಾಗಿರುತ್ತಿದ್ದರು.[೯೫] ಹಳೇಯ ಸೇನಾಪಡೆಯಲ್ಲಿದ್ದವರ ಕುಟುಂಬದಿಂದ ಕನಿಷ್ಟ ಒಬ್ಬರಾದರೂ ಈ ಪಡೆಗೆ ಸೇರಬೇಕಾಗಿದ್ದು ಯಾರನ್ನು ಕಳುಹಿಸಬೇಕೆಂದು ಕುಟುಂಬದವರು ನಿರ್ಧರಿಸಬೇಕಿತ್ತು. ಇದರಿಂದಾಗಿ ತುರ್ತು ಸಂದರ್ಭಗಳಲ್ಲಿ ಒಂದೇ ದಿನದಲ್ಲಿ ೨೦,೦೦೦ ಜನರು ಸೇರುವಂತೆ ಆಯಿತು.[೯೬] ಅವರದ್ದು ಅರ್ಧ ಮಿಲಿಟರಿ ಕರ್ತವ್ಯವಾದರೆ ಇನ್ನರ್ಧ ಸಿವಿಲ್ ಕರ್ತವ್ಯಗಳಾಗಿದ್ದವು. ಕೆಲ ಮೊಮ್ಮೆ ಹಳ್ಳಿಗಳನ್ನು ಕಾಯುವ ಕೆಲಸಕ್ಕೆ ಅವರನ್ನು ನೇಮಿಸಿದ್ದರೆ ಮತ್ತೆ ಕೆಲವೊಮ್ಮೆ ಅವರ ಅಂಚೆಯವನ (ಪೋಸ್ಟ್‌ಮ್ಯಾನ್) ಕೆಲಸಕ್ಕೆ ನೇಮಿಸುತ್ತಿದ್ದರು.

೪.೫.೧ – ಕಂದಾಚಾರಿಗಳ ಕರ್ತವ್ಯ ಮತ್ತು ನೇಮಕಾತಿ

ಈ 'ಕಂದಾಚಾರ' ಪದ್ಧತಿಯ ಜವಾನರೆಲ್ಲರೂ ಮೂಲತ: ಇನ್‌ಫೆಂಟ್ರಿಗೆ ಸೇರಿದವರಾಗಿದ್ದರು. ಅವರುಗಳ ಮುಖ್ಯ ಕರ್ತವ್ಯವೆಂದರೆ, ಅಪರಾಧಿಗಳನ್ನು ಹಿಡಿಯುವುದು, ಅವರುಗಳನ್ನು ಸೂಕ್ತ ಬಂಧನದಲ್ಲಿಡುವುದು, ಜೈಲುಗಳ ರಕ್ಷಣೆ, ಕೋಟೆಗಳ ಪಹರೆ, ರಸ್ತೆ ಮತ್ತು ಸೇತುವೆಗಳ ನಿರ್ಮಾಣವಾಗಿತ್ತು. ೧೮೩೪ ರಲ್ಲಿ 'ಕಂದಾಚಾರ'ದ ಜವಾನರನ್ನು ಪೂರ್ಣವಾಗಿ ಕಂದಾಯ ಸಂಗ್ರಹಣೆಯ ಕಾರ್ಯಕ್ಕೆ ಸರದಿಯ ಮೇಲೆ ನೇಮಕ ಮಾಡಿಕೊಳ್ಳಲಾಯಿತು.

'ಕಂದಾಚಾರ' ಇಲಾಖೆಯ ಕರ್ತವ್ಯವೆಂದರೆ ಅರ್ಧ ಸೈನಿಕ ಕರ್ತವ್ಯಗಳಾದರೆ ಇನ್ನರ್ಧ ದಿವಾಣಿ (ಸಿವಿಲ್) ಕರ್ತವ್ಯಗಳಾಗಿದ್ದವು. ಕಂದಾಯ ಇಲಾಖೆಯಲ್ಲಿ ವಿವಿಧ ದರ್ಜೆಗಳಲ್ಲಿ ಸೇವೆ ಸಲ್ಲಿಸಲು ನೇಮಕಗೊಂಡಿದ್ದ ಮತ್ತು ಕಂದಾಯ ಇಲಾಖೆಯು ಮೇಲ್ವಿಚಾರಣೆಯಲ್ಲಿ ಕೆಲಸ ನಡೆಸುತ್ತಿದ್ದ ಅಥವಣೆಪೀವನ್ (Attavane peons) ಗಳಿಗೆ ಈ 'ಕಂದಾಚಾರ' ಪೀವನ್‌ಗಳ ಕರ್ತವ್ಯವು ವಿರುದ್ಧವಾಗಿತ್ತು. ಈ ಕಂದಾಚಾರ ಪಡೆಯ ಉಗಮವು ಪ್ರಾಚೀನಕಾಲದ Militia ಅಂದರೆ ಅವಶ್ಯ ಬಿದ್ದಾಗ ಉಪಯೋಗಕ್ಕೆ ಬರುವ 'ಸೇನೆಯ ದಂಡು' ಅಥವಾ 'ಪ್ರಜಾಸೈನ್ಯ'ದ ಅಥವಾ ಅವ್ಯವಸ್ಥಿತವಾದ ಕಾಲ್ದಳದ (irregular) ಪ್ರತಿರೂಪವಾಗಿತ್ತು. ಈ ಕಾಲ್ದಳವನ್ನು ಸಾಮಾನ್ಯವಾಗಿ ರಾಜ್ಯದಲ್ಲಿ ಶಾಂತಿ ಕಾಪಾಡುವ ಸಲುವಾಗಿ ಉಪಯೋಗಿಸಲಾಗುತ್ತಿತ್ತು. 'ಕಂದಾಚಾರ' ಪೇದೆಗಳು ವಿವಿಧ ರೀತಿಯ ಆಯುಧಗಳನ್ನು ಹೊಂದಿದ್ದು ಆದರೆ ಸಾಧಾರಣವಾಗಿ ಭರ್ಜಿ ಮತ್ತು ಮ್ಯಾಚ್‌ಲಾಕ್ಸ್‌ಗಳನ್ನು ಹೊಂದಿರುತ್ತಿದ್ದರು. ಶೈಶವಾವಸ್ಥೆಯಲ್ಲಿದ್ದ 'ಕಂದಾಚಾರ' ಪಡೆಗೆ ಮಿಲಿಟರಿ ಕಾರ್ಯಗಳನ್ನು ನಿರ್ವಹಿಸುವವರೆಗೆ ತರಬೇತಿಯನ್ನು ನೀಡಲಾಯಿತು. ಮತ್ತು ವ್ಯವಸಾಯವನ್ನು ಮಾಡುವುದನ್ನು ಕಲಿಸಲಾಯಿತು. ವರ್ಷದ ಆರಾಮವಾದ ಮತ್ತು ವ್ಯವಸಾಯವನ್ನು ಮಾಡುವುದನ್ನು ಕಲಿಸಲಾಯಿತು. ವರ್ಷದ ಆರಾಮವಾದ ದಿನದಲ್ಲಿ ಅಂದರೆ ಅವರಿಗೆ ವ್ಯವಸಾಯದ ಕೆಲಸಗಳು ಇಲ್ಲದಾಗ ಅಥವಾ ಮಿಲಿಟರಿ ಕೆಲಸಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಇವರು ಕೊಳ್ಳೆಹೊಡೆಯಲು ಪ್ರಾರಂಭಿಸಿದರು. ಇದನ್ನು ಗಮನಿಸಿದ ಪೂರ್ಣಯ್ಯನವರು ಈ ಕಂದಾಚಾರ ಪಡೆಯವರ

ಈ ಅಕೃತ್ಯಗಳನ್ನು ಅತ್ಯಂತ ಸಮರ್ಪಕವಾಗಿ ಗಣನೀಯವಾಗಿ ಹತ್ತಿಕ್ಕಲು ತೀರ್ಮಾನಿಸಿದರು. ಇದು ಹೇಗೆಂದರೆ ಅವರನ್ನು ಸರಕಾರಿ ಹುದ್ದೆಗಳಲ್ಲಿ ನೇಮಿಸಿಕೊಂಡು ಅವರ ನಂಬಿಕಸ್ಥ ಸೇವೆಗಳಿಗೆ ಸಾಕಷ್ಟು ಬಹುಮಾನಗಳನ್ನು ನೀಡುತ್ತಾ ಒಂದು ಸ್ಥಿರ ಸರ್ಕಾರದ ನಿರ್ವಹಣೆಗೆ ಕಾರಣರಾದರು.

ಪೂರ್ಣಯ್ಯನವರ ಈ ಯೋಜನೆಯಿಂಗಾಗಿ ಇಂತಹ 'ಕಂದಾಚಾರ' ಪಡೆಯ ಕುಟುಂಬಗಳಿಂದ ಒಬ್ಬೊಬ್ಬ ವ್ಯಕ್ತಿಗೆ ಯಾವುದಾದರೂ ಸರಕಾರಿ ಸೇವೆಯಲ್ಲಿ ಉದ್ಯೋಗ ಸಿಗುವಂತೆ ಮಾಡಿದರು. ಮತ್ತು ಇದೇ ವೇಳೆ ಈ ರೀತಿಯ ಸರ್ಕಾರಿ ಉದ್ಯೋಗಗಳನ್ನು ನೀಡಿದ್ದರ ಪರಿಣಾಮವಾಗಿ ಅವರುಗಳಿಗೆ ಸರಕಾರದ ಬಗ್ಗೆ ಋಣಭಾರವಿದ್ದು, ಅಗತ್ಯವಿದ್ದಾಗ ಇವರುಗಳನ್ನು ಮಿಲಿಟರಿ ಸೇವೆಗೆ ಬಳಸಿಕೊಳ್ಳಲಾಗುತ್ತಿತ್ತು. ಇವರಿಗೆ ಸಂಬಳದ ಅರ್ಧ ಭಾಗವನ್ನು ಹಣದ ರೂಪದಲ್ಲೂ, ಇನ್ನರ್ಧವನ್ನು ವ್ಯವಸಾಯ ಮಾಡದೇ ಉಳಿದ ಭೂಮಿಯನ್ನು ವ್ಯವಸಾಯ ಮಾಡಲು ನೀಡುತ್ತಿದ್ದರು. ಇವರುಗಳಿಗೆ ಸಾದಾರಣವಾಗಿ ಹಳ್ಳಿಗಳಲ್ಲಿರುವ ಕೋಟೆ ಅಥವಾ ರಕ್ಷಣಾ ಗೋಡೆಗಳನ್ನು ಸರದಿಯಂತೆ ಕಾಯುವ ಕೆಲಸ ಮಾಡುತ್ತಿದ್ದರು. ಅಷ್ಟೇ ಅಲ್ಲದೇ ಅವರು ಎಲ್ಲಾ ಸಂದರ್ಭಗಳಲ್ಲಿ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ಸಿದ್ದರಿರಬೇಕಿತ್ತು. ಅವರ ಕೌಟುಂಬಿಕ ಅಗತ್ಯಗಳಿಗೆ ತಕ್ಕಂತೆ ಆಗಾಗ್ಗೆ ಅವರಿಗೆ ಕರ್ತವ್ಯದಲ್ಲಿ ವಿಶ್ರಾಂತಿ ನೀಡಲಾಗುತ್ತಿತ್ತು. 'ಕಂದಾಚಾರ' ಪಡೆಯಲ್ಲಿ ಕೆಲವರಿಗೆ ಡೋಲಿಯನ್ನು ಹೋರುವ ಮತ್ತು ಅದನ್ನು ಕಾಯುವ ದೂತನ ಕೆಲಸವನ್ನು ಮತ್ತೆ ಕೆಲವರು ಅಂಚೆ ಪೇದೆಯ ಕೆಲಸವನ್ನು ಮಾಡಬೇಕಿತ್ತು.

೧೮೩೪ ರಲ್ಲಿ ಪೊಲೀಸ್ ಹುಕುಂನಾಮೆ (ಪೊಲೀಸ್ ಕೋಡ್) ನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಕಂದಾಚಾರ ಪಡೆಯ ಕರ್ತವ್ಯಗಳ ಸ್ವರೂಪದ ಗೊಂದಲ ನಿವಾರಣೆಯಾಯಿತು. ಈ ಹುಕುಂನಾಮೆಯ ಮುಖ್ಯಾಂಶದಲ್ಲಿ ವಿಷದವಾಗಿ ತಿಳಿಸಿದ್ದೇನೆಂದರೆ, "ಕಂದಾಚಾರ ಪೇದೆಗಳ ಕರ್ತವ್ಯಗಳನ್ನು ಸಮರ್ಪಕವಾಗಿ ವಿವರಿಸಿಲ್ಲ. ಇವರುಗಳು ಸಂಪೂರ್ಣವಾಗಿ ಪೊಲೀಸ್ ಇಲಾಖೆಗೆ ಸೇರಿದವರೆಂದು, ಅವರುಗಳು ತಾವು 'ಪೊಲೀಸ್ ಪೀವನ್'ಗಳೆಂದು ಅರ್ಥ ಮಾಡಿಕೊಳ್ಳಬಹುದು" ಎಂದು ತಿಳಿಸಲಾಯಿತು.[೯೭] ಅಂದರೆ ಪೀವನ್‌ಗಳನ್ನು ಸಾಂದರ್ಭಿಕವಾಗಿ ಸೇನೆ ಕೆಲಸಗಳಿಗೆ ನಿಯೋಜಿಸಬಾರದೆಂದಾಗಲೀ ಅಥವಾ ಅಪರಾಧಗಳನ್ನು ತಡೆಯಲು ಈ ಸಿಪಾಯಿಗಳು ಸಹಾಯ ಮಾಡಬಾರದೆಂದಾಗಲಿ ಅರ್ಥವಲ್ಲ. ಈ ಎರಡೂ ಪಡೆಗಳು ಒಬ್ಬರಿಗೊಬ್ಬರು ಪೂರಕವಾಗಿ ಕೆಲಸ ಮಾಡುತ್ತಿದ್ದರು. ಆದರೆ ಅವರನ್ನು ಒಂದು ಪಡೆಯಿಂದ ಇನ್ನೊಂದು ಪಡೆಗೆ ಬದಲಾಯಿಸುವಂತೆ ಇರಲಿಲ್ಲ ಎಂಬುದು ಇಡೀ ರಾಜ್ಯಕ್ಕೆ ತಿಳಿದ ವಿಷಯವಾಗಿತ್ತು. ಮಾರ್ಕ್ ಕಬ್ಬನ್‌ನ ಆಡಳಿತದ ದಾಖಲೆಗಳು, ಈ ಎರಡೂ ಪಡೆಗಳ ಅನುಕೂಲತೆಗಾಗಿ ಇವುಗಳ ನಡುವಿನ ಭಿನ್ನತೆಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ ಬಗ್ಗೆ ತಿಳಿಸುತ್ತವೆ. 'ಕಂದಾಚಾರ' ಪಡೆಯ ಸಿಬ್ಬಂದಿಯವರನ್ನು ಒಂದು ವೇಳೆ ಸೇನೆಯ (ಮಿಲಿಟರಿ) ಕೆಲಸಗಳಿಗೆ ತಾತ್ಕಲಿಕ ವರ್ಗಾವಣೆ ಆಧಾರದ ಮೇರೆಗೆ ನೇಮಕಗೊಳಿಸಿದರೆ, ಪೊಲೀಸ್ ಇಲಾಖೆಯ ಅವರ ಸ್ಥಾನಕ್ಕೆ ತಾತ್ಕಲಿಕವಾಗಿ ಬೇರೆ ಸಿಬ್ಬಂದಿಗಳನ್ನು ನೇಮಿಸಲಾಗುತ್ತಿತ್ತು. ಆದರೆ 'ಕಂದಾಚಾರ' ಪಡೆಯ ಸಿಬ್ಬಂದಿಯವರು ಕಾಲಾನಂತರ ತಮ್ಮ ಸ್ಥಾನಕ್ಕೆ ಹಿಂದಿರುಗಿ ಹೋಗಲು ಹಕ್ಕು ಉಳ್ಳವರಾಗಿದ್ದರು.[೯೮] ಈ 'ಕಂದಾಚಾರ' ಸೇವೆಗೆ ಸೇರುವ ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ಈ ಇಲಾಖೆಗೆ ಅರ್ಹನೆಂದು ಆಯ್ಕೆಯಾದವನು, ಸಧೃಡನಾಗಿದ್ದು, ಧೈರ್ಯವಂತನೂ, ನಂಬಿಕಸ್ಥನೂ ಆಗಿರಬೇಕು. ಮತ್ತು ಅವರನ್ನು ಸೇನಾವರ್ಗದಿಂದ ಮಾತ್ರ ತೆಗೆದುಕೊಂಡಿರಬೇಕು. ಒಂದು ವೇಳೆ ಅಸಮರ್ಪಕವಾದ ಸಿಬ್ಬಂದಿಗಳನ್ನು ಅಂದರೆ ಕೆಟ್ಟ ನಡತೆಯವರನ್ನು ಯಾವಾಗಲೂ (ಚಾಳೀಯ) ಸೋಮಾರಿಗಳಾಗಿ ರುವವರನ್ನು ಅಥವಾ ದೈಹಿಕವಾಗಿ ಅಸಮರ್ಪಕವಾಗಿರುವವರನ್ನು ಯಾರಾದರೂ ಆಯ್ಕೆ ಮಾಡಿದರೆ ಅಂತಹ ಆಯ್ಕೆ ೧೩೧೨ ೦೩೪೯ಮಾಡಿದವನಿಂದ ಆ ಅಭ್ಯರ್ಥಿಗಳಿಗೆ ಇದುವರೆಗೆ ನೀಡಿದ ಸಂಬಳದ ಮೊತ್ತ

ವನ್ನು ಹಿಂದಕ್ಕೆ ಪಡೆಯಲಾಗುತ್ತಿತ್ತು. ಮತ್ತು ಹಾಗೆ ಮಾಡಲು ಆತನು ಬದ್ಧನಾಗಿದ್ದನು.[೯]

"ಕಂದಾಚಾರ ಪೀವನ್"ಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಯಿತು. ಒಂದು "ಶಸ್ತ್ರಧಾರಿಗಳು" ಮತ್ತೊಂದು "ನಿಶಸ್ತ್ರಧಾರಿಗಳು" (ಖಾಲೀಹಾತ್) ಈ ವಿಭಾಗವನ್ನು ಪೊಲೀಸ್ ಹುಕುಂನಾಮೆಯು ದೃಢೀಕರಿಸಿತು ಮತ್ತು ಕಂದಾಚಾರಿಗಳ ಕೆಲಸವನ್ನು ಈ ಕೆಳಗಿನಂತೆ ಗೊತ್ತುಪಡಿಸಲಾಯಿತು. ಶಸ್ತ್ರಧಾರಿ ಪೀವನ್‌ಗಳು ಈ ಕೆಳಗಿನಂತೆ ಕೆಲಸ ನಿರ್ವಹಿಸಬೇಕಿತ್ತು.

೧) ಆಗಾಗ ಖಜಾನೆಯ ಹಣವನ್ನು ಮತ್ತು ಖೈದಿಗಳ ಬೆಂಗಾವಲು ಕೆಲಸ ಮಾಡುವುದರೊಂದಿಗೆ ಕಾರಾಗೃಹಗಳ ಪಹರೆ ಕರ್ತವ್ಯ ಮಾಡಬೇಕಿತ್ತು.

೨) ಸಮಸ್ಯೆಗಳಿದ್ದಾಗ ಕ್ಷೇತ್ರಕಾರ್ಯ (ಫೀಲ್ಡ್ ಸರ್ವಿಸ್) ಗಳಿಗೆ ತಕ್ಷಣ ಒದಗಬೇಕಿತ್ತು.

೩) ಹುಲಿಗಳನ್ನು ಕೊಲ್ಲುವುದು (ವಯಸ್ಕ ಹುಲಿಯನ್ನು ಕೊಂದರೆ ತಲಾ ಒಂದಕ್ಕೆ ೧೦ ರೂಗಳನ್ನು, ಮರಿಹುಲಿಯನ್ನು ಕೊಂದರೆ ತಲಾ ಒಂದಕ್ಕೆ ೫ ರೂ ಬಹುಮಾನ ನೀಡಲಾಗುತ್ತಿತ್ತು)

೪) ತಮ್ಮ ಸರಹದ್ದುಗಳಲ್ಲಿ ಹಾದು ಹೋಗುವ ಗೌರವಾನ್ವಿತ ಯಾತ್ರಿಕರ ಜೊತೆಗಿದ್ದು ಅವರಿಗೆ ರಕ್ಷಣೆ ನೀಡುವುದು ಇವರ ಕರ್ತವ್ಯವಾಗಿತ್ತು. ಈ ಮೇಲಿನ ಕೆಲಸಗಳ ಜೊತೆಗೆ ಇನ್ನಿತರ ಕೆಲಸಗಳನ್ನು ಅವರು ಮಾಡಬೇಕಿತ್ತು. ಅದನ್ನು ಅವರು ವೈಯಕ್ತಿಯವಾಗಿ ಮಾಡದೆ ಸ್ಥಳೀಯ ಗ್ರಾಮಸ್ಥರ ನೆರವಿನೊಂದಿಗೆ ಮಾಡಬೇಕಿತ್ತು. ಅವುಗಳೆಂದರೆ,

೫) ಕಳ್ಳತನಗಳನ್ನು ತಡೆಯುವುದು, ಆರೋಪಿಗಳನ್ನು ಪತ್ತೆಮಾಡುವುದು, ತೋಟಿ ಮತ್ತು ತಳಾರಿಗಳು ಮಾಡುತ್ತಿದ್ದ ಪೊಲೀಸ್ ಕೆಲಸವನ್ನು ನಿಯಂತ್ರಿಸುವುದು.

೬) ಅರಣ್ಯದ ಮೂಲಕ ಹಾದುಹೋಗುವ ಪ್ರತಿಯೊಂದು ಕಣಿವೆಮಾರ್ಗ ಮತ್ತು ಕಾಲುದಾರಿಗಳಲ್ಲಿ ತೋಟಿ ಮತ್ತು ತಳಾರಿಗಳ ಸಹಾಯದಿಂದ ಕಾವಲು ಕಾಯುವುದು.

೭) ರಾಜಧಾನಿನಗರ ಹಾಗು ಕೋಟೆಗಳನ್ನು ರಾತ್ರಿ ವೇಳೆ ಪಹರೆ ಕಾಯುವುದು.

೮) ಶ್ರೀಗಂಧದ ಮರಗಳ ಮೇಲೆ ಕಣ್ಗಾವಲು ಇರಿಸಿ ಅದನ್ನು ರಹಸ್ಯವಾಗಿ ಕತ್ತರಿಸುವುದನ್ನು ತಡೆಯಬೇಕಿತ್ತು. ಮರ ಗಳನ್ನು ಸಂಸ್ಕರಿಸುವಾಗ ಮತ್ತು ಸ್ವಚ್ಛಗೊಳಿಸುವಾಗ ಹಾಜರಿದ್ದು ಈ ಬಗ್ಗೆ ಅಮಿಲ್‌ದಾರನಿಗೆ ವರದಿ ನೀಡಬೇಕು.[೧೦೦]

'ನಿಶಸ್ತ್ರಪೀವನ್'ಗಳನ್ನು 'ಖಾಲಿಹಾತ್' ಎಂದು ಕರೆಯಲಾಗುತ್ತಿದ್ದು ಅವರುಗಳನ್ನು ಸಿಬ್ಬಂದಿಗಳನ್ನಾಗಿ ನೇಮಿಸಿ ಕೊಂಡಿರಲಿಲ್ಲ. ಹುಜೂರು ಆದೇಶದಂತೆ ರಸ್ತೆಗಳ, ಕೆರೆಗಳ ದುರಸ್ತಿ ಮಾಡಲು ಮತ್ತು ಸರಕಾರದ ಇತರ ಕೆಲಸಗಳನ್ನು ಮಾಡಲು ನೇಮಿಸಿಕೊಳ್ಳಲಾಗಿತ್ತು.[೧೦೧] ಇವರನ್ನು ಕ್ಷೇತ್ರ ಕಾರ್ಯಗಳಿಗೆ ಉಪಯೋಗಿಸುವಂತಿರಲಿಲ್ಲ. ಸಾಮಾನ್ಯವಾಗಿ ಕಂದಾ ಚಾರ ಸಿಬ್ಬಂದಿಯವರ ನಿಯೋಜನೆ ಮತ್ತು ಅವರು ಸಾಗಿಸಬೇಕಾಗಿದ್ದ ಶಸ್ತ್ರಾಸ್ತ್ರಗಳ ವಿತರಣೆ ಮಾಡಲು ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು. ಒಂದು ತಾಲೂಕಿನ ಪ್ರತೀ ಹೋಬಳಿಯಲ್ಲಿ ಇಬ್ಬರು ಪೇದೆಗಳು ಇರಲೇಬೇಕು. ರಾಜಧಾನಿಯ ನಗರದಲ್ಲಿ ಮತ್ತು ಕೋಟೆ ಪಹರೆಗೆ ಅಗತ್ಯವಾದಷ್ಟು ಸಿಬ್ಬಂದಿಯವರು (ಪೇದೆಗಳು) ಯಾವಾಗಲೂ ಇರ ಬೇಕು. ತಾಲೂಕು ಕಛೇರಿಗಳಲ್ಲಿ ಕೋಟೆಗಳಲ್ಲಿ, ಮತ್ತು ಹೋಬಳಿಗಳಲ್ಲಿ ಇರುವ ಪೇದೆಗಳು ಖಡ್ಗದಾರಿಗಳಾಗಿರಬೇಕು. ಗಡಿಭಾಗಗಳಲ್ಲಿ ದಾರಿಗಳಲ್ಲಿ ಪಹರೆ ಮಾಡುವವರು ಮತ್ತು ಕಾಡಿನ ಮದ್ಯೆ ಇರುವ ರಸ್ತೆಗಳಲ್ಲಿ ಪಹರೆ ಮಾಡುವವರು ಬೆಂಕಿಯ ದೀಪಗಳನ್ನು ಇಟ್ಟುಕೊಂಡಿರಬೇಕು. ಇಂತಹ ಬೆಂಕಿಯ ದೀಪಗಳು (Match locks) ಇಟ್ಟುಕೊಂಡಿರಬೇಕಾದ ಪೇದೆಗಳಿಗೆ ತಿಂಗಳ ಸಂಬಳ ಪಡೆಯಲು ಬಂದಂತಹ ಸಮಯದಲ್ಲಿ ಈ ಪೇದೆಗಳ ಸಮವಸ್ತ್ರ ಮತ್ತು ಶಸ್ತ್ರಾಸ್ತ್ರಗಳನ್ನು ಪರಿಶೀಲಿಸಲಾಗುತ್ತಿತ್ತು. ಆತ ನಿಜವಾಗಿಯೂ ಕೆಲಸ ಮಾಡುತ್ತಿದ್ದಾನೆಯೇ? ಇಲ್ಲವೇ? ಎಂದು ಇದೇ ವೇಳೆ ಪರೀಕ್ಷಿಸ

ಲಾಗುತ್ತಿತ್ತು. ಈ ವೇಳೆಯಲ್ಲಿ ಅವರ ಕರ್ತವ್ಯಗಳಿಗೆ ಸಂಬಂಧಿಸಿದಂತೆ ಮತ್ತು ವೈಯಕ್ತಿಕವಾದ ಸಲಹೆ ಸೂಚನೆಗಳನ್ನು ನೀಡಲಾಗುತ್ತಿತ್ತು.[೧೦೨]

೪.೫.೨ ಅಮಿಲ್ದಾರನ ಕರ್ತವ್ಯಗಳು

ಕ್ರಮವದ್ದವಾದ ಪೊಲೀಸ್ ಪಡೆಯು ಪ್ರತೀ ತಾಲೂಕಿನಲ್ಲಿ 'ಅಮಲ್ದಾರ'ನ ಕೈಕೆಳಗೆ ಕೆಲಸ ಮಾಡುತ್ತಿತ್ತು. ಈತನ ಕೈಕೆಳಗೆ ಒಬ್ಬ 'ಕಿಲ್ಲೇದಾರ', ಒಬ್ಬ 'ನಾಯಬ್ ಕಿಲ್ಲೇದಾರ್' ಅಥವಾ 'ದಫೇದಾರ' ಮತ್ತು 'ಥಾನಾದಾರ' ಅಥವಾ 'ಹೋಬಳಿದಾರ'ರು ಇದ್ದು ಪೊಲೀಸ್ ಕೆಲಸಗಳಲ್ಲಿ ಸಹಾಯಮಾಡಲು ಇರುತ್ತಿದ್ದರು. 'ಕಿಲ್ಲೇದಾರ', 'ದಫೇದಾರ' ಮತ್ತು 'ಥಾನಾದಾರ' ಅಥವಾ 'ಹೋಬಳಿದಾರ'ರು ಜಿಲ್ಲೆಯಲ್ಲಿನ ಕೆಳಹಂತದ ಮೂರು ಜನ ಪೊಲೀಸ್ ಅಧಿಕಾರಿಗಳಾಗಿದ್ದರು. ಇವರುಗಳು ನೇರವಾಗಿ 'ಅಮಿಲ್‌ದಾರ'ನ ಆದೇಶದ ಮೇರೆಗೆ ಕೆಲಸ ಮಾಡುತ್ತಿದ್ದರು. ಈ 'ಅಮಿಲ್‌ದಾರ'ನು ತನ್ನ ತಾಲೂಕಿನ ಪೊಲೀಸ್ ಪಡೆಯ ಮುಖ್ಯಸ್ಥನಾಗಿದ್ದನು. ಈತನು ತಾನು ಮಾಡುವ ಮತ್ತು ತನ್ನ ಕೈಕೆಳಗಿನ ಅಧಿಕಾರಿಗಳು ಮಾಡುವ ಎಲ್ಲಾ ಪೊಲೀಸ್ ಕೆಲಸಗಳಿಗೆ ಜವಾಬ್ದಾರನಾಗಿದ್ದನು.[೧೦೩] ಮೊದಲನೆಯದಾಗಿ ವಿಭಾಗವೊಂದರ ಪೊಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಪೊಲೀಸ್ ಇಲಾಖೆಯ ಮೇಲೆ ವಿಶೇಷವಾದ ಅಧಿಕಾರವಿರಲಿಲ್ಲ. ತನ್ನ ಕೈಕೆಳಗಿನ ಅಧಿಕಾರಿಗಳ ಕರ್ತವ್ಯನಿರ್ಲಕ್ಷತೆ ಮತ್ತು ರಜೆ ಪಡೆಯದೇ ಕರ್ತವ್ಯಕ್ಕೆ ಗೈರುಹಾಜರಾದರೆ ಇತ್ಯಾದಿ ಸಣ್ಣಪುಟ್ಟ ತಪ್ಪುಗಳಿಗೆ ಶಿಕ್ಷಿಸುವ ಅಧಿಕಾರದ ಹೊರತಾಗಿ ವಿಶೇಷ ಅಧಿಕಾರವಿರಲಿಲ್ಲ. ಕಮಿಷನರ್‌ರವರು ಕಂದಾಚಾರ ಭಕ್ಷಿಯವರ ಸಹಾಯದಿಂದ ಸೂಪರಿಂಟೆಂಡೆಂಟ್‌ರನ್ನು ನಿಯಂತ್ರಿಸುವುದರ ಜೊತೆಗೆ ಇಲಾಖೆಯನ್ನು ನಿಯಂತ್ರಿಸಲು ಉಳಿದೆಲ್ಲಾ ಅಧಿಕಾರವನ್ನು ಹೊಂದಿದ್ದರು.[೧೦೪] ಇದೊಂದು ಅವಿವೇಕದ ನಿರ್ಧಾರವಾಗಿತ್ತು. ೧೮೪೧ರಲ್ಲಿ ಈ ತಪ್ಪನ್ನು ಒಪ್ಪಿಕೊಂಡು ಅದೇ ವರ್ಷ ಆಂಶಿಕವಾಗಿ ಮತ್ತು ೧೮೪೪ ರಲ್ಲಿ ಪೂರ್ಣವಾಗಿ 'ಭಕ್ಷಿ' ಹುದ್ದೆಯನ್ನು ರದ್ದುಗೊಳಿಸಲಾಯಿತು. ಸೂಪರಿಂಟೆಂಡೆಂಟ್‌ರವರಿಗೆ 'ಕಂದಾಚಾರ' ಪಡೆಯಲ್ಲಿ ಕಿಲ್ಲೇದಾರರಿಗಿಂತ ಕೆಳಗಿನ ದರ್ಜೆಯ ಎಲ್ಲಾ ಅಧಿಕಾರಿಗಳಿಗೆ ಭಡ್ತಿ ನೀಡುವ ವಜಾಗೊಳಿಸುವ ಶಿಕ್ಷಿಸುವ ಅಧಿಕಾರ ನೀಡಲಾಯಿತು.[೧೦೫] ಇವೆಲ್ಲವೂ ಸ್ಥಳೀಯ ವಾಸಿಗಳ ರಕ್ಷಣೆ ಅಪರಾಧಗಳ ಪತ್ತೆ ಮತ್ತು ತಡೆಗೆ ಸಂಬಂಧಿಸಿದ ವಿಷಯಗಳಾಗಿದ್ದವು. ಆದರೆ ರಾಜ್ಯದಲ್ಲಿ ವೃತ್ತಿಪರ ಡಕಾಯಿತರು, ಸುಲಿಗೆಕೋರರು, ಅಲೆಮಾರಿಗಳು ಇದ್ದು ಇಂತಹವರುಗಳ ವಿರುದ್ಧ ಕಾರ್ಯಾಚರಣೆ ನಡೆಸಲು ವಿಶೇಷವಾದ ಪರಿಣತಿ ಅಗತ್ಯವಿತ್ತು. ಆದರೆ ಕಂದಾಚಾರಿಗಳು ಇಂತಹ ವೃತ್ತಿಪರ ಅಪರಾಧಿಗಳನ್ನು ಹಿಡಿಯಲು ಅಥವಾ ಆ ಬಗ್ಗೆ ವ್ಯವಹರಿಸಲು ಶಕ್ತರಾಗಿರಲಿಲ್ಲ. ಯಾವಾಗ ಕಂದಾಚಾರಿಗಳಲ್ಲಿ ಶಿಸ್ತು ಇಲ್ಲದೇ ಮೇಲಾಧಿಕಾರಿಗಳಿಂದ ಸರಿಯಾದ ಪರಿವೀಕ್ಷಣೆ ಇಲ್ಲದಾಗ ಕೆಲವು ಪ್ರಕರಣಗಳಲ್ಲಿ ಅವರು ಕಾನೂನು ಸುವ್ಯವಸ್ಥೆ ಪರವಾಗಿ ಇಲ್ಲದೇ, ಇಂತಹ ಅಪರಾಧಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡ ಉದಾಹರಣೆಗಳಿವೆ.[೧೦೬] ಆದುದರಿಂದ ಇಂತಹ ಅಪಾಯಕಾರಿ ವರ್ಗದೊಂದಿಗೆ ವ್ಯವಹರಿಸಲು ಅತ್ಯಂತ ಉಪಾಯದಿಂದ ವ್ಯವಹಾರಿಕ ವಿಧಾನಗಳು ಅಗತ್ಯವಿದೆ ಎಂದು ಕಮಿಷನರ್‌ರವರು ಅಭಿಪ್ರಾಯಪಟ್ಟರು. ಡಕಾಯಿತರನ್ನು ಹಂದಿಗಳಂತೆ ಬೇಟೆ ಯಾಡಿದರು. ಆತನು ಭಾರತ ಸರ್ಕಾರಕ್ಕೆ ತಿಳಿಸಿದ್ದೇನೆಂದರೆ, "ಇದೇನು ಅಸಹಜವಾದ ಕ್ರಿಯೆಯಲ್ಲ ಮೈಸೂರು ರಾಜ್ಯದಲ್ಲಿ ಬಹಳ ಕಾಲದಿಂದ ನಡೆದುಕೊಂಡು ಬಂದ ಪದ್ಧತಿ" ಎಂದನು. ಈ ಕೆಲಸಕ್ಕಾಗಿ ಶಿಲ್ಲೇದಾರರನ್ನು ನೇಮಿಸಿ ಅವರಿಗೆ ಉತ್ತಮ ಬೆಂಬಲ ನೀಡಲಾಯಿತು. ಅವರನ್ನು ಡಕಾಯಿತರಿಂದ ರಕ್ಷಿಸುವ ಸಲುವಾಗಿ ನಾಡಿನ ಎಲ್ಲಾ ಕಡೆ ಆಯಾ ಪ್ರದೇಶಗಳಿಗೆ ಅನುಗುಣವಾಗಿ ಶಿಲ್ಲೇದಾರರನ್ನು ಕರ್ತವ್ಯಕ್ಕೆ ನೇಮಿಸಲಾಗಿತ್ತು. ಇದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಳಿಸಬಲ್ಲ ಪಡೆಯಾಗಿತ್ತು. ಇವರು ಡಕಾಯಿತರಿಗೆ ಸಿಂಹಸ್ವಪ್ನವಾಗಿದ್ದರು. 'ಲಂಬಾಣಿ' ಮತ್ತು 'ಕೊರಮರು' ಸುಲಿಗೆ ಮಾಡುವ ಪ್ರವೃತ್ತಿಯವರಾಗಿದ್ದು, ಇತರೆ ಜನಾಂಗಗಳಿಗಿಂತಲೂ ಶಕ್ತಿಶಾಲಿಗಳೂ, ಧೈರ್ಯ ವಂತರೂ ಆಗಿದ್ದು, ಸಾಮಾನ್ಯವಾಗಿ ಆಯುಧಗಳನ್ನು ಹೊಂದಿರು

ತ್ತಿದ್ದರು. ಇಂತಹವರ ವಿರುದ್ಧ ಸಮರ್ಥವಾಗಿ ಹೋರಾಟ ಮಾಡಲಾಗದ ಅಥವಾ ಅವರುಗಳಿಗಿಂತ ಶೀಘ್ರತೆಯಿಂದ ಕೆಲಸ ಮಾಡಲು ಅಸಮರ್ಥರಾದ ಹೆಚ್ಚುವರಿ ಪಡೆಯನ್ನು ಕಳಿಸಲಾಗುವುದಿಲ್ಲವೆಂದು ಕಮಿಷನರ್ ಅಭಿಪ್ರಾಯಪಟ್ಟರು.[೧೦೭]

ಎರಡನೇ ಅಂಶವೆಂದರೆ, ಗ್ರಾಮನಿವಾಸಿಗಳು, ಡಕಾಯಿತರಿಂದ ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಅವರ ಜವಾಬ್ದಾರಿಗಳನ್ನು ಹೆಚ್ಚಿಸಲಾಯಿತು. ಹಾಗೆಂದು ಅಧಿಕಾರಿಗಳ ಜವಾಬ್ದಾರಿಯನ್ನು ಕಡಿಮೆ ಮಾಡಲಿಲ್ಲ. ಡಕಾಯಿತರ ಗುಂಪಿನ ಉಪಟಳ ತಡೆಯಲು ಅಗ್ನಿ ಅಸ್ತ್ರಗಳು (fire arms) ಹಾಗೂ ಇತರ ಆಯುಧಗಳನ್ನು ಹೊಂದಿ, ಜನರು ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ತಮ್ಮ ಜನರನ್ನು ರಕ್ಷಿಸಿಕೊಳ್ಳುವಂತೆ ಮಾಡಲಾಯಿತು. ಎಲ್ಲಿಯವರೆಗೆ ಜನರು ಇಂತಹ ಕೃತ್ಯಗಳನ್ನು ತಡೆಯಲು ಧೈರ್ಯವಾಗಿ ಜವಾಬ್ದಾರಿಯಿಂದ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಡಕಾಯಿತರ ದಾಳಿಯನ್ನು ತಡೆಯುವುದು ದುಸ್ಥರವಾಗಿತ್ತು. ಆದ್ದರಿಂದ ಜನರು ಸರಕಾರಕ್ಕೆ ಮತ್ತು ಪರಸ್ಪರರಿಗೆ ಕೃತಜ್ಞರಾಗಿದ್ದು, ಪ್ರತ್ಯುಪಕಾರ ಮಾಡಬೇಕಿತ್ತು. ಅವರಿಗೆ ನೀಡಿದ ಅಧಿಕಾರವನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಬೇಕಿತ್ತು.[೧೦೮] ಕಮಿಷನರ್‌ರವರು ಡಕಾಯಿತರ ಗುಂಪನ್ನು ತಡೆಯಲು, ಸೆರೆಹಿಡಿಯಲು ಸಹಕರಿಸಿದ ಹಾಗೂ ತಮ್ಮ ಗ್ರಾಮವನ್ನು ಡಕಾಯಿತರಿಂದ ರಕ್ಷಿಸಲು ವಿಶಿಷ್ಟ ಸೇವೆಸಲ್ಲಿಸಿದ ಖಾಸಗಿ ವ್ಯಕ್ತಿಗಳಿಗೆ ಬೆಳ್ಳಿಯ ಕಡಗವನ್ನು ಬಹುಮಾನವಾಗಿ ನೀಡಿದರು.[೧೦೯] ಈ ಎರಡೂ ಉಪಾಯಗಳು ತಕ್ಷಣದ ಕೆಲವು ಪ್ರತಿಫಲವನ್ನು ನೀಡಿದವು. ಆದುದರಿಂದ ೧೮೩೭ ರಲ್ಲಿ ಈ ಕೆಳಗಿನಂತೆ ಸುತ್ತೋಲೆ ಹೊರಡಿಸಲಾಯಿತು.

೧) ಕಳೆದ ಹಲವು ವರ್ಷಗಳಿಗಿಂತಲೂ ಹೆಚ್ಚಾಗಿ ಈ ಪ್ರದೇಶಗಳಲ್ಲಿ ಮುರ್‍ನಾಲ್ಕು ತಿಂಗಳಲ್ಲಿ ಸರಣಿ ಗುಂಪು ಡಕಾಯಿತಿಗಳು ಟಾರ್ಚ್‌ರಾಬರಿಗಳು ನಡೆದವು. ಇಂತಹವುಗಳನ್ನು ತಡೆಯಲು ವಿಫಲವಾಗಿದ್ದು ಈ ವಿಷಯಗಳಲ್ಲಿ ಅತ್ಯಂತ ಆಳವಾದ ಆಸಕ್ತಿಯಿಂದ ಹಲವಾರು ಪರಿಹಾರಗಳನ್ನು ಕಂಡುಕೊಳ್ಳಬೇಕು.

೨) ಜಿಲ್ಲಾ ಅಧಿಕಾರಿಗಳ ಉದಾಸೀನತೆಯು ದಂಡನೀಯವಾಗಿದ್ದು ಈ ಉದಾಸೀನತೆಯಿಂದಾಗಿ ಅಪರಾಧಗಳ ಸಂಖ್ಯೆಯಲ್ಲಿ ಅದರಲ್ಲೂ ಜನರ ಮತ್ತು ಆಸ್ತಿಪಾಸ್ಥಿಗಳ ಮೇಲಿನ ಅಪರಾಧಗಳ ಸಂಖ್ಯೆಯಲ್ಲಿ ಹೆಚ್ಚಿನ ಏರಿಕೆಯಾಯಿತು. ಅಷ್ಟೇ ಅಲ್ಲದೇ ರೈತರು ಮತ್ತು ಸ್ಥಳಿಯರು ತಮ್ಮ ಸ್ವರಕ್ಷಣೆಗಾಗಿ ಇದ್ದ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಕೆ ತೋರಿ ನಿಷ್ಕ್ರೀಯರಾಗಿದ್ದರೆಂದು ದೂರಲಾಯಿತು. ಮುಂಜಾಗರೂಕತೆಯಿಂದ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಪ್ಪಣೆ ಮಾಡಲಾಗಿತ್ತೋ ಅವುಗಳನ್ನು ಮಾಡಲು ಆಲಕ್ಷ್ಯ ತೋರಿದ್ದಾರೆ. ಇದರಿಂದಾಗಿ ಇಬ್ಬರೂ ಸಹ ಹೊಸ ವಿಧಾನಗಳನ್ನು ಅನುಸರಿಸುವ ಅಗತ್ಯತೆ ಇದೆ. ಈ ಹೊಸ ಕ್ರಮಗಳಿಂದ ದುಷ್ಟ ಶಕ್ತಿಗಳ ವಿರುದ್ಧ ಹೋರಾಡುವುದಲ್ಲದೆ ಇದರಿಂದ ಸರಕಾರಕ್ಕೆ ಬಂದ ಕಳಂಕವನ್ನು ದೂರ ಮಾಡುವುದು.

೩) ಈ ಪತ್ರ ಸ್ವೀಕರಿಸಿದ ದಿನದಿಂದ ಸೂಪರಿಂಟೆಂಡೆಂಟ್‌ರವರುಗಳು ಇದನ್ನು ಒಂದು ಸಾಮಾನ್ಯ ಆದೇಶದಂತೆ ಪರಿಗಣಿಸಬೇಕು. ಸೂಪರಿಂಟೆಂಡೆಂಟ್‌ರವರ ಸ್ವಂತ ವಿವೇಚನೆಗೆ ಒಳಪಟ್ಟ ಕೆಲವು ಘಟನೆಗಳ ಹೊರತಾಗಿ ಯಾವುದೇ ತಾಲೂಕು ಅಥವಾ ವಿಭಾಗಗಳಲ್ಲಿ ಗುಂಪು ಡಕಾಯಿತಿ ಅಥವಾ ಟಾರ್ಚ್‌ರಾಬರಿ ನಡೆದರೆ, ಸಂಬಂಧಪಟ್ಟ ಕಿಲ್ಲೇದಾರ, ಅಮಿಲ್‌ದಾರ ಮತ್ತು ಹಳ್ಳಿಯ ಅಧಿಕಾರಿಗಳಿಗೆ ಸೂಪರಿಂಟೆಂಡೆಂಟ್‌ನು ಒಂದು ನಿರ್ಧಿಷ್ಟ ಅವಧಿಯನ್ನು ನೀಡಿ ಆ ಸಮಯದೊಳಗೆ ಆ ಪ್ರಕರಣವನ್ನು ಪತ್ತೆಮಾಡಬೇಕು. ಇಲ್ಲವಾದಲ್ಲಿ ಇವರ ಸಂಬಳದ ಅರ್ಧಭಾಗವನ್ನು ಅಥವಾ ಸರ್ಕಾರದ ಇತರ ಭತ್ಯೆಗಳನ್ನು ದಂಡವಾಗಿ ಕಟ್ಟಬೇಕೆಂದು ಎಚ್ಚರಿಕೆ ನೀಡಬೇಕು. ಅದೇ ತಾಲೂಕಿನಲ್ಲಿ ಎರಡನೇ ಭಾರಿ ಇಂತಹ ಅಪರಾಧ ಸಂಭವಿಸಿ ಅದನ್ನು ಪತ್ತೆ ಮಾಡದಿದ್ದರೆ ಈ ಅಧಿಕಾರಿಗಳ ತಿಂಗಳ ಪೂರ್ತಿ ಸಂಬಳವನ್ನು ದಂಡವಾಗಿ ಪಡೆಯಬೇಕು. ಅಮಿಲ್ದಾರರಿಂದ ಹಿಡಿದು ತಳಾರಿಯವರೆಗೆ ತಾಲೂಕಿನ ಎಲ್ಲಾ ಪೋಲೀಸರನ್ನು ಕರ್ತವ್ಯದಿಂದ

೪) ವಜಾಗೊಳಿಸಬೇಕು.[೧೧೦]

೫) ಮೇಲಿನ ಪ್ರಕರಣಗಳಲ್ಲಿ ಕಿಲ್ಲೇದಾರರನ್ನು ಅಮಾನತ್ತಿನಲ್ಲಿ ಇಟ್ಟು ಘಟನೆಯ ಪರಿಣಾಮಗಳನ್ನು ಗಮನಿಸಿ ಆತನ ವಜಾಗೊಳಿಸುವ ಆದೇಶವನ್ನು ಹುಜೂರ್‌ರವರು ಮಾಡಬೇಕು.

೬) ಇದೇ ರೀತಿ ಹಳ್ಳಿ ಮತ್ತು ಪಟ್ಟಣಗಳ ನಿವಾಸಿಗಳೂ ಎಚ್ಚರಿಕೆ ನೀಡಬೇಕು. ಒಂದು ವೇಳೆ ಗುಂಪು ಡಕಾಯಿತಿ ಅಥವಾ ಟಾರ್ಚ್ ರಾಬರಿ ನಡೆಯುವ ಸಂದರ್ಭದಲ್ಲಿ ಸಹಾಯಕ್ಕಾಗಿ ಮೊರೆ ಇಟ್ಟರೂ ಸಹಕರಿಸದೇ ಡಕಾಯಿತರಿಗೆ ಸಾಕಷ್ಟು ಪ್ರತಿರೋಧವನ್ನು ವ್ಯಕ್ತಪಡಿಸಿಲ್ಲವೆಂದು ಮುಂದೆ ಡಕಾಯಿತರನ್ನು ಬಂಧಿಸಿದಾಗ ತಿಳಿದುಬಂದರೆ, ವಿಭಾಗದ ಹುಜೂರನು ಇಡೀ ಹಳ್ಳಿಯನ್ನು ಪ್ರಕರಣದಲ್ಲಿ ಉಂಟಾದ ನಷ್ಟಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಮತ್ತು ಪ್ರತೀ ಘಟನೆ ನಡೆದ ಸಂದರ್ಭದಲ್ಲಿ ಈ ಪದ್ಧತಿಯನ್ನು ನವೀಕರಿಸಬೇಕು. ಒಂದು ವೇಳೆ ಸೂಪರಿಂಟೆಂಡೆಂಟ್‌ನಿಗೆ ವಿಚಾರಣೆ ನಡೆಸುವಾಗ ಘಟನೆ ನಡೆದ ಸಂದರ್ಭಗಳ ಆದಾರದ ಮೇಲೆ ಅವರನ್ನು ಕ್ಷಮಿಸುವುದು ನ್ಯಾಯಬದ್ಧ ಎನಿಸಿದರೆ ಮಾತ್ರ ಕ್ಷಮಿಸಬಹುದು. ಇಲ್ಲವಾದರೆ ಅವರನ್ನು ಜಮಾಬ್ದಾರರನ್ನಾಗಿ ಮಾಡಬೇಕು.[೧೧೧]

೧೮೫೮ ರಲ್ಲಿ ಈ ಸುತ್ತೋಲೆ ಬಗ್ಗೆ ದೀರ್ಘ ವಿಶ್ಲೇಷಣೆ ಮಾಡಲಾಯಿತು. ಈ ಮೇಲಿನ ವಿಷಯಗಳು ಎಲ್ಲಾ ಡಕಾಯತಿ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ತಿಳಿಸಲಾಯಿತು. ಸಾರ್ವಜನಿಕ ಸೇವಕರಿಗೆ (ಲೋಕ ನೌಕರ) ಹಾಗೂ ಇತರರಿಗೆ ಶಿಕ್ಷಿಸುವ ಉದ್ದೇಶದೊಂದಿಗೆ ಅದನ್ನು ಜಾರಿಗೊಳಿಸುವ, ತೀರ್ಮಾನಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟ್‌ರವರಿಗೆ ನೀಡಲಾಯಿತು. ಇದು ಜನರ ಮನಸ್ಸಿನಲ್ಲಿ ಪರಿಣಾಮ ಬೀರಿ ಇಂತಹ ಒಂದು ಅಧಿಕಾರ ಸೂಪರಿಂಟೆಂಡೆಂಟ್‌ನಿಗೆ ಇದೆ ಎಂಬ ಜ್ಞಾನ ಅವರಲ್ಲಿ ಮೂಡಿತು. ಮತ್ತು ಇಂತಹ ಶಿಕ್ಷೆಯನ್ನು ಸರಿಯಾದ ಸಂದರ್ಭಗಳಲ್ಲಿ ಜನರಿಗೆ ಸೂಕ್ತ ರಕ್ಷಣೆ ನೀಡುವ ಉದ್ದೇಶದಿಂದ ನೀಡಲಾಗುತ್ತಿದೆ ಎಂದೂ, ಹಾಗೂ ಅಂತಹ ಶಿಕ್ಷೆಗಳನ್ನು ಪದೇ ಪದೇ ನೀಡದಂತೆ ತಡೆದು ಅಗತ್ಯವಿದ್ದಾಗ ಮಾತ್ರ ನೀಡಬೇಕೆಂದು ವಿಶ್ಲೇಷಿಸುವುದರೊಂದಿಗೆ ಈ ನಿಯಮಗಳ ಪರಿಪಾಲನೆ (ಇದು ಪ್ರಾಚೀನ ಕಾಲದ ಪದ್ಧತಿಯಾಗಿತ್ತು) ಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಲಾಗುತ್ತಿತ್ತು. ಶಿಕ್ಷೆ ನೀಡುವುದರಿಂದ ನಡೆದ ಅಪರಾಧಗಳನ್ನೇ ಮುಚ್ಚಿ ಹಾಕುವುದು ಹಾಗೂ ಮುಗ್ದರಿಗೆ ಶಿಕ್ಷೆಯಾಗುವ ಸಾಧ್ಯತೆಗಳನ್ನು ತಡೆಯಲು ಸೂಕ್ಷ್ಮವಾಗಿ ಗಮನಿಸಲಾಗುತ್ತಿತ್ತು.[೧೧೨] ಅಲೆಮಾರಿ ಜನಾಂಗಗಳನ್ನು ನಿರ್ವಹಿಸುವ ವಿಧಾನಗಳನ್ನು ಮದ್ರಾಸ್ ಸರಕಾರದಿಂದ ಅನುಕರಿಸ ಲಾಯಿತು. ಅಲೆಮಾರಿಗಳನ್ನು ದಸ್ತಗಿರಿ ಮಾಡಿ ಅವರುಗಳಿಂದ ಸದ್ವರ್ತನೆಗಾಗಿ ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳುವವರೆಗೆ ಅವರನ್ನು ಅಮಿಲ್‌ದಾರನು ತನ್ನ ಕಸ್ಟಡಿಯಲ್ಲಿ ಇಟ್ಟುಕೊಳ್ಳುತ್ತಿದ್ದನು. ಆ ಮುಚ್ಚಳಿಕೆಯಲ್ಲಿ ಅಲೆಮಾರಿಗಳು ತಮ್ಮ ಜೀವನಾಧಾಯದ ಬಗ್ಗೆ ತಿಳಿಸಬೇಕಿತ್ತು. ೨೦೦ ರೂಪಾಯಿಗಳಿಗೆ ಮೀರದ ಮತ್ತು ೧೨ ತಿಂಗಳ ಅವಧಿಯನ್ನು ಮೀರದ ಬಂಧಪತ್ರವನ್ನು ಅಲೆಮಾರಿಗಳು ಬರೆದುಕೊಡಬೇಕಿತ್ತು. ಈ ರೀತಿ ಬಂಧಪತ್ರ ಬರೆಸಿಕೊಳ್ಳುವ ಸಂದರ್ಭದಲ್ಲಿ ವ್ಯಕ್ತಿಯ ಸ್ವಾತಂತ್ರ್ಯದ ಬಗ್ಗೆಯೂ ಸಹ ಗಮನಹರಿಸಬೇಕಾಗಿತ್ತು.[೧೧೩]

ಗುಂಪು ಡಕಾಯತಿಗಳ ಪರೀಕ್ಷಿಸಲು ಎಲ್ಲಾ ವಯಸ್ಸಿನ ಕೊರಮರ ಗಂಡಸರು, ಹೆಂಗಸರ ಹೆಸರನ್ನು ನೊಂದಾಯಿಸಬೇಕು. ಅವರು ಖಾಯಂ ಆಗಿ ಅಥವಾ ಅಲೆಮಾರಿಗಳಾಗಿ ಎಲ್ಲಿ ನೆಲೆಸಿರುವರೋ ಅಲ್ಲಿ ಅವರ ಹೆಸರು ನೊಂದಾಯಿಸಬೇಕು.[೧೧೪] ಮತ್ತು ಲಂಬಾಣಿ ನಾಯಕರಿಂದ ಅಥವಾ ಮುಖ್ಯಸ್ಥರಿಂದ ಮತ್ತು ಕೊರಮ ನಾಯಕರಿಂದ ಕಾನೂನು ಸುವ್ಯವಸ್ಥೆ ಪಾಲನೆ ಮಾಡುವುದಾಗಿ ಮತ್ತು ಸರ್ಕಾರದೊಂದಿಗೆ ಸಹಕರಿಸುವುದಾಗಿ ಅವರಿಂದ ಭದ್ರತಾ ಪತ್ರ ಬರೆಯಿಸಿಕೊಳ್ಳಬೇಕು. "ಕಳ್ಳತನ, ವಂಚನೆ ಠಕ್ಕವೃತ್ತಿ ಮಾಡುವವರು ಸ್ವಲ್ಪ ಪ್ರಮಾಣದಲ್ಲಿ ಮೈಸೂರಿನಲ್ಲಿ, ಹಲವಾರು ಕಳ್ಳರು ಬೆಂಗಳೂರು ಹಾಗೂ ನಗರಗಳಲ್ಲಿ ವಾಸಿಸುತ್ತಿದ್ದರು"[೧೧೫] ಸರಕಾರದ ಕಡತದಲ್ಲಿ ಕೇವಲ ಎರಡು ಪ್ರಕರಣಗಳು ದಾಖಲಾಗಿ

ದ್ದವು.[೧೧೬] ಆದಾಗ್ಯೂ ಅದರಲ್ಲಿಯೂ ಇರುವ ಕಳ್ಳರೆಲ್ಲರೂ ನಿಜವಾದ ಕಳ್ಳರೆಂದು ಪರ್ಯಾಲೋಚಿಸಿರಲಿಲ್ಲ. ಡೋಬ್ಸ್‌ರವರೊಬ್ಬರೇ ರಾಜ್ಯವು ಕಳ್ಳರ ಪೀಡನೆಗೆ ಒಳಗಾಗಿತ್ತು ಎಂದು ಅಭಿಪ್ರಾಯಪಡುತ್ತಾರೆ.[೧೧೭] ಡೋಬ್ಸ್‌ನು ಹೇಳಿದಂತೆ ಮೈಸೂರು ಕಳ್ಳರ ಪೀಡನೆಗೆ ಒಳಗಾಗಿದೆ ಎಂಬುದನ್ನು ಸರಕಾರವೂ ಭಾವಿಸಿತು. ಆದ್ದರಿಂದ 'ಕರ್ನಲ್ ಸ್ಲೀಮನ್'ನ ಕಾರ್ಯವ್ಯಾಪ್ತಿಯನ್ನು ಇಲ್ಲಿಯವರೆಗೂ ವಿಸ್ತರಿಸಬೇಕೆಂದು ಸರಕಾರವು ಅಭಿಪ್ರಾಯಪಟ್ಟಿತು. ಆದರೆ ಕಬ್ಬನ್ ಈ ಬಗ್ಗೆ ಬಿನ್ನಾಭಿಪ್ರಾಯ ಹೊಂದಿದ್ದು, ಕಳ್ಳರೊಂದಿಗೆ ಬಂದು ಸಾಮಾನ್ಯವಾದ ವ್ಯವಹಾರ ಕುದುರಿಸಲು ವ್ಯವಸ್ಥೆ ಮಾಡಿದನು. ಅವನು ಸ್ವಲ್ಪ ಸಮಯ ಹಾಗೆ ಮಾಡಲು ಅನುಮತಿ ನೀಡಿದ್ದನ್ನು ೧೮೩೬ ರಲ್ಲಿ ಕ್ಯಾಪ್ಟನ್ ಇಲ್‌ವಾಲ್‌ನನ್ನು ಮೈಸೂರಿನಲ್ಲಿ ಕಳ್ಳತನಗಳಿಗೆ ಸಂಬಂಧಿಸಿದಂತೆ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು.[೧೧೮] ಈ ವ್ಯವಸ್ಥೆಯು ೧೮೫೨ರವರೆಗೆ ಮುಂದುವರೆಯಿತು. ಅಲ್ಲಿ ಅಸ್ಥಿತ್ವದಲ್ಲಿರಬಹುದಾದ ಎಲ್ಲಾ ಕಳ್ಳ ವ್ಯಕ್ತಿಗಳನ್ನು ಕೊನೆಗಾಣಿಸಬೇಕು ಮತ್ತು ಕೊನೆಪಕ್ಷ ಎಲ್ಲಾ ಕಳ್ಳರನ್ನು ರಾಜ್ಯದಿಂದ ಹೊರ ಹಾಕಬೇಕೆಂದು ಅಭಿಪ್ರಾಯಪಡಲಾಯಿತು. .[೧೧೯]

ಮದ್ರಾಸ್ ಸರಕಾರವು ಅಲೆಮಾರಿ ಗುಂಪುಗಳ ಜೊತೆ ವ್ಯವಹರಿಸುತ್ತಿದ್ದ ರೀತಿ ನೀತಿಗಳನ್ನು ಇಲ್ಲಿಯೂ ಅನುಸರಿಸಲಾಯಿತು. ಇಂತಹ ಗುಂಪುಗಳ ಜನರನ್ನು ದಸ್ತಗಿರಿ ಮಾಡಿ ಅವರು ಒಳ್ಳೆಯ ನಡತೆಯ ಬಗ್ಗೆ ಹಾಗೂ ತಮ್ಮ ಜೀವನಾದರದ ದುಡಿಮೆ ಬಗ್ಗೆ ಬಂಧಪತ್ರ (ಮುಚ್ಚಳಿಕೆ) ನೀಡುವವರೆಗೆ ಬಂಧನದಲ್ಲಿ ಇಡಲಾಗುತ್ತಿತ್ತು. ಈ ಮುಚ್ಚಳಿಕೆಯು ೨೦೦ ರೂಪಾಯಿ ನಗದು ಅಥವಾ ಹನ್ನೆರಡು ತಿಂಗಳ ಕಾಲಾವಧಿಯನ್ನು ಮೀರುವಂತಿರಲಿಲ್ಲ. ಈ ರೀತಿಯ ಪ್ರಕರಣದಲ್ಲಿ ವ್ಯವಹರಿಸುವಾಗ ಪಾಲಿಸಬೇಕಾದ ಕೆಲವು ನಿಯಮಗಳಿದ್ದವು. ಅವುಗಳೆಂದರೆ, ವ್ಯಕ್ತಿಯೊಬ್ಬನ ಸ್ವಾತಂತ್ರ್ಯಕ್ಕೆ ದಕ್ಕೆಬರದಂತೆ, ಅನಗತ್ಯವಾಗಿ ಬಂಧನದಲ್ಲಿಡದಂತೆ ಅತ್ಯಂತ ಜಾಗರೂಕತೆಯಿಂದ ವರ್ತಿಸಬೇಕು. ಅಥವಾ ಪೊಲೀಸರು ಅಪರಾಧಿಗಳನ್ನು ಹಿಡಿಯುವ ನೆಪದಲ್ಲಿ ದಬ್ಬಾಳಿಕೆ ನಡೆಸಿದ್ದಾರೆ ಎಂದು ಪೊಲೀಸರ ಮೇಲೂ ಆರೋಪ ಬರಬಾರದು. ಇಂತಹ ಪ್ರಕರಣಗಳನ್ನು ನಿಯಂತ್ರಿಸಲು ಪ್ರತೀ ಸಂದರ್ಭಗಳಲ್ಲೂ ಸೂಪರಿಂಟೆಂಡೆಂಟ್‌ನು ಅಥವಾ ಅವನ ಸಹಾಯಕನು ಹಾಜರಿದ್ದು ಯಾವ ರೀತಿ ಶಿಕ್ಷಿಸಬೇಕು ಎಂದು ತೀರ್ಮಾನಿಸಬೇಕು. ಮತ್ತು ಈ ಬಗ್ಗೆ ಕಮಿನಷರ್‌ರವರಿಗೆ ವರದಿ ಸಲ್ಲಿಸಬೇಕು.[೧೨೦]

೧೮೫೬ ರಲ್ಲಿ ಇರಾನಿಯರು ಅಥವಾ ಕಾಬೂಲಿಗಳು ಅಥವಾ ಕಂದಹಾರಿಗಳೆಂದು ಕರೆಯಲ್ಪಡುತ್ತಿದ್ದ ಜನರು ಮೈಸೂರು ಮಾರ್ಗವಾಗಿ ಸಂಚರಿಸುವುದನ್ನು ಜನರು ಗುರುತಿಸಿದರು. ಬೆಂಗಳೂರು ಸೂಪರಿಂಟೆಂಡೆಂಟ್‌ರವರು ಪ್ರಾಂತ್ಯದೊಳಕ್ಕೆ ಹೋಗಲು ಅವಕಾಶ ಮಾಡಿಕೊಟ್ಟರು. ಇವರು ಹೋದ ಕೆಲವು ದಿನಗಳ ನಂತರ ಚಿಂಗಲ್‌ಪೇಟ್‌ನಲ್ಲಿ ಗಲಬೆ ನಡೆಯಿತು. ಮತ್ತು ಇರಾನಿಯನ್ನರ ದಸ್ತಗಿರಿಯೂ ಆಯಿತು. ಇದರ ನೈತಿಕತೆಯ ಬಗ್ಗೆ ಕಬ್ಬನನು ಭಾರತ ಸರ್ಕಾರದ ಗಮನ ಸೆಳೆದನು. ಇಂತಹ ಅಲೆಮಾರಿಗಳನ್ನು ನಿಯಂತ್ರಿಸಲು ಅಸ್ಥಿತ್ವದಲ್ಲಿ ಇರುವ ಯಾವುದೇ ಕಾನೂನುಗಳು ಸಹಕಾರಿಯಾಗಿಲ್ಲವೆಂತಲೂ ಅವರನ್ನು ನಿಯಂತ್ರಿಸಲು ಇಂತಹ ತಂತ್ರಗಳು ಅತ್ಯಂತ ಪ್ರಮುಖವಾಗಿರ ಬೇಕೆಂದು ತಿಳಿಸಿದ.[೧೨೧]

ಪೊಲೀಸ್ ಠಾಣೆಯ ಆಡಳಿತದ ವಿಷಯಗಳಲ್ಲಿ ಅವರೊಳಗೆ ಎರಡು ಸಮಸ್ಯೆಗಳು ಇದ್ದವು. ಅಮಿಲ್‌ದಾರ ಮತ್ತು ಕಿಲ್ಲೇದಾರರ ನಡುವೆ ಅವರ ಕೆಲಸದಲ್ಲಿ ಪರಸ್ಪರ ಹೊಂದಾಣಿಕೆ ತಿಳುವಳಿಕೆಯ ಕೊರತೆಇದ್ದು ಮತ್ತು ಕಿಲ್ಲೇದಾರರಿಗಿಂತ ಕೆಳಹಂತದ ಪೀವನ್‌ಗಳಲ್ಲಿ ಅನಕ್ಷರತೆ ಇತ್ತು.[೧೨೨] ಇದರಲ್ಲಿ ಮೊದಲಿನ ಸಮಸ್ಯೆಗೆ ಪರಿಹಾರವು ಅತ್ಯಂತ ಕಠಿಣವಾಗಿತ್ತು. ೧೮೩೫ ರ ಎಪ್ರೀಲ್‌ನಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಲಾಯಿತು. ಅದರಲ್ಲಿ "ಅಮಲ್ದಾರನಿಗಿರುವಂತಹ ಅಧಿಕಾರಗಳನ್ನು ಕಿಲ್ಲೇದಾರನಿಗೆ ಸ್ವತಂತ್ರವಾಗಿ ಇಲ್ಲವೆಂತಲೂ, ಮತ್ತು ಅಮಿಲ್ದಾರನ ಆದೇಶಗಳನ್ನು ಉಲ್ಲಂಘಿಸುವಂತಹ ಯಾವುದೇ ಕೆಲಸವನ್ನು ಮಾಡಿದ್ದರೆ ಕಿಲ್ಲೇದಾರನನ್ನು ತಕ್ಷಣದಿಂದ ಕೆಲಸದಿಂದ ವಜಾಗೊಳಿಸಬಹುದು.[೧೨೩] ಎಂದು ತಿಳಿಸಲಾಯಿತು. ಈ ಬಗ್ಗೆ ಮೈಸೂರು ಮಹಾರಾಜರ ಹೋಂ ಬ್ರಾಂಚ್ ಕಲೆಕ್ಷನ್ ದಾಖಲೆಗಳು ಈ ರೀತಿ ಹೇಳಿವೆ. "

ಪೊಲೀಸ್ ಆಡಳಿತದಲ್ಲಿ ಮುಖ್ಯವಾಗಿ ಎರಡು ಸಮಸ್ಯೆಗಳು ತಲೆದೂರಿದವು. ಮೊದಲನೆಯದು ಅಮಿಲ್‌ದಾರರು ಮತ್ತು ಕಿಲ್ಲೇದಾರರುಗಳ ನಡುವೆ ಕೆಲಸ ನಿರ್ವಹಣೆಯಲ್ಲಿ ಉತ್ತಮ ಬಾಂಧವ್ಯದ ಕೊರತೆಯು ಇತ್ತು. ಮತ್ತೊಂದು ಸಮಸ್ಯೆಯೆಂದರೆ ಕಿಲ್ಲೇದಾರರುಗಳಿಂತಲೂ ಕೆಳದರ್ಜೆಯ ಪೊಲೀಸ್ ಪೀವನ್‌ಗಳು ಅನಕ್ಷರಸ್ಥರಾಗಿದ್ದರು. ಮೊದಲನೆಯ ಸಮಸ್ಯೆಗೆ ಪರಿಹಾರವನ್ನು ಹುಡುಕುವುದು ಸ್ವಲ್ಪ ಕಠಿಣವಾಗಿತ್ತು. ಅದಕ್ಕಾಗಿ ೧೮೩೫ ರ ಎಪ್ರೀಲ್‌ನಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಲಾಯಿತು. ಇದರಲ್ಲಿ ಅತ್ಯಂತ ಸ್ಪಷ್ಟವಾಗಿ ತಿಳಿಸಿದ ಅಂಶಗಳೆಂದರೆ, 'ಅಮಿಲ್‌ದಾರ'ನ ಆದೇಶವಿಲ್ಲದೇ 'ಕಿಲ್ಲೇದಾರ'ರು ಸ್ವತಂತ್ರವಾಗಿ ಯಾವುದೇ ಕೆಲಸವನ್ನು ಮಾಡುವಂತಿಲ್ಲ. ಒಂದು ವೇಳೆ 'ಕಿಲ್ಲೇದಾರ'ನು 'ಅಮಿಲ್‌ದಾರ'ನ ಆದೇಶಗಳನ್ನು ಉಲ್ಲಂಘಿಸಿದಲ್ಲಿ ಆತನನ್ನು ತಕ್ಷಣದಿಂದ ಕೆಲಸದಿಂದ ವಜಾಮಾಡಲಾಗುತ್ತಿತ್ತು."[೧೨೪] ಹಲವಾರು ಜನ ಕಿಲ್ಲೇದಾರರನ್ನು ಅವರುಗಳು ಅಮಿಲ್ದಾರರೊಂದಿಗೆ ವೈಮನಸ್ಸು ಹೊಂದಿದ್ದರೆಂಬ ಕಾರಣಕ್ಕಾಗಿ ಕೆಲಸದಿಂದ ತೆಗೆದು ಹಾಕಲಾಯಿತು. ಅನಿಷ್ಟಗಳ ನಿವಾರಣೆಗೆ ಪ್ರಯತ್ನವನ್ನು ಮುಂದುವರಿಸಲಾಯಿತು.[೧೨೫] ಆದರೂ ಸಹ 'ಕಿಲ್ಲೇದಾರ'ರ ಈ ಅಶಿಸ್ತು ಮುಂದುವರಿದುಕೊಂಡು ಹೋಯಿತು. ವಿಭಾಗದ ಪೊಲೀಸ್ ಸೂಪರಿಂಟೆಂಡೆಂಟ್‌ನಿಗೆ ಅಶಿಸ್ತನ್ನು ಪ್ರದರ್ಶಿಸಿದ ಪೊಲೀಸರನ್ನು ಶಿಕ್ಷಿಸುವುದನ್ನು ಹೊರತುಪಡಿಸಿ ಯಾವುದೇ ವಿಶೇಷ ಅಧಿಕಾರಗಳು ಇರಲಿಲ್ಲ. ಕಮಿಷನರ್‌ರವರು ಭಕ್ಷಿಯ ಸಹಕಾರದೊಂದಿಗೆ ಉಳಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ಈ ಅಧಿಕಾರ ಕೇಂದ್ರೀಕರಣ ವ್ಯವಸ್ಥೆಯು ಯೋಗ್ಯವಾದುದಲ್ಲವೆಂದು ಮಾರ್ಕ್ ಕಬ್ಬನ್‌ನಿಗೆ ಅನ್ನಿಸಿತು. ಆದುದರಿಂದಾಗಿ ೧೮೪೧ ರಲ್ಲಿ ಮಾರ್ಕ್ ಕಬ್ಬನ್‌ನು 'ಕಂದಾಚಾರ' ಭಕ್ಷಿ ಹುದ್ದೆಯನ್ನು ರದ್ದುಗೊಳಿಸಿದನು. ತನ್ನ ಬಳಿಯಲ್ಲಿದ್ದ ಕಿಲ್ಲೇದಾರರು ಮತ್ತು ಅವರ ಕೈಕೆಳಗಿನ ಅಧಿಕಾರಿಗಳನ್ನು ನೇಮಿಸುವ, ಪದೋನ್ನತಿ ನೀಡುವ ಮತ್ತು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ೧೮೪೪ ರಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್‌ನಿಗೆ ಹಸ್ತಾಂತರಿಸಿದನು.[೧೨೬] ಕಮಿಷನರ್‌ಗಳಿಂತಲೂ ಪೊಲೀಸ್ ಸೂಪರಿಂಟೆಂಡೆಂಟ್‌ರವರು ಜಿಲ್ಲಾ ಪೊಲೀಸರನ್ನು ನಿಯಂತ್ರಿಸುವುದರಲ್ಲಿ ಉತ್ತಮ ಕಾರ್ಯ ನಿರ್ವಹಿಸಿದರು. ಈ ವ್ಯವಸ್ಥೆಯಿಂದಾಗಿ ಪೊಲೀಸ್ ಅಧಿಕಾರಿಗಳ ನಡುವೆ ಇದ್ದ ವ್ಯಾಜ್ಯವು ಕೊನೆಗೊಂಡಿತು.

೧೮೪೧ ರಲ್ಲಿ ಮಾರ್ಕ್ ಕಬ್ಬನನು 'ಕಂದಾಚಾರ ಭಕ್ಷಿ'ಯ ಹುದ್ದೆಯನ್ನು ರದ್ದುಗೊಳಿಸಿದನು. ಈತನ ಅಧಿಕಾರಗಳನ್ನು ಪ್ರತೀ ತಾಲೂಕಿನ ಅಮಿಲ್ದಾರರಿಗೆ ಹಸ್ತಾಂತರಿಸಲಾಯಿತು. ಇದು ಸಾಕಷ್ಟು ಪರಿಣಾಮಕಾರಿ ಯಾಯಿತು. ೧೮೪೪ ರಲ್ಲಿ ಕಬ್ಬನನು ತನಗೆ ಸೇರಿದ್ದ ಅಂದರೆ ಕಮಿಷನರ್‌ಗೆ ಸೇರಿದ್ದ ಕಿಲ್ಲೇದಾರರ ನೇಮಕಾತಿ, ಪದೋನ್ನತಿ ಮತ್ತು ವಜಾ ಮಾಡುವ ಅಧಿಕಾರವನ್ನು ಸೂಪರಿಂಟೆಂಡೆಂಟ್‌ಗೆ ವರ್ಗಾಯಿಸಿದನು.[೧೨೭] ಆದರೆ ಅಮಿಲ್‌ದಾರರು ಮತ್ತು ಕಿಲ್ಲೇದಾರರೊಂದಿಗೆ ವೈಯಕ್ತಿಕ ಸಂಪರ್ಕದಲ್ಲಿದ್ದನು. ಇವರಿಬ್ಬರು ಜಿಲ್ಲೆಯನ್ನು ಕಮಿಷನರ್ ರವರಿಗಿಂತ ಉತ್ತಮವಾಗಿ ನಿಯಂತ್ರಿಸಿದರು. ಇದರಿಂದಾಗಿ ಈ ಇಬ್ಬರು ಅಧಿಕಾರಿಗಳ ನಡುವೆ ನಡೆಯುತ್ತಿದ್ದ ಕೊನೆಯೇ ಇಲ್ಲದ ಕ್ಷುಲ್ಲಕ ಜಗಳಗಳಿಗೆ ಅಂತ್ಯ ಹಾಕಲಾಯಿತು.

ಎರಡನೇ ಸಮಸ್ಯೆಯು ಅತ್ಯಂತ ಗಂಭೀರವೂ, ಸಂಕೀರ್ಣವೂ ಆಗಿತ್ತು. ಪೊಲೀಸ್ ಅಪರಾಧ ವರದಿಗಳು, ಶಂಕಿತ ವ್ಯಕ್ತಿಗಳು, ಕಳೆದುಕೊಂಡ ವಸ್ತುಗಳ ವಿವರ, ಸಮಯ, ಘಟನೆ ನಡೆದ ಸ್ಥಳ ಇಂತಹ ಯಾವುದೇ ವಿವರಣೆಗಳಿಲ್ಲದೇ ಬರುತ್ತಿದ್ದವು. ಹೆದ್ದಾರಿ ಡಕಾಯತಿ ಮಾಡುವವರು ಕಡಿಮೆ ಬೆಲೆಗೆ ಪೀವನ್‌ಗಳನ್ನು ಖರೀದಿ ಸುತ್ತಿದ್ದರು. ಈ ಪೇದೆಗಳ ಗುಣಮಟ್ಟ ಅತ್ಯಂತ ಕಳಪೆಯಾಗಿತ್ತು. ೧೮೩೮ ರಲ್ಲಿ ಇವರ ಸಂಬಳವನ್ನು ಪರಿಷ್ಕರಿಸುವ ಪ್ರಸ್ತಾವನೆ ಮಾಡಲಾಯಿತು. ಆದರೆ ಇದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಈ ಎಲ್ಲಾ ಸಂಕಷ್ಟಗಳ ನಡುವೆಯೂ ಕಬ್ಬನನು ತನ್ನ ಆಡಳಿತದ ಕೊನೆಯಲ್ಲಿ "ಸೂಪರಿಂಟೆಂಡೆಂಟ್‌ರವರುಗಳ ಪುನರ್ ಸಂಘಟನೆ ಅಗತ್ಯವಿಲ್ಲವೆಂತಲೂ, ಈಗಿನ ವ್ಯವಸ್ಥೆ

ಯನ್ನೇ ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿದರೆ ಅದು ಈ ದೇಶದ ಅಗತ್ಯತೆಗೆ ಪರಿಪೂರ್ಣವಾಗಿ ಹೊಂದಾಣಿಕೆಯಾಗುತ್ತದೆ ಈ ಅಭಿಪ್ರಾಯವು ನ್ಯಾಯಸಮ್ಮತವಾದುದೆಂದು ನಾನು ಪೂರ್ಣವಾಗಿ ಒಪ್ಪುತ್ತೇನೆ" ಎಂದು ಬರೆಯುತ್ತಾನೆ.[೧೨೮]

ಅಮಿಲ್‌ದಾರನು ಈ ಕೆಳಗಿನ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನು.

೧೮೧೭ರ ಬಂಗಾಳದ XX ನೇ ರೆಗ್ಯುಲೇಶನ್ ಕಾಯ್ದೆಯು ಪೊಲೀಸ್ ಇಲಾಖೆಗೆ ಅನ್ವಯವಾಗುತ್ತಿತ್ತು. ಇದರಲ್ಲಿ ಸಿವಿಲ್ ವ್ಯಾಜ್ಯಗಳು, ಅಮಲ್ದಾರರ ಕರ್ತವ್ಯಗಳು ಮತ್ತು ಪಂಚಾಯತುಗಳ ಬಗ್ಗೆ ವಿವರಿಸಲಾಯಿತು. ಕಂದಾಯ ಸಂಗ್ರಹಣೆಯ ಜವಾಬ್ಧಾರಿಯನ್ನು "ಪಟೇಲ" ಮತ್ತು "ಶಾನುಭೋಗ" ರಿಗೆ ನೀಡಲಾಯಿತು.[೧೨೯]

೧) 'ಕಂದಾಚಾರ' ಪೀವನ್‌ಗಳ ಹಕ್ಕುಗಳನ್ನು ಸೌಕರ್ಯಗಳನ್ನು ರಕ್ಷಿಸುವುದು. ೨) ತನ್ನ ಕೈಕೆಳಗಿನ ಅಧಿಕಾರಿಗಳ ಕೆಲಸಗಳನ್ನು ನಿಯಂತ್ರಿಸುವುದು .೩) 'ಕಂದಾಚಾರ' ಪೀವನ್‌ಗಳ ವಿರುದ್ಧ ಬಂದ ದೂರುಗಳ ತನಿಖೆ ನಡೆಸುವುದು. ೪) ಪ್ರತಿಯೊಬ್ಬ ಅಧಿಕಾರಿ ಮತ್ತು ಪೀವನ್‌ಗಳಿಗೆ ಕಾಲಕಾಲಕ್ಕೆ ಸಂಬಳ ನೀಡುವುದು ಮತ್ತು ಈ ಬಗ್ಗೆ ಕಮಿಷನರ್‌ರವರಿಗೆ ಲೆಕ್ಕ ನೀಡುವುದು. ೫) ಕಂದಾಚಾರ ಪೀವನ್‌ಗಳಿಗೆ ಎರಡು ದಿನಗಳಿಗೆ ಮೀರದಂತೆ ರಜೆ ನೀಡುವುದು. ೬) 'ಕಂದಾಚಾರ' ಪೀವನ್‌ಗಳನ್ನು ಸರದಿಯ ಮೇಲೆ ಈ ಕೆಳಗ್ಗಿನ ಕೆಲಸ ಮಾಡಲು ವರ್ಗಾವಣೆ ಮಾಡಲಾಗುತ್ತಿತ್ತು. ಭೂಕಂದಾಯ ವಸೂಲಿಗೆ ನೆರವು ನೀಡಲು ಅಂದರೆ ಪ್ರತೀ ಒಂದು ಸಾವಿರ 'ಪಗೋಡ' ಭೂಕಂದಾಯ ವಸೂಲಿಯಾಗಬೇಕಾದಲ್ಲಿಗೆ ತಲಾ ಇಬ್ಬರು ಪೀವನ್‌ಗಳ ಸರಾಸರಿಯಲ್ಲಿ ಸಿಬ್ಬಂದಿಗಳನ್ನು ನೇಮಿಸಲಾಗುತ್ತಿತ್ತು. ಕಂದಾಯ ಇಲಾಖೆಯಲ್ಲಿ ಪ್ರತಿಯೊಬ್ಬ ಪೀವನ್‌ಗಳು ಏಕಕಾಲಕ್ಕೆ ಮೂರು ತಿಂಗಳಿಗಿಂತ ಅಧಿಕವಾಗಿಯಾಗಲೀ ಮತ್ತು ಒಂದು ವರ್ಷದಲ್ಲಿ ಆರು ತಿಂಗಳಿಗಿಂತ ಹೆಚ್ಚಿಗೆಯಾಗಲಿ ಕೆಲಸ ಮಾಡುವಂತಿರಲಿಲ್ಲ. ಈ ಬಗ್ಗೆ ಅಮಿಲ್ದಾರ ಗಮನಹರಿಸಬೇಕಿತ್ತು. ೭) ನಡೆದ ಘಟನೆಗಳ ಬಗ್ಗೆ ಸೂಪರಿಂಟೆಂಡೆಂಟ್‌ರಿಗೆ ವಿಷಯ ಸಂವಹನ ಮಾಡಲು ಪೀವನ್‌ಗಳಿಗೆ ಆದೇಶಿಸುವುದು. ೮) ಗಡಿಭಾಗದಲ್ಲಿನ ಪೊದೆ, ಗಿಡಗಂಟಿಗಳನ್ನು ತೆಗೆದು ದುರಸ್ಥಿಮಾಡಿ ಗಡಿಗಳನ್ನು ನಿರ್ಮಿಸಲು ಹಳ್ಳಿಗರಿಗೆ ಬೆಂಬಲ ನೀಡಬೇಕಿತ್ತು. ೯) ಪ್ರಕರಣದಿಂದ ವಜಾಗೊಂಡ ಆರೋಪಿಗಳು, ಅಪರಾಧಿಗಳು, ಶಂಕಿತ ವ್ಯಕ್ತಿಗಳು ಮತ್ತು ಕೆಟ್ಟ ನಡತೆಯಂತಹ ವ್ಯಕ್ತಿಗಳಿಗೆ ಆಯಾ ಹಳ್ಳಿಯ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗೆ ಪ್ರತೀ ದಿನ ಸಂಜೆ ಹಾಜರಾಗಬೇಕೆಂದು ಆದೇಶಿಸುವುದು ಮತ್ತು ಅಂತಹ ವ್ಯಕ್ತಿಗಳ ಪಟ್ಟಿಯನ್ನು ಇಟ್ಟುಕೊಳ್ಳುವುದು. ೧೦) ಕೊರಮರು, ಲಂಬಾಣಿಗಳು, ವಡ್ಡರ್ ಮೊದಲಾದ ಅಪರಾಧವೆಸಗುವ ಜನಾಂಗಗಳಲ್ಲಿ ಅಪರಾಧ ಮಾಡುವುದರಿಂದ ಸದ್ವರ್ತನೆಗಾಗಿ ಮುಚ್ಚಳಿಕೆ ಪಡೆಯಬೇಕಿತ್ತು. ಮತ್ತು ಅಪರಾಧಗಳನ್ನು ಪತ್ತೆಹಚ್ಚುವುದು. ಒಂದು ವೇಳೆ ಅಪರಾಧ ಪತ್ತೆಹಚ್ಚಲಾಗದಿದ್ದರೆ ಅದಕ್ಕೆ ಈತನೇ ಉತ್ತರಿಸುವ ಜವಾಬ್ದಾರಿಯನ್ನು ಹೊಂದಿದ್ದನು. ೧೧) ಖೈದಿಗಳಿಗೆ ಭತ್ಯೆ ನೀಡುವುದು. ೧೨) ಕಳವು ಮಾಲುಗಳ ಮೌಲ್ಯವನ್ನು ಪಡೆಯುವುದು. ೧೩) ತನ್ನ ಸರಹದ್ದಿನ ಪಕ್ಕದಲ್ಲಿರುವ ಇತರ ತಾಲೂಕುಗಳ ಅಮಿಲ್‌ದರರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡು ಅಪರಾಧ ಎಸಗುವ ಗುಂಪುಗಳ ಚಲನವಲನದ ಬಗ್ಗೆ, ಊರು ಬಿಟ್ಟು ಓಡಿ ಹೋಗುವ ಕಳ್ಳರ ಬಗ್ಗೆ ಮಾಹಿತಿ ವಿನಿಯಮ ಮಾಡಿಕೊಂಡು ಅವರನ್ನು ಪತ್ತೆ ಮಾಡಬೇಕು. ೧೪) ಎಲ್ಲಾ ಸಾರಾಯಿ (ಮದ್ಯ) ಹೆಂಡಗಳ ಉಗ್ರಾಣಗಳ ಮೇಲೆ ಕಟ್ಟುನಿಟ್ಟಿನ ಹಿಡಿತ ಸಾಧಿಸಲು, ರಹಸ್ಯವಾದ ಮತ್ತು ವಿಚಾರವಂತಿಕೆಯ ಮೇಲ್ವಿಚಾರಣೆ ನಡೆಸಬೇಕು. ೧೫) ಶ್ರೀಗಂಧದ ಮರಗಳ ಸ್ಥಿತಿಗತಿಗಳ ಬಗ್ಗೆ ವರದಿ ಸಲ್ಲಿಸಬೇಕು.[೧೩೦] ಮೈಸೂರು ಮಹಾರಾಜರ ಹೋಂಬ್ರಾಂಚ್ ದಾಖಲೆಗಳಲ್ಲಿ ಅಮಿಲ್‌ದಾರನ ಕೆಲಸಗಳನ್ನು ಹೋಂ ಬ್ರಾಂಚ್ ದಾಖಲೆಗಳು ಈ ಕೆಳಕಂಡಂತೆ ವಿವರಿಸಿವೆ.

ಅಮಿಲ್‌ದಾರನು ತಾಲೂಕಿನ ಪೊಲೀಸ್ ಇಲಾಖೆಯಲ್ಲಿ ಮುಖ್ಯಸ್ಥನಾಗಿದ್ದು ತನ್ನ ವ್ಯಾಪ್ತಿಯೊಳಗೆ ಬರುವ ಎಲ್ಲಾ

ಪೊಲೀಸ್ ಕೆಲಸಗಳಿಗೆ ಈತನು ಜವಾಬ್ದಾರಿಯುತನಾಗಿದ್ದಾನೆ.

೧) ತನ್ನ ಕೈಕೆಳಗಿನ ಅಧಿಕಾರಿಗಳ ಕೆಲಸ ಕಾರ್ಯಗಳನ್ನು ನಿಯಂತ್ರಿಸುವುದು, ೨) ಕಂದಾಚಾರ ಪೀವನ್‌ಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದು, ೩) ಪೀವನ್‌ಗಳನ್ನು ಸರದಿಯ ಮೇಲೆ ಕೆಲಸಕ್ಕೆ ನೇಮಿಸುವುದು, ೪) ಸೂಪರಿಂಟೆಂಡೆಂಟ್‌ರವರ ಆದೇಶಗಳನ್ನು ಪೀವನ್‌ಗಳಿಗೆ ಸಂವಹನ ಮಾಡುವುದು, ೫) ಗಡಿಪ್ರದೇಶಗಳಲ್ಲಿರುವ ಗಿಡಗಂಟಿಗಳನ್ನು ಗ್ರಾಮಸ್ಥರ ಸಹಾಯದಿಂದ ತೆಗೆದು ಸ್ವಚ್ಛಗೊಳಿಸುವುದು, ೬) ವಜಾಗೊಂಡ ಅಪರಾಧಿಗಳು, ಅನುಮಾನಾಸ್ಪದ ವ್ಯಕ್ತಿಗಳು ಮತ್ತು ಇನ್ನಿತರ ಇಂತಹ ವ್ಯಕ್ತಿಗಳ ಪಟ್ಟಿಯನ್ನು ತನ್ನ ಬಳಿ ಇಟ್ಟುಕೊಂಡು ಅವರುಗಳಿಗೆ ಪ್ರತೀ ದಿನ ಸಂಜೆ ಅವರವರ ಹಳ್ಳಿಗಳಲ್ಲಿರುವ ಪೊಲೀಸ್ ಠಾಣೆಗಳಿಗೆ ಹೋಗಿ ವರದಿ ಮಾಡುವಂತೆ ನಿರ್ದೇಶಿಸುವುದು.೭) ಆರೋಪಿಗಳು ಮತ್ತು ಕಳ್ಳರ ಮೇಲೆ ಕಣ್ಗಾವಲು ಇರಿಸುವುದು ಮತ್ತು ಇತರ ಪೊಲೀಸ್ ಕೆಲಸಗಳನ್ನು ಮಾಡುವುದು.[೧೩೧]

ಈ ಎಲ್ಲಾ ಕೆಲಸಗಳನ್ನು ಮಾಡಲು ಅಮಿಲ್‌ದಾರನಿಗೆ ಸಹಾಯ ಮಾಡಲು ಒಬ್ಬನು ಶಿರಸ್ತೇದಾರ ಅಥವಾ ಲೆಕ್ಕಿಗನನ್ನು ಮತ್ತು ಒಬ್ಬ ಗುಮಾಸ್ತನನ್ನು ನೀಡಲಾಗಿತ್ತು. ಕಿಲ್ಲೆದಾರನು ಈ ಕಛೇರಿಯ ಮ್ಯಾನೇಜರ್‌ನಂತೆ ಕೆಲಸ ಮಾಡುತ್ತಿದ್ದ. (ತಾಲೂಕಿನಲ್ಲಿ ಇನ್ಸ್‌ಪೆಕ್ಟರ್‌ನಂತೆ) ಶಿರಸ್ತೇದಾರನು ಬರೆದ ಲೆಕ್ಕಪತ್ರಗಳನ್ನು ಅದು ಅಮಿಲ್‌ದಾರನಿಗೆ ಹೋಗುವುದಕ್ಕಿಂತ ಮೊದಲು ಕಿಲ್ಲೇದಾರು ದೃಢೀಕರಿಸಬೇಕಿತ್ತು. ಪ್ರತೀ ತಿಂಗಳ ಅಮಾವಾಸ್ಯೆಯಂದು ಕಳ್ಳರಿಗೆ ಆಶ್ರಯ ನೀಡುವಂತಹ ಪ್ರತೀ ಹಳ್ಳಿ ಹಾಗೂ ಅರಣ್ಯ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕಿತ್ತು. ಮತ್ತು ಪ್ರತೀ ಹುಣ್ಣಿಮೆಯಂದು ತನ್ನ ಕೇಂದ್ರ ಸ್ಥಾನದಲ್ಲಿಯೇ ಉಳಿದುಕೊಳ್ಳಬೇಕಿತ್ತು. ಜಿಲ್ಲೆಯಲ್ಲಿ ತನ್ನ ಸಹೋದ್ಯೋಗಿಗಳಿಂದ ಉತ್ತಮವಾದ ಮತ್ತು ಅತ್ಯಂತ ಪರಿಣಾಮಕಾರಿಯಾದ ಪೊಲೀಸ್ ಕೆಲಸಗಳನ್ನು ಮಾಡಲು ಈತ ಕಾರಣಕರ್ತನಾಗಬೇಕು.[೧೩೨] ಮತ್ತು ಈತನು ಪೀವನ್‌ಗಳ ನಡತೆ ಬಗ್ಗೆ ವರದಿಯನ್ನು ಸಲ್ಲಿಸಬೇಕಿತ್ತು. (ಇಂದಿಗೂ ಸಹ ಪೊಲೀಸ್ ಇಲಾಖೆಯಲ್ಲಿ ಅಮವಾಸ್ಯೆಯ ರಾತ್ರಿಗಳಲ್ಲಿ ಸಂಪೂರ್ಣ ಕತ್ತಲು ಆವರಿಸುವ ಕಾರಣ ಕಳ್ಳತನ, ದರೋಡೆಯಂತಹ ಅಪರಾಧಗಳು ಹೆಚ್ಚಾಗುತ್ತವೆ ಎಂಬ ಕಾರಣಕ್ಕಾಗಿ ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ರಾತ್ರಿಗಸ್ತನ್ನು ಹೆಚ್ಚು ಮಾಡಿ ತಾವೂ ಸಹ ಗಸ್ತು ತಿರುಗುತ್ತಾ ಅನುಮಾನಾಸ್ಪದವಾಗಿ ತಿರುಗುವ ವ್ಯಕ್ತಿಗಳನ್ನು ಪ್ರಶ್ನಿಸಿ ಅವರುಗಳಿಂದ ಸಮರ್ಪಕವಾದ ಉತ್ತರ ಬಾರದೇ ಇದ್ದಲ್ಲಿ ಅವರುಗಳನ್ನು ಬಂಧಿಸಿ ನ್ಯಾಯಾಧೀಶರುಗಳ ಮುಂದೆ ಹಾಜರುಪಡಿಸಿ ಅವರಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಳ್ಳುವ ಪದ್ಧತಿ ಮುಂದುವರಿದುಕೊಂಡು ಬಂದಿದೆ.)ರಾತ್ರಿ ಪಹರೆ ಕಾಯಲು, ದರೋಡೆಗಳನ್ನು ಪತ್ತೆಹಚ್ಚಲು ಅಪರಾಧಗಳನ್ನು ಮಾಡುವ ಮತ್ತು ಟಾರ್ಚ್‌ರಾಬರಿ ಮಾಡುವ ತಂಡಗಳನ್ನು ಸದೆಬಡಿಯಲು ಅಮಿಲ್‌ದಾರನೊಂದಿಗೆ ಕೆಲಸ ಮಾಡಲು ಹಳ್ಳಿಯ ಜನರು ಸಂತೋಷಪಡುತ್ತಿದ್ದರು. ಅವರು ತಮ್ಮ ಗಡಿ ಪ್ರದೇಶಗಳನ್ನು ಅಚ್ಚುಕಟ್ಟಾಗಿ ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಮತ್ತು ಗಡಿ ಪ್ರದೇಶದ ದ್ವಾರಗಳಲ್ಲಿ ರಾತ್ರಿ ಸರಿಯಾದ ಕಾವಲು ಕಾಯಲು ನಿರ್ದೇಶಿತರಾಗಿದರು. 'ತೋಟಿ' ಮತ್ತು 'ತಳಾರಿ'ಗಳು ಪ್ರತೀ ದಿನ ರಾತ್ರಿ ರಸ್ತೆಗಳಲ್ಲಿ ಗಸ್ತು ತಿರುಗುತ್ತಾ ಯಾರಾಗಾರೂ ಹೊಸಬರು ಗ್ರಾಮಕ್ಕೆ ಬಂದಿದ್ದಾರೆಯೇ? ಎಂದು ಗಮನಿಸಬೇಕಿತ್ತು. "ಯಾವುದೇ ಸಾರ್ವಜನಿಕ ಇಲಾಖೆ ಅಥವಾ ಸಂಸ್ಥೆಗಳು, 'ಕಂದಾಚಾರ' ಪೀವನ್‌ಗಳನ್ನು ತಮ್ಮ ಮನೆಕೆಲಸಕ್ಕೆ ಅಥವಾ ಖಾಸಗಿ ಕೆಲಸಗಳಿಗೆ ಬಳಸಿಕೊಳ್ಳಬಾರದೆಂದು ಆದೇಶಿಸಲಾಗಿತ್ತು. ಈ ಆದೇಶದ ಉಲ್ಲಂಘನೆ ಮಾಡಿದರೆ ಅಂತಹ ತಪ್ಪಿತಸ್ಥರಿಗೆ ದಂಡ ವಿಧಿಸಲಾಗುತ್ತಿತ್ತು ಮತ್ತು ಕೆಲಸದಿಂದ ವಜಾಗೊಳಿಸಲಾಗುತ್ತಿತ್ತು.[೧೩೩]

೪.೫.೩– ಕಂದಾಚಾರಿಗಳ ಸಂಬಳ

ಕಂದಾಚಾರಿಗಳ ಸಂಬಳ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಕೆಲವೊಮ್ಮೆ ಅವರಿಗೆ ಹಣದ ರೂಪದಲ್ಲೂ, ಕೆಲವೊಮ್ಮೆ ಭೂಮಿಯ ರೂಪದಲ್ಲೂ ಮತ್ತು ದಾನ್ಯದ ರೂಪದಲ್ಲೂ ಸಂಬಳ ನೀಡಿದ ಉದಾಹರಣೆಗಳು ಸಿಗು

ತ್ತವೆ. ಯಾವುದೇ 'ಕಂದಾಚಾರ' ಪೀವನ್‌ಗಳು ತಮ್ಮ ಸಂಬಳದ ಮೊತ್ತದ ಅರ್ಧದಷ್ಟು ಬೆಲೆಯ ಭೂಮಿ ಬೇಕೆಂದು ಕೋರಿದರೆ ಅವರ ಕೋರಿಕೆಯನ್ನು ಈಡೇರಿಸಬೇಕಿತ್ತು.[೧೩೪] ಯಾವ ಕಂದಾಚಾರಿಗಳಿಗೆ ಭೂಮಿ ಇಲ್ಲವೋ ಅವರ ಸಂಬಳದ ಅರ್ಧಭಾಗವನ್ನು ಹಣದ ರೂಪದಲ್ಲಿ ಉಳಿದರ್ಧಭಾಗ ಧಾನ್ಯಗಳ ರೂಪದಲ್ಲಿ ನೀಡಬೇಕಿತ್ತು. ಇದು ಉಗ್ರಾಣದಲ್ಲಿ ಧಾನ್ಯಗಳ ಸಂಗ್ರಹ ಇದ್ದರೆ ಮಾತ್ರ ಇಲ್ಲವಾದಲ್ಲಿ ಪೂರ್ಣಸಂಬಳವನ್ನು ಹಣದ ರೂಪದಲ್ಲಿ ನೀಡಲಾಗುತ್ತಿತ್ತು.[೧೩೫] ಇದು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಇರುತ್ತಿತ್ತು. ಇದರ ಜೊತೆಗೆ ಮೈಸೂರು ಸಂಸ್ಥಾನದೊಳಗೆ ವಿದೇಶಿ ಸೇವೆಗೆ ಇವರನ್ನು ಹಳ್ಳಿಯಿಂದ ಕರೆಯಿಸಿಕೊಂಡು ಮೂರುವರೆ ರೂ ಸಂಬಳ ಹಾಗೂ ಭತ್ಯೆಯನ್ನು ನೀಡಲಾಗುತ್ತಿತ್ತು.[೧೩೬]

ಮೇಜರ್ ಮಿಲ್ಕ್‌ನು ಶ್ರೀರಂಗಪಟ್ಟಣದ ಪಥನಾನಂತರ ಮೊದಲ ೫ ವರ್ಷಗಳ ಸರಕಾರದ ಖರ್ಚುವೆಚ್ಚಗಳ ಪಟ್ಟಿಯನ್ನು ಮಾಡಿದ್ದಾನೆ. ಅಮಿಲ್ದಾರರು ಮತ್ತು ಆತನ ಕೈಕೆಳಗಿನ ಅಧಿಕಾರಿಗಳ ಸಂಬಳದ ಬಗ್ಗೆ ಹೇಳುತ್ತಾ ೧೨೨ ಮುಖ್ಯ ಅಮಿಲ್ದಾರರುಗಳು ಇದ್ದು, ಅದರಲ್ಲಿ ನಗರ ಮತ್ತು ಚಿತ್ರದುರ್ಗದ ಸುಬೇದಾರರುಗಳನ್ನು ಒಳಗೊಂಡಂತೆ ಮಾಸಿಕ ೪೨೮೫-೫-೦ ಸಂಬಳ ನೀಡಲಾಗುತ್ತಿತ್ತು. ೨೫೪ ನೀರ್ಗಂಟಿಗಳಿಗೆ ೯೨-೨-೮, ೧೫೧ ಜನ ಮುಖ್ಯ ನಗರಗಳ ಕೊತ್ವಾಲರಿಗೆ ಅವರ ಶಾನುಭೋಗರನ್ನು ಒಳಗೊಂಡಂತೆ ೧೩೬-೪-೦, ೭೧ ಜನ ಗಂಧದ ಮರ ಕಾಯುವ ಕಾವಲುಗಾರರಿಗೆ (ಗಿರ್ಗ್‌ವಾಲಾ) ೪೬-೮-೦ ಸಂಬಳ ನೀಡುತ್ತಿದ್ದರು.[೧೩೭]

ಮುಖ್ಯ ರಸ್ತೆಗಳನ್ನು ಕಾಯುತ್ತಾ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಹಾಗೂ ಯುರೋಪಿಯನ್ ಯಾತ್ರಿಕರನ್ನು ರಕ್ಷಿಸುವ ಕಂದಾಚಾರ ಪಡೆಯ ೨೭೨ ಜನ ರೆಗ್ಯುಲರ್ ಸಿಪಾಯಿಗಳಿಗೆ ೧೭೯೯-೧೮೦೦ ರಲ್ಲಿ ಮಾಸಿಕ ೪೩೧-೬-೦ ಕಂಠೀರಾಯ ಪಗೋಡದಂತೆ ವಾರ್ಷಿಕ ೫೧೯-೮-೦ ಸಂಬಳ ನೀಡಲಾಗುತ್ತಿತ್ತು. ೮೧೭ ಜನ ಅಂಚೆಯವರಿಗೆ (ಇವರು ಪೊಲೀಸ್ ಕೆಲಸಗಳನ್ನೂ ಮಾಡುತ್ತಿದ್ದರು) ತಿಂಗಳಿಗೆ ೮೩೭-೭-೦ ರಂತೆ ವಾರ್ಷಿಕ ೧೦೦೫೨-೪-೦ ರಜಾದಿನದ ಸಂಬಳ ಕಳೆದು ೯೫೨-೪-೦ ನೀಡಲಾಗುತ್ತಿತ್ತು. ನಗರದಲ್ಲಿ ೪,೩೭೬ ಪೀವನ್‌ಗಳಿಗೆ ಮಾಸಿಕ ೬,೫೨೭-೩-೦ ರಂತೆ ೧೦ ತಿಂಗಳಿಗೆ ೬೫,೮೪೫-೧-೦ ರಜೆ ಸಂಬಳ ಕಳೆದು ೫೭,೭೪೦-೦-೦ ವನ್ನು ಹಣದ ರೂಪದಲ್ಲಿ ನೀಡಲಾಗುತ್ತಿತ್ತು. ಮೈಸೂರಿನಲ್ಲಿ ೫೯ ಕೋಟೆಗಳನ್ನು ಉತ್ತಮ ರೀತಿಯಲ್ಲಿ ಕಾಯುತ್ತಿದ್ದ ಮತ್ತು ಗ್ರಾಮಗಳನ್ನು ಕಾಯುತ್ತಿದ್ದ ೮,೭೯ ಪೀವನ್‌ಗಳಿಗೆ ಅರ್ಧ ಭೂಮಿ ಹಾಗೂ ಅರ್ಧ ನಗದು ರೂಪದಲ್ಲಿ ಸಂಬಳ ನೀಡುತ್ತಿದ್ದು, ಪ್ರತೀ ತಿಂಗಳಿಗೆ ೬,೨೪೩ ರಂತೆ ೧೧ ತಿಂಗಳಿಗೆ ೬೮,೬೭೩ -೦-೦ ನೀಡಲಾಗುತ್ತಿತ್ತು. ಕಂದಾಚಾರ ಪಡೆಯ ಲೆಕ್ಕಪತ್ರಗಳನ್ನು ನೋಡುವ ೨೦ ಜನ ಮುತ್ಸದ್ದಿಗಳಿಗೆ ತಿಂಗಳಿಗೆ೬೭೦-೦-೦ ರಂತೆ ೧೦ ತಿಂಗಳಿಗೆ ೬,೫೫೦-೦- ೦ ರಂತೆ ಸಂಬಳ ನೀಡಲಾಗುತ್ತಿತ್ತು. ಕಂದಾಚಾರ ಪೀವನ್‌ಗಳ ಭತ್ಯೆ ಸೇರಿ ೨೩,೫೦೦-೦-೦ ನ್ನು ನೀಡಲಾಗುತ್ತಿತ್ತು.[೧೩೮]

೧೮೦೦-೧೮೦೧ ರಲ್ಲಿ ಅಮಿಲ್ದಾರರು ಮತ್ತು ಅವರ ಕೈಕೆಳಗಿನ ಅಧಿಕಾರಿಗಳಿಗೆ ಹಿಂದಿನ ವರ್ಷದಂತೆ ೧,೬೯,೯೭೫ -೦- ೦ ಸಂಬಳವನ್ನೂ, ಕಂದಾಚಾರ ಸಿಬ್ಬಂದಿಗಳಿಗೆ ಕಳೆದ ವರ್ಷದಷ್ಟೇ ಅವರ ಸಂಖ್ಯೆ ಇದ್ದರೂ ಅವರಿಗೆ ಪೂರ್ತಿ ಸಂಬಳವಾಗಿ ೨,೨೫,೮೬೨- ೯-೦ ಸಂಬಳ ನೀಡಲಾಯಿತು.[೧೩೯] ೧೮೦೨ ರಲ್ಲಿ ಮೈಸೂರಿನಲ್ಲಿ ಶಾಂತಿ ಕಾಪಾಡಲು ೧೫೦೦ ಅಶ್ವದಳ, ೩೦೦ ರೆಗ್ಯುಲರ್ ಇನ್‌ಫೆಂಟ್ರಿ, ೨೫೦೦ ಪೀವನ್‌ಗಳು ಮತ್ತು ೧೨,೦೦೦ ಕಂದಾಚಾರಿಗಳು ಇದ್ದರು. ಈ ಕಂದಾಚಾರಿಗಳು ಅವರವರಿಗೆ ಸಂಬಂಧಿಸಿದ ಹಳ್ಳಿಗಳಲ್ಲಿ ಕೆಲಸ ನಿರ್ವಹಿಸಬೇಕಿತ್ತು.[೧೪೦]

೪.೫.೪- ಕಂದಾಚಾರ ಪಡೆಯನ್ನು ಸ್ಥಾಪಿಸಿದವರು ಯಾರು?

'ಕಂದಾಚಾರ' ಪಡೆಯನ್ನು ದಿವಾನ್ ಪೂರ್ಣಯ್ಯನವರು ಸ್ಥಾಪಿಸಿದರೇ? ಅಥವಾ ಇಲ್ಲವೇ? ಎಂಬುದು ಒಂದು ಚರ್ಚಾರ್ಹವಾದ ವಿಷಯವಾಗಿದೆ. ಈ 'ಕಂದಾಚಾರ' ಪಡೆಯ ಬಗ್ಗೆ ಡಾ: ಎಸ್.ನರೇಂದ್ರ ಪ್ರಸಾದ್‌ರವರು ಅಭಿಪ್ರಾಯ

ಪಡುತ್ತಾ "ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆಗೆ ಪೂರ್ಣಯ್ಯನವರು ಒಂದು ಭದ್ರ ಅಡಿಪಾಯವನ್ನು ಒದಗಿಸಿಕೊಟ್ಟರು. ಯುದ್ಧ, ವಿದ್ಯೆ ಮತ್ತು ಶಸ್ತ್ರಾಸ್ತ್ರ ಪ್ರಯೋಗಗಳಲ್ಲಿ ನಿಷ್ಣಾತರಾಗಿದ್ದ ಬೇಡ ಜನಾಂಗದವರನ್ನು ಒಳಗೊಂಡಿದ್ದ ಒಂದು ಖಾಸಗಿ ಬೇಡ ಪಡೆಯನ್ನು ಸಂಘಟಿಸಿದ್ದು, ಇದನ್ನು 'ಕಂದಾಚಾರ' ಎಂದು ಕರೆಯಲಾಯಿತು" ಎಂದು ಅಭಿಪ್ರಾಯ ಪಡುತ್ತಾರೆ.[೧೪೧] ಈ ಅಭಿಪ್ರಾಯವನ್ನು ಗಮನಿಸಿದರೆ ಮೈಸೂರು ರಾಜ್ಯದಲ್ಲಿ 'ಕಂದಾಚಾರ' ಪಡೆಯನ್ನು ದಿವಾನ್ ಪೂರ್ಣಯ್ಯನವರು ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಇದೇ ಅಭಿಪ್ರಾಯವನ್ನು ಡಾ: ಡಿ.ವಿ.ಗುರುಪ್ರಸಾದ್‌ರವರು ಈ ರೀತಿ ವ್ಯಕ್ತಪಡಿಸುತ್ತಾರೆ. "ಟಿಪ್ಪು ಸುಲ್ತಾನನ ಕಾಲದಲ್ಲೇ ಮೈಸೂರು ಪ್ರಾಂತದಲ್ಲಿ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸೈನ್ಯದ ಒಂದು ಸಣ್ಣ ತುಕಡಿಯನ್ನು ನಿಯುಕ್ತಿಗೊಳಿಸಲಾಗಿತ್ತು. ಈ ತುಕಡಿಗೆ ಸಹಾಯ ಸಹಕಾರ ನೀಡಲು 'ಕಂದಾಚಾರ' ಎಂದು ಕರೆಯಲ್ಪಡುವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿತ್ತು. ಈ ಪದ್ಧತಿ ಜಾರಿಗೆ ಬಂದಿದ್ದು ದಿವಾನ್ ಪೂರ್ಣಯ್ಯನವರ ಕಾಲದಲ್ಲಿ. 'ಕಂದಾಚಾರ' ಅಥವಾ ತಾಲೂಕು ನೌಕರರು ಮೊದಲು ಸೈನ್ಯದಿಂದಲೇ ಬಂದವರಾಗಿದ್ದರು. ಅವರ ಮುಖ್ಯ ಕಾರ್ಯ ಜೈಲಿನಲ್ಲಿ ಇರುವ ಬಂಧಿಗಳನ್ನು ನೋಡಿಕೊಳ್ಳುವುದು. ಹಾಗೂ ಜಿಲ್ಲೆಗಳಲ್ಲಿ ಅಂಚೆಪೆಟ್ಟಿಗೆಗಳನ್ನು ಒಯ್ಯುವುದೇ ಆಗಿತ್ತು. ೧೮೩೪ ರಲ್ಲಿ ಕಂದಾಚಾರ ಸೇವಕರನ್ನು ಪೊಲೀಸ್ ಸೇವಕರನ್ನಾಗಿ ನಿಯುಕ್ತಿಗೊಳಿಸಲಾಯಿತು. ೧೮೩೫ ರಲ್ಲಿ 'ಕಂದಾಚಾರ' ಪಡೆಯ ಮುಖ್ಯಸ್ಥರಾಗಿ ಕಂದಾಚಾರ ಭಕ್ಷಿಯವರನ್ನು ನೇಮಿಸಲಾಯಿತು"[೧೪೨]

ಈ ಎರಡೂ ಅಭಿಪ್ರಾಯಗಳು ಸರಿಯಾದುದಲ್ಲವೆಂಬುದಕ್ಕೆ ಕೆಳಗಿನ ಆಧಾರಗಳನ್ನು ನೀಡಬಹುದಾಗಿದೆ. ಇದೇ ಡಾ:ಎಸ್.ನರೇಂದ್ರಪ್ರಸಾದ್‌ರವರು ತಮ್ಮ ಇದೇ ಲೇಖನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಪಟ್ಟಾಭಿಷೇಕ ಆದ ದಿನ ಅಂದರೆ ಜೂನ್ ೩೦ರ ೧೭೯೯ ರ ದಿನದ ವರ್ಣನೆಯನ್ನು ನೀಡುತ್ತಾ " ಅಪ್ರಾಪ್ತ ವಯಸ್ಕರಾಗಿದ್ದ ಮುಮ್ಮಡಿರಾಜ ಕೃಷ್ಣರಾಜ ಒಡೆಯರ್‌ನ್ನು ಮಹಾರಾಜರನ್ನಾಗಿ ನೇಮಿಸಿದ ದಿನದಂದು ದಿವಾನ್ ಪೂರ್ಣಯ್ಯನವರು ಲೆ.ಕ ವೆಲ್ಲೆಸ್ಲಿರವರು ಈ ಬಾಲಕನನ್ನು ಕೈಹಿಡಿದು ನಡೆಸಿಕೊಂಡು ಬಂದು ಸಿಂಹಾಸನದ ಮೇಲೆ ಕೂರಿಸಿದರು. ಒಡೆಯರ್ ರಾಜವಂಶದ ಸದಸ್ಯರು, ರಾಣಿವಾಸದವರು ಮತ್ತು ಅವರ ಊಳಿಗದವರು ತೆರೆಯಿಂದ ಸಿಂಹಾಸನ ರೋಹಣ ಕಾರ್ಯವನ್ನು ವೀಕ್ಷಿಸಿದರು. ಸಮಾರಂಭದಲ್ಲಿ ರಾಜದಾನಿಯಿಂದ ದೂರದಲ್ಲಿದ್ದ ಸುಬೇದಾರರುಗಳು, ಖಿಲ್ಲೇದಾರರುಗಳು ಮತ್ತು ಕಂದಾಚಾರ ಪಡೆಯ ಮುಖಂಡರು ಹಾಜರಿದ್ದರು" ಎಂದು ವಿವರಿಸಿದ್ದಾರೆ. ಇದರಿಂದ ಅರ್ಥವಾಗುವುದೇನೆಂದರೆ ಪೂರ್ಣಯ್ಯನವರು ದಿವಾನರಾಗಿ ನೇಮಕವಾಗಿದ್ದು ೧೭೯೯ ರ ಜುಲಾಯಿ ೧ ರಂದು, ಮುಮ್ಮಡಿ ಕೃಷ್ಣರಾಜ ಒಡೆಯರ್‌ರ ಪಟ್ಟಾಭಿಷೇಕವಾದದ್ದು ಜೂನ್ ೩೦, ೧೭೯೯ ರಂದು ಅಂಬನೆ ಮುಮ್ಮಡಿ ಕೃಷ್ಣರಾಜ ಒಡೆಯರ್‌ರ ಪಟ್ಟಾ ಭಿಷೇಕವಾದ ಮರುದಿನ ಪೂರ್ಣಯ್ಯನವರು ದಿವಾನರಾದದ್ದು. ಪಟ್ಟಾಭಿಷೇಕದ ಸಂದರ್ಭದಲ್ಲಿ ಕಂದಾಚಾರ ಪಡೆಯ ಮುಖ್ಯಸ್ಥರು ಹಾಜರಿದ್ದರು ಎಂಬುದು ನಿಜವಾಗಿದ್ದಲ್ಲಿ 'ಕಂದಾಚಾರ' ಪಡೆಯನ್ನು ಮೈಸೂರು ಸಂಸ್ಥಾನದಲ್ಲಿ ದಿವಾನ್ ಪೂರ್ಣಯ್ಯನವರು ಸ್ಥಾಪಿಸಿದರು ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಡಾ:ಎಸ್.ನರೇಂದ್ರ ಪ್ರಸಾದ್‌ರವರು ತಮ್ಮ ಒಂದೇ ಲೇಖನದಲ್ಲಿ ಎರಡು ಅಭಿಪ್ರಾಯಗಳು ಬರುವಂತೆ ಅಂದರೆ ಕಂದಾಚಾರ ಪಡೆಯನ್ನು ದಿವಾನ್ ಪೂರ್ಣಯ್ಯ ಸ್ಥಾಪಿಸಿದರೆಂತಲೂ, ಮತ್ತು ಮಹಾರಾಜರ ಪಟ್ಟಾಭಿಷೇಕದ ದಿನ ಕಂದಾಚಾರ ಪಡೆಯ ಮುಖ್ಯಸ್ಥರು ಹಾಜರಿದ್ದರೆಂತಲೂ ಎರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಪಟ್ಟಾಭಿಷೇಕದ ದಿನ 'ಕಂದಾಚಾರ' ಪಡೆಯ ಮುಖ್ಯಸ್ಥರು ಹಾಜರಿದ್ದರು ಎಂಬುದು ನಿಜವಾಗಿದ್ದಲ್ಲಿ ಇವರ ಮತ್ತು ಡಾ: ಗುರುಪ್ರಸಾದ್‌ರವರ ಹೇಳಿಕೆಯು ಸರಿಯಾದುದೆಂದು ಒಪ್ಪಲು ಸಾಧ್ಯವಿಲ್ಲ.

ಸಾರ್ವಜನಿಕ ಶಾಂತಿ ನೆಲಸುವ ಸಲುವಾಗಿ ಟಿಪ್ಪುವಿನ ಸೇನೆಯಲ್ಲಿ ಅಳಿದುಳಿದ ಭಾಗಗಳಿಂದ ಆಯ್ದು ಸಿಪಾಯಿ

ಗಳನ್ನು ಆದರೆ ಸಣ್ಣದಾದ ಒಂದು ತಂಡವನ್ನು ರಚಿಸಲಾಯಿತು. ಇದಕ್ಕೆ 'ಕಂದಾಚಾರ' ಪಡೆಯಿಂದ ಹೆಚ್ಚಿನ ಸಂಖ್ಯೆಯ ಸಿಪಾಯಿಗಳನ್ನು ಸೇರಿಸಲಾಯಿತು. ಈ ಪಡೆಯಿಂದ ಗ್ರಾಮಗಳ ಮತ್ತು ಗಡಿಭಾಗಗಳಲ್ಲಿ ಶಾಂತಿ ಕಾಪಾಡಲು ನೆರವಾಯಿತು.[೧೪೩] ಎಂದು ಎಂ.ಶಾಮರಾವ್ ತಿಳಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ದಿವಾನ್ ಪೂರ್ಣಯ್ಯನವರು ಮೈಸೂರು ಸಂಸ್ಥಾನದಲ್ಲಿ 'ಕಂದಾಚಾರ' ಪಡೆಯನ್ನು ಸ್ಥಾಪಿಸಿದರೆಂಬುದು ಸರಿಯಾದ ವಾದವಲ್ಲ ಏಕೆಂದರೆ ಎಂ.ಶಾಮರಾವ್ ರವರು ಅಭಿಪ್ರಾಯಪಡುವಂತೆ "ಟಿಪ್ಪುವಿನ ಮರಣಾನಂತರ ಆತನ ಅಳಿದುಳಿದ ಸೇನೆಯಿಂದ ಆಯ್ದ ಕೆಲವು ಕಡಿಮೆ ಸಂಖ್ಯೆಯ ಸಿಪಾಯಿಗಳನ್ನು ಮತ್ತು 'ಕಂದಾಚಾರ' ಪಡೆಯ ಹೆಚ್ಚಿನ ಸಿಬ್ಬಂದಿಗಳನ್ನು ಆಯ್ಕೆ ಮಾಡಿ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಗಡಿಪ್ರದೇಶಗಳಲ್ಲಿ ಶಾಂತಿ ಸ್ಥಾಪಿಸಲು ಒಂದು ರಕ್ಷಣಾ ಪಡೆಯನ್ನು ರಚಿಸಲಾಯಿತು".[೧೪೪] ಎಂದಿದ್ದಾರೆ. ಅಂದರೆ 'ಕಂದಾಚಾರ' ಪಡೆ ಪೂರ್ಣಯ್ಯನವರು ದಿವಾನ ರಾಗುವುದಕ್ಕಿಂತ ಮುಂಚೆಯೇ ಇತ್ತು ಎಂಬುದು ಸಾಬೀತಾಗಿತ್ತು.

'ಕಂದಾಚಾರ' ಪಡೆಯ ಸಿಬ್ಬಂದಿಯವರು ಟಿಪ್ಪುವಿನ ಕಾಲದಲ್ಲಿ ಉದ್ಯೋಗವಿಲ್ಲದ ಕೆಲವು ಜನರೊಂದಿಗೆ ಸೇರಿಕೊಂಡು ಸುಲಿಗೆ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಇವರು ಆಗಾಗ ರೈತರನ್ನು ಸುಲಿಗೆ ಮಾಡುತ್ತಿದ್ದರು. ಆದರೂ ತಾವು ಬೆಳೆದ ಕೆಲವು ಭಾಗಗಳನ್ನು 'ಕಂದಾಚಾರ' ಪಡೆಯವರಿಗೆ ನೀಡಬೇಕಿತ್ತು ಇದರಿಂದಾಗಿ ರೈತರು ದಾಳಿಕೋರರಿಂದ ತಪ್ಪಿಸಿಕೊಳ್ಳುತ್ತಿದ್ದರು. ಟಿಪ್ಪು ಸುಲ್ತಾನನು 'ಕಂದಾಚಾರ' ಪಡೆಯ ಸಿಬ್ಬಂದಿಯನ್ನು ಕಡಿತಗೊಳಿಸಿ ತನ್ನ ಸೇನೆಗೆ ಸೇರಿಸಿಕೊಂಡಿದ್ದರ ಪರವಾಗಿ ಇಂತಹ ದರೋಡೆಗಳು ಕಡಿಮೆಯಾದವು.[೧೪೫] ಎಂದು ಶಾಮರಾವ್ ಅಭಿಪ್ರಾಯ ಪಡುತ್ತಾರೆ.

ಶ್ರೀರಂಗಪಟ್ಟಣ ಪಥನಾನಂತರ ಅಲ್ಲಿನ ಸೇನೆ ಮತ್ತು 'ಕಂದಾಚಾರ' ಪಡೆಯ ಸದಸ್ಯರು ನಿರುದ್ಯೋಗಿಗಳಾಗಿ ಲೂಟಿಯಂತಹ ಚಟುವಟಿಕೆಗಳಲ್ಲಿ ತೊಡಗಿದ್ದರು. 'ಕಂದಾಚಾರ' ಪಡೆಯ ಸಿಪಾಯಿಗಳು ಅಲ್ಲಲ್ಲಿ ಹಂಚಿಹೋದರು. ಆದ್ದರಿಂದ ಪೂರ್ಣಯ್ಯನವರು ಇಂತಹ 'ಕಂದಾಚಾರಿ'ಗಳ ಕುಟುಂಬದಿಂದ ಕನಿಷ್ಠ ಒಬ್ಬರನ್ನು ಪುನ: ಪಟ್ಟಿ ಮಾಡುವಂತೆ ಆದೇಶಿಸಿದರು. ಇಂತಹ ಸಿಬ್ಬಂದಿಗಳಿಗೆ ಹಳೆಯ ಕಾಲದಂತೆಯೇ ಅವರ ಕೆಲಸಕ್ಕೆ ತಕ್ಕಂತೆ ಸಂಬಳವನ್ನು ನೀಡಲು ಪ್ರಾರಂಭಿಸಿದರು. 'ಕಂದಾಚಾರ' ಪಡೆಯನ್ನು ವ್ಯವಸ್ಥಿತವಾಗಿ ಸಂಘಟಿಸಲಾಯಿತು. ಇದರಿಂದಾಗಿ ರಾಜ್ಯದಲ್ಲಿ ನಡೆಯುವ ದರೋಡೆ ನಡೆಸುವ ತಂಡಗಳನ್ನು ತಡೆಯಲು ಈ 'ಕಂದಾಚಾರ' ಪಡೆಯವರು ಕೂಡಲೇ ಸಿದ್ಧರಿರುವಂತೆ ಅಣಿಗೊಳಿಸಲಾಯಿತು. ಪೊಲೀಸ್ ಕರ್ತವ್ಯಗಳಿಗೆ ಅದರಂತೆ ರಾಜ್ಯದಲ್ಲಿ ನಡೆಯುವ ಗಲಭೆ ದೊಂಬಿಗಳನ್ನು ನಿಯಂತ್ರಿಸಲು ಇವರು ತಕ್ಷಣ ಸಿದ್ದರಿರಬೇಕಿತ್ತು. ದಿವಾನರು ಮತ್ತು ರೆಸಿಡೆಂಟರು ಆಗಾಗ ರಾಜ್ಯದಲ್ಲಿ ಒಂದು ಸಣ್ಣ 'ಕಂದಾಚಾರ' ಪಡೆಯೊಂದಿಗೆ ಸಂಚಾರ ನಡೆಸಿ ಜನರ ಸಮಸ್ಯೆಗಳಿಗೆ ಅಲ್ಲಿಯೇ ನಿವಾರಿಸಲು ಪ್ರಯತ್ನಿ ಸುತ್ತಿದ್ದರು. ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಒಂದು ವ್ಯವಸ್ಥಿತವಾದ 'ಕಂದಾಚಾರ' ಪೊಲೀಸ್ ಪಡೆ ಇತ್ತು. ಅವರಿಗೆ ಉದ್ಯೋಗ ಮತ್ತು ಸಂಬಳ ಎರಡೂ ಇತ್ತು. ಆದರೆ ಈಗ ಇವರು ಉದ್ಯೋಗವೂ ಇಲ್ಲದೇ ಸಂಬಳವೂ ಇಲ್ಲದೇ ಮತ್ತು ರಾಜನೂ ಇಲ್ಲದೇ ರಾಜ್ಯದ ವಿವಿಧ ಭಾಗ ಗಳಲ್ಲಿ ಹರಿದು ಹಂಚಿಹೋಗಿದ್ದರು. ಟಿಪ್ಪುವಿನ ಕಾಲದಲ್ಲಿ ನೀಡಿದ್ದ ಶಸ್ತ್ರಾಸ್ತ್ರಗಳು ಇವರ ಕೈಯಲ್ಲೇ ಇದ್ದವು. ಹೊಟ್ಟೆ ಪಾಡಿಗಾಗಿ ಈ ಕಂದಾಚಾರಿಗಳು ರೈತರನ್ನು ಲೂಟಿ ಮಾಡಲು ಪ್ರಾರಂಭಿಸಿದರು. ಇವರ ಈ ದಾಳಿಯನ್ನು ತಡೆಯಲು ಹಾಗೂ ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಉದ್ದೇಶದಿಂದ ದಿವಾನ್ ಪೂರ್ಣಯ್ಯನವರು ಇಂತಹ 'ಕಂದಾಚಾರ' ಪಡೆಯ ಕುಟುಂಬದವರಿಂದ ಕನಿಷ್ಠ ಒಬ್ಬೊಬ್ಬರನ್ನು ಆಯ್ಕೆ ಮಾಡಿ ಅವರಿಗೆ ಸರ್ಕಾರದ ಉದ್ಯೋಗವನ್ನು ಕೊಡುವಂತಹ ವ್ಯವಸ್ಥೆ ಮಾಡಿದರು.[೧೪೬] ಅಂದರೆ ಕಂದಾಚಾರ ಪಡೆಯನ್ನು ದಿವಾನ್ ಪೂರ್ಣಯ್ಯನವರು ಪುನರ್ ಸಂಘಟಿಸಿದರೇ ಹೊರತು 'ಕಂದಾಚಾರ' ಪಡೆಯನ್ನು ಸ್ಥಾಪಿಸಿದವರು

ಪೂರ್ಣಯ್ಯನವರಲ್ಲ. ಡಾ: ಡಿ.ವಿ. ಗುರುಪ್ರಸಾದ್ ಮತ್ತು ಇತರ ಸಂಶೋಧಕರು ತಿಳಿಸುವಂತೆ ಪೂರ್ಣಯ್ಯನವರು 'ಕಂದಾಚಾರ' ಪಡೆಯನ್ನು ಸ್ಥಾಪಿಸಿದರೆಂಬ ವಾದವನ್ನು ಸರಿಯಲ್ಲವೆಂದು ಇದರಿಂದ ಅಭಿಪ್ರಾಯಪಡಬಹುದಾಗಿದೆ. ೧೭೯೯ ರ ಸಬ್ಸಿಡಿಯರಿ ಒಪ್ಪಂದಲ್ಲಿ ಮೈಸೂರಿಗೆ ಬಾಹ್ಯ ಆಕ್ರಮಣಗಳಿಂದ ರಕ್ಷಣೆ ಒದಗಿಸುವುದಕ್ಕಾಗಿ ಸಬ್ಸಿಡಿ ಹಣ ನೀಡುತ್ತಿದ್ದರೂ ಮೈಸೂರಿನ ಸಾಮಾನ್ಯ ರಕ್ಷಣೆಯೆಂದು ನಿರ್ಧಿಷ್ಟ ಸಂಖ್ಯೆಯ ಸೇನೆ ಹಾಗೂ ಕಂದಾಚಾರ ವ್ಯವಸ್ಥೆ ಹೊಂದಿರುವಂತೆ ಸೂಚಿಸಲಾಗಿತ್ತು. ಅದರಂತೆ ೨೦೦೦ ಅಶ್ವದಳ, ೩೦೪೬ ಕಾಲ್ದಳ ಹಾಗೂ ೨೬೯೯ ಸಿಪಾಯಿಗಳು ಮುಂತಾದ ಸಹಾಯಕ ವರ್ಗಗಳನ್ನೊಳಗೊಂಡ ಸೇನೆ ಇತ್ತು [೧೪೭] ಎಂದು ಡಾ: ಅನಿತಾ ಅಭಿಪ್ರಾಯಪಡುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ೧೭೯೯ಕ್ಕಿಂತ ಮೊದಲು ಅಂದರೆ ಟಿಪ್ಪುವಿನ ಮರಣಾನಂತರ ಏರ್ಪಟ್ಟ ಸಬ್ಸಿಡಿಯರಿ ಒಪ್ಪಂದಕ್ಕಿಂತ ಮೊದಲು ಕಂದಾಚಾರ ವ್ಯವಸ್ಥೆ ಪ್ರಚಲಿತದಲ್ಲಿತ್ತು ಎಂಬುದು ಅರ್ಥವಾಗುತ್ತದೆ.

ಎಂ.ಶಾಮರಾವ್‌ರವರು ಕಂದಾಚಾರ ಪದ್ಧತಿಯು ಹೈದರ್‌ನ ಕಾಲದಲ್ಲಿಯೇ ಇತ್ತು ಎಂಬುದರ ಬಗ್ಗೆ ಈ ರೀತಿ ಹೇಳಿದ್ದಾರೆ. "ಹೈದರಾಲಿಯ ಕಾಲದಿಂದ 'ಕಂದಾಚಾರ' ಸಿಬ್ಬಂದಿ ಪದ್ದತಿ ಇತ್ತು. ಈ ಸಿಬ್ಬಂದಿಯು ಮುಖ್ಯವಾಗಿ ಕೃಷಿಯಲ್ಲಿ ತೊಡಗಿರುತ್ತಿದ್ದು ಒಂದು ಸಂಘಟಿತ ತಂಡವಾಗಿತ್ತು. ಅಗತ್ಯ ಬಿದ್ದಾಗ ಆರಕ್ಷಕ ಅಥವಾ ಸೈನಿಕ ಸೇವೆಗೆ ತಾತ್ಕಲಿಕವಾಗಿ ಒದಗಿಸಬೇಕಾಗಿತ್ತು."[೧೪೮] 'ಗೆಜೆಟಿಯರ್ ಆಫ್ ಇಂಡಿಯಾ'ದಲ್ಲಿ "ಪೂರ್ಣಯ್ಯರವರು ಹೈದರಾಲಿಯ ಬಳಿ ಸರಬರಾಜು ಮಂತ್ರಿಯಾಗಿ ಟಿಪ್ಪುವಿನ ಬಳಿ ಹಣಕಾಸು ಮಂತ್ರಿಯಾಗಿದ್ದರು. ಶ್ರೀರಂಗಪಟ್ಟಣದಲ್ಲಿದ್ದ ಹಲವಾರು ಕಛೇರಿಗಳನ್ನು ಟಿಪ್ಪುವಿನ ಮರಣಾನಂತರ ಅವರು ಮೈಸೂರಿಗೆ ವರ್ಗಾಯಿಸಿದರು". 'ಕಂದಾಚಾರ ' ಪದ್ಧತಿಯನ್ನು ಜಾರಿಗೆ ತಂದರು [೧೪೯] ಎಂದು ಇದೆ. ಪೂರ್ಣಯ್ಯನವರು ಹೈದರ್‌ನ ಕಾಲದಲ್ಲಿದ್ದ 'ಕಂದಾಚಾರ' ಇಲಾಖೆಯನ್ನು ಇತರ ಇಲಾಖೆಗಳೊಂದಿಗೆ ಮೈಸೂರಿಗೆ ವರ್ಗಾಯಿಸಿದರೇ ವಿನಹ ಕಂದಾಚಾರ ಪಡೆಯನ್ನು ಪ್ರಾರಂಭಿಸಿದ್ದು ಪೂರ್ಣಯ್ಯನವರು ಅಲ್ಲ.

ಮೊಗಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನಕ್ಕೆ ಚಿಕ್ಕದೇವರಾಜ ಒಡೆಯರ್‌ರವರು ಒಂದು ಸುಪ್ರಸಿದ್ಧ ನಿಯೋಗವನ್ನು ಕಳುಹಿಸಿಕೊಟ್ಟಿದ್ದು, ಆ ನಿಯೋಗವು ಔರಂಗಜೇಬನ ಆಸ್ಥಾನದಲ್ಲಿದ್ದ ಆಡಳಿತ ಪದ್ಧತಿಯನ್ನು ಪರಿಶೀಲಿಸಿ ೧೮ ಚಾವಡಿಗಳನ್ನು ಮೈಸೂರು ಸಂಸ್ಥಾನದಲ್ಲಿಯೂ ಅಳವಡಿಸುವಂತೆ ಸೂಚಿಸಿದ್ದು ಅದರಂತೆ ಚಿಕ್ಕದೇವರಾಜ ಒಡೆಯರ್‌ರವರು ೧೮ ಚಾವಡಿಗಳನ್ನು ಅಸ್ಥಿತ್ವಕ್ಕೆ ತಂದರು.[೧೫೦] ಅದರಲ್ಲಿ 'ಸೀಮೆಯ ಕಂದಾಚಾರ'ದ ಚಾವಡಿ, 'ಬಾಗಿಲ ಕಂದಾಚಾರ'ದ ಚಾವಡಿ ಮತ್ತು ಪೊಲೀಸರ ಕಾರ್ಯವನ್ನು ನಡೆಸುತ್ತಿದ್ದ ಪಟ್ಟಣದ ಚಾವಡಿಗಳೂ ಸಹ ಇದ್ದುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ಪೂರ್ಣಯ್ಯನವರು ಹೈದರ್‌ನ ಬಳಿ ಕೆಲಸಕ್ಕೆ ಬರುವ ಮೊದಲೇ ಇಂತಹ ಒಂದು 'ಕಂದಾಚಾರ' ಪಡೆಯು ಒಡೆಯರ ಆಡಳಿತ ಕಾಲದಲ್ಲಿ ಇತ್ತೆಂದು ಅಭಿಪ್ರಾಯಕ್ಕೆ ಬರಬಹುದಾಗಿದೆ.

ಚಿಕ್ಕದೇವರಾಜ ಒಡೆಯರ್‌ರವರು ೧೬೭೩ ರಲ್ಲಿ ಪಟ್ಟಾಭಿಶಿಕ್ತರಾದರು. ಅವರ ಕಾಲದಲ್ಲಿಯೇ ಕಂದಾಚಾರ ಪೊಲೀಸ್ ಪಡೆ ಇತ್ತು. ಆಗಿನ್ನೂ ಪೂರ್ಣಯ್ಯನವರು ಹುಟ್ಟಿಯೇ ಇರಲಿಲ್ಲ. ದಿವಾನ್ ಪೂರ್ಣಯ್ಯನವರು ಜನಿಸಿದ್ದು ೧೭೪೬ ರಲ್ಲಿ. ಹೀಗಿರುವಾಗ ಕಂದಾಚಾರ ಪಡೆಯನ್ನು ದಿವಾನ್ ಪೂರ್ಣಯ್ಯನವರು ಸ್ಥಾಪಿಸಿದರು ಎಂಬ ವಾದವನ್ನು ನಂಬಲು ಸಾಧ್ಯವಿಲ್ಲ. ಅಷ್ಟೇ ಏಕೆ ಈ ವೇಳೆ ಹೈದರಾಲಿಯೂ ಹುಟ್ಟಿರಲಿಲ್ಲ. ಹೈದರಾಲಿ ಹುಟ್ಟಿದ್ದು ೧೭೨೧ ರಲ್ಲಿ. ಹಾಗಿರುವಾಗ ಕಂದಾಚಾರ ಪಡೆಯು ಹೈದರಾಲಿ, ಟಿಪ್ಪುಗಳಿಗಿಂತ ಮೊದಲೇ ಮೈಸೂರು ಅರಸರಲ್ಲಿ ಪ್ರಚಲಿತದಲ್ಲಿದ್ದ ಪಡೆಯಾಗಿತ್ತು. "ಹೈದರ್, ಟಿಪ್ಪು ಕಾಲದಲ್ಲಿ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಇದೇ ಕಂದಾಚಾರ ಪಡೆಯು ಮುಂದುವರಿಯಿತು."[೧೫೧] ಎಂದು ತೀ.ತಾ ಶರ್ಮ ಅಭಿಪ್ರಾಯಪಡುತ್ತಾರೆ. ಆದ್ದರಿಂದ ದಿವಾನ್ ಪೂರ್ಣಯ್ಯನವರು ಕಂದಾಚಾರ ಪದ್ಧತಿಯನ್ನು ಜಾರಿಗೆ ತಂದರು ಎಂಬ ವಾದ ಸರಿಯಾದುದಲ್ಲ. ಸೀಮೆ ಕಂದಾಚಾರ, ಬಾಗಿಲ ಕಂದಾಚಾರ, ಅಷ್ಟಗ್ರಾಮಗಳು, ಕಾಣಿಕೆ

ಚಾವಡಿ, ಬೆಣ್ಣೆ ಚಾವಡಿ , ಹೊಗೆಸೊಪ್ಪುವಿನ ಚಾವಡಿ, ಸುಂಕದ ಚಾವಡಿ, ಪೊಂಮ್ಮನ ಚಾವಡಿ, ದೊಡ್ಡ ಉಗ್ರಾಣ, ಕತ್ತಿ ಬೊಕ್ಕಸ, ಹಸುವಿನಕರೊಹಟ್ಟಿ, ಬೇಹಿನ ಚಾವಡಿ, ಆನೆಸಾಲೆ, ಮೈಸೂರು ಹೋಬಳಿ ಊಳಿಗ, ಕಬ್ಬಿಣದ ಪೊಮ್ಮ, ಕುದುರೆ ಲಾಯ, ಒಂಟೆಲಾಯ, ಬಾಳದೆರಿಗೆ ಇತ್ಯಾದಿ ೩೬ ಶೀಮೆಗಳ ಅಧಿಕಾರ ವರ್ಗ ಶೀಮೆ ಪಟ್ಟಣದ ಕಸಬೆಯಲ್ಲಿ ಹೈದರನ ಕಾಲದಲ್ಲಿಯೇ ಇತ್ತು.[೧೫೨] ಎಂದು

ಡಾ:ಎಂ.ಜಿ.ನಾಗರಾಜ್‌ರವರು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ಹೈದರಾಲಿಯ ಕಾಲದಲ್ಲಿಯೇ (೧೭೬೧–೧೭೮೨) ಕಂದಾಚಾರ ಎಂಬ ಶಬ್ದದ ಬಳಕೆ ಇರುವುದನ್ನು ನಾವು ಗಮನಿಸಬಹುದಾಗಿದೆ. ಇಲ್ಲಿ ಶೀಮೆ ಕಂದಾಚಾರ ಮತ್ತು ಬಾಗಿಲ ಕಂದಾಚಾರ ಎಂಬ ಎರಡು ಶಬ್ದದ ಬಳಕೆ ಆಗಿದೆ. ಸೀಮೆ ಕಂದಾಚಾರ ಚಾವಡಿ ಎಂದರೆ ಆಡಳಿತ ಘಟಕಗಳಲ್ಲಿ ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕಪತ್ರಗಳನ್ನಿಡುವುದು ಆಯಾ ಘಟಕಗಳನ್ನು ಸಜ್ಜುಗೊಳಿಸಲು ಅಗತ್ಯವಾದ ಶಸ್ತ್ರಾಸ್ತ್ರ ಗಳನ್ನು ಮತ್ತು ಮದ್ದುಗುಂಡುಗಳ ವ್ಯವಹಾರ ನೋಡಿಕೊಳ್ಳುವ ಇಲಾಖೆಯೆಂತಲೂ, ಬಾಗಿಲ ಕಂದಾಚಾರ ಚಾವಡಿ ಎಂದರೆ, ಮಿಲಿಟರಿ ಮತ್ತು ಪೌರ ಹುಜೂರು ಅಧಿಕಾರಿಗಳ ಮತ್ತು ಪಾಳೇಯಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಇಡುವ ಇಲಾಖೆ ಎಂದು ಪ್ರೊ.ಶೇಕ್ ಆಲಿ ತಿಳಿಸುತ್ತಾರೆ.[೧೫೩] ಸೀಮೆ ಕಂದಾಚಾರ ಚಾವಡಿ ಎಂದರೆ ಆಡಳಿತ ಘಟಕಗಳ ಸೈನ್ಯ ಸಂಸ್ಥಾಪನೆಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು, ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಸರಕು ಸಂಗ್ರಹಗಳ ಲೆಕ್ಕ ಗಳನ್ನು ಬರೆದಿಡುವ ಸೈನಿಕ ಇಲಾಖೆ ಎಂದು ಮತ್ತು ಹುಜೂರು ಅಧಿಕಾರಿಗಳ ಮತ್ತು ಪಾಳೇದಾರರ ಲೆಕ್ಕಪತ್ರಗಳನ್ನು ಪರಿ ಶೋಧಿಸುವ ಇಲಾಖೆ ಎಂದು ಡಾ:ಎಂ.ವಿ.ಕೃಷ್ಣರಾವ್ ಮತ್ತು ಡಾ:ಕೇಶವ ಭಟ್‌ರವರು ಅಭಿಪ್ರಾಯಪಡುತ್ತಾರೆ.[೧೫೪] ಹಯವದನರಾವ್‌ರವರು ತಿಳಿಸುವಂತೆ ೧) ಸೀಮೆಯ ಕಂದಾಚಾರದ ಚಾವಡಿ ಎಂದರೆ Department dealing with accounts of civil and military establishments in the administrative units and of arms and ammunition and stores required for the equipment of respective units

೨) ಬಾಗಿಲ ಕಂದಾಚಾರದ ಚಾವಡಿ ಎಂದರೆ department dealing with accounts relating to the military and civil officials on the Huzur establishment and the palegur.[೧೫೫]

ಈ ಮೇಲಿನ ಎಲ್ಲಾ ಆಧಾರಗಳ ಮೇರೆಗೆ ದಿವಾನ್ ಪೂರ್ಣಯ್ಯನವರು ಮೈಸೂರಿನಲ್ಲಿ ಕಂದಾಚಾರ ಪಡೆಯನ್ನು ಸ್ಥಾಪಿಸಿದರು ಎಂಬ ವಾದವು ಸರಿಯಾದುದಲ್ಲವೆಂತಲೂ, ಅವರು ಹುಟ್ಟುವುದಕ್ಕಿಂತ ಮೊದಲೇ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಕಂದಾಚಾರ ಪೊಲೀಸ್ ಪಡೆ ಇತ್ತು. ಮತ್ತು ಅದು ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಮುಂದು ವರೆದುಕೊಂಡು ಬಂದಿದ್ದು, ಶ್ರೀರಂಗಪಟ್ಟಣದ ಪಥನಾನಂತರ ಹರಿದು ಹಂಚಿಹೋಗಿದ್ದ ಕಂದಾಚಾರ ಪಡೆಯನ್ನು ಪೂರ್ಣಯ್ಯನವರು ಪುನರ್‌ಸಂಘಟಿಸಿದರು, ಎಂಬ ಅಭಿಪ್ರಾಯಕ್ಕೆ ಬರಬಹುದು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಕ್ರಮವಾಗಿ ಸರಬರಾಜು ಹಾಗೂ ಹಣಕಾಸು ಮಂತ್ರಿಯಾಗಿದ್ದ ಪೂರ್ಣಯ್ಯನವರಿಗೆ ಟಿಪ್ಪುವಿನ ಬಗ್ಗೆ ಅಪಾರವಾದ ಪ್ರೇಮವಿತ್ತು. ಟಿಪ್ಪುವಿನ ಮರಣಾನಂತರ ಶ್ರೀರಂಗಪಟ್ಟಣದ ಸಮೀಪದ ಕರಿಘಟ್ಟ ಎಂಬ ಪ್ರದೇಶದಲ್ಲಿ ಟಿಪ್ಪುವಿನ ಮಗ ಫಥೇಮೊಹಮ್ಮದ್‌ನಿಗೆ ರಕ್ಷಣೆಯನ್ನು ಕೊಟ್ಟುಕೊಂಡಿದ್ದ ಪೂರ್ಣಯ್ಯನವರು ಬ್ರಿಟೀಷರೊಂದಿಗೆ ಸಂದಾನನಡೆಸಿ ಆತನಿಗೆ ಪುನಹ ಮೈಸೂರಿನ ಪಟ್ಟಾಭಿಷೇಕ ಮಾಡಬೇಕೆಂದು ಮನವಿ ಮಾಡುತ್ತಾರೆ. ಆದರೆ ಈ ಮನವಿಯನ್ನು ಬ್ರಿಟೀಷರು ತಿರಸ್ಕರಿಸಿದರು. ಈ ಎಲ್ಲಾ ಘಟನೆಗಳನ್ನು ನೋಡಿದಾಗ ಪೂರ್ಣಯ್ಯನವರು ತಾವು ಕೆಲಸ ಮಾಡಿದ ರಾಜರಿಗೆ ನಿಷ್ಠರಾಗಿದ್ದರೆಂದು ತಿಳಿದುಬರುತ್ತದೆ. ಇವರು ದಿವಾನರಾಗಿ ಮೈಸೂರು ಸಂಸ್ಥಾನಕ್ಕೆ ನೇಮಕವಾದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್‌ರೊಂದಿಗೆ ಅಂತಹ ಉತ್ತಮ ಸಂಬಂಧವನ್ನೇನು ಹೊಂದಿರಲಿಲ್ಲ ಎಂಬುದಕ್ಕೆ

ಸಾಕಷ್ಟು ಉದಾಹರಣೆಗಳು ಸಿಗುತ್ತವೆ. (ಪೂರ್ಣಯ್ಯನವರು ಉದ್ಯೋಗವಿಲ್ಲದೇ ಅಪರಾಧಗಳಲ್ಲಿ ತೊಡಗಿಕೊಂಡಿದ್ದ ಸಿಪಾಯಿಗಳನ್ನು ಪುನಹ 'ಕಂದಾಚಾರ' ಪಡೆಗೆ ಸೇರಿಸಿಕೊಂಡರೆಂದು ತಿಳಿದುಬರುತ್ತದೆ.) ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಯಾವುದೇ ಒಬ್ಬ ರಾಜ ತನ್ನ ಶತ್ರು ರಾಜ್ಯದ ಮೇಲೆ ದಾಳಿ ಮಾಡಿ ಆತನನ್ನು ಸೋಲಿಸಿದರೆ ಆತನ ಸೈನಿಕರನ್ನು ಯುದ್ಧ ಖೈದಿಗಳನ್ನಾಗಿ ಬಂಧಿಸುತ್ತಾರೆಯೇ ವಿನಹ ಅವರನ್ನು ತಮ್ಮ ರಾಜ್ಯದ ಉದ್ಯೋಗಗಳಿಗೆ ನೇಮಿಸಿಕೊಂಡ ಉದಾಹರಣೆಗಳು ಸಿಗುವುದಿಲ್ಲ. ಹಾಗಿದ್ದರೆ ಇಲ್ಲಿ ಪೂರ್ಣಯ್ಯನವರು ಟಿಪ್ಪುವಿನ 'ಕಂದಾಚಾರ' ಪಡೆಯಲ್ಲಿದ್ದ ಯೋಧರನ್ನು ಪುನಹ ಉದ್ಯೋಗ ಕೊಟ್ಟು ಕರೆಸಿಕೊಂಡಿದ್ದರ ಹಿನ್ನಲೆಯನ್ನು ಗಮನಿಸಿದಾಗ ಇವರು ತನಗೆ ಆಶ್ರಯ ನೀಡಿದ್ದ ಹೈದರ್, ಟಿಪ್ಪುವಿಗೆ ಈ ಮೂಲಕ ಋಣ ತೀರಿಸಿದರೆಂದು ಹೇಳಬಹುದು. ಇಲ್ಲದಿದ್ದಲ್ಲಿ ಮೈಸೂರು ಅರಸರ ಶತ್ರುವಾಗಿದ್ದ ಟಿಪ್ಪುವಿನ ಸೈನಿಕರನ್ನು ಅರಸರ ಕೈಕೆಳಗಿನ 'ಕಂದಾಚಾರ' ಪಡೆಗೆ ಸೇರಿಸುವ ಅಗತ್ಯವಾದರು ಕಂಡುಬರುವುದಿಲ್ಲ. ಒಂದು ವೇಳೆ 'ಕಂದಾಚಾರ' ಪಡೆಯ ಯೋಧರು ಅಪರಾಧಗಳಲ್ಲಿ ತೊಡಗಿದ್ದರೆ ಪ್ರಚಲಿತದಲ್ಲಿದ್ದ ಕಾನೂನಿನಂತೆ ಅವರ ಮೇಲೆ ಕ್ರಮ ಜರುಗಿಸಬಹುದಿತ್ತು. ಆದರೆ ಹಾಗೆ ಮಾಡದೆ ಅವರನ್ನು ಉದ್ಯೋಗಕ್ಕೆ ಸೇರಿಸಿಕೊಂಡಿದ್ದರಿಂದ ಪೂರ್ಣಯ್ಯನವರ ಈ ಕಾರ್ಯದ ಹಿಂದೆ ಒಂದು ಸ್ಥಾಪಿತ ಉದ್ದೇಶವಿದ್ದಂತೆ ಕಂಡು ಬರುತ್ತದೆ ಎಂದು ಅಭಿಪ್ರಾಯ ಪಡಬಹುದಾಗಿದೆ. ನಂತರ ೧೮೬೯ ರಲ್ಲಿ ಮೈಸೂರಿನ ಪೊಲೀಸ್ ಮುಖ್ಯಸ್ಥರಾಗಿ ಚೀಫ್ ಕಮಿಷನರ್ ಅಧಿಕಾರ ಪಡೆದರು. ಸರದಿ ಮೇಲೆ ಕಂದಾಯ ವಸೂಲಿ ಮಾಡುತ್ತಿದ್ದ 'ಕಂದಾಚಾರ' ಪೊಲೀಸ್ ಪದ್ಧತಿಯನ್ನು ಕೊನೆಗೊಳಿಸಲಾಯಿತು.

೪.೬ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪೊಲೀಸ್

ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದು ೧೮೧೨ ರಿಂದ ೧೮೩೧ ರವರೆಗೆ ೧೮೩೧ ರಿಂದ ೧೮೮೧ ರವರೆಗೆ ರಾಜ್ಯವು ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರು ೧೭೯೯ ರ ಜೂನ್ ೩೦ ರಂದು ಪಟ್ಟಾಭಿಶಿಕ್ತರಾದರು. ಇವರ ಕಾಲದ ಅಧಿಕಾರಿಗಳ ವಿವರಗಳು ಚಾಮರಾಜೇಂದ್ರ ಕಾಲದ ಹಸ್ತಪ್ರತಿಗಳಲ್ಲಿ ಲಭ್ಯವಾಗಿದ್ದು, ಅದನ್ನು ಎ.ಎಸ್.ನಿರಂಜನರಾಜ ಅರಸುರವರು ಈ ರೀತಿ ಪಟ್ಟಿ ಮಾಡಿದ್ದಾರೆ.

ಅಠಾರ ಕಛೇರಿಗಳು

ಅವರ ಕಾಲದಲ್ಲಿ ಸ್ಥಾಪಿತವಾದ ಕಛೇರಿಗಳು ೧೮. ಆ ಕಛೇರಿಗಳು ಮೊಗಲ್ ಬಾದ್‌ಶಹರ ಆಳ್ವಿಕೆಯಲ್ಲಿ ಕಾಲದಲ್ಲಿ ಅನುಸರಿಸುತ್ತಿದ್ದ ರೀತಿಯಲ್ಲಿಯೇ ಸ್ಥಾಪಿತವಾದವು. ಅವುಗಳೆಂದರೆ, ೧) ದಿವಾನ್ ಕಛೇರಿ, ೨) ಖಿಲ್ಲೇ ಕಛೇರಿ, ೩)ಕಟ್ಟೆ ಕಛೇರಿ, ೪) ಬಾರ್‌ಗೀರ್ ಕಛೇರಿ, ೫) ಸಂದಲ್ ಕಛೇರಿ, ೬) ಸವಾರ್ ಕಛೇರಿ, ೭) ತೋಪಿಖಾನ್ ಕಛೇರಿ, ೮) ಕಮಿಟ ಕಛೇರಿ, ೯)ಪಿರ್ಯಾದು ಕಛೇರಿ, ೧೦)ಮೋದಿಖಾನೆ, ೧೧) ಕಂದಾಚಾರ್ ಕಛೇರಿ, ೧೨)ಬಾರ್ ಕಛೇರಿ, ೧೩)ಭಾರಿಘಾಟ್ ಕಛೇರಿ, ೧೪) ದುಯುಬಾರ್ ಕಛೇರಿ, ೧೫)ದಿನಶಿ ಕಛೇರಿ ೧೬)ಅಂಚೆ, ಅಮೃತ ಮಹಲ್ ಕಛೇರಿ, ೧೭)ಪಾರ್ಗೀದ್ ಪೇಷ್ ಕಛೇರಿ, ೧೮) ಜಿಲ್ಲಾ ಕಛೇರಿ.[೧೫೬] ಆದರೆ ಈ ೧೮ ಕಛೇರಿಗಳು ಅಂದರೆ ಅಠಾರ ಕಛೇರಿಗಳು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಇತ್ತೆಂದು ಹಯವದನರಾಯರು ಅಭಿಪ್ರಾಯಪಡುತ್ತಾರೆ. "೧೬೮೬ ರಿಂದ ೧೭೦೪ ರ ವರೆಗೆ ಆಡಳಿತ ನಡೆಸಿದ ಚಿಕ್ಕದೇವರಾಜ ಒಡೆಯರ್ ರವರ ಕಾಲದಲ್ಲಿ ಹಿಂದೆ ಇದ್ದ ಆಡಳಿತ ಪದ್ಧತಿಯನ್ನೇ ಮುಂದು ವರಿಸಿಕೊಂಡು ಬರಲಾಯಿತು. ಯಾವುದೇ ದೊಡ್ಡ ಬದಲಾವಣೆಗಳನ್ನು ಮಾಡಲಿಲ್ಲ. ೧೭೦೦ರ ಆಸುಪಾಸಿನಲ್ಲಿ ಮೊಗಲರ ಆಡಳಿತ ಪದ್ಧತಿಯಲ್ಲಿ ಇದ್ದಂತೆ ೧೮ ಆಡಳಿತ ಕಛೇರಿಗಳನ್ನು (ಚಾವಡಿ) ಸಂಘಟಿಸ ಲಾಯಿತು."[೧೫೭] ಕಂದಾಚಾರ ಕಛೇರಿಯು ಪೊಲೀಸ್ ಕರ್ತವ್ಯಗಳ ಪ್ರಧಾನ ಕಛೇರಿಯಾಗಿತ್ತು.

ಮುಮ್ಮಡಿ ಕೃಷ್ಣರಾಜ ಮಹೀಪಾಲರ ಕಾಲದಲ್ಲಿ ನೇಮಕವಾಗಿದ್ದ ರಕ್ಷಣಾಧಿಕಾರಿಗಳ ಹೆಸರು ಹೀಗಿದೆ. ೧)

ಕಂದಾಚಾರ್ ಕಛೇರಿ ಭಕ್ಷಿ–ಚೆಲುವೇ ಅರಸು, ೨) ಬಾರ್ ಕಛೇರಿ ಭಕ್ಷಿ –ಬ್ಯಾಳಿ ರಾಮರಾಯರು, ೩)ಕಂದಾಚಾರ್ ಕಛೇರಿ ಭಕ್ಷಿ–ಜೀವುಣ ರಾಯರು, ೪) ಅಷ್ಟಗ್ರಾಮದ ಪೌಜುದಾರ–ವೆಂಕಟರಾಮಯ್ಯ, ೫)ನಗರ ಪೌಜುದಾರ – ಸರ್ವೋತ್ತಮ ರಾಯ, ೬) ಕಮರೀಭಕ್ಷಿ –ಬಾಕರ್‌ಸಾಬು ಮತ್ತು ಮೇಖರಿ ಮೌದೀನ್ ಸಾಬು, [೧೫೮]

ಮುಮ್ಮಡಿ ಶ್ರೀ.ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯಲ್ಲಿ ಅವರ ಆಡಳಿತಕ್ಕೆ ಒಳಪಟ್ಟಿದ್ದ ೧೨೫ ತಾಲೂಕು ಗಳಿಂದ ಕಂದಾಯ ವಗೈರೆಗಳನ್ನು ವಸೂಲಿ ಮಾಡಲು ೬ ಪೌಜುದಾರರುಗಳನ್ನು ನೇಮಕ ಮಾಡಿದರು. ಒಂದು ಗಡಿಗೆಯಲ್ಲಿ (ಒಂದು ಗಡಿಗೆ, ಒಂದು ತಾಲೂಕು ಸಮ) ಒಬ್ಬ ಸುಬೇದಾರ, ಇಬ್ಬರು ಶಿರಸ್ತೇದಾರರು, ಇಬ್ಬರು ಗುಮಾಸ್ತರು, ಮುನಿಷಿಗಳು, ರಾಯಸದವರು, ಬಹುಮಂದಿ ವಾಲೇಕಾರರು. ಇದ್ದರು. ಒಂದು ಖಿಲ್ಲೆಗೆ ಒಬ್ಬ ಖಿಲ್ಲೇದಾರರು, ಇಬ್ಬರು ಶಿರಸ್ತೇದಾರರು, ಅಂಚೆ ಊಳಿಗದವರಿಗೆ ಗೊತ್ತುಗಾರರಾಗಿ ಅಂಚೆ ಗುರಿಕಾರರು, ಖೊತ್ವಾಲ ಚಾವಡಿಯಂತಹ ಅನೇಕ ಚಾವಡಿಗಳು ಇದ್ದು, ಗ್ರಾಮಕ್ಕೆ ಶಾನುಬೋಗ, ಶೇಖದಾರ ಹೀಗೆ ಅನೇಕ ಸೇವಾ ಜನಗಳನ್ನು ನೇಮಕ ಮಾಡಿದ್ದರು. ಮುಮ್ಮಡಿ ಕೃಷ್ಣರಾಜ ಮಹೀಪಾಲರು ತಮ್ಮ ಆಳ್ವಿಕೆಯ ಕಾಲದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಿಂದ ತಮ್ಮ ಕಾಲದವರೆಗೆ ಅರಮನೆಯ ನಾನಾ ಇಲಾಖೆಗಳಲ್ಲಿ ಸೇವೆ ಮಾಡಿದ ಅರಸುಗಳು ಮುಖ್ಯವಾಗಿ ಅಧಿಕಾರಿಗಳು, ಕಲಾವಿದರು, ವಿದ್ವಾಂಸರು, ಪುರೋಹಿತರು, ಋತ್ವಿಕರು ಹಾಗೂ ಇತರ ವ್ಯಕ್ತಿಗಳ ಬಾವಚಿತ್ರವನ್ನು ಚಿತ್ರಾಗಾರರಿಂದ ರೇಖಾಚಿತ್ರದ ರೂಪ ದಲ್ಲಿ ಚಿತ್ರಿಸಿ ಅವುಗಳನ್ನು ಒಂದು ದಾಖಲೆ ಪುಸ್ತಕದಲ್ಲಿ ಅಳವಡಿಸಿ ಅದನ್ನು ಮೈಸೂರಿನ ಜಗನ್ಮೋಹನ ಪ್ಯಾಲೇಸ್‌ನಲ್ಲಿ ಇಟ್ಟಿದ್ದರು. ಅದು ಈಗಲೂ ಅಲ್ಲಿ ಇದೆ. ಈ ಪೈಕಿ ಕಂದಾಚಾರ ಭಕ್ಷಿ ಚೆಲುವೇರಾಜ ಅರಸುರವರ ಚಿತ್ರ ಸಹ ಅದರಲ್ಲಿ ಇದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೆಲವು ಕಛೇರಿ, ಇಲಾಖೆಗಳಲ್ಲಿ ನೇಮಕವಾಗಿದ್ದ ಸಿಬ್ಬಂದಿ ವರ್ಗದ ವಿವರಗಳ ಪಟ್ಟಿ.

ಇಲಾಖೆ	ನೌಕರರು	ಮಾಹೇಯಾನ ಖರ್ಚು ಆಗುತ್ತಿದ್ದ ಒಟ್ಟು ವೇತನ ಕಂಠೀರಾಯ ಪಗೋಡ	ಫನಾಮ್
ಅರಮನೆ	೫೧೬೯	೧೨೩೦೪	೮
ಬಾರ್ ಕಛೇರಿ	೯೦೩	೧೯೯೫	೧
ಬಾಡಿಗಾರ್ಡ್(ಅಂಗರಕ್ಷಕ ಪಡೆ)	೬೯೫	೯೪೮೯	೨
ಜಿಲ್ಲಾ ಕಚೇರಿ	೧೨೨೭	೨೮೩೫	೩
ಖಿಲ್ಲೆ ಕಛೇರಿ	೧೦೧೫	೧೩೬೨	೮
ಶಾಗಿರ್ದ್ ಪೇಶ್ ಕಛೇರಿ	೬೬೯	೧೨೪೬	೩
ಖಜಾನೆ	೪೪೧	೪೦೨೩	೮
ಒಟ್ಟು	೧೦೧೧೯	೨೬೦೭೪	೩೭
		(ಸುಮಾರು ೭೮,೦೦೦ ರೂಗಳು)	

೪.೭ : ಮುಮ್ಮಡಿ ಕೃಷ್ಣರಾಜ ಒಡೆಯರ ನೇರ ಆಡಳಿತದಲ್ಲಿ ಇಲಾಖೆಯಲ್ಲಾದ ಬದಲಾವಣೆಗಳು

ಪೂರ್ಣಯ್ಯನವರ ರಾಜೀನಾಮೆ ನಂತರ ತೆರವಾಗಿದ್ದ ದಿವಾನರ ಹುದ್ದೆಗೆ ಪೂರ್ಣಯ್ಯರ ಸಂಬಂಧಿಯಾಗಿದ್ದ ರಾಮರಾವ್‌ರವರನ್ನು ನೇಮಿಸಲಾಯಿತು. ಕ್ರಿಶ ೧೮೧೧ ರಿಂದ ೧೮೫೧ ರ ವರೆಗೆ ರಾಮರಾವ್ ಮೈಸೂರು ಸಂಸ್ಥಾನದ ದಿವಾನರಾಗಿದ್ದರು. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಅಶ್ವದಳದ ದಳಪತಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದ ಅವರನ್ನು ಪೂರ್ಣಯ್ಯ ನಗರದ 'ಫೌಜುದಾರ'ರಾಗಿ ನೇಮಿಸಿದ್ದರು. ಕ್ರಿಶ ೧೮೦೫ರವರೆಗೆ ಅವರು ನಗರದ 'ಫೌಜುದಾರ' ರಾಗಿದ್ದರು. 'ಫೌಜುದಾರ'ನೆಂದರೆ ಕಾನೂನು, ಸುವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ಜವಾಬ್ದಾರಿಯನ್ನೂ ಸಹ ಹೊಂದಿರುವ ಅಧಿಕಾರಿ ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. 'ಫೌಜುದಾರರು ಸೇನಾನಾಯಕನ ಜೊತೆಗೆ

ಪೊಲೀಸ್ ಕಾರ್ಯಗಳ ಮೇಲ್ವಿಚಾರಣೆ ಮಾಡುತ್ತಿದ್ದರು.'[೧೫೯] ಎಂದು ಎಂ.ಶಾಮರಾವ್ ಅಭಿಪ್ರಾಯಪಡುತ್ತಾರೆ.

ರಾಜನ ನಂತರ ಆತನ ಕೈಕೆಳಗೆ ಅವರೋಹಣ ಕ್ರಮದಲ್ಲಿ 'ದಿವಾನ'ರು–'ಫೌಜುದಾರ'ರು –'ಅಮಿಲ್‌ದಾರ'ರು ಇರುತ್ತಿದ್ದರು. 'ದಿವಾನ'ರು ಸಂಪೂರ್ಣ ಆಡಳಿತದ ಮುಖ್ಯಸ್ಥರಾಗಿದ್ದರು. ಹಣಕಾಸು ಇಲಾಖೆಯ ಆಡಳಿತವನ್ನು ನೇರವಾಗಿ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಿದ್ದರು. ಸಾಮಾನ್ಯವಾಗಿ 'ಫೌಜುದಾರ', 'ಅಮಲ್‌ದಾರ' ಮತ್ತು ಇತರ ಹುದ್ದೆಗಳನ್ನು 'ದಿವಾನ'ರ ಶಿಫಾರಸ್ಸಿನ ಮೇರೆಗೆ ನೇಮಿಸಲಾಗುತ್ತಿತ್ತು. ಈ ಅಧಿಕಾರಿಗಳನ್ನು ಸೇವೆಯಿಂದ ತೆಗೆಯಲು ಅಥವಾ ವಜಾ ಗೊಳಿಸಲು 'ದಿವಾನ'ರಿಗೆ ಅಧಿಕಾರ ಇತ್ತು. ಆದರೆ ಅದಕ್ಕೆ ಮಹಾರಾಜರ ಅನುಮತಿಬೇಕಿತ್ತು. 'ಫೌಜುದಾರ'ರ ಕರ್ತವ್ಯ ಗಳೆಂದರೆ, ನಿಗಧಿತ ಸಮಯಕ್ಕೆ ಕಂದಾಯವನ್ನು (ತೆರಿಗೆ) ವಸೂಲಿ ಮಾಡುವುದು ಮತ್ತು ರೈತರ ಸಮಸ್ಯೆಗಳನ್ನು ಬಗೆ ಹರಿಸುವುದಾಗಿತ್ತು. ಪ್ರತೀ ತಾಲೂಕುಗಳಲ್ಲಿ 'ಅಮಲ್‌ದಾರ'ರು ಈ 'ಫೌಜುದಾರ'ರಿಗೆ ಅವರ ಕರ್ತವ್ಯಗಳಲ್ಲಿ ನೆರವಾಗು ತ್ತಿದ್ದರು. ಪ್ರತಿಯೊಂದು ಕೃಷಿಯೋಗ್ಯ ಭೂಮಿಯಲ್ಲಿ ವ್ಯವಸಾಯ ಮಾಡಲಾಗಿದೆಯೇ ಎಂದು ನೋಡಿ ಕೊಳ್ಳುವುದು ಈತನ ಇನ್ನೊಂದು ಪ್ರಮುಖ ಕರ್ತವ್ಯವಾಗಿತ್ತು. ಈ 'ಫೌಜುದಾರ'ನ ಕೈಕೆಳಗೆ ಹಲವಾರು ಶೇಖ್‌ದಾರರುಗಳು ಇರುತ್ತಿದ್ದರು. ಇವರುಗಳ ಕರ್ತವ್ಯಗಳೆಂದರೆ ಕೃಷಿಯ ಮೇಲ್ವಿಚಾರಣೆ, ಕಂದಾಯ ವಸೂಲಿ ಮಾಡುವುದು ಮತ್ತು ಪಂಚಾಯತಿಯ ಸಹಾಯ ಸಹಿತವಾಗಿ ಅಥವಾ ರಹಿತವಾಗಿ 'ಅಮಲ್‌ದಾರ'ರು ಕೂಡ ನ್ಯಾಯಾಂಗದ ಕರ್ತವ್ಯವನ್ನು ಮಾಡುತ್ತಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ನೇರ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ಒಟ್ಟು ಆರು ಫೌಜುದಾರ ಗಳಿದ್ದವು. ೧೨೫ ತಾಲೂಕುಗಳನ್ನು ದಕ್ಷತೆಯಿಂದ ನೋಡಿಕೊಳ್ಳಲು ಸ್ಥಾಪಿತವಾದ ೬ ಫೌಜುದಾರಿಗಳ ವಿವರ ಈ ರೀತಿ ಇದೆ. ೧) ಅಷ್ಟ ಗ್ರಾಮದ ತುಕಡಿ –ಇದರಲ್ಲಿ ೨೬ ತಾಲೂಕುಗಳು ಇದ್ದವು, ೨) ಬೆಂಗಳೂರು ತುಕಡಿ ಇದರಲ್ಲಿ ೨೮ ತಾಲೂಕುಗಳು ಇದ್ದವು, ೩) ಚಿತ್ರದುರ್ಗದ ತುಕಡಿ – ಇದರಲ್ಲಿ ೧೩ ತಾಲೂಕುಗಳು ಇದ್ದವು, ೪) ಮುಂಜಿರಾಬಾದ್ ತುಕಡಿ –ಇದರಲ್ಲಿ ೧೩ ತಾಲೂಕುಗಳು ಇದ್ದವು, ೫) ನಗರದ ತುಕಡಿ –ಇದರಲ್ಲಿ ೨೪ ತಾಲೂಕುಗಳು ಇದ್ದವು, ೬) ಮದ್ದಗಿರಿ ತುಕಡಿ–ಇದರಲ್ಲಿ ೧೯ ತಾಲೂಕುಗಳು ಇದ್ದವು. ಈ ತಾಲೂಕುಗಳಿಂದ ವಸೂಲಾದ ಕಂದಾಯ ವಗೈರೆಗಳನ್ನು ರಾಜಬೊಕ್ಕಸಕ್ಕೆ ಸಲೀಸಾಗಿ ಜಮಾಮಾಡಲು ಆರು ಫೌಜುದಾರರನ್ನು ನೇಮಕಮಾಡಲಾಗಿತ್ತು.[೧೬೦]

'ಫೌಜುದಾರಿ'ಗಳ ಆಡಳಿತವನ್ನು 'ಫೌಜುದಾರ್'ಗಳು ನಿರ್ವಹಿಸುತ್ತಿದ್ದವು. ಪ್ರತೀ 'ಫೌಜುದಾರಿ'ಗಳ 'ಫೌಜುದಾರ್' ಕಛೇರಿಗಳಲ್ಲಿ 'ಶಿರಸ್ತೇದಾರ್'ರವರು, ಲೆಕ್ಕ ಮತ್ತು ಮುನ್ಶಿಗಳ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಪ್ರತಿ ಯೊಂದು ಫೌಜುದಾರಿಗಳಲ್ಲೂ ಸೈನಿಕ ತುಕಡಿಗಳಿದ್ದವು. ಫೌಜುದಾರರು ತಮ್ಮ ಹತೋಟಿಯಲ್ಲಿನ ಫೌಜುದಾರಿಯ ಸೈನ್ಯದ ನಿರ್ವಹಣೆ ಯನ್ನು ನೋಡಿಕೊಳ್ಳುತ್ತಿದ್ದರು. ಪ್ರತಿಯೊಂದು ತಾಲೂಕುಗಳಲ್ಲಿ ಸುಬೇದಾರರುಗಳು, ಪೇಷ್ಕಾರರು, ಇಬ್ಬರು ಶಿರಸ್ತೇದಾರರು, ಕಾರಕೂನರು, ಮುನ್ಶಿಗಳು, ಅಂಚೆ ಮುತ್ಸದ್ದಿಗಳು, ಕೊತ್ವಾಲರು, ಚಾವಡಿಯವರು ಮತ್ತು ಇತರೇ ಕಾರ್ಯದವರು ಇರುತ್ತಿ ದ್ದರು. ಆಡಳಿತ ವ್ಯವಸ್ಥೆಯಲ್ಲಿ ಗ್ರಾಮವು ಆಡಳಿತದ ಕೊನೆಯ ಘಟಕವಾಗಿತ್ತು. ಸಾಮಾನ್ಯವಾಗಿ ಗ್ರಾಮಗಳಲ್ಲಿನ ಆಡಳಿತ ವನ್ನು ಪಟೇಲ ಅಥವಾ ಊರಿನ ಗೌಡ, ಶಾನುಭೋಗ ಇವರನ್ನೊಳಗೊಂಡ ಗ್ರಾಮಪಂಚಾಯತಿ (ಪಂಚಪ್ರಧಾನ) ನಿರ್ವಹಿಸುತ್ತಿತ್ತು.[೧೬೧]

ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಸಣ್ಣದಾದ ಆದರೆ ಆಯ್ದ ಕೆಲವು ಪಧಾತಿಗಳನ್ನು, ಅಶ್ವದಳದವರನ್ನು ಆಯ್ಕೆ ಮಾಡಿ 'ಕಂದಾಚಾರ'ದ ಸೇವಕರಾಗಿ (ಪೊಲೀಸ್) ಸೇರಿಸಿದರು. ಯುರೋಪಿಯನ್ ಸೈನಿಕರನ್ನು ಬಿಟ್ಟರೆ ಈ ಕಂದಾಚಾರದ ಸೇವಕರು ಅತ್ಯಂತ ಶಿಸ್ತಿನಿಂದ ಇರುತ್ತಿದ್ದರು.[೧೬೨] ಕನಿಷ್ಟ ಒಂದು ಕುಟುಂಬದಿಂದ ಒಬ್ಬರು ಈ ಕಂದಾಚಾರ ದಳದಲ್ಲಿ ಕೆಲಸಕ್ಕೆ ಸೇರುತ್ತಿದ್ದರು. ಅವರ ಕೆಲಸಗಳು ಸ್ವಲ್ಪ ಮಿಲಿಟರಿ (ಸೈನಿಕ) ಕೆಲಸವಾದರೆ, ಇನ್ನು ಸ್ವಲ್ಪ ಸಿವಿಲ್ ಕಾರ್ಯಗಳು ಆಗಿದ್ದವು.

ಅವರು ಹಳ್ಳಿಗಳನ್ನು ಕಾಯುತ್ತಿದ್ದರು. ಕೆಲವೊಮ್ಮೆ ಅಂಚೆಪೇದೆಯ ಕೆಲಸವನ್ನು ಸಹ ಮಾಡುತ್ತಿದ್ದರು. ಪ್ರಾಚೀನ ಹಿಂದೂ ಕಾನೂನು ಸಂಪ್ರದಾಯ ಆಚರಣೆಗಳಂತೆ ನ್ಯಾಯಾಂಗ ಆಡಳಿತ ನಡೆಯಲು ಲಕ್ಷ್ಯ ನೀಡಲಾಗಿತ್ತು. ಆದರೆ ನ್ಯಾಯಾಂಗಕ್ಕೆ ಪ್ರತ್ಯೇಕವಾದ ಆಡಳಿತ ವ್ಯವಸ್ಥೆ ಇರಲಿಲ್ಲ. ನ್ಯಾಯಾಂಗದ ಕಾರ್ಯಗಳನ್ನು ಸರಕಾರದ ಕಾರ್ಯಾಂಗದ ಅಧಿಕಾರಿಗಳೇ ಮಾಡುತ್ತಿದ್ದರು.[೧೬೩]

ಮೂರನೇ ಕೃಷ್ಣರಾಜ ಒಡೆಯರ್‌ರವರ ಅಡಿಯಲ್ಲಿ ರಚಿಸಿದ ಸರಕಾರವು ವೈಯಕ್ತಿಕ ನಿರಂಕುಶ ಪ್ರಭುತ್ವದಂತೆ ಇತ್ತು. ಶ್ರೀರಂಗಪಟ್ಟಣದ ಒಪ್ಪಂದದಂತೆ ಕೆಲವು ನಿಯಮಿತ ಸಂಪ್ರದಾಯ, ಕಟ್ಟುಪಾಡುಗಳು ಹಾಗೂ ಋಣದ ಹೊರತಾಗಿ ನಿರಂಕುಶ ಪ್ರಭುತ್ವವಾಗಿತ್ತು. 'ಅಂಚೆಭಕ್ಷಿ' ಅಥವಾ ಅಂಚೆ ಇಲಾಖೆಯ ಮುಖ್ಯಸ್ಥನು ರಾಜನಿಗೆ ಬಂದಿರುವ ಎಲ್ಲಾ ಪತ್ರ ಗಳನ್ನು ಮುಟ್ಟಿಸುತ್ತಿದ್ದನು. ಕೆಲವೊಮ್ಮೆ ಪತ್ರಗಳಲ್ಲಿ ಇರುವ ವಿಷಯಗಳ ಬಗ್ಗೆ ಕೂಡಲೇ ಆದೇಶ ಹೊರಡಿಸಲಾಗುತ್ತಿತ್ತು. ಅತ್ಯಂತ ಮುಖ್ಯವಾದ ವಿಷಯಗಳಿದ್ದರೆ ಮಂತ್ರಿಗಳೊಂದಿಗೆ ಚರ್ಚಿಸಿ ತೀರ್ಮಾನ ತೆಗೆದು ಕೊಳ್ಳಲಾಗುತ್ತಿತ್ತು. ರಾಜ್ಯದ ಮೂಲೆ ಮೂಲೆಯಲ್ಲಿ ನಡೆಯುವ ಪ್ರಮುಖ ಆಗುಹೋಗುಗಳ ಬಗ್ಗೆ 'ಅಂಚೆ ಭಕ್ಷಿ' ಯು ತಾಲೂಕುಗಳಲ್ಲಿ ಇರುವ 'ಅಂಚೆ ಮುತ್ಸದ್ಧಿ'ಯಿಂದ ಅಥವಾ ಅಂಚೆ ಮುಖ್ಯಸ್ಥನಿಂದ ಮಾಹಿತಿಗಳನ್ನು ತರಿಸಿ ಕೊಳ್ಳುತ್ತಿದ್ದ. ತುರ್ತು ಮಾಹಿತಿಗಳನ್ನು ಶೀಘ್ರ ಅಂಚೆ (Express Tappal) ಮೂಲಕ ಕಳುಹಿಸಲಾಗುತ್ತಿತ್ತು.[೧೬೪] ಅಂದರೆ 'ಅಂಚೆಭಕ್ಷಿ' ಇಲ್ಲಿ ಗುಪ್ತಚರ ಇಲಾಖೆ ಯ ಕೆಲಸವನ್ನು ಸಹ ಮಾಡುತ್ತಿದ್ದ ಎಂದು ಅರ್ಥವಾಗುತ್ತವೆ. ಕಂದಾಚಾರ ಎಂಬ ಇಲಾಖೆಯು ಚಿಕ್ಕದೇವರಾಜರ ಒಡೆಯರ ಕಾಲದಿಂದಲೂ ರೂಡಿಯಲ್ಲಿದ್ದು, ಅದನ್ನೇ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಮುಂದುವರಿಸಿಕೊಂಡು ಬಂದಿದ್ದಾರೆ ಎಂಬುದು ಡಾ: ಆರ್.ಗೋಪಾಲ್ ಮತ್ತು ಡಾ: ಎಸ್.ನರೇಂದ್ರ ಪ್ರಸಾದ್‌ರವರ ಅಭಿಪ್ರಾಯವಾಗಿರುತ್ತದೆ. ಚಿಕ್ಕ ದೇವರಾಜ ಒಡೆಯರ್‌ರವರು ೧೬೪೫ ರಲ್ಲಿ ಜನಿಸಿದ್ದು, ೧೬೭೩ ರಿಂದ ೧೭೦೪ರವರೆಗೆ ಆಡಳಿತವನ್ನು ನಡೆಸಿದ್ದರು. ಅಂದರೆ ಈ ಕಾಲದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಕಂದಾಚಾರ ಎಂಬ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತೆಂದು ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ರಣಧೀರ ಕಂಠೀರವ ನರಸರಾಜ ಒಡೆಯರ್‌ರವರ ಕಾಲದಲ್ಲಿ (ಜನನ ೧೬೧೫, ಆಳ್ವಿಕೆಯ ಕಾಲ ೧೬೩೮–೧೬೫೯) ಅವರ ಕಾಲದಲ್ಲಿ ಮೈಸೂರು ಕೋಟೆಯನ್ನು ಬಲಪಡಿಸಿ, ಪಿರಂಗಿಗಳನ್ನು ಇರಿಸಿ ಗಡಿವೊಂದಕ್ಕೆ ಒಬ್ಬ ಸುಬೇದಾರ, ಇಬ್ಬರು ಕರಣಿಕರು, ಗುಮಾಸ್ತರು, ಠಾಣೇದಾರರು ಮುಂತಾದ ಅಧಿಕಾರಿಗಳನ್ನು ನೇಮಕ ಮಾಡಿದರು.[೧೬೫] ಎಂದು ಎ.ಎನ್.ನಿರಂಜನರಾಜ ಅರಸುರವರು ತಿಳಿಸಿರುತ್ತಾರೆ. ಠಾಣೇದಾರ ಎಂಬ ಶಬ್ದವು ಪೊಲೀಸ್ ಠಾಣೆಗಳಿಗೆ ಸಂಬಂಧಿಸಿದ ಶಬ್ದವಾಗಿದೆ. ಠಾಣೆ ಅಥವಾ ಥಾಣೆ ಎಂಬ ಶಬ್ದವು ಮೊಗಲರ ಕಾಲದಿಂದಲೂ ಬಳಕೆಯಲ್ಲಿ ಬಂದಿದೆ. ಗಡಿ ಪ್ರದೇಶದಲ್ಲಿ ರಕ್ಷಣಾ ಠಾಣೆಗಳು ಇರುವುದು ಅನೇಕ ರಾಜಮಹಾರಾಜರುಗಳ ಚರಿತ್ರೆಗಳಲ್ಲಿ ನಮೂದಾಗಿದೆ.

೪.೮ : ಕಮಿಷನರುಗಳ ಆಡಳಿತದಲ್ಲಿ ಮೈಸೂರು ಪೊಲೀಸ್

೧೮೩೧–೮೧ ರ ವರೆಗೆ ಮೈಸೂರು ಬ್ರಿಟೀಷ್ ಕಮಿಷನರ್‌ರವರುಗಳ ಆಡಳಿತಕ್ಕೆ ಒಳಪಟ್ಟಿತ್ತು. ೧೮೩೦ ರಲ್ಲಿ ಮೈಸೂರು ರಾಜ್ಯದ ವಾಯುವ್ಯ ಪ್ರಾಂತದ ನಗರ ಸೀಮೆಯಲ್ಲಿ ಗಲಾಟೆ ನಡೆಯಿತು. ಈ ಭಾಗದಲ್ಲಿ ಕೆಳದಿಯ ನಾಯಕರು ಆಳುತ್ತಿದ್ದರು. ಈ ನಾಯಕರು ಮೈಸೂರು ರಾಜವಂಶಕ್ಕೆ ನಿಷ್ಠರಾಗಿರಲಿಲ್ಲ. ಬೂದಿ ಬಸವಪ್ಪನೆಂಬವನು ನಾಯಕ ಪಟ್ಟಕ್ಕೆ ಹಕ್ಕುದಾರನೆಂದು ನಟಿಸಿ ಹೇಳಿಕೊಳ್ಳುತ್ತಾ ಹಾವಳಿ ಎಬ್ಬಿಸಿದನು. ರೈತರನ್ನು ಕೆರಳಿಸಿ ದಂಗೆಯ ಮುಂದಾಳಾದನು. ಗಲಬೆಯ ಪ್ರದೇಶಕ್ಕೆ ಮೈಸೂರು ಸೈನ್ಯವೂ ಅದಕ್ಕೆ ನೆರವಾಗಿ ಸಹಾಯಕ ಸೈನ್ಯವೂ ಹೋಗಿ ದಂಗೆಯನ್ನಡಗಿಸಿದವು. ಈ ದಂಗೆಗೆ ಇದ್ದ ಕಾರಣ ಸಂದರ್ಭಗಳೇನೆಂಬುದನ್ನು ಶೋಧಿಸಲು ಒಂದು ವಿಚಾರಣಾ ಸಮಿತಿ ನೇಮಕವಾಯಿತು. ಈ ಸಮಿತಿಯ ಇತ್ಯರ್ಥ ವೇನೆಂಬ ವರದಿ ಹೊರಬೀಳುವುದರೊಳಗಾಗಿ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಮೈಸೂರು ರಾಜ್ಯ

ವನ್ನು ಬ್ರಿಟೀಷರ ನೇರವಾದ ಆಡಳಿತಕ್ಕೋಸ್ಕರ ಸ್ವಾಧೀನಪಡಿಸಿಕೊಳ್ಳಬೇಕೆಂದು ನಿರ್ಧರಿಸಿದನು. ಹೀಗೆ ೧೮೩೧ ರಲ್ಲಿ ರಾಜ್ಯವು ಮುಮ್ಮಡಿ ಕೃಷ್ಣರಾಜ ಒಡೆಯರ ಕೈತಪ್ಪಿ ಹೋಯಿತು. ೧೮೩೧ ರಿಂದ ೧೮೮೧ ರವರೆಗೆ ಮೈಸೂರನ್ನು ಬ್ರಿಟೀಷ್ ಕಮಿಷನರುಗಳು ಆಳಿದರು.[೬೬] ಲಾರ್ಡ್ ವಿಲಿಯಂ ಬೆಂಟಿಂಕ್‌ನು ೧೭೯೯ ರ ಒಪ್ಪಂದದ ನಾಲ್ಕನೇ ವಿಭಾಗದ ಪ್ರಕಾರ ಮೈಸೂರು ದೇಶದ ರಾಜ್ಯಾಡಳಿತವನ್ನು ಪರಿಸ್ಥಿತಿಗೆ ಕಟ್ಟುಬಿದ್ದು ತಾತ್ಕಲಿಕವಾಗಿ ತನ್ನ ವಶಕ್ಕೆ ತೆಗೆದುಕೊಂಡನು. ಗವರ್ನರ್ ಜನರಲ್ ಕರ್ನಲ್ ಬ್ರಿಕ್ಸ್‌ನನ್ನು ಸೀನಿಯರ್ ಕಮಿಷನರ್‌ನನ್ನಾಗಿ, ಸಿ.ಎಂ ಲಿಪಿಂಗ್ಟನ್‌ನನ್ನು ಜ್ಯೂನಿಯರ್ ಕಮಿಷನ್‌ರನನ್ನಾಗಿ ನೇಮಿಸಲಾಯಿತು.

ಮೈಸೂರಿನಲ್ಲಿ ಕಮಿಷನರ್‌ಗಳ ಆಡಳಿತ ಬಂದೊಡನೆ ದಿವಾನರಿಗೆ ಇದ್ದ ವ್ಯಾಪಕ ಅಧಿಕಾರವನ್ನು ಮೊಟಕು ಗೊಳಿಸಲಾಯಿತು. ಆರ್ಥಿಕ ಇಲಾಖೆಗೆ ದಿವಾನರು ಮುಖ್ಯಸ್ಥರಾಗಿರುವುದನ್ನು ತಡೆಯಲಾಯಿತು. ಇವರನ್ನು feryad (ಫೆರ್ಯಾದ್) ಮತ್ತು (Sadar) ಸಾದರ್ ಕಛೇರಿಗಳ ಮುಖ್ಯಸ್ಥರನ್ನಾಗಿ ಮಾಡಲಾಯಿತು. "ಸೆಕ್ರೆಟರಿಯೇಟ್" ಅಥವಾ "ಹುಜೂರ್ ಕಛೇರಿ" ಅಸ್ತಿತ್ವಕ್ಕೆ ಬಂದಿತು. ಪ್ರತಿಯೊಂದು ಲೆಕ್ಕಪತ್ರಗಳನ್ನು ಇಂಗ್ಲೀಷ್ ಕ್ಯಾಲೆಂಡರ್‌ಗೆ ಅನುಗುಣವಾಗಿ ನಿರ್ವಹಿಸಲಾಯಿತು. ಬ್ರಿಟೀಷರು ಭಾರತದಲ್ಲಿ ಕೇವಲ ವ್ಯಾಪಾರ, ಆಡಳಿತವನ್ನಷ್ಟೇ ನಡೆಸಿದಲ್ಲ, ಭಾರತೀಯರ ಸಾಂಸ್ಕೃತಿಕ ಬದುಕಿನ ಮೇಲೆ ಭಾರಿ ದೊಡ್ಡ ಆಘಾತವನ್ನು ಹಂತಹಂತವಾಗಿ ನೀಡಿದರು. ತಮ್ಮ ಕ್ರಿಶ್ಚಿಯಾನಿಟಿಯ ಛಾಪನ್ನು ಭಾರತೀಯರ ಬದುಕಿನ ಎಲ್ಲಾ ರಂಗಗಳ ಮೇಲೆ ಬೀರಿದರು. ಇದರಲ್ಲಿ ಬ್ರಿಟೀಷರಿಗೆ ಸ್ಥಾಪಿತ ಹಿತಾಸಕ್ತಿಗಳಿದ್ದವು. ತಮ್ಮ ಪ್ರಭುತ್ವವನ್ನು ಸಾಧಿಸವುದು, ಭಾರತೀಯರನ್ನು ಒಂದೆಡೆ ಸೇರಿಸಬಲ್ಲ ಅವರ ಸಂಸ್ಕೃತಿ, ಸಂಪ್ರದಾಯಗಳ ಮೇಲೆ ಪೆಟ್ಟು ಕೊಡುವುದು ಎರಡೂ ಉದ್ದೇಶಗಳು ಅಡಗಿದ್ದವು. ಇದಕ್ಕೆ ಒಂದು ಉದಾಹರಣೆ ಏನೆಂದರೆ, ಹಿಂದೂಗಳು ವಾರ, ತಿಥಿ, ನಕ್ಷತ್ರ ಮತ್ತು ಸಂವತ್ಸರಗಳ ಆಧಾರದ ಮೇರೆಗೆ ಶಕ ವರ್ಷದ ಕ್ಯಾಲೆಂಡರ್ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆದರೆ ಬ್ರಿಟೀಷರು ಈ ಪದ್ಧತಿಯನ್ನು ರದ್ದುಪಡಿಸಿ ಇಂಗ್ಲೀಷ್ ಕ್ಯಾಲೆಂಡರ್ ಪದ್ಧತಿಯನ್ನು ಜಾರಿಗೆ ತಂದರು. ಶತಮಾನಗಳಿಂದ ಬೆಳೆದು ಬಂದ ಒಂದು ಸಂಪ್ರದಾಯಕ್ಕೆ ಪೆಟ್ಟುಕೊಟ್ಟು ಅದರ ನಾಶಕ್ಕೆ ಕಾರಣರಾದರು. ಇಡೀ ರಾಜ್ಯದ ಭೂಭಾಗಗಳನ್ನು ೪ ವಿಭಾಗಗಳಾಗಿ ವಿಭಾಗಿಸಲಾಯಿತು. ಲಾರ್ಡ್ ವಿಲಿಯಂ ಬೆಂಟಿಂಕ್‌ನು ೧೮೩೪ ರಲ್ಲಿ ಮೈಸೂರು ಆಡಳಿತವನ್ನು ಸುಧಾರಿಸಲು ಕೆಲವು ರಚನಾತ್ಮಕವಾದ, ಅಮೂಲ್ಯವಾದ ಸಲಹೆಗಳನ್ನು ಕೊಟ್ಟನು. ಇಡೀ ದೇಶವನ್ನು ೪ ಪ್ರಾದೇಶಿಕ ವಿಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗವು ಅಲ್ಲಿಯವರೆಗೆ ಇದ್ದ ಫೌಜುದಾರನಿಗೆ ಬದಲಾಗಿ ಒಬ್ಬ ಯುರೋಪಿಯನ್ ಸೂಪರಿಂಟೆಂಡೆಂಟ್‌ನ ಕೈಕೆಳಗೆ ಇರಬೇಕು. ಈ ಸೂಪರಿಂಟೆಂಡೆಂಟ್‌ರು ಕಮಿಷನರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದು, ಕಂದಾಯ, ದಂಡನೆ, ನಿರ್ಧಿಷ್ಟವಾದ ಕೆಲವು ನ್ಯಾಯತೀರ್ಮಾನಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡುವುದರ ಜೊತೆಗೆ ಸಿವಿಲ್ ಸರಕಾರದ ಪ್ರತಿಯೊಂದು ಶಾಖೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು. ತಾಲೂಕಿನ ಅಮಲ್‌ದಾರರು ಈ ಅಧಿಕಾರ ಚಲಾವಣೆಯಲ್ಲಿ ತಮ್ಮ ಕಂದಾಯ ಸಂಬಂಧಿ ಕಾರ್ಯದೊಡನೆ ಮೊದಲಿನಂತೆ ಪೋಲೀಸ್ ಶಾಖೆಯನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ನೋಡಿಕೊಳ್ಳಬೇಕೆಂದು ತೀರ್ಮಾನಿಸಿದನು.[೬೭] ಈ ೪ ವಿಭಾಗಗಳಲ್ಲಿ ಈ ಹಿಂದೆ ಕೆಲಸ ನಿರ್ವಹಿಸಿದ್ದ ಫೌಜುದಾರರುಗಳನ್ನು ತೆಗೆದುಹಾಕಿ ಯುರೋಪಿನ ಸೂಪರಿಂಟೆಂಡೆಂಟ್‌ಗಳನ್ನು ನಿಯೋಜಿಸಲಾಯಿತು. ಈ ಸೂಪರಿಂಟೆಂಡೆಂಟ್‌ಗಳು, ಕಂದಾಯ ಸಂಗ್ರಹಣೆ, ಮ್ಯಾಜಿಸ್ಟ್ರೇಯಲ್ ಕರ್ತವ್ಯಗಳು ಮತ್ತು ನ್ಯಾಯಾಂಗದ ಕೆಲವು ಜವಾಬ್ದಾರಿಗಳು, ಮತ್ತು ನಾಗರಿಕ ಸರಕಾರದ (Civil Govt) ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸಬೇಕಿತ್ತು. ಪ್ರಾಚೀನ ಕಾಲದಿಂದಲೂ ಬಂದ ವಿವಿಧ ಇಲಾಖೆಗಳನ್ನು ಮತ್ತು ಅವಶ್ಯ ಕಾರ್ಯನಿರ್ವಹಣೆಯನ್ನು ಹಾಗೆಯೇ ಉಳಿಸಿಕೊಂಡು ಬರಲಾಯಿತು. ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಯ ಫೌಜುದಾರರ ಕಾರ್ಯವಿಧಾನಗಳಿಗೆ

ನಿರ್ಬಂಧ ಹೇರಿ ನಿಗಧಿಪಡಿಸಲಾಯಿತು. ಅಮಿಲ್‌ದಾರನಿಗೆ ಇದ್ದ ಪೊಲೀಸ್ ಮತ್ತು ನ್ಯಾಯಾಂಗದ ಕರ್ತವ್ಯಗಳಿಗೆ ನಿರ್ಭಂದ ಹೇರಿ ಅವನ ಕರ್ತವ್ಯಗಳನ್ನು ನಿರ್ಧಿಷ್ಟಪಡಿಸಲಾಯಿತು.[೧೬೮] ಇದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ೧೮೩೪ಕ್ಕಿಂತ ಹಿಂದೆ ಮೈಸೂರಿನಲ್ಲಿ ಪೊಲೀಸ್ ಶಾಖೆ ಇತ್ತು. ಮತ್ತು ಕಂದಾಯ ಹಾಗೂ ರಕ್ಷಣೆ ಎರಡೂ ಕಾರ್ಯಗಳೂ ಅಮಲ್‌ದಾರರಿಗೆ ಇದ್ದವು. ಕಮಿಷನರ್‌ರ ಕೆಳಗೆ ಸೂಪರಿಂಟೆಂಡೆಂಟ್ ಇರುವ ವ್ಯವಸ್ಥೆ ಇಂದಿಗೂ ಮುಂದುವರಿದು ಬಂದಿದೆ.

ಕ್ರಿಶ ೧೮೩೧–೧೮೮೧ ರ ವರೆಗೆ ೫೦ ವರ್ಷಗಳ ಕಾಲ ಮೈಸೂರಿನಲ್ಲಿ ನೆಲೆಸಿದ ಬ್ರಿಟೀಷ್ ಕಮಿಷನ್‌ರುಗಳ ಆಡಳಿತ ಮಾದರಿ ಮೈಸೂರಿನ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ರಾಜ್ಯಾಡಳಿತದ ಎಲ್ಲಾ ಮುಖ್ಯ ವಿಷಯಗಳಲ್ಲಿ ಆಗ ಬಳಕೆಯಲ್ಲಿದ್ದ ಹಿಂದು ಪದ್ಧತಿಯು ಕ್ರಮೇಣ ಬ್ರಿಟೀಷ್ ಪದ್ಧತಿಗೆ ಮೂಲತ: ಬದಲಾಗುತ್ತಾ ಬಂದಿತ್ತು. ಗಣ್ಯವಾದ ಮತ್ತು ಉಳಿಸಿಕೊಳ್ಳಲು ಯೋಗ್ಯವಾದ ಎಲ್ಲಾ ಸಂಪ್ರದಾಯಗಳು ಮತ್ತು ಪದ್ಧತಿಗಳು ಯಾವ ಅಡ್ಡಿಯೂ ಇಲ್ಲದೇ ಮುಂದುವರಿಯಲು ಅವಕಾಶಪಡೆದವು. ಮತ್ತು ಅತೀ ಲಾಭದಾಯಕವಾದ ಸುಧಾರಣೆಗಳು ಆದ್ಯಂತವಾಗಿ, ಕ್ರಮಬದ್ಧವಾಗಿ ಜಾರಿಗೆ ಬಂದವು. ಇದರಿಂದ ೧೮೮೧ ರಲ್ಲಿ ಬ್ರಿಟೀಷ್ ಆಡಳಿತ ಕೊನೆಗೊಳ್ಳುವ ವೇಳೆಗೆ ಮೈಸೂರು ಸುವ್ಯವಸ್ಥಿತ, ಶಾಂತಿಯುತ ಮತ್ತು ಅತ್ಯುತ್ತಮ ಆಡಳಿತವನ್ನುಳ್ಳ ರಾಜ್ಯವಾಗಿ ರೂಪಗೊಂಡಿತ್ತು.[೧೬೯] ಅಂದರೆ ರಾಜ್ಯಾಡಳಿತ ಮುಖ್ಯ ವಿಷಯಗಳಲ್ಲಿ ರಕ್ಷಣೆಯು ಅತ್ಯಂತ ಮುಖ್ಯವಾದುದರಿಂದ, ಆಗ ಬಳಕೆಯಲ್ಲಿದ್ದ ಹಿಂದು ಪದ್ಧತಿಯ ರಕ್ಷಣಾ ವ್ಯವಸ್ಥೆಗಳ ಬದಲಿಗೆ ಕಾಲಕ್ರಮೇಣ ಬ್ರಿಟೀಷ್ ಪದ್ಧತಿ ಜಾರಿಗೆ ತರಲಾಯಿತು. ಸಾಮಾನ್ಯವಾಗಿ ಹೇಳುವುದಾದರೆ ಕಮಿಷನ್ ಆಡಳಿತದ ಸಮಗ್ರ ಕಾಲದಲ್ಲಿ ಎರಡು ವಿರುದ್ಧ ಉದ್ದೇಶ ಗಳು ಜಾರಿಯಲ್ಲಿದ್ದುದರ ಫಲವಾಗಿ ಬ್ರಿಟೀಷ್ ಕಾರ್ಯನೀತಿಯಲ್ಲಿ ಎರಡು ಪ್ರತ್ಯೇಕ ಅವಸ್ಥೆಗಳನ್ನು ಕಾಣಬಹುದು. ಸರಕಾರದ ಹಲವಾರು ಇಲಾಖೆಗಳಲ್ಲಿ ಮೇಲುಗೈ ಆಗಿದ್ದ ಕುತ್ಸಿತ ಅನ್ಯಾಯ ಗಳನ್ನು ಸುಧಾರಿಸುವುದು, ಶಾಂತಿ ಮತ್ತು ನೆಮ್ಮದಿಗಳನ್ನು ಉಂಟುಮಾಡುವುದು, ದೇಶದ ಮೂಲಸಂಪತ್ತನ್ನು ಅಭಿವೃದ್ಧಿ ಗೊಳಿಸುವುದು, ವ್ಯವಸಾಯಗಾರರನ್ನು ದಬ್ಬಾಳಿಕೆ, ಸುಲಿಗೆಗಳಿಂದ ಮುಕ್ತರನ್ನಾಗಿಸುವುದು ಮತ್ತು ದೇಶಿಯ ನ್ಯಾಯಾಂಗ ಪದ್ಧತಿಯನ್ನು ಹಸನುಗೊಳಿಸುವುದು. ಇವು ಆಡಳಿತದ ಮೊದಲ ೩೦ ವರ್ಷಗಳ ಗುರಿಯಾಗಿದ್ದಿತೆ ಹೊರತು ಹೊಸ ಪದ್ಧತಿಯ ಸರಕಾರವನ್ನು ಪ್ರಾರಂಭಿ ಸುವುದಾಗಿರಲಿಲ್ಲ.[೧೭೦]

೪.೮.೧: ಮೈಸೂರು ಕಮಿಷನರ್ ಆಗಿ ಮಾರ್ಕ್ ಕಬ್ಬನ್ನನ ಪೊಲೀಸ್ ಸುಧಾರಣೆಗಳು (೧೮೩೪ ಮೆ ೩೦)

ಮಾರ್ಕ್ ಕಬ್ಬನ್ ಕ್ರಿಶ ೧೮೩೪ ರ ಜೂನ್ ತಿಂಗಳ ೬ ರಂದು ಮೈಸೂರು ಸಂಸ್ಥಾನದ ಕಮಿಷನರ್‌ರಾಗಿ ಅಧಿಕಾರವನ್ನು ಸ್ವೀಕರಿಸಿದರು. ಈ ಹಿಂದೆ ಕಮಿಷನರ್‌ರಾಗಿದ್ದ ಕರ್ನಲ್ ಮಾರಿಸನ್‌ರನ್ನು ಕಂಪನಿಯು ಕಲ್ಕತ್ತೆಯ ಸುಪ್ರೀಂ ಕೌನ್ಸಿಲ್‌ನಲ್ಲಿ ಸದಸ್ಯರಾಗಿ ವರ್ಗಾಯಿಸಿತು. ಹೀಗಾಗಿ ಮಾರ್ಕ್ ಕಬ್ಬನರು ನೇಮಕಗೊಂಡರು.

ಮಾರಿಸನ್ ಸರ್ ಮಾರ್ಕ್‌ಕಬ್ಬನ್‌ನು ಅತ್ಯಂತ ಪ್ರಮುಖ ಕಮಿಷನರ್‌ಗಳಲ್ಲಿ ಒಬ್ಬನಾಗಿದ್ದ. ಈತನ ನಂತರ ಕಮಿಷನರ್‌ಗಳ ಪೂರ್ಣ ಅಧಿಕಾರವು ಸರ್ವೋಚ್ಚ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿತ್ತು. ಮಾರ್ಕ್ ಕಬ್ಬನ್‌ರ ಕಾಲದಲ್ಲಿ ಮೈಸೂರು ಸಂಸ್ಥಾನದ ಆಡಳಿತ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಯಿತು. ಆಡಳಿತ ದಲ್ಲಿ ಆಧುನೀಕರಣದ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಆಡಳಿತ ವ್ಯವಸ್ಥೆಯ ಮೇಲೆ ಸ್ಥಳೀಯರ ಹತೋಟಿಯನ್ನು ನಿರ್ಬಂಧಿಸಿ, ತನ್ಮೂಲಕ ಯುರೋಪಿಯನ್ ಅಧಿಕಾರಿಗಳ ಒಂದು ಶ್ರೇಣೀಕೃತ ಅಧಿಕಾರಷಾಹಿ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಇದಕ್ಕೆ ಒಂದು ಪ್ರಮುಖ ಕಾರಣವೇನೆಂದರೆ, ಸ್ಥಳೀಯ ಆಡಳಿತ ವ್ಯವಸ್ಥೆಯ ಮೇಲೆ ಸಂಪೂರ್ಣ ಹತೋಟಿಯನ್ನು ಇಟ್ಟುಕೊಳ್ಳುವುದು ಹಾಗೂ ಇಂಗ್ಲೀಷ್ ಕಂಪೆನಿಯಿಂದ ನೇರವಾಗಿ ನೇಮಕಗೊಂಡಿದ್ದ ಯುರೋಪಿಯನ್ ಅಧಿಕಾರ

ಶಾಹಿಯ ಹತೋಟಿಯಲ್ಲಿ ಆಡಳಿತ ಯಂತ್ರವನ್ನು ಇರಿಸಿಕೊಳ್ಳುವುದು. ಹೀಗೆ ಮಾಡಿದಲ್ಲಿ ಮೈಸೂರಿನ ಆಡಳಿತ ನಿಯಂತ್ರಣದ ಮೇಲೆ ತಮ್ಮ ಅಧಿಕಾರ ಪರಿಪೂರ್ಣವಾಗುತ್ತದೆ ಎಂದು ಇಂಗ್ಲೀಷ್ ಕಂಪೆನಿಯ ಹಿರಿಯ ಅಧಿಕಾರಿಗಳ ವಿಚಾರವಾಗಿತ್ತು. ಹೀಗಾಗಿ ಸಂಸ್ಥಾನದ ಆಡಳಿತ ವ್ಯವಸ್ಥೆಯ ಕೇಂದ್ರಬಿಂದುಗಳಾಗಿದ್ದ 'ದಿವಾನ್' ಮತ್ತು 'ಫೌಜುದಾರ'ರ ಕಛೇರಿಗಳನ್ನು ರದ್ದುಪಡಿಸಿ ಆಡಳಿತವನ್ನು ಕಮಿಷನರ ಹತೋಟಿಗೆ ಒಳಪಡಿಸುವ ಮೂಲಕ ಕೇಂದ್ರೀಕೃತಗೊಳಿಸಲಾಯಿತು. ಸರ್ ಮಾರ್ಕ್ ಕಬ್ಬನ್‌ನು ಆಡಳಿತದಲ್ಲಿ ಹಲವಾರು ಬದಲಾವಣೆಗಳನ್ನು ತಂದನು. ಆದರೆ ಅಭಿವೃದ್ಧಿಯನ್ನಲ್ಲ. ಪ್ರತೀ ವಿಭಾಗಗಳಲ್ಲಿ ಇದ್ದ ಸೂಪರಿಂಟೆಂಡೆಂಟ್‌ಗಳಿಗೆ ಅತ್ಯಂತ ಹೆಚ್ಚು ಅಧಿಕಾರವನ್ನು ನೀಡಿದನು. ತಾಲೂಕಿನ ಮುಖ್ಯಸ್ಥನಾದ 'ಅಮಲ್‌ದಾರ'ನು (ಇಂದು ಇದೇ ಅಮಲ್‌ದಾರರನ್ನು ತಹಶಿಲ್ದಾರರೆಂದು ಕರೆಯಲಾಗುತ್ತಿದೆ) 'ಸೂಪರಿಂಟೆಂಡೆಂಟ್‌ನ ನೇರ ನಿಯಂತ್ರಣದಲ್ಲಿ ಕೆಲಸ ಮಾಡಬೇಕಾಗಿತ್ತು. ಆದರೆ ಅವರು ಆಗು ಹೋಗುಗಳನ್ನು ನೇರವಾಗಿ 'ಕಮಿಷನರ್' ರವರಿಗೆ ತಿಳಿಸಬಹುದಾಗಿತ್ತು. 'ಅಮಲ್‌ದಾರರು' ತಾಲೂಕಿನ 'ಜಮಾಬಂಧಿ'ಯನ್ನು ಮಾಡುವುದರೊಂದಿಗೆ, ಕೆರೆ ಮತ್ತು ಅಣೆಕಟ್ಟು (ಒಡ್ಡು)ಗಳನ್ನು ಪರಿಶೀಲಿಸಿ, ಅದರ ಸ್ಥಿತಿಗತಿಗಳ ಬಗ್ಗೆ ಸೂಪರಿಂಟೆಂಡೆಂಟ್‌ರವರಿಗೆ ಮಾಹಿತಿಯನ್ನು ನೀಡಬೇಕಾಗಿತ್ತು. ಕಮಿನಷರ್ ಆಗಿದ್ದ ಸರ್.ಮಾರ್ಕ್ ಕಬ್ಬನ್‌ನು, ಕಮಿಷನರ್‌ನ ನಿಯಂತ್ರಣದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ವಿವಿಧ ಇಲಾಖೆಗಳ ಸ್ಥಾಪನೆಗೆ ಕಾರಣನಾದನು. ಮತ್ತು ಈತನ ಕಾಲದಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಚುರುಕಿನ ಪ್ರಗತಿಯನ್ನು ಸಾಧಿಸುವ ಯತ್ನದಲ್ಲಿ ಅನೇಕ ಇಲಾಖೆಗಳನ್ನು ಪುನರ್‌ಸಂಘಟಿಸಲಾಯಿತು. ಸಂಪೂರ್ಣವಾಗಿ ಮೈಸೂರು ಸಂಸ್ಥಾನದ ಮೇಲೆ ಹತೋಟಿಯನ್ನು ಸಾಧಿಸುವ ದೃಷ್ಟಿಯಿಂದ ಕೆಲವು ಪ್ರಮುಖ ವಿಭಾಗಗಳ ಮೇಲೆ ಹೆಚ್ಚಿಗೆ ಗಮನಕೊಡಲಾಯಿತು. ಅವುಗಳು ಯಾವುದೆಂದರೆ, ೧) ಕಂದಾಯ, ೨) ಅಂಚೆ, ೩) ಪೊಲೀಸ್ ೪) ಲೋಕೋಪಯೋಗಿ ೫) ಸೈನ್ಯ ೬) ಆರೋಗ್ಯ, ೭) ಪಶು ಸಂಗೋಪನೆ , ೮) ನ್ಯಾಯಾಂಗ ೯) ಸಾರ್ವಜನಿಕ ಶಿಕ್ಷಣ. ಕಂದಾಯ ಇಲಾಖೆಯ ಮುಖ್ಯಸ್ಥರನ್ನು ಶಿರಸ್ತೇದಾರ್ ಎಂದು ಕರೆಯಲಾಯಿತು. ಅಂಚೆ ಇಲಾಖೆ, ಕಂದಾಚಾರ್ (ಪೊಲೀಸ್) ಇಲಾಖೆ ಮತ್ತು ಸೈನ್ಯಾಡಳಿತ ಇಲಾಖೆಗಳ ಮುಖ್ಯಸ್ಥರನ್ನು ಭಕ್ಷಿಗಳೆಂದು ಕರೆಯಲಾಯಿತು[೧೫] ಉಳಿದ ಐದು ಇಲಾಖೆಗಳ ಸುಪರ್ದಿಯನ್ನು ಯುರೋಪಿಯನ್ ಅಧಿಕಾರಿಗಳಿಗೆ ವಹಿಸಿಕೊಡಲಾಯಿತು. ಪ್ರತಿಯೊಂದು ಇಲಾಖೆಯನ್ನು ನೇರವಾಗಿ ಕಮಿಷನರರ ಹತೋಟಿಗೆ ಒಳಪಡಿಸಲಾಯಿತು. ಹೀಗಾಗಿ ಕೇಂದ್ರೀಕೃತ ನಿರ್ವಹಣೆಯನ್ನೊಳಗೊಂಡಿದ್ದ ವಿಕೇಂದ್ರೀಕರಣ ಆಡಳಿತ ವ್ಯವಸ್ಥೆಯನ್ನು ಮೈಸೂರು ಸಂಸ್ಥಾನದಲ್ಲಿ ಜಾರಿಗೊಳಿಸಲಾಯಿತು. ಪ್ರತೀ ಇಲಾಖೆಗಳ ಮುಖ್ಯಸ್ಥರುಗಳು ಯುರೋಪಿಯನ್ನರೇ ಆಗಿರುವುದನ್ನು ಇಲ್ಲಿ ಗಮನಿಸಬೇಕು. ದಿವಾನರ ಕಛೇರಿಯನ್ನು ಕಮಿಷನರ್ ಕಛೇರಿಯ ಜೊತೆಗೆ ಒಟ್ಟಿಗೆ ಸೇರಿಸಲಾಯತು. ಈ ಕಛೇರಿಯ ಮುಖ್ಯಸ್ಥನಾಗಿ 'ಹುಜೂರು ಮುಖ್ಯ ಶಿರಸ್ತೇದಾರ' ಎಂಬ ಹೆಸರಿನ ಅಧಿಕಾರಿಯನ್ನು ನೇಮಿಸಲಾಯಿತು. ೧೮೪೫ರಲ್ಲಿ 'ಕಂದಾಚಾರ ಭಕ್ಷಿ' ಹುದ್ದೆಯನ್ನು ಮುಂದುವರಿಸಿಕೊಂಡು ಬರಲಾಯಿತು.[೧೬]

ಮರಾಮತ್, ಅಮೃತ ಮಹಲ್ ಮತ್ತು ಆರೋಪಿ ಇಲಾಖೆಗಳಿಗೆ ಯುರೋಪಿನ ಸೂಪರಿಂಟೆಂಡೆಂಟ್‌ಗಳನ್ನು ನೇಮಿಸಲಾಯಿತು. ನ್ಯಾಯಾಧೀಶರು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರೂ ಸಹ ಯುರೋಪಿಯನ್ನರೇ ಆಗಿದ್ದರು. ಪತ್ರೀ ತಾಲೂಕುಗಳಲ್ಲಿ ಡಬಲ್ ಧಫ್ತಾರ್‌ನ್ನು ರದ್ದುಗೊಳಿಸಲಾಯಿತು. ಮರಾಠಿ ಅಥವಾ ಕನ್ನಡ ಭಾಷೆಯು ಆಡಳಿತಾತ್ಮಕ ಉದ್ಯೋಗಗಳ ವ್ಯವಹಾರಗಳ ಅಧಿಕೃತ ಭಾಷೆಯಾಯಿತು. ಪ್ರಕಟಣೆ, ಸುತ್ತೋಲೆ ಮತ್ತು ಸರ್ಕಾರದ ಆಗು ಹೋಗುಗಳನ್ನು ಜನರ ಗಮನಕ್ಕೆ ತರಲಾಗುತ್ತಿತ್ತು. ಗ್ರಾಮೀಣ ಜನರು, ಅಮಲ್ದಾರರು ಅಥವಾ ಇತರ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ, ಅಸಮರ್ಪಕತೆ, ಹಣ ದುರುಪಯೋಗ ಅಥವಾ ಇತರ ಕರ್ತವ್ಯದಲ್ಲಿನ ನಿರ್ಲಕ್ಷತೆ ಬಗ್ಗೆ ದೂರುಗಳನ್ನು ನೀಡಿದರೆ ಅವರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಮೈಸೂರು ಸಂಸ್ಥಾನವನ್ನು ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು

ನಗರ ಪ್ರಾಂತ್ಯಗಳಾಗಿ ವಿಂಗಡಿಸಿ ಪ್ರತಿಯೊಂದು ಪ್ರಾಂತ್ಯದ ಆಡಳಿತ ನಿರ್ವಹಣೆಯನ್ನು ಯುರೋಪಿಯನ್ ಸೂಪರಿಂಟೆಂಡೆಂಟ್‌ನ ಹತೋಟಿಗೆ ಒಳಪಡಿಸಲಾಯಿತು. ಈ ನಾಲ್ಕು ವಿಭಾಗಗಳನ್ನು ಸುಮಾರು ೧೨೦ ಉಪ-ವಿಭಾಗ ಗಳನ್ನಾಗಿ ರಚಿಸಿ ಈ ಉಪ-ವಿಭಾಗಗಳ ಅಧಿಕಾರವನ್ನು ಅಮಿಲುದಾರರಿಗೆ ವಹಿಸಿಕೊಡಲಾಯಿತು.

ತಾಲೂಕುಗಳನ್ನು ಹೋಬಳಿಗಳನ್ನಾಗಿ ವಿಭಾಗಿಸಲಾಯಿತು. ಪ್ರತಿಯೊಂದು ಹಳ್ಳಿಗಳ ಸಮುದಾಯದಿಂದ ಕೂಡಿತ್ತು. ಶೇಖ್‌ದಾರ ಅಥವಾ ಹೋಬಳಿದಾರನು ಹೋಬಳಿಯ ಮುಖ್ಯಾಧಿಕಾರಿಯಾಗಿದ್ದನು. ವಿಭಾಗದ ಸೂಪರಿಂಟೆಂಡೆಂಟ್‌ರ ಅಧಿಕಾರ ವ್ಯಾಪ್ತಿಯು ಅನೇಕ ವಿಧಗಳಲ್ಲಿ ವಿಸ್ತೃತಗೊಂಡಿತು. ಆದರೂ ತಾಲೂಕಿನ ಅಮಲ್‌ದಾರರು ಕಮಿಷನರ್‌ರೊಡನೆ ನೇರವಾಗಿ ವ್ಯವಹರಿಸಲು ಅವಕಾಶವಿತ್ತು. ಹಲವಾರು ಗ್ರಾಮಗಳ ಒಕ್ಕೂಟವಾಗಿದ್ದ ಹೋಬಳಿಗಳ ಮೇಲೆ ಶೇಕದಾರರು ನಿಯಂತ್ರಣವನ್ನು ಹೊಂದುವಂತಾಯಿತು.[೧೮೩]

ಕಮಿಷನರ ಆಡಳಿತ ವ್ಯವಸ್ಥೆಯು ಮೈಸೂರು ಸಂಸ್ಥಾನದಲ್ಲಿ ತನ್ನ ಪ್ರಾರಂಭದ ದಿನಗಳಿಂದಲೂ ಕೂಡ ಸೈನ್ಯಾಡಳಿತ ನಿರ್ವಹಣೆಯ ಬಗ್ಗೆ ಜಾಗರೂಕವಾಗಿತ್ತು. ಹೀಗಾಗಿ ಸೈನ್ಯದ ಮೇಲಿನ ನೇರ ಹತೋಟಿಯನ್ನು ಹೊಂದುವುದು ಕಂಪನಿಯ ಉದ್ದೇಶವಾಗಿತ್ತು. ಸೈನ್ಯದಲ್ಲಿ ಮಾರ್ಕ್ ಕಬ್ಬನರ ಕಾಲದಲ್ಲಿ ಪ್ರಪ್ರಥಮ ಭಾರಿಗೆ ಆಧುನಿಕ ರೂಪದ ಸಮವಸ್ತ್ರ ವನ್ನು ಅಳವಡಿಸಲಾಯಿತು. ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದ ಸಿಳೇದಾರರಿಗೆ ಮಾಹೆಯಾನ ೨೦ ರೂಪಾಯಿ ವೇತನ ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಬಾರಗೀರ್(ಖಾಸಗಿ) ಸೈನ್ಯವನ್ನು ರದ್ದುಪಡಿಸಲಾಯಿತು. ತಾಲೂಕುಗಳ ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದ ಅಮಿಲುದಾರರ ಕೈಕೆಳಗೆ ಖಿಲ್ಲೇದಾರರನ್ನು, ಒಬ್ಬ ನಯೀಬ್ (ಉಪ) ಖಿಲ್ಲೇದಾರ ಅಥವಾ ದಫೇದಾರರನ್ನು ಮತ್ತು ಠಾಣಾ ದಾರರು ಅಥವಾ ಹೋಬಳಿದಾರರನ್ನು ಒಳಗೊಂಡ ಒಂದು ವ್ಯವಸ್ಥಿತ ಪೊಲೀಸ್ ಇಲಾಖೆಯನ್ನು ರಚಿಸಲಾಯಿತು.

ಪೊಲೀಸ್ ಇಲಾಖೆಯು 'ಅಮಲ್‌ದಾ‌ರ'ರುಗಳ ಮತ್ತು ಅವರ ಸಹಾಯಕರಾದ 'ಕಿಲ್ಲೇದಾರ'ರು, 'ಹೋಬಳಿ ದಾರ'ರು, 'ಶೇಖ್‌ದಾರ'ರು, 'ದಫೇದಾರ'ರು ಮತ್ತು 'ಕಂದಾಚಾರ ಪೇದೆ'ಗಳಿಂದ ಕೂಡಿತ್ತು. ಲಂಬಾಣಿಗಳ ನಾಯಕ, ಕೊರಮ ಮತ್ತು ವಡ್ಡರ ಗುಂಪಿನ ಮುಖ್ಯಸ್ಥರು ಕಳ್ಳ ಕಸುಬಿನ ಪಂಗಡದವರೆಂದು ಪರಿಗಣಿತರಾಗಿದ್ದುದರಿಂದ ಅವರು ತಮ್ಮ ಸದ್ವರ್ತನೆಯ ಬಗ್ಗೆ ಜಾಮೀನು ಕೊಡಬೇಕಾಗಿತ್ತು. ಗ್ರಾಮಸ್ಥರಿಗೆ ಆಯುಧವನ್ನು ಆತ್ಮರಕ್ಷಣೆಗೆ ಬಳಸುವ ಅಧಿಕಾರವಿತ್ತು. ಪುನರ್‌ರಚಿತ ಯೋಜನೆಯ ಪ್ರಕಾರ ಮೈಸೂರು, ತುಮಕೂರು, ಶಿವಮೊಗ್ಗ ಮತ್ತು ಬೆಂಗಳೂರು ನಗರಗಳಲ್ಲಿ ಮೊದಲಿಗಿಂತ ಹೆಚ್ಚಿನ ಸಿಬ್ಬಂಧಿ ನೇಮಕವಾಯಿತು. ಕಾರಾಗೃಹ ಖೈದಿಯ ಜೀವನ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಕಾರ್ಯ ನಡೆಯಿತು. ಶೇಖ್‌ದಾರರು ಹಳ್ಳಿಯ ಗೌಡರಿಂದ ಕಂದಾಯ ವಸೂಲಿ ಮಾಡಿ ಅಮಲ್‌ದಾರರಿಗೆ ನೀಡುತ್ತಿದ್ದರು. ಅವರು ಡಿವಿಜನಲ್ ಸೂಪರಿಂಟೆಂಡೆಂಟ್‌ಗಳಿಗೂ ಮತ್ತು ಡಿವಿಜನಲ್ ಸೂಪರಿಂಟೆಂಡೆಂಟ್‌ಗಳು ಕಮಿಷನರ್‌ಗಳಿಗೂ ನೀಡುತ್ತಿದ್ದರು. ಮದ್ರಾಸ್ ಪದ್ಧತಿಯಂತೆ ಒಂದು ಹೊಸ ಪೊಲೀಸ್ ಇಲಾಖೆಯು ರಚಿತವಾಗಿ, ಅದು ಬೆಂಗಳೂರು ಪಟ್ಟಣ ಮತ್ತು ಜಿಲ್ಲೆಯಲ್ಲಿ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿ ಸ್ಥಾಪಿತವಾಯಿತು. ಹಳೇಯ ಕಂದಾಚಾರ ಸೈನ್ಯವನ್ನು ತೊಡೆದು ಹಾಕಲಾಯಿತು. ಮತ್ತು ೧೮೭೨ರಲ್ಲಿ ಹೊಸ ನಿಯಮಗಳು ಜಾರಿಗೆ ಬಂದವು. ಪೊಲೀಸರು ಅಲ್ಲಿಂದ ಮುಂದಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳ ನೇರ ನಿಯಂತ್ರಣಕ್ಕೆ ಒಳಪಡಲಿಲ್ಲ. ಇಲಾಖೆಯು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ (ಐಜಿಪಿ) ಅವರ ಸಹಾಯಕರಾದ ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್‌ಗಳು, ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್‌ಗಳಿಂದ ಕೂಡಿತ್ತು.[೧೮೪]

ಕಬ್ಬನ್‌ನನ್ನು ಆಡಳಿತದ ಮೇಲೆ ಸ್ಥಳೀಯರ ಹತೋಟಿ ನಿರ್ಬಂಧಿಸಿದ. ತನ್ಮೂಲಕ ಯುರೋಪಿಯನ್

ಅಧಿಕಾರಿಗಳ ಒಂದು ಶ್ರೇಣೀಕೃತ ಅಧಿಕಾರಿಶಾಹಿ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿದ. ಇಲಾಖೆಯ ಪುನರ್ ಸಂಘಟನೆಯ ಹಿಂದೆ ಬ್ರಿಟೀಷರ ಸ್ಥಾಪಿತ ಹಿತಾಸಕ್ತಿಯಿದೆ. 'ದಿವಾನ', 'ಫೌಜುದಾರ', 'ಪಟೇಲ'ರ ಹುದ್ದೆಗಳನ್ನು ರದ್ದು ಮಾಡಿ, 'ಫೌಜುದಾರ'ರುಗಳ ಬದಲಿಗೆ ಸೂಪರಿಂಟೆಂಡೆಂಟುಗಳನ್ನು, 'ಪಟೇಲ'ರ ಬದಲಿಗೆ 'ಅಮಿಲ್‌ದಾರ'ರರನ್ನು ನೇಮಿಸಿ, ಅವರು ನೇರವಾಗಿ ಕಮಿಷನರ್‌ನ ಆದೇಶಗಳಿಗೆ ಅನುಗುಣವಾಗಿ ಅವನ ನಿಯಂತ್ರಣದಲ್ಲಿ ಕೆಲಸ ಮಾಡುವಂತೆ ಮಾಡ ಲಾಯಿತು. ಸೂಪರಿಂಟೆಂಡೆಂಟ್‌ರವರುಗಳು ಅರ್ಧಕ್ಕಿಂತ ಹೆಚ್ಚು ಭಾಗ ಯುರೋಪಿಯನ್ನರಾಗಿದ್ದರು. ಉತ್ತರಕನ್ನಡ ಜಿಲ್ಲೆ ಯಲ್ಲಿ ಎಂಟು ಜನ ಸೂಪರಿಂಟೆಂಡೆಂಟ್‌ರವರುಗಳಲ್ಲಿ ನಾಲ್ಕು ಜನ ಮಾತ್ರ ಭಾರತೀಯರಾಗಿದ್ದರು. ಬೆಳಗಾಂ ಜಿಲ್ಲೆಯಲ್ಲಿ ಒಟ್ಟು ೩೩ ಜನರಲ್ಲಿ ಒಬ್ಬನು ಮಾತ್ರ ಭಾರತೀಯ, ದಾರವಾಡ ಜಿಲ್ಲೆಯಲ್ಲಿ ೩೫ ಜನ ಸೂಪರಿಂಟೆಂಡೆಂಟ್ ರವರುಗಳಲ್ಲಿ ಎಲ್ಲರೂ ಯುರೋಪಿಯನ್ನರು, ಬಿಜಾಪುರ ಜಿಲ್ಲೆಯಲ್ಲಿ ೫೨ ಸೂಪರಿಂಟೆಂಡೆಂಟರವರುಗಳಲ್ಲಿ ಇಬ್ಬರು ಮಾತ್ರ ಭಾರತೀ ಯರು. ದಕ್ಷಿಣ ಕನ್ನಡದ ೭೬ ಸೂಪರಿಂಟೆಂಡೆಂಟ್‌ರವರುಗಳಲ್ಲಿ ೧೪ ಜನ ಭಾರತೀಯರಿದ್ದಾರೆ. (ಅನುಬಂಧಗಳನ್ನು ನೋಡಿರಿ.) ಇದನ್ನು ಗಮನಿಸಿದಾಗ ಬ್ರಿಟೀಷರ ತಾರತಮ್ಯಗಳು ಅರ್ಥವಾಗುತ್ತದೆ. ನಾವು ಅಂದುಕೊಂಡಂತೆ ಕಬ್ಬನ್‌ನು ಇಲಾಖೆಯನ್ನು ಅಭಿವೃದ್ಧಿ ಮಾಡಲಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಪೂರ್ಣ ಆಡಳಿತವನ್ನು ತನ್ನ ನಿಯಂತ್ರಣಕ್ಕೆ ಪಡೆದು ಕೊಂಡನು. ಮೈಸೂರು ಅರಸರನ್ನು ಆಟದ ಬೊಂಬೆಯನ್ನಾಗಿ ಮಾಡಿ ಕೂರಿಸಿದ. ಆತ ನಾಮಮಾತ್ರ ರಾಜನಾದ. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದಿದ್ದ 'ಬಾರ್‌ಗೀರ್' ಸೇನೆಯನ್ನೂ ಸಹ ರದ್ದುಪಡಿಸಲಾಯಿತು.

ಮಾರ್ಕ್ ಕಬ್ಬನನು ಶಾಂತಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಎರಡು ಮಾರ್ಗೋಪಾಯಗಳನ್ನು ಕಂಡು ಕೊಂಡನು. ಮೊದಲನೆಯದು ಸೇನೆ, ಪೊಲೀಸ್ ಮತ್ತು ನ್ಯಾಯಾಂಗವನ್ನು ಪುನರ್‌ಸಂಘಟಿಸುವುದು. ಎರಡನೆಯದು ಜನರ ಪೂರ್ಣ ಸಹಕಾರವನ್ನು ಪಡೆಯುವುದು. ಇದರಿಂದಾಗಿ ಕಬ್ಬನ್ ಆ ಕಾಲದಲ್ಲಿ ಜನರ ವಿಶ್ವಾಸವನ್ನುಗಳಿಸಿದ. ಸಾರ್ವಜನಿಕರ ಸುರಕ್ಷತೆಗೆ ಆತನು ಮೊದಲು ಗಮನಹರಿಸಿದ.[೧೫]

೪.೮.೨. ಪೊಲೀಸ್ ಹುಕುಂ ನಾಮೆ

ಮಾರ್ಕ್ ಕಬ್ಬನ್‌ನು ಪೊಲೀಸ್ ಇಲಾಖೆಯನ್ನು ವ್ಯವಸ್ಥಿತವಾಗಿ ಮಾಡಲು ಹಲವು ಕ್ರಮ ಕೈಗೊಂಡನು. ಈತ ೧೮೩೪ ರ ಜುಲಾಯಿಯಲ್ಲಿ ಜಾರಿಗೆ ತಂದ ಪೊಲೀಸ್ 'ಹುಕುಂನಾಮೆ'ಯು 'ಕಂದಾಚಾರ' ಪೀವನ್‌ಗಳ ಕೆಲಸದ ಸ್ವರೂಪದ ಬಗ್ಗೆ ಜನರಲ್ಲಿ ಇದ್ದ ಗೊಂದಲವನ್ನು ನಿವಾರಿಸಿತು. ಇದು 'ಕಂದಾಚಾರ' ಪೀವನ್‌ಗಳ ಕರ್ತವ್ಯ ವ್ಯಾಪ್ತಿಯ ಬಗ್ಗೆ ವಿವರಿಸಿದ್ದಲ್ಲದೇ ಇವರ ಕರ್ತವ್ಯವನ್ನು ಕೇವಲ ಪೊಲೀಸ್ ಇಲಾಖೆಗೆ ಮಾತ್ರ ಸೀಮಿತಗೊಳಿಸಲಾಯಿತು. ಆದರೆ ಅವರು ಮಿಲಿಟರಿ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಯಾವುದೇ ತಡೆಒಡ್ಡಲಿಲ್ಲ.

ಈ 'ಪೊಲೀಸ್‌ಹುಕುಂ ನಾಮೆ'ಯ ಪ್ರಕಾರ 'ಕಂದಾಚಾರ ಪೀವನ್'ಗಳ ಕರ್ತವ್ಯಗಳನ್ನು ಪುನರ್‌ನಿರೂಪಿಸ ಲಾಯಿತು. ಇದರ ಪ್ರಕಾರ ಇವರು ಪೊಲೀಸ್ ಪೀವನ್‌ಗಳಾದರು. ಈ 'ಕಂದಾಚಾರ' ಪೀವನ್‌ಗಳನ್ನು ತಾಲೂಕುಗಳಲ್ಲಿ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ನೇಮಿಸಿಕೊಳ್ಳಲಾಯಿತು. ಅವರುಗಳ ಕರ್ತವ್ಯಗಳು ತಾಲೂಕಿನ ಟ್ರಜರಿಗಳನ್ನು ಪಹರೆ ಕಾಯುವುದು, ಜೈಲುಗಳ ಪಹರೆ ಕಾಯುವುದು, ಈ ಪಡೆಗಳಿಗೆ ಬೇಕಾದ ಅಗತ್ಯ ಸಾಮಾಗ್ರಿಗಳನ್ನು ಒದಗಿಸುವುದು, ವ್ಯವಸಾಯದ ಮೇಲ್ವಿಚಾರಣೆ ನೋಡುವುದು, ಕಂದಾಯ ಇಲಾಖೆಯ ಸೇವಕರುಗಳಿಗೆ ಕಂದಾಯ ಸಂಗ್ರಹಣೆ ಕಾರ್ಯ ದಲ್ಲಿ ಸಹಾಯ ಮಾಡುವುದು ಇವರ ಕರ್ತವ್ಯವಾಗಿತ್ತು. ಜಿಲ್ಲಾ ಖಜಾನೆಗಳು ಮತ್ತು ಜಿಲ್ಲಾ ಜೈಲುಗಳ ಪಹರೆ ಕರ್ತವ್ಯಕ್ಕೆ ಬಾರ್ ಆಫ್ ಇನ್‌ಫೆಂಟ್ರಿಯ ಸಿಬ್ಬಂದಿಯವರನ್ನು ಮತ್ತು ಶಿಲ್ಲೇದಾರರನ್ನು ನೇಮಿಸಲಾಯಿತು. ಗಡಿ ಸರಹದ್ದು (Frontier

Police) ಪೊಲೀಸರಾಗಿ ಮತ್ತು (Sudder Station) ಸಂಚಾರಿ ಠಾಣೆಗಳಲ್ಲಿ ಕಛೇರಿ ರಕ್ಷಕರಾಗಿ ಮತ್ತು ನಗರರಕ್ಷಕರಾಗಿ ಇವರನ್ನು ನೇಮಿಸಲಾಯಿತು. (ಶಿಲ್ಲೇದಾರ್ ಅಶ್ವಪಡೆಯ ಬಗ್ಗೆ ಮುಂದೆ ವಿವರಿಸಲಾಗಿದೆ.)

೧೮೫೯ ರಲ್ಲಿ ಭಾರತ ಸರಕಾರದ ಮಿಲಿಟರಿ ಫೈನಾನ್ಸ್ ಕಮಿಷನ್, ಸಿವಿಲ್ ಪೊಲೀಸ್ ದಳ ರಚಿಸುವ ಬಗ್ಗೆ ಪ್ರಸ್ತಾಪಿಸಿತು. ಇದರ ಪ್ರಕಾರ ಟ್ರಜರಿಯ ಸಾಗಾಟಕ್ಕೆ ಬೆಂಗಾವಲು, ಜಿಲ್ಲಾ ಖಜಾನೆ ಮತ್ತು ಜೈಲುಗಳ ಪಹರೆಗೆ ಸಿಬ್ಬಂದಿಗಳನ್ನು ನೇಮಿಸುವುದು ಮುಂತಾದ ಕರ್ತವ್ಯಗಳಿಂದ ಸೇನೆ ಮತ್ತು ಇನ್‌ಫೆಂಟ್ರಿಯವರನ್ನು ಪ್ರತ್ಯೇಕಿಸಬೇಕು ಎಂದು ಪ್ರಸ್ಥಾಪಿಸಲಾಯಿತು. ೧೮೫೬ ರಲ್ಲಿ ಡೆಪ್ಯೂಟಿ ಕಮಿಷನರ್‌ರವರನ್ನು ಜಿಲ್ಲೆಗಳ ಪೊಲೀಸ್ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಅವರುಗಳು ಪೊಲೀಸ್ ಇಲಾಖೆಯ ಕರ್ತವ್ಯಗಳನ್ನು ನೋಡಿಕೊಳ್ಳುತ್ತಿದ್ದರು.

೪: ೮. ೩ : ಶ್ರೀ.ಎಲ್.ಬಿ ಬೋರಿಂಗ್‌ನು ಪೊಲೀಸ್ ಇಲಾಖೆಯಲ್ಲಿ ತಂದ ಬದಲಾವಣೆಗಳು

೧೮೬೨ ರಲ್ಲಿ ಮಾರ್ಕ್ ಕಬ್ಬನ್‌ನ ಸ್ಥಾನಕ್ಕೆ ಶ್ರೀ.ಎಲ್.ಬಿ ಬೋರಿಂಗ್ ಬಂದನು. ಈತ ಮೈಸೂರಿನ ಆಡಳಿತವನ್ನು ವಹಿಸಿಕೊಂಡ ನಂತರ ಭಾರತದಲ್ಲಿ ಬ್ರಿಟೀಷ್ ಆಡಳಿತವಿರುವ ಪ್ರಾಂತ್ಯಗಳಲ್ಲಿ ಇರುವಂತೆ ಆಡಳಿತದಲ್ಲಿ ಬದಲಾವಣೆಗಳನ್ನು ತಂದು ಹೊಸದಾಗಿ ಸಂಘಟಿಸುವ ಅವಶ್ಯಕತೆ ಮತ್ತು ಒತ್ತಡ ಆತನ ಮೇಲಿತ್ತು. ಮೇಜರ್ ಬೌರಿಂಗ್‌ನ ಕಾಲದಲ್ಲಿ ಇಂಗ್ಲೀಷ್ ರಾಜ್ಯದ ಪದ್ಧತಿಗಳಿಗೆ ಅನುಸಾರವಾಗಿ ಕೆಲವು ಮಾರ್ಪಾಟುಗಳನ್ನು ಮಾಡಿದನು. ಸಂಸ್ಥಾನದಲ್ಲಿ ೪ ತುಕಡಿಗಳಿಗೆ ಬದಲಾಗಿ ೮ ಡಿಸ್ಟ್ರಿಕ್ಟ್‌ಗಳು ಏರ್ಪಟ್ಟು, ಇವು ೩ ಡಿವಿಜನ್‌ಗಳಿಗೆ ಒಳಪಟ್ಟವು. ಪ್ರತೀ ಡಿಸ್ಟ್ರಿಕ್ಟ್‌ಗೆ ಒಬ್ಬೊಬ್ಬರು ಡೆಪಿಟ್ಯೂ ಸೂಪರಿಂಟೆಂಡೆಂಟ್‌ರವರು, ಪ್ರತೀ ಡಿವಿಜನ್‌ಗೂ ಒಬ್ಬೊಬ್ಬರು ಸೂಪರಿಂಟೆಂಡೆಂಟರವರನ್ನು ನೇಮಕಮಾಡಿದ್ದನು. ಇವರುಗಳಿಗೆ ಮತ್ತು ಡಿಸ್ಟ್ರಿಕ್ಟ್‌ಗಳಿಗೆ ಒಳಪಟ್ಟ ತಾಲೂಕು ಅಮಲ್ದಾರರಿಗೂ, ರೆವೆನ್ಯೂ ಕೆಲಸದೊಂದಿಗೆ ಸಿವಿಲ್ ಮತ್ತು ರೆವಿನ್ಯೂ ಮೊಕದ್ದಮೆಗಳನ್ನು ತೀರ್ಮಾನಿಸಲು ಅಧಿಕಾರ ನೀಡಲಾಯಿತು. ಮೈಸೂರು ನಗರವನ್ನು ೩ ಪ್ರದೇಶಗಳನ್ನಾಗಿ ವಿಂಗಡಿಸಿ ಕೋಟೆ, ಪೇಟೆ, ಅಗ್ರಹಾರ ಎಂದು ವಿಭಾಗಿಸಿದನು. ಅರಮನೆಯ ಕೋಟೆಯೊಳಗೆ ಖಜಾನೆ, ಅಂಚೆ ಕಛೇರಿ, ಪೊಲೀಸ್ ಕಛೇರಿ, ಎಂಜಿನ್ ಹೌಸ್ ಇತ್ತು.[೧೬] ನ್ಯಾಯಪ್ರಧಾನ ಕಾರ್ಯಗಳ ವಿಭಜನೆಗೂ ಅವನು ಕ್ರಮ ಕೈಗೊಂಡನು. ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್, ಮುಂತಾದ ಬ್ರಿಟೀಷ್ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ಕಾನೂನು ಸಂಹಿತೆಗಳನ್ನೂ ಅವನು ಸಂಸ್ಥಾನದಲ್ಲಿಯೂ ಜಾರಿಗೆ ತಂದನು. ಮದ್ರಾಸ್ ಪ್ರಾಂತ್ಯದ ವ್ಯವಸ್ಥೆಗೆ ಅನುಗುಣವಾಗಿ ಪೊಲೀಸ್ ಇಲಾಖೆಯನ್ನು ಪುನರ್‌ಸಂಘಟಿಸಿದನು.[೧೭] ೧೮೬೧ ರಲ್ಲಿ ರಾಜ್ಯವನ್ನು ೩ ವಿಭಾಗಳನ್ನಾಗಿಸಲಾಯಿತು. ಅದರಲ್ಲಿ ೮ ಜಿಲ್ಲೆಗಳಿದ್ದವು. ವಿಭಾಗಗಳಲ್ಲಿ ಸೂಪರಿಂಟೆಂಡೆಂಟ್‌ಗಳು ಮತ್ತು ಮೈಸೂರಿನಲ್ಲಿ ಚೀಫ್ ಕಮಿಷನರ್‌ರವರ ಕಛೇರಿಯನ್ನು ತೆರೆಯಲಾಯಿತು. (ಡಿವಿಜನ್) ವಿಭಾಗಗಳಲ್ಲಿದ್ದ ಸೂಪರಿಂಟೆಂಡೆಂಟ್‌ಗಳನ್ನು ಕಮಿಷನರ್‌ಗಳೆಂತಲೂ, ಡೆಪಿಟ್ಯೂ ಸೂರಿಂಟೆಂಡೆಂಟ್‌ರವರುಗಳನ್ನು ಡೆಪಿಟ್ಯೂ ಕಮಿಷನರ್‌ಗಳೆಂತಲೂ ಕರೆಯಲಾಯಿತು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳನ್ನು 'ಸಿವಿಲ್' ಕರ್ತವ್ಯಗಳಿಂದ ಬಿಡುಗಡೆಗೊಳಿಸಲಾಯಿತು. ಜಿಲ್ಲೆಗಳಲ್ಲಿ ನ್ಯಾಯಾಲಯಗಳಲ್ಲಿ ಸಹಾಯಕರ ಹುದ್ದೆಗಳನ್ನು ನೇಮಿಸಲಾಯಿತು.[೧೮]

೧೮೭೪-೭೫ ರಲ್ಲಿ ಅಮಿಲ್‌ದಾರರುಗಳನ್ನು ಸಿವಿಲ್ ಸ್ವರೂಪದ ಕರ್ತವ್ಯಗಳಿಂದ ಮುಕ್ತಿಗೊಳಿಸಿ ಅಲ್ಲಿಗೆ ಮುನ್ಸಿಫ್‌ಗಳನ್ನು ನೇಮಿಸಲಾಯಿತು. ೧೮೭೯ ರಲ್ಲಿ ಮೂರನೇ ಕೃಷ್ಣರಾಜ ಒಡೆಯರ್‌ರವರನ್ನು ಮೈಸೂರು ಸಿಂಹಾಸನದಲ್ಲಿ ಪುನರ್‌ಸ್ಥಾಪಿಸಿದ ಸಂದರ್ಭದಲ್ಲಿ ಕಮಿಷನ್‌ನ್ನು ಪುನರ್‌ಸಂಘಟಿಸಲಾಯಿತು. ವಿಭಾಗಗಳಲ್ಲಿ ಇದ್ದ ಕಮಿಷನರ್ ಹುದ್ದೆಗಳನ್ನು ರದ್ದುಮಾಡಲಾಯಿತು. ಇದರ ಪರಿಣಾಮವಾಗಿ ಚೀಫ್ ಕಮಿಷನರ್‌ನ ಕೈಕೆಳಗೆ ನೇರವಾಗಿ ಜಿಲ್ಲೆಗಳಲ್ಲಿ ಡೆಪಿಟ್ಯೂ ಕಮಿಷನರ್ (ಡಿ.ಸಿ.) ಇವರ ಕೈಕೆಳಗೆ ಅಸಿಸ್ಟೆಂಟ್ ಕಮಿಷನರ್‌ಗಳು (ಎ.ಸಿ) ಇವರ ಕೈಕೆಳಗೆ ಅಮಿಲ್ದಾರರಿದ್ದರು.[೧೯] ಈಗಲೂ ಸಹ ನಾವು

ಕಂದಾಯ ಇಲಾಖೆಯಲ್ಲಿ ಇದೇ ವ್ಯವಸ್ಥೆ ಮುಂದುವರೆದು ಕೊಂಡುಬಂದಿರುವುದನ್ನು ಗಮನಿಸಬಹುದು. ಅಮಿಲ್ದಾರನ ಹುದ್ದೆಯ್ನು ಈಗ ತಹಶಿಲ್ದಾರ ಎಂಬ ಹೆಸರಿಂದ ಕರೆಯಲಾಗುತ್ತಿದೆ. ಪೊಲೀಸ್ ಆಡಳಿತದಲ್ಲಿಯೂ ಸಹ ಬದಲಾಣೆಗಳನ್ನು ತರಲಾಯಿತು. ಮದ್ರಾಸ್‌ನಲ್ಲಿದ್ದ ಪೊಲೀಸ್ ವ್ಯವಸ್ಥೆಯಂತೆಯೇ ಇಲ್ಲಿಯೂ ಪ್ರತ್ಯೇಕ ಇಲಾಖೆಯನ್ನು ರಚಿಸಲಾಯಿತು. ಬೆಂಗಳೂರು ನಗರ ಮತ್ತು ಜಿಲ್ಲೆಗಳ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿದ್ದವು. ೧೮೭೨ ರಲ್ಲಿ 'ಕಂದಾಚಾರ' ಪಡೆಯನ್ನು ರದ್ದುಗೊಳಿಸಿ ಹೊಸ ನಿಯಮಗಳನ್ನು ರಚಿಸಲಾಯಿತು. ೧೮೬೧ (೫ ನೇ ಕಾಯ್ದೆ) ರಲ್ಲಿ ರಚಿತವಾದ ಪೊಲೀಸ್ ಕಾಯ್ದೆಯನ್ನು ೧೮೭೨ ಮತ್ತು ೧೮೭೪ ರ ನಡುವೆ ಇಡೀ ರಾಜ್ಯಕ್ಕೆ ಅನ್ವಯಿಸಲಾಯಿತು.[೧೮೦] ಇಲ್ಲಿ ಗಮನಿಸ ಬೇಕಾದ ಮುಖ್ಯವಾದ ಅಂಶವೆಂದರೆ ೧೮೬೧ ರಲ್ಲಿ ಬ್ರಿಟೀಷರು ರಚಿಸಿದ ಭಾರತೀಯ ಪೊಲೀಸ್ ಕಾಯ್ದೆ ಜಾರಿಗೆ ಬಂತು. ಇದು ಭಾರತ ದೇಶದಲ್ಲಿ ಎಲ್ಲೆಲ್ಲಿ ಬ್ರಿಟೀಷ್ ಆಡಳಿತವಿತ್ತೋ ಆ ಪ್ರದೇಶಗಳಿಗೆ ಮಾತ್ರ ಪೊಲೀಸ್ ಕಾಯ್ದೆಯನ್ವಯ ವಾಗುತ್ತಿತ್ತು. ಉಳಿದಂತೆ ದೇಶದಲ್ಲಿ ಇದ್ದ ಬೇರೆ ಬೇರೆ ರಾಜ, ಮಹಾರಾಜರುಗಳಲ್ಲಿ ಆಂತರಿಕ ರಕ್ಷಣೆಗಾಗಿ ಅವರದೇ ಆದ ಪ್ರತ್ಯೇಕ ವ್ಯವಸ್ಥೆ ಇತ್ತು. ಅದರಂತೆ ಮೈಸೂರಿನಲ್ಲಿಯೂ ಸಹ ೧೮೭೨ ರ ವರೆಗೆ 'ಕಂದಾಚಾರ' ಪೊಲೀಸ್ ವ್ಯವಸ್ಥೆಯೇ ಮುಂದುವರೆದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಂದರೆ ಮೈಸೂರಿನ ಪೊಲೀಸ್ ವ್ಯವಸ್ಥೆ ಬ್ರಿಟೀಷರ ಕೊಡುಗೆ ಅಲ್ಲ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ೧೮೬೨ರ ಡಿಸೆಂಬರ್ ೧೬ ರಂದು ಮೈಸೂರು ಕಮಿಷನರ್‌ರವರು ಒಂದು ಸುತ್ತೋಲೆಯನ್ನು ಹೊರಡಿಸಿ ವಿಭಾಗದ ಸೂಪರಿಂಟೆಂಡೆಂಟ್‌ರವರುಗಳಿಗೆ 'ಕಂದಾಚಾರ ಪೀವನ್'ಗಳನ್ನು ಕಡಿತ ಗೊಳಿಸುವಂತೆ ಆದೇಶಿಸಿದರು. ಅದರಂತೆ ಅಸಮರ್ಥರಾದ ಕಂದಾಚಾರ ಪೀವನ್‌ಗಳನ್ನು ಕೆಲಸದಿಂದ ತೆಗೆದುಹಾಕ ಲಾಯಿತು. ಉಳಿದವರು ಕ್ರಮಬದ್ಧವಾಗಿ ಪೊಲೀಸ್ ಕೆಲಸಗಳನ್ನು ಮಾಡುವಂತೆ ಹದ್ದುಬಸ್ತಿನಲ್ಲಿಟ್ಟು ಸಂಬಳ ಹೆಚ್ಚಿಸ ಲಾಯಿತು.[೧೮೧]

೧೮೭೩ ರಲ್ಲಿ ಆರ್.ಎಲ್ ಮಂಗಳೇಶ್ ಎಂಬುವವರು ಒಂದು ಯೋಜನೆ ತಯಾರಿಸಿದರು. ಅದು ಚಿತ್ರದುರ್ಗ ಜಿಲ್ಲೆಗೆ ಸಂಬಂದಿಸಿತ್ತು. ಇದೊಂದೇ ಜಿಲ್ಲೆಯನ್ನು ಪೂರ್ಣವಾಗಿ ಸಮೀಕ್ಷೆ ಮಾಡಲಾಯಿತು.[೧೮೨] ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಲಾಯಿತು. ಇತರ ಜಿಲ್ಲೆಗಳಲ್ಲಿ ಈ ರೀತಿ ಮಾಡಲು ಅಧಿಕ ಸಮಯ, ಶ್ರಮ ಬೇಕು ಅಲ್ಲದೇ ಸಿಬ್ಬಂದಿಗಳ ಆಯ್ಕೆ ಮತ್ತು ತರಬೇತಿಗೂ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳ ಲಾಯಿತು. ಆದುದರಿಂದ ಬೇರೆ ಜಿಲ್ಲೆಗಳಲ್ಲಿ ಈಗ ಇರುವ ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನೇ ಕ್ರಮಬದ್ದವಾಗಿ ಅಭಿವೃದ್ಧಿ ಪಡಿಸುವುದೇ ಸೂಕ್ತವೆಂದು ತೀರ್ಮಾನಿಸಲಾಯಿತು. ಅನರ್ಹರನ್ನು ತೆಗೆದುಹಾಕಲಾಯಿತು. ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ಉತ್ತಮ ಸಂಬಳ ನೀಡಲಾಯಿತು. ಸಿಬ್ಬಂದಿಗಳ ಸಂಖ್ಯೆಯಲ್ಲಿ ಏರಿಕೆ ಮಾಡಿ, ಎಲ್ಲಾ ವರ್ಗದ ಅಧಿಕಾರಿಗಳಿಗೆ ಹೇಗೆ ಕೆಲಸ ನಿರ್ವಹಿಸಬೇಕೆಂದು ಸಂಸ್ಥಾನವು ನಿರ್ದೇಶನ ನೀಡಿತು.[೧೮೩]

೧೮೭೪–೭೫ ರಲ್ಲಿ ಅಮಿಲ್‌ದಾರ್‌ರವರುಗಳಿಗೆ ಇದ್ದ ಸಿವಿಲ್ ಕರ್ತವ್ಯಗಳನ್ನು ತೆಗೆದು ಹಾಕಲಾಯಿತು. ಈ ಕೆಲಸಕ್ಕಾಗಿ ಮುನ್ಸೀಫ್‌ರವರುಗಳನ್ನು ನೇಮಿಸಲಾಯಿತು. ೧೮೭೯ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರನ್ನು ಪುನ: ಸಿಂಹಾಸನದಲ್ಲಿ ಪ್ರತಿಷ್ಠಾಪಿಸಬೇಕೆಂಬ ಹಿನ್ನಲೆಯಲ್ಲಿ ಕಮಿಷನ್ನನು ಪುನ: ರಚಿಸಲಾಯಿತು. ವಿಭಾಗಗಳ ಕಮಿಷನರುಗಳ ಹುದ್ದೆಗಳನ್ನು ರದ್ದುಮಾಡಲಾಯಿತು. ಚೀಫ್ ಕಮಿಷನರ್‌ನ ಕೈಕೆಳಗೆ ಜಿಲ್ಲೆಗಳಲ್ಲಿ ಡೆಪಿಟ್ಯೂ ಕಮಿಷನರುಗಳು, ಅವರ ಕೈಕೆಳಗೆ ಅಸಿಸ್ಟೆಂಟ್ ಕಮಿಷನರ್‌ಗಳು, ಅವರ ಕೈಕೆಳಗೆ ಅಮಿಲ್ದಾರರನ್ನು ನೇಮಿಸಲಾಯಿತು.[೧೮೪] ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯ ಮುಖ್ಯಸ್ಥನಂತೆ ಡೆಪಿಟ್ಯೂ ಕಮಿಷನ್‌ರ ಕೆಲಸ ನಿರ್ವಹಿಸುತ್ತಿದ್ದ ಒಬ್ಬ ಅಸಿಸ್ಟೆಂಟ್ ಕಮಿಷನರ್‌ರವರನ್ನು, 'ಪೊಲೀಸ್ ಅಸಿಸ್ಟೆಂಟ್' ಎಂಬ ಪದನಾಮದೊಂದಿಗೆ ನೇಮಿಸಲಾಯಿತು. ಈತನು ಡೆಪಿಟ್ಯೂ ಕಮಿಷನರ್‌ರವರಿಗೆ ಜಿಲ್ಲೆಯ

ಪೊಲೀಸ್ ಇಲಾಖೆಯ ಆಡಳಿತವನ್ನು ನೋಡಿಕೊಳ್ಳುವ ಬಗ್ಗೆ ಸಹಾಯ ಮಾಡುತ್ತಿದ್ದನು. ಸರ್ಕಾರವು ಎಲ್ಲಾ ವರ್ಗದ ಅಧಿಕಾರಿಗಳಿಗೆ ಅವರವರ ಜವಾಬ್ಧಾರಿಗಳ ಬಗ್ಗೆ, ಕರ್ತವ್ಯಗಳ ಬಗ್ಗೆ ವಿಷದವಾಗಿ ತಿಳಿಸಿತು.

೧೮೭೬-೭೭ ರಲ್ಲಿ ಬಂದ ಬರಗಾಲದಿಂದಾಗಿ ಇಲಾಖೆಯ ಸಿಬ್ಬಂದಿಗಳ ಸಂಖ್ಯೆಯಲ್ಲಿ ಕಡಿತಗೊಳಿಸ ಲಾಯಿತು. ಇದರ ಪರಿಣಾಮವಾಗಿ ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್‌ರವರ ಹುದ್ದೆಯನ್ನು ರದ್ದುಗೊಳಿಸಲಾಯಿತು. ಅದರಂತೆ ೧೮೭೯ ರಲ್ಲಿ ಜ್ಯುಡಿಷಿಯಲ್ ಕಮಿಷನರ್‌ರವರು ಐ.ಜಿ.ಪಿಯ ಅಧಿಕಾರಗಳನ್ನು ಚಲಾಯಿಸುವುದಕ್ಕೆ ತಡೆ ನೀಡಲಾಯಿತು. ೧೮೭೯ರ ಆಗಸ್ಟ್‌ನಲ್ಲಿ ಮುಖ್ಯ ಕಮಿಷನರ್‌ರವರು ತಮ್ಮ ಸಾಮಾನ್ಯ ಇಲಾಖೆಯ ಕಾರ್ಯದರ್ಶಿ ಯವರ ಮುಖಾಂತರ ಪೊಲೀಸ್ ಇಲಾಖೆಯ ನೇರ ನಿಯಂತ್ರಣವನ್ನು ಹೊಂದಿದರು.[೧೮೫.]

೧೮೭೪ ರಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರ್‌ರವರನ್ನು ಡೆಪಿಟ್ಯೂ ಕಮಿಷನರ್ ಅವರ ಕೈಕೆಳಗೆ ಅವರಿಗೆ ಪೊಲೀಸ್ ಕರ್ತವ್ಯಗಳಲ್ಲಿ ಸಹಕಾರವನ್ನು ನೀಡುವ ಉದ್ದೇಶದಿಂದ ನೇಮಿಸಲಾಯಿತು. ಡೆಪಿಟ್ಯೂ ಕಮಿಷನ್‌ರವರ ಎಲ್ಲಾ ಪೊಲೀಸ್ ಕರ್ತವ್ಯಗಳನ್ನು ಡೆಪಿಟ್ಯೂ ಇನ್ಸ್‌ಪೆಕ್ಟರ್‌ರವರು ಮಾಡುತ್ತಿದ್ದರು. ಡೆಪಿಟ್ಯೂ ಇನ್ಸ್‌ಪೆಕ್ಟರ್‌ರವರ ಕರ್ತವ್ಯಗಳು ಬಹುತೇಕ ನ್ಯಾಯಾಂಗ ಕಮಿಷನರ್‌ರವರ ಕೆಲಸವನ್ನು ಒಳಗೊಂಡಿತ್ತು. ಇದೇ ಹುದ್ದೆಯನ್ನು ನಂತರ ಮುಂದೆ ೧೮೮೦ರಲ್ಲಿ ಐ.ಜಿ.ಪಿ (ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್) ದರ್ಜೆಗೆ ಏರಿಸಲಾಯಿತು. ಅಸಿಸ್ಟೆಂಟ್ ಕಮಿಷನರ್‌ರವರ ಹುದ್ದೆಯನ್ನು ರದ್ದು ಮಾಡಲಾಯಿತು. ಮತ್ತು ಡೆಪಿಟ್ಯೂ ಕಮಿಷನರ್‌ರವರಿಗೆ ಜಿಲ್ಲೆಯ ಸಾಮಾನ್ಯ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ಅಸಿಸ್ಟೆಂಟ್ ಕಮಿಷನರ್‌ರವರನ್ನು ನೇಮಿಸಿಕೊಳ್ಳುವ ಅಧಿಕಾರಗಳನ್ನು ನೀಡಲಾಯಿತು. ಪೊಲೀಸ್ ಪ್ರಧಾನ ಕಛೇರಿ ಯಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪೊಲೀಸ್ ಇಲಾಖೆಯಲ್ಲಿ ಡೆಪಿಟ್ಯೂ ಕಮಿಷನರ್‌ರವರ ಶಿರಸ್ತೇದಾರ ರಾಗಿದ್ದರು.[೧೮೬]

ಮೇಲ್ದರ್ಜೆಯ ಅಧಿಕಾರಿ ವರ್ಗದಲ್ಲೂ ಇದೇ ರೀತಿ ಪುನರ್‌ಸಂಘಟಿಸಲು ಪ್ರಯತ್ನ ನಡೆಸಲಾಯಿತು. ೧೮೭೯ ರಲ್ಲಿ ಚೀಫ್ ಕಮಿಷನರ್‌ರವರ ಹುದ್ದೆ ಪ್ರಾರಂಭವಾಯಿತು. ವಿಭಾಗಗಳ ಸೂಪರಿಂಟೆಂಡೆಂಟ್‌ರವರುಗಳನ್ನು ಕಮಿಷನರ್ ಗಳೆಂತಲೂ, ಡೆಪಿಟ್ಯೂ ಸೂಪರಿಂಟೆಂಡೆಂಟ್‌ರವರುಗಳನ್ನು ಡೆಪಿಟ್ಯೂ ಕಮಿಷನರ್‌ಗಳೆಂತಲೂ ಕರೆಯಲಾಯಿತು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳನ್ನು ಸಿವಿಲ್ ಕರ್ತವ್ಯಗಳಿಂದಹೊರಗಿಡಲಾಯಿತು. ಎಲ್ಲಾ ಜಿಲ್ಲೆಗಳಲ್ಲಿ ನ್ಯಾಯಾಂಗದ ಕಾರ್ಯಗಳಿಗೆ ಅಸಿಸ್ಟೆಂಟ್‌ರವರುಗಳನ್ನು ನೇಮಿಸಲಾಯಿತು. ಪೊಲೀಸ್ ಕಾಯ್ದೆಯು ರಾಜ್ಯಕ್ಕೆ ೧೮೭೨–೧೮೭೪ ರ ನಡುವೆ ವಿಸ್ತರಿಸಲ್ಪಟ್ಟಿತು. ಮದ್ರಾಸ್ ಪೊಲೀಸ್ ಪದ್ಧತಿಯನ್ನು ಜಾರಿಗೆ ತರಲು ಪ್ರತ್ಯೇಕ ವಿಭಾಗ ತೆರೆಯಲಾಯಿತು. ಇದನ್ನು ಒಬ್ಬ ಯುರೋಪಿಯನ್ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಇಡಲಾಯಿತು. ಕಂದಾಚಾರ ಪೊಲೀಸ್ ಪದ್ಧತಿಯನ್ನು ರದ್ದು ಗೊಳಿಸಲಾಯಿತು. ನ್ಯಾಯಾಂಗದ ಕಮಿಷನರ್‌ರವರನ್ನು ಇನ್ಸ್‌ಪೆಕ್ಟರ್ ಜನರಲ್ ಅಫ್ ಪೊಲೀಸ್ ಎಂಬ ಹುದ್ದೆಯಿಂದ ಹೆಸರಿಸಿ ಪೊಲೀಸ್ ಪಡೆಯನ್ನು ಹೊಸ ವ್ಯವಸ್ಥೆಯಡಿ ಸ್ಥಾಪಿಸಲಾಯಿತು. ಒಬ್ಬ ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ೧೮೭೩ ರಲ್ಲಿ ನೇಮಿಸಲಾಯಿತು. ಈತ ಬಹುತೇಕ ಜ್ಯುಡಿಷಿಯಲ್ ಕಮಿಷನರ್‌ರವರ ಕಾರ್ಯದರ್ಶಿಯಂತೆ ಕೆಲಸ ನಿರ್ವ ಹಿಸುತ್ತಿದ್ದನು.

ರಾಜ್ಯ ಸರ್ಕಾರವು ಕೇಂದ್ರ ಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಆತನ ಕೈಕೆಳಗಿನ ಅಧಿಕಾರಿಗಳ ಕರ್ತವ್ಯಗಳು ಮತ್ತು ಜವಾಬ್ದಾಗಳು ಏನು ಎಂಬ ಬಗ್ಗೆ ವಿವರವಾದ ನಿರ್ದೇಶನ ನೀಡಿತು.[೧೮೭] ಚೀಫ್ ಕಮಿಷನರ್‌ರವರು ಒಂದು ಸುತ್ತೋಲೆಯನ್ನು ಹೊರಡಿಸಿ ಅದರಲ್ಲಿ ಡೆಪಿಟ್ಯೂ ಕಮಿಷನರ್ ಮತ್ತು ಅಮಿಲ್‌ದಾರ್‌ರವರಿಗೆ (ಅವರವರ ವ್ಯಾಪ್ತಿಗೆ ಸಂಬಂಧಿಸಿದಂತೆ) ಪೊಲೀಸ್ ಇಲಾಖೆಯ ಆಂತರಿಕ ಹಣಕಾಸು ವ್ಯವಹಾರ ನಡೆಸಲು ಅಧಿಕಾರ ನೀಡಿದರು. ಪೊಲೀಸ್

ಇನ್ಸ್‌ಪೆಕ್ಟರ್‌ನ ಬಳಿ ಇದ್ದ ತಾಲೂಕು ಪೊಲೀಸ್ ಪಡೆಯ ಅಧಿಕಾರವನ್ನು ಅಮಿಲ್‌ದಾರನಿಗೆ ಹಸ್ತಾಂತರಿಸಲಾಯಿತು. ಇದು ಅಮಿಲ್‌ದಾರನಿಗೆ ಪೊಲೀಸ್ ಕರ್ತವ್ಯ ಮಾಡಲು ಇರುವ ಸ್ಥಳೀಯ ಮಾಹಿತಿಗಳು, ಅಪರಾಧ ತಡೆ ಮತ್ತು ಪತ್ತೆಯಲ್ಲಿರುವ ಅವರ ಜ್ಞಾನಕ್ಕೆ ಅವಲಂಬಿತವಾಗಿತು. ಪೊಲೀಸ್ ಕಾನ್ಸ್‌ಟೇಬಲ್‌ಗಳಿಗಿಂತ, ಅಧಿಕಾರಿಗಳ ಖರ್ಚುವೆಚ್ಚ ಅತ್ಯಂತ ಹೆಚ್ಚಾಗಿತ್ತು. ಇಲಾಖೆಯ ಖರ್ಚುವೆಚ್ಚಗಳನ್ನು ಕಡಿತಗೊಳಿಸುವ ಸಲುವಾಗಿ ತಾಲೂಕು ಕೇಂದ್ರ ಸ್ಥಾನವನ್ನು ಹೊರತುಪಡಿಸಿ, ಉಳಿದ ಎಲ್ಲ 'ಹೆಡ್‌ಸ್ಟೇಷನ್'ಗಳನ್ನು ರದ್ದುಮಾಡಲಾಯಿತು. ಇನ್ಸ್‌ಪೆಕ್ಟರ್ ಮತ್ತು ಜಮಾದಾರ್‌ರವರ ಸಂಖ್ಯೆಯನ್ನು ೬೯ ತಾಲೂಕುಗಳಿಗೆ ಸೀಮಿತಗೊಳಿಸಲಾಯಿತು. ಆದರೆ ಪ್ರತೀ ಜಿಲ್ಲೆಗೆ ಒಬ್ಬೊಬ್ಬ ಕಾಯ್ದಿಟ್ಟ ಜಮಾದಾರ ಹುದ್ದೆಯನ್ನು ನೀಡಲಾಯಿತು. ಇದರಿಂದಾಗಿ ಇಲಾಖೆಯ ಖರ್ಚು ವೆಚ್ಚಗಳನ್ನು ನಿಯಂತ್ರಿಸುವಲ್ಲಿ ಸಾಕಷ್ಟು ಪರಿಣಾಮವಾಯಿತು.[೧೮೮]

೧೮೮೧ ರಲ್ಲಿ ಇಲಾಖೆಯ ಪ್ರತಿಯೊಂದು ದರ್ಜೆಯ ಅಧಿಕಾರಿಗಳ ಸಂಖ್ಯೆಯು ತರ್ಕಬದ್ಧವಾಗಿ ಇರಲಿಲ್ಲ. ಇಲ್ಲಿ ಅರಾಜಕತ್ವವಿದ್ದು ಪದೋನ್ನತಿಯಲ್ಲಿ ಬಹಳ ತಾರತಮ್ಯವಿದ್ದು ಸಿಬ್ಬಂದಿಗಳಲ್ಲಿ ಅಸಮಾಧಾನ ತುಂಬಿತ್ತು. ಉದಾಹರಣೆಗೆ : ಸುಮಾರು ೮೦ ಜನ ಪ್ರಥಮ ದರ್ಜೆ ಜಮೇದಾರರು ಮಾಸಿಕ ೨೬ ರೂಪಾಯಿ ಸಂಬಳ ಪಡೆ ಯುತ್ತಿದ್ದರೆ ೮೭ ಜನ ಎರಡನೇ ದರ್ಜೆ ಜಮೇದಾರರು ಮಾಸಿಕ ೨೨ ರೂಪಾಯಿ ಸಂಬಳ ಪಡೆಯುತ್ತಿದ್ದರು. ಮೊದಲನೇ ಮತ್ತು ಮೂರನೇ ದರ್ಜೆಯ ತಲಾ ೧೩೪ ದಫೇದಾರರುಗಳು ಇದರ ಮಧ್ಯದಲ್ಲಿದ್ದರು. ಈ ರೀತಿ ಕ್ರಮರಹಿತವಾದ ವ್ಯವಸ್ಥೆಯನ್ನು ತೆಗೆದು ಹಾಕಿ ಅವರ ಸಂಖ್ಯೆಗಳಲ್ಲಿ ನಿಯಂತ್ರಣ ತರಬೇಕಿತ್ತು. ಈ ರೀತಿ ಖಡಿತ ಗೊಳಿಸುವುದರಿಂದ ಪಡೆಯ ಸಾಮರ್ಥ್ಯದಲ್ಲಿ ಬೆಳವಣಿಗೆ ತರಬಹುದಾಗಿತ್ತು. ೧೮೮೦ ರ ಡಿಸೆಂಬರ್ ೧ ರಂದು ಹೊಸ ವೇತನ ಶ್ರೇಣಿ ಜಾರಿಗೆ ತರಲಾಯಿತು.[೧೮೯]

ಕ್ರಸಂ	ದರ್ಜೆ	ಅಧಿಕಾರಿ, ಸಿಬ್ಬಂದಿಗಳ ಸಂಖ್ಯೆ	ಮಾಸಿಕ ವೇತನ ಮತ್ತು ಮನೆಯ ಬಾಡಿಗೆ (ಪ್ರತೀ ದರ್ಜೆಗೆ)	ಒಟ್ಟು ಸಂಬಳ ಮತ್ತು ಕುದುರೆ ಭತ್ಯೆ
೧	ಕೇಂದ್ರಸ್ಥಾನ ಇನ್ಸ್‌ಪೆಕ್ಟರ್	೮	೧೦೦+೧೫	೯೨೦
೨	ಜಿಲ್ಲಾ ಮುಖ್ಯ ಮುನ್‌ಶಿ	೮	೪೦	೩೨೦
೩	ಜಿಲ್ಲಾ ಎರಡನೇ ಮುನ್‌ಶಿ	೮	೩೦	೨೪೦
೪	ಜಿಲ್ಲಾ ಮೂರನೇ ಮುನ್‌ಶಿ	೮	೨೦	೧೬೦
೫	ಜಿಲ್ಲಾ ನಾಲ್ಕನೇ ಮುನ್‌ಶಿ	೮	೧೫	೧೨೦
	ಒಟ್ಟು	೪೦	–	೧೭೬೦
೬	ಒಂದನೇ ದರ್ಜೆಯ ಇನ್ಸ್‌ಪೆಕ್ಟರ್	೨೦	೪೦+೧೦	೧೨೦೦
೭	ಎರಡನೇ ದರ್ಜೆಯ ಇನ್ಸ್‌ಪೆಕ್ಟರ್	೪೯	೩೫+೧೦	೨೨೦೫
೮	ಮೊದಲನೇ ದರ್ಜೆಯ ಜಮೇದಾರ್	೩೦	೨೦+೬	೭೮೦
೯	ಎರಡನೇ ದರ್ಜೆಯ ಜಮೇದಾರ್	೧೭	೧೫+೦೬	೯೮೭
	ಒಟ್ಟು	೧೪೬	–	೫೧೭೬
೧೦	ಒಂದನೇ ದರ್ಜೆಯ ದಫೇದಾರ್	೭೫	೧೨	೯೦೦
೧೧	ಎರಡನೇ ದರ್ಜೆಯ ದಫೇದಾರ್	೧೨೫	೧೦	೧೨೫೦
೧೨	ಲಾನ್ಸ್ ದಫೇದಾರ್	೨೬೩	೮	೨೧೦೪
೧೩	ಒಂದನೇ ದರ್ಜೆ ಕಾನ್ಸ್‌ಟೇಬಲ್	೮೦೦	೭	೫೬೦೦
೧೪	ಎರಡನೇ ದರ್ಜೆಯ ಕಾನ್ಸ್‌ಟೇಬಲ್	೨೬೧೯	೬	೧೫೭೧೪
	ಒಟ್ಟು	೩೮೮೨	–	೨೫೫೬೮
	ಎಲ್ಲಾ ಒಟ್ಟು	೪೦೬೮	–	೩೨೫೦೦

ಪ್ರತೀ ವಾರ್ಷಿಕ ವೆಚ್ಚ ರೂ. ೩,೯೦,೦೦೦-೦೦. ಇದೇ ವೇಳೆಗೆ ಕಮಿಷನರ್‌ರವರು ಒಂದು ಆದೇಶವನ್ನು ಹೊರಡಿಸಿದರು. ಅದರಲ್ಲಿ ಕೇಂದ್ರಸ್ಥಾನ ಇನ್ಸ್‌ಪೆಕ್ಟರ್‌ರವರ ಸ್ಥಾನಮಾನದ ಬಗ್ಗೆ ವಿವರಿಸಿದರೂ ಈತನ ಹುದ್ದೆಯನ್ನು ಕೆಳದರ್ಜೆಯ ಅಮಿಲ್ ದಾರನ ಹುದ್ದೆಗೆ ಸಮವೆಂದು ತಿಳಿಸಲಾಯಿತು. ತಾಲೂಕು ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳು ಪೊಲೀಸ್ ಇಲಾಖೆಯಲ್ಲಿ ಅಮಿಲ್ದಾರರ ಸಹಾಯಕರಂತೆ ಇರಬೇಕು. ಕಂದಾಯ ಇಲಾಖೆಯ ಶಿರಸ್ತೇದಾರನಂತೆ ಇನ್ಸ್‌ಪೆಕ್ಟರ್‌ರವರುಗಳು ಅಮಿಲ್

ದಾರನ ಹುದ್ದೆಗೆ ಪದೋನ್ನತಿಯನ್ನು ಪಡೆಯಲು ಅರ್ಹರಾಗಿದ್ದರು. ಪ್ರತಿಯೊಂದು ತಾಲೂಕಿಗೂ ಒಬ್ಬೊಬ್ಬ ಇನ್ಸ್‌ಪೆಕ್ಟರ್ ರವರನ್ನು ನೇಮಿಸಿ, ಅವರು ಅಮಿಲ್‌ದಾರನ ಕೈಕೆಳಗೆ ಕೆಲಸ ಮಾಡುವಂತೆ ತಿಳಿಸಲಾಯಿತು. ಈ ಇನ್ಸ್‌ಪೆಕ್ಟರ್‌ಗಳನ್ನು ಅವರ ಸಂಬಳದ ಆದಾರದ ಮೇರೆಗೆ ಎರಡು ವರ್ಗಗಳನ್ನಾಗಿ ಮಾಡಲಾಯಿತು. ಮೊದಲ ವರ್ಗ ಮಾಸಿಕ ರೂ ೫೦ ಹಾಗೂ ಎರಡನೇ ವರ್ಗ ಮಾಸಿಕ ರೂ ೩೫ ಸಂಬಳ ಪಡೆಯುತ್ತಿದ್ದರು. ಪ್ರತಿಯೊಂದು ತಾಲೂಕು ಕೇಂದ್ರ ಸ್ಥಾನಕ್ಕೆ ಒಂದೊಂದು ಹೆಡ್‌ಸ್ಟೇಷನ್‌ಗಳನ್ನು (ಮುಖ್ಯ ಠಾಣೆ) ಹೊಂದಿದ್ದವು. ಈ ಠಾಣೆಗಳಿಗೆ ಸಂಬಂಧಿಸಿದಂತೆ ದಾಖಲೆ ಪತ್ರಗಳ ನಿರ್ವಹಣೆ ಮತ್ತು ಠಾಣೆ ಸಂಬಂಧಿಸಿದ ವರದಿ ಸಲ್ಲಿಸುವುದು, ಅತ್ಯಂತ ಪ್ರಮುಖ ಪ್ರಕರಣಗಳ ತನಿಖೆಗೆ ಇನ್ಸ್‌ಪೆಕ್ಟರ್ ರವರುಗಳನ್ನು ನೇಮಿಸುವುದರೊಂದಿಗೆ ತಾನೂ ಸಹ ತನಿಖೆ ನಡೆಸುವುದು, ಅಮಿಲ್ದಾರನ ಕೆಲಸಗಳಾಗಿದ್ದವು.[೧೯೦] ಎಲ್ಲೆಲ್ಲಿ ಠಾಣೆಗೆ ಕಟ್ಟಡಗಳಿಲ್ಲವೋ ಅಲ್ಲಿ ಠಾಣಾ ಕಟ್ಟಡಗಳನ್ನು, ಎಲ್ಲಿ ಸುಲಭವಾಗಿ ವಸತಿ ಸೌಕರ್ಯವಿಲ್ಲವೋ ಅಲ್ಲಿ ಗುಡಿಸಲುಗಳನ್ನು (ಹಟ್) ನಿರ್ಮಿಸಲಾಯಿತು. ಘಾಟಿ ಪ್ರದೇಶದ ಹಾಗೂ ಅತ್ಯಂತ ಹೆಚ್ಚಿನ ಕೆಲಸವಿರುವ ಠಾಣೆಗಳಿಗೆ ಭತ್ಯೆ ವಿತರಿಸ ಲಾಯಿತು. ಸಮರ್ಪಕವಾದ ಸಮವಸ್ತ್ರವನ್ನು ವಿತರಿಸಲಾಯಿತು. ಗ್ರಾಮೀಣ ಪ್ರದೇಶದ ಪೊಲೀಸರಿಗೆ ಒಂದುವರೆ ಇಂಚು ದಪ್ಪ, ೪೦ ಇಂಚು ಉದ್ದದ ತುದಿಯಲ್ಲಿ ಹಿತ್ತಾಳಿಯ ಉಂಗುರವಿರುವ ಗಟ್ಟಿಯಾದ ಲಾಠಿಗಳನ್ನು ಆಯುಧವಾಗಿ ನೀಡ ಲಾಯಿತು. ಕೆಲವು ಚಿಕ್ಕ ಕೋವಿ ಅದರ ತುದಿಯಲ್ಲಿ ಖಡ್ಗದಂತಿರುವ ಕಠಾರಿ (ಬೈನೆಟ್) ಅಳವಡಿಸಿ ನೀಡಲಾಯಿತು. ಏಕಾಂತ ಪ್ರದೇಶದಲ್ಲಿ ಇರುವ ಠಾಣೆಗಳಿಗೂ ಸಹ ಅಗತ್ಯತೆ ನೋಡಿ ಆಯುಧಗಳನ್ನು ನೀಡಲಾಯಿತು.[೧೯೧] ಇದರಿಂದಾಗಿ ಪೊಲೀಸ್ ಇಲಾಖೆಯ ಕೆಳಮಟ್ಟದ ಸಿಬ್ಬಂದಿಯವರ ವೃತ್ತಿ ಸಾಮರ್ಥ್ಯ ಹೆಚ್ಚುವಂತಾಯಿತು.

೧೮೮೧ರ ವೇಳೆಗೆ ಪ್ರತೀ (ವಿಭಾಗಗಳಿಗೆ ಸಂಬಂಧಿಸಿದ) ಭೂಪ್ರದೇಶಗಳನ್ನು ನಿಗದಿಪಡಿಸಲಾಯಿತು. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ತಲಾ ಮೂರು, ತುಮಕೂರು, ಮೈಸೂರು, ಶಿವಮೊಗ್ಗ ಮತ್ತು ಕಡೂರು ಜಿಲ್ಲೆ ಗಳಲ್ಲಿ ತಲಾ ಎರಡು ವಿಭಾಗಗಳಂತೆ ಒಟ್ಟು ೧೪ ವಿಭಾಗಗಳಿದ್ದವು. ೧೮೮೨ ರಲ್ಲಿ ಚಿತ್ರದುರ್ಗ, ಫ್ರೆಂಚ್‌ರಾಕ್ ಈಗಿನ ಪಾಂಡವಪುರ ಮತ್ತು ಹಾಸನಗಳಲ್ಲಿ ಹೊಸದಾಗಿ ಮೂರು ವಿಭಾಗಗಳನ್ನು ತೆರೆಯಲಾಯಿತು. ಪ್ರತಿಯೊಂದು ವಿಭಾಗವೂ ಅಸಿಸ್ಟೆಂಟ್ ಕಮಿಷನರ್‌ರವರ ಅಧೀನದಲ್ಲಿರುವಂತೆ ಮಾಡಲಾಯಿತು. ಒಟ್ಟಾರೆ ೧೭ ವಿಭಾಗಗಳಿದ್ದವು.[೧೯೨] ೧೮೮೫ ರಿಂದ ೧೮೯೨ ರ ಅವಧಿಯಲ್ಲಿ ಮೈಸೂರು ಸಂಸ್ಥಾನವು ಈ ಹಿಂದೆ ಹೇಳಿದಂತೆ ೮ ಜಿಲ್ಲೆಗಳು ಹಾಗೂ ಫ್ರೆಂಚ್‌ರಾಕ್ ಉಪ ವಿಭಾಗವನ್ನು ಹೊಂದಿತ್ತು. ಈ ಫ್ರೆಂಚ್‌ರಾಕ್ಸ್‌ಗೆ , ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ, ಕೃಷ್ಣರಾಜ ಪೇಟೆ ತಾಲೂಕುಗಳು ಸೇರಿದ್ದವು. ಉತ್ತಮ ಪೊಲೀಸ್ ಆಡಳಿತದ ದೃಷ್ಟಿಯಿಂದ ಫ್ರೆಂಚ್‌ರಾಕ್ಸ್‌ನ್ನು ಒಂದು ಪ್ರತ್ಯೇಕ ಪೊಲೀಸ್ ಘಟಕವನ್ನಾಗಿ ಮಾಡಲಾಗಿತ್ತು.[೧೯೩] ಮೈಸೂರಿನ ದಿವಾನರು ಡೆಪಿಟ್ಯೂ ಕಮಿಷನರ್‌ರವರೊಂದಿಗೆ ರಾಜ್ಯದ ಪೊಲೀಸ್ ಪಡೆಯ ನಿಯಂತ್ರಣ ವನ್ನು ಹೊಂದಿದ್ದರು. ೧೮೮೩ ರಲ್ಲಿ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಪೊಲೀಸ್ ಕಾರ್ಯದರ್ಶಿ ಹುದ್ದೆ ಯನ್ನು ಸೃಷ್ಟಿಸಲಾಯಿತು. ಈತನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯೂ ಆಗಿದ್ದನು.

ಮೈಸೂರು ಪೊಲೀಸ್ ಆಡಳಿತ ವ್ಯವಸ್ಥೆಯಲ್ಲಿ ೧೮೮೫ ರಲ್ಲಿ ಡೆಪ್ಯೂಟಿ ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಹುದ್ದೆ ಯನ್ನು ರಚಿಸಲಾಯಿತು.[೧೯೪] ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್‌ರವರು ಪೊಲೀಸ್ ಆಡಳಿತದ ಜೊತೆಗೆ ಅರಣ್ಯ, ಸಸಿಗಳನ್ನು ನೆಡುವುದು, ಲೆಕ್ಕಪತ್ರಗಳ ಇಲಾಖೆ, ಕೃಷಿ ಇಲಾಖೆಯ ವ್ಯವಹಾರಗಳನ್ನು ಸಹ ನೋಡಿಕೊಳ್ಳಬೇಕಿತ್ತು. ದಿವಾನರ ಅಧೀನ ದಲ್ಲಿದ್ದ ಪೊಲೀಸ್ ಇಲಾಖೆಯನ್ನು ಜಿಲ್ಲೆಗಳಲ್ಲಿ ವರ್ಗೀಕರಿಸಿದ ನಂತರ, ಪೊಲೀಸ್ ಅಸಿಸ್ಟೆಂಟ್ ಕಮಿಷನರ್‌ರವರನ್ನು ಪುನರ್‌ಸ್ಥಾಪಿಸಲಾಯಿತು. ೧೮೯೧ ರಲ್ಲಿ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಹುದ್ದೆಯನ್ನು ಅಸಿಸ್ಟೆಂಟ್ ಸೂಪರಿಂ ಟೆಂಡೆಂಟ್ ಆಫ್ ಪೊಲೀಸ್ ಎಂಬ ಹೆಸರಿನಿಂದ ಕರೆಯಲಾಯಿತು. ಆ ವೇಳೆಗೆ ಪೊಲೀಸ್ ಪಡೆಯು ಸಾಮಾನ್ಯ

ಪೊಲೀಸ್ ಮತ್ತು ಗ್ರಾಮೀಣ ಪೊಲೀಸನ್ನು ಒಳಗೊಂಡಿತ್ತು. ಗ್ರಾಮೀಣ ಪೊಲೀಸ್‌ನ್ನು ವಂಶಪಾರಂಪರ್ಯವಾಗಿ ಬಂದ ಪಟೇಲರು, ತೋಟಿಗಳು ಅಥವಾ ತಳವಾರರು ನೋಡಿಕೊಳ್ಳುತ್ತಿದ್ದರು. ಅವರ ಕರ್ತವ್ಯಗಳೆಂದರೆ ಅಪರಾಧಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು ಮತ್ತು ಪೊಲೀಸರಿಗೆ ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಸಹಕರಿಸುವುದು, ರಾತ್ರಿ ವೇಳೆ ಪೊಲೀಸರಿಗೆ ಗಸ್ತು (ಪೆಟ್ರೋಲಿಂಗ್) ಕರ್ತವ್ಯಕ್ಕೆ ನೆರವುನೀಡುವುದು, ಗ್ರಾಮದ ಗಡಿಗಳ ಕಾವಲು, ಗ್ರಾಮದ ಜನರ ರಕ್ಷಣೆ, ಅತಿಥಿ ಗೃಹ ಮತ್ತು ಚೌಲ್ಟ್ರಿಗಳಲ್ಲಿ ತಂಗಿದ ಜನರ ರಕ್ಷಣೆಯ ಬಗ್ಗೆ, ಪೊಲೀಸರಿಗೆ ನೆರವು ನೀಡುವುದು ಇವರ ಕರ್ತವ್ಯವಾಗಿತ್ತು. ೧೯೦೧ ರಲ್ಲಿ ಇವರಿಗೆ ಸಮವಸ್ತ್ರಗಳನ್ನು ಮತ್ತು ಆಯುಧವಾಗಿ ಈಟಿಯನ್ನು ನೀಡಲಾಯಿತು. ಜಿಲ್ಲಾ ಪೊಲೀಸ್‌ನಲ್ಲಿ ಉಪ–ವಿಭಾಗವನ್ನು ರಚಿಸಲಾಯಿತು. ಈ ಉಪ– ವಿಭಾಗಗಳಿಗೆ ತಾಲೂಕುಗಳು, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಅಂದರೆ ಸಶಸ್ತ್ರ ಪೊಲೀಸ್, ತುರ್ತು ಮೀಸಲು ಪೊಲೀಸ್‌ಗಳನ್ನು ಇವರ ಅಧೀನಕ್ಕೆ ಸೇರಿಸಲಾಯಿತು. ೧೯೦೬ ರಲ್ಲಿ ಮುನಿಸಿಪಾಲಿಟಿಯ ವ್ಯಾಪ್ತಿಯು ಶೀಘ್ರ ಬೆಳವಣಿಗೆ ಹೊಂದಿದ್ದರಿಂದ ಪಡುವಾರಹಳ್ಳಿ, ಕನ್ನೇಗೌಡನ ಕೊಪ್ಪಲು, ಕುರುಬರ ಹಳ್ಳಿ ಮತ್ತು ಒಂಟಿ ಕೊಪ್ಪಲುಗಳನ್ನು ಮೈಸೂರು ನಗರ ವ್ಯಾಪ್ತಿಗೆ ಸೇರಿಸಲಾಯಿತು. ಆದುದರಿಂದ ಪೊಲೀಸ್ ಇಲಾಖೆ ಯನ್ನು ಮೂರು ವಿಭಾಗಗಳನ್ನಾಗಿ ವಿಂಗಡಣೆ ಮಾಡಲಾಯಿತು. ಮೂರನೇಯ ಅಂಗವೇ ಕ್ರೈಂ ಇನ್‌ವೆಸ್ಟಿಗೇಷನ್ ವಿಂಗ್. (ಅಪರಾಧ ತನಿಖಾ ವಿಭಾಗ)[೧೯೫.] ೧೯೨೩ ರಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳು ಜಿಲ್ಲಾಮಟ್ಟದ ಪೊಲೀಸ್ ಮುಖ್ಯಸ್ಥರಾಗಿರುತ್ತಿದ್ದರು.

೧೯೩೦ ರಲ್ಲಿ ಫ್ರೆಂಚ್‌ರಾಕ್ಸ್ (ಪಾಂಡವಪುರ) ನಲ್ಲಿ ಪೊಲೀಸ್ ಪಡೆಯು ಗಲಭೆಗಳ ಸರಮಾಲೆಯನ್ನೇ ಎದುರಿಸ ಬೇಕಾಯಿತು. ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಣದಲ್ಲಿ ತರುವ ದೃಷ್ಟಿಯಿಂದ ಇದೇ ವರ್ಷ ಎಮರ್‌ಜೆನ್ಸಿ ಪೊಲೀಸ್ ಫೋರ್ಸ್‌ನ್ನು ಜಾರಿಗೆ ತರಲಾಯಿತು. ಇದೇ ವರ್ಷ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು ಮೈಸೂರು ನಗರ ದಲ್ಲಿ ನೇಮಿಸಲಾಯಿತು. ಅವರಿಗೆ ಮೈಸೂರು ನಗರ, ಹುಣಸೂರು ಮತ್ತು ಕೆ.ಆರ್.ನಗರದ ತಾಲೂಕುಗಳ ವ್ಯಾಪ್ತಿಯನ್ನು ನೀಡಲಾಯಿತು. ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರನ್ನು ನೇಮಿಸಿ ನಂಜನಗೂಡಿನಲ್ಲಿ ಅವರ ಕೇಂದ್ರ ಕಛೇರಿ ಯನ್ನು ನಿರ್ಮಿಸಿ, ಅವರಿಗೆ ಉಳಿದ ತಾಲೂಕುಗಳ ಜವಬ್ದಾರಿಯನ್ನು ನೀಡಲಾಯಿತು.[೧೯೬] ಇದೇ ವೇಳೆ ಯಳಂದೂರಿನಲ್ಲಿ ವಿಶೇಷ ಪೊಲೀಸ್ ಅಧಿಕಾರಿಯನ್ನು ನೇಮಿಸಲಾಗಿತ್ತು. ಅಲ್ಲಿಯ ಜಾಗಿರ್‌ದಾರರು ಪೊಲೀಸ್ ಇಲಾಖೆಯನ್ನು ನಿಯಂತ್ರಿಸು ತ್ತಿದ್ದರು. ಜಾಗಿರ್‌ದಾರರು ಪೊಲೀಸ್ ಇಲಾಖೆಯನ್ನು ನಿಯಂತ್ರಿಸಲು ಅಸಮರ್ಥರಾಗಿದ್ದಾರೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅಸಮರ್ಥರಾಗಿದ್ದರೆಂಬ ಕಾರಣಕ್ಕೆ ಪೊಲೀಸರು ಈ ಪ್ರದೇಶವನ್ನು ಪ್ರವೇಶಿಸಿದರು. ನಂತರ ಸ್ಥಳೀಯ ಅಮಲ್‌ದಾರರಿಗೆ ಪೊಲೀಸ್ ಇಲಾಖೆಯನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ನೀಡಲಾಯಿತು. ಯಳಂದೂರು ಜಾಗಿರ್‌ದಾರರು ೧೯೩೦ ರಲ್ಲಿ ಬಂದೋಬಸ್ತ್ ಕರ್ತವ್ಯವನ್ನು ನಿರ್ವಹಿಸಿದ ಬಗ್ಗೆ ಪೊಲೀಸರಿಗೆ ೭೫೦೭/– ರೂಪಾಯಿ ೮ ಆಣೆಗಳನ್ನು ನೀಡಿದ್ದರು.[೧೯೭] ೧೯೩೫ ರಲ್ಲಿ ಪೊಲೀಸರಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡಲಾಯಿತು. ಅವುಗಳೆಂದರೆ, ಮೋಟಾರು ವಾಹನಗಳ ನೊಂದಣಿ ಮತ್ತು ಅದರ ತೆರಿಗೆ ಸಂಗ್ರಹಣೆ ಜವಾಬ್ದಾರಿ ನೀಡಲಾಯಿತು. ಆದುದರಿಂದ ಪೊಲೀಸ್ ಸಿಬ್ಬಂದಿಯವರಿಗೆ ಬಸ್‌ವಾರಂಟು ಸೌಲಭ್ಯವನ್ನು ನೀಡಲಾಯಿತು ಮತ್ತು ಸೈಕಲುಗಳನ್ನು ನೀಡ ಲಾಯಿತು.[೧೯೮] ತಾಲೂಕುಗಳಲ್ಲಿ ಪೊಲೀಸರು ಅಮಲ್‌ದಾರನ ಕೈಕೆಳಗೆ ಇರುತ್ತಿದ್ದರು. ಪೊಲೀಸರಿಗೆ ಘಾಟಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಆಶ್ರಯ ಸಿಗದ್ದಿದ್ದಾಗ ಅವರಿಗೆ ವಿಶೇಷ ಭತ್ಯೆಗಳನ್ನು ನೀಡಲಾಗುತ್ತಿತ್ತು.

೪.೯: ಮೈಸೂರು ಅರಸರ ಅಂಗರಕ್ಷಕ ಪಡೆ

ಮೈಸೂರು ಮಹಾರಾಜರ ಅಂಗರಕ್ಷಕ ಪಡೆಗೆ ಒಂದು ಇತಿಹಾಸವಿದೆ. ಮಹಾರಾಜರು ಊರಿನಿಂದ ಊರಿಗೆ

ಹೋಗುವಾಗ, ಪ್ರತೀ ನಿತ್ಯ ಅರಮನೆಯಲ್ಲಿ ಇರುವ ಸಂದರ್ಭದಲ್ಲಿ, ದಸರಾ ಮೆರವಣಿಗೆಯಂತಹ ಸಾಂಸ್ಕೃತಿಕ ಉತ್ಸವಗಳಲ್ಲಿ ಅವರ ಬೆಂಗಾವಲಿಗಾಗಿನಿಂತು ಅವರನ್ನು ದಿನದ ೨೪ ಗಂಟೆಯೂ ಕಾಯುತ್ತಾ ಬಂದಿದ್ದು ಈ ಅಂಗರಕ್ಷಕ ಪಡೆ. ಮಹಾರಾಜರ ಅಂಗರಕ್ಷಕದಳ ಮತ್ತು ಅಶ್ವದಳದ ಬ್ಯಾಂಡ್ ಒಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತವೆ. ಮುಂದೊಂದು ದಿನ ಸ್ವಾತಂತ್ರ್ಯ ನಂತರದಲ್ಲಿ ಮಹಾರಾಜರ ಅಂಗರಕ್ಷಕ ಪಡೆಯುಕರ್ನಾಟಕ ಪೊಲೀಸ್‌ನಲ್ಲಿ ಮೌಂಟೆಡ್ (ಅಶ್ವದಳ) ಪೊಲೀಸ್ ಆಗಿ ಪರಿವರ್ತನೆಯಾಗಿದೆ. ಮಹಾರಾಜರ ಖಾಸಗಿ ಅಂಗರಕ್ಷಕ ಪಡೆಯನ್ನು 'ಬಾರ್ಗಿರ್' ಎಂದು ಕರೆಯಲಾಗುತ್ತಿತ್ತು. ಸುಮಾರು ೫೦೦ ಮಂದಿ ಅಂಗರಕ್ಷಕ ಇದ್ದ ಈ ಪಡೆಗೆ ಕ್ಲೋಸ್‌ಪೇಟೆ (ಈಗಿನ ರಾಮನಗರ)ಯಲ್ಲಿ ತರಬೇತಿಯನ್ನು ನೀಡಲಾಗುತ್ತಿತ್ತು. (ಮಹಾರಾಜರ ಅಂಗರಕ್ಷಕ ಪಡೆಯು ಕರ್ನಾಟಕ ರಾಜ್ಯ ಪೊಲೀಸ್ ಅಶ್ವದಳವಾಗಿ ಪರಿವರ್ತನೆಯಾದ ವಿವರಗಳನ್ನು ಮುಂದೆ ವಿವರಿಸಲಾಗಿದೆ.)

೧೯೨೫ರ ದಸರಾ ಮೆರವಣಿಗೆಯ ಬಗ್ಗೆ ಮೈಸೂರು ಅರಮನೆಯ ಹೊರಭಾಗದ ಗೋಡೆಯ ಮೇಲೆ ಇರುವ ವರ್ಣ ಚಿತ್ರವೊಂದರಲ್ಲಿ ದಸರಾ ಮೆರವಣಿಗೆಯು ಹೋಗುವಾಗ ಮೆರವಣಿಗೆಯನ್ನು ಅನುಕ್ರಮ ರೀತಿಯಲ್ಲಿ ಚಿತ್ರಿಸಿದ್ದು, ಯಾರು ಮೊದಲು ಮತ್ತು ಯಾರ ನಂತರ ಯಾರು ಹೋಗಬೇಕು ಎಂಬುದನ್ನು ಚಿತ್ರಿಸಲಾಗಿದೆ. ದಸರಾ ಮೆರವಣಿಗೆಯಲ್ಲಿ ಒಟ್ಟು ೪೧ ಅನುಕ್ರಮಣಿಕೆಗಳು ಇದ್ದು, ಅದರಲ್ಲಿ ಮಹಾರಾಜರ ಅಂಗರಕ್ಷಕ ಪಡೆ ಮತ್ತು ಪೊಲೀಸ್ ಅಧಿಕಾರುವ್ಯದನ್ನು ಗಮನಿಸಬಹುದು. ಅನುಕ್ರಮಣಿಕೆ ೧೯ರಲ್ಲಿ ಮಹಾರಾಜರ ಅಂಗರಕ್ಷಕರು ಮತ್ತು ಅಶ್ವದಳದ ಬ್ಯಾಂಡ್, ೨೫ ರಲ್ಲಿ ಕುದುರೆಗಳ ಮೇಲೆ ಐ.ಜಿ.ಪಿ ಮತ್ತು ಮೈಸೂರಿನ ಡೆಪುಟ್ಯೂ ಕಮಿಷನರ್, ೨೮ ರಲ್ಲಿ ಬ್ಯಾಂಡ್‌ಗಳು, ಅರಮನೆಯ ಬ್ಯಾಂಡ್, ಓಲ್ಗಾ, ಸೈನಿಕ ಮತ್ತು ಕರ್ನಾಟಕ ಬ್ಯಾಂಡ್, ೩೬ ರಲ್ಲಿ ಮಹಾರಾಜರ ಅಂಗರಕ್ಷಕ ದಳದ ಪತಾಕೆಗಳು, ಮೈಸೂರ್ ಲ್ಯಾನ್ಸರ್ ಮೈಸೂರು ಕುದುರೆಗಳು,ಹಾಗೂ ೩೭ ರಲ್ಲಿ ಮಹಾರಾಜರ ಅಂಗರಕ್ಷಕ ದಳವಿತ್ತು.[೧೯] ಈ ಮೆರವಣಿಗೆಯನ್ನು ಪ್ರತಿನಿಧಿಸುವ ೨೬ ವರ್ಣ ಚಿತ್ರಗಳು ಈಗಿನ ಮೈಸೂರು ಅರಮನೆಯ ಕಲ್ಯಾಣ ಮಂಟಪದ ಸುತ್ತ ಗೋಡೆಯ ಮೇಲೆ ಕಾಣಬಹುದು. ಪೂರ್ವ ದಿಕ್ಕಿನ ಗೋಡೆ ಗಜಲಕ್ಷ್ಮಿಪಟ್ಟಿಕೆ ಬಾಗಿಲ ಇಕ್ಕೆಲಗಳಲ್ಲಿ ಪೊಲೀಸ್ ಅಧಿಕಾರಿಗಳು ಇರುವುದನ್ನು ಗಮನಿಸಬಹುದು.

ಪಟ್ಟಿಕೆ ೧ ರಲ್ಲಿ ಎಡಭಾಗದಲ್ಲಿ ಒಂಟೆ ಸವಾರರು (ಹಿನ್ನೆಲೆ –ಕೆ.ಇ.ಬಿ ಕಾಲೋನಿ) ಹಿಂಭಾಗದ ದೃಶ್ಯದಲ್ಲಿ ದಫೇದಾರ ಮೊಹಮ್ಮದ್ ಗೌಸ್, ಸೈಯದ್ ಉಸ್ಮಾನ್ ಬಿನ್‌ಚಿಕಹುಚ್ಚ, ಗಫಾರ್‌ಸಾಬ್, ಬಲಭಾಗದಲ್ಲಿ ಗಜಸವಾರರು. ಈ ಚಿತ್ರವನ್ನು ೧೯೩೫ ರಲ್ಲಿ ಕಲಾವಿದ ಕೆ.ಕೇಶವಯ್ಯರವರು ಚಿತ್ರಿಸಿದ್ದಾರೆ. ಪಟ್ಟಿಕೆ ೧೧ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದ *ಮಹಾರಾಜರ ಅಂಗರಕ್ಷಕ ದಳ ಮತ್ತು ಅಶ್ವದಳ ಬ್ಯಾಂಡ್* – ಇದರಲ್ಲಿ ಅಧಿಕಾರಿಗಳ ಹೆಸರನ್ನು ಗುರುತಿಸಲಾಗಿದೆ. ೧) ರಿಸಲ್‌ದಾರ್ – ಹನುಮಂತರಾವ್, ೨) ಕಹಳೆ ಊದುವವ –ಮಹಾದೇವ ನಾಯ್ಕ, ೩) ಸಂಗೀತಗಾರ (ಬ್ಯಾಂಡ್‌ಮ್ಯಾನ್)– ಸುಬ್ಬರಾವ್, ೪) ನಾಯ್ಕ–ಲಕ್ಷ್ಮೀಶ, ೫) ಬ್ಯಾಂಡ್‌ಮ್ಯಾನ್–ರಾಮ್‌ಜಿ, ೬)ಬ್ಯಾಂಡ್‌ಮ್ಯಾನ್ – ಸುಸೀನ್‌ದನ್, ೭) ಬ್ಯಾಂಡ್‌ಮ್ಯಾನ್ –ವೆಂಕಟರಾವ್, ೮) ನಾಯ್ಕ – ಪುಟ್ಟಯ್ಯ, ೯) ಬ್ಯಾಂಡ್‌ಮ್ಯಾನ್ – ಜವರಪ್ಪ, ೧೦) ನಾಯ್ಕ – ಸೆಬಾಸ್ಟಿಯನ್, ೧೧) ನಾಯ್ನ –ಮಸಲಮಣಿ ಇದನ್ನು ೧೯೩೦ ರಲ್ಲಿ ಚಿತ್ರ ಕಲಾವಿಧ ಎಸ್.ಎನ್. ಸ್ವಾಮಿಯವರು ಚಿತ್ರಿಸಿದ್ದಾರೆ. ಪಟ್ಟಿಕೆ ೧೪ ರಲ್ಲಿ *ಗಜಲಕ್ಷ್ಮಿ ಪಟ್ಟಿಕೆಯುಳ್ಳ ಬಾಗಿಲು*– ಧರ್ಬಾರಿಗಳು (ಅಶ್ವಾರೂಡರಾಗಿ) ೧ ಶ್ರೀ.ಎಫ್.ಎ.ಹ್ಯಾಮಿಲ್ಟನ್–ಸಿ.ಇ.ಎ– ಐ.ಜಿ.ಪಿ (ಹ್ಯಾಟ್ ಸಹಿತ),೨) ಶ್ರೀ.ಬಿ.ಟಿ.ಕೇಶವ ಅಯ್ಯಂಗಾರ್, ಬಿ.ಎ. ಜಿಲ್ಲಾಧಿಕಾರಿಗಳು (ಮೈಸೂರು ಪೇಟ ಸಹಿತ) ೩) ಶ್ರೀ.ಎಂ.ಮರಿಯಪ್ಪ, ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಈ

ಚಿತ್ರವನ್ನು ೧೯೩೫ ರಲ್ಲಿ ಚಿತ್ರ ಕಲಾವಿದ ವೈ.ನಾಗರಾಜುರವರು ಚಿತ್ರಿಸಿದ್ದಾರೆ. *ಚಿತ್ರ –೮ ನೋಡಿ.* ಪಟ್ಟಿಕೆ ೨೧ ರಲ್ಲಿ *ಮಹಾರಾಜರ ಅಂಗರಕ್ಷಕ ದಳದ ಲಾಂಛನಾಧಿಕಾರಿಗಳು*– ೧) ದಫೇದಾರ ರಾಜರಾವ್ ಯಾಧವ, ೨) ದಫೇದಾರ ಮೊಹಮ್ಮದ್ ಯಾಸೀನ್ ೩) ದಫೇದಾರ ಇ. ನಾರಾಯಣಮತ್ತು ಅರಮನೆ ಆವರಣ ಹಿನ್ನಲೆ ಜಯಮಾರ್ತಾಂಡ ಗೇಟ್ ಹತ್ತಿರ ಮೈಸೂರು ಲ್ಯಾನ್ಸರ್ಸ್ ೧)ದಫೇಧಾರ ಮುದ್ದೀನ್ ಅನ್ಸರ್, ೨)ಸ್ಕ್ವಾಡ್ರನ್ ಮೇಜರ್ ಗೋವಿಂದರಾವ್, ೩)ದಫೇದಾರ ಸೈಯದ್ ಬುಡಾನ್ ಮೈಸೂರು ಮಹಾರಾಜರ ಅಂಗರಕ್ಷಕ ಪಡೆಗೆ ಸಂಬಂಧಿಸಿದ ಅಪರೂಪದ ಚಿತ್ರಗಳ ಬಗ್ಗೆ ಚಿತ್ರ–*೯ರಿಂದ ೨೦ ನೋಡಿ*

೪.೧೦ : ಮೈಸೂರು ಪೊಲೀಸ್‌ನ ಬೆಳವಣಿಗೆಯ ಮುಖ್ಯ ಹೆಜ್ಜೆಗಳು

ಮೈಸೂರು ಪೊಲೀಸ್ ಬೆಳವಣಿಗೆಯ ಮುಖ್ಯ ಹೆಜ್ಜೆಗಳು ಈ ಕೆಳಕಂಡಂತೆ ಇರುತ್ತದೆ. ರಾಜ ಒಡೆಯರ ಕಾಲ (೧೫೭೮–೧೬೧೭)– ಠಾಣಾದಾರರು, ಓಲೆಗಾರರು ಹೋಬಳಿದಾರರಿಂದ ಪೊಲೀಸರ ಕಾರ್ಯನಿರ್ವಹಣೆ. ಚಿಕ್ಕ ದೇವರಾಜ ಒಡೆಯರ್ (೧೬೭೩–೧೭೦೪)– ಹದಿನೆಂಟು ಇಲಾಖೆಗಳ ಅಠಾರ ಕಛೇರಿ ನಿರ್ಮಾಣ, ಇದರಲ್ಲಿ ' ಪಟ್ಟಣದ ಚಾವಡಿ 'ಯಿಂದ ಪೊಲೀಸರ ಕಾರ್ಯ ಹಾಗೂ ಅರಮನೆ ಕೋಟೆ ಕೊತ್ತಲಗಳ ರಕ್ಷಣೆ.

ಹೈದರಾಲಿ ಆಳ್ವಿಕೆ (೧೭೬೧–೧೭೮೨)– ಪ್ರತ್ಯೇಕ ಪೊಲೀಸ್ ದಳಗಳ ನಿರ್ಮಾಣ, ಗುಪ್ತಚಾರ ದಳದ ರಚನೆ, ಹಳ್ಳಿ, ಜಿಲ್ಲೆ ಹಾಗೂ ನಗರಗಳೆಂದು ಪೊಲೀಸ್ ಆಡಳಿತದ ವಿಂಗಡಣೆ.

ಟಿಪ್ಪು ಆಳ್ವಿಕೆ (೧೭೮೨–೧೭೯೯)– ಕಂದಾಚಾರ ಪದ್ಧತಿಯಲ್ಲಿ ಆಶಮ್ ಕಛೇರಿ ಸ್ಥಾಪನೆ. ಭಕ್ಷಿ ಇದರ ಮುಖ್ಯಸ್ಥ. ಪೊಲೀಸ್ ವ್ಯವಸ್ಥೆಗೆ ಪ್ರತ್ಯೇಕ ಅಸ್ತಿತ್ವ.

ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯–೧೮೩೧)– ಟಿಪ್ಪು ಕಾಲದ ವ್ಯವಸ್ಥೆಯ ಮುಂದುವರಿಕೆ. ಕಂದಾಚಾರ ದಳಕ್ಕೆ ಟಿಪ್ಪುವಿನ ಸೈನ್ಯದಲ್ಲಿದ್ದ 'ಪದಾತಿ' ಗಳ ಸೇರ್ಪಡೆ. ರಾಜಧಾನಿಯಲ್ಲಿ ಮಾತ್ರ ಪೊಲೀಸ್ ದಳಕ್ಕೆ ಬಾರ್ ಆಫ್ ಇನ್‌ಫೆಂಟ್ರಿಯ ನೆರವು ನೀಡಿಕೆ.

೧೮೦೦	ಬುರ್ರಾಪಡೆ ಎಂಬ ಸೈನಿಕ ದಳದಿಂದ ಪೊಲೀಸರ ಕರ್ತವ್ಯ ನಿರ್ವಹಣೆ.
೧೮೩೪	ಪೊಲೀಸ್ ಪಡೆಯ ಪುನರ್‌ಸಂಘಟನೆ. 'ಪೊಲೀಸ್ ಇಲಾಖೆಯ ಕಾರ್ಯಕ್ಷೇತ್ರ ನ್ಯಾಯಾಂಗದ ಕಾರ್ಯಗಳಿಗಿಂತ ಸೈನ್ಯದ ಕೆಲಸಗಳಿಗಿಂತ ಭಿನ್ನವಾಗಿರಬೇಕು. ರೆವಿನ್ಯೂ ಅಧಿಕಾರಿಗಳಿಂದ ಪೊಲೀಸ್ ಅಧಿಕಾರಿ ಬೇರ್ಪಡಬೇಕು ಎಂಬ ಹುಕುಂ ನಾಮೆಯ ಜಾರಿ.
೧೮೩೫	ಕಂದಾಚಾರ ಪಡೆಯ ಮುಖ್ಯಸ್ಥರಾಗಿ 'ಕಂದಾಚಾರ ಭಕ್ಷಿ'ಯ ನೇಮಕ.
೧೮೪೧	ಈವರೆಗೆ ಪೊಲೀಸ್ ಕರ್ತವ್ಯ ಮಾಡುತ್ತಿದ್ದ ಕಂದಾಚಾರ ಪಡೆಯ ರದ್ದು.
೧೮೪೪	ಮೈಸೂರಿಗೆ ಪ್ರಥಮವಾಗಿ ಪೊಲೀಸ್ ಸೂಪರಿಂಟೆಂಡೆಂಟ್‌ರ ನೇಮಕ.
೧೮೫೬ ರಿಂದ ೧೮೬೨	ಮೈಸೂರು ಪೊಲೀಸ್ ಇತಿಹಾಸದ ನಡೆಯಲ್ಲಿ ಸಂಕ್ರಮಣ ಕಾಲ. ನ್ಯಾಯಾಂಗ ಕಮೀಷನರನ್ನೇ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಕ, ವ್ಯವಸ್ಥಿತ ಪೊಲೀಸ್ ದಳವಾಗಿ ಪರಿವರ್ತನೆ.
೧೮೬೯	ಮೈಸೂರಿನ ಪೊಲೀಸ್ ಮುಖ್ಯಸ್ಥರಿಗೆ ಚೀಫ್ ಕಮಿಷನರ್ ಸ್ಥಾನ. ಸರದಿಯ ಮೇಲೆ ಕಂದಾಯ ವಸೂಲಿ ಮಾಡುತ್ತಿದ್ದ 'ಕಂದಾಚಾರ' ಪದ್ಧತಿಯ ಕೊನೆ.
೧೮೭೩	ಜಿಲ್ಲಾಧಿಕಾರಿಗಳು ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಣೆ.

೧೮೭೪ ೧೮೬೧ ರ ಭಾರತ ಪೊಲೀಸ್ ಕಾಯ್ದೆಯಂತೆ ಪೊಲೀಸ್ ಕರ್ತವ್ಯಗಳ ಪೂರ್ಣ ಅನುಸರಣೆ. ಪೊಲೀಸ್ ಪಡೆಗೆ ಅಧಿಕೃತ ಮನ್ನಣೆ.

೧೮೮೦ ಮೈಸೂರು ಪೊಲೀಸ್ ಪಡೆಯಲ್ಲಿ ಕಡಿತ ಹಾಗೂ ಇತರ ಸುಧಾರಣೆಗಳು.

೧೮೮೨ ಪೊಲೀಸ್ ಪಡೆಗೆ ಮೊದಲ ಬಾರಿ ಇಲಾಖೆಯಿಂದ ಎಲ್ಲ ಶ್ರೇಣಿಯ ಪೊಲೀಸರಿಗೂ ಸಮವಸ್ತ್ರ ವಿತರಣೆ.

೧೮೮೫ ಸಂಸ್ಥಾನದಲ್ಲಿ ಪೊಲೀಸ್ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯಆರಂಭ.ಲಾನ್ಸ್‌ಲ್ಯಾಟ್ ರಿಕೆಟ್ಸ್ ಪ್ರಥಮ ಐ.ಜಿ.ಪಿ.

೧೮೯೪ ಮೈಸೂರಿನಲ್ಲಿ ಮೀಸಲು ಪೊಲೀಸ್ ಪಡೆಯ ಸ್ಥಾಪನೆ.

೧೮೯೭ ಪೊಲೀಸ್ ಪೇದೆಗಳಿಗಾಗಿ ತರಬೇತಿ ಶಾಲೆಯ ಪ್ರಾರಂಭ.

೧೯೦೪ ಪೊಲೀಸ್ ಅಶ್ವದಳದ ಸ್ಥಾಪನೆ.

೧೯೦೬ ನಗರದ ಪೊಲೀಸ್ ಠಾಣೆಗಳ ಮರುವಿಂಗಡನೆ.

೧೯೦೭ ಮೈಸೂರು ಪೊಲೀಸ್ ಅಧಿಕಾರಿಗಳ ಸಂಖ್ಯಾ ಪ್ರಮಾಣದ ನಿಗದಿ.

೧೯೦೮ ಮೈಸೂರಿನಲ್ಲಿ ಅಪರಾಧ ತನಿಖಾ ವಿಭಾಗದ ಆರಂಭ.

೧೯೦೮ ಪೊಲೀಸ್ ಅಧಿಕಾರಿಗಳಿಗೆ ಪ್ರಥಮವಾಗಿ ಖಡ್ಗಗಳ ನೀಡಿಕೆ. ಗ್ರಾಮಾಂತರ ಪೊಲೀಸ್ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆ.

೧೯೧೩ ಮೈಸೂರು ಪೊಲೀಸ್ ಇಲಾಖೆ, ಜಿಲ್ಲೆಯ ರೆವಿನ್ಯೂ ಆಡಳಿತದಿಂದ ಪ್ರತ್ಯೇಕ, ಮೊಹಮ್ಮದ್ ಜಾಫರ್ ಮೇಖ್ರಿ, ಸಹಾಯಕ ಪೊಲೀಸ್ ಅಧೀಕ್ಷಕರಾಗಿ ನೇಮಕ. ಪೊಲೀಸರ ಸಂಬಳ ಸಾರಿಗೆಗಳಲ್ಲಿ ಸುಧಾರಣೆ.

೧೯೧೮ ಪೊಲೀಸ್ ಅಶ್ವದಳದ ಕಟ್ಟಡ ನಿರ್ಮಾಣ.

೧೯೩೦ ಮೈಸೂರು ನಗರಕ್ಕೆ ಒಂದು ಪೊಲೀಸ್ ಸೈಕಲ್ ಪಡೆ. ಜಿಲ್ಲಾ ಮೀಸಲು ಪಡೆಗೆ ಮೊದಲ ಬಸ್ ನೀಡಿಕೆ.

೧೯೩೩ ಮೈಸೂರು ಪೊಲೀಸ್ ಮೇಲಾಧಿಕಾರಿಗಳಿಗೆ ಕಾರು ಇಟ್ಟುಕೊಳ್ಳಲು ಭತ್ಯೆ.

೧೯೩೪ ಮೈಸೂರು ನಗರದಲ್ಲಿ ಸಂಚಾರ ನಿಯಂತ್ರಣ ಪೊಲೀಸ್ ಘಟಕದ ಪ್ರಾರಂಭ

೧೯೩೫ ನಂಜನಗೂಡು ಪೊಲೀಸ್ ಉಪವಿಭಾಗ ಕಛೇರಿ ಪ್ರಾರಂಭ. ಪೊಲೀಸ್ ಪಡೆಗೆ ಗಂಡಭೇರುಂಡವಿರುವ to guard the people ಎಂಬ ಲಾಂಛನ.

೧೯೩೯ ಮೈಸೂರು ಜಿಲ್ಲೆಯ ಪೊಲೀಸ್ ಆಡಳಿತದ ವಿಭಜನೆ. ಮಂಡ್ಯ (ಪ್ರೆಂಚ್ ರಾಕ್ಸ್ ಪಡೆ) ಮತ್ತು ಮೈಸೂರು ಜಿಲ್ಲೆಗಳು.

೧೯೩೯ ಹ್ಯಾಮಿಲ್ಟನ್ ಕಟ್ಟಡದ ನಿರ್ಮಾಣ. ಈಗಿನ ಲಷ್ಕರ್ ಠಾಣೆಯ ಕಟ್ಟಡಕ್ಕೆ ಇಟ್ಟಿದ್ದ ನಿವೃತ್ತ ಐ.ಜಿ.ಪಿ ಎಫ್.ಎ. ಹ್ಯಾಮಿಲ್ಟನ್‌ರ ಹೆಸರನ್ನು ಕಿತ್ತೊಗೆಯುವಂತೆ ನಡೆದ ವ್ಯಾಪಕ ಚಳುವಳಿ.

೧೯೪೨ ಅಗ್ನಿಶಾಮಕ ದಳದ ಆರಂಭ.

೧೯೪೪ ಮೈಸೂರು ಉತ್ತರ ವಿಭಾಗ ಹಾಗೂ ನಗರಕ್ಕೆ ಉಪಾಧೀಕ್ಷಕರ ನೇಮಕ.

ಅಡಿಟಿಪ್ಪಣಿ

೧) **Venkatasubba Shasthri .K.N – On Introduction to the History of Mysore, p- 1**

೨) **Ibid- p- 2**

೩) Ibid - p- 4-5

೪) Ibid - p- 5

೫) Ibid - p- 6

೬) Ibid - p- 10

೭) Venkataramaiah. P.S- P.K.G.C, p- 1

೮) ಕೃಷ್ಣರಾವ್.ಕೆ.ಎಂ-(ಅನು) ಮೈಸೂರು ಒಡೆಯರು (ಕರ್ನಾಟಕದ ಪರಂಪರೆ ಸಂಪುಟ -೨ ರಲ್ಲಿ ಪ್ರಕಟಿತ, (ಮೂಲ ಜಿ.ಆರ್.ಜೋಶ್ಯರ್) ಪು- ೨೩೭

೯) ಅದೇ- ಪು- ೨೪೧

೧೦) ಷೇಕ್ ಅಲಿ. ಬಿ- ಕ.ಚ , ಪು- ೩೦೨- ೩೦೩

೧೧) ಅದೇ- ಪು- ೩೦೪

೧೨) Hayavadhana. Rao C – History of Mysore 1399-1799 - Mysore government press Bangalore 1943, p- 337

೧೩) ೧೪) Rice. B.L - Gazetteer of In:'ia – Karnataka State, Mysore District, vol-1- west minister Archibald constable and company, p- 550

೧೫) ೧೬) and ೧೭) Ibid – p- 338

೧೮) Sarkar. J- Mogal Administration, - Oriantal langman limited 1920, p- 97-101

೧೯) Hayavadana Rao .C - H.M – p- 338

೨೦) ೨೧), ೨೨) and ೨೩) Ibid - p- 339

೨೪) and ೨೫) Ibid – p- 340

೨೬) Rice. B.L – G.I .K.M- p-529

೨೭) Ibid - p- 549

೨೮) ತಿರುಮಲೇ ತಾತಾ ಶರ್ಮ – ಮೈಸೂರು ಇತಿಹಾಸದ ಹಳೇಯ ಪುಟಗಳು ಈ ಪುಸ್ತಕದಲ್ಲಿ ಜಿ.ಎಸ್.ದೀಕ್ಷಿತ್ ಬರೆದ ಮುನ್ನುಡಿ, ಪು- ೨

೨೯) ಅದೇ- ಪು – ೨೬

೩೦) Hayavadana Rao—History of Mysore – p- 410

೩೧) ತಿರುಮಲೇ ತಾತಾ ಶರ್ಮ – ಮೈ.ಇ.ಹ.ಪು – ಪು- ೧೪೩-೧೪೪

೩೨) Rice B.L - G.I .K.M - p- 550

೩೩) Hayavadana Rao—H. M – p- 286

೩೪) Shyamarao. M – Modern Mysore Volume 1, -Higgin and bothams Bangalore- 1936, p- 344

೩೫) Gopal.M.H- Tippu Sulthans Mysore, an economic study, Popular prakashana Bombay 1971, p- 324

೩೬) Gopal.M.H- T.M.A.E.S - p- 66

೩೭) Mohibulla Hassan – History of Tippu Sulthans Delhi, 1971, p- 357 – 358

೩೮) Shyamarao. M – M.M – p- 224

೩೯) Mishra .B.B- The administrative History of India- 1834-1947 Oxford univercity press- 1970, p- 532

೪೦) Gopal.M.H- T.M.A.E.S (orginal- A letter from Tippu Sulthan to Mahamirza Khan dtd 16 September 1785 – Kirckpatric select :etter no CXIX) P – 63

೪೧) Ibid - p- 64

೪೨) **Ibid - p- 64 (orginal- Forest selections, Marata series, p-723, aphendix C**

೪೩) **Ibid - p- 64 (orginal- governer general the court of directors, August 3, 1799, phyara 31 and 40**

೪೪) **Ibid - p- 64 (orginal- Malakoms abstract (martin), dispatchs of wellesly, volume -1, p- 656**

೪೫) **Ibid - p- 64 (orginal- webbs memorandum 4, February 1799)**

೪೬) ನಟರಾಜ್- ನ್ಯಾಯಾಡಳಿತಗಾರನಾಗಿ ದಿವಾನ್ ಪೂರ್ಣಯ್ಯ, (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು- ೨೦೦೮, ಪು- ೧೭೮

೪೭) **Shyamarao. M – M.M – p- 344**

೪೮) **Gopal. M.H- T.M.A.E.S, P – 63**

೪೯) ಸೂರ್ಯನಾಥ ಕಾಮತ್, ಕ.ಸಂ.ಇ, ಪು – ೨೨೫

೫೦) **Khan. M.H – History of Tippu Sulthan, - popular prakashana Bombay, 1971, p – 81**

೫೧) ತಿರುಮಲೇ ತಾತಾ ಶರ್ಮ- ಮೈ.ಇ.ಹ.ಪು- ಪು- ೪೭

೫೨) **Hayavadhana. Rao C – H.M – p- 356**

೫೩) **Gopal. M.H- T.M.A.E.S – p- 324**

೫೪) **Rice. B.L (E) G.I .K.M - P- 535**

೫೫) **Ibid - p- 550**

೫೬) **Shyamarao. M – M.M– p- 235**

೫೭) **Ibid - p- 237**

೫೮) **Ibid - p- 233**

೫೯) **Ibid - p- 227**

೬೦) **Charles Philip Brown – Memories of Hydar and Tippu rools of Srirangapattana – Simkin and Co- Madras 1849, p- 43**

೬೧) ಜಗನ್ನಾಥ.ಎಸ್.ಎ –ದಿವಾನ್ ಪೂರ್ಣಯ್ಯನವರ ಬಾಲ್ಯ ಜೀವನ ಮತ್ತು ಸಾಧನೆ, (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು- ೨೦೦೮, ಪು – ೮೬

೬೨) ಅದೇ – ಪುಸ್ತಕದಲ್ಲಿ ಡಾ: ಶಶಿಧರ ಮೂರ್ತಿಯವರ ಆಶಯ ನುಡಿ – ಪು- ೨

೬೩) ಮೂರ್ತಿ ಎನ್.ಕೆ.ಎನ್.- ಪೂರ್ಣಯ್ಯ, ಬೆಂಗಳೂರು- ೧೯೭೬, ಪು- ೯೫

೬೪) **Shyamarao. M, M.M – p- 336**

೬೫) ನಾಗರಾಜ್.ಎಂ.ಜಿ- ದಿವಾನ್ ಪೂರ್ಣಯ್ಯನವರ ಕಾಲದ ಪಾಳಯಪಟ್ಟುಗಳು, (ಡಾ: ಗೋಪಾಲ ಆರ್(ಸಂ) ಸಂಪಾಧಿಸಿದ ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪು-೧೫೬

೬೬) **Shyamarao. M, M.M – p- 344**

೬೭) ಮಂಜಪ್ಪ ಶೆಟ್ಟಿ ಮಸಗಲಿ ಎಂ.ಪಿ – ಮೈಸೂರು ಅರಮನೆ. ಪ್ರ . ಮಸಗಲಿ ಪ್ರಕಾಶನ ಮೈಸೂರು- ೨೦೦೩, ಪು-೧೩೨

೬೮) **Shyamarao. M, M.M – ibid – p- 336**

೬೯) **and** ೭೦) **Ibid - p- 339**

೭೧) **Ibid - p- 340**

೭೨) **and** ೭೩) **Ibid - p- 341**

೭೪) ನಟರಾಜ್- ನ್ಯಾ.ದಿ.ಪೂ, ಪು- ೧೭೮, ೧೭೯.

೭೫) ಅದೇ – ಪು- ೧೮೧

೭೬) ಗೋಪಾಲ್ ಬಾ.ರಾ, – ಕರ್ನಾಟಕದ ಇತಿಹಾಸ – ಪು- ೩೫೧

೭೭) ಅದೇ- ಪು – ೩೫೨

೭೮) ವೆಂಕಟಾಚಲಪತಿ.ಎಸ್ – ರಾಜಕೀಯ ಇತಿಹಾಸ ಆಧುನಿಕ ಕಾಲ – ಕರ್ನಾಟಕದ ಪರಂಪರೆ ಸಂಪುಟ– ೨ ರಲ್ಲಿ ಪ್ರಕಟವಾದ ಲೇಖನ (ಮೂಲ– ಕೆ.ಸಂಪತ್‌ಗಿರಿ ರಾವ್) ಪು– ೩೧೮

೭೯) ನಟರಾಜ್– ನ್ಯಾ.ದಿ.ಪೂ, ಪು– ೧೮೧

೮೦) ಕೃಷ್ಣಕುಮಾರ್.ಕೆ– ಮೈಸೂರು ರಾಜ್ಯದ ಪಾಳೇಗಾರರು ಮತ್ತು ದೀವಾನ್ ಪೂರ್ಣಯ್ಯ, (ಗೋಪಾಲ್.ಆರ್‌ರವರು ಸಂಪಾದಿಸಿದ ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ,) ಪು – ೧೨೯

೮೧) ಅದೇ– ಪು – ೧೩೦

೮೨) ಸಿದ್ದಲಿಂಗ ಸ್ವಾಮಿ– ದಿವಾನ್ ಪೂರ್ಣಯ್ಯರವರು – ಪುನರಾವಲೋಕನ. (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪು– ೧೨೪

೮೩) ಯಶೋದ ರಾಜಶೇಖರಪ್ಪ. ಪಿ – ಪ್ರಾನ್ಸಿಸ್ ಬುಕನನ್ ದಾಖಲಿಸಿದ ದಿವಾನ್ ಪೂರ್ಣಯ್ಯನವರು (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪು– ೭೭

೮೪) ಶಾಸ್ತ್ರಿ.ಎ.ಕೆ– ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದು ಚಾರಿತ್ರಿಕ ದಾಖಲೆಗಳು. ಪ್ರ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ. ಬೆಂಗಳೂರು– ೨೦೦೩ – ಪು– ೨೩೨

೮೫) ಶರ್ಮ ತೀ.ತಾ – ವಿಚಾರ ಕರ್ನಾಟಕ, ಪ್ರ. ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು– ೧೯೭೦ ಪು– ೨೬೪–೨೬೮

೮೬) ಗೋಪಾಲ್ ರಾವ್ ಹೆಚ್.ಎಸ್– ವಕೀಲ ರಾಮಪ್ಪನ ಕೈಫಿಯತ್ತು (ಇತಿಹಾಸ ದರ್ಶನ ಸಂಪುಟ ೮ ರಲ್ಲಿನ ಲೇಖನ) ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು ೧೯೯೩, ಪು– ೧೦೩

೮೭) ಕೃಷ್ಣರಾವ್.ಎಂ.ಬಿ ಮತ್ತು ಕೇಶವ ಭಟ್.ಎಂ.– ಕ. ಇ.ದ, ಪ್ರ. ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು– ೧೯೭೦, ಪು – ೯೩೦

೮೮) **Shyamarao. M – M.M – p- 343**

೮೯) **and ೯೦) – Ibid – p- 336**

೯೧) **Venkataramaiah. P.S- P.K.G.C- p- 2**

೯೨) **Major.M.Milks – Mysore Government Press – 1861, p- 121**

೯೩) **Shyamarao. M, M.M– ibid – p- 342**

೯೪) **Venkatasubba Shastri K.N- Administration of Mysore under Sir Mark Cubbon, - London George Alen and Onwin ((Ltd) – 1934- 1961, p- 38**

೯೫) **Venkataramaiah . P.S- P.K.G.C - p- 2**

೯೬) **Major.M.Milks – R.I.E.M- p 172**

೯೭) **And ೯೮) Venkatasubba Shastri K.N- A.M.U.M – p- 38**

೯೯) **Ibid- p- 39 (orginal - Indian political cons, june 26- 1834 No- 1838 No- 58, Apendix 2, para- 2**

೧೦೦) **Ibid- p- 43 (orginal - General and revenue secretariate of the government of His Highness the Maharaja of Mysore, Police (Home branch), selections 1 of 1864**

೧೦೧) **Ibid- p- 40 (orginal - Indian political cons- July 25, 1834- No- 58, appendix- 2, p- 22)**

೧೦೨) **Ibid- p- 40**

೧೦೩) **Ibid- p- 40 , (Indian political cons- July 25, 1834, No- 58, appendix 2, para -6)**

೧೦೪) **Ibid- p- 40**

೧೦೫) **Ibid- p- 41 (orginal – Collections of circular orders to criminal court- p- 12-13**

೧೦೬) **Indian political cons, March- 14, 1834 No- 213, p- 19-20, and the instruction committee report 1833, p-147, and report on civil and criminal indicature in Mysore, April 26, 1838, p- 158**

೧೦೭) **Indian political cons – July 26, 1848, No- 109 p- 11**

೧೦೮) **Collection of circular orders of criminal court – p- 17**

೧೦೯) **Indian political cong June – 1, 1835, No- 72, p- 65**

೧೧೦) **Ibid- p- 45**

೧೧೧) **C.C.O.C- p- 19-20**

೧೧೨) **Ibid- p- 21- 22**

೧೧೩) **G.R.G.M.M - 1 of 1864**

೧೧೪) **C.C.O.C- p- 30 and report on civil and criminal judicature in Mysore, April 26- 1838, p-125 and 126**

೧೧೫) **Indian political cons- January 16, 1837, No- 33, p- 28**

೧೧೬) **I.D.E.M June 29, 1835, No- 77, I.D.E.M November 7, 1836 and -------- parkans June (judicial) 1864 No- 5 June 29, 1835 No- 77, I.D.E.M November 7, 1836 and ind – parkans, June (Judicaial) 1864 No- 5**

೧೧೭) **Dobs – Rominiseene of life in Mysore, p- 26**

೧೧೮) **Indian Police Cons, December 12, 1836 No- 62, I.D.E.M January 16, No 33, Indian polnad for cons, February 6, 1852 No 238 and I.D.E.M March 17, 1853 No- 39**

೧೧೯) **C. C.O.C- p- 69**

೧೨೦) **Indian political and forighen proceedings, October 17, 1856 No 184**

೧೨೧) **Venkatasubba Shastri K.N- A.M.U.M - p- 47**

೧೨೨) ೧೨೩) **C. C.O.C, p- 12**

೧೨೪) **G.R.G.M.M - 1 of 1864**

೧೨೫) **C. C.O.C p- 13**

೧೨೬) **Ind- pol con, June 17, 1859 No- 299**

೧೨೭) **G.R.G.M.M – 1 of 1864**

೧೨೮) **Venkatasubba Shastri K.N- A.M.U.M - p- 40 -41**

೧೨೯) **Venkataramaiah P.S- P.K.G.C - p- 5**

೧೩೦) **Ibid- p- 42**

೧೩೧) **G.R.G.M.M – 1 of 1864**

೧೩೨) **Venkatasubba Shashrti.K.N – A.M.U.M, p-42, (orginal- Indian political con – July -25, 1834, No- 58, appendix -2, p-34, and G.R.G.M.M – 1 of 1864)**

೧೩೩) **Ibid- p- 42 (Orginal- Indian political con – July-25, 1834- No- 58, appendix-2, p- 25**

೧೩೪) **Ibid- p- 42**

೧೩೫) **Indian political con – July-25, 1834, No- 58, appendix – 24, pyara 27**

೧೩೬) **Major M.Milks- R.I.E.M p- 172**

೧೩೭) **Ibid- p- 131**

೧೩೮) **Ibid- p- 124**

೧೩೯) **Ibid- p- 121**

೧೪೦) **Ibid- p- 171**

೧೪೧) ಅನಿತಾ.ಎಂ.ಎಸ್ – ಪೂರ್ಣಯ್ಯನವರ ದಿವಾನಗಿರಿ ಕಾಲದ ಹಣಕಾಸಿನ ಪಕ್ಷಿನೋಟ. ಪ್ರ (ಡಾ:ಗೋಪಾಲ ಆರ್(ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪು – ೧೮೬

೧೪೨) ಗುರುಪ್ರಸಾದ್.ಡಿ.ವಿ– ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆ. (ಬೆಂಗಳೂರು ದರ್ಶನ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಉದಯಬಾನು ಕಲಾಸಂಘ ಬೆಂಗಳೂರು ೨೦೦೬, ಪು – ೫೦೧

೧೪೩) ೧೪೪) ೧೪೫) and ೧೪೬) **Shyamarao. M – ibid – p- 344**

೧೪೭) ಅನಿತಾ.ಎಂ.ಎಸ್.– ಪೂ.ದಿ.ಹ.ಪ– – ಪು– ೧೮೬

೧೪೮) **Shyamarao. M – M.M – p- 339**

೧೪೯) **The Gazetter of India, p- 550**

೧೫೦) ಕೃಷ್ಣರಾವ್.ಕೆ.ಎಂ– ಮೈಸೂರು ಒಡೆಯರು, (ಕರ್ನಾಟಕದ ಪರಂಪರೆ ಸಂಪುಟ ೨ ರಲ್ಲಿ ಪ್ರಕಟಿತ ಲೇಖನ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೯೨, ಪು– ೨೩೭ (ಮೂಲ– ಜೆ.ಆರ್.ಜೋಶ್ಯರ್)

೧೫೧) ಶರ್ಮಾ ತೀ.ತಾ– ಚಾರಿತ್ರಿಕ ದಾಖಲೆಗಳು, ಪ್ರ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು – ೧೯೭೧, ಪು– ೧೩೨

೧೫೨) ನಾಗರಾಜ್.ಎಂ.ಜಿ – ದಿವಾನ್ ಪೂರ್ಣಯ್ಯನವರ ಕಾಲದ ಪಾಳಯಪಟ್ಟುಗಳು, (ಡಾ:ಗೋಪಾಲ ಆರ್(ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪು– ೧೫೫

೧೫೩) ಷೇಖ್ ಆಲಿ.ಬಿ– ಕ.ಚ, ಪು– ೩೦೩

೧೫೪) ಕೃಷ್ಣರಾವ್.ಎಂ.ವಿ ಮತ್ತು ಕೇಶವ ಭಟ್.ಎಂ– ಕ.ಇ.ದ– ಪು–೯೩೧

೧೫೫) Hayavadana Rao –H.M - p- 356

೧೫೬) ನಿರಂಜನರಾಜ ಅರಸು.ಎ.ಎನ್– ಮುಮ್ಮಡಿ ಶ್ರೀ.ಕೃಷ್ಣರಾಜ ಮಹಿಪಾಲ ವಂಶರತ್ನಾಕರ. ಪ್ರ. ಹರ್ಷ ಪ್ರಿಂಟರ್ಸ್ ಮೈಸೂರು – ೧೯೯೩ ಪು– ೧೦೩

೧೫೭) Hayavadana Rao –H.M - p- 355

೧೫೮) ನಿರಂಜನರಾಜ ಅರಸು.ಎ.ಎನ್ – ಮು.ಕೃ.ಮ.ವಂ– ಪು– ೧೦೨

೧೫೯) **Shyamarao. M – M. M – p – ೩೪೦**

೧೬೦) ನಿರಂಜನರಾಜ ಅರಸು.ಎ.ಎನ್– ಮು.ಕೃ.ಮ.ವಂ– ಪು– ೧೦೩

೧೬೧) ಗೋಪಾಲ.ಆರ್ ಮತ್ತು ನರೇಂದ್ರ ಪ್ರಸಾದ್.ಎಸ್– ಮುಮ್ಮಡಿ ಕೃಷ್ಣರಾಜ ಒಡೆಯರ್, ಒಂದು ಚಾರಿತ್ರಿಕ ಅಧ್ಯಯನ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ – ೨೦೦೪, ಪು– ೩೮–೩೯

೧೬೨) **Venkataramaiah .P.S- P.K.G.C - p- 2**

೧೬೩) **Idid- p- 3**

೧೬೪) **Ibid- p- 4**

೧೬೫) ನಿರಂಜನರಾಜ ಅರಸು.ಎ.ಎನ್– ಮು.ಕೃ.ಮ.ವಂ – ಪು– ೪೭

೧೬೬) ವೆಂಕಟಾಚಲಪತಿ–ಎಸ್– ರಾ.ಆ– ಪು – ೩೧೯

೧೬೭) ಅದೇ– ಪುಟ– ೩೩೪

೧೬೮) ಮೂರ್ತಿ ಎನ್.ಕೆ.ಎನ್ – ಪೂರ್ಣಯ್ಯ, ಪು– ೯೫

೧೬೯) **Hayavadana Rao – G.I. K.M - p- 551**

೧೭೦) ಸಿಂಗಮ್ಮ. ಎಂ.ಎ – ಮೈಸೂರಿನಲ್ಲಿ ಕಮಿಷನರುಗಳ ಆಡಳಿತ – (ಕರ್ನಾಟಕದ ಪರಂಪರೆ ಸಂಪುಟ–೨ ರಲ್ಲಿ ಪ್ರಕಟಿತ ಲೇಖನ ಮೂಲ ಜಯಲಕ್ಷ್ಮಮ್ಮಣ್ಣಿ) ಪು– ೩೩೫

೧೭೧) ಅದೇ – ಪು– ೩೩೬

೧೭೨) **Venkataramaiah. P.S- P.K.G.C- p- 5**

೧೭೩) ಸಿಂಗಮ್ಮ.ಎಂ.ಎ- ಮೈ.ಕ.ಆ- , ಪು- ೩೩೫

೧೭೪) ಅದೇ- ಪು- ೩೪೧

೧೭೫) **Venkatasubba Shastri K.N- A.M.U.M - p- 6**

೧೭೬) ನಿರಂಜನರಾಜ ಅರಸ್.ಕೆ.ಎನ್- ಮು.ಕೃ.ಮ.ವಂ- ಪು – ೧೨೦

೧೭೭) ಸೂರ್ಯನಾಥ ಕಾಮತ್ – ಕ.ಸಂ.ಇ – ಪು- ೨೪೦

೧೭೮) ೧೭೯) **and** ೧೮೦) **Venkataramaiah P.S- P.K.G.C- p- 6**

೧೮೧) **Hayavadana Rao.C – G.I.K.M, volume – 3, p- 255**

೧೮೨) **R.A.M – for the year 1872-73 (Bangalore 1873)**

೧೮೩) **Shyamarao. M – M.M – p- 520**

೧೮೪) **Ibid- p- 259**

೧೮೫) **P.G.M No- 159-18, dtd Bangalore 27 April 1874**

೧೮೬) **Hayavadana Rao- G.I.K.M - p- 551**

೧೮೭) ೧೮೮) ೧೮೯) ೧೯೦) **and** ೧೯೧) **P.G.M-No- 489- Police – 15 dtd Bangalore 24 September 1880**

೧೯೨) **Venkataramaiah P.S- P.K.G.C - p- 15**

೧೯೩) **P.M.R.A 1892 (Bangalore – 1893)**

೧೯೪) ೧೯೫), ೧೯೬), ೧೯೭) **&** ೧೯೮) **Hayavadana Rao- G.I.K.M - p- 550**

೧೯೯) ನಿರಂಜನರಾಜ್ ಅರಸು. ಕೆ.ಎನ್- ಮು.ಕೃ.ಮ.ವಂ- ಪು – ೧೨೦

ಅಧ್ಯಾಯ – ೫

ಬ್ರಿಟೀಷರ ಕಾಲದ ಪೊಲೀಸ್ ವ್ಯವಸ್ಥೆ

೫.೧: ಬ್ರಿಟೀಷ್ ಆಡಳಿತದ ಪ್ರಾರಂಭದಲ್ಲಿ ದೇಶದಲ್ಲಿದ್ದ ಪೊಲೀಸ್ ವ್ಯವಸ್ಥೆ

ಇತಿಹಾಸ ಮಾನವನು ಸಾಧಿಸಿದ ಪ್ರಗತಿಯ ದಾಖಲೆ ಸಾವಿರಾರು ವರ್ಷಗಳಲ್ಲಿ ಆತ ಸಾಗಿಬಂದ ಬದುಕಿನ ಹಿನ್ನೋಟದ ಚಿತ್ರಣ, ಪ್ರಾಚೀನ ಭಾರತದ ಸಮಾಜದ ಮೂಲಭೂತ ತಳಹದಿ ಎಂದರೆ ವರ್ಗ ವ್ಯವಸ್ಥೆ ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕ ಸಂಪ್ರದಾಯ ಕಾನೂನುಗಳಿದ್ದವು. ಅದರಲ್ಲಿ ಆಡಳಿತ ಮತ್ತು ರಕ್ಷಣೆಯ ಜವಾಬ್ದಾರಿ ಕ್ಷತ್ರಿಯರವಾಗಿತ್ತು. ಯುದ್ಧ ಅವರ ಧರ್ಮವೇ ಆಗಿತ್ತು. ಹೀಗಾಗಿ ದೇಶವನ್ನು ವೈರಿಗಳಿಂದ ರಕ್ಷಿಸುವುದು ಕ್ಷತ್ರಿಯರ ಸ್ವ–ಧರ್ಮವಾಗಿತ್ತು. ಭಾರತದಲ್ಲಿ ಬ್ರಿಟೀಷರ ಕಾಲದ ಪೊಲೀಸ್ ವ್ಯವಸ್ಥೆಯು (ಟ್ರಯಲ್ ಆಂಡ್ ಎರರ್) ಪ್ರಯೋಗದಿಂದ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ವಿಕಸಿತಗೊಂಡಿದೆ. ಇದು ಆ ಕಾಲದ ಆಡಳಿತಗಾರರನ್ನು ನೋಡಿ ವಾಸ್ತವದ ಸನ್ನಿವೇಶಗಳಿಗನು ಗುಣವಾಗಿತ್ತು.[೧] ಇದು ಸತತವಾಗಿ ತೀವ್ರವಾದ ಚರ್ಚೆಗೆ ಒಳಗಾಯಿತು.

ಹಿಂದಿನ ಅಧ್ಯಾಯದಲ್ಲಿ ಹೇಳಿದ ಪೋ ೀಸ್ ವ್ಯವಸ್ಥೆಯು ಸ್ವದೇಶಿಯವಾಗಿದ್ದು, ಸರಳವಾಗಿದ್ದು, ಕೃಷಿಕರ ಅಗತ್ಯ ಗಳನ್ನು ಪೂರೈಸುವ ಸಲುವಾಗಿ ಇದ್ದ ವ್ಯವಸ್ಥೆಯಾಗಿದ್ದು, ಯಾವುದೇ ರಾಜಕೀಯ ಅವ್ಯವಸ್ಥೆಯನ್ನು ನಿವಾರಿಸುವ ಶಕ್ತಿ ಇರಲಿಲ್ಲ. ಏಕೆಂದರೆ, ಕೇಂದ್ರ ಸರಕಾರದಿಂದ ಈ ವ್ಯವಸ್ಥೆಯ ಮೇಲೆ ಹಿಡಿತವು ಅಷ್ಟೊಂದು ಪ್ರಭಲವಾಗಿರಲಿಲ್ಲ. ಆದ್ದರಿಂದ ಮೊಗಲರ ಅವನತಿಯ ನಂತರ ಅವರ ಆಡಳಿತ ಪದ್ಧತಿಯೂ ಅವನತಿ ಹೊಂದಿತು. ಪೊಲೀಸ್ ಅಧಿಕಾರಿಗಳು ಭ್ರಷ್ಟ ರಾಗಿದ್ದು, ಸುಲಿಗೆ ಮತ್ತು ಅವರ ಹಿಂಸಾಚಾರ ಪ್ರತೀ ದಿನದ ನಿಯಮದಂತಾಗಿತ್ತು. ಇವರು ಪ್ರಜಾಸೇವಕರಾಗಿದ್ದರು. ಜಮೀನುದಾರರು ಗ್ರಾಮದ ಮುಖ್ಯಸ್ಥ ಮತ್ತು ಹಳ್ಳಿಯ 'ಕಾವಲುಗಾರ'ರು ಅಪರಾಧಿಗಳೊಂದಿಗೆ ಶಾಮೀಲಾಗಿ ಅವರಿಗೆ ಆಶ್ರಯವನ್ನು ನೀಡಿ ಅವರು ಮಾಡಿದ ದರೋಡೆ, ಸುಲಿಗೆ, ಕಳ್ಳತನ ಗಳಲ್ಲಿ ಪಾಲು ಪಡೆಯುತ್ತಿದ್ದರು.[೨] ಹಿರಿಯ ಅಧಿಕಾರಿ ಗಳೂ ಸಹ ಇಂತಹ ಕೆಲಸಗಳಿಂದ ಹೊರತಾಗಿರಲಿಲ್ಲ. ಕಳ್ಳತನದ ಮಾಲುಗಳನ್ನು ಪತ್ತೆಮಾಡಿ ಕೊಡಬೇಕು. ಅಥವಾ ಅದರ ಮೌಲ್ಯಕ್ಕೆ ಸಂಬಂಧಪಟ್ಟಂತೆ ಪರಿಹಾರ ನೀಡಬೇಕು ಎಂಬ ನಿಯಮವನ್ನು ಪಾಲಿಸುವುದಕ್ಕಿಂತ ಹೆಚ್ಚಾಗಿ ನಿಯಮ ಉಲ್ಲಂಘನೆ ಮಾಡಲಾಗಿತ್ತು.[೩] ಇದರಿಂದಾಗಿ ಮನುಷ್ಯನ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ರಕ್ಷಣೆ ಇಲ್ಲದಂತಾಗಿತ್ತು. ಬ್ರಿಟೀಷ ರು ಬಂಗಾಳ, ಮದರಾಸು ಮತ್ತು ಬಾಂಬೆಯಲ್ಲಿ ಆಡಳಿತ ವನ್ನು ತಮ್ಮ ಕೈಗೆ ತೆಗೆದುಕೊಳ್ಳುವ ವೇಳೆ ಎಲ್ಲಾ ಕಡೆಗಳಲ್ಲಿ ಅಶಾಂತಿ ಕಾನೂನು ಪಾಲಿಸದ ಅವ್ಯವಸ್ಥೆಗಳೇ ತುಂಬಿ ಹೋಗಿದ್ದವು. ರಾಜಕೀಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲೆಡೆ ಶೂನ್ಯ ಆವರಿಸಿತ್ತು. ಈ ವೇಳೆಯಲ್ಲಿ ಬ್ರಿಟೀಷರು ಈ ಸಮಸ್ಯೆಗೆ ಕೆಲವು ಸುಧಾರಣೆಗಳನ್ನು ತರುವುದರ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು. ಆದ್ದರಿಂದ ಗ್ರಾಮಗಳ ಮುಖ್ಯಸ್ಥ ಮತ್ತು ಕಾವಲುಗಾರ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಿದರು. ಜಮೀನುದಾರರುಗಳನ್ನು ಪೊಲೀಸ್ ಅಧಿಕಾರದಿಂದ ದೂರವಿರಿಸಿ ಈ ಅಧಿಕಾರ ವನ್ನು ಮ್ಯಾಜಿಸ್ಟ್ರೇಟರುಗಳಿಗೆ ನೀಡಿದರು. ಇದಕ್ಕೆ ಕಾರಣವೆಂದರೆ ಜಮೀನುದಾರರು ಅಪರಾಧವನ್ನು ತಡೆಯಬೇಕಾದವರು, ದರೋಡೆಕೋರರು ಮತ್ತು ಕಳ್ಳರೊಂದಿಗೆ ಸೇರಿಕೊಂಡು ಅಪರಾಧಗಳನ್ನು ಮಾಡಲು ನೆರವು ನೀಡುತ್ತಿದ್ದರು. "ಈ ಮ್ಯಾಜಿಸ್ಟ್ರೇಟರುಗಳಿಗೆ ಸಹಕರಿಸಲು 'ದರೋಗ' ಎಂಬ ಹೆಸರಿನ ಅಧಿಕಾರಿಯನ್ನು ಅವರ ಕೈಕೆಳಗೆ ನೇಮಿಸಲಾಯಿತು.(ಈ ಅಧಿಕಾರಿಯು ಇಂದಿನ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಎಂದು ಕರೆಯುವ ಅಧಿಕಾರಿಗೆ ಸಮನಾಗಿದ್ದ) ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 'ಪೀವನ್'ಗಳನ್ನು ಕಾನೂನು ಸುವ್ಯವಸ್ಥೆ ನೋಡಿಕೊಳ್ಳಲು ನೇಮಿಸಲಾಯಿತು. ನಗರಗಳಲ್ಲಿ 'ಕೊತ್ವಾಲ'ರ ಹುದ್ದೆಯನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು.

೫.೨ : ಬಂಗಾಳದ ಬ್ರಿಟೀಷ್ ಪೊಲೀಸ್ ವ್ಯವಸ್ಥೆಯ ಪ್ರಭಾವ

ಬಂಗಾಳದಲ್ಲಿ ಕೆಳದರ್ಜೆಯ ಪೊಲೀಸ್ ಅಧಿಕಾರಿಗಳಿಗೆ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಆದ್ದರಿಂದ ಅವರು ಒತ್ತಡದಲ್ಲಿ ಕೆಲಸ ಮಾಡುತ್ತಾ ಭ್ರಷ್ಟಾಚಾರಿಗಳಾಗಿದ್ದರು. ಮ್ಯಾಜಿಸ್ಟ್ರೇಟರ್ ಅಥವಾ ಡೆಪ್ಯೂಟಿ ಮ್ಯಾಜಿಸ್ಟ್ರೇಟರ್‌ನ ಕೈಕೆಳಗೆ 'ದರೋಗ' ಅಥವಾ ಥಾಣಾದಾರ ಎಂಬ ಅಧಿಕಾರಿಯಿದ್ದನು. ಇವರಿಗೆ ಅತ್ಯಂತ ಹೆಚ್ಚಿನ ಅಧಿಕಾರವಿದ್ದು ೨೦೦ ರಿಂದ ೩೦೦ ಚದರ ಮೈಲು ವಿಸ್ತೀರ್ಣದ ಭೂಪ್ರದೇಶದ ಅಧಿಕಾರಿಯಾಗಿದ್ದನು. ಇವರಿಗೆ ಮಾಸಿಕ ೨೫ ರೂಪಾಯಿ ಸಂಬಳವಿತ್ತು. ಇವರ ಕೈಕೆಳಗೆ ಮುಗ್ರಾರ್ (Mugarrar) ಅಥವಾ ಗುಮಾಸ್ತ ಇದ್ದ. ಈತನು ಠಾಣೆಯಲ್ಲಿ ಬರಹಗಾರನಾಗಿದ್ದ. ಠಾಣಾ ದಾಖಲೆಗಳನ್ನು ಬರೆಯುವುದು ಮತ್ತು ಸಾಕ್ಷಿಗಳ ಹೇಳಿಕೆ ಬರೆಯುವುದು ಈತನ ಕೆಲಸವಾಗಿತ್ತು. 'ದರೋಗ'ನು ಕೇಂದ್ರಸ್ಥಾನದಲ್ಲಿ ಅಂದರೆ ಠಾಣೆಯಲ್ಲಿ ಇಲ್ಲದಿದ್ದಾಗ ಇವನು ಆತನ ಕೆಲಸಗಳ ಪ್ರಭಾರ ಅಧಿಕಾರಿಯಾಗಿರುತ್ತಿದ್ದ. ಈತನಿಗೆ ಮಾಸಿಕ ೮ ರೂಪಾಯಿ ಸಂಬಳವಿತ್ತು. 'ಜಮಾದಾರ' ಎಂಬ ಹೆಸರಿನ ಅಧಿಕಾರಿಯಿದ್ದು, ಈತನು ಬರವಣಿಗೆಯ ಹೊರತಾಗಿ ಉಳಿ ದೆಲ್ಲ ಕೆಲಸಗಳನ್ನು ಮಾಡುತ್ತಿದ್ದು ಈತನಿಗೂ ಸಹ ೮ ಅಥವಾ ೧೦ ರೂಪಾಯಿ ಮಾಸಿಕ ಸಂಬಳವಿತ್ತು. ಈತನು ದರೋಗನ ಸೂಚನೆಯಂತೆ ಕೆಲಸ ನಿರ್ವಹಿಸುತ್ತಿದ್ದ ೨೦ ರಿಂದ ೨೫ ಜನ ಕಾನ್ಸ್‌ಟೇಬಲ್‌ಗಳು ಇದ್ದು ಇವರಿಗೆ ಮಾಸಿಕ ೪ ರಿಂದ ೫ ರೂಪಾಯಿ ಸಂಬಳವಿತ್ತು. ದರೋಗನ ನಿರ್ದೇಶನದಲ್ಲಿ ಕೆಲವೊಮ್ಮೆ ಒಬ್ಬರೇ ಪ್ರಕರಣದ ತನಿಖೆಗೆ ಹೋಗ ಬೇಕಿತ್ತು. ಗ್ರಾಮಗಳಲ್ಲಿ ಸಂಬಳ ಪಡೆಯುತ್ತಿದ್ದ ಕಾವಲುಗಾರರಿದ್ದರು. ಈ ಬಂಗಾಳದ ಪೊಲೀಸ್ ವ್ಯವಸ್ಥೆಯು, ಬ್ರಿಟೀಷರು ಭಾರತದಲ್ಲಿ ಸ್ಥಾಪಿಸಿದ ಮೊದಲ ಪೊಲೀಸ್ ವ್ಯವಸ್ಥೆಯಾಗಿದ್ದು, ಅವರು ತಮ್ಮ ವಸಹಾತು ಕೇಂದ್ರಗಳನ್ನು ಬೆಳೆ ಯಿಸುತ್ತಿದ್ದಂತೆ ಯಾವ ಯಾವ ಪ್ರದೇಶಗಳಲ್ಲಿ ತಮ್ಮ ಆಡಳಿತದ ಚುಕ್ಕಾಣಿ ಹಿಡಿದರೋ ಆ ಎಲ್ಲಾ ಪ್ರದೇಶಗಳಲ್ಲಿ ಇದೇ ಮಾದರಿಯ ಪೊಲೀಸ್ ವ್ಯವಸ್ಥೆಯನ್ನು ಬಹುತೇಕವಾಗಿ ಜಾರಿಗೆ ತಂದರು.

೫.೩ : ಪೊಲೀಸ್ ಇಲಾಖೆಗೆ ಲಾರ್ಡ್ ಕಾರ್ನ್‌ವಾಲೀಸ್‌ನ ಕೊಡುಗೆಗಳು (೧೭೮೬ ರಿಂದ ೧೭೯೩)

ವಾರನ್ ಹೇಸ್ಟಿಂಗ್ಸ್‌ನು (೧೭೭೨-೧೭೮೫) 'ಫೌಜುದಾರ'ರು ಮತ್ತು 'ಥಾಣೆದಾರ'ರು ಎಂಬ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಹೊಸ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಿಸಿದನು. ಆದರೆ ಇದು ಯಶಸ್ವಿಯಾಗದೆ ೧೭೮೧ರ ವೇಳೆಗೆ ಕೈಬಿಡಲಾಯಿತು. ಇದರಿಂದಾಗಿ ಪೊಲೀಸ್ ಕರ್ತವ್ಯಗಳು ಸ್ಥಳೀಯ ಜಮೀನ್ದಾರರ ಕೈಲೇ ಉಳಿದವು. ಮುಂದಿನ ಗವರ್ನರ್ ಜನರಲ್‌ನಾದ ಕಾರ್ನ್‌ವಾಲೀಸನು ಪೊಲೀಸ್ ಆಡಳಿತದಲ್ಲಿ ಕೆಲವು ಮಾರ್ಪಾಡುಗಳನ್ನು ತರಲು ಪ್ರಯತ್ನಿಸಿ ಸಫಲನಾದನು. ೧೭೮೬ ರಲ್ಲಿ ಕಂಪನಿಯ ಡೈರೆಕ್ಟರ್‌ರು ಉತ್ತಮ ಸೇನಾಪತಿ, ಮುತ್ಸದ್ದಿ ಹಾಗೂ ಪರಿಶುದ್ಧ ಚಾರಿತ್ರ್ಯದ ಧಕ್ಷ ವ್ಯಕ್ತಿಯೆಂದು ಹೆಸರಾಗಿದ್ದ ಲಾರ್ಡ್ ಕಾರ್ನ್‌ವಾಲೀಸ್‌ನನ್ನು ಗವರ್ನರ್ ಜನರಲ್‌ನನ್ನಾಗಿ ನೇಮಿಸಿದರು. ಈತನು ಬೋರ್ಡ್ ಆಫ್ ಕಂಟ್ರೋಲ್‌ನ ಸದಸ್ಯನಾಗಿದ್ದ ಡಂಡ್‌ಸನ್, ಇಂಗ್ಲೆಡ್‌ನ ಪ್ರಧಾನಮಂತ್ರಿಯಾಗಿದ್ದ ಪಿಟ್ ಮತ್ತು ಕಂಪನಿಯ ಡೈರೆಕ್ಟರ್‌ನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ೧೭೮೬ ರಲ್ಲಿ ಶಾಸನದ ಪ್ರಕಾರ ಗವರ್ನರ್ ಜನರಲ್ ಕಾರ್ನ್ ವಾಲೀಸ್‌ನು ಕಾರಣಗಳಿದ್ದರೆ ತನ್ನ ಕೌನ್ಸಿಲ್‌ನ ನಿರ್ಣಯಗಳನ್ನು ಬದಿಗೊತ್ತುವ ಅಧಿಕಾರವನ್ನು ಪಡೆದನು. ಹೀಗೆ ಈತನು ತನಗೆ ಸರಿಕಂಡ ನೀತಿಯನ್ನು ಕಾರ್ಯಗತಗೊಳಿಸುವ ಅಧಿಕಾರವನ್ನು ಪಡೆದಿದ್ದನು. ಹೀಗೆ ಈತನು ತನಗೆ ಸರಿಕಂಡ ನೀತಿಯನ್ನು ಕಾರ್ಯಗತಗೊಳಿಸುವ ಸ್ಥಿತಿಯಲ್ಲಿದ್ದನು. ಈತನು ಭಾರತದ ಸೇನಾಪತಿಯೂ ಆಗಿದ್ದನು. ಈತನಿಗೆ ಭಾರತದ ಬಗ್ಗೆ ಪರಿಜ್ಞಾನ ಇರಲಿಲ್ಲ. ಭಾರತೀಯರ ಬಗ್ಗೆ ಈತನಲ್ಲಿ ಸದ್ಭಾವನೆ ಇರಲಿಲ್ಲ. ಅವರ ಸಾಮರ್ಥ್ಯದ ಹಾಗೂ ಪ್ರಾಮಾಣಿ ಕತೆಯ ಬಗ್ಗೆ ಅವನು ಅಪನಂಬಿಕೆವುಳ್ಳವನಾಗಿದ್ದನು. ಭಾರತಕ್ಕೆ ಆಗಮಿಸಿದ ಕೂಡಲೇ ಈತನು ಯುದ್ಧವನ್ನು ತಡೆ ಗಟ್ಟುವುದು, ಮತ್ತು ಕಂಪನಿಯ ಆಡಳಿತವನ್ನು ಸುಧಾರಿಸುವುದು ತನ್ನ ಧ್ಯೇಯಗಳೆಂದು ಸಾರಿದನು. ತನ್ನ ಆಡಳಿತಾತ್ಮಕ

ನ್ಯಾಯಾಂಗದ ಹಾಗೂ ಭೂಕಂದಾಯದ ಸುಧಾರಣೆಗಳಿಂದ ಈತ ಖ್ಯಾತನಾಗಿದ್ದಾನೆ.

ವಾರ್ನ್ ಹೇಸ್ಟಿಂಗ್‌ನು ಕಂಪನಿಯ ಆಡಳಿತದಲ್ಲಿನ ಭ್ರಷ್ಟಾಚಾರಗಳನ್ನು ನಿವಾರಿಸಲು ಕ್ರಮಗಳನ್ನು ಕೈಗೊಂಡಿದ್ದರೂ ಕೂಡ ಭ್ರಷ್ಟಾಚಾರಗಳು ಮುಂದುವರಿದಿದ್ದವು. ಕಂಪನಿಯ ಸೇವಕರಲ್ಲಿ ಲಂಚಗುಳಿತನ, ಖಾಸಗಿ ವ್ಯಾಪಾರ ಹಾಗೂ ಸ್ವಜನಪಕ್ಷಪಾತದ ಭ್ರಷ್ಟಾಚಾರಗಳು ಮನೆಮಾಡಿಕೊಂಡಿದ್ದವು.

ಕಾರ್ನ್‌ವಾಲೀಸ್‌ನು ಭ್ರಷ್ಟಾಚಾರಗಳನ್ನು ನಿರ್ಮೂಲನಗೊಳಿಸಿ ಕಂಪನಿ ಆಡಳಿತವನ್ನು ಶುದ್ಧೀಕರಿಸಲು ದೃಢ ನಿರ್ಧಾರ ಮಾಡಿದನು. ಕಂಪನಿಯ ಸೇವಕರ ಅಲ್ಪಪ್ರಮಾಣದ ವೇತನ ಹಲವಾರು ಭ್ರಷ್ಟಾಚಾರಗಳಿಗೆ ಕಾರಣವೆಂದು ಅರಿತು ಅವರ ಸಂಬಳವನ್ನು ಹೆಚ್ಚಿಸಿದನು. ಕಂಪನಿಯ ಸೇವಕರ ಖಾಸಗಿ ವ್ಯಾಪಾರವನ್ನು ನಿಷೇಧಿಸಿದನು. ಅವರು ಭೂಕಂದಾಯ ವಸೂಲಿ ಮಾಡಿದ ನಂತರ ಪಡೆಯುತ್ತಿದ್ದ ಕಮಿಷನ್ ಎಂಬ ಹೆಚ್ಚುವರಿ ಸಂಭಾವನೆಯನ್ನು ರದ್ದುಪಡಿಸಿದನು. ಭ್ರಷ್ಟ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿದನು. ಆರ್ಥಿಕ ಉಳಿತಾಯದ ದೃಷ್ಟಿಯಿಂದಾಗ ಈತನು ಡೈರಕ್ಟರ್‌ರ ಮಿತ್ರರಿಗಾಗಿ ಹಾಗೂ ಸಂಬಂಧಿಕರಿಗಾಗಿ ನಿರ್ಮಿಸಲಾಗಿದ್ದ ಹುಸಿ ಹುದ್ದೆಗಳ (Sinceure post) ಸಂಖ್ಯೆಗಳನ್ನು ಕಡಿಮೆ ಮಾಡಿದನು.

ಕಾರ್ನ್‌ವಾಲೀಸ್‌ನು ಪ್ರತಿಯೊಬ್ಬ ನೌಕರನು ಪಾಲಿಸಲೇಬೇಕಾದ ಕರ್ತವ್ಯಗಳು ಹಾಗೂ ನಿಯಮಾವಳಿಯನ್ನು ೧೭೯೩ ರಲ್ಲಿ ರೂಪಿಸಿ ಜಾರಿಗೆ ತಂದನು. ಸರಳತೆ, ಪರಿಶುದ್ಧತೆ ಹಾಗೂ ಮಿತವ್ಯಯ ಇವು ಕಾರ್ನ್‌ವಾಲೀಸ್‌ನ ಆಡಳಿತದಲ್ಲಿ ಸುಧಾರಣೆಯ ಮೂರು ಗುರಿಗಳಾಗಿದ್ದವು. ಈತನು ಕೇವಲ ಅರ್ಹತೆಯ ಆದಾರದ ಮೇಲೆ ಅಧಿಕಾರಿಗಳನ್ನು ನೇಮಿಸುವ ಪದ್ಧತಿಯನ್ನು ಜಾರಿಗೆ ತಂದನು. ಕಾರ್ಯಾಂಗವನ್ನು ನ್ಯಾಯಾಂಗದಿಂದ ಬೇರ್ಪಡಿಸಿದನು.

೫.೩.೧ ಕಾರ್ನ್‌ವಾಲೀಸ್‌ನ ನ್ಯಾಯಾಂಗದ ಸುಧಾರಣೆಗಳು ಮತ್ತು ಪೊಲೀಸ್ ಸುಧಾರಣೆಗಳು

ಕ್ರಿಮಿನಲ್ ನ್ಯಾಯಾಡಳಿತವು ಅಪರಾಧಿಗಳನ್ನು ಪತ್ತೆಹಚ್ಚಿ ಅವರಿಗೆ ತಕ್ಕ ಶಿಕ್ಷೆಗಳನ್ನು ವಿಧಿಸುತ್ತಿತ್ತು. ಕಾರ್ನ್‌ವಾಲೀಸ್‌ನು ಸ್ಥಾಪಿಸಿದ ನಾಲ್ಕು ಪ್ರಾಂತೀಯ ಮೇಲ್ಮನವಿ ನ್ಯಾಯಾಲಯಗಳನ್ನು ಸರ್ಕ್ಯೂಟ್ ಕೋರ್ಟ್(Circuit court) ಎಂದು ಕರೆಯಲಾಗುತ್ತಿತ್ತು. ಈ ನ್ಯಾಯಾಲಯಗಳ ನ್ಯಾಯಾಧೀಶರು ತಮ್ಮ ವ್ಯಾಪ್ತಿಯಲ್ಲಿನ ಜಿಲ್ಲೆಗಳಲ್ಲಿ ವರ್ಷಕ್ಕೆ ಎರಡು ಬಾರಿ ಸಂಚರಿಸಿ ಕ್ರಿಮಿನಲ್ (ಅಪರಾಧದ) ಪ್ರಕರಣಗಳನ್ನು ಇತ್ಯರ್ಥ ಪಡಿಸುತ್ತಿದ್ದರು. ಪ್ರತೀ ಜಿಲ್ಲೆಗೆ ಒಂದು ಕ್ರಿಮಿನಲ್ ನ್ಯಾಯಾಲಯವಿದ್ದು, ಸೆಶನ್ಸ್ ಜಡ್ಜ್ ಅದರ ಮುಖ್ಯಸ್ಥನಾಗಿದ್ದನು. ಕಲ್ಕತ್ತಾದಲ್ಲಿನ ' ಸದರ್ ನಿಜಾಮತ್ ಅದಾಲತ್' ಅತ್ಯುಚ್ಚ ಕ್ರಿಮಿನಲ್ ನ್ಯಾಯಾಲಯವಾಗಿತ್ತು. ಗವರ್ನರ್ ಜನರಲ್ ಮತ್ತು ಆತನ ಕೌನ್ಸಿಲ್‌ನ ಸದಸ್ಯರು ಅದರ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಕ್ರಿಮಿನಲ್ ಪ್ರಕರಣಗಳನ್ನು ಮುಸ್ಲಿಂ ಕಾನೂನಿನ ಪ್ರಕಾರ ವಿಚಾರಿಸಲಾಗುತ್ತಿತ್ತು. ಕಾರ್ನ್‌ವಾಲೀಸ್‌ನು ಅಂಗಚ್ಛೇಧ, ಶೂಲಕ್ಕೇರಿಸುವುದು ಮುಂತಾದ ಕ್ರೂರ ಶಿಕ್ಷೆಗಳನ್ನು ರದ್ದುಪಡಿಸಿದನು.

ಲಾರ್ಡ್‌ಕಾರ್ನ್‌ವಾಲೀಸ್‌ನು ಜಿಲ್ಲಾ ಕಲೆಕ್ಟರ್‌ರು ಹೊಂದಿದ್ದ ನ್ಯಾಯಾಂಗ ಹಾಗೂ ಮ್ಯಾಜಿಸ್ಟ್ರೇಯಲ್ ದಂಡವಿಧಿಸುವ ಅಧಿಕಾರಗಳನ್ನು ರದ್ದುಪಡಿಸಿದನು. ಕಲೆಕ್ಟರ್‌ರಿಗೆ ಕಂದಾಯ ಆಡಳಿತವನ್ನು ಮಾತ್ರ ವಹಿಸಿಕೊಡಲಾಗಿತ್ತು. ಹೀಗೆ ಕಾರ್ನ್‌ವಾಲೀಸ್‌ನು ಕಾರ್ಯಾಂಗ ಹಾಗೂ ನ್ಯಾಯಾಂಗದ ಅಧಿಕಾರಗಳನ್ನು ಬೇರ್ಪಡಿಸಿದನು. ಹಿಂದೆ ಕಂದಾಯ ವಸೂಲಿ ಅಧಿಕಾರದ ಜೊತೆಗೆ ಸಿವಿಲ್ ನ್ಯಾಯವಿಚಾರಣೆಯ ಅಧಿಕಾರವನ್ನು ಹೊಂದಿದ್ದ ಕಲೆಕ್ಟರ್‌ರಿಂದ ಅನೇಕ ಅನ್ಯಾಯಗಳು ಜರಗಿದ್ದವು. ಭಾರತೀಯ ಪ್ರಜೆಗಳನ್ನು ಸರಕಾರಿ ಅಧಿಕಾರಿಗಳ ದಬ್ಬಾಳಿಕೆಯಿಂದ ರಕ್ಷಿಸುವುದಕ್ಕಾಗಿ ಕಾರ್ನ್‌ವಾಲೀಸ್‌ನು ಸೂಕ್ತವಾದ ವ್ಯವಸ್ಥೆಯನ್ನು ಜಾರಿಗೆ ತಂದನು. ಅದೆಂದರೆ, ಅಧಿಕಾರಿಗಳು ತಮ್ಮ ಅಧಿಕಾರದ ಬಲದಿಂದ

ಮಾಡಿದ ಕೃತ್ಯಗಳನ್ನು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಗುರಿಪಡಿಸುವುದಕ್ಕೆ ಅವಕಾಶ ಕಲ್ಪಿಸಿದನು. ಹೀಗೆ ಈತನು ಕಾನೂನುಬದ್ಧ ಆಡಳಿತ (Rule of law) ಕ್ಕೆ ಅಡಿಪಾಯ ಹಾಕಿದನು.

ಕಾರ್ನ್‌ವಾಲೀಸ್ ಕೋಡ್ ೧೭೯೩ ರಲ್ಲಿ ಸರಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳ ಮಾರ್ಗದರ್ಶನಕ್ಕಾಗಿ ಜಾರ್ಜ್ ಬಾರ್ಲೋ ಎಂಬುವವನು ಕಟ್ಟಲೆ (Regulations) ಗಳ ಹೊಸ ಸಂಗ್ರಹ (Code) ವನ್ನು ಸಿದ್ಧಪಡಿಸಿದನು. ಈ ನಿಬಂಧನೆಗಳ ಸಂಗ್ರಹವನ್ನು ಕಾರ್ನ್‌ವಾಲೀಸ್ ಕೋಡ್ ಎಂದು ಕರೆಯಲಾಗಿದೆ. ಇದು ಆಡಳಿತ ವ್ಯವಸ್ಥೆ, ವಿವಿಧ ಅಧಿಕಾರಿಗಳ ಕಾರ್ಯವ್ಯಾಪ್ತಿ, ಅಧಿಕಾರಗಳ ವಿಂಗಡನೆಯ ತತ್ವದ ಮಹತ್ವ ಮುಂತಾದ ವಿಷಯಗಳನ್ನು ವಿವರವಾಗಿ ನಿರೂಪಿಸಿತ್ತು. ಕಾರ್ನ್‌ವಾಲೀಸ್ ಕೋಡ್ ಅಥವಾ ಕೋಡ್ ಆಫ್ ರೆಗ್ಯೂಲೇಶನ್ ಕಂಪನಿಯ ಆಡಳಿತ ಸೇವೆ ಮತ್ತು ವಾಣಿಜ್ಯ ಸೇವೆಗಳನ್ನು ಸುಸ್ಪಷ್ಟವಾಗಿ ವಿಭಾಗಿಸಿತ್ತು. ೫೦೦ ಪೌಂಡ್‌ಗಳಿಗಿಂತ ಅಧಿಕ ವಾರ್ಷಿಕ ವೇತನ ಹೊಂದಿರುವ ಎಲ್ಲಾ ಉನ್ನತ ಹುದ್ದೆಗಳಿಗೆ ಇಂಗ್ಲೀಷರನ್ನೇ ನೇಮಿಸಬೇಕೆಂದು ಕಾರ್ನ್‌ವಾಲೀಸ್ ಕೋಡ್‌ನಲ್ಲಿ ವಿಧಿಸಲಾಗಿತ್ತು. ಈ ನೀತಿಯನ್ನು ಸೈನ್ಯ, ಪೊಲೀಸ್ ಇಲಾಖೆ, ನ್ಯಾಯಾಂಗ, ಇಂಜಿನಿಯರಿಂಗ್ ಮುಂತಾದ ಎಲ್ಲಾ ಶಾಖೆಗಳಿಗೂ ಅನ್ವಯವಾಗುತ್ತಿತ್ತು.[೪]

ಪೊಲೀಸ್ ಆಡಳಿತದಲ್ಲಿ ಸುಧಾರಣೆಗಳು :

ಕಾರ್ನ್‌ವಾಲೀಸನು ಭಾರತಕ್ಕೆ ಬರುವ ಮುಂಚೆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ 'ಜಮೀನ್ದಾರರು' ಆ ಪ್ರದೇಶದ ಶಾಂತಿ ಸುವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಸ್ಥಳೀಯ ಶಾಂತಿಪಾಲನೆ ಮತ್ತು ರಕ್ಷಣಾ ಜವಾಬ್ದಾರಿ ಹಾಗೂ ಸಮಾಜಘಾತುಕ ಶಕ್ತಿಗಳನ್ನು ದಮನ ಮಾಡುವಲ್ಲಿ ಸ್ಥಳೀಯ ಜಮೀನ್ದಾರರು ಯಶಸ್ವಿಯಾಗಿರಲಿಲ್ಲ. ಆದರೆ ಅವರ ಕಾರ್ಯ ಸಮರ್ಪಕವಾಗಿರಲಿಲ್ಲ, ನಗರಗಳಲ್ಲಿದ್ದ ಪೊಲೀಸರು ಕಡಿಮೆ ಸಂಖ್ಯೆಯಲ್ಲಿದ್ದು ಜಿಲ್ಲೆಯಾದ್ಯಾಂತ ನೋಡಿಕೊಳ್ಳಲು ಅಸಮರ್ಥರಾದ್ದರು. ಕಾರ್ನ್‌ವಾಲೀಸನು ಭೂ ಜಮೀನ್ದಾರರಲ್ಲಿದ್ದ ಶಾಂತಿಸುವ್ಯವಸ್ಥೆ ಕಾಪಾಡುವ ಅಧಿಕಾರವನ್ನು ಕಸಿದು ಕೊಂಡನು. ಪ್ರತ್ಯೇಕ ಪೊಲೀಸ್ ವ್ಯವಸ್ಥೆಗೆ ಅಡಿಪಾಯ ಹಾಕಿದನು. ನ್ಯಾಯಾಂಗ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಶಸ್ವಿ ಯಾಗಬೇಕಾದರೆ ಪೊಲೀಸ್ ಆಡಳಿತದಲ್ಲೂ ಮಾರ್ಪಾಡುಗಳಾಗಬೇಕಿತ್ತು. ಜೊತೆಗೆ ಸ್ಥಳೀಯ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕ್ಕಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಅವಶ್ಯವಾಗಿತ್ತು. ಆ ನಿಟ್ಟಿನಲ್ಲಿ ಕಾರ್ನ್‌ವಾಲೀಸನು ಪ್ರತೀ ಜಿಲ್ಲೆಯನ್ನು ಠಾಣೆ ಗಳೆಂಬ ಹಲವು ಚಿಕ್ಕ ವಿಭಾಗಗಳಾಗಿ ವಿಂಗಡಿಸಿದನು. ಅಲ್ಲಿ ಭಾರತೀಯ ಪೊಲೀಸ್ ಅಧಿಕಾರಿಗಳಾದ 'ದರೋಗ' (ಸಬ್‌ಇನ್ಸ್‌ಪೆಕ್ಟರ್) ರನ್ನು ನೇಮಿಸಿದನು. ಇವರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಅವರ ಕರ್ತವ್ಯವಾಗಿತ್ತು. ನಂತರ ಸಾಧ್ಯವಾದಷ್ಟು ಭಾರತೀಯ ದರೋಗರ ಸ್ಥಾನದಲ್ಲಿ ಇಂಗ್ಲೀಷ್ ಅಧಿಕಾರಿಗಳನ್ನು ನೇಮಿಸ ಲಾಯಿತು. ಈ ಅಧಿಕಾರಿಗಳ ಕಾರ್ಯಚಟುವಟಿಕೆಗಳನ್ನು ಮ್ಯಾಜಿಸ್ಟ್ರೇಟರು ನಿಯಂತ್ರಿಸಬೇಕಿತ್ತು. ನಗರ ಗಳಲ್ಲಿನ ಪೊಲೀಸ್ ಸೂಪರಿಂಟೆಂಡೆಂಟ್ ಅಧಿಕಾರಿಯು ಹಕ್ಕು ಕರ್ತವ್ಯಗಳನ್ನು ಕುರಿತು ೧೭೯೧ ರಲ್ಲಿ ಒಂದು ಕಾಯ್ದೆಯನ್ನು ಹೊರಡಿಸ ಲಾಯಿತು. ಪೊಲೀಸ್ ಅಧಿಕಾರಿಗಳಿಗೆ ಹೆಚ್ಚಿನ ವೇತನ ನಿಗಧಿಮಾಡಲಾಯಿತು. ಮತ್ತು ಉತ್ತಮ ಕಾರ್ಯನಿರ್ವಹಿಸಿದವರಿಗೆ ಬಹುಮಾನ ನೀಡಲಾಗುತ್ತಿತ್ತು.[೫] ಹೀಗೆ ಕಾರ್ನ್‌ವಾಲೀಸ್‌ನು ಜಮೀನುದಾರರ ಶಾಂತಿಪಾಲನೆಯ ಹೊಣೆಯನ್ನು ಅಂತ್ಯ ಗೊಳಿಸಿ ಅವರ ಸೈನಿಕ ಪಡೆಗಳನ್ನು ವಿಸರ್ಜಿಸಿ ಆಧುನಿಕ ಪೊಲೀಸ್ ಪಡೆಯ ತಳಹದಿ ಹಾಕಿದನು. ಇದರಿಂದ ಕಾರ್ನ್ ವಾಲೀಸ್‌ನು ಕ್ರಮಬದ್ಧವಾದ ಪೊಲೀಸ್ ವ್ಯವಸ್ಥೆಂಯನ್ನು ಸಂಘಟಿಸಿದನು. ಪ್ರತೀ ಠಾಣಾ ದಲ್ಲಿ 'ದರೋಗ' ಎಂಬ ಹೆಸರಿನ ಭಾರತೀಯ ಪೊಲೀಸ್ ಅಧಿಕಾರಿಯನ್ನು ನೇಮಿಸಿದನು. (ಹೈದರ್ ಮತ್ತು ಟಿಪ್ಪು ಮತ್ತು ಮೈಸೂರು ಅರಸರ ಕಾಲ ದಲ್ಲಿಯೂ ಸಹ ದರೋಗ ಪದ್ಧತಿ ಮತ್ತು ಅಧಿಕಾರಿಗಳು ಇದ್ದ ಬಗ್ಗೆ ಈ ಹಿಂದೆ ವಿವರಿಸಲಾಗಿದೆ.) ಈ ಅಧಿಕಾರಿಗಳು ಜಿಲ್ಲಾ ಮ್ಯಾಜಿಸ್ಟ್ರೇಟನ ಮೇಲ್ವಿಚಾರಣೆಗೆ (ಉಸ್ತುವಾರಿ) ಒಳಪಟ್ಟಿದ್ದರು.

೧೮೦೧ ರಲ್ಲಿ ಲಾರ್ಡ್‌ವೆಲ್ಲೆಸ್ಲಿಯು ಪೊಲೀಸ್ ಇಲಾಖೆಯು ಶಾಂತಿ ಕಾಪಾಡಲು ಏಕೆ ವಿಫಲವಾಯಿತು ಎಂದು ಕಾರಣ ತಿಳಿಯಲು ಸಮಿತಿ ರಚಿಸಿದ. ಮದ್ರಾಸಿನಲ್ಲಿಯೂ ಸಹ ಕಾನೂನು ಸುವ್ಯವಸ್ಥೆ ವೈಫಲ್ಯಗಳ ಬಗ್ಗೆ ವಿಚಾರಣೆ ನಡೆಸಲು ಲಾರ್ಡ್ ವಿಲಿಯಂ ಬೆಂಟಿಕ್‌ನ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಕಾನೂನು ಸುವ್ಯವಸ್ಥೆಯು ಹಿಂದಿನಂತೆಯೇ ಕೆಟ್ಟು ಹೋಗಿತ್ತು. ೧೮೧೩ ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರುಗಳ ಸಭೆಯು (court of directors) ಭಾರತ ದೇಶದಲ್ಲಿ ತನಗೆ ಒಳಪಡುವ ಭೂಪ್ರದೇಶಗಳಲ್ಲಿ ನ್ಯಾಯಾಡಳಿತ ಮತ್ತು ಪೊಲೀಸ್ ವ್ಯವಸ್ಥೆಯ ಬಗ್ಗೆ ವಿಚಾರಣೆ ನಡೆಸಲು ತನ್ನದೇ ಆದ ಸದಸ್ಯರನ್ನು ಒಳಗೊಂಡ ಒಂದು ವಿಶೇಷ ಸಮಿತಿಯನ್ನು ರಚಿಸಿತು. ಈ ಸಮಿತಿಯು ನೀಡಿದ ಶಿಫಾರಸ್ಸುಗಳಿಗೆ ಅನುಗುಣವಾಗಿ ಶಾಂತಿ ಕಾಪಾಡಲು ಸ್ಥಳೀಯ ಜನರು ಸಹಕರಿಸುವಂತೆ ಆದೇಶ ಹೊರಡಿಸಲಾಯಿತು. ಇದರ ಜೊತೆಗೆ ೧೮೧೬ ರ XI ನೇ ಮದ್ರಾಸ್ ರೆಗ್ಯುಲೇಷನ್ ಕಾಯ್ದೆಯನ್ನು ಜಾರಿಗೆ ತರಲಾಯಿತು.[೬] ಈ ಕಾಯ್ದೆಯ ಪ್ರಕಾರ ಬ್ರಿಟೀಷ್ ಪ್ರಾಂತ್ಯಗಳಲ್ಲಿ ಗ್ರಾಮೀಣ ಪೊಲೀಸ್ ವ್ಯವಸ್ಥೆ ಏಕಪ್ರಕಾರ ಇರುವಂತೆ ಮಾಡಲಾಯಿತು. ೧೮೦೭ ರಲ್ಲಿ ಪೊಲೀಸ್ ಕರ್ತವ್ಯಗಳನ್ನು ಮತ್ತೆ ಜಮೀನ್ದಾರರಿಗೆ ವಹಿಸುವ ಪ್ರಯತ್ನ ನಡೆಯಿತು. ಆದರೆ ಅದೂ ಸಹ ವಿಫಲತೆ ಹೊಂದಿತು. ೧೮೧೪ ರಲ್ಲಿ ಬೊಂಬಾಯಿ ಮತ್ತು ಮದ್ರಾಸ್‌ಗಳಲ್ಲಿ ಪೊಲೀಸ್ ದಳವನ್ನು ಹಿಂತೆಗೆದುಕೊಳ್ಳಲಾಯಿತು. ಮತ್ತು ಗ್ರಾಮಗಳಲ್ಲಿನ ಪರಂಪರಾಗತ ಮುಖ್ಯಸ್ಥರಿಗೇ ಪೊಲೀಸ್ ಕರ್ತವ್ಯಗಳನ್ನು ನೀಡಲಾಯಿತು. ಸರ್ ಥಾಮಸ್ ಮನ್ರೋರವರು ಈ ವ್ಯವಸ್ಥೆಯ ಬಗ್ಗೆ ಹೀಗೆ ಹೇಳಿದ್ದಾರೆ. "ನಾವು ಈಗ ದೇಶದ ಬಹಳಷ್ಟು ಪ್ರದೇಶಗಳಲ್ಲಿ ಹಿಂದಿನ ಪೊಲೀಸ್ ವ್ಯವಸ್ಥೆಗೆ ಮರಳಿದ್ದೇವೆ. ಹಳ್ಳಿಯ ಮುಖ್ಯಸ್ಥನ ನಿರ್ದೇಶನದಲ್ಲಿ ಸಾಧಾರಣವಾಗಿ ವಂಶಪಾರಂಪರ್ಯವಾಗಿ ಗ್ರಾಮದ ಕಾವಲುಗಾರ, ಜಿಲ್ಲೆಯಲ್ಲಿ ತಹಶಿಲ್ದಾರ ಮತ್ತು ಪ್ರಾಂತ್ಯದಲ್ಲಿ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟರು ಪ್ರಾಂತ್ಯಗಳಲ್ಲಿ ಇದರ ಜವಾಬ್ದಾರಿ ಹೊಂದಿದ್ದರು. "We have in most places reverted to the old police of the country, excuted by village watchman, mostly hereditary, under the directions of hands of villages, Tahashildars of district and the collecter and magistrates of the provinces "[೭]

ಮದ್ರಾಸ್ ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆಗಳನು ತಂದಂತೆ ಬಾಂಬೆಯಲ್ಲಿ ಸುಧಾರಣೆಗಳನ್ನು ತರಲು ನಿರ್ದೇಶಕರುಗಳ ಸಭೆಯು (court of directors) ೧೮೨೭ ರ XII ನೇ ರೆಗ್ಯುಲೇಷನ್ ಕಾಯ್ದೆಯನ್ನು ಜಾರಿಗೆ ತಂದಿತು. ಇದರಲ್ಲಿ ಕೆಲವು ಸುಧಾರಣೆಗಳು ಕಂಡು ಬಂದವು. ಪೊಲೀಸ್ ಸೂಪರಿಂಟೆಂಡೆಂಟ್ ರವರ ಹುದ್ದೆಯನ್ನು ಈಗ ಬಂಗಾಳದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂದು ಹೆಸರಿಸಲಾಯಿತು.[೮] ನಂತರ ೧೮೩೨ ರಲ್ಲಿ ಆಯ್ದ ಸಮಿತಿಯನ್ನು ಈಸ್ಟ್ ಇಂಡಿಯಾ ಕಂಪೆನಿಯ ಆಗು ಹೋಗುಗಳ ಬಗ್ಗೆ ಕೆಲಸ ಕಾರ್ಯಗಳ ಬಗ್ಗೆ ವರದಿಮಾಡಲು ರಚಿಸಿದ್ದು, ಅದು ಪೊಲೀಸ್ ಆಡಳಿತ ವ್ಯವಸ್ಥೆಯ ಬಗ್ಗೆಯೂ ಅತ್ಯಂತ ಮೌಲ್ಯಯುತವಾದ ಮಾಹಿತಿಗಳನ್ನು ಸಂಗ್ರಹಿಸಿತು. ಹೀಗೆ ಈ ಸಮಿತಿಯು ಸಂಗ್ರಹಿಸಿದ ಒಂದು ಮುಖ್ಯ ಮಾಹಿತಿ ಏನೆಂದರೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ತಮ್ಮ ಕೈಕೆಗಳಿನ ಅಧಿಕಾರಿಗಳ ಮೇಲೆ ಪರಿಣಾಮಕಾರಿಯಾಗಿ ನಿಯಂತ್ರಣ ಹೇರಲು ವಿಫಲರಾಗಿದ್ದಾರೆ. ಏಕೆಂದರೆ ಅವರಿಗೆ ಹೆಚ್ಚಿನ ಕೆಲಸದ ಹೊರೆಯಿದೆ. ಆದ್ದರಿಂದಲೇ ಕೆಳಹಂತದ ಅಧಿಕಾರಿಗಳು ಅಸಮರ್ಪಕರಾಗಿ, ಭ್ರಷ್ಟರಾಗಿ,ಅನ್ಯಾಯವೆಸಗುತ್ತಿದ್ದರು[೯] ಆದಾಗ್ಯೂ ಸಮಿತಿಯ ಈ ಸಲಹೆಯಿಂದ ತಕ್ಷಣ ಯಾವುದೇ ಕ್ರಮಕೈಗೊಳ್ಳದ ಕಾರಣ ಈ ಭ್ರಷ್ಟಾಚಾರ ವ್ಯವಸ್ಥೆ ಬೆಳೆಯುತ್ತಾ ಬಂತು.

೩.೪ : ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪೊಲೀಸ್ ವ್ಯವಸ್ಥೆ

೧೯೬೧ ಕ್ಕಿಂತ ಮೊದಲು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಗಳನ್ನೊಳಗೊಂಡ ಕನ್ನಡ ಜಿಲ್ಲೆ ಹಾಗೂ ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದವು. ಈ ಹಿನ್ನಲೆ ಯಲ್ಲಿ ಈ ಪ್ರದೇಶದ ಪೊಲೀಸ್ ವ್ಯವಸ್ಥೆಯ ಬಗ್ಗೆ ತಿಳಿಯುವುದು

ಅಗತ್ಯವಾಗಿದೆ. ಕರ್ನಾಟಕದಲ್ಲಿ ಮೊದಲು ಬ್ರಿಟೀಷ್ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದದ್ದು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ.

ಹುಟ್ಟು ಮತ್ತು ಬೆಳವಣಿಗೆ :

ದಕ್ಷಿಣ ಭಾರತವನ್ನು ಬ್ರಿಟೀಷರು ವಶಪಡಿಸಿಕೊಳ್ಳುತ್ತಿದ್ದಂತೆ ಈ ಪ್ರದೇಶದಲ್ಲಿ ಪೊಲೀಸ್ ವ್ಯವಸ್ಥೆಯು ಸಹ ಮೇಲುಗೈ ಸಾದಿಸುತ್ತಾ ಬಂದಿದ್ದನ್ನು ಗಮನಿಸಬಹುದಾಗಿದೆ. ಇದು ಪ್ರಾಚೀನ ಕಾಲದಲ್ಲಿ ವಂಶಪಾರಂಪರ್ಯವಾಗಿ ಬಂದ ಕಾವಲಿ (Cauvaly) ವ್ಯವಸ್ಥೆ ಆಗಿತ್ತು.[೧೦]

ತಮಿಳು ಭಾಷೆಯಲ್ಲಿ 'ಕಾವಲರ್' ಎಂದರೆ ಪೊಲೀಸರು ಎಂದು ಅರ್ಥ. ಇಂದಿಗೂ ಸಹ ತಮಿಳುನಾಡಿನಲ್ಲಿ ಪೊಲೀಸ್ ಠಾಣೆಗಳಿಗೆ 'ಕಾವಲ್ ನಿಲಯಂ' ಎಂದು ಕರೆಯುತ್ತಾರೆ. ಬ್ರಿಟೀಷರು ಮದ್ರಾಸ್ ಪ್ರಾಂತ್ಯವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕಿಂತಲೂ ಮೊದಲು ತಮಿಳುನಾಡಿನಲ್ಲಿ ಈ 'ಕಾವಲಿ' ವ್ಯವಸ್ಥೆ ಅಸ್ತಿತ್ವದಲ್ಲಿ ಇತ್ತು ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನವಾಗಿದೆ. ಈ 'ಕಾವಲಿ' ವ್ಯವಸ್ಥೆಯಲ್ಲಿ ದರೋಡೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಬುಡಕಟ್ಟುಗಳಿಂದ ನಡೆಯುವ ದರೋಡೆಯನ್ನು ತಡೆಯುವುದು, ಮತ್ತು ದರೋಡೆಗೆ ಒಳಗಾದವರ ಉಳಿದ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು ಇವರ ಕೆಲಸವಾಗಿರುತ್ತದೆ. ಮತ್ತು ಇದರ ಜೊತೆಗೆ ಸರಕಾರವು ವಿಧಿಸುತ್ತಿದ್ದ ವಿವಿಧ ರೀತಿಯ ತೆರಿಗೆಗಳನ್ನು ವಸೂಲಿ ಮಾಡುವುದು ಸಹ ಇವರ ಜವಬ್ದಾರಿಯಾಗಿತ್ತು. ಮೈಸೂರು ಸಂಸ್ಥಾನದಲ್ಲಿಯೂ ಸಹ 'ಕಂದಾಚಾರ','ದರೋಗ' ವ್ಯವಸ್ಥೆಯಲ್ಲಿ ಪೊಲೀಸರು ಕಂದಾಯ ವಸೂಲಿ ಮಾಡುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇವರ ಬೇಡಿಕೆಗಳು ವಿಬಿನ್ನ ರೂಪವಾಗಿದ್ದವು. ಉದಾಹರಣೆಯಾಗಿ: ಬೆಳೆದ ಬೆಳೆಯಲ್ಲಿ ಪಾಲು, ಮನೆಗೆ ನಿಗದಿಪಡಿಸಿದ್ದ ಕಂದಾಯದಲ್ಲಿ ಪಾಲು, ಭೂ ಸಾರಿಗೆ ಮೂಲಕ ಸಾಗಿಸುತ್ತಿದ್ದ ವಸ್ತುಗಳ ಮೇಲೆ ವಿಧಿಸುತ್ತಿದ್ದ ಕರದಲ್ಲಿ ಪಾಲು, ವೃತ್ತಿ ತೆರಿಗೆಗಳಲ್ಲಿ ಪಾಲು ನೀಡಬೇಕೆಂದು ಇವರ ಬೇಡಿಕೆ ಆಗಿತ್ತು. ಮತ್ತು MOTURPHA ಎಂಬುದು ಮೂಲತ: ಸೇನೆಗಾಗಿ ನೀಡುತ್ತಿದ್ದ ತೆರಿಗೆಯಾಗುತ್ತಿತ್ತು. ಆದರೆ ಇದರಲ್ಲಿಯೂ ಈ 'ಕಾವಲ್'ನವರಿಗೆ ಭಾಗ ನೀಡಬೇಕಿತ್ತು. ಆದರೆ ಯಾವ ನಿಯಮಗಳ ಮೇರೆಗೆ ಅದು ನಿರ್ಧಾರವಾಗುತ್ತಿತ್ತು ಎಂದು ತಿಳಿದುಬಂದಿಲ್ಲ. ಈ ಪದ್ಧತಿಯು ಯಾವ ಪ್ರದೇಶದಲ್ಲಿ ಪ್ರಬಲವಾಗಿತ್ತು ಮತ್ತು ಯಾವ ಪ್ರದೇಶದಲ್ಲಿ ಪ್ರಬಲವಾಗಿಲ್ಲ ಎಂಬುದು ತಿಳಿದುಬಂದಿಲ್ಲ. ಇದು ಆಯಾ ಭೌಗೋಳಿಕ ಪ್ರದೇಶ ಮತ್ತು ಪರಸ್ಪರ ಹೊಂದಾಣಿಕೆಯನ್ನು ಮುಖ್ಯವಾಗಿ ಅವಲಂಬಿಸಿತ್ತು.[೧೧]

ಮದ್ರಾಸ್ ಪ್ರೆಸಿಡೆನ್ಸಿಯ ಬಹುತೇಕ ಭಾಗದಲ್ಲಿ ಈ 'ಕಾವಲಿ' ವ್ಯವಸ್ಥೆಯು ಮುಖ್ಯವಾಗಿ ಹಳ್ಳಿಗಳ ನಿಯಂತ್ರಣ ಮತ್ತು ಕಾವಲು ಕಾಯುವ ಕೆಲಸ ಮಾಡುತ್ತಿತ್ತು. ಕೆಲವೊಮ್ಮೆ ಇದಕ್ಕೆ ಹೊರತಾದ ಕೆಲಸವನ್ನೂ ಸಹ 'ಕಾವಲಿ' ಪೊಲೀಸರು ಮಾಡುತ್ತಿದ್ದರು. ತಮಿಳುನಾಡಿನ ದಕ್ಷಿಣದ ಜಿಲ್ಲೆಗಳಲ್ಲಿ 'ಕಾವಲಿ' ವ್ಯವಸ್ಥೆಯಲ್ಲಿ ಅನ್ಯಾಯವು ತುಂಬಿ ತುಳುಕುತ್ತಿತ್ತು. ಅನ್ಯಾಯ ವ್ಯವಸ್ಥೆಯ ಒಂದು ಅಂಗವಾಗಿತ್ತು. ಇಲ್ಲಿ 'ಕಾವಲಿ' ವ್ಯವಸ್ಥೆ ಇರುವ ಜಾಗಗಳಲ್ಲಿ ಅವರು ರಹಸ್ಯವಾಗಿ ಎಲ್ಲಾ ಸುಲಿಗೆಗಳನ್ನು ನಡೆಸುತ್ತಿದ್ದರು. ಕೆಲವೊಮ್ಮೆ ಇವರು ನೀಡಿದ ರಕ್ಷಣೆಗಾಗಿ ಜನರಿಂದ ಒಂದು ಕೊಟ್ಟು ಒಂದು ತೆಗೆದು ಕೊಳ್ಳುವ ಪದ್ಧತಿಯಂತೆ (quid-pro-quo) ಬೇರೆ ವಸ್ತುಗಳನ್ನು ಪಡೆಯಲು ಇವರು ಹಿಂಜರಿಯುತ್ತಿರಲಿಲ್ಲ. ಬ್ರಿಟೀಷ್ ಆಡಳಿತ ವ್ಯವಸ್ಥೆ ಬಂದ ಪ್ರಾರಂಭದಲ್ಲಿ ಇಂತಹ ಅಧಿಕಾರ ದುರುಪಯೋಗ ತಡೆಯಲು ಸೂಕ್ತ ಕ್ರಮ ಕೈಗೊಳ್ಳಲಾಯಿತು. 'ಪೊಲೀಗಾರ್' (ಪಾಳೇಗಾರ) ರವರ ಇನಾಮ್ ಭೂಮಿಯನ್ನು ರದ್ದುಗೊಳಿಸಲಾಯಿತು. ಮತ್ತು ಅವರಿಗೆ ಬಳುವಳಿಯ ರೂಪದಲ್ಲಿ ಬರುತ್ತಿದ್ದ ಕಂದಾಯ ಭಾಗವನ್ನು ಪಡೆಯದಂತೆ ನಿಷೇಧ ಹೇರಲಾಯಿತು. ಕೆಲವು ವರ್ಷಗಳ ನಂತರ ಇಂತಹ ಹಿಂಸಿಸುವ ಪದ್ಧತಿಗೆ ಸಂಪೂರ್ಣವಾಗಿ ಇತಿಶ್ರೀ ಹಾಡಲಾಯಿತು. ಇಂತಹ ಪರಿಸ್ಥಿತಿಯಲ್ಲಿ ಹಳ್ಳಿಯ 'ಕಾವಲುಗಾರ', 'ಸ್ಥಳಕಾವಲ್' ಎಂದು ಕರೆಯಲ್ಪಡುತ್ತಿದ್ದ ಕಾವಲು ವ್ಯವಸ್ಥೆ ಮುಂದುವರಿಸಲಾಯಿತು ಮತ್ತು ಇದು 'ಗ್ರಾಮೀಣ ಪೊಲೀಸ್'

ವ್ಯವಸ್ಥೆಯ ರಚನೆಗೆ ಕಾರಣವಾಯಿತು.[೧೨] 'ಸ್ಥಳಕಾವಲ್', 'ಕಾವಲ್‌ಗಾರ', 'ಪೋಲಿಗಾರ್' ಎಂದು ಒಂದೊಂದು ಸ್ಥಳದಲ್ಲಿ ಒಂದೊಂದು ಹೆಸರಿನಿಂದ ಪೊಲೀಸ್ ವ್ಯವಸ್ಥೆಯನ್ನು ಕರೆಯಲಾಗುತ್ತಿತ್ತು. ಮದ್ರಾಸ್‌ನ ೧೮೧೬ ರ ೧೧ನೇ ರೆಗ್ಯುಲೇಶನ್ ಕಾಯ್ದೆಯ ಪ್ರಕಾರ ಗ್ರಾಮೀಣ ಪೊಲೀಸರು ಹಳ್ಳಿಯ ಮುಖಂಡನ ಕೈಕೆಳಗೆ ಕೆಲಸ ಮಾಡುವಂತೆ ಮಾಡಲಾಯಿತು ಮತ್ತು ಗ್ರಾಮ ಪೊಲೀಸರು ರಾಜ್ಯದ ಆಡಳಿತದ ಮುಖ್ಯ ಭಾಗವಾದ ಮ್ಯಾಜಿಸ್ಟ್ರೇಟರ ನಿಯೋಗಿ (Agent) ಆದರು. ಸಾಮಾನ್ಯ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸುವ ವರೆಗೂ ಸರಕಾರದೊಂದಿಗೆ ಗ್ರಾಮ ಪೊಲೀಸರು ಪರಿಣಾಮಕಾರಿಯಾಗಿ ಸಹಕರಿಸುವಂತೆ ಮಾಡಲಾಯಿತು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೬೦ ರ ವೇಳೆಗೆ ಒಂದು ವ್ಯವಸ್ಥಿತವಾದ ಸಂಘಟಿತವಾದ ಪೊಲೀಸ್ ವ್ಯವಸ್ಥೆ ಇತ್ತು.[೧೩]

೧೮೫೫ ರಲ್ಲಿ ಬಂದ ಟಾರ್ಚರ್ (torture) ಕಮಿಟಿ ವರದಿಯಲ್ಲಿ ಈ ಹಿಂದೆ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ, ಅದರ ಬಗೆಗಿನ ಗಾಳಿ ಸುದ್ದಿಗಳ ಬಗ್ಗೆ ಚರ್ಚೆ ಮಾಡಿ ಅತ್ಯಂತ ತುರ್ತಾಗಿ ಪೊಲೀಸ್ ವ್ಯವಸ್ಥೆಯನ್ನು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪುನರ್ ಸಂಘಟಿಸಬೇಕೆಂದು ಸೂಚಿಸಿದರು. ಆಗ ಅಸ್ತಿತ್ವದಲ್ಲಿದ್ದ ಗ್ರಾಮ ಪೊಲೀಸ್ (Mofussil) ವ್ಯವಸ್ಥೆಯ ಬಗ್ಗೆ ಕಮಿಟಿಯು ಅತ್ಯಂತ ತಿರಸ್ಕಾರ ಭಾವದ ಶಬ್ಧಗಳಿಂದ ವಿವರಿಸಿ ಅದರ ಪುನರ್ ಸಂಘಟನೆಯೊಂದೇ ಮಾರ್ಗ ವೆಂದಿತು.[೧೪]

೧೮೫೬ ರಲ್ಲಿ ಕೋರ್ಟ್ ಆಫ್ ಡೈರಕ್ಟರ್‌ಗಳು (ನಿರ್ದೇಶಕರುಗಳ ಸಭೆ) ಒಂದೇ ದೃಷ್ಟಿಕೋನದಿಂದ ಪೊಲೀಸ್ ವ್ಯವಸ್ಥೆಯನ್ನು ಕಂದಾಯ ಮತ್ತು ಮ್ಯಾಜಿಸ್ಟ್ರೇಟರ್ ಇಲಾಖೆಗಳಿಂದ ದೂರವಿರಿಸಿ, ಸ್ಥಳೀಯ ಸರಕಾರಗಳ ವ್ಯಾಪ್ತಿಗಿಂತ ಮುಂದೆ ಹೋಗಿ, ಒಬ್ಬ ಚೀಫ್ ಕಮಿಷನರ್ ಜೊತೆಗೆ ೨೦ ಜಿಲ್ಲಾ ಸೂಪರಿಂಟೆಂಡೆಂಟ್‌ಗಳು ಮತ್ತು ೨೦ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳನ್ನು ಮಂಜೂರುಮಾಡಿ ೦೯–೦೬–೧೮೫೭ ರಲ್ಲಿ ಆದೇಶ ಹೊರಡಿಸಿತು. ಮದ್ರಾಸ್ ಸಿವಿಲ್ ಸರ್ವಿಸ್‌ಗೆ ಸೇರಿದ ಶ್ರೀ.ವಿಲಿಯಂ ರಾಬಿನ್‌ಸನ್ ೧೮೫೮ ರಲ್ಲಿ ಚೀಫ್ ಕಮಿಷನರಾಗಿ ನೇಮಕವಾದನು. ಈತನು ಇಂಗ್ಲೆಂಡ್ ಮತ್ತು ಇತರೆಡೆಗಳಲ್ಲಿನ ಪೊಲೀಸ್ ಸಂಘಟನೆ ಮತ್ತು ವ್ಯವಸ್ಥೆಗಳ ಬಗ್ಗೆ ವಿವರವಾದ ಅಧ್ಯಯನ ಮಾಡಿದವ ನಾಗಿದ್ದನು. ನಂತರದ ದಿನಗಳಲ್ಲಿ ಈ ಹುದ್ದೆಗೆ ಐ.ಜಿ.ಪಿ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಯಿತು. ೧೮೫೯ ರಲ್ಲಿ ಉತ್ತರ ಆರ್ಕಾಟ್‌ನಲ್ಲಿ ಹೊಸ ಕಾನ್‌ಸ್ಟೇಬಲ್ ವ್ಯವಸ್ಥೆ ಜ್ಯಾರಿಗೆ ತರಲಾಯಿತು. ಉತ್ತರ ಸಿರ್‌ಕಾರ್ಸ್ (circars) ಜಿಲ್ಲೆಯನ್ನು ಹೊರತುಪಡಿಸಿ ಉಳಿದೆಲ್ಲಾ ಜಿಲ್ಲೆಗಳಲ್ಲಿ ಪೊಲೀಸ್ ಪುನರ್‌ಸಂಘಟನೆ ಕೆಲಸ ಪ್ರಾರಂಭವಾದುವು. ಉತ್ತರ ಸಿರ್‌ಕಾರ್ಸ್‌ನಲ್ಲಿ ೧೮೬೧ ರ ವರೆಗೂ ಪೊಲೀಸ್ ವ್ಯವಸ್ಥೆಯ ಪುನರ್ ಸಂಘಟನೆ ವ್ಯವಸ್ಥೆಯನ್ನು ಮುಂದುವರಿಸಲಾಯಿತು. ಹೊಸ ಪೊಲೀಸ್ ವ್ಯವಸ್ಥೆಯನ್ನು 'ಐರೀಷ್' ಮಾಧರಿಯಲ್ಲಿ ಸಂಘಟಿಸಲಾಯಿತು.[೧೫]

ಭಾರತದಲ್ಲಿರುವ ಪೊಲೀಸ್ ವ್ಯವಸ್ಥೆ ಬ್ರಿಟೀಷರ ಕೊಡುಗೆ, ಇದು ಬ್ರಿಟೀಷರು ನಮಗೆ ನೀಡಿದ ವ್ಯವಸ್ಥೆ ಎಂಬ ವಾದವನ್ನು ಮಾಡಿಕೊಂಡು ಬಂದವರ ವಾದವನ್ನು ಸಮರ್ಥವಾಗಿ ಖಂಡಿಸಲು ಇದೊಂದು ಉತ್ತಮ ಆಧಾರವಾಗಿದೆ. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ಬ್ರಿಟೀಷ್ ಅಧಿಕಾರಿ ಇ.ಕೀಸ್ (E.Keys) ನು ಮದ್ರಾಸ್ ಪ್ರೆಸಿಡೆನ್ಸಿಯ ವಾರ್ಷಿಕ ವರದಿ ಸಲ್ಲಿಸುವಾಗ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಮೊದಲು ಇದ್ದ ಪೊಲೀಸ್ ವ್ಯವಸ್ಥೆ ಭ್ರಷ್ಟಾಚಾರದಿಂದ ಕೂಡಿ ದ್ದರಿಂದ ಅದನ್ನು ಕೊನೆಗೊಳಿಸಿ, 'ಐರೀಷ್' ಮಾದರಿಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಜ್ಯಾರಿ ಗೊಳಿಸಲಾಯಿತು ಎಂದು ವಿವರಿಸಿದ್ದಾನೆ.[೧೬] ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳು ಎರಡು. ಒಂದನೇಯದು ಬ್ರಿಟೀಷರು ಮದ್ರಾಸ್ ಪ್ರಾಂತ್ಯಕ್ಕೆ ಬರುವ ಮೊದಲು ಅಲ್ಲಿ ಸ್ಥಳೀಯವಾದ ಪೊಲೀಸ್ ವ್ಯವಸ್ಥೆ ಇದ್ದು, ಅದನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದರು. ಅದನ್ನು ಈಗಾಗಲೇ ಚರ್ಚಿಸಲಾಗಿದೆ. ಎರಡನೇಯದು ಬ್ರಿಟೀಷರು ಭಾರತಕ್ಕೆ ಬರುವ ಮೊದಲೇ ಬ್ರಿಟನ್‌ನಲ್ಲಿ ಒಂದು

ಪೊಲೀಸ್ ವ್ಯವಸ್ಥೆ ಅಸ್ತಿತ್ವದಲ್ಲಿದ್ದರೂ ಸಹ ಅದರಂತೆ ಹೋಲುವ ಪೊಲೀಸ್ ವ್ಯವಸ್ಥೆಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೆ ತರದೇ 'ಐರೀಷ್' ಮಾದರಿಯ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದರು ಎಂಬುದು ಮುಖ್ಯ. ಮದ್ರಾಸ್ ಪ್ರೆಸಿಡೆನ್ಸಿ ಒಳಗೆ ಇದ್ದ 'ಕಾವಲೀ' ವ್ಯವಸ್ಥೆಯ ಪೊಲೀಸರು ಭ್ರಷ್ಟಾಚಾರದಲ್ಲಿ ತೊಡಗಿದ್ದರೆಂದು ಆರೋಪವನ್ನು ಬ್ರಿಟೀಷರು ಮಾಡಿದರು. ಆದರೆ ಇದರಲ್ಲಿ ಬ್ರಿಟೀಷರು ಭಾಗಿಗತದಲ್ಲಿದ್ದ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೊನೆಗೊಳಿಸಿ ತಮಗೆ ಬೇಕಾದ ರೀತಿಯಲ್ಲಿ ಪೊಲೀಸ್ ವ್ಯವಸ್ಥೆಯೊಂದನ್ನು ಜಾರಿಗೆ ತರಬೇಕೆಂಬ ದೂರಾಲೋಚನೆ ಮತ್ತು ದುರಾಲೋಚನೆ ಎರಡು ಸಹ ಇದ್ದಂತೆ ಕಂಡು ಬರುತ್ತದೆ. ಏಕೆಂದರೆ 'ಕಾವಲೀ' ವ್ಯವಸ್ಥೆಯಲ್ಲಿ ಪೊಲೀಸರಿಗೆ ನಿಗಧಿತವಾದ ಸಂಬಳವನ್ನು ಕೊಡುತ್ತಿರಲಿಲ್ಲ. ಅವರು ಜನರು ನೀಡಿದ ಹಣ ಮತ್ತು ವಸೂಲಿ ಮಾಡಿದ ಕಂದಾಯದ ಕೆಲವು ಭಾಗಗಳನ್ನು ಪಡೆದು ಕೊಂಡು ಜೀವನ ನಡೆಸುತ್ತಿದ್ದರು. ಇದನ್ನೇ ಭ್ರಷ್ಟಾಚಾರವೆಂದು ಬ್ರಿಟೀಷರು ಬಿಂಬಿಸಿದರು. ಬ್ರಿಟೀಷರು ತಂದ ಪೊಲೀಸ್ ವ್ಯವಸ್ಥೆಯಲ್ಲೇನೋ ಭ್ರಷ್ಟಾಚಾರವು ಕಡಿಮೆಯಾಗಿರಲಿಲ್ಲ. ತಾವು ಅಕ್ರಮಿಸಿಕೊಂಡ ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸ ಬೇಕಾದಲ್ಲಿ ಬ್ರಿಟೀಷರಿಗೆ ಅಗತ್ಯವಾಗಿ ಬೇಕಾದುದು ಸೇನೆ ಮತ್ತು ಪೊಲೀಸ್ ವ್ಯವಸ್ಥೆಯಾಗಿತ್ತು. ಇಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಾವು ಹೇಳಿದಂತೆ ನಡೆದುಕೊಳ್ಳುವ ಮತ್ತು ತಾವು ಹೇಳಿದಂತೆ ಅಕ್ರಮಣಗಳನ್ನು ಎಸಗುವ ಮತ್ತು ಬ್ರಿಟೀಷರ ವಿರುದ್ಧ ನಡೆಯುವ ದಂಗೆಗಳು, ಹೋರಾಟಗಳು, ಸತ್ಯಾಗ್ರಹಗಳನ್ನು ಸದೆ ಬಡಿಯುವಂತಹ ಒಂದು ಸಂಘಟಿತ ವಾದ ಪೊಲೀಸ್ ವ್ಯವಸ್ಥೆ ಬ್ರಿಟೀಷರಿಗೆ ಬೇಕಾಗಿತ್ತು. ಅದಕ್ಕಾಗಿ 'ಕಾವಲೀ' ವ್ಯವಸ್ಥೆಯನ್ನು ಕೊನೆಗೊಳಿಸುವುದು ಅವರ ಪ್ರಾಥಮಿಕ ಕಾರ್ಯಗಳಲ್ಲಿ ಒಂದಾಗಿತ್ತು. ಶತಮಾನಗಳಿಂದ ಅಸ್ತಿತ್ವದಲ್ಲಿದ್ದ ಒಂದು ವ್ಯವಸ್ಥೆಯನ್ನು ಕೊನೆಗೊಳಿಸಬೇಕಾದರೆ ಸಾಮಾಜಿಕ ವಿರೋಧಗಳು ಬರಬಹುದೆಂಬುದನ್ನು ಯೋಚಿಸಿದ ಬ್ರಿಟೀಷರು, ಭ್ರಷ್ಟಾಚಾರದ ಆರೋಪವನ್ನು 'ಕಾವಲೀ' ವ್ಯವಸ್ಥೆಯ ಮೇಲೆ ಹೊರಿಸಿ ನಂತರ ಅದನ್ನು ಬೇರು ಸಹಿತ ಕಿತ್ತುಹಾಕುವ, ತನ್ಮೂಲಕ ತಮಗೆ ಬೇಕಾದ ರೀತಿಯ ಪೊಲೀಸ್ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವಲ್ಲಿ ಅವರು ಯಶಸ್ವಿಯಾದರು.

೧೮೦೨ ರ XXXV ನೇ ಮದ್ರಾಸ್ ರೆಗ್ಯುಲೇಶನ್ ಕಾಯ್ದೆ ಮೂಲಕ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ವಾಸ್ತವವಾಗಿ ಬಂಗಾಳ ಪೊಲೀಸ್ ವ್ಯವಸ್ಥೆಯನ್ನು ಈ ಭಾಗಕ್ಕೆ ವಿಸ್ತರಿಸಲಾಯಿತು. ಪ್ರತೀ ಜಿಲ್ಲೆಯನ್ನು ಸುಮಾರು ೨೦ ಚದರ ಮೈಲು ಭೂಪ್ರದೇಶ ಹೊಂದಿರುವಂತೆ ಸಣ್ಣ ಪೊಲೀಸ್ ವಿಭಾಗಗಳನ್ನು ಮಾಡ ಲಾಯಿತು. ಇಂತಹ ಪ್ರತಿಯೊಂದು ವಿಭಾಗದಲ್ಲೂ 'ದರೋಗ' ಮತ್ತು 'ಥಾಮಸ್' ಎಂದು ಕರೆಯಲ್ಪಡುವ ಪೊಲೀಸ್ ಅಧಿಕಾರಿಯನ್ನು ನೇಮಿಸಲಾಯಿತು. ಈ ಅಧಿಕಾರಿಯ ಕೈಕೆಳಗೆ ೨೦ ರಿಂದ ೫೦ ಜನ ಶಸ್ತ್ರಸಜ್ಜಿತ ಸಿಬ್ಬಂದಿ ಇರುತ್ತಿದ್ದರು. 'ದರೋಗ'ನು ಕಲೆಕ್ಟರ್‌ನ ಕೈಕೆಳಗೆ ಕೆಲಸ ಮಾಡುತ್ತಿದ್ದನು.

ಪೊಲೀಸ್ ಆಡಳಿತದ ಉದ್ದೇಶದಿಂದ ದಕ್ಷಿಣ ಕನ್ನಡವನ್ನು ಮೂರು ವಿಭಾಗಗಳನ್ನಾಗಿ ಮಾಡಲಾಯಿತು. ಪ್ರತೀ ಯೊಂದು ವಿಭಾಗದ ಮೇಲ್ವಿಚಾರಣೆಯನ್ನು ಒಬ್ಬೊಬ್ಬ 'ದರೋಗ' ನೋಡಿಕೊಳ್ಳುತ್ತಿದ್ದ. ಈತನ ನೇತೃತ್ವದಲ್ಲಿ ವ್ಯವಸ್ಥಿತವಾಗಿ 'ಠಾಣಾದಾರ' ಮತ್ತು 'ಪೀವನ್'ಗಳನ್ನು ನೇಮಿಸಲಾಗಿತ್ತು. ಪ್ರತೀಯೊಂದು ವಿಭಾಗವನ್ನು ಅಗತ್ಯಗಳಿಗೆ ತಕ್ಕಂತೆ ಹಲವು ಠಾಣೆಗಳಾಗಿ ವಿಂಗಡಿಸಲಾಗಿತ್ತು. ಅದಕ್ಕೆ 'ಠಾಣಾದಾರ' ಅಧಿಕಾರಿಯಾಗಿದ್ದನು. ಪ್ರತಿಯೊಂದು 'ಠಾಣಾದಾರ' ಠಾಣೆಯಲ್ಲಿ ಯೂ ಸಾಕಷ್ಟು 'ಪೀವನ್'ಗಳಿದ್ದರು. ಈ 'ದರೋಗ', 'ಠಾಣಾದಾರ', ಮತ್ತು 'ಪೀವನ್' ಗಳನ್ನು ನೇಮಕ ಮಾಡುವುದು ಮತ್ತು ತೆಗೆಯುವ ಕೆಲಸ ಮ್ಯಾಜಿಸ್ಟ್ರೇಟ್‌ನಿಗೆ ಸೇರಿತ್ತು. 'ದರೋಗ' ಅಥವಾ ಇತರ ಯಾವುದೇ ಅಧಿಕಾರಿಯು ತಪ್ಪಿತಸ್ಥ ವ್ಯಕ್ತಿ ಗಳಿಗೆ ಶಿಕ್ಷೆ ವಿಧಿಸುವಂತಿರಲಿಲ್ಲ. ಅಥವಾ ಲೆವಿ ಅಥವಾ ದಂಡ ವಿಧಿಸುವಂಂತಿರಲಿಲ್ಲ. ಅವರ ಕೇವಲ ಶಿಕ್ಷೆ ಅಥವಾ ದಂಡ ವಿಧಿಸುವ ಬಗ್ಗೆ ಮ್ಯಾಜಿಸ್ಟ್ರೇಟ್‌ರವರಿಗೆ ಶಿಫಾರಸ್ಸು ಮಾಡಬಹುದಿತ್ತು.

ಜಿಲ್ಲಾ ಕಲೆಕ್ಟರ್‌ನ ಅಧಿಕಾರಗಳು ಗಮನಾರ್ಹವಾಗಿ ಹೆಚ್ಚಾಗುತ್ತಾ ಬಂದಂತೆ ಈತನ ಬಳಿಯಿದ್ದ ಪೊಲೀಸ್ ಅಧಿಕಾರವನ್ನು ಕ್ರಿಶ ೧೮೦೮ ರಲ್ಲಿ ಜಿಲ್ಲಾ ಜಡ್ಜ್‌ಗೆ (ನ್ಯಾಯಾಧೀಶರಿಗೆ) ಹಸ್ತಾಂತರಿಸಲಾಯಿತು. ಅತ್ಯಾಚಾರವನ್ನು ತಡೆಯಲು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ೧೮೧೨ ರಲ್ಲಿ ಹಲವು ಶಾಸನಗಳನ್ನು ಜಾರಿಗೆ ತರಲಾಯಿತು.[೧೭]

೧೮೧೪ ರಲ್ಲಿ ನಿರ್ದೇಶಕರುಗಳ ಸಭೆ (the court of directors) 'ದರೋಗ' ವ್ಯವಸ್ಥೆಯನ್ನು ಟೀಕಿಸಿ ಸ್ಥಳೀಯವಾಗಿ ಶಾಂತಿಯನ್ನು ಕಾಪಾಡಲು 'ಗ್ರಾಮೀಣ ಪೊಲೀಸ್' (village Police) ವ್ಯವಸ್ಥೆಯೇ ಉತ್ತಮ ರಕ್ಷಣಾ ವ್ಯವಸ್ಥೆಯೆಂದು ಬಲವಾಗಿ ಅಭಿಪ್ರಾಯಪಟ್ಟಿತು. ಗ್ರಾಮೀಣ ಪ್ರದೇಶಗಳಲ್ಲಿ ಪೊಲೀಸ್ ಪಡೆಯ ಮೂಲ ಶಕ್ತಿ ವೃದ್ಧಿಸುವಂತೆ ಈ ಸಭೆ ಅನುಮೋದಿಸಿತು. ಕಲೆಕ್ಟರನು ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಹೊಂದಿ ಜಿಲ್ಲಾ ಮಟ್ಟದಲ್ಲಿ ಪೊಲೀಸ್ ವ್ಯವಸ್ಥೆಯ ಮೇಲೆ ನಿಯಂತ್ರಣವನ್ನು ಹೊಂದಿದ್ದನು.[೧೮]

ಈ ಹಿಂದೆ ವಿವರಿಸಿದಂತೆ, ಮ್ಯಾಜಿಸ್ಟ್ರೇಟರ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್‌ರ ಕರ್ತವ್ಯಗಳು ಜಡ್ಜ್‌ರ (ನ್ಯಾಯಾಧೀಶ) ಬಳಿ ಇತ್ತು. ೧೮೧೪-೧೬ರ ವಿಶೇಷ ಆಯೋಗ (Special commission) ದ ಮುಖ್ಯಸ್ಥನಾದ ಮನ್ರೋನು ಮ್ಯಾಜಿಸ್ಟ್ರೇಟರ ಕರ್ತವ್ಯಗಳನ್ನು ಸೂಪರಿಂಟೆಂಡೆಂಟ್‌ರ ಕರ್ತವ್ಯಗಳನ್ನು ಜಡ್ಜರಿಂದ ಪ್ರತ್ಯೇಕಿಸಬೇಕೆಂತಲೂ, ಮತ್ತು ಆ ಅಧಿಕಾರವನ್ನು ಒಟ್ಟುಗೂಡಿಸಿ ಕಲೆಕ್ಟರ್‌ಗೆ ನೀಡಬೇಕೆಂತಲೂ, ಪ್ರಸ್ತಾಪಿಸಿದನು. ಮನ್ರೋನು ಜಡ್ಜ್‌ರಿ ಗಿಂತಲೂ ಕಲೆಕ್ಟರನು ಪೊಲೀಸ್ ಇಲಾಖೆಯನ್ನು ಉತ್ತಮವಾಗಿ ನಿರ್ವಹಿಸಬಲ್ಲನೆಂದು ನಂಬಿದ್ದನು. ಮತ್ತು ಹಳ್ಳಿಯ ಕಲೆಕ್ಟರ್‌ನನ್ನು ಕಂದಾಯ ಕರ್ತವ್ಯಗಳಿಂದ ಮತ್ತು ನ್ಯಾಯಾಧೀಶರನ್ನು ಪೊಲೀಸ್ ಕರ್ತವ್ಯದಿಂದ ವಿಮುಕ್ತಿಗೊಳಿಸಿ ಅವರವರ ಮೂಲ ಕೆಲಸಗಳನ್ನು ಮಾಡುವಂತೆ ಮಾಡಬಹುದೆಂದು, ಅದರಿಂದ ಸರ್ಕಾರಿ ಕೆಲಸವನ್ನು ಉತ್ತಮ ಪಡಿಸಬಹುದೆಂದು ಅಭಿಪ್ರಾಯಪಟ್ಟನು.[೧೯]

ಮನ್ರೋನ ಸಲಹೆಗಳನ್ನು ೧೮೧೬ ರಲ್ಲಿ ಒಪ್ಪಿಕೊಳ್ಳಲಾಯಿತು. ಪೊಲೀಸ್ ಸೂಪರಿಂಟೆಂಡೆಂಟ್‌ನ ಬಳಿ ಇದ್ದ ಮ್ಯಾಜಿಸ್ಟ್ರೀಯಲ್ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ವರ್ಗಾಯಿಸಲಾಯಿತು. 'ದರೋಗ' ಹುದ್ದೆಯನ್ನು ರದ್ದು ಗೊಳಿಸಲಾಯಿತು. 'ಗ್ರಾಮೀಣ ಪೊಲೀಸ್'ರನ್ನು ಪಟೇಲನ ನೇರ ನಿರ್ದೇಶನಕ್ಕೆ ಒಪ್ಪಿಸಲಾಯಿತು. ಜಿಲ್ಲೆಯಲ್ಲಿ 'ತಹಶಿಲ್ದಾರನ' ನಿರ್ದೇಶನಕ್ಕೆ ಒಪ್ಪಿಸಲಾಯಿತು. ಸಾಮ್ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಕಲೆಕ್ಟರ್‌ನ ನಿರ್ದೇಶನಕ್ಕೆ ಒಪ್ಪಿಸಲಾಯಿತು.[೨೦] ಇದೇ ರೀತಿ ಕಂದಾಯ ಪೊಲೀಸ್ ಮತ್ತು ಮ್ಯಾಜಿಸ್ಟ್ರೀಯಲ್ ಅಧಿಕಾರಿಗಳು ಒಂದೇ ರೀತಿಯಾಗಿ ಕೇಂದ್ರೀಕೃತವಾಗಿ ಕೆಲಸ ನಿರ್ವಹಿಸುವಂತಾಯಿತು. ವಾಸ್ತವವಾಗಿ ಸೆಂಟ್‌ಜಾರ್ಜ್‌ಪೋರ್ಟ್‌ನ ಸರ್ಕಾರದ ನಿರ್ದೇಶನಗಳಿಗೊಳಪಟ್ಟು ಇಡೀ ಸಾಮ್ರಾಜ್ಯದಲ್ಲಿ ೧೮೧೬ ರಲ್ಲಿ ಒಂದು ಸಾಮಾನ್ಯವಾದ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆತರಲಾಯಿತು. ಭಾರತ ದೇಶದಲ್ಲಿ ಬ್ರಿಟೀಷರು ಒಂದು ವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ೧೮೧೬ ರಲ್ಲಿ ಅದೂ ಬಂಗಾಳದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಅನುಸರಿಸಿಕೊಂಡು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತಂದರು. ಕರ್ನಾಟಕದ ಕೆಲವು ಭಾಗಗಳು ಅಂದರೆ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದವು. ಆ ಪ್ರದೇಶಗಳಲ್ಲಿ ಒಂದು ವ್ಯವಸ್ಥಿತ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದಿದ್ದು ೧೮೧೬ ರಲ್ಲಿ ಎಂಬ ಅಭಿಪ್ರಾಯಕ್ಕೆ ಬರಬಹುದು.

೧೮೧೬ ರಲ್ಲಿ ಜಾರಿಗೆ ಬಂದ ಪೊಲೀಸ್ ವ್ಯವಸ್ಥೆಯು ಇಡೀ ಪ್ರಾಂತ್ಯದಲ್ಲಿ ೧೯ ನೇ ಶತಮಾನದ ಮಧ್ಯಭಾಗದವರೆಗೂ ಕೆಲಸವನ್ನು ಮುಂದುವರಿಸಿಕೊಂಡುಬಂತು. ಈ ಪೊಲೀಸ್ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಹಿಂಸೆ ಮತ್ತು ಸ್ಥಳೀಯ ಜನರ ವಿರೋಧಗಳಿಂದಾಗಿ ಬಳಲುತ್ತಿತ್ತು. ಇದೇ ರೀತಿ ಕಂದಾಯ ಮತ್ತು ನ್ಯಾಯಾಂಗ ಇಲಾಖೆಯಲ್ಲಿಯೂ ಸಹ ಇದೇ ವ್ಯವಸ್ಥೆಯಿತ್ತು. ೧೮೫೪ ರ ಸೆಪ್ಟಂಬರ್‌ನಲ್ಲಿ ಮದ್ರಾಸ್ ಸರ್ಕಾರವು ಇ.ಎಫ್.ಇಲಿಯಟ್ ಹೆಚ್.ಸ್ಟ್ರೋಕ್ಸ್ ಮತ್ತು ಜಾನ್

ಬ್ರೂಸ್ ನಾರ್ಟನ್ ಎಂಬುವವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿತು. ಇದರ ಉದ್ದೇಶವೇನೆಂದರೆ ಪೊಲೀಸರು ನೀಡುತ್ತಿದ್ದ ಹಿಂಸೆ ಮತ್ತು ದಬ್ಬಾಳಿಕೆ ಮತ್ತು ಸ್ಥಳೀಯ ಜನರ ಮೇಲೆ ಕಂದಾಯ ಇಲಾಖೆ ಮ್ಯಾಜಿಸ್ಟ್ರೇಟರ್ ಮತ್ತು ಪೊಲೀಸ್ ಅಧಿಕಾರಿಗಳ ದಬ್ಬಾಳಿಕೆಯನ್ನು ತನಿಖೆ ನಡೆಸುವ ಸಲುವಾಗಿ ಆಯೋಗವನ್ನು ರಚಿಸಲಾಯಿತು. ಈ ಆಯೋಗವು ೧೮೫೫ರ ಎಪ್ರೀಲ್‌ನಲ್ಲಿ ತನ್ನ ವರದಿ ಯನ್ನು ಸಲ್ಲಿಸಿತು. ಅದರಲ್ಲಿ ಪೊಲೀಸ್ ಮತ್ತು ಕಂದಾಯ ಕಾರಣಗಳಿಗಾಗಿ ಜನರನ್ನು ಹಿಂಸಿಸುವ ಮತ್ತು ದಬ್ಬಾಳಿಕೆ ನಡೆಸುವ ಪ್ರವೃತ್ತಿಯು ವ್ಯಾಪಕವಾಗಿ ಪ್ರಚಲಿತವತ್ತೆಂದು ತಿಳಿಸಲಾಯಿತು. ಮತ್ತು ಇದು ಕಂದಾಯದ ಕಾರಣಗಳಿಗಾಗಿ ಅತ್ಯಂತ ಹೆಚ್ಚು ದಬ್ಬಾಳಿಕೆ ನಡೆಯುತ್ತಿದ್ದೆಂದು ವರದಿ ಮಾಡಿತು.[೨೧]

ಪೊಲೀಸರಿಗೆ ಅತ್ಯಂತ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಪೊಲೀಸರು ಯಾವುದೇ ನೈತಿಕ ಅಂಕೆಗಳಿಲ್ಲದೇ ಆತ್ಮ ಗೌರವವೂ ಇಲ್ಲದೇ ಭ್ರಷ್ಟಾಚಾರ ನಡೆಸುತ್ತಿದ್ದರು. ಇಂತಹ ಪೊಲೀಸ್ ವ್ಯವಸ್ಥೆಯನ್ನು ಪೂರ್ಣವಾಗಿ ಬದಲಾಯಿಸುವ ಅಥವಾ ಹೊಸದಾಗಿ ಸಂಘಟಿಸುವ ಅವಶ್ಯಕತೆಯಿತ್ತು. ಇ.ಎಫ್.ಇಲಿಯಟ್ ಮತ್ತು ಇತರರ ನೇತೃತ್ವದಲ್ಲಿ ರಚನೆಯಾದ ಆಯೋಗವು ಪೊಲೀಸ್ ಆಡಳಿತ ವ್ಯವಸ್ಥೆಯಲ್ಲಿ ಇರುವ ಇಂತಹ ಸಮಸ್ಯೆಗಳಿಂದ ಹೊರಬರಲು ಪರಿಹಾರೋಪಾಯಗಳನ್ನು ಸೂಚಿಸಿತು. ಇದರಲ್ಲಿ ಮುಖ್ಯವಾದ ಅಂಶಗಳೆಂದರೆ ಕಂದಾಯ ಮತ್ತು ಪೊಲೀಸ್ ಕರ್ತವ್ಯಗಳನ್ನು ಪ್ರತ್ಯೇಕಗೊಳಿಸಿ ಪೊಲೀಸ್ ವ್ಯವಸ್ಥೆಯನ್ನು ಪೊಲೀಸ್ ಸೂಪರಿಂಟೆಂಡೆಂಟ್‌ನ ನೇರ ಮೇಲ್ವಿಚಾರಣೆಯಲ್ಲಿ ಪುನರ್‌ಸಂಘಟಿಸಲಾಯಿತು ಮತ್ತು ಈ ಅಧಿಕಾರಿಯು ಒಬ್ಬ ಯುರೋಪಿಯನ್ ಆಗಿರಬೇಕೆಂದು ಸೂಚಿಸಿತು. ಮದ್ರಾಸ್ ಸರ್ಕಾರವು ಆಯೋಗದ ಈ ಸೂಚನೆಗಳನ್ನು ಒಪ್ಪಿಕೊಂಡು ಪೊಲೀಸ್ ಕರ್ತವ್ಯಗಳನ್ನು ಕಂದಾಯ ಕರ್ತವ್ಯಗಳಿಂದ ಬೇರ್ಪಡಿಸಿತು.[೨೨]

೧೮೫೯ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಇಡೀ ಪೊಲೀಸ್ ಪಡೆಯನ್ನು ಇನ್ಸ್‌ಪೆಕ್ಟರ್ ಜನರಲ್ ಪೊಲೀಸ್‌ರವರ ನಿರ್ದೇಶನ ಮತ್ತು ನಿಯಂತ್ರಣದಡಿಯಲ್ಲಿ ಪುನರ್‌ಸ್ಥಾಪಿಸಲಾಯಿತು. ಇವರ ಕೈಕೆಳಗೆ ಆಡಳಿತದ ದೃಷ್ಟಿಯಿಂದ ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮತ್ತು ಸಹಾಯಕ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರ ಹುದ್ದೆಗಳನ್ನು ರಚಿಸಲಾಯಿತು.[೨೩]

೧೮೬೦ರಲ್ಲಿ ಹೊಸ ಪೊಲೀಸ್ ವ್ಯವಸ್ಥೆಗೆ ನಾಂದಿ ಹಾಡಲಾಯಿತು. ಅಪರಾಧಗಳ ಪತ್ತೆ ವಿಷಯಗಳಲ್ಲಿ ಕೆಲವು ಬೆಳವಣಿಗೆಗಳು ಕಂಡುಬಂದವು. ೧೯ ನೇ ಶತಮಾನದುದ್ದಕ್ಕೂ ಅಪರಾಧಗಳನ್ನು ತಡೆಯಲು ಉಗ್ರ ಶಿಕ್ಷೆ ಗಳನ್ನು ನೀಡುವುದರಿಂದ ಹೆಚ್ಚು ಪರಿಣಾಮಕಾರಿಯಾಗಲಿದೆ ಎಂದು ನಂಬಿಕೆ ಇಡಲಾಗಿತ್ತು. ೧೮೬೦ ರಲ್ಲಿ ಭಾರತೀಯ ದಂಡಸಂಹಿತೆ (Indian Penal Code) ಯನ್ನು ಅಂಗೀಕರಿಸಲಾಯಿತು. ಆದರೆ ಇದು ೧೮೬೨ ರ ಜನವರಿಯಿಂದ ಕಾರ್ಯರೂಪಕ್ಕೆ ಬಂದಿತು. ಅಲ್ಲಿಯವರೆಗೆ ಅತ್ಯಂತ ಉಗ್ರ ಶಿಕ್ಷೆಗಳಾದ ಅಂಗಛೇದನ (೧೮೦೨ ರಲ್ಲಿ ರದ್ದುಪಡಿಸಲಾಯಿತು) ಬರೆ ಹಾಕುವುದು. (೧೮೧೮ ರಲ್ಲಿ ರದ್ದುಗೊಳಿಸಲಾಯಿತು) ಮತ್ತು ಹಿಂಸೆ ನೀಡುವುದು ಪ್ರಚಲಿತದಲ್ಲಿತ್ತು. ಐ.ಪಿ.ಸಿಯಲ್ಲಿ ಐದು ಬಗೆಯ ಶಿಕ್ಷೆಗಳನ್ನು ನೀಡಲಾಯಿತು. ಅದರಲ್ಲಿ ೧)ಮರಣದಂಡನೆ ೨)ಸಮುದ್ರದಾಚೆಗೆ ಗಡಿಪಾರು ೩)ಕಠಿಣ ಕಾರಾಗೃಹ ಶಿಕ್ಷೆ ಮತ್ತು ಸಾದಾರಣ ಕಾರಾಗೃಹ ಶಿಕ್ಷೆ, ೪)ಆಸ್ತಿ ಮುಟ್ಟುಗೋಲು ಹಾಕುವುದು ಮತ್ತು ದಂಡ ವಿಧಿಸುವ ಶಿಕ್ಷೆಗಳನ್ನು ಗುರುತಿಸಲಾಯಿತು.[೨೪]

೧೮೦೨ ರ VI ನೇ ರೆಗ್ಯುಲೇಷನ್ ಕಾಯ್ದೆ ಕಲಂ: XXI ರಲ್ಲಿ ಬಂಧೀಖಾನೆ ಆಡಳಿತ ವ್ಯವಸ್ಥೆ ಇತ್ತು. ರಕ್ಷಣೆ ಹಾಗೂ ಇತರ ವಿಷಯಗಳ ಬಗ್ಗೆ ಸಂಬಂಧಿಸಿದಂತೆ ಅಷ್ಟೇನು ತೃಪ್ತಿಕರವಾಗಿರಲಿಲ್ಲ. ಕೆಲವು ಹಳೆಯ ಟೆಂಟುಗಳು, ಕೆಲವು ಬಾಡಿಗೆಮನೆಗಳನ್ನು 'ಪಗೋಡ'ಗಳು ಉಪಯೋಗಿಸುತ್ತಿದ್ದರು. ಅವು ಶಿಥಿಲವಾಗಿತ್ತು. ನ್ಯಾಯಾಲಯದ ಕಟ್ಟಡಗಳನ್ನು ಕಟ್ಟಲಾಯಿತು. ದಕ್ಷಿಣ ಕನ್ನಡ ಮತ್ತು ನಾಲ್ಕು ಕಡೆಗಳಲ್ಲಿ ಬಂಧೀಖಾನೆ ನಿರ್ಮಿಸಲಾಯಿತು. ಮಂಗಳೂರಿನಲ್ಲಿ ಜಿಲ್ಲಾ

ಬಂಧೀಖಾನೆ ನಿರ್ಮಿಸಲಾಯಿತು. ಆದರೆ ಅಲ್ಲಿ ಅಷ್ಟೊಂದು ರಕ್ಷಣೆ ಮತ್ತು ಶಿಸ್ತು ಇರಲಿಲ್ಲ. ಬಂಧೀಖಾನೆಯಲ್ಲಿರುವ ಖೈದಿಗಳಿಗೆ ಅತ್ಯಂತ ಶ್ರಮದ ಕೆಲಸ ನೀಡಲಾಗುತ್ತಿತ್ತು. ಆದರೂ ಪ್ರತಿಯೊಂದು ಜೈಲಿನಲ್ಲೂ ಒಂದೊಂದು ಆಸ್ಪತ್ರೆಗಳಿದ್ದವು. ಆದರೆ ಖೈದಿಗಳ ಆರೋಗ್ಯದ ಬಗ್ಗೆ ಅಸಡ್ಡೆ ತೋರಲಾಗಿತ್ತು. ಭ್ರಷ್ಟಾಚಾರ ತುಂಬಿ ಹೋಗಿತ್ತು. ೧೮೩೬ರಲ್ಲಿ ಪ್ರಿಸನ್ ಕಮಿಟಿಯು ಕೇಂದ್ರ ಕಾರಾಗೃಹವನ್ನು ನಿರ್ಮಿಸುವಂತೆ ಸೂಚಿಸಿತು. ಕಂಪನಿ ಸರ್ಕಾರವು ಈ ಸೂಚನೆಯನ್ನು ಒಪ್ಪಿಕೊಂಡರೂ ಸಹ ಅವನ್ನು ಕಾರ್ಯರೂಪಕ್ಕೆ ತರಲು ಯಾವುದೇ ಪ್ರಯತ್ನಮಾಡಲಿಲ್ಲ. ೧೮೫೭ ರ ನಂತರವೇ ಸರ್ಕಾರ ಈ ಬಗ್ಗೆ ಕ್ರಮಕೈಗೊಂಡಿತು. ಮೊದಲನೇ ದರ್ಜೆಯ ಮತ್ತು ಎರಡನೇ ದರ್ಜೆಯ ಕೇಂದ್ರಕಾರಾಗೃಹಗಳನ್ನು ನಿರ್ಮಿಸಲು ತೀರ್ಮಾನಿಸಲಾಯಿತು. ದಕ್ಷಿಣ ಕನ್ನಡವು, ಕಣ್ಣಾನೂರಿನಲ್ಲಿ ರಚನೆಯಾದ ಎರಡನೇ ದರ್ಜೆಯ ಕೇಂದ್ರ ಕಾರಾಗೃಹದ ಅಡಿಯಲ್ಲಿ ಬಂದಿತು.[೨೫] ಈ ಮೇಲಿನ ವಿಶ್ಲೇಷಣೆಗಳಿಂದ ತಿಳಿದುಬರುವುದೇನೆಂದರೆ, ವಸಹಾತುಶಾಹಿ ಆಡಳಿತದ ಪ್ರಾರಂಭದ ದಿನಗಳಲ್ಲಿ ದಕ್ಷಿಣ ಕನ್ನಡದಲ್ಲಿ ಕಂದಾಯ, ನ್ಯಾಯಾಂಗ, ಮತ್ತು ಪೊಲೀಸ್ ವ್ಯವಸ್ಥೆಗಳು ಈ ಭಾಗದ ಜನರಿಗೆ ನೆರವಾಗಿರಲಿಲ್ಲ. ಸಾಮಾನ್ಯವಾಗಿ ಇಂಗ್ಲೀಷರ ಆಡಳಿತ, ಜನರನ್ನು ಶೋಷಣೆಗೆ ಗುರಿಪಡಿಸಿತ್ತು. ಸ್ಥಳೀಯ ಕೆಲವು ಗುಂಪುಗಳು ವಸಹಾತುಶಾಹಿ ವಿಷಯಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕಂಪೆನಿಯ ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತಿದ್ದರು.

೫.೪.೧– ಮದ್ರಾಸ್ ಪ್ರೆಸಿಡೆನ್ಸಿಯಲ್ಲಿದ್ದ ಪೊಲೀಸ್ ಪಡೆಯ ಬಲ.

೧೮೮೫ ರಲ್ಲಿ ಮೊದಲು ಮದ್ರಾಸ್ ಪ್ರಾಂತ್ಯದಲ್ಲಿ ಇದ್ದ ಪೊಲೀಸ್ ಇಲಾಖೆಯ ಬಲ ಈ ರೀತಿ ಇತ್ತು.[೨೬]

ಕ್ರ.ಸಂ	ಹುದ್ದೆ	ಅಧಿಕಾರಿ ಮತ್ತು ಸಿಬ್ಬಂದಿ ಬಲ
೧	ಐ.ಜಿ.ಪಿ	೧
೨	ಡಿ.ಐ.ಜಿ.ಪಿ	೩
೩	ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್	೧
೪	ಮದ್ರಾಸ್ ನಗರದ ಡೆಪ್ಯೂಟಿವ್ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್	೩
೫	ಸೂಪರಿಂಟೆಂಡೆಂಟ್	೨೧
೬	ಅಸಿಸ್ಟೆಂಟ್ ಸೂಪರಿಂಟೆಂಡೆಂಡ್	೨೦
೭	ಇನ್ಸ್‌ಪೆಕರ್	೪೬೧
೮	ಸಬ್ ಇನ್ಸ್‌ಪೆಕ್ಟರ್	೯೫
೯	ಎಲ್ಲಾ ದರ್ಜೆಯ ಕಾನ್‌ಸ್ಟೇಬಲ್‌ಗಳು	೨೧,೮೬೧
೧೦	ಕಛೇರಿಯ ಜವಾನರು ಮತ್ತು ಕೆಲಸಗಾರರು (ಪೊಲೀಸ್ ಅಧಿಕಾರಿಗಳಲ್ಲ)	೧೪೯೭
	ಒಟ್ಟು	೨೪,೩೬೩

೧೮೮೩ ಡಿಸೆಂಬರ್ ೧ ರಂದು ಇಲಾಖೆಯಲ್ಲಿ ಒಟ್ಟು ಪೊಲೀಸ್ ಬಲ ೨೪,೨೫೪ ಇತ್ತು. ಈ ಕೆಳಗಿನವರನ್ನು ಪೂರ್ಣವಾಗಿ ರಾಜ್ಯಸೇವೆಗೆ ನೇಮಿಸಿಕೊಳ್ಳಲಾಗಿತ್ತು.

೧) ಉಪ್ಪು ತಯಾರಿಕೆಯನ್ನು ತಡೆಯುವ ಪಡೆ ೧೧೩. ೨)ಭೂಕಂದಾಯ ಪಡೆ –೨೨೬, ೩) ಕಾರಾಗೃಹದ ಪಹರೆ ಕಾಯುವವರು ೧೦೬೪ ಒಟ್ಟು ೧೩೯೯, ಇದರ ಜೊತೆಗೆ ೨೭೩ ಪೊಲೀಸ್ ಸಿಬ್ಬಂದಿಯವರನ್ನು ಬ್ಯಾಂಕ್‌ಗಳಿಗೆ, ಸಾರ್ವಜನಿಕ ಕಂಪೆನಿಗಳಿಗೆ, ಖಾಸಗಿ ವ್ಯಕ್ತಿಗಳಿಗೆ ಶುಲ್ಕವನ್ನು ಪಡೆದು ರಕ್ಷಣೆಗಾಗಿ ನೀಡಲಾಗಿತ್ತು. ೧೮೮೩ ರಲ್ಲಿ ಈ ಸಿಬ್ಬಂದಿಗಳ ಒಟ್ಟು ಖರ್ಚು ೨೮,೧೮೩/– ರೂಪಾಯಿಗಳು. ಒಟ್ಟು ಪಡೆಗಳ ಖರ್ಚು ೩೭,೬೧,೩೮೧ ರೂಪಾಯಿಗಳು. ಪೊಲೀಸ್ ಪೇದೆ (ಕಾನ್‌ಸ್ಟೇಬಲ್)ಗಳ ಗರಿಷ್ಠ ಪದವಿ ಎಂದರೆ ಮುಖ್ಯ ಪೇದೆ. (ಹೆಡ್‌ಕಾನ್‌ಸ್ಟೇಬಲ್) ಇದರಲ್ಲಿ ನಾಲ್ಕು ದರ್ಜೆಗಳಿದ್ದವು. ಕಾನ್‌ಸ್ಟೇಬಲ್‌ಗಳನ್ನು ಪ್ರಥಮ, ದ್ವಿತೀಯ ಮತ್ತು ತೃತಿಯ ದರ್ಜೆಗಳೆಂದು ವಿಭಾಗಿಸಲಾಗಿತ್ತು. ಸಬ್ ಇನ್ಸ್‌ಪೆಕ್ಟರ್ ಪಧವಿಯು ಪರೀಕ್ಷಾರ್ಥ ದರ್ಜೆಯಾಗಿತ್ತು. ಮದ್ರಾಸ್ ನಗರ ಪೊಲೀಸರೂ ಸೇರಿದಂತೆ ಇಡೀ ಪ್ರೆಸಿಡೆನ್ಸಿಯ

ಎಲ್ಲಾ ಪೊಲೀಸರು ಐ.ಜಿ.ಪಿಯ ನಿರ್ದೇಶನ ಮತ್ತು ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಬೇಕಾಗಿತ್ತು. ಮದ್ರಾಸ್ ನಗರದ ಪೊಲೀಸ್ ವ್ಯವಸ್ಥೆಯ ಪೂರ್ಣ ನಿರ್ವಹಣೆಯನ್ನು ಪೊಲೀಸ್ ಕಮಿಷನ್‌ರವರಿಗೆ ವಹಿಸಲಾಗಿತ್ತು. ಅವರ ಕೈಕೆಳಗೆ ಉಪ ಪೊಲೀಸ್ ಕಮಿಷನರ್ ಮತ್ತು ಸಹಾಯಕ ಪೊಲೀಸ್ ಕಮಿಷನರ್‌ರವರು ಇರುತ್ತಿದ್ದರು.[೨೭]

ಗ್ರಾಮ ಪೊಲೀಸರು (Mofussil)

ಮದ್ರಾಸ್ ಪ್ರೆಸಿಡೆನ್ಸಿ ಒಳಗೆ ಬರುವ ಎಲ್ಲಾ ಗ್ರಾಮಾಂತರ ಜಿಲ್ಲೆಗಳನ್ನು ಬೇರೆ ಬೇರೆ ವಲಯಗಳ ಅಡಿಯಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ಸೇರಿಸಲಾಗಿತ್ತು. ಪ್ರತೀ ವಲಯಕ್ಕೂ ಒಬ್ಬ ಉಪ-ಪೊಲೀಸ್ ಮಹಾನಿರೀಕ್ಷಕರ (ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್) ಮೇಲ್ವಿಚಾರಣೆಗೆ ಒಳಪಡಿಸಲಾಗಿತ್ತು. ಒಟ್ಟು ಪ್ರೆಸಿಡೆನ್ಸಿಯನ್ನು ಮೂರು ಪೊಲೀಸ್ ವಲಯಗಳನ್ನಾಗಿ ವಿಭಾಗಿಸಲಾಗಿತ್ತು. ಅವುಗಳಿಗೆ ಕೆಲವು ಜಿಲ್ಲೆಗಳನ್ನು ಸೇರಿಸಲಾಗಿತ್ತು. ಅದರ ವಿವರ ಈ ಕೆಳಗಿನಂತಿವೆ.[೨೮]

ಉತ್ತರ ವಲಯ –	ಕೇಂದ್ರವಲಯ –	ದಕ್ಷಿಣವಲಯ –
ಗಂಜಾ ಜಿಲ್ಲೆ.	ನೆಲ್ಲೂರು	ತಂಜೋರ್
ವಿಜಗಪಟ್ನಂ	ಬಳ್ಳಾರಿ.	ತ್ರಿಚಿನೋಪೊಳಿ
ಜೈಪೋರೆ	ಅನಂತಪುರ	ಮಧುರ
ಗೋದಾವರಿ	ಕರ್ನೂಲು	ತಿನ್ನೆವಳ್ಳಿ
ಕೃಷ್ಣ	ಕುದ್ದಪ್	ಸೇಲಂ
	ಉತ್ತರ ಆರ್ಕಾಟ್	ಕೊಯಂಬತ್ತೂರ್
	ದಕ್ಷಿಣ ಆರ್ಕಾಟ್	ಮಲ್‌ಬಾರ್
	ಚಂಗಲ್‌ಪಟ್	ಸೌತ್‌ಕೆನರ

ಪ್ರತೀ ಜಿಲ್ಲೆಯು ಪೊಲೀಸ್ ಅಧೀಕ್ಷಕನ ಉಸ್ತುವಾರಿಯಲ್ಲಿತ್ತು. ಈತನ ಕೈಕೆಳಗೆ ಭೂಪ್ರದೇಶ, ಅಲ್ಲಿ ವಾಸಿಸುವ ಜನಸಂಖ್ಯೆ ಮತ್ತು ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಒಂದು ಅಥವಾ ಎರಡು ಜನ ಸಹಾಯಕ ಅಧಿಕಾರಿಗಳನ್ನು ನೀಡಲಾಗಿತ್ತು. ಪ್ರತೀ ಜಿಲ್ಲೆಯನ್ನು ಹಲವಾರು ಉಪ-ವಿಭಾಗಳನ್ನಾಗಿ ವಿಭಜಿಸಲಾಗಿತ್ತು. ಇವುಗಳನ್ನು ಸಾಧ್ಯ ವಾದಷ್ಟು ಮಟ್ಟಿಗೆ ಕಂದಾಯ ತಾಲೂಕುಗಳ ಗಡಿ ಮತ್ತು ಮ್ಯಾಜಿಸ್ಟ್ರೇಟರ ವಲಯಗಳಿಗೆ ಅನುಗುಣವಾಗಿ ವಿಭಾಗಿಸಲಾಗಿತ್ತು. ಪ್ರತೀ ವಿಭಾಗಗಳಿಗೆ ಒಬ್ಬೊಬ್ಬ ಪೊಲೀಸ್ ಇನ್‌ಪೆಕ್ಟರ್‌ಗನರು ಅಧಿಕಾರಿಗಳಾಗಿದ್ದರು.

ಪೊಲೀಸ್ ಪ್ರಧಾನ ಕಛೇರಿಯು ಪ್ರೆಸಿಡೆನ್ಸಿಯ ಕೇಂದ್ರಸ್ಥಾನದಲ್ಲಿತ್ತು. ಈ ಪ್ರಧಾನ ಕಛೇರಿಯ ಸಿಬ್ಬಂದಿಯವರ ನಿರ್ವಹಣೆಗಾಗಿ ಸಹಾಯಕ ಪೊಲೀಸ್ ಮಹಾನಿರೀಕ್ಷಕರು (ಎ.ಐ.ಜಿ.ಪಿ) ಇರುತ್ತಿದ್ದರು. ಜಿಲ್ಲೆಯ ರಕ್ಷಣಾ ಕಛೇರಿಗಳು ಜಿಲ್ಲಾ ಕೇಂದ್ರದಲ್ಲಿದ್ದು, ಪೊಲೀಸ್ ಅಧೀಕ್ಷಕರವರ (ಸೂಪರಿಂಟೆಂಡೆಂಟ್)ರವರ ನಿರ್ದೇಶನದಲ್ಲಿ ಕೆಲಸ ನಿರ್ವಹಿಸುತ್ತಿತ್ತು. ಇವನ ಕೈಕೆಳಗೆ ಕೇಂದ್ರ ಸ್ಥಾನ ಇನ್ಸ್‌ಪೆಕ್ಟರ್‌ರೊಬ್ಬರು, ಹಲವಾರು ಪೊಲೀಸ್ ಸಿಬ್ಬಂದಿಗಳು ಕಛೇರಿಯ ಕೆಲಸ ನಿರ್ವಹಣೆ ಗಾಗಿ ಇರುತ್ತಿದ್ದರು. ತಾಲೂಕಿನ ಮುಖ್ಯಠಾಣೆಯನ್ನು ಹಾಗೂ ಡಿವಿಜನಲ್ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕಛೇರಿಯನ್ನು ಪೊಲೀಸ್ ಉಪ-ವಿಭಾಗದ ಕೇಂದ್ರಸ್ಥಾನದಲ್ಲಿರುವಂತೆ ನೋಡಿಕೊಳ್ಳಲಾಗಿತ್ತು. ಗ್ರಾಮೀಣ ಪೊಲೀಸರು ಸಹ ಹೆಚ್ಚು ಉಪ ಯುಕ್ತರಾಗಿದ್ದರು. ಅಪರಾಧಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳಿಗೆ ಠಾಣೆಗೆ ವಿಚಾರಣೆಗೆ ಬರುವಂತೆ ನೊಟೀಸು ನೀಡುವ ಬದಲಾಗಿ ಪೊಲೀಸ್ ಅಧಿಕಾರಿಗಳು ಸಾಧ್ಯವಾದಷ್ಟು ಮಟ್ಟಿಗೆ ವೈಯಕ್ತಿವಾಗಿ ಅವರೇ ಪ್ರಕರಣಗಳ ವಿಚಾರಣೆ ನಡೆಸು ತ್ತಿದ್ದರು. ಪೊಲೀಸ್ ಅಧಿಕಾರಿಯ ವಶದಲ್ಲಿ ಇರುವ ವ್ಯಕ್ತಿಯೇ ಸ್ವ-ಇಚ್ಛೆಯಿಂದ ಅಪರಾಧಕ್ಕೆ ಸಂಬಂಧಿಸಿದ ವಸ್ತುಗಳ ಪತ್ತೆ ಬಗ್ಗೆ ಒಂದು ವೇಳೆ ಹೇಳಿಕೆಯನ್ನು ನೀಡಿದ್ದರೆ, ಆ ಬಂಧಿಯು ಯಾವ ಶಬ್ದಗಳನ್ನು ಉಪಯೋಗಿಸಿ ಹೇಳಿಕೆ ನೀಡಿದ್ದಾನೆ ಯೇ ಅದೇ ಶಬ್ದಗಳಲ್ಲಿ ಆತನ ಲಿಖಿತ ಹೇಳಿಕೆ ದಾಖಲಿಸಿಕೊಳ್ಳಬೇಕಿತ್ತು. ಆ ಹೇಳಿಕೆಯನ್ನು ಪೊಲೀಸ್ ಅಧಿಕಾರಿಯು ತನ್ನ ವಶದಲ್ಲಿರುವ ಬಂಧಿಗೆ ಓದಿ ಹೇಳಬೇಕಿತ್ತು. ಆದರೆ ಆ ಪತ್ರದ ಮೇಲೆ ಆತನ ಸಹಿ ಪಡೆಯುವಂತೆ ಇರಲಿಲ್ಲ. ಈ ಪತ್ರ

ಕಲಂ: ೨೭ ಭಾರತೀಯ ಸಾಕ್ಷಿ ಅಧಿನಿಯಮದಂತೆ ಆರೋಪಿಯಿಂದ ಅಪರಾಧಕ್ಕೆ ಸಂಬಂಧಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲು ಮತ್ತು ಈ ಬಗ್ಗೆ ಪೊಲೀಸ್ ಅಧಿಕಾರಿ ಸಾಕ್ಷಿ ನುಡಿಯಲು ಸಹಕಾರಿಯಾಗಿತ್ತು. ಕೇವಲ ಆರೋಪಿಯು ಸ್ವಯಂ ಪ್ರೇರಿತವಾಗಿ ನೀಡಿದ ಹೇಳಿಕೆಯಂತೆ ಆತನ ಮೇಲೆ ಆರೋಪ ಹೊರಿಸಲು ಬರುವುದಿಲ್ಲ. ಆತನಿಂದ ಅಪರಾಧಕ್ಕೆ ಸಂಬಂಧಿಸಿದ ವಸ್ತುಗಳನ್ನು (ಸುಳಿವನ್ನು) ಪಡೆಯಬೇಕಿತ್ತು.

ಕವಾಯತು

ಪೊಲೀಸ್ ಸಿಬ್ಬಂದಿಗಳಿಗೆ ಯಾವಾಗಲೂ ಕವಾಯತು ನಡೆಸಲಾಗುತ್ತಿದ್ದು. ಈ ಪಡೆಯ ಸಿಬ್ಬಂದಿಯವರನ್ನು ವ್ಯವಸ್ಥಿತವಾಗಿ ಸಂಘಟಿಸಲಾಗಿತ್ತು. ಈ ಪಡೆಗಳು ತುರ್ತುಪರಿಸ್ಥಿತಿಯಲ್ಲಿ ಸೈನಿಕ ಕಾರ್ಯಗಳನ್ನು ಮಾಡಲು ಶಕ್ತವಾಗಿದ್ದು, ತಕ್ಷಣವೇ ತುರ್ತು ಕೆಲಸಗಳಿಗೆ ಕಳುಹಿಸಿಕೊಡುವ ಸಂಘಟಿತ ತುಕಡಿಗಳಾಗಿದ್ದವು. ಸಿಬ್ಬಂದಿಯವರುಗಳಿಗೆ ವೈಯಕ್ತಿಕವಾಗಿ ಮತ್ತು ತಂಡಗಳಲ್ಲಿ ಅಂದರೆ ಪ್ಲಾಟೂನ್‌ಗಳಿಗೆ ದೈಹಿಕ ತರಬೇತಿಯನ್ನು ನೀಡಿ ಸ್ಥಳೀಯ ಸೈನ್ಯದಂತೆ ಅವುಗಳನ್ನು ಸದೃಢಗೊಳಿಸಲಾಗಿತ್ತು. ಅಕ್ರಮ ಗುಂಪುಗಳನ್ನು ಚದುರಿಸುವ ಸಲುವಾಗಿ ಲಾಠಿ ಡ್ರಿಲ್‌ಗಳನ್ನು ಹೇಳಿ ಕೊಡಲಾಗುತ್ತಿತ್ತು.[೨೯]

ಪೊಲೀಸರಿಗೆ ಶಿಕ್ಷೆ

ತಪ್ಪಿತಸ್ಥ ಪೊಲೀಸರಿಗೆ ೧೮೬೧ ರ ೨೫ನೇ ಕಾಯ್ದೆ, ದಂಡಸಂಹಿತೆ, ಅಥವಾ ಇಲಾಖೆಯ ನೊಟೀಸುಗಳ ಆಧಾರದ ಮೇರೆಗೆ ಶಿಕ್ಷೆಗಳನ್ನು ನೀಡಲಾಗುತ್ತಿತ್ತು. ಶಿಕ್ಷೆಗಳನ್ನು ಮ್ಯಾಜಿಸ್ಟ್ರೇಟರು ನೀಡುತ್ತಿದ್ದನು. ಯಾವುದೇ ಕ್ರಿಮಿನಲ್ ಕೋರ್ಟ್‌ಗಳಿಂದ ಶಿಕ್ಷೆಗೆ ಒಳಗಾದ ಅಥವಾ ಜೈಲು ಶಿಕ್ಷೆಗೆ ಒಳಗಾದ ಪೊಲೀಸ್ ಸಿಬ್ಬಂದಿಯವರನ್ನು ಐ.ಜಿ.ಪಿರವರ ವಿಶೇಷ ಆದೇಶ ಇಲ್ಲದೇ ಪುನ: ಇಲಾಖೆಯ ಕೆಲಸಕ್ಕೆ ಸೇರಿಸುವಂತಿರಲಿಲ್ಲ. ಒಂದು ವೇಳೆ ನ್ಯಾಯಾಲಯದಲ್ಲಿ ಪ್ರಕರಣ ಖುಲಾಸೆಗೊಂಡಿದ್ದರೂ ಸಹ ಅಪರಾಧದ ಬಗ್ಗೆ ನೈತಿಕ ಸಾಕ್ಷ್ಯವಿದ್ದಲ್ಲಿ ಕೆಲಸದಿಂದ ವಜಾಮಾಡುತ್ತಿದ್ದರು. ಕ್ರಿಮಿನಲ್ ನ್ಯಾಯಾಲಯಗಳು ಕೇವಲ ದಂಡವಿಧಿಸುವ ಶಿಕ್ಷೆಯನ್ನು ನೀಡಿ ಬೇರೆ ಶಿಕ್ಷೆಯನ್ನು ನೀಡದಿದ್ದಲ್ಲಿ ಮತ್ತು ಅಷ್ಟೊಂದು ಅಗತ್ಯವೆಂದು ಅನ್ನಿಸದಿದ್ದಲ್ಲಿ ಅಂತಹ ಅಧಿಕಾರಿಯನ್ನು ಕೆಲಸದಿಂದ ವಜಾಗೊಳಿಸುತ್ತಿರಲಿಲ್ಲ.[೩೦]

ಇಲಾಖೆಯ ಶಿಕ್ಷೆಗಳೆಂದರೆ ಕಪ್ಪು ಚುಕ್ಕೆಗಳಿದ್ದಂತೆ. ದಂಡ, ಸಂಬಳಕಡಿತ, ಕರ್ತವ್ಯದಿಂದ ವಜಾಗೊಳಿಸುವುದು ಇತ್ಯಾದಿ ಶಿಕ್ಷೆಗಳನ್ನು ನೀಡಲಾಗುತ್ತಿತ್ತು. ಇವರಿಗೆ ನೀಡಿದ ಶಿಕ್ಷೆಗಳನ್ನು ಪ್ರತಿಯೊಬ್ಬ ಪೊಲೀಸರಿಗೂ ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದ್ದ ಡಿಫಾಲ್ಟರ್ ಪುಸ್ತಕದಲ್ಲಿ (ಪೊಲೀಸರು ಮಾಡುವ ತಪ್ಪುಗಳನ್ನು ಮತ್ತು ಶಿಕ್ಷೆಗಳನ್ನು ಮಾತ್ರ ಬರೆಯುವ ಪುಸ್ತಕ) ನಮೂದಿಸಲಾಗುತ್ತಿತ್ತು. ತಮಗೆ ನೀಡಿದ ಶಿಕ್ಷೆಗಳ ಬಗ್ಗೆ ಎಸ್.ಪಿ, ಡಿ.ಐ.ಜಿ ಮತ್ತು ಐ.ಜಿ.ಪಿರವರುಗಳಿಗೆ ಮೇಲ್ಮನವಿಯನ್ನು ಸಲ್ಲಿಸುವ ಅವಕಾಶವಿತ್ತು.ಮೇಲ್ಮನವಿಯ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಅವರುಗಳ ನಿರ್ಧಾರಕ್ಕೆ ಬಿಟ್ಟದ್ದು.

ಪೊಲೀಸ್ ಇಲಾಖೆಯಲ್ಲಿ ಕಂಡು ಬರುವ ಒಂದು ದುರದೃಷ್ಟಕರ ವಿಷಯವೆಂದರೆ, ಕೆಳ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡುವ ಶಿಕ್ಷೆಗಳು. ಬೇರೆ ಯಾವುದೇ ಇಲಾಖೆಯಲ್ಲಿ ಇಲ್ಲದ ಶಿಕ್ಷೆಗಳು ಈ ಇಲಾಖೆಯಲ್ಲಿ ಕಾಣಸಿಗುತ್ತವೆ. ಅಂದರೆ ಕೆಳಹಂತದ ಅಧಿಕಾರಿ ಮತ್ತು ಸಿಬ್ಬಂಧಿಗಳಿಗೆ ಅವರು ಮಾಡಿದ ತಪ್ಪುಗಳಿಗೆ ದೈಹಿಕ ದಂಡನೆಯನ್ನು ನೀಡುವ ಅಮಾನವೀಯ ಪದ್ಧತಿ ಇಂದಿಗೂ ಬೆಳೆದುಕೊಂಡು ಬಂದಿದೆ. ಹೆಚ್ಚಿನ ಅವಧಿಯ ಕೆಲಸ ಮಾಡಿಸುವುದು, ದೇಹಕ್ಕೆ ಆಯಾಸವನ್ನು ಉಂಟುಮಾಡುವಂತೆ ಕಠಿಣ ಪೆರೇಡನ್ನು ಮಾಡಿಸುವುದು, ರೈಫಲ್‌ನ್ನು ಬಹಳ ಹೊತ್ತಿನ ಕಾಲ ಎರಡೂ ಕೈಗಳಲ್ಲಿ ನೇರವಾಗಿ ಎತ್ತಿ ಹಿಡಿದುಕೊಂಡು ಬಹಳ ದೂರದವರೆಗೆ ಓಡಿಸುವುದು, ಎರಡು ರೈಫಲ್‌ಗಳನ್ನು ಎರಡು ಕೈಯಲ್ಲಿ ಹಿಡಿದುಕೊಂಡು ಕೈ ಮತ್ತು ಕಾಲುಗಳ ಗಂಟುಗಳ ಮೇಲೆ ತೆವಳಿಕೊಂಡು ನಡೆದು ಹೋಗುವಂತೆ ಮಾಡುವುದು ಪೊಲೀಸ್ ಠಾಣೆಯ ಕಟ್ಟಡ ಅಥವಾ ಅಧಿಕಾರಿಯ ಮನೆಯ ಸುತ್ತಮುತ್ತ ಕಸ ತೆಗೆದು ಶುಚಿ ಮಾಡುವುದು, ಬೆಳಗ್ಗಿನಿಂದ

ಸಂಜೆಯವರೆಗೆ ಆರ್ಡರ್ಲಿ ರೂಂಗಳಲ್ಲಿ ಏಕಾಂಗಿಯಾಗಿ ಕೂರಿಸುವುದು ಹೀಗೆ ಹತ್ತು ಹಲವು ರೀತಿಯ ಅಮಾನವೀಯ ಶಿಕ್ಷೆಗಳನ್ನು ಇಂದಿಗೂ ನೀಡುತ್ತಿರುವುದು ಅತ್ಯಂತ ಖೇದಕರ.

ಸಮವಸ್ತ್ರ

ಪೊಲೀಸರು ಯಾವಾಗಲೂ ಸಮವಸ್ತ್ರವನ್ನು ದರಿಸಬೇಕಾಗಿತ್ತು. ವಿಶೇಷವಾದ ಕರ್ತವ್ಯಗಳಲ್ಲಿ, ರಹಸ್ಯ ಮಾಹಿತಿಗಳ ಸಂಗ್ರಹಣೆಗಾಗಿ, ಉತ್ತಮ ಕರ್ತವ್ಯ ನಿರ್ವಹಣೆಗಾಗಿ ಅಥವಾ ಹಿರಿಯ ಅಧಿಕಾರಿಗಳ ವಿಶೇಷ ಆದೇಶವಿದ್ದಲ್ಲಿ ಮಾತ್ರ ಬೇರೆ ವಸ್ತ್ರಗಳನ್ನು ಧರಿಸಬೇಕಾಗಿತ್ತು. ಪ್ರತಿಯೊಬ್ಬ ಕಾನ್‌ಸ್ಟೇಬಲ್ ಹಾಗೂ ಹೆಡ್‌ಕಾನ್‌ಸ್ಟೇಬಲ್ ರವರಿಗೆ ಪ್ರತೀ ವರ್ಷ ಕವಾಯತು ಮಾಡುವ ಸಲುವಾಗಿ ಎರಡು ಜೊತೆ ಬಿಳಿಯ ಚಡ್ಡಿಗಳನ್ನು ನೀಡಲಾಗುತ್ತಿತ್ತು. ೩ ವರ್ಷಕ್ಕೊಮ್ಮೆ ಉಲ್ಲನ್‌ನ ಕೋಟ್ ನೀಡಲಾಗುತ್ತಿತ್ತು. (ಕರ್ನಾಟಕದಲ್ಲಿ ೧೯೭೦ರ ನೇ ಇಸವಿಯವರೆಗೂ ಇಲಾಖೆಯಲ್ಲಿ ಕಾನ್‌ಸ್ಟೇಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್ ರವರಿಗೆ ಖಾಕಿ ಚಡ್ಡಿ ಮತ್ತು ತುಂಬು ತೋಳಿನ ಖಾಕಿ ಅಂಗಿಯನ್ನು ಮತ್ತು ತಲೆಗೆ ವೃತ್ತಾಕಾರದ ಟರ್ಬನ್ ಧರಿಸುವ ಪದ್ಧತಿ ಇತ್ತು. ಆ ನಂತರ ಖಾಕಿ ಚಡ್ಡಿಯ ಬದಲಾಗಿ ಖಾಕಿ ಪ್ಯಾಂಟನ್ನು ಧರಿಸುವ ವ್ಯವಸ್ಥೆ ಬಂದಿತ್ತು) ವಿಶೇಷ ಸಮಾರಂಭಗಳಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ರವರುಗಳು ಖಾಕಿ ಚಡ್ಡಿ ಮತ್ತು ಖಾಕಿ ತುಂಬು ತೋಳಿನ ಅಂಗಿಯನ್ನು ಧರಿಸಿ ಕ್ರಾಸ್ ಬೆಲ್ಟ್‌ನ್ನು ಅಂದರೆ ಬೇಸಿಗೆ ಅಲಂಕಾರಿಕ ಸಮವಸ್ತ್ರವನ್ನು ಧರಿಸುತ್ತಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಅಧೀಕ್ಷಕರಿಗೂ ಸಹ ನಿಗದಿಯಾದ ಸಮವಸ್ತ್ರವನ್ನು ನೀಡಲಾಗುತ್ತಿತ್ತು. ಅಧಿಕಾರಿಗಳ ದರ್ಜೆಯನ್ನು ಅವರುಗಳ ಭುಜದ ಮೇಲೆ ಇರುವ ನಕ್ಷತ್ರಗಳು ಮತ್ತು ವಿವಿಧ ರೀತಿಯ ಚಿಹ್ನೆಗಳು, ಭುಜಪಟ್ಟಿಗಳು, ತಲೆಗೆ ಧರಿಸುವ ಟೋಪಿಗಳ ಸಹಾಯದಿಂದ ಗುರುತಿಸಲಾಗುತ್ತಿತ್ತು. ಸಬ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕೆಳಗೆ ಇರುವ ಸಿಬ್ಬಂದಿಯವರನ್ನು, ಸ್ಥಳೀಯ ಸೇನೆ ಲೋಕಲ್ ಆರ್ಮಿ ಸಿಬ್ಬಂದಿಯವರನ್ನು ಬೇರೆ ಬೇರೆ ಬ್ಯಾಡ್ಜ್‌ಗಳ ಸಹಾಯದೊಂದಿಗೆ ಗುರುತಿಸಲಾಗುತ್ತಿತ್ತು. ಮೂರನೇ ಒಂದು ಭಾಗದ ಸಿಬ್ಬಂದಿಗೆ ಸ್ಮೂತ್ ಬೋರ್ ಕಾರ್ಬನ್ ಬಂದೂಕನ್ನು ನೀಡಿದ್ದರೆ, ಮೂರನೇ ಎರಡು ಭಾಗದ ಸಿಬ್ಬಂದಿಗೆ ಖಡ್ಗಗಳನ್ನು ನೀಡಲಾಗುತ್ತಿತ್ತು. ಪ್ರತಿಯೊಬ್ಬ ಸಿಬ್ಬಂದಿಯವರಿಗೂ ಲಾಠಿಯನ್ನು ನೀಡಲಾಗುತ್ತಿತ್ತು.[೩೦] ಬಂಧಿಖಾನೆಯ ಗಾರ್ಡ್‌ಗಳಿಗೆ ಮತ್ತು ಜಿಲ್ಲಾ ಕೇಂದ್ರಸ್ಥಾನದಲ್ಲಿರುವ ಮೀಸಲು ಪಡೆಗಳಿಗೆ ಕಾರ್ಬನ್‌ಗನ್‌ಗಳನ್ನು ನೀಡ ಲಾಗುತ್ತಿತ್ತು. ಇವರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಮವಸ್ತ್ರ ಮತ್ತು ಇತರ ವಸ್ತುಗಳನ್ನು ಸಾರ್ವಜನಿಕರ ಹಣದಿಂದ ನೀಡಲಾಗುತ್ತಿತ್ತು. ಈ ವಸ್ತುಗಳನ್ನು ಪಡೆದ ಪೊಲೀಸ್ ಸಿಬ್ಬಂದಿ ಶಿಕ್ಷೆಗೆ ಒಳಗಾದರೆ ಅಥವಾ ಅಮಾನತ್ತುಗೊಂಡರೆ ಆ ವಸ್ತುಗಳನ್ನು ಹಿಂದಕ್ಕೆ ಪಡೆಯಲಾಗುತ್ತಿತ್ತು.

ತರಭೇತಿ

ಪ್ರತೀ ಜಿಲ್ಲೆಯ ಕೇಂದ್ರಸ್ಥಾನಗಳಲ್ಲಿ ಪೊಲೀಸ್ ತರಬೇತಿ ಶಾಲೆಗಳು ಇದ್ದು, ಇವುಗಳು ವಿಶೇಷವಾಗಿ ಆಯ್ಕೆಯಾದ ಇನ್ಸ್‌ಪೆಕ್ಟರ್‌ಗಳು ಅಥವಾ ಹೆಡ್‌ಕಾನ್‌ಸ್ಟೇಬಲ್‌ಗಳಿಂದ ನಿರ್ವಹಿಸಲ್ಪಡುತ್ತಿದ್ದವು. ಪ್ರತೀಯೊಬ್ಬನು ಪೊಲೀಸ್ ಇಲಾಖೆಗೆ ಕೆಲಸಕ್ಕೆ ಸೇರಿದ ನಂತರ ಉಪ-ವಿಭಾಗಗಳಿಗೆ ಕರ್ತವ್ಯಕ್ಕೆ ನೇಮಕಗೊಳ್ಳುವ ಮೊದಲು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿತ್ತು. ಠಾಣಾಧಿಕಾರಿಗಳನ್ನೂ ಸಹ ಕಾಲಕಾಲಕ್ಕೆ ಈ ಶಾಲೆಗೆ ಕರೆದು ಅವರವರ ದರ್ಜೆಗೆ ತಕ್ಕಂತೆ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು.[೩೧] ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳಿಗೆ ಇಲಾಖೆಯಲ್ಲಿ ವಿಶೇಷ ಪರೀಕ್ಷೆಯು ಸಹ ಇರುತ್ತಿತ್ತು. ಇದು ಅಸಂಪ್ರದಾಯಕವಾಗಿತ್ತು. ಸಬ್ ಮ್ಯಾಜಿಸ್ಟ್ರೇಟ್‌ರವರುಗಳಿಗೆ ನಡೆಸುವ ಪರೀಕ್ಷೆಯನ್ನೇ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳಿಗೆ ಸಹ ನಡೆಸಬೇಕಾಗಿತ್ತು. ಆದರೆ ಕೆಲವು ಹೆಚ್ಚುವರಿಯಾಗಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳು ಇರುತ್ತಿದ್ದವು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳು ಇಲಾಖೆಗೆ ಆಯ್ಕೆಯಾಗುವ ಮೊದಲು ಇಂತಹ ಪರೀಕ್ಷೆಗಳನ್ನು ಬರೆಯಬೇಕಿತ್ತು. ಅವರಿಗೆ

ಜಿಲ್ಲೆಯ ಬಗ್ಗೆ ಎಷ್ಟು ಮಾಹಿತಿ ಇದೆ ಎಂದು ತಿಳಿಯಲು ಇದು ಅವಶ್ಯಕವಾಗುತ್ತಿತ್ತು. ಇವರು ಅಪರಾಧಿಕ ಕಾನೂನು ಮತ್ತು ಸಾಕ್ಷಿ ಅಧಿನಿಯಮಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಿತ್ತು. ಪ್ರತೀಯೊಬ್ಬ ಕಾನ್‌ಸ್ಟೇಬಲ್‌ಗಳ ಹೆಸರುಗಳನ್ನು ಪಟ್ಟಿ ಮಾಡಲಾಗಿತ್ತು. ಅದು ಅವರುಗಳು ಕೆಲಸ ಮಾಃುವ ಸ್ಥಳ ಮತ್ತು ಅವರ ಸೇವೆ ಅಗತ್ಯ ಇರುವ ಸ್ಥಳಗಳ ಆಧಾರದ ಮೇರೆಗೆ ಪಟ್ಟಿ ಮಾಡಲಾಗಿತ್ತು. ಆದರೆ ಪ್ರಾಯೋಗಿಕವಾಗಿ ಪೊಲೀಸ್ ಪಡೆಯನ್ನು ಮದ್ರಾಸ್ ನಗರ ಒಳಗೊಂಡಂತೆ ೨೨ ಜಿಲ್ಲೆಗಳಲ್ಲಿ ವಿಂಗಡಿಸಲಾಗಿತ್ತು. ಪ್ರತೀ ಜಿಲ್ಲೆಗಳನ್ನು ಬೇರೆ ಬೇರೆ ಘಟಕಗಳನ್ನಾಗಿ ವಿಭಾಗಿಸಿಕೊಂಡು ಕರ್ತವ್ಯ ನಿರ್ವಹಿಸಿ ಕೊಂಡಿದ್ದರು. ಪೊಲೀಸರನ್ನು ಸಾಮಾನ್ಯವಾಗಿ ಅವರವರ ಜಿಲ್ಲೆಗಳಲ್ಲಿಯೇ ಕೆಲವು ನಿರ್ಧಿಷ್ಟ ಕಾರಣಗಳಿಗಾಗಿ ಇಟ್ಟುಕೊಳ್ಳ ಲಾಗಿತ್ತು. ಪೊಲೀಸ್ ಸಿಬ್ಬಂದಿಯವರು ಅವರ ದೈಹಿಕ ಸಾಮರ್ಥ್ಯವನ್ನು ದೃಢಪಡಿಸುವ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿ ಯವರಿಂದ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕಾಗಿತ್ತು. ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ೧೮ ವರ್ಷಕ್ಕಿಂತ ಕೆಳಗಿನವರನ್ನು ಮತ್ತು ೨೫ ವರ್ಷಕ್ಕಿಂತ ಮೇಲ್ಪಟ್ಟವರನ್ನು ಇಲಾಖೆಗೆ ನೇಮಕ ಮಾಡುತ್ತಿರಲಿಲ್ಲ. ಅದು ಐ.ಜಿ.ಪಿ ರವರ ಮಂಜೂರಾತಿಯೊಂದಿಗೆ ನೇಮಕಾತಿ ನಡೆಯುತ್ತಿತ್ತು. ಪೊಲೀಸ್ ಅಧಿಕಾರಿಯು ತನ್ನ ಪೂರ್ಣ ಸಮಯವನ್ನು ಪೊಲೀಸ್ ಇಲಾಖೆಯ ಸೇವೆಗೆ ಸಮರ್ಪಿಸಬೇಕಾಗಿತ್ತು. ಪೊಲೀಸರು ಯಾವುದೇ ರೀತಿಯ ವ್ಯಾಪಾರ/ವಹಿವಾಟುಗಳಲ್ಲಿ ತೊಡಗು ವಂತಿರಲಿಲ್ಲ. ವಿಶೇಷ ವಾದ ಅನುಮತಿಯನ್ನು ಹಿರಿಯ ಅಧಿಕಾರಿಗಳಿಂದ ಪಡೆದು ವ್ಯವಹಾರ ನಡೆಸಬಹುದಾಗಿತ್ತು. ಇಲಾಖೆಯನ್ನು ಸುವ್ಯವಸ್ಥೆಯಲ್ಲಿ ಮತ್ತು ನಿಯಂತ್ರಣದಲ್ಲಿಡಲು ಕಾಲಕಾಲಕ್ಕೆ ರಚಿತವಾಗುತ್ತಿದ್ದ ನಿಯಮಗಳಿಗೆ ಸ್ವಯಂಬದ್ಧ ರಾಗಿರ ಬೇಕಾಗಿತ್ತು. ಯಾವುದೇ ನೆಪ ಹೇಳಿ ಒಬ್ಬ ಪೊಲೀಸ್ ಅಧಿಕಾರಿಯು ಇನ್ನೊಬ್ಬ ಪೊಲೀಸ್ ಅಧಿಕಾರಿಯೊಂದಿಗೆ ಹಣಕಾಸು ವ್ಯವಹಾರ ಇಟ್ಟುಕೊಳ್ಳುವಂತಿರಲಿಲ್ಲ. ಪೊಲೀಸ್ ಸಿಬ್ಬಂದಿಯವರು ಹಿರಿಯ ಅಧಿಕಾರಿಯವರ ಪೂರ್ವಾನುಮತಿ ಇಲ್ಲದೇ ಯಾವುದೇ ಸಮಯ ಸಂದರ್ಭಗಳಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಶುಲ್ಕ, ಕೊಡುಗೆಗಳನ್ನು ಪಡೆಯುವಂತೆ ಇರಲಿಲ್ಲ.[೩೩]

ಮ್ಯಾಜಿಸ್ಟ್ರೇಟ್‌ನು ಎಲ್ಲಾ ಇನ್ಸ್‌ಪೆಕ್ಟರ್‌ರವರ ಕಷ್ಟ ಸುಖಗಳನ್ನು ಏಕರೀತಿಯಲ್ಲಿ ವಿಚಾರಿಸಬೇಕಾಗಿತ್ತು. ಮತ್ತು ಮ್ಯಾಜಿ ಸ್ಟ್ರೇಟ್‌ರು ಪ್ರತೀ ವರ್ಷ ಪೊಲೀಸರು ಹೆಸರಿನ ಪಟ್ಟಿಯನ್ನು (ನಾಮಿನಲ್ ರೋಲ್) ತಯಾರಿಸಬೇಕಾಗಿತ್ತು. ಅದನ್ನು ಡಿ.ಐ.ಜಿ ಮೂಲಕ ಐ.ಜಿ.ಪಿಗೆ ಕಳುಹಿಸಬೇಕಾಗಿತ್ತು.

೫.೪.೨ – ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಪೊಲೀಸರ ಜಾತಿವಾರು ನೇಮಕಾತಿ ಮತ್ತು ಸಂಬಳ

ಪೊಲೀಸ್ ಸಿಬ್ಬಂದಿಯವರನ್ನು ಸ್ಥಳೀಯ, ಗ್ರಾಮೀಣ, ಕೃಷಿಕ ವರ್ಗದವರಿಂದ ಆಯ್ಕೆ ಮಾಡಲಾಗುತ್ತಿತ್ತು. ಹೆಚ್ಚು ಜನ ಇಂತಹ ಸ್ಥಳದಲ್ಲಿಯೇ ಸಿಗುತ್ತಿದ್ದರು. ಆಯ್ಕೆಯಾಗುವ ಪ್ರತಿಯೊಬ್ಬರು ಐದು ಅಡಿ ಐದು ಅಂಗುಲ ಎತ್ತರ ಇರ ಬೇಕಿತ್ತು. ಎದೆಯ ಸುತ್ತಳತೆಯು ಎರಡುವರೆ ಇಂಚು ಇರಬೇಕಿತ್ತು. ನೌಕಾಪಡೆ ಮತ್ತು ಭೂಸೇನೆಯಲ್ಲಿಯೂ ಸಹ ಇದೇ ರೀತಿ ಇತ್ತು. ಮತ್ತು ಅವರಿಗೆ ಓದಲು ಮತ್ತು ಬರೆಯಲು ಬರಬೇಕಿತ್ತು. (ಇಲ್ಲಿ ವಿದ್ಯಾರ್ಹತೆಯನ್ನು ನಿರ್ಧಿಷ್ಟವಾಗಿ ಸೂಚಿಸಿ ರುವುದು ಕಂಡು ಬರುವುದಿಲ್ಲ.) ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಆಯ್ಕೆವಾಗಬೇಕಾದರೆ ಐದುಅಡಿ ಏಳು ಇಂಚು ಎತ್ತರ ಇರಬೇಕಾಗಿತ್ತು. ಕೆಳಜಾತಿಯ ಸಿಬ್ಬಂದಿಯವರ ನೇಮಕಾತಿಯು ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ ವಿರಳ ವಾಗಿತ್ತು. ಗುಡ್ಡಗಾಡು ಪ್ರದೇಶದಲ್ಲಿ ಇವರನ್ನು ನೇಮಕಗೊಳಿಸಲಾಗುತ್ತಿತ್ತು. ಕೆಲವು ಕಾಲ ನೇಮಕಾತಿ ಇಲ್ಲದ ಸಮಯದಲ್ಲಿ ನಿವೃತ್ತ ಬ್ರಿಟೀಷ್ ಪೊಲೀಸ್ ಅಧಿಕಾರಿಗಳನ್ನೇ ಕೆಲಸಕ್ಕೆ ಪಡೆಯಲಾಗಿತ್ತು. *೧೮೮೧ ರಿಂದ ೧೮೮೫ ರವರೆಗೆ ಮದ್ರಾಸ್ ಪ್ರೆಸಿಡೆನ್ಸಿ ಯಲ್ಲಿ ಆಯ್ಕೆಯಾದ ಪೊಲೀಸರು ಜಾತಿವಾರುವಿವರ [೩೪] ಮತ್ತು ಪೊಲೀಸ್ ಅಧಿಕಾರಿ ಸಿಬ್ಬಂದಿಗಳ ಸಂಬಳದ ವಿವರ [೩೫] ಗಳಿಗೆ ಅನುಬಂಧ ೪ ಮತ್ತು ೫ ನ್ನು ನೋಡಿರಿ*

I.C.S ನಲ್ಲಿ ಯುರೋಪಿಯನ್ ಸದಸ್ಯರ ವೃತ್ತಿಪರ ತರಬೇತಿ ಮತ್ತು ವೃತ್ತಿಜೀವನ, ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನಲೆ ಬಗ್ಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಆದರೆ ವಸಹಾತುಶಾಹಿಯ ಅಧಿಕಾರಶಾಹಿಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದ ಭಾರತೀಯ ಅಧೀನ ಅಧಿಕಾರಿಗಳ ಮೂಲ, ವೃತ್ತಿಜೀವನ ಮತ್ತು ಅವರ ಮನೋಭಾವದ ಬಗ್ಗೆ ತಿಳಿಯಲು ನಾವು ಬಹುತೇಕ ಕಡೆಗಣಿಸಿದ್ದೇವೆ.

ಪೊಲೀಸ್ ಇಲಾಖೆಯ ಅಧೀನ ಅಧಿಕಾರಿಗಳ ನೇಮಕಾತಿಯು ಕ್ರಮಬದ್ಧವಾಗಿರಲಿಲ್ಲ. ಸ್ವದೇಶಿ ಸಮಾಜವನ್ನು ನಿಯಂತ್ರಿಸಲು ಇದು ದುರ್ಬಲವಾಗಿತ್ತು. ೧೮೫೯ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಪೊಲೀಸ್ ವ್ಯವಸ್ಥೆ ಪ್ರಾರಂಭವಾಯಿತು. ಪೊಲೀಸ್ ಇಲಾಖೆಯು ಹೇಗೆ ಇರಬೇಕು, ಅದಕ್ಕಿಂತ ವಿಶಾಲ ಅರ್ಥದಲ್ಲಿ ಹೇಳವುದಾದರೆ ಇಲಾಖೆಯ ಸಿಬ್ಬಂದಿಗಳನ್ನು ಹೇಗೆ ನೇಮಿಸಬೇಕೆಂಬುದನ್ನು ನಿರ್ಧರಿಸಿದ್ದು ವಸಹಾತುಶಾಹಿಯ ಅಧಿಕಾರಿಗಳು ಅಧೀನತೆಯನ್ನು ದ್ವಿಗುಣವಾಗಿ ಸ್ಥಾಪಿಸಲಾಯಿತು. ಭಾರತೀಯರು ನೇರವಾಗಿ ಅಥವಾ ಭಾರತೀಯ ಮಧ್ಯವರ್ತಿಗಳ ಸಹಾಯದಿಂದ, ಯುರೋಪಿಯನ್ ಅಧಿಕಾರಿಗಳ ನಿಯಂತ್ರಣದಲ್ಲಿ, ಅಧೀನ ಅಧಿಕಾರಿಗಳಾಗಿ ನೇಮಿಸಲಾಯಿತು. ಈ ಅಧಿಕಾರಿ ಸಶಾಹಿಯ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಕೆಳಸ್ಥರದಲ್ಲಿ ಉದ್ಯೋಗಸ್ಥರದವರು ಅತ್ಯಂತ ಕಡಿಮೆ ಸಂಬಳಕ್ಕೆ ಮನೆ ಕೆಲಸದ ಆಳಾಗಿ ಚಾಕರಿ ಮಾಡಬೇಕಿತ್ತು. [೬]

ಪೊಲೀಸ್ ಇಲಾಖೆಯ ಸಾಂಸ್ಥಿಕ ಗುಣಲಕ್ಷಣಗಳನ್ನು ವಸಹಾತುಶಾಹಿ ವ್ಯವಸ್ಥೆಯ ಇತರ ಘಟಕಗಳೊಂದಿಗೆ ಹೋಲಿಸಿ ನೋಡಿದಾಗ , ಬ್ರಿಟೀಷ್ ಆಡಳಿತಗಾರರು ಗ್ರಹಿಸಿದಂತೆ, ವಸಹಾತುಶಾಹಿಯ ಅಗತ್ಯಕ್ಕೆ ತಕ್ಕಂತೆ ನಿಯಂತ್ರ ಣದ ಸಂಘಟಿತ ತಂತ್ರಗಾರಿಕೆಯು ಯುರೋಪಿನಲ್ಲಿ ಬೆಳವಣಿಗೆಗೆ ಬಂತು. ಶಿಸ್ತುಬದ್ಧವಾದ ರಾಜ್ಯಭಾರದಿಂದಾಗಿ ೧೯ ನೇ ಶತಮಾನದ ಆರಂಭದಲ್ಲಿ ಯುರೋಪ್ ವೇಗವಾ.ಗಿ ಬೆಳೆಯುತ್ತಿತ್ತು. ಸೇನೆ, ಆಸ್ಪತ್ರೆಗಳು, ಕಾರಾಗೃಹ, ಶಾಲೆ ಹೀಗೆ ಎಲ್ಲಾ ಸಾಮಾಜಿಕ ಕೇತ್ರಗಳಲ್ಲಿ ಬೆಳವಣಿಗೆ ಕಂಡಿತು. ೧೮ ನೇ ಶತಮಾನದ ಕೊನೆ ಹಾಗೂ ೧೯ ನೇ ಶತಮಾನದ ಆರಂಭದಲ್ಲಿ ಭಾರತೀಯ ವಸಹಾತುಶಾಹಿಯಲ್ಲಿ ಆಡಳಿತವನ್ನು ಚುರುಕುಗೊಳಿಸಲು ಯುರೋಪಿನ ಆಡಳಿತ ನಿರ್ಧರಿಸಿತು. ಅಧೀನ ಅಧಿಕಾರಿಗಳ ನೇಮಕಾತಿಗೆ ಮಧ್ಯಸ್ಥಿಕೆದಾರರನ್ನು ತೆಗೆದುಹಾಕಲಾಯಿತು. ಕೃಷಿಗೆ ಸಂಬಂಧಿಸಿದ ಆರ್ಥಿಕತೆಯ ಪರಿಶೀಲನೆ ರಾಜ್ಯದಲ್ಲಿ ಆರ್ಥಿಕ ನಿಯಂತ್ರಣಕ್ಕೆ ಪ್ರಯತ್ನಿಸಲಾಯಿತು. ಮದ್ರಾಸ್ ರೈತವಾದಿ ಪದ್ಧತಿಯು ರಾಜ್ಯಾಡಳಿತದ ಹೊಸ ಪ್ರಯೋಗ ಮಾಡಿದ್ದಕ್ಕೆ ಒಂದು ಪ್ರಮುಖ ಉದಾಹರಣೆಯಾಗಿದೆ. ಸ್ಥಳೀಯ ಪದ್ಧತಿಗಳಂತೆ ಅಂಗೀಕೃತವಾಗಿದ್ದರೂ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಭೂಕಂದಾಯವು ಅತ್ಯಂತ ಪ್ರಮುಖ ವಾದುದಾಗಿದ್ದರೂ, ಈ ಕ್ಷೇತ್ರದ ಮೇಲೆ ಪ್ರಥಮತಃ ವ್ಯವಸ್ಥಿತ ಪ್ರಯೋಗಗಳನ್ನು ನಡೆಸಲಾಯಿತು. ೧೮೫೦ರ ವರೆಗೆ ವಸಹಾತುಶಾಹಿ ಆಡಳಿತವು ಯೋಗ್ಯತೆ, ಅರ್ಹತೆಯ ಆಧಾರದ ಮೇರೆಗೆ ಪೊಲೀಸ್ ವ್ಯವಸ್ಥೆಯನ್ನು ಸಂಘಟಿಸಬೇಕೆಂದು ಯೋಚಿಸಿರಲಿಲ್ಲ. [೭] ಆ ಕಾಲದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಮತ್ತು ಇತರೆಡೆಗಳಲ್ಲಿ ಔಪಚಾರಿಕವಾಗಿ ಅಸ್ತಿತ್ವದಲ್ಲಿದ್ದ ಪೊಲೀಸ್ ಇಲಾಖೆಯ ಸ್ವರೂಪವು ನೂತನ ಬ್ರಿಟೀಷ್ ಅಂದರೆ ಐರಿಷ್ ಕಾನ್ಸ್‌ಟೇಬಲರಿ, ಮತ್ತು ಲಂಡನ್ ಮೆಟ್ರೋಪಾಲಿಟನ್, ಇಂಗ್ಲೆಂಡ್ ಮತ್ತು ವೇಲ್ಸ್‌ನ ದೇಶೀಯ ಪೊಲೀಸ್ ವ್ಯವಸ್ಥೆಯಂತಿತ್ತು.

ರಾಜಕೀಯ, ಸಾಮಾಜಿಕ, ಅಂತೆಯೇ ಆರ್ಥಿಕ ಹಾಗೂ ಇತರ ವಿಭಿನ್ನ ಕಾರಣಗಳಿಗಾಗಿ ಭಾರತದ ಯುರೋಪಿಯನ್ ವಸಹಾತುಶಾಹಿಯಲ್ಲಿ, ಹೆಚ್ಚಿನ ಜನ ಯುರೋಪಿಯನ್ನಿರಬಹುದು ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿತ್ತು. ಆದರೆ ಭಾರತದ ಮಣ್ಣಿನಿಂದ ಸಂಪತ್ತು ಪಡೆಯಲು ಯುರೋಪಿಯನ್ನರು ಹೆಚ್ಚು ಜನರನ್ನು ನೇಮಿಸಲಿಲ್ಲ. ಯುರೋಪಿಯನ್ನರ ಜನಬಲ ಮೌಲ್ಯಯುತವಾಗಿದ್ದರು, ವಿರಳ ಹಾಗೂ ದುಬಾರಿಯಾಗಿತ್ತು. ಇದರಿಂದ

ಮುಕ್ತಿ ಪಡೆಯಲು ಭಾರತೀಯ ಶ್ರಮಜೀವಿಗಳಾದ ಹೊಲದಲ್ಲಿ ದುಡಿಯುವ ರೈತ, ತೋಟದ ಕಾರ್ಮಿಕರು, ಕಾರ್ಖಾನೆಗಳ ಕೆಲಸಗಾರರುಗಳನ್ನು ಕಾನ್‌ಸ್ಟೇಬಲ್ ಮತ್ತು ಗುಮಾಸ್ತರಾಗಿ ವಸಹಾತುಶಾಹಿಯ ಅಧಿಕಾರಶಾಹಿಯಲ್ಲಿ ನೇಮಿಸಲಾಯಿತು. ಈ ಭಾರತೀಯರಿಗೆ ಮನೆಗೆಲಸದ ಚಾಕರಿ ಮಾಡಲು ಅಧೀನ ಆಳಾಗಿ ಜವಬ್ದಾರಿಯಿಂದ ಶಿಸ್ತಿನಿಂದ ಕೆಲಸ ಮಾಡುವಂತೆ ಜವಾಬ್ದಾರಿ ವಹಿಸಲಾಗಿತ್ತು.

ಮೇಲ್ವಿಚಾರಣೆಯಲ್ಲಿರುವವರನ್ನು ಹೊರತುಪಡಿಸಿ, ಯುರೋಪಿಯನ್ನರು ಮೇಲ್ವಿಚಾರಕರ ಹುದ್ದೆಯನ್ನು ವಶಪಡಿಸಿ ಕೊಳ್ಳಲೇಬೇಕೆಂಬ ದೃಢಸಂಕಲ್ಪ ಮಾಡಿದ್ದರು. ಇದಕ್ಕೆ ಭಾರತೀಯರ ಮೇಲೆ ಅವರಿಗಿದ್ದ ಅಪನಂಬಿಕೆ ಮತ್ತು ಅವರ ಸಾಮರ್ಥ್ಯ ಮತ್ತು ಗುಣನಡತೆಯ ಬಗ್ಗೆ ಇದ್ದ ಕೀಳುಭಾವನೆಗಳು ಪೂರಕವಾದವು. ಯುರೋಪಿಯನ್ನರ ನಿರ್ದೇಶನ ಮತ್ತು ಭಾರತೀಯ ಪೊಲೀಸರ ಮೇಲೆ ಪರಿಣಾಮಕಾರಿಯಾಗಿ ಕಣ್ಗಾವಲು ಇಡಲು ಯುರೋಪಿಯನ್ ಪೊಲೀಸರನ್ನು ನೇಮಿಸಲು ಸಂಕಲ್ಪಿಸಲಾಯಿತು. ಯುರೋಪಿಯನ್ನರ ಮೇಲ್ವಿಚಾರಣೆ ಅಗತ್ಯವಿದೆಯೆಂದು ೧೯ ನೇ ಶತಮಾನದಲ್ಲಿ ಮದ್ರಾಸ್ ಪೊಲೀಸ್ ಮುಖ್ಯಸ್ಥನನ್ನು, ಐಕ್ಯಮತದಿಂದ ಆಯ್ಕೆ ಮಾಡಲಾಯಿತು. ಮದ್ರಾಸ್ ಪ್ರಾಂತ್ಯದ ಮೊದಲ ಐಜಿಪಿ ಯಾಗಿದ್ದ ಸರ್ ವಿಲಿಯಂ ರಾಬಿನ್‌ಸನ್‌ರವರು ೧೮೬೨ ರಲ್ಲಿ ಹೀಗೆ ಬರೆಯುತ್ತಾರೆ."ಸಮರ್ಥರಾದ, ಗೌರವಾನ್ವಿತ ಯುರೋಪಿಯನ್ ಅಧಿಕಾರಿಗಳ ಕೈಕೆಳಗೆ ಭಾರತೀಯರನ್ನು ಬಹಳ ಉಪಯುಕ್ತ ಮತ್ತು ಬುದ್ಧಿವಂತ ಅಧೀನ ಅಧಿಕಾರಿ ಗಳಾಗಿರುತ್ತಾರೆ. ಆದರೆ ಅವರಿಗೆ ಸ್ವತಂತ್ರ ಜವಾಬ್ದಾರಿಗಳನ್ನು ನೀಡುವುದು ಸಂಪೂರ್ಣವಾಗಿ ಸಧುವಾದುದಲ್ಲ" [೩೮] ಒಂದು ಸಂಘಟಿತ ಪಡೆಯ ನಿರ್ವಹಣೆಗೆ ಅಗತ್ಯವಾಗಿ ಬೇಕಾದ ಶಿಸ್ತು ಮತ್ತು ಹತೋಟಿ ಮತ್ತು ಸ್ವ-ನಂಬಿಕೆಗೆ ಭಾರತೀಯರು ಪರಿಪೂರ್ಣರಲ್ಲ ಎಂದು ಆತ ನಂಬಿದ್ದ. ತುರ್ತು ಸಂದರ್ಭಗಳಲ್ಲಿ ಬುದ್ಧಿಶಕ್ತಿಯನ್ನು ಬಳಸಿಕೊಳ್ಳಲು ಅಸಮರ್ಥರೆಂದು ಭಾವಿಸಿದ್ದ. [೩೯]

೧೯೦೨ ರಲ್ಲಿ ಮದ್ರಾಸ್ ನಗರದ ಪೊಲೀಸ್ ಕಮಿಷನರಾದ ಓ.ಆರ್. ಜೋನ್ಸ್ ಇದೇ ರೀತಿಯ ಮನೋ ವೃತ್ತಿಯನ್ನು ಹೊಂದಿದ್ದನು. ಪೊಲೀಸ್ ಪಡೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಯುರೋಪಿಯನ್ ಅಧಿಕಾರಿಗಳಿರಬೇಕೆಂಬು ದಕ್ಕೆ ಹೆಚ್ಚು ಒತ್ತು ನೀಡಿದ. ಯುರೋಪಿಯನ್ನರ ಮೇಲ್ವಿಚಾರಣೆ ಇಲ್ಲದೇ ಸ್ಥಳೀಯ ಪೊಲೀಸ್‌ನಲ್ಲಿ ಕಾನ್‌ಸ್ಟೇಬಲ್ ಅಥವಾ ಹೆಡ್‌ಕಾನ್‌ಸ್ಟೇಬಲ್‌ಗಳು ನಿರೀಕ್ಷಿತ ಮಟ್ಟಕ್ಕೆ ಕೆಲಸ ಮಾಡುವುದಿಲ್ಲ, ಅಷ್ಟೇ ಅಲ್ಲದೇ ಪೊಲೀಸ್ ಇಲಾಖೆಯು ಸಂಪೂರ್ಣ ವಾಗಿ ಕೆಲಸ ಮಾಡಲು ಯುರೋಪಿಯನ್ ಅಧಿಕಾರಿಗಳ ಬುದ್ಧಿಶಕ್ತಿಯ ಅಗತ್ಯವಿದೆಯೆಂದು ಆತ ವಾದಿಸಿದ.[೪೦]

ಭಾರತದ ವಸಹಾತುಶಾಹಿ ಆಡಳಿತವು ಜನಾಂಗೀಯ ಭಿನ್ನತೆಯಿಂದ ಕೂಡಿದ ಶ್ರೇಣಿಕೃತ ವ್ಯವಸ್ಥೆಯ ಅಧಿಕಾರಿ ಶಾಹಿಯನ್ನು ನೀಡಿತು. ೧೮೫೦ ರಲ್ಲಿ ನಡೆದ ಪೊಲೀಸ್ ಪುನರ್‌ಸಂಘಟನೆಯಲ್ಲಿ ಈ ಮೇಲ್ವಿಚಾರಣಾ ಸಿದ್ಧಾಂತವನ್ನು ಸ್ಥಾಪಿಸಲಾಯಿತು. ಹಳೇಯ ಪೊಲೀಸ್ ಪದ್ಧತಿಯ ಲೋಪಗಳ ಬಗ್ಗೆ ಹಾಗೂ ಕಂದಾಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ಯುರೋಪಿಯನ್ನರು ತೀವ್ರ ನಿಗಾ ಇಟ್ಟಿಲ್ಲವೆಂದು ದೂಷಿಸಲಾಯಿತು. ಇದರಿಂದ ಹೊರಗೆ ಬರಲು ತಕ್ಷಣವೇ ಯುರೋಪಿಯನ್‌ರನ್ನು ಎಸ್‌ಪಿ ದರ್ಜೆಯ ಅಧಿಕಾರಿಗಳನ್ನಾಗಿ, ಭಾರತೀಯರನ್ನು ಅಧೀನ ಅಧಿಕಾರಿಗಳಾಗಿ ನೇಮಿಸಲೆಂದು ಸರ್ಕಾರವು ಪರಿಹಾರ ಹುಡುಕಿತು. ಸ್ಥಳೀಯ ಬಾಷೆ ಮತ್ತು ಪರಿಸ್ಥಿತಿಗಳ ಅರಿವು ಇರುವುದರಿಂದ ಮತ್ತು ಆರ್ಥಿಕ ಕಾರಣಗಳಿಗಾಗಿ ಹೆಚ್ಚಿನ ಅಧೀನ ಅಧಿಕಾರಿಗಳನ್ನು ಸ್ಥಳೀಯ ಜನರಿಂದಲೇ ಆಯ್ಕೆ ಮಾಡುವ ಅವಶ್ಯಕತೆ ಕಂಡು ಬಂತು. ಆದರೆ ಪುನರ್‌ಸಂಘಟನೆ ಮಾಡುವವರು ಯಾವ ರೀತಿಯಾಗಿ ಭಾರತೀಯರನ್ನು ನೇಮಿಸಬೇಕೆಂದು ನಿರ್ದಿಷ್ಟ ಪಡಿಸಲಿಲ್ಲ. –[೪೧]

ಪ್ರಾರಂಭದಲ್ಲಿ ಹೊಸ ಪೊಲೀಸ್ ವ್ಯವಸ್ಥೆಯು ಹೊಸ ಆಡಳಿತಾಂಗದಡಿ ಇದ್ದ ಹಳೆಯ ಪೊಲೀಸ್ ವ್ಯವಸ್ಥೆ

ಯಾಗಿತ್ತು. ಹಾಲಿ ಇರುವ ಪೀವನ್‌ಗಳು ಮತ್ತು ಸಿಬ್ಬಂದಿ (ಕಂದಾಯ ನೌಕರರು) ಗಳ ದಳವನ್ನು ಹೊಸ ಜಿಲ್ಲಾ ಪೊಲೀಸ್‌ಗೆ ಸೇರಿಸಲಾಯಿತು.[೮೨] ಆದರೆ ೧೮೬೦ ರಿಂದ ೧೮೭೦ ರ ನಡುವೆ ಈ ಅಧಿಕಾರಿಗಳಿಗೆ ಅನ್ನಿಸಿತೋ ಅಂತಹ ವರನ್ನು ಆ ಸ್ಥಳಕ್ಕೆ ನಿಯುಕ್ತಿಗೊಳಿಸಲಾಯಿತು. ಅಸ್ಪೃಶ್ಯರಾಗಿದ್ದ ಗ್ರಾಮದ ಕಾವಲುಗಾರರಾಗಿದ್ದ ತಲಯಾರಿಗಳನ್ನು ಹಳೇಯ ಪೊಲೀಸ್ ಪೀವನ್‌ಗಳೆಂದು ಪರಿಗಣಿಸಲಾಯಿತು. ಹಾಗೂ ಕೂಡಲೇ ಕೆಲಸದಿಂದ ತೆಗೆಯಲಾಯಿತು. ಏಕೆಂದರೆ ಅವರೆಲ್ಲರೂ 'ಪರಿಹಾತ್' ಜಾತಿಗೆ ಸೇರಿದವರಾಗಿದ್ದರು. ಇದಕ್ಕೆ ಕಾರಣ ಇವರುಗಳು ಸಾಮಾನ್ಯ ಜನರೊಂದಿಗೆ ಬರೆಯಲು ಸಾದ್ಯವಿಲ್ಲ. ನಗರ ಮತ್ತು ಗ್ರಾಮಗಳಲ್ಲಿ ಹಿಂದು ಜನಾಂಗದ ಉನ್ನತ ಜಾತಿಯವರು ವಾಸಿಸುವ ಪ್ರದೇಶಗಳಲ್ಲಿ ಗಸ್ತು ತಿರುಗುವ, ದಸ್ತಗಿರಿ ಮಾಡುವ, ಮನೆಯನ್ನು ಶೋಧಿಸುವಂತಹ ಪೊಲೀಸ್‌ನ ಮೂಲಭೂತ ಕರ್ತವ್ಯಗಳನ್ನು ಮಾಡಲು ಸಾಧ್ಯವಿಲ್ಲವೆಂಬುದಾಗಿತ್ತು. ಅಧಿಕಾರಿಗಳ ಮನಸ್ಥಿತಿಯಲ್ಲಿ ಬಹಳವಾಗಿ ಇದ್ದ ಸಂಗತಿಯೆಂದರೆ ಅಸ್ಪೃಶ್ಯರು ರೂಢಿಗತ ಅಪರಾಧಿಗಳೆಂದು ಆದ್ದರಿಂದ ಪೊಲೀಸ್ ಇಲಾಖೆಯ ನೇಮಕಾತಿಗೆ ಅನರ್ಹರೆಂಬುದಾಗಿತ್ತು.[೮೩]

೧೮೮೦ ರ ದಶಕದ ಮಧ್ಯಭಾಗದಲ್ಲಿ ಈ ಕೆಳದರ್ಜೆಯವರನ್ನು ಪೊಲೀಸ್ ಇಲಾಖೆಗೆ ನೇಮಿಸಿಕೊಳ್ಳುವ ಬಗೆಗಿನ ಈ ವಿಷಯವು ಸ್ಥಾಪಿತ ಸಿದ್ಧಾಂತದಂತೆ ಆಯಿತು. ಯಾವ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆಗೆ ಸೇರಲು ಅಭ್ಯರ್ಥಿಗಳೇ ಇಲ್ಲವೋ ಅಂತಹ ಸ್ಥಳದಲ್ಲಿ ಮಾತ್ರ ಇವರನ್ನು ಆಯ್ಕೆ ಮಾಡಲಾಗುತ್ತಿತ್ತು. ಉಳಿದಂತೆ ಇವರನ್ನು ಆಯ್ಕೆ ಮಾಡುವುದು ಕಠಿಣವಾಗಿತ್ತು.[೮೪]

ಇದೇ ರೀತಿ ದಕ್ಷಿಣ ತಮಿಳುನಾಡಿನಲ್ಲಿ 'ಮರವರು' ಮತ್ತು 'ಕಳ್ಳರ್' ಜಾತಿಯವರಿಗೂ ಸಂಸ್ಥಾನದ ಮಧ್ಯಭಾಗದ ಜಿಲ್ಲೆಗಳಲ್ಲಿ ಕೊರವರಿಗೂ ಕಾವಲ್ ವ್ಯವಸ್ಥೆಗೆ ಸೇರಲು ಇದೇ ರೀತಿಯ ಬಹಿಷ್ಕಾರವಿತ್ತು. ಬ್ರಿಟೀಷರ ದೃಷ್ಟಿಕೋನದಲ್ಲಿ 'ಕಾವಲ್' ಎಂದರೆ ಕಳ್ಳರು ದರೋಡೆಕೋರರಿಂದ ಹಣ ವಸೂಲಿ ಮಾಡುವವರು, ಹಳ್ಳಿಯ ಜನರಿಗೆ ಇಷ್ಟವಿಲ್ಲದಿದ್ದರೂ ಸಹ ತಮ್ಮನ್ನು ದರೋಡೆಕೋರರಿಂದ ರಕ್ಷಿಸಲಾಗುತ್ತದೆಂದು ಭಯ ಹುಟ್ಟಿಸಿ, ಅಥವಾ ಹಿಂಸೆಯಿಂದ ಅಥವಾ ಬೆಂಕಿ ಹಚ್ಚಿಯಾದರೂ ಪ್ರೊಟೆಕ್ಷನ್ ಮನಿ (protection money) ಯನ್ನು ಪಡೆಯುವ ವರಾಗಿದ್ದರು. ಕಳ್ಳನನ್ನು ಕಳ್ಳನಿಂದಲೇ ಹಿಡಿ ಎಂಬ ತತ್ವವು ಇದೇ ಆಗಿತ್ತು. ಕ್ರಮಬದ್ಧವಾದ ಪೊಲೀಸ್ ವ್ಯವಸ್ಥೆ ಮತ್ತು ನ್ಯಾಯದ ಬಗ್ಗೆ ಬ್ರಿಟೀಷರ ಯೋಚನೆಗಳಿಗೆ ಇದು ಒಪ್ಪಿದ ವಿಷಯವಾಗಿರಲಿಲ್ಲ. ಕಾವಲ್ ಪಡೆಯ ಈ ಹಟವು ಈ ಪಡೆಯನ್ನು ಹೊಸಕಿ ಹಾಕುವ ಪ್ರಯತ್ನದಲ್ಲಿದ್ದ ಬ್ರಿಟೀಷರ ಆಕ್ರೋಶಕ್ಕೆ ಗುರಿಯಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ನಿರಂತವಾಗಿ ಹೆಚ್ಚಿದ ಹಿಂಸೆ ಅಪರಾಧಗಳಿಂದಾಗಿ ವಸಹಾತುಶಾಹಿ ವ್ಯವಸ್ಥೆಯೊಂದಿಗೆ ಅಪಾಯಕಾರಿ ವಿರೋಧವನ್ನು ಕಟ್ಟಿಕೊಂಡಿತು. ಕಾವಲ್ ಪಡೆಯಲ್ಲಿದ್ದ ಎಲ್ಲಾ ಕಳ್ಳರ್ ಮತ್ತು ಬಹುತೇಕ ಮರವರು ಮತ್ತು ಕೊರವರು ವಸ್ತುಶ: ಅಪರಾಧಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿಯಾದರೂ ಭಾಗಿಯಾಗಿದ್ದರೆಂಬ ಅನುಮಾನವಿತ್ತು. ಅದಕ್ಕಾಗಿ ಇವರನ್ನು ವಸಹಾತುಶಾಹಿ ಪೊಲೀಸ್ ಸಿಬ್ಬಂದಿಗಳಾಗಿ ಒಪ್ಪಲು ಸಾಧ್ಯವಿಲ್ಲವೆಂದು ಯೋಚಿಸಲಾಯಿತು.[೮೫]

ಹಾಗಾದರೆ ಬ್ರಿಟೀಷರು ಹೊಸ ಪೊಲೀಸ್ ಪಡೆಗೆ ಎಂತಹವರು ಬೇಕೆಂದು ಯೋಚಿಸಿದರು . ಈ ಕಾರ್ಯದಲ್ಲಿ ಪೊಲೀಸ್ ಆಡಳಿತಶಾಹಿಯು ಸಾಮಾಜಿಕ ಸ್ಥರೀಕರಣದ ವಿಸ್ತಾರವಾದ ವ್ಯವಸ್ಥೆ ಬಗೆಗಿನ ವಸಹಾತುಶಾಹಿಯ ವ್ಯಾಖ್ಯಾನಕ್ಕೆ ಬೆಂಬಲಿಸಿತು. ಇಂತಹ ಬದಲಾಗದೇ ಇರುವ ದೇಶೀಯ ಜನರ ಗುಂಪನ್ನು ಕಡಿಮೆ ಮಾಡಬೇಕಿತ್ತು. ಇದು ಇಲಾಖೆಗೆ ಸೇರಿಸಿಕೊಳ್ಳುವ ಮತ್ತು ತೆಗೆದುಹಾಕುವ ವಸಹಾತುಶಾಹಿಯ ಎರಡು ಪ್ರಕ್ರಿಯೆಗಳಿಗೆ ಸಹಾಯಕವಾಯಿತು. ಮತ್ತು ಜಾತಿ ವ್ಯವಸ್ಥೆಯು ಪೊಲೀಸ್ ವ್ಯವಸ್ಥೆಯನ್ನು ಈ ರೀತಿ ವರ್ಗೀಕರಿಸಲು ಇರುವ ಪ್ರೇರಣೆಗಳಲ್ಲಿ ಒಂದಾಗಿತ್ತು. ವಸ್ತುಶ: ಈ ವರ್ಗೀಕರಣವು ಭಾರತೀಯರು ಜಾತಿ ಆಧಾರಿತವಾಗಿ ಬೇರೆ ಬೇರೆಯಾಗಲು ಕಾರಣವಾಗಿತ್ತು. ಮತ್ತು ಶ್ರೇಣಿಕೃತ

ಸಾಮಾಜಿಕ ದೇಶೀಯ ವ್ಯವಸ್ಥೆಯ ಬೆಳವಣಿಗೆಗೆ ಪೂರಕವಾಗಿತ್ತು.[೪೬]

೧೯ ನೇ ಶತಮಾನದ ದ್ವಿತೀಯಾರ್ಧದಲ್ಲಿ ಇಂತಹದೇ ಒಂದು ಪ್ರಭಾವವನ್ನು ಕಾಣಬಹುದು. ಅದು ವಿಕ್ಟೋರಿಯಾದ ಜನಾಂಗೀಯ ಸಿದ್ಧಾಂತ. –[೪೭] ಬ್ರಿಟೀಷ್ ಭಾರತದಲ್ಲಿ ಅಪರಾಧ ಮತ್ತು ಅಪರಾಧ ಸ್ವಭಾವಗಳ ಬಗ್ಗೆ ಸಾಹಿತ್ಯಗಳು ಹೆಚ್ಚಾಗುತ್ತಾ ಹೋದಂತೆ ಈ ಸಿದ್ಧಾಂತವು ೧೮೫೦ ರವರೆಗೆ ಪ್ರಾಂತ್ಯದಲ್ಲಿ ದೊರೆತ ಅಪರಾಧಗಳ ಅಂಕಿ ಅಂಶಗಳನ್ನು ಅವಲಂಬಿಸಿತ್ತು ಮತ್ತು ಇದು ಅಸತ್ಯವಾದ, ವೈಜ್ಞಾನಿಕವೆಂದು ಹೇಳಲಾದ, ಜನಾಂಗಿಯ ಸಿದ್ಧಾಂತದಿಂದ ಕೂಡಿತ್ತು. ವಸಹಾತುಶಾಹಿ ಅಧಿಕಾರಿಗಳು, ಕೆಲವು ಜಾತಿಗೆ ಸೇರಿದವರು ಸ್ವಾಭಾವಿಕವಾಗಿ ಅಪರಾಧಿಗಳಾಗಿರುತ್ತಾರೆ, ಅವರನ್ನು ಕೇವಲ ಕಠಿಣವಾದ ಶಿಕ್ಷೆಯಿಂದ ಮತ್ತು ಮರುಸ್ಥಾಪನೆಯಿಂದ ಮಾತ್ರ ಸುಧಾರಿಸಲು ಸಾಧ್ಯವೆಂದು ಸಾಧಿಸಲು ಪ್ರಯತ್ನಿಸಿದರು. ಈ ಆಲೋಚನೆಗಳಿಗೆ ೧೮೬೦ ರಲ್ಲಿ ಪ್ರಕಟವಾದ ಗೆಜೆಟಿಯರ್ ಮತ್ತು ಜಿಲ್ಲಾ ಕೈಪಿಡಿಗಳಲ್ಲಿ ವ್ಯಾಪಕ ಪ್ರಚಾರಸಿಕ್ಕಿತು.

ಜೆ.ಹೆಚ್ ನೆಲ್ಸನ್ ಎಂಬುವವನು ಮದ್ರಾಸ್ ಕಂಟ್ರಿಮ್ಯಾನ್ಯುವೆಲ್‌ನ ಮೂಲಕರ್ತನಾಗಿ ಜಿಲ್ಲೆಯ ಜಾತಿಗಳ ಬಗ್ಗೆ "ಕಾನೂನಿಗೆ ಅವಿದೇಯರಾದ ಮರವರು, ಮೃಗಳ್ಳರಾದ ಕಳ್ಳರ್, ಕಾಮುಕರಾದ ಪರಿಹಾರಿಗಳು." ಎಂದನು.[೪೮] ಹೀಗೆ ಇಡೀ ಒಂದು ಸಮುದಾಯಕ್ಕೆ ಸೇರಿದ ಸಾವಿರಾರು ಜನ ಗಂಡಸರು, ಹೆಂಗಸರು ಮಕ್ಕಳನ್ನು ಏಕದೃಷ್ಟಿಕೋನದಿಂದ ನೋಡಿ, ಇಡೀ ಸಮುದಾಯದ ಜನರು ಒಂದೇ ಗುಣಲಕ್ಷಣ ಹೊಂದಿದ್ದಾರೆಂದು ವಸಹಾತುಶಾಹಿಯು ವರ್ಗೀಕರಿಸಿತು. ಭೌತಿಕವಾಗಿ ಮತ್ತು ಸಾಮಾಜಿಕವಾದ ಇವರ ವಿಭಿನ್ನ ಗುಣ ಲಕ್ಷಣಗಳನ್ನು ಊಹಾತ್ಮಕವಾಗಿ ಒಂದೇ ರೀತಿಯಾಗಿರುತ್ತವೆಂದು ತಿಳಿಸಿದರು. ಭಾರತೀಯನೊಬ್ಬನು ವಹಸಾತುಶಾಹಿಯ ಜ್ಞಾನದ ಪರಿಮಿತಿಯೊಳಗೆ ಸಸ್ಯ ವಿಜ್ಞಾನ ಮತ್ತು ಪ್ರಾಣಿ ವಿಜ್ಞಾನದ ಪ್ರಯೋಗಾಲಯದ ಮಾದರಿ ವಸ್ತುಗಳಾಂತದರು.[೪೯] ವಸಹಾತುಶಾಹಿಯ ಈ ಸಾಮಾಜಿಕ ವರ್ಗೀಕರಣದಿಂದಾಗಿ ಕಾನೂನಿಗೆ ಅವಿದೇಯರಾದ ಮರವರು, ಮತ್ತು ಮೃಗಳ್ಳರಾದ ಕಳ್ಳರ್‌ರವರುಗಳನ್ನು ಮಾತ್ರ ಪ್ರತ್ಯೇಕಿಸಲು ಸಾಧ್ಯವಾಗಲಿಲ್ಲ. ಈ ನಡುವೆ ವಸಹಾತುಶಾಹಿ ಪೊಲೀಸ್ ಅಧಿಕಾರಸ್ಥರಿಂದ ಸಕರಾತ್ಮಕವಾಗಿ ವಿಶೇಷ ಗುಣಗಳ ಹೊಗಳಿಕೆಯೂ ನಡೆಯಿತು. ಭೌತಿಕ ಗುಣಲಕ್ಷಣಗಳಿಗೆ ವಿಶೇಷ ಮಹತ್ವ ನೀಡಲಾಯಿತು. ಇದು ಭಾವಸಂಕೀರ್ಣತೆಗೆ ಕಾರಣವಾಗಿ, ವಸಹಾತುಶಾಹಿ ರಾಜ್ಯಗಳಿಗೆ ಪೊಲೀಸರು ಅತ್ಯಗತ್ಯವಾದ ನಾಗರಿಕ ಪಡೆಯಾಗಿರಬೇಕೆ ? (ಲಂಡನ್ ಮೆಟ್ರೋಪಾಲಿಟನ್ ಪೊಲೀಸ್‌ನಂತೆ) ಅಥವಾ ಪಾರ್ಲಿಮೆಂಟಿನ ಹಿಡಿತದಲ್ಲಿರುವ (ಐರಿಷ್ ಕಾನ್‌ಸ್ಟೇಬಲರಿ) ಮಾದರಿಯಲ್ಲಿರಬೇಕೆ ಎಂಬ ಬಗ್ಗೆ ಪ್ರಭಾವ ಬೀರಿತು.[೫೦]

೧೮೫೦ ರಲ್ಲಿ ಪೊಲೀಸ್ ಪಡೆಯನ್ನು ಸುಧಾರಣೆ ಮಾಡುವ ಉದ್ದೇಶದಿಂದ ಅರೆ ಅಕ್ಷರಸ್ಥರನ್ನು ಹಾಗೂ ಕಣ್ಗಾವಲು ಮಾಡಿ ನಿಯಂತ್ರಿಸುವಂತಹ ಪಡೆಯನ್ನು ರಚಿಸಲಾಯಿತು. ಆದರೆ ಈ ಪಡೆಯು ಹೆಚ್ಚಾಗಿ ಸೇನೆಯ ಮಾಧರಿಯಲ್ಲಿರಬೇಕೆಂಬುದು ಆಡಳಿತಗಾರರ ಭಾವನೆಯಾಗಿತ್ತು.

ಮದ್ರಾಸ್ ಪ್ರಾಂತ್ಯದ ಮೊದಲ ಐಜಿಪಿಯಾಗಿ ರಾಬಿನ್‌ಸನ್ ಆಯ್ಕೆಯಾದರು. ಇವರು ಐಸಿಎಸ್ ಅಧಿಕಾರಿಯಾಗಿದ್ದರು. ಈತನ ನಂತರದ ಜಿಲ್ಲಾ ಎಸ್‌ಪಿಗಳೆಲ್ಲರೂ ೧೮೯೦ ರ ವರೆಗೆ ಬಹುತೇಕ ಯುರೋಪಿಯನ್ನರಾಗಿದ್ದರು. ಅದನ್ನು ಬಿಟ್ಟರೆ ಸೇನೆಯಿಂದ ಬಂದ ಅಧಿಕಾರಿಗಳಾಗಿದ್ದರು. ಪೊಲೀಸ್ ನೇಮಕಾತಿ ಮತ್ತು ತರಬೇತಿಯಲ್ಲಿ ಸೇನೆಯಿಂದ ಬಂದವರಿರಬೇಕೆಂಬ ಪೂರ್ವಾಗ್ರಹವಿತ್ತು. ಮತ್ತು ಅವರಿಗೆ ಆದ್ಯತೆಯೂ ಇತ್ತು. ಸೇನೆಯಲ್ಲಿರುವ ದೇಹದಾರ್ಢ್ಯತೆಯನ್ನು ಪೊಲೀಸ್ ನೇಮಕಾತಿಯಲ್ಲಿ ಅನುಸರಿಸಲಾಯಿತು. ಮತ್ತು ಸೇನೆಯಲ್ಲಿರುವ ಶಸ್ತ್ರ ಕವಾಯತನ್ನೇ (ಆರ್ಮ್ಸ್ ಡ್ರಿಲ್) ಕಾನ್ ಸ್ಟೇಬಲ್‌ಗಳಿಗೆ ನಿಗಧಿಪಡಿಸಲಾಯಿತು. –[೫೧]

ಆದರೆ ೧೯ ನೇ ಶತಮಾನದಲ್ಲಿ ಉತ್ತರದ ಮಾರ್ಷಲ್ ರೇಸ ಪರಿಣಾಮವಾಗಿ ದಕ್ಷಿಣ ಭಾರತದಲ್ಲಿ ಸೇನೆಯ

ನೇಮಕಾತಿಯಲ್ಲಿ ನಾಟಕೀಯ ಕುಸಿತ ಕಂಡಿತು. ಸೇನೆಯಿಂದ ನಿವೃತ್ತಿರಾದವರು ಪೊಲೀಸ್ ಪಡೆಗೆ ಸೇರಲು ಉತ್ಸುಕರಾಗಿದ್ದರು. ಮೊದಲ ಪ್ರಪಂಚ ಮಹಾಯುದ್ಧದ ನಂತರ ಅರೆಸೈನಿಕ ಪಡೆಗಳಲ್ಲಿ ಈ ಮನೋವೃತ್ತಿ ಹೆಚ್ಚಾಯಿತು. [೫೨]

ಮುಸ್ಲಿಮರು ಮತ್ತು ಮಲೆಯಾಳಿಗಳು ಮದ್ರಾಸ್‌ನ ಆಡಳಿತದಲ್ಲಿ ಸಮಾನವಾದ ಉತ್ಕೃಷ್ಟತೆಯನ್ನು ಹೊಂದಿದ್ದ ಮಾರ್ಷಲ್ ರೇಸ್‌ನ್ನು ಹೊಂದಿದ್ದರು. ಆದಾಗ್ಯೂ ಬಹುಸಂಖ್ಯಾತ ಹಿಂದುಗಳಿರುವ ಸಂಸ್ಥಾನಗಳಲ್ಲಿ ಮುಸ್ಲಿಮರು ೭% ರಷ್ಟು ಜನಸಂಖ್ಯೆ ಇದ್ದರು. ೧೮೫೯ ರಿಂದ ೧೯೪೭ ರ ಮಧ್ಯೆ ಮುಸ್ಲಿಮರನ್ನು ಪೊಲೀಸ್ ಇಲಾಖೆಯಲ್ಲಿ ಅತ್ಯಂತ ಹೆಚ್ಚಾಗಿ ನೇಮಿಸಿಕೊಳ್ಳಲಾಯಿತು. ಮದ್ರಾಸ್ ಕಾನ್‌ಸ್ಟೇಬಲರಿಯರು ಶೇಕಡ ೨೦ ರಿಂದ ೩೦% ರಷ್ಟು ಮುಸ್ಲಿಮರಿದ್ದರು. ಮದ್ರಾಸ್ ಪ್ರಾಂತ್ಯದ ಮಧ್ಯಭಾಗದ ಜಿಲ್ಲೆಗಳಲ್ಲಿ ನಿರ್ಧಿಷ್ಟವಾಗಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿದ್ದು ೧೯ ನೇ ಶತಮಾನದ ಅಂತ್ಯದ ವೇಳೆಗೆ ಆ ಭಾಗಗಳಲ್ಲಿ ಬಹುತೇಕ ಶೇಕಡ ೫೦ ರಷ್ಟು ಮುಸ್ಲಿ ಕಾನ್‌ಸ್ಟೇಬಲ್‌ಗಳಿದ್ದರು.[೫೩] ೧೯೩೮ ರ ವೇಳೆಗೆ ಮದ್ರಾಸ್ ಪ್ರಾಂತ್ಯದ ಕಾನ್‌ಸ್ಟೇಬಲ್‌ಗಳಲ್ಲಿ ಶೇಕಡ ೨೨ (೨೨.೦೫೨ ರಲ್ಲಿ ೪.೮೪೮) ಮುಸ್ಲಿಮರಿದ್ದರು.[೫೪] ಇವರುಗಳು ದನವನ್ನು ತಿನ್ನುವವರಾಗಿದ್ದರಿಂದ ಅವರು ಶೌರ್ಯವಂತರಾಗಿದ್ದು, ಸಶಸ್ತ್ರ ಪೊಲೀಸ್ ಪಡೆಯಲ್ಲಿಯೂ ಸಹ ಅಸಮಾನ ಅನುಪಾತದಿಂದ ಹೆಚ್ಚಿನ ಸಂಖ್ಯೆಯಲ್ಲಿದ್ದರು. ೧೯೧೫ ರಲ್ಲಿ ಉತ್ತರ ಆರ್ಕಾಟ್‌ನಲ್ಲಿ ೨೪% ಮುಸ್ಲಿಂ ಕಾನ್‌ಸ್ಟೇಬಲ್‌ಗಳಿದ್ದರು. ಮದುರೈಯಲ್ಲಿ ಈ ಸಂಖ್ಯೆ ೩೪% ಆಗಿತ್ತು.[೫೫]

ಹೀಗೆ ಹಲವು ಜಿಲ್ಲೆಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಮುಸ್ಲಿಮರ ಪ್ರಾಭಲ್ಯವಿದ್ದರು. ಈವರ್ಗದ ನ್ಯಾಯಯುತವಲ್ಲದ ಈ ಅನುಪಾತದಿಂದಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ಚಿಂತಿತರಾದರು.[೫೬] ಬಳ್ಳಾರಿ ಜಿಲ್ಲೆಯಲ್ಲಿ ಕಾನ್‌ಸ್ಟೇಬಲರಿಯಲ್ಲಿ ೧೮೬೮ ರಲ್ಲಿ ಇವರ ಸಂಖ್ಯೆ ೫೫% ಗೆ ಏರಿತ್ತು. ಉಳಿದ ಶೇಕಡ ೪೫ ಉಳಿದ ಜಾತಿಯವರಿದ್ದರು.[೫೭], ಮುಖ್ಯವಾಗಿ ಹಿಂದು ಸಂಸ್ಥಾನಗಳಲ್ಲಿ ಮುಸ್ಲಿಂ ಕಾನ್‌ಸ್ಟೇಬಲರಿ ಇರುವುದು ಬ್ರಿಟೀಷರಿಗೆ ಪ್ರದಾನ ಆಕರ್ಷಣೆಯ ವಿಷಯವಾಗಿತ್ತು. ಏಕೆಂದರೆ, ಹಿಂದು ಕಾನ್‌ಸ್ಟೇಬಲ್‌ಗಳಿಗಿಂತ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಹೋಲಿಸಿ ನೋಡಿದಾಗ ಇವರು ವಸಹಾತುಶಾಹಿಗೆ ಸ್ವಲ್ಪ ಹೆಚ್ಚಿನ ವಿದೇಯ ಕೆಲಸಗಾರರಾಗಿದ್ದರು. ಪೊಲೀಸ್ ಮತ್ತು ಸೇನೆಯಲ್ಲಿ ಆ ಕಾಲದಲ್ಲಿ ಬಲವಾಗಿ ನಂಬಿದ್ದ ವಿಷಯವೆಂದರೆ, ಮುಸ್ಲಿಮರು ಸ್ವಭಾವತ: ಕಠಿಣ ಮತ್ತು ಧೈರ್ಯಶಾಲಿಗಳೆಂದು, ದನ ತಿನ್ನುವ ಇವರ ಸಂತತಿ ಯೋಧರೆಂದು ಹಾಗೂ ಬಲಹೀನ, ಹೇಡಿ, ಸಸ್ಯಾಹಾರಿ ಹಿಂದುಗಳನ್ನು ಇವರು ಜಯಿಸುವವರೆಂದು ನಂಬಲಾಗಿತ್ತು.[೫೮] ಮದ್ರಾಸ್ ಪ್ರೆಸಿಡೆನ್ಸಿಯ ಆರ್ಮಿ ರಿಕ್ರೂಟ್‌ಮೆಂಟ್ ಮ್ಯಾನುವೆಲ್‌ನ ಶಬ್ದಗಳಲ್ಲಿ ಹೇಳುವುದಾದರೆ, " ಉತ್ತಮವಾದ ಮುಸಲ್ಮಾನರು, ಉಧ್ಯಮಶೀಲರು, ಶ್ರಮಜೀವಿಗಳು ಮತ್ತು ದೈಹಿಕವಾಗಿ ದೃಢಕಾಯರು, ಮೂಲತ: ಅವರು ಹೋರಾಡುವವರು, ಅವರ ಹೋರಾಟದ ಹುರುಪು ಇನ್ನೂ ಉತ್ತಮವಾಗಿ ಉಳಿದಿದೆ.[೫೯] ಮುಖ್ಯವಾಗಿ ಇಸ್ಲಾಂಗೆ ಮತ ಪರಿವರ್ತನೆಯಾದವರನ್ನು, ಅನ್ಯರಕ್ತದ ಕಾರಣದಿಂದಾಗಿ ನೇಮಕಾತಿಯಲ್ಲಿ ಕಡಿಮೆ ಮಾಡಲು ಪರ್ಯಾಲೋಚಿಸಲಾಯಿತು. ಅಂತೆಯೇ ಮಲೆಯಾಳಿ ಜನಾಂಗದೊಳಗೆ 'ನಾಯರ್'ಗಳು ಪ್ರಥಮ ಸ್ಥಾನದಲ್ಲಿದ್ದರು. ಕೇರಳವು ವಸಹಾತುಶಾಹಿಗಳ ಆಡಳಿತಕ್ಕೆ ಒಳಪಡುವ ಮೊದಲು, 'ನಾಯರ್'ಗಳು ಮಿಲಿಟರಿ ಕುಲೀನರಾಗಿದ್ದು, ಬ್ರಿಟೀಷ್ ಕಾಲದಲ್ಲಿಯೂ ಅದು ನಶಿಸಲಿಲ್ಲ. ಹಾಗಾಗಿ ಆರ್ಮಿ ಮ್ಯಾನ್ಯುವೆಲ್‌ನಲ್ಲಿ ಇವರ ಶೌರ್ಯದ ಲಕ್ಷಣವನ್ನು ಇನ್ನೂ ಗುರುತಿಸಬಹುದು. ಎಂದು ಹೇಳಿದೆ.[೬೦] ೧೯೨೦ ರಲ್ಲಿ ೨.೯೧೯ ಜನ ನಾಯರ್ ಜನಾಂಗಕ್ಕೆ ಸೇರಿದ ಪಿ.ಸಿ ಮತ್ತು ಹೆಚ್‌ಸಿಗಳಿದ್ದರು. ಇದು ಮದ್ರಾಸ್ ಕಾನ್‌ಸ್ಟೇಬಲರಿಯ ಬಹುತೇಕ ಶೇಕಡ ೧೦ ರಷ್ಟು ಆಗಿತ್ತು. ಆದರೆ ಇವರ ಮಾತೃ ಜಿಲ್ಲೆಯಿಂದ ಮಲಬಾರ್‌ನಲ್ಲಿ ಇವರ ಜನಸಂಖ್ಯೆ ಕೇವಲ ೧೪.೫% ಇತ್ತು. ಆದರೆ ಶೇಕಡ ೬೪ ಕಾನ್‌ಸ್ಟೇಬಲರಿ ಹುದ್ದೆಗಳಲ್ಲಿ ಇವರಿದ್ದರು. (೧,೭೮೫ ಹುದ್ದೆಗಳಲ್ಲಿ ೧.೧೪೯)[೬೧]

ಇವರು ಉತ್ತಮ ಹೋರಾಟಗಾರರು ಎಂಬುದು ಇವರ ಖ್ಯಾತಿಯನ್ನು ಹೆಚ್ಚಿಸಿತ್ತು. ಮತ್ತು ಪೊಲೀಸ್ ಹಾಗೂ ಸೇನೆಯಲ್ಲಿ ನೇಮಕಾತಿ ಮಾಡುವ ಅಧಿಕಾರಿಗಳ ಮೇಲೆ ಇದು ಪ್ರಭಾವ ಬೀರಿತ್ತು. ಇದರಂತೆ ಈ ನಾಯರ್‌ಗಳು ಅರೆಸೇನಾಪಡೆ ಮತ್ತು ಸಶಸ್ತ್ರ ಮೀಸಲು ಪಡೆ ಬೇಕೆಂದು ಬಯಸುತ್ತಿದ್ದರು. ೧೯೨೧ ರಲ್ಲಿ ನಾಯರ್‌ಗಳ ಪ್ರಾಭಲ್ಯವಿರುವ ಮಲಬಾರ್‌ನಲ್ಲಿ ಮಲಬಾರ್ ಸ್ಪೆಷಲ್ ಪೊಲೀಸ್‌ನ್ನು ಸ್ಥಾಪಿಸಲಾಯಿತು. ಇದನ್ನು ಇದೇ ಸಂಸ್ಥಾನದಲ್ಲಿ ಎಲ್ಲೆಲ್ಲಿ ಸಮಸ್ಯೆಗಳಿರುವ ಪ್ರದೇಶಗಳಿವೆಯೋ ಅಲ್ಲಿಗೆ ಉಪಯೋಗಿಸಲು ಒಂದು ಶಾಶ್ವತ ಪಡೆಯಾಯಿತು.

ಭಾರತ ಸರ್ಕಾರದ ನಿಯಮದಂತೆ ಬಂಗಾಳ ಹಾಗೂ ಬಿಹಾರ ಪ್ರಾಂತ್ಯಗಳಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಪೊಲೀಸ್ ವ್ಯವಸ್ಥೆಯ ವಿಚಾರಗಳಿಗೆ ಬದ್ಧವಾಗಿರುವಂತಾಯಿತು. ಇದು ಪರಿಣಾಮಕಾರಿಯಾಗಲು ಸ್ಥಳೀಯ ನಿವಾಸಿಗಳ ಭಾಷೆ, ಅವರ ಪದ್ಧತಿಗಳು, ಸಂಪ್ರದಾಯಗಳ ಬಗ್ಗೆ ತಾನೂ ಒಬ್ಬನಾಗಿ, ಅವುಗಳ ಬಗ್ಗೆ ಚೆನ್ನಾಗಿ ಬಲ್ಲವನಾಗಿರಬೇಕು. ಮತ್ತು ಈ ಬಗ್ಗೆ ಅಪರಿಚಿತರಾದಂತವರನ್ನು ಭಾರತದ ಬೇರೆ ಭಾಗಗಳಿಂದ ಪಡೆಯಬಾರದು.[೬] ಆದರೆ ಮದ್ರಾಸ್ ಪ್ರಾಂತ್ಯದಲ್ಲಿ ಮಾತ್ರ ಹೋರಾಟಗಾರ ಸಿಬ್ಬಂದಿ 'fighting man' ಎಂದು ಕರೆಯಲ್ಪಡುತ್ತಿದ್ದ ಜಾತಿಯವರನ್ನು ಸಂಸ್ಥಾನದ ಒಂದು ಭಾಷಾ ಜನಾಂಗದವರು ಇರುವ ಪ್ರದೇಶದಿಂದ ಮತ್ತೊಂದು ಅಪರಿಚಿತ ಭಾಷೆಯನ್ನಾಡುವ ಜನರ ಪ್ರದೇಶಕ್ಕೆ ನೇಮಿಸುವ ಪ್ರಕ್ರಿಯೆ ಯಾವುದೇ ಭಾದಕವಿಲ್ಲದೇ ಮುಂದುವರೆಯಿತು. ಕರ್ನಲ್ ಸಿ.ಎ. ಪೋರ್ಟಿಯಸ್ ಐ.ಜಿ.ಪಿ ಯು ೧೮೮೭ ರಲ್ಲಿ ನಿರ್ಭೀತಿಯಿಂದ ಹೇಳಿದ್ದೇನೆಂದರೆ, ಪೊಲೀಸರು ಹೊರಗಿನ ಜಿಲ್ಲೆಯವರಾಗಿರದಿದ್ದರೆ, ಅವರದೇ ನಗರದ, ಅವರದೇ ಸಂಬಂಧಿಗಳ ವಿರುದ್ಧ ಕೆಲಸ ಮಾಡುವಂತಹ ಅದೇ ಜಿಲ್ಲೆಯ ಜನರನ್ನು ಪಡೆಯುವುದು ದೊಡ್ಡ ತ್ರಾಸದ ಕೆಲಸ.[೬೭]

ಆದರೆ ಇವರ ನೇಮಕಾತಿಯು ಸೇನೆಯ ಧ್ಯೇಯೋದ್ದೇಶಗಳಂತೆ ಇರಬಾರದೆಂಬುದನ್ನು ಪೊಲೀಸ್ ಅಧಿಕಾರಿ ವರ್ಗ ಗುರುತಿಸಿತು. ಸೇನೆಯು ಮಲಬಾರಿನ ಮಾಫಿಲ ಮುಸ್ಲಿಮರು, ದಕ್ಷಿಣ ತಮಿಳುನಾಡಿನ ಮಾರವರು ಮತ್ತು ಕಳ್ಳರ್ ರವರುಗಳನ್ನು ಪಟ್ಟಿ ಮಾಡಲು ತಯಾರಿನಡೆಸಿತು. ಇವರುಗಳು ಬಹುತೇಕ ಕಾನೂನುಭಂಗ ಮಾಡುವವರು, ತೊಂದರೆ ಮಾಡುವವರು, ಅಪರಾಧಿಗಳೆಂಬ ಭಾವನೆ ಪೊಲೀಸರಲ್ಲಿ ಮುಂದುವರಿಯಿತು. ಇವರುಗಳು ಅಪರಾಧಗಳಲ್ಲಿ ಭಾಗಿಯಾದ ಬಗ್ಗೆ ಶೇಕಡವಾರು ಅಂಕಿಅಂಶಗಳನ್ನು ಪ್ರಕಟಿಸಲಾಯಿತು. ೧೮೬೦ ರಿಂದ ೧೯೦೫ರ ವರೆಗೆ ಪ್ರತೀವರ್ಷ ಇದನ್ನು ಪ್ರಕಟಿಸಿದರೆ ನಂತರ ೧೯೨೦ ರ ವರೆಗೆ ಐದು ವರ್ಷಕ್ಕೊಮ್ಮೆ ಪ್ರಕಟಿಸಲಾಯಿತು. ಇದರಿಂದ ಪೊಲೀಸ್ ಪಡೆಯಲ್ಲಿ ಯಾವ ಯಾವ ಜನಾಂಗದವರು ಎಷ್ಟಿದ್ದರೆಂದು ತಿಳಿಯಲು ಸಹಾಯಕವಾಗಿದೆ. ಆದರೆ ಒಂದು ವ್ಯಂಗವೆಂದರೆ, ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ 'ಮಾರ್ಷಲ್‌ರೇಸ್' ಸಿದ್ಧಾಂತ ಕಾರ್ಯ ನಡೆಸುತ್ತಿದ್ದು, ತಮ್ಮ ಜಿಲ್ಲೆಯವರೇ ಆದ, ಸೇನೆಯಲ್ಲಿ ಬೇರೆ ಸ್ಥಳದಲ್ಲಿ ಕೆಲಸ ಮಾಡಲು ಸಮರ್ಥರಾದ ಸಮುದಾಯದವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಇಲಾಖೆಯಿಂದ ತೆಗೆದುಹಾಕಲಾಯಿತು. ಅವರ ಮೇಲೆ ಪೊಲೀಸ್ ಇಲಾಖೆಯ ಕಡ್ಡಾಯದ ಕಣ್ಗಾವಲು ಇರಿಸಲಾಯಿತು. ಬ್ರಿಟೀಷರು, ನಾಯರ್ ಜನಾಂಗದವರ 'ಮಾರ್ಷಲ್‌ರೇಸ್' ಒಂದು ಆದರ್ಶವಾದ ಮತ್ತು ಅನುಕರಣೀಯವಾದುದೆಂಬ ದೃಷ್ಟಿಕೋನ ಹೊಂದಿದ್ದರು. ಅದು ಕೇವಲ ಅವರು ಶೌರ್ಯ ಸ್ವಭಾವದವರೆಂಬ ಕಾರಣಕ್ಕಾಗಿರಲಿಲ್ಲ. ಅದು ಆ ನೆಲದ ವಾಸ್ತವದ ಸಂಗತಿಯಾಗಿತ್ತು. ಅವರು ಉನ್ನತ ಜಾತಿಯವರಾಗಿದ್ದು ಅವರು ಸ್ವಭಾವತಹ: ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಬಲ್ಲವರಾಗಿದ್ದರು. ಮುಸ್ಲಿಮರು ಖಂಡಿತವಾಗಿಯೂ ಯುದ್ಧಪ್ರಿಯರಾದರೂ ಸಹ ಮಾಫಿಲಗಳು ತಮ್ಮ ಕಾರ್ಯ ವಿಧಾನದಲ್ಲಿ ಭಿನ್ನರಾಗಿದ್ದರು. (ಕೆಲವು ಸೇನೆಯ ಅಧಿಕಾರಿಗಳು ಉತ್ಸುಕರಾಗಿದ್ದರು)[೬೮] ಇವರು ಬಹುತೇಕ ಶ್ರಮಜೀವಿಗಳಾದ ಅವಿಶ್ರಾಂತ ಕಾರ್ಮಿಕರಾಗಿದ್ದರಿಂದ ಇದರ ಶಕ್ತಿ ಅಡಗಿತ್ತು. ಇವರದ್ದು ರೇಗುವ, ಕೋಪಿಸಿಕೊಳ್ಳುವ ಸಾಮಾಜಿಕ ಗುಂಪಾಗಿತ್ತು. ಇವರು ಹಠಸ್ವಭಾವದವರಾಗಿ ಕಾಣುತ್ತಿದ್ದರು. ಇದು ಆಂಗ್ಲೋ ನಾಯರ್ ಮುಂದಾಳುತನಕ್ಕೆ ಅಪಾಯಕಾರಿ

ಯಾಗಿತ್ತು. ಆದರೆ ಅವರದೇ ಜಾತಿಗೆ ಸೇರಿದ ಧರ್ಮಾಂದರ ವಿರುದ್ಧ ಕೆಲಸ ಮಾಡಲು ನಿಯೋಜಿಸಿದಾಗ ಮಾತ್ರ ಇವರ ಪೊಲೀಸ್ ಕೆಲಸ ಉಪಯುಕ್ತವಾಗಿತ್ತು.[೬೫]

ಇವರುಗಳ ಅರೆಸೈನಿಕ ಕೆಲಸಗಳು ಹಾಗೂ ಪೊಲೀಸ್ ಕೆಲಸಗಳು ಪ್ರಶಂಸೆಗೆ ಕಾರಣವಾಗಿದ್ದವು. ೧೯೨೦ ರ ವೇಳೆಗೆ ಬಹುತೇಕ ಪೂರ್ಣವಾಗಿ ವಿಭಾಗವಾಯಿತು. ಸಶಸ್ತ್ರ ಘಟಕಗಳು ವಿಶೇಷವಾಗಿ ನೇಮಕವಾದವು. ಮತ್ತು ತರಬೇತಿಗೊಂಡವರು, ಮತ್ತು ವ್ಯವಸ್ಥಿತ ಪೊಲೀಸ್‌ಗಳು (ಇದಕ್ಕೆ ಮಾರ್ಷಲ್ ಗುಣಲಕ್ಷಣ ಅಷ್ಟಾಗಿ ಅಗತ್ಯವಿರಲಿಲ್ಲ) ಪ್ರತ್ಯೇಕವಾದವು. ಇದಕ್ಕಾಗಿ ಮುಂದೆ ಅಕ್ಷರಜ್ಞಾನ ಮತ್ತು ಸಾಧ್ಯವಾದ ಕಡೆಗಳಲ್ಲಿ ಇಂಗ್ಲೀಷ್ ಜ್ಞಾನವು ನೇಮಕಾತಿಯ ಪ್ರಮುಖ ಅಳತೆಗೋಲಾದವು. ಇದು ವಸಹಾತುಶಾಹಿಯಲ್ಲಿನ ಆಡಳಿತಶಾಹಿಯ ಇತರೇ ನೇಮಕಾತಿಗಳಿಗೆ ಪೊಲೀಸ್ ನೇಮಕಾತಿಯೂ ಸಾಮಿಪ್ಯತೆ ಪಡೆಯಿತು. ಮತ್ತು ಸೇನಾ ನೇಮಕಾತಿಯಿಂದ ದೂರ ಉಳಿಯಿತು. ಅಕ್ಷರ ಜ್ಞಾನವನ್ನು ನೇಮಕಾತಿಗೆ ಸೇರಿಸಿದ್ದರಿಂದ ಮದ್ರಾಸ್, ಬೇರೆ ಪ್ರಾಂತೀಯ ಪಡೆಗಳಿಗಿಂತ ವಿಶೇಷತೆಯನ್ನು ಪಡೆಯಿತು. ಅಕ್ಷರಸ್ಥ ಕಾನ್‌ಸ್ಟೇಬಲ್‌ಗಳಿಗೆ ಹೆಚ್ಚಿನ ಶಿಕ್ಷಣ ನೀಡಿ, ಬಹುತೇಕ ಹಳೆಯ ಪೀವನ್‌ಗಳನ್ನು ತೆಗೆದು ಹಾಕಲಾಯಿತು. ೧೮೬೩ ರಲ್ಲಿ ಇಲಾಖೆಯಲ್ಲಿದ್ದ ಅಕ್ಷರಸ್ಥರ ಪ್ರಮಾಣ ಶೇಕಡ ೩೬. ರಿಂದ ೫೯ ಕ್ಕೆ ಏರಿತು. ೧೮೯೭ ರ ವೇಳೆಗೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೮೪.೫% ಕಾನ್‌ಸ್ಟೇಬಲ್‌ಗಳು ಅಕ್ಷರಸ್ಥರೆಂದು ದಾಖಲಾಗಿದ್ದರೆ ಬಾಂಬೆ ಪ್ರೆಸಿಡೆನ್ಸಿಯಲ್ಲಿ ೪೧.೧% ಬಂಗಾಳ ಪ್ರೆಸಿಡೆನ್ಸಿಯಲ್ಲಿ ೨೮.೧% ವಾಯುವ್ಯ ಪ್ರಾಂತ್ಯದಲ್ಲಿ ೧೬.೭% ಅಕ್ಷರಸ್ಥರಿದ್ದರು.[೬೬] ಈ ಅಂಕಿಅಂಶಗಳಲ್ಲಿ ತೋರಿಸಿದಂತೆ ನಿಜವಾದ ಅಕ್ಷರಸ್ಥರ ಸಂಖ್ಯೆಯು ಇಷ್ಟು ಹೆಚ್ಚು ಪ್ರಮಾಣದಲ್ಲಿ ಇದ್ದಿರಲಾರದು. ೧೯೧೧ ರಲ್ಲಿ ಐ.ಜಿ.ಪಿಯವರು ಹೀಗೆ ಹೇಳಿದರು. "ನಮ್ಮ ಈಗಿನ ವ್ಯವಸ್ಥೆಯಲ್ಲಿ ಬಹುತೇಕ ಕೆಲಸಗಳು ರ್‍ಯಾಂಕ್ ಮತ್ತು ಫೈಲ್‌ಗಳಲ್ಲದೇ (ರ್‍ಯಾಂಕ್ ಎಂದರೆ ಕವಾಯತಿಯಲ್ಲಿ ಅಡ್ಡಡ್ಡವಾಗಿ ಮೂರು ಸಾಲಿನಲ್ಲೂ ಫೈಲ್ ಎಂದರೆ ಒಬ್ಬರ ಹಿಂದೆ ಒಬ್ಬರಂತೆ ನಿಲ್ಲುವ ಸಾಲು) ಅದಕ್ಕೆ ಶಿಕ್ಷಣದ ಅಗತ್ಯತೆ ಇಲ್ಲ." [೬೭], ಆದರೆ ೧೮೮೦ ರ ವೇಳೆಗೆ ನೇಮಕಾತಿಯಾಗುವವರಿಗೆ 'ಬೇಸಿಕ್ ಲಿಟ್ರೆಸಿಟೆಸ್ಟ್' ನಲ್ಲಿ ತೇರ್ಗಡೆ ಮತ್ತು ದೇಹದಾರ್ಢ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ಆಯ್ಕೆ ಮಾಡಲಾಗುತ್ತಿತ್ತು. ಪೊಲೀಸ್ ಇಲಾಖೆಯ ಕೈಪಿಡಿಯಲ್ಲಿ, ಅಕ್ಷರತೆಯು ಮನಸ್ಸು ಸರಿಯಾಗಿರಲು ನಮಗೆ ಮಾರ್ಗದರ್ಶಕ ನಮಗೆ ವಹಿಸಿದ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಲು ಅಕ್ಷರತೆಯ ಅಗತ್ಯವಿದೆ. ಒಬ್ಬ ಸೈನಿಕರಿಗಿಂತ ದ್ವಿತೀಯ ದರ್ಜೆಯ ಕಾನ್‌ಸ್ಟೇಬಲ್‌ಗೆ ಹೆಚ್ಚಿನ ಅಕ್ಷರಜ್ಞಾನದ ಅಗತ್ಯವಿದೆ ಎಂದು ಹೇಳಿದರು.[೬೮] ಇದರಿಂದಾಗಿ ತಿಳಿದು ಬರುವು ದೇನೆಂದರೆ, ಸೈನಿಕ ಲಕ್ಷಣಗಳ ಪೊಲೀಸ್ ಪಡೆಗಿಂತ ವಿಭಿನ್ನವಾದ, ನಾಗರೀಕ ಕಾನ್‌ಸ್ಟೇಬಲರಿ ವ್ಯವಸ್ಥೆಗೆ ಹೆಚ್ಚು ಮಹತ್ವ ನೀಡಿದರು. ಬೇರೆ ಪ್ರಾಂತ್ಯಗಳಲ್ಲಿ ಕಾನ್‌ಸ್ಟೇಬಲ್‌ಗಳಲ್ಲಿ ಹೆಚ್ಚಿನ ಅಕ್ಷರಸ್ಥರಿರಲಿಲ್ಲ. ಅಂತೆಯೇ ಪ್ರಾಂತ್ಯದ ಜನರಲ್ಲಿಯೂ ಸಹ ಅಕ್ಷರತೆ ಕಡಿಮೆ ಇತ್ತು. ಹಾಗಾಗಿ ಮದ್ರಾಸ್ ಪ್ರಾಂತ್ಯಕ್ಕಿಂತ ಉಳಿದ ಕಡೆಗಳಲ್ಲಿ ಹಿಂಸೆಯಿಂದ ಕೂಡಿದ ಅಪರಾಧಗಳು ಪ್ರಭಲವಾಗಿದ್ದವು.[೬೯] ಮದ್ರಾಸ್ ಪ್ರಾಂತ್ಯದ ಈ ನೇಮಕಾತಿ ಸಿದ್ದಾಂತ ಬಲದ ಶಿಕ್ಷಣದಲ್ಲಿ ಹಿಂದೆ ಉಳಿದಿದ್ದ ಕೆಳಜಾತಿಯ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೂ ಮತ್ತು ಮೇಲ್ಜಾತಿಯ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ಬ್ರಾಹ್ಮಣ ಹಾಗೂ ವೆಲ್ಲಾಸ್ ಹಾಗೂ ತಮಿಳುನಾಡಿನ ಮುದಲಿಯಾರಗಳ ನಡುವೆ ಇನ್ನಷ್ಟು ಭೇದ ಉಂಟಾಯಿತು.

ಈ ರೀತಿಯ ನೇಮಕಾತಿಯು ಭಾರತೀಯ ಕ್ರಿಶ್ಚಿಯನ್ನರ ಮೇಲೂ ಪ್ರಭಾವ ಬೀರಿತು. ಬಹಳಷ್ಟು ಕ್ರಿಶ್ಚಿಯನ್ನರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರು. ಆದರೆ ಮಿಶನರಿಗಳ ಮೂಲಕ ಅಕ್ಷರಸ್ಥರಾಗುವ ಮತ್ತು ಇಂಗ್ಲೀಷ್ ಜ್ಞಾನ ಪಡೆಯುವ ಅವಕಾಶಸಿಕ್ಕಿತು. ತರಬೇತಿ ಮತ್ತು ಶಿಸ್ತಿನ ಮೂಲಕ ನಿಷ್ಠೆಯನ್ನು ಇವರಲ್ಲಿ ತುಂಬಬಹುದೆಂದು ನಂಬಿದ್ದರು. ಆದರೆ ವಸಹಾತುಶಾಹಿಗಳ ತಲೆಯಲ್ಲಿ ಇವರು ಭಾರತೀಯರೆಂಬ ಭಾವನೆ, ಅನುಮಾನಗಳು ತುಂಬಿದ್ದವು. ಆದಾಗ್ಯೂ

ಪೂರ್ಣ ಪ್ರಮಾಣದ, ತರಬೇತಿ ನೀಡಿ, ಮೇಲ್ವಿಚಾರಣೆಯಲ್ಲಿಡಲಾಯಿತು. ಆದರೆ ಸಂಕಷ್ಟ ಬಂದಾಗ ಅವರು ಬ್ರಿಟೀಷರಿಗೆ ನಿಷ್ಟರಾಗಿರಲಿಲ್ಲ.[೨೦] ಯುರೋಪಿಯನ್ ಅಧೀನ ಪೋಲೀಸರು ಸಂಪೂರ್ಣ ನಂಬಿಕೆಗೆ ಯೋಗ್ಯರೆಂದು ಭಾವಿಸಲಾಗಿತ್ತು. ಆದರೆ ಮದ್ರಾಸ್‌ನ ಮೌಂಟೆಡ್ (ಅಶ್ವದಳ) ನ ಕಾನ್‌ಸ್ಟೇಬಲ್‌ಗಳನ್ನೊಳಗೊಂಡಂತೆ ಏಷ್ಯಾದ ಯುರೋಪಿಯನ್ನರನ್ನು ಮಾಮೂಲಿಯಂತೆ ಸಾಮಾನ್ಯ ಕಾನ್‌ಸ್ಟೇಬಲ್‌ನಂತೆ ಕಡಿಮೆ ದರ್ಜೆಯ ಕೆಲಸ ಮಾಡಲು ನೇಮಿಸುವುದು ಸರಿಯಲ್ಲವೆಂದು ಭಾವಿಸಲಾಯಿತು. ಜಾತಿ ಮತ್ತು ಭಾಷೆಯ ಆದಾರದ ಮೇರೆಗೆ, ಯುರೋಪಿಯನ್ನರನ್ನು ಹೆಚ್ಚಿನ ಸಂಖ್ಯೆಯಲ್ಲಿ ಖಡಿತಗೊಳಿಸಲಾಯಿತು.[೨೧] ಆದೆರ ಲಾಭ ಪಡೆದುಕೊಂಡವರು ಮಾತ್ರ ಭಾರತದ ಕ್ರಿಶ್ಚಿಯನ್ನರು ಅವರು ಸ್ವದೇಶಿಯರಾಗಿ, ಸ್ಥಳೀಯ ಸಮಾಜದ ಪರಿಚಿತರಾಗಿ, ಸ್ಥಳೀಯ ಸಮಾಜದ ಪರಿಚಿತರಾಗಿ, ಸ್ಥಳೀಯ ಮಾತೃಭಾಷೆಯನ್ನು ಬಲ್ಲವರಾಗಿ ಮತ್ತು ಬ್ರಿಟೀಷರಿಗೆ ಅವರ ಧರ್ಮದವರೆಂಬ ಕಾರಣಕ್ಕೆ ಬಾಂದವ್ಯ ಬೆಳೆಯಿತು.[೨೨]

ಉಳಿದ ಜನಾಂಗಗಳಿಗೆ ಸಂಬಂಧಿಸಿದಂತೆ ನಿಷ್ಟೆಯ ಪ್ರಶ್ನೆ ಅಸ್ಪಷ್ಟವಾಗಿತ್ತು. ನಾಯರ್‌ಗಳನ್ನು ೧೯೪೬ರ ಮಲಬಾರ್ ಸ್ಪೆಷಲ್ ಪೊಲೀಸ್ ರಚನೆಯಾಗುವವರೆಗೂ ನಂಬಿಕಸ್ಥರೆಂದು ಭಾವಿಸಲಾಗಿತ್ತು. ನಂತರದ ದಿನಗಳಲ್ಲಿ ಅವರ ಬಗ್ಗೆ ಅನುಮಾನ ದೃಷ್ಟಿಯಿಂದ ನೋಡಲಾಗುತ್ತಿತ್ತು. ಬ್ರಾಹ್ಮಣರನ್ನು ಇನ್ನಿಲ್ಲದ ಅನುಮಾನದ ದೃಷ್ಟಿಯಿಂದ ನೋಡಲಾಗು ತ್ತಿತ್ತು. ೨೦ ನೇ ಶತಮಾನದ ಆದಿಯಲ್ಲಿ ಇವರುಗಳು ಕ್ರಾಂತಿಕಾರಿ ರಾಷ್ಟ್ರೀಯತೆಯನ್ನು ಅನುಸರಿಸಿದರು. ಮದ್ರಾಸ್‌ನಲ್ಲಿ ಕಾಂಗ್ರೆಸ್‌ನ ಪ್ರಭಲ ನಾಯಕತ್ವವನ್ನು ಬ್ರಾಹ್ಮಣರು ಹೊಂದಿದ್ದರು ಆದರೆ ಈ ಕಾರಣಕ್ಕಾಗಿ ಬ್ರಾಹ್ಮಣ ಜಾತಿಯ ಪೊಲೀಸ್ ಅಧೀನ ಅಧಿಕಾರಿಗಳನ್ನು ಕಡಿತಗೊಳಿಸಿದ್ದು ಕಂಡು ಬರುವುದಿಲ್ಲ.

ಮುಸ್ಲಿಂ ಕಾನ್‌ಸ್ಟೇಬಲ್‌ಗಳ ಸಂಖ್ಯೆ ೧೮೬೦ ರಲ್ಲಿ ೩೦% ಇದ್ದು ೧೯೨೦ರ ವೇಳೆಗೆ ೨೦% ಗೆ ಕುಸಿಯಿತು. ೧೯೪೭ ರ ವೇಳೆಗೆ ಈ ಸಂಖ್ಯೆ ೧೯% ಗೆ ಇಳಿಯಿತು. ಹಾಗೆಯೇ ಮುಸ್ಲಿಂ ಅದೀನ ಅಧಿಕಾರಿಗಳ ನಿಷ್ಟೆಯ ಮೇಲೂ ಅನಿಶ್ಚಿತತೆ ಬೆಳೆಯಿತು. ೧೯ ನೇ ಶತಮಾನದ ಕೊನೆಯ ದಶಕದಲ್ಲಿ ಮತ್ತು ೨೦ ನೇ ಶತಮಾನದ ಆರಂಭದಲ್ಲಿ ನಡೆದ ಮುಸ್ಲಿಮರನ್ನೊಳಗೊಂಡ ಮತೀಯ ಗಲಭೆಗಳ ಸಂದರ್ಭದಲ್ಲಿ ಮೊದಲ ಬಾರಿಗೆ ಮತ್ತು ೧೯೨೦ ರಲ್ಲಿ ನಡೆದ ಖಿಲಾಫತ್ ಚಳುವಳಿಯಲ್ಲಿ ಇವರ ನಿಷ್ಠೆಯ ಬಗ್ಗೆ ಅನುಮಾನ ಹೆಚ್ಚಿತು [೨೩] ಬ್ರಿಟೀಷರು ಯಾವುದೇ ಒಂದು ಜಾತಿಯವರನ್ನು ಅತಿ ಹೆಚ್ಚಾಗಿ ಪೊಲೀಸ್ ಇಲಾಖೆಗೆ ನೇಮಿಸಿರಲಿಲ್ಲ. ಹೀಗೆ ಮಾಡಿದಲ್ಲಿ ತಾವು ತೊಂದರೆಗೆ ಒಳಗಾಗುವುದಾಗಿ ಅವರಿಗೆ ತಿಳಿದಿತ್ತು.

೧೮೧೮ ರ ಆರಂಭದಲ್ಲಿ ವಿಶಾಕಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಪಡೆಯೊಳಗೆ ಮತೀಯ ಸಮತೋಲನ ಕಾಪಾಡಲು ಒಂದೇ ಜಾತಿಯವರಿಗೆ ನೇಮಕಾತಿ ಮಾಡುವುದನ್ನು ತಡೆಯಬೇಕು, ಇದು ಪಡೆಯ ಪ್ರಾಬಲ್ಯಕ್ಕೆ ಅಪಾಯಕಾರಿ ಯಾದುದೆಂದು ಮತ್ತು ವಸಹಾತುಶಾಹಿಯ ನಿಂಗಂತ್ರಣದಲ್ಲಿರುವ ಹಲವಾರು ಜನಾಂಗ ಗಳನ್ನು ಪ್ರೋತ್ಸಾಹಿಸಲು ಹೀಗೆ ಮಾಡಬೇಕೆಂದರು.[೨೪] ಇಪ್ಪತ್ತನೇ ಶತಮಾನದ ಮೊದಲಾರ್ಧದಲ್ಲಿ ಇಲಾಖೆಯಲ್ಲಿ ಅದಿಕವಾಗಿದ್ದ ಮುಸ್ಲೀಮರ ಸಂಖ್ಯೆಯನ್ನು ಖಡಿತಗೊಳಿಸಲಾಯಿತು. ಕಾಲದಿಂದ ಕಾಲಕ್ಕೆ ಪೊಲೀಸ್ ಅಧಿಕಾರಿಗಳು ಇಲಾಖೆಯಲ್ಲಿ ಯಾವುದೇ ಒಂದು ಜಾತಿಯವರು ಏಕಸ್ವಾಮ್ಯ ಹೊಂದದಂತೆ ನೋಡಿಕೊಂಡರು.

ಈ ಕಾರಣಗಳಿಗಾಗಿ ವಸಹಾತುಶಾಹಿಯ ಪ್ರಭುತ್ವವು, ಪೊಲೀಸ್ ಇಲಾಖೆಗೆ ಸೇರಲು ಎಲ್ಲಾ ಜಾತಿಯವರು ಸಮಾನ ಯೋಗ್ಯತೆ ಹೊಂದಿಲ್ಲವೆಂದು ಭಾವಿಸಿತ್ತು. ಅಭ್ಯರ್ಥಿಗಳ ಆಯ್ಕೆಗೆ ಎರಡು ಮಾಪನಗಳನ್ನು ಬಳಸಲಾಯಿತು. ಮೊದಲನೆಯದು ಅವನ ವೈಯಕ್ತಿಕ ಅರ್ಹತೆಗಳು, ವಯಸ್ಸು, ಎತ್ತರ, ಆರೋಗ್ಯ, ಅಕ್ಷರಜ್ಞಾನ, ಎರಡನೆಯದು ಮುಖ್ಯ ವಾಗಿ ಆತನ ಜಾತಿ, ಅಭ್ಯರ್ಥಿಯು ಬ್ರಿಟೀಷರು ನೇಮಕಾತಿ ಮಾಡಿಕೊಳ್ಳಲು ಬಯಸುವ ಜಾತಿಗೆ ಸೇರಿದ್ದಾನೆಯೇ? ಇದು

ಮಾರ್ಷಲ್‌ರೇಸ್, ಅಪರಾಧಿ, ಕಾನೂನು ಭಂಗ ಮಾಡುವ ಅಥವಾ ನಿಷ್ಪರಾದ ಜಾತಿಗೆ ಸೇರಿದ್ದರೆಯೇ? ಎಂಬುದನ್ನು ಗಮನಿಸಲಾಯಿತು. ಬಹುತೇಕ ಆಯ್ಕೆಯು ಆತನ ಅರ್ಹತೆಗಿಂತಲೂ ಸಾಮಾಜಿಕ ಮತ್ತು ರಾಜಕೀಯ ಮೌಲ್ಯಗಳಿಗ ನುಗುಣವಾಗಿತ್ತು. ೧೯೦೫ರ ಪೊಲೀಸ್ ಆಯೋಗವು ಅಪರಾಧಿಕ ವರ್ಗ (ಕ್ರಿಮಿನಲ್ ಕ್ಲಾಸ್) ನ ಸದಸ್ಯರ ನೇಮಕಾತಿ ವಿಚಾರದಲ್ಲಿ ಮೌನ ತಾಳಿತು. ನೇಮಕಾತಿಯು ಗೌರವಾನ್ವಿತ, ಮರ್ಯಾದಸ್ಥ ವರ್ಗಗಳಿಗೆ ಸೇರಿದವರನ್ನೇ ನೇಮಿಸ ಬೇಕೆಂಬ ವಸಹಾತುಶಾಹಿಗಳ ದೋರಣೆಯಿಂದ ಕ್ರಮೇಣ ಅವರ ಪೊಲೀಸ್ ಪಡೆಯ ಗೌರವ ಹಾಗೂ ಬಲ ಹೆಚ್ಚಾಯಿತು.[೭೫]

ನೇಮಕಾತಿ ಮತ್ತು ಶಿಸ್ತು

ವಸಹಾತುಶಾಹಿ ಪೊಲೀಸ್ ರಚನೆಗೆ ಭಾರತೀಯ ಅಧೀನ ಅಧಿಕಾರಿಗಳ ಸಂಖ್ಯೆಯು ಬಹುತೇಕ ಕಾರಣವಾಗಿತ್ತು. ಆದರೆ ಇಲಾಖೆಯಲ್ಲಿ ಸೇವೆ ಸಲ್ಲಿಸಬೇಕೆಂದಾಗಲಿ ರಾಷ್ಟ್ರಸೇವೆ ಮಾಡಬೇಕೆಂದಾಗಲೀ, ಪೊಲೀಸ್ ಪಡೆಗೆ ಸೇರುತ್ತಿರಲಿಲ್ಲ. ಒಟ್ಟು ಆಯ್ಕೆಯಾದವರನ್ನು ನೇಮಕಾತಿ ಖಾಯಂಗೊಳಿಸುವುದಾಗಿ ಮನ ಒಲಿಸಬೇಕಿತ್ತು. ವಾಸ್ತವವಾಗಿ ಪ್ರಾರಂಭದಲ್ಲಿ ಪೊಲೀಸ್ ಇಲಾಖೆಗೆ ನೇಮಕಾತಿಗೆ ವಿರೋದವು ಪ್ರಭಲವಾಗಿತ್ತು. ನೇಮಕವಾದರೂ ಪಡೆಯಲ್ಲಿ ಅಶಿಸ್ತಿನ ಮಟ್ಟ ಹೆಚ್ಚಾಗಿದ್ದು, ಕೆಲಸಕ್ಕೆ ರಾಜಿನಾಮೆ ನೀಡುವುದು ಪದತ್ಯಾಗ ಮಾಡುವುದು ಮುಂದುವರೆಯಿತು. ಆದ್ದರಿಂದ ವಸಹಾತು ಶಾಹಿಯಲ್ಲಿ ಪೊಲೀಸ್ ಇಲಾಖೆಗೆ ನೇಮಕಾತಿ ಅತ್ಯಂತ ಸರಳವಾಗಿರಲಿಲ್ಲ. ಪೊಲೀಸ್ ಇಲಾಖೆಗೆ ಸೇರುವ ಬಗ್ಗೆ ಪ್ರೇರಣೆ ಯೂ ಕಡಿಮೆಯಾಗಿತ್ತು. ಭಾರತೀಯರು ಪೊಲೀಸ್ ಇಲಾಖೆಯ ಕಾನ್‌ಸ್ಟೇಬಲ್ ಹುದ್ದೆ ಸೇರುವುದಕ್ಕೆ ಪ್ರಭಲವಾಗಿ ಎರಡು ಕಾರಣಗಳಿದ್ದವು. ಮೊದಲನೆಯದು ಯಾರು ಇಲಾಖೆಗೆ ಸೇರುತ್ತಾರೋ ಅವರ ವೈಯಕ್ತಿಕ ಬಯಕೆ ಹಾಗೂ ಒಪ್ಪಿಗೆ ಮತ್ತು ಜಾತೀಯ ಸ್ಥಾನಮಾನ, ಎರಡನೆಯದಾಗಿ ಸಾಧಾರಣವಾಗಿ ಪರ್ಯಾಯವಾದ ಯಾವುದೇ ಉದ್ಯೋಗಗಳು ಸಿಗದ ಕಾರಣ ಈ ಹುದ್ದೆಗೆ ಸೇರುತ್ತಿದ್ದರು[೭೬] ಬ್ರಿಟೀಷರಿಂದ ಬೆಳವಣಿಗೆಗೆ ಬಂದು ಸಾಮಾಜಿಕ ಸ್ಥಿರೀಕರಣವು ಅದರ ವ್ಯವಸ್ಥಿತ ವ್ಯಾಪಕತೆ ಮತ್ತು ಶೋಷಣೆಯಲ್ಲಿ ಅಪೂರ್ವವಾಗಿತ್ತು. ಇದು ಪೂರ್ಣವಾಗಿ ವಸಹಾತುಶಾಹಿಯ ಕಾಲ್ಪನಿಕ ಚಿತ್ರಣ ವಾಗಿರಲಿಲ್ಲ. ಇದು ಪ್ರತಿಯೊಂದು ಜನಾಂಗದ ವೈಯುಕ್ತಿಕ ಸ್ಥಾನಮಾನ, ಮತ್ತು ಉದ್ಯೋಗ ಹಾಗೂ ಕೆಲವು ಸಂಪ್ರದಾಯ, ರೂಢಿ, ಪದ್ಧತಿಗಳನ್ನು ಅವಲಂಬಿಸಿತ್ತು. ಉದಾಹರಣೆಗೆ ತಮಿಳು, ಚೆಟ್ಟಿ ಮತ್ತು ತೆಲುಗು ಕೊಮಟಿರವರುಗಳ ಪರಂಪರೆ ಎಂದರೆ ವ್ಯಾಪಾರ ಮತ್ತು ಹಣಕಾಸು ವ್ಯವಹಾರವಾಗಿತ್ತು. ಆದರೂ ಸಹ ವಸಹಾತುಶಾಹಿ ಪೊಲೀಸ್‌ನಲ್ಲಿ ಇವರು ಹೆಚ್ಚಿನ ಅನುಕೂಲ ಪಡೆದವರಾಗಿದ್ದರು. ವಿಪರ್ಯಾಸವೆಂದರೆ, ಹೋರಾಟದ ಪ್ರವೃತ್ತಿಯನ್ನು ಹೊಂದಿದ ಜಾತಿಯಿಂದ ಬಂದವ ರೆಂದು ಗುರುತಿಸಲ್ಪಟ್ಟವರ ಸಾಮಾಜಿಕ ಗೌರವಾದಾರಗಳು, ಇನ್ನೂ ಸಹ ಸೈನ್ಯದಿಂದ ಬಂದವರೆಂಬ ಅಭಿಪ್ರಾಯಕ್ಕೆ ಬದ್ಧ ವಾಗಿತ್ತು. ಅವರುಗಳಿಗೆ ಸೈನ್ಯ ಮತ್ತು ವಸಹಾತುಶಾಹಿಯ ಪೊಲೀಸ್‌ನಲ್ಲಿ ಕೆಲಸ ಮಾಡುವುದು ಕೇವಲ ತಕ್ಕುದಾದ ಮತ್ತು ಆಕರ್ಷಕವಾದ ಉದ್ಯೋಗವಾಗಿರಲಿಲ್ಲ. ಬದಲಿಗೆ ಹಿಂದಿನಿಂದಲೂ ಹೋರಾಟದ ಪ್ರವೃತ್ತಿಯಿಂದ ಬಂದವರೆಂಬ ಮನೋ ಭಾವನೆಯನ್ನು ಭದ್ರಪಡಿಸುವುದು ಮತ್ತು ಇನ್ನಷ್ಟು ಶಕ್ತಿಯುತವಾಗಿ ಹೆಚ್ಚಿಸುವುದಾಗಿತ್ತು. ಈ ರೀತಿ ವಸಹಾತುಶಾಹಿ ರಾಜ್ಯ ಗಳಲ್ಲಿ ಹೋರಾಟದ ಪ್ರವೃತ್ತಿಯಿಂದ ಬಂದವರಾದ ನಾಯರ್‌ಗಳಂತಹ ಜಾತಿಯವರೊಳಗೆ ಇದು ಪರಸ್ಪರ ಪೂರಕವಾದ ಸಂಬಂಧಗಳನ್ನು ಬೆಳೆಸಲು ಕಾರಣವಾಯಿತು. ಇದಕ್ಕೆ ಒಂದು ಪ್ರಮುಖ ಉದಾಹರಣೆ ಎಂದರೆ, ರಜಪೂತರು, ಇವರು ಉತ್ತರ ಆರ್ಕಾಟ್ ಮತ್ತು ಸುತ್ತಮುತ್ತ ವಾಸಿಸುತ್ತಿದ್ದ ಹಿಂದೂಸ್ಥಾನಿ ಭಾಷೆ ಮಾತನಾಡುವ ಅಲ್ಪಸಂಖ್ಯಾತ ಜನಾಂಗದ ವರಾಗಿದ್ದರು. ಇವರು ಶತಮಾನಗಳ ಹಿಂದೆ ಉತ್ತರದಿಂದ ದಕ್ಷಿಣಕ್ಕೆ ಬಂದ ಮುಸ್ಲಿಂ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ವರಾಗಿದ್ದರು. ಬಹುತೇಕ ರಜಪೂತರು ಸಿಪಾಯಿಗಳಾಗಿದ್ದರು. ಅಥವಾ ಯುದ್ಧ ಖೈದಿಗಳಾಗಿದ್ದರು.[೭೭] ಇದರಿಂದ ನೂರಾರು

ಸಂಖ್ಯೆಯಲ್ಲಿಯಾದರೂ (ಶೇಕಡವಾರು ಸ್ವಲ್ಪ ಕಡಿಮೆ ಇರಬಹುದು) ವಸಹಾತುಶಾಹಿ ಪೊಲೀಸ್ ವ್ಯವಸ್ಥೆಯ ಉದ್ಯೋಗದಲ್ಲಿರುವುದನ್ನು ಗುರುತಿಸಬಹುದು.

ಆದರೆ ಕೃಷಿಯನ್ನು ಮಾಡಿಕೊಂಡಿದ್ದ ಜಾತಿಯವರು ತಾವು ಸೈನಿಕ ಸಂಪ್ರದಾಯದಿಂದ ಬಂದವರೆಂದು ಹೇಳಿ ಕೊಂಡಿರಲಿಲ್ಲ. ಆದರೆ ತಮ್ಮ ವೃತ್ತಿಯಿಂದ ದೂರ ಸರಿದಿದ್ದರು. ಕಮ್ಮ, ವೆಲ್ಮ, ತೆಲುಗರು ಮೊದಲಾದ ಬಹುತೇಕ ತೆಲುಗು ಭಾಷಿಕ ರೈತರು ಹಾಗೂ ಜಮೀನುದಾರರು, ವಸಹಾತುಶಾಹಿ ಪೂರ್ವದ ಸೈನಿಕ ಹಾಗೂ ನಾಯಕ್‌ನ ಸ್ಥಾನಮಾನಗಳನ್ನು ಬಯಸಿದ್ದರು. ಅವರು ತಾವು ಕ್ಷತ್ರಿಯರೆಂದು ಹೇಳಿಕೊಂಡರು. [೭೮] ಇವರದು ರೈತ ಕುಟುಂಬವಾದರೂ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಉನ್ನತ ಸ್ಥಾನಮಾನ ಹೊಂದಿದ್ದರು. ಮತ್ತು ನಿರ್ಧಿಷ್ಟ ದೇಹದಾರ್ಢ್ಯ ಹೊಂದಿದ್ದರು. ಮತ್ತು ಅಲ್ಪಸ್ವಲ್ಪ ಅಕ್ಷರಸ್ಥರಾಗಿದ್ದರು. ಇವರಗಳನ್ನು ಮದ್ರಾಸ್ ಕಾನ್‌ಸ್ಟೇಬಲರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಮಾಡಿ ಕೊಳ್ಳಲಾಯಿತು. ಪೊಲೀಸ್ ಸೇವೆಗೆ ಸೇರುವುದನ್ನು ಬಿಟ್ಟರೆ ಸೇನೆಗೆ ಸೇರುವುದು ದ್ವಿತೀಯ ಆದ್ಯತೆಯಾಗಿತ್ತು. ದಕ್ಷಿಣ ದವರನ್ನು ಸೇನೆಯಲ್ಲಿ ನೇಮಕಾತಿ ಮಾಡಿಕೊಳ್ಳುವುದರಲ್ಲಿ ನಿಯಮಗಳನ್ನು ತಾರತಮ್ಯ ಮಾತ್ರವಲ್ಲದೇ ತಮ್ಮ ಮನೆಮಠ ಮುಚ್ಚಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಲು ಬಯಸಿದವರ ಮೇಲೂ ಈ ತಾರತಮ್ಯವಿತ್ತು. ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಪೊಲೀಸರನ್ನು ದೂರದ ಊರುಗಳಲ್ಲಿ ಸೇನೆಯೊಂದಿಗೆ ಯುದ್ಧ ಮಾಡಲು ಕಳಿಸಲಾಗುತ್ತಿದೆ ಎಂಬ ವದಂತಿಯಿಂದ ಪೊಲೀಸ್ ಇಲಾಖೆಗೆ ಸೇರಲು ಜನರು ಭಯಪಡುವಂತಾಯಿತು.[೭೯]

ಸೇನಾ ಸಂಪ್ರದಾಯದಿಂದ ಬಂದಿದ್ದೇನೆ, ಅಥವಾ ಕ್ಷತ್ರೀಯರೆಂದು ಹೇಳಿಕೊಳ್ಳುವ ಒಂದೇ ಕಾರಣಕ್ಕೆ ಪೊಲೀಸ್ ಪಡೆಯಲ್ಲಿ ನೇಮಕಾತಿಯಾಗುವ ಭರವಸೆಯಿರಲಿಲ್ಲ. ಬ್ರಿಟೀಷರು ಆಯ್ಕೆಗೆ ತಮ್ಮದೇ ವಿದಾನಗಳನ್ನು ಉಳಿಸಿ ಕೊಂಡಿದ್ದರು. ತಮ್ಮ ಜನಸಂಖ್ಯೆಗೆ ಹೋಲಿಸಿದರೆ ಪೊಲೀಸ್ ಇಲಾಖೆಯಲ್ಲಿ ಅವರ ಪ್ರಮಾಣ ಕಡಿಮೆಯಾಗಿತ್ತು. ಉದಾಹರಣೆಗೆ ಉತ್ತರ ಆರ್ಕಾಟ್‌ನಲ್ಲಿ ೧೯೨೦ ರ ವೇಳೆಗೆ ವನ್ನಿಯಾರ್ ಜನಾಂಗದವರು ಅಲ್ಲಿನ ಜನಸಂಖ್ಯೆಯ ಶೇಕಡಾ ೨೫ ಭಾಗವಿದ್ದರು. ಆದರೆ ಆ ಜಿಲ್ಲೆಯ ಪೊಲೀಸ್‌ನಲ್ಲಿ ಈ ಜಾತಿಯರು ೮% ಇದ್ದರು. ಈ ರೀತಿ ಜಾತಿ ಕಾರಣ ದಿಂದ ಪೊಲೀಸ್ ಇಲಾಖೆಯಲ್ಲಿ ನೇಮಕಾತಿಯನ್ನು ಬಯಸಿದರೂ ಸಹ ಮತ್ತು ತಾವು ನಿರ್ಧಿಷ್ಟ ಜಾತಿಯ ಹಿನ್ನಲೆಯಿಂದ ಬಂದವರೆಂದು ಹೇಳಿಕೊಂಡರೂ ಸಹ ಬ್ರಿಟೀಷರು ನಿರ್ಧಿಷ್ಟ ಸಂಖ್ಯೆಗಿಂತ ಹೆಚ್ಚಿಗೆ ಅವರನ್ನು ನೇಮಿಸಿಕೊಳ್ಳಲು ತಿರಸ್ಕರಿಸಿದರು.[೮೦]

ಅರೆಸೈನಿಕ ದೃಷ್ಟಿಕೋನದಲ್ಲಿ ಮಾತ್ರ ಪೊಲೀಸ್ ಇಲಾಖೆಯಲ್ಲಿ ನೇಮಕಾತಿಯ ಸಾಧ್ಯತೆಗಳಿದ್ದವು. ಉದಾಹರಣೆಗೆ ಬ್ರಾಹ್ಮಣರನ್ನು ಪೊಲೀಸ್ ಇಲಾಖೆಯಲ್ಲಿ ಅಧಿಕಾರಶಾಹಿ ಅಥವಾ ಗುಮಾಸ್ತರ ಕೆಲಸಕ್ಕೆ ನೇಮಿಸಲಾಗುತ್ತಿತ್ತು. ಇದು ರಾಜ್ಯದ ಸೇನೆಯಲ್ಲಿ, ಅಕ್ಷರಸ್ಥರಾದ ಇವರಿಗೆ ರಾಜ್ಯದ ಸೇನೆಯಲ್ಲಿ ತಕ್ಕದಾದ ಉದ್ಯೋಗಕ್ಕೆ ಪ್ರಸ್ತಾವವಾಗಿತ್ತು. ಜಾತೀಯ ನಿಬಂಧನೆ ಗಳು ಇವರು ದೈಹಿಕ ಶ್ರಮದ ಕೆಲಸ ಮಾಡಲು ನಿಷೇದಿಸಿತತು. ಸಮಾನ ವಿದ್ಯಾರ್ಹತೆ ಹೊಂದಿದ ಕಾನ್‌ಸ್ಟೇಬಲ್ ಮತ್ತು ಕಾರ್ಖಾನೆಯ ಕಾರ್ಮಿಕರು ಮತ್ತು ಕೃಷಿ ಕೆಲಸ ಮಾಡುವವರ ಸಂಬಳದ ಹೋಲಿಕೆ ಮಾಡಿ ಆಗಾಗ ಚರ್ಚೆಗಳು ನಡೆಯುತ್ತಿತ್ತು. ಮೇಲಿನ ದೈಹಿಕ ಶ್ರಮದ ವಿಚಾರವನ್ನು ಗಮನದಲ್ಲಿರಿಸಿಕೊಂಡು ಉನ್ನತ ಜಾತಿಯವರು ಪೊಲೀಸ್ ಇಲಾಖೆಗೆ ಸೇರುತ್ತಿದ್ದರು.[೮೧] ಆದರೆ ಈ ವಿಷಯವು ಅಷ್ಟೊಂದು ಸರಿಯಾದುದಾಗಿರಲಿಲ್ಲ. ಪೊಲೀಸ್ ಇಲಾಖೆಗೆ ಸೇರಿದ ಬಹುತೇಕ ಉದ್ಯೋಗಿಗಳು ಹೊಲ ಅಥವಾ ಕಾರ್ಖಾನೆಯಲ್ಲಿ ಕೆಲಸ ಮಾಡುವುದಕ್ಕೆ ಬದಲಾಗಿ ಎರಡನೇ ಉತ್ತಮ ಪರ್ಯಾಯ ಆಯ್ಕೆಯಾಗಿ ಇಲಾಖೆಗೆ ಸೇರಿದ್ದರು. ಆದರೆ ಅಕ್ಷರಸ್ಥರು ಮತ್ತು ಭಾರತದಲ್ಲಿನ ಉನ್ನತ ಜಾತಿಯವರಿಗೆ ಪೊಲೀಸ್ ಇಲಾಖೆಗೆ ಸೇರುವುದೆಂದರೆ ಅದು ದೈಹಿಕ ಶ್ರಮದ ವಿಷಯಕ್ಕಿಂತಲೂ ಗೌರವದ ಮತ್ತು ಅಧಿಕಾರಶಾಹಿಯ

ಪ್ರತ್ಯೇಕವಾಗಿತ್ತೆಂಬುದು ನಿಶ್ಚಯ[೮೨] ಇದು ಬ್ರಾಹ್ಮಣರು, ಮರಾಠರು, ವೆಲ್ಲಗಳು, ನಾಯರ್‌ಗಳು, ಬಲಿಜ, ನಾಯ್ಡುಗಳ ಸಂಖ್ಯೆ ಮದ್ರಾಸ್ ಕಾನ್‌ಸ್ಟೇಬಲರಿಯಲ್ಲಿ ಅಸಮರ್ಪಕವಾದ ಪ್ರಮಾಣದಲ್ಲಿತ್ತೆಂಬ ಬಗ್ಗೆ ವಿವರಣೆ ನೀಡುತ್ತದೆ.

ಆದಾಗ್ಯೂ ಕಾನ್‌ಸ್ಟೇಬಲ್‌ಗಳ ಸಂಬಳವು ಅತ್ಯಂತ ಕಡಿಮೆಯಾಗಿತ್ತು. ೧೯ ನೇ ಶತಮಾನದ ಉತ್ತರಾರ್ಧದಲ್ಲಿ ಪೊಲೀಸ್ ಅಧೀನ ಅಧಿಕಾರಿಗಳಾಗಿ ಸೇರಿಕೊಳ್ಳುವುದೆಂದರೆ, ಶರತತಿನ ಮೇಲೆ ಸರ್ಕಾರಿ ನೌಕರಿಗೆ ಸೇರುವುದಾಗಿತ್ತು. ಅದು ಅದೃಷ್ಟ, ಸಹಾಯ, ಬಹುಶ: ಕುಲಪಕ್ಷಪಾತ ಮತ್ತು ಸ್ವಜನ ಪಕ್ಷಪಾತವನ್ನು ಅವಲಂಬಿಸಿತ್ತು. ರಾಜ್ಯ ಸರಕಾರ ಸೇವೆಯಲ್ಲಿ ಅದರಲ್ಲೂ ಪೊಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನಗಳು ಹೆಚ್ಚಿನ ಗೌರವಯುತದಿಂದ ಮತ್ತು ಹೆಚ್ಚಿನ ಸಂಬಳವಿರುವ ಉದ್ಯೋಗಗಳಾಗಿತ್ತು. ೧೯೦೫ರ ಭಾರತೀಯ ಪೊಲೀಸ್ ಕಮಿಷನ್ನಿನ ವರದಿ ಬಂದ ನಂತರ ಇಂತಹ ಉನ್ನತ ಅಧಿಕಾರಶಾಹಿಯನ್ನು ಹೊಂದುವುದು ಬಹುತೇಕ ಅಸಾಧ್ಯವಾಯಿತು. ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ರವರುಗಳ ನೇರ ನೇಮಕಾತಿಯಿಂದಾಗಿ ಕಾನ್‌ಸ್ಟೇಬಲ್ ಹುದ್ದೆಯಿಂದ ಇನ್ಸ್‌ಪೆಕ್ಟರ್ ದರ್ಜೆಗೆ ಪದೋನ್ನತಿ ನೀಡುವುದನ್ನು ಬಹುತೇಕ ಕಡಿತಗೊಳಿಸಲಾಯಿತು. ಹಿಂದೆ ಠಾಣಾಧಿಕಾರಿಯ ಹುದ್ದೆಯನ್ನು ಹೊಂದುವುದೂ ಸಹ ಕಾನ್‌ಸ್ಟೇಬಲ್‌ಗಳಿಗೆ ದೊಡ್ಡ ಬಹುಮಾನದಂತಾಗಿತ್ತು.[೮೩] ಈ ಹುದ್ದೆ ಮೊದಲು ಹೆಡ್‌ಕಾನ್‌ಸ್ಟೇಬಲ್‌ಗಳು ನಿರ್ವಹಿಸುತ್ತಿದ್ದರು. ಅದನ್ನು ರದ್ದುಗೊಳಿಸಿ ಸಬ್‌ಇನ್ಸ್‌ಪೆಕ್ಟರ್‌ಗಳು ಹೊಂದುವಂತೆ ಮಾಡಲಾಯಿತು. ಇದೂ ಸಹ ಕಾನ್‌ಸ್ಟೇಬಲರಿಯನ್ನು ಕೆಳದರ್ಜೆಗೆ ತಳ್ಳುವುದಕ್ಕೆ ಸಮಾನ ಕಾರಣವಾಯಿತು. ಆನಂತರದಲ್ಲಿ ಕಾನ್‌ಸ್ಟೇಬಲ್‌ಗಳು ಉನ್ನತ ಸ್ಥಾನಕ್ಕೆ ಹೋಗುವುದು ಕೊನೆಯಾಯಿತು. ವಿದ್ಯಾವಂತರು ಮತ್ತು ಉನ್ನತ ಜಾತಿಯವರು ಏಕೆ ಕಾನ್‌ಸ್ಟೇಬಲ್‌ಗಳನ್ನು ದೂರೀಕರಿಸುತ್ತಾ ಹೋದರು ಮತ್ತು ಏಕೆ ಕಾನ್‌ಸ್ಟೇಬಲ್ ಹುದ್ದೆಯು ಕಡಿಮೆ ಶಿಕ್ಷಣ ಹೊಂದಿದವರ ಬಳಿಯೇ ಉಳಿಯಿತು ಮತ್ತು ಜಾತಿ ಆಧಾರಿತವಾಗಿತ್ತೆಂಬುದಕ್ಕೆ ಈ ಮೇಲಿನದೂ ಒಂದು ಕಾರಣವಾಗಿತ್ತು.

ಎರಡನೇ ಮಹಾಯುದ್ಧಕ್ಕಿಂತ ಮೊದಲು ಬಹುತೇಕ ಮಂದಿ ಪೊಲೀಸ್‌ಗೆ ಸೇರುತ್ತಿದ್ದುದು ಯಾವುದೋ ದೂರ ದೃಷ್ಟಿಯಿಂದಲೋ ಅಥವಾ ಅದು ಅಪೇಕ್ಷಣೀಯವದುದೆಂಬ ಕಾರಣಕ್ಕಾಗಿ ಆಗಿರಲಿಲ್ಲ. ಅದು ಕೇವಲ ನಿರುದ್ಯೋಗ ತಡೆಯಲು, ಹಸಿವು ಮತ್ತು ತೀವ್ರ ಬಡತನವನ್ನು ತಡೆಯುವ ಸಲುವಾಗಿತ್ತು. ಎಲ್ಲಿಯವರೆಗೆ ನಾಡಿನ ಇತರೆಡೆಗಳಲ್ಲಿ ಸಾಕಷ್ಟು ಉದ್ಯೋಗವಕಾಶಗಳು ಸಿಗುತ್ತಿದ್ದವೋ ಅಲ್ಲಿಯವರೆಗೆ ಇಲಾಖೆಯಲ್ಲಿ ನೇಮಕಾತಿ ಕಷ್ಟವಾಗಿತ್ತು. ಪೊಲೀಸ್ ಅಧಿಕಾರಿಗಳಿಗೆ ತಮಗೆ ಬೇಕಾದ ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇತ್ತು.

ಪೊಲೀಸ್ ಇಲಾಖೆಯ ನೌಕರರಿಗೆ ಉಳಿದ ಇಲಾಖೆಗಳಿಗಿಂತಲೂ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಅದರಲ್ಲೂ ಇಲಾಖೆಯ ಹಿರಿಯ ಮತ್ತು ಕಿರಿಯ ಅಧಿಕಾರಿಗಳಲ್ಲಿ ವೇತನದ ತಾರತಮ್ಯ ಬಹಳಷ್ಟು ಇತ್ತು. ಇದಕ್ಕೆ ಮುಖ್ಯ ಕಾರಣವೆಂದರೆ, ಹಿರಿಯ ಅಧಿಕಾರಿಗಳು ಹೆಚ್ಚಾಗಿ ಯುರೋಪಿಯನ್ನರಾಗಿದ್ದು, ಕಿರಿಯ ಅಧಿಕಾರಿಗಳು ಭಾರತೀಯರಾಗಿದ್ದರು. ಐ.ಜಿ.ಪಿರವರು ಮಾಸಿಕ ರೂ ೨೫೦೦ ವೇತನ ಪಡೆದರೆ ಪ್ರಥಮ ದರ್ಜೆಯ ಕಾನ್‌ಸ್ಟೇಬಲ್ ರೂ ೮ ಹಾಗೂ ದ್ವಿತೀಯ ದರ್ಜೆ ಕಾನ್‌ಸ್ಟೇಬಲ್ ರೂ ೭, ತೃತೀಯ ಕಾನ್‌ಸ್ಟೇಬಲ್ ರೂ ೬, ಗ್ರಾಮಕಾವಲುಗಾರರು ರೂ ೩ ರಿಂದ ೪, ಮಾಸಿಕ ವೇತನ ಪಡೆಯುತ್ತಿದ್ದರು. ಅಂದರೆ ತೃತೀಯ ದರ್ಜೆಯ ಕಾನ್‌ಸ್ಟೇಬಲ್‌ಗಿಂತ ೪೧೬ ಪಟ್ಟು ಹೆಚ್ಚಿನ ಸಂಬಳ ಐಜಿಪಿರವರಿಗೆ ಬರುತ್ತಿತ್ತು. ಕಾವಲುಗಾರನಿಗಿಂತ ೬೨೫ ಪಟ್ಟು ಹೆಚ್ಚಿಗೆ ಸಂಬಳ ಐಜಿಪಿಗೆ ಬರುತ್ತಿತ್ತು. ನಿಜವಾಗಿಯೂ ಹಗಲು, ರಾತ್ರಿ ಗ್ರಾಮವನ್ನು ರಕ್ಷಿಸುವ ಕೆಳಹಂತದ ಪೊಲೀಸರಿಗೆ ಅತ್ಯಂತ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಬಹುಶ: ಇದರಿಂದಾಗಿಯೇ ಪೊಲೀಸರು ಭ್ರಷ್ಟಾಚಾರಕ್ಕೆ ಇಳಿದರೆಂದು ಕಾಣುತ್ತದೆ.

ಪ್ರತಿಯೊಬ್ಬ ಇನ್ಸ್‌ಪೆಕ್ಟರ್‌ನು ಅಶ್ವಾರೂಢನಾಗಿರುತ್ತಿದ್ದನು. ಇವರ ಸಂಬಳದ ಒಂದು ಭಾಗ ಕುದುರೆಗಳ ಭತ್ಯೆ

ರೂಪದಲ್ಲಿ ಬರುತ್ತಿತ್ತು. ಸೇನೆಗೆ ಸಂಬಂಧಿಸಿದ ಅಧಿಕಾರಿಗಳು ರಜಾ ಕಾಲದ ನಿಯಮಗಳಿಗೆ ಅನುಗುಣವಾಗಿ ಬರುತ್ತಿದ್ದರು. ಮಿಲಿಟರಿ ಅಧಿಕಾರಿಗಳಲ್ಲದವರ ಸಂಬಳ ತಿಂಗಳಿಗೆ ೨೦ ರೂಪಾಯಿಗಳಾಗಿತ್ತು. ಕಾನ್‌ಸ್ಟೇಬಲ್ ಮತ್ತು ಕೆಳ ದರ್ಜೆಯವರಿಗೆ ಸಾಂದರ್ಭಿಕ ಮತ್ತು ಕಾಯಿಲೆ ರಜೆಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಎಸ್‌ಪಿರವರು ಮಂಜೂರು ಮಾಡುತ್ತಿದ್ದರು.[೮೪]

೧೮೫೯ರ ೨೫ ನೇ ಕಾಯ್ದೆ ಪ್ರಕಾರ ಪಿಂಚಣಿ ಹಣವನ್ನು ಮಂಜೂರು ಮಾಡುವ ಆದೇಶವು ಹೊರಬಂತು. ಈ ಕಾಯ್ದೆ ೧೮೫೬ರ ೧೩ ನೇ ಕಾಯ್ದೆಯನ್ನು ೧೮೬೭ ರ ೮ ನೇ ಕಾಯ್ದೆಯೊಂದಿಗೆ ಸಮ್ಮಿಳಿತಗೊಳಿಸಿ ಹೊರತರಲಾಯಿತು. ಇವನ್ನು ೧೮೮೯ ರ ೧೦ ನೇ ಕಾಯ್ದೆಯಲ್ಲಿ ರದ್ದುಗೊಳಿಸಲಾಯಿತು. ಪೊಲೀಸ್ ಇಲಾಖೆಯ ಸದಸ್ಯರಿಗೆ ನಿವೃತ್ತಿ ವೇತನ ವನ್ನು ಮತ್ತು ಗ್ರಾಚ್ಯುಟಿಯನ್ನು (ನಿವೃತ್ತಿ ವೇಳೆ ನೀಡುವ ಹಣದ ರೂಪದ ಇನಾಮು) ಸರಕಾರದ ಇತರ ಇಲಾಖೆಗಳಲ್ಲಿ ಕರಾರುಬದ್ಧವಲ್ಲದೇ ನೇಮಕವಾದ ಸೇವಕರ ಕಾನೂನಿನಂತೆ ನೀಡಲಾಗುತ್ತಿತ್ತು. ಅದರ ಹೊರತಾಗಿ ಪೊಲೀಸರಿಗೆ 'ಪೆನ್ಷನ್ ಕೋಡ್' ಅನ್ವಯವಾಗುತ್ತಿತ್ತು. ಕೆಳದರ್ಜೆಯಿಂದ ಬಂದವರಿಗೆ ತಿಂಗಳಿಗೆ ರೂ.೧೦/– ಸಂಬಳ ನೀಡಲಾಗುತ್ತಿತ್ತು.[೮೫]

ವಸತಿ :

ಕೆಳಹಂತದ ಮುಖ್ಯಪೇದೆ ಮತ್ತು ಸಿಬ್ಬಂದಿಯವರಿಗೆ ಪೊಲೀಸ್ ಠಾಣೆಗಳ ಸಮೀಪದಲ್ಲೇ ಇರುವ ಪೊಲೀಸ್ ಲೇನ್ ಅಥವಾ ಗುಡಿಸಲುಗಳು (Huts)ಗಳಲ್ಲಿ ವಾಸವಿರಬೇಕಿತ್ತು. ಅಗತ್ಯ ಬಿದ್ದಾಗ ತುರ್ತು ಕೆಲಸಗಳಿಗೆ ಮತ್ತು ದೈನಂದಿನ ಕೆಲಸ ಗಳಿಗೆ ಒದಗುವಂತೆ ಇರಬೇಕಾಗಿತ್ತು. ಇದು ಇಲಾಖೆಯಲ್ಲಿ ಅಗತ್ಯವಾದ ಸರಿಯಾದ ಶಿಸ್ತುಪಾಲನೆ ಮತ್ತು ಸಿಬ್ಬಂದಿಯವರ ಮೇಲ್ವಿಚಾರಣೆಯ ದೃಷ್ಟಿಯಿಂದ ಅಗತ್ಯವಾದ ವ್ಯವಸ್ಥೆಯಾಗಿತ್ತು.[೮೬] ಈಗಲೂ ಸಹ ಅಸ್ತಿತ್ವದಲ್ಲಿರುವ ಸ್ವಾತಂತ್ರ್ಯಪೂರ್ವ ಕಾಲದ ಪೊಲೀಸ್ ಠಾಣಾ ಕಟ್ಟಡಗಳನ್ನು ಗಮನಿಸಿದಲ್ಲಿ ಆ ಕಟ್ಟಡದ ಸುತ್ತಮುತ್ತಲೇ ಪೊಲೀಸ್ ವಸತೀಗೃಹ ಇರು ವುದನ್ನು ಗಮನಿಸಬಹುದಾಗಿದೆ. ಹಿಂದಿನ ಕಾಲದ ಪೊಲೀಸರಿಗೆ ವಾಹನ ಸೌಕರ್ಯಗಳು ಇರಲಿಲ್ಲ. ಆಗ ತುರ್ತು ಕೆಲಸ ಗಳಿಗೆ ಅಂದರೆ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಬರುವ ಸಂದರ್ಭಗಳಲಿ ತಕ್ಷಣ ಪೊಲೀಸ್ ಸಿಬ್ಬಂದಿಗಳು ಕೆಲಸಕ್ಕೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪೊಲೀಸ್ ಠಾಣೆಗಳ ಪಕ್ಕದಲ್ಲಿಯೇ ಪೊಲೀಸ್ ವಸತಿಗೃಹಗಳು ಇರುತ್ತಿದ್ದವು. ಸರಕಾರ ದಿಂದ ಸಿಬ್ಬಂದಿಯವರಿಗೆ ವಸತಿಗೃಹಗಳನ್ನು ಒದಗಿಸ ಲಾಗಿತ್ತು. ಆ ಕಟ್ಟಡದ ರಿಪೇರಿ ಮಾಡುವ ಸಲುವಾಗಿ ಬಾಡಿಗೆಯನ್ನು ವಿಧಿಸಲಾಗಿತ್ತು. ಎಲ್ಲಾ ದರ್ಜೆಯ ಇನ್‌ಸ್ಪೆಕ್ಟರ್‌ರವರುಗಳು ಅವರೇ ವಸತಿ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಆದರೆ ಅವರು ಕೆಲಸ ನಿರ್ವಹಿಸುವ ವಲಯದೊಳಗೆ ವಾಸ ಮಾಡಬೇಕಿತ್ತು. ಅವರು ವಲಯದ ಒಳಗೆ ಆಗಾಗ ಸಂಚರಿಸಬೇಕಿತ್ತು. ಕೆಲವು ಕಡೆಗಳಲ್ಲಿ ಸರಕಾರವು ಇವರಿಗೆ ವಸತಿಗೃಹ ನಿರ್ಮಿಸಿದ್ದರೆ ಅದಕ್ಕೆ ಅವರು ಬಾಡಿಗೆ ನೀಡಬೇಕಿತ್ತು.[೮೭]

ಪೊಲೀಸ್ ಇಲಾಖೆಯ ಕಾರ್ಯವ್ಯಾಪ್ತಿ

ಪೊಲೀಸರು ಮಾಡಬೇಕಾದ ಆದ್ಯ ಕರ್ತವ್ಯ ಎಂದರೆ, ಸಮಾಜದಲ್ಲಿ ಶಾಂತಿ ಕಾಪಾಡುವುದು, ಅಪರಾಧ ಗಳನ್ನು ತಡೆಯುವುದು ಮತ್ತು ತಪ್ಪಿತಸ್ಥ ಅಪರಾಧಿಗಳನ್ನು ಬಂಧಿಸುವುದು ಮತ್ತು ಘೋರ ಅಪರಾಧಗಳನ್ನು ಮಾಡಿದ ಅಪರಾಧಿ ಗಳ ಬಗ್ಗೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುವುದು. ಅಲೆಮಾರಿಗಳ ಬಗ್ಗೆ ಹಾಗೂ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ನಿಗಾ ಇಟ್ಟು ಅವರ ಚಲನವಲನಗಳ ಬಗ್ಗೆ ಪರಿಶೀಲಿಸುವುದು, ನಗರದ ಮತ್ತು ಹಳ್ಳಿ ರಸ್ತೆ ಗಳಲ್ಲಿ ಗಸ್ತು ತಿರುಗುವುದು, ಸಾರ್ವಜನಿಕರಿಗೆ ಆಗುವ ಉಪದ್ರವಗಳನ್ನು ತಡೆಯುವುದು, ಸಾರ್ವಜನಿಕ ಹಿತಾಸಕ್ತಿಯಿಂದ, ಕಾನೂನು ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧಗಳ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ಒದಗಿಸುವುದು, ತೂಕ ಮತ್ತು ಅಳತೆಯ ಬಗ್ಗೆ ತಪಾಸಣೆ ನಡೆಸುವುದು, (ಈ ಸಂದರ್ಭದಲ್ಲಿ ತೂಕ ಮತ್ತು ಅಳತೆಯ ಬಗ್ಗೆ ಪ್ರತ್ಯೇಕ ಇಲಾಖೆ

ಇರಲಿಲ್ಲ) ದನಗಳ ದೊಡ್ಡಿಯ ನಿರ್ವಹಣೆ, (ಜನರು ಹಸುಗಳನ್ನು ಕಾವಲು ಕಾಯದೇ ಹಾಗೆಯೇ ಮೇಯಲು ಬಿಟ್ಟು ಅವುಗಳು ಸಾರ್ವಜನಿಕರ ಬೆಳೆಯನ್ನು ತಿಂದು ನಾಶಪಡಿಸಿದರೆ ಅವುಗಳನ್ನು ಹಿಡಿದು ಸಾರ್ವಜನಿಕ ದನಗಳ ದೊಡ್ಡಿಗಳಿಗೆ ಕಳುಹಿಸಲಾಗುತ್ತಿತ್ತು, ಸರಕಾರದ ವತಿಯಿಂದ ಅವುಗಳನ್ನು ಸಾಕಲಾಗುತ್ತಿತ್ತು. ಸಂಬಂಧಪಟ್ಟ ಹಸುಗಳ ಮಾಲಿಕರು ಸರಕಾರಕ್ಕೆ ದಂಡವನ್ನು ಹಾಗೂ ಅವುಗಳನ್ನು ಸಾಕಲು ತಗಲಿದ ವೆಚ್ಚವನ್ನು ಕಟ್ಟಿ, ಹಸುಗಳನ್ನು ಬಿಡಿಸಿಕೊಂಡು ಹೋಗ ಬೇಕಾಗಿತ್ತು.) ಸಮನ್ಸ್ ಮತ್ತು ವಾರಂಟುಗಳ ಜಾರಿ ಮತ್ತು ನ್ಯಾಯಾಲಯ ಮತ್ತು ಮ್ಯಾಜಿಸ್ಟ್ರೇಟರಿಂದ ನೀಡಲ್ಪಟ್ಟ ಅಪರಾಧ ವಿಷಯಗಳಿಗೆ ಸಂಬಂಧಿಸಿದ ಇತರ ನೋಟೀಸುಗಳ ಜಾರಿ, ಬಂಧಿಗಳನ್ನು, ಶಿಕ್ಷೆಗೆ ಒಳಗಾದವರನ್ನು ಸೂಕ್ತ ಭದ್ರಿಕೆಯಲ್ಲಿ ಡುವುದು, ಖಜಾನೆಗಳ ಪಹರೆ ಕಾಯುವುದು, ಸಾರ್ವಜನಿಕವಾಗಿ ಪ್ರಾಮುಖ್ಯತೆಯನ್ನು ಪಡೆದ ವಿಷಯಗಳ ಬಗ್ಗೆ ದೇಶದ ವಿವಿಧ ಭಾಗಗಳ ಪೊಲೀಸರೊಂದಿಗೆ ಪ್ರತೀದಿನ ಸಂಪರ್ಕ ಇಟ್ಟುಕೊಂಡು ಗುಪ್ತ ಮಾಹಿತಿಯನ್ನು ವಿನಿಮಯ ಮಾಡಿ ಕೊಳ್ಳುವುದು ಪೊಲೀಸರ ಸಾಮಾನ್ಯ ಕರ್ತವ್ಯವಾಗಿತ್ತು.[೮೮] ಪೊಲೀಸರ ಈ ಸಾಮಾನ್ಯ ಕರ್ತವ್ಯಗಳ ಜೊತೆಗೆ ಜೈಲುಗಳನ್ನು ಕಾವಲು ಕಾಯಬೇಕಿತ್ತು. ದೇಶದ ಗಡಿಭಾಗದಲ್ಲಿ ನಡೆಯುವ ಕಳ್ಳಸಾಗಾಣೆ ತಡೆಯುವುದು, ಅಬಕಾರಿ ಕಾಯ್ದೆಯಡಿ ಮದ್ಯ ತಯಾರಿಕಾ ಘಟಕಗಳ ಪಹರೆ ಕಾಯುವುದು, ಸಾಂಕ್ರಾಮಿಕ ರೋಗ ಕಾಯ್ದೆ ಅನ್ವಯ ಮುನ್ಸಿಫಲ್ ಮತ್ತು ಕಂಟೋನ್ ಮೆಂಟ್‌ಗಳಲ್ಲಿ ಕೆಲಸ ನಿರ್ವಹಿಸುವುದು, ಈ ಹಿಂದೆ ಮದ್ರಾಸ್ ಟ್ರೂಪ್‌ಗಳು ನಿರ್ವಹಿಸುತ್ತಿದ್ದ ಗಡಿ ಠಾಣೆ ಕಾಯುವ ಕೆಲಸ ವನ್ನು ಪೊಲೀಸರಿಗೆ ವಹಿಸಲಾಯಿತು. ಪ್ರತ್ಯೇಕವಾದ ಅಪರಾಧ ಪತ್ತೆದಳಗಳು ಇರಲಿಲ್ಲ. ಘೋರ ಅಪರಾಧಗಳನ್ನು ಪತ್ತೆ ಹಚ್ಚುವಲ್ಲಿ ಸುಳಿವುಗಳನ್ನು ಪಡೆಯಲು ಸಾಮಾನ್ಯ ಪೊಲೀಸರು ವಿಫಲರಾದಲ್ಲಿ ವಿಶೇಷ ಬುದ್ಧಿ ಸಾಮಾರ್ಥ್ಯ ಇರುವ ಹಿರಿಯ ಅಧಿಕಾರಿಗಳನ್ನು ಈ ಕೆಲಸಕ್ಕೆ ನೇಮಿಸಲಾಗುತ್ತಿತ್ತು. ಬಹಳ ಗಮನವಿಟ್ಟು ಸರಿಯಾಗಿ ಕೆಡಿಗಳನ್ನು ಅಲೆಮಾರಿ ಗುಂಪುಗಳ ಮೇಲೆ ಮತ್ತು ಪ್ರೆಸಿಡೆನ್ಸಿಯಲ್ಲೆಲ್ಲಾ ಮಾಡಿರುವ ಅಪರಾಧಿಗಳ ವರ್ಗೀಕರಣ ದಲ್ಲಿರುವ ಅಪರಾಧಿಗಳ ಬಗ್ಗೆ ಗಮನಹರಿಸಿ ಮಾಹಿತಿ ಸಂಗ್ರಹಿಸುವುದು, ಅಪರಾಧಗಳ ಪತ್ತೆಗೆ ಸಹಕರಿಸುವುದು.

ಸಂಜ್ಞೆಯ ಅಪರಾಧಗಳನ್ನು ಕಾನೂನಿನಲ್ಲಿ ವಿವರಿಸಿದಂತೆ ಮ್ಯಾಜಿಸ್ಟ್ರೇಟರ ಅನುಮತಿಯಿಲ್ಲದೇ ಪೊಲೀಸರು ವಿಚಾರಣೆ ನಡೆಸುತ್ತಿದ್ದರು. ಆದರೆ ಆ ಸಂಜ್ಞೆಯ ಅಪರಾಧಗಳನ್ನು ಮ್ಯಾಜಿಸ್ಟ್ರೇಟರಿಂದ ಪೂರ್ವಾನುಮತಿ ಪಡೆದ ನಂತರವೇ ತನಿಖೆ ನಡೆಸಬಹುದಾಗಿತ್ತು. ವ್ಯಕ್ತಿ, ಆಸ್ತಿ ಮತ್ತು ರಾಜ್ಯದ ವಿರುದ್ಧ ನಡೆದ ಘೋರ ಅಪರಾಧಗಳಲ್ಲಿ ಮೊದಲ ಹಂತದಲ್ಲೇ ಆರೋಪಿಗಳನ್ನು ದಸ್ತಗಿರಿ ಮಾಡಲು ವಾರೆಂಟ್ ಜಾರಿಗೊಳಿಸುವಂತೆ ಈ ಹಿಂದೆ ಮ್ಯಾಜಿಸ್ಟ್ರೇಟರುಗಳಿಗೆ ನಿರ್ದೇಶಿಸ ಲಾಗಿತ್ತು.ಸಣ್ಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮನ್ಸ್‌ಗಳನ್ನು ಜಾರಿಗೊಳಿಸುವಂತೆ ಸೂಚಿಸಲಾಗಿತ್ತು. ಸೂಪರಿಂಟೆಂಡೆಂಟ್ ಮತ್ತು ಸಹಾಯಕರುಗಳು ಪೊಲೀಸ್ ಕೇಂದ್ರ ಸ್ಥಾನದಲ್ಲಿ ಪ್ರತೀ ತಿಂಗಳು ನಡೆಯುವ 'ಅಪರಾಧ ಸಭೆಗಳಲ್ಲಿ ಭಾಗವಹಿಸ ಬೇಕಿತ್ತು. ಮತ್ತು ಪ್ರಮುಖ ಪ್ರಕರಣಗಳ ವಿಚಾರಣೆಯಲ್ಲಿ ಭಾಗವಹಿಸಬೇಕಿತ್ತು.

೫.೪.೩- ಮದ್ರಾಸ್ ಪ್ರೆಸಿಡೆನ್ಸಿಯ ಅಪರಾಧಗಳು ಮತ್ತು ಇತರ ವಿಚಾರಗಳು

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧-೮೨ -೮೩ ರಲ್ಲಿ ಘಟಿಸಿದ ಅಪರಾಧಗಳು, ಪೊಲೀಸರ ಕ್ರಮ, ಪರಿಣಾಮಗಳ ಪಟ್ಟಿಗಳ ಬಗ್ಗೆ ಅನುಬಂಧ - ೭ ನ್ನು ನೋಡಿರಿ[೮೯]

ಕಾರಾಗೃಹ :

ಪ್ರತೀ ಜೈಲುಗಳಲ್ಲಿ, ಪಹರೆಯವರು ಮತ್ತು ಜೈಲಿನ ಕಟ್ಟಡದ ಮೇಲ್ಭಾಗದಲ್ಲಿ ಹಗಲು, ರಾತ್ರಿ ನಿರ್ಧಿಷ್ಟ ಸಂಖ್ಯೆ ಯಲ್ಲಿ, ಖಾಯಂ ಆಗಿ ಪಹರೆ ಕಾಯಲು ಪೊಲೀಸ್ ಪಡೆ ಇತ್ತು. ಈ ಪಹರೆ ಕರ್ತವ್ಯದವರಿಗೆ ಒಂದು ವಾರ ಕೆಲಸ ಮಾಡಿದ ನಂತರ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಮತ್ತೊಂದು ಪೊಲೀಸರ ತಂಡ ಕರ್ತವ್ಯ ನಿರ್ವಹಿಸುತ್ತಿತ್ತು.

ಹೀಗೆ ಇದು ಸರದಿ ಪ್ರಕಾರ ನಡೆಯುತ್ತಿತ್ತು. ಪಹರೆ ಕರ್ತವ್ಯಕ್ಕೂ ಪೊಲೀಸರನ್ನೇ ನೇಮಿಸುತ್ತಿದ್ದರು. (ಏಳು ಜನ ಖೈದಿಗಳಿಗೆ ಒಬ್ಬ ಪೊಲೀಸರ ಪ್ರಮಾಣದಲ್ಲಿ ಗಾರ್ಡ್‌ಗಳನ್ನು ಪಹರೆಗೆ ನೇಮಿಸಲಾಗುತ್ತಿತ್ತು)

೧೮೮೧ ರಿಂದ ೧೮೮೫ ರವರೆಗಿನ ಮದ್ರಾಸ್ ಪ್ರೆಸಿಡೆನ್ಸಿಯ ಕಾರಾಗೃಹದಲ್ಲಿದ್ದ ಖೈದಿಗಳು ಸಂಖ್ಯೆ, ಪೊಲೀಸ್ ಪಹರೆ ಮತ್ತು ಖರ್ಚುವೆಚ್ಚಗಳ ವಿವಗಳ ಬಗ್ಗೆ ಅನುಬಂಧ – ೭ ನ್ನು ನೋಡಿರಿ. [೯೦]

ಅಪರಿಚಿತ ಶವ :

ಅನುಮನಾಸ್ಪದವಾಗಿ ಅಥವಾ ಹಿಂಸೆಯಿಂದ ಸತ್ತದೆಂದು ತಿಳಿದು ಬಂದರೆ ಗ್ರಾಮದ ಮುಖ್ಯಸ್ಥನು ಶವ ಪಂಚನಾಮೆ ನಡೆಸಬೇಕಿತ್ತು. ಮತ್ತು ಆ ಸಂದರ್ಭದಲ್ಲಿ ಪೊಲೀಸರು ಹಾಜರಿರಬೇಕಿತ್ತು. ಇವರು ಮ್ಯಾಜಿಸ್ಟ್ರೇಟರಿಗೆ ಈ ಬಗ್ಗೆ ಸಹಕರಿಸುವ ಜವಾಬ್ದಾರಿಯನ್ನು ಹೊಂದಿದ್ದರು. ಮ್ಯಾಜಿಸ್ಟ್ರೇಟರುಗಳಿಗೆ ಪೊಲೀಸ್ ಇಲಾಖೆಯಿಂದ ಮನೆ ಕೆಲಸ (ಆರ್ಡರ್‌ಲಿ) ದವರನ್ನು ಮಂಜೂರು ಮಾಡಲಾಗಿತ್ತು. ಕಾಲಕ್ರಮೇಣ ಅವರನ್ನು ಇಲಾಖಾ ಕೆಲಸಗಳಿಗೆ ಬಳಸಿಕೊಳ್ಳಲಾಯಿತು. ಇವರುಗಳನ್ನು ವಾರಕ್ಕೊಮ್ಮೆ ಕರ್ತವ್ಯದಿಂದ ಬಿಡುಗಡೆಗೊಳಿಸುತ್ತಿದ್ದರು.

ಪ್ರೊಸೆಸ್ :

ಅಪರಾಧಗಳಿಗೆ ಸಂಬಂಧಿಸಿದ ಸಮನ್ಸ್ ಮತ್ತು ವಾರಂಟ್‌ಗಳನ್ನು ಪೊಲೀಸರು ಜಾರಿಗೊಳಿಸುತ್ತಿದ್ದರು. ೧೮೭೮ ನೇ ಇಸವಿಯಲ್ಲಿ ಸಮನ್ಸ್ ಮತ್ತು ವಾರೆಂಟ್‌ಗಳು ಸರಿಯಾಗಿ ಜಾರಿಯಾಗುತ್ತಿಲ್ಲ ಎಂಬ ಕಾರಣಕ್ಕೆ ೪೦೦ ಜನ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯವರನ್ನು ಈ ಕೆಲಸಕ್ಕೆ ನೇಮಿಸಲಾಯಿತು. *ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧ ರಿಂದ ೧೮೮೫ ರವರೆಗೆ ಸಮನ್ಸ್ ಮತ್ತು ವಾರೆಂಟ್ ಜಾರಿಗೊಳಿಸಿದ ಪಟ್ಟಿಯ ಬಗ್ಗೆ ಅನುಬಂಧ-೮ ನ್ನು ನೋಡಿರಿ* [೯೧]

ಅಪರಾಧ ಮಾಡುವ ಗುಂಪುಗಳು

ಅಲೆಮಾರಿ ವರ್ಗಗಳಲ್ಲಿ ಹಲವು ವಿಧಗಳಿದ್ದವು. ಆದರೆ ಅವುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅಪರಾಧಗಳ ದೃಷ್ಟಿಯಿಂದ ಬಹಳ ತೊಂದರೆ ನೀಡುತ್ತಿದ್ದ ವರ್ಗವಾಗಿದ್ದವು. ಉತ್ತರ ಭಾಗದ ಮೂಲ ಬ್ರಿಂಜರಿ ಪ್ರೆಸಿಡೆನ್ಸಿಯಲ್ಲಿ ಅಪರಾಧಕ್ಕೆ ಒಮ್ಮೊಮ್ಮೆ ಕಾಣಿಸುವ ವರ್ಗವಾಗಿತ್ತು. ಇವರು ಕೋಳಿ ಮಾಂಸ ಮಾಡಿಕೊಂಡು ಪೂರ್ವ ಗಟ್ಟದ ತಗ್ಗು ಪ್ರದೇಶದಲ್ಲಿ ಇದ್ದರೆ, ಉತ್ತರದಲ್ಲಿ ಉಪ್ಪಿನ ಮಡಿ ಮಾಡಿಕೊಂಡಿದ್ದರು. ಇವರು ಗಂಜಾಮ್, ಗೋದಾವರಿ ಮತ್ತು ವಿಜಗಪಟ್ನಮ್ ಇವರು ಕರಾವಳಿ ಪ್ರದೇಶಕ್ಕೆ ಹೋಗುವ ದಾರಿಯಲ್ಲಿ ಅಪರಾದಗಳನ್ನು ಮಾಡುತ್ತಿದ್ದರು. 'ಲುಂಬಾಡಿ' ಇವರು ನೋಡಲು ರೂಪದಲ್ಲಿ ಮತ್ತು ಅವರ ನಡೆ, ನುಡಿಗಳಲ್ಲಿ ಬ್ರಿಂಜರಿ ಜನಾಂಗದವರಂತೆ ಇದ್ದರು. ಈ ಎರಡೂ ಜನಾಂಗಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುವ ಸ್ವಭಾವದವರಾಗಿದ್ದರು. ಈ ಜನಾಂಗದ ಮಹಿಳೆಯರು ನೋಡಲು ರೂಪದಲ್ಲಿ 'ಜಿಪ್ಸಿ' ಜನಾಂಗದವರಂತೆ ಕಾಣುತ್ತಿದ್ದರು. ಈ ಲುಂಬಾಡಿ ಜನಾಂಗದವರು ಸಂಪೂರ್ಣವಾಗಿ 'ಅಲೆಮಾರಿ'ಗಳಾಗಿದ್ದರು. ಆದಾಗ್ಯೂ ಬಳ್ಳಾರಿ ಜಿಲ್ಲೆಯಲ್ಲಿ ಇವರುಗಳಿಗೆ ಕೆಲವು ನೆಲೆಗಳಿದ್ದವು. ಆದರೆ ಇವರಲ್ಲಿ ಬಹುತೇಕ ಮಂದಿಗೆ ಒಂದು ನಿಗದಿಯಾದ ವಾಸ್ತವ್ಯ ಎಂಬುದು ಇರಲಿಲ್ಲ. ಪ್ರೆಸಿಡೆನ್ಸಿಯ ಎಲ್ಲಾ ರಾಜ್ಯಗಳಲ್ಲಿ ಅಲೆದಾಡುತ್ತಿದ್ದರು. ಹಲವು ವೇಳೆ ಪ್ರೆಸಿಡೆನ್ಸಿಯ ಗಡಿ ದಾಟಿ ಮೈಸೂರಿಗೂ ಅಥವಾ ನಿಜಾಮನ ರಾಜ್ಯಕ್ಕೂ ಹೋಗುತ್ತಿದ್ದರು. ಅಲ್ಲಿಂದ ಕೆಲವೊಮ್ಮೆ ಡಕಾಯಿತಿ ಮಾಡುವ ಸಲುವಾಗಿ ತಕ್ಷಣದ ಧಾಳಿ ಮಾಡುತ್ತಿದ್ದರು. ಈ ರೀತಿಯ ಘೋರವಾದ ಡಕಾಯಿತಿಗಳನ್ನು ಬಳ್ಳಾರಿ, ಕರ್ನೂಲ್, ಕೃಷ್ಣ ಜಿಲ್ಲೆಗಳಲ್ಲಿ ಈ ಲುಂಬಾಡಿಗಳು ಮಾಡಿದ್ದರು. ಇಂತಹ ಸಂದರ್ಭಗಳಲ್ಲಿ ಡಕಾಯತಿ ಮಾಡುವಾಗ ಇವರು ಮಾರಾಕಾಯುಧಗಳನ್ನು ಇಟ್ಟುಕೊಂಡು ಭಾರಿ ಹಿಂಸಾಚಾರ ನಡೆಸುತ್ತಿದ್ದರು. ಆದರೆ ಇವರು ತಮ್ಮ ದೈನಂದಿನ ಜೀವನ ಸಾಗಿಸಲು ತಾವು ವಾಸವಿರುವ ಸ್ಥಳಗಳಲ್ಲಿ ತೋರುಗಾಣಿಕೆಗೆ ವ್ಯಾಪಾರ ಮಾಡಿಕೊಂಡಿದ್ದರು. ಅವರು ಯಾವುದೇ ಸಂದರ್ಭಗಳಲ್ಲಿ ಅಪರಾಧ ವೆಸಗಲು ಸಿದ್ಧರಿರುತ್ತಿದ್ದರು. ಇವರ ಮೇಲೆ ಪೊಲೀಸರು ಸೂಕ್ಷ್ಮವಾಗಿ ಕಣ್ಗಾವಲು ಇರಿಸಿದ್ದರು. 'ಕೊರವರು'

ಅಥವಾ 'ಕೊರಚರು' 'ಲುಂಬಾಡಿ'ಗಳಿಗಿಂತ ಭಿನ್ನವಾದ ಗಿರಿಜನರಾಗಿದ್ದರು. ಆದರೆ ಊರಿಂದೂರಿಗೆ ಅಲೆದಾಡುವ ಸ್ವಭಾವ, ಕಸುಬು ಮತ್ತು ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವಿಕೆಯಲ್ಲಿ ಸಾಮ್ಯತೆ ಇತ್ತು. ಕೊರವರು ನಡೆಸುವ ಡಕಾಯತಿ ಮತ್ತು ಮನೆ ಕಳ್ಳತನ ಪ್ರಕರಣಗಳಲ್ಲಿ ಇವರದೇ ಆದ ಕೆಲವು ವಿಧಾನಗಳು (ಶೈಲಿಗಳು) ಇದ್ದವು. ಆದರೆ ಇವರು 'ಲುಂಬಾಡೀಸ್' ಅಥವಾ 'ಬ್ರಿಂಜರೀಸ್'ಗಳಷ್ಟು ಧೈರ್ಯವಂತರಾಗಿರಲಿಲ್ಲ. ಕೊರವರು ಕೆಲವೊಂದು ಪ್ರದೇಶಗಳಲ್ಲಿ ವಾಸವಾಗಿದ್ದರೂ ಸಹ ಅವರಿಗೆ ಶಾಶ್ವತವಾದ ನೆಲೆ ಇರಲಿಲ್ಲ.

'ಎರ್ಕಲರ್' ವಿಭಿನ್ನ ಪಂಗಡವಾಗಿದ್ದರೂ ಸಹ ಕೊರವರಿಗೂ ಇವರಿಗೂ ನೋಡಲು ಹೆಚ್ಚು ವ್ಯತ್ಯಾಸವಿರಲಿಲ್ಲ. ಚಹರೆಯಿಂದ ಇವರನ್ನು ಪ್ರತ್ಯೇಕಿಸುವುದು ಕಷ್ಟವಾಗಿತ್ತು. ಇವರ ಜೀವನ ವಿಧಾನ ಮತ್ತು ಪ್ರವೃತ್ತಿಗಳು ಕೊರವರಂತೆಯೇ ಇದ್ದರೂ ಸಹ ಅವರು ವಲಸೆ ಹೋಗುತ್ತಿದ್ದ ದೂರ ನಿಯಮಿತವಾಗಿತ್ತು. ಇವರು ನೆಲ್ಲೂರು ಜಿಲ್ಲೆಯಲ್ಲಿ ಹಲವಾರು ಸ್ಥಳಗಳಲ್ಲಿ ವಾಸವಾಗಿದ್ದರು. ಇವರು ಕೆಲವು ಸ್ಥಳಗಳಲ್ಲಿ ಖಾಯಂ ಠಿಕಾಣಿ ಹಾಕಿ ಬೇರೆ ಸ್ಥಳಗಳಿಗೆ ವರ್ಷಂಪ್ರತಿ ಹೋಗಿ ಅದೇ ಸ್ಥಳಕ್ಕೆ ಹಿಂದಿರುಗುತ್ತಿದ್ದರು. ಹಾವಾಡಿಗರು ಮತ್ತು ಇಂದ್ರಜಾಲ ಮಾಡುವವರು ಪ್ರೆಸಿಡೆನ್ಸಿಯಲ್ಲಿ ಬಹಳ ಪರಿಚಿತ ರಾಗಿದ್ದು, ಅವರು ಎಲ್ಲೆಲ್ಲೆ ಹೋಗುತ್ತಾರೋ ಅಲ್ಲಿ ಸಮಯ ಸಾಧಿಸಿ ಅಪರಾಧಗಳನ್ನು ಮಾಡುತ್ತಿದ್ದರು. ಇವರು ಮುಖ್ಯ ವಾಗಿ ಮನೆಕಳ್ಳತನಗಳನ್ನು ಮಾಡುತ್ತಿದ್ದರು.

Alagaries ಅಥವಾ Capemarries ರವರುಗಳು ಅತ್ಯಂತ ಹೆಚ್ಚು ತೊಂದರೆ ಕೊಡುವ ಬುಡಕಟ್ಟಿನವರಾಗಿದ್ದರು. ಅಲಗಿರಿಗಳು ಆಗಾಗ ಸಣ್ಣಪುಟ್ಟ ತಂಡಗಳಾಗಿ ವಾಸಿಸುತ್ತಿದ್ದರು. ಅಲ್ಲಿಂದ ಕೃಷಿ ಕೆಲಸಕ್ಕೆ ಅಥವಾ ತಮ್ಮ ಕಸುಬು ಆದ ಅಪರಾಧ ಮಾಡಲು ಒಟ್ಟಿಗೆ ಸೇರುತ್ತಿದ್ದರು. ಅವರು ಅತ್ಯಂತ ಧೈರ್ಯದಿಂದ ಮತ್ತು ಅತ್ಯಂತ ವ್ಯವಸ್ಥಿತವಾದ ಸಂಚುರೂಪಿಸಿ ಡಕಾಯಿತಿ ಮಾಡುವವರೆಂದು ಚಿರಿಪರಿಚಿತರಾಗಿದ್ದರು. ಆದರೆ ಸಾದಾರಣವಾಗಿ ಇವರು ಜಾತ್ರೆ, ಸಂತೆ, ಹಬ್ಬಗಳ ಸಂದರ್ಭ ದಲ್ಲಿ ಪಿಕ್‌ಪಾಕೇಟ್ ಮಾಡಲು ಜೊತೆ ಸೇರುತ್ತಿದ್ದರು. 'ಎನುಡಿ' ಜಾತಿಯಿಂದ ಬಹಿಷ್ಕೃತ ವಾದ ಒಂದು ಪಂಗಡವಾಗಿತ್ತು. ಇವರು ಶ್ರೀಹರಿಕೊಟ, ಪೊಲುಕಾಟ್ ಸರೋವರ ಮತ್ತು ಸಮುದ್ರದ ಮಧ್ಯೆ ಇರುವ ದ್ವೀಪದಲ್ಲಿ ಹೆಚ್ಚಾಗಿರುತ್ತಿದ್ದರು. ಅಲ್ಲಿ ಅವರು ಮದ್ರಾಸ್ ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಮರಗಳನ್ನು ಕತ್ತರಿಸುವ ಉದ್ಯೋಗ ಮಾಡುತ್ತಿದ್ದರು. ತಮಗೂ ಅಪರಾಧಕ್ಕೂ ಸಂಬಂಧವಿಲ್ಲದವರಂತೆ ವರ್ತಿಸುತ್ತಿದ್ದರು. ವಾಸ್ತವವಾಗಿ ಅಲ್ಲಿ ಕದಿಯಲು ಏನೂ ಇರಲಿಲ್ಲ. ನಂತರ ನೆಲ್ಲೂರು ಜಿಲ್ಲೆಯ ಉತ್ತರ ಭಾಗದಲ್ಲಿ ಹಳ್ಳಿಗಳ ಹೊರಗೆ ಸಣ್ಣ ಪುಟ್ಟ ಪಂಗಡಗಳಾಗಿ ವಾಸವಿದ್ದರು. ಅಲ್ಲಿಯೇ ಸಣ್ಣ ಪುಟ್ಟ ಉದ್ಯೋಗ ಮಾಡಿಕೊಂಡಿದ್ದರು. ಇವರು ಕೃಷ್ಣ ಮತ್ತು ಗೋದಾವರಿ ಜಿಲ್ಲೆಗಳಲ್ಲಿ ಅಲೆಯುತ್ತಿದ್ದರು. ಇಲ್ಲಿ ಇವರ ಅಪ ರಾಧ ಕೃತ್ಯಗಳು ಹೆಚ್ಚಾಗಿದ್ದವು. ಉತ್ತರದ ಎನುಡಿಗಳು ಕಾಡಿನಿಂದ ಆವೃತವಾದ ಜಿಲ್ಲೆಗಳಲ್ಲಿ ಬೇಟೆಯಾಡಿಕೊಂಡು ಮತ್ತು ಅಪರಾಧಗಳನ್ನು ಮಾಡಿಕೊಂಡು ಅದರಿಂದಲೇ ಹೊಟ್ಟೆ ಹೊರೆಯುತ್ತಿದ್ದರು. ಇವರು ಹಳ್ಳಿಗರನ್ನು ಹೆದರಿಸಿಕೊಂಡು ಇದ್ದರು. ಹಳ್ಳಿಗರು ಇವರನ್ನು ತಿರಸ್ಕರಿಸಿದ್ದರು. ಇವರು ಮನೆ ಒಡೆದು ಕಳ್ಳತನ ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದರು. ಡಕಾಯತಿ ಮಾಡಲು ಯಾವಾಗಲೂ ಸಿದ್ಧರಿರುತ್ತಿದ್ದರು. ಅದೃಷ್ಟವಶಾತ್ ಇವರ ಗುಂಪು ಸಣ್ಣದಾಗಿತ್ತು. ಕೃಷ್ಣ ಮತ್ತು ಗೋದಾವರಿ ಜಿಲ್ಲೆಗಳಲ್ಲಿ ಈ ಎನುಡಿ ಬಹುತೇಕ ಹೆಚ್ಚಾದರೂ ಕೆಲವು ನೂರು ಸಂಖ್ಯೆಗಳಲ್ಲಿ ಇದ್ದರು. ಅವರ ಅಸ್ಥಿರವಾದ ಅಲೆಮಾರಿತನದಿಂದಾಗಿ ಅವರ ಮೇಲೆ ಅನುಮಾನ ಬರುತ್ತಿರಲಿಲ್ಲ. ಪ್ರತೀ ಊರಿನಲ್ಲಿ ಅವರು ನೆಲೆಸಿದಾಗಲೂ ಕೊನೆ ಪಕ್ಷ ಒಂದಾದರೂ ಅಪರಾಧಗಳನ್ನು ಮಾಡಿಯೇ ತೀರುತ್ತಿದ್ದರು. ಯಾವಾಗ ಇವರನ್ನು ನೆಲ್ಲೂರು ಮತ್ತು ಗೋದಾವರಿ ಜಿಲ್ಲೆಗೆ ಪೊಲೀಸರು ಬೆನ್ನು ಹತ್ತುತ್ತಿದ್ದರೋ ಆಗ ಪಕ್ಕದ ನೆಲ್ಲೂರು ಜಿಲ್ಲೆಯಲ್ಲಿ ಇವರು ಸುಲಿಗೆ ಮಾಡುತ್ತಿದ್ದರು. ಮತ್ತು ಅಕ್ಕಪಕ್ಕದ ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದರು. ಇವರುಗಳು ದೃಢವಾದ ಸ್ವಭಾವದವರಾಗಿದ್ದು, ಯಾವಾಗಲೂ ಬಂಧನದಿಂದ ತಪ್ಪಿಸಿ

ಕೊಳ್ಳುವ, ವಿರೋಧಿಸುವ ಸ್ವಭಾವದವರಾಗಿದ್ದರು. ಇವರ ಸಹಚರರನ್ನು ಯಾರನ್ನಾದರೂ ಜೈಲಿಗೆ ಕಳಿಸಿದರೆ ಅದಕ್ಕೆ ಪ್ರತೀಕಾರವಾಗಿ ಹೆಚ್ಚಿನ ಕ್ರೌರ್ಯದಿಂದ ಕೂಡಿದ ಹೊಸ ಅಪರಾಧಗಳನ್ನು ಮಾಡುತ್ತಿದ್ದರು. ತಂಜಾವೂರು, ತಿರುಚಾನಪಳ್ಳಿ, ಮದುರೆ ಜಿಲ್ಲೆಗಳಲ್ಲಿ 'ಕುಲ್ಲರ್' ಮತ್ತು 'ಮರವರ್' ಎಂಬ ಎರಡು ಜನಾಂಗಗಳು ಸುಲಿಗೆ ಮತ್ತು ದರೋಡೆಯಲ್ಲಿ ತೊಡಗಿದ್ದವು. ಇವರು ದರೋಡೆ ಮಾಡುವ ಅಲೆಮಾರಿಗಳಾಗಿದ್ದರು. ಇವರ ಚಲನವಲನದ ಬಗ್ಗೆ ಕಾವಲುಗಾರರು ಗಮನವಿಟ್ಟಿದ್ದರು. ಇವರು ಅಪರಾಧಗಳನ್ನು ಮಾಡಲು ಅಗ್ನಿ ಶಸ್ತ್ರಗಳು Fire Arms, ರಿವಾಲ್ವರ್, ಪಿಸ್ತೂಲು, ಬಂದೂಕು, ಖಡ್ಗ, ತಲವಾರುಗಳನ್ನು ಕೊಂಡುಹೋಗುತ್ತಿದ್ದರು.

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ನಡೆಯುತ್ತಿದ್ದ ಸಾಮಾನ್ಯ ಅಪರಾಧಗಳು

ಸಾಮಾನ್ಯವಾಗಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಮನೆಯ ಕನ್ನ ಕಳವು ಮತ್ತು ಸಾಮಾನ್ಯ ಕಳವುಗಳು ನಡೆಯುತ್ತಿದ್ದವು. *೧೮೮೧-೮೨-೮೩ ನೇ ಸಾಲಿನಲ್ಲಿ ನಡೆದ ವಿವಿಧ ಅಪರಾಧಗಳ ಬಗ್ಗೆ ಅನುಬಂಧ -೯ ನ್ನು ನೋಡಿರಿ.*[೨] ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಕರ್ನಾಟಕದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಗಮನಿಸಿದರೆ, ದಕ್ಷಿಣ ಕನ್ನಡದಲ್ಲಂತೂ ಅತ್ಯಂತ ಕಡಿಮೆ ಅಪರಾಧಗಳು ನಡೆದಿದ್ದು, ಜಿಲ್ಲೆಯು ಅತ್ಯಂತ ಶಾಂತಿಯುತವಾಗಿತ್ತೆಂದು ಹೇಳಬಹುದಾಗಿದೆ. ಆದರೆ ಬಳ್ಳಾರಿಯಲ್ಲಿ ಕೊಲೆ, ಅಪರಾಧಿಕ ನರಹತ್ಯೆ ಮತ್ತು ಡಕಾಯತಿ ಪ್ರಕರಣಗಳನ್ನು ಹೊರತುಪಡಿಸಿ ಮೇಲೆ ಹೇಳಲ್ಪಟ್ಟ ಬೇರೆ ಯಾವುದೇ ಪ್ರಕರಣಗಳು ದಾಖಲಾಗದೇ ಶಾಂತಿಯುತವಾಗಿತ್ತೆಂದು ಮದ್ರಾಸ್ ಪ್ರೆಸಿಡೆನ್ಸಿಯ ಬೇರೆ ಎಲ್ಲಾ ಜಿಲ್ಲೆಗಳಿಗಿಂತ ಇಲ್ಲಿಯ ಜನ ಕಾನೂನಿಗೆ ಹೆಚ್ಚು ಬೆಲೆಕೊಟ್ಟು ಅದನ್ನು ಪರಿಪಾಲಿಸುವವರಾಗಿದ್ದರೆಂದು ಇದರಿಂದ ತಿಳಿದುಬರುತ್ತದೆ.

ಅಪರಾಧಗಳ ಅಂಕಿ ಅಂಶಗಳನ್ನು ಸರಕಾರದವರು ಪೂರ್ಣವಾಗಿ ಪೊಲೀಸ್ ಇಲಾಖೆಯಿಂದ ತಿಳಿಯುತ್ತಿದ್ದರು. ಪೊಲೀಸ್ ಇಲಾಖೆಯವರು ಬೀಟ್ ಕಾನ್‌ಸ್ಟೇಬಲ್ ಮೂಲಕ ವಿಷಯ ತಿಳಿಯುತ್ತಿದ್ದರು. ಪ್ರತಿಯೊಂದು ಪೊಲೀಸ್ ಠಾಣೆಯ ವ್ಯಾಪ್ತಿಯನ್ನು ೩-೪ ಭಾಗಗಳನ್ನಾಗಿ ವಿಂಗಡಿಸಿ ಪ್ರತೀ ನಿತ್ಯ ಅಲ್ಲಿಗೆ ಪೊಲೀಸ್ ಸಿಬ್ಬಂದಿಯವರನ್ನು ಕಳುಹಿಸಿ, ಅಲ್ಲಿ ವಾಸಿಸುವ ಕೆಟ್ಟ ನಡವಳಿಕೆಯ ಜನರ ಬಗ್ಗೆ ಅಂದರೆ, ಕಳ್ಳರು, ಡಕಾಯಿತರು, ಸುಲಿಗೆ ಕೋರರು, ರೌಡಿಗಳು, ಕೆ.ಡಿಗಳು ಮೊದಲಾದವರ ಬಗ್ಗೆ ಮತ್ತು ಆ ಸ್ಥಳದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳು, ಸಂಘಟಿತ ಅಪರಾಧಿಕ ಚಟುವಟಿಕೆ, ಅಲೆಮಾರಿ ಜನಾಂಗಗಳು, ಹೊಸದಾಗಿ ಬರುವ ವ್ಯಕ್ತಿಗಳ ಮಾಹಿತಿಗಳು ಹೀಗೆ ಹತ್ತು ಹಲವು ವಿಷಯಗಳ ಮಾಹಿತಿಯನ್ನು ಸಂಗ್ರಹಿಸಿ ಠಾಣಾಧಿಕಾರಿಗೆ ಪೊಲೀಸರು ತಿಳಿಸಬೇಕು. ಅಷ್ಟೇ ಅಲ್ಲದೇ ಪ್ರತೀ ವಿಭಾಗಗಳಲ್ಲಿ ಒಂದೊಂದು ಪುಸ್ತಕಗಳನ್ನು ಇರಿಸಿ ಪೊಲೀಸರು ಅಲ್ಲಿಗೆ ಹೋದ ಬಗ್ಗೆ ಸಹಿ ಮತ್ತು ದಿನಾಂಕವನ್ನು ನಮೂದಿಸಬೇಕು. ಇದನ್ನು ಪೊಲೀಸ್ ಗಸ್ತು (ಬೀಟ್) ವ್ಯವಸ್ಥೆ ಎಂದು ಕರೆಯಲಾಗುತ್ತದೆ. ೧೮೮೧ ರಿಂದ ೮೩ ರವರೆಗಿನ ಈ ಮದ್ರಾಸ್ ಪ್ರೆಸಿಡೆನ್ಸಿಯ ವಾರ್ಷಿಕ ವರದಿಯಲ್ಲಿ ಪೊಲೀಸ್ ಬೀಟ್ ವ್ಯವಸ್ಥೆಯ ಬಗ್ಗೆ ಮಾಹಿತಿಯು ಲಭ್ಯವಾಗಿರುತ್ತದೆ. ಇದು ಬಹುಶ: ಬೀಟ್ ವ್ಯವಸ್ಥೆಯ ಬಗ್ಗೆ ಸಿಕ್ಕಿದ ಮೊದಲ ಉಲ್ಲೇಖವಾಗಿದೆ. ಕೆಲವು ಬಾರಿ ಅಪರಾಧಗಳ ಬಗ್ಗೆ ಗಾಳಿಸುದ್ದಿ ಮೂಲಕ ವಿಷಯ ತಿಳಿಯುತ್ತಿತ್ತು. ಅಪರಾಧಗಳು ನಡೆದ ಬಗೆಗೆ ಮೊದಲು ಪೊಲೀಸ್ ಠಾಣೆಯ ದಾಖಲೆಯಲ್ಲಿ ಬರೆಯಲಾಗುತ್ತಿತ್ತು. ನಂತರ ಈ ಬಗೆಗೆ ಠಾಣಾಧಿಕಾರಿಯು ಅಪರಾಧ ನಡೆದ ಬಗ್ಗೆ ವರದಿಯನ್ನು ಜಿಲ್ಲಾ ಪೊಲೀಸ್ ಕಛೇರಿಗೆ ಕಳಿಸುತ್ತಿದ್ದರು. ಕೆಲವೊಮ್ಮೆ ಅಪರಾಧಗಳ ವಿವರವನ್ನು ಪ್ರತೀ ದಿನ ನಡೆಯುವ ಅಪರಾಧ ವಿವರದ ಪುಸ್ತಕದಲ್ಲಿ ಬರೆದು, ಅದನ್ನು ಡಿವಿಜನ್ ಇನ್ಸ್‌ಪೆಕ್ಟರ್‌ರವರಿಗೆ ಕಳುಹಿಸುತ್ತಿದ್ದರು. ಆತನು ಅದನ್ನು ಪರಿಶೀಲಿಸಿ ನಂತರ ಪೊಲೀಸ್ ಪ್ರಧಾನ ಕಛೇರಿಗೆ ಕಳಿಸುತ್ತಿದ್ದ. ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಪ್ರತೀ ದಿನ ವರದಿಯಾದ ಅಪರಾಧಗಳ ವಿವರವನ್ನು ಪಡೆದ ನಂತರ ಡಿವಿಜನ್ ಹಾಗೂ ಅಪರಾಧಗಳ

ವರ್ಗೀಕರಣಗಳಿಗೆ ಅನುಗುಣವಾಗಿ ವಿಭಾಗಿಸಲಾಗುತ್ತಿತ್ತು. ನಂತರ ಇನ್ಸ್‌ಪೆಕ್ಟರ್ ಮತ್ತು ಮ್ಯಾಜಿಸ್ಟ್ರೇಟರುಗಳು ಬರೆಯುತ್ತಿದ್ದ ದಿನಚರಿಗಳ ಮೂಲಕ ಪಡೆಯಲಾಗುತ್ತಿತ್ತು. ಪ್ರತೀ ವಿಭಾಗದ ಇನ್ಸ್‌ಪೆಕ್ಟರ್‌ಗಳು ಅಪರಾಧ ನೊಂದಣಿ ಪುಸ್ತಕವೊಂದನ್ನು ನಿರ್ವಹಿಸಬೇಕಿತ್ತು. ಅದರಲ್ಲಿ ಠಾಣಾಧಿಕಾರಿಗಳ ಪ್ರತೀ ದಿನ ಠಾಣೆಗಳಿಂದ ಅಪರಾಧ ನಡೆದ ಬಗ್ಗೆ ನೀಡುತ್ತಿದ್ದ ವರದಿಯಲ್ಲಿ ಬಂದ ಅಪರಾಧಗಳ ವಿವರ ಬರೆಯಬೇಕಿತ್ತು. ನಂತರ ಅದರ ಬಗ್ಗೆ ನಡವಳಿಗಳನ್ನು ಬರೆಯಬೇಕಿತ್ತು. ಇನ್ಸ್‌ಪೆಕ್ಟರ್‌ಗಳಿಂದ ಪಡೆದ ಅಪರಾಧಗಳ ಘೋಷ್ವಾರೆಯನ್ನು ಪೊಲೀಸ್ ಪ್ರಧಾನ ಕಛೇರಿಯಲ್ಲಿ ಈಗಾಗಲೇ ಕಡತದಲ್ಲಿ ಇರುವ ವರದಿಯಾದ ಪ್ರಕರಣಗಳೊಂದಿಗೆ ತಾಳೆ ನೋಡುತ್ತಿದ್ದರು. ವರದಿ ಹಾಗೂ ಘೋಷ್ವಾರೆಯಲ್ಲಿ ಏನಾದರೂ ವ್ಯತ್ಯಾಸಗಳು ಅಥವಾ ವಿವಾದಗಳು ಇದ್ದಲ್ಲಿ ಅದನ್ನು ನಮೂದಿಸಿ ನಂತರ ಕಡತಕ್ಕೆ ಸೇರಿಸಲಾಗುತ್ತಿತ್ತು. ನಂತರ ಮ್ಯಾಜಿಸ್ಟ್ರೇಟರು ನಡಾವಳಿ ಮತ್ತು ಫಲಿತಾಂಶ ನಮೂದಿಸುತ್ತಿದ್ದರು.

೫.೫ : ಸಿಂಧ್ ಪೊಲೀಸ್.

೧೮೪೩ ರಲ್ಲಿ ಸಿಂಧ್ ಪ್ರಾಂತದ ಮೇಲೆ ಸರ್ ಚಾರ್ಲ್ಸ್ ನೇಪಿಯರ್ ದಾಳಿ ಮಾಡಿ ವಶಕ್ಕೆ ಪಡೆದುಕೊಂಡನು. ಈತನು ರಾಯಲ್ ಐರಿಷ್ ಕಾನ್ಸ್‌ಟೇಬಲರಿ ಮಾದರಿಯಲ್ಲಿ 'ಸಿಂಧ್ ಪೊಲೀಸ್'ನ್ನು ಸಂಘಟಿಸಿದನು.[೯೩] ಇದು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಇವನಿಗೆ ಸಹಾಯಕವಾಯಿತು. ಈ ಯಶಸ್ಸಿನ ರಹಸ್ಯವೇನೆಂದರೆ, ಈತನು ಪೊಲೀಸ್ ಪಡೆಯನ್ನು ಪ್ರತ್ಯೇಕವಾದ ಮತ್ತು ತನ್ನದೇ ಆದ ಪಡೆಯನ್ನು ಹೊಂದುವಂತೆ ಮಾಡಿ, ಇದಕ್ಕೆ ಇದೇ ಇಲಾಖೆಯ ಸ್ವಂತ ಹಿರಿಯ ಅಧಿಕಾರಿಗಳೇ ಮೇಲ್ವಿಚಾರಣೆ ನಡೆಸುವಂತೆ ಮಾಡಿದ. ಈ ಹಿರಿಯ ಅಧಿಕಾರಿಗಳ ಮುಖ್ಯ ಕರ್ತವ್ಯವೆಂದರೆ ಪೊಲೀಸ್ ಇಲಾಖೆಯ ಮೇಲ್ವಿಚಾರಣೆ ಆಗಿತ್ತು. ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಮುಖ್ಯಸ್ಥರ ಕರ್ತವ್ಯಗಳನ್ನು ಪ್ರತ್ಯೇಕಿಸಲಾಯಿತು. ಪೊಲೀಸ್ ಪಡೆಯ ಪ್ರಮಾಣವನ್ನು ಸಹ ಅಧಿಕಗೊಳಿಸಿ ಶಿಸ್ತು ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಇದೇ ವ್ಯವಸ್ಥೆಯನ್ನು ಇನ್ನಿತರ ಪ್ರಾಂತ್ಯಗಳಲ್ಲೂ ಅಳವಡಿಸಲಾಯಿತು.

೧೮೪೭ ರಲ್ಲಿ ಸಿಂಧ್‌ಗೆ ಬಾಂಬೆಯ ಗವರ್ನರ್ ಆಗಿದ್ದ ಸರ್ ಜಾರ್ಜ್ ಕ್ಲಾರ್ಕ್ ಭೇಟಿ ನೀಡಿದನು. ಈತನು ಅಲ್ಲಿನ ಪೊಲೀಸ್ ವ್ಯವಸ್ಥೆಯಿಂದ ಪ್ರಭಾವಗೊಂಡು, ಬಾಂಬೆ ಪ್ರಾಂತ್ಯದಲ್ಲಿಯೂ ಇದೇ ಮಾದರಿಯ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದನು.[೯೪] ಇದರ ಮೂಲ ಲಕ್ಷಣಗಳೆಂದರೆ, ಪ್ರತೀ ಜಿಲ್ಲೆಗಳಲ್ಲಿಯೂ ಒಬ್ಬೊಬ್ಬ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು ನೇಮಿಸಲಾಯಿತು. ಈತನಿಗೆ ತನ್ನ ಕೈಕೆಳಗಿನ ಪೊಲೀಸ್ ಅಧಿಕಾರಿಗಳ ಮೇಲೆ ಪೂರ್ಣ ಹಿಡಿತವಿತ್ತು. ಆದರೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಈತನು ಮ್ಯಾಜಿಸ್ಟ್ರೇಟನಿಗೆ ಅಧೀನವಾಗಬೇಕಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟರ್‌ಗಿಂತ ಕಡಿಮೆ ದರ್ಜೆಯ ಮ್ಯಾಜಿಸ್ಟ್ರೇಟರು ಪೊಲೀಸ್ ಅಧಿಕಾರಗಳನ್ನು ಚಲಾಯಿಸುವಂತಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಗೆ ಪೊಲೀಸ್ ಇಲಾಖೆ ಮೇಲೆ ಪೂರ್ಣ ನಿಯಂತ್ರಣವಿತ್ತು. ಜಿಲ್ಲೆಯ ಕಾನೂನು ಸುವ್ಯವಸ್ಥೆಗೆ ಈತ ಮುಖ್ಯಸ್ಥನಾಗಿದ್ದ.[೯೫] ಇಂದಿಗೂ ಭಾರತ ದೇಶದಲ್ಲಿ ಈ ರೀತಿಯ ವ್ಯವಸ್ಥೆಯು ನಡೆದುಕೊಂಡು ಬಂದಿದೆ. ಈ ವ್ಯವಸ್ಥೆಯು ಪರಿಣಾಮಕಾರಿಯಾದದ್ದೆಂದು ಸಾಬೀತಾಯಿತು. ನಂತರ ೧೮೫೩ ರಲ್ಲಿ ಇದನ್ನು ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೆ ತರಲಾಯಿತು.[೯೬]

೧೮೫೭ ರಲ್ಲಿ ಪ್ರಥಮ ಭಾರತ ಸ್ವಾತಂತ್ರ್ಯ ಸಂಗ್ರಾಮ ಜರುಗಿತು. ಔದ್ ಪ್ರಾಂತ್ಯವನ್ನು ಜನರಲ್ ಔಟ್ರಾಮ್ ವಶಪಡಿಸಿಕೊಂಡನು. ೧೮೫೮ ರಲ್ಲಿ ಔದ್‌ನಲ್ಲಿ ಸಿಂಧ್ ಮಾದರಿಯ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಬ್ರಿಟೀಷರು ವಿವಿಧ ಬಗೆಯ ಪೊಲೀಸ್ ವ್ಯವಸ್ಥೆಯನ್ನು ಪ್ರಯೋಗ ಮಾಡಿ ನೋಡಿದ ನಂತರ ೧೮೬೦ರಲ್ಲಿ ಒಂದು ಪರಿಹಾರ ಕಂಡುಕೊಂಡರು.[೯೭] ಪೊಲೀಸ್ ವ್ಯವಸ್ಥೆಯು ಇನ್ನು ಮುಂದೆ ಸಾಮಾನ್ಯ ಆಡಳಿತ ವ್ಯವಸ್ಥೆಯ ಭಾಗವಾಗಿರ

ಬಾರದು. ಇದು ಪ್ರತ್ಯೇಕವಾದ ತನ್ನದೇ ಆದ ಪಡೆಯನ್ನು ಹೊಂದಿರಬೇಕು ಮತ್ತು ತನ್ನದೇ ಘಟಕದ ಹಿರಿಯ ಅಧಿಕಾರಿಗಳನ್ನು ಹೊಂದಿರಬೇಕು. ಹಾಗೂ ಅವರಿಗೆ ತನ್ನ ಕೈಕೆಗಳಿನ ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲ್ವಿಚಾರಣೆ ನಡೆಸುವುದಕ್ಕೆ ಪ್ರಮುಖ ಕರ್ತವ್ಯವಾಗಿರಬೇಕು ಎಂಬುದನ್ನು ಬ್ರಿಟೀಷರು ಮನವರಿಕೆ ಮಾಡಿಕೊಂಡರು. ಈ ವಿಷಯ ಕರ್ನಾಟಕಕ್ಕೆ ಸಂಬಂಧಪಡದಿದ್ದರೂ ಸಹ ಕರ್ನಾಟಕ ಪೊಲೀಸ್ ಅಧಿನಿಯಮದ ಪ್ರಸ್ತಾವನೆಯಲ್ಲಿ ಬೇ.ಕಾ.ಮೂರ್ತಿಶ್ವರಯ್ಯರವರು ಲಾರ್ಡ್ ಕಾರ್ನಾವಾಲೀಸ್‌ನು ೧೮೫೪ ರಲ್ಲಿ ಸಿಂಧ್ ಪ್ರಾಂತ್ಯದಲ್ಲಿ ಮೊದಲ ಬಾರಿಗೆ ಪೊಲೀಸ್ ವ್ಯವಸ್ಥೆಗೆ ಜಾರಿಗೆ ತಂದನು ಎಂದು ವಾದಿಸಿದ್ದಾರೆ. ಆದರೆ ಅದು ಸರಿಯಾದುದಲ್ಲ. ಏಕೆಂದರೆ "೧೮೫೪ ರಲ್ಲಿ ಪೊಲೀಸ್ ವ್ಯವಸ್ಥೆ ಪ್ರಥಮ ಬಾರಿಗೆ ಯಶಸ್ವಿಯಾದುದು ಸರ್. ನೇಪಿಯರ್‌ನ ನಾಯಕತ್ವದ ಸಿಂಧ್ ಪೊಲೀಸ್ ಪಡೆಯ ರೂಪದಲ್ಲಿ. ಮ್ಯಾಜಿಸ್ಟ್ರೇಟ್ ಮತ್ತು ಪೊಲಿಸ್ ಮುಖ್ಯಸ್ಥರ ಕರ್ತವ್ಯಗಳನ್ನು ಪ್ರತ್ಯೇಕಿಸಲಾಯಿತು. ಪೊಲೀಸ್ ಪಡೆಯ ಪ್ರಮಾಣವನ್ನು ಸಹ ಅಧಿಕಗೊಳಿಸಿ ಶಿಸ್ತು ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಇದೇ ವ್ಯವಸ್ಥೆಯನ್ನು ಇನ್ನಿತರ ಪ್ರಾಂತ್ಯಗಳಲ್ಲೂ ಅಳವಡಿಸಲಾಯಿತು. ಸಿಂದ್ ಪೊಲೀಸನ್ನು ಸ್ಥಾಪಿಸಿ ದವನು ಸರ್ ಚಾರ್ಲ್ ನೇಪಿಯರ್ ಎಂಬುದು ಈ ಮೇಲಿನ ವಿಷಯಗಳಿಂದ ಸಾಬೀತಾಗಿರುತ್ತದೆ. ಅಷ್ಟೇ ಏಕೆ ೧೮೫೪ ರಲ್ಲಿ ಕಾರ್ನ್‌ವಾಲೀಸ್ ಭಾರತದಲ್ಲಿರಲಿಲ್ಲ. ಅಷ್ಟೇ ಅಲ್ಲ ಆತ ಬದುಕಿಯೇ ಇರಲಿಲ್ಲ.

೫ : ೬ – ೧೮೬೦ ರ ಪೊಲೀಸ್ ಆಯೋಗ.

೧೮೫೭ ರ ಸ್ವಾತಂತ್ರ್ಯ ಸಂಗ್ರಾಮದ ನಂತರ ವಸ್ತುಶ: ಸಂಪೂರ್ಣ ಆಡಳಿತ ಕುಸಿದುಹೋಯಿತು. ದೇಶದಲ್ಲಿ ಆರ್ಥಿಕ ಸಮಸ್ಯೆ ಉದ್ಭವಿಸಿತು. ಪೊಲೀಸ್ ಇಲಾಖೆಯಲ್ಲಿ ದುರಾಡಳಿತ ಮತ್ತು ಅಸಮರ್ಪಕತೆ ತುಂಬಿತು. ಆಗಾಗ ಅಲ್ಲಲ್ಲಿ ಶಾಂತಿ ಸುವ್ಯವಸ್ಥೆಗೆ ಭಂಗ ಬರುವ ಕೆಲಸಗಳು ನಡೆದವು. ಜನರ ಜೀವ ಮತ್ತು ಆಸ್ತಿಪಾಸ್ತಿಗಳು ಅಭದ್ರತೆಯಲ್ಲಿ ತೊಳಲಾಡಿದವು. ಬ್ರಿಟೀಷ್ ಸರ್ಕಾರವು ಭಾರತದಲ್ಲಿ ನೆಲೆಸಿರುವ ಯುರೋಪಿಯನ್ನರನ್ನು ರಕ್ಷಿಸುವುದರ ಜೊತೆಗೆ ಅವರ ಆಸಕ್ತಿಯನ್ನು ಹೆಚ್ಚಿಸುವ ಕೆಲಸ ಮಾಡಬೇಕಿತ್ತು. ಇದರಿಂದಾಗಿ ಇಡೀ ಭಾರತ ದೇಶದಲ್ಲಿಯೇ ಪೊಲೀಸ್ ವ್ಯವಸ್ಥೆಯನ್ನು ಪುನರ್ ಸಂಘಟಿಸುವ ಅವಶ್ಯಕತೆ ಎದುರಾಯಿತು.[೯೮] ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವುದರ ಹಿಂದಿನ ಬ್ರಿಟೀಷರ ಉದ್ದೇಶ, ದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು ಅಲ್ಲ. ಬದಲಿಗೆ ಯುರೋಪಿಯನ್ ಅಧಿಕಾರಿಗಳ ರಕ್ಷಣೆ ಹಾಗೂ ತಮ್ಮ ಅಧಿಕಾರದ ರಕ್ಷಣೆಗಾಗಿ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕಾಗಿ ೧೮೬೦ ರಲ್ಲಿ ಭಾರತ ಸರ್ಕಾರವು 'ಪೊಲೀಸ್ ಆಯೋಗ'ವೊಂದನ್ನು ರಚಿಸಿತು. ಆಯೋಗವು ಹಾಲಿ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಪೊಲೀಸ್ ವ್ಯವಸ್ಥೆಯನ್ನು ಸುಧಾರಿಸುವ ಬಗ್ಗೆ ಮಾರ್ಗೋಪಾಯಗಳನ್ನು ಸೂಚಿಸಬೇಕಿತ್ತು. ಮತ್ತು ಭಾರತದಲ್ಲಿರುವ ಯಾವುದೇ ಭಾಗ ಪೊಲೀಸ್ ವ್ಯವಸ್ಥೆಯ ಖರ್ಚುವೆಚ್ಚಗಳನ್ನು ಪರಿಣಾಮಕಾರಿಯಾಗಿ ಕಡಿತಗೊಳಿಸಲು ಸಾಧ್ಯವೇ? ಎಂಬುದನ್ನು ಅಭ್ಯಸಿಸಬೇಕಿತ್ತು.[೯೯]

ಭಾರತ ಸರ್ಕಾರವು ಈ ಆಯೋಗಕ್ಕೆ ಕೆಲವು ಮಾರ್ಗದರ್ಶಿ ಸೂತ್ರದ ರೂಪದಲ್ಲಿ ಇದನ್ನು ಅಂದಿನ ಗೌರ್ನರ್ ಜನರಲ್ ಆದ 'ಲಾರ್ಡ್‌ಕನ್ನಿಂಗ್'ನಿಗೆ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದ ಚಾರ್ಲ್‌ವುಡ್ ಕಳಿಸಿದನು. ಈ ಮನವಿಯಲ್ಲಿ ಪೊಲೀಸರ ಸಂಖ್ಯೆಯನ್ನು ಏರಿಸವುದರಿಂದ ರಾಷ್ಟ್ರದ ಖಜಾನೆಗೆ ಅಧಿಕ ಹೊರೆಯಾಗುತ್ತದೆ ಎಂದು ತಿಳಿಸಲಾಯಿತು. ಅಲ್ಲದೇ ಮೊದಲನೆಯದಾಗಿ ಆಯಾ ಸಂಸ್ಥಾನಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿ ಅರ್ಧ ಸೈನಿಕ ಮತ್ತು ಅರ್ಧ ದಿವಾಣಿ (ಸಿವಿಲ್) ಸ್ವರೂಪದ ಮಿಶ್ರ ವ್ಯವಸ್ಥೆ ಇರಬೇಕು. ಎರಡನೆಯದಾಗಿ ಸಿವಿಲ್ ಪೊಲೀಸ್ ಕರ್ತವ್ಯ ಮತ್ತು ಜವಾಬ್ದಾರಿಗಳೆಂದರೆ, ಅಪರಾಧಗಳ ತಡೆ ಮತ್ತು ಪತ್ತೆ, ಮಿಲಿಟರಿ ಪೊಲೀಸರ ಕೆಲಸವೆಂದರೆ ಜನರ ರಕ್ಷಣೆ. ಮೂರನೆಯ

ದಾಗಿ ಸಂಪೂರ್ಣವಾಗಿ ಪೊಲೀಸ್ ವ್ಯವಸ್ಥೆಯು ಸ್ಥಳೀಯ ಸರಕಾರದೊಂದಿಗೆ ನೇರವಾಗಿ ಸಂಪರ್ಕವನ್ನು ಹೊಂದಿರುವ ಒಬ್ಬ ಅಧಿಕಾರಿಯ ನಿಯಂತ್ರಣದಲ್ಲಿರಬೇಕು. ನಾಲ್ಕನೆಯದಾಗಿ ಬಲಶಾಲಿಯಾದ ಮತ್ತು ಪರಿಣಾಮಕಾರಿಯಾದ ಪಡೆಯು ಮ್ಯಾಜಿಸ್ಟ್ರೇಟ್‌ನ ನಿಯಂತ್ರಣದಲ್ಲಿರಬೇಕು. ಮತ್ತು ಕೊನೆಯದಾಗಿ ಎಲ್ಲಾ ವರ್ಗದ ಅಧಿಕಾರಿಗಳಿಗೆ ಉತ್ತಮ ಸಂಬಳವನ್ನು ನೀಡಬೇಕು ಎಂದು ಆಯೋಗವು ಸೂಚಿಸಿತು.[೧೦೦] ಆಯೋಗವು ಮದ್ರಾಸ್ ಪೊಲೀಸರ ವ್ಯವಹಾರಿಕ ಅನುಭವಗಳನ್ನು ಪಡೆಯಿತು. ಏಕೆಂದರೆ ಅಲ್ಲಿನ ಪೊಲೀಸ್ ವ್ಯವಸ್ಥೆಯು ೧೮೫೭ ರ ೨೪ ಕಾಯ್ದೆಯಂತೆ ಮದ್ರಾಸ್ ಪೊಲೀಸ್ ಆಕ್ಟ್ ರಚಿಸಿಕೊಂಡು ಪುನರ್‌ಸಂಘಟಿತವಾಗಿತ್ತು. ಅದರಂತೆ, ಮಿಲಿಟರಿ ಅಥವಾ ಅರೆಮಿಲಿಟರಿ ಪೊಲೀಸರು ಈಗ ಪೊಲೀಸ್ ಕೆಲಸಗಳನ್ನು ನಿರ್ವಹಿಸಲು ಅಗತ್ಯವಿಲ್ಲವೆಂದು ಅಭಿಪ್ರಾಯಕ್ಕೆ ಬಂದಿತು. ಈ ಕಾಯ್ದೆಯ ಮುಖ್ಯಾಂಶಗಳೆಂದರೆ, ಪೊಲೀಸ್ ಇಲಾಖೆಯನ್ನು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಿ, ಅದೇ ಇಲಾಖೆಯ ಅಧಿಕಾರಿಯ ನಿಯಂತ್ರಣ ಹಾಗೂ ನೇರ ಮೇಲ್ವಿಚಾರಣೆಯಲ್ಲಿ ಇಡಬೇಕು. ಮತ್ತು ನ್ಯಾಯಾಂಗದ ಕೆಲಸಗಳಿಂದ ಇಲಾಖೆಯನ್ನು ದೂರವಿಡಬೇಕು. ಇಡೀ ಸಂಸ್ಥಾನಕ್ಕೆ ಒಬ್ಬ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ನನ್ನು ನೇಮಿಸಬೇಕು. ಈತನಿಗೆ ಮದ್ರಾಸ್ ಪ್ರಾಂತ್ಯದ ಪೊಲೀಸ್ ಪಡೆಯ ಶಿಸ್ತು ಕಾಪಾಡುವ ಆಂತರಿಕ ಆಡಳಿತ ನೆಡೆಸುವ ಅಧಿಕಾರ ನೀಡಲಾಗಿತ್ತು.[೧೦೧] ಪೊಲೀಸ್ ಸಿಬ್ಬಂದಿಗೆ ಸೂಕ್ತ ಸಂಬಳವನ್ನು ನೀಡಿ ಸರಿಯಾಗಿ ನಿಯಂತ್ರಣದಲ್ಲಿಡಲಾಗಿತ್ತು. ಪ್ರತೀ ಜಿಲ್ಲೆಗೆ ಒಬ್ಬ ಯುರೋಪಿಯನ್ ಡೆಪಿಟ್ಯೂ ಕಮಿಷನರ್ ಮತ್ತು ಅಗತ್ಯಕ್ಕೆ ತಕ್ಕಷ್ಟು ಕೆಳದರ್ಜೆಯ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಮ್ಯಾಜಿಸ್ಟ್ರೇಟ್‌ನ ನ್ಯಾಯಾಂಗದ ಕೆಲಸಗಳನ್ನು, ಅಪರಾಧಗಳ ತಡೆ ಮತ್ತು ಪತ್ತೆ ಕಾರ್ಯದಿಂದ ಪ್ರತ್ಯೇಕಗೊಳಿಸಲಾಯಿತು. ಗ್ರಾಮೀಣ ಪೊಲೀಸ್ ಸಂಖ್ಯೆಯನ್ನು ಹೆಚ್ಚು ಮಾಡಿ ಜಿಲ್ಲಾ ಸೂಪರಿಂಟೆಂಡೆಂಟ್‌ನ ನಿಯಂತ್ರಣದಲ್ಲಿ ಇಡಲಾಗಿತ್ತು. ಗ್ರಾಮದ ಪಟೇಲನ ಬದಲಿಗೆ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳನ್ನು ನೇಮಿಸಲಾಗಿತ್ತು. ಈತನದು ಕಾರ್ಯನಿರ್ವಾಹಕ ಜವಾಬ್ದಾರಿಗಳಾಗಿದ್ದವು. ಈತನ ಹಳ್ಳಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಈತ ಗ್ರಾಮೀಣ ಪೊಲೀಸ್ ಮತ್ತು ವ್ಯವಸ್ಥಿತ ಪೊಲೀಸರ ನಡುವಿನ ಮುಖ್ಯ ಕೊಂಡಿಯಾಗಿದ್ದ. ಈ ಕಾಯ್ದೆ ಪ್ರಕಾರ ತಾಲೂಕು ಮಟ್ಟದಲ್ಲಿಯೂ ಸಹ ಕಂದಾಯ ಹಾಗೂ ಪೊಲೀಸ್ ಕೆಲಸಗಳನ್ನು ಪ್ರತ್ಯೇಕಗೊಳಿಸಲಾಯಿತು. ಮ್ಯಾಜಿಸ್ಟ್ರೇಟ್‌ನ ಆದೇಶದಂತೆ ಪ್ರತೀ ಜಿಲ್ಲೆಗೆ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್‌ನನ್ನು ಪೊಲೀಸ್ ಇಲಾಖೆಯ ಆಡಳಿತ ನಿರ್ವಹಣೆಗೆ ನೇಮಿಸಲಾಯಿತು. ಆದರೆ ಈತನು ಸಂಸ್ಥಾನದ ಐ.ಜಿ.ಪಿ ಯವರಿಗೆ ವರದಿ ಮಾಡುವ ಅಧಿಕಾರಿಯಾಗಿದ್ದನು.

ಆಯೋಗವು ಪೊಲೀಸ್ ಇಲಾಖೆಯ ಆಡಳಿತವನ್ನು ಸರಳೀಕರಣಗೊಳಿಸಲು ಕೆಲವು ಸರಳ ಪರಿಹಾರಗಳನ್ನು ಸೂಚಿಸಿತು. ೧೮೫೯ ರ ೨೪ ನೇ ಮದ್ರಾಸ್ ಪ್ರೆಸಿಡೆನ್ಸಿಯ ಮದ್ರಾಸ್ ಪೊಲೀಸ್ ಕಾಯ್ದೆಯ ಅನುಭವಗಳ ಅಡಿಯಲ್ಲಿ ಕೆಲವು ಪ್ರಯೋಗಗಳನ್ನು ಮಾಡಲಾಯಿತು. ಮಿಲಿಟರಿ ಪೊಲೀಸನ್ನು ಉಳಿಸಿಕೊಳ್ಳುವುದು ಅಗತ್ಯವೂ ಇಲ್ಲ ಅಥವಾ ಯೋಗ್ಯವೂ ಅಲ್ಲ ಎಂದು ಆಯೋಗ ಅಭಿಪ್ರಾಯಪಟ್ಟಿತು. ಮಿಲಿಟರಿ ಪಡೆಗೆ ಅದರ ಕರ್ತವ್ಯಗಳ ಬಗ್ಗೆ ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದೇನೆಂದರೆ ನಾಡಿನ ಭೂಪ್ರದೇಶಗಳನ್ನು ರಕ್ಷಿಸುವುದು ಮತ್ತು ದಂಗೆಯಂತಹ ಸಂದರ್ಭಗಳಲ್ಲಿ ಮಾತ್ರ ಸಿವಿಲ್ (ದಿವಾಣಿ) ಅಧಿಕಾರಿಗಳಿಗೆ ಸಹಾಯ ನೀಡುವುದು. ಆಯೋಗವು ನಿದಾನವಾಗಿ ಮಿಲಿಟರಿ ಪೊಲೀಸನ್ನು ರದ್ದುಗೊಳಿಸಬೇಕು ಎಂದು ಅಭಿಪ್ರಾಯಪಟ್ಟಿತು. ಭಾರತದ ಮೊದಲ ಪೊಲೀಸ್ ಕಮಿಷನ್‌ನ ಈ ಅಭಿಪ್ರಾಯಗಳನ್ನು ಕೆಲವು ಬದಲಾವಣೆಗಳೊಂದಿಗೆ ಒಪ್ಪಿ ೧೮೬೧ ರ ೫ ನೇ ಕಾಯ್ದೆಯಲ್ಲಿ ಪೊಲೀಸ್ ಆ್ಯಕ್ಟ್ ಆಗಿ ಜಾರಿಗೆ ತರಲಾಯಿತು. ಇದು ಮೈಸೂರು ಸಂಸ್ಥಾನಕ್ಕೂ ಅನ್ವಯಿಸಿತು.

೫: ೭– ಸಿವಿಲ್ ಸರ್ವಿಸ್‌ನಲ್ಲಿ ಪೊಲೀಸ್ ಇಲಾಖೆಗೆ ಭಾರತೀಯರನ್ನು ನೇಮಿಸಿಕೊಳ್ಳುವ ಬಗ್ಗೆ ಬ್ರಿಟೀಷರ ಮನೋಭಾವ

ಸರ್. ಚಾರ್ಲ್ಸ್ ಅರ್ಟಿಸ್‌ಸನ್‌ರವರ ನೇತ್ರತ್ವದಲ್ಲಿ ಲೋಕಸೇವಾ ಆಯೋಗವು ೧೮೮೬–೮೭ ರಲ್ಲಿ ಮನೋಭಾವದ ಬಗ್ಗೆ ಅಧ್ಯಯನ ನಡೆಸಿತು. ಅದರಲ್ಲಿ ತಿಳಿಸಿದ್ದೇನೆಂದರೆ, ೧೮೬೦ ರಲ್ಲಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ, ಪ್ರೆಸಿಡೆನ್ಸಿಗಳಲ್ಲಿ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ ವ್ಯಾಪಕವಾಗಿ ಅದರ ಪೂರ್ಣ ವಿಚಾರಗಳ ಬಗ್ಗೆ ವಿಚಾರಣೆ ನಡೆಸಿದ ಸಮಿತಿಯು ನೀಡಿದ ಶಿಫಾರಸ್ಸುಗಳನ್ನು ಶಾಸನ ಸಭೆಗಳಲ್ಲಿ ಕಾಯಿದೆಯಾಗಿ ಸೇರಿಸಲಾಯಿತು. ಪೊಲೀಸ್ ವ್ಯವಸ್ಥೆಯು, ಅರೆಸೇನಾ ಪಡೆಗಳ ಬಳಿ ಅದರದೇ ಆದ ಅಧಿಕಾರಿಗಳಿಂದ ತರಬೇತಿಯನ್ನು ಪಡೆದು ಒಂದು ಉನ್ನತ ಸಂಘಟಿತ ವ್ಯವಸ್ಥೆಯಾಗಿತ್ತು. ಆದರೆ ಮ್ಯಾಜಿಸ್ಟ್ರೇಟರು ಮತ್ತು ಸ್ಥಳೀಯ ಸರ್ಕಾರಗಳ ನಿಯಂತ್ರಣಕ್ಕೆ ಇದು ಒಳಪಟ್ಟತ್ತು. ಇದೇ ಚಕ್ರಾಧಿಪತ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಮತ್ತು ಅಪರಾಧ ಪತ್ತೆ ಮಾಡುವ ಜವಾಬ್ದಾರಿ ಹೊಂದಿತ್ತು. ಕೆಲವು ಸ್ಥಳೀಯ ಬದಲಾವಣೆಗಳನ್ನು ಹೊರತುಪಡಿಸಿದರೆ ಇದರ ಮುಖ್ಯಸ್ಥ ಐ.ಜಿ ಆಗುತ್ತಿದ್ದ. ಈತನಿಗೆ ಸಹಾಯಕರಾಗಿ ಎರಡು ಅಥವಾ ಮೂರು ಜನ ಡೆಪ್ಯುಟಿ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ಗಳು ಇರುತ್ತಿದ್ದರು. ೧೮೬೧ ರಲ್ಲಿ ಇಲಾಖೆಯ ಸಂವಿಧಾನ (ನಿಯಮ)ಗಳು ಜಾರಿಗೆ ಬಂದು ಪ್ರತೀ ಜಿಲ್ಲೆಯ ಪೊಲೀಸ್ ಮುಖ್ಯಸ್ಥನ ಸ್ಥಾನಕ್ಕೆ ಯುರೋಪಿಯನ್ ಅಧಿಕಾರಿಗಳನ್ನು ಮತ್ತು ಅಗತ್ಯವಿದ್ದಲ್ಲಿ ಅವರಿಗೆ ಸಹಾಯಕರನ್ನು ನೇಮಿಸಬೇಕೆಂದು ಉದ್ದೇಶಿಸಲಾಯಿತು. ೧೮೮೬–೮೭ ರ ವೇಳೆಗೆ ಈ ಪದ್ಧತಿಯಲ್ಲಿ ಸ್ವಲ್ಪ ಸಡಿಲಿಕೆ ಇರುವುದು ಕಂಡುಬರುತ್ತದೆ.[೧೦೨]

ಸಂಸ್ಥಾನದಲ್ಲಿ ಪಿ.ಎಸ್. ಕಮಿಷನ ವಿಚಾರಣೆ ಮುಂದುವರಿಸಿದ್ದು, ಈ ಇಲಾಖೆಯಲ್ಲಿ ಸುಮಾರು ೩೭೦ ಜನ ಹಿರಿಯ ಅಧಿಕಾರಿಗಳಿದ್ದರು. ಇದರಲ್ಲಿ ಕೆಲವು ಜಿಲ್ಲೆಗಳಲ್ಲಿ ಇನ್ನೂ ಅಧಿಕಾರ ನೀಡದ ಅರ್ಹರಾದ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ಗಳಿದ್ದರು. ಇದು ಸಂಸ್ಥಾನದಲ್ಲಿ ಅಗತ್ಯವೆಂದು ಕಂಡು ಬಂದ ಕಡೆಗೆ ಕಳಿಸಲು ಕಾಯ್ದಿಟ್ಟ ಅಧಿಕಾರಿ ವರ್ಗವಾಗಿತ್ತು. ಈ ೩೭೦ ಜನ ಅಧಿಕಾರಿಗಳಲ್ಲಿ ೩೧೫ ಜನ ಅನಿವಾಸಿ ಯುರೋಪಿಯನ್ನರಾಗಿದ್ದರು. ೩೩ ಜನ ನಿವಾಸಿ ಯುರೋಪಿಯನ್ನರಾಗಿದ್ದರು. ೫ ಜನ ಯುರೋಪಿಯನ್ನರು ೧೭ ಜನ ಸ್ಥಳೀಯರು ಆಗಿದ್ದರು.[೧೦೩] ಈ ರೀತಿ ರಚನೆಯ ಕೆಲವು ವರ್ಷಗಳ ನಂತರ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಮಾಡಲಾಯಿತು. ಬಂಗಾಳದ ಪಡೆಗಳಲ್ಲಿದ್ದ ಬಂಡಾಯದ ಪರಿಣಾಮ ಈ ರೀತಿ ಅಧಿಕಾರಿಗಳ ನೇಮಕಾತಿಗೆ ಉತ್ತಮ ಅವಕಾಶಕಲ್ಪಿಸಿತು.[೧೦೪]

ಈ ರೀತಿಯ ಅಧಿಕಾರಿಗಳನ್ನು ಇಲಾಖೆಗೆ ಒದಗಿಸುವ ಪದ್ಧತಿ ಕ್ರಮೇಣ ಬದಲಾಗುತ್ತಾ ಬಂತು. ೧೮೮೬–೮೭ ರ ಹೊತ್ತಿಗೆ ಬಹುಮಟ್ಟಿಗೆ ಈ ರೀತಿ ನೇಮಕಾತಿ ನಿಲ್ಲಿಸಲಾಯಿತು. ಪ್ರಸ್ತುತ ಮಿಲಿಟರಿ ಅಧಿಕಾರಿಗಳು ಈ ರೀತಿಯಲ್ಲಿ ತಮ್ಮ ಅಧಿಕಾರಿಗಳನ್ನು ಪೊಲೀಸ್ ಇಲಾಖೆಗೆ ನೇಮಿಸುವುದನ್ನು ವಿರೋಧಿಸಿದ್ದರಿಂದ ಇದನ್ನು ನಿಲ್ಲಿಸಲಾಯಿತು. ಬ್ರಿಟೀಷ್ ಆಡಳಿತವಿರುವ ಕೆಲವು ಪ್ರಾಂತ್ಯಗಳಲ್ಲಿ ಈ ಇಲಾಖೆಯ ನಾಗರಿಕ (ಸಿವಿಲ್) ಸ್ವರೂಪದ ಲಕ್ಷಣಗಳು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ಪೊಲೀಸ್ ಅಧಿಕಾರಿಗಳ ಸ್ಥಿತಿಗತಿಯು ಉತ್ತಮವಾಗಿದ್ದು, ಮಿಲಿಟರಿ ಅಧಿಕಾರಿಗಳಿಗೆ ನೀಡುತ್ತಿದ್ದ ಸಂಬಳದಂತೆಯೇ ಇದನ್ನು ಸಹ ಪರಿಶೀಲಿಸಿ ಗೌರವಯುತ ಸಂಬಳ ನೀಡಲಾಗುತ್ತಿತ್ತು. ಕಾಲಕಾಲಕ್ಕೆ ಪದೋನ್ನತಿ ನೀಡಲಾಗುತ್ತಿತ್ತು. ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಹುದ್ದೆಗೆ ಅಧಿಕಾರಿಗಳನ್ನು ನೇಮಿಸುವುದರ ಬದಲಿಗೆ ಬೇರೆ ಮೂಲಗಳಿಂದ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಇದನ್ನು ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ಮಾಡಲಾಗುತ್ತಿತ್ತು. ನಂತರ ಇದು ಇಲಾಖೆಯ ನಿಯಮವಾಯಿತು. ಬಹುತೇಕ ಸಂಸ್ಥಾನಗಳಲ್ಲಿ ಈ ಅಧಿಕಾರಿಗಳ

ನೇಮಕಾತಿಯು ಪೂರ್ಣ ಹಾಗೂ ಸರಳವಾದ ನಾಮಕರಣದಿಂದ ಮಾಡಲಾಗುತ್ತಿತ್ತು. ಆದಾಗ್ಯೂ ಒಂದೆರಡು ಪ್ರಾಂತ್ಯಗಳಲ್ಲಿ ಕೆಲವು ಸಮಯದ ನಂತರ ಈ ರೀತಿ ನಾಮಕರಣಗೊಂಡ ಅಧಿಕಾರಿಗಳಿಗೆ ಭಾಷೆಯ ಬಗ್ಗೆ ಪರೀಕ್ಷೆಗಳನ್ನು ಮಾಡಲು ಪ್ರಾರಂಭಿಸಿದರು.[೧೦೫]

ಲೋಕಸೇವಾ ಆಯೋಗದ ಶಿಪಾರಸ್ಸುಗಳು ಮತ್ತು ದೃಷ್ಟಿಕೋನ

ಅಧಿಕಾರಿಗಳನ್ನು ನಾಮಕರಣದ ಮೂಲಕ ಆಯ್ಕೆಮಾಡುವುದು ಉತ್ತಮ ಫಲಗಳನ್ನು ನೀಡಿಲ್ಲವೆಂಬುದು ಆಯೋಗದ ಮುಂದೆ ತೆರೆದಿಟ್ಟ ಸಾಕ್ಷ್ಯವಾಗಿತ್ತು. ಈ ರೀತಿ ನಾಮಕರಣಗೊಂಡ ಅಧಿಕಾರಿಗಳ ಕಾರ್ಯಕ್ಷಮತೆಯಲ್ಲಿ ಭಾರಿ ಅಸಮಾನತೆ ಇತ್ತು. ಕೆಲವು ಅತ್ಯುತ್ತಮ ಅಧಿಕಾರಿಗಳಾಗಿ ಹೊರ ಹೊಮ್ಮಿದರೆ ಮತ್ತೆ ಕೆಲವರು ಮತ್ತೆ ಕೆಲವು ವಿಶೇಷ ಪ್ರಕರಣಗಳಲ್ಲಿ, ಕೆಲವರು ಯಾವಾಗಲೂ ಒಳ್ಳೆ ಅಧಿಕಾರಿಯಾಗಿ ಹೊರ ಹೊಮ್ಮಲೇ ಇಲ್ಲ. ಈ ವ್ಯವಸ್ಥೆಯಲ್ಲಿ ಸಹಜವಾಗಿ ಇಂಗ್ಲೆಂಡ್‌ನಲ್ಲಿ ನಡೆದ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ಯುವಕರನ್ನೇ ಸೇವೆಗೆ ಒದಗಿಸಲಾಗುತ್ತಿತ್ತು ಇವರು ಭಾರತದಲ್ಲಿನ ಪೊಲೀಸ್ ಇಲಾಖೆಯಲ್ಲಿ ನಾಮಕರಣಗೊಳ್ಳುವ ಭರವಸೆಯಿಂದ, ಇಂಗ್ಲೆಂಡ್‌ನಿಂದ ಇಲ್ಲಿಗೆ ಬರುತ್ತಿದ್ದರು ಮತ್ತು ನಾಮಕರಣ ಮಾಡುವ ಅಧಿಕಾರಿಗಳಿಗೆ ಪ್ರಭಾವ ಬೀರಿಕೊಂಡೇ ಬರುತ್ತಿದ್ದರು. ಇವರ ನೇಮಕಾತಿಗಳು ಶಿಪಾರಸ್ಸು ನೇಮಕಾತಿ ನಿಯಮಗಳಂತೆ ಇರದೇ ಅಸಮಾಧಾನಕರವಾಗಿದ್ದವು. ಇದು ನಿರೀಕ್ಷಿತವೂ ಆಗಿದ್ದರಬೇಕು. ಈ ವ್ಯವಸ್ಥೆಯು ಆಗಾಗ್ಗೆ ಇಲಾಖೆಯಲ್ಲಿ ಕೆಲಸ ಮಾಡಬಲ್ಲ ಬುದ್ಧಿಸಾಮರ್ಥ್ಯವನ್ನು ಬೆಳೆಸಿಕೊಂಡ ಸಿಬ್ಬಂದಿಯವರನ್ನು ಸಹ ಕೆಲಸಕ್ಕೆ ಒದಗಿಸುತ್ತಿತ್ತು. ಕೆಲವು ಪ್ರಾಂತ್ಯಗಳಲ್ಲಿ, ಗಮನಾರ್ಹವಾಗಿ ಬಂಗಾಳದ ದಕ್ಷಿಣದ ಪ್ರಾಂತ್ಯಗಳಲ್ಲಿ 'ಯುರೋಪಿಯನ್ನರು' ಮತ್ತು 'ಯುರೇಶಿಯನ್ನ'ರಿಗಾಗಿ ಇದ್ದ ಶಿಕ್ಷಣ ಸಂಸ್ಥೆಗಳು ಉತ್ತಮ ಪೊಲೀಸ್ ವ್ಯವಸ್ಥೆಗಾಗಿ ಸಾಕಷ್ಟು ಜನ ಹುಡುಗರನ್ನು ಪ್ರತಿ ವರ್ಷ ನೀಡುತ್ತಿರುವುದನ್ನು ಆಯೋಗವು ಒತ್ತಿ ಹೇಳಿತು. ವಿಶೇಷವಾಗಿ ಗುಡ್ಡಗಾಡು ಪ್ರದೇಶದಲ್ಲಿರುವ ಶಾಲೆಗಳು, ಈ ರೀತಿ ಅಭ್ಯರ್ಥಿಗಳ್ನು ನೀಡುತ್ತಿತ್ತು. ಉಳಿದ ಪ್ರಾಂತ್ಯಗಳಲ್ಲಿ ಇಂತಹ ಉತ್ತಮ ಅಭ್ಯರ್ಥಿಗಳನ್ನು ಪೊಲೀಸ್ ಇಲಾಖೆಗೆ ಒದಗಿಸಿದ ಉದಾಹರಣೆಗಳು ಕಾಣಸಿಗುವುದಿಲ್ಲ. ಅಗತ್ಯವಾದ ಉತ್ತಮ ದರ್ಜೆಯ ಅಧಿಕಾರಿಗಳನ್ನು ಇಂಗ್ಲೆಂಡ್ ಮಾತ್ರ ಹೊರತರುತ್ತಿತ್ತು ಎಂದು ಹೇಳಲಾಯಿತು. [೧೦೬]

ಪೊಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳ ಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರನ್ನು ಉದ್ಯೋಗಕ್ಕೆ ತೆಗೆದುಕೊಳ್ಳುವ ಬಗ್ಗೆ ಇದ್ದ ಪ್ರಶ್ನೆಯೆಂದರೆ, ಸಹ-ಕಮಿಟಿಯು ಪಡೆದು ದಾಖಲಿಸಿದ ವಾಸ್ತವಿಕವಾಗಿ ಪೂರ್ಣ ಮಾಹಿತಿಗಳು ಆಯೋಗವು ಈ ವಿಷಯಗಳ ಬಳಿಗೆ ಸಮೀಪಿಸಿತು. ಕಾನೂನು ಸುವ್ಯವಸ್ಥೆ ಪಾಲನೆ ಮತ್ತು ವ್ಯಕ್ತಿ ಹಾಗೂ ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡುವುದು, ಭಾರತದಲ್ಲಿರುವ ಬ್ರಿಟೀಷ್ ಸರ್ಕಾರದ ಅತ್ಯಂತ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು. ಈ ಪ್ರಾಥಮಿಕ ಕರ್ತವ್ಯದ ಜೊತೆಗೆ ಲೋಕಸೇವಾ ಆಯೋಗದ ಎಲ್ಲಾ ಹುದ್ದೆಗಳಿಗೆ ಸೇರಲು ಎಲ್ಲಾ ವರ್ಗದವರಿಗೆ ಸರಿಯಾದ ಅವಕಾಶಗಳು ಇರಲಿಲ್ಲ. ಆದರೆ ಈ ಅವಕಾಶಗಳು ಇರಬೇಕಿತ್ತು ಎಂದು ಆಯೋಗವು ಅಭಿಪ್ರಾಯಪಟ್ಟಿತ್ತು. ಇಲಾಖೆಯಲ್ಲಿನ ಹುದ್ದೆಗಳನ್ನು ನ್ಯಾಯಯುತವಾಗಿ ಪಡೆಯಲು ಅತ್ಯಂತ ಉನ್ನತವಾದ ಅಪರಾಧ ಪತ್ತೆ ಸಾಮರ್ಥ್ಯವನ್ನು ಹೊಂದಿರಬೇಕಿತ್ತು. ಆಯೋಗವು ಈ ರೀತಿ ಅಭಿಪ್ರಾಯಪಟ್ಟಿತು. ಕೇವಲ ಉತ್ತಮ ಪೊಲೀಸ್ ಅಧಿಕಾರಿಗಳು ಬೇಕೆಂಬ ಒಂದೇ ವಿಷಯಕ್ಕೆ ಅವಲಂಬಿತವಾಗಿ ಇಲಾಖೆಯ ಇತರ ಕರ್ತವ್ಯಗಳ ಕಡೆಗೆ ಅವಗಣನೆ ಮಾಡಬಾರದು. ಈಗ ಇರುವ ತಾರತಮ್ಯಗಳಿಗೆ ಹೊರತಾಗಿ ಸಮಾಜದಲ್ಲಿ ಜನರ ನಡುವಿನ ಶಾಂತಿ ಕಾಪಾಡಲು, ಜನಾಂಗ, ಧರ್ಮಗಳಿಂದ ಮನಸ್ತಾಪವುಂಟಾಗಿ, ಜನರ ನಡುವೆ ಇರುವ ವ್ಯತ್ಯಾಸ, ದ್ವೇಷಗಳಿಂದ ಹೊರಗೆ ಬರಬೇಕೆಂದು ಆಯೋಗ ಒತ್ತಾಯಮಾಡಿತು. ಭಾರತ ಸರಕಾರ ಅಥವಾ ಸ್ಥಳೀಯ ಸರ್ಕಾರಗಳು ಪೊಲೀಸ್ ಇಲಾಖೆಯಲ್ಲಿನ ಉನ್ನತ ಸ್ಥಾನಗಳಿಗೆ ಸ್ಥಳೀಯರನ್ನು ನೇಮಕ ಮಾಡುವ

ವಿಚಾರದಲ್ಲಿ ಯಾವುದೇ ಆಲಸ್ಯ ತೋರಿರಲಿಲ್ಲ. ಈ ರೀತಿ ಪ್ರಯೋಗಗಳನ್ನು ಮಾಡುವಾಗ ಅತ್ಯಂತ ಜಾಗರೂಕವಾಗಿ ಮಾಡಲಾಯಿತು ಮತ್ತು ಅದು ಏಕರೂಪವಾಗಿ ಯಶಸ್ವಿಯಾಗಲಿಲ್ಲ.[೧೦೭] ಯುರೋಪಿಯನ್ ಅಧಿಕಾರಿಗಳ ಗೈರುಹಾಜರು ಇದಕ್ಕೆ ಒಂದು ಕಾರಣವಾಯಿತು. ಆದರೆ ಇದು ಪ್ರಮುಖ ಕಾರಣವಾಗಿರಲಿಲ್ಲ. ೧೮೬೦ಕ್ಕಿಂತ ಹಿಂದೆ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ ವ್ಯಾಪಕವಾಗಿ ಸಾರ್ವತ್ರಿಕವಾಗಿ ದೂರುಗಳು ಇದ್ದವು. ಈಗಿನ ವ್ಯವಸ್ಥೆಯನ್ನು (೧೮೮೬-೮೭) ಈ ಹಿಂದಿನ ಪೊಲೀಸ್ ವ್ಯವಸ್ಥೆಯಂತೆ ಆಗದಂತೆ ನೋಡುವ ಬಯಕೆ ಹೊಂದಿದ್ದರು. ಆದಾಗ್ಯೂ ಸಂಪೂರ್ಣವಾಗಿ ಇದೊಂದು ಹಿಂದಿನ ವ್ಯವಸ್ಥೆಗಿಂತ ಉತ್ತಮ ವ್ಯವಸ್ಥೆಯಾಗಿತ್ತು. ಮತ್ತು ಆಯೋಗವು ಹಿಂದೆ ಇದ್ದ ಯಾವುದೇ ರೀತಿಯ ಪೊಲೀಸ್ ವ್ಯವಸ್ಥೆಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲಿಲ್ಲ. ಆಯೋಗವು ಈ ವಿಷಯವನ್ನು ಭಾರತ ಸರ್ಕಾರದ ಜವಾಬ್ದಾರಿ ನೀಡಿತು. ಭಾರತೀಯ ಸ್ಥಳೀಯ ವ್ಯಕ್ತಿಗಳನ್ನು ಸಿವಿಲ್ ಸರ್ವಿಸ್‌ನ ಇತರ ಇಲಾಖೆಯಲ್ಲಿ ನೇಮಿಸುವುದು ಹಾಗೂ ಅದನ್ನೇ ಎಷ್ಟರ ಮಟ್ಟಿಗೆ ಪೊಲೀಸ್ ಇಲಾಖೆಗೂ ವಿಸ್ತರಿಸಬೇಕೆನ್ನುವ ಬಗ್ಗೆ ಸರಿಯಾಗಿ ತೀರ್ಮಾನಿಸುವ ಏಕೈಕ ಅಧಿಕಾರಸತ್ತೆ ಎಂದರೆ ಭಾರತ ಸರ್ಕಾರವಾಗಿತ್ತು. ಅದೇ ವೇಳೆಗೆ ಪೊಲೀಸ್ ಇಲಾಖೆಯಲ್ಲಿನ ಉನ್ನತ ಸ್ಥಾನಗಳಲ್ಲಿ ಬಹಳ ವರ್ಷಗಳಿಂದ ಯುರೋಪಿಯನ್ನರೇ ಇದ್ದರು. ಕೆಲವು ಪ್ರಾಂತಗಳಲ್ಲಿ ಹಿರಿಯ ಹುದ್ದೆಗಳಲ್ಲಿ ಇದ್ದ ಭಾರತೀಯರು ಹುದ್ದೆಗೆ ಬದ್ಧವಾಗಿದ್ದರು. ಅವರನ್ನು ಕೆಲಸದಿಂದ ತೆಗೆಯುತ್ತಿದ್ದರು. ಹೀಗೆ ಮಾಡಬಾರದು ಎಂದು ಆಯೋಗ ಅಭಿಪ್ರಾಯಪಟ್ಟಿತು. ಈ ಸಾಹಸ ದಿಂದಾಗಿ ಸಮಾಧಾನಕರವಾದ ಪ್ರಮಾಣದಲ್ಲಿ ಸ್ಥಳೀಯರು ಈ ಹುದ್ದೆಗಳಲ್ಲಿ ಪ್ರವೇಶ ಪಡೆಯುವಂತಾಯಿತು. ಇದರಿಂದಾಗಿ ಯಾವಾಗಲೂ ಉತ್ತಮ ಸಾಮರ್ಥ್ಯವಿರುವವರೇ ಸೇವೆಗೆ ಲಭಿಸುವಂತಾಯಿತು.[೧೦೮] ಕೊನೆಯದಾಗಿ ಆಯೋಗವು ಆದಷ್ಟು ಬೇಗ ತನ್ನ ಐಕ್ಯಮತ್ಯದ ಅಭಿಪ್ರಾಯಗಳನ್ನು ದಾಖಲೀಕರಣ ಮಾಡ ಬೇಕೆಂದು ಇಚ್ಚೆಸಿತು. ಇಲಾಖೆಯಲ್ಲಿನ ಕೆಳಗಿನ ಹಂತದ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನದಲ್ಲಿನ ತಾರತಮ್ಯ ಮತ್ತು ಅಸಮರ್ಪಕ ವೇತನ ನೀಡುತ್ತಿದ ಬಗ್ಗೆ ತುಂಬಾ ಆರೋಪವಿತ್ತು. ಆದರೆ ಇತರೆ ದರ್ಜೆಯ ಅಧಿಕಾರಿಗಳ ಕಾರ್ಯದ ಗುಣಮಟ್ಟದ ಸುಧಾರಣೆಗೆ ಯಾವ ಯಾವ ಕ್ರಮ ಕೈಗೊಳ್ಳಬೇಕೆಂದು ಆಪೇಕ್ಷಿಸಿದ್ದರೋ ಅವುಗಳು ಪೊಲೀಸ್ ಠಾಣೆಯ ಅಧಿಕಾರಿ ಮಟ್ಟದಲ್ಲಿ ಯಶಸ್ಸು ಕಾಣಲಿಲ್ಲ. ಈ ಅಧಿಕಾರಿಯನ್ನು ಯಾವುದೇ ಹೆಸರಿನಿಂದ ಕರೆಯಲಿ ಆತನು ಜನರಿಂದ ಸಂಭಾವನೆ ಪಡೆಯದೇ, ಸಾಕಷ್ಟು ದೂರದೃಷ್ಟಿ ಹೊಂದಿದ್ದು, ಈತನ ಸುತ್ತ ತೆರೆದಿಟ್ಟ ಪ್ರಲೋಬನೆಗಳಿಗೆ ಒಳಗಾಗದಂತೆ ಮನವೊಲಿಸಿ ಶಕ್ತಗೊಳಿಸಬೇಕಾಗಿತ್ತು. ಈ ಠಾಣಾ ಧಿಕಾರಿಯು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಅಪರಾಧಗಳ ತಡೆ, ಅಪರಾಧಗಳ ಪತ್ತೆ, ಶಾಂತಿಪಾಲನೆಗೆ ಇವರೇ ಜವಾಬ್ದಾರರಾಗಿದ್ದರು. ಮತ್ತು ಆತನ ಸರಹದ್ದಿನಲ್ಲಿ ನಡೆಯುವ ಎಲ್ಲಾ ಅಪರಾಧಗಳನ್ನು ಈತನೇ ವಿಚಾರಣೆ ನಡೆಸ ಬೇಕಿತ್ತು. ಈತನು ಪೊಲೀಸ್ ಆಡಳಿತದ ಬಗ್ಗೆ ಪರಿಪೂರ್ಣ ಜ್ಞಾನವನ್ನು ಹೊಂದಿರಬೇಕಾಗಿತ್ತು. ಇನ್ಸ್‌ಪೆಕ್ಟರ್‌ಗಳ ದರ್ಜೆಯ ಅಧಿಕಾರಿ ಗಳನ್ನು ವ್ಯವಸ್ಥಿತವಾಗಿ ನೇಮಿಸಬೇಕು. ಮತ್ತು ಅಗತ್ಯವಾಗಿ ನಾನ್‌ಕಮಿಷನ್ಡ್ ಉನ್ನತ ದರ್ಜೆಯ ಅಧಿಕಾರಿಗಳ ಕಾರ್ಯ ವೈಖರಿಯ ಸುಧಾರಣೆ ಆಗಬೇಕೆಂದು ಆಯೋಗ ಅಭಿಪ್ರಾಯಪಟ್ಟಿತು.[೧೦೯]

ಆಯೋಗವು ಈ ಕೆಳಗಿನ ಶಿಫಾರಸ್ಸುಗಳನ್ನು ನೀಡಿತು

೧) ಬಹಳಷ್ಟು ಪ್ರಾಂತ್ಯಗಳಲ್ಲಿ ಅಸಿಸ್ಟೆಂಟ್ ಜಿಲ್ಲಾ ಸೂಪರಿಂಟೆಂಡೆಂಟ್‌ರವರ ನೇಮಕಾತಿಯಲ್ಲಿನ ಪದ್ಧತಿಯು ಅಸಮಾದಾನ ಕರವಾಗಿತ್ತು. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಉದ್ಯೋಗದ ಪದ್ಧತಿಗಳ ಬಗ್ಗೆ ಸಾಕಷ್ಟು ಖಚಿತತೆಯೂ ಇರಲಿಲ್ಲ. ಆದ್ದರಿಂದ ಅವರುಗಳ ನೇಮಕವು ಈ ಕೆಳಗಿನಂತೆ ಇರಬೇಕು.

ಎ) ಈ ರೀತಿಯ ಹುದ್ದೆಗೆ ಇಂಗ್ಲೆಂಡ್‌ನಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನಿಯಮಿತವಾಗಿ ಸ್ಪರ್ದೆ ಇದ್ದು, ಅವರುಗಳನ್ನು ಪ್ರತೀ ಪ್ರಾಂತ್ಯಗಳಲ್ಲಿ ನೇಮಿಸುವ ಬಗ್ಗೆ ಭಾರತ ಸರ್ಕಾರ ಸರಿಯಾದ ನಿರ್ಧಾರ ಕೈಗೊಳ್ಳಬೇಕು.

ಬಿ) ಭಾರತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನಿಯಮಿತ ಸ್ಪರ್ಧೆಯಿದ್ದು, ಅಂತಹ ಅಭ್ಯರ್ಥಿಗಳನ್ನು ಅತ್ಯಂತ ಜಾಗರೂಕತೆಯಿಂದ ಆಯ್ಕೆ ಮಾಡಬೇಕು. ಅವರ ದೈಹಿಕ ಸಾಮರ್ಥ್ಯ, ಪ್ರಾಂತೀಯ ಸೇವೆಗಳಿಗೂ ಅಗತ್ಯವಾಗಿ ನಿಗಧಿಪಡಿಸಿದ್ದ ಮಾತೃ ಭಾಷೆಯ ಜ್ಞಾನ, ಇಂಗ್ಲೀಷ್ ಶಿಕ್ಷಣ ಮಾದರಿಯ ಉನ್ನತ ಶೈಕ್ಷಣಿಕ ವಿದ್ಯಾರ್ಹತೆಗಳ ಆಧಾರದ ಮೇರೆಗೆ ಅವರ ಆಯ್ಕೆ ನಡೆಯಬೇಕು.

ಸಿ) ತಮ್ಮ ವೃತ್ತಿಯಲ್ಲಿ ತೋರಿದ ಅಸಾಧಾರಣವಾದ ಸೇವೆ, ಸಾಮರ್ಥ್ಯಗಳಿಗೆ ಇನ್ಸ್‌ಪೆಕ್ಟರ್ ದರ್ಜೆಯಿಂದ ಪದೋನ್ನತಿಯನ್ನು ನೀಡಬೇಕು.

ಡಿ) ಈ ಎರಡೂ ಸ್ಪರ್ಧಾತಕ ಪರೀಕ್ಷೆಗಳು ಈ ಹಿಂದಿನ ಶಿಪಾರಸ್ಸುಗಳನ್ನು ಉಲ್ಲೇಖಿಸಿ ಭಾರತ ಸರ್ಕಾರ ಮಾನ್ಯತೆ ಪಡೆದ ನಿಯಮಾವಳಿಗಳಿಗೆ ಅನುಸಾರವಾಗಿ ನಡೆಯಬೇಕು.

ಇ) ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳ ನೇಮಕಾತಿಯು, ಇಲಾಖೆಯಲ್ಲಿನ ಕೆಳದರ್ಜೆಯಿಂದಲೇ ನೇಮಿಸಬೇಕೆಂಬ ನಿಯಮ ಮಾಡಬೇಕು ಯಾವುದೇ ಕಾರಣಕ್ಕೂ ಈ ಹುದ್ದೆಗಳಿಗೆ ಹೊರಗಿನವರನ್ನು ನೇಮಿಸಬಾರದು ಮತ್ತು ಇದು ಉನ್ನತ ಅಧಿಕಾರಿಗಳಿಗೆ ತರಭೇತಿ ನೀಡುವ ಸ್ಥಳವಾಗಬೇಕು.[೧೧೦]

ಸ್ವಾತಂತ್ರ್ಯ ಪೂರ್ವದಲ್ಲಿ ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ರಾಜ್ಯದ ಕಾರ್ಯದರ್ಶಿಗಳಿಂದ ನೇಮಕವಾಗುತ್ತಿದ್ದರು. ಪ್ರಪ್ರಥಮ ಸಾರ್ವಜನಿಕ ಸ್ಪರ್ಧಾತ್ಮಕ ಪರೀಕ್ಷೆಯ ೧೮೯೩ರ ಜೂನ್ ತಿಂಗಳಿನಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಿತು. ಅತ್ಯಂತ ಹೆಚ್ಚು ಅಂಕಗಳಿಸಿದ ೧೦ ಜನ ಅಭ್ಯರ್ಥಿಗಳನ್ನು ಭಾರತೀಯ ಪೊಲೀಸ್ ವ್ಯವಸ್ಥೆಯಲ್ಲಿ ಫ್ರೊಬೆಷನರಿ ಅಧಿಕಾರಿಗಳನ್ನಾಗಿ ನೇಮಿಸಲಾಯಿತು. ಈ ಪೊಲೀಸ್ ವ್ಯವಸ್ಥೆಯು ನಿರ್ಧಿಷ್ಟವಾಗಿ ಯಾವ ದಿನಾಂಕದಿಂದ ಪ್ರಾರಂಭವಾಯಿತೆಂದು ಖಚಿತವಾಗಿ ಹೇಳುವುದು ಸ್ವಲ್ಪ ತ್ರಾಸಾ ದಾಯಕ. ೧೯೦೭ ರಲ್ಲಿ ಪ್ರತೀ ರಾಜ್ಯದ ಪೊಲೀಸ್ ಅಧಿಕಾರಿಗಳು ತಮ್ಮ ಭುಜಪಟ್ಟಿಕೆಯಲ್ಲ ಸಂಬಂಧಪಟ್ಟ ರಾಜ್ಯ ವನ್ನು ಸೂಚಿಸುವ ಅಕ್ಷರಗಳನ್ನು ಹಾಕಿಕೊಳ್ಳುವಂತೆ ನಿರ್ದೇಶಿಸಲಾಯಿತು. ಇದು ರಾಜ್ಯದ ಕಾರ್ಯದರ್ಶಿಯಿಂದ ನೇಮಕವಾದ ಅಧಿಕಾರಿಗಳಿಗೆ ಮಾತ್ರ ಸೀಮಿತವಾಗಿತ್ತು. ಮತ್ತು ರಾಜ್ಯ ಕಾರ್ಯದರ್ಶಿಗಳಿಂದ ನೇಮಕವಾದ ಅಧಿಕಾರಿ ಗಳನ್ನು ಪ್ರತ್ಯೇಕವಾಗಿ ಗುರುತಿಸಲು ಇದು ಅನುಕೂಲವಾಗುತ್ತಿತ್ತು. ಈ ದೃಷ್ಟಿಕೋನದಿಂದ ಭಾರತೀಯ ಪೊಲೀಸ್ ಸೇವೆಯು ೧೯೦೭ ರಿಂದ ಪ್ರಾರಂಭವಾಯಿತೆಂದು ಹೇಳಬಹುದು.

೫: ೮ : ೧೮೬೧ರ ಪೊಲೀಸ್ ಕಾಯ್ದೆ

೧೮೬೦ರ ಅಗೋಸ್ತ್ ೧೭ ರಂದು ನೇಮಕವಾದ ಭಾರತದ ಮೊದಲ ಪೊಲೀಸ್ ಕಮಿಷನ್ ವರದಿಯಲ್ಲಿ ಭಾರತದಲ್ಲಿ ಇರಬೇಕಾದ ಅಪೇಕ್ಷಿತ ಪೊಲೀಸ್ ವ್ಯವಸ್ಥೆಯ ಬಗ್ಗೆ ರೂಪುರೇಷೆಗಳನ್ನು ನೀಡಲಾಯಿತು.

೧೮೬೦ ರಿಂದ ೧೯೪೭ ರವರೆಗೆ ಅನೇಕ ಪ್ರಯೋಗಗಳ ನಂತರ ಭಾರತೀಯ ಪೊಲೀಸ್ ವ್ಯವಸ್ಥೆಯ ಸಮಸ್ಯೆಯ ಬಗ್ಗೆ ಬ್ರಿಟೀಷರು ಪರಿಹಾರ ಕಂಡುಕೊಂಡರು. ಅದೆಂದರೆ ಆಗಿನ ಕಾಲದ ಅಗತ್ಯಕ್ಕೆ ಸರಿಹೊಂದು ವಂತಹದ್ದುದ "ರಾಯಲ್ ಐರಿಷ್ ಕಾನ್ಸ್‌ಟೇಬಲರಿ"ಯನ್ನು ಹೋಲುವ ಪೂರ್ಣ ಪ್ರಮಾಣದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಿದರು. ಈ ಮಾದರಿಯ ಪೊಲೀಸ್ ವ್ಯವಸ್ಥೆ ಭಾರತದ ಹಲವು ಪ್ರಾಂತ್ಯಗಳಲ್ಲಿ ಅಳವಡಿಸಲಾಯಿತು. ಇದು ಅತ್ಯಂತ ಪರಿಣಾಮಕಾರಿಯಾಗಿ ಯಶಸ್ವಿಯಾಯಿತು. ಭಾರತದ ವಿವಿದೆಡೆ ಇರುವ ಪೊಲೀಸ್ ವ್ಯವಸ್ಥೆಯನ್ನು ಪರೀಕ್ಷೆಗೊಳಪಡಿಸಿ ಅದನ್ನು ಪುನರ್‌ಸಂಘಟಿಸುವ ಸಲುವಾಗಿ ಆ ಕಾಲದ ಎಲ್ಲಾ ಪೊಲೀಸ್ ವ್ಯವಸ್ಥೆ ಗಳನ್ನು ಒಂದೇ ರೀತಿ (ರೇಖೆಯಲ್ಲಿ ತರಲು) ಮಾಡಲು ಕಾಲ ಪಕ್ವವಾಗಿದೆ ಎಂದು ಮನವರಿಕೆಯಾಯಿತು. ಪರಿಣಾಮವಾಗಿ ೧೮೬೦ ರಲ್ಲಿ ಭಾರತ ಸರ್ಕಾರವು

ಇದೇ ಭಾರತದಲ್ಲಿನ ಬ್ರಿಟೀಷ್ ಭೂಭಾಗಗಳಲ್ಲಿ ಇರುವ ಪೊಲೀಸ್ ವ್ಯವಸ್ಥೆಯ ಬಗ್ಗೆ ಅಧ್ಯಯನನಡೆಸಿ ಅದನ್ನು ಅಭಿವೃದ್ಧಿ ಪಡಿಸಲು ಸಲಹೆಗಳನ್ನು ನೀಡಲು ಸಮಿತಿಯೊಂದನ್ನು ರಚಿಸಿತು.[೧೧೧] ಈ ಸಮಿತಿಯು ಸಮಸ್ಯೆಗಳ ಅಧ್ಯಯನವನ್ನು ನಡೆಸಿದ ನಂತರ ತನ್ನ ಶಿಪಾರಸ್ಸುಗಳನ್ನು ನೀಡಿತು. ಈ ಸಮಿತಿಯ ಸಲಹೆಗಳೆಂದರೆ, ಸೇನೆ ಅಧಿಕಾರಿಗಳ ಅಧೀನದಲ್ಲಿರುವ ಸಶಸ್ತ್ರ ಸೇನೆಯನ್ನು (ಮಿಲಿಟರಿ ಪೊಲೀಸ್) ಸಿವಿಲ್ ಕಾನ್ಸ್‌ಟೇಬಲ್‌ಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಬೇಕು. ಮಿಲಿಟರಿ ಅಧಿಕಾರಿಗಳನ್ನು ಮಿಲಿಟರಿ (ಸೇನೆ) ಕೆಲಸಕ್ಕೆ ಮತ್ತು ಸಿವಿಲ್ ಕಾನ್ಸ್‌ಟೇಬಲ್‌ಗಳನ್ನು ನಾಗರಿಕ ಕೆಲಸಕ್ಕಾಗಿಯೇ ನೇಮಕ ಮಾಡಬೇಕು. ಭಾರತದಲ್ಲಿನ ಪೊಲೀಸ್ ವ್ಯವಸ್ಥೆಯು ಇಂಗ್ಲೀಷ್ ಮತ್ತು ಐರಿಷ್ ಕಾನ್ಸ್‌ಟೇಬಲರಿಯ ಮಾದರಿಯಲ್ಲಿ ಇರಬೇಕು. ಹೊಸ ಪೊಲೀಸ್ ವ್ಯವಸ್ಥೆಯನ್ನು ಗ್ರಾಮೀಣ ಪೊಲೀಸರೊಂದಿಗೆ ಸಂಪರ್ಕದಲ್ಲಿರುವಂತೆ ಮಾಡಬೇಕು. ಇದರಿಂದ ಮುಂದೆ ಹೇಗೆ ಉಪಯುಕ್ತವಾಗುತ್ತದೋ ಹಾಗೆ ಮಾಡಬಹುದು. ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಇನ್ಸ್‌ಪೆಕ್ಟರ್ ಜನರಲ್ ರವರ ನೇತೃತ್ವದಲ್ಲಿ ಪೊಲೀಸ್ ಇಲಾಖೆಯನ್ನು ಪ್ರತ್ಯೇಕವಾದ ಆಡಳಿತ ಘಟಕವಾಗಿ ಮಾಡಬೇಕು. ಜಿಲ್ಲಾಮಟ್ಟದಲ್ಲಿ ಪೊಲೀಸರು ಮ್ಯಾಜಿಸ್ಟ್ರೇಟ್‌ರೊಂದಿಗೆ ಸಂಬಂಧ ಹೊಂದಿರಬೇಕು. ಪೊಲೀಸ್ ಮತ್ತು ನ್ಯಾಯಾಲಯ ಕಾರ್ಯಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಬೇಕು.[೧೧೨]

ಪ್ರತೀ ಜಿಲ್ಲೆಯ ಆಡಳಿತವನ್ನು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರಿಗೆ ವಹಿಸಬೇಕೆಂತಲೂ, ಜಿಲ್ಲೆಯ ವಿಸ್ತೀರ್ಣ ದೊಡ್ಡದಾಗಿದ್ದರೆ ಆತನಿಗೆ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರನ್ನು ನೇಮಿಸಬಹುದೆಂತಲೂ, ಈ ಇಬ್ಬರೂ ಅಧಿಕಾರಿಗಳು ಯುರೋಪಿಯನ್ನರಾಗಿರಬೇಕೆಂತಲೂ, ಕೆಳದರ್ಜೆಯ ಅಧಿಕಾರಿಗಳೆಂದರೆ, ಇನ್ಸ್‌ಪೆಕ್ಟರ್, ಹೆಡ್‌ಕಾನ್ಸ್ಟೇಬಲ್, ಸಾರ್ಜೆಂಟ್ ಮತ್ತು ಕಾನ್‌ಸ್ಟೇಬಲ್‌ಗಳೆಂದು ಆಯೋಗವು ತಿಳಿಸಿತು. ಹೆಡ್‌ಕಾನ್‌ಸ್ಟೇಬಲ್ ಠಾಣೆಯ ಪ್ರಭಾರ ಅಧಿಕಾರಿಗಳಾಗಿರಬೇಕೆಂತಲೂ, ಹಲವು ಠಾಣೆಗಳಿಗೆ ಒಬ್ಬ ಇನ್ಸ್‌ಪೆಕ್ಟರನು ಮುಖ್ಯಸ್ಥನಾಗಿರಬೇಕೆಂತಲೂ ಡಿವಿಜನ್ ಕಮಿಷನರ್‌ರವರು ಎಸ್‌ಪಿ ರವರನ್ನು ನಿಯಂತ್ರಿಸಬೇಕೆಂತಲೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಂತ ಕಡಿಮೆ ದರ್ಜೆಯ ಯಾವುದೇ ಪೊಲೀಸ್ ಮ್ಯಾಜಿಸ್ಟ್ರೇಟರು ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಬಾರದು, ಗ್ರಾಮೀಣ ಪೊಲೀಸರನ್ನು ಈಗ ಇರುವಂತೆಯೇ ಉಳಿಸಿಕೊಂಡು ಅವರು ಸಾಮಾನ್ಯ ಪೊಲೀಸ್ ವ್ಯವಸ್ಥೆಯೊಂದಿಗೆ ನೇರ ಸಂಪರ್ಕದಲ್ಲಿರುವಂತೆ ಮಾಡಬೇಕೆಂದು ಶಿಪಾರಸ್ಸುಮಾಡಿತು. ಪೊಲೀಸ್ ಕಮಿಷನರ್‌ನ ಈ ಶಿಪಾರಸ್ಸುಗಳನ್ನು ಭಾರತ ಸರ್ಕಾರ ಒಪ್ಪಿಕೊಂಡು ಭಾರತದ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಈ ಬಗ್ಗೆ ಕರಡು ಮಸೂದೆಯನ್ನು ಮಂಡಿಸಲಾಯಿತು. ಈ ಮಸೂದೆಯ ಉದ್ದೇಶವೆಂದರೆ ಭಾರತದ ವಿವಿಧ ಭಾಗಗಳಲ್ಲಿ ಐರಿಶ್ ಮಾಧರಿಯ ಕಾನ್ಸ್‌ಟೇಬಲರಿ ಪಡೆಯನ್ನು ಸಂಘಟಿಸುವುದೇ ಆಗಿತ್ತು.[೧೧೩] ಇಂತಹ ವ್ಯವಸ್ಥೆಯು ಈಗಾಗಲೇ ಅನೇಕ ಪ್ರಾಂತ್ಯಗಳಲ್ಲಿ ಅಸ್ಥಿತ್ವದಲ್ಲಿತ್ತು. ಕಾರಣಕ್ಕಾಗಿ ಕೌನ್ಸಿಲ್‌ನಲ್ಲಿ ಈ ಕರಡು ಮಸೂದೆಯನ್ನು ಓದಿದಾಗ ನಡೆದ ಚರ್ಚೆಯಲ್ಲಿ ಶ್ರೀ.ಎ.ಸೋನ್ಸ್‌ರವರು ಅಭಿಪ್ರಾಯಪಟ್ಟಿದ್ದೇನೆಂದರೆ, " ಇದು ಒಂದು ಹೊಸ ಕರಡು ಶಾಸನವಲ್ಲ ಇದು ಹೊಸ ಮುಖದಲ್ಲಿ ಬಂದ ಹಳೆಯ ಗೆಳೆಯ, ಕೌನ್ಸಿಲ್ ಇದನ್ನು ನೆನಪಿಸಿಕೊಳ್ಳಬೇಕು. ಕಳೆದ ವರ್ಷದ ಕೌನ್ಸಿಲ್ ಸಭೆಯನ್ನು ಮುಂದೂಡುವುದಕ್ಕಿಂತ ಸ್ವಲ್ಪ ಮುಂದೆ ನಾವು ಮದ್ರಾಸ್ ಪೊಲೀಸ್ ಆಕ್ಟ್‌ನ್ನು ಅಂಗೀಕರಿಸಿದ್ದೇವೆ." This was not a new bill. It was an old friend with a new face. The council should recollect that just before the adjournment of the council last year. We passed the madras police Act. [೧೧೪] ಎಂದರು. ನಂತರ ಈ ಕುರಿತು ಮಸೂದೆಯ ವಿವಿಧ ಕಾನೂನು ಕ್ರಮಗಳ ಮೂಲಕ ಒಪ್ಪಿಗೆ ಪಡೆದ ನಂತರ ೧೮೬೧ ರ ಮಾರ್ಚ್ ೨೨ ರಂದು ಅಂಗೀಕಾರವಾಯಿತು. ಮತ್ತು ಇದು ೧೮೬೧ ರ ಭಾರತ ಪೊಲೀಸ್ ಕಾಯ್ದೆಯಾಯಿತು. ೧೮೬೧ ರ ಭಾರತೀಯ ಪೊಲೀಸ್ ಕಾಯ್ದೆಯು ಭಾರತದ ಪೊಲೀಸ್ ಇತಿಹಾಸದಲ್ಲಿ ಎರಡು ಪ್ರಮುಖ ಹೆಜ್ಜೆ ಗುರುತುಗಳನ್ನಿಟ್ಟಿದೆ.

ಅವುಗಳೆಂದರೆ, ೧) ಇಡೀ ಭಾರತದಲ್ಲಿ ಬ್ರಿಟೀಷ್ ಆಡಳಿತವಿರುವ ಪ್ರದೇಶಗಳಲ್ಲಿ ಪೊಲೀಸ್ ವ್ಯವಸ್ಥೆಯನ್ನು ಪುನರ್ ಸಂಘಟಿಸುವುದರ ಜೊತೆಗೆ ಈ ಎಲ್ಲಾ ಪ್ರದೇಶಗಳಲ್ಲಿ ಏಕರೂಪವಾದ ಪೊಲೀಸ್ ವ್ಯವಸ್ಥೆ ಜಾರಿಗೆ ಬಂತು. ೨) ಇಂದಿಗೂ ಸಹ ಈ ಪೊಲೀಸ್ ಕಾಯ್ದೆಯ ಆಧಾರದ ಮೇಲೆ ಭಾರತದ ಪೊಲೀಸ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಈ ಕಾರಣ ಗಳಿಗಾಗಿ ಈ ಕಾಯ್ದೆಯ ಬಗ್ಗೆ ತಿಳಿದುಕೊಳ್ಳುವುದು ಅಪೇಕ್ಷಣೀಯವಾಗಿದೆ.

ಪೊಲೀಸ್ ಕಾಯ್ದೆಯನ್ನು ಜಾರಿಗೆ ತರಲು ಎದ್ದುಕಾಣುವ ಉದ್ದೇಶಗಳೆಂದರೆ, ಪೊಲೀಸ್ ಪಡೆಯನ್ನು ಪುನರ್ ಸಂಘಟಿಸುವುದಾಗಿತ್ತು. ಆದರೆ ಅದರ ಪ್ರಸ್ತಾವನೆಯಲ್ಲಿ ತಿಳಿಸಿದಂತೆ, ಯಾವುದೇ ಪೊಲೀಸ್ ಪಡೆಯು ಅಪರಾಧಗಳ ತಡೆ ಮತ್ತು ಪತ್ತೆಗಾಗಿ ಅಸ್ಥಿತ್ವದಲ್ಲಿರಬೇಕುಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ ಪ್ರಸ್ಥಾವನೆಯಲ್ಲಿ "Whereas it is expedient to reorganise the police and to make it a more efficient instrument for the prevention and ditection of crime" ಎಂದು ಹೇಳಿದೆ. ಈ ಕಾಯ್ದೆಯ ಪ್ರಕಾರ ಇಡೀ ಪೊಲೀಸ್ ಇಲಾಖೆಯು ರಾಜ್ಯ ಸರ್ಕಾರದ ಅಧೀನದಲ್ಲಿ, ಅದರ ನಿರ್ದೇಶನದಂತೆ ಕೆಲಸ ಮಾಡುವಂತಾಯಿತು. ಪ್ರತೀ ರಾಜ್ಯದಲ್ಲಿಯೂ ಒಂದೊಂದು ಪೊಲೀಸ್ ಪಡೆಗಳು ಇದ್ದವು. (ಆದರೆ ಇದಕ್ಕೆ ಅಪವಾದವೆಂಬಂತೆ ಕಲ್ಕತ್ತ, ಬಾಂಬೆ, ಮತ್ತು ಮದ್ರಾಸ್ ಮಹಾನಗರಗಳ ಅಗತ್ಯಗಳಿಗೆ ಅನುಗುಣವಾಗಿ ಪ್ರತ್ಯೇಕವಾದ ನಗರ ಪೊಲೀಸ್ ವ್ಯವಸ್ಥೆಯಿದ್ದು, ಅವರಿಗೆ ಪ್ರತ್ಯೇಕ ಕಾಯಿದೆಗಳನ್ನು ಮಾಡಲಾಯಿತು) ರಾಜ್ಯ ಸರ್ಕಾರಗಳು ಪೊಲೀಸರ ಸಂಬಳ ಸ್ಥಿತಿಗಳ ಬಗ್ಗೆ ನಿಯಂತ್ರಣವನ್ನಿಡಬೇಕು. ರಾಜ್ಯ ಸರ್ಕಾರವು ಪೊಲೀಸ್ ಪಡೆಯ ಸಾಮಾನ್ಯ ಮೇಲುಸ್ತುವಾರಿಯನ್ನು ಹೊಂದಿತ್ತು. ಆದರೆ ಪೊಲೀಸ್ ಇಲಾಖೆಯು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ನ ನೇರ ಅಧೀನದಲ್ಲಿತ್ತು. ಅವನ ಕೈಕೆಳಗೆ ಆಯಾ ರಾಜ್ಯ ಸರ್ಕಾರಗಳು ಅಗತ್ಯವೆನಿಸಿದಲ್ಲಿ ಡಿಐಜಿ ಮತ್ತು ಎಐಜಿರವರನ್ನು ನೇಮಿಸಬಹುದಿತ್ತು. ಪೊಲೀಸ್ ಪಡೆಯ ಖರ್ಚುವೆಚ್ಚಗಳ ಬಗ್ಗೆ ಸಂಘಟನೆ, ವಿಭಜನೆ, ಪಡೆಯ ಹಂಚಿಕೆ, ಪೊಲೀಸ್ ಪಡೆಯ ಸಿಬ್ಬಂದಿ ಎಲ್ಲಿ ಇರಬೇಕು ? ಅವರಿಂದ ಯಾವ ಕೆಲಸ ಮಾಡಿಸಬೇಕು? ಎಂಬ ವಿಷಯಗಳ ಬಗ್ಗೆ ಐಜಿಪಿಯವರು ರಾಜ್ಯ ಸರ್ಕಾರದ ಅನುಮತಿ ಪಡೆದು ನೀತಿ ನಿಯಮಗಳನ್ನು ಹಾಕಿ ನಿಯಂತ್ರಿಸುವ ಅಧಿಕಾರವನ್ನು ಪಡೆದಿದ್ದರು. [೧೧೫] ಈ ಕಾಯಿದೆಯ ಈ ಕಲಂನಿಂದಾಗಿ ಆಯಾ ರಾಜ್ಯದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರುಗಳು 'ಪೊಲೀಸ್ ರೂಲ್ಸ್' ಗಳನ್ನು ರಚಿಸಿದರು. ಈ ಕಾಯ್ದೆ ಪ್ರಕಾರ ಯಾರೇ ಪೊಲೀಸರು, ಯಾವುದೇ ಅಪರಾಧ ಮಾಡಿದ ವ್ಯಕ್ತಿಯ ಬಗ್ಗೆ ಮಾಹಿತಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಇಟ್ಟು, ಸಮನ್ಸ್, ವಾರಂಟ್ ಅಥವಾ ಸರ್ಚ್‌ವಾರಂಟು ಅಥವಾ ಇತರ ಯಾವುದೇ ಕಾನೂನುಬದ್ಧ ಕ್ರಮ ಜರುಗಿಸಲು, ಮನವಿ ಮಾಡಲು ಅಧಿಕಾರವನ್ನು ನೀಡಿತು. ಈ ಕಾಯಿದೆಯಲ್ಲಿ ಪೊಲೀಸರ ಕರ್ತವ್ಯಗಳ ಬಗ್ಗೆ ವಿಷದವಾಗಿ ವಿವರಿಸಲಾಗಿತ್ತು. ಈ ಕಾಯಿದೆ ಪ್ರಕಾರ ಪೊಲೀಸರನ್ನು ಯಾವಾಗಲೂ ಕರ್ತವ್ಯದಲ್ಲಿದ್ದಾರೆಂದು ಭಾವಿಸಲಾಗುತ್ತಿತ್ತು ಮತ್ತು ಅವರನ್ನು ರಾಜ್ಯದ ಯಾವುದೇ ಭಾಗಕ್ಕೆ ಬೇಕಾದರೂ ಕರ್ತವ್ಯಕ್ಕೆ ಕಳುಹಿಸಬಹುದಾಗಿತ್ತು. ಈ ಕಾಯ್ದೆ ಪ್ರಕಾರ ಪೊಲೀಸರ ಕರ್ತವ್ಯಗಳೆಂದರೆ, ಪೊಲೀಸರು ಎಲ್ಲಾ ಆದೇಶಗಳನ್ನು ಪ್ರಾಮಾಣಿಕತೆಯಿಂದ ಪಾಲಿಸಬೇಕಿತ್ತು. ಸಾರ್ವಜನಿಕ ಶಾಂತಿಗೆ ಸಂಬಂಧಿಸಿದಂತೆ ಗುಪ್ತಮಾಹಿತಿಗಳನ್ನು ಸಂಗ್ರಹಿಸಿ ಹಿರಿಯ ಅಧಿಕಾರಿಗಳಿಗೆ ತಿಳಿಸಬೇಕಿತ್ತು. ಅಪರಾಧಗಳನ್ನು ಮತ್ತು ಸಾರ್ವಜನಿಕ ಉಪದ್ರವಗಳನ್ನು ತಡೆಯಬೇಕಿತ್ತು. ಅಪರಾಧಗಳನ್ನು ಪತ್ತೆ ಹಚ್ಚಿ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದು, ಕಾನೂನುಬದ್ಧವಾಗಿ ದಸ್ತಗಿರಿ ಮಾಡಬೇಕಾದ ಆರೋಪಿಗಳನ್ನು ದಸ್ತಗಿರಿಮಾಡುವುದು, ಜೂಜಾಟ ಕೇಂದ್ರಗಳಿಗೆ, ಪಾನಗೃಹಗಳಿಗೆ ವಾರಂಟ್ ಇಲ್ಲದೇ ಪ್ರವೇಶಿಸಿ ಪರೀಕ್ಷಿಸುವುದು ಇವೆಲ್ಲವೂ ಪೊಲೀಸರ ಕರ್ತವ್ಯಗಳಾಗಿದ್ದು, ಅವರು ಅತ್ಯಂತ ಶಿಸ್ತಿನಿಂದಿರಬೇಕಿತ್ತು.

ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮತ್ತು ಅದಕ್ಕಿಂತ ಹಿರಿಯ ಅಧಿಕಾರಿಗಳಿಗೆ ತಮ್ಮ ಅಧೀನ ಅಧಿಕಾರಿಗಳ

ಮೇಲೆ ಶಿಸ್ತು ಕ್ರಮ ಜರುಗಿಸುವುದಲ್ಲದೇ ಕರ್ತವ್ಯದಿಂದ ವಜಾಗೊಳಿಸುವ ಅಧಿಕಾರವನ್ನು ಈ ಕಾಯ್ದೆಯು ನೀಡಿತ್ತು.[೧೧೬] (ಅಧೀನ ಅಧಿಕಾರಿಗಳೆಂದರೆ ಭಾರತದಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆಗಿಂತ ಕಡಿಮೆ ದರ್ಜೆಯ ಅಧಿಕಾರಿ) ಈ ಕಾಯ್ದೆಯು ಕಾಲಕಾಲಕ್ಕೆ ಬದಲಾಗುತ್ತಾ ಬಂದಿತ್ತು. ಉದಾಹರಣೆಗೆ ೧೮೯೫ ರ ೮ ನೇ ಪೊಲೀಸ್ (ತಿದ್ದುಪಡಿ) ಕಾಯ್ದೆ, ೧೮೮೨ ರ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (೧೮೮೨ ರ ೧೦ ಕಾಯ್ದೆ) ಗಳು ಈ ಪೊಲೀಸ್ ಕಾಯ್ದೆಯಲ್ಲಿ ಕೆಲವು ಬದಲಾವಣೆಗಳನ್ನು ತಂದವು. ನಂತರ ಈ ಕಾಯ್ದೆಗೆ ಪೂರಕವಾದ ಕೆಲವು ಕಾನೂನು ಗಳು ಬಂದವು. ದಿ ಇಂಡಿಯನ್ ಪೊಲೀಸ್ ಆ್ಯಕ್ಟ್ ೧೮೮೮ (೧೮೮೮ ರ ೩ನೇ ಕಾಯ್ದೆ) ರಲ್ಲಿ ಪ್ರಾಂತ್ಯದಿಂದ ಹೊರ ಭಾಗದಲ್ಲಿ ವಾಸಿಸುವ ಜನರನ್ನು ಪೊಲೀಸ್ ಇಲಾಖೆಗೆ ನೇಮಕ ಮಾಡಿಕೊಳ್ಳಬಾರದೆಂಬ ನಿಯಮಕ್ಕೆ ಸಡಿಲಿಕೆಯನ್ನು ತಂದಿತು. ಕೊನೆಯ ಪ್ರಪಂಚ ಯುದ್ಧದ ಸಮಯದಲ್ಲಿ ಕೇಂದ್ರ ಸರಕಾರದ ನೌಕರರುಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕಿತ್ತು ಎಂದು ಹೇಳಲಾಯಿತು. ಅದರಲ್ಲೂ ರೈಲ್ವೆ ಇಲಾಖೆಯಲ್ಲಿ ಇದು ಸಮಸ್ಯೆಯಾಗಿ ಪರಿಣಮಿಸಿತ್ತು. ಇದಕ್ಕೆ ಪರಿಹಾರ ಕಂಡುಹಿಡಿಯಲು ೧೯೪೬ ರಲ್ಲಿ ಸ್ಪೆಷಲ್ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್ ಜಾರಿಗೆ ಬಂದಿತು. ಆದರೆ ಈ ಎಲ್ಲಾ ಕಾಯ್ದೆಗಳು ೧೮೬೧ ರ ಕಾಯ್ದೆಯ ಮೂಲತತ್ವಗಳನ್ನು ಒಳಗೊಂಡಿದ್ದವು. ಶತಮಾನಗಳ ನಂತರವೂ ಈ ತತ್ವಗಳೇ ಉಳಿದುಕೊಂಡಿದೆ. ದಿನಾಂಕ: ೨೧-೧೦-೧೮೬೧ ದಿ ಪೊಲೀಸ್ ಆ್ಯಕ್ಟ್ (೧೮೬೧ ರ ೫ ನೇ ಕಾಯ್ದೆ) ಗವರ್ನರ್ ಜನರಲ್ ರವರ ಒಪ್ಪಿಗೆ ಪಡೆದು ಜಾರಿಗೆ ಬಂದಿತು. ೧೮೩೪ ಕ್ಕಿಂತಲೂ ಹಿಂದೆ ನಮ್ಮ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯು ಹುಕುಂನಾಮೆ, ಕಂದಾಚಾರ ವ್ಯವಸ್ಥೆಯ ಹೆಸರಿನಲ್ಲಿ ಅಸ್ಥಿತ್ವದಲ್ಲಿತ್ತು. ಈ ಪೊಲೀಸ್ ಕಾಯ್ದೆ ಇಡೀ ಭಾರತ ದೇಶಕ್ಕೆ ಅನ್ವಯವಾಯಿತು. ಯಾವುದೇ ಒಂದು ಸಂಸ್ಥೆ ಅಥವಾ ಇಲಾಖೆಯು ಯಶಸ್ವಿಯಾಗಬೇಕಾದರೆ ಅದು ವ್ಯವಸ್ಥಿತವಾಗಿ ಸಂಘಟಿತವಾಗಬೇಕು. ಇದು ಪೊಲೀಸ್ ಇಲಾಖೆ ಗೂ ಅನ್ವಯವಾಗುತ್ತದೆ. ಇಡೀ ಭಾರತ ದೇಶದಲ್ಲಿ ಬೇರೆ ಬೇರೆ ಸಂಸ್ಥಾನಗಳು ಅವರದ್ದೇ ಆದ ದೇಶೀಯ ಮಾದರಿಯ ಆಂತರಿಕ ಭದ್ರತಾ ವ್ಯವಸ್ಥೆಯನ್ನು ಹೊಂದಿದ್ದವು. ಆಯಾ ಸಂಸ್ಥಾನಗಳಿಗೆ ಪ್ರತ್ಯೇಕವಾದ ಕಾನೂನು, ನೀತಿ ಸಂಹಿತೆ ಗಳಿದ್ದವು. ಇವುಗಳಲ್ಲಿ ಏಕರೂಪತೆ ಇರಲಿಲ್ಲ. ಪೊಲೀಸ್ ಇಲಾಖೆಯ ಕಾರ್ಯ ಅಪರಾಧಗಳ ತಡೆ, ಪತ್ತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು, ಆದರೂ ಸಹ ಅದರ ಆಡಳಿತ, ಕಾರ್ಯವೈಖರಿ, ಅಧಿಕಾರಿ ವ್ಯವಸ್ಥೆಗಳಲ್ಲಿ ವ್ಯತ್ಯಾಸವಿತ್ತು. ಆಂತರಿಕ ರಕ್ಷಣೆಗಾಗಿ ಇಡೀ ದೇಶದಲ್ಲಿ ಒಂದೇ ತರವಾದ ಏಕೀಕೃತ ವ್ಯವಸ್ಥೆಯು ಅಗತ್ಯವಿತ್ತು. ಅದಕ್ಕಾಗಿ ಬ್ರಿಟೀಷರು ಇಡೀ ಭಾರತದಲ್ಲಿ ತಮ್ಮ ಆಡಳಿತವಿರುವ ಪ್ರದೇಶಗಳಿಗೆ ಅನ್ವಯವಾಗುವ ಪೊಲೀಸ್ ಕಾಯ್ದೆಯನ್ನು ಜಾರಿಗೆ ತಂದರು.

೧೮೬೧ರ ಪೊಲೀಸ್ ಕಾಯ್ದೆಯು ಭಾರತದಲ್ಲಿ ಈ ಹಿಂದೆ ಇದ್ದ ಯಾವುದೇ ಏಕರೂಪತೆ ಇಲ್ಲದ ಹಲವು ಭಿನ್ನ ಸ್ವರೂಪಗಳನ್ನು ಹೊಂದಿದ ದೇಶೀಯ ಪೊಲೀಸ್ ವ್ಯವಸ್ಥೆಯನ್ನು ತೆಗೆದುಹಾಕಿತು[೧೧೭] ಈ ಕಾಯ್ದೆಯು ಪೊಲೀಸ್ ಇಲಾಖೆಯ ನೇಮಕಾತಿ, ತರಭೇತಿ ಮತ್ತು ಸಂಘಟನೆಯ ಮೇಲೆ ನಿಯಂತ್ರಣ ಹೇರಿತು. ಇದು ಮೈಸೂರು ಸಂಸ್ಥಾನದ ಪೊಲೀಸ್ ಪಡೆಗೂ ಅನ್ವಯವಾಯಿತು. ಇದು ಪೊಲೀಸ್ ವ್ಯವಸ್ಥೆಯನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲು ಸಾಧನವಾಯಿತು. ಈ ಕಾಯ್ದೆಯ ಪ್ರಕಾರ ಪ್ರತಿಯೊಂದು ಸಂಸ್ಥಾನದಲ್ಲಿಯೂ ಒಂದು ಪೊಲೀಸ್ ಪಡೆಯನ್ನು ಐ.ಜಿ.ಪಿ ಎಂಬ ಅಧಿಕಾರಿಯ ನಿಯಂತ್ರಣದಲ್ಲಿ ರಚಿಸಬೇಕು. ಮತ್ತು ಈತನ ನಿರ್ದೇಶನದಂತೆ ಜಿಲ್ಲೆಗಳಿಗೆ ಸೂಪರಿಂಟೆಂಡೆಂಟ್ ರವರುಗಳನ್ನು ನೇಮಿಸಬೇಕು. ಈತನ ಕೈಕೆಳಗೆ ಇನ್ಸ್‌ಪೆಕ್ಟರ್, ಹೆಡ್‌ಕಾನ್ಸ್‌ಟೇಬಲ್, ಸಾರ್ಜೆಂಟ್, ಕಾನ್ಸ್‌ಟೇಬಲ್‌ಗಳನ್ನು ಕ್ರಮಾಗತವಾಗಿ ನೇಮಿಸಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಮ್ಯಾಜಿಸ್ಟ್ರೇಟ್‌ನ ವ್ಯಾಪ್ತಿಯೊಳಗೆ ಕೊನೇ ಪಕ್ಷ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು ಜಿಲ್ಲಾ ಪೊಲೀಸ್ ಇಲಾಖೆಯ ನಿಯಂತ್ರಣಕ್ಕಾಗಿ ನೇಮಿಸಬೇಕು.[೧೧೮] ಈ

ಅಧಿಕಾರಿಯು ಪೊಲೀಸ್ ಇಲಾಖೆಯ ಆರ್ಥಿಕ ವ್ಯವಹಾರಗಳು, ಪೊಲೀಸ್ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಐ.ಜಿ.ಪಿ ರವರ ಕೈಕೆಳಗಿನ ಅಧಿಕಾರಿಯಾಗಿದ್ದ ಅಷ್ಟೇ ಅಲ್ಲದೇ ಸಾರ್ವಜನಿಕ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಮ್ಯಾಜಿಸ್ಟ್ರೇಟರು ನೀಡುವ ಎಲ್ಲಾ ಆದೇಶಗಳನ್ನು ಈತನು ಕಡ್ಡಾಯವಾಗಿ ಪಾಲಿಸಬೇಕಿತ್ತು. ಕೆಳದರ್ಜೆಯ ಅಧಿಕಾರಿಗಳ ಹುದ್ದೆಗಳಿಗೆ ತಕ್ಕಂತೆ ಅವರವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಲಾಯಿತು. ಇನ್ಸ್‌ಪೆಕ್ಟರನು ಮೊದಲನೇ ಕೆಳದರ್ಜೆಯ ಅಧಿಕಾರಿಯಾಗಿದ್ದನು. ಜಿಲ್ಲಾ ಸೂಪರಿಂಟೆಂಡೆಂಟ್‌ನ ಕೈಕೆಳಗೆ ಕೇಂದ್ರ ಸ್ಥಾನದಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಬೇಕು. ಅವರು ಇಲಾಖೆಯ ಶಿಸ್ತು ಮತ್ತು 'ಕವಾಯತುಗಳನ್ನು ನೋಡಿಕೊಳ್ಳಬೇಕು. ತನ್ನ ಕೈಕೆಳಗಿನ ಅಧಿಕಾರಿಗಳ ಕೆಲಸಕಾರ್ಯಗಳನ್ನು ಮಾಡುವುದರ ಜೊತೆಗೆ ಅವರ ಕೆಲಸ ಕಾರ್ಯಗಳ ಪರಿವೀಕ್ಷಣೆಯನ್ನು ನಡೆಸಬೇಕು. ಉಕ್ಕಡ (ಔಟ್‌ಪೋಸ್ಟ್) ಗಳ ಪರಿವೀಕ್ಷಣೆ ಮಾಡುವುದು, ಆರೋಪಿಗಳನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸುವುದು ಈತನ ಕೆಲಸವಾಗಿತ್ತು ಎಂದು ಈ ಕಾಯ್ದೆ ತಿಳಿಸಿತು.

೫.೯: ಮೈಸೂರು ಅರಸರಿಗೆ ಅಧಿಕಾರ ಹಸ್ತಾಂತರದ ನಂತರ

ಕಮಿಷನರುಗಳ ಆಡಳಿತದಿಂದ ಮೈಸೂರು ಸಂಸ್ಥಾನಕ್ಕೆ ಅಧಿಕಾರ ಹಸ್ತಾಂತರಿಸುವುದಕ್ಕಿಂತ ಮೊದಲು ಅಂದರೆ ೧೮೮೧ ಮಾರ್ಚ್‌ಗಿಂತ ಮೊದಲು ಮೈಸೂರಿನಲ್ಲಿ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ರಾಜ್ಯವನ್ನು ೮ ಜಿಲ್ಲೆಗಳನ್ನಾಗಿ ವಿಂಗಡಿಸಲಾಗಿತ್ತು. ಅದರಲ್ಲಿ ೬೯ ತಾಲೂಕುಗಳಿದ್ದವು. ಇವುಗಳ ಸಂಖ್ಯೆಯನ್ನು ೬೦ ಕ್ಕೆ ಇಳಿಸಲಾಯಿತು. ೧೭ ಸಣ್ಣ ಪ್ರದೇಶಗಳಲ್ಲಿ ಉಪ 'ಅಮಲ್ದಾರ'ನ ನೇತೃತ್ವದಲ್ಲಿ ಉಪ ತಾಲೂಕುಗಳನ್ನು ರಚಿಸಲಾಯಿತು.

ಕಮಿಷನರುಗಳ ಆಡಳಿತವನ್ನು ಕೊನೆಗೊಳಿಸಿ ಮೈಸೂರು ಅರಸರಿಗೆ ಅಧಿಕಾರ ಹಸ್ತಾಂತರಿಸಿದ ನಂತರ ಕಮಿಷನರ್ ಹುದ್ದೆಯನ್ನು ರದ್ದುಗೊಳಿಸಲಾಯಿತು. ಬ್ರಿಟೀಷ್ ರೆಸಿಡೆಂಟ್‌ರನ್ನು ಮೈಸೂರು ಸಂಸ್ಥಾನದಲ್ಲಿ ನೇಮಿಸಲಾಯಿತು. 'ದಿವಾನ' ಪದವಿಯು ಮಹತ್ವಪಡೆಯಿತು. ಮಹಾರಾಜ 'ಚಾಮರಾಜ ಒಡೆಯರ್' ಆಡಳಿತಾಂಗದ ಪ್ರಮುಖರಾದರು. ಆದರೆ ಕೆಲವು ಇಲಾಖೆಗಳ ಮೇಲೆ ಬ್ರಿಟೀಷರು ತಮ್ಮ ನಿಯಂತ್ರಣ ಇಟ್ಟುಕೊಂಡಿದ್ದರು. ಅವುಗಳೆಂದರೆ, ಸೇನೆ, ರೈಲ್ವೆ, ಟೆಲಿಗ್ರಾಫ್, ನಾಣ್ಯ ಮಾಡುವಿಕೆ ಅಥವಾ ಟಂಕಸಾಲೆ ಮತ್ತು ಕಂಟೋನ್ಮೆಂಟ್ ಏರಿಯಾಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡರು. ಮಹಾರಾಜರು ಬೇರೆ ರಾಜ್ಯಗಳ ಜೊತೆಗೆ ಯಾವುದೇ ರೀತಿಯಲ್ಲಿ ನೇರವಾಗಿ ವ್ಯವಹಾರಗಳನ್ನು ಇಟ್ಟುಕೊಳ್ಳುವಂತೆ ಇರಲಿಲ್ಲ. ಭಾರತೀಯರಲ್ಲದ ವಿದೇಶಿ ವ್ಯಕ್ತಿಗಳನ್ನು ನೇಮಿಸುವುದರ ಮೂಲಕ ಆಡಳಿತದಲ್ಲಿ ಬದಲಾವಣೆ ತರಲಾಯಿತು. ಅಧಿಕಾರ ಹಸ್ತಾಂತರದಿಂದಾಗಿ ಆಡಳಿತದಲ್ಲಿ ಬಹಳಷ್ಟು ಬದಲಾವಣೆಗಳಾದವು. ೧೮೮೨ ರಲ್ಲಿ ರಾಜ್ಯದ ಭೌಗೋಳಿಕ ವಿಭಾಗಗಳನ್ನು ಬದಲಾಯಿಸಲಾಯಿತು. ಈ ವೇಳೆಯಲ್ಲಿ ಮೂರು ಹೊಸ ಉಪ–ವಿಭಾಗಗಳನ್ನು ಮಾಡಿ ಅದಕ್ಕೆ ಅಸಿಸ್ಟೆಂಟ್ ಕಮಿಷನರ್‌ಗಳನ್ನು ಅಧಿಕಾರಿಗಳನ್ನಾಗಿ ನೇಮಿಸಲಾಯಿತು. ೧೮೮೩ ರ ಆರಂಭದಲ್ಲಿ ಒಟ್ಟು ೬೬ ತಾಲೂಕು, ೧೭ ಉಪ–ವಿಭಾಗಗಳು ಇದ್ದವು. ಈ ವೇಳೆಗೆ ೬ ಜಿಲ್ಲೆಗಳಿದ್ದವು. (ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಶಿವಮೊಗ್ಗ, ಮತ್ತು ಕಡೂರು) ಮೂರು ಉಪ ವಿಭಾಗಗಳಿದ್ದವು.ಚಿತ್ರದುರ್ಗ, ಪ್ರೆಂಚ್‌ರಾಕ್, (ಪಾಂಡವಪುರ) ಮತು ಹಾಸನ. ೬೦ ತಾಲೂಕು ೧೭ ಉಪ–ತಾಲೂಕು ಇದ್ದವು. ೧೮೮೬ ರ ವೇಳೆಗೆ ಚಿತ್ರದುರ್ಗಮತ್ತು ಹಾಸನ ಜಿಲ್ಲೆಗಳನ್ನು ಕೆಲವು ಮಾರ್ಪಾಡು ಗಳೊಂದಿಗೆ ಬದಲಾಯಿಸಲಾಯಿತು ಕಮಿಷನರುಗಳ ಆಡಳಿತ ನಂತರ ಮೈಸೂರು ಅರಸರಿಗೆ ಅಧಿಕಾರವನ್ನು ನೀಡಿದ ಮೇಲೆ ಪೊಲೀಸ್ ಇಲಾಖೆಯು ಪೂರ್ಣವಾಗಿ 'ದಿವಾನ'ರ ಮತ್ತು ಡೆಪ್ಯೂಟಿ ಕಮಿಷನರ್‌ರವರ ನಿಯಂತ್ರಣದಲ್ಲಿತ್ತು. ನಂತರ ಪೊಲೀಸ್ ಸೆಕ್ರೆಟರಿ ಎಂಬ ಹುದ್ದೆಯನ್ನು ರಚಿಸಲಾಯಿತು.

೧೮೮೩ ರಲ್ಲಿ ಶಿಕ್ಷಣ ಇಲಾಖೆಯ ಸೆಕ್ರೆಟರಿ (ಕಾರ್ಯದರ್ಶಿ) ಯವರನ್ನೇ ಪೊಲೀಸ್ ಇಲಾಖೆಯ

ಕಾರ್ಯದರ್ಶಿಯಾಗಿ ನೇಮಿಸಲಾಯಿತು. ೧೮೮೫ ರಲ್ಲಿ ದಿವಾನರ ಕೆಳಗೆ ಇದ್ದ ಪೊಲೀಸ್ ಸೆಕ್ರೆಟರಿ ಹುದ್ದೆಯನ್ನು ರದ್ದು ಗೊಳಿಸಲಾಯಿತು. ಸರ್ಕಾರಿ ಆದೇಶ ಸಂಖ್ಯೆ ನಂಬ್ರ ೧೨೬೫-೬೯ ದಿನಾಂಕ ೨೭-೧೦-೧೮೮೫ ರಂತೆ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಪೊಲೀಸ್ ಮಹಾನಿರೀಕ್ಷಕ) ರ ಹುದ್ದೆಯನ್ನು ಸೃಷ್ಠಿಸಲಾಯಿತು. ಇದೇ ಐ.ಜಿ.ಪಿ ರವರು ಕೃಷಿ ಮತ್ತು ಅರಣ್ಯ ಮತ್ತು ಪ್ಲಾಂಟೇಷನ್ ಇಲಾಖೆಗಳ ನಿರ್ದೇಶಕರೂ ಆಗಿದ್ದರು.

೫.೧೦ – ಮೈಸೂರಿನ ಮೊದಲ ಐ.ಜಿ.ಪಿ ಶ್ರೀ.ಎಲ್. ರಿಕೆಟ್ಸ್ ರವರ ಸಾಧನೆಗಳು

೧೮೮೫ ರಲ್ಲಿ ಐ.ಜಿ.ಪಿ ಹುದ್ದೆಯನ್ನು ಸೃಷ್ಟಿಸಲಾಯಿತು. ಎಲ್.ರಿಕೆಟ್ಸ್‌ರವರನ್ನು ಈ ಸ್ಥಾನಕ್ಕೆ ನೇಮಿಸ ಲಾಯಿತು.[೧೯] ಪ್ರತೀ ಜಿಲ್ಲೆಯಲ್ಲಿದ್ದ ಅಸಿಸ್ಟೆಂಟ್ ಕಮಿಷನರ್‌ರವರ ಹುದ್ದೆಯನ್ನು ರದ್ದುಮಾಡಿ ಆ ಹುದ್ದೆಯನ್ನು ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂಬ ಹೆಸರಿನಿಂದ ಕರೆಯಲಾಯಿತು.

ಶ್ರೀ.ಎಲ್. ರಿಕೆಟ್ಸ್ ಎಂಬುವವರು ಆ ವೇಳೆಯಲ್ಲಿ ಬೆಂಗಳೂರು ಜಿಲ್ಲೆಯ ಡೆಪ್ಯುಟಿ ಕಮಿಷನರ್ ಆಗಿ ಕೆಲಸ ಮಾಡುತ್ತಿದ್ದರು. ದಿನಾಂಕ ೨೭-೧೦-೧೮೮೫ ರಂದು ಸರಕಾರ ಹೊರಡಿಸಿದ ಸರಕಾರಿ ನಡಾವಳಿ ನಂಬ್ರ ೧೨೬೫-೬೯ರ ಆದೇಶದಂತೆ ಶ್ರೀ.ಎಲ್.ರಿಕೆಟ್ಸ್‌ರವರನ್ನು ರಾಜ್ಯದ ಮೊದಲ ಐ.ಜಿ.ಪಿಯಾಗಿ ನೇಮಕ ಮಾಡಲಾಯಿತು. ದಿನಾಂಕ ೦೧-೧೧-೧೮೮೫ ರಂದು ಅವರು ಅಧಿಕಾರ ಸ್ವೀಕರಿಸಿದರು. ಇವರು ಮೈಸೂರು ಸಂಸ್ಥಾನದ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿ ೧೫-೦೫-೧೮೯೨ ರ ವರೆಗೆ ಅಧಿಕಾರದಲ್ಲಿದ್ದರು.[೨೦]

ಸರ್ಕಾರಿ ಆದೇಶ ಸಂಖ್ಯೆ ೫೩೩೪-೪೧-೯೫ ದಿನಾಂಕ ೧೫-೧೨-೧೮೮೫ ರಂತೆ ಶ್ರೀ.ಎಲ್. ರಿಕೆಟ್ಸ್‌ರವರಿಗೆ ಕೆಲವು ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಯಿತು. ಇದೇ ವೇಳೆ ಅಸಿಸ್ಟೆಂಟ್ ಪೊಲೀಸ್ ಕಮಿಷನರ್ (ಸಹಾಯಕ ಪೊಲೀಸ್ ಆಯುಕ್ತರ) ಹುದ್ದೆಯನ್ನು ಪರಿಷ್ಕರಿಸಲಾಯಿತು. ಪ್ರತೀ ಜಿಲ್ಲೆಗೂ ಒಬ್ಬೊಬ್ಬ ಸೂಪರಿಂಟೆಂಡೆಂಟ್‌ರನ್ನು ನೇಮಿಸಿ ಅವರು ಡೆಪ್ಯುಟಿ ಕಮಿಷನರ್‌ರವರ ಕೈಕೆಳಗೆ ಅಪರ ಮೇಲ್ವಿಚಾರಣೆಯ ಕೆಲಸ ಮಾಡಬೇಕಿತ್ತು. ತಾಲೂಕು ಮತ್ತು ಉಪ ತಾಲೂಕುಗಳಲ್ಲಿ ಅಮಿಲ್‌ದಾರ ಮತ್ತು ಉಪ ಅಮಿಲ್‌ದಾರರುಗಳು ಮುಖ್ಯಸ್ಥರಾಗಿದ್ದರು. ಅವರಿಗೆ ಅನುಕ್ರಮವಾಗಿ ಇನ್ಸ್‌ಪೆಕ್ಟರ್ ಮತ್ತು ಜಮೇದಾರರು ಸಹಾಯಕರಾಗಿದ್ದರು.[೨೧]

ಶ್ರೀ.ಎಲ್.ರಿಕೆಟ್ಸ್‌ರವರು ತಮ್ಮ ಕಾಲದಲ್ಲಿ ಪೊಲೀಸ್ ಇಲಾಖೆಯ ಅಭಿವೃದ್ಧಿಗೆ ಶ್ರಮಿಸಿದರು. ಪೊಲೀಸ್ ಇಲಾಖೆಗೆ ಸಿಬ್ಬಂದಿಗಳನ್ನು ಭರ್ತಿ ಮಾಡಲು ಪ್ರಯತ್ನಿಸಿದರು. ಆದರೆ ಕೂಲಿ ಕಾರ್ಮಿಕರ ಸಂಬಳವನ್ನು ಹೆಚ್ಚಿಸಿ ತಿಂಗಳಿಗೆ ೧೦ ರೂಪಾಯಿಗಳನ್ನು ನೀಡಿದ್ದರಿಂದ ಕೆ.ಜಿ.ಎಫ್, ಚಿಕ್ಕಮಗಳೂರು. ಮಲೆನಾಡು, ಚಿತ್ರದುರ್ಗದಲ್ಲಿ ಇದಕ್ಕಿಂತ ಕಡಿಮೆ ಸಂಬಳ ನೀಡುತ್ತಿದ್ದ ಪೊಲೀಸ್ ಇಲಾಖೆಗೆ ಸೇರಲು ಜನರೇ ಮುಂದೆ ಬರುತ್ತಿರಲಿಲ್ಲ. ಈ ಬಗ್ಗೆ ೧೮೯೧ ರ ಪೊಲೀಸ್ ವಾರ್ಷಿಕ ಆಡಳಿತ ವರದಿಯಲ್ಲಿ ವಿವರಿಸಿದೆ. ಜನರು ಹೆಚ್ಚಾಗಿ ಕಾಫಿ ಮತ್ತು ಅಡಿಕೆ ತೋಟಗಳಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ರೈಲ್ವೆ ಕೆಲಸ ಮತ್ತು ಚಿನ್ನದಗಣಿಯಲ್ಲಿ ಕಡಿಮೆ ಶ್ರಮ, ಹೆಚ್ಚು ಸಂಬಳ ಇದ್ದುದರಿಂದ ಜನರು ಹೆಚ್ಚಾಗಿ ಅಲ್ಲಿಗೆ ಹೋಗು ತ್ತಿದ್ದರು. ಪೊಲೀಸ್ ಇಲಾಖೆಗೆ ಉತ್ತಮ ದೇಹದಾರ್ಢ್ಯ ಹಾಗೂ ಅಪರಾಧ ಪತ್ತೆ ಮಾಡುವ ಚಾಣಕ್ಷತನ ಹೊಂದಿದ ವಿದ್ಯಾವಂತ ಯುವಕರ ಅಗತ್ಯತೆ ಇತ್ತು. ಆದರೆ ಇಲಾಖೆಯು ಅಷ್ಟೊಂದು ಆಕರ್ಷಣೀಯವಾಗಿರಲಿಲ್ಲ.

ಎಲ್.ರಿಕೆಟ್ಸ್‌ರವರ ಪ್ರಕಾರ, ಒಮ್ಮೆ ಇಲಾಖೆಗೆ ಆಯ್ಕೆಯಾದ ಸಿಬ್ಬಂದಿಗಳಿಗೆ ಸರಿಯಾದ ಸೌಲಭ್ಯಗಳು ಇರಲಿಲ್ಲ. ಹೀಗಿರುವಾಗ ಅಭ್ಯರ್ಥಿಗಳನ್ನು ಇಲಾಖೆಯತ್ತ ಸೆಳೆಯಲು ಉತ್ತಮ ಸಂಬಳ ಹಾಗೂ ಭಡ್ತಿಯ ಭರವಸೆಗಳನ್ನು ನೀಡುವುದು ಪರ್ಯಾಯ ಮಾರ್ಗವಾಗಿತ್ತು.[೨೨]

ಏಳು ವರ್ಷಗಳ ಪೊಲೀಸ್ ಇಲಾಖೆಯ ಚುಕ್ಕಾಣಿ ಹಿಡಿದ ರಿಕೆಟ್ಸ್ ಅವರ ಪರಿಶ್ರಮದಿಂದ, ಅಂದಿನ ಸರಕಾರವು

ಪೊಲೀಸ್ ಇಲಾಖೆಗಾಗಿ ಹಲವಾರು ಸುಧಾರಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಕಾಲಕ್ರಮೇಣ ಪೊಲೀಸ್ ವ್ಯವಸ್ಥೆ ಬದಲಾಗುತ್ತಾ ಬಂದು ಜಿಲ್ಲಾ ಪೊಲೀಸ್, ನಗರ ಪೊಲೀಸ್, ಕೋಲಾರದ ಚಿನ್ನದಗಣಿ ಪೊಲೀಸ್, ರೈಲ್ವೆ ಪೊಲೀಸ್, ಹಾಗೂ ರಿಸರ್ವ್ ಪೊಲೀಸ್ ಎಂದು ಬೇರೆ ಬೇರೆ ಘಟಕಗಳು ಪ್ರಾರಂಭವಾದವು. ಈ ಹಿಂದೆ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬಹುತೇಕ ಸಿಬ್ಬಂದಿಯವರು ಅನಕ್ಷರಸ್ಥರಾಗಿದ್ದರು. ಶ್ರೀ.ಎಲ್. ರಿಕೇಟ್ಸ್‌ರವರು ಇಲಾಖೆಯಲ್ಲಿರುವ ಅನರಕ್ಷ ರಸ್ಥರನ್ನು ಶಾಲೆಗೆ ಕಳುಹಿಸಿ ಓದು, ಬರಹ ಕಲಿಸಲು ನಿರ್ಧರಿಸಿದರು. ಅವರುಗಳನ್ನು ಹೋಬಳಿ ಮಟ್ಟದ ಶಾಲೆಗಳಲ್ಲಿ ಓದು ಬರಹ ಕಲಿಯಲು ಕಳಿಸಿದರು. ಅಗತ್ಯ ಪೊಲೀಸ್ ಕೆಲಸಗಳಿದ್ದಾಗ ಅವರನ್ನು ಕರೆಯಿಸಿಕೊಂಡು ಅವರಿಗೆ ಆ ಸಂದರ್ಭದಲ್ಲಿ ಶಾಲೆಯ ಹಾಜರಾತಿಯಿಂದ ವಿನಾಯಿತಿ ನೀಡಲಾಯಿತು. ಗ್ರಾಮೀಣ ಪೊಲೀಸರು ವ್ಯವಸ್ಥಿತ ಪೊಲೀಸರಿಗೆ (ರೆಗ್ಯುಲರ್ ಪೊಲೀಸ್) ಗೆ ಅಪರಾಧ ತಡೆ ಮತ್ತು ಪತ್ತೆಯಲ್ಲಿ ಸಹಕರಿಸುತ್ತಿದ್ದರು. ಈ ಗ್ರಾಮೀಣ ಪೊಲೀಸರನ್ನು ಅಭಿವೃದ್ಧಿ ಪಡಿಸಬೇಕೆಂದು ಐಜಿಪಿ ಶ್ರೀ.ಎಲ್.ರಿಕೆಟ್ಸ್ ಸರ್ಕಾರದ ಗಮನಸೆಳೆದರು. ಆದರೆ ಸರ್ಕಾರ ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸದೇ ಅದು ನಿದಾನವಾಗಿ ಬೆಳೆಯಲಿ ಎಂಬ ಅಭಿಪ್ರಾಯದಲ್ಲಿದ್ದುದರಿಂದ ಮತ್ತು ಅವರಿಗೆ ಸರಿಯಾದ ಸವಲತ್ತುಗಳನ್ನು ನೀಡದೇ ಇದ್ದುದರಿಂದ ಗ್ರಾಮೀಣ ಪೊಲೀಸ್ ಪ್ರತ್ಯೇಕವಾಗಿಯೇ ಉಳಿಯಿತು.

ಪೊಲೀಸರು ಕೆಲವು ಘೋರ ಅಪರಾಧಗಳನ್ನು ಪತ್ತೆಹಚ್ಚಲು ವಿಫಲರಾಗಿದ್ದರು. ಆದ್ದರಿಂದ ಐಜಿಪಿ ಶ್ರೀ.ಎಲ್. ರಿಕೆಟ್ಸ್‌ರವರು, ಸರ್ಕಾರಕ್ಕೆ ಮನವಿ ಸಲ್ಲಿಸಿ ಒಂದು 'ವಿಶೇಷ ಪತ್ತೆದಳ'ದ ಅಗತ್ಯವಿದೆ, ಘೋರವಾದ ಮತ್ತು ಕ್ಲಿಷ್ಟವಾದ ಅಪರಾಧಗಳನ್ನು ಪತ್ತೆಹಚ್ಚಲು ಇಂತಹ ಒಂದು ದಳ ಬೇಕೆಂತಲೂ ಇದರಿಂದ ಪೊಲೀಸ್ ಪಡೆಯ ಶಕ್ತಿ ಹೆಚ್ಚಿಸಬಹುದು ಎಂದರು. ಆ ವೇಳೆಯಲ್ಲಿ ಅಪರಾಧ ಪತ್ತೆ ಮಾಡುವುದು ಅಮಿಲ್ದಾರ ಮತ್ತು ಇನ್ಸ್‌ಪೆಕ್ಟರ್ ರವರ ಜಂಟಿ ಕರ್ತವ್ಯವಾಗಿತ್ತು. ಅಪರಾಧ ಪತ್ತೆ ಮಾಡಿದ ಕೀರ್ತಿಯೂ ಇಬ್ಬರಿಗೂ ಹೋಗುತ್ತಿತ್ತು. ಆದರೆ ಇವರಿಬ್ಬರೂ ಸಹ ಈ ಕೆಲಸ ಮಾಡಲು ಆಸಕ್ತಿ ತೋರುತ್ತಿರಲಿಲ್ಲ. ಆದ್ದರಿಂದ ಇವರಿಬ್ಬರ ಕೆಲಸಗಳನ್ನು ಪುನಹ ನಿಗಧಿಪಡಿಸಬೇಕೆಂದು ಇವರು ಸರಕಾರಕ್ಕೆ ವರದಿ ಮಾಡಿದರು. ಪೊಲೀಸ್ ಮತ್ತು ಮ್ಯಾಜಿಸ್ಟ್ರೇಟರ ಸಂಬಂಧ ಉತ್ತಮವಾಗಿರಬೇಕು ಆದರೆ ಅತ್ಯಂತ ಹೆಚ್ಚು ಸ್ನೇಹದಿಂದಿ ರುವುದು ಆಪೇಕ್ಷಣೀಯವಲ್ಲ ಎಂದು ರಿಕೆಟ್ಸ್ ಅಭಿಪ್ರಾಯಪಟ್ಟರು. ಆದರೆ ಅವರಿಬ್ಬರ ನಡುವಿನ ಸಂಬಂಧ ಆಪೇಕ್ಷಣೀಯ ವಾಗಿರಲಿಲ್ಲ. ಆದರೆ ಸಮರ್ಪಕ ಸಿಬ್ಬಂದಿ ಸಿಗದ ಕಾರಣ ಈ ಉದ್ದೇಶಗಳು ಈಡೇರಲಿಲ್ಲ.

ಪೊಲೀಸ್ ಇಲಾಖೆಯಲ್ಲಿ ಕರ್ತವ್ಯದ ಏಗ್ಗೆ ಉತ್ಸಾಹವನ್ನು ಸಮರ್ಥತೆಯನ್ನು ತುಂಬುವ ಅಗತ್ಯವಿತ್ತು. ಇದು ಮೇಲ್ದರ್ಜೆಯ ಅಧಿಕಾರಿಗಳಿಗೆ ಸೇರಿದ್ದಾಗಿತ್ತು. ಡೆಪಿಟ್ಯೂ ಕಮಿಷನರನು ನೀಡುವ ಸ್ವತಂತ್ರ ಮತ್ತು ಬೆಂಬಲಕ್ಕೆ ಅನುಗುಣ ವಾಗಿ ಅಸಿಸ್ಟೆಂಟ್ ಕಮಿಷನರ್‌ರರವರು ತಮ್ಮ ಶಕ್ತಿ ಉತ್ಸಾಹ ಬುದ್ಧಿಮತ್ತೆಗಳನ್ನು ಪ್ರದರ್ಶಿಸುತ್ತಿದ್ದರು. ಪ್ರತೀ ತಾಲೂಕಿನಲ್ಲಿ ನಡೆಯುವ ಅಪರಾಧಗಳ ವಿವರಗಳು ಮೊದಲು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಹೋಗುತ್ತಿತ್ತು. ಈ ಬಗ್ಗೆ ಅಪರಾಧಿ ಗಳನ್ನು ಪತ್ತೆಹಚ್ಚುವ ಬಗ್ಗೆ ಈತನೇ ಮೊದಲ ಹೆಜ್ಜೆ ಇಡಬೇಕಿತ್ತು. ಹಾಗಾಗಿ ಈತನ ಆಯಾ ತಾಲೂಕಿನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಅಪರಾಧ ಎಸಗುವ ವ್ಯಕ್ತಿಗಳ ಪರಿಚಯ ಮತ್ತು ಅಪರಾಧ ಪತ್ತಗೆ ಹೆಚ್ಚು ಕೌಶಲ ಎರಡೂ ಇರಬೇಕಿತ್ತು. ಈತ ಉತ್ಸಾಹಿಯಾಗಿ ಶ್ರದ್ದೆಯಿಂದ ಕೆಲಸ ಮಾಡಿದರೆ ಈತನ ಕೈಕೆಳಗಿನ ಅಧಿಕಾರಿಗಳಿಗೆ ಅದರಿಂದ ಸಂದೇಶ ರವಾನೆಯಾಗಿ ಅವರೂ ಸಹ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಅದೇ ರೀತಿ ಮೇಲಾಧಿಕಾರಿಯು ಸೋಮಾರಿಯಾಗಿ ನಿರುತ್ಸಾಹಿ ಯಾಗಿದ್ದರೆ ಆತನ ಕೈಕೆಳಗಿನ ಅಧಿಕರಿಗಳೂ ಸಹ ನಿರುತ್ಸಾಹಿ ಗಳಾಗುತ್ತಿದ್ದರು. ಒಂದು ವೇಳೆ ಪತ್ತೆಕಾರ್ಯ ವಿಫಲವಾದರೆ ಐಜಿಪಿಯವರು ಅಸಿಸ್ಟೆಂಟ್ ಕಮಿಷನರ್ ಮತ್ತು ಸೂಪರಿಂಟೆಂಡೆಂಟ್‌ರವರನ್ನು ಈ ಬಗ್ಗೆ ಕರೆದು ಚರ್ಚಿಸುತ್ತಿದ್ದರು.

ಎಲ್.ರಿಕೆಟ್ಸ್‌ರವರು ತಾಲೂಕು ಮಟ್ಟದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸಂಘಟಿಸಲು ಮತ್ತು ಅಪರಾಧ ಪತ್ತೆಗೆ

ಬಳಸುವ ವಿದಾನಗಳ ಬಗ್ಗೆ ಹೆಚ್ಚು ಒತ್ತು ನೀಡಿದರು. ತಾಲೂಕು ಮಟ್ಟದಲ್ಲಿ ಪೊಲೀಸ್ ಅಧಿಕಾರಿಗಳ ಅಪರಾಧ ಪತ್ತೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದನ್ನು ಮನಗಂಡರು. ತಾಲೂಕು ಮಟ್ಟದ ಪೊಲೀಸ್ ಅಧಿಕಾರಿಯು ತನ್ನ ವ್ಯಾಪ್ತಿಯೊಳಗೆ ನಡೆಯುವ ಅಪರಾಧಗಳ ಬಗ್ಗೆ ಪೊಲೀಸ್ ಕಮಿಷನರ್‌ರವರಿಗೆ ವರದಿ ಮಾಡಬೇಕೆಂದು ಸೂಚಿಸಿದರು. ಇದರ ಜೊತೆಯಲ್ಲಿ ಆರೋಪಿಗಳ ಪತ್ತೆಗೆ ಏನೇನು ಕ್ರಮ ಜರುಗಿಸಿದೆ ಎಂಬ ಬಗ್ಗೆ ವರದಿಯೊಂದನ್ನು ಸಹ ಕಳುಹಿಸಬೇಕಾಗಿತ್ತು. ಕಮಿಷನರ್‌ರವರು ಈ ವರದಿಯನ್ನು ಗಮನಿಸಿ ಇದರಲ್ಲಿ ಯಾವುದಾದರೂ ವಿಷಯಗಳನ್ನು ಮರೆತಿದ್ದಾರೆಯೇ ? ಎಂಬುದನ್ನು ಗಮನಿಸಿ ಇನ್ನು ಮುಂದೆ ಹೀಗಾಗದಂತೆ ಸೂಚನೆಗಳನ್ನು ಸಂಬಂಧಪಟ್ಟ ಅಧಿಕಾರಿಗೆ ನೀಡಬೇಕು. ಇದಾದ ಮೇಲೂ ತಾಲೂಕು ಪೊಲೀಸ್ ಅಧಿಕಾರಿಯು ತಪ್ಪು ಮಾಡಿ ತನಿಖೆಯನ್ನು ಸರಿಯಾಗಿ ಮಾಡಿ ಆರೋಪಿಗಳನ್ನು ಪತ್ತೆ ಮಾಡದಿದ್ದಲ್ಲಿ ಮತ್ತು ಅಪರಾಧ ತಡೆಯಲು ವಿಫಲವಾದಲ್ಲಿ ಆತನನ್ನು ಜವಾಬ್ದಾರಿಯನ್ನಾಗಿ ಮಾಡಲಾಗುವುದೆಂದು ಸೂಚಿಸಿದರು. ಇದರಿಂದಾಗಿ ಅಧಿಕಾರಿಗಳಿಗೆ ಕೆಲಸ ಮಾಡುವ ಬಗ್ಗೆ ಶ್ರದ್ಧೆ ಹೆಚ್ಚಾಯಿತು. ಮತ್ತು ತನ್ನ ಕೈಕೆಳಗಿನ ಸಿಬ್ಬಂದಿಗಳ ಮೇಲೂ ಪ್ರಭಾವ ಬೀರಿತು.

ಐ.ಜಿ.ಪಿಯವರು ತಾಲೂಕಿನಿಂದ ಬಂದ ಅಪರಾಧಗಳ ವರದಿಗಳ ಪರಿಶೀಲನೆ ಮಾಡುವಾಗ ತನಿಖೆಯಲ್ಲಿ ದೋಷಗಳು ಕಂಡುಬಂದಲ್ಲಿ ಅದರ ಬಗ್ಗೆ ಸಂಬಂಧಿಸಿದ ಅಧಿಕಾರಿಯ ವಿವರಣೆಗಳನ್ನು ಕೇಳುತ್ತಿದ್ದರು. ಜಿಲ್ಲಾ ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರಿಂದ ಅತ್ಯಂತ ವಿವರವಾದ ಮೇಲ್ವಿಚಾರಣೆಯು ಅಗತ್ಯವಿದೆ, ಆದ್ದರಿಂದ ನೆಲೆನಿಂತ ಅಪರಾಧಿ ಗುಂಪುಗಳ ಬಗ್ಗೆ ಕಣ್ಗಾವಲು ಇಡಲು ಹಾಗೂ ಗ್ರಾಮೀಣ ಪೊಲೀಸ್ ವ್ಯವಸ್ಥೆ ಸಮರ್ಪಕವಾಗಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು.[೧೨೩] ಇವರು ಡೆಪ್ಯುಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಇಲಾಖೆಯ ಅಭಿವೃದ್ಧಿಯ ವಿಚಾರ ದಲ್ಲಿ ಹೆಚ್ಚಿನ ಸ್ವಾತಂತ್ರ್ಯ ನೀಡಿದರು. ಇದರಿಂದಾಗಿ ಪೊಲೀಸ್ ಆಡಳಿತದಲ್ಲಿ ಮಹತ್ತರ ಬದಲಾವಣೆಯಾಯಿತು. ಡೆಪ್ಯುಟಿ ಕಮಿಷನರ್‌ರವರೂ ಸಹ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಸ್ವಾತಂತ್ರ್ಯ ನೀಡಿದರು.

ಕೆಳಹಂತದ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ಅವರಿಗೆ ಉಪಯುಕ್ತ ಸಲಹೆಗಳನ್ನು ನೀಡಲು ಹಾಗೂ ಅವರನ್ನು ನಿಯಂತ್ರಣದಲ್ಲಿಡಲು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಅಥವಾ ಸೂಪರಿಂಟೆಂಡೆಂಟ್‌ರವರುಗಳು ಆಗಾಗ ಠಾಣೆಗಳನ್ನು ಪರಿವೀಕ್ಷಣೆ ಮಾಡುತ್ತಿದ್ದರು. ಠಾಣಾ ದಾಖಲಾತಿಗಳನ್ನು ಪರಿಶೀಲಿಸುತ್ತಿದ್ದರು. ಅವರ ತಪ್ಪುಗಳು ಕಂಡುಬಂದರೆ ಅವರಿಗೆ ಕೆಲವೇ ದಿನಗಳಲ್ಲಿ ತಿದ್ದಿಕೊಳ್ಳಲು ಜ್ಞಾಪನವನ್ನು ನೀಡುತ್ತಿದ್ದರು. ಜಿಲ್ಲೆಯಲ್ಲಿ ಪರಿವೀಕ್ಷಣೆ ನಡೆಸುವಾಗ ನಿವಾಸಿ ಮತ್ತು ಅಲೆಮಾರಿ ಕ್ರಿಮಿನಲ್ ಗ್ಯಾಂಗುಗಳನ್ನು ಸರಿಯಾಗಿ ಪರೀಕ್ಷಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ಗಮನಿಸುತ್ತಿದ್ದರು. ಗ್ರಾಮೀಣ ಪೊಲೀಸರು ಸರಿಯಾಗಿ ತಮ್ಮ ಕೆಲಸಗಳನ್ನು ಮಾಡುತ್ತಿದ್ದಾರೆಯೇ? ಇಲ್ಲವೇ? ಎಂದು ಪರೀಕ್ಷಿಸುತ್ತಿದ್ದರು. ಪ್ರತೀ ಠಾಣೆಗಳಿಂದ ಪ್ರಕರಣಗಳ ತನಿಖೆಗೆ ಸಂಬಂಧಿಸಿದಂತೆ ದಿನಂಪ್ರತಿ ದಿನಚರಿ ಕಳಿಸಬೇಕಿತ್ತು. ಇವರು ತಮ್ಮ ಕೆಳಗಿನ ಹಂತದ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ದಿನಚರಿಗಳಲ್ಲಿ ತಪ್ಪುಗಳನ್ನು ತಿದ್ದುತ್ತಿದ್ದರು.

ರಿಕೆಟ್ಸ್‌ರವರು ಪೊಲೀಸ್ ಪಡೆಗೆ ಸಿಬ್ಬಂದಿಗಳ ನೇಮಕಾತಿ ವಿಷಯದಲ್ಲಿ ಅನುಸರಿಸುತ್ತಿದ್ದ ನಿಯಮಗಳ ಬಗ್ಗೆ ಅಸಮದಾನ ಹೊಂದಿದ್ದರು. ಈ ನೇಮಕಾತಿಯ ವಿದಾನವನ್ನು ಉತ್ತಮಪಡಿಸಬೇಕೆಂಬ ಗುರಿ ಹೊಂದಿದ್ದರು. ಹೀಗೆ ಮಾಡುವುದರಿಂದ ಮಾತ್ರ ಕಾಲಕ್ರಮೇಣ ಇಲಾಖೆಯ ಗುಣಮಟ್ಟವನ್ನು ಅಭಿವೃದ್ಧಿಪಡಿಸಬಹುದೆಂಬುದು ಅವರ ಅಭಿಪ್ರಾಯವಾಗಿತ್ತು. ಇವರು ಗಮನಿಸಿದ ಮುಖ್ಯ ಅಂಶವೆಂದರೆ " ಕೆಲವು ವರ್ಷ ಗಮನಹರಿಸದೆ ಮನಸ್ಸಿಗೆ ಬಂದಂತೆ ಇಲಾಖೆಗೆ ಸಿಬ್ಬಂದಿಯನ್ನು ನೇಮಕ ಮಾಡುವುದರಿಂದ ಹಲವಾರು ವರ್ಷಗಳವರೆಗೆ ಇಲಾಖೆಯು ದುಸ್ಥಿತಿಯಲ್ಲಿರುತ್ತದೆ." ಆದ್ದರಿಂದ ಇವರ ಆಡಳಿತದ ಅವಧಿಯಲ್ಲಿ ಪೊಲೀಸ್ ಅಸಿಸ್ಟೆಂಟ್ ಕಮಿಷನರ್‌ರವರ ಹುದ್ದೆಯ ಆಯ್ಕೆಗೆ ಉತ್ತಮ

ಪರೀಕ್ಷೆಗಳನ್ನು ನಡೆಸಿದರು.[೧೪]

ಇಂದಿಗೂ ಸಹ ನೇಮಕಾತಿಯ ವಿದಾನಗಳು ಸಮರ್ಪಕವಾಗಿಲ್ಲ. ಪಿಎಸ್‌ಐ ಹುದ್ದೆಯಿಂದ ಐ.ಪಿ.ಎಸ್ ಹುದ್ದೆಯವರೆಗೂ ಅಭ್ಯರ್ಥಿಗಳ ಆಯ್ಕೆಗೆ ಬೇಕಾದ ಕನಿಷ್ಟ ವಿದ್ಯಾರ್ಹತೆ ಎಂದರೆ ಯಾವುದೇ ಪದವಿ, ಕೇವಲ ಇಲಾಖೆ ಆಯ್ಕೆಯ ಪರೀಕ್ಷೆ ಹೊರತುಪಡಿಸಿದರೆ ಎಲ್ಲರ ವಿದ್ಯಾರ್ಹತೆಯೂ ಒಂದೇ. ಎಷ್ಟೋ ಸಂದರ್ಭಗಳಲ್ಲಿ ಹಿರಿಯ ಅಧಿಕಾರಿಗಳಿಗಿಂತ ಕಿರಿಯ ಅಧಿಕಾರಿಗಳು ಹೆಚ್ಚು ವಿದ್ಯಾರ್ಹತೆಯನ್ನು ಹೊಂದಿದವರಾಗಿರುತ್ತಾರೆ. ಆದರೆ ಬೇರೆ ಬೇರೆ ಆಯ್ಕೆಯ ನಿಯಮಗಳು, ಮೀಸಲಾತಿಗಳ ಆಧಾರದ ಮೇರೆಗೆ ಆಯ್ಕೆಯಾಗಿ ಉನ್ನತ ಸ್ಥಾನ ಪಡೆದರೆ ಹೆಚ್ಚು ವಿದ್ಯಾರ್ಹತೆಯನ್ನು ಹಿಂದಿದವರು ಕಡಿಮೆ ದರ್ಜೆಯಲ್ಲಿರುವುದನ್ನು ಕಾಣಬಹುದು.

ದುರಾದೃಷ್ಟವಶಾತ್ ಡಿಸ್ಟ್ರಿಕ್ಟ್ ಕಮಿನಷರ್‌ರವರು ನೇಮಕಾತಿಗಳ ಜವಾಬ್ದಾರಿಯನ್ನು ಹೊಂದಿದ್ದು, ಅವರು ಈ ರೀತಿಯ ನೇಮಕಾತಿಗಳ ಬಗ್ಗೆ ಸಮ್ಮತಿಸಲಿಲ್ಲ. ಹೀಗಾಗಿ ಆಗಾಗ ಅಸಮರ್ಪಕ ದೇಹದಾರ್ಢ್ಯವನ್ನು ಹೊಂದಿದವರು ಆಯ್ಕೆಯಾಗುತ್ತಿದ್ದರು. ದೃಢಕಾಯರೆಲ್ಲರೂ ಹೆಚ್ಚು ಸಂಬಳ ಬರುತ್ತಿದ್ದುದರಿಂದ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಕೂಲಿ ಕೆಲಸಕ್ಕೆ ಸಿಗುತ್ತಿದ್ದ ಸಂಬಳಕ್ಕಿಂತಲೂ ಪೊಲೀಸ್ ಕೆಲಸಕ್ಕೆ ಸಿಗುವ ಸಂಬಳ ಕಡಿಮೆಯಾಗಿತ್ತು. ಇದು ಇಂದಿಗೂ ಮುಂದುವರೆದು ಕೊಂಡು ಬಂದಿದೆ. ಹಗಲು, ರಾತ್ರಿ, ಛಳಿ, ಮಳೆ, ಬಿಸಿಲೆನ್ನದೆ ಸದಾ ಸೇವೆಗೆ ಸಿದ್ಧರಾಗಿರುವ ಪೊಲೀಸರಿಗೆ ಸಿಗುವ ಸಂಬಳವನ್ನು ಬೇರೆ ಇಲಾಖೆಗಳವರಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಇದೆ.

ಗ್ರಾಮೀಣ ಪ್ರದೇಶದಲ್ಲಿ ಅಪರಾಧಗಳ ತಡೆ ಮತ್ತು ಪತ್ತೆ ಅತ್ಯಂತ ಮುಖ್ಯವಾಗಿದ್ದು ಅದರಲ್ಲಿ ಗ್ರಾಮೀಣ ಪೊಲೀಸರ ಕೆಲಸ ಪ್ರಮುಖವಾಗಿತ್ತು. ಆದ್ದರಿಂದ ಅವರನ್ನು ವ್ಯವಸ್ಥಿತ ಪೊಲೀಸ್ ಪಡೆಗೆ ಸೇರಿಸಿಕೊಂಡು ನಿರಂತರ ವಾಗಿ ಸಂಬಳ ಕೊಡಬೇಕೆಂಬುದು ರಿಕೆಟ್ಸ್‌ರ ಅಭಿಪ್ರಾಯವಾಗಿತ್ತು. ಆದರೆ ಇದಕ್ಕೆ ಸರಕಾರ ಸಮ್ಮತಿಸಲಿಲ್ಲ.[೧೫] ಎಲ್.ರಿಕೆಟ್ಸ್‌ರವರ ಕೆಲವು ದೂರದರ್ಶಿತ್ವದ ಪ್ರಸ್ತಾವನೆಗಳಿಗೆ ಸರಕಾರವು ಅಂಗೀಕಾರ ನೀಡಿತು. ಹಾಗೂ ತಕ್ಷಣದಿಂದ ಅವುಗಳನ್ನು ಜಾರಿಗೆ ತರುವಂತೆ ಆದೇಶಿಸಿತು. ಈ ಪ್ರಸ್ತಾವನೆಗಳಿಂದಾಗಿ ಡೆಪ್ಯುಟ್ಯೂ ಕಮಿಷನರ್‌ರವರಿಗಿದ್ದ ಪೊಲೀಸ್ ಅಧಿಕಾರಗಳು ಕಡಿಮೆಯಾದವು. ಪೊಲೀಸ್ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಪ್ರತ್ಯೇಕವಾದ ದರ್ಜೆಯನ್ನು ನೀಡಿ, ಸೂಪರಿಂಟೆಂಡೆಂಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಎಂತಲೂ ಕರೆಯಲಾಯಿತು. ಅವರ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ವಿಷದವಾಗಿ ತಿಳಿಸಲಾಯಿತು. ಇವರುಗಳು ಡೆಪ್ಯುಟ್ಯೂ ಕಮಿಷನರ್‌ನ ಕೈಕೆಳಗೆ ಕೆಲಸ ಮಾಡುವುದು ಮುಂದುವರೆಯಿತು. ಸರಕಾರವು ಪ್ರಯೋಗಾರ್ಥವಾಗಿ ಅಮಿಲ್‌ದಾರರುಗಳಿಗೆ ಇರುವ ಪೊಲೀಸ್ ಅಧಿಕಾರಗಳನ್ನು ತೆಗೆದುಹಾಕಿ ಅವರ ಸ್ಥಾನಗಳಿಗೆ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳನ್ನು ಹೆಚ್ಚಿನ ಸಂಬಳ ನೀಡಿ ನಿಯೋಜಿಸಬೇಕೆಂದು ತೀರ್ಮಾನಿಸಿತು. ಆದರೆ ರಾಜ್ಯವನ್ನು ಕಾಡಿದ ಕೆಟ್ಟ ಹವಾಮಾನದಿಂದಾಗಿ ಈ ಯೋಜನೆಯನ್ನು ಮೂಂದೂಡಲಾಯಿತು.[೧೬] *ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯದಲ್ಲಿದ್ದ ಐ.ಜಿ.ಪಿ ರವರುಗಳ ಪಟ್ಟಿಯನ್ನು ಅನುಬಂಧ – ೧೦ ರಲ್ಲಿ ನೋಡಿ ಮತ್ತು ಅವರ ಫೋಟೋಗಳನ್ನು ಚಿತ್ರ ೨೧ ರಿಂದ ೪೨ ವರೆಗೆ ನೋಡಿ.*

೫.೧೧: ಮೈಸೂರಿನ ಎರಡನೇ ಐ.ಜಿ.ಪಿ. ಶ್ರೀ.ವಿ.ಪಿ.ಮಾದವರಾವ್‌ರವರ ಸಾಧನೆಗಳು (೧೬-೦೫-೧೮೯೨- ೧೭-೦೪-೧೮೯೮)

ಶ್ರೀ.ಎಲ್.ರಿಕೆಟ್ಸ್‌ರವರ ನಂತರ ರಾಜ್ಯದ ಎರಡನೇ ಐ.ಜಿ.ಪಿರವರಾಗಿ ಶ್ರೀ.ವಿ.ಪಿ.ಮಾದವರಾವ್‌ರವರು ದಿನಾಂಕ ೧೬-೦೫-೧೮೯೨ ರಂದು ಅಧಿಕಾರ ಸ್ವೀಕರಿಸಿದರು. ಪೊಲೀಸ್ ಇಲಾಖೆಯ ಎಲ್ಲಾ ಹಂತಗಳಲ್ಲಿಯೂ ಕನ್ನಡ ಭಾಷೆ ಬಳಕೆ ಮಾಡಬೇಕೆಂದು ಅಡಿಪಾಯ ಹಾಕಿದರು. ಇವರು ಹೊರಡಿಸುತ್ತಿದ್ದ ಸುತ್ತೋಲೆಗಳು ಕನ್ನಡದಲ್ಲಿರುತ್ತಿತ್ತು. ಅದಕ್ಕೆ ಸಾಹಿತ್ಯಿಕ ಮೌಲ್ಯ ಇದೆ. ಇವರ ಕಾಲದಲ್ಲಿಯೇ ಪ್ರಥಮ ಪೊಲೀಸ್ ತರಬೇತಿ ಕೇಂದ್ರ ಪ್ರಾರಂಭವಾಯಿತು. ಇವರು

ತರಬೇತಿಗೆ ಹೆಚ್ಚಿನ ಮಹತ್ವ ನೀಡಿದರು. ಈ ಅವಧಿಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸಂಘಟಿಸಲು ಸರ್ಕಾರವು ಹಲವು ಪ್ರಮುಖ ಹೆಜ್ಜೆಗಳನ್ನಿಟ್ಟಿತು. ೧೮೫೯ರ ಭಾರತ ಸರ್ಕಾರದ ಮಿಲಿಟರಿ ಫೈನಾನ್ಸ್ ಕಮಿಷನ್ ಸೂಚಿಸಿದ್ದೇನೆಂದರೆ, ಸೇನೆಯ ಇನ್‌ಫೆಂಟ್ರಿ ದಳವನ್ನು ಟ್ರಜರಿಯ ಎಸ್ಕಾರ್ಟ್, ಜಿಲ್ಲಾ ಟ್ರಜರಿ ಮತ್ತು ಜೈಲುಗಳ ಪಹರೆ ಕಾಯುವಂತಹ ಕೆಲಸಗಳಿಂದ ಬಿಡುಗಡೆಗೊಳಿಸಬೇಕು. ಅದಕ್ಕಾಗಿ ಸಿವಿಲ್ ಪೊಲೀಸ್ ಪಡೆಯನ್ನು ಸ್ಥಾಪಿಸಬೇಕು ಎಂದು ಸೂಚಿಸಿತು. *ಐ.ಜಿ.ಪಿ ಮಾಧವರಾವ್‌ರವರ ಹಸ್ತಾಕ್ಷರ ಹಾಗೂ ಸಹಿಯ ಬಗ್ಗೆ ಚಿತ್ರ ೪೩ ಮತ್ತು ೪೪ ನೋಡಿರಿ.*

೫.೧೨ : ೧೯೦೨-೦೩ ರ ಭಾರತೀಯ ಪೊಲೀಸ್ ಆಯೋಗ

೧೮೬೧ ರ ಪೊಲೀಸ್ ಕಾಯ್ದೆಯಿಂದ ಸ್ಥಾಪಿತವಾದ ಪೊಲೀಸ್ ವ್ಯವಸ್ಥೆ ತೀವ್ರ ದೋಷಗಳಿಂದ ಕೂಡಿತ್ತು. ಇದಕ್ಕೆ ಕಾರಣ ಶಾಂತಿ ಮತ್ತು ಶಿಸ್ತನ್ನು ಪಾಲಿಸುವ ಜವಾಬ್ದಾರಿಯುತ ಕರ್ತವ್ಯವನ್ನು ಸಾಕಷ್ಟು ತರಬೇತಿ ಪಡೆಯದ ಜನರಿಗೆ ವಹಿಸಲಾಗಿತ್ತು. ಪೊಲೀಸ್ ಆಡಳಿತದ ಸ್ಥಿತಿಗತಿಗಳನ್ನು ಪರಿಶೀಲಿಸಲು ೧೯೦೨ ರಲ್ಲಿ ಒಂದು ಪೊಲೀಸ್ ಆಯೋಗವನ್ನು ನೇಮಕಮಾಡಲಾಯಿತು. ಆಯೋಗವು ಪೊಲೀಸ್ ವ್ಯವಸ್ಥೆಯನ್ನು ಕುರಿತಂತೆ ಅನೇಕ ಶಿಪಾರಸ್ಸುಗಳನ್ನು ಮಾಡಿತು. ಈ ಶಿಫಾರಸ್ಸುಗಳು ಚಿಕ್ಕಪುಟ್ಟ ಮಾರ್ಪಾಡಿನೊಂದಿಗೆ ಅಂಗೀಕಾರವಾದವು. ಈ ಆಯೋಗವು ವಿಶೇಷ ಪೊಲೀಸ್ ಪಡೆಯನ್ನು ನಿರ್ಮಿಸಲು ಶಿಪಾರಸ್ಸು ಮಾಡಿತು. ಇದು ಅಪರಾಧ ತನಿಖಾ ವಿಭಾಗ (ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್) ವಾಗಿದ್ದು ಪ್ರತಿಯೊಂದು ಪ್ರಾಂತದಲ್ಲೂ ವಿಶೇಷವಾದ ಅಪರಾಧಗಳನ್ನು ಪತ್ತೆ ಮಾಡುವ ಕಾರ್ಯನಿರ್ವಹಿಸುತ್ತಿತ್ತು. ಇಷ್ಟೇ ಅಲ್ಲದೇ ಎಲ್ಲ ಪ್ರಾಂತೀಯ ಅಪರಾಧ ತನಿಖಾ ವಿಭಾಗಗಳಿಂದ ಮಾಹಿತಿ ಸಂಗ್ರಹಿಸಿ ನಂತರ ಪ್ರಾಂತೀಯ ಸಂಪರ್ಕದ ಕಾರ್ಯನಿರ್ವಹಿಸಲು ಭಾರತ ಸರ್ಕಾರದ ಗೃಹಖಾತೆಯಲ್ಲಿ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋವನ್ನು ರೂಪಿಸಲಾಯಿತು. ೧೮೬೧ರ ಕಾಯ್ದೆಯಿಂದ ಸ್ಥಾಪನೆಗೊಂಡ ಪೊಲೀಸ್ ಬಹು ಮಟ್ಟಿಗೆ ಪ್ರಾಂತೀಯ ವ್ಯವಸ್ಥೆಯಾಗಿತ್ತು. ಸಂಬಂಧಪಟ್ಟ ಸ್ಥಳೀಯ ಸರ್ಕಾರ ಇದರ ಆಡಳಿತ ನೋಡಿಕೊಳ್ಳುತ್ತಿತ್ತು. ಇದು ಕೇಂದ್ರ ಸರ್ಕಾರದ ಹತೋಟಿಗೆ ಒಳಪಟ್ಟಿರಲಿಲ್ಲ. ಪ್ರತಿ ಯೊಂದು ಪ್ರಾಂತದಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ವ್ಯವಸ್ಥೆಯ ಮುಖ್ಯಸ್ಥನಾಗಿರುತ್ತಿದ್ದ. ಜಿಲ್ಲೆಗಳಲ್ಲಿ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರು, ಠಾಣಾ ಎಂಬ ಉಪ ವಿಭಾಗಗಳಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್‌ಗಳು ಇರುತ್ತಿದ್ದರು. ಗ್ರಾಮಗಳಲ್ಲಿ 'ಚೌಕಿದಾರ'ರು ಇರುತ್ತಿದ್ದರು. ಕಲ್ಕತ್ತಾ, ಮದ್ರಾಸ್ ಮತ್ತು ಬೊಂಬಾಯಿ ಯಂಥ ಪ್ರೆಸಿಡೆನ್ಸಿ ನಗರಗಳಲ್ಲಿ ಪೊಲೀಸ್ ಕಮಿಷನರ್‌ನ ನೇತೃತ್ವದಲ್ಲಿನ ಏಕೀಕೃತ ಪಡೆ ನೋಡಿಕೊಳ್ಳುತ್ತಿತ್ತು.

ಭಾರತದಲ್ಲಿನ ಪೊಲೀಸ್ ಯಾವಾಗಲೂ ನಿರ್ಧಿಷ್ಟ ಪ್ರಮಾಣದ ಸೇವೆಯನ್ನು ಮಾಡಿಕೊಂಡು ಬಂದಿತು. ಅದು ಭಾರತದ ಸಾಮಾನ್ಯ ಜನರ ಜೀವ ಮತ್ತು ಗೌರವಗಳನ್ನು ರಕ್ಷಿಸುವಲ್ಲಿ ವಿಫಲಗೊಂಡಿತು. ಆದರೂ ಅದು ತನ್ನ ಬ್ರಿಟೀಷ್ ಯಜಮಾನರಿಗೆ ನಿಷ್ಠೆಯಿಂದಿದ್ದು ಬ್ರಿಟಿಷ್ ಆಡಳಿತಶಾಹಿ ಮತ್ತು ವಸಾಹತುಶಾಹಿ ಆಡಳಿತಕ್ಕೆ ಬೆಂಬಲ ಮತ್ತು ನಿಷ್ಠೆಯಿಂದ ಕೂಡಿದ ಸೇವೆಯನ್ನು ನಿರ್ವಹಿಸಿತು. ಹಾಗಾಗಿ ಸ್ವಾತಂತ್ರ್ಯ ಚಳುವಳಿಯಂತಹ ಸಂದರ್ಭದಲ್ಲಿ ಭಾರತೀಯ ಪೊಲೀಸ್ ಪಡೆಯನ್ನು ಬ್ರಿಟೀಷರು ಚಳವಳಿಕಾರರ ದಮನಕ್ಕಾಗಿ ಬಳಸಿಕೊಂಡರು.

ಪೊಲೀಸ್ ವ್ಯವಸ್ಥೆಯ ಒಂದು ವಿಕಾಸದ ಹೆಜ್ಜೆಯಾಗಿದೆ. ೧೮೬೧ರ ಪೊಲೀಸ್ ಕಾಯ್ದೆಯಲ್ಲಿನ ಅಂಶ ಗಳನ್ನು ಇನ್ನೂ ವಿಸ್ತರಿಸಲಾಯಿತು. ವಿವಿದ ಪ್ರಾಂತ್ಯಗಳಲ್ಲಿನ ಪೊಲೀಸ್ ಪಡೆಗಳಲ್ಲಿ ಸಾದ್ಯವಾದಷ್ಟು ಮಟ್ಟಿಗೆ ಏಕ ರೂಪತೆಯನ್ನು ತರಲು ಬಳಸಬೇಕಾದ ವಿದಾನಗಳ ಬಗ್ಗೆ ಆಯೋಗವು ಸೂಚಿಸಿತು. ಇದಕ್ಕಾಗಿ ಹಲವು ಪ್ರಮುಖ ಶಿಪಾರಸ್ಸುಗಳನ್ನು ಮಾಡಿತ್ತು.[೧೨೭] ಎ)ಸಂಪೂರ್ಣವಾಗಿ ಇಂಗ್ಲೆಂಡ್‌ನಲ್ಲಿ ಪೊಲೀಸ್ ಪಡೆಯ ಸೇವೆಗೆ ಯುರೋಪಿಯನ್ನರನ್ನೇ ನೇಮಿಸಿ ಕೊಳ್ಳಬೇಕು. ಬಿ) ಸಂಪೂರ್ಣವಾಗಿ ಭಾರತದಲ್ಲಿ ಅವರನ್ನು ಪ್ರಾಂತೀಯ ಸೇವೆಗಳಿಗೆ ನೇಮಿಸಬೇಕು. ಸಿ) ಮೇಲ್ದರ್ಜೆಯ

ಅಧೀನ ಅಧಿಕಾರಿಗಳೆಂದರೆ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಡಿ) ಕೆಳದರ್ಜೆ ಅಧೀನ ಅಧಿಕಾರಿಗಳೆಂದರೆ ಹೆಡ್ ಕಾನ್ಸ್‌ಟೇಬಲ್ ಮತ್ತು ಕಾನ್ಸ್‌ಟೇಬಲ್‌ಗಳು. ಈ ವ್ಯವಸ್ಥೆ ಇಂದಿಗೂ ಭಾರತದಲ್ಲಿದೆ. ಆದರೆ ಇಂಗ್ಲೆಂಡ್‌ನಲ್ಲಿ ಈ ವ್ಯವಸ್ಥೆ ಈಗ ಇಲ್ಲ. ಎರಡನೇ ಶಿಫಾರಸ್ಸು – ಪ್ರತೀ ಪ್ರಾಂತ್ಯಗಳಲ್ಲೂ ಪೊಲೀಸ್ ಆಡಳಿತದ ದೃಷ್ಟಿಯಿಂದ ವಲಯಗಳಾಗಿ ವಿಭಾಗಿಸ ಬೇಕು. ಈ ವಲಯಗಳಲ್ಲಿ ಆಡಳಿತದ ಜವಾಬ್ದಾರಿಯನ್ನು ಡಿ.ಐ.ಜಿ.ಪಿ ದರ್ಜೆಯ ಅಧಿಕಾರಿಗೆ ನೀಡಬೇಕು. ಈ ಶಿಫಾರಸ್ಸಿನ ಆಧಾರದ ಮೇರೆಗೆ ವಲಯಗಳನ್ನು ರಚಿಸಲಾಯಿತು. ಇವು ಇಂದಿಗೂ ಇದೆ. ಮತ್ತು ಈ ಆಯೋಗದ ಮೂರನೇ ಮುಖ್ಯ ಶಿಪಾರಸ್ಸು ಎಂದರೆ ಜಿಲ್ಲೆಗಳಲ್ಲಿ ಸೂಪರಿಂಟೆಂಡೆಂಟ್‌ಗಿಂತ ಕಡಿಮೆ ದರ್ಜೆಯ ಅಧಿಕಾರಿಗಳನ್ನು ಪೊಲೀಸ್ ಇಲಾಖೆಯ ಮುಖ್ಯಸ್ಥನನ್ನಾಗಿ ನೇಮಿಸಬಾರದು. ಈ ವ್ಯವಸ್ಥೆಯೂ ಸಹ ಇಂದಿಗೂ ಭಾರತದಲ್ಲಿ ಅಸ್ಥಿತ್ವದಲ್ಲಿದೆ. ನಾಲ್ಕನೇ ಶಿಫಾರಸ್ಸು ಎಂದರೆ, ಕೆಲವು ಜನ ಸೂಪರಿಂಟೆಂಡೆಂಟ್‌ಗಳನ್ನು ಪ್ರಾಂತೀಯ ಸೇವೆಗೆ ಕಾಯ್ದಿಡಬೇಕು. ಐದನೇ ಶಿಫಾರಸ್ಸು ಎಂದರೆ, ಪ್ರತೀ ಜಿಲ್ಲೆಯನ್ನು ಹಲವಾರು ಸರ್ಕಲ್‌ಗಳಾಗಿ ವಿಭಾಗಿಸಬೇಕು. ಈ ವೃತ್ತ (ಸರ್ಕಲ್)ಗಳಲ್ಲಿ ಏಳರಿಂದ ಎಂಟು ಪೊಲೀಸ್ ಠಾಣೆಗಳು ಇರಬೇಕು. ಒಬ್ಬರು ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿ ವೃತ್ತದ ಅಧಿಕಾರ ಹೊಂದಿದ ಅಧಿಕಾರಿಯಾಗಿರಬೇಕು. ಪ್ರತೀ ಪೊಲೀಸ್ ಠಾಣೆಯು ಒಬ್ಬೊಬ್ಬ ಸಬ್‌ಇನ್ಸ್‌ಪೆಕ್ಟರ್ ಮುಖ್ಯಸ್ಥನಾಗಿರಬೇಕು. ಪ್ರತೀ ಠಾಣೆಯು ಸುಮಾರು ೧೫೦ ಚದರ ಮೈಲಿಯ ವ್ಯಾಪ್ತಿಯನ್ನು ಹೊಂದಿರಬೇಕು ಎಂದು ಶಿಫಾರಸ್ಸುಮಾಡಿತು. ನಂತರ ಇಷ್ಟು ದೊಡ್ಡ ಭೂಪ್ರದೇಶ ವಿರುದರಿಂದ ಸಮರ್ಪಕವಾಗಿ ಪೊಲೀಸ್ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಅರಿವಾದ ನಂತರ ಹೆಚ್ಚು ಹೆಚ್ಚು ಪೊಲೀಸ್ ಠಾಣೆಗಳನ್ನು ನಿರ್ಮಿಸಲಾಯಿತು. ಆದರೆ ಆಯೋಗದ ಶಿಫಾರಸ್ಸುಗಳನ್ನು ವೃತ್ತ ಮತ್ತು ಠಾಣೆಗಳಿಗೆ ಸಂಬಂಧಿಸಿದಂತೆ ಬದಲಾಯಿಸಲಿಲ್ಲ. ಆರನೇ ಶಿಪಾರಸ್ಸು ಎಂದರೆ ಪ್ರತೀ ಜಿಲ್ಲಾ ಕೇಂದ್ರಗಳಲ್ಲಿ ಒಂದು ಸಶಸ್ತ್ರ ಮೀಸಲು ಪೊಲೀಸ್ ಪಡೆ ಯನ್ನು ಹೊಂದಿರಬೇಕು. ಇದರಿಂದ ಸ್ಥಳೀಯವಾಗಿ ನಡೆಯುವ ಗಲಾಟೆ, ದೊಂಬಿಗಳನ್ನು ನಿಯಂತ್ರಿಸಲು ಅನುಕೂಲ ವಾಗುತ್ತದೆ. ಏಳನೇಯದಾಗಿ ಸಂಘಟಿತ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಮತ್ತು ಆ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಹಂಚಲು, ಘೋರ ಅಪರಾಧಗಳಲ್ಲಿ ಸ್ಥಳೀಯ ಪೊಲೀಸರಿಗೆ ತನಿಖೆಗೆ ಸಹಕರಿಸಲು, ಪ್ರಾಂತ್ಯದಲ್ಲಿ ಒಂದು ಅಪರಾಧ ತನಿಖಾ ವಿಭಾಗವನ್ನು ರಚಿಸಬೇಕು. ಎಂಟನೆಯದಾಗಿ ರೈಲ್ವೆ ಪೊಲೀಸ್, ರಿವರ್ ಪೊಲೀಸ್ ಮತ್ತು ಪ್ರಾಂತ್ಯದ ಕೇಂದ್ರ ಸ್ಥಾನದಲ್ಲಿ ಪೊಲೀಸ್ ಪಡೆಗಳನ್ನು ರಚಿಸಬೇಕು. ಒಂಬತ್ತನೇಯದಾಗಿ ಆಯೋಗವು ಪೊಲೀಸ್ ಮತ್ತು ಮ್ಯಾಜಿಸ್ಟ್ರೇಟ್‌ರವರ ಸಂಬಂಧದ ಬಗ್ಗೆ ವಿವರಿಸಿತು. ಈಗಲೂ ಇದೇ ವ್ಯವಸ್ಥೆ ಮುಂದುವರಿದಿದೆ. ಕೊನೆ ಯದಾಗಿ ಪೊಲೀಸ್ ನೇಮಕಾತಿ, ತರಬೇತಿ, ಸಂಬಳ, ಮತ್ತು ಇತರ ವಿಷಯಗಳಲ್ಲಿ ಮಹತ್ತರ ಬದಲಾವಣೆಗೆ ಶಿಫಾರಸ್ಸು ಮಾಡಿತು. ಇದು ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಅನುಗುಣವಾಗಿತ್ತು.

೧೯೦೨ –೧೯೦೩ ರಲ್ಲಿ ರಚಿತವಾದ ಭಾರತದ ಪೊಲೀಸ್ ಆಯೋಗವು ಪ್ರತೀ ಜಿಲ್ಲಾ ಹಂತದಲ್ಲಿಯೂ ಇರ ಬೇಕಾದ ಪೊಲೀಸ್ ವ್ಯವಸ್ಥೆಯ ಮತ್ತು ಅದರ ಸಂಘಟನೆಯ ಸ್ವರೂಪಗಳನ್ನು ಮತ್ತು ರೈಲ್ವೆ ಪೊಲೀಸರ ಹಾಗೂ ನದಿ ಪೊಲೀಸ್ (River Police) ರ ನೇಮಕಾತಿ, ತರಬೇತಿ, ಸಂಬಳ ಮತ್ತು ಭತ್ಯೆ ಹಾಗೂ ವಿವಿಧ ಹಂತಗಳ ಅಧಿಕಾರಿ ಶ್ರೇಣಿ ಗಳ ಬಗ್ಗೆ ಇದರಲ್ಲಿ ವಿವರಿಸಲಾಯಿತು.

ಈ ಶಿಪಾರಸ್ಸುಗಳು ಬಹಳ ಕಾಲದವರೆಗೆ ಪೊಲೀಸ್ ಆಡಳಿತವನ್ನು ವಿವಿಧ ಪ್ರಾಂತ್ಯಗಳಲ್ಲಿ ಏಕರೂಪವಾಗಿ ತರಲು ಅವಕಾಶವಾಯಿತು. ೧೮೬೧ ರ ಪೊಲೀಸ್ ಕಾಯ್ದೆ ಮತ್ತು ೧೯೦೨–೦೩ರ ಪೊಲೀಸ್ ಕಮಿಷನರ್‌ನ ಶಿಪಾರಸ್ಸು ಗಳಂತೆಯೆ ಇಂದಿನ ಪೊಲೀಸ್ ವ್ಯವಸ್ಥೆ ರಚನೆಯಾಗಿದೆ.

೫.೧೩ – ಮೈಸೂರು ಪೊಲೀಸ್ ಕಾಯ್ದೆ

೧೯೦೮ ರ ಮೈಸೂರು ಪೊಲೀಸ್ ಕಾಯ್ದೆಯು ಅದೇ ವರ್ಷದ ಡಿಸೆಂಬರ್‌ನಲ್ಲಿ ಜಾರಿಗೆ ಬಂದಿತು. ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಏಕರೂಪತೆಯನ್ನು ತರುವುದು ಇದರ ಮುಖ್ಯ ಉದ್ದೇಶವಾಗಿತ್ತು.[೧೨೮] ಈ ಕಾಯ್ದೆಯು ಒಂದು ಅಥವಾ ಅದಕ್ಕಿಂತ ಹೆಚ್ಚು ಡೆಪಿಟ್ಯೂ (ಉಪ) ಅಥವಾ ಸಹಾಯಕ (ಅಸಿಸ್ಟೆಂಟ್) ಇನ್ಸ್‌ಪೆಕ್ಟರ್ ಜನರಲ್‌ರವರನ್ನು (ಡಿ.ಐ.ಜಿ.ಪಿ, ಎ.ಐ.ಜಿ.ಪಿ) ನೇಮಿಸಲು ಸರಕಾರಕ್ಕೆ ಅಧಿಕಾರನೀಡಿತು. ಸೂಪರಿಂಟೆಂಡೆಂಟ್, ಅಸಿಸ್ಟೆಂಟ್ ಸೂಪರಿಂಟೆಂ ಡೆಂಟ್ ಹಾಗೂ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲು ಐ.ಜಿ.ಪಿಯವರಿಗೆ ಅಧಿಕಾರವಿಲ್ಲ. ಅದು ಸರ್ಕಾರದ ಅಧಿಕಾರವೆಂದು ಈ ಕಾಯ್ದೆ ತಿಳಿಸಿತು. ಪ್ರಾಂತ್ಯದಲ್ಲಿರುವ ಮೀಸಲು ಪೊಲೀಸ್ ಪಡೆಗೆ ಕೆಲವು ದರ್ಜೆಯ ಇನ್ಸ್‌ಪೆಕ್ಟರ್‌ರವರನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳನ್ನು ಅದರಲ್ಲೂ ನಿಗದಿತ ನಿಯಮಗಳಿಗೆ ಒಳಪಟ್ಟು ನೇಮಿಸುವ ಅಧಿಕಾರವರನ್ನು ಐ.ಜಿ.ಪಿಯವರಿಗೆ ನೀಡಲಾಯಿತು. ಮತ್ತು ಡೆಪಿಟ್ಯೂ ಕಮಿಷನರ್‌ರರಿಗೆ 'ಜಮೇದಾರ' ನನ್ನು ಹಾಗೂ ಸೂಪರಿಂಟೆಂಡೆಂಟ್‌ರವರಿಗೆ ಜಮೇ ದಾರನಿಗಿಂತ ಕೆಳಗಿನ ಅಧಿಕಾರಿಗಳನ್ನು ಅವರವರ ಸರಹದ್ದುಗಳಲ್ಲಿ ನೇಮಿಸಿಕೊಳ್ಳಲು ಅವಕಾಶ ನೀಡಲಾಯಿತು.

ಈ ಮೈಸೂರು ಪೊಲೀಸ್ ಕಾಯ್ದೆ ೧೯೦೮ರ ಕಲಂ ೨೪ ಮತ್ತು ೨೫ ರಲ್ಲಿ ಐ.ಜಿ.ಪಿ ರವರ ಕರ್ತವ್ಯ ಹಾಗೂ ಅಧಿಕಾರಿಗಳ ಬಗ್ಗೆ ವಿವರಿಸಲಾಯಿತು. ಪೊಲೀಸ್ ಇಲಾಖೆಯ ಮುಖ್ಯಸ್ಥನಾಗಿ ಇಡೀ ರಾಜ್ಯದ ಪೊಲೀಸ್ ಇಲಾಖೆಯನ್ನು ನಿಯಂತ್ರಿಸುವ ಅಧಿಕಾರವಿತ್ತು. ಈತನಿಗೆ ರಾಜ್ಯ ಸರ್ಕಾರದ ಅನುಮೋದನೆ ಪಡೆದು ಇಲಾಖೆಗೆ ಬೇಕಾದ ನಿಯಮ ಮತ್ತು ಆದೇಶಗಳನ್ನು ಹೊರಡಿಸುವ ಅಧಿಕಾರವಿತ್ತು. ರಾಜ್ಯಸರ್ಕಾರವು ನಿಗದಿಗೊಳಿಸಿದ ಈತನ ವ್ಯಾಪ್ತಿಯೊಳಗೆ ಮೊದಲ ದರ್ಜೆಯ ಮ್ಯಾಜಿಸ್ಟ್ರೇಟನಿಗಿದ್ದ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸಲು ಈತನಿಗೆ ಅಧಿಕಾರ ನೀಡಲಾಯಿತು. ಜಿಲ್ಲಾ ಮಟ್ಟದಲ್ಲಿ ಎಲ್ಲಾ ಪೊಲೀಸ್ ಕೆಲಸಗಳನ್ನು ಮಾಡಲು, ಇಲಾಖೆಯ ಆಡಳಿತವನ್ನು ನಿಯಂತ್ರಿಸಲು ಮತ್ತು ಮಾರ್ಗದರ್ಶನ ನೀಡಲು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ನೀಡಲಾಯಿತು. ಹಾಗೂ ಇವರು ಐ.ಜಿ.ಪಿಯವರ ಗಮನಕ್ಕೆ ತಂದು ತನ್ನ ವ್ಯಾಪ್ತಿಯೊಳಗಿರುವ ಪೊಲೀಸ್ ಪಡೆಯನ್ನು ಅಗತ್ಯವಿದ್ದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಳುಹಿಸುವ ಅಧಿಕಾರ ನೀಡಲಾಯಿತು. ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ನಿಗೆ ಡಿಸ್ಟ್ರಿಕ್ಟ್ ಕಮಿಷನರ್‌ರವರಿಗೆ ಇರುವ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು, ಯಾವುದೇ ಪೂರ್ವಾಗ್ರಹವಿಲ್ಲದೇ ಚಲಾಯಿಸ ಬಹುದು. ಈತನಿಗೆ ಪೊಲೀಸ್ ಇಲಾಖೆಯ ಸಾಮಾನ್ಯ ವಿಷಯಗಳ ಬಗ್ಗೆ ನೇರವಾದ ನಿಯಂತ್ರಣವಿತ್ತು. ಅವುಗಳೆಂದರೆ, ೧)ಶಸ್ತ್ರಾಸ್ತ್ರ ಹಾಗೂ ಸಿಬ್ಬಂದಿಗಳ ಸಮವಸ್ತ್ರ ೨)ಕವಾಯತು, ೩)ಕೆ.ಡಿ.ಗಳ ಹಾಗೂ ಗುಮಾನಿ ವ್ಯಕ್ತಿಗಳ ಅಪರಾಧಿ ಗುಂಪು ಗಳು, (ಕ್ರಿಮಿನಲ್ ಗ್ಯಾಂಗ್) ಚಲನವಲನದ ಬಗ್ಗೆ ಗುಪ್ತ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ವಿನಿಮಯ ಮಾಡಿ ಕೊಳ್ಳುವುದು, ಬೆರಳುಮುದ್ರೆ ಮತ್ತು ಇತರ ರೀತಿಗಳಲ್ಲಿ ಅಪರಾಧಿಗಳನ್ನು ಗುರುತಿಸುವುದು. ೪) ಕರ್ತವ್ಯಗಳನ್ನು ಹಂಚು ವುದು ಮತ್ತು ಗಸ್ತುವ್ಯವಸ್ಥೆ ನಿರ್ವಹಿಸುವುದು, ೫) ಪೊಲೀಸ್ ಪ್ರಕ್ರಿಯೆಗಳು ಹಾಗೂ ಕಾನೂನುಗಳ ಬಗ್ಗೆ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಶಿಕ್ಷಣ ನೀಡುವುದು ಹಾಗೂ ಪ್ರತಿನಿತ್ಯದ ಇಲಾಖೆಯ ಆಗುಹೋಗುಗಳ ಬಗ್ಗೆ ಐ.ಜಿ.ಪಿಯವರಿಗೆ ಮಾಹಿತಿ ಒದಗಿಸುವುದು ಇವರ ಅಧಿಕಾರಗಳಾಗಿದ್ದವು.[೧೨೯]

'ಅಮಿಲ್‌ದಾರ' ಹಾಗೂ 'ಉಪಅಮಿಲ್‌ದಾರ'ರು ತಾಲೂಕು ಹಾಗೂ ಉಪ ತಾಲೂಕುಗಳ ಪೊಲೀಸ್ ಇಲಾಖೆ ಯ ಮುಖ್ಯಸ್ಥರು, ಪೊಲೀಸ್ ಇನ್ಸ್‌ಪೆಕ್ಟರ್ ವಲಯದ ಪೊಲೀಸ್ ಕಾರ್ಯನಿರ್ವಹಣೆಯ ಮುಖ್ಯಸ್ಥನೆಂತಲೂ ಮತ್ತು ಈ ಮೂರು ಜನರೂ ಸಹ ತಮ್ಮ ಸರಹದ್ದಿನಲ್ಲಿ ಕಾನೂನು ಸುವ್ಯವಸ್ಥೆಯ ಪರಿಪಾಲನೆ ಮತ್ತು ಅಪರಾಧಗಳ ತಡೆ ಮತ್ತು ಪತ್ತೆಯ ಜವಾಬ್ದಾರಿಯನ್ನು ಹೊಂದಿದ್ದಾರೆಂದು ಕಾಯ್ದೆಯು ತಿಳಿಸಿತು.

೫. ೧೪ : ಐಸ್‌ಲಿಂಗ್‌ಟನ್ ಆಯೋಗದ ವರದಿ (The Islington commission report)

ಕಳೆದ ಶತಮಾನದ ಪ್ರಾರಂಭದ ದಶಕದಲ್ಲಿ ಬ್ರಿಟೀಷ್ ಚಕ್ರಾಧಿಪತ್ಯದ ಮತ್ತು ಭಾರತದಲ್ಲಿನ ಬ್ರಿಟೀಷ್ ಪ್ರಾಂತ್ಯಗಳಲ್ಲಿನ ಶಾಸನಸಭೆ (ಲೆಜಿಸ್ಲೇಟಿವ್ ಕೌನ್ಸಿಲ್)ಯು ಭಾರತದಲ್ಲಿನ ಪ್ರಗತಿಗಳನ್ನು ಗುರುತಿಸಿತು. ಕಂದಾಯ, ಖರ್ಚು, ಶಿಕ್ಷಣದ ವಿಸ್ತರಣೆ, ಬೆಲೆ ಏರಿಕೆ, ಹೀಗೆ ಎಲ್ಲದರಲ್ಲೂ ಆದ ಬದಲಾವಣೆಯನ್ನು ಗುರುತಿಸಿತು. ಈ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರವು ಭಾರತದ ನಾಗರಿಕ ಸೇವಾ ವಿಭಾಗ (ಸಿವಿಲ್ ಸರ್ವಿಸ್)ದಲ್ಲಿ ಸಾಮಾನ್ಯ ಬದಲಾವಣೆ ತರಲು ಬಯಸಿತು. ಈ ನಾಗರೀಕ ಸೇವೆಗಳಲ್ಲಿ ಪೊಲೀಸ್ ಸೇವೆಯೂ ಸೇರಿತ್ತು. ಹಾಗಾಗಿ ೩೧-೦೮-೧೯೧೨ ರಂದು ಲಾರ್ಡ್ ಐಸ್‌ಲಿಂಗ್ ಟನ್‌ನ ಅಧ್ಯಕ್ಷತೆಯಲ್ಲಿ ರಾಯಲ್ ಕಮಿಷನ್ ಆನ್ ಸಿವಿಲ್ ಸರ್ವಿಸ್ ಎಂಬ ಆಯೋಗ ರಚಿಸಲಾಯಿತು. ಈ ಆಯೋಗವು ಭಾರತದ ನಾಗರೀಕ ಸೇವೆ ಹಾಗೂ ಇತರ ಸೇವೆಗಳಲ್ಲಿನ ೧) ನೇಮಕಾತಿ ವಿಧಾನ ಮತ್ತು ತರಬೇತಿ ವಿಧಾನ ಹಾಗೂ ಖಾಯಂ ಪೂರ್ವ ಸೇವಾ ಅವಧಿ ೨) ಸೇವೆಯ ನಿಂಬಂಧಗಳು, ಸಂಬಳ, ರಜೆ ಹಾಗೂ ನಿವೃತ್ತಿವೇತನ, ೩) ಯುರೋಪಿಯನ್ನರಲ್ಲದ್ದವರನ್ನು ನೇಮಕಾತಿ ಮಾಡುವ ಬಗ್ಗೆ ಇನ್ನೂ ಅಸ್ಥಿತ್ವದಲ್ಲಿರುವ ನಿಯಮಗಳು, ೪)ಪ್ರಾಂತ್ಯದಲ್ಲಿ ಹಾಗೂ ವಿಭಾಗ ಮಟ್ಟದಲ್ಲಿ ಈಗ ನಡೆಯುತ್ತಿರುವ ಕೆಲಸದ ಹಂಚಿಕೆಯ ವಿಧಾನಗಳು ಎಂಬ ವಿಷಯಗಳ ಮೇಲೆ ವಿಚಾರಣೆ ನಡೆಸಿತು.[೧೩೦]

ಈ ಆಯೋಗವು ಮೂರು ವರ್ಷಗಳ ಪೂರ್ಣ ಪ್ರಮಾಣದ ತನಿಖೆ ಮಾಡಿ ೧೯೧೫ ರಲ್ಲಿ ತನ್ನ ವರದಿ ಯನ್ನು ಸಲ್ಲಿಸಿತು. ಈ ಆಯೋಗವು ಮಾಡಿದ ಶಿಪಾರಸ್ಸುಗಳಲ್ಲಿ ಮುಖ್ಯವಾದವುಗಳೆಂದರೆ, ಇಲಾಖೆಗೆ ಸೇರುತ್ತಿದ್ದ ತರುಣರ ವಿದ್ಯಾರ್ಹತೆಯನ್ನು ಹೆಚ್ಚಿಸಬೇಕೆಂತಲೂ, ಮತ್ತು ಈ ಸೇವೆಗಳಲ್ಲಿ ಭಾರತೀಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ ತನ್ನ ಒಪ್ಪಿಗೆ ನೀಡಿತು. ಎರಡನೇಯದಾಗಿ ಆಯೋಗವು ಅಗತ್ಯ ವಸ್ತುಗಳ ಬೆಲೆ ಏರಿಕೆ ಯಾಗುವುದನ್ನು ಗಮನಿಸಿ ಸಿಬ್ಬಂದಿಗೆ ಸಂಬಳ ಹೆಚ್ಚಳ ಮಾಡುವ ಬಗ್ಗೆ ಶಿಪಾರಸ್ಸು ಮಾಡಿತು. ಮೂರನೆಯದಾಗಿ ಅತ್ಯಂತ ಮುಖ್ಯವಾದ ಕೆಲಸಗಳದ್ದು ಅದಕ್ಕೆ ಕಡಿಮೆ ಪ್ರಾಮುಖ್ಯತೆಯನ್ನು ನೀಡಿದ್ದರೆ ಮತ್ತು ಕೆಳಹಂತದ ಅಧಿಕಾರಿಗಳಿಂದ ಆ ಕೆಲಸ ಮಾಡಲು ಸಾಧ್ಯವಾಗದಿದ್ದಾಗ, ಅದಕ್ಕೆ ಉನ್ನತ ಮಟ್ಟದ ಸಮರ್ಥ ಅಧಿಕಾರಿಗಳನ್ನು ನೇಮಿಸಬೇಕು. ಇಂತಹ ಸಂದರ್ಭ ಗಳಲ್ಲಿ ಎರಡು ವರ್ಗದ ಸೇವೆಗಳಿರಬೇಕು. ಅಥವಾ ಒಂದು ಸೇವೆಯಲ್ಲಿ ಎರಡು ವರ್ಗಗಳಿರಬೇಕು. ಕೆಳವರ್ಗ ಅಥವಾ ಕೆಳಗಿನ ಸೇವೆಯು ಮೇಲಿನ ಸೇವೆ ಅಥವಾ ಮೇಲಿನ ವರ್ಗಕ್ಕೆ ಅಧೀನವಾದ ಸ್ಥಾನದಲ್ಲಿರಬೇಕು ಎಂದು ಆಯೋಗವು ಸೂಚಿಸಿತು. ಈ ನಿಯಮಗಳನ್ನು ನಾಗರಿಕ ಸೇವೆ (ಸಿವಿಲ್ ಸರ್ವಿಸ್) ಮತ್ತು ಪೊಲೀಸ್ ಒಳಗೊಂಡಿದೆ.[೧೩೧] ನಾಲ್ಕನೆ ಯದಾಗಿ, ಆ ಕಾಲದಲ್ಲಿ ಕೆಳಹಂತದ ಹುದ್ದೆಗಳಿಂದ ಮೇಲ್ದರ್ಜೆಗೇರಿದ ಅಧಿಕಾರಿ ಗಳು ಹಾಗೂ ನೇರವಾಗಿ ಮೇಲ್ದರ್ಜೆ ಗೇರಿದ ಅಧಿಕಾರಿಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸಲಾಯಿತು. ಈ ರೀತಿಯ ಎರಡೂ ಬಗೆಯ ಅಧಿಕಾರಿಗಳಿಗೆ ಸಮಾನ ಅವಕಾಶಗಳನ್ನು ನೀಡಬೇಕು ಮತ್ತು ಇಲಾಖೆಯ ಯಾವುದೇ ಹುದ್ದೆಗಳಿಗೆ ಅವರ ಯೊಗ್ಯತೆಯನ್ನು ನೋಡಿ ಅರ್ಹತೆ ಮೇರೆಗೆ ನೇಮಕ ಮಾಡಬೇಕೆಂದು ಆಯೋಗವು ಶಿಪಾರಸ್ಸು ಮಾಡಿತು.[೧೩೨] ಐದನೆಯದಾಗಿ ಆ ಕಾಲದಲ್ಲಿ ಮಿಲಿಟರಿ ಅಧಿಕಾರಿಗಳನ್ನು ಪೊಲೀಸ್ ಅಧಿಕಾರಿಗಳನ್ನಾಗಿ ನೇಮಿಸುವುದು ಸಾಮಾನ್ಯವಾಗಿತ್ತು. ಇದು ಅನಪೇಕ್ಷಿತ ಲಕ್ಷಣ ವಾಗಿತ್ತು. ಆದ್ದರಿಂದ ಆಯೋಗವು ಮಿಲಿಟರಿ ಅಧಿಕಾರಿಗಳನ್ನು ಪೊಲೀಸ್ ಇಲಾಖೆಗೆ ನೇಮಿಸುವುದನ್ನು ಮುಂದುವರಿಸ ಬಾರದೆಂದು ಶಿಪಾರಸ್ಸು ಮಾಡಿತು. ಆರನೇಯದಾಗಿ ಭಾರತೀಯ ಸಿವಿಲ್ ಸೇವೆಗೆ ಆಯ್ಕೆಯಾದವನೊಬ್ಬನು ಪೊಲೀಸ್ ಆಗಲು ಅರ್ಹನೆಂದು ಆ ಕಾಲದವರೆಗೆ ಇತ್ತು. ಆಯೋಗವು ಇದು ಆರೋಗ್ಯಕರವಾದ ಬೆಳವಣಿಗೆ ಅಲ್ಲ ಎಂದು ಭಾವಿಸಿತು. ಇದರ ಪರಿಣಾಮವಾಗಿ ಇನ್ನು ಮುಂದೆ ಐ.ಜಿ.ಪಿ ಹುದ್ದೆಗೆ ಭಾರತೀಯ ಸಿವಿಲ್ ಸೇವೆಯಿಂದ ನೇಮಕ ಮಾಡ

ಬಾರದೆಂದು, ಆದರೆ ಭಾರತೀಯ ಸಿವಿಲ್ ಸೇವೆಯಲ್ಲಿ ಇರುವ ಅಧಿಕಾರಿಗಳಲ್ಲಿ ಪೊಲೀಸ್ ಅಧಿಕಾರಿಗಳಾಗಲು ಅರ್ಹರಾದವರನ್ನು ಪೊಲೀಸ್ ಸೇವೆಗೆ ಕಳುಹಿಸಬಹುದು. ಏಳನೆಯದಾಗಿ ಸಂಬಳದ ವಿಷಯದಲ್ಲಿ ಆಯೋಗವು ಸಡಿಲವಾದ ಭಾವನೆ ಹೊಂದಿತ್ತು. ಸರಕಾರವು ತನ್ನ ಉದ್ಯೋಗಿಗಳಿಗೆ ಸಂಬಳ ನೀಡುವಾಗ ಹೆಚ್ಚು ಹೆಚ್ಚು ನೀಡಬೇಕು. ಪೊಲೀಸ್ ಇಲಾಖೆಯಲ್ಲಿ ನೇಮಕಾತಿಯನ್ನು ಆಕರ್ಷಿಸಲು ಉದ್ಯೋಗಿಗಳ ಸ್ಥಾನಮಾನ, ಗೌರವ ಕಾಪಾಡಿ ಕೊಳ್ಳುವಂತಹ ಸಂಬಳ ನೀಡಬೇಕೆಂದು ಶಿಫಾರಸ್ಸುಮಾಡಿತು. ಕೊನೆಯದಾಗಿ ಆಯೋಗವು ಎಲ್ಲಿಯವರೆಗೆ ಬ್ರಿಟನ್ ಭಾರತದಲ್ಲಿ ಉತ್ತಮ ಆಡಳಿತವನ್ನು ನಡೆಸಲು ಜವಾಬ್ದಾರಿಯುತವಾಗಿರುತ್ತದೋ, ಅಲ್ಲಿಯವರೆಗೆ ಭಾರತೀಯ ನಾಗರೀಕ ಸೇವೆಯಲ್ಲಿ ಮತ್ತು ಪೊಲೀಸ್ ಇಲಾಖೆಯ ಉನ್ನತ ಸ್ಥಾನಗಳಿಗೆ ಹೆಚ್ಚು ಪಾಲು ಬ್ರಿಟೀಷ್ ಅಧಿಕಾರಿಗಳನ್ನು ನೇಮಿಸಬೇಕೆಂದು ಅಭಿಪ್ರಾಯಪಟ್ಟಿತು.[೧೩೩]

ಐಸ್‌ಲಿಂಗ್‌ಟನ್‌ನ ವರದಿಗೆ ಆಗಸ್ಟ್ ೧೯೧೫ ರಲ್ಲಿ ಮೊದಲ ಮಹಾಯುದ್ಧದ ವೇಳೆ ಸಹಿ ಹಾಕಲಾಯಿತು. ಇಂಗ್ಲೆಂಡ್ ಮತ್ತು ಭಾರತ ಸರ್ಕಾರಗಳೆರಡೂ ಸಹ ಯುದ್ಧದಲ್ಲಿಯೂ ಗಮನಹರಿಸಿದ್ದರಿಂದ, ಅಯೋಗದ ಶಿಪಾರಸ್ಸುಗಳನ್ನು ಅನುಷ್ಠಾನಗೊಳಿಸುವುದನ್ನು ಮುಂದೂಡಲಾಯಿತು. ಅದೇ ರೀತಿ ಆಯೋಗದ ಶಿಪಾರಸ್ಸುಗಳಲ್ಲಿ ಹೇಳಿದ ವಿಷಯಗಳಲ್ಲಿ ಬದಲಾವಣೆ ತರಲಾಯಿತು. ೧೯೧೭ ರ ಆಗಸ್ಟ್ ೨೦ ರಂದು ಭಾರತ ಸರ್ಕಾರದ ಕಾರ್ಯದರ್ಶಿಯವರು ಪ್ರಭುತ್ವ ಸರ್ಕಾರದ ಸಾಮಾನ್ಯರ ಸಭೆ (House of common) ಯಲ್ಲಿ ಪ್ರಕಟಿಸಿದ್ದೇನೆಂದರೆ, ಆಡಳಿತದ ಪ್ರತಿಯೊಂದು ವಿಭಾಗಗಳಲ್ಲಿಯೂ ಭಾರತೀಯ ಸಂಘಟನೆಗಳು ಹೆಚ್ಚಾಗುತ್ತಿವೆ. ಸ್ವಯಂ ಆಡಳಿತ ಸಂಸ್ಥೆಗಳು ಕ್ರಮೇಣ ಬೆಳೆಯುತ್ತಿವೆ. ಬ್ರಿಟೀಷ್ ಚಕ್ರಾಧಿಪತ್ಯದ ಅಖಂಡ ಭಾಗವಾದ ಭಾರತ ಸರ್ಕಾರದಲ್ಲಿ ಪ್ರಗತಿದಾಯಕ ಜವಾಬ್ದಾರಿಗಳು ಬೆಳೆಯುತ್ತಿವೆ.[೧೩೪] ಎಂದರು. ಯುದ್ಧವು ಭಾರತ ಹಾಗೂ ಪ್ರಪಂಚದ ಇತರ ಭಾಗಗಳಲ್ಲಿ ನಡೆಯುತ್ತಿತ್ತು. ಇದರ ಪರಿಣಾಮವಾಗಿ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿತು. ಜೀವನ ನಿರ್ವಹಣಾ ವೆಚ್ಚದಲ್ಲಿ ಏರಿಕೆಯಾಯಿತು. ಆದ್ದರಿಂದ ಆಯೋಗವು ಸಂಬಳದ ವಿಚಾರದಲ್ಲಿ ಮಾಡಿದ ಶಿಪಾರಸ್ಸುಗಳನ್ನು ಜಾರಿಗೆ ತರಲು ಖಂಡಿತಾ ಸಾಧ್ಯವಿಲ್ಲವೆಂದು ತಿಳಿಸಿದರು. ಮೂರು ಹೊಸ ವಿಷಯಗಳು ಆ ಕಾಲಕ್ಕೆ ಅಗತ್ಯವೆನಿಸಿದವು. ಆಡಳಿತದ ಎಲ್ಲಾ ಘಟಕಗಳಲ್ಲಿ ಭಾರತೀಯರ ಸಂಘಟನೆಗಳು ಹೆಚ್ಚಾಗುತ್ತಿರುವುದರ ಬಗ್ಗೆ ವಿಶೇಷ ಗಮನನೀಡಲಾಯಿತು. ಜವಾಬ್ದಾರಿ ಸರಕಾರದೊಂದಿಗೆ ಪ್ರಗತಿದಾಯಕ ಸಂಬಂಧವಿಟ್ಟುಕೊಳ್ಳಲು ಹೊಸ ವಿಷಯಗಳನ್ನು ಪ್ರಸ್ತಾಪಿಸಲಾಯಿತು. ಜೀವನ ನಿರ್ವಹಣಾ ವೆಚ್ಚವನ್ನು ಗಮನಾರ್ಹವಾಗಿ ಬದಲಿಸುವುದು ಅಗತ್ಯವಾಗಿದ್ದವು. ಆದ್ದರಿಂದ ಭಾರತ ಸರ್ಕಾರದ ಕಾರ್ಯದರ್ಶಿಯವರು ಬದಲಾದ ಮತ್ತು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಐಸ್‌ಲಿಂಗ್‌ಟನ್ ಆಯೋಗದ ವರದಿ ಯನ್ನು ಜಾರಿಗೆ ತರಲು ಸಾಹಸ ಪಡಬೇಕಾಯಿತು.[೧೩೫]

೫.೧೫: ಲೀ ಕಮಿಷನ್ ವರದಿ ೧೯೨೪

೧೯೧೭ ರ ಅಗೋಸ್ತ್ ೨೦ ರಂದು ಭಾರತ ಸರ್ಕಾರದ ಕಾರ್ಯದರ್ಶಿಯವರ ಈ ಪ್ರಕಟಣೆ ಆಧಾರದ ಮೇರೆಗೆ ಬ್ರಿಟೀಷ್ ಪಾರ್ಲಿಮೆಂಟ್ ಗೌರ್‍ನಮೆಂಟ್ ಆಫ್ ಇಂಡಿಯಾ ಆಕ್ಟ್ ೧೯೧೯ ಜಾರಿಗೆ ತಂದಿತು. ಈ ಕಾಯ್ದೆ ಪೊಲೀಸ್ ಆಡಳಿತಕ್ಕೆ ಹೊಸ ಆಯಾಮ ನೀಡಿತು. ಇದರ ಉದ್ದೇಶವೇನೆಂದರೆ, ಜವಾಬ್ದಾರಿ ಸರ್ಕಾರದೊಂದಿಗೆ ಪ್ರಗತಿದಾಯಕ ಸಂಬಂಧ ಇಟ್ಟುಕೊಳ್ಳುವುದಾಗಿತ್ತು. ಇದು ಸೇವೆಯಲ್ಲಿರುವವರ ಮನಸ್ಸಿನಲ್ಲಿ ಆತಂಕ ಹುಟ್ಟಿಸಿತು. ರಾಜಕೀಯ ವರ್ಗ ಮತ್ತು ಸೇವೆಯಲ್ಲಿರುವ ನೌಕರರ ನಡುವಿನ ಸಂಬಂಧ ಹೆಚ್ಚು ಕೆಟ್ಟಿತು. ೧೯೧೯ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ಬಂದ ವರ್ಷದಲ್ಲಿ ಸೇವೆಗಳ ಬಗ್ಗೆ ಪುನ: ಗಮನ ಹರಿಸುವ ವ್ಯವಸ್ಥೆ ಬಂತು. ಕೂಡಲೇ ಲಾರ್ಡ್ ಲೀ ಎಂಬವನ ಅಧ್ಯಕ್ಷತೆಯಲ್ಲಿ ರಾಯಲ್ ಕಮಿಷನ್ ಆನ್ ದ ಸೂಪೀರಿಯರ್ ಸಿವಿಲ್ ಸರ್ವಿಸ್ ಇನ್ ಇಂಡಿಯಾ ಎಂಬ ಆಯೋಗವನ್ನು ೧೯೨೪ ರಲ್ಲಿ ರಚಿಸಲಾಯಿತು.[೧೩೬] ಇದು ೧)ಭಾರತೀಯ ಉನ್ನತ ನಾಗರಿಕ ಸೇವೆಗಳ ಸಂಘಟನೆ, ಸಾಮಾನ್ಯ ಸ್ಥಿತಿಗತಿ , ಆರ್ಥಿಕ

ಹಾಗೂ ಇತರ ಸ್ಥಿತಿಗಳ ಬಗ್ಗೆ. ೨) ಈಗ ಹಾಲಿ ಇರುವ ಉದ್ಯೋಗ, ಹಾಗೂ ಕೆಲಸ ಕಾರ್ಯಗಳಿಂದ ಪ್ರಾಂತೀಯವಾಗಿ ರಚಿತವಾದ ಸೇವೆಗಳಿಗೆ ತಕ್ಷಣ ಅಥವಾ ನಿದಾನವಾಗಿ ನೌಕರರನ್ನು ವರ್ಗಾವಣೆ ಮಾಡುವ ಸಾಧ್ಯತೆಗಳ ಬಗ್ಗೆ. ೩) ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್‌ನಲ್ಲಿ ತಿಳಿಸಿರುವ ಪ್ರಮಾಣಗಳಿಗುಣವಾಗಿ ಭಾರತೀಯ ಸೇವೆಗಳಲ್ಲಿ ಯುರೋಪಿಯನ್ನರು ಹಾಗೂ ಭಾರತೀಯರನ್ನು ನೇಮಕ ಮಾಡುವ ಬಗ್ಗೆ ಲಾರ್ಡ್ ಲೀ ಆಯೋಗ ಚರ್ಚಿಸಿತು. ಭಾರತೀಯ ಪೊಲೀಸ್‌ಗೆ ಸಂಬಂಧಿಸಿದಂತೆ ಲೀ ಕಮಿಷನ್‌ನ ಕೆಲವು ಉಪಯುಕ್ತ ಶಿಫಾರಸ್ಸುಗಳನ್ನು ಗಮನಿಸುವುದು ಸೂಕ್ತ.

೧) ಅಖಿಲ ಭಾರತ ಸೇವೆಗೆ ನೇಮಕ ಮಾಡುವ ಮತ್ತು ಅದನ್ನು ನಿಯಂತ್ರಿಸುವ ಅಧಿಕಾರವನ್ನು ಭಾರತ ಸರ್ಕಾರದ ಕಾರ್ಯದರ್ಶಿಯವರು ಇಟ್ಟುಕೊಳ್ಳಬೇಕು. ಎಂದು ಶಿಪಾರಸ್ಸು ಮಾಡಿತು. ೨) ಆಯೋಗದ ಎರಡನೇ ಪ್ರಮುಖ ಶಿಪಾರಸ್ಸು ಎಂದರೆ, ಭಾರತೀಯ ಪೊಲೀಸ್ ಸೇವೆ (ಐ.ಪಿ.ಎಸ್)ನಲ್ಲಿ ಭಾರತೀಯರ ನೇಮಕವನ್ನು ೧೯೧೯ ರಲ್ಲಿ ನಿಗದಿಯಾದಂತೆ ೩೩% ಮಾಡಬೇಕು ಎಂದಿತ್ತು. ಭಾರತೀಯರ ನೇಮಕಾತಿಯ ಪ್ರಮಾಣವನ್ನು ವಿಶೇಷ ಸನ್ನಿವೇಶಗಳನ್ನು ಗಮನಿಸಿ ಭಾರತೀಯ ಪೊಲೀಸ್ ಸೇವೆಗೆ ವಿಶೇಷ ಚಿಕಿತ್ಸೆ ನೀಡುವ ಸಲುವಾಗಿ ಆಯೋಗವು ಪ್ರತೀ ೧೦೦ ಜನರ ಐಪಿಎಸ್ ನೇಮಕಾತಿಯಲ್ಲಿ ೫೦ ಜನ ನೇರವಾಗಿ ಆಯ್ಕೆಯಾದ ಯುರೋಪಿಯನ್ನರು, ೩೦ ಜನ ನೇರವಾಗಿ ಆಯ್ಕೆಯಾದ ಭಾರತೀಯರು, ಉಳಿದ ೨೦ ಜನರು ಪ್ರಾಂತೀಯ ಸೇವೆಗಳಿಂದ ಭಡ್ತಿ ಪಡೆದವರು ಇರಬೇಕೆಂದು ಶಿಫಾರಸ್ಸು ಮಾಡಿತು.[೧೩೭] ಇದೇ ಆಯೋಗವು ಉಳಿದ ಭಾರತೀಯ ಸೇವೆಗಳಲ್ಲಿ ೪೦ ಜನ ನೇರ ನೇಮಕವಾದ ಯುರೋಪಿಯನ್ನರು ೪೦ ಜನ ನೇರ ಆಯ್ಕೆಯಾದ ಭಾರತೀಯರು ಹಾಗೂ ೨೦ ಜನ ಭಡ್ತಿ ಪಡೆದವರು ಇರಬೇಕೆಂದು ಶಿಫಾರಸ್ಸುಮಾಡಿತು. ಭಾರತೀಯರನ್ನು ಭಾರತೀಯ ಪೊಲೀಸ್ ಪಡೆಯಲ್ಲಿ ಕಡಿಮೆ ಸಂಖ್ಯೆಯಲ್ಲಿ ನೇಮಕಮಾಡಲು ಕಾರಣಗಳನ್ನು ಆಯೋಗವು ತಿಳಿಸಿತ್ತು. ಅದೇನೆಂದರೆ, ಆ ಕಾಲದಲ್ಲಿ ಸಾಮಾನ್ಯವಾಗಿ ಉತ್ತಮ ಭಾರತೀಯನಲ್ಲಿ ಇದ್ದ ಸಾಮಾನ್ಯ ಪ್ರವೃತ್ತಿ ಏನೆಂದರೆ, ಅವರು ಭಾರತೀಯ ಪೊಲೀಸ್ ಸೇವೆಯನ್ನು ಆಯ್ಕೆ ಮಾಡುತ್ತಿರಲಿಲ್ಲ. ಏಕೆಂದರೆ ಅದರ ಕಾರಣ ಆಂಶಿಕವಾಗಿ, ಅಸಮರ್ಪಕವಾದ ಸಂಬಳವಾದರೆ ಇನ್ನರ್ಧ ಬೇರೆ ಭಾರತೀಯ ಸೇವೆಗಳಿಗೆ ಹೋಲಿಸಿದರೆ ಪೊಲೀಸ್ ಸೇವೆಯಲ್ಲಿ ಶ್ರಮ ಅಧಿಕವಾಗಿತ್ತು. ಆಯೋಗವು ಹೊಸ ಸಂಬಳದ ದರವನ್ನು ನಿಗದಿಮಾಡಿ ಈ ತಾರತಮ್ಯ ಸರಿದೂಗಿಸಿ ಜನರನ್ನು ಭಾರತೀಯ ಪೊಲೀಸ್ ಸೇವೆಗೆ ಆಕರ್ಷಕರಾಗುವಂತೆ ಮಾಡಲು ಪ್ರಯತ್ನಿಸಿತು. ಅಂತಿಮವಾಗಿ ಲೀ ಕಮಿಷನರ್ ಶಿಪಾರಸ್ಸಿನಂತೆ ಭಾರತದಲ್ಲಿ ಲೋಕಸೇವಾ ಆಯೋಗ ರಚನೆಯಾಯಿತು.

೫.೧೬: ಭಾರತೀಯ ಸ್ವಾತಂತ್ರ್ಯ ಕಾಯ್ದೆ. ೧೯೪೭

ಈ ಕಾಯ್ದೆಯು ಭಾರತದ ಪೊಲೀಸ್ ಸೇವೆಯಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ಈ ಕಾಯ್ದೆಯ ಪ್ರಕಾರ ಭಾರತದ ಮತ್ತು ಪಾಕಿಸ್ಥಾನಗಳಾಗಿ ದೇಶ ವಿಭಜನೆಯಾಗಿ ಎರಡು ಸರಕಾರಗಳಾದವು. ಭಾರತ ಸರಕಾರದಲ್ಲಿದ್ದ ಕಾರ್ಯದರ್ಶಿ ಹುದ್ದೆಯನ್ನು ರದ್ದುಮಾಡಲಾಯಿತು. ಕಾರ್ಯದರ್ಶಿಯವರ ಅಧಿಕಾರವನ್ನು ಹಾಗೂ ಅವರ ನೇಮಕ ಮತ್ತು ನಿಯಂತ್ರಣದ ಅಧಿಕಾರವನ್ನು ಭಾರತ ಸರಕಾರಕ್ಕೆ ಹಸ್ತಾಂತರಿಸಲಾಯಿತು. ಲಂಡನ್‌ನಿಂದ ಭಾರತೀಯ ಸೇವೆಗೆ ನೇಮಕವಾಗುತ್ತಿದ್ದ ಪದ್ಧತಿ ನಿಂತಿತು. ಈಗಾಗಲೇ ಭಾರತೀಯ ಪೊಲೀಸ್ ಸೇವೆಯಲ್ಲಿ ಇದ್ದ ಯುರೋಪಿಯನ್ ಅಧಿಕಾರಿಗಳಿಗೆ ಸೂಕ್ತ ನಿವೃತ್ತಿವೇತನ ನೀಡಿ ರಾಜಿನಾಮೆ ನೀಡುವಂತೆ ಮಾಡಲಾಯಿತು. ಕೆಲವೇ ದಿನಗಳಲ್ಲಿ ನೂರಾರು ಯುರೋಪಿಯನ್ನರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ದೇಶ ಬಿಟ್ಟು ಹೋದರು. ಇದರಿಂದಾಗಿ ಅಖಿಲ ಭಾರತೀಯ ಸೇವೆಗಳು ಖಾಲಿಯಾಗುತ್ತಾ ಬಂದವು. ಈ ಹುದ್ದೆಗಳನ್ನು ಮೂರು ರೀತಿಯಲ್ಲಿ ಭರ್ತಿ ಮಾಡಲಾಯಿತು. ೧) ಪ್ರಾಂತ್ಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳಿಗೆ ಅಖಿಲ ಭಾರತೀಯ ಸೇವೆ ಹಾಗೂ ಕೇಂದ್ರದ ಸೇವೆಗಳಿಗೆ ಪದೋನ್ನತಿ ನೀಡಲಾಯಿತು. ೨)

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ನಡೆಸಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಯಿತು. ೩) ಭಾರತೀಯ ಆಡಳಿತ ಸೇವೆಗೆ ವಿಶೇಷ ತುರ್ತು ನೇಮಕಾತಿ ಎಂದು, ಹಿರಿಯ ಅನುಭವಿ ನೈಪುಣ್ಯತೆ ಹೊಂದಿದವರನ್ನು ನೇಮಕ ಮಾಡಲಾಯಿತು. ಭಾರತಕ್ಕೆ ಅಧಿಕಾರಕ್ಕೆ ಹಸ್ತಾಂತರ ಮಾಡಿದ ನಂತರ ಇಂಡಿಯಾ ಸಿವಿಲ್ ಸರ್ವಿಸ್‌ನ್ನು, ಇಂಡಿಯನ್ ಅಡ್‌ಮಿನಿಸ್ಟ್ರೇಟಿವ್ ಸರ್ವಿಸ್ ಎಂತಲೂ, ಇಂಡಿಯನ್ ಪೊಲೀಸನ್ನು, ಇಂಡಿಯನ್ ಪೊಲೀಸ್ ಸರ್ವಿಸ್ ಎಂತಲೂ ಪುನರ್ ನಾಮಕರಣ ಮಾಡಲಾಯಿತು.[೯೩] ನಂತರ ಇಂಡಿಯನ್ ಪೊಲೀಸ್ ಸರ್ವಿಸ್‌ನಲ್ಲಿ ಪ್ರತಿಯೊಬ್ಬ ನಾಗರೀಕನಿಗೆ ಪರೀಕ್ಷೆಗೆ ವಿಶೇಷ ನೇಮಕಾತಿ ಸಮಿತಿ ರಚಿಸಿ, ಅಭ್ಯರ್ಥಿಗಳನ್ನು ಪರೀಕ್ಷಿಸಲಾಗುತ್ತಿತ್ತು. ೧೯೪೭ ರ ವರೆಗೆ ಐಜಿಪಿ ಮತ್ತು ಡಿಐಜಿ ಹುದ್ದೆಗಳಲ್ಲಿ ಬಹುತೇಕ ಯುರೋಪಿಯನ್ನರೇ ಇದ್ದು ಆ ಹುದ್ದೆಯ ಆಡಳಿತಾತ್ಮಕ ವಿಷಯ ಗಳು ಭಾರತೀಯರಿಗೆ ತಿಳಿಯದಂತೆ ನೋಡಿಕೊಂಡಿದ್ದರು. ಇದರಿಂದಾಗಿ ಹೊಸಬರು ಐಪಿಎಸ್ ಹುದ್ದೆಗಳಿಗೆ ಬಂದಿದ್ದ ರಿಂದ ಪ್ರಾರಂಭದಲ್ಲಿ ಆಡಳಿತದ ವಿಚಾರದಲ್ಲಿ ಗೊಂದಲಗಳು ಇದ್ದವು.

೫: ೧೭– ಬ್ರಿಟನ್ ಮತ್ತು ಭಾರತದ ಪೋಲೀಸ್ ವ್ಯವಸ್ಥೆಯ ವೈರುಧ್ಯಗಳು

ಭಾರತ ದೇಶದಲ್ಲಿನ ಪೊಲೀಸ್ ವ್ಯವಸ್ಥೆಯು ಬ್ರಿಟೀಷರಿಂದ ಬಂದ ಕೊಡುಗೆಯಾಗಿದೆ ಎಂಬುದು ಹಲವರ ಅಭಿಪ್ರಾಯವಾಗಿದೆ. ಬೇ.ಕಾ ಮೂರ್ತಿಶ್ವರಯ್ಯರವರು ಈ ವಾದವನ್ನು ಮಂಡಿಸಿದ್ದಾರೆ. ಆದರೆ ಈ ಅಧ್ಯಯನದ ಪ್ರಮುಖ ಉದ್ದೇಶಗಳಲ್ಲಿ ಭಾರತದಲ್ಲಿನ ಪೊಲೀಸ್ ವ್ಯವಸ್ಥೆಯು ಬ್ರಿಟೀಷರ ಕೊಡುಗೆ ಅಲ್ಲ ಎಂಬುದನ್ನು ಸಾಬೀತು ಪಡಿಸುವು ದಾಗಿದೆ. ಹಾಗಿರುವಾಗ ಬ್ರಿಟನ್‌ನಲ್ಲಿರುವ ಪೊಲೀಸ್ ವ್ಯವಸ್ಥೆಗೂ ಮತ್ತು ನಮ್ಮ ದೇಶದಲ್ಲಿರುವ ಪೊಲೀಸ್ ವ್ಯವಸ್ಥೆಗೂ ಒಂದಕ್ಕೊಂದು ಹೋಲಿಕೆ ಮಾಡಿ ಇವೆರಡು ಒಂದೇ ರೀತಿಯಾಗಿದೆಯೇ ? ಅಥವಾ ಭಿನ್ನವಾಗಿದೆಯೇ ? ಎಂದು ತಿಳಿ ಯುವುದು ಉದ್ದೇಶಗಳಲ್ಲಿ ಒಂದಾಗಿದೆ.

ಬ್ರಿಟೀಷರು ನಮ್ಮ ದೇಶಕ್ಕೆಂದೇ ೧೮೬೧ ರಲ್ಲಿ ರೂಪಿಸಿದ ಭಾರತೀಯ ಪೊಲೀಸ್ ಕಾಯ್ದೆ ಇಂಗ್ಲೆಂಡ್‌ನಲ್ಲಿ ರೂಪಿತವಾದ ಪೊಲೀಸ್ ನಿಯಮಗಳಂತ ಸಾಕಷ್ಟು ಬಿನ್ನವಾಗಿದೆ. ಬ್ರಿಟೀಷ್ ಪೊಲೀಸ್ ವ್ಯವಸ್ಥೆಯಂತಹ ಪೊಲೀಸ್ ಪಡೆಯು ಹಿಂದೆ ಇರಲಿಲ್ಲ. ರಾಜ್ಯಗಳಲ್ಲಿ ಇದು ಬೇರೆ ಬೇರೆ ಸ್ವರೂಪಗಳಲ್ಲಿ ಇತ್ತು. ಪ್ರಾಚೀನ ಭಾರತದಲ್ಲಿ ಪೊಲೀಸ್ ಇಲಾಖೆಯ ಬೆಳವಣಿಗೆಯು ಆಡಳಿತದ ಒಂದು ಪ್ರಮುಖ ಭಾಗವಾಗಿತ್ತು. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು, ಅಪರಾಧಗಳ ತಡೆ ಮತ್ತು ಪತ್ತೆ, ದುರ್ಜನರಿಂದ ಸಜ್ಜನರನ್ನು ರಕ್ಷಿಸುವುದು, ರಾಜ್ಯದ ಪ್ರಾಥಮಿಕ ಕರ್ತವ್ಯವಾಗಿತ್ತು. ಕಾನೂನ ನ್ನು ಜಾರಿಗೆ ತರುವ ಈ ಪಡೆಯು ಸ್ಥಳೀಯ ಸಿದ್ಧಾಂತಗಳ ಮತ್ತು ಗ್ರಾಮದ ಸ್ಥಳೀಯ ನಿವಾಸಿಗಳ ಪರಸ್ಪರ ಸಹಕಾರವನ್ನು ಅವಲಂಬಿಸಿತ್ತು. ಹಳ್ಳಿಯು ರಾಜ್ಯದ ಆಡಳಿತದ ಪ್ರಾಥಮಿಕ ಹಾಗೂ ಕೊನೆಯ ಘಟಕವಾಗಿದ್ದು, ಇಲ್ಲಿನ ಶಾಂತಿಪಾಲನೆ ಮತ್ತು ರಕ್ಷಣೆಯು ಅಲ್ಲಿನ ಪ್ರತಿಯೊಂದು ಕುಟುಂಬದ ಜವಾಬ್ದಾರಿಯಾಗಿತ್ತು.[೯೪]

ಇಂಗ್ಲೆಂಡ್‌ನಲ್ಲಿ ಎರಡು ರೀತಿಯ ಪೊಲೀಸ್ ವ್ಯವಸ್ಥೆ ಇದೆ. ಮೊದಲನೇಯದು ಮೆಟ್ರೋ ಪಾಲಿಟನ್ ವ್ಯವಸ್ಥೆ. ಇದು ಲಂಡನ್ ನಗರದ ಪೊಲೀಸ್‌ಗೆ ಅನ್ವಯ. ಬೆಂಗಳೂರಿನಲ್ಲಿ ಹೇಗೆ ಪೊಲೀಸ್ ಕಮಿಷನರ್ ವ್ಯವಸ್ಥೆ ಇದೆಯೋ ಅದೇ ರೀತಿಯ ವ್ಯವಸ್ಥೆಯಿದು. ಎರಡನೇಯದು ಕೌಂಟಿ ಪೊಲೀಸ್. ನಮ್ಮಲ್ಲಿ ಜಿಲ್ಲಾ ಪೊಲೀಸ್ ವ್ಯವಸ್ಥೆಯಂತಹದು. ಆದರೆ ಎರಡೂ ವ್ಯವಸ್ಥೆಗಳಲ್ಲಿ ಪೊಲೀಸ್ ಆಡಳಿತದಲ್ಲಿ ಸಾರ್ವಜನಿಕರಿಗೆ ನೇರ ಸ್ಥಾನ ಕಲ್ಪಿಸಿ ಕೊಡಲಾಗಿದೆ. ಪೊಲೀಸ್ ಆಡಳಿತ ವು ಸರಕಾರದ ಅಧೀನದಲ್ಲಿಯೇ ಬಂದರೂ, ತನ್ನ ಪ್ರಾಂತ್ಯದ ಪೊಲೀಸರಿಗೆ ಸಂಬಂಧಿಸಿದಂತೆ ಹಲವಾರು ತೀರ್ಮಾನ ಗಳನ್ನು ಸ್ಥಳೀಯರನ್ನು ಒಳಗೊಂಡಿರುವ ಸಮಿತಿಯೇ ತೆಗೆದುಕೊಳ್ಳುತ್ತದೆ. ಪೊಲೀಸ್ ಆಡಳಿತಕ್ಕೆ ಸಂಬಂಧಿಸಿದಂತೆ ಪ್ರತಿ ಪ್ರಾಂತ್ಯದಲ್ಲಿಯೂ ಪೊಲೀಸ್ ಅಥಾರಿಟಿ ಎಂದು ಕರೆಯಲಾಗುವ ಸಮಿತಿ ರಚಿಸಲಾಗುತ್ತದೆ. ಈ ಸಮಿತಿಯು ತನ್ನ ಪ್ರಾಂತ್ಯ

ದ ಪೊಲೀಸ್ ವ್ಯವಸ್ಥೆಗೆ ಬೇಕಾಗುವ ಹಣವನ್ನು ಸಂಗ್ರಹಿಸುತ್ತದೆ. ಹಾಗೂ ಆ ಹಣವನ್ನು ಹೇಗೆ ವ್ಯಯಿಸಬೇಕೆಂದು ಪೊಲೀಸರಿಗೆ ಸಲಹೆ ಸೂಚನೆನೀಡುತ್ತದೆ. ಹಣಕಾಸಿನ ನಿರ್ವಹಣೆಗಾಗಿಯೇ ಪೊಲೀಸ್ ಅಥಾರಿಟಿಯು ಆಡಿಟ್ ಕಮಿಟಿ ಎಂಬ ಉಪಸಮಿತಿ ರಚಿಸಿರುತ್ತದೆ. ಈ ಉಪಸಮಿತಿಯು ಪೊಲೀಸರು ತಮ್ಮ ಖರ್ಚು ಸೂಕ್ತ ರೀತಿಯಲ್ಲಿ ನಿರ್ವಹಿಸುತ್ತಿದ್ದಾರೆಯೇ ಇಲ್ಲವೇ ಎನ್ನುವುದರ ಉಸ್ತುವಾರಿ ವಹಿಸುತ್ತದೆ.[೧೫೦]

ಭಾರತ ಹಾಗೂ ಬ್ರಿಟನ್‌ನಲ್ಲಿರುವ ಪೊಲೀಸ್ ವ್ಯವಸ್ಥೆಗೆ ಸಾಕಷ್ಟು ವ್ಯತ್ಯಾಸಗಳಿವೆ. ಮೈಸೂರಿನ ಅಷ್ಟೇ ಏಕೆ ಭಾರತದ ಪೊಲೀಸ್ ಆಡಳಿತ ವ್ಯವಸ್ಥೆಯಲ್ಲಿ ಬ್ರಿಟನ್‌ನಲ್ಲಿರುವಂತೆ, ಸಾರ್ವಜನಿಕರಿಗೆ ನೇರ ಸ್ಥಾನ ಇಲ್ಲ. ನಮ್ಮಲ್ಲಿ ಪೊಲೀಸ್ ಆಡಳಿತಕ್ಕೆ ಸಂಬಂಧಿಸಿದಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸ್ಥಳೀಯರಿಗೆ ಅವಕಾಶ ಇರುವುದಿಲ್ಲ. ಪೊಲೀಸ್ ಇಲಾಖೆಗೆ ಬೇಕಾದ ಹಣ ಸಂಗ್ರಹಿಸಲು ಇಲ್ಲಿ ಯಾವುದೇ ಪೊಲೀಸ್ ಅಥಾರಿಟಿಗಳು ಇಲ್ಲ. ಇಲಾಖೆಗೆ ಬೇಕಾದ ಹಣವನ್ನು ಸರಕಾರವೇ ಒದಗಿಸುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳ ಪೊಲೀಸ್ ಇಲಾಖೆಯ ಖರ್ಚನ್ನು ಸರಕಾರವೇ ನೇರವಾಗಿ ನೋಡಿಕೊಳ್ಳುತ್ತಿದ್ದರೆ ಇನ್ನು ಕೆಲವೆಡೆ ಸ್ಥಳೀಯ ಮುನ್ಸಿಪಾಲಿಟಿಯವರು ನೋಡಿಕೊಳ್ಳುತ್ತಿದ್ದರು.

ಬ್ರಿಟನ್‌ನಲ್ಲಿ ಪ್ರತೀ ವರ್ಷದ ಆದಿ ಭಾಗದಲ್ಲಿ ಪೊಲೀಸ್ ಅಥಾರಿಟಿಯು ತನ್ನ ಪ್ರಾಂತ್ಯದ ಪೊಲೀಸರಿಗಾಗಿ ವಾರ್ಷಿಕ ಯೋಜನೆಯೊಂದನ್ನು ರೂಪಿಸುತ್ತದೆ. ಈ ಯೋಜನೆಯು ಆ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥನ ಸಲಹೆ ಸೂಚನೆಪಡೆದೇ ರೂಪಿಸಲಾಗುತ್ತದೆ. ತನ್ನ ಅಧೀನದಲ್ಲಿರುವ ಪೊಲೀಸ್ ಪಡೆಯು ಯಾವ ಗುರಿಗಳನ್ನು ಇಟ್ಟುಕೊಳ್ಳುತ್ತದೆ ಅಥವಾ ಆ ಗುರಿಗಳನ್ನು ಮುಟ್ಟಲು ಪೊಲೀಸ್ ಪಡೆ ಹೇಗೆ ಕಾರ್ಯ ನಿರ್ವಹಿಸಲು ಉದ್ದೇಶಿಸುತ್ತದೆ, ಎನ್ನುವ ವಿವರಗಳನ್ನು ಪೊಲೀಸ್ ಮುಖ್ಯಸ್ಥರು ತನ್ನ ಅಥಾರಿಟಿಗೆ ನೀಡಬೇಕು. ಯೋಜನೆಯನ್ನು ಅಥಾರಿಟಿಯು ರೂಪಿಸಿದ ನಂತರ ಆ ಯೋಜನೆಯ ಉದ್ದೇಶವೇನು, ಗುರಿಗಳೇನು ಹಾಗೂ ಗುರಿಗಳನ್ನು ಮುಟ್ಟಲು ತೆಗೆದು ಕೊಳ್ಳುವಂತಹ ಕಾರ್ಯಕ್ರಮಗಳೇನು ಎಂದು ಸಾರ್ವಜನಿಕರಿಗೆ ತಿಳಿಸಬೇಕು. ಆ ವರ್ಷ ಮುಗಿಯುವ ವೇಳೆಗೆ ಪೊಲೀಸ್ ಪಡೆಯು ಉದ್ದೇಶಿತ ಕ್ರಿಯಾ ಯೋಜನೆಯನ್ನು ಯಾವ ರೀತಿ ಅನುಸರಿಸಿದೆ, ಯಾವ ಯಾವ ಗುರಿಗಳನ್ನು ಮುಟ್ಟಲಾಯಿತು, ಯಾವ ಗುರಿ ಸಾಧನೆಯಾಗಿಲ್ಲ, ಅದಕ್ಕೆ ಕಾರಣ ಏನು ಎಂದು ಪರಿಶೀಲಿಸುವ ಅಧಿಕಾರ ಹೊಂದಿದೆ. ನಮ್ಮಲ್ಲಿ ಈ ರೀತಿಯಾಗಿ ಪೊಲೀಸ್ ವಾರ್ಷಿಕ ಯೋಜನೆಗಳ ಬಗ್ಗೆ ಜನರಿಗೆ ತಿಳಿಸುವ ಪರಿಪಾಠವಿಲ್ಲ. ಮತ್ತು ಯೋಜನೆಗಳನ್ನು ಸಾಧಿಸಿದ ಬಗ್ಗೆ ಪರಿಶೀಲಿಸುವ ಅಧಿಕಾರವೂ ಸಹ ಜನರಿಗೆ ಇಲ್ಲ.

ಬ್ರಿಟನ್‌ನ ಪ್ರಾಂತೀಯ ಪೊಲೀಸ್ ವ್ಯವಸ್ಥೆಯಲ್ಲಿ ಇಲಾಖೆಯ ಮುಖ್ಯಸ್ಥನ ಪದನಾಮ ಚೀಫ್ ಕಾನ್‌ಸ್ಟೇಬಲ್, ಈತನ ಕೆಳಗಡೆ ಎರಡರಿಂದ ನಾಲ್ಕರವರೆಗೆ ಅಸಿಸ್ಟೆಂಟ್ ಚೀಫ್ ಕಾನ್‌ಸ್ಟೇಬಲ್‌ಗಳಿರುತ್ತಾರೆ. ಚೀಫ್ ಕಾನ್‌ಸ್ಟೇಬಲ್ ಹಾಗೂ ಅಸಿಸ್ಟೆಂಟ್ ಚೀಫ್ ಕಾನ್‌ಸ್ಟೇಬಲ್‌ಗಳನ್ನು ನೇಮಿಸುವ ಅಧಿಕಾರ ಪೊಲೀಸ್ ಅಥಾರಿಟಿ ಹೊಂದಿದೆ. ಸಾಮಾನ್ಯವಾಗಿ ಈ ಎರಡೂ ಹುದ್ದೆಗಳಿಗೆ ನೇಮಿಸಲಾದ ಪೊಲೀಸ್ ಅಥಾರಿಟಿ ಬೇರೆ ಪ್ರಾಂತ್ಯದ ಅಧಿಕಾರಿಗಳನ್ನು ನೇಮಿಸುತ್ತದೆ. ಉದಾಹರಣೆಗೆ ವೆಸ್ಟ್ ಯಾರ್ಕ್‌ಶೈರ್ ಪ್ರಾಂತ್ಯದ ಚೀಫ್ ಪೊಲೀಸ್ ಕಾನ್‌ಸ್ಟೇಬಲ್ ನೇಮಿಸಬೇಕಾದರೆ ಹಂಬರ್ ಸೈಡ್ ಪೊಲೀಸ್ ಪಡೆಗೆ ಸೇರಿದವನು ಇಲ್ಲವೇ ಲಂಡನ್ ಪೊಲೀಸ್‌ಗೆ ಸೇರಿದ ವ್ಯಕ್ತಿಯೊಬ್ಬನನ್ನೋ ನೇಮಿಸಲಾಗುವುದು. ಅದೇ ಪ್ರಾಂತ್ಯದ ಪೊಲೀಸ್ ದಳಕ್ಕೆ ಸೇರಿದ ವ್ಯಕ್ತಿ ತನ್ನ ಪ್ರಾಂತ್ಯದ ಪೊಲೀಸ್ ಪಡೆಯ ಮುಖ್ಯಸ್ಥನಾಗಲಾರ. ಈ ಕಾರಣಕ್ಕೆ ಒಂದು ಪ್ರಾಂತ್ಯದ ಪೊಲೀಸ್ ಪಡೆಯ ಹಿರಿಯ ಅಧಿಕಾರಿಗಳು ವಸ್ತು ನಿಷ್ಠತೆ (Ojectivity) ಹೊಂದಿರುತ್ತಾರೆ ಎಂದು ಅಲ್ಲಿಯ ಜನ ಭಾವಿಸುತ್ತಾರೆ. ಆದರೆ ನಮ್ಮಲ್ಲಿ ಪೊಲೀಸ್ ಅಧಿಕಾರಿಗಳನ್ನು ಅಂದರೆ ಇನ್ಸ್‌ಪೆಕ್ಟರ್ ದರ್ಜೆಗಿಂತ ಮೇಲ್ಪಟ್ಟ

ಅಧಿಕಾರಿಗಳನ್ನು ನೇಮಿಸುವ ಜವಾಬ್ದಾರಿ ಸರಕಾರಕ್ಕೆ ಸೇರಿದ್ದು. ಕಾನ್‌ಸ್ಟೇಬಲ್, ಹೆಡ್‌ಕಾನ್‌ಸ್ಟೇಬಲ್ ಮತ್ತು ಎ.ಎಸ್.ಐ ಗಳನ್ನು ಸೂಪರಿಂಟೆಂಡೆಂಟ್‌ರವರು ವರ್ಗಾವಣೆ ಮಾಡಬಹುದು. ಸಬ್‌ಇನ್ಸ್‌ಪೆಕ್ಟರ್‌ಗಳನ್ನು ವಲಯದ ಐ.ಜಿ.ಪಿ ಯವರು ವರ್ಗಾವಣೆ ಮಾಡುತ್ತಾರೆ. ಸಬ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಮೇಲ್ಪಟ್ಟ ಅಧಿಕಾರಿಗಳನ್ನು ರಾಜ್ಯದ ಯಾವುದೇ ಪ್ರದೇಶಗಳಿಗೆ ನೇಮಿಸಬಹುದು. ಆದರೆ ಐ.ಪಿ.ಎಸ್ ಅಧಿಕಾರಿಯವರನ್ನು ನೇಮಿಸುವಾಗಲೇ ಅವರನ್ನು ಯಾವ ರಾಜ್ಯಕ್ಕೆ ನೇಮಿಸಲಾಗಿದೆ ಎಂಬುದನ್ನು ನಿಗಧಿಪಡಿಸಲಾಗಿರುತ್ತದೆ.

ಇನ್ನೊಂದು ಕುತೂಹಲದ ವಿಷಯವೆಂದರೆ ಇಂಗ್ಲೆಂಡ್‌ನ ಪೊಲೀಸರಲ್ಲಿ ಪ್ರತಿಯೊಬ್ಬನು ಕಾನ್‌ಸ್ಟೇಬಲ್ ಎಂದೇ ನೌಕರಿಗೆ ಸೇರಬೇಕು. ಅದರ ಮೇಲಿನ ಹುದ್ದೆ ಸಾರ್ಜೆಂಟ್ (ನಮ್ಮಲ್ಲಿ ಹೆಡ್‌ಕಾನ್‌ಸ್ಟೇಬಲ್ ತರಹ) ಆ ನಂತರ ಇನ್ಸ್‌ಪೆಕ್ಟರ್ (ನಮ್ಮಲ್ಲಿರುವ ಎಸ್‌ಐ) ಚೀಫ್ ಇನ್ಸ್‌ಪೆಕ್ಟರ್ (ನಮ್ಮಲ್ಲಿರುವ ಇನ್ಸ್‌ಪೆಕ್ಟರ್) ಸೂಪರಿಂಟೆಂಡೆಂಟ್ (ನಮ್ಮಲ್ಲಿರುವ ಡಿವೈಎಸ್‌ಪಿ) ಹಾಗೂ ಚೀಫ್ ಸೂಪರಿಂಟೆಂಡೆಂಟ್ (ನಮ್ಮಲ್ಲಿರುವ ಎಸ್‌ಪಿ) ಚೀಫ್ ಸೂಪರಿಂಟೆಂಡೆಂಟ್ ಹುದ್ದೆಯವರೆಗೆ ತಮ್ಮ ಪ್ರಾಂತ್ಯದ ಪೊಲೀಸ್ ಪಡೆಯಲ್ಲಿಯೇ ಭಡ್ತಿ ಪಡೆಯುತ್ತಾರೆ. ಅದರ ನಂತರ ಅಸಿಸ್ಟೆಂಟ್ ಚೀಫ್ ಕಾನ್‌ಸ್ಟೇಬಲ್ ಹುದ್ದೆಗಾಗಿ ಬೇರೆ ಪ್ರಾಂತ್ಯದ ಪೊಲೀಸ್ ಅಥಾರಿಟಿಗೆ ಅರ್ಜಿ ಗುಜರಾಯಿಸಿ ಅಲ್ಲಿ ಆಯ್ಕೆಯಾದರೆ, ಮುಂದಿನ ಪದೋನ್ನತಿ ಪಡೆಯುತ್ತಾರೆ. ನಮ್ಮ ದೇಶದಂತೆಯೇ ನೇರ ನೇಮಕಾತಿ ಎರಡು ಮೂರು ಹಂತಗಳಲ್ಲಿ ನಡೆಯುವುದಿಲ್ಲ. ವೃತ್ತಿಗೆ ಸಂಬಂಧಪಟ್ಟ ಇಲಾಖಾ ಪರೀಕ್ಷೆಗಳನ್ನು ಬೇಗ ಬೇಗ ಉತ್ತೀರ್ಣರಾದರೆ ಬೇಗ ಬೇಗನೆ ಪದೋನ್ನತಿ ಪಡೆಯಬಹುದಾಗಿದೆ. ಪ್ರತಿಯೊಂದು ಹುದ್ದೆಗೆ ನೀಡಬಹುದಾದಂತಹ ವೇತನ ಶ್ರೇಣಿಯ ನಿರ್ಧಾರವನ್ನು ಇಂಗ್ಲೆಂಡ್ ದೇಶದ ಗೃಹ ಸಚಿವಾಲಯವೇ ಮಾಡುತ್ತದೆ. ಇಲಾಖಾ ನೀತಿ ನಿಯಮಗಳು ಹಾಗೂ ಕಾನೂನುಗಳು ಕೇಂದ್ರ ಮಟ್ಟದಲ್ಲಿಯೇ ರೂಪಿತವಾಗುತ್ತದೆ. ಪ್ರತೀ ಪ್ರಾಂತ್ಯದ ಪೊಲೀಸ್ ದಳದ ನಿರ್ವಹಣೆಗಾಗಿ ಇಂಗ್ಲೀಷ್ ಸರಕಾರ ಹಣ ಬಿಡುಗಡೆ ಮಾಡುತ್ತದೆ. ಸಾಮಾನ್ಯವಾಗಿ ಇದು ಪ್ರತೀ ಪ್ರಾಂತೀಯ ಪೊಲೀಸ್ ಬಜೆಟ್‌ನ ಶೇಖಡಾ ೫೧ ರಷ್ಟು ಇರುತ್ತದೆ. ಉಳಿದ ೪೯ ಭಾಗವನ್ನು ಪೊಲೀಸ್ ಅಥಾರಿಟಿ ಸ್ಥಳೀಯ ವಾಗಿ ಸಂಗ್ರಹಿಸಬೇಕಾಗುತ್ತದೆ. ಆದರೆ ಹಣದ ಖರ್ಚು ಹೇಗೆ ಮಾಡಬೇಕೆನ್ನುವ ವಿವೇಚನೆ ಪೊಲೀಸ್ ಅಥಾರಿಟಿಗೆ ಬಿಟ್ಟದ್ದು.

ಆದರೆ ನಮ್ಮಲ್ಲಿ ಯಾವುದೇ ಪರೀಕ್ಷೆಗಳನ್ನು ಬರೆದರೆ ಪದೋನ್ನತಿಯನ್ನು ನೀಡುವ ವ್ಯವಸ್ಥೆಯು ಇರುವುದಿಲ್ಲ. ನಮ್ಮಲ್ಲಿ ಕೇವಲ ಇಲಾಖೆಯಲ್ಲಿನ ಸೇವೆಯ ಹಿರಿತನ ಮತ್ತು ಮೀಸಲಾತಿಯ ಆಧಾರದ ಮೇರೆಗೆ ಪದೋನ್ನತಿಯನ್ನು ನೀಡಲಾಗುತ್ತದೆ. ಪ್ರತೀ ಪೊಲೀಸ್ ಅಥಾರಿಟಿಯಲ್ಲಿ ೧೧ ರಿಂದ ೧೭ ಜನ ಸದಸ್ಯರಿರುತ್ತಾರೆ. ಇದರಲ್ಲಿ ಶೇಕಡಾ ೬೭ ರಷ್ಟು ಸದಸ್ಯರು ಸ್ಥಳೀಯ ಸಂಸ್ಥೆಗಳಿಂದ (ಮುನ್ಸಿಪಾಲಿಟಿ) ನಾಮಕರಣಗೊಂಡರೆ ಉಳಿದ ಶೇಕಡಾ ೩೩ ಸದಸ್ಯರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಸಮಿತಿ ನಾಮಕರಣ ಮಾಡುತ್ತದೆ. ಅಂದರೆ ಶೇಕಡಾ ೩೩ ಸದಸ್ಯರು ನ್ಯಾಯಾಧೀಶರಾಗಿರುತ್ತಾರೆ. ಪೊಲೀಸ್ ಅಥಾರಿಟಿಯು ಕೆಲವೊಂದು ಹೆಚ್ಚುವರಿ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರ ಹೊಂದಿರುತ್ತದೆ. ಹೀಗಾಗಿ ಪ್ರತಿಯೊಂದು ಪೊಲೀಸ್ ಅಥಾರಿಟಿಯಲ್ಲಿಯ ಸಾರ್ವಜನಿಕರಲ್ಲದೇ, ನ್ಯಾಯಾಧೀಶರು ಇರುವುದರಿಂದ ಪೊಲೀಸ್ ದಳದ ಮೇಲುಸ್ತುವಾರಿಯನ್ನು ಸೂಕ್ತವಾಗಿ ಮಾಡಲು ಅನುಕೂಲವಾಗುತ್ತದೆ. ಎರಡು ತಿಂಗಳಿಗೊಮ್ಮೆ ಪೊಲೀಸ್ ಅಥಾರಿಟಿ ತನ್ನ ಸಭೆ ನಡೆಸಬೇಕು. ಸಾಮಾನ್ಯವಾಗಿ ಆ ಪ್ರಾಂತ್ಯದ ಮುಖ್ಯ ಪಟ್ಟಣವಲ್ಲದೇ, ಪ್ರಾಂತ್ಯದ ಇತರ ನಗರಗಳಲ್ಲೂ ಸಭೆ ನಡೆಸಬೇಕು. ಸಭೆಗೆ ಸಾರ್ವಜನಿಕರ ಪ್ರವೇಶ ಮುಕ್ತವಾಗಿರುತ್ತದೆ. ಸಭೆಯ ನಡವಳಿಗಳನ್ನು ಸಾರ್ವಜನಿಕರು ಮುಕ್ತವಾಗಿ ಪಡೆಯುವ ಅವಕಾಶ ನೀಡಲಾಗುತ್ತದೆ.

ಪೊಲೀಸ್ ಅಥಾರಿಟಿಯ ಮುಖ್ಯ ಕರ್ತವ್ಯ ಸಾರ್ವಜನಿಕರ ಸಲಹೆ ಸೂಚನೆ ಪಡೆಯುವುದೇ ಆಗಿದೆ. ಈ ಕಾರಣ

ಕ್ಕಾಗಿಯೇ ಪ್ರಾಂತ್ಯದ ವಿವಿಧ ಸ್ಥಳಗಳಲ್ಲಿ ಆ ಪ್ರದೇಶಕ್ಕೆ ಮೀಸಲಾದ "ಕ್ಯಾಪ್ ಗ್ರೂಪ್" ಎನ್ನುವ ಸಮಿತಿಗಳನ್ನು ನೇಮಿಸಲಾಗುತ್ತದೆ. ಕ್ಯಾಪ್ ಎಂದರೆ ಸಮುದಾಯ ಹಾಗೂ ಪೊಲೀಸ್ (ಕಮ್ಯೂನಿಟಿ ಆಂಡ್ ಪೊಲೀಸ್) ಪ್ರತೀಯೊಂದು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿಯೂ ಇರುವ ಈ ಸಮಿತಿಗಳು ತಮ್ಮ ಪೊಲೀಸ್ ಠಾಣೆ ಹೇಗೆ ಕರ್ತವ್ಯ ನಿರ್ವಹಿಸುತ್ತದೆ ಎಂದು ಪರಿಶೀಲಿಸುತ್ತದೆ. ಈ ಕಾರಣಗಳಿಂದ ಇಂಗ್ಲೆಂಡ್‌ನಲ್ಲಿ ಪೊಲೀಸರು ಜನರಿಗೆ ಹತ್ತಿರವಾಗಿದ್ದಾರೆ.

ಪೊಲೀಸ್ ವ್ಯವಸ್ಥೆಗೆ ಬ್ರಿಟೀಷರ ಕೊಡುಗೆ ಏನೆಂದರೆ, ಇಲಾಖೆಯಲ್ಲಿ ಒಂದು ವೃತ್ತಿಪರತೆಯನ್ನು ತಂದಿದ್ದು ಮತ್ತು ಎಲ್ಲರಿಗೂ ಏಕರೂಪವಾದಂತಹ ಕಾನೂನನ್ನು ತಂದಿದ್ದು. ಪ್ರಾಚೀನ ಸಂಪ್ರದಾಯಗಳಿಗೆ ಬದಲಾಗಿ ದಂಡ ಪ್ರಕ್ರಿಯಾ ಸಂಹಿತೆಗಳನ್ನು ಜಾರಿಗೆ ತಂದರು.

೫: ೧೮– ಭಾರತದ ಆಧುನಿಕ ಕಾನೂನಿನ ಬೆಳವಣಿಗೆ

ಪ್ರಾಚೀನ ಕಾಲದಲ್ಲಿ ಅಂದರೆ ನಾಗರಿಕತೆ ಬೆಳೆಯುವುದಕ್ಕಿಂತ ಮೊದಲು ಯಾವುದೇ ರೀತಿಯ ಅಪರಾಧಿಕ ಕಾನೂನು (Criminal law) ಇರಲಿಲ್ಲ. ಯಾರನ್ನು ಯಾರೂ ಬೇಕಾದರೂ ಯಾವುದೇ ವೇಳೆಯಲ್ಲಿ ದಾಳಿ ಮಾಡಬಹುದು. ವ್ಯಕ್ತಿಯ ಮೇಲೆ ಆತನ ವಸ್ತುಗಳ ಮೇ‘ ದಾಳಿ ಮಾಡಬಹುದಿತ್ತು. ಎಷ್ಟೋ ಜನ ಇಂತಹ ದಾಳಿಗೂ ಸಹ ಬಲಿಯಾಗುತ್ತಿದ್ದರು. ಮುಯ್ಯಿಗೆ ಮುಯ್ಯಿ , ಜೀವಕ್ಕೆ ಜೀವ ಎಂಬುದೇ ಅಂದಿನ ಕಾನೂನು ಆಗಿತ್ತು. ಕಾಲ ಬದ ಲಾದಂತೆ ಇಂತಹ ದಾಳಿಯಿಂದ ಹಾನಿಗೊಳಗಾದ ವ್ಯಕ್ತಿಯು ತನಗಾದ ಅನ್ಯಾಯಕ್ಕೆ ಎದುರಾಳಿಯಿಂದ ಪರಿಹಾರ ವನ್ನು ಪಡೆಯಲು ಒಪ್ಪಿಕೊಂಡ. ಮುಂದೆ ಇಂತಹ ಅಪರಾಧಕ್ಕೆ ಏನು ಶಿಕ್ಷೆ ನೀಡಬೇಕೆಂಬ ಒಂದು ಮಾಪನ ಬೆಳೆಯಿತು. ಇದು ಪುರಾತನವಾದ ಕಾನೂನುಗಳ ರಚನೆಗೆ ಕಾರಣವಾಯಿತು.[೧೪೧] ಮೊದಮೊದಲು ಇಂತಹ ಕಾನೂನು ಗಳನ್ನು ಜಾರಿಗೆ ತರುವ ವಿಧಾನಗಳು ವ್ಯಕ್ತಿ ವ್ಯಕ್ತಿಗಳಲ್ಲಿಯೇ ಇತ್ತು. ಅಂದರೆ ಆಯಾ ಸಮುದಾಯದ ಮುಖಂಡನಿಗೆ ಅಥವಾ ಪಂಚಾಯತುದಾರನಿಗೆ ಸೇರಿದ್ದಾಗಿತ್ತು. ಕಾಲಕ್ರಮೇಣ ಇಂತಹ ಕಾನೂನುಗಳನ್ನು ಸರಕಾರ/ರಾಜ್ಯವು ಜಾರಿಗೆ ತರಲು ಆರಂಭಿಸಿತು.

ಭಾರತದಲ್ಲಿ ನ್ಯಾಯಶಾಸ್ತ್ರದ ಉಗಮವಾದುದೇ ಮನುವಿನ ಕಾಲದಿಂದ. ಮನು ಅಪರಾಧಗಳನ್ನು ವರ್ಗೀಕರಿಸುತ್ತಾ ಹಲ್ಲೆ, (Assault) ಕಳ್ಳತನ, (theft) ದರೋಡೆ, (Robbery) ಸುಳ್ಳು ಸಾಕ್ಷ್ಯ, (false evidence) ನಿಂದನೆ, (slander) ಅಪರಾಧಿತ ನಂಬಿಕೆ ದ್ರೋಹ, (criminal breach of trust) ಮೋಸ, (cheating) ಕಲಬೆರಕೆ (adualtry) ವ್ಯಭಿಚಾರ, ಮತ್ತು ಅತ್ಯಾಚಾರ (rape) ಎಂದು ವಿಭಾಗಿಸಿದ್ದ. ಜನರು ರಾಜನಿಗೆ ರಾಜಭಕ್ತಿ, ನಿಷ್ಠೆಯನ್ನು ತೋರಿಸಬೇಕಿತ್ತು ಮತ್ತು ಆತನಿಗೆ ತೆರಿಗೆ ನೀಡಬೇಕಾಗಿತ್ತು. ರಾಜನೇ ನ್ಯಾಯಾಂಗ ಇಲಾಖೆಯ ಕಾರ್ಯನಿರ್ವಹಣೆ ಮಾಡುತ್ತಿದ್ದನು. ಕೆಲವೊಮ್ಮೆ ಆತನು ಬೇರೆ ಕೆಲಸಗಳ ಒತ್ತಡದಲ್ಲಿ ಇದ್ದು, ಈ ಕೆಲಸವನ್ನು ಬೇರೆ ನ್ಯಾಯಾಧೀಶರಿಗೆ ಒಪ್ಪಿಸುತ್ತಿದ್ದನು. ಅಪರಾಧಗಳು ಸಿದ್ದಪಟ್ಟ ಬಳಿಕ ಅಪರಾಧಗಳಿಗೆ ವಿಧಿಸುವ ದಂಡವು ರಾಜನ ಖಜಾನೆಗೆ ಸೇರುತ್ತಿತ್ತು. ಆದರೆ ಎದುರಾಳಿಯಿಂದ ಗಾಯ ಗೊಂಡವನಿಗೆ ಆ ಹಣ ಪರಿಹಾರವಾಗಿ ಹೋಗುತ್ತಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ನ್ಯಾಯಶಾಸ್ತ್ರ ಉಗಮವಾದದ್ದೇ ರೋಮನ್ ಕಾನೂನಿನಿಂದಾಗಿ, ಆಧುನಿಕ ಕಾಲದಲ್ಲಿ ಅಪರಾಧಗಳ ಸ್ವರೂಪಗಳು ವಿಪರೀತವಾಗಿ ಬದಲಾಗಿದೆ. ಅಪರಾಧಿಕ ಕಾನೂನುಗಳಲ್ಲಿಯೂ ಸಹ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಭಾರತದಲ್ಲಿ ಬ್ರಿಟೀಷ್ ಆಡಳಿತದ ಮೊದಲ ದಶಕದಲ್ಲಿ ಅಪರಾಧಿಕ ನ್ಯಾಯವ್ಯವಸ್ಥೆಯಲ್ಲಿ (Criminal Justice Administration) ವ್ಯಾಪಕ ಬದಲಾವಣೆ ತರಲಾಯಿತು. ಈಸ್ಟ್ ಇಂಡಿಯಾ ಕಂಪೆನಿಯ ಮಧ್ಯಪ್ರವೇಶದಿಂದಾಗಿ ದೇಶದ ಆಡಳಿತ ವ್ಯವಸ್ಥೆ ಮತ್ತು ಕಾನೂನಿನ ವ್ಯವಸ್ಥೆಗಳನ್ನು ಪರಿಷ್ಕರಿಸಲಾಯಿತು. ೧೭೭೨ ರಲ್ಲಿ ವಾರ್ನ್ ಹೇಸ್ಟಿಂಗ್‌ನು ಮೊದಲ ಬಾರಿಗೆ ಅತ್ಯಂತ ಮಹತ್ತರವಾದ ತಿದ್ದುಪಡಿ

ಗಳನ್ನು ತಂದನು. ಅವನು ಬಂಗಾಳದ ಕಾನೂನು ಮತ್ತು ಸುವ್ಯವಸ್ಥೆಯ ಪರಿಪಾಲನೆಗಾಗಿ ಪರಿಹಾರಗಳನ್ನು ಸೂಚಿಸುವಂತಹ ಒಂದು ವಿವರವಾದ ವರದಿಯನ್ನು ತಯಾರಿಸಿದನು. ಇದು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಾ ಹೋದರೂ ಸಹ ಅದರ ಮೂಲ ಸ್ವರೂಪ ಇಂದಿಗೂ ಉಳಿದುಕೊಂಡು ಬಂದಿದೆ. ಅಪರಾಧಿಕ ನ್ಯಾಯ ವ್ಯವಸ್ಥೆಯ ಆಡಳಿತದಲ್ಲಿಯೂ ಸುಧಾರಣೆಗಳನ್ನು ತರಲಾಯಿತು. ಕ್ರೂರ ನ್ಯಾಯದಾನ ಪದ್ಧತಿಯ ಬದಲಾಗಿ ಮೃದುವಾದ ಮತ್ತು ತರ್ಕಬದ್ಧವಾದ ನ್ಯಾಯಾದಾನ ಪದ್ಧತಿಯನ್ನು ಜಾರಿಗೆ ತರಲಾಯಿತು. ಈ ಸುಧಾರಣೆಗಳು ಸಾಕಷ್ಟು ಯಶಸ್ವಿಯಾಗಿರಲಿಲ್ಲ. ಇದರಿಂದ ಜನರಲ್ಲಿ ಅಧೈರ್ಯ ಮೂಡಿಸುವಂತಿತ್ತು. ಅಪರಾಧದ ಪ್ರಮಾಣ ಒಂದೇ ಸಮನೆ ಏರಿತು. ಕೊಲೆಗಳೊಂದಿಗೆ ಶೋಷಣೆ ಮತ್ತು ಹಿಂಸೆಗಳು ಸೇರಿಕೊಂಡು ಪ್ರತಿನಿತ್ಯ ಇಂತಹ ಹಿಂಸಾಚಾರಗಳು ನಡೆಯುತ್ತಿದ್ದವು. ಇದಕ್ಕೆ ಕಾರಣ ಗಳೆಂದರೆ ೧) ಬ್ರಿಟೀಷ್ ನ್ಯಾಯಾಲಯಗಳಲ್ಲಿ ಶಿಕ್ಷೆ ನೀಡಲು ಅತ್ಯಂತ ಹೆಚ್ಚು ಸಾಕ್ಷ್ಯಾಧಾರಗಳು ಬೇಕಿತ್ತು. ಇದು ಸಾಧ್ಯವಿರಲಿಲ್ಲ. ಏಕೆಂದರೆ ಸಾಕ್ಷ್ಯ ಹೇಳಿದರೆ ಆರೋಪಿಗಳು ಪ್ರತೀಕಾರವೆಸಗಬಹುದೆಂದು ಸಾಮಾನ್ಯ ಜನರು ಭಯ ಪಡುತ್ತಿದ್ದರು. ಮತ್ತು ೨) ಜೈಲಿನೊಳಗಿನ ಖೈದಿಗಳ ಜೀವನ ಹಿಂದಿಗಿಂತಲೂ ಸುಖ ನೆಮ್ಮದಿಯಿಂದ ಕೂಡಿತ್ತು.

ಪೋರ್ಚುಗಲ್ ದೇಶದ ನಾವಿಕ ವಾಸ್ಕೋಡಿಗಾಮ ಗುಡ್‌ಹೋಪ್ ಭೂಶಿರದ ಮೂಲಕ ಬಂದು ಭಾರತಕ್ಕೆ ಜಲ ಮಾರ್ಗವನ್ನು ಕಂಡು ಹಿಡಿದ ನಂತರ, ಪೋರ್ಚ್‌ಗೀಸರು ಭಾರತದೊಂದಿಗೆ ವ್ಯಾಪಾರ ವ್ಯವಹಾರವನ್ನು ಪ್ರಾರಂಭಿಸಿದರು. ಪೋರ್ಚ್‌ಗೀಸರ ನಂತರ ಡಚ್ಚರು, ಅನುಸರಿಸಿದರು. ನಂತರ ಬ್ರೀಟಿಷರು ಕೂಡ ಭಾರತಕ್ಕೆ ಬಂದರು. ಕ್ರಿಶ ೧೬೦೦ ರಲ್ಲಿ ಬ್ರಿಟನ್‌ನ ರಾಣಿ ಎಲಿಜಬೆತ್‌ಳು ಈಸ್ಟ್ ಇಂಡಿಯಾ ಕಂಪೆನಿಯನ್ನು ಭಾರತಕ್ಕೆ ಕಳುಹಿಸುವ ಸನ್ನದಿಗೆ ಸಹಿ ಹಾಕಿದಳು. ಈ ಸನ್ನದು ಈಸ್ಟ್ ಇಂಡಿಯಾ ಕಂಪೆನಿಗೆ ಏಶಿಯಾ ಖಂಡದ ಎಲ್ಲಾ ರಾಷ್ಟ್ರಗಳು, ಆಫ್ರಿಕಾ ಮತ್ತು ಅಮೇರಿಕಾಗಳು ವ್ಯಾಪಾರ ಮಾಡಲು ಅನುಮತಿ ನೀಡಿತು. ಇದು ಕಂಪೆನಿಗೆ ಕಾನೂನನ್ನು ರಚಿಸಲು ನೆರವು ನೀಡಿತು.

೧೬೦೯ ರಲ್ಲಿ ಮೊದಲನೇ ಜೇಮ್ಸ್‌ನು ಈ ಸನ್ನದನ್ನು ನವೀಕರಿಸಿದನು. ೧೬೬೧ ರಲ್ಲಿ ಎರಡನೇ ಚಾರ್ಲ್ಸ್‌ನು ಸಹ ಈ ಸನ್ನದನ್ನು ನವೀಕರಿಸಿದನು. ೧೬೬೮ ರ ಸನ್ನದಿನಲ್ಲಿ ಈಸ್ಟ್ ಇಂಡಿಯಾ ಕಂಪೆನಿಯನ್ನು ಮುಂಬಾಯಿಗೆ ಸ್ಥಳಾಂತರಿಸಲಾಯಿತು. ಇಂಗ್ಲೆಂಡ್‌ನಲ್ಲಿ ಇರುವಂತೆಯೇ ನ್ಯಾಯಾಲಯಗಳ ವ್ಯವಹಾರಗಳು ಇಲ್ಲಿಯೂ ಇರುವಂತೆ ನಿರ್ದೇಶನ ನೀಡಿತು. ೧೬೭೨ ರಲ್ಲಿ ಒಂದು ನ್ಯಾಯಸಭೆ (judicatre) ಅಸ್ಥಿತ್ವಕ್ಕೆ ಬಂದಿತು. ತಿಂಗಳಿಗೆ ಒಮ್ಮೆ ಇದು ಸಾಮಾನ್ಯ ಸಭೆ ನಡೆಸುತ್ತಿತ್ತು. ಈ ಸಾಮಾನ್ಯ ಸಭೆಯಲ್ಲಿ ಉಳಿದ ಪ್ರಕರಣಗಳನ್ನು ಪೆಟ್ಟಿ ಸೆಶನ್‌ಗೆ ವರ್ಗಾವಣೆ ಮಾಡಲಾಗಿತ್ತು. ಈ ನ್ಯಾಯಾಲಯ ಕಳ್ಳತನ, ರಾಬರಿ ಮಾಡಿದವರಿಗೆ ಗುಲಾಮರಾಗಿ ಕೆಲಸ ಮಾಡುವ ಶಿಕ್ಷೆ ನೀಡುತ್ತಿತ್ತು. ಸಣ್ಣ ಕಳ್ಳತನಕ್ಕೆ ಕಳ್ಳನು ಕಳ್ಳತನ ಮಾಡಿದ ಮನೆಯ ಮಾಲಿಕನಿಗೆ ಹಣದ ಪರಿಹಾರವನ್ನು ನೀಡಬೇಕಾಗಿತ್ತು. ಅಥವಾ ಅವನ ಮನೆಯ ಚಾಕರಿ ಮಾಡಬೇಕಾಗಿತ್ತು.

೧೬೮೩ ರಲ್ಲಿ ಎರಡನೇ ಚಾರ್ಲ್ಸ್‌ನು ಸನ್ನದಿನಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಸೂಕ್ತ ಎಂದು ತೀರ್ಮಾನಿಸಿದ ಸ್ಥಳದಲ್ಲಿ, ನ್ಯಾಯಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿದನು. ೧೬೮೭ರಲ್ಲಿ ಮದ್ರಾಸ್‌ನ ಸೈಂಟ್ ಜಾರ್ಜ್ ಫೋರ್ಟ್‌ನಲ್ಲಿ ಕಾರ್ಪೋರೇಶನ್‌ನನ್ನು ಸ್ಥಾಪಿಸಲು, ಮೇಯರ್‌ರವರನ್ನು ನೇಮಿಸಲು ಮತ್ತೊಂದು ಸನ್ನದನ್ನು ಜಾರಿಗೆ ತರಲಾಯಿತು. ಸಣ್ಣ ವ್ಯಾಜ್ಯವನ್ನು ಪರಿಹರಿಸುವುದು ಇದರ ಕೆಲಸವಾಗಿತ್ತು. ಈ ಸನ್ನದಿನ ಪ್ರಕಾರ ಇಂಗ್ಲೆಂಡ್‌ನಿಂದ ಬರುವ ಇಂಗ್ಲೀಷರಿಗೆ ನ್ಯಾಯವ್ಯವಸ್ಥೆಯ ಆಡಳಿತವನ್ನು ನೋಡಿಕೊಳ್ಳುವ ಜವಬ್ದಾರಿಯನ್ನು ನೀಡಲಾಯಿತು. ಆದರೆ ವ್ಯಾಪಾರಕ್ಕಾಗಿ ಇಂಗ್ಲೆಂಡ್‌ನಿಂದ ಬಂದವರು ಕಂಪೆನಿಯ ಸೇವಕರು ಆಗಿದ್ದುದರಿಂದ ಅವರಿಗೆ ಕಾನೂನಿನ ಪರಿಜ್ಞಾನ ಇರಲಿಲ್ಲ. ಅದರಲ್ಲೂ ಭಾರತೀಯ ಸಾಮಾಜಿಕ ಸ್ಥಿತಿಗತಿಗಳ ಅರಿವು ಇರಲಿಲ್ಲ. ಆದ್ದರಿಂದ ಹಿಂದುಗಳಿಗೆ ಅಥವಾ ಮುಸಲ್ಮಾನರಿಗೆ ಇವರ

ಕಾನೂನು ಸರಿಹೋಗುತ್ತಿರಲಿಲ್ಲ.

೧೭೫೩ ರಲ್ಲಿ ಮತ್ತೊಂದು ಸನ್ನದು ಜಾರಿಗೆ ಬಂದಿತು. ಅದರಲ್ಲಿ ಭಾರತೀಯರ ನಡುವಿನ ವ್ಯಾಜ್ಯಗಳನ್ನು ಬಗೆ ಹರಿಸಲು ಮೇಯರಿಗೆ ಅಧಿಕಾರವಿಲ್ಲವೆಂದು, ಯಾವುದೇ ಒಂದು ವಿವಾದದಲ್ಲಿ ಆಸಕ್ತಿ ಇರುವವರು ನ್ಯಾಯಾಧೀಶನ ಸ್ಥಾನ ದಲ್ಲಿ ಕೂರಬಾರದೆಂದು ಮತ್ತು ಬ್ರಿಟೀಷರ ಕಾನೂನು ಭಾರತೀಯರಿಗೆ ಹೆಚ್ಚು ಅನ್ವಯವಾಗುವುದಿಲ್ಲವೆಂದು ಆದ್ದರಿಂದ ಅವರದ್ದೇ ಆದ ಕಾನೂನು ಸಂಪ್ರದಾಯದಂತೆ ನಡೆದುಕೊಳ್ಳಲು ಭಾರತೀಯರನ್ನು ಬಿಡಬೇಕೆಂದು ತಿಳಿಸಲಾಯಿತು.

೧೭೬೫ ರಲ್ಲಿ ರಾಬರ್ಟ್ ಕ್ಲೇವ್ ಭಾರತಕ್ಕೆ ಮೂರನೇ ಭಾರಿ ಬಂದನು. ಈತನು ಮೊಗಲ್ ಚರ್ಕವರ್ತಿಯಿಂದ 'ದಿವಾನಿ'ಯನ್ನು ಪ್ರಾರಂಭಿಸಲು ಅನುಮತಿಯನ್ನು ಪಡೆದನು. ದಿವಾನಿ ಕೋರ್ಟ್‌ಗಳನ್ನು ನಡೆಸಲು ಅನುಮತಿ ಮಾತ್ರವಲ್ಲ ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ಪೂರ್ಣ ಆಡಳಿತ ನೋಡಿ ಕೊಳ್ಳುವ ' ನಿಜಾಮತ್ ' ನ್ನು ಪಡೆದನು.

೧೭೭೨ ರಲ್ಲಿ ವಾರ್ನ ಹೇಸ್ಟೀನ್‌ನು ಅಪರಾಧಿಕ ಕಾನೂನು (Criminal justice) ನ ಸರಿಯಾದ ನಿರ್ವಹಣೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಂಡನು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕ್ರಿಮಿನಲ್ ಅಪರಾಧಗಳ ವಿಚಾರಣೆಗಾಗಿ 'ಫೌಜುದಾರಿ ಅದಾಲತ್'ಗಳನ್ನು ಪ್ರಾರಂಭಿಸಿದನು. ನ್ಯಾಯಾಲಯಕ್ಕೂ ಕಂಪೆನಿಯ ಯುರೋಪಿಯನ್ ವಿಷಯಗಳಿಗೂ ಸಂಬಂಧವಿರಲಿಲ್ಲ. ಮಾತ್ರವಲ್ಲದೇ ಅವರ ಆಡಳಿತಗಳಲ್ಲಿ ಈ ನ್ಯಾಯಾಲಯಗಳು ಹಸ್ತಕ್ಷೇಪ ಮಾಡುವಂತೆ ಇರಲಿಲ್ಲ. ಖಾಜಿ (Kazi) ಅಥವಾ ಮುಫ್ತಿ (Mufti) ರವರು ಈ ನ್ಯಾಯಾಲಯದಲ್ಲಿ ಕುಳಿತು ಕಾನೂನಿನ ವ್ಯಾಖ್ಯಾನ ಮಾಡುವ ಮತ್ತು ಆರೋಪಿಯ ವಿರುದ್ಧ ಇರುವ ದೋಷಾರೋಪಣೆಯ ಬಗ್ಗೆ ಅದು ಎಷ್ಟರ ಮಟ್ಟಿಗೆ ತಪ್ಪಿತಸ್ಥನೆಂದು ತೀರ್ಮಾನಿಸುವ ಅಧಿಕಾರ ಪಡೆದನು. ಪ್ರತೀ ಜಿಲ್ಲೆಯ ಕಲೆಕ್ಟರ್‌ರವರಿಗೆ ಈ ನ್ಯಾಯಾಲಯಗಳ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಯಿತು.

ಜಿಲ್ಲಾ ಮಟ್ಟದಲ್ಲಿ ಸ್ಥಾಪಿತವಾದ 'ಫೌಜಿದಾರಿ ಅದಾಲತ್' ಕೋರ್ಟ್‌ಗಳ ಜೊತೆಗೆ 'ಸುದ್ದರ್ ನಿಜಾಮತ್ ಅದಾಲತ್' ಎಂಬ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಈ ನ್ಯಾಯಾಲಯಗಳಿಗೆ ಫೌಜಿದಾರಿ ಅದಾಲತ್‌ನಲ್ಲಿ ನೀಡುವ ಶಿಕ್ಷೆಗಳನ್ನು ಅತ್ಯಂತ ಪ್ರಮುಖ ಪ್ರಕರಣಗಳಲ್ಲಿ ಪುನರ್ ಪರಿಶೀಲಿಸುವ ಮತ್ತು ೧೦೦ ರೂಪಾಯಿಗಳಿಗಿಂತ ಹೆಚ್ಚಿನ ದಂಡ ವಿಧಿಸಬಹುದಾದ ಪ್ರಕರಣಗಳ ಪುನರ್‌ಪರಿಶೀಲನೆ ಮಾಡುವ ಅಧಿಕಾರ ನೀಡಲಾಯಿತು. ಈ ನ್ಯಾಯಾಲಯಗಳಲ್ಲಿ ನ್ಯಾಯಾಧೀಶನಾದವನಿಗೆ ಮುಸ್ಲಿಂ ಕಾನೂನು ಅಧಿಕಾರಿಗಳ ನೆರವು ನೀಡುವಂತೆ ಮಾಡ ಲಾಯಿತು. ವಾರ್ನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಈ ನ್ಯಾಯಿಕ ಯೋಜನೆಯು ೨ ಮುಖ್ಯ ಅಂಶಗಳನ್ನು ಒಳ ಗೊಂಡಿತ್ತು. ೧) ಬ್ರೀಟೀಷ್ ಆಡಳಿತ ಇರುವ ಸ್ಥಳಗಳಲ್ಲಿ ಇಂಗ್ಲೀಷ್ ಕಾನೂನುಗಳನ್ನು ಹೇರಲಿಲ್ಲ. ೨) ಹಿಂದು ಮತ್ತು ಮುಸ್ಲೀಂ ಕಾನೂನುಗಳನ್ನು ಒಂದೇ ರೀತಿ ಪರಿ ಗಣಿಸಲಾಯಿತು. ಅಪರಾಧಿಕ ನ್ಯಾಯ ವಿಚಾರಣೆಯ ನಿರ್ವಹಣೆ ನವಾಬರಲ್ಲಿಯೇ ಉಳಿದುಕೊಂಡು ಮುಸ್ಲಿಂ ಕ್ರಿಮಿನಲ್ ಕಾನೂನು ಚಾಲ್ತಿಯಲ್ಲಿ ಉಳಿಯಿತು. ಉಳಿದಂತೆ ದೇಶದಲ್ಲಿ ನ್ಯಾಯವಿಚಾರಣೆಯ ಜವಾಬ್ದಾರಿ ಜಮೀನ್ದಾರರ ಕೈಯಲ್ಲಿತ್ತು. ಬಂಗಾಲ ಮತ್ತು ಮದ್ರಾಸ್‌ಗಳಲ್ಲಿ ಮುಸ್ಲಿಂ ಕಾನೂನು ಅಸ್ಥಿತ್ವದಲ್ಲಿತ್ತು. ಬೋಂಬೆ ಪ್ರೆಸಿಡೆನ್ಸಿ ಪ್ರದೇಶದಲ್ಲಿ, ಹಿಂದುಗಳಲ್ಲಿ ಹಿಂದು ಕಾನೂನು, ಮುಸ್ಲಿಂರಿಗೆ ಮುಸ್ಲಿಂ ಕಾನೂನು ಅನ್ವಯಿಸಿತ್ತು. 'ವ್ಯವಹಾರಮಾಯುಕ' (Vyavahara mayuka) ಹಿಂದು ಕಾನೂನಗಳ ಬಗ್ಗೆ ಮುಖ್ಯವಾಯಿತು. ಹಿಂದೂ ಕಾನೂನುಗಳು ಪ್ರಜಾಪೀಡನೆಯಿಂದ ಕೂಡಿತ್ತು. ಪ್ರತಿಯೊಬ್ಬರು ಕಾನೂನಿನ ದೃಷ್ಟಿಯಲ್ಲಿ ಸಮಾನರಾಗಿರಲಿಲ್ಲ. ಶಿಕ್ಷೆಗಳಲ್ಲಿಯೂ ತಾರತಮ್ಯ ಇತ್ತು.

೧೭೭೩ ರಲ್ಲಿ ರೆಗ್ಯುಲೇಶನ್ ಆ್ಯಕ್ಟ್ ಜಾರಿಗೆ ಬಂತು. ಇದು ಅಪರಾಧಿಕ ನ್ಯಾಯ ವಿಚಾರಣಾ ಪದ್ಧತಿಯ ಮೇಲೆ ಪ್ರಭಾವ ಬೀರಿತು. ಈ ಆ್ಯಕ್ಟ್‌ನಿಂದಾಗಿ ಗವರ್ನರ್ ಜನರಲ್‌ರವರ ನೇಮಕವಾಯಿತು. ಆತನಿಗೆ ಸಹಾಯಕರಾಗಿ ನಾಲ್ಕು ಜನ ಕೌನ್ಸಿಲರ್‌ಗಳ ನೇಮಕವಾಯಿತು. ಬಂಗಾಲದ ಪೋರ್ಟ್ ವಿಲಿಯಂನಲ್ಲಿ ಸುಪ್ರಿಂ ಕೋರ್ಟ್ ಸ್ಥಾಪಿಸಲಾಯಿತು.

೧೮೬೦ ರಲ್ಲಿ ಭಾರತೀಯ ದಂಡಸಂಹಿತೆ ಒಂದು ಶಾಸನವಾಗಿ ಅಸ್ತಿತ್ವಕ್ಕೆ ಬಂದಿತು. ೧೮೩೪ ರಲ್ಲಿ ರಚಿತವಾದ ಭಾರತದ ಮೊದಲ ಲಾ ಕಮಿಷನ್‌ನ ಅಧ್ಯಕ್ಷರಾದ ಮೇದಾವಿಯಾಗಿದ್ದ 'ಲಾರ್ಡ್ ಮೆಕಾಲೆ' ಇದರ ರಚನೆಯ ಮುಖ್ಯಸ್ಥರು. ಸುಮಾರು ೧೪೮ ವರ್ಷಗಳು ಆದರೂ ೭.ಹ ಇದರ ಸ್ಪಷ್ಟತೆ ಮತ್ತು ಖಚಿತತೆಯಿಂದ ಅತ್ಯಂತ ಕಡಿಮೆ ತಿದ್ದುಪಡಿಗಳಿಗೆ ಇದು ಒಳಗಾಗಿದೆ. ಭಾರತದ ಸ್ವಾತಂತ್ರ್ಯ ನಂತರದಲ್ಲಿ ಸಮಗ್ರ ಭಾರತದಲ್ಲಿ ಈ ಭಾರತೀಯ ದಂಡ ಸಂಹಿತೆ (ಜಮ್ಮು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ) ಎಲ್ಲಾ ರಾಜ್ಯಗಳಲ್ಲೂ ಏಕರೂಪ ಶಾಸನವಾಗಿ ಪರಿಣಮಿಸಿತು. ಇದಕ್ಕಿಂತ ಮೊದಲು ಬ್ರಿಟೀಷ್ ಚಕ್ರಾಧಿಪತ್ಯ ಇರುವ ಸ್ಥಳಗಳಲ್ಲಿ ಮಾತ್ರ ಈ ದಂಡಸಂಹಿತೆ ಅಸ್ತಿತ್ವದಲ್ಲಿತ್ತು. ಉಳಿದಂತೆ ಆಯಾ ರಾಜ್ಯಗಳಲ್ಲಿ ಆಯಾ ರಾಜಮಹಾರಾಜರುಗಳ ಶಾಸನಗಳೇ ಅಸ್ತಿತ್ವದಲ್ಲಿದ್ದವು.

ಅಡಿಟಿಪ್ಪಣಿ:–

೧) ಧರ್ಮವೀರಾ ಕಮಿಟಿ ರಿಪೋರ್ಟ್ ವಾಲ್ಯೂಮ್ ೫, ಪುಟ– ೩೩

೨) Nigam.S.R – S.Y.I.P - 1963, p- 33

೩) The Indian Police commission report, 1902-03, p- 5

೪) Nigam.S.R – S.Y.I.P- p - 33

೫) The Indian Police commission report – 1902-03, p- 5

೬) The Indian Police commission report – 1902-03, p- 33

೭) Ibid- p- 7

೮) ೯) Ibid- p- 7 to 10

೧೦) Ramesh. Datt- The Economic History of India under early British rule 1757-1837, - the publications divission ministry of information and broadcasting, Delhi- 1960, p- 147

೧೧) Keys.E- Manual of the administration on the Madras presidency in illustration of record of Government and the yearly administration report.Volume-1 Government press Madras –1885, p-187

೧೨) ೧೩), ೧೪) ೧೫) and ೧೬) ibid- p- 188

೧೭) Shyam Bhat. N – Early colonial experience 1762-1862p- 58, An artical in Poli canara (Orginal – Mishra B.B- The administrative History of India,1834-1947, general administration Bombay 1970, p- 534)

೧೮) Ibid- p- 58

೧೯) Ibid- p- 58 (Orginal – Sir Alexandar.J, Arboothnath Major general Sir Thomas Munro- selections from His mynutes and other official writings, p- 182-83)

೨೦) Ibid- p- 58 (Orginal – Report of the commissioners for the investigation for the alleged cases of the tortures in the Madras presidency (Madras 1855) volume 1, p- 5571

೨೧) and ೨೨) Ibid- p- 59

೨೩) Ibid- p- 59 (Orginal – Orders of Madras Police (corrected upto 20 February 1897) volume -1, Madras-1987, p-3-9 and 11-18)

೨೪) p- 59 (orginal – Dadwid.H.Baile- the Police and political development in India (princiton 1969) p-41-45

೨೫) Ibid- p- 60

೨೬) Keys – E, M.A.M.P – p- 188

೨೭) ೨೮), ೨೯) ೩೦) and ೩೧) Ibid - p- 189

೩೨) and ೩೩) ibid- p- 190

೩೪) ೩೫) ibid- p- 191

೩೬) ೩೭) David Arnold. Bureaueratic Recruitment and subordination in colonial India, the Medrass constabulary 1859-1947 - p- 4

೩೮) Ibid- p- 5

೩೯) Report on the public service commission – 1886-87 Calcutta , p- 314-15

೪೦) Statement of the Police committee on the administration of Madrass city Police (Madras – 1902) p- 44

೪೧) David Arnold – B.R.S. M.C - p- 6

೪೨) Ibid- p- 6

೪೩) Statement of Police committee on the administration of Madrass city Police (Madras – 1902) p-37 (M.P.A.R _ p- 29)

೪೪) Macleane. C.D- Manual of the administration of the Madras presidency (Madras 1885) p- 190

೪೫) ೪೬) ೪೭) David Arnold- B.R.S. M.C- p- 7

೪೮) Nelson . J.H.- The Madras country manual part II (Madras) p- 16

೪೯) ೫೦) David Arnold – B.R.S.M.C - p- 8

೫೧) Macleane .- M.A.M.P - p- 189-90

೫೨) David Arnold – B.R.S.M.C - p- 9

೫೩) Madras Police Administration Report 1868, p-8,

೫೪) G.O 3819 Home 4th August 1938 T.NA

೫೫) G.O 2395 Home (judicial) 7th Oct 1916 TNA

೫೬) Devid Arnold – B.R.S.M.C - p- 11,

೫೭) G.O 2395 Home Judicial 7th October 1916 T.N.A

೫೮) Devid Arnold – B.R.S.M.C - p- 12

೫೯) Lt. Col. GED Mouat Hand book for the Indian Army : Madras class revised Edition New Delhi, 1938- p- 63 (Do- p- 12)

೬೦) Ibid – p- 64

೬೧) M.P.A.R – 1920 , p- 51

೬೨) Orders of Madras Police I (Madras 1897) p- 145, (Indian Police proceedings No-3, 8th July 1871, I.O.R)

೬೩) I.G.P to chief secretory 31 December 1887 G.O 3, 595 -6 judicial 7th March 1888, TNA

೬೪) David Arnold – B.R.S.M.C - p- 12, orginal – Mouat – Handbooks for the Indian Army Madrass class- p- 68

೬೫) G -O- 1386-7, Judicail, 30th June 1887, I.O.R

೬೬) M.P.A.R. - 1865-66 p-4 & I.G to C.S, 6th September 1897

೬೭) M.P.A.R – 1911 – p- 2

೬೮) David Arnold – B.R.S.M.C -p-14 Orginal MPAR – 1911-p-2

೬೯) Ibid - p- 15

೭೦) G.O, 1027- 8 Judicial 28th July 1908 TNA

೭೧) ೭೨) David Arnold – B.R.S.M.C - p- 15

೭೩) & ೭೪) Ibid - p- 16

೭೫) Report on the police commission – 1902-03, p- 39

೭೬) David Arnold – B.R.S.M.C - p- 17

೭೭) Ibid - p- 18 (Original Edgar Thurston custe and tribe of London Indian (Madrass 1909) VI p-240

೭೮) Ibid – p- 18

೭೯) M.P.A.R 1916- p- 3

೮೦) G.O 1956, law 19 November 1925 TNA

೮೧) G. O 679, Home (Judicial) 28 March 1921 TNA

೮೨) David Arnold – B.R.S.M.C - p- 19

೮೩) MPAR – 1911- p- 2

೮೪), ೮೫) ೮೬) and ೮೭) ibid- p- 191

೮೮) ibid- p- 192

೮೯) and ೯೦) ibid- p- 194

೯೧) Ibid- p- 154

೯೨) Ibid- p- 194

೯೩) ೯೪) the Indian Police commission report, 1902-03 , p-7

೯೫) Mishra. B.B – The administrative History of India, 1834-1947, - Oxfard, Bombay – 1970, p- 538

೯೬) The Indian Police commission report, 1902-03, p- 7

೯೭) Ibid- p- 7 and 10

೯೮) Police file – 3 of 1968 (Bangalore 1868)

೯೯) R.A.M – for the year 1862-63 (Bangalore 1863)

೧೦೦) ೧೦೧) Police file -2, of 1873, 1-5, (Bangalore -1873)

೧೦೨) ೧೦೩), ೧೦೪) and ೧೦೫) Charles. U. Aitchison - Report of the public service commission on British attitude towards the employment of Indians in civil service – 1886-87, concept publishing company – Delhi- 1977, p- 119

೧೦೬) ೧೦೭), ೧೦೮), ೧೦೯) and ೧೧೦) Ibid- p- 120

೧೧೧) ೧೧೨) and ೧೧೩) Nigam.S.R – S.Y.I.P - p – 35

೧೧೪) Proceedings of the Indian Legislative council – Saturday – October -6, 1866

೧೧೫) Nigam.S.R – S.Y.I.P- p – 36

೧೧೬) Ibid- p-37

೧೧೭) and ೧೧೮) Police Act 5 of 1861, Indian Gazette 15 December 1866

೧೧೯) P.G.M No 1265, Police Date, Bangalore 27 October 1885

೧೨೦) Venkataramaiah P.S – P.K.G.C - p- 16

೧೨೧) Ibid- p- 17

೧೨೨) P.M.R.A - 1891, Bangalore 1892

೧೨೩) and ೧೨೪ R.A.M for the year 1886-87 to 1890-91 Bangalore 1894

೧೨೫) **P.M.R.A- 1891, Bangalore 1892**

೧೨೬) **P.G.M No- 11103- 1296 dtd Bangalore 29, February 1892**

೧೨೭) **Nigam.S.R. – S.Y.I.P – p- 38**

೧೨೮) **and ೧೨೯) The Mysore code unrefilled Mysore act- 1950- 1920 volume -1, p- 562-604**

೧೩೦) **Report of the royal commission on the public services in India, (Islington commission) 1916, p-7 and 11**

೧೩೧) **Ibid- p- 2**

೧೩೨) **Ibid- p- 16-17**

೧೩೩) **Ibid- p- 22**

೧೩೪) **Ibid- p- 4-5**

೧೩೫) **Nigam.S.R. – S.Y.I.P- p- 4**

೧೩೬) **Report of the royal commission on the superiors civil services in India (Lee commission) 1924, p-4 and 5**

೧೩೭) **Ibid- p- 20**

೧೩೮) ಭಾರತದ ಸಂವಿಧಾನ – ೧೯೪೯– ಆರ್ಟಿಕಲ್– ೩೧೨

೧೩೯) **Mishra. K.K – Police Administration in Ancient India** – ಪೂರ್ವೋಕ್ತ, ಪು– ೭

೧೪೦) ಗುರುಪ್ರಸಾದ್.ಡಿ.ವಿ – ಜನರೊಂದಿಗೆ ಪೊಲೀಸರು, ಗೆಳೆಯರ ಬಳಗ ಧಾರವಾಡ– ೨೦೦೩, ಪುಟಗಳು– ೯೯–೧೦೨

೧೪೧) **Charles. U. Aitchison- R.P.B.I – p- 121**

ಅಧ್ಯಾಯ – ೬

ವಿವಿಧ ಜಿಲ್ಲೆಗಳ ಪೊಲೀಸ್ ಇಲಾಖೆಯ ಸ್ವರೂಪ ಮತ್ತು ಬೆಳವಣಿಗೆ.

ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಸಂಘಟನೆಯು ಎಲ್ಲಾ ಜಿಲ್ಲೆಗಳಲ್ಲೂ ಏಕರೂಪತೆಯಿಂದ ಇರಲಿಲ್ಲ. ಪೊಲೀಸ್ ಪಡೆಯ ಬೆಳವಣಿಗೆ ಮತ್ತು ಸ್ವರೂಪವು ವೈವಿಧ್ಯತೆಯಿಂದ ಕೂಡಿತ್ತು. ಕೆಲವು ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಗೂ, ಮತ್ತೆ ಕೆಲವು ಜಿಲ್ಲೆಗಳು ಬಾಂಬೆ ಪ್ರೆಸಿಡೆನ್ಸಿಗೂ, ಮತ್ತು ಕೆಲವು ಜಿಲ್ಲೆಗಳು ಹೈದರಾಬಾದ್ ಸಂಸ್ಥಾನಕ್ಕೂ ಒಳಪಟ್ಟರೆ, ಎಂಟು ಜಿಲ್ಲೆಗಳು ಮೈಸೂರು ಅರಸರ ಅಧೀನದಲ್ಲಿತ್ತು. ಹಾಗಾಗಿ ಇವುಗಳ ಸ್ವರೂಪ ಮತ್ತು ಬೆಳವಣಿಗೆಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

೬.೧ : ಬೆಂಗಳೂರು ಜಿಲ್ಲಾ ಪೊಲೀಸ್ ಪುನರ್‌ಸಂಘಟನೆ.

ಪ್ರಾಚೀನ ರಾಜರುಗಳ ಕಾಲದಲ್ಲಿ ಕಾನೂನು ಸುವ್ಯವಸ್ಥೆಯ ಪರಿಪಾಲನೆಯನ್ನು ಸೇನೆ ಅಥವಾ ಪ್ರಜಾಸೈನ್ಯ (ಮಿಲಿಟಿಯ) ದವರುಗಳು ನಗರ ಪ್ರದೇಶಗಳಲ್ಲಿ ನಡೆಸುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮದ ಸೇವಕರುಗಳಾದ ತಳವಾರರು, ತೋಟಿ ಮತ್ತು ಕಾವಲುಗಾರರು ಸಾದಾರಣವಾಗಿ ಪೊಲೀಸ್ ಕೆಲಸ ಮಾಡುತ್ತಿದ್ದರು. 'ಕಟ್ಟಬಿಡಿ ಪೀವನ್'ಗಳು ಕಾವಲುಗಾರರಾಗಿದ್ದರು. 'ಹಳೆಪೈಕಿ'ಯವರು (ಪ್ರಾಚೀನ ಪದಾತಿಗಳು) ಪೊಲೀಸ್ ಕೆಲಸ ಮಾಡುತ್ತಿದ್ದರು. 'ಹೋಬಳಿದಾರ'ರು ಹೋಬಳಿ ಮಟ್ಟದಲ್ಲಿ ಜನರ ಆಸ್ತಿಪಾಸ್ಥಿಯ ರಕ್ಷಣೆಯ ಜವಾಬ್ದಾರಿ ಹೊಂದಿದ್ದರು. 'ಅಮರ್‌ಗಾರ'ರು ಇನಾಮ್ ಭೂಮಿಯನ್ನು ಹೊಂದಿದ ಪೊಲೀಸರಾಗಿದ್ದರು. ಬೇಡರ ಜಾತಿಯ ಕಾವಲುಗಾರರಿಗೆ 'ಅಂಕಮಾಲ' ಎಂದು ಕರೆಯಲಾಗುತ್ತಿತ್ತು. ಕಳ್ಳಕೊರಮರು, ಕಳ್ಳರನ್ನು ಪತ್ತೆಮಾಡಲು ಪೊಲೀಸರಿಗೆ ನೆರವು ನೀಡುತ್ತಿದ್ದರು.[೧] ಬೆಂಗಳೂರು ಜಿಲ್ಲೆಯಲ್ಲಿನ ಪೊಲೀಸ್ ಆಡಳಿತ ಬಹುತೇಕ ಮೈಸೂರು ಸಂಸ್ಥಾನದ ಇತರೆಡೆಗಳಲ್ಲಿ ಇರುವಂತೆಯೇ ಇತ್ತು. ಹೈದರಾಲಿ, ಟಿಪ್ಪು ಸುಲ್ತಾನ್, ಪೂರ್ಣಯ್ಯನವರ ಕಾಲದಿಂದಲೂ ಪೊಲೀಸ್ ವ್ಯವಸ್ಥೆ ಇಲ್ಲಿ ಬೆಳೆದುಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗೌಡನು ಹಳ್ಳಿಯ ಮುಖ್ಯಸ್ಥನಾಗಿದ್ದುಕೊಂಡು ನಂತರದ ದಿನಗಳಲ್ಲಿ ಈತನನ್ನೇ ಪಟೇಲ ಎಂದು ಕರೆಯಲಾಯಿತು. ಈತನು ವಂಶಪಾರಂಪರಿಕ ಅಧಿಕಾರವನ್ನು ಅನುಭವಿಸುತ್ತಿದ್ದನು. ಈತನಿಗೆ ಸಹಾಯಕರಾಗಿ ಗ್ರಾಮದ 'ಪ್ರಜಾಸೈನ್ಯ' ಅಥವಾ 'ತಳವಾರ'ರು ಇದ್ದರು. ಪಟ್ಟಣ ಪ್ರದೇಶಗಳಲ್ಲಿ ಇನ್ನೊಂದು ಪೊಲೀಸ್ ಪಡೆ ಅಸ್ಥಿತ್ವದಲ್ಲಿತ್ತು. ಅವರನ್ನು 'ಕಂದಾಚಾರ ಪೀವನ್'ಗಳೆಂದು ಕರೆಯಲಾಗುತ್ತಿತ್ತು. ಅವರು ಪೊಲೀಸ್ ಕೆಲಸಗಳ ಜೊತೆಗೆ ಕೋಟೆಗಳನ್ನು ಕಾಯುವ ಕೆಲಸವನ್ನು ಸಹ ಮಾಡಬೇಕಿತ್ತು. ಮತ್ತು ಯಾವುದೇ ತುರ್ತು ಸಂದರ್ಭಗಳಲ್ಲಿ ಬೇರೆಡೆಗೆ ಕರ್ತವ್ಯಕ್ಕೆ ಹೋಗಲು ಸಿದ್ಧರಿರಬೇಕಿತ್ತು. ಕಂದಾಚಾರ ಪದ್ಧತಿಯು ಆಡಳಿತ ವ್ಯವಸ್ಥೆಯ ಮುಖ್ಯ ಭಾಗವಾಗಿದ್ದು, ದಳವಾಯಿಯು ಇದಕ್ಕೆ ಮುಖ್ಯಸ್ಥನಾಗಿದ್ದನು. ಈತನು ಕಾನೂನು ಸುವ್ಯವಸ್ಥೆ ಪರಿಪಾಲನೆ ಮತ್ತು ಅಪರಾಧಗಳ ಪತ್ತೆ ಜವಾಬ್ದಾರಿಯನ್ನು ಹೊಂದಿದ್ದ.

ಮೈಸೂರು ಪೊಲೀಸ್ ಕಮಿಷನರುಗಳು ಸಹ ಈ ಕಂದಾಚಾರ ಪೊಲೀಸ್ ಪಡೆ ಮತ್ತು ಗ್ರಾಮೀಣ ಪೊಲೀಸರಿಂದ ಹೆಚ್ಚು ಪ್ರಯೋಜನವನ್ನು ಪಡೆದರು. ಒಡೆಯರುಗಳ ಕಾಲದಲ್ಲಿ ಪೊಲೀಸ್ ಪಡೆಯನ್ನು ಉತ್ತಮವಾಗಿ ಸಂಘಟಿಸಲಾಯಿತು. ಠಾಣೆಗಳಲ್ಲಿ 'ಠಾಣಾದಾರ್' ಎಂಬ ಪೊಲೀಸ್ ಅಧಿಕಾರಿಯನ್ನು, ಹೊಬಳಿ ಮಟ್ಟದಲ್ಲಿ ಪೊಲೀಸ್ ಕರ್ತವ್ಯಗಳಿಗಾಗಿ 'ಹೋಬಳಿದಾರರ'ನ್ನು ನೇಮಿಸಿದ್ದಲ್ಲದೇ ಈ ಪೊಲೀಸ್ ಪಡೆಯ ಅಧೀನದಲ್ಲಿ 'ಓಲೆಕಾರ', 'ಡಂಗುರ'ದವರು ಸರಕಾರದ ಆಜ್ಞೆಗಳನ್ನು ಸಾರುತ್ತಿದ್ದರು.

ಟಿಪ್ಪು ಸುಲ್ತಾನನು ಈ 'ಪಟೇಲ', 'ಉಂಬಳಿಗಾರ', 'ಅಮರ್‌ಗಾರರು'ಗಳ ಸಂಖ್ಯೆಯನ್ನು ಕಡಿತಗೊಳಿಸಿದ. ನಂತರ ದಿವಾನ್ ಪೂರ್ಣಯ್ಯನವರು ಪಟೇಲರುಗಳ ಸಂಖ್ಯೆಯನ್ನು ಕಡಿತಗೊಳಿಸಿ ಆ ಸ್ಥಾನಕ್ಕೆ ಕಂದಾಚಾರ ಪೀವನ್‌ಗಳನ್ನು ತಂದರು. ಕಂದಾಚಾರ ಪಡೆಯ ಬಗ್ಗೆ ಈ ಹಿಂದೆಯ ವಿವರಿಸಲಾಗಿದೆ.

೧೮೬೧ರ ಪೊಲೀಸ್ ಆ್ಯಕ್ಟ್ ದಿನಾಂಕ ೧೮-೧೨-೧೮೬೬ ರ ನೋಟಿಫಿಕೇಶನ್‌ನಂತೆ ಬೆಂಗಳೂರು ನಗರ, ಕಂಟೋನ್ಮೆಂಟ್ ಮತ್ತು ಬೆಂಗಳೂರು ಜಿಲ್ಲೆಗೆ ಅನ್ವಯವಾಗುವಂತಾಯಿತು. ಮದ್ರಾಸ್‌ನ ಮೋಫಿಸಿಲ್‌ನಲ್ಲಿ (ಮೋಫಿಸಿಲ್ ಎಂದರೆ ಗ್ರಾಮಾಂತರ ಪ್ರದೇಶ ಹಳ್ಳಿಗಾಡು ಪೊಲೀಸರು ಎಂದು ಅರ್ಥ) ಉತ್ತಮ ಅನುಭವವನ್ನು ಹೊಂದಿದ್ದ ಕ್ಯಾಪ್ಟನ್ ಇ.ಡಿ.ಗೊಂಪೆರ್ಟ್ಸ್‌ರವರನ್ನು, ಬೆಂಗಳೂರು ಕಂಟೋನ್ಮೆಂಟಿನ ಪ್ರಭಾರ ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ನೇಮಕ ಮಾಡಿ ಬೆಂಗಳೂರು ಜಿಲ್ಲೆಯ ಹೆಚ್ಚುವರಿ ಅಧಿಕಾರವನ್ನು ನೀಡಿ ಆಡಳಿತ ನೋಡಿಕೊಳ್ಳುವಂತೆ ಸೂಚಿಸಲಾಯಿತು.[೨] ಇದರ ಜೊತೆಗೆ ಗವರ್ನರ್ ಜನರಲ್‌ನಿಂದ ಪರಿಚಯಿಸಲ್ಪಟ್ಟ ೧೮೬೧ ರ ಪೊಲೀಸ್ ಕಾಯ್ದೆಯ ನಿಯಮಗಳಿಗೆ ಒಳಪಟ್ಟ ಬೆಂಗಳೂರು ಜಿಲ್ಲೆಯ ಪೊಲೀಸ್ ವ್ಯವಸ್ಥೆಯ ನವೀಕರಣಕ್ಕಾಗಿ ಪ್ರಸ್ತಾವನೆಯೊಂದನ್ನು ಕಳುಹಿಸಿಕೊಡುವಂತೆ ಸೂಚಿಸಲಾಯಿತು. ಇದರಿಂದ ಪೊಲೀಸ್ ಇಲಾಖೆಯನ್ನು ಭಿನ್ನರೀತಿಯಲ್ಲಿ ಸಂಘಟಿಸಲು ಯೋಚಿಸಲಾಯಿತು. ಇದರಂತೆ ಕ್ಯಾಪ್ಟನ್ ಇ.ಡಿ. ಗೋಂಪೆರ್ಟ್ಸ್‌ನು ಬೆಂಗಳೂರು ಜಿಲ್ಲೆಯ ಪುನರ್‌ಸಂಘಟನೆ ಬಗ್ಗೆ ಒಂದು ವಿಸ್ತೃತವಾದ ಪ್ರಸ್ಥಾವನೆಯನ್ನು ಕಳುಹಿಸಿದನು.[೩] ಇದರ ಪ್ರಮುಖ ಅಂಶಗಳೆಂದರೆ, ಪೊಲೀಸರನ್ನು ಕಂದಾಯ ಇಲಾಖೆಯ ಕರ್ತವ್ಯಗಳಿಂದ ಬೇರ್ಪಡಿಸಬೇಕು, ಈವರೆಗೆ ಕೆಳಗಿನ ಹಂತದ ಸ್ಥಳೀಯ ಅಧಿಕಾರಿಗಳಿಂದ ಈ ಕರ್ತವ್ಯವನ್ನು ಮಾಡಿಸಲಾಗುತ್ತಿತ್ತು. ಈ ರೀತಿ ಕಂದಾಯ ಇಲಾಖೆ ಕೆಲಸಗಳಿಂದ ಪೊಲೀಸ್ ಇಲಾಖೆಯನ್ನು ಬೇರ್ಪಡಿಸುವುದರಿಂದ ಮುಖ್ಯವಾಗಿ ಕಂದಾಯ ಸಂಗ್ರಹಣೆ ಕಾರ್ಯಕ್ಕೆ ಅಡಚಣೆ ಉಂಟಾಗುತ್ತಿದ್ದುದರಿಂದ ಇದಕ್ಕೆ ವಿರೋಧವಿತ್ತು. ಇದರಿಂದ ಕಂದಾಯ ವಸೂಲಿಗೆ ಜನರ ಕೊರತೆಯಾಯಿತು. ಈ ಪ್ರಸ್ತಾವನೆಯನ್ನು ಸಂಪೂರ್ಣವಾಗಿ ಒಪ್ಪಿದ ಸರಕಾರವು ಈ ಕಾರ್ಯಕ್ಕಾಗಿ ೧೩,೩೬೮ ರೂಪಾಯಿಗಳನ್ನು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿ ಸ್ವತಂತ್ರ ಪೊಲೀಸ್ ವ್ಯವಸ್ಥೆಗೆ ವಿಶೇಷ ರೂಪ ನೀಡಿತು. ೧೮೭೩ ರಲ್ಲಿ ಐ.ಜಿಪಿಗೆ ಸಹಾಯ ಮಾಡಲು ಒಂದು ಡಿ.ಐ.ಜಿ ಹುದ್ದೆಯನ್ನು ಸೃಜಿಸಲಾಯಿತು. ಕಾಲಕ್ರಮೇಣ ಬೆಂಗಳೂರು ಮೈಸೂರಿನಲ್ಲಿ ಪೊಲೀಸ್ ವ್ಯವಸ್ಥೆಯ ನವೀಕರಣ ಮಾಡುತ್ತಾಬರಲಾಯಿತು.

೧೮೬೮-೬೯ ರ ವೇಳೆಗೆ ಬೆಂಗಳೂರು ನಗರದ ವ್ಯವಸ್ಥಿತ ಪೊಲೀಸ್ ಪಡೆಯು ೨೨ ಚದುರ ಮೈಲು ಭೂಪ್ರದೇಶದ ವಿಸ್ತೀರ್ಣವನ್ನು ಹೊಂದಿದ್ದು ೧,೪೪,೦೦೦ ಜನಸಂಖ್ಯೆಯನ್ನು ಹೊಂದಿತ್ತು. ೧೮೬೮ ರಲ್ಲಿ ಬೆಂಗಳೂರು ಜಿಲ್ಲಾ ಪೊಲೀಸ್‌ನ್ನು ಪುನರ್‌ಸಂಘಟಿಸಲಾಯಿತು. ಒಬ್ಬರು ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು, ಪೊಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಸಹಾಯ ಮಾಡಲು ನೇಮಿಸಲಾಯಿತು.ಇವರು ಬೆಂಗಳೂರು ಜಿಲ್ಲೆ, ಬೆಂಗಳೂರು ನಗರ ಮತ್ತು ಕಂಟೋನ್‌ಮೆಂಟ್ ಪ್ರದೇಶಗಳ ಪೊಲೀಸ್ ವ್ಯವಸ್ಥೆಯ ಮೇಲ್ವಿಚಾರಣೆಯನ್ನೂ ಸಹ ನೋಡಿಕೊಳ್ಳುತ್ತಿದ್ದರು.[೪] ಗೊಂಫೆರ್ಟ್ಸ್‌ರವರನ್ನು ಮೈಸೂರು ಸಂಸ್ಥಾನದ ಡೆಪಿಟ್ಯೂ ಇನ್ಸ್‌ಪೆಕ್ಟರ್ ಜನರಲ್ ಆಗಿಯೂ ಸಹ ನೇಮಿಸಿದ ಬಗ್ಗೆ ಪುರಾತತ್ವ ಇಲಾಖೆಯಲ್ಲಿ ದಾಖಲೆಗಳಿವೆ. *(ಟಿಪ್ಪಣಿ ನೋಡಿ.)* ನಂತರ ಎಲ್.ಬಿ ಬೋರಿಂಗ್ ಸಿ.ಎಸ್.ಐ ಮೈಸೂರು ಕಮಿಷನರ್ ಆಗಿ ಬಂದನು. ಈತನು ಕ್ಯಾಪ್ಟನ್ ಗೊಂಪೆರ್ಟ್ಸ್‌ನು ತಯಾರಿಸಿದ ಯೋಜನೆಗಳನ್ನು ಸರಕಾರಕ್ಕೆ ಕಳುಹಿಸಿದನು.[೫]

ಇದರಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿ ಬಲವನ್ನು ಹೆಚ್ಚಿಸಲು ಸೂಚಿಸಲಾಯಿತು. ೬ ಜನ ದಫೇದಾರರು ೨೬೦ ಜನ ಪೀವನ್‌ಗಳು ರೂ. ೨೮,೨೧೮ ರೂಗಳ ಖರ್ಚಿನಲ್ಲಿ ಕಂದಾಯ ಇಲಾಖೆಗೆ ಸೇರಿಕೊಳ್ಳಲು ಪ್ರಸ್ಥಾಪಿಸಲಾಯಿತು. ತಾಲೂಕು ಗುಮಾಸ್ತರನ್ನು ಪೊಲೀಸ್ ಇಲಾಖೆಗೆ ಸೇರಿಸಿಕೊಳ್ಳಲು ವರ್ಗಾವಣೆ ಮಾಡುವಂತೆ ಮತ್ತು ಎಸ್‌ಪಿ

೧೮೭೩-೭೪

ಟಿಪ್ಪಣಿ : **2310 –29th Octobar 1873**
from – Secretry
to- the Chief Commissioner of Mysore
dtd 29th Oct 1873 , ref – No-4216-105
with reference to commi No 3245-306 of the Rech –forwarded copy of a notification from the Government of India appointing major Gomprtz to be deputive Inspector Genaral of Police in Mysore with certain directions.

ಯವರಿಗೆ ಸಹಕರಿಸಲು ಜೂನಿಯರ್ ಅಸಿಸ್ಟೆಂಟ್ (ಕಿರಿಯ ಸಹಾಯಕರು) ಹುದ್ದೆಗಳನ್ನು ನೇಮಿಸಲು ಪ್ರಸ್ಥಾವನೆ ಸಲ್ಲಿಸ ಲಾಯಿತು. ಕೊನೆಯದಾಗಿ ಭಾರತ ಸರ್ಕಾರದ ಕಾರ್ಯದರ್ಶಿಯಾಗಿದ್ದ ಡಬ್ಲು.ಎಸ್.ಸೆಟಾರ್‌ಕರ್ ಇವರು ಮೈಸೂರು ಕಮಿಷನರ್ ಆಗಿದ್ದ ಎಲ್.ಬಿ ಬೋರಿಂಗ್‌ರವರಿಗೆ ಒಂದು ಪತ್ರವನ್ನು ಬರೆದು[೬] ವೈಸರಾಯ್ ಮತ್ತು ಗವರ್ನರ್ ಜನರಲ್ ರವರು ಈ ಯೋಜನೆಗೆ ಮಂಜೂರಾತಿ ನೀಡಿದ್ದಾಗಿದೆ. ಇದರಿಂದ ವಾರ್ಷಿಕ ೧೩.೩೬೮ ರೂಪಾಯಿಗಳ ಅಧಿಕ ಖರ್ಚು ತಗಲುತ್ತಿತ್ತು. ಇದನ್ನು ಪ್ರಾಯೋಗಿಕವಾಗಿ ಒಂದು ವರ್ಷಕ್ಕೆ ಈ ಯೋಜನೆಗಳನ್ನು ಅಳವಡಿಸಿಕೊಳ್ಳುವಂತೆ ನಂತರ ಇದರ ಫಲಶ್ರುತಿಯ ಬಗ್ಗೆ ಒಂದು ವಿಶೇಷ ವರದಿಯನ್ನು ತರಿಸಿಕೊಂಡು (ಕಾರ್ಯ ಮತ್ತು ಖರ್ಚುಗಳ ಬಗ್ಗೆ) ಮೈಸೂರು ರಾಜ್ಯದ ಇತರ ಜಿಲ್ಲೆಗಳಿಗೆ ವಿಸ್ತರಿಸಲು ಮಂಜೂರಾತಿ ನೀಡಲಾಯಿತು. ಭಾರತ ಸರ್ಕಾರದ ಈ ಮಂಜೂರಾತಿ ಆದೇಶವನ್ನು ತಿಳಿಸುವ ವೇಳೆ ಮೈಸೂರು ಕಮಿಷನರ್‌ರವರ ಕಾರ್ಯದರ್ಶಿಯಾಗಿದ್ದ ಶ್ರೀ.ಜೆ.ಎ.ಕ್ಯಾಂಬೆಲ್ ತನ್ನ ಪತ್ರದಲ್ಲಿ ಮೈಸೂರಿನ ನ್ಯಾಯಾಂಗದ ಕಮಿಷನರ್‌ರವರಿಗೆ ಸ್ಪಷ್ಟವಾಗಿ ಪತ್ರ ಬರೆದನು.[೭] ಅದೇನೆಂದರೆ, "That it is to be clearly understood that the Amildars will on the formation of the now police be absolutely debarred from employing the latter for any revenue duties what soever " ಇದುವರೆಗೆ ಪೊಲೀಸ್ ಅಮಿಲ್‌ದಾರರು ನಿರ್ವಹಿಸುತ್ತಿದ್ದ ಕಂದಾಯ ಇಲಾಖೆಯ ಕೆಲಸಗಳಿಂದ ಅವರನ್ನು ಸಂಪೂರ್ಣವಾಗಿ ಹೊರತುಪಡಿಸಿ ಕೇವಲ ಪೊಲೀಸ್ ಇಲಾಖೆಯ ಕೆಲಸಗಳಿಗೆ ಮಾತ್ರ ಇನ್ನು ಮುಂದೆ ನೇಮಿಸಬೇಕು ಎಂದು ತಿಳಿಸಿದನು.

೧೮೫೬ ರಲ್ಲಿ ಜ್ಯುಡಿಷಿಯಲ್ ಕಮಿಷನರ್‌ರವರ ಹುದ್ದೆಯನ್ನು ಹೊಸದಾಗಿ ತೆರೆಯಲಾಯಿತು. ಅಧಿಕಾರ ಪದವಿ ಯಿಂದ ನಂತರ ಈ ಹುದ್ದೆಯನ್ನು ಐ.ಜಿ.ಪಿ ಹುದ್ದೆಗೆ ಪರಿವರ್ತಿಸಲಾಯಿತು. ೧೮೭೩ ರಲ್ಲಿ ಸೃಜಿಸಲಾದ ಡಿ.ಐ.ಜಿ.ಪಿಯು ಬಹುಮಟ್ಟಿಗೆ ನ್ಯಾಯಾಂಗದ ಕಮಿಷನರ್‌ರವರಿಗೆ ಸೆಕ್ರೆಟರಿಯಾಗಿದ್ದಂತೆ ಕಂಡುಬರುತ್ತದೆ. ಜಿಲ್ಲೆಗಳಲ್ಲಿ ಡೆಪ್ಯುಟಿ ಕಮಿಷನರ್‌ರವರೇ ಅಧಿಕಾರ ಪದವಿಯಿಂದ ಪೊಲೀಸ್ ಕರ್ತವ್ಯ ನಿರ್ವಹಿಸುತ್ತಿದ್ದರು. ೧೮೭೪ ರಲ್ಲಿ ಇವರುಗಳಿಗೆ ಒಬ್ಬ ಅಸಿಸ್ಟೆಂಟ್ ಕಮಿಷನರುಗಳನ್ನು ಸಹಾಯಕ್ಕಾಗಿ ನೇಮಿಸಲಾಯಿತು. ಇವರನ್ನು "ಪೊಲೀಸ್ ಅಸಿಸ್ಟೆಂಟ್" ಎಂಬ ಹೆಸರಿನಿಂದ ಗುರುತಿಸಲಾಗುತ್ತಿತ್ತು.

೧೮೭೪– ೭೫ ರಲ್ಲಿ ಒಂದು ಆದೇಶವನ್ನು ಹೊರಡಿಸಿ ಅದರಲ್ಲಿ ಡಿ.ಐ.ಜಿ.ಪಿ, ಡಿ.ಸಿ, ಪೊಲೀಸ್ ಅಸಿಸ್ಟೆಂಟ್, ಅಮಲ್ದಾರ್ ಮತ್ತು ಇನ್ಸ್‌ಪೆಕ್ಟರ್‌ರವರುಗಳ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಒಬ್ಬರಿಂದೊಬ್ಬರಿಗೆ ಇರಬೇಕಾದ ಸಂಬಂಧಗಳ ಬಗ್ಗೆ ವಿವರಿಸಲಾಯಿತು. ೧೮೭೬–೭೭ ರಲ್ಲಿ ಬಂದ ಬರಗಾಲದಿಂದಾಗಿ ಈ ಹೊಸ ಯೋಜನೆಗಳ ಖರ್ಚಿನ ಮೇಲೆ ಹೆಚ್ಚಿನ ಪರಿಣಾಮಬೀರಿತು. ಇದರಿಂದಾಗಿ ೧೮೭೯ ರಲ್ಲಿ ಡಿ.ಐ.ಜಿ.ಪಿ ಹುದ್ದೆಯನ್ನು ರದ್ದುಗೊಳಿಸಲಾಯಿತು. ಇದೇ ಸಮಯಕ್ಕೆ ಸರಿಯಾಗಿ ೧೮೭೯ ರ ಆಗಸ್ಟ್‌ನಲ್ಲಿ ಜ್ಯುಡಿಷಿಯಲ್ ಕಮಿಷನರ್‌ರವರು ಐ.ಜಿ.ಪಿ ಹುದ್ದೆಯ ಕೆಲಸಕಾರ್ಯ ನಿರ್ವಹಿಸುವುದಕ್ಕೆ ತಡೆ ಒಡ್ಡಲಾಯಿತು. ಪೊಲೀಸ್ ಇಲಾಖೆಯ ಪೂರ್ಣ ನಿಯಂತ್ರಣವು ಚೀಫ್ ಕಮಿಷನರ್‌ರವರ ಕೈಗೆ ಸೇರಿತು.[೮]

ಮೈಸೂರು ಮತ್ತು ಬೆಂಗಳೂರು ನಗರಗಳಿಗೆ ಅವುಗಳದ್ದೇ ಆದ ಪ್ರತ್ಯೇಕ ಪೊಲೀಸ್ ವ್ಯವಸ್ಥೆಯಿತ್ತು. ೧೮೬೧ರ ೫ ನೇ ಕಾಯ್ದೆಯಂತೆ ಬೆಂಗಳೂರು ನಗರ ಪೊಲೀಸ್ ವ್ಯವಸೆಯಿತ್ತು. ಉಳಿದಂತೆ ಮೈಸೂರನ್ನು ಒಳಗೊಂಡ ಸಂಸ್ಥಾನದ ಉಳಿದ ಭಾಗಗಳು 'ರೆಗ್ಯುಲರ್ ಪೊಲೀಸ್ ರೂಲ್ಸ್' ನಂತೆ ಕಾರ್ಯನಿರ್ವಹಿಸುತ್ತಿದ್ದವು. ಬೆಂಗಳೂರು ನಗರ ಪೊಲೀಸ್ ಇಲಾಖೆಯ ವೆಚ್ಚವನ್ನು ಸಂಸ್ಥಾನದ ಹಣಕಾಸಿನಿಂದಲೇ ಭರಿಸಲಾಗುತ್ತಿತ್ತು. ಆದರೆ ಮೈಸೂರು ನಗರ ಪೊಲೀಸರ ವೆಚ್ಚ ವನ್ನು ಮೈಸೂರು ಮುನ್ಸಿಪಾಲಿಟಿಯೇ ವಹಿಸಬೇಕಿತ್ತು. ನಂತರ ತಾತ್ಕಲಿಕವಾಗಿ ಸಂಸ್ಥಾನವೇ ನೀಡುವಂತಾಯಿತು.[೯] ರಾಜ್ಯದ

ಉಳಿದ ಜಿಲ್ಲೆಗಳ ಪೊಲೀಸ್ ಇಲಾಖೆಯ ವೆಚ್ಚವನ್ನು ಆಯಾ ಮುನಿಸಿಪಾಲಿಟಿಯವರೇ ವಹಿಸಬೇಕಿತ್ತು. ಚಿಕ್ಕಮಗಳೂರು ಮುನ್ಸಿಪಾಲಿಟಿಗೆ ಸಂಬಂಧಿಸಿದಂತೆ ಎಪ್ರಿಲ್ ೧, ೧೮೯೧ ರಿಂದ ಪೊಲೀಸ್ ವೆಚ್ಚಗಳನ್ನು ಮುನಿಸಿಪಾಲಿಟಯವರು ಭರಿಸುವುದರಿಂದ ವಿನಾಯಿತಿ ನೀಡಲಾಯಿತು[೧೦] ಉಳಿದ ಜಿಲ್ಲಾ ಕೇಂದ್ರಗಳ ಪೊಲೀಸ್ ವೆಚ್ಚವನ್ನು ಮುನಿಸಿಪಾಲಿಟಿಯವರೇ ಭರಿಸುವ ಪದ್ಧತಿ ಮುಂದುವರಿಯಿತು.

ಬೆಂಗಳೂರು ನಗರ ಮತ್ತು ಜಿಲ್ಲೆಯಲ್ಲಿ ಪೊಲೀಸ್‌ಪಡೆಯನ್ನು ಸುಮಾರು ೧೮೬೬ ರ ವೇಳೆಗೆ ಪುನರ್ ಸಂಘಟಿಸಲಾಯಿತು. ಜಿಲ್ಲೆಗೆ ಒಬ್ಬ ಪ್ರಭಾರ ಅಧಿಕಾರಿಯನ್ನು ನೇಮಿಸಲಾಯಿತು. ಸರಕಾರವು ರಾಜ್ಯದಲ್ಲಿ ಮದ್ರಾಸ್ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಿತು.[೧೧] ಹೊಸ ಮಾದರಿಯನ್ನು ಜಾರಿಗೆ ತರುವುದು ಹೆಚ್ಚು ದುಬಾರಿ ಆಗಿದ್ದು ಆಶಾದಾಯಕವಾಗಿರಲಿಲ್ಲ. ಆದ್ದರಿಂದ ಗ್ರಾಮೀಣ ಪೊಲೀಸ್ ಮಟ್ಟದಲ್ಲಿ ಪುನರ್ ಸಂಘಟನೆಯ ಕೆಲಸ ಮಾಡುವುದರಿಂದ ರಾಜ್ಯದಲ್ಲಿ ಪೊಲೀಸ್ ಪಡೆಯ ಸಂಘಟನೆಗೆ ಸಹಾಯವಾಗಲಿದೆ ಎಂದು ಬಾವಿಸಲಾಯಿತು. ಹಾಗಾಗಿ ಈ ಕೆಳಕಂಡ ನಿಯಮಗಳನ್ನು ರೂಪಿಸಲಾಯಿತು. ೧) ಗ್ರಾಮೀಣ ಪೊಲೀಸರಲ್ಲಿನ ಅವರ ಸಾಮರ್ಥ್ಯ ಮತ್ತು ಕಠಿಣತೆಯನ್ನು ಉಳಿಸಿಕೊಳ್ಳುವುದು ಅವರು ಕೆಲವು ಸರಳ ನಿಯಮಗಳಡಿ ಕೆಲಸ ಮಾಡುವಂತೆ ಮಾಡುವುದು. ಅವರ ಸಂಬಳವಾಗಿ ಬಾಡಿಗೆ ರಹಿತ ಭೂಮಿಯನ್ನು ವ್ಯವಸಾಯ ಮಾಡಲು ಉಪಯೋಗಿಸುಂತೆ ನೀಡುವುದು. ೨) ಗ್ರಾಮಗಳಲ್ಲಿ ಕಂದಾಚಾರ ಪೊಲೀಸರ ಜಾಗದಲ್ಲಿ ವ್ಯವಸ್ಥಿತ ಪೊಲೀಸರನ್ನು ನೇಮಿಸುವುದು, ಈ ಪೊಲೀಸರಿಗೂ ಮತ್ತು ವ್ಯವಸ್ಥಿತ ಪೊಲೀಸರಿಗೂ ಉತ್ತಮ ಬಾಂದವ್ಯವಿರಬೇಕು ಅದನ್ನು ಸ್ಪಷ್ಟವಾಗಿ ವಿಷಧೀಕರಿಸಬೇಕು. ೩) ಬಾರ್‌ಪಡೆಯು ದಮನಕಾರಿ ಕೆಲಸಗಳಲ್ಲಿ ತೊಡಗುವುದರಿಂದ ವ್ಯವಸ್ಥಿತ ಪೊಲೀಸರಿಗೆ ಆಯುಧಗಳನ್ನು ನೀಡಬಾರದು ಮತ್ತು ಕವಾಯತಿನ ಅಗತ್ಯವಿಲ್ಲ ಎಂದು ತಿಳಿಸಲಾಯಿತು.

ಬೆಂಗಳೂರುನಗರ ಹಾಗೂ ಜಿಲ್ಲೆಗೆ ಬಂದ ಮದ್ರಾಸ್ ಪ್ರಾಂತದ ಪೊಲೀಸ್ ಅಧಿಕಾರಿಗಳು ಕಂದಾಚಾರ ಪೊಲೀಸರು ಹಾಗೂ ಗ್ರಾಮದಲ್ಲಿರುವ ಇತರ ಪೊಲೀಸ್ ವ್ಯವಸ್ಥೆಗಳ ಪುನರ್‌ಸಂಘಟನೆ ಮಾಡಲು ಪ್ರಾರಂಭಿಸಿದರು. ನ್ಯಾಯಿಕ ಕಮಿಷನರ್ ಆಗಿದ್ದಂತಹ 'ಮ್ಯಾಂಗ್ಲರ್ಸ್' ಎನ್ನುವವರು ಈ ಮಾರ್ಪಾಟು ಹೇಗಿರಬೇಕು ಎನ್ನುವ ರೂಪುರೇಷೆಗಳನ್ನು ವರದಿಯೊಂದರಲ್ಲಿ ಸರಕಾರಕ್ಕೆ ನೀಡಿದರು. ೧೮೬೫ ರಲ್ಲಿ ನ್ಯಾಯಿಕ ಕಮಿಷನರ್ ಹುದ್ದೆಯ ಪ್ರಭಾರ ಹೊತ್ತವರನ್ನು ಪದನಿಮಿತ್ತ ಐಜಿಪಿ ಎಂದು ಸರ್ಕಾರ ನೇಮಿಸಿತು.

ಕಂಟೋನ್ಮೆಂಟ್ ಪ್ರದೇಶಕ್ಕೆ ಸೀಮಿತವಾಗಿದ್ದ ಬೆಂಗಳೂರು ನಗರ ಪೊಲೀಸ್ ಈ ಒಂದು ಶತಮಾನದಲ್ಲಿ ಆಗಾಧವಾಗಿ ಬೆಳೆದಿದ್ದು, ಭಾರತದ ಅತೀ ದೊಡ್ಡ ನಗರಗಳ ಪೊಲೀಸ್ ಪಡೆಗಳಲ್ಲಿ ಒಂದಾಗಿದೆ. ಒಂದು ಕಾಲು ಶತಮಾನದ ಹಿಂದೆ ಬೆಂಗಳೂರು ನಗರ ಪೊಲೀಸ್ ಪಡೆಯಲ್ಲಿ ಒಬ್ಬ ಇನ್ಸ್‌ಪೆಕ್ಟರ್, ಇಬ್ಬರು ಯುರೋಪಿಯನ್ ಚೀಫ್ ಕಾನ್ಸ್‌ಟೇಬಲ್‌ಗಳು, ಆರು ಮೊದಲ ದರ್ಜೆ ಸಾರ್ಜೆಂಟ್‌ಗಳು, ೧೧ ಎರಡನೇ ದರ್ಜೆ ಸಾರ್ಜೆಂಟ್‌ಗಳು ೪೩ ಫಸ್ಟ್ ಕ್ಲಾಸ್ ಕಾನ್ಸ್‌ಟೇಬಲ್‌ಗಳು, ೮೮ ಸೆಕೆಂಡ್ ಕ್ಲಾಸ್ ಕಾನ್ಸ್‌ಟೇಬಲ್‌ಗಳು ಹಾಗೂ ೪೦ ಮೂರನೇ ಕ್ಲಾಸ್ ಕಾನ್ಸ್‌ಟೇಬಲ್‌ಗಳು ಹೀಗೆ ಕೇವಲ ೨೦೨ ಸಿಬ್ಬಂದಿ ಇದ್ದರು.

ಕಂಟೋನ್‌ಮೆಂಟ್ ಪೊಲೀಸ್ ಪಡೆಯು ಒಂದು ಇನ್ಸ್‌ಪೆಕ್ಟರ್, ೨ ಸಬ್‌ಇನ್ಸ್‌ಪೆಕ್ಟರ್, ೫ ಯುರೋಪಿಯನ್ ಕಾನ್ಸ್‌ಟೇಬಲ್, ಒಂದು ಜಮೇದಾರ್, ೨ ದರೋಗ, ೧೭ ದಫೇದಾರ್, ೧೮೬ ಪೀವನ್‌ಗಳನ್ನು ಹೊಂದಿತ್ತು. ಪೇಟೆಯು ಒಂದು ಜಮೇದಾರ್, ೪ ಹೋಬಳಿದಾರ್, ೨೦ ದಫೇದಾರ್, ೨೦೦ ಪೀವನ್‌ಗಳನ್ನು ಹೊಂದಿತ್ತು. ಜಿಲ್ಲೆಯು ೧೩ ಕಿಲ್ಲೇದಾರರು, ೭೦ ಪೀವನ್‌ಗಳನ್ನು ಹೊಂದಿತ್ತು. ಇದರ ಜೊತೆಗೆ ಕಂಟೋನ್‌ಮೆಂಟ್ ಪ್ರದೇಶಕ್ಕೆ ೧೨೧ ಜನ ನಿವೃತ್ತ

ಯುರೋಪಿಯನ್ನರನ್ನು ನೇಮಿಸಲಾಯಿತು.

೧೮೬೮-೬೯ ರ ವೇಳೆಗೆ ಬೆಂಗಳೂರು ನಗರದ ವ್ಯವಸ್ಥಿತ ಪೊಲೀಸ್ ಪಡೆಯು ೨೨ ಚದುರ ಮೈಲು ಭೂಪ್ರದೇಶದ ವಿಸ್ತೀರ್ಣವನ್ನು ಹೊಂದಿದ್ದು, ೧,೪೪,೦೦೦ ಜನಸಂಖ್ಯೆಯನ್ನು ಹೊಂದಿತ್ತು.[೧೨]

೧೮೭೧-೭೨ ರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಮಂಜೂರಾದ ಪೊಲೀಸ್ ಬಲವೆಂದರೆ, ೧ ಪೊಲೀಸ್ ಸೂಪರಿಂಟೆಂಡೆಂಟ್, ೧ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮತ್ತು ೨೦೮ ಜನ ಅಧೀನ ಅಧಿಕಾರಿಗಳು ಮತ್ತು ೮೨೬ ಜನ ಎಲ್ಲಾ ದರ್ಜೆಯ ಕಾನ್ಸ್‌ಟೇಬಲ್‌ಗಳನ್ನು ಒಳಗೊಂಡಿತ್ತು. ಬೆಂಗಳೂರು ನಗರದ ಜನಸಂಖ್ಯೆಯು ಹೆಚ್ಚುತ್ತಿರುವುದರಿಂದ ಪೊಲೀಸ್ ಪಡೆಯ ಬಲವನ್ನು ಹೆಚ್ಚಿಸುವುದು ಅಗತ್ಯವಾಗಿತ್ತು. ಈ ಕಾರಣಕ್ಕಾಗಿ ಜ್ಯೂಡಿಷಿಯಲ್ ಕಮಿಷನರ್‌ರವರು ಪೊಲೀಸ್ ಪಡೆಯ ಬಲವನ್ನು ಹೆಚ್ಚಿಸುವುದರ ಜೊತೆಗೆ ಅವರ ಸಂಬಳವನ್ನು ಹೆಚ್ಚಿಸಬೇಕೆಂದು, ಪ್ರತ್ಯೇಕವಾದ ಪತ್ತೆದಳ ವನ್ನು ರಚಿಸಬೇಕೆಂದು, ಬೆಂಗಳೂರು ಜಿಲ್ಲೆಯನ್ನು ಅಸಿಸ್ಟೆಂಟ್ ಕಮಿಷನರ್‌ರವರ ವ್ಯಾಪ್ತಿಯಿಂದ ಹೊರತುಪಡಿಸ ಬೇಕೆಂದೂ ಪ್ರಸ್ಥಾವನೆಯನ್ನು ಸಲ್ಲಿಸಿದರು. ೧೮೭೪ ರ ಸಪ್ಟೆಂಬರ್‌ನಲ್ಲಿ ಸರಕಾರವು ಬೆಂಗಳೂರು ನಗರ ಪೊಲೀಸರ ಪುನರ್‌ಸಂಘಟನೆಯ ಪ್ರಸ್ತಾವನೆಗೆ ತನ್ನ ಅನುಮೋದನೆಯನ್ನು ನೀಡಿತು.[೧೩] ಇದರಂತೆ ಪುನರ್‌ಸಂಘಟಿತವಾದ ಪೊಲೀಸ್ ಪಡೆಯ ಬಲವು ಒಂದು ಸೂಪರಿಂಟೆಂಡೆಂಟ್, ಒಂದು ಅಸಿಸ್ಟೆಂಟ್ ಪೊಲೀಸ್ ಸೂಪರಿಂಟೆಂಡೆಂಟ್, ಮೂರು ಜನ ಯುರೋಪಿಯನ್ ಇನ್ಸ್‌ಪೆಕ್ಟರ್‌ಗಳು, ಒಬ್ಬ ಸ್ಥಳೀಯ ಇನ್ಸ್‌ಪೆಕ್ಟರ್, ೧೧ ಜನ ಯುರೋಪಿಯನ್ ಚೀಫ್ ಕಾನ್ಸ್‌ಟೇಬಲ್ಸ್, ೬ ಜನ ಸ್ಥಳೀಯ ಹೆಡ್ ಕಾನ್ಸ್‌ಟೇಬಲ್, ೪೦ ಸಾರ್ಜೆಂಟ್‌ಗಳು, ೨೮೦ ಕಾನ್ಸ್‌ಟೇಬಲ್‌ಗಳು ಇದ್ದು ಇದರ ಜೊತೆಗೆ ಮೀಸಲು ಪಡೆಯಲ್ಲಿ ಒಂದು ಸಬ್‌ಇನ್ಸ್‌ಪೆಕ್ಟರ್, ಒಂದು ಹೆಡ್‌ಕಾನ್ಸ್‌ಟೇಬಲ್, ೩ ಜನ ಸಾರ್ಜೆಂಟ್, ೨೨ ಜನ ಕಾನ್ಸ್ ಟೇಬಲ್‌ಗಳಿಗೆ ಮಂಜೂರಾತಿಯನ್ನು ನೀಡಲಾಯಿತು. ಇದರ ಜೊತೆಗೆ ಕಛೇರಿಯಲ್ಲಿ ಕೆಲಸ ಮಾಡಲು ಒಂದು ಮ್ಯಾನೇಜರ್, ಒಂದು ಲೆಕ್ಕಿಗ, ಒಬ್ಬ ಭಾಷಾಂತರಕಾರ, ಒಬ್ಬ ಇಂಗ್ಲೀಷ್ ಕ್ಲರ್ಕ್, ಮೂರು ಜನ ಜವಾನರನ್ನೂ ಸಹ ನೇಮಿಸಲಾಯಿತು.

೧೯ ನೇ ಶತಮಾನದ ಮುಕ್ತಾಯದ ವೇಳೆಗೆ ನಗರೀಕರಣ, ಕೈಗಾರಿಕೀಕರಣ, ಮತ್ತು ಜನಸಂಖ್ಯೆಯ ಹೆಚ್ಚಳ ದಿಂದಾಗಿ ನಗರಗಳ ಸಮಸ್ಯೆಗಳು ಉಲ್ಬಣವಾಗುತ್ತಾ ಹೋದವು. ಇದಕ್ಕೆ ತಕ್ಕುದಾಗಿ ಸರಕಾರವು ಪೊಲೀಸ್ ಪಡೆಯ ಬಲ ವನ್ನೂ ಸಹ ಹೆಚ್ಚಿಸುತ್ತಾ ಹೋಯಿತು. ಹೀಗಾಗಿ ಬೆಂಗಳೂರು ನಗರ ಪೊಲೀಸ್ ಪಡೆಯ ಬಲವನ್ನು ೧೮೯೭ ರಲ್ಲಿ ೨೬೬ ರಿಂದ ೩೧೮ ಕ್ಕೆ ಏರಿಸಲಾಯಿತು.[೧೪] ಇದು ಒಬ್ಬ ಇನ್ಸ್‌ಪೆಕ್ಟರ್, ೨ ಚೀಫ್ ಕಾನ್ಸ್‌ಟೇಬಲ್ ಮೊದಲನೇ ಮತ್ತು ಎರಡನೇ ದರ್ಜೆಯ ತಲಾ ಮೂರು ಹೆಡ್‌ಕಾನ್ಸ್‌ಟೇಬಲ್ಸ್, ಮೂರನೇ ದರ್ಜೆಯ ೬ ಜನ ಹೆಡ್‌ಕಾನ್ಸ್‌ಟೇಬಲ್‌ಗಳು, ಮೊದಲನೇ ದರ್ಜೆಯ ೯, ಎರಡನೇ ದರ್ಜೆಯ ೧೩, ಮೂರನೇ ದರ್ಜೆಯ ೧೧ ಸಾರ್ಜೆಂಟ್‌ಗಳು, ಮೊದಲನೇ ದರ್ಜೆಯ ೬೩, ಎರಡನೇ ದರ್ಜೆಯ ೧೧೨, ಮೂರನೇಯ ದರ್ಜೆಯ ೯೫ ಕಾನ್ಸ್‌ಟೇಬಲಗಳನ್ನು ನೇಮಿಸಲಾಯಿತು. ೧೯೦೭-೦೮ ರಲ್ಲಿ ೩ ಇನ್ಸ್‌ಪೆಕ್ಟರ್, ೧೩ ಹೆಡ್‌ಕಾನ್ಸ್‌ಟೇಬಲ್, ೩೪ ಸಾರ್ಜೆಂಟ್, ೨೮೫ ಕಾನ್ಸ್‌ಟೇಬಲ್‌ಗಳನು ಹೆಚ್ಚುವರಿಯಾಗಿ ಸೇರಿಸ ಲಾಯಿತು. ೧೯೧೯ ರಲ್ಲಿ ಪುನ : ಈ ಪಡೆಯ ಬಲವನ್ನು ಹೆಚ್ಚಿಸಲಾಯಿತು, ೬ ಇನ್ಸ್‌ಪೆಕ್ಟರ್‌ಗಳು, ೨೪ ಹೆಡ್ ಕಾನ್ಸ್ ಟೇಬಲ್, ೪೦ ಸಾರ್ಜೆಂಟ್ ಮತ್ತು ೩೫೨ ಕಾನ್ಸ್‌ಟೇಬಲ್‌ಗಳನ್ನು ಈ ಪಡೆಗೆ ಸೇರಿಸಲಾಯಿತು.[೧೫] ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳಾದ ಹೆಡ್‌ಕಾನ್ಸ್‌ಟೇಬಲ್ ರವರುಗಳು ವೃತ್ತಿಪರ ಜ್ಞಾನಗಳನ್ನು ಹೊಂದಿರಲಿಲ್ಲ. ತಮ್ಮ ವ್ಯಾಪ್ತಿಯೊಳಗಿರುವ ಕೆ.ಡಿಗಳು, ದರೋಡೆಕೋರರು ಮತ್ತು ಇತರ ಅಪರಾಧಿಗಳು ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದು, ಅವರನ್ನು ಪತ್ತೆಹಚ್ಚಲು ವಿಫಲರಾಗುತ್ತಿದ್ದರು. ಈ ಕಾರಣಕ್ಕಾಗಿ ಇಂತಹ ಆರೋಪಿಗಳನ್ನು ಬಂಧಿಸಲು ವೃತ್ತಿಪರತೆಯ ಅಗತ್ಯ ವಿತ್ತು. ಆದ್ದರಿಂದ

ಇಂತಹ ಜ್ಞಾನವನ್ನು ಹೊಂದಿದ ಇಂತಹ ಆರೋಪಿಗಳನ್ನು ಅಭ್ಯಸಿಸಿ ಅವರ ಚಲನವಲನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬಲ್ಲಂತಹ ಆಯ್ದ ಕೆಲವು ಸಿಬ್ಬಂದಿಗಳಿಂದ ಒಂದು ದಳವನ್ನು ರಚಿಸಲಾಯಿತು. ಅವರುಗಳಿಗೆ ಪತ್ತೆದಾರಿದಳ (ಡಿಟೆಕ್ಟೀವ್ ಸ್ಟಾಫ್) ಎಂದು ಕರೆಯಲಾಯಿತು. ಇದರಲ್ಲಿ ಒಂದು ಹೆಡ್‌ಕಾನ್‌ಸ್ಟೇಬಲ್ ಮತ್ತು ೭ ಜನ ಕಾನ್‌ಸ್ಟೇಬಲ್‌ಗಳು ಇದ್ದರು. ಇದನ್ನು ಒಂದು ಪ್ರಯೋಗಾರ್ಥವಾಗಿ ಮಾಡಲಾಯಿತು. ಈ ಸಣ್ಣ ಪಡೆಯು ಹಲವಾರು ಪ್ರಮುಖ ಅಪರಾಧಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ಅತ್ಯಂತ ಉಪಯುಕ್ತವಾದಂತಹ ಸುಳಿವುಗಳನ್ನು ತನಿಖಾಧಿಕಾರಿಗಳಿಗೆ ಒದಗಿಸಿದರು. ಇದರಿಂದಾಗಿ ಹಲವಾರು ವೃತ್ತಿಪರ ಆರೋಪಿತರು ನ್ಯಾಯಾಲಯದಲ್ಲಿ ಶಿಕ್ಷೆಯನ್ನು ಹೊಂದಿದರು.[೧೬] ಈ ಸಣ್ಣ ಪಡೆಯ ಸಾಧನೆಗಳನ್ನು ಐ.ಜಿ.ಪಿರವರು ಪ್ರಶಂಶಿಸಿದರು. ಮತ್ತು ಬೆಂಗಳೂರು ನಗರ ಪೊಲೀಸ್ ಪಡೆಯನ್ನು ಪುನರ್‌ಸಂಘಟಿಸುವ ಬಯಕೆಯನ್ನು ಅವರು ಹೊಂದಿದ್ದು, ಸರಕಾರಕ್ಕೆ ಒಂದು ವರದಿಯನ್ನು ೧೯೧೨-೧೩ ರಲ್ಲಿ ಸಲ್ಲಿಸಿದರು. ಅದರಲ್ಲಿ ಅವರು ಪೊಲೀಸ್ ಪಡೆಯ ಬಲವನ್ನು ಹೆಚ್ಚಿಸುವ ಅಗತ್ಯವನ್ನು ತಿಳಿಸಿದರು. ಅವರು ತಿಳಿಸಿದ್ದೇನೆಂದರೆ ೧೮೭೮ ರಲ್ಲಿ ಬೆಂಗಳೂರು ನಗರ ಪೊಲೀಸ್ ಪಡೆಯು ಒಂದು ಇನ್ಸ್‌ಪೆಕ್ಟರ್, ೨ ವಿಭಾಗೀಯ ಇನ್ಸ್‌ಪೆಕ್ಟರ್, ೯ ಹೆಡ್‌ಕಾನ್‌ಸ್ಟೇಬಲ್, ೨೬ ಸಾರ್ಜೆಂಟ್, ೨೧೫ ಕಾನ್‌ಸ್ಟೇಬಲ್‌ಗಳನ್ನು ಒಳ ಗೊಂಡಿತ್ತು. ಇದು ೧೮೯೬ ರಲ್ಲಿ ಸ್ವಲ್ಪ ಹೆಚ್ಚುವರಿಯಾಯಿತು. ಒಂದು ಹೆಡ್‌ಕಾನ್‌ಸ್ಟೇಬಲ್, ೨ ಸಾರ್ಜೆಂಟ್, ೧೦ ಕಾನ್‌ಸ್ಟೇಬಲ್‌ಗಳನ್ನು ಸೇರಿಸಲಾಯಿತು, ೨ ವರ್ಷಗಳ ನಂತರ ೨ ಹೆಡ್‌ಕಾನ್‌ಸ್ಟೇಬಲ್, ೫ ಸಾರ್ಜೆಂಟ್, ೪೫ ಸಿಬ್ಬಂದಿಯನ್ನು ಸೇರಿಸಲಾಯಿತು. ೪ ವರ್ಷಗಳ ನಂತರ ಅಂದರೆ ೧೯೦೦ ರಲ್ಲಿ ಮಲ್ಲೇಶ್ವರಂ ಮತ್ತು ಬಸವನಗುಡಿಗಳಿಗೆ ಒಂದು ಕಾನ್‌ಸ್ಟೇಬಲ್, ಒಂದು ಸಾರ್ಜೆಂಟ್, ೧೬ ಕಾನ್‌ಸ್ಟೇಬಲ್‌ಗಳನ್ನು ಮಂಜೂರು ಮಾಡಲಾಯಿತು.

೧೯೧೧ ರಲ್ಲಿ ಶಂಕರಪುರಂಗೆ ಒಂದು ಸಾರ್ಜೆಂಟ್, ೬ ಸಿಬ್ಬಂದಿಯವರನ್ನು ನೀಡಲಾಯಿತು. ಮತ್ತು ಎಕ್ಸ್‌ಟೆನ್‌ಷನ್ ಪ್ರದೇಶಗಳಿಗೆ ಹೆಚ್ಚುವರಿ ಬಲವನ್ನು ನೀಡಲಾಯಿತು. ೩ ಇನ್ಸ್‌ಪೆಕ್ಟರ್, ೧೩ ಹೆಡ್ ಕಾನ್‌ಸ್ಟೇಬಲ್, ೩೫ ಸಾರ್ಜೆಂಟ್, ೨೯೨ ಕಾನ್‌ಸ್ಟೇಬಲ್‌ಗಳನ್ನು ನೀಡಲಾಯಿತು.[೧೭]

ಸರಕಾರವು ಈ ಪ್ರಸ್ತಾವನೆಯ ಉತ್ತಮ ಅಂಶಗಳನ್ನು ಗಮನಿಸಿ ಹೆಚ್ಚುವರಿ ಸಿಬ್ಬಂದಿಯನ್ನು ಕೊಡಲು ಮುಂಜೂರಾತಿಯನ್ನು ನೀಡಿತು. ಇನ್ಸ್‌ಪೆಕ್ಟರ್‌ಗಳ ಸಂಖ್ಯೆಯನ್ನು ೩ ರಿಂದ ೫ಕ್ಕೆ , ಹೆಡ್ ಕಾನ್‌ಸ್ಟೇಬಲ್‌ಗಳನ್ನು ೪೮ ರಿಂದ ೫೦ ಕ್ಕೆ ಏರಿಸಿದ್ದು, ಕಾನ್‌ಸ್ಟೇಬಲ್‌ಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡದೇ ಅವರ ಸಂಖ್ಯೆಯನ್ನು ೨೯೨ ರಲ್ಲೇ ಉಳಿಸಲಾಯಿತು ಆದರೆ ಅವರುಗಳನ್ನು ೪ ವರ್ಗಗಳಲ್ಲಿ ವಿಭಾಗಿಸಲಾಯಿತು. ರೂ ೧೧ ಸಂಬಳ ಪಡೆಯುವ ೫೮ ಜನರ ೧ ನೇ ವರ್ಗ, ರೂ ೧೦ ಸಂಬಳ ಪಡೆಯುವ ೭೨ ಜನರ ಎರಡನೇ ವರ್ಗ, ರೂ. ೯ ಸಂಬಳ ಪಡೆಯುವ ೯೬ ಜನರ ಮೂರನೇ ವರ್ಗ, ರೂ ೮ ಸಂಬಳ ೬೬ ಜನರ ನಾಲ್ಕನೇ ವರ್ಗ ಎಂದು ವಿಭಾಗಿಸಲಾಯಿತು. ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಅಭಿಯೋಜಕ ಇನ್ಸ್‌ಪೆಕ್ಟರ್‌ರವರನ್ನು ಒದಗಿಸಲಾಯಿತು. ಬೆಂಗಳೂರು ನಗರಕ್ಕೆ ಎಡಿಷನಲ್ ಇನ್ಸ್‌ಪೆಕ್ಟರ್‌ರವರುಗಳನ್ನು ಮಂಜೂರು ಮಾಡಲಾಯಿತು.

೧೯೧೯ ರಲ್ಲಿ ಐ.ಜಿ.ಪಿರವರ ಪ್ರಸ್ತಾವನೆಯಂತೆ ನಾಲ್ಕು ಜನ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರನ್ನು ನೇಮಿಸಲು ಸರಕಾರವು ಮಂಜೂರಾತಿಯನ್ನು ನೀಡಿತು. ಅದರಲ್ಲಿ ತಲಾ ಒಬ್ಬರಂತೆ ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಉಪ-ವಿಭಾಗ, ದಾವಣಗೆರೆ ಉಪ-ವಿಭಾಗ ಮತ್ತು ಸಾಗರ ಉಪ-ವಿಭಾಗಕ್ಕೆ ನೇಮಿಸಲಾಯಿತು.[೧೮] ಅಸ್ತಿತ್ವದಲ್ಲಿದ್ದ ೪ ಜನ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಹುದ್ದೆಯನ್ನು ರದ್ದುಗೊಳಿಸಿ ಅವರ ಜಾಗಕ್ಕೆ ಕೆಳದರ್ಜೆಯ ನಾಲ್ಕು ಜನ ಪೊಲೀಸ್ ಇನ್ಸ್‌ಪೆಕ್ಟರ್‌ರನ್ನು ನೇಮಿಸಲಾಯಿತು. ಸರಕಾರವು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳಿಗೆ

ಅವರ ಸಾಮಾನ್ಯ ಕೆಲಸದೊಂದಿಗೆ ಮೇಲ್ವಿಚಾರಣೆಯನ್ನು ನಡೆಸುವ ಎಲ್ಲಾ ಘೋರ ಅಪರಾಧಗಳ ತನಿಖೆಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡುವ ಹಾಗೂ ಸಣ್ಣ ಅಪರಾಧಗಳಿಗೂ ಸಹ ಗಮನಹರಿಸುವಂತೆ ನಿರ್ದೇಶನ ನೀಡಿತು. ಕಮರ್ಷಿಯಲ್ ಸ್ಟ್ರೀಟ್ ಠಾಣೆ ೧೯೧೭ ರಲ್ಲಿ ಬ್ರಿಟೀಷರು ಸ್ಥಾಪಿಸಿದರು. ಮೊದಲು ಇದು ಕುದುರೆಲಾಗಿತ್ತು. ಈಗಲೂ ಹಳೆ ಕಟ್ಟಡದಲ್ಲಿ ಕುದುರೆ ಕಟ್ಟುತ್ತಿದ್ದ ಗುರುತುಗಳಿವೆ. ೧೯೦೦ ರಲ್ಲಿ ಬೆಂಗಳೂರು ನಗರ ೩೦ ಚ.ಕಿಮೀ ವ್ಯಾಪ್ತಿಹೊಂದಿತ್ತು. ಬೆಂಗಳೂರು ನಗರದ ಪೊಲೀಸ್ ವ್ಯವಸ್ಥೆಯು ಪ್ರಾರಂಭದಲ್ಲಿ ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗಿರಲಿಲ್ಲ. ೧೮೬೬–೬೭ ರಲ್ಲಿ ಬೆಂಗಳೂರುನಗರ ಪೊಲೀಸರ ವ್ಯಾಪ್ತಿಯು ಬೆಂಗಳೂರುನಗರ, ಕಂಟೋನ್ ಮೆಂಟ್, ಪೇಟೆ ಮತ್ತು ಬೆಂಗಳೂರು ಜಿಲ್ಲೆಗಳನ್ನು ಒಳಗೊಂಡಿತ್ತು.[೧೯]

೧೯೨೭ ರಲ್ಲಿ ವಿಸ್ತರಣಾ ಪ್ರದೇಶಗಳಾದ ಬೆಂಗಳೂರು ನಗರದ ವಿಶ್ವೇಶ್ವರಪುರ ಮತ್ತು ಗವಿಪುರಗಳಿಗೆ ಹೆಚ್ಚಿನ ಸಿಬ್ಬಂದಿಗಳನ್ನು ಒದಗಿಸುವ ಅಗತ್ಯತೆ ಕಂಡುಬಂತು. ಅದಕ್ಕಾಗಿ ೧೯೨೭ರ ಎಪ್ರೀಲ್ ೧ ರಂದು ವಾರ್ಷಿಕ ೧೧,೯೮೨ ರೂಗಳ ಖರ್ಚಿನೊಂದಿಗೆ ಹೆಚ್ಚಿನ ಪಡೆಯನ್ನು ಒದಗಿಸಲಾಯಿತು.[೨೦]

೧೯೩೦ ರಲ್ಲಿ ಬೆಂಗಳೂರು ನಗರದ ಬೆಳವಣಿಗೆಯನ್ನು ಗಮನಿಸಿ ಪೊಲೀಸ್ ವ್ಯವಸ್ಥೆಯನ್ನು ಪುನರ್ ಸಂಘಟಿಸ ಲಾಯಿತು. ಹಿಂದಿನ ಸಿಬ್ಬಂದಿಗಳ ಜೊತೆಗೆ ಹೊಸದಾಗಿ ೫ ಜನ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಿ ಅವರುಗಳನ್ನು ಎ, ಬಿ, ಸಿ ಎಂಬ ಮೂರು ವಿಭಾಗಗಳನ್ನಾಗಿ ಮಾಡಿ ಮತ್ತು ಇನ್ನಿಬ್ಬರನ್ನು ಅಭಿಯೋಜನೆ ಮತ್ತು ಸಂಚಾರ ವಿಭಾಗಕ್ಕೆ ನೇಮಿಸ ಲಾಯಿತು. ಎ ವಿಭಾಗವನ್ನು ಅಪರಾಧ ವಿಭಾಗ ಎಂದು ಕರೆಯಲಾಯಿತು. ಬಿ ಮತ್ತು ಸಿ ವಿಭಾಗಗಳನ್ನು ಒಟ್ಟಿಗೆ ಸೇರಿಸಿ ಅದಕ್ಕೆ ಆಡಳಿತ ವಿಭಾಗ ಎಂದು ಕರೆಯಲಾಯಿಸು. ಬಿ ಮತ್ತು ಸಿ ವಿಭಾಗಗಳು ತನಿಖೆಗಾಗಿ ಬಾಕಿ ಇದ್ದ ಮೊಕದ್ದಮೆಗಳನ್ನು ತನಿಖೆಗೋಸ್ಕರ ಅಪರಾಧ ವಿಭಾಗಕ್ಕೆ ಕಳುಹಿಸಿಕೊಡುತ್ತಿದ್ದರು. ಇದು ಜಿಲ್ಲಾ ಸೂಪರಿಂಟೆಂಡೆಂಟ್‌ರವರ ನೇರ ಅಧೀನದಲ್ಲಿ ತನಿಖೆ ಮಾಡುತ್ತಿತ್ತು. ಅಪರಾಧ ವಿಭಾಗಕ್ಕೆ ಹೆಚ್ಚುವರಿಯಾಗಿ ಒಬ್ಬ ಸಬ್‌ಇನ್ಸ್‌ಪೆಕ್ಟರ್‌ರನ್ನು ನೀಡಲಾಯಿತು.[೨೧] ಕೆಲವು ಸಣ್ಣ ಪುಟ್ಟ ಬದಲಾವಣೆಗಳು ಬೆಂಗಳೂರು ನಗರದ ಆಡಳಿತ ವ್ಯವಸ್ಥೆಯಲ್ಲಿ ಅಗತ್ಯ ಇದೆ ಎಂಬುದನ್ನು ಐ.ಜಿ.ಪಿರವರು ಮನ ಗೊಂಡು ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ನ ಬದಲಾಗಿ ಇನ್ನೊಬ್ಬರನ್ನು ನೇಮಿಸಿ ಅವರನ್ನು ಮೀಸಲಾಗಿರಿಸಿ ಎಸ್‌ಪಿ ಯವರು ರಜೆ ಅಥವಾ ಬೇರೆ ಅನ್ಯ ಕರ್ತವ್ಯದಲ್ಲಿ ಹೋಗಿದ್ದಾಗ ಜಿಲ್ಲೆಯ ಪ್ರಭಾರವನ್ನು ವಹಿಸುವಂತೆ ಸೂಚಿಸಲಾಯಿತು.

ಬೆಂಗಳೂರು ನಗರದಲ್ಲಿ ಹೆಚ್ಚಿದ ವಾಹನದಟ್ಟಣೆ ಮತ್ತು ಜನಸಂಖ್ಯೆಯಿಂದಾಗಿ ಇರುವ ಸಿಬ್ಬಂದಿಗಳಿಂದ ಸಂಚಾರ ನಿಯಂತ್ರಣ ಕಾರ್ಯವು ಕಷ್ಟವಾಗುತ್ತದೆ ಎಂದು ಮನಗೊಂಡು ಐ.ಜಿ.ಪಿ ಯವರು ಸಂಚಾರ ವಿಭಾಗಕ್ಕೆ ಹೆಚ್ಚುವರಿಯಾಗಿ ೧ ಇನ್ಸ್‌ಪೆಕ್ಟರ್, ೩ ಜನ ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್, ೨೧ ಜನ ಹೆಡ್ ಕಾನ್ಸ್‌ಟೇಬಲ್ಸ್‌ಗಳನ್ನು ನೀಡಿದರು.[೨೨] ಎರಡನೇ ಜಾಗತಿಕ ಯುದ್ಧ ಮತ್ತು ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಹಿನ್ನಲೆಯಲ್ಲಿ ದಿನೇ ದಿನೇ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳು ಉಲ್ಬಣವಾಗುತ್ತಾ ಬಂದವು. ಹೋರಾಟಗಾರರು ರಾಷ್ಟ್ರಪ್ರೇಮಿಗಳಾಗಿದ್ದರೇ ವಿನಹ ಅಪರಾಧಿಗಳಾಗಿರಲಿಲ್ಲ. ಇವರುಗಳನ್ನು ನಿಯಂತ್ರಿಸುವುದು ಬಹಳ ಕಷ್ಟಕರವಾಗಿತ್ತು. ಇದಕ್ಕಾಗಿ ಹೆಚ್ಚಿನ ಪೊಲೀಸ್ ಅಗತ್ಯತೆ ಯನ್ನು ಐ.ಜಿ.ಪಿ ಯವರು ಮನಗಂಡರು. ಹಾಗೆಯೇ ೫೫೦ ಜನಸಂಖ್ಯೆಗೆ ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಇದ್ದನು. ಇದನ್ನು ೩೦೦ ಜನಸಂಖ್ಯೆಗೆ ಒಬ್ಬ ಪೊಲೀಸ್ ಕಾನ್ಸ್‌ಟೇಬಲ್‌ನಂತೆ ಸರಾಸರಿಯಲ್ಲಿ ಸಿಬ್ಬಂದಿಗಳನ್ನು ನೇಮಿಸಬೇಕೆಂದು ಸರಕಾರಕ್ಕೆ ಮನವಿ ಮಾಡಿದರು. ಹಾಗೂ ಅದು ಮಂಜೂರಾಗುವವರೆಗೂ ತಾತ್ಕಲಿಕ ಸಿಬ್ಬಂದಿಯನ್ನು ನೇಮಿಸುವಂತೆ ಕೋರಿಕೊಂಡರು.ಇವರು ಸರಕಾರಕ್ಕೆ ಖಾಯಂ ಮತ್ತು ತಾತ್ಕಲಿಕ ಸಿಬ್ಬಂದಿಗಳು ಬೇಕೆಂದು ಸಲ್ಲಿಸಿದ ಮನವಿ ಈ ಕೆಳ ಕಂಡಂತೆ ಇದೆ.

ಕ್ರಸಂ	ಹುದ್ದೆ	ಖಾಯಂ ಮತ್ತು ತಾತ್ಕಲಿಕ	ಪ್ರಸ್ಥಾವಿಸಿದಂತೆ ಇದ್ದ ಪಡೆಯ ಸಂಖ್ಯೆ	ಹೆಚ್ಚುವರಿ ಪ್ರಸ್ಥಾವನೆ
೧	ಇನ್ಸ್‌ಪೆಕ್ಟರ್	೬	೯	೩
೨	ಸಬ್‌ಇನ್ಸ್‌ಪೆಕ್ಟರ್	೨೨	೩೭	೧೫
೩	ಯುರೋಪಿಯನ್ ಸಾರ್ಜೆಂಟ್	೩	೪	೧
೪	ಹೆಡ್‌ಕಾನ್ಸ್‌ಟೇಬಲ್	೬	೮	೨
೫	ಜಮಾದಾರ್	೧೩	೧೩	–
೬	ದಫೇದಾರ್	೮೬	೧೪೭	೬೧
೭	ಕಾನ್ಸ್‌ಟೇಬಲ್	೭೨೬	೧೩೪೬	೬೧೬
	ಒಟ್ಟು	೮೬೨	೧೫೬೪	೬೯೮

ಬೆಂಗಳೂರುನಗರ ಪೊಲೀಸ್ ಆಡಳಿತ ವ್ಯವಸ್ಥೆಯನ್ನು ೪ ವಿಭಾಗಗಳಾಗಿ ವಿಂಗಡಿಸಲಾಯಿತು. ಅವುಗಳೆಂದರೆ, ಆಡಳಿತ, ಅಪರಾಧ, ಸಂಚಾರ ಮತ್ತು ಕೇಂದ್ರಸ್ಥಾನ.[೨೩]

ಆಡಳಿತ :– ಈ ಆಡಳಿತ ಘಟಕವು ಪೊಲೀಸ್ ಠಾಣೆ ಮತ್ತು ಉಕ್ಕಡಗಳನ್ನು ಹೊಂದಿದ್ದು ಕಾನೂನು ಸುವ್ಯವಸ್ಥೆಯ ಜವಾಬ್ದಾರಿಯನ್ನು ಹೊಂದಿತ್ತು. ಮತ್ತು ಅಪರಾಧಗಳ ತಡೆ ಮತ್ತು ಪತ್ತೆಗಾಗಿ ಅಪರಾಧ ವಿಭಾಗಕ್ಕೆ ಸಹಕರಿಸುತ್ತಿದ್ದರು. ಬೆಂಗಳೂರು ನಗರವನ್ನು ಮೂರು ವಿಭಾಗಗಳ ಬದಲಾಗಿ ೪ ವಿಭಾಗಗಳನ್ನಾಗಿ ವಿಂಗಡಿಸಲಾಯಿತು. ಪ್ರತೀ ವಿಭಾಗಗಳನ್ನು ಒಬ್ಬೊಬ್ಬ ಪೊಲೀಸ್ ಇನ್ಸ್‌ಪೆಕ್ಟರ್‌ನ ನೇತೃತ್ವದಲ್ಲಿ ಇರುವಂತೆ ನೊಡಿಕೊಳ್ಳಲಾಯಿತು. ಬೆಂಗಳೂರು ನಗರದಲ್ಲಿದ್ದ ಪೊಲೀಸ್ ಠಾಣೆಗಳ ಸಂಖ್ಯೆಯನ್ನು ೯ ರಿಂದ ೧೧ ಕ್ಕೆ ಏರಿಸಲಾಯಿತು. ಮುನಿರೆಡ್ಡಿಪಾಳ್ಯ ಮತ್ತು ವಿಲ್ಸನ್ ಗಾರ್ಡನ್ ಗಳಲ್ಲಿದ್ದ ಉಕ್ಕಡ (ಔಟ್‌ಪೋಸ್ಟ್) ಗಳಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ನಿಗಧಿಪಡಿಸಲಾಯಿತು. ಇಬ್ಬರು ದಫೇದಾರರು ಮತ್ತು ೧೨ ಜನ ಕಾನ್ಸ್‌ಟೇಬಲ್‌ಗಳನ್ನು ಠಾಣಾ ಸೆಂಟ್ರಿಯನ್ನು ಹೊರತುಪಡಿಸಿ ಎರಡು ಉಕ್ಕಡಗಳಿಗೆ ನೀಡ ಲಾಯಿತು.

ಬೆಂಗಳೂರು ನಗರದಲ್ಲಿದ್ದ ಮಲ್ಲೇಶ್ವರಂ, ಗಾಂಧೀನಗರ, ಮಾವಳ್ಳಿ, ಕಳಾಸಿಪಾಳ್ಯ ಮತ್ತು ಗವಿಪುರ ಗುಟ್ಟಳ್ಳಿ ಈ ೫ ಉಕ್ಕಡಗಳಿಗೆ ಖಾಯಂ ಸಿಬ್ಬಂದಿಗಳನ್ನು ನೀಡಲಾಯಿತು. ಪ್ರತೀ ಠಾಣೆಗಳಿಗೆ ಸಿಬ್ಬಂದಿಗಳನ್ನು ಕೆಳಗಿನ ಆಧಾರಗಳಲ್ಲಿ ಹೆಚ್ಚಿಸಲಾಯಿತು. ೧) ಪ್ರತೀ ಠಾಣೆಗಳಲ್ಲಿ ಇಬ್ಬರ ಬದಲಾಗಿ ಮೂರು ಜನ ಸೆಂಟ್ರಿಗಳನ್ನು ನೇಮಿಸುವುದು ಮತ್ತು ಅವರು ಗಳನ್ನು ಸರದಿಯಲ್ಲಿ ಪ್ರತೀ ಎಂಟು ಗಂಟೆಗೊಮ್ಮೆ ಕರ್ತವ್ಯ ನಿರ್ವಹಿಸುವಂತೆ ಮಾಡುವುದು. ೨) ಪ್ರತೀ ಠಾಣೆಗಳಿಗೆ ಇಬ್ಬರು ದೂರವಾಣಿ ಆರ್ಡರ್ಲಿಗಳನ್ನು ಸರದಿಯಲ್ಲಿ ಪ್ರತೀ ಎಂಟು ಗಂಟೆಗೊಮ್ಮೆ ಕರ್ತವ್ಯ ಮಾಡುವಂತೆ ನಿಯೋಜಿಸ ಲಾಯಿತು. ಮೂರು ಜನ ಕಾನ್ಸ್‌ಟೇಬಲ್‌ಗಳನ್ನು ಪ್ರತೀ ಠಾಣೆಯಲ್ಲಿರುವ ಬಂಧೀಖಾನೆಯನ್ನು ಪ್ರತೀ ಎಂಟು ಗಂಟೆಗೊಮ್ಮೆ ಸರದಿಯಲ್ಲಿ ಕಾಯುವಂತೆ ನೇಮಿಸಲಾಯಿತು. ಪ್ರತೀ ಠಾಣೆಯಲ್ಲಿ ಬೆಂಗಾವಲು ಕರ್ತವ್ಯಕ್ಕಾಗಿ ಮೂರು ಜನ ಕಾನ್ಸ್‌ಟೇಬಲ್ ಗಳನ್ನು, ಅವರ ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಜೂಜಾಟದ ಮತ್ತು ವೇಶ್ಯಾವಾಟಿಕೆಯ ಬಗ್ಗೆ ಗುಪ್ತವಾರ್ತಾ ಸಂಗ್ರಹಕ್ಕಾಗಿ ಇಬ್ಬರನ್ನು ನೇಮಿಸಲಾಯಿತು. ೩) ಪ್ರತೀ ಠಾಣೆಗೆ ಠಾಣಾ ಬರಹಗಾರನಾಗಿ ದಫೇದಾರರನ್ನು ನೇಮಿಸಲಾಯಿತು. ೪) ಪ್ರತೀ ಠಾಣೆಗೆ ಎರಡು ಅಥವಾ ಮೂರು ಜನರ ಕಾನ್ಸ್‌ಟೇಬಲ್‌ಗಳನ್ನು ಇತರೇ ಕರ್ತವ್ಯಕ್ಕಾಗಿ ನೇಮಿಸಲಾಯಿತು. ೫) ಮೂರು ಜನ ಕಾನ್ಸ್‌ಟೇಬಲ್‌ಗಳನ್ನು ಗಸ್ತು ಕರ್ತವ್ಯಕ್ಕಾಗಿ ಪ್ರತೀ ಉಕ್ಕಡಗಳಲ್ಲಿ ನೇಮಿಸಲಾಯಿತು. ಅವರು ಸರದಿಯ ಮೇಲೆ ಸೆಂಟ್ರಿ, ಗಸ್ತು ಕರ್ತವ್ಯ, ಮೊದಲಾದವುಗಳನ್ನು ಮಾಡಬೇಕಾಗುತ್ತಿತ್ತು. ಈ ಎಲ್ಲಾ ಕೆಲಸಗಳಿಗಾಗಿ ೪೬ ಜನ ದಫೇದಾರ್, ೩೨೪ ಜನ ಕಾನ್ಸ್‌ಟೇಬಲ್‌ಗಳನ್ನು ಒದಗಿಸುವಂತೆ ಸರಕಾರಕ್ಕೆ ಪ್ರಸ್ಥಾವನೆಯನ್ನು ಸಲ್ಲಿಸಲಾಯಿತು.

ಅಪರಾಧ ವಿಭಾಗ : ಬೆಂಗಳೂರು ನಗರದ ಅಪರಾಧ ವಿಭಾಗವನ್ನು ಇಬ್ಬರು ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ನಾಲ್ಕು

ವಿಭಾಗಗಳ ವ್ಯಾಪ್ತಿಯನ್ನು ನೀಡಿ ಇದರೊಂದಿಗೆ ಎಂಟು ಜನ ಕಾನ್ಸ್‌ಟೇಬಲ್‌ಗಳನ್ನು ನೀಡಿ ರಚಿಸಲಾಯಿತು. ಇನ್ಸ್‌ಪೆಕ್ಟರ್‌ರವರಿಗೆ ಸಹಾಯ ಮಾಡಲು ಒಂದು ಸಣ್ಣ ಪ್ರಮಾಣದ ಪತ್ತೆದಾರಿ ಸಿಬ್ಬಂದಿಗಳಿದ್ದರು. ಅದರಲ್ಲಿ ಒಬ್ಬರು ಸಬ್‌ಇನ್‌ಪೆಕ್ಟರ್, ಇಬ್ಬರು ದಫೇದಾರರು, ನಾಲ್ಕು ಜನ ಕಾನ್ಸ್‌ಟೇಬಲ್ ಮತ್ತು ಒಬ್ಬ ದಫೇದಾರ್ ಬರಹಗಾರರನ್ನು ಒಳಗೊಂಡಿತ್ತು. ಕೇಂದ್ರ ಅಪರಾಧ ವಿಭಾಗ (ಸಿ.ಸಿ.ಬಿ) ಠಾಣೆಯು ಎರಡು ಜನ ದಫೇದಾರ್, ಎಂಟು ಕಾನ್ಸ್‌ಟೇಬಲ್‌ಗಳನ್ನು ಒಳಗೊಂಡಿದ್ದು, ಮೂವರನ್ನು ಬಂಧಿಖಾನೆ ಪಹರೆ ಹಾಗೂ ಖೈದಿಗಳ ಬೆಂಗಾವಲು ಕರ್ತವ್ಯಕ್ಕೆ ನೇಮಿಸಲಾಯಿತು. ಮೂರು ಜನ ಕಾನ್ಸ್‌ಟೇಬಲ್‌ಗಳನ್ನು ಸೆಂಟ್ರಿಗಳಾಗಿ, ಇಬ್ಬರು ಕಾನ್ಸ್‌ಟೇಬಲ್‌ಗಳನ್ನು ಇಬ್ಬರು ಇನ್ಸ್‌ಪೆಕ್ಟರ್‌ಗಳ ಆರ್ಡರ್ಲಿಗಳಾಗಿ ನೇಮಿಸಲಾಯಿತು.

ಸಂಚಾರ ವಿಭಾಗ :– ಬೆಂಗಳೂರು ನಗರದಲ್ಲಿ ಹೆಚ್ಚುತ್ತಿದ್ದ ವಾಹನದಟ್ಟಣೆಯನ್ನು ಗಮನಿಸಿ ಸಂಚಾರ ವಿಭಾಗವನ್ನು ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ಒಬ್ಬರು ಇನ್ಸ್‌ಪೆಕ್ಟರ್, ಐದು ಜನ ಸಬ್‌ಇನ್ಸ್‌ಪೆಕ್ಟರ್, ಎಂಟು ಜನ ಹೆಡ್ ಕಾನ್ಸ್‌ಟೇಬಲ್ ಮತ್ತು ೨೦೮ ಜನ ಕಾನ್ಸ್‌ಟೇಬಲ್‌ನೊಂದಿಗೆ ಪುನರ್ ಸಂಘಟಿಸಲಾಯಿತು. ಸಿಬ್ಬಂದಿಗಳನ್ನು ಹೆಚ್ಚಾಗಿ ಸಂಚಾರ ನಿಯಂತ್ರಣಕ್ಕೂ ಮತ್ತು ಠಾಣಾ ಕರ್ತವ್ಯಕ್ಕೂ ನಿಯೋಜಿಸಲಾಯಿತು. ರಸ್ತೆಗಳಲ್ಲಿ ಗಸ್ತು ತಿರುಗಲು, ದಂಡ ಹಾಕಲು, ವೇಗ ನಿಯಂತ್ರಣಕ್ಕಾಗಿ ಮತ್ತು ಇತರ ಕೆಲಸಗಳಿಗಾಗಿ ಸಿಬ್ಬಂದಿಗಳನ್ನು ನೇಮಿಸಲಾಯಿತು. ಸಂಚಾರ ನಿಯಂತ್ರಣಕ್ಕಾಗಿ ಉಪ್ಪಾರಪೇಟೆಯಲ್ಲಿ ಉಕ್ಕಡವನ್ನು ತೆರೆಯಲಾಯಿತು. ಸಂಚಾರ ನಿಯಂತ್ರಣದ ಕಛೇರಿ ಕೆಲಸಕ್ಕಾಗಿ ಎರಡನೇ ದರ್ಜೆಯ ಗುಮಾಸ್ತನನ್ನು ಮೂರನೇ ದರ್ಜೆಯ ಗುಮಾಸ್ತನ ಬದಲಿಗೆ ನೇಮಿಸಲಾಯಿತು.

ಕೇಂದ್ರಸ್ಥಾನ :– ಬೆಂಗಳೂರು ನಗರದ ಪೊಲೀಸ್ ಕೇಂದ್ರಸ್ಥಾನದಲ್ಲಿ ಕಛೇರಿ ಸಿಬ್ಬಂದಿಯನ್ನು ಬಲಪಡಿಸಲಾಯಿತು. ಒಬ್ಬರು ಪ್ರಥಮ ದರ್ಜೆಯ ಗುಮಾಸ್ತ, ಇಬ್ಬರು ದ್ವಿತೀಯ ದರ್ಜೆಯ ಗುಮಾಸ್ತ, ೪ ಜನ ಮೂರನೇ ದರ್ಜೆಯ ಗುಮಾಸ್ತ ಹಾಗೂ ಪಹರೆ ಮತ್ತು ಆರ್ಡರ್ಲಿ ಕೆಲಸಕ್ಕಾಗಿ ೪ ಜನ ಕಾನ್ಸ್‌ಟೇಬಲ್‌ಗಳನ್ನು ನೇಮಿಸಲಾಯಿತು.[೨೪] *ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರು ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ ೧೧ ರಲ್ಲಿ ನೋಡಿ.*

೬.೨: ಕೋಲಾರ ಜಿಲ್ಲಾ ಪೊಲೀಸ್

ಐತಿಹಾಸಿಕ ಹಿನ್ನಲೆ:– ಗ್ರಾಮೀಣ ಪೊಲೀಸ್ ವ್ಯವಸ್ಥೆಯಡಿ ಜಿಲ್ಲೆಯ ಪೊಲೀಸರ ಕರ್ತವ್ಯಗಳನ್ನು ಮೊದಲಿಗೆ ಗ್ರಾಮ ಸೇವಕರಾದ ತೋಟಿ, ತಳವಾರರು, ನೀರ್‌ಗಂಟಿಗಳು ಹಾಗೂ ಕಾವಲುಗಾರರು ನಿರ್ವಹಿಸುತ್ತಿದ್ದರು. ಇವರು ಆಸ್ತಿಪಾಸ್ತಿಗಳಿಗೂ ಅವರ ಜೀವಕ್ಕೂ ರಕ್ಷಣೆ ಒದಗಿಸುತ್ತಿದ್ದರೆಂದು, ೧೮೩೮ರ ಸರ್.ಮಾರ್ಕ್‌ಕಬ್ಬನ್‌ರ ವರದಿ ತಿಳಿಸುತ್ತದೆ. ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಮತ್ತು ದಿವಾನ್ ಪೂರ್ಣಯ್ಯನವರ ಕಾಲದಲ್ಲಿಯೂ ಈ ವ್ಯವಸ್ಥೆಯೇ ಮುಂದುವರೆಯಿತೆಂದು ತಿಳಿದುಬರುತ್ತದೆ. ತದನಂತರದಲ್ಲಿ ಜಾರಿಯಾದ ಕಂದಾಚಾರ ವ್ಯವಸ್ಥೆಯಡಿ ಸಿಪಾಯಿಗಳಿಗೆ ಮೇಲ್ಕಂಡ ಕರ್ತವ್ಯಗಳನ್ನು ವಹಿಸಲಾಯಿತು. ಈ ಸಿಪಾಯಿಗಳನ್ನು ೧೮೩೮ ರಲ್ಲಿ ಅಧಿಕೃತ ಪೊಲೀಸರೆಂದು ಪರಿಗಣಿಸಲಾಯಿತು. ಗ್ರಾಮೀಣರಲ್ಲಿ ಶಾಂತಿ, ಶಿಸ್ತುಪಾಲನೆ ಮೂಡಿಸುವ ಹಾಗೂ ಅವರಿಗೆ ರಕ್ಷಣೆ ಒದಗಿಸುವ ಸಂಪೂರ್ಣ ಜವಾಬ್ದಾರಿಯನ್ನು ಇವರಿಗೆ ವಹಿಸಲಾಯಿತು. ಇದರೊಂದಿಗೆ ಸರ್ಕಾರಿ ಸಿಬ್ಬಂದಿಯ ಸೇವೆಯನ್ನೂ ಪಡೆದು, ಅವರಿಗೆ ಪ್ರಮುಖ ಕರ್ತವ್ಯಗಳಾದ ಹಣದ ರಕ್ಷಣೆ, ಜೈಲುಗಳ ಪಹರೆ ಮುಂತಾದವುಗಳನ್ನು ವಹಿಸಲಾಯಿತು. ೧೮೫೯ ರಲ್ಲಿ ಪ್ರತ್ಯೇಕ ಜುಡಿಷಿಯಲ್ ಕಮಿಷನರ್‌ರ ನೇಮಕವಾಗಿ ಅವರನ್ನು ಪದನಿಮಿತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂದು ಕರೆಯಲಾಯಿತು. ೧೮೬೬ ರಲ್ಲಿ ಜಾರಿಯಾದ ೧೮೬೧ರ ಮದ್ರಾಸ್ ಪೊಲೀಸ್ ಕಾಯ್ದೆ V ಪೊಲೀಸ್ ಇಲಾಖೆಯ ಮೊಟ್ಟ ಮೊದಲ ಸುಧಾರಣೆಯಾಯಿತು. ಇದನ್ನು ಪ್ರಾರಂಭದಲ್ಲಿ ಮದರಾಸ್ ಪೊಲೀಸ್ ಅಧಿಕಾರಿಯ ಆಡಳಿತದಡಿ ಬೆಂಗಳೂರು ಜಿಲ್ಲೆಗೆ ಮಾತ್ರ

ಅನ್ವಯಿಸುವಂತೆ ಜಾರಿಮಾಡಿ, ನಂತರದಲ್ಲಿ ರಾಜ್ಯದ ಇತರೆಡೆಗಳಿಗೂ ಅನ್ವಯಿಸಲಾಯಿತು. ಆ ಸಮಯದಲ್ಲಿ ಹೊಸ ವ್ಯವಸ್ಥೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವ ಹಾಗೂ ಪೊಲೀಸ್ ಇಲಾಖೆಯನ್ನು ಪುನರ್‌ರೂಪಿಸುವ ಜವಾಬ್ದಾರಿಯನ್ನು ಆಗಿನ ಜ್ಯೂಡಿಷಿಯಲ್ ಕಮಿಷನರಾಗಿದ್ದ ಮ್ಯಾಂಗಲ್ಸ್ ಅವರಿಗೆ ನೀಡಲಾಯಿತು. ಇವರು ಕಂದಾಚಾರ ಸಿಪಾಯಿ ವ್ಯವಸ್ಥೆಯನ್ನು ರದ್ದುಮಾಡಿ, ನಿರ್ಧಿಷ್ಟ ಕರ್ತವ್ಯಗಳನ್ನು ಹೊಂದಿದ ಹೊಸ ಕಾನ್‌ಸ್ಟೇಬಲ್‌ಗಳನ್ನು ಇಲಾಖೆಗೆ ನೇಮಿಸಿದರು. ಇಲಾಖೆಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿಗೆ ತಂತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಡಲಾಯಿತು. ಇವರಿಗೆ ಹಲವು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣ ರಾಗುವುದನ್ನು ಕಡ್ಡಾಯಗೊಳಿಸಲಾಯಿತು. ಜಿಲ್ಲೆಯ ಪೊಲೀಸ್ ವರೀಷ್ಠಾಧಿಕಾರಿಯಾಗಿ ಡೆಪ್ಯುಟಿ ಕಮಿಷನರ್‌ನ್ನು, ಅವರಿಗೆ ಸಹಾಯಕರಾಗಿ ಅಸಿಸ್ಟೆಂಟ್ ಕಮಿಷನರ್‌ಗಳನ್ನು ೧೮೭೪ ರಲ್ಲಿ ನೇಮಿಸಲಾಯಿತು. ೧೮೭೩ರಲ್ಲಿ ನಿರ್ಮಿಸಲಾದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಹುದ್ದೆ ೧೮೭೯ ರಲ್ಲಿ ರದ್ದಾಗಿ, ಇವರ ಕಾರ್ಯವನ್ನು ಚೀಫ್ ಕಮಿಷನರ್ ಕಛೇರಿಯ ಸಾಮಾನ್ಯ ಶಾಖೆ ನಿರ್ವಹಿಸುತ್ತಿತ್ತು. ಜ್ಯುಡಿಷಿಯಲ್ ಕಮಿಷನರ್ ಹೊಂದಿದ್ದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ಅಧಿಕಾರವನ್ನು ೧೮೭೯ ರಲ್ಲಿ ಚೀಫ್ ಕಮಿಷನರಿಗೆ ಹಸ್ತಾಂತರ ಗೊಳಿಸಲಾಯಿತು. ೧೮೮೦ ರಲ್ಲಿ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಹುದ್ದೆ ರದ್ದಾಯಿತು. ತಾಲೂಕು ಅಮಲ್ದಾರರಿಗೆ ತಂತಮ್ಮ ವ್ಯಾಪ್ತಿಯ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆಯ ನಿರ್ವಹಣಾ ಜವಾಬ್ದಾರಿಯನ್ನು ನೀಡಲಾಯಿತು.[೨೫]

೧೮೮೧ ರಲ್ಲಿ ರಾಜ್ಯ ಹಸ್ತಾಂತರವಾದಾಗ ಇಡೀ ಪೊಲೀಸ್ ವ್ಯವಸ್ಥೆ ದಿವಾನರ ಆಡಳಿತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಿತು. ೧೮೮೫ ರಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆ ನಿರ್ಮಾಣವಾಯಿತು. ಇವರು ಅರಣ್ಯ ಹಾಗೂ ಪ್ಲಾಂಟೇಷನ್‌ಗಳ ಇನ್ಸ್‌ಪೆಕ್ಟರ್ ಜನರಲ್ ಹಾಗೂ ಕೃಷಿ ಮತ್ತು ಸಂಖ್ಯಾ ಇಲಾಖೆಗಳ ನಿರ್ದೇಶಕರ ಹುದ್ದೆಗಳನ್ನೂ ನಿರ್ವಹಿಸುತ್ತಿದ್ದರು. ಇವರ ಸಹಾಯಕ್ಕಾಗಿ ಜಿಲ್ಲೆಗೊಬ್ಬರಂತೆ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ನೇಮಕಗೊಂಡರು. ತಾಲೂಕು ಮಟ್ಟದಲ್ಲಿ ಅಮಲ್ದಾರರು ಮತ್ತು ಉಪತಾಲೂಕು ಮಟ್ಟದಲ್ಲಿ ಡೆಪ್ಯುಟಿ ಅಮಲ್ದಾರರು ಮುಖ್ಯಸ್ಥರಾಗಿದ್ದು, ಇವರಿಗೆ ಕ್ರಮವಾಗಿ ಇನ್ಸ್‌ಪೆಕ್ಟರ್ ಹಾಗೂ ಜಮೇದಾರರು ಸಹಾಯಕರಾಗಿದ್ದರು. ೧೮೯೧ ರಲ್ಲಿ ಪೊಲೀಸ್ ಇಲಾಖೆ ಪುನರ್‌ಸಂಘಟನೆಗೊಂಡು ಒಬ್ಬ ಪೂರ್ಣಾವಧಿಯ ಇನ್ಸ್‌ಪೆಕ್ಟರ್ ಜನರಲ್‌ರ ಆಡಳಿತಕ್ಕೊಳಪಟ್ಟಿತು. ಇದೇ ಸಮಯಕ್ಕೆ ಅಸಿಸ್ಟೆಂಟ್ ಕಮಿಷನರ್ ಹುದ್ದೆ ರದ್ದುಗೊಳಿಸಲ್ಪಟ್ಟು, ಅದಕ್ಕೆ ಬದಲಾಗಿ ಸೂಪರಿಂಟೆಂಡೆಂಟ್ ಹಾಗೂ ಡೆಪ್ಯುಟಿ ಸೂಪರಿಂಟೆಂಡೆಂಟ್‌ಗಳು ನೇಮಕಗೊಂಡರು.[೨೬]

೨೦ ನೇ ಶತಮಾನದ ಆರಂಭದಲ್ಲಿ ಕೋಲಾರ ಜಿಲ್ಲಾ ಪೊಲೀಸ್ ಆಡಳಿತದಲ್ಲಿ ಗ್ರಾಮ ಪೊಲೀಸರು ಹಾಗೂ ಖಾಯಂ ಪೊಲೀಸರು ಎಂಬ ಎರಡು ವಿಭಾಗಗಳಿದ್ದವು. ಕ್ರೈಂ ಪ್ರಕರಣಗಳನ್ನು ಪತ್ತೆಹಚ್ಚಿ ಅವುಗಳನ್ನು ಖಾಯಂ ಪೊಲೀಸಿನವರಿಗೆ ವರದಿ ಮಾಡುವ ಅಧಿಕಾರವನ್ನು ಪಟೇಲರು, ತೋಟಿ ಹಾಗೂ ತಳವಾರರು ಹೊಂದಿದ್ದರು. ೧೯೦೧ರಲ್ಲಿ ಗ್ರಾಮ ಪೊಲೀಸರಿಗೆ ಸಮವಸ್ತ್ರ ನೀಡಲಾಯಿತು. ೧೯೧೮ರ ವೇಳೆಗೆ ಖಾಯಂ ಪೊಲೀಸ್, ಗ್ರಾಮ ಪೊಲೀಸ್ ಮತ್ತು ಗೋಲ್ಡ್ ಫೀಲ್ಡ್ ಪೋರ್ಸ್‌ಗಳು ಎಂಬ ಮೂರು ಪ್ರಮುಖ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದವು. ಗಣಿ ಪ್ರದೇಶದಲ್ಲಿ ಶಾಂತಿ ಪಾಲನೆಗಾಗಿ ಮೇಲೆ ಹೇಳಿದ ಮೂರನೇ ವಿಭಾಗ ವಿಶೇಷ ತರಬೇತಿ ಹೊಂದಿದ್ದು, ಜಿಲ್ಲಾ ಪೊಲೀಸರಿಗಿಂತ ತನ್ನ ಕಾರ್ಯ ವ್ಯಾಪ್ತಿ, ನಿರ್ವಹಣೆಗಳಲ್ಲಿ ವಿಭಿನ್ನವಾಗಿದ್ದಿತು. ಇದರಡಿ ಚಿನ್ನದ ಗಣಿ ಪ್ರದೇಶದ ಬೇಹುಗಾರಿಕೆಗಾಗಿ ಒಂದು ಬೇಹುಗಾರಿಕೆ ದಳವಿದ್ದು, ಇಡೀ ವಿಭಾಗವನ್ನು ಒಬ್ಬ ಸೂಪರಿಂಟೆಂಡರು ನಿರ್ವಹಿಸುತ್ತಿದ್ದರು.

ಜಿಲ್ಲೆಯ ಪ್ರಪ್ರಥಮ ಪೊಲೀಸ್ ಠಾಣೆ ಕೆ.ಜಿ.ಎಫ್.ನ ಮಾರಿಕುಪ್ಪಂನಲ್ಲಿ ಸ್ಥಾಪಿಸಲ್ಪಟ್ಟಿತು. ಇದೇ ಕಟ್ಟಡದಲ್ಲಿ ಒಂದು

ಪೊಲೀಸ್ ಠಾಣೆ ಇಂದಿಗೂ ಕಾರ್ಯನಿರತವಾಗಿದೆ. ಜಿಲ್ಲೆಯ ಪೊಲೀಸ್ ವ್ಯವಸ್ಥೆಯು ೧೯೧೮ರಲ್ಲಿ ಪ್ರಕಟಗೊಂಡ ಮೈಸೂರು ಮಾನ್ಯುವೆಲ್‌ನಂತೆ ಕಾರ್ಯನಿರ್ವಹಿಸುತ್ತಿತ್ತು.[೨೬] *ಸ್ವಾತಂತ್ರ್ಯ ಪೂರ್ವದಲ್ಲಿ ಕೋಲಾರ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ ೧೨ ರಲ್ಲಿ ನೋಡಿ.*

೬.೨-೧-ವಿದುರಾಶ್ವತ್ಥ ದುರಂತ

ಮಂಡ್ಯ ಜಿಲ್ಲೆಯ ಶಿವಪುರ ಧ್ವಜಸತ್ಯಾಗ್ರಹ ಯಶಸ್ಸಿನಿಂದ ಉತ್ತೇಜಿತರಾದ ಕಾಂಗ್ರೇಸಿಗರು, ಸಂಸ್ಥಾನದ ಇತರೆಡೆಗಳಲ್ಲೂ ಅದೇ ರೀತಿಯ ಧ್ವಜ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲು ನಿರ್ಧರಿಸಿದರು. ಅದರಂತೆ ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥದಲ್ಲಿ ೧೯೩೮ರ ಎಪ್ರಿಲ್ ತಿಂಗಳಲ್ಲಿ ನಡೆಯುವ ಜಾತ್ರೆಯ ಸಂದರ್ಭವನ್ನು ಬಳಸಿಕೊಂಡು ಧ್ವಜಸತ್ಯಾಗ್ರಹವನ್ನು ಆಚರಿಸಿ ಬಹಿರಂಗ ಸಭೆಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಕಾಂಗ್ರೆಸ್‌ನ ಈ ಕಾರ್ಯಯೋಜನೆಯನ್ನು ತಪ್ಪಿಸಲು ಮುಂದಾದ ಸಂಸ್ಥಾನದ ಸರ್ಕಾರವು ವಿದುರಾಶ್ವತ್ಥದ ಸುತ್ತ ಎರಡು ಮೈಲಿ ಸುತ್ತಳತೆಯಲ್ಲಿ ಮೆರವಣಿಗೆ, ಭಾಷಣ, ಧ್ವಜಾರೋಹಣಗಳನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿತು. ಆದರೆ ಇದಾವುದನ್ನೂ ಲೆಕ್ಕಿಸದೇ ಜಿಲ್ಲೆಯ ಎನ್.ಸಿ ನಾಗಯ್ಯರೆಡ್ಡಿ, ಎನ್.ಸಿ.ತಿಮ್ಮಾರೆಡ್ಡಿ, ಎಸ್.ಸಿ ಶ್ರೀನಿವಾಸರಾವ್, ಗೆದರೆ ಗ್ರಾಮದ ರಾಮಸ್ವಾಮಿ, ಜಿ.ವೆಂಕಟಸ್ವಾಮಿಗೌಡ, ಮುಂತಾದವರು ಜಿಲ್ಲೆಯಲ್ಲಿ ಸಂಚರಿಸಿ ಜನರಲ್ಲಿ ಸ್ವಾತಂತ್ರ್ಯ ಚಳವಳಿಯ ಬೀಜ ಬಿತ್ತಿದರು. ಅವರ ಕರೆಗೆ ಓಗೊಟ್ಟ ಜಿಲ್ಲೆಯ ಜನತೆ ವಿದುರಾಶ್ವತ್ಥದಲ್ಲಿ ನೆರೆಯಲಾರಂಭಿಸಿದರು. ಜಾತ್ರೆಗೆ ಬಂದಿದ್ದ ಯಾತ್ರಾರ್ಥಿಗಳೂ ಇದರಲ್ಲಿ ಪಾಲ್ಗೊಂಡರು. ೧೯೩೮ರ ಎಪ್ರೀಲ್ ೧೫ ರಂದು ಪೊಲೀಸ್ ಮೀಸಲು ಪಡೆಯ ೩೬ ಮಂದಿ ಉನ್ನತ ಅಧಿಕಾರಿಗಳು ವಿದುರಾಶ್ವತ್ಥದಲ್ಲಿ ಜಮಾಯಿಸಿದರು. ಎಪ್ರೀಲ್ ೧೮ ರಿಂದ ೨೧ ರವರೆಗೆ ಯಾರೂ ನಿಷೇದಾಜ್ಞೆಯನ್ನು ಉಲ್ಲಂಘಿಸಲಿಲ್ಲ. ಆದರೆ ಎಪ್ರೀಲ್ ೨೨ ರಂದು ನಿಷೇಧಾಜ್ಞೆಯನ್ನು ಮುರಿದ ಎನ್.ಸಿ ನಾಗಯ್ಯರೆಡ್ಡಿ, ಶ್ರೀಪಾಲಯ್ಯ, ಗೆದರೆ ರಾಮಸ್ವಾಮಿ, ವೆಂಕಟಸ್ವಾಮಿ, ನರಸಿಂಹಪ್ಪ, ನಾರಾಯಣಪ್ಪ, ಸೂರ್ಯನಾರಾಯಣ ರಾವ್, ವೆಂಕಟರಾವ್, ಸಂಗಪ್ಪ ಮುಂತಾದ ಕಾಂಗ್ರೆಸ್ ಕಾರ್ಯಕರ್ತರು ಬಂಧನಕ್ಕೊಳಗಾದರು. ಎಪ್ರೀಲ್ ೨೩ ರಂದು ಅನೇಕ ಕಾರ್ಯಕರ್ತರು ಸರಕಾರದ ವಿರುದ್ಧ ಕರಪತ್ರಗಳನ್ನು ಹಂಚಿ ಭಾಷಣ ಮಾಡುವ ಮೂಲಕ ವಾಕ್‌ಸ್ವಾತಂತ್ರ್ಯದ ಹಕ್ಕನ್ನು ಸ್ಥಾಪಿಸಿದರು. ರಾಷ್ಟ್ರಧ್ವಜದ ಗೌರವ ಕಾಪಾಡಲು, ಸರ್ಕಾರ ನಿಷೇಧಾಜ್ಞೆಯನ್ನು ಹಿಂದಕ್ಕೆ ಪಡೆಯುವವರೆಗೆ ಜನರೆಲ್ಲರೂ ಸತ್ಯಾಗ್ರಹ, ಚಳವಳಿ ನಡೆಸಬೇಕೆಂದು ಕಾಂಗ್ರೆಸ್ ಪಕ್ಷ ಕರೆನೀಡಿತು. ಎಪ್ರೀಲ್ ೨೫ ರಂದು ನಡೆದ ಬಹಿರಂಗ ಸಭೆಯಲ್ಲಿ ಸುಮಾರು ೧೦,೦೦೦ ಜನ ಸೇರಿದ್ದರು. ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಟಿ.ರಾಮಾಚಾರ್ ನಾಯಕತ್ವದಲ್ಲಿ ಸತ್ಯಾಗ್ರಹಿಗಳ ತಂಡ ದೇವಸ್ಥಾನದ ಹಿಂಭಾಗದಲ್ಲಿ ನಿರ್ಮಿಸಿದ್ದ ಸಭಾವೇದಿಕೆಗೆ ಧ್ವಜಾರೋಹಣ ಮಾಡಲು ಹೋಯಿತು. ಅದನ್ನು ಸುತ್ತುವರಿದು ನಿಂತಿದ್ದ ಪೊಲೀಸರು ಸತ್ಯಾಗ್ರಹಿಗಳಿಗೆ ಹಿಂದೆ ಹೋಗಲು ಹೇಳಿ ತಾವೂ ಹಿಂದೆ ಸರಿಯುವುದಾಗಿ ಹೇಳಿದರು. ಅದರಂತೆ ಟಿ.ರಾಮಾಚಾರ್ ಹಿಂದಕ್ಕೆ ಸರಿದರು. ಆದರೆ ಅದೇ ವೇಳೆಗೆ ಶ್ರೀನಿವಾಸರಾಯರ ನಾಯಕತ್ವದಲ್ಲಿ ಇನ್ನೊಂದು ತಂಡ ಸಭಾವೇದಿಕೆ ಹತ್ತಲು ಮುಂದಾದಾಗ ಅವರಿಗೆ ಚದುರಲು ಪೊಲೀಸರು ಆದೇಶಿಸಿದರು. ಆದರೆ ಯಾರೂ ಕದಲಲಿಲ್ಲ. ಬದಲಿಗೆ ನೆರೆದಿದ್ದವರು ಮುನ್ನುಗ್ಗಲಾರಂಭಿಸಿದರು. ಇದೂ ಸಾಲದೆಂಬಂತೆ ಧ್ವಜಾರೋಹಣಕ್ಕೆ ನಾಲ್ಕಾರು ಮಂದಿ ಮುಂದಾದರು. ಆಗ ಅವರನ್ನು ಬಂಧಿಸಲು ಪೊಲೀಸರು ಯತ್ನಿಸಿದಾಗ ಸೇರಿದ ಜನ ಆಕ್ರೋಶದಿಂದ ಪೊಲೀಸರೊಂದಿಗೆ ಮಾತಿನ ಚಕಮಕಿಗಿಳಿದರು. ಕ್ರಮೇಣ ಹಿಡಿತತಪ್ಪಿತು. ಪೊಲೀಸರು ಜನರನ್ನು ಚದುರಿಸಲು ಲಾಠಿ ಪ್ರಹಾರಕ್ಕೆ ಮುಂದಾದರು. ಅದಕ್ಕೂ ಜನಸ್ತೋಮ ನಿಯಂತ್ರಣಕ್ಕೆ ಬಾರಾದಾದಾಗ ಪೊಲೀಸರು ಗೋಲಿಬಾರ್‌ಗೆ ಮುಂದಾದರು. ಆ ದಿನ ಪೊಲೀಸರು ೯೬ ಸುತ್ತು ಗುಂಡು ಹಾರಿಸಿದರೆಂದು ವೇಪಾ ರಮೇಶಂರವರ ವರದಿ ತಿಳಿಸಿದೆ.

ಅದರಿಂದ ನೂರಾರು ಮಂದಿ ಗಾಯಾಳುಗಳಾದರು. ಸರ್ಕಾರಿ ದಾಖಲೆ ಪ್ರಕಾರ ಒಂಬತ್ತು (ಜನವಾಡಿಕೆಯಲ್ಲಿ ಮೂವತ್ತೈದು) ಮಂದಿ ಪ್ರಾಣತೆತ್ತರು. ಇಡಗೂರು ಭೀಮಯ್ಯ, ನಾಮಾ ಅಶ್ವತ್ತನಾರಾಯಣ ಶೆಟ್ಟಿ, ನರಸಪ್ಪ, ಹನುಮಂತಪ್ಪ, ಚೌಳೂರು ನರಸಪ್ಪ, ಗಚ್ಚನಗಾರಿ ನರಸಪ್ಪ, ಕಾರಂಡಹಳ್ಳಿ ಮಲ್ಲಯ್ಯ, ವೆಂಕಟಗಿರಿಯಪ್ಪ ಹಾಗೂ ಮರಳೂರಿನ ಗೌರಮ್ಮ ಸರ್ಕಾರಿ ದಾಖಲೆ ಪ್ರಕಾರ ಸತ್ತವರಾಗಿದ್ದರು. ಆ ಸಮಯದಲ್ಲಿ ಗುಡಿಬಂಡೆಯ ರಾಮರಾಯರು ಗಾಯಾಳುಗಳಿಗೆ ಶುಶ್ರೂಷೆ ಮಾಡಿ ವರದಿ ತಯಾರಿಸಿ ರುಮಾಲೆ ಚೆನ್ನಬಸವಯ್ಯ ಮತ್ತು ನಂಜುಂಡರಾವ್ ಮೂಲಕ ಪಿ.ಟಿ.ಐ ಹಾಗೂ ಬಿ.ಬಿ.ಸಿಗಳಿಗೆ ಸುದ್ದಿ ಮುಟ್ಟಿಸಿದ್ದರಿಂದ ವಿದುರಾಶ್ವತ್ಥದ ದುರಂತ ಜಗಜ್ಜಾಹೀರವಾಯಿತು. ಅಂದು ಬಂಧಿಸಲ್ಪಟ್ಟವರಲ್ಲಿ ಟಿ.ರಾಮಾಚಾರ್ ಮತ್ತವರ ಅನುಯಾಯಿಗಳು ಇದ್ದರು.[೨೮] ವಿದುರಾಶ್ವತ್ಥ ದುರಂತವನ್ನು ಪ್ರತಿಭಟಿಸಿ, ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಕೆ.ಸಿರೆಡ್ಡಿ ಹಾಗೂ ಎನ್.ಸಿ. ತಿಮ್ಮಯ್ಯ ರೆಡ್ಡಿ ಭಾಷಣ ಮಾಡಿದ ಸಂದರ್ಭದಲ್ಲಿ ಪೊಲೀಸರು ಲಾಠಿಚಾರ್ಜ್‌ನ್ನು ಮಾಡಿದರು. ಬ್ರಿಟೀಷರ ವಿರುದ್ಧ ಮೈಸೂರು ರಾಜ್ಯದಲ್ಲಿ ಹಲವಾರು ಚಳವಳಿಗಳು, ಆಂದೋಲನಗಳು ನಡೆದಿದ್ದು, ಅದನ್ನು ಹತ್ತಿಕ್ಕುವ ಸಲುವಾಗಿ ಬ್ರಿಟೀಷರು ಪೊಲೀಸ್ ವ್ಯವಸ್ಥೆಯನ್ನು ಬಳಸಿ ಕೊಂಡಿದ್ದರು. ಹಲವಾರು ಗೋಲಿಬಾರ್ ಮತ್ತು ಲಾಠಿ ಚಾರ್ಜ್‌ನಂತಹ ಘಟನೆಗಳು ರಾಜ್ಯದಲ್ಲಿ ನಡೆದಿದ್ದರೂ ಸಹ ವಿದುರಾಶ್ವತ್ಥ ದುರಂತದಂತಹ ಅಮಾನವೀಯ ಕೃತ್ಯ ರಾಜ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತೊಂದು ನಡೆದಿಲ್ಲ. ಕರ್ನಾಟಕದ ಜಲಿಯನ್‌ವಾಲಾಬಾಗ್ ಹತ್ಯಾ ಕಾಂಡವೆಂದೇ ಕರೆಯಲ್ಪಡುವ ಈ ಘಟನೆಯ ಬಗ್ಗೆ ಇಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ.

೬.೩ : ಕೋಲಾರ ಚಿನ್ನದಗಣಿ ಪೊಲೀಸ್ (ಕೆ.ಜಿ.ಎಫ್)

೧೯೦೦ ರಲ್ಲಿ ಕೋಲಾರ ಚಿನ್ನದಗಣಿ (ಕೆ.ಜಿ.ಎಫ್)ಯ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಲು ಪ್ರಸ್ಥಾವನೆಯನ್ನು ಸಲ್ಲಿಸಲಾಯಿತು. ಚಿನ್ನದ ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಹಿತರಕ್ಷಣೆ ಹಾಗೂ ವಿವಿಧ ಚಿನ್ನದ ಗಣಿಗಳಿಂದ ನಡೆಯುತ್ತಿದ್ದ ಚಿನ್ನದ ಕಳ್ಳತನಗಳನ್ನು ತಡೆಯುವ ಸಲುವಾಗಿ ಹಾಗೂ ಚಿನ್ನದ ಗಣಿಯಲ್ಲಿ ಕೆಲಸ ಮಾಡುವ ಕೆಲಸಗಾರರು ತಮ್ಮ ಸುತ್ತಮುತ್ತಲ ಮತ್ತು ಹೊರಗಿನ ಜನರೊಂದಿಗೆ ನಡೆಸುತ್ತಿದ್ದ ವ್ಯವಹಾರಗಳನ್ನು ಗಮನಿಸುವ ಉದ್ದೇಶ ದಿಂದ ಪುನರ್‌ಸಂಘಟಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಇದನ್ನು ಸರ್ಕಾರವು ಒಪ್ಪಿಕೊಂಡು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ನ ಜಾಗದಲ್ಲಿ ಸೂಪರಿಂಟೆಂಡೆಂಟ್‌ರವರನ್ನು ನೇಮಿಸಿತು. ಅಧಿಕಾರಿಗಳ ಸಂಖ್ಯೆಯನ್ನು ೧೬ ರಿಂದ ೨೨ ಕ್ಕೂ ಹಾಗೂ ಸಿಬ್ಬಂದಿಗಳ ಸಂಖ್ಯೆಯನ್ನು ೮೫ ರಿಂದ ೧೨೫ ಕ್ಕೂ ಏರಿಸಲಾಯಿತು.[೨೯] ವಿವಿಧ ದರ್ಜೆಯ ಯುರೋಪಿಯನ್ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ನೀಡುವುದು ಸರ್ಕಾರದ ಉದ್ದೇಶವಾಗಿತ್ತು. ಇದರಿಂದಾಗಿ ಹಾಲಿ ಇದ್ದ ಆ ಪ್ರದೇಶದ ಯುರೋಪಿಯನ್ ಮ್ಯಾಜಿಸ್ಟ್ರೇಟರನ್ನು ಮುಂದುವರಿಸಿ ದ್ದಲ್ಲದೇ ಒಬ್ಬ ಯುರೋಪಿಯನ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರನ್ನು ನೇಮಿಸಿ, ಪೊಲೀಸರು ಅವರೊಂದಿಗೆ ಉತ್ತಮ ಬಾಂಧವ್ಯದಿಂದಿರುವಂತೆ ಮಾಡಲಾಯಿತು. ಇದರಿಂದಾಗಿ ಆ ಪ್ರದೇಶದಲ್ಲಿ ಅಪರಾಧಗಳ ತಡೆ ಮತ್ತು ಪತ್ತೆಕಾರ್ಯದಲ್ಲಿ ಹೆಚ್ಚು ಕಾರ್ಯಕ್ಷಮತೆ ಉಂಟಾಯಿತು. ಒಬ್ಬ ಯುರೋಪಿಯನ್ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು ಕೋಲಾರ ಚಿನ್ನದಗಣಿಗೆ ಪ್ರಯೋಗಾರ್ಥವಾಗಿ ಸರ್ಕಾರವು ನೇಮಿಸಿತು. ನೆರೆಯ ತಾಲೂಕುಗಳಾದ ಬಂಗಾರಪೇಟೆ, ಮಾಲೂರು ಮತ್ತು ಮುಳಬಾಗಿಲುಗಳ ಸರಹದ್ದು ಈತನ ವ್ಯಾಪ್ತಿ ಯೊಳಗೆ ಬರುವಂತೆ ಮಾಡಲಾಯಿತು.[೩೦] ಸರಕಾರವು ಯುರೋಪಿಯನ್ ಅಧಿಕಾರಿಗಳಿಗೆ ರಕ್ಷಣೆ ನೀಡುವುದರ ಜೊತೆಗೆ ಅವರಿರುವ ಸ್ಥಳದಲ್ಲಿ ಅವರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸಲು ಅನುವು ಮಾಡಿಕೊಟ್ಟಿತು.

೧೯೦೨ರ ಮಾರ್ಚ್‌ನಲ್ಲಿ ಕೆ.ಜಿ.ಎಫ್ ಪತ್ತೆದಳಕ್ಕೆ (ಡಿಟೆಕ್ಟೀವ್ ಡಿಪಾರ್ಟ್‌ಮೆಂಟ್) ಸರ್ಕಾರವು ನಿಯಮಗಳನ್ನು ರಚಿಸಿತು. ಈ ಪತ್ತೆದಳದ ನಿಯಂತ್ರಣವು ಡೆಪ್ಯುಟಿ ಕಮಿಷನರ್ ರವರಿಗೆ ಸೇರಿತ್ತು. ಡೆಪ್ಯುಟಿ ಕಮಿಷನರ್ ರವರ

ನಿರ್ದೇಶನದ ಮೇರೆಗೆ ಪೊಲೀಸ್ ಸೂಪರಿಂಟೆಂಡೆಂಟ್‌ನು ಈ ಇಲಾಖೆಯ ನಿಯಂತ್ರಣವನ್ನು ಹೊಂದಿದ್ದನು. ಸಾಮಾನ್ಯ ಮೇಲ್ವಿಚಾರಣೆಯನ್ನು ಐ.ಜಿ.ಪಿ ಯವರು ಮಾಡುತ್ತಿದ್ದರು. ಕೋಲಾರದ ಡೆಪಿಟ್ಯೂ ಕಮಿಷನರ್ ರವರ ಆದೇಶದಂತೆ ಕೆ.ಜಿ.ಎಫ್‌ಗೆ ೧೯೦೨ ರ ಎಪ್ರೀಲ್‌ನಲ್ಲಿ 'ವಿಶೇಷ ಪತ್ತೆದಳ' ಮಂಜೂರಾಯಿತು.[೩೧] ಪೊಲೀಸ್ ಪಡೆಯನ್ನು ಅಲ್ಲಿದ್ದ ಚಿನ್ನದ ಗಣಿಯ ರಕ್ಷಣೆಗಾಗಿಯೇ ರಚಿಸಲಾಯಿತು. ಮತ್ತು ಆ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದ ಯುರೋಪಿಯನ್ನರ ರಕ್ಷಣೆಗಾಗಿ ಒಂದು ಹೊಸದಾದ ಕೆ.ಜಿ.ಎಫ್. ಜಿಲ್ಲೆಯನ್ನೇ ರಚಿಸಲಾಯಿತು. ಪ್ರಾರಂಭದಲ್ಲಿ ಇದು ಕೋಲಾರ ಜಿಲ್ಲಾ ಪೊಲೀಸರೊಂದಿಗೆ ಸೇರಿಕೊಂಡಿದ್ದರೂ ಸಹ ನಂತರ ಇದು ಪ್ರತ್ಯೇಕ ಪೊಲೀಸ್ ಜಿಲ್ಲೆಯಾಯಿತು. ಕೋಲಾರದಲ್ಲಿ ಮೊದಲ ಬಾರಿಗೆ ೧೮೭೬ ರಲ್ಲಿ ಚಿನ್ನದ ಗಣಿ ಕೆಲಸ ಪ್ರಾರಂಭವಾಯಿತು. ಇದರ ರಕ್ಷಣೆಗೆ ಅಗತ್ಯವಾಗಿ ಸರಕಾರವು ೫ ಜನ ಹಿರಿಯ ಅಧಿಕಾರಿಗಳು ಹಾಗೂ ೩೦ ಜನ ಕಾನ್ಸ್‌ಟೇಬಲ್‌ಗಳನ್ನು ಒಳಗೊಂಡಂತೆ ಈ ಗಣಿಯ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ನೇಮಿಸಲಾಯಿತು. ೧೮೯೦ರ ವೇಳೆಗೆ ನವೀಕೃತ ಪಡೆಯನ್ನು ಇದಕ್ಕೆ ಸೇರಿಸಲಾಯಿತು. ೧೮೯೬ ರ ವೇಳೆಗೆ ಈ ಪಡೆಯ ಬಲವು ೬೦ ಕ್ಕೆ ಏರಿತು. ಇದರಲ್ಲಿ ಮೊದಲನೆಯ ದರ್ಜೆಯ ಮೂರು ಜನ ದಫೇದಾರರು, ಎರಡನೆಯ ದರ್ಜೆಯ ಒಬ್ಬರು ದಫೇದಾರರು, ಇಬ್ಬರು ಲ್ಯಾನ್ಸ್ ದಫೇದಾರರು, ೧೫ ಜನ ಪ್ರಥಮ ದರ್ಜೆಯ ಕಾನ್ಸ್‌ಟೇಬಲ್‌ಗಳು, ಎರಡನೇ ದರ್ಜೆಯ ೩೯ ಕಾನ್ಸ್‌ಟೇಬಲ್‌ಗಳು ಇದ್ದರು.[೩೨] ಗಣಿ ಕೆಲಸಗಳು ಹೆಚ್ಚಾಗುತ್ತಾ ಹೋದಂತೆ ಅಲ್ಲಿನ ಸುತ್ತಮುತ್ತ ಲಿನ ಸಮಸ್ಯೆಗಳು ಹೆಚ್ಚಾಗುತ್ತಾ ಹೋಗುತ್ತಿರುವುದನ್ನು ಐ.ಜಿ.ಪಿಯವರು ಗಮನಿಸಿದರು. ಕಳ್ಳತನ, ಹಲ್ಲೆ, ಹೈವೆ ರಾಬರಿಯಂತಹ ಪ್ರಕರಣಗಳು ಸರ್ವೆ ಸಾಮಾನ್ಯವಾದವು. ಆಗ ಇದ್ದ ಪಡೆಗಳಿಂದ ಇದನ್ನು ನಿರ್ವಹಿಸುವುದು ಅತ್ಯಂತ ಕಷ್ಟಕರವಾಗಿದ್ದು ಪಡೆಯನ್ನು ಬಲಪಡಿಸುವುದು ಅನಿವಾರ್ಯವಾಗಿತ್ತು. ಆದ್ದರಿಂದ ೧೮೯೭ ರಲ್ಲಿ ಪಡೆಯ ಬಲವನ್ನು ಹೆಚ್ಚಿಸಲು ಒಂದು ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಪ್ರಥಮ ದರ್ಜೆಯ ಇಬ್ಬರು ಕಾನ್ಸ್ಟೇಬಲ್, ಎರಡನೇ ದರ್ಜೆಯ ೪ ಕಾನ್ಸ್‌ಟೇಬಲ್, ಮೂರನೇ ದರ್ಜೆಯ ೪ ಕಾನ್ಸ್‌ಟೇಬಲ್, ಮೊದಲನೆಯ ದರ್ಜೆಯ ೨೭ ಕಾನ್ಸ್‌ಟೇಬಲ್, ಎರಡನೇ ದರ್ಜೆಯ ೫೦ ಕಾನ್ಸ್‌ಟೇಬಲ್‌ಗಳನ್ನು ಹೆಚ್ಚುವರಿಯಾಗಿ ನೀಡುವಂತೆ ಪ್ರಸ್ತಾಪಿಸಲಾಯಿತು. ಅಲ್ಲದೇ ಮೊದಲನೆಯ ದರ್ಜೆಯ ಒಬ್ಬ ಕಾನ್ಸ್‌ಟೇಬಲ್ ಮತ್ತು ಎರಡನೇಯ ದರ್ಜೆಯ ಇಬ್ಬರು ಕಾನ್ಸ್‌ಟೇಬಲ್‌ಗಳನ್ನು ಸೂಪರಿಂಟೆಂಡೆಂಟ್‌ರವರ ಕಛೇರಿ ಕೆಲಸಕ್ಕೆ ನೇಮಿಸುವಂತೆ ಪ್ರಸ್ತಾವಿಸಲಾಯಿತು. ಕೆ.ಜಿ.ಎಫ್ ನ ಸಹಾಯಕ್ಕೆ ಬಂಗಾರಪೇಟೆಯ ಪೊಲೀಸರ ನೆರವನ್ನು ಕೂಡ ಪಡೆಯಲಾಗುತ್ತಿತ್ತು. ಈ ಪ್ರಸ್ತಾವನೆಗೆ ಸರಕಾರ ವು ಅಂಗೀಕಾರವನ್ನು ನೀಡಿತು.[೩೩]

೧೯೦೦ ನೇ ಇಸವಿಯಲ್ಲಿ ಕೆ.ಜಿ.ಎಫ್‌ನ ಪೊಲೀಸ್ ಪುನರ್‌ಸಂಘಟನೆಯ ಕಾರ್ಯವು ಪುನ: ಪ್ರಾರಂಭವಾಯಿತು. ಹೊರರಾಜ್ಯಗಳಿಂದ ಅಲ್ಲಿಗೆ ಬರುತ್ತಿದ್ದ ಜನಸಂಖ್ಯೆ ಹಾಗೂ ಬೆಳೆಯುತ್ತಿದ್ದ ಚಿನ್ನದ ಗಣಿಗಾರಿಕೆಯಿಂದಾಗಿ ಪಡೆಯ ಬಲವನ್ನು ಹೆಚ್ಚಿಸಲಾಯಿತು. ಕಡೂರಿನ ಜಿಲ್ಲಾಧಿಕಾರಿಗಳನ್ನು ಕೆ.ಜಿ.ಎಫ್ ಪೊಲೀಸ್ ಪಡೆಯ ಅಗತ್ಯಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನೇಮಿಸಲಾಯಿತು. ಅವರು ತಮ್ಮ ವರದಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಯುರೋಪಿಯನ್ ಕೆಲಸಗಾರರನ್ನು ರಕ್ಷಿಸಲು ಹಾಗೂ ಅವರ ಸಾಮಾಜಿಕ, ಸಾಂಸ್ಕ್ರತಿಕ ಚಟುವಟಿಕೆಗಳನ್ನು ರಕ್ಷಿಸುವ ಸಲುವಾಗಿ, ಬೇರೆ ಬೇರೆ ಗಣಿ ಪ್ರದೇಶಗಳಲ್ಲಿ ವಿವಿಧ ರೀತಿಯಲ್ಲಿ ತೆಗೆಯುತ್ತಿದ್ದ ಚಿನ್ನದ ಅದಿರಿನ ಮೇಲ್ವಿಚಾರಣೆ ನೋಡುವ ಸಲುವಾಗಿ, ಗಣಿಯಲ್ಲಿ ಕೆಲಸ ಮಾಡುವ ಕೆಲಸಗಾರರು ಹಾಗೂ ಸುತ್ತಮುತ್ತಲಿನ ನಿವಾಸಿಗಳನ್ನು ಗಮನಿಸುವ ಸಲುವಾಗಿ ಪಡೆಯನ್ನು ಬಲಪಡಿಸಬೇಕೆಂದು ಪ್ರಸ್ತಾವಿಸಿದರು. ಅವರ ಪ್ರಸ್ತಾವನೆಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್‌ರವರನ್ನು ಉನ್ನತ ಸ್ಥಾನದಲ್ಲಿರಿಸಿ ಅವರ ಕೈಕೆಳಗೆ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮತ್ತು ಅವರ ಕಛೇರಿ ಕೆಲಸಕ್ಕೆ ಸಿಬ್ಬಂದಿಗಳು, ಕ್ಷೇತ್ರಕಾರ್ಯ ಮಾಡುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆಯನ್ನು ಏರಿಸಿದರು. ೧೭ ಜನ ಅಧಿಕಾರಿಗಳು

ಮತ್ತು ೮೫ ಸಿಬ್ಬಂದಿಗಳ ಸಂಖ್ಯೆಯನ್ನು ೨೨ ಅಧಿಕಾರಿಗಳು ಮತ್ತು ೧೨೫ ಸಿಬ್ಬಂದಿಗಳಿಗೆ ಏರಿಸಲಾಯಿತು. ಹೆಡ್ ಕಾನ್ಸ್‌ಟೇಬಲ್‌ಗಳಿಗೆ ಸ್ಥಳೀಯ ಭತ್ಯೆಯಾಗಿ ೧ ರೂಪಾಯಿಯನ್ನು ನೀಡಲಾಗುತ್ತಿತ್ತು. ಎರಡು ವರ್ಷಗಳ ನಂತರ ೨ ರೂ, ಮೂರು ವರ್ಷಗಳ ಸೇವೆಯ ನಂತರ ೩ ರೂ, ಮತ್ತು ಐದು ವರ್ಷಗಳ ನಂತರ ಸೇವೆಯನ್ನು ಖಾಯಂಗೊಳಿಸ ಲಾಗುತ್ತಿತ್ತು. ಗೋಲ್ಡ್ ಮೈನಿಂಗ್ ಕಂಪೆನಿಯು ಉತ್ತಮವಾಗಿ ಕಾರ್ಯ ನಿರ್ವಹಿಸುವ ಪೊಲೀಸರಿಗೆ ವಾರ್ಷಿಕವಾಗಿ ೧೨,೦೦೦ ರೂಪಾಯಿ ಬಹುಮಾನವಾಗಿ ನೀಡಲು ನಿರ್ಧರಿಸಿತು. ಈ ನಿರ್ಧಾರವನ್ನು ಸರಕಾರವು ೧೯೦೦ ರ ಆಗಸ್ಟ್‌ನಲ್ಲಿ ಒಪ್ಪಿಕೊಂಡಿತು.[೩೪] ಅಲ್ಲಿನ ಅಪರಾಧಿ ಪತ್ತೆದಳವು ಒಂದು ಚೀಫ್ ಇನ್ಸ್‌ಪೆಕ್ಟರ್, ಒಬ್ಬ ಇನ್ಸ್‌ಪೆಕ್ಟರ್, ಮೂರು ಜನ ಹೆಡ್ ಕಾನ್ಸ್‌ಟೇಬಲ್‌ಗಳು, ೧೫ ಜನ ಕಾನ್ಸ್‌ಟೇಬಲ್‌ಗಳನ್ನು ಹೊಂದಿದ್ದು, ಚಿನ್ನಕಳ್ಳತನಗಳ ಪತ್ತೆ ಮತ್ತು ಅಲ್ಲಿನ ನೌಕರರ ಮೇಲಿನ ಕಣ್ಗಾವಲು ಕೆಲಸಗಳನ್ನು ಮಾಡುತ್ತಿತ್ತು. ಕೆ.ಜಿ.ಎಫ್‌ಗೆ ಅತ್ಯಂತ ಹತ್ತಿರದಲ್ಲಿದ್ದಂತಹ ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಪುನರ್‌ಸಂಘಟಿಸಲು ಯೋಜಿಸಲಾಯಿತು. ಏಕೆಂದರೆ ಕೆಟ್ಟ ನಡತೆಯ ಜನಗಳು ಈ ಊರಿನಲ್ಲಿ ಆಶ್ರಯವನ್ನು ಪಡೆದು ಪೊಲೀಸರ ಕಣ್ಣುತಪ್ಪಿಸಿ ತಮ್ಮ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಆದ್ದರಿಂದ ಇಲ್ಲಿಗೆ ಬಂದು ಹೋಗುವ ಜನರ ಮೇಲೆ ಕಣ್ಗಾವಲು ಇರಿಸಬೇಕಾಗಿತ್ತು. ಆದ್ದರಿಂದ ಅಲ್ಲಿ ಇದ್ದ ಜಮೇದಾರ್ ಹುದ್ದೆಯನ್ನು ರದ್ದುಗೊಳಿಸಲಾಯಿತು. ಇಬ್ಬರು ದಫೇದಾರರು ಮತ್ತು ಒಬ್ಬರು ಎರಡನೇ ದರ್ಜೆಯ ಕಾನ್ಸ್‌ಟೇಬಲ್‌ಗಳನ್ನು ನಗರಕ್ಕೆ ನೇಮಿಸಲಾಯಿತು. ವರ್ಗಾವಣೆ ಗೊಂಡ ಆದೇಶಗಳನ್ನು ರದ್ದುಪಡಿಸಲಾಯಿತು. ಬಂಗಾರಪೇಟೆಯ ಅಮೀಲ್‌ದಾರರನ್ನು ತನ್ನ ಕರ್ತವ್ಯದಿಂದ ಬಿಡುಗಡೆ ಗೊಳಿಸಲಾಯಿತು. ಒಬ್ಬರು ಇನ್ಸ್‌ಪೆಕ್ಟರ್‌ರ ನೇತೃತ್ವದಲ್ಲಿ ಇಡೀ ಪಡೆ ಕೆಲಸ ಮಾಡುವಂತಾಯಿತು. ೧೯೦೩ ರಲ್ಲಿ ಸರಕಾರವು ಈ ಪ್ರಸ್ಥಾವನೆಗೆ ಮಂಜೂರಾತಿಯನ್ನು ನೀಡಿತು.[೩೫] ಈ ಮಂಜೂರಾತಿ ನಂತರ ಬಂಗಾರಪೇಟೆ ಪೊಲೀಸರ ಸಂಖ್ಯೆಯನ್ನು ಏರಿಸಿ ಒಬ್ಬರು ಮೂರನೇ ದರ್ಜೆಯ ಚೀಫ್ ಕಾನ್ಸ್ ಟೇಬಲ್‌ಗೆ ರೂ ೫೦ + ೨೦, ಒಬ್ಬರು ಎರಡನೇ ದರ್ಜೆಯ ಹೆಡ್‌ಕಾನ್ಸ್‌ಟೇಬಲ್‌ಗೆ ರೂ ೨೦ +೧೦ , ಒಬ್ಬರು ಮೂರನೇ ದರ್ಜೆಯ ಹೆಡ್‌ಕಾನ್ಸ್‌ಟೇಬಲ್ ರೂ ೧೬+೧೦, ೫ ಜನ ಮೊದಲನೇ ದರ್ಜೆಯ ಕಾನ್ಸ್‌ಟೇಬಲ್‌ಗೆ ರೂ ೮+೪ , ೧೫ ಜನ ಎರಡನೇ ದರ್ಜೆಯ ಕಾನ್ಸ್‌ಟೇಬಲ್ ರೂ ೭+೪ ಸಂಬಳವನ್ನು ನೀಡಿ ಸೂಪರಿಂಟೆಂಡೆಂಟ್‌ನ ನೇರ ಅಧೀನದಲ್ಲಿ ನೇಮಿಸಲಾಯಿತು.

೨೦ ನೇ ಶತಮಾನದ ಆರಂಭದಲ್ಲಿ ಕೋಲಾರ ಚಿನ್ನದ ಗಣಿ ಅತ್ಯಂತ ವ್ಯಾಪಕವಾಗಿ ಬೆಳೆದು ಬಹು ದೊಡ್ಡ ಕೈಗಾರಿಕೆಯಾಗಿ ಬದಲಾವಣೆ ಹೊಂದಿತು. ಅಷ್ಟೇ ಅಲ್ಲದೇ ಇಲ್ಲಿನ ಜನಸಂಖ್ಯೆಯು ಸಹ ಹೆಚ್ಚುತ್ತಾಹೋಯಿತು. ಇಲ್ಲಿನ ಜನರು ಹೆಚ್ಚಾಗಿ ಬೇರೆ ಭಾಗದಿಂದ ಬಂದು ವಾಸಿಸುತ್ತಿದ್ದುದವರಾಗಿದ್ದರು. ಅವರುಗಳಲ್ಲಿ ಹೆಚ್ಚಿನವರು ಕಳ್ಳತನ ಮೊದಲಾದ ಅಪರಾಧಗಳಲ್ಲಿ ತೊಡಗುವವರಾಗಿದ್ದರು. ಇದರ ಪರಿಣಾಮವಾಗಿ ಇಲ್ಲಿನ ಪೊಲೀಸ್ ಪಡೆಯನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಯಿತು. ಈ ಕಾರಣದಿಂದ ೧೯೦೫ ರಲ್ಲಿ ಹೆಚ್ಚುವರಿಯಾಗಿ ೨೦ ಕಾನ್ಸ್‌ಟೇಬಲ್‌ಗಳನ್ನು ನೀಡಿ ರಾಬರ್ಟ್‌ಸನ್ ಪೇಟ್‌ನಲ್ಲಿ ಪೊಲೀಸ್ ಠಾಣೆಯನ್ನು ತೆರೆಯಲಾಯಿತು. ಅಷ್ಟೇ ಅಲ್ಲದೇ ಮುಂದೆ ಹೆಚ್ಚುವರಿಯಾಗಿ ೪ ಜನ ಹೆಡ್ ಕಾನ್ಸ್‌ಟೇಬಲ್, ೪೦ ಕಾನ್ಸ್‌ಟೇಬಲ್‌ಗಳನ್ನು ಹೆಚ್ಚುವರಿಯಾಗಿ ಇಲ್ಲಿಗೆ ಮಂಜೂರು ಮಾಡಲಾಯಿತು. [೩೬] ಇದಾದ ನಂತರ ಕೆ.ಜಿ.ಎಫ್ ಪೊಲೀಸ್‌ನಲ್ಲಿ ೧೯೩೧ ರವರೆಗೂ ಯಾವುದೇ ಹೆಚ್ಚಿನ ಬದಲಾವಣೆಗಳು ಕಂಡುಬರಲಿಲ್ಲ. ೧೯೩೧ ರಲ್ಲಿ ಐ.ಜಿ.ಪಿರವರು ಕೆ.ಜಿ.ಎಫ್ ಪೊಲೀಸ್ ಮತ್ತು ಬಂಗಾರಪೇಟೆ ತಾಲೂಕು ಪೊಲೀಸ್‌ಗಳಿಗೆ ನಿರ್ಧಿಷ್ಟವಾಗಿ ಭೂಪ್ರದೇಶವನ್ನು ಹಂಚಿದರು. ಮತ್ತು ಕೆ.ಜಿ.ಎಫ್‌ನಲ್ಲಿ ಒಟ್ಟು ನಾಲ್ಕು ಜನ ಇನ್ಸ್‌ಪೆಕ್ಟರ್, ಹತ್ತು ಸಬ್‌ಇನ್ಸ್‌ಪೆಕ್ಟರ್, ಇಬ್ಬರು ಜಮೇದಾರ್, ೩೪ ದಫೇದಾರ್, ೩೧೫ ಕಾನ್ಸ್‌ಟೇಬಲ್‌ಗಳು ಇದ್ದರು. ೨೩ ಜನ ಕಾನ್ಸ್‌ಟೇಬಲ್‌ಗಳನ್ನು ಉಳಿದ ಕಾನ್ಸ್‌ಟೇಬಲ್‌ಗಳು ರಜೆ ಅಥವಾ ಕಾಯಿಲೆ ಹೋದಾಗ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಕಾಯ್ದಿರಿಸಲಾಯಿತು. ತುರ್ತು ಮೀಸಲು ಪಡೆಯಲ್ಲಿ

ಒಬ್ಬರು ಸುಬೇದಾರ್, ಇಬ್ಬರು ದಫೇದಾರ್, ೩೫ ಕಾನ್ಸ್‌ಟೇಬಲ್‌ಗಳನ್ನು ಇಡಲಾಯಿತು.

೬.೩–.೧ : ಪತ್ತೆದಾರಿದಳ

೧೯೦೦ ರಲ್ಲಿ ಕೆ.ಜಿ.ಎಫ್‌ಗೆ ಪತ್ತೆದಾರಿದಳವನ್ನು ಮಂಜೂರು ಮಾಡಲಾಯಿತು.[೬೭] ಇದಕ್ಕೆ ಬೇಕಾದ ಪೊಲೀಸ್ ಸಿಬ್ಬಂದಿಗಳನ್ನು ವಿಶೇಷವಾಗಿ ನೇಮಕಾತಿ ಮಾಡದೇ ಪೊಲೀಸ್ ಇಲಾಖೆಗಳಿಂದಲೇ ಆಯ್ಕೆ ಮಾಡಲಾಗುತ್ತಿತ್ತು. ೧೯೦೨ ರಲ್ಲಿ ಇದಕ್ಕೆ ಪ್ರತ್ಯೇಕವಾಗಿ ಒಬ್ಬರು ಮೊದಲನೇ ದರ್ಜೆಯ ಇನ್ಸ್‌ಪೆಕ್ಟರ್, ಒಬ್ಬರು ಎರಡನೇ ದರ್ಜೆಯ ಇನ್ಸ್‌ಪೆಕ್ಟರ್, ಇಬ್ಬರು ಹೆಡ್‌ಕಾನ್ಸ್‌ಟೇಬಲ್ ಮತ್ತು ಒಂಬತ್ತು ಜನ ಮೊದಲನೇ ದರ್ಜೆಯ ಕಾನ್ಸ್‌ಟೇಬಲ್‌ಗಳನ್ನು ತಾತ್ಕಲಿಕ ನೆಲೆಯಲ್ಲಿ ನೇಮಿಸಲಾಯಿತು. ೧೯೦೯ ರಲ್ಲಿ ಸರಕಾರವು ಈ ವಿಶೇಷ ಪತ್ತೆದಳವನ್ನು ೩ ವರ್ಷಗಳ ಕಾಲ ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿತು. ಇದರ ಅವಧಿಯು ೨೦ ಜುಲಾಯಿ ೧೯೧೨ ಕ್ಕೆ ಮುಕ್ತಾಯವಾಗುತ್ತಿತ್ತು.[೬೮]

ಐ.ಜಿ.ಪಿ ರವರು ಸರಕಾರಕ್ಕೆ ಈ ಪಡೆಯನ್ನು ಒಂದು ಹೆಡ್‌ಕಾನ್ಸ್‌ಟೇಬಲ್ ಮತ್ತು ೬ ಕಾನ್ಸ್‌ಟೇಬಲ್‌ಗಳ ಮಂಜೂರಾತಿಯೊಂದಿಗೆ ೩ ವರ್ಷಗಳ ಕಾಲ ಮುಂದುವರಿಸುವಂತೆ ಮನವಿ ಮಾಡಿದರು. ಈ ಮನವಿಯಲ್ಲಿ ಅವರು ಈ ಪತ್ತೆದಳವು ವಿಶೇಷವಾಗಿ ಗಮನಹರಿಸಿ ೫೯ ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚಿದ ಬಗ್ಗೆ ಹಾಗೂ ಅದರಲ್ಲಿ ೪೩ ಪ್ರಕರಣ ಗಳು ಶಿಕ್ಷೆಯಾದ ಬಗ್ಗೆ, ೮ ಪ್ರಕರಣಗಳು ಖುಲಾಸೆಗೊಂಡ ಬಗ್ಗೆ, ೫ ಕೇಸುಗಳು ಹಿಂಪಡೆದಿದ್ದು, ೩ ಕೇಸು ಬಾಕಿ ಇರುವ ಬಗ್ಗೆ ವಿವರಗಳನ್ನು ನಮೂದಿಸಿದರು. ೬೦ ಜನರಿಗೆ ಶಿಕ್ಷೆ ಆಗಿದ್ದು, ಅದರಲ್ಲಿ ೩೪ ಜನರು ಕದ್ದ ಚಿನ್ನದ ಮಾಲುಗಳನ್ನು ಸ್ವೀಕರಿಸಿದವರಾಗಿದ್ದು, ೬ ಜನ ಬಂಗಾರದ ಕೆಲಸ ಮಾಡುವವರಾಗಿದ್ದರು. ಇವರಿಗೆ ಯಾವುದೇ ಪರವಾನಿಗೆಗಳು ಇರಲಿಲ್ಲ. ಅಷ್ಟೇ ಅಲ್ಲದೇ ಈ ಪಡೆಯು ಜಿಲ್ಲಾ ವ್ಯವಸ್ಥಿತ ಪೊಲೀಸ್‌ನೊಂದಿಗೆ ಅಪರಾಧ ಪತ್ತೆ ಕಾರ್ಯದಲ್ಲಿ ಸಹಾಯ ನೀಡಿದ ಬಗ್ಗೆ ಮತ್ತು ರಹಸ್ಯ ಮಾಹಿತಿಗಳನ್ನು ಸಂಗ್ರಹಿಸಿದ ಬಗ್ಗೆ ವಿವರಗಳನ್ನು ನೀಡಿದರು. ಸರಕಾರವು ಈ ಪಡೆಯ ಮಹತ್ತರ ಕಾರ್ಯ ಗಳನ್ನು ಗಮನಿಸಿ ಐ.ಜಿ.ಪಿ ರವರ ಪ್ರಸ್ತಾವನೆಯಂತೆ ೧೯೧೨ರ ಜುಲಾಯಿ ೨೦ ರಿಂದ ೩ ವರ್ಷಗಳ ಕಾಲ ಮುಂದು ವರಿಸಲು ಅನುಮತಿ ನೀಡಿತು. ಈ ಕಾರ್ಯಕ್ಕಾಗಿ ಚಿನ್ನದ ಗಣಿ ಕಂಪೆನಿಯು ಸರಕಾರಕ್ಕೆ ಪ್ರತೀ ವರ್ಷ ರೂ. ೧೫,೦೦೦ ರೂಪಾಯಿಯನ್ನು ಕೊಡುಗೆಯಾಗಿ ನೀಡುತ್ತಿತ್ತು. *ಸ್ವಾತಂತ್ರ್ಯ ಪೂರ್ವದಲ್ಲಿ ಕೆ.ಜಿ.ಎಫ್ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ – ೧೩ ರಲ್ಲಿ ನೋಡಿ.*

೬. ೪ : ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್

೬.೪–೧– ದ.ಕ ಜಿಲ್ಲೆ ಪೊಲೀಸ್ ಐತಿಹಾಸಿಕ ಹಿನ್ನಲೆ :– ಭಾರತದ ಇತರ ಪ್ರದೇಶಗಳಂತೆಯೇ ಪ್ರಾಚೀನ ತುಳವ ರಲ್ಲೂ ರಾಜನದೇ ಅಗ್ರಸ್ಥಾನವಾಗಿತ್ತು. ಆ ಕಾಲದ ತುಳುನಾಡನ್ನು ಸುಗಮ ಆಡಳಿತಕ್ಕಾಗಿ ನಾಡುಗಳಾಗಿ ವಿಭಜಿಸಲಾಗಿತ್ತು. ಈ ನಾಡುಗಳ ಅಧಿಕಾರ ಸ್ಥಾನದಲ್ಲಿದ್ದವರು 'ನಾಡುಮುದಿಮೆಗೆಯ್ಯುತ್ತಿದ್ದ'ರೆಂದು (ನಾಡನ್ನು ಆಳುತ್ತಿದ್ದರು) ಶಾಸನಗಳಲ್ಲಿ ಉಕ್ತವಾಗಿವೆ. ಊರುಗಳನ್ನು ಮಹಾನಗರ, ನಗರ, ಪುರ ಎಂದು ಗುರುತಿಸಲಾಗಿತ್ತಲ್ಲದೇ ಆ ಊರುಗಳ ಆಡಳಿತಗಾರರನ್ನು ನಾಯಕರೆಂದು ಕರೆಯಲಾಗುತ್ತಿತ್ತು. ಗ್ರಾಮದ ಮುಖ್ಯಸ್ಥನಿಗೆ ಒಡೆಯನೆಂದು, ಗ್ರಾಮದ ಆಡಳಿತ ವರ್ಗಕ್ಕೆ ಸೇರಿದ ಮತ್ತೊಬ್ಬ ಅಧಿಕಾರಿ ಗ್ರಾಮಣಿ, ಊರಾಳುವ ಮತ್ತು ವರ್ಗಡೆ ಅಥವಾ ಹೆಗ್ಗಡೆ, (ಊರಾಳುವನು ಊರನ್ನು ಅಂದರೆ ಗ್ರಾಮವನ್ನು ಆಳುವವನು) ಈ ಅಂಕಿತಗಳು ತುಳುನಾಡಿನ ಶಾಸನಗಳಲ್ಲಿ ವಿರಳವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತುಳುವ ಶಾಸನದಲ್ಲಿ ಕಂಡು ಬರುವ ಪೆರ್ಗಡೆ ಅಥವಾ ಹೆಗ್ಗಡೆ ಗ್ರಾಮಾಧಿಕಾರಿಗೆ ಅನ್ವಯವಾಗುತ್ತದೆ. ಪೊಲೀಸ್ ಅಥವಾ ಆರಕ್ಷಕ ಇಲಾಖೆಯು ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ, ಅಪರಾಧ ಪತ್ತೆ ಮಾಡುವ, ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಿಸುವ ಮತ್ತು ಜನರಿಗೆ ರಕ್ಷಣೆಯನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. ಪ್ರಾಚೀನ ಕಾಲದ ವ್ಯವಸ್ಥೆಯಲ್ಲಿ ಗ್ರಾಮಮಟ್ಟದಲ್ಲಿ

ಊರಿನ ರಕ್ಷಣೆ ಹೊಣೆ ತಳವಾರನದಾಗಿತ್ತು. ಪಟ್ಟಣಗಳಲ್ಲಿ ಹಾಗೂ ನಗರಗಳಲ್ಲಿ ಕೊತ್ವಾಲರು ರಕ್ಷಣೆ ಒದಗಿಸುತ್ತಿದ್ದರು. ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಆಡಳಿತ ನಡೆಸುತ್ತಿದ್ದ ನಾಯಕರು ತಮ್ಮ ಪ್ರದೇಶದ ಶಾಂತಿ ಮತ್ತು ಸುವ್ಯವಸ್ಥೆಗೆ ಜವಾಬ್ದಾರರಾಗಿದ್ದರು. ಇವರು ತಮ್ಮ ಅಧೀನದಲ್ಲಿ 'ಕಾವಲುಗಾರ' ಎಂಬ ಭಟರನ್ನು ನೇಮಿಸಿ ಅವರಿಗೆ ಸಣ್ಣ ಪ್ರದೇಶದ ಉಸ್ತುವಾರಿ ನೀಡುತ್ತಿದ್ದರು. ಇಂತಹ ಕಾವಲುಗಾರರು ಸ್ಥಳೀಯ 'ಅಪರಾಧಿ ಬುಡಕಟ್ಟಿಗೆ' ಸೇರಿದವರಾಗಿದ್ದು ತಮ್ಮ ಜನರಿಂದ ನಡೆಯಬಹುದಾದ ಅಪರಾಧಗಳನ್ನು ತಡೆಯುವ ಹೊಣೆ ಹೊರುತ್ತಿದ್ದರು. ಮತ್ತು ಕಾವಲುಗಾರರ ಅಧೀನದಲ್ಲಿ 'ತಲೈಯಾರಿ' ಎಂಬ ಭಟರಿರುತ್ತಿದ್ದರು, 'ಕಳ್ಳರ ಜಾಡನ್ನು ಕಳ್ಳನೇ ಬಲ್ಲ' ಎಂಬ ನಾಣ್ಣುಡಿಯಂತೆ ಕಳ್ಳರನ್ನು ಕಳ್ಳರೇ ಹಿಡಿಯುತ್ತಿದ್ದ ಈ ವ್ಯವಸ್ಥೆಯು 'ನಾಯನಕಾರ ಪದ್ಧತಿ' ಎಂದು ಹೆಸರಾಗಿತ್ತು. ಮತ್ತು ಕರ್ತವ್ಯ ಪಾಲನೆಯಲ್ಲಾಗುವ ಲೋಪಕ್ಕೆ ಶಿಕ್ಷೆಯಾಗುತ್ತಿತ್ತು. ಇವರ ಕೆಲಸಕ್ಕೆ ಭೂಮಿಯನ್ನು ವೇತನರೂಪದಲ್ಲಿ ನೀಡಲಾಗುತ್ತಿತ್ತು. ಕೆಲವೊಮ್ಮೆ ಆರಕ್ಷಕ ಅಥವಾ ಪಾಡಿಕ್ಕಾವಲ್ ವ್ಯವಸ್ಥೆಯ ಜವಾಬ್ದಾರಿಯನ್ನು ಗ್ರಾಮಸ್ಥರೇ ಗ್ರಾಮದ ಪ್ರಭಾವಿ ವ್ಯಕ್ತಿಗಳಿಗೆ ವಹಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಆಳರಸರು 'ಪಾಡಿಕ್ಕಾವಲ್' ಹಕ್ಕನ್ನು ವ್ಯಕ್ತಿಯೊಬ್ಬನಿಗೆ ಅವನು ಮಾಡಿದ ಸೇವೆಗೆ ಪ್ರತಿಫಲವಾಗಿ ನೀಡುತ್ತಿದ್ದ ವಿಷಯ ತುಳು ನಾಡಿನ ಶಾಸನಗಳಲ್ಲಿ ಉಲ್ಲೇಖವಾಗಿದೆ. ಇವರ ಸೇವೆಗೆ ಜಮೀನನ್ನು ಉಂಬಳಿಯಾಗಿ ನೀಡಲಾಗುತ್ತಿತ್ತು. ಕರ್ತವ್ಯಲೋಪಗಳಿಗೆ ಉಗ್ರರೂಪದ ಶಿಕ್ಷೆ ಕಾದಿರುತ್ತಿತ್ತು. ವಿಜಯನಗರ ಸಾಮ್ರಾಜ್ಯ ಆಡಳಿತಾವಧಿಯಲ್ಲೂ ಈ ವ್ಯವಸ್ಥೆ ಪರಿಣಾಮಕಾರಿಯಾಗಿ ನಡೆಯುತ್ತಿತ್ತು.

೬.೪-೨ - ಬ್ರಿಟೀಷ್ ಆಡಳಿತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ವ್ಯವಸ್ಥೆ

೧೮೬೦ಕ್ಕಿಂತ ಮೊದಲು ಬ್ರಿಟೀಷ್ ಭಾರತದಲ್ಲಿ ಪೊಲೀಸ್ ಇತಿಹಾಸವೆಂದರೆ ಅದು ಸಾಮಾನ್ಯ ಆಡಳಿತಾಂಗದ ಭಾಗವಾಗಿತ್ತು. ಆಗ್ಗಿಂದಾಗ್ಗೆ ಹಲವಾರು ಅಪಯಶಸ್ಸನ್ನು ಕಂಡ ಪ್ರಯೋಗಗಳಿಂದ ಕೂಡಿತ್ತು.[೩೯] ಸಾಮಾನ್ಯ ಆಡಳಿತದ ಭಾಗವಾಗಿದ್ದ ಪೊಲೀಸ್ ಇಲಾಖೆ ಕಲೆಕ್ಟರ್‌ನ ನಿಯಂತ್ರಣದಲ್ಲಿತ್ತು. ಈ ಭಾಗದಲ್ಲಿ ಸರ್‌ಥಾಮಸ್ ಮನ್ರೋ ಹಲವಾರು ಪ್ರಯೋಗಗಳನ್ನು ಮಾಡಿದ. ೧೮೧೬ರ ನಂತರ ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಪೊಲೀಸ್ ಪಡೆ ಅಸ್ತಿತ್ವಕ್ಕೆ ಬಂತು[೪೦]. ೧೮೫೯-೬೦ ರ ವೇಳೆಗೆ ಒಂದು ಪೂರ್ಣ ಪ್ರಮಾಣದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸಂಘಟಿಸಲಾಯಿತು. ನಂತರದ ದಿನಗಳಲ್ಲಿ ಈ ಇಲಾಖೆಯನ್ನು ಕಂದಾಯ ಹಾಗೂ ಮ್ಯಾಜಿಸ್ಟ್ರಿಯಲ್ ಇಲಾಖೆಗಳಿಂದ ಪ್ರತ್ಯೇಕಗೊಳಿಸಲಾಯಿತು. ಪೊಲೀಸರನ್ನು ಕಂದಾಯ ಇಲಾಖೆಯ ಅಧಿಕಾರ ಮತ್ತು ಕರ್ತವ್ಯಗಳಿಂದ ದೂರವಿರಿಸಲಾಯಿತು.

೧೯ನೇ ಶತಮಾನದ ಮಧ್ಯಭಾಗದವರೆಗೆ ಪೊಲೀಸರು ಎಲ್ಲಾ ರೀತಿಯ ಕೆಲಸಗಳನ್ನು ಮಾಡುತ್ತಿದ್ದರು. ಅವರ ಕರ್ತವ್ಯಗಳ ಸ್ವರೂಪಗಳ ಬಗ್ಗೆ ನಿರ್ಧಿಷ್ಟವಾದ ವ್ಯಾಖ್ಯಾನವಿರಲಿಲ್ಲ. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಹೆಚ್ಚುತ್ತಾ ಹೋದಂತೆ ಬ್ರಿಟೀಷರು ಪೊಲೀಸರ ಕರ್ತವ್ಯಗಳ ಸ್ವರೂಪವನ್ನು ನಿಗಧಿ ಗೊಳಿಸುತ್ತಾ ಬಂದರು. ಈ ಪ್ರಾಂತ್ಯದಲ್ಲಿ ಬೆಳೆಯುತ್ತಿರುವ ಹಿತಾಸಕ್ತಿಗೆ ಅನುಗುಣವಾಗಿ ಕೆಲಸ ಮಾಡಲು ಒಂದು ಸಂಘಟಿತವಾದ ಪೊಲೀಸ್ ವ್ಯವಸ್ಥೆ ಜನ್ಮತಾಳಿದ್ದು ೧೮೫೬ ರಲ್ಲಿ ಎನ್ನಬಹುದು. [೪೧] ಅಲ್ಲಿಯವರೆಗೆ ಪ್ರಾಚೀನ ಸಾಂಪ್ರದಾಯಿಕ ಪೊಲೀಸ್ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು. ಹಾಗೂ ಅಪರಾಧಗಳ ತಡೆ ಮತ್ತು ಪತ್ತೆ ಹಾಗೂ ಶಾಂತಿ ಕಾಪಾಡುವುದು ಇವರ ಕರ್ತವ್ಯಗಳೆಂದು ನಿಗದಿಪಡಿಸಿ ಉಳಿದ ಕರ್ತವ್ಯಗಳಿಂದ ವಿಮುಕ್ತಿಗೊಳಿಸಲಾಯಿತು. ೧೮೦೨ ರ ೩೫ ನೇ ಮದ್ರಾಸ್ ರೆಗ್ಯುಲೇಷನ್ ಕಾಯ್ದೆ ಪ್ರಕಾರ ಮದ್ರಾಸ್ ಪ್ರಾಂತ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆತರಲಾಯಿತು. ವಾಸ್ತವವಾಗಿ ಬಂಗಾಳದ ಪೊಲೀಸ್ ವ್ಯವಸ್ಥೆಯನ್ನು ಇಲ್ಲಿಯೂ ಜಾರಿಗೆ ತರಲಾಯಿತು. ಪ್ರತೀ ಜಿಲ್ಲೆಯನ್ನು ೨೦ ಚದರ ಮೈಲಿಗೊಂದರಂತೆ ವಿಭಾಗಗಳಾಗಿ ವಿಂಗಡಿಸಲಾಯಿತು. ಇಂತಹ ಪ್ರತೀ ವಿಭಾಗಗಳಿಗೆ 'ದರೋಗ' ಎಂಬ ಹೆಸರಿನ ಒಬ್ಬ ಅಧಿಕಾರಿ ಮತ್ತು ಒಬ್ಬ 'ಥಾಣಾದಾರ' ಎಂಬವರನ್ನು ನೇಮಿಸಲಾಯಿತು.

ಇವರ ಕೈಕೆಳಗೆ ೨೦ ರಿಂದ ೫೦ ಜನ ಶಸ್ತ್ರದಾರಿ ಪೊಲೀಸರು ಇರುತ್ತಿದ್ದರು. ಇವರೆಲ್ಲರೂ ಕಲೆಕ್ಟರ್‌ನ ನಿಯಂತ್ರಣದಲ್ಲಿ ಕೆಲಸ ಮಾಡಬೇಕಾಗಿತ್ತು.[೪೨] ಈ 'ದರೋಗ'ಗಳನ್ನು 'ಥಾಮಸ್' ಎಂದೂ ಕರೆಯುತ್ತಿದ್ದರು ಎಂಬುದಾಗಿ ಬಿ.ಬಿ.ಮಿಶ್ರ ತಿಳಿಸುತ್ತಾರೆ.[೪೩] ೧೮೦೬ ರಲ್ಲಿ ಮತ್ತು ೧೮೦೮ ರಲ್ಲಿ *ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪೊಲೀಸ್ ಸಿಬ್ಬಂದಿಗಳ ಬಲ*[೪೪] *ಮತ್ತು ಸಂಬಳದ ವಿವರ*[೪೫] *ಗಳ ಬಗ್ಗೆ ಅನುಬಂಧ ೧೪ ಮತ್ತು ೧೫ ನ್ನು ನೋಡಿ*

೬.೪–೩ :– ೧೮೦೪ರ ಟಿ.ಪಿ.ಕೇಟ್ ಕಮಿಟಿ

ಬ್ರಿಟೀಷ್ ಪ್ರಾಂತ್ಯಗಳ ಪೊಲೀಸ್ ಇಲಾಖೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಪೊಲೀಸರ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ವಿಚಾರಣೆ ನಡೆಸಲು ಹಿರಿಯ ನಾಗರೀಕ ಸೇವಾ ಅಧಿಕಾರಿಗಳನ್ನೊಳಗೊಂಡ ಒಂದು 'ಪೊಲೀಸ್ ಕಮಿಟಿ'ಯನ್ನು ೧೮೦೪ ರಲ್ಲಿ ರಚಿಸಲಾಯಿತು.[೪೬] ೧೮೦೬ ರಲ್ಲಿ ಮಂಗಳೂರಿನ ಜಡ್ಜ್ ಹಾಗೂ ಮ್ಯಾಜಿಸ್ಟ್ರೇಟರಾಗಿದ್ದ ಟಿ.ಪಿ.ಕೇಟ್ ಪೊಲೀಸ್ ಬಗ್ಗೆ ನೀಡಿದ ವರದಿ ಏನೆಂದರೆ, ಪೊಲೀಸರ ಮತ್ತು ಥಾಣಾದಾರರ ಕರ್ತವ್ಯ, ಆಯಾ ಪ್ರದೇಶದ ಶಾಂತಿ ಕಾಪಾಡುವುದು. ಅಪರಾಧಗಳನ್ನು ಪತ್ತೆಮಾಡುವುದು, ಗ್ರಾಮಸಿಬ್ಬಂದಿಗಳ ಕೆಲಸವೂ ಇದೇ ಎಂದು ತಿಳಿಸಿದರು. ಮತ್ತು ದಕ್ಷಿಣ ಕನ್ನಡದ ವಿವಿಧ ಮಿಲಿಟರಿ ಠಾಣೆಗಳಿಗೆ ಈ ಕೆಳಕಂಡಂತೆ ಸಂಬಳ ನೀಡಿ ಸಿಬ್ಬಂದಿಗಳನ್ನು ಹಾಗೂ ಅಧಿಕಾರಿಗಳನ್ನು ನೇಮಿಸುವಂತೆ ಈ ಕಮಿಟಿಯು ಸೂಚಿಸಿತು.

	ಸ್ಟಾರ್‌ಪಗೋಡ	ಫನಂ	ಕಾಯಿನ್ಸ್
ಒಬ್ಬ ಕೊತ್ವಾಲ ಮಾಸಿಕ ೮ ಸ್ಟಾರ್ ಪಗೋಡ	೮	–	–
೮ ಪೀವನ್‌ಗಳು	೯	೬	–
ಮುತ್ಸದ್ದಿ	೩	–	–
ಶ್ಯಾನ್‌ಭೋಗ	೨	–	–
ಒಟ್ಟು	೨೨	೬	–

ಪೊಲೀಸು ಆಡಳಿತಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಮೂರು ವಿಭಾಗಗಳಾಗಿ ವಿಭಜಿಸಲಾಯಿತು. ಪ್ರತಿಯೊಂದು ವಿಭಾಗವನ್ನು 'ದರೋಗ' ತನ್ನ ಅಧೀನದಲ್ಲಿರುವ 'ಥಾಣಾಧಾರ'ರು ಮತ್ತು ಪೇದೆಗಳೊಂದಿಗೆ ಮೇಲ್ವಿಚಾರಣೆ ಮಾಡುತ್ತಿದ್ದನು. ಪ್ರತಿಯೊಂದು ವಿಭಾಗವನ್ನು ಅಗತ್ಯಕ್ಕನುಗುಣವಾಗಿ ಹಲವಾರು 'ಥಾಣಾಧಾರ' ಠಾಣೆಯನ್ನಾಗಿ ವಿಭಜಿಸಲಾಗಿತ್ತು. ಪ್ರತಿಯೊಂದು 'ಥಾಣಾಧಾರ'ನ ಠಾಣೆಯು, ಒಬ್ಬ 'ಥಾಣಾಧಾರ' ಮತ್ತು ಅಗತ್ಯ ಪೇದೆ ಗಳನ್ನು ಹೊಂದಿತ್ತು. ಪ್ರತೀ ವಿಭಾಗಗಳನ್ನು ಅಗತ್ಯಕ್ಕೆತಕ್ಕಂತೆ 'ಥಾಣಾಧಾರ ಸ್ಟೇಷನ್'ಗಳೆಂದು ವಿಭಾಗಿಸಲಾಗಿತ್ತು. 'ದರೋಗ', 'ಥಾಣಾಧಾರ' ಮತ್ತು ಪೇದೆಗಳ ನೇಮಕ ಮತ್ತು ವಜಾ ಇವುಗಳನ್ನು ಮ್ಯಾಜಿಸ್ಟ್ರೇಟರು (ದಂಡಾಧಿಕಾರಿ) ಮಾಡುತ್ತಿದ್ದರು.[೪೭] ದರೋಗ ಆಗಲಿ ಅಥವಾ ಯಾರೋ ಪೊಲೀಸು ಅಧಿಕಾರಿಗಳು ಅಪರಾಧಿಗಳ ಮೇಲೆ ಯಾವುದೇ ದಂಡನೆ ಅಥವಾ ಜುಲ್ಮಾನೆಯನ್ನಾಗಲೀ ವಿಧಿಸುವಂತಿರಲಿಲ್ಲ. ಅವರು ದಂಡಾಧಿಕಾರಿಗೆ ಕೇವಲ ದಂಡನೆ ಅಥವಾ ಜುಲ್ಮಾನೆಯ ಬಗ್ಗೆ ಸೂಚಿಸಬಹುದಿತ್ತು.[೪೮] ಕಳ್ಳರು, ಡಕಾಯಿತರಿಗೆ ಶಿಕ್ಷೆಯಾದರೆ ಅವರು ಕದ್ದ ಎಲ್ಲಾ ಮಾಲುಗಳ ಮೌಲ್ಯದ ಶೇಕಡಾ ೧೦ನ್ನು ಕಟ್ಟುವಂತೆ ದರೋಗನು ಸೂಚಿಸಬಹುದಿತ್ತು. ಒಂದು ವೇಳೆ ದರೋಗ ಅಥವಾ ಯಾವುದೇ ಪೊಲೀಸ್ ಅಧಿಕಾರಿಗಳು, ಭ್ರಷ್ಟಾಚಾರ, ಸುಲಿಗೆ ಅಥವಾ ಅಕ್ರಮ ಬಂಧನಗಳ ಆರೋಪದಲ್ಲಿ ಶಿಕ್ಷೆಗೆ ಒಳಗಾದರೆ ಅವರನ್ನು ಕೆಲಸದಿಂದ ತೆಗೆದು ಹಾಕಿ ಕಾನೂನಿನ ಪ್ರಕಾರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗುತ್ತಿತ್ತು. ದರೋಗನು ತಿಂಗಳಿಗೆ ಕನಿಷ್ಟ ಒಂದು ಬಾರಿಯಾದರೂ ತನ್ನ ವ್ಯಾಪ್ತಿಯಲ್ಲಿ ಬರುವ ಠಾಣೆಗಳಿಗೆ ಬೇಟಿ ನೀಡಬೇಕಿತ್ತು. ಸರಕಾರದ ಕೌನ್ಸಿಲ್ (ಗವರ್ನ್‌ಮೆಂಟ್ ಇನ್ ಕೌನ್ಸಿಲ್) ಹೊರಡಿಸಿದ ತಮ್ಮ ಇಲಾಖೆ ಹಾಗೂ ಕರ್ತವ್ಯಗಳಿಗೆ ಸಂಬಂಧಿಸಿದ ಆದೇಶಗಳ ಬಗ್ಗೆ ಜ್ಞಾನ ಹೊಂದಿದವನಾಗಿರಬೇಕಿತ್ತು. ಮತ್ತು ತಮ್ಮ ಕೈಕೆಳಗಿನ ಅಧಿಕಾರಿಗಳ ಬಗ್ಗೆ ತಿಳಿದವನಾಗಿರಬೇಕಿತ್ತು. ಯಾವುದೇ ಪಾಸ್‌ಪೋರ್ಟ್ ಇಲ್ಲದೇ ಪ್ರಯಾಣಿಸುವ ಯುರೋಪಿ

ಯನ್ನರನ್ನು 'ದರೋಗ' ಅಥವಾ ಇತರ ಪೊಲೀಸ್ ಅಧಿಕಾರಿಗಳು ಬಂಧಿಸಬಹುದಿತ್ತು. ಕೇವಲ ಸರ್ಕಾರಿ ಅಧಿಕಾರಿಗಳು ಮಾತ್ರ ಅಗ್ನಿ ಅಸ್ತ್ರಗಳು (ಫೈರ್ ಆರ್ಮ್ಸ್) ಗಳನ್ನು ತೆಗೆದುಕೊಂಡು ಓಡಾಡಬಹುದಿತ್ತು.[೪೯] ಥಾಣಾಧಾರ ಮತ್ತು ಪೀವನ್ ಗಳಿಗೆ ಎಲ್ಲ ತರದ ಆರೋಪಿಗಳನ್ನು ಹಿಡಿಯುವ ಮತ್ತು ತಮ್ಮ ಪ್ರದೇಶದಲ್ಲಿ ಸರಿಯಾದ ದಾಖಲೆಗಳಿಲ್ಲದೇ ಅಲೆದಾಡುವ ವರನ್ನು ಹಿಡಿಯುವ ಅಧಿಕಾರವಿತ್ತು. ಇಂತಹ ಬಂಧಿತ ಆರೋಪಿಗಳನ್ನು ಠಾಣಾದಾರರು ಅಥವಾ ಪೀವನ್‌ಗಳು, ದರೋಗನ ಮುಂದೆ ಹಾಜರುಪಡಿಸಬೇಕಿತ್ತು. ಆರೋಪಿಗಳನ್ನು ತನ್ನ ಬಳಿಗೆ ಹಾಜರುಪಡಿಸಿದ ನಂತರ ೨೪ ಗಂಟೆಯ ಒಳ ಗಾಗಿ ಆತನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಹಾಜರುಪಡಿಸಬೇಕಾಗಿತ್ತು. ಯಾವುದೇ ಡಕಾಯಿತರನ್ನು ಅಥವಾ ಕೊಲೆ ಮಾಡಿದ ವರನ್ನು ಹಿಡಿದರೆ ತಕ್ಷಣವೇ ಠಾಣಾದಾರರಿಗೆ ೧೦ ರೂಗಳ ಬಹುಮಾನ ನೀಡಬೇಕಾಗಿತ್ತು,. ಇದನ್ನು ದರೋಗನ ಆದೇಶ ವಿಲ್ಲದೇ ನೀಡಬಹುದಿತ್ತು.

೧೮೧೨ ರಲ್ಲಿ ದ.ಕ ಜಿಲ್ಲಾ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಒಬ್ಬನೇ ಒಬ್ಬ ದರೋಗ ಇದ್ದನು. ಆಗಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಹಾಗೂ ಜಡ್ಜ್ ಅಗಿದ್ದ ಎ.ವಿಲ್ಸನ್‌ರವರು ದ.ಕ ಜಿಲ್ಲೆ ವಿಸ್ತಾರವಾಗಿದ್ದು ಹಾಗೂ ಸಮಸ್ಯೆಗಳಿಂದ ಕೂಡಿದ್ದರಿಂದ ಹೆಚ್ಚುವರಿಯಾಗಿ ಮೂರು ಜನ ದರೋಗಗಳನ್ನು ನೀಡುವಂತೆ ಸಲಹೆ ನೀಡಿದರು. ವಿಲ್ಸನ್‌ರವರ ಅಭಿಪ್ರಾಯವೇನೆಂದರೆ, " ಪೊಲೀಸ್ ವ್ಯವಸ್ಥೆಯು ಕಠಿಣವಾಗಿರಬೇಕು,. ಹಾಗೂ ಪ್ರಾಮಾಣಿಕತೆಯಿಂದ ಕೂಡಿರಬೇಕು. ದರೋಗರವರುಗಳು ಕೆಳಸ್ತರದ ಅಧಿಕಾರಿಗಳ ಮೇಲೆ ತೀವ್ರ ನಿಗಾ ಇಟ್ಟಿರಬೇಕು. ಇಲಾಖೆಯ ಕಠಿಣತೆ ಹಾಗೂ ಸ್ಥಿರತೆ ಯನ್ನು ಕಾಯ್ದುಕೊಳ್ಳಲು ಹೆಚ್ಚಾಗಿ ಸ್ಥಳೀಯವಾದ ಮಾಹಿತಿ ಹಾಗೂ ಜ್ಞಾನವನ್ನು ಹೊಂದಿರಬೇಕು" ಎಂದು ತಿಳಿಸಿದ್ದರು.[೫೦] ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಪೊಲೀಸರು ಶಸ್ತ್ರಧಾರಿಗಳಾಗಿದ್ದು ಕೆಳಗಿನಂತೆ ಸಂಬಳ ಹೊಂದಿದ್ದರು.

ಹುದ್ದೆ	ಮಾಸಿಕ ಸಂಬಳ	
ದಫೇದಾರ	೬	ರೂ
ಪೀವನ್	೪.೫	ರೂ
೨೬೮ ಶಸ್ತ್ರಧಾರಿ ಕಂದಾಚಾರ ಪೀವನ್‌ಗಳು ರೆವೆನ್ಯು ಇಲಾಖೆಯಲ್ಲಿ ಇದ್ದವರು ಸೇರಿ	೫	ರೂ

ಜಿಲ್ಲಾಧಿಕಾರಿಯ ಕೆಲಸವು ಸಾಕಷ್ಟು ಹೆಚ್ಚಾದಾಗ ೧೮೦೮ ರಲ್ಲಿ ಅವರಿಗೆ ವಹಿಸಲಾಗಿದ್ದ ಪೊಲೀಸು ಅಧಿಕಾರವನ್ನು ಜಿಲ್ಲಾ ನ್ಯಾಯಾಧೀಶರಿಗೆ ವರ್ಗಾಯಿಸಲಾಯಿತು. ಅತ್ಯಾಚಾರವನ್ನು ತಡೆಯಲು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ೧೮೧೨ ರಲ್ಲಿ ಹಲವು ಶಾಸನಗಳನ್ನು ಜಾರಿಗೆ ತರಲಾಯಿತು.[೫೧] ೧೮೧೨ ರಲ್ಲಿ ಅನ್ಯಾಯವನ್ನು ತಡೆದು ಸುವ್ಯವಸ್ಥೆಯನ್ನು ಕಾಪಾಡಲು ಹಲವಾರು ನಿಯಮಗಳನ್ನು ಜಾರಿಗೊಳಿಸಲಾಯಿತು.

೬.೪-೪ : ಪೊಲೀಸ್ ಅಧಿಕಾರಿ ದರೋಗನ ಕರ್ತವ್ಯಗಳು

೧೮೧೨ ರಲ್ಲಿ ಅತ್ಯಾಚಾರ ತಡೆಯಲು ಮತ್ತು ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಹಲವು ಕಾನೂನು ಗಳನ್ನು ರಚಿಸಲಾಯಿತು. ಅದರಲ್ಲಿ ಪ್ರಮುಖವಾದವು ೧) ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಕೆಲಸ ಕಾರ್ಯಗಳನ್ನು 'ದರೋಗ' ನಿಗೆ ಹಾಗೂ ಆತನ ಕೈಕೆಳಗೆ ನಿಯಮಿತವಾಗಿ ನೇಮಿಸಲ್ಪಟ್ಟ ದಫೇದಾರ್ ಹಾಗೂ ಪೀವನ್‌ಗಳಿಗೆ ವಹಿಸ ಲಾಯಿತು. ದರೋಗನು ತನ್ನ ಕೈಕೆಳಗೆ ನೇಮಿಸಲ್ಪಟ್ಟ ಎಲ್ಲಾ ಸಿಬ್ಬಂದಿಗಳನ್ನು ಅವರ ನಡತೆಯನ್ನು ನಿಯಂತ್ರಿಸಬೇಕಿತ್ತು. ಮತ್ತು ತನ್ನ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನಡೆಸಬೇಕಿತ್ತು. ಈತನ ವ್ಯಾಪ್ತಿಗೆ ಒಳಪಡುವ ಭೂ ಪ್ರದೇಶಗಳನ್ನು ಮ್ಯಾಜಿಸ್ಟ್ರೇಟರು ನಿಗಧಿಪಡಿಸುತ್ತಿದ್ದರು. ೨) ದರೋಗರವರುಗಳನ್ನು ಕೆಲಸಕ್ಕೆ ನೇಮಿಸುವ ವೇಳೆ ಅವರು ಗಳು ೫೦೦೦ ರೂಗಳ ಬಂದಪತ್ರ ನೀಡಬೇಕಿತ್ತು. ಕರ್ತವ್ಯಕ್ಕೆ ಸೇರುವ ಮೊದಲು ಮ್ಯಾಜಿಸ್ಟ್ರೇಟರ ಮುಂದೆ ಪ್ರಮಾಣ

ಮಾಡಬೇಕಿತ್ತು. ಇವರು ಯಾವುದೇ ಬೇದಬಾವವಿಲ್ಲದೇ ಏಕತೆಗಾಗಿ ಕೆಲಸ ಮಾಡ ಬೇಕಿತ್ತು. ಇವರು ಪೊಲೀಸ್ ಕೆಲಸಗಳನ್ನು ನಿರ್ವಹಿಸುವ ಸಮಯದಲ್ಲಿ ಯಾವುದೇ ಶುಲ್ಕ, ಬಹುಮಾನ ಇನ್ನಿತರ ಯಾವುದೇ ಉಡುಗೊರೆಗಳನ್ನು ಪಡೆಯುವಂತಿರಲಿಲ್ಲ. ಅಥವಾ ಬೇರೆಯವರಿಗೆ ತಿಳಿದೋ ತಿಳಿಯದೋ ಕೊಡಿಸು ವಂತಿರಲಿಲ್ಲ. ೩) ದರೋಗರವರುಗಳು ತಿಂಗಳಿಗೆ ಒಮ್ಮೆ ತಮ್ಮ ವಿಭಾಗಗಳಲ್ಲಿ ಸಂಚರಿಸಿ ಅಲ್ಲಿರುವ ವಾಸಿಗಳ ಬಗ್ಗೆ ತಿಳಿಯುವುದು, ನಡೆದ ಅಪರಾಧಗಳ ಸ್ವರೂಪ ಹಾಗೂ ಸಂಖ್ಯೆಗಳ ಬಗ್ಗೆ ತಿಳಿದು ಪೊಲೀಸರ ಸಾಮಾನ್ಯ ನಡತೆಗಳ ಬಗ್ಗೆ ತಿಳಿದು ಮ್ಯಾಜಿಸ್ಟ್ರೇಟರಿಗೆ ವರದಿ ಮಾಡುವುದು ಇವರ ಕರ್ತವ್ಯವಾಗಿತ್ತು. ೪) ದರೋಗನು ಯಾವುದೇ ಕೊಲೆ, ರಾಬರಿ ಅಥವಾ ಯಾವುದೇ ಜಾಮೀನಿಯ ಅಪರಾಧಗಳ ಬಗ್ಗೆ ದೂರನ್ನು ಸ್ವೀಕರಿಸಿದರೆ ಆತ ಘಟನೆ ನಡೆದ ಸ್ಥಳಕ್ಕೆ ಹೋಗಬೇಕಿತ್ತು. ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಿ ಆತನ ತಪ್ಪೊಪ್ಪಿಗೆ ಹೇಳಿಕೆಯನ್ನು ಬರೆದುಕೊಳ್ಳಬೇಕಿತ್ತು. ಅಥವಾ ಆತ ಹೇಳಿಕೆ ನೀಡಲು ನಿರಾಕರಿಸಿದರೆ ಅದನ್ನೂ ಬರೆದಿಡಬೇಕಿತ್ತು. ಕಳ್ಳತನದ ಮಾಲುಗಳನ್ನು ವಶಪಡಿಸಿ ಕೊಳ್ಳಬೇಕಿತ್ತು. ಅದನ್ನು ನೇರವಾಗಿ ಮ್ಯಾಜಿಸ್ಟ್ರೇಟ್‌ರಿಗೆ ಸಲ್ಲಿಸಬೇಕಿತ್ತು. ೫) ದರೋಗರವರುಗಳು ತಮ್ಮ ಸರಹದ್ದುಗಳಲ್ಲಿ ನಡೆಯುವ ಪ್ರತಿಯೊಂದು ಪರೀಕ್ಷೆಗಳಲ್ಲಿ ಭಾಗವಹಿಸಬೇಕಿತ್ತು. ಯಾವುದೇ ಅಪರಾಧದ ಆರೋಪ ಹೊತ್ತಿರುವ ಆರೋಪಿಯಿಂದ ತಪ್ಪೊಪ್ಪಿಗೆ ಹೇಳಿಕೆಯನ್ನು ಪಡೆಯಲು ಆತನಿಗೆ ಯಾವುದೇ ರೀತಿ ಬಲಪ್ರಯೋಗ ಮಾಡುವಂತಿರಲಿಲ್ಲ. ಅಥವಾ ಪುಸಲಾಯಿಸುವಂತಿರಲಿಲ್ಲ. ಯಾವುದೇ ಆರೋಪಿಯನ್ನು ೨೪ ಗಂಟೆಗಿಂತ ಹೆಚ್ಚಿಗೆ ಅಕ್ರಮ ಬಂಧನದಲ್ಲಿ ಇಟ್ಟುಕೊಳ್ಳದಂತೆ, ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಬೇಕಿತ್ತು. ಆದರೆ ಅತ್ಯಂತ ಅಗತ್ಯವಾದ ಯಾವುದಾದರೂ ಗ್ಯಾಂಗುಗಳಿಗೆ ಸೇರಿದ ಆರೋಪಿಯಾಗಿದ್ದರೆ ಈ ಸಮಯ ಮೀರಿ ಇಟ್ಟುಕೊಳ್ಳಬಹುದಿತ್ತು. ಪ್ರತೀ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟರಿಗೆ ತಕ್ಷಣ ವರದಿ ಸಲ್ಲಿಸಬೇಕಿತ್ತು. ೬) ದರೋಗನು ತನ್ನ ಕೈಕೆಳಗೆ ಕೆಲಸ ಮಾಡುವ ದಫೇದಾರ್ ಮತ್ತು ಪೀವನ್‌ಗಳ ನಡತೆ, ವರ್ತನೆಗಳ ಬಗ್ಗೆ ಜಾಗೃತವಾಗಿರಬೇಕಿತ್ತು. ಇವರುಗಳು ಠಾಣೆಗೆ ಸರಿಯಾಗಿ ಹಾಜರಾಗುವಂತೆ ನೋಡಿಕೊಳ್ಳಬೇಕಿತ್ತು. ಮತ್ತು ಶಸ್ತ್ರಾಸ್ತ್ರಗಳನ್ನು ಪರಿಶೀಲಿಸಿ ಅವು ಸುಸ್ಥಿತಿಯಲ್ಲಿ ಇವೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಿತ್ತು. ೭) ದರೋಗ ನು ತನ್ನ ವ್ಯಾಪ್ತಿಯಲ್ಲಿ ವಾಸಿಸುವ ಜನರಲ್ಲಿ ಯಾರು ನಿರುದ್ಯೋಗಿಗಳಾಗಿದ್ದರೋ, ಯಾರಿಗೆ ಸರಿಯಾಗಿ ಜೀವನೋಪಾಯ ನಡೆಸಲು ಸಾಕಾಗುವಷ್ಟು ಉತ್ಪಾದನೆ ಇಲ್ಲವೋ, ಅಂತವರ ಬಗ್ಗೆ ಹಾಗೂ ಅವರ ಚಲನವಲನಗಳ ಬಗ್ಗೆ ವಿಶೇಷ ಗಮನ ನೀಡ ಬೇಕಿತ್ತು. ೮) ದರೋಗನು ನೆರೆಹೊರೆಯವರೊಂದಿಗೆ ಯಾವುದೇ ರೀತಿಯ ವ್ಯಾಪಾರ ವಹಿವಾಟು ನಡೆಸುವಂತಿ ರಲಿಲ್ಲ. ೯) ದರೋಗನು ತನ್ನ ಜೇಲ್ಲೆಯಲ್ಲಿ ನಡೆಯುವ ಪ್ರತಿಯೊಂದು ವರ್ಷಾವದಿ ಜಾತ್ರೆ, ಹೆಚ್ಚು ಜನ ಸೇರುವ ಸಮಾರಂಭಗಳಿಗೆ ಖುದ್ದಾಗಿ ಹೋಗಿ ಅಲ್ಲಿನ ಶಾಂತಿ ಸುವ್ಯವಸ್ಥೆ ಕಾಪಾಡಬೇಕಿತ್ತು. ಅಲ್ಲಿ ನಡೆಯುವ ಜೂಜಾಟ, ಕೋಳಿಅಂಕ, ಮದ್ಯಪಾನ ಹಾಗೂ ಇತರ ಅನೈತಿಕ ಚಟುವಟಿಕೆಗಳನ್ನು ಸಾದ್ಯವಾದಷ್ಟು ತಡೆಯಬೇಕಿತ್ತು. ೧೦) ದಫೇದಾರರು ತಾವು ಕೆಲಸಕ್ಕೆ ಸೇರುವ ವೇಳೆ ೧೦೦೦ ರೂಪಾಯಿಗಳ ಬಂಧಪತ್ರ ನೀಡಬೇಕಿತ್ತು. ಆ ನಂತರವರೇ ಕೆಲಸಕ್ಕೆ ಸೇರಬೇಕಿತ್ತು. ಅವರುಗಳು ಪ್ರತೀ ವಾರ ತಮ್ಮ ವಿಭಾಗಗಳಲ್ಲಿ ಪ್ರಯಾಣ ಮಾಡಿ ಯಾವುದೇ ಅಪರಾಧಗಳು ಅಥವಾ ಪೊಲೀಸ್‌ಗೆ ಸಂಬಂಧಿಸಿದ ವಿಷಯಗಳಿದ್ದರೆ ದರೋಗನಿಗೆ ತಿಳಿಸಬೇಕಿತ್ತು. ೧೧) ಪೀವನ್‌ಗಳು ಕೆಲಸಕ್ಕೆ ಸೇರುವ ಮೊದಲು ೧೦೦ ರೂಗಳ ಬಂಧಪತ್ರ ನೀಡಬೇಕಿತ್ತು. ೧೨) ಘಾಟಿಗಳಲ್ಲಿ ಪೊಲೀಸರನ್ನು ನೇಮಿಸುವ ಜವಾಬ್ದಾರಿ ದರೋಗನದ್ದಾಗಿತ್ತು. ದಫೇದಾರ್ ಹಾಗೂ ಪೀವನ್‌ಗಳಿಗೆ ನೀತಿ ಸಂಹಿತೆಗಳಿದ್ದವು. ೧೩) ಘಾಟಿಗಳಲ್ಲಿ ಗಸ್ತು ತಿರುಗುವ ಕೆಲಸಕ್ಕೆ ವಿಶೇಷವಾದ ಪೊಲೀಸ್ ದಳ ರಚಿಸಿದ್ದು ಅದರಲ್ಲಿ ಒಬ್ಬ ದರೋಗ ಕೆಲವು ದಫೇದಾರ ಮತ್ತು ಪೀವನ್‌ಗಳಿದ್ದರು. ಹೆಚ್ಚಾಗಿ ಡಕಾಯಿತರು ಸಂಚರಿಸುವ ದಾರಿಗಳಲ್ಲಿ ಗಸ್ತು ತಿರುಗಬೇಕಿತ್ತು. ೧೪) ಗಸ್ತು ತಿರುಗುವ ಪೊಲೀಸರ ಗುಂಪು ತಮ್ಮ ಸರಹದ್ದಿನ ಎಲ್ಲಾ ಭಾಗಗಳಲಿ ಗಸ್ತು ತಿರುಗಬೇಕಿತ್ತು. ಎಲ್ಲಿಯಾದರೂ ಡಕಾಯಿತರ

ಸಂಚಾರದ ಸುಳಿವು ಸಿಕ್ಕರೆ ತಕ್ಷಣ ಅಲ್ಲಿಗೆ ತೆರಳಬೇಕಿತ್ತು. [೫೨]

೧೮೧೨ ರಲ್ಲಿ ಕೆನರಾ ಜಿಲ್ಲೆಯಲ್ಲಿ ಇದ್ದ ಪೊಲೀಸ್ ಪಡೆಯ ಬಲ ಮತ್ತು ಅವರ ಸಂಬಳದ ವಿವರ ಈ ಕೆಳಗಿನಂತೆ ಇದೆ.

ಸಂಖ್ಯೆ	ಹುದ್ದೆ	ಮಾಸಿಕ ಸಂಬಳ		
		ಸ್ಟಾರ್ ಪಗೋಡ	ಫನಂ	ಕಾಯಿನ್
೧	ದರೋಗ	೮	–	–
೨	ಸೀರ್ ದಫೇದಾರ್ಸ್ ತಲಾ ೩ ಸ್ಟಾರ್‌ಪಗೋಡದಂತೆ	೬	–	–
೧	ಮುತ್ಸದ್ದಿ	೪	–	–
೧೦೮	ದಫೇದಾರ್ಸ್ ತಲಾ ಸ್ಟಾರ್‌ಪಗೋಡ ೧–೩೨–೧೧ ರಂತೆ	೧೮೫	೬	೩೪
೩೭೮	ಪೀವನ್ ತಲಾ ೧–೧೨–೬೮ ರಂತೆ	೪೬೮	–	೧

[೫೩]

೧೮೧೪ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಯಲ್ಲಿದ್ದ ಪೊಲೀಸ್ ಪಡೆಗಳ ಬಲ ಮತ್ತು ಪ್ರಸ್ತಾವಿತ ಬಲಗಳ ತುಲನಾತ್ಮಕ ಪಟ್ಟಿಯನ್ನು ಅನುಬಂಧ– ೧೬ ರಲ್ಲಿ ನೋಡಿ.

೧೮೧೪ ದರೋಗ ಪದ್ಧತಿಯನ್ನು ನಿರ್ದೇಶಕರುಗಳ ಸಭೆ ಟೀಕಿಸಿತು. ಗ್ರಾಮೀಣ ಪೊಲೀಸ್ ಪದ್ಧತಿಯನ್ನು ಬೆಂಬಲಿಸಿತು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಇಲ್ಲದಿರುವುದನ್ನು ಇದು ಗುರುತಿಸಿತು. ಬಹಳ ಕಡಿಮೆ ಸಂಖ್ಯೆಯಿಂದ ಕೂಡಿದ್ದ ದರೋಗ ಹಾಗೂ ಪೀವನ್‌ಗಳಿಂದ ಶಾಂತಿ ಕಾಪಾಡುವುದು ಕಷ್ಟಸಾಧ್ಯವಾಗಿತ್ತು. ಇದಕ್ಕೆ ಸ್ಥಳೀಯ ಜನರ ಸಹಕಾರ ಮತ್ತು ಅವರೊಂದಿಗೆ ಉತ್ತಮ ಬಾಂಧವ್ಯಬೇಕಿತ್ತು. ಕಡಿಮೆ ಸಂಬಳ ನೀಡಿ ಹೆಚ್ಚಿನ ಅಧಿಕಾರ ನೀಡಿದ್ದರಿಂದ ಅವರು ಅಧಿಕಾರ ದುರುಪಯೋಗಪಡಿಸಿಕೊಂಡು, ಸ್ವಂತ ಹಿತಾಸಕ್ತಿಗಳಿಗೆ ಅಧಿಕಾರ ಬಳಸುತ್ತಿದ್ದರು. ಗ್ರಾಮೀಣ ಮಟ್ಟದಲ್ಲಿ ಪೊಲೀಸ್ ಪಡೆಯ ಶಕ್ತಿಯನ್ನು ಪುನರ್‌ಪರಿಶೀಲಿಸಿ, ಜಿಲ್ಲಾ ಮಟ್ಟದಲ್ಲಿ ಕಲೆಕ್ಟರ್‌ನ ಕೆಲಸಗಳನ್ನು ಮ್ಯಾಜಿಸ್ಟ್ರೇಟನು ನಿಯಂತ್ರಿಸಬೇಕೆಂದು ಈ ಸಭೆ ಅಭಿಪ್ರಾಯಪಟ್ಟಿತು.[೫೪] ಈ ಹಿಂದೆ ಹೇಳಿದಂತೆ ಮ್ಯಾಜಿಸ್ಟ್ರೇಟನ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್ ಕೆಲಸಗಳು ಜಡ್ಜ್‌ರ ಬಳಿ ಇದ್ದವು. ೧೮೧೬ರ ಅಕ್ಟೋಬರ್ ೩೧ ರ ವೇಳೆಗೆ ೧೮೧೪–೧೬ ರಲ್ಲಿ ಸರ್ ಥಾಮಸ್ ಮನ್ರೋ ಇದನ್ನು ಗಮನಿಸಿದನು. ಜಡ್ಜ್‌ರಿಗೆ ಈ ಕೆಲಸಗಳನ್ನು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಿರಲಿಲ್ಲ ಮತ್ತು ದೇಶದ ನಗರಸಭೆ (ಮುನ್ಸಿಫಲ್) ಗಳ ಜವಾಬ್ದಾರಿಯು ಕಲೆಕ್ಟರ್‌ನ ಬಳಿ ಇತ್ತು.[೫೫] *ದಕ್ಷಿಣ ಕನ್ನಡ ಜಿಲ್ಲೆಯ ಜಡ್ಜ್‌ರ ಅಧೀನದಲ್ಲಿದ್ದ ಪೊಲೀಸ್ ಪಡೆಯ ಬಲ ಮತ್ತು ಸಂಬಳದ ವಿವರದ ಬಗ್ಗೆ ಅನುಬಂಧ – ೧೭ ನೋಡಿ)*

ನ್ಯಾಯಾಂಗದ ಮತ್ತು ಪೊಲೀಸ್ ಆಡಳಿತವನ್ನು ಈಗ ಇರುವ ಸೌಲಭ್ಯಗಳಿಂದ ಒಟ್ಟಿಗೆ ನಡೆಸಲು ಸಾಧ್ಯವಿಲ್ಲವೆಂದು ಸರ್ ಥಾಮಸ್ ಮನ್ರೋ ಅಭಿಪ್ರಾಯಪಟ್ಟನು. ಆದ್ದರಿಂದ ಜಡ್ಜ್‌ರವರನ್ನು ಅವರ ನ್ಯಾಯಾಂಗದ ಕೆಲಸಗಳಿಗೆ ಮಾತ್ರ ಸೀಮಿತಗೊಳಿಸಿ, ಮ್ಯಾಜಿಸ್ಟ್ರೇಟ್ ಮತ್ತು ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರ ಕರ್ತವ್ಯಗಳನ್ನು ಜಡ್ಜ್‌ರಿಂದ ಪ್ರತ್ಯೇಕಗೊಳಿಸಿ ಆ ಎರಡೂ ಕೆಲಸಗಳನ್ನು ಒಟ್ಟಿಗೆ ಸೇರಿಸಿ ಕಲೆಕ್ಟರ್‌ಗೆ ನೀಡಬೇಕೆಂದು ಸಲಹೆ ನೀಡಿದನು. ಮನ್ರೋನು ಇದು ಬ್ರಿಟೀಷ್ ಸಾಮ್ರಾಜ್ಯದಲ್ಲಿ ಮತ್ತು ಸ್ಥಳೀಯ ಪ್ರಾಂತ್ಯಾಡಳಿತಗಳಲ್ಲಿ ಸರ್ವೆ ಸಾಮಾನ್ಯವಾಗಿತ್ತೆಂದು ತಿಳಿಸಿದ. ಅಷ್ಟೇ ಅಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಸಣ್ಣಪುಟ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಮತ್ತು ಕಲೆಕ್ಟರ್‌ಗೆ ಸಂಬಂಧಿಸಿದಂತೆ ಈ ಬದಲಾವಣೆ ಅನ್ವಯಿಸುತ್ತದೆಂದು ಮನ್ರೋ ತಿಳಿಸಿದ. ಇದರಿಂದಾಗಿ ಜಡ್ಜ್‌ಗಳು ಇದುವರೆಗೆ ತಮ್ಮ ಹೆಚ್ಚಿನ ಸಮಯವನ್ನು

ಸಣ್ಣಪ್ರಕರಣಗಳ ವಿಚಾರಣೆಗಾಗಿಯೇ ವ್ಯಯಮಾಡುತ್ತಿದ್ದರು. ಇದರಿಂದ ಅವರಿಗೆ ಮುಕ್ತಿಸಿಕ್ಕಿತು. ಮನ್ರೋನು ಮುಂದು ವರೆದು ತಿಳಿಸಿದ್ದೇನೆಂದರೆ, ಜಡ್ಜ್‌ರಿಗಿಂತ ಮ್ಯಾಜಿಸ್ಟ್ರೇಟನು ಪೊಲೀಸ್ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾರೆಂದನು. ಪಟೇಲ ಮತ್ತು ಕರ್ನಮ್‌ಗಳನ್ನು ಇಬ್ಬರು ಅಧಿಕಾರಿ ಗಳ ಕೈಕೆಳಗೆ ಸೇವೆ ಮಾಡುವುದರಿಂದ ಮುಕ್ತಿ ನೀಡಬಹುದೆಂದನು. ಕಲೆಕ್ಟರ್‌ನ ಬಳಿ ಕಂದಾಯ ವಿಚಾರಗಳಿಗಾಗಿ ಹಾಗೂ ಜಡ್ಜ್‌ನ ಬಳಿ ಪೊಲೀಸ್ ವಿಷಯಗಳಿಗಾಗಿ ಕೆಲಸ ಮಾಡುತ್ತಿದ್ದು, ದುರ್ಬಲವಾಗಿದ್ದ ಈ ಎರಡೂ ವಿಭಾಗ ಗಳನ್ನು ಬಲಪಡಿಸಿ ಸರ್ಕಾರವನ್ನು ಶಕ್ತಗೊಳಿಸಬೇಕು ಎಂದನು.

ಈ ದೇಶದಲ್ಲಿ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್‌ರವರುಗಳ ಅಧಿಕಾರದ ಅಸಾಮಾನ್ಯವಾದುದೆಂದು ಕಾಣುತ್ತದೆ. ಆದರೆ ಭಾರತದಲ್ಲಿ ಮುನ್ಸಿಫಲ್ ಸಂಸ್ಥೆಯ ಕೆಲಸಗಳೂ ಸಹ ಇದೇ ವ್ಯಕ್ತಿಗಳಲ್ಲಿ ಇತ್ತು. ಇದನ್ನು ಹೀಗೆ ಮುಂದುವರೆ ಸುವುದು ಸೂಕ್ತ. ಅಧಿಕಾರಗಳನ್ನು ಪ್ರತ್ಯೇಕಿಸುವುದಕ್ಕಿಂತಲೂ ಒಟ್ಟಿಗೆ ಸೇರಿಸುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದೆಂಬುದು ಮನ್ರೋನ ಅಭಿಪ್ರಾಯವಾಗಿತ್ತು. "ನಾವು ಇಂಗ್ಲೀಷ್ ನೀತಿ ಭಾರತದ ಎಲ್ಲೆಡೆಗೆ ಅನ್ವಯಿಸಬೇಕೆಂದು ಅಂದುಕೊಂಡಿಲ್ಲ. ಆದರೆ ಈಗ ಇರುವಂತೆ ಈ ನೀತಿಗಳು ಭಾರತದಲ್ಲಿ ಅತ್ಯಂತ ಅಗತ್ಯವಿರುವಲ್ಲಿ ಆ ನಿಯಮಗಳನ್ನು ಪಾಲಿಸಬೇಕು" ಎಂದನು.[೨೬]

ಮನ್ರೋನು ಜಡ್ಜ್ ಹಾಗೂ ಮ್ಯಾಜಿಸ್ಟ್ರೇಟರ ಕೆಲಸಗಳು ಪೂರ್ಣ ಅಸಂಬದ್ಧತೆಯಿಂದ ಕೂಡಿದೆ ಎಂದು ಒತ್ತಿ ಹೇಳಿದ. ಮತ್ತು ಮ್ಯಾಜಿಸ್ಟ್ರೇಟರ ಕೆಲಸಗಳನ್ನು ಕಲೆಕ್ಟರ್‌ಗೆ ವರ್ಗಾಯಿಸಬೇಕೆಂದು ಪ್ರತಿಪಾದಿಸಿದ. ಹಿಂದೂ ಆಡಳಿತದಲ್ಲಿ ಪೊಲೀಸ್ ಮತ್ತು ಕಂದಾಯದ ಕರ್ತವ್ಯಗಳು ಒಂದಕ್ಕೊಂದು ಅಂಟಿಕೊಂಡಿವೆ. ಗ್ರಾಮದ ಕಾವಲುಗಾರ, ಪಟೇಲ ಹಾಗೂ ಕರ್ನಮ್‌ರವರುಗಳು ಪೊಲೀಸ್ ಹಾಗೂ ಕಂದಾಯ ಇಲಾಖೆಯ ಸೇವಕರಾಗಿದ್ದರು. ತಹಶಿಲ್ದಾರನ ಕರ್ತವ್ಯ ವೂ ಸಹ ಹಾಗೆ ಇದ್ದಿತು. ಕಲೆಕ್ಟರ್‌ನ ಕೈಕೆಳಗಿನ ಪೊಲೀಸರು, ಅಮಿಲ್‌ದಾರ, ಪಟೇಲ ಗ್ರಾಮದ ಕಾವಲುಗಾರರಿಗೆ ಜನರ ಸಹಕಾರ ದಿಂದ ಉದ್ಯೋಗ ಪಡೆಯುವ ಅವಕಾಶಗಳಿದ್ದವು. ಆದಾಗ್ಯೂ ಕಲೆಕ್ಟರರು ಪೂರ್ಣ ನಿಯಂತ್ರಣ ಹೊಂದಿದ್ದನು.

ಮನ್ರೋನು ಮದ್ರಾಸ್ ಜ್ಯುಡಿಷಿಯಲ್ ರೆಗ್ಯುಲೇಷನ್‌ನಡಿ ಸ್ಥಾಪಿತವಾದ ಹೊಸ ಪೊಲೀಸ್ ವ್ಯವಸ್ಥೆಯು ಪೂರ್ಣ ವಾಗಿ ಇದಕ್ಕೆ ವಿರುದ್ಧವಾಗಿದ್ದು ಯಾವುದೂ ಈ ವ್ಯವಸ್ಥೆಯ ಪರವಾಗಿರಲಿಲ್ಲ. ಇದು ಜನರ ಭಾವನೆಗಳಿಗೆ ವಿರುದ್ಧವಾಗಿದೆ ಎಂದು ಹೇಳಿದನು. ಇದರಲ್ಲಿ ಬಾಡಿಗೆಗೆ ಪಡೆದ ದರೋಗ ಹಾಗೂ ಪೀವನ್‌ಗಳ ಮೇಲೆ ಅವಲಂಬಿತವಾಗಿರುವುದರಿಂದ ಅವರಿಗೆ ಸ್ಥಳೀಯ ವಾಸಿಗಳ ಹಿತಾಸಕ್ತಿ ಬಗ್ಗೆ ಕಾಳಜಿಯಿಲ್ಲ.[೨೭] ಎಂದನು. ಈತ ೧೮೧೩ ರ ರಿವಿಜನ್ ಆಫ್ ದಿ ಜ್ಯುಡಿಷಿಯಲ್ ಸಿಸ್ಟಂ ಎಂಬ ತನ್ನ ಮನವಿಯಲ್ಲಿ ಹೊಸ ಪೊಲೀಸ್ ವ್ಯವಸ್ಥೆಯು ಸರ್ಕಾರದ ಪ್ರಭುತ್ವ ಕಾಯ್ದುಕೊಳ್ಳಲು ಹಾಗೂ ಸ್ಥಳೀಯ ವಾಸಿಗಳನ್ನು ರಕ್ಷಿಸಲು ಹಳೆಯ ಪೊಲೀಸ್ ಪದ್ದತಿಯಷ್ಟು ಸಮರ್ಪಕವಾಗಿಲ್ಲ ಎಂದು ವಾದಿಸಿದನು.[೨೮] ಮನ್ರೋನು ಈಗ ಇರುವ ಪೊಲೀಸ್ ಪಡೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಬದಲು ಅಲ್ಪಸ್ವಲ್ಪ ಬದಲಾವಣೆ ಗಳೊಂದಿಗೆ ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೆಂದು ಬಲವಾಗಿ ಪ್ರತಿಪಾದಿಸಿದನು. ಇದು ನಾಡಿನಲ್ಲಿ ಅಸ್ತಿತ್ವ ದಲ್ಲಿದ್ದ ಕಂದಾಯ ಆಡಳಿತಕ್ಕೆ ಪೂರಕವಾಗಿತ್ತು. ಮನ್ರೋನ ಸಲಹೆಗಳು ಮತ್ತು ವಾದಗಳು ಮದ್ರಾಸ್ ಸರಕಾರಕ್ಕೆ ಒಪ್ಪಿಗೆ ಯಾಯಿತು. ಅದು ೧೮೧೬ ರ ೯ ನೇ ಕಾಯ್ದೆ ಪ್ರಕಾರ ಗ್ರಾಮದ ಕಾವಲುಗಾರರ ಹಳೇಯ ಪೊಲೀಸ್ ಪದ್ಧತಿಯನ್ನು ಉಳಿಸಿಕೊಂಡು ಬಂತು. ಆ ಪದ್ಧತಿ ಬಹುತೇಕ ವಂಶಪಾರಂಪರ್ಯವಾಗಿತ್ತು. ಜಿಲ್ಲಾ ಜಡ್ಜ್‌ರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರ ಹಾಗೂ ಪೊಲೀಸರ ಅಧಿಕಾರಗಳನ್ನು ತೆಗೆದು ಜಿಲ್ಲಾ ಕಲೆಕ್ಟರ್‌ನಿಗೆ ನೀಡಲಾಯಿತು. ಕಲೆಕ್ಟರ್, ಉಪಕಲೆಕ್ಟರ್, ತಹಶಿಲ್ದಾರ (ಜಿಲ್ಲಾ ಪೊಲೀಸ್ ಮುಖ್ಯಸ್ಥ) ಪಟೇಲ (ಗ್ರಾಮದ ಮುಖ್ಯಸ್ಥ) ಮತ್ತು ಇತರ ಅಧಿಕಾರಿಗಳಲ್ಲಿ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸರ ಅಧಿಕಾರಗಳು ಇದ್ದವು.[೨೯] ಕಂದಾಯ, ಮ್ಯಾಜಿಸ್ಟ್ರೇಟ್ ಅಧಿಕಾರಗಳು ಮತ್ತು ಪೊಲೀಸ್ ಅಧಿಕಾರಗಳು ಒಂದು

ಗುಂಪಿನ ಅಧಿಕಾರಿಗಳಲ್ಲಿ ಉಳಿಯಿತು. ಸೈಂಟ್ ಪೋರ್ಟ್ ಜಾರ್ಜ್‌ನ ಆದೇಶದಂತೆ ಇದೇ ಮದ್ರಾಸ್ ಪ್ರಾಂತ್ಯದಲ್ಲಿ ೧೮೧೬ ರಲ್ಲಿ ಸಾಮಾನ್ಯ ಪೊಲೀಸ್ ಪದ್ಧತಿ ಜಾರಿಗೆ ತರಲಾಯಿತು. ದರೋಗ ವ್ಯವಸ್ಥೆಯನ್ನು ರದ್ದುಮಾಡಲಾಯಿತು. ದರೋಗರನ್ನು ಠಾಣಾದಾರರ ಹಾಗೂ ಗ್ರಾಮದ ಮುಖ್ಯಸ್ಥನ ಬಳಿಗೂ, ತಹಶಿಲ್ದಾರ, ಜಮೀಲ್‌ದಾರ, ಪೊಲೀಸ್ ಅಮೀನ, ಕೊತ್ವಾಲರನ್ನು ಮ್ಯಾಜಿಸ್ಟ್ರೇಟ್‌ರವರ ಸಹಾಯಕರನ್ನಾಗಿ ಮಾಡಿ ವರ್ಗಾಯಿಸಲಾಯಿತು. ಸ್ಥಳೀಯ ಪೊಲೀಸ್ ಮುಖ್ಯಸ್ಥರ ಮಾರ್ಗದರ್ಶನದಲ್ಲಿ ನಿಯಮಗಳನ್ನು ರಚಿಸಲಾಯಿತು. ಇವರುಗಳು ಎಲ್ಲಾ ವ್ಯಾಜ್ಯಗಳ ತನಿಖೆ, ನ್ಯಾಯಾಲಯದಿಂದ ಬಂದ ಪ್ರಕರಣಗಳ ತನಿಖೆ, ಅಪರಾಧಿಗಳ ಪತ್ತೆಗಳನ್ನು ಮಾಡುತ್ತಿದ್ದುದಲ್ಲದೇ ಗ್ರಾಮದ ಪೊಲೀಸ್ ಮುಖ್ಯಸ್ಥನಿಗೆ ಕೆಲವು ವಿಶೇಷ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ಲಘುಪ್ರಕರಣಗಳ ಇತ್ಯರ್ಥಪಡಿಸುವ ಅಧಿಕಾರವಿತ್ತು. ಮುಂದೆ ಇದನ್ನು ದೈಹಿಕ ಶಿಕ್ಷೆ ಹಾಗೂ ಹತ್ತು ದಿನಗಳ ವರೆಗೆ ಕಾರಾಗೃಹ ಶಿಕ್ಷೆ ವಿಧಿಸುವವರೆಗೆ ವಿಸ್ತರಿಸಲಾಯಿತು. ಸಣ್ಣ ಕಳ್ಳತನದ ಪ್ರಕರಣವಾಗಿದ್ದರೆ ಕದ್ದ ವಸ್ತುವಿನ ಮೌಲ್ಯ, ಐದು ರೂ ಮೀರದಿದ್ದರೆ ಇಂತಹ ಲಘು ಪ್ರಕರಣಗಳಿಗೆ ಮೂರು ರೂಪಾಯಿ ವರೆಗೆ ದಂಡ ವಿಧಿಸುವ ಅಧಿಕಾರ ಈತನಿಗೆ ಇತ್ತು. [೬೦]

ಮನ್ರೋನ ಸಲಹೆಗಳನ್ನು ೧೮೧೬ ರಲ್ಲಿ ಒಪ್ಪಿಕೊಳ್ಳಲಾಯಿತು. ಪೊಲೀಸ್ ಸೂಪರಿಂಟೆಂಡೆಂಟ್‌ನ ಬಳಿ ಇದ್ದ ಮ್ಯಾಜಿಸ್ಟ್ರೇಯಲ್ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ವರ್ಗಾಯಿಸಲಾಯಿತು. 'ದರೋಗ' ಹುದ್ದೆಯನ್ನು ರದ್ದು ಗೊಳಿಸಲಾಯಿತು. 'ಗ್ರಾಮೀಣ ಪೊಲೀಸ್'ರನ್ನು ಪಟೇಲನ ನೇರ ನಿರ್ದೇಶನಕ್ಕೆ ಒಪ್ಪಿಸಲಾಯಿತು. ಜಿಲ್ಲೆಯಲ್ಲಿ 'ತಹಶಿಲ್ದಾರನ' ನಿರ್ದೇಶನಕ್ಕೆ ಒಪ್ಪಿಸಲಾಯಿತು. ಸಂಸ್ಥಾನದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಕಲೆಕ್ಟರ್‌ನ ನಿರ್ದೇಶನಕ್ಕೆ ಒಪ್ಪಿಸಲಾಯಿತು.[೬೧] ೧೮೧೬ ರಲ್ಲಿ ಮದ್ರಾಸ್‌ನ ಪೋರ್ಟ್ ಸೈಂಟ್ ಜಾರ್ಜ್ ಸರಕಾರಕ್ಕೆ ಒಳಪಟ್ಟು ಪ್ರದೇಶದಾದ್ಯಂತ ಸಾಮಾನ್ಯ ಪೊಲೀಸ್ ಪದ್ಧತಿಯು ಜಾರಿಗೆ ಬಂದಿತು. [೬೨]

೬.೪-೫ :-ಅಮೀನ್‌ದೀವ್ ದ್ವೀಪಗಳಲ್ಲಿ ಪೊಲೀಸ್

ಈ ಕಾಲದಲ್ಲಿ ಅಮೀನ್‌ದೀವ್ ದ್ವೀಪಗಳ ಗುಂಪು ಸೌತ್ ಕೆನರಾಕ್ಕೆ ಸೇರಿದ್ದು ಅಲ್ಲಿನ ಪೊಲೀಸ್ ಕೆಲಸಗಳನ್ನು 'ಮ್ಯಾನೇಜರ್' ಎಂದು ಕರೆಯುವ ಕಂದಾಯ ಅಧಿಕಾರಿ ನೋಡಿಕೊಳ್ಳುತ್ತಿದ್ದನು. ಈತನಿಗೆ ಸಹಾಯಕನಾಗಿ 'ಅಮೀನ' ಎಂಬ ಅಧಿಕಾರಿ ಇದ್ದನು. ಈತನಿಗೆ ಒಟ್ಟು ಮಾಸಿಕವಾಗಿ ಹತ್ತು ಪಗೋಡ ವೇತನ ನೀಡುತ್ತಿದ್ದರು. ಅದರಲ್ಲಿ ಐದು ಪಗೋಡಗಳು ಅವನ ಕಂದಾಯ ಇಲಾಖೆಯ ಕೆಲಸಕ್ಕೂ ಐದು ಪಗೋಡಗಳು ಪೊಲೀಸ್ ಇಲಾಖಾ ಕೆಲಸಕ್ಕೂ ನೀಡಲಾಗುತ್ತಿತ್ತು. ಮ್ಯಾನೇಜರ್ ಮತ್ತು ಅಮೀನನಿಗೆ ಸಹಾಯಕನಾಗಿ ನಾಲ್ಕು ಜನ ಪೀವನ್‌ಗಳು ಹಾಗೂ ಒಬ್ಬ ರಿಜಿಸ್ಟ್ರಾರ್ ಹಾಗೂ ಗುಮಾಸ್ತರಿದ್ದರು.[೬೩]

೬.೪-೬ :- ೧೮೫೪ ರ ಪೊಲೀಸ್ ಆಯೋಗ

೧೮೧೬ ರಲ್ಲಿ ಪ್ರಾರಂಭವಾದ ಈ ಸೊಲೀಸ್ ವ್ಯವಸ್ಥೆಯು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದವರೆಗೆ ಮುಂದುವರಿದುಕೊಂಡು ಬಂದಿತು. ಆದರೆ ಭ್ರಷ್ಟಾಚಾರ, ಹಿಂಸೆ, ಸ್ವಜನಪಕ್ಷಪಾತಗಳಿಂದಾಗಿ ಬಳಲುತ್ತಿತ್ತು. ಇದು ಕಂದಾಯ ಮತ್ತು ನ್ಯಾಯಾಂಗ ಇಲಾಖೆಗಳನ್ನೂ ಸಹ ಬಿಟ್ಟಿರಲಿಲ್ಲ. ಆದ್ದರಿಂದ ಮದ್ರಾಸ್ ಸರಕಾರವು ೧೮೫೪ ರಲ್ಲಿ ಇ.ಎಫ್. ಎಲಿಯಟ್, ಹೆಚ್.ಸ್ಟೋಕ್ಸ್ ಮತ್ತು ಜಾನ್‌ಬ್ರೂಸ್ ನಾರ್ಟನ್ ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿತು. ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿದ್ದ ಹಿಂಸೆ, ಪೊಲೀಸರು, ಮ್ಯಾಜಿಸ್ಟ್ರೇಟರು, ಕಂದಾಯ ಅಧಿಕಾರಿಗಳಿಂದ ಸ್ಥಳೀಯ ಜನರಿಗೆ ಆಗುತ್ತಿದ್ದ ಕಿರುಕುಳ, ಹಿಂಸೆಯ ಆಮೂಲಾಗ್ರ ತನಿಖೆ ನಡೆಸಲು ಈ ಆಯೋಗಕ್ಕೆ ಸೂಚಿಸಲಾಯಿತು. ಈ ಆಯೋಗವು ೧೮೫೫ರ ಎಪ್ರೀಲ್ ೧೬ ರಂದು ತನ್ನ ವರದಿಯನ್ನು ಸಲ್ಲಿಸಿತು. ಅದರಲ್ಲಿ ತಿಳಿಸಿದ ವಿಷಯಗಳೇನೆಂದರೆ,

ಹಿಂಸೆಯು ಸರ್ವೆ ಸಾಮಾನ್ಯವಾಗಿದ್ದು, ಪೊಲೀಸ್ ಪ್ರಕರಣಗಳಿಗಿಂತಲೂ ಕಂದಾಯ ಪ್ರಕರಣಗಳಲ್ಲಿ ಹಿಂಸೆಯು ಹೆಚ್ಚಾಗಿದೆಯೆಂತಲೂ, ಪೊಲೀಸ್ ಇಲಾಖೆಯಲ್ಲಿಯೂ ಸಹ ವ್ಯಾಪಕವಾಗಿ ದೌರ್ಜನ್ಯಗಳು ನಡೆಯುತ್ತಿದೆಯೆಂತಲೂ, ಯಾವ ಜಿಲ್ಲೆಗಳಲ್ಲಿ ಆಗಾಗ ಯುರೋಪಿಯನ್ ಅಧಿಕಾರಿಗಳಿಂದ ಕಟ್ಟುನಿಟ್ಟಿನ ಮತ್ತು ಪರಿಣಾಮಕಾರಿಯಾದ ಮೇಲ್ವಿಚಾರಣೆಗಳು ಇಲ್ಲವೋ ಅಂತಹ ಜಿಲ್ಲೆಗಳಲ್ಲಿ ಹಿಂಸೆಯು ಪ್ರಚಲಿತವಾಗಿದೆ, ಹೀಗೆ ಹಿಂಸೆಯು ರೂಢಿಯಲ್ಲಿರಲು ಕಂದಾಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಗಳು ಒಂದೇ ಅಧಿಕಾರಿಯ ಒಟ್ಟಿಗೆ ಇರುವುದೇ ಕಾರಣವೆಂದು ಆಯೋಗವು ಅಭಿಪ್ರಾಯಪಟ್ಟಿತು.[೬೪]

೬.೪-೭ :- ಪೊಲೀಸ್ ದೌರ್ಜನ್ಯಗಳು

ಈ ದೌರ್ಜನ್ಯ, ಹಿಂಸೆಗಳಿಗೆ ಸಂಬಂಧಿಸಿದಂತೆ ಕೆನರಾದ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟ್‌ರಾಗಿದ್ದ ಎಫ್.ಎಸ್.ಮಾಲ್ತ್‌ಬೈ ರವರು ೧೮೫೪ ರಲ್ಲಿ ಹೀಗೆ ಹೇಳಿದರು. " ಪೊಲೀಸರಿಗೆ ಸಂಬಂಧಿಸಿದಂತೆ ನನ್ನ ಪೂರ್ಣವಾದ, ದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ವಿಷಾದಪಡಿಸುತ್ತೇನೆ. ಒಂದು ರಾಬರಿ ಪ್ರಕರಣ ಘಟಿಸಿದರೆ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು, ತಪ್ಪೊಪ್ಪಿಗೆಯನ್ನು ಪಡೆಯಲು, ಅನೈತಿಕವಾದ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಆದರೆ ಇದು ಸರಿಯಲ್ಲ. ಬಂಧಿಗಳಿಗೆ ಆಹಾರವನ್ನು ನೀಡದೇ ಅಕ್ರಮ ಬಂಧನದಲ್ಲಿಡುವುದು ಸರ್ವೇಸಾಮಾನ್ಯವಾಗಿದೆ. ಆದರೆ ಬಂಧನದಲ್ಲಿರುವಾಗ ಬಳಸುವ ಇತರ ವಿಧಾನಗಳು ಹೆಚ್ಚು ಕ್ರೌರ್ಯದಿಂದ ಕೂಡಿದೆ. ಈ ದೌರ್ಜನ್ಯಗಳು ಕಡಿಮೆಯಾಗಿದ್ದರೂ ನನಗೆ ಭಯವಾಗುತ್ತಿದೆ. ಪೊಲೀಸರೂ ಸಹ ಬೇರೆ ದಾರಿಯಿಲ್ಲದೇ ಈ ದೌರ್ಜನ್ಯಗಳನ್ನು ನಡೆಸುತ್ತಿದ್ದಾರೆ. ಮಹಿಳೆಯರ ಮೇಲೂ ಘೋರ ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ. ನನಗೆ ನೆನಪಿರುವಂತೆ ಪುರುಷರಿಗೆ ವಿವಿಧ ರೀತಿಯ ಚಿತ್ರಹಿಂಸೆಗಳನ್ನು ನೀಡಲಾಗುತ್ತಿದೆ. ಈ ಬಗ್ಗೆ ಪೊಲೀಸರ ಮೇಲೆ ಆಗಾಗ್ಗೆ ದೂರುಗಳು ಬರುತ್ತಿವೆ. ದೂರುಗಳು ಸತ್ಯವಾದುದೆಂದು ನಾನು ನಂಬುತ್ತೇನೆ. ಒಬ್ಬ ಖೈದಿಯಿಂದ ಫಲಕಾರಿಯಾದ ತಪ್ಪೊಪ್ಪಿಗೆಯನ್ನು ಪಡೆಯಲು ಆತನನ್ನು ಕೆಂಪು ಇರುವೆಗಳ ಗೂಡಿಗೆ ತಳ್ಳಿದ್ದು ನನಗೆ ಗೊತ್ತಿದೆ."[೬೫] ಎಂದು ಹೇಳಿದ್ದಾನೆ. ಇದರಿಂದ ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿದ್ದ ದೌರ್ಜನ್ಯಗಳು ಚಿತ್ರಗಳು ನಮಗೆ ಸಿಗುತ್ತದೆ. ಅಪರಾಧ ಪತ್ತೆ ಪ್ರಕರಣಗಳಲ್ಲಿ ಪೊಲೀಸರು ಆರೋಪಿಗಳಿಗೆ ಕ್ಷಮಿಸುತ್ತೇವೆ ಎಂದು ಹೇಳಿ ಆಮಿಷ ತೋರುವುದು ಒಂದು ವಿಧಾನವಾಗಿ ಬಳಕೆಯಲ್ಲಿತ್ತು. ೧೮೦೨ ರ ಎಂಟನೇ ರೆಗ್ಯುಲೇಷನ್ ಕಾಯ್ದೆಯ ಕಲಂ: ೨೦ ರಲ್ಲಿ ಈ ಬಗ್ಗೆ ತಿಳಿಸಲಾಗಿತ್ತು. ಕೊಲೆ, ಗುಂಪು ರಾಬರಿ, ಬೆಂಕಿ ಹಚ್ಚುವಿಕೆಯಂತಹ ಘೋರ ಪ್ರಕರಣಗಳನ್ನು ಪತ್ತೆಹಚ್ಚುವ ಸಲುವಾಗಿ ಆರೋಪಿಯೊಬ್ಬನು ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ನೀಡಿದರೆ, ಅಂದರೆ ಅಪರಾಧ ದಲ್ಲಿ ಭಾಗಿಯಾದ ಎಲ್ಲಾ ಆರೋಪಿಗಳ ವಿವರ, ಅಪರಾಧ ನಡೆದ ಬಗೆಯನ್ನು ತಿಳಿಸಿದರೆ ಆತನಿಗೆ ಕ್ಷಮಿಸುವ ಭರವಸೆ ನೀಡಬಹುದೆಂದು ಸೂಚಿಸಲಾಗಿತ್ತು. ಇದರಿಂದ ಪ್ರಕರಣದ ಪ್ರಮುಖ ಆರೋಪಿಗಳನ್ನು ಪತ್ತೆಹಚ್ಚಲು ಮತ್ತು ಶಿಕ್ಷಿಸಲು ಸಹಾಯ ವಾಗುತ್ತಿತ್ತು. ಹತ್ತೊಂಬತನೇ ಶತಮಾನದ ಆದಿಭಾಗದಲ್ಲಿ ಈ ವಿಧಾನವನ್ನು ಯಾವಾಗಲೂ ಅನುಸರಿಸಲಾಗುತ್ತಿತ್ತು.[೬೬]

೧೮೫೬ ರವರೆಗೆ ಪೊಲೀಸ್ ವ್ಯವಸ್ಥೆಯಲ್ಲಿ ಅಪರಾಧಗಳನ್ನು ಪತ್ತೆಹಚ್ಚಲು ಹಿಂಸೆ ನೀಡುವುದು ಅತ್ಯಂತ ಹೆಚ್ಚು ಬಳಕೆಯಲ್ಲಿರುವ ಪದ್ಧತಿಯಾಗಿತ್ತು. ೧೮೦೬ ರಿಂದ ೧೮೫೦ ರ ನಡುವೆ ಸರಕಾರವು ಈ ಹಿಂಸಾ ವಿಧಾನಗಳನ್ನು ಪರೀಕ್ಷಿಸುವ ಬಗ್ಗೆ ಅರೆಮನಸ್ಸಿನಿಂದ ವರ್ತಿಸಿತು. ತಪ್ಪೊಪ್ಪಿಗೆಯನ್ನು ಪಡೆಯಲು ಈ ಒರಟು ವಿಧಾನಗಳನ್ನು ನಿಷೇಧಿಸಲು ಫೌಜುದಾರಿ ಅದಾಲತ್‌ಗಳ ಮೂಲಕ ಹತ್ತು ಸುತ್ತೋಲೆಗಳನ್ನು ಹೊರಡಿಸಲಾಗಿತ್ತು. ಕೆನರ ಜಿಲ್ಲೆಯ ಸಬ್‌ಕಲೆಕ್ಟರ್ ಆಗಿದ್ದ ಡಬ್ಲ್ಯು.ಫಿಶರ್ ಎಂಬವವರಿಗೆ ಪೊಲೀಸ್ ಇಲಾಖೆಯ ದೌರ್ಜನ್ಯಗಳನ್ನು ಪರಿಶೀಲಿಸಿ ವರದಿ ನೀಡುವಂತೆ ತಿಳಿಸಿದ್ದು,

೧೮೫೫ ರಲ್ಲಿ ಪಿಶರ್ ಹೇಳಿದ್ದೇನೆಂದರೆ " ಯಾವುದೇ ಪ್ರಕರಣಗಳು ಇಲ್ಲದೇ ಇದ್ದರೂ ಸಹ ೧೮೫೯ ರಲ್ಲಿ ಒಬ್ಬ ತಹಶಿಲ್ದಾರ್‌ರವರು ಒಬ್ಬ ಖೈದಿಯನ್ನು ಎರಡು ವರ್ಷಗಳ ಕಾಲ ವಿಚಾರಣೆ ನಡೆಸದೇ ಇದ್ದುದು ನನಗೆ ನೆನಪಿದೆ. ಮತ್ತು ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳು ತಪ್ಪೊಪ್ಪಿಗೆ ಹೇಳಿಕೆಯನ್ನು ಪಡೆಯಲು ಅನೈತಿಕ ಕ್ರಮಗಳನ್ನು ಬಳಸುತ್ತಿದ್ದಾರೆ" ಎಂದು ತಿಳಿಸಿದನು. [೬೭] ಇದರಿಂದ ಪೊಲೀಸ್ ಅಧಿಕಾರಿಗಳು ಬಂಧಿತರಿಗೆ ದೌರ್ಜನ್ಯ ನಡೆಸುತ್ತಿದ್ದರು ಎಂದು ಸ್ಪಷ್ಟವಾಗುತ್ತದೆ. ಕಳವು ಮಾಲು ಪತ್ತೆಯಾಗದಿದ್ದಾಗ ಈ ರೀತಿ ಹಿಂಸೆ ನೀಡಲಾಗುತ್ತಿತ್ತು.

ಇ.ಎಫ್.ಎಲಿಯಟ್, ಹೆಚ್.ಸ್ಟ್ರೋಕ್ಸ್, ಜೆ.ವಿ.ನಾರ್ಟನ್‌ರವರನ್ನು ಒಳಗೊಂಡ ಆಯೋಗವು ೧೮೫೫ ರ ತನ್ನ ವರದಿಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರವಾಗಿ ಪೊಲೀಸ್ ಮತ್ತು ಕಂದಾಯ ಇಲಾಖೆಯನ್ನು ಬೇರೆ ಬೇರೆ ಮಾಡಿ ಪೊಲೀಸ್ ಇಲಾಖೆಯನ್ನು ಸೂಪರಿಂಟೆಂಡೆಂಟ್‌ರವರ ನೇತೃತ್ವದಲ್ಲಿ ಪುನರ್‌ಸಂಘಟಿಸಬೇಕು, ಆತನು ಯುರೋಪಿಯನ್ ಅಧಿಕಾರಿಯಾಗಿರಬೇಕು, ಖೈದಿಗಳನ್ನು ಕಡಿಮೆ ಕಾಲಾವಧಿಯಲ್ಲಿ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಬೇಕು ಎಂದು ಸೂಚಿಸಿದರು. ಮದ್ರಾಸ್ ಸರಕಾರವು ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಿತು.[೬೮]

ಕಂದಾಯ ಅಧಿಕಾರಿಗಳು ಪೊಲೀಸ್ ಅಧಿಕಾರಿಗಳಂತೆ ವರ್ತಿಸಿ ದೌರ್ಜನ್ಯ ನಡೆಸಿ ಕೆಟ್ಟ ಹೆಸರನ್ನು ಪಡೆ ದಿದ್ದರು. ಅಶಿಸ್ತು, ಭ್ರಷ್ಟಾಚಾರಗಳು ಬೆಳೆಯುತ್ತಾ ಬಂದಿತ್ತು. ಆದ್ದರಿಂದ ೧೮೫೯ ರಲ್ಲಿ ಜಿಲ್ಲಾ ಜಡ್ಜ್‌ರಿಂದ ಈ ಬಗ್ಗೆ ಪರೀಕ್ಷಿಸಿ ಇಲಾಖೆಯನ್ನು ಪುನರ್‌ಸಂಘಟಿಸುವ ಪ್ರಯತ್ನ ನಡೆಯಿತು.[೬೯] ೧೮೫೦ ರ ದಶಕದ ಕೊನೆಯಲ್ಲಿ ಮದ್ರಾಸ್ ಸರಕಾರವು ಪೊಲೀಸ್ ಆಡಳಿತದ ಸುಧಾರಣೆಯ ಸಲುವಾಗಿ ಕಂದಾಯ ಹಾಗೂ ಪೊಲೀಸ್ ಇಲಾಖೆಗಳ ಕರ್ತವ್ಯಗಳನ್ನು ಪ್ರತ್ಯೇಕಿಸಿತು. ಪೊಲೀಸ್ ಇಲಾಖೆಯನ್ನು ಕಂದಾಯ ಇಲಾಖೆಯ ಸಾಮಾನ್ಯ ಕರ್ತವ್ಯಗಳಿಂದ ಪ್ರತ್ಯೇಕಿಸಲಾಯಿತು. ಯುರೋಪಿಯನ್ ಅಧಿಕಾರಿಗಳನ್ನು ಇಲಾಖಾ ಮುಖ್ಯಸ್ಥರನ್ನಾಗಿ ಮಾಡಲಾಯಿತು. ಈತನು ಬುದ್ಧಿವಂತನೂ ಆಗಿರಬೇಕಿತ್ತು. ೧೮೫೯ ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಪೊಲೀಸ್ ವ್ಯವಸ್ಥೆಯನ್ನು ಐ.ಜಿ.ಪಿಯೊಬ್ಬರ ನೇರ ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಡಿಸಲಾಯಿತು. ೧೮೫೯ರ ಇಪ್ಪತ್ನಾಕನೇ ಕಾಯ್ದೆಯಲ್ಲಿ ಐಜಿಪಿ ರವರ ಅಧಿಕಾರಗಳ ಬಗ್ಗೆ ತಿಳಿಸಲಾಯಿತು. ಇವರ ಕೈಕೆಳಗೆ ಸೂಪರಿಂಟೆಂಡೆಂಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ನ್ನು ನೇಮಿಸಲಾಯಿತು. ಡಿ.ಐ.ಜಿ ರವರು ಜಿಲ್ಲಾ ಮಟ್ಟದಲ್ಲಿ ಎಲ್ಲಾ ಪೊಲೀಸ್ ಕೆಲಸಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುವಂತೆ, ಎಸ್‌ಪಿ ರವರು ಜಿಲ್ಲಾ ಪೊಲೀಸ್ ಮುಖ್ಯಸ್ಥರಾಗಿರುವಂತೆ, ಈತನ ಕೈಕೆಳಗೆ ಎಎಸ್‌ಪಿ, ಡಿವಿಜನ್ ಇನ್ಸ್‌ಪೆಕ್ಟರ್, ಕೇಂದ್ರ ಸ್ಥಾನದ ಇನ್ಸ್‌ಪೆಕ್ಟರ್, ಆಡಿಟ್ ಇನ್ಸ್‌ಪೆಕ್ಟರ್, ಕೇಂದ್ರ ಸ್ಥಾನ ರಕ್ಷಣಾ ಇನ್ಸ್‌ಪೆಕ್ಟರ್, ಮೀಸಲು, ಉಗ್ರಾಣದ ಇನ್ಸ್‌ಪೆಕ್ಟರ್, ನ್ಯಾಯಾಲಯದ ಇನ್ಸ್‌ಪೆಕ್ಟರ್, ಅಭಿಯೋಗದ ಇನ್ಸ್‌ಪೆಕ್ಟರ್, ಹೆಡ್‌ಕಾನ್ಸ್‌ಟೇಬಲ್ ಮತ್ತು ಕಾನ್ಸ್‌ಟೇಬಲ್ ಇರುವಂತೆ ಹೊಸದಾಗಿ ಪಡೆಯನ್ನು ರಚಿಸಲಾಯಿತು.[೭೦] ಡಿವಿಜನಲ್ ಇನ್ಸ್‌ಪೆಕ್ಟರ್‌ನದು ಇಲಾಖೆಯಲ್ಲಿ ಪ್ರಮುಖ ಹುದ್ದೆಯಾಗಿದ್ದು, ಇಲಾಖೆಯ ಶಿಸ್ತು, ಮತ್ತು ಪೊಲೀಸರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆಯೇ? ಇಲ್ಲವೇ? ಎಂಬುದನ್ನು ಗಮನಿಸಬೇಕಿತ್ತು. ಕೇಂದ್ರ ಸ್ಥಾನದ ಇನ್ಸ್‌ಪೆಕ್ಟರ್ ಜಿಲ್ಲಾ ಪೊಲೀಸ್ ಕಛೇರಿಯಲ್ಲಿದ್ದು, ಎಸ್‌ಪಿರವರಿಗೆ ಸಹಾಯಕರಾಗಿದ್ದರು. ಜಿಲ್ಲೆಯಲ್ಲಿ ನಡೆಯುವ ಎಲ್ಲಾ ಘಟನೆಗಳ ಬಗ್ಗೆ ವಿವರಿಸಬೇಕಿತ್ತು. ಆಡಿಟ್ ಇನ್ಸ್‌ಪೆಕ್ಟರ್‌ನು ಜಿಲ್ಲಾ ಎಸ್‌ಪಿ ಕಛೇರಿಯ ಲೆಕ್ಕಪತ್ರ ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದನು. ಈತನಿಗೆ ಸೆಕೆಂಡ್ ಆಫೀಸ್ ಇನ್ಸ್‌ಫೆಕ್ಟರ್‌ನೆಂದೂ ಕರೆಯಲಾಗುತ್ತಿತ್ತು. ಕೇಂದ್ರ ಸ್ಥಾನದ ಇನ್ಸ್‌ಪೆಕ್ಟರ್‌ನಿಗೆ ರೂ ೨೫೦ ಹಾಗೂ ಸೆಕೆಂಡ್ ಆಫೀಸ್ ಇನ್ಸ್‌ಪೆಕ್ಟರ್‌ನಿಗೆ ೧೫೦ ರೂ ಮಾಸಿಕ ಸಂಬಳವಿತ್ತು.

೧೯ ನೇ ಶತಮಾನಗಳ ಮೊದಲ ಆರು ದಶಕಗಳಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ದ.ಕ ಜಿಲ್ಲೆಯಲ್ಲಿ ಪೊಲೀಸ್ ಪಡೆ ಸಂಘಟಿತವಾಗುತ್ತಾ ಬೆಳೆದದನ್ನು ನೋಡಬಹುದು. ಕಲೆಕ್ಟರ್‌ನ ಕೆಳಭಾಗದಲ್ಲಿ 'ದರೋಗ' ಪದ್ಧತಿಯೊಂದಿಗೆ ಪೊಲೀಸ್

ವ್ಯವಸ್ಥೆ ಆರಂಭವಾಯಿತು. ನಂತರ ಈ ಅಧಿಕಾರ ಜಡ್ಜ್‌ನಿಗೆ ವರ್ಗಾವಣೆಯಾಯಿತು. ೧೮೧೬ ರಲ್ಲಿ ಪುನ: ಪೊಲೀಸ್ ಅಧಿಕಾರಗಳು ಕಲೆಕ್ಟರ್ ಹಾಗೂ ಮ್ಯಾಜಿಸ್ಟ್ರೇಟರಿಗೆ ಹಸ್ತಾಂತರವಾಯಿತು. ಪೊಲೀಸ್ ಹಾಗೂ ಕಂದಾಯ ಕೆಲಸಗಳೆರಡನ್ನೂ ಕಲೆಕ್ಟರ್‌ನು ನೋಡಿಕೊಳ್ಳುತ್ತಿದ್ದನು. ೧೮೧೬ ರಲ್ಲಿ ಹೊಸದಾಗಿ ಬಂದ ಪೊಲೀಸ್ ವ್ಯವಸ್ಥೆ ಸರ್.ಥಾಮಸ್ ಮನ್ರೋನ ಕನಸಿನ ಕೂಸು ಆಗಿತ್ತು. ಈ ವ್ಯವಸ್ಥೆ ನಾಲ್ಕು ದಶಕಗಳ ವರೆಗೆ ಮುಂದುವರಿದುಕೊಂಡು ಬಂತು. ಈ ವ್ಯವಸ್ಥೆಯು ಹಿಂಸೆ, ದೌರ್ಜನ್ಯ, ಭ್ರಷ್ಟಾಚಾರ ಮತ್ತು ಲಂಚಗಳಿಂದು ತುಂಬಿತ್ತು. ಆದ್ದರಿಂದ ಮದ್ರಾಸ್ ಸರಕಾರ ಇದನ್ನು ಪುನರ್‌ಸಂಘಟಿಸಲು ಪ್ರಯತ್ನಿಸಿತು. ಆದ್ದರಿಂದ ೧೮೫೯-೬೦ ರಲ್ಲಿ ಹೊಸ ಪೊಲೀಸ್ ವ್ಯವಸ್ಥೆ ರಚನೆಯಾಯಿತು. ಮನ್ರೋ ಜಾರಿಗೆ ತಂದ ಪೊಲೀಸ್ ವ್ಯವಸ್ಥೆಯು ಸಾಂಪ್ರಾದಾಯಿಕ ಗ್ರಾಮಸೇವಕ ಹಾಗೂ ಕಂದಾಯ ಅಧಿಕಾರಿಗಳಿಗೆ ಉಪಯೋಗವಾಗುತ್ತಿತ್ತು. ಆದರೆ ಇದು ಇಡೀ ಸಂಸ್ಥಾನದ ಜನಕ್ಕೆ ಉಪಯುಕ್ತವಾಗಿರಲಿಲ್ಲ. ಹಾಗಾಗಿ ಹೊಸ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದಿತು.[೧೧]

ಅಪರಾಧ ಪತ್ತೆಗಾಗಿ ಬಳಸುತ್ತಿದ್ದ ವಿಧಾನಗಳಲ್ಲಿ ಕ್ಷಮಾಯಾಚನೆ ಒಂದಾಗಿತ್ತು. ೧೮೫೬ರ ವರೆಗೆ ಪೊಲೀಸರು ಅಪರಾಧ ಪತ್ತೆಯ ವಿಧಾನಗಳಲ್ಲಿ ಬಹುತೇಕ ಬಳಸುತ್ತಿದ್ದ ಮತ್ತೊಂದು ಪದ್ಧತಿ ಎಂದರೆ ಹಿಂಸೆ ಆಗಿತ್ತು. ಸರಕಾರವು ೧೮೦೬ ರಿಂದ ೧೮೫೫ ರ ನಡುವಿನ ಅವಧಿಯಲ್ಲಿ ನಡೆದ ಹಿಂಸೆಯ ಪ್ರಕರಣಗಳನ್ನು ತನಿಖೆ ಮಾಡಲು ಅರೆ ಮನಸ್ಸಿನಿಂದ ಕ್ರಮಗಳನ್ನು ಕೈಗೊಂಡಿತು. ಪೊಲೀಸರಿಗೆ ಕಡಿಮೆ ಸಂಬಳ ನೀಡಲಾಗುತ್ತಿತ್ತು. ಇದ ರಿಂದಾಗಿ ಅವರು ಭ್ರಷ್ಟರು, ನೈತಿಕ ನಿರ್ಬಂಧರಹಿತರು, ಸ್ವಾಭಿಮಾನರಹಿತರಾಗಿದ್ದರು. ಅಂತಹ ಪೊಲೀಸ್ ಪದ್ಧತಿಯನ್ನು ಬದಲಿಸುವ ಮತ್ತು ಪುನರ್ ಸಂಘಟಿಸುವ ಅಗತ್ಯವಿತ್ತು. ಇ.ಎಫ್.ಎಲಿಯಟ್ ಮತ್ತು ಇತರರ ಆಯೋಗವು ಪೊಲೀಸ್ ಆಡಳಿತದಲ್ಲಿರುವ ಸಮಸ್ಯೆಗಳನ್ನು ನಿವಾರಿಸಲು ಪರಿಹಾರೋಪಾಯಗಳನ್ನು ಸೂಚಿಸಿದರು. ಅವುಗಳಲ್ಲಿ ಪ್ರಮುಖವಾದುದು ಕಂದಾಯ ಮತ್ತು ಪೊಲೀಸ್ ಪ್ರಕಾರ್ಯಗಳನ್ನು ಪ್ರತ್ಯೇಕಿಸುವುದು ಮತ್ತು ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಿ ಯುರೋಪಿಯನ್ ಅಧಿಕಾರಿಯಾದ ಪೊಲೀಸ್ ಸೂಪರಿಂಟೆಂಡೆಂಟ್‌ರ ನೇರ ಮೇಲ್ವಿಚಾರಣೆಗೆ ತರುವುದಾಗಿತ್ತು. ಮದರಾಸು ಸರಕಾರವು ಆಯೋಗದ ಈ ಸಲಹೆಗಳನ್ನು ಅಂಗೀಕರಿಸಿತು. ಮತ್ತು ಪೊಲೀಸ್ ಪ್ರಕಾರ್ಯಗಳನ್ನು ಕಂದಾಯ ಪ್ರಕಾರ್ಯಗಳಿಂದ ಪ್ರತ್ಯೇಕಿಸಿತು.[೨] *(೧೮೫೪ ರಲ್ಲಿ ಕೆನರಾ ಜಿಲ್ಲೆಯಲ್ಲಿದ್ದ ಪೊಲೀಸ್ ಸಿಬ್ಬಂದಿಗಳ ಬಲ ಹಾಗೂ ಸಂಬಳದ ವಿವರದ ಬಗ್ಗೆ ಅನುಬಂಧ – ೧೮ ನ್ನು ನೋಡಿರಿ)* ಹೀಗೆ ೧೮೫೯ ರಲ್ಲಿ ಜಿಲ್ಲೆಯ ಕಂದಾಯ ಆಡಳಿತದ ಭಾಗವಾಗಿದ್ದ ಪೊಲೀಸ್ ಇಲಾಖೆಯನ್ನು ಅದರಿಂದ ಬೇರ್ಪಡಿಸಿ ಸ್ವತಂತ್ರ ಇಲಾಖೆಯನ್ನಾಗಿ ಮಾಡಲಾಯಿತು. ಆ ನಂತರ ಜಿಲ್ಲಾ ಪೊಲೀಸ್ ಅಧೀಕ್ಷಕರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಅಗತ್ಯ ಪೊಲೀಸ್ ಬಲದೊಂದಿಗೆ ಜಿಲ್ಲಾ ಪೊಲೀಸ್ ಬಲವು ಕಾರ್ಯನಿರ್ವಹಿಸುತ್ತಿದೆ. ೧೮೬೦ ರಲ್ಲಿ ಹೊಸ ಪೊಲೀಸ್ ವ್ಯವಸ್ಥೆಯನ್ನು ಪ್ರಾರಂಭಿಸುವುದರೊಂದಿಗೆ, ಅಪರಾಧ ಪತ್ತೆಯ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆ ಮತ್ತು ಪ್ರಗತಿಯು ಕಂಡುಬಂದಿತ್ತು. ಆದಾಗ್ಯೂ ೧೯ ನೇ ಶತಮಾನದಾದ್ಯಂತ ಅಪರಾಧ ತಡೆಯುವಿಕೆಗೆ ಕ್ರೂರ ದಂಡನೆಯು ಫಲಕಾರಿ ಎಂಬ ನಂಬಿಕೆಯು ಮುಂದುವರಿಯಿತು.[೩]

೧೮೬೦ ರಲ್ಲಿ ಹೆಚ್ಚಿನ ಪೊಲೀಸ್ ವ್ಯಸಸ್ಥೆಗೆ ನಾಂದಿ ಹಾಡಲಾಯಿತು. ಅಪರಾಧಿಗಳ ಪತ್ತೆ ವಿಷಯಗಳಲ್ಲಿ ಕೆಲವು ಬೆಳವಣಿಗೆಗಳು ಕಂಡುಬಂದವು. ೧೯ ನೇ ಶತಮಾನದುದ್ದಕ್ಕೂ ಅಪರಾಧಗಳನ್ನು ತಡೆಯಲು ಉಗ್ರ ಶಿಕ್ಷೆಗಳನ್ನು ನೀಡುವುದರಿಂದ ೧೮೬೦ ರಲ್ಲಿ ಭಾರತೀಯ ದಂಡಸಂಹಿತೆಯನ್ನು ಅಂಗೀಕರಿಸಲಾಯಿತು. ಆದರೆ ಇದು ೧೮೬೨ರ ಜನವರಿಯಿಂದ ಕಾರ್ಯರೂಪಕ್ಕೆ ಬಂದಿತು. ಅಲ್ಲಿಯವರೆಗೆ ಅತ್ಯಂತ ಉಗ್ರ ಶಿಕ್ಷೆಗಳಾದ ಅಂಗಛೇದನ (೧೮೦೨ ರಲ್ಲಿ ರದ್ದುಪಡಿಸಲಾಯಿತು) ಬರೆಹಾಕುವುದು (೧೮೧೮ ರಲ್ಲಿ ರದ್ದುಗೊಳಿಸಲಾಯಿತು) ಮತ್ತು ಹಿಂಸೆ ನೀಡುವುದು ಪ್ರಚಲಿತದಲ್ಲಿತ್ತು. ಐ.ಪಿ.ಸಿಯಲ್ಲಿ ಐದು ಬಗೆಯ ಶಿಕ್ಷೆಗಳನ್ನು ನೀಡಲಾಯಿತು. ಅದರಲ್ಲಿ ೧) ಮರಣದಂಡನೆ, ೨)ಸಮುದ್ರದಾಚೆಗೆ ಗಡಿಪಾರು,

೩) ಕಠಿಣ ಕಾರಾಗೃಹ ಶಿಕ್ಷೆ ಮತ್ತು ಸಾದಾರಣ ಕಾರಾಗೃಹ ಶಿಕ್ಷೆ. ೪) ಆಸ್ತಿ ಮುಟ್ಟುಗೋಲು ಹಾಕುವುದು ಮತ್ತು ದಂಡ ವಿಧಿಸುವ ಶಿಕ್ಷೆಗಳನ್ನು ಗುರುತಿಸಲಾಯಿತು. [೭೪]

೧೮೮೫ ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಸೂಪರಿಂಟೆಂಡೆಂಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರ ನೇತೃತ್ವಗಳಲ್ಲಿ ವಿಭಾಗಗಳನ್ನು ರಚಿಸಲಾಯಿತು. ಇನ್ಸ್‌ಪೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಕೆಲವು ಘಟಕಗಳನ್ನು ಮಾಡಲಾಯಿತು. ಅಂತೆಯೇ ಸೌತ್ ಕೆನರಾ ಜಿಲ್ಲೆಗೆ ಸಂಬಂಧಿಸಿದಂತೆ ಮಂಗಳೂರು, ಬಂಟ್ವಾಳಗಳಲ್ಲಿ ಪ್ರತ್ಯೇಕ ಘಟಕಗಳಿದ್ದು, ಇವರೆಡಕ್ಕೂ ಮಂಗಳೂರು ಕಂದಾಯ ತಾಲೂಕು ಆಗಿತ್ತು. ಕಾಸರಗೋಡು, ಉಡುಪಿ, ಕುಂದಾಪುರ ಉಳಿದ ಘಟಕಗಳಾದರೆ, ಉಪ್ಪಿನಂಗಡಿ ಮತ್ತು ಪುತ್ತೂರು ಘಟಕಗಳು ಉಪ್ಪಿನಂಗಡಿ ಕಂದಾಯ ತಾಲೂಕಿನಡಿ ಬರುತ್ತಿದ್ದವು. [೭೫]

೧೯೦೮ ರ ಭಾರತೀಯ ಇಂಪೀರಿಯಲ್ ಗಜೆಟಿಯರ್ ಪ್ರಕಾರ ೧೯೦೪ ರಲ್ಲಿ ಪ್ರತೀ ೬ ಚದುರ ಮೈಲುಗಳಿಗೆ ಪ್ರತೀ ೧೫೫೮ ಜನರಿಗೆ ಒಬ್ಬ ನಿಯತ ಪೊಲೀಸ್ ಮತ್ತು ಅದರ ಮೇಲಿನ ಅಷ್ಟೇ ಚದರ ಮೈಲಿನ ವಿಸ್ತೀರ್ಣಕ್ಕೆ ಪ್ರತೀ ೧೬೧೨ ಜನರಿಗೆ ಒಬ್ಬ ಗ್ರಾಮ ಪೊಲೀಸ್ ಮದ್ರಾಸ್ ಪ್ರಾಂತ್ಯದಲ್ಲಿ ಇದ್ದರೆಂದು ವರದಿಯಾಗಿರುತ್ತದೆ. ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಇಲಾಖಾ ಮುಖ್ಯಾಧಿಕಾರಿಯಾಗಿದ್ದು, ಅವರ ಸಹಾಯಕ್ಕಾಗಿ ಒಬ್ಬರು ಅಥವಾ ಹೆಚ್ಚು ಸಹಾಯಕ ಸೂಪರಿಂಟೆಂಡೆಂಟ್ ಇದ್ದರು. ಅವರ ಅಧೀನದಲ್ಲಿ ಇನ್ಸ್‌ಪೆಕ್ಟರ್‌ಗಳು ಮತ್ತು ಉಪ ಇನ್ಸ್‌ಪೆಕ್ಟರುಗಳು, ಹೆಡ್‌ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್ ಮತ್ತು ಗ್ರಾಮೀಣ ಪೊಲೀಸರಿದ್ದರು. ನಗರದಲ್ಲಿ ಸಾರ್ಜೆಂಟ್‌ಗಳಿದ್ದರು. ೧೯೦೮ ರ ಇಂಪಿರಿಯಲ್ ಗ್ಯಜೆಟಿಯರ್ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯು ಸೂಪರಿಂಟೆಂಡೆಂಟ್‌ರ ಅಧೀನದಲ್ಲಿದ್ದು, ಅದರ ಕೇಂದ್ರ ಕಛೇರಿ ಮಂಗಳೂರಿನಲ್ಲಿತ್ತು. ಈ ಪೊಲೀಸ್ ದಳದಲ್ಲಿ ೧೦ ಮಂದಿ ಇನ್ಸ್‌ಪೆಕ್ಟರ್ ಮತ್ತು ೫೫೮ ಪೊಲೀಸ್, ೫೦ ಪೊಲೀಸ್ ಠಾಣೆಗಳಿದ್ದವು ಎಂದು ತಿಳಿದುಬರುತ್ತದೆ.

ಬ್ರಿಟೀಷರ ಕಾಲದಿಂದಲೂ ಖಾಕಿ ಸಮವಸ್ತ್ರದಾರಿಗಳಾದ ಪೊಲೀಸರ ಸಮವಸ್ತ್ರದ ಖಾಕಿ ಬಣ್ಣವನ್ನೂ ಕೂಡ ಮೊದಲ ಬಾರಿಗೆ ೧೮೫೧ ರಲ್ಲಿ ಮಂಗಳೂರಿನ 'ಬಾಸೆಲ್ ಮಿಷನ್'ನ ನೇಗೆ ಕಾರ್ಖಾನೆಯಲ್ಲಿ 'ಜಾನ್ ಹಾಲರ್'ನು ಕಂಡುಹಿಡಿದನು ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯವಾಗಿದೆ. ಇಂದಿಗೂ ಇದು ಪೊಲೀಸ್ ಸಿಬ್ಬಂದಿಯ ಸಮವಸ್ತ್ರವಾಗಿದೆ. [೭೬]

ಈ ಮೇಲಿನ ವಿಶ್ಲೇಷಣೆಗಳಿಂದ ತಿಳಿದುಬರುವುದೇನೆಂದರೆ, ವಸಹಾತುಶಾಯಿ ಆಡಳಿತದ ಪ್ರಾರಂಭದ ದಿನಗಳಲ್ಲಿ ದಕ್ಷಿಣ ಕನ್ನಡದಲ್ಲಿ ಕಂದಾಯ, ನ್ಯಾಯಾಂಗ, ಮತ್ತು ಪೊಲೀಸ್ ವ್ಯವಸ್ಥೆಗಳು ಈ ಭಾಗದ ಜನರಿಗೆ ನೆರವಾಗಿರಲಿಲ್ಲ. ಸಾಮಾನ್ಯವಾಗಿ ಇಂಗ್ಲೀಷರ ಆಡಳಿತ ಜನರನ್ನು ಶೋಷಣೆಗೆ ಗುರಿಪಡಿಸಿತ್ತು. ಸ್ಥಳೀಯ ಕೆಲವು ಗುಂಪುಗಳು ವಸಹಾತುಶಾಹಿ ವಿಷಯಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕಂಪೆನಿಯ ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತಿದ್ದರು. *ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿಯನ್ನು ಅನುಬಂಧ – ೧೯ ರಲ್ಲಿ ನೋಡಿ.*

೬.೫ : ಕೊಡಗು ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆ

ಕೊಡಗು ತನ್ನದೇ ಸ್ವಾತಂತ್ರ್ಯ ಆಡಳಿತ ವ್ಯವಸ್ಥೆಯನ್ನು ಹೊಂದುವ ಮೊದಲು ಗಂಗರು, ಹೊಯ್ಸಳರು, ಮತ್ತು ವಿಜಯನಗರದ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಗಂಗರ ಕಾಲದಿಂದಲೂ ಸಮಾಜದ ಅತ್ಯಂತ ಸಣ್ಣ ಘಟಕವಾಗಿ "ಗ್ರಾಮ" ಆನಂತರ "ನಾಡು" ಹಲವು ನಾಡುಗಳು ಸೇರಿ ಅಲ್ಲಿ ರಾಜನು ನೇಮಿಸಿದ್ದ ಅಧಿಕಾರಿಗಳು ಅಥವಾ ಪಾಳೆಯಗಾರರು ಆಡಳಿತ ನಡೆಸುತ್ತಿದ್ದರು. ಸಣ್ಣಪುಟ್ಟ ಅರಸರು ನಾಡುಗಳಲ್ಲಿ ಇದ್ದರು. ೧೭ ನೇ ಶತಮಾನದ ಕೊನೆಯಲ್ಲಿ ಕೊಡಗಿ

ನಲ್ಲಿ ೩೫ ನಾಡುಗಳು ಇದ್ದವು. ಕೊಡಗಿನ ಒಡೆಯರ ಕಾಲದಲ್ಲಿ ೨೭ ನಾಡುಗಳಿದ್ದವು.

ಅರಮನೆಯಲ್ಲಿ ಕೇಂದ್ರ ಸರಕಾರದಲ್ಲಿ (ದಿವಾನ್ ಕಛೇರಿ) ರಾಜನಿಗೆ ಆಡಳಿತದಲ್ಲಿ ದಿವಾನರೆಂಬ ಮಂತ್ರಿಗಳಿದ್ದು, ಇವರು ಸಲಹೆಗಾರರೂ, ರಾಜಾಜ್ಞೆಗಳನ್ನು ಕಾರ್ಯರೂಪಕ್ಕೆ ತರುವವರೂ ಆಗಿದ್ದರು. 'ಸರಕಾರೆಕಾರ' (ಕಾರ್‍ಯಕಾರ) ಎಂಬ ಹೆಸರಿನ ಒಂದು ಹುದ್ದೆ ಇತ್ತು. ಪ್ರತೀ ಸೀಮೆ ಅಥವಾ ತಾಲೂಕಿಗೆ ಒಬ್ಬ 'ಸುಬೇದಾರ'ನಿದ್ದು,ನಾಡು (ಅಥವಾ) ಹೋಬಳಿಗೆ ಒಬ್ಬ 'ಪಾರುಪತ್ತೆಗಾರ'ನಿದ್ದ. ಪ್ರತೀ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ 'ಪಟೇಲ' (ಗೌಡ) ನೂ, 'ಶಾನುಭೋಗ'ನೂ ಇರುತ್ತಿದ್ದರು. [೬೭] ನಾಡಿನಲ್ಲಿ ಪಾರು ಪತ್ಯೆಗಾರ (ಇಂದಿನ ಶೇಖ್‌ದಾರನಿಗೆ ಸಮ) ನ ಕಛೇರಿ ಇರುತ್ತಿತ್ತು. ಈತನ ಕೈಕೆಳಗೆ ಶಾನು ಭೋಗರು ಇರುತ್ತಿದ್ದರು.

ಬ್ರಿಟೀಷರ ಆಳ್ವಿಕೆಗೆ ಬಂದಾಗ ೧೮೩೪ ರಲ್ಲಿ ಕೊಡಗಿನ ಆಡಳಿತದಲ್ಲಿ ತೀವ್ರ ಬದಲಾವಣೆ ಆಗಲಿಲ್ಲ. ಮೊದಲು ಕರ್ನಲ್. ಫ್ರೆಜರ್ ಅಧಿಕಾರ ವಹಿಸಿಕೊಂಡ. ಅರಮನೆಯಲ್ಲಿ ದಿವಾನ ಹುದ್ದೆಗಳು, ತಾಲೂಕಿನ ಸುಬೇದಾರ ಹುದ್ದೆಗಳು ಹಾಗೆ ಮುಂದುವರೆದವು. ಅಮರಸುಳ್ಯ ಮತ್ತು ಪುತ್ತೂರುಗಳನ್ನು ಪ್ರತ್ಯೇಕಿಸಿದ ನಂತರ ಕೊಡಗಿನಲ್ಲಿ ೫೦೮ ಗ್ರಾಮಗಳು ಉಳಿದವು. ಕೊಡಗನ್ನು ಆರು ತಾಲೂಕುಗಳಾಗಿ ವಿಭಜಿಸಲಾಯಿತು. ಇವುಗಳಲ್ಲಿ ೨೪ ಹೋಬಳಿ (ನಾಡು) ಗಳಿದ್ದವು. ನಾಡಿಗೊಬ್ಬ ಪಾರುಪತ್ಯೆಗಾರನಿದ್ದ [೬೮] ೧೮೬೯ ರಲ್ಲಿ ಕೊಡಗಿನ ಸೂಪರಿಂಟೆಂಡೆಂಟ್‌ರಿಗೆ ಕಮಿಷನರ್ ಎಂದು ನಾಮಕರಣ ಮಾಡಲಾಯಿತು. ಇವರು ಮೈಸೂರಿನ ಚೀಫ್ ಕಮಿಷನರ್‌ರ ಅಧೀನರಾಗಿದ್ದರು. ಬೆಂಗಳೂರಿ ನಲ್ಲಿ ಇರುತ್ತಿದ್ದರು. ಚೀಫ್ ಕಮಿಷನರ್ ಕೊಡಗಿನ ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಯ ಮುಖ್ಯಸ್ಥರಾಗಿದ್ದರು. ೧೯೪೦ ರಲ್ಲಿ ಕೊಡಗಿಗೆ ಚೀಪ್ ಕಮಿಷನರ್ ಕಛೇರಿಯನ್ನು ವರ್ಗಾಯಿಸಿ ಕೊಡಗಿನಲ್ಲಿದ್ದ ಕಮಿಷನರ್ ಹುದ್ದೆಯನ್ನು ರದ್ದುಗೊಳಿಸ ಲಾಯಿತು. ಅವರ ಅಧೀನದಲ್ಲಿ ಅಸಿಸ್ಟೆಂಟ್ ಕಮಿಷನರ್ ರವರನ್ನು ನೇಮಿಸಲಾಯಿತು. ಅವರೇ ಜಿಲ್ಲಾ ದಂಡಾಧಿಕಾರಿ (ಮ್ಯಾಜಿಸ್ಟ್ರೇಟ್) ಆಗಿದ್ದರು. ಇವರ ಕೈಕೆಳಗೆ ಇಬ್ಬರು ಸುಬೇದಾರರು (ತಹಶಿಲ್ದಾರರು) ೧೧ ನಾಡು (ಹೋಬಳಿ) ಪಾರುಪತ್ತೆ ಗಾರರು, (ಶೇಖ್‌ದಾರ್ ಅಥವಾ ಮಣೆಗಾರ) ಇದ್ದರು. ಹಲವು ಗ್ರಾಮಗಳಿಗೆ ಒಬ್ಬರಂತೆ ೫೦ ಶಾನುಭೋಗರಿದ್ದರು.

ಈ ಜಿಲ್ಲೆಯಲ್ಲಿ ಹಿಂದಿನ ರಾಜರ ಆಳ್ವಿಕೆಯಲ್ಲಿ ನ್ಯಾಯಾಡಳಿತ ವಿಧಾನವು ಸಾಂಪ್ರಾದಾಯಿಕ ರೂಢಿಯನ್ನು ಅವಲಂಬಿಸಿತ್ತು. ಈ ಸಾಂಪ್ರಾದಾಯಿಕ ವಿದಾನಗಳನ್ನು ಜಾರಿಗೆ ತರಲು ಪ್ರತ್ಯೇಕ ಪೊಲೀಸ್ ವ್ಯವಸ್ಥೆ ಅಗತ್ಯವಿರಲಿಲ್ಲ. 'ಜಮ್ಮ' ಭೂಮಿ ಪಡೆದಿದ್ದ ರೈತರೇ ಕಾವಲು, ಪೊಲೀಸ್ ಹಾಗೂ ಸೈನಿಕರಾಗಿ ಕೆಲಸ ಮಾಡುತ್ತಿದ್ದು ಕೊಡಗು ಸಂಸ್ಥಾನವು ಚಿಕ್ಕದಾಗಿ ದ್ದರಿಂದ ಪೂರ್ಣವಾಗಿ ಎಲ್ಲಾ ಪ್ರದೇಶದಲ್ಲಿಯೂ ಆಡಳಿತವು ಅರಮನೆಯ ನಿಯಂತ್ರಣದಲ್ಲಿತ್ತು. ಯಾವುದೇ ದಂಡನಾರ್ಹ ಕೃತ್ಯವು ಕೂಡಲೇ ಅಧಿಕಾರಿಗಳಿಗೆ ವರದಿಯಾಗುತ್ತಿತ್ತು. ಕೆಲವು ತಿಳಿದಿರುವ ಕಾಡಿನ ದಾರಿಗಳ ವಿನ: ಕೊಡಗಿನಲ್ಲಿ ಹೊರಗಿ ನವರ ಆಗಮನವಾಗಲೀ, ನಿರ್ಗಮನವಾಗಲೀ ಇರಲಿಲ್ಲ. ಒಂದೊಂದು ಗ್ರಾಮಗಳನ್ನು ಮತ್ತು ನಾಡನ್ನು ಬೇರ್ಪಡಿಸಲು ಆಳವಾದ ಕಡಂಗ ಅಥವಾ ಕಂದಕಗಳಿದ್ದು, ಅವುಗಳ ನಡುವೆ ಜನರ ಓಡಾಟಕ್ಕೆ ಚಿಕ್ಕ ಬಾಗಿಲುಗಳು ಇರುತ್ತಿದ್ದವು. ಇಲ್ಲಿ ಕಾವಲುಗಾರರು ಇರುತ್ತಿದ್ದರು. ಜಿಲ್ಲೆಯ ಎಲ್ಲಾ ರಸ್ತೆಯ ದ್ವಾರ ಪ್ರದೇಶಗಳಲ್ಲಿಯೂ ಸಹ 'ರಕ್ಷಣಾಗೃಹ' ಅಥವಾ 'ಚೌಕಿಠಾಣೆ' ಗಳನ್ನು ಕಟ್ಟಿಸಲಾಗಿತ್ತು. ಮತ್ತು ಪ್ರತೀ ಪ್ರವಾಸಿಯನ್ನು ತನಿಖೆ ಮಾಡಿದ ನಂತರವೇ ಒಳಗೆ ಬಿಡಲಾಗುತ್ತಿತ್ತು. ಇತರ ಸಂಸ್ಥಾನಗಳಲ್ಲಿ ಇದ್ದಂತೆ ಕೊಡಗು ಸೀಮೆಗೆ ಬರಲು ರಹದಾರಿ ಪತ್ರ ಅಗತ್ಯವಾಗಿತ್ತು. ಸೀಮೆಯಲ್ಲಿನ ಜನರು ಸೀಮೆ ಯನ್ನು ಬಿಟ್ಟು ಹೋಗುವಾಗ ಸರಕಾರದಿಂದ ರಹದಾರಿ ಪತ್ರ ಪಡೆಯಬೇಕಾಗಿತ್ತು. ಅನುಮತಿಯಿಲ್ಲದೇ ಯಾವ ಪ್ರಜೆಯನ್ನು ಹೊರಹೋಗಲು ಬಿಡುತ್ತಿರಲಿಲ್ಲ. ಮತ್ತು ಹೊರಗೆ ಹೋಗಲು ಸರಿಯಾದ ಕಾರಣ ಕೊಡಬೇಕಿತ್ತು. ಯಾವುದೇ ಪ್ರಜೆಯು ಸಂಸ್ಥಾನವನ್ನು ಬಿಟ್ಟು ಹೊರಗೆ ಹೋಗುವಾಗ ಅವನ ಕುಟುಂಬದ ಸದಸ್ಯರು ಇಲ್ಲಿಯೇ ಇರಬೇಕಿತ್ತು. ಇದರಿಂದ ಆತನ

ಹಿಂದಿರುಗಿ ಬರುವಿಕೆಯು ಖಾತ್ರಿ ಯಾಗುತ್ತಿತ್ತು. ಯಾವುದೇ ದಂಡನಾರ್ಹವಾದ ಅಪರಾಧವನ್ನು ಮಾಡಿದವರಿಗೆ ಸೂಕ್ತ ಶಿಕ್ಷೆಯನ್ನು ನಿಸ್ಸಂಕೋಚವಾಗಿ ವಿಧಿಸಲಾಗುತ್ತಿತ್ತು. ಈ ಕಾರಣದಿಂದ ಹತ್ತಿರದ ಸಂಸ್ಥಾನದವರು ಕೊಡಗು ಸಂಸ್ಥಾನವನ್ನು 'ತಪ್ಪಿಸಿಕೊಂಡು ಹೋಗಲಾಗದಂತಹ ಬಂಧೀಖಾನೆ' ಎಂದು ವಿಶ್ಲೇಷಿಸಿದ್ದಾರೆ.[೭೯] ರಾಜರ ಆಳ್ವಿಕೆಯಲ್ಲಿ ಪ್ರತ್ಯೇಕವಾದ ಪೊಲೀಸ್ ಬಲ ವಿರಲಿಲ್ಲ. ಎಲ್ಲಾ ಸರಕಾರಿ ಕಛೇರಿಗಳಲ್ಲಿನ ಪೇದೆಗಳು, ಪೊಲೀಸರ ಕಾರ್ಯವನ್ನು ಮಾಡುತ್ತಿದ್ದರು. ಕೊಡಗು ಸಂಸ್ಥಾನ ದಲ್ಲಿ ಘರ್ಷಣೆಗಳಾಗಲೀ, ಗಲಬೆಗಳಾಗಲೀ ಇದ್ದಂತೆ ಕಂಡುಬರುವುದಿಲ್ಲ. ಮತ್ತು ಸಾರ್ವಜನಿಕ ಶಾಂತಿ ಯುತ ಮತ್ತು ವ್ಯವಸ್ಥಿತ ರೀತಿ ನೀತಿಯಲ್ಲಿ ಸರಕಾರವು ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಹೆಚ್ಚಿನ ಕಳ್ಳತನಗಳಾಗಲೀ ಕಂಡು ಬಂದಿಲ್ಲ. ಹೆದ್ದಾರಿ ದರೋಡೆಗಳಾಗಲೀ, ಸಾಮಾಜಿಕ ಅಪರಾಧಗಳಾಗಲೀ ಈ ಸಂಸ್ಥಾನದಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಒಬ್ಬ ಸಾಮಾನ್ಯ ಪ್ರವಾಸಿಗನ ಆಸ್ತಿಪಾಸ್ತಿಗಳಿಗೂ ಸಾಕಷ್ಟು ಭದ್ರತೆ ಇತ್ತು. ಆಗಂತುಕರನ್ನು ಎಚ್ಚರಿಕೆಯಿಂದ ನೋಡುತ್ತಿದ್ದು, ಅವರು ಸಂಸ್ಥಾನದ ಜನರೊಂದಿಗೆ ಮುಕ್ತವಾಗಿ ಬೆರೆಯಲು ಅವಕಾಶವಿರುತ್ತಿರಲಿಲ್ಲ. ಮಲಬಾರಿನ 'ನಾಯರ್' ಗಳಂತೆ ಇಲ್ಲಿನ ಪ್ರತೀ ರೈತನೂ ಪೊಲೀಸ್ ಕಾರ್ಯ ನಿರ್ವಹಿಸುತ್ತಿದ್ದ ಸಿಪಾಯಿ ಯಾಗಿದ್ದನು. ಇಲ್ಲಿಯ ಬಹುಪಾಲು ಜನತೆ ಭೂಮಿಯ ಒಡೆತನವನ್ನು ಮಿಲಿಟರಿ ಆಡಳಿತದಲ್ಲಿ ಹೊಂದಿದ್ದರು. ಮತ್ತು ಅಲ್ಲಿಯ ಜನರನ್ನು ಸಂರಕ್ಷಿಸುವ ಭಾರ ಅವರಲ್ಲಿತ್ತು. ಅವರುಗಳೆಂದರೆ 'ಸರ್ವಕಾರ್ಯಕಾರರು' 'ಕಾರ್ಯಕಾರರು' 'ಸುಬೇದಾರರು ' ಮತ್ತು 'ಜಮೇದಾರರು. ಪೊಲೀಸರಿಗೆ ಸಹಾಯವಾಗಿ ಜಮ್ಮದ ರೈತರೂ ಇರುತ್ತಿದ್ದರು.[೮೦]

ಗ್ರಾಮಗಳಲ್ಲಿ 'ತಕ್ಕ'ನು ನ್ಯಾಯಾಧೀಶನಾಗಿದ್ದ. ಕಳವು ಮಾಡಿದ ವಸ್ತುವಿನ ಮೌಲ್ಯದ ೧.೫ ರಷ್ಟನ್ನು ಆತನಿಂದ ವಸೂಲಿ ಮಾಡುತ್ತಿದ್ದರು. ಈ ಹಣದ ಅರ್ಧಭಾಗ ಸರ್ಕಾರಕ್ಕೆ ಜಮಾ ಆಗುತ್ತಿತ್ತು. ಯಾವನೇ ಅಪರಾಧಿ ಗ್ರಾಮದ 'ತಕ್ಕ'ನು ನೀಡಿದ ತೀರ್ಪಿನ ವಿರುದ್ಧ 'ನಾಡತಕ್ಕ' ಅಥವಾ 'ದೇಶತಕ್ಕ' ರಿಗೆ ಮೇಲ್ಮನವಿ ಸಲ್ಲಿಸಬಹುದಿತ್ತು. ಗಡಿಪಾರು ಮಾಡುವುದು ಕಠಿಣ ಶಿಕ್ಷೆಯಾಗಿತ್ತು. ರಾಜ್ಯಕ್ಕೆ ಸಂಬಂಧಿಸಿದ ಅಪರಾಧಗಳಿಗೆ ರಾಜನು ದಿವಾನರೊಂದಿಗೆ ಚರ್ಚಿಸಿ ಗಲ್ಲುಶಿಕ್ಷೆ ಗಡಿಪಾರು ನೀಡುತ್ತಿದ್ದ. ರಾಜರೇ ವಿಧಿಸುವ ಶಿಕ್ಷ್ಷೆಗಳು ಉಗ್ರವಾಗಿದ್ದು, ಅಂಗಾಂಗಗಳನ್ನು ಕತ್ತರಿಸುವ ಶಿಕ್ಷೆಗಳಿದ್ದವು.

೬.೬ :– ಬೆಳಗಾಂ ಜಿಲ್ಲಾ ಪೊಲೀಸ್ ವ್ಯವಸ್ಥೆ

೬.೬–೧ : ೧೮೮೨ ರವರೆಗೆ ಬೆಳಗಾಂ ಜಿಲ್ಲೆಯಲ್ಲಿದ್ದ ಗ್ರಾಮ ಪೊಲೀಸ್ ವ್ಯವಸ್ಥೆ

ಬೆಳಗಾಂ ಜಿಲ್ಲೆ ೧೮೬೪ ರಲ್ಲಿ ರಚಿತವಾಯಿತು. ಪೊಲೀಸ್ ಪಟೇಲನ ನೇತೃತ್ವದಲ್ಲಿ ಗ್ರಾಮೀಣ ಪೊಲೀಸ್ ರಚನೆಯಾಯಿತು. **Shetsandis** ಅಥವಾ ಪ್ರಜಾ ಸೈನ್ಯ (ಮಿಲಿಟಿಯ) ರವರು ಚಿಕ್ಕೋಡಿ, ಅಥಣಿ, ಗೋಕಾಕ ಉಪ–ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು. ಇವರುಗಳು ಗ್ರಾಮದ ಕಾವಲು ಕಾಯುತ್ತಿದ್ದ ಪ್ರಜಾಸೈನ್ಯದವರಾದ 'ಗಸ್ತಿ' (ಗಸ್ತು ತಿರುಗುವವನು) ಯವರ ಮತ್ತು ಪ್ರಯಾಣಿಕರ ರಕ್ಷಣೆ ನೋಡುತ್ತಿದ್ದ 'ತರಲ್ ಅಥವಾ 'ಮಹರ್' ರವರ ಬದಲಿಗೆ ಕೆಲಸ ಮಾಡುತ್ತಿದ್ದರು. 'ಕೊಲ್‌ಕರ್' ಅಥವಾ ಸಂದೇಶವಾಹಕ (ಮೆಸೆಂಜರ್) ಮತ್ತು ಗ್ರಾಮದ ಸೇವಕರುಗಳ ಮುಖ್ಯಸ್ಥ ಅಥವಾ ನಾಯಕರುಗಳು ಜಾತಿ ಆದಾರದಲ್ಲಿ ನೇಮಕವಾಗುತ್ತಿದ್ದರು. ಅವರುಗಳು 'ದಂಗ್ರಾ' (ಕುರುಬರು) ಅಥವಾ ಕೋಲಿ (ಮೀನುಗಾರ) ಜಾತಿಯವರಾಗಿದ್ದು ಅವರಿಗೆ ಭೂಮಿ ಅಥವಾ ಅರ್ಧಭೂಮಿ, ಅರ್ಧ ನಗದು ರೂಪದಲ್ಲೂ ಸಂಬಳ ನೀಡಲಾಗುತ್ತಿತ್ತು. ಈ ಪ್ರಜಾಸೈನ್ಯದ ಗಾತ್ರವು ಆಯಾ ಹಳ್ಳಿಗಳ ಗಾತ್ರಗಳನ್ನು ಅವಲಂಬಿಸಿತ್ತು. [೮೧]

ಬೆಳಗಾಂ ಮತ್ತು ಖಾನಾಪುರ ಜಿಲ್ಲೆಗಳಲ್ಲಿ ವಂಶಪಾರಂಪರ್ಯವಾಗಿ ಪೊಲೀಸ್ ಕೆಲಸಗಳನ್ನು 'ಘಡ್ಕರಿ' ಅಥವಾ ಬೆಟ್ಟದ–ಕೋಟೆ ಜನ (**hill- fort men**) ರು ಮಾಡಿಕೊಂಡು ಬರುತ್ತಿದ್ದರು. ಇವರು ಪ್ರಜಾಸೈನ್ಯಗಳಿಗಿಂತ ಭಿನ್ನವಾಗಿ ಕೆಲಸ ಮಾಡುತ್ತಿದ್ದರು. ಇವರುಗಳು ಬೆಳಗಾಂ ಉಪ–ವಿಭಾಗದಲ್ಲಿ ಬರುವ ಪರಗಡ ಮತ್ತು ಕಾಳಿನಂದಿಗಡ ಹಾಗೂ

ಖಾನಾಪುರ ಉಪ-ವಿಭಾಗದಲ್ಲಿ ಬರುವ, ಭೀಮಗಡ ಎಂಬ ಕೋಟೆಕೊತ್ತಲಗಳಲ್ಲಿ ವಂಶಪಾರಂಪರ್ಯವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದ ಸೇನೆಯಿಂದ ಬಂದವರಾಗಿದ್ದರು. ಇವರುಗಳು ಪಕ್ಕದ ಗ್ರಾಮ ಹಾಗೂ ಪಟ್ಟಣಗಳಲ್ಲಿಯೂ ಸಹ ಸರದಿ ಮೇಲೆ ಕೆಲಸ ಮಾಡುತ್ತಿದ್ದರು. ಪೊಲೀಸ್ ಮುಖ್ಯಸ್ಥನು ಜಿಲ್ಲಾ ಮ್ಯಾಜಿಸ್ಟ್ರೇಟನ ನೇರ ನಿಯಂತ್ರಣದಲ್ಲಿ ಕೆಲಸ ಮಾಡಬೇಕಿತ್ತು. ಆದರೆ ಅವರ ನೇಮಕಾತಿ ಅಥವಾ ಸೇನೆಯಿಂದ ವಜಾ ಮಾಡುವ ಅಧಿಕಾರವು ಕಮಿಷನರ್‌ರವರಿಗೆ ಸೇರಿತ್ತು. ೧೮೮೨ ರಲ್ಲಿ ಬೆಳಗಾಂ ಜಿಲ್ಲೆಯು ೧೨೭೯ ಪಟ್ಟಣ ಹಾಗೂ ಹಳ್ಳಿಗಳನ್ನು ಒಳಗೊಂಡಿದ್ದು ೮.೬೪.೦೧೪ ಜನಸಂಖ್ಯೆ ಹೊಂದಿದ್ದರೆ ೩೫೫೬ ಜನ ಪೊಲೀಸರಿದ್ದರು. ೨೪,೯೭೭ ಜನರಿಗೆ ಒಬ್ಬ ಪ್ರಜಾಸೈನಿಕನಿದ್ದ. ಘಡ್ಕರಿ ಅಥವಾ ಕೋಟೆ ಕೊತ್ತಲಗಳ ಕಾವಲುಗಾರರು ವಾರ್ಷಿಕ ರೂ ೮೦ ಸಂಬಳ ನೀಡಲಾಗುತ್ತಿತ್ತು. ಈ ಪ್ರಜಾಸೈನಿಕರು ಹಳ್ಳಿಯನ್ನು ಕಾವಲು ಕಾಯುವುದರೊಂದಿಗೆ ಜನರ ಆಸ್ತಿಪಾಸ್ತಿಗಳನ್ನು ರಕ್ಷಿಸಬೇಕಿತ್ತು. ಜಿಲ್ಲಾ ಪೊಲೀಸರಿಗೆ ಅಪರಾಧಗಳ ಪತ್ತೆಗೆ ಸಹಕರಿಸುವುದರೊಂದಿಗೆ ಖೈದಿಗಳ ಬೆಂಗಾವಲು ಕೆಲಸವನ್ನು ಮಾಡಬೇಕಿತ್ತು.[೮೨]

೬.೬-೨ – ಬೆಳಗಾಂ ಜಿಲ್ಲೆಯಲ್ಲಿ ಅಪರಾಧಗಳು

ಕೊಲ್ಲಾಪುರ ಮತ್ತು ಪವನತ್‌ವಾಡಿ ಪ್ರದೇಶಗಳು ಪಕ್ಕದ ರಾಜ್ಯದವುಗಳಾಗಿದ್ದುದಲ್ಲದೇ ಅವರ ಕೆಲವು 'ಜಾಗಿರ್' ಗ್ರಾಮಗಳು ಈ ಜಿಲ್ಲೆಯೊಳಗೆ ಇದ್ದುದರಿಂದ ಅಪರಾಧಗಳ ಪತ್ತೆ ಮತ್ತು ಶಿಕ್ಷೆ ನೀಡಲು ತೊಂದರೆಯಾಗುತ್ತಿತ್ತು. ಸುಳ್ಳು ಸಾಕ್ಷಿ ನುಡಿಯುವುದು, ನಕಲಿ ದಾಖಲೆಗಳ ಸೃಷ್ಠಿ, ಅಪರಾಧಿಕ ದುರ್ಬಳಕೆ, ನಂಬಿಕೆದ್ರೋಹ, ಕಳವು ಮಾಲು ಸ್ವೀಕಾರ, ಅತಿಕ್ರಮ ಪ್ರವೇಶ, ಕಲಬೆರಕೆಗಳು, ಹೆಚ್ಚಾಗಿ ನಡೆಯುವ ಸರ್ವೇ ಸಾಮಾನ್ಯವಾದ ಅಪರಾಧಗಳಾಗಿದ್ದವು. ಜಮೀನು ವಿವಾದಗಳು ಆಗಾಗ ನಡೆಯುತ್ತಿದ್ದು ಇವು ಅಪರಾಧಗಳು ನಡೆಯಲು ಮುಖ್ಯ ಕಾರಣವಾಗಿದ್ದವು. ಮುಖ್ಯವಾಗಿ ಕೊಲೆ, ರಾಬರಿ, ಮೋಸ, ಸುಳ್ಳುದೂರು, ಸುಳ್ಳುಸಾಕ್ಷಿಗಳು, ಪ್ರಮುಖ ಅಪರಾಧಗಳಾಗಿದ್ದವು. ಲಮನ್, ಕೈಕಾಡಿ, ವಡ್ಡರು, ಬೆಲ್ದರ್ ಎಂಬ ಪಂಗಡದವರು ಹೈವೆ ರಾಬರಿ ಮತ್ತು ಕಳ್ಳತನಗಳನ್ನು ನಡೆಸುತ್ತಿದ್ದರು.[೮೩]

೧೮೭೪ ರಿಂದ ೧೮೮೨ ರವರೆಗಿನ ಅಪರಾಧಗಳ

೧೮೭೪ ರಿಂದ ೧೮೮೨ ರವರೆಗೆ ಒಂಬತ್ತು ವರ್ಷಗಳಲ್ಲಿ ೧೬೧ ಕೊಲೆ, ೫೨ ಅಪರಾಧಿಕ ನರಹತ್ಯೆ, ೨೪೫ ಭಾರಿ ಗಾಯ, ೪೫೨ ಗುಂಪು ಮತ್ತು ಇತರ ರಾಬರಿ, ೨೫,೫೧೨ ಇತರ ಅಪರಾಧಗಳು ನಡೆದವು. ಈ ಒಂಬತ್ತು ವರ್ಷಗಳಲ್ಲಿ ವಾರ್ಷಿಕ ಸರಾಸರಿ, ೯೩೬ ಪ್ರಕರಣಗಳು ವರದಿಯಾದವು ಅಥವಾ ಸರಾಸರಿ ೯೪೪ ಜನರಿಗೆ ಒಂದು ಅಪರಾಧ ವರದಿಯಾಯಿತು. ೧೮೮೧ ರಲ್ಲಿ ೧೩ ಕೊಲೆಗಳಾದರೆ, ೧೮೭೪ ರಲ್ಲಿ ೨೩ ವರದಿಯಾದವು. ೯ ವರ್ಷಗಳಲ್ಲಿ ವಾರ್ಷಿಕ ಸರಾಸರಿ ೧೮ ಕೊಲೆಗಳಾದವು. ಅಪರಾಧಿಕ ನರಹತ್ಯೆ ೧೮೭೬ ರಲ್ಲಿ ೨ ಆದರೆ ೧೮೭೭ ರಲ್ಲಿ ೧೩ ಆಗಿದ್ದು, ಸರಾಸರಿ ೬ ವರದಿಯಾದವು. ೧೮೭೮ ರಲ್ಲಿ ಭಾರಿ ಗಾಯ ಪ್ರಕರಣಗಳು ೧೬ ವರದಿಯಾದರೆ, ೧೮೭೫ ರಲ್ಲಿ ೨೭ ಆಗಿದ್ದು ವಾರ್ಷಿಕ ಸರಾಸರಿ ೨೭ ಆಗಿತ್ತು. ಗ್ಯಾಂಗ್ ಮತ್ತು ಸರಾಸರಿ ರಾಬರಿಗಳು, ೧೮೭೫ರಲ್ಲಿ ೩೧ ಆದರೆ, ೧೮೭೯ ರಲ್ಲಿ ೬೦ ಆಗಿದ್ದು, ವಾರ್ಷಿಕ ಸರಾಸರಿ ೫೦ ವರದಿಯಾದವು. ಇತರೇ ಪ್ರಕರಣಗಳು ೧೮೭೪ರಲ್ಲಿ ೨೨೭೭ ಇದ್ದರೆ, ೧೮೭೭ ರಲ್ಲಿ ೨೭೮೬ ಆಗಿದ್ದು ಸರಾಸರಿ ೨೮೩೫ ಆಗಿತ್ತು. ಅಥವಾ ೯೬.೫೬% ಆಗಿತ್ತು. ೧೮೭೪ ರಲ್ಲಿ ೪೭% ಆಗಿದ್ದರೆ, ೧೮೭೭ ಮತ್ತು ೧೮೮೧ ರಲ್ಲಿ ೬೮% ಆಗಿತ್ತು. ಕಳವು ಮಾಲು ಪತ್ತೆ ೧೮೮೨ ರಲ್ಲಿ ೩೫% ಆತದ್ದರೆ, ೧೮೭೮ ರಲ್ಲಿ ೭೯.೫% ಅಗಿತ್ತು. ಅವುಗಳ ವಿವರ ಈ ಕೆಳಗಿನಂತಿವೆ.[೮೪]

೧೮೭೪ ರಿಂದ ೧೮೮೨ ರವರೆಗೆ ಬೆಳಗಾಂ ಜಿಲ್ಲೆಯ ಪೊಲೀಸ್ ಮತ್ತು ಅಪರಾಧಗಳ ವಿವರದ ಬಗ್ಗೆ ಅನುಬಂಧ – ೨೦ ನೋಡಿರಿ

೬.೬-೩ : ೧೮೮೨ ರಲ್ಲಿನ ಬೆಳಗಾಂ ಜಿಲ್ಲಾ ಪೊಲೀಸ್ ವ್ಯವಸ್ಥೆ

೧೮೮೨ ರಲ್ಲಿ ಜಿಲ್ಲೆಯಲ್ಲಿನ ವ್ಯವಸ್ಥಿತ ಪೊಲೀಸ್ ಪಡೆಯ ಬಲ ೬೬೩ ಆಗಿತ್ತು. ಇವರೆಲ್ಲ ಜಿಲ್ಲಾ ಎಸ್.ಪಿಯ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಇದರಲ್ಲಿ ಒಬ್ಬನು ಅಧೀನ ಅಧಿಕಾರಿ, ೧೦೮ ಕೆಳದರ್ಜೆಯ ಅಧೀನ ಅಧಿಕಾರಿಗಳು, ೧೪ ಅಶ್ವಾರೋಹಿ ಪೊಲೀಸರು ಹಾಗೂ ೫೩೯ ಪದಾತಿ ಕಾನ್‌ಸ್ಟೇಬಲ್‌ಗಳಾಗಿದ್ದರು. ಇವರಿಗೆ ತಗಲುತ್ತಿದ್ದ ಖರ್ಚು ಗಳೆಂದರೆ, ಎಸ್‌ಪಿ ಯವರಿಗೆ ಒಟ್ಟು ವಾರ್ಷಿಕ ಸಂಬಳ ೭೬೭೩ ರೂ, ಸಹಾಯಕ ಅಧಿಕಾರಿಗೆ ರೂ ೧೨೦೦ಕ್ಕೆ ಕಡಿಮೆ ಇಲ್ಲದಂತೆ, ಸಹಾಯಕ ಅಧೀನ ಅಧಿಕಾರಿಗೆ ವಾರ್ಷಿಕ ರೂ, ೧೨೦೦ ಕ್ಕಿಂತ ಕಡಿಮೆ ಸಂಬಳ ನೀಡುತ್ತಿದ್ದು, ಒಟ್ಟು ರೂ ೨೫.೯೧೦ ಆಗಿತ್ತು. ಅಶ್ವಾರೋಹಿ ಹಾಗೂ ಪದಾತಿ ಪೊಲೀಸರಿಗೆ ವಾರ್ಷಿಕ ರೂ. ೫೦,೧೫೪ ಸಂಬಳದ ಜೊತೆಗೆ ಎಸ್‌ಪಿರವರಿಗೆ ರೂ ೨೩೦೦ ನ್ನು ಕುದುರೆ ಭತ್ಯೆ ಹಾಗೂ ಪ್ರಯಾಣಭತ್ಯೆಯಾಗಿ ನೀಡಲಾಗುತ್ತಿತ್ತು. ಅಧೀನ ಅಧಿಕಾರಿಗಳಿಗೆ ವಾರ್ಷಿಕ ರೂ. ೧೯೩೭ ಕುದುರೆ ಭತ್ಯೆ ಹಾಗೂ ಪ್ರಯಾಣ ಭತ್ಯೆ ನೀಡಿದರೆ, ರೂ ೬೬೮೪ ನ್ನು ಕಛೇರಿ ಖರ್ಚುವೆಚ್ಚ ಹಾಗೂ ಸಣ್ಣಪುಟ್ಟ ವೆಚ್ಚಗಳಿಗಾಗಿ ನೀಡಲಾಗುತ್ತಿತ್ತು. ವಾರ್ಷಿಕವಾಗಿ ಪೊಲೀಸ್ ಇಲಾಖೆಯ ನಿರ್ವಹಣೆಗೆ ತಗಲುತ್ತಿದ್ದ ಒಟ್ಟು ಖರ್ಚು ರೂ. ೯೬೬೧೫ ರೂಗಳು. ಒಟ್ಟು ೪೬೫ ರ ಚ.ಮೈಲಿ ವ್ಯಾಪ್ತಿಯಲ್ಲಿ ೮೬೪.೦೧೪ ಜನಸಂಖ್ಯೆ ಇದ್ದು ೭ ಚದುರ ಮೈಲು ಹಾಗೂ ೧೩೦೩ ಜನರಿಗೆ ಒಬ್ಬ ಕಾನ್‌ಸ್ಟೇಬಲ್‌ನಂತೆ ಸರಾಸರಿ ಬಲ ಇತ್ತು. ಒಟ್ಟು ೬೬೩ ಜನರಲ್ಲಿ ಒಬ್ಬ ಎಸ್‌ಪಿ, ಒಬ್ಬ ಅಧಿಕಾರಿ ಹಾಗೂ ೧೦ ಜನ ಸಿಬ್ಬಂದಿಗಳನ್ನು ೧೮೮೨ ರಲ್ಲಿ ಜಿಲ್ಲಾ ಕೇಂದ್ರ ಹಾಗೂ ಉಪ-ಕಾರಾಗೃಹಗಳ ಕಾವಲು ಕರ್ತವ್ಯಕ್ಕೆ ನೇಮಿಸಲಾಯಿತು. ಆರು ಜನ ಅಧಿಕಾರಿ ಹಾಗೂ ೪೦ ಜನ ಸಿಬ್ಬಂದಿಗಳನು ಟ್ರಜರಿ ಹಾಗೂ ಲಾಕಪ್‌ಗಳ ಕಾವಲಿಗೆ ನಿಯೋಜಿಸಲಾಯಿತು. ೪೪೦ ಜನ ಸಿಬ್ಬಂದಿಯನ್ನು ಪಟ್ಟಣಗಳಲ್ಲಿ ಮುನ್ಸಿಪಾಲಿಟಿ ಹಾಗೂ ಕಂಟೋನ್ಮೆಂಟ್‌ಗಳಲ್ಲಿ ಇರಿಸಲಾಯಿತು. ಒಟ್ಟು ಪೊಲೀಸರ ಸಂಖ್ಯೆಯಲ್ಲಿ ಎಸ್‌ಪಿಯನ್ನು ಹೊರತುಪಡಿಸಿ ೩೩೪ ಜನರಿಗೆ ಬಂದೂಕುಗಳನ್ನು (**fire arms**) ೪೦ ಜನರಿಗೆ ಖಡ್ಗಗಳನ್ನು, ೨೮೬ ಜನರಿಗೆ ಲಾಠಿಗಳನ್ನು ವಿತರಿಸಲಾಯಿತು. ೬೫ ಜನ ಅಧಿಕಾರಿಗಳು ಹಾಗೂ ೧೮೯ ಸಿಬ್ಬಂದಿಗಳು ಸೇರಿ ೧೭೪ ಜನರಿಗೆ ಓದಲು ಮತ್ತು ಬರೆಯಲು ಬರುತ್ತಿತ್ತು. ಎಸ್‌ಪಿಯನ್ನು ಹೊರತುಪಡಿಸಿ ಇಬ್ಬರು ಮಾತ್ರ ಯುರೋಪಿಯನ್ ಅಧಿಕಾರಿಗಳಾಗಿದ್ದು, ಪೊಲೀಸ್ ಪಡೆಯ ಸಿಬ್ಬಂದಿಗಳು ಸ್ಥಳೀಯ ಭಾರತೀಯರಾಗಿದ್ದರು. ಈ ಪಡೆಯಲ್ಲಿ ೩೭ ಅಧಿಕಾರಿಗಳು ಹಾಗೂ ೨೨೩ ಜನ ಸಿಬ್ಬಂದಿಗಳು ಮೊಹಮ್ಮದೀಯರಾಗಿದ್ದರು. ೭೬ ಅಧಿಕಾರಿಗಳು ೬ ಜನ ಸಿಬ್ಬಂದಿಗಳು ಬ್ರಾಹ್ಮಣರಾಗಿದ್ದರೆ, ೭ ಅಧಿಕಾರಿ ೧೨ ಸಿಬ್ಬಂದಿ ರಜಪೂತರು, ೪ ಅಧಿಕಾರಿ ೩೧ ಸಿಬ್ಬಂದಿ ಲಿಂಗಾಯಿತರು, ೩೭ ಅಧಿಕಾರಿ ೨೧೦ ಸಿಬ್ಬಂದಿ ಮರಾಠರು, ೧೬ ಅಧಿಕಾರಿ ೧ ಸಿಬ್ಬಂದಿ ಜೈನರು, ೧೩ ಅಧಿಕಾರಿ ೩೦ ಸಿಬ್ಬಂದಿ ಮರಾಠರು, ೧ ಅಧಿಕಾರಿ, ೧ ಸಿಬ್ಬಂದಿ ಜೈನರು, ೧೩ ಅಧಿಕಾರಿ, ೩೦ ಸಿಬ್ಬಂದಿ ಇತರೆ ಹಿಂದೂ ಜನಾಂಗದವರಾಗಿದ್ದರು. ಒಬ್ಬ ಅಧಿಕಾರಿ ಪಾರ್ಸಿ, ೨ಅಧಿಕಾರಿ ಒಬ್ಬ ಸಿಬ್ಬಂದಿ ಕ್ರಿಶ್ಚಿಯನ್ ಆಗಿದ್ದರು.[೮೫]

ಬೆಳಗಾಂ ಜಿಲ್ಲೆಯ ಪೊಲೀಸರ ಬಗ್ಗೆ ಬರೆಯುವಾಗ ಕಿತ್ತೂರು ಚೆನ್ನಮ್ಮನ ಅಂಗರಕ್ಷಕರ ಬಗ್ಗೆ ಬರೆಯುವುದು ಅನಿವಾರ್ಯ. ಬೆಳಗಾಂ ಜಿಲ್ಲೆಯ ಪ್ರದೇಶವನ್ನು ಅಲ್ಲಿನ ದೇಸಾಯಿ ಮಲ್ಲಸರ್ಜನ ಮಗ ಶಿವಲಿಂಗ ರುದ್ರಸರ್ಜನ ಅಧೀನದಲ್ಲಿ ಸ್ವತಂತ್ರವಾಗಿದ್ದ ಸಂಸ್ಥಾನವೆಂಬುದನ್ನು ಬ್ರಿಟೀಷರು ಒಪ್ಪಿದ್ದರು. ಆದರೆ ಆತನು ವ್ಯಾದಿಗ್ರಸ್ಥನಾಗಿ ತೀರಿ ಕೊಂಡನು. (೧೮೨೪) ಆತನ ದತ್ತುಮಗನಾದ ಶಿವಲಿಂಗಪ್ಪನ ಪರವಾಗಿ ತಾಯಿ ಚೆನ್ನಮ್ಮ ಆಳತೊಡಗಿದಳು. ದಾರವಾಡದ ಕಮಿಷನರಾಗಿದ್ದ ತ್ಯಾಕರೆ ಈ ದತ್ತು ಸ್ವೀಕಾರವನ್ನು ಅನೂರ್ಜಿತವೆಂದು ಘೋಷಿಸಿ ಕಿತ್ತೂರನ್ನು ವಶ ಪಡಿಸಿಕೊಳ್ಳಬೇಕೆಂದು ಮುಂಬಾಯಿ ಪ್ರಾಂತಾಧಿಕಾರಿ ಎಲ್ಫಿನ್‌ಸ್ಟನ್‌ನಿಗೆ ವರದಿ ಕಳುಹಿಸಿ ಅಕ್ಟೋಬರ್ ೧೮೨೪ ರಂದು ಕಿತ್ತೂರು ಕೋಟೆಯನ್ನು ಮುತ್ತಿದ. ಚೆನ್ನಮ್ಮ ಇದರಿಂದ ಹೆದರಲಿಲ್ಲ. ತನ್ನ ದೇಶದ ಸ್ವತಂತ್ರ ಆಡಳಿತಕ್ಕಾಗಿ ಜೀವವನ್ನು ಪಣವಾಗಿಟ್ಟರು. ಆಗ ನಡೆದ

ರಭಸದ ಕಾಳಗದಲ್ಲಿ ತ್ಯಾಕರೆಯನ್ನು ಚೆನ್ನಮ್ಮನ ಮೈಕಾವಲಿನ ಸೈನಿಕನಾದ 'ಅಮಟೂರು ಬಾಳಪ್ಪ' ಗುಂಡಿಟ್ಟುಕೊಂದ ಎಂದು ಬಾ.ರಾ.ಗೋಪಾಲ್ ತಿಳಿಸುತ್ತಾರೆ.[೮೬] ಇದರಿಂದ ಬ್ರಿಟೀಷರು ಸೋಲಬೇಕಾಯಿತು. ಮೈಕಾವಲಿನ ಪಡೆ ಎಂದರೆ, ಅಂಗರಕ್ಷಕ ಪಡೆ ಎಂದು ಅರ್ಥ. ಇತ್ತೀಚಿನ ದಿನಗಳಲ್ಲಿ ಗಣ್ಯ ವ್ಯಕ್ತಿಗಳ, ಅತೀ ಗಣ್ಯವ್ಯಕ್ತಿಗಳ ರಕ್ಷಣೆಗಾಗಿ ಅವರಿಗೆ ಅಂಗರಕ್ಷಕ ಪೊಲೀಸರನ್ನು ಒದಗಿಸುವ ಪದ್ಧತಿ ಇದೆ. ಈ ಪದ್ಧತಿ ಇತ್ತೀಚೆಗೆ ಬೆಳಕಿಗೆ ಬಂದಿದ್ದಲ್ಲ. ಇದಕ್ಕೊಂದು ಪ್ರಾಚೀನ ಇತಿಹಾಸವಿದೆ ಎಂಬುದಕ್ಕೆ ಅಮಟೂರಿನ ಬಾಳಪ್ಪನೇ ಸಾಕ್ಷಿ. ಈತನ ಶೌರ್ಯ ಅಂಗರಕ್ಷಕ ಪಡೆಯ ಮಹತ್ವತೆಯನ್ನು ಎತ್ತಿತೋರಿಸುತ್ತದೆ. *ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾಂ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ – ೨೧ ರಲ್ಲಿ ನೋಡಿ.*

೬.೭– ಗುಲ್ಬರ್ಗ ಜಿಲ್ಲೆಯಲ್ಲಿನ ಪೊಲೀಸ್ ವ್ಯವಸ್ಥೆ

೧೮೫೩ ಕ್ಕೂ ಹಿಂದೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಂಘಟಿತವಾದ ಒಂದು ಪೊಲೀಸ್‌ದಳ ಇರಲಿಲ್ಲ. ೧೮೬೬ ರಲ್ಲಿ ಒಂದು ನಿಯತವಾದ ಪೊಲೀಸ್ ದಳವನ್ನು ರಚಿಸಲಾಯಿತು. ಹಾಗೂ ಇದನ್ನು ರೆವಿನ್ಯೂ ಅಧಿಕಾರಿಗಳ ಅಧೀನದಲ್ಲಿಡಲಾಯಿತು. ೧೮೬೯ ರಲ್ಲಿ ಒಬ್ಬ ವಿಶೇಷ ಸದರ್–ಉಲ್–ಮೊಹಂ ಅಥವಾ ಪೊಲೀಸ್ ಸಚಿವರನ್ನು ನೇಮಕ ಮಾಡಲಾಯಿತು. ಇವರಿಗೆ ಹೈದರಾಬಾದ್ ರಾಜ್ಯದ ಪೊಲೀಸರ ಮೇಲೆ ಪೂರ್ಣ ಅಧಿಕಾರ ಇತ್ತು. ಹೈದರಾಬಾದ್–ಕರ್ನಾಟಕ ಪ್ರದೇಶದ ಪೊಲೀಸ್ ಆಡಳಿತ ಪ್ರಾರಂಭದ ಕಾಲದ ಇತಿಹಾಸ ೧೯೪೮ ಕ್ಕಿಂತ ಮುಂಚೆ ಹೇಗಿತ್ತು ಎಂದರೆ ನಿಜಾಮರ ಆಳ್ವಿಕೆಯ ಕಾಲದಲ್ಲಿ ಕಲ್ಬುರ್ಗಿ, ಬೀದರ್, ರಾಯಚೂರು ಮತ್ತು ಉಸ್ಮಾನಾಬಾದ್ ಈ ನಾಲ್ಕು ಜಿಲ್ಲೆಗಳನ್ನು ಒಳಗೊಂಡ ಕಲ್ಬುರ್ಗಿಯ 'ಸುಭಾ' (ವಿಭಾಗ) ದ ಕೇಂದ್ರಸ್ಥಾನವಾಗಿತ್ತು. ಇಲ್ಲಿಂದ ಎರಡು ಪ್ರತ್ಯೇಕ ಪೊಲೀಸ್ ದಳಗಳು ಕಾರ್ಯನಿರ್ವಹಿಸುತ್ತಿದ್ದವು. ಅದರಲ್ಲಿ ಒಂದು 'ದಿವಾನಿ' ಪೊಲೀಸ್ ದಳವು ನಿಜಾಮರ ಸರಕಾರದ ಪೊಲೀಸ್ ದಳವಾಗಿತ್ತು. 'ಜಹಗೀರ್' ಪೊಲೀಸ್ ದಳವು ವೈಯಕ್ತಿಕ ಜಾಗೀರುದಾರರ ಪೊಲೀಸ್ ದಳ ವಾಗಿದ್ದು, ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಇಟ್ಟುಕೊಳ್ಳಲು ಅನುಮತಿಸಲಾಗಿದ್ದು, ಪ್ರತ್ಯೇಕ ಪೊಲೀಸ್ ದಳವಾಗಿತ್ತು. ಆಹಗೀರ್ ಪೊಲೀಸ್ ದಳವನ್ನು ವ್ಯವಸ್ಥಿತ ರೀತಿಯಲ್ಲಿ ಸಂಘಟಿಸದಿದ್ದ ಕಾರಣ ಅದು ಹೆಚ್ಚು ಕಡಿಮೆ ಅವ್ಯವಸ್ಥೆಯಲ್ಲಿತ್ತು. ೧೯೪೮ ರಲ್ಲಿ ಹೈದರಾಬಾದ್ ರಾಜ್ಯವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಿದ ತರುವಾಯ ಜಹಗೀರ್ ಪೊಲೀಸ್ ವ್ಯವಸ್ಥೆಯನ್ನು ರದ್ದುಗೊಳಿಸಲಾಯಿತು. ಮತ್ತು ಎಲ್ಲಾ ಪೊಲೀಸ್ ಆಡಳಿತವನ್ನು ದಿವಾನಿ ಪೊಲೀಸ್ ವ್ಯವಸ್ಥೆಗೆ ವಹಿಸಿಕೊಡಲಾಯಿತು. ಪೊಲೀಸರಲ್ಲಿ 'ದಿವಾನಿ' ದಳ, 'ಜಗೀರ್' ಮತ್ತು 'ಪೈಗಾ'ಗಳಿಗೆ ನೇಮಿಸಲ್ಪಟ್ಟವರು ಇದ್ದರು. ಪೊಲೀಸ್ ದಳವು ಒಂದು ಏಕೈಕದಳವು ಆಗಿರಲಿಲ್ಲ. 'ದಿವಾನಿ'ಗಳಿಗೆ ಒಂದು ವ್ಯವಸ್ಥಿತವಾದ ತರಬೇತಿ ಇತ್ತು. 'ಜಹಗೀರ್'ಗಳಲ್ಲಿ ನ್ಯಾಯಾಲಯದ ವ್ಯವಸ್ಥೆ, 'ಜಹಗೀರ್‌ದಾರ'ರ ನಿಯಂತ್ರಣದಲ್ಲಿತ್ತು. ಅವರ ಆಳ್ವಿಕೆಯಲ್ಲಿ ಪೊಲೀಸ್ ಬಲದ ಆಡಳಿತವು ಯಾವುದೇ ನಿರ್ದಿಷ್ಟ ಕ್ರಮ ಇಲ್ಲದೇ ಕಠಿಣ ನಿಯಮಗಳಿಲ್ಲದೇ ಇತ್ತು. ಆಗಿನ ಪರಿಸ್ಥಿತಿಯಲ್ಲಿ ಗುಲ್ಬರ್ಗವು ಕೋಮುಗಲಭೆಗೆ ಹೆಚ್ಚುಕಡಿಮೆ ಕೇಂದ್ರ ಸ್ಥಳದಂತೆ ಇತ್ತು. ಆದ್ದರಿಂದ ಕೆಲವು ಗಂಭೀರ ಕೋಮುಗಲಭೆಗಳು ಆಗಾಗ್ಗೆ ನಡೆಯುತ್ತಿದ್ದವು. ೧೯೩೭ ರಲ್ಲಿ ಆರ್ಯ ಸಮಾಜದ ಚಳವಳಿಯ ಸಂದರ್ಭದಲ್ಲಿಯೂ ಶಾಂತಿಪಾಲನೆ ಸಮರ್ಪಕವಾಗಿರಲಿಲ್ಲ. ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಮೊದಲಾದ ಸ್ಥಳಗಳಿಂದ ಬಂದ ಆರ್ಯಸಮಾಜದ ಕಾರ್ಯಕರ್ತರು ಸಾವಿರಾರು ಜನರು ಗುಲ್ಬರ್ಗದಲ್ಲಿ ಸೇರಿ, ಜವಾಬ್ದಾರಿ ಸರಕಾರದ ಅಗತ್ಯಕ್ಕಾಗಿ ಚಳವಳಿ ನಡೆಸಿದರು. ಇದರಿಂದ ಘರ್ಷಣೆಗಳು ಹೆಚ್ಚಾದವು. ಪ್ರತಿಷ್ಠಿತ ರಾಜಕಾರಣಿಗಳನ್ನು ಗುಲ್ಬರ್ಗದ ಕಾರಾಗೃಹದಲ್ಲಿಡಲಾಯಿತು. ನಂತರ 'ರಝಾಕಾರ' ಚಳವಳಿ ಪ್ರಾರಂಭ ವಾಯಿತು. ಪೊಲೀಸ್ ಕಾರ್ಯಾಚರಣೆಯ ನಂತರ ಪರಿಸ್ಥಿತಿ ಶಾಂತವಾಯಿತು. ಕೇಂದ್ರ

ಸರಕಾರವು ಹೈದರಾಬಾದ್ ರಾಜ್ಯದ ಆಡಳಿತವನ್ನು ವಹಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿತು. ನಂತರ ಸುಮಾರು ಶೇಕಡಾ ೪೦ ರಿಂದ ೫೦ ಮುಸಲ್ಮಾನ ಅಧಿಕಾರಿಗಳು ತಮ್ಮ ಅಧಿಕಾರವನ್ನು ಬಿಟ್ಟು ಪಾಕಿಸ್ಥಾನಕ್ಕೆ ಹೋದರು. ಈ ಸಮಯದಲ್ಲಿ ಪೋಲೀಸರಿಗೆ ಶಾಂತಿಪಾಲನೆಯ ಕಾರ್ಯ ಕಷ್ಟವಾಯಿತು. ಹೊಸದಾಗಿ ಜನರನ್ನು ಪೋಲೀಸ್ ದಳಕ್ಕೆ ಸೇರಿಸಿಕೊಳ್ಳುವ ಅಗತ್ಯತೆ ಉಂಟಾಯಿತು.[೮೭] ಸರ್‌ಥಾಮಸ್ ಮನ್ರೋ ೧೮೦೦ ರಲ್ಲಿ ಬಳ್ಳಾರಿ ಜಿಲ್ಲೆ ಕಲೆಕ್ಟರ್ ಆಗಿ ಬಂದ. ಧಾರವಾಡವು ಕನ್ನಡ ಜಿಲ್ಲೆಗಳ ಮುಖ್ಯ ಜಿಲ್ಲಾಧಿಕಾರಿಯ ಕೇಂದ್ರ ಕಾರ್ಯಾಲಯವಾಯಿತು. ೧೮೩೬ ರಲ್ಲಿ ಬೆಳಗಾವಿ ಯನ್ನು ಪ್ರತ್ಯೇಕ ಜಿಲ್ಲೆಯಾಗಿ ವಿಭಾಗಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯನ್ನು–ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕಿಸಿ ೧೮೬೨ ರಲ್ಲಿ ಮುಂಬಾಯಿ ಪ್ರಾಂತಕ್ಕೆ ಸೇರಿಸಲಾಯಿತು.[೮೮]

೬.೮ : ಬಿಜಾಪುರ ಜಿಲ್ಲೆಯಲ್ಲಿ ಪೋಲೀಸ್ ವ್ಯವಸ್ಥೆ

ಒಂದು ಪ್ರದೇಶದ ನ್ಯಾಯ ಮತ್ತು ಶಾಂತಿಯನ್ನು ಕಾಪಾಡಲು ಒಂದು ವ್ಯವಸ್ಥೆ ಇರಬೇಕಾದುದು ರಾಜ ಧರ್ಮಗಳಲ್ಲಿ ಒಂದು ಅವಶ್ಯಕತೆಯಾಗಿರುತ್ತದೆ. ಹಿಂದೆ ರಾಜನು ಪ್ರಜೆಗಳ ಕ್ಷೇಮವನ್ನು ಕಾಪಾಡಲು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಈ ಅಧಿಕಾರಿಗಳು ಬೇರೆ ಬೇರೆ ರಾಜರ ಆಡಳಿತದಲ್ಲಿ ವಿವಿಧ ಹೆಸರುಗಳಿಂದ ಅಂದರೆ ಧರ್ಮಪಾಲಕ, ಕೊತ್ವಾಲ, ಪೋಲೀಸ್, ಪಟೇಲ, ಗೌಡ ಇತ್ಯಾದಿಗಳಿಂದ ಕರೆಯಲ್ಪಡುತ್ತಿದ್ದರು. ನಾಮದೇಯ ಏನೇ ಆದರೂ ಮಾಡಬೇಕಾದ ಕಾರ್ಯ ಒಂದೇ ಆಗಿದ್ದಿತು. ಬಿಜಾಪುರದಲ್ಲಿ ಆದಿಲ್‌ಶಾಹಿ ಕಾಲದಲ್ಲಿಯೂ ವ್ಯವಸ್ಥಿತ ಪೋಲೀಸ್ ವ್ಯವಸ್ಥೆಯಿತ್ತು. ಈ ಜಿಲ್ಲೆಯ ಜಮಖಂಡಿ, ಮುದೋಲ ಮೊದಲಾದ ಸ್ವತಂತ್ರ ಸಂಸ್ಥಾನಗಳಲ್ಲಿಯೂ ಪ್ರತ್ಯೇಕವಾದ ಪೋಲೀಸ್ ವ್ಯವಸ್ಥೆಯು ಇದ್ದಿತು. ಜಿಲ್ಲೆಯ ಪೋಲೀಸ್ ಆಡಳಿತವನ್ನು ೧೮೨೭ ರಲ್ಲಿನ ವ್ಯವಸ್ಥೆಯಿಂದ ಅಧ್ಯಯನ ಮಾಡಬಹುದು. ಆ ಕಾಲದಲ್ಲಿ ಒಂದು ನಿಯಮಿತ ಪೋಲೀಸ್ ಪಡೆಯು ೧೮೨೭ರ ಬಾಂಬೆ ರೆಗ್ಯುಲೇಷನ್ ೧೨ ರಂತೆ ಜಿಲ್ಲಾ ಮ್ಯಾಜಿಸ್ಟ್ರೇಟರ ಆಡಳಿತಾತ್ಮಕ ಅಧೀನದಲ್ಲಿ ಇತ್ತು. ಗ್ರಾಮೀಣ ಮಟ್ಟದಲ್ಲಿ ಪೋಲೀಸ್ ಪಟೇಲರನ್ನು ಗ್ರಾಮದಲ್ಲಿನ ನ್ಯಾಯಪರಿಪಾಲನೆಗೆ ಜವಾಬ್ದಾರರನ್ನಾಗಿ ಮಾಡಲಾಗಿತ್ತು. ಈ ನಿಯಮವನ್ನು ಬಾಂಬೆ ಡಿಸ್ಟ್ರಿಕ್ಟ್ ಪೋಲೀಸ್ ಕಾಯ್ದೆ ೧೮೬೭ರ ಮೂಲಕ ತಿದ್ದುಪಡಿ ಮಾಡಲಾಯಿತು. ಈ ನಿಯಮವು ಕೇಂದ್ರ ಅಧಿನಿಯಮ ಇಂಡಿಯನ್ ಪೋಲೀಸ್ ಆಕ್ಟ್ ೧೮೬೧ ರಂತೆ ರೂಪಗೊಂಡಿತು. ಇದರಲ್ಲಿ ಪೋಲೀಸ್ ಅಧಿಕಾರಿಗಳ ಕೆಲಸಗಳನ್ನು ಅವರ ಅಧಿಕಾರಗಳನ್ನು ವಿವರಿಸ ಲಾಯಿತು. ನಂತರ ೧೮೯೦ರ ಬಾಂಬೆ ಪ್ರಾಂತ್ಯ ಪೋಲೀಸ್ ಆಕ್ಟ್ ಮೂಲಕ ಈ ನಿಯಮಗಳನ್ನು ರದ್ದುಪಡಿಸಲಾಯಿತು. ೧೮೯೦ರ ಈ ನಿಯಮ ವ್ಯಾಪಕವಾಗಿ ಪೋಲೀಸರ ಕಾರ್ಯವ್ಯಾಪ್ತಿ ಜವಾಬ್ದಾರಿಗಳನ್ನು ತಿಳಿಸಿದೆ. ೧೮೯೦ ರ ಈ ನಿಯಮವು ಬಾಂಬೆ ಪೋಲೀಸ್ ಕಾಯ್ದೆ ೧೯೫೧ ಜಾರಿಗೆ ಬರುವವರೆಗೂ ಚಾಲ್ತಿಯಲ್ಲಿತ್ತು. ನಂತರ ೧೯೬೫ರ ಸಮಗ್ರ ಪೋಲೀಸ್ ಕಾಯ್ದೆಯು ಬಿಜಾಪುರವು ಸೇರಿದಂತೆ ರಾಜ್ಯದಲ್ಲಿ ಜಾರಿಗೆ ಬಂದಿತು.[೮೯] *ಸ್ವಾತಂತ್ರ್ಯ ಪೂರ್ವದಲ್ಲಿ ಬಿಜಾಪುರ ಜಿಲ್ಲೆಯಲ್ಲಿದ್ದ ಪೋಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿಯನ್ನು ಅನುಬಂಧ – ೨೨ ರಲ್ಲಿ ನೋಡಿ.*

೬.೯ : ಧಾರವಾಡ ಜಿಲ್ಲಾ ಪೋಲೀಸ್

ಈ ಜಿಲ್ಲೆಯಲ್ಲಿ ೧೮೨೭ರ ಹೊತ್ತಿಗೆ, ಪೋಲೀಸ್ ವ್ಯವಸ್ಥೆಯು ಬಾಂಬೆ ರೆಗ್ಯುಲೇಶನ್ ೧೨ (೧೮೨೭) ಈ ನಿಯಮದಂತೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರ ಆಡಳಿತದ ಹತೋಟಿಯಲ್ಲಿದ್ದಿತು. ಅವರಿಗೆ ಇದ್ದ ಮರಾಠರ ಕಾಲದ 'ಶೇತ್‌ಸನದಿ' ಎಂಬ ಗ್ರಾಮೀಣ ಪೇದೆಗಳನ್ನೇ ಅವರು ಪೋಲೀಸ್ ಪಡೆಗೆ ಬಳಸಿಕೊಂಡರು. ೧೮೮೨ ರಲ್ಲಿ ಜಿಲ್ಲೆಯಲ್ಲಿನ ಪೋಲೀಸ್ ಬಲದ ಸಂಖ್ಯೆ ೭೩೩. ಇವರಲ್ಲಿ ಒಬ್ಬರು ಜಿಲ್ಲೆ ಅಧೀಕ್ಷಕರು, ೨ ಅಧೀನ ಅಧಿಕಾರಿಗಳು, ೧೧೧ ಇತರ ಅಧೀನ ಅಧಿಕಾರಿಗಳು, ೨೫ ಅಶ್ವಾರೂಢ ಪೋಲೀಸ್ ಸಿಬ್ಬಂದಿ ಹಾಗೂ ೫೯೪ ಕಾನ್‌ಸ್ಟೇಬಲ್‌ಗಳು ಇದ್ದರು. ನಂತರ ೧೮೯೦ ರ

ಬಾಂಬೆ ಡಿಸ್ಟ್ರಿಕ್ಟ್ ಪೊಲೀಸ್ ಆಕ್ಟ್ ಜಾರಿಗೆ ಬಂದಿದ್ದು ೧೯೫೧ರವರೆಗೂ ಜಾರಿಯಲ್ಲಿತ್ತು. ಧಾರವಾಡದಲ್ಲಿ ಪೊಲೀಸ್ ಆಡಳಿತದ ಕೇಂದ್ರ ಸ್ಥಾನವಲ್ಲದೇ ೨೮ ಪೊಲೀಸ್ ಠಾಣೆಗಳು, ೨೬ ಔಟ್‌ಪೋಸ್ಟ್‌ಗಳೂ ಇದ್ದವು. ಪೊಲೀಸ್ ಠಾಣೆಗಳಲ್ಲಿ ೪ ಟೌನ್ ಪೊಲೀಸ್ ಠಾಣೆಗಳು ೧೨ ತಾಲೂಕು ಪೊಲೀಸ್ ಠಾಣೆಗಳು, ೪ ಮಹಲ್ ಪೊಲೀಸ್ ಠಾಣೆಗಳು ಮತ್ತು ೮ ಉಪ-ಪೊಲೀಸ್ ಠಾಣೆಗಳಿದ್ದವು.

ಸರಾಸರಿ ಆರು ಚದರ ಮೈಲಿಗೆ ಮತ್ತು ೧೨೦೩ ಜನಸಂಖ್ಯೆಗೆ ಒಬ್ಬ ಕಾನ್‌ಸ್ಟೇಬಲ್ ಇದ್ದರು. ಒಟ್ಟು ೭೩೩ ಪೊಲೀಸ್ ಸಿಬ್ಬಂದಿಯನ್ನು ೧೮೮೨ ರಲ್ಲಿ ಜಿಲ್ಲೆಯ ಶಾಂತಿ ರಕ್ಷಕರಾಗಿ, ಕೇಂದ್ರೀಯ ಅಥವಾ ಉಪ ಬಂಧಿಖಾನೆಯಲ್ಲಿ ಹಾಗೂ ಖಜಾನೆಯ ಕಾವಲಿಗಾಗಿ ಖೈದಿಗಳ ಬೇಹುಗಾರರಾಗಿ, ಕೆಲಸ ಮಾಡುತ್ತಿದ್ದರು. ೩೬೭ ಪೊಲೀಸ್ ಸಿಬ್ಬಂದಿಗೆ, ಮದ್ದುಗುಂಡುಗಳ ಪಿಸ್ತೂಲನ್ನು, ೪೨ ಸಿಬ್ಬಂದಿಗೆ ೨ ಕತ್ತಿಗಳನ್ನು ಒದಗಿಸಲಾಗಿತ್ತು. ಪೊಲೀಸ್ ಅಧೀಕ್ಷಕರನ್ನು ಹೊರತು ಉಳಿದೆಲ್ಲ ಸಿಬ್ಬಂದಿ ಭಾರತೀಯರಾಗಿದ್ದರು.[೯೦]

೬.೯-೧ : ಸವಣೂರು ಸಂಸ್ಥಾನದ ಪೊಲೀಸ್ ಆಡಳಿತ

ಧಾರವಾಡ ಜಿಲ್ಲೆಯ ಸವಣೂರು ೨೫ ಗ್ರಾಮಗಳ ಒಂದು ಪ್ರತ್ಯೇಕ ಸಂಸ್ಥಾನವಾಗಿದ್ದು, ಅಲ್ಲಿಯ ಪೊಲೀಸ್ ಆಡಳಿತದ ವ್ಯವಸ್ಥೆ ಹೀಗಿತ್ತು. ಪೊಲೀಸ್ ಇಲಾಖೆಯಲ್ಲಿನ ಸಿಬ್ಬಂದಿ ೪೫ ಪೊಲೀಸರನ್ನು ನೇಮಿಸಿಕೊಳ್ಳುವಾಗ ಒಳ್ಳೆಯ ನಡತೆ, ಕಾರ್ಯತತ್ಪರತೆ, ಸೇವಾ ಮನೋಭಾವ ವಿದ್ದವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಒಂದು ಬಾರಿಗೆ ಇಬ್ಬರನ್ನು ಧಾರವಾಡಕ್ಕೆ ತರಬೇತಿಗೆ ಕಳುಹಿಸಿ, ಅವರು ಉಳಿದ ಪೊಲೀಸರಿಗೆ ಕವಾಯತು, ಕಾನೂನು, ತನಿಖೆ, ಸಾರ್ವಜನಿಕ ಸಂಪರ್ಕ ಮುಂತಾದ ವಿಷಯಗಳ ಬಗ್ಗೆ ಸವಣೂರಿನಲ್ಲಿಯೇ ತರಬೇತಿ ಕೊಡುತ್ತಿದ್ದರು. ೧೯೧೪ ರಲ್ಲಿ ಸವಣೂರು ಸಂಸ್ಥಾನದಲ್ಲಿ ಚಂದಾಪುರ, ಹೋತನಹಳ್ಳಿ, ಮುಳಕೇರಿ, ಕಬನೂರು, ಡೊಂಬರಮತ್ತೂರು, ಮುಂತಾದ ಸ್ಥಳಗಳಲ್ಲಿ ಪೊಲೀಸರು ಇರುತ್ತಿದ್ದರು. ಅವರು ತಮ್ಮ ತಮ್ಮ ಬೀಟಿಗೆ (ಗಸ್ತು) ಒಳಪಟ್ಟ ಹಳ್ಳಿಗಳಲ್ಲಿ ನಡೆದ ಅಪರಾಧಗಳ ಬಗ್ಗೆ ಮುಂಜಾಗರೂಕತೆ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸವಣೂರಿನಲ್ಲಿಯ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ವರದಿ ಸಲ್ಲಿಸುತ್ತಿದ್ದರು. ಪೊಲೀಸ್ ಮುಖ್ಯಾಧಿಕಾರಿಯು ತನ್ನ ಇಲಾಖೆಗೆ ಸಂಬಂಧಪಟ್ಟ ದೈನಂದಿನ ವರದಿಯನ್ನು ಕಡ್ಡಾಯವಾಗಿ ಪ್ರತೀದಿನ ಬೆಳಗ್ಗೆ ಆರು ಗಂಟೆಗೆ ನವಾಬ ಸಾಹೇಬರ ನಿವಾಸಕ್ಕೆ ಹೋಗಿ ಕೊಡಬೇಕಾಗುತ್ತಿತ್ತು. ಸವಣೂರು ನಗರದಲ್ಲಿ ಎಂಟು ಪೊಲೀಸ್ ಚೌಕಿಗಳಿದ್ದವು. ಸವಣೂರು ನವಾಬರಿಗೆ, ಜಿಲ್ಲಾ ಸೆಶನ್ಸ್ ನ್ಯಾಯಾಧೀಶರ ಅಧಿಕಾರವಿತ್ತು. ಪೊಲೀಸ್ ಹಿರಿಯ ಅಧಿಕಾರಿಯ ಮೇಲೆ ಪೊಲಿಟಿಕಲ್ ಏಜೆಂಟ್ ಎನ್ನುವ ಅಧಿಕಾರಿ ಇರುತ್ತಿದ್ದು, ಅವರು ಆಗಾಗ್ಗೆ ಇಲಾಖಾ ಕಾರ್ಯನಿರ್ವಹಣೆಯ ಪರಿಶೀಲನೆ ಮಾಡುತ್ತಿದ್ದರು.[೯೧] ಇಂತದೇ ವ್ಯವಸ್ಥೆ ಕುಂದಗೋಳ, ಶಿರಹಟ್ಟಿ, ಲಕ್ಷ್ಮೇಶ್ವರ, ಗುಡಿಗೇರಿ ಮುಂತಾದ ಸಂಸ್ಥಾನ ಪ್ರದೇಶಗಳಲ್ಲಿ ಇತ್ತು.

೬.೯-೨ ಧಾರವಾಡದಲ್ಲಿ ಗೋಲಿಬಾರ್

೧೯೧೯-೨೦ ರ ವೇಳೆಗೆ ಧಾರವಾಡ ಜಿಲ್ಲೆಯಲ್ಲಿ ಅಸಹಾಕಾರ ಚಳವಳಿಯು ಜೋರಾಗಿ ನಡೆಯುತ್ತಿತ್ತು. ಸಭೆ ಮೆರವಣಿಗೆಗಳೇ ಅಲ್ಲದೇ ಶೇಂದಿ, ಸಾರಾಯಿ ಅಂಗಡಿಗಳ ಮುಂದೆ ಪಿಕೇಟಿಂಗ್ ಆ ಕಾಲದಲ್ಲಿ ಬಿರುಸಾಗಿ ಸಾಗಿತು. ಪತ್ರಿಕೆಗಳೂ ಈ ವಿಚಾರವನ್ನು ಉಗ್ರವಾಗಿ ಬರೆಯುತ್ತಿದ್ದವು. ಜಿಲ್ಲಾಧಿಕಾರಿಯಾದ ಪೇಂಟರ್ ಎಂಬಾತನು ದಬ್ಬಾಳಿಕೆ ಆರಂಭಿಸಿದನು. ಸಾರಾಯಿ ಪಿಕೇಟಿಂಗ್‌ಗೆ ಸಂಬಂಧಿಸಿ ಇಬ್ಬರು ಖಿಲಾಪತ್ ಸ್ವಯಂ ಸೇವಕರಿಗೆ ಆರು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು. ಅದರ ಪ್ರತಿಭಟನಾರ್ಥ ೧ನೇ ಜುಲಾಯಿ ೧೯೨೧ ರಂದು ಧಾರವಾಡದಲ್ಲಿ ಹರತಾಳ ಆಚರಿಸಿದರು. ಒಂದು ಪ್ರತಿಭಟನಾ ಸಭೆಯೂ ನಡೆಯಿತು. ಆಗ ಸಾರಾಯಿ ಅಂಗಡಿ ಸುಡಲು ಯತ್ನಿಸಿದರು. ದೊಂಬಿ ಮಾಡಿದರು,

ಎಂದೆಲ್ಲ ಕಾರಣ ಹೇಳಿ ಪೊಲೀಸರು ಗೋಲಿಬಾರು ಮಾಡಿ ಮೂವರು ಖಿಲಾಫತ್ ಕಾರ್ಯಕರ್ತರನ್ನು ಕೊಂದರು. ೩೯ ಜನರಿಗೆ ಗಾಯವಾಯಿತು. ಈ ಬಗ್ಗೆ ಸರಕಾರವು ವಿಚಾರಣೆ ನಡೆಸಬೇಕೆಂಬ ಬೇಡಿಕೆ ಬಂದಾಗ ಸರಕಾರವು ಹಾಗೆ ಮಾಡದಿರಲು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯೇ ಅಬ್ಬಾಸ್ ತಯಬ್ಜಿ, ಭವಾನಿಶಂಕರ್ ನಿಯೋಗಿ ಮತ್ತು ಎಸ್.ಎಸ್.ಸೆಟ್ಲೂರ್ ಇವರನ್ನು ಒಳಗೊಂಡ ವಿಚಾರಣಾ ಆಯೋಗ ನೇಮಿಸಿತು. ಇಡೀ ದೇಶದಲ್ಲಿ ಈ ಘಟನೆಗೆ ವಿಶೇಷ ಪ್ರಚಾರ ಸಿಕ್ಕಿತು.

ಈ ಸಂಬಂಧದಿಂದಾಗಿ ಸರಕಾರವು ೨೯ ಜನರನ್ನು ಬಂಧಿಸಿ ದೊಂಬಿಯ ನೆಪಹೇಳಿ ೨೭ ಜನರ ಮೇಲೆ ಸುಳ್ಳು ಖಟ್ಲೆ ಹಾಕಿತು. ಈ ಖಟ್ಲೆ ದೀರ್ಘಕಾಲ ನಡೆದಿರಲು ಅದೇ ಕಾಲಕ್ಕೆ ಲಾಲಾ ಲಜಪತರಾಯ್ ಧಾರವಾಡಕ್ಕೆ ಬಂದು ಖೈದಿಗಳನ್ನೆಲ್ಲ ಕಂಡು ಅವರಿಗೆ ಧೈರ್ಯ ಹೇಳಿ ಸಾರ್ವಜನಿಕ ಭಾಷಣ ಕೂಡ ಮಾಡಿದರು. ಬಂಧಿತರ ನೈತಿಕ ಧೈರ್ಯ ಕಂಡು ತನಗೆ ಸಂತಸವಾಗಿದೆ ಎಂದೂ ಅವರು ಪ್ರಕಟಿಸಿದರು. ಖಟ್ಲೆ ಹಾಕಲ್ಪಟ್ಟ ಜನರಲ್ಲಿ ರಂ.ರಾ.ದಿವಾಕರ, ಹನುಮಂತರಾವ್ ದೇಸಾಯಿ, ಗೋಪಾಲರಾವ್ ದೇಶಪಾಂಡೆ ಹಾಗೂ ಮದಾರ್‌ಸಾಬ್ ಕಟಗಾರ್ ನಿರಪರಾಧಿಗಳೆಂದು ಬಿಡುಗಡೆಯಾದರು. ಮಧ್ವರಾವ್ ಕಬ್ಬೂರ್, ವೆಂಕಟರಾವ್ ಮುದುವೀಡ್‌ಕರ್, ಧಾರವಾಡ ಪುರಸಭೆಯ ಅಧ್ಯಕ್ಷ ದಾಮೋದರ ಹೆರ್ಲೇಕರ್, ಅಬ್ದುಲ್ಲಾ ಖಲಾಸಿ (ಖಿಲಾಫತ್ ಸಮಿತಿ ಅಧ್ಯಕ್ಷರು) ಹಾಗೂ ಅಬ್ದುಲ್ ರಹಿಮಾನ್ ರೋಟೀವಾಲಾ ಇವರಿಗೆ ತಲಾ ಮೂರು ವರ್ಷ ಕಠಿಣ ಶಿಕ್ಷೆಯಾಯಿತು. ಅನಂತ ದಾಬಡೆ, ಉಸ್ಮಾನ್ ಮುಲ್ಲಾ, ಸುಲ್ತಾನ್ ಮೊಹಿದಿನ್ ರಾಯದುರ್ಗ, ಶೇಕ್ ಮೊಹಿದ್ದೀನ್ ದರ್ಜಿ, ಅಬ್ದುಲ್ ಖಾದರ್ ಅತ್ತಾರ್, ಮೊಹಮ್ಮದ್ ಹುಸೇನ್ ರೋಟಿವಾಲಾ, ಅಬ್ದುಲ್ ವಾಜುದ್ದೀನ್ ದರೋಗ, ನರಸಿಂಗ ನಾರಾಯಣ ಭಿಸೆ, ಶ್ಯಾಮ್‌ಭಟ್ ಹಾಗೂ ಬುಡಾನ್ ಚಪ್ಪುರಬಂದ್ ಇವರುಗಳಿಗೆ ತಲಾ ಎರಡು ವರ್ಷ ಕಠಿಣ ಸಜೆ ಆಯಿತು. ತಿರುಮಲರಾವ್ ಜೋಶಿ, ವಾಮನ ಜಠಾರ್, ಅಣ್ಣಾಚಾರ್ಯ ಹೊಸಕೇರಿ, ಮಧ್ವಾಚಾರ್ಯ ಕಲಕೇರಿ, ಮಾಧವ ಕಮಲಾಪುರ, ಇಮಾಮ್ ಮಣಿಯಾರ್, ಮೊಹಮ್ಮದ್ ಸಾಬ್ ಸೌದಾಗರ್ (ಖಿಲಾಫತ್ ಗ್ರಂಥಾಲಯದ ಕಾರ್ಯದರ್ಶಿ) ಹಾಗೂ ಗೋವಿಂದಾಚಾರ್ಯ ಗುತ್ತಲ ಇವರಿಗೆ ತಲಾ ಒಂದು ವರ್ಷ ಕಠಿಣ ಶಿಕ್ಷೆ ಆಯಿತು.

ಗೋವಿಂದರಾವ್ ಗುತ್ತಲರು ವಕೀಲಿ ತ್ಯಜಿಸಿದ್ದ ನಾಯಕರಾಗಿದ್ದು, ಜೂನ್ ೧೪ ರಂದು ಸೇಂದಿ ಅಂಗಡಿ ಮುಂದೆ ಪಿಕೇಟಿಂಗ್ ಮಾಡುವ ಕಾಲಕ್ಕೆ ಅಲ್ಲಿನ ಪಾರ್ಸಿ ಕಂಟ್ರಾಕ್ಟರ್‌ನಿಂದ ಹೊಡೆತಕ್ಕೆ ಒಳಗಾಗಿ ಗಾಯಗೊಂಡು ದೀರ್ಘಕಾಲ ಚಿಕಿತ್ಸೆ ಪಡೆಯುತ್ತಿದ್ದರು. ಅವರೂ ಈ ಸುಳ್ಳು ಖಟ್ಲೆಯಲ್ಲಿ ಸೇರಿಸಲ್ಪಟ್ಟಿದ್ದರು. ಇದು ದಬ್ಬಾಳಿಕೆಯಿಂದ ಜನರನ್ನು ಹೆದರಿಸಲು ಮತ್ತು ಜಾತಿಭೇದ ಮಾಡಿ ಬ್ರಾಹ್ಮಣರನ್ನು, ಮುಸಲ್ಮಾನರನ್ನೂ, ದೇಶದ್ರೋಹಿಗಳೆಂದು ಹಿಂಸೆ ಗೊಳಪಡಿಸುವ ಯತ್ನವಾಗಿತ್ತು. "ಬ್ರಿಟೀಷ್ ಆಳರಸರು ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ, ವೈಮನಸ್ಸು ಹುಟ್ಟಿಸಿದ್ದರು. ಆ ಕಾಲಕ್ಕೆ ಮುಸಲ್ಮಾನ ಸಮಾಜವು ಖಿಲಾಫತ್ ಕಾರಣದಿಂದ ಕಾಂಗ್ರೆಸ್ಸಿಗೆ ಎಂದರೆ ಬಹುಸಂಖ್ಯೆ ಬ್ರಾಹ್ಮಣ ಮುಂದಾಳುಗಳಿಗೆ ಬೆಂಬಲ ಕೊಡುತ್ತಿದ್ದರು. ಆದ್ದರಿಂದ ಪೇಂಟರಿನಿಗೆ ಖೊಟ್ಟಿ ಖಟ್ಲೆಯನ್ನು ರಚಿಸುವಾಗ್ಗೆ ಲಿಂಗಾಯುತ ಸಾಕ್ಷಿದಾರರ ಸಹಾಯಬೇಕಿತ್ತು. ಆದ್ದರಿಂದ ಅವನು ೨೯ ಜನರನ್ನು ಕೈದು ಮಾಡಿದ್ದರೂ ಲಿಂಗಾಯತರ ಪೈಕಿ ಒಬ್ಬನನ್ನೂ ಕೈದು ಮಾಡಿರಲಿಲ್ಲ. ಗೋಲಿ ಬಾರಿನಲ್ಲಿ ಗಾಯಗೊಂಡವರಲ್ಲಿ (ಸಾರಾಯಿ ಅಂಗಡಿ ಮುಂದೆ ಪಿಕೇಟಿಂಗ್ ಮಾಡುತ್ತಿದ್ದ ಅಥವಾ ನೋಡುತ್ತಿದ್ದವರಲ್ಲಿ) ಅನೇಕ ಜನ ಲಿಂಗಾಯುತರಿದ್ದರೆಂಬ ಸಂಗತಿ ಮರೆಯಲಾಗದ್ದು. ಕೈದು ಮಾಡಲ್ಪಟ್ಟ ೨೯ ಜನರಲ್ಲಿ ೧೫ ಜನ ಬ್ರಾಹ್ಮಣರು, ೧೩ ಮುಸಲ್ಮಾನರು ಹಾಗೂ ಒಬ್ಬನೇ ಒಬ್ಬ ಮರಾಠಾ ಇದ್ದರು. "

ಈ ಗೋಲಿಬಾರು ನಡೆದ ದಿನ ಮುದವೀಡು ಕೃಷ್ಣರಾಯರು ಹರಿಕಥೆ ಮಾಡಲು ಹಳಿಯಾಳಕ್ಕೆ ಹೋಗಿದ್ದರು.

ಆರೋಪಿಗಳಾದ ಅವರ ವಿರುದ್ಧ ೧೯ ಸಾಕ್ಷಿಗಳಿವೆಯೆಂದು ಅವರಿಗೆ ಜಾಮೀನು ನಿರಾಕರಿಸಲಾಯಿತು. ಆದರೆ ಆ ದಿನ (ಜುಲೈ ೧) ಅವರು ಹಳಿಯಾಳದಲ್ಲಿದ್ದರೆಂದು ಹಳಿಯಾಳ ಡೈರಿಯಲ್ಲಿ ಇದ್ದುದನ್ನು ಕಂಡು ಅವರನ್ನು ಬಿಡುಗಡೆ ಮಾಡಿದರು. ಆರೋಪಿತರಲ್ಲಿ ಗುತ್ತಲ ಅವರಂತೆ ವಾಮನರಾವ್ ಜಠಾರ್ ಆಗ ಹಾಸಿಗೆ ಹಿಡಿದು ಮಲಗಿದ್ದರು. ಅಣ್ಣಾಚಾರ್ಯ ಹೊಸಕೇರಿಯವರಿಗೆ ಕಾಲು ಕುಂಟು, ಹಾಗೂ ಮಧ್ವರಾವ್ ಕಲಕೇರಿ, ತಿರುಮಲರಾವ್ ಜೋಶಿ ಮತ್ತು ಅನಂತರಾವ್ ದಾಬಡೆ ತೀರ ವೃದ್ದರು. " ಇವರೆಲ್ಲರೂ ಒಂದೆರಡು ಮಣದಷ್ಟು ತೂಕದ ಕಲ್ಲುಗಳನ್ನು ಶೆಂದಿ ಅಂಗಡಿ ಮೇಲೆ ಒಗೆದರು, ಲೂಟಿ ಮುಂತಾದ ಹೇಯ ಗುನ್ನೆಗಳನ್ನು ಮಾಡಿದರೆಂದು ಸಂಪೂರ್ಣವಾಗಿ ಸುಳ್ಳು ಹೇಳಲಿಕ್ಕೆ ಕೆಲ ಸಾಕ್ಷಿದಾರರು ಹಿಂಜರಿಯಲಿಲ್ಲ" ಯಾವ ಆಪಾಧಿತನೂ ತನ್ನ ಪರ ವಕೀಲನನ್ನು ಇಡಬಾರದೆಂದು ಕಾಂಗ್ರೆಸ್ ಸೂಚಿಸಿದ್ದರಿಂದ ಎಲ್ಲ ಬಂಧಿತ ಕಾರ್ಯಕರ್ತರೂ ಅದರಂತೆ ನಡೆದು ಜೈಲು ಸೇರಿ ಅಪಾರ ತ್ಯಾಗ, ಸ್ಥೈರ್ಯಗಳನ್ನು ತೋರಿದರೆಂದು ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳಲ್ಲಿ ವಿವರಿಸಲಾಗಿದೆ.

"ಗೋಲಿಬಾರ್ ಆದ ಸಂಜೆ ನಾನು ಖಿಲಾಫತ್ ಮೈದಾನ್ ಎಂಬ ಬಯಲಿನಲ್ಲಿ ಜಾಹೀರ ಸಭೆಯಲ್ಲಿ (ವಿನಾಯಕರಾವ್ ಜೋಷಿಯವರ ಅಧ್ಯಕ್ಷತೆಯಲ್ಲಿ) ಮಾತನಾಡುತ್ತಲಿದ್ದೆ. ಬೆಜವಾಡಾ ಕಾಂಗ್ರೆಸ್ ಸಭೆಯ ನಿರ್ಣಯ ದಂತೆ ಧಾರವಾಡ ಜಿಲ್ಲೆಯಲ್ಲಿ ಆದ ಕಾರ್ಯದ ವಿವರಗಳನ್ನು ಇಂತಿಷ್ಟು ರಾಟೆಗಳ ಸ್ಥಾಪನೆ, ಇಂತಿಷ್ಟು ಕಾಂಗ್ರೆಸ್ ಸಭಾಸದರ ಸೇರ್ಪಡೆ, ಇಂತಿಷ್ಟು ಟಿಲಕ ಸ್ವರಾಜ್ಯ ನಿಧಿಯ ಸಂಗ್ರಹ ಇತ್ಯಾದಿ ವಿವರ ಕೊಡುತ್ತಿದ್ದೆ." ಎಂದ ರಂ.ರಾ.ದಿವಾಕರರು ತಾನು ಗೋಳಿಬಾರ್ ನಡೆದ ಸ್ಥಳದಿಂದ ಅರ್ಧಮೈಲು ದೂರದಲ್ಲಿ ಇದ್ದರೂ ತಮ್ಮ ಮೇಲೆ ಸರಕಾರ ಸುಳ್ಳು ಖಟ್ಲೆ ಹಾಕಿತು ಎಂದು ತಿಳಿಸುತ್ತ, " ಈ ಘಟನೆಯ ಮೂಲಕ ಧಾರವಾಡ ಹಾಗೂ ಕರ್ನಾಟಕಗಳು ಭಾರತದ ಮುಖಂಡರ ಮತ್ತು ಜನ ಸಾಮಾನ್ಯರ ಮನಸ್ಸನ್ನು ಆಕರ್ಷಿಸಿತು"ಎಂದಿರುವರು. ಧಾರವಾಡ ಗೋಲಿಬಾರಿನ ಪ್ರತಿಕ್ರಿಯೆ ತೀವ್ರವಾಗಿತ್ತು. ಅನೇಕ ವರ್ಷ ಅದರ ದಿನಾಚರಣೆ ಮಾದಲಾಗುತ್ತಿತ್ತು. ಅದು ಜನಜಾಗೃತಿಗೆ ಕಾರಣವಾಯಿತು. ಗೋಲಿಬಾರ್ ಖಟ್ಲೆಯಲ್ಲಿ ಆಪಾದಿತ ರಲ್ಲಿ ೬-೭ ಜನ ಪತ್ರಕರ್ತರೇ ಇದ್ದರು. ಅವರಲ್ಲಿ ದಿವಾಕರರು ಒಬ್ಬರು. 'ಕರ್ಮವೀರ' ದ ಸಂಪಾದಕ ಹಾಗೂ ಪ್ರಕಾಶಕರು (ಮಧ್ವರಾವ್ ಕಬ್ಬೂರ) ಒಮ್ಮೆ ಜಿಲ್ಲಾಧಿಕಾರಿ ಪೇಂಟರ ನನ್ನು ಕಾಣಹೋದಾಗ 'ಐ ಯಾಂ ಥರ್ಸ್‌ಟಿ ಆಫ್ ಯುವರ್ ಬ್ಲಡ್' ಎಂದು ಆತನು ಬೆದರಿಸಿದ್ದು ಅದರಂತೆ ಅವನು ಕ್ರಮ ಕೈಗೊಂಡಿದ್ದನು. ಆದರೆ ಇದರಿಂದ ಪತ್ರಿಕೆಗಳು ಬೆದರಲಿಲ್ಲ. ಜಲಿಯಾನ್‌ವಾಲಾಬಾಗ್ ದುರಂತಕ್ಕೆ ಕಾರಣನಾದ ಡೈಯರ್‌ನ ಜೊತೆ ಪೇಂಟರ್‌ನನ್ನು ಹೋಲಿಸಿ 'ಡೈಯರ್ ಎಂದರೂ ಬಣ್ಣಗಾರನೇ ಪೇಂಟರ್ ಎಂದರೂ ಬಣಗಾರನೇ' ಎಂದು ಅಂದಿನ ಪತ್ರಿಕೆಗಳು ಬರೆದವು. (ಆ ಕಾಲದಲ್ಲಿ ಜೈಲಿನಲ್ಲಿದ್ದ ಸಂಪಾದಕರುಗಳೆಲ್ಲರ ಪರ ಧಾರವಾಡದ ಪತ್ರಿಕೆಗಳಿಗೆ ಆಲೂರರೇ ಲೇಖನ ಬರೆಯುತ್ತಿದರು) [೨] ಒಟ್ಟಿನಲ್ಲಿ ಬ್ರಿಟೀಷರು ಭಾರತೀಯರ ಸ್ವಾತಂತ್ರ್ಯ ಸಂಗ್ರಾಮವನ್ನು ಪೊಲೀಸರ ಮೂಲಕ ಹತ್ತಿಕ್ಕಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಧಾರವಾಡ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ - ೨೩ ರಲ್ಲಿ ನೋಡಿ.

೬.೧೦-ಮಂಡ್ಯ ಜಿಲ್ಲಾ ಪೊಲೀಸ್

ಟಿಪ್ಪು ಈ ಪ್ರಾಂತ್ಯದ ಆಡಳಿತವನ್ನು ತನ್ನ ತಂದೆಯಿಂದ ವಹಿಸಿಕೊಂಡಾಗ ಕೇವಲ ಐದು ಅಸೋಫಿ (ಪ್ರಾಂತ)ಗಳು ಮಾತ್ರ ಇದ್ದವು. ಈ ಅಸೋಫಿಗಳು ಏಕ ರೀತಿಯ ವಿಸ್ತಾರವನ್ನು ಹೊಂದಿರದೆ ಡಾ.ಎಂ.ಹೆಚ್. ಗೋಪಾಲ್‌ರವರು ತಿಳಿಸುವಂತೆ ಒಟ್ಟು ೧೭೧ ಪರಗಣಗಳಿದ್ದ (ತಾಲೂಕುಗಳು) ಐದು ಪ್ರಾಂತಗಳ ಪೈಕಿ ಸಿರಾ ಅಸೋಫಿಯಲ್ಲಿ ಕೇವಲ ಐದು ಪರಗಣಗಳಿದ್ದರೆ ಶ್ರೀರಂಗಪಟ್ಟಣದಲ್ಲಿ ೧೦೨ ಪರಗಣಗಳಿದ್ದವು. ಆತನ ಸಾಮ್ರಾಜ್ಯವು ಕ್ರಿ.ಶ.

೧೭೯೬ ರಲ್ಲಿ ಸುಮಾರು ೬೨,೦೦೦ ಚದರ ಮೈಲಿಗಳಷ್ಟು ವಿಶಾಲವಾಗಿದ್ದು ಒಟ್ಟು ೧೨೭ ಪರಗಣಗಳನ್ನು ಹೊಂದಿದ್ದಿತು. ಪ್ರತಿಯೊಂದು ಅಸೋಫಿ (ಪ್ರಾಂತ್ಯ)ಯಲ್ಲೂ ಒಬ್ಬ ಅಸೋಫ ಮತ್ತು ಒಬ್ಬ ಉಪ ಅಸೋಫ ಎಂಬ ಅಧಿಕಾರಿಯು ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಪ್ರಾಂತವನ್ನು 'ಅಮಿಲ್' ಅಥವಾ ತಾಲೂಕುಗಳನ್ನಾಗಿ ವಿಂಗಡಿಸಿ ಒಬ್ಬ ಅಮಿಲ್‌ದಾರನ ಆಡಳಿತದಲ್ಲಿಡಲಾಗಿತ್ತು. ತಾಲೂಕುಗಳ ಕೆಳಗೆ ಕೆಲವು ಗ್ರಾಮಗಳನ್ನು ಒಟ್ಟುಗೂಡಿಸಿ 'ಸಿಂಪ್ಟ್' (ಹೋಬಳಿ) ಗಳೆಂದು ಕರೆದು ಅವುಗಳ ಆಡಳಿತವನ್ನು ಪಟೇಲನೆಂಬ ಅಧಿಕಾರಿಯು ನೋಡಿಕೊಳ್ಳುತ್ತಿದ್ದ[೯]

ಆಧುನಿಕ ಪೊಲೀಸ್ ವ್ಯವಸ್ಥೆ ಜಾರಿಗೆ ಬರುವ ಮೊದಲು ಬಾರಾಬಲೂತಿ ಅಥವಾ ಆಯಗಾರ ವ್ಯವಸ್ಥೆಯಡಿ ಪೊಲೀಸ್ ಕರ್ತವ್ಯಗಳನ್ನು ಗ್ರಾಮ ನೌಕರರು ನಿರ್ವಹಿಸುತ್ತಿದ್ದರು. ಮರಾಠಿಯಲ್ಲಿ ಬಾರಾಬಲೂತಿ ಎಂದೂ, ಮೈಸೂರು ರಾಜ್ಯದಲ್ಲಿ ಆಯಗಾರ ಪದ್ಧತಿ ಎಂದೂ ಕರೆಯಲ್ಪಡುತ್ತಿದ್ದ ಈ ವ್ಯವಸ್ಥೆಯಲ್ಲಿ ಗ್ರಾಮಜೀವನದ ಹನ್ನೆರಡು ಪ್ರಮುಖ ಉದ್ಯೋಗಗಳ ಪ್ರತಿನಿಧಿಗಳನ್ನು ಹೆಸರಿಸಲಾಗಿ ಅವರೆಂದರೆ– ಗೌಡ ಅಥವಾ ಪಟೇಲ (ಗ್ರಾಮ ಮುಖಂಡ), ಶಾನುಭೋಗ (ಗ್ರಾಮ ಲೆಕ್ಕಪತ್ರಗಳನ್ನು ಇಡುವ ಕರಣಿಕ ಅಥವಾ ಗುಮಾಸ್ತ) ತೋಟಿ ಅಥವಾ ತಳವಾರ (ಹಳ್ಳಿ ಕಾವಲುಗಾರ) ತಳವಾರ ಅಥವಾ ಸ್ಥಳವಾರ (ಗ್ರಾಮದ ಆರಕ್ಷಕ) ನೀರುಗಂಟಿ (ಜಮೀನುಗಳಿಗೆ ನೀರು ಪೂರೈಸು ವವನು) ಕಮ್ಮಾರ (ಕಬ್ಬಿಣದಿಂದ ಕೃಷಿ ಉಪಕರಣ ತಯಾರಿಸುವವನು), ಬಡಗಿ (ಮರಗೆಲಸದವ) ಕುಂಬಾರ (ಮಣ್ಣಿನ ಕುಡಿಕೆ/ಮಡಕೆ ತಯಾರಿಸುವವ) ಚಮ್ಮಾರ (ಚರ್ಮಗಾರ –ಚಪ್ಪಲಿ ತಯಾರಿ ಸುವವನು), ನಾಯಿಂದ (ಕ್ಷೌರಿಕ/ ಹಜಾಮ) ಅಗಸ (ಧೋಬಿ) ಹಾಗೂ ಪುರೋಹಿತ (ಪೂಜಾರಿ ಅಥವಾ ಪುರದ ಹಿತವನ್ನು ಬಯಸು ವವನು) ಇವರೆಲ್ಲ ಆ ಗ್ರಾಮದ ಜನರ ಸಹಬಾಳ್ವೆಯ ಆಧಾರಸ್ತಂಭಗಳಾಗಿದ್ದರು. ಗ್ರಾಮಮಟ್ಟದಲ್ಲಿ ಪೊಲೀಸ್ ಕೆಲಸವನ್ನು ತಳವಾರ ಅಥವಾ ತೋಟಿ ನಡೆಸುತ್ತಿದ್ದರು. ಗೌಡ ಅಥವಾ ಶಾನುಭೋಗರು ಗ್ರಾಮದ ಪ್ರತಿನಿಧಿಗಳಾಗಿದ್ದು, ತಮ್ಮ ಮೇಲಿನ ಸರ್ಕಾರಿ ಅಧಿಕಾರಿಗಳೊಡನೆ ಸಂಪರ್ಕ ಇಟ್ಟುಕೊಂಡಿದ್ದನು. ಉಂಬಳಿ, ಇನಾಂ ಅಥವಾ ಜೋಡಿ ಗ್ರಾಮಗಳಲ್ಲಿ ಅವುಗಳ ಯಜಮಾನರೇ ತಮ್ಮ ವಲಯಗಳಲ್ಲಿ ಪೊಲೀಸ್ ವ್ಯವಸ್ಥೆ ಏರ್ಪಡಿಸಿದ್ದರು. ಇಲ್ಲಿಯೂ ವಂಶಪಾರಂಪರ್ಯವಾದ ಕಾವಲುಗಾರ ಪಡೆ ಇದ್ದು, ತಮ್ಮ ಪ್ರದೇಶದ ಜನರ ಎಲ್ಲಾ ಆಸ್ತಿಪಾಸ್ತಿಗಳ ರಕ್ಷಣಾ ಹೊಣೆ ಅವರ ಮೇಲಿದ್ದಿತು. ಮುಮ್ಮಡಿ ಕೃಷ್ಣದೇವರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಪೊಲೀಸ್ ಕೆಲಸಗಳನ್ನು ನಿರ್ವಹಿಸುವ ವ್ಯಕ್ತಿಗಳಿಗೆ ಪ್ರತ್ಯೇಕ ಇನಾಂ ಭೂಮಿಯನ್ನು ನೀಡಲಾಗುತ್ತಿತ್ತು. ಇದನ್ನು 'ಅಮರ್‌ಗಾರ್' ಎಂದು ಕರೆಯುತ್ತಿದ್ದರು. ಕಳ್ಳರನ್ನು ಕಳ್ಳರೇ ಸುಲಭವಾಗಿ ಹಿಡಿಯಬಹುದೆಂಬ ಸತ್ಯವನ್ನರಿತ ಅಂದಿನ ಪದ್ಧತಿಯಲ್ಲಿ ಕಳ್ಳತನವನ್ನೇ ಕಸುಬಾಗಿಸಿಕೊಂಡಿದ್ದ ಕಳ್ಳಕೊರಮ ವರ್ಗವನ್ನು ಸರ್ಕಾರ ಬೇಹುಗಾರಿಕೆಯ ಕಾರ್ಯಕ್ಕೆ ಬಳಸುತ್ತಿದ್ದರು.

ರಾಮರಾಯನ ಆಡಳಿತದಡಿ ಒಂದು ಬೇಹುಗಾರಿಕೆ ವಿಭಾಗ ರಚಿತವಾಗಿದ್ದು, ಅದಕ್ಕೆ ಒಬ್ಬ ಅಧೀಕ್ಷಕನು ಮುಖ್ಯಸ್ಥನಾಗಿದ್ದನು. ಮೈಸೂರು ಒಡೆಯ ಚಿಕ್ಕದೇವರಾಯರ ಆಡಳಿತದಲ್ಲಿ ಸರ್ಕಾರದ ಆಡಳಿತವನ್ನು ವಿಕೇಂದ್ರೀಕರಿಸಿ ೧೮ ಇಲಾಖೆಗಳಿಗೆ ಹಂಚಲಾಗಿತ್ತು. ಪೊಲೀಸ್ ಇಲಾಖೆ 'ಪಟ್ಟಣ ಚಾವಡಿ' ಎಂದು ಕರೆಯಲ್ಪಡುತ್ತಿತ್ತು. ಹೈದರಾಲಿ ಹಾಗೂ ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ರಾಜ್ಯದ ಗಡಿಪ್ರದೇಶಗಳಲ್ಲಿ ಬೇಹುಗಾರರನ್ನು ನಿಯೋಜಿಸಲಾಯಿತು. ಶ್ರೀರಂಗಪಟ್ಟಣದ ಪಥನಾನಂತರ (೧೭೯೯) ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಪ್ರತೀ ತಾಲೂಕಿನ ಪೊಲೀಸ್ ಅಧಿಕಾರಿಯಾಗಿ ಅಮಲ್ದಾರನು ಕಾರ್ಯನಿರ್ವಹಿಸುತ್ತಿದ್ದು , ನಾಗರಿಕರು ನೀಡಿದ ಎಲ್ಲಾ ರೀತಿಯ ದೂರುಗಳನ್ನು ದಾಖಲಿಸಿಕೊಂಡು ಪರಿಶೀಲಿಸುವ ಹಾಗೂ ತೀರ್ಮಾನಿಸುವ ಅಧಿಕಾರವನ್ನು ಹೊಂದಿದ್ದನು. ಈತನೊಡನೆ ಸಹಕರಿಸಲು 'ಕಂದಚಾರ'ರೆಂಬ ಸಶಸ್ತ್ರ ಸಿಪಾಯಿಗಳೂ ಇದ್ದು, ಅವರು ನಾಗರೀಕರ ಜೀವ ಹಾಗೂ ಆಸ್ತಿಗಳಿಗೆ ರಕ್ಷಣೆ ನೀಡುತ್ತಿದ್ದರು. ಅನಿವಾರ್ಯ

ಪರಿಸ್ಥಿತಿಗಳಲ್ಲಿ ಕಂದಾಚಾರರನ್ನು ಸೈನ್ಯಕ್ಕೂ ನಿಯೋಜಿಸಲಾಗುತ್ತಿತ್ತು. ಈ ಕಂದಾಚಾರ ಪೊಲೀಸ್ ವ್ಯವಸ್ಥೆ ೧೮೩೧ ರಲ್ಲಿ ಬ್ರಿಟೀಷ್ ಕಮಿಷನ್ ಆಡಳಿತ ಪ್ರಾರಂಭವಾಗುವವರೆಗೂ ಜಾರಿಯಲ್ಲಿದ್ದಿತು. ೧೮೩೮ರಲ್ಲಿ ಬ್ರಿಟೀಷ್ ಕಮಿಷನ್ನರು ಒಂದು 'ಹುಕುಂ ನಾಮೆ (ಸರ್ಕಾರಿ ಆಜ್ಞೆ) ಹೊರಡಿಸಿ ಕಂದಾಚಾರ ಪೊಲೀಸರ ದಿನನಿತ್ಯದ ಆಡಳಿತ ವ್ಯವಸ್ಥೆಗೆ ಒಂದು ವೈಜ್ಞಾನಿಕ ಆಯಾಮ ನೀಡಿದರು. ಆ ಆಜ್ಞೆಯಲ್ಲಿ ಕಂದಾಚಾರ ಸಿಪಾಯಿಗಳು ಪ್ರತ್ಯೇಕ ಪೊಲೀಸ್ ದಳಕ್ಕೆ ಸೇರಿದವರೆಂದು ನಿಗಧಿಪಡಿಸಲಾಯಿತು. ಈ ಸಿಪಾಯಿಗಳನ್ನು ಎಲ್ಲಾ ತಾಲೂಕು, ಹೋಬಳಿ ಕಚೇರಿಗಳಲ್ಲಿ ಹಾಗೂ ಕೋಟೆಗಳ ಮೇಲೆ ರಕ್ಷಣೆಗಾಗಿ ನಿಯೋಜಿಸಲಾಗುತ್ತಿತ್ತು. ಈ ಕಂದಾಚಾರ ರಕ್ಷಣಾ ವ್ಯವಸ್ಥೆ ೧೮೬೧ ರವರೆಗೂ ಜಾರಿಯಲ್ಲಿದ್ದಿತು.

ಪ್ರತೀ ತಾಲೂಕಿನ ಪೊಲೀಸ್ ವ್ಯವಸ್ಥೆಗೆ ಮುಖ್ಯಸ್ಥನಾಗಿದ್ದ ಅಮಲ್ದಾರನ ಸಹಾಯಕ್ಕಾಗಿ ಒಬ್ಬ ಖಿಲ್ಲೇದಾರ, ಒಬ್ಬ ನಾಯಿಬ್ ಖಿಲ್ಲೇದಾರ್ (ದಫೇದಾರ) ಹಾಗೂ ಹಲವು ಹೋಬಳಿದಾರರಿದ್ದರು. ಇಡೀ ಪೊಲೀಸ್ ಇಲಾಖೆ ಒಬ್ಬ ಕಮಿಷನರ ಆಡಳಿತಕ್ಕೆ ಒಳಪಟ್ಟಿದ್ದು, ಈತನಿಗೆ 'ಭಕ್ಷಿ' ಎಂಬ ಸಹಾಯಕನಿದ್ದನು. ೧೮೪೪ ರಲ್ಲಿ ಈ ಹುದ್ದೆಯನ್ನು ರದ್ದುಪಡಿಸಲಾಯಿತು. ಅದೇ ವರ್ಷ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಯೊಂದನ್ನು ಸೃಷ್ಟಿಸಿ ಖಿಲ್ಲೇದಾರರಗಿಂತ ಕೆಳಗಿನ ಅಧಿಕಾರಿಗಳ ನೇಮಕಾತಿ, ಭಡ್ತಿ ಹಾಗೂ ಶಿಕ್ಷೆ ನೀಡುವ ಅಧಿಕಾರಿಗಳನ್ನು ಅವರಿಗೆ ನೀಡಲಾಯಿತು. ೧೮೫೬ ರಲ್ಲಿ ಜ್ಯುಡಿಷಿಯಲ್ ಕಮಿಷನರರ ನೇಮಕಾತಿಯಾಯಿತು. ಸರ್ ಮಾರ್ಕ್ ಕಬ್ಬನ್‌ನು ಕಮಿಷನರ್ ಮೇಲಿದ್ದ ಜವಾಬ್ದಾರಿಯನ್ನು ಕಡಿಮೆ ಮಾಡುವ ದೃಷ್ಟಿಯಿಂದ 'ನ್ಯಾಯಾಂಗ ಕಮಿಷನರ್' ಎಂಬ ಹುದ್ದೆಯನ್ನು ರಚಿಸಿದ (ಈತ ಮುಂದೆ ಪೊಲೀಸ್ ಇಲಾಖೆಯ ಜವಾಬ್ದಾರಿ ನೋಡಿಕೊಳ್ಳುತ್ತಿದ್ದ)[೯೪] ಇವರು ಪದನಿಮಿತ್ತ ರಾಜ್ಯ ಪೊಲೀಸ್ ಮುಖ್ಯಾಧಿಕಾರಿ (ಐ.ಜಿ.ಪಿ) ಸಹ ಆಗಿದ್ದರು. ಜಿಲ್ಲಾ ಮಟ್ಟದಲ್ಲಿ ೧೮೭೩ ರಲ್ಲಿ ಸೃಷ್ಟಿಯಾದ ಡೆಪ್ಯುಟ್ಯೂ ಇನ್ಸ್‌ಪೆಕ್ಟರ್ ಜನರಲ್ ಅವರು ಪೊಲೀಸ್ ಮುಖ್ಯಸ್ಥರಾಗಿದ್ದರು. ೧೮೭೬ರಲ್ಲಿ ಜ್ಯುಡಿಷಿಯಲ್ ಕಮಿಷನರಿಗೆ ಕೊಡಮಾಡಲ್ಪಟ್ಟಿದ್ದ ಐ.ಜಿ.ಪಿ ಅಧಿಕಾರವನ್ನು ರದ್ದುಪಡಿಸಿ ಪೊಲೀಸ್ ಇಲಾಖೆಯ ನೇರ ಆಡಳಿತವನ್ನು ಮುಖ್ಯ ಕಮಿಷನರು ವಹಿಸಿಕೊಂಡರು.[೯೫] ಲ್ಯೂವಿಸ್ ಬೌರಿಂಗ್‌ನು ಭಾರತೀಯ ದಂಡ ಸಂಹಿತೆಯನ್ನು ಹಾಗೂ ಅಪರಾಧ ಪ್ರಕ್ರಿಯೆ ಸಂಹಿತೆಯನ್ನು ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತಂದನು. ೧೮೬೪ ರಲ್ಲಿ ಅಂದಿನ ಮದ್ರಾಸ್ ಸರಕಾರವು ಅನುಸರಿಸುತ್ತಿದ್ದ ಪದ್ಧತಿಯ ಆಧಾರದ ಮೇಲೆ ಪೊಲೀಸ್ ಖಾತೆಯನ್ನು ಸಂಘಟಿಸಲಾಯಿತು. [೯೬]

೬.೧೦-೧- ಶಿವಪುರ ಧ್ವಜ ಸತ್ಯಾಗ್ರಹ

ಶಿವಪುರ ಧ್ವಜ ಸತ್ಯಾಗ್ರಹವು ಮೈಸೂರು ಪ್ರಾಂತದಲ್ಲಿ (ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ) ಹಿಂದೆಂದೂ ಸಾಧಿಸಲಾಗದ ಜನತೆಯ ಸಂಘಟನೆಯನ್ನು ಸಾಧಿಸಿದಲ್ಲದೇ, ಪ್ರಥಮ ಬಾರಿಗೆ ಬ್ರಿಟೀಷರ ವಿರುದ್ಧ ಜನಾಭಿಪ್ರಾಯ ವನ್ನು ಮೂಡಿಸುವಲ್ಲಿ ಸತ್ವಶೀಲವಾದ ಪ್ರಚೋದನೆಯನ್ನು ಒದಗಿಸಿತು. ಈ ಸತ್ಯಾಗ್ರಹವು ಮೈಸೂರು ಸಂಸ್ಥಾನದಲ್ಲಿ ಅಭೂತಪೂರ್ವ ರಾಜಕೀಯ ಸಂಘಟನೆಯಾಗಿತ್ತು. ಪ್ರಥಮ ಬಾರಿಗೆ ಅತ್ಯಂತ ವ್ಯಾಪಕವಾಗಿ ಜವಾಬ್ದಾರಿ ಸರ್ಕಾರ ಕ್ಕಾಗಿ ಒತ್ತಾಯದ ಬೇಡಿಕೆಯನ್ನು ಶಿವಪುರದ ಸತ್ಯಾಗ್ರಹವು ಸರ್ಕಾರದ ಮುಂದಿಟ್ಟಿತು. ಶಿವಪುರದ ಧ್ವಜಸತ್ಯಾಗ್ರಹದ ನಂತರ ಫೆಬ್ರವರಿ ೧೮೩೯ ರಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಬ್ರಿಟೀಷ್ ಅಧಿಕಾರಿಗಳ ಹೆಸರುಗಳಿಂದ ಕರೆಯುವುದನ್ನು ವಿರೋಧಿಸಲಾಯಿತು. ಮೈಸೂರಿನ ಇಂತಹ ಒಂದು ಕಟ್ಟಡಕ್ಕೆ (ಇಂದಿನ ಲಷ್ಕರ್ ಪೊಲೀಸ್ ಠಾಣಾ ಕಟ್ಟಡ) ಪೊಲೀಸ್ ಅಧಿಕಾರಿಯಾಗಿದ್ದ 'ಹ್ಯಾಮಿಲ್ಟನ್' ಹೆಸರು ಇಟ್ಟಾಗ ಸತ್ಯಾಗ್ರಹಿಗಳು ಈ ಕಟ್ಟಡದ ನಾಮಫಲಕವನ್ನು ನಾಶ ಪಡಿಸಲು ಪ್ರಯತ್ನಿಸಿದಾಗ ಆ ಸತ್ಯಾಗ್ರಹಿಗಳನ್ನು ಪೊಲೀಸರು ಬಂಧಿಸಿದರು.[೯೭]

ಮಂಡ್ಯ ಜಿಲ್ಲೆಯ ಮದ್ದೂರು ಬಳಿಯ ಶಿವಪುರದಲ್ಲಿ ಜರುಗಲಿದ್ದ ಶಿವಪುರ ರಾಷ್ಟ್ರಕೂಟಕ್ಕೆ (೧೯೩೮ರ ಏಪ್ರಿಲ್

೧೧ ರಿಂದ ೧೩) ಟಿ.ಸಿದ್ದಲಿಂಗಯ್ಯನವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಗಿತ್ತು. ಈ ಸಮಾವೇಶದೊಂದಿಗೆ ಸಂಸ್ಥಾನದಲ್ಲಿ ಸಶಕ್ತ ಸ್ವಾತಂತ್ರ್ಯ ಚಳುವಳಿ ಅಂದಿನಿಂದ ಆರಂಭವಾಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಅಧಿವೇಶನವನ್ನು ನಡೆಯದಂತೆ ಮಾಡಲು ಸಂಸ್ಥಾನದ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿ, ಒಂದು ತಿಂಗಳ ಕಾಲ ಶಿವಪುರದ ಎರಡು ಮೈಲಿ ಸುತ್ತ ಧ್ವಜಾರೋಹಣ ಸಭೆ, ಸಮಾರಂಭಗಳನ್ನು ನಡೆಸಬಾರದೆಂದು ನಿಷೇದಾಜ್ಞೆ ವಿಧಿಸಿತು. ಆದರೆ ಈ ಸಮ್ಮೇಳನವನ್ನು ನಡೆಸೇತೀರಬೇಕೆಂದು ಜನತೆ ನಿರ್ಧರಿಸಿತು. ಸರ್ಕಾರದ ನಿಷೇಧವಿದ್ದರೂ ಎಲ್ಲವೂ ಪೂರ್ವ ನಿಗಧಿತ ಕಾರ್ಯಕ್ರಮದಂತೆ ಜರುಗಿ ರಾಷ್ಟ್ರಧ್ವಜವು ಹಾರಿಸಲ್ಪಟ್ಟು ಟಿ.ಸಿದ್ದಲಿಂಗಯ್ಯ ಸೇರಿದಂತೆ ಅನೇಕ ನಾಯಕರು ಬಂಧನಕ್ಕೊಳಗಾದರು. ಶಿವಪುರ ಸತ್ಯಾಗ್ರಹದ ಎರಡನೆಯ ದಿನವಾದ ಎಪ್ರೀಲ್ ೧೨ ರಂದು ಧ್ವಜಾರೋಹಣ ಪೂರೈಸಿದ ಕೆ.ಸಿ.ರೆಡ್ಡಿ, ಎಚ್.ಸಿ.ದಾಸಪ್ಪ, ಹಾಗೂ ವಿ.ವೆಂಕಟಪ್ಪನವರು ಬಂಧನಕ್ಕೊಳಗಾದರು. ಮಾರನೆಯ ದಿನ ಧ್ವಜವನ್ನೇರಿಸಿದ ಕೆ.ಟಿ.ಭಾಷ್ಯಂ, ಎಚ್.ಸಿದ್ಧಯ್ಯ ಹಾಗೂ ಬಳ್ಳಾರಿ ಸಿದ್ದಮ್ಮನವರನ್ನು ಬಂಧಿಸಲಾಯಿತು. ಅಂದು ಎಚ್.ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಅಧಿವೇಶನದಲ್ಲಿ ತಮ್ಮ ತಮ್ಮ ಊರುಗಳಲ್ಲಿ ಧ್ವಜಾರೋಹಣ ಮಾಡುವಂತೆ ಕಾರ್ಯ ಕರ್ತರಿಗೆಕರೆ ನೀಡಲಾಯಿತು. ಅದರಂತೆ ಸಂಸ್ಥಾನದಾದ್ಯಂತ ವ್ಯಾಪಿಸಿದ ಈ ಚಳವಳಿಯು ಶಿವಪುರ ಧ್ವಜ ಸತ್ಯಾಗ್ರಹವೆಂದೇ ಪ್ರಸಿದ್ಧವಾಯಿತು. ಶಿವಪುರದ ಕಾಂಗ್ರೆಸ್ ಅಧಿವೇಶನ ಸಂದರ್ಭದಲ್ಲಿ ಬಂಧಿತರಾಗಿದ್ದ ಟಿ.ಸಿದ್ದಲಿಂಗಯ್ಯನವರಿಗೆ ಎರಡೂವರೆ ತಿಂಗಳು; ಎಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ ಹಾಗೂ ಎಚ್.ಸಿದ್ದಯ್ಯನವರಿಗೆ ನಾಲ್ಕು ತಿಂಗಳು ೨೦ ದಿನ; ವಿ.ವೆಂಕಟಪ್ಪ ಮತ್ತು ಕೆ.ಸಿ.ರೆಡಿಯವರಿಗೆ ಮೂರು ತಿಂಗಳು ೨೦ ದಿನ ಮತ್ತು ಬಳ್ಳಾರಿ ಸಿದ್ದಮ್ಮನಿಗೆ ೨೫ ದಿನಗಳ ಸಾದಾ ಜೈಲು ಶಿಕ್ಷೆಯನ್ನು ಮಂಡ್ಯ ನ್ಯಾಯಲಯವು ವಿಧಿಸಿತು. ಅಲ್ಲದೇ ಸತ್ಯಾಗ್ರಹಕ್ಕೆ ಶಿವಪುರ ಜಿಲ್ಲೆಯಿಂದ ಹೋಗಿದ್ದ ಕೆ.ಸಿ. ವೆಂಕಟರಾಮಯ್ಯ, ಮುತ್ತಪ್ಪ, ಕೆ.ನಾರಾಯಣಸ್ವಾಮಿ, ಕೆ.ವಿ.ಭೈರಪ್ಪ ಮುಂತಾದ ಪ್ರತಿನಿಧಿಗಳೊಂದಿಗೆ ಕೆ.ವೆಂಕಟಕೃಷ್ಣಪ್ಪ ಕೂಡ ಇದ್ದರು. ರಾತ್ರಿ ವೇಳೆ ಧ್ವಜಸ್ತಂಭದ ರಕ್ಷಣೆಗಾಗಿ ನಿದ್ದೆಗೆಟ್ಟು ಅದನ್ನು ಕಾಯುವುದು, ಹಗಲಲ್ಲಿ ಧ್ವಜದಡಿ ಸತ್ಯಾಗ್ರಹ ನಡೆಸುವುದು ತಮ್ಮಂತಹ ಅನೇಕರ ಕಾಯಕವಾಗಿತ್ತೆಂದು ಕೆ.ವೆಂಕಟಕೃಷ್ಣಪ್ಪ ತಮ್ಮ ಸ್ವಾತಂತ್ರ್ಯ ಸ್ಮೃತಿಯಲ್ಲಿ ದಾಖಲಿಸಿದ್ದಾರೆ. ನಾಗಸಂದ್ರದ ಎಸ್.ಸಿ. ನಾಗಯ್ಯರೆಡ್ಡಿಯವರು ಮಹಿಳಾ ಸಂಚಾಲಕಿಯಾಗಿದ್ದ ಗಂಗಸಂದ್ರದ ಗೌರಮ್ಮ ಹಾಗೂ ಇತರರೊಂದಿಗೆ ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ಕೆ.ಸಂಪಂಗಿರಾಮಯ್ಯನವರ ಜೊತೆಯಲ್ಲೂ ಯಲೂರು ನರಸಿಂಹಯ್ಯ ಕೂಡ ಇದರಲ್ಲಿ ಭಾಗವಹಿಸಿದ್ದರು. ಶ್ರೀನಿವಾಸಪುರ ತಾಲೂಕಿನ ಜಿ.ನಾರಾಯಣಗೌಡ (ಹೊಗಳಕೆರೆ)ರು ಶಿವಪುರಕ್ಕೆ ತೆರಳಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.[೮]

ರಾಜ್ಯವು ೧೮೮೧ ರಲ್ಲಿ ಮೈಸೂರು ಅರಸರಿಗೆ ಮರು ಹಸ್ತಾಂತರಗೊಂಡ ನಂತರ (ರೆಂಡಿಷನ್) ಪೊಲೀಸ್ ಇಲಾಖೆಯು ದಿವಾನರ ಆಡಳಿತಕ್ಕೆ ಒಳಪಟ್ಟಿತ್ತು. ೧೮೮೫ ರಲ್ಲಿ ಸರ್ಕಾರವು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿ, ಇವರ ಆಡಳಿತಕ್ಕೆ ಅರಣ್ಯ ಮತ್ತು ತೋಟಗಾರಿಕೆ ಇನ್ಸ್‌ಪೆಕ್ಟರ್ ಜನರಲ್ ಹಾಗೂ ಕೃಷಿ ಮತ್ತು ಅಂಕಿ ಅಮಶಗಳ ನಿರ್ದೇಶಕರ ಹುದ್ದೆಗಳನ್ನೂ ಒಳಪಡಿಸಿತು. ಉಪವಿಭಾಗಗಳಿಗೆ ಅಧಿಕಾರಿಗಳಾಗಿ ಪೊಲೀಸ್ ಸಹಾಯಕ ಕಮಿಷನರ್‌ರನ್ನು ನೇಮಿಸಲಾಯಿತು. ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರರು ತಾಲೂಕು ಮಟ್ಟದ ಪೊಲೀಸ್ ಅಧಿಕಾರಿಗಳಾಗಿ ಮುಂದುವರಿದರು. ಇವರಿಗೆ ಪರಿವೀಕ್ಷಕರು ಹಾಗೂ ಜಮೇದಾರರು ಸಹಾಯಕ ಅಧಿಕಾರಿಗಳಾಗಿದ್ದರು.

ಪೊಲೀಸ್ ಪಡೆಯಲ್ಲಿ ಖಾಯಂ ಪೊಲೀಸರೊಡನೆ ಗ್ರಾಮ ಪೊಲೀಸರೂ ಸೇರಿದ್ದರು. ಗ್ರಾಮ ಪೊಲೀಸ್ ಪಡೆಯಲ್ಲಿ ಮೊದಲಿದ್ದಂತೆ ಪಟೇಲ, ತಳವಾರ ಹಾಗೂ ತೋಟಿ ಮುಂದುವರಿದರು. ಜಿಲ್ಲಾ ಪೊಲೀಸ್ ದಳದಲ್ಲಿ ತಾಲೂಕು ಪೊಲೀಸರು ಹಾಗೂ ಜಿಲ್ಲಾ ರಿಸರ್ವ್ ಪೊಲೀಸರೂ ಸೇರಿದ್ದರು. ೧೮೯೧ ರಲ್ಲಿ ಪೊಲೀಸ್ ಇಲಾಖೆ

ಪುನರ್ವಿಂಗಡಿಸಲ್ಪಟ್ಟು, ಖಾಯಂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆ ಸೃಷ್ಟಿಯಾಯಿತು. ಸಹಾಯಕ ಪೊಲೀಸ್ ಕಮಿಷನರುಗಳನ್ನು ಪೊಲೀಸ್ ಸೂಪರಿಂಟೆಂಡೆಂಟರೆಂದು ಪುನರ್‌ನಾಮಕರಣ ಮಾಡಲಾಯಿತು. ೧೯೦೯ ರಲ್ಲಿ ಸೂಪರಿಂಟೆಂಡೆಂಟ್‌ರ ಹಾಗೂ ಸಹಾಯಕ ಕಮಿಷನರ್‌ಗಳ ಹುದ್ದೆಗಳನ್ನು ವಿಲೀನಗೊಳಿಸಿ ಅಸಿಸ್ಟೆಂಟ್ ಕಮಿಷನರ್ ಎಂಬ ಸಾಮಾನ್ಯ ವೃಂದಕ್ಕೆ ಒಳಪಡಿಸಲಾಯಿತು. ೧೯೧೩ ರಲ್ಲಿ ಇಲಾಖೆ ಪುನರ್‌ಪರಿಶೀಲನೆ ಗೊಳಪಟ್ಟು, ಇನ್ಸ್‌ಪೆಕ್ಟರ್ ಜನರಲ್‌ರ ಸಂಬಳವನ್ನೂ, ಅವರ ಕುದುರೆ ಭತ್ಯೆಯನ್ನು ಹೆಚ್ಚಿಸಲಾಯಿತು. ಜಮೇದಾರರ ಬದಲಾಗಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆ ಸೃಷ್ಟಿಯಾಯಿತು. ೧೯೧೮ ರಲ್ಲಿ ಪ್ರಕಟಗೊಂಡ 'ದಿ ಮೈಸೂರು ಪೊಲೀಸ್ ಮ್ಯಾನುವಲ್ ಪುಸ್ತಕವು ಇಲಾಖೆಗೆ ಮಾರ್ಗದರ್ಶಿಯಾಗಿ ಮುಂದಿನ ಬದಲಾವಣೆಗಳಗೆ ಬುನಾದಿಯಾಯಿತು. ಮಂಡ್ಯ ಸ್ವತಂತ್ರ ಜಿಲ್ಲೆಯಾಗುವುದಕ್ಕೆ ಮೊದಲು ಅದರ ಪೊಲೀಸ್ ಆಡಳಿತ ಮೈಸೂರು ಜಿಲ್ಲೆಗೆ ಒಳಪಟ್ಟಿದ್ದು, ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ನಲ್ಲಿ ಕೇಂದ್ರಸ್ಥಾನ ಹೊಂದಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರು ಮಂಡ್ಯ ಪ್ರಾಂತದ ಮೇಲೆ ಆಡಳಿತಾತ್ಮಕ ಹತೋಟಿ ಹೊಂದಿದ್ದರು. ೧೯೩೯ ರಲ್ಲಿ ಸರಕಾರವು ಮೈಸೂರು ಜಿಲ್ಲೆಯನ್ನು ೨ ಭಾಗಗಳನ್ನಾಗಿ ಮಾಡಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳನ್ನಾಗಿ ವಿಭಾಗಿಸಲಾಯಿತು. ೧೯೩೯ ರ ಜುಲಾಯಿ ೧ ರಂದು ಮಂಡ್ಯವನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡ ಮಂಡ್ಯ ಜಿಲ್ಲೆಯನ್ನು ರಚಿಸಲಾಯಿತು. ಇದರ ಪರಿಣಾಮವಾಗಿ ಶ್ರೀರಂಗಪಟ್ಟಣದ ಪ್ರಥಮ ದರ್ಜೆಯ ನ್ಯಾಯಾಲಯದಲ್ಲಿದ್ದ ೧ ಜನ ಪ್ರಾಸಿಕ್ಯೂಷನ್ ಇನ್ಸ್‌ಪೆಕ್ಟರ್‌ರವರನ್ನು ಮಂಡ್ಯಕ್ಕೆ ವರ್ಗಾಯಿಸಲಾಯಿತು. ಮಂಡ್ಯದಲ್ಲಿದ್ದ ಪ್ರಥಮ ದರ್ಜೆ ನ್ಯಾಯಾಲಯ ಹಾಗೂ ಪ್ರಾಸಿಕ್ಯೂಟಿಂಗ್ ಸಬ್‌ಇನ್ಸ್‌ಪೆಕ್ಟರ್ ರವರನ್ನು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲಾಯಿತು. ಪಾಂಡವಪುರದಲ್ಲಿದ್ದ ಫ್ರೆಂಚ್ ರಾಕ್ ಪೊಲೀಸ್ ಉಪ–ವಿಭಾಗದ ಕಛೇರಿಯನ್ನು ಮಂಡ್ಯಕ್ಕೆ ವರ್ಗಾಯಿಸಲಾಯಿತು. ಇಲ್ಲಿನ ಪೊಲೀಸ್ ವ್ಯವಸ್ಥೆಯು ಈ ಹಿಂದೆ ಚರ್ಚಿಸಿ ದಂತೆ ಟಿಪ್ಪು ಸುಲ್ತಾನನ ಆಡಳಿತ ಪದ್ಧತಿಯಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಮತ್ತು ಮೈಸೂರು ಸಂಸ್ಥಾನದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಹೊಂದಿತ್ತೇ ವಿನಹ ಯಾವುದೇ ವ್ಯತ್ಯಾಸಗಳು ಇರಲಿಲ್ಲ. ಆದ್ದರಿಂದ ಅದನ್ನು ಇಲ್ಲಿ ಪುನ: ಚರ್ಚಿಸುವ ಅಗತ್ಯತೆ ಇಲ್ಲ. ಮಂಡ್ಯ ಒಂದು ಸ್ವತಂತ್ರ ಜಿಲ್ಲೆಯಾಗಿ ಪರಿವರ್ತನೆಯಾದ ನಂತರ, ಅವರ ಕೇಂದ್ರ ಸ್ಥಾನವನ್ನು ಮಂಡ್ಯಕ್ಕೆ ಸ್ಥಳಾಂತರಿಸಲಾಯಿತು.[೯೯]

೬ :೧೧– ಮೈಸೂರು ನಗರ ಪೊಲೀಸ್

೧೮೬೧ರ ಭಾರತೀಯ ಪೊಲೀಸ್ ಕಾಯ್ದೆಯು ಮೈಸೂರುನಗರ ಮತ್ತು ಜಿಲ್ಲೆಗಳಿಗೆ ಅನ್ವಯವಾಗಿರಲಿಲ್ಲ. ಇಲ್ಲಿ ಸ್ಥಳೀಯ ವಿಧಿಬದ್ಧ ಪೊಲೀಸ್ ನಿಯಮಗಳಿಗೆ ಒಳಪಟ್ಟು ಕೆಲಸ ನಿರ್ವಹಿಸಲಾಗುತ್ತಿತ್ತು. ಮೈಸೂರು ನಗರದ ಪೊಲೀಸ್ ಇಲಾಖೆಯ ಖರ್ಚುವೆಚ್ಚಗಳನ್ನು ಮೈಸೂರಿನ ಮುನ್ಸಿಪಾಲಿಟಿಗೆ ವಹಿಸಲಾಗಿತ್ತು. ಇಲ್ಲಿನ ಪೊಲೀಸ್ ವ್ಯವಸ್ಥೆಯು ತೃಪ್ತಿಕರವಾಗಿಲ್ಲದ ಕಾರಣ ೧೮೭೪ ರಲ್ಲಿ ಇದನ್ನು ಪುನರ್‌ಸಂಘಟಿಸಲು ಒಂದು ಯೋಜನೆಯನ್ನು ತಯಾರಿಸಲಾಯಿತು. ಮೈಸೂರು ನಗರದ ಪೊಲೀಸ್ ಪಡೆಯ ಒಟ್ಟು ಬಲ ೨೨೩ ಇದ್ದು, ಇದರಲ್ಲಿ ೧ ಇನ್ಸ್‌ಪೆಕ್ಟರ್, ೧ ಡೆಪಿಟ್ಯೂ ಇನ್ಸ್‌ಪೆಕ್ಟರ್, ೬ ಜನ ಕೊತ್ವಾಲರು, ೧೩ ಜನ ಹೋಬಳಿದಾರರು, ೧೦ ಜನ ಜಮೇದಾರರು, ೧೨ ದಫೇದಾರರು, ೫೨ ಪ್ರಥಮ ದರ್ಜೆಯ ಕಾನ್‌ಸ್ಟೇಬಲ್‌ಗಳು, ೧೨೮ ಎರಡನೇ ದರ್ಜೆಯ ಕಾನ್‌ಸ್ಟೇಬಲ್‌ಗಳು ಇದ್ದರು. ಇದನ್ನು ಪುನರ್‌ಸಂಘಟಿಸಲು ಒಬ್ಬ ಯುರೋಪಿಯನ್ ಇನ್ಸ್‌ಪೆಕ್ಟರ್, ಒಬ್ಬ ಯುರೋಪಿಯನ್ ಡೆಪಿಟ್ಯೂ ಇನ್ಸ್‌ಪೆಕ್ಟರ್, ೬ ಜನ ಹೆಡ್‌ಕಾನ್‌ಸ್ಟೇಬಲ್, ೬ ಜನ ಪ್ರಥಮ ದರ್ಜೆಯ ಸಾರ್ಜೆಂಟ್‌ಗಳು, ೩೫ ಪ್ರಥಮ ದರ್ಜೆಯ ಕಾನ್‌ಸ್ಟೇಬಲ್‌ಗಳು, ೭೦ ಎರಡನೇ ದರ್ಜೆಯ ಕಾನ್‌ಸ್ಟೇಬಲ್‌ಗಳು, ೭೨ ಮೂರನೇ ದರ್ಜೆಯ ಕಾನ್‌ಸ್ಟೇಬಲ್‌ಗಳನ್ನು ನೇಮಿಸಲಾಯಿತು. ಇದಕ್ಕೆ ೧೮೭೪ರ ಅಕ್ಟೋಬರ್ ೧೩ ರಂದು ಸರಕಾರದ ಮಂಜೂರಾತಿ ದೊರೆಯಿತು.[೧೦೦]

೧೮೮೧–೮೫ ರ ನಡುವೆ ಮೈಸೂರನ್ನು ನಗರ ಎಂದು ಪರಿಗಣಿಸಲಾಯಿತು. ೧೮೯೭ ರಲ್ಲಿ ಮೈಸೂರು ನಗರ ಪೊಲೀಸ್ ವ್ಯವಸ್ಥೆಯನ್ನು ಮಾಸಿಕ ರೂ ೪೮೯ ರ ವೆಚ್ಚದಲ್ಲಿ ಬಲಪಡಿಸಲಾಯಿತು. ಒಬ್ಬರು ಇನ್ಸ್‌ಪೆಕ್ಟರ್, ಒಬ್ಬ ಚೀಫ್ ಕಾನ್ಸ್‌ಟೇಬಲ್‌ಗೆ ರೂ ೫೦, ಮೂರು ಜನ ಚೀಫ್ ಕಾನ್ಸ್‌ಟೇಬಲ್‌ಗಳಿಗೆ ತಲಾ ರೂ. ೩೫, ಹೆಡ್‌ಕಾನ್ಸ್‌ಟೇಬಲ್‌ಗೆ ತಲಾ ರೂ. ೨೦ ಸಂಬಳ ನೀಡಲಾಗುತ್ತಿತ್ತು.[೧೦೧]

೧೯೦೬ ರಲ್ಲಿ ಮೈಸೂರು ನಗರ ಪೊಲೀಸ್‌ನಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ತರಲಾಯಿತು. ನಾಲ್ಕು ಜನ ಚೀಫ್ ಕಾನ್ಸ್‌ಟೇಬಲ್, ಎಂಟು ಹೆಡ್‌ಕಾನ್ಸ್‌ಟೇಬಲ್, ಮೂರು ಜನ ಡಿವಿಜನಲ್ ಇನ್ಸ್‌ಪೆಕ್ಟರ್, ಒಂಬತ್ತು ಹೆಡ್ ಕಾನ್ಸ್‌ಟೇಬಲ್‌ಗಳನ್ನು ನೇಮಿಸಲಾಯಿತು.[೧೦೨] ೧೯೧೩ ರ ವೇಳೆಗೆ ಮೈಸೂರು ನಗರವು ವಿಸ್ತಾರವಾಗುತ್ತಾ ಹೋದುದರಿಂದ ಅಲ್ಲಿನ ಪೊಲೀಸ್ ಪಡೆಯನ್ನು ಬಲಪಡಿಸುವುದು ಅನಿವಾರ್ಯವಾಯಿತು. ಆದುದರಿಂದ ಮೂರು ಜನ ವಿಭಾಗೀಯ ಇನ್ಸ್‌ಪೆಕ್ಟರ್ ಹಾಗೂ ಒಬ್ಬರು ಪ್ರಾಸಿಕ್ಯೂಷನ್ ಇನ್ಸ್‌ಪೆಕ್ಟರ್‌ನ್ನು ಒಳಗೊಂಡಂತೆ ಮೂರು ಜನ ಹೆಡ್‌ಕಾನ್ಸ್‌ಟೇಬಲ್ಸ್ ರವರಿಗೆ ಮಾಸಿಕ ರೂ ೨೫ ರಂತೆ, ಆರು ಜನ ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ೨೦ ರಂತೆ, ನಾಲ್ಕು ಜನ ಸಾರ್ಜೆಂಟ್‌ಗಳಿಗೆ ಮಾಸಿಕ ರೂ ೧೬ ರಂತೆ, ಹತ್ತು ಜನ ಸಾರ್ಜೆಂಟ್‌ರಿಗೆ ಮಾಸಿಕ ರೂ. ೧೪ ರಂತೆ, ಹತ್ತೊಂಬತ್ತು ಜನ ಸಾರ್ಜೆಂಟ್‌ರಿಗೆ ಮಾಸಿಕ ರೂ ೧೨ ರಂತೆ, ಐದು ಜನ ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ೧೧ ರಂತೆ, ಅರವತ್ತೆಂಟು ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ೧೦ ರಂತೆ, ತೊಂಬತ್ತೆಂಟು ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ೯ರಂತೆ ಮತ್ತು ಅರವತ್ತು ಜನ ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ೮ ಸಂಬಳದಂತೆ ನೇಮಿಸಲಾಯಿತು.[೧೦೩]

೧೯೩೧ ರಲ್ಲಿ ಒಬ್ಬ ಪ್ರಾಸಿಕ್ಯೂಷನ್ ಇನ್ಸ್‌ಪೆಕ್ಟರ್‌ನ್ನು ಮಂಜೂರುಮಾಡಲಾಯಿತು. ಒಬ್ಬ ಯುರೋಪಿಯನ್ ಕಾನ್ಸ್‌ಟೇಬಲ್‌ನನ್ನು ಮೈಸೂರು ನಗರದ ಸಂಚಾರ ನಿಯಂತ್ರಣಕ್ಕೆ ನೇಮಿಸಲಾಯಿತು. ೧೯೩೨ ರಲ್ಲಿ ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರ ಅಡಿಯಲ್ಲಿ ಮೈಸೂರು ನಗರ ಮತ್ತು ತಾಲೂಕುಗಳ ಪ್ರಭಾರವನ್ನು ನೀಡಿ ನೇಮಿಸಲಾಯಿತು.[೧೦೪] ಮೈಸೂರು ಜಿಲ್ಲಾ ಸೂಪರಿಂಟೆಂಡೆಂಟ್‌ರಿಗೆ ಮೈಸೂರು ನಗರ ಹಾಗೂ ಹುಣಸೂರು, ಎಡತೊರೆ, ಮೈಸೂರು ತಾಲೂಕುಗಳನ್ನು ಒಳಗೊಂಡಂತೆ ಮೈಸೂರು ನಗರದ ವ್ಯಾಪ್ತಿಯು ಇತ್ತು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರ ಕೇಂದ್ರಸ್ಥಾನವನ್ನು ನಂಜನಗೂಡಿನಲ್ಲಿ ರಚಿಸಲಾಯಿತು.

೧೯೦೫ ರಲ್ಲಿ ಭಾರತೀಯ ಪೊಲೀಸ್ ಕಮಿಷನ್‌ನ ಸೂಚನೆಗಳ ಮೇರೆಗೆ ಜಿಲ್ಲಾಮಟ್ಟದಲ್ಲಿದ್ದ ತನಿಖಾ ಕೇಂದ್ರ ಗಳನ್ನು ಪುನರ್ ಹಂಚಿಕೆ ಕಾರ್ಯವನ್ನು ಪ್ರಾರಂಭಿಸಲಾಯಿತು. ಆಯೋಗವು ತನ್ನ ವರದಿಯಲ್ಲಿ ಸಂಜ್ಞೆಯ ಅಪರಾಧಗಳ ತನಿಖೆಯ ಬಗ್ಗೆ ಒತ್ತಿ ಹೇಳಿತ್ತು. ಸಂಜ್ಞೆಯ ಅಪರಾಧಗಳಾಗಿ ತನಿಖೆಯನ್ನು ಮಾಸಿಕ ೨೫ ರೂ ಕಡಿಮೆ ಸಂಬಳ ಪಡೆಯುವ ಪೊಲೀಸ್ ಅಧಿಕಾರಿಗಳು ಮಾಡಬಾರದೆಂದು ಉದ್ದೇಶ ಹೊಂದಿತ್ತು. ಆಯೋಗವು ತಿಂಗಳಿಗೆ ೫೦ ರೂ ಸಂಬಳ ಪಡೆಯುವ ಅರ್ಧಕ್ಕಿಂತ ಹೆಚ್ಚಿಗೆ ಸಂಬಳ ಪಡೆಯುವ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಠಾಣಾ ಉಸ್ತುವಾರಿಗೆ ನೇಮಿಸಬೇಕೆಂದು ಸೂಚಿಸಿತು. ಅಂದಿನ ಐ.ಜಿ.ಪಿಯಾಗಿದ್ದ ಎಫ್.ಇ.ಸಿ ಕಾರ್‌ರವರು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುವಂತಹ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಹಾಗೂ ಅವರು ಜಮೇದಾರ್ ಅಥವಾ ಮುಖ್ಯ ಪೇದೆಗಳಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳು ಸಂಜ್ಞೆಯ ಅಪರಾಧಗಳನ್ನು ತನಿಖೆ ಮಾಡಲು ಅಧಿಕಾರ ಹೊಂದಿಲ್ಲ ಎಂದು ಆದೇಶಿಸಿದರು.

ಐ.ಜಿ.ಪಿ ಎಫ್.ಇ.ಐ ಕಾರ್‌ರವರು ಶಿವಮೊಗ್ಗ ಜಿಲ್ಲೆಯ ಪೊಲೀಸ್ ಪಡೆಯ ಪುನರ್‌ಸಂಘಟನೆಗೆ ಮತ್ತು ಮರು ಹಂಚಿಕೆ ಬಗ್ಗೆ ಒಂದು ಪ್ರಸ್ತಾವನೆಯನ್ನು ಹೊರಡಿಸಿದರು. ಜಮೇದಾರ್ ಹಾಗೂ ಮುಖ್ಯ ಪೇದೆಗಿಂತ ಕಡಿಮೆ ದರ್ಜೆಯ

ಅಧಿಕಾರಿಯು ತನಿಖೆ ಕಾರ್ಯ ಮಾಡುವಂತಿಲ್ಲ ಎಂದು ಆದೇಶಿಸಿದರು. ಆದರೆ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಉಪಠಾಣೆಯ ಪ್ರಭಾರ ಹೊಂದಿದ ಹಿರಿಯ ಸಾರ್ಜೆಂಟ್ ಅಥವಾ ದಫೇದಾರರುಗಳಿಗೆ ದೂರುಗಳನ್ನು ಮುಂದಿನ ಕ್ರಮದ ಬಗ್ಗೆ ರವಾನಿಸುವುದರೊಂದಿಗೆ, ಶವಪಂಚನಾಮೆ ಮಾಡುವ ಅಧಿಕಾರ ನೀಡಲಾಯಿತು. ಅವರುಗಳಿಗೆ ಸಂಜ್ಞೆಯ ಅಪರಾಧಗಳು ನಡೆದ ಬಗ್ಗೆ ಅದರ ವಿವರಗಳನ್ನು ಬರೆದ ಒಂದು ಪುಸ್ತಕ ತೆರೆಯಲು ಸೂಚಿಸಲಾಯಿತು. ಈ ಯೋಜನೆ ೧೯೦೫ ರಲ್ಲಿ ಶಿವಮೊಗ್ಗ ಜಿಲ್ಲೆಗೆ ಮಂಜೂರಾಯಿತು.ಈ ರೀತಿಯ ಯೋಜನೆಗಳು ಯಶಸ್ವಿಯಾಯಿತು. ಆದ್ದರಿಂದ ಈ ಯೋಜನೆಗಳನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲು ಪ್ರಸ್ತಾಪಿಸಲಾಯಿತು.[೧೦೫]

೧೯೦೮ ರಲ್ಲಿ ಪೊಲೀಸ್ ಇಲಾಖೆಯ ಸಂಘಟನೆ ಹಾಗೂ ಮರುವಿಂಗಡನೆ, ತನಿಖಾ ಕೇಂದ್ರಗಳ ಸ್ಥಾಪನೆಯ ಈ ಪ್ರಸ್ತಾಪವನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ಬೆಂಗಳೂರು ಮತ್ತು ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರಸ್ತಾವಗಳನ್ನು ಸಲ್ಲಿಸಲಾಯಿತು. ಆದರೆ ಸರ್ಕಾರವು ಬೆಂಗಳೂರು ಮತ್ತು ಮೈಸೂರು ನಗರಕ್ಕೆ ಸೇರಿದ ಪ್ರಸ್ತಾವನೆಯನ್ನು ಮಾತ್ರ ಅನುಮೋದಿಸಿತು. ಅದು ೧೯೧೦ ರ ಜುಲಾಯಿ ೧ ರಿಂದ ಜಾರಿಗೆ ಬಂದಿತು.[೧೦೬] ಐ.ಜಿ.ಪಿ ಯವರು ಆಗಾಗ ಇಲಾಖೆಯ ಪುನರ್‌ಸಂಘಟನೆಯನ್ನು ವ್ಯಾಪಕವಾಗಿ ಮಾಡಬೇಕೆಂದು ಒತ್ತಾಯಿಸಿದ್ದರು. ಇದರಿಂದ ಪೊಲೀಸರ ಕಾರ್ಯ ಕ್ಷಮತೆ ಹೆಚ್ಚಾಗುತ್ತದೆಂಬುದು ಅವರ ಅಭಿಪ್ರಾಯವಾಗಿತ್ತು.

೧೯೧೩ ರಲ್ಲಿ ಈ ಬಗ್ಗೆ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿದರು.[೧೦೭] ಇದರ ಪ್ರಸ್ತಾವನೆಯಲ್ಲಿ ೧) ಬೆಂಗಳೂರು ನಗರ ಪೊಲೀಸ್ ಪಡೆಯಲ್ಲಿ ಕಾನ್ಸ್‌ಟೇಬಲ್‌ಗಳ ಸಂಬಳ ಹೆಚ್ಚಿಸಿ ಅವರ ಗುಣಮಟ್ಟವನ್ನು ಹೆಚ್ಚಿಸು ವುದರ ಮೂಲಕ ವ್ಯವಸ್ಥೆಯನ್ನು ಪುನರ್‌ಸಂಘಟಿಸುವುದು. ೨) ಇದೇ ರೀತಿ ಮೈಸೂರು ನಗರ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸುವುದು ೩) ತನಿಖಾ ಕೇಂದ್ರಗಳಿಗೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದರೊಂದಿಗೆ ಈ ಯೋಜನೆಯ ಪರಿಷ್ಕರಿಸುವುದು. ೪) ಜಿಲ್ಲಾ ಪೊಲೀಸರ ಸಂಬಳವನ್ನು ಒಂದು ರೂಪಾಯಿಯಿಂದ ಹೆಚ್ಚಿಸುವುದು, ೫)ಪೊಲೀಸ್ ತರಬೇತಿ ಶಾಲೆಯನ್ನು ಅಭಿವೃದ್ಧಿಪಡಿಸುವ ಅಂಶಗಳನ್ನು ಒಳಗೊಂಡಿತ್ತು. ಈ ಪಸ್ತಾವನೆಯನ್ನು ಕೆಲವು ಬದಲಾವಣೆಗಳೊಂದಿಗೆ ಸರ್ಕಾರವು ಅಂಗೀಕರಿಸಿತು. ಕಾನ್ಸ್‌ಟೇಬಲ್‌ಗಳ ಸಂಬಳವನ್ನು ಹೆಚ್ಚಿಸಲಾಯಿತು. ೧೯೧೩ರ ಅಕ್ಟೋಬರ್ ೧ ರಿಂದ ಬೆಂಗಳೂರುನಗರ ಹಾಗೂ ಮೈಸೂರು ನಗರ ಪೊಲೀಸರ ಸಂಬಳವನ್ನು ನಾಲ್ಕು ದರ್ಜೆಗಳಲ್ಲಿ ನಿಗಧಿಪಡಿಸಲಾಯಿತು. ಅದು ಮಾಸಿಕ ರೂ. ೧೧, ೧೦, ೯ ಹಾಗೂ ೮ ಆಗಿತ್ತು. ೧೯೧೪ ನವೆಂಬರ್ ೧೦ ರಂದು ಐ.ಜಿ.ಪಿ ಯವರು ಸಂಸ್ಥಾನದ ಕಾಯ್ದಿಟ್ಟ ಮೀಸಲು ಪಡೆಯ ಸಂಬಳ ಹೆಚ್ಚಿಸುವ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ಪಡೆದರು. ಇದರಲ್ಲಿಯೂ ಸಹ ನಾಲ್ಕು ದರ್ಜೆಗಳಿದ್ದು ನಿರ್ಧಿಷ್ಟ ವೇತನ ಮಾಸಿಕ ರೂ ೧೨, ೧೧, ೧೦ ಹಾಗೂ ೯ ಆಗಿತ್ತು. ಈ ಹೊಸ ವೇತನ ಶ್ರೇಣಿಯು ೧೯೧೫ ರ ಜುಲಾಯಿ ೧ ರಿಂದ ಜಾರಿಗೆ ಬಂತು.[೧೦೮]

೧೯೪೫-೪೬ ರಲ್ಲಿ ಮೈಸೂರು ಜಿಲ್ಲಾ ಪೊಲೀಸ್‌ರನ್ನು ಈ ಕೆಳಕಂಡಂತೆ ವಿಭಾಗಿಸಲಾಯಿತು.೧) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ೨) ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ೩) ಮೂರು ಜನ ಇನ್ಸ್‌ಪೆಕ್ಟರ್‌ಗಳು,೪) ೧೪ ಜನ ಸಬ್‌ಇನ್ಸ್‌ಪೆಕ್ಟರ್‌ಗಳು, ೫) ೩೦ ಹೆಡ್‌ಕಾನ್ಸ್‌ಟೇಬಲ್‌ಗಳು, ೬) ೧೦೩ ಜಮೇದಾರ್ ಸಾರ್ಜಂಟ್ಸ್‌ಗಳು, ೭) ೭೯೬ ಕಾನ್ಸ್‌ಟೇಬಲ್‌ಗಳು. ಒಟ್ಟು ೯೪೬ ಜನ ಸಿಬ್ಬಂದಿಯವರನ್ನು ನೇಮಿಸಲಾಯಿತು. ವಾರ್ಷಿಕ ವಾಗಿ ಪೊಲೀಸ್ ಇಲಾಖೆಗೆ ೩೫.೬೬ ಲಕ್ಷ ಖರ್ಚಾಗುತ್ತಿತ್ತು. ಕಛೇರಿಯ ಸಿಬ್ಬಂದಿಯವರಿಗೆ ೩೭೭೦/- ರೂಪಾಯಿಗಳ ಖರ್ಚು ತಗಲುತ್ತಿತ್ತು.[೧೦೯]

೬.೧೧-೧ - ಪೊಲೀಸರ ವೇತನ

೧೯೧೮ ರಲ್ಲಿ ಸರ್ಕಾರವು ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಆತನಿಗಿಂತ ಕಡಿಮೆ ದರ್ಜೆಯ ಸಿಬ್ಬಂದಿಯವರ ನವೀಕೃತ ವೇತನಕ್ಕೆ ಮಂಜೂರಾತಿಯನ್ನು ನೀಡಿತು. ಇದು ಪೊಲೀಸ್ ಪಡೆಯ ನೈತಿಕತೆ ಮತ್ತು ನೈಪುಣ್ಯತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೂಡಿತ್ತು.[೧೧೦]

ಈ ನವೀಕೃತ ವೇತನ ಶ್ರೇಣಿಯ ಮುಖ್ಯ ಲಕ್ಷಣಗಳೇನೆಂದರೆ, ಇನ್ಸ್‌ಪೆಕ್ಟರ್‌ಗಳ ಕನಿಷ್ಟ ವೇತನವನ್ನು ಮಾಸಿಕ ೪೦ ರೂಗಳಿಂದ ೬೦ ರೂಪಾಯಿಗಳಿಗೆ ಏರಿಸಿದ್ದು ಇದೇ ವೇಳೆ ಒಂದೇ ಬಾರಿಗೆ ಆರು ಜನ ಪರೀಕ್ಷಾ ಅವಧಿ ಯಲ್ಲಿರುವ ಇನ್ಸ್‌ಪೆಕ್ಟರ್‌ಗಳನ್ನು ಮಾಸಿಕ ರೂ ೪೦-೧೦-೫೦ ರ ವೇತನ ಶ್ರೇಣಿಯೊಂದಿಗೆ ಆಯ್ಕೆ ಮಾಡಲಾಯಿತು. ಇವರುಗಳಿಗೆ ಕ್ರಮವಾಗಿ ಮಾಸಿಕ ರೂ ೨೫ ಹಾಗೂ ರೂ ೨೦ ನ್ನು ಕುದುರೆ ಭತ್ಯೆವಾಗಿ ನೀಡುತ್ತಿದ್ದರು. 'ಜಮೇದಾರ'ರ ಹುದ್ದೆಗಳಿಗೆ ಕಾಲಕ್ರಮೇಣ ಸಬ್‌ಇನ್ಸ್‌ಪೆಕ್ಟರ್‌ರವರುಗಳನ್ನು ನೇಮಿಸಲಾಯಿತು. ಈ ಅಧಿಕಾರಿಗಳಲ್ಲಿ ಎರಡು ದರ್ಜೆಗಳಿದ್ದವು. ಮೊದಲನೆಯದು ರೂ ೪೦+೧೫=೫೫ ಹಾಗೂ ಎರಡನೆಯದು ರೂ ೫೦+೧೫ ಅಥವಾ ೨೦. ಮಾಸಿಕ ಸಂಬಳ ಪಡೆಯುತ್ತಿದ್ದವರಾಗಿದ್ದರು. ಎರಡು ದರ್ಜೆಗಳ ದಫೇದಾರ ಮತ್ತು ಸಾರ್ಜೆಂಟ್‌ರವರಿಗೆ ರೂ ೧೫ ಮತ್ತು ೧೮ ಮಾಸಿಕ ವೇತನವನ್ನು ಅನುಕ್ರಮವಾಗಿ ನೀಡುತ್ತಿದ್ದು (ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕೆಲಸ ಮಾಡುವವರಿಗೆ) ಸ್ಥಳೀಯ ಭತ್ಯೆಯಾಗಿ ರೂ. ೨ ನೀಡಲು ಮಂಜೂರಾತಿ ನೀಡಲಾಯಿತು. ಕಾನ್ಸ್‌ಟೇಬಲ್‌ಗಳ ಹುದ್ದೆಗೆ ಅಭ್ಯರ್ಥಿಗಳನ್ನು ಆಕರ್ಷಿಸುವ ಸಲುವಾಗಿ ರಾಜ್ಯಾದ್ಯಾಂತ ಕಾನ್ಸ್‌ಟೇಬಲ್‌ಗಳ ಸಂಬಳವನ್ನು ಏರಿಸಲಾಯಿತು. ಯಾರು ಈ ಹುದ್ದೆಗೆ ಹೊಸದಾಗಿ ಸೇರುತ್ತಾರೋ ಅವರಿಗೆ ಮಾಸಿಕ ರೂ. ೮ ಹಾಗೂ ಎರಡು ವರ್ಷ ಸೇವೆಯ ನಂತರ ರೂ. ೯, ಏಳು ವರ್ಷ ಸೇವೆಯ ನಂತರ ರೂ. ೧೦ ಹದಿನೈದು ವರ್ಷಗಳ ಸೇವೆಯ ನಂತರ ರೂ ೧೧ ನೀಡಬೇಕೆಂಬ ಹಾಗೂ ಮೈಸೂರು ಹಾಗೂ ಬೆಂಗಳೂರು ನಗರದಲ್ಲಿ ಕೆಲಸಕ್ಕೆ ಸೇರಿದವರಿಗೆ ಮಾಸಿಕ ಒಂದು ರೂಪಾಯಿ ಭತ್ಯೆಯನ್ನು ನವೀಕೃತ ವೇತನ ಶ್ರೇಣಿ ನೀಡಿತ್ತು.[೧೧೧]

ಜಿಲ್ಲಾ ಪೊಲೀಸ್ ಕಛೇರಿಯ ಬಲವನ್ನು ಸಹ ಹೆಚ್ಚಿಸಲಾಯಿತು. ಅವರ ಕೆಲಸದ ಒತ್ತಡವು ಹೆಚ್ಚಾಗಿದ್ದ ಕಾರಣಕೋಸ್ಕರವಾಗಿ ಅವರ ಸಂಬಳವನ್ನು ಸಹ ಹೆಚ್ಚಿಸಲಾಯಿತು. ಮೈದಾನ ಪ್ರದೇಶದ ಉಕ್ಕಡಗಳಲ್ಲಿದ್ದ ತೋಟಿಗಳ ಮಾಸಿಕ ವೇತನವನ್ನು ರೂ ೩ ಕ್ಕೆ ಏರಿಸಲಾಯಿತು. ಮಲೆನಾಡು ಪ್ರಾಂತ್ಯಗಳಲ್ಲಿದ್ದ ಉಕ್ಕಡಗಳ ತೋಟಿಗಳ ಸಂಬಳವನ್ನು ರೂ ೪ ಕ್ಕೆ ಏರಿಸಲಾಯಿತು. ಅನಗತ್ಯವಾಗಿದ್ದಂತಹ ಉಕ್ಕಡಗಳನ್ನು ರದ್ದುಪಡಿಸಲಾಯಿತು. ೧೯೧೮ ರ ಸಪ್ಟೆಂಬರ್‌ನಲ್ಲಿ ಐ.ಜಿ.ಪಿ ರವರು ಪೊಲೀಸ್ ಪಡೆಯ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಮತ್ತೊಂದು ಪ್ರಸ್ತಾವನೆಯನ್ನು ಸಲ್ಲಿಸಿದರು.[೧೧೨]

ಈ ಪ್ರಸ್ತಾವನೆಯಲ್ಲಿ ಸಾಮಾನ್ಯ ದರ್ಜೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳನ್ನು ಪ್ರತ್ಯೇಕ ದರ್ಜೆಯ ಅಂದರೆ ಕಾರ್ಯನಿರ್ವಾಹಕವಲ್ಲದ (ನಾನ್ ಎಕ್ಸಿಕ್ಯೂಟಿವ್) ಅಧಿಕಾರಿಗಳ ಶ್ರೇಣಿಯಲ್ಲಿರಿಸಲಾಯಿತು. ಹಳೇಯ ಜಮೇದಾರ ರುಗಳನ್ನು ಹಾಗೆಯೇ ಉಳಿಸಿಕೊಂಡು ಕಾಲಕ್ರಮೇಣ ಅವರುಗಳ ಸ್ಥಾನಕ್ಕೆ ೨೨ ಜನ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ನೇಮಿಸ ಬೇಕು, ಇವರುಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಕರ್ತವ್ಯಗಳಿಗೆ ನೇಮಿಸಬೇಕು. ತಲಾ ೩ ಜನ ಸಬ್ ಇನ್ಸ್‌ಪೆಕ್ಟರ್‌ರವರು ಬೆಂಗಳೂರು ಮತ್ತು ಶಿವಮೊಗ್ಗ ಜಿಲ್ಲಾ ಮೀಸಲು ಪಡೆಯಲ್ಲಿ, ತಲಾ ಇಬ್ಬರು ಸಬ್‌ಇನ್ಸ್‌ಪೆಕ್ಟರ್ ಕೋಲಾರ, ತುಮಕೂರು, ಮೈಸೂರು, ಫ್ರೆಂಚ್‌ರಾಕ್, ಹಾಸನ, ಕಡೂರು, ಚಿತ್ರದುರ್ಗಗಳಲ್ಲಿ ಹಾಗೂ ತಲಾ ಒಬ್ಬರು ಸಬ್‌ಇನ್ಸ್‌ಪೆಕ್ಟರ್ ಪೊಲೀಸ್ ಕೇಂದ್ರಸ್ಥಾನ ಮತ್ತು ರೈಲ್ವೆಯಲ್ಲಿ ಜಮೇದಾರರುಗಳ ಬದಲಿಗೆ ನೇಮಿಸಬೇಕು. ೪ ಜನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್

ರವರುಗಳನ್ನು ಸಾಗರ, ದಾವಣಗೆರೆ, ಬೆಂಗಳೂರು ನಗರ ಮತ್ತು ಚಿಕ್ಕಬಳ್ಳಾಪುರ ಉಪ-ವಿಭಾಗಗಳಲ್ಲಿ ನೇಮಿಸಿ ಅವರಿಗೆ ಮಾಸಿಕ ರೂ. ೨೦೦ ಸಂಬಳ ನೀಡಬೇಕೆಂದು ಪ್ರಸ್ತಾವಿಸಲಾಯಿತು.

ಸರಕಾರವು ೧೯೧೯ ರಲ್ಲಿ ಕೆಲವು ಬದಲಾವಣೆಗಳೊಂದಿಗೆ ಈ ಪ್ರಸ್ತಾವನೆಯ ಅಂಗೀಕಾರ ನೀಡಿತು. ಆ ಬದಲಾವಣೆ ಗಳೆಂದರೆ, ೧೯೧೯ ರ ಮೇನಲ್ಲಿ ತೆಗೆದು ಹಾಕಲಾಗಿದ್ದ ಹಳೇಯ ಜಮೇದಾರರುಗಳನ್ನು ಉಳಿಸಿಕೊಳ್ಳಲಾಯಿತು. ೪ ಜನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರಿಗೆ ಮಾಸಿಕ ೨೦೦ ರೂ ವೇತನ ನೀಡಿ ರಚಿಸಿದ ಹುದ್ದೆಗಳನ್ನು ಜಿಲ್ಲಾ ಸೂಪರಿಂಟೆಂಡೆಂಟ್‌ರವರು ಅವರುಗಳ ಮೇಲೆ ಸರಿಯಾದ ಮೇಲ್ವಿಚಾರಣೆಯನ್ನು ಮಾಡಿ ಜಿಲ್ಲೆಯ ಅಪರಾಧಗಳ ತನಿಖೆಗೆ ನೇಮಿಸಬೇಕೆಂದು ಸರಕಾರವು ತನ್ನ ಅಂಗೀಕಾರದಲ್ಲಿ ತಿಳಿಸಿದೆ.[೧೧೩]

ಸರಕಾರವು ೨೦೦ ರೂ ಹಾಗೂ ೧೭೫ ರೂ ಸಂಬಳ ಪಡೆಯುತ್ತಿದ್ದ ಕ್ರಮವಾಗಿ ಪ್ರಥಮ ದರ್ಜೆ ಹಾಗೂ ಎರಡನೇ ದರ್ಜೆಯ ಇನ್ಸ್‌ಪೆಕ್ಟರ್‌ರವರ ೪ ಹುದ್ದೆಗಳನ್ನು ರದ್ದು ಮಾಡಿ ಆ ಸ್ಥಳಕ್ಕೆ ಕಡಿಮೆ ದರ್ಜೆಯ (ಲೋವರ್ ಕ್ಲಾಸ್) ಮಾಸಿಕ ರೂ ೮೦ ಸಂಬಳ ಪಡೆಯುತ್ತಿದ್ದ ಒಬ್ಬರು ಹಾಗೂ ೭೦ ರೂ ಸಂಬಳ ಪಡೆಯುತ್ತಿದ್ದ ಇಬ್ಬರು ಹಾಗೂ ೬೦ ರೂ ಸಂಬಳ ಪಡೆಯುತ್ತಿದ್ದ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳನ್ನು ನಿಯೋಜಿಸಲಾಯಿತು. ಸರಕಾರವು ನೀಡಿದ ನಿರ್ದೇಶನವೇನೆಂದರೆ, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳು ಪೊಲೀಸ್ ಸೂಪರಿಂಟೆಂಡೆಂಟ್‌ರವರ ಅಧೀನದಲ್ಲಿದ್ದು ಅವರ ಮೇಲ್ವಿಚಾರಣೆಗೆ ಒಳಪಟ್ಟಿರಬೇಕು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳಿಗೆ ತಮ್ಮ ವ್ಯಾಪ್ತಿಯೊಳಗೆ ನಡೆಯುವ ಘೋರ ಅಪರಾಧಗಳ ತನಿಖೆಯ ಬಗ್ಗೆ ವೈಯಕ್ತಿಕವಾಗಿ ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಹಾಗೂ ಸಣ್ಣ ಅಪರಾಧಗಳಿಗೂ ಸಹ ಗಮನಹರಿಸುವ ಅಧಿಕಾರವನ್ನು ನೀಡಲಾಯಿತು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ರವರುಗಳು ಪೊಲೀಸ್ ಸೂಪರಿಂಟೆಂಡೆಂಟ್‌ರವರ ಆದೇಶಗಳಿಗೆ ಒಳಪಟ್ಟು ಪೊಲೀಸ್ ಸೂಪರಿಂಟೆಂಡೆಂಟ್‌ರವರ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು. ತಮ್ಮ ವ್ಯಾಪ್ತಿಯೊಳಗೆ ಬರುವ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಿಸಿಕೊಳ್ಳುವ ಅಥವಾ ವಜಾ ಮಾಡುವ ಸಂಪೂರ್ಣ ಅಧಿಕಾರವನ್ನು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರಿಗೆ ನೀಡಲಾಯಿತು.[೧೧೪]

೧೯೨೫ ರಲ್ಲಿ ಐ.ಜಿ.ಪಿ ರವರು ಸಂಸ್ಥಾನದ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆಯನ್ನು ಅದರ ಪೂರ್ಣ ಬಲದೊಂದಿಗೆ ಉಳಿಸಿಕೊಳ್ಳಬೇಕು ಎಂದು ನೀಡಿದ ಪ್ರಸ್ತಾವನೆಗೆ ಸರಕಾರವು ತನ್ನ ಸಹಮತವನ್ನು ವ್ಯಕ್ತಪಡಿಸಿತು. ಬೆಂಗಳೂರಿನಲ್ಲಿ ಯಾವಾಗಲೂ ಈ ಮೀಸಲು ಪೊಲೀಸ್ ಪಡೆಯಿಂದ ಪೊಲೀಸರನ್ನು ಅನ್ಯ ಕಾರ್ಯಗಳಿಗೆ ಬಳಸು ತ್ತಿದ್ದರು. ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕವಾದ ಪೊಲೀಸ್ ಪಡೆ ಅಗತ್ಯವಿಲ್ಲವೆಂದು ಇವರು ಅಭಿಪ್ರಾಯಪಟ್ಟರು. ಮೈಸೂರಿನ ಪ್ರಾಂತೀಯ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆಯು ಡೆಪ್ಯುಟ್ಯೂ ಕಮಿಷನರ್‌ರವರ ನಿಯಂತ್ರಣದಲ್ಲಿತ್ತು. ಫ್ರೆಂಚ್‌ರಾಕ್ ನ್ನು ಹೊರತುಪಡಿಸಿ ಬೇರೆ ಯಾವುದೇ ವಿಶೇಷವಾದ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆಯ ಅಗತ್ಯವಿಲ್ಲವೆಂದು ಅಭಿಪ್ರಾಯಪಡಲಾಯಿತು.[೧೧೫]

೬.೧೧-೨ – ಪೊಲೀಸ್ ಉಕ್ಕಡ (ಔಟ್‌ಪೋಸ್ಟ್)

೧೯೦೫-೦೬ ರ ವೇಳೆಗೆ ರಾಜ್ಯದಲ್ಲಿ ಹಲವಾರು ಉಪಠಾಣೆಗಳು, ಉಕ್ಕಡಗಳು ಇದ್ದವು. *ಈ ವರ್ಷದಲ್ಲಿ ಮತ್ತು ೧೯೦೬-೦೭ ರಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಮುಖ್ಯ ಠಾಣೆಗಳು, ಉಪಠಾಣೆಗಳು, ಉಕ್ಕಡಗಳ ಸಂಖ್ಯೆಯ ಬಗ್ಗೆ ಅನುಬಂಧ ೨೪ ಮತ್ತು ೨೫ ನೋಡಿರಿ.*

೧೯೨೮ ರಲ್ಲಿ ತೆರೆಯಲಾಗಿದ್ದ ಹಲವಾರು ಉಕ್ಕಡಗಳು ಹಾಗೂ ಉಪ ಠಾಣೆಗಳು ಅನಗತ್ಯವಾಗಿದ್ದವು. ತುಮಕೂರು, ಕಡೂರು, ಹಾಸನ ಜಿಲ್ಲೆಗಳು ಹಾಗೂ ಪ್ರೆಂಚ್‌ರಾಕ್ ಉಪ ವಿಭಾಗಗಳಲ್ಲಿದ್ದ ಇಂತಹ ಅನಗತ್ಯ ಉಕ್ಕಡ ಹಾಗೂ ಉಪ

ಠಾಣೆಗಳನ್ನು ರದ್ದುಪಡಿಸಿ ಅಲ್ಲಿದ್ದ ಸಿಬ್ಬಂದಿಗಳು ಎಲ್ಲೆಲ್ಲಿ ಅಗತ್ಯವಿತ್ತೋ ಅಲ್ಲಿಗೆ ನೇಮಿಸಿದರು.

೧೯೨೯ ರ ವೇಳೆಗಾಗಲೇ ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ಕಾವು ಹರಡಿತ್ತು. ಪೊಲೀಸರಿಗೆ ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕುವುದು ಅತ್ಯಂತ ಪ್ರಮುಖ ಕಾರ್ಯವಾಗಿ ಮಾರ್ಪಟ್ಟಿತ್ತು. ಇದರಿಂದಾಗಿ ಪೊಲೀಸರ ಮುಖ್ಯ ಕೆಲಸವಾದ ಅಪರಾಧ ತಡೆ ಮತ್ತು ಪತ್ತೆ ಕಾರ್ಯಗಳು ನೆನೆಗುದಿಗೆ ಬಿದ್ದವು. ಸ್ವಾತಂತ್ರ್ಯ ಹೋರಾಟ ಗಾರರು ಸರಕಾರಕ್ಕೆ ಅಪಾಯಕಾರಿಗಳೆಂದು ಭಾವಿಸಲಾಗಿತ್ತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಮೈಸೂರು ಸಂಸ್ಥಾನದ ಬಗ್ಗೆ ಯಾವುದೇ ಸ್ಪಷ್ಟ ನಿರ್ಧಾರವನ್ನು ಹೊಂದಿರಲಿಲ್ಲ. ೧೯೨೮ ರಲ್ಲಿ ಮೈಸೂರು ಸಂಸ್ಥಾನದಲ್ಲಿ ಒಂದು ಜವಾಬ್ದಾರಿಯುತ ಸರ್ಕಾರ ರಚಿಸಬೇಕೆಂದು ಕಾಂಗ್ರೆಸ್ ಹೇಳಿಕೆ ನೀಡಿತು. ಆದರೆ ಅದರ ಧ್ವನಿಗೆ ಸಾಕಷ್ಟು ಬಲ ವಿರಲಿಲ್ಲ. ಆದ್ದರಿಂದ ಒಂದು ಸರಕಾರವನ್ನು ರಚಿಸಲು ಕ್ರಮಗಳನ್ನು ಕೈಗೊಳ್ಳುವಂತೆ ರಾಜನನ್ನು ಒತ್ತಾಯಿಸಿತು.

೧೯೨೯ ರ ಲಾಹೋರ್ ಕಾಂಗ್ರೆಸ್ ಅಧಿವೇಶನ ಭಾರತ ಸ್ವಾತಂತ್ರ್ಯ ಹೋರಾಟದ ಒಂದು ಮೈಲು ಗಲ್ಲಾಯಿತು. ಇದರಿಂದ ಇಡೀ ದೇಶದ ರಾಜಕೀಯ ವಲಯದಲ್ಲಿ ವಿದ್ಯುತ್ ಸಂಚಲನವಾಯಿತು. ೧೯೩೦ರ ಜನವರಿ ೨೬ ರಂದು ಕಾಂಗ್ರೆಸ್ ಧ್ವಜವನ್ನೇ ರಾಷ್ಟ್ರಧ್ವಜವೆಂದು ಎಲ್ಲೆಡೆ ಹಾರಿಸಲಾಯಿತು. ಇದರಿಂದ ಮೈಸೂರು ಕಾಂಗ್ರೆಸ್ ಹಾಗೂ ಸರಕಾರದ ನಡುವಿನ ಸಂಬಂಧ ಹಳಿಸಿಹೋಯಿತು. ಮೈಸೂರು ಸರಕಾರವು ತನ್ನ ಪ್ರಾಂತ್ಯದಲ್ಲಿ ಪರಕೀಯ ರಾಜಕೀಯ ಶಕ್ತಿಗಳು ಹಸ್ತಕ್ಷೇಪ ಮಾಡುವುದನ್ನು ಬಯಸಲಿಲ್ಲ. ಆದ್ದರಿಂದ ಮೈಸೂರು ಸರಕಾರವು ಎಲ್ಲಾ ಜಿಲ್ಲೆಯ ಅಧಿಕಾರಿಗಳಿಗೆ 'ರಾಷ್ಟ್ರಧ್ವಜಾರೋಹಣ' ದ ಹೆಸರಿನಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳನ್ನು ತಡೆಯುವಂತೆ ಆದೇಶಿಸಿತು.[೧೧೬] ಮಹಾತ್ಮಾ ಗಾಂಧೀಜಿಯವರು ಕರೆ ನೀಡಿದ ಉಪ್ಪಿನ ಸತ್ಯಾಗ್ರಹಕ್ಕೆ ಅಂಕೋಲದಲ್ಲಿ ಸತ್ಯಾಗ್ರಹ ನಡೆಯಿತು. ಇದರಿಂದ ಸರಕಾರವು ಇಂತಹ ರಾಜಕೀಯ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇರಿಸಿ ಅಂತವರ ಮೇಲೆ ಕ್ರಮ ಜರುಗಿಸಲು ಸೂಚಿಸಿತು.

೧೯೩೦ ರಲ್ಲಿ ಐ.ಜಿ.ಪಿಯವರು ರಾಜ್ಯದ ಶಾಂತಿಭಂಗ ಉಂಟು ಮಾಡುವ ಇಂತಹ ಚಟುವಟಿಕೆಗಳ ಮೇಲೆ ಗಮನಹರಿಸಲು "ರಾಜಕೀಯ ಗುಪ್ತಚರ ವಿಭಾಗ ತೆರೆಯಲು ಪ್ರಸ್ಥಾವಿಸಿದರು. ಈ ಪ್ರಸ್ಥಾವನೆ ಸರಕಾರವು ಮಂಜೂರಾತಿಯನ್ನು ನೀಡಿತು. ಈ ವಿಭಾಗಕ್ಕೆ ಒಬ್ಬರು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ಒಬ್ಬರು ಇನ್ಸ್‌ಪೆಕ್ಟರ್, ಒಬ್ಬರು ಸಬ್‌ಇನ್ಸ್‌ಪೆಕ್ಟರ್, ನಾಲ್ಕು ಜನ ಕಾನ್ಸ್‌ಟೇಬಲ್‌ಗಳನ್ನು ಮೂರು ವರ್ಷಗಳ ಅವಧಿಗಾಗಿ ನೇಮಿಸಲಾಯಿತು.[೧೧೭] ಕಛೇರಿಯ ಸಿಬ್ಬಂದಿಗಳ ಪುನರ್‌ಸಂಘಟನೆ ಕಾರ್ಯವೂ ಸಹ ೧೯೩೦ ರಲ್ಲಿ ನಡೆಯಿತು. ಗುಮಾಸ್ತರುಗಳನ್ನು, ಕಾರ್ಯನಿರ್ವಾಹಕ ಸಿಬ್ಬಂದಿಗಳನ್ನು ನೇಮಿಸುವುದು ಮತ್ತು ಇವರುಗಳನ್ನು ವರ್ಗಾವಣೆ ಮಾಡುವ ಅಧಿಕಾರಗಳನ್ನು ಒಂದು ಪ್ರಾಧಿಕಾರಕ್ಕೆ ನೀಡಬೇಕೆಂದು ಪ್ರಸ್ತಾಪಿಸಲಾಯಿತು. ೧೯೩೦ ರ ಜುಲಾಯಿ ೧ ರಂದು ಈ ಪ್ರಸ್ತಾವನೆ ಸರಕಾರ ಅಂಗೀಕಾರ ನೀಡಿತು. ಇದರಂತೆ ಒಂದು ಮ್ಯಾನೇಜರ್, ಒಬ್ಬನು ಉಗ್ರಾಣಪಾಲಕ, ಒಬ್ಬನು ಶೀಘ್ರಲಿಪಿಕಾರ, ೧೪ ಗುಮಾಸ್ತರು, ೭೯ ಕೆಳದರ್ಜೆಯ ಗುಮಾಸ್ತರುಗಳನ್ನು ನೀಡಲಾಯಿತು. ಮತ್ತು ಮ್ಯಾನೇಜರ್, ಉಗ್ರಾಣಪಾಲಕರು ಮತ್ತು ಇತರ ಅಧಿಕಾರಿಗಳ ಸಂಬಳವನ್ನು ಹೆಚ್ಚಿಸಲಾಯಿತು.

೧೯೩೧ ರಲ್ಲಿ ಕೋಲಾರ ಚಿನ್ನದ ಗಣಿ ವಿಶೇಷ ಪ್ರದೇಶ ಪೊಲೀಸ್ (ಕೆ.ಜಿ.ಎಫ್ ಸ್ಪೆಷಲ್ ಏರಿಯಾ ಪೊಲೀಸ್)ನ್ನು ಪುನರ್‌ಸಂಘಟಿಸಲಾಯಿತು. ಈ ಪಡೆಯ ಮತ್ತು ಜಿಲ್ಲೆಯ ಸರಹದ್ದುಗಳನ್ನು ಸ್ಪಷ್ಟವಾಗಿ ಗುರುತಿಸಲಾಯಿತು. ಇದೇ ಜಿಲ್ಲೆಯಲ್ಲಿ ಹಾಲಿ ಇದ್ದ ೩೬೫ ಸಿಬ್ಬಂದಿಗಳಲ್ಲಿ ಅಂದರೆ ೪ ಇನ್ಸ್‌ಪೆಕ್ಟರ್, ೧೦ ಸಬ್‌ಇನ್ಸ್‌ಪೆಕ್ಟರ್, ೨ ಜಮೇದಾರ, ೩೪ ದಫೇದಾರ, ೩೧೫ ಕಾನ್ಸ್‌ಟೇಬಲ್‌ಗಳನ್ನು ಗಣಿಯಲ್ಲಿ ಕರ್ತವ್ಯಕ್ಕೆ ನೇಮಿಸಲಾಯಿತು. ಇದರಲ್ಲಿ ೨೩ ಜನ ಕಾನ್ಸ್‌ಟೇಬಲ್‌ಗಳನ್ನು ಉಳಿದ ಸಿಬ್ಬಂದಿಗಳು ರಜೆ ಅಥವಾ ಕಾಯಿಲೆಗೊಳಗಾದ ಸಂದರ್ಭಗಳಿಗೆ ಬೇಕೆಂದು

ಕಾಯ್ದಿರಿಸಲಾಯಿತು. ೧೪೨ ಕಾನ್ಸ್‌ಟೇಬಲ್‌ಗಳನ್ನು ಹೊಸದಾದ ಕೆ.ಜಿ.ಎಫ್ ವಿಶೇಷ ಪ್ರದೇಶ ಪೊಲೀಸ್‌ಗೆ ಸೇರಿಸಲಾಯಿತು. ತುರ್ತು ಮೀಸಲು ಪಡೆಯ ೧ ಸುಬೇದಾರ, ೩ ದಫೇದಾರರು, ೩೫ ಕಾನ್ಸ್‌ಟೇಬಲ್‌ಗಳನ್ನು ಹೊಂದಿತ್ತು.

೧೯೩೧ ರಲ್ಲಿ ಐ.ಜಿ.ಪಿ ಯವರು ಪೊಲೀಸ್ ಪಡೆಯ ಪುನರ್‌ಸಂಘಟನೆ ಮತ್ತು ಪುನರ್‌ಸಂಘಟನೆಯ ಬಗ್ಗೆ ಸರಕಾರಕ್ಕೆ ಪ್ರಸ್ಥಾವನೆ ಸಲ್ಲಿಸಿದ್ದು, ಸರ್ಕಾರವು ಅದನ್ನು ಅಂಗೀಕರಿಸಿತು. ಇದರಿಂದ ಸರ್ಕಾರಕ್ಕೆ ವಿಶೇಷ ಆರ್ಥಿಕ ಹೊರೆಯಾಗಲಿಲ್ಲ. ಈ ಪ್ರಸ್ಥಾವನೆಯ ವಿಷಯಗಳು ಹೀಗಿವೆ.[೧೧೮]

೧) ಬೆಂಗಳೂರು ನಗರ ಹಾಗೂ ತಾಲೂಕು ಜಿಲ್ಲಾ ಸೂಪರಿಂಟೆಂಡೆಂಟ್‌ನ ವ್ಯಾಪ್ತಿಗೆ ಸೇರಿಸಬೇಕು. ಬೆಂಗಳೂರು ನಗರವು ಕೆಲವು ಹಳ್ಳಿಗಳ ಉಕ್ಕಡಗಳನ್ನು ಒಳಗೊಂಡಂತೆ ಅಂದರೆ ಯಶವಂತಪುರ, ವೈಯಾಲಿಕಾವಲ್, ಡಿಸ್ಟಿಲರಿ ಮತ್ತು ಮಡಿವಾಳ ಸೇರಿದಂತೆ ಇದರ ವ್ಯಾಪ್ತಿಗೆ ತರಲಾಯಿತು. ಅಪರಾಧ ವಿಭಾಗಕ್ಕೆ ಒಬ್ಬರು ಸಬ್‌ಇನ್ಸ್‌ಪೆಕ್ಟರನ್ನು ನೇಮಿಸಲಾಯಿತು.

೨) ೧೯೩೧ರ ಪೆಬ್ರವರಿ ೨೮ ರಂದು ಕೆ.ಜಿ.ಎಪ್ ತುರ್ತು ಪಡೆಗೆ ನಾಲ್ಕು ಜನ ದಫೇದಾರರುಗಳನ್ನು ನೇಮಿಸಿದ್ದ ಸರ್ಕಾರಿ ಆದೇಶವನ್ನು ರದ್ಧುಪಡಿಸಿ ಅದನ್ನು ಪ್ರಾಂತೀಯ ಮೀಸಲು ಪಡೆಗೆ ಸೇರಿಸಲಾಯಿತು.

೩) ಜಿಲ್ಲೆಗಳಲ್ಲಿದ್ದ ೧೮೩ ತನಿಖಾ ಕೇಂದ್ರಗಳ ಸಂಖ್ಯೆಯನ್ನು ೧೫೫ ಕ್ಕೆ ಇಳಿಸಲಾಯಿತು. ೩೫ ಸಬ್‌ಇನ್ಸ್‌ಪೆಕ್ಟರ್‌ಗಳ ಸಂಖ್ಯೆಯನ್ನು ೧೯೦ ಗೆ ಇಳಿಸಲಾಯಿತು. ಪೊಲೀಸ್ ಇಲಾಖೆಗೆ ಬಸ್ಸನ್ನು ಒದಗಿಸಿದ್ದರಿಂದ ತುರ್ತುಕಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಿಬ್ಬಂದಿಗಳನ್ನು ಸಾಗಿಸಲು ಸಾಧ್ಯವಾಗುತ್ತಿತ್ತು. ಹಾಗಾಗಿ ಈ ರೀತಿ ಕಡಿತಗೊಳಿಸ ಲಾಯಿತು.

೪) ಅಸಿಸ್ಟೆಂಟ್ ಕಮಿಷನರ್ ಹಾಗೂ ಮ್ಯಾಜಿಸ್ಟ್ರೀಯಲ್ ಅಧಿಕಾರಿ ಹೊಂದಿದ್ದ ಅಮಿಲ್‌ದಾರರುಗಳ ಮನೆಗೆಲಸಕ್ಕೆ (ಆರ್ಡರ್‌ಲಿ) ನೇಮಿಸಿದ್ದ ಸಿಬ್ಬಂದಿಗಳನ್ನು ರದ್ದು ಮಾಡಲಾಯಿತು. ಜಿಲ್ಲಾ ಸೂಪರಿಂಟೆಂಡೆಂಟ್‌ರವರುಗಳಿಗೆ ಮನೆ ಗೆಲಸಕ್ಕೆ ನೀಡಿದ ಒಂದು ದಫೇದಾರ ಹಾಗೂ ೪ ಕಾನ್ಸ್‌ಟೇಬಲ್‌ಗಳ ಸಂಖ್ಯೆಯನ್ನು ಕೇವಲ ೩ ಕಾನ್ಸ್‌ಟೇಬಲ್‌ಗಳಿಗೆ ಇಳಿಸಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳಿಗೆ ಇಬ್ಬರು ಕಾನ್ಸ್‌ಟೇಬಲ್‌ಗಳನ್ನು ಆರ್ಡರ್ಲಿಯಾಗಿ ನೀಡಲಾಯಿತು.

೫) ರೈಲ್ವೆ ಪೊಲೀಸ್‌ನಲ್ಲಿ ಸಬ್‌ಇನ್ಸ್‌ಪೆಕ್ಟರ್‌ರವರುಗಳ ನೇತ್ರತ್ವದಲ್ಲಿ ಮೂರು ವಲಯಗಳನ್ನು ರಚಿಸಲಾಯಿತು. ಅವುಗಳ ಕೇಂದ್ರಸ್ಥಾನ ಬೆಂಗಳೂರು, ಮೈಸೂರು ಮತ್ತು ಶಿವಮೊಗ್ಗಗಳಲ್ಲಿತ್ತು. ರೈಲ್ವೆ ಹಳ್ಳಿಗಳ ಪ್ರದೇಶವನ್ನು ಈ ಮೂರು ವಲಯಗಳಿಗೆ ಹಂಚಲಾಯಿತು. ರೈಲ್ವೆಗೆ ಇದ್ದ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಯನ್ನು ರದ್ಧುಗೊಳಿಸಿ ಇನ್ಸ್‌ಪೆಕ್ಟರ್‌ರವರನ್ನು ನೇಮಿಸಲಾಯಿತು. ಬಂಗಾರಪೇಟೆ ಮತ್ತು ಮಾರಿಕುಪ್ಪಂ ನಡುವಿನ ರೈಲು ಪ್ರಾರಂಭವಾಗಿದ್ದು ಅದನ್ನು ನೋಡಿಕೊಳ್ಳಲು ಒಬ್ಬ ಸಬ್‌ಇನ್ಸ್‌ಪೆಕ್ಟರ್ ಹಾಗೂ ೧೬ ಜನ ಕಾನ್ಸ್‌ಟೇಬಲ್‌ಗಳನ್ನು ನೇಮಿಸಲಾಯಿತು. ಇದು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರವರ ಅಧೀನಕ್ಕೆ ಬರುತ್ತಿತ್ತು. ಕೆ.ಜಿ.ಎಪ್‌ನ್ನು ಸಾಮಾನ್ಯ ರೈಲ್ವೆ ಜಿಲ್ಲೆಗೆ ಸೇರಿಸಲಾಯಿತು. ಇದರಿಂದಾಗಿ ಇಲ್ಲಿ ಇದ್ದ ಒಂದು ಸಬ್‌ಇನ್ಸ್‌ಪೆಕ್ಟರ್ ಹಾಗೂ ೪ ಜನ ಕಾನ್ಸ್‌ಟೇಬಲ್‌ಗಳ ಹುದ್ದೆಯನ್ನು ರದ್ದುಮಾಡಲಾಯಿತು.

೬) ಪ್ರಾಂತೀಯ ಮೀಸಲು ಪೊಲೀಸ್ ಪಡೆಯನ್ನು ಒಂದು ಇನ್ಸ್‌ಪೆಕ್ಟರ್, ಎರಡು ಸುಬೇದಾರ್ ಮೇಜರ್, ೧೦ ಹವಾಲ್ದಾರ, ೪ ನಾಯಕ್ಸ್ ಹಾಗೂ ೩೮ ಕಾನ್ಸ್‌ಟೇಬಲ್‌ಗಳೊಂದಿಗೆ ಬಲಪಡಿಸಲಾಯಿತು.

೭) ಬೆಂಗಳೂರಿನಲ್ಲಿ ಮಾತ್ರ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗಾಗಿ ತರಬೇತಿ ಶಾಲೆಯನ್ನು ಉಳಿಸಿಕೊಳ್ಳಲಾಯಿತು. ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ರವರುಗಳನ್ನು ವೆಲ್ಲೂರಿಗೆ ತರಬೇತಿಗೆ ಕಳಿಸಲಾಯಿತು. ತರಬೇತಿ ಶಾಲೆಯ ಒಂದು ಇನ್ಸ್‌ಪೆಕ್ಟರ್‌ರವರನ್ನು ಖಡಿತಗೊಳಿಸಲಾಯಿತು.

೮) ಅಪರಾಧ ಪತ್ತೆ ಇಲಾಖೆ (ಘಟಕ) ದಲ್ಲಿದ್ದ ರಾಜಕೀಯ ವಿಭಾಗ ಹಾಗೂ ಅಪರಾಧ ವಿಭಾಗಗಳನ್ನು (ಕ್ರೈಂ ಬ್ರಾಂಚ್)ತಲಾ ಒಬ್ಬ ಇನ್ಸ್‌ಪೆಕ್ಟರ್ ಹಾಗೂ ಒಬ್ಬ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ನಿಡಿ ಬಲಪಡಿಸಲಾಯಿತು.

೯)ಮೈಸೂರು ನಗರ ಸಂಚಾರ ನಿಯಂತ್ರಣಕ್ಕೆ ಒಬ್ಬ ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್‌ಗಳನ್ನು ನೇಮಿಸಲಾಯಿತು.

೧೦) ಪ್ರತೀ ಜಿಲ್ಲೆಯಲ್ಲಿ ತಪ್ಪಿತಸ್ಥ ಸಿಬ್ಬಂದಿಗಳ ಇಲಾಖಾ ವಿಚಾರಣೆಗಾಗಿ ಒಂದು ಇನ್ಸ್‌ಪೆಕ್ಟರ್, ಎರಡು ಅಥವಾ ಮೂರು ಇನ್ಸ್‌ಪೆಕ್ಟರ್‌ರವರುಗಳಿಗೆ ಸೀಮಿತಗೊಳಿಸಲಾಯಿತು.

೧೧) ದಾವಣಗೆರೆಗೆ ಪೊಲೀಸ್ ಸೂಪರಿಂಟಂಡೆಂಟ್ ರವರನ್ನು ಸಾಮಾನ್ಯವಾದ ಕಾನೂನು ಸುವ್ಯವಸ್ಥೆಯ ಮೇಲ್ವಿಚಾರಣೆಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಅವರು ರೈಲ್ವೆ ಪಡೆ ಮತ್ತು ಅಪರಾಧ ತನಿಖಾ ವಿಭಾಗದ ಮುಖ್ಯಸ್ಥರಾಗಿಯೂ ಸಹ ನೇಮಿಸಲಾಯಿತು.

೧೨) ಖಾಯಂ ಆಗಿ ಒಟ್ಟು ೭ ಜನ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳಿದ್ದರು. ಅವರುಗಳು ಚೆನ್ನ ಪಟ್ಟಣ, ಮೈಸೂರುನಗರ, ದಾವಣಗೆರೆ, ಅಪರಾಧ ತನಿಖಾ ವಿಭಾಗ, ಪೊಲೀಸ್ ತರಬೇತಿ ಶಾಲೆ, ಬೆಂಗಳೂರುನಗರ ಮತ್ತು ಸಂಸ್ಥಾನದ ಕಾಯ್ದಿಟ್ಟ ಮೀಸಲು ಪಡೆಗಳಿಗೆ ನೇಮಿಸಲಾಯಿತು. ಐಜಿಪಿಯವರು ಒಬ್ಬ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ನ್ನು ಬೆಂಗಳೂರು ನಗರದಲ್ಲಿ ಕಾಯ್ದಿರಿಸಬೇಕೆಂತಲೂ ಒಂದು ವೇಳೆ ಜಿಲ್ಲಾ ಸೂಪರಿಂಟೆಂಡೆಂಟ್ ರವರು ರಜೆಯಲ್ಲಿ ತೆರಳಿದಾಗ ಈ ಅಧಿಕಾರಿಯು ಅವರ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಪ್ರಸ್ತಾವನೆ ತಿಳಿಸಿದೆ. ಉಳಿದ ಸಮಯದಲ್ಲಿ ಇವರು ಐ.ಜಿ.ಪಿ ಯವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಬೇಕೆಂದು ಅದರಲ್ಲಿ ತಿಳಿಸಲಾಯಿತು. ಮತ್ತು ಕೆ.ಜಿ.ಎಫ್‌ನ ಅಸಿಸ್ಟೆಂಟ್ ಸೂಪರಿಂಟೆಂತೆಂಟ್ ಹುದ್ದೆಯನ್ನು ರದ್ಧುಪಡಿಸಬೇಕೆಂತಲೂ ಅಗತ್ಯ ಬಿದ್ದಾಗ ಅವರನ್ನು ಕೆ.ಜಿ.ಎಫ್‌ನ ವಿಶೇಷ ತನಿಖಾ ದಳಕ್ಕೆ ನೇಮಿಸಬೇಕೆಂದು ಪ್ರಸ್ತಾವಿಸಲಾಯಿತು.[೧೧೯]

೧೯೩೨ ರಲ್ಲಿ ಸರಕಾರವು ಮೈಸೂರು ಇನ್‌ಫೆಂಟ್ರಿಯನ್ನು ಪುನರ್‌ಸಂಘಟಿಸಿತು. ಆಂತರಿಕ ಭದ್ರತೆಗಾಗಿ ಕ್ರಿಯಾಶೀಲರಾದ ಮತ್ತು ಉನ್ನತ ದರ್ಜೆಯ ಪಡೆಯನ್ನಾಗಿ ಮಾರ್ಪಾಡಿಸಿತು. ಇನ್‌ಫೆಂಟ್ರಿಯವರು ಮಾಡುತ್ತಿದ್ದ ಸೈನಿಕವಲ್ಲದ ಕಾರ್ಯವನ್ನು ಅಂದರೆ ಉದಾಹರಣೆಗಾಗಿ; ಖಜಾನೆಯ ಪಹರೆ ಮುಂತಾದ ಕರ್ತವ್ಯಗಳಿಂದ ಅವರನ್ನು ಬಿಡುಗಡೆಗೊಳಿಸಿ ಆ ಕೆಲಸವನ್ನು ಪೊಲೀಸ್ ಇಲಾಖೆಗೆ ವಹಿಸಲಾಯಿತು. ಖಜಾನೆಯ ಪಹರೆ ಕಾಯುವುದು, ಸ್ಟಾಂಪ್ ತಯಾರಿಕಾ ಕೇಂದ್ರಗಳ ಪಹರೆ, ಮೈಸೂರಿನ ಸರ್ಕಾರಿ ಭವನವನ್ನು ಕಾಯುವುದು ಜೈಲುಗಳ ಪಹರೆ ಯಂತಹ ಕೆಲಸಗಳಿಂದಾಗಿ ಪೊಲೀಸರಿಗೆ ಕೆಲಸದ ಒತ್ತಡಗಳು ಹೆಚ್ಚಾದವು. ಈ ಹೆಚ್ಚಿನ ಹೊರೆಯನ್ನು ನಿಭಾಯಿಸುವ ಸಲುವಾಗಿ ಸರಕಾರವು ಹೆಚ್ಚುವರಿಯಾಗಿ ೮೩ ದಫೇದಾರರುಗಳು, ೩೯೩ ಕಾನ್ಸ್‌ಟೇಬಲ್‌ಗಳ ಹುದ್ದೆಯನ್ನು ಹೊಸದಾಗಿ ಸೃಷ್ಟಿಸಿದರು. ಐ.ಜಿ.ಪಿ ಯವರು ಇನ್‌ಫೆಂಟ್ರಿಯಿಂದ ಈ ಕೆಲಸಗಳಿಗೆ ಆದಷ್ಟು ಕಡಿಮೆ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ಉಪಯೋಗಿಸಬೇಕೆಂದು ಆದೇಶಿಸಿದರು.[೧೨೦]

೧೯೩೨ ರ ಅಕ್ಟೋಬರ್‌ನಲ್ಲಿ ಐ.ಜಿ.ಪಿರವರು ಇಲಾಖೆಯ ಕೆಳಹಂತದ ಸಿಬ್ಬಂದಿಗಳನ್ನು ಪುನರ್‌ಸಂಘಟಿಸುವ ಕೆಲಸವನ್ನು ಪ್ರಾರಂಭಿಸಿದರು. ಅವರ ಸಂಬಳವನ್ನು ಹೆಚ್ಚಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ಅವರ ಪ್ರಸ್ತಾವನೆಯಲ್ಲಿದ್ದ ಅಂಶಗಳೆಂದರೆ,

೧) ೧೧೬ ಜನ ಇನ್ಸ್‌ಪೆಕ್ಟರ್‌ಗಳ ಸಂಖ್ಯೆಯನ್ನು ೯೬ಕ್ಕೆ ಇಳಿಸಲಾಯಿತು. ಇದರಲ್ಲಿ ೧೬ ಜನರಿಗೆ ಮಾಸಿಕ ರೂ ೧೫೦, ೩೨ ಜನರಿಗೆ ಮಾಸಿಕ ರೂ ೧೨೫, ೪೮ ಜನರಿಗೆ ಮಾಸಿಕ ರೂ, ೧೦೦ ಸಂಬಳ ನೀಡುವಂತೆ ಪ್ರಸ್ತಾವಿಸಲಾಯಿತು.

೨) ಸಬ್‌ಇನ್ಸ್‌ಪೆಕ್ಟರುಗಳ ಸಂಖ್ಯೆಯಲ್ಲಿಯೂ ಸಹ ಕಡಿತಗೊಳಿಸಲಾಯಿತು. ೧೭೬ ಜನ ಇದ್ದ ಸಂಖ್ಯೆಯನ್ನು ೧೨೩ ಕ್ಕೆ

ಇಳಿಸಲಾಯಿತು. ಇವರ ಸಂಬಳದಲ್ಲಿ ೪ ವರ್ಗಗಳಿದ್ದು, ಮಾಸಿಕ ರೂ. ೮೦, ೭೦, ೬೦ ಮತ್ತು ೫೦ ರೂ ಸಂಬಳ ನೀಡಬೇಕೆಂದು ಪ್ರಸ್ತಾವಿಸಲಾಯಿತು. ಈ ೧೭೩ ಜನರಲ್ಲಿ ೧೮ ಜನರಿಗೆ ರೂ ೮೦, ೩೬ ಜನರಿಗೆ ರೂ ೭೦, ೫೪ ಜನರಿಗೆ ರೂ. ೬೦, ೬೫ ಜನರಿಗೆ ರೂ ೫೦ ಸಂಬಳ ನೀಡಬೇಕೆಂದು ಪ್ರಸ್ತಾವಿಸಲಾಯಿತು.

೩) ಜಮೇದಾರ್ ಮತ್ತು ದಫೇದಾರುಗಳ ಹುದ್ದೆಗಳನ್ನು ಒಟ್ಟಿಗೆ ಸೇರಿಸಬೇಕೆಂದು ಪ್ರಸ್ತಾವಿಸಲಾಯಿತು. ಅದರಲ್ಲಿ ೨ ವರ್ಗಗಳಿದ್ದು, ಮೇಲ್ವರ್ಗವು ಜಮೇದಾರ್ ಎಂಬ ಹೆಸರನ್ನೇ ಉಳಿಸಿಕೊಂಡು ವಿದ್ಯಾರ್ಹತೆವುಳ್ಳ ಮತ್ತು ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಭಡ್ತಿ ಪಡೆಯಲು ಅರ್ಹರಾದಂತಹ ಇದರಲ್ಲಿ ಉಳಿಸಿಕೊಳ್ಳಬೇಕೆಂತಲೂ, ಕೆಳದರ್ಜೆಗೆ ದಫೇದಾರ್ ಎಂಬ ಹೆಸರನ್ನೇ ಉಳಿಸಿಕೊಂಡು ಕಿರಿಯ ದರ್ಜೆಯ ವಿದ್ಯಾರ್ಹತೆಯನ್ನು ಹೊಂದಿದ ಮತ್ತು ಹೊಂದಿ ಲ್ಲದ ಅಧಿಕಾರಿಗಳನ್ನು ಉಳಿಸಿಕೊಳ್ಳಬೇಕೆಂದು ಪ್ರಸ್ತಾವಿಸಲಾಯಿತು. ಜವೇದಾರರುಗಳ ಸಂಖ್ಯೆಯನ್ನು ೩೨ ರಿಂದ ೬೦ ಕ್ಕೆ ಏರಿಸಲಾಯಿತು. ಅವರ ಸಂಬಳದಲ್ಲಿ ಮಾಸಿಕ ರೂ ೩೫ ಮತ್ತು ರೂ ೩೦ ನ್ನು ಪಡೆಯುತ್ತಿದ್ದ ೨ ವರ್ಗಗಳಿದ್ದವು. ಇವರ ಸಂಬಳವನ್ನು ೪೦ ರೂಗಳಿಗೆ ಏರಿಸಲು ಪ್ರಸ್ತಾವಿಸಲಾಯಿತು. ದಫೇದಾರರುಗಳ ಸಂಖ್ಯೆಯಲ್ಲಿ ಕಡಿತಗೊಳಿಸಿ ೫೮೪ ದಫೇದಾರರುಗಳ ಸಂಖ್ಯೆಯನ್ನು ೫೪೫ ಕ್ಕೆ ಇಳಿಸಲಾಯಿತು. ಇವರ ಸಂಬಳದಲ್ಲಿ ೫ ದರ್ಜೆ ಗಳಿದ್ದು ಮಾಸಿಕ ರೂ, ೩೦, ೨೭, ೨೫, ೨೩ ಹಾಗೂ ೨೧ ರೂಗಳಿದ್ದವು. ಈ ಸಂಬಳವನ್ನು ಹೆಚ್ಚಿಸಿ ಅವರಿಗೆ ಮಾಸಿಕ ೩೬, ೭೦, ೧೦೮, ೧೪೪ ಮತ್ತು ೧೮೫ ರೂಗಳಿಗೆ ಏರಿಸಲು ಪ್ರಸ್ತಾವಿಸಲಾಯಿತು. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿದ್ದ ೫ ದರ್ಜೆಯ ದಫೇದಾರರುಗಳಿಗೆ ೨೩ ರೂ ವೇತನ ಹಾಗೂ ೨ ರೂ ಭತ್ಯೆಗಳನ್ನು ನೀಡುವಂತೆ ಪ್ರಸ್ತಾವಿಸಲಾಯಿತು. ೪) ಕಾನ್ಸ್‌ಟೇಬಲ್‌ಗಳ ಸಂಖ್ಯೆಯಲ್ಲಿಯೂ ಸಹ ಕಡಿತಗೊಳಿಸಿ ೫,೧೬೧ ಕಾನ್ಸ್‌ಟೇಬಲ್‌ಗಳ ಸಂಖ್ಯೆಯನ್ನು ೪,೯೨೨ ಕ್ಕೆ ಅವರುಗಳ ಮೂಲವೇತನವನ್ನು ರೂ ೧೩ ರಿಂದ ೧೫ ಕ್ಕೆ ಏರಿಸಲಾಯಿತು. ಇನ್ಸ್‌ಪೆಕ್ಟರ್‌ಗಳ ಸಂಖ್ಯೆಯಲ್ಲಿಯೂ ಸಹ ಕಡಿತಗೊಳಿಸಲಾಯಿತು.

ಮೈಸೂರು ನಗರದ ಗುಪ್ತಚರ ವಿಭಾಗವನ್ನು ಸಹ ಬಲಪಡಿಸಲಾಯಿತು. ಐ.ಜಿ.ಪಿ ರವರು ಸರಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರವರು ಮೈಸೂರು ಜಿಲ್ಲೆಯೊಂದಿಗೆ ಮೈಸೂರು ನಗರ, ಮೈಸೂರು ತಾಲೂಕು, ಹುಣಸೂರು ಮತ್ತು ಎಡತೊರೆ (ಕೆ.ಆರ್.ನಗರ) ಗಳ ಜವಾಬ್ದಾರಿಯನ್ನು ಸಹ ವಹಿಸಿಕೊಳ್ಳ ಬೇಕೆಂದು ತಿಳಿಸಿದರು. ಉಳಿದ ತಾಲೂಕುಗಳ ಜವಾಬ್ದಾರಿಯನ್ನು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರಿಗೆ ನೀಡ ಬೇಕೆಂದು, ಅವರ ಕೇಂದ್ರಸ್ಥಾನವನ್ನು ನಂಜನಗೂಡಿನಲ್ಲಿ ಇರಿಸಬೇಕೆಂದು ಅದಕ್ಕಾಗಿ ಮೈಸೂರಿನಿಂದ ಒಬ್ಬರು ಗುಮಾಸ್ತರು ಹಾಗೂ ೨ ಜನ ಮನೆ ಕೆಲಸದವರು (ಆರ್ಡರ್ಲಿ)ಗಳನ್ನು ಕಳುಹಿಸಲಾಯಿತು. ಮೈಸೂರಿನ ಗುಪ್ತಚರ ಇಲಾಖೆಗೆ ಒಬ್ಬ ಜಮೇದಾರನ ಬದಲಿಗೆ ಒಬ್ಬ ಸಬ್‌ಇನ್ಸ್‌ಪೆಕ್ಟರನ್ನು ನೇಮಿಸಲಾಯಿತು. ಮೈಸೂರು ನಗರ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ರವರ ಹುದ್ದೆಯನ್ನು ರದ್ದುಗೊಳಿಸಲಾಯಿತು. ಈ ಎಲ್ಲಾ ಪ್ರಸ್ತಾವನೆಗಳ ಉತ್ತಮ ಅಂಶಗಳನ್ನು ಗಮನಿಸಿದ ಸರಕಾರವು ಎಲ್ಲಾ ಪ್ರಸ್ತಾವನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕಾರ ನೀಡಿತು.[೧೨೧] ೧೯೩೪ ರಲ್ಲಿ ಸರಕಾರವು ಸಂಚಾರಿ ಪೊಲೀಸ್ ವ್ಯವಸ್ಥೆಯನ್ನು ಉತ್ತಮಪಡಿಸುವ ಬಗ್ಗೆ ಗಮನವನ್ನು ಹರಿಸಿತು. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಾಹನವನ್ನು ಉಪಯೋಗಿಸುತ್ತಿರುವರ ಸಂಖ್ಯೆಯೂ ಸಹ ಹೆಚ್ಚಾಗುವುದರಿಂದ ವಾಹನ ದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಸುಧಾರಣೆಗಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಬೆಂಗಳೂರು ನಗರದ ಸಂಚಾರಿ ಪೊಲೀಸ್ ವಿಭಾಗಕ್ಕೆ ೧ ಸಬ್ ಇನ್ಸ್‌ಪೆಕ್ಟರ್, ೩ ಜನ ಯುರೋಪಿಯನ್ ಕಾನ್ಸ್‌ಟೇಬಲ್ ಹಾಗೂ ಮೈಸೂರು ನಗರದ ಸಂಚಾರಿ ಪೊಲೀಸ್ ವಿಭಾಗಕ್ಕೆ ೧ ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್ ಮತ್ತು ೧೧ ಜನ

ಕಾನ್ಸ್‌ಟೇಬಲ್‌ಗಳನ್ನುಒದಗಿಸಲಾಯಿತು.[೧೨]

ಸಂಸ್ಥಾನದ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆಯಲ್ಲಿ ೫ ಜನ ನಾಯಕ್ಸ್ ಹಾಗೂ ೧೧ ಜನ ಕಾನ್ಸ್ ಟೇಬಲ್‌ಗಳಿದ್ದರು. ಬೆಂಗಳೂರು ನಗರ ಕಾಯ್ದಿಟ್ಟ ಪೊಲೀಸ್ ಪಡೆಗೆ ೧ ದಫೇದಾರ್ ,ಹಾಗೂ ೬ ಜನ ಕಾನ್ಸ್ ಟೇಬಲ್ ಗಳನ್ನು ಹೆಚ್ಚುವರಿಯಾಗಿ ಸೇರಿಸಲಾಯಿತು. ಏಂಗಳೂರಿನ ಅಗರದಲ್ಲಿರುವ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆಗೆ ಮಿಲಿಟರಿಯವರ ಶೂಟಿಂಗ್ ರೇಂಜ್‌ನಲ್ಲಿ ತರಬೇತಿಯನ್ನು ನೀಡಲಾಯಿತು. ಇಷ್ಟೆಲ್ಲಾ ಆದರೂ ಸಹ ಹೆಚ್ಚುತ್ತಿರುವ ಬೇಡಿಕೆ ಯಿಂದಾಗಿ ಸಿಬ್ಬಂದಿಗಳ ಕೊರತೆ ಕಾಣುತ್ತಿತ್ತು. ಈ ಕಾರಣಕ್ಕಾಗಿ ೧೯೩೪ರ ಮೇನಲ್ಲಿ ಐ,ಜಿಪಿಯವರು ಸರಕಾರಕ್ಕೆ ಮತ್ತೊಂದು ಪ್ರಸ್ತಾವನೆಯನ್ನು ಸಲ್ಲಿಸಿದರು. ಇದರಲ್ಲಿ ಪೊಲೀಸ್ ಪಡೆಗಳನ್ನು ಪುನರ್ ಸಂಘಟಿಸುವ, ಬಲಪಡಿಸುವ, ಬೆಂಗಳೂರು ಮತ್ತು ಮೈಸೂರಿನ ಸಂಚಾರಿ ಪೊಲೀಸ್ ಪಡೆ ಹಾಗೂ ಪ್ರಾಂತೀಯ ಕಾಯ್ದಿಟ್ಟ ಮೀಸಲು ಪೊಲೀಸ್‌ಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಯಿತು. ಇದಕ್ಕೆ ಮೊದಲು ಐ.ಜಿ.ಪಿ ರವರು ತಮ್ಮ ಇಲಾಖೆಗೆ ಅಗತ್ಯವಿರುವ ಸಿಬ್ಬಂದಿಗಳು ಎಷ್ಟು ಎಂಬುದರ ಬಗ್ಗೆ ಪರೀಕ್ಷಿಸಿದರು. ಸ್ಥಳೀಯವಾಗಿ, ಆರ್ಥಿಕವಾಗಿ ಮತ್ತು ಭೌಗೋಳಿಕ ಪರಿಸರಗಳ ಹಿನ್ನಲೆಗಳನ್ನು ಒಳಗೊಂಡಂತೆ ಪುನರ್‌ಸಂಘಟನೆ ಮತ್ತು ಪುನರ್‌ವಿತರಣೆಗಾಗಿ ಯೋಜನೆಗಳನ್ನು ಸಿದ್ಧಪಡಿಸಲಾಯಿತು. ಇದರಿಂದ ಸರಕಾರದ ಬೊಕ್ಕಸಕ್ಕೆ ಏನೂ ಹೆಚ್ಚಿನದ್ದು ಹೊರೆಯಾಗಿರಲಿಲ್ಲ. ಈ ಪ್ರಸ್ತಾವನೆಯಲ್ಲಿ ನಗರ ಪ್ರದೇಶಗಳಲ್ಲಿ ೩೦೦ ಜನಸಂಖ್ಯೆಗೆ ತಲಾ ಒಬ್ಬ ಪೊಲೀಸ್ ಸಿಬ್ಬಂದಿ ಇರುವಂತೆಯೂ, ಜಿಲ್ಲೆಗಳಲ್ಲಿ ೧೨೪೫ ಜನಸಂಖ್ಯೆಗೆ ತಲಾ ಒಬ್ಬ ಪೊಲೀಸ್ ಇರುವಂತೆಯೂ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಯಿತು. ಇದರಲ್ಲಿ ಜಿಲ್ಲೆಗಳಲ್ಲಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಲಾಯಿತು. ಜಿಲ್ಲೆಯಲ್ಲಿ ೧೩ ಜನ ಜಮೇದಾರರು, ೭ ಜನ ದಫೇದಾರರು, ೧೬೦ ಜನ ಕಾನ್ಸ್‌ಟೇಬಲ್‌ಗಳು ಇರುವಂತೆ ಮಾಡಿ ಉಳಿದವರನ್ನು ನಗರ ಪ್ರದೇಶಗಳಿಗೆ ಉಪಯೋಗಿಸಿಕೊಳ್ಳಲಾಯಿತು. ಇದರ ಜೊತೆಗೆ ೨ ಜನ ಇನ್ಸ್‌ಪೆಕ್ಟರ್, ೧೦ ಜನ ಸಬ್‌ಇನ್ಸ್‌ಪೆಕ್ಟರ್, ೨ ಜನ ಯುರೋಪಿಯನ್ ಸಾರ್ಜೆಂಟ್, ೭ ಜನ ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್, ೫ ಜನ ಜಮೇದಾರರು, ೨೫ ಜನ ದಫೇದಾರರು ಮತ್ತು ೭೫ ಜನ ಕಾನ್ಸ್‌ಟೇಬಲ್‌ಗಳನ್ನು ರಾಜ್ಯ ಪೊಲೀಸ್ ಇಲಾಖೆಗೆ ಸೇರಿಸಿಕೊಂಡು ಇಲಾಖೆಯನ್ನು ಬಲಪಡಿಸಲಾಯಿತು.[೧೨೩]

೧೯೩೪ ರಲ್ಲಿದ್ದ ಒಟ್ಟು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಹಾಗೂ ಐ.ಜಿ.ಪಿರವರು ಸಲ್ಲಿಸಿದ ಪ್ರಸ್ಥಾವನೆಗಳ ಸಂಖ್ಯೆ ಈ ಕೆಳಕಂಡಂತೆ ಇದೆ.

ದರ್ಜೆ	ಹಾಲಿ ಇದ್ದ ಅಧಿಕಾರಿ ಮತ್ತು ಸಿಬ್ಬಂದಿ	ಪ್ರಸ್ಥಾವಿಸಿದ ಅಧಿಕಾರಿ ಮತ್ತು ಸಿಬ್ಬಂದಿ
೧) ಇನ್ಸ್‌ಪೆಕ್ಟರ್‌ಗಳು	೯೬	೯೮
೨) ಸಬ್‌ಇನ್ಸ್‌ಪೆಕ್ಟರ್‌ಗಳು	೧೭೬	೧೮೬
೩) ಯುರೋಪಿಯನ್ ಸಾರ್ಜೆಂಟ್ಸ್	೩	೫
೪) ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್	೪	೧೧
೫) ಜಮೇದಾರ್	೫೮	೪೭
೬) ದಫೇದಾರ್	೫೫೧	೫೬೯
೭) ಕಾನ್ಸ್‌ಟೇಬಲ್	೫೦೦೨	೪೯೧೬

ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ಪ್ರತ್ಯೇಕವಾದಂತಹ ವೇತನ ಶ್ರೇಣಿ ಇತ್ತು. ಅವರು ರೂ ೩೨-೧-೪೦ ರ ವೇತನಶ್ರೇಣಿಯಲ್ಲಿದ್ದು, ೮ ರೂ ಮನೆ ಬಾಡಿಗೆ ಭತ್ಯೆ ಹಾಗೂ ೫ ರೂ ಭತ್ಯೆಗಳನ್ನು ನೀಡಲಾಗುತ್ತಿತ್ತು. ಇದು ಅವರು ಕೆಲಸಕ್ಕೆ ಸೇರಿದ ದಿನದಿಂದಲೇ ನೀಡಲಾಗುತ್ತಿತ್ತು. ಈ ಪ್ರಸ್ತಾವನೆಗೆ ೧೯೩೭ ರಲ್ಲಿ ಸರಕಾರವು ಅಂಗೀಕಾರ ನೀಡಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧ -೨೬ ಮತ್ತು - ೨೭ ರಲ್ಲಿ ನೋಡಿ.

೬. ೧೨ : ಮೈಸೂರು ಜಿಲ್ಲೆಯಲ್ಲಿ ಗ್ರಾಮೀಣ ಪೊಲೀಸ್ ಪುನರ್‌ಸಂಘಟನೆ

ಗ್ರಾಮೀಣ ಪೊಲೀಸ್ ವ್ಯವಸ್ಥೆಯು ಅತ್ಯಂತ ಪ್ರಾಚೀನ ಕಾಲದಿಂದ ಬೆಳೆದುಬಂದಿದೆ. ಮೈಸೂರು ಸಂಸ್ಥಾನದಲ್ಲಿ ಇಡೀ ಪೊಲೀಸ್ ವ್ಯವಸ್ಥೆಯ ಮೂಲ ಸ್ವರೂಪವೇ ಗ್ರಾಮೀಣ ಪೊಲೀಸ್ ವ್ಯವಸ್ಥೆಯಾಗಿತ್ತು. ಇವರ ಪ್ರಾಥಮಿಕ ಕರ್ತವ್ಯವೇನೆಂದರೆ ಅವರ ಸರಹದ್ದುಗಳಲ್ಲಿ ನಡೆಯುವ ಅಪರಾಧಗಳನ್ನು ತಡೆಯುವುದು, ನಡೆದ ಅಪರಾಧಗಳ ಬಗ್ಗೆ ವ್ಯವಸ್ಥಿತ ಪೊಲೀಸ್‌ಗೆ ವರದಿ ಮಾಡುವುದು ಮತ್ತು ಅದನ್ನು ಪತ್ತೆಹಚ್ಚಲು ಅವರಿಗೆ ಸಹಕರಿಸುವು ದಾಗಿರುತ್ತದೆ. ಅಪರಾಧಿಗಳನ್ನು ಪತ್ತೆಹಚ್ಚಲು ವ್ಯವಸ್ಥಿತ ಪೊಲೀಸರೊಂದಿಗೆ ಇವರು ಸಹಕರಿಸುತ್ತಿದ್ದರು. ಗ್ರಾಮಗಳಲ್ಲಿ ನಡೆಯುವ ಕಳ್ಳತನ, ಡಕಾಯತಿ ಮೊದಲಾದಂತಹ ಅಪರಾಧಗಳನ್ನು ತಡೆಯುವ ಸಲುವಾಗಿ ರಾತ್ರಿವೇಳೆಯಲ್ಲಿ ಸ್ಥಳೀಯ ಗ್ರಾಮಸ್ಥರ ಸಹಾಯದೊಂದಿಗೆ ಹಳ್ಳಿಗಳಲ್ಲಿ ಗಸ್ತು ತಿರುಗುತ್ತಿದ್ದರು. ವಸಾಯತುಶಾಹಿ ಆಡಳಿತದಲ್ಲಿ ಗ್ರಾಮೀಣ ಪೊಲೀಸ್ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಗಳು ಏನೂ ಆಗಲಿಲ್ಲ.[೧೨೪]

ಮೈಸೂರಿನ ಚೀಫ್ ಕಮಿಷನರ್‌ರವರ ಆದೇಶ ಸಂಖ್ಯೆ ೪೮೯/ಪೊಲೀಸ್/೧೫ ದಿನಾಂಕ ೨೪-೦೯-೧೮೮೦ ರ ಆದೇಶದಂತೆ ಗ್ರಾಮೀಣ ಪೊಲೀಸ್‌ನ (ಜಿಲ್ಲಾ ಪೊಲೀಸ್) ಪುನರ್‌ಸಂಘಟನೆ ಕಾರ್ಯ ೦೧-೧೨-೧೮೮೦ ರಿಂದ ಜಾರಿಗೆ ಬಂತು. ಅಸಿಸ್ಟೆಂಟ್ ಕಮಿಷನರ್‌ರವರ ಹುದ್ದೆಯನ್ನು ರದ್ದುಗೊಳಿಸಲಾಯಿತು. ಜಿಲ್ಲಾ ಪೊಲೀಸ್ ಇಲಾಖೆಯ ವಿಭಾಗಗಳ ಸಾಮಾನ್ಯ ಕರ್ತವ್ಯಗಳು ಮತ್ತು ಆಡಳಿತದ ಕಾರ್ಯನಿರ್ವಹಣೆ ಜವಾಬ್ದಾರಿಯನ್ನು ಡೆಪ್ಯುಟಿ ಕಮಿಷನರ್‌ಗೆ ವಹಿಸಲಾಯಿತು. ಮತ್ತು ಈ ಕೆಲಸಗಳನ್ನು ಸ್ವತ: ಆತನೇ ನಿರ್ವಹಿಸಬೇಕಿತ್ತು. ತಾಲೂಕುಗಳಲ್ಲಿ ಪೊಲೀಸರು ಅಮಲ್ದಾರನ ಕೈಕೆಳಗೆ ಕೆಲಸ ಮಾಡಬೇಕಿತ್ತು.[೧೨೫] ಮೈಸೂರು ಚೀಫ್ ಕಮಿಷನರ್‌ರವರ ಕಛೇರಿಯ ನಡವಳಿಯಲ್ಲಿ ಹೆಡ್‌ಕ್ವಾರ್ಟರ್ಸ್ ಇನ್ಸ್‌ಪೆಕ್ಟರ್ ಮತ್ತು ಇತರ ಅದೀನ ಸಿಬ್ಬಂದಿಯವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಲಾಯಿತು.[೧೨೬] ಅಸಿಸ್ಟೆಂಟ್ ಕಮಿಷನರ್‌ರವರ ಹುದ್ದೆಯನ್ನು ರದ್ದುಗೊಳಿಸಲಾಯಿತು. ಸಾಮಾನ್ಯವಾಗಿ ಜಿಲ್ಲೆಗಳಲ್ಲಿ ಪೊಲೀಸ್ ಕೆಲಸಗಳ ಮೇಲ್ವಿಚಾರಣೆ, ಪೊಲೀಸನ ವಿವಿಧ ಘಟಕಗಳ ಕಛೇರಿಗಳ ಮೇಲ್ವಿಚಾರಣೆಯನ್ನು ಡೆಪ್ಯುಟಿ ಕಮಿಷನರ್‌ರವರೇ ಸ್ವತ: ಮಾಡಬೇಕಿತ್ತು. ಡೆಪ್ಯುಟಿ ಕಮಿಷನರ್‌ರವರಿಗೆ ಈ ಕೆಲಸಗಳಲ್ಲಿ ಸಹಕರಿಸಲು ಒಬ್ಬರು ಪ್ರಥಮ ದರ್ಜೆಯ ಇನ್ಸ್‌ಪೆಕ್ಟರ್‌ರವರನ್ನು ನೇಮಿಸಲಾಗಿತ್ತು. ಅವರಿಗೆ ತಿಂಗಳಿಗೆ ೧೦೦ ರೂ. ಸಂಬಳ ಮತ್ತು ೧೫ ರೂಪಾಯಿ ಮನೆ ಭತ್ಯೆ ನೀಡಲಾಗುತ್ತಿತ್ತು. ಡೆಪ್ಯುಟಿ ಕಮಿಷನರ್‌ರವರ ಕೇಂದ್ರ ಸ್ಥಾನದಲ್ಲಿ ಶಿರಸ್ತೇದಾರರು ಪೊಲೀಸ್ ಇನ್ಸ್‌ಪೆಕ್ಟರ್‌ರವರ ಕೆಲಸ ಮಾಡುತ್ತಿದ್ದರು. ಪೊಲೀಸ್ ಇಲಾಖೆಯಲ್ಲಿ ಈತನಿಗೆ ಸ್ವಲ್ಪ ಹೆಚ್ಚು ಹೊಣೆಗಾರಿಕೆ ಇತ್ತು. ಪೊಲೀಸರು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರುಪಡಿಸುವ ಪ್ರಕರಣಗಳ ವಿಚಾರಣೆ ನಡೆಸಲು ಈತ ಸದಾ ಹಾಜರಿದ್ದು ಅನುಕೂಲ ಮಾಡುತ್ತಿದ್ದ. ಈತನನ್ನು ಯಾವುದೇ ಪ್ರಕರಣಗಳ ತನಿಖೆಯನ್ನು ಮಾಡಲು ನಿಯೋಜಿಸಬಹುದಿತ್ತು ಮತ್ತು ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳನ್ನು ಪರಿವೀಕ್ಷಣೆ ಮಾಡಿ ವರದಿ ನೀಡಲು ಈತ ನೆರವಾಗುತ್ತಿದ್ದ. ತಾಲೂಕುಗಳಲ್ಲಿ ಅಮಲ್ದಾರರ ಕೈಕೆಳಗೆ ಪೊಲೀಸರು ಇದ್ದರು. ತಾಲೂಕಿನ ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಇನ್ಸ್‌ಪೆಕ್ಟರ್‌ಗಳಿಂದ ಅಮಲ್ದಾರರುಗಳಿಗೆ ಹಸ್ತಾಂತರಿಸಿದರು. ಇದಕ್ಕೆ ಕಾರಣವೇನೆಂದರೆ, ಅಮಿಲ್ದಾರರುಗಳಲ್ಲಿದ್ದ ಸ್ಥಳೀಯ ಮಾಹಿತಿ, ಜ್ಞಾನವನ್ನು ಮತ್ತು ಅವರ ಸ್ಥಳೀಯ ಪ್ರಭಾವಗಳನ್ನು ಘೋರ ಸ್ವರೂಪದ ಅಪರಾಧಗಳ ಪತ್ತೆ ಮತ್ತು ತಡೆಗೆ ಉಪಯೋಗಿಸಿಕೊಳ್ಳುವುದೇ ಇದರ ಉದ್ದೇಶವಾಗಿತ್ತು. ಆದರೆ ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಅತ್ಯಂತ ತ್ವರಿತವಾಗಿ ಪುನ:ಶ್ಚೇತನಗೊಳಿಸಲು ಉದ್ದೇಶಿಸಲಾಗಿತ್ತು.[೧೨೭] ಸಂಸ್ಥಾನದ ಬಹುತೇಕ ಭಾಗಗಳಲ್ಲಿ ಇದು ಅತ್ಯಂತ ಅತ್ಯಗತ್ಯವಾದ ಬೇಡಿಕೆಯಾಗಿದ್ದರೂ ಸಹ ಹೆಚ್ಚು ಗಮನಹರಿಸಲಿಲ್ಲ. ಇನ್ನೊಂದು ಪ್ರಮುಖವಾಗಿ ಗಮನಿಸಬೇಕಾದ ವಿಷಯವೆಂದರೆ, ಸಂಸ್ಥಾನದಲ್ಲಿ ಸದ್ಯ ಇದ್ದ ಅರ್ಥಿಕ ಪರಿಸ್ಥಿತಿಯ ಬದಲಾವಣೆಯ

ಅಗತ್ಯತೆ ಇತ್ತು. ಪೊಲೀಸರಿಗೆ ವಾರ್ಷಿಕವಾಗಿ ನೀಡುತ್ತಿದ್ದ ಸಂಬಳ ಮತ್ತು ಮನೆಭತ್ಯೆ ಈ ರೀತಿ ಇತ್ತು. ಅಧಿಕಾರಿಗಳಿಗೆ ರೂ. ೧,೫೧,೭೨೮, ಸಿಬ್ಬಂದಿಗೆ ರೂ. ೩,೨೩,೮೮೮[೧೨೮] ಈ ವೇಳೆಯಲ್ಲಿಯೂ ಸಹ ಅಧಿಕಾರಿಗಳಿಗೆ ಖರ್ಚು ಮಾಡುತ್ತಿದ್ದ ಹಣದ ಪ್ರಮಾಣವು ಸರಿಯಾಗಿರದೇ ಅಧಿಕವಾಗಿತ್ತು. ತಾಲೂಕಿನ ಜವಬ್ದಾರಿಯು ಅಮಿಲ್ದಾರರುಗಳಿಗೆ ವಹಿಸಿದಾಗ ಈ ವ್ಯವಸ್ಥೆಯಲ್ಲಿ ಗಮನಾರ್ಹವಾದ ಕಡಿತ ಮಾಡಲು ಸಾಧ್ಯವಾಯಿತು. ತಾಲೂಕು ಕೇಂದ್ರದಲ್ಲಿರುವ ಠಾಣೆಗಳನ್ನು ಹೊರತುಪಡಿಸಿ ಉಳಿದ ಮುಖ್ಯ ಠಾಣೆಗಳನ್ನು ರದ್ದುಪಡಿಸಲಾಯಿತು. ತಾಲೂಕುಗಳಿಗೆ ಒದಗಿಸಿದ ಇನ್ಸ್‌ಪೆಕ್ಟರ್ ಮತ್ತು ಜಮೇದಾರರ ಸಂಖ್ಯೆಯನ್ನು ಖಡಿತಗೊಳಿಸಲಾಯಿತು.

೬.೧೩ : ವೇಲ್ಸ್ ರಾಜನಿಂದ ಪ್ರಶಂಸೆಗೆ ಒಳಗಾದ ಮೈಸೂರು ಪೊಲೀಸರು

೧೯೦೫ ಮತ್ತು ೦೬ ರಲ್ಲಿ ವೇಲ್ಸ್ ರಾಜ ಹಾಗೂ ರಾಣಿಯರು ಮೈಸೂರಿಗೆ ಭೇಟಿ ನೀಡಿದ್ದು ಅತ್ಯಂತ ಪ್ರಮುಖ ವಿಷಯವಾಗಿತ್ತು. ಅವರ ರಕ್ಷಣೆಗಾಗಿ ಪಹರೆ ಕಾಯಲು ಪೊಲೀಸರಿಂದ ವಿಶೇಷ ಬಂದೋಬಸ್ತ್ ಮಾಡ ಲಾಯಿತು. ಇವರು ಪ್ರಯಾಣದಲ್ಲಿದ್ದಾಗ ಹೆಚ್ಚಿನ ರಕ್ಷಣೆ ನೀಡಬೇಕಿತ್ತು. ಇದು ಪೊಲೀಸರಿಗೆ ಹೆಚ್ಚಿನ ಕೆಲಸ ಮಾತ್ರವಲ್ಲದೇ ಅತ್ಯಂತ ಪ್ರಮುಖ ಜವಾಬ್ದಾರಿಯೂ ಆಗಿತ್ತು. ಎಲ್ಲಾ ದರ್ಜೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅತ್ಯಂತ ಉತ್ಸಾಹ ಹಾಗೂ ಸಂತೋಷದಿಂದ ತಮ್ಮ ಕರ್ತವ್ಯವನ್ನು ಮಾಡಿದರು. ಇದರಿಂದಾಗಿ ವೇಲ್ಸ್‌ನ ರಾಜ ಅತ್ಯಂತ ಸಂತೋಷಪಟ್ಟನು. ಮತ್ತು ಮೈಸೂರು ಪೊಲೀಸರ ಉತ್ತಮ ಕಾರ್ಯವನ್ನು ಪ್ರಶಂಶಿಸಿದನು.[೧೨೯] ಈ ಸಂದರ್ಭದಲ್ಲಿ ಕೆಲಸ ಮಾಡಿದ ಪೊಲೀಸರಿಗೆ ಮೈಸೂರು ಮಹಾರಾಜರು ಸಹ ಪ್ರಶಂಶಿಸಿದರು. ಈ ವಿಶೇಷ ಕರ್ತವ್ಯ ನಿರ್ವಹಿಸಿದ ಎಲ್ಲಾ ಅಧಿಕಾರಿಗಳಿಗೂ ಬಹುಮಾನ ನೀಡಲಾಯಿತು.[೧೩೦] *ವೇಲ್ಸ್ ರಾಜರಾಣಿಯರ ಭೇಟಿ ಸಂದರ್ಭದಲ್ಲಿ ಕರ್ತವ್ಯಕ್ಕೆ ನೇಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರದ ಬಗ್ಗೆ ಅನುಬಂಧ ೨೮ ನ್ನು ನೋಡಿರಿ.*[೧೩೧] ದಿನಾಂಕ ೦೧-೦೧-೧೯೦೬ ರಿಂದ ೦೧-೦೨-೧೯೦೬ ರವರೆಗೆ ವೇಲ್ಸ್ ರಾಜರಾಣಿಯರು ಸಂಸ್ಥಾನಕ್ಕೆ ಭೇಟಿ ನೀಡಿ ಬೆಂಗಳೂರು, ಮೈಸೂರು, ಕೆಡ್ಡ ಮತ್ತು ಶ್ರೀರಂಗಪಟ್ಟಣಗಳಿಗೆ ಭೇಟಿ ನೀಡಿದ್ದು, ಅಲ್ಲಿ ಹಾಗೂ ಅವರು ಸಂಚರಿಸುವ ರೈಲಿನಲ್ಲಿ ಪ್ರಯಾಣಿಸಲು ರಾಜ್ಯದ ಮೂಲೆ ಮೂಲೆಗಳಿಂದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಕರೆಸಲಾಯಿತು. ಇದರಿಂದ ೧೯೦೬ ರ ವೇಳೆಗಾಗಲೇ ಅತ್ಯಂತ ಪ್ರಮುಖ ವ್ಯಕ್ತಿಗಳ ರಕ್ಷಣೆಗಾಗಿ ಹೇಗೆ ಪೊಲೀಸರನ್ನು ಕರೆಯಿಸಿ ವ್ಯವಸ್ಥಿತವಾಗಿ ರಕ್ಷಣೆ ಒದಗಿಸಲಾಗಿತ್ತೆಂದು ತಿಳಿದುಬರುತ್ತದೆ. ಅಷ್ಟೇ ಅಲ್ಲದೇ ಪೊಲೀಸ್ ತರಬೇತಿ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿ ಸಿಬ್ಬಂದಿಗಳನ್ನು ಈ ವಿಶೇಷ ಕರ್ತವ್ಯಕ್ಕೆ ಕರೆಯಿಸಿಕೊಂಡಿದ್ದು ಗಮನಾರ್ಹವಾಗಿದೆ.

೬.೧೪ – ಬಳ್ಳಾರಿ ಜಿಲ್ಲಾ ಪೊಲೀಸ್

ಬಳ್ಳಾರಿ ಜಿಲ್ಲೆಯು ಹಲವಾರು ರಾಜಕೀಯ ವಿಪ್ಲವಗಳನ್ನು ಕಂಡ ಜಿಲ್ಲೆಯಾಗಿದೆ. ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಮರಾಠರು, ಔರಂಗಜೇಬ್, ಹೈದ್ರಾಬಾದ್ ನಿಜಾಮರು, ಆದಿಲ್‌ಶಾಹಿಗಳು. ಹೈದರ್, ಟಿಪ್ಪು ಹೀಗೆ ಹಲವರ ಆಡಳಿತಕ್ಕೆ ಒಳಪಟ್ಟು ನಂತರ ಬ್ರಿಟೀಷರ ಆಡಳಿತದಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ೧೮೬೦ ಕ್ಕಿಂತ ಮೊದಲು ಈ ಜಿಲ್ಲೆಯ ಪೊಲೀಸ್ ವ್ಯವಸ್ಥೆಯು ಮ್ಯಾಜಿಸ್ಟ್ರೇಟ್‌ನ ನೇರ ನಿಯಂತ್ರಣದಲ್ಲಿತ್ತು. ಅಮಿಲ್‌ದಾರ ಅಥವಾ ತಹಶಿಲ್ದಾರರು ಅವರವರ ತಾಲೂಕುಗಳಿಗೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿದ್ದರು. ತಮ್ಮ ಕೈ ಕೆಳಗಿನ ಅಧಿಕಾರಿ ಮತ್ತು ಸಿಬ್ಬಂದಿಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು ಮತ್ತು ಹಲ್ಲೆ ಮತ್ತು ಸಣ್ಣ ಕಳ್ಳತನದ ಪ್ರಕರಣಗಳಲ್ಲಿ ಮ್ಯಾಜಿಸ್ಟ್ರೇಟರಾಗಿಯೂ ಕೆಲಸ ಮಾಡುತ್ತಿದ್ದರು. ಘೋರ ಪ್ರಕರಣಗಳಲ್ಲಿ ಸತ್ರ ನ್ಯಾಯಾಲಯ ಗಳಿಗೆ ಅಥವಾ ಯುರೋಪಿಯನ್ ಮ್ಯಾಜಿಸ್ಟ್ರೇಟ್‌ನಿಗೆ ಕಳುಹಿಸುತ್ತಿದ್ದರು. ಇವರ ಕೈಕೆಳಗೆ ಪೇಶ್ಕಾರ್ ಮತ್ತು ತಹಶಿಲ್ದಾರ

ಗಳಿದ್ದರು. ಇವರು ಹಳೆಯ ಪದ್ಧತಿಯಂತೆ ಕಂದಾಯ ಸಂಗ್ರಹಣೆಯ ಕೆಲಸಗಳನ್ನು ಸಹ ಮಾಡುತ್ತಿದ್ದರು. ಪ್ರಮುಖ ನಗರಗಳಾದ ಬಳ್ಳಾರಿ, ಗೋಟ, ಅದೋನಿ ಮತ್ತು ಹೊಸಪೇಟೆಗಳಲ್ಲಿ ಅಮಿಲ್‌ದಾರನ ಕೈಕೆಳಗೆ ಕೊತ್ವಾಲನು ಕೆಲಸ ಮಾಡುತ್ತಿದ್ದನು.[೧೨] ೧೮೫೯ ರ ೨೪ ನೇ ಕಾಯ್ದೆ ಅಂದರೆ ಪೊಲೀಸ್ ಕಾಯ್ದೆ ಅಂದರೆ ಪೊಲೀಸ್ ಕಾಯ್ದೆ ಜಾರಿಗೆ ಬಂದಂದಿ ನಿಂದ ಹಳೆಯ ಪೊಲೀಸ್ ಪದ್ಧತಿಯು ಕೊನೆಯಾಯಿತು. ೧೮೬೦ರ ಜುಲಾಯಿವರೆಗೂ ಈ ಕಾಯ್ದೆ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿಲ್ಲ. ಹಳೆಯ ವ್ಯವಸ್ಥೆಯನ್ನು ತೆಗೆದು ಹಾಕುವ ಮತ್ತು ಹೊಸ ಸಿಬ್ಬಂದಿಗಳನ್ನು ನೇಮಕ ಮಾಡುವ ಕೆಲಸವು ಏಕಕಾಲಕ್ಕೆ ನಡೆಯಿತು. ಮೊದಲು ಅನಂತಪುರ ಮತ್ತು ಹೊಸಪೇಟೆ ತಾಲೂಕುಗಳಲ್ಲಿ ಈ ಕೆಲಸವನ್ನು ಮಾಡಿ ನಂತರ ಉಳಿದ ತಾಲೂಕುಗಳಲ್ಲಿ ಹಂತಹಂತವಾಗಿ ಬದಲಾವಣೆ ಮಾಡಲಾಯಿತು. ಜಿಲ್ಲೆಯ ಪೊಲೀಸ್ ಮುಖ್ಯಸ್ಥನಾಗಿ ಸೂಪರಿಂಟೆಂಡೆಂಟ್‌ನಿದ್ದು ಆತನಿಗೆ ಇಬ್ಬರು ಸಹಾಯಕರಿದ್ದರು. ಮೊದಲನೇ ದರ್ಜೆಯ ಎಎಸ್‌ಪಿನು ಅನಂತಪುರದಲ್ಲಿದ್ದು, ಈತ ೫ ತಾಲೂಕುಗಳ ಪೊಲೀಸ್ ವ್ಯವಸ್ಥೆಯ ಪ್ರಭಾರ ಹೊಂದಿದ್ದನು. ಅವುಗಳೆಂದರೆ, ಅನಂತಪುರ, ಧರ್ಮಾವರಂ, ಹಿಂದುಪುರ, ಮಡಕಶಿರ ಮತ್ತು ಪೆನ್ನಕೊಂಡ, ಉಳಿದ ಸಹಾಯಕನನ್ನು ಕೆಲವು ವೇಳೆ ಪಶ್ಚಿಮದ ತಾಲೂಕುಗಳಿಗೆ ನೇಮಿಸಲಾಗುತ್ತಿತ್ತು. ಆದರೆ ಸಾದಾರಣವಾಗಿ ಆತನಿಗೆ ಸ್ವತಂತ್ರ ಅಧಿಕಾರವನ್ನು ನೀಡಿರಲಿಲ್ಲ. ಪ್ರತೀ ತಾಲೂಕುಗಳಿಗೆ ಕನಿಷ್ಟ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್‌ನನ್ನು ದೊಡ್ಡ ತಾಲೂಕಿಗೆ ಇಬ್ಬರನ್ನು ನೇಮಿಸಲಾಗಿತ್ತು. ಠಾಣೆಗಳನ್ನು ಹೆಡ್‌ಕಾನ್ಸ್‌ಟೇಬಲ್‌ನೂ, ಉಪಠಾಣೆಗಳನ್ನು ಉಪ ಕಾನ್ಸ್‌ಟೇಬಲ್ (ಡೆಪಿಟ್ಯೂ ಕಾನ್ಸ್‌ಟೇಬಲ್) ನೋಡಿಕೊಳ್ಳುತ್ತಿದ್ದರು.[೧೩]

ಪೊಲೀಸ್ ಕೆಲಸಗಳು ಬೇರೆ ಜಿಲ್ಲೆಗಳಂತೆಯೇ ಇದ್ದು, ಹಗಲು ಗಸ್ತು ಕರ್ತವ್ಯಕ್ಕೆ ಪೊಲೀಸರನ್ನು ಕಳಿಸುವ ಪದ್ಧತಿ ಇತ್ತು. ಆರು ದರ್ಜೆಯ ಇನ್ಸ್‌ಪೆಕ್ಟರ್‌ಗಳಿದ್ದು ಅವರ ಸಂಖ್ಯೆ ೪೦ ರಿಂದ ೨೦೦ ರೂ ವರೆಗೆ ಇತ್ತು. ಅನಕ್ಷರಸ್ಥ ಪೊಲೀಸರಿಗೆ ಶಿಕ್ಷಣ ನೀಡಲಾಯಿತು. ಇವರಿಗೆ ಪದೋನ್ನತಿಯನ್ನು ನೀಡಬೇಕಾದರೆ ಹೆಡ್‌ಕ್ವಾಟರ್ ಸ್ಕೂಲ್‌ನಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಮಾತ್ರ ಎಂದು ನಿಯಮ ಮಾಡಲಾಯಿತು.

೧೮೬೯–೭೦ ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯ ಖರ್ಚುವೆಚ್ಚಗಳಿಗಾಗಿ ೧೪,೦೦೦ ರೂ ಮಂಜೂರು ಮಾಡಲಾಯಿತು. ಇನ್ಸ್‌ಪೆಕ್ಟರ್‌ಗಳನ್ನು ಹೊರತುಪಡಿಸಿ ಎಲ್ಲಾ ದರ್ಜೆಯ ಒಟ್ಟು ಪೊಲೀಸರು ೧೩೫೧ ಜನರಿದ್ದರು. ಅಂದರೆ ೯೬೬ ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಸರಾಸರಿಯಲ್ಲಿ ಪೊಲೀಸರಿದ್ದರು. ಪೊಲೀಸ್ ಮಂಜೂರಾತಿ ಬಲ ಈ ಕೆಳಗಿನಂತೆ ಇತ್ತು.[೧೪]

ಇನ್ಸ್‌ಫೆಕ್ಟರ್‌ಗಳು											
೧ನೇ ದರ್ಜೆ	೨ನೇ ದರ್ಜೆ	೩ನೇ ದರ್ಜೆ	೪ನೇ ದರ್ಜೆ	೫ನೇ ದರ್ಜೆ	೬ನೇ ದರ್ಜೆ	ಯುರೋಪಿಯನ್ ಹೆಡ್‌ಕಾನ್ಸ್‌ಟೇ	ಸ್ಥಳೀಯ ಹೆಡ್‌ಕಾನ್ಸ್‌ಟೇಬಲ್	ಡೆಪಿಟ್ಯೂ ಕಾನ್ಸ್‌ಟೇಬಲ್	ಮೊದಲನೇ ದರ್ಜೆಯ ಕಾನ್ಸ್‌ಟೇಬಲ್	ಎಡರನೇ ದರ್ಜೆಯ ಕಾನ್ಸ್‌ಟೇಬಲ್	ಒಟ್ಟು
೨	೩	೬	೬	೬	೮	೮	೭೮	೯೯	೩೯೦	೭೮೧	೧೩೫೧

ಎರಡು ದರ್ಜೆಯ ಕಾನ್ಸ್‌ಟೇಬಲ್‌ಗಳಿದ್ದು ಅವರು ಅನುಕ್ರಮವಾಗಿ ೭ ರಿಂದ ೮ ಹಾಗೂ ೬ ರಿಂದ ೮ ರೂ ಸಂಬಳ ಪಡೆಯುತ್ತಿದ್ದರು. ಇವರ ಕನಿಷ್ಟ ಎತ್ತರ ೫.೪ ಅಡಿ ಇರಬೇಕಿತ್ತು. ಎದೆ ಸುತ್ತಳತೆ ೩೩ ಅಂಗುಲವಿರಬೇಕಿತ್ತು. *ಪ್ರತೀ ತಾಲೂಕಿನಲ್ಲಿ ಮಂಜೂರಾದ ಪೊಲೀಸ್ ಪಡೆಯ ಬಲದ ವಿವರದ ಬಗ್ಗೆ ಅನುಬಂಧ ೨೯ ನೋಡಿ*

೨೬ ಜುಲಾಯಿ ೧೮೭೧ ರ ಸರ್ಕಾರಿ ಆದೇಶದ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ೨೦೦೦೦ ಅಲೆಮಾರಿ ಜನಾಂಗದವರಿದ್ದು ೨/೩ ಭಾಗದ ಜನ ಬಳ್ಳಾರಿ ಜಿಲ್ಲೆಯಲ್ಲೇ ವಾಸವಾಗಿದ್ದರೆ, ಉಳಿದವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆಯುತ್ತಾ ತಂಜಾವೂರು ಸೌತ್‌ಆರ್ಕಾಟ್, ಸೇಲಂ ಜಿಲ್ಲೆಗಳಲ್ಲಿ ಅಪರಾಧಗಳನ್ನು ಮಾಡುತ್ತಿದ್ದರು.

ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪೊಲೀಸ್

ಬಹುತೇಕ ಪ್ರತೀ ಗ್ರಾಮಗಳಲ್ಲಿ 'ತಳಾರಿ' ಎಂದು ಕರೆಯುತ್ತಿದ್ದ ಗ್ರಾಮಸೇವಕರುಗಳಿದ್ದರು. ಈತ ಅಪರಾಧಗಳ ತಡೆ ಮತ್ತು ಪತ್ತೆಗೆ ಜವಾಬ್ದಾರನಾಗಿದ್ದ. ೧೮೫೯ ರ ೨೫ ನೇ ಕಾಯ್ದೆಯಂತೆ ಪೊಲೀಸ್ ನೇಮಕಾತಿ ನಿಯಮಗಳಿಗಿಂತ ಇವರದ್ದು ಭಿನ್ನವಾಗಿತ್ತು. ಜಿಲ್ಲಾ ಎಸ್.ಪಿಯವರಿಗೆ ಇವರ ಮೇಲೆ ಯಾವುದೇ ಅಧಿಕಾರ ಇರಲಿಲ್ಲ. ಇವರ ಅಧಿಕಾರ ವಂಶಪಾರಂಪರ್ಯವಾಗಿದ್ದು ಬಹಳ ಜನ ಕಳ್ಳರಾಗಿದ್ದರು. ಒಂದು ವೇಳೆ ಅವರು ನಂಬಿಕಸ್ಥರಾಗಿದ್ದರೆ ಮತ್ತು ಕೆಲವು ಕೆಲಸಗಳನ್ನು ಅವರಿಗೆ ವಹಿಸಿದರೆ ವ್ಯವಸ್ಥಿತ ಪೊಲೀಸ್‌ನೊಂದಿಗೆ ಉತ್ತಮ ಸಹಕಾರ ನೀಡುತ್ತಿದ್ದರು.[೧೩೫] ಇವರ ಸಹಕಾರ ಮತ್ತು ಮಾಹಿತಿಯಿಂದ ಹೆಚ್ಚಿನ ಪ್ರಕರಣಗಳನ್ನು ಪತ್ತೆ ಮಾಡಲಾಗುತ್ತಿತ್ತು.

ಗ್ರಾಮೀಣ ಪೊಲೀಸ್ ಬಗ್ಗೆ ಹಲವಾರು ಜನ ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ವರದಿಸಲ್ಲಿಸಿದ್ದು ಅದರ ಸಾರಾಂಶ ಹೀಗಿದೆ. ಮೊದಲನೆದು ಕರ್ನಲ್ ಮನ್ರೋನು ೧೦ ಎಪ್ರೀಲ್ ೧೮೦೬ ರಂದು ಸಲ್ಲಿಸಿದ ವರದಿಯಲ್ಲಿ ಈತ ತಿಳಿಸಿದ್ದೇನೆಂದರೆ, ವ್ಯವಸ್ಥಿತ ಪೊಲೀಸ್ ವ್ಯವಸ್ಥೆಯಂತೆ ಈ ಗ್ರಾಮೀಣ ಪೊಲೀಸ್ ವ್ಯವಸ್ಥೆ ಇತ್ತೇ ಎಂದು ನಾನು ವ್ಯರ್ಥವಾಗಿ ಹುಡುಕಿದೆ ಎಂದಿದ್ದಾನೆ. ವಿಜಯನಗರದ ಆಡಳಿತದಲ್ಲಿ ಪೊಲೀಸ್ ಆಡಳಿತವು, ಕಾವಲಿಗಾರ, ಸಣ್ಣ ಕಾವಲಿಗಾರ ಮತ್ತು ತಳಾರಿಗಳ ಮೂಲಕ ನಡೆಯುತ್ತಿತ್ತು. ಇದರಲ್ಲಿ ಮೊದಲಿನ ಇಬ್ಬರು ಎಲ್ಲಾ ಅಪರಾಧಗಳನ್ನು ಪತ್ತೆ ಮಾಡುವುದಕ್ಕೆ ಮತ್ತು ದೇಶದ ಶಾಂತಿ ಕಾಪಾಡುವ ಜವಾಬ್ದಾರಿ ಹೊಂದಿದ್ದರು. ಮತ್ತು ಇವರ ಹುದ್ದೆಯು ವಂಶ ಪಾರಂಪರ್ಯವಾಗಿತ್ತು. ತಳಾರಿಗಳ ಕೆಲಸ ಆತನ ಹಳ್ಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಕಳವಾದ ಮಾಲನ್ನು ಕಟ್ಟಿ ಕೊಡುವ ಜವಾಬ್ದಾರಿ ಈತನಿಗೆ ಇರಲಿಲ್ಲ. ಈತ ಅಪರಾಧ ಪತ್ತೆ ಮಾಡಲು ವಿಫಲನಾದರೆ ಈತನನ್ನೇ ಕಾರಾಗೃಹಕ್ಕೆ ಕಳುಹಿಸಬಹುದಿತ್ತು. ಇವರುಗಳಿಗೆ 'ಇನಾಂ' ಮೂಲಕ ಉತ್ತಮ ಆದಾಯ ಹೊಂದಿದ್ದಂತೆ ಕಂಡುಬರುತ್ತದೆ. ಇವರಿಗೆ ಹಣ ಹಾಗೂ ವಸ್ತುಗಳ ಮೂಲಕ ಸಂಬಳ ಬರುತ್ತಿತ್ತು. ಬಿಜಾಪುರದ ಸುಲ್ತಾನರ ಆಡಳಿತದ ಕಾಲದಲ್ಲೂ ಬಹುತೇಕ ಪೊಲೀಸರನ್ನು ಸೇರಿಸಲಾಯಿತು. ಹೈದರನ ಕಾಲದಲ್ಲಿ ಬಹುತೇಕ ಹಿಂದಿನ ವ್ಯವಸ್ಥೆಯನ್ನೇ ಮುಂದುವರೆಸಲಾಯಿತು. ಈತ ಕಾವಲಿಗಾರ ಹುದ್ದೆಯನ್ನು ಕಡಿಮೆಗೊಳಿಸಿ ಅವರ ಇನಾಂನ್ನು ರದ್ದುಗೊಳಿಸಿದನು. ತಳಾರಿಗಳು ಮಾತ್ರ ಉಳಿದು ಕೊಂಡರು. ಪ್ರತೀ ತಾಲೂಕಿನ ಪೊಲೀಸ್ ವ್ಯವಸ್ಥೆಯನ್ನು ಅಮಿಲ್‌ದಾರನ ನಿಯಂತ್ರಣದಲ್ಲಿಡಲಾಯಿತು. ನಗರ ಗಳಲ್ಲಿ ಇವರಿಗೆ ಕೊತ್ವಾಲರು ಸಹಾಯ ನೀಡುತ್ತಿದ್ದರು. ಇವರ ಕೈಕೆಳಗೆ ಕಟ್ಟುಬಡಿ ಮತ್ತು ಕಂದಾಚಾರ ಪೀವನ್‌ಗಳು ಇದ್ದರು. ಟಿಪ್ಪು ಸುಲ್ತಾನನು ತನ್ನ ತಂದೆ ಅನುಸರಿಸಿದ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದನು ಎಂದು ಮನ್ರೋ ತಿಳಿಸಿದ.[೧೩೬]

ಮನ್ರೋನು ನಗರಗಳಲ್ಲಿ ಕೊತ್ವಾಲರು ಮತ್ತು ಅವರ ಸಹಾಯಕರು ಹಾಗೂ ಗ್ರಾಮಗಳಲ್ಲಿ ತಳಾರಿಗಳು ಪೊಲೀಸ್ ಕೆಲಸ ನೋಡಿಕೊಳ್ಳುವ ಪದ್ಧತಿಯನ್ನು ಮುಂದುವರಿಸಿದನು. ತಳಾರಿಗಳು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿದರೆ ಮತ್ತು ಅವರಿಗೆ ಸೂಕ್ತ ಬೆಂಬಲ ನೀಡಿದರೆ, ಬೇರೆ ಪೊಲೀಸ್‌ನ ಅಗತ್ಯವಿಲ್ಲವೆಂದು ಮನ್ರೋ ತಿಳಿಸಿದ. ತಳಾರಿಗಳ ಸಂಬಳ ಮೂರು ವಿಧದಲ್ಲಿತ್ತು. ೧) ಇವರಿಗೆ ವಸೂಲಿಯಾದ ಕಂದಾಯದ ಪ್ರತೀ ಪಗೋಡದಲ್ಲಿ ೧/೩ ಪೈಸೆ ದರದಲ್ಲಿ ದಾನ್ಯಗಳನ್ನು ನೀಡಲಾಗುತ್ತಿತ್ತು. ಇದಕ್ಕೆ ಮೆರ ಎನ್ನುತ್ತಿದ್ದರು. ೨) ಅಂಗಡಿ ಅಥವಾ ಮನೆಗಳ ಕಂದಾಯದಲ್ಲಿ ಪ್ರತೀ ಪಗೋಡದ ೧/೩ ಭಾಗ ಇದಕ್ಕೆ 'ವೆರ್ತನಾ' ಎನ್ನುತ್ತಿದ್ದರು. ೩) ಗ್ರಾಮದ ಮೂಲಕ ಸಾಗಿಸುವ ಪ್ರತಿಯೊಂದು ಗಾಡಿಯಲ್ಲಿನ ಸಾಮಾನುಗಳ ಬೆಲೆಯ ೧/೩ ಭಾಗವನ್ನು ಮಾಷ್ವಿ ಅಥವಾ ಶುಲ್ಕವಾಗಿ ನೀಡಬೇಕಿತ್ತು.

ಕರ್ನಲ್ ಮನ್ರೋನು ಇವರಿಗೆ ಕೇವಲ ಭೂಮಿಯನ್ನು ಕೊಡುವ ಬದಲಿಗೆ ಸಂಬಳ ಹಾಗೂ ಇನಾಂ ಭೂಮಿ ಕೊಡಬೇಕೆಂದು ತಿಳಿಸಿದ. ಎರಡನೇಯದಾಗಿ ೧೮೧೪ ರ ಎಪ್ರೀಲ್ ೧೪ ರಲ್ಲಿ ಚಾಪ್ಲಿನ್ ತಿಳಿಸಿದ್ದೇನೆಂದರೆ, ಈ ಗ್ರಾಮೀಣ

ಪೊಲೀಸ್ ವ್ಯವಸ್ಥೆ ತೃಪ್ತಿದಾಯಕವಾಗಿದೆ. ಆದರೆ ಈತ ಎಲ್ಲಾ ಇನಾಂ ಭೂಮಿಗಳನ್ನು ಹಿಂದೆ ಪಡೆದು ಪ್ರತೀ ತಳಾರಿಗೆ ಮಾಸಿಕ ರೂ. ೪ ನೀಡಲು ನಿರ್ಧರಿಸಿದ. ಆದರೆ ಹೀಗೆ ಮಾಡಲು ಸಣ್ಣ ಹಳ್ಳಿಗಳನ್ನು ಒಟ್ಟಿಗೆ ಸೇರಿಸಿ ತಳಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕಿತ್ತು. ಮೂರನೇಯದಾಗಿ ೧೮೪೦ ಎಪ್ರಿಲ್ ೨೫ ರಂದು ಮೆಲ್ಲರ್ ತಿಳಿಸಿದ್ದೇನೆಂದರೆ, ಪ್ರತೀ ತಳಾರಿಯು ವಾರ್ಷಿಕವಾಗಿ ೧೮ ರೂಪಾಯಿಗಳ ಸಂಬಳ ತಿಂಗಳಿಗೆ ಮೂರು ಶಿಲ್ಲಾಂಗ್ (ಇಂಗ್ಲೆಂಡಿನ ಬೆಳ್ಳಿನಾಣ್ಯ) ಪಡೆಯುತ್ತಿದ್ದಾನೆ. ಇದಕ್ಕೆ ಯಾವುದೇ ಪರಿಹಾರವಿಲ್ಲ ಎಂದನು. ಈ ವೇಳೆಗೆ ೨೨೪೯ ಗ್ರಾಮಗಳಿಗೆ ತಳಾರಿಗಳಿದ್ದರೆ, ೩೮೦ ಗ್ರಾಂಗಳಿಗೆ ಇರಲಿಲ್ಲ. ೪೭೪೦ ಜನ ನಿಜವಾಗಿಯೂ ಕೆಲಸ ಮಾಡುತ್ತಿದ್ದರು. ಆದರೂ ಇದರಲ್ಲಿ ೧೦,೯೮೧ ಜನರಿಗೆ ಪಾಲು ಇತ್ತು. ಏಕೆಂದರೆ ಇವರು ಸರದಿಯ ಮೇಲೆ ಕೆಲಸ ಮಾಡುತ್ತಾ ಅವರವರ ಸರದಿ ಬಂದಾಗ ಇನಾಂಗಳನ್ನು ಅನುಭವಿಸುತ್ತಿದ್ದರು.

ಶ್ರೀ.ಪಿಳ್ಳೈಯವರೂ ಸಹ ಹಲವು ಹಳ್ಳಿಗಳನ್ನು ಒಟ್ಟುಗೂಡಿಸಿ ತಳಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಸ್ಥಾವಕ್ಕೆ ಒಪ್ಪಿದರು. ಪ್ರತೀ ತಳಾರಿಗೆ ರೂ ೩ ಮಾಸಿಕ ನೀಡಲಾಯಿತು. ಇದಕ್ಕಾಗಿ ವಾರ್ಷಿಕ ಖರ್ಚನ್ನು ಲೆಕ್ಕ ಹಾಕಲಾಯಿತು. ೩,೨೧೩ ಸಿಬ್ಬಂದಿಗಳ ಅಗತ್ಯವಿದೆ ಎಂತಲೂ ಇದಕ್ಕೆ ೭೬,೭೪೩ ರೂ ಅಗತ್ಯವಿದೆಯಂದೂ ಈತ ಹೇಳಿದ.

ಭೂಮಿಯಿಂದ ರೂ	–	೫೨೮೫೮
ಶುಲ್ಕದ ರೂಪದಲ್ಲಿ ರೂ	-	೩೨,೬೩೯
ಒಟ್ಟು		೮೫,೪೯೭
--- ಕಳೆದು	–	೮,೭೫೪
		೭೬,೭೪೩

ಆದರೆ ಸರ್ಕಾರ ಈ ಅಭಿಪ್ರಾಯವನ್ನು ತಿರಸ್ಕರಿಸಲು ಯಾವುದೇ ಬದಲಾವಣೆ ಮಾಡದೇ ತಳಾರಿಗಳನ್ನು ಯಥಾಸ್ಥಿತಿಯಲ್ಲಿರಿಸಿತು.

ಕಾರಾಗೃಹಗಳು

ಕಂಪೆನಿ ಸರ್ಕಾರಕ್ಕೆ ಜಿಲ್ಲೆಗಳನ್ನು ಬಿಟ್ಟುಕೊಡುವವರೆವಿಗೂ ಯಾವುದೇ ಕಾರಾಗೃಹಗಳು ಇರಲಿಲ್ಲ. ಹಿಂದಿನ ಸರ್ಕಾರಿಗಳು ತಪ್ಪಿತಸ್ಥರ ಕೈ ಅಥವಾ ಕಾಲನ್ನು ಕತ್ತರಿಸುವ ಅಥವಾ ಅವರ ಗಲ್ಲಕ್ಕೆ ಕೊಕ್ಕೆಯಿಂದ ನೇತು ಹಾಕುವ ಶಿಕ್ಷೆ ನೀಡುತ್ತಿದ್ದರು.[೧೬] ಇದರಿಂದಾಗಿ ಕಾರಾಗೃಹದ ಅವಶ್ಯಕತೆಗಳು ಇರಲಿಲ್ಲ. ೧೮೦೬ ರಲ್ಲಿ ಪೆಬ್ರವರಿ ಮನ್ರೋನು ಸರಕಾರಕ್ಕೆ (ಬೋರ್ಡ್) ಪತ್ರ ಬರೆದು, ಅದರಲ್ಲಿ ತಾನು ಖೈದಿಗಳನ್ನು ಚೌಲ್ಟ್ರಿಗಳಲ್ಲಿ ಅಥವಾ ಕೋಟೆಯ ಒಳಭಾಗದಲ್ಲಿ ಇಡಬೇಕಾಗುತ್ತದೆ. ಇದಕ್ಕಾಗಿ ಹೆಚ್ಚಿನ ಕಾವಲುಗಾರರು ಅಲ್ಲಿಯೇ ಇರಬೇಕಾಗುತ್ತದೆ. ಇದರಿಂದಾಗಿ ತಪ್ಪಿಸಿಕೊಂಡು ಹೋಗುವವರ ಸಂಖ್ಯೆ ಹೆಚ್ಚಾಗಿದೆ ಎಂದು ದೂರಿದನು. ೧೮೬೬ ರಲ್ಲಿ ಕೇಂದ್ರ ಕಾರಾಗೃಹ ರಚಿಸಲು ಪ್ರಸ್ಥಾಪಿಸಲಾಯಿತು. ಆದರೆ ಇದಕ್ಕೂ ಮುಂಚೆ ವೆಲ್ಲೂರಿನಲ್ಲಿ ನಿರ್ಮಿಸಲು ತೀರ್ಮಾನಿಸಲಾಗಿತ್ತು. ನಂತರದ ಕೆಲವು ವರ್ಷಗಳಲ್ಲಿ ಬಳ್ಳಾರಿಯಲ್ಲಿ ಜೈಲು ಪುನರ್‌ನಿರ್ಮಿಸಲಾಯಿತು. ಇದರ ಒಳಗಡೆ ಕಂಬಳಿ ನೇಯ್ಗೆ ಮಾಡುವ ಸಣ್ಣ ಕೈಗಾರಿಕೆಯನ್ನು ಸ್ಥಾಪಿಸಲಾಯಿತು.

೬. ೧೫– ಉತ್ತರಕನ್ನಡ ಜಿಲ್ಲಾ ಪೊಲೀಸ್

ಪ್ರಾಚೀನ ಕಾಲದಲ್ಲಿ ಗ್ರಾಮದ ಮುಖ್ಯಸ್ಥನ ನೇತೃತ್ವದಲ್ಲಿ ಗ್ರಾಮದ ಪ್ರಜಾಸೈನ್ಯ (ವಿಲೇಜ್ ಮಿಲಿಟಿಯ) ಗ್ರಾಮದ ರಕ್ಷಣೆ ನಡೆಸುತ್ತಿತ್ತು. ಶಾತವಾಹನ ಮತ್ತು ಕದಂಬರ ಕಾಲದಲ್ಲಿ 'ಗ್ರಾಮಭೋಜಕ' ಅಥವಾ ಗ್ರಾಮಿಣಿ ರಕ್ಷಣಾ ಕೆಲಸ

ಮಾಡುತ್ತಿದ್ದರೆ ನಂತರದ ದಿನಗಳಲ್ಲಿ ಉರಳ್ ಅಥವಾ ಗೌಡ (ಗ್ರಾಮಕೂಟ) ಗ್ರಾಮದ ಶಾಂತಿ ಕಾಪಾಡುವುದರೊಂದಿಗೆ ಅಪರಾಧಿಗಳ ಪತ್ತೆಕಾರ್ಯ ಮಾಡುತ್ತಿದ್ದರು. ಬಿಜಾಪುರದ ಸುಲ್ತಾನರ ಮತ್ತು ಮರಾಠರ ಕಾಲದಲ್ಲಿ 'ದೇಸಾಯಿ' ಎಂಬುವವನು ಪೊಲೀಸ್ ಕೆಲಸ ಮಾಡುತ್ತಿದ್ದ. ಈತ ಗ್ರಾಮದ ಮುಖ್ಯಸ್ಥನೂ ಆಗಿದ್ದ. ಪ್ರಮುಖವಾದ ಕಾನೂನು ಸುವ್ಯವಸ್ಥೆಗಳ ಸಮಸ್ಯೆಯಾದಾಗ, ಕೋಟೆ ಅಥವಾ ನಗರಗಳಲ್ಲಿರುವ ಸೇನೆಯು ಈ ಸಮಸ್ಯೆಯನ್ನು ಬಗೆಹರಿಸುತ್ತಿತ್ತು. ಇದಕ್ಕಾಗಿ ಸೇನೆಯಲ್ಲಿ 'ಅಧಿಕಾರಿ' ಎಂಬ ಹೆಸರಿನ ಅಧಿಕಾರಿ ಇದ್ದನು . ಹಲವು ಹಳ್ಳಿಗಳ ಗುಂಪುಗಳು ಸೇರಿ 'ನಾಡು' ಎಂದು ಕರೆಯಲಾಗುತ್ತಿತ್ತು. ಇದಕ್ಕೆ 'ನಾಡಗೌಡ' ಎಂಬ ಅಧಿಕಾರಿ ಇದ್ದನು. ಗ್ರಾಮದ ಪ್ರಜಾಸೈನ್ಯದಲ್ಲಿ 'ತೋಟಿ' ಅಥವಾ 'ತಳಾರ' ಅಥವಾ 'ಪೈಕಾ' (ಪದಾತಿ) ಎಂಬ ಹೆಸರಿನ ಪೊಲೀಸರು ಇದ್ದರು. ಕೆಲವೊಮ್ಮೆ ರಾಜ್ಯದಲ್ಲಿ ಕಂದಾಯಗಳನ್ನು ಸಂಗ್ರಹಿಸಿ ಉಗ್ರಾಣದಲ್ಲಿಟ್ಟಾಗ 'ಉಗ್ರಾಣಿ' ಎಂಬುವವನು ಅದನ್ನು ಕಾಯುತ್ತಿದ್ದನು. [೧೩೮]

೧೮೬೨ರ ವರೆಗೆ ಮದ್ರಾಸ್ ಸರ್ಕಾರದ ಅಧೀನದಲ್ಲಿ ಗ್ರಾಮದ ಮುಖ್ಯಸ್ಥನು ಕಂದಾಯ ಹಾಗೂ ಪೊಲೀಸ್ ಕೆಲಸಗಳನ್ನು ಮಾಡುವುದರ ಜೊತೆಗೆ ಗ್ರಾಮದ ಪಂಚಾಯ್ತಿ (ಸಭೆ) ಯ ಮುಖ್ಯಸ್ಥನಾಗಿದ್ದುಕೊಂಡು ಸಣ್ಣಪುಟ್ಟ ಸಿವಿಲ್ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದನು. ೧೮೬೧ರ ಭಾರತೀಯ ಪೊಲೀಸ್ ಕಾಯ್ದೆಯು ೧೮೬೨ ರ ೭ ನೇ ಕಾಯ್ದೆ ಅಂದರೆ ಬಾಂಬೆ ಜಿಲ್ಲಾ ಪೊಲೀಸ್ ಕಾಯ್ದೆಯ ರಚನೆಗೆ ಮಾದರಿಯಾಯಿತು. ಈ ಕಾಯ್ದೆಯ ಆಧಾರದಲ್ಲಿ ಜಿಲ್ಲೆಯಲ್ಲಿ ವ್ಯವಸ್ಥಿತವಾದ ಪೊಲೀಸ್ ಪಡೆ ಜಾರಿಗೆ ಬಂತು. ಈ ಕಾಯ್ದೆಯಲ್ಲಿ ಪೊಲೀಸ್ ಆಡಳಿತದ ರೀತಿ, ಪೊಲೀಸ್ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ವಿವರಿಸಲಾಯಿತು. [೧೩೯]

ಕ್ರಿಶ ೧೮೫೯ ಕ್ಕಿಂತ ಮೊದಲು ಪೊಲೀಸ್ ಕರ್ತವ್ಯಗಳು ಕಂದಾಯ ಇಲಾಖೆಯೊಂದಿಗೆ ಸಂಮ್ಮಿಳಿತವಾಗಿದ್ದವು. ೧೮೫೯ ರಲ್ಲಿ ಕಂದಾಯ ಮತ್ತು ಪೊಲೀಸ್ ಇಲಾಖೆಗಳನ್ನು ಪ್ರತ್ಯೇಕಗೊಳಿಸಲಾಯಿತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಎರಡೂ ಇಲಾಖೆಗಳ ಮುಖ್ಯಸ್ಥರಾದರು.

ಪ್ರಾಚೀನ ಕಾಲದಲ್ಲಿ ಗ್ರಾಮದ ಕಾವಲುಗಾರನ ನೇತೃತ್ವದಲ್ಲಿ ಗ್ರಾಮದ ಪ್ರಜಾಸೈನ್ಯವು ಗ್ರಾಮಗಳನ್ನು ರಕ್ಷಿಸುತ್ತಿತ್ತು. ಶಾತವಾಹನರು ಮತ್ತು ಕದಂಬರ ಕಾಲದಲ್ಲಿ 'ಗ್ರಾಮ ಭೋಜಕ' ಅಥವಾ 'ಗ್ರಾಮಿಣಿ' ಅಥವಾ 'ಊರಾಳ' ಅಥವಾ 'ಗೌಡ' (ಗ್ರಾಮಕೂಟ) ಶಾಂತಿ ಕಾಪಾಡುವವರಾಗಿದ್ದರು. ಗ್ರಾಮದ ಪ್ರಜಾಸೈನ್ಯವು ತೋಟಿ ಅಥವಾ ತಳಾರಿ ಅಥವಾ ಪೈಕಾ (ಪದಾತಿ) ಗಳನ್ನು ಒಳಗೊಂಡಿತ್ತು.

೧೮೬೨ ರ ಬಾಂಬೆ ಪೊಲೀಸ್ ಕಾಯ್ದೆಯಡಿಗೆ ಈ ಜಿಲ್ಲೆ ಒಳಪಟ್ಟಿತು. ೧೮೮೧ ರಲ್ಲಿ ಈ ಜಿಲ್ಲೆಯಲ್ಲಿ ಒಬ್ಬ ಎಸ್.ಪಿ, ೬೬೨ ಜನ ಸಿಬ್ಬಂದಿ ಇದ್ದರು. ೨ ಜನ ಸಾಬಾರ್ಡಿನೇಟ್ ಅಧಿಕಾರಿಗಳು, ೧೦೫ ಇಂಟೀರಿಯರ್ ಸಬಾರ್ಡಿನೇಟ್ ಅಧಿಕಾರಿಗಳು, ೫೫೫ ಫೂಟ್ ಕಾನ್‌ಸ್ಟೇಬಲ್‌ಗಳಿದ್ದರು. ಇದರಲ್ಲಿ ೧ ಅಧಿಕಾರಿ, ೧೨ ಜನ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಗಾರ್ಡ್‌ಗಳಾಗಿದ್ದರು. ೪ ಅಧಿಕಾರಿ, ೭೫ ಜನ ಸಿಬ್ಬಂದಿಗಳು ಜಿಲ್ಲೆಯ ಟ್ರಜರಿ ಹಾಗೂ ಲಾಕಪ್‌ಗಳ ಗಾರ್ಡ್‌ಗಳಾಗಿದ್ದರು. ೮೫ ಅಧಿಕಾರಿಗಳು ೪೮೦ ಸಿಬ್ಬಂದಿಗಳನ್ನು ಪಟ್ಟಣ, ಮುನ್ಸಿಪಾಲಿಟಿ ಕಂಟೋನ್ಮೆಂಟ್‌ಗಳಲ್ಲಿರಿಸಲಾಗಿತ್ತು. ಈ ಪಡೆಯ ಒಟ್ಟು ನಿರ್ವಹಣಾ ವೆಚ್ಚ ೧,೧೨,೦೪೮ ರೂ ಆಗಿತ್ತು. ಈ ಅಂಕಿಅಂಶದಿಂದ ೫.೯ ಚ.ಕಿ.ಗೆ ೬೩೬ ಜನರಿಗೆ ಒಟ್ಟ ಪೊಲೀಸನಿದ್ದ. ಹಳ್ಳಿಗಳಲ್ಲಿ ವ್ಯವಸ್ಥಿತ ಪೊಲೀಸ್ ಇರಲಿಲ್ಲ.

೧೮೮೧ ರಲ್ಲಿ ಒಬ್ಬ ಎಸ್.ಪಿ ಒಟ್ಟು ೬೬೨ ಜನ ಸಿಬ್ಬಂದಿಗಳು, ೨ ಜನ ಅಧೀನ ಅಧಿಕಾರಿಗಳು, ೧೦೫ ಜನ ಕೆಳದರ್ಜೆಯ ಅಧೀನ ಅಧಿಕಾರಿಗಳು (ಇನ್‌ಫೇರಿಯರ್ ಸಬಾರ್ಡಿನೇಟ್ಸ್) ೫೫೫ ಪದಾತಿ ಕಾನ್‌ಸ್ಟೇಬಲ್ (ಫೂಟ್ ಕಾನ್‌ಸ್ಟೇಬಲ್) ಗಳಿದ್ದರು. ಇದರಲ್ಲಿ ಒಬ್ಬ ಅಧಿಕಾರಿ ೧೨ ಜನ ಸಿಬ್ಬಂದಿಗಳನ್ನು ಜಿಲ್ಲಾ ಕಾರಾಗೃಹದ ಪಹರೆಗೆ ನೇಮಿಸ

ಲಾಗಿತ್ತು. ೪ ಜನ ಅಧಿಕಾರಿಗಳು, ೭೫ ಜನ ಸಿಬ್ಬಂದಿಗಳನ್ನು ಟ್ರಜರಿ ಮತ್ತು ಲಾಕಪ್‌ಗಳ ಕರ್ತವ್ಯಕ್ಕೆ ನೇಮಿಸಲಾಗಿತ್ತು. ೮೫ ಜನ ಅಧಿಕಾರಿಗಳು ೪೮೦ ಜನ ಸಿಬ್ಬಂದಿಗಳನ್ನು ನಗರದಲ್ಲಿ ಅಂದರೆ ಮುನಿಸಿಪಾಲಿಟಿ ಮತ್ತು ಕಂಟೋನ್ಮೆಂಟ್‌ಗಳಲ್ಲಿ ಇರಿಸಲಾಗಿತ್ತು. ಈ ಪಡೆಯ ನಿರ್ವಹಣೆಗೆ ಒಟ್ಟು ೧,೧೨,೦೪೭ ರೂ ಖರ್ಚು ಆಗುತ್ತಿತ್ತು. ೫.೯ ಚದುರ ಮೈಲಿಗೆ ಹಾಗೂ ೬೩೬ ಜನರಿಗೆ ಒಬ್ಬ ಪೊಲೀಸ್ ಇದ್ದನು. ಪ್ರತೀವರ್ಷ ಸರಾಸರಿ ೨೦೦ ಜನರಿಗೆ ಒಂದು ಅಪರಾಧ ನಡೆಯುತ್ತಿತ್ತು. ಗ್ರಾಮಗಳಲ್ಲಿ ವ್ಯವಸ್ಥಿತ ಪೊಲೀಸ್ ಇರಲಿಲ್ಲ. ಗ್ರಾಮದ ಕಂದಾಯ ಇಲಾಖೆಯ ಮುಖ್ಯಸ್ಥನಾದ 'ಪಟೇಲನೇ' ಪೊಲೀಸ್ ಕೆಲಸ ಮಾಡುತ್ತಿದ್ದನು. ಅವನಿಗೆ ಪೊಲೀಸ್ ಪಟೇಲ ಎಂದು ಕರೆಯಲಾಗುತ್ತಿತ್ತು. ಇವರಿಗೆ shetsandis ಮತ್ತು ಉಗ್ರಾಣಿಗಳು ಸಹಾಯಕರಾಗಿದ್ದರು. ೧೮೯೦ರ ಕಾಯ್ದೆಯು ೧೯೫೧ ರ ವರೆಗೆ ಮುಂದುವರೆದುಕೊಂಡು ಬಂದಿತು. ೧೮೫೯ ಕ್ಕೆ ಮೊದಲು ಪೊಲೀಸ್ ಕೆಲಸವು ಕಂದಾಯ ಇಲಾಖೆಯ ಭಾಗವಾಗಿತ್ತು. ೧೮೫೯ ರಲ್ಲಿ ಕಂದಾಯ ಮತ್ತು ಪೊಲೀಸ್ ಇಲಾಖೆಗಳನ್ನು ಪ್ರತ್ಯೇಕಗೊಳಿಸಿ ಎರಡೂ ಇಲಾಖೆಗಳಿಗೆ ಮುಖ್ಯಸ್ಥರನ್ನಾಗಿ ಜಿಲ್ಲಾ ಮ್ಯಾಜಿಸ್ಟ್ರೇಟನು ಕೆಲಸ ಮಾಡುತ್ತಿದ್ದನು.

೧೮೭೪ ರಲ್ಲಿ ಕಾರವಾರದಲ್ಲಿ ಜಿಲ್ಲಾ ಕಾರಾಗೃಹ ರಚಿಸಲಾಯಿತು. ಇದು ಪ್ರಾರಂಭದಲ್ಲಿ ಜಿಲ್ಲಾ ಲಾಕಪ್ ಸಹ (ಬಂಧೀಖಾನೆ) ಆಗಿತ್ತು. ಕಾಲಕ್ರಮೇಣ ಬಾಂಿೆ ಪ್ರಾಂತ್ಯದಲ್ಲಿ ನೂರಾರು ಜನ ಶಿಕ್ಷೆಗೆ ಒಳಗಾದವರು ಈ ಕಾರಾಗೃಹದಲ್ಲಿ ಇಡಲು ಪ್ರಾರಂಭಿಸಿದ್ದರಿಂದ ಇದರ ಸ್ಥಾನಮಾನವನ್ನು ವಿಶೇಷ ಉಪಕಾರಾಗೃಹಕ್ಕೆ ಏರಿಸಲಾಯಿತು. ೧೮೮೧ ರ ವರೆಗೂ ಕಾರವಾರದಲ್ಲಿ ಜಿಲ್ಲಾ ಕಾರಾಗೃಹ ಇದ್ದರೂ ಸಹ ಪ್ರತಿಯೊಬ್ಬ 'ಮಮ್‌ಲತ್‌ದಾರನ' ಕಛೇರಿಯಲ್ಲಿ ಲಾಕಪ್‌ಗಳಿದ್ದವು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಈ ಕಾರವಾರದ ಕಾರಾಗೃಹದಲ್ಲಿ ಪ್ರಮುಖ ನಾಯಕರನ್ನು ಬಂಧಿಸಿ ಇಡಲಾಗಿತ್ತು. ಅಫಘಾನ್ ರಾಯಲ್ ಪ್ಯಾಮಿಲಿ ಯವರನ್ನು ಬಂಗಾಳದ ಕ್ರಾಂತಿಕಾರಿ ರಕಲ್‌ಚಂದ್ ದೇ ಮತ್ತು ಹಲವು ಚೈನಾದ ಪ್ರಜೆಗಳನ್ನು ಈ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಈ ಅಧ್ಯಾಯದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಬೆಳೆದುಬಂದ ಪೊಲೀಸ್ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ಕೆಲವು ಭಿನ್ನತೆಗಳನ್ನು ಹೊರತುಪಡಿಸಿ ಬಹುತೇಕ ಪೊಲೀಸ್ ಕೆಲಸವನ್ನು 'ತಳವಾರ', 'ತೋಟಿ', 'ಕಾವಲುಗಾರ', 'ಕಟ್ಟಬಿಡಿ ಪೀವನ್'ಗಳು, 'ಹಳೇಪೈಕಿ'ಯವರು , 'ಹೋಬಳಿದಾರ'ರು, 'ಅಮರ್‌ಗಾರ'ರು, 'ಅಂಕಮಾಲ', 'ಗೌಡ', 'ಗಾವುಂಡ', 'ಪ್ರಜಾಸೈನ್ಯ', 'ದರೋಗ', 'ಕೊತ್ವಾಲ' ಮತ್ತು 'ಕಂದಾಚಾರ' ಪಡೆಯವರು ಮಾಡುತ್ತಿದ್ದರು.

ಬೆಂಗಳೂರು ಕಂಟೋನ್‌ಮೆಂಟ್‌ಗೆ ೧೮೬೬ ರಲ್ಲಿ ಇ.ಡಿ.ಗೋಂಪೆರ್ಟ್ಸ್‌ನನ್ನು ಎಸ್.ಪಿಯಾಗಿ ನೇಮಿಸ ಲಾಯಿತು. ಈತ ಬೆಂಗಳೂರು ನಗರ ಪೊಲೀಸನ್ನು ಪುನರ್‌ಸಂಘಟಿಸಿದ. ೧೮೭೩ ರಲ್ಲಿ ಐ.ಜಿ.ಪಿ ಹುದ್ದೆ ಸೃಜಿಸಲಾಯಿತು. ೧೮೬೮ ರಲ್ಲಿ ಎ.ಎಸ್.ಪಿರನ್ನು ನೇಮಿಸಲಾಯಿತು. ೧೮೭೩ ರಲ್ಲಿ ಗೋಂಪೆರ್ಟ್ಸ್ ಮೊದಲ ಡಿ.ಐ.ಜಿ.ಪಿ ಆದರು. ೧೮೭೪-೭೫ ರಲ್ಲಿ ಒಂದು ಆದೇಶ ಹೊರಡಿಸಿ ಡಿ.ಐ.ಜಿ.ಪಿ, ಡಿ.ಸಿ, ಎಸ್.ಪಿ, ಅಮಿಲ್ದಾರ್, ಇನ್ಸ್‌ಪೆಕ್ಟರ್‌ರವರುಗಳು ಕರ್ತವ್ಯ ಜವಾಬ್ದಾರಿ ವಿವರಿಸಲಾಯಿತು. ೧೮೭೯ ರಲ್ಲಿ ಅಧಿಕ ಆರ್ಥಿಕ ಹೊರೆಕಾರಣದಿಂದ ಡಿ.ಐ.ಜಿ.ಪಿ ಹುದ್ದೆ ರದ್ದು ಮಾಡಲಾಯಿತು. ಮೈಸೂರು, ಬೆಂಗಳೂರುಗಳಿಗೆ ಅವುಗಳದೇ ಆದ ಪ್ರತ್ಯೇಕ ಪೊಲೀಸ್ ವ್ಯವಸ್ಥೆಯಿತ್ತು. ಸಂಸ್ಥಾನದ ಉಳಿದ ಭಾಗಗಳು ರೆಗ್ಯುಲರ್ ಪೊಲೀಸ್ ರೂಲ್ಸ್‌ನಂತೆ ಕೆಲಸ ಮಾಡುತ್ತಿದ್ದವು. ೧೮೬೫ ರಲ್ಲಿ ನ್ಯಾಯಾಂಗ ಕಮಿಷನರ್‌ರವರನ್ನು ಪದನಿಮಿತ್ತ ಐ.ಜಿ.ಪಿ ಎಂದು ಸರ್ಕಾರ ನೇಮಿಸಿತು. ೧೯೩೦ ರಲ್ಲಿ ಬೆಂಗಳೂರಿನಲ್ಲಿ ಸಂಚಾರಿ ಪೊಲೀಸ್ ಸ್ಥಾಪಿಸಲಾಯಿತು. ಬೆಂಗಳೂರು ನಗರ ಅಪರಾಧ ವಿಭಾಗವನ್ನು ಇಬ್ಬರು ಇನ್ಸ್‌ಪೆಕ್ಟರ್‌ಗಳ ನೇತ್ರತ್ವದಲ್ಲಿ ಸ್ಥಾಪಿಸಲಾಯಿತು.

೧೯೩೮ ರ ಎಪ್ರೀಲ್‌ನಲ್ಲಿ ವಿಧುರಾಶ್ವತ್ಥ ದುರಂತದಲ್ಲಿ ಪೊಲೀಸರು ೯೬ ಸುತ್ತು ಗುಂಡುಹಾರಿಸಿ ಸರ್ಕಾರಿ ದಾಖಲೆಗಳ ಪ್ರಕಾರ ಒಂಬತ್ತು (ಜನವಾಡಿಕೆಯಲ್ಲಿ ಮೂವತ್ತೈದು) ಜನ ಮೃತಪಟ್ಟರು. ಇದು ಪೊಲೀಸರು ನಡೆಸಿದ ಅತ್ಯಂತ ದೊಡ್ಡ ದೌರ್ಜನ್ಯವಾಗಿತ್ತು.

ಕೋಲಾರ ಚಿನ್ನದಗಣಿಯಲ್ಲಿ ನಡೆಯುವ ಅವ್ಯವಹಾರ ತಡೆಯಲು ಪ್ರತ್ಯೇಕ ಪೊಲೀಸ್ ಪಡೆ ಸ್ಥಾಪಿಸಲಾಯಿತು. ಒಬ್ಬ ಯುರೋಪಿಯನ್ನು ಎ.ಎಸ್.ಪಿಯನ್ನು ನೇಮಿಸಲಾಯಿತು. ೧೯೦೨ ರಲ್ಲಿ 'ಡಿಟೆಕ್ಟಿವ್' ಡಿಪಾರ್ಟ್‌ಮೆಂಟ್‌ನ್ನು ರಚಿಸಿತು. ಕೆ.ಜಿ.ಎಫ್‌ನ್ನು ಪ್ರತ್ಯೇಕ ಪೊಲೀಸ್ ಜಿಲ್ಲೆಯೆಂದು ಪರಿಗಣಿಸಲಾಯಿತು. ೧೮೭೬ ರಲ್ಲಿ ಕೋಲಾರ ಚಿನ್ನದಗಣಿ ಪ್ರಾರಂಭವಾಯಿತು. ೫ ಜನ ಹಿರಿಯ ಅಧಿಕಾರಿಗಳು, ೩೦ ಜನ ಕಾನ್‌ಸ್ಟೇಬಲ್‌ಗಳನ್ನು ಒಳಗೊಂಡ ಒಂದು ಪೊಲೀಸ್ ಪಡೆ ರಚಿಸಲಾಯಿತು. ಕಾಲಕಾಲಕ್ಕೆ ಈ ಸಂಖ್ಯೆ ಬದಲಾಗುತ್ತಾ ಬಂತು. ೧೯೦೦ ರಲ್ಲಿ ಕೆ.ಜಿ.ಎಫ್‌ನಲ್ಲಿ 'ಪತ್ತೆದಾರಿದಳ' ರಚಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದರಿಂದ ಅಲ್ಲಿನ ಪೊಲೀಸ್ ವ್ಯವಸ್ಥೆಯ ಪ್ರಭಾವವಾಗಿ ಇಲ್ಲಿ ಗಮನಿಸಬಹುದು. ೧೮೫೬ ರ ವೇಳೆಗೆ ಇಲ್ಲಿ ಸಂಘಟಿತ ಪೊಲೀಸ್ ವ್ಯವಸ್ಥೆ ಇತ್ತು. ಅದಕ್ಕೆ ಮೊದಲು ಟಿಪ್ಪುವಿನ ಆಡಳಿತದಲ್ಲಿ 'ದರೋಗ' ಎಂಬ ಪೊಲೀಸ್ ಅದಿಕಾರಿಯಿದ್ದ. ಕದ್ದ ಮಾಲುಗಳನ್ನು ಈತ ಪತ್ತೆ ಮಾಡಬೇಕಿತ್ತು. ವಿಫಲನಾದರೆ ಕಳವಾದ ಮಾಲಿನ ಮೌಲ್ಯದ ಶೇಕಡ ೧೦ ನ್ನು ಈತ ಕಟ್ಟಿಕೊಡಬೇಕಿತ್ತು. ಈತನಿಗೆ ಫೈರ್ ಆರ್ಮ್ಸ್ ನೀಡಲಾಗಿತ್ತು. ದರೋಗನಿಗೆ ನಿರ್ಧಿಷ್ಟ ಕೆಲಸಗಳಿದ್ದು ಅದನ್ನು ಇಲ್ಲಿ ವಿವರಿಸಲಾಗಿದೆ.

೧೮೦೪ ರಲ್ಲಿ ಟಿ.ಪಿ ಕೇಟ್ ರವರ ನೇತೃತ್ವದಲ್ಲಿ ಪೊಲೀಸ್ ಕಮಿಟಿ ರಚನೆಯಾಗಿ ಠಾಣೆಯಲ್ಲಿ ಒಬ್ಬ 'ಥಾಣಾದಾರ', ಅಗತ್ಯ ಪೇದೆಗಳಿರುವಂತೆ ಸೂಚಿಸಿತು. ೧೮೧೨ ರಲ್ಲಿ ದಕ್ಷಿಣ ಕನ್ನಡದಲ್ಲಿದ್ದ ಪೊಲೀಸ್ ಪಡೆಯ ಬಲವನ್ನು ಗುರುತಿಸಲಾಗಿದೆ. ಸರ್‌ಥಾಮಸ್ ಮನ್ರೋನು ನ್ಯಾಯಾಂಗ ಮತ್ತು ಪೊಲೀಸ್ ಕೆಲಸಗಳನ್ನು ಪ್ರತ್ಯೇಕಿಸಿದನು. ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣಪ್ರಕರಣಗಳ ವಿಚಾರಣೆಗಳನ್ನು ಕಲೆಕ್ಟರ್‌ನಿಗೆ ನೀಡಿದನು. ಗ್ರಾಮಗಳಲ್ಲಿ ವಶಪಾರಂಪರ್ಯವಾಗಿ ಬಂದ ಕಾವಲುಗಾರರ ಪದ್ಧತಿಯನ್ನು ಮುಂದುವರಿಸಿಕೊಂಡು ಬರಲಾಯಿತು. ಪೊಲೀಸ್ ಅಧಿಕಾರಿಯಾಗಿದ್ದ ದರೋಗನ ಕರ್ತವ್ಯಗಳನ್ನು ನಿರ್ಧಿಷ್ಟಪಡಿಸಿದನ್ನು ಇಲ್ಲಿ ಚರ್ಚಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ 'ಅಮೀನ್‌ದೀವ್' ದ್ವೀಪಗಳಲ್ಲಿ 'ಮ್ಯಾನೇಜರ್' ಎಂಬ ಪೊಲೀಸ್ ಅಧಿಕಾರಿಯಿದ್ದನು. ೧೮೫೪ ರಲ್ಲಿ ರಚನೆಯಾದ ಇ.ಎಫ್.ಎಲಿಯಟ್ ನೇತೃತ್ವದ ಪೊಲೀಸ್ ಆಯೋಗದ ಶಿಫಾರಸ್ಸುಗಳನ್ನು ಚರ್ಚಿಸಲಾಗಿದೆ. ಆ ಕಾಲದಲ್ಲಿ ನಡೆಯುತ್ತಿದ್ದ ಪೊಲೀಸ್ ದೌರ್ಜನ್ಯಗಳ ಬಗ್ಗೆ ಈ ಆಯೋಗವು ಅಧ್ಯಯನ ನಡೆಸಿತು. ಪೊಲೀಸ್ ಪಡೆಯನ್ನು ಆಮೂಲಾಗ್ರವಾಗಿ ಬದಲಿಸುವಂತೆ ಸೂಚಿಸಿತು. ಅದರಂತೆ ಬದಲಾವಣೆಗಳಾದ ಬಗ್ಗೆ ಚರ್ಚಿಸಲಾಗಿದೆ.

ಕೊಡಗಿನಲ್ಲಿಯೂ ಸಹ ಪ್ರಾಚೀನ ಸೊಲೀಸ್ ಪದ್ಧತಿ ಬಳಕೆಯಲ್ಲಿದ್ದು, 'ಠಾಣಾಗೃಹ' ಮತ್ತು 'ಚೌಕಿಠಾಣೆ'ಗಳು ಇದ್ದ ಬಗ್ಗೆ ಚರ್ಚಿಸಿವೆ. ಬೆಳಗಾಂ ಜಿಲ್ಲೆಯಲ್ಲಿ 'ತರಲ್' ಅಥವಾ 'ಮಹರ್' ಎಂಬ ಪ್ರಯಾಣಿಕರ ರಕ್ಷಣೆ ನೋಡಿ ಕೊಳ್ಳುತ್ತಿದ್ದ ಅಧಿಕಾರಿಗಳ ಬಗ್ಗೆ ಮತ್ತು ಅಲ್ಲಿ ನಡೆಯುತ್ತಿದ್ದ ಅಪರಾಧಗಳ ಬಗ್ಗೆ ಚರ್ಚಿಸಲಾಗಿದೆ. ಗುಲ್ಬರ್ಗದಲ್ಲಿ 'ಸದರ್-ಉಲ್-ಮೊಹಂ' ಎಂಬ ಪೊಲೀಸ್ ಸಚಿವನಿದ್ದ. ಬಿಜಾಪುರದಲ್ಲಿ ಸುಲ್ತಾನರ ಕಾಲದಲ್ಲಿ 'ಕೊತ್ವಾಲ' ಪೊಲೀಸ್ ಅಧಿಕಾರಿಯಾಗಿದ್ದು, ನಂತರ ೧೮೨೭ ರ ಹೊತ್ತಿಗೆ ಇಲ್ಲಿ ವ್ಯವಸ್ಥಿತ ಪೊಲೀಸ್ ಪಡೆಯಿತ್ತು. ೧೮೬೨ರ ಬೊಂಬಾಯಿ ಡಿಸ್ಟ್ರಿಕ್ಟ್ ಪೊಲೀಸ್ ಕಾಯ್ದೆಯಲ್ಲಿ ಇಲ್ಲಿನ ಪೊಲೀಸ್ ಪಡೆಯು ಕರ್ತವ್ಯ ನಿರ್ವಹಿಸುತ್ತಿತ್ತು. ಧಾರವಾಡದಲ್ಲಿ ಮರಾಠರ ಕಾಲದ 'ಶೇತ್‌ಸನದಿ' ಎಂಬ ಪೊಲೀಸ್ ಅಧಿಕಾರಿಯಿದ್ದನು. ನಂತರ ಇದು ಬೊಂಬಾಯಿ ಡಿಸ್ಟ್ರಿಕ್ಟ್ ಆಕ್ಟ್‌ನಡಿಗೆ ಬಂದಿತು.

ಸವಣೂರು ಸಂಸ್ಥಾನದಲ್ಲಿ ಪ್ರತ್ಯೇಕ ಪೊಲೀಸ್ ವ್ಯವಸ್ಥೆ ಇದ್ದ ಬಗ್ಗೆ ಚರ್ಚಿಸಲಾಗಿದೆ. ೧೯೧೯-೨೦ ರಲ್ಲಿ ಧಾರವಾಡದಲ್ಲಿ ನಡೆದ ಪೊಲೀಸ್ ಗೋಲಿಬಾರ್‌ನ ಬಗ್ಗೆ ಚರ್ಚಿಸಲಾಗಿದೆ. ಮಂಡ್ಯ ಜಿಲ್ಲಾ ಪೊಲೀಸ್ ವ್ಯವಸ್ಥೆಯು ಹೈದರ್, ಟಿಪ್ಪುವಿನ ಆಡಳಿತದ ಪ್ರಭಾವದಲ್ಲಿ ಬಂದಿದ್ದಾಗಿದೆ. 'ಅಸೋಫ', 'ಅಮಿಲ್', 'ಗೌಡ' ಮೊದಲಾದ ಅಧಿಕಾರಿಗಳು ಪೊಲೀಸ್ ಕರ್ತವ್ಯವನ್ನು ಮಾಡಿಕೊಂಡಿದ್ದರು. ರಾಮರಾಯನ ಆಡಳಿತದಲ್ಲಿ ಒಂದು ಬೇಹುಗಾರಿಕಾ ಪಡೆಯನ್ನು ರಚಿಸಲಾಗಿತ್ತು. ಪಟ್ಟಣದ ಚಾವಡಿಯಲ್ಲಿ ಪೊಲೀಸ್ ಕೆಲಸಗಳು ನಡೆಯುತ್ತಿದ್ದವು. ಕಂದಾಚಾರದ ಸಿಪಾಯಿಗಳಿದ್ದರು. ಬ್ರಿಟೀಷರ ಪೊಲೀಸ್ ಹುಕುಂನಾಮೆಯಂತೆ ನಂತರ ಇಲ್ಲಿ ಪೊಲೀಸ್ ಕೆಲಸಗಳು ನಡೆಯುತ್ತಿದ್ದವು. ಶಿವಪುರದ ಧ್ವಜಸತ್ಯಾಗ್ರಹದ ವೇಳೆ ನಡೆದ ಪೊಲೀಸ್ ದೌರ್ಜನ್ಯದ ಬಗ್ಗೆ ಇಲ್ಲಿ ವಿವರಿಸಲಾಗಿದೆ. ಮೈಸೂರು ನಗರಕ್ಕೆ ಸಂಬಂಧಪಟ್ಟ ಪೊಲೀಸ್ ಪಡೆ ಬೆಳೆದುಬಂದ ದಾರಿಯನ್ನು ಚಿತ್ರಿಸಲಾಗಿದೆ. ಕಾಲದಿಂದ ಕಾಲಕ್ಕೆ ಬದಲಾದ ಪೊಲೀಸರ ವೇತನದ ಬಗ್ಗೆ ಅಂಕಿಸಂಖ್ಯೆಗಳೊಂದಿಗೆ ಚರ್ಚಿಸಲಾಗಿದೆ. ಮೈಸೂರಿನ ಪೊಲೀಸರ ಬಗ್ಗೆ ವೇಲ್ಸ್ ರಾಜ ಪ್ರಶಂಸೆ ಮಾಡಿದ್ದನ್ನು ಇಲ್ಲಿ ಚರ್ಚಿಸಲಾಗಿದೆ. ಬಳ್ಳಾರಿ ಜಿಲ್ಲೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದು ಸರ್.ಥಾಮಸ್ ಮನ್ರೋನು ಅಲ್ಲಿ ಪೊಲಿಸ್ ಇಲಾಖೆಯಲ್ಲಿ ತಂದ ಸುಧಾರಣೆಗಳ ಬಗ್ಗೆ ಚರ್ಚಿಸಲಾಗಿದೆ. ಪ್ರತೀ ಜಿಲ್ಲೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿದ್ದ ಪೊಲೀಸ್ ಅಧಿಕಾರಿಗಳ ಪಟ್ಟಿ ಹಾಗೂ ಅಪರೂಪದ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಅಡಿಟಿಪ್ಪಣಿ :-

೧) **Sooryanatha.U. Kamath (E)- Gazetteer of India, Karnataka State, Bangalore District, Publishers Karnataka State Governement 1990- p – 595**

೨) **Venkataramaiah P.S- P.K.G.C - p- 1**

೩) ಬೆಂಗಳೂರು ಜಿಲ್ಲಾ ಎಸ್.ಪಿ ಇ.ಡಿ.ಗೋಂಫೆರ್ಟ್ಸ್ ರವರ ಕಛೇರಿ ವರದಿ ಸಂಖ್ಯೆ ೪೭೭/೭೬ ದಿನಾಂಕ:೨೦-೧೨-೧೮೬೭

೪) **Police file 6, 1868-69, 1-9 Bangalore 1869**

೫) ಮೈಸೂರು ಕಮಿಷನರ್ ಎಲ್.ಬಿ.ಬೋರಿಂಗ್ ರವರ ಕಛೇರಿ ಪತ್ರ ಸಂಖ್ಯೆ ೧೯೫೨/೮೭ ದಿನಾಂಕ: ೦೭-೦೭-೧೮೬೮

೬) ಭಾರತ ಸರಕಾರದ ಕಾರ್ಯದರ್ಶಿಯಾಗಿದ್ದ ಡಬ್ಲು.ಎಸ್.ಸಟಾರ್‌ಕರ್‌ರವರು ಎಲ್.ಬಿ.ಬೋರಿಂಗ್‌ರವರಿಗೆ ಬರೆದ ಪತ್ರ ಸಂಖ್ಯೆ ೨೬೩ ದಿನಾಂಕ ೧೪-೦೯-೧೮೬೮

೭) ಮೈಸೂರು ಕಮಿಷನರ್‌ರವರ ಕಾರ್ಯದರ್ಶಿ‌ಯಾಗಿದ್ದ ಶ್ರೀ.ಜೆ.ಎ.ಕ್ಯಾಂಪೆಲ್‌ನು ಮೈಸೂರಿನ ನ್ಯಾಯಾಂಗದ ಕಮಿಷನರ್‌ಗೆ ಬರೆದ ಪತ್ರ ಸಂಖ್ಯೆ ಜನರಲ್ /೩೮೫೫ / ಜ್ಯುಡಿಷಿಯಲ್ ನಂಬ್ರ ೧೮೯. ದಿನಾಂಕ: ೩೦-೦೯-೧೮೬೮

೮) **Venkataramaiah P.S- P.K.G.C - p- 9**

೯) ಸರ್ಕಾರಿ ನಡಾವಳಿ ಸಂಖ್ಯೆ ೪೨೭೭-೮೦-೮೪ ದಿನಾಂಕ: ೨೮-೦೭-೧೮೯೦

೧೦) ಸರ್ಕಾರಿ ನಡಾವಳಿ ಸಂಖ್ಯೆ ೩೩೨೮-೯-೨೩೪ ದಿನಾಂಕ ೧೮-೦೬-೧೮೯೧

೧೧) **Police file 6, 1868-69, Bangalore 1869**

೧೨) **Police file 6, 1868-69, 1-9 Bangalore 1869**

೧೩) **Proceedings of the chief commissioner, judicial department, No 4184, judicial, 68 dtd Bangalore 11, September 1874**

೧೪) **Police file 30- 1897-1-2 Bangalore 1897**

೧೫) **P.M.R.A 1909 (Bangalore 1910)**

೧೬) **P.G.M No- J – 1085-94- Police 256-12-5 dtd Bangalore 25 September 1913**

೧೭) **R.A.M 1912-13 Bangalore 1914**

೧೮) **P.G.M No- G- 202-211, Police, 16[illegible]-18-2 dtd 4 October 1919, Bangalore**

೧೯) **R.A.M – 1868-69 Bangalore 1869**

೨೦) **P.G.M No – p- 5080-1, Police 42-26-3 dtd 24 March 1927, Bangalore**

೨೧) Police file 167-1933-5-7 Bangalore 1935

೨೨) P.M.R.A 1947 P.M.R.A 1947 (Bangalore 1947)

೨೩) and ೨೪) P.G.M No- p- 7101-3, Police, 272-45-3- dated – 4, June 1947, Bangalore

೨೫) ಚಿತ್ತರಂಜನ್, ಹೆಚ್. (ಸಂ)– ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಕೋಲಾರ ಜಿಲ್ಲೆ, ಪು– ೫೨೩

೨೬) ಅದೇ – ಪು– ೫೨೩–೫೨೪

೨೭) ಅದೇ– ಪು– ೫೨೪

೨೮) ಅದೇ – ಪು– ೧೨೪

೨೯) and ೩೦) Police files- 72 of 1902-03-1-3 (Bangalore 1902)

೩೧) P.G.M No 16011- 28, judicial 1372, dtd March 1902, Bangalore

೩೨) Police files -1-1897-1-10 Bangalore 1898

೩೩) and ೩೪) P.G.M No p- 3257-60 Police 342-7 dtd 31 Augest 1900, Bangalore

೩೫) P.G.M No J- 2099 -210, judicial finance 148-3 dtd 30 June 1903, Bangalore

೩೬) P.G.M No- J- 479-81, Police 1-12-4 dtd 14 Augest 1912, Bangalore

೩೭) Police files 72-1902-03 -1-3 Bangalore 1903

೩೮) P.G.M No. J- 19-91 Police 206-08-2 dtd 6 July 1909, Bangalore

೩೯) ೪೦) and ೪೧) ShyamBhat. N – Judiciary and Police in early colonial south canara 1799-1862,- Mittal publications, New Delhi – 2001, p- 54 (Original – J.C Kyari, the Indian Police)

೪೨) Idid - p- 55

೪೩) Mishra.B.B- T.A.I - 1834-1947, - Oxfard, Bombay – 1970 genaral administration- p- 534

೪೪) And ೪೫) P.M.J.D 26-9, JD 26-09-1806, Sl No- 19, p-3063

೪೬) And ೪೭) The History of Madras Police centinary volume 1859-1959 (Madras) 1959- p- 199

೪೮) Ibid- p- 55 (Orginal – P.M.J.D 5-4-1818 SL No 35, p- 908- 1069

೪೯) Ibid- p- 55 (Orginal PMJD) 5-4-1808, S No- 35, p- 908- 1069

೫೦) ದಕ್ಷಿಣ ಕನ್ನಡ ಜಿಲ್ಲೆ, ಜಡ್ಜ್ ಹಾಗೂ ಮ್ಯಾಜಿಸ್ಟ್ರೇಟರು ಆಗಿದ್ದ ಎ.ವಿಲ್ಸನ್ ರವರು ಸರಕಾರದ ಚೀಫ್ ಸೆಕ್ರೆಟರಿ ಪೋರ್ಟ್ ಸೈಂಟ್ ಜಾರ್ಜ್ ಗೆ ಬರೆದ ಪತ್ರ ದಿನಾಂಕ ೩–೩–೧೮೧೮ – ಪಿ.ಎಂ.ಜೆ.ಡಿ ೯–೬–೧೮೧೨ ಸೀರಿಯಲ್ ನಂಬ್ರ ೭೩ ಪು– ೩೦೩೪–೩೫

೫೧) Mishra.B.B- T.A.I - p- 534

೫೨) Ibid- p- 57

೫೩) Ibid- p- 58

೫೪) Ibid- p- 534

೫೫) Alexandar.J. Arbuthnath- (E) Mejor Sir Thomas Manro, selection from his mainuit and other official wraitings, Volume 2, Judicial, Higgin and Bothams company, Madras- 1886 , p- 278

೫೬) Ibid- p- 279

೫೭) Ibid- p- 282

೫೮) Selection of papers from the records of East India house, p- 107

೫೯) Mishra. B.B – T.A.I – p- 535 (Orginal – Mainute of evidence XXB- 151-2-p-534)

೬೦) Alexndar. J. Arboothnath – select report of criminal cases ditermind in the court of fauzidhari adhalath – p- 11

೬೧) Mishra. B.B – T.A.I – p- 535

೬೨) ಜಿಲಾನಿ, ಎಸ್.ಎ. – (ಸಂ). ಭಾರತದ ಗೆಜೆಟಿಯರ್, ಕರ್ನಾಟಕ ರಾಜ್ಯ, ದ.ಕ ಜಿಲ್ಲೆ, ಪು – ೪೭೭

೬೩) Haris. T – Collector and magistrate in Mangalore 14-3-1817 to the commissioners for the rivision of the judicial system in P.M.J.D 30-09-1817 searial No 126, p- 1866

೬೪) Report of the commissioners for the investigation of alleged cases of torture in the Madras presidency (Madras 1855) volume 1, p- 55-71

೬೫) Ibid- p- 107

೬೬) Shalini. B – The History of Crime and punishment in the presidency of Madras in the 19th century (un published Ph.D thesis Madras university - 1966) p-166-67

೬೭) R.I.T.M - (Madras 1855) p- 167-168

೬೮) Ibid- p- 34- 71

೬೯) The History of the Madras Police centinary volume, p- 261

೭೦) Orders of Madras Police, p- 11-1೮

೭೧) Shyam Bhat- J.P.E.S - p- 69

೭೨) ಮತ್ತು ೭೩) ಜಿಲಾನಿ. ಎಸ್.ಎ. – ಭಾ.ಗೆ.ಕ.ದ – ಪು – ೪೭೭

೭೪) Mishra. B.B – T.A.I - p- 535

೭೫) Keys-E, M.A.M.P - p- 434

೭೬) ಜಿಲಾನಿ, ಎಸ್.ಎ.– ಭಾ.ಗೆ.ಕ.ದ– ಪು– ೪೭೮

೭೭) ೭೮) ಸೂರ್ಯನಾಥ. ಯು.ಕಾಮತ್– (ಸಂ) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ, ಪು– ೫೪೭

೭೯) ಅದೇ– ಪು – ೫೮೩

೮೦) ಅದೇ–– ಪು ೫೮೪

೮೧) ೮೨) Jems. M. Campbell (E) Gazetter of the Bombay presidency volume 21, Belgam district, - Government central press, Bombay – 1884, p- 471

೮೩) ೮೪) and ೮೫) ibid- p- 472

೮೬) ಗೋಪಾಲ.ಬಾ.ರಾ – ಕ. ಇ – ಪು– ೩೬೨–೩೬೩

೮೭) ಪಾಟೀಲ.ಎಂ.ವಿ– (ಸಂ). ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಗುಲ್ಬರ್ಗ ಜಿಲ್ಲೆ, ಪು– ೪೩೨

೮೮) ವೆಂಕಟಾಚಲಪತಿ ಎಸ್. – ರಾಜಕೀಯ ಇತಿಹಾಸ– ಆಧುನಿಕ ಕಾಲ. ಕರ್ನಾಟಕದ ಪರಂಪರೆ ಸಂಪುಟ– ೨ ರಲ್ಲಿ ಪ್ರಕಟಿತ ಲೇಖನ (ಮೂಲ ಕೆ.ಸಂಪತ್‌ಗಿರಿ ರಾವ್) ಪು– ೩೨೧–೨೨

೮೯) ಮುನಿಸ್ವಾಮಿ ಆರ್.– (ಸಂ.) ಭಾರತದ ಗೆಜೆಟಿಯರ್ ಕರ್ನಾಟಕ ವಿಜಾಪುರ ಜಿಲ್ಲೆ, – ಪು– ೬೯೩

೯೦) ಸೂರ್ಯನಾಥ. ಯು.ಕಾಮತ್– (ಸಂ). ಭಾರತೀಯ ಗಜೆಟಿಯರ್, ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ, ಪು– ೬೧೮–೬೧೯

೯೧) ಅದೇ– ಪು– ೬೨೦

೯೨) ಅದೇ– ಪು – ೧೩೧– ೧೩೩

೯೩) Parthasarathi. T.A– (E) Gazetter of India, Karnataka State, Mandya District, publishers Karnataka State government, 2003, p- 91-92

೯೪) Ibid- p- 98

೯೫) Ibid- p- 560-561

೯೬) Ibid- p- 121- 122

೯೭) Ibid- p- 561-562

೯೮) ಚಿತ್ತರಂಜನ್.ಎಸ್. (ಸಂ) ಗಜೆಟಿಯರ್ ಆಫ್ ಇಂಡಿಯಾ ಕರ್ನಾಟಕ ರಾಜ್ಯ, ಕೋಲಾರ ಜಿಲ್ಲೆ, ಪ್ರ. ಕರ್ನಾಟಕ ರಾಜ್ಯ ಸರಕಾರ, ೨೦೦೫, ಪುಟ ೧೨೨–೧೨೩

೯೯) Parthasarathi. T.A- G.I. K.Mn - p- 562

೧೦೦) P.G.M No- 5090- judicial 84, dtd 13 Octobar 1874, Bangalore

೧೦೧) P.G.M No J – 7397-8, judicial, 850- dtd 28 december 1897, Bangalore

೧೦೨) P.G.M No- p- 5004-03, Police 118-04 dtd 10 February 1906, Bangalore

೧೦೩) P.G.M No J- 1085-94 Police 256-12-5 dtd 25 September 1913, Bangalore

೧೦೪) P.G.M No- p- 5611-74, Police 141-32-5 dtd 3 May 1932, Bangalore

೧೦೫) Police files 189 of 1907-1-5 and 6-17 (Bangalore 1907)

೧೦೬) P.G.M No J- 3381-90 Police 189-7-5 dtd May 4, 1909, Bangalore

೧೦೭) P.G.M No 5, 1085-94 Police 256-12-5 dtd 25 September 1913, Bangalore

೧೦೮) P.G.M No- J-4033-4 Police 100-14-4 dated 22 May 1915, Bangalore

೧೦೯) ನಿರಂಜನರಾಜ ಅರಸ್.ಎ.ಎನ್ – ಮು.ಕೃ.ಮ.ವಂ- ಪುಟ- ೧೦೨

೧೧೦) ೧೧೧) and ೧೧೨) P.G.M No – J- 4609-18 Police, 234-15-10 dtd 10 May 1918, Bangalore

೧೧೩) Police files 163 of 1918, 1-3 (Bangalore 1918)

೧೧೪) P.G.M No- 202-211 Police, 163-18-2 dtd 4 Octobar 1919, Mysore

೧೧೫) P.G.M No 24570 -8- Police -181-19-4 dtd 18 June 1921, Bangalore

೧೧೬) P.G.M No p- 11397-406

೧೧೭) Bijorn Hetne- Political economic of indirect rule Mysore- 1881-1947 p- 186-187

೧೧೮) P.G.M No 2657-66 Police- 140-28-11 dtd 17 September 1930, Bangalore

೧೧೯) P.G.M No- p- 1011-22 (1) Police 207-30-9 dtd 21 Aurust, Bangalore

೧೨೦) P.G.M No p- 1131- 2- Police- 265-30 dtd 21 August 1931, Bangalore

೧೨೧) P.G.M No – p- 3718-27 Police 31-2 dtd 6 Jaunary 1932, Bangalore

೧೨೨) P.G.M No p- 5611-74 Police 141-32-5 dtd 3 May 1933, Bangalore s

೧೨೩) P.G.M No 3, 7073- 74 Police 167-33-8 dtd 21-24 June 1935, Bangalore

೧೨೪) Shyama Rao- M. M- p- 521

೧೨೫) ಮೈಸೂರು ಚೀಫ್ ಕಮಿಷನರ್‌ರವರ ಕಛೇರಿ ನಡಾವಳಿ ಸಂಖ್ಯೆ ೪೮೯/ಪೊಲೀಸ್/೧೫/ದಿನಾಂಕ: ೨೪-೦೯-೧೮೮೦

೧೨೬) Venkataramaiah P.S – P.K.G.C– p- 16

೧೨೭) Ibid- p- 10

೧೨೮) Ibid- p- 11

೧೨೯) R.A.M for the year 1905-06, p – 23

೧೩೦) Government notification No- F-1, 8238 dtd 7 June 1906

೧೩೧) R.A.M for the year 1905-06, p – 26

೧೩೨) ಜಾನ್‌ಕಿಲ್‌ಸಾಲ್. (ಸಂ) ಗೆಜೆಟಿಯರ್ ಆಫ್ ಕರ್ನಾಟಕ ಬಳ್ಳಾರಿ ಜಿಲ್ಲೆ, ಪು-೨೨೨

೧೩೩) ಮತ್ತು ೧೩೪) ಅದೇ- ಪು- ೨೨೩

೧೩೫) ಅದೇ- ಪು- ೨೨೫

೧೩೬) ಅದೇ- ಪು- ೨೨೬

೧೩೭) ಅದೇ- ಪು- ೨೨೭

೧೩೮) ೧೩೯) ಸೂರ್ಯನಾಥ. ಯು. ಕಾಮತ್,- ಸಂ- ಭಾ.ಗೆ.ಕ.ರಾಜ್ಯ ಉ.ಕ ಜಿಲ್ಲೆ, . ಪುಟ- ೬೫೬

ಅಧ್ಯಾಯ– ೭

ಪೊಲೀಸ್ ಇಲಾಖೆಯ ವಿವಿಧ ಘಟಕಗಳು, ಅಪರಾಧ ಹಾಗೂ ಇತರ ವಿಷಯಗಳು

೭.೧ – ಪೊಲೀಸ್ ಅಶ್ವದಳ (ಮೌಂಟೆಡ್ ಪೊಲೀಸ್)

ಕರ್ನಾಟಕ ರಾಜ್ಯದ ಪೊಲೀಸ್ ಅಶ್ವದಳಕ್ಕೆ ಒಂದು ದೊಡ್ಡ ಇತಿಹಾಸವಿದೆ. ಟಿಪ್ಪು ಸುಲ್ತಾನನ ಕಾಲದಿಂದಲೂ ಬೆಳೆದುಬಂದ 'ಶಿಲ್ಲೇದಾರ'ರ ಪಡೆ ಮೈಸೂರು ಅರಸರ ಕಾಲದಲ್ಲಿಯೂ ಮುಂದುವರಿದು ನಂತರ ಪೊಲೀಸ್ 'ಅಶ್ವದಳ' ವಾಗಿ ಪರಿವರ್ತನೆಯಾಯಿತು. ೧೮೭೩ರ ಜೂನ್ ೧೯ ರಂದು ಮೈಸೂರು ಶಿಲ್ಲೇದಾರ್ ಕುದುರೆಗಳ ಬಗ್ಗೆ ಮೇಜರ್ ಆರ್.ಸಿ ಸ್ಟೀವರ್ಟ್ ರವರು ಒಂದು ವರದಿಯನ್ನು ಸಲ್ಲಿಸಿದರು. ಅದನ್ನು ಬೆಂಗಳೂರು ವರದಿ ಎಂದು ಕರೆಯಲಾಗುತ್ತದೆ. ಅದರಲ್ಲಿನ ಪ್ರಮುಖ ಅಂಶಗಳೆಂದರೆ, ೧೭೯೯ ರಲ್ಲಿ ಶ್ರೀರಂಗಪಟ್ಟಣವನ್ನು ಬ್ರಿಟೀಷರು ವಶಪಡಿಸಿಕೊಂಡ ನಂತರ ನಾಶ ಗೊಂಡ ಸೇನೆಯಿಂದ ಮೈಸೂರಿನ 'ಶಿಲ್ಲೇದಾರ ಅಶ್ವದಳ' ಆರಂಭವಾಯಿತು ಎಂದು ತಿಳಿಸಿದ್ದಾರೆ.

ಟಿಪ್ಪು ಸುಲ್ತಾನನ ಆಡಳಿತದ ಕೊನೆಯ ದಿನಗಳಲ್ಲಿ ಅಶ್ವದಳಕ್ಕೆ ಸೇನಾನಾಯಕನಿರಲಿಲ್ಲ. ಈತನು ತನ್ನ ಅಶ್ವದಳ ವನ್ನು ಹೈದರಾಲಿಯ ಕಾಲದಲ್ಲಿ ಇದ್ದ ಪ್ರಸಿದ್ಧ ಅಶ್ವದಳದ, ಸಾಮರ್ಥ್ಯವನ್ನು ಕಾಪಾಡಿಕೊಂಡು ಬಂದನು. ಈತನು ಸೇನೆಯ ಪಕ್ಷಪಾತಿಯಾಗಿದ್ದನು. ೧೭೯೮ ರಲ್ಲಿ ಈತನ ಸೇನೆಯು ೭೦೦೦ ಸದೃಢವಾದ ಮತ್ತು ೧೨೦೦೦ ಬಾಡಿಗೆ ಕುದುರೆಗಳನ್ನು ಹೊಂದಿತ್ತು. ಇದರಲ್ಲಿ ೫೦೦೦ ಜನ ತರಬೇತಿ ಪಡೆದ ಅಶ್ವಾರೋಹಿಗಳಿದ್ದರೆ, ಅದರಲ್ಲಿ ೨೦೦ ಜನರು 'ಮೊಗಲ' ರಾಗಿದ್ದರು. ಉಳಿದವರಲ್ಲಿ ೩೦೦ ಕುದುರೆ ಸವಾರರು ಬಾಡಿಗೆ ಪಡೆದವರಾಗಿದ್ದರೆ ಉಳಿದವರು ಕೂಲಿಯ ಸಿಪಾಯಿ ಗಳಾಗಿದ್ದು, ಕೆಳ ವರ್ಗದವರಾಗಿದ್ದು, ಬಹುತೇಕ ಸುಲಿಗೆ ಲೂಟಿ ಮಾಡಿಕೊಂಡೇ ಇದ್ದರು.[೧]

ಶ್ರೀರಂಗಪಟ್ಟಣದ ಪಥನಾನಂತರ ಮೈಸೂರು ಸೇನೆಯಲ್ಲಿ ೧೨,೫೦೦ ಕುದುರೆಗಳಿದ್ದವು. ಅದರಲ್ಲಿ ೩,೨೦೦ ಅತ್ಯಂತ ಸಮರ್ಥವಾದ ಕುದುರೆಗಳನ್ನು ಬ್ರಿಟೀಷರು ವಶಪಡಿಸಿಕೊಂಡರು. ೧.೧೩೮ ಕುದುರೆಗಳನ್ನು ಬೇರೆ ಬೇರೆ ಕಮಾಂಡರ್‌ಗಳ ಜೊತೆಗೆ ಕಳಿಸಲಾಯಿತು. ಅದೆಂದರೆ.

ಕಮರ್ ಉದ್ದೀನ್	೮೦
ಬಾಬರ್ ಜಂಗ್	೨೨೨
ಮಿರ್ ಮೊಹಿನೊದ್ದೀನ್	೩೫೦
ಟಿಪ್ಪು ಸರಕಾರದ ೭ ಇಲಾಖೆಗಳ ಅಧಿಕಾರಿಗಳಿಗೆ	४೮೬
ಒಟ್ಟು	೧೧೩೮

ಉಳಿದ ೮.೧೬೨ ಕುದುರೆ ಸವಾರರನ್ನು ದೇಶದ ಎಲ್ಲಾ ಕಡೆಗಳಲ್ಲಿ ಚದುರಿಸಿ ಕಳುಹಿಸಲಾಯಿತು. ತುಂಗಭದ್ರಾ ನದಿಯ ಉತ್ತರದ ಭಾಗಕ್ಕೆ ಕಳಹಿಸಲಾಯಿತು.

ಪೂರ್ಣಯ್ಯನವರು ಮೈಸೂರಿನ ದಿವಾನರಾಗಿ ಅಧಿಕಾರ ವಹಿಸಿಕೊಂಡನಂತರ ಕಮಿಷನರುಗಳಿಗೆ ಪ್ರತಿನಿಧಿಯಾಗಿ ಮೈಸೂರಿನ ಆಡಳಿತವನ್ನು ನೋಡುತ್ತಾ ಮಾಡಿದ ಮೊದಲ ಕೆಲಸಗಳಲ್ಲಿ ಒಂದೆಂದರೆ ವಿಭಾಗ ಒಪ್ಪಂದ (partition treaty) ವಾದ ನಂತರ ಕೃಷ್ಣರಾಜ ಒಡೆಯರ್‌ರವರ ಅಧೀನಕ್ಕೆ ಬಂದ ಜಿಲ್ಲೆಗಳ ರಕ್ಷಣೆಗಾಗಿ ಮೈಸೂರು ಅಶ್ವದಳದ ಕೆಲವು ಭಾಗಗಳನ್ನು ಉಳಿಸಿಕೊಳ್ಳಲು ಇಚ್ಚಿಸಿದ್ದರು. ಆದರೆ ಅದೇ ವೇಳೆಗೆ ಕಮಿಷನರ್‌ನು ೨೦೦೦ ಶಿಲ್ಲೇದಾರರಿಗೆ ಬ್ರಿಟೀಷ್ ಪಡೆ ಗಳಲ್ಲಿ ಕೆಲಸ ಮಾಡುವಂತೆ ಹುರಿದುಂಬಿಸಿ ನಂತರ ಅವರನ್ನು 'ದೋಂಡ್ಯಾ' ದಲ್ಲಿ ನಡೆಯುತ್ತಿದ್ದ ದಂಗೆಯನ್ನು ಅಡಗಿಸಲು ಕಳುಹಿಸುವಂತೆ ಸರಕಾರದ ಮೇಲೆ ಒತ್ತಡ ಹೇರಿದನು. ನಂತರದ ದಿನಗಳಲ್ಲಿ ಈ ಸಂಖ್ಯೆಯನ್ನು ಹೆಚ್ಚಿಸಲಾಯಿತು. ೧೮೦೨ ರ ಅಂತ್ಯದ ವೇಳೆಗೆ ಒಟ್ಟು ೧.೫೦೦ 'ಶಿಲ್ಲೇದಾರ'ರು ಇದ್ದರು. ಮರಾಠ ದೇಶದಲ್ಲಿ ಜನರಲ್ ವೆಲ್ಲೆಸ್ಲಿಯ ಕೈಕೆಳಗೆ

ರಣರಂಗದಲ್ಲಿ ಸೇವೆ ಸಲ್ಲಿಸಿದವರೇ ಬಹುತೇಕ ಇಲ್ಲಿದ್ದರು. ಯುದ್ಧದ ಸಮಯದಲ್ಲಿ ಇವರ ಸಂಖ್ಯೆ ಭೌತಿಕವಾಗಿ ಕಡಿಮೆ ಯಾಯಿತು.[೩]

೧೮೦೩-೦೪ರಲ್ಲಿ ನಡೆದ ಯುದ್ಧದುದ್ದಕ್ಕೂ ಕಾಲಕಾಲಕ್ಕೆ 'ಶಿಲ್ಲೇದಾರ'ರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಕೇವಲ ೪೫೦ ಸೇವೆ ಸಲ್ಲಿಸಬಲ್ಲ 'ಶಿಲ್ಲೇದಾರ'ರು ಇದ್ದರು. ಜುಲೈ ೧೮೦೪ರಲ್ಲಿ ಈ ಅಶ್ವದಳದ ಬಲವನ್ನು ಕಡಿತಗೊಳಿಸುವ ಬಗ್ಗೆ ಅದರ ಪರಿಮಾಣಗಳ ಬಗ್ಗೆ ಪರಿಶೀಲಿಸಲಾಯಿತು. ಮುಂದಿನ ಅಶ್ವದಳವು ೨೦೦೦ 'ಶಿಲ್ಲೇದಾರರ'ನ್ನು ಹೊಂದಿರಬೇಕೆಂದು ಪ್ರಸ್ತಾಪಿಸಲಾಯಿತು. ಆದರೆ ೧೮೦೫ರ ಪ್ರಾರಂಭದ ದಿನಗಳಲ್ಲಿ ದೌಲತ್‌ರಾವ್ ಸಿಂದ್ಯಾನೊಂದಿಗೆ ಇದ್ದ ಸಂಬಂಧಗಳ ಪರಿಣಾಮವಾಗಿ ಶತೃತ್ವವು ಸಂಭವನೀಯವಾಗಿದ್ದರಿಂದ ಈ ಪ್ರಸ್ತಾವನೆಯನ್ನು ನವೀಕರಿಸಿ ೪೦೦೦ ಜನರನ್ನು ಹೊಂದಿದ ಪೂರ್ಣ ಪ್ರಮಾಣದ 'ಶಿಲ್ಲೇದಾರ' ರನ್ನು ಯುದ್ಧರಂಗಕ್ಕೆ ಕಳಿಸಲಾಯಿತು. ಸ್ವಲ್ಪ ಸಮಯದಲ್ಲಿಯೇ ಭಕ್ಷಿರಾಮರಾವ್‌ನ ನೇತೃತ್ವದಲ್ಲಿ ಹರಿಹರದ ಬಳಿ ಈ ಪಡೆ ಜಮಾವಣೆಯಾಯಿತು. ಈತ ೧೮೦೩ ರಲ್ಲಿ ಜನರಲ್ ವೆಲ್ಲೆಸ್ಲಿಯ ಕೈ ಕೆಳಗೆ ಕೆಲಸ ಮಾಡಿ ಅತ್ಯಂತ ವಿಶಿಷ್ಟ ಸಾಧನೆ ಮಾಡಿದವನಾಗಿದ್ದನು. ೧೮೦೫ ರಲ್ಲಿ ಬ್ರಿಟೀಷ್ ಸರಕಾರ ಮತ್ತು ರೆಸಿಡೆಂಟ್‌ರ ನಡುವೆ ಮಾತುಕತೆ ಪ್ರಾರಂಭವಾಯಿತು. ಅದರಲ್ಲಿ ೧೭೯೯ರ ಸಹಕಾರಿ ಒಪ್ಪಂದ (Subsidiary) ೩ನೇ ಆರ್ಟಿಕಲ್‌ನ್ನು ಬದಲಾವಣೆ ಮಾಡಿ ವ್ಯಾಖ್ಯಾನ ನೀಡಿ ಅನುಮೋದಿಸುವ ಪ್ರಯತ್ನವನ್ನು ಕೈಬಿಡ ಲಾಯಿತು. ರಾಜರಿಗೆ ೪೦೦೦ ಕುದುರೆಗಳನ್ನು ಖಾಯಂ ಆಗಿ ನಿರ್ವಹಿಸುವ ಅವಕಾಶ ನೀಡಲಾಯಿತು. ಅದರಲ್ಲಿ ೫೦೦ ಕುದುರೆಗಳು ಅಶ್ವದಳ ಮತ್ತು ಬಾರ್‌ಗೀರ್‌ಗೆ ಸೇರಿದ್ದವು.[೪]

೭. ೧-೧ : ಪೊಲೀಸ್ ಅಶ್ವದಳದ ಸಂಘಟನೆ

ಆ ಸಮಯದಲ್ಲಿ ರೆಜಿಮೆಂಟ್ ಅಸ್ತಿತ್ವದಲ್ಲಿ ಇರಲಿಲ್ಲ. ರಿಸಿಲ್‌ದ್ದಾರರು ಬದಲಾದ ಸೇನಾ ವಿಭಾಗಗಳನ್ನು ನಿರ್ದೇಶಿ ಸುತ್ತಿದ್ದರು. ಅದರ ಸಂಖ್ಯೆ ೧೫೦ ರಿಂದ ೮೦ ಅವರ ಸಂಬಳ ಆಗಾಗ ಬದಲಾಗುತ್ತಿದ್ದು, ನಿಯಂತ್ರಣ ದಲ್ಲಿದ್ದು ರೂ. ೫೦೦ ರಿಂದ ೫೦ ಇತ್ತು. ಇದನ್ನು 'ಭಕ್ಷಿ' ಎಂಬ ಹೆಸರಿನ ಅಧಿಕಾರಿಯು ಪೂರ್ಣವಾಗಿ ನಿಯಂತ್ರಿ ಸುತ್ತಿದ್ದ. ಆ ದಿನಗಳಲ್ಲಿ ಎರಡ ರಿಂದ ಮೂರು ಜನ ಭಕ್ಷಿಗಳಿದ್ದರು. ಒಪ್ಪಂದದ ಹೆಚ್ಚುವರಿ ಆರ್ಟಿಕಲ್‌ಗಳನ್ನು ನಿಗಧಿ ಪಡಿಸಿದ ನಂತರದ ದಿನಗಳಿಂದ, ಮೈಸೂರು ರಾಜ್ಯದಲ್ಲಿ 'ಶಿಲ್ಲೆದಾರ'ರು ಖಾಯಂ ಆಗಿ ಸ್ಥಾಪಿತರಾದರು. ರೆಜಿಮೆಂಟ್ ನಲ್ಲಿ ಒಂದು ಹೊಸ ಪ್ರಯತ್ನ ನಡೆಯಿತು. ಅದೆಂದರೆ, ರೆಜಿಮೆಂಟಿನ ಒಟ್ಟು ಪಡೆಗಳನ್ನು ಏಳು ತುಕಡಿಗಳನ್ನಾಗಿ ಮಾಡಿ ಅವುಗಳಿಗೆ 'ತುಕ್ರಿ' ಎಂದು ಕರೆಯ ಲಾಯಿತು. ಒಂದೊಂದು ವಿಭಾಗಗಳು ಒಬ್ಬೊಬ್ಬ ಅಧಿಕಾರಿಯ ಹತೋಟಿಯಲ್ಲಿದ್ದು, ಆತನನ್ನು 'ತುಕ್ರಿದಾರ' ಎಂದು ಕರೆಯಲಾಗುತ್ತಿತ್ತು. ಈ ಏಳು ತುಕಡಿಗಳನ್ನು ಖಾಯಂ ಆಗಿ ಏಳು ಸ್ಥಳಗಳಲ್ಲಿ ನೇಮಿಸಲಾಯಿತು.[೫] ಅವುಗಳೆಂದರೆ, ೧)ಶಿಡ್ಲಘಟ್ಟ, ೨)ಕಟ್ಟೆ, ೩)ಹುಲಿಯೂರು ದುರ್ಗ, ೪) ನಾಗಮಂಗಲ, ೫)ಚನ್ನರಾಯಪಟ್ಟಣ, ೬)ಚನ್ನಪಟ್ಟಣ, ೭)ಕುಣಿಗಲ್. ಈ ವ್ಯವಸ್ಥೆಗಳ ಹೊರತಾಗಿ ಮುಂದಿನ ದಿನಗಳಲ್ಲಿ ರೆಜಿಮೆಂಟ್ ನಲ್ಲಿ ಕೆಲವು ಪದ್ಧತಿಗಳು ಇದ್ದವು. ಈ ವಿಭಾಗಗಳ ಶಿಲ್ಲೇದಾರರನ್ನು ಕಾರ್ಯಕ್ಷೇತ್ರಕ್ಕೆ ಸೇವೆಗಾಗಿ ಕಳುಹಿಸಿದಾಗ ಅವರಕುಟುಂಬದವರು ಈ ಸಿಬ್ಬಂದಿಗೆ ಖಾಯಂ ಆಗಿ ನೀಡಲಾದ ಸ್ಥಳಗಳಲ್ಲಿಯೇ ಉಳಿದುಕೊಳ್ಳುವಂತೆ ಮಾಡಲಾಯಿತು. ಈ ಶಿಲ್ಲೆದಾರರು ಸೇವೆಯಲ್ಲಿ ಇಲ್ಲದಾಗ ಸ್ವಲ್ಪ ಅಂಕೆ ಮೀರಿ ನಡೆಯುತ್ತಿದ್ದಂತೆ ಕಂಡುಬರುತ್ತಿತ್ತು. ಆದ್ದರಿಂದ ಪ್ರತಿ ಎರಡು ತಿಂಗಳಿಗೊಮ್ಮೆ ಶಿಲ್ಲೆದಾರರು ಕೆಲಸವಿಲ್ಲದಿದ್ದರೂ ಹಾಜರಾಗಲು ಆದೇಶಿಸಲಾಯಿತು. ಈ ಸಂದರ್ಭಗಳಲ್ಲಿ 'ಭಕ್ಷಿ'ಯವರುಗಳು ಠಾಣೆಗಳಿಗೆ ಭೇಟಿ ನೀಡುತ್ತಿದ್ದರು. ದಂಡಿ ನವರ (ಶಿಲ್ಲೇದಾರರ) ಹಾಜರಾತಿಯನ್ನು ಪಡೆಯಲಾಗುತ್ತಿತ್ತು. ಹಾಜರಿದ್ದ ಸಿಬ್ಬಂದಿಯವರಿಗೆ ಸಂಬಳವನ್ನು ವಿತರಿಸ ಲಾಗುತ್ತಿತ್ತು. ಗೈರುಹಾಜರಾದವರ ಸಂಬಳವನ್ನು ಪುನ: ಅವರು ಕೆಲಸಕ್ಕೆ ಹಾಜರಾಗುವವರೆಗೆ ತಡೆಹಿಡಿಯಲಾಗುತ್ತಿತ್ತು.

ಗೈರುಹಾಜರಿಯನ್ನು ಮುಂದಿನ ಹಾಜರಾತಿ ಪಡೆಯುವ ದಿನದ ವರೆಗೆ ಅಂದರೆ ಎರಡು ತಿಂಗಳವರೆಗೆ ಮುಂದುವರಿಸಿದರೆ ಅವರನ್ನು ಸೇವೆಯಿಂದ ವಜಾಗೊಳಿಸಿ ಅವರ ಸಂಬಳವನ್ನು ಮುಟ್ಟುಗೋಲು ಹಾಕಲಾಗುತ್ತಿತ್ತು.[೬] ೧೮೦೪ ರ ಯುದ್ಧ ನಂತರ 'ಶಿಲ್ಲೇದಾರ'ರನ್ನು ಖಡಿತಗೊಳಿಸುವ ಬಗ್ಗೆ ಚಿಂತಿಸಲಾಯಿತು. ವಜಾಗೊಂಡ ಸಿಬ್ಬಂದಿಯವರನ್ನು ಸಂಸ್ಥಾನದ ಒಳ ಭಾಗದಲ್ಲಿಯೇ ಉಳಿಯುವಂತೆ ಸೂಕ್ತವಾಗಿ ಮನವೊಲಿಸಲಾಯಿತು. ಈ ಶ್ರೇಷ್ಠ ಕುದುರೆ ಸವಾರರ ಮೇಲೆ ಶಾಶ್ವತವಾದ ಪ್ರಭಾವವನ್ನು ಉಳಿಸಿಕೊಳ್ಳಲಾಯಿತು. ಬ್ರಿಟೀಷ್ ರೆಸಿಡೆಂಟರು ಮತ್ತು ದಿವಾನರ ಪ್ರಕಟಣೆಗಳಿಂದ ಅವರು ಆಕರ್ಷಿಕ ರಾಗಿದ್ದರು.[೭]

ಮರಾಠ ರಾಜ್ಯವು ನೆಲೆಯಿಲ್ಲದ ರಾಜ್ಯವಾಗಿತ್ತು. ಕೆಲಸದಿಂದ ವಜಾಗೊಂಡ ಕುದುರೆಸವಾರರು ಮರಾಠ ಬುಡಕಟ್ಟಿನಲ್ಲಿ ಸುಲಿಗೆ ಮಾಡಿಕೊಂಡಿದ ಅಲೆಮಾರಿಗಳು ಟಿಪ್ಪುಸುಲ್ತಾನನ ಸೇನೆಯಿಂದ ಬಿಡುಗಡೆ ಹೊಂದಿದವರೆಲ್ಲರೂ ಹೋಗಿ ಮರಾಠ ಸೇನಾನಾಯಕನಲ್ಲಿ ಕೆಲಸಕ್ಕೆ ಸೇರಿದ್ದರು. ಈ ಸಿಬ್ಬಂದಿಗಳನ್ನು ಉಳಿಸಿಕೊಳ್ಳಲು ಅವರುಗಳಿಗೆ ಅವಕಾಶ ಗಳನ್ನು ನೀಡಲಾಯಿತು. ಮತ್ತು 'ಶಿಲ್ಲೇದಾರ'ರಿಗೆ ಸಂಸ್ಥಾನದ ಒಳ ಭಾಗದಲ್ಲಿ ಭೂಮಿಗಳನ್ನು ನೀಡಲಾಯಿತು. ಈ ಉದಾರತೆಯು ಲಾಭದಾಯಕವಾದಂತೆ ಕಂಡುಬಂತು. ಈ ಶಿಲ್ಲೇದಾರರುಗಳನ್ನು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದಂತೆ ಕರ್ತವ್ಯಕ್ಕೆ ನೇಮಿಸಿದಾಗ, ಅವರು ಖಾಯಂ ವಾಸಸ್ಥಳವನ್ನು ಪಡೆದರು. ಎರಡು ತಿಂಗಳಿಗೊಮ್ಮೆ ನಡೆಯುವ ಹಾಜರಿ ಪಡೆಯುವ ಸಭೆ (Bi Monthly) ಹಾಜರಾಗುವುದನ್ನು ಬಿಟ್ಟರೆ ಅವರಿಗೆ ಬೇರೆ ಕೆಲಸವಿರಲಿಲ್ಲ. ಅವರುಗಳಿಗೆ ನೀಡಿದ ಭೂಮಿಯನ್ನು ಪಡೆದು ಕೊಂಡು ಅದರಲ್ಲಿ ವ್ಯವಸಾಯ ಮಾಡಲು ಅವರಿಗೆ ಸ್ವತಂತ್ರವಿತ್ತು. ಇದರಿಂದ ಅವರು ಸಾಕಷ್ಟು ಪ್ರಯೋಜನವನ್ನು ಪಡೆದರು. ಆ ಕಾಲದ ಸಂಗತಿಗಳಿಂದ ತಿಳಿದು ಬರುವುದೇನೆಂದರೆ, ಶಿಲ್ಲೇದಾರರು ಅಪರೂಪವಾಗಿದ್ದರು, ಅವರು ವೈಯುಕ್ತಿಕವಾಗಿಯಾಗಲಿ ಅಥವಾ ಅವರ ಸಂಬಂಧಿಕರಾಗಲಿ ರಾಜ್ಯದಲ್ಲಿ ನೀಡಿದ್ದ ತುಂಡು ಭೂಮಿಯ ಬಗ್ಗೆ ಶಾಶ್ವತ ಆಸಕ್ತಿಯನ್ನು ಹೊಂದಿರಲಿಲ್ಲ[೮] ೧೮೦೬ ರಿಂದ ಮೈಸೂರಿನ ಕುದುರೆಗಳನ್ನು ಕೆಲವೇ ಕಲವು ಸಂದರ್ಭಗಳನ್ನು ಹೊರತು ಪಡಿಸಿ ಗಡಿಯಾಚೆಯಲ್ಲಿ ಕೆಲಸ ನಿರ್ವಹಿಸಲು ಕರೆದಿರಲಿಲ್ಲ. ೧೮೧೪ ರಲ್ಲಿ 'ಹೊಳ್ಕರ್'ನೊಂದಿಗೆ ನಡೆದ ಯುದ್ಧದ ಆರಂಭದವರೆಗೂ ಗಡಿಯಾಚೆಗಿನ ಕೆಲಸಕ್ಕೆ ಕರೆದಿರಲಿಲ್ಲ. ವಿಭಾಗಗಳಲ್ಲಿನ ನೆಮಕಾತಿಯಿಂದಾಗಿ ಶಿಲ್ಲೇದಾರರು ಮತ್ತು ಅವರ ಕುಟುಂಬದವರು ರಾಜ್ಯದಲ್ಲಿಯೇ ಇರುವಂತಾಯಿತು.[೯] ಮರಾಠ ಯುದ್ಧದಲ್ಲಿ ತಾವೇ ಭಾಗವಹಿಸಿದ ಅಧಿಕಾರಿಗಳು 'ತುಕ್ರಿ'ಗಳನ್ನು ನಿಯಂತ್ರಿಸುತ್ತಿದ್ದರು. ಈ ಅಧಿಕಾರಿಗಳ ಆದೇಶದಂತೆ ತುಕ್ರಿಗಳು ಕರ್ತವ್ಯ ನಿರ್ವಹಿಸುತ್ತಿದ್ದರು. ಮತ್ತು ಬಹಳ ಸಂದರ್ಭಗಳಲ್ಲಿ ಟಿಪ್ಪು ಸುಲ್ತಾನನ ಕೈಕೆಳಗೆ ಉನ್ನತ ಹುದ್ದೆಗಳಲ್ಲಿದ್ದ ಅಧಿಕಾರಿಗಳು ತುಕ್ರಿಗಳಿಗೆ ಆದೇಶ ನೀಡುತ್ತಿದ್ದರು. ಈ ಅಧಿಕಾರಿಗಳ ಹೆಸರು ಮತ್ತು ಅವರು ನಿಯುಕ್ತಿ ಹೊಂದಿದ ಸ್ಥಳದ ವಿವರ ಈ ಕೆಳಗಿನಂತೆ ಇದೆ.

೧) ಶಿಡ್ಲ ಘಟ್ಟ	–	ವೆಂಕಟರಾವ್
೨) ಕಟ್ಟೆ	–	ರಾಮರಾವ್, ಭರ್‌ಗಿರ್
೩) ಹುಲಿಯೂರ್ ದುರ್ಗ	–	ಲಲ್ಲಾ ಕೃಷ್ಣದಾಸ್
೪) ನಾಗಮಂಡಲ	–	ಲಿಂಗೋಪಾಂತ್
೫) ಚನ್ನರಾಯಪಟ್ಟಣ	–	ಶ್ರೀನಿವಾಸ್‌ರಾವ್
೬) ಚನ್ನಪಟ್ಟಣ	–	ಅಬ್ದುಲ್ ರೆಹಮಾನ್
೭) ಕುಣಿಗಲ್	–	ರಾಮರಾವ್, ಕಡಪ

ಇದರಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದವರ ಸಂತತಿಯವರು ೧೮೭೫ ರಲ್ಲಿ ಶಿಲ್ಲೇದಾರರಾಗಿ ಕೆಲಸ ನಿರ್ವಹಿ ಸುತ್ತಿದ್ದರು.[೧೦]

ಈ ಶತಮಾನದ ಮೊದಲ ಅರ್ಧ ಭಾಗದಲ್ಲಿ ನಡೆದ ಯುದ್ಧದ ಸಂದರ್ಭಗಳಲ್ಲಿ ಬ್ರಿಟೀಷ್ ಪಡೆಗಳೊಂದಿಗೆ ಕೆಲಸ

ಮಾಡುತ್ತಿದಾಗ ಬ್ರಿಟೀಷ್ ಅಧಿಕಾರಿಗಳು ಶಿಲ್ಲೇದಾರರೊಂದಿಗೆ ಜೊತೆಯಾಗಿದ್ದರು. ಈ ವಿಧಾನದಿಂದ ಶಿಲ್ಲೇದಾರರ ಸಾಮರ್ಥ್ಯವನ್ನು ಅವಲೋಕಿಸಿ ಶಾಶ್ವತ ವ್ಯವಸ್ಥೆಗಳನ್ನು ಮಾಡಲು ಆಲೋಚಿಸಲಾಯಿತು. ಆದರೆ ಅಂತಿಮವಾಗಿ ಇದಕ್ಕೆ ಮನ್ನಣೆ ದೊರೆಯಲಿಲ್ಲ. ಇವುಗಳನ್ನು ಗಮನಿಸಿದರೆ ರೆಜಿಮೆಂಟಲ್ ವ್ಯವಸ್ಥೆಯ ಅಸ್ತಿತ್ವ ಮತ್ತು ಸಂಘಟನೆಯ ಪ್ರಭಾವವು ಅಪ್ರತ್ಯಕ್ಷವಾಗಿ ಪರಿಣಾಮ ಬೀರಿದಂತೆ ಕಾಣುತ್ತದೆ. ಇಲ್ಲಿ ಆದೇಶಗಳನ್ನು ನೀಡುವ ಅಧಿಕಾರಿಗೆ "ರೆಜಿಮೆಂಟ್‌ದಾರ್" ಎಂದು ಕರೆಯಲಾಗುತ್ತಿತ್ತು.

೧೮೧೬ ರಲ್ಲಿ ಜನರಲ್ ಡೊವೆಷನ್ (Dovetion) ಮತ್ತು ಹೈಸ್‌ಲಾಪ್ (Hyslap) ರವರ ಕೈಕೆಳಗೆ ೪೦೦೦ ಸಿಬ್ಬಂದಿಗಳ ದಂಡು ಡೆಕ್ಕಾನ್ ಮತ್ತು ಹಿಂದೂಸ್ಥಾನದಲ್ಲಿತ್ತು. ಅದರಲ್ಲಿ ೧೫ ಜನಕ್ಕಿಂತ ಕಡಿಮೆ ಇಲ್ಲದಂತೆ ರೆಜಿಮೆಂಟ್ ದಾರರು ಇದ್ದು ರಣರಂಗಗಳಲ್ಲಿ ಪಡೆಗಳಿಗೆ ನಿರ್ದೇಶನ ನೀಡುತ್ತಿದ್ದರು.[೧೧]

೭. ೧–೨ :– ಕ್ಲೋಸ್‌ಪೇಟೆ ಕುದುರೆಗಳು (Closepet Horse)

ಮೇಜರ್ ಆರ್.ಸಿ.ಸ್ಟಿವರ್ಟ್‌ನು ೧೮೭೫ ರ ವರದಿಯಲ್ಲಿ ಹೀಗೆ ಹೇಳಿದ್ದಾನೆ. " ನಾನು ಮಾತನಾಡಿದ 'ಶಿಲ್ಲೇದಾರ'ರ ಹೊರತಾಗಿ ೧೮೦೬ ರ ಒಪ್ಪಂದದಲ್ಲಿ ಗೊತ್ತು ಮಾಡಿದ ಬಾರ್‌ಗೀರ್ ಕುದುರೆಗಳಿದ್ದವು. ಅವುಗಳು 'ಕ್ಲೋಸ್‌ಪೇಟೆ'ಯಲ್ಲಿ ಠಿಕಾಣಿಹೂಡಿದ್ದವು. (ಕ್ಲೋಸ್‌ಪೇಟೆ ಎಂದರೆ ಬೆಂಗಳೂರು ಸಮೀಪದ ಇಂದಿನ ರಾಮನಗರ) ಈ ಕುದುರೆದಳದ ಮುಖ್ಯಭಾಗವು ಕಂಪೆನಿಯ ಸೇನಾ ಮಾದರಿಯಲ್ಲಿತ್ತು. ಮತ್ತು ಶತಮಾನದ ಮೊದಲ ಭಾಗದಲ್ಲಿ ಕಂಪೆನಿಯ ಸೇನೆಯಲ್ಲಿದ್ದ ಅಶ್ವದಳದಂತೆ ಅಸಾಧಾರಣವಾಗಿದ್ದು, ಇದೊಂದು ಅತ್ಯುತ್ತಮ ಅಶ್ವದಳವಾಗಿತ್ತು" ಎಂದಿದ್ದಾನೆ. ಇವರನ್ನು ಗಡಿಯಾಚೆಗಿನ ಕೆಲಸಗಳಿಗಾಗಿ ಆಗಾಗ ಕರೆಯುತ್ತಿರಲಿಲ್ಲ. ಇವರ ಬಹುತೇಕ ಕೆಲಸವು ರಾಜನ ಅಂಗರಕ್ಷಣೆಯಾಗಿತ್ತು ಮತ್ತು ರಾಜ್ಯದ ರಕ್ಷಣೆಯಾಗಿತ್ತು. ೧೮೧೪–೧೫ ರಲ್ಲಿ ರಾಜ್ಯದ ಉತ್ತರ ಭಾಗದಲ್ಲಿ ನಡೆದ ಅಲೆಮಾರಿಗಳ ದಾಳಿ ಸಂದರ್ಭದಲ್ಲಿ ಈ ಪಡೆಯನ್ನು ಅಲ್ಲಿಗೆ ಕಳುಹಿಸಲಾಯಿತು. ಎರಡು ಬೇರೆ ಬೇರೆ ಸಂದರ್ಭ ಗಳಲ್ಲಿ ರಾಜನ ಉದಾರತೆಯಿಂದ ೩೦೦ ಕುದುರೆಗಳನ್ನು ಮತ್ತು ರಾವುತರನ್ನು ಕಂಪನಿ ಸೇನೆಗೆ ಕುದುರೆಗಳು ಅಗತ್ಯವಾಗಿ ಬೇಕಾಗಿದ್ದ ಸಂದರ್ಭಗಳಲ್ಲಿ ಕಳುಹಿಸಿದನು.[೧೨] ಈ ಅಶ್ವದಳದಲ್ಲಿ ಮುಖ್ಯಭಾಗಗಳಲ್ಲಿ ರಾಜನ ಸಂಬಂಧಿಗಳೂ ಅಧಿಕಾರಿಗಳಾಗಿದ್ದರು. ೧೮೧೮ ರ ವೇಳೆಗೆ ಈ ಪಡೆಯ ದುರುಪಯೋಗದ ಬಗ್ಗೆ ಆಪಾಧನೆಗಳು ಕೇಳಿ ಬಂದವು. ಇದು ತನ್ನ ಹಿಂದಿನ ಶಕ್ತಿ ಸಾಮರ್ಥ್ಯಗಳಿಂದ ವಾಸ್ತವವಾಗಿ ದೂರ ಸರಿಯಿತು. ಕೊನೆಯದಾಗಿ ೧೮೩೧ರ ಸರ್ಕಾರದ ಆದೇಶದಂತೆ ಈ ದಳವನ್ನು ಯುದ್ಧಕ್ಕೆ ಬಳಕೆ ಮಾಡುವುದನ್ನು ನಿಲ್ಲಿಸಲಾಯಿತು.[೧೩]

೧೮೩೨ ರಲ್ಲಿ ಹೋಳ್ಕರ್ ಜೊತೆ ಶಾಂತಿ ಮಾತುಕತೆಯಾದ ನಂತರ ಈ ಪಡೆಯನ್ನು ಕಿತ್ತೂರು ದಂಗೆಯನ್ನು ಹೊರತುಪಡಿಸಿ ಯಾವುದೇ ಪ್ರಮುಖ ಕಾರ್ಯಗಳಿಗೆ ಬಳಸಲಿಲ್ಲ.

ಕಾರ್ಯಕ್ಷಮತೆಯ ಸ್ಥಿತಿ : ಯುದ್ಧರಂಗದಿಂದ ಹಿಂದಿರುಗಿ ಬಂದ ನಂತರ ಕ್ರಮೇಣ ಇವರ ಕಾರ್ಯಕ್ಷಮತೆಯಲ್ಲಿ ಕುಸಿತ ಕಂಡುಬಂದಿತು. ಅವರುಗಳಿಗೆ ಕನಿಷ್ಟ ಸಂಬಳನೀಡಲಾಗಿತ್ತು. ದೋಷಯುಕ್ತವಾದ ಕುದುರೆ ಮತ್ತು ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಭಕ್ಷಿಗಳು ಭ್ರಷ್ಟಾಚಾರಿಗಳಾಗಿದ್ದರು. ಪ್ರತಿಯೊಬ್ಬ ಶಿಲ್ಲೇದಾರರು ತನ್ನ ಸಂಬಳದಲ್ಲಿ ನಿಗದಿಯಾದ ಪಾಲನ್ನು 'ಭಕ್ಷಿ'ಗಳಿಗೆ ಅವರ ಸ್ವಂತ ಬಳಕೆಗೆ ನೀಡಬೇಕಾಗಿತ್ತು. ಇದರಿಂದಾಗಿ ಈ ಪಡೆಯ ಕಾರ್ಯಕ್ಷಮತೆ ಶೋಚನೀಯ ಸ್ಥಿತಿಗೆ ತಲುಪಿತು. ಇದು ಆಡಳಿತಗಾರರ ಗಮನ ಸೆಳೆಯಿತು.[೧೪]

೧೮೦೭ ರ ಒಪ್ಪಂದದಲ್ಲಿ ಶಿಲ್ಲೇದಾರರುಗಳಿಗೆ ಮಾಸಿಕ ವೇತನ ನೀಡುವ ಬಗ್ಗೆ ಉದ್ದೇಶಿಸಲಾಯಿತು. ಸ್ಥಳೀಯ ನಿಯಮದಂತೆ ತಿಂಗಳಿಗೆ ೩೬ ದಿನಗಳನ್ನು ನಿಗಧಿಮಾಡಿ ಶಿಲ್ಲೇದಾರರಿಗೆ ಮಾಸಿಕವಾಗಿ ನಿಗದಿತ ಸಂಬಳ ರೂ.೨೦ ನ್ನು

ನೀಡಲಾಯಿತು.[೧೫] ಶಿಲ್ಲೇದಾರರ ವಾರ್ಷಿಕ ವೇತನದಲ್ಲಿ ೧೨ ಭಾಗವನ್ನು ಕಡಿತಗೊಳಿಸಲಾಗುತ್ತಿತ್ತು. ಅಥವಾ ಪ್ರತಿಯೊಬ್ಬ ಸಿಬ್ಬಂದಿಯಿಂದ ಎರಡು ಚಿನ್ನದ 'ಫನಾಮ'ಗಳನ್ನು ಸಂಗ್ರಹಿಸಲಾಗುತ್ತಿತ್ತು. ಇದಕ್ಕೂ 'ತರೀರ್' ಎಂದು ಕರೆಯುತ್ತಿದ್ದರು. ಇದನ್ನು ಐದು ಭಾಗಗಳನ್ನಾಗಿ ವಿಂಗಡಿಸಿ ಎರಡು ಭಾಗವನ್ನು 'ಭಕ್ಷಿ'ಗಳಿಗೆ ಇನಾಮಾಗಿ (ಭಕ್ಷೀಸು) ನೀಡಲಾಗುತ್ತಿತ್ತು. ಭಕ್ಷಿಗಳಿಗೆ ಲಂಚ ರೂಪದಲ್ಲಿ ನೀಡುತ್ತಿದ್ದ ಹಣವಾದ್ದರಿಂದ ಭಕ್ಷೀಸು ಎಂಬ ಶಬ್ದ ಹೀಗೆ ಬಳಕೆಗೆ ಬಂದಿರಬೇಕು. ಇನ್ನೆರಡು ಭಾಗ ಮುನಿಬೆ ಮತ್ತು ಐದನೇಯ ಭಾಗ ಸರಕಾರಕ್ಕೆ ಜಮಾ ಆಗುತ್ತಿತ್ತು.[೧೬] ಇದರ ಹೊರತಾಗಿ ಇನ್ನೊಂದು ರೀತಿಯ ಸಂಬಳ ಕಡಿತ ಮಾಡಲಾಗುತ್ತಿತ್ತು. ಅದಕ್ಕೆ 'ಕುಸ್ರಿ' ಎಂದು ಕರೆಯಲಾಗುತ್ತಿತ್ತು. ಇದು ನಿಜವಾದ ಮತ್ತು ಕಾಲ್ಪನಿಕ ವಿನಿಮಯ ದರಗಳ ವ್ಯತ್ಯಾಸ ಸರಿದೂಗಿಸಲು ಪಡೆಯಲಾಗುತ್ತಿತ್ತು. ಇದರಿಂದಾಗಿ ಶಿಲ್ಲೇದಾರರು ತಮಗೆ ನೀಡಿದ ನಾಣ್ಯಗಳಲ್ಲಿ ೫ ಚಿನ್ನದ ಪನಾಮಗಳನ್ನು ಕಳೆದುಕೊಳ್ಳುತ್ತಿದ್ದರು.[೧೭]

೧೮೩೦ ರಲ್ಲಿ ಸೇನಾಧಿಕಾರಿಯಾಗಿದ್ದ ಕರ್ನಲ್ ಕಾನ್‌ವೇ ಎಂಬವರನ್ನು ತೆಗೆದು ಹಾಕಲಾದ ಮೈಸೂರು ಕಮಿಷನರ್‌ನ ಜಾಗದಲ್ಲಿ ನಿಯುಕ್ತಗೊಳಿಸಲಾಯಿತು. ಇವರಿಗೆ 'ಶಿಲ್ಲೇದಾರ್ ಕುದುರೆ' ಗಳ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ಈ ಅಧಿಕಾರಿಗಳು ಅತ್ಯಂತ ಸೂಕ್ಷ್ಮವಾಗಿ ಪರೀಕ್ಷಿಸಿದ ನಂತರ ಕೆಲವು ಶಿಪಾರಸ್ಸುಗಳನ್ನು ಮಾಡಿದರು. 'ಶಿಲ್ಲೇದಾರ'ರ ಮಾಸಿಕ ಸಂಬಳದಿಂದ ಖಡಿತಗೊಳಿಸುತ್ತಿದ್ದ ಎಲ್ಲ ಪದ್ಧತಿಗಳನ್ನು ರದ್ದು ಮಾಡುವುದು ಈ ಶಿಪಾರಸ್ಸಿನಲ್ಲಿ ಒಳಗೊಂಡಿತ್ತು. ೧೮೩೪ ರಲ್ಲಿ ಲಾರ್ಡ್ ವಿಲಿಯಂ ಚೇಂಬರ್‌ನ ಗಮನವು ಶಿಲ್ಲೇದಾರರ ಕಡೆಗೆ ಸೆಳೆಯಿತು. ನಿಶ್ಚಯ ವಾಗಿಯೂ ಈ 'ಶಿಲ್ಲೇದಾರ'ರ ಸಾಮರ್ಥ್ಯದಲ್ಲಿ ಹಿನ್ನಡೆಯಾದ ದೃಷ್ಟಿಯಿಂದ ೧೮೩೬ ರಲ್ಲಿ ಯುರೋಪಿಯನ್ ಅಧಿಕಾರಿ ಗಳನ್ನು ಮಿಲಿಟರಿ ಅಸಿಸ್ಟೆಂಟ್‌ಗಳಾಗಿ ನೇಮಿಸಲಾಯಿತು.

ಯುದ್ಧರಂಗದಲ್ಲಿ ಸೇವೆ – ಈ 'ಶಿಲ್ಲೇದಾರ'ರು ಈ ಮೊದಲು ಲಾರ್ಡ್ ವೆಲ್ಲೆಸ್ಲಿಯ ಕೈ ಕೆಳಗೆ ಮಾಡಿದ ಯುದ್ಧಗಳಲ್ಲಿ ಅವರು ನೀಡಿದ ಸೇವೆಯು ಶ್ಲಾಘನೀಯವಾಗಿತ್ತು ಮತ್ತು ವಿವಿಧ ಪ್ರಮುಖ ಅಧಿಕಾರಿಗಳಿಂದ ಪುನ: ಪುನ: ಇವರ ಸಾಮರ್ಥ್ಯ ಪರೀಕ್ಷೆಗೆ ಒಳಗಾಗಿ ಅವರ ಶೌರ್ಯವು ಪ್ರಶಂಸೆಗೆ ಒಳಗಾಗಿತ್ತು. ೧೮೦೯ರ ಸುಮಾರಿಗೆ ಚಿತ್ರದುರ್ಗ ಮತ್ತು ಶ್ರೀರಂಗಪಟ್ಟಣಗಳಲ್ಲಿದ್ದ ಕಂಪೆನಿಯ ಪಡೆಗಳಲ್ಲಿ ಅಸಮಧಾನ ಉಂಟಾಯಿತು. 'ಶಿಲ್ಲೇದಾರ'ರುಗಳಿಗೆ ನೇಮಿಸಿದ ಹಿಂದಿನ ಸ್ಥಳಗಳಿಂದ ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ಅಸಮದಾನವಿತ್ತು. ಶ್ರೀರಂಗಪಟ್ಟಣದ ಕೋಟೆಯನ್ನು ವಶಕ್ಕೆ ಪಡೆದುಕೊಳ್ಳುವ ಸಂಧಿಸಮಯದಲ್ಲಿ ೧೨೫ 'ಶಿಲ್ಲೇದಾರ್ ಸಿಬ್ಬಂದಿ ೧೫೦ ಕುದುರೆಗಳನ್ನು ಕಳೆದುಕೊಂಡಿತು.[೧೮]

೧೮೧೦–೧೨ ರಲ್ಲಿ ಗಡಿಭಾಗದಲ್ಲಿ ನಡೆದ ಸಣ್ಣ ದಂಗೆಯನ್ನು ಅಡಗಿಸಲು 'ಶಿಲ್ಲೇದಾರ'ರನ್ನು ನೇಮಿಸ ಲಾಯಿತು. ೧೮೧೪ ರಲ್ಲಿ ಜನರಲ್ ಡೊವೆಟನ್‌ನ ಅಡಿಯಲ್ಲಿ ೨೦೦೦ 'ಶಿಲ್ಲೇದಾರ'ರು ಸೇನೆಯನ್ನು ಸೇರಿದರು. ಎಲ್ಲಾ ನಾಲ್ಕು ಸಾವಿರ 'ಶಿಲ್ಲೇದಾರ'ರಿಗೆ ಹಿಂದೂಸ್ಥಾನದಲ್ಲಿ ಉದ್ಯೋಗನೀಡಲಾಯಿತು. ಇದು ೧೮೧೭ ರವರೆಗೆ ಹೋಳ್ಕರ್‌ನೊಂದಿಗೆ ನಡೆದ ಯುದ್ಧದ ಪರಿಸಮಾಪ್ತಿಯಾಗುವವರೆಗೂ ಅವರು ಅಲ್ಲೇ ಕೆಲಸ ಮಾಡುತ್ತಿದ್ದರು. ಈ ಯುದ್ಧದದಲ್ಲಿ ಶಿಲ್ಲೇದಾರರು ಅಪ್ರತಿಮ ಶೌರ್ಯ ತೋರಿದರು. ಮೊಹಿದ್‌ಪುರ್‌ನ ಯುದ್ಧ ಭೂಮಿಯಲ್ಲಿ ಹೊಳ್ಕರ್‌ನ ಖಡ್ಗ ಮತ್ತು ಬೆಲ್ಟ್‌ನ್ನು ವಶಪಡಿಸಿ ಕೊಂಡರು.[೧೯]

೧೮೩೧–೩೨ ರಲ್ಲಿ 'ನಗರ'ದಲ್ಲಿ ಗಲಬೆಯ ಸಂದರ್ಭವನ್ನು ಬಿಟ್ಟರೆ ೧೮೫೭ ರ 'ಸಿಪಾಯಿ ದಂಗೆ'ಯ ವರೆಗೆ ಶಿಲ್ಲೇದಾರರನ್ನು ಪುನ: ಕೆಲಸಕ್ಕೆ ನೇಮಿಸಲಿಲ್ಲ.

೭. ೧–೩ :– ಶಿಲ್ಲೇದಾರರ ಸಂಬಳ ಮತ್ತು ನೇಮಕಾತಿ

೧೮೩೨ ರ ವೇಳೆಗೆ ಶಿಲ್ಲೇದಾರರ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿತ ಕಂಡುಬಂತು. ಇದರ ಸಿಬ್ಬಂದಿಗಳಿಗೆ

ಮೂಲವೇತನ ಮಾಸಿಕ ರೂ. ೨೦ ಆಗಿದ್ದು, ೧೮೬೪ ರಲ್ಲಿ ಅದನ್ನು ೨೨ ರೂಪಾಯಿಗಳಿಗೆ ಏರಿಸಲಾಯಿತು. ೧೮೬೭ ರಲ್ಲಿ ೭ ರೆಜಿಮೆಂಟ್‌ಗಳಲ್ಲಿ ಒಂದನ್ನು ಮಹಾರಾಜರ ಅನುಮತಿ ಪಡೆದು ಒಡೆಯಲಾಯಿತು. ಶಿಲ್ಲೇದಾರರ ಸಂಬಳವನ್ನು ೨೬ ರೂಪಾಯಿಗಳಿಗೆ ಏರಿಸಲಾಯಿತು.[೨೦]

ಕುದುರೆ ಸವಾರಿಯ ನಿಪುಣತೆ : ಕುದುರೆ ಸವಾರಿಯಲ್ಲಾಗಲೀ ಅಥವಾ ಶಸ್ತ್ರಾಸ್ತ್ರಗಳ ಬಳಕೆಯಲ್ಲಾಗಲೀ, ನೈಪುಣ್ಯತೆಯ ಅಗತ್ಯವಿರಲಿಲ್ಲ. ಅವರಲ್ಲಿರುವ ನೈಪುಣ್ಯತೆ ಎಷ್ಟಿತ್ತೆಂದರೆ ಹೊಸದಾಗಿ ನೇಮಕವಾದ ಕುದುರೆ ಸವಾರನೂ ಸಹ ಅತ್ಯಂತ ನೈಪುಣ್ಯತೆ ಹೊಂದಿದ್ದಾನೆಂದು ಭಾವಿಸಲಾಗುತ್ತಿತ್ತು. ಆತ ಕುದುರೆಯ ಮೇಲೆ ಕುಳಿತರೆ ಸಾಕು ನಾಗಾಲೋಟದಿಂದ ಮುಂದೆ ಸಾಗುತ್ತಿದ್ದ. ಅವರನ್ನು ಯಾವುದೇ ಕರ್ತವ್ಯಕ್ಕೆ ಕರೆದರೂ ಸಿದ್ಧರಾಗಿದ್ದರು.[೨೧]

"ವಂಶಪಾರಂಪರ್ಯ ಪದ್ಧತಿ": ತಂದೆಯ ನಂತರ ಆ ಉದ್ಯೋಗವು ಆತನ ಮಗನಿಗೆ ಬರುವ 'ವಂಶಪಾರಂಪರ್ಯ' ಪದ್ಧತಿ ಶಿಲ್ಲೇದಾರ ವ್ಯವಸ್ಥೆಯಲ್ಲಿಯೂ ಇತ್ತು. ಇದನ್ನು ಆ ವೇಳೆಯಲ್ಲಿ 'ವಂಶಪಾರಂಪರ್ಯ ಹಕ್ಕು' ಎಂದು ಬಾವಿಸಲಾಗುತ್ತಿತ್ತು. ಈ ಕಾರಣದಿಂದಾಗಿ (ವಯಸ್ಸಾದ ಶಿಲ್ಲೇದಾರರು ಮತ್ತು ಅವರ ಮಕ್ಕಳನ್ನು ಹೊರತುಪಡಿಸಿ) ಈ ಹುದ್ದೆಗೆ ಬೇರೆ ಅಭ್ಯರ್ಥಿಗಳೇ ಇಲ್ಲದಂತಾಗಿತ್ತು. ಈ ವಂಶಪಾರಂಪರ್ಯ ನೇಮಕಾತಿಯೂ ಅವರು ಕೆಲಸದಲ್ಲಿ ಸಮರ್ಥರಾಗಿರಲು ಒಂದು ಕಾರಣ ವಾಗಿತ್ತು.[೨೨]

೧೮೮೪-೮೫ ನೇ ಸಾಲಿನ ಟ್ಯಾಬ್ಯುಲರ್ (ಕೋಷ್ಟಕ) ಸ್ಟೇಟ್‌ಮೆಂಟ್ 'ಎ' ನಲ್ಲಿ ಮೈಸೂರು ರೆಜಿಮೆಂಟ್‌ನ ಕುದುರೆಗಳ ವಿವರಗಳಿವೆ. ೫೭೦ ಶಕ್ತಿಶಾಲಿಯಾದ ಕುದುರೆಗಳಿದ್ದು, ಅವುಗಳ ಒಟ್ಟಾರೆ ಬೆಲೆ ವಾರ್ಷಿಕ ೨,೦೦,೦೦೦/-ರೂ. ಮದ್ರಾಸ್ ರೆಜಿಮೆಂಟ್‌ನಲ್ಲಿ ೪೮೮ ಶಕ್ತಿಶಾಲಿಯಾದ ಕುದುರೆಗಳಿದ್ದು, ಅವುಗಳ ವಾರ್ಷಿಕ ಬೆಲೆ ೭೩,೦೦೦/-ರೂ ಇದರಲ್ಲಿ ಕುದುರೆಗಳ ನಿರ್ವಹಣೆ ಮತ್ತು ಯುದ್ಧ ಸಲಕರಣೆ ಮತ್ತು ಕುದುರೆ ಸವಾರರ ಲೆಕ್ಕ ಸೇರಿಕೊಂಡಿರಲಿಲ್ಲ. ಮೈಸೂರಿನ ಕುದುರೆ ಸವಾರರನ್ನು ಸಂಸ್ಥಾನದಲ್ಲಿ ಇರುವ ಸೇನಾ ತುಕಡಿಗಳಲ್ಲಿ ಪಟ್ಟಿ ಮಾಡಿದ ಎಲ್ಲಾ ಸವಾರರಿಗಿಂತಲೂ ಮೇಲ್ಮಟ್ಟದಲ್ಲಿದ್ದರು. ವಾಸ್ತವವಾಗಿ ಅವರನ್ನು ವಂಶಪಾರಂಪರ್ಯವಾಗಿ ನೇಮಕವಾಗುವಂತೆ ನೋಡಿಕೊಳ್ಳಲಾಗಿತ್ತು. ಎಲ್ಲಾ ಸನ್ನಿವೇಶಗಳಲ್ಲೂ ಮೈಸೂರು ಸವಾರರು ಶ್ರೇಷ್ಠರು ಎಂಬ ಭಾವನೆಯನ್ನು ಅವರಲ್ಲಿ ಬೆಳೆಸಲಾಗುತ್ತಿತ್ತು. ಇದರ ಪರಿಣಾಮವಾಗಿ ಸವಾರ ಸಿಬ್ಬಂದಿಯವರು ಒಳ್ಳೆಯ ನಡತೆಯನ್ನು ಹೊಂದಿ ಉತ್ತಮ ಕುಟುಂಬದ ನೆರಳಲ್ಲಿ ಬೆಳೆಯುತ್ತಿದ್ದರು. ೫ ಅಡಿ ೫ ಇಂಚು ಎತ್ತರವು ಇವರ ಕನಿಷ್ಟ ಅರ್ಹತೆಯಾಗಿತ್ತು.[೨೩]

ಮೈಸೂರು ಪೊಲೀಸ್ ಅಶ್ವದಳದ ಚಿತ್ರಗಳು ೪೫ ರಿಂದ ೬೦ ರವರೆಗೆ ನೋಡಿ.

೭. ೧-೪:- ಬಾರ್‌ಗೀರ್ ವ್ಯವಸ್ಥೆ

ಮರಣಹೊಂದಿದ ಶಿಲ್ಲೇದಾರ ಕುಟುಂಬದವರ ಅನುಕೂಲತೆಯ ಉದ್ದೇಶಕ್ಕಾಗಿ ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರಲಾಯಿತು. ಮರಣ ಹೊಂದಿದ ಶಿಲ್ಲೇದಾರರ ಕುದುರೆಯನ್ನು ಆತನ ಮಕ್ಕಳಿಗೆ, ಚಿಕ್ಕವರಿರಲಿ, ಹಸುಳೆಯಾಗಿರಲಿ ಅವರ ಹೆಸರಿಗೆ ನೊಂದಾಯಿಸಲಾಗುತ್ತಿತ್ತು. ಈ ವ್ಯವಸ್ಥೆಯು ಶಿಲ್ಲೇದಾರರ ಮಕ್ಕಳು ಬೆಳೆದು ಸೇವೆಗೆ ಲಭ್ಯವಾಗುವವರೆಗೂ ಅವರನ್ನು ಉಪಚರಿಸುತ್ತಿತ್ತು. ಇದು ಕೆಲವು ದೃಷ್ಟಿಕೋನದಿಂದ ಅಗತ್ಯವಾಗಿತ್ತು. ಕರ್ತವ್ಯದಲ್ಲಿ ಇಲ್ಲದ ಶಿಲ್ಲೇದಾರರಿಗೆ ನಿವೃತ್ತಿ ವೇತನ ನೀಡುವ ಪದ್ಧತಿಯು ವಾಸ್ತವಿಕವಾಗಿ ರಾಜ್ಯವು ಶಾಶ್ವತವಾಗಿ ಅಸಮರ್ಥವಾಗುವವರೆಗೆ ಕೊಂಡೊಯ್ಯುತ್ತಿತ್ತು.[೨೪]

೭. ೧-೫:- ಶಿಲ್ಲೇದಾರರ ಸಾಮಾನ್ಯ ಕರ್ತವ್ಯಗಳು.

ಈ "ಶಿಲ್ಲೇದಾರ'ರ ಸಾಮಾನ್ಯ ಕರ್ತವ್ಯಗಳೆಂದರೆ, ೧) ಜೈಲು, ಸರಕಾರಿ, ನಾಣ್ಯ ಮುದ್ರಣಾಲಯ, ಬ್ಯಾಂಕ್‌ಗಳು,

ಕೋಟೆಗಳು ಮತ್ತು ಪಗೋಡಗಳನ್ನು ಕಾಯುವುದು. ೨) ಗೋದಾಮು, ಅಂಗಡಿಗಳು ಮತ್ತು ಶಸ್ತ್ರಾಗಾರಗಳನ್ನು ಕಾಯುವುದು. ೩)ಕೊತ್ವಾಲ ಚೌಲ್ಟ್ರಿಗೆ ಹಾಜರಾಗುವುದು. ೪) ಖಜಾನೆ, ಸೈನಿಕ ಉಪಕರಣಗಳು, ಉನ್ನತ ಸ್ಥಾನಮಾನ ದಲ್ಲಿರುವ ಹಿಂದು ಗುರುಗಳು, ಪ್ರಯಾಣದಲ್ಲಿರುವ ಅಧಿಕಾರಿಗಳು, ಭಕ್ಷಿಗಳು ಮತ್ತು ಕೇಂದ್ರಸ್ಥಾನದ ಇತರ ಅಧಿಕಾರಿಗಳ ಬೆಂಗಾವಲು ಕೆಲಸ ಮಾಡುವುದು. ೫) ಅಮಿಲ್‌ದಾರರಿಗೆ ಸಹಕರಿಸುವುದು. ೬) ವಿಶೇಷವಾಗಿ ತಾಲೂಕುಗಳಲ್ಲಿ ಯಾವುದಾದರೂ ಕೆಲಸ ಇದ್ದಾಗ ಆ ಕೆಲಸಕ್ಕೆ ನೇಮಿಸಿದರೆ ಅದನ್ನು ಮಾಡುವುದು. ೭) ಮೈಸೂರು ನಗರದ ಚೌಲ್ಟ್ರಿಗಳಲ್ಲಿ ಕೆಲಸ ಮಾಡುವುದು. ೮) ರಸ್ತೆಗಳಲ್ಲಿ ಶಿಕ್ಷೆಗೊಳಗಾದವರನ್ನು ಸಾಗಿಸುವಾಗ ಕಾಯುವುದು. ಈ ಮೇಲಿನ ಎಲ್ಲಾ ಕೆಲಸಗಳು ಬಹುತೇಕ ಪೊಲೀಸ್ ಕೆಲಸಗಳೇ ಆಗಿರುವುದನ್ನು ಗಮನಿಸಬೇಕಾಗಿದೆ.[೨೫] ಅಂದರೆ, 'ಶಿಲ್ಲೇದಾರ'ರು ಪೊಲೀಸ್ ಪಡೆಯ ಒಂದು ಭಾಗವಾಗಿದ್ದು, ಪೊಲೀಸ್ ಕೆಲಸಗಳನ್ನು ಮಾಡುತ್ತಿದ್ದು, ಇದೇ ಅಶ್ವಪಡೆಯು ಮುಂದೆ ಪೊಲೀಸ್ 'ಅಶ್ವದಳ'ವಾಗಿ ಮಾರ್ಪಾಟು ಹೊಂದಿತು.

ಮೈಸೂರು ಮಹಾರಾಜರ ಕಾಲದಲ್ಲಿ ಇದ್ದ ಅಂಗರಕ್ಷಕ ದಳವು ಮುಂದೆ ಮೌಂಟೆಡ್ ಪೊಲೀಸ್ ಅಂದರೆ ಕರ್ನಾಟಕ ರಾಜ್ಯ ಪೊಲೀಸ್ ಅಶ್ವದಳವಾಗಿ ಪರಿವರ್ತನೆಯಾಯಿತು. ಮಹಾರಾಜರ ಅಂಗರಕ್ಷಕ ದಳವನ್ನು ಮೊದಲು ಹೆಚ್.ಹೆಚ್.ಎಂ.ಓ.ಐ ಎಂದು ಕರೆಯಲಾಗುತ್ತಿತ್ತು. (ಅಂದರೆ ಹಿಸ್ ಹೈನೆಸ್ ಆಫ್ ಮಹಾರಾಜಾ ಓನ್ ಇನ್‌ಫೆಂಟ್ರಿ) ನಂತರ ಅದು ಹೆಚ್.ಹೆಚ್.ಬಿ.ಜಿಯಾಗಿ ಪರಿವರ್ತನೆಯಾಯಿತು. (ಅಂದರೆ ಹಿಸ್ ಹೈನೆಸ್ ಆಫ್ ಮಹಾರಾಜಾಸ್ ಬಾಡಿಗಾರ್ಡ್) ಇದು ಪ್ರಾರಂಭದಲ್ಲಿ ಒಂದು ಕಮಾಂಡೆಂಟ್ (ಎಸ್‌ಪಿ ದರ್ಜೆ) ಒಬ್ಬರು ಪೊಲೀಸ್ ಇನ್ಸ್‌ಪೆಕ್ಟರ್, ಒಬ್ಬರು ರಿಸರ್ವ್ ಸಬ್‌ಇನ್ಸ್‌ಪೆಕ್ಟರ್, ಇಬ್ಬರು ಅಸಿಸ್ಟೆಂಟ್ ರಿಸರ್ವ್ ಇನ್ಸ್‌ಪೆಕ್ಟರ್, ಹನ್ನೆರಡು ದಫೇದಾರರು, ೧೧೦ ಕಾನ್‌ಸ್ಟೇಬಲ್ ಮತ್ತು ೩೬ ಫಾಲೋಯರ್ಸ್‌ಗಳನ್ನು ಹೊಂದಿತ್ತು. ಇವರ ಕರ್ತವ್ಯಗಳು ಅರಮನೆಯನ್ನು ಕಾಯುವು ದಾಗಿತ್ತು. ಇವರ ಸಮವಸ್ತ್ರಗಳು ಇಂದಿಗೂ ಸಹ ಮೈಸೂರಿನ ಅಶ್ವದಳದ ಕೇಂದ್ರ ಸ್ಥಾನದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿದ್ದು, ಅವರ ನಿಲುವಂಗಿಗಳ ಮೇಲೆ ಇರುವ ಗುಂಡಿಗಳಲ್ಲಿ His Highness of Maharaja own infentrey Mysore ಎಂತಲೂ ಮತ್ತು Bodyguard His Highness Maharaja of Mysore ಎಂದು ಬರೆದಿದ್ದು ಈ ಎರಡೂ ಗುಂಡಿಗಳಲ್ಲೂ ಸಹ ರಾಜಮುದ್ರೆಯಾದ ಗಂಡಬೇರುಂಡದ ಚಿಹ್ನೆ ಇರುತ್ತದೆ. – *ಚಿತ್ರ ೬೧ ನೋಡಿ.* ಈ ಮೈಸೂರು ಪೊಲೀಸ್ ಅಶ್ವದಳಕ್ಕೆ ೧೯೧೮ ರಲ್ಲಿ ಕಟ್ಟಡವನ್ನು ನಿರ್ಮಿಸಲು ಶಂಕುಸ್ಥಾಪನೆ ಮಾಡಲಾಯಿತು. ಇದನ್ನು ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡಿದರು. *ಚಿತ್ರ ೬೨ ನೋಡಿ.* ೧೯೨೦ ರಲ್ಲಿ ಇದರ ಪ್ರಾರಂಭೋತ್ಸವವು ನಡೆಯಿತು. ಈ ನೂತನ ಕಟ್ಟಡವು ಲಂಡನ್‌ನ ಬರ್ಮಿಂಗ್ ಹ್ಯಾಮ್ ನಗರದಲ್ಲಿರುವ ಅಶ್ವದಳದ ಪೊಲೀಸ್ ಕಛೇರಿಯಂತೆ ಇದೆ. – *ಚಿತ್ರ ೬೩ ನೋಡಿ* ಇದರ ನಿರ್ಮಾಣ ವೆಚ್ಚವು ೮೦,೦೦೦/- ರೂಪಾಯಿ ಆಗಿತ್ತು. *ಚಿತ್ರ ೬೪ ನೋಡಿ.*

೭.೨:- ಪೊಲೀಸ್ ಬ್ಯಾಂಡ್.

ಈ ರಾಜ್ಯದ ಪೊಲೀಸ್ ಪಡೆಯಲ್ಲಿ ಸಂಗೀತಗಾರರ ತಂಡಗಳು ಇವೆ. ಅದನ್ನು ಪೊಲೀಸ್ ಬ್ಯಾಂಡ್‌ಗಳೆಂದು ಕರೆಯಲಾಗುತ್ತದೆ. ಪೊಲೀಸ್ ಪಡೆಯಲ್ಲಿ ಎರಡು ರೀತಿಯ ಬ್ಯಾಂಡ್‌ಗಳಿದ್ದವು. ಅವುಗಳೆಂದರೆ ಮೊದಲನೆಯದು ಮೈಸೂರು ಅರಮನೆಯ ಇಂಗ್ಲೀಷ್ ಬ್ಯಾಂಡ್. ಅದನ್ನು ಕೆ.ಜಿ.ಬಿ ಅಂದರೆ ಕರ್ನಾಟಕ ಗೌರ್ನಮೆಂಟ್ ಬ್ಯಾಂಡ್ ಎಂದು ಕರೆಯಲಾಗುತ್ತಿತ್ತು. ಇದು ಪಾಶ್ಚಾತ್ಯ ಸಂಗೀತಗಳನ್ನು ನುಡಿಸುತ್ತಿತ್ತು. ಎರಡನೆಯದು ಕೆ.ಜಿ.ಓ ಅಂದರೆ ಕರ್ನಾಟಕ ಗೌರ್ನಮೆಂಟ್ ಆರ್ಕೆಸ್ಟ್ರಾ. ಇದು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ನುಡಿಸುತ್ತಿತ್ತು. ಈ ಎರಡೂ ಬ್ಯಾಂಡ್‌ಗಳು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಈಗಲೂ ಸಹ ಮೈಸೂರಿನ ಪೊಲೀಸ್

ಪಡೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಈಗಲೂ ಸಹ ಮೈಸೂರಿನ ಅಶ್ವದಳ ಪೊಲೀಸ್ ಕಛೇರಿಯಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಹಳೇಯ ಕಾಲದ ಪೊಲೀಸ್ ವಾದ್ಯಗೋಷ್ಠಿಯವರ ಸಮವಸ್ತ್ರಗಳು ಮತ್ತು ವಾದ್ಯಗಳಿವೆ. *ಈ ಬಗ್ಗೆ ಚಿತ್ರ ೬೫ ರಿಂದ ೭೨ ರವರೆಗೆ ನೋಡಿ.* ಈ ಸಮವಸ್ತ್ರದ ಗುಂಡಿಗಳಲ್ಲಿ ಮೈಸೂರು ಮಹಾರಾಜರ ರಾಜಮುದ್ರೆಯಾದ ಗಂಡಬೇರುಂಡದ ಚಿತ್ರವಿದೆ. ಮತ್ತು ಇದರ ಹಿಂಭಾಗದಲ್ಲಿ ಇದನ್ನು ತಯಾರಿಸಿದ ಲಂಡನ್ನಿನ LONDON FIREME AND SONS LTD ಎಂಬ ಕಂಪೆನಿಯ ಹೆಸರು ಬರೆದಿದೆ. ಪೊಲೀಸ್ ಇಲಾಖೆಯ ಕರ್ನಾಟಕ ಬ್ಯಾಂಡ್ ಹಾಗೂ ಇಂಗ್ಲೀಷ್ ಬ್ಯಾಂಡಿಗೆ ಒಂದು ಇತಿಹಾಸವಿದೆ. ೧೮೬೫ ರಲ್ಲಿ ಮೈಸೂರಿನ ಮಹಾರಾಜರಾಗಿದ್ದ ಶ್ರೀ.ಚಾಮರಾಜ ಒಡೆಯರ್‌ರವರ ಆಶ್ರಯದಲ್ಲಿ ಪ್ಯಾಲೇಸ್ ಬ್ಯಾಂಡ್ (ದ ಪೊಲೀಸ್ ಬ್ಯಾಂಡ್) ಎಂದು ಕರೆಯುತ್ತಿದ್ದ ಪೊಲೀಸರ ಸಂಗೀತಗಾರರ ತಂಡವನ್ನು ರಚಿಸಲಾಯಿತು. 'ಇಂಗ್ಲೀಷ್ ಬ್ಯಾಂಡ್'ನ ಮೊದಲು ಬ್ಯಾಂಡ್‌ಮಾಸ್ಟರ್ ಎಂದರೆ ಪ್ರೆಂಚ್‌ನ ಪ್ರಖ್ಯಾತ ಸಂಗೀತಗಾರನಾಗಿದ್ದ. ಶ್ರೀ. ಡೊಪ್ರೀಸ್ ಶ್ರೀ.ಓಡಿಯೋ ಸ್ಕಾಮಿದ್ ಇವರು ಪ್ರಖ್ಯಾತ ಸಂಗೀತ ಸಂಯೋಜಕರಾಗಿದ್ದರು. ಇವರು ೧೯೨೩ ರಲ್ಲಿ ಸಂಗೀತ ನಿರ್ದೇಶಕರಾಗಿದ್ದರು. ೧೯೪೨ ರಲ್ಲಿ ಶ್ರೀ.ಎಂ. ಪಿರೇಕರ್‌ರವರು ಸಂಗೀತ ನಿರ್ದೇರ್ಶಕರಾದರು. ಸುಮಾರು ಎರಡು ದಶಕಗಳ ಕಾಲ ಇವರು ಈ ಹುದ್ದೆಯಲ್ಲಿ ಮುಂದುವರೆದರು. ೧೯೧೮ ರಲ್ಲಿ ಮೈಸೂರು ಅರಮನೆಯ ಜಿಲ್ಲಾ ಕಛೇರಿಯು 'ಕರ್ನಾಟಕ ಬ್ಯಾಂಡ್' ಎಂಬ ಹೆಸರಿನ ಸಂಗೀತ ತಂಡವನ್ನು ರಚಿಸಿತು. ಇದಕ್ಕೆ ಹಾಲಿ ಇರುವ ಬ್ಯಾಂಡಿನ ಸಿಬ್ಬಂದಿ ಹಾಗೂ ವೇಣುವಾದನ ಮೊದಲಾದ ಗಾಳಿವಾದ್ಯಗಳನ್ನು ನುಡಿಸುವ ಕಲಾವಿದರನ್ನು ಸೇರಿಸಿಕೊಳ್ಳಲಾಯಿತು. ಈ ಕರ್ನಾಟಕ ಬ್ಯಾಂಡ್‌ನ ಮೊದಲ ಬ್ಯಾಂಡ್‌ಮಾಸ್ಟರ್ ಆಗಿ ಪ್ರಖ್ಯಾತ ಸಂಗೀತ ವಿದ್ವಾಂಸರಾಗಿದ್ದ ವಿದ್ವಾನ್ ಶ್ರೀ. ವೆಂಕಟಯ್ಯರವರು ಸೇರಿದರು. ಮೈಸೂರು ಮಹಾರಾಜರಾಗಿದ್ದ ಶ್ರೀ.ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ವಿಶೇಷ ಆಸಕ್ತಿವಹಿಸಿ ಲಾಹೋರಿನಿಂದ ಉಸ್ತಾದ್ ನಸೀರ್‌ಖಾನ್‌ರವರನ್ನು ಮೈಸೂರಿಗೆ ಕರೆಯಿಸಿ ಅರಮನೆಯಲ್ಲಿ ಆಶ್ರಯನೀಡಿ, ಕರ್ನಾಟಕ ಬ್ಯಾಂಡ್‌ನ ಸಂಗೀತಗಾರರಿಗೆ ನಾಲ್ಕು ತಿಂಗಳುಗಳ ಕಾಲ ಉತ್ತರಾದಿ ಸಂಗೀತದ ಬಗ್ಗೆ ತರಬೇತಿ ಕೊಡಿಸಿದರು.[೨೬] ಬಹುತೇಕ ಇದೇ ವೇಳೆಗೆ ಕರ್ನಾಟಕ ಬ್ಯಾಂಡ್ ಮಾಸ್ಟರ್‌ನನ್ನು ಒಳಗೊಂಡಂತೆ ಇಂಡಿಯನ್ ಆರ್ಕೆಸ್ಟ್ರಾ ಎಂಬ ಹೊಸ ತಂಡವನ್ನು ರಚಿಸಲಾಯಿತು. ಕರ್ನಾಟಕ ಬ್ಯಾಂಡ್ ಹಾಗೂ ಇಂಗ್ಲೀಷ್ ಬ್ಯಾಂಡ್‌ಗಳಿಂದ ಸಂಗೀತಗಾರರನ್ನು ಇದಕ್ಕೆ ಸೇರಿಸಲಾಯಿತು. ಉಸ್ತಾದ್ ಆಲಿಖಾನ್ ಇದರ ನಿರ್ದೇಶಕರಾದರು. ೧೯೫೧ ರಲ್ಲಿ ಈ ಎರಡೂ ಬ್ಯಾಂಡ್‌ಗಳನ್ನು ಸೇರಿಸಿ ಒಂದೇ ತಂಡವನ್ನಾಗಿ ಮಾಡಲಾಯಿತು. ಮತ್ತು ಇದನ್ನು ಪೊಲೀಸ್ ಇಲಾಖೆಯ ಅಧೀನದಲ್ಲಿ ಇಡಲಾಯಿತು. ಇದು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಇದಕ್ಕೆ ೧೯೫೮ ರಲ್ಲಿ ಮೈಸೂರು ಗೌರ್ನಮೆಂಟ್ ಬ್ಯಾಂಡ್ (ಇಂಗ್ಲೀಷ್ ಬ್ಯಾಂಡ್) ಎಂದು ಪುನರ್‌ನಾಮಕರಣ ಮಾಡಿದರು. ಈಗ ಇದು ಪೊಲೀಸ್ ಅಶ್ವದಳದೊಂದಿಗಿದೆ. ಈ ಪೊಲೀಸ್ ವಾದ್ಯ ತಂಡವು ಮೈಸೂರು ದಸರಾ ಉತ್ಸವಗಳಲ್ಲಿ ಹಾಗೂ ಇತರ ಸಮಾರಂಭಗಳಲ್ಲಿ ಕಛೇರಿಗಳನ್ನು ನೀಡಿತ್ತು. ಮೈಸೂರು ದಸರಾ ಉತ್ಸವದಲ್ಲಿ ವಿವಿಧ ಸ್ಥಬ್ದಚಿತ್ರಗಳ ಜೊತೆ ಆನೆ, ಕುದುರೆ ಗಳೊಂದಿಗೆ ೨೬ ನೇ ಅನುಕ್ರಮಣಿಕೆಯಲ್ಲಿ ಅರಮನೆ ಬ್ಯಾಂಡ್‌ನವರು ಒಂದು ಎತ್ತಿನ ಗಾಡಿಯಲ್ಲಿ ಕುಳಿತು ಸಂಗೀತ ನುಡಿಸುತ್ತಾ ಸಾಗುತ್ತಿದ್ದರು. *ಚಿತ್ರ ೭೩ ನೋಡಿ.* ಮತ್ತು ದಸರಾ ಮೆರವಣಿಗೆಯಲ್ಲಿ ಪಾದಾಚಾರಿಗಳಾಗಿ ಹೋಗುತ್ತಿರುವ ಕರ್ನಾಟಕ ಬ್ಯಾಂಡ್ ಮತ್ತು ಅರಮನೆ ಬ್ಯಾಂಡ್‌ನ ಬಗ್ಗೆ *ಚಿತ್ರ ೭೪* ನ್ನು ನೋಡಿ. ಮೈಸೂರು ಪೊಲೀಸ್ ಬ್ಯಾಂಡಿನ ವೈಣಿಕ ಪ್ರವೀಣ ಶ್ರೀ.ವೆಂಕಟಗಿರಿಯಪ್ಪನವರಿಗೆ ಸುಬ್ರಮಣ್ಯರಾಜೇ ಅರಸು ಬರೆದ ಪತ್ರಗಳ ಬಗ್ಗೆ *ಚಿತ್ರ ೭೫ ರಿಂದ ೭೮ ನ್ನು ನೋಡಿರಿ.*

೭.೩ :- ವಿಶೇಷ ಮೀಸಲು ಪಡೆ.

ರಾಜ್ಯದ ಯಾವುದೇ ಮೂಲೆಗಳಲ್ಲಿ ತಕ್ಷಣ ಸಂಭವಿಸುವ ಗಲಾಟೆ, ದೊಂಬಿಯಂತಹ ಪ್ರಕರಣಗಳನ್ನು ನಿಯಂತ್ರಿ

ಸಲು ಸ್ಥಳೀಯ ಪೊಲೀಸರಿಂದ ಅಸಾಧ್ಯವಾಗುತ್ತಿತ್ತು. ಮತ್ತು ಈ ಸನ್ನಿವೇಶವನ್ನು ನಿಭಾಯಿಸಲು ಹೆಚ್ಚಿನ ಪೊಲೀಸ್ ಸಿಬ್ಬಂದಿಗಳ ಅಗತ್ಯವೂ ಇತ್ತು. ಬೇರೆ ಬೇರೆ ಠಾಣೆಗಳ ಪೊಲೀಸರಿಗೆ ಮಾಹಿತಿಯನ್ನು ನೀಡಿ ಅವರನ್ನು ಗಲಭೆ ನಡೆದ ಸ್ಥಳಕ್ಕೆ ಕರೆಯಿಸಿಕೊಳ್ಳುವ ವೇಳೆಗಾಗಲೇ ಪರಿಸ್ಥಿತಿ ಕೈಮೀರಿ ಹೋಗುತ್ತಿತ್ತು. ಈ ಕಾರಣಕ್ಕಾಗಿ ಒಂದು ಮೀಸಲು ಪೊಲೀಸ್ ಪಡೆಯ ಅಗತ್ಯವಿತ್ತು. ಹಾಗಾಗಿ ೧೮೮೯ ರಲ್ಲಿ ಮೈಸೂರಿನಲ್ಲಿ ನಡೆದ ಪ್ರತಿಭಟನೆಗಳ ನಂತರ ತಕ್ಷಣವಾಗಿ ಬೆಂಗಳೂರು ಮತ್ತು ಶಿವಮೊಗ್ಗಗಳಲ್ಲಿ ವಿಶೇಷ ಮೀಸಲು ಪೊಲೀಸ್ ಪಡೆಯನ್ನು ಸ್ಥಾಪಿಸಲಾಯಿತು.[೨೭] ಈ ಪಡೆಯು ಅತ್ಯಂತ ಶಿಸ್ತುಬದ್ಧ ವಾದ, ಸಮರ್ಪಕವಾಗಿ ಕವಾಯತು, ತರಬೇತಿಯನ್ನು ಪಡೆದ ಮತ್ತು ಸಮರ್ಥವಾಗಿ ಶಸ್ತ್ರಾಸ್ತ್ರಗಳನ್ನು ಬಳಸಬಲ್ಲ ಸಿಬ್ಬಂದಿ ಗಳನ್ನು ಒಳಗೊಂಡಿತ್ತು. ಇವರುಗಳು ಸಂಘಟಿತ ಅಪರಾಧಗಳ ತಡೆ ಮತ್ತು ರಾಜ್ಯದ ಯಾವುದೇ ಮೂಲೆಯಲ್ಲಿ ನಡೆಯುವ ದೊಂಬಿಗಳನ್ನು ತಡೆಯಬಲ್ಲ ಶಕ್ತಿವುಳ್ಳವರಾಗಿದ್ದರು. ಈ ಪಡೆಯ ಮುಖ್ಯ ಉದ್ದೇಶವೇನೆಂದರೆ, ಯಾವುದೇ ಸಂದರ್ಭದಲ್ಲಿಯೂ ಸರಕಾರದ ವಿರುದ್ಧ ನಡೆಯುವ ದೊಂಬಿ, ಗಲಾಟೆ, ಪ್ರತಿಭಟನೆಗಳನ್ನು ಹತ್ತಿಕ್ಕುವುದಾಗಿತ್ತು. ಐ.ಜಿ.ಪಿ ಯವರಾಗಿದ್ದ ಶ್ರೀ.ಆರ್.ಎಲ್.ರಿಕೇಟ್ಸ್‌ರವರು ಈ ವಿಶೇಷ ಮೀಸಲು ಪೊಲೀಸ್ ಪಡೆಯು " ಪೊಲೀಸ್ ಕರ್ತವ್ಯ ದಲ್ಲಿರುವ ಒಂದು ಸೇನೆಯ ಘಟಕವಿದ್ದಂತೆ ಇರಬೇಕು" ಎಂದು ಅಭಿಪ್ರಾಯಪಟ್ಟಿದ್ದರು. ಈ ಪಡೆಯ ರಚನೆಯ ಉದ್ದೇಶ ವೇನೆಂದರೆ, ರಾಜ್ಯದ ಯಾವುದೇ ಮೂಲೆಯಲ್ಲಿ ನಡೆಯುವ ದೊಂಬಿ, ಸಮಾಜದ ಶಾಂತಿಯನ್ನು ಕದಡುವಂತಹ ವಿಶೇಷ ಘಟನೆಗಳು, ಗಡಿಪ್ರದೇಶದಲ್ಲಿ ನಡೆಯುವಂತಹ ದಾಳಿಗಳನ್ನು ಮತ್ತು ಯಾವುದೇ ತುರ್ತು ಸಂದರ್ಭಗಳಲ್ಲಿ ಕರ್ತವ್ಯಕ್ಕೆ ಒದಗಬೇಕೆಂಬುದಾಗಿತ್ತು. ಇವರು ಸದಾ ಸನ್ನದ್ಧರಾಗಿರಬೇಕಿತ್ತು. ಶ್ರೀ.ಆರ್.ಎಲ್.ರಿಕೇಟ್ಸ್‌ರವರು ಶಿವಮೊಗ್ಗದ ಡೆಪ್ಯುಟಿ ಕಮಿಷನರ್‌ರವರಿಗೆ ಪತ್ರವನ್ನು ಬರೆದು ವಿಶೇಷ ಮೀಸಲು ಪೊಲೀಸ್ ಪಡೆಯನ್ನು ಕೇವಲ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸಿಕೊಳ್ಳಬೇಕೇ ವಿನಹ ಅವರನ್ನು ದೈನಂದಿನ ಸಾಮಾನ್ಯ ಕರ್ತವ್ಯಗಳಿಗೆ ಬಳಸಬಾರದೆಂದು ತಿಳಿಸಿದ್ದರು.

೧೮೯೦ ರಲ್ಲಿ ಈ ವಿಶೇಷ ಮೀಸಲು ಪಡೆಯಲ್ಲಿ ೧ ಇನ್ಸ್‌ಪೆಕ್ಟರ್, ೩ ಜನ ಡ್ರಿಲ್ ಸಾರ್ಜೆಂಟ್‌ಗಳು, ೩೧ ಜನ ಒಂದನೇ ದರ್ಜೆಯ ಕಾನ್‌ಸ್ಟೇಬಲ್‌ಗಳು, ೪೮ ಜನ ಎರಡನೇ ದರ್ಜೆಯ ಕಾನ್‌ಸ್ಟೇಬಲ್‌ಗಳು ಇದ್ದರು. ಈ ವಿಶೇಷ ಮೀಸಲು ಪೊಲೀಸ್ ಪಡೆಯವರು ಶಿವಮೊಗ್ಗ, ಮೈಸೂರು, ಬೆಂಗಳೂರು ನಗರಗಳಲ್ಲಿ ಯಾವ ಉದ್ದೇಶಕ್ಕಾಗಿ ನೇಮಕವಾಗಿದ್ದರೋ ಅದರ ಹೊರತಾದ ಕೆಲಸಗಳನ್ನು ಮಾಡುತ್ತಿದ್ದರು. ಇವರುಗಳನ್ನು ರಾಜ್ಯದ ಗಡಿಭಾಗಗಳಲ್ಲಿ ಗಸ್ತು ತಿರುಗಲು ಬಳಸುತ್ತಿದ್ದರು. ಪಕ್ಕದ ಸಂಸ್ಥಾನಗಳಿಗೆ ಹಾದುಹೋಗುವ ರಸ್ತೆಗಳಲ್ಲಿ ಸಂಘಟಿತ ಗುಂಪುಗಳ ಮತ್ತು ಡಕಾಯಿತರ ಚಲನ ವಲನಗಳನ್ನು ತಿಳಿದು ಕೊಳ್ಳಲು ಈ ಪಡೆಯ ಪೊಲೀಸರನ್ನು ಗಸ್ತು ತಿರುಗಲು ಕಳುಹಿಸುತ್ತಿದ್ದರು. ಇದು ಅವರ ನಿಗದಿತ ಕರ್ತವ್ಯಗಳಿಗೆ ಅಂದರೆ ಪಕ್ಕದ ಜಿಲ್ಲೆಗಳಾದ ಚಿತ್ರದುರ್ಗ ಕಡೂರಿನಂತಹ ಪ್ರದೇಶಗಳಿಂದ ಬರುವ ತುರ್ತು ಕರೆಗಳಿಗೆ ಸ್ಪಂದಿ ಸಲು ಸಾಧ್ಯವಾಗುತ್ತಿರಲಿಲ್ಲ. ಮೈಸೂರಿನ ವಿಶೇಷ ಪೊಲೀಸ್ ಪಡೆಯಂತೂ ಮೈಸೂರು ಅರಮನೆಯಲ್ಲಿ ನಡೆಯುವ ಎಲ್ಲಾ ವಿಶೇಷ ಮತ್ತು ಮುಖ್ಯ ಸಮಾರಂಭಗಳಲ್ಲಿ ಅರಮನೆಯಲ್ಲಿ ಕರ್ತವ್ಯಗಳನ್ನು ನಿರ್ವಹಿಸಬೇಕಿತ್ತು. ಅಲ್ಲದೇ ರಾಜಧಾನಿಗೆ ಗಣ್ಯ ವ್ಯಕ್ತಿಗಳು ಬೇಟಿ ಕೊಡುವ ಸಂದರ್ಭದಲ್ಲಿ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಬೇಕಿತ್ತು. ಅಷ್ಟೇ ಅಲ್ಲದೇ ಮೈಸೂರು ಮಹಾರಾಜರು ಬೇರೆ ಜಿಲ್ಲೆಗಳಿಗೆ ಹೋಗಿ ತಂಗುವ ಸಂದರ್ಭಗಳಲ್ಲಿ ಅವರ ಜೊತೆಯಲ್ಲಿ ಈ ಪಡೆಯ ಪೊಲೀಸರು ಕ್ಯಾಂಪ್ ಡ್ಯೂಟಿಗೆ ಹೋಗಬೇಕಿತ್ತು. ಅಷ್ಟೇ ಅಲ್ಲದೇ ದಸರಾ, ಮೊಹರಂನಂತಹ ವಿಶೇಷ ಹಬ್ಬಗಳ ಸಂದರ್ಭದಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಮತೀಯ ಸೌಹಾರ್ದವನ್ನು ಕಾಪಾಡಲು ಈ ಪಡೆಯನ್ನು ಬಳಸಿಕೊಳ್ಳಲಾಗುತ್ತಿತ್ತು. ಮತ್ತು ಇದರಲ್ಲಿಯ ಕವಾಯತನ್ನು ಹೇಳಿಕೊಡುವ ಅಧಿಕಾರಿಗಳನ್ನು ಕವಾಯತುಗಳನ್ನು ಕಲಿಸಿಕೊಡುವ ಸಲುವಾಗಿ ಕಸಬ ಮತ್ತು ತಾಲೂಕು ಪೊಲೀಸ್‌ಗಳಿಗೆ ಕಳುಹಿಸಿಕೊಡಲಾಗುತ್ತಿತ್ತು.[೨೮]

ಇದರೊಂದಿಗೆ ಈ ವಿಶೇಷ ಮೀಸಲು ಪಡೆಯ ಪೊಲೀಸರನ್ನು ಸರಕಾರಿ ಅಕ್ಕಿ ಉಗ್ರಾಣಗಳ ಕಾವಲಿಗೆ ಹಾಗೂ ಬೆಂಗಳೂರು ಮೈದಾನದಲ್ಲಿ ನಡೆಯುತ್ತಿದ್ದ ಶೀತ, ಜ್ವರ ಕ್ಯಾಂಪು (ಇನ್‌ಫ್ಲುಯನ್ಸಾ ಕ್ಯಾಂಪ್)ಗಳಿಗೂ ಕಳುಹಿಸಿ ಕೊಡಲಾಯಿತು. ಒಂದು ಭಾಗವನ್ನು ಕೋಲಾರ ಗೋಲ್ಡ್‌ಫೀಲ್ಡ್‌ಗೂ ಮತ್ತೊಂದು ಭಾಗವನ್ನು ದಾವಣಗೆರೆಯಲ್ಲಿ ಆಹಾರ ಧಾನ್ಯಗಳ ಕೊರತೆಯಿಂದಾಗಿ ನಡೆದ ಅಶಾಂತಿ ಪರಿಸ್ಥಿತಿಯನ್ನು ನಿಯಂತ್ರಿಸಲು ಸಲುವಾಗಿಯೂ ಕಳುಹಿಸಿಕೊಡಲಾಯಿತು. ಒಂದು ವಿಶೇಷ ಪಡೆಯನ್ನು ಶ್ರೀನಿವಾಸಪುರದಲ್ಲಿ ನಡೆದ ಸರಣಿ ಅಪರಾಧ ಪ್ರಕರಣಗಳನ್ನು ತಡೆಯುವ ಸಲುವಾಗಿ ಕಳುಹಿಸಿಕೊಡಲಾಯಿತು. ಮತ್ತೊಂದು ಪಡೆಯನ್ನು ಶಿವಮೊಗ್ಗದಲ್ಲಿದ್ದ ಕನ್ಯೇಶ್ವರರಾಮ ಎಂಬ ಕೊಲೆಗಾರ ನೊಬ್ಬನನ್ನು ಬಂಧಿಸುವ ಸಲುವಾಗಿ ಕಳುಹಿಸಿಕೊಡಲಾಯಿತು. ಈತನು ಮೈಸೂರು ರಾಜ್ಯದ ಒಳಗೂ ಮತ್ತು ಹೊರಗೂ ಹಲವಾರು ಕೊಲೆಗಳನ್ನು ಮಾಡಿದ್ದನು. ಈ ಪಡೆಯು ೧೯೧೯ರ ಆಗಸ್ಟ್‌ನಲ್ಲಿ ಆತನನ್ನು ಬಂಧಿಸುವವರೆಗೂ ಶಿವಮೊಗ್ಗದಲ್ಲಿಯೇ ಇತ್ತು.[೨೯] ಅಷ್ಟೇ ಅಲ್ಲದೇ ೧೯೧೯ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಈ ವಿಶೇಷ ಮೀಸಲು ಪೊಲೀಸ್ ಪಡೆಯ ಘಟಕ ಗಳನ್ನು ಮೈಸೂರು ರಾಜ್ಯದ ಕರಪುರ್, ಜೋಗ, ಕೆ.ಜಿ.ಎಫ್‌ಗಳಿಗೆ ವೈಸರಾಯ್‌ರವರು ಭೇಟಿ ನೀಡುವ ಸಂದರ್ಭದಲ್ಲಿ ವಿಶೇಷ ಕರ್ತವ್ಯಕ್ಕಾಗಿ ಕಳುಹಿಸಲಾಯಿತು.

ಬೆಂಗಳೂರಿನ ವಿಶೇಷ ಮೀಸಲು ಪೊಲೀಸ್ ಪಡೆಯವರು ಸಾಮಾಜಿಕ ಅಶಾಂತಿಗಳನ್ನು ತಡೆಯುವಂತಹ ಸಾಮರ್ಥ್ಯ ಹೊಂದಿದ್ದು, ಅಗತ್ಯಬಿದ್ದಾಗ ಸ್ಥಳೀಯ ಪೊಲೀಸರಿಗೆ ಈ ಕೆಲಸಗಳಲ್ಲಿ ಹಾಗೂ ಅಪರಾಧ ಪತ್ತೆಯಲ್ಲಿ ಸಹ ಕರಿಸುತ್ತಿದ್ದರು. ಅಷ್ಟೇ ಅಲ್ಲದೇ ಇವರುಗಳು ಗುಪ್ತ ಮಾಹಿತಿ ಸಂಗ್ರಹ ಹಾಗೂ ಸಂವಹನ ಮತ್ತು ಗಸ್ತು ಕಾರ್ಯಗಳು, ಗಡಿ ಕಾವಲು, ಆರ್ಡರ್ಲಿ ಕರ್ತವ್ಯಗಳು, ಕರಕುಶಲ ವಸ್ತುಗಳ ತಯಾರಿಕೆ, ಮರಗೆಲಸ, ಟೆಂಟುಗಳನ್ನು ಕಟ್ಟುವುದು ಮೊದಲಾದ ವಿಶೇಷ ಕೌಶಲ್ಯಗಳನ್ನು ಹೊಂದಿದ್ದರು.[೩೦] ಬೆಂಗಳೂರು ವಿಶೇಷ ಮೀಸಲು ಪೊಲೀಸ್ ಪಡೆಯವರನ್ನು ಅವರ ದೈನಂದಿನ ಕರ್ತವ್ಯಗಳ ಜೊತೆಗೆ ಮೈಸೂರು ದಸರಾ ಮತ್ತು ಇತರ ಮುಖ್ಯ ಸಂದರ್ಭಗಳಲ್ಲಿ ಕೆಲಸಕ್ಕೆ ಕಳುಹಿಸಲಾಗುತ್ತಿತ್ತು. ಬೆಂಗಳೂರಿನಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ನಡೆಯುವ ರೇಸ್‌ಗಳ ಕರ್ತವ್ಯಕ್ಕೆ ಕಳುಹಿಸಲಾಗುತ್ತಿತ್ತು. ಸೇನೆಯ ಫಿರಂಗಿದಳದಲ್ಲಿ ಪೊಲೀಸ್ ಕರ್ತವ್ಯಕ್ಕೂ ಸಹ ಇವರನ್ನು ಕರೆಸಲಾಗುತ್ತಿತ್ತು ಈ ಫಿರಂಗಿ ದಳವು ಆಗಾಗ ಬೆಂಗಳೂರಿನ ಯಶವಂತಪುರದಲ್ಲಿ ಸಮಾವೇಶಗೊಳ್ಳುತ್ತಿತ್ತು. ದಸರಾ ಮತ್ತು ಮೊಹರಂ ಸಂದರ್ಭಗಳಲ್ಲಿ ಸೂಕ್ಷ್ಮ ಪ್ರದೇಶವಾದ ಚನ್ನಪಟ್ಟಣಕ್ಕೂ ಸಹ ಈ ಪಡೆಯನ್ನು ಕಳುಹಿಸಲಾಗುತ್ತಿತ್ತು. ಅಪರೂಪಕ್ಕೊಮ್ಮೆ ರಾತ್ರಿ ಗಸ್ತು ಕರ್ತವ್ಯಗಳಿಗೂ ಹಾಗೂ ಕೆಲವು ವೇಳೆ ಖಾಂದಾರಿ ಮತ್ತು ಬೆಲುಜಿ ಗ್ಯಾಂಗುಗಳ ಬೆಂಗಾವಲಿಗೂ ಸಹ ಈ ಪಡೆಯನ್ನು ಕಳುಹಿಸಲಾಗುತ್ತಿತ್ತು.[೩೧]

ಪ್ರತೀ ಜಿಲ್ಲಾ ಮಟ್ಟದಲ್ಲೂ ಅವರದೇ ಆದ ಒಂದೊಂದು ಮಿಸಲು ಪೊಲೀಸ್ ಪಡೆಗಳು ಜಿಲ್ಲಾ ಕೇಂದ್ರಗಳಲ್ಲಿ ಇದ್ದವು. ಆದರೆ ಈ ಮೀಸಲು ಪೊಲೀಸ್ ಪಡೆಯು ಸಂಸ್ಥಾನದ ಎಲ್ಲಾ ಭಾಗಗಳಲ್ಲಿ ಹರಿದು ಹಂಚಿಹೋಗಿದ್ದರಿಂದ ತುರ್ತು ಸಂದರ್ಭಗಳಲ್ಲಿ ನಿಗಧಿತ ಗುರಿಯನ್ನು ತಲುಪಲು ಈ ಪಡೆಯನ್ನು ಒಟ್ಟಿಗೆ ಸೇರಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಐ.ಜಿ.ಪಿ. ಶ್ರೀ.ಎಲ್.ರಿಕೆಟ್ಸ್‌ರವರು ಈ ಪಡೆಯು ಅತ್ಯಂತ ಪರಿಣಾಮಕಾರಿಯಾದಂತಹ ಪಡೆಯಾಗಿಲ್ಲ ಆದ್ದರಿಂದ ಈ ಪಡೆಗಳನ್ನು ಜಿಲ್ಲಾಕೇಂದ್ರದಲ್ಲಿಯೇ ಇರಿಸಿ ಅಪರಾಧ ತಡೆ ಮತ್ತು ಪತ್ತೆ ಮತ್ತು ವಿಶೇಷ ಸಂದರ್ಭ ಗಳಿಗೆ ಬಳಸಿಕೊಳ್ಳಬೇಕೆಂದು ಸೂಚಿಸಿದರು.[೩೨] ಸರಕಾರವೂ ಸಹ ಈ ಮೀಸಲು ಪಡೆಯ ಪೊಲೀಸರನ್ನು ಯಾವ ಕರ್ತವ್ಯಗಳಿಗೆ ನೇಮಿಸಲಾಗಿದೆಯೋ ಅದೇ ಕರ್ತವ್ಯಕ್ಕೆ ಅವರನ್ನು ಬಳಸಿಕೊಳ್ಳಬೇಕೆಂದು ಸೂಚಿಸಿತು.[೩೩]

೧೮೯೭ ರಲ್ಲಿ ಐಜಿಪಿರವರು ತುಮಕೂರು ಜಿಲ್ಲೆಯಲ್ಲಿ ನಡೆಯುವಂತಹ ಡಕಾಯತಿಗಳು, ಹಿಂಸಾಚಾರಗಳು, ನೆರೆ ರಾಜ್ಯವಾದ ಹೈದರಾಬಾದ್‌ನಿಂದ ಬರುವಂತಹ ಅಪರಾಧಿಗಳು ಇವುಗಳನ್ನೆಲ್ಲಾ ನಿಬಾಯಿಸಲು ಪ್ರತೀ ಪೊಲೀಸ್

ಠಾಣೆಗಳಿಂದ ಕೆಲವು ಸಿಬ್ಬಂದಿಗಳನ್ನು ತೆಗೆದು ಒಂದು ವಿಶೇಷ ಮೀಸಲು ಪಡೆಯನ್ನು ರಚಿಸಬೇಕೆಂದು ಸೂಚಿಸಿದರು.[೩೪] ಇವರು ಸರಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿ ಈ ಮೀಸಲು ಪಡೆಗೆ ಒಬ್ಬ ಇನ್ಸ್‌ಪೆಕ್ಟರ್, ಒಂದು ಸಾರ್ಜೆಂಟ್ ಮತ್ತು ಹತ್ತು ಜನ ಕಾನ್‌ಸ್ಟೇಬಲ್‌ಗಳಿಗೆ ಮಾಸಿಕ ರೂ ೧೦ ಸಂಬಳ ನೀಡಿ ಹಾಗೂ ೨೦ ಕಾನ್ ಸ್ಟೇಬಲ್‌ಗಳಿಗೆ ಮಾಸಿಕ ರೂ ೯ ಸಂಬಳ ನೀಡಿ ಮಂಜೂರಾತಿ ನೀಡಬೇಕೆಂದು ಮತ್ತು ಡೆಪ್ಯುಟಿ ಕಮಿಷನರ್‌ರವರಿಗೆ ತಾಲೂಕು ಪೊಲೀಸ್ ಠಾಣೆಗಳಿಂದ ಕಾನ್‌ಸ್ಟೇಬಲ್‌ಗಳನ್ನು ತೆಗೆದು ಈ ಪಡೆಗೆ ಭರ್ತಿಮಾಡಿಕೊಳ್ಳಲು ಅಧಿಕಾರ ನೀಡಬೇಕೆಂದು ಮನವಿ ಮಾಡಿದರು. ಇದನ್ನು ಸರಕಾರವು ಅಂಗೀಕರಿಸಿತು.[೩೫]

ಭಾರತೀಯ ಪೊಲೀಸ್ ಆಯೋಗವು ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಸುಸಜ್ಜಿತವಾದ ಶಸ್ತ್ರಾಸ್ತ್ರಗಳನ್ನು ಹೊಂದಿದ ಒಂದು ಮೀಸಲು ಪೊಲೀಸ್ ಪಡೆಯು ಇರುವುದು ಅವಶ್ಯಕವೆಂಬುದನ್ನು ವಿಶೇಷ ಒತ್ತು ನೀಡಿ ಹೇಳಿತು. ಅದರಂತೆ ಐ.ಜಿ.ಪಿ ರವರು ಜಿಲ್ಲಾ ಪೊಲೀಸ್ ಮೀಸಲು ಪಡೆಯನ್ನು ಬಲಪಡಿಸುವ ಸಲುವಾಗಿ ೧೯೦೮ ರಲ್ಲಿ ಸರಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿದರು. ಜಿಲ್ಲಾ ಮಟ್ಟದಲ್ಲಿ ಬೇರೆ ಬೇರೆ ಕರ್ತವ್ಯಗಳಿಗೆ ಬರುವ ಬೇಡಿಕೆಗಳು ಮತ್ತು ಎಲ್ಲಾ ಮನೆಗೆಲಸ (ಆರ್ಡರ್ಲಿ)ಗಳ ಅವಶ್ಯಕತೆಯನ್ನು ನಿಬಾಯಿಸುವಂತೆ ಜಿಲ್ಲಾ ಮೀಸಲು ಪಡೆಯನ್ನು ಬಲ ಪಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದರು. ಈ ಪಡೆಯ ಸಿಬ್ಬಂದಿಯವರು ಡಕಾಯಿತಿ, ದೊಂಬಿ, ಅಕ್ರಮ ಕೂಟಗಳು, ಬೆಂಕಿ ಅನಾಹುತಗಳು ಮೊದಲಾದ ತುರ್ತು ಸಂದರ್ಭಗಳಲ್ಲಿ ಸಮರ್ಥವಾಗಿ ಕೆಲಸ ಮಾಡಲು ಸಿದ್ಧರಿರಬೇಕಿತ್ತು. ಭಾರತೀಯ ಪೊಲೀಸ್ ಕಮಿಷನ್‌ನ ಸೂಚನೆ ಗಳ ಆಧಾರದ ಮೇರೆಗೆ ಐ.ಜಿ.ಪಿ ರವರು ಅಗತ್ಯಗಳಿಗೆ ಅನುಗುಣವಾಗಿ ಜಿಲ್ಲಾ ಮೀಸಲು ಪಡೆಯ ಗಾತ್ರಗಳನ್ನು ಸೂಚಿಸಿ ಪಡೆಯನ್ನು ಬಲಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿದರು. ಆ ಪ್ರಸ್ತಾವನೆಯಲ್ಲಿ ಪ್ರತೀ ಜಿಲ್ಲಾ ಮೀಸಲು ಪಡೆಯು ಮೂರು ಜಮೇದಾರರು, ಆರು ಅಥವಾ ಏಳು ಜನ ದಫೇದಾರರು, ೪೦ ಅಥವಾ ೫೦ ಅಥವಾ ೬೦ ಕಾನ್‌ಸ್ಟೇಬಲ್‌ಗಳು ಇರ ಬೇಕೆಂತಲೂ ಮತ್ತು ಶಿವಮೊಗ್ಗ, ಚಿತ್ರದುರ್ಗ ಮತ್ತು ತುಮಕೂರು ಮೀಸಲು ಪಡೆಗಳಿಗೆ ೬೦ ಜನ ಸಿಬ್ಬಂದಿ ಇರ ಬೇಕೆಂತಲೂ, ಹಾಸನ ಮತ್ತು ಕಡೂರು ಜಿಲ್ಲಾ ಮೀಸಲು ಪಡೆಗೆ ೫೦ ಜನ ಸಿಬ್ಬಂದಿ ಇರಬೇಕೆಂತಲೂ, ಕೋಲಾರ ಜಿಲ್ಲೆಗೆ ೪೦ ಜನ ಸಿಬ್ಬಂದಿ ಇರಬೇಕೆಂತಲೂ ಪ್ರಸ್ತಾವನೆಯನ್ನು ಸಲ್ಲಿಸಿದರು.[೩೬]

ಈ ಸಂದರ್ಭದಲ್ಲಿ ಪ್ರಾಂತೀಯ ಮೀಸಲು ಪೊಲೀಸ್ ಪಡೆಯನ್ನು ನಿರ್ವಹಿಸುವ ಬಗ್ಗೆ ಚರ್ಚೆಯಾಯಿತು. ೧೩ ಜನ ಅಧಿಕಾರಿಗಳು ಮತ್ತು ೧೮೩ ಜನ ಸಿಬ್ಬಂದಿಗಳು ಅದರಲ್ಲಿದ್ದರು. ಐ.ಜಿ.ಪಿ ರವರು ಈ ಪಡೆಯಿಂದ ಸಿಬ್ಬಂದಿಗಳನ್ನು ಕಡಿತಗೊಳಿಸಬಾರದೆಂದು ಅಭಿಪ್ರಾಯಪಟ್ಟರು. ಇದಕ್ಕೆ ಪೂರಕವಾಗಿ ೩೦ ಜನ ಅಧಿಕಾರಿಗಳು ಮತ್ತು ೨೦ ಜನ ಸಿಬ್ಬಂದಿ ಗಳನ್ನು ಒಳಗೊಂಡ ಸಂಸ್ಥಾನದ ಮೀಸಲು ಪಡೆಯನ್ನು ಬೆಂಗಳೂರಿನಲ್ಲಿದ್ದ ರಾಜ್ಯದ ಖಜಾನೆ ಯನ್ನು ಕಾಯುವ ಕರ್ತವ್ಯಕ್ಕೆ ನೇಮಿಸಿದರು. ಶಿವಮೊಗ್ಗ, ಚಿತ್ರದುರ್ಗ, ಹಾಸನ, ತುಮಕೂರು, ಕಡೆಗಳಲ್ಲಿ ಜಿಲ್ಲಾ ವಿಶೇಷ ಮೀಸಲು ಪೊಲೀಸ್ ಪಡೆ ಯವರು ಆಯಾ ಜಿಲ್ಲಾ ಖಜಾನೆಗಳನ್ನು ಕಾಯಬೇಕೆಂದು ಸೂಚಿಸಿದರು. ಬಾರ್ ಪಡೆಯಿಂದ ಪೊಲೀಸರಿಗೆ ಖಜಾನೆ ಕಾಯುವ ಕರ್ತವ್ಯವನ್ನು ವರ್ಗಾವಣೆ ಮಾಡಿದ್ದರಿಂದ ಸರಕಾರಕ್ಕೆ ವಾರ್ಷಿಕ ರೂ ೮,೦೦೦ ಉಳಿತಾಯವಾಯಿತು. ಈ ಹಣದಲ್ಲಿ ಹೆಚ್ಚುವರಿ ಪೊಲೀಸರನ್ನು ಒದಗಿಸುವಂತೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು.

ಸಂಸ್ಥಾನದ ಮೀಸಲು ಪಡೆಯ ಸಂಪೂರ್ಣ ಬಲವನ್ನು ಹಾಗೆಯೇ ಕಾಯ್ದುಕೊಳ್ಳಬೇಕೆಂದು ಐಜಿಪಿರವರು ಅಭಿಪ್ರಾಯಪಟ್ಟರು. ಏಕೆಂದರೆ, ಬೆಂಗಳೂರು ಜಿಲ್ಲಾ ಪೊಲೀಸರು ಆಗಾಗ ಸಂಸ್ಥಾನದ ಮೀಸಲು ಪಡೆಯಿಂದ ಸಿಬ್ಬಂದಿ ಯನ್ನು ಎರವಲು ಪಡೆಯುತ್ತಿದ್ದರು. ಆದ್ದರಿಂದ ಈ ಜಿಲ್ಲೆಗೆ ವಿಶೇಷವಾದ ಮೀಸಲು ಪೊಲೀಸ್ ಪಡೆ ಅಗತ್ಯ ವಿಲ್ಲವೆಂದು ಅಭಿಪ್ರಾಯಪಟ್ಟರು. ಮೈಸೂರಿನಲ್ಲಿರುವ ಪ್ರಾಂತೀಯ ಮೀಸಲು ಪೊಲೀಸ್ ಪಡೆಯು ಡೆಪ್ಯುಟಿ ಕಮಿಷನರ್‌ರವರ

ನಿಯಂತ್ರಣದಲ್ಲಿದ್ದು, ಪ್ರೆಂಚ್‌ರಾಕ್ ಸರ್ಕಲ್‌ಗೆ ಹೊರತುಪಡಿಸಿ ಮೈಸೂರು ಜಿಲ್ಲೆಗೂ ಸಹ ಮೀಸಲು ಪೊಲೀಸ್ ಪಡೆಯ ಅಗತ್ಯವಿಲ್ಲವೆಂದು ಅಭಿಪ್ರಾಯಪಡಲಾಯಿತು. ಪ್ರೆಂಚ್ ರಾಕ್ ಸರ್ಕಲ್‌ಗೆ ಇಬ್ಬರು ದಫೇದಾರರು, ೧೨ ಜನ ಸಿಬ್ಬಂದಿಗಳ ಮೀಸಲು ಪಡೆ ರಚಿಸಲು ಪ್ರಸ್ತಾಪಿಸಲಾಯಿತು.[೩೭]

ಮೀಸಲು ಪೊಲೀಸ್ ಪಡೆಯಲ್ಲಿದ್ದ ೫೮ ದಫೇದಾರರು, ೪೧೩ ಜನ ಕಾನ್‌ಸ್ಟೇಬಲ್‌ಗಳ ಸಂಖ್ಯೆಯಲ್ಲಿ ೧೬ ದಫೇದಾರರು ಮತ್ತು ೧೮೯ ಜನ ಕಾನ್‌ಸ್ಟೇಬಲ್‌ಗಳನ್ನು ಕಡಿತಗೊಳಿಸುವಂತೆ ಐ.ಜಿ.ಪಿ ರವರು ಪ್ರಸ್ತಾಪಿಸಿದರು. ನಿವೃತ್ತಿ ಹೊಂದಿದವರನ್ನು ಹೊರತುಪಡಿಸಿ ಜಿಲ್ಲಾ ಮೀಸಲು ಪೊಲೀಸ್ ಪಡೆಗಳಲ್ಲಿ ೪೨ ಜನ ಅಧಿಕಾರಿಗಳು, ೩೦೪ ಜನ ಸಿಬ್ಬಂದಿಗಳು ಉಳಿದುಕೊಂಡಿದ್ದರು. ಮೀಸಲು ಪಡೆಯಲ್ಲಿ ಎರಡು ಭಾಗಗಳಿದ್ದು, ಆರ್ಡರ್ಲಿ ವಿಭಾಗದಲ್ಲಿ ೨೮ ಜನ ದಫೇದಾರರು ಮತ್ತು ೧೮೦ ಸಿಬ್ಬಂದಿಗಳು, ಸಶಸ್ತ್ರ ತುರ್ತು ಮೀಸಲು ಪಡೆಯಲ್ಲಿ ೧೪ ದಫೇದಾರರು ಮತ್ತು ೧೨೪ ಜನ ಸಿಬ್ಬಂದಿಗಳು ಉಳಿದುಕೊಂಡರು.[೩೮]

ಸರಕಾರವು ವಿಶೇಷ ಮೀಸಲು ಪೊಲೀಸ್ ಪಡೆಗೆ ಖಾಯಂ ಸಿಬ್ಬಂದಿಗಳು ಇರಬೇಕೆಂದು ಕಳುಹಿಸಿದ ಪ್ರಸ್ತಾವನೆಯನ್ನು ಅಂಗೀಕರಿಸಿತು. ಜಿಲ್ಲಾ ತುರ್ತು ಮೀಸಲು ಪಡೆಯನ್ನು ಒಳಗೊಂಡಂತೆ ೩೭ ಅಧಿಕಾರಿಗಳು, ೪೮೬ ಜನ ಸಿಬ್ಬಂದಿಗಳು ಈ ಪಡೆಯಲ್ಲಿ ಖಾಯಂ ಆಗಿರುವಂತೆ ಆದೇಶಿಸಿತು. ಅಷ್ಟೇ ಅಲ್ಲದೇ ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಯನ್ನು ಮಾಸಿಕ ರೂ ೨೦೦-೧೦-೨೫೦ ಜೊತೆಗೆ ಕುದುರೆ ಭತ್ಯೆ ರೂ ೨೫ ನ್ನು ನೀಡಿ ನೇಮಿಸಿತು. ಇದರಿಂದಾಗಿ ವಿಶೇಷ ಮೀಸಲು ಪಡೆಯ ಶಾಶ್ವತವಾಗಿ ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಒಬ್ಬರು ಇನ್ಸ್‌ಪೆಕ್ಟರ್, ೮ ಸುಬೇದಾರರು, ೧೦ ಜನ ಹವಾಲ್ದಾರರು, ೧೬ ನಾಯಕ್ಸ್, ೪೮೬ ಜನ ಕಾನ್‌ಸ್ಟೇಬಲ್‌ಗಳು ಮತ್ತು ಒಬ್ಬರು ಗುಮಾಸ್ತನನ್ನು ಒಳಗೊಂಡಿತ್ತು.

೧೯೩೧ ರಲ್ಲಿ ಸಂಸ್ಥಾನದ ಮೀಸಲು ಪೊಲೀಸ್ ಪಡೆಯನ್ನು ಬಲಗೊಳಿಸಲಾಯಿತು. ಅದಕ್ಕೆ ಒಬ್ಬರು ಇನ್ಸ್‌ಪೆಕ್ಟರ್, ಇಬ್ಬರು ಸುಬೇದಾರ್ ಮೇಜರ್‌ಸ್ರವರನ್ನು ಮಾಸಿಕ ರೂ ೪೦-೨-೫೦ ನ್ನು ನೀಡಿ ಮತ್ತು ೧೦ ಜನ ಹವಾಲ್ದಾರ್, ೪ ಜನ ನಾಯಕ್ಸ್ ಮತ್ತು ೩೮ ಕಾನ್‌ಸ್ಟೇಬಲ್‌ಗಳನ್ನು ಸೇರಿಸಲಾಯಿತು.[೩೯] ಈ ಕೆಳಗಿನಂತೆ ಸಂಸ್ಥಾನದ ಮೀಸಲು ಪಡೆಯನ್ನು ವಿಂಗಡಿಸಲಾಯಿತು. ೪೮ ಜನ ಕಾನ್‌ಸ್ಟೇಬಲ್‌ಗಳನ್ನು ಕೆ.ಜಿ.ಎಫ್ ಮತ್ತು ಮೈಸೂರಿಗೂ ೨೪ ಜನ ಕಾನ್‌ಸ್ಟೇಬಲ್‌ಗಳನ್ನು ಪ್ರತೀ ಜಿಲ್ಲಾ ಕೇಂದ್ರಕ್ಕೂ ಮತ್ತು ದಾವಣಗೆರೆಗೂ, ಉಳಿದ ಕಾನ್‌ಸ್ಟೇಬಲ್‌ಗಳನ್ನು ಬೆಂಗಳೂರು ನಗರಕ್ಕೂ ವಿಂಗಡಿಸಲಾಯಿತು. ಈ ಪಡೆಯನ್ನು ಪುನರ್‌ಸಂಘಟಿಸಲಾಯಿತು. ಒಟ್ಟು ೪೮೦ ಜನ ಕಾನ್‌ಸ್ಟೇಬಲ್‌ಗಳಿದ್ದು ಅದನ್ನು ೧೦ ಕಂಪೆನಿಗಳಿಗೆ ವಿಭಾಗಿಸಲಾಯಿತು. ಪ್ರತಿಯೊಂದು ಕಂಪನಿಯಲ್ಲಿಯೂ ೪೮ ಜನ ಸಿಬ್ಬಂದಿಗಳು, ಒಬ್ಬರು ಸುಬೇದಾರ್, ಇಬ್ಬರು ಹವಾಲ್ದಾರ್ ಮತ್ತು ಇಬ್ಬರು ನಾಯಕರುಗಳನ್ನು ಒಳಗೊಂಡಿತು. ಸಂಸ್ಥಾನದ ಮೀಸಲು ಪೊಲೀಸ್ ಪಡೆಗೆ ಹೆಚ್ಚುವರಿಯಾಗಿ ೫ ಜನ ನಾಯಕ್ಸ್ ಮತ್ತು ೧೧ ಜನ ಕಾನ್‌ಸ್ಟೇಬಲ್‌ಗಳನ್ನು ನೇಮಿಸಲಾಯಿತು.[೪೦]

ಬೆಂಗಳೂರು ನಗರದೊಳಗೆ ಇರುವ ಅಗರಂ ಕ್ಯಾಂಪ್‌ನಲ್ಲಿ ಒಬ್ಬ ದಫೇದಾರ್, ಆರು ಜನ ಕಾನ್‌ಸ್ಟೇಬಲ್‌ಗಳು ಯಾವಾಗಲೂ ಇರುವಂತೆ ನೋಡಿಕೊಂಡು ಅಲ್ಲಿದ್ದ ಪ್ರಾಂತೀಯ ಮೀಸಲು ಪಡೆಯ ಪೊಲೀಸರನ್ನು ಬಿಡುಗಡೆ ಗೊಳಿಸಲಾಯಿತು. ಮೀಸಲು ಪೊಲೀಸ್ ಪಡೆಯ ಖಾಯಂ ಸಿಬ್ಬಂದಿ ಮತ್ತು ಅಧಿಕಾರಿಗಳು ಈ ಕೆಳಗಿನಂತೆ ಇದ್ದರು. ೪ ಜನ ಇನ್ಸ್‌ಪೆಕ್ಟರ್, ಮೂರು ಜನ ಸುಬೇದಾರ್ ಮೇಜರ್ಸ್, ೯ ಸುಬೇದಾರ್ಸ್. ೩೧ ಹವಾಲ್ದಾರ್, ೫೧ ನಾಯಕ್ ಮತ್ತು ೬೪೧ ಜನ ಪೊಲೀಸ್ ಕಾನ್‌ಸ್ಟೇಬಲ್‌ಗಳು ಇದ್ದರು. ತಾತ್ಕಾಲಿಕ ಸಿಬ್ಬಂದಿಗಳಾಗಿ ೯ ಇನ್ಸ್‌ಪೆಕ್ಟರ್, ೮ ಸುಬೇದಾರ್ ಮೇಜರ್ಸ್, ೪೨ ಸುಬೇದಾರ್ಸ್, ೬೭ ಹವಾಲ್ದಾರ್ಸ್, ೯೪ ನಾಯಕ್ಸ್ ಮತ್ತು ೧೨೧೧ ಕಾನ್‌ಸ್ಟೇಬಲ್‌ಗಳು ಇದ್ದರು. ಅಧೀನ

ಪೊಲೀಸ್ ಸಿಬ್ಬಂದಿಗಳಿಗೆ ವೇತನವನ್ನು ಸಹ ಪರಿಷ್ಕರಿಸಲಾಯಿತು. ಸರಕಾರವು ಅಧೀನ ಪೊಲೀಸ್ ಸಿಬ್ಬಂದಿಂಗಳಿಗೆ ಈ ಕೆಳಗಿನಂತೆ ವೇತನ ನಿಗಧಿಪಡಿಸಿತು.[೮೦] ಕಾನ್‌ಸ್ಟೇಬಲ್‌ಗಳಿಗೆ ಮೂಲ ವೇತನ ರೂ ೧೮ ಮತ್ತು ವೇತನ ಭಡ್ತಿ ರೂ ೧, ಮೂರು ವರ್ಷ ಖಾಯಂ ಸೇವೆ ಆದ ನಂತರ ೨೨ ರೂಪಾಯಿಗಳವರೆಗೂ ವೇತನ ಭಡ್ತಿಯನ್ನು ನೀಡಲಾಗುತ್ತಿತ್ತು. ಸ್ಥಳೀಯ ಭತ್ಯೆಯಾಗಿ ತಿಂಗಳಿಗೆ ೨ ರೂಪಾಯಿ ಮತ್ತು ಸಮವಸ್ತ್ರ ಭತ್ಯೆಯಾಗಿ ೧ ರೂ, ಒಂದು ವರ್ಷ ಸೇವೆಯ ನಂತರ ವಿಶೇಷ ಮೀಸಲು ಭಡ್ತಿಯಾಗಿ ತಿಂಗಳಿಗೆ ೩ ರೂಪಾಯಿ ಪಡೆಯುತ್ತಿದ್ದರು. ಸ್ಥಳೀಯ ಭತ್ಯೆ ರೂ ೨ ನ್ನು ಕಾನ್‌ಸ್ಟೇಬಲ್‌ಗಳು ಯಾವುದೇ ಸ್ಥಳಕ್ಕೂ ನಿಯೋಜಿತಗೊಂಡರೂ ನೀಡಲಾಗುತ್ತಿತ್ತು. ಯಾವ ಸಿಬ್ಬಂದಿಗಳಿಗೆ ವಸತಿ ಗೃಹವನ್ನು ಒದಗಿಸಲ್ಲವೋ ಅವರಿಗೆ ಮಾಸಿಕ ರೂ ೨ ಮನೆ ಭತ್ಯೆ ಬಾಡಿಗೆ ನೀಡಲಾಗುತ್ತಿತ್ತು. ನಾಯಕ್‌ರವರುಗಳಿಗೆ ಮೂಲ ವೇತನ ರೂ ೩೦ ಇತ್ತು. ೨ ನೇ ದರ್ಜೆಯ ದಫೇದಾರರುಗಳಿಗೂ ಸಹ ಮೂಲವೇತನ ೩೦ ರೂಪಾಯಿ ಗಳಾಗಿತ್ತು. ಇವರುಗಳಿಗೆ ಸಮವಸ್ತ್ರ ಭತ್ಯೆಯಾಗಿ ರೂ ೨, ಮನೆಬಾಡಿಗೆ ಭತ್ಯೆ ರೂ ೫, ಸಶಸ್ತ್ರ ಮೀಸಲು ಭತ್ಯೆಯಾಗಿ ರೂ ೫ ನ್ನು ಮಾಸಿಕವಾಗಿ ನೀಡಲಾಗುತ್ತಿತ್ತು. ಹವಾಲ್ದಾರರುಗಳಿಗೆ ೩೫ ರೂ ಮೂಲವೇತನ ಇದ್ದರೆ, ಸಮವಸ್ತ್ರ ವೇತನ ರೂ. ೨, ಮನೆ ಬಾಡಿಗೆ ಭತ್ಯೆ ರೂ ೫, ಸಶಸ್ತ್ರ ಮೀಸಲು ಭತ್ಯೆ ರೂ ೫ ನ್ನು ಮಾಸಿಕವಾಗಿ ನೀಡಲಾಗುತ್ತಿತ್ತು. ಸುಬೇದಾರರುಗಳಿಗೆ ವೇತನ ಶ್ರೇಣಿಯು ರೂ. ೪೦-೧-೫೦ ಮತ್ತು ಸುಬೇದಾರ್ ಮೇಜರ್‌ರವರಿಗೆ ರೂ. ೬೦-೫-೯೦ ಆಗಿತ್ತು. ೧೯೪೭ ರಲ್ಲಿ ಭಾರತವು ಸ್ವಾತಂತ್ರ್ಯಗೊಳ್ಳುವ ವೇಳೆಗೆ ಸಮರ್ಪಕ ಕೆಲಸವನ್ನು ಮಾಡುವ ಉದ್ದೇಶದಿಂದ ಈ ಮೀಸಲು ಪಡೆಯನ್ನು ಸಣ್ಣ ಘಟಕಗಳಾಗಿ ವಿಭಾಗಿಸಲಾಗಿತ್ತು.

೧೯ ನೇ ಶತಮಾನದ ಅಂತ್ಯದ ವೇಳೆ ಮೈಸೂರು ಪೊಲೀಸ್ ವ್ಯವಸ್ಥೆ ರೆವಿನ್ಯೂ ಅಧಿಕಾರಿಗಳ ನಿಯಂತ್ರಣ ದಲ್ಲಿತ್ತು. ಜಿಲ್ಲಾ ಸಶಸ್ತ್ರ ಮೀಸಲು ಪಡೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಸಶಸ್ತ್ರ ಮೀಸಲು ಪಡೆಯ ಕೆಲಸ ವೇನೆಂದರೆ ಮೈಸೂರು ನಗರದಲ್ಲಿ ವಿದೇಶಿ ಗಣ್ಯವ್ಯಕ್ತಿಗಳು ಆಗಮಿಸಿದಾಗ ಇವರುಗಳಿಗೆ ವಿಶೇಷ ಕರ್ತವ್ಯಕ್ಕೆ ನೇಮಿಸ ಲಾಗುತ್ತಿತ್ತು ಮತ್ತು ಇವರು ಮೈಸೂರು ಮಹಾರಾಜರ ಅಂಗರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.[೮೨] ಮಹಾರಾಜರು ಅರಮನೆಯಿಂದ ಹೊರಗೆ ಸಂಚರಿಸುವಾಗ ದಸರಾ ಮತ್ತು ಮೊಹರಂ ನಂತಹ ಸಂದರ್ಭಗಳಲ್ಲಿ ಈ ಪಡೆಗೆ ಹೆಚ್ಚಿನ ಕೆಲಸಗಳು ಇರುತ್ತಿತ್ತು. ಈ ಪಡೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸರಕಾರವು ಅವರಿಗೆ ಕುದುರೆಗಳನ್ನು ನೀಡಿತ್ತು. ೧೮೯೪ ರಲ್ಲಿ ವಿಶೇಷ ಮೀಸಲು ಪೊಲೀಸ್ ಪಡೆಯನ್ನು ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ರಚಿಸಲಾಯಿತು. ಮೈಸೂರು ಸಂಸ್ಥಾನದಿಂದ ಈ ಪಡೆಗೆ ಆಗುವ ಖರ್ಚು ವೆಚ್ಚಗಳ ಬಗ್ಗೆ ಹಣವನ್ನು ಹೆಚ್ಚಿಗೆ ನೀಡ ಲಾಯಿತು.

೭. ೩-೧ :- ಪ್ರಹಾರ ದಳ ಮತ್ತು ವಿಶೇಷ ಪೊಲೀಸ್. (Punitive and special police)

ಜನವರಿ ೩ ೧೮೯೧ ರಂದು ನಂಜನಗೂಡು ತಾಲೂಕಿನ 'ಕಿರಗುಂಡ' ಎಂಬ ಹಳ್ಳಿಯಲ್ಲಿ ಒಬ್ಬ ಅಕ್ಕಸಾಲಿಗನ ಮದುವೆ ಸಮಯದಲ್ಲಿ ಭಾರಿ ಗಲಭೆಯಾಯಿತು. ಈ ಗ್ರಾಮಸ್ಥರ ನಡವಳಿಕೆಯ ಅತ್ಯಂತ ಮೊಂಡುತನದಿಂದ ಕೂಡಿತ್ತು. ೧ ದಫೇದಾರ ಮತ್ತು ೬ಜನ ಕಾನ್‌ಸ್ಟೇಬಲ್‌ರನ್ನು ಒಳಗೊಂಡ ವಿಶೇಷ ಪ್ರಹಾರದಳವು ಒಬ್ಬ ಸಿಬ್ಬಂದಿಗೆ ೪೮ ರೂಪಾಯಿಗಳ ವೆಚ್ಚದಲ್ಲಿ ಗ್ರಾಮಸ್ಥರ ನಿವಾಸಿಗಳ ಆಶ್ರಯದಲ್ಲಿ ೧೮೯೧ ರ ಜನವರಿ ೧ ನೇ ತಾರೀಕಿನಿಂದ ಆರು ತಿಂಗಳು ಗ್ರಾಮದಲ್ಲಿ ಠಿಕಾಣಿ ಹೂಡಿತ್ತು.[೮೩] *(ದಸರಾ ಮೆರವಣಿಗೆಯಲ್ಲಿ ಹೋಗುತ್ತಿರುವ ಮೈಸೂರು ಪೊಲೀಸ್, ಚಿತ್ರ ೭೯ ನ್ನು ನೋಡಿರಿ)*

೭.೪ :- ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್ (ಸಿ.ಐ.ಡಿ).

ಬ್ರಿಟೀಷರು ಭಾರತದಲ್ಲಿ ಜಾರಿಗೆ ತಂದ ರೈಲ್ವೆ ಮತ್ತು ಟೆಲಿಗ್ರಾಫ್ ವ್ಯವಸ್ಥೆಗಳು ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ

ಯನ್ನು ಅತ್ಯಂತ ಉತ್ತಮಗೊಳಿಸಿದವು. ಇದರಿಂದಾಗಿ ರಾಜ್ಯ ರಾಜ್ಯಗಳ ನಡುವೆ ಸಂಚರಿಸುವ ಅಪರಾಧಿ ಗ್ಯಾಂಗುಗಳನ್ನು ಪತ್ತೆಮಾಡುವ ಸಲುವಾಗಿ ವಿಷಯ ಸಂವಹನವು ಸರಳವಾಗುತ್ತಾಬಂತು. ಅದರ ಜೊತೆಗೆ ಆರೋಪಿಗಳು ಪೊಲೀಸರಿಗೆ ಸಿಗದೆ ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ಹೀಗೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ತಪ್ಪಿಸಿಕೊಂಡು ಹೋದ ಆರೋಪಿಗಳನ್ನು ಪತ್ತೆಹಚ್ಚುವ ಸಲುವಾಗಿ ಒಂದು ವಿಶೇಷ ತನಿಖಾ ತಂಡವು ಅಗತ್ಯವಿದೆ ಎಂದು ಅನ್ನಿಸಿತು. ಐ.ಜಿ.ಪಿ ರವರು ಸಂಘಟಿತ ಅಪರಾಧಗಳ ಮಾಹಿತಿಯನ್ನು ಸಂಗ್ರಹಿಸಿದರು. ಮತ್ತು ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕ್ಲಿಷ್ಟಕರವಾದ ಪ್ರಕರಣಗಳಲ್ಲಿ ಪರಸ್ಪರ ಸಹಕರಿಸುವಂತೆ ಸೂಚಿಸಿದರು. ಐ.ಜಿ.ಪಿರವರು ಇಂತಹ ಕ್ಲಿಷ್ಟಕರ ಪ್ರಕರಣಗಳನ್ನು ಭೇದಿಸುವ ಸಲುವಾಗಿಯೇ ಪ್ರತ್ಯೇಕವಾದ ಒಂದು ತನಿಖಾ ವಿಭಾಗ ಅಗತ್ಯವಿದೆ ಎಂದು ಭಾವಿಸಿದರು. ರಾಜ್ಯದಲ್ಲಿ ಸಿ.ಐ.ಡಿಯನ್ನು ಸ್ಥಾಪಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸು ವಂತೆ ಅಂದಿನ ಕಡೂರು ಜಿಲ್ಲಾ ಡೆಪಿಟ್ಯೂ ಕಮಿಷನರಾಗಿದ್ದ ಎಫ್.ಇ.ಇ. ಕಾರ್‌ರವರಿಗೆ ಸೂಚಿಸಲಾಯಿತು. ಇವರು ೧೯೦೭ ನೇ ಇಸವಿಯಲ್ಲಿ ಮದ್ರಾಸ್‌ಗೆ ಭೇಟಿ ನೀಡಿ ಅಲ್ಲಿನ ಸಿ.ಐ.ಡಿ ವಿಭಾಗವು ಹೇಗೆ ಕೆಲಸ ನಿರ್ವಹಿಸುತ್ತಿದೆ ಮತ್ತು ಅದರ ಅನುಭವಗಳೇನು ಎಂಬುದನ್ನು ಪರಿಶೀಲಿಸಿ ಒಂದು ವರದಿ ತಯಾರಿಸಿದರು. ಇವರ ಅಭಿಪ್ರಾಯದಂತೆ ಮದ್ರಾಸ್ ಪ್ರೆಸಿಡೆನ್ಸಿಗಿಂತಲೂ ಮೈಸೂರು ಪ್ರಾಂತ್ಯವು ಉತ್ತಮವಾದುದೆಂದು ಹೇಳಿದಲ್ಲದೇ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್‌ನ ನೇತೃತ್ವದಲ್ಲಿ ಪ್ರಾಯೋಗಿಕವಾಗಿ ಸಿಐಡಿ ವಿಭಾಗವನ್ನು ಪ್ರಾರಂಭಿಸಿ ಆತನಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿ ೬೦೦೦ ರೂಪಾಯಿಗಳ ಹಣವನ್ನು ನೀಡಿ ಯಾವುದೇ ದರ್ಜೆಯ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಆತನು ಬಯಸುತ್ತಾನೋ ಅವರನ್ನು ನೇಮಿಸಿಕೊಂಡು ಒಂದು ತಂಡ ರಚಿಸಬೇಕೆಂದು ಎಫ್.ಇ.ಇ. ಕಾರ್ ಸೂಚಿಸಿದರು.[೪೪] ಮೂರು ಜನ ಇನ್ಸ್‌ಪೆಕ್ಟರ್ , ಇಬ್ಬರು ಜಮೇದಾರ್ ಮತ್ತು ೬ ಜನ ಕಾನ್‌ಸ್ಟೇಬಲ್‌ಗಳು ಪ್ರಾರಂಭದಲ್ಲಿ ಸಿ.ಐ.ಡಿ ಘಟಕದಲ್ಲಿ ಇರುವಂತೆ ಪ್ರಸ್ತಾವಿಸಲಾಯಿತು.ಸರಕಾರವು ತಾತ್ಕಾಲಿಕ ನೆಲೆಯಲ್ಲಿ ಈ ಪ್ರಸ್ಥಾವನೆಗೆ ೧೯೧೦ರ ಜೂನ್ ಅಂತ್ಯದ ವರೆಗೆ ಅನುಮತಿಯನ್ನು ನೀಡಿತು. ಈ ಘಟಕದ ಕರ್ತವ್ಯಗಳ ಸ್ವರೂಪವನ್ನು ನೋಡಿ ಮುಂದೆ ಇದರ ಅವಧಿಯನ್ನು ೧೯೧೨ರ ಜೂನ್ ಅಂತ್ಯದ ವರೆಗೆ ವಿಸ್ತರಿಸಲಾಯಿತು.[೪೫] ನಂತರ ಐ.ಜಿ.ಪಿ ರವರು ಈ ಸಿ.ಐ.ಡಿ ಘಟಕವು ಶಾಶ್ವತವಾಗಿ ಇರಬೇಕೆಂತಲೂ, ಸರಕಾರವು ಸಹ ಸಿ.ಐ.ಡಿ ಘಟಕದ ಅಗತ್ಯತೆಯ ಬಗ್ಗೆ ಮನಗಂಡು ಜನವರಿ ೧೯೧೩ ರಲ್ಲಿ ಸಿ.ಐ.ಡಿ ಘಟಕವನ್ನು ಖಾಯಂಗೊಳಿಸುವ ಬಗ್ಗೆ ತೀರ್ಮಾನಿಸಿತು. ಈ ಖಾಯಂ ಘಟಕದಲ್ಲಿ ಇಬ್ಬರು ಇನ್ಸ್‌ಪೆಕ್ಟರ್, ಒಬ್ಬರು ಜಮೇದಾರ್ ಮತ್ತು ೪ ಜನ ಕಾನ್‌ಸ್ಟೇಬಲ್‌ಗಳು ಇದ್ದರು.[೪೬]

ಸಿ.ಐ.ಡಿ ಘಟಕವನ್ನು ಆಮೂಲಾಗ್ರವಾಗಿ ಪುನರ್‌ಸಂಘಟಿಸುವ ಅವಶ್ಯಕತೆ ಇತ್ತು. ಏಕೆಂದರೆ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿಪ್ಲವಗಳ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಗಮನಹರಿಸಬೇಕಿತ್ತು. ಆದ್ದರಿಂದ ಐ.ಜಿ.ಪಿ ರವರು ಸಿ.ಐ.ಡಿ ಘಟಕವನ್ನು ಪುನರ್‌ಸಂಘಟಿಸುವಂತೆ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಿದರು. ಇದರಲ್ಲಿ ಒಬ್ಬರು ಎ.ಎಸ್.ಪಿ, ಮಾಸಿಕ ರೂ ೨೦೦-೧೦-೨೫೦ ವೇತನ ಹಾಗೂ ಮಾಸಿಕ ೭೫ ರೂ ಭತ್ಯೆ ಯನ್ನು ನೀಡಿ ಈ ಘಟಕದ ಉಸ್ತುವಾರಿಯಾಗಿ ನೇಮಿಸುವಂತೆ ಪ್ರಸ್ತಾಪಿಸಲಾಯಿತು. ಈತನಿಗೆ ಸಹಾಯಕರಾಗಿ ಹೆಚ್ಚುವರಿ ಸಿಬ್ಬಂದಿಗಳನ್ನು ಅಂದರೆ ಒಬ್ಬರು ಮೊದಲನೇ ದರ್ಜೆಯ ಇನ್ಸ್‌ಪೆಕ್ಟರ್, ಒಬ್ಬರು ಮೊದಲನೇ ದರ್ಜೆಯ ಸಬ್‌ಇನ್ಸ್‌ಪೆಕ್ಟರ್, ನಾಲ್ಕು ಜನ ಕಾನ್‌ಸ್ಟೇಬಲ್‌ಗಳನ್ನು ಹೆಚ್ಚುವರಿಯಾಗಿ ನೀಡಬೇಕೆಂದು ಮತ್ತು ಈಗಾಗಲೇ ಎರಡು ಜನ ಇನ್ಸ್‌ಪೆಕ್ಟರ್, ಒಬ್ಬ ಸಬ್‌ಇನ್ಸ್‌ಪೆಕ್ಟರ್, ನಾಲ್ಕು ಜನ ಕಾನ್‌ಸ್ಟೇಬಲ್‌ಗಳು ಇದ್ದಾರೆಂದು ಪ್ರಸ್ಥಾಪಿಸಿದರು. ೧೯೩೦ ರಲ್ಲಿ ಸರಕಾರವು ಈ ಪ್ರಸ್ಥಾವನೆಗೆ ಜುಲಾಯಿ ೧ ೧೯೩೦ ರಿಂದ ಮೂರು ವರ್ಷಗಳ ಅವಧಿಗೆ ಮಂಜೂರಾತಿಯನ್ನು ನೀಡಿತು. ಎ.ಎಸ್.ಪಿರವರಿಗೆ ರೂ ೫೦, ಇನ್ಸ್‌ಪೆಕ್ಟರ್‌ರವರಿಗೆ ರೂ ೩೫ ಮಾಸಿಕ ಭತ್ಯೆಯನ್ನು ನೀಡಲು ಸರಕಾರವು ಒಪ್ಪಿತು.[೪೭]

೧೯೩೧ ರ ಆಗಸ್ಟ್ ತಿಂಗಳಿನಲ್ಲಿ ಸರಕಾರವು ಸಿ.ಐ.ಡಿ ಘಟಕದಲ್ಲಿ ಪೊಲಿಟಿಕಲ್ ಬ್ರಾಂಚ್ ಮತ್ತು ಕ್ರೈಂ ಬ್ರಾಂಚ್ ವಿಭಾಗಗಳನ್ನು ಅನುಕ್ರಮವಾಗಿ ಒಬ್ಬರು ಇನ್ಸ್‌ಪೆಕ್ಟರ್ ಮತ್ತು ಒಬ್ಬರು ಸಬ್‌ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಪ್ರಾರಂಭಿಸಲು ಅನುಮತಿ ನೀಡಿತು.[೪೮] ಪ್ರಾರಂಭದಲ್ಲಿ ಸಿ.ಐ.ಡಿ ಮತ್ತು ರೈಲ್ವೆ ಘಟಕಗಳು ಒಟ್ಟಾಗಿ ಜಿಲ್ಲಾ ಎಸ್‌ಪಿರವರ ಕೈಕೆಳಗೆ ಕೆಲಸ ನಿರ್ವಹಿಸುತ್ತಿದ್ದವು. ಆದರೆ ಐ.ಜಿ.ಪಿ ರವರು ಈ ಎರಡೂ ಘಟಕಗಳನ್ನು ಪ್ರತ್ಯೇಕಿಸಬೇಕೆಂದು ಮತ್ತು ರೈಲ್ವೆ ಘಟಕವನ್ನು ಡಿ.ಐ.ಜಿ.ಪಿರವರ ನೇರ ನಿರ್ದೇಶನಕ್ಕೆ ಒಳಪಡಿಸಬೇಕೆಂದು ಜಿಲ್ಲೆ, ರೈಲ್ವೆ, ಸಿ.ಐ.ಡಿ ಘಟಕಗಳ ಎಸ್.ಪಿರವರುಗಳನ್ನು ಜಿಲ್ಲಾ ಎಸ್‌ಪಿ, ರೈಲ್ವೆ ಎಸ್‌ಪಿ ಎಂಬುದಾಗಿ ಹೆಸರಿಸಬೇಕೆಂದು ಸೂಚಿಸಿದರು.

೭.೫ :- ರೈಲ್ವೆ ಪೊಲೀಸ್.

ಚಲಿಸುವ ರೈಲುಗಳಲ್ಲಿ ನಡೆಯುತ್ತಿದ್ದ ಅಪರಾಧಗಳು ಮತ್ತು ರೈಲ್ವೆ ಹಳಿ ಮೊದಲಾದ ಸಾಮಗ್ರಿಗಳ ಕಳವು ಪ್ರಕರಣಗಳನ್ನು ತಡೆಯಲು ಮತ್ತು ಪತ್ತೆಹಚ್ಚಲು ಸ್ಥಳೀಯ ಪೊಲೀಸರಿಗೆ ಕಷ್ಟಸಾಧ್ಯವಾಗಿತ್ತು. ಅವರಿಗೆ ಕೆಲಸದ ಒತ್ತಡಗಳು ಹೆಚ್ಚಾಗಿದ್ದವು. ಸರಕಾರವು ರೈಲ್ವೆ ಹಳಿಗಳ ರಚನೆ ಮತ್ತು ಯಂತ್ರಗಳಿಗಾಗಿ ಬಹಳ ದೊಡ್ಡ ಪ್ರಮಾಣದ ಹಣವನ್ನು ವಿನಿಯೋಗಿಸಿತು. ಇವುಗಳ ರಕ್ಷಣೆ ಸರಕಾರದ ಜವಾಬ್ದಾರಿಯಾಗಿತ್ತು. ಆ ಕಾರಣಕ್ಕಾಗಿ ರೈಲ್ವೆ ಪೊಲೀಸ್ ಪಡೆಯನ್ನು ರಚಿಸಲಾಯಿತು. ಪ್ರಾರಂಭದಲ್ಲಿ ಈ ಪಡೆಯು ನೇರವಾಗಿ ಐ.ಜಿ.ಪಿ ಯವರ ಅಧೀನದಲ್ಲಿದ್ದರೂ ಸಹ ಹೊಸ ಹೊಸ ರೈಲು ಮಾರ್ಗಗಳು ನಿರ್ಮಾಣವಾಗುತ್ತಿದ್ದಂತೆ ಇದರ ನಿಯಂತ್ರಣಾಧಿಕಾರಿಯೂ ಸಹ ಬದಲಾಗುತ್ತಾ ಹೋದರು. ೧೮೫೯ರಲ್ಲಿ ಪ್ರಥಮ ಬಾರಿಗೆ ರೈಲ್ವೆ ಹಳಿಗಳನ್ನು ಹಾಕಲಾಯಿತು. ಬೆಂಗಳೂರು ಮತ್ತು ಮದ್ರಾಸ್ ನಡುವೆ ಬ್ರಾಡ್‌ಗೇಜ್ ರೈಲು ಮಾರ್ಗವನ್ನು ನಿರ್ಮಿಸಲಾಯಿತು. ೧೮೬೪ ರ ಆಗಸ್ಟ್‌ನಲ್ಲಿ ಇದನ್ನು ಸಂಚಾರಕ್ಕೆ ತೆರೆಯಲಾಯಿತು. ಇದನ್ನು ಮದ್ರಾಸ್ ರೈಲ್ವೆ ಕಂಪೆನಿಯು ನಿರ್ಮಿಸಿತು. ೧೮೭೧ ರಲ್ಲಿ ಮೈಸೂರು ಸರ್ಕಾರವು ಮೈಸೂರು ರಾಜ್ಯ ರೈಲ್ವೆ ಹೆಸರಿನಲ್ಲಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿತು[೪೯] ಬೆಂಗಳೂರು-ಮೈಸೂರು ನಡುವೆ ೮೬ ಮೈಲುಗಳ ಪ್ರಥಮವಾಗಿ ಮೀಟರ್‌ಗೇಜ್ ರೈಲ್ವೆ ಹಳಿಯನ್ನು ಹಾಕಲಾಯಿತು. ಈ ಕಾರ್ಯ ೧೮೮೨ ರಲ್ಲಿ ಮುಕ್ತಾಯವಾಯಿತು. ಬೆಂಗಳೂರು-ತುಮಕೂರು ನಡುವಿನ ೪೩ ಮೈಲು ಉದ್ದದ ರೈಲ್ವೆ ಹಳಿ ಹಾಕುವ ಕಾರ್ಯ ೧೮೮೨ ರಲ್ಲಿ ಪ್ರಾರಂಭವಾಗಿ ೧೮೮೪ ರ ಆಗಸ್ಟ್‌ನಲ್ಲಿ ಸಂಚಾರಕ್ಕೆ ತೆರೆಯಲಾಯಿತು. ೧೮೮೪ ರ ಡಿಸೆಂಬರ್‌ನಲ್ಲಿ ಇದನ್ನು ೧೧ ಮೈಲುಗಳವರೆಗೆ ಅಂದರೆ ಗುಬ್ಬಿಯವರೆಗೆ ವಿಸ್ತರಿಸಲಾಯಿತು.[೫೦]

೧೮೮೯ ರ ಫೆಬ್ರವರಿಯಲ್ಲಿ ಹರಿಹರ-ಬಿರೂರು ಹಾಗೂ ೧೮೮೯ರ ಆಗಸ್ಟ್‌ನಲ್ಲಿ ಬೀರೂರು –ಗುಬ್ಬಿ ರೈಲು ಮಾರ್ಗಗಳನ್ನು ತೆರೆಯಲಾಯಿತು. ೧೮೯೦ ರಿಂದ ೯೯ ರವರೆಗೆ ಬೆಂಗಳೂರು-ಪುಣೆ ಮಾರ್ಗ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಯಶವಂತಪುರ ಮತ್ತು ಹಿಂದುಪುರಗಳ ನಡುವೆ ೮೩ ಕಿ.ಮೀ ರೈಲ್ವೆ ಹಳಿ ಹಾಕಲಾಯಿತು. ೧೮೯೧ರಲ್ಲಿ ಮೈಸೂರು-ನಂಜನಗೂಡು ನಡುವೆ ೧೫ ಮೈಲು ರೈಲ್ವೆ ಹಳಿ ನಿರ್ಮಿಸಲಾಯಿತು. ೧೮೯೪ರ ಜೂನ್ ನಲ್ಲಿ ಕೆ.ಜಿ.ಎಫ್. ಬಂಗಾರಪೇಟೆಯಿಂದ ಮಾರಿಕುಪ್ಪಂಗೆ ಹಳಿಯನ್ನು ನಿರ್ಮಿಸಲಾಯಿತು. ಹೀಗೆ ರಾಜ್ಯದ ಉದ್ದಗಲಕ್ಕೂ ರೈಲ್ವೆ ಹಳಿಗಳ ನಿರ್ಮಾಣ ಕಾರ್ಯ ನಡೆಯುತ್ತಾ ಹೋಯಿತು. ರೈಲ್ವೆ ಹಳಿಗಳ ರಕ್ಷಣೆ, ಅದರಲ್ಲಿ ಸಂಚಾರ ಮಾಡುವ ಪ್ರಯಾಣಿಕರ ರಕ್ಷಣೆಯ ಜವಾಬ್ದಾರಿಯು ಪೋಲೀಸರದ್ದಾಗಿತ್ತು. ೧೮೮೯ ರಲ್ಲಿ ಪ್ರಥಮ ಬಾರಿಗೆ ರೈಲ್ವೆ ಪೊಲೀಸರನ್ನು ಪುನರ್‌ಸಂಘಟಿಸಲಾಯಿತು. ಆಗ ರೈಲ್ವೆ ಪೊಲೀಸ್ ಪಡೆಯಲ್ಲಿ ೪ ಸಾರ್ಜೆಂಟ್ಸ್, ೨೯ ಕಾನ್ಸ್‌ಟೇಬಲ್‌ಗಳು ಇದ್ದರು. ೧೮೯೦ ರ ಕೊನೆಯಲ್ಲಿ ಒಂದು ಪೊಲೀಸ್ ಅಸಿಸ್ಟೆಂಟ್ ಕಮಿಷನರ್, ೩ ಜನ ಇನ್ಸ್‌ಪೆಕ್ಟರ್, ೨ ಸಾರ್ಜೆಂಟ್, ೪ ದಫೇದಾರ್, ೧೩೪ ಕಾನ್ಸ್‌ಟೇಬಲ್ ಇದ್ದು, ಅದೇ ವರ್ಷದ ಕೊನೆಯಲ್ಲಿ ೧೮ ಜನ ಹೆಚ್ಚುವರಿಯಾಗಿ ಪೊಲೀಸ್ ಕಾನ್ಸ್‌ಟೇಬಲ್‌ನ್ನು ನೀಡಲಾಯಿತು.[೫೧]

೧೮೯೦ ರಲ್ಲಿ ರೈಲ್ವೆ ಪೊಲೀಸನ್ನು ಪ್ರತ್ಯೇಕ ಘಟಕವಾಗಿ ಮಾಡಲಾಯಿತು. ಇದಕ್ಕೆ ಒಬ್ಬರು ಸೂಪರಿಂಟೆಂಡೆಂಟ್‌ರನ್ನು ನೇಮಿಸಿ ಅವರು ಐ.ಜಿ.ಪಿ ರವರ ನೇರ ನಿರ್ದೇಶನದಲ್ಲಿ ಕೆಲಸ ಮಾಡುತ್ತಿದ್ದರು. ೧೮೯೨-೯೩ ರಲ್ಲಿ ಇದ್ದ ಈ ಪಡೆಯ ಒಟ್ಟು ಬಲ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸೇರಿ ೧೭೯ ಆಗಿತ್ತು. ೧೮೯೮ ರಲ್ಲಿ ಒಂದು ಸೂಪರಿಂಟೆಂಡೆಂಟ್, ೨ ಇನ್ಸ್‌ಪೆಕ್ಟರ್, ೧ ಸಾರ್ಜೆಂಟ್, ೪ ಜನ ದಫೇದಾರ್, ೧೧೯ ಕಾನ್ಸ್‌ಟೇಬಲ್‌ಗಳು ಇದ್ದರು. ೧೮೯೮-೯೯ ರಲ್ಲಿ ೫ ಅಧಿಕಾರಿಗಳು ಹಾಗೂ ೪೭ ಸಿಬ್ಬಂದಿಗಳನ್ನು ಕಡಿತಗೊಳಿಸಲಾಯಿತು.[೫೨] ೧೯೦೬ ಮತ್ತು ೦೭ ರ ನಡುವೆ ೭ ಜನ ಅಧಿಕಾರಿಗಳು ಮತ್ತು ೬೮ ಜನ ಸಿಬ್ಬಂದಿಯವರನ್ನು ಹೆಚ್ಚುವರಿಯಾಗಿ ನೀಡಲಾಯಿತು. ಇವರಿಗೆ ತಗಲುವ ಖರ್ಚಿನ ೭/೧೦ ನೇ ಭಾಗವನ್ನು ರೈಲ್ವೆ ಇಲಾಖೆಯು ೩/೧೦ ನೇ ಭಾಗವನ್ನು ರಾಜ್ಯ ಸರಕಾರವು ನೀಡಬೇಕಾಗಿತ್ತು.[೫೩]

ರೈಲ್ವೆ ಪೊಲೀಸರ ಕರ್ತವ್ಯಗಳಲ್ಲಿ ೨ ಭಾಗಗಳನ್ನಾಗಿ ಮಾಡಲಾಯಿತು. ಅದರಲ್ಲಿ ಮೊದಲನೆಯದಾಗಿ ರೈಲ್ವೆ ವ್ಯಾಪ್ತಿಯೊಳಗೆ ನಡೆಯುವ ಸಂಜ್ಞೆಯ ಅಪರಾಧಗಳನ್ನು ಪತ್ತೆಮಾಡುವುದು ಮತ್ತು ಅದನ್ನು ನ್ಯಾಯಾಲಯದ ವಿಚಾರಣೆಗೆ ಒಳಪಡಿಸುವುದು, ಸಂಜ್ಞೆಯ ಅಪರಾಧ ಮಾಡಿದ ಆರೋಪಿಗಳನ್ನು ದಸ್ತಗಿರಿ ಮಾಡುವುದು, ಅಸಂಜ್ಞೆಯ ಅಪರಾಧಗಳು ಸಂಭವಿಸಿದಲ್ಲಿ ಅದನ್ನು ಮೇಲಾಧಿಕಾರಿಗೆ ವರದಿ ಮಾಡುವುದು ಮತ್ತು ಠಾಣಾ ದಿನಚರಿಯಲ್ಲಿ ನಮೂದಿಸುವುದು. ಎರಡನೇ ವರ್ಗದ ಕೆಲಸವೆಂದರೆ ಠಾಣೆಯನ್ನು ಸಮರ್ಪಕವಾಗಿ ನಿರ್ವಹಿಸುವುದು, ರೈಲ್ವೆ ನಿಲ್ದಾಣಗಳಲ್ಲಿ ರೈಲ್ವೆ ಪ್ರಯಾಣಿಕರ ಮೇಲೆ ಕಣ್ಗಾವಲು ಇರಿಸುವುದು, ಗೂಡ್ಸ್ ಶೆಡ್‌ಗಳಲ್ಲಿ ಸರಕು ಸಾಗಾಣೆ ರೈಲುಗಳ ಮೇಲೆ ಕಣ್ಗಾವಲು ಇರಿಸುವುದು, ರೈಲ್ವೆ ಬೋಗಿಗಳನ್ನು, ಹಳಿಗಳನ್ನು, ಕಛೇರಿಗಳನ್ನು, ಅವರಿಗೆ ಸಂಬಂಧಿಸಿದ ಇತರ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು ಇವರ ಕೆಲಸವಾಗಿರುತ್ತದೆ. ರೈಲ್ವೆ ಪೊಲೀಸ್ ಠಾಣೆಗಳಲ್ಲೂ ಸಹ ಹಲವಾರು ಪ್ರಕರಣಗಳು ವರದಿಯಾಗುತ್ತಿದ್ದವು. *೧೯೧೩ ರಿಂದ ೧೯೧೬ ರವರೆಗೆ ವರದಿಯಾದ ಪ್ರಕರಣಗಳ ವಿವರ [೫೪] ಹಾಗೂ ೧೯೧೪-೧೫.[೫೫] ಮತ್ತು ೧೯೧೫-೧೬[೫೬] ರ ಅಪರಾಧಗಳ ಹಂಚಿಕೆ ಬಗ್ಗೆ ಅನುಬಂಧ ೩೦ ನ್ನು ನೋಡಿರಿ.*

೧೯೨೧ ರ ವೇಳೆಗೆ ಮೈಸೂರು ರಾಜ್ಯವು ಸುಮಾರು ೧೦೬೨ ಕಿ.ಮೀನಷ್ಟು ರೈಲ್ವೆ ಸಂಪರ್ಕವನ್ನು ಪಡೆ ಯಿತು. ಬೆಂಗಳೂರು, ಮೈಸೂರು, ಬಂಗಾರಪೇಟೆ, ಮಾರಿಕುಪ್ಪಂ, ಹಿಂದುಪುರ, ನಂಜನಗೂಡು, ಅರಸೀಕೆರೆ, ಬೀರೂರು, ಹರಿಹರ, ಚಿಕ್ಕಮಗಳೂರು, ಶಿವಮೊಗ್ಗ, ಚಿಕ್ಕಬಳ್ಳಾಪುರ, ಹಾಸನ, ಯಲಹಂಕ, ಚಿತ್ರದುರ್ಗ, ಕೆ.ಜಿ.ಎಫ್ ಮೊದಲಾದ ಊರುಗಳಿಗೆ ರೈಲ್ವೆ ಸಂಪರ್ಕಗಳು ಇದ್ದವು. ಸರಕಾರವು ರೈಲ್ವೆಯ ಈ ಯೋಜನೆಗಳಿಗೆ ೩.೩೦ ಕೋಟಿ ರೂಪಾಯಿಗಳನ್ನು ವ್ಯಯಮಾಡಿತ್ತು. ಆದ್ದರಿಂದ ರೈಲ್ವೆ ಆಸ್ತಿಗಳನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸುವುದು ಅತ್ಯಂತ ಅಗತ್ಯವಾಗಿತ್ತು. ಈ ಕಾರಣಕ್ಕಾಗಿ ರೈಲ್ವೆ ಪೊಲೀಸ್ ಠಾಣೆಗಳನ್ನು ಅಮೂಲಾಗ್ರವಾಗಿ ಪುನರ್‌ಸಂಘಟಿಸಲು ಯೋಚಿಸಲಾಯಿತು. ಪ್ರತ್ಯೇಕವಾಗಿಯೇ ಇದ್ದ ರೈಲ್ವೆ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಯನ್ನು ರದ್ದುಗೊಳಿಸಿ ಅವರ ರೈಲ್ವೆ ವ್ಯಾಪ್ತಿಗಳನ್ನು ಜಿಲ್ಲಾ ಪೊಲೀಸ್‌ಗೆ ಹಸ್ತಾಂತರಿಸಲಾಯಿತು. ಚಲಿಸುವ ರೈಲುಗಳಲ್ಲಿ ಜನರ ರಕ್ಷಣೆಗಾಗಿ 'ಟ್ರಾವೆಲಿಂಗ್ ಪೊಲೀಸ್' ಎಂಬ ಪ್ರತ್ಯೇಕವಾದ ವಿಶೇಷ ಸಿಬ್ಬಂದಿಗಳ ತಂಡಗಳನ್ನು ರಚಿಸಲಾಯಿತು. ಇದರಲ್ಲಿ ಒಬ್ಬರು ಇನ್ಸ್‌ಪೆಕ್ಟರ್, ೫ ಜನ ಸಾರ್ಜೆಂಟ್ ಮತ್ತು ೩೮ ಜನ ಕಾನ್ಸ್‌ಟೇಬಲ್‌ಗಳು ಇದ್ದರು. ರೈಲ್ವೆಯ ಯಾರ್ಡ್‌ನಲ್ಲಿ ನಡೆಯುವ ರೈಲ್ವೆ ಅಪರಾಧಿಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಜಿಲ್ಲೆಯ ವ್ಯವಸ್ಥಿತ ಪೊಲೀಸರೇ ಮಾಡುವಂತಾಯಿತು. ಅಸ್ತಿತ್ವ ದಲ್ಲಿದ್ದ ರೈಲ್ವೆ ಪೊಲೀಸರು ಕಳ್ಳತನ ಮೊದಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪಿಗಳನ್ನು ಹಿಡಿದು ತನಿಖೆಗಾಗಿ ಜಿಲ್ಲಾ ಪೊಲೀಸರಿಗೆ ಹಸ್ತಾಂತರಿಸುವುದು ಮಾತ್ರ ಅವರ ಕೆಲಸವಾಗಿತ್ತು. ಸರಕಾರವು ಒಬ್ಬರು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರನ್ನು ರೈಲ್ವೆ ಪೊಲೀಸ್‌ಗೆ ಪ್ರಭಾರವಾಗಿ ನೇಮಿಸಿತು.[೫೭]

೭.೬ :– ವಿಶೇಷ ಘಟಕ (ಸ್ಪೆಷಲ್ ಬ್ರಾಂಚ್) .

ರಾಜ್ಯದಲ್ಲಿ ನಡೆಯುವ ರಾಜಕೀಯ ವಿಚಾರಗಳು, ಕಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸುವ ಸಲುವಾಗಿ ಒಂದು ವಿಶೇಷ ಘಟಕವನ್ನು ಪ್ರಾರಂಭಿಸಲಾಯಿತು. ಇದರಲ್ಲಿ ಒಬ್ಬರು ಇನ್ಸ್‌ಪೆಕ್ಟರ್, ಇಬ್ಬರು ಸಬ್‌ಇನ್ಸ್‌ಪೆಕ್ಟರ್ ಮತ್ತು ೬ ಜನ ಕಾನ್‌ಸ್ಟೆಬಲ್‌ಗಳಿದ್ದರು. ಆಗಾಗ ಅಗತ್ಯಕ್ಕನು ಗುಣವಾಗಿ ಇವರ ಸಂಖ್ಯೆಗಳನ್ನು ಏರಿಸಲಾಯಿತು. ಐ.ಜಿ.ಪಿರವರು ಈ ಘಟಕವನ್ನು ಬಲ ಪಡಿಸುವ ಉದ್ದೇಶದಿಂದ ನಾಲ್ಕು ಜನ ಇನ್ಸ್‌ಪೆಕ್ಟರ್, ೧೨ ಸಬ್‌ಇನ್ಸ್‌ಪೆಕ್ಟರ್, ೮ ದಫೇದಾರ್ ಮತ್ತು ೩೩ ಕಾನ್‌ಸ್ಟೇಬಲ್‌ಗಳು ಇರಬೇಕೆಂತಲೂ ಪ್ರಸ್ತಾವನೆಯನ್ನು ಸಲ್ಲಿಸಿದರು. ಮತ್ತು ಕಛೇರಿ ವ್ಯವಹಾರ ಮತ್ತು ವಿಶೇಷ ಘಟಕ ಗಳನ್ನು ನೋಡಿಕೊಳ್ಳಲು ಒಬ್ಬರು ಮ್ಯಾನೇಜರ್ ಹಾಗೂ ಮೂರನೇ ದರ್ಜೆಯ ಇಬ್ಬರು ಗುಮಾಸ್ತರು ಮತ್ತು ಮೂರು ಜನ ಶೀಘ್ರ ಲಿಪಿಕಾರರು ಇರಬೇಕೆಂದು ಪ್ರಸ್ತಾಪಿಸಲಾಯಿತು. ೧೯೪೭ ರ ಎಪ್ರೀಲ್ ತಿಂಗಳಿನಲ್ಲಿ ಸರಕಾರವು ಇದಕ್ಕೆ ಮಂಜೂರಾತಿಯನ್ನು ನೀಡಿತು. ಆದರೆ ಅಧಿಕಾರಿ ಮತ್ತು ಸಿಬ್ಬಂದಿ ಗಳಿಗೆ ಸಾರಿಗೆ ಭತ್ಯೆಗಳನ್ನು ನೀಡಲು ತಿರಸ್ಕರಿಸಿತು.[೫೮] ಆದಾಗ್ಯೂ ಕರ್ತವ್ಯ ಭತ್ಯೆಯನ್ನು ಸರಕಾರವು ನೀಡಿತು. ಅದು ಎ.ಎಸ್.ಪಿರವರಿಗೆ ಮಾಸಿಕ ರೂ ೫೦, ಇನ್ಸ್‌ಪೆಕ್ಟರ್‌ರವರಿಗೆ ರೂ. ೩೦, ಸಬ್‌ಇನ್ಸ್‌ಪೆಕ್ಟರ್‌ರವರಿಗೆ ರೂ.೨೦, ಜಮೇದಾರ್ ರವರಿಗೆ ರೂ ೧೦, ದಫೇದಾರ್ ರವರಿಗೆ ರೂ. ೮ ನ್ನು ಮಾಸಿಕವಾಗಿ ನೀಡಿದ್ದಲ್ಲದೇ, ಮನೆಬಾಡಿಗೆ ಭತ್ಯೆಯಾಗಿ ದಫೇದಾರ ರಿಗೆ ಮಾಸಿಕ ರೂ ೫, ಕಾನ್‌ಸ್ಟೇಬಲ್‌ಗಳಿಗೆ ಮಾಸಿಕ ರೂ ೫ ಕರ್ತವ್ಯ ಭತ್ಯೆ, ೧ ರೂ ಸ್ಥಳೀಯ ಭತ್ಯೆ, ಮನೆಬಾಡಿಗೆ ಭತ್ಯೆ ೩ ರೂಪಾಯಿ ಯನ್ನು ನೀಡಲಾಯಿತು.

೭.೭ :– ಪೊಲೀಸ್ ಸಾರಿಗೆ ವ್ಯವಸ್ಥೆ .

ಕ್ರಿಶ ೧೮೬೮ ರಲ್ಲಿ ಪೊಲೀಸ್ ಇಲಾಖೆಯನ್ನು ಪುನರ್‌ಸಂಘಟಿಸುವವರೆಗೆ ಪೊಲೀಸ್ ಪಡೆಯಲ್ಲಿ ಯಾವುದೇ ಸಾರಿಗೆ ವ್ಯವಸ್ಥೆ ಇರಲಿಲ್ಲ. ಇಲಾಖೆಯ ಆರಂಭದಲ್ಲಿ ಅಧಿಕಾರಿಗಳಿಗೆ ಕುದುರೆಗಳನ್ನು ನೀಡಲಾಗಿತ್ತು. ಅವುಗಳನ್ನು ಸಾಕಲು ಕುದುರೆ ಭತ್ಯೆಯನ್ನು ನೀಡಲಾಗುತ್ತಿತ್ತು. ಪೊಲೀಸ್ ಇಲಾಖೆಯಲ್ಲಿ ಗಜೆಟೆಡ್ ಅಧಿಕಾರಿಗಳಿಗೆ ಕಾರು ಭತ್ಯೆಗಳನ್ನು ನೀಡ ಲಾಗುತ್ತಿತ್ತು. ನಗರಗಳಲ್ಲಿ ಅಧೀನ ಅಧಿಕಾರಿಗಳಿಗೆ ಮೋಟಾರು ಸೈಕಲ್ ಅಥವಾ ಸೈಕಲನ್ನು ನಿರ್ವಹಣೆ ಮಾಡಲು ಭತ್ಯೆಗಳನ್ನು ನೀಡಲಾಗುತ್ತಿತ್ತು. ೧೯೨೮ ರಲ್ಲಿ ಬೆಂಗಳೂರು ನಗರದಲ್ಲಿ ಗಸ್ತು ತಿರುಗುವ ಉದ್ದೇಶಕ್ಕೋಸ್ಕರವಾಗಿ ೮ ಜನ ಅಧಿಕಾರಿಗಳನ್ನು ಒಳಗೊಂಡ ಒಂದು ಸೈಕಲ್ ಪಡೆಯನ್ನು ರಚಿಸಲಾಯಿತು. ಅವರಿಗೆ ಮಾಸಿಕ ತಲಾ ರೂ ೭–೮–೦ ನ್ನು ಸೈಕಲ್‌ಗಳ ನಿರ್ವಹಣೆಗಾಗಿ ನೀಡಲಾಗುತ್ತಿತ್ತು.[೫೯] ಇನ್ಸ್‌ಪೆಕ್ಟರ್ (ಕಿಲ್ಲೆದಾರ್)ಗಳಲ್ಲಿ ನಾಲ್ಕು ದರ್ಜೆಗಳಿದ್ದವು. ಪ್ರಥಮ ದರ್ಜೆ ಇನ್ಸ್‌ಪೆಕ್ಟರ್‌ರವರಿಗೆ ರೂ. ೧೦೦ ದ್ವಿತೀಯ ದರ್ಜೆ ಇನ್ಸ್‌ಪೆಕ್ಟರ್‌ರವರಿಗೆ ರೂ. ೭೦ ತೃತೀಯ ದರ್ಜೆ ಇನ್ಸ್‌ಪೆಕ್ಟರ್‌ರವರಿಗೆ ರೂ. ೫೫ ನಾಲ್ಕನೇ ದರ್ಜೆಯ ಇನ್ಸ್‌ಪೆಕ್ಟರ್‌ರವರಿಗೆ ರೂ. ೪೦ ಹಾಗೂ ಸಬ್‌ಇನ್ಸ್‌ಪೆಕ್ಟರ್ (ಹೋಬಳಿದಾರ) ರಿಗೆ ರೂ ೮ ನ್ನು ಕುದುರೆ ಭತ್ಯೆಯಾಗಿ ನೀಡಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಗಜೆಟೆಡ್ ಪೊಲೀಸ್ ಅಧಿಕಾರಿಗಳು ತಮ್ಮ ಸ್ವಂತ ಕಾರನ್ನು ಹಾಗೂ ನಗರಗಳಲ್ಲಿರುವ ಕೆಳದರ್ಜೆಯ ಅಧಿಕಾರಿಗಳು ಮೋಟಾರು ಸೈಕಲ್ ಅಥವಾ ಸೈಕಲನ್ನು ಹೊಂದಿದ್ದರೆ ಅವರಿಗೆ ಅವುಗಳನ್ನು ನಿರ್ವಹಿಸಲು ವಾಹನ ಭತ್ಯೆಯನ್ನು ನೀಡಲಾಗುತ್ತಿತ್ತು. ೧೯೨೮ ರಲ್ಲಿ ಬೆಂಗಳೂರು ನಗರ ಪ್ರದೇಶ ಗಳಲ್ಲಿ ಗಸ್ತು ತಿರುಗಲು ಎಂಟು ಜನ ಪೊಲೀಸ್ ಅಧಿಕಾರಿಗಳ ಒಂದು ಸೈಕಲ್‌ದಳವನ್ನು ರಚಿಸಲಾಯಿತು.[೬೦] ಅವರಿಗೆ ಮಾಸಿಕ ೭–೮–೦ ರೂಗಳನ್ನು ಸೈಕಲ್ ನಿರ್ವಹಣೆಗೆ ನೀಡಲಾಗುತ್ತಿತ್ತು.

೧೯೩೦ ರಲ್ಲಿ ಇಂತಹದೇ ಒಂದು ಪೊಲೀಸ್ ಪಡೆಯನ್ನು ಮೈಸೂರು ನಗರದಲ್ಲಿ ರಚಿಸಲಾಯಿತು. ಅವರಿಗೆ ಮಾಸಿಕ ರೂ ೫ ನ್ನು ಸೈಕಲ್ ನಿರ್ವಹಣೆಗಾಗಿ ನೀಡಲಾಗುತ್ತಿತ್ತು.[೬೧] ನಂತರ ಬೆಂಗಳೂರು ನಗರಕ್ಕೆ ಸೈಕಲ್‌ಗಳ ಸಂಖ್ಯೆ

ಯನ್ನು ೨೦ ಕ್ಕೂ, ಮೈಸೂರು ನಗರಕ್ಕೆ ಸೈಕಲ್‌ಗಳ ಸಂಖ್ಯೆಯನ್ನು ೧೫ಕ್ಕೂ ಏರಿಸಲಾಯಿತು. ಬೆಂಗಳೂರು ನಗರ, ಮೈಸೂರು ಮತ್ತು ಕೆ.ಜಿ.ಎಫ್‌ನಲ್ಲಿರುವ ಸಶಸ್ತ್ರ ಮೀಸಲು ಪಡೆಗಾಗಿ ೧೯೨೯-೩೦ ರಲ್ಲಿ ೩ ಬಸ್ಸುಗಳನ್ನು ಖರೀದಿಸಲಾಯಿತು. ನಂತರದ ವರ್ಷಗಳಲ್ಲಿ ೧೭ ಜೀಪುಗಳು, ೩ ವ್ಯಾನ್‌ಗಳು, ೬ ಮೋಟಾರು ಸೈಕಲ್‌ಗಳನ್ನು, ೯೫,೭೫೦ ರೂಗಳ ಖರ್ಚಿನಲ್ಲಿ ಖರೀದಿಸಲಾಯಿತು. ನಂತರ ಪ್ರತೀ ಜಿಲ್ಲಾ ಕೇಂದ್ರದಲ್ಲಿ ಸಂಸ್ಥಾನದ ಮೀಸಲು ಪೊಲೀಸ್ ಪಡೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಲು ಒಂದೊಂದು ಪೊಲೀಸ್ ವ್ಯಾನ್‌ಗಳನ್ನು ನೀಡಲಾಯಿತು.[೬೨]

೭.೮ :- ಐ.ಜಿ.ಪಿ ಯವರ ಕಛೇರಿ .

೧೯೩೫ರ ವರೆಗೆ ಐ.ಜಿ.ಪಿ, ಎಸ್.ಪಿ ಬೆಂಗಳೂರು ಎಸ್‌ಪಿ, ಸಿ.ಐ.ಡಿ. ಹಾಗೂ ಎಸ್.ಪಿ ಬೆಂಗಳೂರು ರೈಲ್ವೆ ರವರಿಗೆ ಸ್ವಂತ ಕಛೇರಿಗಳಲ್ಲದೇ ಬಾಡಿಗೆ ಕಟ್ಟಡದಲ್ಲಿದ್ದರು. ಐ.ಜಿ.ಪಿ ಯವರಾಗಿದ್ದ ಶ್ರೀ.ಎಫ್.ಎ.ಹ್ಯಾಮಿಲ್ಟನ್‌ರವರು ದಿನಾಂಕ ೧೭-೦೩-೧೯೩೧ ರಲ್ಲಿ ಸರಕಾರಕ್ಕೆ ಬಂದು ಪತ್ರ ಬರೆದರು.[೬೩] ಅದರಲ್ಲಿ ಐ.ಜಿ.ಪಿರವರಿಗೆ ಕಟ್ಟಡ ನಿರ್ಮಾಣದ ಬಗ್ಗೆ ಪ್ರಸ್ತಾಪಿಸಿದರು. ಸರ್ಕಾರವು ಈ ಪ್ರಸ್ತಾವನೆಗೆ ಅನುಮೋದಿಸಿ ಆಗಿನ ನೃಪತುಂಗ ರಸ್ತೆಯಲ್ಲಿದ್ದ ಹೆರಿಗೆ ಹಾಗೂ ಮಹಿಳೆಯರ ಆಸ್ಪತ್ರೆಯನ್ನು ಈಗಿನ ವಾಣಿವಿಲಾಸ ಆಸ್ಪತ್ರೆಗೆ ಸ್ಥಳಾಂತರಿಸಿ ಆ ಕಟ್ಟಡ ನಂತರ ಖಾಲಿಯಾದ ಈ ಕಟ್ಟಡಕ್ಕೆ ಐ.ಜಿ.ಪಿ ಎಸ್.ಪಿ, ಸಿ.ಐ.ಡಿ ರೈಲ್ವೆ ಹಾಗೂ ಬೆಂಗಳೂರು ಜಿಲ್ಲೆ ರವರುಗಳ ಕಛೇರಿಯನ್ನು ಬಾಡಿಗೆ ಕಟ್ಟಡದಿಂದ ಈ ಕಟ್ಟಡದ ಒಂದು ಭಾಗಕ್ಕೂ ಹಾಗೂ ಇನ್ನೊಂದು ಭಾಗಕ್ಕೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಳಾಂತರಿಸುವಂತೆ ಆದೇಶಿಸಲಾಯಿತು.[೬೪] ಅದರಂತೆ ದಿನಾಂಕ ೦೧-೦೭-೧೯೩೫ ರಂದು ಐ.ಜಿ.ಪಿ ಕಛೇರಿ ಯನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು.

೭. ೮-೧ :- "ಕಛೇರಿ ಸಿಬ್ಬಂದಿಗಳು" (ಮಿನಿಸ್ಟ್ರೀಯಲ್ ಸ್ಟಾಫ್).

ಬೆಂಗಳೂರು ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಕ್ಯಾಪ್ಟನ್ ಇ.ಡಿ.ಗೊಂಪೆರ್ಟ್ಸ್ ರವರು ೧೮೬೮ ಸೆಪ್ಟಂಬರ್‌ನಲ್ಲಿ ಕಂದಾಚಾರ ಪೊಲೀಸ್ ಪಡೆ ಹಾಗೂ ವ್ಯವಸ್ಥಿತ ಪೊಲೀಸ್ ಪಡೆಯ ಪುನರ್‌ಸಂಘಟನೆ ಬಗ್ಗೆ ಪ್ರಸ್ಥಾವವನ್ನು ಸರ್ಕಾರಕ್ಕೆ ಕಳುಹಿಸಿದ್ದರು. ಇದಕ್ಕೆ ಭಾರತದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್‌ರವರು ಅನುಮತಿಯನ್ನು ನೀಡಿದರು. ಸೂಪರಿಂಟೆಂಡೆಂಟ್‌ರವರ ಕಛೇರಿಗೆ ಒಬ್ಬ ದಾಖಲೆಗಳನ್ನು ನೋಡಿಕೊಳ್ಳುವವನನ್ನು (ರೆಕಾರ್ಡ್‌ಕೀಪರ್) ಆತನಿಗೆ ೩೫.೨ ಮಾಸಿಕ ವೇತನ, ಪ್ರಾದೇಶಿಕ ಭಾಷೆಯನ್ನು ಬಲ್ಲ ಇಬ್ಬರು ಗುಮಾಸ್ತರು, ಒಬ್ಬರಿಗೆ ರೂ.೧೫ ಮಾಸಿಕ ವೇತನ ಹಾಗೂ ಮತ್ತೊಬ್ಬನಿಗೆ ರೂ.೧೦ ಮಾಸಿಕ ವೇತನ ನೀಡಿ ನೇಮಿಸಲಾಯಿತು.

ಮೈಸೂರಿನ ಮುಖ್ಯ ಜ್ಯೂಡಿಷಿಯರ್ ಕಮಿಷನರ್ ಜನರಲ್ ಡಿಪಾರ್ಟ್‌ಮೆಂಟ್ ರವರು ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಲು ಆದೇಶಿಸಿದರು.[೬೫] ಹಾಗೂ ಅದರಲ್ಲಿ ಎಂಟು ಜಿಲ್ಲೆಗಳಲ್ಲಿ ಸಿಬ್ಬಂದಿಗಳ ಸಂಬಳವನ್ನು ಹೆಚ್ಚಿಸಲಾಯಿತು. ಇದು ೦೧-೧೨-೧೮೮೦ ರಿಂದ ಜಾರಿಗೆ ಬಂತು ೦೧-೧೧-೧೮೮೫ಕ್ಕಿಂತ ಮೊದಲು ಐ.ಜಿ.ಪಿ ಯವರ ಹುದ್ದೆ ಇರಲಿಲ್ಲ. ಜ್ಯುಡಿಷಿಯಲ್ ಕಮಿಷನರ್‌ರವರು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಇವರಿಗೆ ಸಹಾಯಕರಾಗಿ ಒಬ್ಬರು ಡಿ.ಐ.ಜಿ ಇದ್ದರು. ಇವರ ಹುದ್ದೆಯು ೧೮೭೬ ರಲ್ಲಿ ರಚಿಸಲಾಗಿತ್ತು. ಇವರ ಕಛೇರಿಯಲ್ಲಿದ್ದ ಸಿಬ್ಬಂದಿಗಳ ಸಂಖ್ಯೆ ಮತ್ತು ವೇತನಗಳ ವಿವರ ಈ ಕೆಳಕಂಡಂತೆ ಇದೆ.

ದರ್ಜೆ	ಪ್ರತೀ ದರ್ಜೆಯಲ್ಲಿದ್ದವರ ಸಂಖ್ಯೆ	ಮನೆಭತ್ಯೆ ಸೇರಿ ಮಾಸಿಕ ವೇತನ ರೂ	ಭತ್ಯೆ ಸೇರಿ ಒಟ್ಟು ಮಾಸಿಕ ವೇತನ	ಷರಾ
ಕೇಂದ್ರಸ್ಥಾನ ಇನ್ಸ್‌ಪೆಕ್ಟರ್	೮	೧೦೦+೧೫	೯೨೦	
ಜಿಲ್ಲಾ ಮುಖ್ಯಮುನ್‌ಷಿ	೮	೪೦	೩೨೦	

ಜಿಲ್ಲಾ ಎರಡನೇ ಮುಖ್ಯ ಮುನ್ಸಿ	೮	೩೦	೨೪೦
ಜಿಲ್ಲಾ ಮೂರನೇ ಮುಖ್ಯ ಮುನ್‌ಷಿ	೮	೨೦	೧೬೦
ಜಿಲ್ಲೆಯ ನಾಲ್ಕನೇ ಮುಖ್ಯ ಮುನ್‌ಷಿ	೮	೧೫	೧೨೦

೭. ೯ :– ಕಾರಾಗೃಹಗಳು .

ರಾಜ್ಯಾಂಗ ಅಥವಾ ಸಾಮಾಜಿಕ ಆರೋಗ್ಯ ರಕ್ಷಣೆಗೆ ರೂಪಿತವಾದ ನಿಯಮಾಳಿಗಳ ವಿರುದ್ಧ ಯೋಚಿಸುವ ಅಥವಾ ನಡೆಯುವವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿರಿಸುವ ಪ್ರಕ್ರಿಯೆ ಬಹು ಪುರಾತನವಾದದ್ದು. ಹೀಗೆ ಆಪಾಧಿತರು ಅಥವಾ ಶಿಕ್ಷೆಗೆ ಗುರಿಯಾದವರನ್ನು ಸಾಮಾಜಿಕ ವ್ಯವಸ್ಥೆಯಿಂದ ದೂರೀಕರಿಸುವಲ್ಲಿ ಬಳಕೆಯಾದ ಮುಖ್ಯ ಪದ್ಧತಿ ಕಾರಾಗೃಹ. ಪ್ರಾಚೀನ ಗ್ರಂಥಗಳಲ್ಲಿ ಕಾರಾಗೃಹಗಳಿಗೆ ಬಂಧನಾಗಾರಂ ಎಂಬ ಪ್ರಯೋಗ ರೂಢಿಯಲ್ಲಿರುವುದು ಕಂಡುಬರುತ್ತದೆ. ಕೌಟಿಲ್ಯನು ಸ್ತ್ರೀ, ಪುರುಷರಿಗೆ ಪ್ರತ್ಯೇಕವಾಗಿರುವ, ಬಲವಾದ ಕಾವಲಿರುವ ಬಂಧೀಖಾನೆ ರಾಜಧಾನಿಯಲ್ಲಿ ರಬೇಕು ಎಂದಿದ್ದಾನೆ. ಬಂಧನಾಗಾರವು ರಾಜಬೀದಿಯಲ್ಲಿರಬೇಕು. ಏಕೆಂದರೆ ಅಪರಾಧಿಗಳು ಪಡುವ ಯಾತನೆ ಮತ್ತು ದುಸ್ಥಿತಿಗಳನ್ನು ಕಂಡು ಇತರರು ಪಾಠ ಕಲಿಯಲಿ ಎಂದು ಮನು ಹೇಳುತ್ತಾನೆ.

ಇಂತಹ ಕಾರಾಗೃಹಗಳ ರೀತಿ ಹಾಗೂ ಉದ್ದೇಶಗಳು ಕ್ರಮೇಣ ಬದಲಾವಣೆ ಹೊಂದಿವೆ. ಹಿಂದೆ ಕೇವಲ ವಿಚಾರಣಾಧೀನ ಕೈದಿಗಳನ್ನು ವಿಚಾರಣೆಗಾಗಿ ಹಾಗೂ ಶಿಕ್ಷೆಯ ಸ್ವರೂಪ ತೀರ್ಮಾನವಾದವರೆಗೆ ಮಾತ್ರ ಕಣ್ಗಾವಲಿನಲ್ಲಿಡಲು ಕಾರಾಗೃಹ ಬಳಕೆಯಾಗುತ್ತಿತ್ತು. ಕ್ರಮೇಣ ಕಾರಾಗೃಹ ವಾಸವೇ ದಂಡನೆಯ ಸ್ವರೂಪ ಪಡೆಯಿತು. ಪ್ರಭುತ್ವ ವಿರೋಧಿ ಹಾಗೂ ಸಮಾಜಘಾತುಕ ಶಕ್ತಿಗಳನ್ನು ಕಾರಾಗೃಹಗಳಲ್ಲಿ ಬಂಧನದಲ್ಲಿಟ್ಟು ಸಮಾಜದ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕಾರಾಗೃಹಗಳು ಮಹತ್ವದ ಪಾತ್ರವಹಿಸಿದೆ. ಸಾಮ್ರಾಜ್ಯಶಾಹಿ ಕಾಲದಲ್ಲಿ ಕಲ್ಲಿನ ಕೋಟೆಗಳಲ್ಲಿನ ಕತ್ತಲು ಕೋಣೆ ಅಥವಾ ಗವಿಗಳನ್ನು ಕಾರಾಗೃಹವಾಗಿ ಬಳಸಲಾಗುತ್ತಿತ್ತು. ಬ್ರಿಟೀಷರ ಆಳ್ವಿಕೆಯಲ್ಲಿ ಕಾರಾಗೃಹಗಳಿಗಾಗಿ ಆಧುನಿಕ ರೀತಿಯ ಕಟ್ಟಡಗಳನ್ನು ಕಟ್ಟಲಾಯಿತು. ಮತ್ತು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಕಾರಾಗೃಹಗಳು ಪ್ರಾರಂಭಗೊಂಡವು.

೭ ೯–೧ :– ಕೋಲಾರ ಜಿಲ್ಲೆಯಲ್ಲಿ ಬಂಧಿಖಾನೆಗಳು ಮತ್ತು ಲಾಕಪ್‌ಗಳು.

ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬಂಧೀಖಾನೆ ೧೮೫೮ರಲ್ಲಿ ಜಿಲ್ಲಾ ಉಪ ಬಂಧೀಖಾನೆಯಾಗಿ ಪ್ರಾರಂಭಗೊಂಡಿತು. ೧೮೫೬ರ ನಂತರ ಬಂಧೀಖಾನೆಯ ಖೈದಿಗಳ ಕಲ್ಯಾಣಕ್ಕಾಗಿ ಹಲವಾರು ಸುಧಾರಣೆಗಳನ್ನು ತರಲಾಯಿತು. ಬೆಂಗಳೂರಿನಲ್ಲಿ ೧೮೬೩ ರಲ್ಲಿ ಕೇಂದ್ರ ಕಾರಾಗೃಹ ಸ್ಥಾಪನೆಯಾದ ನಂತರ ಇಡೀ ರಾಜ್ಯದ ಬಂಧಿಖಾನೆಗಳಿಗೆ ಅನ್ವಯಿಸುವಂತೆ ಏಕರೂಪ ಕಾನೂನು ಜಾರಿಯಾಯಿತು. ೧೮೮೧ರಲ್ಲಿ ಕೋಲಾರದಲ್ಲಿ ಬಂಧಿಖಾನೆ ಜಿಲ್ಲೆಯ ಆರೋಗ್ಯಾಧಿಕಾರಿಯ ಆಡಳಿತಕ್ಕೆ ಒಳಪಟ್ಟಿತು. ೧೮೮೩ರಲ್ಲಿ ಇದರ ಹೆಸರನ್ನು ಜಿಲ್ಲಾ ಲಾಕಪ್ ಎಂದು ಬದಲಾಯಿಸಲಾಯಿತು. ಕಾಲಾನಂತರದಲ್ಲಿ ಅವಶ್ಯಕತೆಗನುಸಾರ ತಾಲೂಕು ಹಾಗೂ ಉಪ ತಾಲೂಕು ಕೇಂದ್ರಗಳಲ್ಲಿ ಲಾಕಪ್ಪುಗಳನ್ನು ಪ್ರಾರಂಭಿಸಲಾಯಿತು. ೧೯೧೩ರ ಡಿಸೆಂಬರ್‌ನಲ್ಲಿ ಕೆ.ಜಿ.ಎಫ್‌ನ ಗಣಿಪ್ರದೇಶಕ್ಕಾಗಿಯೇ ಒಂದು 'ವಿಶೇಷ ಉಪ ಕಾರಾಗೃಹ'ವನ್ನು ಸ್ಥಾಪಿಸಲಾಯಿತು. ಆಗ ಇದು ಆ ಪ್ರದೇಶದ ವಿಶೇಷ ಮಾಜಿಸ್ಟ್ರೇಟರ ಅಧೀನಕ್ಕೊಳಪಟ್ಟಿತು. ಜಿಲ್ಲಾ ಹಾಗೂ ತಾಲೂಕು ಲಾಕಪ್ಪುಗಳ ಉತ್ತಮ ಆಡಳಿತಕ್ಕಾಗಿ ೧೯೪೨ರಲ್ಲಿ ನೂತನ ಕಾನೂನು ಜಾರಿಯಾಗಿ, ಜ್ಯೂಡಿಷಿಯಲ್ ಮುನ್ಸೀಫರು, ಅಮಲ್ದಾರರು ಅಥವಾ ಡೆಪ್ಯುಟಿ ಅಮಲ್ದಾರರಿಗೆ ತಂತಮ್ಮ ಪ್ರದೇಶದ ಲಾಕಪ್‌ಗಳ ಮೇಲ್ವಿಚಾರಣೆಯನ್ನು ವಹಿಸಲಾಯಿತು.[೬೬]

೭.೯-೨ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರಾಗೃಹಗಳು.

೧೮೦೨ ರ VI ನೇ ರೆಗ್ಯುಲೇಷನ್ ಕಾಯ್ದೆ ಕಲಂ: XXI ರಲ್ಲಿ ಬಂಧಿಖಾನೆ ಆಡಳಿತ ವ್ಯವಸ್ಥೆ ಇತ್ತು. ರಕ್ಷಣೆ ಹಾಗೂ ಇತರ ವಿಷಯಗಳ ಬಗ್ಗೆ ಸಂಬಂಧಿಸಿದಂತೆ ಅಷ್ಟೇನು ತೃಪ್ತಿಕರವಾಗಿರಲಿಲ್ಲ. ಕೆಲವು ಹಳೆಯ ಟೆಂಟುಗಳು, ಕೆಲವು ಬಾಡಿಗೆ ಮನೆಗಳನ್ನು 'ಪಗೋಡ'ಗಳು ಉಪಯೋಗಿಸುತ್ತಿದ್ದರು. ಅವು ಶಿಥಿಲವಾಗಿತ್ತು. ದಕ್ಷಿಣಕನ್ನಡ ಮತ್ತು ನಾಲ್ಕು ಕಡೆಗಳಲ್ಲಿ ಬಂಧೀಖಾನೆ ನಿರ್ಮಿಸಲಾಯಿತು. ಇದಕ್ಕಾಗಿ ಪ್ರತ್ಯೇಕವಾಗಿ ಗಾರ್ಡ್‌ಗಳನ್ನು ನೇಮಿಸುವ ಅವಶ್ಯಕತೆ ಇತ್ತು. ಮಂಗಳೂರಿನಲ್ಲಿ ಜಿಲ್ಲಾ ಬಂಧೀಖಾನೆ ನಿರ್ಮಿಸಲಾಯಿತು. ಆದರೆ ಅಲ್ಲಿ ಅಷ್ಟೊಂದು ರಕ್ಷಣೆ ಮತ್ತು ಶಿಸ್ತು ಇರಲಿಲ್ಲ. ಬಂಧೀಖಾನೆಯಲ್ಲಿರುವ ಖೈದಿಗಳಿಗೆ ಅತ್ಯಂತ ಶ್ರಮದ ಕೆಲಸ ನೀಡಲಾಗುತ್ತಿತ್ತು. ಆದರೂ ಪ್ರತಿಯೊಂದು ಜೈಲಿನಲ್ಲೂ ಒಂದೊಂದು ಆಸ್ಪತ್ರೆಗಳಿದ್ದವು. ಆದರೆ ಖೈದಿಗಳ ಆರೋಗ್ಯದ ಬಗ್ಗೆ ಅಸಡ್ಡೆ ತೋರಲಾಗಿತ್ತು. ಭೃಷ್ಟಾಚಾರ ತುಂಬಿ ಹೋಗಿತ್ತು. ೧೮೩೬ರಲ್ಲಿ ಪ್ರಿಸನ್ ಕಮಿಟಿಯು ಕೇಂದ್ರ ಕಾರಾಗೃಹವನ್ನು ನಿರ್ಮಿಸುವಂತೆ ಸೂಚಿಸಿತು. ಸರ್ಕಾರವು ಸೂಚನೆಯನ್ನು ಒಪ್ಪಿಕೊಂಡರೂ ಸಹ ಅದನ್ನು ಕಾರ್ಯರೂಪಕ್ಕೆ ತರಲು ಯಾವುದೇ ಪ್ರಯತ್ನ ಮಾಡಲಿಲ್ಲ.[೭೭] ಕಾರಾಗೃಹದಲ್ಲಿ ಒಂದು ಆಸ್ಪತ್ರೆ ಹಾಗೂ ಸಹಾಯಕ ಸರ್ಜನ್‌ಗಳು ಇದ್ದರು. ೧೮೦೪ರ ಪತ್ರವೊಂದು ಖಾಯಿಲೆಯಲ್ಲಿರುವ ಖೈದಿಗಳಿಗೆ ವೈನ್, ಸಬ್ಬಕ್ಕಿ (ಸೇಗೋ) ಕೋಳಿ ಮಾಂಸಗಳನ್ನು ನೀಡುತ್ತಿದ್ದರೆಂದು ನಮಗೆ ತಿಳಿಸುತ್ತದೆ.[೭೮] ೧೮೦೫ ರಲ್ಲಿ ಕೆನರಾದ ಪ್ರಿನ್ಸಿಪಾಲ್ ಕಲೆಕ್ಟರ್‌ನಾಗಿದ್ದ ಅಲೆಕ್ಸಾಂಡರ್ ರೀಡ್ ಎಂಬವರು ಖೈದಿಗಳ ರಕ್ಷಣೆ ಮತ್ತು ಆರೋಗ್ಯದ ದೃಷ್ಟಿಯಿಂದ ವಿಶಾಲವಾದ ಕಾರಾಗೃಹದ ಅಗತ್ಯವಿದೆ ಎಂದು ತಿಳಿಸಿದರು.[೭೯] ಏಕೆಂದರೆ ಕಾರಾಗೃಹವು ಒಂದೇ ಕಡೆ ಇಲ್ಲದೇ ನಾಲ್ಕು ಕಡೆ ನಡೆಯುತ್ತಿತ್ತು. ಇದಕ್ಕಾಗಿ ಪ್ರತ್ಯೇಕ ಗಾರ್ಡ್‌ಗಳನ್ನು ನೇಮಿಸುವ ಅಗತ್ಯತೆ ಇತ್ತು. ಕಾರಾಗೃಹಗಳಲ್ಲಿ ಒಂದು ಆಸ್ಪತ್ರೆ ಮತ್ತು ಸಹಾಯಕ ಸರ್ಜನ್‌ರು ಇದ್ದರು. ಅದೇ ರೀತಿ ಸರ್ಕ್ಯೂಟ್ ಜಡ್ಜ್ ಆಗಿದ್ದ ಬ್ಯುಲ್ಡಿ ಹುಡ್‌ಗ್‌ಸನ್‌ರವರು ಕುಂದಾಪುರ ಕಾರಾಗೃಹದಲ್ಲಿ ಬಂಧಿಗಳನ್ನು ಕತ್ತಲೆ ಕೋಣೆಯಲ್ಲಿ ಬಂಧಿಸಲಾಗಿದೆ. ಅವರ ಆರೋಗ್ಯಕ್ಕೆ ಇದರಿಂದ ಹಾನಿ ಇದೆ ಎಂದು ವಿವರಿಸಿದರು.[೮೦] ೧೮೧೫ರಲ್ಲಿ ಮಂಗಳೂರು ಕಾರಾಗೃಹಕ್ಕೆ ಮಾಸಿಕ ರೂ ೨೫೦ ಬಾಡಿಗೆ ನೀಡಲಾಗುತ್ತಿತ್ತು. ತಲಾ ಒಬ್ಬ ಖೈದಿಗೆ ಮಾಸಿಕ ಹದಿನೈದು ರೂಪಾಯಿ ಖರ್ಚು ಮಾಡಲಾಗುತ್ತಿತ್ತು. *೧೮೧೧ ರಲ್ಲಿ ದ.ಕ ಜಿಲ್ಲೆಯಲ್ಲಿ ಮ್ಯಾಜಿಸ್ಟ್ರೇಟ ರಿಂದ ನೇಮಕವಾದ ನೇಟೀವ್ ಇನ್‌ಫೆಂಟ್ರಿಯ ಎರಡನೇ ಬೆಟಾಲಿಯನ್, ಮೂರನೇ ರೆಜಿಮೆಂಟ್‌ನಿಂದ ನೇಮಕಗೊಂಡ ಗಾರ್ಡ್‌ಗಳ ಮಾಹಿತಿ ಬಗ್ಗೆ ಅನುಬಂಧ- ೩೧ನ್ನು ನೋಡಿ.[೮೧] ೧೮೧೭ ಮತ್ತು ಅದಕ್ಕಿಂತ ಮೊದಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಜೈಲು ಅಧಿಕಾರಿ ಮತ್ತು ಸಿಬ್ಬಂದಿಗಳ ತುಲನಾತ್ಮಕ ಪಟ್ಟಿಯ ಬಗ್ಗೆ ಅನುಬಂಧ- ೩೨ ನ್ನು ನೋಡಿ.[೮೨]*

ಮಂಗಳೂರಿನ ಕಾರಾಗೃಹವು ಮೊದಲು ಜಿಲ್ಲಾ ಕಾರಾಗೃಹವಾಗಿದ್ದುದು ೧೯೦೮ರ ಅಕ್ಟೋಬರ್ ೮ ರಿಂದ ವಿಶೇಷ ಕಾರಾಗೃಹವಾಗಿ ಪರಿವರ್ತನೆಗೊಂಡಿತು. ಆ ನಂತರ ಅದು ಜಿಲ್ಲೆಯ ಪ್ರಧಾನ ಕಾರಾಗೃಹವಾಗಿದೆ. ವಿಚಾರಣಾಧೀನ ಮತ್ತು ಅಲ್ಪಾವಧಿ ಬಂಧಿಗಳಿಗಾಗಿ ೧೯೨೬ರ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಉಪ ಕಾರಾಗೃಹಗಳು ಮತ್ತು ಮಂಗಳೂರಿನಲ್ಲಿ ಒಂದು ಕಾರಾಗೃಹವು ಇದ್ದವು. ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಕಾರಾಗೃಹ ಶಿಕ್ಷೆಯಾದಲ್ಲಿ ಸಾಮಾನ್ಯವಾಗಿ ಮಲಬಾರಿನ ಕಣ್ಣಾನ್ನೂರು ಕೇಂದ್ರ ಕಾರಾಗೃಹಕ್ಕೆ ಅಥವಾ ಇತರ ದೊಡ್ಡ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗುತ್ತಿತ್ತು. ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಕಾರಾಗೃಹ ಶಿಕ್ಷೆಯ ಅಪರಾಧಿಗಳನ್ನು ಉಪ ಕಾರಾಗೃಹದಲ್ಲಿಡಲಾಗುತ್ತಿತ್ತು. ಆದರೆ, ವಿಚಾರಣಾಧೀನ ಕೈದಿಗಳನ್ನೇ ಹೆಚ್ಚಾಗಿ ಈ ಕಾರಾಗೃಹದಲ್ಲಿರಿಸಲಾಗುತ್ತಿತ್ತು ಮತ್ತು ಮದರಾಸು ಕಾರಾಗೃಹ ಮತ್ತು ಸುಧಾರಣಾ ಗೃಹಗಳ ಕೈಪಿಡಿ (ಸಂಪುಟ-೨) ಜಿಲ್ಲೆಯಲ್ಲಿ ಜಾರಿಯಲ್ಲಿತ್ತು. ಕಾಲಾನುಕ್ರಮದಲ್ಲಿ ಕಾರಾಗೃಹಗಳ ದರ್ಜೆಯಲ್ಲಿ ಬದಲಾವಣೆಯಾಯಿತು.[೮೩]

೧೮೫೭ ರ ನಂತರವೇ ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡಿತು. ಮೊದಲನೇ ದರ್ಜೆಯ ಮತ್ತು ಎರಡನೇ ದರ್ಜೆಯ ಕೇಂದ್ರ ಕಾರಾಗೃಹಗಳನ್ನು ನಿರ್ಮಿಸಲು ತೀರ್ಮಾನಿಸಲಾಯಿತು. ದಕ್ಷಿಣ ಕನ್ನಡವು ಕಣ್ಣಾನ್ನೂರಿನಲ್ಲಿ ರಚನೆ ಯಾದ ಎರಡನೇ ದರ್ಜೆಯ ಕೇಂದ್ರ ಕಾರಾಗೃಹದ ಅಡಿಯಲ್ಲಿ ಬಂದಿತು.[೭೪]

೭.೯-೩:- ಉಡುಪಿ ಜಿಲ್ಲೆ ಕಾರಾಗೃಹ ಮತ್ತು ಬಂಧಿಖಾನೆಗಳು

ರಾಜ್ಯ ಪುನರ್‌ವಿಂಗಡನೆಗೆ ಮುಂಚಿನ ಅವಧಿಯಲ್ಲಿ ಉಡುಪಿ ಜಿಲ್ಲೆಯನ್ನು ಒಳಗೊಂಡಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತದಲ್ಲಿತ್ತು. ಆಗ ಮದರಾಸು ಕಾರಾಗೃಹ ಕೈಪಿಡಿ, ಮದ್ರಾಸು ಕಾರಾಗೃಹ ಸುಧಾರಣೆ ಕೈಪಿಡಿ, ೧೮೯೮ರ ಕಾರಾಗೃಹ ಕಾಯ್ದೆಗಳು ೧೮೭೦ ಹಾಗೂ ೧೯೦೦ ರ ಬಂಧಿತರ ಕಾಯ್ದೆ, ೧೮೬೯ರ ಸಾಕ್ಷಾಧಾರ ಮತ್ತು ಹಾಜರಾತಿ ಕಾಯ್ದೆ ಮತ್ತು ೧೮೯೭ರ ಸುಧಾರಣಾ ಶಾಲೆಯ ಕಾಯ್ದೆಗಳು ಚಾಲ್ತಿಯಲ್ಲಿದ್ದವು. ಆ ಪ್ರಕಾರ ಒಂದು ತಿಂಗಳಿಗಿಂತ ಹೆಚ್ಚಿನ ಕಾರಾಗೃಹ ಶಿಕ್ಷೆಯನ್ನು ಪಡೆದ ಅಪರಾಧಿಗಳನ್ನು ಉಪ ಕಾರಾಗೃಹದಲ್ಲೂ ಒಂದು ವರ್ಷದ ವರೆಗಿನ ಅವಧಿಯ ಶಿಕ್ಷೆಯಾದಲ್ಲಿ ಜಿಲ್ಲಾ ಕಾರಾಗೃಹದಲ್ಲಿಯೂ ಹಾಗೂ ಒಂದು ವರ್ಷ ಮೇಲ್ಪಟ್ಟು ಕಾರಾಗೃಹ ಶಿಕ್ಷೆಯಾದ ಅಪರಾಧಿಯನ್ನು ಸಾಮಾನ್ಯವಾಗಿ ಮಲಬಾರಿನ ಕಣ್ಣಾನೂರು ಕೇಂದ್ರ ಕಾರಾ ಗೃಹಗಳಿಗೆ ರವಾನಿಸಲಾಗುತ್ತಿತ್ತು.[೭೫]

೭.೯-೪ :- ಕೊಡಗು ಜಿಲ್ಲಾ ಕಾರಾಗೃಹಗಳು

ಕೊಡಗು ಜಿಲ್ಲೆಯಲ್ಲಿ ರಾಜರ ಕಾಲದಲ್ಲಿ ಕೇಂದ್ರ ಕಾರಾಗೃಹವು ಇದ್ದ ಸ್ಥಳದ ಬಗ್ಗೆ ಯಾವ ದಾಖಲೆಗಳೂ ದೊರೆತಿಲ್ಲ. ಕಾರಾಗೃಹವು ಕೋಟೆಯೊಳಗೆ ಹಾಗೂ ಬೇರೆ ಬೇರೆ ಅರಮನೆಗಳಿಗೆ ಹೊಂದಿಕೊಂಡು ಇದ್ದವು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿಯೂ ಕೈದಿಗಳನ್ನು ಮಡಿಕೇರಿಯ ಕೋಟೆಯಲ್ಲಿನ ಕಾರಾಗೃಹದಲ್ಲಿ ಇರಿಸುತ್ತಿದ್ದರು. ೧೮೬೮ರಲ್ಲಿ ಕಾರಾಗೃಹದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಮತ್ತು ಕಟ್ಟಡದ ಉಸ್ತುವಾರಿಯನ್ನು ನೋಡಿ ಕೊಳ್ಳುತ್ತಿದ್ದು ಇಂಜಿನಿಯರುಗಳು ಕಾರಾಗೃಹಕ್ಕಾಗಿ ಪ್ರತ್ಯೇಕ ನಿವೇಶನ ಬೇಕೆಂದು ಶಿಫಾರಸು ಮಾಡಿದ್ದರು. ಸೂಕ್ತ ಸ್ಥಳದ ಬಗ್ಗೆ ಭಿನ್ನಾಭಿಪ್ರಾಯವಿದ್ದುದರಿಂದ, ಆಗಿನ ಭಾರತ ಸರ್ಕಾರದ ವೈದ್ಯಕೀಯ ವಿಭಾಗದ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರಾದ ಡಾ: ಓಕ್‌ರವರು ಮಡಿಕೇರಿಗೆ ಭೇಟಿ ಕೊಟ್ಟು, ಮುಖ್ಯ ಇಂಜಿನಿಯರವರು ಆರಿಸಿದ್ದ ಸ್ಥಳವನ್ನು ಬಿಟ್ಟು ಸಿವಿಲ್ ವೈದ್ಯಾಧಿಕಾರಿಗಳು ಆರಿಸಿದ್ದ ಸ್ಥಳವನ್ನು, ಕಾರಾಗೃಹಕ್ಕಾಗಿ ಶಿಫಾರಸ್ಸು ಮಾಡಿದರು. ಈ ಸ್ಥಳವನ್ನು ಆಗಿನ ಮುಖ್ಯ ಕಮಿಷನರೂ ಒಪ್ಪಿದರು. ಕೋಟೆಯೊಳಗಿದ್ದ ಕಾರಾಗೃಹದಲ್ಲಿ ಅನೇಕ ನ್ಯೂನತೆಗಳಿದ್ದವು. ಕೇವಲ ೯೪ ಕೈದಿಗಳಿಗೆ ಮಾತ್ರ ವಸತಿ ವ್ಯವಸ್ಥೆ ಇತ್ತು. ಸರ್ಕಾರದ ೧೮೬೮ ನೇಯ ಆದೇಶದಂತೆ, ಕೈದಿಗಳನ್ನು, ಹೊಸದಾಗಿ ಆರಿಸಲ್ಪಟ್ಟ ಸ್ಥಳದಲ್ಲಿ ಕಟ್ಟಿಸಿದ ತಾತ್ಕಲಿಕವಾದ ಶೆಡ್ಡುಗಳಲ್ಲಿ ಇರಿಸಿದ್ದರು. ಕ್ರಮೇಣ ಅಲ್ಲಿನ ಕೈದಿಗಳ ಆರೋಗ್ಯ ಕ್ಷೀಣಿಸಿ, ಆ ಸ್ಥಳವು ವಾಸ ಯೋಗ್ಯವಲ್ಲವೆಂಬ ತೀರ್ಮಾನಕ್ಕೆ ಬರಲಾಯಿತು. ಆರ್ಥಿಕ ಆಡಚಣೆಯಿಂದ ಹೊಸ ಜಾಗದಲ್ಲಿ ಕಟ್ಟಡವನ್ನು ಕಟ್ಟಲಾಗಲಿಲ್ಲ. ಈ ಮಧ್ಯೆ ಕೋಟೆಯೊಳಗಿನ ಕಾರಾಗೃಹವನ್ನು ಬದಲಾಯಿಸಿ ಅನೇಕ ಕಾಮಗಾರಿ ಕೆಲಸ ಗಳನ್ನು ಮಾಡಲಾಯಿತು. ನಂತರ ಮಡಿಕೇರಿ ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆಯನ್ನು ನಿಯಂತ್ರಿಸಲಾಯಿತು. ಕಡಿಮೆ ಅವಧಿ ಶಿಕ್ಷೆ ಇರುವ ಖೈದಿಗಳು ಹಾಗೂ ವಿಚಾರಣಾ ಕೈದಿಗಳನ್ನು ತಾಲೂಕು ಕಾರಾಗೃಹ ಹಾಗೂ ಲಾಕಪ್‌ಗಳಲ್ಲಿ ಇಡಲಾಗಿತ್ತು. ೧೯೧೪ ರಲ್ಲಿ ಪ್ರಥಮ ಬಾರಿಗೆ ಮಡಿಕೇರಿ ಕಾರಾಗೃಹದಲ್ಲಿ ಮಹಿಳಾ ಕೈದಿಯನ್ನು ಇಡಲಾಗಿತ್ತು. ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಮಡಿಕೇರಿ ಕಾರಾಗೃಹದಲ್ಲಿನ ಕೈದಿಗಳ ಸಂಖ್ಯೆ ಸರಾಸರಿ ೬೮ ಆಗಿದ್ದಿತು. ಕೊಡಗಿನ ಕಾರಾಗೃಹಗಳಿಗೆ ೧೯೨೪ರಲ್ಲಿ ಮದ್ರಾಸಿನ ಬಂಧೀಖಾನೆ ಕೈಪಿಡಿ (ಮ್ಯಾನುವೆಲ್)ಯನ್ನು, ಅನುಷ್ಠಾನ ಗೊಳಿಸಲಾಯಿತು. ೧೯೨೦-೩೦ರಲ್ಲಿ ಕೂಡ ಈ ಬಂಧೀಖಾನೆಯಲ್ಲಿ ಕೈದಿಗಳ ಸರಾಸರಿ ಸಂಖ್ಯೆ ೬೮ ಆಗಿದ್ದಿತು. ಮಡಿಕೇರಿಯ ಕೇಂದ್ರ ಕಾರಾಗೃಹವಲ್ಲದೇ ನಾಲ್ಕು ಉಪ ಕಾರಾಗೃಹಗಳು

ಇದ್ದವು. ನಂತರದ ವರ್ಷಗಳಲ್ಲಿ ಮಡಿಕೇರಿ (ಕೇಂದ್ರ ಕಾರಾಗೃಹ) ವೀರರಾಜಪೇಟೆಯಲ್ಲಿ ಒಂದು ಉಪ ಕಾರಾಗೃಹ ಮತ್ತು ೧೯ ಲಾಕಪ್‌ಗಳು, ವಿವಿಧ ಪೊಲೀಸ್ ಠಾಣೆಯಲ್ಲಿದ್ದವು. ೧೦ ವರ್ಷಗಳಿಗಿಂತ ಕಡಿಮೆ ಅವಧಿಯ ಶಿಕ್ಷೆ ಅನುಭವಿಸುತ್ತಿದ್ದ ಕೊಡಗಿನ ಕೈದಿಗಳನ್ನು ಮಡಿಕೇರಿ ಕಾರಾಗೃಹದಲ್ಲಿ ಇಟ್ಟದ್ದು, ಇತರರನ್ನು ಅಂದಿನ ಮಲಬಾರು ಜಿಲ್ಲೆಯ ಕಣ್ಣಾನೂರಿನ ಕಾರಾಗೃಹಕ್ಕೆ ಕಳುಹಿಸುತ್ತಿದ್ದರು. ಮಹಿಳಾ ಕೈದಿಗಳನ್ನು ವೆಲ್ಲೂರಿನ ಕಾರಾಗೃಹಕ್ಕೆ ಕಳುಹಿಸುತ್ತಿದ್ದರು. ೧೯೫೪-೫೫ ರ ಸುಮಾರಿಗೆ ಮಡಿಕೇರಿ ಕಾರಾಗೃಹದಲ್ಲಿ ಇದ್ದ ವಸತಿ ಸೌಕರ್ಯ ೧೨೯ ಮಂದಿಗೆ ಮಾತ್ರ. ಮತ್ತು ಆಗ ಇದ್ದ ಕೈದಿಗಳ ಸರಾಸರಿ ಸಂಖ್ಯೆ ೫೯. ಕೊಡಗು ರಾಜ್ಯದ ಆರೋಗ್ಯ ಅಧಿಕಾರಿಗಳು ಮಡಿಕೇರಿ ಕಾರಾಗೃಹಕ್ಕೆ ಪದನಿಮಿತ್ತ ಅಧೀಕ್ಷಕ ರಾಗಿದ್ದರು ಹಾಗೂ ವೀರರಾಜಪೇಟೆ ತಾಲೂಕಿನ ಸುಬೇದಾರರು, ಅಲ್ಲಿನ ಉಪ ಕಾರಾಗೃಹದ ಅಧೀಕ್ಷಕರಾಗಿದ್ದರು. ಕೊಡಗಿನ ಮುಖ್ಯ ಆಯುಕ್ತರು, ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದರು. ವೀರರಾಜಪೇಟೆಯಲ್ಲಿನ ಉಪ ಬಂಧೀ ಖಾನೆಯನ್ನು ೧-೪-೫೬ ರಲ್ಲಿ ಮುಚ್ಚಲಾಯಿತು.[೭೭]

೭.೯-೫ :- ಬೆಳಗಾಂ ಜಿಲ್ಲಾ ಕಾರಾಗೃಹಗಳು

ಪ್ರಾಚೀನ ಕಾಲದಿಂದಲೂ ಈ ಜೈಲುಗಳು ಕಾನೂನು ಸುವ್ಯವಸ್ಥೆಯನ್ನು ಪಾಲಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಾ ಬಂದಿದೆ. ಯುದ್ಧ ಖೈದಿಗಳನ್ನು ಇಡುವ ಸಲುವಾಗಿ ಈ ಜೈಲುಗಳು ಅಸ್ಥಿತ್ವಕ್ಕೆ ಬಂದವು. ನಂತರ ಅಪರಾಧಿ ಗಳನ್ನು ಇಡಲು ಪ್ರಾರಂಭಿಸಿದರು. ಕೆಲವು ಉನ್ನತ ದರ್ಜೆಯ ಬಂಧಿಗಳನ್ನು ಬೀಗ ಹಾಕಿದ ಬಂಧೀಖಾನೆಗಳಲ್ಲಿ ಇಡದೇ ಮನೆಗಳಲ್ಲಿ ಮತ್ತು ಕೋಟೆಗಳಲ್ಲಿ ಸೂಕ್ತ ಕಣ್ಗಾವಲನ್ನು ಇಟ್ಟು ಬಂಧನದಲ್ಲಿ ಇರಿಸುತ್ತಿದ್ದರು. ಇದೇ ರೀತಿ ಕಿತ್ತೂರು ಚೆನ್ನಮ್ಮ ನನ್ನೂ ಸಹ ಬ್ರಿಟೀಷರು ಬೈಲಹೊಂಗಲದಲ್ಲಿ ಬಂಧಿಸಿದ್ದರು ಎಂಬುದನ್ನು ದಾಖಲೆಗಳು ತಿಳಿಸುತ್ತವೆ. ಬ್ರಿಟೀಷರ ಕಾಲದಲ್ಲಿ ಬಂಧೀಖಾನೆಗಳು ಮತ್ತು ಜೈಲುಗಳ ಸಂಖ್ಯೆಗಳನ್ನು ಗಣನೀಯವಾಗಿ ಏರಿಸಲಾಯಿತು. ೧೮೮೦ ರ ಹೊತ್ತಿಗೆ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಜೈಲುಗಳನ್ನು ನಿರ್ಮಾಣ ಮಾಡಲಾಯಿತು. ವಿಶೇಷವಾದ ಖೈದಿಗಳನ್ನು ಗೋಕಾಕ್ ಜೈಲಿ ನಲ್ಲೂ, ಸಾದಾರಣ ಖೈದಿಗಳನ್ನು ಮತ್ತು ಶಿಕ್ಷೆಗೆ ಒಳಗಾದ ಖೈದಿಗಳನ್ನು ಬೆಳಗಾಂ ಜೈಲಿನಲ್ಲೂ ಇರಿಸಲಾಯಿತು. ಈ ವೇಳೆ ಯಲ್ಲಿ ಗೋಕಾಕ್ ಜೈಲಿನಲ್ಲಿ ೧೪೯, ಬೆಳಗಾಂ ಜೈಲಿನಲ್ಲಿ ೬೪೬ ಖೈದಿಗಳಿದ್ದರು. ಪ್ರತಿಯೊಬ್ಬ 'ಮಾಮ್‌ಲತ್‌ದಾರ್'ನ ಕಛೇರಿಯಲ್ಲಿ ಬಂಧೀಖಾನೆಗಳು ಇರುತ್ತಿದ್ದವು. ೧೮೮೦ ರಲ್ಲಿ ಬೆಳಗಾಂ ಜಿಲ್ಲಾಕಾರಾಗೃಹವನ್ನು ಹಾಗೂ ಅಥಣಿಯ ಉಪ ಕಾರಾಗೃಹವನ್ನು ನಿರ್ಮಿಸಲಾಯಿತು. ೧೮೮೨ ರಲ್ಲಿ ಬೆಳಗಾಂನಲ್ಲಿ ೪೨ ಜನ ಶಿಕ್ಷೆಗೆ ಒಳಗಾದ ಖೈದಿಗಳಿದ್ದು ಅದರಲ್ಲಿ ೩೨ ಜನ ಗಂಡಸರು ಮತ್ತು ೧೦ ಜನ ಹೆಂಗಸರಿದ್ದರು. ೧೮೮೩ರ ವೇಳೆಗೆ ೪೯ ಶಿಕ್ಷೆಗೆ ಒಳಗಾದ ಖೈದಿಗಳಿದ್ದು, ಅದರಲ್ಲಿ ೪೩ ಗಂಡಸರು ಹಾಗೂ ೬೬ ಜನ ಹೆಂಗಸರಿದ್ದರು.[೭೮]

ಪ್ರತಿಯೊಬ್ಬ 'ಮಮಲತ್‌ದಾರ್'ನ ಕಛೇರಿಯಲ್ಲಿ ಒಂದು ಬಂಧೀಖಾನೆ ಇರುತ್ತಿತ್ತು. ಜಿಲ್ಲಾ ಕಾರಾಗೃಹ ಬೆಳಗಾಂ ನಲ್ಲೂ ಉಪ-ಬಂಧೀಖಾನೆ ಅಥಣಿಯಲ್ಲಿಯೂ ಇತ್ತು. ೧೮೮೨ ರ ೩೧ ಡಿಸೆಂಬರ್‌ನಲ್ಲಿ ಶಿಕ್ಷೆಗೆ ಒಳಗಾದವರ ಸಂಖ್ಯೆ ೪೨. ಅದರಲ್ಲಿ ೩೨ ಗಂಡಸರು ಹಾಗೂ ೧೦ ಜನ ಹೆಂಗಸರು ಇದ್ದರು. ೧೮೮೩ ರಲ್ಲಿ ೪೯ ಶಿಕ್ಷೆಗೊಳಗಾದ ಖೈದಿ ಗಳಿದ್ದು ಅದರಲ್ಲಿ ೪೩ ಜನ ಗಂಡಸರು ಹಾಗೂ ೬೬ ಜನ ಮಹಿಳೆಯರು ಇದ್ದರು. ಈ ವರ್ಷದಲ್ಲಿ ಪ್ರತೀ ದಿನ ಸರಾಸರಿ ೬೦ ಜನ ಖೈದಿಗಳಿದ್ದರೆ ವರ್ಷದ ಕೊನೆಯಲ್ಲಿ ೭೬ ಜನ ಶಿಕ್ಷೆಗೊಳಗಾದವರು ಇರುತ್ತಿದ್ದರು. ಇದರಲ್ಲಿ ೩೪೯ ಜನ ಪುರುಷರು, ೬೩ ಮಹಿಳೆಯರು, ಒಂದು ವರ್ಷಕ್ಕಿಂತ ಹೆಚ್ಚಿಲ್ಲದ ಶಿಕ್ಷೆಗೆ ಒಳಗಾದರೆ, ೩೫ ಪುರುಷರು ಒಂದು ವರ್ಷಕ್ಕಿಂತ ಹೆಚ್ಚಿಗೆ, ಆದರೆ ೨ ವರ್ಷಕ್ಕಿಂತ ಕಡಿಮೆ ಶಿಕ್ಷೆಗೆ ಒಳಗಾಗಿದ್ದರೆ, ೧೩ ಪುರುಷರು ಒಂದು ಮಹಿಳೆ, ೨ ವರ್ಷಕ್ಕಿಂತ ಹೆಚ್ಚಿಗೆ, ಐದು ವರ್ಷಕ್ಕಿಂತ ಕಡಿಮೆ ಶಿಕ್ಷೆಗೆ ಒಳಗಾಗಿದ್ದರು. ೬ ಪುರುಷರು, ೨ ಮಹಿಳೆಯರು, ೫ ರಿಂದ ಹತ್ತು ವರ್ಷದ ವರೆಗೆ

ಶಿಕ್ಷೆಗೆ ಒಳಗಾದರೆ, ೧೦ ವರ್ಷಕ್ಕಿಂತ ಹೆಚ್ಚು ಶಿಕ್ಷೆಗೆ ಒಳಗಾದವರು ಯಾರೂ ಇರಲಿಲ್ಲ. ೮ ಪುರುಷರು ಜೀವಾವಧಿ ಶಿಕ್ಷೆಗೂ, ೮ ಜನ ಮರಣದಂಡನೆಗೂ ಗುರಿಯಾದ ವರು ಇದ್ದರು

೧೯೨೪ ರ ವೇಳೆಗೆ ಹಿಂಡಲಗ ಕಾರಾಗೃಹದ ನಿರ್ಮಾಣಕಾರ್ಯ ಮುಕ್ತಾಯವಾಯಿತು. ಇದರಲ್ಲಿ ೩೦ ಮಹಿಳೆಯರನ್ನು ಒಳಗೊಂಡಂತೆ ೮೯೯ ಖೈದಿಗಳಿದ್ದರು. ಇದರಲ್ಲಿ ೫೮೭ ಗಂಡಸರು ಮತ್ತು ೨೮ ಹೆಂಗಸರು ಬೇರೆ ಜೈಲುಗಳಿಂದ ಇಲ್ಲಿಗೆ ವರ್ಗಾವಣೆಯಾಗಿ ಬಂದಿದ್ದರು. ೧೯೨೩ ರ ವೇಳೆಗೆ ಬೆಳಗಾಂ ಕಾರಾಗೃಹವು ಆ ಕಾಲದಲ್ಲಿ ಒಂದು ಉತ್ಕೃಷ್ಟ ದರ್ಜೆಯ ಕಾರಾಗೃಹವಾಗಿ ನಿರ್ಮಾಣವಾಯಿತು. ಬಾಂಬೆ ಪ್ರೆಸಿಡೆನ್ಸಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಹಲವು ಕಾನೂನುಗಳನ್ನು ರಚಿಸಲಾಯಿತು. ೧೮೯೪ ರಲ್ಲಿ ಪ್ರಿಸನ್ಸ್ ಆ್ಯಕ್ಟ್, ೧೯೦೯ ರಲ್ಲಿ ಪ್ರಿಸನರ್ಸ್ ಆ್ಯಕ್ಟ್, ೧೯೧೨ ರಲ್ಲಿ ದ ಇಂಡಿಯನ್ ಲೂನಸಿ ಆ್ಯಕ್ಟ್‌ಗಳು ರಚನೆಯಾದವು.[೮೮]

೭. ೯–೬ :– ಗುಲ್ಬರ್ಗ ಜಿಲ್ಲಾ ಕಾರಾಗೃಹಗಳು :

ಗುಲ್ಬರ್ಗ ಪಟ್ಟಣದಲ್ಲಿ ಬಹಳ ಹಿಂದಿನಿಂದಲೂ ಅಂದರೆ ಬಹುಮನಿ ಸುಲ್ತಾನರ ಆಳ್ವಿಕೆಯ ಕಾಲದಿಂದಲೂ ಕಾರಾಗೃಹವಿದ್ದ ದಾಖಲೆಗಳಿವೆ. ಇವುಗಳು ಆಗಿನ ಚಕ್ರವರ್ತಿ, ರಾಜ ಇವರ ಅಧೀನದಲ್ಲಿದ್ದಿತು. ಗುಲ್ಬರ್ಗವು ಬಹುಮನಿ ಸುಲ್ತಾನರ ರಾಜಧಾನಿಯಾಗಿದ್ದು, ಇಲ್ಲಿನ ಕಾರಾಗೃಹವು ಆಗಿನ ಕಾಲದ ವಿಧಾನಗಳಲ್ಲಿನ ಆಡಳಿತ ವ್ಯಾಪ್ತಿಯಲ್ಲಿತ್ತು. ಒಬ್ಬ ಖೈದಿಯನ್ನು ಅವನ ಜೈಲುವಾಸದ ಸಂಪೂರ್ಣ ಅವಧಿಯನ್ನು ಶೃಂಖಲೆಯಿಂದ (ಕಾಲಿನಬೇಡಿ) ಬಂಧಿಸಿಡಲಾಗುತ್ತಿತ್ತು. ಅವರಿಗೆ ಶಿಕ್ಷೆಯು ಬಹಳ ಕ್ರೂರವಾದ್ದವು. ಈ ಪರಿಸ್ಥಿತಿಯಿಂದ ಇತ್ತೀಚಿನ ಪರಿಸ್ಥಿತಿಗೆ ಬರಲು ಜೈಲು ನಿಯಮಾವಳಿಗಳಲ್ಲಿ ಅನೇಕ ಸುಧಾರಣೆಗಳಾದವು. ೧೮೫೭ ರಲ್ಲಿ ಆಗಿನ ನಿಜಾಮ ಸರ್ಕಾರದ ಕಾರಾಗೃಹಗಳ ಡೈರೆಕ್ಟರ್ ಜನರಲ್ ಆಗಿದ್ದ 'ಹಾಂಕಿನ್' ಎಂಬವರು ಕಾರಾಗೃಹದ ಸುಧಾರಣೆಗಳನ್ನು ಈ ಪ್ರದೇಶದಲ್ಲಿ ಮಾಡಿದವರಲ್ಲಿ ಮೊದಲಿಗರೆಂದು ಹೇಳಬಹುದು. ಹ್ಯಾಂಕಿನ್ ಕಾರಾಗೃಹ ಆಡಳಿತದ ನೂತನ ವಿಧಾನವನ್ನು ಪ್ರಾರಂಭಿಸಿದವರಾಗಿದ್ದರು. ಕಾರಾಗೃಹಗಳಿಗಾಗಿ ಒಂದು ಕೈಪಿಡಿಯನ್ನು ತಯಾರಿಸಿದರು. ಇದರಂತೆ ಖೈದಿಗಳಿಗೆ ಕಾರಾಗೃಹದಲ್ಲಿ ಸಂಜೆ ಮನೋರಂಜನೆ, ಹಾಗೂ ಪೆರೋಲ್ ಮೇಲೆ (ಶಿಕ್ಷೆಗೊಳಗಾದ ಖೈದಿಗಳಿಗೆ ರಜೆಯ ಮೇಲೆ ಕಳುಹಿಸಿಕೊಡುವ ಪದ್ಧತಿ) ಬಿಡುಗಡೆ ಮಾಡುವ ಕ್ರಮ, ಮೊದಲಾದವನ್ನು ಜಾರಿಗೆ ತಂದರು ಮತ್ತು ಬಿಡುಗಡೆಯಾದ ಖೈದಿಗಳಿಗಾಗಿ ಒಂದು ಸಹಕಾರಿ ಸಂಘವನ್ನು ಸ್ಥಾಪಿಸಿದರು. ನಂತರದ ದಿನಗಳಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಜೈಲಿನ ಸುಧಾರಣೆ ಬಗ್ಗೆ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಗುಲ್ಬರ್ಗದಲ್ಲಿ ಪಟ್ಟಣದ ಮದ್ಯೆ ಸೂಪರ್ ಮಾರ್ಕೆಟ್ ಪ್ರದೇಶದಲ್ಲಿ ಕೇಂದ್ರ ಕಾರಾಗೃಹ ಇದ್ದಿತು. ಈ ಕಾರಾಗೃಹವು ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಮೂರು ಜಿಲ್ಲೆಗಳಿಗೆ ಒಳಪಟ್ಟಿತು. ಜಿಲ್ಲೆ ಯಲ್ಲಿ ಉಪ ಬಂದಿಖಾನೆಗಳಾಗಲೀ, ಲಾಕಪ್‌ಗಳಾಗಲೀ, (ಪೊಲೀಸ್ ಠಾಣೆಯಲ್ಲಿದ್ದ ಲಾಕಪ್‌ಗಳನ್ನು ಹೊರತು ಪಡಿಸಿ) ಇರಲಿಲ್ಲ. ಈ ಕೇಂದ್ರ ಕಾರಾಗೃಹವು ೭೦ ಎಕ್ರೆ ಪ್ರದೇಶದಲ್ಲಿದ್ದು, ೭೫೦ ಎಲ್ಲಾ ವಿಧವಾದ ಖೈದಿಗಳಿಗೆ ಇರಲು ಅವಕಾಶವಿದ್ದಿತು. ಹಾಗೂ ೪೦ ಹಾಸಿಗೆಯ ಆಸ್ಪತ್ರೆ ಇದ್ದಿತು.[೮೯]

೭.೯–೭ :– ಬೆಂಗಳೂರು ಕೇಂದ್ರ ಕಾರಾಗೃಹ

ಬೆಂಗಳೂರು ನಗರದಲ್ಲಿರುವ ಕೇಂದ್ರ ಕಾರಾಗೃಹವನ್ನು ಬ್ರಿಟೀಷರು ೧೮೬೩ ರಲ್ಲಿ ನಿರ್ಮಿಸಿದರು. *ಚಿತ್ರ ೮೦ ನೋಡಿ* ಆ ಕಾಲಕ್ಕೆ ಇದು ಎಲ್ಲಾ ಬಂಧೀಖಾನೆಗಳಿಗೂ ಮಾದರಿಯಾಗಿತ್ತು. ಕಾರಾಗೃಹದ ಮದ್ಯದಲ್ಲಿ ಕಾವಲು ಗೋಪುರವಿತ್ತು. ಅದರ ಸುತ್ತಲೂ ಕಿರಣಗಳ ಆಕಾರದಲ್ಲಿ ಬ್ಯಾರಕ್‌ಗಳ ನಿರ್ಮಾಣವಾಗಿದ್ದವು. ಸಾಮಾನ್ಯ ಖೈದಿಗಳನ್ನು ಗುಂಪಾಗಿ ಕೂಡಿರುವ ಬ್ಯಾರೆಕ್‌ಗಳಿದ್ದರೆ, ರಾಜಕೀಯ ಖೈದಿಗಳಿಗಾಗಿ ಪ್ರತ್ಯೇಕ ಕೋಣೆಯುಳ್ಳ ಬ್ಯಾರೆಕ್‌ಗಳು ಇದ್ದವು. ಉಗ್ರ ಖೈದಿಗಳ ಬ್ಯಾರೆಕ್‌ಗಳು, ಯುರೋಪಿಯನ್ ಬ್ಯಾರೆಕ್, ನೇಣು ಶಿಕ್ಷೆ ನೀಡುವ ಸೆಟ್, ಶವಾಗಾರ, ಆಸ್ಪತ್ರೆ ಮತ್ತು ಒಂದು ಗ್ರಂಥಾಲಯ

ವನ್ನು ಈ ಕಾರಾಗೃಹ ಹೊಂದಿತ್ತು. ಏಕಕಾಲಕ್ಕೆ ೧,೦೦೦ ಕೈದಿಗಳನ್ನು ಇಡುವ ಸಾಮರ್ಥ್ಯ ಈ ಕಾರಾಗೃಹಕ್ಕೆ ಇತ್ತು. ಶಿವಮೊಗ್ಗದ ಈಸೂರು ಸ್ವಾತಂತ್ರ್ಯ ಹೋರಾಟಗಾರರನ್ನು ಈ ಬಂಧೀಖಾನೆಯಲ್ಲಿಯೇ ನೇಣು ಹಾಕಲಾಗಿತ್ತು. ಈಗ ಇದನ್ನು ಐತಿಹಾಸಿಕ ಸ್ಮಾರಕವನ್ನಾಗಿ ಮಾಡಿ ಫ್ರೀಡಂ ಪಾರ್ಕ್ ಎಂಬ ಹೆಸರಿನಿಂದ ಇಡಲಾಗಿದೆ. ಬೆಂಗಳೂರನ್ನು ಹೊರತುಪಡಿಸಿದರೆ ಕರ್ನಾಟಕ ರಾಜ್ಯದ ಬಳ್ಳಾರಿಯ ಕಾರಾಗೃಹದಲ್ಲಿ ಮರಣದಂಡನೆ ಶಿಕ್ಷೆಗೆ ಒಳಗಾದ ಖೈದಿಗಳಿಗೆ ನೇಣುಕಂಬ ಶಿಕ್ಷೆ ನೀಡುವ ಸೆಟ್ (gallows) ಇದೆ. *ಚಿತ್ರ ೮೧ ನೋಡಿ*

ಮಹಾರಾಜರ ಆಡಳಿತದಲ್ಲಿ ಕಾರಾಗೃಹಗಳಲ್ಲಿ ವ್ಯವಸ್ಥೆಗಳ ಬಗ್ಗೆ ಗಮನಹರಿಸಲಾಯಿತು. ಆದರೆ ಶಿಕ್ಷೆಗೊಳಗಾದವರು, ಆರೋಪಿಗಳು, ಸಂಶಯಾಸ್ಪದ ವ್ಯಕ್ತಿಗಳ ನಡುವೆ ಯಾವುದೇ ವರ್ಗೀಕರಣವಿಲ್ಲದೇ ಎಲ್ಲರನ್ನೂ ಒಂದೇ ಸ್ಥಳದಲ್ಲಿ ಇಡಲಾಗಿತ್ತು. ಈ ಪದ್ಧತಿಯನ್ನು ರದ್ದು ಮಾಡಲು ಕಮಿಷನರ್‌ರವರ ವಿಶೇಷ ಆದೇಶ ಬೇಕಿತ್ತು.[೮೦] ಆದರೆ ೧೮೩೫ರ ವರೆಗೆ ಈ ತಪ್ಪನ್ನು ಸರಿಪಡಿಸಲು ಯಾವುದೇ ಕಮಿನಷರ್‌ರವರು ಕ್ರಮಕೈಗೊಳ್ಳಲಿಲ್ಲ. ೧೮೩೪ ರಲ್ಲಿ ಕಂಟೋನ್ಮೆಂಟ್ ಕಾರಾಗೃಹದಲ್ಲಿ ೬೫ ಜನ ಖೈದಿಗಳನ್ನು ಇರಿಸುವ ಸಾಮರ್ಥ್ಯವಿದ್ದರೂ ೧೫೦ ಜನ ಖೈದಿಗಳನ್ನು ತುಂಬಲಾಗಿತ್ತು. ಈ ವಾತಾವರಣವು ದೋಷಪೂರ್ಣವಾಗಿಯೂ, ಅನಾರೋಗ್ಯಕರವಾಗಿಯೂ ಇದ್ದು ಅಭದ್ರತೆಯಿಂದ ಕೂಡಿತ್ತು. ದರೋಡೆಕೋರರು, ಗಂಡಸರು, ಹೆಂಗಸರು, ಮಕ್ಕಳು ಎಂಬ ವರ್ಗೀಕರಣವೂ ಇಲ್ಲದೆ ಎಲ್ಲರನ್ನೂ ಒಟ್ಟಿಗೆ ತುಂಬಲಾಗಿತ್ತು. ಮತ್ತು ಕಾರಾಗೃಹದ ಶಿಸ್ತುಪಾಲನೆಯ ಕಷ್ಟವಾಗಿತ್ತು. ಸಣ್ಣ ಪ್ರಕರಣಗಳಿಗೆ ಶಿಕ್ಷೆಗೊಳಗಾದವರು ಅಥವಾ ಮೊದಲ ಬಾರಿಗೆ ಶಿಕ್ಷೆಗೆ ಒಳಗಾದವರೂ ಇತರರ ಸಹವಾಸದಿಂದ ಕೆಟ್ಟುಹೋಗುತ್ತಿದ್ದರು. ಕೆಲವರು ತಿದ್ದಲಾಗದಷ್ಟು ಮಟ್ಟಿಗೆ ಕೆಟ್ಟುಹೋದ ಕೆಲವು ಉದಾಹರಣೆಗಳಿವೆ.[೮೧]

೧೮೩೫ ರಲ್ಲಿ ಮೊದಲ ಬಾರಿಗೆ ಇದರ ಸುಧಾರಣೆಯು ಆರಂಭವಾಯಿತು. ಬೆಂಗಳೂರಿನಲ್ಲಿ ಕಾರಾಗೃಹ ರಚಿಸಲು ಆರಂಭಿಸಲಾಯಿತು.[೮೨] ಅಲ್ಲಿಯವರೆಗೂ ಮದ್ರಾಸ್ ಸರ್ಕಾರಕ್ಕೆ ಸೇರಿದ್ದ ಒಂದು ಕಟ್ಟಡದಲ್ಲಿ ಖೈದಿಗಳನ್ನು ಇಡಲು ಕಬ್ಬನ್ ಆದೇಶಿಸಿದ್ದ. ನಂತರದ ಹೆಜ್ಜೆಯಾಗಿ, ಶಿಕ್ಷೆಗೊಳಗಾದ ಖೈದಿಗಳಿಂದ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಕೆಲಸಗಳನ್ನು ಮಾಡಿಸಲಾಯಿತು. ಕಠಿಣಶಿಕ್ಷೆಗೆ ಒಳಗಾದ ಖೈದಿಗಳಿಂದ ಶ್ರಮದ ಕೆಲಸವನ್ನು ಮಾಡಿಸಲಾಗುತ್ತಿತ್ತು.[೮೩] ಆದರೆ ಇವರುಗಳನ್ನು ಪಹರೆ ಕಾಯುವುದು ಮತ್ತು ಸಾಕಷ್ಟು ಸ್ಥಳಾವಕಾಶವನ್ನು ಒದಗಿಸುವುದು ಸಮಸ್ಯೆಯಾಗಿತ್ತು. ಇದಕ್ಕಾಗಿ ಹೆಚ್ಚುವರಿಯಾಗಿ ಸೆಂಟ್ರಿಗಳನ್ನು ನೇಮಿಸಲಾಯಿತು. ತಾತ್ಕಲಿಕವಾಗಿ ಟೆಂಟ್, ಶೆಡ್‌ಗಳನ್ನು ನಿರ್ಮಿಸಲಾಯಿತು. ಶಿಕ್ಷೆಗೊಳಗಾದವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾಯಿಸುತ್ತಾ, ಅವರಿಂದ ರಸ್ತೆಗಳ ನಿರ್ಮಾಣ ಕಾರ್ಯವನ್ನು ಮಾಡಿಸುತ್ತಿದ್ದರು. ಮದ್ರಾಸ್ ಸರ್ಕಾರದಲ್ಲಿ ಗಣಿಗಾರಿಕೆಯನ್ನು ನೋಡಿಕೊಳ್ಳುತ್ತಿದ್ದ ಯುರೋಪಿಯನ್ ಅಧಿಕಾರಿಗಳನ್ನು ಈ ಕೆಲಸಕ್ಕೆ ನಿರ್ದೇಶನ ನೀಡಲು ನೇಮಿಸಲಾಯಿತು. ಈ ಯೋಜನೆಯು ಅತ್ಯಂತ ಯಶಸ್ವಿಯಾಯಿತು. ಆಗುಂಬೆ ಘಾಟಿಯ ರಸ್ತೆಯನ್ನು ಶಿಕ್ಷೆಗೊಳಗಾದ ಖೈದಿಗಳ ಸಹಾಯದಿಂದ ತೆರೆಯಲಾಯಿತು.[೮೪] ನಂತರದ ದಿನಗಳಲ್ಲಿ ಶಿಕ್ಷೆಗೊಳಗಾದ ಖೈದಿಗಳನ್ನು ಕೇವಲ ರಸ್ತೆ ಕೆಲಸಗಳಿಗೆ ಮಾತ್ರವಲ್ಲದೇ, ಕಮ್ಮಾರಿಕೆ, ಕುಂಬಾರಿಕೆ, ಮರಗೆಲಸಗಳಿಗೆ ನೇಮಿಸಲಾಯಿತು. ಬುದ್ಧಿವಂತ ಖೈದಿಗಳನ್ನು ಸರಕಾರಿ ಮೇಸ್ತ್ರಿಯ ಮೇಲ್ವಿಚಾರಣೆಯಲ್ಲಿ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡಲು ನೇಮಿಸಲಾಯಿತು. ಇವರಿಂದ ಹಲವು ಪ್ರವಾಸಿ ಮಂದಿರಗಳ ಮರಗೆಲಸವನ್ನು ಮಾಡಿಸಲಾಯಿತು.[೮೫]

ಕಂಟೋನ್ಮೆಂಟ್ ಜೈಲಿನಲ್ಲಿರುವ ಖೈದಿಗಳ ಆರೋಗ್ಯವನ್ನು ಯುರೋಪಿಯನ್ ವೈದ್ಯರಿಂದಲೂ, ಉಳಿದ ಕಾರಾಗೃಹಕ್ಕೆ ಖೈದಿಗಳ ಆರೋಗ್ಯವನ್ನು 'ಹಕೀಂ'ರಿಂದಲೂ, ಪರೀಕ್ಷಿಸಲಾಗುತ್ತಿತ್ತು. ಪ್ರಮುಖ ಕಾಯಿಲೆಗಳಿದ್ದರೆ, 'ಸರ್ಜನ್'ಗಳಿಂದ ಚಿಕಿತ್ಸೆ ನೀಡಲಾಗುತ್ತಿತ್ತು. ೧೮೩೪ ರಲ್ಲಿ ಚಾರ್ಲ್ ಇರ್‌ವಿಂಗ್ ಸ್ಮಿತ್ ಬರೆದಿದ್ದೇನೆಂದರೆ, "ಖೈದಿಗಳು ಸಾಧಾರಣ

ವಾಗಿ ಆರೋಗ್ಯದಿಂದಿದ್ದಾರೆ. ಖೈದಿಗಳನ್ನು ಎಂಟು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರತೀ ದಿನ ಒಂದು ಗುಂಪು ಅಡುಗೆ ಮಾಡುತ್ತಿದ್ದರು. ಅವರ ಊಟ, ರಾಗಿ ಮುದ್ದೆ, ಸಾರು ಆಗಿತ್ತು. ಖೈದಿಗಳಿಗೆ ಪ್ರತೀ ದಿನ ಕಡಿಮೆ ಮೊತ್ತದ ಭತ್ಯೆ ನೀಡಲಾಗುತ್ತಿತ್ತು. ಇದರಿಂದ ಅವರಿಗೆ ಜೈಲಿನಲ್ಲಿ ಒದಗಿಸಲಾದ ತಂಬಾಕು. ವೀಳ್ಯದೆಲೆ, ನಶ್ಯದ ಪುಡಿ ಮತ್ತು ವಾರಕ್ಕೊಮ್ಮೆ ಮಾಂಸವನ್ನು ಖರೀದಿಸುತ್ತಿದ್ದರು.[೮೬] ಎಂದಿದ್ದಾನೆ. ೩೧ ಜೌನ್ಸ್ ತೂಕದ ರಾಗಿ ಅಥವಾ ಅನ್ನವನ್ನು ಹಾಗೂ ೪ ಪೈಸೆಯನ್ನು ಪ್ರತೀ ದಿನ ನೀಡಲಾಗುತ್ತಿತ್ತು. ಬೇರೆ ಬೇರೆ ಜಾತಿಯವರು ಬೇರೆ ಬೇರೆಯಾಗಿ ಅಡುಗೆ, ಊಟ ಮಾಡಿಕೊಳ್ಳುತ್ತಿದ್ದರು. ಭಾನುವಾರ ಕೆಲಸವಿರಲಿಲ್ಲ. ಈ ದಿನ ಖೈದಿಗಳಿಗೆ ಎಣ್ಣೆ ಸ್ನಾನ ಒದಗಿಸಲಾಗುತ್ತಿತ್ತು. ಪ್ರತೀ ದಿನ ಬೆಳಗಿನ ಸೂರ್ಯೋದಯದಿಂದ ಮದ್ಯಾಹ್ನ ೩ ಗಂಟೆಯವರೆಗೆ ಕೆಲಸ ಮಾಡಬೇಕಿತ್ತು. ವರ್ಷಕ್ಕೊಮ್ಮೆ ದೇಶೀಯ ಕಂಬಳಿ ನೀಡಲಾಗುತ್ತಿತ್ತು. ೧೮೩೬ ರಿಂದ ೧೮೫೦ ರವರೆಗೆ ಶಿವಮೊಗ್ಗ ಕಾರಾಗೃಹದಲ್ಲಿ ಸಾವಿನ ಪ್ರಮಾಣ ೧೧.೨೫% ಇತ್ತು. ಚಿತ್ರದುರ್ಗ, ಬೆಂಗಳೂರಿನ ಕೋಟೆ, ನಗರ ಹಾಗೂ ಕಂಟೋನ್ಮೆಂಟ್ ಕಾರಾಗೃಹ ಗಳಲ್ಲಿ ಕ್ರಮವಾಗಿ ಸಾವಿನ ಪ್ರಮಾಣ ೮%, ೨.೫%, ಹಾಗೂ ೦.೫% ಇತ್ತು. ಮಂಗಳೂರು ಮತ್ತು ಸುಥುರಾ ಕಾರಾ ಗೃಹಗಳಿಗೆ ಹೋಲಿಸಿದರೆ ಸಾವಿನ ಪ್ರಮಾಣ ಕಡಿಮೆಯಾಗಿತ್ತು. ಆದ್ದರಿಂದ ಕಬ್ಬನ್ ಹೇಳಿದ್ದೇನೆಂದರೆ, ಮೂರು ಕಾರಾಗೃಹಗಳ ಸರಾಸರಿಯನ್ನು ಹೋಲಿಸಿದರೆ ಇಲ್ಲಿ ಸಾವಿನ ಪ್ರಮಾಣ ಕಡಿಮೆ ಇದೆ. ಐದು ವರ್ಷಗಳಲ್ಲಿ ೨.೭೫೬ ಖೈದಿಗಳಲ್ಲಿ ೮೦ ಜನ ಮರಣ ಹೊಂದಿದರು. ಇದು ಸಣ್ಣ ಪ್ರಮಾಣವೆಂದು ಆತ ಹೇಳಿದ. ಮತ್ತು ಬೆಂಗಳೂರಿನಲ್ಲಿ ಜೈಲಿನಿಂದ ಹೊರಭಾಗದಲ್ಲಿ ಕೆಲಸಕ್ಕೆ ನೇಮಿಸುವುದರಿಂದ ಖೈದಿಗಳು ಆರೋಗ್ಯಯುತರಾಗಿರುತ್ತಾರೆಂದು ಹೇಳಿದ.[೮೭]

ಮೈಸೂರು ಸಂಸ್ಥಾನದಲ್ಲಿ ಒಟ್ಟು ೮ ಕಾರಾಗೃಹಗಳಿದ್ದು, ತಲಾ ಮೂರು ಬೆಂಗಳೂರಿನಲ್ಲೂ ಹಾಗೂ ಅಷ್ಟಗ್ರಾಮ ವಿಭಾಗದಲ್ಲೂ ಇದ್ದರೆ, ಉಳಿದ ವಿಭಾಗಗಳಲ್ಲಿ ತಲಾ ಒಂದು ಇತ್ತು. ಬೆಂಗಳೂರಿನಲ್ಲಿ ಕಂಟೋನ್‌ಮೆಂಟ್, ಪೇಟೆ, ಹಾಗೂ ಕೋಟೆಗಳಲ್ಲಿ ಕಾರಾಗೃಹಗಳಿದ್ದವು. ಕಳ್ಳರನ್ನು ಕೋಟೆ ಕಾರಾಗೃಹದಲ್ಲಿ ಇಡಲಾಗುತ್ತಿತ್ತು. ಇಲ್ಲಿ ಬೇರೆ ಕಡೆಗಳಿಗಿಂತ ಹೆಚ್ಚಿನ ಸುರಕ್ಷತೆ ಇತ್ತು. ಅಷ್ಟ ಗ್ರಾಮದ ಮೂರು ಕಾರಾಗೃಹಗಳು, ಮೈಸೂರು, ಶ್ರೀರಂಗಪಟ್ಟಣ ಮತ್ತು ಹಾಸನಗಳಲ್ಲಿದ್ದವು. ಆದರೆ ೧೮೫೦ ರ ನಂತರ ಶ್ರೀರಂಗಪಟ್ಟಣ ಮತ್ತು ಹಾಸನ ಕಾರಾಗೃಹಗಳನ್ನು ಮುಚ್ಚಿ ಅಲ್ಲಿದ್ದ ಖೈದಿಗಳನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು. ಇದೇ ವೇಳೆ ಬೆಂಗಳೂರು ಪೇಟೆ, ಕೋಟೆ ಹಾಗೂ ತುಮಕೂರು ಮತ್ತು ಶಿವಮೊಗ್ಗಗಳಲ್ಲಿನ ಕಾರಾಗೃಹಗಳನ್ನು ಪುನರ್‌ನಿರ್ಮಾಣ ಮಾಡಲಾಯಿತು. ಆದರೆ ಕಬ್ಬನ್ ಹೋಗುವವರೆಗೂ ಶಿವಮೊಗ್ಗ ಕಾರಾಗೃಹದ ನಿರ್ಮಾಣ ಕಾರ್ಯ ಪೂರ್ತಿಗೊಂಡಿರಲಿಲ್ಲ.

೧೮೩೫ ರಲ್ಲಿ ಮಾರ್ಕ್ ಕಬ್ಬನನು ಬೆಂಗಳೂರಿನಲ್ಲಿ ಕೇಂದ್ರ ಕಾರಾಗೃಹವನ್ನು ರಚಿಸುವಂತೆ ಪ್ರಸ್ಥಾವನೆಯನ್ನು ಕಳುಹಿಸಿದ್ದ. ಕೋರ್ಟ್ ಆಫ್ ಡೈರಕ್ಟರ್ಸ್ ಈ ಪ್ರಸ್ತಾವನೆಗೆ ಅನುಮತಿ ನೀಡಿದರೂ ಸಹ ಭಾರತ ಸರ್ಕಾರವು ಅನುಮತಿ ನೀಡದಿರುವುದು ಆಶ್ಚರ್ಯಕರವಾಗಿತ್ತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಕಂಟೋನ್‌ಮೆಂಟ್ ಕಾರಾಗೃಹ ಹೊರತುಪಡಿಸಿ ೭೦೦ ಖೈದಿಗಳಿಗೆ ಸ್ಥಳಾವಕಾಶ ಇರುವ ೨ ಸಣ್ಣ ಕಾರಾಗೃಹಗಳನ್ನು ನಿರ್ಮಿಸಲು ಅನುಮತಿ ನೀಡ ಲಾಯಿತು. ಆಗಲೇ ೪೦೦ ಜನ ಶಿಕ್ಷೆಗೊಳಗಾದ ಖೈದಿಗಳಿದ್ದರು.[೮೮]

೧೮೩೫ ರಲ್ಲಿ ಪ್ರತಿಯೊಬ್ಬ ಕೈದಿಗೆ ವಾರ್ಷಿಕವಾಗಿ ತಗಲುತ್ತಿದ್ದ ಖರ್ಚು ರೂ ೨೫ , ಆದರೆ ೧೮೫೮ ರಲ್ಲಿ ರೂ ೪೦ ಆಗಿತ್ತು. ಅಂದರೆ ತಿಂಗಳಿಗೆ ಸರಾಸರಿ ರೂ ೨ ರಿಂದ ೩ ಖರ್ಚು ಆಗಿತ್ತು. ಇದು ಕಡಿಮೆ ಪ್ರಮಾಣದ್ದಾಗಿತ್ತು. ಈ ಹಣ ಬಹುತೇಕ ಖೈದಿಗಳು ಮಾಡಿದ ಕೆಲಸದಿಂದಲೇ ಬರುತ್ತಿತ್ತು.[೮೯]

ಕಮಿಷನರ್‌ನು ಕಾರಾಗೃಹಗಳ ವಿಷಯಗಳಿಗೆ ಸಂಬಂಧಿಸಿದಂತೆ ಸ್ವಲ್ಪ ದಾರಾಳಿಯಾಗಿದ್ದನು. ಹಾಗೂ ಕಾರಾ

ಗೃಹಗಳ ಅಭಿವೃದ್ಧಿಗೆ ಹಾಗೂ ಖರ್ಚುವೆಚ್ಚಗಳಿಗೆ ಎಂದೂ ತಕ್ಷಣ ಹಣ ಬಿಡುಗಡೆ ಮಾಡಿರಲಿಲ್ಲ.[೧೦] ಮದ್ರಾಸ್ ಪ್ರಾಂತದ ವ್ಯವಸ್ಥೆಯೂ ಇಷ್ಟೇ ನಿದಾನಗತಿಯಲ್ಲಿತ್ತು.[೧೧] ದೇಶದ ಇತರೆಡೆಗಳ ಪರಿಸ್ಥಿತಿಯೂ ಹೀಗೆ ಇತ್ತು.[೧೨] ೧೮೩೮ ರಲ್ಲಿ ಆಕ್ಲೆಂಡ್‌ನ ನೇತೃತ್ವದ ಜೈಲು ಕಮಿಟಿಯ ಸಿಪಾರಸ್ಸುಗಳಲ್ಲಿ ತಿಳಿಸಿದ್ದೇನೆಂದರೆ, ಈ ರೀತಿಯ ವಿಳಂಬಗಳಿಗೆ ಆರ್ಥಿಕ ಸಂಕಷ್ಟವೇ ಕಾರಣ, ಆದರೆ ಎಲ್ಲಿಯವರೆಗೆ ಸರಕಾರವು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ನಿರ್ಧರಿಸುತ್ತದೆಯೋ, ಅಲ್ಲಿಯವರೆಗೆ ಖೈದಿಗಳಿಗೆ ಸ್ಥಳಾವಕಾಶ ಮತ್ತು ಅವರ ಉಪಚಾರಗಳನ್ನ್ನು ತಿರಸ್ಕರಿಸುವಂತಿಲ್ಲ ಎಂದು ಹೇಳಿತು. ಇದರಿಂದಾಗಿ ಮಾರ್ಕ್ ಕಬ್ಬನ್ ಕೊನೇಯ ಪಕ್ಷ ೧೮೫೦ ರಲ್ಲಿ ಕಾರಾಗೃಹಗಳ ಕಟ್ಟಡ ನಿರ್ಮಿಸಲು ಆರಂಭಿಸಿ ಅದರೊಳಗೆ ಸುಧಾರಣೆಗಳನ್ನು ತಂದನು.[೧೩]

೭.೯-೮ – ಮೈಸೂರಿನಲ್ಲಿ ಕಾರಾಗೃಹ

ಮೈಸೂರು ಅರಸರ ಕಾಲದಲ್ಲಿ ಯುದ್ಧ ಖೈದಿಗಳನ್ನು, ಅಪರಾಧ ಎಸಗಿದವರನ್ನು ಹಾಗೂ ಶಿಕ್ಷೆಗೆ ಒಳಗಾದವರನ್ನು ಇಡಲು ಕಾರಾಗೃಹವನ್ನು ನಿರ್ಮಿಸಲಾಯಿತು. ೧೮೩೧ ರಿಂದ ೧೮೫೬ರ ಅವಧಿಯಲ್ಲಿ ಕಾರಾಗೃಹ ನಿರ್ಮಾಣವಾದವು. ೧೮೭೬-೭೮ ರ ನಡುವೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದ್ದು, ಆ ವೇಳೆಯಲ್ಲಿ ಜೈಲಿನಲ್ಲಿರುವ ಖೈದಿಗಳ ಸಂಖ್ಯೆ ಅತ್ಯಂತ ಹೆಚ್ಚಾಯಿತು. ಈ ಕಾರಣಕ್ಕಾಗಿ ಕುಕ್ಕರಹಳ್ಳಿಯಲ್ಲಿ ಒಂದು ಜೈಲನ್ನು ನಿರ್ಮಿಸಲಾಯಿತು. ಇದಕ್ಕೆ ಶಿಕ್ಷೆಗೆ ಒಳಗಾಗಿದ್ದ ಖೈದಿಗಳನ್ನು ನಿರ್ಮಾಣ ಕಾರ್ಯಗಳಲ್ಲಿ ಕೆಲಸಗಾರರಾಗಿ ಬಳಸಿಕೊಳ್ಳಲಾಯಿತು. ಈ ವರ್ಷ ಮೈಸೂರು ಮತ್ತು ಹಾಸನ ಜೈಲಿನಲ್ಲಿದ್ದ ಒಟ್ಟು ೪೪೫ ಖೈದಿಗಳು ಈ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದರು. ೧೮೯೭ ರಿಂದ ಈ ಜೈಲುಗಳನ್ನು ಐ.ಜಿ.ಪಿ ದರ್ಜೆಯ ಅಧಿಕಾರಿಗಳು ನಿಯಂತ್ರಿಸಲು ಪ್ರಾರಂಭಿಸಿದರು. ಹಿರಿಯ ಸರ್ಜನ್‌ಗಳನ್ನು ಜೈಲುಗಳಿಗೆ ನೇಮಿಸಲಾಯಿತು. 'ಮುನ್ಸಿಫ್‌ರು' ಅಥವಾ ಅಮಿಲ್‌ದಾರರು ಅಥವಾ ಉಪ-ಅಮಿಲ್‌ದಾರರು ತಾಲೂಕು ಮಟ್ಟದ ಬಂಧೀಖಾನೆಗಳ ಉಸ್ತುವಾರಿ ಅಧಿಕಾರಿಯಾಗಿದ್ದರು. ೧೮೯೮ ರಿಂದ ಲಾಕಪ್‌ಗಳನ್ನು ವೈದ್ಯಾಧಿಕಾರಿಯವರ ನಿಯಂತ್ರಣಕ್ಕೆ ನೀಡಲಾಯಿತು. ಇವರುಗಳು ಉಪ ಸಹಾಯಕ ಸರ್ಜನ್‌ಗಳಿಗಿಂತಲೂ (ಸಬ್ ಅಸಿಸ್ಟೆಂಟ್ ಸರ್ಜನ್) ಮೇಲ್ದರ್ಜೆಯವರಾಗಿರಬೇಕಿತ್ತು.

೧೯೦೪-೦೫ ರಲ್ಲಿ ಕೆಲವು ಜೈಲುಗಳನ್ನು ನೋಡಿಕೊಳ್ಳಲು ಸಬ್-ರಿಜಿಸ್ಟ್ರಾರ್‌ಗಳನ್ನು ನೇಮಿಸಲಾಯಿತು. ಮೈಸೂರಿನ ಜಿಲ್ಲಾ ಕಾರಾಗೃಹದಲ್ಲಿ ಖೈದಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ೧೮೮೧ ರಲ್ಲಿ ಹಿಂದೂಸ್ಥಾನಿ ತರಗತಿಗಳು ಪ್ರಾರಂಭವಾದವು. ಧರ್ಮ ಹಾಗೂ ನೈತಿಕತೆಗೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡಲಾಗುತ್ತಿತ್ತು. ಆಯ್ದ ಕೆಲವು ಖೈದಿಗಳಿಗೆ ದಿನದಲ್ಲಿ ಒಂದು ಗಂಟೆ ಪುಸ್ತಕಗಳನ್ನು ಓದಲು ಬಿಡಲಾಗುತ್ತಿತ್ತು. ಕ್ರಮೇಣ ಜೈಲಿನಲ್ಲಿ ಗ್ರಂಥಾಲಯಗಳನ್ನು ತೆರೆಯಲಾಯಿತು. ಮೈಸೂರು ಜೈಲಿನಲ್ಲಿ 'ವಿಸಿಟರ್ಸ್ ಕಮಿಟಿ' ಯನ್ನು ತೆರೆಯಲಾಯಿತು. ಅದರಲ್ಲಿ ಅಧಿಕಾರಿಗಳಲ್ಲದವರೂ ಸಹ ಇದ್ದರು. ಖೈದಿಗಳಿಗೆ ಕೈತೋಟದ ಕೆಲಸವನ್ನು ಮಾಡಿದ್ದಕ್ಕಾಗಿ ೧೯೦೭ ಮತ್ತು ೧೯೦೮ ರಲ್ಲಿ ಎರಡು ಆಣೆ ನೀಡಲಾಗುತ್ತಿತ್ತು. ಅರಮನೆ ಮತ್ತು ದಿವಾನರ ಮನೆಗಳಲ್ಲಿ ಕೈತೋಟದ ಕೆಲಸಗಳಿಗೆ ಶಿಕ್ಷೆಗೊಳಗಾದ ಖೈದಿಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಆದರೆ ಈ ಕೆಲಸಗಳಿಗೆ ಅವರಿಗೆ ಸಂಬಳ ನೀಡಲಾಗುತ್ತಿರಲಿಲ್ಲ. ೧೯೧೨ ರಲ್ಲಿ ಈ ದರವನ್ನು ಎರಡು ಆಣೆಯಿಂದ ನಾಲ್ಕು ಆಣೆಗೆ ಏರಿಸಲಾಯಿತು. ಮೈಸೂರು ಜೈಲಿನಲ್ಲಿ ಬಟ್ಟೆ ನೇಯ್ಗೆ, ಬಡಗಿ ಕೆಲಸ, ಕಮ್ಮಾರಿಕೆ, ಕಂಬಳಿ ಮತ್ತು ಚಾಪೆ ನೆಯ್ಗೆಯಂತಹ ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿದ್ದರು. ಲಿಟರರಿ ಕೌನ್ಸಿಲ್ ೧೯೪೪ ರಲ್ಲಿ ಶಿಕ್ಷೆಗೊಳಗಾದ ೬೦ ಜನರಿಗೆ ಜೈಲಿನಲ್ಲಿ ಕನ್ನಡ ತರಗತಿಗಳನ್ನು ನಡೆಸಲು ಪ್ರಾರಂಭಿಸಿತು.

೭. ೧೦ :- ಪೊಲೀಸ್ ಸಮವಸ್ತ್ರ

ಭಾರತೀಯ ಪೊಲೀಸ್ ಕಾಯ್ದೆ ೧೮೬೧ ರಚಿತವಾಗುವುದಕ್ಕಿಂತ ಮೊದಲು ಇದ್ದ 'ಕಂದಾಚಾರ' ಪೊಲೀಸ್‌ಗೆ

ಯಾವುದೇ ನಿರ್ಧಿಷ್ಟವಾದ ಸಮವಸ್ತ್ರವೂ ಇರಲಿಲ್ಲ. ಅವರು ಕಂದಾಯ ಅಧಿಕಾರಿಗಳೊಂದಿಗೆ ಸೇರಿ ಕಂದಾಯ ವಸೂಲಿಯ ಕೆಲಸವನ್ನು ಮಾಡುತ್ತಿದ್ದುದರಿಂದ ಬಹುಷ: ಸಮವಸ್ತ್ರ ಇರಲಿಲ್ಲ. ಶ್ರೀ. ಇ.ಡಿ. ಗೋಂಪೆರ್ಟ್ಸ್‌ರವರು ಮದ್ರಾಸ್ ಗ್ರಾಮೀಣ ಪೋಲೀಸ್‌ನಿಂದ ಬೆಂಗಳೂರು ಜಿಲ್ಲಾ ಸೂಪರಿಂಟೆಂಡೆಂಟ್ ಆಗಿ ನೇಮಕವಾದ ನಂತರ ಅವರಿಗೆ ಕಂದಾಚಾರ ಪೋಲೀಸ್ ವ್ಯವಸ್ಥೆಯನ್ನು ಪುನರ್‌ಸಂಘಟಿಸಲು ಸೂಚಿಸಲಾಯಿತು. ಇವರು ತಮ್ಮ ವರದಿ ಸಂಖ್ಯೆ ೪೭೭/೨೬ ದಿನಾಂಕ ೨೦-೧೨-೧೮೬೭ ರಲ್ಲಿ ಕಂದಾಚಾರ ಇಲಾಖೆಯ ಬೇರೆ ಬೇರೆ ದರ್ಜೆಯ ಅಧಿಕಾರಿಗಳು ಧರಿಸುವ ಬಟ್ಟೆಯಲ್ಲಿ ಏಕರೂಪತೆ ಇರಬೇಕೆಂದು ಅದು ಶುಭ್ರವಾದ ದೇಶೀಯ ಬಟ್ಟೆಯಾಗಿರಬೇಕೆಂದು, ಅದು ದಾಲಯತರು ಧರಿಸುವಂತೆ ಇರಬೇಕೆಂದು ತಿಳಿಸಿದರು. ವಿವಿಧ ಅಧಿಕಾರಿ ವರ್ಗಗಳನ್ನು ಪ್ರತ್ಯೇಕವಾಗಿ ಗುರುತಿಸುವ ಸಲುವಾಗಿ ಅವರ ಬೆಲ್ಟ್‌ನಲ್ಲಿ ವಿಭಿನ್ನ ರೀತಿಯ ಗುರುತುಗಳನ್ನು ಹಾಕಬೇಕೆಂದು ಸೂಚಿಸಿದರು. ಇದನ್ನು ೧೮೬೧ರ ೫ನೇ ಶಾಸನದಲ್ಲಿ ಸೇರಿಸಲಾಯಿತು.[೬೪]

ಮೈಸೂರು ಪೋಲೀಸ್ ಇಲಾಖೆಯಲ್ಲಿ ಮುಂದಿನ ದಿನಗಳಲ್ಲಿ ಸಮವಸ್ತ್ರವು ಪ್ರಮುಖ ಪಾತ್ರವಹಿಸಿತು. ೧೮೮೨ಕ್ಕಿಂತ ಮೊದಲು ಪೋಲೀಸ್ ಇಲಾಖೆಯ ಎಲ್ಲಾ ವರ್ಗದ ಅಧಿಕಾರಿಗಳಿಗೆ ಸಮವಸ್ತ್ರ ಹಾಕಬೇಕೆಂಬ ನಿಯಮ ಜಾರಿಗೆ ತಂದ ಕೆಲವೇ ರಾಜ್ಯಗಳಲ್ಲಿ ಮೈಸೂರು ಒಂದಾಗಿತ್ತು. ಗೆಜೆಟೆಡ್ ಹಾಗೂ ನಾನ್‌ಗಜೆಟೆಡ್ ಅಧಿಕಾರಿಗಳು (ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ಜಮೇದಾರ್, ದಫೇದಾರ್ ಮತ್ತು ಕಾನ್ಸ್‌ಟೇಬಲ್)ಗಳು ಫುಲ್‌ಡ್ರೆಸ್ ಧರಿಸಬೇಕೆಂದು ಸೂಚಿಸಲಾಯಿತು. ಫುಲ್‌ಡ್ರೆಸನ್ನು ಸಾರ್ವಜನಿಕ ದರ್ಬಾರ್‌ಗಳಲ್ಲಿ, ಮೆರವಣಿಗೆ, ಮಹಾರಾಜರ ಹಾಗೂ ರಾಜರ ಸಂತೋಷಕ್ಕಾಗಿ ನಡೆಸುವ ಸಮಾರಂಭಗಳಲ್ಲಿ, ಹಾಗೂ ಅವರ ಜನ್ಮದಿನ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಧರಿಸುತ್ತಿದ್ದರು. ಅನ್‌ಡ್ರೆಸ್‌ನ್ನು ಗೆಜೆಟೆಡ್ ಅಧಿಕಾರಿಗಳಿಂದ ನಡೆಯುವ ಪರಿವೀಕ್ಷಣೆಯಲ್ಲಿ, ನ್ಯಾಯಾ ಲಯಕ್ಕೆ ಹೋಗುವಾಗ ಮತ್ತು ಹಗಲುಗಸ್ತು ಕರ್ತವ್ಯಗಳ ಸಂದರ್ಭಗಳಲ್ಲಿ ಧರಿಸಬೇಕಿತ್ತು.

ಬೆಂಗಳೂರು, ಮೈಸೂರು ಮತ್ತು ಕೆ.ಜಿ.ಎಫ್‌ಗಳಲ್ಲಿ ಕಾನ್ಸ್‌ಟೇಬಲ್‌ಗಳಿಗೆ ಬೂಟುಗಳನ್ನು ವಿತರಿಸಲಾಯಿತು. ಅಂತೆಯೇ ರಾಜ್ಯದ ಉಳಿದ ಭಾಗದ ಕಾನ್ಸ್‌ಪೇಬಲ್‌ಗಳಿಗೆ ಬೂಟುಗಳನ್ನು ವಿತರಿಸಲಾಯಿತು. ಕಾಲರ್ ಹೊಂದಿದ ಕೋಟು, ಚಡ್ಡಿ, ಕಪ್ಪು ಕುಲ್ಲಾಗಳನ್ನು ಹೊಂದಿದ ಟೋಪಿ ವಿತರಿಸಲಾಯಿತು. ಸಬ್ ಇನ್ಸ್‌ಪೆಕ್ಟರ್ ಹಾಗೂ ಇನ್ಸ್‌ಪೆಕ್ಟರ್ ರವರುಗಳಿಗೆ ಬೂಟು ಹಾಗೂ ತೊಗಲಿನ ಮೊಣಕಾಲು ಕವಚ (ಗೇಯ್ಟರ್) ಸಾಮಾನ್ಯವಾಗಿತ್ತು. ಇನ್ಸ್‌ಪೆಕ್ಟರ್‌ರವರನ್ನು ಪ್ರತ್ಯೇಕವಾಗಿ ಗುರುತಿಸಲು ಅವರು ಕಂದು ಬಣ್ಣದ ಖಡ್ಗವನ್ನು ಹಿಡಿದಿಟ್ಟು ಕೊಳ್ಳಬಲ್ಲ ಸೋರ್ಡ್ ಬೆಲ್ಟ್ (ಕ್ರಾಸ್‌ಬೆಲ್ಟ್) ನ್ನು ಧರಿಸುತ್ತಿದ್ದರೆ, ಉಳಿದ ಅಧೀನ ಅಧಿಕಾರಿಗಳು ಕೊರಳು ಮುಚ್ಚಿದ ಖಾಕಿ ಬಣ್ಣದ ಕೋಟು ಮತ್ತು ಖಾಕಿ ಜುಬ್ಬ, ಟೋಪಿ (ಟರ್ಬನ್) ಖಾಕಿ ಅಂಗಿ, ಬೆಲ್ಟ್ ಮತ್ತು ಪುಟ್ಟಿಗಳನ್ನು ಧರಿಸುತ್ತಿದ್ದರು. ನಗರ ಪೋಲೀಸರು ಮಾತ್ರ ಕಡುನೀಲಿ ಬಣ್ಣದ ಪುಟ್ಟಿಗಳನ್ನು ಧರಿಸುತ್ತಿದ್ದರು. ಉಳಿದ ಎಲ್ಲಾ ಕಡೆ ಇದು ಖಾಕಿ ಬಣ್ಣದಾಗಿತ್ತು. ನಗರ, ರೈಲ್ವೆ, ಪೋಲೀಸರು ಹಾಗೂ ಕೆ.ಜಿ.ಎಫ್‌ನ ಕಾನ್ಸ್‌ಟೇಬಲ್‌ಗಳು ಹಳದಿ ಬಣ್ಣದ ಪುನ್ನಾ ಧರಿಸಿದರೆ, ಉಳಿದ ಜಿಲ್ಲೆ ಪೋಲೀಸರು ಕೆಂಪು ಪುನ್ನಾ ಧರಿಸುತ್ತಿದ್ದರು. ಈ ಪುನ್ನಾದ ಮೇಲೆ ಅವರ ಸಂಖ್ಯೆ ಮೆಟಲ್ ನಂಬ್ರವನ್ನು ಬರೆದಿರುತ್ತಿತ್ತು.[೬೫]

ಐಜಿಪಿಯಾಗಿದ್ದ ಮಾದವರಾವ್‌ರವರು ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಯಾವಾಗಲೂ ಸೂಚಿತ, ಶುಭ್ರವಾದ ಸಮವಸ್ತ್ರದಲ್ಲಿ ಇರಬೇಕೆಂದು ನಿಲುವು ಹೊಂದಿದ್ದರು. ಇದಕ್ಕಾಗಿ ಇವರು ಪುಟ್ಟಿಗಳನ್ನು ಹೇಗೆಕಟ್ಟಬೇಕು, ಹೇಗೆ ಬೂಟನ್ನು ಹಾಗೂ ಮೆಟಲ್ ಗುಂಡಿಗಳನ್ನು ಶುಭ್ರಗೊಳಿಸಿ ಪಾಲೀಸು ಮಾಡಬೇಕು ಎಂಬ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿದರು.[೬೬] ಅದನ್ನು ಜಿಲ್ಲೆಗಳು ಡೆಪಿಟ್ಯೂ ಕಮಿಷನರ್‌ರವರುಗಳು, ಉಪವಿಭಾಗಾಧಿಕಾರಿಗಳು ಪ್ರೆಂಚ್‌ರಾಕ್ಸ್‌ನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ರೈಲ್ವೆ ಎಸ್.ಪಿರವರುಗಳು ದಿನಾಂಕ ೧೫-೦೭-೧೮೯೫ ರ ಪೋಲೀಸ್ ಪಾಕ್ಷಿಕದಲ್ಲಿ

ಇದನ್ನು ಪುನಃ ಪ್ರಕಟಿಸಿದರು. ಅದರಲ್ಲಿ ಹೀಗೆ ಹೇಳಲಾಗಿತ್ತು. " ಪೊಲೀಸ್ ಸಿಬ್ಬಂದಿಗಳಿಗೆ ಹತ್ತಿಯ ಖಾಕಿಚಡ್ಡಿ ಹಾಗೂ ಅಂಗಿಗಳನ್ನು ನೀಡಿದ್ದು, ಅದನ್ನು ಧರಿಸಬೇಕೆಂದು 'ವಸ್ತ್ರಸಂಹಿತೆ' ತಿಳಿಸಿದ್ದರೂ ಸಹ ಹಲವಾರು ಸಂದರ್ಭಗಳಲ್ಲಿ ಇದನ್ನು ಪಾಲಿಸದೇ ಇರುವುದನ್ನು ಐ.ಜಿ.ಪಿಯವರ ಗಮನಕ್ಕೆ ಬಂದಿದೆ. ಆದ್ದರಿಂದ ಸಮವಸ್ತ್ರದ ಈ ನಿಯಮ ಹಾಗೂ ಉದ್ದೇಶವನ್ನು ಸಿಬ್ಬಂದಿಗಳಿಗೆ, ಪಡೆಯವರಿಗೆ ತಿಳಿಸಬೇಕು.ಹಾಗೂ ಇನ್ನು ಮುಂದೆ ಈ ವಸ್ತ್ರಸಂಹಿತೆಯ ನೀತಿ ನಿಯಮಗಳನ್ನು ಯಾರೂ ಮೀರುವುದಿಲ್ಲವೆಂದು ಐ.ಜಿ.ಪಿಯವರು ನಂಬಿದ್ದಾರೆ " ಎಂದು ತಿಳಿಸಲಾಗಿತ್ತು.[೭]

೧೮೯೨-೯೩ ರಲ್ಲಿ ಎಲ್ಲಾ ದರ್ಜೆಯ ಪೊಲೀಸ್ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರು ಧರಿಸ ಬೇಕಾದ ಸಮವಸ್ತ್ರದ ಬಗ್ಗೆ 'ವಸ್ತ್ರಸಂಹಿತೆ'ಯನ್ನು (dress regulation) ಜಾರಿಗೆ ತರಲಾಯಿತು. ಇನ್ಸ್‌ಪೆಕ್ಟರ್ ದರ್ಜೆಯಿಂದ ಹಿಡಿದು ಕೆಳಗಿನ ಅಧಿಕಾರಿಗಳಿಗೆಲ್ಲರಿಗೂ ಸರ್ಕಾರಿ ವೆಚ್ಚದಲ್ಲಿ ಸಮವಸ್ತ್ರ ವಿತರಿಸಲಾಯಿತು. ಆದರೆ ಟೋಪಿ (Turbans) ಯನ್ನು ಅವರ ಸ್ವಂತ ಖರ್ಚಿನಲ್ಲಿ ಪಡೆಯಬೇಕಿತ್ತು. ಆದರೆ ಮೈಸೂರು, ಬೆಂಗಳೂರು ನಗರ, ರೈಲ್ವೆ ಮತ್ತು ವಿಶೇಷ ಮೀಸಲು ಪಡೆಯ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಸರ್ಕಾರಿವೆಚ್ಚದಲ್ಲಿ Turban ಗಳನ್ನು ನೀಡಲಾಯಿತು. ಯುರೋಪಿನಿಂದ ಬಂದು ಕೆಲಸ ಮಾಡುತ್ತಿದ್ದ ಇನ್‌ಪೆಕ್ಟರ್‌ಗಳಿಗೆ ಹೆಲ್ಮೆಟ್ ಮತ್ತು ಲೋಹದಿಂದ ಮಾಡಿದ ಟೊಪ್ಪಿಗಳನ್ನು ಉಚಿತವಾಗಿ ವಿತರಿಸ ಲಾಗುತ್ತಿತ್ತು. ಕಾನ್ಸ್‌ಟೇಬಲ್‌ಗಳಿಗೆ ಉತ್ತಮ ನಡತೆಗಾಗಿ ಬ್ಯಾಡ್ಜ್‌ಗಳನ್ನು (ಅಧಿಕಾರದ ಲಾಂಛನ) ನೀಡಲಾಗುತ್ತಿತ್ತು. ಕೂರ್ಗ್ ಜಿಲ್ಲೆಯ ಪೊಲೀಸರಿಗೆ ೧೮೯೩-೯೪ ರಲ್ಲಿ ೪೨,೦೦೦ ರೂಪಾಯಿಗಳ ವೆಚ್ಚದಲ್ಲಿ ಮತ್ತು ೧೮೯೪-೯೫ ರಲ್ಲಿ ೪೧,೬೮೨ ರೂಪಾಯಿಗಳ ವೆಚ್ಚದಲ್ಲಿ ಸಮವಸ್ತ್ರ ವಿತರಿಸಲಾಯಿತು.[೮]

ದಿನಾಂಕ ೨೨-೧೦-೧೯೩೦ ರಲ್ಲಿ ಶ್ರೀ. ಎಫ್.ಎ.ಹ್ಯಾಮಿಲ್ಟನ್, ಸಿ.ಐ.ಇ ರವರು ಐ.ಜಿ.ಪಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಬಾರಿಗೆ ಒಂದು ಪ್ರಸ್ತಾವನೆಯನ್ನು ಪತ್ರಸಂಖ್ಯೆ ಎಸ್.ಸಿ. ೩೨೨/೩೧-೩೨ ದಿನಾಂಕ ೦೪-೦೩-೧೯೩೩ ರಲ್ಲಿ ಕಳಿಸಿದರು. ಅದರಲ್ಲಿ ಪೊಲೀಸ್ ಅಧಿಕಾರಿಗಳ ಸಮವಸ್ತ್ರವನ್ನು ಬದಲಿಸುವ ಬಗ್ಗೆ ಪೀಠಿಕೆ ಹಾಕಲಾಯಿತು. ಇದರಲ್ಲಿ ಅವರು ಹೊಸ ವಸ್ತ್ರಸಂಹಿತೆಯನ್ನು ಸೂಚಿಸಿದರು. ಅದು ಏನೆಂದರೆ, ೧)ಫುಲ್‌ಡ್ರೆಸ್ ಮತ್ತು ಅನ್‌ಡ್ರೆಸ್‌ಗಳಿಗೆ ಬದಲಾಗಿ ಪ್ರತೀದಿನ ಸುಲಭವಾಗಿ ಕೆಲಸ ಮಾಡಲು ವರ್ಕಿಂಗ್ ಡ್ರೆಸ್ಸನ್ನು ಜಮೇದಾರರಿಗಿಂತ ಮೇಲ್ಪಟ್ಟ ಅಧಿಕಾರಿಗಳು ಹಾಕಬೇಕೆಂತಲೂ, ಮತ್ತು ವರ್ಕಿಂಗ್ ಡ್ರೆಸ್ ಎಂದರೆ, ಚಡ್ಡಿ, ಕಾಲು ಚೀಲ, ಕೋಟಿನ ಬದಲಾಗಿ ಅಂಗಿಯನ್ನು ಬೇಸಿಗೆ ಕಾಲದಲ್ಲಿ ಧರಿಸಬೇಕೆಂದು ತಿಳಿಸಿದರು. ೨) ಫುಲ್‌ಡ್ರೆಸ್ ಎಂದರೆ ನೀಲಿ ಬಣ್ಣದ ಮೇಲಂಗಿ, ಆನ್‌ಡ್ರೆಸ್ ಎಂದರೆ ಖಾಕಿ ಬಣ್ಣದ ಮೇಲಂಗಿ, ಧರಿಸಬೇಕೆಂತಲು, ಕವಾಯತು ಮಾಡುವಾಗ ವರ್ಕಿಂಗ್ ಡ್ರೆಸ್‌ನಲ್ಲಿ ಇರಬೇಕೆಂತಲೂ ಸೂಚಿಸಿದರು. ೩) ಎಲ್ಲಾ ಗೆಜೆಟೆಡ್ ಅಧಿಕಾರಿಗಳಿಗೆ ಒಂದು ತರಹದ ಸಮವಸ್ತ್ರವನ್ನು ಹಾಗೂ ಅವರ ದರ್ಜೆಗಳನ್ನು ಗುರುತಿಸಲು ಬೇರೆ ಬೇರೆ ತರಹದ ಬ್ಯಾಡ್ಜ್‌ಗಳನ್ನು ಧರಿಸಬೇಕೆಂದು ಸೂಚಿಸಲಾಯಿತು. ಐ.ಜಿ.ಪಿ ಯವರು ಕಿರೀಟದಂತಹ ಟೋಪಿ, ಎರಡು ಬೆಳ್ಳಿಯ ನಕ್ಷತ್ರಗಳನ್ನು, ಎಸ್.ಪಿ ರವರು ಕಿರೀಟದಂತಹ ಟೋಪಿ ಯನ್ನು, ಎಸ್.ಎಸ್.ಪಿ ಯವರುಗಳು ಬೆಳ್ಳಿಯ ಮೂರು ನಕ್ಷತ್ರಗಳನ್ನು ಮತ್ತು ತರಬೇತಿಯಲ್ಲಿರುವ ಎಸ್.ಪಿ ಯವರುಗಳು ಬೆಳ್ಳಿಯ ಎರಡು ನಕ್ಷತ್ರಗಳನ್ನು ಹಾಕಬೇಕೆಂದು ಸೂಚಿಸಲಾಯಿತು. ೪) ಗೆಜೆಟೆಡ್ ಅಧಿಕಾರಿಗಳು ಕಾಲರ್ ತೆರೆದಿರುವ ಕೋಟು ಹಾಗೂ ಬಿಳಿಯ ನಾರುಬಟ್ಟೆಯ ಕಾಲರ್ ಹಾಗೂ ಕಡು ನೀಲಿ ಬಣ್ಣದ ಟೈ ಹಾಕಬೇಕು. ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ಜಮೇದಾರ್‌ರವರುಗಳು ಮುಚ್ಚಿದ ಕೊರಳಿನ ಕೋಟು ಧರಿಸಬೇಕೆಂದು ಸೂಚಿಸಿದರು.

೧೯೩೩ರ ಎಪ್ರೀಲ್ ೨೯ ರಂದು ಜಿಲ್ಲಾ ಕಾನ್ಸ್‌ಟೇಬಲ್, ನಗರ ಮತ್ತು ರೈಲ್ವೆ ಪೊಲೀಸ್, ಇನ್ಸ್‌ಪೆಕ್ಟರ್, ಸುಬೇದಾರ, ಹವಾಲ್ದಾರ, ಮತ್ತು ನಾಯಕ್ಸ್ ಮತ್ತು ಕಾನ್ಸ್‌ಟೇಬಲ್‌ಗಳ ಫುಲ್‌ಡ್ರೆಸ್ ಹಾಗೂ ಆನ್‌ಡ್ರೆಸ್‌ಗಳ ಬಗೆಗಿನ

ಪ್ರಸ್ತಾವಕ್ಕೆ ಸರ್ಕಾರ ತನ್ನ ಆದೇಶದಲ್ಲಿ ಮಂಜೂರಾತಿಯನ್ನು ನೀಡಿತು.[೯೯] ಮತ್ತು ಇದರಲ್ಲಿ ಸಮವಸ್ತ್ರಗಳಿಗೆ ಸಂಬಂಧಿಸಿದ ನಿಯಮಗಳನ್ನು ಸಹ ತಿಳಿಸಲಾಯಿತು.[೧೦೦] ಮಂಗಳೂರಿನ ಬಾಸೆಲ್ ಮಿಷನ್ ನೇಯ್ಗೆ ಕಾರ್ಖಾನೆಯಲ್ಲಿದ್ದ ಜಾನ್‌ಹೇಲರ್ ಎಂಬ ಅಧಿಕಾರಿ ರೂಪಿಸಿದ ಖಾಕಿ ಬಣ್ಣವೇ ಮುಂದೆ ಪೊಲೀಸರ ಹಾಗೂ ಇತರ ಕೆಲ ನಿರ್ಧಿಷ್ಟ ನೌಕರರಿಗೆ ಬಹು ಜನಪ್ರಿಯ ಸಮವಸ್ತ್ರವಾಯಿತು.[೧೦೧]

೧೯೩೫ ರ ಹೊತ್ತಿಗೆ ಎಫ್.ಎ.ಹ್ಯಾಮಿಲ್ಟನ್‌ರವರು ಮೈಸೂರು ಪೊಲೀಸರನ್ನು ಗುರುತಿಸುವ ಸಲುವಾಗಿ ಬ್ಯಾಡ್ಜ್‌ಗಳನ್ನು ಪರಿಚಯಿಸಿದರು. ಇದರಲ್ಲಿ ಗಂಡಬೇರುಂಡ ಪಕ್ಷಿಯ ಚಿತ್ರವಿದ್ದು, ಅದರ ಸುತ್ತಲೂ ಮೈಸೂರು ಪೊಲೀಸ್ ಎಂದು ಬರೆದಿದ್ದು ಮತ್ತು ಧ್ಯೇಯ ವಾಕ್ಯವಾದ 'ವಿ ಗಾರ್ಡ್ ದ ಪೀಪಲ್' ಎಂದು ಕೆತ್ತಲ್ಪಟ್ಟಿದ್ದು, ಇದನ್ನು ತಲೆಗೆ ದರಿಸುವ ಟೊಪ್ಪಿಗೆ ಅಳವಡಿಸಲಾಗಿತ್ತು.[೧೦೨] *ಹಿಂದಿನ ಕಾಲದ ಪೊಲೀಸರು ಧರಿಸುತ್ತಿದ್ದ ಸಮವಸ್ತ್ರಗಳ ಬಗ್ಗೆ ಚಿತ್ರ ೮೨ ರಿಂದ ೮೬ ರವರೆಗೆ ನೋಡಿರಿ.*

೭. ೧೧ :- ಪೊಲೀಸ್ ವಸತಿ

ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಕರ್ಯ ನೀಡುವುದು ಪ್ರಭುತ್ವದ ಕರ್ತವ್ಯವಾಗಿತ್ತು. ಏಕೆಂದರೆ ಠಾಣೆಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿಗಳು ಬಹುತೇಕ ಪರ ಊರಿನವರಾಗಿದ್ದರು. ಹಾಗೂ ತುರ್ತಾಗಿ ಕೆಲಸಗಳಿಗೆ ಇವರು ಒದಗಬೇಕಾದುದರಿಂದ ಠಾಣೆಯ ಸಮೀಪದಲ್ಲಿಯೇ ವಾಸಿಸಬೇಕಿತ್ತು. ೧೯೦೧ ರಲ್ಲಿ ಸರಕಾರವು ಪೊಲೀಸ್ ಇಲಾಖೆಯಲ್ಲಿ ಮಾಸಿಕ ೧೫ ರೂಪಾಯಿ ಗಳಿಗಿಂತಲೂ ಮಾಸಿಕವಾಗಿ ಕಡಿಮೆ ವೇತನ ಪಡೆಯುವ ಪೊಲೀಸ್ ಸಿಬ್ಬಂದಿಯಿಂದ ಮನೆಬಾಡಿಗೆ ಪಡೆಯಬಾರದೆಂದು ತೀರ್ಮಾನಿಸಿದರು. ಅವರುಗಳು ಪೊಲೀಸ್ ಠಾಣೆಯ ಅಕ್ಕಪಕ್ಕ ದಲ್ಲಿಯೇ ವಾಸಮಾಡಬೇಕಿತ್ತು.[೧೦೩] ೧೯೨೦ ರಲ್ಲಿ ಮತ್ತು ೧೯೨೩ ರಲ್ಲಿ ಕೆ.ಜಿ.ಎಫ್‌ನಲ್ಲಿ ಕೆಲಸ ಮಾಡುತ್ತಿರುವ ದಫೇದಾರರು ಮತ್ತು ಕಾನ್‌ಸ್ಟೇಬಲ್‌ಗಳಿಗೆ ಮನೆಬಾಡಿಗೆಯಿಂದ ವಿನಾಯಿತಿ ನೀಡಲಾಯಿತು.[೧೦೪] ಪೊಲೀಸ್ ಲೇನ್‌ನಲ್ಲಿ ವಾಸವಿರುವ ಜಮೇದಾರರುಗಳಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳಿಗೆ ಮನೆಬಾಡಿಗೆಯಿಂದ ವಿನಾಯಿತಿ ನೀಡಲಾಯಿತು.[೧೦೫] ಸರಕಾರದ ವಸತಿಗೃಹದಲ್ಲಿ ವಾಸವಿರುವ ಜಮೇದಾರರುಗಳಿಗೂ ಸಹ ಮನೆಬಾಡಿಗೆಯಿಂದ ವಿನಾಯಿತಿ ನೀಡಲಾಯಿತು.[೧೦೬] ೧೯೩೭ ರಲ್ಲಿ ಈ ಪದ್ಧತಿಯನ್ನು ಅಂದರೆ ಜಮೇದಾರನಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳಿಗೆ ಬಾಡಿಗೆರಹಿತ ವಸತಿಗೃಹ ನೀಡುವ ಪದ್ಧತಿಯನ್ನು ಬಂಗಾರಪೇಟೆಯನ್ನು ಒಳಗೊಂಡಂತೆ ಇತರ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಮತ್ತು ಜಿಲ್ಲಾ ಕೇಂದ್ರದಲ್ಲಿ ವಾಸವಾಗಿರುವ ಸಂಸ್ಥಾನದ ಮೀಸಲು ಪಡೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೂ ಈ ನಿಯಮಗಳು ಅನ್ವಯವಾಗುತ್ತಿತ್ತು.[೧೦೭] ಬೆಂಗಳೂರು, ಮೈಸೂರು, ಕೋಲಾರ, ಕೆ.ಜಿ.ಎಫ್‌ಗಳಲ್ಲಿ ಯಾರಿಗೆ ಬಾಡಿಗೆರಹಿತ ವಸತಿಗೃಹ ಸಿಕ್ಕಿಲ್ಲವೋ ಅಂತಹ ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಗಳಿಗೆ ಮಾಸಿಕ ೧೫, ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಮಾಸಿಕ ೧೦, ಜಮೇದಾರ್ ಮತ್ತು ಹೆಡ್‌ಕಾನ್‌ಸ್ಟೇಬಲ್‌ಗಳಿಗೆ ಮಾಸಿಕ ರೂ ೮ ಮನೆಬಾಡಿಗೆ ಭತ್ಯೆಯನ್ನು ನೀಡಲಾಗಿತ್ತು. ಕೊಡಗು ಜಿಲ್ಲೆಯಲ್ಲಿ ಪೊಲೀಸ್ ಪಡೆಯ ಖರ್ಚುವೆಚ್ಚಗಳ ಲೆಕ್ಕಕ್ಕೆ ಸೇರಿಸದೆ, ಪೊಲೀಸರಿಗೆ ವಸತಿಗಾಗಿ, ಮನೆನಿರ್ಮಾಣ, ಪೊಲೀಸ್ ಠಾಣೆಗಳ ದುರಸ್ಥಿಗಾಗಿ, ಪೊಲೀಸ್ ಲೇನ್‌ಗಳ ದುರಸ್ಥಿಗಾಗಿ ಈ ಕೆಳಗಿನಂತೆ ಹಣ ನೀಡಲಾಯಿತು. ಬರಗಾಲದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳ ಸಮೀಪ ೨೦,೭೬೭ ರೂಪಾಯಿಗಳ ವೆಚ್ಚದಲ್ಲಿ ಬಾವಿಗಳನ್ನು ತೋಡಿಸಲಾಯಿತು.[೧೦೮]

	ಮೂಲಕೆಲಸ (ರೂ)	ರಿಪೇರಿ (ರೂ)	ಒಟ್ಟು (ರೂ)
೧೮೯೧	೨೭೨೪೭	೫,೬೬೮	೩೨,೯೧೫
೧೮೯೨-೯೩ (೧೮ ತಿಂಗಳು)	೪೦,೩೯೩	೯,೩೬೩	೪೯,೭೫೦
೧೮೯೩-೯೪	೨೫,೮೬೬	೭,೪೧೧	೩೩,೨೭೭
೧೮೯೪-೯೫	೨೪,೯೨೦	೭,೭೬೧	೩೨,೬೮೧

೭. ೧೨ ಪೊಲೀಸ್ ಕ್ರೀಡಾಕೂಟ

ಪೊಲೀಸ್ ಕ್ರೀಡಾಕೂಟಕ್ಕೆ ಶತಮಾನಗಳ ಇತಿಹಾಸವಿದೆ. ನಿಜವಾಗಿಯೂ ಮೈಸೂರು ರಾಜ್ಯದಲ್ಲಿ ಪೊಲೀಸ್ ಕ್ರೀಡಾಕೂಟವು ಶ್ರೀ.ವಿ.ಪಿ.ಮಾಧವರಾವ್‌ರವರು ಐ.ಜಿ.ಪಿಯವರಾಗಿದ್ದಾಗಿನಿಂದ (೧೬-೦೫-೧೮೮೨ ರಿಂದ ೧೭-೦೪-೧೮೯೮) ನಡೆಯುತ್ತಿತ್ತು. ೧೮೯೭ ರ ಜುಲಾಯಿ ೧೬ ರಂದು ಕೆ.ಜಿ.ಎಫ್‌ನಲ್ಲಿ ಪೊಲೀಸರಿಗೆ ಹಾಗೂ ಅವರ ಮಕ್ಕಳಿಗೆ ಪೊಲೀಸ್ ಕ್ರೀಡಾಕೂಟವನ್ನು ನಡೆಸಲಾಯಿತು. ಇದನ್ನು ಇಂಗ್ಲೆಂಡ್‌ನ ಮಹಾರಾಣಿಯ ವಜ್ರ ಮಹೋತ್ಸವದ ನೆನಪಿಗಾಗಿ ನಡೆಸಲಾಯಿತು. ಬ್ರಿಟೀಷ್ ರೆಸಿಡೆಂಟರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ವಿಜೇತರಿಗೆ ಬಹುಮಾನ ವಿತರಿಸಿದರು. ಹಾಗೂ ಬಹುಮಾನ ಪಡೆದ ಪ್ರತೀಯೊಬ್ಬನೊಂದಿಗೂ ಕೆಲವು ವಾಕ್ಯ ಮಾತನಾಡಿದರು. ತಮ್ಮ ಭಾಷಣದಲ್ಲಿ ಕೆ.ಜಿ.ಎಫ್ ಪೊಲೀಸರು ಅಲ್ಲಿ ಅಪರಾಧಗಳ ಸಂಖ್ಯೆಯನ್ನು ಕಡಿಮೆ ಮಾಡಿ ದ್ದಕ್ಕಾಗಿ ಪ್ರಶಂಸಿದರು. ಹಾಗೂ ತಾನು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದುದಕ್ಕೆ ಸಂತೋಷ ಪಡುತ್ತೇನೆ ಎಂದರು.[೧೮೮] ನಂತರದ ಪೊಲೀಸ್ ಕ್ರೀಡಾಕೂಟ ಮತ್ತು 'ಬೈಸಿಕಲ್ ಜಮಖಾನ' ೧೮-೦೮-೧೮೯೭ ರಂದು ಬೆಂಗಳೂರಿ ನಲ್ಲಿ ನಡೆಯಿತು. 'ಬೈಸಿಕಲ್ ಜಮಾಖಾನ 'ವನ್ನು ಸ್ಥಳೀಯ ವಾಸಿಗಳಾದ ಮಹಿಳೆಯರು ಹಾಗೂ ಪುರುಷರನ್ನು ಆಕರ್ಷಿಸುವ ಸಲುವಾಗಿ ಸೇರಿಸಲಾಯಿತು. ಮತ್ತು ಶ್ರೀ. ಮಾಧವರಾವ್‌ರವರು ಆಗಮಿಸಿದ್ದ ಯುರೋಪಿಯನ್ ಅತಿಥಿಗಳಿಗೆ ಮನರಂಜನೆ ಕಾರ್ಯಕ್ರಮ ಏರ್ಪಡಿಸಿದ್ದರು.

೧೮೯೯ ರ ನವೆಂಬರ್ ೬ ಮತ್ತು ೭ ರಂದು ಪುನ: ಕೆ.ಜಿ.ಎಫ್‌ನಲ್ಲಿ ಪೊಲೀಸ್ ಕ್ರೀಡಾಕೂಟ ನಡೆಸಲಾಯಿತು. ಆಗ ಮಾಧವರಾವ್‌ರವರು ಸರ್ಕಾರದ ಕಮಿಷನರ್ ಮತ್ತು ಕೌನ್ಸಿಲರ್ ಆಗಿದ್ದರು. ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಬಹುಮಾನ ವಿತರಿಸಿದರು. ಡಿ.ಸಿ ಕೋಲಾರರವರು ಪತ್ರಸಂಖ್ಯೆ ೧೬೨೦-೪೯೩ ದಿನಾಂಕ ೧೧-೧೧-೧೮೯೯ ರಲ್ಲಿ ಐ.ಜಿ.ಪಿರವರಿಗೆ ಒಂದು ಪತ್ರ ಬರೆದು ಅದರಲ್ಲಿ ಕೆ.ಜಿ.ಎಫ್‌ನಲ್ಲಿ ದಿನಾಂಕ ೬ ಮತ್ತು ೭ ನೇ ನವೆಂಬರ್‌ನಂದು ನಡೆದ ಜಿಲ್ಲಾ ಪೊಲೀಸ್ ಕ್ರೀಡಾಕೂಟ ನಡೆದ ಬಗ್ಗೆ ವಿವರಗಳನ್ನು ತಿಳಿಸಿದ್ದಲ್ಲದೇ ಬೋಧಕ ಸಾರ್ಜೆಂಟ್ಸ್‌ಗಳಿಂದ ಗುಂಡು ಹೊಡೆಯುವ ಮತ್ತು ಕವಾಯತು ಸ್ಪರ್ಧೆಗಳನ್ನು ಸಹ ನಡೆಸಲಾಯಿತೆಂದು ವರದಿ ಮಾಡಿದರು. ನಂತರದ ದಿನಗಳಲ್ಲಿ ೧೯೧೫ ರ ನಂತರ ಎಲ್ಲಾ ಜಿಲ್ಲೆಗಳಲ್ಲಿ ಪೊಲೀಸ್ ವಾರ್ಷಿಕ ಕ್ರೀಡಾಕೂಟಗಳು ನಡೆದು ಅವು ಪಾಕ್ಷಿಕ ಮತ್ತು ಮಾಸಿಕ ಪೊಲೀಸ್ ಸುತ್ತೋಲೆ ಹಾಗೂ ಗಜೆಟ್‌ಗಳಲ್ಲಿ ಪ್ರಕಟವಾಗಿದೆ. ಅದು ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿದೆ.

೧೯೧೫ ರ ನಂತರ ಬೇರೆ ಬೇರೆ ಕಾರಣಗಳಿಗಾಗಿ ಪೊಲೀಸ್ ಕ್ರೀಡಾಕೂಟವು ಹಲವು ವರ್ಷಗಳವರೆಗೆ ನಡೆಯಲಿಲ್ಲ. ಆದನ್ನು ಪುನ: ಪ್ರಾರಂಭಿಸಿದವರು ಶ್ರೀ.ಎಫ್.ಎ.ಹ್ಯಾಮಿಲ್ಟನ್‌ರವರು. ಅವರು ೨೨-೧೦-೧೯೩೦ ರಲ್ಲಿ ಮೈಸೂರು ರಾಜ್ಯದ ಐ.ಜಿ.ಪಿಯಾದ ನಂತರ ಅಂದರೆ ೧೮ ವರ್ಷಗಳ ನಂತರ ಕ್ರೀಡಾಕೂಟವನ್ನು ಪುನ: ಪ್ರಾರಂಭಿಸಿದರು.

೧೯೩೩ರ ಪೆಬ್ರವರಿ ೨೩, ೨೪ ಮತ್ತು ೨೫ ರಂದು ಬೆಂಗಳೂರಿನಲ್ಲಿ ಕ್ರೀಡಾಕೂಟವನ್ನು ಪುನ: ಪ್ರಾರಂಭಿಸಿ ದರು. ವಿವಿಧ ಸ್ಪರ್ಧೆಗಳು ನಡೆದ ನಂತರ ೨೫-೦೨-೧೯೩೩ ರಂದು ನಡೆದ ಅಂತಿಮ ಸ್ಪರ್ಧೆಯ ಸಮಾರಂಭದಲ್ಲಿ ಮೈಸೂರಿನ ಯುವರಾಜರಾಗಿದ್ದ ಶ್ರೀ.ಕಂಠೀರವ ನರಸರಾಜ ಒಡೆಯರ್ ಮೈಸೂರು ದಿವಾನರಾಗಿದ್ದ ಅಮೀನ್-ಉಲ್ ಮುಲ್ಕ ಶ್ರೀ.ಮಿರ್ಜಾ ಎಂ. ಇಸ್ಮಾಯಿಲ್ ರಾಜ್ಯದ ವಿವಿಧ ಅಧಿಕಾರಿಗಳು ಸುಮಾರು ೫೩೦ ಆಹ್ವಾನಿತ ಗಣ್ಯರು, ಸಾರ್ವಜನಿಕರು, ಭಾಗವಹಿಸಿದ್ದರು ಯುವರಾಜರು ಬಹುಮಾನವನ್ನು ವಿತರಿಸಿದರು.[೧೮೯] ಇದರ ನಂತರ ಖಾಯಂ ಆಗಿ ವಾರ್ಷಿಕ ಪೊಲೀಸ್ ಕ್ರೀಡಾಕೂಟಗಳು ನಡೆದವು.

೭. ೧೩ :- ಪೊಲೀಸ್ ತರಬೇತಿ

ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿಯ ಅಗತ್ಯವಿದೆ ಎಂದು ಆಡಳಿತಾಂಗವು ಮನಗಂಡಿತು. ಪೊಲೀಸ್

ಇಲಾಖೆಯಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳಲ್ಲಿ ಮುಖ್ಯವಾಗಿ ಅನಕ್ಷರತೆ ಮತ್ತು ತರಬೇತಿಯ ಕೊರತೆ ಎದ್ದುಕಾಣುತ್ತಿತ್ತು. ಈ ಕಾರಣಕ್ಕಾಗಿ ಅವರುಗಳಿಗೆ ಸೂಕ್ತ ತರಬೇತಿಯನ್ನು ನೀಡುವುದು ಇಲಾಖೆಯ ಅತ್ಯಂತ ಅಗತ್ಯತೆಗಳಲ್ಲಿ ಒಂದಾಗಿತ್ತು. ಹಾಗಾಗಿ ೧೮೯೨ ನೇ ಇಸವಿಯಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಪೊಲೀಸ್ ತರಬೇತಿ ಶಾಲೆಯನ್ನು ತೆರೆಯಲಾಯಿತು. ಮೈಸೂರಿನಲ್ಲಿ ಪೊಲೀಸರಿಗೆ ತರಬೇತಿಯನ್ನು ನೀಡುವ ಯೋಜನೆಯನ್ನು ಮೊದಲ ಬಾರಿಗೆ ಮಂಡಿಸಿದವರು ಬೆಂಗಳೂರು ಜಿಲ್ಲಾ ಎಸ್‌ಪಿಯಾಗಿದ್ದ ಕ್ಯಾಪ್ಟನ್ ಇ.ಡಿ.ಗೋಂಪೆರ್ಟ್ಸ್. ಅದು ೧೮೬೭ ರಲ್ಲಿ ಮದ್ರಾಸ್ ಪೊಲೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಇವರನ್ನು ಆಗ ಜಾರಿಯಲ್ಲಿದ್ದ ಕಂದಾಚಾರ ಪೊಲೀಸ್ ಪಡೆಯನ್ನು ಪುನರ್ ಸಂಘಟಿಸುವ ಉದ್ದೇಶಕ್ಕಾಗಿ ವಿಶೇಷವಾಗಿ ಮೈಸೂರಿಗೆ ಕರೆಯಿಸಲಾಗಿತ್ತು.[೧೧೧] ಇವರು ಕಂದಾಚಾರ ಪೊಲೀಸ್‌ನ ಪುನರ್‌ಸಂಘಟನೆಯನ್ನು ಮಾಡಲು ಹಲವು ಕ್ರಮಗಳ ಬಗ್ಗೆ ಸಲಹೆ ನೀಡಿ ಜ್ಯುಡಿಷಿಯಲ್ ಕಮಿಷನರ್‌ರವರಿಗೆ ಪತ್ರ ಬರೆದರು.[೧೧೨] ಇವರ ಪತ್ರದ ಸಾರಾಂಶ ಹೀಗಿದೆ. " ನಾನು ಕಾನಕಾನ ಹಳ್ಳಿ ತಾಲೂಕನ್ನು ಹೊರತುಪಡಿಸಿ ಪ್ರತಿ ತಾಲೂಕಿನಿಂದ ಒಬ್ಬರಂತೆ ೧೫ ಜನ ಕಿಲ್ಲೇದಾರರನ್ನು ತರಬೇತಿಗೆ ಕಳಿಸಿದ್ದೇನೆ. ಆದರೆ ಪ್ರತೀ ತಾಲೂಕಿನಿಂದ ಇಬ್ಬರಿಗೆ ತರಬೇತಿ ನೀಡುವುದು ಆಪೇಕ್ಷಣೀಯ. ಇವರಿಗೆ ಪೊಲೀಸ್ ಕರ್ತವ್ಯಗಳು, ಐಪಿಸಿ, ಸಿಆರ್‌ಪಿಸಿ, ಸಾಕ್ಷಿ ಅಧಿನಿಯಮಗಳ ಬಗ್ಗೆ ಒಂದು ಅಥವಾ ಎರಡು ತಿಂಗಳ ತರಬೇತಿ ನೀಡಬೇಕು. ಈಗ ಇರುವ ತರಬೇತಿ ವ್ಯವಸ್ಥೆಯನ್ನು ಪ್ರತೀ ಜಿಲ್ಲೆಗಳಿಗೆ ವಿಸ್ತರಿಸಬೇಕು" ಎಂದು ತಿಳಿಸಿದರು. ಅದರಲ್ಲಿ ೧೮೬೧ ರ ೫ನೇ ಕಾಯ್ದೆಯನ್ನು ಬೆಂಗಳೂರು ಕಂಟೋನ್ಮೆಂಟ್ ಹಾಗೂ ಬೆಂಗಳೂರು ಜಿಲ್ಲೆಗೆ ವಿಸ್ತರಿಸುವ ಅಗತ್ಯತೆ ಬಗ್ಗೆ ಪ್ರಸ್ತಾಪಿಸಿದರು.

ಸಾಮಾನ್ಯವಾಗಿ ತಾಲೂಕಿನಲ್ಲಿ ಕಂದಾಚಾರ ಪಡೆಯ ಮೇಲ್ವಿಚಾರಣಾಧಿಕಾರಿಯಾಗಿ ಕಿಲ್ಲೇದಾರರು ಇದ್ದರು. ಈತನು ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಸಮಾನ ದರ್ಜೆಯ ಅಧಿಕಾರಿಯಾಗಿದ್ದ. ಈತನ ಕೈಕೆಳಗೆ ಠಾಣೆಗಳಲ್ಲಿ ಹೋಬಳಿ ದಾರ ಹಾಗೂ ದಫೇದಾರರುಗಳು ಇದ್ದರು. ಇವರುಗಳಲ್ಲಿ ಮಾತೃಭಾಷೆಯಲ್ಲಿ ವರದಿಗಳನ್ನು ತಯಾರಿಸಲು ತರಬೇತಿ ನೀಡುವ ಸಲುವಾಗಿ ಕೆಲವು ದಫೇದಾರರನ್ನು ಠಾಣಾ ಕೆಲಸದಿಂದ ಪ್ರತ್ಯೇಕಿಸಲಾಯಿತು. ಬೆಂಗಳೂರು ಕೇಂದ್ರ ಸ್ಥಾನದಲ್ಲಿದ್ದ ಪೊಲೀಸ್ ಶಾಲೆಯನ್ನು ೧೮೯೧ ರಲ್ಲಿ ಮುಚ್ಚಲಾಯಿತು. ಅನಾನುಕೂಲಕರವಾದ ಪರ್ಯವು ಇತ್ತು. ಇದರ ಪರಿಣಾಮ ವಾಗಿ ಪೊಲೀಸರ ಮೇಲೆ ಬೇರೆ ಕೆಲಸ ಹೇರಲಾಯಿತು. ಇದೇ ವರ್ಷದ ಅಂತ್ಯದ ವೇಳೆಗೆ ಶಿವಮೊಗ್ಗದಲ್ಲಿದ್ದ ಪೊಲೀಸ್ ಶಾಲೆಯ್ನೂ ಮುಚ್ಚಲಾಯಿತು.[೧೧೩]

ಮೈಸೂರು ರಾಜ್ಯದಲ್ಲಿ ಪ್ರಥಮ ಬಾರಿಗೆ ವ್ಯವಸ್ಥಿತವಾಗಿ ಪೊಲೀಸ್ ತರಬೇತಿ ಶಾಲೆಯನ್ನು ೧೮೯೨ ರಲ್ಲಿ ಬೆಂಗಳೂರಿನಲ್ಲಿ ತೆರೆಯಲಾಯಿತು. ಇದರ ಉದ್ದೇಶವೆಂದರೆ, ತನಿಖೆ ಮಾಡುವ ಸಿಬ್ಬಂದಿಗಳಿಗೆ ಕಾನೂನಿನ ಜ್ಞಾನ, ಪ್ರಾಯೋಗಿಕ ಕೆಲಸಗಳ ಬಗ್ಗೆ ಎರಡು ತರಗತಿಗಳಲ್ಲಿ ತರಬೇತಿ ನೀಡಲಾಗುತ್ತಿತ್ತು.[೧೧೪]

ಬೆಂಗಳೂರು ಪೊಲೀಸ್ ಶಾಲೆಯನ್ನು ೧೮೯೨ ರ ಸೆಪ್ಟೆಂಬರ್‌ನಲ್ಲಿ ಪುನ: ಪ್ರಾರಂಭಿಸಲಾಯಿತು. ೧೮೯೨ ರ ಅಕ್ಟೋಬರ್‌ನಲ್ಲಿ ಶಾಲೆಯನ್ನು ಅಭಿವೃದ್ಧಿಪಡಿಸಿದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಈ ಪುನರ್ ಸಂಘಟನೆಯ ಅತ್ಯಂತ ಗಮನಾರ್ಹವಾದ ಅಂಶವೆಂದರೆ, ತನಿಖೆ ಮಾಡುವ ಸಿಬ್ಬಂದಿಗೆ ತರಬೇತಿ ನೀಡುವ ಶಾಲೆಗಳನ್ನು ಸ್ಥಾಪಿಸ ಲಾಯಿತು. ಈ ಪೊಲೀಸ್ ತರಬೇತಿ ಶಾಲೆಯು ಎರಡು ವಿಭಾಗಗಳನ್ನು ಹೊಂದಿತು. ಒಂದು ಮೇಲ್ದರ್ಜೆ 'Higher' ಎರಡನೇಯದು 'Lower' ಕೆಳದರ್ಜೆ. ಮೊದಲನೆಯದರಲ್ಲಿ 'ಜಮಾದಾರ್' ಮತ್ತು 'ಇನ್ಸ್‌ಪೆಕ್ಟರ್'ರವರುಗಳಿಗೆ ಮತ್ತು ಎರಡನೇಯದರಲ್ಲಿ 'ಧಫೇದಾರ್' ಮತ್ತು ಕಾನ್ಸ್‌ಟೇಬಲ್‌ಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿತ್ತು. ಕೆಳದರ್ಜೆಯಲ್ಲಿ

(Lower class ನಲ್ಲಿ) ಐಪಿಸಿ, ಸಿಆರ್‌ಪಿಸಿ, ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ , ಕೆಳಭಾಗದಲ್ಲಿ ಪೊಲೀಸ್ ರೂಪ್ಸ್ ಆಂಡ್ ಸರ್ಕ್ಯುಲರ್ಸ್–ಡ್ರಿಲ್ ಮತ್ತು ಶೂಟಿಂಗ್‌ಗಳನ್ನು ಮೇಲ್ದರ್ಜೆಯ ತರಗತಿಗಳಲ್ಲಿ (Medical Jurisprydance) ವೈದ್ಯ ನ್ಯಾಯಶಾಸ್ತ್ರ ಠಾಣಾಧಿಕಾರಿಯ ಕರ್ತವ್ಯಗಳನ್ನು ಹೆಚ್ಚುವರಿಯಾಗಿ ಕಲಿಸಲಾಗುತ್ತಿತ್ತು. Higher ಶಾಲೆಯ ವಿದ್ಯಾರ್ಥಿಗಳಿಗೆ ಸರ್ವೆ, ಜಾಮಿಟ್ರಿಕಲ್ ಡ್ರಾಯಿಂಗ್, ಫೋಟೋಗ್ರಾಫಿ, ಅಂಬುಲೆನ್ಸ್ ಅರೇಂಜ್‌ಮೆಂಟ್ಸ್‌ಗಳ ಜೊತೆಗೆ ಶಿಲ್ಲೇದಾರ್ ಕುದುರೆ ಸವಾರಿಯ ಬಗ್ಗೆಯೂ ತರಭೇತಿ ನೀಡಲಾಗುತ್ತಿತ್ತು.[೧೧೫]

ಇಲಾಖೆಯಲ್ಲಿನ ಶಿಸ್ತು ಮತ್ತು ಕವಾಯತಿಗೆ ಹೆಚ್ಚಿನ ಗಮನ ನೀಡಲಾಯಿತು. ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಸಹ ಕವಾಯತು ಹೇಳಿ ಕೊಡುವ ಮಾಸ್ತರು (ಡ್ರಿಲ್ ಇನ್ಸ್‌ಟ್ರಕ್ಟರ್) ರವರನ್ನು ನೇಮಿಸಲಾಯಿತು. ಠಾಣಾಧಿಕಾರಿಗಳಿಗೆ ಹಾಗೂ ಕಾನ್ಸ್‌ಟೇಬಲ್‌ಗಳಿಗೆ ಅನುಕೂಲ ಆಗಲೆಂದು ಒಂದು ಕೈಪಿಡಿಯನ್ನು ಹೊರತರಲಾಯಿತು. ಅದರಲ್ಲಿ ಭಾರತೀಯ ದಂಡಸಂಹಿತೆ, ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ, ಭಾರತೀಯ ಸಾಕ್ಷ್ಯ ಅಧಿನಿಯಮ, ಪೊಲೀಸ್ ನಿಯಮಗಳು, ವೈದ್ಯಕೀಯ ನ್ಯಾಯಶಾಸ್ತ್ರ, ಅಬಕಾರಿ ಕಾಯ್ದೆ, ಓಪಿಯಂ ಕಾಯ್ದೆ, ಅರಣ್ಯ ಕಾಯ್ದೆ, ಫಾರಿನ್ ಜ್ಯೂರಿಸ್‌ಡಿಕ್ಷನ್ ಆ್ಯಕ್ಟ್, ಆರ್ಮ್ಸ್ ಆ್ಯಕ್ಟ್ ರೈಲ್ವೆ ಕಾಯ್ದೆ, ಮೊದಲಾದ ಕಾನೂನನ್ನು ಒಳಗೊಂಡ ಒಂದು ಕಿರು ಹೊತ್ತಿಗೆ ಯನ್ನು ಮಾಡಿ ಸರಳ ಆಂಗ್ಲಭಾಷೆಯಲ್ಲಿಯೂ ನಂತರ ಕನ್ನಡ ಭಾಷೆಯಲ್ಲಿಯೂ ಹೊರತರಲಾಯಿತು. ಆಂಗ್ಲಭಾಷೆಯನ್ನು ತಿಳಿಯದ ಠಾಣಾಧಿಕಾರಿಗಳಿಗಾಗಿ ಬೆಂಗಳೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ಒಂದು ಕನ್ನಡ ವಿಭಾಗವನ್ನು ತೆರೆಯಲಾಯಿತು. ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್‌ರವರ ಮೇಲ್ವಿಚಾರಣೆಯಲ್ಲಿ ತರಬೇತಿ ಪಡೆದ ದಫೇದಾರರು ಗಳನ್ನು ಕಾನ್ಸ್‌ಟೇಬಲ್‌ಗಳಿಗೆ ತರಬೇತಿ ನೀಡಲು ಜಿಲ್ಲಾ ಪೊಲೀಸ್ ಶಾಲೆಗಳಿಗೆ ನೇಮಿಸಲಾಯಿತು ಎಂದು ಪಿ.ಎಸ್. ವೆಂಕಟರಾಮಯ್ಯರವರು ಅಭಿಪ್ರಾಯಪಡುತ್ತಾರೆ.[೧೧೬] ಇಲ್ಲಿ ಅಧಿಕಾರಿ ಮತ್ತು ಕಾನ್ಸ್‌ಟೇಬಲ್‌ಗಳಿಗೆ ತರಬೇತಿ ನೀಡಲಾಗುತ್ತಿತ್ತು. ಈ ತರಬೇತಿ ಶಾಲೆಯು ಐಜಿಪಿರವರ ಕೇಂದ್ರ ಕಛೇರಿಯ ಸಹಾಯಕನ ಅಧೀನದಲ್ಲಿ ನಡೆಯುತ್ತಿದ್ದವು. ಇದಕ್ಕಿಂತ ಮೊದಲು ತುರ್ತು ಪೊಲೀಸ್ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ಇಲಾಖೆಯಲ್ಲಿರುವ ಅನಕ್ಷರಸ್ಥರಿಗೆ 'ಹುಬ್ಬಳಿ' ಸ್ಕೂಲ್‌ಗಳಿಗೆ ಹೋಗಿ ಶಿಕ್ಷಣ ಪಡೆಯುವಂತೆ ಐ.ಜಿ.ಪಿರವರು ಆದೇಶಿಸಿದ್ದರು. ಖಾಸಗಿ ವ್ಯಕ್ತಿಗಳಿಗೂ ಸಹ ತರಬೇತಿ ಪಡೆಯಲು ಅವಕಾಶವಿದ್ದು ಆದರೆ ಇದು ಅಭ್ಯರ್ಥಿಯ ವಿದ್ಯಾರ್ಹತೆಯನ್ನು ಅವಲಂಬಿಸಿ ಐಜಿಪಿರವರ ನಿರ್ಧಾರಕ್ಕೆ ಒಳಪಟ್ಟ ವಿಷಯವಾಗಿತ್ತು. ಹೀಗೆ ಆಯ್ಕೆಯಾದವರು ವೈದ್ಯಕೀಯ ತಪಾಸಣೆಗೆ ಒಳಪಡಬೇಕಿತ್ತು. ಮತ್ತು ದೈಹಿಕವಾಗಿ ಸಮರ್ಥವಾಗಿರಬೇಕಿತ್ತು. ಸಂಸ್ಥಾನದಲ್ಲಿ ಕೆಲಸ ಮಾಡುವ ಸರಕಾರಿ ಅಧಿಕಾರಿಗಳ ಸಂಬಂಧಿಕರಿಗಳಿಗೂ ಈ ತರಬೇತಿಯನ್ನು ನೀಡಲಾಗುತ್ತಿತ್ತು.[೧೧೭]

೧೮೯೨-೯೩ರಲ್ಲಿ ಬೆಂಗಳೂರಿನ ವಿಶೇಷ ಮೀಸಲು ಪಡೆ ಪೊಲೀಸರಿಗೆ ಕೆಲವು ಉಪಯುಕ್ತವಾದ 'ಕಲಕುಶಲತೆ' ಬಗ್ಗೆ ತರಬೇತಿ ನೀಡಲಾಯಿತು. ಉದಾಹರಣೆಗೆ: ಮರಗೆಲಸ ಮತ್ತು ಕಮ್ಮಾರಿಕೆ. ಈ ರೀತಿ ಪೊಲೀಸ್ ತರಭೇತಿ ಶಾಲೆಗಳಲ್ಲಿ ತರಬೇತಿ ಪಡೆದ ಒಟ್ಟು ೧೭೧ ಜನರು ಇಲಾಖೆಯಲ್ಲಿದ್ದರು. ಅದರಲ್ಲಿ ೬೩ ಜನ ಈಗಾಗಲೇ ಸೇವೆಯಲ್ಲಿ ಇದ್ದರೆ ೧೦೮ ಜನ ನೇಮಕಾತಿ (Recruits) ಆದವರು. ೮೬ ಜನ ತರಬೇತಿನಿರತರಲ್ಲಿ (Recruits) ೫೮ ಜನರನ್ನು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆಂದು ಘೋಷಿಸಲಾಯಿತು. ಇವರಲ್ಲಿ ೪ ಜನ ಕಲಾ ವಿಭಾಗದಲ್ಲಿ ಪದವಿ, ಅದರಲ್ಲಿ ಇಬ್ಬರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ, ೨೪ ಜನ ಮೆಟ್ರಿಕ್ಯುಲೇಷನ್ ಆದವರು. ೩೪ ಜನ ರಿಕ್ರೂಟ್‌ಗಳನ್ನು (ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಜವಾದಾರನ ಜೊತೆ ಬಿಡಲಾಯಿತು.[೧೧೮]

೧೮೯೪-೯೫ ರ ಕೊನೆಯಲ್ಲಿ ೪೬ ಜನ ಅಧಿಕಾರಿಗಳು ೫ ಜನ ಸಿಬ್ಬಂದಿಗಳು ಯುನಿವರ್ಸಿಟಿಯಿಂದ ಪದವಿ

ಪಡೆದರು. ಮತ್ತು ಇಲಾಖೇತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಇದ್ದರು. ಅದರಲ್ಲಿ ೮ ಜನ ಬಿ.ಎ., ೫ ಜನಕಲಾ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದವರು. ೧೧ ಜನ ಮೆಟ್ರಿಕ್ಯುಲೇಷನ್ ಆದವರು ಇದ್ದರು. ಕವಾಯತು ಮತ್ತು ಇಲಾಖೆಯಲ್ಲಿನ ಶಿಸ್ತಿಗೆ ಹೆಚ್ಚಿನ ಒತ್ತು ನೀಡಲಾಯಿತು. ಕೇಂದ್ರಸ್ಥಾನದಲ್ಲಿ ಯಾವಾಗಲೂ ಕವಾಯತು ಹೇಳಿ ಕೊಡುವವರು (Drill Instructors) ಇರುತ್ತಿದ್ದರು. ಬೆಂಗಳೂರು, ಮೈಸೂರು, ಶಿವಮೊಗ್ಗಗಳ ಪೊಲೀಸ್ ತರಭೇತಿ ಶಾಲೆಯಲ್ಲಿ ದೈಹಿಕ ಕವಾಯತು, ಖಡ್ಗ, ಲಾಠಿ, ಬಂದೂಕು ಹಾರಿಸುವ (Musketry) ಶಿಕ್ಷಣ ನೀಡಲಾಗುತ್ತಿತ್ತು.[೧೧೯]

೧೮೯೭ ರ ಡಿಸೆಂಬರ್ ೨೮ ರಂದು ಬೆಂಗಳೂರು ಜಿಲ್ಲಾ ಪೊಲೀಸರಿಗೆ ಸಂಬಂಧಿಸಿದಂತೆ ಬೆಂಗಳೂರಿ ನಲ್ಲೂ, ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮೈಸೂರಿನಲ್ಲೂ, ಚಿತ್ರದುರ್ಗ, ಹಾಸನ, ಶಿವಮೊಗ್ಗ ಮತ್ತು ಕಡೂರು ಜಿಲ್ಲೆಗಳಿಗೆ ಸಂಬಂಧಿಸಿಂತೆ ಚಿತ್ರದುರ್ಗದಲ್ಲಿಯೂ, ಜಿಲ್ಲಾ ಪೊಲೀಸ್ ತರಬೇತಿ ಶಾಲೆ ಗಳನ್ನು ತೆರೆಯಲು ಸರಕಾರವು ಮಂಜೂರಾತಿಯನ್ನು ನೀಡಿತು. ತಿಂಗಳಿಗೆ ರೂ ೬೧೧ ಇದಕ್ಕಾಗಿ ಖರ್ಚು ಆಗುತ್ತಿತ್ತು. ಇದರಲ್ಲಿ ಕೇಂದ್ರ ಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಸಂಬಳವೂ ಸೇರಿತ್ತು. ನಂತರ ಒಬ್ಬರು ಕೇಂದ್ರ ಸ್ಥಾನದ ಇನ್ಸ್‌ಪೆಕ್ಟರ್ ಮಾಸಿಕ ತಲಾ ರೂ ೭೫ + ೧೫, ಮೂರನೇ ದರ್ಜೆಯ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್ ಮಾಸಿಕ ತಲಾ ರೂ ೫೦+೧೫, ನಾಲ್ಕನೇ ದರ್ಜೆಯ ನಾಲ್ಕು ಜನ ಪೊಲೀಸ್ ಇನ್ಸ್‌ಪೆಕ್ಟರ್ ಮಾಸಿಕ ತಲಾ ರೂ ೪೦+೧೫, ನಾಲ್ಕು ಜನ ಕವಾಯತು ಮಾಸ್ತರ್ ತಲಾ ಮಾಸಿಕ ರೂ ೧೬, ಆರು ಜನ ಕವಾಯತು ಮಾಸ್ತರ್ ಮಾಸಿಕ ರೂ ತಲಾ ೧೬ ಸಂಬಳ ನೀಡಿ ನೇಮಿಸಲಾಯಿತು.[೧೨೦]

ಈ ತರಬೇತಿಗಳು ಜುಲಾಯಿ ೧ ನೇ ತಾರೀಕಿನಂದು ಪ್ರಾರಂಭವಾಗಿ ಸಪ್ಟೆಂಬರ್ ಅಂತ್ಯದವರೆಗೆ ನಡೆ ಯುತ್ತಿದ್ದವು. ೧೮೯೯ ರಲ್ಲಿ ಮೂರು ಜನ ಜಮೇದಾರರು, ಒಬ್ಬರು ಹೆಡ್‌ಕಾನ್‌ಸ್ಟೇಬಲ್, ೧೦ ಜನ ದಫೇದಾರರು, ಒಬ್ಬರು ಸಾರ್ಜೆಂಟ್, ಒಬ್ಬರು ಕಾನ್‌ಸ್ಟೇಬಲ್ ಮತ್ತು ೩೬ ಜನ ತರಬೇತಿ ನಿರತ ಕಾನ್‌ಸ್ಟೇಬಲ್‌ಗಳು ಮತ್ತು ಒಬ್ಬರು ಪೊಲೀಸ್ ಮುಖ್ಯಮುನ್ಶಿಯವರಿದ್ದು ಅವರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಒಟ್ಟು ೫೩ ಜನರು ಇದ್ದರು. ಪೊಲೀಸ್ ತರಬೇತಿ ಶಾಲೆಯಲ್ಲಿದ್ದ ಜಮೇದಾರರಿಗೆ ಮಾಸಿಕ ರೂ. ೨೦ ಮತ್ತು ಹೆಡ್‌ಕಾನ್‌ಸ್ಟೇಬಲ್‌ಗಳಿಗೆ ಮಾಸಿಕ ರೂ ೧೬ ಸಂಬಳ ನೀಡಲಾಗುತ್ತಿತ್ತು. ೧೯೦೧ ರಲ್ಲಿ ಬೆಂಗಳೂರಿನ ತರಬೇತಿ ಶಾಲೆಯನ್ನು ಮುಚ್ಚಿ ಪುನ: ೧೯೦೩ ರಲ್ಲಿ ತೆರೆಯಲಾಯಿತು. ಆಗ ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ಠಾಣಾಧಿಕಾರಿಗಳಿಗೆ ತಲಾ ಒಂದೊಂದು ತರಗತಿಗಳನ್ನು ತೆರೆಯ ಲಾಯಿತು.[೧೨೧] ಠಾಣಾಧಿಕಾರಿಗಳು ಕನಿಷ್ಟ ಮೆಟ್ರಿಕ್ಯುಲೇಷನ್ ಅಥವಾ ಮೈಸೂರು ಸೆಕೆಂಡರಿ ಲೋಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಿತ್ತು. ನಂತರದ ದಿನಗಳಲ್ಲಿ ಇಂಗ್ಲೀಷ್ ಭಾಷೆ ಅರ್ಥವಾಗದ ಸಿಬ್ಬಂದಿಗಳಿಗೆ ಕನ್ನಡ ಭಾಷೆಯಲ್ಲಿ ತರಬೇತಿ ನೀಡಲು ಆರಂಭಿಸಲಾಯಿತು. ೧೯೧೧ ರಲ್ಲಿ ಐಜಿಪಿಯಾಗಿದ್ದ ಡಿ.ದೇವರಾಜ್ ಅರಸು ರವರುಗಳು ವೆಲ್ಲೂರಿಗೆ ತೆರಳಿ ಅಲ್ಲಿನ ಪೊಲೀಸ್ ತರಬೇತಿ ಶಾಲೆಗೆ ಭೇಟಿ ನೀಡಿ ಅದೇ ಮಾಧರಿಯಲ್ಲಿ ಸಂಸ್ಥಾನ ದಲ್ಲಿಯೂ ಸಹ ತರಬೇತಿ ಶಾಲೆ ಯನ್ನು ಮಾರ್ಪಾಡಿಸಲು ಪ್ರಸ್ತಾವಿಸಿದರು. ಅಲ್ಲಿ ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ಗಳಿಗೆ ಸಂಸ್ಥಾನದ ಪೊಲೀಸ್ ತರಬೇತಿ ಶಾಲೆ, ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ರಿಕ್ರೂಟ್ಸ್ ತರಬೇತಿ ಶಾಲೆ ಇತ್ತು. ಸಂಸ್ಥಾನದ ಪೊಲೀಸ್ ಶಾಲೆಗೆ ಒಬ್ಬರು ಯುರೋಪಿಯನ್ ಎಸ್‌ಪಿರವರನ್ನು ಪ್ರಾಂಶುಪಾಲರನ್ನಾಗಿ ನೇಮಿಸಲಾಗಿತ್ತು. ರಿಕ್ರೂಟ್ಸ್ ಶಾಲೆಯು ಒಬ್ಬರು ಯುರೋಪಿಯನ್ ಎಎಸ್‌ಪಿರವರ ಅಧೀನದಲ್ಲಿತ್ತು ಈ ತರಬೇತಿ ಶಾಲೆಗಳಲ್ಲಿ ಅಪರಾಧಿಕ ಕಾನೂನು, ಸಾಕ್ಷಿ ಅಧಿನಿಯಮ, ದಂಡ ಪ್ರಕ್ರಿಯಾಸಂಹಿತೆ ಮತ್ತು ಪ್ರಾಯೋಗಿಕ ಕೆಲಸಗಳನ್ನು ಕಲಿಸಲಾಗುತ್ತಿತ್ತು. ಸಂಸ್ಥಾನದ ಪೊಲೀಸ್ ತರಬೇತಿ ಶಾಲೆಯು ಒಬ್ಬರು ಪ್ರಾಂಶುಪಾಲರು ಮತ್ತು ಕಾನೂನು ಉಪನ್ಯಾಸಕರು, ಒಬ್ಬರು ಮೊದಲನೇ ದರ್ಜೆಯ

ಇನ್ಸ್‌ಪೆಕ್ಟರ್, ಮೂರು ಜನ ಎರಡನೇ ದರ್ಜೆಯ ಇನ್ಸ್‌ಪೆಕ್ಟರ್‌ರನ್ನು ಒಳಗೊಂಡಿದ್ದು, ಬೋಧಕ ವರ್ಗದಲ್ಲಿ ಒಬ್ಬರು ಶೀಘ್ರಲಿಪಿ ಇನ್ಸ್‌ಟ್ರಕ್ಟರ್, ಒಬ್ಬರು ಪ್ಲಾನ್ ಡ್ರಾಯಿಂಗ್ ಇನ್ಸ್‌ಟ್ರಕ್ಟರ್, ಒಬ್ಬರು ತಮಿಳ್‌ಮುನ್ಷಿ, ಒಬ್ಬರು ತೆಲುಗು ಮುನ್ಷಿ, ಕವಾಯತು ಸಿಬ್ಬಂದಿಗಳು, ಒಬ್ಬರು ಡ್ರಿಲ್ ಇನ್ಸ್‌ಟ್ರಕ್ಟರ್, ಒಬ್ಬರು ಕುದುರೆ ಸವಾರರು, ಆರು ಜನ ಸಹಾಯಕ ಡ್ರಿಲ್ ಇನ್ಸ್‌ಟ್ರಕ್ಟರ್ (ಹೆಡ್‌ಕಾನ್ಸ್‌ಟೇಬಲ್) ಇಬ್ಬರು ಬಿಗಿಲರ್ ಇದ್ದರೆ ಕಛೇರಿ ಕೆಲಸಕ್ಕೆ ಇಬ್ಬರು ಗುಮಾಸ್ತರು, ಒಬ್ಬರು ಮುನ್ಷಿ, ಮೂರು ಜನ ಪೀವನ್, ಒಬ್ಬರು ವಾಚನಾಲಯದ ಸಹಾ ಯಕರು ಇದ್ದರು. ಅಷ್ಟೇ ಅಲ್ಲದೇ ಉದ್ಯಾನವನವನ್ನು ಬೆಳೆಸುವವರು ಸಹ ಇದ್ದರು. ರಿಕ್ರೂಟ್ಸ್ ಶಾಲೆಯಿಲ್ಲಿ ಒಬ್ಬರು ಎಎಸ್‌ಪಿ, ಒಬ್ಬರು ಮುಖ್ಯ ಉಪನ್ಯಾಸಕರು (ಎರಡನೇ ದರ್ಜೆಯ ಇನ್‌ಪೆಕ್ಟರ್) ಒಬ್ಬರು ಮುಖ್ಯ ಡ್ರಿಲ್ ಇನ್ಸ್‌ಪೆಕ್ಟರ್ (ನಾಲ್ಕನೇ ದರ್ಜೆಯ ಇನ್ಸ್‌ಪೆಕ್ಟರ್) ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ಗೆ ಮಾಸಿಕ ತಲಾ ರೂ ೮೦, ಇಬ್ಬರು ಸಬ್ ಇನ್ಸ್‌ಪೆಕ್ಟರಿಗೆ ಮಾಸಿಕ ತಲಾ ರೂ ೭೦, ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ಗೆ ಮಾಸಿಕ ತಲಾ ರೂ. ೬೦, ಒಬ್ಬರು ಸಬ್ ಇನ್ಸ್‌ಪೆಕ್ಟರ್‌ಗೆ ಮಾಸಿಕ ತಲಾ ರೂ ೫೦, ಇಬ್ಬರು ಜನ ಹೆಡ್‌ಕಾನ್ಸ್‌ಟೇಬಲ್‌ಗಳಿಗೆ ಮಾಸಿಕ ರೂ ತಲಾ ೨೦, ಮೂರು ಜನ ಹೆಡ್‌ಕಾನ್ಸ್‌ಟೇಬಲ್ ಮಾಸಿಕ ರೂ. ತಲಾ ೧೭-೮-೦, ಮೂರು ಜನ ಹೆಡ್‌ಕಾನ್ಸ್‌ಟೇಬಲ್ ಮಾಸಿಕ ತಲಾ ರೂ ೧೫, ಒಬ್ಬರು ಜಿಮ್ನಾಸ್ಟಿಕ್ ಇನ್ಸ್‌ಟ್ರಕ್ಟರ್‌ರವರಿಗೆ ಮಾಸಿಕ ರೂ ೧೫, ಎಂಟು ಜನ ವಾಟರ್ ಮ್ಯಾನ್‌ಗಳಿಗೆ ಮಾಸಿಕ ತಲಾ ರೂ ೬ ವೇತನವನ್ನು ನಿಗದಿಪಡಿಸಿ ತರಬೇತಿ ಶಾಲೆಗಳಲ್ಲಿ ನೇಮಿಸಲಾಗಿತ್ತು.[೨೨] ಇಲ್ಲಿ ಕಾನ್ಸ್‌ಟೇಬಲ್‌ಗಳಿಗೆ ಪ್ರಾಥಮಿಕ ಕಾನೂನಿನ ಪಾಠ ಹಾಗೂ ಕವಾಯತನ್ನು ಹೇಳಿಕೊಡ ಲಾಗುತ್ತಿತ್ತು. ನಂತರ ಕನ್ನಡ ಬಲ್ಲ ಠಾಣಾ ಧಿಕಾರಿಗಳಿಗೆ ತರಬೇತಿ ನೀಡಲಾಯಿತು. ೧೯೦೫-೦೬ ರಲ್ಲಿ ಠಾಣಾಧಿಕಾರಿಗಳ ತರಬೇತಿಯನ್ನು ಬೆಂಗಳೂರು ತರಬೇತಿ ಶಾಲೆಯಲ್ಲಿ ನೀಡಲಾಯಿತು.

ಐಜಿಪಿಯಾಗಿದ್ದ ಸರ್ದಾರ ದಳವಾಯಿ ದೇವರಾಯ ಅರಸುರವರು(೨೩-೦೩-೧೯೦೮ ರಿಂದ೨೨-೧೨-೧೯೧೧) ಮತ್ತು ರಾಜಸಭಾಭೂಷಣ ದಿವಾನ್ ಬಹದ್ದೂರ್ ಸಿ.ಶ್ರೀಕಂಠೇಶ್ವರ ಅಯ್ಯರ್ ಐಜಿಪಿ (೧೯-೧೨-೧೯೧೨ ರಿಂದ ೩೧-೦೩-೧೯೧೭) ರವರುಗಳು ವೆಲ್ಲೂರು ಪೊಲೀಸ್ ತರಬೇತಿ ಶಾಲೆಗೆ ಭೇಟಿ ನೀಡಿ ಅಲ್ಲಿನ ತರಬೇತಿಯ ಬಗ್ಗೆ ಅಧ್ಯಯನ ನಡೆಸಿ ಬೆಂಗಳೂರಿನ ಕೇಂದ್ರ ಪೊಲೀಸ್ ತರಬೇತಿ ಶಾಲೆಯನ್ನು ಪುನರ್ ಸಂಘಟಿಸಲು ಒಂದು ವಿಸ್ತ್ರತ ವರದಿ ಸಲ್ಲಿಸಲಾಯಿತು. ಸಂಸ್ಥಾನದ ತರಬೇತಿ ಶಾಲೆಯಲ್ಲಿ ಒಂದು ವರ್ಷದ ತರಬೇತಿ ನೀಡಿದರೆ ರಿಕ್ರೂಟ್ಸ್ ಶಾಲೆಯಲ್ಲಿ ೬ ತಿಂಗಳ ತರಬೇತಿ ಇತ್ತು. ಅವರುಗಳಿಗೆ ಅಗತ್ಯವಾದಂತಹ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ವೆಲ್ಲೂರಿನ ತರಬೇತಿ ಶಾಲೆಯಂತೆಯೇ ಬೆಂಗಳೂರಿನ ತರಬೇತಿ ಶಾಲೆಯನ್ನು ಮಾರ್ಪಡಿಸಲಾಯಿತು. ೧೯೧೪ ರಲ್ಲಿ ಪೊಲೀಸ್ ತರಬೇತಿ ಶಾಲೆಯ ಜೊತೆಗೆ ಹಾಸ್ಟೆಲ್‌ನ್ನು ಮಂಜೂರು ಮಾಡಲಾಯಿತು.[೨೩]

೧೯೦೫-೦೬ ರಲ್ಲಿ ಸಪ್ಟೆಂಬರ್ ೪ ರಿಂದ ತರಗತಿಗಳು ಆರಂಭವಾಗಿದ್ದು, ಎರಡು ತರಗತಿಗಳ ಬದಲಿಗೆ ಮೂರು ತರಗತಿಗಳನ್ನು ನಡೆಸಲು ಸರ್ಕಾರಕ್ಕೆ ಪ್ರಸ್ತಾವನ‌ಯನ್ನು ಸಲ್ಲಿಸಲಾಯಿತು. ಎರಡು ತರಗತಿಗಳು ಆಂಗ್ಲಭಾಷೆ ಯಲ್ಲಿ ಇನ್ಸ್‌ಪೆಕ್ಟರ್ ಮತ್ತು ಠಾಣಾಧಿಕಾರಿಗಳಿಗೆ ಹಾಗೂ ಕನ್ನಡ ಭಾಷೆಯ ಒಂದು ತರಗತಿಯನ್ನು ಠಾಣಾಧಿಕಾರಿಗಳಿಗೆ ಮಾತ್ರ ತೆರೆಯಲು ಪ್ರಸ್ತಾವಿಸಲಾಯಿತು. *೧೯೦೫-೦೬ ರಲ್ಲಿ ತರಬೇತಿಯಲ್ಲಿದ್ದವರ ವಿವರದ ಬಗ್ಗೆ ಅನುಬಂಧ – ೩೩ ನ್ನು ನೋಡಿರಿ.*[೨೪] ತರಬೇತಿ ಪಡೆಯುವವರಿಗಾಗಿ ಈ ವರ್ಷ ಪ್ರಶ್ನೋತ್ತರ ರೂಪದ ಪೊಲೀಸ್ ಕೈಪಿಡಿಯೊಂದನ್ನು ಪ್ರಕಟಿಸಲಾಯಿತು. ಈ ವರ್ಷ ಇನ್ಸ್‌ಪೆಕ್ಟರ್ ಶಾಮರಾವ್ ಹಾಗೂ ನಾರಾಯಣ ಅಯ್ಯರ್‌ರವರು ತರಬೇತಿಯಲ್ಲಿ ಅತ್ಯಂತ ಹೆಚ್ಚಿನ ಶಿಸ್ತನ್ನು ಮೂಡಿಸಿದರೆ ಇನ್ಸ್‌ಪೆಕ್ಟರ್ ಎಡ್ವರ್ಡ್ ಮತ್ತು ಸೀರ್ಲೇರವರುಗಳು ಅತ್ಯಂತ ಉತ್ತಮ ಮಟ್ಟದ ಕವಾಯತನ್ನು ಹೇಳಿಕೊಟ್ಟಿದ್ದರು.

ಬೆಂಗಳೂರು ಪೊಲೀಸ್ ತರಬೇತಿ ಶಾಲೆಯಲ್ಲಿ ಅಪರಾಧ ಶಾಸ್ತ್ರ (ಕ್ರಿಮಿನಾಲಾಜಿಕಲ್ ಮ್ಯೂಸಿಯಂ) ವಸ್ತು ಸಂಗ್ರಹಾಲಯ ಸ್ಥಾಪಿಸಬೇಕೆಂಬ ಐ.ಜಿ.ಪಿ ರವರ ಪ್ರಸ್ಥಾವನೆಗೆ ಸರ್ಕಾರವು ಮಂಜೂರಾತಿಯನ್ನು ನೀಡಿತು.[೧೨೫] ೧೯೧೫-೧೬ ರಲ್ಲಿ ಬೆಂಗಳೂರಿನಲ್ಲಿ ತರಬೇತಿನಿರತರಿಗಾಗಿ ಅಪರಾಧಶಾಸ್ತ್ರ ವಸ್ತು ಸಂಗ್ರಹಾಲಯ ವನ್ನು ತೆರೆಯಲಾಯಿತು. ಇದರಲ್ಲಿ ಅಪರಾಧವನ್ನು ಮಾಡಲು ಉಪಯೋಗಿಸುವಂತಹ ಉಪಕರಣಗಳು, ನಕಲಿ ನಾಣ್ಯಗಳು, ಅದನ್ನು ತಯಾರಿಸಲು ಬಳಸುವಂತಹ ಅಚ್ಚು, ಮಾದಕ ವಸ್ತುಗಳ ಮಾದರಿಗಳು ಮೊದಲಾದವುಗಳನ್ನು ಸಂಗ್ರಹಿಸಲಾಯಿತು. ಇದರಿಂದ ತರಬೇತಿ ನಿರತರಿಗೆ ಹೆಚ್ಚು ಅನುಕೂಲವಾಯಿತು. ೧೯೧೮ ರಲ್ಲಿ ಐ.ಜಿ.ಪಿಯವರು ಪೊಲೀಸ್ ತರಬೇತಿ ಶಾಲೆಗಳ ಗುಣಮಟ್ಟವನ್ನು ಸುಧಾರಿಸಲು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡಲು, ಇದನ್ನು ಪುನರ್‌ಸಂಘಟಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಸಲ್ಲಿಸಿದರು. ಅದರಲ್ಲಿ ತರಬೇತಿ ಶಾಲೆಯ ಪುನರ್ ಸಂಘಟನೆಯ ಬಗ್ಗೆ ಈ ಕೆಳಗಿನ ಅಂಶಗಳನ್ನು ಒಳಗೊಂಡಿತ್ತು. ೧) ಪೊಲೀಸ್ ತರಬೇತಿ ಶಾಲೆಯನ್ನು ಒಬ್ಬ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಯ ನಿಯಂತ್ರಣದಲ್ಲಿಡಬೇಕು ಹಾಗೂ ಆತನಿಗೆ ಮಾಃಕ ೫೦ ರೂಪಾಯಿ ಸ್ಥಳೀಯ ಭತ್ಯೆಯನ್ನು ನೀಡಬೇಕು. ೨) ಆಯ್ಕೆ ಮಾಡಿದ ಇನ್ಸ್‌ಪೆಕ್ಟರ್‌ರವರುಗಳನ್ನು ನೇಮಿಸುವುದು ೩)ಈಗಾಗಲೇ ತರಬೇತಿ ಶಾಲೆಯಲ್ಲಿರುವ ಜಮೇದಾರರುಗಳನ್ನು ತೆಗೆದು ಅವರ ಜಾಗದಲ್ಲಿ ಸಬ್‌ಇನ್ಸ್‌ಪೆಕ್ಟರ್ ರವರುಗಳನ್ನು ನೇಮಿಸುವುದು. ೪) ಇನ್ಸ್‌ಪೆಕ್ಟರ್‌ಗಳಿಗೆ ಮಾಸಿಕ ರೂ. ೪೦ ಹಾಗೂ ಪರೀಕ್ಷಾ ಅವದಿಯಲ್ಲಿರುವ ಇನ್ಸ್‌ಫೆಕ್ಟರ್‌ಗಳಿಗೆ ಮಾಸಿಕ ರೂ ೨೫ ನ್ನು ಸ್ಥಳೀಯ ಭತ್ಯೆಯಾಗಿ ನೀಡಬೇಕೆಂದು ಪ್ರಸ್ತಾವನೆಯಲ್ಲಿತ್ತು.

೧೯೨೨-೨೩ ರಲ್ಲಿ ದಫೇದಾರ್ ಮತ್ತು ಕಾನ್ಸ್‌ಟೇಬಲ್‌ಗಳು ಅನುಕೂಲವಾಗುವಂತೆ ಕನ್ನಡದಲ್ಲಿ ತರಭೇತಿ ನೀಡುವ ತರಗತಿ ಪ್ರಾರಂಭಿಸಲಾಯಿತು. ಇದರಲ್ಲಿ ೪೮ ಜನ ದಫೇದಾರರು ೪೨ ಕಾನ್ಸ್‌ಟೇಬಲ್‌ಗಳು ಉತ್ತೀರ್ಣರಾದರು. ೬೯ ಅಕ್ಷರಸ್ಥ ಮತ್ತು ೭೫ ಅನಕ್ಷರಸ್ಥ ಕಾನ್ಸ್‌ಟೇಬಲ್‌ಗಳಿಗೆ ಎರಡು ಕಂತುಗಳಲ್ಲಿ ತರಬೇತಿ ನೀಡಲಾಯಿತು. ಪೊಲೀಸ್ ವಿಷಯಗಗಳ ಬಗ್ಗೆ ಮತ್ತು ರೈಫಲ್ ಶೂಟಿಂಗ್ ಬಗ್ಗೆ ನೀಡಿದ ತರಭೇತಿಯಲ್ಲಿ ೧೩೭ ಜನರು ಉತ್ತೀರ್ಣರಾದರು.[೧೨೬]

೧೯೨೪-೨೫ ರಲ್ಲಿ ಪೊಲೀಸ್ ತಗಭೇತಿ ಶಾಲೆಯಲ್ಲಿ ಇಡೀ ವರ್ಷ ೩ ತರಗತಿಗಳನ್ನು ನಡೆಸಲಾಯಿತು. ಪ್ರೊಬೆಷನರಿ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ಗಳಿಗಾಗಿ ತರಬೇತಿಗಾಗಿ ತರಗತಿಗಳನ್ನು ತೆರೆಯಲಾಯಿತು. ಇಲ್ಲಿನ ಸಿಬ್ಬಂದಿಗಳ ಸಂಖ್ಯೆಯನ್ನು ೧ ಇನ್ಸ್‌ಪೆಕ್ಟರ್, ೧ ಸಬ್‌ಇನ್ಸ್‌ಪೆಕ್ಟರ್‌ಗಳಲ್ಲಿ ೧೭೮ ವಿದ್ಯಾರ್ಥಿಗಳು ತರಬೇತಿ ಪಡೆಯುವಂತೆ ಏರಿಸಲಾಯಿತು.[೧೨೭]

೧೯೨೬-೨೭ ರಲ್ಲಿ ಪೊಲೀಸ್ ತರಬೇತಿ ಶಾಲೆಯಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಮೂರು ತರಗತಿಗಳು ಇದ್ದವು. ಈ ವರ್ಷ ತರಬೇತಿ ಪಡೆದವರ ಸಂಖ್ಯೆ ೨೧೯. 'ಕ್ರಿಮಿನಲ್ ಹೈಯ್ಯರ್' ಪರೀಕ್ಷೆಗೆ ಕುಳಿತ ೯ ಜನರಲ್ಲಿ ೭ ಜನ ಉತ್ತೀರ್ಣರಾಗಿದ್ದರು. ಅದರಲ್ಲಿ ಒಬ್ಬರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರು. 'ಕ್ರಿಮಿನಲ್ ಲೋಯರ್' ಪರೀಕ್ಷೆಗೆ ಕುಳಿತ ೨೭ ಜನರಲ್ಲಿ ೧೯ ಜನರು ಉತ್ತೀರ್ಣರಾಗಿದ್ದರು.[೧೨೮] ೧೯೪೧-೪೨ ರಲ್ಲಿ ೪೫೧ (ಕಳೆದ ವರ್ಷ ೩೨೦) ಜನರನ್ನು ತರಬೇತಿಗಾಗಿ ಆಯ್ಕೆ ಮಾಡಲಾಯಿತು. ಪೊಲೀಸ್ ತರಬೇತಿ ಶಾಲೆಯಲ್ಲಿ ೧೦ ಜನ ಸಬ್‌ಇನ್ಸ್‌ಪೆಕ್ಟರ್‌ಗಳು, ೪೨ ಜನ ದಫೇದಾರ್‌ಗಳು ಮತ್ತು ೨೬೨ ಜನ ಕಾನ್ಸ್‌ಟೇಬಲ್‌ಗಳು ತರಬೇತಿ ಪಡೆದಿದ್ದರು.[೧೨೯] ೧೯೪೧-೪೨ ರಲ್ಲಿ ೧೬೧ ಜನ ಗ್ರೂಪ್ ಕಮಾಂಡರ್ ಮತ್ತು ೨೫೫೦ ಸಿವಿಲ್ ಗಾರ್ಡ್‌ಗಳುಗಳು ಈ ವರ್ಷ ತರಭೇತಿ ಪಡೆದರು.[೧೩೦] ೧೯೪೫-೪೬ ರಲ್ಲಿ ಬೆಂಗಳೂರು ಪೊಲೀಸ್ ತರಬೇತಿ ಶಾಲೆಯಲ್ಲಿ ೧೩ ಜನ ಪ್ರೊಬೆಷನರಿ (ಖಾಯಂ ಪೂರ್ವ ತರಭೇತಿಯಲ್ಲಿರುವ)

ಸಬ್-ಇನ್ಸ್‌ಪೆಕ್ಟರ್ ವರ್ಷದ ಕೊನೆಯಲ್ಲಿ ತರಬೇತಿ ಪಡೆಯಲು ತರಬೇತಿ ಶಾಲೆಯಲ್ಲಿ ಇದ್ದರು. ೧೦ ಜನ ಪ್ರೊಬೆಷನರಿ ಸಬ್-ಇನ್ಸ್‌ಪೆಕ್ಟರ್, ೨೫ ಜನ ದಫೇದಾರ್, ೧೧೪ ಜನ ಕಾನ್‌ಸ್ಟೇಬಲ್‌ಗಳು, ೧೦ ಜನ ದಫೇದಾರ್‌ಗಳು ಕನ್ನಡ ಶೀಘ್ರಲಿಪಿಯಲ್ಲಿ ತರಬೇತಿ ಪಡೆದರು. ಮೈಸೂರಿನ ಪೊಲೀಸ್ ತರಬೇತಿ ಶಾಲೆಯಲ್ಲಿ ೨೫೧ ಜನ ಕಾನ್‌ಸ್ಟೇಬಲ್‌ಗಳು ತರಬೇತಿ ಪಡೆದರು.[೨೧]

ಭಾರತೀಯ ಪೊಲೀಸ್ ಆಯೋಗದ ಸೂಚನೆಗಳ ಮೇರೆಗೆ ಶಿವಮೊಗ್ಗ ಜಿಲ್ಲೆಯ ವ್ಯವಸ್ಥಿತ ಪೊಲೀಸ್ ಪಡೆಯಲ್ಲಿ ಪ್ರಾಯೋಗಿಕವಾಗಿ ಪುನರ್‌ಹಂಚಿಕೆ ಕಾರ್ಯ ನಡೆಯಿತು. ಇದರ ಉದ್ದೇಶವೇನೆಂದರೆ ೧) ಸಣ್ಣ ಉಪಠಾಣೆಗಳು ಔಟ್‌ಪೋಸ್ಟ್ (ಉಕ್ಕಡ)ಗಳನ್ನು ಖಡಿತಗೊಳಿಸುವುದು. ೨)ಸಮರ್ಥವಾದ, ಉತ್ತಮ ಸಂಬಳ ಪಡೆಯುವ ಅಧಿಕಾರಿಗಳ ಅಡಿಯಲ್ಲಿ ಸರಿಯಾದ ರೀತಿಯಲ್ಲಿ ತನಿಖಾ ಕೇಂದ್ರ ಸ್ಥಾಪಿಸುವುದು ೩)ಪ್ರತೀ ತಾಲೂಕಿನಲ್ಲಿ ಎರಡು ತನಿಖಾ ಕೇಂದ್ರಗಳನ್ನು ಸ್ಥಾಪಿಸುವುದು, ೪) ತಾಲೂಕು ತನಿಖಾ ಕೇಂದ್ರಗಳಲ್ಲಿ ಕ್ರಮಬದ್ಧ ಸರದಿಯಂತೆ ತನಿಖೆ ಮಾಡುವುದು ೫) ಪ್ರತೀ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಪೊಲೀಸ್ ಕೆಲಸಗಳಿಗೆ ಜವಾಬ್ದಾರರನ್ನಾಗಿ ಮಾಡುವುದು. ೬) ಈ ಕೇಂದ್ರಗಳಲ್ಲಿ ತನಿಖೆ ನಡೆಸಲು ಜವಾಬ್ದಾರಿ ಹೊಂದಿದ ಅಧಿಕಾರಿಯಾಗಿ 'ಜಮೇದಾರ' ಅಥವಾ ಮುಖ್ಯ ಪೇದೆಗಳನ್ನು ನೇಮಿಸುವುದು. ಈ ಪುನರ್‌ಹಂಚಿಕೆಯ ಉದ್ದೇಶವಾಗಿತ್ತು.

೭. ೧೪ : ಅಪರಾಧ ತನಿಖಾ ವಿಭಾಗ

ಅಪರಾಧಗಳ ತನಿಖೆಗೆ ಅಪರಾಧ ಶಾಸ್ತ್ರದ ಆಳವಾದ ಜ್ಞಾನದ ಅಗತ್ಯವಿದೆ. ಅಪರಾಧಿಗಳು ಹೇಗಿರುತ್ತಾರೆ? ಹೇಗೆ ಅಪರಾಧಗಳನ್ನು ಮಾಡುತ್ತಾರೆ?, ಏಕೆ ಅಪರಾಧಗಳನ್ನು ಮಾಡುತ್ತಾರೆ?, ಅವರುಗಳ ಹಿನ್ನಲೆ ಏನು?, ಯಾವ ಸಂದರ್ಭಗಳಲ್ಲಿ ಅಪರಾಧಗಳನ್ನು ಮಾಡುತ್ತಾರೆ?, ಅವರು ಬಳಸುವಂತಹ ಆಯುಧಗಳೇನು?, ಅವರು ಹೇಗೆ ತಪ್ಪಿಸಿ ಕೊಳ್ಳುತ್ತಾರೆ?, ಅವರು ವಾಸಿಸುವ ಸ್ಥಳಗಳು ಯಾವುವು?, ಇವರು ಎಸಗಿದ ಅಪರಾಧಗಳನ್ನು ಯಾವ ಯಾವ ವಿಧಾನಗಳ ಮೂಲಕ ಪತ್ತೆ ಹಚ್ಚಬೇಕು? ಎಂಬ ಎಲ್ಲಾ ವಿಷಯ ಜ್ಞಾನವು ತನಿಖಾಧಿಕಾರಿಗೆ ಇರಬೇಕಾಗುತ್ತದೆ. ಮತ್ತು ಇವರ ಚಲನವಲನಗಳ ಬಗ್ಗೆ ಕಣ್ಗಾವಲನ್ನು ಇರಿಸಿ ಗಮನಿಸುತ್ತಿರಬೇಕಾಗುತ್ತದೆ. ಹೀಗಾಗಿ ಒಬ್ಬ ತನಿಖಾಧಿಕಾರಿಗೆ ಅತ್ಯಂತ ವೃತ್ತಿಪರವಾದಂತಹ ಜ್ಞಾನದ ಅಗತ್ಯ ಇರುತ್ತದೆ. ಈ ಕಾರಣಕ್ಕಾಗಿ ಪೊಲೀಸ್ ಪಡೆಯಲ್ಲಿ ಅಪರಾಧ ತನಿಖಾ ವಿಭಾಗವು ಅತ್ಯಂತ ಮಹತ್ತರವಾದ ಪಾತ್ರ ವಹಿಸಿದೆ. ಇದು ಸಂಭವಿಸಿದ ಅಪರಾಧಗಳನ್ನು ಪತ್ತೆಹಚ್ಚುವುದು ಮಾತ್ರವಲ್ಲ, ಮುಂದೆ ನಡೆಯಬಹುದಾದ ದೊಂಬಿ, ಗಲಾಟೆ, ಅಪರಾಧಗಳು ಮೊದಲಾದ ವಿಷಯಗಳ ಬಗ್ಗೆ ಪೂರ್ವಭಾವಿಯಾಗಿ ಗುಪ್ತಮಾಹಿತಿಯನ್ನು ಸಂಗ್ರಹಿಸುತ್ತದೆ. ಈ ಕಾರಣಗಳಿಗಾಗಿ ಸಂಸ್ಥಾನದಲ್ಲಿ ಅಪರಾಧ ತನಿಖಾ ವಿಭಾಗವನ್ನು ರಚಿಸಲಾಯಿತು.

ಪೊಲೀಸ್ ನೇಮಕಾತಿಯಲ್ಲಿ ಇರುವ ಲೋಪದೋಷಗಳನ್ನು ಸುಧಾರಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿ ಅದರ ಮೂಲಕ ಕೆಲವು ಇಲಾಖೆಯ ಅಭಿವೃದ್ಧಿಗೆ ಕೆಲವು ಕ್ರಮಕೈಗೊಂಡ ನಂತರ ಇಲಾಖೆಯಲ್ಲಿ ಕಾರ್ಯಕ್ಷಮತೆ ಹೆಚ್ಚುತ್ತಾ ಬಂದಿತು. ಅದೆಂದರೆ ಪ್ರತಿ ಜಿಲ್ಲೆಯಲ್ಲಿಯ ಉತ್ತಮ ಪೊಲೀಸ್ ಅಭಿಯೋಜನೆಯನ್ನು ನ್ಯಾಯಾಲಯದಲ್ಲಿ ನಡೆಸಬೇಕೆಂಬ ಉದ್ದೇಶದಿಂದ (ಪ್ರಾಸಿಕ್ಯೂಟಿಂಗ್) ಅಭಿಯೋಜಕ ಇನ್ಸ್‌ಪೆಕ್ಟರ್‌ರವರುಗಳನ್ನು ನೇಮಿಸಲಾಯಿತು. ಮೈಸೂರು, ತುಮಕೂರು, ಶಿವಮೊಗ್ಗಗಳಲ್ಲಿದ್ದ ಮೀಸಲು ಪೊಲೀಸ್ ಪಡೆಯನ್ನು ತೆಗೆದು ಅದನ್ನು ಬೆಂಗಳೂರು ಪೊಲೀಸರ ಸಾಮರ್ಥ್ಯ ಹೆಚ್ಚಿಸಲಾಯಿತು. ಮುಖ್ಯ ಠಾಣೆಗಳ ಅಧಿಕಾರಿಗಳು ಠಾಣೆಯಲ್ಲಿ ಕ್ರೈಂ ರಿಜಿಸ್ಟರ್‌ನ್ನು 'ಅಪರಾಧ ವರದಿ ಪುಸ್ತಕ'ವನ್ನು ನಿರ್ವಹಿಸಲಾಯಿತು. ಕ್ರಮಪ್ರಕಾರವಾಗಿ ಪೊಲೀಸರು ಗಸ್ತು ತಿರುಗುವ ವ್ಯವಸ್ಥೆಯನ್ನು ಉತ್ತಮಪಡಿಸಲಾಯಿತು. ರಹಸ್ಯ ವಿಷಯಗಳ ಬಗ್ಗೆ ದಿನಚರಿಯಲ್ಲಿ ಬರೆದು ಕಳುಹಿಸಬೇಕು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮತ್ತು

ಸೂಪರಿಂಟೆಂಡೆಂಟ್‌ಗಳು ವಾರಕ್ಕೊಮ್ಮೆ ಠಾಣೆಗಳ ಪರಿವೀಕ್ಷಣೆ ನಡೆಸಬೇಕು. ಬೆಂಗಳೂರು ತರಬೇತಿ ಶಾಲೆಯಲ್ಲಿರುವವರಿಗೆ ಶಸ್ತ್ರಾಸ್ತ್ರಗಳು ಹಾಗೂ ಸಮವಸ್ತ್ರಗಳನ್ನು ವಿತರಿಸಲಾಯಿತು. ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಕರಣದ ತನಿಖೆ ನಡೆಸುವುದು, ಪೊಲೀಸರು ಅಪರಾಧ ತಡೆಕಾರ್ಯ ಮಾಡುವುದು, ಗ್ರಾಮಗಳಲ್ಲಿ ರಾತ್ರಿ ಕಾವಲು ಕಾಯುವುದು, ರೈಲ್ವೆ ಪೊಲೀಸರನ್ನು ಬಲಪಡಿಸುವುದು ಮತ್ತು ಕೆ.ಜಿ.ಎಫ್ ಪಡೆಯ ಸಂಖ್ಯೆಯನ್ನು ಹೆಚ್ಚಿಸುವುದು ಜಿಲ್ಲಾ ಪೊಲೀಸ್ ತರಬೇತಿ ಶಾಲೆಗಳನ್ನು ಪೊಲೀಸ್ ಕಾನ್ಸ್‌ಟೇಬಲ್‌ಗಳ ತರಬೇತಿ ಶಾಲೆಗಳನ್ನಾಗಿ ಪರಿವರ್ತಿಸಲಾಯಿತು.[೧೨] ಹೀಗೆ ಈ ಸಮಿತಿಯ ಶಿಪಾರಸ್ಸಿನಂತೆ ಇಲಾಖೆಯಲ್ಲಿ ಹಲವು ಅಭಿವೃದ್ಧಿಗಳಾದವು.

೧೯೨೬–೨೭ ರಲ್ಲಿ ರಾಬರ್ಟಸನ್ ಪೇಟೆಯ ಸಿವಿಲ್ ಆಸ್ಪತ್ರೆ ಪ್ರಕರಣ, ಸ್ಟೇಟ್ ಹುಜೂರು ಟ್ರಜರಿ ಮತ್ತು ಮೈಸೂರು ತಾಲೂಕಿನಲ್ಲಿ ಟ್ರಜರಿಯಲ್ಲಿ ನಡೆದ ಹಣದ ವ್ಯತ್ಯಾಸದ ಪ್ರಕರಣ, ಸರ್ಕಾರಿ ನೆಯ್ಗೆ ಕಾರ್ಖಾನೆ ಪ್ರಕರಣ, ೧೯೨೫–೨೬ ರಲ್ಲಿ ನಡೆದ ಶ್ರೀಗಂಧ ಕದ್ದ ಪ್ರಕರಣ, ಅನಂತಪುರ ಪೊಲೀಸರಿಗೆ ವರ್ಗಾವಣೆ ನೀಡಿದ ಪ್ರಕರಣದ ತನಿಖೆ, ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಖೋಟಾನೋಟು ಮತ್ತು ಕನ್ನಕಳವು ಪ್ರಕರಣ, ಅಗ್ರಿಕಲ್ಚರಲ್ ಡೈರಿ ಫಾರಂ ಪ್ರಕರಣ, ದಸರಾ ರಿಟರ್ನ್ ಟಿಕೇಟ್ ಕಳ್ಳತನ ಪ್ರಕರಣ, ಬೆಂಗಳೂರು ನಗರದಲ್ಲಿ ನಡೆದ ಲಂಚ, ಅಪಹರಣ ಯತ್ನ ರಾಬರಿ ಮತ್ತು ಕೊಲೆ ಪ್ರಕರಣದಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಗುಮಾಸ್ತನ ಮೇಲೆ ಇರುವ ದೂರುಗಳ ತನಿಖೆಗೆ ಮೈಸೂರಿನಲ್ಲಿ ಎಸ್.ವಿ ಬ್ರದರ್ಸ್‌ನಿಂದ ನಡೆದ ಬಸ್ಸು ನೊಂದಣಿ ಪ್ರಕರಣ, ರಾಜಕೋಟೆಯ ಜಿಲ್ಲಾ ಎಸ್‌ಪಿರವರ ಮನವಿಯಂತೆ ಪರರೂಪಧಾರಣೆ ನಡೆಸಿ ಮೋಸ ಮಾಡಿದ ಪ್ರಕರಣದ ತನಿಖೆಯಲ್ಲಿ ಅಪರಾಧ ತನಿಖಾ ಸಿಬ್ಬಂದಿ ನೆರವು ನೀಡಿದರು. ತನಿಖೆಗೆ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಸಿಬ್ಬಂದಿಯನ್ನು ನೇಮಿಸಲಾಯಿತು. ಅವರು ಸ್ಥಳೀಯ ಪೊಲೀಸರಿಗೆ ತನಿಖೆಗೆ ಸಹಕರಿಸಿದರು.[೧೩]

೭.೧೫:– ಪೊಲೀಸರಿಗೆ ಶಿಕ್ಷೆ

ಪೊಲೀಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು ಕಿರಿಯ ಅಧಿಕಾರಿಗಳ ಮೇಲೆ ದೌರ್ಜನ್ಯಗಳನ್ನು ನಡೆಸುತ್ತಾ ಅವರ ಮೇಲೆ ಹಿಡಿತವನ್ನು ಸಾಧಿಸಿಕೊಂಡು ಬಂದಿದ್ದಾರೆ ಎಂಬುದಕ್ಕೆ ಪೊಲೀಸರಿಗೆ ನೀಡುತ್ತಿದ್ದ ಶಿಕ್ಷೆ ಉತ್ತಮ ಉದಾಹರಣೆಯಾಗಿದೆ. ಪೊಲೀಸ್ ಪಡೆಯಲ್ಲಿನ ಬಹುತೇಕ ಅರ್ಧದಷ್ಟು ಜನರಿಗೆ ಹಿರಿಯ ಅಧಿಕಾರಿಗಳು ಶಿಕ್ಷೆ ವಿಧಿಸುತ್ತಿದ್ದುದನ್ನು ಕೆಳಗಿನ ಅಂಕಿಅಂಶಗಳಲ್ಲಿ ಗಮನಿಸಬಹುದಾಗಿದೆ. ಬೇರೆ ಯಾವುದೇ ಇಲಾಖೆಯಲ್ಲಿಯೂ ಈ ರೀತಿ ಕೆಳದರ್ಜೆಯ ಅಧಿಕಾರಿಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಶಿಕ್ಷೆಗಳನ್ನು ನೀಡಿದ ಉದಾಹರಣೆಗಳು ಸಿಗುವುದಿಲ್ಲ. ಬ್ರಿಟೀಷರು ತಮ್ಮ ವಿರುದ್ಧ ನಡೆಯುತ್ತಿದ್ದ ನಾಗರಿಕರ ಹೋರಾಟಗಳನ್ನು ಸೇನೆ ಮತ್ತು ಪೊಲೀಸ್ ಪಡೆಯ ಸಹಾಯದಿಂದಲೇ ಹತ್ತಿಕ್ಕಬೇಕಾಗಿತ್ತು. ಸೇನೆಯಲ್ಲಿ ಬಹುತೇಕ ಜನರು ಯುರೋಪಿಯನ್ನರೇ ಆಗಿದ್ದರು. ಆದರೆ ಆಂತರಿಕ ಭದ್ರತೆಗಾಗಿ ಇದ್ದ ಪೊಲೀಸ್ ಪಡೆಯಲ್ಲಿ ಬಹುತೇಕ ಅಧಿಕಾರಿ ಮತ್ತು ಸಿಬ್ಬಂದಿಗಳು ಭಾರತೀಯರಾಗಿದ್ದರು. ಭಾರತೀಯ ಪೊಲೀಸ್ ಪಡೆಯಿಂದಲೇ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕುವ ಅನಿವಾರ್ಯತೆ ಮತ್ತು ಸಂದಿಗ್ಧತೆ ಬ್ರಿಟೀಷರಿಗೆ ಇತ್ತು ೧೮೫೭ ರ ಸಿಪಾಯಿ ದಂಗೆಯಿಂದಾಗಿ ಬ್ರಿಟೀಷರು ಪಾಠಕಲಿತಿದ್ದರು. ಒಂದು ವೇಳೆ ತಮ್ಮ ಅಧೀನದಲ್ಲಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸೇರಿ ಕೊಂಡರೆ ತಮ್ಮ ಅಸ್ತಿತ್ವಕ್ಕೆ ದಕ್ಕೆ ಬರುವುದೆಂಬ ಅರಿವು ಬ್ರಿಟೀಷರಿಗೆ ಇತ್ತು. ಈ ಕಾರಣಕ್ಕಾಗಿ ಸಣ್ಣಪುಟ್ಟ ತಪ್ಪುಗಳಿಗೂ ಪೊಲೀಸರಿಗೆ ಶಿಕ್ಷೆಯನ್ನು ವಿಧಿಸುತ್ತಾ ಅವರನ್ನು ತಮ್ಮ ನಿಯಂತ್ರಣದಲ್ಲಿಯೇ ಇಟ್ಟುಕೊಳ್ಳಲು ಬ್ರಿಟೀಷರು ಪ್ರಯತ್ನಿಸುತ್ತಿದ್ದರು. ಅಷ್ಟೇ ಅಲ್ಲದೇ ಅವರಿಗೆ ನೀಡುವ ತರಭೇತಿ ವೇಳೆಯಲ್ಲಿಯೂ ಸಹ ಅವರನ್ನು ದೈಹಿಕವಾಗಿಯೂ ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು. ಇಂದಿಗೂ ಸಹ ಪೊಲೀಸ್ ಇಲಾಖೆಯ ಕೆಳದರ್ಜೆಯ ಅಧಿಕಾರಿಗಳಿಗೆ ಮೇಲ್ದರ್ಜೆಯ ಅಧಿಕಾರಿಗಳು ದೈಹಿಕ ಶಿಕ್ಷೆಯನ್ನು

ನೀಡುವ ಪದ್ಧತಿಯು ಪೊಲೀಸ್ ಇಲಾಖೆಯನ್ನು ಹೊರತುಪಡಿಸಿದರೆ ದೇಶದ ಇನ್ಯಾವುದೇ ಇಲಾಖೆಯಲ್ಲಿಯೂ ಇರುವುದಿಲ್ಲ. ಈ ಪದ್ಧತಿಯನ್ನು ಬೆಳೆಸಲು ಬ್ರಿಟೀಷರಿಗೆ ಒಂದು ಸಕಾರಣವಿತ್ತು. ಆದರೆ ಇಂದಿಗೂ ಅದನ್ನು ಮುಂದುವರಿಸಿ ಕೊಂಡು ಬಂದಿರುವುದಕ್ಕೆ ಯಾವುದೇ ಸಕಾರಣಗಳು ಇರುವುದಿಲ್ಲ. ಕೆಳ ದರ್ಜೆಯ ಪೊಲೀಸ್ ಅಧಿಕಾರಿಗಳನ್ನು ಮಾನಸಿಕವಾಗಿ ಅವರನ್ನು ಕುಗ್ಗಿಸಿ ಅನಗತ್ಯ ಮಾನಸಿಕ ಹಿಂಸೆಗಳನ್ನು ನೀಡುತ್ತಾ ಹಿರಿಯ ಅಧಿಕಾರಿಗಳೆಂದರೆ ದೇವತಾ ಸ್ವರೂಪಿಗಳೆಂದು ಬಿಂಬಿಸುವ ಪ್ರಯತ್ನಗಳು ನಡೆದವು. ಮತ್ತು ಈಗಲೂ ನಡೆಯುತ್ತಿದೆ. ಕೆಳದರ್ಜೆಯ ಅಧಿಕಾರಿಗಳನ್ನು ತಮ್ಮ ದಾಸರನ್ನಾಗಿ ಬ್ರಿಟೀಷರು ಮಾಡಿಕೊಂಡರು. ಇಂದಿಗೂ ಸಹ ಹಿರಿಯ ಪೊಲೀಸ್ ಅಧಿಕಾರಿಗಳ ಮನೆಗಳಲ್ಲಿ ಅವರ ಮನೆಯ ಅಡುಗೆ ಕೆಲಸ ಮಾಡಲು, ಅವರ ಮತ್ತು ಅವರ ಮನೆಯವರ ಬಟ್ಟೆಗಳನ್ನು ತೊಳೆಯಲು, ಮನೆಯನ್ನು ಗುಡಿಸಿ ಒರೆಸಲು, ಪಾತ್ರೆಗಳನ್ನು ತೊಳೆಯಲು, ಕೈತೋಟವನ್ನು ನಿರ್ವಹಿಸಲು, ಅದಕ್ಕಿಂತಲೂ ಹೆಚ್ಚಾಗಿ ಹಿರಿಯ ಅಧಿಕಾರಿಗಳ ಶೂ ಗಳನ್ನು ಪಾಲಿಷ್ ಮಾಡಲು ಕೆಳದರ್ಜೆಯ ಪೊಲೀಸ್ ಅಧಿಕಾರಿಗಳನ್ನು (ಕಾನ್ಸ್‌ಟೇಬಲ್‌ಗಳನ್ನು) ನೇಮಿಸಿಕೊಳ್ಳುತ್ತಿದ್ದಾರೆ. ಇಂತಹ ಕೆಲಸಕ್ಕೆ ಆರ್ಡರ್ಲಿ ಕೆಲಸ ಎಂದು ಕರೆಯಲಾಗುತ್ತಿದೆ. **Orderly** ಎಂಬ ಇಂಗ್ಲೀಷ್ ಶಬ್ದಕ್ಕೆ ಶಬ್ದಕೋಶದಲ್ಲಿ ಬೀದಿ ಕಸ ಗುಡಿ ಸುವವ ಎಂಬ ಅರ್ಥವಿದೆ. ಇಂದಿಗೂ ಸಹ ಹಿರಿಯ ಅಧಿಕಾರಿಗಳ ಮನೆಗಳಲ್ಲಿ ಕೆಲಸ ಮಾಡುವ ಕೆಳದರ್ಜೆಯ ಅಧಿಕಾರಿಗಳನ್ನು ಆರ್ಡರ್ಲಿ ಎಂದೇ ಕರೆಯಲಾಗುತ್ತದೆ. ಹಿರಿಯ ಅಧಿಕಾರಿಗಳಿಂತಲೂ ಜ್ಞಾನವಂತರೂ, ವಿದ್ಯಾ ವಂತರೂ, ಬುದ್ಧಿವಂತರೂ ಮತ್ತು ಕೌಶಲ್ಯವನ್ನು ಉಳ್ಳ ಕೆಳದರ್ಜೆಯ ಸಿಬ್ಬಂದಿಗಳಿದ್ದರೂ ಸಹ ಅವರನ್ನು ಅಧಿಕಾರಿ ಗಳು ಬೀದಿ ಕಸಗುಡಿಸುವವ ಎಂಬ (ಆರ್ಡರ್ಲಿ) ಶಬ್ಧದಿಂದ ಕರೆಯುತ್ತಾರೆ. ಕನಿಷ್ಟ ಪಕ್ಷ ಅವರನ್ನು ಒಂದು ಒಳ್ಳೆಯ ಹೆಸರಿನಿಂದಲೂ ಕರೆಯುವ ಸೌಜನ್ಯವು ಬ್ರಿಟೀಷರಿಗೆ ಇರಲಿಲ್ಲ. ಅಷ್ಟೇ ಏಕೆ ಇಂದಿಗೂ ಇಲ್ಲದಿರುವುದು ಒಂದು ದುರಂತ. ಪೊಲೀಸ್ ಇಲಾಖೆಯಲ್ಲಿ ಶ್ರೇಣೀಕೃತ ವ್ಯವಸ್ಥೆಯು ಬೇರಾವುದೇ ಇಲಾಖೆಯಲ್ಲಿ ಇಲ್ಲದಿರುವಷ್ಟು ಮಟ್ಟಿಗೆ ಇದೆ. ಉದಾಹರಣೆಗೆ:- ಡಿ.ಐ.ಜಿ ದರ್ಜೆಯ ಅಧಿಕಾರಿಗಿಂತಲೂ ಮೇಲ್ದರ್ಜೆಯ ಅಧಿಕಾರಿಗಳು ಕಛೇರಿಗೆ ಬರುವಾಗ ಗಾರ್ಡ್ ಆಫ್ ಹಾನರ್ ಎಂಬ ಹೆಸರಿನಲ್ಲಿ ಸಶಸ್ತ್ರ ಪೊಲೀಸರು ಬಿಗಿಲು ಊದುವುದರ ಮೂಲಕ ಅವರಿಗೆ ಗೌರವ ವಂದನೆ ಸಲ್ಲಿಸಬೇಕು. ಇಂತಹ ಒಂದು ವ್ಯವಸ್ಥೆ ಬೇರಾವುದೇ ಇಲಾಖೆಯಲ್ಲಿಯೂ ಇಲ್ಲ. ಅಷ್ಟೇ ಏಕೆ ಪ್ರತಿ ನಿತ್ಯ ಕಛೇರಿಗೆ ಬರುವ ರಾಜ್ಯದ ಮುಖ್ಯಮಂತ್ರಿಗಾಗಲೀ, ಅಥವಾ ಮುಖ್ಯ ಕಾರ್ಯದರ್ಶಿಗಾಗಲೀ ಅಥವಾ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗಾಗಲೀ ಪ್ರತೀ ನಿತ್ಯ ಈ ಗೌರವದ ವಂದನೆ ಇರುವುದಿಲ್ಲ. ಆದರೂ ಸಹ ಪೊಲೀಸ್ ಇಲಾಖೆಯಲ್ಲಿ ಈ ವ್ಯವಸ್ಥೆಯನ್ನು ಅವೈಜ್ಞಾನಿಕವಾಗಿ ಇಂದಿಗೂ ಮುಂದುವರಿಸಿಕೊಂಡು ಬರಲಾಗಿದೆ.

ಸಬ್-ಇನ್ಸ್‌ಪೆಕ್ಟರ್ ಮತ್ತು ಮೇಲ್ದರ್ಜೆಯ ಅಧಿಕಾರಿಗಳು ಹೊಸದಾಗಿ ಒಂದು ಪ್ರದೇಶಕ್ಕೆ ಹೋಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಲ್ಲಿ ಫಸ್ಟ್ ಡ್ರೆಸ್ ಎಂದು ಕರೆಯಲ್ಪಡುವ ಒಂದು ಬಗೆಯ ಕೋಟು, ಬೆಲ್ಟ್, ಟೈಗಳನ್ನು ಉಳ್ಳ ಸಮವಸ್ತ್ರಗಳನ್ನು ಧರಿಸಿಕೊಂಡು ಹೋಗಿ ಅಂದರೆ ಪೊಲೀಸರು ಪ್ರತೀ ನಿತ್ಯ ಧರಿಸುವ ಸಮವಸ್ತ್ರಕ್ಕಿಂತಲೂ ಭಿನ್ನವಾದ ಸಮವಸ್ತ್ರವನ್ನು ಧರಿಸಿಕೊಂಡು ಹೋಗಿ ಹಿರಿಯ ಅಧಿಕಾರಿಗಳಿಗೆ ವರದಿಮಾಡಬೇಕು. ಅಥವಾ ಹಿರಿಯ ಅಧಿಕಾರಿಗಳು ಹೊಸದಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಾಗ ಕೆಳ ದರ್ಜೆಯ ಅಧಿಕಾರಿಗಳು ಇದೇ ರೀತಿಯ ಸಮವಸ್ತ್ರವನ್ನು ಧರಿಸಿಕೊಂಡು ಹೋಗಿ ಅವರಿಗೆ ವರದಿ ಮಾಡಿ ಕೊಳ್ಳಬೇಕು. ಇದೂ ಸಹ ಶ್ರೇಣೀಕೃತ ಪೊಲೀಸ್ ವ್ಯವಸ್ಥೆಯಲ್ಲಿ ಕೆಳದರ್ಜೆಯ ಅಧಿಕಾರಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಒಂದು ತಂತ್ರವಾಗಿದೆಯೇ ವಿನಹ ಇದರಲ್ಲಿ ಯಾವುದೇ ವೈಜ್ಞಾನಿಕತೆ ಇಲ್ಲದೇ ಬಳಕೆಯಲ್ಲಿ ಬಂದ ಪದ್ಧತಿಯಾಗಿದೆ. ೧೮೮೮ ರಿಂದ ಪೊಲೀಸರಿಗೆ ಯಾವ ಯಾವ ರೀತಿಯ ಶಿಕ್ಷೆಗಳನ್ನು ನೀಡಲಾಗುತ್ತಿತ್ತು ಎಂಬುದರ ವಿವರಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

೧೮೮೮ ರಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿಯವರ ಸೇವಾ ಪುಸ್ತಕದಲ್ಲಿ 'ಕಪ್ಪುಚುಕ್ಕೆ' ನಮೂದು ಮಾಡುವ ವ್ಯವಸ್ಥೆಯು ಮೌಲ್ಯಯುತವಾಗಿತ್ತು. ಇಂತಹ ಹಲವಾರು ಗುರುತುಗಳನ್ನು ಹಾಕುವುದರಿಂದ ಶಿಕ್ಷೆಗಳನ್ನು ನೀಡುವುದನ್ನು ನಿಯಂತ್ರಿಸಬಹುದಾಗಿತ್ತು. ಇದು ಆಪೇಕ್ಷಣೀಯವಾಗಿತ್ತು. ಇದು ಪೊಲೀಸ್ ಅಧಿಕಾರಿಗಳ ಮೇಲೆ ಪ್ರಭಾವ ಬೀರಿತ್ತು. ಮೇಲಿನ ಶಿಕ್ಷೆಗಳನ್ನು ತಡೆಯಲು ಈ ರೀತಿ ಆಗಾಗ 'ಕಪ್ಪುಚುಕ್ಕೆ' ಸಹಾಯಕವಾಗಿತ್ತು.[೧೩೪] ೧೮೯೧ ರಿಂದ ೧೮೯೪ ರ ವರೆಗೆ ಇಲಾಖೆಯಲ್ಲಿ ಶಿಕ್ಷೆಗೆ ಒಳಗಾದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ[೧೩೫]

ಶಿಕ್ಷೆಗಳು	೧೮೯೧		೧೮೯೨-೯೩ ೧೨ ತಿಂಗಳು		೧೮೯೩-೯೪		೧೯೯೪	
	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ
ವಜಾ	೩	೯೧	೫	೧೧೯	೨	೮೧	೧	೬೩
ಕೆಳದರ್ಜೆಗೆ ಇಳಿಸಿದ್ದು	೧೩	೧೭	೧೯	೪೦	೨೫	೨೫	೧೨	೨೧
ಅಮಾನತ್ತು	೧೦	೧೧೮	೧೮	೧೪೦	೧೯	೧೨೫	೧೨	೧೦೩
ದಂಡ	೬೧	೮೫೭	೯೮	೯೧೧	೮೯	೭೯೩	೪೬	೭೫೨
ಸಂಬಳ ಮುಟ್ಟುಗೋಲು	೫	೮೭೩	೯	೮೩೧	೭	೯೫೦	೬	೬೭೩
ಪೊಲೀಸ್ ಕಾಯ್ದೆಯಂತೆ	–	೬	–	೧೪	–	೧೦	–	೧
ಐಪಿಸಿಯಂತೆ	೧	೨೨	–	೯	೧	೧೩	–	೫
ಒಟ್ಟು	೯೨	೧೯೮೪	೧೪೯	೨೦೬೪	೧೪೩	೧೯೯೭	೭೭	೧೬೧೮

೧೯೦೪-೦೫ ರಲ್ಲಿ ಶಿಕ್ಷೆಗೆ ಒಳಗಾದ ಪೊಲೀಸರ ವಿವರ.[೧೩೬]

ಶಿಕ್ಷೆಗಳು	ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ
ವಜಾ ಆದವರ ಸಂಖ್ಯೆ	೧೦
ಹಿಂಬಡ್ತಿ ಮತ್ತು ಇಲಾಖಾ ಶಿಕ್ಷೆಗೆ ಒಳಗಾದವರ ಸಂಖ್ಯೆ	೧೪೮
ಒಟ್ಟು ಇಲಾಖೆಯಲ್ಲಿ ಶಿಕ್ಷೆಗೆ ಒಳಗಾದವರ ಸರಾಸರಿ	೩೩.೩೩
ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದವರ ಸಂಖ್ಯೆ	೩

೧೯೦೭-೦೮ ರಲ್ಲಿ ಒಬ್ಬ ದಫೇದಾರ್ ಮತ್ತು ೨೪ ಜನ ಸಿಬ್ಬಂದಿಗಳಿಗೆ ಈ ಕೆಳಗಿನ ಅಪರಾಧಕ್ಕಾಗಿ ನ್ಯಾಯಾಲಯ ದಿಂದ ಶಿಕ್ಷೆ ಆಯಿತು.

ಅಪರಾಧಗಳು	ಶಿಕ್ಷೆಗೊಳಗಾದವರ ಸಂಖ್ಯೆ
ಪೊಲೀಸ್ ನಿಯಮಗಳನ್ನು ಪಾಲಿಸದೇ ಕರ್ತವ್ಯ ನಿರ್ಲಕ್ಷ್ಯತೆ ಮಾಡಿದವರು	೧೨ ಜನ
ಅಪರಾಧಿಕ ಅತಿಕ್ರಮ ಪ್ರವೇಶ	೫ ಜನ
ಕಳ್ಳತನ	೪ ಜನ
ಅಪರಾಧಿಕ ನಂಬಿಕೆದ್ರೋಹ	೨ ಜನ
ತಪ್ಪೊಪ್ಪಿಗೆ ಪಡೆಯಲು ಹಲ್ಲೆ ನಡೆಸಿದ್ದಕ್ಕೆ	೧ ಜನ
ನಿರ್ಲಕ್ಷ್ಯತೆಯಿಂದಾಗಿ ಆರೋಪಿಗಳು ತಪ್ಪಿಸಿಕೊಂಡು ಹೋಗಿದ್ದಕ್ಕೆ	೧ ಜನ
ಒಟ್ಟು	೨೫ ಜನ

೧೯೦೬-೦೭ ಮತ್ತು ೧೯೦೭-೦೮ ರಲ್ಲಿ ಇಲಾಖಯಿಂದ ಶಿಕ್ಷೆಗೊಳಗಾದವರು[೧೩೭]

ವಿವರ	೧೯೦೬-೦೭		೧೯೦೭-೦೮	
	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ
ವಜಾಗೊಂಡವರು	೨	೧೨೯	೩	೧೫೧
ದಂಡಹಾಕಲ್ಪಟ್ಟವರು/ಕೆಳಗಿನ ದರ್ಜೆಗೆ ಇಳಿದವರು/ಅಮಾನತು	೨೩೮	೧೮೫೫	೩೦೭	೨೪೫೫
ವಸೂಲಿಯಾದ ದಂಡ	–	೯೧೦-೦-೯	–	೮೬೪-೨-೧೧
ಕಪ್ಪುಚುಕ್ಕೆ	೨೩೯	–	೧೮೧	–

೧೯೦೬ -೦೭ ರಲ್ಲಿ ೨೨೨೪ ಜನ ಪೊಲೀಸರು ಶಿಕ್ಷೆಗೆ ಒಳಗಾದರೆ ೧೯೦೭-೦೮ ರಲ್ಲಿ ೨೯೧೬ ಜನರು ಶಿಕ್ಷೆಗೆ ಒಳಗಾದರು. ಶಿಕ್ಷೆಗೊಳಗಾದವರ ಸಂಖ್ಯೆಯಲ್ಲಿ ೬೯೨ ಏರಿಕೆಯಾಗಿರುವುದನ್ನು ಗಮನಿಸಬಹುದು. ಇದಕ್ಕೆ ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡಿಲ್ಲ. ಆದರೆ ಕಪ್ಪುಚುಕ್ಕೆಯಲ್ಲಿ ಕಡಿಮೆಯಾಗಿರುವುದನ್ನು ಗಮನಿಸಬಹುದಾಗಿದೆ. ೧೯೦೪ ರಿಂದ ೦೮ ರವರೆಗೆ ಶಿಕ್ಷೆಗೊಳಗಾದವರ ಸರಾಸರಿ ಹೀಗಿದೆ.[೧೩೮]

೧೯೦೪-೦೫ ರಲ್ಲಿ ೪೦.೧ %, ೧೯೦೫-೦೬ ರಲ್ಲಿ ೪೫.೫%, ೧೯೦೬-೦೭ ರಲ್ಲಿ ೪೨.೭%, ೧೯೦೭-೦೮ ರಲ್ಲಿ ೫೪.೫% ಇದನ್ನು ಗಮನಿಸಿದಾಗ ಬಹುತೇಕ ಪೊಲೀಸ್ ಪಡೆಯಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳಲ್ಲಿ ಅರ್ಧದಷ್ಟು ಜನರು ಶಿಕ್ಷೆಗೆ ಒಳಗಾಗುತ್ತಿದ್ದರು ಎಂಬುದನ್ನು ಗಮನಿಸಬಹುದಾಗಿದೆ.

೧೯೧೩-೧೪ ರಲ್ಲಿ ೨೦೬ ಶಿಕ್ಷೆಗಳನ್ನು ನೀಡಲಾಯಿತು. ಕಳೆದ ವರ್ಷ ೧೯೧೨-೧೩ ರಲ್ಲಿ ಇದು ೨೯೭ ಆಗಿತ್ತು. ೧೯೧೩-೧೪ ರಲ್ಲಿ ನೀಡಿದ ಶಿಕ್ಷೆಗಳ ವಿವರ ಈ ಕೆಳಗಿನಂತೆ ಇದೆ.[೧೩೯]

ವಜಾಗೊಂಡವರ ಸಂಖ್ಯೆ	೧೭	೩ ಜನರಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿತ್ತು.
ದಂಡ ಹಾಕಲ್ಪಟ್ಟವರು	೪	೨ ಜನರಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿತ್ತು.
ಹಿಂಬಡ್ತಿ ಪಡೆದವರ ಸಂಖ್ಯೆ	೧೧	
ಅಮಾನತುಗೊಂಡವರ ಸಂಖ್ಯೆ	೨೬	
ಕಪ್ಪುಚುಕ್ಕೆ ಪಡೆದವರ ಸಂಖ್ಯೆ	೧೪೮	
ಒಟ್ಟು	೨೦೬	

೧೯೧೪-೧೫ ರಲ್ಲಿ ಈ ವರ್ಷ ಒಟ್ಟು ೩೦೯ ಜನರಿಗೆ ಶಿಕ್ಷೆ ನೀಡಲಾಯಿತು. ಕಳೆದ ವರ್ಷ ೨೦೯ ಜನರಿಗೆ ಶಿಕ್ಷೆ ನೀಡಲಾಗಿತ್ತು.

ಸೇವೆಯಿಂದ ವಜಾಗೊಂಡವರು	–	೧೯	(೫ ಜನರಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿತ್ತು) ದಂಡ
ಪಡೆದವರು	–	೨	
ಹಿಂಭಡ್ತಿ ಪಡೆದವರು	–	೧೩	
ಅಮಾನತು ಆದವರು	–	೨೯	
ಕಪ್ಪು ಚುಕ್ಕೆ ಪಡೆದವರು	–	೨೪೬	
ಒಟ್ಟು	–	೩೦೯ [೧೪೦]	

೧೯೧೫-೧೬ ರಲ್ಲಿ ೩೭೮ ಹಾಗೂ ೧೯೧೪-೧೫ ರಲ್ಲಿ ೩೦೯ ಜನರಿಗೆ ಶಿಕ್ಷೆ ನೀಡಲಾಗಿತ್ತು. ಇಲಾಖೆಯಿಂದ ನೀಡಿದ ಶಿಕ್ಷೆ ಈ ಕೆಳಗಿನಚಿತಿದೆ.

ವಜಾಗೊಂಡವರ ಸಂಖ್ಯೆ	೧೮	೨ ಜನರಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿತ್ತು.
ದಂಡ ಹಾಕಲ್ಪಟ್ಟವರು	೩೬	
ಹಿಂಬಡ್ತಿ ಪಡೆದವರ ಸಂಖ್ಯೆ	೨೭	
ಅಮಾನತುಗೊಂಡವರ ಸಂಖ್ಯೆ	೧೨	
ಕಪ್ಪು ಚುಕ್ಕೆ ಪಡೆದವರ ಸಂಖ್ಯೆ	೨೮೩	
ಒಟ್ಟು	೩೭೬	

೮೨ ಜನರಿಗೆ ಸೇವಾಪುಸ್ತಕದಲ್ಲಿ ಕಪ್ಪುಚುಕ್ಕೆ ನಮೂದಾತಿ ಮಾಡಲಾಗಿತ್ತು.[೧೪೧]

೧೯೨೨-೨೩ ರಲ್ಲಿ ೨೫೩ ಇಲಾಖಾ ಶಿಕ್ಷೆ ನೀಡಲಾಯಿತು. ೧೯೨೧ ರಲ್ಲಿ ಇದು ೨೮೧ ಇತ್ತು. ಹಾಲಿ ಇದ್ದ ಒಟ್ಟು ಬಲದಲ್ಲಿ ೪೭.೬ % ಜನರಿಗೆ ಶಿಕ್ಷೆ ನೀಡಲಾಗಿತ್ತು. ೧೯೨೧ ರಲ್ಲಿ ಇದು ೫೨.೧ % ಶಿಕ್ಷೆ ನೀಡಲಾಗಿತ್ತು. ೧೯೨೧-೨೨ ರಲ್ಲಿ ನೀಡಿದ ಶಿಕ್ಷೆಗಳ ವಿವರ ಈ ರೀತಿ ಇದೆ.

ವಿವರ	ವರ್ಷ	
	೧೯೨೨	೧೯೨೧
ಸೇವೆಯಿಂದ ವಜಾಗೊಂಡವರು	೧೧	೯
ದಂಡ ಪಾವತಿ	೪	೧೨
ಹಿಂಭಡ್ತಿ ಪಡೆದವರು	೨೦	೨೪
ಅಮಾನತು	೫	೧೧
ಕಪ್ಪು ಚುಕ್ಕೆಗಳು	೨೧೩	೨೨೫
ಒಟ್ಟು	೨೫೩	೨೮೧

ರಜೆ ಪಡೆಯದೇ ಗೈರುಹಾಜರಾದವರಿಗೆ ಮಾತ್ರ ದಂಡ ವಿಧಿಸಲಾಗುತ್ತಿತ್ತು. ಕಪ್ಪುಚುಕ್ಕೆ ವ್ಯವಸ್ಥೆಯು ನಿರ್ಬಂಧವಿಲ್ಲದೇ ನಡೆಯುತ್ತಿತ್ತು. ೧೫೦ ಜನರಿಗೆ ಕಪ್ಪು ಚುಕ್ಕೆಗಳನ್ನು ನೀಡಲು ಆದೇಶವಾಗಿದ್ದು, ಅದರಲ್ಲಿ ೩೯ ಆರೋಪ ಸಿದ್ದವಾಗಿತ್ತು. ೮೫ ಉತ್ತಮ ನಡೆತೆಗಾಗಿ ಕೈಬಿಡಲಾಯಿತು. ೨೬ ವಿಚಾರಣೆಗೆ ಬಾಕಿ ಇತ್ತು. ೧೯೨೨-೨೩ ರಲ್ಲಿ ನ್ಯಾಯಾಲಯದಿಂದ ಯಾವುದೇ ಕಾನ್‌ಸ್ಟೇಬಲ್‌ಗಳು ಶಿಕ್ಷೆಗೆ ಗುರಿಯಾಗಿರಲಿಲ್ಲ. ೧೯೨೧ ರಲ್ಲಿ ಇಬ್ಬರು ಈ ಶಿಕ್ಷೆಗೆ ಗುರಿಯಾಗಿದ್ದರು.[೧೯೨] ೧೫೦ ಜನ ಸಿಬ್ಬಂದಿಯನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ೫೭ ಜನ ಕರ್ತವ್ಯಕ್ಕೆ ದೀರ್ಘ ಗೈರು ಹಾಜರಾದವರಾಗಿದ್ದರು. (deserted) ಇಲಾಖೆಯಿಂದ ಮತ್ತು ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಒಟ್ಟು ಅಧಿಕಾರಿ ಮತ್ತು ಸಿಬ್ಬಂದಿಯವರು ೩.೦೫೬. ಇದು ಕಳೆದ ವರ್ಷ ೨೭೬೮. ಇದು ೨೮೭ ಜನರಿಗೆ ಏರಿಕೆ ಯಾಗಿದ್ದನ್ನು ಗಮನಿಸಬಹುದು. ಇದರಲ್ಲಿ ೩೦೩೧ ಜನ ಇಲಾಖೆಯ ನಿಯಮಗಳನ್ನು ಶಿಸ್ತು ಉಲ್ಲಂಘಿಸಿದಕ್ಕೆ ೨೫ ಜನರು ವಿವಿಧ ಅಪರಾಧಗಳಲ್ಲಿ ಭಾಗಿಯಾಗಿದ್ದಕ್ಕೆ ಶಿಕ್ಷೆಗೆ ಒಳಗಾದರು.[೧೯೩] ಇದೇ ವರ್ಷದಲ್ಲಿ ಅತ್ಯುತ್ತಮ ಪೊಲೀಸ್ ಎಂದು ಮೈಸೂರು, ಬೆಂಗಳೂರು ಆಯ್ಕೆಯಾದರೆ ನಂತರದ ಸ್ಥಾನದಲ್ಲಿ ಶಿವಮೊಗ್ಗ ಮತ್ತು ಕೆ.ಜಿ.ಎಫ್ ಇತ್ತು. ಶಿಕ್ಷೆಯ ಸರಾಸರಿ ೭೯.೬% ನಿಂದ ೬೦.೪% ಗೆ ಕುಸಿದರೆ, ಶಿಕ್ಷೆಗೆ ಒಳಗಾದವರ ಸಂಖ್ಯೆ ೫೬.೯% ನಿಂದ ೫೦.೭% ಗೆ ಕುಸಿಯಿತು.[೧೯೪] ೧೯೨೩-೨೪ ರಲ್ಲಿ ೧೪೧ ಸಿಬ್ಬಂದಿಗಳನ್ನು ಕರ್ತವ್ಯದಿಂದ ಡಿಸ್‌ಮಿಸ್ ಮಾಡಿದರೆ, ೪೦ ಜನ ಅನಧಿಕೃತ ಗೈರುಹಾಜರಾದರು. ೧೯೨೩ ರಲ್ಲಿ ೩೦೫೬ ಜನ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಇಲಾಖಾ ಕರ್ತವ್ಯ ಚ್ಯುತಿ ಬಗ್ಗೆ ಇಲಾಖೆ ಮತ್ತು ನ್ಯಾಯಾಲಯಗಳಲ್ಲಿ ಶಿಕ್ಷಿಸಲಾಗಿತ್ತು. ಆದರೆ ೧೯೨೪ ರಲ್ಲಿ ಈ ಸಂಖ್ಯೆ ೨೮೩೦ ಕ್ಕೆ ಇಳಿಯಿತು. ಇದರಲ್ಲಿ ೨೮೦೯ ಜನ ಇಲಾಖೆಯ ನಿಯಮ ಮತ್ತು ಶಿಸ್ತು ಉಲ್ಲಂಘಿಸಿದಕ್ಕಾಗಿ ಶಿಕ್ಷೆಗೆ ಒಳಗಾದವರಾದರೆ, ೨೧ ಜನ ವಿವಿಧ ಅಪರಾಧಗಳಲ್ಲಿ ಭಾಗಿ ಯಾದವರಾಗಿದ್ದರು.[೧೯೫] ೧೯೨೪-೨೫ ರಲ್ಲಿ ೧೨೧ ಜನರನ್ನು ಇಲಾಖೆಯಿಂದ ವಜಾಗೊಳಿಸಿದರೆ ೪೯ ಜನರ ಅನಧಿಕೃತವಾಗಿ ಪಡೆಯಿಂದ ಗೈರುಹಾಜರಾಗಿದ್ದರು. ೫೪ ಜನ ಮೃತಪಟ್ಟರೆ ೯೩ ಜನ ರಾಜಿನಾಮೆ ನೀಡಿದರೆ, ೧೦೯ ಜನ ಡಿಸ್‌ಚಾರ್ಜ್ ಆದರು. (ಕೆಲಸದಿಂದ ತೆಗೆದುಹಾಕಲಾಯಿತು) ಇಲಾಖೇುಂದ ಮತ್ತು ನ್ಯಾಯಾಯಾಲಯದಿಂದ ಶಿಕ್ಷೆಗೆ ಒಳಗಾದವರ ಸಂಖ್ಯೆ ೨೨೨೦ ಇದರಲ್ಲಿ ೨೧೯೬ ಜನ ಇಲಾಖೆಯ ನೀತಿ ನಿಯಮಗಳನ್ನು ಮತ್ತು ಶಿಸ್ತನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ ೨೪ ಜನ ಶಿಕ್ಷೆಗೆ ಒಳಗಾದರು.[೧೯೬]

೧೯೨೬-೨೭ ರಲ್ಲಿ ೭೯ ಸಿಬ್ಬಂದಿಗಳನ್ನು ಇಲಾಖೆಯಿಂದ ವಜಾಮಾಡಲಾಗಿತ್ತು. ೩೨ ಜನ ಅನಧಿಕೃತವಾಗಿ ಗೈರು ಹಾಜರಾಗಿದ್ದರು. ಈ ವರ್ಷ ಮೃತಪಟ್ಟವರು ೫೭, ಒಟ್ಟು ೧೦೮ ಜನರು ರಾಜಿನಾಮೆ ನೀಡಿದರು. (ಡೆಸರ್ಟ್ ಮತ್ತು ರಾಜಿನಾಮೆಯು ಶಿಕ್ಷೆ ಮತ್ತು ಕ್ರೂರತೆಯಿಂದ ಹೆಚ್ಚಾಗಿತ್ತು.) ೪೭ ಜನರಿಗೆ ನಿವೃತ್ತಿ ವೇತನ ನೀಡಿ ಇಲಾಖೆಯಿಂದ ವಜಾಗೊಳಿಸಲಾಯಿತು. ಇಲಾಖೆಯಿಂದ ಶಿಕ್ಷೆಗೆ ಒಳಗಾದ ಒಟ್ಟು ಅಧಿಕಾರಿ ಮತ್ತು ಸಿಬ್ಬಂಧಿಗಳ ಸಂಖ್ಯೆ ೨,೨೮೬, ಕಳೆದ

ವರ್ಷ ಈ ಸಂಖ್ಯೆ ೨,೬೦೩ ಆಗಿತ್ತು. ಇದರಲ್ಲಿ ೨೨೬೯ ಜನ ಇಲಾಖೆಯ ನಿಯಮ ಮತ್ತು ಶಿಸ್ತು ಉಲ್ಲಂಘನೆಗಾಗಿ ಶಿಕ್ಷೆಗೆ ಒಳಗಾಗಿದ್ದರೆ, ೧೭ ಜನ ವಿವಿಧ ಅಪರಾಧಗಳನ್ನು ಮಾಡಿದ್ದರು.[೧೯೭] ೧೯೪೧-೪೨ ಈ ವರ್ಷ ಕೆಳಗಿನ ದರ್ಜೆಯ ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಯವರಿಗೆ ನೀಡಿದ ಇಲಾಖೆಯ ಶಿಕ್ಷೆಯ ಸರಾಸರಿ ೩.೪% ರಿಂದ ೩.೭% ಕ್ಕೆ ಏರಿತು. ಈ ವರ್ಷ ೫ ಜನರಿಗೆ (ಕಳೆದ ವರ್ಷ ೩) ನ್ಯಾಯಾಲಯದಿಂದ ಶಿಕ್ಷೆ ಯಾಯಿತು.[೧೯೮] ೧೯೪೫-೪೬ ರಲ್ಲಿ ಇಲಾಖೆಯಲ್ಲಿ ಕೆಳದರ್ಜೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನೀಡಿದ ಶಿಕ್ಷೆಯ ಸರಾಸರಿ ಈ ರೀತಿ ಇದೆ. ರಜೆ ಇಲ್ಲದೆ ಗೈರುಹಾಜರಾದವರು ಅಧಿಕಾರಿಗಳು ೯.೯ %,, ಸಿಬ್ಬಂದಿಗಳು ೪.೮ % ಇತರೇ ಅಪರಾಧಗಳಿಗೆ ಅಧಿಕಾರಿಗಳು ೭.೮ %, ಸಿಬ್ಬಂದಿ ೮.೦ %, ಕಪ್ಪು ಚುಕ್ಕೆ ಅಧಿಕಾರಿಗಳಿಗೆ ೧೧.೭ %, ಸಿಬ್ಬಂದಿಗಳಿಗೆ ೯.೨೮% ಮೈಸೂರು ಪೊಲೀಸ್ ಕಾಯ್ದೆ ಅಡಿಯಲ್ಲಿ ೩೦ ಜನ ಕಾನ್ಸ್‌ಟೇಬಲ್‌ಗಳನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಯಿತು.[೧೯೯]

೭.೧೬:- ಪೊಲೀಸರಿಗೆ ಬಹುಮಾನಗಳು

ಪೊಲೀಸರು ಮಾಡಿದ ಶ್ಲಾಘನೀಯ ಹಾಗೂ ಉತ್ತಮ ಕೆಲಸಗಳನ್ನು ಗುರುತಿಸುವ ಕಾರ್ಯ ಇಲಾಖೆಯಲ್ಲಿ ನಡೆಯುತ್ತಿತ್ತು ಇದು ಅವರ ಕಾರ್ಯ ತತ್ಪರತೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಹಾಗೂ ಕೆಲಸದಲ್ಲಿ ಶ್ರದ್ಧೆ ಹಾಗೂ ಆಸಕ್ತಿಯನ್ನು ಬೆಳೆಸುವ ಸಲುವಾಗಿ ನಡೆಯುತ್ತಿತ್ತು. ಇಂತಹ ಉತ್ತಮ ಕೆಲಸಗಳಿಗೆ ನಗದು ಬಹುಮಾನ, ಪದೋನ್ನತಿ, ಪದಕಗಳನ್ನು ನೀಡಲಾಗುತ್ತಿತ್ತು. ಸರಕಾರ ಮಾತ್ರವಲ್ಲದೇ ಸ್ಥಳೀಯ ಸಿವಿಲ್ ಇಲಾಖೆಗಳು, ಸಂಘಸಂಸ್ಥೆಗಳು, ಖಾಸಗಿ ವ್ಯಕ್ತಿಗಳೂ ಸಹ ಬಹುಮಾನಗಳನ್ನು ನೀಡಿದ್ದರು. ಅಷ್ಟೇ ಅಲ್ಲದೇ ಅಪರಾಧ ಪತ್ತೆ ಕಾರ್ಯದಲ್ಲಿ ಸಹಕರಿಸಿದ ಸಾರ್ವಜನಿಕರಿಗೂ ಬಹುಮಾನಗಳನ್ನು ನೀಡಲಾಗುತ್ತಿತ್ತು. ಆದರೆ ಸಿಬ್ಬಂದಿಗಳಿಗೆ ನೀಡುತ್ತಿದ್ದ ಶಿಕ್ಷೆಯ ಪ್ರಮಾಣಕ್ಕಿಂತ ಬಹುಮಾನದ ಪ್ರಮಾಣ ಅತ್ಯಂತ ಕಡಿಮೆ ಇರುವುದನ್ನು ಗಮನಿಸಬಹುದಾಗಿದೆ.

೧೮೯೧ ರಿಂದ ೯೫ ರವರೆಗೆ ಪದೋನ್ನತಿ ಮತ್ತು ನಗದು ಮೂಲಕ ನೀಡಿದ ಬಹುಮಾನಗಳ ವಿವರ

		೧೮೯೨-೯೩			೧೮೯೪-೯೫
	೧೮೯೧	೧೨ ತಿಂಗಳು	೧೮ ತಿಂಗಳು	೧೮೯೩-೯೪	
ಪದೋನ್ನತಿ (ಸಹಜ ಪ್ರಕ್ರಿಯೆ ಹೊರತುಪಡಿಸಿ	೧೬೩	೧೫೦	೨೨೧	೧೩೬	೫೬
ನಗದು ಬಹುಮಾನ	೧೧೮	೧೪೨	೨೦೨	೧೨೪	೧೨೭

ವಿಶೇಷವಾಗಿ ನಗದು ಬಹುಮಾನಗಳನ್ನು ನೀಡಲಾಗುತ್ತಿತ್ತು. ಒಳ್ಳೆಯ ಕೆಲಸಗಳನ್ನು ಸಾಮಾನ್ಯವಾಗಿ ಗುರುತಿಸ ಲಾಗುತ್ತಿತ್ತು. ಮತ್ತು ಅದಕ್ಕೆ ತಕ್ಕದಾಗಿ ಪದೋನ್ನತಿ ನೀಡಲಾಗುತ್ತಿತ್ತು. ಇದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ- 'ಅಪರಾಧಿಕ ನಂಬಿಕೆದ್ರೋಹ' ಪ್ರಕರಣವನ್ನು ಅತ್ಯಂತ ನಿಯತ್ತಿನಿಂದ ಪತ್ತೆ ಮಾಡಿದ ಇಬ್ಬರು ಅಧಿಕಾರಿಗಳು ಮತ್ತು ಒಬ್ಬ ಕಾನ್ಸ್‌ಟೇಬಲ್‌ಗೆ ೧೮೯೧ ರಲ್ಲಿ ಖಾಸಗಿ ವ್ಯಕ್ತಿಗಳು ೫೦ ರೂಪಾಯಿ ನಗದು ಬಹಮಾನ ನೀಡಿದರು. ೧೮೯೨-೯೩ ರಲ್ಲಿ ಪೊಲೀಸರು ಡಕಾಯತಿ ಪತ್ತೆ ಮಾಡಿದ್ದಕ್ಕಾಗಿ ಬೆಳ್ಳಿಯ ಪದಕವನ್ನು ದ.ಕ ಜಿಲ್ಲೆಯ ಕೊಲ್ಲೂರು ಪೊಲೀಸ್ ಠಾಣೆಯ ಹೆಡ್‌ಕಾನ್ಸ್‌ಟೇಬಲ್ 'ಶೇಖ್ ಹೈದರ್' ರವರಿಗೆ ರಾಜಶ್ರೀಯವರಿಂದ (Hermajesty) ಬಹುಮಾನ ನೀಡಲ್ಪಟ್ಟಿತು. ಪೆನುಗೊಂಡ ತಾಲೂಕಿನ ಇನ್ಸ್‌ಪೆಕ್ಟರ್‌ರವರಾದ ಸಿ.ಸುಬ್ಬರಾಯಲು ಚೆಟ್ಟಿರವರಿಗೆ ೮೦ ರೂಪಾಯಿ ಬೆಲೆಬಾಳುವ ಖಡ್ಗವನ್ನು ಬಹುಮಾನವಾಗಿ ನೀಡಲಾಯಿತು. ಪದಮೂರ್ತಿ (Padmurti) ಠಾಣೆಯ ಪಟೇಲ್ ವೆಂಕಪ್ಪರೆಡ್ಡಿಗೆ ೫೦ ರೂಪಾಯಿ ಬೆಲೆಬಾಳುವ ಚಿನ್ನದಪದಕ, ಹೆಡ್‌ಕಾನ್ಸ್‌ಟೇಬಲ್ ಬಾಬಾಸಾಬ್‌ಗೆ ರೂ. ೨೦ ನಗದು ಬಹುಮಾನ ನೀಡಲಾಯಿತು. ೧೮೯೩-೯೪ ರಲ್ಲಿ ಸಿಪಾಯಿಯೊಬ್ಬನನ್ನು ನಿರಾಯುಧನನ್ನಾಗಿ ಮಾಡಿ, ಆತನನ್ನು ಕೊಂದು ನರಹತ್ಯೆ ಮಾಡಿ

ಖಡ್ಗದೊಂದಿಗೆ ಪರಾರಿಯಾದವನನ್ನು ಅತ್ಯಂತ ಶೌರ್ಯದಿಂದ ಬಂಧಿಸಿದ ಒಬ್ಬ ಪೊಲೀಸ್ ಸಿಬ್ಬಂದಿ ಮತ್ತು ೩ ಜನ ಖಾಸಗಿ ವ್ಯಕ್ತಿಗಳಿಗೆ ನಗದು ಬಹುಮಾನ ನೀಡಲಾಯಿತು.[೧೫೦] ಮೈಸೂರು ನಗರ ಪೊಲೀಸರಲ್ಲಿ ಕೆಲವರಿಗೆ ಕಾಲರರೋಗ ತಡೆಯಲು ಮಾಡಿದ ಪ್ರಯತ್ನಕ್ಕೆ ಬಹುಮಾನ ನೀಡಲಾಯಿತು. ಕೊಲಾರ ಗೋಲ್ಡ್‌ಫೀಲ್ಡಿನಲ್ಲಿ ಕೆಲವು ಜನ ಪೊಲೀಸರಿಗೆ ಬುದ್ಧಿವಂತಿಕೆಯಿಂದ, ಬಂಗಾರದ ಅದಿರು ಕಳ್ಳತನವನ್ನು ಪತ್ತೆ ಮಾಡಿದ್ದಕ್ಕೆ ಬಹುಮಾನ ನೀಡಲಾಯಿತು. ೧೮೯೪-೯೫ ರಲ್ಲಿ ಹಾಸನ ತಾಲೂಕಿನ ಹಳ್ಳಿಯೊಂದರಲ್ಲಿ ವ್ಯಕ್ತಿಯೊಬ್ಬನಿಗೆ ವಿಷಪ್ರಾಶನ ಮಾಡಿಸಿ ಕೊಲೆ ಮಾಡಿದ ಪ್ರಕರಣವನ್ನು ಪತ್ತೆಹಚ್ಚಲು ಸ್ಥಳೀಯ ಪೊಲೀಸರೊಂದಿಗೆ ಸಹಕರಿಸಿದ 'ಶಾನುಭೋಗ' ಮತ್ತು 'ಪಟೇಲ'ರಿಗೆ ತಲಾ ೧೦ ರೂ ಬೆಲೆಬಾಳುವ 'ಕಡಗ'ವನ್ನು ಬಹುಮಾನವಾಗಿ ನೀಡಲಾಯಿತು.[೧೫೧] ಪೊಲೀಸರಿಗೆ ವಿವಿಧ ಪ್ರಕರಣಗಳನ್ನು ಪತ್ತೆಹಚ್ಚಲು ನೆರವು ನೀಡಿದ ಸ್ಥಳೀಯ ನಾಗರಿಕರಿಗೆ ನೀಡಿದ ನಗದು ಬಹುಮಾನಗಳ ವಿವರ ಈ ರೀತಿ ಇದೆ. ೧೮೯೨-೯೩ ರಲ್ಲಿ ೧೬೯ ಜನರಿಗೆ ರೂ. ೯೪೩, ೧೮೯೩-೯೪ ರಲ್ಲಿ ೧೨೬ ಜನರಿಗೆ ರೂ. ೫೯೧, ೧೮೯೪-೯೫ ರಲ್ಲಿ ೧೧೩ ಜನರಿಗೆ ರೂ. ೫೨೫[೧೫೨] ಬಹುಮಾನವಾಗಿ ನೀಡಲಾಯಿತು. ಬಹುಮಾನ ನೀಡಿದ ಇನ್ನು ಕೆಲವು ಪ್ರಮುಖ ಘಟನೆಗಳೆಂದರೆ, ೧೮೯೧ ರಲ್ಲಿ ಮೈಸೂರು ಜಿಲ್ಲೆಯಲ್ಲಿ ಒಂದು ಡಕಾಯಿತಿ ತಂಡವನ್ನು ಅತ್ಯಂತ ಶೌರ್ಯದಿಂದ ಹಿಡಿಯಲು ಯಶಸ್ವಿಯಾದ ರೈತನೊಬ್ಬನಿಗೆ ಸೂಕ್ತ ಸಮ್ಮಾನ ಪತ್ರದೊಂದಿಗೆ ಕೈಗೆ ಬೆಳ್ಳಿಯ ಕಡಗವನ್ನು ಬಹುಮಾನವಾಗಿ ನೀಡಲಾಯಿತು. ಖೋಟಾ ನಾಣ್ಯಗಳನ್ನು ಮುದ್ರಿಸುವ ಒಂದು ತಂಡದ ಬಗ್ಗೆ ಉಪಯುಕ್ತ ಗುಪ್ತ ಮಾಹಿತಿಗಳನ್ನು ಸಂಗ್ರಹಿಸಿ ಅದನ್ನು ಪತ್ತೆ ಮಾಡಲು ಸಹಕರಿಸಿದ ಕಾಂದಹಾರಿ ಮಹಮ್ಮದ್ ಸಾಬಾನ್‌ಗೆ ೫೦ ರೂಪಾಯಿ ನಗದು ಬಹುಮಾನ ನೀಡಲಾಯಿತು. ೧೮೯೩-೯೪ ರಲ್ಲಿ ಮರಾಠ ಮಹಿಳೆಯೊಬ್ಬಳು ಪ್ರಯಾಣಿಸುತ್ತಿದ್ದಾಗ ಆಕೆಯ ಮೇಲೆ ರಾಬರಿ ಮಾಡಲು ದಾಳಿ ಮಾಡಿದ ಲಂಬಾಣಿಯೊಬ್ಬನನ್ನು ಕೊಂದು ಹಾಕಿದ್ದಕ್ಕಾಗಿ ೨೦ ರೂ.ಬೆಲೆಬಾಳುವ ಬೆಳ್ಳಿಯ ಕಡಗವನ್ನು ಬಹುಮಾನವಾಗಿ ನೀಡಲಾಯಿತು. ೧೮೯೪-೯೫ ರಲ್ಲಿ ಮೈಸೂರು ಜಿಲ್ಲೆಯ ಬೀಚನಹಳ್ಳಿ ಪೊಲೀಸ್ ಠಾಣೆಯ ಸೀತಾರಾಮಯ್ಯರವರಿಗೆ ಕೊಲೆ ಪ್ರಕರಣವನ್ನು ಪತ್ತೆ ಮಾಡಿದಕ್ಕಾಗಿ ರೂ. ೫೦ ನಗದು ಬಹುಮಾನ ನೀಡಿದ್ದರು. ಈ ಪ್ರಕರಣದಲ್ಲಿ ಆರೋಪಿಯು ಮೂರು ವರ್ಷಗಳಿಂದ ಪೊಲೀಸರಿಗೆ ಸಿಗದೇ ತಲೆಮರೆಸಿಕೊಂಡಿದ್ದ ಇದೇ ಮೈಸೂರು ಜಿಲ್ಲೆ ಪೊಲೀಸ್ ಕಛೇರಿಯ ಮ್ಯಾನೇಜರ್‌ರಾಗಿದ್ದ ಕೃಷ್ಣ ಗೌಡರವರಿಗೆ ಒಂದು ಬೆಳ್ಳಿಯ ಪದಕ ಹಾಗೂ ರೂ.೧೦ ಬಹುಮಾನವನ್ನು ಕಳ್ಳತನ ಪ್ರಕರಣದ ಪತ್ತೆಗೆ ಸಹಾಯ ಮಾಡಿದಕ್ಕಾಗಿ ನೀಡಿದ್ದರು.[೧೫೩] ೧೯೦೪-೦೫ ರಲ್ಲಿ ಸ್ಥಳೀಯ ಸರ್ಕಾರದಿಂದ ಒಬ್ಬ ಸಿಬ್ಬಂದಿಗೆ ಬಹುಮಾನ ನೀಡಿದರೆ, ಒಬ್ಬನಿಗೆ (ಮಿಲಿಟರಿ ಅಥಾರಿಟಿಯಿಂದ ತಪ್ಪಿಸಿಕೊಂಡು ಹೋದವರನ್ನು ದಸ್ತಗಿರಿ ಮಾಡಿದ್ದಕ್ಕೆ) ಬಹುಮಾನ ನೀಡಿತು. ೩ ಜನರಿಗೆ ಮೈಸೂರು ಸರ್ಕಾರದಿಂದ, ೨ ಜನರಿಗೆ ಸ್ಥಳೀಯ ನಾಗರೀಕರಿಂದ ಬಹುಮಾನ ನೀಡಲಾಯಿತು. ೯೧ ಸಿಬ್ಬಂದಿ ಪದೋನ್ನತಿ ಪಡೆದರು.[೧೫೪] ೧೯೧೩-೧೪ ರಲ್ಲಿ ಬಹುಮಾನ ಪಡೆದ ಸಿಬ್ಬಂದಿ ಹಾಗೂ ಅಧಿಕಾರಿಯವರ ವಿವರ ಈ ಕೆಳಗಿದೆ.[೧೫೫]

	ಅಧಿಕಾರಿ	ಸಿಬ್ಬಂದಿ	ರೂ	ಎ	ಪಿ
ಸ್ಥಳೀಯ ಮತ್ತು ಸಿವಿಲ್ ಇಲಾಖೆಗಳಿಂದ ಬಹುಮಾನ ಪಡೆದವರು	೨೫	೪೮	೪೪೪	೧೦	೧೧
ಖಾಸಗಿ ವ್ಯಕ್ತಿಗಳಿಂದ ಬಹುಮಾನ ಪಡೆದವರು	೪	೧೩	೨೫	೦	೦
ಮೈಸೂರು ಸರಕಾರದಿಂದ ಬಹುಮಾನ ಪಡೆದವರು	೩	–	೩೫	೦	೦
ಕೊಡಗು ಸರಕಾರದಿಂದ ಬಹುಮಾನ ಪಡೆದವರು	೧	–	೧೦	೦	೦
ಮಿಲಿಟರಿ ಇಲಾಖೆಯಿಂದ ಬಹುಮಾನ ಪಡೆದವರು	೩	೧	೨೫	೦	೦
ಒಟ್ಟು	೩೬	೬೨	೫೩೯	೧೦	೧೧

ಈ ನಗದು ಬಹುಮಾನಗಳ ಜೊತೆಗೆ ೯ ಜನ ಅಧಿಕಾರಿಗಳು ಮತ್ತು ೧೩ ಜನ ಸಿಬ್ಬಂದಿಗಳ ಉತ್ತಮ ಸೇವಾ ನಮೂದಾತಿ **(Good Service entries)** ಪಡೆದರು.

೧೯೧೪–೧೫ ರಲ್ಲಿ ಬಹುಮಾನ ಪಡೆದ ಸಿಬ್ಬಂದಿಯವರ ವಿವರ [೧೫೬]

ಕ್ರಸಂ	ಜಾತಿ	ಅಧಿಕಾರಿ	ಸಿಬ್ಬಂದಿ	ರೂ	ಎ	ಪಿ
೧	ಪೊಲೀಸ್ ಇಲಾಖೆಯಿಂದ ಬಹುಮಾನ ಪಡೆದವರು	೨೦	೫೦	೧೪೨	೮	೦
೨	ಖಾಸಗಿ ವ್ಯಕ್ತಿಗಳಿಂದ ಬಹುಮಾನ ಪಡೆದವರು	೧೧	೪	೧೧೫	೦	೦
೩	ಮಿಲಿಟರಿ ಅಧಿಕಾರಿಗಳಿಂದ ಬಹುಮಾನ ಪಡೆದವರು	೨	–	೨೫	೦	೦
	ಒಟ್ಟು			೨೮೨	೮	೦

೧೯೧೫–೧೬ ರಲ್ಲಿ ಬಹುಮಾನ ಪಡೆದವರ ವಿವರ

	ಅಧಿಕಾರಿ	ಸಿಬ್ಬಂದಿ	ರೂ	ಎ	ಪಿ
ಸ್ಥಳೀಯ ಮತ್ತು ಸಿವಿಲ್ ಇಲಾಖೆಗಳಿಂದ ಬಹುಮಾನ ಪಡೆದವರು	೨೬	೪೭	೨೪೪	೧೪	೮
ಬಂಗಾಳ ಸರಕಾರದಿಂದ ಬಹುಮಾನ ಪಡೆದವರು	೧	–	೫೦	–	–
ಮಿಲಿಟರಿ ಇಲಾಖೆಯಿಂದ ಬಹುಮಾನ ಪಡೆದವರು	೭	೫	೧೦೦	–	–
ಖಾಸಗಿ ವ್ಯಕ್ತಿಗಳಿಂದ ಬಹುಮಾನ ಪಡೆದವರು	೯	೫	೧೧೦	–	–
ಒಟ್ಟು	೪೩	೫೭	೫೦೪	೧೪	೮

ಇದರ ಜೊತೆಗೆ ೨೪ ಜನ ಅಧಿಕಾರಿಗಳ, ೯ ಜನ ಸಿಬ್ಬಂದಿ ಉತ್ತಮ ಸೇವಾ ನಮೂದಾತಿ ಪಡೆದರು.[೧೫೭]

೧೯೨೨–೨೩ ರಲ್ಲಿ

	ಅಧಿಕಾರಿ	ಸಿಬ್ಬಂದಿ	ರೂ	ಎ	ಪಿ
ನ್ಯಾಯಾಲಯದಿಂದ ಬಹುಮಾನ ಪಡೆದವರು	೩೦	೩೧	೩೬೫	೦	೦
ಕೆಲಸಕ್ಕೆ ಗೈರುಹಾಜರಾಗಿ ಓಡಿ ಹೋದ ಸೇನಾ ಸಿಬ್ಬಂದಿಯನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಸೇನೆಯಿಂದ ಬಹುಮಾನ ಪಡೆದವರು	೧	೧	೨೦	೦	೦
ಖಾಸಗಿ ವ್ಯಕ್ತಿಗಳಿಂದ ಬಹುಮಾನ ಪಡೆದವರು	–	೩	೧೫	೦	೦
ಒಟ್ಟು	೩೧	೩೫	೪೦೦	೦	೦

ಈ ವರ್ಷ ೬೫೨ –೮–೦ ರೂಗಳನ್ನು ಬಹುಮಾನ ನೀಡಲು ಸರ್ಕಾರದಿಂದ ಖರ್ಚು ಮಾಡಲಾಯಿತು. ಕಳೆದ ವರ್ಷ ಇದು ರೂ. ೮೬೩ ಆಗಿತ್ತು.

ಬಹುಮಾನ	ರೂ	ಎ	ಪಿ
ಇನ್ಸ್‌ಪೆಕ್ಟರ್‌ಗಳು	೫೦	೦	೦
ಸಾರ್ಜೆಂಟ್‌ಗಳು	೩೦	೦	೦
ಸಬ್–ಇನ್ಸ್‌ಪೆಕ್ಟರ್‌ಗಳು	೧೧೧	೦	೦
ಹೆಡ್ ಕಾನ್ಸ್‌ಟೇಬಲ್‌ಗಳು	೧೦೦	೦	೦
ಪೊಲೀಸ್ ಕಾನ್ಸ್‌ಟೇಬಲ್‌ಗಳು	೩೦೨	೦	೦
ಮಾಹಿತಿದಾರರು ಮತ್ತು ಇತರ ಸರಕಾರಿ ನೌಕರರು	೫೯	೮	೦
ಒಟ್ಟು	೬೫೨	೮	೦

ಇದರ ಜೊತೆಗೆ ೧೬ ಜನ ಅಧಿಕಾರಿಗಳು ಮತ್ತು ಒಬ್ಬ ಪೊಲೀಸ್ ಕಾನ್ಸ್‌ಟೇಬಲ್ ಉತ್ತಮ ಸೇವಾ ನಮೂದಾತಿ ಪಡೆದರು.[೧೫೮]

೧೯೨೨–೨೩ ರಲ್ಲಿ ೩ ಜನ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಬಹುಮಾನವಾಗಿ ಪದೋನ್ನತಿ ನೀಡಲಾಯಿತು. ೧೯೨೧–೨೨ ರಲ್ಲಿಯೂ ಈ ಸಂಖ್ಯೆ ೩ ಆಗಿತ್ತು. ೨೬೦ ಜನ ಸಿಬ್ಬಂದಿಗೆ ನಗದು ಬಹುಮಾನ ನೀಡಿದ್ದರು. ಕಳೆದ ವರ್ಷ ೧೯೨೧–೨೨ ರಲ್ಲಿ ೨೩೪ ಜನರಿಗೆ ನೀಡಲಾಗಿತ್ತು. ಒಟ್ಟು ೨.೪೮೯–೮–೦ ರೂ ಬಹುಮಾನ ನೀಡಿದ್ದರೆ ಕಳೆದ ವರ್ಷ ೨,೨೯ ರೂ ಆಗಿತ್ತು. ಕಡೂರು ಜಿಲ್ಲೆಯ ಒಬ್ಬ ಜಮಾದಾರರಿಗೆ ಮತ್ತು ಬೆಂಗಳೂರು ಜಿಲ್ಲೆಯ ಒಬ್ಬ ಇನ್ಸ್‌ಪೆಕ್ಟರ್‌ರವರಿಗೆ ಉತ್ತಮ ಕಾರ್ಯಮಾಡಿದಿದ್ದಕ್ಕಾಗಿ ೨೦ ರೂ. ನಗದು ಮತ್ತು ೩೦ ರೂ. ಬೆಲೆಯ

ವಾಚನ್ನು ಸೇಲಂ ಪೊಲೀಸರು ಬಹುಮಾನವಾಗಿ ನೀಡಿದ್ದರು.ಅದೇ ವರ್ಷದಲ್ಲಿ ಕಳ್ಳತನವಾದ ಹಳೆಯ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆಹಚ್ಚಿ ಕಳವು ಮಾಲು ವಶಪಡಿಸಿಕೊಳ್ಳಲು ನೆರವಾದ ಮೈಸೂರು ಜಿಲ್ಲೆಯ ಮೂರು ಜನ 'ತೋಟಿ'ಗಳಿಗೆ ಬಹುಮಾನ ನೀಡಲಾಯಿತು.[೧೫೯] ೧೯೨೩–೨೪ರಲ್ಲಿ ಒಟ್ಟು ೧೪೯೮/– ರೂಪಾಯಿ ಬಹುಮಾನವನ್ನು ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ನೀಡಲಾಯಿತು. ಇದು ೧೯೨೨–೨೩ ರಲ್ಲಿ ೨೪೯೬/– ರೂಪಾಯಿ ಇತ್ತು. ವೆಲ್ಲೂರು, ಚಿತ್ತೂರು ಮತ್ತು ಧಾರವಾಡಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ೧ ಇನ್ಸ್‌ಪೆಕ್ಟರ್, ೧ ದಫೇದಾರ, ೮ ಕಾನ್ಸ್‌ಟೇಬಲ್‌ಗಳಿಗೆ ೧೩೧/– ರೂಪಾಯಿಗಳ ಬಹುಮಾನ ನೀಡಲಾಯಿತು.[೧೬೦] ೧೯೨೪–೨೫ ರಲ್ಲಿ ೧೭೪೮ ರೂಗಳನ್ನು ಬಹುಮಾನವಾಗಿ ನೀಡಲು ಮಂಜೂರಾಯಿತು. ಇದು ೧೪೯೭ ಆಗಿತ್ತು. ಇದರಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ೭೫೨–೮–೦ ರೂಗಳನ್ನು ಬಹುಮಾನವಾಗಿ ನೀಡಲಾಯಿತು. ಕಳೆದ ವರ್ಷ ಇದು ೧,೦೧೬ ರೂ ಆಗಿತ್ತು.[೧೬೧] ೧೯೨೬–೨೭ ರಲ್ಲಿ ಬಹುಮಾನ ನೀಡಲು ಮಂಜೂರಾದ ಹಣ ೨,೦೩೭ ರೂ. ೧೯೨೫–೨೬ ಇದು ರೂ. ೧,೦೦೧ ಆಗಿತ್ತು. ಇದರಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ನೀಡಲಾದ ಬಹುಮಾನದ ಮೊತ್ತ ೧,೦೫೪ ರೂ. (ಕಳೆದ ವರ್ಷ ಇದು ರೂ. ೬೬೩ ಆಗಿತ್ತು) ಈ ಹಣ ಸರ್ಕಾರದ ಬಜೆಟ್‌ನಿಂದ ಮಂಜೂರಾದರೆ ಉಳಿದ ೯೮೩ ರೂಪಾಯಿಗಳು ಸರ್ಕಾರದ ಇತರ ಇಲಾಖೆಗಳಿಂದ ಮತ್ತು ಖಾಸಗಿ ವ್ಯಕ್ತಿಗಳಿಂದ ನೀಡಲ್ಪಟ್ಟಿತ್ತು. ಮತ್ತು ೪೩೮ ರೂಪಾಯಿಗಳನ್ನು ೩ ಜನ ಬ್ರಿಟೀಷ್ ಅಧಿಕಾರಿಗಳಿಗೂ ಮತ್ತು ೬೪ ಖಾಸಗಿ ವ್ಯಕ್ತಿಗಳಿಗೂ ನೀಡಲಾಯಿತು. ೧೨ ಜನ ಅಧಿಕಾರಿಗಳು ಮತ್ತು ೭೭ ಕಾನ್ಸ್‌ಟೇಬಲ್‌ಗಳನ್ನು ಅರೆಸರಕಾರಿ ಕೆಲಸದ ಮೇರೆಗೆ ಖಾಸಗಿ ವ್ಯಕ್ತಿಗಳ ಮತ್ತು ವಿವಿಧ ಸಂಘಸಂಸ್ಥೆ ಮತ್ತು ಇತರ ಇಲಾಖೆಗಳ ರಕ್ಷಣೆಗೆ ಹಣ ಪಡೆದು ನೀಡಲಾಗಿತ್ತು. ೧೯೨೫–೨೬ ರಲ್ಲಿ ಇದು ೧೩ ಅಧಿಕಾರಿ ಮತ್ತು ೪೯ ಸಿಬ್ಬಂದಿ ಆಗಿತ್ತು.[೧೬೨]

೧೯೨೯ ರಿಂದ ೩೧ ರವರೆಗೆ ನೀಡಿದ ಬಹುಮಾನಗಳ ವಿವರ[೧೬೩]

	ಪೊಲೀಸ್ ಅಧಿಕಾರಿಗಳಿಗೆ ಬಹುಮಾನ				ಗ್ರಾಮಾಧಿಕಾರಿಗಳನ್ನು ಒಳಗೊಂಡಂತೆ ಸಾರ್ವಜನಿಕರಿಗೆ			
	೧೯೨೯–೩೦		೧೯೩೦–೩೧		೧೯೨೯–೩೦		೧೯೩೦–೩೧	
	ಒಟ್ಟು ಜನ	ಮೊತ್ತ	ಒಟ್ಟು ಜನ	ಮೊತ್ತ	ಒಟ್ಟು ಜನ	ಮೊತ್ತ	ಒಟ್ಟು ಜನ	ಮೊತ್ತ
ಬೆಂಗಳೂರು ನಗರ	೪೨	೪೩೩	೧೨೮	೧೩೦೬–೦–೦	–	–	೯	೧೨೨–೦–೦
ಮೈಸೂರು ನಗರ	೧೫	೧೮೫	೪೪	೮೦೮–೦–೦	–	–	–	–
ಕೆ.ಜಿ.ಎಫ್	೬೬	೨೩೭	೬೩	೨೯೧–೮–೦	೫	೨೦–೦–೦	೨೦	೯೬–೮–೦
ಜಿಲ್ಲೆಗಳು / ಸಿಐಡಿ	೧೭೯	೧೬೦೪	೨೪೪	೨೪೩೪–೦–೦	೪೦	೩೧೮–೮–೦	೫೨	೩೮೧–೦–೦
ಒಟ್ಟು	೩೦೨	೨೪೫೯	೪೭೯	೪೮೩೯–೮–೦	೪೫	೩೮೮–೮–೦	೮೧	೫೯೯–೮–೦

೧೯೪೧–೪೨ರಲ್ಲಿ ೮,೦೬೬/– ರೂಪಾಯಿಗಳನ್ನು ಬಹುಮಾನವಾಗಿ ನೀಡಲಾಯಿತು.[೧೬೪]

೧೯೪೫–೪೬ ರಲ್ಲಿ ಪೊಲೀಸ್ ಅಧಿಕಾರಿಗಳಿಗೆ ೧೭,೪೭೦ ರೂ ಹಾಗೂ ಸಿಬ್ಬಂದಿಗೆ ೧೨,೬೦೧ ರೂಪಾಯಿ ಬಹುಮಾನ ನೀಡಲಾಯಿತು. ರೂ. ೧,೧೭೮ ನ್ನು ಖಾಸಗಿ ವ್ಯಕ್ತಿಗಳಿಗೆ ಬಹುಮಾನವಾಗಿ ನೀಡಲಾಯಿತು. ಇವರು Fire fighting unit ಕಂಟೋನ್‌ಮೆಂಟ್ ಅಗ್ನಿಶಾಮಕ ದಳದೊಂದಿಗೆ ಸೇರಿ ೬ ಅಗ್ನಿ ಆನಾಹುತಗಳನ್ನು ನಂದಿಸಿ ಅಪಾರ ಪ್ರಮಾಣದ ಆಸ್ತಿ ರಕ್ಷಿಸಿದರು.[೧೬೫]

ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಪೊಲೀಸರಿಗೆ ನೀಡುತ್ತಿದ್ದ ಶಿಕ್ಷೆಯ ಪ್ರಮಾಣಕ್ಕಿಂತ ಬಹುಮಾನದ ಪ್ರಮಾಣವು ಅತ್ಯಂತ ಕಡಿಮೆಯಾಗಿತ್ತು. ಪೊಲೀಸರು ತಪ್ಪುಮಾಡಿದಾಗ ದಂಡಿಸುವುದು ಎಷ್ಟು ಮುಖ್ಯವೋ, ಅವರು ಒಳ್ಳೆಯ ಕೆಲಸ ಮಾಡಿದಾಗ ಅವರನ್ನು ಪ್ರಶಂಶಿಸಿ ಬಹುಮಾನಗಳನ್ನು ನೀಡುವುದೂ ಸಹ ಅಷ್ಟೇ

ಮುಖ್ಯ. ಆದರೆ ನಿರಂತರವಾಗಿ ಬಹುಮಾನ ನೀಡುತ್ತಿದ್ದ ಸಂಖ್ಯೆ ಮತ್ತು ಮೊತ್ತ ಎರಡೂ ಅತ್ಯಂತ ಕಡಿಮೆಯಾಗಿರುವುದನ್ನು ಗಮನಿಸಬಹುದು. ಇದರಿಂದ ಪೊಲೀಸರನ್ನು ಪ್ರೋತ್ಸಾಹಿಸುವ ಮತ್ತು ಒಳ್ಳೆಯ ಕೆಲಸಗಳಿಗೆ ಅವರನ್ನು ಉತ್ತೇಜಿಸುವ ಕೆಲಸ ಸಮರ್ಪಕವಾಗಿ ನಡೆಯುತ್ತಿರಲಿಲ್ಲವೆಂದೇ ಹೇಳಬೇಕು.

೭. ೧೭:- ಸಂಜ್ಞೆಯ ಅಪರಾಧಗಳು

ಸಂಜ್ಞೆಯ ಅಪರಾಧವೆಂದರೆ, ಒಬ್ಬ ಪೊಲೀಸ್ ಅಧಿಕಾರಿ ದಂಡ ಪ್ರಕಿಯಾ ಸಂಹಿತೆಯ ಮೊದಲನೇ ಶೆಡ್ಯೂಲ್‌ನಲ್ಲಿ ಅಥವಾ ಇನ್ನಾವುದೇ ಪ್ರಚಲಿತ ಕಾನೂನಿನ ಅಡಿಯಲ್ಲಿ ವ್ಯಕ್ತಿಯೊಬ್ಬನನ್ನು ವಾರಂಟು ಇಲ್ಲದೇ ದಸ್ತಗಿರಿ ಮಾಡಬಹುದೋ ಅಂತಹ ಅಪರಾಧಗಳನ್ನು ಸಂಜ್ಞೆಯ ಅಪರಾಧಗಳೆಂದು ಕರೆಯಲಾಗುತ್ತದೆ. ೧೯೦೫ ರಲ್ಲಿ ಭಾರತೀಯ ಪೊಲೀಸ್ ಕಮಿಷನ್‌ನ ಸೂಚನೆಗಳ ಮೇರೆಗೆ ಜಿಲ್ಲಾಮಟ್ಟದಲ್ಲಿದ್ದ ತನಿಖಾ ಕೇಂದ್ರಗಳನ್ನು ಪುನರ್ ಹಂಚಿಕೆ ಕಾರ್ಯವನ್ನು ಪ್ರಾರಂಭಿಸಲಾಯಿತು. ಆಯೋಗವು ತನ್ನ ವರದಿಯಲ್ಲಿ ಸಂಜ್ಞೆಯ ಅಪರಾಧಗಳ ತನಿಖೆಯ ಬಗ್ಗೆ ಒತ್ತಿ ಹೇಳಿತ್ತು. ಸಂಜ್ಞೆಯ ಅಪರಾಧಗಳಾಗಿ ತನಿಖೆಯನ್ನು ಮಾಸಿಕ ೨೫ ರೂ ಕಡಿಮೆ ಸಂಬಳ ಪಡೆಯುವ ಪೊಲೀಸ್ ಅಧಿಕಾರಿಗಳು ಮಾಡಬಾರದೆಂದು ಉದ್ದೇಶಹೊಂದಿತ್ತು. ಆಯೋಗವು ತಿಂಗಳಿಗೆ ೫೦ ರೂ ಸಂಬಳ ಪಡೆಯುವ ಅರ್ಹಕ್ಕಿಂತ ಹೆಚ್ಚಿಗೆ ಸಂಬಳ ಪಡೆಯುವ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಠಾಣಾ ಉಸ್ತುವಾರಿಗೆ ನೇಮಿಸಬೇಕೆಂದು ಸೂಚಿಸಿತು. ಅಂದಿನ ಐ.ಜಿ.ಪಿಯಾಗಿದ್ದ ಎಫ್.ಇ.ಸಿ ಕಾರ್‌ರವರು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುವಂತಹ ಆಯೋಗದ ಶಿಪಾರಸ್ಸುಗಳನ್ನು ಜಾರಿಗೆ ತರುವ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಹಾಗೂ ಅವರು ಜಮೇದಾರ್ ಅಥವಾ ಮುಖ್ಯ ಪೇದೆಗಳಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳು ಸಂಜ್ಞೆಯ ಅಪರಾಧಗಳನ್ನು ತನಿಖೆ ಮಾಡಲು ಅಧಿಕಾರ ಹೊಂದಿಲ್ಲ ಎಂದು ಆದೇಶಿಸಿದರು.

ಐ.ಜಿ.ಪಿ ಎಫ್.ಇ.ಐ ಖಾರ್‌ರವರು ಶಿವಮೊಗ್ಗ ಜಿಲ್ಲೆಯ ಪೊಲೀಸ್ ಪಡೆಯ ಪುನರ್‌ಸಂಘಟನೆಗೆ ಮತ್ತು ಮರುಹಂಚಿಕೆ ಬಗ್ಗೆ ಒಂದು ಪ್ರಸ್ಥಾವನೆಯನ್ನು ಹೊರಡಿಸಿದರು. ಜಮೇದಾರ್ ಹಾಗೂ ಮುಖ್ಯ ಪೇದೆಗಿಂತ ಕಡಿಮೆ ದರ್ಜೆಯ ಅಧಿಕಾರಿಯು ತನಿಖೆ ಕಾರ್ಯ ಮಾಡುವಂತಿಲ್ಲ ಎಂದು ಆದೇಶಿಸಿದರು. ಆದರೆ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಉಪಠಾಣೆಯ ಪ್ರಭಾರ ಹೊಂದಿದ ಹಿರಿಯ ಸಾರ್ಜೆಂಟ್ ಅಥವಾ ದಫೇದಾರರುಗಳಿಗೆ ದೂರುಗಳನ್ನು ಮುಂದಿನ ಕ್ರಮದ ಬಗ್ಗೆ ರವಾನಿಸುವುದರೊಂದಿಗೆ ಶವಪಂಚನಾಮೆ ಮಾಡುವ ಅಧಿಕಾರ ನೀಡಲಾಯಿತು. ಅವರು ಗಳಿಗೆ ಸಂಜ್ಞೆಯ ಅಪರಾಧಗಳು ನಡೆದ ಬಗ್ಗೆ ಅದರ ವಿವರಗಳನ್ನು ಬರೆದ ಒಂದು ಪುಸ್ತಕ ತೆರೆಯಲು ಸೂಚಿಸಲಾಯಿತು. ಈ ಯೋಜನೆ ೧೯೦೫ ರಲ್ಲಿ ಶಿವಮೊಗ್ಗ ಜಿಲ್ಲೆಗೆ ಮಂಜೂರಾಯಿತು. ಈ ರೀತಿಯ ಯೋಜನೆಗಳು ಯಶಸ್ವಿಯಾಯಿತು. ಆದ್ದರಿಂದ ಈ ಯೋಜನೆಗಳನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲು ಪ್ರಸ್ತಾಪಿಸಲಾಯಿತು.[೧೬೬] ಈ ಸಂಜ್ಞೆಯ ಅಪರಾಧಗಳ ಅಂಕಿ ಅಂಶಗಳಿಂದ ಈ ಹಿಂದೆ ರಾಜ್ಯದಲ್ಲಿದ್ದ ಕಾನೂನು ಸುವ್ಯವಸ್ಥೆಯ ಸ್ಥಿತಿ ಮತ್ತು ಆ ಬಗ್ಗೆ ಪೊಲೀಸರು ತೆಗೆದುಕೊಂಡ ಕ್ರಮಗಳ ಬಗ್ಗೆ ತಿಳಿಯಬಹುದಾಗಿದೆ. ೧೮೮೭ –೮೮ ನೇ ಸಾಲಿನಲ್ಲಿ ಸೆಕ್ರೆಟರಿ ಮ್ಯಾಜಿಸ್ಟ್ರೇಟರಿಗೆ ನೇರವಾಗಿ ವರದಿಯಾದ ಮತ್ತು ಪೊಲೀಸರ ಮೂಲಕ ವರದಿಯಾದ ಸಂಜ್ಞೆಯ ಅಪರಾಧಗಳ ಪಟ್ಟಿ.

ವರ್ಗ	ಅಪರಾಧಗಳು	೧೮೮೭	೧೮೮೮	ಹೆಚ್ಚಳ	ಇಳಿಕೆ
I	ರಾಜ್ಯದ ವಿರುದ್ಧದ ಅಪರಾಧಗಳು ಸಾರ್ವಜನಿಕ ಶಾಂತಿ, ಭದ್ರತೆ, ನ್ಯಾಯದ ವಿರುದ್ಧದ ಅಪರಾಧಗಳು	೧೬	೨೯	೧೩	–
II	ಜನರ ಮೇಲೆ ನಡೆದ ಘೋರ ಅಪರಾಧಗಳು	೧೨೫	೧೪೦	೧೫	–
III	ಆಸ್ತಿಪಾಸ್ತಿ ಮೇಲೆ ನಡೆದ ಘೋರ ಅಪರಾಧಗಳು	೧೦೭	೫೫	–	೫೨

IV	ಜನರ ವಿರುದ್ಧ ನಡೆದ ಸಣ್ಣ ಅಪರಾಧಗಳು	೨೬	೨೯	೩	–
V	ಆಸ್ತಿಪಾಸ್ತಿ ವಿರುದ್ಧ ನಡೆದ ಸಣ್ಣ ಅಪರಾಧಗಳು	೪೨೦	೧೦೭	–	೧೩
VI	ಮೇಲೆ ಹೇಳಿದ ಅಪರಾದಗಳಲ್ಲದೇ ಇತರ ಅಪರಾಧಗಳು	೯೩	೯೫	೨	–
	ಒಟ್ಟು	೭೮೭	೭೮೫	೩೩	೬೫

ಕಲಂ: ೧೫೭ ಸಿಆರ್‌ಪಿಸಿ ಅನ್ವಯ ಸ್ಥಳೀಯ ತನಿಖೆ ಮಾಡದೇ ಮುಕ್ತಾಯಗೊಳಿಸಿದ ಪ್ರಕರಣಗಳು ೧೮೮೮ ರಲ್ಲಿ ೧೦೬, ೧೮೮೭ ರಲ್ಲಿ ೧೩೬ ಒಟ್ಟು ೬೦೪ ಸಂಜ್ಞೆಯ ಅಪರಾಧ ಪ್ರಕರಣಗಳಲ್ಲಿ ತೀರ್ಪು ನೀಡಿದ ಮ್ಯಾಜಿಸ್ಟ್ರೇಟರ್ (ನ್ಯಾಯಾಧೀಶರಿಗೆ ನೇರವಾಗಿವರದಿಯಾದ ಸಂಜ್ಞೆಯ ಪ್ರಕರಣಗಳು ಸೇರಿ) ೨೪೭ ಪ್ರಕರಣಗಳಲ್ಲಿ ಶಿಕ್ಷೆ ನೀಡಿದರು. ಈ ವರ್ಷದಲ್ಲಿ ದಾಖಲಾದ ಒಟ್ಟು ೭೫೫ ಪ್ರಕರಣಗಳಲ್ಲಿ ಪೊಲೀಸರು ೪೭೨ ಪ್ರಕರಣಗಳಲ್ಲಿ ತನಿಖೆ ನಡೆಸಿದ್ದರು. ಪೊಲೀಸರು ತನಿಖೆ ನಡೆಸಿದ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಕರಣಗಳು ೧೮೮೭ ರಲ್ಲಿ ೨೯.೧೫%, ೧೮೮೮ ರಲ್ಲಿ ೪೧.೧೦%. ನ್ಯಾಯಾಧೀಶರ ಆದೇಶದಂತೆ ದಾಖಲಾದ ಆ ಸಂಜ್ಞೆಯ ಅಪರಾಧಗಳನ್ನು ಪೊಲೀಸರು ತನಿಖೆ ನಡೆಸಿದ್ದು, ೧೮೮೮ ರಲ್ಲಿ ೪೫, ೧೮೮೭ ರಲ್ಲಿ ೬೪ ಪ್ರಕರಣಗಳು. ೧೮೮೭ ರ ಅಂತ್ಯದ ವೇಳೆಗೆ ೨೭ ಜನರು ನ್ಯಾಯಾಲಯದ ವಿಚಾರಣೆಯನ್ನು ಎದುರು ನೋಡುತ್ತಿದ್ದರು. ೧೮೮೮ ರಲ್ಲಿ ಪೊಲೀಸರು ೧,೦೧೦ ಜನರನ್ನು ಹಾಗೂ ೧೮೮೭ ರಲ್ಲಿ ೭೮೯ ಜನರನ್ನು ದಸ್ತಗಿರಿ ಮಾಡಿದ್ದರು. ಇದರಲ್ಲಿ ಇಬ್ಬರು ಮೃತಪಟ್ಟು ೧೫೬ ಜನರನ್ನು ಮ್ಯಾಜಿಸ್ಟ್ರೇಟ್‌ರವರ ಮುಂದೆ ಹಾಜರುಪಡಿಸದೇ ಬಿಡುಗಡೆಗೊಳಿಸಲಾಗುತ್ತಿತ್ತು. ೧೮೮೮ ರಲ್ಲಿ ಪೊಲೀಸರಿಂದ ವಿಚಾರಣೆಗಾಗಿ ಕಳಿಸಿದ ಒಟ್ಟು ೩೧೨ ಜನರಲ್ಲಿ ೩೬.೬೨% ಜನರಿಗೆ, ೧೮೮೭ ರಲ್ಲಿ ೨೭೦ ಜನರಲ್ಲಿ ೪೪.೯೫% ಜನರಿಗೆ ಶಿಕ್ಷೆಯಾಗಿತ್ತು.[೧೬೭] ೧೮೯೨-೯೩ ರಿಂದ ೧೯೦೧-೦೨ ರವರೆಗೆ ವಾರ್ಷಿಕ ಸರಾಸರಿ ೫,೯೧೨ ಪ್ರಕರಣಗಳು ದಾಖಲಾಗಿದ್ದವು. ಇದೇ ರೀತಿ ೧೯೦೨-೦೩ ರಲ್ಲಿ ೬,೦೦೯, ೧೯೦೩-೦೪ ರಲ್ಲಿ ೫,೧೨೮, ೧೯೦೪-೦೫ ರಲ್ಲಿ ೫೫೩೭, ೧೯೦೫-೦೬ ರಲ್ಲಿ ೬೮೯೧, ೧೯೦೬-೦೭ ರಲ್ಲಿ ೫೫೨೦ ಹಾಗೂ ೧೯೦೭-೦೮ ರಲ್ಲಿ ೫೨೭೯ ಪ್ರಕರಣಗಳು ದಾಖಲಾಗಿದ್ದು, ಕಳೆದ ೧೦ ವರ್ಷಗಳಲ್ಲಿ ವರದಿಯಾದ ಪ್ರಕರಣಗಳಿಗೆ ಹೋಲಿಸಿದರೆ ಇದು ಕಡಿಮೆ ಎಂದು ತೋರುತ್ತದೆ. ಇದರಲ್ಲಿ ೧೯೭೬ ಪ್ರಕರಣಗಳಿಗೆ ಶಿಕ್ಷೆ ಆದರೆ, ೮೮೯ ಪ್ರಕರಣಗಳು ಖುಲಾಸೆಗೊಂಡಿದ್ದವು.[೧೬೮]

೧೯೦೪-೦೫ ರಲ್ಲಿ ನೇರವಾಗಿ ಪೊಲೀಸರಿಗೆ ವರದಿಯಾದ ಮತ್ತು ಮ್ಯಾಜಿಸ್ಟ್ರೇಟರ ಮೂಲಕ ವರದಿ ಯಾದ ಸಂಜ್ಞೆಯ ಅಪರಾಧಗಳು ೧,೩೮೩. ೫೭ ಪ್ರಕರಣಗಳು ೧೯೦೩-೦೪ ರಲ್ಲಿ ವರದಿಯಾಗಿದ್ದು, ತನಿಖೆಗಾಗಿ ೧೯೦೪-೦೫ ರಲ್ಲಿ ಉಳಿದವಾಗಿದ್ದವು. ಒಟ್ಟು ಸಂಜ್ಞೆಯ ಅಪರಾಧಗಳ ಸಂಖ್ಯೆ ೧೪೪೦ ಆಗಿದ್ದವು. ಇದರಲ್ಲಿ ೧೪ ಪ್ರಕರಣಗಳನ್ನು ಬೇರೆ ಜಿಲ್ಲೆಗೆ ವರ್ಗಾಯಿಸಲಾಯಿತು. ಉಳಿದ ಪ್ರಕರಣಗಳಲ್ಲಿ ೬೯೦ ಐಪಿಸಿ ಪ್ರಕರಣಗಳಾದರೆ, ೭೩೬ ಕ್ಲಾಸ್ VI ರ ವಿಶೇಷ ಮತ್ತು ಸ್ಥಳೀಯ ಕಾಯ್ದೆಯ ಪ್ರಕರಣಗಳಾಗಿದ್ದವು. ಸಿಆರ್‌ಪಿಸಿಯ ಕಲಂ: ೧೫೭ ರ ಅನ್ವಯ ತನಿಖೆ ಮಾಡಲು ತಿರಸ್ಕರಿಸಿದ ಅಥವಾ ಸತ್ಯಕ್ಕೆ ದೂರವಾದ ಸುಳ್ಳು ಪ್ರಕರಣಗಳು ೨೨೭ ಆಗಿದ್ದವು. ಮತ್ತು ಎಲ್ಲಾ (ಕ್ಲಾಸ್) ವರ್ಗಗಳಲ್ಲಿ ಸತ್ಯವಾದ ಪ್ರಕರಣಗಳಾಗಿದ್ದವು.[೧೬೯]

೧೯೦೫-೦೬ ರಲ್ಲಿ ಸಂಜ್ಞೆಯ ಈ ಪ್ರಕರಣಗಳಲ್ಲಿ ಏರಿಕೆ ಮತ್ತು ಇಳಿಕೆ ಆಗಿರುವುದರ ಬಗ್ಗೆ ಜಿಲ್ಲಾವಾರು ವಿವರ ಇಲ್ಲಿದೆ.[೧೭೦]

ಜಿಲ್ಲೆ	ಏರಿಕೆ	ಇಳಿಕೆ	ಜಿಲ್ಲೆ	ಏರಿಕೆ	ಇಳಿಕೆ
ಬೆಂಗಳೂರು	೮೫	೫೯	ಕಡೂರು	೧೪೨	–
ಕೋಲಾರ	–	–	ಚಿತ್ರದುರ್ಗ	–	೨೩

ತುಮಕೂರು	೧೨೩	–	ಕೆ.ಜಿ.ಎಫ್	೧೯೬	–
ಮೈಸೂರು	೩೦	–	ಬೆಂಗಳೂರು ನಗರ	–	೬೬
ಪ್ರೆಂಚರಾಕ್	೩೦	–	ಮೈಸೂರು ನಗರ	೨೨	–
ಹಾಸನ	–	೫೯	ರೈಲ್ವೆ	–	೧೦
ಶಿವಮೊಗ್ಗ	೧೩೩	–	ಒಟ್ಟು	೭೬೨	೨೧೭

೧೯೨೨-೨೩ ರಲ್ಲಿ ಒಟ್ಟು ಸಂಜ್ಞೆಯ ಅಪರಾಧಗಳ ಸಂಖ್ಯೆ ೬೫೨೬ ರಿಂದ ೬೪೧೦ ಕ್ಕೆ ಇಳಿಕೆಯಾಯಿತು. ಶಿವಮೊಗ್ಗ, ಮೈಸೂರು, ಚಿತ್ರದುರ್ಗ ಜಿಲ್ಲೆ ಹಾಗೂ ಪ್ರೆಂಚ್ ರಾಕ್‌ಗಳಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗಿತ್ತು. ೪,೪೯೭ ಬಾಕಿ ಇದ್ದ ಪ್ರಕರಣಗಳನ್ನು ಸೇರಿಸಿ ೧೦.೯೦೭ ಪ್ರಕರಣಗಳು ವರದಿಯಾಗಿದ್ದವು. ೧೯೨೧-೨೨ರಲ್ಲಿ ಇದು ೧೨.೦೫೫ ಆಗಿತ್ತು. ಇದರಲ್ಲಿ ನಾಲ್ಕು ಪ್ರಕರಣಗಳನ್ನು ಬ್ರಿಟೀಷ್ ಪೊಲೀಸ್ ತನಿಖೆಗೆ ವರ್ಗಾವಣೆ ನೀಡಿದ್ದರೆ, ೨೯೦ ಪ್ರಕರಣಗಳಲ್ಲಿ ತನಿಖೆಯನ್ನು ತಿರಸ್ಕರಿಸಲಾಗಿತ್ತು. ೧೫೧೬ ಪ್ರಕರಣಗಳಲ್ಲಿ ಮ್ಯಾಜಿಸ್ಟ್ರೇಟರಿಗೆ ಸುಳ್ಳು ಪ್ರಕರಣ ಅಥವಾ ಸಂಗತಿಯ ತಪ್ಪು ತಿಳುವಳಿಕೆಯಿಂದ (Mistake of fact) ಎಂದು ಅಥವಾ ಅಸಂಜ್ಞೆಯವೆಂದು ೧,೦೩೫ ಪ್ರಕರಣಗಳು ಪತ್ತೆಯಾಗಿಲ್ಲವೆಂದು ತೀರ್ಮಾನಿಸಿ ಹಿಂದಿರುಗಿಸಲಾಯಿತು. ೧೯೨೧-೨೨ರಲ್ಲಿ ೧೮೯೧ ಪ್ರಕರಣಗಳನ್ನು ಪತ್ತೆಯಾಗದೇ ಹಿಂದಿರುಗಿಸಲಾಗಿತ್ತು. ೮೭ ಪ್ರಕರಣಗಳನ್ನು ಹೊಡೆದು ಹಾಕಲಾಗಿತ್ತು. (Struck off) ೨೪ ಪ್ರಕರಣಗಳನ್ನು ಹಿಂಪಡೆಯಲಾಗಿತ್ತು. ೧೧೨ ಪ್ರಕರಣಗಳು ರಾಜಿಯಾಗಿದ್ದವು. ೭ ಪ್ರಕರಣಗಳು ಇತರೇ ರೀತಿ ವಿಲೇಆಗಿದ್ದವು. ಉಳಿದ ೭೮೩೨ ಪ್ರಕರಣಗಳಲ್ಲಿ ೨.೬.೮೧ ಪ್ರಕರಣಗಳಿಗೆ ಶಿಕ್ಷೆಯಾಗಿತ್ತು. ೧೨೫೫ ಪ್ರಕರಣಗಳು ಖುಲಾಸೆಗೊಂಡರೆ, ೩೮೯೬ ಪ್ರಕರಣಗಳು ವರ್ಷದ ಕೊನೆಯಲ್ಲಿ ಬಾಕಿ ಇದ್ದವು. ೧೨೪೮ ಪ್ರಕರಣಗಳಿಗೆ ದೋಷಾರೋಪಣ ಸಲ್ಲಿಸಿದರೆ, ೧೩೩೮ ಪ್ರಕರಣಗಳು ಸುಳ್ಳು ಪ್ರಕರಣಗಳಾಗಿದ್ದವು. ಮ್ಯಾಜಿಸ್ಟ್ರೇಟರ ಬಳಿ ಬಾಕಿ ಉಳಿದ ಪ್ರಕರಣಗಳು ಮತ್ತು ತನಿಖೆಗೆ ಪೊಲೀಸರ ಬಳಿ ಬಾಕಿ ಒಟ್ಟು ಪ್ರಕರಣಗಳು ೧,೪೬೭. ಸಂಜ್ಞೆಯ ಅಪರಾಧಗಳಲ್ಲಿ ಬಾಗಿಯಾದವರ ಸಂಖ್ಯೆ ೧೦.೦೪೦ ಇದರಲ್ಲಿ ೫೯೨೦ ಜನ ದಸ್ತಗಿರಿಯಾದರೆ ೭೩೦ ಜನರು ನೇರವಾಗಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗಿದ್ದರು. ೧೯೨೧-೨೨ ರಲ್ಲಿ ದಸ್ತಗಿರಿಯಾದವರ ಸಂಖ್ಯೆ ೧೧.೪೩೨ ಅದರಲ್ಲಿ ೬೫೪೦ ಜನ ದಸ್ತಗಿರಿಯಾಗಿದ್ದರೆ, ೪೮೯೨ ಜನ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗಿದ್ದರು. ಈ ೧೦,೦೪೦ ಜನರಲ್ಲಿ ೩,೫೩೫ ಜನರಿಗೆ ಶಿಕ್ಷೆಯಾದರೆ ೨,೮೯ ಜನರು ಖುಲಾಸೆ / ವಜಾಗೊಂಡಿದ್ದರು. ೮ ಜನರು ಮೃತಪಟ್ಟಿದರು. ೨೯೪ ಜನರು ಪೊಲೀಸರಿಂದ ಕಲಂ ೧೫೯ ಸಿಆರ್‌ಪಿಸಿ ಅನ್ವಯ ಬಿಡುಗಡೆಗೊಂಡಿದ್ದರು. ೧೨೭ ಜನರು ಮ್ಯಾಜಿಸ್ರ್ಟೇಟರು ವಿಚಾರಣೆಗೆ ಮುನ್ನ ಬಿಡುಗಡೆಗೊಳಿಸಿದ್ದರು. ೨೯೦೭ ಜನರು ಬಂಧನದಲ್ಲಿ ಇದ್ದರು.[೧೫]

೧೯೨೨-೨೩ ರಲ್ಲಿ ೫೫೮ ಸಂಜ್ಞೆಯ ಹಾಗೂ ೧೧ ಆಸಂಜ್ಞೆಯ ಅಪರಾಧಗಳು ನ್ಯಾಯಾಲಯದಿಂದ ಪೊಲೀಸರಿಗೆ ತನಿಖೆಗೆ ಬಂದಿದ್ದವು. ೧೯೨೧-೨೨ ರಲ್ಲಿ ಇದು ಅನಕ್ರಮವಾಗಿ ೫೮೭ ಮತ್ತು ೧೯ ಆಗಿತ್ತು. ಅತ್ಯಂತ ಹೆಚ್ಚು ಸಂಜ್ಞೆಯ ಅಪರಾಧಗಳು ನ್ಯಾಯಾಲಯದಿಂದ ತನಿಖೆಗೆ ಬಂದಿದ್ದು. ಕಡೂರು ಜಿಲ್ಲೆಯಲ್ಲಿ ೧೦೩ ಪ್ರಕರಣದಲ್ಲಿ ೮೮ ಪ್ರಕರಣ ನ್ಯಾಯಾಲಯದಿಂದ ತನಿಖೆಗೆ ನಿರ್ದೇಶಿತವಾದವು. ಅತ್ಯಂತ ಹೆಚ್ಚು ಸೆಷನ್ ಕೇಸುಗಳ ಪ್ರೆಂಚ್ ರಾಕ್ ಸರ್ಕಲ್‌ನಲ್ಲಿ ೧೪ ಮತ್ತು ೧೩ ಕೋಲಾರ ಜಿಲ್ಲೆಯಲ್ಲಿ ಆಗಿತ್ತು. (ಸೆಷನ್ ಕೇಸ್ ಎಂದರೆ ಸೆಷನ್ ನ್ಯಾಯಾಲಯದಿಂದ ವಿಚಾರಣೆಗೆ ಒಳಗಾಗುವಂತಹ ಪ್ರಕರಣಗಳು) [೧೬] *೧೯೨೨-೨೩ ರಿಂದ ೧೯೨೬-೨೭ರ ವರೆಗೆ ವರದಿಯಾದ ಸಂಜ್ಞೆಯ ಅಪರಾಧಗಳು ಮತ್ತು ಅವುಗಳ ಅಂತಿಮ ವಿಲೆಯ ಬಗ್ಗೆ ಅನುಬಂಧ ೩೪ ನೋಡಿರಿ.*

೧೯೨೨-೨೩ ರಲ್ಲಿ ೧೧೮೫ ಪ್ರಕರಣಗಳಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಲಾಯಿತು. ೧೧೫೨ ಪ್ರಕರಣಗಳು

ಸುಳ್ಳು ಮತ್ತು ಇತರ ರೀತಿಗಳಲ್ಲಿ ಮುಕ್ತಾಯಗೊಂಡವು. ೧೨೧೮ ಪ್ರಕರಣಗಳು ತನಿಖಾ ಹಂತದಲ್ಲಿ ಉಳಿದವು. ೧೯೨೧–೨೨ ಕ್ಕೆ ಹೋಲಿಸಿದರೆ ನ್ಯಾಯಾಲಯದಲ್ಲಿ ಮತ್ತು ಪೊಲೀಸರ ಬಳಿ ಬಾಕಿ ಉಳಿದ ಪ್ರಕರಣಗಳಲ್ಲಿ ಇಳಿಮುಖವಾಗಿತ್ತು. ಸಂಜ್ಞೆಯ ಅಪರಾಧಗಳಲ್ಲಿ ಭಾಗಿಯಾದ ಜನರ ಸಂಖ್ಯೆ ೯೭೬. ಅದರಲ್ಲಿ ೬೬೫೬ ಜನ ದಸ್ತಗಿರಿಯಾಗಿದ್ದರೆ ೪೧೩ ಜನ ನ್ಯಾಯಾಧೀಶರ ಮುಂದೆ ಹಾಜರಾಗಿದ್ದರು. ೧೯೨೨–೨೩ ರಲ್ಲಿ ಸಂಜ್ಞೆಯ ಅಪರಾಧಗಳಲ್ಲಿ ಭಾಗಿಯಾದವರ ಸಂಖ್ಯೆ ೧೦,೦೪೩ ಇದ್ದು, ೨೯೦೭ ಜನರ ದಸ್ತಗಿರಿಗೆ ತಪ್ಪಿಸಿಕೊಂಡಿದ್ದರೆ, ೪೯೮ ಜನರು ಸಿಆರ್‌ಪಿಸಿಯ ಕಲಂ: ೧೬೯ ರ ಅಡಿಯಲ್ಲಿ ಪೊಲೀಸರಿಂದ ಬಿಡುಗಡೆಗೊಂಡಿದ್ದರು. ೨೪ ಜನರು ನ್ಯಾಯಾಲಯದಿಂದ ವಿಚಾರಣೆ ಆರಂಭವಾಗುವುದಕ್ಕೆ ಮೊದಲೇ ಬಿಡುಗಡೆ ಹೊಂದಿದ್ದರು. ೩೭೬೯ ಜನ ಶಿಕ್ಷೆಗೆ ಗುರಿಯಾದರೆ ೨೯೫೬ ಜನರು ವಜಾ/ಖುಲಾಸೆಗೊಂಡಿದ್ದರು. ೨೭೧೧ ಜನ ಕಸ್ಟಡಿಯಲ್ಲಿ (ಬಂಧನದಲ್ಲಿ ಇದ್ದರು) [೧೭೩]

೧೯೨೨–೨೩ ರಲ್ಲಿ ೫೫೮ ಸಂಜ್ಞೆಯ ಮತ್ತು ೧೧ ಅಸಂಜ್ಞೆಯ ಪ್ರಕರಣಗಳು ಹಾಗೂ ೧೯೨೪ ರಲ್ಲಿ ೪೯೧ ಸಂಜ್ಞೆಯ ಹಾಗೂ ೭೫ ಆಸಂಜ್ಞೆಯ ಪ್ರಕರಣಗಳು ಪೊಲೀಸರಿಗೆ ತನಿಖೆ ನಡೆಸಲು ನ್ಯಾಯಾಲಯದಿಂದ ನಿರ್ದೇಶಿತವಾಗಿ ಬಂದವು. ಅತ್ಯಂತ ಹೆಚ್ಚು ಸೆಷನ್ಸ್ ಪ್ರಕರಣಗಳು (Sessions case) ತುಮಕೂರಿನಲ್ಲಿದ್ದರೆ, ಅತ್ಯಂತ ಹೆಚ್ಚು ಜನರು ಶಿಕ್ಷೆಗೆ ಒಳಗಾದದ್ದು ಮೈಸೂರು ನಗರ ರೈಲ್ವೆಯಲ್ಲಿ ಮತ್ತು ಕೋಲಾರ ಜಿಲ್ಲೆಯಲ್ಲಿ . ೧೯೨೩ ಕ್ಕೆ ಹೋಲಿಸಿದರೆ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆಯಲ್ಲಿ ೧೯೨೨–೨೩ ರಲ್ಲಿ ಶೇಕಡಾವಾರು ಸ್ವಲ್ಪ ಪ್ರಗತಿ ಕಂಡಿದ್ದರೂ ಸಹ ಶಿಕ್ಷೆಗೆ ಒಳಗಾದ ವ್ಯಕ್ತಿಗಳ ಸಂಖ್ಯೆಯ ಶೇಕಡಾ ಪ್ರಮಾಣ ೫೦.೭% ನಿಂದ ೪೦.೨%ಗೆ ಇಳಿಯಿತು. ೨೫೨೪ ಸಂಜ್ಞೆಯ ಪ್ರಕರಣಗಳಲ್ಲಿ ೨,೦೯,೫೧೧/- ರೂಪಾಯಿ ಆಸ್ತಿಪಾಸ್ತಿ ಕಳವಾಗಿದ್ದರೆ, ೧,೧೧,೪೮೨/- ರೂಪಾಯಿ ಬೆಲೆಯ ವಸ್ತುಗಳನ್ನು ವಶಪಡಿಸಿ ಕೊಳ್ಳಲಾಗಿತ್ತು. ೧೯೨೩ ರಲ್ಲಿ ಇದು ೨,೨೫,೮೯೧/- ರೂಪಾಯಿನಷ್ಟು ಹಾಗೂ ೮೨,೭೮೨/- ರೂಪಾಯಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು.[೧೭೪]

೧೯೨೪–೨೫ ರ ವರ್ಷದ ಕೊನೆಯಲ್ಲಿ ಎ ಅಂತಿಮ ವರದಿ ಸಲ್ಲಿಸಿದ ೧,೦೩೮ ಪ್ರಕರಣಗಳು ಮ್ಯಾಜಿಸ್ಟ್ರೇಟ್‌ರ ಬಳಿ ಬಾಕಿಇತ್ತು. ೯೨೦ ಬಿ ವರದಿ ಸಲ್ಲಿಸಿದ್ದರೆ, ೧,೨೧೧ ಪ್ರಕರಣಗಳು ಪೊಲೀಸರ ಬಳಿ ತನಿಖೆಗೆ ಬಾಕಿ ಇತ್ತು. ೧೯೨೩–೨೪ ನೇ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗಿತ್ತು. ಸಂಜ್ಞೆಯ ಪ್ರಕರಣ ಗಳಲ್ಲಿ ಭಾಗಿಯಾದವರ ಸಂಖ್ಯೆ ೧೦೨೬೩ (೬೬೭೧ ಜನ ದಸ್ತಗಿರಿಯಾಗಿದ್ದರೆ ೮೮೧ ಜನ ಮ್ಯಾಜಿಸ್ಟ್ರೇಟರ ಮುಂದೆ ಶರಣಾಗಿದ್ದರು. ೨೭೧೧ ಜನ ಕಳೆದ ವರ್ಷದಿಂದ ಬಾಕಿ ಇದ್ದವರು) ೧೯೨೩–೨೪ ರಲ್ಲಿ ಇವರ ಸಂಖ್ಯೆ ೯೭೬ ಆಗಿತ್ತು. ಇದರಲ್ಲಿ ೭೩ ಜನ ದಸ್ತಗಿರಿ ಯಾಗದೇ ತಲೆಮರೆಸಿಕೊಂಡಿದ್ದರು. ೩೪೩ ಜನ ಸಿಆರ್‌ಪಿಸಿ ೧೬೯ ರಂತೆ ಪೊಲೀಸರಿಂದ ಬಿಡುಗಡೆಗೊಂಡಿದ್ದರು. ೨೪ ಜನ ಮ್ಯಾಜಿಸ್ಟ್ರೇಟರಿಂದ ಬಿಡುಗಡೆಯಾಗಿದ್ದರು. ೪೩೧೫ ಜನ ಶಿಕ್ಷೆಗೆ ಒಳಗಾಗಿದ್ದರು. ೩೧೫೪ ಜನ ಖುಲಾಸೆ ಅಥವಾ ವಜಾಗೊಂಡಿದ್ದರು. ೨೧೪೩ ಜನರನ್ನು ವರ್ಷದ ಕೊನೆಯಲ್ಲಿ ಜೈಲಿಗೆ ಕಳುಹಿಸಲ್ಪಟ್ಟರು. ವಿಚಾರಣೆಗೆ ಒಳಗಾಗಿ ಶಿಕ್ಷೆಯಾದವರು ೫೭.೭೭% ಜನರು ಕಳೆದ ವರ್ಷ ಇದು ೫೯.೨೧% ಇತ್ತು.[೧೭೫] *೧೯೨೫–೨೬ ಮತ್ತು ೧೯೨೬–೨೭ ರಲ್ಲಿ ವರದಿಯಾದ ಸಂಜ್ಞೆಯ ಪ್ರಕರಣಗಳ ಬಗ್ಗೆ ಅನುಬಂಧ– ೩೫ ನೋಡಿ.* [೧೭೬] ಬಾಕಿ ಉಳಿದ ೩,೩೪೨ ಪ್ರಕರಣಗಳಲ್ಲಿ ೧೨೪೬ ಪ್ರಕರಣಗಳಲ್ಲಿ ಮ್ಯಾಜಿಸ್ಟ್ರೇಟರ ಬಳಿ ‘ಎ’ ಫಾರಂ ಮತ್ತು ೭೧೫ ಪ್ರಕರಣಗಳಲ್ಲಿ ‘ಬಿ’ ಫಾರಂ ಕಳಿಸಿ ಬಾಕಿ ಇದ್ದರೆ, ೧೩೮೧ ಪ್ರಕರಣಗಳು ಪೊಲೀಸರ ತನಿಖೆಯಲ್ಲಿ

ಬಾಕಿ ಇತ್ತು. ೧೯೨೫–೨೬ ಹೋಲಿಸಿದರೆ ೧೯೨೬ ರಲ್ಲಿ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸರ ಬಳಿ ಬಾಕಿ ಇದ್ದ ಪ್ರಕರಣಗಳಲ್ಲಿ ಏರಿಕೆಯಾಗಿತ್ತು. ಸಂಜ್ಞೆಯ ಪ್ರಕರಣಗಳಲ್ಲಿ ಬಾಗಿಯಾದವರ ಒಟ್ಟು ಸಂಖ್ಯೆ ೧೦,೨೭೦ (ಅದರಲ್ಲಿ ೬೬೭೮

ಮಂದಿ ದಸ್ತಗಿರಿಯಾಗಿದ್ದರೆ, ೧೩೮೧ ಜನ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗಿದ್ದರು. ೨೨೨೧ ಮಂದಿ ೧೯೨೫-೨೬ ರಿಂದ ದಸ್ತಗಿರಿಗೆ ಬಾಕಿ ಇದ್ದರು) ಇದು ೧೯೨೫-೨೬ ರಲ್ಲಿ ೯೨೭೫ ಆಗಿತ್ತು. ಈ ವ್ಯಕ್ತಿಗಳಲ್ಲಿ ೩೮ ಜನರು ದಸ್ತಗಿರಿಯಾಗದೇ ತಲೆಮರೆಸಿಕೊಂಡಿದ್ದರು. ಸಿಆರ್‌ಪಿಸಿ ಕಲಂ ೧೬೯ ಪ್ರಕಾರ ಪೊಲೀಸರಿಂದ ೨೮೭ ಜನ ಬಿಡುಗಡೆಯಾಗಿದ್ದರು. ೧೬ ಜನ ಮ್ಯಾಜಿಸ್ಟ್ರೇಟ್‌ರಿಂದ ವಿಚಾರಣೆಗೆ ಮೊದಲೇ ಬಿಡುಗಡೆಯಾಗಿದ್ದರು. ೭ ಜನರ ವಿರುದ್ಧದ ಪ್ರಕರಣಗಳನ್ನು ಸ್ಟ್ರಕ್ ಆಫ್ ಮಾಡಲಾಗಿತ್ತು. ೫೦ ಜನರ ವಿರುದ್ಧದ ಪ್ರಕರಣ ಹಿಂಪಡೆಯಲಾಗಿತ್ತು. ೨೯೩ ಜನರ ಪ್ರಕರಣಗಳು ರಾಜಿಯಾಗಿದ್ದವು. ಇಬ್ಬರು ತಪ್ಪಿಸಿಕೊಂಡರೆ ೫ ಜನ ತಲೆಮರೆಸಿಕೊಂಡಿದ್ದರು. ೧೬ ಜನ ಮೃತರಾದರೆ ೧೬ ಜನರ ಪ್ರಕರಣಗಳನ್ನು ವರ್ಗಾವಣೆ ನೀಡಲಾಯಿತು. ೨೮೮೧ ಜನರು ಜೈಲಿನಲ್ಲಿ ಇದ್ದರು. ವಿಚಾರಣೆಗೆ ಒಳಗಾದ ಜನರಲ್ಲಿ ೫೯.೫೦% ಜನ ಶಿಕ್ಷೆಗೆ ಒಳಗಾದರು. ೧೯೨೫-೨೬ರಲ್ಲಿ ಇದು ೫೯.೬೨% ಆಗಿತ್ತು.[೧೭೭]

೧೯೩೦-೩೧ ರಲ್ಲಿ ಸಂಜ್ಞೆಯ ಅಪರಾಧಗಳ ಸಂಖ್ಯೆಯಲ್ಲಿ ಏರಿಕೆಯಾಯಿತು. ೧೯೨೯-೩೦ ರಲ್ಲಿ ೭೯೩ ಇದ್ದ ಈ ಸಂಖ್ಯೆ ೧೯೩೦-೩೧ ರಲ್ಲಿ ೯೫೧೬ಕ್ಕೆ ಏರಿತು. ೧೯೨೯-೩೦ ಸತ್ಯ ಪ್ರಕರಣಗಳು ೬೨೪೬ ಇದ್ದರೆ ೭೮೫೨ ಆಗಿತ್ತು. ಈ ಸಂಖ್ಯೆಯಲ್ಲಿ ಏರಿಕೆಯಾದುದರಿಂದ ಬೆಂಗಳೂರು ನಗರದಲ್ಲಿ ಅಪರಾಧಗಳ ತನಿಖೆಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಯಿತು. ೧೯೨೯-೩೦ ರಲ್ಲಿ ಬಾಕಿ ಪ್ರಕರಣಗಳು ಸೇರಿ ಒಟ್ಟು ೧೩,೦೪೧ ಪ್ರಕರಣಗಳು ತನಿಖೆಗೆ ಇದ್ದವು. ೧೯೨೯-೩೦ ರಲ್ಲಿ ಇದು ೧೧೫೨೯ ಇತ್ತು. ೩೬೯ ಪ್ರಕರಣಗಳಲ್ಲಿ ತನಿಖೆಯನ್ನು ತಿರಸ್ಕರಿಸಲಾಯಿತು. ೧೫೨೯ ಪ್ರಕರಣಗಳು ಸುಳ್ಳು ಅಥವಾ ತಪ್ಪು ಗ್ರಹಿಕೆಯಿಂದ ನೀಡಿದ ಪ್ರಕರಣಗಳೆಂದು ಮುಕ್ತಾಯ ಮಾಡಲಾಯಿತು. ೯೫೭ ನಾಪತ್ತೆ ಪ್ರಕರಣಗಳು, ೧೩೭ ಪ್ರಕರಣಗಳು ಎ ಫಾರಂ ನೀಡಿ ಹೊಡೆದು ಹಾಕಲಾಗಿತ್ತು. ೯೧ ಪ್ರಕರಣ ಹಿಂಪಡೆಯಲಾಗಿತ್ತು. ೧೧ ಪ್ರಕರಣ ವರ್ಗಾವಣೆ ನೀಡಿದ್ದರೆ ೨೧೩ ರಾಜಿಯಾದವು, ಉಳಿದ ೯೭೨೪ ಪ್ರಕರಣಗಳಲ್ಲಿ ೪೭೧೨ ಪ್ರಕರಣಗಳಿಗೆ ಶಿಕ್ಷೆಯಾದವು. ೧೩೬೨ ಪ್ರಕರಣ ಖುಲಾಸೆಗೊಂಡವು. ೩೬೫೦ ಪ್ರಕರಣಗಳು ತನಿಖೆಗೆ ಬಾಕಿ ಉಳಿದಿದ್ದವು. ೧೯೩೦-೩೧ ರಲ್ಲಿ ವರದಿಯಾದ ಪ್ರಕರಣಗಳಲ್ಲಿ ತನಿಖೆ ತಿರಸ್ಕರಿಸಿದ್ದು, ಶೇಕಡ ೩.೮೭, ಇದು ೧೯೨೯-೩೦ ರಲ್ಲಿ ೩.೮೫ ಆಗಿತ್ತು. ವಿಚಾರಣೆಗೊಂಡ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದ ಪ್ರಕರಣಗಳ ಸರಾಸರಿ ೭೭.೫೭% ಇದ್ದು ೧೯೨೯-೩೦ ರಲ್ಲಿ ೭೨.೩೨% ಆಗಿತ್ತು. ರಾಜ್ಯದ ಮತ್ತು ಸಾರ್ವಜನಿಕರ ನೆಮ್ಮದಿಗೆ ಭಂಗ ತರುವಂತಹ ಪ್ರಕರಣಗಳು ೧೯೨೯-೩೦ ನದ್ದು ಸೇರಿ ೨೮೦ ಪ್ರಕರಣಗಳು ಇದ್ದವು. ಇದರಲ್ಲಿ ೨೪೯ರ ತನಿಖೆ ನಡೆಸಲಾಯಿತು. ಇದರಲ್ಲಿ ೧೧೫ ನಿಜ ಪ್ರಕರಣಗಳು ೪೩ಕ್ಕೆ ಶಿಕ್ಷೆಯಾದವು, ೧೯೨೯-೩೦ ರಲ್ಲಿ ೪೪ ಪ್ರಕರಣಗಳಲ್ಲಿ ಶಿಕ್ಷೆಯಾಗಿತ್ತು. ೧೯೨೯-೩೦ ರಲ್ಲಿ ದೊಂಬಿ, ಗಲಬೆ ಪ್ರಕರಣಗಳು ೯೩ ವರದಿಯಾಗಿದ್ದರೆ ೧೯೩೦-೩೧ ರಲ್ಲಿ ೯೧ ಆಗಿತ್ತು. ನಕಲಿ ನಾಣ್ಯ ಹಾಗೂ ಖೋಟಾನೋಟು ಪ್ರಕರಣಗಳು ೫ ವರದಿಯಾದವು. ೧೯೨೯-೩೦ ರಲ್ಲಿ ೬ ಇತ್ತು. ೧೯೩೦-೩೧ ರಲ್ಲಿ ೬೮ ಅಪಹರಣ ಪ್ರಕರಣಗಳು ವರದಿಯಾದವು. ೧೯೨೯-೩೦ ರಲ್ಲಿ ಇದು ೪೭ ಆಗಿತ್ತು.[೧೭೮]

೧೯೪೫-೪೬ ರಲ್ಲಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ತುರ್ತು ಸ್ಥಿತಿಗಳನ್ನು ನಿಯಂತ್ರಿಸಲು ಸಿವಿಲ್ ಗಾರ್ಡ್‌ಗಳನ್ನು ಮುಂದುವರಿಸಲಾಯಿತು. ಯುದ್ಧಗಳು ನಡೆಯುತ್ತಿದ್ದರೂ ಸಹ ಪೊಲೀಸ್ ಇಲಾಖೆಯ ಕೆಲಸದ ಪ್ರಮಾಣ ಅತಿಯಾಗಿತ್ತು. ಆಹಾರ ಮತ್ತು ನಾಗರಿಕ ಸರಬರಾಜು, ಮತ್ತು ಇತರ ನಿಯಂತ್ರಣ ಕಾಯ್ದೆಗಳ ಅಡಿಯಲ್ಲಿ ದಾಳಿ ಮಾಡುತ್ತಿದ್ದರು. ಪೊಲೀಸ್ ಇಲಾಖೆಯ ಅಧೀನ ಅಧಿಕಾರಿಗಳ ಸಂಖ್ಯೆಯನ್ನು ಪರಿಷ್ಕರಿಸಲಾಯಿತು. ಇದರಿಂದ ವಾರ್ಷಿಕ ೮ ಲಕ್ಷ ರೂಪಾಯಿಗಳ ಅಧಿಕ ಹೊರೆ ಇಲಾಖೆಗೆ ಬಿತ್ತು. ಜೀವನ ನಿರ್ವಹಣಾ ವೆಚ್ಚಹೆಚ್ಚಿಸಿದ್ದರಿಂದ ಹವಾಮಾನಗಳ ವೈಪರಿತ್ಯದಿಂದಾಗಿ ಆಹಾರ ಧಾನ್ಯಗಳ ಕೊರತೆಯಿಂದಾಗಿ ಅಪರಾಧಗಳ ಸಂಖ್ಯೆ ಹೆಚ್ಚಾದವು.[೧೭೯]

೭. ೧೮:- ಅಸಂಜ್ಞೆಯ ಅಪರಾಧಗಳು

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೆ ಶೆಡ್ಯೂಲ್ ಪ್ರಕಾರ ನ್ಯಾಯಾಲಯದ ವಾರೆಂಟ್ ಇಲ್ಲದೇ ಯಾವ ಪ್ರಕರಣಗಳಲ್ಲಿ ವ್ಯಕ್ತಿಗಳನ್ನು ದಸ್ತಗಿರಿ ಮಾಡಲು ಸಭ್ಯವಿಲ್ಲವೋ ಅಂತಹ ಪ್ರಕರಣಗಳು ಆಸಂಜ್ಞೆಯ ಅಪರಾಧಗಳು. ೧೯೦೪ -೦೫ ರಲ್ಲಿ ಆ ಸಂಜ್ಞೆಯ ಅಪರಾಧಗಳಿಗೆ ಸಂಬಂಧಿಸಿದಂತೆ ಪೊಲೀಸರು ಮಾಡಿದ ಕಾರ್ಯದ ವಿವರ

ವರದಿಯಾದ ಪ್ರಕರಣಗಳು – ೩೮		ವಿಚಾರಣೆಗೆ ಒಳಪಟ್ಟವರ ಸಂಖ್ಯೆ – ೨೯	
ಸುಳ್ಳು ಅಥವಾ ಸಂಗತಿಯ ತಪ್ಪು ತಿಳುವಳಿಕೆಯಿಂದ ಹೊಡೆದು ಹಾಕಿದ ಪ್ರಕರಣ	೧೭	ಶಿಕ್ಷೆಗೊಳಗಾದವರು	೨೩
ತನಿಖೆ ಬಾಕಿ	೧	ಖುಲಾಸೆಗೊಂಡವರು	೩
ವಜಾ	೧	ವಜಾಗೊಂಡವರು	೩
ಶಿಕ್ಷೆ	೧೭		
ಖುಲಾಸೆ	೨		

[೧೮೦]

ಸಿವಿಲ್ ಮತ್ತು ಮಿಲಿಟರಿ ಠಾಣೆಗಳಿಗೆ ಸಂಬಂಧಿಸಿದ ೩೩ ಪ್ರಕರಣಗಳು ವರದಿಯಾಗಿದ್ದವು ಖುದ್ದು ಶಿಕ್ಷೆಯ ಪ್ರಮಾಣ ೭೯.೩೧% ಆಗಿತ್ತು.

೧೯೨೨-೨೩ ರಲ್ಲಿ ಅಸಂಜ್ಞೆಯ ಅಪರಾಧಗಳ ಸಂಖ್ಯೆ ೧೦,೪೦೦, ೧೯೨೧-೨೨ ರಲ್ಲಿ ಇದು ೧೦,೪೭೨ ಆಗಿತ್ತು. ಈ ವರ್ಷ ೭೨ ಕಡಿಮೆ ಪ್ರಕರಣ ದಾಖಲಾಗಿದ್ದನ್ನು ಗಮನಿಸಬಹುದು. ೧೯೨೧-೨೨ ರಲ್ಲಿ ಬಾಕಿ ಇದ್ದ ೧,೭೪೨ ಪ್ರಕರಣಗಳು ಸೇರಿ ಒಟ್ಟು ೧೨.೧೪೨ ಪ್ರಕರಣಗಳಲ್ಲಿ ೩೫೨೦ ಪ್ರಕರಣಗಳಲ್ಲಿ ಅಥವಾ ೨೭.೩% ಪ್ರಕರಣದಲ್ಲಿ ಶಿಕ್ಷೆ ಯಾಯಿತು. ಇದು ೧೯೨೧-೨೨ ರಲ್ಲಿ ೨೫೯೦ ಪ್ರಕರಣ ಅಥವಾ ೨೧.೨% ಆಗಿತ್ತು. ೫೭೪೮ ಪ್ರಕರಣಗಳು ಖುಲಾಸೆ/ವಜಾಗೊಂಡವು. ೧೧೪೮ ವಿಚಾರಣೆಗೆ ಬಾಕಿ ಉಳಿದವು. ಈ ಪ್ರಕರಣಗಳಲ್ಲಿ ವರ್ಷದ ಆರಂಭದಲ್ಲಿ ೩,೩೦೧ ಜನ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಿದರೆ ಒಟ್ಟು ೨೨,೦೪೦ ಜನ ನ್ಯಾಯಾಲಯಕ್ಕೆ ಹಾಜರಾದರು. ಒಟ್ಟು ವರ್ಷದ ಕೊನೆಯಲ್ಲಿ ೧೭,೦೮೫ ಜನ ವಿಚಾರಣೆ ಎದುರಿಸಿ ೪೨೨೦ ಜನ ಶಿಕ್ಷೆಗೆ ಗುರಿಯಾದರು. ೧೨,೮೬೫ ಜನ ಖುಲಾಸೆ/ವಜಾಗೊಂಡರು. ೧೦೬೫ ಜನರನ್ನು ನ್ಯಾಯಾಲಯದಲ್ಲಿ ಹಾಜರಾದ ಮೇಲೆ ವಿಚಾರಣೆ ಇಲ್ಲದೇ ವಜಾಗೊಳಿಸಿದರು. ೬ ಜನ ಮೃತಪಟ್ಟರೆ, ೬೭೩ ಜನರು ರಾಜಿಯಾಗಿದ್ದರು. ೩೩ ವರ್ಗಾವಣೆಗೊಂಡರೆ, ೩೬೧ ಜನ ತಲೆಮರೆಸಿಕೊಂಡಿದ್ದರು. ೮೬ ಜನರನ್ನು ಇತರೇ ವಿಧಾನಗಳಲ್ಲಿ ಮುಕ್ತಾಯಗೊಳಿಸಲಾಗಿತ್ತು. ಉಳಿದ ೩.೯೮ ಜನ ವಿಚಾರಣೆ ಎದುರು ನೋಡುತ್ತಿದ್ದರು. ೭೪ ಜನರನ್ನು ೫೯ ಪ್ರಕರಣದಲ್ಲಿ ಗ್ರಾಮ ಪೊಲೀಸರು ಬಂಧಿಸಿದ್ದರು. ೧೯೨೧-೨೨ ರಲ್ಲಿ ೭೪ ಜನರನ್ನು ೬೨ ಪ್ರಕರಣದಲ್ಲಿ ಬಂಧಿಸಿದ್ದರು. ಇದರಲ್ಲಿ ೧೯೨೨-೨೩ ರಲ್ಲಿ ೪೧ ಪ್ರಕರಣಗಳಲ್ಲಿ ೪೭ ಜನರಿಗೆ ಶಿಕ್ಷೆಯಾಯಿತು. ೫ ಪ್ರಕರಣಗಳಲ್ಲಿ ೭ ಜನ ಖುಲಾಸೆ/ವಜಾಗೊ೧ಡರು. ಒಬ್ಬ ವ್ಯಕ್ತಿಯನ್ನು ಒಂದು ಪ್ರಕರಣದಲ್ಲಿ ಪೊಲೀಸರು ಬಿಡುಗಡೆಗೊಳಿಸಿದರೆ, ೧೨ ಪ್ರಕರಣದಲ್ಲಿ ೧೦ ಜನ ವಿಚಾರಣೆ ಎದುರು ನೋಡುತ್ತಿದ್ದರು.[೧೮೧]

೧೯೨೩-೨೪ ರಲ್ಲಿ ಮ್ಯಾಜಿಸ್ಟ್ರೇಟರಿಂದ ಸ್ವೀಕರಿಸಲ್ಪಟ್ಟ ಆಸಂಜ್ಞೆಯ ಪ್ರಕರಣಗಳ ಸಂಖ್ಯೆ ಒಟ್ಟು ೧೦೭೭೩, ಇವುಗಳಲ್ಲಿ ಶಿಕ್ಷೆಯ ಪ್ರಮಾಣ ೨೨.೩% ಆಗಿತ್ತು. ೧೯೨೨-೨೩ ರಲ್ಲಿ ೨೭.೩% ಇತ್ತು. ೧೯೨೩-೨೪ ರ ಆರಂಭದಲ್ಲಿ ೩.೯೮ ಈ ಪ್ರಕರಣಗಳಲ್ಲಿ ತನಿಖೆ ಎದುರಿಸುತ್ತಿದ್ದವರನ್ನು ಒಳಗೊಂಡು ಒಟ್ಟು ೨೦೭೬೭ ಜನರು ಈ ಪ್ರಕರಣಗಳಲ್ಲಿ ನ್ಯಾಯಾಲಯದ ಮುಂದೆ ಹಾಜರಾದರು. ೧೪೬೪೦ ಜನರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಯಿತು. ೨೮೩೪ ಜನ ಶಿಕ್ಷೆಗೆ ಗುರಿಯಾದರೆ, ೧೧.೦೮೬ ಜನ ವಜಾ ಅಥವಾ ಖುಲಾಸೆಗೊಂಡಿದ್ದರು. ೧೦೨೧ ಜನರು ನ್ಯಾಯಾಲಯದ ಮುಂದೆ ಹಾಜರಾಗಿ ವಿಚಾರಣೆ ಇಲ್ಲದೇ ಖುಲಾಸೆಗೊಂಡಿದ್ದರು. ೫೩ ಜನ ತಪ್ಪಿಸಿಕೊಂಡಿದ್ದರು ಅಥವಾ

ಮೃತಪಟ್ಟರು. ೧೨೬೫ ಜನ ರಾಜಿ ಅಥವಾ ಪ್ರಕರಣ ಹಿಂಪಡೆತಕ್ಕೆ ಒಳಪಟ್ಟರು. ೧೪೩ ಜನರ ಪ್ರಕರಣಗಳನ್ನು ವರ್ಗಾಯಿಸಲಾಯಿತು. ೩೬೪೫ ಜನ ವಿಚಾರಣೆಯನ್ನು ಎದುರು ನೋಡುತಿದ್ದರು. ೯೫ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಒಟ್ಟು ೧೩೩ ಜನರನ್ನು ವಿಲೇಜ್ ಪೊಲೀಸರು ದಸ್ತಗಿರಿ ಮಾಡಿದ್ದರು. ೧೯೨೨-೨೩ ರಲ್ಲಿ ೫೯ ಪ್ರಕರಣಗಳಲ್ಲಿ ೭೪ ಜನ ವಿಲೇಜ್ ಪೊಲೀಸರಿಂದ ದಸ್ತಗಿರಿಯಾಗಿದ್ದರು. ೧೯೨೩-೨೪ ರಲ್ಲಿ ಇವರುಗಳಲ್ಲಿ ೮೪ ಜನರಿಗೆ ಶಿಕ್ಷೆಯಾಗಿ ೨೦ ಜನ ಖುಲಾಸೆ ಅಥವಾ ವಜಾಗೊಂಡಿದ್ದರು. ೧೪ ಜನ ಪೊಲೀಸರಿಂದ ಬಿಡುಗಡೆಗೊಂಡಿದ್ದರು. ೬ ಜನರನ್ನು ಬೇರೆ ಸರಹದ್ದುಗಳಿಗೆ ವರ್ಗಾಯಿಸಲಾಗಿತ್ತು. ವರ್ಷದ ಕೊನೆಯಲ್ಲಿ ೯ ಜನ ವಿಚಾರಣೆ ಎದುರು ನೋಡುತ್ತಿದ್ದರು.[೧೮೨] ೧೯೨೪-೨೫ ರಲ್ಲಿ ನ್ಯಾಯಾಲಯದಲ್ಲಿ ಸ್ವೀಕೃತವಾದ ಒಟ್ಟು ಆಸಂಜ್ಞೆಯ ಅಪರಾಧಗಳು ೮,೮೪೭. ಇದು ೧೯೨೩-೨೪ ಕ್ಕಿಂತ ೨೦೦ ಕಡಿಮೆ. ೧೯೨೩-೨೪ ರಿಂದ ಬಾಕಿ ಇದ್ದ ಪ್ರಕರಣಗಳು ೧೭೪೮. ೧೯೨೪-೨೫ ರಲ್ಲಿ ಒಟ್ಟು ಪ್ರಕರಣಗಳು ೧೦,೫೯೫ ಇದರಲ್ಲಿ ೨,?೭೨ ಪ್ರಕರಣಗಳಲ್ಲಿ ಶಿಕ್ಷೆಯಾದವು. (೨೬.೧೬%) ೧೯೨೩-೨೪ರಲ್ಲಿ ೨,೧೦೩ (೨೨.೩೦%) ಆಗಿತ್ತು. ೫೫೬೩ ಪ್ರಕರಣಗಳು ವಜಾ ಅಥವಾ ಖುಲಾಸೆಗೊಂಡವು. ಇದು ೧೯೨೩-೨೪ ರಲ್ಲಿ ೫೫೮೨ ಆಗಿತ್ತು. ವರ್ಷದ ಆರಂಭದಲ್ಲಿ ೩,೬೪೫ ಜನರು ವಿಚಾರಣೆ ಎದುರಿಸುತ್ತಿದ್ದರು. ೧೮,೮೮೫ ಜನ ನ್ಯಾಯಾಲಯದ ಮುಂದೆ ಆಸಂಜ್ಞೆಯ ಅಪರಾಧಗಳಲ್ಲಿ ಹಾಜರಾದರು. ೧೫,೧೫೩ ಜನ ವಿಚಾರಣೆಗೆ ಒಳಗಾದರು. ೩,೪೧೧ ಜನ ಶಿಕ್ಷೆಗೆ ಒಳಗಾದರೆ, ೧೧೭೪೨ ಜನ ಖುಲಾಸೆಗೊಂಡರು. ೫೦೩ ಜನ ವಿಚಾರಣೆ ಇಲ್ಲದೇ ನ್ಯಾಯಾಲಯಕ್ಕೆ ಹಾಜರಾದ ಮೇಲೆ ಖುಲಾಸೆಗೊಂಡರು. ೧೦ ಜನ ಮೃತಪಟ್ಟರು ಅಥವಾ ತಪ್ಪಿಸಿಕೊಂಡರು. ೫೩೮ ಜನರು ರಾಜಿಯಾದರು. ಅಥವಾ ಪ್ರಕರಣ ಹಿಂಪಡೆದರು. ೩೬೩ ಪ್ರಕರಣ ಹೊಡೆದು ಹಾಕಲಾಯಿತು. ೧೩೧ ಪ್ರಕರಣ ವರ್ಗಾವಣೆ ನೀಡಲಾಯಿತು. ೨೬೯೧ ಜನ ವಿಚಾರಣೆ ಎದುರುನೋಡುತ್ತಿದ್ದರು. ೭೩ ಪ್ರಕರಣಗಳಲ್ಲಿ ೮೭ ಜನರನ್ನು ಗ್ರಾಮೀಣ ಪೊಲೀಸರು ದಸ್ತಗಿರಿ ಮಾಡಿದ್ದರು. ೧೯೨೩-೨೪ ರಲ್ಲಿ ೯೫ ಪ್ರಕರಣದಲ್ಲಿ ೧೩೩ ಜನರನ್ನು ಇವರು ದಸ್ತಗಿರಿ ಮಾಡಿದ್ದರು. ೧೯೨೨-೨೩ ರಲ್ಲಿ ಇದರಲ್ಲಿ ೫೭ ಪ್ರಕರಣದಲ್ಲಿ ೧೩೩ ಜನರನ್ನು ಇವರು ದಸ್ತಗಿರಿ ಮಾಡಿದ್ದರು. ೧೯೨೪-೨೫ ರಲ್ಲಿ ಇದರಲ್ಲಿ ೫೭ ಪ್ರಕರಣದಲ್ಲಿ ೬೯ ಜನ ಶಿಕ್ಷೆಗೆ ಒಳಗಾದರು. ೧೫ ಪ್ರಕರಣಗಳಲ್ಲಿ ೧೬ ಜನ ಖುಲಾಸೆ ಅಥವಾ ವಜಾಗೊಂಡರು. ೧೯೨೩-೨೪ ರ ಕೊನೆಯಲ್ಲಿ ಒಂದು ಪ್ರಕರಣದಲ್ಲಿ ಇಬ್ಬರು ವಿಚಾರಣೆಯನ್ನು ಎದುರು ನೋಡುತ್ತಿದ್ದರು. ೧೯೨೪-೨೫ ರಲ್ಲಿ ೫೧೦ ಸಂಜ್ಞೆಯ ಮತ್ತು ೩೯ ಆಸಂಜ್ಞೆಯ ಪ್ರಕರಣಗಳು ನ್ಯಾಯಾಲಯದಿಂದ ತನಿಖೆಗೆ ನಿರ್ದೇಶಿತವಾಗಿದ್ದರೆ ೧೯೨೩-೨೪ ರಲ್ಲಿ ಇದು ೪೯೧ ಮತ್ತು ೭೫ ಆಗಿತ್ತು.[೧೮೩] ೧೯೨೬-೨೭ ರಲ್ಲಿ ಮ್ಯಾಜಿಸ್ಟ್ರೇಟರಿಂದ ಸ್ವೀಕರಿಸಿದ ಎನ್‌ಸಿ ಪ್ರಕರಣಗಳು ೮೭೯೭. ೧೯೨೫-೨೬ ರಲ್ಲಿ ಇದು ೭೭೬೪ ಆಗಿತ್ತು. ಇದರಲ್ಲಿ ೧.೦೮೨ ಪ್ರಕರಣಗಳು ೧೯೨೫-೨೬ ರಿಂದ ಬಾಕಿ ಇದ್ದವು. ಇದರಲ್ಲಿ ೨.೬೨೨ ಪ್ರಕರಣಗಳು ಅಥವಾ ೨೬.೫% ಶಿಕ್ಷೆಯಲ್ಲಿ ಮುಕ್ತಾಯವಾಯಿತು. ೧೯೨೫-೨೬ ರಲ್ಲಿ ೨.೫೬೧ ಪ್ರಕರಣ ೨೮.೧% ಆಗಿತ್ತು) ೪೮೪೩ ಪ್ರಕರಣಗಳು ಖುಲಾಸೆ ಅಥವಾ ವಜಾಗೊಂಡವು. ೧೯೨೫-೨೬ ರಲ್ಲಿ ಇದು ೪೭೩೮ ಆಗಿತ್ತು. ಈ ವರ್ಷದ ಆರಂಭದಲ್ಲಿ ೨೩೪೯ ವ್ಯಕ್ತಿಗಳ ಪ್ರಕರಣ ಸೇರಿ ೧೭೪೨೭ ಜನ ನ್ಯಾಯಾಲಯದ ಮುಂದೆ ಎನ್‌ಸಿ ಪ್ರಕರಣದಲ್ಲಿ ಹಾಜರಾದರು. ಇದರಲ್ಲಿ ೧೩,೩೩೩ ಜನರ ವಿಚಾರಣೆ ನಡೆದು ೩೨೩೮ ಜನ ಶಿಕ್ಷೆಗೆ ಒಳಗಾದರೆ, ೧೦೦೯೫ ಜನರು ಖುಲಾಸೆ ಅಥವಾ ವಜಾಗೊಂಡರು. ೨೯೮ ಜನ ನ್ಯಾಯಾಲಯಕ್ಕೆ ಹಾಜರಾದ ಮೇಲೆ ವಿಚಾರಣೆ ಇಲ್ಲದೇ ಆರೋಪದಿಂದ ಖುಲಾಸೆಗೊಂಡರು. ಒಬ್ಬನು ಮೃತಪಟ್ಟರೆ, ೮೨೧ ಜನರ ಪ್ರಕರಣಗಳು ರಾಜಿಯಾದವು ಅಥವಾ ಸ್ಟ್ರಕ್ ಆಫ್ ಅಥವಾ ಹಿಂಪಡೆದವು. ೫೫ ಜನರ ಪ್ರಕರಣಗಳನ್ನು ವರ್ಗಾಯಿಸಲಾಯಿತು. ಸಿಆರ್‌ಪಿಸಿ ಕಲಂ: ೧೪೫ ಅಡಿಯಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ೪೧

ಜನರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಆದೇಶಿಸಲಾಯಿತು. ೨೮೭೮ ಜನ ವಿಚಾರಣೆಗೆ ಎದುರು ನೋಡುತ್ತಿದ್ದರು.[೧೮೪] ೧೯೪೧-೪೨ ರಲ್ಲಿ ವರದಿಯಾದ ಎನ್.ಸಿ ಪ್ರಕರಣಗಳು (೧೯೪೦-೪೧ ರ ಕೊನೆಯಲ್ಲಿ ಬಾಕಿ ಇದ್ದುದನ್ನು ಸೇರಿಸಿ) ೧೫,೭೪೦, ಅದರಲ್ಲಿ ೯,೭೭೭ ಪ್ರಕರಣಗಳಿಗೆ ಶಿಕ್ಷೆಯಾದರೆ ೪೧೦೨ ಪ್ರಕರಣಗಳ ವಜಾ ಅಥವಾ ಖುಲಾಸೆಗೊಂಡವು. ರಾಜಿಯಾದ ಪ್ರಕರಣಗಳು, ದಂಡ ಹಾಕಿದ ಪ್ರಕರಣಗಳು, ವಜಾ ಮತ್ತು ಸ್ಟ್ರಕ್ ಆಫ್ ಆದ ಪ್ರಕರಣಗಳನ್ನು ಹೊರತುಪಡಿಸಿ ೧೯೪೧-೪೨ ರ ಕೊನೆಯಲ್ಲಿ ಉಳಿದ ಪ್ರಕರಣಗಳು ೯೫೬.[೧೮೫] ೨೬೫ ಪ್ರಕರಣಗಳು ತನಿಖೆಗಾಗಿ ನ್ಯಾಯಾಧೀಶರಿಂದ ನಿರ್ದೇಶಿತವಾದವು, ೧೯೪೦-೪೧ ರಲ್ಲಿ ಇದು ೨೧೮ ಆಗಿತ್ತು. ೧೯೪೫-೪೬ರಲ್ಲಿ ವರದಿಯಾದ ಅಸಂಜ್ಞೆಯ ಅಪರಾಧಗಳು ೧೨.೦೦೬, ೧೯೪೪-೪೫ ರಲ್ಲಿ ಈ ಸಂಖ್ಯೆ ೧೩.೭೧೭ ಇತ್ತು. ೧೯೪೫-೪೬ ರಲ್ಲಿ ೬೫೩೮ ಪ್ರಕರಣಗಳಲ್ಲಿ ಶಿಕ್ಷೆಯಾದರೆ ೧೯೪೪-೪೫ ರಲ್ಲಿ ೭೯೪೪ ರಲ್ಲಿ ಶಿಕ್ಷೆಯಾಗಿತ್ತು. ೧೯೪೫-೪೬ರಲ್ಲಿ ೩೮೭೦ ಅಸಂಜ್ಞೆಯ ಪ್ರಕರಣಗಳು ಖುಲಾಸೆ ಅಥವಾ ವಜಾಗೊಂಡರೆ ೧೯೪೪-೪೫ ರಲ್ಲಿ ಈ ಸಂಖ್ಯೆ ೩೮೦೮. ಹಿಂದೆಗೆದ, ರಾಜಿಯಾದ, ವಜಾ ಗೊಂಡ ಅಥವಾ ಸ್ಟ್ರಕ್‌ಆಫ್ ಆದ ಎಲ್ಲಾ ಪ್ರಕರಣಗಳನ್ನು ಹೊರತುಪಡಿಸಿ ವರ್ಷದ ಕೊನೆಯಲ್ಲಿ ೧೨೫೪ ಪ್ರಕರಣ ಗಳು ಬಾಕಿ ಉಳಿದವು. ೧೯೪೪-೪೫ ರಲ್ಲಿ ಇದು ೧೨೮೩ ಆಗಿತ್ತು. ಮ್ಯಾಜಿಸ್ಟ್ರೇಟ್‌ರಿಂದ ೧೯೪೪-೪೫ರಲ್ಲಿ ತನಿಖೆಗೆ ಆದೇಶವಾದ ಪ್ರಕರಣಗಳು ೨೨೩. ೧೯೪೩-೪೪ ಇದರ ಸಂಖ್ಯೆ ೨೧೮ ಆಗಿತ್ತು. ಶಿಕ್ಷೆಗೊಳಗಾದ ಪ್ರಕರಣಗಳ ಸರಾಸರಿಯು ಐಪಿಸಿ ಪ್ರಕರಣದಲ್ಲಿ ೧೯೪೪-೪೫ ರಲ್ಲಿ ೩೦.೩೫ % ೧೯೪೩-೪೪ರಲ್ಲಿ ೨೫.೨೮ %, ಕಳವು ಮಾಲು ಪತ್ತೆಯಲ್ಲಿ ೧೯೪೪-೪೫ ರಲ್ಲಿ ಶೇಕಡಾ ೪೫.೨೯ ಆಗಿದ್ದರೆ, ೧೯೪೩-೪೪ ರಲ್ಲಿ ೪೭.೮ % ಆಗಿತ್ತು. ಕೆಟ್ಟನಡತೆಯ ೧೪೪ ಜನರ ಮೇಲೆ ಪ್ರಕರಣ ದಾಖಲಿಸಲಾಯಿತು. ೧೯೪೪-೪೫ ರಲ್ಲಿ ಇದು ೨೫೯ ಆಗಿತ್ತು. ವರ್ಷದ ಕೊನೆಯಲ್ಲಿ ಜಾರಿಯಾಗದ ಉಳಿದ ವಾರಂಟುಗಳು ೯೪. ೧೯೪೪-೪೫ ರಲ್ಲಿ ಬಾಕಿ ಇದ್ದವು ೨೭೬.[೧೮೬]

೭.೧೯:- ಅಪರಾಧ ಮಾಡುವ ಅಲೆಮಾರಿ ಗುಂಪುಗಳು

ಬಹಳ ಹಿಂದಿನ ಕಾಲದಿಂದಲೂ ಅಪರಾಧಗಳನ್ನು ನಡೆಸುವ ಕೆಲವು ಗುಂಪುಗಳು, ಜಾತಿಗಳು, ಜನಾಂಗ ಗಳವರು ಆಯಾ ಕಾಲದಲ್ಲಿ ಇದ್ದ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಇದನ್ನು ಯಾವುದೇ ಜಾತಿ ಜನಾಂಗವನ್ನು ದೂಷಿಸುವ ದೃಷ್ಟಿಯಿಂದ ಉಲ್ಲೇಖಿಸುತ್ತಿಲ್ಲ. ಐತಿಹಾಸಿಕ ದಾಖಲೆಗಳಲ್ಲಿ ಸಿಕ್ಕಿದ ವಿಷಯಗಳನ್ನು ಪ್ರಸ್ತಾಪಿಸುವ ಉದ್ದೇಶವಿದೆ ಅಷ್ಟೇ. ಹಲವು ಅಲೆಮಾರಿ ಗುಂಪುಗಳು ಅಪರಾಧ ಚಟುವಟಿಕೆಯಲ್ಲಿ ತೊಡಗಿದ್ದವು. ಇವರ ಅಪರಾಧಿಕ ಕೃತ್ಯಗಳನ್ನು ತಡೆಯಲು ಪೊಲೀಸ್ ಇಲಾಖೆಯಲ್ಲಿ ಹಲವು ಕ್ರಮ ಕೈಗೊಳ್ಳಲಾಗಿತ್ತು. ಇದಕ್ಕಾಗಿ ಕ್ರಿಮಿನಲ್ ಟ್ರೈಬ್ಸ್ ರೆಗ್ಯುಲೇಷನ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಎಂ.ಕೆನಡಿ ಮತ್ತು ಎಸ್.೧ ಹಲದಿಪುರ್‌ರವರು ಅಪರಾಧಗಳನ್ನು ಎಸಗುವವರನ್ನು ಅವರುಗಳ ಜಾತಿಯ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ಈ ಬಗ್ಗೆ ಒಂದು ಪುಸ್ತಕ ಬರೆದು ಅದಕ್ಕೆ 'ಮುಂಬಾಯಿ ಇಲಾಖೆಯ ದುರುಳರು' ಎಂದೇ ಹೆಸರು ನೀಡಿದ್ದಾರೆ. ಇದರಲ್ಲಿ ಜಾತಿಗಳ ಹೆಸರು, ಗುನ್ನೆ ಮಾಡುವ ಪ್ರದೇಶ, ಜನಸಂಖ್ಯೆ, ಅವರ ಸ್ವರೂಪ, ಅವರ ಭಾಷೆ, ಅವರ ಗುಪ್ತಭಾಷೆ, ಉಪಜೀವಿಕೆಯ ದೃಶ್ಯ ಸಾಧನೆಗಳು, ವೇಷಾಂತರ, ಅಪರಾಧಗಳ ಸ್ವರೂಪ, ಗುನ್ನೆ ಮಾಡುವ ಪದ್ಧತಿ, ಕಳವಿನ ಸಾಮಾನಿನ ವಿಲೇವಾರಿ, ಗುನ್ನೆ ಮಾಡುವ ಆಯುಧಗಳು ಎಂಬುದಾಗಿ ಜಾತಿ ಆಧಾರದ ಮೇಲೆ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ವರ್ಗೀಕರಿಸಿದ ಜಾತಿಗಳ ವಿವರ ಈ ರೀತಿ ಇದೆ.[೧೮೭] ೧) ಬಂಜಾರೆಯರು ಅಥವಾ ಲಮಾಣಿಯರು ೨) ಭಾಮಟೆಯರು. ೩) ರಜಪೂತ ಭಾಮಟೆಯರು. ೪) ಬಿಲ್ಲರು. ೫) ಛಪ್ಪರ ಬಂದರು. ೬) ಕೈಕಾತಿಯರು. ೭) ಕಾತಕರಿಯರು. ೮) ಕೊಳಿಯರು. ೯) ಮಾಂಗ ಅಥವಾ ಮಾದಿಗರು. ೧೦) ಮಾಂಗ ಗರೋಡಿಯರು. ೧೧) ಮಿಆನೆಯರು ೧೨) ಪಾರಧಿಯರು ೧೩) ರಾಮೋಶಿಯರು. ೧೪) ವ್ಯಾಘ್ರಿಯರು. ೧೫) ವಡ್ಡರು. ಇತರ

ಪ್ರಾಂತದ ಗುನ್ನೆದಾರರು. ಬೌರಿ ಅಥವಾ ಬೌರಿಯೆ. ಮಾರವಾಡ ಅಥವಾ ಗುಜರಾತ ಬೌರಿ. ಉಜಲೆ (ಸ್ವಚ್ಛ) ಮೀನಾ ಜಾತಿಯವರು. ಮೈಲೆ (ಹೊಲಸು) ಮೀನಾ ಜಾತಿ ಯವರು. ೨) ಔದಿಯರು. ೩) ಪಠಾಣರು. ೪) ಸಾಂಸಿ ಮತ್ತು ಬೆರಿಯರುರವರುಗಳು ಯಾವಾಗಲೂ ಅಪರಾಧಗಳನ್ನು ಎಸಗುತ್ತಿದ್ದರೆಂದು ಇವರು ತಿಳಿಸಿದ್ದಾರೆ. ೧೮೮೮-೮೯ ರಲ್ಲಿ ಅಲೆಮಾರಿ ಜನಾಂಗಗಳ ಮೇಲೆ ಅವರ ಕಾರ್ಯಚಟುವಟಿಕೆಗಳ ಮೇಲೆ ಕಣ್ಗಾವಲು ಇಡುವ ಪ್ರಕ್ರಿಯೆ ಚಾಲ್ತಿಯಲ್ಲಿತ್ತು. ಅವರ ಹೆಸರು, ಉಧ್ಯೋಗ, ಹವ್ಯಾಸ ಮತ್ತು ಚಲನವಲನಗಳ ಬಗ್ಗೆ ದಾಖಲೆಗಳನ್ನು ಇಟ್ಟು ಸಾಕಷ್ಟು ಮುಂಜಾಗರೂಕತಾ ಕ್ರಮವನ್ನು ಕೈಗೊಳ್ಳಲಾಯಿತು. ಈ ಅಲೆಮಾರಿ ಗುಂಪುಗಳು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವಾಗ ಪೊಲೀಸರು ಇವರನ್ನು ಹಿಂಬಾಲಿಸುತ್ತಿದ್ದರು. ೧೮೯೪-೯೫ ರಲ್ಲಿ ದಾಖಲಾದ ಶಾಶ್ವತವಾಗಿ ನೆಲೆಸಿದ ಮತ್ತು ಅಲೆಮಾರಿಗಳಾದ ಗುಂಪುಗಳ ವಿವರ ಈ ಕೆಳಗಿನಂತೆ ಇದೆ.

ಜಿಲ್ಲೆಗಳು	ಖಾಯಂ ನಿವಾಸಿ ಗುಂಪುಗಳು	ಅಲೆಮಾರಿ ಗುಂಪುಗಳು
ಕೋಲಾರ	೧೪೨	೯೮
ತುಮಕೂರು	೫೮೦	೪೬೫
ಮೈಸೂರು	೧೨	೩೬
ಫ್ರೆಂಚ್‌ರಾಕ್ಸ್ (ಉಪ-ವಿಭಾಗ)	೨೩೫	೪೩
ಹಾಸನ	೯೮೦	೧೪೩
ಶಿವಮೊಗ್ಗ	೩೪೩	೩೨೧
ಕಡೂರು	--	೧೯೪
ಚಿತ್ರದುರ್ಗ	೩,೪೬೮ ಜನಗಳು	೩೪೫
ಬೆಂಗಳೂರು	ಇರುವುದಿಲ್ಲ	ಇರುವುದಿಲ್ಲ [೧೮೮]

ಖಾಯಂ ನಿವಾಸ ಇರುವ ಈ ಗುಂಪುಗಳವರು ಕೃಷಿಯನ್ನು ಉದ್ಯೋಗವನ್ನಾಗಿ ಮಾಡಿಕೊಂಡಿದ್ದರು. ೧೮೯೪ ರ ಜುಲಾಯಿಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಕೆ.ಡಿಗಳ ಒಂದು ಲಿಖಿತ ದಾಖಲೆಗಳನ್ನು ಇಡುವ ಪದ್ಧತಿ ಜಾರಿಗೆ ಬಂತು. ಹಳ್ಳಿಯ ಪಟೇಲರು ತಮ್ಮ ಹಳ್ಳಿಗಳಲ್ಲಿ ಹಾದುಹೋಗುವ ಅನುಮಾನಾಸ್ಪದವಾದ ಅಪರಿಚಿತ ವ್ಯಕ್ತಿಗಳ ಬಗ್ಗೆ ವಿವರವನ್ನು ಬರೆದಿಡುವಂತೆ ೧೮೯೫ ರಲ್ಲಿ ಆದೇಶಿಸಲಾಯಿತು.[೧೮೯]

ಈ ಅವಧಿಯಲ್ಲಿ ಯಾವುದೇ ದೊಡ್ಡ ದಂಗೆಗಳಾಗಲೀ, ಘೋರಾಪರಾಧಗಳಾಗಲೀ ಎರಡು ಜನಾಂಗ/ ಧರ್ಮೀಯರ ನಡುವೆ ನಡೆದಿರಲಿಲ್ಲ. ಅತ್ಯಂತ ವ್ಯವಸ್ಥಿತವಾದ ತರಬೇತಿಯನ್ನು ಸಿಬ್ಬಂದಿಗಳಿಗೆ ನೀಡಲಾಯಿತು. ಅಕ್ಕಪಕ್ಕದ ಬ್ರಿಟೀಷ್ ಫ್ರಾಂತ್ಯಗಳಿಂದ ಮೈಸೂರು ಸಂಸ್ಥಾನದೊಳಗೆ ಪ್ರವೇಶಿಸುವ ಅಪರಾಧಿಕ ತಂಡಗಳ ಚಲನವಲನಗಳ ಬಗ್ಗೆ ಘಾಟಿಪ್ರದೇಶ ಮತ್ತು ಹೆದ್ದಾರಿಗಳಲ್ಲಿ ಗಮನಹರಿಸಲಾಯಿತು. ೧೯೨೨--೨೩ರಲ್ಲಿ ರಾಜ್ಯದಲ್ಲಿ ಒಟ್ಟು ೫೯೫ ಕ್ರಿಮಿನಲ್ ಗ್ಯಾಂಗ್‌ಗಳನ್ನು ಗುರುತಿಸಿದ್ದು, ಅದರಲ್ಲಿ ೨೨.೬೪೪ ಜನರಿದ್ದರು. ರಾಜ್ಯದ ಭೂ ಪ್ರದೇಶದಲ್ಲಿ ಹಾದುಹೋಗುವ ೬೨೩ ಅಲೆಮಾರಿ ಗುಂಪುಗಳಿದ್ದವು. ಇದರಲ್ಲಿ ೩೮೯೨ ಪುರುಷರು, ೩೪೧೧ ಮಹಿಳೆಯರನ್ನು ಮತ್ತು ೫೫೨೧ ಮಕ್ಕಳನ್ನು ಗುರುತಿಸಲಾಗಿತ್ತು. ಕೋಲಾರದ ಗೋಲ್ಡ್‌ಫೀಲ್ಡ್ ಪೊಲೀಸ್ ವೃತ್ತದಲ್ಲಿ ಕ್ರಿಮಿನಲ್ ಟ್ರೈಬ್ಸ್ ರೆಗ್ಯುಲೇಷನ್ ಅಡಿಯಲ್ಲಿ ಜೂನ್ ೧೯೨೩ ರಲ್ಲಿ ೧೩೮೯ ಜನರು ನೊಂದಾಯಿತರಾಗಿದ್ದರು[೧೯೦] ೧೯೨೩-೨೪ ರಲ್ಲಿ ಕ್ರಿಮಿನಲ್ ಟ್ರೈಬ್ ರೆಗ್ಯುಲೇಶನ್ ಕಾಯ್ದೆಅಡಿ ಶಿವಮೊಗ್ಗ ಜಿಲ್ಲೆಯಲ್ಲಿ ವಾಸವಿದ್ದ ಘಟ್ಟ ಮತ್ತು ವಡ್ಡರ್ ಗುಂಪುಗಳನ್ನು ಅಪರಾಧ ಮಾಡುವ ಬುಡಕಟ್ಟುಗಳೆಂದು ಘೋಷಿಸಲಾಗಿತ್ತು. ೧೯೨೪ ರ ಜೂನ್ ಅಂತ್ಯದ ವೇಳೆಗೆ ದಾಖಲಾದ ಇವರ ಸಂಖ್ಯೆ ೨೦೦೦ ಆಗಿತ್ತು.[೧೯೧] ೧೯೨೪-೨೫ ರಲ್ಲಿ ರಾಜ್ಯದಲ್ಲಿ ಒಟ್ಟು ೫೪೦ ಖಾಯಂ ನಿವಾಸಿಗಳಾದ ಕ್ರಿಮಿನಲ್ ಗ್ಯಾಂಗುಗಳು ಇದ್ದು, ಅದರಲ್ಲಿ ೧೯೭೪ ಜನರಿದ್ದರು. ೫೮೯ ಜನರು ೩೬೫ಅಲೆಮಾರಿ ಗ್ಯಾಂಗುಗಳ ಸದಸ್ಯರಾಗಿದ್ದರು. ಈ ಅಲೆಮಾರಿ ಗ್ಯಾಂಗುಗಳು ರಾಜ್ಯದ ಮೂಲಕ ಹಾದು ಹೋಗುತ್ತಿದ್ದವು. ಕ್ರಿಮಿನಲ್ ಟ್ರೈಬ್ಸ್ ರೆಗ್ಯುಲೇಶನ್ ಕಾಯ್ದೆ ಅಡಿ ೧೯೨೪-೨೫

ರಲ್ಲಿ ೩೦೬ ಜನರನ್ನು ನೊಂದಾಯಿಸಲಾಯಿತು. ಉಕ್ಕಡಗಳ ಸಂಖ್ಯೆ ೧೯೨೩-೨೪ ರಲ್ಲಿ ಇದ್ದಷ್ಟೇ ಅಂದರೆ ೩೫೨ ಇತ್ತು. ಇವುಗಳೆಲ್ಲ ಅಂದರೆ, ಬೆಂಗಳೂರು ಜಿಲ್ಲೆಯ ೧೨, ಕೋಲಾರ ಜಿಲ್ಲೆಯ ೬, ಶಿವಮೊಗ್ಗ ಜಿಲ್ಲೆಯ ೧೩, ಕಡೂರು ಜಿಲ್ಲೆಯ ೨, ಪ್ರೆಂಚ್‌ರಾಕ್ಸ್ ೩, ಉಕ್ಕುಡಗಳನ್ನು ಹೊರತುಪಡಿಸಿ ಉಳಿದೆಲ್ಲಾ ಕಾರ್ಯ ನಿರ್ವಹಿಸುತ್ತಿದ್ದವು.[೧೯೨] ೧೯೪೧-೪೨ ರ ಕೊನೆಯಲ್ಲಿ ೯೮೭ (ಕಳೆದ ವರ್ಷ ೯೮೦) ಜನ ಅಪರಾಧಿಕ ಹಿನ್ನೆಲೆಯುಳ್ಳ ಬುಡಕಟ್ಟು ಜನಾಂಗದವರನ್ನು ದಾಖಲೆಯಲ್ಲಿ ಸೇರಿಸಲಾಯಿತು. ೧೦೬ ಜನರಿಗೆ ಈ ಕಾಯ್ದೆಯಡಿ ಪ್ರಕರಣ ದಾಖಲಿಸಲಾಯಿತು.[೧೯೩] ೧೯೪೫-೪೬ ರಲ್ಲಿ ೮೬೫ ಜನರ ಮೇಲೆ ಪ್ರಕರಣ ದಾಖಲಿಸಲಾಯಿತು. ೧೯೪೪-೪೫ರಲ್ಲಿ ಇದು ೯೦೮ ಆಗಿತ್ತು. ೧೯೪೫-೪೬ ರಲ್ಲಿ ಹೊಸದಾಗಿ ೩೦ ಜನರ ಮೇಲೆ ಪ್ರಕರಣ ದಾಖಲಿಸಲಾಯಿತು.[೧೯೪]

ಕ್ರಿಮಿನಲ್ ಟ್ರೈಬ್ಸ್ ರೆಗ್ಯುಲೇಶನ್ ಕಾಯ್ದೆಯಡಿ ದಾಖಲಾದ ವ್ಯಕ್ತಿಗಳ ವರ್ಷಾವಾರು ಸಂಖ್ಯೆ ಈ ಕೆಳಗಿನಂತಿದೆ.

ವರ್ಷ	ವ್ಯಕ್ತಿಗಳ ಸಂಖ್ಯೆ
೧೯೨೩	೧೩೧೯
೧೯೨೪	೨೦೦೦
೧೯೪೧-೪೨	೯೮೭
೧೯೪೦-೪೧	೯೮೦
೧೯೪೪-೪೫	೯೦೮
೧೯೪೫-೪೬	೮೦೫

ಇಪ್ಪತ್ತು ವರ್ಷಗಳಲ್ಲಿ ಈ ಕಾಯ್ದೆಯಡಿ ದಾಖಲಾದವರ ಸಂಖ್ಯೆ ಕಡಿಮೆಯಾಗುತ್ತಾ ಬಂದಿರುವುದನ್ನು ಗಮನಿಸಬಹುದು. ಇದಕ್ಕೆ ಬಹು ಮುಖ್ಯವಾದ ಕಾರಣವೆಂದರೆ, ಅಲೆಮಾರಿ ಜನಾಂಗಗಳನ್ನು ಗುರುತಿಸಿ ಅದರ ಸದಸ್ಯರ ಹೆಸರು, ಉದ್ಯೋಗ, ಹವ್ಯಾಸ, ಚಲನವಲನಗಳ ಬಗ್ಗೆ ಪೊಲೀಸರು ದಾಖಲೆಯನ್ನು ಇಡುತ್ತಿದ್ದರು. ಇದರಿಂದಾಗಿ ತಾವು ಅಪರಾಧ ಮಾಡಿದರೆ ಸಿಕ್ಕಿ ಬೀಳಬಹುದೆಂಬ ಭಯದಿಂದ ಅಪರಾಧ ಮಾಡುವವರ ಸಂಖ್ಯೆ ಇಳಿಮುಖವಾಯಿತು. ಅಷ್ಟೇ ಅಲ್ಲದೇ ಈ ಜನಾಂಗದವರ ಫಿಂಗರ್‌ಪ್ರಿಂಟ್‌ಗಳನ್ನು ಕಡ್ಡಾಯವಾಗಿ ಪಡೆಯಲಾಗುತ್ತಿತ್ತು. (ಈ ಬಗ್ಗೆ ಅಂಕಿ ಅಂಶಗಳನ್ನು ಮುಂದೆ ಫಿಂಗರ್‌ಪ್ರಿಂಟ್ ಎಂಬ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ) ಇದರಿಂದ ಅಪರಾಧಿಗಳನ್ನು ಶೀಘ್ರ ಪತ್ತೆ ಮಾಡಬಹುದಾಗಿತ್ತು.

೭. ೨೦: ಮುನ್ಸಿಫಲ್ ಪೊಲೀಸ್

ಸಂಸ್ಥಾನದಲ್ಲಿ ಹಲವೆಡೆ ಪೊಲೀಸ್ ಪಡೆಗಳ ಖರ್ಚುವೆಚ್ಚಗಳನ್ನು ಸಂಬಂಧಪಟ್ಟ ಪುರಸಭೆಗಳು ಅಂದರೆ ಮುನ್ಸಿಪಾಲಿಟಿಗಳೇ ಭರಿಸುತ್ತಿದ್ದವು. ಹಾಗೆ ಮುನ್ಸಿಪಾಲಿಟಿಗಳಿಂದ ನಿರ್ವಹಿಸುತ್ತಿದ್ದ ಪೊಲೀಸ್‌ಗೆ ಮುನ್ಸಿಫಲ್ ಪೊಲೀಸ್ ಎಂದು ಕರೆಯಲಾಗುತ್ತಿತ್ತು.

ಶ್ರೀರಂಗಪಟ್ಟಣದ ಮುನ್ಸಿಫಲ್ ಪೊಲೀಸನ್ನು ೧೮೯೧ ಕ್ಕೆ ಮೊದಲೇ ಸಂಸ್ಥಾನದ ಪಡೆಗಳೊಂದಿಗೆ ಸೇರಿಸ ಲಾಗಿತ್ತು. ಆದರೆ ಅಲ್ಲಿನ ಮುನ್ಸಿಪಾಲಿಟಿ ೧೮೯೪ ಜುಲಾಯಿ ೧ ರವರೆಗೆ ಮುಂದುವರಿದಿತ್ತು. ಪೊಲೀಸ್ ಪಡೆಯ ಖರ್ಚು ಗಳನ್ನು ಸ್ವಲ್ಪ ಭಾಗವನ್ನು ಮುನ್ಸಿಪಾಲಿಟಿ ನೀಡುತ್ತಿತ್ತು. ಮೈಸೂರು ನಗರ ಪೊಲೀಸರ ಖರ್ಚು ವೆಚ್ಚವನ್ನು ಮೈಸೂರುನಗರ ಮುನ್ಸಿಪಾಲಿಟಿಯವರು ೧೮೯೧ ಕ್ಕಿಂತ ಮೊದಲು ಪಡೆಗಳನ್ನು ಉಪಯೋಗಿಸಿದಕ್ಕಾಗಿ ನೀಡುತ್ತಿದ್ದರು. ೧೮೯೧ ರಿಂದ ಇದನ್ನು ಸಂಸ್ಥಾನದವರು ನೀಡುವಂತೆ ವರ್ಗಾಯಿಸಲಾಯಿತು. ೧೮೯೧ರ ಎಪ್ರೀಲ್ ೧ ರಂದು ಸರ್ಕಾರವು ಚಿಕ್ಕಮಗಳೂರು ಮುನ್ಸಿಪಾಲಿಟಿಯವರು ಪೊಲೀಸ್ ವೆಚ್ಚ ಭರಿಸುವುದರಿಂದ ಬಿಡುಗಡೆ ಗೊಳಿಸಲಾಯಿತು.[೧೯೫] ಕೋಲಾರ, ತುಮಕೂರು, ಹಾಸನ, ತರಿಕೆರೆ, ಬೀರೂರು, ಚಿತ್ರದುರ್ಗ, ದಾವಣಗೆರೆ ಮತ್ತು ಹರಿಹರ ಮುನ್ಸಿಪಾಲಿಟಿಗಳು ೧ ನೇ

ಜುಲಾಯಿ ೧೮೯೪ ರವರೆಗೆ ಪೊಲೀಸ್ ಇಲಾಖೆಗೆ ಸಂರಕ್ಷಣೆ ನೀಡಿದ್ದಕ್ಕಾಗಿ, ಕೊಡುಗೆಗಳನ್ನು ನೀಡುತ್ತಿದ್ದವು. ಯಾವಾಗ ಈ ಕೊಡುಗೆಗಳನ್ನು ಕೊಂಡುವುದರಿಂದ ಮುನ್ಸಿಪಾಲಿಟಿಗಳನ್ನು ಬಿಡುಗಡೆಗೊಳಿಸಲಾಯಿತೋ ಅಂದಿನಿಂದ ಈ ಪೊಲೀಸ್ ಪಡೆಗಳನ್ನು ಜಿಲ್ಲಾ ಪೊಲೀಸ್‌ನೊಂದಿಗೆ ಸಮ್ಮಿಳಿತಗೊಳಿಸಲಾಯಿತು.[೧೯೬]

೧೮೯೧-೯೨-೯೩ ಮತ್ತು ೯೩-೯೪ ರಕ್ಷಣೆ ನೀಡಿದಕ್ಕಾಗಿ ಮುನಿಸಿಪಾಲಿಟಿಗಳು ನೀಡಿದ ಹಣ- ಸಿಬ್ಬಂದಿ ಮತ್ತು ಅಧಿಕಾರಿಗಳ ಖರ್ಚಿನ ವಿವರ

ಇಸವಿ	ಅಧಿಕಾರಿ ಮತ್ತು ಸಿಬ್ಬಂದಿ	ಖರ್ಚು
೧೮೯೧	೧೧೯	೧೧,೨೯೧
೧೮೯೨-೯೩	೧೦೦	೧೧,೭೪೦
೧೮೯೩-೯೪	೧೦೦	೧೦,೭೮೧

೧೮೯೧ ರಲ್ಲಿ ತಾಲೂಕು ಕೇಂದ್ರಗಳಲ್ಲಿ (ಯಾವುದು ಮುನ್ಸಿಫಲ್ ಕೇಂದ್ರಗಳಾಗಿದ್ದವೋ ಅವು) ಸ್ಥಳೀಯ ನಿವಾಸಿಗಳಿಂದ ನಡೆಯುತ್ತಿದ್ದ ರಾತ್ರಿಗಸ್ತು ಪದ್ಧತಿಯನ್ನು ರದ್ದುಗೊಳಿಸಲಾಯಿತು. ಈ ವ್ಯವಸ್ಥೆಯನ್ನು ಸ್ಥಳೀಯ ಪೊಲೀಸರಿಗೆ ವಹಿಸಲಾಯಿತು.[೧೯೭] (ಪೊಲೀಸರೊಂದಿಗೆ ಸ್ಥಳೀಯ ನಿವಾಸಿಗಳು ಸೇರಿಕೊಂಡು ರಾತ್ರಿ ಗಸ್ತು ಮಾಡುವ ಪದ್ಧತಿಯು ಇತ್ತೀಚಿನ ಕೆಲವು ವರ್ಷಗಳವರೆಗೂ ನಡೆದುಕೊಂಡು ಬಂದಿತ್ತು. ಪೊಲೀಸ್ ಸಿಬ್ಬಂಧಿಯವರ ಕೊರತೆ ಇರುವ ಪ್ರದೇಶಗಳಲ್ಲಿ ಈ ರೀತಿ ಸ್ಥಳೀಯ ನಿವಾಸಿಗಳು ದಿನಕ್ಕೆ ಒಂದೊಂದು ಮನೆಯವರಂತೆ ರಾತ್ರಿಗಸ್ತಿಗೆ ಬರುತ್ತಿದ್ದರು. ಈ ರೀತಿಯ ವ್ಯವಸ್ಥೆಯಿಂದಾಗಿ ಪೊಲೀಸ್ ಮತ್ತು ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಏರ್ಪಡುತ್ತಿತ್ತು. ಹಳ್ಳಿಗಳ ಮತ್ತು ಈ ಹಿಂದೆ ಇದ್ದ ಮುನ್ಸಿಪಾಲಿಟಿ ನಗರಗಳೂ ಸಹ ಅತ್ಯಂತ ಚಿಕ್ಕದಾಗಿದ್ದು, ಒಬ್ಬರಿಗೊಬ್ಬರು ಪರಸ್ಪರ ಪರಿಚಯವಿರುವ ಮತ್ತು ತಮ್ಮ ರಕ್ಷಣೆಗಾಗಿ ಇಡೀ ಹಳ್ಳಿ ಅಥವಾ ನಗರ ಒಟ್ಟಾಗಿ ಕೆಲಸ ಮಾಡುವ ಮನೋಧರ್ಮವಿತ್ತು. ಆದರೆ ಈಗ ನಗರಗಳು ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಈ ವ್ಯವಸ್ಥೆ ನಶಿಸಿ ಹೋಗಿದೆ.)

೭. ೨೧ :- ಆಸ್ತಿಪಾಸ್ತಿ ಕಳ್ಳತನ ಮತ್ತು ಕಳವು ಮಾಲು ಸ್ವೀಕಾರ

೧೮೮೮ ರಲ್ಲಿ ಸ್ವತ್ತು ಕಳವು ಪ್ರಕರಣಗಳು ೯೬ ವರದಿಯಾದರೆ ೧೮೮೭ ರಲ್ಲಿ ೧೧೫ ವರದಿಯಾಗಿದ್ದವು. ಕಳವು ಮಾಲು ಪತ್ತೆ ೧೮೮೮ ರಲ್ಲಿ ೧೦.೯೪೭ ರೂಪಾಯಿಗಳ ಮಾಲು ಕಳವಾಗಿದ್ದರೆ, ೬,೦೨೧ ರೂಪಾಯಿಗಳಾಗಿದ್ದು ಪತ್ತೆ ಆಗಿತ್ತು. ೧೮೮೭ ರಲ್ಲಿ ೭,೪೬೨ ರೂಪಾಯಿ ಮಾಲುಗಳ ಕಳ್ಳತನವಾಗಿದ್ದರೆ, ೨,೧೫೦ ರೂಗಳ ಮಾಲು ಪತ್ತೆ ಆಗಿತ್ತು. ಶೇಕಡವಾರು ಕಳವು ಮಾಲು ಪತ್ತೆ ೧೮೮೭ ರಲ್ಲಿ ೨೮.೮೧%, ೧೮೮೮ ರಲ್ಲಿ ೫೫% ಆಗಿತ್ತು.[೧೯೮]

೧೮೯೧ ರಿಂದ ೧೮೯೫ ರವರೆಗೆ ಕಳ್ಳತನವಾದ ವಸ್ತುಗಳ ಮೌಲ್ಯ ಮತ್ತು ವಶಪಡಿಸಿಕೊಂಡ ವಸ್ತುಗಳ ಮೌಲ್ಯ[೧೯೯]

ಇಸವಿ	ಕಳವಾದ ಸೊತ್ತುಗಳ ಮೌಲ್ಯ	ವಶಪಡಿಸಿಕೊಂಡ ಸೊತ್ತುಗಳ ಮೌಲ್ಯ	ಸರಾಸರಿ
೧೮೯೧	೯೨,೫೮೭	೩೩,೧೮೦	೩೫.೮
೧೮೯೨-೯೩ (೬ ತಿಂಗಳು)	೫೬,೫೮೭	೧೧,೦೫೪	೧೯.೫
(೧೨ ತಿಂಗಳು)	೯೬,೬೫೮	೨೭,೦೮೧	೨೮.೨
೧೮೯೩-೯೪	೧,೦೭,೦೭೫	೩೨,೩೦೩	೩೦.೨
೧೮೯೪-೯೫	೮೯,೪೦೨	೩೨,೦೨೧	೩೫.೮

೧೯೦೫-೦೬ ರಲ್ಲಿ ೨೯೮೫ ಪ್ರಕರಣಗಳಲ್ಲಿ ೨.೧೨-೮೧೦ ರೂ ಮೌಲ್ಯದ ವಸ್ತುಗಳನ್ನು ಪತ್ತೆಮಾಡಲಾಗಿತ್ತು.[೨೦೦]

ವರ್ಷ	ಕಳವು ಮಾಲು ಪ್ರಕಣಗಳ ಸಂಖ್ಯೆ	ಕಳವು ಮಾಲು ಪತ್ತೆ ಮಾಡಿದ ಪ್ರಕರಣಗಳ ಸಂಖ್ಯೆ	ಕಳವು ಮಾಲು ಪತ್ತೆಯಾದ ಪ್ರಕರಣಗಳ ಸರಾಸರಿ	ಕಳವಾದ ಮಾಲಿನ ಮೌಲ್ಯ	ಪತ್ತೆಮಾಡಿದ ಮಾಲಿನ ಮೌಲ್ಯ	ಸರಾಸರಿ ಪತ್ತೆ
೧೯೦೫-೦೬	೨೯೮೫	೧೯೦೩	೬೩.೭	೨,೧೨,೮೧೦	೮೧,೬೦೯	೩೮.೩
೧೯೦೪-೦೫	೨	೧೮೧೪	೬೪.೧	೨,೩೮,೯೬೬	೭೫,೨೨೭	೩೧.೪

೧೯೦೪-೦೫ ರಲ್ಲಿ ಸಂಜ್ಞೆಯ ಅಪರಾಧಗಳಲ್ಲಿ ಕಳ್ಳತನವಾದ ಆಸ್ಥಿಪಾಸ್ಥಿಗಳ ಮೌಲ್ಯ ೩೩,೫೬೯ ರೂಪಾಯಿಗಳು ಪತ್ತೆಯಾಗಿದ್ದು, ೧೮,೩೦೪ ರೂಪಾಯಿಗಳು. ಕಳ್ಳತನ ಮಾಡಿದ ವಸ್ತುಗಳನ್ನು ಖರೀದಿಸಿದ ಒಟ್ಟು ೧೨ ಪ್ರಕರಣಗಳು ದಾಖಲಾಗಿದು, ಅದರಲ್ಲಿ ೬ ಪ್ರಕಣಗಳಲ್ಲಿ ೧೨ ಜನರು, ೬ ಜನರಿಗೆ ಶಿಕ್ಷೆಯಾಯಿತು.[೨೦೧] ೧೯೧೩-೧೪ ರಲ್ಲಿ ವರದಿಯಾದ ಸಂಜ್ಞೆಯ ಅಪರಾಧಗಳಲ್ಲಿ ಕಳವಾಗ ಮಾಲುಗಳ ಮೌಲ್ಯ ೨೬,೨೪೫/- ರೂ ಆಗಿತ್ತು. ೧೯೦೪-೦೫ ರಲ್ಲಿ ವಶಪಡಿಸಿಕೊಂಡ ಕಳವು ಮಾಲುಗಳ ಮೌಲ್ಯ ೧೧,೨೯೮/- ರೂಪಾಯಿಗಳು. ೧೯೧೨-೧೩ ರಲ್ಲಿ ಇದು ೫೧೧೪ ರೂ. ಆಗಿತ್ತು. ವಶಪಡಿಸಿಕೊಂಡ ಮಾಲುಗಳ ಮೌಲ್ಯ ಸರಾಸರಿಯಲ್ಲಿ ೧೯೧೩-೧೪ ರಲ್ಲಿ ೪೩.೪೪% ಆದರೆ, ೧೯೧೨-೧೩ ರಲ್ಲಿ ೨೧.೮೩% ಆಗಿತ್ತು. ಕಳವು ಮಾಲುಗಳನ್ನು ಸ್ವೀಕರಿಸಿದ ಬಗ್ಗೆ ೧೭ ಪ್ರಕರಣಗಳು ದಾಖಲಾಗಿದ್ದು, ಎಲ್ಲಾ ಪ್ರಕರಣಗಳಿಗೂ ನ್ಯಾಯಾಲಯದಲ್ಲಿ ಶಿಕ್ಷೆಯಾಗಿತ್ತು. ೧೩ ಜನರನ್ನು ದಸ್ತಗಿರಿ ಮಾಡಲಾಗಿತ್ತು. ೧೧ ಜನರಿಗೆ ಶಿಕ್ಷೆಯಾಗಿ ಇಬ್ಬರು ಖುಲಾಸೆಗೊಂಡಿದ್ದರು.[೨೦೨].೧೯೧೪-೧೫ ರಲ್ಲಿ ವರದಿಯಾದ ಸಂಜ್ಞೆಯ ಅಪರಾಧಗಳಲ್ಲಿ ಕಳ್ಳತನವಾದ ಮಾಲುಗಳ ಒಟ್ಟು ಮೊತ್ತ ೧೭.೯೨೪ ರೂ. ಇದು ೧೯೧೩-೧೪ ರಲ್ಲಿ ೨೬.೨೨೦ ರೂ ಆಗಿತ್ತು. ೧೯೧೪-೧೫ ರಲ್ಲಿ ಕಳವು ಮಾಲು ವಶಪಡಿಸಿಕೊಂಡ ಮೌಲ್ಯ ೫೭೨೭. ಇದು ೧೯೧೩-೧೪ ರಲ್ಲಿ ೧೧.೨೯೮ ರೂ ಆಗಿತ್ತು. ೧೯೧೪-೧೫ ರಲ್ಲಿ ೪೧.೯೯% ಆಗಿದ್ದರೆ ೧೯೧೩-೧೪ ರಲ್ಲಿ ವಶಪಡಿಸಿಕೊಂಡ ಮಾಲುಗಳ ಸರಾಸರಿ ೪೩.೪೪%[೨೦೩]

ಕಳವು ಮಾಲು ಪಡೆದವರು -೧೯೧೪-೧೫ ರಲ್ಲಿ ಕಳವು ಮಾಲು ಪಡೆದ ೧೩ ಪ್ರಕರಣ ದಾಖಲಾಗಿದ್ದು, ಅದರಲ್ಲಿ ೯ ರಲ್ಲಿ ಶಿಕ್ಷೆಯಾಗಿದ್ದು, ೨ ಪ್ರಕರಣ ವಜಾ ಆಗಿದ್ದು,. ಒಂದು ಪ್ರಕರಣವನ್ನು ಹೊಡೆದು ಹಾಕಲಾಗಿತ್ತು. ೧ ಪ್ರಕರಣ ತನಿಖೆಗೆ ಬಾಕಿ ಇತ್ತು. ಈ ಬಗ್ಗೆ ೧೧ ಜನರನ್ನು ದಸ್ತಗಿರಿ ಮಾಡಿದ್ದು, ೯ ಜನರಿಗೆ ಶಿಕ್ಷೆಯಾದರೆ ಇಬ್ಬರು ಖುಲಾಸೆಗೊಂಡಿದ್ದರು.[೨೦೪] ೧೯೧೫-೧೬ ರಲ್ಲಿ ವರದಿಯಾದ ಒಟ್ಟು ಸಂಜ್ಞೆಯ ಅಪರಾಧಗಳಲ್ಲಿ ನಷ್ಟವಾದ ಮಾಲು ರೂ. ೧೧.೪೮೩ ಇದು ೧೯೧೪-೧೫ರಲ್ಲಿ ೧೭.೯೨೪ ಆಗಿದ್ದು, ಕಳವು ಮಾಲು ವಶ ೧೯೧೫-೧೬ ರಲ್ಲಿ ರೂ ೫೩೦೮ ಆದರೆ ೧೯೧೪-೧೫ ರಲ್ಲಿ ೭೫೨೭ ಆಗಿದ್ದು, ಸರಾಸರಿ ೧೯೧೫-೧೬ ರಲ್ಲಿ ೪೬.೨೨%, ೧೯೧೪-೧೫ ರಲ್ಲಿ ೪೧.೯೯% ಆಗಿತ್ತು. ಕಳವು ಮಾಲು ಸ್ವೀಕರಿಸಿದ ೧೫ ಪ್ರಕರಣ ದಾಖಲಾದರೆ ಎಲ್ಲವೂ ಶಿಕ್ಷೆಯಾದವು. ೧೫ ಜನ ದಸ್ತಗಿರಿ ಆಗಿ ಎಲ್ಲರೂ ಶಿಕ್ಷೆ ಅನುಭವಿಸಿದರು.[೨೦೫] ೧೯೨೨-೨೩ ರಲ್ಲಿ ಕಳ್ಳತನವಾದ ಒಟ್ಟು ಆಸ್ತಿ ಮೌಲ್ಯ ೨,೨೫,೮೯೧ ರೂಪಾಯಿ ಮಾಲು ವಶಪಡಿಸಿಕೊಂಡಿದ್ದು, ೮೨.೭೮೨ ರೂ ೧೯೨೧-೨೨ ರಲ್ಲಿ ಇದು ಅನುಕ್ರಮವಾಗಿ ರೂ. ೨,೮೪,೦೮೪ ಹಾಗೂ ರೂ. ೧,೯೯,೯೩೦ ಆಗಿತ್ತು.[೨೦೬] ೧೯೨೪-೨೫ ರಲ್ಲಿ ೩೧೫೭ ಸಂಜ್ಞೆಯ ಅಪರಾಧಗಳಲ್ಲಿ ಕಳವಾದ ಆಸ್ತಿಪಾಸ್ತಿ ಒಟ್ಟು ೨,೪೭,೩೬೮ ರೂಗಳದ್ದು, ೧೯೨೩-೨೪ ರಲ್ಲಿ ೨೫೨೪ ಪ್ರಕರಣಗಳಲ್ಲಿ ೨,೦೯,೫೧೫ ರೂ ಬೆಲೆಯ ಮಾಲುಗಳು ಕಳ್ಳತನವಾಗಿತ್ತು. ೧೯೨೧-೨೨ ರಲ್ಲಿ ೨೨೨೩ ಪ್ರಕರಣಗಳಲ್ಲಿ ೧,೧೮,೩೧೫ ರೂಗಳ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ೧೯೨೦-೨೧ ರಲ್ಲಿ ೧೮೦೬ ಪ್ರಕರಣಗಳಲ್ಲಿ ೧,೧೧,೪೮೨ ರೂಗಳ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಕಳುವಾದ ಮಾಲುಗಳನ್ನು ವಶಪಡಿಸಿಕೊಂಡ ಸರಾಸರಿ ೧೯೨೪-೨೫ ರಲ್ಲಿ ೪೭.೮೩% ಆದರೆ

೧೯೨೩-೨೪ ರಲ್ಲಿ ೫೩.೨೧% ಆಗಿತ್ತು.[೨೦೭] ೧೯೨೬-೨೭ ರಲ್ಲಿ ೨೮೨೧ ಸಂಜ್ಞೆಯ ಅಪರಾಧಗಳಲ್ಲಿ ಕಳವಾದ ವಸ್ತುಗಳ ಒಟ್ಟು ಮೌಲ್ಯ ೨,೯೬,೪೮೮ ರೂ ಆಗಿತ್ತು. ೧೯೨೫-೨೬ರಲ್ಲಿ ೨೫೪೬ ಪ್ರಕರಣಗಳಲ್ಲಿ ೨,೨೫,೧೦೬ ರೂಗಳ ನಷ್ಟ ಉಂಟಾಗಿತ್ತು. ೧೯೨೬-೨೭ ರಲ್ಲಿ ೧೭೫೮ ಪ್ರಕರಣಗಳಲ್ಲಿ ೧,೪೩,೦೫೩ ರೂ ಬೆಲೆಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ೧೯೨೫-೨೬ ರಲ್ಲಿ ೧೮೪೫ ಪ್ರಕರಣಗಳಲ್ಲಿ ೧,೩೦,೦೦೨ ರೂನ ಕಳವು ಮಾಲು ವಶಪಡಿಸಿಕೊಳ್ಳಲಾಯಿತು. ೧೯೨೬-೨೭ ರಲ್ಲಿ ಸರಾಸರಿ ೪೮.೨೫% ವಸ್ತುವಾಗಿದ್ದರೆ ೧೯೨೫-೨೬ ರಲ್ಲಿ ಇದು ೪೫.೭೫% ಆಗಿತ್ತು.[೨೦೮] ೧೯೪೧-೪೨ ರಲ್ಲಿ ಕಳುವಾದ ಮಾಲುಗಳನ್ನು ವಶಪಡಿಸಿಕೊಂಡ ಸರಾಸರಿ ಪ್ರಮಾಣ ೪೨.೦% ರಿಂದ ೪೬.೦% ಕ್ಕೆ ಏರಿತು [೨೦೯]

೧೮೮೭ ರಿಂದ ೧೯೪೭ ರವರೆಗೆ ಕಳವಾದ ವಸ್ತುಗಳ ಮೌಲ್ಯ, ಪತ್ತೆಯಾದ ವಸ್ತುಗಳ ಮೌಲ್ಯ, ಅವುಗಳ ಸರಾಸರಿ ಬಗ್ಗೆ ಅನುಬಂಧ – ೩೬ ನ್ನು ನೋಡಿರಿ.

೭.೨೨:. ಅಪರಾಧ ತಡೆ ಕಾರ್ಯಗಳು

ಅಪರಾಧ ತಡೆ ಮತ್ತು ಪತ್ತೆ ಪೊಲೀಸರ ಮುಖ್ಯ ಕರ್ತವ್ಯ. ಮುಂದೆ ನಡೆಯಬಹುದಾದ ಅಪರಾಧ ಘಟನೆಗಳನ್ನುತಡೆಯುವ ಸಲುವಾಗಿ ಶಾಂತಿ ಸುವ್ಯವಸ್ಥೆ ಕಾಪಾಡುವ ಸಲುವಾಗಿ ಅಪರಾಧಿಕ ಹಿನ್ನಲೆಯುಳ್ಳ ವ್ಯಕ್ತಿಗಳಿಂದ ಮುಚ್ಚಳಿಕೆಯನ್ನು ಬರೆಯಿಸಿ ಕೊಳ್ಳಲಾಗುತ್ತಿದ್ದು ಸಿ.ಆರ್.ಪಿ.ಸಿ ಕಲಂ ೧೦೭, ೧೦೯ ಮತ್ತು ೧೧೦ಗಳು ಮುಂದೆ ನಡೆಯುವ ಅಪರಾಧಗಳನ್ನು ತಡೆಯಲು ಇಂತಹ ವ್ಯಕ್ತಿಗಳಿಂದ ಮುಚ್ಚಳಿಕೆ ಪಡೆಯಲು ಪೊಲೀಸರಿಗೆ ಅಧಿಕಾರ ನೀಡಿತ್ತು.

ಸಮಾಜದಲ್ಲಿ ಶಾಂತಿ ಮತ್ತು ಸದ್ವರ್ತನೆಯನ್ನು ಕಾಪಾಡುವ ಸಲುವಾಗಿ ೧೮೯೧ ರಿಂದ ೯೫ ರವರೆಗೆ ಒಟ್ಟು ೨೪೦ ಜನರಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಳ್ಳಲು ದಸ್ತಗಿರಿಮಾಡಲಾಯಿತು. ಇದು ವರ್ಷಕ್ಕೆ ಸರಾಸರಿ ೫೩% ಆಗಿತ್ತು. ಇದರಲ್ಲಿ ಒಟ್ಟು ೧೩೪ ಜನರಿಗೆ ಶಿಕ್ಷೆಯಾಯಿತು. ಇದು ಸರಾಸರಿ ೫೫.೮% ಆಗಿತ್ತು. ಇದು ವಾರ್ಷಿಕ ಸರಾಸರಿ ೩೦ ಜನರಿಗೆ ಶಿಕ್ಷೆಯಾದಂತಾಗಿತ್ತು. ಇದರ ಘೋಷ್ವಾರೆ ಇಲ್ಲಿದೆ.

ಇಸವಿ	ದಸ್ತಗಿರಿ	ಬಿಡುಗಡೆ ಮತ್ತು ಖುಲಾಸೆ	ಸಜಾ
೧೮೯೧	೮೯	೩೯	೫೦
೧೮೯೨-೯೩ (೧೮ ತಿಂಗಳು)	೪೯	೧೬	೨೯
೧೮೯೩-೯೪	೨೬	೧೧	೧೨
೧೮೯೪-೯೫	೭೬	೩೩	೪೩
ಒಟ್ಟು	೨೪೦	೯೯	೧೩೪

ಕೆಟ್ಟ ನಡವಳಿಕೆಯವರ ಮೇಲೆ ಕ್ರಮ ೧೯೦೪-೦೫ ರಲ್ಲಿ ಕಲಂ: ೫೫ ಮತ್ತು ೧೧೦ ಸಿಆರ್‌ಪಿಸಿ ಅನ್ವಯ ೨ ಪ್ರಕರಣಗಳಲ್ಲಿ ನ್ಯಾಯಾಧೀಶರ ಮುಂದೆ ಆರೋಪಣೆ ಪಟ್ಟಿ ಸಲ್ಲಿಸಿದ್ದು, ಅದರಲ್ಲಿ ೧ ಪ್ರಕರಣ ಖುಲಾಸೆಗೊಂಡರೆ [೨೧೦] ಒಂದು ಪ್ರಕರಣದಲ್ಲಿ ಶಿಕ್ಷೆಯಾಯಿತು[೨೧೧] ೧೯೧೩-೧೪ ರಲ್ಲಿ ಶಾಂತಿಪಾಲನೆ, ಸದ್ವರ್ತನೆಗಾಗಿ ಇರುವ ಸಿಆರ್‌ಪಿಸಿಯ ಕಲಂಗಳಡಿ ಅಪರಾಧಗಳನ್ನು ಪೂರ್ವಭಾವಿಯಾಗಿ ತಡೆಯುವ ದೃಷ್ಟಿಯಿಂದ ಕಲಂ: ೧೦೯, ೧೧೦ ಸಿಆರ್‌ಪಿಸಿ ಯಡಿಯಲ್ಲಿ ೧೦ ಜನರಿಂದ ಸದ್ವರ್ತನೆಗಾಗಿ ಮುಚ್ಚಳಿಕೆ ಬರೆಸಿಕೊಳ್ಳಲಾಯಿತು. ಒಬ್ಬನನ್ನು ವಜಾಗೊಳಿಸಲಾಗಿತ್ತು.[೨೧೨]

೧೯೧೪-೧೫ರಲ್ಲಿ ಸಿಆರ್‌ಪಿಸಿ ಕಲಂ ೧೦೯ ಮತ್ತು ೧೧೦ ರ ಅಡಿಯಲ್ಲಿ ಇಬ್ಬರು ವ್ಯಕ್ತಿಗಳ ವಿರುದ್ದ ಕ್ರಮ ಜರುಗಿಸಲಾಗಿತ್ತು.[೨೧೩] ೧೯೧೫-೧೬ ರಲ್ಲಿ ಕಲಂ: ೧೦೯, ೧೧೦ ಸಿಆರ್‌ಪಿಸಿ ಪ್ರಕಾರ ೩ ಜನರ ಮೇಲೆ ಕ್ರಮ ಜರುಗಿಸಲಾಯಿತು. ಸುಳ್ಳು ಪಿರ್ಯಾದು ನೀಡಿದ ಒಬ್ಬ ವ್ಯಕ್ತಿಯ ಮೇಲೆ ಕ್ರಮ ಜರುಗಿಸಿದ್ದು,(೧೯೩)ಆತನಿಗೆ ಶಿಕ್ಷೆಯಾಗಿತ್ತು.[೨೧೪] ೧೯೨೨-೨೩ರಲ್ಲಿ ಅಪರಾಧ ತನಿಖೆ ಕೆಲಸ ಮಾಡುವ ಸಿಬ್ಬಂದಿಗಳು ಈ ಕೆಲಸದ ಜೊತೆಗೆ ಅಪರಾಧಿ ಗುಂಪುಗಳ ಚಲನವಲನದ ಬಗ್ಗೆ

ಮಾಹಿತಿ ಸಂಗ್ರಹಿಸಬೇಕಿತ್ತು. ಎ)ಬೆಂಗಳೂರು ತಾಲೂಕಿನಲ್ಲಿ ನಡೆದ ಕೊಲೆಯ ತನಿಖೆಗೆ ಸಹಕರಿಸಬೇಕಿತ್ತು. ಬಿ) ಸಕಲೇಶಪುರ ತಾಲೂಕಿನಲ್ಲಿ ನಡೆದ ಖೋಟಾನೋಟು ಪ್ರಕರಣ ಬೆಂಗಳೂರುನಗರ ಮತ್ತು Civil & militory station ಸಿ) ಚೆನ್ನಪಟ್ಟಣ ತಾಲೂಕಿನಲ್ಲಿ ನಡೆದ ಕಿಲಾಫತ್ ನೋಟು ವಂಚನೆ ಪ್ರಕರಣ, ಡಿ)ರೈಲುಗಳಲ್ಲಿ ನಡೆದ ನಗದು ಕಳ್ಳತನ ಪ್ರಕರಣ, ಇ)ನಂಜನಗೂಡಿನಲ್ಲಿ ನಡೆದ ಪಾರ್ಸೆಲ್ ಕಳ್ಳತನ, ಎಫ್) ಮೈಸೂರು, ಬೆಂಗಳೂರು ನಡುವೆ ರೈಲಿನಲ್ಲಿ ನಡೆದ ವಾಚುಕಳ್ಳತನ ಪ್ರಕರಣಗಳ ತನಿಖೆಗೆ ಸಹಕರಿಸಬೇಕಾಗಿತ್ತು. ಈ ವರ್ಷ ೧೫೧ಲ ಕೆ.ಡಿಗಳಿದ್ದು, ೧೧೭೫ ಹಾಜರಿದ್ದರೆ, ೧೬೪ ಜನ ತಲೆಮರೆಸಿಕೊಂಡಿದ್ದರು. ೫೭ ಜನ ಮೃತಪಟ್ಟರೆ, ೫೬ ಜನ ಜೈಲಿನಲ್ಲಿ ಇದ್ದರು. ೪೯ ಜನರನ್ನು ಬೇರೆ ಸರಹದ್ದುಗಳಿಗೆ ವರ್ಗಾಯಿಸಲಾಯಿತು. ೧೭ ಜನರನ್ನು ಕೆ.ಡಿ ರಿಜಿಸ್ಟಾರ್‌ನಿಂದ ಕೈಬಿಡಲಾಯಿತು. ೧೯೨೨-೨೩ ರಲ್ಲಿ ೧೧ ಕೆ.ಡಿಗಳಿಗೆ ಶಿಕ್ಷೆಯಾಯಿತು. ೭೫ ಹಳೇ ಅಪರಾಧಿಗಳಿಗೆ ೩ ಕ್ಕಿಂತ ಹೆಚ್ಚುವರಿ ಶಿಕ್ಷೆಯಾದವರಿಗೆ ಪುನ: ಶಿಕ್ಷೆ ನೀಡಲಾಯಿತು. ೧೯೨೨-೨೩ರಲ್ಲಿ ವರದಿಯಾದ ೫೭೧ ಘೋರ ಅಪರಾಧಗಳಲ್ಲಿ ಜಿಲ್ಲಾ ಮತ್ತು ಸಹಾಯಕ ಸೂಪರಿಂಟೆಂಡೆಂಟ್ ರವರ ಪತ್ತೆ ಕಾರ್ಯದಲ್ಲಿ ಹೆಚ್ಚು ಪಾತ್ರವಹಿಸಿದ್ದರು. ಉತ್ತಮ ಪತ್ತೆಕಾರ್ಯದಲ್ಲಿ ೧೯೨೨-೨೩ ರಲ್ಲಿ ಶಿವಮೊಗ್ಗ ಜಿಲ್ಲೆ ಪ್ರಥಮ ಸ್ಥಾನ ಪಡೆಯಿತು. ಚಿತ್ರದುರ್ಗ, ತುಮಕೂರು, ಕೆ.ಜಿ.ಎಫ್‌ಗಳು ಕ್ರಮವಾಗಿ ಎರಡನೇ, ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು. ಫ್ರೆಂಚ್‌ರಾಕ್ ಸರ್ಕಲ್ ಮತ್ತು ಬೆಂಗಳೂರು ಜಿಲ್ಲೆಗಳು ಕೊನೆಯ ಮತ್ತು ಹತ್ತನೇ ಸ್ಥಾನ ಪಡೆದವು.[೨೧೫] ೧೯೨೩-೨೪ ರಲ್ಲಿ ಪ್ರತೀ ದಿನದ ಕೆಲಸದ ಜೊತೆಗೆ ಅಪರಾಧಗಳ ತನಿಖೆ ಮಾಡುವ ಸಿಬ್ಬಂದಿಯವರನ್ನು ಕೆಲವು ಪ್ರಾಮುಖ್ಯವಾದ ಪ್ರಕರಣಗಳ ತನಿಖೆಗೆ ನೇಮಿಸಲಾಯಿತು. ಅವುಗಳೆಂದರೆ, ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿದ್ದ ಶ್ರೀಗಂಧ ಕಳ್ಳಸಾಗಾಣೆ ಮತ್ತು ನಿಡವಂಡ ಮತ್ತು ಹಿರೇಹಳ್ಳಿ ರೈಲ್ವೆ ಸ್ಟೇಷನ್‌ಗಳ ನಡುವೆ ಚಲಿಸುವ ರೈಲುಗಳಲ್ಲಿ ನಡೆಯುತ್ತಿದ್ದ ಕಳ್ಳತನಗಳ ತನಿಖೆಗೆ ನೇಮಿಸಲಾಯಿತು. ಇವರು ಸುಮಾರು ಅರ್ಧ ಡಜನ್‌ಗೂ ಹೆಚ್ಚಿನ ಕ್ಲಿಷ್ಟಕರವಾದ ಪ್ರಕರಣಗಳಲ್ಲಿ ಸ್ಥಳೀಯ ಪೊಲೀಸರಿಗೆ ತನಿಖೆಯಲ್ಲಿ ಸಹಕರಿಸಿದರು.[೨೧೬] ೧೯೨೪-೨೫ ರಲ್ಲಿ ಮೈಸೂರು ಜಿಲ್ಲೆ ಮತ್ತು ಫ್ರೆಂಚ್‌ರಾಕ್ ಸರ್ಕಲ್ (ಪಾಂಡವಪುರ) ಗಳಲ್ಲಿ ವರದಿಯಾದ ಕೆಲವು ದೌರ್ಜನ್ಯಕ್ಕೆ ಒಳಗಾದ ಪಂಗಡಗಳ ಮೇಲೆ ನಡೆದ ಮೋಸದ ಪ್ರಕರಣ ಮತ್ತು ಕನ್ನಕಳವು ಪ್ರಕರಣಗಳಲ್ಲಿ ವಿಚಾರಣೆ ನಡೆಸಲು ಅಪರಾಧ ತನಿಖಾ ಹಂತದ ಸಿಬ್ಬಂದಿಯನ್ನು ನೇಮಸಲಾಯಿತು. ಇಂತಹ ಅಪರಾಧಗಳು ಮರಾಠಿ ಗುಂಪುಗಳು ಮಾಡಿದ್ದವು. ನಂಜನಗೂಡು ಪೊಲೀಸ್ ಠಾಣೆಯಲ್ಲಿ ಬೋಗಸ್ ಸರ್ವೆಯರ್ (ನಕಲಿ) ಮತ್ತು ದಾವಣ ಗೆರೆಯ ಟ್ರಜರಿಯಲ್ಲಿ ೧೦೦ ರೂಪಾಯಿ ಖೋಟಾನೋಟು ಪತ್ತೆಯಾದ ನಾಲ್ಕು ಕ್ಲಿಷ್ಟಕರ ಪ್ರಕರಣ ಪತ್ತೆ ಮಾಡಲು ಈ ತನಿಖಾ ತಂಡ ನೆರವು ನೀಡಿತು. ೧೫೫೭ ಕೆ.ಡಿಗಳನ್ನು ದಾಖಲೆಗಳಲ್ಲಿ (ವಿವಿದ ಜಿಲ್ಲೆ ಹಾಗೂ ನಗರಗಳಲ್ಲಿ) ನೊಂದಾಯಿಸಲಾಯಿತು. ಇದರಲ್ಲಿ ೪೭ ಜನ ಮೃತಪಟ್ಟರು. ೧.೧೯೫ ಜನ ಹಾಜರಾದರೆ ೨೦೬ ಜನ ತಲೆಮರೆಸಿ ಕೊಂಡಿದ್ದರು. (O.V out of view) ೬೫ ಜನ ಜೈಲಿನಲ್ಲಿ ಇದ್ದರು. ೪೪ ಜನ ಬೇರೆ ಸರಹದ್ದುಗಳಿಗೆ ವರ್ಗಾಯಿಸಲ್ಪಟ್ಟರು.

೧೯೨೪-೨೫ ರಲ್ಲಿ ೨೫ ಜನ ಶಿಕ್ಷೆಗೆ ಒಳಗಾದ ವ್ಯಕ್ತಿಗಳ ಮನೆಯ ಮೇಲೆ ನ್ಯಾಯಾಲಯ ನೋಟಿಸು ಮಾಡಿತು. ೧೯೨೩-೨೪ ರಲ್ಲಿ ಇದರ ಸಂಖ್ಯೆ ೧೫ ಆಗಿತ್ತು. ೬೧ ಪ್ರಕರಣಗಳಲ್ಲಿ ೭೫ ಜನರ ಕೆಟ್ಟನಡತೆಯವರೆಂದು ಗುರುತಿಸಲಾಯಿತು. ಕ೧೯೨೩-೨೪ ರಲ್ಲಿ ೫೫ ಪ್ರಕರಣಗಳಲ್ಲಿ ೧೦೦ ಜನರನ್ನು ಕೆಟ್ಟ ನಡತೆಯವರೆಂದು ಗುರುತಿಸಲಾಯಿತು. ೬೬೫ ಘೋರ ಅಪರಾಧಗಳು ೧೯೨೪-೨೫ ರಲ್ಲಿ ವರದಿಯಾದವು. ಸೂಪರಿಂಟೆಂಡೆಂಟ್ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳು ಎಲ್ಲಾ ಘೋರ ಅಪರಾಧಗಳಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ತನಿಖೆ ಮಾಡುವಂತೆ ಆದೇಶಿಸಲಾಯಿತು.[೨೧೭] ೧೯೪೧-೪೨ ರಲ್ಲಿ ಕೆಟ್ಟ ನಡತೆಯವರ ಪಟ್ಟಿಯಲ್ಲಿ ೧೧೪ ಜನ ಹೊಸದಾಗಿ ಸೇರ್ಪಡೆಯಾದರು.

೩೩೬ ಜನ ಕೆಟ್ಟನಡತೆಯವರು ಶಿಕ್ಷೆಗೊಳಗಾದರು. ೩೧೨ ಜನರಿಗೆ ಸೆಕ್ಯುರಿಟಿ ಕಲಂ (ರಕ್ಷಣಾತ್ಮಕ ಕಲಂ) ಗಳಲ್ಲಿ ಪ್ರಕರಣ ದಾಖಲಿಸಲಾಯಿತು.[೨೧೮]

೭.೨೩: ಘೋರ ಅಪರಾಧಗಳು

ಪೊಲೀಸ್ ಮ್ಯಾನುವೆಲ್ ಭಾಗ ೨ ರ ಆದೇಶ ಸಂಖ್ಯೆ ೨೧೬ ರಂತೆ ಘೋರ ಅಪರಾಧಗಳೆಂದರೇನು ಎಂದು ವ್ಯಾಖ್ಯಾನಿಸಲಾಗಿದೆ. ಅದರಂತೆ ದರೋಡೆ, ಕೊಲೆ, ಸುಲಿಗೆ, ಅತ್ಯಾಚಾರ, ಖೋಟಾನೋಟು ಪ್ರಕರಣ, ಅಪಹರಣ ಇತ್ಯಾದಿ ಪ್ರಕರಣಗಳು ಘೋರ ಅಪರಾಧಗಳು.[೨೧೯]

೧೮೯೧ ರಿಂದ ೧೮೯೫ ರವರೆಗೆ ವರದಿಯಾದ ಘೋರ ಅಪರಾಧಗಳು ಅವುಗಳಲ್ಲಿ ತನಿಖೆಗೆ ಬಾಕಿ, ಅದರ ಪರಿಣಾಮ, ಅಪರಾಧಿಗಳ ದಸ್ತಗಿರಿಗಳ ವಿವರ ಈ ಕೆಳಗಿದೆ.[೨೨೦]

	೧೮೯೧	೧೮೯೨-೯೩		೧೮೯೩-೯೪	೧೮೯೪-೯೫
		೬ ತಿಂಗಳು	೧೨ ತಿಂಗಳು		
ಪ್ರಕರಣ ವರದಿ ಮತ್ತು ಬಾಕಿ	೬,೪೫೭	೪,೩೭೪	೬,೯೭೫	೭,೩೨೫	೫,೯೭೬
ಸ್ಟ್ರಕ್‌ಅಫ್ ಮಾಡಿದ ಪ್ರಕರಣಗಳು	೩,೦೮೨	೨,೧೮೨	೩,೪೬೪	೪,೦೪೧	೩,೩೫೨
ಸಜೆ	೨,೦೨೭	೧,೦೮೩	೧,೮೪೮	೧,೭೩೬	೧,೬೩೬
ಬಾಕಿ	೧,೩೪೩	೧,೧೮೯	೧,೬೬೩	೧,೫೪೮	೯೮೮
ದಸ್ತಗಿರಿಯಾದ ಆರೋಪಿಗಳು	೫,೨೮೭	೨,೭೯೨	೪,೪೭೭	೪,೪೬೫	೪,೪೨೪
ಅಂತಿಮವಾಗಿ ಸಜೆ	೩,೩೦೮	೧,೫೨೦	೨,೬೯೪	೨,೬೬೬	೨,೫೭೧
ಖುಲಾಸೆ ಅಥವಾ ಬಿಡುಗಡೆ	೫೩೪	೩೬೮	೬೨೭	೫೮೭	೧,೪೫೮

ಪ್ರತೀ ವರ್ಷ ವರದಿಯಾದ ಪ್ರಕರಣಗಳಲ್ಲಿ ಹೊಡೆದು ಹಾಕಿದ (Struck off) ಮಾಡಿದ ಪ್ರಕರಣಗಳ ಸರಾಸರಿ ವಿವರ.[೨೨೧]

ಇಸವಿ	ಹೊಡೆದು ಹಾಕಿದ ಪ್ರಕರಣ	ಸರಾಸರಿ
೧೮೯೧	೩,೦೮೨	೪೭-೭
೧೮೯೨-೯೩ (೬ ತಿಂಗಳು)	೨,೧೮೨	೪೯-೮
(೧೨ ತಿಂಗಳು)	೩,೪೬೪	೪೯-೬
೧೮೯೩-೯೪	೪,೦೪೧	೫೫-೧
೧೮೯೪-೯೫	೩,೩೫೨	೫೬-೭

ಅಪರಾಧ ಹೆಚ್ಚಾಗಲು ಕಾರಣ

೧೮೯೧ ರಲ್ಲಿ ರಾಜ್ಯದ ಮತ್ತು ನೆರೆಹೊರೆಯ ರಾಜ್ಯದಲ್ಲಿದ್ದ ಕೆಟ್ಟ ವಾತಾವರಣದ ಪರಿಣಾಮವಾಗಿ ಅಪರಾಧಗಳ ಸಂಖ್ಯೆ ಏರಿಕೆಯಾಯಿತು. ಆಹಾರ ದಾನ್ಯಗಳ ಬೆಲೆ ಗಗನಕ್ಕೇರಿತು. ಇದು ೧೮೯೨ ರ ಮದ್ಯಭಾಗದವರೆಗೂ ಮುಂದುವರಿಯಿತು. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರು ಒಂದು ಸುತ್ತೋಲೆಯನ್ನು ಹೊರಡಿಸಿ ಸತ್ಯವಾದುದೆಂದು ನಂಬಬಹುದಾದ ಪ್ರಕರಣಗಳನ್ನು ಮಾತ್ರ ದಾಖಲಿಸುವಂತೆ ಆದೇಶಿಸಿದರು. ಆದರೆ ೧೮೯೨-೯೩ ರಲ್ಲಿ ಈ ಆದೇಶಗಳನ್ನು ಹಿಂದಕ್ಕೆ ಪಡೆಯಲಾಯಿತು.[೨೨೨] ಇದರಿಂದಾಗಿ ಅಪರಾಧಗಳ ವರದಿ ಸಂಖ್ಯೆ ಏರಿಕೆಯಾಯಿತು. ಯಾವುದೇ ಪ್ರಕರಣಗಳನ್ನು ತನಿಖೆ ಮಾಡಿದ ನಂತರವೇ ಅದು ಸತ್ಯವೋ ಸುಳ್ಳೋ ಎಂದು ತಿಳಿಯುವುದು. ಆದು ದರಿಂದ ತನಿಖೆ ಮಾಡಬೇಕಾದರೆ ಪ್ರಕರಣಗಳನ್ನು ದಾಖಲಿಸಬೇಕಿತ್ತು. ಹೀಗಾಗಿ ಎಲ್ಲಾ ಪ್ರಕರಣಗಳನ್ನು ದಾಖಲಿ ಸುವುದು ಹೆಚ್ಚು ಸೂಕ್ತವಾಗಿತ್ತು. ಅಷ್ಟೇ ಅಲ್ಲದೇ ಪೊಲೀಸರು ತನಿಖೆ ಮಾಡದೇ ಸುಳ್ಳು ಪ್ರಕರಣವೆಂದು ಅದನ್ನು ನೊಂದಾಯಿಸದೇ ಜನರು ನ್ಯಾಯದಿಂದ ವಂಚಿತರಾಗುವ ಸಂಭವ ತಪ್ಪಿತು. ಅಪರಾಧಗಳ ಸಂಖ್ಯೆ ಈ ಕಾರಣಕ್ಕಾಗಿ ಹೆಚ್ಚಾಗಿದ್ದಲ್ಲಿ ಅದು ಸಮಾಜದ ಮೇಲೆ ಯಾವುದೇ ದುಷ್ಪರಿಣಾಮ ಬೀರಲಿಲ್ಲವೆಂದೇ ಬಾವಿಸಬಹುದು.

ತನಿಖೆಯನ್ನು ತಿರಸ್ಕರಿಸಿದ ಮತ್ತು ಸುಳ್ಳು ಪ್ರಕರಣಗಳ ವಿವರ

ಈ ಕೆಳಕಂಡ ವರ್ಷಗಳಲ್ಲಿ ವರದಿಯಾದ ಪ್ರಕರಣಗಳಲ್ಲಿ ಪೊಲೀಸರಿಂದ ತನಿಖೆಗೆ ಯೋಗ್ಯವಲ್ಲದ್ದೆಂದು

ತಿರಸ್ಕರಿಸಲ್ಪಟ್ಟಿದ್ದು ಮತ್ತು ಮ್ಯಾಜಿಸ್ಟ್ರೇಟರಿಂದ ಸುಳ್ಳೆಂದು ತೀರ್ಮಾನವಾದ ಪ್ರಕರಣಗಳ ವಿವರ ರೀತಿ ಇದೆ..[೨೨೩]

ಇಸವಿ	ಪ್ರಕರಣಗಳು
೧೮೯೧	೨,೨೫೩
೧೮೯೨-೯೩ (೬ ತಿಂಗಳು)	೧,೬೦೪
(೧೨ ತಿಂಗಳು)	೨,೬೩೪
೧೮೯೩-೯೪	೩,೦೧೯
೧೮೯೪-೯೫	೨,೨೮೩

೧೮೯೧ ರಿಂದ ೯೫ ರವರೆಗೆ ಈ ಕೆಳಗೆ ವರದಿಯಾದ ಗಂಭೀರ ಪ್ರಕರಣಗಳಲ್ಲಿ ಸತ್ಯ ಪ್ರಕರಣಗಳ ವಿವರವಿದ್ದು, ಅದರಲ್ಲಿ ಶಿಕ್ಷೆಯಾದ ಪ್ರಕರಣಗಳು ಮತ್ತು ಸರಾಸರಿ ಶಿಕ್ಷೆಯ ವಿವರ ಇದೆ.[೨೨೪]

ಅಪರಾಧಗಳು	ಸಳ್ಳು ಪ್ರಕರಣ ಹೊರತುಪಡಿಸಿ ವರದಿಯಾದ ಪ್ರಕರಣಗಳು				ಶಿಕ್ಷೆಯಾದ ಪ್ರಕರಣಗಳು				ಸತ್ಯ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಕರಣಗಳ ಸರಾಸರಿ			
	೧೮೯೧	೧೮೯೧-೯೩	೧೮೯೩-೯೪	೧೮೯೪-೯೫	೧೮೯೧	೧೮೯೧-೯೩	೧೮೯೩-೯೪	೧೮೯೪-೯೫	೧೮೯೧	೧೮೯೧-೯೩	೧೮೯೩-೯೪	೧೮೯೪-೯೫
ಕೊಲೆ ಮತ್ತು ಅಪರಾಧಿಕ ನರಹತ್ಯೆ	೭೦	೬೯	೬೨	೫೬	೨೯	೨೪	೩೬	೧೫	೪೧.೧	೩೬.೨	೫೮.೦	೨೬.೭
ತೀವ್ರ ಹಲ್ಲೆ ಮತ್ತು ಅಪಹರಣ	೭೨	೮೮	೮೯	೯೨	೨೮	೪೪	೪೨	೪೮	೩೮.೮	೫೬.೪	೫೩.೧	೫೨.೧
ದರೋಡೆ	೨೦	೨೮	೨೬	೧೪	೪	೩	೭	೧	೨೦	೧೦.೭	೨೭	೭.೧
ಸುಲಿಗೆ	೪೨	೩೭	೩೨	೨೮	೯	೧೨	೧೬	೧೩	೨೧.೪	೩೨.೪	೫೦	೪೬.೪
ಕಳವು	೧.೦೩೭	೧,೩೦೧	೯೮೬	೯೯೧	೬೯೨	೮೨೩	೭೦೨	೬೫೫	೬೬.೭	೬೩.೩	೭೧.೨	೬೮.೦೯

ಈ ಮೇಲಿನ ಅನುಬಂಧದಲ್ಲಿ ಹೇಳಲಾದ ವಿವಿಧ ಅಪರಾಧಗಳಲ್ಲಿ ದಸ್ತಗಿರಿಯಾದ ಜನರ ವಿವರ, ಅದರಲ್ಲಿ ಶಿಕ್ಷೆಗೊಳಾದವರ ಸಂಖ್ಯೆ ಮತ್ತು ಸರಾಸರಿ ಶಿಕ್ಷೆಗೊಳಾದವರ ವಿವರ ಈ ಕೆಳಗಿನ ಅನುಪಾತದಲ್ಲಿದೆ.[೨೨೫]

ಅಪರಾಧಗಳು	ದಸ್ತಗಿರಿಯಾದವರ ವಿವರ				ಶಿಕ್ಷೆಗೊಳಗಾದವರ ಸಂಖ್ಯೆ				ಶಿಕ್ಷೆಗೊಳಗಾದವರ ಶೇಕಡಾವಾರು ವಿವರ			
	೧೮೯೧	೧೮೯೧-೯೩	೧೮೯೩-೯೪	೧೮೯೪-೯೫	೧೮೯೧	೧೮೯೧-೯೩	೧೮೯೩-೯೪	೧೮೯೪-೯೫	೧೮೯೧	೧೮೯೧-೯೩	೧೮೯೩-೯೪	೧೮೯೪-೯೫
ಕೊಲೆ ಮತ್ತು ನರಹತ್ಯೆ	೧೫೦	೧೧೫	೧೪೭	೧೩೪	೩೭	೩೦	೫೭	೨೪	೨೪.೬	೧೯.೮	೩೮.೭	೧೭.೯
ತೀವ್ರ ಹಲ್ಲೆ ಮತ್ತು ಅಪಹರಣ	೧೪೦	೧೫೮	೧೯೮	೧೮೮	೬೩	೬೬	೭೦	೭೫	೪೫.೦	೪೧.೭	೩೫.೩	೩೯.೮
ದರೋಡೆ	೧೧೨	೭೯	೩೮	೭೪	೨೮	೨೬	೧೬	೮	೨೫.೦	೩೨.೯	೪೨.೧	೧೦.೮
ಸುಲಿಗೆ	೪೦	೩೮	೫೯	೪೧	೧೬	೨೩	೨೬	೨೪	೪೦.೦	೬೦.೫	೪೪.೧	೫೮.೫
ಕಳವು	೧,೫೬೬	೧,೬೮೩	೧,೩೬೨	೧,೩೨೪	೧,೦೪೮	೧,೧೫೧	೯೧೪	೮೮೯	೬೬.೯	೬೮.೪	೬೭.೧	೬೭.೧

ಪತ್ತೆಯಾಗದ ಪ್ರಕರಣಗಳು: ೧೮೯೪-೯೫ ರ ಅಂತ್ಯದ ವೇಳೆಗೆ ಸತ್ಯವಾದ ಆದರೆ ಪೊಲೀಸರಿಂದ ಪತ್ತೆ ಮಾಡಲಾಗದ ಪ್ರಕರಣಗಳೆಂದು ೧.೦೦೧ ಪ್ರಕರಣಗಳನ್ನು ಪಟ್ಟಿ ಮಾಡಿದ್ದರು. ಇದರಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಇದ್ದಿದ್ದು

ಬೆಂಗಳೂರು ಜಿಲ್ಲೆಯಲ್ಲಿ ೧೯೬, ಚಿತ್ರದುರ್ಗದಲ್ಲಿ ೩೩ ಮತ್ತು ತುಮಕೂರಿನಲ್ಲಿ ೩೬ ಪ್ರಕರಣಗಳು ಇದ್ದವು. ಕಡೂರು ಜಿಲ್ಲೆಯಲ್ಲಿಯೂ ಹೆಚ್ಚು ಪ್ರಕರಣಗಳು ಬಾಕಿ ಇದ್ದವು. ೧೯೩ ಮೈಸೂರಿನಲ್ಲಿ, ೭೧. ಬೆಂಗಳೂರು ನಗರದಲ್ಲಿ, ಹೆಚ್ಚಿನ ಪ್ರಕರಣಗಳು ಅಂದರೆ ೧೪೦ ಉಳಿದ ಜಿಲ್ಲೆಗಳಲ್ಲಿ, ೧೨೪. ಕೋಲಾರದಲ್ಲಿ, ೧೧೭ ಶಿವಮೊಗ್ಗ, ೭೨-ಹಾಸನ, ೧೯ ರೈಲ್ವೆ ಪೊಲೀಸ್‌ನಲ್ಲಿ ಪತ್ತೆಯಾಗದ ಪ್ರಕರಣಗಳು ಇದ್ದವು.[೨೬] ೧೯೦೪-೦೫ ರಲ್ಲಿ ಒಂದು ಕೊಲೆ ಮತ್ತು ಕಲಂ: ೨೩೫ ಮತ್ತು ೨೪೦ ಐಪಿಸಿ ಅನ್ವಯ ನಾಣ್ಯಗಳಿಗೆ ಸಂಬಂಧಿಸಿದ ಅಪರಾಧ ವರದಿಯಾದವು. ಎರಡು ಪ್ರಕರಣಗಳಲ್ಲಿ ಶಿಕ್ಷೆಯಾಯಿತು. ಇನ್ನೊಂದು ಪ್ರಕರಣದಲ್ಲಿ ಕಲಂ: ೨೪೦ ಐಪಿಸಿ ಅನ್ವಯ ಬೇರೆ ರಾಜನ ನಾಣ್ಯವನ್ನು ತಯಾರಿಸಿದ ಪ್ರಕರಣ ವರದಿಯಾಯಿತು. ಆದರೆ ಅದು ಸುಳ್ಳು ಎಂದು ಸಾಬೀತು ಆಗಿದ್ದರಿಂದ ಮ್ಯಾಜಿಸ್ಟ್ರೇಟರ ಆದೇಶದಂತೆ ಖಡತದಿಂದ ಹೊಡೆದು ಹಾಕಲಾಯಿತು.[೨೭] ೧೯೦೭-೦೮ ರಲ್ಲಿ ೬೩ ಕೊಲೆಗಳಾದವು. ಇದರಲ್ಲಿ ೨೨ ಪ್ರಕರಣಗಳಿಗೆ ಶಿಕ್ಷೆಯಾಯಿತು. ೨೬ ಪ್ರಕರಣಗಳು ವಜಾಗೊಂಡವು. ಸರಾಸರಿ ೪೫ ಪ್ರಕರಣಗಳಲ್ಲಿ ಶಿಕ್ಷೆಯಾಗಿತ್ತು. ಇದರಲ್ಲಿ ದಿನಾಂಕ ೧೭ ನವೆಂಬರ್ ೧೯೦೭ ರಂದು ಹಾಸನ ಜಿಲ್ಲೆಯ ಮಾಂಜರಾಬಾದ್ ತಾಲೂಕಿನ (ಈಗಿನ ಸಕಲೇಶಪುರ) ಎಡಹಳ್ಳಿ ಗ್ರಾಮದಲ್ಲಿ ನಡೆದ ಶ್ರೀಮಂತ ಮಹಿಳೆ ನಂಜಮ್ಮ ಹೆಗ್ಗಡತಿ ಎಂಬವರ ಕೊಲೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ಮರಣದಂಡನೆ ಶಿಕ್ಷೆ ಹಾಗೂ ಉಳಿದ ಒಬ್ಬರಿಗೆ ಜೀವಾವಧಿ ಶಿಕ್ಷೆ ಆಯಿತು. ಇದು ಆಗಿನ ಕಾಲದಲ್ಲಿ ಅತ್ಯಂತ ಗಮನಸೆಳೆದ ಪ್ರಕರಣವಾಗಿತ್ತು[೨೮]. ೧೯೦೬-೦೭ ರಲ್ಲಿ ೪೬ ಅಪಹರಣ ಪ್ರಕರಣಗಳು ದಾಖಲಾಗಿದ್ದರೆ, ೧೯೦೭-೦೮ ರಲ್ಲಿ ೩೭ ಅಪಹರಣ ಪ್ರಕರಣಗಳು ದಾಖಲಾಗಿದ್ದವು. ಇದರಲ್ಲಿ ೧೧ ಪ್ರಕರಣಗಳಿಗೆ ಶಿಕ್ಷೆಯಾಗಿ ೧೨ ಪ್ರಕರಣಗಳು ಖುಲಾಸೆಗೊಂಡವು. ೧೯೦೫-೦೬ ರಲ್ಲಿ ೧೯೦೪-೦೫ ರಲ್ಲಿ ೬೧೭ ಘೋರ ಪ್ರಕರಣ ವರದಿಯಾಗಿದ್ದರೆ ೧೯೦೫-೦೬ರಲ್ಲಿ ೭೧೨ ಪ್ರಕರಣ ವರದಿಯಾದವು. ಇದರಲ್ಲಿ ೧೬೮ ಪ್ರಕರಣಗಳಲ್ಲಿ ಶಿಕ್ಷೆಯಾದರೆ ೧೫೭ ಪ್ರಕರಣಗಳು ಖುಲಾಸೆಗೊಂಡವು. ೧೯೦೪-೦೫ ರಲ್ಲಿ ಈ ಸಂಖ್ಯೆ ೧೭೨ ಹಾಗೂ ೧೪೬ ಇತ್ತು.[೨೯] ೧೯೧೫-೧೬ ರಲ್ಲಿ ಒಂದು ಕೊಲೆ ಪ್ರಕರಣ ವರದಿಯಾಗಿದ್ದು, ಅದು ವಜಾಗೊಂಡಿತ್ತು. ಅತೀ ವೇಗ ಅಜಾಗರೂಕತೆಯಿಂದ ಒಂದು ಸಾವು (೩೦೪(ಎ) ಐಪಿಸಿ) ದಾಖಲಾಗಿತ್ತು. ಅದಕ್ಕೆ ಶಿಕ್ಷೆಯಾಗಿತ್ತು. ಎರಡು ಖೋಟಾನಾಣ್ಯ ಪ್ರಕರಣಗಳು ವರದಿಯಾದರೆ, ಒಂದು ಸ್ಟ್ರಕ್ ಆಫ್ ಆಗಿತ್ತು. ಒಂದು ತನಿಖೆಗೆ ಬಾಕಿ ಇತ್ತು.[೩೦] ೧೯೨೨-೨೩ ರಲ್ಲಿ ಜನರ ವಿರುದ್ಧ ನಡೆದ ಅತ್ಯಂತ ಗಂಭೀರವಾದ ಅಪರಾಧಗಳ ಸಂಖ್ಯೆ ೧೦೭೭, ೧೯೨೧-೨೨ ರಲ್ಲಿ ೧೨೩೨ ಇತ್ತು. ಇಲ್ಲಿ ೧೫೯ ಪ್ರಕರಣಗಲು ಕಡಿಮೆಯಾಗಿದ್ದನ್ನು ಗಮನಿಸಬಹುದು. ೩೬ ಕೊಲೆ ಪ್ರಕರಣಗಳಲ್ಲಿ ೨೨ ಕ್ಕೆ ಶಿಕ್ಷೆಯಾಯಿತು. ೧೭ ಕೊಲೆಗಳು ಮಹಿಳೆಯರ ಜೊತೆ ಗುಪ್ತ ಸಂಬಂಧ ಮತ್ತು ಮನೆಯೊಳಗಿನ ಕೌಟುಂಬಿಕ ಮನಸ್ತಾಪ ಆಗಿತ್ತು. ೧೩ ಜಮೀನು ವಿವಾದ ಮತ್ತು ದ್ವೇಷಕ್ಕಾಗಿ ನಡೆದಿತ್ತು. ೫ ಶಿಶುಹತ್ಯೆ, ೨೧ ಇತರ ಕಾರಣಗಳಿಗಾಗಿ ನಡೆದಿದ್ದವು. ೨೧೪ ಪ್ರಕರಣದಲ್ಲಿ ೨,೧೦೪ ಜನರಿಗೆ ಶಿಕ್ಷೆಯಾಗಿತ್ತು.[೩೧] (೧೯೨೩-೨೪) ೧೯೨೩ ರಲ್ಲಿ ೧೦೭೭ ಘೋರ ಅಪರಾಧಗಳು ವರದಿಯಾಗಿದ್ದರೆ ೧೯೨೪ ರಲ್ಲಿ ೧,೦೯೧ ಘೋರ ಅಪರಾಧಗಳು ವರದಿಯಾಗಿದ್ದವು. ೫೯ ಕೊಲೆ ಪ್ರಕರಣಗಳಲ್ಲಿ ೨೫ಕ್ಕೆ ಶಿಕ್ಷೆಯಾದವು. ೨೨ ಕೊಲೆಗಳು ಮಹಿಳೆಯರೊಂದಿಗೆ ಗುಪ್ತ ಸಂಬಂಧ ಹೊಂದಿದ ಬಗ್ಗೆ ಆಗಿದ್ದವು. ೮ ಕೊಲೆಗಳು ಜಮೀನು ವಿವಾದಕ್ಕೆ ನಡೆದರೆ ೯ ಪ್ರಕರಣಗಳು ಶಿಶು ಹತ್ಯೆಗೆ ಸೇರಿದವು. ೨೦ ಇತರೆ ಕಾರಣಗಳಿಗಾದ ಕೊಲೆಗಳಾಗಿದ್ದವು.[೩೨]

೧೯೨೪-೨೫ ರಲ್ಲಿ ಒಟ್ಟು ಸೆಷನ್ಸ್ ಪ್ರಕರಣಗಳು ೧೦೮. ೧೯೨೩-೨೪ ರಲ್ಲಿ ಇದು ೧೦೨ ಆಗಿತ್ತು. ಇದರಲ್ಲಿ ೬೩ ಪ್ರಕರಣಗಳು ಅಂದರೆ ೬೧.೧೬% ಶಿಕ್ಷೆಯಲ್ಲಿ ಮುಕ್ತಾಯಗೊಂಡವು. ೫ ಪ್ರಕರಣಗಳು ವಿಚಾರಣೆ ಎದುರಿಸುತ್ತಿದ್ದವು. ಅತ್ಯಂತ ಹೆಚ್ಚು ಸೆಷನ್ಸ್ ಪ್ರಕರಣಗಳು ವರದಿಯಾಗಿದ್ದು, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ. ಆದರೆ ಅತ್ಯಂತ

ಹೆಚ್ಚು ಸರಾಸರಿಯಲ್ಲಿ ಶಿಕ್ಷೆಗಳು ಮೈಸೂರು ನಗರ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಆಯಿತು. ೧೯೨೩-೨೪ ಕ್ಕೆ ಹೋಲಿಸಿದರೆ ೧೯೨೪-೨೫ ರಲ್ಲಿ ಶಿಕ್ಷೆಗೊಳಗಾದ ಪ್ರಕರಣಗಳ ಸರಾಸರಿಯಲ್ಲಿ ಸ್ವಲ್ಪ ಕಡಿಮೆಯಾಗಿತ್ತು. ಆದರೆ ಶಿಕ್ಷೆಗೊಳಗಾದ ವ್ಯಕ್ತಿಗಳಲ್ಲಿ ಏರಿಕೆಯಾಗಿತ್ತು. ಅದು ೪೦.೨% ನಿಂದ ೪೬.೪% ಕ್ಕೆ ಏರಿತು. ೧೯೨೩-೨೪ ರಿಂದ ಬಾಕಿ ಉಳಿದ ವ್ಯಕ್ತಿಗಳ ಮೇಲೆ ನಡೆದ ಪ್ರಮುಖ ಅಪರಾಧಗಳು ೧೦೩೬. (೧೯೨೩-೨೪ರಲ್ಲಿ ೧,೦೯೧) ೭೦ ಕೊಲೆ ಪ್ರಕರಣಗಳಲ್ಲಿ ೧೯ ರಲ್ಲಿ ಶಿಕ್ಷೆಯಾಯಿತು. ೨೪ ಕೊಲೆ ಪ್ರಕರಣ ಉದ್ದೇಶ ನೋಡಿದರೆ ಅದು ಮಹಿಳೆ ಅಥವಾ ಲೈಂಗಿಕ ಸಂಬಂಧಗಳ ಕುರಿತಾಗಿ ಒಳಸಂಚು ನಡೆಸಿದ್ದರಿಂದ ನಡೆದಿದ್ದವು. ೭ ಪ್ರಕರಣಗಳು ದ್ವೇಷ ಅಥವಾ ಕೌಟುಂಬಿಕ ಕಲಹಗಳ ಉದ್ದೇಶದಿಂದ ನಡೆದಿತ್ತು. ೧೪ ಕೊಲೆ ಪ್ರಕರಣಗಳು ಭೂವಿವಾದಕ್ಕೆ ಸಂಬಂಧಿಸಿದ್ದರೆ ೭ ಕೊಲೆಗಳು ಹಣಗಳಿಕೆಗಾಗಿ ನಡೆದರೆ ೩ ಪ್ರಕರಣಗಳು ಬುದ್ಧಿಮಾಂದ್ಯರಿಂದ ನಡೆದಿತ್ತು. ೨೪೨೮ ಜನರು ಐಪಿಸಿ ಅದ್ಯಾಯ ೭ ರಲ್ಲಿ ಖೋಟಾನಾಣ್ಯಗಳಿಗೆ ಸಂಬಂಧಿಸಿದಂತೆ ಮತ್ತು ಅಧ್ಯಾಯ ೧೭ ರ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದ ಅಪರಾಧಗಳಲ್ಲಿ ಶಿಕ್ಷೆಗೆ ಗುರಿಯಾಗಿದ್ದರು. ಕಳೆದ ವರ್ಷದ ಪ್ರಕರಣಗಳಲ್ಲಿ ಈ ವರ್ಷ ೨೨೮ ಜನ ಶಿಕ್ಷೆಗೆ ಗುರಿಯಾದರು. ೧೯೨೩-೨೪ ಮತ್ತು ೧೯೨೪-೨೫ ರಲ್ಲಿ ಇದು ಅನುಕ್ರಮವಾಗಿ ೧೯೧೮ ಮತ್ತು ೨೦೬ ಆಗಿತ್ತು.[೨೩೩]

೧೯೨೬-೨೭ ರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಜನರು ದಸ್ತಗಿರಿಯಾಗಿದ್ದರು. ಒಟ್ಟು ಸೆಷನ್ಸ್ ಪ್ರಕರಣಗಳು ೧೦೫ ವರದಿಯಾದವು. (೧೦೬, ೧೯೨೫-೨೬ ರಲ್ಲಿ) ಇದರಲ್ಲಿ ೬೮ ಪ್ರಕರಣಗಳಲ್ಲಿ ೬೮.೦.% ಶಿಕ್ಷೆಯಾಯಿತು. ೬ ಪ್ರಕರಣಗಳಲ್ಲಿ ವಿಚಾರಣೆ ಬಾಕಿ ಇದ್ದವು. ಸೆಷನ್ಸ್ ಕೇಸುಗಳು ಅತ್ಯಂತ ಹೆಚ್ಚು ವರದಿಯಾಗಿದ್ದು, ಮೈಸೂರು ಮತ್ತು ತುಮಕೂರಿನಲ್ಲಿ ಹೆಚ್ಚು ಜನರು ಶಿಕ್ಷೆಗೆ ಒಳಗಾದರು. ಬೆಂಗಳೂರು ನಗರ ಮತ್ತು ಫ್ರೆಂಚ್‌ರಾಕ್ ಸರ್ಕಲ್ ನವರು ಶಿಕ್ಷೆಗೊಳಗಾದ ಪ್ರಕರಣಗಳು ಮತ್ತು ಜನರ ಸಂಖ್ಯೆಯಲ್ಲಿ ೧೯೨೫-೨೬ ಕ್ಕಿಂತ ಕಡಿಮೆಯಾಗಿತ್ತು. ಮನುಷ್ಯನ ಮೇಲೆ ನಡೆದ ಗಂಭೀರ ಪ್ರಕರಣಗಳು ೧೯೨೫-೨೬ ರಲ್ಲಿ ಬಾಕಿ ಇರುವುದನ್ನು ಸೇರಿಸಿ ೧.೧೩೪ (೧೯೨೫-೨೬ ರಲ್ಲಿ ೧.೦೩೮) ೫೯ ಕೊಲೆ ಪ್ರಕರಣಗಳು ವರದಿಯಾಗಿದ್ದು, ೧೯ ರಲ್ಲಿ ಶಿಕ್ಷೆ ಯಾಗಿತ್ತು. ೨೩ ಕೊಲೆ ಪ್ರಕರಣಗಳ ಉದ್ದೇಶ ಮಹಿಳೆಯರಿಗೆ ಸಂಬಂಧಿಸಿದ ಅಪರಾಧಿಕ ದ್ವೇಷದಿಂದ ಆಗಿತ್ತು. ೩ ಪ್ರಕರಣಗಳು ಕೌಟುಂಬಿಕ ಕಲಹದಿಂದ ಆಗಿತ್ತು. ೩ ಪ್ರಕರಣಗಳು ಶಿಶುಹತ್ಯೆಗೆ ಸೇರಿತ್ತು. ೮ ಪ್ರಕರಣಗಳು ಹಣಕ್ಕಾಗಿ ಅಥವಾ ಲಾಭಕ್ಕಾಗಿ ಕೊಲೆಯಾದರೆ ೨೦ ಪ್ರಕರಣಗಳು ದುರುದ್ದೇಶದಿಂದ ಆಗಿದ್ದವು. ಉಳಿದ ೨ ಪ್ರಕರಣಗಳು ಉದ್ದೇಶ ಸರಿಯಾಗಿ ತಿಳಿದುಬಂದಿಲ್ಲ. ೧೫೯೨ ಜನರು ಐಪಿಸಿ ಅಧ್ಯಾಯ XII ಖೋಟಾನಾಣ್ಯ ಮತ್ತು ಅಧ್ಯಾಯ XVII ಆಸ್ತಿಪಾಸ್ತಿಗೆ ಸಂಬಂಧಿಸಿದ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದರು. ೨೨೪ ಜನರ ಮೇಲೆ ಹಳೇಯ ಶಿಕ್ಷೆಗಳು ಸಾಬೀತಾದವು. ಇದು ೧೯೨೫-೨೬ ರಲ್ಲಿ ವರ್ಷ ಅನುಕ್ರಮವಾಗಿ ೧,೯೨೬ ಮತ್ತು ೨೩.೧ ಆಗಿತ್ತು.[೨೩೪] ೧೯೪೧-೪೨ ರಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿದ್ದರಿಂದ ಮತ್ತು ಆಹಾರಧಾನ್ಯಗಳ ಬೆಲೆ ಏರಿಕೆ ಆದ್ದರಿಂದ ಗಂಭೀರ ಅಪರಾಧಗಳ ಸಂಖ್ಯೆ ೫,೬೨೨ ರಿಂದ ೫೭೭೭ ಕ್ಕೆ ಏರಿತು. ಮನುಷ್ಯನ ಮತ್ತು ಆಸ್ತಿಪಾಸ್ತಿ ಮೇಲೆ ನಡೆದ ಅಪರಾಧಗಳ ಸಂಖ್ಯೆ ೧,೯೧೦ ರಿಂದ ೧೮೭೮ ಕ್ಕೆ ಕುಸಿಯಿತು. ೧೯೨ ಘೋರ ಅಪರಾಧಗಳು ಈ ವರ್ಷ ವರದಿಯಾದವು (೧೯೪೦-೪೧ ರಲ್ಲಿ ೧೯೩). ಒಟ್ಟು ೮೦ ಕೊಲೆಗಳು ನಡೆದವು. (೧೯೪೦-೪೧ ರಲ್ಲಿ ೯೬). ಸಾರ್ವಜನಿಕ ಶಾಂತಿಭಂಗ ಪ್ರಕರಣಗಳು ೬೭ ರಿಂದ ೮೮ ಕ್ಕೆ ಏರಿಕೆಯಾಯಿತು. ರಾಜಕೀಯ ಪ್ರತಿಭಟನೆಗಳು ಹಿಂಸಾರೂಪ ತಾಳಿದ್ದರಿಂದ ಹಾಲಿ ಇದ್ದ ಕಾನೂನುಗಳ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚಾಗಿತ್ತು. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸ್ವಾತಂತ್ರ್ಯದ ಉಗ್ರ ಹೋರಾಟಗಳು ತೀವ್ರ ಸ್ವರೂಪದಲ್ಲಿ ನಡೆಯುತ್ತಿದ್ದು, ಪ್ರಭುತ್ವದ ವಿರುದ್ಧ ದಿನದಿಂದ ದಿನಕ್ಕೆ ಹೋರಾಟಗಳು ಉಗ್ರ ಸ್ವರೂಪಗಳು ಪಡೆಯುತ್ತಾ ಹೋದವು.

ಕಾನೂನು ಭಂಗ ಚಳುವಳಿಗಳು ನಡೆದು ಕಾನೂನು ಸುವ್ಯವಸ್ಥೆಗೆ ದಕ್ಕೆ ಉಂಟಾಗುತ್ತಿತ್ತು. ಇದು ಪ್ರಭುತ್ವದ ವಿರುದ್ಧ ನಡೆದ ಹೋರಾಟ ಎಂಬುದಕ್ಕಿಂತಲೂ ಇದು ಬ್ರಿಟೀಷರ ವಿರುದ್ದ ನಡೆದ ಹೋರಾಟ ಎಂಬುದಾಗಿತ್ತು. ಬ್ರಿಟೀಷರನ್ನು ಭಾರತದಿಂದ ಹೊರಗಟ್ಟಿಸುವುದು ಹೋರಾಟಗಾರರ ಉದ್ದೇಶವಾಗಿತ್ತು. 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' (Quit India) ಚಳುವಳಿ, ಉಪ್ಪಿನ ಸತ್ಯಾಗ್ರಹ ಹೀಗೆ ವಿವಿಧ ರೀತಿಯ ಸ್ವಾತಂತ್ರ್ಯ ಹೋರಾಟದ ಕಿಡಿ ರಾಜ್ಯಾದ್ಯಾಂತ ಅಷ್ಟೇ ಏಕೆ ದೇಶಾದ್ಯಂತ ವ್ಯಾಪಿಸಿತ್ತು. ಇದರ ಪರಿಣಾಮವಾಗಿ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿತ್ತು.[೨೩೫] ೧೯೪೫-೪೬ ರಲ್ಲಿ ಘೋರ ಅಪರಾಧಗಳ ಸಂಖ್ಯೆ ೬೨೩೩ ರಿಂದ ೬೭೭೫ ಕ್ಕೆ ಏರಿತು. ಜೀವನ ನಿರ್ವಹಣಾ ವೆಚ್ಚ ಏರಿದ್ದರಿಂದ ಮತ್ತು ಅಸಹಾಕಾರಿಯಾದ ಪರಿಸ್ಥಿತಿಯಿಂದಾಗಿ ಅಪರಾಧಗಳ ಸಂಖ್ಯೆಯಲ್ಲಿ ಏರಿಕೆಯಾಯಿತು.[೨೩೬]

೧೯೪೫-೪೬ ರಲ್ಲಿ ಐಪಿಸಿ ಅಡಿ ದಾಖಲಾದ ಸತ್ಯ ಪ್ರಕರಣಗಳು ಒಟ್ಟು ೬೭೧೧. ಮನುಷ್ಯರ ಮತ್ತು ಆಸ್ತಿಪಾಸ್ತಿಯ ಮೇಲೆ ನಡೆದ ಪ್ರಮುಖ ಅಪರಾಧಗಳ ಸಂಖ್ಯೆ ಹೆಚ್ಚಾಗಿತ್ತು. ಮನುಷ್ಯರ ಮೇಲೆ ನಡೆದ ಪ್ರಮುಖ ಅಪರಾಧಗಳು ೨೩೫೬, ಆಸ್ತಿಯ ಮೇಲೆ ನಡೆದ ಪ್ರಮುಖ ಅಪರಾಧಗಳು ೨೨೧೦. ಘೋರ ಅಪರಾಧಗಳು ೧೯೪೫-೪೬ ರಲ್ಲಿ ೩೨೭ ವರದಿಯಾಗಿದ್ದವು. ೧೯೪೫-೪೬ ರಲ್ಲಿ ವರದಿಯಾದ ಕೊಲೆ ಪ್ರಕರಣಗಳು ೧೦೩. ೧೯೪೪-೪೫ರಲ್ಲಿ ಇದು ೧೨೨ ಇತ್ತು.[೨೩೭]

೭. ೨೪:- ಅಪರಾಧಗಳ ವರ್ಗೀಕರಣ

ಪೊಲೀಸ್ ಇಲಾಖೆಯಲ್ಲಿ ಅಪರಾಧಗಳನ್ನು ಗುರುತಿಸುವ ಸಲುವಾಗಿ ವಿವಿಧ ವರ್ಗಗಳನ್ನಾಗಿ ಮಾಡಲಾಯಿತು. ಅದನ್ನು ಕ್ಲಾಸ್ ೧ ರಿಂದ ಕ್ಲಾಸ್ ೬ ಎಂದು ವಿಭಾಗಿಸಲಾಗಿತ್ತು. ಅವುಗಳೆಂದರೆ ಕ್ಲಾಸ್-I ರಾಜ್ಯದ ವಿರುದ್ಧ ಹಾಗೂ ಸಾರ್ವಜನಿಕ ಶಾಂತಿಯ ವಿರುದ್ಧದ ಪ್ರಕರಣಗಳು . ಕ್ಲಾಸ್-II ಜನರ ಮೇಲಿನ ಘೋರ ಅಪರಾಧಗಳು, ಕ್ಲಾಸ್-III ಜನರ ಹಾಗೂ ಆಸ್ತಿಪಾಸ್ತಿ ಮೇಲಿನ ಘೋರ ಅಪರಾಧಗಳು, ಕ್ಲಾಸ್-IV ಜನರ ಮೇಲಿನ ಸಣ್ಣ ಪ್ರಕರಣಗಳು, ಕ್ಲಾಸ್-V ಆಸ್ಥಿಪಾಸ್ಥಿ ಮೇಲಿನ ಸಣ್ಣ ಪ್ರಕರಣಗಳು, ಕ್ಲಾಸ್-VI ಇತರ ಅಪರಾಧಗಳು. ೧೮೮೮-೮೯ ರಲ್ಲಿ ಅಪರಾಧಗಳ ವರ್ಗೀಕರಣದ ಅನ್ವಯ ಪ್ರತೀ ವರ್ಗಗಳಲ್ಲಿ ವರದಿಯಾದ ಪ್ರಕರಣಗಳಲ್ಲಿ ಪತ್ತೆ ಯಾಗದ ಪ್ರಕರಣಗಳ ವಿವರ ಈ ರೀತಿ ಇದೆ. ಕ್ಲಾಸ್ ೧ – ೪೯, ಕ್ಲಾಸ್ ೨-೫೫೩, ಕ್ಲಾಸ್೩- ೧೦, ಕ್ಲಾಸ್೪-೩೭೪, ಕ್ಲಾಸ್೫- ೯, ಕ್ಲಾಸ್ ೬- ೬[೨೩೮]

೧೯೦೪-೦೫ ರಲ್ಲಿ ಸಿವಿಲ್, ಮಿಲಿಟರಿ ಮತ್ತು ರೈಲ್ವೆ ಠಾಣೆಗಳಲ್ಲಿ ವರದಿಯಾದ ಮೇಲೆ ಹೇಳಿದ ಕ್ಲಾಸ್ ೧ ರಿಂದ ಕ್ಲಾಸ್ ೬ ರವರೆಗಿನ ಅಪರಾಧಗಳು

ಸಿವಿಲ್ ಮಿಲಿಟರಿ ಸ್ಟೇಷನ್		-	೧೧೧೨
ಮದ್ರಾಸ್ ರೈಲ್ವೆಯ ಬೆಂಗಳೂರು ಬ್ರಾಂಚ್	ಕ್ಲಾಸ್ ೩, ೫, ೬	-	೪೧
ಕೋಲಾರ ಗೋಲ್ಡ್‌ಫೀಲ್ಡ್ ರೈಲ್ವೆ	ಕ್ಲಾಸ್ ೪, ೫, ೬	-	೧೨
ಬೆಂಗಳೂರು, ಹರಿಹರ ಮತ್ತು ಹಿಂದುಪುರ ರೈಲ್ವೆ	ಕ್ಲಾಸ್ ೩, ೫, ೬	-	೨೯

ಪೊಲೀಸರು ತನಿಖೆ ಮಾಡಿದ ಸತ್ಯ ಪ್ರಕರಣಗಳ ಸರಾಸರಿ ೮೩.೭೩% [೨೩೯]

೧೯೦೪-೦೫ ಮತ್ತು ೧೯೦೫-೦೬ ರಲ್ಲಿ ವರಡಿಯಾದ ಅಪರಾಧಗಳ ವರ್ಗೀಕರಣ

	೧೯೦೪-೦೫	೧೯೦೫-೦೬	ಏರಿಕೆ
I	೮೩	೮೯	೬
II	೪೮೧	೫೫೪	೭೩
III	೧೪೪೯	೧೫೮೫	೧೩೬
IV	೭೨	೮೪	೧೨
V	೨೭೩೮	೩೧೭೪	೪೩೬
VI	೭೨೪	೬೦೫	೧೧೯
ಒಟ್ಟು	೫೫೪೭	೬೦೯೧	೫೪೪ [೨೪೦]

ಆಹಾರಧಾನ್ಯಗಳ ಉತ್ಪಾದನೆಯಲ್ಲಿ ೧೯೦೪-೦೫ ರಲ್ಲಿ ಉಂಟಾದ ಕುಸಿತವೇ ಕಾರಣವೆಂದು ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠರು ವರದಿ ಮಾಡಿದರು.[೨೪೧] ದರೋಡೆ, ಸುಲಿಗೆಯಂತಹ ಘೋರ ಅಪರಾಧಗಳನ್ನು ಬೇರೆ ರಾಜ್ಯದಿಂದ ಬಂದ ಆರೋಪಿತರು ಮಾಡುತ್ತಿದ್ದರು. ೧೯೦೪-೦೫ ರ ಕೊನೆಯಲ್ಲಿ ಕಡೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ಲಾಸ್-೩ ಪ್ರಕರಣಗಳು ಹೆಚ್ಚಾದವು. ೧೯೧೩-೧೪ ರಲ್ಲಿ ವಸ್ತುಗಳ ಬೆಲೆಗಳು ಹೆಚ್ಚಾಗಿದ್ದರೂ ಸಹ ಅಪರಾಧಗಳ ಸಂಖ್ಯೆ ಸ್ವಲ್ಪ ಕಡಿಮೆ ಇತ್ತು. ಆದರೆ ಕಳ್ಳತನವಾದ ವಸ್ತುಗಳ ಮೌಲ್ಯ ಸ್ವಲ್ಪ ೧೯೧೨-೧೩ ಕ್ಕಿಂತ ಹೆಚ್ಚಾಗಿತ್ತು. ತನಿಖೆಯಲ್ಲಿ ಪ್ರಗತಿ ತೋರಿಸಲಾಯಿತು. ಅಪರಾಧ ಪತ್ತೆಗಳ ಸಂಖ್ಯೆಯಲ್ಲಿ ಸ್ವಲ್ಪ ಪ್ರಗತಿ ಕಂಡು ಬಂದಿತು. ಕಳವಾದ ಮಾಲುಗಳ ಪತ್ತೆ ಇಮ್ಮಡಿಯಾಗಿತ್ತು. ಅತ್ಯತ ಹೆಚ್ಚು ಜನರನ್ನು ನ್ಯಾಯಾಲಯದ ವಿಚಾರಣೆಗೆ ಒಳಪಡಿಸಲಾಯಿತು. ಶಿಕ್ಷೆಯ ಪ್ರಮಾಣವೂ ಸಹ ಹೆಚ್ಚಾಗಿತ್ತು. ಅಪರಾಧಗಳನ್ನು ಮಾಮೂಲಿನಂತೆ ವರ್ಗೀಕರಿಸಲಾಗಿತ್ತು. ಕ್ಲಾಸ್ I ರಿಂದ ಕ್ಲಾಸ್ V ರವರೆಗೆ ಸೂಚಿಸಿದ ಅಪರಾಧಗಳಲ್ಲಿ ೧೯೧೩-೧೪ ರಲ್ಲಿ ೮೬ ಪ್ರಕರಣಗಳು ದಾಖಲಾಗಿದ್ದರೆ, ೧೯೧೨-೧೩ ರಲ್ಲಿ ೯೩೩ ಪ್ರಕರಣಗಳು ದಾಖಲಾಗಿದ್ದವು.[೨೪೨]

೧೯೧೫-೧೬ ರಲ್ಲಿ ಅಪರಾಧಗಳ ವರ್ಗೀಕರಣ ಮೊದಲಿನಂತೆಯೇ ಇತ್ತು. ಕ್ಲಾಸ್ ೧ ರಿಂದ ೫ ರವರೆಗೆ ೬೫೮ ಪ್ರಕರಣ ವರದಿಯಾದವು. ೧೯೧೪-೧೫ ರಲ್ಲಿ ೮೭೪ ಆಗಿತ್ತು. ಇದರಲ್ಲಿ ೧೯೧೫-೧೬ ರಲ್ಲಿ ೫೫೩ ಹಾಗೂ ಕಳೆದ ವರ್ಷ ೬೭೭ ಸತ್ಯ ಪ್ರಕರಣಗಳಾಗಿದ್ದವು. ಅಪರಾಧಗಳು ಕಡಿಮೆಯಾಗಲು ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ವ್ಯಕ್ತಿಗಳಿಗೆ, ಅಧಿಕಾರಿಗಳಿಗೆ ನೀಡಿದ ಕಾವಲುದಂಡನ್ನು ಮತ್ತು ಮನೆಕೆಲಸದವರನ್ನು (Orderly) ಗಳನ್ನು ಕಡಿತ ಗೊಳಿಸಿದ್ದೇ ಕಾರಣ.[೨೪೩]

೭. ೨೫ : ಜನಸಂಖ್ಯೆ ಮತ್ತು ಭೂಪ್ರದೇಶ ಹಾಗೂ ಅಪರಾಧಗಳ ಜಿಲ್ಲಾವಾರು ಅನುಪಾತ

ವರದಿಯಾದ ಸತ್ಯ ಪ್ರಕರಣಗಳ ಭೂಪ್ರದೇಶ ಮತ್ತು ಜನಸಂಖ್ಯೆ ಆಧಾರಿತ ಅನುಪಾತ ಇಲ್ಲಿದ್ದು, ಈ ಅಂಕಿ ಅಂಶಗಳನ್ನು ಹೋಲಿಸಿ ನೋಡಿದಾಗ ೧ ಚದರ ಮೈಲಿಗೆ ೧೦,೦೦೦ ಜನಸಂಖ್ಯೆಗೆ ೫.೫೦ ರಿಂದ ೬.೫೦ ಪ್ರಕರಣಗಳು ವರದಿಯಾಗಿದೆ. ಇದರಲ್ಲಿ ಮ್ಯಾಜಿಸ್ಟ್ರೇಟರಿಗೆ ನೇರವಾಗಿ ವರದಿಯಾದ ಪ್ರಕರಣಗಳು ಸೇರಿದ್ದು, ೧೮೯೪-೯೫ ನೇ ಸಾಲಿಗೆ ಸರಾಸರಿ .೧೪ ಮತ್ತು ೮.೦ ಅಪರಾಧ ಪ್ರಕರಣ ಅನುಕ್ರಮವಾಗಿ ವರದಿಯಾಗಿದ್ದವು. *ಜಿಲ್ಲಾವಾರು ಜನಸಂಖ್ಯೆ, ವಿಸ್ತೀರ್ಣ ಮತ್ತು ಅಪರಾಧ ಪ್ರಕರಣಗಳ ವಿವರದ ಬಗ್ಗೆ ಅನುಬಂಧ ೩೭ ನೋಡಿ* [೨೪೪]

೧೯೦೪-೦೫ ರಲ್ಲಿ ರೈಲ್ವೆಯಲ್ಲಿ ನೇಮಕಗೊಂಡಿದ್ದ ಕಾರ್ಯಕಾರಿಯಲ್ಲದ (non-effective) ಸಿಬ್ಬಂದಿಯನ್ನು ಹೊರತುಪಡಿಸಿ ಪ್ರತೀ ಒಂದು ಚದುರ ಮೈಲಿಗೆ ೨೧.೬೯ ಪೊಲೀಸರಿದ್ದರೆ, ಅಪರಾಧ ಪತ್ತೆ ಮತ್ತು ತಡೆಗೆ ನೇಮಿಸಿದ ಸಿಬ್ಬಂದಿ ಪ್ರಮಾಣ ೩೩೨.೯೩ ಜನರಿಗೆ ಒಬ್ಬ ಪೊಲೀಸ್ ಸಿಬ್ಬಂದಿ ಇದ್ದರು [೨೪೫] ೧೯೧೩-೧೪ ರಲ್ಲಿ ರೈಲ್ವೆ ಸಿಬ್ಬಂದಿ ಹಾಗೂ ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ವಿಭಾಗ ಹೊರತುಪಡಿಸಿ ಪ್ರತಿ ಒಂದು ಚದುರ ಮೈಲಿಗೆ ೨೪.೪೩ ಪೊಲೀಸರು ಇದ್ದರು. ಜನಸಂಖ್ಯೆಗನುಗುಣವಾಗಿ ೩೩೨.೭೮ ಜನರಿಗೆ ಒಬ್ಬ ಸಿಬ್ಬಂದಿ ಇದ್ದರು[೨೪೬] ೧೯೧೪-೧೫ ರಲ್ಲಿ ಕಾರ್ಯಕಾರಿ ಮತ್ತು ರೈಲ್ವೆ ಪೊಲೀಸರನ್ನು ಹೊರತುಪಡಿಸಿ ೨೪.೫೧ ಚದುರ ಮೈಲಿಗೆ ಒಬ್ಬನು ಪೊಲೀಸ್ ಸಿಬ್ಬಂದಿ ಇದ್ದರು. ಜನಸಂಖ್ಯೆಗೆ ಹೋಲಿಸಿದರೆ ೩೩೧.೬೯ ಜನರಿಗೆ ಒಬ್ಬ ಪೊಲೀಸ್ ಸಿಬ್ಬಂದಿ ಇದ್ದ.[೨೪೭] ೧೯೨೨-೨೩ ರಲ್ಲಿ ರೈಲ್ವೆ ಹಾಗೂ ಮೀಸಲು ಪೊಲೀಸರನ್ನು ಹೊರತುಪಡಿಸಿ ೨೫ ಚದರ ಮೈಲಿಗೆ ಒಬ್ಬರು ಪೊಲೀಸ್ ಇದ್ದರು. ಜನಸಂಖ್ಯೆಗೆ ಹೋಲಿಸಿದರೆ ೩೮೪.೦೯ ಜನರಿಗೆ ಒಬ್ಬ ಪೊಲೀಸರಿದ್ದರು.[೨೪೮]

೭. ೨೬: ಕೆ.ಡಿಗಳು

೧೯೧೩-೧೪ ರ ಅಂತ್ಯದ ವೇಳೆಗೆ ೪೬ ಜನ ಕೆ.ಡಿಗಳು ದಾಖಲಾಗಿದ್ದರು. ೧೯೧೨-೧೩ ರಲ್ಲಿ ೮೭ ಜನರನ್ನು ಕೆ.ಡಿ ರಿಜಿಸ್ಟರ್‌ನಲ್ಲಿ ದಾಖಲಾಗಿತ್ತು. ಈ ಸಂಖ್ಯೆ ಕಡಿಮೆಯಾಗಲು ಕಾರಣವೇನೆಂದರೆ, ಈ ಕೆ.ಡಿ. ಪಟ್ಟಿಯನ್ನು ಪುನರ್ ಪರಿಶೀಲಿಸಿದ್ದು, ಕೆಲವರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿತ್ತು. ಬಹಳ ಕಾಲದಿಂದ ಅಪರಾಧ ಚಟುವಟಿಕೆಯಲ್ಲಿ ೧೯೧೩-೧೪ ರಲ್ಲಿ ೨೮ ಕೆ.ಡಿ.ಗಳಿಗೆ ಶಿಕ್ಷೆಯಾಗಿತ್ತು.[೨೪೯] ೧೯೧೪-೧೫ ರ ಕೊನೆಯಲ್ಲಿ ೬೫ ಜನರ ಕೆ.ಡಿ ಗಳನ್ನು ಪಟ್ಟಿಮಾಡಲಾಗಿತ್ತು. ೧೯೧೩-೧೪ ರಲ್ಲಿ ಈ ಸಂಖ್ಯೆ ೪೬ ಆಗಿತ್ತು. ೨೦ ಕೆ.ಡಿಗಳಿಗೆ ಶಿಕ್ಷೆಯಾಗಿತ್ತು.[೨೫೦]

೧೯೧೫-೧೬ ರ ವರ್ಷದ ಕೊನೆಯಲ್ಲಿ ೯೮ ಕೆ.ಡಿಗಳನ್ನು ಪಟ್ಟಿ ಮಾಡಿದ್ದರೆ ೧೯೧೪-೧೫ ರಲ್ಲಿ ೬೫ ಆಗಿತ್ತು. ೨೬ ಕೆ.ಡಿಗಳಿಗೆ ಪುನ: ಶಿಕ್ಷೆಯಾಯಿತು[೨೫೧] ೧೯೨೩-೨೪ ರಲ್ಲಿ ವಿವಿಧ ಜಿಲ್ಲೆ ಮತ್ತು ನಗರಗಳಲ್ಲಿ ದಾಖಲಾಗಿದ್ದ ೧,೬೦೧ ಜನ ಕೆ.ಡಿ (Known- Depredutors) ೬೩ ಜನ ಮರಣ ಹೊಂದಿದರೆ, ೧೨೬೪ ಜನ ಹಾಜರಿದ್ದು, ೧೬೪ ಜನ ತಲೆಮರೆಸಿಕೊಂಡಿದ್ದರು. (**O.V** =Out of View) ೬೩ ಜನ ಜೈಲಿನಲ್ಲಿ ಇದ್ದರೆ, ೪೭ ಜನರನ್ನು ಬೇರೆ ಸರಹದ್ದುಗಳಿಗೆ ವರ್ಗಾಯಿಸಲಾಗಿತ್ತು. ೧೯೨೩-೨೪ ರಲ್ಲಿ ಸಿ.ಆರ್.ಪಿ.ಸಿ ಕಲಂ: ೫೬೫ ರಂತೆ ೧೫ ಜನ ಶಿಕ್ಷೆಗೆ ಒಳಗಾದ ಅಪರಾಧಿಗಳ ಮನೆಯನ್ನು ಮ್ಯಾಜಿಸ್ಟ್ರೇಟರು ಇಸ್ತಿಹಾರು ಪ್ರಕಟಣೆ ಮಾಡಿದರು. ೧೯೨೨-೨೩ ರಲ್ಲಿ ಇದರ ಸಂಖ್ಯೆ ೧೧ ಆಗಿತ್ತು. ಐಪಿಸಿ ಅಧ್ಯಾಯ XII ಮತ್ತು XVII ರ ಅಡಿಯಲ್ಲಿ ಅಪರಾಧ ಮಾಡಿದ ೧೯೧೮ ಜನರಿಗೆ ಶಿಕ್ಷೆಯಾಯಿತು. ಅದರಲ್ಲಿ ೯೦ ಜನರಿಗೆ ಈ ಹಿಂದೆ ಮಾಡಿದ ೩ಕ್ಕೂ ಹೆಚ್ಚು ಪ್ರಕರಣಗಳು ಸಾಬೀತಾಗಿದ್ದವು. ೧೯೨೩ ರಲ್ಲಿ ಇದರ ಸಂಖ್ಯೆ ೧೦೭ ಇತ್ತು. ೧೦೦ ಜನ ಕೆಟ್ಟ ನಡತೆಯ ಮತ್ತು ಅಲೆಮಾರಿಗಳ ಮೇಲೆ ಕ್ರಮ ಜರುಗಿಸ ಲಾಯಿತು. ಅದರಲ್ಲಿ ೫೯ ಜನರಿಗೆ ವಿವಿಧ ಬಗೆಯ ಶಿಕ್ಷೆಗಳಾದರೆ, ೫ ಜನರು ಜಾಮೀನು ನೀಡಿದ್ದರು. ೧೯೨೩-೨೪ ರಲ್ಲಿ ೫೯೪ ಘೋರ ಅಪರಾಧಗಳು ವರದಿಯಾಗಿದ್ದವು. ಇದರಲ್ಲಿ ತುಮಕೂರು ಜಿಲ್ಲೆಯ ೨೯ ಪ್ರಕರಣಗಳನ್ನು ಹೊರತುಪಡಿಸಿ ಉಳಿದೆಲ್ಲಾ ಪ್ರಕರಣಗಳಲ್ಲಿ ತನಿಖೆಯಲ್ಲಿ ಜಿಲ್ಲಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರು ಪಾತ್ರ ವಹಿಸಿದರು.[೨೫೨]

೧೯೨೬-೨೭ ರಲ್ಲಿ ೧೪೧೨ ಜನ ಕೆ.ಡಿಗಳು ವಿವಿಧ ಜಿಲ್ಲೆ ಹಾಗೂ ನಗರಗಳಲ್ಲಿ ದಾಖಲೆಗಳಲ್ಲಿ ನೊಂದಾಯಿಸಲ್ಪಟ್ಟರು. ಇದರಲ್ಲಿ ೨೭ ಜನ ಮೃತಪಟ್ಟರೆ ೧.೧೩೩ ಜನ ಹಾಜರಿದ್ದು, ೧೪೪ ಜನ ತಲೆಮರೆಸಿಕೊಂಡಿದ್ದರು. ೯೫ ಜನ ಜೈಲಿನಲ್ಲಿ ಇದ್ದರು. ೧೩ ಜನ ಬೇರೆ ಸರಹದ್ದುಗಳಿಗೆ ವರ್ಗಾವಣೆಯಾದರು. ೨೮ ಜನ ಶಿಕ್ಷೆಗೆ ಒಳಗಾದವರ (ಕಳೆದ ವರ್ಷ ೩೦) ಮನೆಗಳನ್ನು ಸಿಆರ್‌ಪಿಸಿ ಕಲಂ: ೫೬೫ ರಂತೆ ಮ್ಯಾಜಿಸ್ಟ್ರೇಟರು ನೋಟಿಪೈ ಮಾಡಿದರು. ೭೧ ಪ್ರಕರಣಗಳಲ್ಲಿ ೧೦೨ ಜನ ಕೆಟ್ಟ ನಡತೆಯವರ ಮೇಲೆ ಕ್ರಮ ಜರುಗಿಸಲಾಯಿತು. ೧೯೨೫-೨೬ ರಲ್ಲಿ ಇದು ೬೧ ಪ್ರಕರಣ, ೯೧ ಜನ ಆಗಿತ್ತು. ಇದರಲ್ಲಿ ೪೬ ಜನರಿಗೆ ವಿವಿಧ ರೀತಿಯ ಜೈಲು ಶಿಕ್ಷೆಯಾಯಿತು. ೧೪ ಜನರಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಲಾಯಿತು. ೬೬೩ ಘೋರ ಅಪರಾಧ ಈ ವರ್ಷ ವರದಿಯಾಯಿತು. (ಕಳೆದ ವರ್ಷ ೬೭೭) ಎಸ್‌ಪಿ ಹಾಗೂ ಎಎಸ್‌ಪಿ ಗಳಿಗೆ ಪ್ರಮುಖ ಪ್ರಕರಣಗಳಲ್ಲಿ ಸ್ಥಳಕ್ಕೆ ಹೋಗಿ ತನಿಖೆ ನಡೆಸಲು ಆದೇಶಿಸಲಾಯಿತು[೨೫೩]

೭. ೨೭ ಪ್ರೊಸೆಸ್ ಜಾರಿ

ಆರೋಪಿತರುಗಳಿಗೆ ಹಾಗೂ ಸಾಕ್ಷಿದಾರರುಗಳಿಗೆ ನ್ಯಾಯಾಲಯದಿಂದ ನೀಡುವ ನೊಟೀಸು, ಸಮನ್ಸ್ ಮತ್ತು ವಾರಂಟುಗಳ ಜಾರಿಗೆ ಪ್ರೊಸೆಸ್ ಎಂದು ಕರೆಯಲಾಗುವುದು. ೧೮೯೧ ರಿಂದ ೧೯೨೭ ಪೊಲೀಸರಿಂದ ಜಾರಿಯಾದ ಮತ್ತು ಜಾರಿ ಆಗದ ಪ್ರೊಸೆಸ್‌ಗಳ ವಿವರ ಈ ಕೆಳಗಿನಂತಿದೆ.

ಇಸವಿ	ಸ್ವೀಕರಿಸಿದ್ದು	ಜಾರಿ	ನಜಾರಿ	ಪೊಲೀಸರ ಬಳಿ ಬಾಕಿ
೧೮೯೧	೭೮,೫೭೦	೭೫,೭೦೩	೨,೮೬೭	
೧೮೯೨-೯೩ (೧೮ ತಿಂಗಳು)	೧,೨೬,೩೪೯	೧,೨೧,೩೫೧	೪,೯೯೮	
೧೮೯೩-೯೪	೯೦,೩೪೧	೮೬,೬೩೩	೩,೭೦೮	
೧೮೯೪-೯೫	೯೦,೦೫೪	೮೬,೬೬೦	೩,೩೯೪	
೧೯೦೪-೦೫	೫೯೮೦	೫೯೪೭	೩೩	
೧೯೧೩-೧೪	೮೪೮೫	೬೪೦೩	೨೦೫೬	೨೬
೧೯೧೪-೧೫	೯೦೫೬	೮೩೪೮	೧೮೨	೨೩
೧೯೧೫-೧೬	೯೦೯೭	೮೧೮೯	೬೨೮	
೧೯೨೧-೨೨	೧೬೦೨೬೮	೧೨೮೯೯೪	೩೧೨೭೪	೧.೧೧೬
೧೯೨೨-೨೩	೧೪೨೮೪೮	೧೧೫೯೭೨	೨೫.೨೬೦	
೧೯೨೩-೨೪	೧೪೪೯೬೮	೧೧೭೧೨೩	೨೫೬೩೪	
೧೯೨೪-೨೫	೧೫೨೨೨೨	೧೨೩೪೨೮	೩೬೫೩೬	೨೨೫೮
೧೯೨೫-೨೬	೧೪೮೫೮೭	೧೨೦೮೮೭	೨೫೭೭೩	೧೯೨೭
೧೯೨೬-೨೭	೧೪೬೪೭೩	೧೧೭೯೩೨	೨೬೭೯೩	೧೭೪೮

೭. ೨೮ :- ವಿಶೇಷ ಮತ್ತು ಸ್ಥಳೀಯ ಕಾಯ್ದೆಯಡಿ ದಾಖಲಾದ ಪ್ರಕರಣಗಳು

ಮೈಸೂರು ಸಂಸ್ಥಾನದಲ್ಲಿ ನಡೆಯುವ ಬಾಲ್ಯ ವಿವಾಹಗಳನ್ನು ತಡೆಯುವ ಸಲುವಾಗಿ ೧೮೯೪ ರಲ್ಲಿ "ಮೈಸೂರು ಬಾಲ್ಯವಿವಾಹ ನಿಯಂತ್ರಣ ಕಾಯ್ದೆ" ಯನ್ನು ಜಾರಿಗೆ ತರಲಾಯಿತು. ೧೮೯೫ರ ಜುಲಾಯಿ ೧ ನೇ ತಾರೀಕಿನಂದು ಸರ್ಕಾರವು ಪೊಲೀಸ್, ನ್ಯಾಯಾಂಗದ ಎಲ್ಲಾ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಬಾಲ್ಯವಿವಾಹಗಳ ಬಗ್ಗೆ ಸರ್ಕಾರಕ್ಕೆ ವರದಿ ಮಾಡಬೇಕೆಂದು ಸೂಚಿಸಲಾಯಿತು. ಇದರಿಂದಾಗಿ ಸರ್ಕಾರವು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಾಧ್ಯವಾಯಿತು.[೨೫೪]

ಖೋಟಾನೋಟು ಪ್ರಕರಣಗಳು :- ೧೯೦೫-೦೬ ರಲ್ಲಿ ೨೩ ಖೋಟಾನಾಣ್ಯ ಪ್ರಕರಣಗಳಲ್ಲಿ ಪೊಲೀಸರು ತನಿಖೆ ನಡೆಸಿದರು. ೧೯೦೪-೦೫ ರಲ್ಲಿ ಇದು ೧೩ ಆಗಿತ್ತು. ೧೨ ಪ್ರಕರಣಗಳಿಗೆ ಶಿಕ್ಷೆಯಾಗಿ ೪ ವಜಾಗೊಂಡರೆ ೬ ಬಿ ಫಾರಂ ನೀಡಿದ್ದರೆ ೧ ಪ್ರಕರಣ ಬಾಕಿ ಇತ್ತು. ೧೯೦೫ ರ ೩೦ ನೇ ಡಿಸೆಂಬರ್‌ನಲ್ಲಿ ಕೋಲಾರ ತಾಲೂಕಿನ ಮಕ್ಕೇನಹಳ್ಳಿಯಲ್ಲಿ ವೆಂಕಟರಮಣಪ್ಪ ಎಂಬಾತನ ಮನೆಯ ಮೇಲೆ ಪೊಲೀಸರು ದಾಳಿ ಮಾಡಿ ಖೋಟಾನಾಣ್ಯ ತಯಾರಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದರು. ಆತನಿಗೆ ೧೮ ತಿಂಗಳ ಕಠಿಣ ಶಿಕ್ಷೆಯಾಯಿತು.[೨೫೫] ತುಮಕೂರು ಜಿಲ್ಲೆಯಲ್ಲಿ ಫಕೀರಂತೆ ವೇಷಧರಿಸಿಕೊಂಡು ಬಂದ ಹೈದ್ರಾಬಾದಿನ ಇಬ್ಬರು ಮುಸಲ್ಮಾನರನ್ನು ಖೋಟಾನಾಣ್ಯ ತಯಾರಿಸುತ್ತಿದ್ದುದರಿಂದ ಬಂಧಿಸಿದ್ದು ಅದರಲ್ಲಿ ಒಬ್ಬನಿಗೆ ೪ ವರ್ಷ, ಮತ್ತೊಬ್ಬನಿಗೆ ಆರು ವರ್ಷ ಶಿಕ್ಷೆಯಾಯಿತು.

ಸಾರ್ವಜನಿಕ ಮತ್ತು ಸ್ಥಳೀಯ ಉಪದ್ರವಗಳು:- ೧೯೧೩-೧೪ ರಲ್ಲಿ ವಿಶೇಷ ಮತ್ತು ಸ್ಥಳೀಯ ಕಾಯ್ದೆ ಅಡಿಯಲ್ಲಿ ೧,೯೯೨ ಪ್ರಕರಣಗಳು ವರದಿಯಾಗಿದ್ದು, ೧೯೧೨-೧೩ ರಲ್ಲಿ ಇದು ೧೬೦೩ ಆಗಿತ್ತು. ಇವುಗಳಲ್ಲಿ ೧೮೨೮ ಪ್ರಕರಣಗಳಲ್ಲಿ ಶಿಕ್ಷೆಯಾಗಿತ್ತು. ೯೦ ಪ್ರಕರಣಗಳು ಖುಲಾಸೆಗೊಂಡಿದ್ದವು. ೭ ಪ್ರಕರಣಗಳಲ್ಲಿ ರಾಜಿಯಾಗಿತ್ತು. ೧ ಪ್ರಕರಣ ಹಿಂದೆ ಪಡೆಯಲಾಗಿತ್ತು. ೩ ಪ್ರಕರಣಗಳು ಸುಳ್ಳು, ೫೫ ಬಾಕಿ ಉಳಿದವು, ೮ ರೈಲ್ವೆ ಪೊಲೀಸ್‌ಗೆ ಸಂಬಂಧಿಸಿದ ಪ್ರಕರಣಗಳು ಪತ್ತೆಯಾಗಿರಲಿಲ್ಲ. ೧೯೧೩-೧೪ ರಲ್ಲಿ ಹೊಸ ಕಾನೂನುಗಳು ಜಾರಿಗೆ ಬಂದವು.[೨೫೬]

೧೯೧೪-೧೫ ರಲ್ಲಿ ಒಟ್ಟು ೨,೩೯೫ ಪ್ರಕರಣ ,ಾಖಲಾದರೆ, ೧೯೧೩-೧೪ ರಲ್ಲಿ ೧,೯೯೨ ಪ್ರಕರಣ ದಾಕಲಾಗಿತ್ತು. ಇದರಲ್ಲಿ ೨,೨೬೦ ರಲ್ಲಿ ಶಿಕ್ಷೆಯಾದರೆ, ೮೦ ಖುಲಾಸೆಗೊಂಡಿದ್ದು ೯ ವಜಾ, ೫ ಹಿಂಪಡೆಯಲಾಗಿತ್ತು. ೩ ಸುಳ್ಳು, ೨ ರಾಜಿ, ೩೧ ಬಾಕಿಇದ್ದವು. ೫ (ರೈಲ್ವೆ ಪ್ರಕರಣಗಳು) ಪತ್ತೆಯಾಗಲಿಲ್ಲ. ೨೭೨೭ ಜನರನ್ನು ದಸ್ತಗಿರಿ ಮಾಡಿದ್ದು, ೨೬೯೦

ಜನರನ್ನು ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಿದ್ದು, ೨೬೦೧ ಜನ ಶಿಕ್ಷೆಗೆ ಒಳಗಾದರೆ ೮೪ ಜನ ಖುಲಾಸೆಗೊಂಡು ೫ ಜನ ವಜಾಗೊಂಡಿದ್ದರು.[೨೫೭] ೧೯೧೫-೧೬ ರಲ್ಲಿ ೧೬೦೩ ಪ್ರಕರಣ ವರದಿಯಾದರೆ, ೧೯೧೪-೧೫ ರಲ್ಲಿ ೨೩೯೫ ಆಗಿತ್ತು. ೧೯೧೫-೧೬ ರಲ್ಲಿ ೧೩೮೫ ಪ್ರಕರಣಗಳಲ್ಲಿ ಶಿಕ್ಷೆಯಾದರೆ, ೧೨೬ ಖುಲಾಸೆ, ೪ ವಜಾ ಆಗಿದ್ದವು. ೩೦ ರಾಜಿಯಾದರೆ, ೧೬ ಹಿಂಪಡೆಯಲಾಗಿತ್ತು. ೮ ಸುಳ್ಳು ಮತ್ತು ೩೪ ಬಾಕಿ ಇದ್ದವು.[೨೫೮]

೧೯೨೨-೨೩ ರಲ್ಲಿ ಮೈಸೂರು ಆರ್ಮ್ಸ್ ರೆಗ್ಯುಲೇಷನ್ ಕಾಯ್ದೆಯಡಿಯಲ್ಲಿ ೨೦,೩೦೦ ಜನರಿಗೆ ಶಸ್ತ್ರಾಸ್ತ್ರ ಪರವಾನಿಗೆಯನ್ನು ನೀಡಲಾಗಿತ್ತು. ೧೯೨೧-೨೨ ರಲ್ಲಿ ಇದು ೧೭.೨೫೧ ಆಗಿತ್ತು.[೨೫೯] ಈ ರೀತಿ ಶಸ್ತ್ರಾಸ್ತ್ರ ಪರವಾನಿಗೆಯನ್ನು ಪಡೆಯುವವರ ಸಂಖ್ಯೆಯಲ್ಲಿ ಏರಿಕೆಗೆ ಕಾರಣವೇನೆಂದರೆ, ಹೆಚ್ಚಿನ ಸಂಖ್ಯೆಯ ಜನರು ತಮ್ಮ ಬೆಳೆಗಳನ್ನು ಹಾಳು ಮಾಡುವ ಕ್ರೂರ ಮೃಗಗಳಿಂದ ಬೆಳೆಗಳನ್ನು ರಕ್ಷಿಸಿಕೊಳ್ಳಲು ಮತ್ತು ಗಡಿಭಾಗಗಳಲ್ಲಿ ದರೋಡೆಕೋರರಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಶಸ್ತ್ರಾಸ್ತ್ರಗಳನ್ನು ಹೊಂದುತ್ತಿದ್ದರು. ಈ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ ೫೭ ಪ್ರಕರಣಗಳಲ್ಲಿ ೫೮ ಜನರನ್ನು ವಿಚಾರಣೆಗೆ ಒಳಪಡಿಸಲಾಯಿತು. ಇದರಲ್ಲಿ ೩೪ ಪ್ರಕರಣಗಳಲ್ಲಿ ೩೫ ಜನರಿಗೆ ಶಿಕ್ಷೆಯಾಯಿತು. ೫ ಜನ ಮತ್ತು ೫ ಪ್ರಕರಣಗಳು ಖುಲಾಸೆಗೊಂಡವು. ೧೮ ಪ್ರಕರಣ, ೧೮ ಜನರು ಜನರ ವಿಚಾರಣೆ ಬಾಕಿ ಇತ್ತು. ೧೯೨೨-೨೩ ರಲ್ಲಿ ಯಾವುದೇ ಶಸ್ತ್ರಾಸ್ತ್ರಗಳನ್ನಾಗಲಿ ಅದಕ್ಕೆ ಬೇಕಾದ ಸ್ಫೋಟಕಗಳನ್ನಾಗಲಿ ತಯಾರಿಸಿಲ್ಲ. ಮೈಸೂರು ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ ಬಾಲ್ಯ ವಿವಾಹವಾಗಿದ್ದಕ್ಕಾಗಿ ಶಿಕ್ಷೆಗೆ ಒಳಗಾಗಿದ್ದ. ೮೭ ಬಾಲಾಪರಾಧಿಗಳು (೩೫ ಮೈಸೂರು ನಗರ, ೨೦ ಬೆಂಗಳೂರು ನಗರ, ೧೭ ಕೋಲಾರ ಜಿಲ್ಲೆ, ೯ ಕೆ.ಜಿ.ಎಫ್, ೫ ಶಿವಮೊಗ್ಗ, ೧ ಕಡೂರು) ಬಾಲ ಧೂಮಪಾನ ನಿಷೇಧ ಕಾಯ್ದೆಅಡಿ ಪ್ರಥಮ ಬಾರಿ ಅಪರಾಧ ಮಾಡಿದ್ದುದೆಂಬ ಕಾರಣಕ್ಕೆ ಅವರಿಗೆ ಎಚ್ಚರಿಕೆ ನೀಡಲಾಯಿತು. ೧೯೨೧-೨೨ ರಲ್ಲಿ ಇದು ೩೩ ಆಗಿತ್ತು. ಹಾಸನ ಮತ್ತು ಕಡೂರು ಜಿಲ್ಲೆಯಲ್ಲಿ ೧೨ ಕಾಫಿ ಕಳ್ಳತನದ ಕಾಯ್ದೆ ಅಡಿ ಪ್ರಕರಣ ದಾಖಲಾಗಿದ್ದು, ನಂತರ ಶಿಕ್ಷೆಯಾದರೆ, ೨ ಖುಲಾಸೆಗೊಂಡು, ೬ ಇತರೇ ರೀತಿ ಮುಕ್ತಾಯಗೊಂಡವು. ೧ ಪೊಲೀಸರಲ್ಲಿ ತನಿಖೆಗೆ ಬಾಕಿ ಇತ್ತು. ೫ ಪ್ರಕರಣಗಳಲ್ಲಿ ಎಲ್ಲ ೭ ಜನರನ್ನು ಬಂಧಿಸಲಾಗಿತ್ತು. ಇದರಲ್ಲಿ ೩ ಜನರಿಗೆ ಶಿಕ್ಷೆಯಾದರೆ, ೪ ಜನರು ಖುಲಾಸೆ / ವಜಾಗೊಂಡರು. ೧೯೨೨ ರಲ್ಲಿ ಗೇಮ್ ಆಂಡ್ ಫಿಶ್ ಪ್ರಿಸರ್ವ್‌ವೇಷನ್ ರೆಗ್ಯುಲೇಷನ್ ಕಾಯ್ದೆ ಅಡಿಯಲ್ಲಿ ೨೮೩ ಪರವಾನಗಿ ವಿತರಿಸಲಾಯಿತು. ೧೯೨೧-೨೨ ಕ್ಕಿಂತ ಇದು ೫೨ ಹೆಚ್ಚಾಗಿತ್ತು. ಹೆಚ್ಚಳ ತುಮಕೂರು ಜಿಲ್ಲೆ ಹೊರತುಪಡಿಸಿ ಉಳಿದೆಡೆ ಹರಡಿತ್ತು. ೧೯೨೩ ರಲ್ಲಿ ಮೈಸೂರು ಆರ್ಮ್ಸ್ ರೆಗ್ಯುಲೇಷನ್ ಕಾಯ್ದೆಯಡಿ ೨೧.೦೮೨ ಆಯುಧ ಪರವಾನಿಗೆಗಳನ್ನು ನೀಡಲಾಯಿತು. ಇದು ೧೯೨೨ ರಲ್ಲಿ ೨೦.೩೦೦ ಆಗಿತ್ತು. ಈ ಕಾಯ್ದೆಯ ನಿಯಮಗಳನ್ನು ಉಲ್ಲಂಘನೆಮಾಡಿದ ೪೪ ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಇದರಲ್ಲಿ ೩ ಪ್ರಕರಣಗಳನ್ನು ಹಿಂಪಡೆದಿದ್ದರೆ ೨೫ ಪ್ರಕರಣಗಳಲ್ಲಿ ಶಿಕ್ಷೆಯಾಗಿತ್ತು. ೮ ಪ್ರಕರಣಗಳು ಖುಲಾಸೆ ಅಥವಾ ವಜಾ ಆಗಿದ್ದವು. ವರ್ಷದ ಕೊನೆಯಲ್ಲಿ ೩ ಪ್ರಕರಣಗಳು ೩ ಜನರ ವಿರುದ್ಧ ಪ್ರಕರಣ ವಿಚಾರಣಾ ಹಂತದಲ್ಲಿದ್ದು, ೧೯೨೩ ರಲ್ಲಿ ಹೊಸ 'ಗನ್'ಗಳನ್ನಾಗಲೀ, ಮದ್ದುಗುಂಡುಗಳನ್ನಾಗಲೀ ತಯಾರಿಸಲಿಲ್ಲ.

ಮೈಸೂರು ಬಾಲ್ಯವಿವಾಹ ತಡೆಕಾಯ್ದೆ ಅಡಿಯಲ್ಲಿ ಎರಡು ಪ್ರಕರಣ ೧೯೨೩ರಲ್ಲಿ ದಾಖಲಾಗಿ ೧೧ ಜನರು ವಿಚಾರಣೆ ಎದುರಿಸುತ್ತಿದ್ದರು. ಇದರಲ್ಲಿ ೧೦ ಜನರಿಗೆ ಶಿಕ್ಷೆಯಾದರೆ, ಒಬ್ಬರು ವಿಚಾರಣೆಯಿಂದ ತಪ್ಪಿಸಿಕೊಂಡಿದ್ದರು. ಬಾಲ ಧೂಮಪಾನ ನಿಷೇಧ ಮತ್ತು ತಡೆಕಾಯ್ದೆ ಅನ್ವಯ ೧೭೯ ಬಾಲಾಪರಾಧಿಗಳಿಗೆ ಮೊದಲ ಭಾರಿ ಅಪರಾಧ ಮಾಡಿದ್ದಾರೆಂಬ ಕಾರಣಕ್ಕೆ ಅವರಿಗೆ ಎಚ್ಚರಿಕೆ ನೀಡಲಾಗಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬನಿಗೆ ಶಿಕ್ಷೆ ನೀಡಲಾಗಿತ್ತು. ಕಾಫಿ ಸ್ಟೀಲಿಂಗ್ ಪ್ರಿವೆನ್ಷನ್ ರೆಗ್ಯುಲೇಷನ್ ಕಾಯ್ದೆಯಡಿ ಕಡೂರು ಮತ್ತು ಹಾಸನ ಜಿಲ್ಲೆಗಳಲ್ಲಿ ದಾಖಲಾಗಿರಲಿಲ್ಲ. ಆದರೆ ಕಾಫಿಗೆ

ಸಂಬಂಧಿಸಿದಂತೆ ಐಪಿಸಿ ಅಡಿಯಲ್ಲಿ ಅಪರಾಧಗಳಿಗಾಗಿ ೯ ಪ್ರಕರಣ ದಾಖಲಾಗಿದ್ದವು. ಇದರಲ್ಲಿ ೩ ಪ್ರಕರಣಗಳಲ್ಲಿ ಶಿಕ್ಷೆ ಆಗಿದ್ದರೆ, ಒಂದು ಖುಲಾಸೆಗೊಂಡಿತ್ತು. ೧೯೨೩ ರಲ್ಲಿ ಗೇಮ್ ಆಂಡ್ ಫಿಶ್ ಪ್ರಿವೆನ್ಷನ್ ರೆಗ್ಯುಲೇಷನ್ ಕಾಯ್ದೆ ಅಡಿ ಹಲವಾರು ಪರವಾನಿಗೆಗಳನ್ನು ನೀಡಲಾಯಿತು. ಇದು ೧೯೨೩ ರಲ್ಲಿ ದಾಖಲಾದ ಪ್ರಕರಣಗಳಿಗೆ ಸಮಾನಾಂತರವಾಗಿತ್ತು. ಈ ಎರಡೂ ವರ್ಷದಲ್ಲಿ ೨೮೩ ಪರವಾನಿಗೆಗಳನ್ನು ನೀಡಲಾಗಿತ್ತು. ಈ ಪರವಾನಿಗೆಗಳಿಗೆ ೧೯೨೩ ರಲ್ಲಿ ೧,೮೧೦/- ರೂಪಾಯಿ ಶುಲ್ಕ ಪಡೆದಿದ್ದರೆ ೧೯೨೪ರಲ್ಲಿ ೧,೯೧೨/-ರೂಪಾಯಿ ಶುಲ್ಕ ಪಡೆಯಲಾಗಿತ್ತು. ಈ ಕಾಯ್ದೆಯ ನಿಯಮಗಳನ್ನು ಉಲ್ಲಂಘನೆ ಮಾಡಿದಕ್ಕಾಗಿ ನಾಲ್ಕು ಜನರ ವಿರುದ್ಧ ಒಂದು ಪ್ರಕರಣ ದಾಖಲಾಗಿತ್ತು. ಮತ್ತು ಈ ಪ್ರಕರಣಕ್ಕೆ ನ್ಯಾಯಾಲಯದಲ್ಲಿ ಶಿಕ್ಷೆಯಾಗಿತ್ತು.[೬೦]

ಮೈಸೂರು ಆರ್ಮ್ಸ ರೆಗ್ಯುಲೇಶನ್ ಕಾಯ್ದೆ ಪ್ರಕಾರ ೨೦.೭೬೬ ಜನರಿಗೆ ೧೯೨೪ ರ ಕ್ಯಾಲೆಂಡರ್ ವರ್ಷದಲ್ಲಿ ಬಂದೂಕು ಪರವಾನಿಗೆ ನೀಡಲಾಯಿತು. ೧೯೨೩ ರಲ್ಲಿ ಇದು ೨೧.೦೮೨ ಆಗಿತ್ತು. ಈ ಕಾಯ್ದೆಯಡಿ ನಿಯಮಗಳ ಉಲ್ಲಂಘನೆಗಾಗಿ ೫೬ ಪ್ರಕರಣಗಳಲ್ಲಿ ೫೭ ಜನರನ್ನು ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಲಾಯಿತು. ೩೨ ಪ್ರಕರಣಗಳಲ್ಲಿ ೩೩ ಜನರಿಗೆ ಶಿಕ್ಷೆಯಾದರೆ, ೫ ಪ್ರಕರಣಗಳಲ್ಲಿ ೫ ಜನರು ಖುಲಾಸೆ ಅಥವಾ ವಜಾಗೊಂಡರು. ಉಳಿದ ೧೯ ಪ್ರಕರಣಗಳಲ್ಲಿ ೧೯ ಜನರು ವರ್ಷದ ಕೊನೆಯಲ್ಲಿ ವಿಚಾರಣೆ ಎದುರಿಸುತ್ತಿದ್ದರು. ೧೯೨೪ ರಲ್ಲಿ ಯಾವುದೇ ಬಂದೂಕುಗಳನ್ನಾಗಲೀ ಅಥವಾ ಮದ್ದುಗುಂಡುಗಳನ್ನಾಗಲೀ ತಯಾರಿಸಿರಲಿಲ್ಲ. ೧೯೨೪ ರಲ್ಲಿ ಗೇಮ್ ಆಂಡ್ ಫಿಶ್ ಪ್ರಿಸರ್‌ವೇಷನ್ ಕಾಯ್ದೆಯಡಿ ೨೯೩ ಪರವಾನಿಗೆ ನೀಡಲಾಯಿತು. ೧೯೨೪ ಕ್ಕಿಂತ ಇದು ೧೦ ಹೆಚ್ಚಾಗಿತ್ತು. ಪರವಾನಿಗೆ ಶುಲ್ಕವನ್ನು ೧೯೨೩ ರಲ್ಲಿ ೧,೧೯೨ ಇದ್ದರೆ ೧೯೨೪ ರಲ್ಲಿ ರೂ. ೨,೩೩೪ ಕ್ಕೆ ಏರಿಸಲಾಯಿತು. ಮೈಸೂರು ಬಾಲ್ಯವಿವಾಹ ತಡೆಕಾಯ್ದೆ ಅಡಿಯಲ್ಲಿ ಒಂದು ಪ್ರಕರಣದಲ್ಲಿ ಮೂವರು ವಿಚಾರಣೆಗೆ ಒಳಗಾದರು. ಇಬ್ಬರಿಗೆ ಜೈಲುವಾಸ ಮತ್ತು ದಂಡ ವಿಧಿಸಿದರೆ ಉಳಿದವರು ವಜಾಗೊಂಡರು. ಬಾಲ ಧೂಮಪಾನ ನಿಷೇಧ ಾಯ್ದೆಅಡಿಯಲ್ಲಿ ೧೨೦ ಬಾಲಾಪರಾಧಿಗಳಿಗೆ ಮೊದಲ ಸಲ ಅಪರಾಧ ಮಾಡಿದಕ್ಕಾಗಿ ಎಚ್ಚರಿಕೆ ನೀಡಲಾಯಿತು. ೧೯೨೩ರಲ್ಲಿ ೧೭೯ ಜನರಿಗೆ ಎಚ್ಚರಿಕೆ ನೀಡಲಾಗಿತ್ತು. ಕಡೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕಾಫಿ ಕಳ್ಳತನ ತಡೆಕಾಯ್ದೆಯಡಿಯಲ್ಲಿ ಯಾವುದೇ ಪ್ರಕರಣಗಳು ವರದಿಯಾಗಲಿಲ್ಲ. ಆದರೆ ಐಪಿಸಿಯಡಿಯಲ್ಲಿ ಕಾಫಿ ಕಳ್ಳತನ ಮಾಡಿದ್ದಕ್ಕೆ ೩ ಪ್ರಕರಣಗಳಲ್ಲಿ ೩ ಜನರ ಮೇಲೆ ಆರೋಪ ಹೊರಿಸಲಾಯಿತು. ಇದರಲ್ಲಿ ೨ ಪ್ರಕರಣಗಳಲ್ಲಿ ಇಬ್ಬರಿಗೆ ಶಿಕ್ಷೆಯಾದರೆ ಒಂದು ಪ್ರಕರಣದಲ್ಲಿ ಒಬ್ಬನು ಖುಲಾಸೆಗೊಂಡನು.[೬೧]

೧೯೨೬-೨೭ ರಲ್ಲಿ ೧೯೨೬ ರಲ್ಲಿ ಮೈಸೂರು ಆರ್ಮ್ಸ್ ರೆಗ್ಯುಲೇಶನ್ ಕಾಯ್ದೆ ಅಡಿ ೨೨.೧೧೩ ಪರವಾನಿಗೆ ನೀಡಲಾಯಿತು. ೧೯೨೫ ರಲ್ಲಿ ಇದು ೨೦.೯೫೦ ಆಗಿತ್ತು. ಈ ಕಾಯ್ದೆಯ ನಿಯಮಗಳನ್ನು ಉಲ್ಲಂಘನೆ ಮಾಡಿದಕ್ಕಾಗಿ ೨೪ ಜನರ ವಿರುದ್ಧ ೨೪ ಮೊಕದ್ದಮೆ ದಾಖಲಿಸಲಾಯಿತು. ಇದರಲ್ಲಿ ೧೮ ಜನರಿಗೆ ಶಿಕ್ಷೆಯಾಯಿತು. ೪ ಪ್ರಕರಣಗದಲ್ಲಿ ೪ ಜನ ವಜಾ ಅಥವಾ ಖುಲಾಸೆಗೊಂಡರು. ೨ ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದವು. ಬೆಂಗಳೂರು ಮತ್ತು ಶಿವಮೊಗ್ಗಗಳಲ್ಲಿ ಶಸ್ತ್ರಾಸ್ತ್ರ ತಯಾರಿಸಲಾಯಿತು. ಅನುಕ್ರಮವಾಗಿ ಈ ಜಿಲ್ಲೆಗಳಲ್ಲಿ ೧೦ ಮತ್ತು ೧೮ ಗನ್‌ಗಳನ್ನು ತಯಾರಿಸಲಾಯಿತು. ೧೯೨೬ ರಲ್ಲಿ ಗೇಮ್ ಆಂಡ್ ಫಿಷ್ ಪ್ರಿಸರ್‌ವೇಷನ್ ರೆಗ್ಯುಲೇಶನ್ ಕಾಯ್ದೆ ಅಡಿ ೨೬೮ ಪರವಾನಗಿಗಳನ್ನು ವಿಂಗಡಿಸಲಾಯಿತು. ೧೯೨೫-೨೬ ರಲ್ಲಿ ಇದು ೨೬೦ ಆಗಿತ್ತು. ೧೯೨೬-೨೭ ರಲ್ಲಿ ಪರವಾನಗಿ ಹಣ ಸಂಗ್ರಹಿಸಿದ್ದು ೧೯೭೧ ರೂ (೧೯೨೫-೨೬ ರಲ್ಲಿ ಇದು ೧೭೩೫) ಅರಣ್ಯ ನಿಯಂತ್ರಣ ಕಾಯ್ದೆಯಡಿ ಕಲಂ: ೨೪ ಮತ್ತು ಕಲಂ: ೮೮ ಅಡಿಯಲ್ಲಿ ೩ ಜನರ ವಿರುದ್ದ ೩ ನೇ ಜುಲಾಯಿ ೧೯೨೬ ರಂದು ಪುರುದಾಲ್ ರಾಜ್ಯ ಅರಣ್ಯದಲ್ಲಿ ಹೆಣ್ಣು ಹರಿಣವನ್ನು ಕೊಂದಿದಕ್ಕಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಕರಣ ದಾಖಲಾಯಿತು. ಇದರಲ್ಲಿ ಒಬ್ಬನಿಗೆ ಜೈಲುವಾಸ

ಮತ್ತು ೨೫ ರೂ ದಂಡ ವಿಧಿಸಲಾಯಿತು. ದಂಡ ಕಟ್ಟಲಾಗದಿದ್ದರೆ ೭೫ ದಿನಗಳ ಸಾದಾರಣ ಜೈಲು ಶಿಕ್ಷೆ ವಿಧಿಸಲಾಯಿತು. ಇನ್ನು ಇಬ್ಬರು ಖುಲಾಸೆಗೊಂಡರು. ಕೋಲಾರ ಜಿಲ್ಲೆಯಲ್ಲಿ ೫ ಗಂಡು ಚಿಗರೆಗಳನ್ನು ಕೊಲ್ಲಲು ಅನುಮತಿ ನೀಡಲಾಯಿತು. ಜ್ಯುವೆನೇಲ್ ಸ್ಮೋಕಿಂಗ್ ಪ್ರಿಸರ್‌ವೇಷನ್ ಕಾಯ್ದೆ ಅಡಿ ೩೬೯ ಬಾಲಾಪರಾಧಿಗಳಿಗೆ ಇಚ್ಚರಿಕೆ ನೀಡಲಾಯಿತು. ೧೯೨೫-೨೬ ರಲ್ಲಿ ಈ ಸಂಖ್ಯೆ ೩೮೫ ಆಗಿತ್ತು. ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ಯಾವುದೇ ಪ್ರಕರಣಗಳು ದಾಖಲಾಗಿಲ್ಲ. ಕಡೂರು ಮತ್ತು ಹಾಸನ ಜಿಲ್ಲೆಯಲ್ಲಿ ಕಾಫಿ ಸ್ಟೀಲಿಂಗ್ ಪ್ರಿವೆನ್‌ಷನ್ ಕಾಯ್ದೆಯಡಿ ಯಾವುದೇ ನಿರ್ಧಿಷ್ಟ ಪ್ರಕರಣಗಳು ದಾಖಲಾಗಿಲ್ಲ. ಆದರೆ ಐಪಿಸಿ ಕಲಂ: ೩೭೯ ಅಡಿಯಲ್ಲಿ ಕಡೂರು ಜಿಲ್ಲೆಯಲ್ಲಿ ೫ ಪ್ರಕರಣಗಳು ದಾಖಲಾದವು. ಇದರಲ್ಲಿ ೨ಕ್ಕೆ ಶಿಕ್ಷೆಯಾಯಿತು. ಪೊಲೀಸ್ ರೆಗ್ಯುಲೇಷನ್ ಕಾಯ್ದೆಯಲ್ಲಿ ೧೬೭೨ ಪ್ರಕರಣಗಳಲ್ಲಿ ೧೭೪೦ ಜನರನ್ನು ವಿಚಾರಣೆಗೆ ಗುರಿಪಡಿಸಲಾಯಿತು. (೧೯೨೫-೨೬ ರಲ್ಲಿ ಇದು ೧೫೩ ಮತ್ತು ೧೦೧ ಆಗಿತ್ತು.) ವಿಲೇಜ್ ಪೊಲೀಸ್ ರೂಲ್ಸ್‌ಗಳನ್ನು ಉಲ್ಲಂಘನೆ ಮಾಡಿದಕ್ಕಾಗಿ ೧೨೩ ಪ್ರಕರಣಗಳಲ್ಲಿ ೧೪೨ ಜನರನ್ನು ವಿಚಾರಣೆಗೆ ಗುರಿಪಡಿಸಲಾಯಿತು. ೧೯೨೫-೨೬ ರಲ್ಲಿ ೫೨ ಪ್ರಕರಣದಲ್ಲಿ ೬೦ ಜನರನ್ನು ವಿಚಾರಣೆಗೆ ಗುರಿಪಡಿಸಲಾಗಿತ್ತು. ಮೋಟಾರು ವಾಹನ ಕಾಯ್ದೆಯಡಿಯಲ್ಲಿ ೩೬೧ ಮೋಟಾರು ವಾಹನಗಳನ್ನು ನೊಂದಣಿ ಮಾಡಲಾಯಿತು. (ಇದು ೩೦ ಜೂನ್ ೧೯೨೭ ರವರೆಗೆ) ಈ ಬಗ್ಗೆ ೫೪೬೮ ರೂ ಶುಲ್ಕ ವಸೂಲಿಮಾಡಲಾಯಿತು. ೮೫ ಅಪಘಾತ ಪ್ರಕರಣಗಳು ವರದಿಯಾದವು. ಇದರಲ್ಲಿ ೨೦ ಪ್ರಕರಣಗಳಲ್ಲಿ ಶಿಕ್ಷೆಯಾಯಿತು. ಪ್ರತೀ ವರ್ಷದಂತೆ ೧೯೨೬ ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ರವರು ವೆಟನರಿ (ಪಶುವೈದ್ಯ) ಇನ್ಸ್‌ಪೆಕ್ಟರ್ ರವರೊಂದಿಗೆ ಸೇರಿ ಜಟಕ ಅಥವಾ ಟಾಂಗಗಳ ಅರ್ಧವಾರ್ಷಿಕ ಪರೀಕ್ಷೆ ನಡೆಸಿದರು.[೨೨]

೧೯೪೧-೪೨ ರಲ್ಲಿ ವಿಶೇಷ ಮತ್ತು ಸ್ಥಳೀಯ ಮತ್ತು ವಿಶೇಷ ಕಾಯ್ದೆ ಅಡಿಯಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆ ೧೬,೬೮೯ ರಿಂದ ೧೭,೭೮೦ ಕ್ಕೆ ಏರಿತು.[೨೩] ೧೯೪೧-೪೨ ರಲ್ಲಿ ೩೯೭ ಬಾಲಕರು ಧೂಮಪಾನ ಮಾಡಿದ ಪ್ರಕರಣಗಳಲ್ಲಿ ಅವರ ಪೋಷಕರನ್ನು ಕರೆದು ಎಚ್ಚರಿಕೆ ನೀಡಲಾಯಿತು. ಒಂದು ಪ್ರಕರಣದಲ್ಲಿ ಶಿಕ್ಷೆಯಾಯಿತು. ೧೯೪೧ ರಲ್ಲಿ ಹೊಸದಾಗಿ ೧,೦೩೭ (೮೮೩) ಮೋಟಾರು ವಾಹನಗಳು ನೊಂದಣಿಯಾದವು. ಒಟ್ಟು ೪೫೬ (೪೯೨) ರಸ್ತೆ ಅಪಘಾತ ಪ್ರಕರಣಗಳು ವರದಿಯಾಗಿ ೩೭ ಜನ ಮೃತಪಟ್ಟರು.[೨೪] ೧೯೪೫-೪೬ ರಲ್ಲಿ ಸ್ಥಳೀಯ ಮತ್ತು ವಿಶೇಷ ಕಾಯ್ದೆಗಳು ಹಾಗೂ ಸಾರ್ವಜನಿಕ ಉಪದ್ರವಗಳ ಪ್ರಕರಣಗಳು ೧೬.೪೬೪ ರಿಂದ ೧೮.೪೬೬ ಕ್ಕೆ ಏರಿತು. ಡಿಫೆನ್ಸ್ ಇಂಡಿಯಾ ರೂಲ್ಸ್, ಮೈಸೂರು ಪೊಲೀಸ್ ಕಾಯ್ದೆ ಹೊಸದಾಗಿ ಬಂದಿದ್ದರಿಂದ ಅಪರಾಧಗಳು ಹೆಚ್ಚಿದವು.[೨೫] ೧೯೪೫-೪೬ ರಲ್ಲಿ ಧೂಮಪಾನ ಮಾಡಿದ ಬಾಲಕರಲ್ಲಿ ೩೮೩ ಜನರ ಪೋಷಕರನ್ನು ಕರೆದು ಎಚ್ಚರಿಕೆ ನೀಡಲಾಯಿತು. ೧೯೪೪ ರಲ್ಲಿ ಇದು ೪೦೨ ಆಗಿತ್ತು. ೩ ಪ್ರಕರಣಗಳನ್ನು ದಾಖಲಿಸಲಾಯಿತು. ೧ ರಲ್ಲಿ ಶಿಕ್ಷೆಯಾಯಿತು. ೧೯೪೫-೪೬ ರಲ್ಲಿ ೫೫೮೩ ವಾಹನಗಳ ನೊಂದಣಿಯಾಯಿತು. ೧೯೪೪-೪೫ ರಲ್ಲಿ ಇದು ೫೧೯ ಆಗಿತ್ತು. ಅಪಘಾತಗಳ ಸಂಖ್ಯೆ ೫೮೪ ರಿಂದ ೪೯೧ ಕ್ಕೆ ಇಳಿಯಿತು. ಮೋಟಾರು ವಾಹನ ಕಾಯ್ದೆಯಡಿ ೩೧೮೦ ಪ್ರಕರಣ ದಾಖಲಾಗಿ ೩೦೫೭ ಪ್ರಕರಣಗಳಲ್ಲಿ ಶಿಕ್ಷೆಯಾಯಿತು[೨೬]

೭. ೨೯ :- ಪೊಲೀಸ್ ಪಡೆಗೆ ತಗಲಿದ ಖರ್ಚುವೆಚ್ಚಗಳು

ಪೊಲೀಸ್ ಪಡೆಗೆ ೧೮೮೭ ರಲ್ಲಿ ೨೩,೨೩೭-೦-೫ ರೂ ಖರ್ಚಾಗಿದ್ದರೆ ೧೮೮೮ ರಲ್ಲಿ ೨೨೪೨೯-೬-೪ ರೂ ಖರ್ಚು ಮಾಡಲಾಗಿತ್ತು. ಈ ಖರ್ಚಿನಲ್ಲಿ ಇಳಿಕೆಯಾಗಲು ಕಾರಣವೇನೆಂದರೆ ಪೊಲೀಸರಿಗೆ ಬಟ್ಟೆ ಹಂಚಿಕೆ ಮಾಡುವ ಬಗ್ಗೆ ಹಣವನ್ನು ಖರ್ಚು ಮಾಡಿರಲಿಲ್ಲ.

೧೯೦೪-೦೫ ರಲ್ಲಿ ಇಲಾಖೆಗೆ ಖರ್ಚಾದ ಹಣದ ವಿವರ ಈ ರೀತಿ ಇದೆ[೨೧೭]

	ರೂ	ಎ-	ಪಿ
ಜಿಲ್ಲಾ ಸೂಪರಿಂಟೆಂಡೆಂಟ್‌ರವರ ಸಂಬಳ	೧೨೧೯೫-	೧೧	೦
ಸಿಬ್ಬಂದಿಯವರ ಸಂಬಳ	೬೩೪೦೮-	೧	೭
ಕುದುರೆ ಮತ್ತು ಪ್ರಯಾಣ ಭತ್ಯೆ	೨೧೪೫-	೭	೯
ಆಕಸ್ಮಿಕ ಖರ್ಚುಗಳು ಮತ್ತು ಕಸ ಗುಡಿಸುವವರ ಸಂಬಳ	೯೫೫೮-	೧೫	೫

೧೯೦೪-೦೫ ರಲ್ಲಿ ಪೊಲೀಸ್ ಸಿಬ್ಬಂದಿಯೊಬ್ಬನ ಸರಾಸರಿ ಖರ್ಚು ಆತನ ಸಮವಸ್ತ್ರ ಸೇರಿ. ರೂ. ೧೬೮-೧೪-೪ ಆಗಿತ್ತು. ಆತನ ಸರಿಸುಮಾರು ಸಂಬಳ ರೂ. ೧೪೫-೦-೪ ಆಗಿದ್ದು, ರೈಲ್ವೆ ಪೊಲೀಸರನ್ನು ಬಿಟ್ಟು ಪ್ರತಿ ಒಬ್ಬ ಪ್ರಜೆಗೆ ತಗಲುತ್ತಿದ್ದ ಒಟ್ಟು ಖರ್ಚು ರೂ. ೦-೧೦-೧೧ [೨೧೮] ೧೯೦೫-೦೬ ರಲ್ಲಿ ಇಲಾಖೆಗೆ ಖರ್ಚಾದ ಹಣ ೯,೯೨,೧೬೩, ೧೯೦೪-೦೫ ರಲ್ಲಿ ೯,೭೫,೬೦೭ ರೂ ಆಗಿತ್ತು. ೧೯೦೪-೦೫ ಕ್ಕಿಂತ ೧೬,೫೫೦ ರೂ ಹೆಚ್ಚಾಗಿತ್ತು. ಇದರ ವಿವರ ಈ ರೀತಿ ಇದೆ.[೨೧೯]

ಕ್ರಸಂ	ವಿವರಗಳು	೧೯೦೪-೦೫ ರೂಗಳಲ್ಲಿ	೧೯೦೫-೦೬ ರೂಗಳಲ್ಲಿ
೧	ಕೇಂದ್ರಸ್ಥಾನದ ಎಸ್‌ಪಿ	೩೫,೮೪೧	೩೫,೧೦೦
೨	ಬೆಂಗಳೂರು ಮತ್ತು ಮೈಸೂರು ನಗರ ಪೊಲೀಸ್	೭೩,೮೪೧	೭೩,೮೯೫
೩	ಕೆ.ಜಿ.ಎಫ್ ಪೊಲೀಸ್	೬೯,೨೭೭	೬೮,೪೮೮
೪	ಕೆ.ಜಿ.ಎಫ್‌ನ ವಿಶೇಷ ತನಿಖಾ ಘಟಕ	೧೪,೧೦೪	೧೨,೪೬೮
೫	ವಿಶೇಷ ಮೀಸಲು ಪೊಲೀಸ್	೭,೪೩,೨೬೦	೭,೬೨,೪೮೦
೬	ಗ್ರಾಮೀಣ ಪೊಲೀಸ್		
೭	ರೈಲ್ವೆ ಪೊಲೀಸ್	೯,೮೭೦	೯,೬೦೧
೮	ಹಣ ಹಿಂದಿರುಗಿಸಿದ್ದು	೫೬	೧೪
೯	ಪೊಲೀಸರಿಗೆ ನೀಡಿದ ಭೂಕಂದಾಯದ ಭಾಗ	೨೯,೩೫೮	೨೯,೭೫೭
	ಒಟ್ಟು	೯,೭೫,೬೦೭	೯,೯೨,೧೬೩

೧೯೧೩-೧೪ ರಲ್ಲಿ ಇಲಾಖೆಯ ವಿವಿಧ ಭಾಗಗಳಲ್ಲಿ ಖರ್ಚಾದ ಹಣ

		ರೂ	ಎ	ಪಿ
೧	ಜಿಲ್ಲಾ ಸೂಪರಿಂಟೆಂಡೆಂಟ್‌ರವರ ಸಂಬಳ	೧೧,೪೦೦	–	–
೨	ಇಲಾಖೆಯ ಸಿಬ್ಬಂದಿಯವರ ಸಂಬಳ ಮತ್ತು ಕಛೇರಿಯ ಖರ್ಚು	೮೪,೨೬೪	೧	೬
೩	ಸಾರಿಗೆ, ಸೈಕಲ್ ಮತ್ತು ಪ್ರಯಾಣಭತ್ಯೆ	೫,೭೩೪	೧೩	೫
೪	ಕಸ ಹೊಡೆಯುವವರ ಮತ್ತು ಕವಾಯತು ಕಲಿಸುವವರ ಸಂಬಳ ಮತ್ತು ಇತರ ಖರ್ಚು	೧೧,೬೦೫,	೨	೩
	ಒಟ್ಟು	೧,೧೨,೪೦೪,	೧	೨

ಪೊಲೀಸ್ ಕಾನ್‌ಸ್ಟೇಬಲ್‌ರವರ ಸಮವಸ್ತ್ರ ಸೇರಿ ಇತರೇ ಸರಾಸರಿ ವಾರ್ಷಿಕ ಖರ್ಚು ರೂ. ೨೨೯-೬-೪ ಸರಾಸರಿ ಸಂಬಳ ಪರಿಹಾರ ಭತ್ಯೆ ಸೇರಿ ರೂ. ೧೯೧-೮-೨ ಪರಿಹಾರ ಭತ್ಯೆಗಳಲ್ಲದೇ ರೂ. ೧೭೯-೧೦-೨ ರೈಲ್ವೆ ಪೊಲೀಸರನ್ನು ಹೊರತುಪಡಿಸಿ ಸರಾಸರಿ ಖರ್ಚು ಪ್ರತಿ ಜನರ ಮೇಲೆ ರೂ. ೦-೧೪-೩ ಆಗಿತ್ತು.[೨೨೦]

೧೯೧೪-೧೫ ರಲ್ಲಿನ ಖರ್ಚಿನ ವಿವರ ಈ ಕೆಳಗಿನಂತೆ ಇದೆ.

ಕ್ರಸಂ	ಜಾತಿ	ರೂ	ಎ	ಪಿ
೧	ಜಿಲ್ಲೆ ಎಸ್‌ಪಿಯವರ ಸಂಬಳ	೧೦,೯೨೬	೧೩	೧
೨	ಸಿಬ್ಬಂದಿ ಹಾಗೂ ಕಛೇರಿ ಸಿಬ್ಬಂದಿಯವರ ಸಂಬಳ	೮೭,೬೪೪	೧೩	೧೧
೩	ಸಾರಿಗೆ, ಸೈಕಲ್, ಮತ್ತು ಪ್ರಯಾಣ ಭತ್ಯೆ	೬,೨೫೨	೭	೫
೪	ಕಛೇರಿ ಖರ್ಚು, ಕಸಗುಡಿಸುವವರ ಸಂಬಳ ಮತ್ತು ಕವಾಯತು ಕಲಿಸುವವರ ಭತ್ಯೆ	೧೧,೭೦೮	೬	೪
	ಒಟ್ಟು	೧,೧೬,೫೩೨	೮	೯

ಒಬ್ಬ ಪೊಲೀಸರ ಅವರ ಸಮವಸ್ತ್ರ ಸೇರಿ ಸರಾಸರಿ ವಾರ್ಷಿಕ ಖರ್ಚ ರೂ. ೨೪೧-೭-೧ ಸರಾಸರಿ ಸಂಬಳ ಮತ್ತು ಭತ್ಯೆ ರೂ. ೨೦೦-೯-೦, ಪರಿಹಾರ ಭತ್ಯೆಗಳಿಲ್ಲದ ಸರಾಸರಿ ವಾರ್ಷಿಕ ಖರ್ಚು ರೂ. ೧೮೩-೧೨-೧, ರೈಲ್ವೆ

ಪೊಲೀಸರನ್ನು ಹೊರತುಪಡಿಸಿ ಪ್ರತಿ ಜನರ ಮೇಲೆ ಬೀಳುತ್ತಿದ್ದ ಸರಾಸರಿ ಖರ್ಚು ರೂ. ೦-೧೪-೦.[೨೭೧] ೧೯೧೫-೧೬ ರಲ್ಲಿ ಪೊಲೀಸ್ ಪಡೆಗೆ ಈ ರೀತಿ ಖರ್ಚುಗಳಾಗಿತ್ತು.

ಜಿಲ್ಲಾ ಪೊಲೀಸ್ ಅಧೀಕ್ಷಕರ ಸಂಬಳ ಮತ್ತು ಭತ್ಯೆ	೧೧,೪೦೦	-	-
ಪೊಲೀಸ್ ಸಿಬ್ಬಂದಿ ಮತ್ತು ಕಛೇರಿ ಸಿಬ್ಬಂದಿಗಳ ಸಂಬಳ ಮತ್ತು ಭತ್ಯೆ	೮೬,೬೩೮	೧೫	೫
ಸಾರಿಗೆ, ಸೈಕಲ್, ಪ್ರಯಾಣ ಭತ್ಯೆ	೫,೭೮೦	೪	೧೦
ಕಸಗುಡಿಸುವವರ ಮತ್ತು ಕವಾಯತು ಶಿಕ್ಷಕರ ಸಂಬಳ ಮತ್ತು ಆಕಸ್ಮಿಕ ಖರ್ಚುಗಳು	೧೩,೯೩೨	೮	೮
ಒಟ್ಟು	೧,೧೭,೭೫೧	೧೨	೧೧

[೨೭೨]

ಸಮವಸ್ತ್ರ ಸೇರಿ ಸರಾಸರಿ ಒಬ್ಬ ಪೊಲೀಸರಿಗೆ ಆಗುತ್ತಿದ್ದ ಖರ್ಚು- ರೂ. ೨೪೪-೯-೫, ಪರಿಹಾರ ಭತ್ಯೆಗಳು ಸೇರಿ ನೀಡುತ್ತಿದ್ದ ಸಂಬಳ ಒಬ್ಬರಿಗೆ ವಾರ್ಷಿಕ ಸರಾಸರಿ ರೂ. ೧೯೯-೧೦-೧, ಪರಿಹಾರ ಭತ್ಯೆಗಳಲ್ಲದೇ ಒಬ್ಬನಿಗೆ ರೂ. ೧೮೬-೮-೪, ರೈಲ್ವೆ ಪೊಲೀಸರನ್ನು ಹೊರತುಪಡಿಸಿ ಪ್ರತಿಯೊಬ್ಬ ಸಾರ್ವಜನಿಕನ ಮೇಲೆ ಬೀಳುತ್ತಿದ್ದ ಹೊರೆ ರೂ- ೦-೧೫-೦.

೧೯೨೨-೨೩ ರಲ್ಲಿ ಇಲಾಖೆಯ ಖರ್ಚುವೆಚ್ಚಗಳು

	ರೂ	ಎ	ಪಿ
ಜಿಲ್ಲಾ ಎಸ್‌ಪಿರವರ ಸಂಬಳ	೧೨,೮೩೯	೧೨	೦
ಸಾರಿಗೆ ಮತ್ತು ಪ್ರಯಾಣ ಭತ್ಯೆ	೧,೨೩೫	೦	೦
ಕಛೇರಿ ಸಿಬ್ಬಂದಿಯವರ ಮತ್ತು ಪೊಲೀಸ್ ಪಡೆಯ ಸಂಬಳ ಮತ್ತು ಸ್ಥಳೀಯ ಭತ್ಯೆಗಳು	೧,೭೩,೫೯೭	೦	೦
ಸಾರಿಗೆ, ಸೈಕಲ್, ಪ್ರಯಾಣ ಭತ್ಯೆಗಳು	೧೧,೪೬೭	೭	೧೦
ಕಛೇರಿ ಖರ್ಚುಗಳು	೧೫,೦೭೮	೨	೪
ಪೊಲೀಸ್ ಸಮವಸ್ತ್ರ	೨೦,೮೩೪	೯	೩
ಒಟ್ಟು	೨,೩೫,೦೫೧	೧೫	೫

ಸಮವಸ್ತ್ರವನ್ನು ಸೇರಿ ಪ್ರತೀಯೊಬ್ಬ ಪೊಲೀಸರಿಗೆ ಖರ್ಚಾಗುತ್ತಿದ ವಾರ್ಷಿಕ ಸರಾಸರಿ ರೂ ೫೦೬-೧೩-೩ ಪ್ರತೀಯೊಬ್ಬ ಪೊಲೀಸರಿಗೂ ಸಂದಾಯವಾಗುತ್ತಿದ್ದ ವಾರ್ಷಿಕ ಸರಾಸರಿ ಸಂಬಳ ೩೯೮-೨-೬, ರೈಲ್ವೆ ಪೊಲೀಸರನ್ನು ಹೊರತುಪಡಿಸಿ ಪ್ರತೀಯೊಬ್ಬ ನಾಗರಿಕನಿಗೆ ಬೀಳುತ್ತಿದ್ದ ಹೊರೆ ರೂ. ೧-೯-೧೧.[೨೭೩] ೧೯೨೪-೨೫ ರಲ್ಲಿ ಪ್ರಾಥಮಿಕ ಅಂಕಿಅಂಶಗಳ ಪ್ರಕಾರ ವಾರ್ಷಿಕವಾಗಿ ಇಲಾಖೆಯ ಖರ್ಚು ವೆಚ್ಚ ೧೫,೪೯,೧೦೫ ರೂ ಆಗಿತ್ತು. ೧೯೨೩-೨೪ ರಲ್ಲಿ ಇದು ೧೪,೯೭,೮೦೦ ರೂ ಆಗಿತ್ತು.[೨೭೪]

೭. ३೦ :- ಬೆರಳುಮುದ್ರೆ (ಫಿಂಗರ್‌ಪ್ರಿಂಟ್)

೧೮೯೬-೯೭ ಕ್ಕಿಂತ ಮೊದಲು ಹಳೆಯ ಅಪರಾಧಿಗಳನ್ನು ಗುರುತು ಹಿಡಿಯುವ ಯಾವುದೇ ಪದ್ಧತಿಗಳು ಇರಲಿಲ್ಲ. ೧೮೯೪-೯೫ ರಲ್ಲಿ ಶಿವಮೊಗ್ಗ ಮತ್ತು ಮೈಸೂರು ಜೈಲಿನಲ್ಲಿರುವ ಎಲ್ಲಾ ಖೈದಿಗಳನ್ನು ಬೆಂಗಳೂರು ಜೈಲಿಗೆ ಆಗಾಗ ಕರೆದುಕೊಂಡು ಹೋಗಿ ಅಲ್ಲಿಗೆ ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳ ಪೊಲೀಸ್ ಅಧಿಕಾರಿಗಳನ್ನು ಕರೆಯಿಸಿ ಹಳೆ ಅಪರಾಧಿಗಳನ್ನು ಪತ್ತೆ ಮಾಡುತ್ತಿದ್ದರು. ನಂತರ ಎಲ್ಲಾ ಅಧಿಕಾರಿಗಳನ್ನು ಕರೆಯಿಸಿ ಪತ್ತೆ ಮಾಡುವುದಕ್ಕಿಂತ ಕೇಂದ್ರಸ್ಥಾನದ ಇನ್ಸ್‌ಪೆಕ್ಟರ್‌ರವರಿಂದ ಮಾತ್ರ ಪತ್ತೆ ನಡೆಸುವಂತೆ ಮಾಡಲಾಯಿತು. ಏಕೆಂದರೆ ಆರೋಪಿಗಳನ್ನು ಅಭಿಯೋಜನೆಗೆ ಗುರಿಪಡಿಸುತ್ತಿದ್ದುದು ಇದೇ ಅಧಿಕಾರಿಯಾಗಿದ್ದರಿಂದ ಹೀಗೆ ಮಾಡಲಾಯಿತು. ನಂತರ ಹಳೆಯ ಅಪರಾಧಿಗಳನ್ನು ಅವರ ಫೋಟೋಗಳ ಸಹಾಯದಿಂದ ಪತ್ತೆ ಮಾಡಲಾಗುತ್ತಿತ್ತು. ಆದರೆ ಇಂತಹ ಪತ್ತೆಕಾರ್ಯವು ಕಾರಾಗೃಹ ಅಧಿಕಾರಿಗಳ ಅಥವಾ ಪೊಲೀಸ್ ಅಧಿಕಾರಿಗಳ ವೈಯಕ್ತಿಕ ಜ್ಞಾನವನ್ನು ಅವಲಂಭಿಸಿತ್ತು. ಆದರೆ ಬಹುತೇಕ ಅಪರಾಧಿಗಳು ಅಧಿಕಾರಿಗಳಿಗೆ ಪರಿಚಿತರಾಗಿರಲಿಲ್ಲ. ಇದರಿಂದಾಗಿ ಹಲವಾರು ಆರೋಪಿಗಳು ಪುನ: ಶಿಕ್ಷೆಗೊಳಗಾಗುವುದು ತಪ್ಪಿ ಹೋಯಿತು.[೨೭೫]

೧೮೯೬-೯೭ ರಲ್ಲಿ ಹಳೇ ಆರೋಪಿಗಳನ್ನು ಪತ್ತೆಹಚ್ಚಲು Bertillon's system of anthropometric mealurements ಎಂಬ ಹೊಸವಿಧಾನ ಜಾರಿಗೆ ಬಂದಿತು. Anthropometric ಇನ್ಸ್‌ಪೆಕ್ಟರ್‌ನ್ನು ಐಜಿಪಿ ಕಛೇರಿಯಲ್ಲಿ ನೇಮಿಸಲಾಯಿತು. ಈತ ಜಿಲ್ಲೆಗಳಿಗೆ ಬೇಟಿ ನೀಡಿ ಪೊಲೀಸ್ ಅಧಿಕಾರಿಗಳಿಗೆ ಹೇಗೆ ಆರೋಪಿಗಳ ಬೆರಳು ಗುರುತುಗಳನ್ನು ಪಡೆಯಬೇಕೆಂಬ ಬಗ್ಗೆ ತರಬೇತಿ ನೀಡಿದ ಅದನ್ನು ದಾಖಲೆಗಳಿಗೆ ಸೇರಿಸಲಾಯಿತು.[೨೭೬]

೧೯೧೮ರಲ್ಲಿ ಎಫ್‌ಪಿಬಿ (ಫಿಂಗರ್‌ಪ್ರಿಂಟ್ ಬ್ಯೂರೋ) ಯನ್ನು ಕೇಂದ್ರಸ್ಥಾನದಲ್ಲಿರಿಸಿ ೧ ಇನ್ಸ್‌ಫೆಕ್ಟರ್, ೧೮ ಜಮೇದಾರ್ ಹಾಗೂ ೧ ಗುಮಾಸ್ತನನ್ನು ಮಾಸಿಕ ರೂ ೨೦ ಸಂಬಳ ನೀಡಿ ನೇಮಿಸಲಾಯಿತು. ಇವರ ಕೆಲಸಗಳೆಂದರೆ,

೧) ಜಿಲ್ಲೆಗಳಿಂದ ಭಾರತದ ಬ್ರಿಟೀಷ್ ಸಂಸ್ಥಾನಗಳಿಂದ ಅಥವಾ ಕೆಜಿಎಫ್‌ನ ಚೀಫ್ ಸೂಪರ್‌ವೈಸರ್, ವಾಚ್‌ಮ್ಯಾನ್ ಗಳಿಂದ ಪತ್ತೆ ಮಾಡುವ ಸಲುವಾಗಿ ಬರುತ್ತಿದ್ದ ಬೆರಳಚ್ಚುಗಳನ್ನು ಪಡೆದು ಆದಷ್ಟು ಶೀಘ್ರವಾಗಿ ತಮ್ಮ ದಾಖಲೆ ಗಳಲ್ಲಿರುವ ಬೆರಳುಮುದ್ರೆಗಳೊಂದಿಗೆ ತಾಳೆ ಹೊಂದುತ್ತದೆಯೇ ಎಂದು ಪರಿಶೀಲಿಸಿ ವರದಿಯನ್ನು ಹಿಂದಿರುಗಿಸಿ ಕಳಿಸ ಬೇಕಿತ್ತು.

೨) ತಮಗೆ ಬಂದ ಬೆರಳುಮುದ್ರೆಗಳನ್ನು ವರ್ಗೀಕರಿಸಿ ಸಂಬಂಧಪಟ್ಟ ಖಡತದಲ್ಲಿ ಸೇರಿಸಬೇಕಿತ್ತು.

೩) ತಾಲೂಕುವಾರು ಬೆರಳುಮುದ್ರೆಗಳನ್ನು ಪ್ರತೀ ತಿಂಗಳು ತರಿಸಿ ಬ್ಯೂರೋಗೆ ಪುನರ್‌ಪರಿಶೀಲನೆಗೆ ಕಳಿಸಬೇಕಿತ್ತು.

೪) ಪತ್ತೆಮಾಡಲು ಬಂದ ಬೆರಳು ಮುದ್ರೆಗಾಗಿ ಒಂದು ಪುಸ್ತಕವನ್ನು ತೆರೆದು ದಾಖಲಿಸಬೇಕಿತ್ತು

೫) ನ್ಯಾಯಾಲಯಗಳು ಕೇಳಿದರೆ ತಜ್ಞರ ಅಭಿಪ್ರಾಯ ನೀಡಬೇಕಿತ್ತು.

೬) ಎಫ್.ಪಿ.ಬಿ ಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳ ಬಗ್ಗೆ ಗಮನಹರಿಸಿ ಸೂಕ್ತಕ್ರಮ ಕೈಗೊಳ್ಳಬೇಕಿತ್ತು.[೨೭೭] ನಂತರದ ದಿನಗಳಲ್ಲಿ ಈ ವ್ಯವಸ್ಥೆಗೆ ಬದಲಾಗಿ bentry's system of finger print bureau ವ್ಯವಸ್ಥೆ ಬೆಂಗಳೂರಿನಲ್ಲಿ ಅಸ್ಥಿತ್ವಕ್ಕೆ ಬಂದಿತು. ಇದನ್ನು ಒಬ್ಬ ಎಎಸ್‌ಪಿಯ ಅಧೀನದಲ್ಲಿ ಇಡಲಾಯಿತು. ಈತ ಸಿ.ಐ.ಡಿ ಹಾಗೂ ರೈಲ್ವೆ ಎಎಸ್‌ಪಿಯಾಗಿದ್ದ.[೨೭೮]

ಆರೋಪಿಗಳ ಬೆರಳಚ್ಚುಗಳನ್ನು ತೆಗೆದುಕೊಳ್ಳುವ ಪದ್ಧತಿ ಮಾತ್ರ ಇರಲಿಲ್ಲ. ಜೊತೆಗೆ ಅಪರಾಧವೆಸಗುವ ಅಲೆಮಾರಿ ಜನಾಂಗದ ಎಲ್ಲರ ಬೆರಳುಮುದ್ರೆಗಳನ್ನು ತೆಗೆದುಕೊಳ್ಳುವ ಪದ್ಧತಿ ಇತ್ತು ಎಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ. ಎಂ.ಕೆನಡಿ ಮತ್ತು ಎಸ್.ಎ ಹಳದಿಪುರ್‌ರವರು ಮುಂಬಾಯಿ ಪ್ರಾಂತದ ದುರುಳರ ಬಗ್ಗೆ ಹೇಳುವಾಗ ಹೀಗೆ ಹೇಳಿದ್ದಾರೆ. "ಛಪ್ಪರ ಬಂದರು ಎಂಬ ಜಾತಿಯ ಕಳ್ಳರು ಬಿಜಾಪುರ ಜಿಲ್ಲೆಯವರಾಗಿದ್ದು, ಅವರುಗಳ ಫಿಂಗರ್ ಪ್ರಿಂಟನ್ನು (ಬೊಟ್ಟಿನ ಗುರುತು) ಸರಕಾರದವರು ತಕ್ಕೊಂಡು ಇಟ್ಟಿದ್ದಾರೆ. ಕಾರಣ ಗುನ್ನೇದಾರರು ಛಪ್ಪರ ಬಂದರೆಂದು ಸಂಶಯ ಬಂದ ಕೂಡಲೇ ಅವರ ಫೋಟೋ ತೆಗೆದು ಆರು ಪ್ರತಿಗಳನ್ನು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಬಿಜಾಪುರ ಇವರಿಗೆ ರವಾನಿಸಿದರೆ ಮತ್ತು ಅವರ ಬೊಟ್ಟಿನ ಗುರುತುಗಳನ್ನು ಪೂಣೆಯ ಫಿಂಗರ್ ಪ್ರಿಂಟ್ ಬ್ಯೂರೋಕ್ಕೆ ಕಳುಹಿಸಿದರೆ ಇವರ ಪತ್ತೆ ಕೂಡಲೇ ಸಿಗುವುದು "ಎಂದು ಉಲ್ಲೇಖಿಸಿದ್ದಾರೆ.[೨೭೯] ಇದರಿಂದ ೧೮೯೬ ರ ವೇಳೆಗೆನೆ ಅಪರಾಧಿಗಳನ್ನು ಪತ್ತೆಹಚ್ಚಲು ಬೆರಳಚ್ಚುನಂತಹ ವೈಜ್ಞಾನಿಕ ವಿಧಾನಗಳನ್ನು ಬಳಸುತ್ತಿದ್ದರು ಎಂದು ತಿಳಿದು ಬರುತ್ತದೆ.

೧೯೦೫-೦೬ ರಲ್ಲಿ ೧೭೦೪ ಬೆರಳಚ್ಚುಗಳು ಪರಿಶೀಲನೆಗಾಗಿ ಬಂದಿದ್ದು ಒಟ್ಟು ೧೩,೧೮೫ ಬೆರಳಚ್ಚುಗಳು ದಾಖಲಾಗಿದ್ದವು. ಇದರಲ್ಲಿ ೧೦೫೯ ಸಂಸ್ಥಾನಕ್ಕೆ ಸೇರಿದ್ದರೆ, ಉಳಿದವು ವಿದೇಶಿಯರದ್ದಾಗಿತ್ತು. ೧೯೦೫-೦೬ ರಲ್ಲಿ ಪ್ರತಿಯೊಂದು ಅಪರಾಧಿ ಗುಂಪುಗಳ ಸದಸ್ಯರು ದಸ್ತಗಿರಿಯಾದಾಗ ಅವರ ಬೆರಳಚ್ಚು ತೆಗೆದು ಪರಿಶೀಲನೆಗೆ ಕಳಿಸಬೇಕೆಂದು ಐಜಿಪಿ ಆದೇಶಿಸಿದರು.[೨೮೦]

೧೯೨೨ ರ ಜುಲಾಯಿ ೧ ನೇ ತಾರೀಕಿನ ವರೆಗೆ ೩೮,೬೮೮ ಫಿಂಗರ್ ಪ್ರಿಂಟ್ ಕಡತದಲ್ಲಿ ಸ್ಲಿಪ್‌ಗಳಿದ್ದವು.

೨೭೪೧ ಫಿಂಗರ್ ಪ್ರಿಂಟ್‌ಗಳನ್ನು ೧೯೨೨-೨೩ ರಲ್ಲಿ ಪಡೆಯಲಾಗಿತ್ತು. ಒಟ್ಟು ೪೧೪೨೯ ಫಿಂಗರ್ ಪ್ರಿಂಟ್ ಸ್ಲಿಪ್‌ಗಳು ೧೯೨೨ ರ ಕೊನೆಯಲ್ಲಿ ಎಫ್.ಪಿ.ಬಿಯಲ್ಲಿ ಇದ್ದವು. ೧೯೨೧-೨೨ ರಲ್ಲಿ ೨೮೭೬ ಬೆರಳುಗುರುತಿನಿಂದ ಪತ್ತೆಯಾದ ಪ್ರಕರಣಗಳು ೬೭೦, ೧೯೨೧-೨೨ ರಲ್ಲಿ ಇದು ೫೮೬ ಆಗಿತ್ತು. ಬೆರಳಚ್ಚು ತಜ್ಞರು ೩೦ ಕ್ರಿಮಿನಲ್ ಮತ್ತು ೨೫ ಸಿವಿಲ್ ಪ್ರಕರಣಗಳಲ್ಲಿ ಸಾಕ್ಷಿ ನುಡಿದಿದ್ದರು. ೫೩ ಸಿವಿಲ್ ಮತ್ತು ೯ ಕ್ರಿಮಿನಲ್ ಪ್ರಕರಣಗಳಲ್ಲಿ ಇವರು ತಮ್ಮ ಲಿಖಿತ ಅಭಿಪ್ರಾಯ ನೀಡಿದ್ದರು. ೧೯೨೧-೨೨ ರಲ್ಲಿ ೪೫ ಸಿವಿಲ್ ಮತ್ತು ೯ ಕ್ರಿಮಿನಲ್ ಪ್ರಕರಣಗಳಲ್ಲಿ ಲಿಖಿತ ಅಭಿಪ್ರಾಯ ನೀಡಿದ್ದರು. ೧೯೨೨-೨೩ ರಲ್ಲಿ ಪೊಲೀಸ್ ತರಬೇತಿ ಶಾಲೆಯಲ್ಲಿದ್ದ ವಿದ್ಯಾರ್ಥಿಗಳಿಗೆ ಬೆರಳಚ್ಚು ತರಬೇತಿಯನ್ನು ಪಡೆಯಲಾಯಿತು.[೨೮೧] ೧೯೨೩ ಜುಲಾಯಿ ೧ ರವರೆಗೆ ೪೧.೪೨೯ ಫಿಂಗರ್ ಪ್ರಿಂಟ್ ಸ್ಲಿಪ್‌ಗಳಿದ್ದು, ೧೯೨೩ ರಲ್ಲಿ ೨.೧೫೮ ಫಿಂಗರ್‌ಪ್ರಿಂಟ್ ಸ್ಲಿಪ್‌ಗಳನ್ನು ಹೊಸದಾಗಿ ಸೇರಿಸಲಾಯಿತು. ೨,೯೫೬ ಫಿಂಗರ್‌ಪ್ರಿಂಟ್ ಸ್ಲಿಪ್‌ಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿತ್ತು. ೫೬೬ ಸ್ಲಿಪ್‌ಗಳಲ್ಲಿ ಈ ಹಿಂದೆ ಶಿಕ್ಷೆಯಾದ ಬಗ್ಗೆ ವಿವರಗಳು ಪತ್ತೆಯಾದವು. ಫಿಂಗರ್ ಪ್ರಿಂಟ್ ತಜ್ಞರು ೫೯ ಸಿವಿಲ್ ಮತ್ತು ೩೫ ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದರು. ೫೯ ಸಿವಿಲ್ ಪ್ರಕರಣಗಳಲ್ಲಿ ೧೦ ಕ್ರಿಮಿನಲ್, ೧೨ ಇಲಾಖಾ ಪ್ರಕರಣಗಳಲ್ಲಿ ಒಟ್ಟು ೮೧ ಪ್ರಕರಣಗಳಲ್ಲಿ ಲಿಖಿತ ತಜ್ಞ ಅಭಿಪ್ರಾಯವನ್ನು ನೀಡಿದ್ದರು. ೪೭೨ ಖಾಯಂ ಆದ ಕ್ರಿಮಿನಲ್ ಅಪರಾಧಗಳನ್ನು ಎಸಗುವ ತಂಡ (ಗ್ಯಾಂಗ್) ಗಳು ರಾಜ್ಯದಲ್ಲಿ ಇದ್ದು, ಅದರಲ್ಲಿ ೨೧.೮೭೩ ಜನರಿದ್ದರು. ಮತ್ತು ೪೯೭ ಅಲೆಮಾರಿ ಗ್ಯಾಂಗ್‌ಗಳಲ್ಲಿ ೮.೨೫೫ ಜನರಿದ್ದರು. ಇವು ಇಡೀ ರಾಜ್ಯದಲ್ಲಿ ಪಸರಿಸಿದ್ದವು.[೨೮೨]

೧೯೨೪ ರ ಜುಲಾಯಿ ೧ ನೇ ತಾರೀಕಿನಂದು ಒಟ್ಟು ೪೩.೫೮೭ ಫಿಂಗರ್ ಪ್ರಿಂಟ್ ಸ್ಲಿಪ್ ಇದ್ದವು. ಈ ವರ್ಷದ ಕೊನೆಯಲ್ಲಿ ಒಟ್ಟು ೪೫,೬೮೬ ಪಿಂಗರ್‌ಪ್ರಿಂಟ್ ಸ್ಲಿಪ್‌ಗಳಿದ್ದವು. ೩೦೮೨ ಪಿಂಗರ್‌ಪ್ರಿಂಟ್‌ಗಳು ಪರೀಕ್ಷೆಗಾಗಿ ಕಳುಹಿಸಿದ್ದು, ಅದರಲ್ಲಿ ೬೪೩ ಜನ ಈ ಹಿಂದೆ ಶಿಕ್ಷೆಗೆ ಗುರಿಯಾದವರ ಫಿಂಗರ್‌ಪ್ರಿಂಟ್ ಪತ್ತೆಯಾದವು. ಬೆರಳಚ್ಚು ತಜ್ಞರು ೩೧ ಕ್ರಿಮಿನಲ್, ೩೩ ಸಿವಿಲ್ ಮತ್ತು ೨ ಇಲಾಖಾ ಪ್ರಕರಣಗಳಲ್ಲಿ ಸಾಕ್ಷಿ ಹೇಳಿದರು. ಪಿಂಗರ್ ಪ್ರಿಂಟ್ ತಜ್ಞರು ತಮ್ಮ ಅಭಿಪ್ರಾಯವನ್ನು ೫೩ ಸಿವಿಲ್ ವ್ಯಾಜ್ಯ ೨ ಕ್ರಿಮಿನಲ್ ಪ್ರಕರಣ ಹಾಗೂ ೪ ಇಲಾಖಾ ಪ್ರಕರಣಗಳಲ್ಲಿ ಒಟ್ಟು ೫೯ ಪ್ರಕರಣಗಳಲ್ಲಿ ನೀಡಿದ್ದರು.[೨೮೩]

೧೯೨೬-೨೭ ನೇ ವರ್ಷದ ಆರಂಭದಲ್ಲಿ ಒಟ್ಟು ೪೭,೩೭೮ ಫಿಂಗರ್‌ಪ್ರಿಂಟ್ ಸ್ಲಿಪ್‌ಗಳಿದ್ದವು. ಇದರಲ್ಲಿ ೧,೭೧೫ ಜನರಿಗೆ ಶಿಕ್ಷೆಯಾಯಿತು. ೩೭೫ ಜನರು ಕ್ರಿಮಿನಲ್ ಟ್ರೈಬ್ಸ್ ರೆಗ್ಯುಲೇಷನ್ ಕಾಯ್ದೆ ಅಡಿ ದಾಖಲಾದರು.[೨೮೪] ೧೯೪೧-೪೨ ರ ಆರಂಭದಲ್ಲಿ ೪೩೭೧೪ ಪಿಂಗರ್ ಪ್ರಿಂಟ್ ಸ್ಲಿಪ್‌ಗಳು ದಾಖಲೆಯಲ್ಲಿದ್ದವು. ಇದರಲ್ಲಿ ೨.೦೯೯ ಜನರಿಗೆ ಶಿಕ್ಷೆಯಾಯಿತು. ೩೭ ಜನ ಅಪರಾಧಿ ಬುಡಕಟ್ಟು ಜನಾಂಗದವರ ಫಿಂಗರ್‌ಪ್ರಿಂಟ್ ಪಡೆಯಲಾಯಿತು. ೩,೦೩೨ ಪಿಂಗರ್ ಪ್ರಿಂಟ್ ಸ್ಲಿಪ್‌ಗಳನ್ನು ಕಡತದಿಂದ ಕೈಬಿಡಲಾಯಿತು. ೧೧೫ ಪ್ರಕರಣಗಳಲ್ಲಿ ಬೆರಳಚ್ಚುಗೆ ಸಂಬಂಧಿಸಿದಂತೆ ತಜ್ಞರ ವರದಿಯನ್ನು ನೀಡಲಾಯಿತು.[೨೮೫] ೧೯೪೫-೪೬ ರ ಆರಂಭದಲ್ಲಿ ೩೯.೧೦೩ ಫಿಂಗರ್ ಪ್ರಿಂಟ್‌ಗಳು ದಾಖಲೆಯಲ್ಲಿ ಇದ್ದವು. ೧೯೪೪ ರಲ್ಲಿ ಇದು ೩೬,೭೧೭ ಆಗಿತ್ತು. ಇದರಲ್ಲಿ ೨೪೬೨ ಜನ ಶಿಕ್ಷೆಯಾದವರ ಫಿಂಗರ್‌ಪ್ರಿಂಟ್ ಇತ್ತು. ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಅಡಿ ೩೦ ಜನರ ಬೆರಳಚ್ಚನ್ನು ಪಡೆಯಲಾಯಿತು. ೧೯೪೪ ರಲ್ಲಿ ಇದು ೧೪ ಆಗಿತ್ತು. ೬೬೦ ಜನರ ಫಿಂಗರ್ ಪ್ರಿಂಟ್ ಸ್ಲಿಪ್‌ಗಳನ್ನು ನಾಶಪಡಿಸಲಾಯಿತು. ವರ್ಷದ ಕೊನೆಯಲ್ಲಿ ೪೦,೯೩೫ ಉಳಿದವು. ೧೯೪೪ ರ

ಕೊನೆಯಲ್ಲಿ ೧೯,೧೦೩ ಉಳಿದಿದ್ದವು. ಬೆರಳಚ್ಚಿಗೆ ಸಂಬಂಧಿಸಿದಂತೆ ೮೪ ಪ್ರಕರಣಗಳಲ್ಲಿ ಲಿಖಿತ ಅಭಿಪ್ರಾಯ ನೀಡಲಾಗಿತ್ತು. [೨೬]

೭. ೩೧ : ಗಡಿಪಾರು ಶಿಕ್ಷೆಗಳು

ಪದೇ ಪದೇ ಅಪರಾಧಗಳನ್ನು ಮಾಡಿ ಸಮಾಜದಲ್ಲಿ ಶಾಂತಿಸುವ್ಯವಸ್ಥೆಯನ್ನು ಹಾಳುಮಾಡುವ ಜನರನ್ನು ಅದೇ ಊರಿನಲ್ಲಿ ಬಿಟ್ಟರೆ ಇನ್ನಷ್ಟು ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಾರೆಂಬ ಕಾರಣಕ್ಕಾಗಿ ಅವರನ್ನು ಬೇರೆ ಸ್ಥಳಕ್ಕೆ ಗಡಿ ಪಾರು ಮಾಡುವ ಪದ್ಧತಿ ಜಾರಿಗೆ ಬಂತು. ಇದಕ್ಕಾಗಿ ೧೯೦೩ ರ ೧೫ ನೇ ಕಾಯ್ದೆ ಅಂದರೆ ಇಂಡಿಯನ್ ಎಕ್ಸ್‌ಟ್ರಡಿಷನ್ ಆಕ್ಟ್ ಜಾರಿಗೆ ಬಂತು. ಈ ಕಾಯ್ದೆಯ ಆಧಾರದ ಮೇರೆಗೆ ಉಪದ್ರವಕಾರಿ ವ್ಯಕ್ತಿಗಳನ್ನು ಗಡಿಪಾರು ಮಾಡಲಾಗುತ್ತಿತ್ತು. ಮೈಸೂರಿಗೆ ಸಂಬಂಧಿಸಿದಂತೆ ೧೮೭೮ ರ ೬ನೇ ಕಾಯ್ದೆ ಅಂದರೆ ಮೈಸೂರು ಗಡಿಪಾರು ಕಾಯ್ದೆ ಜಾರಿಗೆ ಬಂದಿತು. ೧೯೨೨-೨೩ ರಲ್ಲಿ ೧೯೦೩ ರ ೧೫ ನೇ ಕಾಯ್ದೆ ಇಂಡಿಯನ್ ಎಕ್ಸ್‌ಟ್ರಡಿಷನ್ ಆಕ್ಟ್ ಅಡಿಯಲ್ಲಿ ೧೯೨೨ ರಲ್ಲಿ ರಾಜ್ಯ ಸರ್ಕಾರಕ್ಕೆ ಶರಣಾದವರ ಸಂಖ್ಯೆ ೩೪. ಇದರಲ್ಲಿ ೨೬ ಜನ ಬ್ರಿಟೀಷರ ವಿಚಾರಗಳಿಗೆ ಸಂಬಂಧಪಟ್ಟಂತೆ ಮತ್ತು ೮ ಜನ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ಶರಣಾದರು. ೧೯೨೨ ರ ಕೊನೆಯಲ್ಲಿ ವಿಚಾರಣೆಯನ್ನು ಎದುರಿಸುತ್ತಿದ್ದ ೭ ಜನರನ್ನು ಒಳಗೊಂಡಂತೆ ಒಟ್ಟು ೪೧ ಜನರನ್ನು ಗಡಿಪಾರು ಮಾಡಲು ವರದಿ ಸಲ್ಲಿಸಲಾಯಿತು. ಇದರಲ್ಲಿ ೨೮ ಜನ ಶಿಕ್ಷೆಗೆ ಒಳಗಾದರೆ, ೨ ಜನ ವಜಾಗೊಂಡು, ೮ ಜನ ಖುಲಾಸೆಗೊಂಡರು. ೧೯೨೨-೨೩ ರ ಕೊನೆಯಲ್ಲಿ ೩ ಪ್ರಕರಣಗಳು ಬಾಕಿ ಉಳಿದಿದ್ದವು. ಸಿಆರ್‌ಪಿಸಿ ಕಲಂ: ೨೪೯ ರ ರೀತಿಯ ೧ ಪ್ರಕರಣದ ವಿಚಾರಣೆಗೆ ತಡೆನೀಡಲಾಯಿತು. ೧೯೨೨-೨೩ ರಲ್ಲಿ ಬ್ರಿಟೀಷ್ ಸರಕಾರದ ಮುಂದೆ ೬೪ ಜನರು ಶರಣಾದರು. ಇದರಲ್ಲಿ ೧೪ ಜನ ಬ್ರಿಟೀಷರ ವಿಚಾರಗಳಿಗೂ ಉಳಿದವರು ಮೈಸೂರು ರಾಜ್ಯದ ವಿಚಾರಗಳಿಗೂ ಸಂಬಂಧಪಟ್ಟವರಾಗಿದ್ದರು. ಇದರಲ್ಲಿ ೧೬ ಜನರ ವಿರುದ್ಧ ಐಪಿಸಿ ಅಡಿಯಲ್ಲಿಯೂ ೪೮ ಜನರ ವಿರುದ್ದ ವಿಶೇಷ ಮತ್ತು ಸ್ಥಳೀಯಕಾಯ್ದೆ ಅಡಿಯಲ್ಲಿಯೂ ಪ್ರಕರಣ ದಾಖಲಾಗಿದ್ದವು. ಮೈಸೂರಿನ ವಿಚಾರಕ್ಕೆ ಸಂಬಂಧಪಟ್ಟಂತೆ ಕೇವಲ ೪ ಜನರಿಗೆಮಾತ್ರ ಶಿಕ್ಷೆಯಾಗಿತ್ತು.[೨೭]

೧೯೨೪-೨೫ ರಲ್ಲಿ ಇಂಡಿಯನ್ ಎಕ್ಸ್‌ಟ್ರಡಿಷನ್ ಆಕ್ಟ್ XV – ೧೯೦೩ರ ಅಡಿಯಲ್ಲಿ ೫೮ ಜನರು ಸರಕಾರಕ್ಕೆ ಶರಣಾದರು. ಅದರಲ್ಲಿ ೪೭ ಜನ ಬ್ರಿಟೀಷ್ ಸಾಮ್ರಾಜ್ಯದ ವಿಷಯಗಳಿಗೆ ೨೫ ಜನ ಸ್ಥಳೀಯ ವಿಷಯ ಹಾಗೂ ೯ ಜನರು ಮಹಾರಾಜರುಗಳಿಗೆ ಸಂಬಂಧಿಸಿದ ವಿಷಯಗಳಿಗಾಗಿ ಶರಣಾದರು. ೧೫ ಜನ ೧೯೨೩-೨೪ ರ ಅಂತ್ಯದಲ್ಲಿ ವಿಚಾರಣೆ ಎದುರಿಸುತ್ತಿದ್ದವರಾಗಿದ್ದರು. ಒಟ್ಟು ೭೩ ಜನ ಈ ವರ್ಷದಲ್ಲಿ ವಿಚಾರಣೆ ಎದುರಿಸಿದರು. ಇದರಲ್ಲಿ ೧೦ ಜನ ಖುಲಾಸೆಗೊಂಡರೆ, ೯ ಜನ ವಜಾಗೊಂಡರು. ಒಬ್ಬನು ಬುದ್ದಿಮಾಂದ್ಯ ಕೇಂದ್ರಕ್ಕೆ ಸೇರಿಸಲ್ಪಟ್ಟರೆ ೪೬ ಜನರಿಗೆ ಶಿಕ್ಷೆಯಾಯಿತು. ವರ್ಷದ ಕೊನೆಯಲ್ಲಿ ೭ ಜನರ ವಿರುದ್ಧ ವಿಚಾರಣೆ ಬಾಕಿ ಉಳಿಯಿತು. ೧೯೨೪ ರಲ್ಲಿ ಬ್ರಿಟೀಷ್ ಸರಕಾರದ ಮುಂದೆ ವಿಚಾರಣೆಗಾಗಿ ೧೪೮ ಜನ ಶರಣಾದರು. ಇದರಲ್ಲಿ ೨೮ ಜನರು ಬ್ರಿಟೀಷರ ವಿಷಯಕ್ಕೆ ಸಂಬಂಧಿಸಿದವರಾದರೆ ಉಳಿದವರು ರಾಜ್ಯದ ವಿಷಯಕ್ಕೆ ಸಂಬಂಧಿಸಿದವರು, ಇದರಲ್ಲಿ ೫೦ ಜನರ ವಿರುದ್ಧ ಐಪಿಸಿ ಪ್ರಕರಣಗಳಿದ್ದರೆ, ೯೮ ಜನರ ವಿರುದ್ದ ಸ್ಥಳೀಯ ಮತ್ತು ವಿಶೇಷ ಕಾಯ್ದೆಗಳಡಿ ಪ್ರಕರಣಗಳಿದ್ದವು. ಶರಣಾದವರ ಪೈಕಿ ಕೇವಲ ೭ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಯಿತು.[೨೮]. ೧೯೪೧-೪೨ ರಲ್ಲಿ ಬ್ರಿಟೀಷ್ ಇಂಡಿಯಾದಿಂದ ೨೯, ಮೈಸೂರಿನಿಂದ ೫೩ ಒಟ್ಟು ೮೨ ಜನರಿಗೆ ಗಡಿಪಾರಿಗೆ ವಿಚಾರಣೆಗೆ ಒಳಪಡಿಸಲಾಯಿತು. ಇದರಲ್ಲಿ ೨ ಜನರ ಪ್ರಕರಣಗಳು ೧೯೪೦-೪೧ರ ಕೊನೆಯಲ್ಲಿ ಬಾಕಿ ಉಳಿದಿತ್ತು. ಒಟ್ಟು ೮೪ ಜನರಲ್ಲಿ ೬೦ ಜನರಿಗೆ ಶಿಕ್ಷೆಯಾದರೆ, ೭ ಜನರಿಗೆ ಖುಲಾಸೆ ಅಥವಾ ವಜಾ ಆಗಿ ೭ ಜನರಿಗೆ ವಿಚಾರಣೆಗೆ ಬಾಕಿ ಉಳಿಯಿತು. ಮೈಸೂರು ಮಿಲಿಟರಿಯಿಂದ ೬ ಜನ ಅನಧಿಕೃತ

ಗೈರುಹಾಜರಾದವರು ಬ್ರಿಟೀಷ್ ಇಂಡಿಯಾದ ಮೂಲಕ ರಾಜ್ಯಕ್ಕೆ ಶರಣಾಗಿದ್ದರು. ಮೈಸೂರು ಎಕ್ಸ್‌ಟ್ರಡಿಷನ್ ಕಾಯ್ದೆಯಡಿಯಲ್ಲಿ ೬೪ ವ್ಯಕ್ತಿಗಳು ಶರಣಾದರು.[೨೮೯] ೧೯೪೫-೪೬ ರಲ್ಲಿ ೩೯ ಜನರನ್ನು ವಿಚಾರಣೆ ನಡೆಸಲು ರಾಜ್ಯದ ಹೊರಭಾಗದಿಂದ ಸ್ವೀಕರಿಸಲಾಯಿತು. ಇದರಲ್ಲಿ ೨೬ ಜನ ಬ್ರಿಟೀಷ್ ಇಂಡಿಯಾಕ್ಕೆ ಸೇರಿದವರಾಗಿದ್ದು, ೧೩ ಜನ ಮೈಸೂರಿನವರು. ೧೯೪೪ ರ ಕೊನೆಯಲ್ಲಿ ಬಾಕಿ ಉಳಿದಿದ್ದ ೧೨ ಪ್ರಕರಣಗಳು ಇದರಲ್ಲಿ ಸೇರಿದ್ದವು. ೫೧ ಜನರು ಹೊರ ರಾಜ್ಯದಿಂದ ಬಂದವರು ವಿಚಾರಣೆ ಎದುರಿಸುತ್ತಿದ್ದರು. ಅದರಲ್ಲಿ ೩೦ ಜನರಿಗೆ ಶಿಕ್ಷೆಯಾದರೆ, ೮ ಜನ ಖುಲಾಸೆ ಅಥವಾ ವಜಾಗೊಂಡರು. ೧೧ ಜನ ವಿಚಾರಣೆ ಎದುರಿಸುತ್ತಿದ್ದರು. ಇದರಲ್ಲಿ ಮೈಸೂರು ಮಿಲಿಟರಿ ಘಟಕದಿಂದ ಓಡಿ ಬಂದ ದೀರ್ಘ ರಜೆಯಾದವರು ಇಬ್ಬರು ಇದ್ದರು. ಇವರು ಬ್ರಿಟೀಷ್ ಇಂಡಿಯಾದಲ್ಲಿ ಶರಣಾಗಿದ್ದರು. ಮೈಸೂರು ಗಡಿಪಾರು ಕಾಯ್ದೆ ೧೯೩೮ (VI) ರಲ್ಲಿ ೯೮ ಜನರು ಬ್ರಿಟೀಷ್ ಇಂಡಿಯಾಗೆ ಶರಣಾಗಿದ್ದರು.[೨೯೦]

೭. ೩೨:- ಪೊಲೀಸ್ ಪಡೆಯ ಬಲ

ಜನಸಂಖ್ಯೆ, ಭೂಪ್ರದೇಶ ಮತ್ತು ಅಪರಾಧಗಳ ಪ್ರಮಾಣಗಳಿಗೆ ಅನುಸಾರವಾಗಿ ಪೊಲೀಸ್ ಪಡೆಯ ಬಲವನ್ನು ಕಾಲದಿಂದ ಕಾಲಕ್ಕೆ ಹೆಚ್ಚಿಸುತ್ತಾ ಬಂದಿರುವುದನ್ನು ನಾವು ಗಮನಿಸಬಹುದಾಗಿದೆ. ೧೮೮೮ ರಲ್ಲಿ ಕೂರ್ಗ್ ಕಮಿಷನರ್‌ರವರಿಗೆ ಹೆಚ್ಚುವರಿಯಾಗಿ ೫.೨೬೮ ರೂಪಾಯಿಗಳ ವೆಚ್ಚದಲ್ಲಿ ಪೊಲೀಸ್ ಪಡೆಯನ್ನು ವಿಸ್ತರಿಸುವ ಮತ್ತು ನವೀಕರಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಯಲ್ಲಿ ೬೭ ಜನ ಕಾನ್ಸ್‌ಟೇಬಲ್‌ಗಳನ್ನು ಪೊಲೀಸ್ ಪಡೆಗೆ ನೇಮಿಸುವ ಮತ್ತು ಪೊಲೀಸ್ ಠಾಣೆಗಳ ಸಂಖ್ಯೆಯನ್ನು ೮ ರಿಂದ ಹೆಚ್ಚಿಸುವ ಹೆಚ್ಚಿನ ಸಂಖ್ಯೆಯಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಸೇರಿಸುವ ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಇದ್ದ 'ಪಾರುಪತ್ತೆಗಾರ' (Parpattigars) ರ ಸ್ಥಳದಲ್ಲಿ ಹೆಡ್‌ಕಾನ್ಸ್‌ಟೇಬಲ್‌ಗಳನ್ನು ನೇಮಿಸುವ ಪ್ರಸ್ತಾಪಗಳಿದ್ದವು.[೨೯೧] ೧೯೪೧ ರಿಂದ ೪೫ ರವರೆಗೆ ರಾಜ್ಯದಲ್ಲಿ ಇದ್ದ ಮಂಜೂರಾದ ಸಿಬ್ಬಂದಿ ಬಲ ವಾಸ್ತವವಾಗಿದ್ದ ಸಿಬ್ಬಂದಿ ಬಲ ಈ ರೀತಿ ಇದೆ.[೨೯೨]

	ಅಧಿಕಾರಿಗಳು		ಸಿಬ್ಬಂದಿಗಳು		ಒಟ್ಟು	
ವರ್ಷಗಳು	ಮಂಜೂರಾದ ಬಲ	ಹಾಲಿ ಇದ್ದಬಲ	ಮಂಜೂರಾದ ಬಲ	ಹಾಲಿ ಇದ್ದಬಲ	ಮಂಜೂರಾದ ಬಲ	ಹಾಲಿ ಇದ್ದಬಲ
೧೯೪೧	೫೦೦	೪೮೭	೪೭೯೭	೪೭೦೪	೫೨೯೭	೫೧೯೧
೧೯೪೨-೪೩	೫೩೫	೫೧೭	೪೮೪೪	೪೫೫೬	೫೩೭೯	೫೦೭೩
೧೯೪೩-೪೪	೫೧೧	೪೯೬	೪೮೯೫	೪೫೧೬	೫೪೦೬	೫೦೧೨
೧೯೪೪-೪೫	೫೧೫	೫೦೭	೪೯೪೨	೪೬೭೦	೫೪೫೭	೫೧೭೭

ಮಂಜೂರಾದ ಸಿಬ್ಬಂದಿ ಮತ್ತು ಹಾಲಿ ಇದ್ದ ಸಿಬ್ಬಂದಿಗಳ ಸಂಖ್ಯೆಗಳ ನಡುವೆ ವ್ಯತ್ಯಾಸವಿದ್ದು, ಇದಕ್ಕೆ ಮುಖ್ಯ ಕಾರಣ ವೆಂದರೆ ಸರಿಯಾದ ರೀತಿಯಲ್ಲಿ ನೇಮಕಾತಿ ಮಾಡುವಲ್ಲಿ ಇರುವ ಅನುಭವದ ಕೊರತೆಯೇ ಕಾರಣವಾಗಿತ್ತು. *೧೯೧೦ ರಿಂದ ೪೭ ರವರೆಗೆ ಮೈಸೂರು ಸಂಸ್ಥಾನದಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳ ಬಲದ ಬಗ್ಗೆ ಅನುಬಂಧ – ೩೮ ನೋಡಿರಿ.*

೧೯೪೪-೪೫ ರಲ್ಲಿ ಪೊಲೀಸ್ ಇಲಾಖೆಯ ವಿವಿಧ ಅಂಗಗಳಿಗೆ ಮಂಜೂರಾದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಬಲ ಹೀಗಿದೆ.[೨೯೩]

೧	ಪೊಲೀಸ್ ಪ್ರಧಾನ ಕಛೇರಿ ಮತ್ತು ಪೊಲೀಸ್ ಶಾಲೆ	೧೦
೨	ಜಿಲ್ಲಾ ಪೊಲೀಸ್	೪೫೨೯
೩	ಬೆಂಗಳೂರು ಮತ್ತು ಮೈಸೂರಿನ ನಗರ ಪೊಲೀಸ್	೫೩೩
೪	ವಿಶೇಷ ಮೀಸಲು ಪೊಲೀಸ್ (ಬೆಂಗಳೂರು,ಮೈಸೂರು, ಶಿವಮೊಗ್ಗ)	೧೩೬
೫	ರೈಲ್ವೆ ಪೊಲೀಸ್	೧೭೯
೬	ಗೋಲ್ಡ್‌ಮೈನ್ ಪೊಲೀಸ್	೭೦
	ಒಟ್ಟು	೫೪೫೭

ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ಸದಾಕಾಲ ಉತ್ತಮ ಕರ್ತವ್ಯ ನಿರ್ವಹಿಸುವ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲಾಗಿತ್ತು. ಅವರಿಗೆ ಬೇಕಾದ ಸಮವಸ್ತ್ರ, ಕುದುರೆಗಳಿಗೆ ಬೇಕಾದ ಸರಂಜಾಮು ಮತ್ತು ಬೇಕಾದ ಶಸ್ತ್ರಾಸ್ತ್ರಗಳನ್ನು 'ಮಿಲಿಟರಿ ಸ್ಟೋರ್'ಗಳಿಂದ ನೀಡಲಾಗುತ್ತಿತ್ತು. ೧೯೦೪ – ೦೫ ಮತ್ತು ೧೯೧೩–೧೪, ೧೯೧೪–೧೫ ರಲ್ಲಿ ಸಿವಿಲ್ ಮತ್ತು ಮಿಲಿಟರಿ ಠಾಣೆ ಹಾಗೂ ರೈಲ್ವೆ ಪೊಲೀಸ್‌ನಲ್ಲಿದ್ದ ಅಧಿಕಾರಿ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

	೧೯೦೪–೦೫		೧೯೧೩–೧೪		೧೯೧೪–೧೫	
	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ
ಸಿವಿಲ್ ಮತ್ತು ಮಿಲಿಟರಿ ಠಾಣೆ	೪೨(ಎ)	೨೪೯(ಎ)	೬೪	೨೪೩	೬೪	೨೪೩
ಮದ್ರಾಸ್ ರೈಲ್ವೆಯ ಬೆಂಗಳೂರು ಬ್ರಾಂಚ್	೨	೧೧	೧	೧೩	೧	೧೩
ಕೋಲಾರ ಗೋಲ್ಡ್‌ಫೀಲ್ಡ್ ಲೇನ್	೧	೩೨	೨	೨೧	೨	೧೭
ಬೆಂಗಳೂರು,ಹರಿಹರ ಮತ್ತು ಹಿಂದುಪುರ ಲೇನ್	೧೪	೮೯	೮	೬೬	೮	೬೬
ಠಾಣಾ ಕರ್ತವ್ಯವನ್ನು ಹೊರತುಪಡಿಸಿ ನ್ಯಾಯಾಲಯ, ಉಗ್ರಾಣ, ಶಾಲೆ, ಆರ್ಡರ್ಲಿ ಕರ್ತವ್ಯ ಮತ್ತು ಇತರ ಕೆಲಸಗಳಿಗೆ ನೇಮಕಗೊಂಡ ವರು	೭	೨೬	೧	೨೬	೧	೨೬
ಒಟ್ಟು	೬೬	೪೦೭ = ೪೭೩	೭೬	೩೬೯	೭೬	೩೬೫

೧೯೦೪–೦೫ ರಲ್ಲಿ ಎ ಎಂದು ಗುರುತಿಸಿದವರಲ್ಲಿ ೩ ಜನ ಅಧಿಕಾರಿ ಮತ್ತು ೧೫ ಜನ ಸಿಬ್ಬಂದಿಯವರು ಟ್ರಜರಿ ಎಸ್ಕಾರ್ಟ್ ಕರ್ತವ್ಯಕ್ಕೆ ನೇಮಿಸಿದವರು ಸೇರಿದ್ದಾರೆ. ೩೧ ಡಿಸೆಂಬರ್ ೧೯೦೪ ರ ವೇಳೆಗೆ ೨೯ ಜನ ಸಿಬ್ಬಂದಿಯವರ ಕೊರತೆ ಇತ್ತು. ೪೧೧ ಜನ ಸಿಬ್ಬಂದಿ ಮತ್ತು ಅಧಿಕಾರಿಗಳು ಅಕ್ಷರಸ್ಥರಿದ್ದರು[೨೯೪]

೧೯೧೪ ರ ಪೆಬ್ರವರಿ ೧೫ ರಂದು ಕೆ.ಜಿ.ಎಫ್ ಲೇನ್‌ನ್ನು (ಬೌರಿಂಗ್‌ಪೇಟೆ ಠಾಣೆಯನ್ನು ಹೊರತುಪಡಿಸಿ) ಉಳಿದದನ್ನು ಪ್ರಾಯೋಗಿಕವಾಗಿ 'ಮೈಸೂರು ದರ್ಬಾರ್'ಗೆ ನಿಯೋಜಿಸಲಾಯಿತು. ಇದರ ಪರಿಣಾಮವಾಗಿ ೧೯೧೩ರಲ್ಲಿದ್ದ ಸಿಬ್ಬಂದಿಗಿಂತ ೪ ಜನ ಕಾನ್ಸ್‌ಟೇಬಲ್‌ಗಳ ಸಂಖ್ಯೆ ಕಡಿಮೆಯಾಯಿತು. ಬಲದ ವಿತರಣೆ ಈ ರೀತಿ ಇತ್ತು. [೨೯೫]

ವರ್ಷ	ಅಧಿಕಾರಿ	ಸಿಬ್ಬಂದಿ	ವರ್ಷ	ಅಧಿಕಾರಿ	ಸಿಬ್ಬಂದಿ
೧೯೨೧–೨೨	೯೦೪	೫೩೦೩	೧೯೨೬–೨೭	೯೨೫	೫೩೯೨
೧೯೨೨	೯೫	೪೪೩	೧೯೨೫–೨೬	೯೨೧	೫೩೨೦
೧೯೨೨–೨೩	೮೯	೫೨೯೩	೧೯೪೦–೪೧	೧೦೮೭	೫೭೧೯
೧೯೨೩–೨೪	೮೮೮	೫೨೧೨	೧೯೪೧–೪೨	೧೧೦೩	೫೭೬೪
೧೯೨೪–೨೫	೯೨೦	೫೩೦೭	೧೯೪೫–೪೬	೧೨೯೫	೬೭೭೦

೧೯೨೨–೨೩ ನೇ ವರ್ಷದ ಕೊನೆಯ ದಿನದಲ್ಲಿ ಇದ್ದ ಮಂಜೂರಾದ ಬಲ ೯೫ ಜನ ಅಧಿಕಾರಿಗಳು ಮತ್ತು ೪೪೩ ಜನ ಸಿಬ್ಬಂದಿ ಒಟ್ಟು ೫೩೮ ಜನ. ಪೊಲೀಸ್ ಕಾನ್ಸ್‌ಟೇಬಲ್‌ಗಳ ಮಂಜೂರಾತಿ ಬಲದಲ್ಲಿ ೪ ಜನರನ್ನು ಕಡಿಮೆ ಮಾಡಲಾಯಿತು. ಏಕೆಂದರೆ ಮೀಸಲು ಪೊಲೀಸ್ ಪಡೆಯಲ್ಲಿ ಸಾರ್ಜೆಂಟ್ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿತ್ತು. ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಸಾರ್ಜೆಂಟ್ ಹುದ್ದೆಗಳಾಗಿ ಪರಿವರ್ತಿಸಲಾಯಿತು[೨೯೬] ೧೯೨೩ ರ ಕೊನೆಯಲ್ಲಿ ೧೮ ಜನ ತರಬೇತಿ ಪಡೆಯಲು ಪೊಲೀಸ್ ತರಭೇತಿ ಶಾಲೆಯಲ್ಲಿ ಇದ್ದರು. ನಿಜವಾದ ಬಲ ೫೩೧. (ಏಳು ಜನ ಕಡಿಮೆ) ೧೯೨೨–೨೩ ರ ಪ್ರಾರಂಭದಲ್ಲಿ "ಫ್ರೇಜರ್ ಟೌನ್" ಪೊಲೀಸ್ ಠಾಣೆಯನ್ನು ಪ್ರಾರಂಭಿಸಲಾಯಿತು[೨೯೭] ೧೯೨೨–೨೩ ರ ಕೊನೆಯಲ್ಲಿ ಮೈಸೂರಿನ ಪೊಲೀಸ್ ಇಲಾಖೆಯಲ್ಲಿ ಇದ್ದ ಒಟ್ಟು ಸಿಬ್ಬಂದಿಗಳ ಬಲ ೮೯ ಅಧಿಕಾರಿಗಳು ಮತ್ತು ೫೨೯೩ ಸಿಬ್ಬಂದಿ. ೧೯೨೧–೨೨ ರಲ್ಲಿ ೯೦೪ ಅಧಿಕಾರಿಗಳು ಮತ್ತು ೫೩೦೩ ಸಿಬ್ಬಂದಿ ಇದ್ದರು. ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಲು ಕಾರಣ ಪೊಲೀಸ್ ತರಭೇತಿ ಶಾಲೆಯ ೪ ಜನ ಅಧಿಕಾರಿಗಳ ಹುದ್ದೆಯನ್ನು ರದ್ದುಮಾಡಲಾಯಿತು. ಸಾಗರದ ಅಸಿಸ್ಟೆಂಟ್

ಸೂಪರಿಂಟೆಂಡೆಂಟ್ ರವರ ಹುದ್ದೆಯನ್ನು ರದ್ದುಮಾಡಲಾಯಿತು. ೩೪ ಅಧಿಕಾರಿಗಳು ಮತ್ತು ೧೩೪ ಜನ ಸಿಬ್ಬಂದಿಯವರ ಒಂದು ತಾತ್ಕಾಲಿಕ ಪೊಲೀಸ್ ತಂಡ ಇತ್ತು. ಕಳೆದ ವರ್ಷದಲ್ಲಿ ಇದರ ಬಲ ೨೮ ಅಧಿಕಾರಿ ಮತ್ತು ೧೧೯ ಸಿಬ್ಬಂದಿ ಇದ್ದರು. ೧೯೨೨-೨೩ ರ ಕೊನೆಯಲ್ಲಿ ಮೈಸೂರಿನ ಪೊಲೀಸ್‌ನ ವಿವಿಧ ಘಟಕಗಳಲ್ಲಿ ಇದ್ದ ಮಂಜೂರಾದ ಬಲ ಮತ್ತು ಹಾಲಿ ಇದ್ದ ಬಲ ಈ ರೀತಿ ಇದೆ [೯೮].

ವಿವರ	ಮಂಜೂರಾದ ಬಲ		ಹಾಲಿ ಇರುವ ಸಿಬ್ಬಂದಿ ಬಲ			
			೧೯೨೧-೨೨		೧೯೨೨-೨೩	
	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ
ಕೇಂದ್ರೀಯ ಪೊಲೀಸ್ (ಕೇಂದ್ರೀಯ ಕಛೇರಿ ಮತ್ತು ಪೊಲೀಸ್ ತರಭೇತಿ ಶಾಲೆ)	೨೮	೪	೨೪	೪	೧೫	೪
ರೈಲ್ವೆ	೧೪	೧೫೩	೧೪	೧೫೩	೧೪	೧೫೩
ಗೋಲ್ಡ್‌ಫೀಲ್ಡ್ ಪೊಲೀಸ್	೪೮	೩೦೭	೪೯	೩೦೭	೪೮	೩೦೭
ಸಿಟಿ ಪೊಲೀಸ್ ಬೆಂಗಳೂರು	೫೭	೩೦೮	೫೬	೩೦೮	೫೭	೩೦೬
ಸಿಟಿ ಪೊಲೀಸ್ ಮೈಸೂರು	೪೬	೨೭೫	೪೬	೨೭೩	೪೬	೨೩೮
ವಿಶೇಷ ಮೀಸಲು ಪೊಲೀಸ್	೧೩	೧೮೩	೧೨	೧೭೯	೧೩	೧೫೩
ಜಿಲ್ಲಾ ಪೊಲೀಸ್	೬೭೫	೪,೦೬೩	೬೭೩	೩,೯೬೩	೬೭೨	೩,೫೯೩
ಒಟ್ಟು	೮೮೧	೫,೨೯೩	೮೭೪	೫,೧೮೭	೮೬೫	೪,೭೫೪

೧೯೨೩-೨೪ ರಲ್ಲಿ – ಈ ೧೯೨೪ ನೇ ವರ್ಷದ ಕೊನೆಯಲ್ಲಿ ಇಲಾಖೆಯಲ್ಲಿ ಇದ್ದ ಮಂಜೂರಾದ ಖಾಯಂ ಸಿಬ್ಬಂಧಿಗಳ ಬಲ ಅಧಿಕಾರಿಗಳು ೮೮೮, ೫೨೧೨ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದರು. ಆದರೆ ೮೯ ಸಿಬ್ಬಂದಿ ೫೯೩ ಗಳು ೧೯೨೨-೨೩ ರಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ೧೯೨೨-೨೩ ನೇ ಸಾಲಿನಲ್ಲಿ ೫೭೩ ಖಾಲಿ ಹುದ್ದೆಗಳಿದ್ದು, ೫೧೬ ಜನರನ್ನು ನೇಮಕಮಾಡಲಾಯಿತು. ೧೯೨೨-೨೩ ರ ಕೊನೆಯಲ್ಲಿ ೧೬೯ ಹುದ್ದೆಗಳು ಖಾಲಿ ಇದ್ದರೆ ೧೯೨೪ ರ ಕೊನೆಗೆ ಕೇವಲ ೫೯ ಹುದ್ದೆಗಳು ಖಾಲಿ ಇದ್ದವು.[೯೯]

೧೯೨೪-೨೫ ರಲ್ಲಿ ಇದ್ದ ಮಂಜೂರಾದ ಖಾಯಂ ಪೊಲೀಸ್ ಬಲ- ೯೨೦ ಅಧಿಕಾರಿಗಳು ಮತ್ತು ೫,೩೦೭ ಸಿಬ್ಬಂದಿಗಳು ಇದ್ದು, ೧೯೨೩-೨೪ ರಲ್ಲಿ ೮೮೮ ಅಧಿಕಾರಿಗಳು ಮತ್ತು ೫,೨೧೨ ಸಿಬ್ಬಂದಿ ಇದ್ದರು. ಒಂದು ತಾತ್ಕಾಲಿಕ ಪೊಲೀಸರ ಪಡೆ ಇದ್ದು ಇದರಲ್ಲಿ ೬ ಜನ ಅಧಿಕಾರಿಗಳು ಮತ್ತು ೩೪ ಜನ ಸಿಬ್ಬಂದಿಯಿದ್ದರು. ೧೯೨೩-೨೪ ರಲ್ಲಿ ೨೮ ಅಧಿಕಾರಿಗಳು ಮತ್ತು ೧೧೧ ಜನ ಸಿಬ್ಬಂದಿ ಇದ್ದರು. ೪೫೧ ಜನರನ್ನು ಇಲಾಖೆಗೆ ಸೇರಿಸಲು ಪಟ್ಟಿ ಮಾಡಲಾಗಿತ್ತು. ೧೯೨೩-೨೪ ರಲ್ಲಿ ಈ ಸಂಖ್ಯೆ ೫೧೬ ಆಗಿತ್ತು. ೧೯೨೪-೨೫ ರಲ್ಲಿ ಇಲಾಖೆಯಲ್ಲಿ ಆದ ಸಾವುನೋವುಗಳು ೪೩೩. ೧೯೨೩-೨೪ ರಲ್ಲಿ ಇದು ೫೮೨ ಆಗಿತ್ತು.[೧೦೦]

೧೯೨೬-೨೭ರ ಕೊನೆಯ ಭಾಗದಲ್ಲಿ ಇದ್ದ ಪೊ(ಲೀ)ಸ್ ಪಡೆಯ ಖಾಯಂ ಬಲ- ಅಧಿಕಾರಿಗಳು ೯೨೫, ಮತ್ತು ೫೯೨ ಕಾನ್ಸ್‌ಟೇಬಲ್‌ಗಳನ್ನು ಒಳಗೊಂಡಿತ್ತು. ೧೯೨೫-೨೬ ರಲ್ಲಿ ಇದು ೯೨೧. ಮತ್ತು ೫೩೨೦ ಆಗಿತ್ತು. ೬ ಜನ ಅಧಿಕಾರಿಗಳು ಮತ್ತು ೪೫ ಕಾನ್ಸ್‌ಟೇಬಲ್‌ಗಳನ್ನು ಒಳಗೊಂಡ ಒಂದು ತಾತ್ಕಲಿಕ ಪಡೆ ಇತ್ತು. ೧೯೨೫-೨೬ ರಲ್ಲಿ ಇದರ ಬಲ ಕ್ರಮವಾಗಿ ೫ ಮತ್ತು ೩೮ ಆಗಿತ್ತು. ೧೯೨೬-೨೭ ರಲ್ಲಿ ಹೊಸದಾಗಿ ಪಡೆಗೆ ಸೇರಿಸಲು ಪಟ್ಟಿಯಲ್ಲಿ ದ್ದವರ ಸಂಖ್ಯೆ ೩೮೨. ೧೯೨೫-೨೬ ರಲ್ಲಿ ಈ ಸಂಖ್ಯೆ ೪೭೨ ಆಗಿತ್ತು. ೧೯೨೫-೨೬ ರ ಕೊನೆಯಲ್ಲಿ ೯೨ ಖಾಲಿ ಹುದ್ದೆಗಳಿದ್ದವು. ೧೯೨೫-೨೬ರ ಕೊನೆಯಲ್ಲಿ ಇದರ ಸಂಖ್ಯೆ ೮೬ ಆಗಿತ್ತು. ಈ ವರ್ಷ ಖಾಯಿಲೆಗೆ ಒಳಗಾದವರ ಸಂಖ್ಯೆ ೩೭೯. ೧೯೨೪-೨೫ ರಲ್ಲಿ ಈ ಸಂಖ್ಯೆ ೩೭೭ ಆಗಿತ್ತು.[೧೦೧] ೧೯೪೧-೪೨ ರಲ್ಲಿ ತರಬೇತಿಯಲ್ಲಿರುವ ಸಬ್ ಇನ್ಸ್‌ಪೆಕ್ಟರ್‌ಗಳನ್ನು ಹೊರತುಪಡಿಸಿ ಮಂಜೂರಾದ ಸಿಬ್ಬಂದಿಗಳು ೫೭೬೪. ೧೯೪೦-೪೧ ರಲ್ಲಿ ೫೭೧೯. ೧೯೪೧-೪೨ ರಲ್ಲಿ ಅಧಿಕಾರಿಗಳು ೧,೧೦೩

ಮತ್ತು ೧೯೪೦-೪೧ ರಲ್ಲಿ ಅಧಿಕಾರಿಗಳು ೧,೦೮೭, ೧೯೪೧-೪೨ ರಲ್ಲಿ ತಾತ್ಕಾಲಿಕ ಹುದ್ದೆಯಲ್ಲಿದ್ದ ಅಧಿಕಾರಿಗಳು ೭೯ ಮತ್ತು ೧೯೪೦-೪೧ ರಲ್ಲಿ ಅಧಿಕಾರಿಗಳು ೪೪. ೧೯೪೧-೪೨ ರಲ್ಲಿ ತಾತ್ಕಲಿಕ ಹುದ್ದೆಯಲ್ಲಿದ್ದ ಸಿಬ್ಬಂದಿಗಳು ೫೭೭ ಆದರೆ ೧೯೪೦-೪೧ ರಲ್ಲಿ ಇವರ ಸಂಖ್ಯೆ ೧೦೦.[೩೦೨]

೧೯೪೫-೪೬ ರಲ್ಲಿ ಪೊಲೀಸ್ ಪಡೆಯಲ್ಲಿ ಮಂಜೂರಾದ ಬಲ ೧೨೯೫ ಅಧಿಕಾರಿಗಳ ಬದಲಿಗೆ ಹಾಲಿ ೧,೧೨೬ ಅಧಿಕಾರಿಗಳಿದ್ದರು. ೬೭೭೦ ಸಿಬ್ಬಂದಿಗಳ ಬದಲಿಗೆ ೫೩೮೭ ಕಾನ್ಸ್‌ಟೇಬಲ್‌ಗಳಿದ್ದರು. ತಾತ್ಕಲಿಕ ಹುದ್ದೆಗಳಲ್ಲಿ ೩೮೭ ಅಧಿಕಾರಿಗಳು ಮತ್ತು ೧,೯೬೮ ಜನ ಸಿಬ್ಬಂದಿಗಳನ್ನು ವಿವಿಧ ಆಂತರಿಕ ಭದ್ರತಾ ವಿಷಯಗಳಲ್ಲಿ ನೇಮಕ ಮಾಡಿಕೊಳ್ಳಲಾಗಿತ್ತು. ಇವರನ್ನು ಶಾಂತಿ ಸುವ್ಯವಸ್ಥೆ ಕಾಪಾಡಲು, ಆಹಾರ ನಿಯಂತ್ರಣ ಇಲಾಖೆಗಳಲ್ಲಿ ದಾಳಿ ನಡೆಸಲು, ವಿಶೇಷ ಘಟಕಗಳು, ಸಿ.ಐ.ಡಿ ಮತ್ತು ಪೊಲೀಸ್ ತರಬೇತಿ ಶಾಲೆ ಹಾಗೂ ವಿವಿಧ ರೀತಿಯ ಕೆಲಸಗಳಿಗೆ ನೇಮಿಸಿಕೊಳ್ಳಲಾಯಿತು. ಸಂಸ್ಥಾನದಲ್ಲಿ ಮೀಸಲು ಪಡೆಯಲ್ಲಿ ಖಾಯಂ ಆಗಿ ೨೬೮ ಜನ ಅಧಿಕಾರಿಗಳು ಮತ್ತು ೧೫೪೦ ಜನ ಸಿಬ್ಬಂದಿಗಳು ಇದ್ದರು. ತಾತ್ಕಲಿಕವಾಗಿ ೩೨ ಜನ ಅಧಿಕಾರಿಗಳು ಮತ್ತು ೧೬೦ ಜನ ಸಿಬ್ಬಂದಿಯವರನ್ನು ನಿಸ್ತಂತುಗಳನ್ನು ಅಳವಡಿ ಸಲು, ಯಾಂತ್ರಿಕ, ಶಸ್ತ್ರಾಸ್ತ್ರಗಳ ಉಪಯೋಗಗಳ ಬಗ್ಗೆ ತರಬೇತಿ ನೀಡುವ ಸಲುವಾಗಿ ನೇಮಕ ಮಾಡಿಕೊಳ್ಳಲಾಯಿತು. ೫೪ ಜನ ಅಧಿಕಾರಿಗಳು ಮತ್ತು ೧೪೯ ಜನ ಸಿಬ್ಬಂದಿಗಳನ್ನು ಸರಕಾರದ ಇತರ ಇಲಾಖೆಗೆ ಮತ್ತು ಖಾಸಗಿ ವ್ಯಕ್ತಿಗಳ ಹಾಗೂ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಎರವಲು ನೀಡಲಾಯಿತು.[೩೦೩]

೭.೩೩ :ಪೊಲೀಸರ ನೇಮಕಾತಿ ಮತ್ತು ಭಡ್ತಿ

ಸರಿಯಾದ ಹುದ್ದೆಗೆ ಸರಿಯಾದ ವ್ಯಕ್ತಿಯನ್ನು ಆಯ್ಕೆ ಮಾಡುವುದು ಸರಕಾರದ ಉದ್ದೇಶವಾಗಿರುತ್ತದೆ. ಮತ್ತು ಅವನಿಗೆ ಅಗತ್ಯ ತರಬೇತಿಗಳನ್ನು ನೀಡಿ ಅವರ ಕೆಲಸಗಳಿಗೆ ಸೂಕ್ತ ಬಹುಮಾನ ಹಾಗೂ ಭಡ್ತಿಗಳನ್ನು ಸಹ ಸರಕಾರವು ನೀಡುತ್ತಿತ್ತು. ೧೯೧೭ ರಲ್ಲಿ ಸರಕಾರವು ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್‌ಗಳ ನೇಮಕಾತಿಗೆ ಆದೇಶಿಸಿತು. ೧೯೨೦ ರಲ್ಲಿ ಎಲ್ಲಾ ವರ್ಗದ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್‌ಗೆ ಮೂಲ ತರಬೇತಿಯನ್ನು ನೀಡಲು ತೀರ್ಮಾನಿಸಲಾಯಿತು. ಇದು ಒಂದು ವರ್ಷ ಅವಧಿಯದ್ದಾಗಿತ್ತು. ಈ ತರಬೇತಿಯಲ್ಲಿ ಇವರುಗಳನ್ನು ಜಿಲ್ಲಾ ಪೊಲೀಸ್ ಕಛೇರಿಗಳಿಗೆ ಕಳುಹಿಸಿ ಗಸ್ತು ವ್ಯವಸ್ಥೆ, ಕೆ.ಡಿಗಳ ಮತ್ತು ಅನುಮಾನಾಸ್ಪದ ವ್ಯಕ್ತಿಗಳ ಕಣ್ಗಾವಲು, ಸಂಚಾರ ನಿಯಂತ್ರಣ, ಪ್ರಕರಣಗಳ ತನಿಖೆ, ಠಾಣೆಯಲ್ಲಿ ದಾಖಲಾತಿಗಳ ನಿರ್ವಹಣೆ, ಪ್ರಕರಣಗಳ ದಿನಚರಿಯನ್ನು ಬರೆಯುವುದು ಮೊದಲ ಹಂತವಾದರೆ, ಎರಡನೇ ಹಂತವಾಗಿ ಮೂರು ತಿಂಗಳ ಅವಧಿಗೆ ತಾಲೂಕು ಮಟ್ಟದಲ್ಲಿ ಅನುಭವ ಇರುವ ಇನ್ಸ್‌ಪೆಕ್ಟರ್‌ಗಳ ಅಡಿಯಲ್ಲಿ ತರಬೇತಿಗೆ ಇವರನ್ನು ಕಳುಹಿಸಿ ಸರಳ ಪ್ರಕರಣಗಳ ತನಿಖೆ, ಅಸಹಜ ಸಾವುಗಳ ತನಿಖೆಯಿಂದ ಪ್ರಾರಂಭಿಸಿ ಕಠಿಣ ಪ್ರಕರಣಗಳ ತನಿಖೆ ಮಾಡುವುದನ್ನು ಸಹ ಕಲಿಯಬೇಕಿತ್ತು. ಇವರುಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿತ್ತು. ದೈನಂದಿನ ಪೊಲೀಸ್ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿತ್ತು. ಗ್ರಾಮೀಣ ಪ್ರದೇಶಗಳ ಕಸಬಾ ಮುಖ್ಯ ಠಾಣೆಗಳಲ್ಲಿ ಇವರುಗಳು ಮೊದಲು ದಫೇದಾರರಾಗಿ ಕೆಲಸ ಮಾಡಬೇಕಾಗಿತ್ತು. ನಂತರ ಸಬ್‌ಇನ್ಸ್‌ಪೆಕ್ಟರ್ ಅಗಿ ಕೆಲಸ ಮಾಡುತ್ತಿದ್ದರು.

ನಂತರ ಮೂರು ತಿಂಗಳ ಕಾಲ ಜಿಲ್ಲೆಯ ಅಭಿಯೋಜಕದ ಇನ್ಸ್‌ಪೆಕ್ಟರ್‌ನ ಬಳಿ ಕೆಲಸ ಮಾಡಬೇಕಿತ್ತು. ಈ ಅವಧಿಯಲ್ಲಿ ಅಭಿಯೋಜನೆಯ ಇನ್ಸ್‌ಪೆಕ್ಟರ್‌ಗೆ ಬರುವ ಪ್ರಕರಣಗಳ ಬಗ್ಗೆ ಗಮನಹರಿಸಿ ಅದರ ಬಗ್ಗೆ ಟಿಪ್ಪಣಿ ತಯಾರಿಸಬೇಕಿತ್ತು. ನ್ಯಾಯಾಲಯದಲ್ಲಿ ನಡೆಯುವ ವಿಚಾರಣೆಯಲ್ಲಿ ಭಾಗವಹಿಸಬೇಕಾಗಿತ್ತು. ಅಭಿಯೋಜನೆಯ

ಇನ್ಸ್‌ಪೆಕ್ಟರ್‌ಗಳು ಈ ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ, ನ್ಯಾಯಾಲಯದಲ್ಲಿ ಹೇಗೆ ಕಡತವನ್ನು ಸಲ್ಲಿಸಬೇಕು, ಹೇಗೆ ಸಾಕ್ಷಿಗಳನ್ನು ಹೇಳಿಸಬೇಕು, ಹೇಗೆ ಪಾಟಿಸವಾಲು ಮಾಡುತ್ತಾರೆ ಎಂಬ ಬಗ್ಗೆ ಹೇಳಿ ಕೊಡಬೇಕಿತ್ತು. ವಾರದಲ್ಲಿ ಮೂರು ಬಾರಿ ಇವರುಗಳು ಕವಾಯತಿಗೆ ಹಾಜರಾಗಬೇಕಿತ್ತು. ಅಲ್ಲಿ ಇವರುಗಳು ಸಿಬ್ಬಂದಿಗಳಿಗೆ ಹೇಗೆ ಕವಾಯತು ಮಾಡಬೇಕು ಎಂಬುದನ್ನು ಹೇಳಿಕೊಡಬೇಕಿತ್ತು. ಕೊನೆಯ ಮೂರು ತಿಂಗಳ ಅವಧಿಗೆ ಇವರುಗಳನ್ನು ಜಿಲ್ಲಾ ಪೊಲೀಸ್ ಕಛೇರಿಗೆ ನೇಮಿಸಿ ಅಲ್ಲಿಯ ಪೊಲೀಸ್ ಕೆಲಸಗಳು ಹೇಗೆ ನಡೆಯುತ್ತದೆ ಎಂಬ ಬಗ್ಗೆ ತಿಳಿಸಬೇಕಿತ್ತು.[೩೦೪]

ಪೊಲೀಸ್ ಮ್ಯಾನುವೆಲ್ ವಾಲ್ಯೂಮ್ ೧ ನ ಮೂರನೇ ಅಧ್ಯಾಯದಲ್ಲಿ ತಿಳಿಸಿದಂತೆ ಪೊಲೀಸರ ನೇಮಕಾತಿಯ ಬಗ್ಗೆ ಸರಕಾರವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಸಿಬ್ಬಂದಿಗಳ ನೇಮಕಾತಿ ಮತ್ತು ಭಡ್ತಿ ಬಗ್ಗೆ ಕೆಲವು ನಿಯಮಾವಳಿಗಳನ್ನು ರೂಪಿಸಿದರು.[೩೦೫] ಈ ನಿಯಮಾವಳಿಯಲ್ಲಿ ದಫೇದಾರರುಗಳನ್ನು ೨/೩ ಖಾಲಿ ಹುದ್ದೆಗಳನ್ನು ಭಡ್ತಿ ಮುಖಾಂತರವೂ ೧/೩ ಖಾಲಿ ಹುದ್ದೆಗಳನ್ನು ನೇಮಕಾತಿ ಮುಖಾಂತರವೂ ಮಾಡಬೇಕೆಂದು ತಿಳಿಸಲಾಯಿತು. ಹೊಸದಾಗಿ ಈ ಹುದ್ದೆಗೆ ಆಯ್ಕೆಯಾಗುವವರು ಕನಿಷ್ಟ ಪಕ್ಷ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂತಲೂ ಮತ್ತು ಅವರುಗಳ ನೇಮಕಾತಿ ನಂತರ ದಫೇದಾರರುಗಳ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಬೇಕೆಂತಲೂ ನಿಯಮದಲ್ಲಿ ತಿಳಿಸಲಾಯಿತು. ಜಮೇದಾರರುಗಳನ್ನು ಸಂಪೂರ್ಣವಾಗಿ ದಫೇದಾರರುಗಳ ಭಡ್ತಿ ಮುಖಾಂತರವೇ ಭರ್ತಿ ಮಾಡಲಾಗುತ್ತಿತ್ತು. ಸಬ್‌ಇನ್ಸ್‌ಪೆಕ್ಟರ್‌ಗಳ ಖಾಲಿ ಹುದ್ದೆಗಳಿಗೆ ೧/೪ ಭಾಗ ಭಡ್ತಿ ಮುಖಾಂ ತರವೂ, ೩/೪ ಭಾಗ ನೇರ ನೇಮಕಾತಿಗಳ ಮುಖಾಂತರವೂ ಭರ್ತಿ ಮಾಡಬೇಕೆಂದು ಸೂಚಿಸಲಾಯಿತು. ಹೊಸದಾಗಿ ಈ ಹುದ್ದೆಗೆ ಸೇರುವವರು ಕನಿಷ್ಠ ಪಕ್ಷ ಎಸ್.ಎಸ್.ಎಲ್.ಸಿ ಯನ್ನು ಉತ್ತೀರ್ಣರಾಗಿರಬೇಕಿತ್ತು. ಪಿ.ಎಸ್.ಐ ಹುದ್ದೆಗೆ ಆಯ್ಕೆಯಾದವರು ಪೊಲೀಸ್ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯಬೇಕಿತ್ತು. ಇನ್ಸ್‌ಪೆಕ್ಟರ್‌ಗಳ ಖಾಲಿ ಹುದ್ದೆಗಳಿಗೆ ೨/೩ ಭಾಗ ಭಡ್ತಿ ಮುಖಾಂತರವೂ ೧/೩ ಭಾಗ ನೇರ ನೇಮಕಾತಿ ಮುಖಾಂತರವೂ ಭರ್ತಿ ಮಾಡಲಾಗುತ್ತಿತ್ತು. ಹೊಸದಾಗಿ ಈ ಹುದ್ದೆಗೆ ಸೇರುವವರು ಕನಿಷ್ಟ ಪಕ್ಷ ಪಧವೀದರರಾಗಿರಬೇಕಿದ್ದು, ನೇಮಕಾತಿಯ ನಂತರ ಇನ್ಸ್‌ಪೆಕ್ಟರ್ ಹುದ್ದೆಗಾಗಿ ಇರುವ ತರಬೇತಿಗೆ ತೆರಳಿ ಅದಕ್ಕೆ ಸಂಬಂಧಿಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಿತ್ತು.[೩೦೬]

೧೯೨೫ ರಲ್ಲಿ ಐಜಿಪಿ ರವರು ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ಗಳ ಭಡ್ತಿ ವಿಚಾರದಲ್ಲಿ ಒಂದು ನಿಯಮವನ್ನು ಹೊರಡಿಸಿದರು. ಇದರ ಪ್ರಕಾರ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯಿಂದ ಇನ್ಸ್‌ಪೆಕ್ಟರ್ ಹುದ್ದೆಗೆ ಭಡ್ತಿಯನ್ನು ಪಡೆಯಲು ವಯೋಮಾನ ನಿಗಧಿಗೊಳಿಸಲಾಯಿತು. ಇನ್ಸ್‌ಪೆಕ್ಟರ್‌ಗಳು ಮುಂದಿನ ದರ್ಜೆಗೆ ಭಡ್ತಿ ಪಡೆಯಬೇಕಾದರೆ, ರೂ ೭೮ ವೇತನವನ್ನು ಪಡೆಯುತ್ತಿರಬೇಕಿತ್ತು. ಇನ್ಸ್‌ಪೆಕ್ಟರ್ ದರ್ಜೆಗೆ ಭಡ್ತಿಯನ್ನು ಪಡೆಯಲು ಕ್ರಿಮಿನಲ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಿತ್ತು. ಮೊದಲನೇ ದರ್ಜೆ ಇನ್ಸ್‌ಪೆಕ್ಟರ್ ಹುದ್ದೆಗೆ ಭಡ್ತಿ ಪಡೆಯಲು ರೂ. ೧೫೦ ಸಂಬಳ ಪಡೆಯುತ್ತಿರಬೇಕು. ಈ ಹುದ್ದೆಗಳಿಗೆ ಕೇವಲ ಸೇವಾ ಹಿರಿತನದ ಮುಖಾಂತರ ಭಡ್ತಿಯನ್ನು ನೀಡದೇ ಅವರ ಸಾಮರ್ಥ್ಯ ಮತ್ತು ವಿದ್ಯಾರ್ಹತೆಯನ್ನು ನೋಡಿ ಭಡ್ತಿ ನೀಡಬೇಕೆಂದು ನಿಯಮ ರೂಪಿಸಲಾಯಿತು.[೩೦೭]

ನಂತರ ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್ ದರ್ಜೆಗೆ ಆಯ್ಕೆಯಾಗುವ ಪ್ರತಿಯೊಬ್ಬರೂ ಸಹ ಹೈಯರ್ ಅಥವಾ ಲೋಯರ್ ಕ್ರಿಮಿನಲ್ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕೆಂದು ಸರಕಾರವು ತಿಳಿಸಿದೆ. ಸಬ್ ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್ ದರ್ಜೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಕನಿಷ್ಟ ಎರಡು ವರ್ಷದ ಒಳಗಾಗಿ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕಿತ್ತು. ಒಂದು ವೇಳೆ ಅನುತ್ತೀರ್ಣರಾದರೆ ಅವರನ್ನು ಇಲಾಖಾ ಹುದ್ದೆಯಿಂದ ತೆಗೆದುಹಾಕಬಹುದಿತ್ತು. ಸರಕಾರವು ೧೯೨೬ರ ಸಪ್ಟೆಂಬರ್ ೧೩ ರಂದು ಹೊರಡಿಸಿದ ಆದೇಶದ ಪ್ಯಾರಾ ೩ ಮತ್ತು ೪ರಲ್ಲಿ

ತಿಳಿಸಿದ್ದೇನೆಂದರೆ, ಸಬ್‌ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ್‌ಗಳ ಹುದ್ದೆಗೆ ಭಡ್ತಿಯನ್ನು ವಯೋಮಾನದ ಆಧಾರದ ಮೇಲೂ, ಇನ್ಸ್‌ಪೆಕ್ಟರ್‌ರಿಂದ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಹುದ್ದೆಗೆ ಅವರ ಯೋಗ್ಯತೆ ಮತ್ತು ಸಾಮರ್ಥ್ಯಗಳ ಮೇಲೂ ಭಡ್ತಿ ನೀಡುವುದು ಉಚಿತವೆಂದು ಸರಕಾರವು ಭಾವಿಸಿತು. ಯಾವ ಇನ್ಸ್‌ಪೆಕ್ಟರನು ಕಾನೂನು ಪಧವೀದರನಾಗಿದ್ದಾನೋ ಅಥವಾ ಲೋಕಲ್ ಸರ್ವಿಸ್ ಕ್ರಿಮಿನಲ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಾನೋ ಅಂತವರುಗಳನ್ನು ಎಎಸ್‌ಪಿ ಹುದ್ದೆಗೆ ಆಯ್ಕೆ ಮಾಡಲು ಯೋಗ್ಯರೆಂದು ತೀರ್ಮಾನಿಸಲಾಗುತ್ತಿತ್ತು. ಇದರ ಜೊತೆಗೆ ಅವರ ನಡತೆ, ಸಾಮರ್ಥ್ಯ, ಅರ್ಹತೆ, ಒಳ್ಳೆಯ ಕೆಲಸಗಳನ್ನೂ ಸಹ ಭಡ್ತಿಗಾಗಿ ಗಮನಿಸಲಾಗುತ್ತಿತ್ತು.[೩೦೮] ಯಾವ ಕಾನ್ಸ್‌ಟೇಬಲ್‌ಗಳು ಇಂಗ್ಲೀಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೋ ಅವರುಗಳನ್ನು ಎರಡನೇ ದರ್ಜೆಯ ಕಾನ್ಸ್‌ಟೇಬಲ್‌ಆಗಿ ಮಾಸಿಕ ರೂ. ೧೪ ವೇತನ ಪಡೆಯಲು ಅರ್ಹರೆಂದು ಭಾವಿಸಲಾಗುತ್ತಿತ್ತು. ಎಸ್.ಎಸ್.ಎಲ್.ಸಿ ಪಾಸಾದ ಕಾನ್ಸ್‌ಟೇಬಲ್‌ಗಳನ್ನು ಮೊದಲನೇ ದರ್ಜೆಯ ಕಾನ್ಸ್‌ಟೇಬಲ್ ಹುದ್ದೆಗೆ ಮಾಸಿಕ ರೂ ೧೫ ವೇತನ ಪಡೆಯಲು ಅರ್ಹರೆಂದು ಬಾವಿಸಲಾಗುತ್ತಿತ್ತು.[೩೦೯]

ಸರಕಾರವು ನಾಲ್ಕು ಎಸ್‌ಪಿ ದರ್ಜೆಯ ಹುದ್ದೆಗಳನ್ನು ನೇರವಾಗಿ ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮೀಸಲಿಟ್ಟಿತು. ಕೆ.ಜಿ.ಎಫ್‌ನ ಎಸ್‌ಪಿ ಹುದ್ದೆಯನ್ನು ಸಿವಿಲ್ ಸರ್ವಿಸ್ ಅಭ್ಯರ್ಥಿಗಳಿಗಲ್ಲದೇ ಕೆಳ ಹಂತದಿಂದ ಪದೋನ್ನತಿ ಪಡೆದವರಿಗಾಗಿ ಮೀಸಲಿಡಲಾಯಿತು. ಒಟ್ಟು ೬ ಎಸ್‌ಪಿ, ೭ ಎಎಸ್‌ಪಿ ಹುದ್ದೆಗಳನ್ನು ಕೆಳ ಹಂತದಿಂದ ಪದೋನ್ನತಿ ಪಡೆದ ಅಂದರೆ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲೂ ಪಾಸಾಗದವರಿಗಾಗಿ ಮೀಸಲಿಡ ಲಾಯಿತು.[೩೧೦] ಎಎಸ್‌ಪಿ ಹುದ್ದೆಯ ನೇಮಕಾತಿಗೆ ಸಂಬಂಧಪಟ್ಟಂತೆ ನಿರ್ಧಿಷ್ಟವಾದಂತಹ ನಿಯಮಗಳು ಇರಲಿಲ್ಲ. ಆದ್ದರಿಂದ ಸರಕಾರವು ವಯಸ್ಸು ಮತ್ತು ಅರ್ಹತೆಯ ಆಧಾರದ ಮೇರೆಗೆ ಸಮರ್ಥರೆಂದು ಎನ್ನಿಸಿದವರನ್ನು ಭಡ್ತಿ ನೀಡುವಂತೆ ಸೂಚಿಸಿತು. ಈ ಕಾರಣಕ್ಕಾಗಿ ನೇರ ನೇಮಕಾತಿ ಅಥವಾ ಇನ್ಸ್‌ಪೆಕ್ಟರ್‌ಗಳಿಗೆ ಭಡ್ತಿ ನೀಡುವುದರ ಮುಖಾಂತರ ಆ ಹುದ್ದೆಯನ್ನು ತುಂಬಲಾಗುತ್ತಿತ್ತು. ಇನ್ಸ್‌ಪೆಕ್ಟರ್ ಹುದ್ದೆಗಳಲ್ಲಿ ಅತ್ಯಂತ ಸಮರ್ಥವಾಗಿ ಕೆಲಸ ನಿರ್ವಹಿಸಿದವರಿಗೆ ಭಡ್ತಿ ಮೂಲಕ ಈ ಹುದ್ದೆಯನ್ನು ಆಯ್ಕೆ ಮಾಡಲಾಗುತ್ತಿತ್ತು. ಇದು ಪೊಲೀಸ್ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಲು ಅಧಿಕಾರಿಗಳಿಗೆ ಒಂದು ಪ್ರೇರಕ ಶಕ್ತಿಯಾಗಿತು.[೩೧೧]

೭.೩೪: ಗ್ರಾಮೀಣ ಪೊಲೀಸ್ ವ್ಯವಸ್ಥೆ

ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತದ ಹಳ್ಳಿಗಳು ತಮ್ಮದೇ ಆದ ರಕ್ಷಣಾ ವ್ಯವಸ್ಥೆಯನ್ನು ಬೆಳೆಸಿ, ಉಳಿಸಿಕೊಂಡು ಬಂದಿದೆ. ಅಂತೆಯೇ ಕರ್ನಾಟಕದಲ್ಲೂ ಸಹ. ಹಳ್ಳಿಗಳಲ್ಲಿ ಗೌಡ ಅಥವಾ ಗಾವುಂಡ ಅಥವಾ ಪಟೇಲರು ಆಯಾ ಗ್ರಾಮದ ಕಾನೂನು ಸುವ್ಯವಸ್ಥೆ ಪಾಲನೆ, ಅಪರಾಧ ತಡೆ ಮತ್ತು ಪತ್ತೆ ಜವಾಬ್ಧಾರಿಯನ್ನು ಹೊಂದಿದ್ದರು. ಇವರಿಗೆ ಸಹಾಯಕರಾಗಿ ತೋಟಿ, ತಳಾರಿ, ನೀರ್ಗಂಟಿ ಮೊದಲಾದವರು ಇದ್ದು, ಹಳ್ಳಿಯನ್ನು ಕಾವಲು ಕಾಯುತ್ತಿದ್ದುದ್ದನ್ನು ನಾವು ವಿವರವಾಗಿ ಚರ್ಚಿಸಿದ್ದೇವೆ. ಮೈಸೂರು ಅರಸರ ಕಾಲದಲ್ಲಿ ಹಾಗೂ ಬ್ರಿಟೀಷ್ ಕಮಿಷನರುಗಳ ಕಾಲ ಹಾಗೂ ನಂತರದ ಸಮಯದಲ್ಲಿಯೂ ಸಹ ಪೊಲೀಸ್ ಇಲಾಖೆಯ ಪುನರ್‌ಸಂಘಟನೆ, ಪುನರ್ ಹಂಚಿಕೆ ಹಾಗೂ ಅಭಿವೃದ್ಧಿಗಾಗಿ ಹಲವಾರು ಪ್ರಯತ್ನಗಳು ನಡೆದವು. ಅದಕ್ಕಾಗಿ ಆಯೋಗಗಳು ರಚನೆಯಾಗಿ ಅವು ತಮ್ಮ ವರದಿಯನ್ನು ಸಲ್ಲಿಸಿ, ಅದರಲ್ಲಿ ಕೆಲವು ಅನುಷ್ಠಾನಕ್ಕೂ ಬಂದಿವೆ. ಈ ಗ್ರಾಮೀಣ ಪೊಲೀಸರು ವ್ಯವಸ್ಥಿತ ಪೊಲೀಸರಿಗೆ ಅಪರಾಧ ತಡೆ ಮತ್ತು ಪತ್ತೆಯಲ್ಲಿ ಸಹಾಯ ಮಾಡುತ್ತಿದ್ದರೇ ವಿನ: ಇವರಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿರಲಿಲ್ಲ.

ಭಾರತದ ಪೊಲೀಸ್ ವ್ಯವಸ್ಥೆಯು ಮೊಗಲರಗಿಂತಲೂ ಮೊದಲಿನಿಂದ ವಿಕಸಿತಗೊಂಡು ಆಯಾ ಭೂಪ್ರದೇಶದಲ್ಲಿ

ಪೊಲೀಸ್ ಕಾರ್ಯಗಳನ್ನು ಮಾಡುತ್ತಾ ಅಧಿಕಾರ ನಡೆಸುವವರಿಗೆ ಅತ್ಯಂತ ಸಾಮಿಪ್ಯದಲ್ಲಿತ್ತು.[೩೧೨] ಪ್ರಾಚೀನ ಕಾಲದಲ್ಲಿ ರಾಜರಿಗೆ ರಾಜ್ಯದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಒಂದು ಪ್ರಮುಖ ಜವಾಬ್ದಾರಿಯಾಗಿತ್ತು. ಆದ್ದರಿಂದ ಜನರನ್ನು ನಿಯಂತ್ರಣದಲ್ಲಿಡುವುದು ಅಗತ್ಯವಾಗಿತ್ತು. ಹಳ್ಳಿಗಳಲ್ಲಿ ನದಿತೀರ ಮತ್ತು ಸಮುದ್ರತೀರಗಳಲ್ಲಿ ಕಂದಾಯ ವಸೂಲಿಗಾಗಿ ಒಂದು ಜನಶಕ್ತಿ ಅಗತ್ಯವಿತ್ತು. ಮೊಗಲರ ಕಾಲದಲ್ಲಿಯೂ ಇದೇ ಮಾದರಿ ಮುಂದುವರೆಯಿತು. ಸಂಘಟಿತ ಪೊಲೀಸ್ ವ್ಯವಸ್ಥೆಯು ರಾಜಧಾನಿ ಹಾಗೂ ಇತರ ಪ್ರದೇಶಗಳಲ್ಲಿ ಜಾರಿಗೆ ಬಂತು. ಹಳ್ಳಿಗಳಲ್ಲಿ ಅಲ್ಲಿನ ಸಂಪ್ರದಾಯ, ಪದ್ಧತಿಗಳು ಕಡ್ಡಾಯವಾಗಿದ್ದರೂ ಒಂದು ವ್ಯವಸ್ಥಿತವಾದ ನಿಯಂತ್ರಣ ವ್ಯವಸ್ಥೆಯಿತು. ಇದು ಹಳ್ಳಿಯಲ್ಲಿನ ಜಾತಿಯ ಪದರಗಳ ಮೂಲಕ ನಿರ್ವಹಿಸಲ್ಪಡುತ್ತಿತ್ತು. ಗ್ರಾಮೀಣ ಪ್ರದೇಶದ ಪೊಲೀಸ್ ವ್ಯವಸ್ಥೆಯು ಬ್ರಿಟೀಷರ ಆಡಳಿತ ಆರಂಭವಾದರೂ ಅದರ ಮೂಲ ಸ್ವರೂಪ ಬದಲಾಗಿರಲಿಲ್ಲ. ಇದರ ಆಡಳಿತ ಸ್ವರೂಪವನ್ನು ಜಿಲ್ಲಾಮಟ್ಟದಲ್ಲಿ ರಚಿಸಲಾಯಿತು. ಕಂದಾಯ ವಸೂಲಿ ಮುಖ್ಯ ಕರ್ತವ್ಯವಾಗಿತ್ತು. ಪೊಲೀಸ್‌ನ ಅಭಿವೃದ್ಧಿಯು ಕೇವಲ ರಾಜಧಾನಿಗಳು ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿತ್ತು. ಹಳ್ಳಿಯ ಪೊಲೀಸ್ ವ್ಯವಸ್ಥೆಯು ಮುಖ್ಯವಾಗಿ ಹಳ್ಳಿಗರಿಂದಲೇ ಅಂದರೆ ಹಳ್ಳಿಯ ಮುಖ್ಯಸ್ಥನಾದ 'ಪಟೇಲ' ನಿಂದ ನಡೆಸಲ್ಪಡುತ್ತಿತ್ತು. ಈತನಿಗೆ 'ಚೌಕಿದಾರ' ನೆಂಬ ಸಹಾಯಕನಿದ್ದನು.[೩೧೩] ವ್ಯವಸ್ಥಿತ ಪೊಲೀಸ್‌ನ ರಚನೆಯು ಗ್ರಾಮಗಳಲ್ಲಿ ಬಹಳ ವಿರಳವಾಗಿದ್ದು, ಗ್ರಾಮಗಳಲ್ಲಿ ಅಗತ್ಯ ಕಂಡುಬಂದಾಗ, ಪ್ರಮುಖ ಘಟನೆಗಳು ನಡೆದಾಗ ಈ ಪೊಲೀಸ್ ಪಡೆಯಿಂದ ಸಿಬ್ಬಂದಿಗಳನ್ನು ಪಡೆಯಲಾಗುತ್ತಿತ್ತು. ಉಳಿದಂತೆ, ಹಳ್ಳಿಯ ಪೊಲೀಸ್ ಪಡೆಯ ಅಧಿಕಾರಗಳೆಲ್ಲವೂ ಪಟೇಲನ ಅಥವಾ ಚೌಕಿದಾರರ ಬಳಿ ಇತ್ತು.

ಬ್ರಿಟೀಷರು ೧೮೬೧ ರ ನಂತರ ಪೊಲೀಸ್ ಆಡಳಿತ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. ಅದರಲ್ಲಿ ಗ್ರಾಮೀಣ ಪೊಲೀಸ್ ವ್ಯವಸ್ಥೆಗೂ ಗಮನಹರಿಸಿದರು. ಆದರೆ ಗ್ರಾಮೀಣ ಪೊಲೀಸ್ ವ್ಯವಸ್ಥೆಯ ಸ್ಥಳೀಯ ಅಗತ್ಯತೆ ಮತ್ತು ಚಾರಿತ್ರಿಕ ಹಿನ್ನಲೆಯನ್ನು ಅವರು ಗಮನದಲ್ಲಿ ಇಟ್ಟುಕೊಂಡಿದ್ದರು. ಗ್ರಾಮದಲ್ಲಿದ್ದ ಪಟೇಲರು ಮತ್ತು ತೋಟಿ ಅಥವಾ ತಳವಾರನು ವಂಶಪಾರಂಪರ್ಯವಾಗಿ ತನ್ನ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿ ಸುತ್ತಿದ್ದನು. ೧೮೩೧ ರಿಂದ ೧೮೮೧ ರವರೆಗೆ ಮೈಸೂರು ರಾಜರಿಂದ ಬ್ರಿಟೀಷರು ಅಧಿಕಾರವನ್ನು ಕಿತ್ತುಕೊಂಡು ಕಮಿಷನರುಗಳನ್ನು ಆಡಳಿತಕ್ಕೆ ನೇಮಿಸಿದರು. ಈ ಸಂದರ್ಭದಲ್ಲಿ ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ನಡೆಯಿತು. ವ್ಯವಸ್ಥಿತ ಪೊಲೀಸರಿಗಿಂತಲೂ ಗ್ರಾಮೀಣ ಪೊಲೀಸರಿಗೆ ಹೆಚ್ಚಿನ ಮಹತ್ವವು ಇತ್ತು. ಗ್ರಾಮೀಣ ಪೊಲೀಸ್ ಆಡಳಿತವು ಜನರೊಂದಿಗೆ ನೇರ ಸಂಪರ್ಕವನ್ನು ಹೊಂದಿದ್ದಲ್ಲದೇ ಇದು ಹಲವು ವಿಧಗಳಲ್ಲಿ ಪೊಲೀಸ್ ಇಲಾಖೆಯ ಮೂಲ ರಚನೆಯಾಗಿತ್ತು.[೩೧೪] ೧೮೬೧ ರ ಭಾರತೀಯ ಪೊಲೀಸ್ ಕಾಯ್ದೆಯು ಗ್ರಾಮೀಣ ಪೊಲೀಸ್ ಪಡೆಯನ್ನು ಸಂಘಟಿಸುವ ಹಾಗೂ ನಿಯಂತ್ರಿಸುವ ಬಗ್ಗೆಯೂ ತಿಳಿಸಿತು. ಗ್ರಾಮೀಣ ಪೊಲೀಸ್ ಪಡೆಯ ವಿವಿದ ದರ್ಜೆಯ ಅಧಿಕಾರಿಗಳು, ಕರ್ತವ್ಯಗಳೆಂದರೆ ತಮ್ಮ ಸರಹದ್ದಿನಲ್ಲಿ ನಡೆಯುವ ಅಪರಾಧ ಪ್ರಕರಣಗಳು ಅವುಗಳ ತನಿಖಾಹಂತ, ಹಾಗೂ ಅಪರಾಧ ಮಾಡುವ ಗುಂಪುಗಳ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸಿ ಅದನ್ನು ಸಂಬಂಧಿಸಿದವರೊಂದಿಗೆ ವಿನಿಮಯ ಮಾಡಿಕೊಳ್ಳುವುದು. ಗ್ರಾಮದಲ್ಲಿ ರಾತ್ರಿ ವೇಳೆ ಗಸ್ತು ತಿರುಗುವುದು, ಕಾವಲು ಕಾಯುವುದು, ಕಳ್ಳತನಗಳನ್ನು ತಡೆಯುವುದು ಅಥವಾ ಅದಕ್ಕೆ ಪ್ರತಿರೋಧ ಒಡ್ಡುವುದು ಆರೋಪಿಗಳನ್ನು ಪತ್ತೆ ಹಚ್ಚುವುದು ಮತ್ತು ಕಳವು ಮಾಲುಗಳನ್ನು ವಸೂಲಿ ಮಾಡುವುದು ಆಗಿತ್ತು. ಗ್ರಾಮದ ಸದಸ್ಯರು ಗ್ರಾಮೀಣ ಪೊಲೀಸರಿಗೆ ಸಹಾಯ ಮಾಡಲು ಸರ್ಕಾರವು ಅಧಿಕಾರ ನೀಡಿತು.

ಗ್ರಾಮೀಣ ಪೊಲೀಸ್ ಬಗ್ಗೆ ಕಾಯ್ದೆ ರಚನೆಯಾಗಿ ಪ್ರಕಟವಾಗುವವರೆಗೆ ಮೈಸೂರು ರಾಜ್ಯದ ಗ್ರಾಮೀಣ

ಪೊಲೀಸ್ ಪಡೆಯ ಸಂಘಟನೆ ಮತ್ತು ನಿಯಂತ್ರಣದ ಬಗ್ಗೆ ೧೮೭೨ ರಲ್ಲಿ ಆರ್.ಸಿ ಮಂಗಳೇಶರು ಸೂಚಿಸಿದ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಬರಬೇಕೆಂದು ತಿಳಿಸಲಾಯಿತು.[೩೧೫]

ಮೈಸೂರು ತಾಲೂಕಿನಲ್ಲಿ ದಫೇದಾರ ಮತ್ತು ಪೀವನ್‌ಗಳಿಗೆ ಸಂಬಳವನ್ನು ನೀಡಿ ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಪುನರ್ ಸಂಘಟಿಸುವಂತೆ ಮತ್ತು ಅಗತ್ಯಗಳಿಗೆ ತಕ್ಕಂತೆ ಪಡೆಯ ಬಲವನ್ನು ಖಡಿತಗೊಳಿಸಲು ಐಜಿಪಿರವರು ಪ್ರಸ್ಥಾಪಿಸಿದರು.[೩೧೬] ಈ ಬಗ್ಗೆ ಜ್ಯುಡಿಷಿಯಲ್ ಕಮಿಷನರ್‌ರವರಿಗೆ ಮುಖ್ಯ ಕಮಿಷನರ್‌ರವರು ಸೂಚಿಸಿದ್ದೇನೆಂದರೆ, ಈಗ ಇರುವ ಪೊಲೀಸ್ ವ್ಯವಸ್ಥೆಯನ್ನು ಮಾರ್ಪಡಿಸಿ, ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಪುನರ್ ರಚಿಸುವ ಕೆಲಸ ಕೊನೆ ಪಕ್ಷ ಮೈಸೂರು ತಾಲೂಕಿನಲ್ಲಿ ನಡೆಯುತ್ತಿದೆಯೋ ಇಲ್ಲವೋ ಎಂಬ ಬಗ್ಗೆ ವಿಭಾಗ ಕಮಿಷನರ್‌ರವರುಗಳಿಂದ ಮಾಹಿತಿ ತರಿಸಿಕೊಂಡು ವರದಿ ಮಾಡುವಂತೆ ಸೂಚಿಸಲಾಯಿತು.[೩೧೭]

ಐಜಿಪಿರವರು ಕಳುಹಿಸುತ್ತಿದ್ದ ವಾರ್ಷಿಕ ಪೊಲೀಸ್ ಆಡಳಿತ ವರದಿಗಳಲ್ಲಿ ಈಗ ಇರುವ ಗ್ರಾಮೀಣ ಪೊಲೀಸ್ ವ್ಯವಸ್ಥೆಯು ಕಿರುಕುಳದಿಂದ ಕೂಡಿದೆ ಎಂಬ ಕೆಟ್ಟ ಹೆಸರು ಇದೆ. ಇದಕ್ಕೆ ಪುನರ್ಜನ್ಮ ನೀಡಬೇಕು. ಕೇವಲ ತಾಲೂಕು ಮಟ್ಟದಲ್ಲಲ್ಲದೇ ಹಳ್ಳಿಗಳ ಮಟ್ಟದಲ್ಲೂ ಪೊಲೀಸ್ ಪಡೆಯನ್ನು ಪುನರ್ ಸಂಘಟಿಸುವ ಮೂಲಕ ಹೊಸ ಹೆಜ್ಜೆ ಇಡಬೇಕೆಂದು ಒತ್ತಾಯಿಸುತ್ತಿದ್ದರು. ನಂತರದ ವರ್ಷಗಳಲ್ಲಿ ಡಿ.ಸಿಯವರು ಹಲವು ಜಿಲ್ಲೆಗಳಲ್ಲಿ, ಹಳ್ಳಿಗಳಲ್ಲಿ ಪಟೇಲರನ್ನು ನೇಮಿಸಿದರು. ಗ್ರಾಮೀಣ ಪ್ರದೇಶದಲ್ಲಿ ಕೇವಲ ಕಂದಾಯ ಇಲಾಖೆಗಳ ಕರ್ತವ್ಯಗಳನ್ನಷ್ಟೇ ಮಾಡುವುದಲ್ಲಿ ಪೊಲೀಸ್ ಇಲಾಖೆಯ ಕರ್ತವ್ಯಗಳಿಗೂ ಸರಿಸಮಾನವಾದ ಅಧಿಕಾರಿಗಳು ಗಮನ ಕೊಡಬೇಕೆಂದು ಸೂಚಿಸಲಾಯಿತು. ಗ್ರಾಮದ ಸೇಕರುಗಳಾದ ತಳವಾರ ಅಥವಾ ಕಾವಲುಗಾರರು ಪಟೇಲರಿಗಿಂತಲೂ ತುಂಬಾ ಕೆಟ್ಟದಾಗಿ ಕೆಲಸ ಮಾಡುತ್ತಿದ್ದಾರೆಂದು ಐಜಿಪಿ ರವರು ಪ್ರತಿಪಾದಿಸಿದರು. ಪಟೇಲರುಗಳ ಸಂಖ್ಯೆಯಲ್ಲಿ ಕೊರತೆ ಇತ್ತು. ಅಲ್ಲಿಯವರೆಗೆ ಈ ಗ್ರಾಮಸೇವಕರುಗಳಿಗೆ ಹಳ್ಳಿಯ ಜನರಿಂದ ವಸೂಲಿಯಾದ ಕಂದಾಯದಲ್ಲಿ ನಿರ್ದಿಷ್ಟ ಪ್ರಮಾಣದ ದವಸದಾನ್ಯ ಪಡೆಯುತ್ತಿದ್ದರು. ಅಥವಾ ಹಳ್ಳಿಯ ರೈತರಿಂದ ಅವರು ಬೆಳೆದ ಬೆಳೆಯಲ್ಲಿ ಸ್ವಲ್ಪ ಭಾಗ ಪಡೆಯುತ್ತಿದ್ದರು. ಇದರಿಂದ ರೈತರಿಗೆ ಹೊರೆಯಾಗುತ್ತಿದ್ದುದು ಮಾತ್ರವಲ್ಲ ಈ ಸೇವಕರಿಂದ ಕಿರುಕುಳವು ಹೆಚ್ಚಾಗಿತ್ತು. ಅದಕ್ಕಾಗಿ ಮೇಜರ್ ಗ್ರಾಂಟ್ ಮತ್ತು ಕೃಷ್ಣ ಅಯ್ಯಂಗಾರ್ ರವರು ಒಂದು ಪ್ರಸ್ಥಾವನೆಯನ್ನು ಸಿದ್ದಪಡಿಸಿದರು. ಅದರಲ್ಲಿ ಗ್ರಾಮದ ಸೇವಕರುಗಳಾದ ತೋಟಿ, ತಳಾರಿ ಮತ್ತು ನೀರ್ಗಂಟಿಗಳಿಗೆ ನಿಗದಿತವಾದ ಸಂಬಳ ನೀಡಬೇಕೆಂದು ಪ್ರಸ್ಥಾಪಿಸಿ ಅದನ್ನು ಅವರು ಪತ್ರ ಸಂಖ್ಯೆ ೧೧೦ ದಿನಾಂಕ ೨೪ ಅಗಸ್ಟ್ ೧೮೭೬ ರಲ್ಲಿ ಸರಕಾರಕ್ಕೆ ಕಳುಹಿಸಿದರು.

ಈ ಪ್ರಸ್ಥಾವನೆಯನ್ನು ೧೮೭೭ ರ ಪೆಬ್ರವಿ ೧ ರಂದು ಚೀಫ್ ಕಮಿಷನರ್‌ರವರು ಒಪ್ಪಿಕೊಂಡರು. ಚೀಫ್ ಕಮಿಷನರ್‌ರವರು ಗ್ರಾಮಸೇವಕರುಗಳಾದ ತೋಟಿ, ತಳಾರಿ, ನೀರ್ಗಂಟಿಗಳ ಹಾಲಿ ಇರುವ ವೇತನದ ಬಗ್ಗೆ ವರದಿ ಕೊಡುವಂತೆ ಸೂಚಿಸಿದರು. – [೩೧೮] ಹಲವಾಗು ವಿಭಾಗಗಳಿಂದ ತೋಟಿ ಅಥವಾ ತಳಾರಿಗೆ ಸಂಬಳವಿಲ್ಲದ ಬಗ್ಗೆ ವರದಿಗಳು ಬಂದವು. ಉದಾಹರಣೆಗೆ ಕಾನಕಾನಹಳ್ಳಿ ತಾಲೂಕಿನ ತೋಟಿಗಳಿಗೆ ಬಂಬಳ ನಿಗದಿಯಾಗಿರಲಿಲ್ಲ. – [೩೧೯]

೧೮೬೮ ರಲ್ಲಿ ಈ ಬಗ್ಗೆ ಶ್ರೀ.ಬೋರಿಂಗ್ ಮಾಜಿ ಚೀಪ್ ಕಮಿಷನರ್‌ನ ಎಲ್.ಬೋರಿಂಗ್‌ನ ಮುಖಂಡತ್ವದಲ್ಲಿ ಸೇರಿದ ಸಭೆಯು ಹಲವು ವಿಷಯಗಳ ಬಗ್ಗೆ ತೀರ್ಮಾನಿಸಿ ಸಭಾ ನಡವಳಿಯನ್ನು ಹೊರಡಿಸಿತು. ಅದರಲ್ಲಿ ಮುಖ್ಯವಾದುದು ಗ್ರಾಮದ ಸೇವಕರು, ಪಟೇಲ, ಶಾನುಭೋಗರುಗಳಿಗೆ ಸಂಬಳ ನೀಡುವ ಬಗ್ಗೆ ತಿಳಿಸಲಾಯಿತು. ಈ ವರೆಗೆ ಇದು ಕಂದಾಯ ಸರ್ವೆ ಇಲಾಖೆಗೆ ಸೇರಿತ್ತು. ಇನಾಂ ಕಮಿಷನರ್ ರವರು ಈ ಕೆಳಗಿನ ವಿಷಯಗಳನ್ನು

ಪ್ರಸ್ಥಾಪಿಸಿದರು. ೧) ತೋಟಿ, ತಳವಾರಿ ಮತ್ತು ನೀರ್ಗಂಟಿ ಎಂಬ ಅಧಿಕಾರಿಗಳನ್ನು ಮುಂದುವರಿಸಬೇಕು. ೨)ಅವರುಗಳಿಗೆ ಮೂರು ಶ್ರೇಣಿಯಲ್ಲಿ ಅಂದರೆ ಮಾಸಿಕ ೪,೩ ಹಾಗೂ ೨ ರೂಗಳ ಸಂಬಳ ನೀಡಬೇಕು. ೩) ಇವರುಗಳಿಗೆ ಬಾಡಿಗೆರಹಿತವಾದ ಉತ್ತಮ ಭೂಮಿಯನ್ನು ನೀಡಬೇಕು. ಒಂದು ವೇಳೆ ಭೂಮಿ ಇಲ್ಲವಾದಲ್ಲಿ ಹಣದ ರೂಪದಲ್ಲಿ ಸಂಬಳ ನೀಡಬೇಕು ಮತ್ತು ಭೂಮಿ ಸಿಗುವ ವರೆಗೂ ಈ ಸಂಬಳ ಮುಂದುವರಿಸಬೇಕು ಈ ಪ್ರಸ್ಥಾವನೆಗಳಿಗೆ ಬೋರಿಂಗ್ ಒಪ್ಪಿದನು.

ಗ್ರಾಮಸೇವಕರುಗಳಾದ ತೋಟಿ, ತಳಾರಿ ಮತ್ತು ನೀರ್ಗಂಟಿಗಳಿಗೆ ನಾಲ್ಕು ವಿದಗಳಲ್ಲಿ ಸಂಬಳ ನೀಡಲು ಒಪ್ಪಿಗೆ ನೀಡಿದರು.– [೨೦] ಅವುಗಳೆಂದರೆ, ಮೊದಲನೆಯದಾಗಿ ಇನಾಂ ಭೂಮಿಯನ್ನು ಕೊಡುವುದು. ಎರಡನೇಯದಾಗಿ ಸರ್ಕಾರದಿಂದ ಹಣದ ರೂಪದಲ್ಲಿ ಸಂಬಳ ನೀಡುವುದು. ಮೂರನೆಯದಾಗಿ ರೈತರಿಂದ ಹಣದ ರೂಪದಲ್ಲಿ ಸಂಬಳ ನೀಡುವುದು ಮತ್ತು ಕೊನೇಯದಾಗಿ ರೈತರಿಂದ ಬೆಳೆದ ಧಾನ್ಯ ಅಥವಾ 'ಆಯ' ದ ರೂಪದಲ್ಲಿ ಸಂಬಳ ನೀಡುವುದಾಗಿತ್ತು. ಆದರೆ ಬಹಳ ಸಂದರ್ಭಗಳಲ್ಲಿ ಯೋಗ್ಯವಾದ ಸರ್ಕಾರದ ಭೂಮಿ ಇರಲಿಲ್ಲ. ಒಂದು ವೇಳೆ ಇದ್ದರೂ ಅದನ್ನು ಬೇರೆಯವರಿಗೆ ಪರಬಾರೆ ಮಾಡಲಾಗಕಿತ್ತು. ರೈತಯ ಹಾಗೂ ಸರ್ಕಾರದಿಂದ ಸರಿಯಾಗಿ ಸಂಬಳ ಬರುತ್ತಿರಲಿಲ್ಲ. ರೈತರು ಧಾನ್ಯಗಳನ್ನೂ ಸರಿಯಾಗಿ ಕಾಲಕಾಲಕ್ಕೆ ನೀಡುತ್ತಿರಲಿಲ್ಲ.

ತೊಟಿಗಳ ಕೆಲಸ ೧) ಶೇಖ್‌ದಾರ ಶಾನುಭೋಗ ಪಟೇಲ ಅವರ ಆದೇಶಗಳನ್ನು ಪಾಲಿಸುವುದು. ೨)ಕಂದಾಯ ಪಾವತಿ ಮಾಡದವರನ್ನು ಶಾನುಭೋಗ, ಶೇಕ್‌ದಾರ ಅಥವಾ ಪಟೇಲರ ಮುಂದೆ ಹಾಜರುಪಡಿಸುವುದು, ೩) ಇರಸಾಲ್ (ಸಂಗ್ರಹಿಸಿದ ಕಂದಾಯ) ವನ್ನು ತಾಲೂಕು ಕಛೇರಿಗೆ ತಲುಪಿಸುವುದು. ೪) ವರದಿಗಳನ್ನು ಶೇಖ್‌ದಾರನಿಂದ ಮತ್ತು ಶೇಖ್‌ದಾರರಿಗೆ ತಲುಪಿಸುವುದು. ೫) ಕಂದಾಯ ಅಧಿಕಾರಿಗಳ ಸಮ್ಮುಖದಲ್ಲಿ ಭೂಮಿಯನ್ನು ಅಳೆಯುವುದು. ೬) ಗ್ರಾಮಗಳಲ್ಲಿ ಗಸ್ತು ತಿರುಗುವುದು. ೭) ಸತ್ತ ಪ್ರಾಣಿಗಳ ದೇಹವನ್ನು ತೆಗೆಯುವುದು ಮತ್ತು ಹೂಳುವುದು. ೮) ಪೊಲೀಸರು ಕೇಳಿದಾಗ ಅವರಿಗೆ ಸಹಾಯ ಮಾಡುವುದು ೯) ಸರಕಾರದಿಂದ ಘೋಷಣೆ ಮಾಡುವಂತಹ ವಿಷಯಗಳಿದ್ದರೆ ಅದನ್ನು ಗ್ರಾಮದಲ್ಲಿ ಟಾಂ ಟಾಂ ಮೂಲಕ ಸಾರುವುದು. ೧೦) ದನದ ದೊಡ್ಡಿಗಳ ನಿರ್ವಹಣೆಗೆ ಪಟೇಲನಿಗೆ ಸಹಾಯ ಮಾಡುವುದು ಮತ್ತು ಯಾರೂ ತನ್ನದೆಂದು ಹೇಳಿದ ದನಗಳನ್ನು ತಾಲೂಕು ಕಛೇರಿಗೆ ಸಾಗಿಸುವುದು. ೧೧) ಮೇಲಾಧಿಕಾರಿಗಳಿಂದ ವಿವಿಧ ಕೆಲಸಗಳಿಗೆ ಕೂಲಿಯವರು ಬೇಕೆಂದಾಗ ಅವರನ್ನು ಒದಗಿಸುವುದು. ೧೨) ಜಮಾಬಂಧಿ ಮತ್ತು ಇತರ ಸಂದರ್ಭಗಳಲ್ಲಿ ರೈತರು ಖಡ್ಡಾಯವಾಗಿ ಹಾಜರಿರುವಂತೆ ನೋಡಿಕೊಳ್ಳುವುದು. ೧೩) ಹೋಬಳಿ ಮುಖ್ಯಸ್ಥರಿಗೆ ಹಾಗೂ ಅವರಿಂದ ಸಣ್ಣಪುಟ್ಟ ಸಂದಾಯಗಳಿದ್ದಲ್ಲಿ ಮಾಡುವುದು ೧೪) ಮಳೆಗಾಲದಲ್ಲಿ ಕೆರೆಗಳಿಂದ ಅಪಾಯಗಳಿವೆಯೇ ಎಂದು ಗಮನಿಸುವುದು. ೧೫) ಭತ್ತದ ಬೆಳೆಯನ್ನು ಕಾವಲು ಮಾಡುವುದು. ೧೬) ಯಾವುದಾದರೂ ತುರ್ತು ಸಂದರ್ಭಗಳಿದ್ದರೆ ವಿವಿಧ ಕೆಲಸಗಳಿಗೆ ಹೋಗಬೇಕು.

ಮೈಸೂರಿನ ಡೆಪ್ಯುಟ್ಯೂ ಕಮಿಷನರ್ ಆಗಿದ್ದ C. PEARSE ರವರು ಒಂದು ಆದೇಶ ಹೊರಡಿಸಿ ತೋಟಿ ಮತ್ತು ತಳಾರಿಗಳ ಕರ್ತವ್ಯಗಳು ಏನೆಂಬುದನ್ನು ನಿಗದಿಪಡಿಸಿದ್ದರು. – [೨೧]

<u>ತಳಾರಿಗಳ ಕರ್ತವ್ಯ</u> ೧) ಶೇಖ್‌ದಾರ್ ಮತ್ತು ಶಾನುಭೋಗರವರುಗಳ ಆದೇಶ ಪಾಲಿಸುವುದು. ೨) ಕಂದಾಯ ಸಂಗ್ರಹಣೆಗೆ ನೆರವು ನೀಡುವುದು. ೩) ಗ್ರಾಮದಲ್ಲಿ ಗಸ್ತು ತಿರುಗುವುದು ೪) ಪೊಲೀಸರು ಕರೆದಾಗ ಅವರ ನೆರವಿಗೆ ಹೋಗುವುದು. ೫) ಪಟೇಲನಿಗೆ ದನಗಳ ದೊಡ್ಡಿ ನಿರ್ವಹಿಸಲು (ಕೆಲವೆಡೆ ಮಾತ್ರ) ಸಹಾಯ ಮಾಡುವುದು. ೬)

ಅಗತ್ಯವಿದ್ದಲ್ಲಿ ಬತ್ತದ ಬೆಳೆಯನ್ನು ವಶಕ್ಕೆ ತೆಗೆದುಕೊಳ್ಳುವುದು. ೭) ಯಾವುದಾದರೂ ತುರ್ತು ಸಂದರ್ಭಗಳಲ್ಲಿ ವಿವಿಧ ಬಗೆಯ ಕೆಲಸಗಳಿಗೆ ಹೋಗಬೇಕು.

<u>ನೀರ್ಗಂಟಿಗಳ ಕೆಲಸ :</u>

೧) ಅಗತ್ಯವಿದ್ದೆಡೆಗಳಲ್ಲಿ ಕೆರೆದಂಡೆಗಳಿಗೆ ಮಣ್ಣು ಹಾಕುವುದು. ೨) ಕೃಷಿ ಮಾಡುವ ಸಂದರ್ಭಗಳಲ್ಲಿ ಕಾಲುವೆಗಳ ಮೂಲಕ ನೀರು ಹಾಯಿಸುವುದು, ೩) ಕೆರೆಯ ತಗ್ಗು ಪ್ರದೇಶಗಳಲ್ಲಿರುವ ಭೂಮಿಗಳಿಗೆ ಈ ನೀರನ್ನು ಹಂಚುವುದು. ೪) ಅಪಾಯದ ಸಂದರ್ಭಗಳಲ್ಲಿ ಮತ್ತು ಮಳೆಗಾಲದಲ್ಲಿ ಕೆರೆಗಳನ್ನು ಕಾಯವುದು ೫) ಕಂದಾಯ ವಸೂಲಿ ಮಾಡಲು ಅಧಿಕಾರಿಗಳಿಗೆ ಅಗತ್ಯವಿದ್ದಾಗ ಸಹಕರಿಸುವುದು ೬) ಶೇಖ್‌ದಾರರ ಕಛೇರಿಗೆ ಮತ್ತು ಕಛೇರಿಯಿಂದ ಅಗತ್ಯವಿದ್ದಾಗ ಟಪ್ಪಾಲುಗಳ್ನು ತೆಗೆದುಕೊಂಡು ಹೋಗುವುದು.

೧೮೬೮ ರಲ್ಲಿ ಮುಖ್ಯ ಕಮಿಷನರ್‌ರಾಗಿದ್ದ ಶ್ರೀ. ಬೋರಿಂಗ್ ಗ್ರಾಮಸೇವಕರುಗಳು, (ಪಟೇಲ, ಶಾನುಭೋಗರನ್ನು ಹೊರತುಪಡಿಸಿ) ಸಂಬಳವನ್ನು ಪರಿಷ್ಕರಿಸಲು ಕಂದಾಯ ಸರ್ವೆ ಇಲಾಖೆಗೆ ಜವಾಬ್ದಾರಿ ವಹಿಸಿದನು. ಇನಾಮ್ ಕಮಿಷನರ್‌ರವರು ಬೋರಿಂಗ್‌ಗೆ ಈ ಕೆಳಗಿನಂತೆ ಪ್ರಸ್ತಾವನೆಯನ್ನು ಸಲ್ಲಿಸಿದರು.

೧) ತಳಾರಿ, ತೋಟಿ, ನೀರ್ಗಂಟಿಗಳ ಹುದ್ದೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕು.

೨) ಇವರುಗಳಿಗೆ ಮೂರು ಶ್ರೇಣಿಗಳಲ್ಲಿ ಅಂದರೆ ಮಾಸಿಕ ೪, ೩, ೨ ರೂ ವೇತನ ನೀಡಬೇಕು.

೩) ಬಾಡಿಗೆರಹಿತವಾದ ಉತ್ತಮವಾದ ಭೂಮಿಗಳನ್ನು ವ್ಯವಸಾಯ ಮಾಡುವ ಸಲುವಾಗಿ ನೀಡಲು ಹುಡುಕಬೇಕು. ಭೂಮಿ ಸಿಗುವವರೆಗೂ ಈ ಮೇಲಿನ ಸಂಬಳ ನೀಡುತ್ತಿರಬೇಕು. ಭೂಮಿ ಸಿಗದಿದ್ದರೆ ಈ ಸಂಬಳ ನೀಡುವುದನ್ನು ಮುಂದುವರಿಸಬೇಕು. [೩೨]

ತೋಟಿ, ತಳಾರಿ ಮತ್ತು ನೀರ್ಗಂಟಿಗಳಿಗೆ ಸಂಬಳ ನೀಡಬೇಕೆಂದು ಬೇರೆ ಬೇರೆ ಜಿಲ್ಲಾಧಿಕಾರಿಗಳು ಮನವಿ ಸಲ್ಲಿಸುತ್ತಿದ್ದರು. ಸರ್ವೆ ಸೆಟ್ಲ್‌ಮೆಂಟ್ ಕಮಿಷನರ್‌ರವರು ಚಿತ್ರದುರ್ಗ ಜಿಲ್ಲೆಯ ಈ ಗ್ರಾಮಸೇವಕರಿಗೆ ಸಂಬಳ ನೀಡಬೇಕೆಂದು ನಂದಿದುರ್ಗ ಡಿವಿಜನ್ ಕಮಿಷನರ್‌ರವರು ಕಳುಹಿಸಿದ ಪತ್ರಗಳನ್ನು [೩೩] ಐ.ಜಿ.ಪಿರವರಿಗೆ ಕಳುಹಿಸಿ ಸರ್ಕಾರದ ಪ್ರಕಟನೆ ಸಂಖ್ಯೆ ೨೩೦ ಜೆ ದಿನಾಂಕ ೧೬ ಅಕ್ಟೋಬರ್ ೧೮೭೨ ರ ಪ್ರಕಾರ ತಳಾರಿಗಳಿಗೆ ಸಂಬಳ ಹೆಚ್ಚಿಸಬೇಕೇ ? ಹೌದಾದರೆ ಎಷ್ಟು ? ಮತ್ತು ಪತ್ರೀ ಹಳ್ಳಿಗಳಿಗೆ ಎಷ್ಟು ಜನ ಕಾವಲುಗಾರರನ್ನು ನೇಮಿಸಬೇಕು ಎಂಬ ಬಗ್ಗೆ ವಿವರ ಕೇಳಿದರು- [೩೪] ಇದಕ್ಕೆ ವರ್ಷದ ಜಮಾಬಂಧಿ ಕಳೆದ ಮೇಲೆ ಐ.ಜಿ.ಪಿ ರವರು ಉತ್ತರಿಸಿದರು. ಹೀಗೆ ಹಲವಾರು ಬಾರಿ ಇವರುಗಳಿಗೆ ಎಷ್ಟು ಸಂಬಳ ನೀಡಬೇಕು ಮತ್ತು ವ್ಯವಸಾಯದ ಭೂಮಿ ಇರುವ ಅಥವಾ ಒಣಭೂಮಿ ಇರುವ ರೈತರ ವಾರ್ಷಿಕವಾಗಿ ಎಷ್ಟು ಧಾನ್ಯವನ್ನು ಇವರಿಗೆ ನೀಡಬೇಕೆಂಬ ಪತ್ರ ವ್ಯವಹಾರಗಳು ಚರ್ಚೆಗಳು ನಡೆದವು. ಆದರೆ ವಿವಿಧ ತಾಲೂಕು ಹಾಗೂ ಹಳ್ಳಿಗಳಲ್ಲಿ ಈ ಮೂವರ ಸಂಬಳದ ದರ ಹಾಗೂ ಸ್ವರೂಪಗಳಲ್ಲಿ ವ್ಯತ್ಯಾಸವಿತ್ತು.

೧೮೭೮ ರಲ್ಲಿ ಮಹಾರಾಜರ ಆಡಳಿತದಡಿ ಬರುವ ಸಣ್ಣ ಗ್ರಾಮಗಳ ಸೇವಕರಿಂದ ತಳವಾರರು, ತೋಟಿಗಳು ಹಾಗೂ ನೀರ್ಗಂಟಿಗಳಿಗೆ (ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುವ) ಈ ಕೆಳಗಿನ ನಿಯಮಗಳನ್ನು ಪಾಲಿಸಿ ಸಂಬಳ ನೀಡಬೇಕೆಂದು ವೈಸ್‌ರಾಯ್ ಮತ್ತು ಗೌರ್ನರ್ ಜನರಲ್ ಕೌನ್ಸಿಲ್ ನಿರ್ದೇಶಿಸಿದರು.[೩೫]

<u>ತಳವಾರರು</u> ೧) ಸ್ಥಾಪಿತವಾದ (**Setlled**) ತಾಲೂಕುಗಳಲ್ಲಿ ಪ್ರತೀ ಹಳ್ಳಿಯಲ್ಲಿ ತಳವಾರರಿಗೆ ನೀಡಬೇಕಾದ ಭತ್ಯೆ ಅಥವಾ ಮಿರ (**Miras**) ನ್ನು ಬಿತ್ತನೆ ಮಾಡಿದ ಪ್ರತೀ ಎಕರೆ ಭೂಮಿಗೆ ಮೂರು ಸೇರು ಧಾನ್ಯಕ್ಕೆ ನಿಗದಿಪಡಿಸಲಾಯಿತು. (ಒಂದು ವೇಳೆ ಕಬ್ಬು, ತೆಂಗಿನಕಾಯಿ ಮೊದಲಾದ ತೋಟದ ಬೆಳೆಗಳನ್ನು ಬೆಳೆಯುವ ಭೂಮಿಯಾಗಿದ್ದರೆ ಭೂಮಿಯ

ಒಡೆಯ ತೀರ್ಮಾನಿಸಿದಂತೆ ಭತ್ತ ಅಥವಾ ರಾಗಿಯ ರೂಪದಲ್ಲಿ ನೀಡಬಹುದಿತ್ತು.) ಇದು ತೋಟವಾಗಿರಲಿ, ನೀರಾವರಿ ಇರುವ ಭೂಮಿಯಾಗಿರಲಿ ಪ್ರತಿಯೊಬ್ಬ ರೈತರೂ ಇದನ್ನು ನೀಡಬೇಕು. ೨) ಸ್ಥಾಪಿತವಾಗದ (**unSetlled**) ತಾಲೂಕುಗಳಲ್ಲಿ ಗ್ರಾಮದ ತಳವಾರರ 'ಮೀರಾ' ವನ್ನು ಬಿತ್ತನೆ ಮಾಡಿದ ಪ್ರತೀ ಎಕರೆ ನೀರಾವರಿ ಭೂಮಿಗೆ (**Kudu**) ಎರಡು ಸೇರು ಧಾನ್ಯ ಹಾಗೂ ಒಣಭೂಮಿಗೆ ಅರ್ಧ ಸೇರು ಧಾನ್ಯವನ್ನು ಪ್ರತೀ ರೈತನು ನೀಡಬೇಕು. ೩) ಭೂಮಿಯಿಲ್ಲದ ಹಳ್ಳಿಯ ಜನರು ಅವರು ಮೊಹತರಫ್‌ಗಳಾಗಿದ್ದರೆ ಪ್ರತೀ ರೂಪಾಯಿಗೆ ಒಂದು ಆಣೆಯನ್ನು, ಒಂದು ವೇಳೆ ಮೊಹತರಫ್ ನೀಡದೇ ಇರುವವರಾಗಿದ್ದರೆ ಪ್ರತೀ ಮನೆಗೆ ಎರಡು ಆಣೆಯನ್ನು ನೀಡಬೇಕು.

ತೋಟಿಗಳಿಗೆ ೪) ಸ್ಥಾಪಿತವಾದ ತಾಲೂಕುಗಳಲ್ಲಿ ತೋಟಿಗಳಿಗೆ ನೀಡಬೇಕಾದ ಭತ್ಯೆ ಎಂದರೆ ಪ್ರತೀ ಹಳ್ಳಿಯಲ್ಲಿ ಮೀರಾಭತ್ಯೆ, ಇರಬೇಕಾಗಿದ್ದು ಜಮೀನನ್ನು ಹೊಂದಿದ ಪ್ರತಿಯೊಬ್ಬ ರೈತನು, ಆ ಭೂಮಿ ತೋಟವಾಗಿರಲಿ, ನೀರಾವರಿ ಭೂಮಿಯಾಗಿರಲಿ ಅಥವಾ ಒಣಭೂಮಿಯಾಗಿರಲಿ ಬಿತ್ತನೆ ಮಾಡಿದ ಪ್ರತೀಯೊಂದು ಎಕರೆ ಭೂಮಿಗೆ ಎರಡು ಸೇರು ಧಾನ್ಯ ನೀಡಬೇಕು. ೫) ಸ್ಥಾಪಿತವಾಗದ ತಾಲೂಕುಗಳಲ್ಲಿ ತೋಟಿಗೆ ನೀಡಬೇಕಾದ 'ಮಿರಾ' ಏನೆಂದರೆ, ಬಿತ್ತನೆ ಮಾಡಿದ ಒಣಭೂಮಿಯ ಪ್ರತಿಯೊಂದು ಕುಡುವಿಗೆ ಎರಡು ಸೇರು ಧಾನ್ಯ ಹಾಗೂ ಬಿತ್ತನೆ ಮಾಡಿದ ನೀರಾವರಿ ಇರುವ ಅಥವಾ ತೋಟದ ಪ್ರತಿಯೊಂದು ಕುಡುವಿಗೆ ಅರ್ಧ ಸೇರು ಧಾನ್ಯ ನೀಡಬೇಕು. ಮೀರಾವನ್ನು ವ್ಯವಸಾಯ ಮಾಡದ ಭೂಮಿಗೆ ಹಾಕುವಂತೆ ಇರಲಿಲ್ಲ.

ನೀರ್ಗಂಟಿ ೬)ಸ್ಥಾಪಿತ ತಾಲೂಕುಗಳಲ್ಲಿ ಗ್ರಾಮದ ನೀರ್ಗಂಟಿಯ ನಿಗಧಿಪಡಿಸಿದ ಭತ್ಯೆ ಏನೆಂದರೆ, ಪ್ರತೀ ಹಳ್ಳಿಯಲ್ಲೂ ಮಿರಾ ಇದ್ದು ಕೆರೆಯ ನೀರಿನಿಂದ ಮತ್ತು ಕಾಲುವೆಗಳಿಂದ ವ್ಯವಸಾಯ ಮಾಡುವ ಪ್ರತಿಯೊಂದು ಎಕರೆ ಭೂಮಿಗೆ ಅಥವಾ ತೋಟಕ್ಕೆ ನಾಲ್ಕು ಸೇರು ಧಾನ್ಯ ನೀಡಬೇಕು. ೭) ಸ್ಥಾಪಿತವಾಗದ ತಾಲೂಕುಗಳಲ್ಲಿ ಹಳ್ಳಿಗಳ ನೀರ್ಗಂಟಿಗಳಿಗೆ ಮಿರಾ ನಿಗದಿಯಾಗಿದ್ದು, ಕೆರೆಯ ನೀರಿನಿಂದ ಕಾಲುವೆ ನೀರಿನಿಂದ ವ್ಯವಸಾಯ ಮಾಡುವ ಪ್ರತಿಯೊಂದು ಕುಡುವಿಗೆ ಒಂದು ಸೇರು ಧಾನ್ಯವನ್ನು ನೀಡಬೇಕು. ಇದನ್ನು ಹಳ್ಳಿಯಲ್ಲಿ ಭೂಮಿಯನ್ನು ಹೊಂದಿರುವ ಪ್ರತಿಯೊಬ್ಬ ರೈತನೂ ನೀಡಬೇಕು. ಆದರೆ ಬಾವಿಯ ನೀರಿನಿಂದ ವ್ಯವಸಾಯ ಮಾಡುವ ರೈತನು ನೀರ್ಗಂಟಿಗೆ ಯಾವುದೇ ಮಿರಾವನ್ನು ನೀಡಬೇಕಾಗಿರಲಿಲ್ಲ. ಮತ್ತು ವ್ಯವಸಾಯವನ್ನೇ ಮಾಡದ ಹಳ್ಳಿಯ ಜನರು ನೀರ್ಗಂಟಿಗೆ ಯಾವುದೇ ಮಿರಾವನ್ನು ಕೊಡಬೇಕಾಗಿರಲಿಲ್ಲ. ಗ್ರಾಮದ ಸೇವಕರುಗಳ ಸಂಬಳವನ್ನು ಜಾರಿಗೊಳಿಸಲು ಕೆಲವು ನಿಯಮಗಳನ್ನು ರೂಪಿಸಲಾಗಿತ್ತು. ಮೈಸೂರಿನ ಕಂದಾಯ, ಕೃಷಿ, ಹಾಗೂ ವಾಣಿಜ್ಯ ಇಲಾಖೆಗಳ ಮುಖ್ಯ ಕಾರ್ಯದರ್ಶಿಯವರಾಗಿದ್ದ ಟಿ.ಕ್ಲರ್ಕೆರವರ ಕಛೇರಿಯ ನಡವಳಿ ದಿನಾಂಕ ೧-೮-೧೮೭೮ ರಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ.

ಒಂದು ವೇಳೆ ಮೇಲೆ ಹೇಳಿದ ಮೂರು ಜನ ಗ್ರಾಮಸೇವಕರುಗಳಿಂದ ಈ ಮಿರಾವನ್ನು ಕೊಡಬೇಕಾದ ಯಾವುದೇ ರೈತ ಅಥವಾ ಇತರ ವ್ಯಕ್ತಿಗಳು ಕೊಡದೆ ಬಾಕಿ ಇರಿಸಿಕೊಂಡಿದ್ದಾರೆಂದು ಯಾವುದಾದರೂ ದೂರು ಬಂದರೆ, ತಾಲೂಕಿನ ಅಮಿಲ್‌ದಾರನು ಈ ಬಗ್ಗೆ ವಿಚಾರಣೆ ನಡೆಸಿ ಒಂದು ಆದೇಶ ಹೊರಡಿಸಬೇಕು. ಒಂದು ವೇಳೆ ಈ ಆದೇಶವು ಹಳ್ಳಿಯ ಸೈನಿಕನ ಪರವಾಗಿ ಬಂದರೆ, ಬಾಕಿ ಉಳಿಸಿಕೊಂಡ ರೈತನಿಂದ ಕಂದಾಯವೆಂದು ಪಡೆದು ಅದನ್ನು ಗ್ರಾಮಸೇವಕನಿಗೆ ನೀಡಬೇಕೆಂದು ಮತ್ತು ಬಾಕಿ ಉಳಿಸಿಕೊಂಡ ವ್ಯಕ್ತಿಯ ವಿರುದ್ಧ ದೂರು ನೀಡಬೇಕೆಂದು ಸೂಚಿಸಲಾಯಿತು. ಅಮಿಲ್‌ದಾರನು ನೀಡಿದ ಈ ಆದೇಶದ ವಿರುದ್ಧ ಹತ್ತು ದಿನದೊಳಗೆ ರೈತರು ಡಿ.ಸಿ. ಯವರಿಗೆ ಮೇಲ್ಮನವಿ ಸಲ್ಲಸಬಹುದು. ಆದರೆ ಡಿ.ಸಿ.ಯವರ ಆದೇಶವೇ ಅಂತಿಮವೆಂದು ತಿಳಿಸಲಾಯಿತು.

ಗ್ರಾಮೀಣ ಪೊಲೀಸ್ ವ್ಯವಸ್ಥೆ ಬಗ್ಗೆ ಪೊಲೀಸ್ ಆಯೋಗದ ಸಲಹೆಗಳು

೧೮೬೦ ರ ಪೊಲೀಸ್ ಆಯೋಗವು ಗ್ರಾಮೀಣ ಪೊಲೀಸ್ ವ್ಯವಸ್ಥೆಯಲ್ಲಿರುವ ಅಸಮರ್ಪಕತೆಗಳನ್ನು ಗುರುತಿಸಿ ಅದನ್ನು ಅಭಿವೃದ್ಧಿಪಡಿಸಲು ಸಲಹೆಗಳನ್ನು ನೀಡಿದರು. ಭಾರತ ಸರಕಾರವು, ಮೈಸೂರು ಸಂಸ್ಥಾನದಲ್ಲಿರುವ ಗ್ರಾಮೀಣ ಪೊಲೀಸ್ ವ್ಯವಸ್ಥೆಯ ಸಂಘಟನೆ ಮತ್ತು ನಿಯಂತ್ರಣದ ಬಗ್ಗೆ ನಿಯಮಾವಳಿಗಳನ್ನು ಪ್ರಕಟಿಸಿತು[೩೬] ಈ ನಿಯಮಾವಳಿಗಳ ಪ್ರಕಾರ ಪ್ರತೀ ಹಳ್ಳಿಗಳಲ್ಲಿರುವ ಗ್ರಾಮೀಣ ಪೊಲೀಸರನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ನ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಪೊಲೀಸ್ ಪಟೇಲ ಅಥವಾ ಗ್ರಾಮದ ಪೊಲೀಸ್ ಮುಖ್ಯಸ್ಥನನ್ನಾಗಿ ಮತ್ತು ಗ್ರಾಮದ ಕಾವಲುಗಾರ ಹುದ್ದೆಗೆ ಸಮರ್ಪಕವಾದ ವ್ಯಕ್ತಿಗಳನ್ನು ಆಯ್ಕೆ ಮಾಡಲಾಯಿತು. ಮ್ಯಾಜಿಸ್ಟ್ರೇಟ್‌ರವರುಗಳು ಸ್ಥಳೀಯ ಸಂಪ್ರದಾಯಗಳು ಮತ್ತು ಆಚಾರ ವಿಚಾರಗಳಿಗೆ ಅನುಗುಣವಾಗಿ ಹಾಲಿ ಇರುವ ಪಟೇಲರು ಮತ್ತು ಗ್ರಾಮ ಸೇವಕರುಗಳಲ್ಲಿ ಉತ್ತಮರನ್ನು ಆಯ್ಕೆ ಮಾಡುತ್ತಿದ್ದರು. ವಂಶಪಾರಂಪರ್ಯ ಕಾರಣಗಳನ್ನು ಹಿಡಿದಕೊಂಡು ಒಂದಕ್ಕಿಂತ ಹೆಚ್ಚು ಜನ ಆ ಹುದ್ದೆ ತಮಗೆ ಬೇಕೆಂದು ಬಯಸಿದ್ದಲ್ಲಿ ಮ್ಯಾಜಿಸ್ಟ್ರೇಟರುಗಳು ಅವರುಗಳಲ್ಲಿ ಸಮರ್ಥನಾದವನನ್ನು ಆ ಹುದ್ದೆಗೆ ಆಯ್ಕೆ ಮಾಡುತ್ತಿದ್ದರು. ಹಲವಾರು ಗ್ರಾಮಗಳಲ್ಲಿ ಪೊಲೀಸ್ ಪಟೇಲರುಗಳು ಸಮರ್ಪಕವಾಗಿ ಕರ್ತವ್ಯಗಳನ್ನು ನಿರ್ವಹಿಸುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಮ್ಯಾಜಿಸ್ಟ್ರೇಟರಿಗೆ ಹಳ್ಳಿಯನ್ನು ಪೊಲೀಸ್ ಉದ್ದೇಶಗಳಿಗೆ ಅನುಗುಣವಾಗಿ ವಿಭಾಗಮಾಡಿ ಒಂದು ಅಥವಾ ಅದಕ್ಕಿಂತ ಹೆಚ್ಚು ಜನ ಪೊಲೀಸ್ ಪಟೇಲರುಗಳನ್ನು ನೇಮಿಸುವ ಅಧಿಕಾರವನ್ನು ನೀಡಲಾಯಿತು. ಅದರಂತೆ ಹೆಚ್ಚು ಜನ ಕಾವಲುಗಾರರನ್ನು ನೇಮಿಸಿ ಜಿಲ್ಲಾಮಟ್ಟದಲ್ಲಿ ಮ್ಯಾಜಿಸ್ಟ್ರೇಟರುಗಳಿಗೆ ಅವರನ್ನು ನಿಯಂತ್ರಿಸುವ ಅಧಿಕಾರವನ್ನು ನೀಡಲಾಯಿತು. ಪಟೇಲರ ಪೊಲೀಸ್ ಕರ್ತವ್ಯಗಳನ್ನು

ವಿಷದವಾಗಿ ತಿಳಿಸಲಾಯಿತು. ಗ್ರಾಮಗಳಲ್ಲಿ ನಡೆಯುವ ಅಪರಾಧಗಳ ಬಗ್ಗೆ ಈತನು ವರದಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಗೆ ನೀಡಬೇಕಿತ್ತು. ಅಥವಾ ಅದರ ಬಗ್ಗೆ ಮಾಹಿತಿಗಳನ್ನು ಕೇಳಿದಾಗ ಆ ಮಾಹಿತಿಗಳನ್ನು ಒದಗಿಸಬೇಕಿತ್ತು. ಸಾರ್ವಜನಿಕ ಶಾಂತಿಭಂಗ ಉಂಟು ಮಾಡುವಂತಹ ವಿಷಯಗಳ ಬಗ್ಗೆ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ನೀಡಬೇಕಿತ್ತು. ಅಪರಾಧಗಳನ್ನು ತಡೆಯುವ, ಪತ್ತೆಹಚ್ಚುವ, ಸಾರ್ವಜನಿಕ ಉಪದ್ರವಗಳನ್ನು ತಡೆಯುವ ಮತ್ತು ಆರೋಪಿಗಳನ್ನು ನ್ಯಾಯಾಂಗದ ಮುಂದೆ ಹಾಜರು ಪಡಿಸುವ ಕರ್ತವ್ಯಗಳು ಈತನದ್ದಾಗಿತ್ತು. ಪೊಲೀಸ್ ಪಟೇಲನು ಎಲ್ಲಾ ಗ್ರಾಮದ ಕಾವಲುಗಾರರು ಮತ್ತು ಗ್ರಾಮ ಸೇವಕರುಗಳನ್ನು ಪೊಲೀಸ್ ಕರ್ತವ್ಯಕ್ಕೆ ಸಂಬಂಧಿಸಿದಂತೆ ಏನು ಕೆಲಸಗಳನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ಕರೆದು ವಿಚಾರಿಸುವ ಮತ್ತು ಆ ಬಗ್ಗೆ ಮೇಲುಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದನು. ಆದರೆ ಈ ಗ್ರಾಮಸೇವಕರನ್ನು ಮತ್ತು ಗ್ರಾಮದ ಕಾವಲುಗಾರರನ್ನು ತನ್ನ ಸ್ವಂತ ಕೆಲಸಗಳಿಗೆ ಉಪಯೋಗಿಸುವಂತಿರಲಿಲ್ಲ. ಯಾವುದೇ ಅಪರಾಧ, ಅಸಹಜ ಸಾವು, ಯಾವುದೇ ಡಕಾಯಿತರ ಅಥವಾ ಕಳ್ಳರ ಚಲನವಲನಗಳ ಬಗ್ಗೆ ಮಾಹಿತಿ ಬಂದಲ್ಲಿ ತಕ್ಷಣ ಅದನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯ ಉಸ್ತುವಾರಿಯಲ್ಲಿರುವ ಅಧಿಕಾರಿಗೆ ಮಾಹಿತಿಯನ್ನು ರವಾನಿಸಬೇಕಿತ್ತು. ಗ್ರಾಮದ ಕಾವಲುಗಾರರು ಗ್ರಾಮದಲ್ಲಿ ಯಾವುದೇ ಅಪರಾಧಗಳು ನಡೆದರೆ ಅದಕ್ಕೆ ಸಂಬಂಧಿಸಿದ ಆರೋಪಿಗಳನ್ನು ಪತ್ತೆ ಮಾಡಿ ಪೊಲೀಸ್ ಪಟೇಲನ ಮುಂದೆ ಹಾಜರುಪಡಿಸಬೇಕಿತ್ತು. ಗ್ರಾಮದಲ್ಲಿನ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಪೊಲೀಸ್ ಪಟೇಲ ಹಾಗೂ ಕಾವಲುಗಾರನ ಕರ್ತವ್ಯವಾಗಿತ್ತು. ಗ್ರಾಮ ಹಾಗೂ ವ್ಯವಸ್ಥಿತ ಪೊಲೀಸ್ ನಡುವೆ ಇವರುಗಳು ಸೇತುವೆಯಾಗಿತ್ತು. ರಾತ್ರಿ ಗಸ್ತು ತಿರುಗಲು ಗ್ರಾಮಸ್ಥರುಗಳನ್ನು ಸೇರಿಸುವ ಜವಾಬ್ದಾರಿ ಪಟೇಲನದ್ದಾಗಿತ್ತು. ಘಾಟಿ ಪ್ರದೇಶಗಳಲ್ಲಿ ಅಂದರೆ ಗುಂಡಲಪೇಟೆ ಹಾಗೂ ಚಾಮರಾಜನಗರ ತಾಲೂಕುಗಳಲ್ಲಿ ವಯನಾಡಿಗೆ ಹೋಗುವ ದಾರಿ

ಹಾಗೂ ನೀಲಗಿರಿ ಹಾಗೂ ಹಣೂರು ಘಾಟಿಗಳಲ್ಲಿ ಇವರುಗಳು ಸಂಚರಿಸಬೇಕಿತ್ತು. ಇವರುಗಳಿಗೆ ಭತ್ಯೆಗಳನ್ನು ನೀಡಲಾಗುತ್ತಿತ್ತು. ಆದರೆ ಈ ಘಾಟಿ ಠಾಣೆಗಳು ಗ್ರಾಮಗಳಿಂದ ಬಹಳ ದೂರ ದಲ್ಲಿದ್ದುದರಿಂದ ಕೆಲವೊಮ್ಮೆ ಆನೆ ಮೊದಲಾದ ವನ್ಯಜೀವಿಗಳ ಧಾಳಿಗೆ ತುತ್ತಾಗುತ್ತಿದ್ದವು. ಈ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ 'ತಳಾರಿ' ಗಳನ್ನು ಪಕ್ಕದ ಹಳ್ಳಿಗಳ ತೋಟಿ ಮತ್ತು ತಲವಾರರುಗಳಿಂದ ಆಯ್ಕೆ ಮಾಡಿ ಅವರಿಗೆ ಒಟ್ಟು ಮಾಸಿಕ ರೂ ೨೦೦೦ ಭತ್ಯೆಗಳನ್ನು ನೀಡಲಾಗುತ್ತಿತ್ತು.[೨೭] ಇವರುಗಳ ಮಂಜೂರಾತಿ ಬಲವು ಒಟ್ಟು ೮೧೯ ಆಗಿದ್ದು, ವಾರ್ಷಿಕ ೧೯,೭೫೨ ರೂಪಾಯಿಗಳ ಖರ್ಚು ಆಗುತ್ತಿದ್ದವು. ಈ ಘಾಟಿ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸಲು ಶಕ್ತಿಯುತವಾದ ಧೈರ್ಯಶಾಲಿಯಾದ ಆರೋಗ್ಯಕರವಾದ ವ್ಯಕ್ತಿಗಳು ಬೇಕಿತ್ತು. ಕೆಲವು ಪಟೇಲರಿಗೆ ಹಣ ಸಿಕ್ಕಿದರೆ ಕೆಲವು ತಲವಾರರಿಗೆ ಏನೂ ಸಿಗುತ್ತಿರಲಿಲ್ಲ. ಈ ಕಾರಣಗಳಿಂದಾಗಿ ಗ್ರಾಮೀಣ ಪೊಲೀಸರು ಯಾವುದೇ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಹಿಂಜರಿಯುತ್ತಿದ್ದರು. ಆದ್ದರಿಂದ ಈ ಪ್ರದೇಶಗಳಲ್ಲಿ ಇವರುಗಳಿಗೆ ಹಣ ಹಂಚಿಕೆ ಯಲ್ಲಿ ನಿಯಂತ್ರಣ ಹೇರುವುದು ಅವಶ್ಯಕವಾಗಿತ್ತು. ಅದು ಆಯಾ ಭೂಪ್ರದೇಶ ಮತ್ತು ಜನಸಂಖ್ಯೆಗಳಿಗೆ ಅನುಗುಣ ವಾಗಿ ನೀಡಬೇಕಾಗಿತ್ತು. ಇವರು ಗಳಲ್ಲಿ ಹೆಚ್ಚಿನ ಜನ ಅನಕ್ಷರಸ್ಥರಾಗಿದ್ದರು. ಆದರೂ ಸ್ಥಳೀಯ ಪೊಲೀಸರೊಂದಿಗೆ ಇವರಿಗೆ ಉತ್ತಮ ಬಾಂಧವ್ಯವಿತ್ತು. ಕಾನೂನು ಸುವ್ಯವಸ್ಥೆಯ ಪಾಲನೆಯಲ್ಲಿ ಗ್ರಾಮೀಣ ಪೊಲೀಸರು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದರು.

೧೯೦೨-೦೩ ರ ಪೊಲೀಸ್ ಆಯೋಗವು ಈ ವ್ಯವಸ್ಥೆಯನ್ನು ಪರಿಶೀಲಿಸಿದ ನಂತರ ಹೆಚ್ಚು ಕಡಿಮೆ ಈಗ ಇರುವ ಮಾದರಿಯಲ್ಲೇ ಅದನ್ನು ಮುಂದುವರಿಸಲು ಶಿಫಾರಸ್ಸು ಮಾಡಿತು. ಅಷ್ಟೇ ಅಲ್ಲದೇ ಗ್ರಾಮದ ಪಟೇಲ ಮತ್ತು ಚೌಕಿದಾರರು, ಗ್ರಾಮದಲ್ಲಿ ಅಪರಾಧಗಳನ್ನು ತಡೆಯುವ ಪ್ರಾಥಮಿಕ ಜವಾಬ್ದಾರಿ ಜೊತೆಗೆ ವ್ಯವಸ್ಥಿತ ಪೊಲೀಸ್ ಠಾಣಾ ಮಟ್ಟದಲ್ಲಿ ಅಧೀನ ಅಧಿಕಾರಿಗಳಾಗಿ ಕೆಲಸ ಮಾಡುವುದಕ್ಕಿಂತಲೂ ಗ್ರಾಮೀಣ ಸಮುದಾಯದ ಸೇವಕರಾಗಿ ಕೆಲಸ ಮಾಡಬೇಕೆಂದು ಆಯೋಗವು ಒತ್ತಾಯಿಸಿತು. ಆಯೋಗದ ವರದಿಯ ಈ ಕೆಳಗಿನ ಅಂಶಗಳು ಗ್ರಾಮೀಣ ಪೊಲೀಸ್ ವ್ಯವಸ್ಥೆಯ ಬಗ್ಗೆ ಸ್ಪಷ್ಟ ಜ್ಞಾನವನ್ನು ಒದಗಿಸುತ್ತದೆ.

"ಗ್ರಾಮದ ಮುಖ್ಯಸ್ಥನ ಪ್ರಧಾನ ಜವಾಬ್ದಾರಿಗಳ ಬಗ್ಗೆ ಪ್ರಾಮುಖ್ಯತೆ ನೀಡುವುದು ಅಗತ್ಯವೆಂದು ಆಯೋಗವು ತೀರ್ಮಾನಿಸಿತು. ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ಅಧೀನ ಅಧಿಕಾರಿಗಳಿಂತಲೂ ಗ್ರಾಮದ ಪೊಲೀಸ್ ಜವಾಬ್ದಾರಿಯನ್ನು ಹೊಂದಿದ ಮುಖ್ಯಸ್ಥನು (ಸ್ಥಳೀಯವಾಗಿ ಆತನನ್ನು ಯಾವುದೇ ಹೆಸರಿನಿಂದ ಕರೆಯಲಿ) ಹೆಚ್ಚು ಜವಾಬ್ದಾರಿಯನ್ನು ಹೊಂದಿರಬೇಕು. ಕಂದಾಯ ವಸೂಲಿ ಮತ್ತು ಹಳ್ಳಿಯ ಸಾಮಾನು ಆಡಳಿತಕ್ಕಾಗಿ ಇರುವ ಮುಖಸ್ಥನನ್ನೇ ಸಾಧ್ಯವಾದಷ್ಟು ಮಟ್ಟಿಗೆ ಪೊಲೀಸ್ ಕರ್ತವ್ಯಗಳಿಗೂ ಮುಖ್ಯಸ್ಥನಾಗಿರತಕ್ಕದ್ದು. ಒಂದು ವೇಳೆ ಇದು ಸಾಧ್ಯವಾಗದಿದ್ದಲ್ಲಿ ಪೊಲೀಸ್ ಕರ್ತವ್ಯ ನೋಡಿಕೊಳ್ಳುವವನು ಗ್ರಾಮದಲ್ಲಿ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿಯಾಗಿ ಹಾಗೂ ಸ್ಥಾನ ಹೊಂದಿರಬೇಕು. ಮತ್ತು ಜಿಲ್ಲಾ ಅಧಿಕಾರಿಯು ಈತನ ಸ್ಥಾನ ಮತ್ತು ಪ್ರಭಾವವನ್ನು ಬಲಗೊಳಿಸಬೇಕು. ಹೀಗೆ ಮಾಡುವಾಗ ಆ ವ್ಯಕ್ತಿ ಹಳ್ಳಿಯಲ್ಲಿ ಸಾಮಾಜಿಕ ಗೌರವಾರ್ಹತೆ ಮತ್ತು ಪ್ರಭುತ್ವವನ್ನು ಹೊಂದಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕಿತ್ತು.

"ಗ್ರಾಮದ ಪೊಲೀಸ್ ಅಧಿಕಾರಿಯು ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದು, ಆತ ಗ್ರಾಮದ ಸೇವಕನಾಗಿರಬೇಕು. ಈತನ ಅಧೀನ ಪೊಲೀಸ್ ಅಧಿಕಾರಿಯು ಗ್ರಾಮದಲ್ಲಿ ನಡೆಯುವ ಅಪರಾಧ ವಿಷಯಗಳಿಗೆ ಪ್ರಾಥಮಿಕ ಜವಾಬ್ದಾರಿ ಹೊಂದಿರಬೇಕು. ಈ ಇಬ್ಬರು ಅಧಿಕಾರಿಗಳು ಸ್ಥಳೀಯ ಜನರೊಂದಿಗೆ ಉತ್ತಮ ಸಂಬಂಧ ಹೊಂದಿರಬೇಕು. ಇವರಿಬ್ಬರೂ ಸಹ ಜಿಲ್ಲೆಯ ಮುಖ್ಯ ಅಧಿಕಾರಿಯು ಜವಾಬ್ದಾರಿ ನಿರ್ವಹಿಸುವಂತೆ ಗ್ರಾಮಗಳ ಮುಖ್ಯಸ್ಥರಾಗಿ ಜನರ ಪ್ರತಿನಿಧಿಗಳಾಗಿ

ಕೆಲಸ ಮಾಡಬೇಕು. ಗ್ರಾಮ ಪೊಲೀಸ್ ಅಧಿಕಾರಿಯನ್ನು ಪೊಲೀಸ್ ಠಾಣಾ ಅಧಿಕಾರಿಯ ಅಧೀನ ದಲ್ಲಿ ಇರುವಂತೆ ಮಾಡಿದರೆ ಗ್ರಾಮೀಣ ಪೊಲೀಸ್‌ನ ಮೂಲ ಉದ್ದೇಶಗಳನ್ನು ನಾಶಪಡಿಸಿದಂತಾಗಬಹುದು, ಗ್ರಾಮದ ಜನರನ್ನು ಅವರ ನಂಬಿಕೆ, ಸಂಪ್ರದಾಯ ನಡವಳಿಕೆಗಳಿಂದ ದೂರ ಮಾಡಿದಂತಾಗುವುದು. ಹಳ್ಳಿಯ ಕಾವಲುಗಾರನು ಪೊಲೀಸ್‌ನ ಆಳು ಅಥವಾ ಸೇವಕನಾಗಿದ್ದು ಆತನ ವರ್ತನೆಗಳು ವಿದಾನಗಳು, ವಿವೇಚನಾ ರಹಿತವಾಗಿದ್ದವು. ಈತ ಕೆಲವೊಮ್ಮೆ ಗ್ರಾಮದ ಮುಖ್ಯಸ್ಥನ ವಿರುದ್ದವಾಗಿಯೂ ಕೆಲಸ ಮಾಡುತ್ತಿದ್ದನು. ಹಳ್ಳಿಯ ಘಟನೆಗಳ ಬಗ್ಗೆ ಈತನಿಗೆ ಸಮರ್ಪಕ ಜ್ಞಾಪನವಿಲ್ಲದೇ ಕೆಳಮಟ್ಟದ ಪೊಲೀಸ್ ಅಧಿಕಾರಿಯಾಗಿದ್ದನು. ಗ್ರಾಮದ ಮುಖ್ಯಸ್ಥ ಮತ್ತು ಗ್ರಾಮದ ಪೊಲೀಸ್ ಅಧಿಕಾರಿಯು ಪರಸ್ಪರ ಸಹಕಾರಿಗಳಾಗಿದ್ದು, ವ್ಯವಸ್ಥಿತ ಪೊಲೀಸ್‌ಗೆ ಅಧೀನರಾಗಿರಲಿಲ್ಲ." [೨೮] ಆಯೋಗವು ೮ ರಾಜ್ಯಗಳಲ್ಲಿ ಚೌಕಿದಾರರ ಬಗ್ಗೆ ಅಧ್ಯಯನ ನಡೆಸಿ ಅವರ ವೈಫಲ್ಯತೆಯ ಕಾರಣಗಳನ್ನು ಪಟ್ಟಿ ಮಾಡಿತು.[೨೯]

೧) ಈ ಚೌಕಿದಾರರಿಗೆ ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆಯನ್ನು ನಿಗದಿಪಡಿಸಿರಲಿಲ್ಲ. ಕೆಲವು ಪ್ರದೇಶಗಳಲ್ಲಿ ಇವರು ಪೂರ್ಣ ಅನಕ್ಷರಸ್ಥರಾಗಿದ್ದರು.

೨) ಅವರಿಗೆ ಶೈಕ್ಷಣಿಕ ಅರ್ಹತೆಯ ಜೊತೆಗೆ ನಿಗದಿತ ವಯಸ್ಸಾಗಿರಬೇಕೆಂದಿರಲಿಲ್ಲ. ಹಲವು ಕಡೆ ಚೌಕಿದಾರರು, ಅತ್ಯಂತ ವಯಸ್ಸಾಗಿದ್ದು ಸಮರ್ಥವಾಗಿ ಕ್ಷೇತ್ರ ಕಾರ್ಯಗಳಿಗೆ ಅಶಕ್ತರಾಗಿದ್ದರು.

೩) ಅವರ ಕರ್ತವ್ಯಗಳ ಬಗ್ಗೆ ಸಾಕಷ್ಟು ಜ್ಞಾನ ಅವರಿಗಿರಲಿಲ್ಲ. ಅಪರಾಧ ಮತ್ತು ಅಪರಾಧಿಗಳ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸುವುದು ಹಾಗೂ ಸಿಕ್ಕಿದ ಮಾಹಿತಿಯನ್ನು ಪೊಲೀಸ್ ಪಡೆಗೆ ರವಾನಿಸುವ ಬಗ್ಗೆ ಯಾವುದೇ ನಿರ್ದಿಷ್ಟ ನಿಯಮಗಳಿರಲಿಲ್ಲ. ಅವರು ಯಾವಾಗ ಎಂದರೆ ಆವಾಗ ಸಿಕ್ಕಿದ ಮಾಹಿತಿಗಳನ್ನು ಗ್ರಾಮದ ಮುಖ್ಯಸ್ಥ ಅಥವಾ ಪಟೇಲನಿಗೆ ರವಾನಿಸುತ್ತಿದ್ದರು.

೪) ಅವರಿಗೆ ಅತ್ಯಂತ ಕಡಿಮೆ ಸಂಬಳವಿತ್ತು. ಮತ್ತು ಅದನ್ನು ಸಹ ನಿಗದಿತ ಸಮಯಕ್ಕೆ ನೀಡುತ್ತಿರಲಿಲ್ಲ. ಕೆಲವು ಪ್ರದೇಶಗಳಲ್ಲಿ ೩ ಅಥವ ೪ ತಿಂಗಳಿಗಳಿಗೊಮ್ಮೆ ಸಂಬಳವನ್ನು ನೀಡಲಾಗುತ್ತಿತ್ತು.

೫) ಇವರುಗಳು ತಾವೇ ಸ್ವತ: ಯಾವುದೇ ಪತ್ತೆಕಾರ್ಯಗಳನ್ನು ಮಾಡುತ್ತಿರಲಿಲ್ಲ. ಹೀಗಾಗಿ ವ್ಯವಸ್ಥಿತ ಪೊಲೀಸರೊಂದಿಗೆ ಇವರ ಸಹಕಾರ ಬಹುತೇಕ ಶೂನ್ಯವಾಗಿತ್ತು.

ಈ ಚೌಕಿದಾರ್ ಪದ್ಧತಿಯು ವಾಸ್ತವಿಕವಾಗಿ ವ್ಯವಸ್ಥಿತ ಪೊಲೀಸರಿಗೆ ಉತ್ತಮ ರೀತಿಯಲ್ಲಿ ಸಹಕರಿಸುತ್ತಿರಲಿಲ. ಪರ್ಯಾಯ ವ್ಯವಸ್ಥೆ ಇಲ್ಲದೇ ಈ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಿಲ್ಲವೆಂದು ಈ ಚೌಕಿ ದಾರರುಗಳನ್ನು ಕೊನೇಪಕ್ಷ ಗ್ರಾಮಗಳಲ್ಲಿ ನಡೆಯುವ ಅಪರಾಧ ವಿಚಾರಗಳ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸಲು ನೆರವು ಪಡೆಯಬೇಕೆಂತಲೂ ಧರ್ಮವೀರ ಆಯೋಗವು ಅಭಿಪ್ರಾಯಪಟ್ಟಿತು.

೧೯೦೨-೦೩ ರಲ್ಲಿ ಭಾರತೀಯ ಪೊಲೀಸ್ ಆಯೋಗವು ಗ್ರಾಮೀಣ ಪೊಲೀಸ್ ವ್ಯವಸ್ಥೆ ಬಗ್ಗೆ ಮಾಡಿದ ಕೆಲವು ಶಿಪಾರಸ್ಸುಗಳು ಅತ್ಯಂತ ಮುಖ್ಯವಾಗಿವೆ. ಅವುಗಳೆಂದರೆ, ೧) ಪೊಲೀಸ್ ಕೆಲಸ ಕಾರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಬೆಳೆಸಲು ಈಗ ಇರುವ ಗ್ರಾಮೀಣ ಪೊಲೀಸ್ ವ್ಯವಸ್ಥೆಯನ್ನು ಬಳಸಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ೨) ಪೊಲೀಸ್ ಕೆಲಸ ಕಾರ್ಯಗಳನ್ನು ಮಾಡುವ ಗ್ರಾಮದ ಮುಖ್ಯಸ್ಥನ ಜವಾಬ್ದಾರಿಗಳನ್ನು ಗುರುತಿಸಲೇಬೇಕು ಮತ್ತು ಗ್ರಾಮದ ಕಾವಲುಗಾರನು ಗ್ರಾಮದ ಸೇವಕನಾಗಿದ್ದು ಆಗ ಗ್ರಾಮದ ಮುಖ್ಯಸ್ಥನ ಅಧೀನನಾಗಿರಬೇಕು. ೩) ಯಾವ ಗ್ರಾಮಗಳಲ್ಲಿ ಸಣ್ಣ ಪ್ರಕರಣಗಳ ವಿಚಾರಣೆ ಮಾಡುವ ಅಧಿಕಾರ ಗ್ರಾಮದ ಮುಖ್ಯಸ್ಥನಿಗೆ ಇಲ್ಲವೋ ಅಂತಹ ಪ್ರದೇಶ ಗಳಲ್ಲಿ ಅತ್ಯಂತ ಜಾಗರೂಕತೆಯಿಂದ ಹಾಗೂ ಪ್ರಯೋಗಾರ್ಥವಾಗಿ ಸಣ್ಣ ಪ್ರಕರಣಗಳನ್ನು ವಿಚಾರಣೆ ನಡೆಸಲು ಗ್ರಾಮದ ಮುಖ್ಯಸ್ಥನಿಗೆ ಹಸ್ತಾಂತರಿಸಬೇಕು ಎಂದು ಶಿಪಾರಸ್ಸು ಮಾಡಿತು. ಇಲ್ಲಿ ಗ್ರಾಮದ ಮುಖ್ಯಸ್ಥನು ಪೊಲೀಸ್ ಕೆಲಸ ಕಾರ್ಯಗಳನ್ನು

ಮಾಡುವುದರ ಜೊತೆಗೆ ಸಣ್ಣ ಪ್ರಕರಣಗಳನ್ನು ತೀರ್ಮಾನಿಸುವ ನ್ಯಾಯಾಧೀಶನಾಗಿಯೂ ಕೆಲಸ ಮಾಡುತ್ತಿದ್ದನೆಂಬುದು ಗಮನಾರ್ಹ.[೩೩೦]

ಬಾಂಬೆ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಪೊಲೀಸರು ೧೮೬೭ರ 'ಬಾಂಬೆ ವಿಲೇಜ್ ಪೊಲೀಸ್ ಆ್ಯಕ್ಟ್'ನಡಿಯಲ್ಲಿ ಕೆಲಸ ಮಾಡುತ್ತಿದ್ದರು. ಜಿಲ್ಲಾ ಮ್ಯಾಜಿಸ್ಟ್ರೇಟರು ಗ್ರಾಮೀಣ ಪೊಲೀಸರನ್ನು ನಿಯಂತ್ರಿಸುತ್ತಿದ್ದರು. ಈತನು ಪೊಲೀಸ್ ಸೂಪರಿಂಟೆಂಡೆಂಟ್‌ರವರ ಬಳಿಗೆ ತನ್ನ ಪ್ರತಿನಿಧಿಯನ್ನು ಕಳಿಸಬಹುದಿತ್ತು. ಪ್ರತೀ ಹಳ್ಳಿಗೆ ಅಥವಾ ಸಣ್ಣ ಹಳ್ಳಿಗಳ ಗುಂಪಿಗೆ ಒಬ್ಬ ಪೊಲೀಸ್ ಪಟೇಲನಿದ್ದ. ಆತನಿಗೆ ನಾಲ್ಕು ಜನ 'ವಾಲಿಕಾರ' ಎಂಬುವವರು ಸಹಾಯಕರಾಗಿದ್ದರು. ಪೊಲೀಸ್ ಪಟೇಲನ ಕೆಲಸಗಳೆಂದರೆ, ಅಪರಾಧ ಹಾಗೂ ಅಪರಾಧಿಗಳ ಬಗ್ಗೆ ಗುಪ್ತಮಾಹಿತಿಯನ್ನು ಸಂಗ್ರಹಿಸುವುದು, ಅಲೆಮಾರಿಗಳ ಮೇಲೆ, ಗೊತ್ತಿರುವ ಅಪರಾಧಿಗಳ ಮೇಲೆ, ಕೆಟ್ಟ ನಡತೆಯವರ ಮೇಲೆ ಈತನು ಕಣ್ಗಾವಲು ಇರಿಸಬೇಕಿತ್ತು. ಮತ್ತು ವಿಚಾರದ ಬಗ್ಗೆ ಸದಾಕಾಲ ಸ್ಥಳೀಯ ಪೊಲೀಸರಿಗೆ ಮಾಹಿತಿ ತಿಳಿಸಬೇಕಿತ್ತು. ಮತ್ತು ಅಪರಾಧ ಮತ್ತು ಅಪರಾಧಿಗಳ ಬಗ್ಗೆ ಈತನು ಸಂಗ್ರಹಿಸಿದ ಮಾಹಿತಿಗಳನ್ನು ಆ ಹಳ್ಳಿಗಳಿಗೆ ಭೇಟಿ ನೀಡುವ, ಗಸ್ತು ತಿರುಗಲು ಬಂದ ಬೀಟ್ ಪೊಲೀಸರಿಗೆ ತಿಳಿಸಬೇಕಿತ್ತು. ಸಾಧಾರಣವಾಗಿ ಈತನ ಸರಹದ್ದಿನ ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಈತನದ್ದಾಗಿತ್ತು.

ಮೈಸೂರು ಜಿಲ್ಲೆಯ ಗ್ರಾಮೀಣ ಪೊಲೀಸರಿಗೆ ಸಂಬಂಧಿಸಿದಂತೆ, ಪೊಲೀಸ್ ಅಧಿಕಾರಗಳು ವಂಶ ಪಾರಂಪರ್ಯವಾಗಿದ್ದವು. ಈತನಿಗೆ ಹಳ್ಳಿಯ ತೋಟಿ ಅಥವಾ ತಳಾರಿಗಳು ನೆರವು ನೀಡುತ್ತಿದ್ದರು. ಇವರು ಅಪರಾಧ ಮತ್ತು ಅಪರಾಧಿಗಳ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸುವ್ರುು, ಅದನ್ನು ಸ್ಥಳೀಯ ಪೊಲೀಸರಿಗೆ ತಿಳಿಸುವುದು, ರಾತ್ರಿಗಸ್ತು ಕಾರ್ಯ ನಡೆಯುವಂತೆ ನೋಡಿಕೊಳ್ಳುವುದು. ಗ್ರಾಮದ ಚಾವಡಿಗಳನ್ನು ಸರಿಯಾಗಿ ನಿರ್ವಹಿಸುವುದು ಮತ್ತು ಹಳ್ಳಿಯ ಸುರಕ್ಷೆ ಈತನ ಜವಾಬ್ದಾರಿಯಾಗಿತ್ತು. ಈತನು ಮೈಸೂರು ವಿಲೇಜ್ ಪೊಲೀಸ್ ರೂಲ್ಸ್‌ನ ನಿಯಮಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸುತ್ತಿದ್ದರು.

ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಗ್ರಾಮದ ಮುಖ್ಯಸ್ಥನನ್ನು 'ಮುನ್ಸೀಫ್' ಎಂತಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈತನನ್ನು 'ಪಟೇಲ' ಎಂತಲೂ ಕರೆಯುತ್ತಿದ್ದರು. ಮೈಸೂರು ಜಿಲ್ಲೆಯಂತೆ ಇಲ್ಲಿ ಇವರಿಗೂ ಸಹ ತೋಟಿ ಮತ್ತು ತಳವಾರಿಗಳು ನೆರವು ನೀಡುತ್ತಿದ್ದರು. ಈತನ ಜವಾಬ್ದಾರಿಗಳು ಮೇಲೆ ಹೇಳಿದ ಮೈಸೂರು ಪ್ರಾಂತ್ಯದ ಪಟೇಲನ ಕರ್ತವ್ಯಗಳೇ ಆಗಿದ್ದವು. 'ಕೂರ್ಗ' ಜಿಲ್ಲೆಯಲ್ಲಿ ಇದೇ ವ್ಯವಸ್ಥೆ ಮುಂದುವರಿಯಿತು. ಹೈದ್ರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಪೊಲೀಸ್ ಪಟೇಲನೇ ಪೊಲೀಸ್ ಕಾರ್ಯಗಳಿಗೆ ಜವಾಬ್ದಾರನಾಗಿದ್ದ. ಆದರೆ ಕಂದಾಯ ಇಲಾಖೆಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡಲು 'ಮಾಲಿ ಪಟೇಲ' ಎಂಬ ಮತ್ತೊಬ್ಬನಿದ್ದ. ಪಟೇಲನ ಹುದ್ದೆ ವಂಶ ಪಾರಂಪರ್ಯವಾಗಿತ್ತು. ಈತನ ಸಾಮಾನ್ಯ ಕರ್ತವ್ಯಗಳ ಜೊತೆಗೆ ಇತರ ಕೆಲಸಗಳನ್ನು ಮಾಡಬೇಕಿತ್ತು. ಇಲ್ಲಿ ಪೊಲೀಸ್ ಪಟೇಲನು ಪ್ರತೀನಿತ್ಯ 'ರೋಸ್‌ನಮಚಾ' (ಅಂದರೆ ಪ್ರತೀ ದಿನದ ದಿನಚರಿ) ವನ್ನು ಕಳಿಸಬೇಕಿತ್ತು. ಈ ರೋಸ್ ನಮಚಾವನ್ನು ಸಂದೇಶವಾಹಕರ ಮೂಲಕ ಕಳಿಸಲಾಗುತ್ತಿತ್ತು. ಇವನಿಗೆ ಡಕಾಯಿತರು, ಅಥವಾ ಕಳ್ಳರನ್ನು ಎದುರಿ ಸಲು, ಲಾಠಿ ಹಾಗೂ ಭರ್ಜಿಗಳನ್ನು ನೀಡಲಾಗುತ್ತಿತ್ತು.[೩೩೧]

೧೮೯೧–೯೨ ರಲ್ಲಿ ಗ್ರಾಮಗಳಲ್ಲಿ ಪೊಲೀಸ್ ಕರ್ತವ್ಯ/ಕೆಲಸಗಳನ್ನು ಪಟೇಲರ ನಿರ್ದೇಶನದಲ್ಲಿ 'ತೋಟಿ' ಮತ್ತು 'ತಳವಾರ' ರವರುಗಳನ್ನು ನಿರ್ವಹಿಸುತ್ತಿದ್ದರು. ಇದು ಅಪರಾಧಗಳ ಬಗ್ಗೆ ವರದಿ ಸಲ್ಲಿಸುವಿಕೆ, ಹಳ್ಳಿಗಳ ಸಮೀಪದಲ್ಲಿ ಇರುವ ಘಾಟಿ ಮತ್ತು ರಸ್ತೆಗಳಲ್ಲಿ ಗಸ್ತು ತಿರುಗುವಿಕೆ, ಮತ್ತು ವ್ಯವಸ್ಥಿತ ಪೊಲೀಸ್ ಪಡೆಗೆ ಅವರ ಕರ್ತವ್ಯಗಳಲ್ಲಿ

ಸಹಕರಿಸುವ ಜವಾಬ್ದಾರಿಗಳನ್ನು ಒಳಗೊಂಡಿತ್ತು.[೩೨]

೧೯೦೫-೦೬ ರಲ್ಲಿ ಗ್ರಾಮೀಣ ಪೊಲೀಸ್ ಪಟೇಲ ಹೇಗೆ ಕೆಲಸ ಮಾಡುತ್ತಿದ್ದನೆಂಬುದಕ್ಕೆ ಇಲ್ಲೊಂದು ಉದಾಹರಣೆಯಿದೆ. ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ್ದ ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಚೀಫ್ ಕಾನ್ಸ್‌ಟೇಬಲ್ ಒಬ್ಬರು ನೀಡಿದ ಮಾಹಿತಿ ಏನೆಂದರೆ, ೧೯೦೫ರ ನವೆಂಬರ್ ೨೭ ರ ರಾತ್ರಿ ೧೪ ರಿಂದ ೧೫ ಜನ ಕಾಂದಾರಿಗಳು ಕಕ್ಕೊಡು ಮಠದಲ್ಲಿ ದರೋಡೆ ಮಾಡಿ ಸೊರಬ ಕಡೆಗೆ ತಪ್ಪಿಸಿಕೊಂಡು ಹೋಗಿದ್ದಾರೆಂದು ಮಾಹಿತಿ ನೀಡಿದಂತೆ ಸೊರಬ ತಾಲೂಕಿನ ಇನ್ಸ್‌ಪೆಕ್ಟರ್ ಆಗಿದ್ದ 'ಧೂಮಯ್ಯ' ಎಂಬವರು ಠಾಣಾ ಗಡಿ ಪ್ರದೇಶಕ್ಕೆ ತೆರಳಿ ಸುತ್ತಮುತ್ತಲ ಹಳ್ಳಿಯ ಪಟೇಲರಿಗೆ ಈ ಬಗ್ಗೆ ಮಾಹಿತಿ ನೀಡಿ ಯಾರೇ ಅನುಮಾನಾಸ್ಪದ ವ್ಯಕ್ತಿಗಳು ಕಂಡರೆ ಬಂಧಿಸಬೇಕೆಂದು ಸೂಚಿಸಿದರು. ೧೯೦೫ರ ಡಿಸೆಂಬರ್ ೧ ರ ರಾತ್ರಿ ಇರಾಪುರದ ಪಟೇಲನು ಇಬ್ಬರು ಕಾಂದಾರಿಗಳನ್ನು ದಸ್ತಗಿರಿ ಮಾಡಿರುವುದಾಗಿ ವರದಿ ಮಾಡಿದ. ಕೂಡಲೇ ಸೊರಬ ಪಿ.ಐ ಅಲ್ಲಿಗೆ ತೆರಳಿ ಆರೋಪಿಗಳಲ್ಲಿ ಒಬ್ಬನಾಗಿದ್ದ ಅಬ್ದುಲ್ ಮಜೀದ್ ಎಂಬವನಿಂದ ಇನ್ನಷ್ಟು ಮಾಹಿತಿಗಳನ್ನು ಸಂಗ್ರಹಿಸಿದರು. ಉಳಿದ ೭ ಜನ ಕಾಂದಾರಿಗಳು ಹುಬ್ಬಳ್ಳಿಯವರಾಗಿದ್ದು, ನಗರ ತಾಲೂಕಿನ ಹುಂಬುಚ್ಚ ದೇವಸ್ಥಾನವನ್ನು ದರೋಡೆ ಮಾಡುವ ಉದ್ದೇಶಕ್ಕಾಗಿ ಶಿಕಾರಿ ಪುರದಿಂದ ಹೊರಟು ಅಲ್ಲಿ ಉತ್ಸವ ನಡೆಯುತ್ತಿದ್ದುದರಿಂದ ಲೂಟಿ ಮಾಡಲು ಆಗಲಿಲ್ಲವೆಂದೂ, ಅಲ್ಲಿಂದ ಕಕ್ಕೊಡು ಮಠಕ್ಕೆ ಹೋಗಿ ದರೋಡೆ ಮಾಡಿದ್ದಾಗಿ ಒಪ್ಪಿಕೊಂಡನು. ನಂತರ ಪಿಐ ಧೂಮಯ್ಯ ಜಮೇದಾರ ಮಾದಪ್ಪ ಮತ್ತು ಇತರ ಪೊಲೀಸರು ಸಿದ್ಧಾಪುರಕ್ಕೆ ಹೋಗುವ ಮಾರ್ಗದಲ್ಲಿ ಒಬ್ಬನನ್ನು ಹಿಡಿದು ಇನ್ನೊಬ್ಬ ಗಾಯಗೊಂಡು ಉಳಿ ದವರು ತಪ್ಪಿಸಿಕೊಂಡರು. ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಯಿತು.[೩೩] ಇರಾಪುರದ ಪಟೇಲ ಮತ್ತು ಗ್ರಾಮಸ್ಥರು ಪಿ.ಐ ನಿಂದ ಮಾಹಿತಿ ಪಡೆದ ತಕ್ಷಣ ಕಾರ್ಯಪ್ರವೃತ್ತರಾಗಿ ಹೇಗೆ ಆರೋಪಿಗಳನ್ನು ಹಿಡಿದು ಇಡೀ ಪ್ರಕರಣ ಪತ್ತೆಯಾಗಲು ಸಹಾಯಕ ರಾದರೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಇದು ಇವರ ಕಾರ್ಯತತ್ಪರತೆಯನ್ನು ತೋರಿಸುತ್ತದೆ.

೧೯೦೫-೦೬ ರಲ್ಲಿ ಗ್ರಾಮೀಣ ಪೋೀಸರಿಂದ ದಸ್ತಗಿರಿಯಾದವರು ೮೬ ಪ್ರಕರಣದಲ್ಲಿ ೧೧೨ ಜನರನ್ನು ಗ್ರಾಮೀಣ ಪೊಲೀಸರು ದಸ್ತಗಿರಿ ಮಾಡಿದರು. ೧೯೦೪-೦೫ ರಲ್ಲಿ ೯೫ ಜನರನ್ನು ದಸ್ತಗಿರಿ ಮಾಡಿದ್ದರು. ಇದರಲ್ಲಿ ೭೫ ಪ್ರಕರಣಗಳಲ್ಲಿ ೯೧ ಜನರಿಗೆ ಶಿಕ್ಷೆಯಾಯಿತು. ೧೯೦೪-೦೫ ರಲ್ಲಿ ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಗ್ರಾಮೀಣ ಪೊಲೀಸರನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳಲಾಯಿತು.[೩೪]

೧೯೦೬-೦೭ ರಲ್ಲಿ ೭೬ ಜನರನ್ನು ಗ್ರಾಮೀಣ ಪೊಲೀಸರು ದಸ್ತಗಿರಿ ಮಾಡಿದ್ದರೆ, ೧೯೦೭-೦೮ ರಲ್ಲಿ ೭೭ ಪ್ರಕರಣಗಳಲ್ಲಿ ಭಾಗಿಯಾಗಿದ್ದ ೧೦೭ ಜನರನ್ನು ದಸ್ತಗಿರಿ ಮಾಡಿದರು. ಇದರಲ್ಲಿ ೬೧ ಪ್ರಕರಣಗಳಲ್ಲಿ ಶಿಕ್ಷೆಯಾಯಿತು.[೩೫] ೧೯೨೬-೨೭ ರಲ್ಲಿ ನ್ಯಾಯಾಲಯದಿಂದ ಪೊಲೀಸರಿಗೆ ತನಿಖೆಗಾಗಿ ನಿರ್ದೇಶಿತವಾದ ಸಂಜ್ಞೆಯ ಅಪರಾಧಗಳು ೪೪೭ ಮತ್ತು ಆಸಂಜ್ಞೆಯ ಅಪರಾಧಗಳು ೩೯ ಆಗಿತ್ತು. ಇದು ೧೯೨೫-೨೬ ರಲ್ಲಿ ಕ್ರಮವಾಗಿ ೬೯೩ ಮತ್ತು ೪೧ ಆಗಿತ್ತು. ೮೧ ಪ್ರಕರಣಗಳಲ್ಲಿ ೯೭ ಜನರನ್ನು ಗ್ರಾಮೀಣ ಪೊಲೀಸರು ಬಂಧಿಸಿದ್ದರು. (೧೯೨೫-೨೬ರಲ್ಲಿ ಗ್ರಾಮೀಣ ಪೊಲೀಸರು ೮೬ ಪ್ರಕರಣಗಳಲ್ಲಿ ೧೧೨ ಜನರನ್ನು ಬಂಧಿಸಿದ್ದರು) ಇದರಲ್ಲಿ ೬೪ ಪ್ರಕರಣಗಳಲ್ಲಿ ೬೮ ಜನ ಶಿಕ್ಷೆಗೆ ಗುರಿಯಾದರು. ೯ ಪ್ರಕರಣಗಳಲ್ಲಿ ೨೪ ಜನರು ಖುಲಾಸೆ ಅಥವಾ ಪಜಾಗೊಂಡರು. ವರ್ಷದ ಕೊನೆಯಲ್ಲಿ ೨೪ ಜನರು ಖುಲಾಸೆ ಅಥವಾ ವಜಾಗೊಂಡರು. ವರ್ಷದ ಕೊನೆಯಲ್ಲಿ ೫ ಜನ ೮ ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಿದ್ದರು.[೩೬] ೧೯೪೫-೪೬ ರಲ್ಲಿ ಗ್ರಾಮ ಪೊಲೀಸ್ ಎಂದಿನಂತೆ ಅಪರಾಧ ತಡೆ ಮತ್ತು ಪತ್ತೆ ಕಾರ್ಯದಲ್ಲಿ ಸ್ಥಳೀಯ ಪೊಲೀಸರೊಂದಿಗೆ ಸಹಕರಿಸುತ್ತಿದ್ದರು. ೬೬ ಜನ ಗ್ರಾಮ ಪೊಲೀಸ್ ಅಧಿಕಾರಿಗಳಿಗೆ ಉತ್ತಮ ಕಾರ್ಯ ಮಾಡಿರುವು ದಕ್ಕಾಗಿ ಬಹುಮಾನ ನೀಡಲಾಯಿತು.

"ಗ್ರಾಮ ಜಾಗೃತಿ ಸಮಿತಿ" Village vigilance committee ಗಳು ಜಿಲ್ಲೆಗಳಲ್ಲಿ ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದವು. ಅಪರಾಧ ಪತ್ತೆ ಮತ್ತು ಅಪರಾಧಗಳ ಚಲನವಲನಗಳ ಬಗ್ಗೆ ಅವರು ಸಂಗ್ರ ಹಿಸುತ್ತಿದ್ದ ಗುಪ್ತಮಾಹಿತಿಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗುತ್ತಿತ್ತು.[೩೩೭]

ಗ್ರಾಮೀಣ ಪೊಲೀಸ್ ಪಡೆಯ ಸ್ವರೂಪ ಮಾತ್ರ ಬಹಳ ಕಾಲದಿಂದ ಹಾಗೆಯೇ ಉಳಿದುಕೊಂಡು ಬಂದಿತ್ತು. ಇದು ಏಕೆ ಎಂಬುದು ಚರ್ಚಾರ್ಹ ವಿಷಯವಾಗಿದೆ? ಉದ್ದೇಶಪೂರ್ವಕವಾಗಿ ಆ ಸ್ವರೂಪವನ್ನು ಹಾಗೆಯೇ ಬಿಡ ಲಾಯಿತೇ? ಅಥವಾ ಅದರ ಬಗ್ಗೆ ನಿರ್ಲಕ್ಷವೇ ಅಥವಾ ಅದರ ಅಗತ್ಯತೆ ಇರಲಿಲ್ಲವೇ? ಎಂಬುದು ಪ್ರಶ್ನೆ. ಗ್ರಾಮೀಣ ಪ್ರದೇಶದ ಪೊಲೀಸ್ ವ್ಯವಸ್ಥೆಯ ಸ್ವರೂಪ ಬದಲಾವಣೆಯ ಅಗತ್ಯತೆ ಮೈಸೂರು ಅರಸರು ಮತ್ತು ಬ್ರಿಟೀಷರ ಕಾಲಕ್ಕೆ ಅಷ್ಟಾಗಿ ಕಂಡು ಬರುವುದಿಲ್ಲ. ಏಕೆಂದರೆ ಹಳ್ಳಿ ಎಂದರೆ ಕಡಿಮೆ ಸಂಖ್ಯೆಯ ಮನೆಗಳು ಮತ್ತು ಕುಟುಂಬಗಳು ಹಾಗೂ ಕಡಿಮೆ ಜನಸಂಖ್ಯೆಯಿರುವುದು ಸಹಜ. ಇಲ್ಲಿ ಒಬ್ಬರಿಗೊಬ್ಬರು ಪರಸ್ಪರ ಪರಿಚಿತರಾಗಿರುತ್ತಾರೆ. ಊರಿಗೆ ಯಾರೇ ಒಬ್ಬ ಹೊಸ ವ್ಯಕ್ತಿ ಬಂದರೆ ತಕ್ಷಣ ಆತನನ್ನು ಊರ ಜನರು ಗುರುತಿಸುತ್ತಾರೆ. ಆತ ಏಕೆ? ಯಾರ ಮನೆಗೆ? ಯಾವ ಉದ್ದೇಶಕ್ಕೆ ಬಂದಿದ್ದಾನೆಂದು ವಿಚಾರಿಸುತ್ತಾರೆ. ಆದ್ದರಿಂದ ಕಳ್ಳತನದಂತಹ ಅಪರಾಧಗಳು ಕಡಿಮೆ ಸಂಖ್ಯೆಯಲ್ಲಿ ಅತ್ಯಂತ ವಿರಳವಾಗಿ ಆಗುತ್ತಿದ್ದವು. ಅದು ಇಂದಿಗೂ ನಿಜ. ಈ ಕಾರಣಕ್ಕಾಗಿ ಪುನರ್‌ಸಂಘಟನೆಯ ಅಗತ್ಯತೆ ಅಷ್ಟೊಂದು ಅವಶ್ಯಕವೆಂದು ಅನ್ನಿಸಿರಲಿಲ್ಲ. ಸಾವಿರಾರು ಹಳ್ಳಿಗಳು ಮೈಸೂರು ಸರಕಾರದಲ್ಲಿ ಇದ್ದವು. ಪ್ರತಿಯೊಂದು ಹಳ್ಳಿಗೆ ಸರ್ಕಾರವು ಸಂಬಳವನ್ನು ಕೊಟ್ಟು ಪೊಲೀಸ್ ಅಧಿಕಾರಿಗಳನ್ನು ನೇಮಿಸುವುದು ಅತ್ಯಂತ ಕಷ್ಟವಾಗಿತ್ತು. ಏಕೆಂದರೆ ಇದು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತಿತ್ತು. ಅಷ್ಟೇ ಅಲ್ಲದೇ ಪೊಲೀಸ್ ಇಲಾಖೆಯು ಒಂದು ಅನುತ್ಪಾಧಕ ಇಲಾಖೆ. ಇದರಿಂದ ಸರಕಾರಕ್ಕೆ ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ವರಮಾನವಿಲ್ಲ, ಖರ್ಚು ಮಾತ್ರ. ಹಾಗೆಂದು ಖರ್ಚು ಮಾಡದೆಯೇಇರಲು ಸಾಧ್ಯವಿಲ್ಲ. ಏಕೆಂದರೆ ರಾಜರಿಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಅಪರಾಧ ತಡೆ ಪತ್ತೆ ಜೊತೆಗೆ ಬಂಡಾಯಗಳನ್ನು, ದಂಗೆ ಚಳುವಳಿಗಳನ್ನು ಹತ್ತಿಕ್ಕಲು ಈ ಪಡೆ ಅನಿವಾರ್ಯವಾಗಿತ್ತು. ಈ ಇಲಾಖೆ ಅನಿವಾರ್ಯವಾಗಿತ್ತು. ಹಾಗಾಗಿ ನಗರ ಪ್ರದೇಶಗಳಲ್ಲಿ ಇದರ ಪುನರ್‌ಸಂಘಟನೆಗೆ ಪ್ರಯತ್ನಿಸಲಾಯಿತು.

ರಾಜರುಗಳಿಗೆ ಕಂದಾಯ ವಸೂಲಿಯೇ ಅತ್ಯಂತ ಪ್ರಮುಖ ಕೆಲಸವಾಗಿತ್ತು. ಅದಕ್ಕಾಗಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಕಂದಾಯ ಇಲಾಖೆಗೆ ಆಡಳಿತ ಯಂತ್ರದಲ್ಲಿ ಪ್ರಥಮಾಧ್ಯತೆ, ಅದು ಸರ್ಕಾರಕ್ಕೆ ಆದಾಯ ತಂದುಕೊಡುವ ಉತ್ಪಾಧಕ ಇಲಾಖೆ, ಹಾಗಾಗಿ ಅನುತ್ಪಾಧಕ ಇಲಾಖೆಗೆ ಹೆಚ್ಚು ಗಮನಹರಿಸಿಲ್ಲ. ಅದು ಇಂದಿಗೂ ಸತ್ಯವಾಗಿದೆ, ಹಳ್ಳಿಗಳಲ್ಲಿ ರಾಜರಿಗೆ ಆಗಬೇಕಾದ ಪ್ರಮುಖ ಕೆಲಸವೆಂದರೆ ಕಂದಾಯ ವಸೂಲಿ, ಆ ಕೆಲಸವನ್ನು ಗೌಡ ಅಥವಾ ಪಟೇಲನಿಗೆ ವಹಿಸಲಾಯಿತು. ಆತನಿಗೆ ಜನರು ಗೌರವಿಸಬೇಕು. ಆತನ ಮಾತು ಆದೇಶಗಳನ್ನು ಅವರು ಪಾಲಿಸಬೇಕು. ಅದಕ್ಕಾಗಿ ಆತನಿಗೆ ಕೆಲವು ಅಧಿಕಾರಿಗಳನ್ನು ನೀಡುವುದು ಅಗತ್ಯವಿತ್ತು. ಆತನ ಮಾತು ಅಧಿಕಾರಯುತ ವಾಗಿಲ್ಲದಿದ್ದರೆ ಅವನಿಗೆ ಯಾರೂ ಗೌರವಿಸುತ್ತಿರಲಿಲ್ಲ. ಕಂದಾಯವನ್ನೂ ನೀಡುತ್ತಿರಲಿಲ್ಲ. ಹಾಗಾಗಿ ಗೌಡ ಅಥವಾ ಪಟೇಲನಿಗೆ ಪೊಲೀಸ್ ಅಧಿಕಾರವನ್ನು ನೀಡಲಾಯಿತು. ಅಷ್ಟೇ ಅಲ್ಲದೇ ಒಂದು ವೇಳೆ ಸರಕಾರ ಹಳ್ಳಿಗಳಿಗೆ ಪೊಲೀಸ್ ಅಧಿಕಾರಿಯನ್ನು ನೇಮಿಸಿದರೆ ಆತನಿಗೆ ಅಲ್ಲಿಯ ಜನಜೀವನ ಪರಿಚಯವಿರುತ್ತಿರಲಿಲ್ಲ. ಹಾಗೂ ಅವನು ಅಲ್ಲಿ ತನ್ನ ಪ್ರಭಾವವನ್ನು ಬೀರಿ ಹಳ್ಳಿಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಬಹಳ ದಿನಗಳೇ ಬೇಕಾಗುತ್ತಿತ್ತು. ಮತ್ತು ಅದು ಕಷ್ಟಸಾಧ್ಯವೂ ಆಗಿತ್ತು. ಆದರೆ ಗೌಡ ಅಥವಾ ಪಟೇಲರು ಸ್ಥಳೀಯರಾದ್ದರಿಂದ ಹಳ್ಳಿಯ ಜನರೊಂದಿಗೆ ಪರಸ್ಪರ ಸಂಬಂಧವಿದ್ದುದರಿಂದ ಮತ್ತು ಅವರಿಗೆ ಅಧಿಕಾರವಿರುವುದರಿಂದ ಹಾಗೂ ಹಳ್ಳಿಯ ಜನರಿಗೆ ಆಪತ್ಕಾಲದಲ್ಲಿ ನೇರವಾಗಬಲ್ಲವರು ಇವರಾಗಿದ್ದರಿಂದ,

ಇವರಿಗೆ ಜನರ ಮೇಲೆ ಹೆಚ್ಚು ನಿಯಂತ್ರಣವಿತ್ತು. ಅಷ್ಟೇ ಅಲ್ಲದೆ, ಗೌಡ ಅಥವಾ ಪಟೇಲನಿಗೆ ಅಧಿಕಾರಿಗಳನ್ನು ನೀಡಿ ವಸೂಲಿ ಮಾಡಿದ ಕಂದಾಯದ ಸ್ವಲ್ಪ ಭಾಗವನ್ನು ಅವರಿಗೂ ತೋಟಿ, ತಳಾರಿ, ಕಂದಾಚಾರಿಗಳಿಗೆ ನೀಡುತ್ತಿದ್ದುದರಿಂದ ಮತ್ತು ಕಂದಾಚಾರಿಗಳಿಗೆ ಉಲುಮೆ ಮಾಡದೆ ಇರುವ ಭೂಮಿಯನ್ನು ಉಳುಮೆ ಮಾಡಿಕೊಳ್ಳುವಂತೆ ಬಿಟ್ಟಿದ್ದರಿಂದ ಇವರೆಲ್ಲ ಸರಕಾರಕ್ಕೆ ಅಥವಾ ರಾಜನಿಗೆ ವಿದೇಯರಾಗಿದ್ದರು. ಹಾಗಾಗಿ ಈ ವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಂಡು ಬರಲಾಯಿತು. ಒಂದು ವೇಳೆ ಹಳ್ಳಿಗಳಿಗೆ ಪೊಲೀಸ್ ಅಧಿಕಾರಿಗಳನ್ನು ನೇಮಿಸಿದ್ದಲ್ಲಿ ಆ ಹಳ್ಳಿಯಿಂದ ಬರುವ ಆದಾಯಕ್ಕಿಂತಲೂ ಖರ್ಚೇ ಹೆಚ್ಚಾಗುವ ಸಾಧ್ಯತೆಗ ಳಿತ್ತು. ಮತ್ತು ಜನರ ನಿಯಂತ್ರಣ ಕಷ್ಟವಾಗುತ್ತಿತ್ತು. ಸಾವಿರಾರು ಹಳ್ಳಿಗಳು ಮೈಸೂರು ಸರಕಾರದಲ್ಲಿ ಇದ್ದವು. ಪ್ರತಿಯೊಂದು ಹಳ್ಳಿಗೆ ಸರಕಾರವು ಸಂಬಳವನ್ನು ಕೊಟ್ಟು ಪೊಲೀಸ್ ಅಧಿಕಾರಿಗಳನ್ನು ನೇಮಿಸುವುದು ಅತ್ಯಂತ ಕಷ್ಟವಾಗಿತ್ತು. ಹಾಗಾಗಿ ನಗರ ಪ್ರದೇಶಗಳಲ್ಲಿ ಇದರ ಪುನರ್‌ಸಂಘಟನೆಗೆ ಪ್ರಯತ್ನಿಸಲಾಯಿತೇ ವಿನಹ, ಗ್ರಾಮೀಣ ಪ್ರದೇಶದಲ್ಲಿ ಈ ಇಲಾಖೆ ಯ ಪುನರ್‌ಸಂಘಟನೆಗೆ ಯಾವುದೇ ಒತ್ತು ನೀಡಲಿಲ್ಲ. ಆದ್ದರಿಂದ ಹಳ್ಳಿಯ ಪ್ರಮುಖನೊಬ್ಬನಿಗೆ ಅಧಿಕಾರ ನೀಡಿ ಅವನ ಮೂಲಕ ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದರೊಂದಿಗೆ ಕಂದಾಯ ವಸೂಲಿಯು ನಡೆಯುತ್ತಿತ್ತು. ಶಾಲೆಯಲ್ಲಿ ಎಲ್ಲಾ ಅಧಿಕಾರಗಳು ಮಾಸ್ತರನದ್ದಾದರೂ ಮಾನಿಟರನು ಶಾಲೆಯನ್ನು ನಿಯಂತ್ರಿಸುವಂತೆ ಇಲ್ಲಿ ಹಳ್ಳಿಯ ನಿಯಂತ್ರಣ ನಡೆಯುತ್ತಿತ್ತು.

ಅಡಿಟಿಪ್ಪಣಿ

೧) and ೨) **Report on the administration of the civil and military station of Bangalore for the year 1891-92 to 1894-95, p- 16**

೩) ೪), ೫), ೬) and ೭) **Ibid- p- 17**

೮) ೯), ೧೦), ೧೧), ೧೨) and ೧೩) **Ibid- p- 18**

೧೪) ೧೫), ೧೬), ೧೭) ೧೮), ೧೯) **Ibid- p- 19**

೨೦) ೨೧), ೨೨) **– Ibid- p- 20**

೨೩) **Ibid- p- 16**

೨೪) **Ibid- p- 20**

೨೫) **Venkatasubba Shastri. K.N- A.M.U.M- p- 37**

೨೬) **Venkataramaiah . P.S – P.K.G.C - p- 380**

೨೭) **P.G.M No- J- 24848 judicial 1802 dtd 24 June 1895 , Bangalore**

೨೮) **P.M.R.A 1892 (Bangalore 1893)**

೨೯) **R.A.M 1919-20 (Bangalore 1920)**

೩೦) **P.G.M No – p- 1591-98 Police 372-3 dtd 16 June 1893, Bangalore**

೩೧) **R.A.M 1894-95 (Bangalore 1895)**

೩೨) **and ೩೩) P.G.M No- J 24848 judicial, 1502, dtd 24 June 1895, Bangalore**

೩೪) **P.G.M No p- 5688-90 Police 1042-112 dtd 11 September 1897, Bangalore,**

೩೫) **P.G.M No – J- 7399-400- judicial 851, dtd 28 December 1897 , Bangalore**

೩೬) **R.A.M 1895-96 to 1898-99 (Bangalore 1900)**

೩೭) **P.G.M No- p- 11397-406 Police, 1-22-22 dtd 9 June 1922 Bangalore**

೩೮) **P.M.R.A 1924 (Bangalore 1925)**

೩೯) **P.G.M No – p- 1011-22 (1) Police – 207-30-9 dtd 15 Augest 1931, Bangalore**

೪೦) **P.G.M No- p- 35297-305- Police 30-36-9 dtd 21-24 June 1935, Bangalore,**

೪೧) P.G.M No- p- 6829-39 – Police, 175-45-8 dtd 11-06-1946 , Bangalore

೪೨) Rice B.L (E) G.I.K.M - volume -2, p- 550

೪೩) New March.L.S- Report on the administration of Coorg for the year 1888-89 part -1, Coorg chief commission office, 22 November 1889-p-18

೪೪) and ೪೫) P.G.M No- J- 2474-83 Police 108-06-9 dtd 25 February 1909 Bangalore

೪೬) Police files 1-1911-1-2 (Bangalore 1911)

೪೭) P.G.M No- p- 2012-21, Police 1-11-5 dtd 16 January 1913 Bangalore

೪೮) P.G.M No p- 1657-66 Police, 140-28-11 dtd 17 September 1930 Bangalore

೪೯) Hayavadana Rao- C – Mysore Gazetter, economic, Volume -3, p- 317

೫೦) R.A.M 1881-82 to 1885-86, Bangalore 1886

೫೧) P.G.M No p- 1852-55 Police 97-10. dtd 17 April 1890 Bangalore

೫೨) P.M.R.A 1899 (Bangalore 1900)

೫೩) P.G.M No . J- 3825-8 Police- 152-13-9 dtd 30 June 1914 Bangalore

೫೪) A.A.R - for the year 1913-14 by the Honarable Lt colnol sir Hughdali, K.E.I.E, C.S.I resident of Mysore, p-5

೫೫) Ibid- p- 6

೫೬) R.A.C.M.S - for the year 1915-16, p- 7

೫೭) P.G.M No- J- 1952-3, Police, 17-21-4 dtd 30 September 1921, Bangalore

೫೮) P.G.M No-P- p- 1011-22(1) police , 207-30-9 dtd 15 Auguest 1931, Bangalore

೫೯) P.G.M No- p- 4921-22 Police- 147-27-3 dtd 25 February 1928, Bangalore

೬೦) Government order No- p- 4921-22 poli-4921-22-poli-147-27-3 dtd 25-02-1928

೬೧) P.G.M No- p- 7463-4 Police- 67-27-9 dtd 27 June 1930, Bangalore

೬೨) P.G.M No- 9269-4-Police, 163-35-2 dtd 13 June 1936 , Bangalore

೬೩) ಹ್ಯಾಮಿಲ್ಟನ್ ಎಫ್.ಎ. ಐ.ಜಿ.ಪಿ- ರವರು ಸರಕಾರಕ್ಕೆ ಬರೆದ ಪತ್ರಸಂಖ್ಯೆ ೩.ಎಸ್.೨೭/೩೦-೩೧ ದಿನಾಂಕ ೧೭-೦೩-೧೯೩೧

೬೪) Government order No- G- 75888-97 GM 133-337 dtd 11-02-193

೬೫) ಮೈಸೂರಿನ ಮುಖ್ಯ ಜ್ಯೂಡಿಷಿಯರ್ ಕಮಿಷನರ್ ಜನರಲ್ ಡಿಪಾರ್ಟ್‌ಮೆಂಟ್‌ರವರ ಆದೇಶ ಸಂಖ್ಯೆ ೪೮೨, ಪೊಲೀಸ್ ೧೫ ದಿನಾಂಕ ೨೪-೦೯-೧೮೮೦

೬೬) Chitharanjan.S (E)- G.I.K.K. - p- 525

೬೭) R.A M for the 1926-27

೬೮) P.M.J.D 30-11-1804 Sl No- 8- p- 495

೬೯) P.M.J.D 29-9-1805, SlNo 12, p- 1923-25

೭೦) P.M.J.D – 15-11-1805 SlNo 13, p- 2149-50

೭೧) P.M.J.D 8-3.-1811 SlNo 60, p- 1048

೭೨) P.M.J.D 30-9-1817 SlNO- 126-p- 2883

೭೩) ಜಿಲಾನಿ. ಎಸ್.ಎ. – ಭಾ.ಗೆ.ಕ.ದ – ಪು – ೪೬೭

೭೪) R.A M for the year 1926-27

೭೫) ಜಿಲಾನಿ. ಎಸ್.ಎ. (ಸಂ) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಉಡುಪಿ ಜಿಲ್ಲೆ, ಕರ್ನಾಟಕ ರಾಜ್ಯ ಸರಕಾರ, ೨೦೧೦ ಪು– ೪೯೫

೭೬) ಸೂರ್ಯನಾಥ.ಯು.ಕಾಮತ್ – ಜಿಲಾನಿ. ಎಸ್.ಎ. – ಭಾ.ಗೆ.ಕ.ಕೊ – ಪು – ೫೯೬– ೫೯೭

೭೭) ಮತ್ತು ೭೮) ಸೂರ್ಯನಾಥ್ ಕಾಮತ್ – (ಸಂ) ಗೆಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಬೆಳಗಾಂ ಜಿಲ್ಲೆ, ಪು– ೬೧೧

೭೯) ಪಾಟೀಲ. ಎಂ.ಬಿ – (ಸಂ)- ಬಾ.ಗೆ.ಕ.ಗು– ಪು– ೪೪೮

೮೦) Report on the civil and criminal Judicature , 1838, p- 63

೮೧) Indian political cons, Augest 3, 1835- p- 65-70

೮೨) and ೮೩) Venkatasubba Shastri. K.N- A.M.U.M - p- 94

೮೪) ೮೫) and ೮೬) Ibid- p- 95

೮೭) and ೮೮) Ibid- p- 96

೮೯) and ೯೦) Ibid- p- 97

೯೧) Dadwell. H.H.- Report on the Madras record, 1816, pyara 2831

೯೨) Selection from the records of government of India home department No- 52-1867

೯೩) Venkatasubba Shastri. K.N- A.M.U.M - p- 98

೯೪) Venkataramaiah P.S- P.K.G.C - p- 434

೯೫) Ibid– p- 435

೯೬) ಮಾಧವರಾವ್ ಐಜಿಪಿರವರು ಹೊರಡಿಸಿದ ಸುತ್ತೋಲೆ ನಂಬ್ರ – ೫೦–೧ ದಿನಾಂಕ ೧೫–೦೭–೧೮೯೨

೯೭) Venkataramaiah. P.S- P.K.G.C - p- 435- 436

೯೮) Newmarch.L.S- R.A.C - 1888-89, part-1, Coorg Chief commission office, 22 November 1889-, p- 20

೯೯) Government order No- p- 5545-55, p-01-70-32-4 dtd April 29, 1933

೧೦೦) Venkataramaiah. P.S- P.K.G.C - p- 436

೧೦೧) ಜಿಲಾನಿ. ಎಸ್.ಎ. – ಭಾ.ಗೆ.ಕ.ದ – ಪು – ೫೦೨– ೫೦೪

೧೦೨) P.G.M No- 4329-39 Police, 109-34-2 dtd 12-15 February 1935 Bangalore

೧೦೩) P.G.M No- 383-425 – Police 3378-41 dtd 24 June 1901 Bangalore

೧೦೪) P.G.M No- 5617-20 Police 80-2-2 dtd 11 January 1923 Bangalore

೧೦೫) P.G.M No- p- 2247-49 Police- 106-31-20 dtd 20-21 October 1932 Bangalore

೧೦೬) P.G.M No – p – 2893-96 Police 106-31-30 dtd 4-5 December 1933 Bangalore

೧೦೭) P.G.M No- p- 5380-2 Police, 98-26-2 dtd 8-9 March 1937 Bangalore

೧೦೮) R.A.C - for the year 1888-89, p- 20

೧೦೯) Report of the sports meet published in Mysore Gazette dtd 01-08-1897

೧೧೦) Venkataramaiah.. P.S- P.K.G.C- p- 429

೧೧೧) Ibid- p- 287

೧೧೨) Letter by Gomferts.E.D to Judicial commissioner No- 477/29 dtd 20-12-1867

೧೧೩) R.A.C for the year 1888-89 , p- 18

೧೧೪) Venkataramaiah. P.S- P.K.G.C - p-288

೧೧೫) R.A.C for the year 1888-89- p- 18

೧೧೬) Venkataramaiah. P.S- P.K.G.C - p- 29

೧೧೭) Ibid- p- 19

೧೧೮) R.A.C for the year 1888-89 p- 19

೧೧೯) Ibid- p- 18

೧೨೦) P.G.M No- J- 7395-6-5- judicial, 649 dtd 28 December 1897 Bangalore

೧೨೧) P.G.M No- J- 12-428-29 – Judicial 1542 dtd 1 May 1899 Bangalore

೧೨೨) Police file, 1907, 221-1-15 Bangalore 1907

೧೨೩) P.G.M No- J- 882-3, Police, 195-13-2 dtd 28 September 1914 Bangalore,

೧೨೪) R.A M for the year 1905, p- 17

೧೨೫) P.G.M No- J- 4396-405, Police 148-14-2 dtd 21 July 1915 Bangalore

೧೨೬) R.A M for the year 1922-23 ending 30 June, p- 12

೧೨೭) R.A M for the year 1924-25 ending 30 June 1925, p- 13

೧೨೮) R.A M for the year 1926-27, p- 19

೧೨೯) and ೧೩೦) R.A M for the year 1941-42, p- 28

೧೩೧) R.A M for the year 1945-46, p- 22

೧೩೨) Police files 189 of 1907 -1-5 and 6-17 (Bangalore 1907)

೧೩೩) R.A M for the year 1926-27 p- 21

೧೩೪) And ೧೩೫) R.A.C for the year 1888-89, p- 18

೧೩೬) R.A.C.M.S - for the year 1904-05 p- 6

೧೩೭) A.A.R - on the Police department for the offical year 1907-08, p- 16

೧೩೮) Ibid- p- 1

೧೩೯) A.A.R - for the year 1913-14, by the Honarable Colonel Sir Hughdaly, KCIE C.S.I, resident in Mysore – p- 5

೧೪೦) R.A.C.M.S - for the year 1914-15 by the Honarable, Lt. Colonel Sir Hughdaly, KCIE C.S.I, resident in Mysore- p- 6

೧೪೧) R.A.C.M.S - for the year 1915-16, p- 6

೧೪೨) R.A.C.M.S - for the year 1922-23, p-6

೧೪೩) R.A M for the year 1922-23 ending 30, June , p- 12

೧೪೪) Ibid- p- 13

೧೪೫) R.A M for the year 1932-34, ending 30 June, p- 20

೧೪೬) R.A M for the year 1924-25 ending 30 June 1925, p- 13

೧೪೭) ೧೪೮) R.A M for the year 1926-27, p- 18-19

೧೪೯) R.A M for the year 1941-42, p- 28

೧೫೦) ೧೫೧) ೧೫೨), & ೧೫೩) R.A.C for the year 1888-89, p- 19

೧೫೪) R.A.C.M.S for the iear 1904-05, p- 6

೧೫೫) A.A.R - for the year 1913-14 by the Honarable Colonel Sir Hughdaly, KCIE C.S.I, resident in Mysore – p- 5

೧೫೬) R.A.C.M.S - for the year 1914-15, p- 6

೧೫೭) R.A.C.M.S - for the year 1915-16, p- 6

೧೫೮) R.A.C.M.S - for the year 1922-23, by the Hon'ble Mr.W.P. Barton, C.S.I, C.I.E, Resident in Mysore, Mysoure residency press 1924, p- 6

೧೫೯) R.A M for the year 1922-23, ending 30 June, p- 12-12

೧೬೦) R.A M for the year 1923-24 ending 30 June 1924, p- 20

೧೬೧) R.A M for the year 1924-25 ending 30 June 1925, p- 13

೧೬೨) R.A M for the year 1926-27, p- 19

೧೬೩) A.A.R - for the year 1930

೧೬೪) R.A M for the year 1941-42, p- 28

೧೬೫) R.A M for the year 1945-46, p- 2

೧೬೬) Police files – 189 of 1907-1-5 and 6-17 (Bangalore 1907)

೧೬೭) Newmarch. L.S- R.A.C for the year 1888-89, part1, Coorg chief commission office, 22 November 1889, p- 4

೧೬೮) R.A M for the year 1907-08, p- 2

೧೬೯) R.A.C.M.S - for the year 1904-05, p- 4

೧೭೦) R.A M for the year 1905-06, p- 1

೧೭೧) And ೧೭೨) R.A M for the year 1922-23, ending 30 June, p- 13

೧೭೩) R.A M for the year 1923-24, p- 21

೧೭೪) Ibid- p- 22

೧೭೫) R.A M for the year 1924-25, ending 30 June 1925, p- 13

೧೭೬) and 177) R.A M for the year 1926-27 , p- 19

೧೭೮) A.A.R for the year 1930-31, p- 2 and G.O No 9-6829-40 Pol 101-313, 28-05-1932

೧೭೯) R.A M for the year 1945- 46-p- 23

೧೮೦) R.A.C.M.S - for the year 1904-05, p- 6

೧೮೧) R.A M for the year 1922-23- ending 30 June, p- 13

೧೮೨) R.A M for the year 1923-24- ending 30 June, p- 21

೧೮೩) R.A M for the year 1924-25- ending 30 June 1925, p- 13-14

೧೮೪) R.A M for the year 1926-27, p- 20

೧೮೫) R.A M for the year 1941- 42, p- 28

೧೮೬) R.A M for the year 1945- 46, p- 23

೧೮೭) Kenadi.M. and Haladhipur-S.V- The criminal clases in Bombay Presidency , Basel mission Mangalore– p- 37

೧೮೮) and 189) R.A.C for the year 1888-89 part-1, Coorg chief commissioners office – 2 November 1889, p- 23

೧೯೦) R.A M for the year 1922-23, ending 30 June , p- 14

೧೯೧) R.A M for the year 1923-24, ending 30 June , p- 22

೧೯೨) R.A M for the year 1924-25, ending 30 June , p- 15

೧೯೩) R.A M for the year 1941-42, p- 28

೧೯೪) R.A M for the year 1945-46, p- 23

೧೯೫) and ೧೯೬) R.A.C.M.S - for the year 1891-92 to 1894-95, p- 15

೧೯೭) R.A.C.M.S - for the year 1891-92 to 1894-95 p- 15

೧೯೮) Newmarch.L.S- R.A.C- p- 4

೧೯೯) R.A.C for year 1888-89 , part-1, Coorg chief commissioners office 2, November 1889, p- 22

೨೦೦) R.A M for the year 1905-06, p- 13

೨೦೧) R.A.C.M.S - for the year 1904-05, p- 4

೨೦೨) R.A M for the year 1913-14, p- 6

೨೦೩) and ೨೦೪) R.A.C.M.S - for the year 1914-15, p- 6

೨೦೫) R.A.C.M.S - for the year 1915-16, p- 7

೨೦೬) R.A M for the year 1922-23, ending 30 June , p- 13

೨೦೭) R.A M for the year 1924-25, ending June 1925, p- 14

೨೦೮) R.A M for the year 1926-27, p- 20

೨೦೯) R.A M for the year 1941-42, p- 28

೨೧೦) R.A.C for the year 1888-89, part 1, Coorg chief commissioners office 22 November 1889, p- 22

೨೧೧) R.A.C.M.S - for theyear 1904-05, p- 4

೨೧೨) R.A M for the year 1913-14, p- 6

೨೧೩) R.A.C.M.S - for the year 1914-15, p- 6

೨೧೪) R.A.C.M.S - for the year 1915-16, p- 7

೨೧೫) R.A M for the year 1922-23, ending June 30, p- 14

೨೧೬) R.A M for the year 1923-24 (ending 30, 1924) p- 22

೨೧೭) R.A M for the year 1924-25 ending 30 June, p- 14-15

೨೧೮) R.A M for the year 1941-42 p- 28

೨೧೯) Police mannual part- 2, p- 93

೨೨೦) and ೨೨೧) R.A.C - for the year 1888-89 part-1, Coorg chief commissioners office 22 November 1889, p- 20

೨೨೨) Ibid- p- 22

೨೨೩) and ೨೨೪) Ibid - p- 21

೨೨೫) and ೨೨೬) Ibid- p- 22

೨೨೭) R.A.C.M.S - the year 1904-05,- p- 4

೨೨೮) R.A M for the year 1907-08 p- 8

೨೨೯) R.A M for the year 1905-06, p- 5

೨೩೦) R.A.C.M.S - for the year 1915-16, p-7

೨೩೧) R.A M for the year 1922-23, ending 30, June, p- 21

೨೩೨) R.A M for the year 1923-24 p- 21

೨೩೩) R.A M for the year 1924-25 p- 14

೨೩೪) R.A M for the year 1926-27 p- 20

೨೩೫) R.A M for the year 1941-42 p- 28

೨೩೬) and ೨೩೭) R.A M for the year 1945-46- p- 22

೨೩೮) R.A.C for the year 1888-89 part-1, Coorg chief commissioner office, 22 November 1889, p- 22

೨೩೯) R.A.C.M.S - for the year 1904-05, p-4

೨೪೦) R.A M for the year 1905- p- 1

೨೪೧) Ibid- p- 2

೨೪೨) R.A M for the year 1913-14, p- 5

೨೪೩) R.A.C.M.S - for the year 1915-16, p- 7

೨೪೪) R.A.C - for the year 1888-89 p- 21

೨೪೫) R.A.C.M.S - for the year 1915-16, p- 7

೨೪೬) R.A M for the year 1913-14, p- 5

೨೪೭) R.A.C.M.S - for the year 1914-15, p- 6

೨೪೮) R.A.C.M.S - for the year 1922-23, p- 8

೨೪೯) R.A M for the year 1913-14, p- 6
೨೫೦) R.A.C.M.S - for the year 1914-15, p- 6
೨೫೧) R.A.C.M.S - for the year 1915-16, p- 7
೨೫೨) R.A M for the year 1923-24, p- 22
೨೫೩) R.A M year 1926-27, p- 21
೨೫೪) P.G.M No- 3568, Judicial – 2, date 1 July 1895
೨೫೫) R.A M for the year 1905-06, p- 5
೨೫೬) R.A M for the year 1913-14, p- 6
೨೫೭) R.A.C.M.S - for the year 1914-15, ρ- 7
೨೫೮) R.A.C.M.S - for the year 1915-16, p- 8
೨೫೯) R.A M for the year 1922-23, p- 13
೨೬೦) and ೨೬೧) R.A M for the year 1923-24, p- 22
೨೬೨) R.A M for the year 1926-27, p- 21
೨೬೩) and ೨೬೪) R.A M for the year 1941-42, p- 28
೨೬೫) and ೨೬೬) R.A M for the year 1945-46, p- 23
೨೬೭) and ೨೬೮) R.A.C.M.S - for the year 1904-05, p- 5
೨೬೯) R.A M for the year 1905-06, p- 19
೨೭೦) R.A M for the year 1913-14, p- 5
೨೭೧) R.A.C.M.S - for the year 1914-15, p- 6
೨೭೨) R.A.C.M.S - for the year 1915-16, ŋ- 6
೨೭೩) R.A.C.M.S - for the year 1922-23, p- 8
೨೭೪) R.A M for the year 1924-25, p- 15
೨೭೫) and ೨೭೬) Venkataramaiah P.S – P.K.G.C- p- 317
೨೭೭) and ೨೭೮) Ibid- p- 318
೨೭೯) Kenadi.M. and Haldhimat, - C.C.B.P - p- 37
೨೮೦) R.A M for the year 1905-06, p- 17
೨೮೧) R.A M for the year 1922-23, p- 14
೨೮೨) R.A M for the year 1923-24, p- 22
೨೮೩) R.A M for the year 1924-25, p- 15
೨೮೪) R.A M for the year 1926-27, p- 21
೨೮೫) R.A M for the year 1941-42, p- 28
೨೮೬) R.A M for the year 1945-46, p- 2
೨೮೭) R.A M for the year 1922-23, p- 14
೨೮೮) R.A M for the year 1924-25, p- 15
೨೮೯) R.A M for the year 1941-42, p- 28
೨೯೦) R.A M for the year 1945-46, p- 23
೨೯೧) New march L.S- R.A.C- p- 17
೨೯೨) and ೨೯೩) R.A.C.M.S - for the year 1991-92, p- 15
೨೯೪) R.A.C.M.S - for the year 1904-05, p- 5

೨೯೫) **R.A.C.M.S- for the year 914-15, p- 6**

೨೯೬) **and** ೨೯೭) **R.A.C.M.S for the year 1922-23, p- 5**

೨೯೮) **R.A.C. for the year 1922-23, p- 12**

೨೯೯) **R.A.M for the year 1923-24, p- 20**

೩೦೦) **R.A.M for the year 1924-25, p- 12**

೩೦೧) **R.A M for the year 1926-27 p- 18**

೩೦೨) **R.A.M for the year 1941-42, p- 28**

೩೦೩) **R.A.M for the year 1945-46, p- 21**

೩೦೪) **P.G.M NO- 5481, Police, 85-19-2 dtd Bangalore 8, September 1920**

೩೦೫) **Police mannual volume 1, chapter 3, Bangalore 1969**

೩೦೬) **P.G.M No- p- 2157-9, Police, 43-22-6 dtd 13, September 1922 Bangalore**

೩೦೭) **P.G.M No- p- 2157-9, Police, 43-22-6 dtd 13, September 1922 Bangalore**

೩೦೮) **P.G.M No- p- 6382-3 Police, 149- 2 ;- 4 dtd 13, March 1926 Bangalore**

೩೦೯) **P.G.M No- p- 2112-14, Police, 232-23-2 dtd 17, November 1926 Bangalore**

೩೧೦) **P.G.M No- CR 757-807, Cedar and recruitment 21-23-1 dtd 22 September 1924 Bangalore**

೩೧೧) **P.G.M No- p- 2275- Police, 72-27-1- dtd 3 November 1927 Bangalore**

೩೧೨) **And** ೩೧೩) **Dharmaveera kamiti report – 1977, vol-3, p- 12**

೩೧೪) **Doreswamy. K – History of Police force in Mysore 1866-1947 unpublished Ph.D thesis. – p- 103**

೩೧೫) **Ibid- p- 103**

೩೧೬) ಐ.ಜಿ.ಪಿ ರವರ ಮೆಮೋ ಪತ್ರ ೧೮೦೬-೨೮೧ ದಿನಾಂಕ ೨೪ ನವೆಂಬರ್ ೧೮೭೬

೩೧೭) ಮುಖ್ಯ ಕಮಿಷನರ್ ರವರ ಪ್ರೊಗೆಸ್ ನಂ ೭೦೧೮-೧೧೭೫ ದಿನಾಂಕ ೧೬ ಅಕ್ಟೋಬರ್ ೧೮೭೬

೩೧೮) ಚೀಫ್ ಕಮಿಷನರ್ ಪ್ರೊಸಿಡಿಂಗ್ಸ್ ನಂಬ್ರ ೯೪೦೬-೫೪೪ ದಿನಾಂಕ ೧೩ ಮಾರ್ಚ್ ೧೮೭೫

೩೧೯) ನಂದಿದುರ್ಗ ವಿಭಾಗದ ಕಮಿಷನರ್ ಪತ್ರ ಸಂ ೬ ದಿನಾಂಕ: ೫ ಎಪ್ರೀಲ್ ೧೮೭೭

೩೨೦) ಚೀಫ್ ಕಮಿಷನರ್ ರವರ ಪ್ರೊಸಿಡಿಂಗ್ಸ್ ನಂಬ್ರ ೯೧೦೬-ಆರ್-೫೪೪ ದಿನಾಂಕ ೧೩-೦೩-೧೮೭೫

೩೨೧) ಮೈಸೂರು ಡೆಪಿಟ್ಯೂ ಕಮಿಷನರ್ ರವರ ಕಛೇರಿ ಮೆಮೋ ನಂ ೭೨ ಜಿ.ಎಲ್.ನಂ ೭೭, ಪ್ಯಾರಾ ೨೮

೩೨೨) ಸರ್ವೆ ಕಮಿಷನರ್‌ರವರು ಬೋರಿಂಗ್‌ಗೆ ಬರೆದ ಪತ್ರಸಂಖ್ಯೆ ೧೦೨೪/೨೨-೬, ೧೮೭೪

೩೨೪) ನಂದಿದುರ್ಗ ಡಿವಿಜನ್ ಕಮಿಷನರ್‌ರವರು ಸರ್ವೆ ಸೆಟ್ಲ್‌ಮೆಂಟ್ ಕಮಿಷನರ್‌ನವರಿಗೆ ಕಳುಹಿಸಿದ ಪತ್ರಸಂಖ್ಯೆ ೬ ಮತ್ತು ೭ ದಿನಾಂಕ ೫ ಎಪ್ರೀಲ್ ೧೮೭೭

೩೨೪) ಸರ್ವೆ ಸೆಟ್ಲ್‌ಮೆಂಟ್ ಕಮಿಷನರ್ ರವರು ಐ.ಜಿ.ಪಿ ಗೆ ಬರೆದ ಪತ್ರ ಸಂಖ್ಯೆ ೨೧೨೧-೩೧೨ ದಿನಾಂಕ ೨೨ ಜನವರಿ ೧೮೭೭

೩೨೫) ಸರ್ಕಾರದ ಪ್ರಕರಣ (ನೋಟಿಫಿಕೇಷನ್) ದಿನಾಂಕ ೦೧-೦೮-೧೮೭

೩೨೬) **R.A.M 1904-05 (Bangalore 1906)**

೩೨೭) **And** ೩೧೮) **Dharmaveera kamiti report, vol-3, p- 12**

೩೨೯) **Ibid- p- 13**

೩೩೦) **A.A.R for the year 1905-06, p- 14**

೩೩೧) **Venkataramaiah . P.S – P.K.G.C - p- 443**

೩೩೨) **R.A.C.M.S for the year 1891-92 to 1894-95 p- 15**

೩೩೩) **R.A.C.M.S for the year 1905-06, p- 9**

೩೩೪) **Ibid- p- 15**

೩೩೫) **A.A.R for the year 1907-08, p- 1**

೩೩೬) **R.A M for the year 1926-27, p- 20**

೩೩೭) **R.A M for the year 1946-47, p- 22**

ಅಧ್ಯಾಯ– ೮
ಅಧ್ಯಯನದ ಫಲಿತಗಳು

ಮಾನವನಿಗೆ ಆಹಾರ ನಿದ್ರೆಗಳಷ್ಟೇ ಮುಖ್ಯವಾದುದು 'ರಕ್ಷಣೆ' ಇದರ ಅವಶ್ಯಕತೆ ಮನುಷ್ಯನಿಗೆ ಹುಟ್ಟಿದಾರಭ್ಯ ಆರಂಭವಾಗುತ್ತದೆ. ತಾನು ಹಾಗೂ ತನ್ನವರ ರಕ್ಷಣೆಗೆ ಮಾನವ ಹಂಬಲಿಸುತ್ತಾನೆ. ಪ್ರಾಚೀನ ಇತಿಹಾಸದ ಪುಟಗಳನ್ನು ತೆರೆದಾಗ ರಾಜನಾದವನು ತನ್ನ ನಾಡಿನ ರಕ್ಷಣೆಗೆ ಸೇನೆಯನ್ನು ಕಟ್ಟಿಕೊಂಡಿರುವುದು ಕಾಣುತ್ತದೆ. ಆದರೆ ಸೇನೆ ಶತ್ರುವಿನೊಡನೆ ಯುದ್ಧ ಹಾಗೂ ನಾಡಿನ ಗಡಿರಕ್ಷಣೆ ಮಾಡುತ್ತಿತ್ತು. ನಾಡಿನ ಒಳಭಾಗದಲ್ಲಿ ನಡೆಯುವ ಅಪರಾಧಗಳನ್ನು ತಡೆಯಲು, ಕಳ್ಳಕಾಕರು ಹಾಗೂ ದರೋಡೆಕೋರರಿಂದ ಜನರನ್ನು ರಕ್ಷಿಸಲು ಅಂದರೆ, ನಾಡಿನ ಆಂತರಿಕ ರಕ್ಷಣೆಗಾಗಿ ಒಂದು ಪಡೆಯ ಅಗತ್ಯತೆಯು ಕಂಡುಬಂತು. ಕಾಲಕಾಲಕ್ಕೆ ಅಂತಹ ಒಂದು ಪಡೆಗಳನ್ನು ರಚಿಸಿಕೊಂಡಿರವುದು ಕಾಣಸಿಗುತ್ತದೆ. ಆಧುನಿಕ ಪೊಲೀಸರು ಮಾಡುತ್ತಿದ್ದ ಕೆಲಸಗಳನ್ನೇ ಆಯಾ ಕಾಲದ ಭಿನ್ನ ಭಿನ್ನ ಹೆಸರಿನ ಪಡೆಗಳು ಮಾಡುತ್ತಿದ್ದುದರ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮೊದಲು ಪೊಲೀಸ್ ಪದದ ವ್ಯುತ್ಪತ್ತಿ ಬಗ್ಗೆ ಚರ್ಚಿಸಲಾಗಿದೆ. ಪೊಲೀಸ್ ಎಂಬ ಶಬ್ಧವು ನಗರ ಎಂದು ಅರ್ಥ ಬರುವ, Polis ಎಂಬ ಗ್ರೀಕ್ ಭಾಷೆಯಿಂದ ಹುಟ್ಟಿದೆಂದು ಸಿ ರೀತ್ ಅಭಿಪ್ರಾಯ ಪಡುತ್ತಾರೆ. ಆದರೆ ಈ ಶಬ್ಧವು ರಾಜ್ಯದ ಅಥವಾ ಸರ್ಕಾರದ ಸ್ಥಿತಿ ಎಂದು ಅರ್ಥ ನೀಡುವ ಲ್ಯಾಟಿನ್ ಭಾಷೆಯ politia ಎಂಬ ಶಬ್ದದಿಂದ ಹುಟ್ಟಿದೆಂದು ಮೊರೈಟಿ ಅಭಿಪ್ರಾಯಪಡುತ್ತಾರೆ. ಇದು ಪೊಲೀಸ್ ಶಬ್ಧಕ್ಕೆ ತುಲನಾತ್ಮಕ ವಾಗಿ ಸಮೀಪವಾಗಿದೆ.

ಪ್ರಾಚೀನ ಕಾಲದ ರಾಜನ ಪ್ರಮುಖ ಕರ್ತವ್ಯಗಳಲ್ಲಿ ಜನರ ರಕ್ಷಣೆಯು ಒಂದಾಗಿತ್ತು. ವೈದಿಕ ಯುಗದಲ್ಲಿ 'ಸ್ಪಶ'ರೆಂಬ ಗೂಢಚಾರರನ್ನು ರಾಜನು ನೇಮಿಸಿದ. 'ವಿಶ್ಪತಿ'ಗಳು ಗ್ರಾಮದ ರಕ್ಷಣೆ ಕಾರ್ಯ ಮಾಡುತ್ತಿದ್ದವು. ಋಗ್ವೇದದಲ್ಲಿ 'ವಿಧಾತ' ಸಭೆಯು ಬುಡಕಟ್ಟುಗಳನ್ನು ರಕ್ಷಿಸುವುದನ್ನು ಉಲ್ಲೇಖಿಸುತ್ತದೆ. 'ಸಭಾ' ಮತ್ತು 'ಸಮಿತಿ'ಗಳು ಜನರ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿದ್ದವು. ಇಲ್ಲಿನ ಸಭಾಪತಿಯ ಮುಂದೆ ಕ್ರಿಮಿನಲ್ ಮೊಕದ್ದಮೆಗಳು ತೀರ್ಮಾನವಾಗುತ್ತಿದ್ದವು. ಇದಕ್ಕಾಗಿ ಜನರಿಂದ 'ಬಲ' ಎಂಬ ಹೆಸರಿನ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು.

ಮನುವಿನ ಕಾಲದಲ್ಲಿ ಪೊಲೀಸ್ ಚೌಕಿಗಳಿದ್ದವು. ಕಳವಾದ ವಸ್ತುಗಳನ್ನು ಕಳ್ಳರಿಂದ ವಶಪಡಿಸಿಕೊಂಡು ಯಜಮಾನನಿಗೆ ಒಪ್ಪಿಸಬೇಕಿತ್ತು. ಇದಕ್ಕೆ ವಿಫಲನಾದಲ್ಲಿ ರಾಜನೇ ಖಜಾನೆಯಿಂದ ಭರಿಸಬೇಕಿತ್ತು. ಶೂರರಾದವರನ್ನು, ದಕ್ಷರನ್ನು, ಶುದ್ಧರಾದವರನ್ನು ಉತ್ತಮ ಕುಲದಲ್ಲಿ ಜನಿಸಿದವರನ್ನು ರಕ್ಷಣೆಗೆ ನೇಮಿಸಲಾಗುತ್ತಿತ್ತು. ಅಧಿಪತಿ, ನಗರಾಧಿಪತಿ ಎಂಬ ಪೊಲೀಸ್ ಅಧಿಕಾರಿಗಳಿದ್ದರು. ಒಂದು ಗ್ರಾಮಕ್ಕೆ ಒಬ್ಬ ಅಧಿಪತಿಯನ್ನು, ಹತ್ತು ಗ್ರಾಮಗಳಿಗೆ ದಶಗ್ರಾಮಾಧಿಪತಿಗಳನ್ನು ಹೀಗೆ ಶತಗ್ರಾಮಾಧಿಪತಿಗಳು ಮೊದಲಾದ ಅಧಿಕಾರಿಗಳನ್ನು ಇಲ್ಲಿ ಗುರುತಿಸಬಹುದು. ಈ ಅಧಿಕಾರಿಗಳ ಕರ್ತವ್ಯಗಳು ಇಂದಿನ ಪೊಲೀಸ್‌ನ ಕರ್ತವ್ಯಗಳನ್ನೇ ಬಹುತೇಕ ಹೋಲುತ್ತದೆ. ಅಪರಾಧಗಳಿಗೆ ಮನವು ೧೮ ಕಾರಣಗಳನ್ನು ಗುರುತಿಸಿದ್ದಾನೆ. ಯಾವ್ಯಾವ ಅಪರಾಧಗಳಿಗೆ ಯಾವ ಶಿಕ್ಷೆ ಎಂಬುದನ್ನು ಆತನು ನಿರ್ಣಯಿಸಿದ್ದಾನೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ನಾಗರಿಕ', 'ಗೋಪ', 'ಸ್ಥಾನಿಕ' ಎಂಬ ಪೊಲೀಸರು ಇದ್ದ ಬಗ್ಗೆ ಉಲ್ಲೇಖವಿದೆ. ಇವರಿಗೆ ನಿರ್ಧಿಷ್ಟ ಕೆಲಸ ಹಾಗೂ ಜವಾಬ್ದಾರಿಗಳನ್ನು ನೀಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಪೊಲೀಸ್ ವ್ಯವಸ್ಥೆಯ ಭಾಗವಾಗಿರುವ ಗೂಢಚರ ವ್ಯವಸ್ಥೆಯ ಬಗ್ಗೆ ಅತ್ಯಂತ ವಿವರವಾಗಿ ಇಲ್ಲಿ ವಿವರಿಸಲಾಗಿದೆ. ಗೂಢಚಾರರು

ಯಾರ್‍ಯಾರನ್ನು ಅನುಮಾನದ ದೃಷ್ಟಿಯಿಂದ ನೋಡಬೇಕೆಂದು, ನಾಗರಿಕನು ಯಾರನ್ನು ಪ್ರಶ್ನಿಸಬೇಕೆಂತಲೂ ತಿಳಿಸಿದ್ದಾನೆ. ಕರ್ನಾಟಕ ಪೊಲೀಸ್ ಕಾಯ್ದೆ ಕಲಂ ೯೨ರಲ್ಲಿ ಸಾರ್ವಜನಿಕ ಉಪದ್ರವಗಳು ಎಂಬ ಹಲವಾರು ಅಪರಾಧಗಳನ್ನು ವಿವರಿಸಲಾಗಿದೆ. ಇಂತಹುದೇ ಹಲವು ಅಪರಾಧಗಳ ಬಗ್ಗೆ ಕೌಟಿಲ್ಯನು ವಿವರಿಸಿದ್ದು ಅವು ಯಾವ ಅಪರಾಧಗಳು ಮತ್ತು ಎಷ್ಟು ದಂಡ ಎಂಬುದನ್ನು ವಿವರಿಸಿದ್ದಾನೆ.ಪೊಲೀಸರು ಮಾಡಬೇಕಾದ ಕೆಲಸಗಳನ್ನು ಮಾಡದಿದ್ದರೆ ಮತ್ತುಅವರ ಅನುಚಿತ ಕೆಲಸಗಳಿಗೂ ದಂಡ ವಿಧಿಸಲಾಗುತ್ತಿತ್ತು. ಇಂದಿನ ಇಮಿಗ್ರೇಷನ್ ಪೊಲೀಸನ್ನು ಹೋಲುವ ವಿದೇಶಿ ರಹದಾರಿ ಅಧಿಕಾರಿ 'ಮುದ್ರಾಧ್ಯಕ್ಷ' ಎಂಬವನ ವಿವರ ಹಾಗೂ ಅದಕ್ಕಾಗಿ ಪಡೆಯುತ್ತಿದ್ದ 'ಮೌಷಿಕ' ಎಂಬ ಸುಂಕದ ವಿಚಾರಗಳನ್ನು ಗುರುತಿಸಿದೆ.

ಮೌರ್ಯರ ಕಾಲದಲ್ಲಿ ಕರ್ನಾಟಕದ 'ಇಸಿಲ' ಒಂದು ಉಕ್ಕಡವಾಗಿತ್ತೆಂದು ಅದು ಸೇನೆಯ ಅಥವಾ ಪೊಲೀಸ್ ಪಡೆಯ ಉಕ್ಕಡ (ಔಟ್‌ಪೋಸ್ಟ್) ಆಗಿತ್ತೆಂದು ಕಂಡುಬರುತ್ತದೆ. ಚಂದ್ರಗುಪ್ತನ ಕಾಲದಲ್ಲಿ ಮಹಿಳಾ ಅಂಗರಕ್ಷಕರು ಇದ್ದರೆಂದು ಮೇಗಸ್ಥನೀಸ್ ತಿಳಿಸಿದ್ದಾನೆ. ಈ ಕಾಲದಲ್ಲಿ ಗೂಢಚಾರ ವ್ಯವಸ್ಥೆ ಅತ್ಯಂತ ಪ್ರಭಲವಾಗಿತ್ತು. ಇವರು ದಿನನಿತ್ಯದ ಘಟನೆಗಳನ್ನು ರಾಜನಿಗೆ ವಿವರಿಸುತ್ತಿದ್ದರು.

ಶಾತವಾಹನರ ಕಾಲದಲ್ಲಿ ಗ್ರಾಮಗಳ ರಕ್ಷಣೆಗೆ ಬರುವ ಕಾವಲುದಂಡು (ಪೊಲೀಸ್)ಗಳ ಆಗಮನ ಕಾಲಕ್ಕೆ 'ವಸಂತಿದಂಡ', 'ಪ್ರಯಾಣದಂಡ' ಎಂಬ ಸುಂಕಗಳನ್ನು ಸಂಗ್ರಹಿಸುತ್ತಿದ್ದುದನ್ನು ಗಮನಿಸಿದರೆ ಆ ಕಾಲದಲ್ಲಿ ಕಾವಲು ದಳ ಅಂದರೆ ಪೊಲೀಸ್ ಪಡೆ ಇದ್ದಿರಬೇಕು. ಇನ್ನು ಗಂಗರ ಕಾಲದಲ್ಲಿ 'ಪಡಿಯಾರ', 'ಹದಿಯಾರ' ಅಥವಾ 'ಹದಿಹಾರ' ಎಂಬ ಕಾವಲುಗಾರರಿದ್ದರೆಂದು ತಿಳಿಯುತ್ತದೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಸೇವುಣರ ಕಾಲದಲ್ಲಿ ಗಾವುಂಡರೇ ಗ್ರಾಮದ ರಕ್ಷಕರಾಗಿದ್ದರು. ಕೆಲವೆಡೆ ಇವರಿಗೆ ಗ್ರಾಮಪತಿ, ಪ್ರಭುಗಾವುಂಡ, ನಾಡಗಾವುಂಡ, ತಳಾರ ಎಂಬ ಹೆಸರಿನಿಂದಲೂ ಸಂಬೋಧಿಸಲಾಗುತ್ತಿತ್ತು. ರಾಜನ ಅಂಗರಕ್ಷಕ ಪಡೆಗೆ ದೊಡ್ಡ ಇತಿಹಾಸವೇ ಇದ್ದು ಹೊಯ್ಸಳರ ಕಾಲದಲ್ಲಿ 'ಗರುಡ' ಮತ್ತು 'ಲೆಂಕ' ಎಂಬ ಅಂಗರಕ್ಷಕರು. ಅರಸನು ಸತ್ತಾಗ ಆತನೊಂದಿಗೆ 'ಸಿಡಿತಲೆ' ಎಂದು ಕರೆಯುತ್ತಿದ್ದ ಪದ್ಧತಿಯಂತೆ ಪ್ರಾಣಾರ್ಪಣೆ ಮಾಡುತ್ತಿದ್ದರು. ಈ ಬಗ್ಗೆ ಹಲವಾರು ಶಾಸನಗಳ ಉಲ್ಲೇಖವನ್ನು ಅಭ್ಯಸಿಸಲಾಗಿದೆ. ಗ್ರಾಮಕೂಟ ಎಂಬ ಅಧಿಕಾರಿಯೂ ರಕ್ಷಣೆಯ ಜವಾಬ್ದಾರಿ ಹೊಂದಿದ್ದ. ಬಾದಾಮಿ ಚಾಲುಕ್ಯರ ಕಾಲದಲ್ಲಿ 'ಚೌಟರು' ಮತ್ತು 'ಭಟರು' ಎಂಬ ವಿಶೇಷವಾದ ಪೊಲೀಸ್ ಅಧಿಕಾರಿಗಳಿದ್ದರು.

ಗ್ರಾಮಗಳಲ್ಲಿ ಗೌಡನೇ ಪೊಲೀಸ್ ನ್ಯಾಯಮೂರ್ತಿಯಾಗಿದ್ದನು. 'ನಾಗರಿಕ' ಮತ್ತು 'ತೋಟಿಗಾರ' ಎಂಬ ಪೊಲೀಸ್ ಅಧಿಕಾರಿಗಳಿದ್ದ ಬಗ್ಗೆ ಉಲ್ಲೇಖಗಳಿವೆ. ಪೂರ್ವದ ಗಡಿಗಳಲ್ಲಿ ರಕ್ಷಕರನ್ನು 'ಮೂಲದಾತಾರ'ಗಳೆಂದು ಕರೆಯಲಾಗುತ್ತಿತ್ತು. ಬಾದಾಮಿ ಚಾಲುಕ್ಯರ ಕಾಲದಲ್ಲಿ 'ದಂಡಪಾಸಿಕರ', 'ಚೌರಾಧಿಕರಣ'ರು ಮತ್ತು 'ಚೌಟ'ರು ಪೊಲೀಸ್ ಅಧಿಕಾರಿಗಳಾಗಿದ್ದರು. 'ಚಟ' ಎಂಬ ಹೆಸರಿನ ಅಧಿಕಾರಿಯನ್ನು ಪೊಲೀಸ್ ಅಧಿಕಾರಿಯೆಂದು ಭಾವಿಸಲಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ 'ಪ್ರಭುಗಾವುಂಡ' ಮತ್ತು 'ನಾಡಗಾವುಂಡ'ರು ಊರರಕ್ಷಕರಾಗಿ, ತಳವಾರ ನಾಯಕನಾಗಿ ಕೆಲಸ ಮಾಡಿದ್ದ ಬಗ್ಗೆ ಉಲ್ಲೇಖಗಳಿವೆ. ಇದೇ ಪದ್ಧತಿ ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ಮುಂದುವರಿಯಿತು. ಹೊಯ್ಸಳರ ಕಾಲದಲ್ಲಿ ಗಾವುಂಡರೇ ಪೊಲೀಸ್ ಅಧಿಕಾರಿಗಳು. ದೇವಗಿರಿಯ ಯಾದವರ (ಸೇಉಣರು) ಕಾಲದಲ್ಲಿ ಮಾತ್ರ 'ರಕ್ಷಪಾಲ'ನೆಂಬ ಪೊಲೀಸ್ ಅಧಿಕಾರಿಯಿದ್ದ ಉಲ್ಲೇಖಗಳು ಸಿಗುತ್ತವೆ.

ಮೊಗಲರಿಗಿಂತಲೂ ಹಿಂದಿನ ಕಾಲದಲ್ಲಿ ಬಂಗಾಳದಲ್ಲಿ ಜಮೀನುದಾರರೇ ಪೊಲೀಸ್ ಜವಾಬ್ದಾರಿಯನ್ನು ಹೊಂದಿದ್ದರು. ಶಾಂತಿಭಂಗ ಮಾಡುವವರನ್ನು ಹಿಡಿಯುವ, ಕಳವಾದ ವಸ್ತುಗಳನ್ನು ಪತ್ತೆಮಾಡುವ ಜವಾಬ್ದಾರಿ

ಇವರದ್ದಾಗಿತ್ತು. ಮೊಗಲರ ಕಾಲದಲ್ಲಿ ನಗರಗಳಲ್ಲಿ ಕೊತ್ವಾಲ ಎಂಬ ಪೊಲೀಸ್ ಅಧಿಕಾರಿ ಇದ್ದ. ಗ್ರಾಮಗಳಲ್ಲಿ ಚೌಕಿದಾರ ಶಾಂತಿ ಸುವ್ಯವಸ್ಥೆಯ ಜವಾಬ್ದಾರಿ ಹೊಂದಿದ್ದ. 'ಮುತ್ಸಿಬ್', 'ಕೊತ್ವಾಲ', 'ಥಾಣಾದಾರ'ರು ಪೊಲೀಸ್ ಅಧಿಕಾರಿಗಳಾಗಿದ್ದರು. ಪೊಲೀಸ್ ಠಾಣೆಗಳಲ್ಲಿ 'ಥಾಣಾದಾರ' ಎಂಬ ಅಧಿಕಾರಿ ಇದ್ದು ಕಾನೂನು ಸುವ್ಯವಸ್ಥೆಯ ಪರಿಪಾಲನೆ ಮಾಡುತ್ತಿದ್ದ. ಪೊಲೀಸ್ ಇಲಾಖೆಯನ್ನು ಎರಡು ಭಾಗಗಳನ್ನಾಗಿ ಮಾಡಲಾಗಿತ್ತು. ಒಂದು 'ದಿವಾನಿ' ಮತ್ತೊಂದು 'ಮಿಲಿಟರಿ'. ದಿವಾನಿ ಪೊಲೀಸ್ ಕಂದಾಯ ಮತ್ತು ಪೊಲೀಸ್ ಇಲಾಖೆಗಳ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೆ, ಮಿಲಿಟರಿ ಪೊಲೀಸ್, 'ಪಾಲಕ' ಮತ್ತು 'ಚೌಕಿದಾರ' ಎಂಬ ಅಧಿಕಾರಿಗಳನ್ನು ಹೊಂದಿದ್ದು, ಅಪರಾಧಿಗಳನ್ನು ಹಿಡಿಯುವ, ಶಾಂತಿ ಕಾಪಾಡುವ ಜವಾಬ್ದಾರಿಯನ್ನು ಹೊಂದಿತ್ತು. ರಾಜ್ಯದಲ್ಲಿ ದೊಡ್ಡಮಟ್ಟದ ಹಿಂಸಾಚಾರ ನಡೆದರೆ ಮಾತ್ರ ಸೇನೆಯನ್ನು ಕರೆಸಲಾಗುತ್ತಿತ್ತು. ಉಳಿದಂತೆ ಈ ಅಧಿಕಾರಿಗಳೇ ಶಾಂತಿಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಗ್ರಾಮಗಳಲ್ಲಿ ಕಳ್ಳತನಗಳನ್ನು ಪತ್ತೆಹಚ್ಚುವ ಜವಾಬ್ದಾರಿಯು ಗ್ರಾಮಕೂಟಕ್ಕೆ ಇತ್ತು. ಕೊತ್ವಾಲನು ರಾಜನ ದರ್ಬಾರ್‌ಗಳಲ್ಲಿ ಭಾಗವಹಿಸಿ ವರದಿ ನೀಡಬೇಕಿತ್ತು. ಸಭೆ ಸಮಾರಂಭ ಗಳಿಗೆ ಪೊಲೀಸ್ ರಕ್ಷಣೆ ಒದಗಿಸಬೇಕಿತ್ತು. ವೇಶ್ಯಾವಾಟಿಕೆ ನಿಯಂತ್ರಿಸುವ, ಮಧ್ಯ ತಯಾರಿಕೆ ಮತ್ತು ಮಾದಕದ್ರವ್ಯ ಮಾರಾಟದ ಮೇಲೆ ನಿಯಂತ್ರಣ ಹೇರುವ ಜವಾಬ್ದಾರಿ ಹೊಂದಿದ್ದನು. ಕಳ್ಳರನ್ನು ಪತ್ತೆಹಚ್ಚುವುದು, ಬೆಲೆ ನಿಯಂತ್ರಣ, ಅಳತೆಗಳ ಪರಿಶೀಲನೆ, ರಾತ್ರಿ ವೇಳೆ ಗಸ್ತು ತಿರುಗುವುದು, ಮನೆ ಹಾಗೂ ಜನರ ಬಗ್ಗೆ ದಾಖಲೆ ಇಡುವುದು ಗೂಢಚಾರರನ್ನು ನೇಮಿಸಿ ರಹಸ್ಯ ಮಾಹಿತಿ ಸಂಗ್ರಹಿಸುವುದು, ಹಕ್ಕುದಾರರಿಲ್ಲದ, ಸತ್ತ ಅಥವಾ ತಪ್ಪಿಸಿಕೊಂಡವರ ಆಸ್ತಿ ಬಗ್ಗೆ ವಿವರವಾದ ಮಾಹಿತಿ ಸಂಗ್ರಹಿಸಿ ಅದನ್ನು ವಶಪಡಿಸಿಕೊಳ್ಳುವುದು ಕೊತ್ವಾಲನ ಕರ್ತವ್ಯವಾಗಿತ್ತೆಂದು ಐನ್–ಇ–ಅಕ್ಬರಿಯಲ್ಲಿ ವಿವರಿಸಿದೆ. ಜಿಲ್ಲೆ ಅಥವಾ ಸರ್ಕಾರಿಗಳಲ್ಲಿ ಫೌಜುದಾರನು ಶಾಂತಿ ಮತ್ತು ಸುವ್ಯವಸ್ಥೆಯ ಪರಿಪಾಲಕನಾಗಿದ್ದ. ವಿದೇಶಿ ಯಾತ್ರಿಕರಾದ ಅಬ್ದುಲ್ ರಜಾಕ್ ಮತ್ತು ನ್ಯೂನಿಜ್‌ರು ಸಚಿವಾಲಯದ ಅಧಿಕಾರಿಗಳನ್ನು ವಿವರಿಸುತ್ತಾ ಪೊಲೀಸ್ ಅಧಿಕಾರಿಗಳು ಇದ್ದ ಬಗ್ಗೆ ವಿವರಿಸಿದ್ದಾರೆ. ಶೇರ್‌ಶಹಾನ ಕಾಲದಲ್ಲಿ ಶಿಕ್ದಾರ್‌ಎಂಬ ಅಧಿಕಾರಿ ದಿವಾನಿ ಮತ್ತು ಪೊಲೀಸ್ ಕರ್ತವ್ಯಗಳೆರಡನ್ನು ಮಾಡುತ್ತಿದ್ದುದನ್ನು ಗಮನಿಸಲಾಗಿದೆ.

ವಿಜಯನಗರ ಕಾಲದಲ್ಲಿ ಪೊಲೀಸ್ ಕೆಲಸಗಳಿಗೆ ಗ್ರಾಮಗಳಲ್ಲಿ 'ತಳಾರಿ' ಎಂಬ ಅಧಿಕಾರಿಯಿದ್ದನು. ಈತನು ಗೌಡನ ಕೈಕೆಳಗೆ ಕೆಲಸ ಮಾಡುತ್ತಿದ್ದನು. ಈತನನ್ನು ತಳವಾರ, ಕಾಪು, ಕಾವಲ್ ಎಂದೂ ಕರೆಯಲಾಗುತ್ತಿತ್ತು. ಇವರು ಗ್ರಾಮಗಳ ರಕ್ಷಣೆ ಮಾಡುತ್ತಿದ್ದರು. ಪ್ರತೀ ಪಾಳಯಕ್ಕೆ ಒಬ್ಬ ರಕ್ಷಣಾಧಿಕಾರಿಯಿದ್ದು ಆತನು ಬೀದಿಗಳನ್ನು ಗಸ್ತು ತಿರುಗಬೇಕಿತ್ತು. 'ತಳಾರಿ', 'ಕಾಪು' ಎಂಬ ಪೊಲೀಸ್ ಅಧಿಕಾರಿಗಳಿದ್ದರು. ತಳಾರಿ ಗೌಡನ ಅಧೀನದಲ್ಲಿ ಕೆಲಸ ಮಾಡುತ್ತಿದ್ದನು. ಗ್ರಾಮಗಳನ್ನು ಕ್ರೂರ ಮೃಗಗಳಿಂದ ರಕ್ಷಿಸುವುದು, 'ಬಾರಿ–ಕಾಪು' ಎಂಬ ಅಧಿಕಾರಿಯ ಕರ್ತವ್ಯವಾಗಿತ್ತು. ಪಟ್ಟಣಗಳಲ್ಲಿ ಪಟ್ಟಣಶೆಟ್ಟಿಯ ಕೆಳಗೆ ತಳವಾರನಿದ್ದನು. ಇವರು ರಾತ್ರಿವೇಳೆ ಕಾವಲು ಕಾಯುವುದು, ಹಳ್ಳಿಗೆ ಬರುವ ಮತ್ತು ಹೋಗುವವರ ಮೇಲೆ ನಿಗಾ ಇಡುವುದು, ಅಲೆಮಾರಿಗಳ ಚಲನವಲನ ಗಮನಿಸುವುದು ಇದರ ಬಗ್ಗೆ ಪಟೇಲನಿಗೆ ವರದಿ ಮಾಡುವುದು, ಅಪರಾಧಗಳನ್ನು ಪತ್ತೆ ಮಾಡುವುದು ಆರೋಪಿಗಳನ್ನು ಸ್ಥಳೀಯ ಪ್ರಾಧಿಕಾರದ ಮುಂದೆ ಹಾಜರುಪಡಿಸುವುದು, ಕಳ್ಳತನ, ದರೋಡೆ, ಸುಲಿಗೆಗಳನ್ನು ಪತ್ತೆಹಚ್ಚುವುದು, ನೆರೆಯ ಮತ್ತು ಪಕ್ಕದ ಹಳ್ಳಿಗಳ ಪೊಲೀಸ್ ಅಧಿಕಾರಿಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು ಇವನ ಕೆಲಸವಾಗಿತ್ತು. ಕಳ್ಳತನ ನಡೆದರೆ ಹೆಜ್ಜೆ ಗುರುತುಗಳ ಮೇಲೆ ಆತನನ್ನು ಪತ್ತೆ ಹಚ್ಚುತ್ತಿದ್ದರು. ಒಂದು ವೇಳೆ ಪತ್ತೆಮಾಡಲು ವಿಫಲನಾದರೆ, ವಸ್ತುವನ್ನು ಕಳೆದುಕೊಂಡವನಿಗೆ ಅದರ ಮೌಲ್ಯವನ್ನು ಕಟ್ಟಿಕೊಡಬೇಕಿತ್ತು. ಈ ಕಾಲದಲ್ಲಿ ಪೊಲೀಸ್ ವ್ಯವಸ್ಥೆಗೆ 'ಕಾವಲ್' ಎಂದು

ಕರೆಯಲಾಗುತ್ತಿತ್ತು. ಅಂದರೆ ಕಾಯುವುದು ಎಂದು ಅರ್ಥ. ಈ ಕಾವಲುಗಾರರಲ್ಲಿ 'ಅರಸು ಕಾವಲುಗಾರ', 'ನಾಡುಕಾವಲುಗಾರ', 'ದೇಶಕಾವಲುಗಾರ' ಮತ್ತು 'ಸ್ಥಳಂಕಾವಲುಗಾರ'ನೆಂಬ ನಾಲ್ಕು ವಿಭಾಗಗಳಿದ್ದವು. ಕಾವಲುಗಾರರು ತಳಾರಿಗಿಂತಲೂ ಮೇಲಿನ ಸ್ಥಾನಗಳನ್ನು ಹೊಂದಿದ್ದರು. ಈ ಕಾಲದಲ್ಲಿ ಪೊಲೀಸ್ ಪಡೆಯಲ್ಲಿ ಎರಡು ಭಾಗಗಳಿದ್ದು ಒಂದು ಭಾಗ ರಾಜನಿಂದ ನಿರ್ವಹಿಸಲ್ಪಡುತ್ತಿದ್ದರೆ ಇನ್ನೊಂದು ಸ್ಥಳೀಯ ಜನರಿಂದ ನಿರ್ವಹಿಸಲ್ಪಡುತ್ತಿತ್ತು. ಮೊದಲನೇಯದು ಸರಕಾರಕ್ಕೆ ನೇರವಾಗಿ ಜವಾಬ್ದಾರರಾಗಿದ್ದರೆ, ಎರಡನೇಯದು ಸ್ಥಳೀಯ ಜನರಿಗೆ ಜವಾಬ್ದಾರಿಯುತವಾಗಿತ್ತು. ಈ ತಳವಾರರುಗಳು ಕಳ್ಳತನಗಳನ್ನು ಸಮರ್ಥವಾಗಿ ತಕ್ಷಣವೇ ಪತ್ತೆಹಚ್ಚುತ್ತಿದ್ದರು. ಕಾಲದ ಪೊಲೀಸರು ಅತ್ಯಂತ ಚಾಣಾಕ್ಷರಾಗಿದ್ದರು ನ್ಯೂನಿಜ್ ಅವರನ್ನು ಮಾಟಗಾರರೆಂದು ಕರೆದಿದ್ದಾನೆ, ಪರ್ಶಿಯಾದ ರಾಯಭಾರಿಯಾದ ಅಬ್ದುಲ್ ರಜಾಕ್‌ನು ಪೊಲೀಸರೇ ಕಳ್ಳರನ್ನು ಶಿಕ್ಷಿಸುತ್ತಿದ್ದ ಬಗ್ಗೆ ವಿವರವನ್ನು ನೀಡಿದ್ದಾನೆ. ರಕ್ಷಣಾ ಶಾಖೆಯು 'ಕಂದಾಚಾರ' ಎಂಬ ಶಾಖೆಯ ಮೇಲ್ವಿಚಾರಣೆಯಲ್ಲಿತ್ತು. ಮೈಸೂರು ಅರಸರ ಕಾಲದಲ್ಲಿ ಕಂದಾಚಾರ ಪಡೆ ಪೊಲೀಸ್ ಪಡೆಯ ಕೆಲಸ ಮಾಡುತ್ತಿತ್ತು. ಆದರೆ ಈ ಶಬ್ದವನ್ನು ವಿಜಯನಗರದ ಕಾಲದಲ್ಲಿಯೇ ಗುರುತಿಸಲಾಗಿದೆ. ಈ ಕಾಲದಲ್ಲಿ ಮಹಿಳಾ ಅಂಗರಕ್ಷಕರು ಇದ್ದರು ಎಂತಲೂ ಮತ್ತು ಮಹಿಳಾ ಪೇದೆಗಳಿದ್ದರೆಂದು ಶ್ರೀ.ನಾರಾಯಣ ಸಂಗಮ ಅಭಿಪ್ರಾಯಪಡುತ್ತಾರೆ.

ರಾಜನೇ ಸರ್ವೋಚ್ಚ ನ್ಯಾಯಾಧೀಶನಾಗಿದ್ದು ನ್ಯಾಯ ತೀರ್ಮಾನಗಳಲ್ಲಿ ಭೀಕರವಾದ ದಿವ್ಯಗಳು ಆಚರಣೆ ಯಲ್ಲಿದ್ದವು. ಕಾದ ಕಬ್ಬಿಣದ ಗುಂಡನ್ನು ಕೈಯಲ್ಲಿ ಹಿಡಿಯುವುದು ಅಥವಾ ನಾಲಗೆಯಿಂದ ನೆಕ್ಕುವುದು, ಕಾಸಿದ ತುಪ್ಪದಲ್ಲಿ ಕೈ ಅದ್ದುವುದು, ಅಗ್ನಿದಿವ್ಯ, ಜಲದಿವ್ಯ, ವಿಷದಿವ್ಯ, ತುಂಡಲದಿವ್ಯ ಸಮತೋಲನ ದಿವ್ಯಗಳು ಆಚರಣೆ ಯಲ್ಲಿದ್ದವು. ಕೃಷ್ಣದೇವರಾಯ ಗುಪ್ತಚರ ವಿಭಾಗವನ್ನು ಗಟ್ಟಿಗೊಳಿಸಿ ಅದನ್ನು ಎರಡು ಭಾಗ ಮಾಡಿದ. ಅದನ್ನು 'ಬೇಹಿನವರ' ಮತ್ತು 'ಕಾಹಿನವರ' ಎಂದು ಕರೆಯಲಾಗುತ್ತಿತ್ತು. ಬೇಹಿನವರ ಎಂದರೆ ಬೇಹುಗಾರಿಕೆ, ಕಾಹಿನವರ ಎಂದರೆ ಕಾವಲು ಎಂದು ಅರ್ಥ. ಇವರ ಮಾಹಿತಿ ಆಧರಿಸಿ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿತ್ತು. ಈ ಗೂಢಚಾರರು ಬಹುಭಾಷಿಕರಾಗಿದ್ದರು. ರಾಜನೇ ಗೂಢಚರನಾಗಿ ಹೋದ ವಿಚಾರಗಳು ಸಿಗುತ್ತದೆ.

ಬಹಮನಿ ಸುಲ್ತಾನರ ಕಾಲದಲ್ಲಿ 'ಹಾಜಿಬ್ ಉಲ್ ಖಾಸ್‌ಹಾಬ್' ನಗರ ಪೊಲೀಸ್ ಅಧಿಕಾರಿಯಾಗಿದ್ದ. ಬಿಜಾಪುರ ಸುಲ್ತಾನರ ಕಾಲದಲ್ಲಿ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆ ಕಂಡುಬರುವುದಿಲ್ಲ. ಪ್ರಾಂತೀಯ ಆಡಳಿತದ ಸ್ವರೂಪ ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಬಹಮನಿ ಸುಲ್ತಾನರ ಆಡಳಿತದಂತೆಯೇ ಮುಂದುವರಿಯಿತು. ತರಫ್ ಮತ್ತು ತರಫ್‌ದಾರನ ಬದಲಾಗಿ 'ಜಾಗೀರ್- ಜಾಗೀರ್‌ದಾರರೆಂದು ಬದಲಾಯಿಸಲಾಯಿತು. ಇವರಿಗಿದ್ದ ಪ್ರಮುಖ ಮೂರು ಕರ್ತವ್ಯಗಳಲ್ಲಿ ತನ್ನ ವ್ಯಾಪ್ತಿಯೊಳಗಿನ ಪ್ರದೇಶದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಒಂದಾಗಿತ್ತು. ಇವರನ್ನು ಸುಲ್ತಾನನು ವರ್ಗಾವಣೆ ಅಥವಾ ವಜಾ ಮಾಡಬಹುದಿತ್ತು. ಈ ಜಾಗೀರ್‌ದಾರರು ತನ್ನ ವ್ಯಾಪ್ತಿಯ ನ್ಯಾಯಾಂಗದ ಮುಖ್ಯಸ್ಥನೂ ಆಗಿದ್ದನು. ಪರಗಣಗಳಲ್ಲಿ ಕೊತ್ವಾಲ ಪೊಲೀಸ್ ಅಧಿಕಾರಿಯಾಗಿದ್ದ. ಹಾಗೂ ನಗರಗಳ ರಕ್ಷಣೆ ಈತನ ಜವಾಬ್ದಾರಿಯಾಗಿತ್ತು. ಗ್ರಾಮಗಳಲ್ಲಿ ಚೌಕಿದಾರ ಅಥವಾ ಗ್ರಾಮದ ಕಾವಲುಗಾರ ಅಥವಾ ಮಹರ್ ಎಂಬುವವನು ಪೊಲೀಸ್ ಅಧಿಕಾರಿಯಾಗಿದ್ದ. ಈತನ ಹುದ್ದೆ ವಂಶಪಾರಂಪರ್ಯವಾಗಿತ್ತು. ಇವರ ಕಾಲದಲ್ಲಿ ದಿವಾನಿ ವ್ಯವಹಾರಗಳಿಗೆ ಹಿಂದು ಸಂಪ್ರದಾಯವನ್ನು, ಕ್ರಿಮಿನಲ್ ಅಪರಾಧಗಳಿಗೆ ಕುರಾನ್ ಶಾಸನಗಳನ್ನು ಪಾಲಿಸು ವಂತಾಯಿತು.

ಬಿಜಾಪುರ ಸುಲ್ತಾನರ ಕಾಲದಲ್ಲಿ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆ ಕಂಡುಬರುವುದಿಲ್ಲ. ಆದರೆ ಪ್ರಾಂತೀಯ

ಆಡಳಿತದ ಸ್ವರೂಪ ಬಹಮನಿ ಸುಲ್ತಾನರ ಆಡಳಿತದಂತೆಯೇ ಮುಂದುವರೆಯಿತು. (ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ) ತರಫ್ ಮತ್ತು ತರಫ್‌ದಾರನ ಬದಲಾಗಿ ಜಾಗಿರ್ ಮತ್ತು ಜಾಗಿರ್‌ದಾರರು ಬಂದರು. ಜಾಗಿರ್‌ದಾರನಿಗೆ ಪ್ರಮುಖವಾಗಿ ಮೂರು ಕರ್ತವ್ಯಗಳಿದ್ದವು. ಮೊದಲನೆಯದು ಈತ ರಾಜನ ಸೇವೆಗೆ ನಿರ್ಧಿಷ್ಟ ಕಾಲ್ದಳ ಮತ್ತು ಸೇನೆಯನ್ನು ಇಟ್ಟುಕೊಳ್ಳಬೇಕಿತ್ತು. ಎರಡನೆಯದು, ತನ್ನ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು. ಇವರನ್ನು ಸುಲ್ತಾನನು ವರ್ಗಾವಣೆ ಅಥವಾ ವಜಾ ಮಾಡಬಹುದಿತ್ತು. ಈ ಜಾಗೀರ್‌ದಾರರು ತನ್ನ ವ್ಯಾಪ್ತಿಯ ನ್ಯಾಯಾಂಗದ ಮುಖ್ಯಸ್ಥನೂ ಆಗಿದ್ದನು. ಪರಗಣಗಳಲ್ಲಿ ಕೊತ್ವಾಲ ಪೊಲೀಸ್ ಅಧಿಕಾರಿಯಾಗಿದ್ದ. ಗ್ರಾಮಗಳಲ್ಲಿ ಚೌಕಿದಾರ ಅಥವಾ ಗ್ರಾಮದ ಕಾವಲುಗಾರ ಪೊಲೀಸ್ ಅಧಿಕಾರಿಯಾಗಿದ್ದ.

ಪ್ರಾಚೀನ ಕಾಲದಲ್ಲಿ ಗ್ರಾಮದ ರಕ್ಷಣೆಯನ್ನು ಗಾವುಂಡರು ಮಾಡುತ್ತಿದ್ದರು. ಇವರ ವಿವರಗಳು ಶಾಸನ ಗಳಲ್ಲಿದೆ. ಇದನ್ನು ಪೊಲೀಸರಿಗೆ ಸಂಬಂಧಿಸಿದ ಶಾಸನಗಳೆಂದೇ ಹೇಳಬಹುದು.ಇವರು ನೀಡಿದ ದಾನದತ್ತಿಗಳ ಬಗ್ಗೆ ಜನರ ರಕ್ಷಣೆ ಇವರ ಜವಾಬ್ದಾರಿ ಎಂದು ಶಾಸನಗಳ ಉಲ್ಲೇಖವನ್ನು ಚರ್ಚಿಸಿದೆ.

ಇನ್ನು ಮೈಸೂರು ಅರಸರ ಕಾಲದಲ್ಲಿ ಪೊಲೀಸ್ ಇಲಾಖೆಯು ಹಂತಹಂತವಾಗಿ ಪುನರಚನೆಯಾಯಿತು. ಆಡಳಿತಾಂಗದಲ್ಲಿ ಫೌಜುದಾರ ಮತ್ತು ಅಮಿಲ್‌ದಾರರು ಪೊಲೀಸ್ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರ್‌ರವರು ಅಂಚೆ ವ್ಯವಸ್ಥೆಯನ್ನು ಜಾರಿಗೆ ತಂದರು. ಅಂಚೆ ಪೇದೆಗಳೇ ಗುಪ್ತಚರರಾಗಿ ಕೆಲಸ ಮಾಡುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ ಮೊದಲು ಧರ್ಮಾಧರಿತ ಆಡಳಿತವಿದ್ದು ವಿಜಯನಗರದ ಅರಸರ ಆಡಳಿತ ಪದ್ಧತಿಯೇ ಮುಂದುವರೆದಿತ್ತು. ಚಿಕ್ಕದೇವರಾಜ ಒಡೆಯರ್‌ರವರು ಮೊಗಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನಕ್ಕೆ ರಾಯಭಾರಿ ಗಳನ್ನು ಕಳುಹಿಸಿ ಅಲ್ಲಿಯ ಆಡಳಿತ ಪದ್ಧತಿಗಳನ್ನು ಅಭ್ಯಸಿಸಿ ೧೮ ಚಾವಡಿಗಳನ್ನು ಸ್ಥಾಪಿಸಿದರು. ಅದೇ ಸುಪ್ರಸಿದ್ಧ ವಾದ ಅಠಾರ ಕಛೇರಿಗಳಾಗಿತ್ತು. ಇವುಗಳಲ್ಲಿ ಪಟ್ಟಣದ ಚಾವಡಿಯಲ್ಲಿ ಅರಮನೆ, ಕೋಟೆ ಕೊತ್ತಲ, ಬತ್ತೇರಿಗಳು, ಉಗ್ರಾಣಗಳು, ಆಯುಧಾಗಾರ, ಇತ್ಯಾದಿಗಳನ್ನು ಕಾವಲು ಕಾಯುವುದು ಮತ್ತು ಸುಸ್ಥಿತಿಯಲ್ಲಿ ಇಡುವುದರೊಂದಿಗೆ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು, ಅಂದರೆ ಪೊಲೀಸ್ ಕೆಲಸ ನಿರ್ವಹಿಸುವುದು ಈ ಚಾವಡಿಯ ಕರ್ತವ್ಯವಾಗಿತ್ತು. ಸೀಮೆಯ ಕಂದಾಚಾರದ ಚಾವಡಿಯಲ್ಲಿ ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕಪತ್ರಗಳನ್ನಿಟ್ಟು, ಶಸ್ತ್ರಾಸ್ತ್ರ ಮದ್ದುಗುಂಡುಗಳ ವ್ಯವಹಾರಗಳ ಬಗ್ಗೆ ಗಮನಹರಿಸಿ, ಆಯಾ ಘಟಕಗಳನ್ನು ಸಿದ್ದಪಡಿಸುವ ಜವಾಬ್ದಾರಿ ಹೊಂದಿತ್ತು. ಬಾಗಿಲ 'ಕಂದಾಚಾರ' ಚಾವಡಿಯಲ್ಲಿ ಮಿಲಿಟರಿ ಹುಜೂರ್ ಅಧಿಕಾರಿಗಳು ಮತ್ತು ಪಾಳೆಯಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದರು. ನಂತರ ಸ್ಥಳೀಯ ಪ್ರಜಾಸೈನ್ಯಕ್ಕೆ 'ಕಂದಾಚಾರ' ಎಂದು ಕರೆಯಲಾಗುತ್ತಿತ್ತು. ಆರಂಭದಲ್ಲಿ ಈ ಕಂದಾಚಾರ ಪಡೆಯವರು ಗಸ್ತು ತಿರುಗುವುದು ಖಜಾನೆ ಕಾಯುವ ಕೆಲಸ ಮಾಡುತ್ತಿದ್ದರು. ಯುದ್ಧಗಳು ನಡೆಯುವಾಗ ಶಸ್ತ್ರಧಾರಿಗಳಾಗಿ ಸಿದ್ಧರಿದ್ದವರಿಗೆ ಸಂಬಳ ನೀಡಲಾಗುತ್ತಿತ್ತು. ಅರ್ಧ ಸಂಬಳ ಹಣದ ರೂಪದಲ್ಲೂ, ಇನ್ನರ್ಧ ಸಂಬಳ ವಸ್ತು ರೂಪದಲ್ಲೂ ನೀಡಲಾಗುತ್ತಿತ್ತು. ಇವರುಗಳಿಗೆ ತೆರಿಗೆ ವಿನಾಯಿತಿ ನೀಡಲಾಗಿತ್ತು. ರಾಜ್ಯದ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ವಿಶೇಷ ಗಮನ ಹರಿಸಲಾಯಿತು. ಓಲೆಕಾರರ ಮೂಲಕ ಗುಪ್ತಮಾಹಿತಿ ಪಡೆಯಲಾಗುತ್ತಿತ್ತು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಹಳ್ಳಿಯು ಆಡಳಿತದ ಚಿಕ್ಕ ಘಟಕವಾಗಿತ್ತು. ಇದರಲ್ಲಿ ೧೨ ರೀತಿಯ ಆಡಳಿತಾಂಗ ಇದ್ದು ಅದನ್ನು ಬಾರಾಬಲೂತಿ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಹಳ್ಳಿಯ ರಕ್ಷಣೆಗಾಗಿ ಕಾವಲುಗಾರ ಅಥವಾ ತಳವಾರ ಎಂಬ ಅಧಿಕಾರಿಯು ಇದ್ದ. ಈ ಕಾವಲುಗಾರರಿಗೆ ಹಳ್ಳಿಯ ಪ್ರತೀ ರೈತರಿಂದ ಒಂದು ಹೊರೆ

ಹುಲ್ಲು, ಒಂದು ಕೊಳಗ ಧಾನ್ಯವನ್ನು ಪಡೆಯಲು ಅನುಮತಿಯನ್ನು ನೀಡಲಾಗಿತ್ತು. ಇದು ಅವರ ಹೊಟ್ಟೆಪಾಡಿಗೆ ಸಾಕಾಗುತ್ತಿರಲಿಲ್ಲ. ಆದ್ದರಿಂದ ಒಂದರಿಂದ ಆರು ವರಹದವರೆಗೆ ಕಂದಾಯ ಮೌಲ್ಯ ಹೊಂದಿರುವ ಭೂಮಿಯನ್ನು ಅವರ ಯೋಗ್ಯತೆಗೆ ಅನುಸಾರವಾಗಿ ಕಂದಾಯ ರಹಿತವಾಗಿ ನೀಡಲಾಗುತ್ತಿತ್ತು. ದೊಡ್ಡಕೃಷ್ಣರಾಜ ಒಡೆಯರ ಕಾಲದಲ್ಲಿ ಅಪರಿಚಿತರು ಊರಿಗೆ ಬಂದರೆ ಅವರನ್ನು ಗಮನಿಸಲು ಕಳ್ಳತನ ಮೊದಲಾದ ಅಪರಾಧಗಳನ್ನು ತನಿಖೆ ಮಾಡಲು ಸ್ಥಳೀಯ ಪ್ರಜಾಸೈನ್ಯ ಇತ್ತು. ಇದರ ಮುಖ್ಯಸ್ಥನನ್ನು ಪ್ರಾಚೀನ ಕಾಲದಲ್ಲಿ 'ಗಾವುಂಡ' ಅಥವಾ 'ಗೌಡ' ಎಂದು ಕರೆಯುತ್ತಿದ್ದು ನಂತರದ ಕಾಲದಲ್ಲಿ ಈತನನ್ನು ಪಟೇಲ ಎಂದು ಕರೆಯಲಾಗುತ್ತಿತ್ತು.

ಹೈದರ್ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ತಾಲೂಕಿನ ವ್ಯವಹಾರಗಳನ್ನು 'ಅಮಿಲ್‌ದಾರ' ಎಂಬ ಅಧಿಕಾರಿ ನೋಡಿ ಕೊಳ್ಳುತ್ತಿದ್ದ. ಟಿಪ್ಪು ರಾಜ್ಯಗಳನ್ನು ವಿಭಾಗಗಳನ್ನಾಗಿ ಮಾಡಿ ಅದಕ್ಕೆ 'ಅಸೋಫ' ಮತ್ತು 'ಫೌಜುದಾರ' ಎಂಬ ಅಧಿಕಾರಿಗಳನ್ನು ನೇಮಿಸಿದ್ದ. ಅಸೋಫ ಕಂದಾಯ ಇಲಾಖೆಯ ಮುಖ್ಯಸ್ಥನಾಗಿದ್ದರೆ, ಫೌಜುದಾರ ಮಿಲಿಟರಿ ಕಮಾಂಡರ್‌ನಾಗಿ ಸ್ಥಳೀಯ ಪೊಲೀಸರ ಕರ್ತವ್ಯಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದ. 'ಮೃಗಾವಲು' ಎಂಬ ಅಧಿಕಾರಿಗಳು ಇವರ ಕಾಲದಲ್ಲಿ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದರು. ಹೈದರ್‌ನ ಕಾಲದಲ್ಲಿ ಕಂದಾಚಾರ ಕಛೇರಿ ಇತ್ತೆಂದು ತಿ.ತಾ ಶರ್ಮ ಅಭಿಪ್ರಾಯ ಪಡುತ್ತಾರೆ. ಅಲ್ಲದೇ 'ಕಳಭಂಟರು', 'ಚೂಪುದಾರ'ರೆಂಬ ಗುಪ್ತಚರ ವರ್ಗವು ಇತ್ತೆಂದು ಹೇಳಿದ್ದಾರೆ. ಟಿಪ್ಪುವಿನ ಕಾಲದಲ್ಲಿ ಕಂದಾಚಾರ ಪದ್ಧತಿಯಲ್ಲಿ 'ಅಶಂ ಕಛೇರಿ'ಯನ್ನು ಸ್ಥಾಪನೆ ಮಾಡಲಾಯಿತು. ಅದಕ್ಕೆ ಭಕ್ಷಿ ಎಂಬ ಅಧಿಕಾರಿಯನ್ನು ಮುಖ್ಯಸ್ಥರನ್ನಾಗಿ ಮಾಡಲಾಯಿತು. ಟಿಪ್ಪುವು ಪಶ್ಚಿಮ ಕರಾವಳಿಯಲ್ಲಿದ್ದಾಗ ಶ್ರೀರಂಗಪಟ್ಟಣದಲ್ಲಿ ಒಡೆಯರ್ ಮನೆತನದವರು ಒಂದು ಪಿತೂರಿಯನ್ನು ನಡೆಸಿದರು. ಕಂದಾಚಾರ ಚಾವಡಿಯ ಸಿಂಗಯ್ಯ ಮತ್ತು ರಂಗಯ್ಯ ಮೊದಲಾದವರು ಸೇರಿಕೊಂಡು ಆಂಗ್ಲರೊಂದಿಗೆ ಸಂಪರ್ಕ ಹೊಂದಿ ಶ್ರೀರಂಗಪಟ್ಟಣ ವನ್ನು ವಶಪಡಿಸಿಕೊಳ್ಳುವ ಸಂಚನ್ನು ರೂಪಿಸಿದರು. ಆದರೆ ಮಾಹಿತಿಯ ಸೋರಿಕೆಯಿಂದಾಗಿ ಇದು ಯಶಸ್ವಿ ಯಾಗಲಿಲ್ಲ. ಟಿಪ್ಪುವಿನ ಕಂದಾಚಾರ ಪಡೆಯ ಕಿಲ್ಲೇದಾರನೊಬ್ಬ ಈ ಪಿತೂರಿಯ ಮಾಹಿತಿಯನ್ನು ಬೇಧಿಸಿದನು. ಇದರಿಂದ ಕಂದಾಚಾರ ಪಡೆಯು ಎಷ್ಟು ಪ್ರಭಲವಾಗಿತ್ತೆಂದು ತಿಳಿಯಬಹುದಾಗಿದೆ. ಟಿಪ್ಪು ಸುಲ್ತಾನನು ಪೊಲೀಸ್ ಅಧಿಕಾರಿಗಳಿಗೆ ಬರೆದ ಅಪರೂಪದ ಪತ್ರಗಳನ್ನು ಸಂಗ್ರಹಿಸಲಾಗಿದೆ. ಯಾವುದೇ ವಿದೇಶಿ ಹಡಗುಗಳು ರಾಜ್ಯ ಬಂದರನ್ನು ಪ್ರವೇಶಿಸಲು ಸ್ಥಳೀಯ ಪೊಲೀಸ್ ಅಧಿಕಾರಿಗಳ ಅನುಮತಿಯೊಂದಿಗೆ ರಾಜನ ಅನುಮತಿ ಪಡೆಯಬೇಕಿತ್ತು. ಈ ಪತ್ರಗಳ ಮುಖಾಂತರ ಟಿಪ್ಪುವಿನ ಕಾಲದಲ್ಲಿದ್ದ ಹಲವಾರು ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ಸಂಗ್ರಹಿಸಲಾಗಿದೆ. ಕಂದಾಚಾರ ಪಡೆ ರಾಜ್ಯವನ್ನು ಕಟ್ಟುವ ಮತ್ತು ನಾಶಪಡಿಸುವಷ್ಟು ಬಲಿಷ್ಟವಾಗಿತ್ತೆಂಬುದನ್ನು ಗಮನಿಸಬಹುದಾಗಿದೆ. ಟಿಪ್ಪುವಿನ ಕಾಲದಲ್ಲಿಯೇ ಕಂದಾಚಾರ ಪಡೆಯು ಅತ್ಯಂತ ಪ್ರಭಲವಾಗಿತ್ತು. ಈ ಪಡೆಯ ಸಿಬ್ಬಂದಿಯವರು ಉದ್ಯೋಗವಿಲ್ಲದೇ ಜನರೊಂದಿಗೆ ಸೇರಿಕೊಂಡು ಸುಲಿಗೆ ಕಾರ್ಯದಲ್ಲಿ ತೊಡಗಿದ್ದರು. ಇವರು ಆಗಾಗ ರೈತರನ್ನು ಸುಲಿಗೆ ಮಾಡುತ್ತಿದ್ದರು. ಇದನ್ನು ಗಮನಿಸಿದ ಟಿಪ್ಪುಸುಲ್ತಾನ್ ಕಂದಾಚಾರ ಪಡೆಯ ಸಿಬ್ಬಂದಿಯನ್ನು ಕಡಿತಗೊಳಿಸಿ ತನ್ನ ಸೇನೆಗೆ ಸೇರಿಸಿಕೊಂಡ. ಟಿಪ್ಪು ಸುಲ್ತಾನನ ಕಾಲದಲ್ಲಿ ಪೊಲೀಸ್ ಪಡೆಯು ಅತ್ಯಂತ ಪ್ರಬಲವಾಗಿತ್ತು. ಯಾವುದೇ ವಿದೇಶದ ಹಡಗುಗಳು ರಾಜ್ಯದ ಬಂದರನ್ನು ಪ್ರವೇಶಿಸಬೇಕಾದರೆ, ಅಲ್ಲಿಯ ಪೊಲೀಸ್ ಅಧಿಕಾರಿಯ ಅನುಮತಿ ಯನ್ನು ಪಡೆಯಬೇಕಿತ್ತು. ಈ ಬಗ್ಗೆ ಹಾಗೂ ರಾಜ್ಯದ ವಿವಿಧ ಘಟನೆಗಳ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಟಿಪ್ಪು ಸುಲ್ತಾನನು ನೇರವಾಗಿ ಪತ್ರವನ್ನು ಬರೆಯುತ್ತಿದ್ದನು. ಇದರಿಂದ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಕಾನೂನು ಪರಿಪಾಲನೆಯ ಬಗ್ಗೆ ಟಿಪ್ಪು ಹೆಚ್ಚು ಗಮನಹರಿಸುತ್ತಿದ್ದನೆಂಬುದು ತಿಳಿದುಬರುತ್ತದೆ.

ಈತನ ಕಾಲದಲ್ಲಿ ಪೊಲೀಸ್ ಇಲಾಖೆಗೆ ಶಾಮಯ್ಯ ಅಯ್ಯಂಗಾರ್ ಎಂಬವರು ಮಂತ್ರಿಯಾಗಿದ್ದ ರೆಂದು ಡಬ್ಲ್ಯು.ಕಿರ್ಕ್ ಪ್ಯಾಟ್ರಿಕ್ ತಿಳಿಸಿದ್ದಾನೆ. ೧೭೩೦ ರಲ್ಲಿ ಮೀರ್‌ಸಾದಿಕ್ ಎಂಬುವವನು ಅಶ್ವದಳದ ಅಧಿಕಾರಿಯಾಗಿದ್ದು ಈತನು ಮೊದಲು ದೊಡ್ಡಬಳ್ಳಾಪುರದಲ್ಲಿ ಕೊತ್ವಾಲನಾಗಿದ್ದನು. ಈತನೇ ಮುಂದೆ ಶ್ರೀರಂಗಪಟ್ಟಣದ ಪಥನಕ್ಕೆ ಕಾರಣನಾದನು.

ದಿವಾನ್ ಪೂರ್ಣಯ್ಯನವರು ಕಂದಾಚಾರ ಪದ್ಧತಿಯನ್ನು ಪ್ರಾರಂಭಿಸಿದರೆಂಬುದು ಅನೇಕ ವಿದ್ವಾಂಸರ ವಾದವಾಗಿದೆ. ಆದರೆ ಅದು ಸರಿಯಾದ ಅಭಿಪ್ರಾಯವಲ್ಲ. ಏಕೆಂದರೆ ಪೂರ್ಣಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗುವುದಕ್ಕಿಂತ ಮುಂಚೆಯೇ ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಕಂದಾಚಾರ ಪಡೆ ಇತ್ತು. ೧೬-೧೭ ನೇ ಶತಮಾನದ ಮೈಸೂರಿನ ಆಡಳಿತದ ವ್ಯವಸ್ಥೆಯಲ್ಲಿ ನಾಲ್ಕು ವಿಭಾಗಗಳಿದ್ದು, ಅದರಲ್ಲಿ ಒಂದು ಕಂದಾಚಾರ ವಿಭಾಗವಿತ್ತು ಎಂದು ಶ್ರೀ.ಶ್ಯಾಮರಾಮ್‌ರವರು ತಿಳಿಸಿದ್ದಾರೆ. ಟಿಪ್ಪುವಿನ ಆಳ್ವಿಕೆಯ ಸಮಯದಲ್ಲಿ ಹೊತ್ತಿಗೆ ಕಂದಾಚಾರ ಪದ್ಧತಿಯಲ್ಲಿ ಅಶಮ್ ಕಛೇರಿಯನ್ನು ಸ್ಥಾಪಿಸಿ ಅದಕ್ಕೆ ಭಕ್ಷಿಯನ್ನು ಸಹ ನೇಮಿಸಲಾಗಿತ್ತು. ಟಿಪ್ಪುವಿನ ಸೈನ್ಯದಲ್ಲಿ ಪದಾಧಿಕಾರಿಗಳನ್ನು ಕಂದಾಚಾರ ಪಡೆಗೆ ಸೇರಿಸಲಾಗಿತ್ತು. ಹಳೇಯ ಸೇನಾಪಡೆಯಲ್ಲಿದ್ದ ಕುಟುಂಬ ವರ್ಗದಿಂದ ಕನಿಷ್ಠ ಒಬ್ಬರಾದರೂ ಈ ಕಂದಾಚಾರ ಪಡೆಗೆ ಸೇರಬೇಕಿತ್ತು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸೈನ್ಯದ ಒಂದು ಸಣ್ಣ ತುಕಡಿಯನ್ನು ನಿಯುಕ್ತಿಗೊಳಿಸಲಾಗಿತ್ತು. ಈ ತುಕಡಿಗೆ ಸಹಾಯ ನೀಡಲು ಕಂದಾಚಾರ ಎಂದು ಕರೆಯಲ್ಪಡುವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳನ್ನು ನೇಮಿಸಲಾಗಿತ್ತು ಎಂದು ಡಾ:ಡಿ.ವಿ.ಗುರುಪ್ರಸಾದ್ ಅಭಿಪ್ರಾಯ ಪಡುತ್ತಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕದ ದಿನ ಕಂದಾಚಾರ ಪಡೆಯ ಮುಖಂಡರು ಹಾಜರಿದ್ದ ರೆಂದು ಡಾ: ನರೇಂದ್ರ ಪ್ರಸಾದ್ ಅಭಿಪ್ರಾಯಪಡುತ್ತಾರೆ. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾದದ್ದು ಜೂನ್ ೩೦, ೧೭೯೯ ರಂದು ಆದರೆ ಪೂರ್ಣಯ್ಯನವರು ದಿವಾನರಾಗಿ ನೇಮಕವಾಗಿದ್ದು ೧೭೯೯ ರ ಜುಲಾಯಿ ೧ ರಂದು. ಅಂದರೆ ಪೂರ್ಣಯ್ಯನವರು ದಿವಾನರಾಗುವುದಕ್ಕಿಂತ ಮುಂಚೆಯೇ ಮೈಸೂರು ಕಂದಾಚಾರ ಪಡೆ ಇತ್ತೆಂದು ಸಾಬೀತಾಗುತ್ತದೆ. ಟಿಪ್ಪು ಸುಲ್ತಾನನ ಪಥನಾನಂತರ ಆತನ ಸೈನ್ಯ ಮತ್ತು ಕಂದಾಚಾರ ಪಡೆಯಲ್ಲಿದ್ದ ಯೋಧರು ಉದ್ಯೋಗವಿಲ್ಲದೇ ಲೂಟಿಯಂತಹ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಅವರ ಕೈಗಳಲ್ಲಿ ಶಸ್ತ್ರಾಸ್ತ್ರಗಳೂ ಸಹ ಇದ್ದವು. ಹೀಗಾಗಿ ಅವರನ್ನು ನಿಯಂತ್ರಿಸುವುದು ಮೈಸೂರಿನ ಮೊದಲ ಕರ್ತವ್ಯವಾಗಿತ್ತು. ಹಾಗಾಗಿ ದಿವಾನ್ ಪೂರ್ಣಯ್ಯ ನವರು ಸುಮಾರು ೨೦೦೦ ಕಂದಾಚಾರಿಗಳ ಪಡೆಯನ್ನು ಪುನರ್‌ಸಂಘಟಿಸಿದರು. ಇವರು ಈ ಪಡೆಯಲ್ಲಿ ಒಂದು ಶಿಸ್ತನ್ನು ಮೂಡಿಸಲು ಪ್ರಯತ್ನಿಸಿದರು. ಚಿತ್ತೂರಿನ ಗಲಭೆ, ವೆಲ್ಲೂರಿನ ದಂಗೆಗಳನ್ನು ಕಂದಾಚಾರಿಗಳ ಸಹಾಯದಿಂದ ಅಡಗಿಸಿದರು. ೧೮೦೩ ರಲ್ಲಿ ಬೂದಿಬಸಪ್ಪನಿಗೆ ಸಹಾಯಕವಾಗಿ ತರಿಕೆರೆಯ ಪಾಳೇಗಾರನಾಗಿದ್ದ ಸರ್ಜಾ ಹನುಮಪ್ಪ ನಾಯ್ಕನು ಬೇಡರ ಗುಂಪಿಗೆ ಸೇರಿದ ಸುಮಾರು ೧೫೦೦ ಜನ ಕಂದಾಚಾರ ನೌಕರರನ್ನು ದಂಗೆ ಏಳುವಂತೆ ಮಾಡಿದನು. ಇದನ್ನು ಕಂದಾಚಾರಿಗಳ ಪ್ರಥಮ ದಂಗೆ ಎನ್ನಬಹುದು. ಇದನ್ನು ಬ್ರಿಟೀಷ್ ಸೇನೆಯ ನೆರವಿನಿಂದ ಪೂರ್ಣಯ್ಯನವರು ಅಡಗಿಸಿದರು. ನಂತರ ಪೂರ್ಣಯ್ಯನವರು ಇಂತಹ ಕಂದಾಚಾರ ಪಡೆಯ ಸದಸ್ಯರನ್ನು ೨೦೦೦೦ ಕ್ಕೆ ಏರಿಸಿದರೆಂದು ತಿಳಿದುಬರುತ್ತದೆ.

ಈ ಕಂದಾಚಾರ ಪಡೆಯಲ್ಲಿ ಎರಡು ವಿಭಾಗಗಳಿದ್ದವು. ಒಂದು ಶಸ್ತ್ರಧಾರಿಗಳು ಮತ್ತೊಂದು ನಿಶಸ್ತ್ರಧಾರಿಗಳು (ಖಾಲಿಹಾತ್) ಶಸ್ತ್ರಧಾರಿಗಳು ಖಜಾನೆ ಹಣದ ಹಾಗೂ ಖೈದಿಗಳ ಬೆಂಗಾವಲು, ಕಾರಾಗೃಹಗಳ ಪಹರೆಗಳೊಂದಿಗೆ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳಿದ್ದಾಗ ಕ್ಷೇತ್ರ ಕಾರ್ಯಗಳಿಗೆ ಒದಗಬೇಕಿತ್ತು. ಹಂದಿಗಳನ್ನು ಕೊಲ್ಲುವುದು, ತಮ್ಮ

ಸರಹದ್ದುಗಳಲ್ಲಿ ಹಾದುಹೋಗುವ ಗೌರವಾನ್ವಿತ ಯಾತ್ರಿಕರೊಂದಿಗೆ ಇದ್ದು ಅವರಿಗೆ ರಕ್ಷಣೆ ನೀಡುವುದು, ಕಳ್ಳತನ ತಡೆಯುವುದು, ಆರೋಪಿಗಳ ಪತ್ತೆ, ಅರಣ್ಯ ಮಾರ್ಗಗಳಲ್ಲಿ ಗಸ್ತು ತಿರುಗುವುದು, ರಾಜಧಾನಿ, ನಗರ, ಹಾಗೂ ಕೋಟೆಗಳನ್ನು ಕಾಯುವುದು, ಶ್ರೀಗಂಧ ಮರಗಳ ರಕ್ಷಣೆ ಇವರ ಕರ್ತವ್ಯವಾಗಿತ್ತು. ನಿಶಸ್ತ್ರಧಾರಿಗಳೂ ಸಹ ಬಹುತೇಕ ಇದೇ ಕೆಲಸಗಳನ್ನು ಮಾಡುತ್ತಿದ್ದು, ರಸ್ತೆ, ಕೆರೆಗಳ ದುರಸ್ಥಿ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು. ಇವರೆಲ್ಲರೂ ಅಮಲ್‌ದಾರನ ಕೈಕೆಳಗೆ ಕೆಲಸ ಮಾಡಬೇಕಿತ್ತು. ಅಮಲ್‌ದಾರನ ಕೈಕೆಳಗೆ ಒಬ್ಬ ಕಿಲ್ಲೇದಾರ, ಆತನ ಕೈಕೆಳಗೆ ಒಬ್ಬ ನಾಯಬ್ ಕಿಲ್ಲೇದಾರ ಅಥವಾ ದಫೇದಾರ ಮತ್ತು ಥಾಣಾದಾರ ಅಥವಾ ಹೋಬಳಿದಾರರು ಇರುತ್ತಿದ್ದರು. ಕಂದಾಚಾರ ಪೀವನ್‌ಗಳನ್ನು ನಿಯಂತ್ರಣದಲ್ಲಿಡುವ, ಅವರನ್ನು ಕೆಲಸಕ್ಕೆ ನೇಮಿಸುವ, ಅವರ ರಜೆ, ಸಂಬಳ, ಭತ್ಯೆಗಳನ್ನು ನೀಡುವ ಅಧಿಕಾರಗಳು ಅಮಿಲ್‌ದಾರನಿಗೆ ಇತ್ತು. ಅಷ್ಟೇ ಅಲ್ಲದೇ ಕೆಟ್ಟ ನಡತೆಯವರ ಪಟ್ಟಿಯನ್ನು ಇಟ್ಟುಕೊಳ್ಳುವುದು, ಅಲೆಮಾರಿ ಜನಾಂಗದವರ ಮೇಲೆ ಗಮನವಿಡುವುದು, ಖೈದಿಗಳಿಗೆ ಭತ್ಯೆ ನೀಡುವುದು, ಅಪರಾಧಗಳ ಪತ್ತೆ, ಸಾರಾಯಿ ಉಗ್ರಾಣಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಮೊದಲಾದ ಕರ್ತವ್ಯಗಳನ್ನು ಈತನು ನಿರ್ವಹಿಸು ತ್ತಿದ್ದನು. ಕಂದಾಚಾರಿಗಳು ಪೊಲೀಸ್ ಕರ್ತವ್ಯಗಳನ್ನು ಮಾಡುವುದರ ಜೊತೆಗೆ ಕಂದಾಯ ವಸೂಲಿಯಲ್ಲಿಯೂ ಸಹ ನೆರವು ನೀಡುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಂದಾಚಾರ ಭಕ್ಷಿಯಾಗಿ ಚೆಲುವೇ ಅರಸು ಮತ್ತು ಜೀವುಣರಾಯರು ಕೆಲಸ ಮಾಡಿದ್ದರು.

ಶೃಂಗೇರಿ ಸ್ವಾಮಿಜಿಗಳು ಪ್ರಯಾಣಿಸುವ ಕಾಲದಲ್ಲಿ ಅವರಿಗೆ ರಕ್ಷಣೆಯನ್ನು ನೀಡುವ ಸಲುವಾಗಿ ಸಂಬಂಧಪಟ್ಟ ಸೀಮೆಗಳ ಕಿಲ್ಲೇದಾರ ಮತ್ತು ಅಮಲ್‌ದಾರರಿಗೆ ಪೂರ್ಣಯ್ಯನವರು ಬರೆದ ಪತ್ರವನ್ನು ಸಂಗ್ರಹಿಸಲಾಗಿದೆ. ಮತ್ತು ಮೈಸೂರಿನ ರೆಸಿಡೆಂಟರಾಗಿದ್ದ ಮಾಲ್ಕಂ ರವರಿಗೆ ರಕ್ಷಣೆ ಒದಗಿಸುವಂತೆ ಪೂರ್ಣಯ್ಯನವರು ಬರೆದ ಪತ್ರವನ್ನು ಸಹ ಸಂಗ್ರಹಿಸಲಾಗಿದೆ.

ಮೈಸೂರು ಸಂಸ್ಥಾನವು ಕಮಿಷನರುಗಳ ಆಡಳಿತಕ್ಕೆ ಒಳಪಟ್ಟ ಮೇಲೆ ಆಡಳಿತದಲ್ಲಿ ಸಮಗ್ರ ಬದಲಾವಣೆಗಳನ್ನು ತರಲಾಯಿತು. ಫೌಜುದಾರರುಗಳನ್ನು ತೆಗೆದುಹಾಕಿ ಸೂಪರಿಂಟೆಂಡೆಂಟ್‌ರವರುಗಳನ್ನು ನೇಮಿಸಲಾಯಿತು. ಅಮಲ್‌ದಾರರುಗಳು ನೇರವಾಗಿ ಸೂಪರಿಂಟೆಂಡೆಂಟ್‌ನ ನಿರ್ದೇಶನದಲ್ಲಿ ಕೆಲಸ ಮಾಡ ಬೇಕಾಯಿತು. ಕಂದಾಚಾರ ಇಲಾಖೆಗೆ ಭಕ್ಷಿಗಳನ್ನು ನೇಮಿಸಲಾಯಿತು.

೧೮೩೪ರ ವೇಳೆಗೆ ಮಾರ್ಕ್ ಕಬ್ಬನ್‌ನು 'ಪೊಲೀಸ್ ಹುಕುಂನಾಮೆ'ಯನ್ನು ಜಾರಿಗೆ ತಂದನು. ಇದರಿಂದ ಕಂದಾಚಾರ ಪೀವನ್‌ಗಳ ಕೆಲಸದ ಸ್ವರೂಪದ ಬಗ್ಗೆ ಜನರಲ್ಲಿದ್ದ ಗೊಂದಲಗಳು ನಿವಾರಣೆಯಾಯಿತು. ಅವರ ಕರ್ತವ್ಯಗಳನ್ನು ನಿಗಧಿಪಡಿಸಲಾಯಿತು. ೧೮೭೨ರ ವೇಳೆಗೆ ಕಂದಾಚಾರಿಗಳ ಸಂಖ್ಯೆಯನ್ನು ಖಡಿತಗೊಳಿಸಲಾಯಿತು. ಸಂಪೂರ್ಣ ಪೊಲೀಸ್ ಇಲಾಖೆಯ ಮೇಲ್ವಿಚಾರಕನಾಗಿ ನ್ಯಾಯಾಂಗದ ಕಮಿಷನರ್‌ನು ಕೆಲಸ ಮಾಡುತ್ತಿದ್ದನು. ೧೮೮೦ ರ ವೇಳೆಗೆ ನ್ಯಾಯಾಂಗದ ಕಮಿಷನರ್ ಹುದ್ದೆಯ ಬದಲಿಗೆ ಐಜಿಪಿ ಹುದ್ದೆಯನ್ನು ನೇಮಿಸ ಲಾಯಿತು. ೧೮೭೨-೭೪ ರ ನಡುವೆ ಮದ್ರಾಸ್‌ನಲ್ಲಿದ್ದ ಪೊಲೀಸ್ ಪದ್ಧತಿಯನ್ನೇ ಇಲ್ಲಿಯೂ ಜಾರಿಗೆ ತರಲಾಯಿತು. ೧೮೭೨ ರ ವೇಳೆಗೆ ಮೈಸೂರು ಕಮಿಷನರ್ ಆಗಿದ್ದ ಎಲ್.ಬಿ.ಬೋರಿಂಗ್‌ನು ಕಂದಾಚಾರ ಪೊಲೀಸ್ ಪದ್ಧತಿಯನ್ನು ರದ್ದುಗೊಳಿಸಿದನು. ಜಿಲ್ಲೆಯಲ್ಲಿ ಸೂಪರಿಂಟೆಂಡೆಂಟ್, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರವರುಗಳನ್ನು , ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳನ್ನು ಪೊಲೀಸ್ ಕರ್ತವ್ಯಕ್ಕೆ ನೇಮಿಸಲಾಯಿತು. ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಗಳ ಸಂಬಳಗಳಲ್ಲಿ ಸುಧಾರಣೆಯನ್ನು ಮಾಡಲಾಯಿತು. ಅದರ ಪೂರ್ಣ ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪೊಲೀಸ್

ಠಾಣಾ ಕಟ್ಟಡಗಳನ್ನು ಮತ್ತು ಪೊಲೀಸರಿಗೆ ವಸತಿಗಳನ್ನು ನಿರ್ಮಿಸಲಾಯಿತು. ಪೊಲೀಸರಿಗೆ ಶಸ್ತ್ರಾಸ್ತ್ರಗಳನ್ನು ವಿತರಿಸಲಾಯಿತು. ೧೮೮೫ ರ ವೇಳೆಗೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆಯನ್ನು ರಚಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ವಂಶಪಾರಂಪರ್ಯವಾಗಿ ಪಟೇಲರು, ತೋಟಿಗಳು, ಅಥವಾ ತಳವಾರರು ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಅಪರಾಧಗಳ ಪತ್ತೆ, ಅಪರಾಧಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು, ರಾತ್ರಿ ವೇಳೆ ಗಸ್ತು, ಗ್ರಾಮದ ಗಡಿಕಾವಲು ಮೊದಲಾದ ಕರ್ತವ್ಯಗಳನ್ನು ಈ ಗ್ರಾಮೀಣ ಪೊಲೀಸರು ಮಾಡುತ್ತಿದ್ದರು. ಹಂತಹಂತವಾಗಿ ಬೆಳೆದುಬಂದ ಪೊಲೀಸ್ ಇಲಾಖೆಯ ಬೆಳವಣಿಗೆಗಳನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಈತನ ಕಾಲದಲ್ಲಿ ಬ್ರಿಟೀಷ್ ಪ್ರಾಂತ್ಯಗಳಲ್ಲಿ ಇದ್ದ ಐ.ಪಿ.ಸಿ, ಸಿ.ಆರ್.ಪಿ.ಸಿ ಮೊದಲಾದ ಕಾನೂನುಗಳನ್ನು ಮೈಸೂರು ಸಂಸ್ಥಾನದಲ್ಲಿಯೂ ಜಾರಿಗೆ ತರಲಾಯಿತು. ಇದರಿಂದಾಗಿ ಪ್ರತಿಯೊಬ್ಬ ನಾಗರೀಕನು ಕಾನೂನಿನ ಅಡಿಯಲ್ಲಿ ಯಾವುದೇ ಭೇದಭಾವಗಳಿಲ್ಲದೇ ಮಾಡಿದ ತಪ್ಪಿಗೆ ಸಮಾನ ಶಿಕ್ಷೆಗಳನ್ನು ಅನುಭವಿಸುವಂತಾಯಿತು.

ಮೈಸೂರು ಮಹಾರಾಜರಿಗೆ ಒಂದು ಅಂಗರಕ್ಷಕ ಪಡೆಯಿದ್ದು, ಈ ದಳ ಹಾಗೂ ಅಶ್ವದಳದ ಬ್ಯಾಂಡ್ ಒಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದವು. ಸುಮಾರು ೫೦೦ ಮಂದಿ ಅಂಗರಕ್ಷಕರಿದ್ದರು. ಈ ಪಡೆಯು ಮುಂದೆ ಕರ್ನಾಟಕ ರಾಜ್ಯ ಪೊಲೀಸ್ ಅಶ್ವದಳವಾಗಿ ಪರಿವರ್ತನೆಯಾಯಿತು. ಇದಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳನ್ನು ಸಹ ಸಂಗ್ರಹಿಸಲಾಗಿದೆ. ಮೈಸೂರು ದಸರಾ ಮೆರವಣಿಗೆಯಲ್ಲಿ ಈ ಅಂಗರಕ್ಷಕ ಪಡೆಗೆ ಒಂದು ಗೌರವಯುತವಾದ ಸ್ಥಾನವಿತ್ತು. ಇಂತಹ ಅಂಗರಕ್ಷಕ ಪಡೆಯಲ್ಲಿದ್ದ ಹಲವು ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ಸಂಗ್ರಹಿಸಲಾಗಿದೆ. ರಾಜ ಒಡೆಯರ ಕಾಲದಲ್ಲಿ ಥಾಣಾದಾರರು, ಓಲೆಕಾರರು, ಹೋಬಳಿದಾರರಿಂದ ಪ್ರಾರಂಭವಾದ ಪೊಲೀಸ್ ಕಾರ್ಯನಿರ್ವಹಣೆ, ಚಿಕ್ಕದೇವರಾಜ ಒಡೆಯರ ಅಠಾರ ಕಛೇರಿಯಲ್ಲಿ ಒಂದಾದ ಪಟ್ಟಣದ ಚಾವಡಿಯಲ್ಲಿ ನಡೆಯುತ್ತಿತ್ತು. ಟಿಪ್ಪುವಿನ ಕಾಲದಲ್ಲಿ ಕಂದಾಚಾರ ಪಡೆಯ ಆಶಮ್ ಕಛೇರಿ ಸ್ಥಾಪಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್, ಇದೇ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದರು. ಕ್ರಿಶ ೧೮೦೦ ರ ಸುಮಾರಿಗೆ ಬುರ್ರಾ ಪಡೆಯೆಂಬ ಸೈನಿಕ ಪಡೆಯಿಂದ ಪೊಲೀಸ್ ಕೆಲಸಗಳನ್ನು ನಿರ್ವಹಿಸಲಾಯಿತು. ಕ್ರಿಶ ೧೮೬೯ ರ ವೇಳೆಗೆ ಕಂದಾಚಾರ ಪಡೆಗೆ ಇದ್ದ ಕಂದಾಯ ವಸೂಲಿ ಅಧಿಕಾರವನ್ನು ರದ್ದುಗೊಳಿಸಲಾಯಿತು. ಕ್ರಿಶ ೧೮೮೭ ವೇಳೆಗೆ ಪ್ರಥಮ ಭಾರಿಗೆ ಪೊಲೀಸರಿಗೆ ಸಮವಸ್ತ್ರವನ್ನು ವಿತರಿಸಲಾಯಿತು.

ಮೈಸೂರು ಅಸರಸು ಬ್ರಿಟೀಷರಿಗೆ ಅಧೀನರಾಗಿದ್ದುಕೊಂಡೇ ಆಡಳಿತ ನಡೆಸಿದರು. ಇವರು ಈ ನೆಲದ ಅರಸರಾದರೂ ಸಹ ಬ್ರಿಟೀಷರ ವಿರುದ್ಧ ಈ ದೇಶದ ಜನ ನಡೆಸಿದ ಸ್ವಾತಂತ್ರ್ಯದ ಹೋರಾಟಗಳನ್ನು ಹತ್ತಿಕ್ಕುವುದು ಮೈಸೂರು ಅರಸರು ಅನಿವಾರ್ಯವೆಂದು ಭಾವಿಸಿದ್ದರು. ಏಕೆಂದರೆ ಅವರಿಗೆ ಅರಸೊತ್ತಿಗೆ ಮುಖ್ಯವಾಗಿತ್ತು. ಈ ಕಾರಣಕ್ಕಾಗಿ ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ನಂದಿಸಲು ಮೈಸೂರು ಅರಸರು ಬಳಸಿಕೊಂಡಿದ್ದು ಈ ನೆಲದ ಪೊಲೀಸರನ್ನು. ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಗಮನಿಸಿದ್ದ ಅರಸರಿಗೆ ತಾವು ಅಧಿಕಾರವನ್ನು ಕಳೆದುಕೊಳ್ಳುವ ಭಯವುಂಟಾಗಿತ್ತು. ಹಾಗಾಗಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೇಸಿಗರು ನಡೆಸಿದ ಧ್ವಜಾರೋಹಣ ಕಾರ್ಯಕ್ರಮಗಳನ್ನೂ ಸಹ ಮೈಸೂರು ಅರಸರ ಪೊಲೀಸ್ ಪಡೆ ಅಪರಾಧವೆಂದು ಪರಿಗಣಿಸಿ ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಕ್ರಮ ಜರಗಿಸಿತು. ಒಮ್ಮೆ ಬ್ರಿಟೀಷರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಸರಿಂದ ಅಧಿಕಾರವನ್ನು ಕಿತ್ತುಕೊಂಡು ಕಮಿಷನರುಗಳನ್ನು ಆಡಳಿತಕ್ಕಾಗಿ ನೇಮಿಸಿದ್ದರು. ಮೈಸೂರು ಅರಸರಿಗೆ ಅಧಿಕಾರವನ್ನು ಪುನ: ಬ್ರಿಟೀಷರು ಹಸ್ತಾಂತರ ಮಾಡಿದ್ದರು. ಹಾಗಾಗಿ ಮೈಸೂರು ಅರಸರಿಗೆ ಅಧಿಕಾರವನ್ನು

ಉಳಿಸಿಕೊಳ್ಳಲು ಬ್ರಿಟೀಷರೊಂದಿಗೆ ಉತ್ತಮ ಬಾಂದವ್ಯದಿಂದ ಇರುವುದು ಅನಿವಾರ್ಯವಾಗಿತ್ತು. ಬ್ರಿಟೀಷರ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇವರು ಇರಲಿಲ್ಲ. ಅಥವಾ ಬ್ರಿಟೀಷರ ವಿರುದ್ದ ಸೈನಿಕ ಹೋರಾಟವನ್ನು ಮಾಡಬಲ್ಲಂತಹ ಸಾಮರ್ಥ್ಯ, ಸೈನಿಕ ಬಲ ಇವರಲ್ಲಿ ಇರಲಿಲ್ಲ. ಹಾಗಾಗಿ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ತಮ್ಮ ಪೊಲೀಸ್ ಪಡೆಯನ್ನು ಬಳಸಿಕೊಂಡರು. ಪ್ರಜಾ ಸರಕಾರ ರಚಿಸಬೇಕೆಂಬ ಕಾಂಗ್ರೇಸಿನ ಬೇಡಿಕೆ, ಕಾಂಗ್ರೇಸ್ ಧ್ವಜವೇ ರಾಷ್ಟ್ರಧ್ವಜ ಎಂದು ಹಾರಿಸಿದ ಘಟನೆಗಳಿಂದ ನಿಜವಾಗಿಯೂ ಬ್ರಿಟೀಷರಿಗಷ್ಟೇ ಅಲ್ಲದೇ ಮೈಸೂರು ಅರಸರಿಗೂ ಭಯವಾಗಿತ್ತು. ತಾವು ಅಧಿಕಾರ ಕಳೆದುಕೊಳ್ಳುತ್ತೇವೆ ಎಂಬ ಭಯ ಅವರನ್ನು ಆವರಿಸಿತು. ಅಧಿಕಾರಕ್ಕಾಗಿ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವುದು ಬ್ರಿಟೀಷರಷ್ಟೇ ಮೈಸೂರು ಅರಸರಿಗೂ ಅಗತ್ಯವಾಗಿತ್ತು. ಇದಕ್ಕಾಗಿ ಅವರು ಪೊಲೀಸ್ ಪಡೆಯನ್ನು ಬಳಸಿಕೊಂಡರು. ಪೊಲೀಸರಿಗಾದರೂ ಊಳಿಯಪಾಳಿ. ಅನ್ನವಿಟ್ಟ ಅರಸನಿಗೆ ವಿಧೇಯನಾಗಿ ನಡೆಯಬೇಕಾದ ಅನಿವಾರ್ಯತೆ ಇತ್ತು. ಬ್ರಿಟೀಷರ ಅನ್ಯಾಯಗಳನ್ನು ಪ್ರತಿಭಟಿಸುವ ಮನಸ್ಸು ಆಂತರ್ಯದಲ್ಲಿ ಇದ್ದರೂ ಸಹ ತಮ್ಮ ಉದ್ಯೋಗದ ನಿಮಿತ್ತ ಅವರು ಹಾಗೆ ಮಾಡಲಿಲ್ಲ. ಅದಕ್ಕಿಂತ ಹೆಚ್ಚಾಗಿ ಪ್ರತಿಭಟನೆ ಯಂತಹ ಕೆಲಸಗಳಿರಲಿ, ಇಲಾಖೆಯಲ್ಲಿ ಒಂದು ಸಣ್ಣ ತಪ್ಪನ್ನೇ ದೊಡ್ಡದೆಂದು ಪರಿಗಣಿಸಿ ಅವರಿಗೆ ಉಗ್ರ ಶಿಕ್ಷೆ ನೀಡಲಾಗುತ್ತಿತ್ತು. ಇದರ ಮೂಲಕ ತಾವು ಹೇಳಿದಂತೆ ಕೇಳುವ ಸ್ಥಿತಿಯಲ್ಲಿ ಪೊಲೀಸರನ್ನು ಇಟ್ಟುಕೊಂಡರು.

ಬ್ರಿಟೀಷ್ ಕಾಲದ ಪೊಲೀಸ್ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ಬಂಗಾಳದ ಬ್ರಿಟೀಷ್ ಪೊಲೀಸ್ ವ್ಯವಸ್ಥೆಯ ಪ್ರಭಾವವು ಮೈಸೂರು ಪ್ರಾಂತ್ಯದ ಮೇಲೆ ಆಗಿತ್ತು. ಅಲ್ಲಿದ್ದ ದರೋಗ ವ್ಯವಸ್ಥೆ, ಥಾಣಾದಾರ್ ವ್ಯವಸ್ಥೆಯೂ ಸಹ ಮೈಸೂರಿನಲ್ಲಿ ಇದ್ದುದನ್ನು ಗುರುತಿಸಬಹುದಾಗಿದೆ. ಲಾರ್ಡ್ ಕಾರ್ನ್‌ವಾಲೀಸನು ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಯಲ್ಲಿ ಹಲವಾರು ಸುಧಾರಣೆಯನ್ನು ತಂದನು. ಭ್ರಷ್ಟಾಚಾರವನ್ನು ನಿಯಂತ್ರಣಕ್ಕೆ ತಂದನು. ಜಮೀನು ದಾರರುಗಳ ಬಳಿಯಲ್ಲಿದ್ದ ಶಾಂತಿ ಸುವ್ಯವಸ್ಥೆ ಕಾಪಾಡುವ ಅಧಿಕಾರವನ್ನು ಕಿತ್ತುಕೊಂಡು ಪ್ರತ್ಯೇಕ ಪೊಲೀಸ್ ವ್ಯವಸ್ಥೆಗಾಗಿ ಅಡಿಪಾಯ ಹಾಕಿದನು. ಠಾಣೆಗಳನ್ನು ಸ್ಥಾಪಿಸಿ ಅದಕ್ಕೆ ದರೋಗಗಳನ್ನು ನೇಮಿಸಿದನು. ಹೆಚ್ಚಾಗಿ ಬ್ರಿಟೀಷ್ ಅಧಿಕಾರಿಗಳೇ ಈ ಹುದ್ದೆಯಲ್ಲಿದ್ದರು. ಪೊಲೀಸ್ ಅಧಿಕಾರಿಗಳಿಗೆ ವೇತನವನ್ನು ನಿಗಧಿಗೊಳಿಸಿದನು. ದರೋಗನಿಗೆ ಸಹಾಯಕರಾಗಿ ೧೫ ರಿಂದ ೨೦ ಜನ ಪೊಲೀಸ್ ಪೇದೆಗಳು ಇರುವಂತೆ ಸಂಘಟಿಸಲಾಯಿತು. ಕ್ರಿಶ ೧೮೧೩ ರ ವೇಳೆಗೆ ಈಸ್ಟ್ ಇಂಡಿಯಾ ಕಂಪೆನಿಯ ನಿರ್ದೇಶಕರುಗಳ ಸಭೆಯು ಭಾರತ ದೇಶದಲ್ಲಿ ತನಗೆ ಒಳಪಡುವ ಭೂಪ್ರದೇಶಗಳಲ್ಲಿ ನ್ಯಾಯಾಡಳಿತ ಮತ್ತು ಪೊಲೀಸ್ ವ್ಯವಸ್ಥೆಯ ಬಗ್ಗೆ ವಿಚಾರಣೆ ನಡೆಸಲು ತನ್ನದೇ ಆದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿತು. ಇದರ ಶಿಫಾರಸ್ಸಿನ ಮೇರೆಗೆ ಕ್ರಿಶ ೧೮೧೬ರ ೧೧ ನೇ ಮದ್ರಾಸ್ ರೆಗ್ಯುಲೇಶನ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದರ ಪ್ರಕಾರ ಬ್ರಿಟೀಷ್ ಪ್ರಾಂತ್ಯಗಳಲ್ಲಿ ಗ್ರಾಮೀಣ ಪೊಲೀಸ್ ವ್ಯವಸ್ಥೆ ಏಕಪ್ರಕಾರ ಇರುವಂತೆ ಮಾಡಲಾಯಿತು. ಗ್ರಾಮಗಳಲ್ಲಿನ ಪರಂಪರಾಗತ ಮುಖ್ಯಸ್ಥರಿಗೆ ಪೊಲೀಸ್ ಕರ್ತವ್ಯಗಳನ್ನು ನೀಡಲಾಯಿತು.

ಕ್ರಿಶ ೧೮೪೩ ರಲ್ಲಿ ಕಾರ್ನ್‌ವಾಲೀಸನು ಮೊಟ್ಟಮೊದಲ ಬಾರಿಗೆ ಸಿಂದ್ ಪ್ರದೇಶದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತಂದನೆಂಬುದು ಕೆಲವರ ಅಭಿಪ್ರಾಯ. ಆದರೆ ಈ ವಾದ ಸರಿಯಾದುದಲ್ಲ. ಏಕೆಂದರೆ ಕ್ರಿಶ ೧೮೪೩ ರಲ್ಲಿ ಸಿಂದ್‌ನಲ್ಲಿ ಪೊಲೀಸ್ ಪಡೆಯನ್ನು ಸ್ಥಾಪಿಸಿದವನು ಸರ್.ನೇಪಿಯರ್. ಅಷ್ಟೇ ಏಕೆ ಕ್ರಿಶ ೧೮೪೩ ರಲ್ಲಿ ಲಾರ್ಡ್ ಕಾರ್ನ್‌ವಾಲೀಸನು ಭಾರತದಲ್ಲಿಯೇ ಇರಲಿಲ್ಲ. ಮಾತ್ರವಲ್ಲ ಅವನು ಬದುಕಿಯೇ ಇರಲಿಲ್ಲ ಎಂಬುದನ್ನು ಆಧಾರಗಳ ಸಹಿತ ಚರ್ಚಿಸಲಾಗಿದೆ.

ಕರ್ನಾಟಕದ ಪೊಲೀಸ್ ವ್ಯವಸ್ಥೆಯ ಮೇಲೆ ಮದ್ರಾಸ್ ಪ್ರೆಸಿಡೆನ್ಸಿಯ ಪೊಲೀಸ್ ವ್ಯವಸ್ಥೆಯ ಪ್ರಭಾವ ಕಂಡುಬರುತ್ತದೆ. ಏಕೆಂದರೆ ಈಗಿನ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದವು. ಕ್ರಿಶ ೧೮೬೦ ರಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂದು ಕರಾವಳಿ ಜಿಲ್ಲೆಯನ್ನು ಬ್ರಿಟೀಷರು ವಿಭಾಗಿಸುವುದಕ್ಕಿಂತ ಮೊದಲು ಉತ್ತರಕನ್ನಡ ಜಿಲ್ಲೆಯೂ ಸಹ ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟಿತ್ತು. ನಂತರ ಅದನ್ನು ಬಾಂಬೆ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕಾವಲ್ ವ್ಯವಸ್ಥೆ ಎಂದು ಕರೆಯುವ ಪೊಲೀಸ್ ವ್ಯವಸ್ಥೆ ಜಾರಿಯಲ್ಲಿತ್ತು. ಇವರ ಕರ್ತವ್ಯಗಳು ಬಹುತೇಕ ಕಂದಾಚಾರಿ ಪೊಲೀಸರ ಕರ್ತವ್ಯಗಳನ್ನೇ ಹೋಲುತ್ತದೆ. ಪೊಲೀಸ್ ಅಧಿಕಾರಿಗಳನ್ನು ಕಾವಲ್‌ಗಾರ, ಪೋಲಿಗಾರ್ ಎಂದು ಕರೆಯಲಾಗುತ್ತಿತ್ತು. ಇಲ್ಲಿಯ ಪೊಲೀಸ್ ಸುಧಾರಣೆಗಳ ಬಗ್ಗೆ ಕ್ರಿಶ ೧೮೫೫ ರಲ್ಲಿ ಟಾರ್ಟರ್ ಕಮಿಟಿಯನ್ನು ರಚಿಸಲಾಯಿತು. ಕ್ರಿಶ ೧೮೫೭ ರ ಹೊತ್ತಿಗೆ ಒಬ್ಬ ಚೀಫ್ ಕಮಿಷನರ್, ೨೦ ಜಿಲ್ಲಾ ಸೂಪರಿಂಟೆಂಡೆಂಟ್‌ಗಳು, ೨೦ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳು ಇದ್ದರು. ೧೮೫೯ ರ ವೇಳೆಗೆ ಉತ್ತರ ಆರ್ಕಾಟ್‌ಗಳನ್ನು ಕಾನ್‌ಸ್ಟೇಬಲ್ ವ್ಯವಸ್ಥೆಗಳನ್ನು ಜಾರಿಗೆ ತರಲಾಯಿತು. ಈ ಹೊಸ ಪೊಲೀಸ್ ವ್ಯವಸ್ಥೆ ಐರೀಷ್ ಮಾದರಿಯಲ್ಲಿತ್ತು. ಮದ್ರಾಸ್ ಸಿವಿಲ್ ಸರ್ವಿಸ್‌ಗೆ ಸೇರಿದ ಶ್ರೀ.ವಿಲಿಯಂ ರಾಬಿನ್‌ಸನ್ ೧೮೫೮ ರಲ್ಲಿ ಚೀಫ್ ಕಮಿಷನರ್ ಆಗಿ ನೇಮಕವಾದನು. ಈತನು ಇಂಗ್ಲೆಂಡ್ ಮತ್ತು ಇತರೆಡೆಗಳಲ್ಲಿನ ಪೊಲೀಸ್ ಸಂಘಟನೆ ಮತ್ತು ವ್ಯವಸ್ಥೆಗಳ ಬಗ್ಗೆ ವಿವರವಾದ ಅಧ್ಯಯನ ಮಾಡಿದವನಾಗಿದ್ದನು. ನಂತರದ ದಿನಗಳಲ್ಲಿ ಈ ಹುದ್ದೆಗೆ ಐ.ಜಿ.ಪಿ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಯಿತು. ೧೮೫೯ ರಲ್ಲಿ ಉತ್ತರ ಆರ್ಕಾಟ್‌ನಲ್ಲಿ ಹೊಸ ಕಾನ್‌ಸ್ಟೇಬಲ್ ವ್ಯವಸ್ಥೆ ಜ್ಯಾರಿಗೆ ತರಲಾಯಿತು. ಉತ್ತರ ಸಿರ್‌ಕಾರ್ಸ್ (circars) ಜಿಲ್ಲೆಯನ್ನು ಹೊರತುಪಡಿಸಿ ಉಳಿದೆಲ್ಲಾ ಜಿಲ್ಲೆಗಳಲ್ಲಿ ಪೊಲೀಸ್ ಪುನರ್‌ಸಂಘಟನೆ ಕೆಲಸ ಪ್ರಾರಂಭವಾದುವು. ಉತ್ತರ ಸಿರ್‌ಕಾರ್ಸ್‌ನಲ್ಲಿ ೧೮೬೧ ರ ವರೆಗೂ ಪೊಲೀಸ್ ವ್ಯವಸ್ಥೆಯ ಪುನರ್ ಸಂಘಟನೆ ವ್ಯವಸ್ಥೆಯನ್ನು ಮುಂದುವರಿಸಲಾಯಿತು. ಹೊಸ ಪೊಲೀಸ್ ವ್ಯವಸ್ಥೆಯನ್ನು 'ಐರೀಷ್' ಮಾಧರಿಯಲ್ಲಿ ಸಂಘಟಿಸಲಾಯಿತು. ನಮ್ಮ ಪೊಲೀಸ್ ವ್ಯವಸ್ಥೆ ಬ್ರಿಟೀಷರ ಕೊಡುಗೆ ಅಲ್ಲ. ಏಕೆಂದರೆ ಬ್ರಿಟೀಷರ ಪೊಲೀಸ್ ವ್ಯವಸ್ಥೆ ಬರುವುದಕ್ಕಿಂತ ಮೊದಲೇ ನಮ್ಮದೇ ಆದ ಒಂದು ವ್ಯವಸ್ಥಿತ ಪೊಲೀಸ್ ಪಡೆ ಇತ್ತು. ಇದಕ್ಕೆ ಬ್ರಿಟೀಷರು ಹೊಸ ರೂಪವನ್ನು ಕೊಟ್ಟರೇ ವಿನಹ ಪೊಲೀಸ್ ಪಡೆ ಸ್ಥಾಪಿಸಿದವರು ಇವರಲ್ಲ. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಈ ಹಿಂದೆಯೇ ಇದ್ದ ಕಾವಲಿ ಪೊಲೀಸ್ ವ್ಯವಸ್ಥೆಯನ್ನು ರದ್ದುಮಾಡಿ ಅದನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಆ ವ್ಯವಸ್ಥೆಯು ಭ್ರಷ್ಟಾಚಾರದಿಂದ ಕೂಡಿದೆ ಎಂದು ಬ್ರಿಟೀಷರು ಆರೋಪಿಸಿದರು. ತಾವು ಹೇಳಿದಂತೆ ಕೇಳುವ ಬ್ರಿಟೀಷರ ವಿರುದ್ಧ ನಡೆಯುವ ದಂಗೆಗಳು, ಹೋರಾಟಗಳು, ಸತ್ಯಾಗ್ರಹಗಳನ್ನು ಸದೆಬಡಿಯುವಂತಹ ಒಂದು ಸಂಘಟಿತವಾದ ಪೊಲೀಸ್ ವ್ಯವಸ್ಥೆ ಬ್ರಿಟೀಷರಿಗೆ ಬೇಕಿತ್ತು. ಹಾಗಾಗಿ ಸ್ಥಳೀಯ ಪೊಲೀಸ್ ವ್ಯವಸ್ಥೆಗಳನ್ನು ಕೊನೆಗೊಳಿಸಿ ಯುರೋಪಿಯನ್ ಅಧಿಕಾರಿಗಳನ್ನು ಒಳಗೊಂಡ ಪೊಲೀಸ್ ಪಡೆಯನ್ನು ರಚಿಸುವುದು ಅವರ ಪ್ರಥಮಾದ್ಯತೆಗಳಲ್ಲಿ ಒಂದಾಗಿತ್ತು.

ಸರ್ ಥಾಮಸ್ ಮನ್ರೋನು ಕ್ರಿಶ ೧೮೧೪ ರ ವೇಳೆಗೆ ನ್ಯಾಯಾಧೀಶರನ್ನು ಪೊಲೀಸ್ ಕರ್ತವ್ಯದಿಂದ ವಿಮುಕ್ತಿಗೊಳಿಸಿದನು. ಪೊಲೀಸ್ ಸೂಪರಿಂಟೆಂಡೆಂಟ್‌ನ ಬಳಿ ಇದ್ದ ಮ್ಯಾಜಿಸ್ಟ್ರಿಯಲ್ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ವರ್ಗಾಯಿಸಲಾಯಿತು. ಪೊಲೀಸ್ ಅಧಿಕಾರಿಗಳಲ್ಲಿದ್ದ ಮ್ಯಾಜಿಸ್ಟ್ರಿಯಲ್ ಅಧಿಕಾರವನ್ನು ಕಿತ್ತುಕೊಂಡಿದ್ದರ ಹಿಂದೆ ಬ್ರಿಟೀಷರ ಸ್ಥಾಪಿಕ ಉದ್ದೇಶಗಳು ಅಡಗಿವೆ. ಏಕೆಂದರೆ ಪೊಲೀಸ್ ಅಧಿಕಾರಿಗಳು ಬಹುತೇಕ ಭಾರತೀಯರಾಗಿದ್ದುದರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂಧನಕ್ಕೊಳಗಾದ ವ್ಯಕ್ತಿಗಳನ್ನು ಮ್ಯಾಜಿಸ್ಟ್ರಿಯಲ್

ಅಧಿಕಾರವನ್ನು ಹೊಂದಿದ ಈ ಪೊಲೀಸ್ ಅಧಿಕಾರಿಗಳ ಮುಂದೆ ಹಾಜರುಪಡಿಸಿದ್ದಲ್ಲಿ ಬ್ರಿಟೀಷರ ವಿರುದ್ಧದ ತೀರ್ಪುಗಳು ಬರುವ ಸಾಧ್ಯತೆಗಳಿದ್ದವು. ಆದ್ದರಿಂದ ಈ ಅಧಿಕಾರವನ್ನು ಕಿತ್ತುಕೊಂಡು ಮ್ಯಾಜಿಸ್ಟ್ರೇಟರುಗಳು ಮತ್ತು ನ್ಯಾಯಾಧೀಶರುಗಳು ಯುರೋಪಿಯನ್ನರಾಗಿರುವಂತೆ ನೋಡಿಕೊಳ್ಳಲಾಯಿತು. ಕ್ರಿಶ ೧೮೧೬ ರಲ್ಲಿ ದರೋಗ ಹುದ್ದೆಯನ್ನು ರದ್ದುಗೊಳಿಸಲಾಯಿತು. ಗ್ರಾಮೀಣ ಪೊಲೀಸರನ್ನು ಪಟೇಲನ ನೇರ ನಿರ್ದೇಶನಕ್ಕೆ ಒಪ್ಪಿಸಲಾಯಿತು. ಸೈಂಟ್ ಜಾರ್ಜ್ ಪೋರ್ಟ್‌ನ ಸರಕಾರದ ನಿರ್ದೇಶನಗಳಿಗೆ ಒಳಪಟ್ಟು ೧೮೧೬ ರಲ್ಲಿ, ಒಂದು ಸಾಮಾನ್ಯವಾದ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಇದು ಬಹುತೇಕ ಬಂಗಾಳದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಹೋಲುತ್ತಿತ್ತು. ಕ್ರಿಶ ೧೮೫೪ ರಲ್ಲಿ ಇಲಾಖೆಯಲ್ಲಿ ಹಿಂಸೆ, ದಬ್ಬಾಳಿಕೆ ಮತ್ತು ಭ್ರಷ್ಟಾಚಾರಗಳು ತುಂಬಿಹೋಗಿದ್ದವೆಂದು ಆರೋಪಿಸಲಾಯಿತು. ಇಂತಹ ಆರೋಪಗಳ ವಿಚಾರಣೆಗೆ ನೇಮಕವಾದ ಆಯೋಗದ ಮುಖ್ಯಸ್ಥರು ಮಾತ್ರ ಭಾರತೀಯರಾಗಿರದೇ ಯುರೋಪಿಯನ್ನರೇ ಆಗಿರುವಂತೆ ನೋಡಿಕೊಳ್ಳಲಾಯಿತು. ಈ ಆರೋಪಗಳ ಬಗ್ಗೆ ತನಿಖೆ ನಡೆಸುವ ಸಲುವಾಗಿ ಸರಕಾರವು ಇ.ಎಫ್.ಇಲಿಯೆಟ್ ಮತ್ತು ಇತರರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿತು. ಪೊಲೀಸರು ಕಂದಾಯ ವಸೂಲಿಯ ಕಾರಣವನ್ನು ಹಿಡಿದುಕೊಂಡು ಜನರನ್ನು ಹಿಂಸಿಸುತ್ತಿದ್ದಾರೆಂದು ಈ ಆಯೋಗವು ತನ್ನ ವರದಿಯಲ್ಲಿ ತಿಳಿಸಿತು. ಪೊಲೀಸರಿಗೆ ಅತ್ಯಂತ ಕಡಿಮೆ ಸಂಬಳವನ್ನು ನೀಡುತ್ತಿದ್ದುದರಿಂದ ಭ್ರಷ್ಟಾಚಾರಿಗಳಾಗಿದ್ದರೆಂತಲೂ ವರದಿ ನೀಡಿತು. ಹಾಗಾಗಿ ಪೊಲೀಸರನ್ನು ಕಂದಾಯ ಕರ್ತವ್ಯಗಳಿಂದ ಪ್ರತ್ಯೇಕಗೊಳಿಸಲಾಯಿತು. ಪೊಲೀಸ್ ಸೂಪರಿಂಟೆಂಡೆಂಟ್‌ನ ನೇರ ಮೇಲ್ವಿಚಾರಣೆಯಲ್ಲಿ ಪುನರ್‌ಸಂಘಟಿಸ ಲಾಯಿತು. ಮತ್ತು ಈ ಅಧಿಕಾರಿಯು ಯುರೋಪಿಯನ್ ಆಗಿರಬೇಕೆಂದು ಆಯೋಗವು ಸೂಚಿಸಿತು. ಇದು ಭಾರತ ದಲ್ಲಿ ಇರಬೇಕಾದ ಅಪೇಕ್ಷಿತ ಪೊಲೀಸ್ ವ್ಯವಸ್ಥೆಯ ಬಗ್ಗೆ ರೂಪರೇಶೆಗಳನ್ನು ನೀಡಿತು. ಸೇನಾ ಅಧಿಕಾರಿಗಳ ಅಧೀನದಲ್ಲಿರುವ ಸಶಸ್ತ್ರ ಸೇನೆಯನ್ನು ಸಿವಿಲ್ ಕಾನ್‌ಸ್ಟೇಬಲ್‌ಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಬೇಕು, ಮಿಲಿಟರಿ ಅಧಿಕಾರಿಗಳನ್ನು ಮಿಲಿಟರಿ ಕೆಲಸಕ್ಕೂ, ಸಿವಿಲ್ ಕಾನ್‌ಸ್ಟೇಬಲ್‌ಗಳನ್ನು ನಾಗರಿಕ ಕೆಲಸಕ್ಕೂ ನೇಮಿಸಬೇಕು. ಭಾರತದ ಪೊಲೀಸ್ ವ್ಯವಸ್ಥೆ ಇಂಗ್ಲೀಷ್ ಮತ್ತು ಐರಿಷ್ ಕಾನ್‌ಸ್ಟೇಬಲರಿಯ ಮಾದರಿಯಲ್ಲಿರಬೇಕು ಎಂದು ಈ ಆಯೋಗವು ಸೂಚಿಸಿತು. ಆದರೆ ೧೮೫೫ ರಲ್ಲಿ ಮದ್ರಾಸ್ ಪ್ರಾಂತ್ಯದ ಪೊಲೀಸ್ ಸುಧಾರಣೆಗೆ ರಚನೆಯಾದ ಟಾರ್ಟರ್ ಕಮಿಟಿಯು ಪೊಲೀಸ್ ವ್ಯವಸ್ಥೆ ಐರಿಷ್ ಮಾದರಿಯಲ್ಲಿರುವಂತೆ ಶಿಫಾರಸ್ಸು ಮಾಡಿತು. ಇದಕ್ಕೆ ಪ್ರಭಲ ಕಾರಣವೇನೆಂದರೆ, ಇಂಗ್ಲೆಂಡ್‌ನಲ್ಲಿ ಪೊಲೀಸ್ ಆಡಳಿತ ಸರಕಾರದ ಅಧೀನದಲ್ಲಿಯೇ ಬಂದರೂ ಪೊಲೀಸ್ ಆಡಳಿತದಲ್ಲಿ ಸಾರ್ವಜನಿಕರಿಗೆ ನೇರ ಸ್ಥಾನ ಕಲ್ಪಿಸಲಾಗಿದೆ. ತಮ್ಮ ಪ್ರಾಂತ್ಯದ ಪೊಲೀಸರಿಗೆ ಸಂಬಂಧಿಸಿದಂತೆ ಹಲವಾರು ತೀರ್ಮಾನಗಳನ್ನು ಸ್ಥಳೀಯರನ್ನು ಒಳಗೊಂಡ ಸಮಿತಿ ತೆಗೆದುಕೊಳ್ಳುತ್ತದೆ. ಪೊಲೀಸ್ ಆಡಳಿತಕ್ಕೆ ಸಂಬಂಧಿಸಿದಂತೆ ಪ್ರತೀ ಪ್ರಾಂತ್ಯದಲ್ಲಿ ಪೊಲೀಸ್ ಅಥಾರಿಟಿ ಎಂದು ಕರೆಯುವ ಸಮಿತಿ ಇರುತ್ತದೆ. ಈ ಸಮಿತಿ ಪೊಲೀಸರಿಗೆ ಬೇಕಾಗುವಂತಹ ಹಣ ಸಂಗ್ರಹಿಸುತ್ತದೆ. ಹಾಗೂ ಈ ಹಣವನ್ನು ಹೇಗೆ ವ್ಯಯಿಸಬೇಕೆಂದು ಪೊಲೀಸರಿಗೆ ಮಾರ್ಗದರ್ಶನ ನೀಡುತ್ತದೆ. ಈ ಪೊಲೀಸ್ ಅಥಾರಿಟಿಯು ಪ್ರತೀ ವರ್ಷ ಪೊಲೀಸರಿಗೆ ಸಾಧಿಸಬೇಕಾದ ಗುರಿಗಳ ಬಗ್ಗೆ ವಾರ್ಷಿಕ ಯೋಜನೆಯನ್ನು ರೂಪಿಸಿಕೊಡುತ್ತದೆ. ಪೊಲೀಸ್ ಇಲಾಖೆಯೂ ಸಹ ಮುಂದಿನ ವರ್ಷದ ಕ್ರಿಯಾ ಯೋಜನೆಯನ್ನು ಸಾರ್ವಜನಿಕರಿಗೆ ತಿಳಿಸಬೇಕು. ಮತ್ತು ವರ್ಷದ ಕೊನೆಯಲ್ಲಿ ಯಾವ್ಯಾವ ಗುರಿಗಳನ್ನು ಸಾಧಿಸಲಾಗಿದೆ ಮತ್ತು ಯಾವ ಗುರಿಗಳನ್ನು ಸಾಧಿಸಲಾಗಿಲ್ಲ ಮತ್ತು ಅದಕ್ಕೆ ಕಾರಣವೇನೆಂದು ಜನರಿಗೆ ತಿಳಿಸಬೇಕು. ಪೊಲೀಸರು ವ್ಯಯಿಸಿದ ಹಣದ ಬಗ್ಗೆ ಗಮನಹರಿಸಲು ಸ್ಥಳೀಯರನ್ನು ಒಳಗೊಂಡ ಆಡಳಿತ

ಕಮಿಟಿಯು ಇರುತ್ತದೆ. ಈ ರೀತಿ ಸ್ಥಳೀಯರಿಗೆ (ಭಾರತೀಯರಿಗೆ) ಸ್ವಾತಂತ್ರ್ಯ ನೀಡಿರುವುದು ಬ್ರಿಟೀಷರಿಗೆ ಇಷ್ಟವಿರಲಿಲ್ಲ. ಪೊಲೀಸ್ ವ್ಯವಸ್ಥೆ ಯುರೋಪಿಯನ್ನರ ಪರಮಾಧಿಕಾರದಲ್ಲಿರಬೇಕೆಂದು ಅವರ ಸ್ಥಾಪಿತ ಉದ್ದೇಶವಾಗಿತ್ತು. ಹಾಗಾಗಿ ಅವರು ಇಂಗ್ಲೆಂಡ್ ಮಾಧರಿಯ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಿಲ್ಲ. ಹೊಸ ಪೊಲೀಸ್ ವ್ಯವಸ್ಥೆ ಗ್ರಾಮೀಣ ಪೊಲೀಸರೊಂದಿಗೆ ಸಂಪರ್ಕ ಹೊಂದಿರಬೇಕು, ಪ್ರತಿಯೊಂದು ಪ್ರಾಂತ್ಯದಲ್ಲೂ ಐ.ಜಿ.ಪಿ ನೇತ್ರತ್ವದಲ್ಲಿ ಪೊಲೀಸ್ ಇಲಾಖೆಯನ್ನು ಪ್ರತ್ಯೇಕವಾದ ಆಡಳಿತ ಘಟಕವನ್ನಾಗಿ ಮಾಡಬೇಕು, ಪೊಲೀಸ್ ಮತ್ತು ನ್ಯಾಯಾಲಯದ ಕರ್ತವ್ಯಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಬೇಕೆಂದು ಆಯೋಗವು ಸೂಚಿಸಿತು. ಈ ಶಿಫಾರಸ್ಸುಗಳನ್ನು ಸರಕಾರವು ಒಪ್ಪಿಕೊಂಡು ಜಾರಿಗೆ ತಂದಿತು. ಕ್ರಿಶ ೧೮೬೦ ರ ವೇಳೆಗೆ ಎಲ್ಲಾ ಬ್ರಿಟೀಷ್ ಪ್ರಾಂತ್ಯಗಳಿಗೆ ಅನ್ವಯವಾಗುವಂತೆ ಭಾರತೀಯ ದಂಡ ಸಂಹಿತೆಯನ್ನು ಜಾರಿಗೆ ತರಲಾಯಿತು. ಎಲ್ಲಾ ವರ್ಗದ ಜನರಿಗೂ ಏಕರೂಪವಾದ ಕಾನೂನನ್ನು ಜಾರಿಗೆ ಬಂತು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿದ್ದ ಪೊಲೀಸ್ ಇಲಾಖೆಯ ಬಲ, ಅಲ್ಲಿದ್ದ ಗ್ರಾಮಿಣ ಪೊಲೀಸ್ ವ್ಯವಸ್ಥೆ, ಪೊಲೀಸರ ಜಾತಿವಾರು ನೇಮಕಾತಿ, ತರಬೇತಿ, ಸಮವಸ್ತ್ರ, ಸಂಬಳ, ವಸತಿ, ಅಪರಾಧಗಳ ಬಗ್ಗೆ ಅಂಕಿ ಅಂಶಗಳ ಆಧಾರದ ಮೇರೆಗೆ ವಿವರಿಸಲಾಗಿದೆ. ಕ್ರಿಶ ೧೮೫೭ ರ ಭಾರತದ ಸ್ವಾತಂತ್ರ್ಯ ಆಂದೋಲನದ ನಂತರ ಸಂಪೂರ್ಣವಾಗಿ ಆಡಳಿತದ ವ್ಯವಸ್ಥೆ ಕುಸಿದು ಹೋಯಿತು. ಶಾಂತಿ ಸುವ್ಯವಸ್ಥೆಗೆ ಭಂಗ ತರುವ ಕೆಲಸಗಳು ನಡೆದವು. ಜನರ ಜೀವ ಮತ್ತು ಆಸ್ತಿಪಾಸ್ತಿಗಳು ಅಭದ್ರತೆಯಲ್ಲಿ ತೇಲಾಡಿದವು. ಇದರಿಂದಾಗಿ ಇಡೀ ಭಾರತ ದೇಶದಲ್ಲಿ ಪೊಲೀಸ್ ಪುನರ್‌ಸಂಘಟನೆ ಮಾಡುವ ವ್ಯವಸ್ಥೆ ಬ್ರಿಟೀಷರಿಗೆ ಎದುರಾಯಿತು. ಅಷ್ಟೇ ಅಲ್ಲದೇ ಭಾರತದಲ್ಲಿದ್ದ ಯುರೋಪಿಯನ್ನರನ್ನು ರಕ್ಷಿಸುವುದು ಸಹ ಅವರ ಪ್ರಮುಖ ಉದ್ದೇಶವಾಗಿತ್ತು. ಹೀಗಾಗಿ ಕ್ರಿಶ ೧೮೬೦ ರಲ್ಲಿ ಪೊಲೀಸ್ ಆಯೋಗವೊಂದನ್ನು ರಚಿಸಲಾಯಿತು. ಹಾಲಿ ಇದ್ದ ಪೊಲೀಸ್ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಮಾರ್ಗೋಪಾಯಗಳನ್ನು ಸೂಚಿಸುವಂತೆ ಆಯೋಗಕ್ಕೆ ತಿಳಿಸಲಾಯಿತು. ಈ ಆಯೋಗವು ಮದ್ರಾಸ್ ಪೊಲೀಸರ ವ್ಯವಹಾರಿಕ ಅನುಭವಗಳನ್ನು ಪಡೆಯಿತು. ಏಕೆಂದರೆ ಇಲ್ಲಿ ಕ್ರಿಶ ೧೮೫೭ರ ೨೪ ನೇ ಕಾಯ್ದೆಯಂತೆ ಮದ್ರಾಸ್ ಪೊಲೀಸ್ ಆಕ್ಟ್‌ನ್ನು ರಚಿಸಿಕೊಳ್ಳಲಾಗಿತ್ತು. ಆಯೋಗವು ಪೊಲೀಸ್ ಇಲಾಖೆಯ ಆಡಳಿತವನ್ನು ಸರಳೀಕರಣಗೊಳಿಸಲು ಕೆಲವು ಪರಿಹಾರಗಳನ್ನು ಸೂಚಿಸಿತು. ಮಿಲಿಟರಿ ಪೊಲೀಸ್‌ನ ಅಗತ್ಯವಿಲ್ಲ ವೆಂದು ಪೊಲೀಸ್ ಇಲಾಖೆಯನ್ನು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಿ, ಅದೇ ಇಲಾಖೆಯ ಅಧಿಕಾರಿಯ ನಿಯಂತ್ರಣದಲ್ಲಿಡಬೇಕೆಂತಲೂ, ಅವರನ್ನು ನ್ಯಾಯಾಂಗದ ಕೆಲಸಗಳಿಂದ ದೂರ ಇಡಬೇಕೆಂತಲೂ, ಪೊಲೀಸರಿಗೆ ಸೂಕ್ತ ಸಂಬಳ ನೀಡಬೇಕೆಂತಲೂ ಸೂಚಿಸಿತು. ಇದನ್ನು ಭಾರತ ಸರಕಾರವು ಒಪ್ಪಿಕೊಂಡಿತು. ಈ ಆಯೋಗದ ಶಿಫಾರಸ್ಸಿನಂತೆ ಕ್ರಿಶ ೧೮೬೧ ರ ೫ ನೇ ಕಾಯ್ದೆಯಲ್ಲಿ ಪೊಲೀಸ್ ಆಕ್ಟ್‌ನ್ನು ಜಾರಿಗೊಳಿಸಲಾಯಿತು. ಇದು ಮೈಸೂರು ಪ್ರಾಂತ್ಯಕ್ಕೂ ಅನ್ವಯಿಸಿತು.

ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಹುದ್ದೆಗಳಲ್ಲಿ ಬಹುತೇಕವಾಗಿ ಯುರೋಪಿಯನ್ನರೇ ಇರುತ್ತಿದ್ದರು. ಒಂದು ವೇಳೆ ಭಾರತೀಯ ಅಧಿಕಾರಿಗಳನ್ನು ಹೆಚ್ಚಾಗಿ ನೇಮಿಸಿದ್ದಲ್ಲಿ ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸುವ ಹೋರಾಟಗಾರರಿಗೆ ಪೊಲೀಸರು ಬೆಂಬಲಿಸಬಹುದೆಂಬ ಅನುಮಾನ ಬ್ರಿಟೀಷರನ್ನು ಕಾಡಿತ್ತು. ಹೀಗಾಗಿ ಕೆಳಹಂತದ ಪೊಲೀಸರು ಮಾತ್ರ ಹೆಚ್ಚಾಗಿ ಭಾರತೀಯರಾಗಿದ್ದರು. ಈ ನೇಮಕಾತಿಯ ಕುರಿತು ಲೋಕಸೇವಾ ಆಯೋಗವು ಮಾಡಿದ ಶಿಫಾರಸ್ಸುಗಳನ್ನು ವಿವರವಾಗಿ ಚರ್ಚಿಸಿದೆ. ಕ್ರಿಶ ೧೮೬೧ ಪೊಲೀಸ್ ಕಾಯ್ದೆಯಿಂದ ಸ್ಥಾಪಿತ ವಾದ ಪೊಲೀಸ್ ವ್ಯವಸ್ಥೆಯು ತೀವ್ರ ದೋಷಗಳಿಂದ ಕೂಡಿತ್ತು. ಸಾಕಷ್ಟು ತರಬೇತಿ ಪಡೆಯದ ಜನರಿಗೆ ಶಾಂತಿ

ಸುವ್ಯವಸ್ಥೆಯನ್ನು ಪಾಲಿಸುವ ಜವಾಬ್ದಾರಿಯನ್ನು ನೀಡಲಾಯಿತು. ಈ ದೋಷಗಳ ಸುಧಾರಣೆಗಾಗಿ ಕ್ರಿಶ ೧೯೦೨ ರಲ್ಲಿ ಭಾರತೀಯ ಪೊಲೀಸ್ ಆಯೋಗವನ್ನು ಸ್ಥಾಪಿಸಲಾಯಿತು. ಈ ಆಯೋಗವು ವಿಶೇಷ ಪೊಲೀಸ್ ಪಡೆಯನ್ನು ನಿರ್ಮಿಸಲು ಶಿಫಾರಸ್ಸುಮಾಡಿತು. ಇದನ್ನು ಅಪರಾಧ ತನಿಖಾ ವಿಭಾಗ ಎಂದು ಕರೆಯಲಾಯಿತು, ವಿಶೇಷ ಅಪರಾಧಗಳನ್ನು ಪತ್ತೆ ಮಾಡುವ ಕಾರ್ಯವನ್ನು ಇದು ನಿರ್ವಹಿಸುತ್ತಿತ್ತು. ಭಾರತದ ಗೃಹ ಖಾತೆಯಲ್ಲಿ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋವನ್ನು ರಚಿಸಲಾಯಿತು. ಇದು ಗುಪ್ತಮಾಹಿತಿಗಳನ್ನು ಸಂಗ್ರಹಿಸುತ್ತಿತ್ತು. ಪ್ರಾಂತ್ಯಗಳಲ್ಲಿ ಐ.ಜಿ,.ಪಿ ಆತನ ಕೆಳಭಾಗದಲ್ಲಿ ಎಸ್‌ಪಿಗಳು, ಪೊಲೀಸ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ಕಾನ್‌ಸ್ಟೇಬಲ್ ಇರುವಂತೆ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಗ್ರಾಮಗಳಲ್ಲಿ ಚೌಕಿದಾರರು ಇರುತ್ತಿದ್ದರು. ಆಡಳಿತದ ದೃಷ್ಟಿಯಿಂದ ಪ್ರಾಂತ್ಯಗಳಲ್ಲಿ ವಲಯಗಳನ್ನಾಗಿ ವಿಭಾಗಿಸಿ ಅದಕ್ಕೆ ಡಿ.ಐ.ಜಿಗಳನ್ನು ನೇಮಿಸಬೇಕೆಂತಲೂ, ಜಿಲ್ಲೆಗಳಲ್ಲಿ ಸೂಪರಿಂಟೆಂಡೆಂಟ್‌ಗಿಂತಲೂ ಕಡಿಮೆ ದರ್ಜೆಯ ಅಧಿಕಾರಿಗಳನ್ನು ಪೊಲೀಸ್ ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಬಾರದೆಂತಲೂ, ಕೆಲವು ಜನ ಸೂಪರಿಂಟೆಂಡೆಂಟ್‌ರನ್ನು ಪ್ರಾಂತೀಯ ಸೇವೆಗೆ ಕಾಯ್ದಿಡಬೇಕೆಂತಲೂ, ಪ್ರತೀ ಜಿಲ್ಲೆಯನ್ನು ಹಲವಾರು ಸರ್ಕಲ್ ಗಳನ್ನಾಗಿ ವಿಭಾಗಿಸಿ ಈ ಸರ್ಕಲ್‌ಗಳಲ್ಲಿ ೭ ರಿಂದ ೮ ಪೊಲೀಸ್ ಠಾಣೆಗಳು ಇರಬೇಕು, ಒಬ್ಬ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿ ಈ ಸರ್ಕಲ್‌ನ ಅಧಿಕಾರಿಯಾಗಿರಬೇಕು, ಪ್ರತೀ ಪೊಲೀಸ್ ಠಾಣೆಗೆ ಒಬ್ಬೊಬ್ಬ ಸಬ್‌ಇನ್ಸ್‌ಪೆಕ್ಟರ್ ಇರಬೇಕು, ಪ್ರತೀ ಠಾಣೆಯು ಸುಮಾರು ೧೫೦ ಚದರ ಮೈಲು ವ್ಯಾಪ್ತಿಯನ್ನು ಹೊಂದಿರಬೇಕು ಎಂದು ಆಯೋಗವು ಶಿಫಾರಸ್ಸು ಮಾಡಿತು. ಅಷ್ಟೇ ಅಲ್ಲದೇ ಒದಗಬಹುದಾದ ದೊಂಬಿಗಳನ್ನು ನಿಯಂತ್ರಿಸಲು ಜಿಲ್ಲಾ ಕೇಂದ್ರಗಳಲ್ಲಿ ಒಂದು ಸಶಸ್ತ್ರ ಮೀಸಲು ಪೊಲೀಸ್ ಪಡೆಯನ್ನು, ರೈಲ್ವೆ ಪೊಲೀಸ್, ರಿವರ್ ಪೊಲೀಸ್‌ಗಳನ್ನು ರಚಿಸಬೇಕೆಂತಲೂ, ಪೊಲೀಸರ ಸಂಬಳ ಮತ್ತು ತರಬೇತಿಯಲ್ಲಿ ಮಹತ್ತರ ಬದಲಾವಣೆ ಮಾಡ ಬೇಕೆಂತಲೂ ಆಯೋಗವು ಸೂಚಿಸಿತು. ಇದನ್ನು ಸರಕಾರವು ಒಪ್ಪಿದ್ದರಿಂದ ಇಡೀ ರಾಜ್ಯದಲ್ಲಿ ಏಕರೂಪವಾದ ಪೊಲೀಸ್ ವ್ಯವಸ್ಥೆ ಜಾರಿಗೆ ಬಂತು.

ಕ್ರಿಶ ೧೯೦೮ ರಲ್ಲಿ ಮೈಸೂರು ಪೊಲೀಸ್ ಕಾಯ್ದೆ ಬಂತು. ಇಡೀ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರುವುದು ಇದರ ಉದ್ದೇಶವಾಗಿತ್ತು. ಈ ಕಾಯ್ದೆಯು ಒಂದು ಅಥವಾ ಅದಕ್ಕಿಂತ ಹೆಚ್ಚು ಡಿ.ಐ.ಜಿ.ಪಿ ಅಥವಾ ಎ.ಐ.ಜಿ.ಪಿ ರವರನ್ನು ನೇಮಿಸಲು ಸರಕಾರಕ್ಕೆ ಅಧಿಕಾರವನ್ನು ನೀಡಿತು. ಪ್ರಾಂತ್ಯದಲ್ಲಿರುವ ಮೀಸಲು ಪೊಲೀಸ್ ಪಡೆಗೆ ಕೆಲವು ದರ್ಜೆಯ ಇನ್ಸ್‌ಪೆಕ್ಟರ್‌ಗಳನ್ನು ಹೊರತುಪಡಿಸಿ ಉಳಿದ ಅಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ಐ.ಜಿ.ಪಿರವರಿಗೆ ನೀಡಿತು.

ಪೊಲೀಸ್ ಪಡೆಯ ಸುಧಾರಣೆಗಾಗಿ ಕ್ರಿಶ ೧೯೧೨ ರಲ್ಲಿ ಬಂದ ಲಾರ್ಡ್ ಐಸ್‌ಲಿಂಗ್ಟನ್‌ನ ವರದಿಯು ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು ನೇಮಿಸಿಕೊಳ್ಳ ಬೇಕೆಂತಲೂ, ಸಿಬ್ಬಂದಿಗಳ ಸಂಬಳವನ್ನು ಹೆಚ್ಚಿಸಬೇಕೆಂತಲೂ, ಕೆಳಹಂತದ ಅಧಿಕಾರಿಗಳಿಂದ ಸಮಸ್ಯೆಗಳನ್ನು ಬಗೆಹರಿಸಲಾಗದಿದ್ದರೆ ಉನ್ನತ ಮಟ್ಟದ ಅಧಿಕಾರಿಗಳನ್ನು ನೇಮಿಸಬೇಕೆಂತಲೂ, ಕೆಳಹಂತದಿಂದ ಮೇಲ್ದರ್ಜೆಗೆ ಏರಿದ ಅಧಿಕಾರಿಗಳ ಹಾಗೂ ನೇರವಾಗಿ ಮೇಲ್ದರ್ಜೆಗೆ ಆಯ್ಕೆಯಾದ ಅಧಿಕಾರಿಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸ ಲಾಯಿತು. ಈ ಎರಡೂ ಬಗೆಯ ಅಧಿಕಾರಿಗಳಿಗೆ ಸಮಾನ ಅವಕಾಶಗಳನ್ನು ನೀಡಬೇಕು. ಮತ್ತು ಇಲಾಖೆಯ ಯಾವುದೇ ಹುದ್ದೆಗಳಿಗೆ ಅವರ ಯೋಗ್ಯತೆಗಳನ್ನು ನೋಡಿ ಅರ್ಹತೆಗೆ ನೇಮಕ ಮಾಡಬೇಕೆಂತಲೂ, ಮಿಲಿಟರಿ ಅಧಿಕಾರಿಗಳನ್ನು ಪೊಲೀಸ್ ಸೇವೆಗೆ ಸೇರಿಸಿಕೊಳ್ಳಬಾರದೆಂತಲೂ, ಭಾರತೀಯ ಸಿವಿಲ್ ಸೇವೆಗೆ ಆಯ್ಕೆಯಾದವರು ಪೊಲೀಸ್ ಆಗಲು ಅರ್ಹರಲ್ಲವೆಂತಲೂ ಆಯೋಗವು ಶಿಫಾರಸ್ಸು ಮಾಡಿತು. ಭಾರತೀಯ ನಾಗರೀಕ ಸೇವೆಯಲ್ಲಿ

ಮತ್ತು ಪೊಲೀಸ್ ಇಲಾಖೆಯ ಉನ್ನತ ಸ್ಥಾನಗಳಿಗೆ ಹೆಚ್ಚಾಗಿ ಯುರೋಪಿಯನ್ ಅಧಿಕಾರಿಗಳನ್ನು ನೇಮಿಸಬೇಕೆಂದು ಆಯೋಗವು ತಿಳಿಸಿತು.

ಕ್ರಿಶ ೧೯೧೯ ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ಬಂದ ನಾಲ್ಕು ವರ್ಷಗಳ ನಂತರ ಕ್ರಿಶ ೧೯೨೪ ರಲ್ಲಿ ಲೀ ಕಮಿಷನ್ ನೇಮಕವಾಯಿತು. ಅಖಿಲ ಭಾರತ ಸೇವೆಗೆ ನೇಮಕ ಮಾಡುವ ಮತ್ತು ಅದನ್ನು ನಿಯಂತ್ರಿಸುವ ಅಧಿಕಾರವನ್ನು ಭಾರತ ಸರಕಾರದ ಕಾರ್ಯದರ್ಶಿಯವರು ಇಟ್ಟುಕೊಳ್ಳಬೇಕು. ಭಾರತೀಯ ಪೊಲೀಸ್ ಸೇವೆಯಲ್ಲಿ ಭಾರತೀಯರ ನೇಮಕವನ್ನು ಶೇಕಡಾ ೫೦ ಜನ ನೇರವಾಗಿ ಆಯ್ಕೆಯಾದ ಯುರೋಪಿಯನ್ನರು, ೩೦ ಜನ ನೇರವಾಗಿ ಆಯ್ಕೆಯಾದ ಭಾರತೀಯರು ಮತ್ತು ೨೦ ಜನ ಪ್ರಾಂತೀಯ ಸೇವೆಗಳಿಂದ ಭಡ್ತಿ ಪಡೆದವರು ಇರ ಬೇಕೆಂದು ಶಿಫಾರಸ್ಸು ಮಾಡಿತು. ಭಾರತೀಯ ಸ್ವತಂತ್ರ ಕಾಯ್ದೆ ಕ್ರಿಶ ೧೯೪೭ ಭಾರತೀಯ ಪೊಲೀಸ್ ಸೇವೆಗೆ ಒಂದು ಪ್ರಮುಖ ಘಟ್ಟವಾಯಿತು. ದೇಶ ವಿಭಜನೆಯಾದ ನಂತರ ಭಾರತ ಸರಕಾರದಲ್ಲಿದ್ದ ಕಾರ್ಯದರ್ಶಿ ಹುದ್ದೆ ಯನ್ನು ರದ್ದುಮಾಡಲಾಯಿತು. ಭಾರತೀಯ ಪೊಲೀಸ್ ಸೇವೆಗೆ ನೇಮಕ ಮಾಡುವ ಅಧಿಕಾರವನ್ನು ಭಾರತ ಸರಕಾರಕ್ಕೆ ನೀಡಲಾಯಿತು. ಲಂಡನ್‌ನಿಂದ ಭಾರತೀಯ ಸೇವೆಗೆ ನೇಮಕವಾಗುತ್ತಿದ್ದ ಪದ್ಧತಿ ನಿಂತಿತು. ಭಾರತೀಯ ಪೊಲೀಸ್ ಸೇವೆಯಲ್ಲಿದ್ದ ಯುರೋಪಿಯನ್ ಅಧಿಕಾರಿಗಳಿಗೆ ಸೂಕ್ತ ನಿವೃತ್ತಿ ವೇತನ ನೀಡಿ ರಾಜಿನಾಮೆ ನೀಡುವಂತೆ ಮಾಡಲಾಯಿತು. ಹೀಗಾಗಿ ನೂರಾರು ಯುರೋಪಿಯನ್ ಅಧಿಕಾರಿಗಳು ರಾಜಿನಾಮೆ ನೀಡಿ ದೇಶ ಬಿಟ್ಟು ಹೋದರು. ಹಾಗಾಗಿ ಭಾರತೀಯ ಸೇವೆಗಳ ಹುದ್ದೆಗಳು ಖಾಲಿಯಾಗುತ್ತ ಬಂದವು. ಈ ಹುದ್ದೆಗಳಿಗೆ ಪ್ರಾಂತ್ಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳಿಗೆ ಅಖಿಲ ಭಾರತ ಸೇವೆ ಹಾಗೂ ಕೇಂದ್ರದ ಸೇವೆಗಳಿಗೆ ಪದೋನ್ನತಿ ನೀಡಲಾಯಿತು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ನಡೆಸಿ ಆಡಳಿತ ಸೇವೆಗೆ ತುರ್ತು ನೇಮಕಾತಿಯನ್ನು ಮಾಡಲಾಯಿತು.

ಬ್ರಿಟೀಷರು ಭಾರತವನ್ನು ಆಳಿದ್ದರೂ ಸಹ ಅವರು ಆಡಳಿತ ನಡೆಸಿದ ಭಾರತೀಯ ಪ್ರಾಂತೀಯದಲ್ಲಿದ್ದ ಪೊಲೀಸ್ ವ್ಯವಸ್ಥೆಗೂ, ಬ್ರಿಟನ್‌ನಲ್ಲಿದ್ದ ಪೊಲೀಸ್ ವ್ಯವಸ್ಥೆಗೂ ಸಾಮ್ಯತೆ ಇಲ್ಲದೇ ಬಹಳಷ್ಟು ವ್ಯತ್ಯಾಸ ಇದ್ದುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇಂಗ್ಲೆಂಡ್‌ನಲ್ಲಿ ಎರಡು ರೀತಿಯ ಪೊಲೀಸ್ ವ್ಯವಸ್ಥೆಗಳು ಇದ್ದು ಒಂದು ಮೆಟ್ರೋ ಪಾಲಿಟನ್ ವ್ಯವಸ್ಥೆ. ಇದು ಲಂಡನ್ ನಗರಕ್ಕೆ ಸಂಬಂಧಿಸಿದ ಪೊಲೀಸ್ ವ್ಯವಸ್ಥೆಯಾದರೆ, ಇನ್ನೊಂದು ಕೌಂಟಿ ಪೊಲೀಸ್. ಇದು ನಮ್ಮಲ್ಲಿರುವ ಜಿಲ್ಲಾ ಪೊಲೀಸ್‌ನಂತಹ ವ್ಯವಸ್ಥೆಯಾಗಿದೆ. ಆದರೆ ಈ ಎರಡೂ ಪೊಲೀಸ್ ಆಡಳಿತದಲ್ಲಿ ಸಾರ್ವಜನಿಕರಿಗೆ ನೇರ ಸ್ಥಾನ ಕಲ್ಪಿಸಿಕೊಡಲಾಗಿದೆ. ಭಾರತೀಯ ಪೊಲೀಸ್ ಆಡಳಿತದಲ್ಲಿ ಸಾರ್ವಜನಿ ಕರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಮತ್ತು ಇಲಾಖೆಗೆ ಬೇಕಾದ ಹಣಕಾಸು, ಖರ್ಚುವೆಚ್ಚಗಳೆಲ್ಲವನ್ನು ಸರಕಾರ ವೇ ನಿಯಂತ್ರಿಸುತ್ತದೆ. ಲಂಡನ್‌ನಲ್ಲಿರುವ ಪೊಲೀಸ್ ಅಧಿಕಾರಿಗಳ ದರ್ಜೆಗಳು ಹಾಗೂ ಭಾರತೀಯ ಪೊಲೀಸ್ ವ್ಯವಸ್ಥೆಯಲ್ಲಿರುವ ದರ್ಜೆಗಳು ಸಂಪೂರ್ಣ ವಾಗಿ ವೈರುಧ್ಯದಿಂದ ಕೂಡಿರುತ್ತದೆ. ಹೀಗೆ ಎರಡೂ ಪಡೆಗಳ ನಡುವಿನ ಹಲವು ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಈ ಅಧ್ಯಾಯದ ಕೊನೆಯಲ್ಲಿ ಭಾರತದಲ್ಲಿ ಆಧುನಿಕ ಕಾನೂನಿನ ಬೆಳವಣಿಗೆಗಳು ಬೆಳೆದು ಬಂದ ದಾರಿಯನ್ನು ಚರ್ಚಿಸಲಾಗಿದೆ.

ಯುರೋಪಿಯನ್ನರ ಮೇಲ್ವಿಚಾರಣೆ ಇಲ್ಲದೇ ಸ್ಥಳೀಯ ಪೊಲೀಸ್‌ನಲ್ಲಿ ಕಾನ್‌ಸ್ಟೇಬಲ್ ಅಥವಾ ಹೆಡ್‌ಕಾನ್‌ಸ್ಟೇಬಲ್‌ಗಳು ನಿರೀಕ್ಷಿತ ಮಟ್ಟಕ್ಕೆ ಕೆಲಸ ಮಾಡುವುದಿಲ್ಲ, ಅಷ್ಟೇ ಅಲ್ಲದೇ ಪೊಲೀಸ್ ಇಲಾಖೆಯು ಪರಿಪೂರ್ಣವಾಗಿ ಕೆಲಸ ಮಾಡಬೇಕಾದರೆ, ಯುರೋಪಿಯನ್ನರ ಬುದ್ಧಿಶಕ್ತಿ ಅಗತ್ಯವಿದೆಯೆಂದು ವಾದಿಸಲಾಯಿತು.

೧೮೫೦ರ ವೇಳೆಗೆ ಮೇಲ್ವಿಚಾರಣಾ ಸಿದ್ಧಾಂತವನ್ನು ಸ್ಥಾಪಿಸಲಾಯಿತು. ಹೀಗಾಗಿ ಎಸ್.ಪಿ ದರ್ಜೆಯ ಅಧಿಕಾರಿಗಳನ್ನಾಗಿ ಯುರೋಪಿಯನ್ನರನ್ನು ನೇಮಿಸಲಾಯಿತು.

ಪೊಲೀಸ್ ಇಲಾಖೆಯ ಅಧಿಕಾರಿಗಳ ಅದರಲ್ಲೂ ಅಧೀನ ಅಧಿಕಾರಿಗಳ ನೇಮಕಾತಿಯು ಸಂಪೂರ್ಣವಾಗಿ ಪ್ರಾಚೀನ ವರ್ಗ ವ್ಯವಸ್ಥೆಯನ್ನೇ ಅವಲಂಬಿಸಿತ್ತು. ಇದನ್ನು ಪ್ರೋತ್ಸಾಹಿಸುವುದರಿಂದ ಸಮಾಜದಲ್ಲಿ ಇರುವ ಸ್ಥಿರೀಕರಣ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವುದು ಬ್ರಿಟೀಷರ ಉದ್ದೇಶವಾಗಿತ್ತು. ವಸಾಹತುಶಾಹಿ ಅಧಿಕಾರಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರನ್ನು ಪೊಲೀಸ್ ಕೆಲಸಕ್ಕೆ ನೇಮಿಸುತ್ತಿರಲಿಲ್ಲ. ಈಗಾಗಲೇ ಉದ್ಯೋಗದಲ್ಲಿದ್ದ 'ಪರಿಹಾತ್' ಮೊದಲಾದ ಅಸ್ಪೃಶ್ಯರನ್ನು ಉದ್ಯೋದದಿಂದ ತೆಗೆದು ಹಾಕಲಾಯಿತು. ಇವರುಗಳು ಪೊಲೀಸ್ ಕೆಲಸ ಮಾಡಲು ಉನ್ನತ ಜಾತಿಯವರ ಮನೆಗೆ ಹೋಗಲು ಸಾಧ್ಯವಿಲ್ಲ. ಮತ್ತು ಅವರ ಮನೆಗಳನ್ನು ಶೋಧಿಸುವಂತಹ ಪೊಲೀಸ್‌ನ ಮೂಲಭೂತ ಕರ್ತವ್ಯಗಳನ್ನು ಮಾಡಲು ಸಾಧ್ಯವಿಲ್ಲವೆಂದು ಮತ್ತು ಇವರುಗಳು ರೂಢಿಗತ ಅಪರಾಧಿಗಳಾಗವುದರಿಂದ ನೇಮಕಾತಿಗೆ ಅನರ್ಹರೆಂದು ಭಾವಿಸಲಾಗಿತ್ತು. ಪೊಲೀಸ್ ಇಲಾಖೆಗೆ ನೇಮಕಗೊಳ್ಳಲು ಅಭ್ಯರ್ಥಿಗಳೇ ಇಲ್ಲದ ಸಮಯದಲ್ಲಿ ಮಾತ್ರ ಇವರುಗಳನ್ನು ಆಯ್ಕೆ ಮಾಡಲಾಗುತ್ತಿತ್ತು. ಮಲಬಾರಿನ ಮಾಫಿಲ ಮುಸ್ಲೀಮರು ದಕ್ಷಿಣ ತಮಿಳುನಾಡಿನ 'ಮರವರ್' ಮತ್ತು 'ಕಳ್ಳರ್' ಮತ್ತು ಇತರ ಜನಾಂಗದವರನ್ನು ಕಾನೂನು ಭಂಗಮಾಡುವರೆಂದು ಪಟ್ಟಿ ಮಾಡಲಾಯಿತು. ೧೮೬೦ ರಿಂದ ೧೯೦೫ ರವರೆಗೆ ಪ್ರತೀ ವರ್ಷ ಇವರು ಅಪರಾಧಗಳಲ್ಲಿ ಭಾಗಿಯಾದ ಬಗ್ಗೆ ಶೇಕಡಾವಾರು ಅಂಕಿಅಂಶಗಳನ್ನು ಪ್ರಕಟಿಸಲಾಯಿತು. ಈ ಬಗ್ಗೆ ಹಲವು ಬ್ರಿಟೀಷ್ ಸಾಹಿತ್ಯಗಳು ಪ್ರಕಟವಾದವು. ಗೆಜೆಟಿಯರ್, ಜಿಲ್ಲಾ ಕೈಪಿಡಿಗಳಲ್ಲಿ ಈ ಮಿತ್ಯವನ್ನು ಸತ್ಯವೆಂದು ಪ್ರಚಾರ ಮಾಡಲಾಯಿತು. ಇಡೀ ಜನಾಂಗವನ್ನು ಏಕದೃಷ್ಟಿಕೋನದಿಂದ ನೋಡಲಾಯಿತು. ಭಾರತೀಯರು ವಸಾಹತುಶಾಹಿಯ ಜ್ಞಾನದ ಪರಿಮಿತಿಯೊಳಗೆ ಸಸ್ಯ ವಿಜ್ಞಾನ ಮತ್ತು ಪ್ರಾಣಿವಿಜ್ಞಾನದ ಪ್ರಯೋಗಾಲಯಗಳ ಮಾದರಿ ವಸ್ತುಗಳಂತೆ ಆಗಿದ್ದರು.

ಮುಸ್ಲೀಮರು ದನವನ್ನು ತಿನ್ನುವವಗಾದುದರಿಂದ ಅವರು ಶೌರ್ಯವಂತರೆಂದೂ ಭಾವಿಸಲಾಗಿತ್ತು. ಮತ್ತು ನಾಯರ್‌ಗಳನ್ನೂ ಸಹ ಮಾರ್ಷಲ್ ರೇಸ್ ಹೊಂದಿದ ಅಂದರೆ ಶೌರ್ಯವೆಂತರೆಂದೂ, ಉಳಿದ ಹಿಂದುಗಳು ಹೇಡಿಗಳೆಂದು ಬ್ರಿಟೀಷರು ನಂಬಿದ್ದರು.ಈ ಮಾರ್ಷಲ್‌ರೇಸ್ ಸಿದ್ಧಾಂತದ ಪರಿಣಾಮದಿಂದಾಗಿ ೧೯ನೇ ಶತಮಾನದಲ್ಲಿ ನೇಮಕಾತಿಯಲ್ಲಿ ನಾಟಕೀಯ ಕುಸಿತ ಕಂಡಿತು. ಹೀಗಾಗಿ ಮುಸ್ಲಿಮರು ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಸಹ ಪೊಲೀಸ್ ಉದ್ಯೋಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರು. ಹಿಂದೂ ಸಂಸ್ಥಾನಗಳಲ್ಲಿ ಮುಸ್ಲೀಮ್ ಕಾನ್‌ಸ್ಟೇಬಲರಿ ಇರುವುದು ಬ್ರಿಟೀಷರಿಗೆ ಪ್ರಧಾನ ಆಕರ್ಷಣೆಯ ವಿಷಯವಾಗಿತ್ತು. ಏಕೆಂದರೆ, ಹಿಂದುಗಳಿಗಿಂತಲೂ ಮುಸ್ಲೀಮರು ವಸಾಹತುಶಾಹಿಗೆ ಹೆಚ್ಚು ವಿದೇಯರಾಗಿದ್ದರು.

ಅಂತೆಯೇ ಮಲಿಯಾಳಿ ಜನಾಂಗದೊಳಗೆ ನಾಯರ್‌ಗಳು ಪ್ರಥಮ ಸ್ಥಾನದಲ್ಲಿದ್ದರು. ಅವರುಗಳನ್ನು ಮಿಲಿಟರಿ ಕುಲೀನರೆಂದು, ಆರ್ಮಿ ಮಾನ್ಯುವೆಲ್‌ನಲ್ಲಿ ಕರೆಯಲಾಗಿದೆ. ನಾಯರ್‌ಗಳು ಮಿಲಿಟರಿ ಮತ್ತು ಪೊಲೀಸ್ ಇಲಾಖೆಯ ಹುದ್ದೆಗಳನ್ನು ಉದ್ಯೋಗಕ್ಕಾಗಿ ಪಡೆಯುವುದಕ್ಕಿಂತಲೂ ಹೆಚ್ಚಾಗಿ ಅದೊಂದು ಶೌರ್ಯ ಮತ್ತು ಗೌರವದ ಸಂಕೇತವೆಂದು ಭಾವಿಸಿದ್ದರು. ಭಾರತೀಯ ಕ್ರಿಶ್ಚಿಯನ್ನರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರು. ಆದರೆ ಮಿಷನರಿಗಳ ಮೂಲಕ ಅಕ್ಷರಸ್ಥರಾಗುವ ಮತ್ತು ಇಂಗ್ಲೀಷ್ ಜ್ಞಾನ ಪಡೆಯುವ ಅವಕಾಶ ಸಿಕ್ಕಿತು. ಇವರು ಭಾರತೀಯರೆಂಬ ಅನುಮಾನ ಬ್ರಿಟೀಷರಿಗೆ ಇದ್ದರೂ ಸಹ, ನೇಮಕಾತಿಯಲ್ಲಿ ಇವರು ಹೆಚ್ಚಿನ ಲಾಭ ಪಡೆದರು.

ಇವರು ಸ್ವದೇಶಿಯರಾಗಿ, ಸ್ಥಳೀಯ ಸಮಾಜದ ಪರಿಚಿತರಾಗಿ, ಮಾತೃಭಾಷೆಯನ್ನು ಬಲ್ಲವರಾಗಿ ಮತ್ತು ಬ್ರಿಟೀಷರಿಗೆ ಅವರ ಧರ್ಮರವರೆಂಬ ಕಾರಣಕ್ಕೆ ಬಾಂದವ್ಯ ಬೆಳೆಯಿತು. ಉಳಿದ ಜನಾಂಗಗಳಿಗೆ ಸಂಬಂಧಿಸಿದಂತೆ ನಿಷ್ಠೆಯ ಪ್ರಶ್ನೆ ಅಸ್ಪಷ್ಟವಾಗಿತ್ತು. ಬ್ರಾಹ್ಮಣರನ್ನು ಇನ್ನಿಲ್ಲದ ಅನುಮಾನದ ದೃಷ್ಟಿಯಿಂದ ನೋಡಿಕೊಳ್ಳಲಾಯಿತು. ಏಕೆಂದರೆ, ಮದ್ರಾಸ್ ಕಾಂಗ್ರೇಸ್‌ನ ಪ್ರಭಲ ನಾಯಕತ್ವವನ್ನು ಬ್ರಾಹ್ಮಣರು ಹೊಂದಿದ್ದರು. ಒಂದೇ ಜಾತಿಯವರ ಏಕಸೌಮ್ಯತೆಯಿಂದ ಅಪಾಯವಾಗಬಹುದೆಂದು ಗ್ರಹಿಸಿದ ಬ್ರಿಟೀಷರು ಮುಸ್ಲೀಮರ ಸಂಖ್ಯೆಯನ್ನು ಕಡಿತಗೊಳಿಸುತ್ತಾ ಬಂದರು. ಮದ್ರಾಸ್ ಪ್ರಾಂತ್ಯದ ಈ ನೇಮಕಾತಿ ಸಿದ್ದಾಂತ ಶಿಕ್ಷಣದಲ್ಲಿ ಹಿಂದೆ ಉಳಿದಿದ್ದ ಕೆಳಜಾತಿಯ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೂ ಹಾಗೂ ಮೇಲ್ಜಾತಿಯ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ಬ್ರಾಹ್ಮಣರು, ತಮಿಳುನಾಡಿನ ಮುದಲಿಯಾರಗಳ ನಡುವೆ ಇನ್ನಷ್ಟು ಭೇದವನ್ನು ಸೃಷ್ಟಿಸಿತು.

ಆರನೇ ಅಧ್ಯಾಯದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪೊಲೀಸ್ ವ್ಯವಸ್ಥೆಯು ಬೆಳೆದು ಬಂದ ಬಗ್ಗೆ ಚರ್ಚಿಸಲಾಗಿದೆ. ಇಡೀ ರಾಜ್ಯದಲ್ಲಿ ಏಕರೂಪವಾದ ಪೊಲೀಸ್ ವ್ಯವಸ್ಥೆ ಇರಲಿಲ್ಲ. ಇದರ ಸ್ವರೂಪವು ವೈವಿಧ್ಯತೆಯಿಂದ ಕೂಡಿತ್ತು. ರಾಜ್ಯದ ಕೆಲವು ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಗೂ ಮತ್ತು ಬಾಂಬೆ ಪ್ರೆಸಿಡೆನ್ಸಿಗೂ, ಇನ್ನು ಕೆಲವು ಹೈದರಾಬಾದ್ ಸಂಸ್ಥಾನಕ್ಕೂ ಒಳಪಟ್ಟರೆ, ೮ ಜಿಲ್ಲೆಗಳು ಮೈಸೂರು ಅರಸರ ಅಧೀನದಲ್ಲಿತ್ತು. ಎಲ್ಲಾ ಜಿಲ್ಲೆಗಳಲ್ಲಿ ಕೆಲವು ಭಿನ್ನತೆಗಳನ್ನು ಹೊರತುಪಡಿಸಿ ಬಹುತೇಕ ಪೊಲೀಸ್ ಕೆಲಸವನ್ನು 'ತಳವಾರ', 'ತೋಟಿ', 'ಕಾವಲುಗಾರ', 'ಕಟ್ಟಬಿಡಿ ಪೀವನ್'ಗಳು, 'ಹಳೇಪೈಕಿ'ಯವರು , 'ಹೋಬಳಿದಾರ'ರು, 'ಅಮರ್‌ಗಾರ'ರು, 'ಅಂಕಮಾಲ', 'ಗೌಡ', 'ಗಾವುಂಡ', 'ಪ್ರಜಾಸೈನ್ಯ', 'ದರೋಗ', 'ಕೊತ್ವಾಲ' ಮತ್ತು 'ಕಂದಾಚಾರ' ಪಡೆಯವರು ಮಾಡುತ್ತಿದ್ದರು. ಎಲ್ಲಾ ಜಿಲ್ಲೆಗಳಲ್ಲಿ ಕೆಲವು ಭಿನ್ನತೆಗಳನ್ನು ಹೊರತುಪಡಿಸಿ ಬಹುತೇಕ ಪೊಲೀಸ್ ಕೆಲಸವನ್ನು 'ತಳವಾರ', 'ತೋಟಿ', 'ಕಾವಲುಗಾರ', 'ಕಟ್ಟಬಿಡಿ ಪೀವನ್'ಗಳು, 'ಹಳೇಪೈಕಿ'ಯವರು , 'ಹೋಬಳಿದಾರ'ರು, 'ಅಮರ್‌ಗಾರ'ರು, 'ಅಂಕಮಾಲ', 'ಗೌಡ', 'ಗಾವುಂಡ', 'ಪ್ರಜಾಸೈನ್ಯ', 'ದರೋಗ', 'ಕೊತ್ವಾಲ' ಮತ್ತು 'ಕಂದಾಚಾರ' ಪಡೆಯವರು ಮಾಡುತ್ತಿದ್ದರು. ಬೆಂಗಳೂರು ಜಿಲ್ಲೆಯ ಪೊಲೀಸ್ ಆಡಳಿತ ವ್ಯವಸ್ಥೆ ಬಹುತೇಕ ಮೈಸೂರು ಸಂಸ್ಥಾನದ ಆಡಳಿತದಂತೆಯೇ ಇತ್ತು. ನಗರ ಪ್ರದೇಶಗಳಲ್ಲಿ ಪ್ರಜಾಸೈನ್ಯವು, ಗ್ರಾಮೀಣ ಪ್ರದೇಶಗಳಲ್ಲಿ ತಲವಾರರು, ತೋಟಿಗಳು, ಕಾವಲ್‌ಗಾರರು ಸಾಮಾನ್ಯವಾಗಿ ಪೊಲೀಸ್ ಕೆಲಸಗಳನ್ನು ಮಾಡುತ್ತಿದ್ದರು. ಕಟ್ಟಬಿಡಿ ಪೀವನ್‌ಗಳು ಮತ್ತು ಹಳೇಪೈಕಿಯವರು ಪ್ರಾಚೀನ ಕಾಲದಲ್ಲಿ ಪೊಲೀಸ್ ಕೆಲಸ ಮಾಡುತ್ತಿದ್ದ ವಿವರಗಳಿವೆ. ಹೋಬಳಿಮಟ್ಟದಲ್ಲಿ ಹೋಬಳಿದಾರರು ಜನರ ಆಸ್ತಿಪಾಸ್ತಿಯ ರಕ್ಷಣೆ ಮಾಡಿದರೆ ಅಮರ್‌ಗಾರರು ಇನಾಮ್ ಭೂಮಿಯನ್ನು ಹೊಂದಿದ ಪೊಲೀಸರಾಗಿದ್ದರು. ಗ್ರಾಮಗಳಲ್ಲಿ ಬೇಡರ ಜಾತಿಯ ಕಾವಲುಗಾರರಿದ್ದು ಅವರಿಗೆ ಅಂಕಮಾಲ ಎಂದು ಕರೆಯಲಾಗುತ್ತಿತ್ತು. ನಂತರದ ದಿನಗಳಲ್ಲಿ ಹಳ್ಳಿಗಳಲ್ಲಿ ಗೌಡ ಅಥವಾ ಗಾವುಂಡರು, ಗ್ರಾಮ ರಕ್ಷಣೆಯ ಜವಾಬ್ದಾರಿ ಹೊಂದಿದ್ದರೆ, ಹೈದರ್, ಟಿಪ್ಪು ಕಾಲದಲ್ಲಿ ಕಂದಾಚಾರ ಪಡೆಯವರು ಪೊಲೀಸ್ ಕೆಲಸದೊಂದಿಗೆ ಕೋಟೆಗಳನ್ನು ಕಾಯುತ್ತಿದ್ದರು. ಕ್ರಿಶ ೧೮೬೧ ರ ಪೊಲೀಸ್ ಕಾಯ್ದೆ ಬೆಂಗಳೂರು ನಗರ ಮತ್ತು ಕಂಟೋನ್ಮೆಂಟ್‌ಗೆ ಅನ್ವಯವಾಯಿತು. ೧೮೬೬ ರಲ್ಲಿ ಮದ್ರಾಸಿನ ಮೊಫಿಸಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕ್ಯಾಪ್ಟನ್. ಇ.ಡಿ.ಗೋಂಪೆರ್ಟ್ಸ್ ಬೆಂಗಳೂರಿನ ಮೊದಲ ಎಸ್‌ಪಿಯಾಗಿ ಕರ್ತವ್ಯವನ್ನು ಪ್ರಾರಂಭಿಸಿದರು. ಇವರು ಬೆಂಗಳೂರು ಜಿಲ್ಲೆಯ ಪೊಲೀಸ್ ವ್ಯವಸ್ಥೆಯ ಪುನರ್‌ಸಂಘಟನೆ ಮಾಡಿದರು. ೧೮೭೩ ರಲ್ಲಿ ಇವರು ಮೊದಲ ಡಿ.ಐ.ಜಿ.ಪಿ ಆದರು. ೧೮೭೪-೭೫ ರಲ್ಲಿ ಒಂದು ಆದೇಶ ಹೊರಡಿಸಿ ಡಿ.ಐ.ಜಿ.ಪಿ, ಡಿ.ಸಿ, ಎಸ್.ಪಿ, ಅಮಿಲ್ದಾರ್, ಇನ್ಸ್‌ಪೆಕ್ಟರ್‌ರವರುಗಳು ಕರ್ತವ್ಯ ಜವಾಬ್ದಾರಿ ವಿವರಿಸಲಾಯಿತು. ೧೮೭೯ ರಲ್ಲಿ ಅಧಿಕ ಆರ್ಥಿಕ ಹೊರೆಕಾರಣದಿಂದ

ಡಿ.ಐ.ಜಿ.ಪಿ ಹುದ್ದೆ ರದ್ದುಮಾಡಲಾಯಿತು. ಪೊಲೀಸರಿಂದ ಕಂದಾಯ ಇಲಾಖೆಯ ಕರ್ತವ್ಯವನ್ನು ಬೇರ್ಪಡಿಸಿದರು. ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಅವುಗಳದ್ದೇ ಆದ ಪ್ರತ್ಯೇಕ ಪೊಲೀಸ್ ವ್ಯವಸ್ಥೆಯಿತ್ತು. ಬೆಂಗಳೂರು ನಗರದ ಪೊಲೀಸರ ಖರ್ಚುವೆಚ್ಚ ಗಳನ್ನು ಸರಕಾರ ನೋಡಿಕೊಳ್ಳುತ್ತಿದ್ದರೆ, ಮೈಸೂರು ನಗರದ ಪೊಲೀಸರ ಖರ್ಚನ್ನು ಅಲ್ಲಿಯ ಮುನ್ಸಿಪಾಲಿಟಿಯು ನೋಡಿಕೊಳ್ಳುತ್ತಿತ್ತು. ಕ್ರಿ ಶ ೧೮೬೬ ರ ವೇಳೆಗೆ ಪೊಲೀಸ್ ಪುನರ್‌ಸಂಘಟನೆ ಭರದಿಂದ ಸಾಗಿತ್ತು. ಪೊಲೀಸರಿಗೆ ಸಂಬಳವಾಗಿ ಬಾಡಿಗೆರಹಿತ ಭೂಮಿಯನ್ನು ವ್ಯವಸಾಯ ಮಾಡಲು ನೀಡಲಾಯಿತು. ಕಂದಾಚಾರ ಪೊಲೀಸರ ಜಾಗದಲ್ಲಿ ವ್ಯವಸ್ಥಿತ ಪೊಲೀಸರನ್ನು ನೇಮಿಸಲಾಯಿತು. ಬಾರ್ ಪಡೆಯು ದಮನಕಾರಿ ಕೆಲಸಗಳಲ್ಲಿ ತೊಡಗಿದ್ದರಿಂದ ಅವರಿಗೆ ಆಯುಧಗಳನ್ನು ನೀಡಬಾರದೆಂದು ತೀರ್ಮಾನಿಸಲಾಯಿತು. ಕಾಲದಿಂದ ಕಾಲಕ್ಕೆ ಬೆಂಗಳೂರು ನಗರ ಹೊಂದಿದ್ದ ಪೊಲೀಸ್ ಪಡೆಯ ಬಲಗಳ ಬಗ್ಗೆಯೂ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅಪರಾಧಗಳ ಸಂಖ್ಯೆ ಏರುತ್ತಿರುವುದನ್ನು ಗಮನಿಸಿ ಬೆಂಗಳೂರಿನಲ್ಲಿ ಅಪರಾಧಿ ಪತ್ತೆದಳವನ್ನು ಪ್ರಾರಂಭಿಸಲಾಯಿತು. ಅವರಿಗೆ ವೃತ್ತಿಪರ ತರಬೇತಿಗಳನ್ನು ನೀಡಲಾಯಿತು. ಕ್ರಿಶ ೧೯೧೭ ರಲ್ಲಿ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯನ್ನು ಬ್ರಿಟೀಷರು ಪ್ರಾರಂಭಿಸಿದರು. ಕ್ರಿಶ ೧೯೨೭ ರಲ್ಲಿ ವಿಶ್ವೇಶ್ವರಪುರ, ಗವಿಪುರ ಠಾಣೆಗಳು ಪ್ರಾರಂಭವಾದವು. ಇದೇ ವೇಳೆಗೆ ಮೊದಲ ಬಾರಿಗೆ ಬೆಂಗಳೂರು ನಗರದಲ್ಲಿ ಸಂಚಾರಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಬೆಂಗಳೂರು ನಗರದ ಪೊಲೀಸ್ ಇಲಾಖೆಯಲ್ಲಿ ನಾಲ್ಕು ವಿಭಾಗಗಳನ್ನಾಗಿ ಮಾಡಲಾಯಿತು. ಅವುಗಳೆಂದರೆ, ಆಡಳಿತ, ಅಪರಾಧ ವಿಭಾಗ ಸಂಚಾರ ವಿಭಾಗ ಮತ್ತು ಕೇಂದ್ರಸ್ಥಾನ. ಇವುಗಳಿಗೆ ಸಾಕಷ್ಟು ಸಿಬ್ಬಂದಿಗಳನ್ನು ನೀಡಿ ಆ ಘಟಕಗಳನ್ನು ಅಭಿವೃದ್ಧಿಪಡಿಸಿದ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಮತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರು ಹಾಗೂ ಇತರ ಜಿಲ್ಲೆಗಳ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಕೋಲಾರ ಜಿಲ್ಲೆಯಲ್ಲಿಯೂ ಸಹ ಪ್ರಾಚೀನ ಕಾಲದಲ್ಲಿ ತೋಟಿ, ತಳಾರಿ, ತಳವಾರರು, ನೀರ್ಗಂಟಿಗಳು, ಕಾವಲುಗಾರರು, ಪೊಲೀಸ್ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ನಂತರ ಕಂದಾಚಾರ ಪಡೆ ಈ ಕೆಲಸಗಳನ್ನು ನಿರ್ವಹಿಸುತ್ತಿದ್ದವು. ಕೋಲಾರದ ಚಿನ್ನದ ಗಣಿಯ ರಕ್ಷಣೆಗಾಗಿ ವಿಶೇಷ ಪೊಲೀಸ್ ಪಡೆಯನ್ನು ರಚಿಸಲಾಯಿತು. ಅದಕ್ಕಾಗಿ ಒಬ್ಬರು ಪೊಲೀಸ್ ಸೂಪರಿಂಟೆಂಡೆಂಟ್‌ರನ್ನು ಸಹ ನೇಮಿಸಲಾಯಿತು. ಚಿನ್ನದ ಕಳ್ಳಸಾಗಾಣೆ ಬಗ್ಗೆ ಗುಪ್ತಮಾಹಿತಿ ಸಂಗ್ರಹವನ್ನು ಮಾಡಲಾಯಿತು,. ಕ್ರಿಶ ೧೯೦೨ ರಲ್ಲಿ ಅದಕ್ಕಾಗಿ ಒಂದು ಡಿಟೆಕ್ಟಿವ್ ಡಿಪಾರ್ಟ್‌ಮೆಂಟನ್ನು ರಚಿಸಲಾಯಿತು. ಕ್ರಿಶ ೧೮೭೬ ರಲ್ಲಿ ಮೊದಲ ಬಾರಿಗೆ ಚಿನ್ನದ ಗಣಿ ಪ್ರಾರಂಭವಾದಾಗ ಅದರ ರಕ್ಷಣೆಗಾಗಿ ೫ ಜನ ಅಧಿಕಾರಿಗಳು ಮತ್ತು ೨೦ ಜನ ಕಾನ್‌ಸ್ಟೇಬಲ್‌ಗಳನ್ನು ನೇಮಿಸಲಾಯಿತು. ಈ ಸಂಖ್ಯೆ ಕಾಲದಿಂದ ಕಾಲಕ್ಕೆ ಬದಲಾದ ಬಗ್ಗೆ ವಿವರವಾಗಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.ಕ್ರಿಶ ೧೯೩೮ ರ ಎಪ್ರೀಲ್‌ನಲ್ಲಿ ಕೋಲಾರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ದೊಡ್ಡ ದುರಂತವೇ ನಡೆಯಿತು. ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಬ್ರಿಟೀಷರ ನಿರ್ದೇಶನದಲ್ಲಿ ಪೊಲೀಸರು ನಡೆಸಿದ ಲಾಠಿಪ್ರಹಾರ ಮತ್ತು ಗೋಲಿಬಾರ್‌ನಲ್ಲಿ ಪೊಲೀಸರು ೯೬ ಸುತ್ತು ಗುಂಡುಗಳನ್ನು ಹಾರಿಸಿದ್ದು, ಸರ್ಕಾರಿ ದಾಖಲೆಗಳ ಪ್ರಕಾರ ಒಂಬತ್ತು (ಜನವಾಡಿಕೆಯಲ್ಲಿ ಮೂವತ್ತೈದು) ಜನ ಮೃತಪಟ್ಟರು. ಇದು ರಾಜ್ಯದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲೇ ಪೊಲೀಸರು ನಡೆಸಿದ ಅತ್ಯಂತ ದೊಡ್ಡ ದೌರ್ಜನ್ಯವಾಗಿದೆ.

೧೮೬೧ ಕ್ಕಿಂತ ಮೊದಲು ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಒಂದೇ ಆಗಿದ್ದು ಕನ್ನಡ ಜಿಲ್ಲೆಯೆಂದು ಕರೆಯಲಾಗುತ್ತಿತ್ತು. ದ.ಕ ಜಿಲ್ಲಾ ಪೊಲೀಸ್ ಇತಿಹಾಸಕ್ಕೆ ಒಂದು ವೈಶಿಷ್ಟ್ಯತೆ ಇದೆ. ಗ್ರಾಮೀಣ ಪ್ರದೇಶ ಗಳಲ್ಲಿ

ಗ್ರಾಮಿಣಿ, ಉರಾಳುವ, ವರ್ಗಡೆ ಅಥವಾ ಹೆಗ್ಗಡೆ ಎಂಬವರು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದರು, ನಂತರದ ದಿನಗಳಲ್ಲಿ ನಗರಗಳಲ್ಲಿ 'ಕೊತ್ವಾಲ'ರು, ಗ್ರಾಮಗಳಲ್ಲಿ 'ತಳವಾರ'ರು, ಹಾಗೂ 'ಕಾವಲುಗಾರ'ರು ಈ ಜವಾಬ್ದಾರಿಯನ್ನು ಹೊಂದಿದರು. ಕಳ್ಳರನ್ನು ಹಿಡಿಯಲು ನಾಯನಕಾರ ಪದ್ಧತಿಯು ಜಾರಿಯಲ್ಲಿತ್ತು. ಈ ಪ್ರದೇಶವು ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟಿದ್ದರಿಂದ ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಬ್ರಿಟೀಷ್ ಪೊಲೀಸ್ ವ್ಯವಸ್ಥೆಯು ದಕ್ಷಿಣ ಕನ್ನಡದಲ್ಲಿ ಜಾರಿಗೆ ಬಂತು. ಕ್ರಿಶ ೧೮೫೭ರ ವೇಳೆಗೆ ಇಲ್ಲೊಂದು ವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆ ಜಾರಿಯಲ್ಲಿತ್ತು. ಅದಕ್ಕೆ ಮೊದಲು ಟಿಪ್ಪುವಿನ ಆಡಳಿತದಲ್ಲಿ 'ದರೋಗ' ಎಂಬ ಪೊಲೀಸ್ ಅಧಿಕಾರಿಯಿದ್ದ. ಕದ್ದ ಮಾಲುಗಳನ್ನು ಈತ ಪತ್ತೆ ಮಾಡಬೇಕಿತ್ತು. ವಿಫಲನಾದರೆ ಕಳವಾದ ಮಾಲಿನ ಮೌಲ್ಯದ ಶೇಕಡ ೧೦ ನ್ನು ಈತ ಕಟ್ಟಿಕೊಡಬೇಕಿತ್ತು. ಈತನಿಗೆ ಫೈರ್ ಆರ್ಮ್ಸ್ ನೀಡಲಾಗಿತ್ತು. ಕ್ರಿಶ ೧೮೦೨ ರ ೩೫ ನೇ ಮದ್ರಾಸ್ ರೆಗ್ಯುಲೇಶನ್ ಕಾಯ್ದೆ ಪ್ರಕಾರ ಮದ್ರಾಸ್ ಪ್ರಾಂತ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ವಾಸ್ತವವಾಗಿ ಇದು ಬಂಗಾಳ ಪೊಲೀಸ್ ಪದ್ಧತಿಯ ಅನುಕರಣೆಯಾಗಿತ್ತು. ಪ್ರತೀ ವಿಭಾಗಗಳಿಗೆ ದರೋಗ ಎಂಬ ಹೆಸರಿನ ಒಬ್ಬ ಅಧಿಕಾರಿ ಮತ್ತು ಒಬ್ಬ ಥಾಣಾದಾರ ಆತನ ಕೈಕೆಳಗೆ ೨೦ ರಿಂದ ೫೦ ಜನ ಶಸ್ತ್ರಧಾರಿ ಪೊಲೀಸರಿದ್ದರು. ಕ್ರಿಶ ೧೮೦೪ ರ ಟಿ.ಪಿ. ಕೇಟ್ ಕಮಿಟಿ ದಕ್ಷಿಣ ಕನ್ನಡ ಪೊಲೀಸ್ ವ್ಯವಸ್ಥೆಯ ಸಂಘಟನೆಗೆ ಸಲಹೆಗಳನ್ನು ನೀಡಿತು. ದರೊಗನ ಮತ್ತು ಥಾಣಾದಾರ ಕರ್ತವ್ಯಗಳನ್ನು ವಿಷದವಾಗಿ ವಿವರಿಸಲಾಯಿತು. ಕ್ರಿಶ ೧೮೧೨ ರ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ದರೋಗ ಮಾತ್ರ ಇದ್ದನು. ಆಗಿನ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿದ್ದ ಎ.ವಿಲ್ಸನ್‌ರವರು ದ.ಕ ಜಿಲ್ಲೆಯು ವಿಸ್ತಾರವಾಗಿದ್ದರಿಂದ ಮೂರು ಜನ ದರೋಗಗಳನ್ನು ನೀಡುವಂತೆ ಸರಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರು. ಈ ಕಾಲದಲ್ಲಿ ದ.ಕ ಪೊಲೀಸರಿಗಿದ್ದ ಸಂಬಳದ ಬಗ್ಗೆಯೂ ಕೂಡ ಚರ್ಚಿಸಲಾಗಿದೆ. ದರೋಗನ ಕರ್ತವ್ಯಗಳನ್ನು ಸವಿವರವಾಗಿ ವಿವರಿಸಲಾಗಿದೆ. ಕ್ರಿಶ ೧೮೧೪ ರ ವೇಳೆಗೆ ದಕ್ಷಿಣ ಕನ್ನಡದಲ್ಲಿದ್ದ ಪೊಲೀಸ್ ಪಡೆಯ ಬಲಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಮೊದಲು ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರು ಮ್ಯಾಜಿಸ್ಟ್ರೇಟರ ಅಧೀನದಲ್ಲಿದ್ದರು. ಸರ್.ಥಾಮಸ್ ಮನ್ರೋನು ನ್ಯಾಯಾಂಗ ಇಲಾಖೆ ಯಿಂದ ಪೊಲೀಸ್ ಕರ್ತವ್ಯವನ್ನು ಬೇರ್ಪಡಿಸಿದನು, ಮತ್ತು ಆ ಅಧಿಕಾರವನ್ನು ಕಲೆಕ್ಟರ್‌ಗೆ ನೀಡಬೇಕೆಂದು ಸಲಹೆ ಮಾಡಿದನು. ಮನ್ರೋನು ಪೊಲೀಸ್ ಇಲಾಖೆಯ ಸುಧಾರಣೆಗಳ ಬಗ್ಗೆ ಹಲವಾರು ಸಲಹೆಗಳನ್ನು ನೀಡಿದ್ದನ್ನು ವಿವರವಾಗಿ ಚರ್ಚಿಸಿದೆ. ಈ ಸಲಹೆಗಳನ್ನು ಕ್ರಿಶ ೧೮೧೬ ರಲ್ಲಿ ಒಪ್ಪಿಕೊಳ್ಳಲಾಯಿತು. ದರೋಗ ಹುದ್ದೆಯನ್ನು ರದ್ದು ಗೊಳಿಸಲಾಯಿತು. ಗ್ರಾಮಗಳಲ್ಲಿ ಪೊಲೀಸರನ್ನು ಪಟೇಲರ ನೇರ ನಿರ್ದೇಶನಕ್ಕೆ ಒಪ್ಪಿಸಲಾಯಿತು. ಈ ಕಾಲದಲ್ಲಿ ಅಮೀನ್ ದೀವ್ ದ್ವೀಪಗಳ ಗುಂಪು ದ.ಕ ಜಿಲ್ಲೆಗೆ ಸೇರಿದ್ದು, ಅಲ್ಲಿನ ಪೊಲೀಸ್ ಕೆಲಸಗಳನ್ನು 'ಮ್ಯಾನೇಜರ್' ಎಂದು ಕರೆಯುವ ಅಧಿಕಾರಿ ನೋಡಿಕೊಳ್ಳುತ್ತಿದ್ದನು. ಕ್ರಿಶ ೧೮೧೬ ರಲ್ಲಿ ಈ ಪೊಲೀಸ್ ವ್ಯವಸ್ಥೆಯು ಭ್ರಷ್ಟಾಚಾರ, ಹಿಂಸೆ, ಸ್ವಜನಪಕ್ಷಪಾತಗಳಿಂದ ಕೂಡಿದೆ ಎಂದು ಆರೋಪಿಸಿ, ಇವುಗಳ ಸುಧಾರಣೆಗಾಗಿ ಇ.ಎಫ್.ಎಲಿಯಟ್‌ರವರ ನೇತೃತ್ವ ದಲ್ಲಿ ಕ್ರಿಶ ೧೮೫೪ ರಲ್ಲಿ ಒಂದು ಆಯೋಗವನ್ನು ರಚಿಸಲಾಯಿತು. ಈ ಆಯೋಗವು ಕ್ರಿಶ ೧೮೫೫ ರ ಎಪ್ರೀಲ್ ೧೬ ರಂದು ವರದಿ ಸಲ್ಲಿಸಿತು. ಈ ಆಯೋಗವು ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿದ್ದ ದೌರ್ಜನ್ಯಗಳನ್ನು ಪಟ್ಟಿ ಮಾಡಿತು. ಮತ್ತು ಅದಕ್ಕೆ ಕಾರಣಗಳನ್ನು ಗುರುತಿಸಿತು. ಈ ಸಮಸ್ಯೆಗಳಿಗೆ ಪರಿಹಾರವಾಗಿ ಪೊಲೀಸ್ ಮತ್ತು ಕಂದಾಯ ಇಲಾಖೆಯನ್ನು ಬೇರ್ಪಡಿಸಬೇಕೆಂತಲೂ, ಪೊಲೀಸ್ ಇಲಾಖೆಯನ್ನು ಸೂಪರಿಂಟೆಂಡೆಂಟ್‌ರವರ ನೇತೃತ್ವಕ್ಕೆ ವಹಿಸಬೇಕೆಂತಲೂ, ಯುರೋಪಿಯನ್ ಅಧಿಕಾರಿಯಾಗಿರಬೇಕೆಂತಲೂ, ಖೈದಿಗಳನ್ನು ಕಡಿಮೆ ಅವಧಿಯಲ್ಲಿ ಮ್ಯಾಜಿಸ್ಟ್ರೇಟ್‌ರವರ ಮುಂದೆ

ಹಾಜರುಪಡಿಸಬೇಕೆಂತಲೂ ಆಯೋಗವು ಸೂಚಿಸಿತು. ಕ್ರಿಶ ೧೮೫೯ ರ ವೇಳೆಗೆ ಮದ್ರಾಸ್ ಪ್ರೆಸಿಡೆನ್ಸಿಯ ಪೊಲೀಸ್ ವ್ಯವಸ್ಥೆ ಒಬ್ಬ ಐ.ಜಿ.ಪಿಯ ನೇರ ನಿರ್ದೇಶನಕ್ಕೆ ಒಳಪಟ್ಟಿತು. ಕ್ರಿಶ ೧೮೫೯ರ ೨೪ ನೇ ಕಾಯ್ದೆಯಲ್ಲಿ ಐ.ಜಿ.ಪಿ ಮತ್ತು ಇತರ ಪೊಲೀಸ್ ಅಧಿಕಾರಿಗಳ ಕರ್ತವ್ಯಗಳ ಬಗ್ಗೆ ಸವಿವರವಾಗಿ ವಿವರಿಸಲಾಯಿತು,. ಆ ಬಗ್ಗೆ ಈ ಅಧ್ಯಯನದಲ್ಲಿ ವಿವರವಾಗಿ ಚರ್ಚಿಸಿದೆ.

ಕೊಡಗು ಜಿಲ್ಲಾ ಪೊಲೀಸ್ ವ್ಯವಸ್ಥೆ ಬೇರೆ ಜಿಲ್ಲೆಗಳಿಗಿಂತ ಸ್ವಲ್ಪ ಬಿನ್ನವಾಗಿತ್ತು. ಕೊಡಗಿನ ಸೂಪರಿಂಟೆಂಡೆಂಟ್‌ರಿಗೆ ಕಮಿಷನರ್ ಎಂದು ನಾಮಕರಣ ಮಾಡಲಾಯಿತು. ಈತನು ಮೈಸೂರಿನ ಚೀಫ್ ಕಮಿಷನರ್‌ನ ಅಧೀನದಲ್ಲಿ ಕೆಲಸ ಮಾಡುತ್ತಿದ್ದನು. ಈತನು ಪೊಲೀಸ್ ಇಲಾಖೆಗೆ ಮಾತ್ರವಲ್ಲದೇ ಶಿಕ್ಷಣ ಹಾಗೂ ಅರಣ್ಯ ಇಲಾಖೆಯ ಮುಖ್ಯಸ್ಥನಾಗಿದ್ದನು. ಜಮ್ಮಭೂಮಿಯನ್ನು ಪಡೆಯುತ್ತಿದ್ದ ರೈತರೇ ಹಳ್ಳಿಗಳ ಕಾವಲು ಕಾಯುತ್ತಿದ್ದರು. ನಾಡಿನ ಸುತ್ತ ಕಂದಕಗಳನ್ನು ರಚಿಸಲಾಗಿತ್ತು. ಇದರ ಪ್ರವೇಶ ದ್ವಾರಗಳಲ್ಲಿ ರಕ್ಷಣಾಗ್ರಹ ಮತ್ತು ಚೌಕಿ ಠಾಣೆಗಳನ್ನು ಕಟ್ಟಲಾಗಿತ್ತು. ಪ್ರವಾಸಿಗಳನ್ನು ತನಿಖೆಯ ನಂತರವೇ ಒಳಗೆ ಕಳುಹಿಸಲಾಗಿತ್ತು. ಸರಕಾರದಿಂದ ರಹದಾರಿ ಪತ್ರ ಪಡೆಯದೇ ಯಾರೂ ನಾಡನ್ನು ಬಿಟ್ಟು ಹೊರಹೋಗುವಂತಿರಲಿಲ್ಲ. ಕೊಡಗಿನ ರಾಜರ ಆಳ್ವಿಕೆಯಲ್ಲಿ ಪ್ರತ್ಯೇಕ ಪೊಲೀಸ್ ಬಲವಿರಲಿಲ್ಲ. ಎಲ್ಲಾ ಸರಕಾರಿ ಕಛೇರಿಗಳಲ್ಲಿನ ಪೇದೆಗಳು ಪೊಲೀಸರ ಕರ್ತವ್ಯಗಳನ್ನು ಮಾಡುತ್ತಿದ್ದರು. ಜನರ ರಕ್ಷಣೆಯ ಜವಾಬ್ದಾರಿ 'ಸರ್ವಕಾರ್ಯಕಾರರು', 'ಕಾರ್ಯಕಾರರು', 'ಜಮೇದಾರರು' ಮತ್ತು 'ಸುಬೇದಾರರಿಗೆ' ಸೇರಿದ್ದಾಗಿತ್ತು.

ಬೆಳಗಾಂ ಜಿಲ್ಲೆಯಲ್ಲಿ ಪ್ರಜಾಸೈನ್ಯ ಜನರ ರಕ್ಷಣೆಯ ಜವಾಬ್ದಾರಿಯನ್ನು ಹೊಂದಿತ್ತು. 'ತಲರ್' ಅಥವಾ 'ಮಹರ್' ಎಂಬ ಅಧಿಕಾರಿಗಳು ಗಸ್ತು ಕಾರ್ಯ ನಡೆಸುತ್ತಿದ್ದರು. ಖಾನಾಪುರದಲ್ಲಿ ವಂಶಪಾರಂಪರ್ಯವಾಗಿ 'ಗಡ್ಕರಿ' ಎಂಬವರು ಪೊಲೀಸ್ ಕೆಲಸವನ್ನು ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಪೊಲೀಸ್ ವ್ಯವಸ್ಥೆಯು ಮ್ಯಾಜಿಸ್ಟ್ರೇಟರ್‌ನ ನಿಯಂತ್ರಣಕ್ಕೆ ಬಂದಿತ್ತು. ಕ್ರಿಶ ೧೮೮೨ ರ ವೇಳೆಗೆ ಬೆಳಗಾಂ ಜಿಲ್ಲೆಯಲ್ಲಿ ೩೩೫೬ ಜನ ಪೊಲೀಸರು ಇದ್ದರು. ಆ ಜಿಲ್ಲೆಯಲ್ಲಿ ನಡೆಯುತ್ತಿದ್ದ ಅಪರಾಧಗಳ ಸ್ವರೂಪ ಹಾಗೂ ಪೊಲೀಸ್ ಇಲಾಖೆ ಬೆಳೆದು ಬಂದ ಬಗೆಯನ್ನು ಸಹ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಕಿತ್ತೂರು ಚೆನ್ನಮ್ಮನ ಅಂಗರಕ್ಷಕನಾಗಿದ್ದ 'ಅಮಟೂರುಬಾಳಪ್ಪ' ಎಂಬುವವನು ಥ್ಯಾಕರೆಯನ್ನು ಗುಂಡಿಟ್ಟು ಕೊಂದನೆಂಬುದು ಅಂಗರಕ್ಷಕ ಪಡೆಯ ಹೆಮ್ಮೆಯ ವಿಷಯವಾಗಿದೆ. ಗುಲ್ಬರ್ಗದಲ್ಲಿ 'ಸದರ್-ಉಲ್-ಮೊಹಂ' ಎಂಬ ಪೊಲೀಸ್ ಸಚಿವನಿದ್ದ.

ಬಿಜಾಪುರ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಧರ್ಮಪಾಲಕ, ಕೊತ್ವಾಲ, ಪಟೇಲ, ಗೌಡರವರುಗಳೇ ಪೊಲೀಸ್ ಕರ್ತವ್ಯವನ್ನು ಮಾಡಿಕೊಂಡು ಬಂದರು. ಆದಿಲ್‌ಷಾಹಿಗಳು ತಮ್ಮದೇ ಆದ ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆಯನ್ನು ಹೊಂದಿದ್ದರು. ಬ್ರಿಟೀಷ್ ಆಡಳಿತದಲ್ಲಿ ಈ ಜಿಲ್ಲೆಯು ಕ್ರಿಶ ೧೮೨೭ ರ ಬಾಂಬೆ ರೆಗ್ಯುಲೇಶನ್ ಕಾಯ್ದೆ ೧೨ ರಂತೆ ಜಿಲ್ಲಾ ಮ್ಯಾಜಿಸ್ಟ್ರೇಟರ್‌ನ ಆಡಳಿತಾತ್ಮಕ ಅಧೀನಕ್ಕೆ ಇಲಾಖೆ ಒಳಪಟ್ಟಿತು.

ಧಾರವಾಡ ಜಿಲ್ಲೆಯು ಇದೇ ಕಾಯ್ದೆಯ ಅಧೀನಕ್ಕೆ ಒಳಪಟ್ಟಿತು. ಮರಾಠರ ಕಾಲದಲ್ಲಿದ್ದ 'ಸೇತ್‌ಸನದಿ' ಎಂಬ ಗ್ರಾಮೀಣ ಪೇದೆಗಳನ್ನೇ ಇಲ್ಲಿ ಪೊಲೀಸ್ ಪಡೆಗೆ ಬಳಸಿಕೊಂಡರು. ಧಾರಾವಾಡ ಜಿಲ್ಲೆಯಲ್ಲಿದ್ದ ಜನಸಂಖ್ಯೆ ಹಾಗೂ ಪೊಲೀಸರ ಬಲಾಬಲವನ್ನು ಚರ್ಚಿಸಲಾಗಿದೆ. ಸವಣೂರಿನ ಸಂಸ್ಥಾನದ ಪೊಲೀಸ್ ಆಡಳಿತವು ಪ್ರತ್ಯೇಕವಾಗಿತ್ತು. ಕ್ರಿಶ ೧೯೧೯-೨೦ ರ ವೇಳೆಗೆ ಧಾರವಾಡ ಜಿಲ್ಲೆಯಲ್ಲಿ ನಡೆದ ಅಸಹಕಾರ ಚಳುವಳಿ ಸಂದರ್ಭದಲ್ಲಿ ನಡೆದ ಪೊಲೀಸ್

ಗೋಲಿಬಾರ್‌ನ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಇನ್ನು ಮಂಡ್ಯ ಜಿಲ್ಲೆಯಂತೂ ಸಂಪೂರ್ಣವಾಗಿ ಹೈದರ್ ಟಿಪ್ಪು ಮತ್ತು ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಿದ್ದು, ಹೈದರ್, ಟಿಪ್ಪುವಿನ ಕಾಲದಲ್ಲಿ 'ಅಸೋಫ', 'ಅಮಿಲ್', 'ಗೌಡ' ಮೊದಲಾದ ಅಧಿಕಾರಿಗಳು ಪೊಲೀಸ್ ಕರ್ತವ್ಯವನ್ನು ಮಾಡಿಕೊಂಡಿದ್ದರು. ರಾಮರಾಯನ ಆಡಳಿತದಲ್ಲಿ ಒಂದು ಬೇಹುಗಾರಿಕಾ ಪಡೆಯನ್ನು ರಚಿಸಲಾಗಿತ್ತು. ಪಟ್ಟಣದ ಚಾವಡಿಯಲ್ಲಿ ಪೊಲೀಸ್ ಕೆಲಸಗಳು ನಡೆಯುತ್ತಿದ್ದವು. ಕಂದಾಚಾರದ ಸಿಪಾಯಿಗಳಿದ್ದರು. ಬ್ರಿಟೀಷರ ಪೊಲೀಸ್ ಹುಕುಂನಾಮೆಯಂತೆ ನಂತರ ಇಲ್ಲಿ ಪೊಲೀಸ್ ಕೆಲಸಗಳು ನಡೆಯುತ್ತಿದ್ದವು. ಶಿವಪುರದ ಧ್ವಜ ಸತ್ಯಾಗ್ರಹ ಮತ್ತು ಪೊಲೀಸರ ನಡುವಿನ ಸಂಘರ್ಷಗಳ ವಿವರವನ್ನು ನೀಡಿದೆ.

ಮೈಸೂರು ನಗರ ಪೊಲೀಸ್ ವ್ಯವಸ್ಥೆ ಹಂತ ಹಂತವಾಗಿ ಬೆಳದು ಬಂದ ವಿವರಗಳನ್ನು ಚರ್ಚಿಸಲಾಗಿದೆ. ಅವರಿಗೆ ನೀಡುತ್ತಿದ್ದ ವೇತನ, ಸಾರಿಗೆ ವ್ಯವಸ್ಥೆ. ಆಡಳಿತದ ವಿಭಾಗಗಳು, ಅಲ್ಲಿದ್ದ ಮೀಸಲು ಪೊಲೀಸ್ ಪಡೆ, ಅದು ಬೆಳೆದು ಬಂದ ರೀತಿ, ಇನ್‌ಫೆಂಟ್ರ ಮತ್ತು ಪೊಲೀಸ್ ಇಲಾಖೆಗಳ ಸಂಬಂಧ ಕಾಲಕಾಲಕ್ಕೆ ಇದ್ದ ಜನಸಂಖ್ಯೆ ಮತ್ತು ಪೊಲೀಸ್ ಪಡೆಯ ಬಲ, ಸಂಚಾರಿ ಪೊಲೀಸ್ ವ್ಯವಸ್ಥೆ, ಸಂಸ್ಥಾನದ ಕಾಯ್ದಿಟ್ಟ ಮೀಸಲು ಪೊಲೀಸ್ ಪಡೆ ಮತ್ತು ಮೈಸೂರು ಜಿಲ್ಲೆಯ ಗ್ರಾಮೀಣ ಪೊಲೀಸ್ ಸಂಘಟನೆಯ ಬಗ್ಗೆ ಅಂಕಿಅಂಶಗಳೊಂದಿಗೆ ಚರ್ಚಿಸಿದೆ. ಮೈಸೂರಿನ ಪೊಲೀಸರ ಬಗ್ಗೆ ವೇಲ್ಸ್ ರಾಜ ಪ್ರಶಂಸೆ ಮಾಡಿದ್ದನು. ಬಳ್ಳಾರಿ ಜಿಲ್ಲೆಯು ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟಿದ್ದು, ಅಲ್ಲಿ ಪೊಲೀಸ್ ಪಡೆ ಬೆಳೆದು ಬಂದ ರೀತಿ, ಅಲ್ಲಿನ ಗ್ರಾಮೀಣ ಪೊಲೀಸ್ ವ್ಯವಸ್ಥೆ, ಮನ್ರೋನು ತಂದ ಸುಧಾರಣೆಗಳ ಬಗ್ಗೆ ಅಭ್ಯಸಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಪೊಲೀಸ್ ಇಲಾಖೆಯ ವಿವಿಧ ಘಟಕಗಳು ಮತ್ತು ಅಪರಾಧಗಳ ಬಗ್ಗೆ ಚರ್ಚಿಸಲಾಗಿದೆ. ಮೊದಲನೆಯದಾಗಿ ಪೊಲೀಸ್ ಅಶ್ವದಳದ ಬಗ್ಗೆ ಚರ್ಚಿಸಲಾಗಿದೆ. ಟಿಪ್ಪು ಸುಲ್ತಾನನ ಆಡಳಿತದ ಕೊನೆಯ ದಿನಗಳಿಂದ ಇದ್ದಂತಹ ಅಶ್ವದಳವು ಮೈಸೂರು ಅಶ್ವದಳದ ವರೆಗೆ ಬೆಳೆದು ಬಂದ ಪ್ರಮುಖ ಹಂತಗಳನ್ನು ಚರ್ಚಿಸಲಾಗಿದೆ. ಪೊಲೀಸ್ ಅಶ್ವದಳವು ಟಿಪ್ಪುವಿನ ಕಾಲದಿಂದಲೂ ಬೆಳೆದುಬಂದ ಶಿಲ್ಲೇದಾರರ ಪಡೆಯ ಮುಂದುವರಿದ ಸ್ವರೂಪವಾಗಿದೆ. ಮೈಸೂರಿನ ಶಿಲ್ಲೇದಾರ ಅಶ್ವದಳವು, ಶ್ರೀರಂಗಪಟ್ಟಣವನ್ನು ಬ್ರಿಟೀಷರು ವಶಪಡಿಸಿಕೊಂಡ ನಂತರ ನಾಶಗೊಂಡ ಸೇನೆಯಿಂದ ರಚಿಸಿದ್ದಾಗಿದೆ. ಕ್ರಿ.ಶ ೧೮೦೨ ರ ವೇಳೆಗೆ ೧೫೦೦ ಜನ ಶಿಲ್ಲೇದಾರರು ಇದ್ದರು. ಯುದ್ಧದ ಸಂದರ್ಭಗಳಲ್ಲಿ ಇದರ ಸಂಖ್ಯೆ ಭೌತಿಕವಾಗಿ ಕುಸಿಯಿತು. ಕಾಲಕಲಕ್ಕೆ ಶಿಲ್ಲೇದಾರರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಶಿಲ್ಲೇದಾರ್ ಪಡೆಗಳನ್ನು ೭ ತುಕಡಿಗಳ ವಿಭಾಗಗಳನ್ನಾಗಿ ಮಾಡಲಾಯಿತು. ಅವುಗಳಿಗೆ ತುಕ್ರಿ ಎಂತಲೂ, ಅದರ ಅಧಿಕಾರಿಗೆ ತುಕ್ರಿದಾರ ಎಂತಲೂ ಕರೆಯಲಾಯಿತು. ಈ ಪಡೆಗಳು ಶಿಡ್ಲಘಟ್ಟ, ಕಟ್ಟೆ, ಹುಲಿಯೂರುದುರ್ಗ, ನಾಗಮಂಗಲ, ಚನ್ನರಾಯ ಪಟ್ಟಣ, ಚೆನ್ನಪಟ್ಟಣ ಮತ್ತು ಕುಣಿಗಲ್‌ನಲ್ಲಿ ಇದ್ದವು. ಶ್ರೀರಂಗಪಟ್ಟಣ ಪಥನಾನಂತರ ಶಿಲ್ಲೇದಾರರು ಮರಾಠರ ಸೇನೆಗೆ ಸೇರುವುದನ್ನು ತಡೆಗಟ್ಟಲು ಸಂಸ್ಥಾನದ ಒಳಭಾಗದಲ್ಲಿ ಅವರಿಗೆ ಭೂಮಿಯನ್ನು ನೀಡಲಾಯಿತು. ಈ ಶಿಲ್ಲೇದಾರರು ವಂಶಪಾರಂಪರ್ಯವಾಗಿ ಹಕ್ಕನ್ನು ಹೊಂದಿದ್ದು ಬಹುತೇಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಜೈಲು, ಸರಕಾರಿ ನಾಣ್ಯ ಮುದ್ರಣಾಲಯ, ಬ್ಯಾಂಕ್‌ಗಳು, ಕೋಟೆಗಳು, ಗೋದಾಮುಗಳು, ಅಂಗಡಿಗಳು, ಶಸ್ತ್ರಾಗಾರಗಳನ್ನು ಕಾಯುವುದು, ಕೊತ್ವಾಲ ಚೌಲ್ಟ್ರಿಗೆ ಹಾಜರಾಗುವುದು, ಹಿಂದು ಗುರುಗಳು ಮತ್ತು ಅಧಿಕಾರಿಗಳು, ಭಕ್ಷಿಗಳ ಬೆಂಗಾವಲು ಮಾಡುವುದು, ಅಮಿಲ್‌ದಾರನಿಗೆ ಸಹಕರಿಸುವುದು, ರಸ್ತೆಗಳಲ್ಲಿ ಶಿಕ್ಷೆಗೊಳಗಾದವರನ್ನು ಸಾಗಿಸುವಾಗ ಅವರನ್ನು ಕಾಯುವುದು ಇವರ ಕರ್ತವ್ಯವಾಗಿತ್ತು. ಕ್ಲೋಸ್‌ಪೇಟೆ ಅಂದರೆ ಇಂದಿನ ರಾಮನಗರ ಅಶ್ವದಳದ ಪ್ರಮುಖ ಕೇಂದ್ರವಾಗಿತ್ತು. ಈ ಕುದುರೆ ಸವಾರರ ಕಾರ್ಯಕ್ಷಮತೆ, ಯುದ್ಧರಂಗದ ಸೇವೆ, ಅವರ ಸಂಬಳ

ಮತ್ತು ನೇಮಕಾತಿ, ಕುದುರೆ ಸವಾರರ ನಿಪುಣತೆ, ಅವರ ವಂಶಪಾರಂಪರ್ಯದ ಪದ್ಧತಿ, ಬಾರ್‌ಗೀರ್ ವ್ಯವಸ್ಥೆ, ಮತ್ತು ಶಿಲ್ಲೇದಾರರ ಸಾಮಾನ್ಯ ಕರ್ತವ್ಯಗಳ ಬಗ್ಗೆ ಚರ್ಚಿಸಲಾಗಿದೆ.

ಮೈಸೂರು ಅರಸರ ಅಂಗರಕ್ಷಕ ದಳವು ಮುಂದೆ ಮೌಂಟೆಡ್ ಪೊಲೀಸ್ ಅಂದರೆ ಕರ್ನಾಟಕ ರಾಜ್ಯ ಪೊಲೀಸ್ ಅಶ್ವದಳವಾಗಿ ಪರಿವರ್ತನೆಯಾಯಿತು. ಮಹಾರಾಜರ ಅಂಗರಕ್ಷಕ ಪಡೆಯನ್ನು ಮೊದಲು ಹಿಸ್ ಹೈನೆಸ್ ಆಫ್ ಮಹಾರಾಜ ಓನ್ ಇನ್‌ಫೆಂಟ್ರಿ ಎಂದು ಕರೆಯುತ್ತಿದ್ದು, ನಂತರ ಅದು ಹಿಸ್ ಹೈನೆಸ್ ಆಫ್ ಮಹಾರಾಜಾಸ್ ಬಾಡಿಗಾರ್ಡ್ ಎಂದು ಪರಿವರ್ತನೆಯಾಯಿತು. ಇದಕ್ಕೆ ಒಬ್ಬ ಕಮಾಂಡೆಂಟ್, ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್, ಒಬ್ಬ ರಿಸರ್ವ್ ಇನ್ಸ್‌ಪೆಕ್ಟರ್, ಇಬ್ಬರು ಅಸಿಸ್ಟೆಂಟ್ ರಿಸರ್ವ್ ಇನ್ಸ್‌ಪೆಕ್ಟರ್, ೧೨ ದಫೇದಾರರು, ೧೧೦ ಕಾನ್ಸ್‌ಟೇಬಲ್ ಮತ್ತು ೩೬ ಜನ ಕಾನ್ಸ್‌ಟೇಬಲ್‌ಗಳು ಇದ್ದರು. ಇವರ ಪ್ರಮುಖ ಕರ್ತವ್ಯಗಳೆಂದರೆ ಅರಮನೆಯನ್ನು ಕಾಯುವುದಾಗಿತ್ತು. ಇವರ ಸಮವಸ್ತ್ರಗಳ ಮೇಲೆ ಗಂಡಬೇರುಂಡದ ಚಿಹ್ನೆ ಮತ್ತು ಮುದ್ರೆಗಳಿರುವ ಬಗ್ಗೆ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಗೀತಗಾರರ ತಂಡವಿದ್ದು ಅದನ್ನು ಪೊಲೀಸ್ ಬ್ಯಾಂಡ್ ಎಂದು ಕರೆಯಲಾಗುತ್ತದೆ. ಮೈಸೂರು ಅರಮನೆಯಲ್ಲಿ ಎರಡು ರೀತಿಯ ಪೊಲೀಸ್ ಬ್ಯಾಂಡ್‌ಗಳಿದ್ದವು. ಮೊದಲನೆಯದು ಇಂಗ್ಲೀಷ್ ಬ್ಯಾಂಡ್ ಇದನ್ನು ಕರ್ನಾಟಕ ಗವರ್ನಮೆಂಟ್ ಬ್ಯಾಂಡ್ (ಕೆ.ಜಿ.ಬಿ) ಎಂದು ಕರೆಯಲಾಗುತ್ತಿತ್ತು. ಇದು ಪಾಶ್ಚಾತ್ಯ ಸಂಗೀತವನ್ನು ನುಡಿಸುತ್ತಿದ್ದವು. ಎರಡನೇಯದು ಕರ್ನಾಟಕ ಗವರ್ನ್‌ಮೆಂಟ್ ಆರ್ಕೇಸ್ಟ್ರಾ. ಇದು ಕರ್ನಾಟಕ ಶಾಸ್ತ್ರೀಯ ಸಂಗೀತ ವನ್ನು ನುಡಿಸುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಇದಕ್ಕೆ ಸಂಬಂಧಿಸಿದ ಹಳೇಯ ಕಾಲದ ವಾದ್ಯಗಳ ಚಿತ್ರಗಳನ್ನು ಸಂಗ್ರಹಿಸಲಾಗಿದೆ. ಈ ಸಂಗೀತಗಾರರ ಸಮವಸ್ತ್ರದ ಗುಂಡಿಯ ಮೇಲೆ ಮೈಸೂರು ಮಹಾರಾಜರ ರಾಜಮುದ್ರೆಯಾದ ಗಂಡಬೇರುಂಡದ ಚಿತ್ರ ಇದೆ. ಇದರ ಹಿಂಭಾಗದಲ್ಲಿ ಅದನ್ನು ತಯಾರಿಸಿದ ಲಂಡನ್‌ನ ಕಂಪೆನಿಯ ಹೆಸರು ಇದೆ. ಕ್ರಿಶ ೧೮೬೫ ರಲ್ಲಿ ಚಾಮರಾಜ ಒಡೆಯರ ಕಾಲದ ಪ್ಯಾಲೇಸ್ ಬ್ಯಾಂಡ್ (ದ ಪೊಲೀಸ್ ಬ್ಯಾಂಡ್) ಎಂದು ಕರೆಯುತ್ತಿದ್ದ ಪೊಲೀಸ್ ಸಂಗೀತಗಾರರ ತಂಡವೊಂದನ್ನು ರಚಿಸಲಾಯಿತು. ಇದರ ಮೊದಲ ಬ್ಯಾಂಡ್ ಮಾಸ್ತರ್ ಪ್ರೆಂಚ್‌ನ ಪ್ರಖ್ಯಾತ ಸಂಗೀತಗಾರರಾಗಿದ್ದ ಶ್ರೀ.ಡೊಪ್ರಿಸ್ ಮತ್ತು ಶ್ರೀ.ಓತಿಯೋ ಸ್ಮಾಮಿದ್ ಎಂಬವರಾಗಿದ್ದರು. ಇವರು ಕ್ರಿಶ ೧೯೨೩ ರಲ್ಲಿ ಸಂಗೀತ ಗಾರರಾಗಿದ್ದರು. ಕ್ರಿಶ ೧೯೪೨ ರಲ್ಲಿ ಶ್ರೀ.ಎಂ.ಪಿರೇಕರ್‌ರವರು ಸಂಗೀತ ನಿರ್ದೇಶಕರಾದರು. ಇವರು ಸುಮಾರು ೨ ದಶಕಗಳ ಕಾಲ ಈ ಹುದ್ದೆಯಲ್ಲಿ ಮುಂದುವರಿದರು. ಕರ್ನಾಟಕ ಬ್ಯಾಂಡ್‌ನ ಮೊದಲ ಬ್ಯಾಂಡ್‌ಮಾಸ್ತರ್‌ರಾಗಿ ಪ್ರಖ್ಯಾತ ಸಂಗೀತ ವಿದ್ವಾಂಸಕರಾಗಿದ್ದ ಶ್ರೀ.ವೆಂಕಟಯ್ಯರವರನ್ನು ನೇಮಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ವಿಶೇಷ ಆಸಕ್ತಿವಹಿಸಿ ಲಾಹೋರ್‌ನಿಂದ ಉಸ್ತಾದ್ ನಜೀದ್‌ಖಾನ್‌ರವರನ್ನು ಮೈಸೂರಿಗೆ ಕರೆಯಿಸಿ ಅರಮನೆಯಲ್ಲಿ ಆಶ್ರಯ ನೀಡಿ ಕರ್ನಾಟಕ ಬ್ಯಾಂಡ್‌ನ ಸಂಗೀತಗಾರರಿಗೆ ಉತ್ತರಾದಿ ಸಂಗೀತದ ಬಗ್ಗೆ ತರಬೇತಿ ಕೊಡಿಸಿದರು. ಇದೇ ವೇಳೆಗೆ ಇಂಡಿಯನ್ ಆರ್ಕೇಸ್ಟ್ರಾ ಎಂಬ ಹೊಸ ತಂಡವನ್ನು ರಚಿಸಲಾಯಿತು. ಮೈಸೂರು ಅರಮನೆಯ ಪೊಲೀಸ್ ಬ್ಯಾಂಡ್ ದಸರಾ ಉತ್ಸವದಲ್ಲಿ ಸಂಗೀತ ನುಡಿಸುತ್ತಾ ಸಾಗುತ್ತಿತ್ತು. ಮೈಸೂರು ಅರಸರ ಕಾಲದ ಪೊಲೀಸ್ ಬ್ಯಾಂಡಿಗೆ ಸಂಬಂಧಿಸಿದಂತೆ ಅಪರೂಪದ ಚಿತ್ರಗಳನ್ನು ಸಂಗ್ರಹಿಸಲಾಗಿದೆ.

ರಾಜ್ಯದ ವಿವಿಧ ಕಡೆಗಳಲ್ಲಿ ಸಂಭವಿಸಬಹುದಾದ ಗಲಭೆ ಮತ್ತು ದೊಂಬಿಗಳನ್ನು ನಿಯಂತ್ರಿಸಲು ಸ್ಥಳೀಯ ಪೊಲೀಸರಿಂದ ಅಸಾಧ್ಯವಾದ ಕಾರಣ ಕ್ರಿಶ ೧೮೮೯ ರಲ್ಲಿ ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ವಿಶೇಷ ಮೀಸಲು

ಪೊಲೀಸ್‌ಪಡೆಯನ್ನು ಸ್ಥಾಪಿಸಲಾಯಿತು. ಕ್ರಮೇಣ ಪ್ರತೀ ಜಿಲ್ಲಾ ಕೇಂದ್ರಗಳಲ್ಲೂ ಇಂತಹ ಪಡೆಗಳನ್ನು ರಚಿಸಲಾಯಿತು. ಇವರಿಗೆ ವಾಹನ ಸೌಲಭ್ಯ ಒದಗಿಸಲಾಯಿತು. ಈ ಪಡೆಯ ಬಲ ಮತ್ತು ಇದು ಬೆಳದು ಬಂದ ರೀತಿಯನ್ನು ವಿವರವಾಗಿ ಚರ್ಚಿಸಲಾಗಿದೆ. ಈ ಪಡೆಯ ಸಿಬ್ಬಂದಿಗಳಿಗೆ ಕವಾಯತು ತರಬೇತಿಯನ್ನು ಹಾಗೂ ಶಸ್ತ್ರಾಸ್ತ್ರಗಳನ್ನು ಬಳಸುವ ಬಗ್ಗೆ ತರಬೇತಿಗಳನ್ನು ನೀಡಲಾಗಿತ್ತು. ಈ ಪಡೆಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸಬೇಕೆ ವಿನಹ ದೈನಂದಿನ ಕರ್ತವ್ಯಗಳಿಗೆ ಬಳಸಬಾರದೆಂದು ಐ.ಜಿ.ಪಿ ಶ್ರೀ.ಆರ್.ರಿಕೆಟ್ಸ್‌ರವರು ಆದೇಶಿಸಿ ದ್ದರು. ೧೮೯೦ ರ ವೇಳೆಗೆ ಈ ಪಡೆಯಲ್ಲಿ ಒಂಬು ಇನ್ಸ್‌ಪೆಕ್ಟರ್, ಮೂರು ಜನ ಡ್ರಿಲ್ ಸಾರ್ಜೆಂಟ್‌ಗಳು, ೩೧ ಜನ ಒಂದನೇ ದರ್ಜೆಯ ಕಾನ್‌ಸ್ಟೇಬಲ್‌ಗಳು, ೪೮ ಜನ ಎರಡನೇ ದರ್ಜೆಯ ಕಾನ್‌ಸ್ಟೇಬಲ್‌ಗಳು ಇದ್ದರು. ರಾಜ್ಯದ ಗಡಿಭಾಗಗಳಲ್ಲಿ ಗಸ್ತು ತಿರುಗುವುದು, ಪಕ್ಕದ ಸಂಸ್ಥಾನಗಳಿಗೆ ಹಾದುಹೋಗುವ ರಸ್ತೆಗಳಲ್ಲಿ ಸಂಘಟಿತ ಗುಂಪುಗಳ ಮತ್ತು ಡಕಾಯಿತರುಗಳ ಚಲನವಲನಗಳ ಬಗ್ಗೆ ಮಾಹಿತಿ ಪಡೆದು ಗಸ್ತು ತಿರುಗುವುದು, ಅರಮನೆಯ ರಕ್ಷಣೆ ಕರ್ತವ್ಯ, ರಾಜಧಾನಿಗೆ ಗಣ್ಯವ್ಯಕ್ತಿಗಳು ಬೇಟಿಕೊಡುವ ವೇಳೆ ಬಂದೋಬಸ್ತ್ ಕರ್ತವ್ಯಗಳನ್ನು ಸಹ ಮಾಡಬೇಕಿತ್ತು. ಅಲ್ಲದೇ ಮೈಸೂರು ಮಹಾರಾಜರು ಬೇರೆ ಜಿಲ್ಲೆಗಳಿಗೆ ಹೋಗುವ ಸಂದರ್ಭಗಳಲ್ಲಿ ಅವರ ಕ್ಯಾಂಪಿನಲ್ಲಿದ್ದು ರಕ್ಷಣೆಯನ್ನು ಒದಗಿಸುವುದು, ದಸರ ಮೊಹರಂನಂತಹ ಸಂದರ್ಭಗಳಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಮತೀಯ ಸೌಹಾರ್ಧವನ್ನು ಕಾಪಾಡುವುದು ಈ ಪಡೆಯ ಕರ್ತವ್ಯವಾಗಿತ್ತು. ಈ ಪಡೆಯು ಕಾಲದಿಂದ ಕಾಲಕ್ಕೆ ಬೆಳೆದು ಬಂದ ಬಗೆಯನ್ನು ಅಂಕಿ ಸಂಖ್ಯೆಗಳ ಆಧಾರದ ಮೇರೆಗೆ ಚರ್ಚಿಸಲಾಗಿದೆ.

ಬ್ರಿಟೀಷರು ಭಾರತದಲ್ಲಿ ಜಾರಿಗೆ ತಂದ ರೈಲ್ವೆ ಮತ್ತು ಟೆಲಿಗ್ರಾಪ್ ವ್ಯವಸ್ಥೆಗಳಿಂದಾಗಿ ಆರೋಪಿಗಳು ಪೊಲೀಸರಿಗೆ ಸಿಗದೇ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ತಪ್ಪಿಸಿಕೊಳ್ಳುತ್ತಿದ್ದರು. ಇಂತಹ ಆರೋಪಿಗಳ ಪತ್ತೆಗೆ ಒಂದು ವಿಶೇಷ ತನಿಖಾ ತಂಡ ಅಗತ್ಯವಿತ್ತು. ಹೀಗಾಗಿ ಸಿ.ಐ.ಡಿ ಘಟಕವನ್ನು ತಯಾರಿಸಲು ಕಡೂರು ಜಿಲ್ಲಾ ಡೆಪ್ಯೂಟಿ ಕಮಿಷನರಾಗಿದ್ದ ಎಫ್.ಇ.ಇ. ಖಾರ್‌ರವರಿಗೆ ಸೂಚಿಸಲಾಯಿತು. ಇವರು ೧೯೦೭ ರಲ್ಲಿ ಮದ್ರಾಸ್‌ಗೆ ಬೇಟಿ ನೀಡಿ ಅಲ್ಲಿನ ಸಿ.ಐ.ಡಿ ವಿಭಾಗಗಳ ಬಗ್ಗೆ ಅಧ್ಯಯನ ನಡೆಸಿ ಒಂದು ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದು, ಆ ಶಿಪಾರಸ್ಸಿನಂತೆ ರಾಜ್ಯದಲ್ಲೂ ಸಿ.ಐ.ಡಿ ಘಟಕವನ್ನು ಪ್ರಾರಂಭಿಸಲಾಯಿತು. ಈ ಘಟಕ ಬೆಳೆದು ಬಂದ ಬಗ್ಗೆ ಅದರ ಸಿಬ್ಬಂದಿಗಳು ಮತ್ತು ಅವರ ವೇತನಗಳ ಬಗ್ಗೆ ಅಂಕಿಸಂಖೆಗಳೊಂದಿಗೆ ಚರ್ಚಿಸಲಾಗಿದೆ. ರೈಲುಗಳಲ್ಲಿ ನಡೆಯುತ್ತಿದ್ದ ಅಪರಾಧಗಳನ್ನು ಪತ್ತೆಹಚ್ಚುವ ಸಲುವಾಗಿ ರೈಲ್ವೆ ಪೊಲೀಸ್ ಘಟಕವನ್ನು ೧೮೯೦ ರಲ್ಲಿ ಪ್ರತ್ಯೇಕವಾಗಿ ರಚಿಸಲಾಯಿತು. ಅಲ್ಲಿಂದ ಹಂತ ಹಂತವಾಗಿ ಈ ಘಟಕವು ವಿಸ್ತರಣೆಗೊಂಡ ಬಗ್ಗೆ ಅದರ ಅಧಿಕಾರಿ ಸಿಬ್ಬಂದಿಗಳ ಅಂಕೆಸಂಖ್ಯೆಗಳು, ಅದರಲ್ಲಿ ವರದಿಯಾದ ಪ್ರಕರಣಗಳು, ಅಪರಾಧ ಹಂಚಿಕೆಗಳ ಬಗ್ಗೆ ಅಂಕೆ ಸಂಖ್ಯೆಗಳೊಂದಿಗೆ ಚರ್ಚಿಸಲಾಗಿದೆ.

ರಾಜ್ಯದಲ್ಲಿ ನಡೆಯುವ ರಾಜಕೀಯ ವಿಚಾರಗಳು, ಕಾರ್ಮಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಚಾರಗಳ ಬಗ್ಗೆ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸುವ ಸಲುವಾಗಿ ವಿಶೇಷ ಘಟಕವನ್ನು ಸ್ಥಾಪಿಸಿದ ಬಗ್ಗೆ ಚರ್ಚಿಸಲಾಗಿದೆ. ೧೮೬೪ ರಲ್ಲಿ ಪೊಲೀಸ್ ಇಲಾಖೆಯನ್ನು ಪುನರ್‌ಸಂಘಟಿಸುವ ಸಲುವಾಗಿ ಪೊಲೀಸರಿಗೆ ನೀಡುತ್ತಿದ್ದ ಕುದುರೆ ಭತ್ಯೆಗಳಿಂದ ಪ್ರಾರಂಭಿಸಿ ಹಂತ ಹಂತವಾಗಿ ಪೊಲೀಸ್ ಇಲಾಖೆಗೆ ಒದಗಿಸಿದ ಸಾರಿಗೆ ವ್ಯವಸ್ಥೆಯ ಬಗ್ಗೆ ಚರ್ಚಿಸಲಾಗಿದೆ. ಅಷ್ಟೇ ಅಲ್ಲದೇ ಪೊಲೀಸ್ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುವ ಕಛೇರಿ ಸಿಬ್ಬಂದಿಗಳ ಮಂಜೂರಾತಿಗಳ ಬಗ್ಗೆ ಚರ್ಚಿಸಲಾಗಿದೆ. ರಾಜ್ಯಾಂಗ ಅಥವಾ ಸಾಮಾಜಿಕ ಆರೋಗ್ಯ ರಕ್ಷಣೆಗೆ ರೂಪಿತವಾದ ನಿಯಮಾವಳಿಗಳ ವಿರುದ್ಧ ನಡೆಯುವವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿರಿಸುವ ಪ್ರಕ್ರಿಯೆಯು ಪುರಾತನವಾದುದು. ಹೀಗೆ

ಅಪಾಧಿತರು ಅಥವಾ ಶಿಕ್ಷೆಗೆ ಗುರಿಯಾದವರನ್ನು ಸಾಮಾಜಿಕ ವ್ಯವಸ್ಥೆಯಿಂದ ದೂರೀಕರಿಸುವಲ್ಲಿ ಬಳಕೆಯಾಗವ ಮುಖ್ಯ ಪದ್ಧತಿ ಎಂದರೆ ಕಾರಾಗೃಹ. ಈ ಕಾರಾಗೃಹಗಳ ರಚನೆ, ಬೆಳೆದು ಬಂದ ಬಗೆ, ಅಲ್ಲಿನ ಖೈದಿಗಳ ಸ್ಥಿತಿಗತಿ, ರಾಜ್ಯದ ಕೋಲಾರ, ಉಡುಪಿಯನ್ನೊಳಗೊಂಡಂತೆ ದಕ್ಷಿಣ ಕನ್ನಡ, ಕೊಡಗು, ಬೆಳಗಾಂ, ಗುಲ್ಬರ್ಗ, ಬೆಂಗಳೂರು, ಮೈಸೂರುನಲ್ಲಿ ರಚಿತವಾದ ಕಾರಾಗೃಹಗಳ ಬಗ್ಗೆ ವಿಸ್ತೃತವಾಗಿ ಮಾಹಿತಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ.

೧೮೬೧ ರ ಭಾರತೀಯ ಪೊಲೀಸ್ ಕಾಯ್ದೆ ರಚನೆಯಾಗುವ ಮುಂಚೆ ರಾಜ್ಯದಲ್ಲಿನ ಕಂದಾಚಾರ ಪೊಲೀಸರಿಗೆ ನಿರ್ಧಿಷ್ಟ ಸಮವಸ್ತ್ರ ಇರಲಿಲ್ಲ. ಬೆಂಗಳೂರು ಜಿಲ್ಲಾ ಎಸ್‌ಪಿಯಾಗಿದ್ದ ಇ.ಡಿ.ಗೊಂಫರ್ಟ್ ಪೊಲೀಸರಿಗೆ ಒಂದು ನಿರ್ಧಿಷ್ಟ ಸಮವಸ್ತ್ರಬೇಕೆಂದು ಪ್ರಸ್ತಾಪಿಸಿದರು. ಹಾಗೂ ವಿವಿಧ ದರ್ಜೆಯ ಅಧಿಕಾರಿಗಳನ್ನು ಗುರುತಿಸುವ ಸಲುವಾಗಿ ಅವರ ಸಮವಸ್ತ್ರಗಳಲ್ಲಿ ಹೇಗೆ ಬಿನ್ನತೆ ಇರಬೇಕೆಂದು ಸೂಚಿಸಿದರು. ೧೮೯೨-೯೩ ರಲ್ಲಿ ಇದಕ್ಕಾಗಿ ವಸ್ತ್ರಸಂಹಿತೆಯನ್ನು ಜಾರಿಗೆ ತರಲಾಯಿತು. ಮಂಗಳೂರಿನ ಬಾಸೆಲ್‌ಮಿಷನ್‌ನ ನೇಯ್ಗೆ ಕಾರ್ಖಾನೆಯಲ್ಲಿದ್ದ ಜಾನ್‌ಹೇಲರ್ ಎಂಬುವವನು ಖಾಕಿ ವಸ್ತ್ರವನ್ನು ಮೊದಲ ಬಾರಿಗೆ ರೂಪಿಸಿದರು. ಹಿಂದಿನ ಕಾಲದ ಪೊಲೀಸರು ಧರಿಸುತ್ತಿದ್ದ ಸಮವಸ್ತ್ರಗಳ ಬಗ್ಗೆ ಚಿತ್ರಗಳನ್ನು ಸಂಗ್ರಹಿಸಲಾಗಿದೆ, ಪೊಲೀಸರಿಗೆ ಅಗತ್ಯ ವಾಗಿ ಬೇಕಾಗಿದ್ದ ವಸತಿ ಸೌಕರ್ಯಗಳು, ಅವರು ನೀಡುತ್ತಿದ್ದ ಮನೆಬಾಡಿಗೆ ಭತ್ಯೆಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಲಾಗಿದೆ. ವಸತಿಸೌಕರ್ಯ ಇಲ್ಲದ ಪೊಲೀಸರಿಗೆ ನೀಡುತ್ತಿದ್ದ ಮನೆಬಾಡಿಗೆ ಭತ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಅಷ್ಟೇ ಅಲ್ಲದೇ ಕಾಲಕಾಲಕ್ಕೆ ಪೊಲೀಸರು ವಸತಿಗೃಹಗಳ ರಿಪೇರಿಗಾಗಿ ಖರ್ಚು ಮಾಡಿದ ಹಣದ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗಿದೆ.

೧೮೯೭ ರ ಜುಲಾಯಿ ೧೬ ರಂದು ಮೊದಲ ಬಾರಿಗೆ ಕೆ,.ಜಿ.ಎಫ್‌ನಲ್ಲಿ ಪೊಲೀಸರು ಮತ್ತು ಅವರ ಮಕ್ಕಳಿಗೆ ಪೊಲೀಸ್ ಕ್ರಿಡಾಕೂಟವನ್ನು ನಡೆಸಲಾಯಿತು. ಇದನ್ನು ಇಂಗ್ಲೆಂಡ್‌ನ ಮಹಾರಾಣಿಯ ವಜ್ರಮಹೋತ್ಸವದ ನೆನಪಿಗಾಗಿ ನಡೆಸಲಾಯಿತು. ಬ್ರಿಟೀಷ್ ರೆಸಿಡೆಂಟರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ವಿಜೇತರಿಗೆ ಬಹುಮಾನ ನೀಡಿದರು. ಹೀಗೆ ಪೊಲೀಸ್ ಕ್ರೀಡಾಕೂಟ ಬೆಳೆದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಯಿತು. ೧೯೩೨ ರಲ್ಲಿ ನಡೆದ ಪೊಲೀಸ್ ಕ್ರೀಡಾಕೂಟದಲ್ಲಿ ಮೈಸೂರಿನ ಯುವರಾಜರಾಗಿದ್ದ ಶ್ರೀ.ಕಂಠೀರವ ನರಸಿಂಹರಾಜ ಒಡೆಯರ್‌ರವರು, ಮೈಸೂರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಭಾಗವಹಿಸಿದ್ದರು. ಪೊಲೀಸ್ ಇಲಾಖೆಯಲ್ಲಿದ್ದ ಅನಕ್ಷರತೆಯನ್ನು ಹೋಗಲಾಡಿಸಲು ೧೮೯೨ ರಲ್ಲಿ ಮೊದಲ ಬಾರಿಗೆ ಅತ್ಯಂತ ಅಗತ್ಯವಾಗಿದ್ದ ಪೊಲೀಸ್ ತರಬೇತಿ ಶಾಲೆಯನ್ನು ಬೆಂಗಳೂರಿನಲ್ಲಿ ತೆರೆಯಲಾಯಿತು. ಕಂದಾಚಾರ ಪೊಲೀಸ್ ಪಡೆಯಲ್ಲಿ ಪ್ರತ್ಯೇಕವಾಗಿ ತರಬೇತಿ ಕೇಂದ್ರ ಇರಲಿಲ್ಲ. ಪೊಲೀಸರಿಗೆ ತರಬೇತಿಯು ಅನಿವಾರ್ಯವಾಗಿತ್ತು. ಇದರಲ್ಲಿ ಹೈಯರ್ ಮತ್ತು ಲೋಯರ್ ಎಂಬ ಎರಡು ವಿಭಾಗಗಳನ್ನು ಮಾಡಲಾಯಿತು. ಹೈಯರ್ ವಿಭಾಗವು ಜಮೇದಾರ್ ಮತ್ತು ಇನ್‌ಸ್ಪೆಕ್ಟರ್‌ಗಳಿಗೆ ತರಬೇತಿ ನೀಡುವುದಾಗಿದ್ದರೆ ಲೋಯರ್ ವಿಭಾಗವು ದಫೇದಾರ್ ಮತ್ತು ಕಾನ್‌ಸ್ಟೇಬಲ್‌ಗಳಿಗೆ ತರಬೇತಿ ನೀಡುತ್ತಿತ್ತು. ಈ ತರಬೇತಿ ಶಾಲೆಯಲ್ಲಿ ಕಲಿಸಲಾಗುತ್ತಿದ್ದ ಕಾನೂನಿನ ವಿಷಯಗಳು ಅಲ್ಲಿದ್ದ ಅಧಿಕಾರಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಬಗ್ಗೆ ಅಂಕೆ ಸಂಖ್ಯೆಗಳೊಂದಿಗೆ ಚರ್ಚಿಸಲಾಗಿದೆ. ೧೯೧೫-೧೬ ರಲ್ಲಿ ಅಪರಾಧಶಾಸ್ತ್ರ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಲಾಯಿತು. ಅಪರಾಧಿಗಳ ಹಿನ್ನೆಲೆ, ಸ್ವರೂಪ, ಅಪರಾಧಗಳನ್ನು ಹೇಗೆ, ಏಕೆ, ಎಲ್ಲಿ ಮಾಡುತ್ತಾರೆಂಬ ತಿಳುವಳಿಕೆ ಇರುವ ಅಧಿಕಾರಿಗಳಿಂದ ಅಪರಾಧ ತನಿಖಾ ವಿಭಾಗವನ್ನು ಪ್ರಾರಂಭಿಸಲಾಯಿತು. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಪ್ರಾರಂಭವಾದ ಪೊಲೀಸ್ ತರಬೇತಿ ಶಾಲೆಗಳು, ಅಲ್ಲಿ ಪೊಲೀಸರಿಗೆ ಬೋಧಿಸುತ್ತಿದ್ದ ವಿಷಯಗಳು, ಅಲ್ಲಿದ್ದ

ಅಧಿಕಾರಿ/ಸಿಬ್ಬಂದಿಗಳು ಮತ್ತು ಅವರ ಸಂಬಳ ಹಾಗೂ ಭತ್ಯೆಗಳ ಬಗ್ಗೆ, ಕನ್ನಡದಲ್ಲಿ ಪ್ರಾರಂಭವಾದ ತರಬೇತಿಗಳ ಬಗ್ಗೆ ಅಂಕಿಸಂಖ್ಯೆಗಳೊಂದಿಗೆ ವಿಷಯ ಸಂಗ್ರಹಣೆ ಮಾಡಲಾಗಿದೆ.

ಇಲಾಖೆಯಲ್ಲಿ ಶಿಸ್ತನ್ನು ಮೂಡಿಸುವ ದಿಸೆಯಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡುತ್ತಿದ್ದ ಶಿಕ್ಷೆಗಳು ಮತ್ತು ಅದರ ಅಮಾನವೀಯತೆಯ ಬಗ್ಗೆ ಸಾಕಷ್ಟು ಅಂಕಿಸಂಖ್ಯೆಗಳನ್ನು ಸಂಗ್ರಹಿಸಲಾಗಿದೆ. ಅದೇ ರೀತಿ ಪೊಲೀಸರ ಒಳ್ಳೆಯ ಕೆಲಸಗಳನ್ನು ಹುರಿದುಂಬಿಸುವ ಸಲುವಾಗಿ ಪೊಲೀಸರಿಗೆ ನೆರವಾದ ಸಾರ್ವಜನಿಕರಿಗೆ ನೀಡುತ್ತಿದ್ದ ಬಹುಮಾನಗಳ ಬಗ್ಗೆಯೂ ಸಹ ಅಂಕಿಸಂಖ್ಯೆಗಳೊಂದಿಗೆ ಮಾಹಿತಿ ಸಂಗ್ರಹಿಸುವ ಪ್ರಯತ್ನ ಮಾಡಿದೆ. ಕಾಲದಿಂದ ಕಾಲಕ್ಕೆ ವರದಿಯಾದ ಸಂಜ್ಞೆಯ ಅಪರಾಧಗಳು, ಅಸಂಜ್ಞೆಯ ಅಪರಾಧಗಳ ವರದಿ, ಅವುಗಳ ವಿಚಾರಣೆ, ಅವುಗಳ ವರ್ಗಾವಣೆ, ತನಿಖೆ ಕೈಗೊಂಡಿದ್ದು, ಸುಳ್ಳೆಂದು ಮುಕ್ತಾಯ ಮಾಡಿದ್ದು, ಪತ್ತೆಯಾಗದೇ ಹಿಂಪಡೆದಿದ್ದು, ರಾಜಿಯಾದವು, ಸಜೆಯಾದವು, ಖುಲಾಸೆ ಅಥವಾ ವಜಾ ಆದವು, ಇತರ ರೀತಿ ಮುಕ್ತಾಯಗೊಂಡವು ಮತ್ತು ಬಾಕಿ ಇದ್ದ ಪ್ರಕರಣಗಳ ಅಂಕಿಸಂಖ್ಯೆಗಳನ್ನು ಸಂಗ್ರಹಿಸಲಾಗಿದೆ.

ಪೊಲೀಸ್ ಇಲಾಖೆಯು ಅಪರಾಧ ಮಾಡುವ ಗುಂಪುಗಳ ಬಗ್ಗೆ ಮಾಹಿತಿ ಸಂಗ್ರಹಿಸಿತ್ತು. ವಿವಿಧ ಜಿಲ್ಲೆಗಳಲ್ಲಿ ಎಷ್ಟು ಖಾಯಂ ನಿವಾಸಿ ಗುಂಪುಗಳು ಹಾಗೂ ಅಲೆಮಾರಿ ಗುಂಪುಗಳಿದ್ದವು ಎಂಬ ಮಾಹಿತಿ ಗಳನ್ನು ಸಂಗ್ರಹಿಸಿದ್ದು, ಅವರುಗಳ ಬಗ್ಗೆ ಪೊಲೀಸರು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಿದೆ. ಸಂಸ್ಥಾನದ ಹಲವು ಕಡೆಗಳಲ್ಲಿ ಪೊಲೀಸ್ ಇಲಾಖೆಯ ಖರ್ಚುವೆಚ್ಚಗಳನ್ನು ಮುನ್ಸಿಪಾಲಿಟಿಗಳು ನೋಡಿಕೊಳ್ಳುತ್ತಿದ್ದವು.

೧೮೮೮ ರಿಂದ ರಾಜ್ಯದಲ್ಲಿ ನಡೆದ ಕಳ್ಳತನದ ಪ್ರಕರಣಗಳಲ್ಲಿ ಕಳವಾದ ವಸ್ತುಗಳ ಮೌಲ್ಯ, ವಶಪಡಿಸಿಕೊಂಡ ವಸ್ತುಗಳ ಮೌಲ್ಯಗಳ ಬಗ್ಗ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿದೆ. ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಪೊಲೀಸರು ತೆಗೆದುಕೊಂಡ ಕ್ರಮಗಳನ್ನು ಚರ್ಚಿಸಲಾಗಿದೆ. ೧೮೯೧ ರಿಂದ ನಡೆದ ಘೋರ ಅಪರಾಧಗಳ ಬಗ್ಗೆಯೂ ಸಹ ಅಂಕಿಅಂಶಗಳೊಂದಿಗೆ ಚರ್ಚಿಸಿ ಅಪರಾಧಗಳು ಹೆಚ್ಚಾಗಲು ಕಾರಣವೇನೆಂದು ಕಂಡುಹಿಡಿಯುವ ಪ್ರಯತ್ನ ಮಾಡ ಲಾಗಿದೆ. ಆಡಳಿತದ ದೃಷ್ಟಿಯಿಂದ ಅಪರಾಧಗಳನ್ನು ವರ್ಗೀಕರಿಸಿದ್ದು, ಆ ವರ್ಗೀಕರಿಸಿದಂತೆ ಅಪರಾಧಗಳ ವರದಿಯ ಬಗ್ಗೆ ಮತ್ತು ಅದರ ಕಾರಣಗಳ ಬಗ್ಗೆ ಚರ್ಚಿಸಲಾಗಿದೆ. ಜನಸಂಖ್ಯೆ, ಭೂಪ್ರದೇಶ, ಅಪರಾಧ, ಪೊಲೀಸರ ಸಂಖ್ಯೆಗಳ ಅನುಪಾತಗಳ ಬಗ್ಗೆ ಚರ್ಚಿಸಲಾಗಿದೆ. ಕೆ.ಡಿಗಳ ಬಗ್ಗೆ ಪೊಲೀಸರು ಕೈಗೊಂಡ ಕ್ರಮಗಳು, ಪ್ರೊಸೆಸ್ ಜಾರಿ ಮತ್ತು ವಿಶೇಷ ಹಾಗೂ ಸ್ಥಳೀಯ ಕಾಯ್ದೆಯಡಿ ದಾಖಲಾದ ಪ್ರಕರಣಗಳು ಹಾಗೂ ಅವುಗಳ ವಿಲೇವಾರಿಗಳ ಬಗ್ಗೆ ಅಂಕಿಸಂಖೆಗಳೊಂದಿಗೆ ಚರ್ಚಿಸಿದೆ. ಕಾಲದಿಂವ ಕಾಲಕ್ಕೆ ಪೊಲೀಸ್ ಪಡೆಯ ಪುನರ್‌ಸಂಘಟನೆಯ ಉದ್ದೇಶಕ್ಕಾಗಿ ಖರ್ಚು ಮಾಡಿದ ಹಣದ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

ಅಪರಾಧಿಗಳನ್ನು ಪತ್ತೆಹಚ್ಚುವ ಸಲುವಾಗಿ ಬೆಳಕಿಗೆ ಬಂದ ಫಿಂಗರ್‌ಪ್ರಿಂಟ್ ವ್ಯವಸ್ಥೆಯ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಮತ್ತು ಅದರ ವರ್ಗೀಕರಣ ಮತ್ತು ಅದರಿಂದ ಪತ್ತೆಯಾದ ಪ್ರಕರಣಗಳ ಅಂಕಿಸಂಖ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ಪದೇ ಪದೇ ಅಪರಾಧಗಳನ್ನು ಮಾಡಿ ಸಮಾಜದ ಶಾಂತಿ ಸುವ್ಯವಸ್ಥೆಗಳನ್ನು ಹಾಳು ಮಾಡುವ ಸಮಾಜ ಘಾತುಕ ಶಕ್ತಿಗಳನ್ನು ಗಡಿಪಾರುಗಳ ಬಗೆ ಮಾಹಿತಿ ಸಂಗ್ರಹಿಸಿದೆ. ೧೮೮೮ ರಿಂದ ಕಾಲಕಾಲಕ್ಕೆ ಬದಲಾಗುತ್ತ ಬಂದ ಪೊಲೀಸ್ ಪಡೆಯಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳ ಬಲದ ಬಗ್ಗೆ, ಪೊಲೀಸರ ನೇಮಕಾತಿ ಮತ್ತು ಭಡ್ತಿಯ ವಿಚಾರಗಳ ಬಗ್ಗೆ, ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತದ ಹಳ್ಳಿಗಳ ತಮ್ಮದೇ ಆದ ರಕ್ಷಣಾ ವ್ಯವಸ್ಥೆಯನ್ನು ಬೆಳೆಸಿಕೊಂಡು ಬಂದಿದೆ. ಅಂತೆಯೇ ನಮ್ಮ ನಾಡಿನ ಹಳ್ಳಿಗಳಲ್ಲಿ ಕಾಲದಿಂದ

ಕಾಲಕ್ಕೆ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದ, ಗೌಡ ಅಥವಾ ಗಾವುಂಡ, ಪಟೇಲ, ತೋಟಿ, ತಳಾರಿ, ಕಾವಲುಗಾರ, ಚೌಕಿದಾರ ಮೊದಲಾದವರು ನಡೆಸಿದ ಗ್ರಾಮ ರಕ್ಷಣೆಯ ಬಗ್ಗೆ ಅಲ್ಲಿದ್ದ ಗ್ರಾಮರಕ್ಷಣೆಯ ವ್ಯವಸ್ಥೆಯ ಬಗ್ಗೆ, ಇವರ ಕರ್ತವ್ಯಗಳ ಬಗ್ಗೆ ಮತ್ತು ಈ ಗ್ರಾಮೀಣ ಪೊಲೀಸ್ ವ್ಯವಸ್ಥೆಯ ಪುನರ್‌ಸಂಘಟನೆಗೆ ವಿವಿಧ ಪೊಲೀಸ್ ಆಯೋಗಗಳು ನೀಡಿದ ಸಲಹೆ ಸೂಚನೆಗಳ ಬಗ್ಗೆ ಚರ್ಚಿಸಿದೆ. ನಗರಗಳಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬದಲಾಯಿಸಿ ದರೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಪೊಲೀಸ್ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿಕೊಂಡು ಬರಲಾಗಿತ್ತು. ಇದಕ್ಕೆ ಕಾರಣಗಳನ್ನು ಇಲ್ಲಿ ಹುಡುಕಲಾಗಿದೆ.

ಒಟ್ಟಾರೆ ಈ ಅಧ್ಯಯನದಿಂದ ಕಂಡುಕೊಂಡ ಅಂಶಗಳು ಈ ಕೆಳಗಿನಂತಿವೆ.

೧) ಭಾರತ ಮತ್ತು ಕರ್ನಾಟಕದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಿದ್ದು ಬ್ರಿಟೀಷರು ಅಲ್ಲ. ಬ್ರಿಟೀಷರು ಭಾರತಕ್ಕೆ ಬರುವುದಕ್ಕೆ ಮುಂಚೆಯೇ ಒಂದು ವ್ಯವಸ್ಥಿತವಾದ ಪೊಲೀಸ್ ವ್ಯವಸ್ಥೆ ನಮ್ಮ ರಾಜ್ಯದಲ್ಲಿತ್ತು.

೨) ಆಂತರಿಕ ಭದ್ರತಾ ವ್ಯವಸ್ಥೆಯನ್ನು, ಸೈನ್ಯದಿಂದ ಪ್ರತ್ಯೇಕಗೊಳಿಸಿ ಅದಕ್ಕಾಗಿ ವಿಶೇಷ ದಳವನ್ನು ನೇಮಿಸಿದ್ದು ಬ್ರಿಟಿಷರಲ್ಲ. ಕೌಟಿಲ್ಯನ ಕಾಲದಿಂದಲೂ ಇಂತಹ ಒಂದು ಪ್ರತ್ಯೇಕ ವ್ಯವಸ್ಥೆ ನಮ್ಮಲ್ಲಿತ್ತು. ಕದಂಬರು, ಶಾತವಾಹನರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಸೇವುಣರ ಕಾಲದಲ್ಲಿ ಗಾವುಂಡ, ಗ್ರಾಮಪತಿ, ಪ್ರಭುಗಾವುಂಡ, ನಾಡಗಾವುಂಡ, ತೋಟಿ, ತಳಾರಿ, ಚೌಟರು, ಭಟರು ಮೊದಲಾದವರು ಪೊಲೀಸ್ ಕರ್ತವ್ಯಗಳನ್ನು ನಡೆಸುತ್ತಿದ್ದರೆ, ಮೊಗಲರ ಆಡಳಿತದ ಪ್ರಭಾವ ಹೊಂದಿದ ಬಿಜಾಪುರ ಮತ್ತು ಬಹಮನಿ ಸುಲ್ತಾನರ ಕಾಲದಲ್ಲಿ ಠಾಣಾದಾರ, ಕೊತ್ವಾಲ, ಚೌಕಿದಾರ, ಶಿಕ್ದಾರ, ಹಾಜಿಬ್-ಉಲ್-ಖಾಸಾಬ್ ಎಂಬುವವರು ನಗರಗಳಲ್ಲಿ ಪೊಲೀಸ್ ಕರ್ತವ್ಯವನ್ನು ನಿರ್ವಹಿಸುತ್ತಿದ್ದರೆ, 'ಮಹರ್' ಎಂಬುವವನು ಗ್ರಾಮಗಳಲ್ಲಿ ಕಾವಲುಗಾರನಾಗಿದ್ದ. ವಿಜಯನಗರ ಕಾಲದಲ್ಲಿಯೇ ಕಂದಾಚಾರ ಎಂಬ ಪೊಲೀಸ್ ಪಡೆಯಿದ್ದು ಅದು ಹೈದರ್, ಟಿಪ್ಪು ಮತ್ತು ಮೈಸೂರು ಅರಸರ ಕಾಲದಲ್ಲಿ ಮುಂದುವರಿದುಕೊಂಡು ಬಂದಿತ್ತು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅಠಾರ ಕಛೇರಿಗಳಲ್ಲಿ ಒಂದಾದ ಪಟ್ಟಣದ ಛಾವಡಿಯಿಂದ ಪೊಲೀಸರ ಕಾರ್ಯ ಹಾಗೂ ಅರಮನೆಗಳ ರಕ್ಷಣೆ ನಡೆಯುತ್ತಿತ್ತು. ಹೊಯ್ಸಳರ ಕಾಲದಲ್ಲಿ ಗರುಡ ಎಂಬ ಅಂಗರಕ್ಷಕರು ಇದ್ದರೆ, ವಿಜಯನಗರ ಕಾಲದಲ್ಲಿ ಮಹಿಳಾ ಅಂಗರಕ್ಷಕರು ಇದ್ದು, ಕಂದಾಚಾರ ಎಂಬ ಪೊಲೀಸ್ ಪದ್ಧತಿ ಜಾರಿಯಲ್ಲಿತ್ತು.

೩) ಕರ್ನಾಟಕದಲ್ಲಿರುವ ಪೊಲೀಸ್ ವ್ಯವಸ್ಥೆಯು ಬ್ರಿಟನ್ನಿನ ಪೊಲೀಸ್ ವ್ಯವಸ್ಥೆಯ ಮಾದರಿಯಲ್ಲಿ ಇಲ್ಲ. ನಮ್ಮ ಪೊಲೀಸ್ ವ್ಯವಸ್ಥೆಯ ಐರಿಷ್ ಪೊಲೀಸ್ ಮಾದರಿಯನ್ನು ಹೊಂದಿದೆ. ಇಂಗ್ಲೆಂಡ್‌ನಲ್ಲಿರುವ ಪೊಲೀಸ್ ವ್ಯವಸ್ಥೆಗೂ, ಕರ್ನಾಟಕದಲ್ಲಿರುವ ಪೊಲೀಸ್ ವ್ಯವಸ್ಥೆಗೂ ಯಾವುದೇ ಸಾದೃಶ್ಯಗಳು ಇರುವುದಿಲ್ಲ, ಇದು ಸಂಪೂರ್ಣ ವೈರುಧ್ಯದಿಂದ ಕೂಡಿದೆ.

೪) ಮೈಸೂರಿನಲ್ಲಿ ಕಂದಾಚಾರ ಪೊಲೀಸ್ ವ್ಯವಸ್ಥೆಯನ್ನು ಸ್ಥಾಪಿಸಿದವರು ದಿವಾನ್ ಪೂರ್ಣಯ್ಯನವರು ಅಲ್ಲ. ಈ ಪದ್ಧತಿಯು ಹೈದರ್ ಮತ್ತು ಟಿಪ್ಪು ಕಾಲದಲ್ಲಿಯೇ ಪ್ರಚಲಿತದಲ್ಲಿತ್ತು ಮತ್ತು ವಿಜಯನಗರ ಅರಸರ ಕಾಲದಲ್ಲಿಯೂ ಸಹ ಕಂದಾಚಾರ ಎಂಬ ಹೆಸರಿನ ಪಡೆಯೊಂದು ಇತ್ತು ಎಂಬುದನ್ನು ಗುರುತಿಸಲಾಗಿದೆ. ಪೂರ್ಣಯ್ಯನವರು ಶ್ರೀರಂಗಪಟ್ಟಣದ ಪತನಾನಂತರ ಟಿಪ್ಪುವಿನ ಸೇನೆಯಲ್ಲಿ ಅಳಿದುಳಿದ ನಿರುದ್ಯೋಗಿ ಸೈನಿಕರುಗಳನ್ನು ಮೈಸೂರಿನ ಕಂದಾಚಾರ ಪಡೆಗೆ ನೇಮಿಸಿಕೊಂಡು ರಾಜ್ಯದಲ್ಲಿ ತಲೆದೋರಿದ್ದ ಹಲವು ದಂಗೆಗಳನ್ನು ಅಡಗಿಸಿದ್ದಲ್ಲದೇ, ಇವರುಗಳಿಗೆ ಕಂದಾಯ ವಸೂಲಿಯ ಜವಾಬ್ದಾರಿಯನ್ನೂ ನೀಡಿ ಇವರ ಸಂಬಳವನ್ನು ಅರ್ಧ ಹಣದ

ರೂಪದಲ್ಲೂ, ಇನ್ನರ್ಧ ದಾನ್ಯದ ರೂಪದಲ್ಲೂ ನೀಡಿ ಇವರಿಂದ ಆಗಬಹುದಾಗಿದ್ದ ಅಪರಾಧಗಳನ್ನು ತಡೆದರು.

೫) ಭಾರತದಲ್ಲಿ ಬ್ರಿಟೀಷರು ಪೊಲೀಸ್ ಪಡೆಯನ್ನು ತಮ್ಮ ವಿರುದ್ಧ ನಡೆಯುತ್ತಿದ್ದ ಹೋರಾಟ ಅಂದರೆ ಸ್ವಾತಂತ್ರ್ಯದ ಚಳುವಳಿಯನ್ನು ಹತ್ತಿಕ್ಕಲು ಬಳಸಿಕೊಂಡರು. ಈ ಪಡೆಯಲ್ಲಿ ಹೆಚ್ಚಾಗಿ ಮೇಲ್ದರ್ಜೆಯ ಅಧಿಕಾರಿಗಳು ಯುರೋಪಿಯನ್ನರಾಗಿದ್ದರು. ಕೆಳಹಂತದ ಸಿಬ್ಬಂದಿಗಳು ಮಾತ್ರ ಭಾರತೀಯರಾಗಿದ್ದರು. ಭಾರತೀಯರ ಹೋರಾಟವನ್ನು ಹತ್ತಿಕ್ಕಲು ಭಾರತೀಯ ಪೊಲೀಸರನ್ನೇ ಅಂದರೆ ಕೆಳದರ್ಜೆಯ ಸಿಬ್ಬಂದಿಯವರನ್ನೇ ಬಳಸಿಕೊಂಡರು. ಮೇಲ್ದರ್ಜೆಯ ಮತ್ತು ಕೆಳದರ್ಜೆಯ ಅಧಿಕಾರಿಗಳಿಗೆ ವೇತನಗಳಲ್ಲಿ ತಾರತಮ್ಯವಿತ್ತು. ಕೆಳಹಂತದ ಸಿಬ್ಬಂದಿಗಳಿಗೆ ದೈಹಿಕ ಶಿಕ್ಷೆಯನ್ನೂ ಒಳಗೊಂಡಂತೆ ಹಲವಾರು ಶಿಕ್ಷೆಗಳನ್ನು ನೀಡಲಾಗಿತ್ತು. ಪೊಲೀಸ್ ಪಡೆಯ ಮೂಲಕ ಜನರ ಹಕ್ಕನ್ನು ಹತ್ತಿಕ್ಕಲಾಯಿತು. ಹೀಗಾಗಿ ಪೊಲೀಸ್ ಇಲಾಖೆಯ ಬಗ್ಗೆ ಗೌರವದ ಭಾವನೆ ಮೂಡುವ ಬದಲು ಭಯದ ಭಾವನೆ ಉಂಟಾಯಿತು. ಹೀಗಾಗಿ ಈ ಪೊಲೀಸ್ ವ್ಯವಸ್ಥೆ ಜನರಿಂದ ದೂರ ಉಳಿಯಿತು.

೬) ಭಾರತದಲ್ಲಿ ೧೮೪೩ ರಲ್ಲಿ ಸಿಂಧ್ ಪ್ರಾಂತದಲ್ಲಿ ಪೊಲೀಸ್ ಪಡೆಯನ್ನು ಸ್ಥಾಪಿಸಿದ್ದು ಲಾರ್ಡ್‌ಕಾರ್ನ್‌ವಾಲೀಸ್ ಅಲ್ಲ. ಇದನ್ನು ಸ್ಥಾಪಿಸಿದವನು ಸರ್.ಚಾರ್ಲ್ಸ್ ನೇಪಿಯರ್.

೭) ಟಿಪ್ಪು ಸುಲ್ತಾನನಿಗೆ ನಂಬಿಕೆದ್ರೋಹ ಮಾಡಿದ ಮೀರ್‌ಸಾದಿಕ್‌ನು ದೊಡ್ಡಬಳ್ಳಾಪುರದಲ್ಲಿ ಕೊತ್ವಾಲ (ಪೊಲೀಸ್ ಅಧಿಕಾರಿ) ನಾಗಿದ್ದನು. ಟಿಪ್ಪುವಿನಿಂದ ರಾಜ್ಯವನ್ನು ಕಿತ್ತುಕೊಂಡು ಮೈಸೂರು ಅರಸರಿಗೆ ರಾಜ್ಯವನ್ನು ಹಿಂದಿರುಗಿಸಲು ಕಂದಾಚಾರ ಪಡೆಯ ಅಧಿಕಾರಿಗಳಾದ ಸಿಂಗಯ್ಯ ಮತ್ತು ರಂಗಯ್ಯರವರುಗಳು ಸಂಚು ರೂಪಿಸಿ ಸಿಕ್ಕಿ ಹಾಕಿಕೊಂಡು ಮರಣದಂಡನೆಗೆ ಒಳಗಾದರು. ದಿವಾನ್ ಪೂರ್ಣಯ್ಯನವರು ೨೦೦೦ ಕಂದಾಚಾರ ಪಡೆಯನ್ನು ಪುನರ್‌ಸಂಘಟಿಸಿ ಚಿತ್ತೂರಿನ ಗಲಭೆ ಮತ್ತು ವೆಲ್ಲೂರಿನ ದಂಗೆಯನ್ನು ಇವರ ಸಹಾಯದಿಂದ ಅಡಗಿಸಿದ್ದರು. ೧೮೦೩ ರಲ್ಲಿ ಬೂದಿಬಸಪ್ಪನಿಗೆ ಸಹಾಯಕನಾಗಿ ತರಿಕೆರೆಯ ಪಾಳೇಗಾರನಾಗಿದ್ದ ಸರ್ಜಾ ಹನುಮಪ್ಪ ನಾಯಕ್‌ನು ಬೇಡರ ಗುಂಪಿಗೆ ಸೇರಿದ ೧೫೦೦ ಜನ ಕಂದಾಚಾರಿಗಳು ದಂಗೆ ಏಳುವಂತೆ ಮಾಡಿದ್ದು, ಇದು ಮೊದಲ ಪೊಲೀಸ್ ದಂಗೆ ಎನ್ನಬಹುದು. ಈ ದಂಗೆಯನ್ನು ಅಡಗಿಸಲು ಬ್ರಿಟೀಷ್ ಸೈನ್ಯವೇ ಬರಬೇಕಾಯಿತು. ಪೊಲೀಸರು ಧರಿಸುವ ಖಾಕಿ ಬಟ್ಟೆಯನ್ನು ಮೊದಲ ಬಾರಿಗೆ ಮಂಗಳೂರಿನ ಬಾಸೆಲ್ ಮಿಷನ್‌ನ ನೇಯ್ಗೆ ಕಾರ್ಖಾನೆಯಲ್ಲಿದ್ದ ಜಾನ್‌ಹಾಲ್ ಎಂಬ ಬ್ರಿಟೀಷ್ ಇಂಜಿನಿಯರ್‌ನು ಮೊದಲ ಬಾರಿಗೆ ರೂಪಿಸಿದನು. ಕಿತ್ತೂರು ರಾಣಿ ಚೆನ್ನಮ್ಮನ ಅಂಗರಕ್ಷಕನಾಗಿದ್ದ ಅಮಟೂರಿನ ಬಾಳಪ್ಪ ಎಂಬುವವನು ಬ್ರಿಟೀಷ್ ಅಧಿಕಾರಿ ಥ್ಯಾಕರೆಯನ್ನು ಗುಂಡಿಟ್ಟು ಕೊಂದನು. ಟಿಪ್ಪು ಸುಲ್ತಾನನು ಪೊಲೀಸ್ ಅಧಿಕಾರಿಗಳಿಗೆ ಬರೆದ ಪತ್ರ, ದಿವಾನ್ ಪೂರ್ಣಯ್ಯನವರು ಮಾಲಕಂ ಸಾಹೇಬರಿಗೆ ರಕ್ಷಣೆ ಒದಗಿಸುವಂತೆ ಹಾಗೂ ಶೃಂಗೇರಿ ಜಗದ್ಗುರುಗಳ ಸಂಚಾರ ಕಾಲದಲ್ಲಿ ಕಳ್ಳಕಾಕರಿಂದ ರಕ್ಷಣೆ ಒದಗಿಸುವಂತೆ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಬರೆದ ಪತ್ರಗಳು, ಮೈಸೂರು ಪೊಲೀಸ್ ಬ್ಯಾಂಡ್‌ನ ವೈಣಿಕ ಪ್ರವೀಣ ಶ್ರೀ.ವೆಂಕಟಗಿರಿಯಪ್ಪನವರಿಗೆ ಸುಬ್ರಮಣ್ಯ ರಾಜೇ ಅರಸು ಬರೆದ ಪತ್ರಗಳನ್ನು ಸಂಗ್ರಹಿಸಲಾಗಿದೆ. ಟಿಪ್ಪು ಹಾಗೂ ಮೈಸೂರು ಅರಸರ ಕಾಲದಲ್ಲಿದ್ದ ಹಲವು ಜನ ಪೊಲೀಸ್ ಅಧಿಕಾರಿಗಳ ಹೆಸರನ್ನು ಸಂಗ್ರಹಿಸಲಾಗಿದೆ.


೮) ರಾಜರುಗಳಿಗೆ ಕಂದಾಯ ವಸೂಲಿಯೇ ಅತ್ಯಂತ ಮುಖ್ಯವಾಗಿತ್ತು. ಈ ಕೆಲಸವನ್ನು ಊರಿನ ಗೌಡ ಅಥವಾ ಪಟೇಲನಿಗೆ ವಹಿಸಲಾಯಿತು. ಬೇರೆ ಅಧಿಕಾರಿಗಳಿಗಿಂತ ಭಿನ್ನವಾದ ಅಧಿಕಾರವು ಇವರಿಗೆ ಅಗತ್ಯವಿತ್ತು. ಅದಕ್ಕಾಗಿ

ಪೊಲೀಸ್ ಅಧಿಕಾರವನ್ನೂ ಸಹ ಇವರಿಗೆ ನೀಡಲಾಯಿತು. ಕಂದಾಯ ವಸೂಲಿಗಾಗಿ ಬೇರೆ ಅಧಿಕಾರಿಗಳನ್ನು ನೇಮಿಸಿದ್ದರೆ, ಆತನಿಗೆ ಜನರ ಹಾಗೂ ಜನಜೀವನದ ಪರಿಚಯವಿರತ್ತಿರಲಿಲ್ಲ. ಮತ್ತು ತನ್ನ ಪ್ರಭಾವವನ್ನು ಬೀರಿ ಹಳ್ಳಿಯನ್ನು ನಿಯಂತ್ರಣದಲ್ಲಿಟ್ಟು ಕಂದಾಯವನ್ನು ವಸೂಲಿ ಮಾಡುವುದು ಕಷ್ಟಸಾಧ್ಯವಾಗಿತ್ತು. ಹಾಗಾಗಿ ಗೌಡ ಹಾಗೂ ಪಟೇಲರಿಗೆ ವಂಶಪಾರಂಪರ್ಯವಾಗಿ ಕಂದಾಯದ ಅಧಿಕಾರದ ಜೊತೆಗೆ ಪೊಲೀಸ್ ಅಧಿಕಾರವನ್ನು ನೀಡಲಾಯಿತು. ಇವರುಗಳು ಪರಸ್ಪರ ಸಂಬಂಧವನ್ನು ಹೊಂದಿದ್ದು ಆಪತ್ಕಾಲದಲ್ಲಿ ಹಳ್ಳಿಯ ಜನರಿಗೆ ನೆರವಾಗಬಲ್ಲ ಅಷ್ಟೇ ಅಲ್ಲದೇ ಕಂದಾಯ ವಸೂಲಿಯನ್ನು ಸಮರ್ಪಕವಾಗಿ ಮಾಡುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಪೊಲೀಸರನ್ನು ನೇಮಿಸುವುದರಿಂದ ಸರಕಾರಕ್ಕೆ ಅಧಿಕ ಹೊರೆಯಾಗಿತ್ತು. ಹೀಗಾಗಿ ಸ್ಥಳೀಯ ಗೌಡ, ಪಟೇಲ, ತೋಟಿ, ತಳಾರಿ, ಕಂದಾಚಾರಿಗಳಿಗೆ ತಾವು ವಸೂಲಿ ಮಾಡಿದ ಕಂದಾಯದ ಸ್ವಲ್ಪ ಭಾಗವನ್ನು ದಾನ್ಯದ ರೂಪದಲ್ಲೂ ಹಾಗೂ ಹಣದ ರೂಪದಲ್ಲೂ ಮತ್ತು ಉಳುಮೆ ಮಾಡದೇ ಇರುವ ಭೂಮಿಯನ್ನು ಉಳುಮೆ ಮಾಡಲು ನೀಡಿದ್ದರಿಂದ ಕಂದಾಯ ವಸೂಲಿಯೂ ಸಮರ್ಪಕವಾಗಿ ನಡೆಯುವುದರ ಜೊತೆಗೆ ಹಳ್ಳಿಗಳಲ್ಲಿನ ಕಾನೂನು ಸುವ್ಯವಸ್ಥೆಗಳನ್ನು ಪಾಲಿಸಿಕೊಂಡು ಬರುವ ತಂತ್ರವನ್ನು ಮಾಡಲಾಯಿತು.

೯) ಪ್ರಾಚೀನ ಕಾಲದಿಂದ ಪೊಲೀಸ್ ಪಡೆ ಬೆಳೆದು ಬಂದ ಬಗೆ, ಅದರ ವಿವಿಧ ಘಟಕಗಳಾದ ಅಶ್ವದಳ, ಪೊಲೀಸ್‌ಬ್ಯಾಂಡ್, ಮಿಸಲು ಪೊಲೀಸ್‌ಪಡೆ, ಸಿ.ಐ.ಡಿ, ರೈಲ್ವೆ ಪೊಲೀಸ್, ವಿಶೇಷ ಘಟಕ, ಕಾರಾಗೃಹಗಳು, ಸಾರಿಗೆ ವ್ಯವಸ್ಥೆ, ಅಧಿಕಾರಿ ಸಿಬ್ಬಂದಿಗಳ ಬಲ, ಅಪರಾಧ ತನಿಖಾ ವಿಭಾಗ, ವಿವಿಧ ರೀತಿಯ ಅಪರಾಧಗಳು, ಬೆರಳುಮುದ್ರೆ, ಪೊಲೀಸ್ ಪಡೆಯ ಬಲ ಹಾಗೂ ಗ್ರಾಮೀಣ ಪೊಲೀಸ್ ವ್ಯವಸ್ಥೆ ಹೇಗೆ ಬೆಳೆದು ಬಂದಿತು ಎಂಬ ವಿಚಾರಗಳನ್ನು ಅಂಕಿಅಂಶಗಳೊಂದಿಗೆ ಸವಿವರವಾಗಿ ಈ ಅಧ್ಯಯನದಲ್ಲಿ ಚರ್ಚಿಸಿದೆ. ಕಂದಾಚಾರ ಪಡೆಯ ಸ್ವರೂಪ, ಅದರ ನೇಮಕಾತಿ, ಸಂಬಳ, ಸೌಕರ್ಯ, ಪೊಲೀಸ್ ಕಾಯ್ದೆಯ ವಿಚಾರಗಳು, ಪೊಲೀಸ್ ಇಲಾಖೆಗೆ ಅಧಿಕಾರಿಗಳು ನೀಡಿದ ಕೊಡುಗೆಗಳ ಬಗ್ಗೆ ಚರ್ಚಿಸಿದ್ದಲ್ಲದೇ ಸ್ವಾತಂತ್ರ್ಯಪೂರ್ವದಲ್ಲಿ ವಿವಿಧ ಜಿಲ್ಲೆಗಳಲ್ಲಿದ್ದ ಪೊಲೀಸ್ ಅಧಿಕಾರಿಗಳ ಪಟ್ಟಿಯನ್ನು ಸಂಗ್ರಹಿಸಲಾಗಿದೆ.

ಒಟ್ಟಿನಲ್ಲಿ ಕನ್ನಡ ನಾಡಿನಲ್ಲಿ ಬೆಳೆದು ಬಂದ ಪೊಲೀಸ್ ಪಡೆಯ ಇತಿಹಾಸವನ್ನು ಪುನಃ ಕಟ್ಟುವ ಒಂದು ವಿನಮ್ರ ಪ್ರಯತ್ನವನ್ನು ಮಾಡಲಾಗಿದೆ.

ಚಿತ್ರ ೧



ಹಂಪಿಯ ಮಹಾನವಮಿ ದಿಬ್ಬದಲ್ಲಿರುವ ಮಹಿಳಾ ಅಂಗರಕ್ಷಕರು

ಚಿತ್ರ ೨




ಮೈಸೂರು ದಸರಾ ಮೆರವಣಿಗೆಯ ಪಥಸಂಚಲನದಲ್ಲಿ ತೊಡಗಿರುವ ಹಳೆಪೈಕಿಯವರು

ಚಿತ್ರ ೩




ದಿವಾನ್ ಪೂರ್ಣಯ್ಯನವರು. ೧೭೪೬-೧೮೧೨

ಚಿತ್ರ ೪




ದಿವಾನ್ ಪೂಣಯ್ಯನವರು ಮಲಕಂ ಸಾಹೇಬರಿಗೆ ಹಾಗೂ ಬ್ರಿಟೀಷ್‌ಅಧಿಕಾರಿಗೆ ರಕ್ಷಣೆ ಒದಗಿಸುವಂತೆ ನಾಯಕ್ ರಾಮಯ್ಯನಿಗೆ ಬರೆದ ಪತ್ರ ಕ್ರಿ.ಶ.೧೮೦೪

ಚಿತ್ರ ೫




ಚಿತ್ರ ೬



ದಿವಾನ್ ಪೂಣಯ್ಯನವರು ಮಲಕಂ ಸಾಹೇಬರಿಗೆ ಹಾಗೂ ಬ್ರಿಟೀಷ್ ಅಧಿಕಾರಿಗೆ
ರಕ್ಷಣೆ ಒದಗಿಸುವಂತೆ ನಾಯಕ್ ರಾಮಯ್ಯನಿಗೆ ಬರೆದ ಪತ್ರ ಕ್ರಿಶ ೧೮೦೪

ಚಿತ್ರ ೭



ದಿವಾನ್ ಕಛೇರಿಯ ಸೀಲು

ಚಿತ್ರ ೮



ಮೈಸೂರು ದಸರಾ ಮೆರವಣಿಗೆಯಲ್ಲಿ ಅಶ್ವಾರೂಢ ಐ.ಜಿ.ಪಿ ರವರು ೧೯೩೫

ಚಿತ್ರ ೯



ಮೈಸೂರು ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಅಂಗರಕ್ಷಕ ಪಡೆಯ ಪೊಲೀಸರೊಂದಿಗೆ

ಚಿತ್ರ ೧೦



ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಅಂಗರಕ್ಷಕ ಪಡೆಯವರ ನಡುವಿನಲ್ಲಿ ಅಶ್ವಾರೋಹಿಯಾಗಿರುವುದು.

ಚಿತ್ರ ೧೧



ಮಹಾರಾಜ ಜಯಚಾಮರಾಜ ಒಡೆಯರ್‌ರವರು ಅಂಗರಕ್ಷಕ ಪಡೆಯ ಕಮಾಂಡೆಂಟ್ ಆಗಿದ್ದ ಕ್ಯಾಪ್ಟನ್ ಕೃಷ್ಣರವರ ಬೆಂಗಾವಲಿನಲ್ಲಿ

ಚಿತ್ರ ೧೨



ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯೊಂದಿಗೆ ಮೈಸೂರು ದಸರಾ ಅಂಬಾರಿಯಲ್ಲಿ ರಾಜ ಮತ್ತು ಯುವರಾಜರು.

ಚಿತ್ರ ೧೩



ದಸರಾ ಮೆರವಣಿಗೆಯಲ್ಲಿ ಸಾಗುತ್ತಿರುವ ಪೊಲೀಸ್ ಪಡೆಯ ಚಿತ್ರ, ಮೈಸೂರಿನ ಅರಮನೆಯ ದ್ವಾರದ ಮೇಲ್ಭಾಗದಲ್ಲಿದೆ .

ಚಿತ್ರ ೧೪




ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಶಸ್ತ್ರಸಜ್ಜಿತರಾದ ಮಹಾರಾಜರ ಅಂಗರಕ್ಷಕ ಪಡೆಯವರ ಪಥಸಂಚಲನ.

ಚಿತ್ರ ೧೫



ಮೈಸೂರಿನ ಕೃಷ್ಣರಾಜೇಂದ್ರ ವೃತ್ತದಲ್ಲಿ ಸಾಗುತ್ತಿರುವ ಜಂಬೂಸವಾರಿಯಲ್ಲಿ ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯವರು ಹೋಗುತ್ತಿರುವುದು.

ಚಿತ್ರ ೧೬



ಚಿತ್ರ ೧೭



ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯವರು ಧರಿಸುತ್ತಿದ್ದ ಸಮವಸ್ತ್ರಗಳು

ಚಿತ್ರ ೧೮



ವೇಲ್ಸ್ ರಾಜರಾಣಿಯರೊಂದಿಗೆ ಮಹಾರಾಜರ ಅಂಗರಕ್ಷಕ ಪಡೆಯ ಪೊಲೀಸರು.
೧೯೦೫

ಚಿತ್ರ ೧೯




ವೇಲ್ಸ್ ರಾಜರಾಣಿಯರೊಂದಿಗೆ ಮಹಾರಾಜರ ಅಂಗರಕ್ಷಕ ಪಡೆಯ ಪೋಲೀಸರು ೧೯೦೫

ಚಿತ್ರ ೨೦



ಮಹಾರಾಜರ ಅಂಗರಕ್ಷಕ ಪಡೆಯ ಕಛೇರಿಯ ಮುಂಭಾಗದಲ್ಲಿ
ಕರ್ನಲ್ ಗೋಪಾಲರಾವ್

ಚಿತ್ರ ೨೧



ಮೈಸೂರು ರಾಜ್ಯದ ಮೊದಲ ಐಜಿಪಿ
ಶ್ರೀ.ಎಲ್.ರಿಕೆಟ್ಸ್
೧-೧೧-೧೮೮೫ ರಿಂದ ೧೫-೫-೧೮೯೨

ಚಿತ್ರ ೨೨



ಎರಡನೇ ಐಜಿಪಿ
ಶ್ರೀ ವಿ.ಪಿ. ಮಾಧವ ರಾವ್
೧೬-೫-೧೮೯೨ ರಿಂದ ೧೭-೪-೧೮೯೮

ಚಿತ್ರ ೨೩



ರಾವ್‌ಬಹದ್ದೂರ್ ಎ ರಂಗಸ್ವಾಮಿ ಅಯ್ಯಂಗಾರ್
ಬಿ.ಎ.,ಬಿ.ಎಲ್
೧೮-೪-೧೮೯೮ ರಿಂದ ೧೬-೬-೧೯೦೧

ಚಿತ್ರ ೨೪




ಬಿ.ಕೆ. ವೆಂಕಟವರದ ಅಯ್ಯಂಗಾರ್
೧೭-೬-೧೯೦೧ ರಿಂದ ೧೧-೮-೧೯೦೨

ಚಿತ್ರ ೨೫



ರಾವ್ ಬಹದ್ದೂರ್ ಸಿ. ಮಾದಯ್ಯ
೧೨-೮-೧೯೦೨ ರಿಂದ ೧೮-೩-೧೯೦೪

ಚಿತ್ರ ೨೬



ಎಫ್.ಇ.ಸಿ.ಕಾರ್
೨೯-೩-೧೯೦೪ ರಿಂದ ೧೫-೩-೧೯೦೮

ಚಿತ್ರ ೨೭



ಶ್ರೀ ಸರ್ದಾರ್ ದಳವಾಯಿ ದೇವರಾಜ್ ಅರಸ್
೨೩-೩-೧೯೦೮ ರಿಂದ ೨೨-೧೨-೧೯೧೧

ಚಿತ್ರ ೨೮



ಶ್ರೀ ಕೆ.ಎಸ್. ದೊರೆಸ್ವಾಮಿ ಐಯ್ಯರ್.
೨೩-೧೨-೧೯೧೧ ರಿಂದ ೧೮-೧೨-೧೯೧೨

ಚಿತ್ರ ೨೯




ಶ್ರೀ.ಸಿ.ಶ್ರೀಕಂಠೇಶ್ವರ ಐಯ್ಯರ್. ಬಿಎ.,ಬಿ.ಎಲ್
೧೯–೨–೧೯೧೨ ರಿಂದ ೩೧–೩–೧೯೧೭

ಚಿತ್ರ ೩೦



ಶ್ರೀ.ಕೆ.ಆರ್. ಶ್ರೀನಿವಾಸ್ ಐಯ್ಯರ್,ಎಮ್.ಎ
೧–೪–೧೯೧೭ ರಿಂದ ೬–೬–೧೯೧೮

ಚಿತ್ರ ೩೧



ಮಿರ್ ಹುಮ್ಜ ಹುಸೈನ್, ಬಿ.ಎ.,ಬಿ.ಎಲ್
೭–೬–೧೯೧೮ ರಿಂದ ೩೨–೩–೧೯೧೯

ಚಿತ್ರ ೩೨



ಶ್ರೀ. ಎ. ಸುಬ್ರಹ್ಮಣ್ಯ ಐಯ್ಯರ್.
೨೪–೪–೧೯೧೯ ರಿಂದ ೧–೧–೧೯೨೩

ಚಿತ್ರ ೩೩




ಶ್ರೀ.ಪಿ.ಎಫ್. ಬೌರಿಂಗ್
೨-೧-೧೯೨೩ ರಿಂದ ೫-೪-೧೯೨೭

ಚಿತ್ರ ೩೪



ಶ್ರೀ. ಎಸ್. ಹಿರಿಯಣ್ಣಯ್ಯ.ಎಮ್.ಎ.,ಬಿ.ಎಲ್
೬-೪-೧೯೨೭ ರಿಂದ ೧೮-೧೨-೧೯೨೯

ಚಿತ್ರ ೩೫



ಶ್ರೀ.ಎ.ಕೆ. ಸಯ್ಯದ್ ತಾಜ್ ಪೀರನ್
೧೯-೧೨-೧೯೨೯ ರಿಂದ ೩-೩-೧೯೩೦

ಚಿತ್ರ ೩೬



ಶ್ರೀ. ಎಫ್.ಎ ಹ್ಯಾಮಿಲ್ಟನ್
೨೨-೧೦-೧೯೩೦ ರಿಂದ ೩-೪-೧೯೩೫

ಚಿತ್ರ ೩೭



ಶ್ರೀ. ಇ.ಜಿ.ಬಿ. ಪೀಲ್.
೪-೪-೧೯೩೯ ರಿಂದ ೩-೪-೧೯೪೨

ಚಿತ್ರ ೩೮



ಶ್ರೀ.ಎಮ್ ಶೇಷಾದ್ರಿ, ಎಮ್.ಎ.
೪-೪-೧೯೪೨ ರಿಂದ ೧೬-೫-೧೯೪೩

ಚಿತ್ರ ೩೯



ಶ್ರೀ.ಎ.ಎ.ಖಾನ್. ಬಿ.ಎ
೧೭-೫-೧೯೪೩ ರಿಂದ ೨೧-೧೧-೧೯೪೩

ಚಿತ್ರ ೪೦



ಶ್ರೀ.ಎಸ್. ನಾರಾಯಣ ರಾವ್. ಎಮ್.ಎ.
೨೨-೧೧-೧೯೪೩ ರಿಂದ ೨-೭-೧೯೪೬

ಚಿತ್ರ ೪೧




ಶ್ರೀ. ಜಿ. ಸುಂದರ ರಾವ್..ಬಿ,ಎ.
೩-೭-೧೯೪೬ ರಿಂದ ೭-೧-೧೯೪೭

ಚಿತ್ರ ೪೨




ಶ್ರೀ. ಸಿ.ಎಮ್.ಹೆಚ್.ರಣಜೋತ್‌ಸಿಂಗ್, ಬಿ.ಎ.
೧೬-೧-೧೯೪೭ ರಿಂದ ೧೩-೧೨-೧೯೫೦

ಚಿತ್ರ ೪೩



ಚಿತ್ರ ೪೪



ಐ.ಜಿ.ಪಿ ಮಾಧವರಾವ್ ರವರ ಹಸ್ತಾಕ್ಷರ ಹಾಗೂ ಸಹಿ

ಚಿತ್ರ ೪೫



ಪೊಲೀಸ್ ಕೆಲಸ ಮಾಡುತಿದ್ದ ಓಲೆಕಾರನ ಪ್ರತಿಮೆ
(ಸ್ಥಳ – ಅಶ್ವದಳದ ಕಛೇರಿ. ಮೈಸೂರು)

ಚಿತ್ರ ೪೬



ಮೈಸೂರು ರಾವುತದಳದ ಕಛೇರಿಮುಂದೆ
ಇರುವ ಮಹಾರಾಜರ ಅಂಗರಕ್ಷಕಪಡೆಯ
ಯೋಧನ ಪ್ರತಿಕೃತಿ.

ಚಿತ್ರ ೪೭



ಮೈಸೂರು ಅಶ್ವದಳದ ಪೊಲೀಸ್

ಚಿತ್ರ ೪೮



ಮೈಸೂರು ಮಹಾರಾಜರ ಕಾಲದಲ್ಲಿ ಪ್ರತೀ ಗಂಟೆಗೊಮ್ಮೆ ಭಾರಿಸುತ್ತಿದ್ದ ಪೋಲೀಸ್ ಘಂಟೆ

ಚಿತ್ರ ೪೯



ಅಶ್ವದಳದ ಪೋಲೀಸರು ಉಪಯೋಗಿಸುತ್ತಿದ್ದ ಆಯುಧಗಳು

ಚಿತ್ರ ೫೦



ಸೆರಮೋನಿಯಲ್ ಪೆರೇಡ್‌ಗೆ ಸಿದ್ಧವಾದ ಅಶ್ವದಳ ಪೋಲೀಸ್ ಪಡೆ

ಚಿತ್ರ ೫೧



ಸೆರೆಮೋನಿಯಲ್ ಪೆರೆಡ್‌ಗೆ ಸಿದ್ಧರಾದ ಅಶ್ವದಳದ ಪೊಲೀಸ್ ಪಡೆ

ಚಿತ್ರ ೫೨




ಅಶ್ವದಳದ ಪೊಲೀಸರು (ಎಡದಿಂದ ಬಲಕ್ಕೆ ಕುಳಿತಿರುವವರು), ಕರ್ನಲ್ ಗೋಪಾಲ್ ರಾವ್, ಕರ್ನಲ್ ನಂಜರಾಜ್ ಬಹದ್ದೂರ್, (ಎಡದಿಂದ ಬಲಕ್ಕೆ ನಿಂತಿರುವವರು) ಎಮ್.ಎ.ಕರೀಂಬೇಗ್, ಸಯ್ಯೆದ್ ಹಸನ್ ೧೯೨೪

ಚಿತ್ರ ೫೩



ಪೊಲೀಸ್ ಅಶ್ವದಳದ ಅಧಿಕಾರಿಗಳು. ಎಡದಿಂದ ಬಲಕ್ಕೆ ಕುಳಿತಿರುವವರು ಕರ್ನಲ್ ಗೋಪಾಲರಾವ್, ಕೃಷ್ಣೋಜಿರಾವ್ ಮಾನೆ.(ಶ್ರೀಯುತರು ಒಳ್ಳೆಯ ತಳಿ ಅಶ್ವಗಳನ್ನು ಖರೀದಿಸುವಲ್ಲಿ ನಿಪುಣರು). ಶ್ರೀಮಾನ್ ಮಹಾರಾಜರ ಎ.ಡಿ.ಸಿ ಕರ್ನಲ್‌ನಂಜರಾಜ ಬಹದ್ದೂರ್.ಎಡದಿಂದ ಬಲಕ್ಕೆ ನಿಂತಿರುವವರು , ನಂಜರಾಜ ಅರಸ್ ,ಎಮ್.ಎ.ಕರೀಂಬೇಗ್.ಸೈಯದ್ ಹಸನ್, ದಶರಥರಾವ್ ೧೯೨೪.

ಚಿತ್ತ ೫೪



ಅಶ್ವದಳದ ಪೊಲೀಸರು (ಎಡದಿಂದ ಬಲಕ್ಕೆ) ಶ್ರೀ.ಸಿದ್ದೋಜಿರಾವ್ ಜಗದಾಳೆ, ಎಂ.ಎ.ಕರೀಂ ಬೇಗ್, ದಶರಥ ರಾವ್, ಅಬ್ದುಲ್ ರಜಾಕ್, ಶ್ರೀ.ಜಾನ್, ಕರ್ನಲ್ ಗೋಪಾಲ್ ರಾವ್, ರಿಸಾಲ್ದಾರ್ ಹನುಮಂತ ರಾವ್ ಘಾಟಗೆ. ೧೯೩೪.

ಚಿತ್ರ ೫೫



ಮೈಸೂರು ಅಶ್ವದಳದ ಪೋಲೋ ಪಟುಗಳು
ಎಡದಿಂದ ಬಲಕ್ಕೆ; ಆರ್. ಎಸ್. ನಂಜರಾಜ್ ಅರಸ್, ಎಂ.ಎ.ಕರೀಂಬೇಗ್, ಸಯ್ಯದ್‌ಹಸನ್ ಮತ್ತು ದಶರಥ ರಾವ್. (ಸ್ಥಳ; ರೇಸ್ ಕೋರ್ಸ್ ಮೈದಾನ.೧೯೨೫)

ಚಿತ್ರ ೫೬



ಚಿತ್ರ ೫೭



ಕರ್ನಲ್ ಗೋಪಾಲ್ ರಾವ್ ರವರ ಚಿತ್ರಗಳು

ಚಿತ್ರ ೫೮



ಅಶ್ವದಳದ ಪೋಲೀಸರು ಕರ್ನಲ್ ಗೋಪಾಲ್ ರಾವ್ ತಮ್ಮ ಬೋಧಕ ಶ್ರೀ ರಿಸಲ್ದಾರ್ ಅಬ್ದುಲ್‌ಸತ್ತಾರ್ ರವರೊಡನೆ(ಬಲಕ್ಕೆ) ಅವರು ಮಹಾನ್ ಸವಾರರಾಗಿದ್ದು, ಕಣ್ಣಿಗೆ ಬಟ್ಟೆಕಟ್ಟಿ ಟೆಂಟ್‌ಪಿಕ್ಕಿಂಗ್ ಮಾಡುತ್ತಿದ್ದರು. ಶ್ರೀಯುತರಿಗೆ ಅರಮನೆ ವರ್ಧಂತಿ ಪೋಷಾಕಿನಿಂದ ಗೌರವಿಸಲಾಗಿತ್ತು ೧೯೨೨. (ಎಡದಿಂದ ಬಲಕ್ಕೆ ಕುಳಿತಿರುವವರು) ಕರ್ನಲ್ ಗೋಪಾಲ್ ರಾವ್, ಫಯಾಜ ಮಹಮ್ಮದ್ ಮತ್ತು ಹವಾಲ್ದಾರ್ ಸದಾಶಿವರಾವ್ (ಎಡದಿಂದಬಲಕ್ಕೆ ನಿಂತಿರುವವರು)ರಿಸಾಲ್ದಾರ್ ಸಿದ್ದರಾಜ ಒಡೆಯರ್,ರಿಸಾಲ್ದಾರ್ ಹನುಮಂತರಾವ್ ಮತ್ತು ರಿಸಲ್ದಾರ್ ಅಬ್ದುಲ್ ಸತ್ತಾರ್. ೧೯೩೦

ಚಿತ್ರ ೫೯



ಪೋಲೀಸ್ ಅಶ್ವದಳದ ಅಧಿಕಾರಿಗಳು

ಚಿತ್ರ ೬೦




ಅಶ್ವದಳದ ಪೊಲೀಸರು– ವಿವಾಹ ಸವಾರಿಯ ಸಂದರ್ಭ –೧೯೩೫.ಎಡದಿಂದ ಬಲಕ್ಕೆ ಶ್ರೀಯುತರಾದ ಸಿದ್ದೋಜಿರಾವ್ ಜಗದೋಳೆ,ದಶರಥರಾವ್,ಅಬ್ದುಲ್‌ರಜಾಕ್,ಕರ್ನಲ್ ಗೋಪಾಲ್‌ರಾವ್,ಶ್ರೀ ಜಾನ್,ಎಂ.ಎ.ಕರೀಂ,ಭಾರಜಿರಾವ್ ಶಿಂದೆ ಮತ್ತು ಹನುಮಂತರಾವ್‌ಘಾಟ್ಕೆ.

ಚಿತ್ರ ೬೧



ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯವರ ಅಂಗಿಯ ಮೇಲೆ ರಾಜಮುದ್ರೆಯಿರುವ ಗಂಡಬೇರುಂಡದ ಚಿತ್ರದೊಂದಿಗೆ **H,H.Maharaja Body guard** ಎಂದು ಬರೆದ ನಿಲುವಂಗಿಗಳ ಗುಂಡಿಗಳು

ಚಿತ್ರ ೬೧



ಮೈಸೂರು ಅಶ್ವದಳದ ಪೊಲೀಸ್ ಕಛೇರಿಗೆ ಶ್ರೀ ಕೃಷ್ಣರಾಜ ಒಡೆಯರ್‌ರವರು ಶಂಕುಸ್ಥಾಪನೆ ಮಾಡಿರುವ ಶಾಸನ.

ಚಿತ್ರ ೬೨



ಮೈಸೂರು ಪೊಲೀಸ್ ಅಶ್ವದಳದ ಕಛೇರಿ

ಚಿತ್ರ ೬೪



೮೦,೦೦೦ ರೂಪಾಯಿ ವೆಚ್ಚದಲ್ಲಿ ಮೈಸೂರಿನ ಪೊಲೀಸ್ ಅಶ್ವದಳದ ಕಛೇರಿ ಕಟ್ಟಡ ನಿರ್ಮಿಸಿದ ಬಗ್ಗೆ ಶಾಸನ. ೧೯೨೦.

ಚಿತ್ರ ೬೫



ಮೈಸೂರು ಪೊಲೀಸ್ ಬ್ಯಾಂಡ್‌ನವರು ಧರಿಸುತ್ತಿದ್ದ ಸಮವಸ್ತ್ರ.

ಚಿತ್ರ ೬೬



ಮೈಸೂರಿನ ರಾಜಮುದ್ರೆಯುಳ್ಳ ಪೊಲೀಸ್ ಬ್ಯಾಂಡ್ ಡ್ರಮ್ಮಿನ ಕವರ್


ಚಿತ್ರ ೬೭



ಚಿತ್ರ ೬೮



ಚಿತ್ರ ೬೯



ಚಿತ್ರ ೭೦



ಚಿತ್ರ ೭೧



ಚಿತ್ರ ೭೨



ಚಿತ್ರ ೬೭ ರಿಂದ ೭೨ ಮೈಸೂರು ಪೊಲೀಸ್ ಬ್ಯಾಂಡ್‌ನವರು ಉಪಯೋಗಿಸುತ್ತಿದ್ದ ವಿವಿಧ ರೀತಿಯ ವಾದ್ಯಗಳು

ಚಿತ್ರ ೭೩




ಮೈಸೂರು ದಸರಾ ಮೆರವಣಿಗೆಯಲ್ಲಿ ಎತ್ತಿನಗಾಡಿಯಲ್ಲಿ ಸಾಗುತ್ತಿರುವ ಮೈಸೂರು ಪೊಲೀಸ್ ಬ್ಯಾಂಡ್

ಚಿತ್ರ ೭೪




ಮೈಸೂರು ದಸರಾ ಮೆರವಣಿಗೆಯಲ್ಲಿ ಸಾಗುತ್ತಿರುವ ಕರ್ನಾಟಕ ಬ್ಯಾಂಡ್ ಮತ್ತು ಅರಮನೆ ಬ್ಯಾಂಡ್

ಚಿತ್ರ ೭೫




೨೭–೫–೧೯೩೭

ಚಿತ್ರ ೭೬


THE PALACE.
MYSORE


೧೮–೮–೧೯೩೯

ಚಿತ್ರ ೭೭


THE PALACE
FERNHILL
NILGIRIS

೨೮–೫–೧೯೩೭

ಚಿತ್ರ ೭೮



೩೦–೧೧–೧೯೩೭

ಮೈಸೂರು ಪೊಲೀಸ್ ಬ್ಯಾಂಡಿನ ವೈಣಿಕ ಪ್ರವೀಣ ಶ್ರೀ ವೆಂಕಟಗಿರಿಯಪ್ಪನವರಿಗೆ ಸುಬ್ರಹ್ಮಣ್ಯ ರಾಜೇ ಅರಸು ಬರೆದ ಪತ್ರಗಳು.

ಚಿತ್ರ ೭೯



ಮೈಸೂರು ದಸರಾ ಮೆರವಣಿಗೆಯಲ್ಲಿ ಸಾಗುತ್ತಿರುವ ಮೈಸೂರು ಪೋಲೀಸ್

ಚಿತ್ರ ೮೦



ಬೆಂಗಳೂರು ನಗರದಲ್ಲಿರುವ ಕೇಂದ್ರ ಕಾರಾಗೃಹ

ಚಿತ್ರ ೮೧+



ಬಳ್ಳಾರಿಯ ಕಾರಾಗೃಹದಲ್ಲಿ ಮರಣದಂಡನೆ ಶಿಕ್ಷೆಗೆ ಒಳಗಾದ ಖೈದಿಗಳಿಗೆ ನೇಣುಕಂಬ ಶಿಕ್ಷೆ ನೀಡುವ ಸೆಟ್ (gallows) .

ಚಿತ್ರ ೮೨



ಚಿತ್ರ ೮೩



ಹಿಂದಿನ ಕಾಲದ ಪೊಲೀಸರು ಧರಿಸುತ್ತಿದ್ದ ಸಮವಸ್ತ್ರ

ಚಿತ್ರ ೮೪



ಚಿತ್ರ ೮೫



ಚಿತ್ರ ೮೬



ಹಿಂದಿನ ಕಾಲದ ಪೊಲೀಸರು ಧರಿಸುತ್ತಿದ್ದ ಸಮವಸ್ತ್ರ

ಅನುಬಂಧ – ೧

ಪೂರ್ಣಯ್ಯನವರು ಶೃಂಗೇರಿ ಸ್ವಾಮಿಯವರಿಗೆ ರಕ್ಷಣೆ ನೀಡಲು ಕಿಲ್ಲೇದಾರರು ಮತ್ತು ಅಮಲ್‌ದಾರರಿಗೆ ಬರೆದ ಪತ್ರ

೧) ಶ್ರೀ ಕ್ರೊಧನ ಸಂವತ್ಸರದ ಫಾಲ್ಗುಣ ಶು ೨ ಲು ಶ್ರೀಮ
೨) ತು ಪೂರ್ಣೆಯ್ಯನವರು ಅರಮನೆ ಶಿಮೆ ಗಡಿಗಳ ಕಿ
೩) ಲ್ಲೆದಾರ ಅಮಲದಾರ್‍ರಿಗೆ ಅದಾಗಿ ಶ್ರೀಂಗೆರ್‍ರಿ ಶ್ರೀ
೪) ಸ್ವಾಮಿಗಳವರು ಪಟ್ಟಣಕ್ಕೆ ದಯಮಾಡುವದ
೫) ರ್‍ರಿಂದಾ ನಿಂಮ ನಿಂಮ ಗಡಿಗಳ ಮಾರ್ಗವಾಗಿ
೬) ದಯಮಾಡಿದಲ್ಲಿ ನಿಉ ಅಶೆಷ ಬ್ರಾಂಹ್ಮರು ಯ
೭) ದರ್‍ರಿಗೆ ಹೋಗಿ ಕರಕೊಂಡು ಬಂದು ಬಿಡದಿ ಮ
೮) ನೆಯಲ್ಲಿ ಉಳಿಶಿ ಮಠಕ್ಕೆ ಹತ್ತು ಕವಾಡ ಹು
೯) ಲ್ಲು ಕಟ್ಟಿಗೆ ಹತ್ತು ಕವಾಡ ಸಹ ಕೊಡಿಶಿಕೊ
೧೦) ಟ್ಟು ಯಿಂನ್ನು ಬೆಕಾದ ಸಾಮಾನು ಯಾವತ್ತು
೧೧) ವಾಜಬಿ ಕ್ರಯಕ್ಕೆ ಕೊಡಿಶಿಕೊಟ್ಟು ರಾತ್ರೆ
೧೨) ವೆಳೆಯಿಳದ ಬಳಿ ಕಳ್ಳಕಾಕರ ಉಪದ್ರ
೧೩) ವಿಲ್ಲದಂತ್ತೆ ಆಳುಯಿಟ್ಟು ವಿಚಾರಿಶಿಕೊಂ
೧) ಡು ಮುಂದಕ್ಕೆ ಸಾಗಿಬರುವಲ್ಲಿ ಗಡಿಯಿಂದಾ
೨) ಗಡಿಗೆ ಸಂಗಡ ನಾಲ್ಕಾಳು ಕೊಟ್ಟು ಸಾಗಿಶಿ ಕ
೩) ಳುಹಿಸುವದು ರುಜು ಶ್ರೀ

ಅನುಬಂಧ - ೨

ಪೂರ್ಣಯ್ಯನವರು ಶೃಂಗೇರಿ ಸ್ವಾಮಿಯವರಿಗೆ ರಕ್ಷಣೆ ನೀಡಲು ಕಿಲ್ಲೇದಾರರು ಮತ್ತು ಅಮಲ್‌ದಾರರಿಗೆ ಬರೆದ ಪತ್ರ

೧) ಶ್ರೀ ಪ್ರಮೊದೂತ ಸಂವತ್ಸರದ ಚೈಯಿತ್ರ ಬ ೧೩ ಮಂಗ
೨) ಳವಾರದಲ್ಲು ಶ್ರೀಮತ್ತು ಪೂರ್ಣೈಯನವರ್‍ರು ಅರಮ
೩) ನೆ ಶಿಮೆ ಗಡಿಗಳ ಅಮಲದಾರ್‍ರು ಕಿಲ್ಲಿದಾರ ಜಾಗಿರ್ರಿದಾರ
೪) ಮುಂತ್ತಾದವರ್‍ರಿಗೆ ಸಹಾ ಅದಾಗಿ / ಶುಂಗೆರ್‍ರಿ ಶ್ರೀ
೫) ಸ್ವಾಮಿಯವರ್‍ರು ಮಯಿಶೂರ್‍ರಿಗೆ ದಯುಮಾಡು
೬) ವದರ್‍ರಿಂದಾ ನಿಂಮ್ಮ ನಿಂಮ್ಮ ತಾಲೂಕಿನ ಸರಹ
೭) ದ್ದುಗೆ ಬಂದಲ್ಲಿ ನಿಉ ನಿಂಮ್ಮ ಶಿರಸ್ತೇದಾರ್‍ರು
೮) ಆ ಸ್ತಳದ ಮಹಜನಗಳು ಗ್ರಹಸ್ತರ್‍ರು ಶೆಟ್ಟಿವರ್ತ
೯) ಕರ್‍ರು ತಾಳಮೆಳ ಬಜಂತ್ರಿ ಮುಂಕತ್ತಾಗಿ ಕರದು
೧೦) ಕೊಂಡು ಹೋಗಿ / ಯೆದರ್‍ರುಗೊಂಡು ಕರದುಕೊ
೧೧) ಂಡು ಬಂದ್ದು ವಳೆ ಬಿಡದಿ ಮನೆ ಬಿಡಿಶಿ
೧೨) ಕೊಟ್ಟು ಪೂರ್ವಮೆರೆಗೆ ಯಾವ ಮರ್‍ರಿಯಾದಿ
೧೩) ಯಾವ ಮೆರೆಗೆ ನಡದುಬಂದು ಯಿದೆಯೊ
೧೪) ಆ ಪ್ರಕಾರ ನಡದುಕೊಂಡು ಸಂಗಡ ಬಂದು
೧೫) ಯಿರ್‍ರುವ ಆನೆ ವಂಟೆ ಕುದರೆ ಯೆತ್ತು ಮುಂತ್ತಾದ
೧೬) ಕೈ ಸರಕಾರದಯಿಂದ ಹುಲ್ಲುಂನು ಕೊಡ್ಸಿ
೧೭) ಅಡಿಗಬು ಬೆಕಾದಷ್ಟು ಕೊಡ್ಸಿ ಕು॰ಾರ ಸ್ವರೂ
೧೮) ಪ ಸಹಾ ಕೊಡ್ಸಿ ಕೊಟ್ಟು ಗಡಿಯಿಂದಾ ಮುಂದ
೧೯) ಣ ಗಡಿಗೆ ಬರುವಲ್ಲಿ ಆಳುಕಾಳು ಕೊಡ್ಸಿ ಕಳುಹ್ಸಿ
೨೦) ಕೊಡುವದು ನಿಂಮ್ಮ ನಿಂಮ್ಮ ತಾಲುಕಕ್ಕೆ ಬಂದು ಯಿಳ
೨೧) ದಲ್ಲಿ ರಾತ್ರೆ ಕಾಲ ಕಳ ಚಳರ ಉಪದ್ರ ಯಿಲ್ಲದಂತ್ತೆ
೨೨) ಬಂದೊಬಸ್ತು ಮಾಡಿ ಆಳುಕಾಳು ಯಿಟ್ಟು ಬಂದೊಬಸ್ತು
೨೩) ಮಾಡ್ಸಿವ – ತರ್‍ರಿಶಿಕೊಂಡು ಶ್ರೀಗಳವರ್‍ರು ಮುಂದೆ
೧ ಸಾಗಿಬಂದ ಬಗ್ಯೆ ಬರಶಿ ಕಳುಹಿಸುತ್ತಾ ಬರುವದು
೨ ತಾರ್‍ರಿಕು ೧ನೆ ಮೆ ಸಾಲ ೧೮೧೧ನೆ ಯಿಸವಿ
೩ ಯಲು ತಾಜಾಕಲಂ ಹೊರೆ ಆಳು ಬೆಕಾಗಿ
೪ ಕೆಳದಲ್ಲಿ ವಾಜಬ ಮಜೂರ್‍ರಿಯಂನು ಕೊ
೫ ಡುತ್ತಾರೆ ಕೊಡ್ಸಿ ಕೊಡುತ್ತಾರೆ ಮಜೂರ್‍ರಿ ದಾರ್‍ರಿಗೆ
೬ ಕೊಡ್ಸಿ ಆಳು ಕೊಡ್ಸಿಕೊಡುವದು ಚಉರಿ ಶಾರು
೭ ಕೈರಾಲಿಕುರ ಮಾತ್ರ ಸರಕಾರದಯಿಂದ ಕೊಡುವ
೮ ದು ರ್‍ರುಜು ಶ್ರೀ

ಅನುಬಂಧ - ೩

ದಿವಾನ್‌ಪೂರ್ಣಯ್ಯನವರು ಮಾಲ್ಕಂ ಸಾಹೇಬರಿಗೆ ರಕ್ಷಣೆ ನೀಡಲು ವಕೀಲ ರಾಮಪ್ಪರಿಗೆ ಬರೆದ ನಾಲ್ಕು ಪತ್ರಗಳು

ಪತ್ರ ೧

ಶ್ರೀ.ರುಧಿರೋದ್ಗಾರಿ ಸಂ : ಜೇಷ್ಠ ಶು. ೧ ರಲ್ಲು ಶ್ರೀ ಮತ್ತು ಪೂರ್ಣೈಯ್ಯನವರು ನಾಯಕ ರಾಮಯ್ಯನಿಗೆ ನಮಸ್ಕಾರ ಅದಾಗಿ/ ನೀವು ಪುನೆದಿಂದ್ದ ವೈಶಾಖ ಬ ೯ ರವಾನೆಯಲ್ಲಿ ಕಳುಹ್ಸಿದ ಅರ್ಜಿಯಿಂದ್ಯೆಲ್ಲಾ ವಿವರ ಉ ಶ್ರುತ ವಾಯಿತು. ಇದೇ ಪ್ರಕಾರಕ್ಕೆ ಪ್ರತಿ ನಿತ್ಯೆದಲ್ಲು ಅರ್ಜಿ ಬರೆಶಿ ಕಲುಹ್ಸುತಾ ಇರುವದು. ನೀನು ಆಗಾಗ್ಗೆ ಕಳಹುಸಿದ ಅರ್ಜಿಗಳು

ಹುಜೂರಿಗೆ ಬಂದು ತಲಪುತಾಯಿಧೆಯಾಗಿ ರಾಜಶ್ರೀ ಮಲಕಂ ಸಾಹೆಬ ಬಹದೂರವರ ಸಂನ್ನಿಧಿಯಲ್ಲಿ ಕಾದುಕೊಂಡು ಯಿದ್ದು ಅಪ್ಪಣೆ ಪ್ರಕಾರ ಚಾಕರಿಯಲ್ಲಿ ಹಾಜರಾಗಿರುವುದು. ರುಜುಶ್ರೀ.

ಪತ್ರ ೨

ಶ್ರೀ ರುಧಿರೋದ್ಗಾರಿ ಸಂ : ಭಾದ್ರಪದ ಶು ೧ ರಲ್ಲು ಶ್ರೀಮತು ಪೂರ್ಣೈಯ್ಯನವರು ನಾಯಕ ರಾಮಯ್ಯನಿಗೆ ನಮಸ್ಕಾರ ಅದಾಗಿ / ನೀನು ಶ್ರಾವಣ ಬ ೯ ರವಾನೆಯಲ್ಲಿ ಕಳಹ್ಸಿದ ಅರ್ಜಿಯಿಂದೆಲ್ಲಾ ವಿವರ ಉ ಶ್ರುತವಾಯಿತು. ರಾಜ ಶ್ರೀ ಜನ್ರಲ್ ವಸಲೀಸಾಹೆಬ ಬಹದರವರು ಅಹಮ್ಮದ್ ನಗರದ ಷಹರನ್ನು ಹಲ್ಲಾ ಮಾಡಿ ತೆಗೆದುಕೊಂಡ ವರ್ತ್ತಮಾನ ಮುಂತಾಗಿ ಬರಶಿ ಕಳುಹ್ಸಿದ್ದು ಸರಿಯಷ್ಟೇ. ಅಹಮ್ಮದ್ ನಗರದಲ್ಲಿ ಕಿಲ್ಲೆಯನ್ನು ಠಾಣ್ಯ ಹಾಕಿದ ಪತ್ತೆ ದಾಜಿ ವರ್ತಮಾನ ವನ್ನು ಬರೆಶಿ ಕಳುಹ್ಸಿದು. ನೀವು ಸರ್ವದಾ ರಾಜಶ್ರಿ ಮಲಕಂ ಸಾಹೇಬ ಬಹದರವರ ಬಳಿಯಲ್ಲೆ ಜಾಗ್ರತೆಯಲ್ಲಿ ಕಾದು ಕೊಂಡು ಯಿದ್ದು ಫರ್ಮಾಯಿಶಿದ ಚಾಕರಿಯಂನ್ನು ಮಾಡುತಾ ಆಗಾಗ್ಗೆ ಹಜೂರಿಗೆ ಅರ್ಜಿ ಬರೆಶಿರಾ/ ಚಿತ್ರದುರ್ಗದ ಗೋವಿಂದರಾಯರ ಮುಖಾಂತ್ರ ಅಂಚೆ ಮೇಲೆ ಹುಜೂರಿಗೆ ರವಾನೆ ಮಾಡುವುದು. ರಾ/ ಮಾಲಕಂ ಸಾಹೆಬಹದರವರ ಶರೀರಕ್ಕೆ ಸ್ವಲ್ಪ ಆರೋಗ್ಯವಾಯಿತುಯೆಂಬುದಾಗಿ ಬರೆದು ಕಳುಹ್ಸಿದ್ದರಿಂದ ಮನಸ್ಸಿಗೆ ಬಹಳ ಸಂತೋಷವಾತು. ರುಜುಶ್ರೀ.

ಪತ್ರ ೩

ಶ್ರೀ ರುಧಿರೋದ್ಗಾರಿ ಸಂವತ್ಸರದ ಮಾರ್ಗಶಿರ ಶು ೧೧ ರಲ್ಲು ಶೀಮತು ಪೂರ್ಣೈಯ್ಯನವರು ನಾಯಕ ರಾಮೈಯ್ಯಗೆ ನಮಸ್ಸಾರ. ಅದಾಗಿ/ ನೀನು ಕಾರ್ತ್ತಿಕ ಬ ೧೪ ರಲ್ಲು ಬರೆದ ಅರ್ಜಿ ೧ ಮಾರ್ಗಶಿರ ಶು ೪ ರಲ್ಲು ಬರೆದ ಅರ್ಜಿ ೧ ಸಹಾ ೨ ಅರ್ಜಿಯೂ ಹುಜೂರಿಗೆ ಬಂದು ತಲಪಿ. . . . . ಎಲ್ಲಾ ವಿವರಲೂ ಶ್ರುತವಾಯಿತು. ರಾಜಶ್ರೀ ಮಲಕಂ ಸಾಹೆಬ ಬಹದರವರು ಮುಂಬಯಿಂದ ಹೊರಟು ಪುನಕ್ಕೆ ಬಂದು ದಾಖಲಾಗಿದ್ದಾಗಿಯೂ ಅಲ್ಲಿಗೆ ಹರಿಹರದಿಂದ ರವಾನೆ ಮಾಡಿ ಕಳುಹ್ಸಿದ ಸಾಮಾನು ಕುದ್ರೆಗಳು ಮನವೆಲಕು ಮಂದ್ದನಸು ಸಾಗ್ಸಿಕೊಂಡು ಬಂದು ತಲುಪಿದರಿಂದ, ಬಹಳ ಸಂತೋಷಪಟ್ಟರು. ಅಲ್ಲಿಂದ್ದ ಮುಂದೆ ದಂಡಿಗೆ ಸಾಗಿ ಹೋಗುವುದಾಗಿಯೂ ಸಂಗಡ ಮನವೆ ಲಕುಮಂದ್ದನ್ನ ಪಟಾಲಂ ನ್ನು ತೆಗೆದುಕೊಂಡು ಹೋಗುತ್ತಾರೆಂಬುದಾಗಿ ಸಹಾ ಬರಶಿ ಕಳುಹ್ಸಿದ್ದು ಸರಿಯಷ್ಟೇ. ಅದೆ ಪ್ರಕಾರಕ್ಕೆ ರಾ/ಮಲಕಂ ಸಾಹೆಬ ಬಹದವರ ಸಂಗಡ ನೀನು ದಂಡಿಗೆ ಹೋಗಿ ಅವರ ಸಮಿಪದಲ್ಲೆ ಕಾದುಕೊಂಡುಯಿದ್ದು ಅಪ್ಪಣೆಕೊಟ್ಟ ಚಾಕರಿಯನ್ನು ಮಾಡಿಕೊಂಡು ಜಾಗ್ರತೆ ಗೂಡಿ ನಡೆದುಕೊಂಬದು. ಬಹದರ ಸಾಹೆಬರವರು ಮಲ. ಲಕುಮಪ್ಸನ್ನ ಪಟಾಲಂ ಮಂದ್ದಿ ಯಂನ್ನು ನೋಡಿ ಬಹಳ ಸಂತೋಷಪಟ್ಟರು ಯಂತ್ತಲು ಹರಿಹರಕ್ಕೆ ಸಾಗ್ಸತಕ್ಕ ಕುದ್ರೆಗಳಂನ್ನು ವಾಜರು ಚಿತ್ರದುರ್ಗದ ಶ್ರೀನಿವಾಸರಾಯರಿಗೆ ಸಾಗ್ಸಿಕೊಂಡು ಹೋಗ ಹೇಳಿ ಅಪ್ಪಣೆ ಕೊಟ್ಟದಕ್ಕಾಗಿ ಸಾಹಾಬರದ್ದು ಮನನವಾಯಿತು. ಯಿದೆ ಪ್ರಕಾರಕ್ಕೆ ಆಗಾಗ್ಗೆ ಹುಜೂರಿಗೆ ಅರ್ಜಿ ಬರೆಶಿ ಕಳುಹ್ಸುತಾ ಬರುವದು. ರುಜುಶ್ರೀ.

ಪತ್ರ ೪

ಶ್ರೀ ರುಧಿರೋದ್ಗಾರಿ ಸಂವತ್ಸರದ ಪುಷ್ಯ ಬ ೩೦ ರಲ್ಲು ಶ್ರೀಮತು ಪೂಣ್ಯೈಯ್ಯನವರು ನಾಯಕ ರಾಮಯ್ಯಗೆ ನಮಸ್ಕಾರ. ಅದಾಗಿ/ ನೀನು ಪುಷ್ಯ ಶು ೩ ರವಾನೆಯಲ್ಲಿ ದಂಡಿನಿಂದ ಕಳುಹ್ಸಿದ ಬಿಂನವತ್ತಳೆಯಿಂದ್ಯೆಲ್ಲಾ ವಿವರಲು ಶ್ರುತ ವಾಯಿತು. ರಾಜಶ್ರೀಮಲಕಂ ಸಾಹೆಬರವರು ಸುರಕ್ಷಿತದಲ್ಲಿ ದಂಡಿಗೆ ಹೋಗಿ ತಲಪಿದ್ದಾಗಿಯೂ ನೀನು ಅವರ ಸಮಿಪ ದಲ್ಲೇ ಕಾದುಕೊಂಡು ಮರ್ಜಿ ಪ್ರಕಾರಕ್ಕೆ ನಡೆದುಕೊಳ್ಳುತೇನೆಂಬುದಾಗಿ ಸಹಾ ಬರೆಶಿ ಕಳುಹ್ಸಿದ್ದು ಸರಿಯಷ್ಟೆ ಬಹುವಳ್ಳೆ ದಾಯಿತು. ಯಿದೆ ಪ್ರಕಾರಕ್ಕೆ ರಾಜಶ್ರೀಯವರ ಬಳಿಯಿದ್ದು ಅವರು ಫರ್ಮಾ ಪ್ರಕಾರ ಜಾಗ್ರತೆ ಮಾಡಿ ಬುದ್ಧಿವಂತ್ತನಾಗಿ ನಡೆದುಕೊಂಬುದು. ಮನವೆಲ ಪಟಾಲಂ ಸಂಗಡ ಬಂದು ಯಿದ್ದು ಹರಕಾರ ಶಿಂಗಳಾಚಾರಿ ಯಂಬವನು ಮಾರ್ಗದಲ್ಲಿ ಜದನಾಗಿ ಮಾರ್ಗಶಿರ ೭ ದಿವ್ಸ ತೀರಿಹೋದ್ದ ಪ್ರಯುಕ್ತ ಅವನ ಸಾಮಾನು ನಗದುಯಿದ್ದು ರೂಪಾಯಿ ಸಹಾ ಅಮಾನತು ಕಟ್ಸಿಮನವೆಲತು ಮಂದ್ದನನ ವಶೆಯಲ್ಲಿ ಯಿಕ್ಸಿಯಿದೆಯಂಬುದಾಗಿ ಬರೆದು ಯಿದ್ದಿ ದೈವಗತಿಗೆ ಯತ್ನವೇನು ? ಯಲ್ಲಿ ಯಿದ್ದರೂ ಆದಾಗ್ಯೂ ಆ ಹರಕಾರ ಕೆಲ್ಸದ ಮ್ಯಾಲೆಯಿದ್ದನಾದ್ದರಿಂದ ಅವನ ಮನೆಗೆ ಹೆಂಗಸರು ಮಕ್ಕಳ ಕಾಲಕ್ಷೇಪಕ್ಕೆ ೩೦ ೧ಕ್ಕೆ ಗು ೦ :೦ ಐದು ವರಹದ ಮೇಲೆ ಕೊಡ್ಸಿಕೊಂಡು ಬರುವ ಹಾಗೆ ಮಂಡ ಅಮಲದಾರರಿಗೆ ಪರವಾನೆ ಬರೆಶಿ ಕಳುಹ್ಸಿಯಿದೀತಾಗಿ. ಈ ಪ್ರಕಾರ ನಡೆದು ಕೊಂಡಾನಾಗಿ ಆ ಹರಿಕಾರನ ಸಾಮಾನು ನಗದು ರೂಪಾಯಿಗಳು ಸಹಾದಂಡಿ ನಿಂದ ಮನವೆಲನ ಪಟಾಲಂ ಬರುವಾಗೆ ಸಂಗಡ ಕೊಟ್ಟು ಕಳುಹ್ಸುವದು. ಬಂದರೆ ಅವನ ಮನೆಗೆ ತಲಪ್ಸಲಾದೀತು. ರುಜುಶ್ರೀ.

ಅನುಬಂಧ - ೪

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧ ರಿಂದ ೧೮೮೩ ರವರೆಗೆ ಇದ್ದ ಜಾತಿವಾರು ಪೊಲೀಸರ ವಿವರ

ಜಿಲ್ಲೆ	ಕ್ರಿಶ್ಚಿಯನ್ನರು	ಮುಸ್ಲೀಮರು	ಹಿಂದುಗಳು						
			ಬ್ರಾಹ್ಮಣರು	ರಜಪೂತರು	ನಾಯರ್	ತಿಯಾರ್ಸ್	ಒರಿಯಾಸ್	ಪರಿಯಾಸ್	ಇತರೇ ಹಿಂದು ಜನಾಂಗ
೧	೨	೩	೪	೫	೬	೭	೮	೯	೧೦
ಮದ್ರಾಸ್ ನಗರ	೭೪	೨೭೬	೩೭	೪೩	–	–	–	೯೭	೬೮೮
ಗಂಜಂ	೨೩	೬೮	೧೨	೧೦	–	–	೪೨೭	೯	೬೨೯
ವಿಜಗಪಟ್ನಂ	೧೯	೧೧೧	೫೯	೧೭	–	–	೧೫೭	೧೫	೮೬೩
ಜೈಪುರ	೭	೯	೫	೧	–	–	೩೧೬	೧	೫೧
ಗೋದಾವರಿ	೧೭	೪೨೦	೨೫	೪೧	–	–	೨	೨೧	೮೨೪
ಕೃಷ್ಣ	೧೧	೩೭೨	೫೩	೩೬	–	–	–	೨	೬೯೨
ಒಟ್ಟು	೧೪೭	೧೨೫೬	೧೯೧	೧೪೮	–	–	೯೦೨	೧೪೪	೩೭೪೭
ನೆಲ್ಲೂರು	೧೨	೪೭೪	೨೫	೬೬	–	–	–	೪	೫೩೬
ಕರ್ನೂಲ್	೧೨	೪೭೦	೪೧	೬೮	–	–	–	೨	೩೧೫
ಬಳ್ಳಾರಿ	೧೮	೩೮೯	೫೨	೪೫	–	–	–	೨೧	೩೫೪
ಅನಂತಪುರ	೩	೧೫೩	೧೮	೧೧	–	–	–	–	೧೫೦
ಕುದ್ದಪ್	೧೩	೪೯೩	೨೧	೩೨	–	–	–	೧	೪೯೩
ಉತ್ತರಆರ್ಕಾಟ್	೧೮	೪೫೯	೫೧	೩೩	–	*–	–	೭	೭೪೧
ಚಂಗಲ್‌ಪಟ್	೪೮	೨೬೩	೭	೧೫	–	–	–	೨೧	೪೩೦
ದಕ್ಷಿಣ ಆರ್ಕಾಟ್	೩೬	೪೨೩	೧೯	೩೦	–	--	–	೧೪	೬೩೬
ಒಟ್ಟು	೧೬೦	೩೧೨೮	೨೨೮	೩೦೦	–	–	–	೭೦	೩೬೫೫
ತಂಜಾವೂರು	೫೧	೧೩೩	೩೧	೨೪	–	–	–	–	೧೨೫೬
ತಿರುಚಾನಪಳ್ಳಿ	೩೬	೨೦೮	೧೩	೨೧	–	–	–	೫	೫೨೫
ಮದುರೆ	೨೭	೩೦೭	೨೮	೩	–	–	–	೫	೮೦೩
ತಿನ್ನವಳ್ಳಿ	೬೮	೧೬೭	೮	೧	–	–	–	೭	೬೯೦
ಸೇಲಂ	೫೧	೪೧೮	೭೩	೨೩	–	–	–	೭	೬೧೬
ಕೊಯಮುತ್ತೂರು	೨೯	೨೫೯	೫೭	೩೧	೧	–	–	೧	೫೮೦
ನೀಲ್‌ಗಿರೀಸ್	೧೭	೬೦	೨	೭	–	–	–	೨	೯೬
ಮಲ್‌ಬಾರ್	೫೮	೨೨೦	೩	೧೪	೯೧೯	೨೨೪	–	೧೧	೨೫
ಸೌತ್‌ಕೆನರ	೧೬೬	೧೦೦	೪೭	೨	೬	೭೩	೧೨	–	೨೭೭
ಒಟ್ಟು	೫೦೩	೧೮೭೨	೨೬೨	೧೨೬	೯೨೬	೨೯೭	೧೨	೩೫	೪೮೬೮
ಎಲ್ಲಾ ಒಟ್ಟು	೮೧೪	೬೨೫೬	೬೮೧	೫೭೪	೯೨೬	೨೯೭	೯೧೪	೨೫೦	೧೨೨೭೦

ಅನುಬಂಧ - ೫

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧ ರಿಂದ ೧೮೮೩ ರವರೆಗೆ ಇದ್ದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರ ಸಂಬಳದ ವಿವರ

ಹೆಸರು	ರೂ		ಹೆಸರು	ರೂ	
ಐ.ಜಿ.ಪಿ	೨,೫೦೦	೦೦	ನಾಲ್ಕನೇ ದರ್ಜೆಯ ಪೊಲೀಸ್ ನಿರೀಕ್ಷಕರು	೭೫	೦೦
ಕಮಿಷನರ್ ಆಫ್ ಪೊಲೀಸ್ ಮದ್ರಾಸ್ ನಗರ	೧,೫೦೦	೦೦	ಸಾರ್ಜೆಂಟ್ಸ್ ಮದ್ರಾಸ್ ನಗರ	೬೦	೦೦
ಡೆಪ್ಯೂಟಿ ಇನ್ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್	೧,೨೦೦	೦೦	ಯುರೋಪಿಯನ್ ಹೆಡ್ ಕಾನ್ಸ್ಟೇಬಲ್, ಕೊಯಮುತ್ತೂರು ಆರ್ಕಾಟ್ ಮತ್ತು ತಿರುಚನಾಪಳ್ಳಿ	೫೫	೦೦
ಪೊಲೀಸ್ ಅಧೀಕ್ಷಕರು, ಪ್ರಥಮ ದರ್ಜೆ	೧,೦೦೦	೦೦	ಪೊಲೀಸ್ ಉಪ-ನಿರೀಕ್ಷಕರು, ಊಟಿ	೫೨	೦೦
ಸಹಾಯಕ ಇನ್ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್	೯೦೦	೦೦	ಐದನೇ ದರ್ಜೆಯ ಪೊಲೀಸ್ ನಿರೀಕ್ಷಕರು	೫೦	೦೦
ಪೊಲೀಸ್ ಅಧೀಕ್ಷಕರು, ದ್ವಿತೀಯ ದರ್ಜೆ	೮೦೦	೦೦	ಆರನೇ ದರ್ಜೆಯ ಪೊಲೀಸ್ ನಿರೀಕ್ಷಕರು ಮತ್ತು ಮದ್ರಾಸ್ ನಗರದ ಪೊಲೀಸ್ ಉಪ-ನಿರೀಕ್ಷಕರು,	೪೦	೦೦
ಡೆಪ್ಯೂಟಿ ಕಮಿಷನರ್ ಆಫ್ ಪೊಲೀಸ್, ಮದ್ರಾಸ್ ನಗರ	೭೫೦	೦೦	ಪೊಲೀಸ್ ಉಪ-ನಿರೀಕ್ಷಕರು	೩೦	೦೦
ಪೊಲೀಸ್ ಅಧೀಕ್ಷಕರು, ಮೂರನೇ ದರ್ಜೆ	೭೦೦	೦೦	ಯುರೋಪಿಯನ್ ಹೆಡ್ ಕಾನ್ಸ್ಟೇಬಲ್	೩೭ ರಿಂದ ೩೦	೦೦
ಸಹಾಯಕ ಪೊಲೀಸ್ ಅಧೀಕ್ಷಕರು ಗುಡ್ಡಗಾಡು ವಲಯ(ಹಿಲ್‌ರೇಂಜ್	೬೦೦	೦೦	ಪ್ರಥಮ ದರ್ಜೆಯ ಹೆಡ್‌ಕಾನ್ಸ್ಟೇಬಲ್	೨೫	೦೦
ಸಹಾಯಕ ಪೊಲೀಸ್ ಅಧೀಕ್ಷಕರು	೫೦೦	೦೦	ದ್ವಿತೀಯ ದರ್ಜೆಯ ಹೆಡ್‌ಕಾನ್ಸ್ಟೇಬಲ್	೨೦	೦೦
ಸಹಾಯಕ ಕಮಿಷನರ್ ಆಫ್ ಪೊಲೀಸ್, ಮದ್ರಾಸ್ ನಗರ	೩೫೦ ರಿಂದ ೪೦೦	೦೦	ತೃತಿಯ ದರ್ಜೆಯ ಹೆಡ್‌ಕಾನ್ಸ್ಟೇಬಲ್	೧೫	೦೦
ಅಸಿಸ್ಟೆಂಟ್ ಎಸ್‌ಪಿ ಆಗಿ ಕೆಲಸ ಮಾಡುತ್ತಿದ್ದ ಪ್ರಥಮ ದರ್ಜೆಯ ಇನ್ಸ್ಪೆಕ್ಟರ್	೪೦೦	೦೦	ನಾಲ್ಕನೇ ದರ್ಜೆಯ ಹೆಡ್‌ಕಾನ್ಸ್ಟೇಬಲ್	೧೨	೦೦
ಪ್ರಧಾನ (ಚೀಫ್) ಇನ್ಸ್ಪೆಕ್ಟರ್	೩೫೦	೦೦	ಪ್ರಥಮ ದರ್ಜೆಯ ಕಾನ್ಸ್ಟೇಬಲ್, ಮದ್ರಾಸ್ ನಗರ	೯	೦೦
ವಿಶೇಷ (ಸ್ಪೆಷಲ್) ಇನ್ಸ್ಪೆಕ್ಟರ್	೩೦೦	೦೦	ಪ್ರಥಮ ದರ್ಜೆಯ ಕಾನ್ಸ್ಟೇಬಲ್, ಜಿಲ್ಲೆಯಲ್ಲಿ	೮	೦೦
ಪ್ರಥಮ ದರ್ಜೆಯ ಪೊಲೀಸ್ ನಿರೀಕ್ಷಕರು	೨೦೦	೦೦	ದ್ವಿತೀಯ ದರ್ಜೆಯ ಕಾನ್ಸ್ಟೇಬಲ್, ಜಿಲ್ಲೆಯಲ್ಲಿ	೭	೦೦
ದ್ವಿತೀಯ ದರ್ಜೆಯ ಪೊಲೀಸ್ ನಿರೀಕ್ಷಕರು	೧೫೦	೦೦	ತೃತಿಯ ದರ್ಜೆಯ ಕಾನ್ಸ್ಟೇಬಲ್, ಜಿಲ್ಲೆಯಲ್ಲಿ	೬	೮೦
ತೃತೀಯ ದರ್ಜೆಯ ಪೊಲೀಸ್ ನಿರೀಕ್ಷಕರು	೧೦೦	೦೦	ಗ್ರಾಮ ಕಾವಲುಗಾರರು	೩ ರಿಂದ ೪	೦೦
ಮುಖ್ಯ ಸಾರ್ಜೆಂಟ್ ಮದ್ರಾಸ್ ನಗರ	೮೫	೦೦			

ಅನುಬಂಧ - ೬

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧-೮೨ -೮೩ ರಲ್ಲಿ ಘಟಿಸಿದ ಅಪರಾಧಗಳು, ಪೊಲೀಸರ ಕ್ರಮ ಪರಿಣಾಮಗಳ ಪಟ್ಟಿ

ವಲಯ	ಜಿಲ್ಲೆ	ಪ್ರಕರಣಗಳು		ಆರೋಪಿಗಳು		ಸೊತ್ತುಗಳು	
		ವರದಿ	ಪತ್ತೆ	ದಸ್ತಗಿರಿ	ಶಿಕ್ಷೆ	ಕಳವು ರೂ	ಪತ್ತೆ ರೂ
ಉತ್ತರ ವಲಯ	ಮದ್ರಾಸ್ ನಗರ	೩೪,೦೯೯	೨೨,೦೯೧	೪೨,೧೨೫	೩೪,೦೪೩	೫೬,೩೨೦	೧೭,೩೫೮
	ಗಾಂಜಂ	೮,೦೩೮	೩,೫೪೪	೧೪,೫೮೮	೫,೪೭೧	೫೧,೯೫೭	೯,೮೩೧
	ವಿಜಗಪಟ್ನಂ	೮,೨೦೦	೩,೫೩೩	೧೮,೫೩೦	೭,೩೧೫	೮೦,೨೮೧	೨೧,೩೧೩
	ಜೈಪುರ	೯೮೫	೪೩೮	೧,೪೦೧	೭೦೨	೧೭,೪೫೫	೪,೪೭೨
	ಗೋದಾವರಿ	೭,೫೯೯	೩,೮೬೨	೧೭,೫೪೧	೫,೫೪೮	೭೨,೧೦೭	೧೬,೫೩೮
	ಕೃಷ್ಣ	೯,೭೮೭	೪,೪೬೦	೧೫,೬೯೨	೬,೧೬೧	೫೩,೬೨೬	೧೦,೬೫೭
ಒಟ್ಟು		೩೪,೬೦೯	೧೫,೮೩೭	೬೭,೭೫೨	೨೫,೧೯೭	೨,೭೫,೪೨೬	೬೨,೮೧೧
ಕೇಂದ್ರ ವಲಯ	ನೆಲ್ಲೂರು	೬,೪೯೮	೩,೧೪೩	೧೧,೭೦೩	೪,೭೯೬	೪೨,೧೫೭	೮,೧೦೬
	ಕರ್ನೂಲ್	೪,೨೧೫	೨,೧೦೩	೮,೪೫೬	೩,೧೬೨	೫೫,೨೦೭	೯,೬೮೩
	ಬಳ್ಳಾರಿ	೭,೫೮೮	೫,೧೯೫	೧,೪೩೬	೫,೯೧೧	೬೬,೨೩೪	೬,೯೧೦
	ಅನಂತಪುರ	೩,೩೪೮	೧,೮೧೭	೬,೦೭೮	೨,೪೦೦	೪೨,೫೭೯	೪,೮೮೦
	ಕುದ್ದಪ್	೫,೩೦೫	೨,೩೪೬	೧೧,೯೮೯	೪,೧೫೪	೭೬,೫೦೦	೧೨,೮೮೨
	ಉತ್ತರಆರ್ಕಾಟ್	೮,೦೧೫	೩,೪೪೬	೧೫,೭೫೫	೫,೦೦೦	೬೫,೫೦೫	೧೪,೮೨೦
	ಚಂಗಲ್‌ಪಟ್	೯,೨೭೩	೬,೧೫೫	೧೪,೧೫೦	೭,೭೦೩	೩೮,೧೪೫	೭,೭೬೩
	ದಕ್ಷಿಣ ಆರ್ಕಾಟ್	೭,೦೮೩	೪,೩೧೨	೧೫,೩೫೭	೫,೭೨೯	೩೩,೫೨೭	೭,೮೪೬
	ಒಟ್ಟು	೫೧,೩೨೫	೨೮,೭೧೭	೮೪,೯೨೪	೩೮,೮೫೫	೪,೧೯,೮೫೪	೭೨,೮೯೦
ದಕ್ಷಿಣ ವಲಯ	ತಂಜಾವೂರು	೧೭,೭೭೯	೧೦,೫೮೩	೨೭,೩೩೯	೧೨,೧೧೮	೯೪,೯೯೯	೧೬,೧೧೨
	ತಿರುಚಾನಪಳ್ಳಿ	೮,೮೨೩	೫,೬೩೬	೧೪,೯೪೩	೬,೯೩೫	೩೫,೬೦೪	೬,೨೮೨
	ಮದುರೆ	೧೪,೮೪೮	೯,೦೦೩	೩೩,೧೮೨	೧೦,೯೫೭	೫೯,೩೮೮	೧೩,೮೯೩
	ತಿನ್ನವಳ್ಳಿ	೬,೮೭೫	೩,೭೦೦	೧೩,೭೬೧	೫,೭೩೫	೬೦,೧೪೦	೯,೬೫೩
	ಸೇಲಂ	೬,೨೮೭	೩,೦೮೬	೧೨,೭೪೫	೫,೦೭೪	೫೩,೬೧೧	೧೫,೨೮೯
	ಕೊಯಮುತ್ತೂರು	೬,೨೭೯	೨,೯೧೦	೧೨,೨೪೮	೪,೧೮೩	೩೪,೨೩೮	೯,೬೮೫
	ನೀಲ್‌ಗಿರೀಸ್	೧,೮೬೯	೧,೨೩೨	೨,೫೯೪	೧,೬೪೭	೫,೬೧೮	೨,೩೯೮
	ಮಲ್‌ಬಾರ್	೧೭,೯೧೨	೯,೬೧೦	೨೯,೭೦೦	೧೨,೨೧೨	೭೨,೯೯೮	೨೦,೨೮೨
	ಸೌತ್‌ಕೆನರ	೨,೮೯೫	೧,೭೨೨	೬,೫೨೫	೨,೪೨೭	೩೨,೨೬೧	೧೧,೭೨೭
	ಒಟ್ಟು	೮೩,೦೬೭	೪೭,೪೩೭	೧,೫೩,೦೩೭	೬೧,೩೫೮	೪,೪೮,೮೫೭	೧,೦೫,೩೨೧
	ಎಲ್ಲಾ ಒಟ್ಟು	೨,೦೩,೧೦೦	೧,೦೮,೦೮೨	೩,೪೭,೮೩೨	೧,೫೭,೪೫೩	೧೨,೦೦,೪೫೭	೨,೫೮,೨೮೦

ಅನುಬಂಧ - ೭

೧೮೮೧ ರಿಂದ ೧೮೮೩ ರವರೆಗಿನ ಮದ್ರಾಸ್ ಪ್ರೆಸಿಡೆನ್ಸಿಯ ಕಾರಾಗೃಹದಲ್ಲಿದ್ದ ಖೈದಿಗಳು ಸಂಖ್ಯೆ, ಪೊಲೀಸ್ ಪಹರೆ ಮತ್ತು ಖರ್ಚುವೆಚ್ಚಗಳ ವಿವರ

ವಲಯ	ಜಿಲ್ಲೆ	ಖೈದಿಗಳ ಸರಾಸರಿ ಸಂಖ್ಯೆ	ಪೊಲೀಸ್ ಗಾರ್ಡ್	
			ಸಂಖ್ಯೆ	ಖರ್ಚು ರೂ. ಆ ಪೈ
ಉತ್ತರ ವಲಯ	ಮದ್ರಾಸ್ ನಗರ	೬೭೧	೫೬	೬,೭೩೪- ೦ ೦
	ಗಾಂಜಂ	೫೨೭	೬೩	೪,೭೧೭- ೧೧ - ೭
	ವಿಜಗಪಟ್ನಂ	೩೩೭	೫೧	೪,೪೫೬- ೨ - ೮
	ಜೈಪುರ	–	–	–
	ಗೋದಾವರಿ	೧,೦೦೨	೧೧೦	೧೨,೩೨೮ - ೭ - ೩
	ಕೃಷ್ಣ	೧೩೩	೨೧	೨,೫೬೩ - ೮ - ೬
ಒಟ್ಟು		೧,೬೯೯	೨೨೫	೨೪,೦೬೫ - ೧೪ - ೦
ಕೇಂದ್ರ ವಲಯ	ನೆಲ್ಲೂರು	೧೪೯	೨೯	೩,೩೮೯ - ೫ - ೪
	ಕರ್ನೂಲ್	೮೩	೨೫	೨,೪೩೪ - ೫- ೪
	ಬಳ್ಳಾರಿ	೩೩೬	೮೯	೪,೫೫೭ - ೧೪- ೩
	ಅನಂತಪುರ	–	–	–
	ಕುದ್ದಪ್	೧೨೭	೨೮	೨,೫೭೫ - ೫ - ೪

	ಉತ್ತರಆರ್ಕಾಟ್	೧,೧೦೩	೧೧೮	೧೩,೬೭೫ - ೦ - ೦
	ಚಂಗಲ್‌ಪಟ್	೧೧೭	೨೪	೨,೬೩೩ - ೨ - ೮
	ದಕ್ಷಿಣ ಆರ್ಕಾಟ್	೨೨೦	೨೯	೩,೮೮೮ - ೬ - ೧೦
	ಒಟ್ಟು	೨,೧೩೫	೨೯೨	೩೪,೧೫೩ - ೭ - ೯
ದಕ್ಷಿಣ ವಲಯ	ತಂಜಾವೂರು	೨೩೧	೪೭	೫,೬೭೮ - ೧೦ - ೮
	ತಿರುಚಾನಪಳ್ಳಿ	೯೦೭	೧೨೯	೧೪,೩೧೩ - ೫ - ೪
	ಮದುರೆ	೨೮೪	೩೬	೪,೨೯೦ - ೦ - ೦
	ತಿನ್ನವಳ್ಳಿ	೧೯೧	೨೭	೩,೪೯೧ - ೬ - ೦
	ಸೇಲಂ	೫೨೪	೪೭	೬,೪೬೦ - ೧ - ೪
	ಕೊಯಮುತ್ತೂರು	೧,೦೪೦	೧೧೨	೧೪,೭೫೮ - ೦ - ೦
	ನೀಲ್‌ಗಿರೀಸ್	–	–	–
	ಮಲ್‌ಬಾರ್	೮೯೪	೧೦೪	೧೩,೬೯೨ - ೭ - ೨
	ಸೌತ್‌ಕೆನರ	೧೧೨	೨೧	೨,೩೧೬ - ೮ - ೦
	ಒಟ್ಟು	೪,೧೮೩	೫೨೨	೬೫,೦೦೦ - ೬ - ೬
	ಎಲ್ಲಾ ಒಟ್ಟು	೮,೬೮೮	೧,೦೯೫	೧,೨೯,೯೫೩- ೧೨ - ೩

ಅನುಬಂಧ - ೮

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧ ರಿಂದ ೧೮೮೩ ರವರೆಗೆ ಜ್ಯಾರಿಗೊಳಿಸಿದ ಸಮನ್ಸ್ ಮತ್ತು ವಾರೆಂಟ್‌ಗಳ ವಿವರ

ವಲಯ	ಜಿಲ್ಲೆ	ಪ್ರೊಸೆಸ್	ವಲಯ	ಜಿಲ್ಲೆ	ಪ್ರೊಸೆಸ್
ಉತ್ತರ ವಲಯ	ಮದ್ರಾಸ್ ನಗರ	೧೬,೭೫೫	ಕೇಂದ್ರ ವಲಯ	ನೆಲ್ಲೂರು	೨೦,೨೬೦
	ಗಾಂಜಂ	೩೦,೭೪೬		ಕರ್ನೂಲ್	೧೬,೯೮೩
	ವಿಜಗಪಟ್ನಂ	೩೫,೫೦೪		ಬಳ್ಳಾರಿ	೨೦,೪೬೭
	ಜೈಪುರ	೧,೧೯೬		ಅನಂತಪುರ	೧೩,೯೫೬
	ಗೋದಾವರಿ	೩೫,೫೪೬		ಕುದ್ದಪ್	೧೨,೧೫೪
	ಕೃಷ್ಣ	೧೯,೮೮೩		ಉತ್ತರಆರ್ಕಾಟ್	೩೮,೭೧೧
ಒಟ್ಟು		೧,೨೨,೮೭೫		ಚಂಗಲ್‌ಪಟ್	೨೧,೫೪೦
				ದಕ್ಷಿಣ ಆರ್ಕಾಟ್	೩೧,೨೨೩
			ಒಟ್ಟು		೧,೭೫,೨೯೪

ದಕ್ಷಿಣ ವಲಯ	ತಂಜಾವೂರು	೬೧,೦೦೭
	ತಿರುಚಾನಪಳ್ಳಿ	೨೯,೬೧೨
	ಮದುರೆ	೪೨,೦೭೭
	ತಿನ್ನವಳ್ಳಿ	೨೯,೮೨೯
	ಸೇಲಂ	೩೩,೮೭೨
	ಕೊಯಮುತ್ತೂರು	೨೩,೮೭೫
	ನೀಲ್‌ಗಿರೀಸ್	೨,೬೬೫
	ಮಲ್‌ಬಾರ್	೩೮,೬೬೮
	ಸೌತ್‌ಕೆನರ	೧೫,೨೨೬
ಒಟ್ಟು		೨,೭೬,೮೪೧
ಎಲ್ಲಾ ಒಟ್ಟು		೫,೯೧,೭೬೫

ಅನುಬಂಧ - ೯

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ೧೮೮೧-೮೨-೮೩ ನೇ ಸಾಲಿನಲ್ಲಿ ನಡೆದ ವಿವಿಧ ಅಪರಾಧಗಳ ವಿವರ

ಅಪರಾಧ	ಅಪರಾಧಗಳು ಹೆಚ್ಚಾಗಿರುವ ಜಿಲ್ಲೆಗಳ ಹೆಸರು	೧೯೮೧-೮೨-೮೩ ರಲ್ಲಿ ಸರಾಸರಿ ಪ್ರಕರಣಗಳು
೧) ಕೊಲೆ	ಗಾಂಜಂ	೨೦
	ಜೈಪುರ	೧೭
	ಗೋದಾವರಿ	೧೮
	ಬಳ್ಳಾರಿ	೧೭
	ಕುದ್ದಪ್	೧೯
	ಮದುರೈ	೧೫
	ತಿನ್ನೆವೆಳ್ಳಿ	೧೦
	ಮಲಬಾರ್	೭
೨) ಅಪರಾಧಿಕ ನರಹತ್ಯೆ	ಗಾಂಜಾಂ	೧೦
	ವಿಶಾಖಪಟ್ನಂ	೧೦
	ಮಲ್‌ಬಾರ್	೯
೪) ಡಕಾಯತಿ	ಕರ್ನೂಲ್	೧೪
	ಕುದ್ದಪ್	೧೪
	ಉತ್ತರ ಆರ್ಕಾಟ್	೧೭
	ತಂಜಾವೂರ್	೧೫
	ತಿರುಚಾನಪಳ್ಳಿ	೧೦
	ಮದುರೈ	೯
	ತಿನ್ನೆವೆಲ್ಲಿ	೧೯
೫) ಸುಲಿಗೆ	ವಿಶಾಖಪಟ್ನಂ	೧೩
	ಕೃಷ್ಣ	೧೪
	ಕರ್ನೂರ್	೧೨
	ಬಳ್ಳಾರಿ	೧೬
	ಕುದ್ದಪ್	೨೧
	ಉತ್ತರ ಆರ್ಕಾಟ್	೨೨
	ಮದುರೈ	೧೧
	ಸೇಲಂ	೨೭
	ಕೊಯಮುತ್ತೂರು	೧೦
	ಮಲ್‌ಬಾರ್	೧೫
೬) ರಾಜ್ಯದ ವಿರುದ್ಧ, ಸೇನೆ ಹಾಗೂ ನೌಕಾ ದಳದ ವಿರುದ್ಧ, ಸಾರ್ವಜನಿಕ ಶಾಂತಿಯ ವಿರುದ್ಧ, ಸಾರ್ವಜನಿಕ ನೌಕರರ ವಿರುದ್ಧ ನಡೆದ ಅಪರಾಧಗಳು, ಅಪರಾಧಿಕ ಒಪ್ಪಂದ ದ್ರೋಹ, ನಾಣ್ಯಗಳು ಮತ್ತು ಧರ್ಮಕ್ಕೆ ಸಂಬಂಧಿಸಿದ ಅಪರಾಧಗಳು	ಈ ರೀತಿಯ ಪ್ರಕರಣಗಳು ಪ್ರತೀ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಗಳಲ್ಲಿ ನಡೆದಿರುತ್ತದೆ.	

ಅಪರಾಧ	ಅಪರಾಧಗಳು ಹೆಚ್ಚಾಗಿರುವ ಜಿಲ್ಲೆಗಳ ಹೆಸರು	೧೯೮೧-೮೨-೮೩ ರಲ್ಲಿ ಸರಾಸರಿ ಪ್ರಕರಣಗಳು
೩) ಭಾರಿಗಾಯ	ಗಾಂಜಾಂ	೨೭
	ಕೃಷ್ಣ	೨೪
	ನೆಲ್ಲೂರು	೨೧
	ಬಳ್ಳಾರಿ	೨೦
	ಉತ್ತರ ಆರ್ಕಾಟ್	೨೪
	ತಂಜಾವೂರು	೩೨
	ಮದುರೈ	೨೫
	ಸೇಲಂ	೨೫
	ಕೊಯಮುತ್ತೂರು	೨೧
	ಮಲ್‌ಬಾರ್	೨೪
೭) ಕಾನೂನು ಬದ್ದ ಆದೇಶಗಳ ಉಲ್ಲಂಘನೆ	ತಂಜಾವೂರು	೨೧೮
	ಮದುರೈ	೧೭೧
	ಕೊಯಮುತ್ತೂರು	೧೪೭
	ಮಲ್‌ಬಾರ್	೧೨೭
೮) ಸುಳ್ಳು ಸಾಕ್ಷಿ	ತಂಜಾವೂರು	೪೪
	ಮದುರೈ	೧೪
	ತಿನ್ನವೆಲ್ಲಿ	೧೪
	ಮಲ್‌ಬಾರ್	೧೪
೯) ತೂಕ ಮತ್ತು ಅಳತೆಗೆ ಸಂಬಂಧಿಸಿದ ಅಪರಾಧಗಳು	ತಂಜಾವೂರ್	೨೫
	ಮದುರೈ	೨೨
	ಕೊಯಮುತ್ತೂರು	೧೩
೧೦) ಸಾರ್ವಜನಿಕರ ಆರೋಗ್ಯಕ್ಕೆ ಕುಂದುಂಟುಮಾಡುವ ಅಪರಾಧಗಳು	ಮದುರೈ	೬೮
	ತಂಜಾವೂರ್	೧೨೧
೧೧) ದಸ್ತಾವೇಜು ಗಳಿಗೆ ಸಂಬಂಧಿಸಿದ ಅಪರಾಧಗಳು	ಮದುರೈ	೨೨
	ಮಲ್‌ಬಾರ್	೩೩
	ತಂಜಾವೂರು	೨೨
೧೨) ಮದುವೆಗೆ ಸಂಬಂಧಿಸಿದ ಅಪರಾಧಗಳು	ವಿಶಾಖಪಟ್ನಂ	೧೨೯
೧೩) ಮಾನನಷ್ಟ ಪ್ರಕರಣಗಳು	ಮದ್ರಾಸ್ ನಗರ	೯೭

ಅನುಬಂಧ - ೧೦

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯದಲ್ಲಿದ್ದ ಐ.ಜಿ.ಪಿ ರವರುಗಳ ಪಟ್ಟಿ

ಕ್ರಸಂ	ಹೆಸರು	ರಿಂದ	ರಿಗೆ
೧	ಎಲ್.ರಿಕೇಟ್ಸ್, ಇ.ಎಸ್.ಕ್ಯೂ	೦೧-೧೧-೧೮೮೫	೧೫-೦೫-೧೮೯೨
೨	ವಿ.ಪಿಮಾಧವರಾವ್, ಬಿ.ಎ. ಸಿಐಇ	೧೬-೦೫-೧೮೯೨	೧೭-೦೪-೧೮೯೮
೩	ಎ.ರಂಗಸ್ವಾಮಿ ಅಯ್ಯಂಗಾರ್, ಬಿ.ಎ.ಬಿ.ಎಲ್	೧೮-೦೪-೧೮೯೮	೧೬-೦೬-೧೯೦೧
೪	ಬಿ.ಕೆ.ವೆಂಕಟವರದ ಅಯ್ಯಂಗಾರ್ ಇ.ಎಸ್.ಕ್ಯೂ	೧೭-೦೬-೧೯೦೧	೧೧-೦೮-೧೯೦೨
೫	ಸಿ.ಮಾದಯ್ಯ, ಇ.ಎಸ್.ಕ್ಯೂ	೧೨-೦೮-೧೯೦೨	೧೮-೦೩-೧೯೦೪
೬	ಎಫ್.ಇ.ಸಿ. ಖಾರ್, ಇ.ಎಸ್.ಕ್ಯೂ	೨೯-೦೩-೧೯೦೪	೧೫-೦೩-೧೯೦೮
೭	ಡಿ.ದೇವರಾಜ ಅರಸ್, ಇ.ಎಸ್.ಕ್ಯೂ	೨೩-೦೩-೧೯೦೮	೨೨-೧೨-೧೯೧೧
೮	ಕೆ.ಎಸ್.ದೊರೆಸ್ವಾಮಿ ಅಯ್ಯರ್, ಇ.ಎಸ್.ಕ್ಯೂ	೨೩-೧೨-೧೯೧೧	೧೮-೦೨-೧೯೧೨
೯	ಸಿ.ಶ್ರೀಕಂಠೇಶ್ವರ ಅಯ್ಯರ್, ಬಿ.ಎ. ಬಿ.ಎಲ್	೧೯-೦೨-೧೯೧೨	೩೧-೦೩-೧೯೧೭
೧೦	ಕೆ.ಆರ್.ಶ್ರೀನಿವಾಸ ಅಯ್ಯಂಗಾರ್, ಎಂ.ಎ	೦೧-೦೪-೧೯೧೭	೦೬-೦೬-೧೯೧೮
೧೧	ಮಿರ್ ಹಂಝು ಹುಸೈನ್, ಬಿ.ಎ. ಬಿ.ಎಲ್	೦೭-೦೬-೧೯೧೮	೨೩-೦೩-೧೯೧೯
೧೨	ಎ.ಸುಬ್ರಮಣ್ಯ ಅಯ್ಯರ್. ಬಿ.ಎ	೨೪-೦೪-೧೯೧೯	೦೧-೦೧-೧೯೨೩
೧೩	ಪಿ.ಎಫ್. ಬೌರಿಂಗ್, ಇ.ಎಸ್.ಕ್ಯೂ	೦೨-೦೧-೧೯೨೩	೦೫-೦೪-೧೯೨೭
೧೪	ಎಸ್.ಹಿರಿಯಣ್ಣಯ್ಯ, ಎಂ.ಎ. ಬಿ.ಎಲ್	೦೬-೦೪-೧೯೨೭	೧೮-೧೨-೧೯೨೯
೧೫	ಎ.ಕೆ. ಸೈಯದ್ ತಾಜ್ ಪೀರಾನ್, ಬಿ.ಎ	೧೯-೧೨-೧೯೨೯	೦೩-೦೩-೧೯೩೦
೧೬	ಎಫ್.ಎ. ಹ್ಯಾಮಿಲ್ಟನ್, ಸಿ.ಐ.ಇ	೨೨-೧೦-೧೯೩೦	೦೩-೦೪-೧೯೩೯
೧೭	ಇ.ಜಿ.ಬಿ. ಪೀಲ್, ಸಿ.ಐ.ಇ	೦೪-೦೪-೧೯೩೯	೦೩-೦೪-೧೯೪೨
೧೮	ಎಂ.ಶೇಷಾದ್ರಿ, ಎಂ.ಎ	೦೪-೦೪-೧೯೪೨	೧೬-೦೫-೧೯೪೩
೧೯	ಎ.ಎ. ಖಾನ್. ಬಿ.ಎ	೧೭-೦೫-೧೯೪೩	೨೧-೧೧-೧೯೪೩
೨೦	ಎಸ್.ನಾರಾಯಣ ರಾವ್, ಎಂ.ಎ. ಆನರ್ಸ್	೨೨-೧೧-೧೯೪೩	೦೨-೦೭-೧೯೪೬
೨೧	ಜಿ.ಸುಂದರ ರಾವ್. ಬಿ.ಎ	೦೩-೦೭-೧೯೪೬	೦೭-೦೧-೧೯೪೭
೨೨	ಸಿ.ಎಂ.ಹೆಚ್.ರಂಚೋದ್‌ಸಿಂಗ್, ಬಿ.ಎ	೧೬-೦೧-೧೯೪೭	೧೩-೦೨-೧೯೫೦

ಅನುಬಂಧ - ೧೧

ಸ್ವಾತಂತ್ರ್ಯ ಪೂರ್ವದಲ್ಲಿ ಬೆಂಗಳೂರು ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ವೈ.ಬಿ,ಕೃಷ್ಣಮೂರ್ತಿ ಬಿ.ಎ	೦೧-೦೭-೧೯೦೫	೨೦-೦೫-೧೯೦೬
೨	ಶ್ರೀ.ಎಲ್.ಕೃಷ್ಣರಾವ್	೨೩-೦೫-೧೯೦೬	೨೫-೧೦-೧೯೦೬
೩	ಶ್ರೀ.ಜಿ.ಬಿ.ಹೆಬ್ಬಿಕರ್, ಬಿ.ಎ. ಎಲ್.ಎಲ್.ಬಿ	೨೬-೧೦-೧೯೦೬	೨೫-೧೧-೧೯೦೬
೪	ಶ್ರೀ.ಎಲ್.ಕೃಷ್ಣರಾವ್	೨೬-೧೧-೧೯೦೬	೨೪-೧೦-೧೯೦೭
೫	ದ ಡೆಪ್ಯುಟಿವ್ ಕಮಿಷನರ್	೨೫-೧೦-೧೯೦೭	೨೪-೧೧-೧೯೦೭
೬	ಶ್ರೀ.ಎಲ್.ಕೃಷ್ಣರಾವ್ (ಎಸ್.ಪಿ)	೨೫-೧೧-೧೯೦೭	೦೭-೧೧-೧೯೦೮
೭	ಶ್ರೀ.ಎ.ನಾರಾಯಣ ಅಯ್ಯಂಗಾರ್, (ಸೀನಿಯರ್ ಅಸಿಸ್ಟೆಂಟ್ ಕಮಿಷನರ್)	೦೮-೧೧-೧೯೦೮	೨೨-೧೧-೧೯೦೮
೮	ಶ್ರೀ.ಎಲ್.ಕೃಷ್ಣರಾವ್. (ಎಸ್‌ಪಿ)	೨೩-೧೧-೧೯೦೮	೦೧-೦೨-೧೯೧೦
೯	ಶ್ರೀ.ಎಂ.ಶ್ಯಾಮರಾವ್.ಬಿ.ಎ..ಬಿ.ಎಲ್	೦೨-೦೨-೧೯೧೦	೦೬-೦೨-೧೯೧೦
೧೦	ಶ್ರೀ.ಟಿ.ತುಂಬು ಚೆಟ್ಟಿ, ಬಿ.ಎ	೦೭-೦೨-೧೯೧೦	೨೬-೦೪-೧೯೧೨
೧೧	ಶ್ರೀ.ಆರ್.ಶಾಮರಾವ್. ಬಿ.ಎ. ಬಿ.ಎಲ್	೨೭-೦೪-೧೯೧೨	೩೦-೦೬-೧೯೧೨
೧೨	ಶ್ರೀ.ಟಿ. ತುಂಬು ಚೆಟ್ಟಿ, ಬಿ.ಎ.	೧೯೧೩-೧೪ ಪೂರ್ಣ ವರ್ಷ	
೧೩	ಶ್ರೀ.ಬಿ.ರಾಮಸ್ವಾಮಿ, ಬಿ.ಎ	೧೯೧೪-೧೫ ಪೂರ್ಣ ವರ್ಷ	೦೨-೦೨-೧೯೧೬
೧೪	ಶ್ರೀ.ಎ.ಹಯಾಸ್	೦೩-೦೨-೧೯೧೬	೧೧-೦೮-೧೯೧೮
೧೫	ಶ್ರೀ.ಎಸ್.ರಿಯುಬಿನ್ .ಬಿ.ಎ.	೧೨-೦೮-೧೯೧೮	೩೦-೦೬-೧೯೧೯
೧೬	ಶ್ರೀ.ರಾಮಚಂದ್ರರಾವ್ ಬೊಂಬೇರೆ,	೦೧-೦೭-೧೯೩೦	೦೪-೧೦-೧೯೩೦
೧೭	ಶ್ರೀ.ಎಂ.ಮೆಲ್ಲೂರು	೦೫-೧೦-೧೯೩೦	೩೦-೦೩-೧೯೩೧

ಅನುಬಂಧ - ೧೨

ಸ್ವಾತಂತ್ರ್ಯ ಪೂರ್ವದಲ್ಲಿ ಕೋಲಾರ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀಟಿ..ಕೆ.ಸುಂದರರಾಜ ಅಯ್ಯಂಗಾರ್	೦೧-೦೭-೧೯೦೫	೧೭-೦೭-೧೯೦೫
೨	ಶ್ರೀ.ಎ.ವೇದಾಂತದೇಶಿಗಂ ಅಯ್ಯಂಗಾರ್	೧೮-೦೭-೧೯೦೫	೧೯-೦೯-೧೯೦೬
೩	ಶ್ರೀ.ಎಂ,.ಪಿ.ವಿಶ್ವನಾಥ ರಾವ್	೨೦-೦೯-೧೯೦೬	
೪	ಶ್ರೀ.ಎಂ,.ಪಿ.ವಿಶ್ವನಾಥ ರಾವ್	೦೧-೦೭-೧೯೦೮	೩೦-೦೯-೧೯೦೮
೫	ಶ್ರೀಎ.ವೇದಾಂತ ದೇಶಿಗಂ ಅಯ್ಯಂಗಾರ್ (ಟ್ರೆಜರಿ ಅಸಿಸ್ಟೆಂಟ್‌ಕಮಿಷನರ್)	೦೧-೧೦-೧೯೦೮	೨೧-೧೧-೧೯೦೮
೬	ಶ್ರೀ.ಎಂ.ಪಿ ವಿಶ್ವನಾಥ ರಾವ್ (ಅಸಿಸ್ಟೆಂಟ್ ಎಸ್‌ಪಿ)	೨೨-೧೧-೧೯೦೮	೧೪-೦೨-೧೯೧೦
೭	ಶ್ರೀ.ಡಿ.ಶ್ರೀನಿವಾಸ್ ಅಯ್ಯಂಗಾರ್, ಬಿ.ಎ	೧೫-೦೨-೧೯೧೦	೨೨-೦೬-೧೯೧೦
೮	ಶ್ರೀ.ಸಿ.ವೆಂಕಟರಾವ್ ,ಬಿಎ	೨೩-೦೬-೧೯೧೦	೧೭-೦೧-೧೯೧೨
೯	ಶ್ರೀ.ಎ.ವೇದಾಂತದೇಶಿಗಂ ಅಯ್ಯಂಗಾರ್	೧೮-೦೧-೧೯೧೨	೩೦-೦೬-೧೯೧೨
೧೦	ಶ್ರೀ.ಬಿ.ರಾಮಸ್ವಾಮಯ್ಯ ಬಿ.ಎ.	೦೧-೦೭-೧೯೧೩	೩೧-೧೨-೧೯೧೩
೧೧	ಶ್ರೀ.ಎ.ಮೃತ್ಯುಂಜಯ ಅಯ್ಯರ್, ಬಿ.ಎ	೦೧-೦೧-೧೯೧೪	೨೪-೦೧-೧೯೧೪
೧೨	ಶ್ರೀ.ಸಿ.ದೇವರಾಜ ಅರಸ್	೨೫-೦೧-೧೯೧೪	೧೨-೧೨-೧೯೧೪
೧೩	ಶ್ರೀ.ಎ.ಮೃತ್ಯುಂಜಯ ಅಯ್ಯರ್, ಬಿ.ಎ	೧೩-೧೨-೧೯೧೪	೧೭-೧೨-೧೯೧೪
೧೪	ಶ್ರೀ.ಎಸ್.ರಿಯುಬಿನ್, ಬಿ.ಎ.	೧೮-೧೨-೧೯೧೪	೧೨-೦೩-೧೯೧೫
೧೫	ಶ್ರೀ.ಸಿ.ದೇವರಾಜ ಅರಸ್	೧೩-೦೩-೧೯೧೫	೧೮-೧೧-೧೯೧೫
೧೬	ಶ್ರೀ.ರಾಮರಾವ್, ಬಿ.ಎ.ಬಿ.ಎಲ್	೧೯-೦೧-೧೯೧೫	೩೦-೦೬-೧೯೧೬
೧೭	ಶ್ರೀ.ಆರ್.ಶ್ಯಾಮರಾವ್. ಬಿ.ಎ. ಬಿ.ಎಲ್	ಪೂರ್ಣ ವರ್ಷ ೧೯೧೭	
೧೮	ಶ್ರೀ ಸಿ. ನಾರಾಯಣ ರಾವ್. ಬಿ.ಎ. ಬಿ.ಎಲ್	೦೧-೦೭-೧೯೧೮	೨೬-೧೧-೧೯೧೮
೧೯	ಶ್ರೀ.ಅಬ್ದುಲ್ ಹುಕ್, ಬಿ.ಎ	೨೭-೧೧-೧೯೧೮	೦೯-೧೨-೧೯೧೮
೨೦	ಶ್ರೀ ಸಿ. ನಾರಾಯಣ ರಾವ್. ಬಿ.ಎ. ಬಿ.ಎಲ್	೧೦-೧೨-೧೯೧೮	೩೦-೦೬-೧೯೧೯
೨೧	ಶ್ರೀ.ಸಫ್‌ದರ್ ಹುಸೈನ್	೧೯೩೦-೩೧	ಪೂರ್ಣ ವರ್ಷ

ಅನುಬಂಧ - ೧೩

ಸ್ವಾತಂತ್ರ್ಯ ಪೂರ್ವದಲ್ಲಿ ಕೆ.ಜಿ.ಎಫ್ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಪಿ.ಬಿ,.ತೋಮಸ್	೦೧-೦೭-೧೯೦೫	೧೧-೧೨-೧೯೦೫
೨	ಶ್ರೀ.ಪಿ.ಬಿ,.ತೋಮಸ್	೦೧-೦೭-೧೯೦೭	೩೧-೦೮-೧೯೦೭
೩	ಶ್ರೀ.ಎಸ್.ಎಂ.ಪ್ರಿಚಂಡಿ	೦೧-೦೯-೧೯೦೭	೩೦-೦೬-೧೯೦೮
೪	ಶ್ರೀ.ಆರ್.ವಿ.ಪ್ಲಮೇರ್	೧೨-೧೨-೧೯೦೫	೨೨-೧೨-೧೯೦೫
೫	ಶ್ರೀ.ಐ.ಇ.ಡೇವಿಡ್	೨೩-೧೨-೧೯೦೫	೦೬-೦೧-೧೯೦೬
೬	ಶ್ರೀ.ಆರ್.ವಿ.ಪ್ಲಮೇರ್	೦೭-೦೧-೧೯೦೬	೧೭-೦೨-೧೯೦೬
೭	ಶ್ರೀ.ಐ.ಇ.ಡೇವಿಡ್	೧೮-೦೨-೧೯೦೬	೨೬-೦೩-೧೯೦೬
೮	ಶ್ರೀ.ಆರ್.ವಿ.ಪ್ಲಮೇರ್	೨೭-೦೩-೧೯೦೬	೩೦-೦೪-೧೯೦೬
೯	ಶ್ರೀ.ಆರ್.ಜೆ.ಎಂ.ಮೈನೇ	೦೧-೦೫-೧೯೦೬	೧೬-೧೨-೧೯೦೬
೧೦	ಶ್ರೀ.ಪಿ.ಬಿ ತೋಮಸ್	೧೭-೧೨-೧೯೦೬	೩೦-೦೬-೧೯೦೭
೧೧	ಶ್ರೀ.ಸ್ಯಾಂಡಿ ಎಂ.ಪ್ರಿಕ್ಚರ್ಡ್	೦೧-೦೭-೧೯೦೯	೦೨-೦೫-೧೯೧೦
೧೨	ಶ್ರೀ.ವೆಂಕಟರಾವ್ ಬಿ.ಎ.	೦೩-೦೫-೧೯೧೦	೦೬-೦೬-೧೯೧೦
೧೩	ಶ್ರೀ.ಸ್ಯಾಂಡಿ ಎಂ.ಪ್ರಿಕ್ಚರ್ಡ್	೦೭-೦೬-೧೯೧೦	೩೦-೦೬-೧೯೧೦
೧೪	ಶ್ರೀ.ಸ್ಯಾಂಡಿ ಎಂ.ಪ್ರಿಕ್ಚರ್ಡ್	೦೧-೦೭-೧೯೧೧	೦೮-೦೩-೧೯೧೨
೧೫	ಶ್ರೀ.ವೇದಾಂತದೇಶಿಗಂ ಅಯ್ಯಂಗಾರ್	೦೯-೦೩-೧೯೧೨	೨೩-೦೩-೧೯೧೨
೧೬	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೨೪-೦೩-೧೯೧೨	೩೦-೦೬-೧೯೧೨
೧೭	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೦೧-೦೭-೧೯೧೩	೨೪-೧೦-೧೯೧೩
೧೮	ಶ್ರೀ.ಎಫ್.ಎಸ್.ರಾಘವಾಚಾರ್, ಬಿ.ಎ.	೨೫-೧೦-೧೯೧೩	೨೪-೧೧-೧೯೧೩
೧೯	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೨೫-೧೧-೧೯೧೩	೩೦-೦೬-೧೯೧೧
೨೦	ಶ್ರೀ.ವೆಂಕೋಬರಾವ್, ಬಿ.ಎ. ಬಿಎಲ್	೨೦-೧೧-೧೯೧೫	೧೧-೧೨-೧೯೧೫
೨೧	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೧೨-೧೨-೧೯೧೫	೧೫-೦೮-೧೯೧೬
೨೨	ಶ್ರೀ.ಬಿ.ವೆಂಕೋಬರಾವ್, ಬಿ.ಎ.	೧೬-೧೦-೧೯೧೫	೧೯-೧೦-೧೯೧೬
೨೩	ಶ್ರೀ.ಎ.ವೇಂದಾಂತದೇಶಿಗಂ ಅಯ್ಯಂಗಾರ್	೨೦-೧೦-೧೯೧೬	೧೪-೧೧-೧೯೧೬
೨೪	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೧೫-೧೧-೧೯೧೬	೨೦-೦೫-೧೯೧೭
೨೫	ಶ್ರೀ.ಸಿ.ಎವೆರಾರ್ಡ್	೨೧-೦೫-೧೯೧೭	೩೦-೦೬-೧೯೧೭
೨೬	ಶ್ರೀ.ಆರ್.ಶಾಮರಾವ್. ಬಿ.ಎ. ಬಿ.ಎಲ್	೦೧-೦೭-೧೯೧೮	೧೩-೧೦-೧೯೧೮
೨೭	ಶ್ರೀ.ಎಸ್.ಎಂ.ಪ್ರಿಕ್ಚರ್ಡ್	೧೪-೧೦-೧೯೧೮	೩೦-೦೬-೧೯೧೯

ಅನುಬಂಧ - ೧೪

೧೮೦೬ ರಲ್ಲಿ ಮತ್ತು ೧೮೦೮ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪೊಲೀಸ್ ಸಿಬ್ಬಂದಿಗಳ ಬಲದ ವಿವರ

ಸಂ	ಹುದ್ದೆ	ಹೆಸರುಗಳು	ಮಾಸಿಕ ವೇತನ			ಒಟ್ಟು		
			ಸ್ಟಾ	ಫ	ಕಾ	ಸ್ಟಾ	ಫ	ಕಾ
೧	ಸುರ್‌ದರ್	ಅಜ್ಮುದ್ದೀನ್	೧೦	–	–	೧೦	–	–
			ಬಾರ್‌ಕೂರ್ ತಾಲೂಕು					
೧	ಜಮೇದಾರ್	–	೪	–	–			
೨	ದಫೇದಾರ್	–	೪	–	–			
೩೦	ಪೀವನ್	ಎಲ್ಲಾ ಹುದ್ದೆಗಳು ಭರ್ತಿಯಾಗಿದ್ದವು	೪೨	೩೬	–	೫೦	೩೬	–
			ಮಂಗಳೂರು ತಾಲೂಕು					
೧	ಜಮೇದಾರ್	ಸೂಬ್‌ನಾಯಕ್	೪	–	–			
೨	ಸುಬೇದಾರ್	ರಾಮನಾಯಕ್ ಮತ್ತು ಗುರುನಾಯಕ್	೪	–	–			
೩೦	ಪೀವನ್	ಎಲ್ಲಾ ಹುದ್ದೆಗಳು ಭರ್ತಿಯಾಗಿದ್ದವು	೪೨	೩೬	–	೫೦	೩೬	–
			ಬಂಟ್ವಾಳ ತಾಲೂಕು					
೧	ಜಮೇದಾರ್	ಜಸ್ವಂತ್ ಸಿಂಗ್	೪	–	–			
೨	ದಫೇದಾರ್	ಬುವನ್ ಸಿಂಗ್ ಮತ್ತು ರಾಂಪ	೪	–	–			
೩೦	ಪೀವನ್	ಎಲ್ಲಾ ಹುದ್ದೆಗಳು ಭರ್ತಿಯಾಗಿದ್ದವು	೪೨	೩೬	–	೫೦	೩೬	–
			ಬೇಕಲ ತಾಲೂಕು					
೧	ಜಮೇದಾರ್	ಶೇಖ್‌ಚಾಂದ್	೪	–	–			
೨	ದಫೇದಾರ್	ಬುಂದೇಖಾನ್ ಮತ್ತು ಜನ್ಸರ್‌ಖಾನ್	೪	–	–			
೩೦	ಪಿವನ್	ಎಲ್ಲಾ ಹುದ್ದೆಗಳು ಭರ್ತಿ ಯಾಗಿದ್ದವು	೪೨	೩೬	–	೫೦	೩೬	–

ಅನುಬಂಧ – ೧೫

೧೮೦೬ ರಲ್ಲಿ ಮತ್ತು ೧೮೦೮ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪೊಲೀಸ್ ಸಿಬ್ಬಂದಿಗಳ ಸಂಬಳದ ವಿವರ

ಸಂ	ಹುದ್ದೆ	ತಿಂಗಳ ಖರ್ಚು			ವಾರ್ಷಿಕ ಖರ್ಚು		
		ಸ್ಟಾ	ಫ	ಕಾ	ಸ್ಟಾ	ಫ	ಕಾ
೧	ದರೋಗ	೮	–	–	೯೬	–	–
೧	ಮುತ್ಸದ್ದಿ	೪	–	–	೪೮	–	–
೨	ದಫೇದಾರ್	೬	–	–	೭೨	–	–
	ತಲಾ ೩ ಪಗೋಡದಂತೆ						
೪೫	ನಾಯಕ್ಸ್	೭೭	೬	೩೪	೯೨೫	೩೨	೮
	ತಲಾ ೧–೩೨–೧೧೧/೨ ರಂತೆ						
೧೬೨	ಪೀವನ್	೨೦೨	೧೨	೩೮ ೧/೨	೨೪೯೯	೧೯	೨೨
	ತಲಾ ೧–೧೨–೬೮೧/೨ ರಂತೆ						
	ಒಟ್ಟು ಸ್ಟಾರ್ ಪಗೋಡ	೩೦೩	೧೯	೨೨ ೧/೨	೩೬೪೧	೬	೩೦
	ಹಿಂದಿನ ವಾರ್ಷಿಕ ಖರ್ಚು				೪೬೮೦	–	–
	ಇಳಿಕೆ				೧೦೩೮	೩೮	೫೦
	ದ.ಕ ಜಿಲ್ಲೆಯ ಪ್ರಸ್ತಾವಿತ ಕೊತ್ವಾಲ ಸಿಬ್ಬಂದಿಗಳ ಸಂಖ್ಯೆ						
		ಮಂಗಳೂರು					
೧	ಕೊತ್ವಾಲ	೩	–	–	೩೬	–	–
೬	ಪೀವನ್	೭	೩೨	೧೧ ೧/೪	೯೨	೩೫	೫೫
	ತಲಾ ೧೨–೬೮ ೪ ರಂತೆ						
		ಜಮ್ಲಾಬಾದ್					
೧	ಕೊತ್ವಾಲ	೨	೩೮	೪೮	೩೪	೧೨	೬೦
೨	ಪೀವನ್	೨	೧೨	೬೮	೨೭	೧೯	೧೬
	ತಲಾ ೧–೬–೩೪ ರಂತೆ						
	ಒಟ್ಟು ಸ್ಟಾರ್ ಪಗೋಡ	೧೫	೩೮	೪೪ ೧/೨	೧೯೦	೧೨	೫೧
	ಹಿಂದಿನ ವಾರ್ಷಿಕ ಖರ್ಚು				೩೫೧	೧೯	೧೬
	ಇಳಿಕೆ				೬೧	೬	೪೫
	ಪ್ರಸ್ತಾವಿತ ಒಟ್ಟು ಪೊಲೀಸ್, ಕೊತ್ವಾಲ, ಪೀವನ್‌ಗಳ ವಾರ್ಷಿಕ ಖರ್ಚು						
	ಪೊಲೀಸ್	೩೦೩	೧೯	೨೨ ೧/೨	೩೬೪೧	೬	೩೦
	ಕೊತ್ವಾಲ ಸಿಬ್ಬಂದಿಗಳು	೧೫	೩೮	೪ ೧/೪	೧೯೦	೧೨	೫೧
	ಕಾರಾಗೃಹಗಳಿಗೆ ಹೆಚ್ಚುವರಿ ಪೀವನ್‌ಗಳು	೩೮	೩೮	೪೫	೪೬೬	೧೨	೬೦
	ಸಮನ್ಸ್ ಜಾರಿಗೆ ಹೆಚ್ಚುವರಿ ಸಿವಿಲ್ ಪೀವನ್‌ಗಳು	೩೦	–	–	೩೬೦	–	–
	ಒಟ್ಟು ಸ್ಟಾರ್ ಪಗೋಡ	೩೮೮	೬	೩೧ ೩/೪	೪೬೫೭	೩೧	೬೧

ಅನುಬಂಧ – ೧೬

೧೮೧೪ ರಲ್ಲಿ ಕೆನರಾ ಜಿಲ್ಲೆಯಲ್ಲಿದ್ದ ಪೊಲೀಸ್ ಹಾಗೂ ಪ್ರಸ್ತಾವಿತ ಪೊಲೀಸ್ ಪಡೆಗಳ ತುಲನಾತ್ಮಕ ಪಟ್ಟಿ

ಸಂ	ಪ್ರಸ್ತಾವಿತ ಪಡೆಯ ವಿವರ	ಮಾಸಿಕ ಸಂಬಳ			ಹಾಲಿ ಇದ್ದ ಸಿಬ್ಬಂದಿ		ಮಾಸಿಕ ಸಂಬಳ			ಏರಿಕೆ			ಇಳಿಕೆ		
		ಸ್ಟಾ	ಫ	ಕಾ	ಸಂ	ಹುದ್ದೆ	ಸ್ಟಾ	ಫ	ಕಾ	ಸ್ಟಾ	ಫ	ಕಾ	ಸ್ಟಾ	ಫ	ಕಾ
	ಮುನ್ಸಿಫಲ್														
೮	ದರೋಗ	೧೬೦	–	–	೧	ದರೋಗ	೮	–	–						
	ತಲಾ ೨೦ ಸ್ಟಾರ್														
	ಪಗೋಡ ದಂತೆ														
೮	ರಾಯ್‌ಸಮ್ಸ್	೪೮	–	–	೧	ಮುತ್ಸದ್ದಿ	೪	–	–						
	ತಲಾ ೬ ಪಗೋಡದಂತೆ														
೧೬	ದಫೇದಾರ್ಸ್	೨೭	೧೯	೨೩		ಪೊಲೀಸ್	೪	೧೨	೬೮						
	೧-೩೨-೧೧				೧	ಸರ್ದ್‌ಸೇನಾ									
	ಪಗೋಡದಂತೆ														
೧೬೦	ಪೀವನ್	೨೦೫	೩೨	೧೧	೨	ದಫೇದಾರ್ಸ್	೬	–	–						
	೧-೧೨-೬೮					ತಲಾ ೩ಸ್ಟಾರ್									
	ಪಗೋಡದಂತೆ					ಪಗೋಡದಂತೆ									
೨೧೪೩	ಪಟೇಲ	೩೦೬	೬	೩೪೩೭೮	೧೦೮	ನಾಯಕ್ಸ್	೧೮೫	೬	೩೪						
	-೬-೩೪ ಪಗೋಡದಂತೆ					ತಲಾ ೧-೩೨-೧೧									
						ಪಗೋಡದಂತೆ									
						ಪೀವನ್	೪೮೬	–	೧						
						ತಲಾ ೧-೧೨-೬೮									
						ಪಗೋಡದಂತೆ									
	ಪೊಲೀಸ್					ಒಟ್ಟು ಸ್ಟಾರ್	೬೯೩	೧೯	೨೩	೨೩೯	೨೫	೫೭			
						ಪಗೋಡ									
೧	ದರೋಗ	೨೦	–	–	೨	ದರೋಗ	೪	೨೫	೫೮						
						ತಲಾ ೨-೧೨-೬೯									
						ಪಗೋಡದಂತೆ									
೧೦	ದಫೇದಾರ್	೨೨	೩೮	೪೬	೬	ಕೊತ್ವಾಲ	೩	೧೯	೨೩						
	ತಲಾ ೨-೧೨-೬೮														
	ಪಗೋಡದಂತೆ														
೧೦೦	ಪೀವನ್	೧೪೨	೩೮	೪೬											
	ತಲಾ ೧-೧೯-೨೩														
	ಪಗೋಡದಂತೆ									೧೮	೩೮	೪೭			
	ಒಟ್ಟು ಸ್ಟಾರ್ ಪಗೋಡ	೯೩೩	–	–											
	ಕೊತ್ವಾಲರ ವ್ಯವಸ್ಥೆ									೨	೩೨	೧೧			
೪	ಕೊತ್ವಾಲರು	೨೦	–	–	೧	ಮುತ್ಸದ್ದಿ									
	ತಲಾ ೫ ಪಗೋಡದಂತೆ														

೧೬	ಪೀವನ್ ತಲಾ ೧-೧೨-೬೮	೨೦	೨೫	೫೬	೧	ದಫೇದಾರ್				೧	೩೨	೧೨			
	ಒಟ್ಟು ಸ್ಟಾರ್ ಪಗೋಡ	೪೦	೨೫	೫೬		ಪೀವನ್ ೬ ತಲಾ ೧-೧೨-೬೮	೭	೩೨	೧೦						
		೯೭೩	೨೫	೫೬		ತಲಾ೧೨, ೧-೬- ೩೪	೧೩	೩೨	೧೦	೨೧	೧೯	೨೦			
						ಒಟ್ಟು ಸ್ಟಾರ್‌ಪಗೋಡ				೪೪	೩೨	೧೦	೪	೬	೩೪
						ಒಟ್ಟು ಸ್ಟಾರ್‌ಪಗೋಡ				೭೩೮	೬ ಏರಿಕೆ	೩೩		ಇಳಿಕೆ	
	ಹಾಲಿ ಸಿಬ್ಬಂದಿ ಒಟ್ಟು ಸ್ಟಾರ್ ಪಗೋಡ	೭೩೮	೬	೨೩						೨೩೯	೨೫	೫೭	೪	೬	೩೪
	ಇಳಿಕೆಯ ಕಡಿತ									೪	೬	೩೪			
	ಮಾಸಿಕ ಏರಿಕೆ									೨೩೫	೬	೩೬			
	ವಾರ್ಷಿಕ ಏರಿಕೆ									೨೮೨೫	೬	೩೬			

ಅನುಬಂಧ – ೧೭

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಡ್ಜ್‌ರ ಅಧೀನದಲ್ಲಿ ೧೮೧೬ ರ ಅಕ್ಟೋಬರ್ ೩೧ ರಂದು ಇದ್ದ ಪೊಲೀಸ್ ಪಡೆಯ ಬಲ ಹಾಗೂ ಸಂಬಳಗಳ ವಿವರಗಳು

ಸಂ	ಹುದ್ದೆ	ಸಂಬಳ		
		ಸ್ಟಾ	ಫ	ಕಾ
೧	ದರೋಗ	೮	–	–
೩	ಸುಬೇದಾರ್	೧೫	–	–
೨	ಕೊತ್ವಾಲ	೯	–	–
೧೦	ಜಮೇದಾರ್ಸ್	೩೭	–	–
೫	ಮುತ್ಸದ್ದಿ	೧೩	–	–
೭೭	ದಫೇದಾರ್ಸ್	೧೮೮	೧೬	೫
೪೨೩	ಪೀವನ್ಸ್	೫೯೭	೩೮	೪೬
೫೨೧	ಒಟ್ಟು	೮೬೮	೯	೫೦
೧	ದರೋಗ	೮	–	–
೨	ಸುಬೇದಾರ್ಸ್	೧೦	–	–
೯	ಜಮೇದಾರ್ಸ್	೩೩	–	–
೬೯	ದಫೇದಾರ್ಸ್	೧೬೭	೯	೫೧
೮೧	ಒಟ್ಟು	೨೧೮	೯	೫೧
೧	ಸುಬೇದಾರ್	೫	–	–
೧	ಮುತ್ಸದ್ದಿ	೩	–	–

೧	ಜಮೇದಾರ್	೪	–	–
೮	ದಫೇದಾರ್ಸ್	೨೧	೬	೩೪
೭೦	ಪೀವನ್ಸ್	೧೦೦	–	–
೮೧	ಒಟ್ಟು	೧೩೩	೬	೩೪
೨	ಕೊತ್ವಾಲ	೯	–	–
೪	ಮುತ್ಸದ್ದಿ	೧೦	–	–
೩೫೩	ಪೀವನ್ಸ್	೪೯೭	೩೮	೪೫
೩೫೯	ಒಟ್ಟು	೫೧೬	೩೮	೪೫

ಅನುಬಂಧ – ೧೮

೧೮೫೪ ರಲ್ಲಿ ಕೆನರಾ ಜಿಲ್ಲೆಯಲ್ಲಿದ್ದ ಪೊಲೀಸ್ ಸಿಬ್ಬಂದಿಗಳ ಬಲ ಹಾಗೂ ಅವರ ಸಂಬಳದ ವಿವರ

	ಆಂಗ್ಲ ಬರಹಗಾರರು		ಮುನ್ಸಿ			ಗುಮಾಸ್ತ			ಪೊಲೀಸ್ ಅಮೀನ		ಕೊತ್ವಾಲ	
	ಸಂಖ್ಯೆ	ಮಾಸಿಕ ವೇತನ ರೂ	ಸಂಖ್ಯೆ	ದರ	ಮಾಸಿಕ ವೇತನ ರೂ	ಸಂಖ್ಯೆ	ದರ	ಮಾಸಿಕ ವೇತನ ರೂ	ಸಂಖ್ಯೆ	ಮಾಸಿಕ ವೇತನ ರೂ	ಸಂಖ್ಯೆ	ಮಾಸಿಕ ವೇತನ ರೂ
ಹುಜೂರ್ ತಾಲೂಕು	೧	೪೦	೧	–	೩೦	೨	೧೪ ಮತ್ತು ೧೫	೨೯	–	–	–	–
ಮಂಗಳೂರು	–	–	೪	–	೩೧ ೧/೨	–	–	–	೧	೩೫	೧	೧೭ ೧/೨
ಬೇಕಲ್	–	–	೪	೧	೩೮	–	–	–	–	–	–	–
ಬಂಟ್ವಾಳ	–	–	೩	೫ ರಿಂದ ೧೫ ರೂ	೨೯	–	–	–	೧	೩೫	–	–
ಪುತ್ತೂರು	–	–	೨	–	೧೬ ೧/೨	–	–	–	–	–	–	–
ಉಡುಪಿ	–	–	೧	–	೯	–	–	–	–	–	–	–
ಬಾರ್ಕೂರು	–	–	೨	–	೧೮	–	–	–	–	–	–	–
ಕುಂದಾಪುರ	–	–	೩	–	೨೨	–	–	–	–	–	–	–
ಹೊನ್ನೊರೆ	–	–	೨	–	೧೭ ೧/೨	–	–	–	೧	೩೫	೧	೧೭ ೧/೨
ಅಂಕೋಲ	–	–	೪	–	೩೪	–	–	–	–	–	–	–
ಸೂಪ	–	–	೪	–	೩೦	–	–	–	–	–	–	–
ಸೊಂದ	–	–	೧	–	೧೦ ೧/೨	–	–	–	–	–	೧	೧೭ ೧/೨
ಬಿಳಗಿ	–	–	೧	–	೯	–	–	–	–	–	–	–
ಒಟ್ಟು	–	–	೩೧	–	೨೬೫	–	–	–	೩	೧೦೫	೩	೫೨ ೧/೨
ಎಲ್ಲಾ ಒಟ್ಟು	೧	೪೦	೩೨	–	೨೯೫	೨	–	೨೯	೩	೧೦೫	೩	೫೨ ೧/೨

	ಶಾನ್‌ಬಾಗ್		ದಫ್ತರ್‌ಬಂದ್			ದಫೇದಾರ್ಸ್			ಪೀವನ್ಸ್			ಒಟ್ಟು	
	ಸಂ	ಮಾಸಿಕ ವೇತನ	ಸಂ	ದರ	ವಾಸಿಕ ವೇತನ	ಸಂ	ದರ	ಮಾಸಿಕ ವೇತನ	ಸಂ	ದರ	ಮಾಸಿಕ ವೇತನ	ಸಂ	ಮೊತ್ತ
ಹುಜೂರ್ ತಾಲೂಕು	–	–	–	–	–	–	–	––	–	–	–	೪	೯೯
ಮಂಗಳೂರು	೧	೭	–	–	–	೩	–	೨೪	೫೦	–	೨೧೮ ೧/೨	೬೦	೩೩೩ ೧/೨
ಬೇಕಲ್	–	–	–	–	–	೭	–	೫೬	೪೨		೧೬೮	೫೩	೨೬೨
ಬಂಟ್ವಾಳ	–	–	–	–	–	೬	–	೪೮	೩೯	–	೧೬೦	೪೯	೨೭೨
ಪುತ್ತೂರು	–	–	೧		೫	೮		೫೮	೩೯		೧೫೬	೫೦	೨೩೫ ೧/೨
ಉಡುಪಿ	–	–	೧		೬	೩		೨೪	೧೯		೭೬	೨೪	೧೧೫
ಬಾರ್‌ಕೂರು	–	–	–		–	೪		೩೨	೨೪		೯೬	೩೦	೧೪೬
ಕುಂದಾಪುರ	–	–	–	–	–	೪		೩೨	೩೯		೧೫೮	೪೬	೨೨೨
ಹೊನ್ನೊರೆ	–	–	–	–	–	೭		೫೬	೪೧		೧೬೭	೫೨	೨೯೩
ಅಂಕೋಲ	–	––	–	–	–	೬		೪೮	೫೦		೨೦೦	೬೦	೨೮೨
ಸೂಪ	–	–	೧	–	೮	೧೪	–	೧೧೨	೧೧೦	–	೪೮೭ ೧/೨	೧೨೯	೬೩೭ ೧/೨
[illegible]	–	–	೧	–	೬	೧೨	–	೯೫	೮೬	–	೩೭೦	೧೦೧	೪೯೯
ಒಳಗೆ	–	–	–	–	–	೪	–	೩೪ ೧/೨	೨೬	–	೧೧೨	೩೧	೧೫೫ ೧/೨
ಒಟ್ಟು	೧	೭	೪	–	೨೫	೭೮	–	೬೧೯ ೧/೨	೫೬೫	–	೨೩೬೯	೬೮೫	೩೪೪೩
ಎಲ್ಲಾ ಒಟ್ಟು	೧	೭	೪	–	೨೫	೭೮	–	೬೧೯ ೧/೨	೫೬೫	–	೨೩೬೯	೬೮೯	೩೫೪೨

ಹುದ್ದೆ									ಏರಿಕೆ				ಇಳಿಕೆ			
	ಸಂ	ಸ್ಟಾ	ಫ	ಕಾ	ಸಂ	ಸ್ಟಾ	ಫ	ಕಾ	ಸಂ	ಸ್ಟಾ	ಫ	ಕಾ	ಸಂ	ಸ್ಟಾ	ಫ	ಕಾ
ದರೋಗ	೧	೮	–	–	–	–	–	–	–	–	–	–	೧	೮	–	–
ಸುಬೇದಾರ್	೩	೧೫	–	–	–	–	–	–	–	–	–	–	೩	೧೫	–	–
ಜಮೇದಾರ್	೧೦	೩೭	–	–	–	–	–	–	–	–	–	–	೧೦	೩೭	–	–
ಕೊತ್ವಾಲ	೨	೯	–	–		೨	೯	–	–	–	–	–	–	–	–	–
ಮುತ್ಸದ್ದಿ	೫	೧೩		–	–	೨	೭	–	–	–	–	–	೩	೬	–	–
ದಫೇದರ್ಸ್	೭೭	೧೮೮	೧೬	೫	೭೦	೧೭೦	೯	೫೧	–	–	–	–	೭	೧೮	೬	೩೪
ಪೀವನ್ಸ್	೪೨೩	೫೯೭	೩೮	೪೫	೩೬೩	೫೧೨	೨೮	೪೭	–	–	–	–	೬೦	೮೪	೪೪	೭೮
ಒಟ್ಟು	೫೨೧	೮೬೮	೯	೫೦	೪೩೭	೬೯೯	೩	೧೮	–	–	–	–	೮೪	೧೬೯	೬	೩೨

ಅನುಬಂಧ – ೧೯

ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರಸಂ	ಹೆಸರು	ರಿಂದ
೧	ಶ್ರೀ. ಕರ್ನಲ್ ಹೆನ್‌ಕಿನ್ಸ್	೦೪-೧೦-೧೮೬೦
೨	ಶ್ರೀ. ಕರ್ನಲ್. ಜೆ.ಇ.ಬೆಯಿಲಿ	೨೪-೦೩-೧೮೬೨
೩	ಶ್ರೀ.ಕ್ಯಾಪ್ಟನ್ ಆರ್.ಸಿ.ಜನ್‌ಕಿನ್ಸ್	೨೭-೦೬-೧೮೬೪
೪	ಶ್ರೀ.ಕೆಸ್ಟ್ರೈ	೨೮-೦೪-೧೮೬೬
೫	ಶ್ರೀ.ಕ್ಯಾಪ್ಟನ್ ಆರ್.ಸಿ. ಜೆನ್‌ಕಿನ್ಸ್	೦೬-೦೪-೧೮೬೭
೬	ಶ್ರೀ.ಮೇಜರ್ .ಜೆ. ಪಿಕ್ಚರ್	೦೧-೦೫-೧೮೭೫
೭	ಶ್ರೀ.ಜಾನ್ ಇವರ್ಟ್ ಇ.ಎ. ಬೋಯ್ಡ್	೧೫-೦೫-೧೮೭೫
೮	ಶ್ರೀ.ಎಸ್.ಪಿ.ಸಿ. ಸ್ಕಾಟ್	೨೪-೦೩-೧೮೮೫
೯	ಶ್ರೀ.ಜಾನ್ ಇವರ್ಟ್ ಇ.ಎ. ಬೋಯ್ಡ್	೧೫-೦೫-೧೮೮೫
೧೦	ಶ್ರೀ.ಓ.ಆರ್.ಜೋನ್ಸ್	೧೫-೦೧-೧೮೮೬
೧೧	ಶ್ರೀ.ಮೇಜರ್.ಇ.ಆರ್.ಹೆಡ್ಜ್‌ಸನ್	೦೫-೦೪-೧೮೮೬
೧೨	ಶ್ರೀ.ಜಾನ್ ಇವರ್ಟ್ ಇ.ಎ. ಬೋಯ್ಡ್	೩೧-೦೧-೧೮೮೭
೧೩	ಶ್ರೀ.ಹೆಚ್.ಡಿ.ರಾಬಿನ್‌ಸನ್	೦೬-೦೪-೧೮೮೭
೧೪	ಶ್ರೀ.ಜೆ.ವೈ.ಫುಲ್‌ರ್ಟನ್	೨೪-೧೦-೧೯೮೭
೧೫	ಶ್ರೀ.ಎಡ್ವರ್ಡ್ ಎಡ್‌ಫೀಲ್ಡ್	೨೨-೦೫-೧೮೮೮
೧೬	ಶ್ರೀ.ಹೆಚ್.ಡಿ.ರಾಬಿನ್‌ಸನ್	೨೭-೦೧-೧೮೮೯
೧೭	ಶ್ರೀ.ಎಪ್.ಟಿ.ಬಾಗ್‌ವೇ	೧೦-೦೨-೧೮೮೯
೧೮	ಶ್ರೀ.ಹೆಚ್.ಎಪ್.ವಿಲ್ಕಿಸನ್	೨೯-೦೩-೧೮೮೯
೧೯	ಶ್ರೀ.ಎಪ್.ಟಿ.ಬಾಗ್‌ವೇ	೧೧-೦೫-೧೮೮೯
೨೦	ಶ್ರೀ.ಹೆಚ್.ಸ್ವೀಟ್	೧೯-೧೦-೧೮೮೯
೨೧	ಶ್ರೀ.ಜಾರ್ಜ್	೨೩-೧೧-೧೮೯೧
೨೨	ಶ್ರೀ.ಎ.ಸಿ.ಎಸ್.ವೆಸ್ಟ್	೧೯-೦೯-೧೮೯೨
೨೩	ಶ್ರೀ.ಕರ್ನಲ್ ಹಾಸ್ಕಿನ್ಸ್	೨೩-೧೦-೧೮೯೨
೨೪	ಶ್ರೀ.ಎಸ್.ಪಿ.ಸಿ.ಸ್ಕಾಟ್	೦೪-೦೫-೧೮೯೩
೨೫	ಶ್ರೀ.ಪಿ.ಎಸ್.ಮಿಲ್ಲರ್	೧೯-೦೯-೧೮೯೩
೨೬	ಶ್ರೀ.ಎಸ್.ಪಿ.ಸಿ.ಸ್ಕಾಟ್	೧೮-೧೨-೧೮೯೩
೨೭	ಶ್ರೀ.ಎ.ಸಿ.ಎಸ್.ವೆಸ್ಟ್	೦೫-೦೧-೧೮೯೫
೨೮	ಶ್ರೀ.ಎಸ್.ಪಿ.ಸಿ.ಸ್ಕಾಟ್	೦೫-೦೨-೧೮೯೫
೨೯	ಶ್ರೀ.ಬಿ.ಎಂ.ಪೋವಲ್	೧೪-೦೪-೧೮೯೬
೩೦	ಶ್ರೀ.ಎಸ್.ಪಿ.ಸಿ.ಸ್ಕಾಟ್	೧೮-೦೫-೧೮೯೬
೩೧	ಶ್ರೀ.ಜೆ.ಹೆಚ್.ಸ್ಟೊಡರ್ಟ್	೧೧-೦೧-೧೮೯೭
೩೨	ಶ್ರೀ.ಜೆ.ಹೆಚ್.ಹಂಟ್	೧೭-೦೯-೧೮೯೮
೩೩	ಶ್ರೀ.ಸಿ.ಸಿ.ಲಂಗ್ಡನ್	೧೭-೦೬-೧೮೯೯
೩೪	ಶ್ರೀ.ಹೆಚ್.ಇ.ಸುಲಿವನ್	೦೨-೧೨-೧೮೯೯
೩೫	ಶ್ರೀ.ಐ.ಇ.ಡೇವಿಡ್	೦೮-೦೫-೧೯೦೧
೩೬	ಶ್ರೀ.ಎಪ್.ಎಸ್.ಎಸ್. ಜಾರ್ಜ್	೩೦-೦೯-೧೯೦೧
೩೭	ಶ್ರೀ.ಹೆಚ್.ಇ.ಸುಲಿವನ್	೧೨-೧೨-೧೯೦೨
೩೮	ಶ್ರೀ.ಎಪ್.ಎಸ್.ಎಸ್.ಜಾರ್ಜ್	೨೬-೦೨-೧೯೦೪
೩೯	ಶ್ರೀ.ಹೆಚ್.ಇ. ಸುಲಿವನ್	೩೧-೦೩-೧೯೦೪
೪೦	ಶ್ರೀ.ಬಿ.ಎಲ್.ಕೊಂಬೆರ್ಲಾಂಡ್	೨೯-೦೮-೧೯೦೫
೪೧	ಶ್ರೀ.ಹೆಚ್.ಸಿ.ಡೇನಿಯಲ್	೦೮-೧೦-೧೯೦೬
೪೨	ಶ್ರೀ.ಹೆಚ್.ಆರ್.ಜೆ ಹಾಸ್ಟೆಡ್	೦೪-೦೫-೧೯೦೭
೪೩	ಶ್ರೀ. ಇ.ಹೆಚ್.ಜಾನ್ಸ್	೦೧-೦೨-೧೯೦೯
೪೪	ಶ್ರೀ.ಡಬ್ಲ್ಯು.ಹೆಚ್.ಪಿಟ್	೧೮-೦೭-೧೯೦೯
೪೫	ಶ್ರೀ.ಇ.ಬಿ.ಲವ್‌ಲುಕ್	೨೩-೦೯-೧೯೦೯
೪೬	ಶ್ರೀ.ಎ.ಸುಬ್ಬರಾವ್	೨೪-೦೩-೧೯೧೧
೪೭	ಶ್ರೀ.ಎ.ಎಫ್.ಬುಲ್ಕಿ	೧೫-೦೨-೧೯೧೨

೪೮	ಶ್ರೀ.ಎ.ಸುಬ್ಬರಾವ್	೨೬-೦೧-೧೯೧೩
೪೯	ಶ್ರೀ.ಎಂ.ಗೋವಿಂದನ್ ನಾಯರ್	೦೬-೦೪-೧೯೧೫
೫೦	ಶ್ರೀ.ಜಿ.ಎಸ್.ಪಿ.ಪರ್ಸಿವಲ್	೦೫-೦೭-೧೯೧೭
೫೧	ಶ್ರೀ.ಬಾಲಕೃಷ್ಣ ಮೆನನ್	೨೭-೦೪-೧೯೧೮
೫೨	ಶ್ರೀ.ವೆಂಕೋಬರಾವ್	೦೩-೦೫-೧೯೧೮
೫೩	ಶ್ರೀ.ಎಂ.ಬಾಲಕೃಷ್ಣ ಮೆನನ್	೦೮-೦೫-೧೯೧೮
೫೪	ಶ್ರೀ.ಜಿ.ಎಸ್.ಪಿ.ಪರ್ಸಿವಲ್	೧೩-೦೮-೧೯೧೮
೫೫	ಶ್ರೀ.ಜಿ.ಗೋವಿಂದನ್ ನಾಯರ್	೨೩-೦೪-೧೯೧೯
೫೬	ಶ್ರೀ.ಜಿ.ಎಸ್.ಪಿ. ಪರ್ಸಿವಲ್	೦೬-೦೨-೧೯೧೯
೫೭	ಶ್ರೀ.ರಾಮಚಂದ್ರ ಅಯ್ಯರ್	೨೩-೦೯-೧೯೨೧
೫೮	ಶ್ರೀ.ಆರ್.ಜೆ.ಪಿ.ದೌಸನ್	೧೧-೦೩-೧೯೨೨
೫೯	ಶ್ರೀ.ವಿ.ರಾಜಗೋಪಾಲ್ ತುಂಬನ್	೨೨-೦೫-೧೯೨೫
೬೦	ಶ್ರೀ.ಕರುಣಾಕರ ನಾಯರ್	೨೫-೦೨-೧೯೨೫
೬೧	ಶ್ರೀ.ಜೆ.ಎಂ.ಗ್ರೀನ್	೦೭-೧೧-೧೯೨೮
೬೨	ಶ್ರೀ.ಎನ್.ರಾಮಾನುಜ ಅಯ್ಯಂಗಾರ್	೧೧-೦೧-೧೯೨೯
೬೩	ಶ್ರೀ.ರಾಜಗೋಪಾಲ ತುಂಬನ್	೧೫-೦೩-೧೯೩೦
೬೪	ಶ್ರೀ.ಡಬ್ಲ್ಯು.ಹೆಚ್.ರೈಟ್	೨೫-೦೫-೧೯೩೨
೬೫	ಶ್ರೀ.ವಿ.ರಾಮಚಂದ್ರ ಅಯ್ಯರ್	೧೨-೦೪-೧೯೩೩
೬೬	ಶ್ರೀ.ಹೆಚ್.ಜಿ.ಫರ್ನೀರ್ಝ್	೨೦-೧೦-೧೯೩೪
೬೭	ಶ್ರೀ.ಸಿ,.ಆರ್,. ಚರ್ಸ್‌ಲೇ	೨೭-೧೦-೧೯೩೫
೬೮	ಶ್ರೀ.ಜಿ.ಎಸ್.ಹ್ಯಾರಿಸನ್	೧೨-೧೦-೧೯೩೭
೬೯	ಶ್ರೀ.ಜಿ.ಹೆಚ್.ಪಿ.ಬಯ್ಲೀ	೧೮-೦೩-೧೯೩೮
೭೦	ಶ್ರೀ.ಕೆ.ಎಂ.ಹುಸೈನ್	೧೩-೦೬-೧೯೩೮
೭೧	ಶ್ರೀ. ಎಂ.ಜೈನುದ್ದೀನ್	೦೯-೧೧-೧೯೩೮
೭೨	ಶ್ರೀ.ಎಪ್.ಜೆ.ಚಡ್‌ವಿಕ್	೨೪-೦೩-೧೯೪೧
೭೩	ಶ್ರೀ.ಆರ್.ಆರ್.ಬಿ ಟ್ರಸ್‌ಕಾಟ್	೨೮-೦೮-೧೯೪೩
೭೪	ಶ್ರೀ.ಎಫ್.ಜೆ.ಚಡ್‌ವಿಕ್	೦೮-೧೦-೧೯೪೩
೭೫	ಶ್ರೀ.ಬಿ.ಎ.ಹಾರ್ವೇ	೨೧-೦೪-೧೯೪೫
೭೬	ಶ್ರೀ.ಇ.ಎಲ್.ಸ್ಟ್ರಸೇ	೧೬-೦೮-೧೯೪೭

ಅನುಬಂಧ – ೨೦

೧೮೭೪ ರಿಂದ ೧೮೮೨ ರವರೆಗೆ ಬೆಳಗಾಂ ಜಿಲ್ಲೆಯ ಅಪರಾಧಗಳ ವಿವರ

ಅಪರಾಧಗಳು ಮತ್ತು ಶಿಕ್ಷೆ																
ವರ್ಷ	ಕೊಲೆ ಮತ್ತು ಕೊಲೆಯತ್ನ				ಅಪರಾಧಿಕ ನರಹತ್ಯೆ				ಭಾರಿಗಾಯ				ಡಕಾಯತಿ ಮತ್ತು ರಾಬರಿ			
	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ
೧೮೭೪	೨೩	೪೮	೩೧	೬೫	೩	೫	೨	೪೦	೧೯	೬೦	೧೩	೨೨	೪೬	೯೬	೧೭	೧೮
೧೮೭೫	೧೬	೪೮	೧೦	೨೧	೪	೩	೧	೩೩	೪೩	೯೪	೫೬	೬೦	೩೧	೪೮	೯	೧೯
೧೮೭೬	೧೮	೪೨	೨೭	೬೪	೨	೨	೨	೧೦೦	೩೬	೫೯	೩೯	೬೬	೫೭	೨೮೦	೧೫೭	೫೬
೧೮೭೭	೧೮	೩೬	೯	೨೫	೧೩	೨೪	೩	೧೨	೩೬	೫೦	೨೭	೫೪	೫೨	೨೨೦	೧೧೩	೫೧
೧೮೭೮	೨೨	೩೧	೧೫	೪೮	೬	೧೩	೫	೩೮	೧೬	೧೫	೮	೫೩	೬೦	೩೭	೧೮	೪೯
೧೮೭೯	೧೪	೨೩	೧೪	೬೧	೮	೯	೪	೪೪	೩೨	೩೩	೧೧	೩೩	೫೮	೭೮	೪೨	೫೪
೧೮೮೦	೧೬	೩೦	೧೮	೬೦	೭	೭	೫	೭೧	೨೫	೩೬	೨೪	೬೭	೫೭	೮೫	೩೭	೪೪
೧೮೮೧	೧೩	೧೩	೭	೫೪	೩	೫	೪	೮೦	೨೬	೩೮	(೫	೪೦	೪೩	೫೩	೨೩	೫೩
೧೮೮೨	೨೧	೩೩	೨೧	೬೪	೬	೩	೨	೬೭	೨೨	೩೪	೧೭	೫೦	೫೦	೩೯	೪	೧೦
ಒಟ್ಟು	೧೬೧	೩೦೪	೧೫೨	೫೦	೫೨	೭೧	೨೮	೩೯	೨೪೫	೪೧೯	೨೧೦	೫೧	೪೫೨	೯೩೬	೪೨೫	೪೬

ಅಪರಾಧಗಳು ಮತ್ತು ಶಿಕ್ಷೆ											
ವರ್ಷ	ಇತರ ಅಪರಾಧಗಳು				ಒಟ್ಟು				ಆಸ್ತಿಪಾಸ್ತಿ		
	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ	ಪ್ರಕರಣ	ದಸ್ತಗಿರಿ	ಶಿಕ್ಷೆ	ಸರಾಸರಿ	ಕಳವು	ವಶ	ಸರಾಸರಿ
೧೮೭೪	೨೨೭೭	೩೭೬೬	೧೫೫೨	೪೧	೨೩೬೮	೬೯೭೫	೧೬೨೫	೪೭	೬೫೫೨	೨೬೩೩	೪೦
೧೮೭೫	೨೩೭೧	೩೬೧೦	೧೮೧೨	೫೦	೨೪೬೫	೩೮೦೬	೧೮೮೮	೬೧	೩೨೭೭	೧೫೧೧	೪೬
೧೮೭೬	೨೬೮೫	೩೯೨೦	೨೧೮೩	೫೬	೨೭೯೮	೪೩೦೩	೨೪೦೮	೫೬	೩೨೦೭	೧೨೧೮	೩೮
೧೮೭೭	೩೭೮೦	೬೩೭೬	೪೪೨೩	೬೯	೩೯೦೫	೬೭೦೬	೪೬೭೫	೬೮	೬೩೭೭	೪೫೧೯	೭೧
೧೮೭೮	೨೮೫೦	೩೪೩೦	೨೧೯೦	೬೪	೨೯೫೪	೩೫೨೬	೨೩೨೬	೬೬	೫೫೫೦	೪೨೯೨	೭೯
೧೮೭೯	೨೭೮೭	೩೫೩೫	೨೦೬೭	೫೮	೨೩೮೭	೩೬೭೭	೨೧೩೮	೫೮	೫೩೭೮	೨೫೭೪	೪೮
೧೮೮೦	೩೧೯೧	೪೧೬೦	೩೨೫೨	೫೪	೩೨೯೬	೪೩೧೮	೨೩೩೬	೫೪	೩೫೫೫	೧೩೩೭	೩೮
೧೮೮೧	೨೯೯೯	೩೨೩೩	೨೨೨೨	೬೯	೩೦೮೪	೩೩೪೨	೨೨೭೬	೬೮	೨೯೨೦	೧೦೧೫	೩೫
೧೮೮೨	೨೫೬೬	೨೫೫೭	೧೫೧೬	೫೯	೨೬೬೫	೨೬೬೪	೧೫೬೦	೫೯	೨೯೦೨	೧೨೪೦	೪೩
ಒಟ್ಟು	೨೫೫೧೨	೩೪೫೮೭	೨೦೨೨೭	೫೮	೨೬೪೨೨	೩೬೩೧೪	೨೧೦೪೨	೫೮	೩೯೭೧೮	೨೦೩೩೯	೫೧

ಅನುಬಂಧ – ೨೧

ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾಂ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್‌ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಆರ್.ಮೆಕ್‌ವಿರ್	೧೧-೧೨-೧೯೦೪	೦೬-೦೭-೧೯೦೭
೨	ಶ್ರೀ.ಜೆ.ಬಿ.ಎ.ಬಿಡ್ಲೆ	೦೭-೦೭-೧೯೦೭	೧೮-೦೮-೧೯೦೮
೩	ಶ್ರೀ.ಕೆ.ಸಿ.ರುಸನ್	೧೯-೦೯-೧೯೦೯	೦೯-೦೪-೧೯೧೨
೪	ಶ್ರೀ.ಟ್ರಸ್ಟ್‌ಲಿ	೧೦-೦೪-೧೯೧೨	೩೧-೦೫-೧೯೧೬
೫	ಶ್ರೀ.ಜೆ.ವಿ.ಕೊಕೆ	೦೧-೦೬-೧೯೧೬	೨೪-೦೨-೧೯೧೯
೬	ಶ್ರೀ.ಜೆ.ಎಂ.ವೈಟ್	೨೫-೦೨-೧೯೧೯	೦೫-೧೦-೧೯೧೯
೭	ಶ್ರೀ.ಹೆಚ್.ಬಿ.ಕಿಡ್	೦೬-೧೦-೧೯೧೯	೧೬-೦೩-೧೯೨೦
೮	ಶ್ರೀ.ಬಿ.ಎ.ದುಬ್ಯಾಜ್	೧೭-೦೩-೧೯೨೦	೦೧-೦೪-೧೯೨೦
೯	ಶ್ರೀ.ಇ.ಇ.ಟರ್ನರ್	೦೨-೦೪-೧೯೨೦	೧೯-೦೫-೧೯೨೦
೧೦	ಶ್ರೀ.ವಿ.ಸಿ.ಡ್ಯಾನಿಯಲ್	೨೦-೦೫-೧೯೨೦	೦೧-೦೭-೧೯೨೦
೧೧	ಶ್ರೀ.ಇ.ಇ.ಟರ್ನರ್	೦೨-೦೭-೧೯೨೦	೦೫-೦೯-೧೯೨೧
೧೨	ಶ್ರೀ.ಒ.ಸಿ.ಜಿ.ಹ್ಯೊಟರ್	೦೯-೦೯-೧೯೨೧	೨೦-೦೯-೧೯೨೨
೧೩	ಶ್ರೀ.ಡಬ್ಲ್ಯು.ವೈ.ಎಸ್ಟೈನ್	೨೯-೦೯-೧೯೨೨	೨೯-೧೦-೧೯೨೨
೧೪	ಶ್ರೀ.ಒ.ಸಿ.ಜಿ. ಹ್ಯೊಟರ್	೩೧-೧೦-೧೯೨೨	೦೯-೦೫-೧೯೨೩
೧೫	ಶ್ರೀ.ಹೆಚ್.ಸ್ಟೈನ್ಲಿ	೨೮-೦೬-೧೯೨೩	೧೧-೦೩-೧೯೨೬
೧೬	ಶ್ರೀ.ಇ.ಇ.ಟರ್ನರ್	೧೨-೦೩-೧೯೨೬	೧೯-೦೪-೧೯೨೬
೧೭	ಶ್ರೀ.ಇ.ವಿ.ಮೆಸನ್	೨೦-೦೪-೧೯೨೬	೨೬-೧೦-೧೯೨೬
೧೮	ಶ್ರೀ.ಇ.ಇ.ಟರ್ನರ್	೩೧-೧೦-೧೯೨೬	೦೫-೦೩-೧೯೨೭
೧೯	ಶ್ರೀ.ಎಂ.ವಿ.ಕಿಡ್	೦೬-೦೩-೧೯೨೭	೧೯-೦೩-೧೯೩೦
೨೦	ಶ್ರೀ.ಸಿ.ಹೆಚ್.ದೇವಮೊಸ್	೨೦-೦೩-೧೯೩೦	೨೨-೧೦-೧೯೩೦
೨೧	ಶ್ರೀ.ಎಸ್.ಡಬ್ಲ್ಯು.ರವಲ್ನಾಡ್	೨೩-೧೦-೧೯೩೦	೧೩-೦೨-೧೯೩೦
೨೨	ಶ್ರೀ.ಜಿ.ಜಿ.ವಿಲ್ಸನ್	೧೪-೦೨-೧೯೩೦	೨೧-೧೨-೧೯೩೪
೨೩	ಶ್ರೀ.ಬಿ.ಹೆಚ್.ಟೈಲರ್	೦೧-೦೧-೧೯೩೫	೦೫-೦೩-೧೯೩೮
೨೪	ಶ್ರೀ.ಜೆ.ಎ.ರಾಫನ್	೦೬-೦೩-೧೯೩೮	೧೯-೦೧-೧೯೩೯
೨೫	ಶ್ರೀ.ಎ.ಎಸ್.ಹೊಲಂಡ್	೨೦-೦೧-೧೯೩೯	೧೪-೦೨-೧೯೩೯
೨೬	ಶ್ರೀ.ಸಿ.ಬಿ.ರೊಲಾಂಡ್	೧೫-೦೨-೧೯೩೯	೨೬-೦೩-೧೯೩೯
೨೭	ಶ್ರೀ.ವಿ.ಜಿ.ಕಾನೆಟ್ಕರ್	೨೬-೦೩-೧೯೩೯	೦೯-೦೫-೧೯೩೯
೨೮	ಶ್ರೀ.ಜೆ.ಅಬಿರ್ನಲಿ	೧೦-೦೬-೧೯೩೯	೨೪-೦೭-೧೯೩೯
೨೯	ಶ್ರೀ.ವಿ.ಜಿ.ಕಾನೆಟ್ಕರ್	೨೫-೦೭-೧೯೩೯	೨೮-೦೮-೧೯೩೯
೩೦	ಶ್ರೀ.ಆರ್.ಜಿ.ರೋಡಿಗರ್	೨೯-೦೮-೧೯೩೯	೧೧-೦೩-೧೯೪೩
೩೧	ಶ್ರೀ.ಡಿ.ಡಬ್ಲ್ಯು.ಬಿ.ಕರಂಗನ್	೧೨-೦೧-೧೯೪೩	೧೨-೦೩-೧೯೪೪
೩೨	ಶ್ರೀ.ವಿ.ಡಿ.ಮೋರ್	೧೩-೦೩-೧೯೪೪	೦೪-೦೯-೧೯೪೪
೩೩	ಶ್ರೀ.ಸಿ.ಡಬ್ಲ್ಯು.ಇ.ವೆರನ್	೦೫-೦೯-೧೯೪೪	೩೧-೧೨-೧೯೪೭

ಅನುಬಂಧ –೨೨

ಸ್ವಾತಂತ್ರ್ಯ ಪೂರ್ವದಲ್ಲಿ ಬಿಜಾಪುರ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರ.ಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಇಂಗಳೆ	೧೮೯೯	
೨	ಶ್ರೀ.ಬಗಲನಲ್	೧೮೯೯	
೩	ಶ್ರೀ.ಬಿಡ್ಲೆ	೧೮೫೯	
೪	ಶ್ರೀ.ಡಬ್ಲು.ಡಬ್ಲು.ಡ್ರಾ	೧೯೦೦	
೫	ಶ್ರೀ.ಬಿಡ್ಲೆ	೧೯೦೧	೧೯೦೩
೬	ಶ್ರೀ.ಭಂಗಜರ್	ಸದರ	
೭	ಶ್ರೀ.ಲ್ಯಾಮಿಕ್ಸ್		
೮	ಶ್ರೀ.ಬಿಡ್ಲೆ		
೯	ಶ್ರೀ.ಬಡೊಲೆ	೧೯೦೪	೧೯೦೫
೧೦	ಶ್ರೀ.ವಿಲ್ಸನ್	ಸದರ	
೧೧	ಶ್ರೀ.ಬಿಡ್ಲೆ	೧೯೦೬	
೧೨	ಶ್ರೀ.ಜೆ.ಎ.ವಲಿಂಜರ್	೧೯೦೭	
೧೩	ಶ್ರೀ.ಡಬ್ಲು.ಸಿ.ಶೇಪರ್ಡ್	೧೯೦೮	
೧೪	ಶ್ರೀ.ಎ.ಹೆಚ್.ಎಂ.ಓಸ್ತಾನ್		
೧೫	ಶ್ರೀ.ಲ್ಯಾಂಬರ್ಟ್		
೧೬	ಶ್ರೀ.ಡಬ್ಲು.ಎಂ.ಎಫ್.ಕ್ಲರ್ಕ್		
೧೭	ಶ್ರೀ.ಡಬ್ಲು.ಎಂ.ಎಫ.ಕ್ಲರ್ಕ್	೧೯೦೭	೧೯೧೧
೧೮	ಶ್ರೀ.ಡುಬೈಸ್	೧೯೧೧	
೧೯	ಶ್ರೀ.ಹಾಲಂಡ್		
೨೦	ಶ್ರೀ.ಇ.ಇ.ಗ್ರೀನ್		
೨೧	ಶ್ರೀ.ಇ.ಇ.ಗ್ರೀನ್	೧೯೧೨	೧೯೧೩
೨೨	ಶ್ರೀ.ಶಿಂದೆ	೧೯೧೩	
೨೩	ಶ್ರೀ.ಹಾಲಂಡ್		
೨೪	ಶ್ರೀ.ಎ.ಸಿ.ಡನಿಯಲ್		
೨೫	ಶ್ರೀ.ಎ.ಸಿ.ಡನಿಯಲ್	೧೯೧೪	೧೯೧೬
೨೬	ಶ್ರೀ.ಆರ್.ಬಿ.ಬಿ.ಗುಡಿ	೧೯೧೬	
೨೭	ಶ್ರೀ.ಇ.ಪ್ರೀಸ್ಡಲೆ		
೨೮	ಶ್ರೀ.ಇ.ಪ್ರೀಸ್ಡಲೆ	೧೯೧೭	೧೯೧೮
೨೯	ಶ್ರೀ.ಆರ್.ಬಿ.ಬಿ.ಗುಡಿ		
೩೦	ಶ್ರೀ.ಇ.,ಪ್ರೀಸ್ಡಲೆ		
೩೧	ಶ್ರೀ.ರಾವ್ ಬಾಹದ್ದೂರ	೧೯೧೯	
೩೨	ಶ್ರೀ. ಆರ್.ಎಚ್.ಪೇಜ್		
೩೩	ಶ್ರೀ.ಇ.ಪ್ರೀಸ್ಡಲೆ		
೩೪	ಶ್ರೀ.ಆರ್.ಬಿ.ಬಿ.ಗುಡಿ	೧೯೨೦	
೩೫	ಶ್ರೀ.ಗೊರ್ಮನ್ ಇಸ್‌ಕ್ವೆರ್	೧೯೨೧	
೩೬	ಶ್ರೀ.ಪಿ.ಟಿ.ಕಿರ್ಕಪಟ್ರಿಕ್		
೩೭	ಶ್ರೀ.ಪಿ.ಟಿ.ಕಿರ್ಕಪಟ್ರಿಕ್	೧೯೨೨	
೩೮	ಶ್ರೀ.ಎಫ್.ಡಬ್ಲು.ಓ.ಗೊರ್ಮನ್		
೩೯	ಶ್ರೀ.ಆರ್.ಬಿ.ಬಿ.ಗುಡಿ		
೪೦	ಶ್ರೀ.ಇ.ಪ್ರೀಸ್ಡಲೆ	೧೯೨೩	
೪೧	ಶ್ರೀ.ಆರ್.ಬಿ.ಬಿ.ಗುಡಿ	೧೯೨೩	
೪೨	ಶ್ರೀ.ಎಂ.ಟಿ.ಕ್ಯೂ.ಗೊರ್ಮನ್	೧೯೨೮	
೪೩	ಶ್ರೀ.ಡಬ್ಲು.ಡಬ್ಲು.ಚಿಫೋರ್ಡ		
೪೪	ಶ್ರೀ.ಜೆ.ಎ.ಕೌಗಲನ್		
೪೫	ಶ್ರೀ.ಜೆ.ಎ.ಕೌಗಲನ್	೧೯೨೯	
೪೬	ಶ್ರೀ.ಪಿ.ಟಿ.ವ್ಹಿಲಕಿನ್ಸ್	ಸದರ	
೪೭	ಶ್ರೀ.ಎ.ಸಿ.ಜೆ.ಬೈಲೆ	ಸದರ	
೪೮	ಶ್ರೀ.ಎ.ಸಿ.ಜೆಬೈಲೆ	೧೯೩೦	
೪೯	ಶ್ರೀ.ಆರ್.ಬಿ.ಎನ್.ವ್ಹಿ.ತ್ರಿವೇದಿ	ಸದರ	
೫೦	ಶ್ರೀ.ಡಬ್ಲು.ಡಬ್ಲು.ಚಿಫೋರ್ಡ	ಸದರ	
	೧೯೩೧– ೧೯೪೬ ಮಾಹಿತಿ ಇರುವುದಿಲ್ಲ		
೫೧	ಶ್ರೀ.ಇ.ಎಸ್.ಮೊಡಕ್.	೧೯೪೭	೧೯೪೮

ಅನುಬಂಧ – ೨೩

ಸ್ವಾತಂತ್ರ್ಯ ಪೂರ್ವದಲ್ಲಿ ದಾರವಾಡ ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಕ್ಯಾಪ್ಟನ್.ಜಿ.ಜಿ.ತೋಮಸ್	೧೮೫೭	೧೮೫೯
೨	ಶ್ರೀ.ಕ್ಯಾಪ್ಟನ್.ಮೇಜರ್ ಬಾರ್ತೋಲೊಮಿವ್	೧೮೭೨	೧೮೭೪
೩	ಶ್ರೀ.ಕ್ಯಾಪ್ಟನ್ ಮೇಜರ್ ಚಾರ್ಲ್‌ಶೇ	೧೮೭೪	೧೮೮೩
೪	ಶ್ರೀ.ಹೆಚ್.ಎಸ್. ಕ್ಯಾಮೆಲ್	೧೮೮೩	೧೮೮೯
೫	ಶ್ರೀ.ಎಫ್.ಸಿ. ಜೋನ್ಸ್	೧೮೮೯	೧೮೯೨
೬	ಶ್ರೀ.ಜೆ.ಬಿ.ಡಿ.ಆಡಮ್ಸ್	೧೮೯೨	೧೮೯೭
೭	ಶ್ರೀ.ಡಬ್ಲು.ಜೆ.ಹೊಲಂಡ್	೧೮೯೭	೧೮೯೮
೮	ಶ್ರೀ.ಜೆ.ಬಿ.ಡಿ.ಆಡಮ್ಸ್	೧೮೯೮	೧೮೯೯
೯	ಶ್ರೀ.ಇ.ಸಿ.ಕೊಕ್ಸ್	೧೮೯೯	೧೯೦೧
೧೦	ಶ್ರೀ.ಜೆ.ಎನ್.ಫೆಲೋಸ್	೧೯೦೧	೧೯೦೨
೧೧	ಶ್ರೀ.ಡಿಗ್‌ಬೈ ಡೇವಿಸ್	೧೯೦೨	೧೯೦೬
೧೨	ಶ್ರೀ.ಡಬ್ಲು.ಎ.ಡುಬ್ಯೋಸ್	೧೯೦೭	೧೯೦೯
೧೩	ಶ್ರೀ.ಆರ್.ಎಂ.ಪಿಲಿಪ್ಸ್	೧೯೧೦	೧೯೧೨
೧೪	ಶ್ರೀ.ಹೆಚ್.ಆರ್.ಹುಮೆ	೧೯೧೩	೧೯೧೩
೧೫	ಶ್ರೀ.ಡಬ್ಲು.ಬಿ.ಮನ್ಲೆ	೧೯೧೩	೧೯೧೪
೧೬	ಶ್ರೀ.ಜಿ.ಹೆಚ್.ವೈಟ್	೧೯೧೪	೧೯೧೬
೧೭	ಶ್ರೀ.ಡಿ.ಜೆ.ಒಮ್ಮಾನೀನೇ	೧೯೧೬	೧೯೧೭
೧೮	ಶ್ರೀ.ಡಬ್ಲು.ಸಿ.ಹೊಲಿಮನ್	೧೯೧೭	೧೯೧೯
೧೯	ಶ್ರೀ.ಡಬ್ಲು.ಬಿ.ಮನ್ಲೇ	೧೯೧೯	೧೯೧೯
೨೦	ಶ್ರೀ.ಪ್ರಿಸ್ಲಿ	೧೯೨೦	೧೯೨೧
೨೧	ಶ್ರೀ.ಸಿ.ಎಸ್.ಮಾರ್‌ಸ್ಟನ್	೧೯೨೧	೧೯೨೨
೨೨	ಶ್ರೀ.ಇ.ಪ್ರಿಸ್ಲಿ.	೧೯೨೩	೧೯೨೭
೨೩	ಶ್ರೀ.ಎ.ಎಸ್. ಹೂಲಂಡ್	೧೯೨೭	೧೯೩೦
೨೪	ಶ್ರೀ.ಹೆಚ್.ಬಿ.ಕಿಡ್ಡ್	೧೯೩೧	೧೯೩೧
೨೫	ಶ್ರೀ.ಆರ್.ಸಿ. ರೋಡ್ಗರ್	೧೯೩೨	೧೯೩೨
೨೬	ಶ್ರೀ.ಜೆ.ಎ.ಬೆರ್‌ಬೆತ್ತಿ	೧೯೩೩	೧೯೩೩
೨೭	ಶ್ರೀ.ಪಿ.ಎಂ.ಸ್ಟಿವರ್ಟ್	೧೯೩೪	೧೯೩೪
೨೮	ಶ್ರೀ.ಜಿ.ವ.ಪರಾಂಟ್	೧೯೩೪	೧೯೩೭
೨೯	ಶ್ರೀ.ಜೆ.ಟಿ.ಥನ್ನೆರ್	೧೯೩೭	೧೯೩೮
೩೦	ಶ್ರೀ.ಬಿ.ಎ.ಡುಬೈಸ್	೧೯೩೮	೧೯೩೮
೩೧	ಶ್ರೀ.ಪಿ.ಎಂ.ಸ್ಟಿವರ್ಟ್	೧೯೩೮	೧೯೪೨
೩೨	ಶ್ರೀ.ಹೆಚ್.ಎಸ್.ಮೆಗ್ಯುಗನ್	೧೯೪೨	೧೯೪೨
೩೩	ಶ್ರೀ.ಎನ್.ಎಂ.ಕಮ್ಪೆ	೧೯೪೨	೧೯೪೫
೩೪	ಶ್ರೀ.ಎಲ್.ಎ.ಪಡ್ಡೋನ್ರೋ	೧೯೪೫	೧೯೪೫
೩೫	ಶ್ರೀ.ಹೆಚ್.ಎಸ್. ಮೆಗ್ಯುಗನ್	೧೯೪೫	೧೯೪೭

ಅನುಬಂಧ – ೨೪

೧೯೦೫–೦೬ ರಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಮುಖ್ಯಠಾಣೆಗಳು, ಉಪಠಾಣೆಗಳು ಹಾಗೂ ಉಕ್ಕಡಗಳ ಸಂಖ್ಯೆ

ಜಿಲ್ಲೆಗಳು	ಮುಖ್ಯಠಾಣೆಗಳು	ಉಪಠಾಣೆಗಳು	ಉಕ್ಕಡಗಳು	ಒಟ್ಟು
ಬೆಂಗಳೂರು	೧೨	೫೪	೫	೭೧
ಕೋಲಾರ	೧೧	೩೨	೫	೪೮
ತುಮಕೂರು	೧೫	೫೩	೫[illegible]	೧೨೩
ಮೈಸೂರು	೯	೪೫	೪[illegible]	೮೧
ಫ್ರೆಂಚರಾಕ್	೬	೩೧	೫	೪೨
ಹಾಸನ	೧೦	೩೫	೧[illegible]	೫೬
ಶಿವಮೊಗ್ಗ	೨೦	೧೧	೪[illegible]	೭೬
ಕಡೂರು	೯	೨೯	೧[illegible]	೫೪
ಚಿತ್ರದುರ್ಗ	೧೧	೫೪	೧[illegible]	೭೭
ಕೆ.ಜಿ.ಎಫ್	೫	೧೪	೪	೨೩
ಬೆಂಗಳೂರು ನಗರ	೧	೬	–	೭
ಮೈಸೂರು ನಗರ	೧	೮	–	೯
ಒಟ್ಟು	೧೦೩	೩೭೩	೧೮[illegible]	೬೬೭

ಅನುಬಂಧ – ೨೫

೧೯೦೬–೦೭ ರಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಮುಖ್ಯಠಾಣೆಗಳು, ಉಪಠಾಣೆಗಳು ಹಾಗೂ ಉಕ್ಕಡಗಳ ಸಂಖ್ಯೆ

ಜಿಲ್ಲೆಗಳು	ಮುಖ್ಯಠಾಣೆಗಳು	ಉಪಠಾಣೆಗಳು	ಉಕ್ಕಡಗಳು	ಒಟ್ಟು
ಬೆಂಗಳೂರು	೧೨	೫೪	೫	೭೧
ಕೋಲಾರ	೧೧	೩೨	೫	೪೮
ತುಮಕೂರು	೧೩	೫೩	೫[illegible]	೧೨೩
ಮೈಸೂರು	೯	೪೬	೨[illegible]	೭೮
ಫ್ರೆಂಚರಾಕ್	೭	೩೧	೧	೩೯
ಹಾಸನ	೧೦	೩೫	೧[illegible]	೫೫
ಶಿವಮೊಗ್ಗ	೨೧	೧೦	೪[illegible]	೭೬
ಕಡೂರು	೯	೨೬	೨[illegible]	೫೫
ಚಿತ್ರದುರ್ಗ	೧೧	೫೪	೩	೬೮
ಕೆ.ಜಿ.ಎಫ್	೫	೧೪	೪	೨೩
ಬೆಂಗಳೂರು ನಗರ	೧	೬	–	೭
ಮೈಸೂರು ನಗರ	೧	೮	–	೯
ಒಟ್ಟು	೧೧೦	೧೬೯	೧೭[illegible]	೬೫೨

ಅನುಬಂಧ – ೨೬

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ನಗರಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಮೊಹಮ್ಮದ್ ಜಾಫರ್ ಮೇಕ್ರಿ	೦೧–೦೭–೧೯೧೩	೦೨–೦೯–೧೯೧೩
೨	ಶ್ರೀ.ಸಿ.ದೇವರಾಜ್ ಅರಸ್	೦೩–೦೯–೧೯೧೩	೨೦–೦೧–೧೯೧೪
೩	ಶ್ರೀ.ಸಿ.ನಾರಾಯಣ ರಾವ್	೨೧–೦೧–೧೯೧೪	೧೮–೦೨–೧೯೧೪
೪	ಶ್ರೀ.ಮೊಹಮ್ಮದ್ ಜಾಫರ್ ಮೇಕ್ರಿ	೧೯–೦೨–೧೯೧೪	೧೦–೦೬–೧೯೧೫
೫	ಶ್ರೀ.ಆರ್.ಶ್ಯಾಮರಾವ್. ಬಿ.ಎ. ಬಿ.ಎಲ್	೧೧–೦೬–೧೯೧೫	೨೫–೦೮–೧೯೧೫
೬	ಶ್ರೀ.ಮೊಹಮ್ಮದ್ ಜಾಫರ್ ಮೇಕ್ರಿ	೨೬–೦೮–೧೯೧೫	ಪೂರ್ಣವರ್ಷ
೭	ಶ್ರೀ.ಸಿ.ಎವೆರಾರ್ಡ್	೦೧–೦೭–೧೯೧೮	೩೦–೦೬–೧೯೧೯

ಅನುಬಂಧ – ೨೭

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಜಿಲ್ಲೆಯಲ್ಲಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ರವರುಗಳ ಪಟ್ಟಿ

ಕ್ರ.ಸಂ	ಹೆಸರು	ದಿನಾಂಕ	
		ರಿಂದ	ರಿಗೆ
೧	ಶ್ರೀ.ಮೊಹಮ್ಮದ್ ಜಾಫರ್	೧೯೦೫–೦೬ ಪೂರ್ಣ ವರ್ಷ	
೨	ಶ್ರೀ.ಮೊಹಮ್ಮದ್ ಜಹೀರುದ್ದೀನ್ ಮೆಕ್ಕ	೧೯೦೬–೦೮	ಪೂರ್ಣವರ್ಷ
೩	ಶ್ರೀ.ಜಾಹಿರುದ್ದೀನ್ ಮೆಕ್ಕಿ.ಬಿ.ಎ	೦೧–೦೭–೧೯೦೯	೧೬–೦೨–೧೯೧೦
೪	ಶ್ರೀ.ಬಿ.ಎಸ್.ರಣೋಜಿರಾವ್. ಬಿ.ಎ	೧೭–೦೨–೧೯೧೦	೩೦–೦೬–೧೯೧೨
೫	ಶ್ರೀ.ಸಿ.ದೇವರಾಜ್ ಅರಸ್	೦೧–೦೭–೧೯೧೩	೨೦–೦೧–೧೯೧೪
೬	ಶ್ರೀ.ಸಿ.ನಾರಾಯಣ ರಾವ್, ಬಿ.ಎ.ಬಿ.ಎಲ್	೨೧–೦೧–೧೯೧೪	೨೫–೧೨–೧೯೧೪
೭	ಶ್ರೀ.ಆರ್.ಶ್ಯಾಮರಾವ್, ಬಿ.ಎ.ಬಿ.ಎಲ್	೨೬–೧೨–೧೯೧೪	೧೪–೧೧–೧೯೧೫
೮	ಶ್ರೀ.ಎಸ್.ನಾರಾಯಣ ರಾವ್	೧೫–೧೧–೧೯೧೫	೦೪–೦೯–೧೯೧೬
೯	ಶ್ರೀ.ಕೆ.ವಿ.ಅನಂತರಾಮನ್, ಬಿ.ಎ.	೦೫–೦೯–೧೯೧೬	೨೨–೦೩–೧೯೧೭
೧೦	ಶ್ರೀ.ಸಿ.ಮಾಚಯ್ಯ, ಬಿ.ಎ.	೨೩–೦೩–೧೯೧೭	೩೦–೦೬–೧೯೧೯

ಅನುಬಂಧ – ೨೮

೧೯೦೫ ಮತ್ತು ೦೬ ರಲ್ಲಿ ವೇಲ್ಸ್ ರಾಜರಾಣಿಯರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕರ್ತವ್ಯಕ್ಕೆ ನೇಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ

ಜಿಲ್ಲೆ	ಬೆಂಗಳೂರು ಜಿಲ್ಲೆಯಿಂದ ವಿಶೇಷ ಕರ್ತವ್ಯಕ್ಕೆ ನೇಮಿಸಿದ		೦೧–೦೧–೧೯೦೬ ಹಾಗೂ ೨೦–೦೧–೧೯೦೬ ರಂದು ವಿಶೇಷ ಕರ್ತವ್ಯಕ್ಕೆ ಕರೆದ		೦೧–೦೨–೧೯೦೬ ರಂದು ವಿಶೇಷ ಕರ್ತವ್ಯಕ್ಕೆ ಕರೆದ		ಜಿಲ್ಲೆಗಳಿಂದ ವಿಶೇಷ ಕರ್ತವ್ಯಕ್ಕೆ ನೇಮಿಸಿದ		ಒಟ್ಟು	
	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ	ಅಧಿಕಾರಿ	ಸಿಬ್ಬಂದಿ
ಬೆಂಗಳೂರು	–	೧೭	೧	೧೫	–	–	–	–	೧	೩೨
ಕೋಲಾರ	೧	೧೫	೧	೧೫	–	–	–	–	೨	೩೦
ತುಮಕೂರು	೧	೧೫	೧	೧೫	೧	೩೦	–	–	೩	೬೦
ಹಾಸನ	೧	೧೫	೧	೧೫	–	–	–	–	೨	೩೦
ಕಡೂರು	೧	೧೫	೧	೧೫	–	–	–	–	೨	೩೦
ಚಿತ್ರದುರ್ಗ	೧	೧೫	೧	೧೫	೧	೨೦	–	–	೩	೫೦
ಕೆ.ಜಿ.ಎಫ್	–	–	೨	೫೦	–	–	–	–	೨	೫೦
ಫ್ರೆಂಚ್‌ರಾಕ್	–	–	–	–	–	–	೨೦	೧೫೦	೨೦	೧೫೦
ಮೈಸೂರು ಜಿಲ್ಲೆ	–	–	–	–	–	–	೨೩	೧೦೫	೨೩	೧೦೩
ಮೈಸೂರು ನಗರ	–	–	–	–	–	–	೩೦	೨೦೦	೩೦	೨೦೦
ಪೊಲೀಸ್ ತರಬೇತಿ ಶಾಲೆ	–	–	–	–	–	–	೪೦	೨೦	೪೦	೨೦
ಮೀಸಲು ಪಡೆ	–	–	–	–	–	–	೧೩	೧೮೦	೧೩	೧೮೦
ಬೆಂಗಳೂರು ನಗರ	–	–	–	–	–	–	೨೦	೧೫೦	೨೦	೧೫೦
ರೈಲ್ವೆ	–	–	–	–	–	–	೬	೪೧	೬	೪೧
ಒಟ್ಟು	೫	೯೨	೮	೧೪೦	೨	೫೦	೧೫೨	೮೪೬	೧೬೭	೧೧೨೮

ಅನುಬಂಧ – ೨೯

೧೮೬೯-೭೦ ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರತೀ ತಾಲೂಕಿನಲ್ಲಿ ಮಂಜೂರಾದ ಪೊಲೀಸ್ ಪಡೆಯ ಬಲದ ವಿವರ

ತಾಲೂಕುಗಳು	ಇನ್ಸ್‌ಪೆಕ್ಟರ್‌ಗಳು	ಹೆಡ್ ಕಾನ್‌ಸ್ಟೆಬಲ್	ಮೌಂಟೆಡ್ ಕಾನ್‌ಸ್ಟೆಬಲ್	ಕಾನ್‌ಸ್ಟೆಬಲ್
ಬಳ್ಳಾರಿ ನಗರ ಮತ್ತು ತಾಲೂಕು	೩	೭	೧೧	೧೧೩
ಹೊಸಪೇಟೆ	೨	೫	೫	೩೭
ಕೂಡ್ಲಿಗಿ	೧	೪	೪	೪೮
ಹರಪ್ಪನಹಳ್ಳಿ	೧	೨	೬	೪೦
ಹಡಗಲಿ	೧	೨	೬	೩೭
ಅದೋನಿ	೨	೪	೬	೫೪
ಆಲೂರು	೧	೨	೩	೩೧
ಗೂಟಿ	೨	೫	೬	೬೪
ರಾಯ್‌ದುರ್ಗ	೧	೩	೪	೫೨
ತಾಡಪತ್ರಿ	೨	೨	೪	೫೨
ಅನಂತಪುರ್	೨	೩	೫	೬೦
ಧರ್ಮಾವರಂ	೨	೩	೬	೬೬
ಪೆನುಕೊಂಡ	೨	೩	೨	೫೬
ಹಿಂದಿಪುರ	೧	–	೪	೩೫
ಮಡಕಶಿರ	೧	೨	೧	೨೪
ಮೀಸಲು,ಕಾರಾಗೃಹ ಹಾಗೂ ಇತರ	೩	೭	೧೧	೧೧೩

ಅನುಬಂಧ – ೩೦

೧೯೧೩-೧೪ ರಲ್ಲಿ ರೈಲ್ವೆಯಲ್ಲಿ ವರದಿಯಾದ ಪ್ರಕರಣಗಳ ವಿವರ

		ವರ್ಗಾವಣೆ	ತನಿಖೆ ನಿರಾಕರಣೆ	ಸುಳ್ಳು	ತನಿಖೆ ಮಾಡಿದ್ದು
ನಾಗರಿಕ ಮತ್ತು ಸಿವಿಲ್ ಠಾಣೆ	೭೧೬	೯	೨	೧೪೩	೫೬೨
ದಕ್ಷಿಣ ಮರಾಠ ರೈಲ್ವೆ	೯೦	೬	–	೧೮	೬೬
ಬಿ.ಬಿ.ಮದ್ರಾಸ್ ರೈಲ್ವೆ	೬೫	೨	–	೧೨	೫೧
ಕೋಲಾರ ಗೋಲ್ಡ್‌ಪೀಲ್ಡ್	೧೫	೧	–	೩	೧೧
ಒಟ್ಟು	೮೮೬	೧೮	೨	೧೭೬	೬೯೦

೧೯೧೪-೧೫ ರಲ್ಲಿ ನಡೆದ ಅಪರಾಧಗಳ ಹಂಚಿಕೆ

ಕ್ರ.ಸಂ	ಅಪರಾಧಗಳ ಸ್ಥಳಗಳು	ಒಟ್ಟು	ವರ್ಗಾವಣೆ	ತನಿಖೆ ತಿರಸ್ಕರಿಸಿದ್ದು	ಸುಳ್ಳು	ತನಿಖೆ ಮಾಡಿದ್ದು
೧	ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್	೭೩೧	೧೬	೧	೧೩೬	೫೭೮
೨	ದಕ್ಷಿಣ ಮರಾಠ ರೈಲ್ವೆ	೭೭	೪	–	೨೫	೪೮
೩	ಬಿ.ಬಿ. ಮದ್ರಾಸ್ ರೈಲ್ವೆ	೬೦	೪	–	೧೦	೪೬
೪	ಕೆ.ಜಿ.ಎಫ್	೬	೨	–	–	೪
	ಒಟ್ಟು	೮೭೪	೨೬	೧	೧೭೧	೬೭೬

೧೯೧೫-೧೬ ರಲ್ಲಿ ಅಪರಾಧಗಳ ಹಂಚಿಕೆ.

ಕ್ರಸಂ	ಅಪರಾಧಗಳ ಸ್ಥಳಗಳು	ಒಟ್ಟು	ವರ್ಗಾವಣೆ	ತನಿಖೆ ತಿರಸ್ಕರಿಸಿದ್ದು	ಸುಳ್ಳು	ತನಿಖೆ ಮಾಡಿದ್ದು
೧	ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್	೩೫೩	೩	೩	೭೬	೪೭೧
೨	ಸದರ್ನ್, ಮರಾಠ ರೈಲ್ವೆ	೬೮	೪	೨	೧೮	೪೪
೩	ಬಿ.ಬಿ.ಮದ್ರಾಸ್ ರೈಲ್ವೆ	–	–	–	––	–
೪	ಕೋಲಾರ ಗೋಲ್ಡ್ ಫೀಲ್ಡ್ ರೈಲ್ವೆ (ಬೋರಿಂಗ್‌ಪೇಟೆ ಬೈ.ಸ್ಟೇಷನ್ ಮಾತ್ರ)	೩೭	–	–	೪	೩೩
	ಒಟ್ಟು	೬೫೮	೭	೫	೯೮	೫೪೮

ಅನುಬಂಧ – ೩೧

೧೮೧೧ ರಲ್ಲಿ ದ.ಕ ಜಿಲ್ಲೆಯಲ್ಲಿ ಮ್ಯಾಜಿಸ್ಟ್ರೇಟರಿಂದ ನೇಮಕವಾದ ನೇಟೀವ್ ಇನ್‌ಫೆಂಟ್ರಿಯ ಎರಡನೇ ಬೆಟಾಲಿಯನ್ ಮೂರನೇ ರೆಜಿಮೆಂಟ್‌ನಿಂದ ನೇಮಕಗೊಂಡ ಗಾರ್ಡ್‌ಗಳ ಮಾಹಿತಿ ಈ ಕೆಳಗಿನಂತಿದೆ.

	ಸುಬೇದಾರ್	ಜಮೇದಾರ್	ಹವಾಲ್ದಾರ್	ನಾಯಕ್ಸ್	ಡ್ರಮ್ಮರ್	ಸಿಪಾಯಿ
ಮೊದಲನೇ ವಾರ್ಡ್	೧	–	೧	೨	೧	೧೮
ಎರಡನೇ ವಾರ್ಡ್	–	–	೧	೨	–	೧೮
ಮೂರನೇ ವಾರ್ಡ್	–	–	೧	೧	–	೧೨
ಖೈದಿಗಳನ್ನು ತೆಗೆಯಲ್ಪಟ್ಟ ಹೊಸ ಕಟ್ಟಡ	–	–	೧	೧	–	೧೫
ಆಸ್ಪತ್ರೆ	–	–	–	೧	–	೪
ಟ್ರಜರಿ ಗಾರ್ಡ್	–	–	–	೧	–	೩
ಒಟ್ಟು	೧	–	೪	೮	೧	೭೦

ಅನುಬಂಧ – ೩೨

೧೮೧೭ ಮತ್ತು ಅದಕ್ಕಿಂತ ಮೊದಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಜೈಲು ಅಧಿಕಾರಿ ಮತ್ತು ಸಿಬ್ಬಂದಿಗಳ ತುಲನಾತ್ಮಕ ಪಟ್ಟಿ

	೧೮೧೭ ಕ್ಕಿಂತ ಮೊದಲು	೧೮೧೭ ರಲ್ಲಿ
೪ ದಫೇದಾರ್ ೨೪ ಪೀವನ್	೦೨-೦೭-೧೮೦೭ ರಲ್ಲಿ ಸರಕಾರದ ಮಂಜೂರಾತಿಯಂತೆ	೧ ಸುಬೇದಾರ್, ೧ ಜಮೇದಾರ್
೨ ದಫೇದಾರ್ ೨೦ ಪೀವನ್	೩೦-೧೧-೧೮೦೮ರ ಸರಕಾರದ ಮಂಜೂರಾತಿಯಂತೆ	೧ ಮುತ್ಸದ್ದಿ, ೪ ಹೆಡ್‌ಕಾನ್‌ಸ್ಟೇಬಲ್
೧ ದಫೇದಾರ್ ೧೨ ಪೀವನ್	೦೨-೦೭-೧೮೦೭ರ ಸರಕಾರಿ ಮಂಜೂರಾತಿಯಂತೆ	೪ ಎರಡನೇ ದರ್ಜೆಯ ದಫೇದಾರಗಳು
೨ ದಫೇದಾರ್ ೨೦ ಪೀವನ್	೨೬-೦೫-೧೮೧೦ರ ಸರಕಾರಿ ಮಂಜೂರಾತಿಯಂತೆ	೭೧ ಪೀವನ್
೮೩		೮೧

ಅನುಬಂಧ – ೩೩

೧೯೦೫-೦೬ ರಲ್ಲಿ ತರಬೇತಿ ಶಾಲೆಯಲ್ಲಿದ್ದ ಅಧ್ಯಾಪಕರು ಹಾಗೂ ಪ್ರಶಿಕ್ಷಣಾರ್ಥಿಗಳ ವಿವರ

ಅಧಿಕಾರಿ ವರ್ಗ	ಕರ್ತವ್ಯದಲ್ಲಿರುವ ಸಿಬ್ಬಂದಿಗಳು	ಪ್ರಶಿಕ್ಷಣಾರ್ಥಿಗಳು (ರಿಕ್ರೂಟ್ಸ್)	ಒಟ್ಟು
ಇನ್ಸ್‌ಪೆಕ್ಟರ್‌ಗಳು	೧೯	೪	೨೩
ಆಂಗ್ಲಭಾಷೆಯಲ್ಲಿ ತರಬೇತಿ ಪಡೆಯುತ್ತಿದ್ದ ಠಾಣಾಧಿಕಾರಿಗಳು	೧೫	–	೧೫
ಕನ್ನಡ ಭಾಷೆಯಲ್ಲಿ ತರಬೇತಿ ಪಡೆಯುತ್ತಿದ್ದ ಠಾಣಾಧಿಕಾರಿಗಳು	೨೦	–	೨೦
ಒಟ್ಟು	೫೪	೪	೫೮
ಇದರಲ್ಲಿ ೧೯೦೬ ರ ಜುಲಾಯಿನಲ್ಲಿ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ			
ಇನ್ಸ್‌ಪೆಕ್ಟರ್‌ಗಳು	೧೭	೪	೨೧
ಆಂಗ್ಲಭಾಷೆಯಲ್ಲಿ ತರಬೇತಿ ಪಡೆಯುತ್ತಿದ್ದ ಠಾಣಾಧಿಕಾರಿಗಳು	೧೩	–	೧೩
ಕನ್ನಡ ಭಾಷೆಯಲ್ಲಿ ತರಬೇತಿ ಪಡೆಯುತ್ತಿದ್ದ ಠಾಣಾಧಿಕಾರಿಗಳು	೧೮	–	೧೮
ಒಟ್ಟು	೪೮	೪	೫೨

ಅನುಬಂಧ – ೩೪

೧೯೨೨-೨೩ ರಿಂದ ೧೯೨೬-೨೭ ರ ವರೆಗೆ ವರದಿಯಾದ ಸಂಜ್ಞೆಯ ಅಪರಾಧಗಳು ಮತ್ತು ಅವುಗಳ ಅಂತಿಮ ವಿಲೆ

ವರ್ಷ	ಆರಂಭದಲ್ಲಿ ಬಾಕಿ	ವರದಿ	ಒಟ್ಟು	ಬ್ರಿಟೀಷ್ ಪೋಲೀಸರಿಗೆ ವರ್ಗಾವಣೆ	ತನಿಖೆ ನಿರಾಕರಿಸಿದ್ದು	ಸುಳ್ಳು/ ಅಸಂಜ್ಞೆಯ ಅಪರಾಧಗಳು	ಪತ್ತೆಯಾಗದೇ ಹಿಂತಿರುಗಿಸಿದ್ದು
೧೯೨೨-೨೩	೪,೪೯೭	೬,೪೧೦	೧೦,೯೦೭	೪	೨೯೦	೧,೫೧೬	೧,೦೩೫
೧೯೨೩-೨೪	೩,೮೯೬	೬,೯೫೬	೧೦,೮೫೨	೧೫	೩೬೮	೧,೯೦೭	೯೯೮
೧೯೨೪-೨೫	೩,೩೯೯	೭,೮೦೪	೧೧,೨೦೩	೧೦	೧೩೯	೨,೦೫೬	೮೨೨
೧೯೨೫-೨೬	೩,೧೭೩	೭,೬೫೯	೧೦,೮೩೨	೧೪	೪೫೩	೧,೮೩೮	೧,೦೧೩
೧೯೨೬-೨೭	೩,೦೭೬	೭,೯೦೬	೧೦,೯೮೨	೬	೪೮೬	೧,೬೩೭	೯೯೫
ವರ್ಷ	ಎ ಪಾರಂ ಸಲ್ಲಿಸಿದ್ದು	ಹಿಂಪಡೆದದ್ದು	ರಾಜಿ ಯಾದವು	ಸಜೆ	ಖುಲಾಸೆ/ ವಜಾ	ಇತರ ರೀತಿಯಲ್ಲಿ ವಿಲೇವಾರಿ	ಬಾಕಿ
೧೯೨೨-೨೩	೮೭	೨೪	೧೧೨	೨,೬೮೧	೧,೨೫೫	೭	೩,೮೯೬
೧೯೨೩-೨೪	೬೭	೪೧	೧೫೭	೨,೮೬೨	೧,೦೩೮	---	೩,೩೯೯
೧೯೨೪-೨೫	೯೭	೪೧	೮೮	೩,೨೫೬	೧,೨೯೯	೧೨	೩,೧೭೩
೧೯೨೫-೨೬	೭೨	೩೪	೧೦೫	೩,೧೬೮	೧,೦೫೫	೫	೩,೦೭೫
೧೯೨೬-೨೭	೭೩	೫೧	೧೬೩	೩,೧೬೦	೧,೦೬೭	೨	೩,೩೪೨

ಅನುಬಂಧ – ೩೫

೧೯೨೫-೨೬ ಮತ್ತು ೧೯೨೬-೨೭ ರಲ್ಲಿ ವರದಿಯಾದ ಸಂಜ್ಞೆಯ ಪ್ರಕರಣಗಳು ಮತ್ತು ಅವುಗಳ ವಿಲೆ

	ಆರಂಭದ ಶಿಲ್ಕು	ವರದಿಯಾದ ಪ್ರಕರಣಗಳು	ಒಟ್ಟು	ಬ್ರಿಟೀಷ್ ಪೋಲೀಸರಿಗೆ ವರ್ಗಾವಣೆ	ತನಿಖೆ ತಿರಸ್ಕಾರ	ಆಸಂಜ್ಞೆಯ ಅಥವಾ ಸುಳ್ಳು ಪ್ರಕರಣಗಳು	ನಾಪತ್ತೆ
೧೯೨೫-೨೬	೩೧೭೩	೭೬೫೯	೧೦೮೩೨	೧೪	೪೫೩	೧೮೩೮	೧೦೧೩
೧೯೨೬-೨೭	೩೦೭೬	೭೯೦೬	೧೦೯೮೨	೬	೪೮೬	೧೬೩೭	೯೯೫
	ಎ ಪಾರಂ ನೀಡಿ ಹೊಡೆದು ಹಾಕಿದ್ದು	ಹಿಂಪಡೆದಿದ್ದು	ರಾಜಿ	ಶಿಕ್ಷೆ	ವಜಾ	ಇತರ ರೀತಿ ಮುಕ್ತಾಯ	ಬಾಕಿ
೧೯೨೫-೨೬	೭೨	೩೪	೧೦೫	೩೧೬೮	೧೦೫೫	೫	೩೦೭೫
೧೯೨೬-೨೭	೭೩	೫೧	೧೬೩	೩೧೬೦	೧೦೬೭	೨	೩೩೪೨

ಅನುಬಂಧ – ೩೬

೧೮೮೭ ರಿಂದ ೧೯೪೭ ರವರೆಗೆ ಕಳವಾದ ವಸ್ತುಗಳ ಮೌಲ್ಯ, ಪತ್ತೆಯಾದ ವಸ್ತುಗಳ ಮೌಲ್ಯ, ಅವುಗಳ ಸರಾಸರಿ

ಇಸವಿ	ಕಳವು ಪ್ರಕರಣಗಳ ಸಂಖ್ಯೆ	ಕಳವಾದ ವಸ್ತುವಿನ ಮೌಲ್ಯ	ಪತ್ತೆಯಾದ ವಸ್ತುವಿನ ಮೌಲ್ಯ	ಸರಾಸರಿ
೧೮೮೭	೧೯೫	೭೪೬೨	೨೧೫೦	೨೮.೮೧
೧೮೮೮	೯೬	೧೦೯೪೭	೬೦೨೧	೫೫
೧೯೦೪–೦೫		೩೩.೫೬೯	೧೮.೩೦೪	
೧೯೧೩–೧೪		೨೬.೨೪೫	೧೧.೨೯೮	೪೩.೪
೧೯೧೨–೧೩			೫೧.೪	೨೧.೮೩
೧೯೧೪–೧೫		೧೭೯೨೪	೫೭೨೯	೪೧.೯೯
೧೯೧೩–೧೪		೨೬.೨೨೦	೧೧.೨೯೮	೪೩.೪೮೯
೧೯೧೫–೧೬		೧೧.೪೮೩	೫೩೦೮	೪೬.೨೨
೧೯೨೨–೨೩		೨೨೫೮೯೧	೮೨೭೮೨	
೧೯೨೧–೨೨		೨೮೪೦೮೪	೧೯೯೯೩೦	
೧೯೨೪–೨೫		೨೪೭೩೬೮	೧೧೮೩೧೫	೪೭.೮೩
೧೯೨೩–೨೪		೨೦೯೫೧೫	೧೧೧೪೨೨	೫೩.೨೧
೧೯೨೬–೨೭		೨೯೬೪೮೮	೧೪೩೦೫೩	೪೮.೨೫
೧೯೨೫–೨೬		೨೨೫೧೦೬	೧೩೦೦೨೨	೪೫.೭೫

ಅನುಬಂಧ – ೩೭

ಜನಸಂಖ್ಯೆ ಮತ್ತು ಭೂಪ್ರದೇಶ ಹಾಗೂ ಅಪರಾಧಗಳ ಜಿಲ್ಲಾವಾರು ಅನುಪಾತ

	ಚದುರ ಮೈಲುಗಳಲ್ಲಿ ವಿಸ್ತೀರ್ಣ	ಜನಸಂಖ್ಯೆ	ವರದಿಯಾದ ಪ್ರಕರಣಗಳಲ್ಲಿ ಸುಳ್ಳು ಪ್ರಕರಣಗಳನ್ನು ಕಳೆದು								ನೇರವಾಗಿ ವರದಿಯಾದ ಪ್ರಕರಣಗಳು ಸೇರಿ	
			ಒಂದು ಚದುರ ಮೈಲಿಗೆ ವರದಿಯಾದ ನಿಜಪ್ರಕರಣಗಳು				೧೦,೦೦೦ ಜನಸಂಖ್ಯೆಗೆ ವರದಿಯಾದ ನಿಜಪ್ರಕರಣಗಳು				ಒಂದು ಚದುರ ಮೈಲಿಗೆ ವರದಿಯಾದ ನಿಜಪ್ರಕರಣಗಳು	೧೦,೦೦೦ ಜನಸಂಖ್ಯೆಗೆ ವರದಿಯಾದ ನಿಜಪ್ರಕರಣಗಳು
			೧೮೯೧	೧೮೯೨-೯೩	೧೮೯೩-೯೪	೧೮೯೪-೯೫	೧೮೯೧	೧೮೯೨-೯೩	೧೮೯೩-೯೪	೧೮೯೪-೯೫	೧೮೯೪-೯೫	೧೮೯೪-೯೫
ಬೆಂಗಳೂರು (ನಗರಹೊರತುಪಡಿಸಿ	೨,೫೩೯	೬೨೨,೬೨೮	.೧೦೨	.೧೧೩	.೦೮೬	.೧೧೩	೪.೧೪೩	೪.೫೬೧	೩.೫೧೨	೪.೫೯೩	.೧೫೭	೬.೪೨೧
ಕೋಲಾರ	೩,೦೫೯	೫೯೧,೦೩೦	.೧೩೯	.೧೪೭	.೧೬೭	.೧೬೩	೭.೧೭೩	೭.೫೯೬	೮.೬೨೯	೮.೪೨೫	.೨೦೮	೧೦.೭೯೫
ತುಮಕೂರು	೪,೦೯೩	೫೮೦,೭೮೬	.೦೩೬	.೦೫೪	.೦೧೭	.೦೩೯	೨.೫೬೫	೩,೮೦೫	೧.೧೭೧	೨.೭೮೯	.೦೮೭	೬.೧೪೨
ಮೈಸೂರು (ನಗರಹೊರತುಪಡಿಸಿ ಮತ್ತು ಫ್ರೆಂಚ್‌ರಾಕ್ಸ್	೫,೦೦೦೧	೧,೧೦೭,೭೬೬	.೦೭೪	.೦೭೯	.೦೬೯	.೦೬೭	೩.೩೬೭	೩.೫೬೪	೩.೧೨೩	೩.೦೨೪	.೧೦೨	೪.೬೧೩
ಹಾಸನ	೨,೬೦೩	೫೧೪,೯೫೨	.೧೫೨	.೧೮೯	.೧೫೭	.೧೨೫	೭.೬೭೦	೯.೫೫೪	೭.೯೬೭	೬.೩೫೦	.೧೮೯	೯.೫೫೪
ಶಿವಮೊಗ್ಗ	೩,೯೮೬	೫೨೭,೯೮೧	.೦೫೫	.೦೬೫	.೦೬೭	.೦೪೪	೪.೧೪೨	೪.೯೪೩	೫.೧೧೩	೩.೩೧೪	.೦೯೮	೭.೪೪೩
ಕಡೂರು	೨,೬೩೫	೩೩೦,೦೬೩	.೧೨೮	.೧೪೭	.೧೧೦೮	.೧೨೫	೧೦.೨೪೦	೧೧.೭೨೫	೮.೮೪೬	೯.೯೬೨	.೧೪೪	೧೧.೪೮೩
ಚಿತ್ರದುರ್ಗ	೩,೯೯೪	೪೧೩,೯೮೪	.೦೪೮	.೦೫೮	.೦೪೫	.೦೪೩	೪.೬೮೬	೫,೬೦೪	೪.೩೯೬	೪.೧೫೪	.೦೫೬	೫.೪೩೫
ಒಟ್ಟು	೨೭,೯೦೯.೧	೪,೬೮೯,೧೯೦	.೦೮೪	.೦೯೭	.೦೮೨	.೦೮೨	೫.೦೧೧	೫.೮೦೬	೪.೮೯೬	೪.೮೬೮	.೧೨	೭.೨೪೦
ಬೆಂಗಳೂರು ನಗರ	೮	೮೦,೨೮೫	೯೩..೬೨	೫೧.೭೫	೫೬೫	೪೫	೯೩.೨೦೨	೫೧.೫೬೬	೫೬.೨೯	೪೪.೨೧೫	೪೮.೩೨೫	೪೮.೨೦೩
ಮೈಸೂರು ನಗರ	೬.೯	೭೪,೦೪೮	೧೫.೫೦೭	೧೨.೪೬	೧೬.೩೭	೧೬.೩೭	೧೪.೪೫೦	೧೧.೬೧೪	೧೫.೨೬೩	೧೫.೨೬೦	೧೯.೪೨೦	೧೮.೦೯೬
ಒಟ್ಟು ಮೊತ್ತ	೨೭,೯೨೪	೪,೮೪೩,೫೨೩	.೧೧೪೮	.೧೧೫೪	.೧೦೨೪	.೦೯೯	೬.೬೧೯	೬.೬೫೪	೫.೯೦೬	೫.೬೯೦	.೧೪೦೨	೮.೦೮೫

ಅನುಬಂಧ – ೩೮

೧೯೧೦ ರಿಂದ ೧೯೪೭ ರವರೆಗೆ ಮೈಸೂರು ಸಂಸ್ಥಾನದಲ್ಲಿದ್ದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಬಲ

ಇಸವಿ	ಅಧಿಕಾರಿಗಳ ಸಂಖ್ಯೆ	ಸಿಬ್ಬಂದಿಗಳ ಸಂಖ್ಯೆ
೧೯೧೦-೧೧	೮೩೧	೫೦೪೯
೧೯೨೦-೨೧	೯೨೧	೫೩೨೬
ತಾತ್ಕಲಿಕ	೩೯	೧೬೬
೧೯೩೦-೩೧	೮೯೪	೫೫೯೨
ತಾತ್ಕಲಿಕ	೩೦	೧೫೨
೧೯೪೨-೪೩	೧೧೨೪	೫೮೩೫
ತಾತ್ಕಲಿಕ	೩೦೩	೧೬೪೭
೧೯೪೭-೪೮	೧೭೦೩	೮೬೬೪
ತಾತ್ಕಲಿಕ	೨೬೩	೯೫೬

BIBLIOGRAPHY

Primary sources (Englisgh)

1) Administration report of the Police department in Mysore for year 1911-12, 1912-13, 1913-14, 1914-15, 1915-16, by- Sri.Srikanteshwara Iyer, I.G.P Mysore.

2) Annual administration report of the Police department for the official year 1905-06, 1906-07, F.E.C Khar, I.G.P, Mysore, date 22-24 September 1906

3) Annual administration report of the Police department for the official year 1907-08, 1908-09, 1909-10, 1910-11, by- D.Devaraj Arasu, I.G.P Mysore.

4) Annual reports of south Indian epigraphy 1916

5) Annual administration report of Mysore for the year 1913-14, 1914-15, by- the Honourable Leptinent coloned Hugedaly, K.C.I, E.C.S.I. president of Mysore, Mysore residency press 1914

6) Collection of circular, order to criminal courts.

7) Collection of circular orders to criminal courts, and report on civil and criminal judicature in Mysore, April 26- 1838

8) Conscious Oxford English dictionary , publishers Oxford university press 2004

9) Correspondence relating to the revision of village establishments of Madras presidency, 14 December 1866, Part 1

10) Dharmaveera kamiti report

11) Encyclopedia of Britanika, Volume 18

12) English, Kannada Dictionary, Ekikritha Volume, Publisher Mysore University 2007

13) General and revenue secretariat of the government of His Highness the maharaja of Mysore, police(Home), branch, collections- 1864, 1868-1869, 1 of 1864.

14) General and revenue secretariat of the government of His Highness the maharaja of Mysore, confidential branch collection – 1924- 1941.

15) General and revenue secretariat of the government of His Highness the maharaja of Mysore, general miscellaneous collections – 1892- 1940.

16) General and revenue secretariat of the government of His Highness the maharaja legislation branch collection 1912-1940

17) Home (Police) department collections 1881 to 1940

18) Indian constitutions

19) Indian Independence Act 1947

20) Indian Police Act 1863

21) Indian Penal code

22) Madras Police Administration Report , 1865, 1866, 1867, 1868, 1902, 1911, 1920 ,

23) Mannaul of administration of Madras presidency 2 volume

24) Mysore administration reports 1927-28, by- S.Hiriyannayya, I.G.P Mysore Government press Bangalore – 1928

25) Orders of Madras Police 1897

26) Police Act 5 of 1861

27) Police Act 5 of 1861, Indian Gazette, 15 December 1866

28) Police files (Karnataka State Archive Bangalore)

29) Police Manual Part 1 and 2, publishers Karnataka state Government Bangalore. 1898

30) Proceedings of chief commissioner judicial department – Bangalore 1874

31) Proceedings of government of His Highness the maharaja of Mysore 1831 to 1876 (volume 1) 1876 to 1947 (monthly)

32) Proceedings of Indian Legislative council October 6, 1866 and 1924 to 1947

33) Proceedings of the Mysore representative assembly, Bangalore 1891 to 1947

34) Report on administration of the civil and military administration of Bangalore for the year 1891-92 to 1894-95, by Madava Rao, V.P, I.G.P Mysore, Government press Bangalore.

35) Report on Administration of criminal justice for the year – 1920-21, by- S.Hiriyannayya, secretory by Government genaral department.

36) Report on the administration of criminal justice in Mysore for the year 1925-26, BY- B.Nagappa, Secretory Government local Legislative department.

37) Report on the administration of criminal justice in Mysore for the year 1921-22, by B.Venkoba Rao, Secretary by Government general department.

38) Report on the administration of the civil and military station of Bangalore for the year 1904-05, by- the Honourable Alberts Williams, I.C.S- resident in Mysore – Mysore presidency 1905.

39) Report on the administration of the civil and military station of Bangalore for the year 1922-23, By- Honourable W.P.Burton, C.S.I, C.I.E, resident in Mysore- Mysore resident Press 1924

40) Report on administration of the civil and military station of Bangalore for the year 1915-16

41) Report on administration of coorg for the year 1888-89, part 1, coorg chief commissioners office- 2-11-1889- L.S.New March secretory. Government press Bangalore

42) Report on the administration of Mysore for the year 1941-42, by- E.G.B Peel, I.G.P Mysore, Government press Bangalore. 1943

43) Report on the administration of Mysore for the year 1922-23, 1923-24, 1924-25, 1926-27, by- P.F.Bauring , I.G.P Mysore, government press Bangalore 1923 (ending june 30)

44) Report on the administration of Mysore for the year 1945-46, by-S.Narayana Rao, I.G.P, Mysore, Government press, Bangalore 1947

45) Report on the administration of the Police department for the year 1916-17, by, K.R.Srinivasa Iyer , officiating, I.G.P Mysore (21-10-1917)

46) Report on the administration of the Police department for the year 1918-19, by- Sri. A. Subramanya Iyer, I.G.P Mysore, (24-10-1919)

47) Report on the civil and criminal judicature in Mysore 1838. April 26, 1838

48) Report of the commissioners for the investigation of alleged cases of torture , in the Madras presidency (Madras 1855)

49) Report on the interior administration resourses and expenditure of the Government of Mysore.

50) Report on the police commission – 1902-03

51) Report on the public service commission – 1886-87 Calcutta

52) Report on the Madras record, by H.H.Dadwel 1916.

53) Report of the royal commission on the public service in India 1916 (Islington commission report)

54) Report of the Royal commission on the superior civil services in India, 1924 (Lee commission report)

55) Reports of the sports meet published in Mysore Gazette, date 01-08-1897

56) Revenue consultation volume 16 Madras council 28, November 1800

57) Selection from the records of Fort Saint George, 13 May 1815

58) Selection from the records of Government of India home department No 52-1867

59) Selection of papers from the records at the East India house, relating to the revenue, Police and civil and criminal justice under the company Government in India, volume 1 and 2 (London –1820)

60) Statement of the Police committee on the administration of Madrass city Police (Madras – 1902)

61) The Indian Police commission report 1902-03

62) The Indian political Cons. July 26 1834, March-14- 1834. July-26 1848. No-109, August 3, 1835

63) The Mysore code unrefilled Mysore act 1850-1920, volume 1, - Government of Mysore, Bangalore- 1955

JOURNALS

1) Bombay Karnataka Inscriptions.
2) Epigraphia of Carnatica
3) Epigraphia of Indica
4) Karnataka Inscriptions
5) Indian Antiquary
6) South Indian inscriptions

LETTERS

1) Letter by Cambel.J.A secretary to the Mysore commissioner to Judicial commissioner Mysore, No- general 3855/judicial No 189, dtd 30-09-1868

2) Letter by Gompertz.E.D to judicial commissioner Mysore, No 477/26 dtd 20-12-1867

3) Letter by .Hamilton. F.A, I.G.P, Mysore, to government from, No C.S. 27/30-31 dtd 17-03-1931

4) Letter by Haris.T- Collector and magistrate in Mangalore 14-03-1817 to the commissioners for the rivission of the judicial system in P.M.J.D 30-09-1817 seirial number 126

5) Letter by I.G.P Madrass to chief secretory 31 December 1887 G.O 3, 595 -6 judicial 7th March 1888, TNA

6) Letter by Mysore commissioner L.B. Bouring NO 1992/87 dtd 07-07-1968

7) Letter by Satarkar.W.S- secretary to government of India to L.B.Bauring, No 263 dtd 14-09-1868

8) Letter by Wilson.A dated 03-03-1812, to chief secretary to government for Fort St. George

9) Letter by- Wilson .A judge and magistrate in Zillah court Mangalore, to the chief secretary to Fort St. George dtd 03-03-1818

Secondary sources (Englisgh)

1) **Alexandar. J. Arbuthnath (E) Mejor Sir Thomas Manro,**

1) selection from his mainuit and other official wraitings, Volume 2, Judicial, Higgin and Bothams company, Madras- 1886
2) Select report of criminal cases ditermind in the court of Fauzidari Adhalath.

2) **Arnold Devid**

1) Police power for colonial rool, Madras – 1859-1947, publishers Oxfard university press Delhi- 1886

2) Bureaueratic Recruitment and subordination in colonial India, the Medrass constabulary 1859-1947

3) **Basavaraj. R**

Administration under the Chalukyas of Kalyana, publishers New Era publications Madras – 1983

4) **B.L.Rice (E)**

Gazetteer of India Karnataka State, Mysore Distrcit, Volume 1 and 2, publishers west minister archibald constable and company, Bangalore – 1876

5) **Chande. M.B**
The Police in India- Lontic publishers and distributers – New Delhi- 1997

6) **Charles Philip Brown**
Memories of Hydar and Tippu rools of Srirangapattana – Simkin and Co- Madras 1849

7) **Charles. U. Aitchison**
Report of the public service commission on British attitude towards the employment of Indians in civil service – 1886-87, by- Sir Charles U Aitchison- concept publishing company – Delhi- 1977

8) **Chitharanjan.S (E)**

Gazetter of India, Karnataka State, Kolara District, publishers Karnataka State government, 2005

9) **Deekshitar. V.R.R**
Hindu administrative institute

10) **Doreswamy. K**
History of Police force in Mysore 1866-1947 unpublished Ph.D thesis.

11) **Eliat**
History of India, Volume -4, publishers Kithab Mahal

12) **Francies W (E)**
Gazetter of India, Karnataka state, Ballary District, publishers John Kelsel and publishers Karnataka state government, Madras- 1904

13) **G.E.D Mouat**
Hand book for the Indian Army : Madras class revised Edition New Delhi, 1938

14) **Gopal. M.H**
Tippu Sulthans Mysore, An economic study, Popular prakashana Bombay 1971

15) **Gourlay W.R**
A contribution towards a history of Bengal Police

16) **Hayavadhana Rao . C**
1) History of Mysore 1399-1799 - Mysore government press Bangalore 1943
2) Mysore Gazetter, economic volume -3

17) **Jems. M. Campbell (E)**
Gazetter of the Bombay presidency volume 21, Belgam district, - Government central press, Bombay – 1884

18) **Jilani S.A (E)**
1) Gazetter of India, Karnataka State, Dakshina Kannada District - Karnataka State government, 2007

2) Gazetter of India, Karnataka State, Udupi District, -Karnataka State government, 2010

19) **Kane. P.V**
History of Dharmashastra, - Bandarkar Oriyantal institute, Poona 1958

20) **Kenady.M. and Haldhipur S.V .**
The criminal classes in Bombay Presidency, - Basel mission Mangalore 1914

21) **Keys. E-**
Manual of the administration on the Madras presidency in illustration of record of Government and the yearly administration report.Volume-1 Government press Madras – 1885

22) **Khan.M.H**
History of Tippu Sulthan, - popular prakashana Bombay, 1971

23) **Kyari. J.C**
The Indian Police, - Febar and Febar, London- 1932

24) **Macleane. C.D**
Manual of the administration of the Madras presidency (Madras 1885)

25) **Madan. J.C**
Indian Police,- Uppal publication New Delhi- 1980

26) **Madhava Menan. N.R**
Wat else the Indian Police, - National Law school of India. Bangalore 1994

27) **Mahalingam. T.V**
Administration and social life under Vijayanagara, publishers Madras University, 1940

28) **Milks. M**
Report on the intierriar administration resources and expanditure of the Government of Mysore, Mysore Government Press – 1861

29) **Mishra. B.B**
The administrative History of India, 1834-1947, - Oxfard, Bombay – 1970

30) **Mishra. K.K**
Police administration in ancient India, -New Delhi – 1987

31) **Mohibulla Hasan**
History of Tippu Sulthan, Delhi 1971,

32) **Moriarty**
Police procedure and administration - Battarworth London 1955

33) **Mullik. B.N**
A philosophy for the Police, Aliyad - Bombay – 1969

34) **Muniswamy. R. (E)**
Gazetter of India, Karnataka State, Bijapura District, - Karnataka State Government, Bangalore 1999

35) **Nelson. J.H**
The Madras country manual part II (Madras)

36) **Nigam. S.R**
Scottland yard and Indian Police, - Kithab Mahal Alahabadh- 1963

37) **Parthasarathi. T.A**
Gazetter of India, Karnataka State, Mandya District, publishers Karnataka State government, 2003

38) **Pramathanath Banarji**
Public administration in Anciant India, - Uppal publishing house, New Delhi- 1985

39) **Rajayyan. K**
Administration and sociaty in the karnatic, - Venkateshwara university publishers Thirupathi- 1966

40) **Ramesh Duth**
The Economic history of India under early British rule 1757-1837, - the publications divission ministry of information and broadcasting, Delhi- 1976

41) **Rangarao. R**
Police administration report 1930- Bangalore press 1930.

42) **Reith. C**
The Blind Eye of History- Febar and Febar London – 1952

43) **Sarkar. J**
Mogal Administration, - Oriantal langman limited 1920

44 **Shalinidevi. B**
1) The History of Crime and punishment in the presidency of Madras in the 19th century (un published Ph.D thesis Madras university - 1966)
2) The History of Madras Police, sentinary volume 1859-1959- Police department Madras- 1959

45 **Sharn. S.D**
Administration of justice in ancient India, - Arman publishing house, New Delhi

46 **ShyamBhat. N**
1) Judiciary and Police in early colonial south canara !799-1862,- Mittal publications, New Delhi – 2001
2) Early colonail experiances 1792 – 1862 (An artical published in Poly canara) (E) Mukunda Prabhu- D.C, D.K Disrcit- 2000

47 **Shyama Rao. M**
Modern Mysore Volume 1, -Higgin and bothams Bangalore- 1936

48 **Smith. V. W**
Early History of India, - Oxford the claradon press London- 1914

49 **Suryanatha.U. Kamath (E)**
1) Gazetter of India, Karnataka State, Uttarkannada District, - Karnataka State Government, Bangalore 1985
2) The consiyas histroy of Karnataka, - jupitar books Bangalore- 2001

50 **Venkataramaiah . P.S (E)**
Policing in Karnataka Growth in a century, - Karnataka State Government, Bangalore – 1985

51 **Venkatasubba Shastri. K.N**
1) Administration of Mysore undersir Mark Cubbon, - London George Alen and Onwin ((Ltd) - 1930
2) On Introduction to the History of Mysore.

ಸರ್ಕಾರಿ ಆದೇಶಗಳು

೧ G -O- 1386-7, Judicail, 30th June 1887, I.O.R

೨ Orders of Madras Police I (Madras 1897) p- 145, (Indian Police proceedings No-3, 8th July 1871, I.O.R)

೩ G.O, 1027- 8 Judicial 28th July 1908 TNA

೪ G.O 2395 Home (judicial) 7th Oct 1916 TNA

೫ G.O 3819 Home 4th August 1938 T.NA

೬ ಬೆಂಗಳೂರು ಜಿಲ್ಲಾ ಎಸ್.ಪಿ ಇ.ಡಿ.ಗೋಂಪೆರ್ಟ್ಸ್ ರವರ ಕಛೇರಿ ವರದಿ ಸಂಖ್ಯೆ ೪೭೭/೭೬ ದಿನಾಂಕ: ೨೦-೧೨-೧೮೬೭

೭ ಮೈಸೂರಿನ ಮುಖ್ಯ ಜ್ಯೂಡಿಷಿಯರ್ ಕಮಿಷನರ್ ಜನರಲ್ ಡಿಪಾರ್ಟ್‌ಮೆಂಟ್‌ರವರ ಆದೇಶ ಸಂಖ್ಯೆ ೪೮೨, ಪೋಲೀಸ್ ೧೫ ದಿನಾಂಕ ೨೪-೦೯-೧೮೮೦

೮ ಸರ್ಕಾರಿ ನಡಾವಳಿ ಸಂಖ್ಯೆ ೪೨೭೭-೮೦-೮೪ ದಿನಾಂಕ: ೨೮-೦೭-೧೮೯೦

೯ ಸರ್ಕಾರಿ ನಡಾವಳಿ ಸಂಖ್ಯೆ ೩೩೨೮-೯-೨೩೪ ದಿನಾಂಕ ೧೮-೦೬-೧೮೯೧

೧೦ ಐಜಿಪಿ, ಮಾದವರಾವ್ ರವರು ಹೊರಡಿಸಿದ ಸುತ್ತೋಲೆ ನಂಬ್ರ – ೫೦-೧ ದಿನಾಂಕ ೧೫-೦೭-೧೮೯೨

೧೧ ಸರ್ಕಾರಿ ಆದೇಶ ಸಂಖ್ಯೆ ನಂಬ್ರ ಪಿ-೪೯೨೧-೨೨-ಪೋಲಿ-೪೯೨೧-೨೨-ಪೋಲಿ- ೧೪೭-೨೭-೩ ದಿನಾಂಕ ೨೫-೦೨-೧೯೨೮

೧೨ ಜಿ.ಒ.ನಂಬ್ರ-ಪಿ-೬೮೨೯-೪೦-ಪೋಲ್ ೧೦೧-೩೧೩, ೨೮-೦೫-೧೯೩೨

೧೩ ಸರ್ಕಾರಿ ಆದೇಶ ಸಂಖ್ಯೆ ಪಿ-೫೫೪೫ -೫೫/ಪಿ ೦೧ - ೭೦-೩೨-೪ ದಿನಾಂಕ ಏಪ್ರಿಲ್ ೨೯, ೧೯೩೩

೧೪ ಸರ್ಕಾರಿ ಆದೇಶ ಸಂಖ್ಯೆ ಜಿ-೭೫೮೮೮-೯೭- ಜಿಎಂ. ೧೩೨-೩೩೭ ದಿನಾಂಕ ೧೧-೦೨-೧೯೩೪

ಅನುಷಂಗಿಕ ಆಕರಗಳು (ಕನ್ನಡ ಭಾಷೆ)

೧ **ಅನಿತ.ಎಂ.ಎಸ್**
ಪೂರ್ಣಯ್ಯನವರ ದಿವಾನಗಿರಿ ಕಾಲದ ಹಣಕಾಸಿನ ಪಕ್ಷಿನೋಟ. ಪ್ರ (ಡಾ:ಗೋಪಾಲ ಆರ್(ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು- ೨೦೦೮.

೨ **ಅಶ್ವತ್ಥನಾರಾಯಣ.ಜಿ. (ಅನು)**
ಕರ್ನಾಟಕದ ಪರಂಪರೆ ಸಂಪುಟ ೨. ಪ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

೩ **ಕಂಠೀರಾವ್**
ಭಾರತೀಯ ನ್ಯಾಯಪದ್ಧತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೧೯೮೫

೪ **ಕೃಷ್ಣಕುಮಾರ್.ಕೆ**
ಗೋಪಾಲ್.ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿ ಮೈಸೂರು ರಾಜ್ಯದ ಪಾಳೇಗಾರರು ಮತ್ತು ದೀವಾನ್ ಪೂರ್ಣಯ್ಯ ರವರು ಎಂಬ ಲೇಖನ)

೫ **ಕೃಷ್ಣಕುಮಾರ್.ಕೆ**
ಮೈಸೂರು ರಾಜ್ಯ ಪಾಳೇಗಾರರು ಮತ್ತು ದಿವಾನ್ ಪೂರ್ಣಯ್ಯ. (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು- ೨೦೦೮.

೬ **ಕೃಷ್ಣರಾವ್.ಎಂ.ವಿ**
ಕರ್ನಾಟಕದ ಪರಂಪರೆ ಭಾಗ ೧ ರಲ್ಲಿ, ಆಡಳಿತ ಸಂಸ್ಥೆಗಳು –ಆದಿಕಾಲ ಎಂಬ ಲೇಖನ, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು –೨೦೦೬

೭ **ಕೃಷ್ಣರಾವ್.ಕೆ.ಎಂ (ಅನು)**
ಮೈಸೂರು ಒಡೆಯರು, (ಕರ್ನಾಟಕದ ಪರಂಪರೆ ಸಂಪುಟ ೨ ರಲ್ಲಿ ಪ್ರಕಟಿತ ಲೇಖನ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೭೨

೮ **ಕೃಷ್ಣರಾವ್ ಎಂ.ಬಿ. ಮತ್ತು ಕೇಶವ ಭಟ್.ಎಂ. (ಸಂ)**
ಕರ್ನಾಟಕ ಇತಿಹಾಸ ದರ್ಶನ, ಪ್ರ. ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು- ೧೯೭೦

೯ **ಕೆಳದಿ ವೆಂಕಟೇಶ ಜೋಯಿಸ್**
ಮರೆಯಲಾಗದ ಕೆಳದಿ ಸಾಮ್ರಾಜ್ಯ, ಪ್ರ. ಸರಸ್ವತಿ ಸೇವಾ ಸಮಿತಿ, ಕೆಳದಿ – ೨೦೦೯

೧೦ **ಗುರುಪ್ರಸಾದ್.ಡಿ.ವಿ**
೧) ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆ. (ಬೆಂಗಳೂರು ದರ್ಶನ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಉದಯಬಾನು ಕಲಾಸಂಘ ಬೆಂಗಳೂರು ೨೦೦೬
೨) ಜನರೊಂದಿಗೆ ಪೊಲೀಸರು, ಗೆಳೆಯರ ಬಳಗ ಧಾರವಾಡ- ೨೦೦೩

೧೧ **ಗೋಪಾಲ. ಆರ್**
ದಿವಾನ್ ಪೂರ್ಣಯ್ಯ, ಪ್ರ .ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು- ೨೦೦೮

೧೨ ಗೋಪಾಲ.ಆರ್ ಮತ್ತು ನರೇಂದ್ರಪ್ರಸಾದ್.ಎಸ್
ಮುಮ್ಮಡಿ ಕೃಷ್ಣರಾಜ ಒಡೆಯರ್, ಒಂದು ಚಾರಿತ್ರಿಕ ಅಧ್ಯಯನ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ – ೨೦೦೪

೧೩ ಗೋಪಾಲ. ಬಾ.ರಾ
ಕರ್ನಾಟಕದ ಇತಿಹಾಸ,

೧೪ ಗೋಪಾಲ ರಾವ್. ಹೆಚ್.ಎಸ್
ವಕೀಲ ರಾಮಪ್ಪನ ಕೈಫಿಯತ್ತು (ಇತಿಹಾಸ ದರ್ಶನ ಸಂಪುಟ ೮ ರಲ್ಲಿನ ಲೇಖನ) – ೧೯೯೩ ಪ್ರಕಟನೆ

೧೫ ಚಿದಾನಂದಮೂರ್ತಿ.ಎಂ.
೧) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿಶ. ೪೫೦–೧೧೫೦, ಪ್ರ. ಸಪ್ನ ಬುಕ್ ಹೌಸ್, ಬೆಂಗಳೂರು ೧೯೯೬
೨) ಸಂಶೋಧನ ತರಂಗ– ಪ್ರ– ಸರಸ ಸಾಹಿತ್ಯ ಪ್ರಕಾಶನ ಮೈಸೂರು ೧೯೬೬

೧೬ ಚಿತ್ರರಂಜನ್ .ಎಸ್ (ಸಂ)
ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಕೋಲಾರ ಜಿಲ್ಲೆ

೧೭ ಜಗನ್ನಾಥ. ಎಸ್.ಎ.
ದಿವಾನ್ ಪೂರ್ಣಯ್ಯನವರ ಬಾಲ್ಯ ಜೀವನ ಮತ್ತು ಸಾಧನೆ, (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮.

೧೮ ಜಗದ್ಗುರು ಶ್ರೀ.ಸಚ್ಚಿದಾನಂದ ಶಂಕರಭಾರತಿ ಸ್ವಾಮಿಗಳು, ಕೂಡಲಿ ಶೃಂಗೇರಿ.
ಕೌಟಲೀಯ ಅರ್ಥಶಾಸ್ತ್ರ, ಪ್ರ. ಅಂಕಿತ ಪ್ರಕಾಶನ ಬೆಂಗಳೂರು – ೧೯೬೩

೧೯ ತಿರುಮಲೇ ತಾತಾ ಶರ್ಮ
೧) ಮೈಸೂರು ಇತಿಹಾಸದ ಹಳೇಯ
೨) ಚಾರಿತ್ರಿಕ ದಾಖಲೆಗಳು, ಪ್ರ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು – ೧೯೭೧
೩) ವಿಚಾರ ಕರ್ನಾಟಕ, ಪ್ರ. ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು– ೧೯೭೦

೨೦ ದೀಕ್ಷಿತ್.ಜಿ.ಎಸ್
೧)ಸಂಗಮ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಪ್ರ. ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ೧೯೯೧
೨) ಶ್ರೀಕೃಷ್ಣದೇವರಾಯನ ಜೀವನ ಸಾಧನೆಗಳು. ಮೈಸೂರು– ೧೯೯೭

೨೧ ನಟರಾಜ್
ನ್ಯಾಯಾಡಳಿತಗಾರನಾಗಿ ದಿವಾನ್ ಪೂರ್ಣಯ್ಯ, (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮.

೨೨ ನರಸಿಂಹಾಚಾರ್.ಡಿ.ಎಲ್
ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ,(ಕರ್ನಾಟಕದ ಪರಂಪರೆ ಭಾಗ೧ ರಲ್ಲಿನ ಲೇಖನ) ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು– ೧೯೯೨

೨೩ ನಾಗರಾಜ್. ಎಂ.ಜಿ
ದಿವಾನ್ ಪೂರ್ಣಯ್ಯನವರ ಕಾಲದ ಪಾಳಯಪಟ್ಟುಗಳು, (ಡಾ:ಗೋಪಾಲ ಆರ್(ಸಂ) ಸಂಪಾದಿಸಿದ ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮

೨೪ ನಾಗಯ್ಯ. ಜಿ.ಎಂ.
ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯ ಪ್ರಕಾಶನ ಬಳ್ಳಾರಿ, ೨೦೦೨

೨೫ ನಾಗೇಗೌಡ. ಹೆಚ್.ಎಲ್. (ಅನು)
ನಿಕೋಲ್ ದೆ ಕೊಂತಿ ಮತ್ತು ಅಬ್ದುಲ್ ರಜಾಕ್, ಡಾ.ಬಿ.ಎ.ವಿವೇಕ ರೈ. (ಸಂ) ಪ್ರವಾಸಿ ಕಂಡ ವಿಜಯನಗರ ಪುಸ್ತಕದಲ್ಲಿ ಪ್ರಕಟಿತ ಲೇಖನ, ಕನ್ನಡ ವಿಶ್ವವಿದ್ಯಾಲಯ ಹಂಪಿ– ೨೦೦೫

೨೬ ನಾರಾಯಣ ಸಂಗಮ (ಅನು)
ವಿಜಯನಗರದ ಕೃಷ್ಣದೇವರಾಯನ ಕಾಲ, (ಮೂ. ಸಿ.ವಿ.ರಂಗಸ್ವಾಮಿ) ಕರ್ನಾಟಕದ ಪರಂಪರೆ ಭಾಗ-೨ ರಲ್ಲಿ ಪ್ರಕಟಿತ ಲೇಖನ. -ಪ್ರ ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು. ೧೯೯೨

೨೭ ನಿರಂಜನರಾಜ ಅರಸು.ಎ.ಎನ್
ಮುಮ್ಮಡಿ ಶ್ರೀ.ಕೃಷ್ಣರಾಜ ಮಹಿಪಾಲ ವಂಶರತ್ನಾಕರ. ಪ್ರ ಹರ್ಷ ಪ್ರಿಂಟರ್ಸ್ ಮೈಸೂರು – ೧೯೯೩

೨೮ ಪಾಟೀಲ. ಎಂ.ವಿ (ಸಂ)
ಭಾರತದ ಗೆಜೆಟಿಯರ್, ಪ್ರ. ಗೀತಾಂಜಲಿ ಪ್ರಿಂಟರ್ಸ್ ಬೆಂಗಳೂರು– ೧೯೯೨

೨೯ ಬಸವರಾಜು ಕೆ.ಆರ್
ಬಾದಾಮಿ ಚಾಲುಕ್ಯರ ಆಡಳಿತ, (ಮುರಿಗಪ್ಪ.ಎ. (ಸಂ) ಬಾದಾಮಿ ಚಾಲುಕ್ಯರು, ಲೇಖನ ಸಂಪುಟದಲ್ಲಿನ ಲೇಖನ) ಪ್ರ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ –೨೦೦೯

೩೦ ಭುವನೇಶ್ವರ ಪ್ರಸಾದ್
ಪ್ರಾಚೀನ ಭಾರತದ ರಾಜಕೀಯ ತಾತ್ವಿಕರು, ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೨೦೦೮

೩೧ ಮಂಜಪ್ಪ ಶೆಟ್ಟಿ ಮಸಗಲಿ. ಎಂ.ಪಿ
ಮೈಸೂರು ಅರಮನೆ. ಪ್ರ . ಮಸಗಲಿ ಪ್ರಕಾಶನ ಮೈಸೂರು– ೨೦೦೩

೩೨ ಮಳಗಿ. ಎಸ್.ಆರ್
ಪ್ರಾಚೀನ ಕಾಲದ ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿ, ಕರ್ನಾಟಕದ ಪರಂಪರೆ ಭಾಗ– ೧ ರಲ್ಲಿನ ಲೇಖನ ಮೂಲ ಲೇಖಕರು ಗೋಪಾಲ.ಬಿ.ಆರ್, ಪ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

೩೩ ಮಿತ್ರಆ.ರಾ
ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ, (ಕರ್ನಾಟಕದ ಪರಂಪರೆ ಭಾಗ ೧ ರಲ್ಲಿ ಪ್ರಕಟಿತ ಲೇಖನ) ಪ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

೩೪ ಮೂರ್ತಿ ಎನ್.ಕೆ.ಎಸ್.
ಪೂರ್ಣಯ್ಯ (ಬೆಂಗಳೂರು ೧೯೭೬)

೩೫ ಮುಕುಂದಪ್ರಭು.ಎಂ (ಸಂ)
ಪೋಲಿ– ಕೆನರಾ – ೨೦೦೦. ಪ್ರ ಜಿಲ್ಲಾಧಿಕಾರಿ. ದ.ಕ ಜಿಲ್ಲೆ– ೨೦೦೦

೩೬ ಮೂರ್ತಿಶ್ವರಯ್ಯ. ಬೆ.ಕಾ
ಕರ್ನಾಟಕದ ಪೊಲೀಸ್ ಅಧಿನಿಯಮ ,೧೯೬೩, ಪ್ರ ಲಾಯರ್ಸ್ ಲಾ ಬುಕ್ಸ್, ಬೆಂಗಳೂರು– ೧೯೯೮

೩೭ ಮುರಿಗಪ್ಪ.ಎ. (ಸಂ)
ಬಾದಾಮಿ ಚಾಲುಕ್ಯರು, ಲೇಖನ ಸಂಪುಟ, ಪ್ರ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೯

೩೮ ಯಶೋದ ರಾಜಶೇಕರಪ್ಪ. ಪಿ
ಫ್ರಾನ್ಸಿಸ್ ಬುಕನನ್ ದಾಖಲಿಸಿದ ದಿವಾನ್ ಪೂರ್ಣಯ್ಯನವರು (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮

೩೯ ವಿವೇಕ. ರೈ. ಬಿ.ಎ.
ಪ್ರವಾಸಿ ಕಂಡ ವಿಜಯನಗರ, ಪ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೫

೪೦ ವೆಂಕಟಾಚಲಪತಿ.ಎಸ್
ರಾಜಕೀಯ ಇತಿಹಾಸ– ಆಧುನಿಕ ಕಾಲ. ಕರ್ನಾಟಕದ ಪರಂಪರೆ ಸಂಪುಟ– ೨ ರಲ್ಲಿ ಪ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

೪೧ ವೆಂಕಟರತ್ನಂ.ಎ.ವಿ
ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ, ಪ್ರ ಕನ್ನಡ ಅಧ್ಯಯನ ಕೇಂದ್ರ ಮೈಸೂರು ವಿ.ವಿ– ೧೯೭೪

೪೨ **ಶಶಿಧರಮೂರ್ತಿ ಹೆಚ್.ಪಿ**

ದಿವಾನ್ ಪೂರ್ಣಯ್ಯರವರು ಮತ್ತು ಬ್ರಿಟೀಷರ ಸಂಬಂಧಗಳು. (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮.

೪೩ **ಶಾಸ್ತ್ರಿ.ಎ.ಕೆ**

ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು. ಪ್ರ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ. ಬೆಂಗಳೂರು– ೨೦೦೩

೪೪ **ಶಿವರುದ್ರಪ್ಪ.ಜಿ.ಎಸ್. (ಅನು)**

ವಿಜಯನಗರ ಕಾಲದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜೀವನ. (ಕರ್ನಾಟಕ ಪರಂಪರೆ ಸಂಪುಟ ೨ ರಲ್ಲಿ ಪ್ರಕಟಿತ ಲೇಖನ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ೧೯೯೨

೪೫ **ಶಿವಪ್ರಸಾದ್. ಟಿ.ಆರ್.**

ಶ್ರೀಕೃಷ್ಣದೇವರಾಯ, ಚಿಂತನಗಂಗಾ ಪ್ರಕಾಶನ ದಾವಣಗೆರೆ – ೨೦೦೯

೪೬ **ಶಿವಶಂಕರ್.ಎಂ.ಎಲ್. ಮತ್ತು ಚೆನ್ನಬಸಪ್ಪ ಪಾಟೀಲ (ಸಂ)**

ವಿಜಯನಗರ ಒಂದು ಅಧ್ಯಯನ ಸಂಪುಟ– ೨, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯದ ನಿರ್ದೇಶನಾಲಯ, ಮೈಸೂರು– ೧೯೯೭

೪೭ **ಶ್ರೀಧರ.ಹೆಚ್.ಜಿ**

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆ. ಕ್ರಿ.ಶ. ೪೫೦ ರಿಂದ ೧೩೫೦ ಶಿವರಾಮ ಕಾರಂತ ಅಧ್ಯಯನ ಕೇಂದ್ರ ಪುತ್ತೂರು – ೨೦೦೨

೪೮ **ಶೇಷ ನವರತ್ನ (ಅನು)**

ಮನುಸ್ಮೃತಿ. ಪ್ರ. ಸಮಾಜ ಪುಸ್ತಕಾಲಯ ದಾರವಾಡ – ೨೦೦೩

೪೯ **ಷೇಕ್ ಆಲಿ. ಬಿ (ಸಂ),**

ಕರ್ನಾಟಕ ಚರಿತ್ರೆ, ಸಂಪುಟ ೧ ರಿಂದ ೪, ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, – ೧೯೯೭

೫೦ **ಸರಸ್ವತಿ. ಎನ್.**

೧) ವಿಜಯನಗರ ಕಾಲದಲ್ಲಿ ಉದ್ಯೋಗಸ್ಥ ಮಹಿಳೆಯರು, ವಿಜಯನಗರ ಒಂದು ಅಧ್ಯಯನ, ಸಂಪುಟ ೩ ರಲ್ಲಿ, ಪ್ರಕಟಿತ ಲೇಖನ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭

೨) ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು– ವಿಜಯನಗರ ಒಂದು ಅಧ್ಯಯನ, ಸಂಪುಟ ೨ ರಲ್ಲಿ, ಪ್ರಕಟಿತ ಲೇಖನ, ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭

೫೧ **ಸಿಂಗಮ್ಮ. ಎಂ.ಎ**

ಮೈಸೂರಿನಲ್ಲಿ ಕಮಿಷನರುಗಳ ಆಡಳಿತ. ಕರ್ನಾಟಕದ ಪರಂಪರೆ ಸಂಪುಟ–೨ ರಲ್ಲಿ ಪ್ರಕಟಿತ ಲೇಖನ, ಪುಟ– ೩೩೫ (ಮೂಲ ಜಯಲಕ್ಷ್ಮಮ್ಮಣ್ಣಿ)

೫೨ **ಸಿದ್ದಲಿಂಗ ಸ್ವಾಮಿ**

ದಿವಾನ್ ಪೂರ್ಣಯ್ಯರವರು – ಪುನರಾವಲೋಕನ. (ಡಾ:ಗೋಪಾಲ ಆರ್ (ಸಂ) ದಿವಾನ್ ಪೂರ್ಣಯ್ಯ ಎಂಬ ಪುಸ್ತಕದಲ್ಲಿನ ಲೇಖನ) ಪ್ರ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು– ೨೦೦೮.

೫೪ **ಸೂರ್ಯನಾಥ. ಯು. ಕಾಮತ್**

೧) (ಸಂ) ಇತಿಹಾಸ ದರ್ಶನ, ಸಂಪುಟ ೭,ರಿಂದ ೨೨, ೨೦೦೭

೨) ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪ್ರ. ಎಂ.ಪಿ.ಸಿ ಪಬ್ಲಿಕೇಷನ್, ಬೆಂಗಳೂರು– ೧೯೭೩

೩) (ಸಂ). ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಬೆಂಗಳೂರು ಜಿಲ್ಲೆ, ಪ್ರ– ಕರ್ನಾಟಕ ರಾಜ್ಯ ಸರಕಾರ ೧೯೯೦

೪) (ಸಂ) ಭಾರತದ ಗೆಜೆಟಿಯರ್. ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ, ಪ್ರ– ಕರ್ನಾಟಕ ರಾಜ್ಯ ಸರಕಾರ ೧೯೯೨

೫) (ಸಂ) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ ಬೆಳಗಾಂ ಜಿಲ್ಲೆ, ಪ್ರ– ಕರ್ನಾಟಕ ರಾಜ್ಯ ಸರಕಾರ ೧೯೮೭

೬) (ಸಂ) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆ– ಪ್ರ– ಕರ್ನಾಟಕ ರಾಜ್ಯ ಸರಕಾರ– ೧೯೯೫